UNIVERSAL LIBRARY
OU_200721
UNIVERSAL LIBRARY

OSMANIA UNIVERSITY LIBRARY

Call No. K294.11/V46R Accession No. K. 5250.

Author ವೆಂಕಟೇಶಾಚಾರ್, H.P.

Title ಶ್ರೀಮದ್ಭಾಗವತ Volume 25

This book should be returned on or before the date last marked below.



# ಋಗ್ವೇದಸಂಹಿತಾ

ಭಾಗ—೨೫

ಆರನೆಯ ಅಷ್ಟಕದ ಅಧ್ಯಾಯಗಳು ೫-೮

ಎಂಟನೆಯ ಮಂಡಲದ ಸೂಕ್ತಗಳು ೬೮-೧೦೩

ಒಂಭತ್ತನೆಯ ಮಂಡಲದ ಸೂಕ್ತಗಳು ೧-೪೩

ಶ್ರೀ ಜಯಚಾಮರಾಜೇಂದ್ರ ವೇದರತ್ನಮಾಲಾ

ಸಂಖ್ಯೆ—೨೫

# RIG-VEDA

ಸಾಯಣಭಾಷ್ಯಸಮೇತಾ

# ಋಗ್ವೇದ ಸಂಹಿತಾ

( ಕರ್ಣಾಟಕ ಭಾಷಾರ್ಥಾನುವಾದವಿವರಣೆಗಳೊಡನೆ )

ಭಾಗ—೨೫

ಆರನೆಯ ಅಷ್ಟಕದ ಅಧ್ಯಾಯಗಳು ೫-೮

ಎಂಟನೆಯ ಮಂಡಲದ ಸೂಕ್ತಗಳು ೬೮-೧೦೩

ಒಂಭತ್ತನೆಯ ಮಂಡಲದ ಸೂಕ್ತಗಳು ೧-೪೩

*Translated with Exhaustive Critical Notes & Explanations*

*by*

ASTHANA MAHAVIDWAN

H. P. VENKATA RAO

*Editor*

*Printed at*

SREE VINAYAK PRINTING WORKS, MYSORE

1953

Published by the gracious permission of

His Highness

Sri Jayachamarajendra Wadiyar Bahadur,

G.C.B., G.C.S.I., Maharaja of Mysore



ಯದುವಂಶಪಯಃಪಾರಾವಾರಸುಧಾಕರರೂ ಸತ್ಸಂಪ್ರದಾಯವೈದಿಕವಿದ್ಯಾವರ್ಧಕರೂ
ಮೈಸೂರು ದೇಶವನ್ನಾಳುವ ಧರ್ಮಪ್ರಭುಗಳೂ ಆದ ಶ್ರೀಮನ್ಮಹಾರಾಜ
**ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್**
**ಜಿ.ಸಿ ಬಿ . ಜಿ ಸಿ.ಎಸ್ ಐ. ರವರು**

# ಪೀಠಿಕೆ.

---

ಋಗ್ವೇದಸಂಹಿತೆಯ ಈ ಭಾಗದಲ್ಲಿ ಎಂಟನೆಯ ಮಂಡಲವು ಮುಗಿದು ಒಂಭತ್ತನೆಯ ಮಂಡಲವು ಪ್ರಾರಂಭಿಸಲ್ಪಟ್ಟಿದೆ. ಈ ಮಂಡಲದಲ್ಲಿ ಒಟ್ಟು ೧೧೪ ಸೂಕ್ತಗಳೂ, ಒಟ್ಟು ೧೧೦೮ ಋಕ್ಕುಗಳೂ ಇರುವವು. ಇವೆಲ್ಲಕ್ಕೂ ಋಷಿಗಳು ಬೇರೆ ಬೇರೆ ಇದ್ದರೂ ಪವಮಾನಃ ಸೋಮಃ ಎಂಬ ಒಂದೇ ದೇವತೆಯು ಇರುವುದು. ಈ ೧೧೪ ಸೂಕ್ತಗಳಲ್ಲಿ ಮೊದಲಿನ ೬೭ ಸೂಕ್ತಗಳಲ್ಲಿರುವ ೬೧೦ ಋಕ್ಕುಗಳಲ್ಲಿ ಕೆಲವು ಋಕ್ಕುಗಳನ್ನು ಬಿಟ್ಟರೆ ಉಳಿದ ಎಲ್ಲಾ ಋಕ್ಕುಗಳೂ ಗಾಯತ್ರೀಛಂದಸ್ಸವು. ಋಗ್ವೇದದಲ್ಲಿ ಗಾಯತ್ರೀಛಂದಸ್ಸಿಗೂ ಸೋಮದೇವತೆಗೂ ಬಹು ಮುಖ್ಯವಾದ ಸ್ಥಾನವಿದೆ ಆದುದರಿಂದ ಪವಮಾನವೆಂದು ಪ್ರಸಿದ್ಧವಾಗಿರುವ ಈ ೬೧೦ ಋಕ್ಕುಗಳನ್ನು ವೈದಿಕಕರ್ಮಗಳಲ್ಲಿ ನಾನಾ ವಿಧವಾಗಿ ಪ್ರಯೋಗಮಾಡುವುದು ರೂಢಿಯಲ್ಲಿದೆ. ಈ ಮಂತ್ರಗಳಿಗೆ ದೇವತೆಯಾದ **ಪವಮಾನಃ ಸೋಮಃ** ಎಂಬ ದೇವತೆಯು ಸೋಮಲತೆಯನ್ನು, ಸೋಮರಸವನ್ನು ನಿರ್ದೇಶಿಸುವುದಾದರೂ ಈಚೆಗೆ ಕೆಲವರು ತಮಗೆ ಇಷ್ಟಬಂದ ರೀತಿಯಲ್ಲಿ ಸೋಮಶಬ್ದಕ್ಕೆ ಅರ್ಥಮಾಡಿ ಅದರಂತೆ ಆ ಮಂತ್ರಗಳನ್ನು ಉಪಯೋಗಿಸುವುದು ರೂಢಿಯಲ್ಲಿದೆ. ಸೋಮ ಎಂದರೆ ರುದ್ರನೆಂದು ಕೆಲವರು ಅರ್ಥಮಾಡಿ ರುದ್ರಾಭಿಷೇಕಕ್ಕಾಗಿ ಈ ಮಂತ್ರಗಳನ್ನು ಬಳಸುವುದುಂಟು. ಕೆಲವರು ಪವಮಾನ ಎಂದರೆ ವಾಯುವೆಂದು ಅರ್ಥಮಾಡಿ ಈ ಮಂತ್ರಗಳು ವಾಯುದೇವತೆಯನ್ನು ಪ್ರಶಂಸಿಸುವ ಮಂತ್ರಗಳೆಂದು ಹೇಳುತ್ತಾರೆ ಋಗ್ವೇದದಲ್ಲಿ ಸೋಮ ಶಬ್ದಕ್ಕೆ ರುದ್ರನೆಂಬ ಅರ್ಥವು ಎಲ್ಲಿಯೂ ಇರುವಂತೆ ಕಂಡು ಬರುವುದಿಲ್ಲ. ಯಜುರ್ವೇದದಲ್ಲಿ ಮಾತ್ರ ಸೋಮ ಶಬ್ದಕ್ಕೆ (ಉಮಾದೇವಿಯಿಂದ ಸಹಿತನಾದ ದೇವನು ಎಂದರೆ ರುದ್ರನು) **ನಮಃ ಸೋಮಾಯ ಚ ರುದ್ರಾಯ ಚ** ಇತ್ಯಾದಿ ಮಂತ್ರಗಳಲ್ಲಿ ರುದ್ರನೆಂಬ ಅರ್ಥವನ್ನು ಸ್ಪಷ್ಟವಾಗಿ ಹೇಳಲಾಗಿದೆ. ಆದರೆ ಸೋಮ ಶಬ್ದಕ್ಕೆ ಋಗ್ವೇದದಲ್ಲಿ ಕಂಡುಬರುವ ಸೋಮದೇವತೆಯೆಂಬ ಅರ್ಥವೇ ಸಾಧುವಾದುದು ಬಹು ಪ್ರಾಚೀನ ಕಾಲದಿಂದಲೂ ಸೋಮಯಾಗ, ಸೋಮಪಾನ, ಇತ್ಯಾದಿಗಳಲ್ಲಿ ನಿರತರಾದವರು ಶ್ರೇಷ್ಠರೆಂದು ಪರಿಗಣಿಸಲ್ಪಟ್ಟಿದ್ದಾರೆ. ಸೋಮಪಾನಾರ್ಥವಾಗಿಯೇ ಮಾಡಲ್ಪಡುವ ಅನೇಕ ಯಾಗಗಳಿವೆ. ಈ ಸೋಮಯಾಗಗಳನ್ನು ಮಾಡಿದವರಿಗೆ ಸೋಮಯಾಜಿಗಳೆಂದು ಹೆಸರು. ಯಜ್ಞದಲ್ಲಿ ಕೆಲದಿವಸಗಳಲ್ಲಿ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳಲ್ಲಿ, ಪ್ರಾತಸ್ಸವನ, ಮಾಧ್ಯಂದಿನಸವನ ತೃತೀಯಸವನ ಎಂಬ ಸೋಮರಸವನು ಹಿಂಡಿ ತೆಗೆಯುವ ಸವನಕರ್ಮಗಳು ವಿಧ್ಯುಕ್ತವಾಗಿ ನೆರವೇರುವವು. ಈ ಕಾರಣಗಳಿಂದ ಸೋಮದೇವತೆಗೂ ಸೋಮಪಾನಮಾಡುವುದರಲ್ಲಿ ಮುಖ್ಯದೇವತೆಯಾದ ಇಂದ್ರನಿಗೂ ಶ್ರೇಷ್ಠವಾದ ಸ್ಥಾನವೂ ಪ್ರಾಮುಖ್ಯತೆಯೂ ಇದೆ. ಇದಲ್ಲದೆ ಪವಮಾನನೆಂದು ಕರೆಯಲ್ಪಡುವ ಈ ಮಂಡಲದ ೬೧೦ ಋಕ್ಕುಗಳನ್ನು ವಿಧ್ಯುಕ್ತವಾಗಿ ಅಧ್ಯಯನಮಾಡುವವರೂ ಸಹ, ಗರ್ಭವಾಸ ಮೊದಲುಗೊಂಡು ಮೃತರಾಗುವವರೆಗೆ ಮಾಡುವ, ಮಾತಾಪಿತೃಗಳ ಹನನ, ಗೋವಧ, ಕಳ್ಳತನ, ಸ್ತ್ರೀವಧ, ಬ್ರಹ್ಮಹತ್ಯೆ, ಮದ್ಯಪಾನ, ಸ್ವರ್ಣಸ್ತೇಯ, ಗುರುಪತ್ನೀಸಂಗ, ಅಕ್ರಮಸ್ತ್ರೀಸಂಗ, ಅಭಕ್ಷ್ಯಭೋಜನ, ಮೊದಲಾದ ಅನೇಕವಿಧಪಾಪಗಳನ್ನು ಪರಿಹಾರಮಾಡಿಕೊಂಡು ಶುದ್ಧರಾಗುವರೆಂದೂ ಅವರನ್ನು ತಾನೇ ಪುನೀತರನ್ನಾಗಿ ಮಾಡುವನೆಂದೂ ವೇದಪುರುಷನೇ ಪರಿಶಿಷ್ಟಮಂತ್ರದಲ್ಲಿ ಹೇಳಿದಾನೆ. ಮತ್ತು —

**ಪಾವಮಾನಂ ಪರಂ ಬ್ರಹ್ಮ ಯೇ ಪಠಂತಿ ಮನೀಷಿಣಃ ।**
**ಸಪ್ತ ಜನ್ಮ ಭವೇದ್ವಿಪ್ರೋ ಧನಾಢ್ಯೋ ವೇದಪಾರಗಃ ॥**
**ದಶೋತ್ತರಾಣ್ಯೃಚಾಂಶ್ಚೈವ ಪಾವಮಾನೀಃ ಶತಾನಿ ಷಟ್ ।**
**ಏತಜ್ಜಪೇನ್ಮಂತ್ರಂ ಘೋರಮೃತ್ಯುಭಯಂ ಹರೇತ್ ॥**
**ಏತತ್ಪುಣ್ಯಂ ಪಾಪಹರಂ ರೋಗಮೃತ್ಯುಭಯಾಪಹಂ ।**
**ಪಠತಾಂ ಶೃಣ್ವತಾಂ ಚೈವ ದದಾತಿ ಪರಮಾಂ ಗತಿಂ ॥**

(ಪರಿಶಿಷ್ಟಮಂತ್ರ ೧೮–೧೯ ರಿಂದ ೨೧)

ಎಂದರೆ ೬೧೦ ಗಾಯತ್ರೀಛಂದಸ್ಸಿನ ಋಕ್ಕುಗಳಿರುವ ಈ ಪಾವಮಾನೀ ಸೂಕ್ತಗಳನ್ನು ಪಠಿಸುವ ಪುರುಷನು ಏಳು ಜನ್ಮಗಳಲ್ಲಿಯೂ ಧನಾಢ್ಯನಾಗಿಯೂ ವೇದಪಾರಗನಾಗಿಯೂ ಆಗುವನು ಈ ಮಂತ್ರಗಳ ಜಪಹೋಮಾದಿಗಳನ್ನು ಮಾಡಿದರೆ ಸನ್ನಿಹಿತವಾದ ಘೋರಮೃತ್ಯುಭಯವೂ ಪರಿಹಾರವಾಗುವುದು. ಇದನ್ನು ಪಠಿಸುವವರೂ, ಶ್ರವಣ ಮಾಡುವವರೂ ಉತ್ತಮವಾದ ಗತಿಯನ್ನು ಹೊಂದುತ್ತಾರೆ ಎಂದು ವೇದಪುರುಷನೇ ಸ್ಪಷ್ಟವಾಗಿ ಹೇಳಿರುವನು.

ಅತಿಪ್ರಾಚೀನವೂ, ಅತಿಗಹನವೂ, ಅತಿವಿಸ್ತಾರವೂ, ಸರ್ವಶಾಸ್ತ್ರಗಳಿಗೂ, ಮೂಲಭೂತವೂ ಆದ ಇಂತಹ ಋಗ್ವೇದ ಸಂಹಿತೆಯನ್ನು ಸರಳವಾದ ಕನ್ನಡಭಾಷೆಯಲ್ಲಿ ವಿಮರ್ಶಾನುವಾದಸಹಿತವಾಗಿ ಪ್ರಕಾಶಪಡಿಸುವುದು ಸುಲಭವಾದ ಕೆಲಸವಲ್ಲ ಆದರೂ ಇಂತಹ ಮಹತ್ಕಾರ್ಯದಿಂದ ಪಂಡಿತಪಾಮರರಾದಿಯಾದ ಸಕಲ ಜನರೂ ಜ್ಞಾನಾಭಿವೃದ್ಧಿಯನ್ನು ಪಡೆದು ಈಶ್ವರಾನುಗ್ರಹಕ್ಕೆ ಪಾತ್ರರಾಗಲೆಂಬ ಘನವಾದ ಉದ್ದೇಶದಿಂದ ಕರ್ನಾಟಕಸಿಂಹಾಸನಾಧೀಶ್ವರರೂ, ವೇದವಿದ್ಯಾಭಿಮಾನಿಗಳೂ, ಸ್ವಯಂಪಂಡಿತರೂ, ಪ್ರಜಾನುರಾಗಿಗಳೂ, ದೈವಭಕ್ತಿತತ್ಪರರೂ ಆದ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ ಸಿ ಬಿ , ಜಿ.ಸಿ.ಎಸ್. ಐ.** ಮಹಾಪ್ರಭುವರ್ಯರೂ ಅವರ ಸರ್ಕಾರದವರೂ ಬಹುದ್ರವ್ಯಸಾಧ್ಯವಾದ ಈ ಗ್ರಂಥಪ್ರಕಟನೆಯನ್ನು ತಮ್ಮ ಉದಾರಾಶ್ರಯದಿಂದ ಪ್ರೋತ್ಸಾಹಮಾಡುತ್ತಿರುವುದು ಕರ್ನಾಟಕ ಜನಕೋಟಿಯ ಸುಕೃತವೆಂದೇ ಹೇಳಬೇಕು. ಇಂತಹ ಉದಾರಮತಿಗಳಾದ ನಮ್ಮ ಪ್ರಭುವರ್ಯರಿಗೂ, ಅವರ ಕುಟುಂಬಕ್ಕೂ, ರಾಜಕುಮಾರಿಯವರಿಗೂ, **ಶ್ರೀಕಂಠದತ್ತ ನೃಸಿಂಹರಾಜ ಒಡೆಯರ್**, ಎಂಬ ಶುಭಾನಾಮಾಂಕಿತರಾದ ರಾಜಕುಮಾರರಿಗೂ, ಸಮಸ್ತ ಪ್ರಜಾಕೋಟಿಗೂ ಸಹ ವೇದಪುರುಷನಾದ ಸರ್ವೇಶ್ವರನು ಐಹಿಕ ಫಲಗಳಾದ ಆಯುರಾರೋಗ್ಯೈಶ್ವರ್ಯಾದಿ ಸಕಲಸಂಪತ್ತನ್ನೂ ಪಾರಮಾರ್ಥಿಕವಾದ ಆಧ್ಯಾತ್ಮಜ್ಞಾನವನ್ನೂ ಇತೋಽಪ್ಯತಿಶಯವಾಗಿ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

| | |
|---|---|
| ಮೈಸೂರು<br>ವಿಜಯನಾಮ ಸಂ॥ ಮಾರ್ಗಶಿರ ಶುಕ್ಲ ತೃತೀಯಾ ಬುಧವಾರ<br>ತಾ॥ 9-12 1953 | ಅನುವಾದಕ<br>**ಹೆಚ್. ಪಿ. ವೆಂಕಟರಾವ್,**<br>ಆಸ್ಥಾನ ಮಹಾವಿದ್ವಾನ್ |

## ಋಗ್ವೇದಸಂಹಿತೆಯ ಇಪ್ಪತ್ತೈದನೆಯ ಭಾಗದ

# ವಿ ಷ ಯಾ ನು ಕ್ರ ಮ ಣಿ ಕೆ .

### ಆರನೆಯ ಅಷ್ಟಕದಲ್ಲಿ ಐದನೆಯ ಅಧ್ಯಾಯವು.

### ಎಂಟನೆಯ ಮಂಡಲದ ಸೂಕ್ತಗಳು.


| | | ಪುಟಸಂಖ್ಯೆ |
|---|---|---|
| ೬೮. | ಆ ತ್ವಾ ರಥಂ ಎಂಬ ಅರವತ್ತೆಂಟನೆಯ ಸೂಕ್ತವು. | 1 |
| | ಸೂಕ್ತದ ವಿನಿಯೋಗ, ಋಷಿದೇವತಾಛಂದಸ್ಸುಗಳು ಅರ್ಥವಿವರಣೆ ಇತ್ಯಾದಿ | 2 |
| ೬೯. | ಪ್ರಪ್ರ ವಃ ಎಂಬ ಅರವತ್ತೊಂಭತ್ತನೆಯ ಸೂಕ್ತ | 22 |
| | ಸುದೇವೋ ಅಸಿ ವರುಣ ಎಂಬ ಋಕ್ಕಿನ ನಿರುಕ್ತವು | 37 |
| ೭೦ | ಯೋ ರಾಜಾ ಎಂಬ ಎಪ್ಪತ್ತನೆಯ ಸೂಕ್ತವು | 41 |
| ೭೧. | ತ್ವಂ ನೋ ಅಗ್ನೇ ಎಂಬ ಎಪ್ಪತ್ತೊಂದನೆಯ ಸೂಕ್ತ | 62 |
| ೭೨. | ಹವಿಷ್ಕೃಣುಧ್ವಂ ಎಂಬ ಎಪ್ಪತ್ತೆರಡನೆಯ ಸೂಕ್ತ | 79 |
| ೭೩. | ಉದೀರಾಥಾಂ ಎಂಬ ಎಪ್ಪತ್ತಮೂರನೆಯ ಸೂಕ್ತ | 98 |
| ೭೪ | ವಿಶೋವಿಶೋ ವಃ ಎಂಬ ಎಪ್ಪತ್ತನಾಲ್ಕನೆಯ ಸೂಕ್ತ | 114 |
| ೭೫ | ಯುಕ್ಷ್ವಾ ಹಿ ದೇವಹೂತಮಾನ್ ಎಂಬ ಎಪ್ಪತ್ತೈದನೆಯ ಸೂಕ್ತ | 130 |
| | ಸಮಂ, ಸಮಸ್ಯ ಎಂಬ ಶಬ್ದಗಳ ಅರ್ಥವಿವರಣೆ | 139 |
| | ಮಾ ನಃ ಸಮಸ್ಯ ಎಂಬ ಋಕ್ಕಿನ ನಿರ್ವಚನ ಇತ್ಯಾದಿ | 139 |
| ೭೬. | ಇಮಂ ನು ಮಾಯಿನಂ ಎಂಬ ಎಪ್ಪತ್ತಾರನೆಯ ಸೂಕ್ತ | 146 |
| ೭೭. | ಜಜ್ಞಾನೋ ನು ಎಂಬ ಎಪ್ಪತ್ತೇಳನೆಯ ಸೂಕ್ತ | 158 |
| | ಏಕಯಾ ಪ್ರತಿಧಾ ಎಂಬ ಋಕ್ಕಿನ ನಿರುಕ್ತವು | 162 |
| | ಕಾಣುಕಾ ಎಂಬ ಶಬ್ದದ ಅರ್ಥವಿವರಣೆ | 162 |
| | ಸರಾಂಸಿ ತ್ರಿಂಶತಂ ಎಂಬ ಶಬ್ದಗಳ ವಿವರಣೆ. | 163 |
| | ನಿರಾವಿಧ್ಯತ್ ಎಂಬ ಋಕ್ಕಿನ ನಿರ್ವಚನವು | 165 |
| | ಬುಂದ ಎಂಬ ಶಬ್ದದ ವಿವರಣೆ | 165 |
| | ವಿಶ್ವೇತ್ತಾ ವಿಷ್ಣುಃ ಎಂಬ ಋಕ್ಕಿಗೆ ನೈರುಕ್ತಪಕ್ಷದ ಅರ್ಥವಿವರಣೆ. | 171 |
| | ಇದೇ ಋಕ್ಕಿಗೆ ಐತಿಹಾಸಿಕಪಕ್ಷದ ವಿವರಣೆಯನ್ನು ಮಾಡುವ ಸಂದರ್ಭದಲ್ಲಿ ಚರಕ ಬ್ರಾಹ್ಮಣದಲ್ಲಿರುವ ಪೂರ್ವೇತಿಹಾಸವು. | 172 |

ಪುಟಸಂಖ್ಯೆ

ಈ ವಿಷಯದಲ್ಲಿ ಕೃಷ್ಣಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಹೇಳಿರುವ ಉಪಾಖ್ಯಾನವು. 174
ವರಾಹಶಬ್ದದ ನಾನಾರ್ಥಗಳು ಇತ್ಯಾದಿ 175
ತುವಿಕ್ಷಂ ತೇ ಎಂಬ ಋಕ್ಕಿನ ನಿರುಕ್ತವು. 177
ಬುಂದಶಬ್ದಾರ್ಥವಿವರಣೆ ಇತ್ಯಾದಿ. 177
೭೮. ಪುರೋಳಾಶಂ ನಃ ಎಂಬ ಎಪ್ಪತ್ತೆಂಟನೆಯ ಸೂಕ್ತ. 178
೭೯. ಅಯಂ ಕೃತ್ನುಃ ಎಂಬ ಎಪ್ಪತ್ತೊಂಭತ್ತನೆಯ ಸೂಕ್ತ 187
೮೦. ನಹ್ಯನ್ಯಂ ಎಂಬ ಎಂಭತ್ತನೆಯ ಸೂಕ್ತ. 196
೮೧. ಆ ತೂ ನ ಇಂದ್ರ ಎಂಬ ಎಂಭತ್ತೊಂದನೆಯ ಸೂಕ್ತ 207

ಆರನೆಯ ಅಷ್ಟಕದಲ್ಲಿ ಐದನೆಯ ಅಧ್ಯಾಯವು ಸಮಾಪ್ತವು.

## ಆರನೆಯ ಅಧ್ಯಾಯವು.

೮೨. ಆ ಪ್ರ ದ್ರವ ಎಂಬ ಎಂಭತ್ತೆರಡನೆಯ ಸೂಕ್ತ. 217
ಪ್ರಭರ್ಮಣಿ ಎಂಬ ಶಬ್ದದ ಅರ್ಥವಿವರಣೆ 219
ತೀವ್ರ ಎಂಬ ಶಬ್ದದ ಅರ್ಥವಿವರಣೆ. 221
ಶ್ಯೇನಪಕ್ಷಿಯು ಸ್ವರ್ಗದಿಂದ ಸೋಮಲತೆಗಳನ್ನು ತಂದ ವಿಷಯ 229
೮೩. ದೇವಾನಾಮಿತ್ ಎಂಬ ಎಂಭತ್ತಮೂರನೆಯ ಸೂಕ್ತ 232
ಅದಿತಿದೇವಿಯಲ್ಲಿ ದ್ವಿಪ್ರಕಾರವಾಗಿ (ಅವಳಿ) ಜನಿಸಿದ ದೇವತೆಗಳ ವಿಚಾರ 240
೮೪. ಪ್ರೇಷ್ಠಂ ವಃ ಎಂಬ ಎಂಭತ್ತನಾಲ್ಕನೆಯ ಸೂಕ್ತ 242
ಅಗ್ನಿಗೆ ಅಂಗಿರಃ ಎಂಬ ಹೆಸರು ಬರಲು ಕಾರಣ 247
ಊರ್ಜೋನಪಾತ್ ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ 249
೮೫. ಆ ಮೇ ಹವಂ ಎಂಬ ಎಂಭತ್ತೈದನೆಯ ಸೂಕ್ತ 256
೮೬. ಉಭಾ ಹಿ ದಸ್ರಾ ಎಂಬ ಎಂಭತ್ತಾರನೆಯ ಸೂಕ್ತ. 264
ಭಿಷಜಾ ಎಂಬ ಶಬ್ದದ ವಿವರಣೆ 267
ತನೂಕೃಥೇ ಎಂಬ ಶಬ್ದದ ವಿವರಣೆ. 267
ವಿಷ್ಣಾಪ್ವೇ ಎಂಬ ಶಬ್ದದ ಅರ್ಥವಿವರಣೆ. 270
೮೭. ದ್ಯುಮ್ನೀ ವಾಂ ಎಂಬ ಎಂಭತ್ತೇಳನೆಯ ಸೂಕ್ತ. 274
೮೮. ತಂ ವೋ ದಸ್ಮಂ ಎಂಬ ಎಂಭತ್ತೆಂಟನೆಯ ಸೂಕ್ತ. 282
ತ್ರಸರೇಷು ಎಂಬ ಶಬ್ದದ ಅರ್ಥವಿವರಣೆ 285

ಪುಟಸಂಖ್ಯೆ


೮೯. ಬೃಹದಿಂದ್ರಾಯ ಎಂಬ ಎಂಭತ್ತೊಂಭತ್ತನೆಯ ಸೂಕ್ತ. 291

ಅಮಾಸು ಪಕ್ವಂ ಎಂಬ ಋಕ್ಕಿನ ನಿರುಕ್ತವಿವರಣೆ. 301

೯೦. ಆ ನೋ ವಿಶ್ವಾಸು ಎಂಬ ತೊಂಭತ್ತನೆಯ ಸೂಕ್ತ 302

ಪರಮಜ್ಯಾಃ ಎಂಬ ಶಬ್ದದ ಅರ್ಥವಿವರಣೆ ಇತ್ಯಾದಿ. 304

೯೧. ಕನ್ಯಾ ವಾಃ ಎಂಬ ತೊಂಭತ್ತೊಂದನೆಯ ಸೂಕ್ತ. 310

ಅಪಾಲಾ ಎಂಬ ಅತ್ರಿಪುತ್ರಿಯು ಇಂದ್ರನಿಗೆ ಸೋಮವನ್ನು ಅರ್ಪಿಸಿದ ವಿಚಾರ, ಈ ವಿಷಯದಲ್ಲಿ ಶಾಟ್ಯಾಯನಬ್ರಾಹ್ಮಣದಲ್ಲಿ ಹೇಳಿರುವ ಪೂರ್ವೇತಿಹಾಸ. 314

೯೨ ಶಾಂತಮಾ ವಃ ಎಂಬ ತೊಂಭತ್ತೆರಡನೆಯ ಸೂಕ್ತ. 322

೯೩ ಉದ್ಘೇದಭಿ ಎಂಬ ತೊಂಭತ್ತಮೂರನೆಯ ಸೂಕ್ತ. 356

ನಿಚುಂಪುಣಃ ಎಂಬ ಶಬ್ದಕ್ಕೆ ಯಾಸ್ಕರ ವಿವರಣೆಯು 380

ಋಭುಗಳ ಕಲಾಕೌಶಲ್ಯದ ವಿವರಣೆ ಇತ್ಯಾದಿ 393

೯೪ ಗೌರ್ಧಯತಿ ಎಂಬ ತೊಂಭತ್ತನಾಲ್ಕನೆಯ ಸೂಕ್ತ 397

೯೫. ಆ ತ್ವಾ ಗಿರಃ ಎಂಬ ತೊಂಭತ್ತೈದನೆಯ ಸೂಕ್ತ. 410

ಇಂದ್ರನ ಶುದ್ಧಿಗಾಗಿ ಏತೋ ನ್ವಿಂದ್ರಂ ಇತ್ಯಾದಿ ಮೂರು ಋಕ್ಕುಗಳ ವಿಷಯದಲ್ಲಿ ಭಾಷ್ಯಕಾರರು ಹೇಳಿರುವ ಪೂರ್ವೇತಿಹಾಸವು 418

೯೬. ಅಸ್ಮಾ ಉಷಾಸಃ ಎಂಬ ತೊಂಭತ್ತಾರನೆಯ ಸೂಕ್ತ. 421

ಇಂದ್ರನು ಸಪ್ತಪರ್ವತಗಳನ್ನು ಸೀಳಿದ ಪೂರ್ವೇತಿಹಾಸ 425

ಇಂದ್ರನಿಗೆ ಮರುದ್ದೇವತೆಗಳು ಸಹಾಯಮಾಡಿದವಿಚಾರ ಮತ್ತು ಮರುತ್ತುಗಳಿಗೂ ಇಂದ್ರನಿಗೂ ಸಖ್ಯವು ಉಂಟಾದ ಬಗೆ ಈ ವಿಷಯದಲ್ಲಿ ಪೂರ್ವೇತಿಹಾಸ 433

ಇಂದ್ರನು ಕೃಷ್ಣನೆಂಬ ಅಸುರನನ್ನು ಸಂಹಾರಮಾಡಿದ ವಿಚಾರ ಮತ್ತು ಈ ವಿಷಯದಲ್ಲಿ ಪೂರ್ವೇತಿಹಾಸವು 443

೯೭. ಯಾ ಇಂದ್ರ ಭುಜಃ ಎಂಬ ತೊಂಭತ್ತೇಳನೆಯ ಸೂಕ್ತ 455


**ಆರನೆಯ ಅಷ್ಟಕದ ಆರನೆಯ ಅಧ್ಯಾಯವು ಸಮಾಪ್ತವು.**

## ಏಳನೆಯ ಅಧ್ಯಾಯವು


೯೮. ಇಂದ್ರಾಯ ಸಾಮ ಎಂಬ ತೊಂಭತ್ತೆಂಟನೆಯ ಸೂಕ್ತ 475

೯೯. ತ್ವಾಮಿದಾ ಹ್ಯಃ ಎಂಬ ತೊಂಭತ್ತೊಂಭತ್ತನೆಯ ಸೂಕ್ತ 488

ಶ್ರಾಯಂತಇವ ಸೂರ್ಯಂ ಎಂಬ ಋಕ್ಕಿನ ನಿರುಕ್ತವಿವರಣೆ 492

ಅನರ್ಶರಾತಿಂ ಎಂಬ ಶಬ್ದದ ನಿರ್ವಚನವು 494

೧೦೦. **ಅಯಂ ತ ಏಮಿ** ಎಂಬ ನೂರನೆಯ ಸೂಕ್ತ. 499

**ಯದ್ವಾಗ್ವದಂತೀ** ಎಂಬ ಋಕ್ಕಿನ ನಿರ್ವಚನ. 511

**ದೇವೀಂ ವಾಚಮಜನಯಂತ** ಎಂಬ ಋಕ್ಕಿನ ನಿರುಕ್ತ. 513

ವೃತ್ರವಧಾರ್ಥವಾಗಿ ಇಂದ್ರನು ವಿಷ್ಣುವಿನ ಸಹಾಯವನ್ನು ಪ್ರಾರ್ಥಿಸುವ ವಿಷಯ ಇತ್ಯಾದಿ 515

೧೦೧ **ಋಧಗಿತ್ಥಾ** ಎಂಬ ನೂರೊಂದನೆಯ ಸೂಕ್ತ. 516

೧೦೨. **ತ್ವಮಗ್ನೇ ಬೃಹದ್ವಯಃ** ಎಂಬ ನೂರೆರಡನೆಯ ಸೂಕ್ತ. 535

**ಶೀರಂ ಪಾವಕಶೋಚಿಷಂ** ಎಂಬ ಶಬ್ದಗಳ ನಿರ್ವಚನ ಇತ್ಯಾದಿ. 546

**ಪ್ರಯೋಗ** ನೆಂಬ ಋಷಿಯು ಅಗ್ನಿಯಲ್ಲಿ ಕಾಷ್ಠಾದಿಗಳನ್ನು ಅರ್ಪಿಸಿದ ವಿಷಯದಲ್ಲಿ ಯಜುರ್ವೇದದಲ್ಲಿರುವ ವಿವರಣೆ 554

**ಉಪಜಿಹ್ವಿಕಾ** ಎಂಬ ಶಬ್ದದ ನಿರ್ವಚನ ಮತ್ತು ವಿವರಣೆ. 555

ವಮ್ರಿ ಶಬ್ದಾರ್ಥವಿವರಣೆ 556

೧೦೩. **ಅದರ್ಶಿ ಗಾತುವಿತ್ತಮಃ** ಎಂಬ ನೂರಮೂರನೆಯ ಸೂಕ್ತ 557


ಇಲ್ಲಿಗೆ ಎಂಟನೆಯ ಮಂಡಲವು ಸಮಾಪ್ತವಾದುದು.

## ಒಂಭತ್ತನೆಯ ಮಂಡಲವು

**(ಆರನೆಯ ಅಷ್ಟಕದಲ್ಲಿ ಏಳನೆಯ ಅಧ್ಯಾಯವು)**


೧. **ಸ್ವಾದಿಷ್ಠಯಾ** ಎಂಬ ಮೊದಲನೆಯ ಸೂಕ್ತವು. 575

೨. **ಪವಸ್ವ ದೇವವೀಃ** ಎಂಬ ಎರಡನೆಯ ಸೂಕ್ತ 585

೩. **ಏಷ ದೇವೋ ಅಮರ್ತ್ಯಃ** ಎಂಬ ಮೂರನೆಯ ಸೂಕ್ತ 595

೪. **ಸನಾ ಚ ಸೋಮ** ಎಂಬ ನಾಲ್ಕನೆಯ ಸೂಕ್ತ 603

೫. ಸಮಿದ್ಧೋ ವಿಶ್ವತಃ ಎಂಬ ಐದನೆಯ ಸೂಕ್ತ 612

೬. **ಮಂದ್ರಯಾ ಸೋಮ** ಎಂಬ ಆರನೆಯ ಸೂಕ್ತ 623

೭. **ಅಸೃಗ್ರಮಿಂದವಃ** ಎಂಬ ಏಳನೆಯ ಸೂಕ್ತ 631

೮. **ಏತೇ ಸೋಮಾ ಅಭಿ** ಎಂಬ ಎಂಟನೆಯ ಸೂಕ್ತ 639

೯. **ಪರಿ ಪ್ರಿಯಾ ದಿವಃ** ಎಂಬ ಒಂಭತ್ತನೆಯ ಸೂಕ್ತ 647

೧೦. **ಪ್ರ ಸ್ವಾನಾಸಃ** ಎಂಬ ಹತ್ತನೆಯ ಸೂಕ್ತ 555

೧೧. **ಉಪಾಸ್ಮೈ ಗಾಯತ** ಎಂಬ ಹನ್ನೊಂದನೆಯ ಸೂಕ್ತ 664

೧೨. **ಸೋಮಾ ಅಸೃಗ್ರಂ** ಎಂಬ ಹನ್ನೆರಡನೆಯ ಸೂಕ್ತ 672


**ಆರನೆಯ ಅಷ್ಟಕದ ಏಳನೆಯ ಅಧ್ಯಾಯವು ಸಮಾಪ್ತವು**

# ಎಂಟನೆಯ ಅಧ್ಯಾಯವು


| | | |
|---|---|---|
| ೧೩. | **ಸೋಮಃ ಪುನಾನಃ** ಎಂಬ ಹದಿಮೂರನೆಯ ಸೂಕ್ತ | 681 |
| ೧೪. | **ಪರಿ ಪ್ರಾಸಿಷ್ಯದತ್** ಎಂಬ ಹದಿನಾಲ್ಕನೆಯ ಸೂಕ್ತ | 691 |
| ೧೫. | **ಏಷ ಧಿಯಾ ಯಾತಿ** ಎಂಬ ಹದಿನೈದನೆಯ ಸೂಕ್ತ | 699 |
| ೧೬. | **ಪ್ರ ತೇ ಸೋತಾರಃ** ಎಂಬ ಹದಿನಾರನೆಯ ಸೂಕ್ತ | 707 |
| ೧೭. | **ಪ್ರ ನಿಮ್ನೇನೇವ** ಎಂಬ ಹದಿನೇಳನೆಯ ಸೂಕ್ತ | 715 |
| ೧೮. | ಪರಿ ಸುವಾನಃ ಎಂಬ ಹದಿನೆಂಟನೆಯ ಸೂಕ್ತ | 723 |
| ೧೯. | **ಯತ್ಸೋಮ ಚಿತ್ರಂ** ಎಂಬ ಹತ್ತೊಂಭತ್ತನೆಯ ಸೂಕ್ತ | 729 |
| ೨೦. | **ಪ್ರ ಕವಿರ್ದೇವವೀತಯೇ** ಎಂಬ ಇಪ್ಪತ್ತನೆಯ ಸೂಕ್ತ | 736 |
| ೨೧. | **ಏತೇ ಧಾವಂತಿ** ಎಂಬ ಇಪ್ಪತ್ತೊಂದನೆಯ ಸೂಕ್ತ | 743 |
| ೨೨. | **ಏತೇ ಸೋಮಾಸಃ** ಎಂಬ ಇಪ್ಪತ್ತೆರಡನೆಯ ಸೂಕ್ತ | 749 |
| ೨೩. | **ಸೋಮಾ ಅಸೃಗ್ರಂ** ಎಂಬ ಇಪ್ಪತ್ತಮೂರನೆಯ ಸೂಕ್ತ | 756 |
| ೨೪. | **ಪ್ರ ಸೋಮಾಸಃ** ಎಂಬ ಇಪ್ಪತ್ತನಾಲ್ಕನೆಯ ಸೂಕ್ತ | 763 |
| ೨೫. | **ಪವಸ್ವ ದಕ್ಷಸಾಧನಃ** ಎಂಬ ಇಪ್ಪತ್ತೈದನೆಯ ಸೂಕ್ತ | 769 |
| ೨೬. | **ತಮಮೃಕ್ಷಂತ** ಎಂಬ ಇಪ್ಪತ್ತಾರನೆಯ ಸೂಕ್ತ | 775 |
| ೨೭. | **ಏಷ ಕವಿರಭಿಷ್ಟುತಃ** ಎಂಬ ಇಪ್ಪತ್ತೇಳನೆಯ ಸೂಕ್ತ | 781 |
| ೨೮. | **ಏಷ ವಾಜೀ** ಎಂಬ ಇಪ್ಪತ್ತೆಂಟನೆಯ ಸೂಕ್ತ | 787 |
| ೨೯. | **ಪ್ರಾಸ್ಯ ಧಾರಾಃ** ಎಂಬ ಇಪ್ಪತ್ತೊಂಭತ್ತನೆಯ ಸೂಕ್ತ | 793 |
| ೩೦. | **ಪ್ರ ಧಾರಾ ಅಸ್ಯ** ಎಂಬ ಮೂವತ್ತನೆಯ ಸೂಕ್ತ | 799 |
| ೩೧. | **ಪ್ರ ಸೋಮಾಸಃ** ಎಂಬ ಮೂವತ್ತೊಂದನೆಯ ಸೂಕ್ತ | 805 |
| ೩೨. | **ಪ್ರ ಸೋಮಾಸಃ** ಎಂಬ ಮೂವತ್ತೆರಡನೆಯ ಸೂಕ್ತ | 811 |
| ೩೩. | **ಪ್ರ ಸೋಮಾಸಃ** ಎಂಬ ಮೂವತ್ತಮೂರನೆಯ ಸೂಕ್ತ | 817 |
| ೩೪. | **ಪ್ರ ಸುವಾನಃ** ಎಂಬ ಮೂವತ್ತನಾಲ್ಕನೆಯ ಸೂಕ್ತ | 822 |
| ೩೫. | **ಆ ನಃ ಪವಸ್ವ** ಎಂಬ ಮೂವತ್ತೈದನೆಯ ಸೂಕ್ತ | 828 |
| ೩೬. | **ಅಸರ್ಜಿ ರಥ್ಯಃ** ಎಂಬ ಮೂವತ್ತಾರನೆಯ ಸೂಕ್ತ | 834 |
| ೩೭ | **ಸ ಸುತಃ ಪೀತಯೇ** ಎಂಬ ಮೂವತ್ತೇಳನೆಯ ಸೂಕ್ತ | 839 |
| ೩೮. | **ಏಷ ಉ ಸ್ಯ** ಎಂಬ ಮೂವತ್ತೆಂಟನೆಯ ಸೂಕ್ತ | 845 |

೩೯. ಆಶುರರ್ಷ ಎಂಬ ಮೂವತ್ತೊಂಭತ್ತನೆಯ ಸೂಕ್ತ 850

೪೦. ಪುನಾನೋ ಅಕ್ರಮೀತ್ ಎಂಬ ನಲವತ್ತನೆಯ ಸೂಕ್ತ 556

೪೧. ಪ್ರ ಯೇ ಗಾವಃ ಎಂಬ ನಲವತ್ತೊಂದನೆಯ ಸೂಕ್ತ 861

೪೨. ಜನಯನ್ರೋಚನಾ ಎಂಬ ನಲವತ್ತೆರಡನೆಯ ಸೂಕ್ತ 867

೪೩. ಯೋ ಅತ್ಯಇವ ಎಂಬ ನಲವತ್ತಮೂರನೆಯ ಸೂಕ್ತ 872


ವಿಷಯಾನುಕ್ರಮಣಿಕೆ ಸಮಾಪ್ತವು

Printed by K. Venkatasubbiah, at Sri Vinayak Printing Works, Mysore

॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

## ಸಾಯಣಭಾಷ್ಯಸಹಿತಾ

# ಋಗ್ವೇದಸಂಹಿತಾ

## ಭಾಗ—೧೫

## ಅಥ ಷಷ್ಠಾಷ್ಟಕೇ ಪಂಚಮೋಽಧ್ಯಾಯಃ

### ಆರನೆಯ ಅಷ್ಟಕದಲ್ಲಿ ಐದನೆಯ ಅಧ್ಯಾಯವು

## ಎಂಟನೆಯ ಮಂಡಲದಲ್ಲಿ ಅರವತ್ತೆಂಟನೆಯ ಸೂಕ್ತವು.

---

॥ ಸಾಯಣಭಾಷ್ಯಂ ॥

ತತ್ರ ತ್ವಾ ರಥಮಿತ್ಯೇಕೋನವಿಂಶತ್ಯೃಚಂ ನವಮಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಆ ತ್ವೈಕೋನಾ ಪ್ರಿಯಮೇಧ ಆದಾವನುಷ್ಟುಪ್ತ್ರ್ಯಾಸ್ತ್ರ್ಯೃಚಾಶ್ಚತ್ವಾರೋಽಂತ್ಯಾಃ ಷಳೃಕ್ಷಾಶ್ವಮೇಧಯೋರ್ದಾನಸ್ತುತಿರಿತಿ । ಆಂಗಿರಸಃ ಪ್ರಿಯಮೇಧ ಋಷಿಃ । ಪ್ರಥಮಾಚತುರ್ಥೀಸಪ್ತಮೀದಶಮ್ಯೋಽನುಷ್ಟುಭಃ ಶಿಷ್ಟಾಃ ಪರಂ ಗಾಯತ್ರಮಿತಿ ಪರಿಭಾಷಯಾ ಗಾಯತ್ರ್ಯಃ । ಅಂತತಃ ಷಟ್ಸ್ವೃಕ್ಷ್ವೃಕ್ಷಾಶ್ವಮೇಧಯೋರ್ದಾನಂ ಸ್ತೂಯತೇ । ಅತಸ್ತಾಸ್ತದ್ದೇವತಾಕಾಃ । ಶಿಷ್ಟಾ ಅನುಕ್ತಪರಿಭಾಷಯೈಂದ್ರ್ಯಃ ॥

**ಸೂಕ್ತವಿನಿಯೋಗೋ ಲೈಂಗಿಕಃ ॥ ಆದ್ಯಸ್ತೃಚೋ ಮರುತ್ವತೀಯಸ್ಯ ಪ್ರತಿಪತ್ । ತಥಾ ಚ ಸೂತ್ರಿತಂ ॥ ಆ ತ್ವಾ ರಥಂ ಯಥೋತಯ ಇದಂ ವಸೋ ಸುತಮಂಧ ಇತಿ ಮರುತ್ವತೀಯಸ್ಯ ಪ್ರತಿಪದನುಚರೌ । ಆ. ೫-೧೪ । ಇತಿ ॥ ಮಹಾವ್ರತಾದಿಷ್ವಪಿ ಯತ್ರ ತೃಚಾಂತರಂ ನ ವಿಧೀಯತೇ ತತ್ರ ಸರ್ವತ್ರಾಯಮೇವ ಪ್ರತಿಪದ್ಭವತಿ ॥**

ಅನುವಾದವು—ಋಗ್ವೇದಸಂಹಿತೆಯ ಎಂಟನೇ ಮಂಡಲದಲ್ಲಿ ಏಳನೆಯ ಅನುವಾಕದಲ್ಲಿ ಒಟ್ಟು ಹತ್ತು ಸೂಕ್ತಗಳಿರುವವು. ಅವುಗಳಲ್ಲಿ ಎಂಟು ಸೂಕ್ತಗಳನ್ನು ಹಿಂದಿನ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈಗ **ಆ ತ್ವಾ ರಥಂ** ಎಂಬ ಈ ಸೂಕ್ತವು ಈ ಅನುವಾಕದಲ್ಲಿ ಒಂಭತ್ತನೆಯದು. ಅನುಕ್ರಮಣಿಕೆಯಲ್ಲಿ—**ಆ ತ್ವೈಕೋನಾ ಪ್ರಿಯಮೇಧ ಆದಾವನುಷ್ಟುಮ್ಮುಖಾಸ್ತೃಚಾಶ್ಚ ತ್ವಾರೋಽನ್ತ್ಯಾಃ ಷಳೃಕ್ಷಾಶ್ವಮೇಧಯೋರ್ದಾನಸ್ತುತಿಃ** ಎಂದು ಹೇಳಿರುವುದು ಈ ಸೂಕ್ತಕ್ಕೆ ಅಂಗಿರಸಪುತ್ರನಾದ ಪ್ರಿಯಮೇಧನೆಂಬುವನು ಋಷಿಯು; ಈ ಸೂಕ್ತದ ಒಂದು, ನಾಲ್ಕು, ಏಳು ಮತ್ತು ಹತ್ತನೆಯ ಋಕ್ಕುಗಳು ಅನುಷ್ಟುಪ್ ಛಂದಸ್ಕವು; ಉಳಿದ ಋಕ್ಕುಗಳು ಗಾಯತ್ರೀ ಛಂದಸ್ಕವು. ಕೊನೆಯ ಆರು ಋಕ್ಕುಗಳಲ್ಲಿ ಋಕ್ಷ ಮತ್ತು ಅಶ್ವಮೇಧ ಎಂಬಿಬ್ಬರ ದಾನಪ್ರಶಂಸೆಯು ಉಕ್ತವಾಗಿದೆ. ಆದುದರಿಂದ ಆ ಋಕ್ಕುಗಳಿಗೆ ಅವರ ದಾನಸ್ತುತಿಯೇ ದೇವತೆಯು. ಉಳಿದ ಋಕ್ಕುಗಳಿಗೆ ಇಂದ್ರನು ದೇವತೆಯು. ಸೂಕ್ತವಿನಿಯೋಗವು ಲೈಂಗಿಕವು. ಈ ಸೂಕ್ತದ ಮೊದಲಿನ ಮೂರು ಋಕ್ಕುಗಳನ್ನು ಮರುತ್ವತೀಯಶಸ್ತ್ರಮಂತ್ರಗಳಲ್ಲಿ ಪ್ರತಿಪತ್ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ತ್ವಾ ರಥಂ ಯಥೋತಯ ಇದಂ ವಸೋ ಸುತಮಂಧ ಇತಿ ಮರುತ್ವತೀಯಸ್ಯ ಪ್ರತಿಪದನುಚರೌ** ಎಂಬ ಸೂತ್ರದಿಂದ (ಆ. ೫-೧೪) ವಿವೃತವಾಗಿರುವುದು. ಮತ್ತು ಮಹಾವ್ರತಾದಿ ಇಷ್ಟಿಗಳಲ್ಲಿಯೂ ಪ್ರತಿಪತ್ತೃಚಗಳಿಗಾಗಿ ಬೇರೆ ಮಂತ್ರಗಳನ್ನು ಪಠಿಸಬೇಕೆಂಬ ನಿರ್ದಿಷ್ಟವಿಧಿಯು ಇಲ್ಲದಿದ್ದರೆ ಆಗ ಮೇಲೆ ಹೇಳಿದ ಈ ತೃಚವನ್ನೇ ಪ್ರತಿಪತ್ತೃಚವನ್ನಾಗಿ ಪಠಿಸಬೇಕಾಗಿರುವುದು.

## ಸೂಕ್ತ—೬೮

ಮಂಡಲ—೮ ॥ ಅನುವಾಕ—೭ ॥ ಸೂಕ್ತ—೬೮ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೧, ೨, ೩, ೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೯ ॥
ಋಷಿಃ—ಪ್ರಿಯಮೇಧಃ ॥
ದೇವತಾ—೧-೧೩. ಇಂದ್ರಃ । ೧೪-೧೯. ಋಕ್ಷಾಶ್ವಮೇಧಯೋರ್ದಾನಸ್ತುತಿಃ ।
ಛಂದಃ—೧, ೪, ೭, ೧೦. ಅನುಷ್ಟುಪ್ । ೨, ೩, ೫, ೬, ೮, ೯, ೧೧-೧೯. ಗಾಯತ್ರೀ ॥

॥ ಸಂಹಿತಾಪಾಠಃ ॥

ಆ ತ್ವಾ ರಥಂ ಯಥೋತಯೇ ಸುಮ್ನಾಯ ವರ್ತಯಾಮಸಿ ।
ತುವಿಕೂರ್ಮಿಮೃತೀಷಹಮಿಂದ್ರ ಶವಿಷ್ಠ ಸತ್ಪತೇ ॥ ೧ ॥

॥ ಪದಪಾಠಃ ॥

ಆ । ತ್ವಾ । ರಥಂ । ಯಥಾ । ಊತಯೇ । ಸುಮ್ನಾಯ । ವರ್ತಯಾಮಸಿ ।

ತುವಿಽಕೂರ್ಮಿಂ । ಋತಿಽಸಹಂ । ಇಂದ್ರ । ಶವಿಷ್ಠ । ಸತ್ಽಪತೇ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ತ್ವಾ ತ್ವಾಮಾ ವರ್ತಯಾಮಸಿ । ಆವರ್ತಯಾಮಃ । ಕಿಮರ್ಥಂ । ಊತಯೇಽಸ್ಮಾಕಂ ರಕ್ಷಣಾಯ ಸುಮ್ನಾಯ ಸುಖಾಯ ಚ । ಕಿಮಿವ । ರಥಂ ಯಥಾ । ರಥಂ ಯಥೋಕ್ತಯೇ ಸುಖಾಯ ಚಾವರ್ತಯಂತಿ ತದ್ವತ್ । ಕೀದೃಶಂ ತ್ವಾಂ । ತುವಿಕೂರ್ಮಿಂ ಬಹುಕರ್ಮಾಣಮೃತೀಷಹಂ ಹಿಂಸಕಾನಾಮಭಿಭವಿತಾರಂ । ಹೇ ಇಂದ್ರ ಶವಿಷ್ಠಾತಿಶಯೇನ ಬಲವನ್ ಹೇ ಸತ್ಪತೇ ಸತಾಂ ಪಾಲಕ ತ್ವಾಮಿತಿ ಸ್ವಮನ್ವಯಃ ॥**

॥ ಪ್ರತಿಪದಾರ್ಥ ॥

**ಶವಿಷ್ಠ**—ಅತ್ಯಂತ ಬಲಯುತನೂ । **ಸತ್ಪತೇ**—ಸಜ್ಜನರ ಪಾಲನೂ ಆದ । **ಇಂದ್ರ**—ಎಲೈ ಇಂದ್ರನೇ **ತುವಿಕೂರ್ಮಿಂ**—ಅನೇಕ ವಿಧವಾದ ಕರ್ಮಕರ್ತನೂ । **ಋತೀಷಹಂ**—ಹಿಂಸಕರಾದ ಶತ್ರುಗಳನ್ನು ಉರುಳಿಸುವವನೂ ಆದ । **ತ್ವಾ**—ನಿನ್ನನ್ನು । **ಊತಯೇ**—ನಮ್ಮ ರಕ್ಷಣಾರ್ಥವಾಗಿಯೂ । **ಸುಮ್ನಾಯ**—ನಮ್ಮ ಸುಖಕ್ಕಾಗಿಯೂ ಸಹ । **ರಥಂ ಯಥಾ**—ರಥವು ನಿನ್ನನ್ನು ಕರೆತರುವಂತೆ । **ಆ ವರ್ತಮಾಯಸಿ**—ಕರೆತರುವೆವು.

॥ ಭಾವಾರ್ಥ ॥

ಅತ್ಯಂಥ ಬಲಯುತನೂ, ಸಜ್ಜನರ ಪಾಲಕನೂ ಆದ ಎಲೈ ಇಂದ್ರನೇ, ಅನೇಕ ವಿಧವಾದ ಕರ್ಮಕರ್ತನೂ, ಹಿಂಸಕರಾದ ಶತ್ರುಗಳನ್ನು ಉರುಳಿಸುವವನೂ ಆದ ನಿನ್ನನ್ನು ನಮ್ಮ ರಕ್ಷಣಾರ್ಥವಾಗಿಯೂ ನಮ್ಮ ಸುಖಕ್ಕಾಗಿಯೂ ಸಹ ರಥವು ನಿನ್ನನ್ನು ಕರೆತರುವಂತೆ ನಾವೂ ಕರೆತರುತ್ತೇವೆ

## English Translation

Most powerful Indra, protector of the good, we bring you here, rich in achievement and subduer of enemies, as a car for our protection and weal.

॥ ಸಂಹಿತಾಪಾಠಃ ॥

ತುವಿಶುಷ್ಮ ತುವಿಕ್ರತೋ ಶಚೀವೋ ವಿಶ್ವಯಾ ಮತೇ ।

ಆ ಪಪ್ರಾಥ ಮಹಿತ್ವನಾ ॥ ೨ ॥

॥ ಪದಪಾಠಃ ॥

ತುವಿಽಶುಷ್ಮ । ತುವಿಕ್ರತೋ ಇತಿ ತುವಿಽಕ್ರತೋ । ಶಚೀಽವಃ । ವಿಶ್ವಯಾ । ಮತೇ ।
ಆ । ಪಪ್ರಾಥ । ಮಹಿಽತ್ವನಾ ॥ ೨ ॥

॥ ಸಾಯಣಭಾಷ್ಯಂ ॥

ಹೇ ತುವಿಶುಷ್ಮ ಪ್ರಭೂತಬಲ ಹೇ ತುವಿಕ್ರತೋ ಬಹುಕರ್ಮನ್ । ಅಥವಾ ಬಹುಪ್ರಜ್ಞ ಕರ್ಮಣಃ ಪೃಥಗಭಿಧಾನಾತ್ । ಹೇ ಶಚೀವಃ ಬಹುಕರ್ಮೋಪೇತ ಮತೇ ಪೂಜನೀಯೇಂದ್ರ ವಿಶ್ವಯಾ ವಿಶ್ವವ್ಯಾಪ್ತೇನ ಮಹಿತ್ವನಾ ಮಹತ್ತ್ವೇನ ಪಪ್ರಾಥ । ಆಪೂರಿತವಾನಸಿ । ಅವಿಶೇಷಾದ್ವಿಶ್ವಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ತುವಿಶುಷ್ಮ**—ಅತ್ಯಧಿಕವಾದ ಬಲವುಳ್ಳವನೂ । **ತುವಿಕ್ರತೋ**—ಬಹುವಿಧವಾದ ಪ್ರಜ್ಞೆಯುಳ್ಳವನೂ । **ಶಚೀವಃ**—ಅನೇಕ ವಿಧವಾದ ಕರ್ಮೋಪೇತನೂ । **ಮತೇ**—ಪೂಜ್ಯನೂ ಆದ ಎಲೈ ಇಂದ್ರನೇ । **ವಿಶ್ವಯಾ**—ಸಮಸ್ತವಾದ । **ಮಹಿತ್ವನಾ**—ನಿನ್ನ ಮಾಹಾತ್ಮ್ಯದೊಡನೆ । **ಆ ಪಪ್ರಾಥ**—ನಿನ್ನ ಪ್ರಭಾವವನ್ನು ಸರ್ವತ್ರ ತುಂಬಿರುವೆ.

॥ ಭಾವಾರ್ಥ ॥

ಅತ್ಯಧಿಕವಾದ ಬಲವುಳ್ಳವನೂ, ಬಹುವಿಧವಾದ ಪ್ರಜ್ಞೆಯುಳ್ಳವನೂ, ಅನೇಕ ವಿಧವಾದ ಕರ್ಮೋಪೇತನೂ ಪೂಜ್ಯನೂ ಆದ ಎಲೈ ಇಂದ್ರನೇ, ಸಮಸ್ತವಾದ ನಿನ್ನ ಮಾಹಾತ್ಮ್ಯದೊಡನೆ ನಿನ್ನ ಪ್ರಭಾವವನ್ನು ಸರ್ವತ್ರ ತುಂಬಿರುವೆ.

English Translation

Great in power, rich in deeds, mighty one, adorable, you have filled (all things) with your universal majesty.

॥ ಸಂಹಿತಾಪಾಠಃ ॥

ಯಸ್ಯ ತೇ ಮಹಿನಾ ಮಹಃ ಪರಿ ಜ್ಮಾಯಂತಮೀಯತುಃ ।
ಹಸ್ತಾ ವಜ್ರಂ ಹಿರಣ್ಯಯಂ ॥ ೩ ॥

॥ ಪದಪಾಠಃ ॥

ಯಸ್ಯ । ತೇ । ಮಹಿನಾ । ಮಹಃ । ಪರಿ । ಜ್ಮಾಯಂತಂ । ಈಯತುಃ ।
ಹಸ್ತಾ । ವಜ್ರಂ । ಹಿರಣ್ಯಯಂ ॥ ೩ ॥

॥ ಸಾಯಣಭಾಷ್ಯಂ ॥

ಮಹೋ ಮಹತೋ ಯಸ್ಯ ತೇ ತವ । ಯಚ್ಛಬ್ದಃ ಪ್ರಕೃತಪರಾಮರ್ಶಕಃ । ಪ್ರಕೃತಂ ತೂಕ್ತ-ಮೃಗ್ದ್ವಯಂ । ತತ್ರತ್ಯತುವಿಕೂರ್ಮಿರ್ಮೃತೀಷಹಮಿತ್ಯಾದ್ಯುಕ್ತಲಕ್ಷಣಸ್ಯ ತವೇತ್ಯರ್ಥಃ । ಮಹಿನಾ ಮಹ-ತ್ತ್ವೇನ ಹಸ್ತಾ ತವ ಹಸ್ತಾ ಹಸ್ತೌ ಜ್ಮಾಯಂತಂ ಪೃಥಿವ್ಯಾಂ ಸರ್ವತೋ ವ್ಯಾಪ್ನುವಂತಂ ಹಿರಣ್ಯಯಂ ಹಿರಣ್ಮಯಂ ವಜ್ರಮಾಯತುಃ ಪರಿಗೃಹ್ಣೀತಃ । ಸರ್ವದಾಸ್ಮಾಕಂ ಭಯನಿವಾರಣಾಯೇತಿ ಭಾವಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ಯಸ್ಯ—ಹಿಂದೆ ಹೇಳಿದ ಗುಣಗಳುಳ್ಳವನೂ । ಮಹಃ—ಮಹಾತ್ಮನೂ ಆದ । ತೇ—ನಿನ್ನ । ಮಹಿನಾ—ಮಹತ್ವದಿಂದಲೇ । ಹಸ್ತಾ—ನಿನ್ನ ಎರಡು ಹಸ್ತಗಳೂ । ಪರಿ ಜ್ಮಾಯಂತಂ—ಸರ್ವತ್ರ ವ್ಯಾಪಿಸಿರುವುದೂ । ಹಿರಣ್ಯಯಂ—ಸುವರ್ಣನಿರ್ಮಿತವಾದುದೂ ಆದ । ವಜ್ರಂ—ವಜ್ರಾಯುಧವನ್ನು । ಆಯತುಃ— ಹಿಡಿದಿರುತ್ತವೆ

॥ ಭಾವಾರ್ಥ ॥

ಎಲೈ ಇಂದ್ರನೇ, ಹಿಂದೆ ವರ್ಣಿತವಾದ ಗುಣಗಳುಳ್ಳವನೂ, ಮಹಾತ್ಮನೂ ಆದ ನಿನ್ನ ಮಹತ್ವದಿಂದಲೇ, ನಿನ್ನ ಎರಡು ಹಸ್ತಗಳೂ ಸರ್ವತ್ರ ವ್ಯಾಪಿಸುವುದೂ, ಸುವರ್ಣನಿರ್ಮಿತವಾದುದೂ ಆದ ವಜ್ರಾಯುಧವನ್ನು ಹಿಡಿದಿರುತ್ತವೆ

English Translation

You mighty one, whose hands in your might grasp the all-pervading golden thunderbolt.

॥ ಸಂಹಿತಾಪಾಠಃ ॥

ವಿಶ್ವಾನರಸ್ಯ ವಸ್ಪತಿಮನಾನತಸ್ಯ ಶವಸಃ ।
ಏವೈಶ್ಚ ಚರ್ಷಣೀನಾಮೂತೀ ಹುವೇ ರಥಾನಾಂ ॥ ೪ ॥

॥ ಪದಪಾಠಃ ॥

ವಿಶ್ವಾನರಸ್ಯ । ವಃ । ಪತಿಂ । ಅನಾನತಸ್ಯ । ಶವಸಃ ।
ಏವೈಃ । ಚ । ಚರ್ಷಣೀನಾಂ । ಊತೀ । ಹುವೇ । ರಥಾನಾಂ ॥ ೪ ॥

॥ ಸಾಯಣಭಾಷ್ಯಂ ॥

ಪೃಷ್ಠ್ಯಾಭಿಪ್ಲವಷಡಹಯೋರ್ದ್ವಿತೀಯೇಽಹನಿ ವಿಶ್ವಾನರಸ್ಯೇತಿ ಪ್ರತಿಪತ್ತ್ರ್ಯೃಚಃ । ಸೂತ್ರಿತಂ ಚ । ವಿಶ್ವಾನರಸ್ಯ ವಸ್ಪತಿಮಿಂದ್ರ ಇತ್ಯೋಮುಷಾ ಏಕ ಇತಿ ಮರುತ್ವತೀಯಸ್ಯ ಪ್ರತಿಪದನುಚರೌ । ಆ. ೭-೬ । ಇತಿ ॥

ವಿಶ್ವಾನರಸ್ಯ ವಿಶ್ವಾಞ್ಞತ್ರೂನ್ನೃತ್ಯೃತಸ್ಯಾನಾನತಸ್ಯ ಶತ್ರೂಣಾಮಪ್ರಹ್ವಸ್ಯ ಶವಸೋ ಬಲಸ್ಯ ಪತಿಂ ಸ್ವಾಮಿನಮಿಂದ್ರಂ ವಾ । ಅತ್ರೇಂದ್ರಸಂಬಂಧಿನೋ ಮರುತೋಽಪಿ ಸಂಕೀರ್ತ್ಯಂತೇ । ಹೇ ಮರುತಃ ವಃ। ಯುಷ್ಮಾಕಮಿತ್ಯರ್ಥಃ। ಯದ್ಯಪಿ ಮರುತ್ಸಂಶಬ್ದನಂ ನಾಸ್ತಿ ತಥಾಪಿ ವ ಇತಿ ಸಾಮರ್ಥ್ಯಾ-ಲ್ಲಭ್ಯತೇ । ಯುಷ್ಮಾಕಂ ಚರ್ಷಣೀನಾಮಿಂದ್ರಸ್ಯ ಸೇನಾರೂಪಾಣಾಂ ವೋ ಯುಷ್ಮಾಕಂ ಗಮನೈರಿತಿ ಸಾಮಾನಾಧಿಕರಣ್ಯಂ। ಯುಷ್ಮಾಕಂ ರಥಾನಾಂ ಚೋತ್ಯೂತಿಭಿರ್ಗಮನೈಶ್ಚ ಸಹ ಹುವೇ। ಆಹ್ವಯಾಮಿ। ಗಂತೃಭೀ ರಥೈರ್ಗಂತೃಭಿರ್ಮರುದ್ಭಿಶ್ಚ ಸಹೇಂದ್ರಂ ಹುವ ಇತ್ಯರ್ಥಃ । ಯದ್ವಾ । ಹೇ ಯಜಮಾನಾಃ ಯುಷ್ಮದೀಯಾಃ ಸೈನಿಕಾಃ ಸರಥಾ ಯದಾ ಪ್ರವಿಶಂತಿ ಯುದ್ಧಾಯ ಸಂಗ್ರಾಮಂ ತದಾನೀಂ ತೇಷಾಂ ಸಾಹಾಯ್ಯಾಯೇಂದ್ರಂ ಹುವ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಮರುತ್ತುಗಳೇ) ವಃ—ನಿಮ್ಮ । ಚರ್ಷಣೀನಾಂ—ಸೈನ್ಯರೂಪದ । ಏವೈಃ—ಗಮನಗಳೊಡನೆ ಕೂಡಿದವನೂ । ರಥಾನಾಂ—ನಿಮ್ಮ ರಥಗಳ । ಊತೀ ಚ—ರಕ್ಷಣೆಗಳೊಡನೆ ಕೂಡಿದವನೂ ಮತ್ತು । ವಿಶ್ವಾನರಸ್ಯ—ಸಕಲ ಶತ್ರುಜನರನ್ನೂ ನಾಶಪಡಿಸತಕ್ಕದ್ದೂ । ಅನಾನತಸ್ಯ—ಯಾವ ಶತ್ರುವಿಗೂ ಬಗ್ಗದಿರುವುದೂ ಆದ । ಶವಸಃ—ಬಲಕ್ಕೆ । ಪತಿಂ—ಒಡೆಯನಾದವನೂ ಆದ ಇಂದ್ರನನ್ನು । ಹುವೇ—ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಎಲೈ ಮರುತ್ತುಗಳೇ, ನಿಮ್ಮ ಸೈನ್ಯರೂಪದ ಗಮನಗಳೊಡನೆ ಕೂಡಿದವನೂ, ನಿಮ್ಮ ರಥಗಳ ರಕ್ಷಣೆಗಳೊಡನೆ ಕೂಡಿದವನೂ ಮತ್ತು ಸಕಲ ಶತ್ರುಜನರನ್ನೂ ನಾಶಪಡಿಸುವುದೂ ಯಾವ ಶತ್ರುವಿಗೂ ಬಗ್ಗದಿರುವುದೂ ಆದ ಬಲಕ್ಕೆ ಒಡೆಯನೂ ಆದ ಇಂದ್ರನನ್ನು ಪ್ರಾರ್ಥಿಸಿ ಕರೆಯುತ್ತೇನೆ.

English Translation

I invoke (Indra) the lord of that might which subdues all enemies and bows to none,—(I invoke him) followed by your onsets as his soldiers and (surrounded) by the protection of your chariots (O Maruts).

॥ ವಿಶೇಷವಿಷಯಗಳು ॥

ಪೃಷ್ಠ್ಯ ಮತ್ತು ಅಭಿಪ್ಲವಷಡಹವೆಂಬ ಯಾಗಗಳ ಎರಡನೆಯ ದಿವಸ ವಿಶ್ವಾನರಸ್ಯ ಎಂದು ಮೊದಲಾಗುವ ಮೂರು ಋಕ್ಕುಗಳನ್ನು (ಈ ಸೂಕ್ತದ ೪-೬ ಋಕ್ಕುಗಳನ್ನು) ಮರುತ್ವತೀಯ ಶಸ್ತ್ರಮಂತ್ರಪಠನಕಾಲದಲ್ಲಿ ಪ್ರತಿಪ

ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ **ವಿಶ್ವಾನರಸ್ಯ ವನಸ್ಪತಿಮಿಂದ್ರ ಇತ್ಯೋಮಸಾ ಏಕ ಇತಿ ಮರುತ್ವತೀಯಸ್ಯ ಪ್ರದಿಪದನುಚರೌ** ಎಂಬ ಸೂತ್ರದಿಂದ (ಆ ೭-೬) ವಿಸ್ತೃತವಾಗಿರುವುದು

॥ ಸಂಹಿತಾಪಾಠಃ ॥

ಅಭಿಷ್ಟಯೇ ಸದಾವೃಧಂ ಸ್ವರ್ಮೀಳ್ಹೇಷು ಯಂ ನರಃ ।
ನಾನಾ ಹವಂತ ಊತಯೇ ॥ ೫ ॥

॥ ಪದಪಾಠಃ ॥

**ಅಭಿಷ್ಟಯೇ । ಸದಾಽವೃಧಂ । ಸ್ವಃಽಮೀಳ್ಹೇಷು । ಯಂ । ನರಃ ।**
**ನಾನಾ । ಹವಂತೇ । ಊತಯೇ** ॥ ೫ ॥

॥ ಸಾಯಣಭಾಷ್ಯಂ ॥

**ಹೇ ಯಜಮಾನಾಃ ಯುಷ್ಮಾಕಮಭಿಷ್ಟಯೇ ಸಾಹಾಯ್ಯಾರ್ಥಮಭಿಗಮನಾಯಾಭಿಷ್ಟಯೇ ವಾ ಸದಾವೃಧಂ ಸರ್ವದಾ ವರ್ಧಯಂತಂ ಸೇವಕಾನ್ ಸ್ವಯಂ ಸರ್ವದಾ ವರ್ಧಮಾನಂ ವಾ ಹುವ ಇತಿ ಶೇಷಃ । ಯಂ ಸ್ವರ್ಮೀಳ್ಹೇಷು ಸಂಗ್ರಾಮೇಷು ನರೋ ನೇತಾರೋ ಮನುಷ್ಯಾ ನಾನಾ ಬಹುಪ್ರಕಾರಂ ಹವಂತೇ ಆಹ್ವಯಂತ್ಯೂತಯೇ ರಕ್ಷಾರ್ಥಂ** ತಂ ಹುವ ಇತಿ ಶೇಷಃ ॥

॥ ಪ್ರತಿಪದಾರ್ಥ ॥

(ಎಲೈ ಯಜಮಾನರೇ) **ಯಂ**—ಯಾವ ಇಂದ್ರನನ್ನು । **ಸ್ವರ್ಮೀಳ್ಹೇಷು**— ಸಂಗ್ರಾಮಗಳಲ್ಲಿ । **ನರಃ**— ಮಾನವರು । **ನಾನಾ**—ಅನೇಕಪ್ರಕಾರವಾಗಿ । **ಹವಂತೇ**—ಕರೆಯುವರೋ ಅಂತಹವನೂ । **ಸದಾವೃಧಂ**— ತನ್ನ ಭಕ್ತರನ್ನು ಪ್ರವೃದ್ಧರನ್ನಾಗಿ ಸರ್ವದಾ ಮಾಡುವವನೂ ಅಥವಾ ಸರ್ವದಾ ವೃದ್ಧಿಯನ್ನು ಹೊಂದುವವನೂ ಆದ ಇಂದ್ರನನ್ನು । **ಅಭಿಷ್ಟಯೇ**—ಇಷ್ಟಾರ್ಥಸಿದ್ಧಿಗಾಗಿಯೂ । **ಊತಯೇ**—ರಕ್ಷಣಾರ್ಥವಾಗಿಯೂ (ಪ್ರಾರ್ಥಿಸಿ ಕರೆಯೋಣ)

॥ ಭಾವಾರ್ಥ ॥

**ಎಲೈ ಯಜಮಾನರೇ, ಯಾವ ಇಂದ್ರನನ್ನು ಸಂಗ್ರಾಮಗಳಲ್ಲಿ ಮಾನವರು ಅನೇಕಪ್ರಕಾರವಾಗಿ ಕರೆಯುವರೋ ಅಂತಹವನೂ, ತನ್ನ ಭಕ್ತರನ್ನು ಪ್ರವೃದ್ಧರನ್ನಾಗಿ ಸರ್ವದಾ ಮಾಡುವವನೂ ಅಥವಾ ಸರ್ವದಾ ಸ್ವಯಂ ವೃದ್ಧಿಯನ್ನು ಹೊಂದುವವನೂ ಆದ ಇಂದ್ರನನ್ನು ಇಷ್ಟಾರ್ಥಸಿದ್ಧಿಗಾಗಿಯೂ ರಕ್ಷಣಾರ್ಥವಾಗಿಯೂ ಪ್ರಾರ್ಥಿಸಿ ಕರೆಯೋಣ.**

English Translation

(I invoke him) to come to our help, whose might ever waxes more and more,—to whom men appeal for aid in various ways in battles.

॥ ಸಂಹಿತಾಪಾಠಃ ॥

ಪರೋಮಾತ್ರಮೃಚೀಷಮಮಿಂದ್ರಮುಗ್ರಂ ಸುರಾಧಸಂ ।
ಈಶಾನಂ ಚಿದ್ವಸೂನಾಂ ॥ ೬ ॥

॥ ಪದಪಾಠಃ ॥

ಪರಃಽಮಾತ್ರಂ । ಋಚೀಷಮಂ । ಇಂದ್ರಂ । ಉಗ್ರಂ । ಸುಽರಾಧಸಂ ।
ಈಶಾನಂ । ಚಿತ್ । ವಸೂನಾಂ ॥ ೬ ॥

॥ ಸಾಯಣಭಾಷ್ಯಂ ॥

ಪರೋಮಾತ್ರಂ । ಪರಾ ಮಾತ್ರಾ ಯಸ್ಯ ತಾದೃಶಂ । ಅಥವಾ ಮೀಯತ ಇತಿ ಮಾತ್ರಂ ದಂರದೇಶಃ । ತತಃ ಪರಸ್ತಾದ್ವರ್ತಮಾನಮಪರಿಮಿತಸ್ವರೂಪಂ । ತಥಾಪ್ಯೃಚೀಷಮಮೃಚಾ ಸ್ತುತ್ಯಾ ಸಮಂ । ಯದ್ಯಪ್ಯಪರಿಚ್ಛಿನ್ನಃ ತಥಾಪಿ ಸ್ತುತಿರ್ಯಾವನ್ಮಾತ್ರಂ ವಿಷಯೀಕರೋತಿ । ತತ್ಸಮ ಇತ್ಯರ್ಥಃ । ತದೇವಾಹ । ಇಂದ್ರಂ ಪರಮೈಶ್ವರ್ಯಯೋಗಿತ್ವಾದಿಚ್ಛಾನುಕೂಲಸ್ವರೂಪಮುಗ್ರಮುದ್ಗೂರ್ಣಬಲಂ ಸುರಾಧಸಂ । ರಾಧ ಇತಿ ಧನನಾಮ । ಶೋಭನಧನಂ ಶೋಭನಾನ್ನಂ ವೇಶಾನಂ ಚಿದೀಶ್ವರಂ ಚ । ಕೇಷಾಂ । ವಸೂನಾಮಸ್ಮಭ್ಯಂ ಪ್ರದೇಯಾನಾಂ ಗವಾದಿಧನಾನಾಂ । ಏವಂ ಮಹಾನುಭಾವಮಿಂದ್ರಂ ಹುವ ಇತಿ ಶೇಷಃ ॥

॥ ಪ್ರತಿಪದಾರ್ಥ ॥

**ಪರೋಮಾತ್ರಂ**—ಅಳತೆಗೆ ಮೀರಿದವನೂ । **ಋಚೀಷಮಂ**—ಶ್ರೇಷ್ಠವಾದ ಸ್ತುತಿಗೆ ಪಾತ್ರನಾದವನೂ । **ಉಗ್ರಂ**—ಅತ್ಯಧಿಕವಾದ ಬಲವುಳ್ಳವನೂ । **ಸುರಾಧಸಂ**—ಉತ್ತಮವಾದ ಧನವುಳ್ಳವನೂ । **ಈಶಾನಂ ಚಿತ್**—ಸಕಲ ವಿಶ್ವಕ್ಕೂ ಒಡೆಯನೂ ಆದ । **ಇಂದ್ರಂ**—ಇಂದ್ರನನ್ನು । **ವಸೂನಾಂ**—ಧನನಿಮಿತ್ತವಾಗಿ (ಪ್ರಾರ್ಥಿಸಿ ಕರೆಯೋಣ).

॥ ಭಾವಾರ್ಥ ॥

ಅಳತೆಗೆ ಮೀರಿದವನೂ, ಶ್ರೇಷ್ಠವಾದ ಸ್ತುತಿಗೆ ಪಾತ್ರನಾದವನೂ, ಅತ್ಯಧಿಕವಾದ ಬಲವುಳ್ಳವನೂ, ಉತ್ತಮವಾದ ಧನವುಳ್ಳವನೂ, ಸಕಲ ವಿಶ್ವಕ್ಕೂ ಒಡೆಯನೂ ಆದ ಇಂದ್ರನನ್ನು ಧನನಿಮಿತ್ತವಾಗಿ ಪ್ರಾರ್ಥಿಸಿ ಕರೆಯೋಣ.

## English Translation

(I invoke) Indra, the unlimited, worthy of praise, the mighty, possessing excellent wealth, the lord of treasures (for his votaries).

॥ ಸಂಹಿತಾಪಾಠಃ ॥

ತಂತಮಿದ್ರಾಧಸೇ ಮಹ ಇಂದ್ರಂ ಚೋದಾಮಿ ಪೀತಯೇ ।
ಯಃ ಪೂರ್ವ್ಯಾಮನುಷ್ಟುತಿಮೀಶೇ ಕೃಷ್ಟೀನಾಂ ನೃತುಃ ॥ ೭ ॥

॥ ಪದಪಾಠಃ ॥

ತಂऽತಂ । ಇತ್ । ರಾಧಸೇ । ಮಹೇ । ಇಂದ್ರಂ । ಚೋದಾಮಿ । ಪೀತಯೇ ।
ಯಃ । ಪೂರ್ವ್ಯಾಂ । ಅನುऽಸ್ತುತಿಂ । ಈಶೇ । ಕೃಷ್ಟೀನಾಂ । ನೃತುಃ ॥ ೭ ॥

॥ ಸಾಯಣಭಾಷ್ಯಂ ॥

ತೃತೀಯೇಽಹನಿ ಮರುತ್ವತೀಯೇ ತಂತಮಿದಿತಿ ಪ್ರತಿಪತ್ತೃಚಃ । ಸೂತ್ರಿತಂ ಚ । ತಂತಮಿದ್ರಾಧಸೇ ಮಹೇ ತ್ರಯ ಇಂದ್ರಸ್ಯ ಸೋಮಾಃ । ಆ. ೭-೧೦ । ಇತಿ ॥

ತಂ ತಮಿತ್ತಮೇವೇಂದ್ರಂ । ಸರ್ವೇಷ್ವಪಿ ಯಾಗಕಾಲೇಷು ತಮೇವೇಂದ್ರಮಿತ್ಯರ್ಥಃ। ತಂ ಪ್ರತಿ ಚೋದಾಮಿ ಪ್ರೇರಯಾಮಿ ಸ್ತುತಿಂ ಪೀತಯೇ ಸೋಮಪಾನಾಯ । ತತಃ ಕೋ ಲಾಭ ಇತಿ ಉಚ್ಯತೇ । ಮಹೇ ಮಹತೇ ರಾಧಸೇ ಧನಾಯ ಪ್ರಭೂತಧನಲಾಭಾರ್ಥಂ । ಯೋ ನೃತುಃ ಫಲಸ್ಯ ನೇತಾ ದೇವಃ ಪೂರ್ವ್ಯಾಂ ಪೂರ್ವೇ ಭವಾಂ ಯಜ್ಞಮುಖಸ್ಥಾಮನುಷ್ಟುತಿಮನುಕ್ರಮೇಣ ಕ್ರಿಯಾಮಾಣಾಂ ಸ್ತುತಿಂ ಕೃಷ್ಟೀನಾಂ ಮನುಷ್ಯಾಣಾಮೃತ್ವಿಜಾಂ ಸಂಬಂಧಿನೀಮೀಶೇ ಈಷ್ಟೇ ಶ್ರೋತುಂ ತಂ ಚೋದಾಮೀತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ನೃತುಃ**—ಫಲಸಂಪಾದಕನಾದ । **ಯಃ**—ಯಾವ ಇಂದ್ರನು । **ಕೃಷ್ಟೀನಾಂ**—ಋತ್ವಿಗಾದಿಗಳಿಂದ ನಿರ್ಮಿತವಾದುದೂ । **ಪೂರ್ವ್ಯಾಂ**—ಯಜ್ಞದಲ್ಲಿ ಮುಖ್ಯಸ್ಥವಾದುದೂ । **ಅನುಷ್ಟುತಿಂ**—ಕ್ರಮವಾಗಿ ಪಠಿತವಾದುದೂ ಆದ ಸ್ತುತಿಯನ್ನು । **ಈಶೇ**—ಕೇಳಲು ಸಮರ್ಥನೋ । **ತಂ ತಮಿತ್ ಇಂದ್ರಂ**—ಅದೇ ಇಂದ್ರನನ್ನೇ । **ಮಹೇ**—ಮಹತ್ತಾದ । **ರಾಧಸೇ**—(ನನಗೆ) ಧನಲಾಭಾರ್ಥವಾಗಿ । **ಪೀತಯೇ**—ಸೋಮವನ್ನು ಪಾನಮಾಡಲು । **ಚೋದಾಮಿ**—ಪ್ರೇರಿಸುತ್ತೇನೆ

॥ ಭಾವಾರ್ಥ ॥

ಫಲಸಂಪಾದಕನಾದ ಯಾವ ಇಂದ್ರನು ಋತ್ವಿಗಾದಿಗಳಿಂದ ನಿರ್ಮಿತವಾದುದೂ, ಯಜ್ಞದಲ್ಲಿ ಮುಖ್ಯವಾದುದೂ, ಕ್ರಮವಾಗಿ ಪಠಿತವಾದುದೂ ಆದ ಸ್ತುತಿಯನ್ನು ಕೇಳಲು ಸಮರ್ಥನೋ ಅಂತಹ ಅದೇ ಇಂದ್ರನನ್ನೇ ನನಗೆ ಮಹತ್ತಾದ ಧನವು ಲಭಿಸುವುದಕ್ಕಾಗಿ ಸೋಮವನ್ನು ಪಾನಮಾಡಲು ಪ್ರೇರಿಸುತ್ತೇನೆ

## English Translation

To him, to him, Indra, I direct my praise, that he may quaff the Soma to my great gain,—to him, the bringer of success, who rules over the praises of the offerers at the opening of the sacrifice.

॥ ವಿಶೇಷವಿಷಯಗಳು ॥

ಯಾಗದ ಮೂರನೆಯ ದಿವಸ ಮರುತ್ವತೀಯಶಸ್ತ್ರಮಂತ್ರಪಠನಕಾಲದಲ್ಲಿ **ತಂತಮಿತ್** ಎಂದು ಮೊದಲಾಗುವ ಮೂರು ಋಕ್ಕುಗಳನ್ನು (ಈ ಸೂಕ್ತದ ೭–೯ ಋಕ್ಕುಗಳನ್ನು) ಪ್ರತಿಪತ್ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ತಂತಮಿದ್ರಾಧಸೇ ಮಹೇ ತ್ರಯ ಇಂದ್ರಸ್ಯ ಸೋಮಾಃ** ಎಂಬ ಸೂತ್ರದಿಂದ (ಆ. ೭–೧೦) ವಿವೃತವಾಗಿರುವುದು

॥ ಸಂಹಿತಾಪಾಠಃ ॥

ನ ಯಸ್ಯ ತೇ ಶವಸಾನ ಸಖ್ಯಮಾನಂಶ ಮರ್ತ್ಯಃ ।
ನಕಿಃ ಶವಾಂಸಿ ತೇ ನಶತ್ ॥ ೮ ॥

॥ ಪದಪಾಠಃ ॥

**ನ** । ಯಸ್ಯ । ತೇ । ಶವಸಾನ । ಸಖ್ಯಂ । ಆನಂಶ । ಮರ್ತ್ಯಃ ।
**ನಕಿಃ** । ಶವಾಂಸಿ । ತೇ । ನಶತ್ ॥ ೮ ॥

॥ ಸಾಯಣಭಾಷ್ಯಂ ॥

**ಹೇ ಶವಸಾನ ಬಲವನ್ನಿಂದ್ರ ಯಸ್ಯ ತೇ ತವ ಸಖ್ಯಂ ಮರ್ತ್ಯೋ ಮರಣಧರ್ಮಾ ಮನುಷ್ಯೋ ನಾನಂಶ ನ ವ್ಯಾಪ್ನೋತಿ ತೇ ಶವಾಂಸಿ ಬಲಾನ್ಯಪಿ ನಕಿರ್ನೈವ ನಶತ್ । ವ್ಯಾಪ್ನೋತಿ ॥**

॥ ಪ್ರತಿಪದಾರ್ಥ ॥

**ಶವಸಾನ**—ಶಕ್ತಿಯುತನಾದ ಎಲೈ ಇಂದ್ರನೇ । **ಯಸ್ಯ**—ಯಾವ ಮಹದ್ಗುಣಗಳುಳ್ಳ । **ತೇ**—ನಿನ್ನ ।

**ಸಖ್ಯಂ**—ಸ್ನೇಹವನ್ನು | **ಮರ್ತ್ಯಃ**—ಮಾನವನಾರೂ | **ನ ಆನಂಶ**—ಪಡೆಯಲಾರನೋ | **ತೇ**—ಅಂತಹ ನಿನ್ನ | **ಶವಾಂಸಿ**—ಶಕ್ತಿಗಳನ್ನೂ ಕೂಡ | **ನಕಿಃ ನಶತ್**—ಯಾರೂ ಹೊಂದಲಾರರು.

॥ ಭಾವಾರ್ಥ ॥

ಶಕ್ತಿಯುತನಾದ ಎಲೈ ಇಂದ್ರನೇ, ಯಾವ ಮಹದ್ಗುಣಗಳುಳ್ಳ ನಿನ್ನ ಸ್ನೇಹವನ್ನು ಮಾನವನಾರೂ ಪಡೆಯಲಾರನೋ, ಅಂತಹ ನಿನ್ನ ಶಕ್ತಿಗಳನ್ನೂ ಕೂಡ ಯಾರೂ ಹೊಂದಲಾರರು

English Translation

You mighty one, whose friendship no mortal reaches, whose might no one attains.

॥ ಸಂಹಿತಾಪಾಠಃ ॥

**ತ್ವೋತಾಸಸ್ತ್ವಾ ಯುಜಾಪ್ಸು ಸೂರ್ಯೇ ಮಹದ್ಧನಂ ।**

**ಜಯೇಮ ಪೃತ್ಸು ವಜ್ರಿವಃ ॥ ೯ ॥**

॥ ಪದಪಾಠಃ ॥

**ತ್ವಾಽಊತಾಸಃ | ತ್ವಾ | ಯುಜಾ | ಅಪ್ಽಸು | ಸೂರ್ಯೇ | ಮಹತ್ | ಧನಂ |**

**ಜಯೇಮ | ಪೃತ್ಽಸು | ವಜ್ರಿಽವಃ ॥ ೯ ॥**

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವೋತಾಸಸ್ತ್ವಯಾ ರಕ್ಷಿತಾಸ್ತ್ವಾ ತ್ವಯಾ ಯುಜಾ ಸಹಾಯೇನಾಪ್ಸು ಸ್ನಾತುಂ ಸೂರ್ಯಂ ದ್ರಷ್ಟುಂ ಚ | ಸ್ನಾನಾದಿವ್ಯವಹಾರಂ ಕರ್ತುಂ ಸೂರ್ಯೇ ಉದಿತೇ ಸತಿ ಗಮನಾದಿವ್ಯವಹಾರಂ ಕರ್ತುಮಿತ್ಯರ್ಥಃ | ತದರ್ಥಂ ಪೃತ್ಸು ಸಂಗ್ರಾಮೇಷು ಹೇ ವಜ್ರಿವೋ ವಜ್ರಿನ್ನಿಂದ್ರ ಮಹದ್ಧನಂ ಜಯೇಮ | ಶತ್ರೂನ್ ಸಂಗ್ರಾಮೇ ಜಿತ್ವಾ ತೇಷಾಂ ಧನಂ ಲಭೇಮೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ವಜ್ರಿವಃ**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ | **ತ್ವೋತಾಸಃ**—ನಿನ್ನಿಂದ ರಕ್ಷಿತರಾದವರೂ | **ತ್ವಾ ಯುಜಾ**—ನಿನ್ನ ಸಹಾಯವನ್ನು ಹೊಂದಿದವರೂ ಆದ ನಾವು | **ಅಪ್ಸು**—ತೀರ್ಥಗಳಲ್ಲಿ ಸ್ನಾನಮಾಡುವುದಕ್ಕೂ | **ಸೂರ್ಯೇ**—ಸೂರ್ಯೋದಯವಾದಾಗ ಅವನನ್ನು ದರ್ಶನಮಾಡುವುದಕ್ಕೂ | **ಪೃತ್ಸು**—ಸಂಗ್ರಾಮಗಳಲ್ಲಿ | **ಮಹದ್ಧನಂ**—ಅತ್ಯಧಿಕವಾದ ಧನವನ್ನು | **ಜಯೇಮ**—ಹೊಂದುವಂತಾಗಲಿ

॥ ಭಾವಾರ್ಥ ॥

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ನಿನ್ನಿಂದ ರಕ್ಷಿತರಾದವರೂ, ನಿನ್ನ ಸಹಾಯವನ್ನು ಹೊಂದಿದವರೂ ಆದ ನಾವು ತೀರ್ಥಗಳಲ್ಲಿ ಸ್ನಾನಮಾಡುವುದಕ್ಕೂ ಸೂರ್ಯೋದಯವಾದಾಗ ಅವನನ್ನು ದರ್ಶನಮಾಡುವುದಕ್ಕೂ ಸಂಗ್ರಾಮಗಳಲ್ಲಿ ಅತ್ಯಧಿಕವಾದ ಧನವನ್ನು ಹೊಂದುವಂತಾಗಲಿ.

English Translation

Protected by you, O thunderer, with you as our ally, may we win great wealth in battles, that we may bathe in the water and behold the sun.

॥ ಸಂಹಿತಾಪಾಠಃ ॥

ತಂ ತ್ವಾ ಯಜ್ಞೇಭಿರೀಮಹೇ ತಂ ಗೀರ್ಭಿರ್ಗಿರ್ವಣಸ್ತಮ ।
ಇಂದ್ರ ಯಥಾ ಚಿದಾವಿಥ ವಾಜೇಷು ಪುರುಮಾಯ್ಯಂ ॥ ೧೦ ॥

॥ ಪದಪಾಠಃ ॥

ತಂ । ತ್ವಾ । ಯಜ್ಞೇಭಿಃ । ಈಮಹೇ । ತಂ । ಗೀಃऽಭಿಃ । ಗಿರ್ವಣಃऽತಮ ।
ಇಂದ್ರ । ಯಥಾ । ಚಿತ್ । ಆವಿಥ । ವಾಜೇಷು । ಪುರುऽಮಾಯ್ಯಂ ॥ ೧೦ ॥

॥ ಸಾಯಣಭಾಷ್ಯಂ ॥

ಚತುರ್ಥೇಽಹನಿ ಮರುತ್ವತೀಯೇ ತಂ ತ್ವಾ ಯಜ್ಞೇಭಿರಿತಿ ತೃಚಃ ಪ್ರತಿಪತ್ । ಸೂತ್ರಿತಂ ಚ । ತಂ ತ್ವಾ ಯಜ್ಞೇಭಿರೀಮಹ ಇದಂ ವಸೋ ಸುತಮಂಧ ಇತಿ ಮರುತ್ವತೀಯಸ್ಯ ಪ್ರತಿಪದನುಚರೌ । ಆ. ೭-೧೧ । ಇತಿ ॥

ತಂ ಸ್ತುತ್ಯತ್ವೇನ ಪ್ರಸಿದ್ಧಂ ತ್ವಾ ತ್ವಾಂ ಯಜ್ಞೇಭಿರ್ಯಾಗಸಾಧನೈಃ ಸೋಮಾದಿಭಿರೀಮಹೇ । ಯಾಚಾಮಹೇ । ತಮೇವೇಂದ್ರಂ ಗೀರ್ಭಿಃ ಸ್ತುತಿಭಿರೀಮಹೇ । ಹೇ ಗಿರ್ವಣಸ್ತಮ ಗೀರ್ಭಿಃ ಸ್ತುತಿಭಿರ್ವನನೀಯತಮೇಂದ್ರ ತಂ ತ್ವಾಮಿತಿ ಸಮನ್ವಯಃ । ಹೇ ಇಂದ್ರ ತ್ವಂ ಯಥಾ ಚಿದಾವಿಥ ಯೇನ ಪ್ರಕಾರೇಣ ರರಕ್ಷಿಥ ಮಾಂ । ಚಿದಿತಿ ಪೂರಣಃ । ಕುತ್ರೇತಿ ಉಚ್ಯತೇ । ವಾಜೇಷು ಸಂಗ್ರಾಮೇಷು । ಈದೃಶಂ ಮಾಂ । ಪುರುಮಾಯ್ಯಂ ಬಹುಪ್ರಜ್ಞಂ । ಬಹುಸ್ತುತಿಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಗಿರ್ವಣಸ್ತಮ**—ಸ್ತುತಿಗಳಿಂದ ಪೂಜಿಸಲ್ಪಡುವ । **ಇಂದ್ರ**—ಎಲೈ ಇಂದ್ರನೇ । **ಯಥಾ ಚಿತ್**—ಯಾವ ರೀತಿಯಲ್ಲಿ । **ಪುರುಮಾಯ್ಯಂ**—ಅಧಿಕವಾದ ಪ್ರಜ್ಞೆಯುಳ್ಳ ನನ್ನನ್ನು । **ವಾಜೇಷು**-ಸಂಗ್ರಾಮಗಳಲ್ಲಿ । **ಆವಿಥ**—

ರಕ್ಷಿಸಿದೆಯೋ (ಅದೇ ರೀತಿ) । **ತಂ—**ಪ್ರಸಿದ್ಧನಾದ । **ತ್ವಾ—**ನಿನ್ನನ್ನು । **ಯಜ್ಞೇಭಿಃ—**ಯಜ್ಞಸಾಧನವಾದ ಸೋಮದ ಅರ್ಪಣೆಯಿಂದಲೂ । **ಈಮಹೇ—**ಪೂಜಿಸಿ ಯಾಚಿಸುತ್ತೇವೆ । **ತಂ—**ಅದೇ ನಿನ್ನನ್ನು । **ಗೀರ್ಭಿಃ—**ಸ್ತುತಿಗಳಿಂದಲೂ ಪ್ರಶಂಸಿಸಿ ಯಾಚಿಸುತ್ತೇವೆ.

॥ ಭಾವಾರ್ಥ ॥

ಸ್ತುತಿಗಳಿಂದ ಪೂಜಿಸಲ್ಪಡತಕ್ಕ ಎಲೈ ಇಂದ್ರನೇ, ಯಾವ ರೀತಿಯಲ್ಲಿ ಅಧಿಕವಾದ ಪ್ರಜ್ಞೆಯುಳ್ಳ ನನ್ನನ್ನು ಸಂಗ್ರಾಮದಲ್ಲಿ ರಕ್ಷಿಸಿದೆಯೋ ಅದೇ ರೀತಿ ಪ್ರಸಿದ್ಧನಾದ ನಿನ್ನನ್ನು ಯಜ್ಞಸಾಧನವಾದ ಸೋಮದ ಅರ್ಪಣೆಯಿಂದ ಪೂಜಿಸಿ ಯಾಚಿಸುತ್ತೇವೆ. ಸ್ತುತಿಗಳಿಂದಲೂ ಅದೇ ನಿನ್ನನ್ನು ಪ್ರಶಂಸಿಸಿ ಯಾಚಿಸುತ್ತೇವೆ.

## English Translation

We address you with sacrificial gifts, (we address) you with songs, O Indra, most worthy of song, as you have protected me, the offerer of many praises, in battles

॥ ವಿಶೇಷವಿಷಯಗಳು ॥

ಯಾಗದ ನಾಲ್ಕನೆಯ ದಿವಸ ಮರುತ್ವತೀಯಶಸ್ತ್ರಮಂತ್ರಪಠನಕಾಲದಲ್ಲಿ **ತಂ ತ್ವಾ ಯಜ್ಞೇಭಿಃ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು (ಈ ಸೂಕ್ತದ ೧೦-೧೨) ಋಕ್ಕುಗಳನ್ನು ಪ್ರತಿಪತ್ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತಂ ತ್ವಾ ಯಜ್ಞೇಭಿರೀಮಹ ಇದಂ ವಸೋ ಸುತಮಂಧ ಇತಿ ಮರುತ್ವತೀಯಸ್ಯ ಪ್ರತಿಪದನುಚರೌ** ಎಂಬಸೂತ್ರದಿಂದ (ಆ ೭-೧೧) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಯಸ್ಯ ತೇ ಸ್ವಾದು ಸಖ್ಯಂ ಸ್ವಾದ್ವೀ ಪ್ರಣೀತಿರದ್ರಿವಃ ।
ಯಜ್ಞೋ ವಿತಂತಸಾಯ್ಯಃ ॥ ೧೧ ॥

॥ ಪದಪಾಠಃ ॥

ಯಸ್ಯ । ತೇ । ಸ್ವಾದು । ಸಖ್ಯಂ । ಸ್ವಾದ್ವೀ । ಪ್ರऽನೀತಿಃ । ಅದ್ರಿऽವಃ ।
ಯಜ್ಞಃ । ವಿತಂತಸಾಯ್ಯಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಅದ್ರಿವೋ ವಜ್ರವನಿಂದ, ಯಸ್ಯ ಸ್ತುತ್ಯತ್ವೇನ ಪ್ರಸಿದ್ಧಸ್ಯ ತೇ ತವ ಸಖ್ಯಂ ಸ್ವಾದ್ವತೇ-

ವಾನುಭವಾರ್ಹಂ । ಕಿಂ ಚ ತೇ ಪ್ರಣೀತಿಃ ಪ್ರಣಯನಂ ಧನಾದೀನಾಂ ಸ್ವಾದ್ವೀ ಸ್ವಾದು ಸುಹರ್ಷಕಂ । ತಥೋಭೇ ತ್ವದ್ವಿಷಯೋ ಯಜ್ಞಶ್ಚ ವಿತಂತಸಾಯ್ಯೋ ವಿಶೇಷೇಣ ತನನೀಯಃ ॥

॥ ಪ್ರತಿಪದಾರ್ಥ ॥

ಅದ್ರಿವಃ—ವಜ್ರಾಯುಧಧಾರಿಯಾದ ಎಲೈ ಇಂದ್ರನೇ । ಯಸ್ಯ—ಅತ್ಯಂತ ಪ್ರಸಿದ್ಧನಾದ । ತೇ—ನಿನ್ನೊಡನೆ । ಸಖ್ಯಂ—ಸ್ನೇಹವು । ಸ್ವಾದು—ಅತ್ಯಂತ ಹಿತಕರವಾಗಿದೆ । ಪ್ರಣೀತಿಃ—ನಿನ್ನಿಂದ ನಡೆಯುವ ಧನಾದಿಗಳ ದಾನಗಳೂ ಸಹ । ಸ್ವಾದ್ವೀ—ಹರ್ಷದಾಯಕವಾಗಿವೆ । ಯಜ್ಞಃ—ನಿನ್ನನ್ನುದ್ದೇಶಿಸಿದ ಯಜ್ಞವೂ । ವಿತಂತಸಾಯ್ಯಃ—ವಿಸ್ತೃತವಾಗಿ ನೆರವೇರಿಸಲ್ಪಡುತ್ತವೆ.

॥ ಭಾವಾರ್ಥ ॥

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ಅತ್ಯಂತ ಪ್ರಸಿದ್ಧನಾದ ನಿನ್ನೊಡನಿರುವ ಸ್ನೇಹವು ಅತ್ಯಂತ ಹಿತಕರವಾಗಿದೆ. ನಿನ್ನಿಂದ ನಡೆಯುವ ಧನಾದಿಗಳ ದಾನಗಳೂ ಸಹ ಹರ್ಷದಾಯಕವಾಗಿವೆ. ನಿನ್ನನ್ನುದ್ದೇಶಿಸಿದ ಯಜ್ಞವೂ ಸಹ ವಿಸ್ತೃತವಾಗಿ ನೆರವೇರಿಸಲ್ಪಡುತ್ತವೆ.

Engalish Translation

You, the thunderer, whose friendship is sweet, sweet too is your liberality, and your sacrifice pre eminently to be performed.

॥ ಸಂಹಿತಾಪಾಠಃ ॥

ಉರು ಣಸ್ತನ್ವೇ ತನ ಉರು ಕ್ಷಯಾಯ ನಸ್ಕೃಧಿ ।
ಉರು ಣೋ ಯಂಧಿ ಜೀವಸೇ ॥ ೧೨ ॥

॥ ಪದಪಾಠಃ ॥

ಉರು । ನಃ । ತನ್ವೇ । ತನೇ । ಉರು । ಕ್ಷಯಾಯ । ನಃ । ಕೃಧಿ ।
ಉರು । ನಃ । ಯಂಧಿ । ಜೀವಸೇ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ನೋಽಸ್ಮಾಕಂ ತನ್ವ ಆತ್ಮಜಾಯೋರುರು ಪ್ರಭೂತಂ ಕೃಧಿ । ಕುರು । ಸಾಮರ್ಥ್ಯಾದ್ಧನಂ ಸುಖಂ ವೇತಿ ಗಮ್ಯತೇ । ತಥಾ ತನೇ ತತ್ಪುತ್ರಾಯೋರು ಕೃಧಿ । ತಥಾ ಕ್ಷಯಾಯ ನಿವಾಸಾಯೋರು ಕೃಧಿ । ನೋಽಸ್ಮಾಕಂ ಜೀವಸೇ ಜೀವನಾಯ ಯಂಧಿ । ಪ್ರಯಚ್ಛಾಭಿಮತಂ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ನಃ**—ನಮ್ಮ। **ತನ್ವೇ**—ಪುತ್ರಾದಿಗಳಿಗೆ। **ಉರು**—ಪ್ರಭೂತವಾದ ಧನವನ್ನು । **ಕೃಧಿ**-ಕೊಡು । **ತನೇ**—ತತ್ಪುತ್ರಾದಿಗಳಿಗೂ । ಉರು—ಪ್ರಭೂತವಾದ ಧನವನ್ನು ಕೊಡು । **ನಃ**-ನಮ್ಮ । **ಕ್ಷಯಾಯ**-ವಸತಿಗಾಗಿ । **ಉರು**—ಅಧಿಕವಾದ ವಾಸಸ್ಥಾನಗಳನ್ನು ನಿರ್ಮಿಸು । **ನಃ**—ನಮ್ಮ । **ಜೀವಸೇ**—ಜೀವನಕ್ಕಾಗಿ । **ಯಂಧಿ**—ಅಧಿಕವಾಗಿ ನಮ್ಮ ಇಷ್ಟಾರ್ಥಗಳನ್ನು ಒದಗಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ನಮ್ಮ ಪುತ್ರಾದಿಗಳಿಗೆ ಪ್ರಭೂತವಾದ ಧನವನ್ನು ಕೊಡು. ತತ್ಪುತ್ರಾದಿಗಳಿಗೂ ಪ್ರಭೂತವಾದ ಧನವನ್ನು ಕೊಡು ನಮ್ಮ ವಸತಿಗಾಗಿ ಅಧಿಕವಾದ ವಾಸಸ್ಥಾನಗಳನ್ನು ನಿರ್ಮಿಸು. ನಮ್ಮ ಜೀವನಕ್ಕಾಗಿ ಅತ್ಯಧಿಕವಾಗಿ ನಮ್ಮ ಇಷ್ಟಾರ್ಥಗಳನ್ನು ಒದಗಿಸು.

## English Translation

Give ample (wealth) to our own selves, give ample (wealth) to our children, give ample (wealth) to our dwelling,—grant us (our desire) that we may live.

॥ ಸಂಹಿತಾಪಾಠಃ ॥

ಉರುಂ ನೃಭ್ಯ ಉರುಂ ಗವ ಉರುಂ ರಥಾಯ ಪಂಥಾಂ ।
ದೇವವೀತಿಂ ಮನಾಮಹೇ ॥ ೧೩ ॥

॥ ಪದಪಾಠಃ ॥

ಉರುಂ । ನೃಽಭ್ಯಃ । ಉರುಂ । ಗವೇ । ಉರುಂ । ರಥಾಯ । ಪಂಥಾಂ ।
ದೇವಽವೀತಿಂ । ಮನಾಮಹೇ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ನೃಭ್ಯೋಽಸ್ಮದೀಯೇಭ್ಯೋ ಭೃತ್ಯೇಭ್ಯ ಉರುಂ ಹಿತಂ ಮನಾಮಹೇ । ತಥಾ ಗವೇ। ಏತದುಪಲಕ್ಷಣಂ । ಗವಾಶ್ವಾದಿಕಾಯ ತಥಾ ರಥಾಯ ಪಂಥಾಂ ಪಂಥಾನಂ ಮಾರ್ಗಂ । ಅಥವಾ ನೃಪ್ರಭೃತೀನಾಂ ಸಂಚಾರಾಯ ಶೋಭನಂ ಮಾರ್ಗಂ ಮನಾಮಹೇ । ತಥಾ ದೇವವೀತಿಂ ಯಜ್ಞಂ ಮನಾಮಹೇ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ನೃಭ್ಯಃ**—ನಮ್ಮ ಭೃತ್ಯಾದಿಜನರಿಗೆ । **ಉರುಂ**—ಅಧಿಕವಾದ ಹಿತವನ್ನು । **ಮನಾಮಹೇ**—ಯಾಚಿಸುತ್ತೇವೆ । **ಗವೇ**—ನಮ್ಮ ಪಶ್ವಾದಿಗಳಿಗೆ । **ಉರುಂ**—ವಿಸ್ತೃತವಾದ । **ಪಂಥಾಂ**—ಮಾರ್ಗವನ್ನು ಯಾಚಿಸುತ್ತೇವೆ । **ರಥಾಯ**—ನಮ್ಮ ರಥಗಳ ಸಂಚಾರಕ್ಕಾಗಿ । **ಉರುಂ**—ವಿಸ್ತೃತವಾದ ಮಾರ್ಗವನ್ನು ಯಾಚಿಸುತ್ತೇವೆ । **ದೇವವೀತಿಂ**—ದೇವತೆಗಳನ್ನುದ್ದೇಶಿಸುವ ಯಜ್ಞಗಳ ಸೌಕರ್ಯಗಳನ್ನೂ ಯಾಚಿಸುತ್ತೇವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಮ್ಮ ಭೃತ್ಯಾದಿಜನರಿಗೆ ಅಧಿಕವಾದ ಹಿತವನ್ನು ಯಾಚಿಸುತ್ತೇವೆ ನಮ್ಮ ಪಶ್ವಾದಿಗಳಿಗೆ ವಿಸ್ತೃತವಾದ ಮಾರ್ಗವನ್ನು ಯಾಚಿಸುತ್ತೇವೆ ನಮ್ಮ ರಥಗಳ ಸಂಚಾರಕ್ಕಾಗಿಯೂ ವಿಸ್ತೃತವಾದ ಮಾರ್ಗವನ್ನು ಯಾಚಿಸುತ್ತೇವೆ. ದೇವತೆಗಳನ್ನುದ್ದೇಶಿಸುವ ಯಜ್ಞಗಳ ಸೌಕರ್ಯಗಳನ್ನೂ ಯಾಚಿಸುತ್ತೇವೆ

English Translation

We solicit a spacious (road) for our servants, a spacious road for our cattle, a spacious road for our chariot, and (an abundant) sacrifice.

॥ ಸಂಹಿತಾಪಾಠಃ ॥

ಉಪ ಮಾ ಷಟ್‌ದ್ವಾದ್ವಾ ನರಃ ಸೋಮಸ್ಯ ಹರ್ಷ್ಯಾ ।
ತಿಷ್ಠಂತಿ ಸ್ವಾದುರಾತಯಃ ॥ ೧೪ ॥

॥ ಪದಪಾಠಃ ॥

ಉಪ । ಮಾ । ಷಟ್ । ದ್ವಾಽದ್ವಾ । ನರಃ । ಸೋಮಸ್ಯ । ಹರ್ಷ್ಯಾ ।
ತಿಷ್ಠಂತಿ । ಸ್ವಾದುಽರಾತಯಃ ॥ ೧೪ ॥

॥ ಸಾಯಣಭಾಷ್ಯಂ ॥

ಏತದಾದ್ಯಾಃ ಷಡೃಚ ಋಕ್ಷಾಶ್ವಮೇಧಯೋರ್ದಾನಸ್ತುತಿರೂಪಾಃ । ಯದ್ಯಪಿ ಬೃಹದ್ದೇವತಾನುಕ್ರಮಣ್ಯಾಮೃಕ್ಷಾಶ್ವಮೇಧಯೋರತ್ರ ಪಂಚ ದಾನಪ್ರಶಂಸಕಾ ಇತ್ಯುಕ್ತಂ ತಥಾಪ್ಯುಪ ಮಾ ಷಡಿತ್ಯಸ್ಯಾ ರಾಜದಾನಸ್ತುತಿಶೇಷತ್ವಾದನಿರೋಧಃ । ಅನಯೈವಾಶಯಾನುಕ್ರಮಣ್ಯಾಮಂತ್ಯಾಃ ಷಳೃಚ ಋಕ್ಷಾಶ್ವಮೇಧಯೋರ್ದಾನಸ್ತುತಿರಿತ್ಯುಕ್ತಂ ॥ ಮಾ ಮಾಂ ಪ್ರಿಯಮೇಧಂ ಯಜ್ಞೇ ಪ್ರಸರ್ಪಂತಃ

ಷಡೇತತ್ಸಂಖ್ಯಾಕಾ ನರೋ ನೇತಾರೋ ರಾಜಾನಃ ಸೋಮಸ್ಯ ಪೀತಸ್ಯ ಹರ್ಷ್ಯಾ ಹರ್ಷೇಣ ಸ್ವಾದುರಾತಯಃ ಸುಷ್ಠೂಪಭೋಗರ್ಹದಾನಾಃ ಸಂತೋ ದ್ವಾ ದ್ವಾ ದ್ವೌ ದ್ವೌ ಪಿತೃಪುತ್ರರೂಪೇಣ ಯುಗ್ಮೀಭೂತಾ ಮಾಮುಪ ತಿಷ್ಠಂತಿ । ತೇಷಾಂ ಯುಗ್ಮಾನಾಂ ನಾಮ ಉತ್ತರತ್ರ ಸ್ಪಷ್ಟೀಕ್ರಿಯತೇ ॥

॥ ಪ್ರತಿಪದಾರ್ಥ ॥

**ದ್ವಾದ್ವಾ**—ತಂದೆಮಕ್ಕಳ ರೂಪದಲ್ಲಿ ಇಬ್ಬಿಬ್ಬರಂತೆ ಗುಂಪುಳ್ಳವರೂ । **ಸ್ವಾದುರಾತಯಃ**—ಹಿತವನ್ನುಂಟುಮಾಡುವ ದಾನವುಳ್ಳವರೂ । **ಷಟ್**—ಆರು ಸಂಖ್ಯೆಯುಳ್ಳವರೂ ಆದ । **ನರಃ**—ರಾಜರು । **ಸೋಮಸ್ಯ**—ಸೋಮರಸದ ಪಾನದಿಂದ ಉಂಟಾದ । **ಹರ್ಷ್ಯಾ**—ಸಂತೋಷದಿಂದ ಕೂಡಿ । **ಮಾ**—ನನ್ನನ್ನು । **ಉಪ ತಿಷ್ಠಂತಿ**—ಸಮೀಪಿಸಿ ಬಂದು ನಿಲ್ಲುತ್ತಾರೆ.

॥ ಭಾವಾರ್ಥ ॥

ತಂದೆಮಕ್ಕಳ ರೂಪದಲ್ಲಿ ಇಬ್ಬಿಬ್ಬರಂತೆ ಗುಂಪುಳ್ಳವರೂ ಹಿತವನ್ನುಂಟುಮಾಡುವ ದಾನವುಳ್ಳವರೂ ಆರು ಸಂಖ್ಯೆಯುಳ್ಳವರೂ ಆದ ರಾಜರು ಸೋಮರಸದ ಪಾನದಿಂದ ಉಂಟಾದ ಸಂತೋಷದಿಂವ ಕೂಡಿ ನನ್ನನ್ನು ಸಮೀಪಿಸಿ ಬಂದು ನಿಲ್ಲುತ್ತಾರೆ

English Translation

Six princes come to me in pairs, bearing pleasant gifts, in the exhilaration of the Soma

॥ ಸಂಹಿತಾಪಾಠಃ ॥

ಋಜ್ರಾವಿಂದ್ರೋತ ಆ ದದೇ ಹರೀ ಋಕ್ಷಸ್ಯ ಸೂನವಿ ।

ಅಶ್ವಮೇಧಸ್ಯ ರೋಹಿತಾ ॥ ೧೫ ॥

॥ ಪದಪಾಠಃ ॥

ಋಜ್ರಾ । ಇಂದ್ರೋತೇ । ಆ । ದದೇ । ಹರೀ ಇತಿ । ಋಕ್ಷಸ್ಯ । ಸೂನವಿ ।

ಅಶ್ವऽಮೇಧಸ್ಯ । ರೋಹಿತಾ ॥ ೧೫ ॥

॥ ಸಾಯಣಭಾಷ್ಯಂ ॥

ಇಂದ್ರೋತ ಏತನ್ನಾಮಕ ಅತಿಥಿಗ್ವೇಽತಿಥಿಗ್ವನಾಮ್ನೋ ರಾಜ್ಞಃ ಪುತ್ರೇ । ಅತಿಥಿಗ್ವಾಯ ಶಂಬರಂ । ಋ. ೧-೫೧-೬ । ಇತ್ಯತಿಥಿಗ್ವಾಯ ಶಂಸ್ಯಂ । ಋ. ೬-೨೬-೩ । ಇತ್ಯಾದಿಷ್ವತಿಥಿಗ್ವ ಪ್ರಸಿದ್ಧಃ । ತತ್ಪುತ್ರ ಇಂದ್ರೋತ ಋಜ್ರಾವೃಜುಗಾಮಿನಾವಶ್ವಾವಾ ದದೇ । ಸ್ವೀಕೃತವಾನಸ್ಮಿ । ತಥರ್ಕ್ಷಸ್ಯ ಸೂನವ್ಯೃಕ್ಷನಾಮ್ನೋ

ಪುತ್ರೇಽನ್ಯಸ್ಮಿನ್ರಾಜನಿ ಹರೀ ಹರಿತವರ್ಣಾವಶ್ವಾವಾ ದದೇ । ತಥಾಶ್ವಮೇಧಸ್ಯಾಶ್ವಮೇಧಪುತ್ರೇ ರಾಜನಿ ರೋಹಿತಾ ರೋಹಿತವರ್ಣಾವಶ್ವಾವಾ ದದೇ । ನನ್ವನುಕ್ರಮಣ್ಯಾಮುಭಯೋರೇವ ದಾನಪ್ರಶಂಸಾರೂಪತ್ವಮುಕ್ತಮತ್ರ ಕಥಂ ತ್ರಯಾಣಾಂ ದಾನಕೀರ್ತನಮಿತಿ ನೈಷ ದೋಷಃ । ಋಕ್ಷಾಶ್ವಮೇಧಪುತ್ರಯೋರೇವ ಯಾಗೇಽಸ್ಯರ್ಷೇಃ ಪ್ರವೃತ್ತೇಸ್ತಯೋರೇವ ದಾನಂ । ಪ್ರಸ್ತುತ್ಯ ಇಂದ್ರೋತಸ್ತು ಸ್ವಪಿತ್ರಾ ಸಹ ತಯೋರ್ಯಜ್ಞದಿದೃಕ್ಷಯಾಗತ್ಯ ತಯೋರ್ದಾನಂ ದೃಷ್ಟ್ವಾ ಸ್ವಪಿತ್ರಾ ಪ್ರೇರಿತೋ ದತ್ತವಾನಶ್ವೌ । ಅತಸ್ತದ್ದಾನಂ ಪ್ರಾಸಂಗಿಕಮಿತಿ । ಏವಮೃಕ್ಷಾಶ್ವಮೇಧಯೋರ್ದಾನಸ್ತುತಿತ್ವಂ ನ ವ್ಯಾಹನ್ಯತೇ । ಪಿತೃಪುತ್ರಯೋರಭೇದಾತ್ತಯೋಃ ಪಕ್ಷಕರ್ತೃತ್ವಾಚ್ಚೇಂದ್ರೋತದಾನಸ್ಯ ಪ್ರಾಸಂಗಿಕತ್ವಂ ಷಳಶ್ವಾನಿತ್ಯತ್ರ ವಿಸ್ಪಷ್ಟಯಿಷ್ಯತೇ ॥

॥ ಪ್ರತಿಪದಾರ್ಥ ॥

ಇಂದ್ರೋತೇ—ಅತಿಥಿಗ್ವಪುತ್ರನಾದ ಇಂದ್ರೋತನಿಂದ । ಋಜ್ರಾ—ನೇರವಾಗಿ ಸಂಚರಿಸತಕ್ಕ ಎರಡು ಅಶ್ವಗಳನ್ನು । ಆ ದದೇ—ನಾನು ಸ್ವೀಕರಿಸಿದೆನು । ಋಕ್ಷಸ್ಯ—ಋಕ್ಷನೆಂಬುವನ । ಸೂನವಿ—ಪುತ್ರನಿಂದ । ಹರೀ—ಪಚ್ಚೆವರ್ಣವುಳ್ಳ ಎರಡು ಅಶ್ವಗಳನ್ನು ಹೊಂದಿದೆನು । ಅಶ್ವಮೇಧಸ್ಯ— ಅಶ್ವಮೇಧನ ಪುತ್ರನಾದ ರಾಜನಿಂದ । ರೋಹಿತಾ—ಹೊಂಬಣ್ಣವುಳ್ಳ ಎರಡು ಅಶ್ವಗಳನ್ನೂ ಹೊಂದಿದೆನು.

॥ ಭಾವಾರ್ಥ ॥

ಅತಿಥಿಗ್ವಪುತ್ರನಾದ ಇಂದ್ರೋತನಿಂದ ನೇರವಾಗಿ ಸಂಚರಿಸತಕ್ಕ ಎರಡು ಅಶ್ವಗಳನ್ನು ಸ್ವೀಕರಿಸಿದೆನು. ಋಕ್ಷನೆಂಬುವನ ಪುತ್ರನಿಂದ ಪಚ್ಚೆವರ್ಣವುಳ್ಳ ಎರಡು ಅಶ್ವಗಳನ್ನು ಹೊಂದಿದೆನು. ಅಶ್ವಮೇಧನ ಪುತ್ರನಾದ ರಾಜನಿಂದ ಹೊಂಬಣ್ಣವುಳ್ಳ ಎರಡು ಅಶ್ವಗಳನ್ನು ಹೊಂದಿದೆನು.

English Translation

I receive two straight-going steeds from Indrota, two bay from the son of Riksha, two roan from the son of Ashwamedha.

॥ ಸಂಹಿತಾಪಾಠಃ ॥

ಸುರಥಾಁ ಆತಿಥಿಗ್ವೇ ಸ್ವಭೀಶೂಁರಾರ್ಕ್ಷೇ ।
ಆಶ್ವಮೇಧೇ ಸುಪೇಶಸಃ ॥ ೧೬ ॥

॥ ಪದಪಾಠಃ ॥

ಸುಽರಥಾನ್ । ಆತಿಥಿಽಗ್ವೇ । ಸುಽಅಭೀಶೂನ್ । ಆರ್ಕ್ಷೇ ।
ಆಶ್ವಽಮೇಧೇ । ಸುಽಪೇಶಸಃ ॥ ೧೬ ॥

॥ ಸಾಯಣಭಾಷ್ಯಂ ॥

**ಅತಿಥಿಗ್ವ ಇಂದ್ರೋತೇ ಸುರಥಾಞ್ಶೋಭನರಥೋಪೇತಾನಶ್ವಾನಾದದೇ । ಆರ್ಕ್ಷ್ಯಋಕ್ಷಪುತ್ರೇ ಸ್ವಭೀಶೂನಶ್ವಾನಾದದೇ । ಅಶ್ವಮೇಧೇಽಶ್ವಮೇದಪುತ್ರೇ ಸುಪೇಶಸಃ ಸುರೂಪಾನಶ್ವಾಞ್ಶೋಭನಾಲಂಕಾರಾನಾದದೇ ॥**

॥ ಪ್ರತಿಪದಾರ್ಥ ॥

**ಅತಿಥಿಗ್ವೇ**—ಅತಿಥಿಗ್ವಪುತ್ರನಾದ ಇಂದ್ರೋತನಿಂದ । **ಸುರಥಾನ್**—ಉತ್ತಮವಾದ ರಥಗಳೊಡನೆ ಯುಕ್ತವಾದ ಅಶ್ವಗಳನ್ನು ಪಡೆದೆನು । **ಆರ್ಕ್ಷೇ**—ಋಕ್ಷಪುತ್ರನಿಂದ । **ಸ್ವಭೀಶೂನ್**—ಉತ್ತಮವಾದ ಕಡಿವಾಣಗಳನ್ನುಹೊಂದಿದ ಅಶ್ವಗಳನ್ನು ಪಡೆದೆನು । **ಆಶ್ವಮೇಧೇ**—ಅಶ್ವಮೇಧಪುತ್ರನಿಂದ । **ಸುಪೇಶಸಃ**—ಉತ್ತಮವಾದ ರೂಪವನ್ನು ಹೊಂದಿರುವ ಅಶ್ವಗಳನ್ನು ಪಡೆದೆನು.

॥ ಭಾವಾರ್ಥ ॥

ಅತಿಥಿಗ್ವಪುತ್ರನಾದ ಇಂದ್ರೋತನಿಂದ ಉತ್ತಮವಾದ ರಥದೊಡನೆ ಯುಕ್ತವಾದ ಅಶ್ವಗಳನ್ನು ಪಡೆದೆನು ಋಕ್ಷಪುತ್ರನಿಂದ ಉತ್ತಮವಾದ ಕಡಿವಾಣಗಳನ್ನು ಹೊಂದಿದ ಅಶ್ವಗಳನ್ನು ಪಡೆದನು. ಅಶ್ವಮೇಧಪುತ್ರನಿಂದ ಉತ್ತಮವಾದ ರೂಪವನ್ನು ಹೊಂದಿರುವ ಅಶ್ವಗಳನ್ನು ಪಡೆದೆನು.

English Translation

(I receive) two steeds with excellent chariots from the son of Atithigva, two with excellent reins from the son of Riksha, two with excellent ornaments from the son of Ashwamedha

॥ ಸಂಹಿತಾಪಾಠಃ ॥

ಷಳಶ್ವಾँ ಅತಿಥಿಗ್ವ ಇಂದ್ರೋತೇ ವಧೂಮತಃ ।
ಸಚಾ ಪೂತಕ್ರತೌ ಸನಂ ॥ ೧೭ ॥

॥ ಪದಪಾಠಃ ॥

ಷಟ್ । ಅಶ್ವಾನ್ । ಆತಿಥಿऽಗ್ವೇ । ಇಂದ್ರೋತೇ । ವಧೂऽಮತಃ ।
ಸಚಾ । ಪೂತऽಕ್ರತೌ । ಸನಂ ॥ ೧೭ ॥

॥ ಸಾಯಣಭಾಷ್ಯಂ ॥

**ಅತಿಥಿಗ್ವ ಇಂದ್ರೋತೇ ಪೂತಕ್ರತೌ ಶುದ್ಧಪ್ರಜ್ಞೇ ಶುದ್ಧಕರ್ಮೋಪೇತೇ ವಾ ತಸ್ಮಿನ್ವಧೂಮತೋ**

ವಧೂಭಿರ್ವಡವಾಭಿಸ್ತದ್ವತಃ ಷಡಶ್ವಾನ್ ಸಚರ್ಕ್ಷಾರ್ಶ್ವಮೇಧಯೋಃ ಪುತ್ರಾಭ್ಯಾಂ ದತ್ತೇನಾಶ್ವಾದಿಧನೇನ ಸಚಾ ಸಹ ಸನಂ। ಲಬ್ಧವಾನಸ್ಮಿ । ಏತತ್ಸಾಹಿತ್ಯವಚನಮಿಂದ್ರೋತದಾನಸ್ಯ ಪ್ರಾಸಂಗಿಕತ್ವೇ ಲಿಂಗಂ ॥

॥ ಪ್ರತಿಪದಾರ್ಥ ॥

**ಆತಿಥಿಗ್ವೇ**—ಅತಿಥಿಗ್ವಪುತ್ರನಾದ । **ಇಂದ್ರೋತೇ**—ಇಂದ್ರೋತನಿಂದ । **ಪೂತಕ್ರತಾ**—ಪರಿಶುದ್ಧವಾದ ಕರ್ಮವುಳ್ಳವೂ । **ವಧೂಮತಃ**—ಹೆಣ್ಣುಕುದುರೆಗಳೊಡನೆ ಕೂಡಿದವೂ ಆದ । **ಷಟ್ ಅಶ್ವಾನ್**—ಆರು ಕುದುರೆಗಳನ್ನು । **ಸಚಾ**—ಋಕ್ಷ ಮತ್ತು ಅಶ್ವಮೇಧರ ಪುತ್ರರಿಂದ ದತ್ತವಾದ ಇತರ ಧನಗಳೊಡನೆ ಕೂಡಿ । **ಸನಂ**—ನಾನು ಪಡೆದಿದ್ದೇನೆ

॥ ಭಾವಾರ್ಥ ॥

ಅತಿಥಿಗ್ವಪುತ್ರನಾದ ಇಂದ್ರೋತನಿಂದ ಪರಿಶುದ್ಧವಾದ ಕರ್ಮವುಳ್ಳವೂ, ಹೆಣ್ಣುಕುದುರೆಗಳೊಡನೆ ಕೂಡಿದವೂ ಆದ ಆರು ಕುದುರೆಗಳನ್ನು ಋಕ್ಷ ಮತ್ತು ಅಶ್ವಮೇಧರ ಪುತ್ರರಿಂದ ದತ್ತವಾದ ಇತರ ಧನಗಳೊಡನೆ ಕೂಡಿ ನಾನು ಪಡೆದಿದ್ದೇನೆ.

English Translation

I have received together (with my other gifts) six horses with their mares from the pious Indrota, the son of Atithigva

॥ ಸಂಹಿತಾಪಾಠಃ ॥

ಐಷು ಚೇತದ್ವೃಷಣ್ವತ್ಯಂತರೃಜ್ರೇಷ್ವರುಷೀ ।
ಸ್ವಭೀಶುಃ ಕಶಾವತೀ ॥ ೧೮ ॥

॥ ಪದಪಾಠಃ ॥

ಆ । ಏಷು । ಚೇತತ್ । ವೃಷಣ್ಽವತೀ । ಅಂತಃ । ಋಜ್ರೇಷು । ಅರುಷೀ ।
ಸುಽಅಭೀಶುಃ । ಕಶಾಽವತೀ ॥ ೧೮ ॥

॥ ಸಾಯಣಭಾಷ್ಯಂ ॥

ಏಷ್ವೃಜ್ರೇಷ್ವೃಜುಗಾಮಿಷ್ವಶ್ವೇಷ್ವಂತರ್ಮಧ್ಯೇ ಆ ಚೇತತ್ । ಆಜ್ಞಾಯತೇ । ಕಾ । ವೃಷಣ್ವತೀ ವರ್ಷಕೈಃ ಪುಮಶ್ವೈಸ್ತದ್ವತ್ಯರುಷ್ಯಾರೋಚಮಾನಾ ಸ್ವಭೀಶುಃ ಶೋಭನಪ್ರಗ್ರಹಾ ಕಶಾವತೀ ವೃಷ್ಟಾ ವಡವಾ ಜ್ಞಾಯತೇ ॥

॥ ಪ್ರತಿಪದಾರ್ಥ ॥

**ಋಜ್ರೇಷು**—ನೇರವಾದ ಗಮನಗಳುಳ್ಳ । **ಏಷು**—ಈ ಅಶ್ವಗಳ । **ಅಂತಃ**—ನಡುವೆ । **ವೃಷಣ್ವತೀ**—ಸೇಚನಸಾಮರ್ಥ್ಯವುಳ್ಳ ಗಂಡುಕುದುರೆಯೊಡನಿರುವುದೂ । **ಅರುಷೀ**—ಆಕರ್ಷಕವಾದ ಹೊಂಬಣ್ಣವುಳ್ಳದ್ದೂ । **ಸ್ವಭೀಶುಃ**—ಉತ್ತಮವಾದ ಕಡಿವಾಣವುಳ್ಳದ್ದೂ । **ಕಶಾವತೀ**—ಚಾವಟಿಯುಳ್ಳದ್ದೂ ಆದ ಒಂದು ಉತ್ತಮವಾದ ಕುದುರೆಯಿರುವುದೆಂದು । **ಆ ಚೇತತ್**—ತಿಳಿಯಲ್ಪಡುತ್ತದೆ.

॥ ಭಾವಾರ್ಥ ॥

ನೇರವಾದ ಗಮನಗಳುಳ್ಳ ಈ ಅಶ್ವಗಳ ನಡುವೆ ಸೇಚನಸಾಮರ್ಥ್ಯವುಳ್ಳ ಗಂಡುಕುದುರೆಯೊಡನಿರುವುದೂ ಆಕರ್ಷಕವಾದ ಹೊಂಬಣ್ಣವುಳ್ಳದ್ದೂ ಉತ್ತಮವಾದ ಕಡಿವಾಣವುಳ್ಳದ್ದೂ ಚಾವಟಿಯುಳ್ಳದ್ದೂ ಆದ ಒಂದು ಉತ್ತಮವಾದ ಕುದುರೆಯಿರುವುದೆಂದು ತಿಳಿಯಲ್ಪಡುತ್ತದೆ.

English Translation

Among these straight-going steeds is numbered a mature roan mare with excellent reins and whip

॥ ಸಂಹಿತಾಪಾಠಃ ॥

ನ ಯುಷ್ಮೇ ವಾಜಬಂಧವೋ ನಿನಿತ್ಸುಶ್ಚನ ಮರ್ತ್ಯಃ ।
ಅವದ್ಯಮಧಿ ದೀಧರತ್ ॥ ೧೯ ॥

॥ ಪದಪಾಠಃ ॥

ನ । ಯುಷ್ಮೇ ಇತಿ । ವಾಜಽಬಂಧವಃ । ನಿನಿತ್ಸುಃ । ಚನ । ಮರ್ತ್ಯಃ ।
ಅವದ್ಯಂ । ಅಧಿ । ದೀಧರತ್ ॥ ೧೯ ॥

॥ ಸಾಯಣಭಾಷ್ಯಂ ॥

ಹೇ ವಾಜಬಂಧವೋಽನ್ನಬಂಧವೋಽನ್ನಪ್ರದಾಃ । ಏವಂ ಪುತ್ರಾಣಾಂ ಪಿತೃಪುತ್ರರೂಪಾಣಾಂ ಷಣ್ಣಾಂ ವಾ ಸಂಬೋಧನಂ । ಹೇ ರಾಜಾನಃ ಯುಷ್ಮೇ ಯುಷ್ಮಾಸು ನಿನಿತ್ಸುಶ್ಚನ ನಿಂದಕೋಽಪಿ ಮರ್ತ್ಯೋ ಮನುಷ್ಯೋಽವದ್ಯಂ ನಿಂದಾಂ ನಾಧಿ ದೀಧರತ್ । ನಾನ್ವಧಾರಯತ್ । ನಾರೋಪಯತಿ-ಯುಷ್ಮಾಸು । ಅತೋಽನಿಂದ್ಯಾ ಯೂಯಮಿತಿ ದಾತೄಣಾಂ ಸ್ತುತಿಃ ॥

॥ ಪ್ರತಿಪದಾರ್ಥ ॥

ವಾಜಬಂಧವಃ—ಅನ್ನಸಂಪತ್ತಿಗೆ ಒಡೆಯರಾಗಿ ಅನ್ನವನ್ನು ದಾನಮಾಡತಕ್ಕ ಎಲೈ ರಾಜರುಗಳೇ ।

**ನಿನಿತ್ಸುಃ**—ಯಾವಾಗಲೂ ನಿಂದೆಮಾಡುವ ಸ್ವಭಾವವೇ ಉಳ್ಳ । **ಮರ್ತ್ಯಃ ಚನ**—ಮಾನವನೂ ಸಹ **ಯುಷ್ಮೇ**—ನಿಮ್ಮ ವಿಷಯದಲ್ಲಿ । **ಅವದ್ಯಂ**—ನಿಂದಾವಾಕ್ಯವನ್ನು । **ನ ಅಧಿ ದೀಧರತ್**—ಪ್ರಯೋಗಿಸುವುದೇ ಇಲ್ಲ

॥ ಭಾವಾರ್ಥ ॥

ಅನ್ನಸಂಪತ್ತಿಗೆ ಒಡೆಯರಾಗಿ ಅನ್ನವನ್ನು ದಾನಮಾಡತಕ್ಕ ಎಲೈ ರಾಜರುಗಳೇ, ಯಾವಾಗಲೂ ನಿಂದೆಮಾಡುವ ಸ್ವಭಾವವೇ ಉಳ್ಳ ಮಾನವನೂ ಸಹ ನಿಮ್ಮ ವಿಷಯದಲ್ಲಿ ನಿಂದಾವಾಕ್ಯವನ್ನು ಪ್ರಯೋಗಿಸುವುದೇ ಇಲ್ಲ. ನಿಮ್ಮ ಚಾರಿತ್ರ್ಯವು ಅಷ್ಟು ಪ್ರಶಸ್ತ್ಯವಾಗಿದೆ.

## English Translation

O princes, givers of food, even the lover of calumny has thrown no censure on you.

# ಅರವತ್ತೊಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪ್ರಪ್ರ ವ ಇತ್ಯಷ್ಟಾದಶರ್ಚಂ ದಶಮಂ ಸೂಕ್ತಂ ಪ್ರಿಯಮೇಧಸ್ಯಾಂಗಿರಸಸ್ಯಾರ್ಷಂ । ದ್ವಿತೀಯಾ ನದಂ ವ ಇತ್ಯೇಷಾ ಚತುಃಸಪ್ತಕೋಷ್ಣಿಕ್ ಚತುರ್ಥ್ಯಾದ್ಯಾಸ್ತಿಸ್ರೋ ಗಾಯತ್ರ್ಯ ಏಕಾದಶೀಷೋಡಶ್ಯೌ ಪಂಕ್ತೀ ಶಿಷ್ಟಾ ದಶಾನುಷ್ಟುಭಃ । ಅಪಾದಿಂದ್ರ ಇತ್ಯರ್ಧರ್ಚೋ ವೈಶ್ವದೇವೋ ವರುಣ ಇದಿಹೇತ್ಯಾ-ದ್ಯಾಸು ಯೋऽರ್ಧರ್ಚಾ ವರುಣದೇವತಾಕಾಃ ಶಿಷ್ಟಾ ಐಂದ್ರ್ಯಃ । ತಥಾ ಚಾನುಕ್ರಾಂತಂ। ಪ್ರಪ್ರ ದ್ವ್ಯೂನಾ-ನುಷ್ಟುಭಂ ದ್ವಿಬೃಹತ್ಯಂತಂ ದ್ವಿತೀಯೋಷ್ಣಿಕ್ ಚತುರ್ಥ್ಯಾದ್ಯಾಸ್ತಿಸ್ರೋ ಗಾಯತ್ರ್ಯಃ ಷೋಳಶ್ಯೇ-ಕಾದಶ್ಯೌ ಪಂಕ್ತೀ ಅಪಾದ್ವೈಶ್ವದೇವೋऽರ್ಧರ್ಚಸ್ತ್ರಯೋ ವಾರುಣಾ ಇತಿ ॥ ಆದ್ಯಸ್ತೃಚಃ ಷೋಡ-ಶಿಶಸ್ತ್ರ ಆನುಷ್ಟುಭಃ । ಸೂತ್ರಿತಂ ಚ । ಪ್ರಪ್ರ ವಸ್ತ್ರಿಷ್ಟುಭಮಿಷಮರ್ಚತ ಪ್ರಾರ್ಚತ । ಆ. ೬-೨ ಇತಿ ॥

ಅನುವಾದವು—**ಪ್ರಪ್ರ** ವಃ ಎಂಬ ಈ ಸೂಕ್ತವು ಏಳನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು ಇದರಲ್ಲಿ ಹದಿನೆಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅಂಗಿರಾ ಋಷಿಯ ಪುತ್ರನಾದ ಪ್ರಿಯಮೇಧನೆಂಬುವನು ಋಷಿಯು. ಈ ಸೂಕ್ತದಲ್ಲಿ **ನದಂ ವಃ** ಎಂಬ ಎರಡನೆಯ ಋಕ್ಕು ಚತುಃಸಪ್ತಕೋಷ್ಣಿಕ್ ಎಂಬ ಛಂದಸ್ಸಿನದು. ಈ ಋಕ್ಕಿನಲ್ಲಿ ನಾಲ್ಕು ಪಾದಗಳಿದ್ದು ಪ್ರತಿಯೊಂದು ಪಾದದಲ್ಲಿಯೂ ಏಳೇಳು ಅಕ್ಷರಗಳಿರುವವು ಎಂದು ಇದರ ಲಕ್ಷಣವು ನಾಲ್ಕನೆಯ ಋಕ್ಕಿನಿಂದ ಮುಂದಿನ ಮೂರು ಋಕ್ಕುಗಳು (೪-೬ ಋಕ್ಕುಗಳು) ಗಾಯತ್ರೀಛಂದಸ್ಕವು ಹನ್ನೊಂದು ಮತ್ತು ಹದಿನಾರನೆಯ ಋಕ್ಕುಗಳು ಪಂಕ್ತಿಛಂದಸ್ಕವು. ಉಳಿದ ಋಕ್ಕುಗಳು ಅನುಷ್ಟುಪ್‌ಛಂದಸ್ಕವು. **ಅಪಾದಿಂದ್ರಃ** ಎಂಬ ಹನ್ನೊಂದನೆಯ ಋಕ್ಕಿನ ಪೂರ್ವಾರ್ಧವು ವಿಶ್ವೇದೇವತಾಕವು, **ವರುಣ** ಇದಿಹ ಎಂಬ ಈ ಋಕ್ಕಿನ ಉತ್ತರಾರ್ಧವೂ, ಮುಂದಿನ ಋಕ್ಕಿನ (೧೨ನೆಯ ಋಕ್ಕಿನ)ಎರಡು ಅರ್ಧಗಳೂ ಸಹ ವರುಣದೇವತಾಕವು.

ಉಳಿದ ಋಕ್ಕುಗಳು ಇಂದ್ರದೇವತಾಕವು ಅನುಕ್ರಮಣಿಕೆಯಲ್ಲಿ— **ಪ್ರಪ್ರ ದ್ವ್ಯೂನಾಽನುಷ್ಟುಭಂ ದ್ವಿಬೃಹತ್ಯಂತಂ ದ್ವಿತೀಯೋಷ್ಣಿಕ್ ಚತುರ್ಥ್ಯಾದ್ಯಾಸ್ತಿಸ್ರೋ ಗಾಯತ್ರ್ಯಃ ಷೋಳಶ್ಯೇಕಾದಶ್ಯೌ ಪಂಕ್ತೀ ಅಪಾದ್ವೈಶ್ವದೇವ್ಯೋಽರ್ಧರ್ಚಸ್ತ್ರಯೋ ವಾರುಣಾಃ** ಎಂದು ಹೇಳಿರುವುದು ಈ ಸೂಕ್ತದ ಮೊದಲನೆಯ ಮೂರು ಋಕ್ಕುಗಳು ಷೋಡಶಿಶಸ್ತ್ರಮಂತ್ರಗಳಲ್ಲಿ ಅನುಷ್ಟುಪ್‌ಛಂದಸ್ಸಿನ ಋಕ್ಕುಗಳಿಗಾಗಿ ಉಪಯೋಗಿಸಲ್ಪಡುವವು ಎಂದು ಆಶ್ವಲಾಯನಶ್ರೌತಸೂತ್ರದ— **ಪ್ರಪ್ರ ವಸ್ತ್ರಿಷ್ಟುಭಮಿಷಮರ್ಚತ ಪ್ರಾರ್ಚತೆ** ಎಂಬ ಸೂತ್ರದಿಂದ (೮ ೬-೨) ವಿವೃತವಾಗಿರುವುದು

## ಸೂಕ್ತ—೬೯

ಮಂಡಲ—೮ ॥ ಅನುವಾಕ—೭ ॥ ಸೂಕ್ತ—೬೯ ।
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೫, ೬, ೭ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೮ ॥
ಋಷಿಃ—ಪ್ರಿಯಮೇಧಃ ।
ದೇವತಾ—೧-೧೦, ೧೪-೧೮. ಇಂದ್ರಃ । ೧೧ ರಲ್ಲಿ ಪೂರ್ವಾರ್ಧ. ವಿಶ್ವೇದೇವಾಃ । ೧೧ ರಲ್ಲಿ ಉತ್ತರಾರ್ಧ, ೧೨ ವರುಣಃ ॥
ಛಂದಃ—೧-೨, ೭-೧೦, ೧೨-೧೫ ಅನುಷ್ಟುಪ್ । ೩ ಉಷ್ಣಿಕ್ । ೪-೬ ಗಾಯತ್ರೀ । ೧೧, ೧೬ ಪಂಕ್ತಿಃ । ೧೭ ೧೮ ಬೃಹತೀ ॥

॥ ಸಂಹಿತಾಪಾಠಃ ॥

ಪ್ರಪ್ರ ವಸ್ತ್ರಿಷ್ಟುಭಮಿಷಂ ಮಂದದ್ವೀರಾಯೇಂದವೇ ।
ಧಿಯಾ ವೋ ಮೇಧಸಾತಯೇ ಪುರಂಧ್ಯಾ ವಿವಾಸತಿ ॥ ೧ ॥

॥ ಪದಪಾಠಃ ॥

ಪ್ರऽಪ್ರ । ವಃ । ತ್ರಿऽಸ್ತುಭಂ । ಇಷಂ । ಮಂದತ್ऽವೀರಾಯ । ಇಂದವೇ ।
ಧಿಯಾ । ವಃ । ಮೇಧऽಸಾತಯೇ । ಪುರಂऽಧ್ಯಾ । ಆ । ವಿವಾಸತಿ । ೧ ।

॥ ಸಾಯಣಭಾಷ್ಯಂ ॥

**ಹೇ ಅಧ್ವರ್ಯ್ವಾದಯಃ ವೋ ಯೂಯಂ । ಪ್ರಥಮಾರ್ಥೇ ದ್ವಿತೀಯಾ । ತ್ರಿಷ್ಟುಭಂ ಸ್ತೋಭತ್ರಯೋಪೇತಮಿಷಮನ್ನಂ ಪಪ್ರ । ಅಪರಃ ಪ್ರಶಬ್ದಃ ಪೂರಣಃ । ಪ್ರಭರತೇತಿ ಶೇಷಃ । ಉಪಸರ್ಗಶ್ರುತೇರ್ಯೋಗ್ಯಕ್ರಿಯಾಧ್ಯಾಹಾರಃ । ಕಸ್ಮೈ । ಮಂದದ್ವೀರಾಯ । ಯೋ ವೀರಾನ್ ಹರ್ಷಯತಿ ಸ ಮಂದದ್ವೀರಃ । ತಸ್ಮಾ ಇಂದವ ಇಂದ್ರಾಯ ॥ ಇಂದತೇರೈಶ್ವರ್ಯಕರ್ಮಣ ಇದಂ ರೂಪಂ । ಅಥವಾ ಫಲೈರ್ವೃಷ್ಟಿಭಿರ್ವೋನತ್ತೀತೀಂದುರಿಂದ್ರಃ ॥ ತಸ್ಮೈ । ಸ ಚೇಂದ್ರೋ ವೋ ಯುಷ್ಮಾನ್ಮೇಧಸಾತಯೇ**

**ಯಜ್ಞಸಂಭಜನಾಯ ಪುರಂಧ್ಯಾ ಬಹುಪ್ರಜ್ಞಯಾ ಧಿಯಾ ಕರ್ಮಣಾ ವಿವಾಸತಿ । ಅಭಿಮತಫಲ-ಯೋಜನೇನ ಸತ್ಕರೋತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ವಃ**— ನೀವು । **ಮಂದದ್ವೀರಾಯ**— ವೀರಜನರಿಗೆ ಹರ್ಷವನ್ನುಂಟುಮಾಡತಕ್ಕ । **ಇಂದವೇ**— ಪ್ರಭುವಾದ ಇಂದ್ರನನ್ನುದ್ದೇಶಿಸಿ । **ತ್ರಿಷ್ಟುಭಂ**— ಮೂರು ವಿಧವಾದ ಸ್ತುತಿಗಳಿಂದ ಕೂಡಿದ । **ಇಷಂ**— ಅನ್ನವನ್ನು । **ಪ್ರಪ್ರ**— ಒದಗಿಸಿರಿ । **ಸಃ**— ಅದೇ ಇಂದ್ರನು । **ವಃ**— ನಿಮಗೆ । **ಮೇಧಸಾತಯೇ**— ಯಜ್ಞನಿರ್ವಹಣಕ್ಕೆ ಅನುಕೂಲವಾಗಲು । **ಪುರಂಧ್ಯಾ**— ಅನೇಕವಿಧವಾದ ಪ್ರಜ್ಞೆಯಿಂದಕೂಡಿದ । **ಧಿಯಾ**— ಕರ್ಮಗಳೊಡನೆ । **ಆ ವಿವಾಸತಿ**-- ಅನುಗ್ರಹಿಸುತ್ತಾನೆ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ವೀರಜನರಿಗೆ ಹರ್ಷವನ್ನುಂಟುಮಾಡತಕ್ಕ ಪ್ರಭುವಾದ ಇಂದ್ರನನ್ನುದ್ದೇಶಿಸಿ ನೀವು ಮೂರು ವಿಧವಾದ ಸ್ತುತಿಗಳಿಂದ ಕೂಡಿದ ಅನ್ನವನ್ನು ಒದಗಿಸಿರಿ. ಅದೇ ಇಂದ್ರನು ನಿಮಗೆ ಯಜ್ಞನಿರ್ವಹಣಕ್ಕೆ ಅನುಕೂಲವಾಗಲು ಅನೇಕವಿಧವಾದ ಪ್ರಜ್ಞೆಯಿಂದ ಕೂಡಿದ ಕರ್ಮಗಳೊಡನೆ ಅನುಗ್ರಹಿಸುತ್ತಾನೆ.

English Translation

Present your sacrificial food with a three-fold song of praise to Indu, gladdener of heroes; he will bless you in your religious rites to the accomplishment of your sacrifice.

॥ ಸಂಹಿತಾಪಾಠಃ ॥

ನದಂ ವ ಓದತೀನಾಂ ನದಂ ಯೋಯುವತೀನಾಂ ।
ಪತಿಂ ವೋ ಅಘ್ನ್ಯಾನಾಂ ಧೇನೂನಾಮಿಷುಧ್ಯಸಿ ॥ ೨ ॥

॥ ಪದಪಾಠಃ ॥

ನದಂ । ವಃ । ಓದತೀನಾಂ । ನದಂ । ಯೋಯುವತೀನಾಂ ।
ಪತಿಂ । ವಃ । ಅಘ್ನ್ಯಾನಾಂ । ಧೇನೂನಾಂ । ಇಷುಧ್ಯಸಿ ॥ ೨ ॥

॥ ಸಾಯಣಭಾಷ್ಯಂ ॥

**ಮಹಾವ್ರತೇ ನಿಷ್ಕೇವಲ್ಯೇ ನದಂ ವ ಇತ್ಯೇಷಾ ವಿಹರಣೀಯಾ । ತಥೈವ ಪಂಚಮಾರಣ್ಯಕೇ ಸೂತ್ರಿತಂ ಚ । ನದಂ ವ ಓದತೀನಾಮಿತ್ಯೇತಯೈತಾನಿ ವ್ಯತಿಷಜತಿ । ಐ ಆ. ೫-೧.೬ । ಇತಿ ॥**

ಓದತೀನಾಂ । ಓದತ್ಯ ಉಷಸಃ ಓದತೀ ಭಾಸ್ವತೀತಿ ತನ್ನಾಮಸು ಪಾಠಾತ್ । ತಾಸಾಂ ನದಂ । ಉತ್ಪಾದಕಮಿತ್ಯರ್ಥಃ । ಇಂದ್ರೇಣ ಹ್ಯುಷಸ ಉತ್ಪದ್ಯಂತೆ ಇಂದ್ರಸ್ಯೈವ ಸೂರ್ಯತ್ವಾತ್ ವಿವಸ್ವದಿಂದ್ರ ಸುಗ್ಮ್ಯೇತಿ ಹಿ ದ್ವಾದಶಾದಿತ್ಯಮಧ್ಯ ಇಂದ್ರಃ ಪಠಿತಃ। ತಾದೃಶಮಿಂದ್ರಂ ಹೇ ಯಜಮಾನಾಃ ವೋ ಯುಷ್ಮದರ್ಥಂ । ಆಹ್ವಯತೇತ್ಯರ್ಥಃ । ತಥಾ ಯೋಯುವತೀನಾಂ ಸರ್ವತ್ರ ಮಿಶ್ರಯಂತೀನಾಂ ನದೀನಾಂ ನದಂ ಶಬ್ದಯಿತಾರಂ ವೋ ಯುಷ್ಮದರ್ಥಮಾಹ್ವಯಾಮಿ । ಅಘ್ನ್ಯಾನಾಮಹಂತವ್ಯಾನಾಂ ಗವಾಂ ಪತಿಮಾಹ್ವಯೇ । ಅಥ ಪ್ರತ್ಯಕ್ಷಕೃತಾ । ಹೇ ಯಜಮಾನ ತ್ವಂ ಧೇನೂನಾಂ ಕ್ಷೀರಾದಿನಾ ಪ್ರೀಣಯತ್ರೀಣಾಂ ಗವಾಮಿಷುಧ್ಯಸಿ । ಅನ್ನಮಿಚ್ಛಸಿ ॥

॥ ಪ್ರತಿಪದಾರ್ಥ ॥

(ಎಲೈ ಯಜಮಾನರೇ) **ಓದತೀನಾಂ**—ಉಷಸ್ಸುಗಳಿಗೆಲ್ಲಾ । **ನದಂ**—ಉತ್ಪಾದಕನಾದ ಇಂದ್ರನನ್ನು । **ವಃ**—ನಿಮ್ಮ ಕಾರ್ಯಾರ್ಥವಾಗಿ ಪ್ರಾರ್ಥಿಸಿ ಕರೆಯಿರಿ । **ಯೋಯುವತೀನಾಂ**—ಸರ್ವತ್ರ ಪ್ರವಹಿಸುವ ನದಿಗಳಿಗೆ । **ನದಂ**—ಭೋರ್ಗರೆಯುವ ಶಬ್ದಕಾರಕನಾದ ಇಂದ್ರನನ್ನು । **ವಃ**—ನಿಮ್ಮ ಕಾರ್ಯಾರ್ಥವಾಗಿ ಕರೆಯಿರಿ । **ಅಘ್ನ್ಯಾನಾಂ**—ಹಿಂಸೆಗೆ ಯೋಗ್ಯವಲ್ಲದ ಗೋವುಗಳಿಗೆಲ್ಲಾ । **ಪತಿಂ**—ಒಡೆಯನಾದ ಇಂದ್ರನನ್ನು ನಾನು ನಿಮಗಾಗಿ ಕರೆಯುವೆನು (ಎಲೈ ಯಜಮಾನನೇ) । **ಧೇನೂನಾಂ**—ಕ್ಷೀರಾದಿಗಳಿಂದ ತೃಪ್ತಿಗೊಳಿಸುವ ಧೇನುಗಳು ಒದಗಿಸುವ **ಇಷುಧ್ಯಸಿ**—ಕ್ಷೀರಾದ್ಯನ್ನಗಳನ್ನು ನೀನು ಇಚ್ಛಿಸುತ್ತೀಯೆ.

॥ ಭಾವಾರ್ಥ ॥

ಎಲೈ ಯಜಮಾನರೇ, ಉಷಸ್ಸುಗಳಿಗೆಲ್ಲಾ ಉತ್ಪಾದಕನಾದ ಇಂದ್ರನನ್ನು ನಿಮ್ಮ ಕಾರ್ಯಾರ್ಥವಾಗಿ ಪ್ರಾರ್ಥಿಸಿ ಕರೆಯಿರಿ ಸರ್ವತ್ರ ಪ್ರವಹಿಸುವ ನದಿಗಳಿಗೆ ಭೋರ್ಗರೆಯುವಂತೆ ಶಬ್ದಕಾರಕನಾದ ಇಂದ್ರನನ್ನು ನಿಮ್ಮ ಕಾರ್ಯಾರ್ಥವಾಗಿ ಕರೆಯಿರಿ. ಹಿಂಸೆಗೆ ಯೋಗ್ಯವಲ್ಲದ ಗೋವುಗಳಿಗೆಲ್ಲಾ ಒಡೆಯನಾದ ಇಂದ್ರನನ್ನು ನಾನು ನಿಮಗಾಗಿ ಕರೆಯುವೆನು. ಎಲೈ ಯಜಮಾನನೇ, ಕ್ಷೀರಾದಿಗಳಿಂದ ತೃಪ್ತಿಗೊಳಿಸುವ ಧೇನುಗಳು ಒದಗಿಸುವ ಕ್ಷೀರಾದ್ಯನ್ನಗಳನ್ನು ನೀನು ಇಚ್ಛಿಸುತ್ತೀಯೆ

## English Translation

(Invoke) for yourselves the author of the dawns, (I invoke) for you the roarer of the rivers ; (I invoke) for you the lord of the inviolable ones ; (O sacrificer), you desire cows

॥ ವಿಶೇಷವಿಷಯಗಳು ॥

ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಪಠನಮಾಡುವಾಗ **ನದಂ ವಃ** ಎಂಬ ಈ ಋಕ್ಕನ್ನು ವಿಹರಣೀಯಾಋಕ್ಕನ್ನಾಗಿ ಪಠಿಸಬೇಕೆಂದು ಐತರೇಯಾರಣ್ಯಕದ ಪಂಚಮಾರಣ್ಯಕದ—**ನದಂ ವ ಓದತೀನಾಮಿತ್ಯೇತಯೈತಾನಿ ವ್ಯತಿಷಜತಿ** ಎಂಬ ವಾಕ್ಯದಿಂದ (ಐ. ಆ ೫-೧ ೬) ನಿರ್ದಿಷ್ಟವಾಗಿರುವುದು.

॥ ಸಂಹಿತಾಪಾಠ ॥

ತಾ ಅಸ್ಯ ಸೂದದೋಹಸಃ ಸೋಮಂ ಶ್ರೀಣಂತಿ ಪೃಶ್ನಯಃ ।
ಜನ್ಮನ್ದೇವಾನಾಂ ವಿಶಸ್ತ್ರಿಷ್ವಾ ರೋಚನೇ ದಿವಃ ॥ ೩ ॥

॥ ಪದಪಾಠಃ ॥

ತಾಃ । ಅಸ್ಯ । ಸೂದಽದೋಹಸಃ । ಸೋಮಂ । ಶ್ರೀಣಂತಿ । ಪೃಶ್ನಯಃ ।
ಜನ್ಮನ್ । ದೇವಾನಾಂ । ವಿಶಃ । ತ್ರಿಷು । ಆ । ರೋಚನೇ । ದಿವಃ ॥ ೩ ॥

॥ ಸಾಯಣಭಾಷ್ಯಂ ॥

ಅಗ್ನಿಹೋತ್ರೇ ಪೂರ್ವಾಹುತೌ ಹುತಾಯಾಂ ತಾ ಅಸ್ಯೇತ್ಯನಯೋತ್ತರಾಮಾಹುತಿಂ ಕಾಂಕ್ಷಮಾಣಸ್ತಿಷ್ಠೇತ್ । ತಥಾ ಚ ಸೂತ್ರಿತಂ । ತಾ ಅಸ್ಯ ಸೂದದೋಹಸ ಇತಿ ಪೂರ್ವಾಮಾಹುತಿಮುತ್ಪ್ರೇಕ್ಷ್ಯೋತ್ತರಾಂ ಕಾಂಕ್ಷೇತ । ಆ ೨ ೩ ॥ ಇತಿ । ಮಹಾವ್ರತೇ ನಿಷ್ಕೇವಲ್ಯೇಽಪ್ಯೇಷಾ । ತಥೈವ ಪಂಚಮಾರಣ್ಯಕೇ ಸೂತ್ರಿತಂ । ತಾ ಅಸ್ಯ ಸೂದದೋಹಸ ಇತ್ಯೇತದಾದಿಃ ಸೂದದೋಹಾಃ ಸೂದದೋಹಾಃ ॥ ಐ ಆ. ೫-೨-೬ । ಇತಿ ॥

ತಾಃ ಪ್ರಸಿದ್ಧಾಃ ಸೂದದೋಹಸಃ । ಸೂದ ಇತಿ ಕೂಪನಾಮ । ತತ್ಸದೃಶದೋಹನಾಃ ಪೃಶ್ನಯಃ ಪೃಶ್ನಿವರ್ಣಾ ಗಾವೋಽಸ್ಯೇಂದ್ರಸ್ಯ ಸೋಮಂ ಶ್ರೀಣಂತಿ । ಮಿಶ್ರಯಂತ್ಯಾಶಿರೇಣ । ಕದಾ । ತ್ರಿಷು ತ್ರಿಷ್ವಪಿ ಸವನೇಷು । ಗಾವೋ ವಿಶೇಷ್ಯಂತೇ । ದೇವಾನಾಂ ಜನ್ಮನ್ಯುತ್ಪತ್ತಿಸ್ಥಾನೇ । ದಿವೀತ್ಯರ್ಥಃ । ದಿವ ಆದಿತ್ಯಸ್ಯ ರೋಚನ ಆರೋಚಮಾನೇ । ಅನೇನ ದ್ಯೌರ್ವಿಶೇಷ್ಯತೇ । ತಸ್ಮಿನ್ ಸ್ಥಾನೇ ವಿಶೋ ನಿವಿಶಂತ್ಯಃ । ಯಜ್ಞಾರ್ಥೋಪಯುಕ್ತಾನಾಂ ಗವಾಂ ದ್ಯುಪ್ರಾಪ್ತಿಃ ಪ್ರಸಿದ್ಧಾ ॥

॥ ಪ್ರತಿಪದಾರ್ಥ ॥

**ದೇವಾನಾಂ**—ದೇವತೆಗಳಿಗೆ । **ಜನ್ಮನ್**—ಉತ್ಪತ್ತಿಸ್ಥಾನವಾದ ಅಂತರಿಕ್ಷದಲ್ಲಿರುವ । **ದಿವಃ**—ಆದಿತ್ಯನ । **ಆ ರೋಚನೇ**—ಪ್ರಕಾಶಮಾನವಾದ ದ್ಯುಲೋಕದಲ್ಲಿ । **ವಿಶಃ**—ವಾಸಿಸುತ್ತಿರುವುವೂ । **ತಾಃ**—ಪ್ರಸಿದ್ಧವಾದವೂ । **ಸೂದದೋಹಸಃ**-ಆಳವಾದ ಬಾವಿಯಲ್ಲಿರುವ ನೀರಿನಂತೆ ಪ್ರಭೂತವಾಗಿ ಕ್ಷೀರವನ್ನು ಕೊಡತಕ್ಕವೂ । **ಪೃಶ್ನಯಃ**-ವಿಧವಿಧವಾದ ಬಣ್ಣವುಳ್ಳವೂ ಆದ ಗೋವುಗಳು । **ಅಸ್ಯ**—ಈ ಇಂದ್ರನಿಗಾಗಿ । **ತ್ರಿಷು**—ಮೂರು ಯಜ್ಞಕಾಲಗಳಲ್ಲೂ । **ಸೋಮಂ**—ಸೋಮವನ್ನು । **ಶ್ರೀಣಂತಿ**—ಆಶಿರದ್ರವ್ಯಗಳಿಂದ ಸೇರಿಸುತ್ತವೆ.

॥ ಭಾವಾರ್ಥ ॥

ದೇವತೆಗಳಿಗೆ ಉತ್ಪತ್ತಿಸ್ಥಾನವಾದ ಅಂತರಿಕ್ಷದಲ್ಲಿರುವ ಆದಿತ್ಯನ ಪ್ರಕಾಶಮಾನವಾದ ದ್ಯುಲೋಕದಲ್ಲಿ

ವಾಸಿಸುತ್ತಿರುವುವೂ ಪ್ರಸಿದ್ಧವಾದವೂ ಆಳವಾದ ಬಾವಿಯಲ್ಲಿರುವ ನೀರಿನಂತೆ ಪ್ರಭೂತವಾಗಿ ಕ್ಷೀರವನ್ನು ಕೊಡತಕ್ಕವೂ ವಿಧವಿಧವಾದ ಬಣ್ಣವುಳ್ಳವೂ ಆದ ಗೋವುಗಳು ಈ ಇಂದ್ರನಿಗಾಗಿ ಮೂರು ಯಜ್ಞಗಳ ಕಾಲಗಳಲ್ಲಿಯೂ ಸೋಮವನ್ನು ಆಶಿರದ್ರವ್ಯಗಳೊಡನೆ ಸೇರಿಸುತ್ತವೆ.

## English Translation

These white cows, giving milk like wells, mix the Soma for him at the three oblations, rising (in consequence to the brilliant home of the sun, the birthplace of the gods).

॥ ವಿಶೇಷವಿಷಯಗಳು ॥

ಅಗ್ನಿಹೋತ್ರಕರ್ಮದಲ್ಲಿ ಮೊದಲನೆಯ ಆಹುತಿಯನ್ನು ಹೋಮಮಾಡಿದ ಮೇಲೆ ಎರಡನೆಯ ಆಹುತಿಯನ್ನು ಹೋಮಮಾಡುವುದಕ್ಕೆ ಪೂರ್ವಭಾವಿಯಾಗಿ ಎದ್ದು ನಿಂತುಕೊಂಡು **ತಾ ಅಸ್ಯ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತಾ ಅಸ್ಯ ಸೂದದೋಹಸ ಇತಿ ಪೂರ್ವಾಮಾಹುತಿಮುಪೋತ್ಥಾಯೋತ್ತರಾಂ ಕಾಂಕ್ಷೇತ** ಎಂಬ ಸೂತ್ರದಿಂದ (ಆ. ೨-೩) ವಿವೃತವಾಗಿರುವುದು. ಮಹಾವ್ರತೇಷ್ಟಿಯಲ್ಲಿಯೂ ನಿಷ್ಕೇವಲ್ಯ ಶಸ್ತ್ರಮಂತ್ರಗಳಲ್ಲಿ ಈ ಋಕ್ಕನ್ನು ಪಠಿಸಬೇಕೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ—**ತಾ ಅಸ್ಯ ಸೂದದೋಹಸ ಇತ್ಯೇತದಾದಿಃ ಸೂದದೋಹಾಃ ಸೂದದೋಹಾಃ** ಎಂಬ ವಾಕ್ಯದಿಂದ (ಐ ಆ. ೫ ೧-೬) ನಿರ್ದಿಷ್ಟವಾಗಿರುವುದು.

॥ ಸಂಹಿತಾಪಾಠಃ ॥

ಅಭಿ ಪ್ರ ಗೋಪತಿಂ ಗಿರೇಂದ್ರಮರ್ಚ ಯಥಾ ವಿದೇ ।
ಸೂನುಂ ಸತ್ಯಸ್ಯ ಸತ್ಪತಿಂ । ೪ ॥

॥ ಪದಪಾಠಃ ॥

ಅಭಿ । ಪ್ರ । ಗೋಽಪತಿಂ । ಗಿರಾ । ಇಂದ್ರಂ । ಅರ್ಚ । ಯಥಾ । ವಿದೇ ।
ಸೂನುಂ । ಸತ್ಯಸ್ಯ । ಸತ್ಽಪತಿಂ ॥ ೪ ॥

॥ ಸಾಯಣಭಾಷ್ಯಂ ॥

ದ್ವಿತೀಯೇ ಪರ್ಯಾಯೇ ಮೈತ್ರಾವರುಣಶಸ್ತ್ರೇಽಭಿ ಪ್ರ ಗೋಪತಿಮಿತಿ ತೃಚೋಽನುರೂಪಃ । ಸೂತ್ರಿತಂ ಚ । ಅಭಿ ತ್ವಾ ವೃಷಭಾ ಸುತೇಽಭಿ ಪ್ರ ಗೋಪತಿಂ ಗಿರಾ । ಆ. ೬-೪ । ಇತಿ ॥

ಗೋಪತಿಂ ಗವಾಂ ಸ್ವಾಮಿನಮಿಂದ್ರಮಭಿ ಪ್ರಾರ್ಚ । ಪ್ರಕರ್ಷೇಣ ಪೂಜಯ ಸ್ತುತ್ಯಾ । ಯೋಗ್ಯಾ

**ವಿದೇ ಸ ಯಥಾ ಸ್ವಾತ್ಮಾನಂ ಸ್ತುತಪ್ರಕಾರಂ ಜಾನಾತಿ ಯಥಾ ವಾ ಯಾಗಂ ಪ್ರತಿ ಗಂತವ್ಯಮಿತಿ ಜಾನಾತಿ ತಥಾ ವೇತಿ ಈದೃಶಮಿಂದ್ರಂ । ಸತ್ಯಸ್ಯ ಯಜ್ಞಸ್ಯ ಸತ್ಯಸ್ಯ ವಾ ಸೂನುಂ ಪುತ್ರಂ। ತತ್ರಾ-ಸುರಕ್ತತ್ವಾತ್ಸೂನುರಿತ್ಯುಪಚರ್ಯತೇ । ಸತ್ಪತಿಂ ಸತಾಂ ಯಜಮಾನಾನಾಂ ಪಾಲಕಂ ॥**

॥ ಪ್ರತಿಪದಾರ್ಥ ॥

(ಎಲೈ ಯಜಮಾನನೇ) **ಗೋಪತಿಂ**—ಗೋವುಗಳಿಗೆ ಒಡೆಯನೂ। **ಸತ್ಯಸ್ಯ**—ಸತ್ಯಾತ್ಮಕವಾದ ಯಜ್ಞಕ್ಕೆ **ಸೂನುಂ**—ಪುತ್ರರೂಪನೂ । **ಸತ್ಪತಿಂ**—ಸಜ್ಜನರಿಗೆ ಪಾಲಕನೂ ಆದ । **ಇಂದ್ರಂ**—ಇಂದ್ರನನ್ನು । **ಯಥಾ**—ಯಾವ ಪ್ರಕಾರವಾಗಿ । **ವಿದೇ**—ಅವನು ತಿಳಿಯುವನೋ ಆ ರೀತಿಯಲ್ಲಿ । **ಗಿರಾ**—ಸ್ತುತಿವಾಕ್ಯಗಳಿಂದ । **ಅಭಿ ಪ್ರ ಅರ್ಚ**—ಪೂಜಿಸಿ ಸ್ತುತಿಸು.

॥ ಭಾವಾರ್ಥ ॥

ಎಲೈ ಯಜಮಾನನೇ, ಗೋವುಗಳಿಗೆ ಒಡೆಯನೂ, ಸತ್ಯಾತ್ಮಕವಾದ ಯಜ್ಞಕ್ಕೆ ಪುತ್ರರೂಪನೂ, ಸಜ್ಜನರಿಗೆ ಪಾಲಕನೂ ಆದ ಇಂದ್ರನನ್ನು ಯಾವ ಪ್ರಕಾರವಾಗಿ ಅವನು ನಿನ್ನ ಪೂಜೆಯನ್ನು ಅರಿಯುವನೋ ಆ ರೀತಿಯಲ್ಲಿ ಸ್ತುತಿಸಿ ಪೂಜಿಸು.

English Translation

Worship with your praise, as he himself knows,—that lord of cows, Indra, the son ot truth, the protector of the good.

॥ ವಿಶೇಷ ವಿಷಯಗಳು ॥

ಎರಡನೆಯ ಪರ್ಯಾಯದಲ್ಲಿ ಮೈತ್ರಾವರುಣಶಸ್ತ್ರಮಂತ್ರಪಠನಕಾಲದಲ್ಲಿ **ಅಭಿ ಪ್ರ ಗೋಪತಿಂ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಅನುರೂಪತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಭಿ ತ್ವಾ ವೃಷಭಾ ಸುತೇಽಭಿ ಪ್ರ ಗೋಪತಿಂ ಗಿರಾ** ಎಂಬ ಸೂತ್ರದಿಂದ (ಆ ೬-೪) ವಿನ್ಯಸ್ತವಾಗಿರುವುದು.

॥ ಸಂಹಿತಾಪಾಠಃ ॥

ಆ ಹರಯಃ ಸಸೃಜ್ರಿರೇಽರುಷೀರಧಿ ಬರ್ಹಿಷಿ ।
ಯತ್ರಾಭಿ ಸಂನವಾಮಹೇ ॥ ೫ ॥

॥ ಪದಪಾಠಃ ॥

ಆ । ಹರಯಃ । ಸಸೃಜ್ರಿರೇ । ಅರುಷೀಃ । ಅಧಿ । ಬರ್ಹಿಷಿ ।
ಯತ್ರ । ಅಭಿ । ಸಂಽನವಾಮಹೇ ॥ ೫ ॥

॥ ಸಾಯಣಭಾಷ್ಯಂ ॥

ಹರಯೋ ಹರಿತವರ್ಣಾ ಅಶ್ವಾ ಅರುಷೀರಾರೋಚಮಾನಾ ಅಧಿ ಬರ್ಹಿಷಿ । ಅಧೀತಿ ಸಪ್ತಮ್ಯ-ರ್ಥಾನುವಾದೀ । ಬರ್ಹಿಷ್ಯಾಸ್ತೃತ ಆ ಸಸೃಜ್ರಿರೇ । ಆಸೃಜಂತು । ಯತ್ರ ಯಸ್ಮಿನ್ಬರ್ಹಿಷಿ ಸ್ಥಿತಮಿಂದ್ರ-ಮಭಿ ಸಂನವಾಮಹೇ ಅಭಿಸಂಸ್ತುಮಃ ॥

॥ ಪ್ರತಿಪದಾರ್ಥ ॥

**ಯತ್ರ**—ಯಾವ ದರ್ಭಾಸನದ ಮೇಲೆ ಸ್ಥಿತನಾಗಿರುವ ಇಂದ್ರನನ್ನು । **ಅಭಿ ಸಂನವಾಮಹೇ**—ನಾವು ಪ್ರಶಂಸಿಸಿ ಪೂಜಿಸುವೆವೋ ಅಂತಹ । **ಅಧಿ ಬರ್ಹಿಷಿ**—ದರ್ಭಾಸನಗಳಮೇಲೆ । **ಅರುಷೀಃ**—ಪ್ರಕಾಶಮಾನಗಳಾದ । **ಹರಯಃ**—ಇಂದ್ರನ ಅಶ್ವಗಳು । **ಆ ಸಸೃಜ್ರಿರೇ**—ಇಂದ್ರನನ್ನು ತಂದು ಕುಳ್ಳಿರಿಸಲಿ

॥ ಭಾವಾರ್ಥ ॥

ಯಾವ ದರ್ಭಾಸನದ ಮೇಲೆ ಸ್ಥಿತನಾಗಿರುವ ಇಂದ್ರನನ್ನು ನಾವು ಪ್ರಶಂಸಿಸಿ ಪೂಜಿಸುವೆವೋ ಅಂತಹ ದರ್ಭಾಸನಗಳ ಮೇಲೆ ಪ್ರಕಾಶಮಾನಗಳಾದ ಇಂದ್ರನ ಅಶ್ವಗಳು ಇಂದ್ರನನ್ನು ತಂದು ಕುಳ್ಳಿರಿಸಲಿ.

English Translation

Let the brilliant bay (horses) drop him down on the cut grass, where we will hymn his praise

॥ ಸಂಹಿತಾಪಾಠಃ ॥

ಇಂದ್ರಾಯ ಗಾವ ಆಶಿರಂ ದುದುಹ್ರೇ ವಜ್ರಿಣೇ ಮಧು ।
ಯತ್ಸೀಮುಪಹ್ವರೇ ವಿದತ್ ॥ ೬ ॥

॥ ಪದಪಾಠಃ ॥

ಇಂದ್ರಾಯ । ಗಾವಃ । ಆऽಶಿರಂ । ದುದುಹ್ರೇ । ವಜ್ರಿಣೇ । ಮಧು ।
ಯತ್ । ಸೀಂ । ಉಪऽಹ್ವರೇ । ವಿದತ್ ॥ ೬ ॥

॥ ಸಾಯಣಭಾಷ್ಯಂ ॥

ಇಂದ್ರಾಯ ಗಾವ ಆಶಿರಮಾಶ್ರಯಣಸಾಧನಂ ಪಯಆದಿಕಂ ಮಧು ಮದಕರಂ ದುದುಹ್ರೇ । ದುಗ್ಧವತ್ಯಃ । ಕೀದೃಶಾಯ । ವಜ್ರಿಣೇ ವಜ್ರಯುಕ್ತಾಯೇಂದ್ರಾಯ । ಯದ್ಯದೋಪಹ್ವರೇ ಸಮೀಪೇ ವರ್ತಮಾನಂ ಮಧು ಸೋಮರಸಂ ಸೀಂ ಸರ್ವತೋ ವಿದತ್ ಲಭತೇ ತದಾ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಉಪಹ್ವರೇ**—ಸಮೀಪದಲ್ಲಿರುವ ಸೋಮರಸವನ್ನು । **ಸೀಂ**—ಸರ್ವತ್ರ । **ವಿದತ್**—ಇಂದ್ರನು ಹೊಂದುವನೋ ಆಗ । **ವಜ್ರಿಣೇ**—ವಜ್ರಾಯುಧಧಾರಿಯಾದ । **ಇಂದ್ರಾಯ**—ಇಂದ್ರನಿಗಾಗಿ । **ಗಾವಃ**—ಗೋವುಗಳು । **ಮಧು**—ತೃಪ್ತಿಕರವಾದ । **ಆಶಿರಂ**—ಕ್ಷೀರಾದ್ಯಾಶ್ರಯಣದ್ರವ್ಯವನ್ನು । **ದುದುಹ್ರೇ**—ಕರೆಯುತ್ತವೆ

॥ ಭಾವಾರ್ಥ ॥

ಸಮೀಪದಲ್ಲಿರುವ ಸೋಮರಸವನ್ನು ಇಂದ್ರನು ಯಾವಾಗ ಸರ್ವತ್ರ ಹೊಂದುವನೋ ಆಗ ವಜ್ರಾಯುಧಧಾರಿಯಾದ ಇಂದ್ರನಿಗಾಗಿ ಗೋವುಗಳು ತೃಪ್ತಿಕರವಾದ ಕ್ಷೀರಾದ್ಯಾಶ್ರಯಣದ್ರವ್ಯವನ್ನು ಕರೆಯುತ್ತವೆ.

English Translation

The cows have milked the intoxicating draught for Indra, the thunderer, when he finds it near him.

॥ ಸಂಹಿತಾಪಾಠಃ ॥

ಉದ್ಯದ್ಬ್ರಧ್ನಸ್ಯ ವಿಷ್ಟಪಂ ಗೃಹಮಿಂದ್ರಶ್ಚ ಗನ್ವಹಿ ।
ಮಧ್ವಃ ಪೀತ್ವಾ ಸಚೇವಹಿ ತ್ರಿಃ ಸಪ್ತ ಸಖ್ಯುಃ ಪದೇ ॥ ೭ ॥

॥ ಪದಪಾಠಃ ॥

ಉತ್ । ಯತ್ । ಬ್ರಧ್ನಸ್ಯ । ವಿಷ್ಟಪಂ । ಗೃಹಂ । ಇಂದ್ರಃ । ಚ । ಗನ್ವಹಿ ।
ಮಧ್ವಃ । ಪೀತ್ವಾ । ಸಚೇವಹಿ । ತ್ರಿಃ । ಸಪ್ತ । ಸಖ್ಯುಃ । ಪದೇ ॥ ೭ ॥

॥ ಸಾಯಣಭಾಷ್ಯಂ ॥

**ಷೋಡಶಿಶಸ್ತ್ರಸ್ಯೋದ್ಯದ್ಬ್ರಧ್ನಸ್ಯೇತ್ಯೇಷಾಂತ್ಯಾ । ಸೂತ್ರಿತಂ ಚ । ಉದ್ಯದ್ಬ್ರಧ್ನಸ್ಯ ವಿಷ್ಟಪಮಿತ್ಯೇಷಾ ಪರಿಧಾನೀಯಾ ॥ ಆ. ೬-೨ । ಇತಿ ॥**

**ಯದ್ಯದಾ ಬ್ರಧ್ನಸ್ಯ ವಿಷ್ಟಪಂ ಸೂರ್ಯಸ್ಯ ಸ್ಥಾನಂ ಗೃಹಮಿಂದ್ರಶ್ಚಾಹಂ ಚೋಭಾವುದ್ಗನ್ವಹಿ ಉದ್ಗಚ್ಛಾವಃ ತದಾನೀಂ ಮಧ್ವೋ ಮಧುರಂ ಸೋಮರಸಂ ಪೀತ್ವಾ ಸಚೇವಹಿ । ಸಂಸ್ಪೃಷ್ಟೌ ಭವೇವ । ಕುತ್ರ । ಸಖ್ಯುಃ ಸರ್ವೇಷಾಂ ಸಖಿಭೂತಸ್ಯಾದಿತ್ಯಸ್ಯ । ತ್ರಿಃ ಸಪ್ತೇತ್ಯನೇನ ದೇವಲೋಕಾನಾಮುತ್ತಮಮೇಕವಿಂಶಂ ಸ್ಥಾನಮುಚ್ಯತೇ । ಆದಿತ್ಯಸ್ಯೈಕವಿಂಶತ್ವಾತ್ । ತಥಾ ಚ ಬ್ರಾಹ್ಮಣಂ । ದ್ವಾದಶ ಮಾಸಾಃ**

ಪಂಚರ್ತವಸ್ತ್ರಯ ಇಮೇ ಲೋಕಾ ಅಸಾವಾದಿತ್ಯ ಏಕವಿಂಶ ಇತಿ । ತಾದೃಶ ಏಕವಿಂಶಸ್ಥಾನೇ ಸಚೇವಹೀತಿ ॥

॥ ಪ್ರತಿಪದಾರ್ಥ ॥

ಯತ್—ಯಾವಾಗ । ಬ್ರಧ್ನಸ್ಯ—ಆದಿತ್ಯನ । ವಿಷ್ಟಪಂ—ಸ್ಥಾನವಾದ । ಗೃಹಂ—ಅಂತರಿಕ್ಷವನ್ನು । ಇಂದ್ರಶ್ಚ—ಇಂದ್ರ ಮತ್ತು ನಾನು ಇಬ್ಬರೂ ಸಹ । ಉತ್ ಗಸ್ವಹಿ—ಹತ್ತಿಹೋಗಿ ಸೇರುವೆವೋ, ಆಗ । ಮಧ್ವಃ—ಮಧುರವಾದ ಸೋಮರಸವನ್ನು । ಪೀತ್ವಾ—ಪಾನಮಾಡಿ । ಸಖ್ಯುಃ—ಪ್ರಪಂಚಕ್ಕೆಲ್ಲಾ ಮಿತ್ರನಾದ ಆದಿತ್ಯನ । ತ್ರಿಃ ಸಪ್ತ—ಏಕವಿಂಶವೆಂಬ ಅತ್ಯುತ್ತಮವಾದ । ಪದೇ-ಸ್ಥಾನದಲ್ಲಿ । ಸಚೇವಹಿ—ಒಂದುಗೂಡಿ ಸೇರಿಕೊಳ್ಳುವೆವು.

॥ ಭಾವಾರ್ಥ ॥

ಯಾವಾಗ ಆದಿತ್ಯನ ಸ್ಥಾನವಾದ ಅಂತರಿಕ್ಷವನ್ನು ಇಂದ್ರ ಮತ್ತು ನಾನು ಇಬ್ಬರೂ ಸಹ ಹತ್ತಿ ಹೋಗಿ ಸೇರುವೆವೋ ಆಗ ಮಧುರವಾದ ಸೋಮರಸವನ್ನು ಪಾನಮಾಡಿ ಪ್ರಪಂಚಕ್ಕೆಲ್ಲಾ ಮಿತ್ರನಾದ ಆದಿತ್ಯನ ಏಕವಿಂಶವೆಂಬ ಅತ್ಯುತ್ತಮವಾದ ಸ್ಥಾನದಲ್ಲಿ ಒಂದುಗೂಡಿ ಸೇರಿಕೊಳ್ಳುವೆವು.

## English Translation

When Indra and I ascend to our home, the world of the sun, then, having drunk the sweet (Soma), let us be united in the twenty-first sphere of the (universal) friend.

॥ ವಿಶೇಷವಿಷಯಗಳು ॥

ಷೋಡಶಿಶಸ್ತ್ರಮಂತ್ರಪಠನದಲ್ಲಿ **ಉದ್ಯದ್ಬ್ರಧ್ನಸ್ಯ** ಎಂಬ ಈ ಋಕ್ಕನ್ನು ಕೊನೆಯ ಋಕ್ಕನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಉದ್ಯದ್ಬ್ರಧ್ನಸ್ಯ ವಿಷ್ಟಪಮಿತ್ಯೇಷಾ ಪರಿಧಾನೀಯಾ** ಎಂಬ ಸೂತ್ರದಿಂದ (ಆ ೬-೨) ವಿನ್ಯತವಾಗುವುದು

॥ ಸಂಹಿತಾಪಾಠಃ ॥

ಅರ್ಚತ ಪ್ರಾರ್ಚತ ಪ್ರಿಯಮೇಧಾಸೋ ಅರ್ಚತ ।
ಅರ್ಚಂತು ಪುತ್ರಕಾ ಉತ ಪುರಂ ನ ಧೃಷ್ಣ್ವರ್ಚತ ॥ ೮ ॥

॥ ಪದಪಾಠಃ ॥

ಅರ್ಚತ । ಪ್ರ । ಅರ್ಚತ । ಪ್ರಿಯಽಮೇಧಾಸಃ । ಅರ್ಚತ ।
ಅರ್ಚಂತು । ಪುತ್ರಕಾಃ । ಉತ । ಪುರಂ । ನ । ಧೃಷ್ಣು । ಅರ್ಚತ ॥ ೮ ॥

॥ ಸಾಯಣಭಾಷ್ಯಂ ॥

**ಪೂರ್ವೋಕ್ತ ಏವ ಶಸ್ತ್ರೇಽರ್ಚತೇತಿ ದ್ವಿತೀಯ ಆನುಷ್ಟುಭಸ್ತೃಚಃ । ಸೂತ್ರಿತಂ ಚ । ಪ್ರಪ್ರ ವಸ್ತ್ರಿಷ್ಟುಭಮಿಷಮರ್ಚತ ಪ್ರಾರ್ಚತ । ಆ. ೬-೨ । ಇತಿ ॥**

**ಹೇ ಅಧ್ವರ್ಯ್ವಾದಯಃ ಯೂಯಮಿಂದ್ರಮರ್ಚತ । ಪೂಜಯತ ಸ್ತುತ್ಯಾ । ಪ್ರಾರ್ಚತ । ಪ್ರಕರ್ಷೇಣಾರ್ಚತೇಂದ್ರಮೇವ । ಹೇ ಪ್ರಿಯಮೇಧಾಸಃ ಪ್ರಿಯಮೇಧಸಂಬಂಧಿನಸ್ತದ್ಗೋತ್ರಾಃ ಯೂಯಮರ್ಚತೇಂದ್ರಂ । ಪುತ್ರಕಾಃ ಪುತ್ರಾ ಅಪ್ಯರ್ಚಂತ್ವಿಂದ್ರಂ । ಉತಾಪಿ ಚ ಪುರಂ ನ ಧೃಷ್ಣು ಯಥಾ ಪುರಂ ಧರ್ಷಣಶೀಲಮರ್ಚಂತಿ ತಾದೃಶಮಿಂದ್ರಮರ್ಚತ ॥**

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ಅರ್ಚತ**—ಇಂದ್ರನನ್ನು ಪೂಜಿಸಿರಿ । **ಪ್ರಾರ್ಚತ**—ಅತ್ಯುತ್ತಮವಾಗಿ ಪೂಜಿಸಿರಿ । **ಪ್ರಿಯಮೇಧಾಸಃ**—ಪ್ರಿಯಮೇಧಸಂತತಿಗೆ ಸೇರಿನ ಎಲೈ ಋಷಿಗಳೇ । **ಅರ್ಚತ**—ಇಂದ್ರನನ್ನು ಪೂಜಿಸಿರಿ । **ಪುತ್ರಕಾಃ**—ನಿಮ್ಮ ಪುತ್ರರೂ ಸಹ । **ಅರ್ಚಂತು**—ಇಂದ್ರನನ್ನು ಪೂಜಿಸಲಿ । ಉತ—ಮತ್ತು । **ಪುರಂ ನ**—ಪಟ್ಟಣದಂತೆ । **ಧೃಷ್ಣು**—ದೃಢಕಾಯನಾದ ಇಂದ್ರನನ್ನು । **ಅರ್ಚತ**—ಪೂಜಿಸಿರಿ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಇಂದ್ರನನ್ನು ಪೂಜಿಸಿರಿ. ಅತ್ಯುತ್ತಮವಾಗಿ ಪೂಜಿಸಿರಿ. ಪ್ರಿಯಮೇಧಸಂತತಿಗೆ ಸೇರಿದ ಎಲೈ ಋಷಿಗಳೇ, ಇಂದ್ರನನ್ನು ಪೂಜಿಸಿರಿ. ನಿಮ್ಮ ಪುತ್ರರೂ ಸಹ ಇಂದ್ರನನ್ನು ಪೂಜಿಸಲಿ ಮತ್ತು ಪಟ್ಟಣದಂತೆ ದೃಢಕಾಯನಾದ ಇಂದ್ರನನ್ನು ಪೂಜಿಸಿರಿ.

English Translation

Worship Indra, worship him pre-eminently, worship him, you of the family of Priyamedha , let your sons also wosiship him , worship him as a strong city.

॥ ವಿಶೇಷವಿಷಯಗಳು ॥

ಹಿಂದೆ ಹೇಳಿದ ಶಸ್ತ್ರಮಂತ್ರಗಳಲ್ಲಿ **ಅರ್ಚತ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಆನುಷ್ಟುಪ್ ಛಂದಸ್ಸಿನ ಎರಡನೆಯ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ- **ಪ್ರಪ್ರ ವಸ್ತ್ರಿಷ್ಟುಭಮಿಷಮರ್ಚತ ಪ್ರಾರ್ಚತ** ಎಂಬ ಸೂತ್ರದಿಂದ (ಆ. ೬-೨) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

**ಅವ ಸ್ವರಾತಿ ಗರ್ಗರೋ ಗೋಧಾ ಪರಿ ಸನಿಷ್ವಣತ್ ।**

ಪಿಂಗಾ ಪರಿ ಚನಿಷ್ಕದದಿಂದ್ರಾಯ ಬ್ರಹ್ಮೋದ್ಯತಂ ॥ ೯ ॥

॥ ಪದಪಾಠಃ ॥

ಅವ । ಸ್ವರಾತಿ । ಗರ್ಗರಃ । ಗೋಧಾ । ಪರಿ । ಸನಿಸ್ವನತ್ ।

ಪಿಂಗಾ । ಪರಿ । ಚನಿಸ್ಕದತ್ । ಇಂದ್ರಾಯ । ಬ್ರಹ್ಮ । ಉತ್ऽಯತಂ ॥ ೯ ॥

॥ ಸಾಯಣಭಾಷ್ಯಂ ॥

ಗರ್ಗರೋ ಗರ್ಗರಧ್ವನಿಯುಕ್ತೋ ವಾದ್ಯವಿಶೇಷೋ ಯುದ್ಧೇऽವ ಸ್ವರಾತಿ । ಭಯಂ ಶಬ್ದ-ಯತಿ । ಗೋಧಾ ಹಸ್ತಘ್ನಃ ಪರಿ ಪರಿತಃ ಸನಿಸ್ವಣತ್ । ಸ್ವನತಿ ಭೃಶಂ । ಪಿಂಗಾ ಪಿಂಗವರ್ಣಾ ಜ್ಯಾಪಿ ಪರಿ ಚನಿಷ್ಕದತ್ । ಪರಿಸ್ಕಂದತೇ । ಯಸ್ಮಾದೇವಂ ಯುದ್ಧಃ ಸಂನದ್ಧೋऽತ ಇಂದ್ರಾಯ ಬ್ರಹ ಪರಿವೃಢಂ ಕರ್ಮ ಸ್ತುತಿಲಕ್ಷಣಮುದ್ಯತಂ ಭವತ್ವಿತಿ ಶೇಷಃ ॥

॥ ಪ್ರತಿಪದಾರ್ಥ ॥

**ಗರ್ಗರಃ**—ಗರ್ಗರಶಬ್ದವನ್ನುಂಟುಮಾಡುವ ಭೇರಿಯು । **ಅವ ಸ್ವರಾತಿ**—ಯುದ್ಧರಂಗದಲ್ಲಿ ಭಯಂಕರವಾದ ಶಬ್ದವನ್ನುಂಟುಮಾಡುತ್ತದೆ । **ಗೋಧಾ**—ಗೋಧಾಸಂಜ್ಞಕವಾದ ಪಟಹವು । **ಪರಿ**—ಸುತ್ತಲೂ । **ಸನಿಸ್ವಣತ್**—ಅಧಿಕವಾಗಿ ಶಬ್ದಮಾಡುತ್ತದೆ । **ಪಿಂಗಾ**—ಹೊಂಬಣ್ಣವುಳ್ಳ ಬಿಲ್ಲಿನ ಹೆದೆಯೂ ಸಹ । **ಪರಿ**—ಸುತ್ತಲೂ । **ಪರಿ ಚನಿಸ್ಕದತ್**—ಟೇಂಕಾರದ ಶಬ್ದವನ್ನು ಮಾಡುತ್ತದೆ । **ಇಂದ್ರಾಯ**—ಇಂದ್ರನನ್ನುದ್ದೇಶಿಸಿದ । **ಬ್ರಹ್ಮ**—ಉತ್ತಮವಾದ ಸ್ತೋತ್ರವು । **ಉದ್ಯತಂ**—ಪಠಿತವಾಗಲಿ

॥ ಭಾವಾರ್ಥ ॥

ಗರ್ಗರಶಬ್ದವನ್ನುಂಟುಮಾಡುವ ಭೇರಿಯು ಯುದ್ಧರಂಗದಲ್ಲಿ ಭಯಂಕರವಾದ ಶಬ್ದವನ್ನುಂಟುಮಾಡುತ್ತದೆ ಗೋಧಾಸಂಜ್ಞಕವಾದ ಪಟಹವು ಸುತ್ತಲೂ ಅಧಿಕವಾದ ಶಬ್ದವನ್ನುಂಟುಮಾಡುತ್ತದೆ. ಬಿಲ್ಲಿನ ಹೊಂಬಣ್ಣವುಳ್ಳ ಹೆದೆಯೂ ಸಹ ಸುತ್ತಲೂ ಟೇಂಕಾರದ ಶಬ್ದವನ್ನು ಮಾಡುತ್ತದೆ ಇಂತಹ ಯುದ್ಧ ಸಮಯದಲ್ಲಿ ಇಂದ್ರನನ್ನುದ್ದೇಶಿಸಿದ ಉತ್ತಮವಾದ ಸ್ತೋತ್ರವು ಪಠಿತವಾಗಲಿ

Engalish Translation

The drum utters its sound, the leathern guard twangs, the tawny bowstring leaps to and fro; let the hymn be raised to Indra.

॥ ಸಂಹಿತಾಪಾಠಃ ॥

ಆ ಯತ್ಪತಂತ್ಯೇನ್ಯಃ ಸುದುಘಾ ಅನಪಸ್ಫುರಃ ।

ಅಪಸ್ಫುರಂ ಗೃಭಾಯತ ಸೋಮಮಿಂದ್ರಾಯ ಪಾತವೇ ॥ ೧೦ ॥

॥ ಪದಪಾಠಃ ॥

ಆ । ಯತ್ । ಪತಂತಿ । ಏನ್ಯಃ । ಸುಽದುಘಾಃ । ಅನಪಽಸ್ಫುರಃ ।

ಅಪಽಸ್ಫುರಂ । ಗೃಭಾಯತ । ಸೋಮಂ । ಇಂದ್ರಾಯ । ಪಾತವೇ ॥ ೧೦ ॥

॥ ಸಾಯಣಭಾಷ್ಯಂ ॥

ಯದ್ಯದ್ಯೇನ್ಯ ಏತವರ್ಣಾಃ ಶುಭ್ರವರ್ಣಾ ನದ್ಯ ಆ ಪತಂತಿ ಆಗಚ್ಛಂತಿ ಸರ್ವತಃ ಪ್ರವಹಂತಿ । ಕೀದೃಶ್ಯಃ । ಸುದುಘಾಃ ಸುದೋಹಾ ಅನಪಸ್ಫುರಃ ಅಪಸ್ಫುರೋಽಪಸ್ಫುರಾ ಅಪವೃದ್ಧಾಃ । ಅತಾದೃಶ್ಯೋಽನಪಸ್ಫುರಃ । ಅತ್ಯಂತಂ ಪ್ರವೃದ್ಧಾ ಇತ್ಯರ್ಥಃ । ಯದ್ವಾ । ಸುದುಘಾಃ ಪ್ರವೃದ್ಧಾ ಏತವರ್ಣಾ ಗಾವೋ ಯದಾ ಪಯಆಪ್ಯರ್ಥಾಯಾ ಪತಂತಿ ತದಾಪಸ್ಫುರಂ । ಅತ್ರಾಪಶಬ್ದೋ ಧಾತ್ವರ್ಥಾನುವಾದೀ। ಅತ್ಯಂತಪ್ರವೃದ್ಧಂ ಸೋಮಮಿಂದ್ರಾಯ ಪಾತವೇ ಪಾತುಂ ಗೃಭಾಯತ । ಗ್ರಹಣಂ ಕುರುತ। ಅಥವಾ. ನಪಸ್ಫುರ ಇತ್ಯತ್ರಾಪ್ಯಪಶಬ್ದೋಽನುವಾದೀ ಧಾತ್ವರ್ಥಸ್ಯ । ತಥಾ ಸತ್ಯಯಮರ್ಥಃ । ಯದ್ಯೇನ್ಯೋ ನದ್ಯೋಽನಪಸ್ಫುರೋಽಪವೃದ್ಧೋದಕಾ ಆ ಪತಂತಿ ವೃಷ್ಟಿರಲ್ಪಾ ಯದಾ ಭವತಿ ತದಾ ಸೋಮಮಿಂದ್ರಾರ್ಥಂ ಸಂಪಾದಯತೇತಿ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಏನ್ಯಃ**—ಶುಭ್ರವರ್ಣವುಳ್ಳವೂ । **ಸುದುಘಾಃ**—ಉತ್ತಮವಾಗಿ ಕರೆಯತಕ್ಕವೂ । **ಅನಪಸ್ಫುರಃ**—ಅತಿ ಪ್ರವೃದ್ಧವಾದುದೂ ಆದ ಗೋವುಗಳು (ಅಥವಾ ನದಿಗಳು) । **ಆ ಪತಂತಿ**—ನಮ್ಮ ಕಡೆಗೆ ಬರುವುವೋ ಆಗ । **ಅಪ**—ಅತ್ಯಂತ ಪ್ರಭೂತವಾಗಿ । **ಸೋಮಂ**—ಸೋಮವನ್ನು । **ಇಂದ್ರಾಯ**—ಇಂದ್ರನಿಗೆ । **ಪಾತವೇ**—ಪಾನಮಾಡಲು । **ಗೃಭಾಯತ**—ಎತ್ತಿ ಹಿಡಿಯಿರಿ

॥ ಭಾವಾರ್ಥ ॥

ಶುಭ್ರವರ್ಣವುಳ್ಳವೂ, ಉತ್ತಮವಾಗಿ ಕರೆಯತಕ್ಕವೂ, ಅತಿ ಪ್ರವೃದ್ಧವಾದವೂ ಆದ ಗೋವುಗಳು (ಅಥವಾ ನದಿಗಳು) ನಮ್ಮ ಕಡೆಗೆ ಯಾವಾಗ ಬರುವುವೋ ಆಗ ಅತ್ಯಂತ ಪ್ರಭೂತವಾಗಿ ಸೋಮವನ್ನು ಇಂದ್ರನಿಗೆ ಪಾನಮಾಡಲು ಎತ್ತಿ ಹಿಡಿಯಿರಿ.

## English Translation

When the bright fertilizing rivers flow with diminished waters, then take the overflowing Soma for Indra to drink.

॥ ಸಂಹಿತಾಪಾಠಃ ॥

ಅಪಾದಿಂದ್ರೋ ಅಪಾದಗ್ನಿರ್ವಿಶ್ವೇ ದೇವಾ ಅಮತ್ಸತ ।
ವರುಣ ಇದಿಹ ಕ್ಷಯತ್ತಮಾಪೋ ಅಭ್ಯನೂಷತ ವತ್ಸಂ ಸಂಶಿಶ್ವರೀರಿವ ॥ ೧೧ ॥

॥ ಪದಪಾಠಃ ॥

ಅಪಾತ್ । ಇಂದ್ರಃ । ಅಪಾತ್ । ಅಗ್ನಿಃ । ವಿಶ್ವೇ । ದೇವಾಃ । ಅಮತ್ಸತ ।
ವರುಣಃ । ಇತ್ । ಇಹ । ಕ್ಷಯತ್ । ತಂ । ಆಪಃ । ಅಭಿ । ಅನೂಷತ । ವತ್ಸಂ । ಸಂಶಿಶ್ವರೀಃऽಇವ ॥ ೧೧ ॥

॥ ಸಾಯಣಭಾಷ್ಯಂ ॥

ಇಂದ್ರೋಽಪಾತ್ । ಅಪಿಬತ್ಸೋಮಂ । ಅಗ್ನಿರಪ್ಯಪಿಬತ್ । ವಿಶ್ವೇ ದೇವಾ ಅಪ್ಯಮತ್ಸತ । ತೃಪ್ತಾ ಅಭವನ್ ಸೋಮಪಾನೇನ । ವರುಣ ಇದ್ವರುಣೋಽಪೀಹಾಸ್ಮಿನ್ಯಾಗಗೃಹೇ ಕ್ಷಯತ್ । ನಿವಸತು ಸೋಮಪಾನಾರ್ಥಂ । ನಿವಸಂತಂ ತಮಾಪೋಽಪ್ಯಭ್ಯನೂಷತ । ಉದಕಾನ್ಯಾವನಶೀಲಾಃ ಸ್ತುತಯೋ ವಾಭ್ಯಸ್ತುವನ್ । ಕಿಮಿವ । ವತ್ಸಂ ಸ್ವೀಯಂ ಸಂಶಿಶ್ವರೀಃ ಸಂಶಿಶ್ವರ್ಯಃ ಸಂಗಚ್ಛಮಾನಾ ಗಾವ ಇವ । ತಾ ಯಥಾ ಧಾವಂತ್ಯೋ ಹಂಭಾರವಂ ಕುರ್ವಂತಿ ತದ್ವತ್ ॥

॥ ಪ್ರತಿಪದಾರ್ಥ ॥

**ಇಂದ್ರಃ**—ಇಂದ್ರನು । **ಅಪಾತ್**—ಸೋಮವನ್ನು ಪಾನಮಾಡಿದ್ದಾನೆ । **ಅಗ್ನಿಃ**—ಅಗ್ನಿಯೂ ಸಹ ಪಾನಮಾಡಿದ್ದಾನೆ । **ವಿಶ್ವೇ ದೇವಾಃ**—ವಿಶ್ವೇದೇವತೆಗಳೂ । **ಅಮತ್ಸತ**—ಹರ್ಷವನ್ನು ಹೊಂದಿದ್ದಾರೆ । **ವರುಣ ಇತ್**—ವರುಣನೂ ಸಹ । **ಇಹ**—ನಮ್ಮ ಯಾಗಗೃಹದಲ್ಲಿ । **ಕ್ಷಯತ್**—ವಾಸಮಾಡಲಿ । **ವತ್ಸಂ**—ಕರುವಿನಲ್ಲಿಗೆ। **ಸಂಶಿಶ್ವರೀಃ ಇವ**—ಆದರದಿಂದ ಓಡಿಹೋಗುವ ಪಶುವು ಶಬ್ದಮಾಡುವಂತೆ । **ಆಪಃ**—ಉದಕಗಳು । **ತಂ**—ಆ ವರುಣನನ್ನು । **ಅಭ್ಯನೂಷತ**—ಗಟ್ಟಿಯಾಗಿ ಪ್ರಶಂಸಿಸುತ್ತವೆ

॥ ಭಾವಾರ್ಥ ॥

ಇಂದ್ರನು ಸೋಮವನ್ನು ಪಾನಮಾಡಿದ್ದಾನೆ. ಅಗ್ನಿಯೂ ಸಹ ಪಾನಮಾಡಿದ್ದಾನೆ. ವಿಶ್ವೇದೇವತೆಗಳು ಹರ್ಷಚಿತ್ತರಾಗಿದ್ದಾರೆ. ವರುಣನು ಸಹ ನಮ್ಮ ಯಾಗಗೃಹದಲ್ಲಿ ವಾಸಮಾಡಲಿ ಕರುವಿನಲ್ಲಿಗೆ ಆದರದಿಂದ ಓಡಿಹೋಗುವ ಪಶುವು ಶಬ್ದಮಾಡುವಂತೆ ಆ ವರುಣನನ್ನು ಉದಕಗಳು ಗಟ್ಟಿಯಾಗಿ ಪ್ರಶಂಸಿಸುವುವು.

English Translation

Indra drank (the Soma), Agni drank it, the Vishwe Devah were gladdened; let Varuna fix his dwelling here; the waters have praised him as cows (low) meeting their calves

॥ ಸಂಹಿತಾಪಾಠಃ ॥

ಸುದೇವೋ ಅಸಿ ವರುಣ ಯಸ್ಯ ತೇ ಸಪ್ತ ಸಿಂಧವಃ ।
ಅನುಕ್ಷರಂತಿ ಕಾಕುದಂ ಸೂರ್ಮ್ಯಂ ಸುಷಿರಾಮಿವ ॥ ೧೨ ॥

॥ ಪದಪಾಠಃ ॥

ಸುऽದೇವಃ । ಅಸಿ । ವರುಣ । ಯಸ್ಯ । ತೇ । ಸಪ್ತ । ಸಿಂಧವಃ ।
ಅನುऽಕ್ಷರಂತಿ । ಕಾಕುದಂ । ಸೂರ್ಮ್ಯಂ । ಸುಷಿರಾಂऽಇವ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ವರುಣ ಜಲಾಭಿಮಾನಿನ್ದೇವ ತ್ವಂ ಸುದೇವೋऽಸಿ ಯಸ್ಯ ಸುದೇವಸ್ಯ ತೇ ತವ ಕಾಕುದಂ ತಾಲುಂ ಸಮುದ್ರಾಖ್ಯಂ ಸಪ್ತ ಸಿಂಧವೋ ಗಂಗಾದ್ಯಾಃ ಸಪ್ತ ನದ್ಯೋऽನುಕ್ಷರಂತಿ ಜಿಹ್ವಾಯಾಂ ಸರ್ವದಾ ಸ್ರವಂತಿ ॥

॥ ಪ್ರತಿಪದಾರ್ಥ ॥

**ವರುಣ**—ಎಲೈ ವರುಣದೇವನೇ । **ಯಸ್ಯ**—ಯಾವ ಮಾಹಾತ್ಮ್ಯವುಳ್ಳ । **ತೇ**—ನಿನ್ನ । **ಕಾಕುದಂ**—ನಾಲಿಗೆಯ ತಳಭಾಗಕ್ಕೆ । **ಸೂರ್ಮ್ಯಂ**—ಪ್ರವಾಹವು । **ಸುಷಿರಾಂಇವ**—ಪಾತಾಳದಂತಿರುವ ಹಳ್ಳಕ್ಕೆ ಬೀಳುವಂತೆ। **ಸಪ್ತ ಸಿಂಧವಃ**—ಗಂಗಾದಿ ಸಪ್ತನದಿಗಳೂ । **ಅನುಕ್ಷರಂತಿ**—ಪ್ರವಹಿಸುವುವೋ ಅಂತಹ ನೀನು । **ಸುದೇವಃ ಅಸಿ**—ಅತ್ಯುತ್ತಮವಾದ ದೇವನಾಗಿದ್ದೀಯೆ

॥ ಭಾವಾರ್ಥ ॥

ಎಲೈ ವರುಣದೇವನೇ, ಯಾವ ಮಾಹಾತ್ಮ್ಯವುಳ್ಳ ನಿನ್ನ ನಾಲಿಗೆಯ ತಳಭಾಗಕ್ಕೆ ಪ್ರವಾಹವು ಪಾತಾಳದಂತಿರುವ ಹಳ್ಳಕ್ಕೆ ಬೀಳುವಂತೆ ಗಂಗಾದಿಸಪ್ತನದಿಗಳೂ ಸಹ ಪ್ರವಹಿಸುವುವೋ ಅಂತಹ ನೀನು ಅತ್ಯುತ್ತಮನಾದ ದೇವನಾಗಿದ್ದೀಯೆ.

English Translation

You are a glorious god, Varuna, across whose palate the seven rivers keep pouring as a fair-flowing (stream) into an abyss.

॥ ವಿಶೇಷವಿಷಯಗಳು ॥

**ಕಾಕುದಂ** ಎಂಬ ಶಬ್ದಕ್ಕೆ ಅರ್ಥವಿವರಣೆಮಾಡುವುದಕ್ಕಾಗಿ ಈ ಋಕ್ಕಿಗೆ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

**ಸುದೇವಸ್ತ್ವಂ ಕಲ್ಯಾಣದೇವಃ ಕಮನೀಯದೇವೋ ವಾ ಭವಸಿ ವರುಣ ಯಸ್ಯ ತೇ ಸಪ್ತ ಸಿಂಧವಃ । ಸಿಂಧುಃ ಸ್ರವಣಾತ್ ಯಸ್ಯ ತೇ ಸಪ್ತ ಸ್ರೋತಾಂಸಿ ತಾನಿ ತೇ ಕಾಕುದಮನುಕ್ಷರಂತಿ ಸೂರ್ಮಿಂ ಕಲ್ಯಾಣೋರ್ಮಿಂ ಸ್ರೋತಃ ಸುಷಿರಮನು ಯಥಾ ॥**

(ನಿ ೫-೨೭)

ಎಲೈ ವರುಣನೇ, ನೀನು ಸುದೇವ ಎಂದರೆ ಕಲ್ಯಾಣಕಾರಕನಾದ, ಎಲ್ಲರಿಗೂ ಒಳ್ಳೆಯದನ್ನುಂಟುಮಾಡುವ ಮಂಗಳಕಾರಕನಾದ ದೇವನು, ಅಥವಾ ಎಲ್ಲರಿಂದಲೂ ಅಪೇಕ್ಷಿಸಲ್ಪಡುವ (ಮನೋಹರನಾದ) ದೇವನು ಇಂತಹ ನಿನ್ನ ನಾಲಗೆಯ ತಳಭಾಗಕ್ಕೆ ಪ್ರಸಿದ್ಧವಾದ (ಗಂಗೆಯೇ ಮೊದಲಾದ) ಏಳು ನದಿಗಳೂ ಪ್ರವಹಿಸಿ ಬೀಳುವವು ಹೇಗೆಂದರೆ ಹರಿಯುವ ನೀರು ಹಳ್ಳಕ್ಕೆ ಎಂದರೆ ತಗ್ಗಾದ ಪ್ರದೇಶಕ್ಕೆ ಸ್ವಾಭಾವಿಕವಾಗಿ ಹೋಗಿ ಬೀಳುವಂತೆ ಏಳು ಪ್ರಸಿದ್ಧನಾದ ನದಿಗಳೂ ನಿನ್ನ ನಾಲಗೆಯ ತಳಕ್ಕೆ (ಎಂದರೆ ಸಮುದ್ರಕ್ಕೆ) ಹೋಗಿ ಬೀಳುವವು ಇಲ್ಲಿ ಸಿಂಧುಶಬ್ದಕ್ಕೆ ಹರಿಯುವ ನದಿ ಎಂದರ್ಥವು. ಎಂದರೆ ಹರಿಯುವ ಸ್ವಭಾವವುಳ್ಳದ್ದರಿಂದ ನದಿಗೆ ಸಿಂಧುವೆಂದೂ ಹೆಸರು. ಸೂರ್ಮಿ ಎಂದರೆ ಒಳ್ಳೆಯ ಅಲೆಗಳುಳ್ಳ ಎಂದರೆ ಯಥೇಚ್ಛವಾಗಿ ನೀರುಳ್ಳ ಪ್ರವಾಹವು ತಗ್ಗಾದ ಪ್ರದೇಶಕ್ಕೆ ನುಗ್ಗುವಂತೆ ಎಂದು ಸೂರ್ಮ್ಯಂ ಎಂಬ ಶಬ್ದದ ದೃಷ್ಟಾಂತವನ್ನು ಹೇಳಿದೆ.

। ಸಂಹಿತಾಪಾಠಃ ।

ಯೋ ವ್ಯ॑ತೀಁರಫಾಣಯ॒ತ್ಸುಯು॑ಕ್ತಾಁ ಉಪ॑ ದಾ॒ಶುಷೇ॑ ।

ತ॒ಕ್ವೋ ನೇ॒ತಾ ತದಿದ್ವಪು॑ರುಪ॒ಮಾ ಯೋ ಅಮು॑ಚ್ಯತ ॥ ೧೨ ॥

॥ ಪದಪಾಠಃ ॥

ಯಃ । ವ್ಯತೀನ್ । ಅಫಾಣಯತ್ । ಸುಽಯುಕ್ತಾನ್ । ಉಪ । ದಾಶುಷೇ ।

ತಕ್ವಃ । ನೇತಾ । ತತ್ । ಇತ್ । ವಪುಃ । ಉಪಽಮಾ । ಯಃ । ಅಮುಚ್ಯತ ॥ ೧೨ ॥

। ಸಾಯಣಭಾಷ್ಯಂ ।

**ಷೋಡಶಿಶಸ್ತ್ರೇ ಯೋ ವ್ಯತೀನಿತಿ ತೃತೀಯ ಅನುಷ್ಟುಭಸ್ತೃಚಃ । ಸೂತ್ರಿತಂ ಚ । ಯೋ ವ್ಯತೀಁರಫಾಣಯದಿತಿ ತೃಚಾ ಅನುಷ್ಟುಭಾಃ । ಆ. ೬-೨ । ಇತಿ ॥**

ಯ ಇಂದ್ರೋ ವ್ಯತೀನ್ವಿವಿಧಗಮನಾನ್ ಸುಯುಕ್ತಾನ್ ಸುಷ್ಠು ರಥೇ ಸಂಬದ್ಧಾನಶ್ವಾನ್ದಾಶುಷೇ ಹವಿರ್ದಾತ್ರೇ ಯಜಮಾನಾಯ ಗಂತುಂ ಪ್ರಾಪ್ತುಮುಪಾಫಾಣಯತ್ ಉಪಗಮಯತಿ । ಫಣತಿರ್ಗತಿಕರ್ಮಾ । ಯದ್ವೈವಂ ಕರೋತಿ ತದಿತ್ತದಾನೀಮೇವ ತಕ್ವಃ । ತಕತಿರ್ಗತಿಕರ್ಮಾ । ಯಜ್ಞಗಮನಶೀಲೋ ನೇತೋದಕಸ್ಯ ಫಲಸ್ಯ ವಾ ನಾಯಕ ಇಂದ್ರೋ ವಪುರುದಕಮುತ್ಪಾದಯತೀತಿ ಶೇಷಃ। ಯ ಇಂದ್ರ ಉಪಮೋಪಮಾನಭೂತೋಽಮುಚ್ಯತ ಅನ್ಯೈರ್ವೃಷ್ಟಿವಾರಕೈರಸುರಾದಿಭಿರ್ಮುಕ್ತೋ ಭವತಿ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಇಂದ್ರನು । **ವ್ಯತೀನ್**—ಅನೇಕವಿಧವಾದ ಸಂಚಾರವುಳ್ಳವೂ । **ಸುಯುಕ್ತಾನ್**—ಅವನ ರಥಕ್ಕೆ ಉತ್ತಮವಾಗಿ ಕಟ್ಟಲ್ಪಟ್ಟವೂ ಆದ ಅಶ್ವಗಳನ್ನು । **ದಾಶುಷೇ**—ಹವಿಸ್ಸನ್ನರ್ಪಿಸುವ ಯಜಮಾನನಲ್ಲಿಗೆ ಬರಲು । **ಉಪ ಅಫಾಣಯತ್**—ಪ್ರೇರಿಸುವನೋ । **ತದಿತ್**—ಆ ಒಡನೆಯೇ । **ತಕ್ವಃ**—ಯಜ್ಞಕ್ಕೆ ಬರಲಿಚ್ಛಿಸುವವನೂ । **ನೇತಾ**—ಫಲವನ್ನು ಹೊಂದಿಸುವವನೂ ಆದ ಆ ಇಂದ್ರನು । **ವಪುಃ**—ಉದಕವನ್ನು ಉತ್ಪನ್ನಮಾಡುತ್ತಾನೆ । **ಯಃ**—ಯಾವ ಇಂದ್ರನು । **ಉಪಮಾ**—ತನಗೆ ತಾನೇ ಉಪಮಾನವಾಗಿರುತ್ತಾನೆಯೋ ಆ ಇಂದ್ರನು । **ಅಮುಚ್ಯತ**—ಶತ್ರುಗಳಿಂದ ಮುಕ್ತನಾಗುತ್ತಾನೆ.

॥ ಭಾವಾರ್ಥ ॥

ಯಾವ ಇಂದ್ರನು ಅನೇಕವಿಧವಾದ ಸಂಚಾರವುಳ್ಳವೂ, ಅವನ ರಥಕ್ಕೆ ಉತ್ತಮವಾಗಿ ಕಟ್ಟಲ್ಪಟ್ಟವೂ ಆದ ಅಶ್ವಗಳನ್ನು ಹವಿಸ್ಸನ್ನರ್ಪಿಸುವ ಯಜಮಾನನಲ್ಲಿಗೆ ಬರಲು ಪ್ರೇರಿಸುವನೋ ಆ ಒಡನೆಯೇ, ಯಜ್ಞಕ್ಕೆ ಬರಲಿಚ್ಛಿಸುವವನೂ, ಫಲವನ್ನು ಹೊಂದಿಸುವವನೂ ಆದ ಆ ಇಂದ್ರನು ಉದಕವನ್ನು ನಿರ್ಮಿಸುತ್ತಾನೆ. ಯಾವ ಇಂದ್ರನು ತನಗೆ ತಾನೇ ಉಪಮಾನನಾಗಿರುತ್ತಾನೆಯೋ ಆ ಇಂದ್ರನು ಶತ್ರುಗಳಿಂದ ಮುಕ್ತನಾಗುತ್ತಾನೆ.

## English Translation

He who directs towards the worshipper his well-yoked prancing steeds,—he, (Indra), the swift bearer of blessing, (produces) rain,—he, who being comparable only to himself is delivered (from all his enemies).

॥ ವಿಶೇಷವಿಷಯಗಳು ॥

ಷೋಡಶಿಶಸ್ತ್ರಮಂತ್ರಪಠನದಲ್ಲಿ **ಯೋ ವ್ಯತೀನ್** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಅನುಷ್ಟುಪ್ ಛಂದಸ್ಸಿನ ಮೂರನೆಯ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯೋ ವ್ಯತೀಁರಫಾಣಯದಿತಿ ತೃಚಾ** ಅನುಷ್ಟುಭಾಃ ಎಂಬ ಸೂತ್ರದಿಂದ (ಆ. ೬–೨) ವಿವೃತವಾಗಿರುವುದು

॥ ಸಂಹಿತಾಪಾಠಃ ॥

ಅತೀದು ಶಕ್ರ ಓಹತ ಇಂದ್ರೋ ವಿಶ್ವಾ ಅತಿ ದ್ವಿಷಃ ।

ಭಿನತ್ಕನೀನ ಓದನಂ ಪಚ್ಯಮಾನಂ ಪರೋ ಗಿರಾ ॥ ೧೪ ॥

॥ ಪದಪಾಠಃ ॥

ಅತಿ । ಇತ್ । ಊಂ ಇತಿ । ಶಕ್ರಃ । ಓಹತೇ । ಇಂದ್ರಃ । ವಿಶ್ವಾಃ । ಅತಿ । ದ್ವಿಷಃ ।

ಭಿನತ್ । ಕನೀನಃ । ಓದನಂ । ಪಚ್ಯಮಾನಂ । ಪರಃ । ಗಿರಾ ॥ ೧೪ ॥

॥ ಸಾಯಣಭಾಷ್ಯಂ ॥

ಅಯಮಿಂದ್ರಃ ಶಕ್ರಃ ಶಕ್ತಃ ಸನ್ನತೀದೋಹತೇ । ಅತಿಕ್ರಮ್ಯ ಗಚ್ಛತ್ಯೇವ ಸಂಗ್ರಾಮೇ ನಿರೋಧಕಾಞ್ಶತ್ರೂನ್ । ತದೇವಾಹ । ಅಯಮಿಂದ್ರೋ ವಿಶ್ವಾ ದ್ವಿಷೋ ದ್ವೇಷ್ಟ್ರಾಞ್ಶತ್ರೂನತ್ಯತಿಕ್ರಮ್ಯ ಗಚ್ಛತಿ । ಕನೀನಃ ಕಮನೀಯಃ ಪರೋ ಮೇಘಾನಾಂ ಪರಸ್ತಾತ್ಪ್ರವರ್ತಮಾನ ಇಂದ್ರ ಓದನಂ । ಮೇಘನಾಮೈತತ್ । ಮೇಘಂ ಭಿನತ್ । ಅಭಿನತ್ । ಭಿನತ್ತಿ ವೃಷ್ಟ್ಯರ್ಥಂ । ಕೀದೃಶಂ । ಗಿರಾ ಮಾಧ್ಯಮಿಕಯಾ ವಾಚಾ ಸ್ತನಿತಲಕ್ಷಣಯಾ ಪಚ್ಯಮಾನಂ । ವಜ್ರನಿರ್ಘೋಷೇಣ ತಾಡ್ಯಮಾನಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಶಕ್ರಃ**—ಸರ್ವಶಕ್ತನಾದ ಇಂದ್ರನು । **ಅತೀತ್**—ಶತ್ರುಜನರನ್ನೆಲ್ಲಾ ಅತಿಕ್ರಮಿಸಿ । **ಓಹತೇ**—ಸಂಚರಿಸುತ್ತಾನೆ । **ಇಂದ್ರಃ**—ಆದೇ ಇಂದ್ರನು । **ವಿಶ್ವಾಃ**—ಸಮಸ್ತವಾದ । **ದ್ವಿಷಃ**—ಶತ್ರುಗಳನ್ನೂ । **ಅತಿ**—ಮೀರಿಸುತ್ತಾನೆ । **ಕನೀನಃ**—ಆಕರ್ಷಕವಾದ ರೂಪವುಳ್ಳವನೂ । **ಪರಃ**—ಉತ್ಕೃಷ್ಟನೂ ಆದ ಇಂದ್ರನು । **ಗಿರಾ**—ತನ್ನ ಗರ್ಜನ ಶಬ್ದದಿಂದ । **ಪಚ್ಯಮಾನಂ**—ಹೊಡೆಯಲ್ಪಟ್ಟ । **ಓದನಂ**—ಮೇಘವನ್ನು । **ಭಿನತ್**—ವೃಷ್ಟ್ಯರ್ಥರಾಗಿ ಸೀಳಿಹಾಕಿದ್ದಾನೆ

॥ ಭಾವಾರ್ಥ ॥

ಸರ್ವಶಕ್ತನಾದ ಇಂದ್ರನು ಶತ್ರುಜನರನ್ನೆಲ್ಲಾ ಅತಿಕ್ರಮಿಸಿ ಸಂಚರಿಸುತ್ತಾನೆ ಆದೇ ಇಂದ್ರನು ಸಮಸ್ತವಾದ ಶತ್ರುಗಳನ್ನೂ ಮೀರಿಸುತ್ತಾನೆ. ಆಕರ್ಷಕವಾದ ರೂಪವುಳ್ಳವನೂ, ಉತ್ಕೃಷ್ಟನೂ ಆದ ಇಂದ್ರನು ತನ್ನ ಗರ್ಜನ ಶಬ್ದದಿಂದ ಹೊಡೆಯಲ್ಪಟ್ಟ ಮೇಘವನ್ನು ವೃಷ್ಟ್ಯರ್ಥವಾಗಿ ಸೀಳಿಹಾಕಿದ್ದಾನೆ

## English Translation

Shakra verily overpowers, Indra, overpowers all his enemies; he, worthy of love: abiding beyond, cleaves the cloud smitten by his thunder-voice

॥ ಸಂಹಿತಾಪಾಠಃ ॥

ಅರ್ಭಕೋ ನ ಕುಮಾರಕೋಽಧಿ ತಿಷ್ಠನ್ನವಂ ರಥಂ ।

ಸ ಪಕ್ಷನ್ಮಹಿಷಂ ಮೃಗಂ ಪಿತ್ರೇ ಮಾತ್ರೇ ವಿಭುಕ್ರತುಂ ॥ ೧೫ ॥

॥ ಪದಪಾಠಃ ॥

ಅರ್ಭಕಃ । ನ । ಕುಮಾರಕಃ । ಅಧಿ । ತಿಷ್ಠತ್ । ನವಂ । ರಥಂ ।

ನ । ಪಕ್ಷತ್ । ಮಹಿಷಂ । ಮೃಗಂ । ಪಿತ್ರೇ । ಮಾತ್ರೇ । ವಿಭುಽಕ್ರತುಂ ॥ ೧೫ ॥

॥ ಸಾಯಣಭಾಷ್ಯಂ ॥

ಅಯಮಿಂದ್ರೋಽರ್ಭಕೋ ನಾಲ್ಪಶರೀರಃ ಕುಮಾರಕಃ ಕುಮಾರ ಇವ ನವಂ ಸ್ತುತ್ಯಂ ರಥಮಧಿ ತಿಷ್ಠತ್ । ಅಧಿತಿಷ್ಠತಿ । ಸ ಇಂದ್ರೋ ಮಹಿಷಂ ಮಹಾಂತಂ ಮೃಗಂ ಮೃಗವದಿತಸ್ತತೋ ಧಾವಂತಂ ಸರ್ವೈರ್ಮೃಗ್ಯಂ ವಾ ವಿಭುಕ್ರತುಂ ಬಹುಕರ್ಮಾಣಂ ಮೇಘಂ ಪಕ್ಷತ್ । ಪಚತಿ । ವೃಷ್ಟ್ಯಭಿಮುಖಂ ಕರೋತೀತ್ಯರ್ಥಃ ॥

॥ ಪ್ರತಿಪದಾರ್ಥ ॥

(ಇಂದ್ರಃ—ಇಂದ್ರನು) । **ಅರ್ಭಕಃ**—ಚಿಕ್ಕವಯಸ್ಸಿನ । **ಕುಮಾರಕಃ ನ**—ಎಳೆಯ ಕುಮಾರನಂತೆ । **ನವಂ**—ತನ್ನ ಸ್ತುತ್ಯವಾದ । **ರಥಂ**—ರಥವನ್ನು । **ಅಧಿ ತಿಷ್ಠತ್**—ಹತ್ತಿ ಕುಳಿತಿದ್ದಾನೆ । **ಸಃ**—ಅದೇ ಇಂದ್ರನು । **ಮಹಿಷಂ**—ಮಹದ್ರೂಪವುಳ್ಳದ್ದೂ । **ಮೃಗಂ**—ಮೃಗದಂತೆ ಸಂಚಾರಶೀಲವಾದುದೂ । **ವಿಭುಕ್ರತುಂ**—ಅನೇಕ ಕರ್ಮವುಳ್ಳದ್ದೂ ಆದ ಮೇಘವನ್ನು । **ಪಿತ್ರೇ ಮಾತ್ರೇ**—ತನ್ನ ಮಾತಾಪಿತೃಗಳಿಗಾಗಿ । **ಪಕ್ಷತ್**—ವೃಷ್ಟಿಗಾಗಿ ಸಿದ್ಧಮಾಡುತ್ತಾನೆ.

॥ ಭಾವಾರ್ಥ ॥

ಚಿಕ್ಕವಯಸ್ಸಿನ ಎಳೆಯ ಕುಮಾರನಂತೆ ಇಂದ್ರನು ತನ್ನ ಸ್ತುತ್ಯವಾದ ರಥವನ್ನು ಹತ್ತಿ ಕುಳಿತಿದ್ದಾನೆ. ಅದೇ ಇಂದ್ರನು ಮಹದ್ರೂಪವುಳ್ಳದ್ದೂ ಮೃಗದಂತೆ ಸಂಚಾರಶೀಲವಾದುದೂ, ಅನೇಕ ಕರ್ಮವುಳ್ಳದ್ದೂ ಆದ ಮೇಘವನ್ನು ತನ್ನ ಮಾತಾಪಿತೃಗಳ ದ್ಯಾವಾಪೃಥಿವಿಗಳ ಸೌಕರ್ಯಾರ್ಥವಾಗಿ ವೃಷ್ಟಿಗಾಗಿ ಸಿದ್ಧಗೊಳಿಸುತ್ತಾನೆ.

## English Translation

(Indra), like a young boy, has mounted his splendid chariot; he makes ready for his father and mother the great deer-like many-functioned cloud.

॥ ಸಂಹಿತಾಪಾಠಃ ॥

ಆ ತೂ ಸುಶಿಪ್ರ ದಂಪತೇ ರಥಂ ತಿಷ್ಠಾ ಹಿರಣ್ಯಯಂ ।
ಅಧ ದ್ಯುಕ್ಷಂ ಸಚೇವಹಿ ಸಹಸ್ರಪಾದಮರುಷಂ ಸ್ವಸ್ತಿಗಾಮ-
ನೇಹಸಂ ॥ ೧೬ ॥

॥ ಪದಪಾಠಃ ॥

ಆ । ತು । ಸುऽಶಿಪ್ರ । ದಂऽಪತೇ । ರಥಂ । ತಿಷ್ಠ । ಹಿರಣ್ಯಯಂ ।
ಅಧ । ದ್ಯುಕ್ಷಂ । ಸಚೇವಹಿ । ಸಹಸ್ರऽಪಾದಂ । ಅರುಷಂ । ಸ್ವಸ್ತಿऽಗಾಂ । ಅನೇಹಸಂ ॥೧೬॥

॥ ಸಾಯಣಭಾಷ್ಯಂ ॥

ಹೇ ಸುಶಿಪ್ರ ಸುಹನೋ ಹೇ ದಂಪತೇ ಗೃಹಸ್ವಾಮಿನ್ । ಅತ್ರ ಗೃಹೋ ರಥಃ । ತಸ್ಯ ಸ್ವಾಮಿನ್ ತು ತ್ವಂ ತಾವದ್ರಥಮಾ ತಿಷ್ಠ । ಹವಿಃ ಸ್ವೀಕರಣಾನಂತರಂ ಪಶ್ಚಾದಹಂ ರಥಮಾರೋಹಾಮೀತಿ ಭಾವಃ । ಕೀದೃಶಂ । ಹಿರಣ್ಯಯಂ ಹಿರಣ್ಮಯಂ । ಅಧ ತದಾರೋಹಣಾನಂತರಮುಭಾವುಪ್ಯಾರುಹ್ಯೋಭೌ ಸಚೇವಹಿ । ಸಂಗಚ್ಛೇವಹಿ । ಸಂಗತೌ ಭವೇವ । ಪುನಃ ಕೀದೃಶಂ । ದ್ಯುಕ್ಷಂ ದೀಪ್ತಂ ರಥಂ ಸಹಸ್ರಪಾದಂ ಬಹುಪಾದಮರುಷಮಾರೋಚಮಾನಂ ಸ್ವಸ್ತಿಗಾಂ ಕುಶಲಗಮನಮನೇಹಸಮಪಾಪಂ ॥

॥ ಪ್ರತಿಪದಾರ್ಥ ॥

**ಸುಶಿಪ್ರ**—ಉತ್ತಮವಾದ ಕೆನ್ನೆಯುಳ್ಳವನೂ । **ದಂಪತೇ**—ರಥವೆಂಬ ಗೃಹಕ್ಕೆ ಸ್ವಾಮಿಯೂ ಆದ ಎಲೈ ಇಂದ್ರನೇ । **ತು**—ನೀನಾದರೋ । **ಹಿರಣ್ಯಯಂ**—ಸುವರ್ಣನಿರ್ಮಿತವಾದ । **ರಥಂ**—ರಥದಲ್ಲಿ । **ಆ ತಿಷ್ಠ**—ಹತ್ತಿ ಕುಳಿತುಕೋ । **ಅಧ**—ಅನಂತರ । **ದ್ಯುಕ್ಷಂ**—ಪ್ರಕಾಶಮಾನವಾದುದೂ । **ಸಹಸ್ರಪಾದಂ**—ಸಾವಿರ (ಸ್ತಂಭ) ಪಾದಗಳುಳ್ಳದ್ದೂ । **ಅರುಷಂ**—ಹೊಂಬಣ್ಣವುಳ್ಳದ್ದೂ । **ಸ್ವಸ್ತಿಗಾಂ**—ಶ್ರೇಷ್ಠವಾದ ಗಮನವುಳ್ಳದ್ದೂ । **ಅನೇಹಸಂ**—ಪಾಪರಹಿತವಾದುದೂ ಆದ ರಥವನ್ನು ಹತ್ತಿ । **ಸಚೇವಹಿ**—ನಾವಿಬ್ಬರೂ ಸೇರಿಕೊಳ್ಳೋಣ

॥ ಭಾವಾರ್ಥ ॥

ಉತ್ತಮವಾದ ಕೆನ್ನೆಯುಳ್ಳವನೂ, ರಥವೆಂಬ ಗೃಹಕ್ಕೆ ಸ್ವಾಮಿಯೂ ಆದ ಎಲೈ ಇಂದ್ರನೇ, ಸುವರ್ಣನಿರ್ಮಿತವಾದ ರಥದಲ್ಲಿ ಒಡನೆಯೇ ಹತ್ತಿ ಕುಳಿತುಕೋ. ಅನಂತರ, ಪ್ರಕಾಶಮಾನವಾದುದೂ, ಸಾವಿರ (ಸ್ತಂಭ) ಪಾದಗಳುಳ್ಳದ್ದೂ, ಹೊಂಬಣ್ಣವುಳ್ಳದ್ದೂ, ಶ್ರೇಷ್ಠವಾದ ಗಮನವುಳ್ಳದ್ದೂ, ಪಾಪರಹಿತವಾದುದೂ ಆದ ರಥವನ್ನು ಹತ್ತಿ ನಾವಿಬ್ಬರೂ ಸೇರಿಕೊಳ್ಳೋಣ

English Translation

Handsome-jawed (Indra), householder, mount your golden chariot: then let us meet mounted together on that bright thousand-footed brilliant auspiciously-moving sinless (car)

॥ ಸಂಹಿತಾಪಾಠಃ ॥

ತಂ ಘೇಮಿತ್ಥಾ ನಮಸ್ವಿನ ಉಪ ಸ್ವರಾಜಮಾಸತೇ ।

ಅರ್ಥಂ ಚಿದಸ್ಯ ಸುಧಿತಂ ಯದೇತವ ಆವರ್ತಯಂತಿ ದಾವನೇ ॥

॥ ಪದಪಾಠಃ ॥

ತಂ । ಘ । ಈಂ । ಇತ್ಥಾ । ನಮಸ್ವಿನಃ । ಉಪ । ಸ್ವಽರಾಜಂ । ಆಸತೇ ।

ಅರ್ಥಂ । ಚಿತ್ । ಅಸ್ಯ । ಸುಽಧಿತಂ । ಯತ್ । ಏತವೇ । ಆಽವರ್ತಯಂತಿ । ದಾವನೇ ॥

॥ ಸಾಯಣಭಾಷ್ಯಂ ॥

ಪೂರ್ವಾಹ್ಣೇ ಪ್ರವರ್ಗ್ಯೇ ತಂ ಘೇಮಿಕ್ಥೇತ್ಯೇಷಾ । ಸೂತ್ರಿತಂ ಚ । ತಂ ಘೇಮಿತ್ಥಾ ನಮಸ್ವಿನ ಇತಿ ಪ್ರಾಗಾಥೀಂ ಪೂರ್ವಾಹ್ಣೇ । ಆ. ೪-೭ । ಇತಿ ॥

ತಂ ಘ ತಂ ಖಲ್ವೀಮೇನಮಿಂದ್ರಮಿತ್ಥೇತ್ಥಮನೇನ ಪ್ರಕಾರೇಣ ನಮಸ್ವಿನೋಽನ್ನವಂತಃ ಸ್ತುತಿವಂತೋ ವಾಧ್ವರ್ಯ್ವಾದಯಃ ಸ್ವರಾಜಂ ಸ್ವಯಂ ರಾಜಮಾನಂ ವೋಪಾಸತೇ । ಸೇವಂತೇ । ತಥಾ ಕೃತ್ವಾರ್ಥಂ ಚಿದರಣೀಯಂ ಧನಂ ಸುಧಿತಂ ಸುಷ್ಠು ಸ್ಥಾಪಿತಮಸ್ಯೇಂದ್ರಸ್ಯ ಸಂಬಂಧಿನಂ ಪ್ರಾಪ್ನುವಂತೀತಿ ಶೇಷಃ । ಕದೇತಿ ಆಹ । ಯದ್ಯದೈತವೇಽಸ್ಯೇಂದ್ರಸ್ಯ ಗಮನಾಯ ಸ್ವಯಂ ಪ್ರಾಪ್ತುಂ ವಾ ದಾವನೇ ಹವಿರ್ದಾನಾಯಾವರ್ತಯಂತಿ ಸ್ತುತಯಃ । ತದೇತ್ಯರ್ಥಃ । ಅಥವಾಶ್ವಾ ನಾವರ್ತಯಂತಿ ತದೇತ್ಯರ್ಥಃ ॥

ಪ್ರತಿಪದಾರ್ಥ ॥

**ಸ್ವರಾಜಂ**—ಸ್ವಯಂಪ್ರಕಾಶಮಾನನೂ । **ತಂ**—ಪ್ರಸಿದ್ಧನೂ ಆದ । **ಈಂ ಘ**—ಈ ಇಂದ್ರನನ್ನೇ । **ನಮಸ್ವಿನಃ**—ಹವಿರ್ಯುಕ್ತರಾದ ಅಧ್ವರ್ಯುಗಳು । **ಇತ್ಥಾ**—ಈ ಪ್ರಕಾರವಾಗಿ । **ಉಪ ಆಸತೇ**—ಸೇವಿಸುತ್ತಾರೆ । **ಯತ್**—ಯಾವಾಗ । **ದಾವನೇ**—ಹವಿರ್ದಾನಾರ್ಥವಾಗಿ । **ಏತವೇ**—ಹೋಗಲು । **ಆವರ್ತಯಂತಿ**—ಈ ಇಂದ್ರನ ಅಶ್ವಗಳು ಸಿದ್ಧವಾಗಿರುವುವೋ ಆಗ । **ಅಸ್ಯ**—ಈ ಇಂದ್ರನಿಗೆ ಸೇರಿದುದೂ । **ಸುಧಿತಂ**—ಉತ್ತಮವಾಗಿ ಸ್ಥಾಪಿತವಾದುದೂ ಆದ । **ಅರ್ಥಂ ಚಿತ್**—ಧನವನ್ನೇ ಅವರು ಹೊಂದುತ್ತಾರೆ.

॥ ಭಾವಾರ್ಥ ॥

ಸ್ವಯಂಪ್ರಕಾಶಮಾನನೂ, ಪ್ರಸಿದ್ಧನೂ ಆದ ಈ ಇಂದ್ರನನ್ನೇ ಹವಿರ್ಯುಕ್ತವಾದ ಅಧ್ವರ್ಯುಗಳು ಈ ಪ್ರಕಾರವಾಗಿ ಸೇವಿಸುತ್ತಾರೆ. ಹವಿರ್ದಾನಾರ್ಥವಾಗಿ ಹೋಗಲು ಯಾವಾಗ ಈ ಇಂದ್ರನ ಅಶ್ವಗಳು ಸಿದ್ಧವಾಗುವುವೋ (ಅಥವಾ ಹವಿರ್ದಾನಾರ್ಥವಾಗಿ ಇವರ ಸ್ತುತಿಗಳು ಸಿದ್ಧವಾಗುವುವೋ) ಆಗ ಈ ಇಂದ್ರನಿಗೆ ಸೇರಿದುದೂ ಉತ್ತಮವಾಗಿ ಸ್ಥಾಪಿತವಾದುದೂ ಆದ ಧನವನ್ನೇ ಅವರು ಹೊಂದುತ್ತಾರೆ.

## English Translation

(The priests), presenting praise, thus worship that self-resplendent (Indra), they obtain his well-stored wealth, when (his horses) bring him on his way for the offering.

॥ ವಿಶೇಷವಿಷಯಗಳು ॥

ಪೂರ್ವಾಹ್ಣದಲ್ಲಿ ಮಾಡಲ್ಪಡುವ ಪ್ರವರ್ಗ್ಯೇಷ್ಟಿಯಲ್ಲಿ **ತಂ ಘೇಮಿತ್ಥಾ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತಂಘೇಮಿತ್ಥಾ ನಮಸ್ವಿನ ಇತಿ ಪ್ರಾಗಾಥೀಂ ಪೂರ್ವಾಹ್ಣೇ** ಎಂಬ ಸೂತ್ರದಿಂದ (ಆ ೪-೭) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಅನು ಪ್ರತ್ನಸ್ಯೌಕಸಃ ಪ್ರಿಯಮೇಧಾಸ ಏಷಾಂ ।
ಪೂರ್ವಾಮನು ಪ್ರಯತಿಂ ವೃಕ್ತಬರ್ಹಿಷೋ ಹಿತಪ್ರಯಸ ಆಶತ॥

॥ ಪದಪಾಠಃ ॥

ಅನು । ಪ್ರತ್ನಸ್ಯ । ಓಕಸಃ । ಪ್ರಿಯಽಮೇಧಾಸಃ । ಏಷಾಂ ।
ಪೂರ್ವಾಂ । ಅನು । ಪ್ರಽಯತಿಂ ವೃಕ್ತಽಬರ್ಹಿಷಃ । ಹಿತಽಪ್ರಯಸಃ । ಆಶತ ॥ ೧೮ ॥

॥ ಸಾಯಣಭಾಷ್ಯಂ ॥

**ಅನಯಾ ಸ್ತುತಿಮುಪಸಂಹರತಿ । ಏಷಾಂ ದೇವಾನಾಮಿಂದ್ರಾದೀನಾಂ ಪ್ರತ್ನಸ್ಯ ಪುರಾಣಸ್ಯೌಕಸಃ ಸ್ಥಾನಸ್ಯ ಪುರಾಣಂ ಸ್ಥಾನಂ ಪ್ರಿಯಮೇಧಾಸಃ ಪ್ರಿಯಮೇಧಾ ಅನ್ವಾಶತ । ಅನುಪ್ರಾಪ್ತಾಃ । ಕೀದೃಶಾಃ ಪ್ರಿಯಮೇಧಾಃ । ಪೂರ್ವಾಂ ಮುಖ್ಯಾಂ ಪ್ರಯತಿಂ ಪ್ರದಾನಮನು ಲಕ್ಷೀಕೃತ್ಯ ವೃಕ್ತಬರ್ಹಿಷಃ ಸ್ತೀರ್ಣದರ್ಭಾ ಹಿತಪ್ರಯಸ ಆಸಾದಿತಸೋಮಾದಿಹವಿಷ್ಕಾಃ ॥**

॥ ಪ್ರತಿಪದಾರ್ಥ ॥

**ಪೂರ್ವಾಮ್**—ಅತಿ ಮುಖ್ಯವಾದ। **ಪ್ರಯತಿಂ**—ಪ್ರದಾನವನ್ನು । **ಅನು**—ಉದ್ದೇಶಿಸಿ (ಪ್ರದಾನವನ್ನು ಅರ್ಪಿಸಲು) । **ವೃಕ್ತಬರ್ಹಿಷಃ**—ದರ್ಭಾಸನವನ್ನು ಹರಡಿರುವವರೂ । **ಹಿತಪ್ರಯಸಃ**—ಹವಿಸ್ಸನ್ನು ಹೊಂದಿದವರೂ ಆದ । **ಪ್ರಿಯಮೇಧಾಸಃ**—ಪ್ರಿಯಮೇಧಸಂತತಿಯವರು । **ಏಷಾಂ**—ಈ ಇಂದ್ರಾದಿದೇವತೆಗಳ । **ಪ್ರತ್ನಸ್ಯ**—ಪುರಾತನದಾದ । **ಓಕಸಃ**—ಸ್ಥಾನವನ್ನು । **ಅನು ಆಶತ**—ಹೊಂದಿದ್ದಾರೆ.

॥ ಭಾವಾರ್ಥ ॥

ಅತಿ ಮುಖ್ಯವಾದ ಪ್ರದಾನಾರ್ಥವಾಗಿ ದರ್ಭಾಸನವನ್ನು ಹರಡಿ ಸಿದ್ಧಪಡಿಸಿರುವವರೂ, ಹವಿಸ್ಸನ್ನು ಹೊಂದಿದವರೂ ಆದ ಪ್ರಿಯಮೇಧಸಂತತಿಯವರು ಈ ಇಂದ್ರಾದಿದೇವತೆಗಳ ಪುರಾತನವಾದ ಸ್ಥಾನವನ್ನು ಹೊಂದಿದ್ದಾರೆ.

## English Translation

The Priyamedhas have reached the ancient dwelling-place of these deities, having strewed the sacred grass and placed their oblations after the manner of a pre-eminent offering

# ಎಪ್ಪತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಅಷ್ಟಮೇಽನುವಾಕ ಏಕಾದಶ ಸೂಕ್ತಾನಿ । ತತ್ರ ಯೋ ರಾಜೇತಿ ಪಂಚದಶರ್ಚಂ ಪ್ರಥಮಂ ಸೂಕ್ತಂ ಅತ್ರಾನುಕ್ರಮಣಿಕಾ । ಯೋ ರಾಜಾ ಪಂಚೋನಾ ಪುರುಹನ್ಮಾ ಬಾರ್ಹತಂ ತ್ರಿಪ್ರಗಾಥಾದ್ಯುಷ್ಣಿಗನುಷ್ಟುಪ್ಪುರಉಷ್ಣಿಗಂತಮಿತಿ । ಪುರುಹನ್ಮಾ ಋಷಿಃ । ಸ ಚ ಕ್ವಚಿತ್ಕಥಂಚಿದವಿಶೇಷಿತಂ । ಅನು. ೨-೩ । ಇತಿ ಪರಿಭಾಷಯಾಂಗಿರಸಃ । ಆದ್ಯಾತೃತೀಯಾಪಂಚಮ್ಯೋ ಬೃಹತ್ಯಃ। ದ್ವಿತೀಯಾ ಚತುರ್ಥೀಷಷ್ಠ್ಯಃ ಸತೋಬೃಹತ್ಯಃ । ಸಪ್ತಮ್ಯಾದ್ಯಾಃ ಷಡ್ಬೃಹತ್ಯಃ । ತ್ರಯೋದಶ್ಯುಷ್ಣಿಕ್ । ಚತುರ್ದಶ್ಯನುಷ್ಟುಪ್ । ಪಂಚದಶೀ ಪುರಉಷ್ಣಿಗಾದ್ಯದ್ವಾದಶಕಾ ದ್ವ್ಯಷ್ಟಕಾ । ಆದ್ಯಶ್ಚೇತ್ಪುರಉಷ್ಣಿಕ್ । ಅನು. ೫-೨ ಇತಿ ಹಿ ತಲ್ಲಕ್ಷಣಂ । ಇಂದ್ರೋ ದೇವ ೧॥ ಮಹಾವ್ರತೇ ನಿಷ್ಕೇವಲ್ಯೇ ಬಾರ್ಹತತೃಚಾಶೀತಾವಾದಿತ ಏಕಾದಶರ್ಚಃ । ತಥಾ ಚ ಪಂಚಮಾರಣ್ಯಕೇ ಸೂತ್ರಿತಂ । ಯೋ ರಾಜಾ ಚರ್ಷಣೀನಾಮಿತ್ಯೇಕಾದಶ । ಐ. ಆ. ೫-೨-೪ ॥ ಇತಿ ॥

ಅನುವಾದವು—ಎಂಟನೆಯ ಮಂಡಲದ ಎಂಟನೆಯ ಅನುವಾಕದಲ್ಲಿ ಹನ್ನೊಂದು ಸೂಕ್ತಗಳಿರುವವು. ಅವುಗಳಲ್ಲಿ **ಯೋ ರಾಜಾ** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ಹದಿನೈದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ಯೋ ರಾಜಾ ಪಂಚೋನಾ ಪುರುಹನ್ಮಾ ಬಾರ್ಹತಂ ತ್ರಿಪ್ರಗಾಥಾದ್ಯುಷ್ಣಿಗನುಷ್ಟುಪ್ಪುರಉಷ್ಣಿಗಂತಂ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಪುರುಹನ್ಮಾ ಎಂಬುವನು ಋಷಿಯು; ಈ ಋಷಿಯು ಆಂಗಿರಸಗೋತ್ರದವನೆಂದು ಅನುಕ್ರಮಣಿಕೆಯಲ್ಲಿ (ಅನು. ೨-೩) ಹೇಳಲಾಗಿರುವುದು. ಈ ಸೂಕ್ತದ ಒಂದು, ಮೂರು, ಐದನೆಯ ಋಕ್ಕುಗಳು ಬೃಹತೀಛಂದಸ್ಕವು ಎರಡು, ನಾಲ್ಕು, ಆರನೆಯ ಋಕ್ಕುಗಳು ಸತೋಬೃಹತೀ ಛಂದಸ್ಕವು ಏಳನೆಯ ಋಕ್ಕಿನಿಂದ ಮುಂದಿನ ಆರು ಋಕ್ಕುಗಳು ಬೃಹತೀಛಂದಸ್ಕವು. ಹದಿಮೂರನೆಯದು ಉಷ್ಣಿಕ್, ಹದಿನಾಲ್ಕನೆಯದು ಅನುಷ್ಟುಪ್, ಹದಿನೈದನೆಯದು ಪುರಉಷ್ಣಿಕ್ ಎಂಬ ಛಂದಸ್ಸಿನವು. ಒಂದು ಋಕ್ಕಿನಲ್ಲಿ ಮೂರು ಪಾದಗಳಿದ್ದು ಪ್ರಥಮಪಾದದಲ್ಲಿ ಹನ್ನೆರಡು ಅಕ್ಷರಗಳೂ, ಉಳಿದ ಪಾದಗಳಲ್ಲಿ ಎಂಟೆಂಟು ಅಕ್ಷರ

ಗಳೂ ಇದ್ದರೆ ಆ ಛಂದಸ್ಸು ಪುರಉಷ್ಣಿಕ್ ಎನಿಸುವುದು ಎಂದು ಇದರ ಲಕ್ಷಣವು. ಇಂದ್ರನು ದೇವತೆಯು, ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳನ್ನು ಪಠಿಸುವಾಗ ಬೃಹತೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ಮೊದಲಿನ ಹನ್ನೊಂದು ಋಕ್ಕುಗಳ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ— **ಯೋ ರಾಜಾ ಚರ್ಷಣೀನಾಮಿತ್ಯೇಕಾದಶ** ಎಂಬ ವಾಕ್ಯದಿಂದ (ಐ. ಆ. ೫-೨-೪) ನಿರ್ದಿಷ್ಟವಾಗಿರುವುದು

## ಸೂಕ್ತ—೭೦

ಮಂಡಲ—೮ ॥ ಅನುವಾಕ—೮ ॥ ಸೂಕ್ತ—೭೦ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೮, ೯, ೧೦ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ಪುರುಹನ್ಮಾ ॥
ದೇವತಾ—ಇಂದ್ರಃ ॥
ಛಂದಃ—೧-೫. ಪ್ರಾಗಾಥಂ (ಅಯುಜಃ ಬೃಹತ್ಯಃ ಯುಜಃ ಸತೋಬೃಹತ್ಯಃ) ।
೭-೧೨ ಬೃಹತೀ । ೧೩. ಉಷ್ಣಿಕ್ । ೧೪ ಅನುಷ್ಟುಪ್ । ೧೫. ಪುರಉಷ್ಣಿಕ್ ॥

॥ ಸಂಹಿತಾಪಾಠಃ ॥

ಯೋ ರಾಜಾ ಚರ್ಷಣೀನಾಂ ಯಾತಾ ರಥೇಭಿರಧ್ರಿಗುಃ ।
ವಿಶ್ವಾಸಾಂ ತರುತಾ ಪೃತನಾನಾಂ ಜ್ಯೇಷ್ಠೋ ಯೋ ವೃತ್ರಹಾ ಗೃಣೇ ॥ ೧ ॥

॥ ಪದಪಾಠಃ ॥

ಯಃ । ರಾಜಾ । ಚರ್ಷಣೀನಾಂ । ಯಾತಾ । ರಥೇಭಿಃ । ಅಧ್ರಿऽಗುಃ ।
ವಿಶ್ವಾಸಾಂ । ತರುತಾ । ಪೃತನಾನಾಂ । ಜ್ಯೇಷ್ಠಃ ।ಯಃ । ವೃತ್ರऽಹಾ । ಗೃಣೇ ॥ ೧ ॥

॥ ಸಾಯಣಭಾಷ್ಯಂ ॥

ಯ ಇಂದ್ರಶ್ಚರ್ಷಣೀನಾಂ ಮನುಷ್ಯಾಣಾಂ ರಾಜಾ ಸ್ವಾಮೀ ರಥೈರ್ಯಾತಾ ಗಂತಾ ಚಾಧ್ರಿಗುರಧೃತಗಮನೋऽನ್ಯೈರ್ವಿಶ್ವಾಸಾಂ ಪೃತನಾನಾಂ ಸೇನಾನಾಂ ತರುತಾ ತಾರಕಃ । ಯಶ್ಚ ಜ್ಯೇಷ್ಠೋ ಗುಣೈರ್ಜ್ಯಾಯಾನ್ । ಯಶ್ಚ ವೃತ್ರಹಾ ವೃತ್ರಂ ಹತವಾನ್ । ತಂ ಮಹಾಭಾಗಮಿಂದ್ರಂ ಗೃಣೇ । ಸ್ತೌಮಿ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಇಂದ್ರನು । **ಚರ್ಷಣೀನಾಂ**—ಮಾನವರಿಗೆಲ್ಲಾ । **ರಾಜಾ**—ಸ್ವಾಮಿಯಾಗಿಯೂ । **ಅಧ್ರಿಗುಃ**—ಇತರರಿಂದ ತಡೆಯಲ್ಪಡದಿರುವ ಗಮನವುಳ್ಳವನಾಗಿ । **ರಥೇಭಿಃ**—ರಥಗಳಿಂದ (ರಥಗಳಲ್ಲಿ) **ಯಾತಾ**—

ಸಂಚರಿಸುವವನಾಗಿಯೂ । **ವಿಶ್ವಾಸಾಂ**—ಸಮಸ್ತವಾದ । **ಪೃತನಾನಾಂ**—ಸೇನೆಗಳಿಗೂ । **ತರುತಾ**—ರಕ್ಷಕನಾಗಿಯೂ ಇರುವನೋ । **ಯಃ**—ಯಾವ ಇಂದ್ರನು । **ಜ್ಯೇಷ್ಠಃ**—ಗುಣಗಳಿಂದ ಅತ್ಯಧಿಕನಾಗಿಯೂ । **ವೃತ್ರಹಾ**—ವೃತ್ರಹಂತಕನಾಗಿಯೂ ಇರುವನೋ (ಅಂತಹ ಇಂದ್ರನನ್ನು) । **ಗೃಣೇ**—ನಾನು ಸ್ತುತಿಸುತ್ತೇನೆ.

॥ ಭಾವಾರ್ಥ ॥

ಯಾವ ಇಂದ್ರನು ಮಾನವರಿಗೆಲ್ಲಾ ಸ್ವಾಮಿಯಾಗಿಯೂ ಇತರರಿಂದ ತಡೆಯಲ್ಪಡದಿರುವ ಗಮನವುಳ್ಳವನಾಗಿ ರಥಗಳಲ್ಲಿ ಸಂಚರಿಸುವವನಾಗಿಯೂ ಸಮಸ್ತವಾದ ಸೇನೆಗಳಿಗೂ ರಕ್ಷಕನಾಗಿಯೂ ಇರುವನೋ ಮತ್ತು ಯಾವ ಇಂದ್ರನು ಗುಣಗಳಿಂವ ಅತ್ಯಧಿಕನಾಗಿಯೂ ವೃತ್ರಹಂತಕನಾಗಿಯೂ ಇರುವನೋ ಅಂತಹ ಇಂದ್ರನನ್ನು ನಾನು ಸ್ತುತಿಸುತ್ತೇನೆ

English Translation

I praise that Indra who is the lord of men, who proceeds irresistible in his chariots, the breaker-through of all armies, the pre-eminent one, the slayer of Vritra.

॥ ಸಂಹಿತಾಪಾಠಃ ॥

ಇಂದ್ರಂ ತಂ ಶುಂಭ ಪುರುಹನ್ಮನ್ನವಸೇ ಯಸ್ಯ ದ್ವಿತಾ ವಿಧರ್ತರಿ।
ಹಸ್ತಾಯ ವಜ್ರಃ ಪ್ರತಿ ಧಾಯಿ ದರ್ಶತೋ ಮಹೋ ದಿವೇ ನ ಸೂರ್ಯಃ ॥ ೨ ॥

॥ ಪದಪಾಠಃ ।

ಇಂದ್ರಂ । ತಂ । ಶುಂಭ । ಪುರುಽಹನ್ಮನ್ । ಅವಸೇ । ಯಸ್ಯ । ದ್ವಿತಾ । ವಿಽಧರ್ತರಿ ।
ಹಸ್ತಾಯ । ವಜ್ರಃ । ಪ್ರತಿ । ಧಾಯಿ । ದರ್ಶತಃ । ಮಹಃ । ದಿವೇ । ನ । ಸೂರ್ಯಃ ॥೨॥

॥ ಸಾಯಣಭಾಷ್ಯಂ ॥

ಹೇ ಪುರುಹನ್ಮನ್ನೃಷೇ ತ್ವಂ ತಮಿಂದ್ರಂ ಶುಂಭ । ಹವಿಸ್ಪ್ರದಾನಾದಿನಾಲಂಕುರು । ಕಿಮರ್ಥಂ । ಅವಸೇ ರಕ್ಷಣಾಯ । ಏವಮಾತ್ಮಾ ಸ್ವಾತ್ಮಾನಂ ಸಂಬೋಧ್ಯ ಬ್ರವೀತಿ । ಯಸ್ಯ ತವ ವಿಧರ್ತರಿ ವಿಧಾರಕ ಇಂದ್ರೇ ದ್ವಿತಾ ದ್ವಿತ್ವಮಸ್ತ್ಯೌಗ್ರ್ಯಮನೌಗ್ರ್ಯಂ । ತವ ಶತ್ರೂನ್ಹಂತುಮುಗ್ರತ್ವಂ ತ್ವದನುಗ್ರಹಾಯಾನೌಗ್ರ್ಯಂ ಚೇತಿ ದ್ವೈತಮಸ್ತಿ । ತತ್ಔಗ್ರ್ಯಚಿಹ್ನಂ ದರ್ಶಯತಿ । ಹಸ್ತಾಯ ಕರಾಯ ಹನನಾಯ ಶತ್ರೂಣಾಂ ದರ್ಶತೋ ದರ್ಶನೀಯೋ ಮಹೋ ಮಹಾನ್ವಜ್ರಃ ಪ್ರತಿ ಧಾಯಿ ಪ್ರತಿನಿಹಿತೋ ಭವತಿ ದಿವೇ ಪ್ರಕಾಶಾಯ ದಿವಸಾಯ ವಾ ಅಥವಾ ದಿವಿ ದೃಶ್ಯಮಾನಃ ಸೂರ್ಯ ಇವ ॥

॥ ಪ್ರತಿಪದಾರ್ಥ ॥

**ಪುರುಹನ್ಮನ್**—ಪುರುಹನ್ಮ ಎಂಬ ಹೆಸರುಳ್ಳ ಎಲೈ ಋಷಿಯೇ । **ಯಸ್ಯ**—ಯಾವ । **ವಿಧರ್ತರಿ**—ನಿನ್ನ ಧಾರಕನಾದ ಇಂದ್ರನಲ್ಲಿ । **ದ್ವಿತಾ**—ನಿಗ್ರಹ ಮತ್ತು ಅನುಗ್ರಹ ಎಂಬ ಎರಡು ವಿಧವಾದ ಉಪಕರಣಗಳಿರುವುವೋ । **ತಂ ಇಂದ್ರಂ**—ಆ ಇಂದ್ರನನ್ನು । **ಅವಸೇ**—ರಕ್ಷಣಾರ್ಥವಾಗಿ । **ಶುಂಭ**—ಹವಿಷ್ಪ್ರದಾನಾದಿಗಳಿಂದ ಅಲಂಕರಿಸು । **ದಿವೇ**—ಹಗಲಿನಲ್ಲಿ ಪ್ರಕಾಶಕ್ಕಾಗಿ । **ಸೂರ್ಯಃ ನ**—ಸೂರ್ಯನಿರುವಂತೆ । **ಹಸ್ತಾಯ**—ಶತ್ರುಹನನಕ್ಕಾಗಿ । **ದರ್ಶತಃ**—ರಮ್ಯವಾದ ರೂಪವುಳ್ಳದ್ದೂ । **ಮಹಃ**—ಮಹತ್ಸ್ವರೂಪವುಳ್ಳದ್ದೂ ಆದ । **ವಜ್ರಃ**—ವಜ್ರಾಯುಧವು । **ಪ್ರತಿಧಾಯಿ**—ಇಂದ್ರನಿಂದ ಹಿಡಿಯಲ್ಪಟ್ಟಿದೆ

॥ ಭಾವಾರ್ಥ ॥

ಪುರುಹನ್ಮ ಎಂಬ ಹೆಸರುಳ್ಳ ಎಲೈ ಋಷಿಯೇ, ಯಾವ ನಿನ್ನ ಧಾರಕನಾದ ಇಂದ್ರನಲ್ಲಿ ನಿಗ್ರಹ ಮತ್ತು ಅನುಗ್ರಹ ಎಂಬ ಎರಡು ವಿಧವಾದ ಉಪಕರಣಗಳಿರುವುವೋ ಆ ಇಂದ್ರನನ್ನು ನಿನ್ನ ರಕ್ಷಣಾರ್ಥವಾಗಿ ಹವಿಷ್ಪ್ರದಾನಾದಿಗಳಿಂದ ಅಲಂಕರಿಸು. ಹಗಲಿನಲ್ಲಿ ಪ್ರಕಾಶಕ್ಕಾಗಿ ಸೂರ್ಯನಿರುವಂತೆ ರಮ್ಯವಾದ ರೂಪವುಳ್ಳದ್ದೂ, ಮಹತ್ಸ್ವರೂಪವುಳ್ಳದ್ದೂ ಆದ ವಜ್ರಾಯುಧವು ಶತ್ರುವಧಾರ್ಥವಾಗಿ ಇಂದ್ರನಿಂದ ಹಿಡಿಯಲ್ಪಟ್ಟಿದೆ.

English Translation

Puruhanman, honour that Indra for your protection, for in your upholder there is a two-fold might ; he holds in his hand ( to smite his enemies) the glorious thunderbolt great as the sun in heaven

॥ ಸಂಹಿತಾಪಾಠಃ ॥

ನಕಿಷ್ಟಂ ಕರ್ಮಣಾ ನಶದ್ಯಶ್ಚಕಾರ ಸದಾವೃಧಂ ।
ಇಂದ್ರಂ ನ ಯಜ್ಞೈರ್ವಿಶ್ವಗೂರ್ತಮೃಭ್ವಸಮಧೃಷ್ಟಂ ಧೃಷ್ಣ್ವೋ-
ಜಸಂ ॥ ೩ ॥

॥ ಪದಪಾಠಃ ॥

ನಕಿಃ । ತಂ । ಕರ್ಮಣಾ । ನಶತ್ । ಯಃ । ಚಕಾರ । ಸದಾಽವೃಧಂ ।
ಇಂದ್ರಂ । ನ । ಯಜ್ಞೈಃ । ವಿಶ್ವಽಗೂರ್ತಂ । ಋಭ್ವಸಂ । ಅಧೃಷ್ಟಂ । ಧೃಷ್ಣುಽಓಜಸಂ॥

॥ ಸಾಯಣಭಾಷ್ಯಂ ॥

ತಸ್ಮಿನ್ನೇವ ಶಸ್ತ್ರೇ ನಕಿಷ್ಟಮಿತಿ ಪ್ರಗಾಥೋ ವೈಕಲ್ಪಿಕಃ ಸ್ತೋತ್ರಿಯಃ । ಸೂತ್ರಿತಂ ಚ । ನಕಿಷ್ಟಂ ಕರ್ಮಣಾ ನಶನ್ನತ್ವಾ ಬೃಹಂತೋ ಅದ್ರಯಃ । ಆ. ೭-೪ । ಇತಿ ॥

**ತಂ ಜನಮನ್ಯೋ ಮರ್ತ್ಯೋ ಜನಃ ಕರ್ಮಣಾ ಹನನಾದಿವ್ಯಾಪಾರೇಣ ನಕಿರ್ನಶತ್ । ನೈವ ವ್ಯಾಪ್ನೋತಿ । ಯ ಇಂದ್ರಂ ಚಕಾರ ಇಂದ್ರಮೇವಾನುಕೂಲಂ ಯಜ್ಞೈಃ ಸಾಧನೈಃ । ಕೀದೃಶಮಿಂದ್ರಂ । ಸದಾವೃಧಂ ಸದಾ ವರ್ಧಕಂ ವಿಶ್ವಗೂರ್ತಂ ಸರ್ವೈಃ ಸ್ತುತ್ಯಮೃಭ್ವಸಂ ಮಹಾಂತಮಧೃಷ್ಟಮನ್ಯೈ-ರ್ಧರ್ಷಿತುಮಶಕ್ಯಂ ಧೃಷ್ಣ್ವೋಜಸಂ ಧರ್ಷಕಬಲಂ ॥**

॥ ಪ್ರತಿಪದಾರ್ಥ ॥

**ಯಃ**—ಯಾವ ಯಜಮಾನನು । **ಸದಾವೃಧಂ**—ಸರ್ವದಾ ವೃದ್ಧಿಯನ್ನು ಹೊಂದುವವನೂ । **ವಿಶ್ವಗೂರ್ತಂ**—ಸಕಲರಿಂದಲೂ ಸ್ತುತ್ಯನೂ । **ಋಭ್ವಸಂ**—ಮಹಾತ್ಮನೂ । **ಅಧೃಷ್ಟಂ**—ಶತ್ರುಗಳಿಂದ ಅಪ್ರತಿಹತನೂ । **ಧೃಷ್ಣ್ವೋಜಸಂ**—ಧರ್ಷಕವಾದ ಬಲವುಳ್ಳವನೂ ಆದ । **ಇಂದ್ರಂ ನ**—ಇಂದ್ರನನ್ನೇ । **ಯಜ್ಞೈಃ**—ಯಜ್ಞಸಾಧನಗಳಾದ ಹವಿರಾದಿಗಳಿಂದ । **ಚಕಾರ**—ಪೂಜಿಸುವನೋ । **ತಂ**—ಆ ಯಜಮಾನನನ್ನು । **ಕರ್ಮಣಾ**—ಹಿಂಸಾದಿಕರ್ಮಗಳಿಂದ । **ನಕಿಃ ನಶತ್**—ಶತ್ರುಗಳಲ್ಲಾರೂ ಹಿಂಸಿಸಲಾರರು.

॥ ಭಾವಾರ್ಥ ॥

ಸರ್ವದಾ ವೃದ್ಧಿಯನ್ನು ಹೊಂದುವವನೂ, ಸಕಲರಿಂದಲೂ ಸ್ತುತ್ಯನೂ, ಮಹಾತ್ಮನೂ, ಶತ್ರುಗಳಿಂದ ಅಪ್ರತಿಹತನೂ, ಧರ್ಷಕವಾದ ಬಲವುಳ್ಳವನೂ ಆದ ಇಂದ್ರನನ್ನೇ ಯಜ್ಞಸಾಧನಗಳಾದ ಹವಿರಾದಿಗಳಿಂದ ಯಾರು ಪೂಜಿಸುವನೋ ಆ ಯಜಮಾನನನ್ನು ಹಿಂಸಾದಿಕರ್ಮಗಳಿಂದ ಶತ್ರುಗಳಲ್ಲಾರೂ ಹಿಂಸಿಸಲಾರರು.

English Translation

None can touch him by his deeds, who has made Indra his friend by sacrifices,—(Indra) ever giving fresh strength, to be hymned by all, great, unconquered, of ever-daring might.

॥ ವಿಶೇಷವಿಷಯಗಳು ॥

ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ **ನಕಿಷ್ಟಂ** ಎಂಬ ಪ್ರಗಾಥವನ್ನು (೩-೪ ಋಕ್ಕುಗಳನ್ನು) ವೈಕಲ್ಪಿಕಸ್ತೋತ್ರಿಯ ಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ನಕಿಷ್ಟಂ ಕರ್ಮಣಾ ನಶನ್ನ ತ್ವಾ ಬೃಹಂತೋ ಅದ್ರಯಃ** ಎಂಬ ಸೂತ್ರದಿಂದ (ಆ. ೭-೪) ವಿವೃತವಾಗಿರುವುದು

॥ ಸಂಹಿತಾಪಾಠಃ ॥

ಅಷಾಳ್ಹಮುಗ್ರಂ ಪೃತನಾಸು ಸಾಸಹಿಂ ಯಸ್ಮಿನ್ಮಹೀರುರುಜ್ರಯಃ।
ಸಂ ಧೇನವೋ ಜಾಯಮಾನೇ ಅನೋನವುರ್ದ್ಯಾವಃ ಕ್ಷಾಮೋ ಅನೋನವುಃ ॥ ೪ ॥

॥ ಪದಪಾಠಃ ॥

ಅಷಾಳ್ಹಂ । ಉಗ್ರಂ । ಪೃತನಾಸು । ಸಸಹಿಂ । ಯಸ್ಮಿನ್ । ಮಹೀಃ । ಉರುಽಜ್ರಯಃ ।

ಸಂ । ಧೇನವಃ । ಜಾಯಮಾನೇ । ಅನೋನವುಃ । ದ್ಯಾವಃ । ಕ್ಷಾಮಃ । ಅನೋನವುಃ ॥೪॥

॥ ಸಾಯಣಭಾಷ್ಯಂ ॥

ಅಷಾಳ್ಹಮಸೋಢಮುಗ್ರಮುದ್ಗೂರ್ಣಬಲಂ ಪೃತನಾಸು ಶತ್ರುಸೇನಾಸು ಸಾಸಹಿಮಭಿಭವಿತಾರಂ ಸ್ತೌಮೀತ್ಯರ್ಥಃ । ಯಸ್ಮಿನ್ನಿಂದ್ರೇ ಜಾಯಮಾನೇ ಮಹೀರ್ಮಹತ್ಯ ಉರುಜ್ರಯೋ ಬಹುವೇಗಾ ಧೇನವೋ ಹವಿರಾದಿನಾ ಪ್ರೀಣಯಿತ್ರ್ಯಃ ಪ್ರಜಾ ಗಾವ ಏವ ವಾ ಸಮನೋನವುಃ ಸಮಸ್ತುವನ್ । ನ ಕೇವಲಂ ಧೇನವ ಏವ ಅಪಿ ತು ದ್ಯಾವೋ ದ್ಯುಲೋಕಾಃ ಕ್ಷಾಮಃ ಪೃಥಿವ್ಯಶ್ಚ ಸಮನೋನವುಃ । ತತ್ರತ್ಯಾಃ ಸರ್ವೇ ಪ್ರಾಣಿನೋ ನಮಂತ ಇತ್ಯರ್ಥಃ । ತ್ರಿವೃತೋ ಲೋಕಾ ಇತಿ ಶ್ರುತೇರ್ಬಹುವಚನಂ ॥

॥ ಪ್ರತಿಪದಾರ್ಥ ॥

**ಯಸ್ಮಿನ್**—ಯಾವ ಇಂದ್ರನು । **ಜಾಯಮಾನೇ**—ಉತ್ಪನ್ನನಾದೊಡನೆಯೇ । **ಮಹೀಃ**—ಮಹತ್ಸ್ವರೂಪವುಳ್ಳವೂ । **ಉರುಜ್ರಯಃ**—ಬಹುವಾದ ವೇಗವುಳ್ಳವೂ ಆದ । **ಧೇನವಃ**—ಧೇನುಗಳು । **ಸಮನೋನವುಃ**—ಸ್ತುತಿಸಿದವೋ (ಮತ್ತು) । **ದ್ಯಾವಃ**-ದ್ಯುಲೋಕಗಳೂ । **ಕ್ಷಾಮಃ**—ಪೃಥ್ವಿಯೂ ಸೇರಿಕೊಂಡು। **ಅನೋನವುಃ**—ನಮಸ್ಕರಿಸಿದವೋ ಅಂತಹ । **ಅಷಾಳ್ಹಂ**—ಅಪ್ರತಿಹತನೂ । **ಉಗ್ರಂ**—ಭಯಂಕರನೂ । **ಪೃತನಾಸು**—ಶತ್ರುಸೇನೆಗಳ ನಡುವೆ । **ಸಾಸಹಿಂ**—ಅತಿಶಯವಾದ ಶಕ್ತಿಯುಳ್ಳವನೂ ಆದ ಇಂದ್ರನನ್ನು (ಸ್ತುತಿಸುತ್ತೇನೆ)

॥ ಭಾವಾರ್ಥ ॥

ಯಾವ ಇಂದ್ರನು ಉತ್ಪನ್ನನಾದೊಡನೆಯೇ ಮಹತ್ಸ್ವರೂಪವುಳ್ಳವೂ, ಬಹುವಾದ ವೇಗವುಳ್ಳವೂ ಆದ ಧೇನುಗಳು ಸ್ತುತಿಸಿದವೋ ಮತ್ತು ದ್ಯುಲೋಕಗಳೂ ಪೃಥ್ವಿಯೂ ಸೇರಿಕೊಂಡು ನಮಸ್ಕರಿಸಿದವೋ ಅಂತಹ ಅಪ್ರತಿಹತನೂ ಭಯಂಕರನೂ ಶತ್ರುಸೇನೆಗಳ ನಡುವೆ ಅತಿಶಯವಾದ ಶಕ್ತಿಯುಳ್ಳವನೂ ಆದ ಇಂದ್ರನನ್ನು ಸ್ತುತಿಸುತ್ತೇನೆ.

## English Translation

(I laud) him who is not to be withstood, the mighty, the conqueror in hostile hosts; whom, when he was born, the strong rushing cows welcomed and the heavens and the earths praised

[ xxv 4 ]

॥ ಸಂಹಿತಾಪಾಠಃ ॥

ಯದ್ದ್ಯಾವ ಇಂದ್ರ ತೇ ಶತಂ ಶತಂ ಭೂಮೀರುತ ಸ್ಯುಃ ।
ನ ತ್ವಾ ವಜ್ರಿನ್ತ್ಸಹಸ್ರಂ ಸೂರ್ಯಾ ಅನು ನ ಜಾತಮಷ್ಟ ರೋದಸೀ ॥ ೫ ॥

॥ ಪದಪಾಠಃ ॥

ಯತ್ । ದ್ಯಾವಃ । ಇಂದ್ರ । ತೇ । ಶತಂ । ಶತಂ । ಭೂಮೀಃ । ಉತ । ಸ್ಯುರಿತಿ ಸ್ಯುಃ । ನ । ತ್ವಾ । ವಜ್ರಿನ್ । ಸಹಸ್ರಂ । ಸೂರ್ಯಾಃ । ಅನು । ನ । ಜಾತಂ । ಅಷ್ಟ । ರೋದಸೀ ಇತಿ ॥ ೫ ॥

॥ ಸಾಯಣಭಾಷ್ಯಂ ॥

ತೃತೀಯೇಽಹನಿ ನಿಷ್ಕೇವಲ್ಯೇ ವೈರೂಪಸಾಮಪಕ್ಷೇ ಯದ್ದ್ಯಾವ ಇತಿ ಪ್ರಗಾಥಃ ಸ್ತೋತ್ರಿಯಃ । ಸೂತ್ರಿತಂ ಚ । ಯದ್ದ್ಯಾವ ಇಂದ್ರ ತೇ ಶತಂ ಯದಿಂದ್ರ ಯಾವತಸ್ತ್ವಮಿತಿ ಪ್ರಗಾಥೌ ಸ್ತೋತ್ರಿಯಾನುರೂಪೌ ॥ ಆ. ೭-೧೮ । ಇತಿ ॥

ಹೇ ಇಂದ್ರ ತೇ ತವ ಪ್ರತಿಮಾನಾರ್ಥಂ ಯದ್ಯದಿ ದ್ಯಾವೋ ದ್ಯುಲೋಕಾಃ ಸ್ಯುಃ ತಥಾಪಿ ನಾಶ್ನುವಂತಿ । ಉತಾಪಿ ಚ ಭೂಮೀರ್ಭೂಮ್ಯಸ್ತೇ ತವ ಮೂರ್ತಿಪ್ರತಿಬಿಂಬಾಯ ಶತಂ ಸ್ಯುಃ ತಥಾಪಿ ನಾಶ್ನುವಂತಿ । ಹೇ ವಜ್ರಿನ್ ತೇ ತ್ವಾಂ ಸಹಸ್ರಂ ಸೂರ್ಯಾ ಅಗಣಿತಾ ಅಪಿ ಸೂರ್ಯಾ ನಾನುಭವಂತಿ । ನ ಪ್ರಕಾಶಯಂತೀತ್ಯರ್ಥಃ । ನ ತತ್ರ ಸೂರ್ಯೋ ಭಾತಿ । ಕ ಉ. ೫-೧೫ । ಇತಿ ಶ್ರುತೇಃ । ಕಿಂ ಬಹುನಾ । ಜಾತಂ ಪೂರ್ವಮುತ್ಪನ್ನಂ ಕಿಂಚನ ನಾಷ್ಟ । ನಾಶ್ನುತೇ । ತಥಾ ರೋದಸೀ ದ್ಯಾವಾಪೃಥಿವ್ಯೌ ನಾಶ್ನುವಾತೇ । ಸರ್ವೇಭ್ಯೋಽತಿರಿಚ್ಯಸ ಇತ್ಯರ್ಥಃ । ಜ್ಯಾಯಾನ್ಪೃಥಿವ್ಯಾ ಜ್ಯಾಯಾನಂತರಿಕ್ಷಾಜ್ಜ್ಯಾಯಾನ್ದಿವೋ ಜ್ಯಾಯಾನೇಭ್ಯೋ ಲೋಕೇಭ್ಯಃ । ಛಾಂ. ಉ. ೩-೧೪-೩ । ಇತಿ ಶ್ರುತೇಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ತೇ**—ನಿನ್ನನ್ನು ಹೋಲಿಸಲು । **ಯತ್**—ಒಂದು ವೇಳೆ । **ಶತಂ**—ಶತಸಂಖ್ಯಾಕವಾಗಿ । **ದ್ಯಾವಃ**—ದ್ಯುಲೋಕಗಳು । **ಸ್ಯುಃ**—ಇದ್ದರೂ । **ಉತ**—ಮತ್ತು । **ಶತಂ ಭೂಮೀಃ**—ನೂರು ಸಂಖ್ಯೆಯಷ್ಟು ಪೃಥ್ವಿಯಿದ್ದರೂ (ಅವು ನಿನ್ನನ್ನು ಸರಿತೂಗಿಸಲಾರವು) । **ವಜ್ರಿನ್**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ । **ತ್ವಾ**—ನಿನ್ನನ್ನು । **ಸಹಸ್ರಂ**—ಸಹಸ್ರಸಂಖ್ಯೆಯಷ್ಟು । **ಸೂರ್ಯಾಃ**—ಸೂರ್ಯರೂ ಸಹ । **ನ ಅನು**—

ನಿನ್ನ ಪ್ರಕಾಶಕ್ಕೆ ಸಮನಾಗಲಾರರು । **ಜಾತಂ**—ಉತ್ಪನ್ನವಾದ ಯಾವ ವಸ್ತುವೂ । **ನ ಅಷ್ಟ**—ನಿನ್ನನ್ನು ವ್ಯಾಪಿಸಲಾರವು । **ರೋದಸೀ**—ದ್ಯಾವಾಪೃಥಿವಿಗಳೂ ಸಹ ನಿನ್ನನ್ನು ವ್ಯಾಪಿಸಲಾರವು.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನನ್ನು ಹೋಲಿಸಲು ಒಂದು ವೇಳೆ ದ್ಯುಲೋಕಗಳು ಶತಸಂಖ್ಯಾಕವಾಗಿದ್ದರೂ, ನೂರು ಸಂಖ್ಯೆಯಷ್ಟು ಪೃಥ್ವಿಯಿದ್ದರೂ ಸಹ ಅವು ನಿನ್ನನ್ನು ಸರಿತೂಗಿಸಲಾರವು. ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ನಿನ್ನನ್ನು ಸಹಸ್ರಸಂಖ್ಯೆಯಷ್ಟು ಸೂರ್ಯರೂ ಸಹ ನಿನ್ನ ಪ್ರಕಾಶಕ್ಕೆ ಸಮನಾಗಲಾರರು (ನಿನ್ನಿಂದಲೇ ಅವರೆಲ್ಲರೂ ಪ್ರಕಾಶಿತರಾಗುತ್ತಾರೆ) ಉತ್ಪನ್ನವಾದ ಯಾವ ವಸ್ತುವಾಗಲಿ, ದ್ಯಾವಾಪೃಥಿವಿಗಳಾಗಲಿ ನಿನ್ನನ್ನು ವ್ಯಾಪಿಸಲಾರವು.

English Translation

Indra, were there one hundred heavens to compare with you, or were there one hundred earths,—O thunderer, not even a thousand suns would reveal you,—yes, no created thing would fill you, nor heaven and earth.

॥ ವಿಶೇಷವಿಷಯಗಳು ॥

ಯಾಗದ ಮೂರನೆಯ ದಿವಸ ನಿಷ್ಕೇವಲ್ಯಶಸ್ತ್ರಮಂತ್ರಶಂಸನಕಾಲದಾಗ ಸ್ತೈರೂಪನಾಮಪಕ್ಷದಲ್ಲಿ **ಯದ್ದ್ಯಾವಃ** ಎಂಬ ಈ ಪ್ರಗಾಥವನ್ನು(೫-೬ ಋಕ್ಕುಗಳನ್ನು) ಸ್ತೋತ್ರಿಯ ಪ್ರಗಾಥಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯದ್ದ್ಯಾವ ಇಂದ್ರ ತೇ ಶತಂ ಯದಿಂದ್ರ ಯಾವತಸ್ತ್ವಮಿತಿ ಪ್ರಗಾಥೌ ಸ್ತೋತ್ರಿಯಾನುರೂಪೌ** ಎಂಬ ಸೂತ್ರದಿಂದ (ಆ. ೭-೧೦) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಆ ಪಪ್ರಾಥ ಮಹಿನಾ ವೃಷ್ಣ್ಯೋ ವೃಷನ್ವಿಶ್ವಾ ಶವಿಷ್ಠ ಶವಸಾ ।
ಅಸ್ಮಾಁ ಅವ ಮಘವನ್ಗೋಮತಿ ವ್ರಜೇ ವಜ್ರಿಞ್ಚಿತ್ರಾಭಿರೂತಿಭಿಃ ॥

॥ ಪದಪಾಠಃ ॥

ಆ । ಪಪ್ರಾಥ । ಮಹಿನಾ । ವೃಷ್ಣ್ಯ । ವೃಷನ್ । ವಿಶ್ವಾ । ಶವಿಷ್ಠ । ಶವಸಾ ।
ಅಸ್ಮಾನ್ । ಅವ । ಮಘವನ್ । ಗೋಽಮತಿ । ವ್ರಜೇ । ವಜ್ರಿನ್ । ಚಿತ್ರಾಭಿಃ ।
ಊತಿಽಭಿಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ವೃಷನ್ನಭಿಮತವರ್ಷಕೇಂದ್ರ ತ್ವಮಾ ಪಪ್ರಾಥ । ಆಪೂರಯಸಿ । ವ್ಯಾಪ್ನೋಷಿ । ಕಾನಿ । ವಿಶ್ವಾ ಸರ್ವಾಣಿ ವೃಷ್ಣ್ಯಾ ವರ್ಷಕಾಣಿ ಬಲಾನಿ ಶತ್ರುಸಂಬಂಧೀನಿ । ಕೇನ ಸಾಧನೇನ । ಮಹಿನಾ ಮಹತಾ ಶವಸಾ ಬಲೇನ ಸ್ವೀಯೇನ । ಅಥವಾ ವೃಷ್ಣ್ಯೇತ್ಯೇತಚ್ಛವೋವಿಶೇಷಣಂ। ತಥಾ ಸತ್ಯಭಿಮತ-ವರ್ಷಕೇಣ ಮಹತಾ ಬಲೇನಾಸ್ಮದೀಯಾನಿ ಬಲಾನಿ ಪೂರಯಸೀತ್ಯರ್ಥಃ । ಅಧ ತಥಾ ಕೃತ್ವಾಸ್ಮಾನ್ ಗೋಮತಿ ಬಹುಭಿರ್ಗೋಭಿರ್ಯುಕ್ತೇ ವ್ರಜೇ ಶತ್ರುಸಂಬಂಧಿನಿ ನಿಮಿತ್ತೇ ಸತ್ಯಸ್ಮಾನವ ಹೇ ವಜ್ರಿ-ನ್ವಜ್ರಯುಕ್ತೇಂದ್ರ । ಕೈಃ ಸಾಧನೈಃ । ಚಿತ್ರಾಭಿರ್ನಾನಾವಿಧೈರೂತಿಭೀ ರಕ್ಷಣೈರಿತಿ ॥

॥ ಪ್ರತಿಪದಾರ್ಥ ॥

**ಶವಿಷ್ಠ**—ಅತ್ಯಂತ ಶಕ್ತಿಯುತನೂ। **ವೃಷನ್**—ಕಾಮವರ್ಷಕನೂ ಆದ ಎಲೈ ಇಂದ್ರನೇ । **ಮಹಿನಾ**—ಮಹತ್ವವುಳ್ಳ । **ಶವಸಾ**—ನಿನ್ನ ಬಲದಿಂದ । **ವಿಶ್ವಾ**—ಸಮಸ್ತವಾದ । **ವೃಷ್ಣ್ಯಾ**—ಶತ್ರುಸಂಬಂಧಿಯಾದ ಸೇನೆಯನ್ನು । **ಆ ಪಪ್ರಾಥ**—ವ್ಯಾಪಿಸಿ ಆಕ್ರಮಿಸಿದ್ದೀಯೆ । **ಮಘವನ್**—ಧನವಂತನೂ । **ವಜ್ರಿನ್**—ವಜ್ರಾಯುಧಧಾರಿಯೂ ಆದ ಎಲೈ ಇಂದ್ರನೇ । **ಗೋಮತಿ**—ಗೋವುಗಳಿಂದ ಭರಿತವಾದ । **ವ್ರಜೇ**—ಶತ್ರುಗಳ ಕೊಟ್ಟಿಗೆಗಳಲ್ಲಿ (ಆ ಗೋವುಗಳನ್ನು ನಾವು ಪಡೆಯಬೇಕೆಂದು ಹೋದಾಗ) । **ಅಸ್ಮಾನ್**—ನಮ್ಮನ್ನು । **ಚಿತ್ರಾಭಿಃ**—ಅನೇಕವಿಧವಾದ । **ಊತಿಭಿಃ**—ರಕ್ಷಣೆಗಳಿಂದ । **ಅವ**—ರಕ್ಷಿಸು

॥ ಭಾವಾರ್ಥ ॥

ಅತ್ಯಂತ ಶಕ್ತಿಯುತನೂ, ಕಾಮವರ್ಷಕನೂ ಆದ ಎಲೈ ಇಂದ್ರನೇ ಮಹತ್ಸ್ವರೂಪವುಳ್ಳ ನಿನ್ನ ಬಲದಿಂದ ಸಮಸ್ತವಾದ ಶತ್ರುಸೇನೆಗಳನ್ನೂ ವ್ಯಾಪಿಸಿ ಆಕ್ರಮಿಸಿದ್ದೀಯೆ. ಧನವಂತನೂ, ವಜ್ರಾಯುಧಧಾರಿಯೂ ಆದ ಎಲೈ ಇಂದ್ರನೇ ಗೋವುಗಳಿಂದ ಭರಿತವಾದ ಶತ್ರುಗಳ ಕೊಟ್ಟಿಗೆಗಳಲ್ಲಿ ನಾವು ಗೋವುಗಳನ್ನು ಪಡೆಯಬೇಕೆಂದು ಹೋದಾಗ ನಮ್ಮನ್ನು ಅನೇಕ ವಿಧವಾದ ರಕ್ಷಣೆಗಳಿಂದ ರಕ್ಷಿಸು.

## English Translation

Mightiest showerer (of blessings), you have filled all (our hosts) with your vast bountiful power; O Maghavan, thunderer, guard us with your manifold protections, (when we march) against the well-stocked cowpen of our enemies.

॥ ಸಂಹಿತಾಪಾಠಃ ॥

ನ ಸೀಮದೇವ ಆಪದಿಷಂ ದೀರ್ಘಾಯೋ ಮರ್ತ್ಯಃ ।
ಏತಗ್ವಾ ಚಿದ್ಯ ಏತಶಾ ಯುಯೋಜತೇ ಹರೀ ಇಂದ್ರೋ
ಯುಯೋಜತೇ ॥ ೭ ॥

|| ಪದಪಾಠಃ ||

ನ । ಸೀಂ । ಅದೇವಃ । ಆಪತ್ । ಇಷಂ । ದೀರ್ಘಾಯೋ ಇತಿ ದೀರ್ಘಽಆಯೋ ।
ಮರ್ತ್ಯಃ ।
ಏತಽಗ್ವಾ । ಚಿತ್ । ಯಃ । ಏತಶಾ । ಯುಯೋಜತೇ । ಹರೀ ಇತಿ । ಇಂದ್ರಃ ।
ಯುಯೋಜತೇ || ೭ ||

|| ಸಾಯಣಭಾಷ್ಯಂ ||

ಹೇ ದೀರ್ಘಾಯೋ ನಿತ್ಯೇಂದ್ರ ಸೋಽದೇವ ಇಂದ್ರಾಖ್ಯದೇವರಹಿತೋ ಮರ್ತ್ಯೋ ಮರಣಧರ್ಮಾ ಮನುಷ್ಯಃ ಸೀಂ ಸರ್ವಮಿಷಮನ್ನಂ ನಾಪತ್ । ನ ಪ್ರಾಪ್ನೋತಿ । ಯೋ ಮರ್ತ್ಯೋಽಸ್ಯೇಂದ್ರಸ್ಯೈತಗ್ವಾ ಚಿತ್ । ಏತವರ್ಣಾವೇವಾಶ್ವೌ ಭವತೋಽಭಿಮತದೇಶಗಮನಾಯ । ಏತಶ್ಯೈತಶಾವಶ್ವೌ ಯುಯೋಜತೇ ಯೋಜಯತಿ ರಥೇ ಯಜ್ಞಂ ಗಂತುಂ । ಯಶ್ಚೇಂದ್ರೋ ಹರೀ ಯುಯೋಜತೇ ತನ್ನ ಯಃ ಸ್ತೌತಿ । ಸ ನ ಪ್ರಾಪ್ನೋತೀತಿ ಸಮನ್ವಯಃ ||

|| ಪ್ರತಿಪದಾರ್ಥ ||

**ದೀರ್ಘಾಯೋ**—ಶಾಶ್ವತವಾದ ಆಯುಸ್ಸುಳ್ಳ ಎಲೈ ಇಂದ್ರನೇ । **ಯಃ**—ಯಾವ ನೀನು । **ಏತಗ್ವಾ ಚಿತ್**—ಬಹುವಿಧವಾದ ವರ್ಣವುಳ್ಳ । **ಏತಶಾ**—ಅಶ್ವಗಳನ್ನು । **ಯುಯೋಜತೇ**—ನಿನ್ನ ರಥಕ್ಕೆ ಸೇರಿಸುವೆಯೋ । **(ಯಃ) ಇಂದ್ರಃ**—ಈಶ್ವರನಾದ ಯಾವ ನೀನು । ಹರೀ—ಹರಿಸಂಜ್ಞಕವಾದ ಅಶ್ವಗಳನ್ನು । **ಯುಯೋಜತೇ**—ರಥಕ್ಕೆ ಸೇರಿಸುವೆಯೋ (ಅಂತಹ ನಿನ್ನನ್ನು ಸ್ತುತಿಸದೇ) । **ಅದೇವಃ**—ನಿನ್ನನ್ನು ದೇವನೆಂದು ಪರಿಗಣಿಸದೇ ಇರುವ । **ಮರ್ತ್ಯಃ**—ಮಾನವನು । ಸೀಂ—ಖಂಡಿತ ಎಲ್ಲಿಲ್ಲೂ । ಇಷಂ—ಅನ್ನವನ್ನು । **ನ ಆಪತ್**—ಹೊಂದುವುದೇ ಇಲ್ಲ

|| ಭಾವಾರ್ಥ ||

ಶಾಶ್ವತವಾದ ಆಯುಸ್ಸುಳ್ಳ ಎಲೈ ಇಂದ್ರನೇ, ಯಾವ ನೀನು ಬಹುವಿಧವಾದ ವರ್ಣವುಳ್ಳ ಅಶ್ವಗಳನ್ನು ನಿನ್ನ ರಥಕ್ಕೆ ಸೇರಿಸುವೆಯೋ, ಈಶ್ವರನಾದ ಯಾವ ನೀನು ಹರಿಸಂಜ್ಞಕವಾದ ಅಶ್ವಗಳನ್ನು ರಥಕ್ಕೆ ಸೇರಿಸುವೆಯೋ ಅಂತಹ ನಿನ್ನನ್ನು ಸ್ತುತಿಸದೇ ಮತ್ತು ನಿನ್ನನ್ನು ದೇವನೆಂದು ಪರಿಗಣಿಸದೇ ಇರುವ ಮಾನವನು ಖಂಡಿತ ಎಲ್ಲಿಲ್ಲೂ ಅನ್ನವನ್ನು ಹೊಂದುವುದೇ ಇಲ್ಲ

## English Translation

O long-lived Indra, the mortal who has not you as his deity obtains no food ; (he who praises not) that steed-borne India, who yokes to his car the two variegated, who yokes the two bay steeds.

॥ ಸಂಹಿತಾಪಾಠಃ ॥

ತಂ ವೋ ಮಹೋ ಮಹಾಯ್ಯಮಿಂದ್ರಂ ದಾನಾಯ ಸಕ್ಷಣಿಂ ।
ಯೋ ಗಾಧೇಷು ಯ ಆರಣೇಷು ಹವ್ಯೋ ವಾಜೇಷ್ವಸ್ತಿ ಹವ್ಯಃ ॥

॥ ಪದಪಾಠಃ ॥

ತಂ । ವಃ । ಮಹಃ । ಮಹಾಯ್ಯಂ । ಇಂದ್ರಂ । ದಾನಾಯ । ಸಕ್ಷಣಿಂ ।
ಯಃ । ಗಾಧೇಷು । ಯಃ । ಆಽಅರಣೇಷು । ಹವ್ಯಃ । ವಾಜೇಷು । ಅಸ್ತಿ । ಹವ್ಯಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಋತ್ವಿಜಃ ಮಹೋ ಮಹಾಂತೋ ವೋ ಯೂಯಂ ತಂ ಮಹಾಯ್ಯಂ ಪೂಜ್ಯಮಿಂದ್ರಂ ದಾನಾಯ ಸಕ್ಷಣಿಂ ಸಚಮಾನಂ ಪರಿಚರತೇತಿ ಶೇಷಃ । ಯ ಇಂದ್ರೋ ಗಾಧೇಷೂದಕೇಷು ಹವ್ಯೋಽಸ್ತಿ ಆಹ್ವಾತವ್ಯೋ ಭವತಿ । ಯಶ್ಚಾರಣೇಷು ಗಂತವ್ಯೇಷು ನಿಮ್ನೇಷೂದಕೇಷು ಸ್ಥಲೇಷು ವಾ ಹವ್ಯೋಽಸ್ತಿ। ತಥಾ ವಾಜೇಷು ಸಂಗ್ರಾಮೇಷು ಜಯಾಯ ಹವ್ಯೋ ಹ್ವಾತವ್ಯೋಽಸ್ತಿ ಭವತಿ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ಯಃ**—ಯಾವ ಇಂದ್ರನು । **ಗಾಧೇಷು**—ಉದಕಗಳಲ್ಲಿ । **ಹವ್ಯಃ**—ಸಹಾಯಕ್ಕಾಗಿ ಕರೆಯಲ್ಪಡುವವನಾಗಿ । **ಅಸ್ತಿ**—ಆಗಿರುವನೋ । **ಯಃ**—ಯಾರು । **ಆರಣೇಷು**—ಸಂಚಾರಕ್ಕೆ ಕಠಿನವಾದ ತಗ್ಗುಪ್ರದೇಶಗಳಲ್ಲಿಯೂ । **ವಾಜೇಷು**—ಸಂಗ್ರಾಮಗಳಲ್ಲಿಯೂ । **ಹವ್ಯಃ**—ಕರೆಯಲ್ಪಡುವನೋ ಅಂತಹ । **ತಂ**—ಪ್ರಸಿದ್ಧನೂ । **ಮಹಾಯ್ಯಂ**—ಪೂಜ್ಯನೂ । **ದಾನಾಯ**—ದಾನಾರ್ಥವಾಗಿ । **ಸಕ್ಷಣಿಂ**—ಒಟ್ಟಿಗಿರತಕ್ಕವನೂ ಆದ । **ಇಂದ್ರಂ**—ಇಂದ್ರನನ್ನು । **ಮಹಃ**—ಮಹದ್ಗುಣಗಳುಳ್ಳ । **ವಃ**—ನೀವು (ಪೂಜಿಸಿರಿ).

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಯಾವ ಇಂದ್ರನು ಉದಕಗಳಲ್ಲಿ ಸಹಾಯಾರ್ಥವಾಗಿ ಕರೆಯಲ್ಪಡುವನೋ, ಯಾರು ಸಂಚಾರಕ್ಕೆ ಕಠಿನವಾದ ತಗ್ಗುಪ್ರದೇಶಗಳಲ್ಲಿಯೂ ಸಂಗ್ರಾಮಗಳಲ್ಲಿಯೂ ಕರೆಯಲ್ಪಡುವನೋ ಅಂತಹ ಪ್ರಸಿದ್ಧನೂ, ಪೂಜ್ಯನೂ ದಾನಾರ್ಥವಾಗಿ ಒಟ್ಟಿಗಿರತಕ್ಕವನೂ ಆದ ಇಂದ್ರನನ್ನು ಮಹದ್ಗುಣಗಳುಳ್ಳ ನೀವು ಪೂಜಿಸಿರಿ.

## English Translation

Great (priests), worship that Indra who is propitiated by gifts; who is to be invoked in the shallows and in the depths, and who is to be invoked in battles

॥ ಸಂಹಿತಾಪಾಠಃ ॥

ಉದೂ ಷು ಣೋ ವಸೋ ಮಹೇ ಮೃಶಸ್ವ ಶೂರ ರಾಧಸೇ ।
ಉದೂ ಷು ಮಹ್ಯೈ ಮಘವನ್ಮಘತ್ತಯ ಉದಿಂದ್ರ ಶ್ರವಸೇ ಮಹೇ ॥ ೯ ॥

॥ ಪದಪಾಠಃ ॥

ಉತ್ । ಊಂ ಇತಿ । ಸು । ನಃ । ವಸೋ ಇತಿ । ಮಹೇ । ಮೃಶಸ್ವ । ಶೂರ । ರಾಧಸೇ ।
ಉತ್ । ಊಂ ಇತಿ । ಸು । ಮಹ್ಯೈ । ಮಘsವನ್ । ಮಘತ್ತಯೇ । ಉತ್ । ಇಂದ್ರ ।
ಶ್ರವಸೇ । ಮಹೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ವಸೋ ವಾಸಯಿತಃ ಶೂರೇಂದ್ರ ತ್ವಂ ನೋಽಸ್ಮಾನ್ ಸು ಸುಷ್ಠು ಉದು ಮೃಶಸ್ವ । ಉನ್ಮೃಶಸ್ವೈವ । ಉತ್ಥಾಪಯ । ಕಿಮರ್ಥಂ । ಮಹೇ ಮಹತೇ ರಾಧಸೇಽನ್ನಾಯ । ತಥಾ ಹೇ ಶೂರ ಮಘವನ್ನಿಂದ್ರ ಉನ್ಮೃಶಸ್ವ ಮಹ್ಯೈ ಮಹತೇ ಮಘತ್ತಯೇ ಧನದಾನಾಯ । ತಥೋನ್ಮೃಶಸ್ವೇಂದ್ರ ಮಹೇ ಮಹತ್ಯೈ ಶ್ರವಸೇ ಕೀರ್ತ್ಯೈ ॥

॥ ಪ್ರತಿಪದಾರ್ಥ ॥

**ವಸೋ**— ವಸತಿದಾಯಕನೂ । **ಶೂರ**— ಪರಾಕ್ರಮಿಯೂ ಆದ ಎಲೈ ಇಂದ್ರನೇ । **ನಃ**—ನಮ್ಮನ್ನು । **ಮಹೇ**—ಮಹತ್ತಾದ । **ರಾಧಸೇ**—ಅನ್ನಲಾಭಾರ್ಥವಾಗಿ । **ಸು**—ಉತ್ತಮರೀತಿಯಲ್ಲಿ । **ಉದು ಮೃಶಸ್ವ**—ಮೇಲಕ್ಕೇಳುವಂತೆ ಮಾಡು । **ಮಘವನ್**—ಧನವಂತನಾದ ಎಲೈ ಇಂದ್ರನೇ । **ಮಹ್ಯೈ**—ಅತ್ಯಧಿಕವಾದ । **ಮಘತ್ತಯೇ**—ಧನದಾನಕ್ಕಾಗಿಯೂ । **ಸು**—ಉತ್ತಮವಾಗಿ । **ಉದು**— ಮೇಲಕ್ಕೇಳುವಂತೆ ಮಾಡು । **ಇಂದ್ರ**—ಎಲೈ ಇಂದ್ರನೇ । **ಮಹೇ**—ಅತ್ಯಧಿಕವಾದ । **ಶ್ರವಸೇ**—ಕೀರ್ತಿಗಾಗಿಯೂ । **ಉತ್**—ಮೇಲಕ್ಕೇಳುವಂತೆ ಮಾಡು.

॥ ಭಾವಾರ್ಥ ॥

ವಸತಿದಾಯಕನೂ ಪರಾಕ್ರಮಿಯೂ ಆದ ಎಲೈ ಇಂದ್ರನೇ, ನಮ್ಮನ್ನು ಮಹತ್ತಾದ ಅನ್ನಲಾಭಾರ್ಥವಾಗಿ ಉತ್ತಮರೀತಿಯಲ್ಲಿ ಮೇಲಕ್ಕೇಳುವಂತೆ ಮಾಡು. ಧನವಂತನಾದ ಎಲೈ ಇಂದ್ರನೇ, ಅತ್ಯಕಧಿವಾದ ಧನದಾನಕ್ಕಾಗಿಯೂ ಉತ್ತಮವಾಗಿ ಮೇಲಕ್ಕೇಳುವಂತೆ ಮಾಡು. ಎಲೈ ಇಂದ್ರನೇ, ಅತ್ಯಧಿಕವಾದ ಕೀರ್ತಿಗಾಗಿಯೂ ಮೇಲಕ್ಕೇಳುವಂತೆ ಮಾಡು.

## English Translation

O hero, giver of dwellings, raise us up to enjoy abundant food; raise us up, Maghavan, for abundant wealth; raise us up, Indra, for abundant fame.

॥ ಸಂಹಿತಾಪಾಠ ॥

ತ್ವಂ ನ ಇಂದ್ರ ಋತಯುಸ್ತ್ವಾನಿದೋ ನಿ ತೃಂಪಸಿ ।
ಮಧ್ಯೇ ವಸಿಷ್ವ ತುವಿನೃಮ್ಣೋರ್ವೋರ್ನಿ ದಾಸಂ ಶಿಶ್ನಥೋ
ಹಥೈಃ ॥ ೧೦ ॥

॥ ಪದಪಾಠಃ ॥

ತ್ವಂ । ನಃ । ಇಂದ್ರ । ಋತಽಯುಃ । ತ್ವಾಽನಿದಃ । ನಿ । ತೃಂಪಸಿ ।
ಮಧ್ಯೇ । ವಸಿಷ್ವ । ತುವಿಽನೃಮ್ಣ । ಊರ್ವೋಃ । ನಿ । ದಾಸಂ । ಶಿಶ್ನಥಃ । ಹಥೈಃ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಋತಯುರ್ಯಜ್ಞಕಾಮಸ್ತ್ವಂ ನೋಽಸ್ಮಾಂಸ್ತ್ವಾನಿದಃ । ತ್ವಾಂ ಯೋ ನಿಂದತಿ ಸಃ । ಅಯಜನಮೇವ ನಿಂದಾ ತವ । ತಸ್ಮಾದಯಷ್ಟುಃ ಸಕಾಶಾನ್ನಿ ನಿತರಾಂ ತೃಂಪಸಿ । ಪ್ರೀಣಯಸಿ । ತಸ್ಯ ಧನಮಪಹೃತ್ಯೇತಿ ಭಾವಃ । ಏವಂ ಸಂತರ್ಪ್ಯ ಹೇ ತುವಿನೃಮ್ಣ ಪ್ರಭೂತಧನ ಸ ತ್ವಂ ತವೋರ್ವೋರ್ಮಧ್ಯೇಽಸ್ಮಾನ್ವಸಿಷ್ವ । ಊರುಭ್ಯಾಮಾಚ್ಛಾದಯ ರಕ್ಷಾರ್ಥಂ । ದಾಸಮುಪಕ್ಷಪಯಿತಾರಮಸ್ಮದ್ದ್ವೇಷಿಣಂ ಪಾಪಂ ವಾ ಹಥೈರ್ಹನನೈರ್ನಿ ಶಿಶ್ನಥಃ । ಮಾರಯಸಿ । ಅಥವಾ ತ್ವದ್ವಿರೋಧಿನಂ ದಾಸಮಸುರಂ ನಿ ಶಿಶ್ನಥೋ ಹನನೈಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಋತಯುಃ**—ಯಜ್ಞವನ್ನು ಅಪೇಕ್ಷಿಸುವ । **ತ್ವಂ**—ನೀನು । **ತ್ವಾನಿದಃ**—ನಿನ್ನನ್ನು ದೂಷಿಸುವ ದುಷ್ಟನಿಂದ (ಧನವನ್ನು ಅಪಹರಿಸಿ) **ನಃ**—ನಮ್ಮನ್ನು । **ನಿ**—ಪೂರ್ಣವಾಗಿ । **ತೃಂಪಸಿ**—ತೃಪ್ತಿಪಡಿಸುತ್ತೀಯೆ । **ತುವಿನೃಮ್ಣ**—ಅತ್ಯಧಿಕವಾದ ಧನವುಳ್ಳ ಎಲೈ ಇಂದ್ರನೇ । **ಊರ್ವೋಃ**—ನಿನ್ನ ತೊಡೆಗಳ । **ಮಧ್ಯೇ**—ಮಧ್ಯಭಾಗದಲ್ಲಿ ಮರೆಸಿ । **ವಸಿಷ್ವ**—ನಮ್ಮ ರಕ್ಷಣೆಗೆ ಆಶ್ರಯವನ್ನು ಕೊಡು । **ದಾಸಂ**—ಹಿಂಸಕನಾದ ಶತ್ರುವನ್ನು । **ಹಥೈಃ**—ಹನನಸಾಧನಗಳಿಂದ । **ನಿ ಶಿಶ್ನಥಃ**—ಪೂರ್ಣವಾಗಿ ನಾಶಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಯಜ್ಞವನ್ನು ಅಪೇಕ್ಷಿಸುವ ನೀನು ನಿನ್ನನ್ನು ದೂಷಿಸುವ ದುಷ್ಟನಿಂದ ಧನವನ್ನು ಉಪಹರಿಸಿ ನಮ್ಮನ್ನು ಪೂರ್ಣವಾಗಿ ತೃಪ್ತಿಪಡಿಸುತ್ತೀಯೆ. ಅತ್ಯಧಿಕವಾದ ಧನವುಳ್ಳ ಎಲೈ ಇಂದ್ರನೇ, ನಿನ್ನ ತೊಡೆಗಳ ಮಧ್ಯಭಾಗದಲ್ಲಿ ಮರೆಸಿ ನಮ್ಮ ರಕ್ಷಣೆಗೆ ಆಶ್ರಯವನ್ನು ಕೊಡು ಹಿಂಸಕನಾದ ಶತ್ರುವನ್ನು ಹನನಸಾಧನಗಳಿಂದ ಪೂರ್ಣವಾಗಿ ನಾಶಮಾಡು .

English Translation

Indra, who delights in offerings, satisfy us abuudantly with (the possessions of him) who despises you ; O you, possessed of vast wealth, shelter us between your thighs ; smite down the Dasa with your blows

॥ ಸಂಹಿತಾಪಾಠಃ ॥

ಅನ್ಯವ್ರತಮಮಾನುಷಮಯಜ್ವಾನಮದೇವಯುಂ ।
ಅವ ಸ್ವಃ ಸಖಾ ದುಧುವೀತ ಪರ್ವತಃ ಸುಘ್ನಾಯ ದಸ್ಯುಂ ಪರ್ವತಃ ॥ ೧೧ ॥

॥ ಪದಪಾಠಃ ॥

ಅನ್ಯಽವ್ರತಂ । ಅಮಾನುಷಂ । ಅಯಜ್ವಾನಂ । ಅದೇವಽಯುಂ ।
ಅವ । ಸ್ವಃ । ಸಖಾ । ದುಧುವೀತ । ಪರ್ವತಃ । ಸುಽಘ್ನಾಯ । ದಸ್ಯುಂ । ಪರ್ವತಃ ॥೧೧॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಅನ್ಯವ್ರತಂ ವ್ಯತಿರಿಕ್ತಕರ್ಮಾಣಂ ಅತ ಏವಾಮಾನುಷಂ ಮಾನುಷಾಣಾಮಿಂದ್ರ-ಯಾಜಿನಾಮಪ್ರಿಯಮಯಜ್ವಾನಮಯಷ್ಟಾರಮದೇವಯುಮದೇವಕರ್ಮಿಣಂ ಪಾಪಿನಂ ಸ್ವಃ ಸ್ವರ್ಗಾ-ದವ ದುಧುವೀತ । ಅವಚಾಲಯೇದಿತ್ಯರ್ಥಃ । ಕಃ । ಸಖಾ ಪರ್ವತಸ್ತವ ಸಖಿಭೂತಃ ಪರ್ವತ ಋಷಿಃ । ಯದ್ಯಪ್ಯನ್ಯಂ ದೇವಮಿಷ್ಟ್ವಾ ಸ್ವರ್ಗಂ ಪ್ರಾಪ್ನೋತಿ ಸಃ ತಥಾಪಿ ಪಾತಯತ್ಯೃಷಿಃ । ನ ಕೇವಲಂ ಧೂನ-ನಮಾತ್ರಂ ಅಪಿ ತು ಸುಘ್ನಾಯ ಸುಷ್ಠು ಹಂತ್ರೇ ಮೃತ್ಯವೇ ದಸ್ಯುಮುಕ್ತಲಕ್ಷಣಂ ಪರ್ವತಃ ಪ್ರೇರ-ಯತೀತಿ ಶೇಷಃ ॥ ಅತ ಇಂದ್ರಮೇವಾವಶ್ಯಂ ಯಜಧ್ವಮಿತಿ ಶೇಷಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಸಖಾ**— ನಿನ್ನ ಮಿತ್ರನಾದ । **ಪರ್ವತಃ**—ಪರ್ವತನೆಂಬ ಋಷಿಯು । **ಅನ್ಯವ್ರತಂ**—ವಿಧಿಗೆ ವಿರೋಧವಾಗಿ ಕರ್ಮವುಳ್ಳವನೂ । **ಅಮಾನುಷಃ**— ನಿನ್ನನ್ನು ಪೂಜಿಸುವ ಮಾನವರಿಗೆ ವಿರೋಧಿಯೂ । **ಅಯಜ್ವಾನಂ**—ಯಜ್ಞಮಾಡದಿರುವವನೂ । **ಅದೇವಯುಂ**—ದೇವತೆಗಳ ಪೂಜೆಮಾಡದಿರುವವನೂ ಆದ ಪಾಪಿಷ್ಠನನ್ನು । **ಸ್ವಃ**—ಸ್ವರ್ಗದಿಂದ । **ಅವ ದಂಧ್ವೀತ**— ಕೆಳಕ್ಕೆ ತಳ್ಳಿಬಿಡಲಿ । **ಪರ್ವತಃ**—ಅದೇ ಪರ್ವತನು **ದಸ್ಯುಂ**—ಹಿಂಸಕನಾದ ಶತ್ರುವನ್ನು । **ಸುಘ್ನಾಯ**— ಹತ್ಯಾಕಾರಿಯಾದ ಮೃತ್ಯುವಿಗೆ ಈಡುಮಾಡಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಮಿತ್ರನಾದ ಪರ್ವತನೆಂಬ ಋಷಿಯು ಶಾಸ್ತ್ರಕ್ಕೆ ವಿರೋಧವಾಗಿ ಕರ್ಮವುಳ್ಳವನೂ, ನಿನ್ನನ್ನು ಪೂಜಿಸುವ ಮಾನವರಿಗೆ ವಿರೋಧಿಯೂ, ಯಜ್ಞಮಾಡದಿರುವವನೂ ಆದ ಪಾಪಿಷ್ಠನನ್ನು ಸ್ವರ್ಗದಿಂದ ಕೆಳಕ್ಕೆ ತಳ್ಳಿಬಿಡಲಿ. ಅದೇ ಪರ್ವತನು ಹಿಂಸಕನಾದ ಶತ್ರುವನ್ನು ಹತ್ಯಾಕಾರಿಯಾದ ಮೃತ್ಯುವಿಗೆ ಈಡುಮಾಡಲಿ

English Translation

May your friend, Parvata, hurl down from heaven him who follows other rites, the enemy of men, him who offers not sacrifice and who worships not the gods; may Parvata hurl the Dasyu down to the stern smiter (death)

॥ ಸಂಹಿತಾಪಾಠಃ ॥

ತ್ವಂ ನ ಇಂದ್ರಾಸಾಂ ಹಸ್ತೇ ಶವಿಷ್ಠ ದಾವನೇ ।
ಧಾನಾನಾಂ ನ ಸಂ ಗೃಭಾಯಾಸ್ಮಯುರ್ದ್ವಿಃ ಸಂ ಗೃಭಾಯಾ-
ಸ್ಮಯುಃ ॥ ೧೨ ॥

॥ ಪದಪಾಠಃ ॥

ತ್ವಂ । ನಃ । ಇಂದ್ರ । ಆಸಾಂ । ಹಸ್ತೇ । ಶವಿಷ್ಠ । ದಾವನೇ ।
ಧಾನಾನಾಂ । ನ । ಸಂ । ಗೃಭಾಯ । ಅಸ್ಮಯುಃ । ದ್ವಿಃ । ಸಂ । ಗೃಭಾಯ । ಅಸ್ಮಯುಃ ॥

॥ ಸಾಯಣಭಾಷ್ಯಂ ॥

ಹೇ ಶವಿಷ್ಠ ಬಲವನ್ನಿಂದ್ರ ತ್ವಂ ನೋಽಸ್ಮಭ್ಯಂ ದಾವನೇ ಪ್ರದಾನಾಯಾಸಾಂ ಗವಾಂ ॥ ಕರ್ಮಣಿ ಷಷ್ಠೀ ॥ ಏತಾ ಗಾ ಹಸ್ತೇ ಗೃಭಾಯ । ಗೃಹಾಣ । ಗ್ರಹಣೇ ದೃಷ್ಟಾಂತಃ । ಧಾನಾನಾಂ ನ । ಧಾನಾ

**ಭ್ರಷ್ಟಯವಾಃ ॥ ಅತ್ರಾಪಿ ಕರ್ಮಣಿ ಷಷ್ಠೀ ॥ ಧಾನಾ ಯಥಾ ಸಂಗೃಹ್ಣಾತಿ ತದ್ವದ್ಗೃಹಾಣ । ಕೀದೃಶಸ್ತ್ವಂ। ಅಸ್ಮಯುರಸ್ಮಾನ್ಕಾಮಯಮಾನಃ । ಗೃಹೀತ್ವಾ ಚಾಸ್ಮಯುಃ ಸನ್ದ್ವಿಃ ಸಂ ಗೃಭಾಯ । ಪುನರ್ದ್ವಿರ್ವಾರಂ ಸಂಗೃಹಾಣ ॥**

॥ ಪ್ರತಿಪದಾರ್ಥ ॥

**ಶವಿಷ್ಠ**—ಅತ್ಯತಿಶಯವಾದ ಬಲವುಳ್ಳ । **ಇಂದ್ರ**—ಎಲೈ ಇಂದ್ರನೇ । **ತ್ವಂ**—ನೀನು । **ಅಸ್ಮಯುಃ**—ನಮಗೆ ಸಹಾಯಮಾಡಲಪೇಕ್ಷೆಯುಳ್ಳವನಾಗಿ । **ನಃ**—ನಮಗೆ । **ದಾವನೇ**—ಕೊಡುವುದಕ್ಕಾಗಿ । **ಧಾನಾನಾಂ ನ**—ಧಾನ್ಯಗಳನ್ನು ಕೈಯಲ್ಲಿ ಹಿಡಿದುಕೊಳ್ಳುವಂತೆ । **ಅಸಾಂ**—ಈ ಗೋವುಗಳನ್ನು । **ಹಸ್ತೇ**—ಕೈಯಿನಲ್ಲಿ । **ಸಂ ಗೃಭಾಯ**—ಹಿಡಿದುಕೊ । **ಅಸ್ಮಯುಃ**—ನಮಗೆ ಹಿತವನ್ನು ಮಾಡಲಪೇಕ್ಷೆಯುಳ್ಳದನಾಗಿ । **ದ್ವಿಃ**—ಎರಡು ಸಲ । **ಸಂ ಗೃಭಾಯ**—ಅವನ್ನು ಕೈಲೆತ್ತಿಹಿಡಿ.

॥ ಭಾವಾರ್ಥ ॥

ಅತ್ಯತಿಶಯವಾದ ಬಲವುಳ್ಳ ಎಲೈ ಇಂದ್ರನೇ, ನೀನು ನಮಗೆ ಕೊಡುವುದಕ್ಕಾಗಿ ಧಾನ್ಯಗಳನ್ನು ಕೈಯಲ್ಲಿ ಹಿಡಿದುಕೊಳ್ಳುವಂತೆ ಈ ಗೋವುಗಳನ್ನು ಕೈಯಲ್ಲಿ ಹಿಡಿದುಕೊ ನಮಗೆ ಹಿತವನ್ನುಂಟುಮಾಡಲಪೇಕ್ಷಯುಳ್ಳವನಾಗಿ ಎರಡು ಸಲ ಅವನನ್ನು ಕೈಲೆತ್ತಿಹಿಡಿ.

English Translation

Most powerful Indra, in your favour towards us, take these cows in your hand, as fried grain, to give to us ; yes, take them twice in your favour towards us.

॥ ಸಂಹಿತಾಪಾಠಃ ॥

ಸಖಾಯಃ ಕ್ರತುಮಿಚ್ಛತ ಕಥಾ ರಾಧಾಮ ಶರಸ್ಯ ।
ಉಪಸ್ತುತಿಂ ಭೋಜಃ ಸೂರಿರ್ಯೋ ಅಹ್ರಯಃ ॥ ೧೩ ॥

॥ ಪದಪಾಠಃ ॥

ಸಖಾಯಃ । ಕ್ರತುಂ । ಇಚ್ಛತ । ಕಥಾ । ರಾಧಾಮ । ಶರಸ್ಯ ।
ಉಪsಸ್ತುತಿಂ । ಭೋಜಃ । ಸೂರಿಃ । ಯಃ । ಅಹ್ರಯಃ ॥ ೧೩ ॥

॥ ಸಾಯಣಭಾಷ್ಯಂ ॥

**ಹೇ ಸಖಾಯ ಋತ್ವಿಜೋಽಧ್ವರ್ಯ್ವಾದಯಃ ಕ್ರತುಂ ಕರ್ಮೇಂದ್ರಸಂಬಂಧಿನಮಿಚ್ಛತ ಕರ್ತುಂ। ಹೇ ಸಖಾಯಃ ಶರಸ್ಯ ॥ ಶ್ವಾ ಹಿಂಸಾಯಾಂ ॥ ಹಿಂಸಕಸ್ಯೇಂದ್ರಸ್ಯ ಕಥಾ ಕಥಂ ರಾಧಾಮ । ಸಾಧಯಾಮ।**

**ಕಿಂ । ಉಪಸ್ತುತಿಂ ಸ್ತೋತ್ರಂ । ಯ ಇಂದ್ರೋ ಭೋಜಃ ಶತ್ರೂಣಾಂ ಭೋಜಯಿತಾ ಸೂರಿಃ ಪ್ರೇರಕೋಽಹ್ರಯೋಽನವನತಃ ಶತ್ರೂಣಾಮಿತಿ ॥**

॥ ಪ್ರತಿಪದಾರ್ಥ ॥

**ಸಖಾಯಃ**—ಮಿತ್ರಭೂತರಾದ ಎಲೈ ಋತ್ವಿಕ್ಕುಗಳೇ । **ಕ್ರತುಂ**—ಇಂದ್ರನನ್ನುದ್ದೇಶಿಸಿದ ಯಜ್ಞಕರ್ಮವನ್ನು । **ಇಚ್ಛತ**—ನೆರವೇರಿಸಲಿಚ್ಛಿಸಿರಿ । **ಯಃ**—ಯಾವ ಇಂದ್ರನು । **ಭೋಜಃ**—ಶತ್ರುಗಳಿಗೆ ದುಃಖಾನುಭವವನ್ನುಂಟುಮಾಡುವವನೂ । **ಸೂರಿಃ**—ಪ್ರೇರಕನೂ । **ಅಹ್ರಯಃ**—ಶತ್ರುಗಳಿಗೆ ಬಗ್ಗದಿರುವವನೂ ಆಗಿರುವನೋ ಅಂತಹ । **ಶರಸ್ಯ**—ಹಿಂಸಕನಾದ ಇಂದ್ರನ । **ಉಪಸ್ತುತಿಂ**—ಸ್ತೋತ್ರವನ್ನು । **ಕಥಾ**—ಯಾವ ಪ್ರಕಾರವಾಗಿ । **ರಾಧಾಮ**—ನೆರವೇರಿಸೋಣ ?

॥ ಭಾವಾರ್ಥ ॥

ಮಿತ್ರಭೂತರಾದ ಎಲೈ ಋತ್ವಿಕ್ಕುಗಳೇ, ಇಂದ್ರನನ್ನು ಉದ್ದೇಶಿಸಿದ ಯಜ್ಞಕರ್ಮವನ್ನು ನೆರವೇರಿಸಲಿಚ್ಛಿಸಿರಿ. ಯಾವ ಇಂದ್ರನು ಶತ್ರುಗಳಿಗೆ ದುಃಖಾನುಭವವನ್ನುಂಟುಮಾಡುವವನೂ, ಪ್ರೇರಕನೂ, ಶತ್ರುಗಳಿಗೆ ಬಗ್ಗದಿರುವವನೂ ಆಗಿರುವನೋ ಅಂತಹ ಶತ್ರುಹಿಂಸಕನಾದ ಇಂದ್ರನ ಸ್ತೋತ್ರವನ್ನು ಯಾವ ಪ್ರಕಾರವಾಗಿ ನೆರವೇರಿಸೋಣ ?

English Translation

Associated priests, give good heed to the sacrifice, for how can we (worthily) perform the praise of (Indra) the destroyer, who is the recompenser of enemies, the sender of reward, the unvanquished ?

॥ ಸಂಹಿತಾಪಾಠಃ ॥

ಭೂರಿಭಿಃ ಸಮಹ ಋಷಿಭಿರ್ಬರ್ಹಿಷ್ಮದ್ಭಿಃ ಸ್ತವಿಷ್ಯಸೇ ।
ಯದಿತ್ಥಮೇಕಮೇಕಮಿಚ್ಛರ ವತ್ಸಾನ್ಪರಾದದಃ ॥ ೧೪ ॥

॥ ಪದಪಾಠಃ ॥

ಭೂರಿಽಭಿಃ । ಸಮಹ । ಋಷಿಽಭಿಃ । ಬರ್ಹಿಷ್ಮತ್ಽಭಿಃ । ಸ್ತವಿಷ್ಯಸೇ ।
ಯತ್ । ಇತ್ಥಂ । ಏಕಂಽಏಕಂ । ಇತ್ । ಶರ । ವತ್ಸಾನ್ । ಪರಾಽದದಃ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಸಮಹ ಸಮಾನಪೂಜ । ಸರ್ವೈಃ ಪೂಜ್ಯೇತ್ಯರ್ಥಃ । ಭೂರಿಭಿರ್ಬಹುಭಿರ್ಋಷಿಭಿರತೀಂದ್ರಿಯಜ್ಞೈರ್ಋತ್ವಿಗ್ಭಿರ್ಬರ್ಹಿಷ್ಮದ್ಭಿರ್ಯಾಗವದ್ಭಿಃ ಸ್ತವಿಷ್ಯಸೇ । ಸ್ತೂಯಸೇ । ಯದ್ಯ ಇಂದ್ರ

ಇತ್ಥಮೇಕಮೇಕಮಿದೇಕಮೇಕಮೇವ ಬಹೂನ್ವತ್ಸಾನ್ ಸ್ತೋತೃಭ್ಯಃ ಪರಾದದಃ ಪ್ರಯಚ್ಛಸಿ। ಹೇ ಶರ ಹಿಂಸಕ ಶತ್ರೋಃ । ಅತ್ರ ವತ್ಸಶಬ್ದೋ ವತ್ಸಮಾತ್ರಾಣಾಂ ಗವಾಮುಪಲಕ್ಷಕಃ । ಗಾಃ ಪ್ರಯಚ್ಛಸೀತಿ ॥

॥ ಪ್ರತಿಪದಾರ್ಥ ॥

**ಶರ**—ಶತ್ರುಹಿಂಸಕನಾದ ಎಲೈ ಇಂದ್ರನೇ । **ಯತ್**—ಯಾವ ನಿಮಿತ್ತವಾಗಿ । **ಇತ್ಥಂ**—ಈ ರೀತಿ । **ಏಕಂ ಏಕಂ ಇತ್**—ಇದೊಂದು, ಇನ್ನೊಂದು ಎಂದು ಅನೇಕ ಸಂಖ್ಯೆಯುಳ್ಳ । **ವತ್ಸಾನ್**—ಗೋವುಗಳನ್ನು । **ಪರಾದದಃ**—ನೀನು ನಿನ್ನ ಸ್ತುತಿಕರ್ತರಿಗೆ ಕೊಡುವಿಯೋ ಆದುದರಿಂದಲೇ । **ಸಮಹ**—ಎಲ್ಲರಿಂದಲೂ ಒಂದೇ ಸಮನಾಗಿ ಪೂಜಿತನಾಗುವ ಎಲೈ ಇಂದ್ರನೇ । **ಬರ್ಹಿಷ್ಮದ್ಭಿಃ**—ಯಾಗಯುಕ್ತರೂ । **ಭೂರಿಭಿಃ**—ಅನೇಕಸಂಖ್ಯೆಯುಳ್ಳವರೂ ಆದ । **ಋಷಿಭಿಃ**—ಋಷಿಗಳಿಂದ । **ಸ್ತವಿಷ್ಯಸೇ**—ಸ್ತುತಿಸಲ್ಪಡುತ್ತೀಯೆ.

॥ ಭಾವಾರ್ಥ ॥

ಶತ್ರುಹಿಂಸಕನಾದ ಎಲೈ ಇಂದ್ರನೇ, ಯಾವ ನಿಮಿತ್ತವಾಗಿ ಈ ರೀತಿ ಇದೊಂದು, ಇನ್ನೊಂದು ಎಂದು ಅನೇಕ ಸಂಖ್ಯೆಯುಳ್ಳ ಗೋವುಗಳನ್ನು ನೀನು ನಿನ್ನ ಸ್ತುತಿಕರ್ತರಿಗೆ ಕೊಡುವೆಯೋ ಆದುದರಿಂದಲೇ, ಎಲ್ಲರಿಂದಲೂ ಒಂದೇಸಮನಾಗಿ ಪೂಜಿತನಾಗುವ ಎಲೈ ಇಂದ್ರನೇ, ಯಾಗಯುಕ್ತರೂ, ಅನೇಕಸಂಖ್ಯೆಯುಳ್ಳವರೂ ಆದ ಋಷಿಗಳಿಂದ ನೀನು ಸ್ತುತಿಸಲ್ಪಡುತ್ತೀಯೆ.

English Translation

Indra, the common object of our worship, you are praised by many sacrificing Rishis; for it is you, destroyer of foes, who thus give calves in succession to your worshippers.

॥ ಸಂಹಿತಾಪಾಠಃ ॥

ಕರ್ಣಗೃಹ್ಯಾ ಮಘವಾ ಶೌರದೇವ್ಯೋ ವತ್ಸಂ ನಸ್ತ್ರಿಭ್ಯ
ಆನಯತ್ ।
ಅಜಾಂ ಸೂರಿರ್ನ ಧಾತವೇ ॥ ೧೫ ॥

॥ ಪದಪಾಠಃ ॥

ಕರ್ಣಽಗೃಹ್ಯ । ಮಘಽವಾ । ಶೌರಽದೇವ್ಯಃ । ವತ್ಸಂ । ನಃ । ತ್ರಿಽಭ್ಯಃ । ಆ । ಅನಯತ್ ।
ಅಜಾಂ । ಸೂರಿಃ । ನ । ಧಾತವೇ ॥ ೧೫ ॥

॥ ಸಾಯಣಭಾಷ್ಯಂ ॥

**ಅಯಂ ಮಘವೇಂದ್ರಸ್ತ್ರಿಭ್ಯೋ ಹಿಂಸಕೇಭ್ಯಃ ಸಕಾಶಾಚ್ಛೌರದೇವ್ಯಃ । ದೀವ್ಯಂತಿ ಕ್ರೀಡಂತ ಇತಿ ದೇವಾ ಯೋದ್ಧಾರಃ । ಶೂರಾಶ್ಚ ತೇ ದೇವಾಶ್ಚ ಶೂರದೇವಾಃ । ತೇಷಾಂ ಹಿತಂ ಶೌರದೇವಂ ಯುದ್ಧಂ । ತತ್ಸಂಬಂಧಿನ್ಯೋ ಗಾಃ । ಯುದ್ಧೇ ಶತ್ರೂನ್ಹತ್ವಾ ತತ್ಸಂಬಂಧಿನ್ಯ ಇತ್ಯರ್ಥಃ । ತಾ ವತ್ಸಂ ನ । ನೇತಿ ಚಾರ್ಥೇ । ವತ್ಸಸಹಿತಾ ಅಸ್ಮಭ್ಯಂ ಕರ್ಣಗೃಹ್ಯ ಕರ್ಣೇ ಗೃಹೀತ್ವಾನಯುತ್ । ಆನಯತು । ಸೂರಿರ್ನ ಪ್ರೇರಕಃ ಸ್ವಾಮೀವ ಧಾತವೇ ಪಾನಾಯಾಜಾಂ ಯಥಾ ಸ ಆನಯತಿ ಗೃಹೀತ್ವಾ ತದ್ವದಿತಿ ॥**

॥ ಪ್ರತಿಪದಾರ್ಥ ॥

**ಧಾತವೇ**—ಕ್ಷೀರಪಾನಕ್ಕಾಗಿ । **ಅಜಾಂ**--ಆಡನ್ನು । **ಸೂರಿಃ ನ**—ಅದರ ಯಜಮಾನನು ಕಿವಿಯನ್ನು ಹಿಡಿದು ಕರೆತರುವಂತೆ । **ಮಘವಾ**—ಧನವಂತನಾದ ಇಂದ್ರನು । **ಶೌರದೇವ್ಯಃ**—ಶೂರರಿಂದ ತುಂಬಿದ ಯುದ್ಧರಂಗದಲ್ಲಿ ಸಿಕ್ಕಿರುವ ಗೋವುಗಳನ್ನು । **ವತ್ಸಂ ನ**—ಅವುಗಳ ಕರುಗಳೊಂದಿಗೆ । **ಕರ್ಣಗೃಹ್ಯ**—ಕಿವಿಯನ್ನು ಹಿಡಿದೆಳೆದುಕೊಂಡು । **ತ್ರಿಭ್ಯಃ**—ಮೂರು ವಿಧವಾದ ಶತ್ರುಗಳಿಂದಲೂ ಅಪಹರಿಸಿ । **ಆನಯುತ್**—ನಮ್ಮಲ್ಲಿಗೆ ಕರೆತರಲಿ

॥ ಭಾವಾರ್ಥ ॥

ಕ್ಷೀರಪಾನಕ್ಕಾಗಿ ಆಡನ್ನು ಅದರ ಯಜಮಾನನು ಕಿವಿಯನ್ನು ಹಿಡಿದು ಕರೆತರುವಂತೆ, ಧನವಂತನಾದ ಇಂದ್ರನು ಶೂರರಿಂದ ತುಂಬಿದ ಯುದ್ಧರಂಗದಲ್ಲಿ ಸಿಕ್ಕಿರುವ ಗೋವುಗಳನ್ನು ಅವುಗಳ ಕರುಗಳೊಂದಿಗೆ ಕಿವಿಯನ್ನು ಹಿಡಿದೆಳೆದುಕೊಂಡು ಮೂರು ವಿಧವಾದ ಶತ್ರುಗಳಿಂದಲೂ ಅಪಹರಿಸಿ ನಮ್ಮಲ್ಲಿಗೆ ಕರೆತರಲಿ.

## English Translation

May Maghavan, taking them by the ears, lead the cows with their calves from our three (destructive enemies), as the owner leads a goat to drink.

## ಎಪ್ಪತ್ತೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ತ್ವಂ ನೋ ಅಗ್ನ ಇತಿ ಪಂಚದಶರ್ಚಂ ದ್ವಿತೀಯಂ ಸೂಕ್ತಂ । ಸುದೀತಿಪುರುಮೀಳ್ಹಾವೃಷೀ ತಯೋರನ್ಯತರೋ ವಾ । ಆದೌ ನವ ಗಾಯತ್ರ್ಯೋ ದಶಮೀದ್ವಾದಶೀಚತುರ್ದಶ್ಯೋ ಬೃಹತ್ಯ ಏಕಾದಶೀತ್ರಯೋದಶೀಪಂಚದಶ್ಯಃ ಸತೋಬೃಹತ್ಯಃ । ಅಗ್ನಿರ್ದೇವತಾ । ತಥಾ ಚಾನುಕ್ರಾಂತಂ । ತ್ವಂ ನಃ ಸುದೀತಿಪುರುಮೀಳ್ಹೌ ತಯೋರ್ವಾನ್ಯತರ ಆಗ್ನೇಯಂ ತು ತ್ರಿಪ್ರಗಾಥಾಂತಮಿತಿ ॥ ಪ್ರಾತರನುವಾಕ-ಆಗ್ನೇಯೇ ಕ್ರತೌ ಗಾಯತ್ರೇ ಛಂದಸ್ಯಾಶ್ವಿನಶಸ್ತ್ರ ಆದಿತೋ ನವರ್ಚಃ । ತಥಾ ಚ ಸೂತ್ರಿತಂ । ತ್ವಂ ನೋ ಅಗ್ನೇ ಮಹೋಭಿರಿತಿ ನವ । ಆ ೪-೧೩ । ಇತಿ ॥**

ಅನುವಾದವು—**ತ್ವಂ ನೋ ಅಗ್ನೇ** ಎಂಬ ಈ ಸೂಕ್ತವು ಎಂಟನೆಯ ಅನುವಾಕದಲ್ಲಿ ಎರಡನೆಯಸೂಕ್ತವು. ಇದರಲ್ಲಿ ಹದಿನೈದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸುದೀತಿ ಮತ್ತು ಪುರುಮೀಳ್ಹ ಎಂಬಿಬ್ಬರು ಋಷಿಗಳು. ಅಥವಾ ಬೇರೆ ಮತ್ಯಾರಾದರೂ ಋಷಿಯಿರಬಹುದು. ಅಗ್ನಿಯು ದೇವತೆಯು; ಈ ಸೂಕ್ತದಲ್ಲಿ ಮೊದಲಿನ ಒಂಭತ್ತು ಋಕ್ಕುಗಳು ಗಾಯತ್ರೀಛಂದಸ್ಕವು, ಹತ್ತು, ಹನ್ನೆರಡು, ಹನಾದಿಲ್ಕನೆಯ ಋಕ್ಕುಗಳು ಬೃಹತೀಛಂದಸ್ಕವು ಹನ್ನೊಂದು, ಹದಿಮೂರು, ಹದಿನೈದನೆಯ ಋಕ್ಕುಗಳು ಸತೋಬೃಹತೀಛಂದಸ್ಕವು. ಅನುಕ್ರಮಣಿಕೆಯಲ್ಲಿ—**ತ್ವಂ ನಃ ಸುದೀತಿಪುರುಮೀಳ್ಹೌ ತಯೋರ್ವಾನ್ಯತರ ಆಗ್ನೇಯಂ ತು ತ್ರಿಪ್ರಗಾಥಾಂತಂ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ಮೊದಲಿನ ಒಂಭತ್ತು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ತ್ವಂ ನೋ ಅಗ್ನೇ ಮಹೋಭಿರಿತಿ ನವ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು.

## ಸೂಕ್ತ—೭೧

ಮಂಡಲ—೮ ॥ ಅನುವಾಕ—೮ । ಸೂಕ್ತ—೭೧ ।
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೧೧, ೧೨, ೧೩ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ಸುದೀತಿಪುರುಮೀಳ್ಹೌ ತಯೋರ್ವಾನ್ಯತರಃ ॥
ದೇವತಾ—ಅಗ್ನಿಃ ॥
ಛಂದಃ—೧-೯. ಗಾಯತ್ರೀ । ೧೦-೧೫. ಪ್ರಾಗಾಥಂ ॥

॥ ಸಂಹಿತಾಪಾಠಃ ॥

ತ್ವಂ ನೋ ಅಗ್ನೇ ಮಹೋಭಿಃ ಪಾಹಿ ವಿಶ್ವಸ್ಯಾ ಅರಾತೇಃ ।
ಉತ ದ್ವಿಷೋ ಮರ್ತ್ಯಸ್ಯ ॥ ೧ ॥

॥ ಪದಪಾಠಃ ॥

ತ್ವಂ । ನಃ । ಅಗ್ನೇ । ಮಹಃऽಭಿಃ । ಪಾಹಿ । ವಿಶ್ವಸ್ಯಾಃ । ಅರಾತೇಃ ।
ಉತ । ದ್ವಿಷಃ । ಮರ್ತ್ಯಸ್ಯ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ನೋऽಸ್ಮಾನ್ಮಹೋಭಿಃ ಪೂಜಾಭಿರ್ಮಹದ್ಭಿರ್ಧನೈರ್ವಾ ಪಾಹಿ । ರಕ್ಷ । ವಿಶ್ವಸ್ಯಾ ಬಹುವಿಧಾದರಾತೇರದಾತುಃ ಸಕಾಶಾತ್ ಅದಾನಾದ್ವಾ ಪಾಹಿ । ತ್ವಮೇವ ಮಹದ್ಧನಂ ದತ್ವಾ-

ಧಾತುರದಾನಾದ್ವಾ ಸಕಾಶಾದ್ರಕ್ಷೇತ್ಯರ್ಥಃ । ಯದ್ವಾ । ಮಹೋಭಿರ್ಯುಕ್ತಸ್ತ್ವಮಿತಿ ಯೋಜ್ಯಂ । ಉತಾಪಿ ಚ ದ್ವಿಷೋ ದ್ವೇಷ್ಟುರ್ಮರ್ತ್ಯಸ್ಯ ಮರ್ತ್ಯಾತ್ಸಕಾಶಾತ್ಪಾಹಿ । ಅಸ್ಮಭ್ಯಂ ಬಲಂ ದತ್ವೇತಿ ಭಾವಃ । ಅಥವಾ ಮರ್ತ್ಯಸ್ಯ ದ್ವಿಷೋ ದ್ವೇಷಾದ್ರಕ್ಷೇತಿ ಸಂಬಂಧಃ । ಅರಾತೇರಿತ್ಯಸ್ಯಾದಾನಾದಿತಿ ಪಕ್ಷೇ ತತ್ರಾಪಿ ಮರ್ತ್ಯಸ್ಯಾದಾನಾದಿತಿ ಸಂಬಂಧನೀಯಂ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ತ್ವಂ—ನೀನು । ನಃ—ನಮ್ಮನ್ನು । ಮಹೋಭಿಃ—ಪೂಜ್ಯವಾದ ಧನಪ್ರದಾನದಿಂದ । ಪಾಹಿ—ರಕ್ಷಿಸು । ವಿಶ್ವಸ್ಯಾಃ—ಸಮಸ್ತವಾದ । ಅರಾತೇಃ—ಯಜ್ಞಕರ್ತನಲ್ಲದ ಕೃಪಣನಿಂದಲೂ ರಕ್ಷಿಸು । ಉತ—ಮತ್ತು । ದ್ವಿಷಃ—ಶತ್ರುವಾದ । ಮರ್ತ್ಯಸ್ಯ—ಮಾನವನಿಂದಲೂ ರಕ್ಷಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ನಮ್ಮನ್ನು ಪೂಜ್ಯವಾದ ಧನಪ್ರಧಾನದಿಂದ ರಕ್ಷಿಸು. ಸಮಸ್ತವಾದ ಯಜ್ಞಕರ್ತನಲ್ಲದ ಅಥವಾ ದಾನಮಾಡದಿರುವ ಕೃಪಣನಿಂದಲೂ ರಕ್ಷಿಸು. ಮತ್ತು ಶತ್ರುವಾದ ಮಾನವನಿಂದಲೂ ರಕ್ಷಿಸು.

English Translation

Agni, protect us by great wealth from every niggard and mortal foe.

॥ ಸಂಹಿತಾಪಾಠಃ ॥

ನಹಿ ಮನ್ಯುಃ ಪೌರುಷೇಯ ಈಶೇ ಹಿ ವಃ ಪ್ರಿಯಜಾತ ।
ತ್ವಮಿದಸಿ ಕ್ಷಪಾವಾನ್ ॥ ೨

॥ ಪದಪಾಠಃ ॥

ನಹಿ । ಮನ್ಯುಃ । ಪೌರುಷೇಯಃ । ಈಶೇ । ಹಿ । ವಃ । ಪ್ರಿಯಽಜಾತ ।
ತ್ವಂ । ಇತ್ । ಅಸಿ । ಕ್ಷಪಾಽವಾನ್ ॥ ೨ ॥

॥ ಸಾಯಣಭಾಷ್ಯಂ ॥

ಹೇ ಪ್ರಿಯಜಾತಾಗ್ನೇ ವಸ್ತವ ಪೌರುಷೇಯಃ ಪುರುಷಸಂಬಂಧೀ ಮನ್ಯುಃ ಕ್ರೋಧೋ ನೇಶೇ ನೇಷ್ಟೇ ಬಾಧಿತುಂ । ಅಸ್ಮದಾದಿಭೀ ರಕ್ಷಿತತ್ವಾದಿತಿ ಭಾವಃ । ದಿವಾಚರಾಃ ಖಲು ಪುರುಷಾಃ ಅತೋ ದಿವಾ ತವ ಹಾನಿರ್ನಾಸ್ತೀತಿ ಭಾವಃ । ಅಥ ರಾತ್ರಿಂಚರಾ ರಕ್ಷಃಪ್ರಭೃತಯಃ । ತೇಭ್ಯೋಽಪಿ ಪೀಡಾ ನಾಸ್ತೀತ್ಯುಚ್ಯತೇ।ತ್ವಮಿತ್ತ್ವಮೇವ ಖಲು ಕ್ಷಪಾವಾನ್ರಾತ್ರಿಮಾನಸಿ । ರಾತ್ರೌ ಹ್ಯಗ್ನಿರ್ವಿಶೇಷೇಣ ತೇಜಸ್ವೀ ಭವತಿ ॥

॥ ಪ್ರತಿಪದಾರ್ಥ ॥

**ಪ್ರಿಯಜಾತ**—ಪ್ರೀತ್ಯುತ್ಪಾದಕವಾದ ಜನ್ಮವುಳ್ಳ ಎಲೈ ಅಗ್ನಿಯೇ । **ಪೌರುಷೇಯಃ**—ಪುರುಷನಿಂದ ಪ್ರಕಟವಾಗತಕ್ಕ । **ಮನ್ಯುಃ**—ಕ್ರೋಧವು । **ವಃ**—ನಿನ್ನನ್ನು । **ನಹಿ ಈಶೇ ಹಿ**—ಹಿಂಸಿಸಲು ಸಮರ್ಥವಾಗಲಾರದು । **ತ್ವಮಿತ್**—ನೀನೇ । **ಕ್ಷಪಾವಾನ್**—ರಾತ್ರಿಗೆಲ್ಲಾ ಅಧಿಪತಿಯಾಗಿ । **ಅಸಿ**—ಆಗಿದ್ದೀಯೆ.

॥ ಭಾವಾರ್ಥ ॥

ಪ್ರೀತ್ಯುತ್ಪಾದಕವಾದ ಜನ್ಮವುಳ್ಳ ಎಲೈ ಅಗ್ನಿಯೇ, ಯಾವ ಮಾನವನಿಂದ ಪ್ರಕಟಿತವಾದರೂ ಸಹ ಅಂತಹ ಕ್ರೋಧವು ನಿನ್ನನ್ನು ಹಿಂಸಿಸಲು ಸಮರ್ಥವಾಗಲಾರದು ರಾತ್ರಿಗೆಲ್ಲಾ ನೀನೇ ಅಧಿಪತಿಯಾಗಿ ಆಗಿದ್ದೀಯೆ

English Translation

O you who were born loved, no human anger can harm you,—you only are the lord of night.

॥ ಸಂಹಿತಾಪಾಠಃ ॥

ಸ ನೋ ವಿಶ್ವೇಭಿರ್ದೇವೇಭಿರೂರ್ಜೋ ನಪಾದ್ಭದ್ರಶೋಚೇ ।
ರಯಿಂ ದೇಹಿ ವಿಶ್ವವಾರಂ ॥ ೩ ॥

॥ ಪದಪಾಠಃ ॥

ಸಃ । ನಃ । ವಿಶ್ವೇಭಿಃ । ದೇವೇಭಿಃ । ಊರ್ಜಃ । ನಪಾತ್ । ಭದ್ರ್ಽಶೋಚೇ ।
ರಯಿಂ । ದೇಹಿ । ವಿಶ್ವ್ಽವಾರಂ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಸಃ ಸ್ತುತ್ಯಸ್ತ್ವಂ ನೋಽಸ್ಮಭ್ಯಂ ವಸ್ವೋ ವಸು ಧನಮುಪ ಮಾಸಿ । ಪ್ರಯಚ್ಛಸಿ । ಹೇ ಊರ್ಜೋ ನಪಾದ್ಬಲಸ್ಯ ನಪ್ತರ್ನ ಪಾತಯಿತರ್ವಾ ಹೇ ಭದ್ರಶೋಚೇ ಸ್ತುತ್ಯ-ಪ್ರಕಾಶನ । ದೇವಾದರಾರ್ಥಂ ಪುನರಾಹ । ರಯಿಂ ಧನಂ ವಿಶ್ವವಾರಂ ಸರ್ವೈರ್ವರಣೀಯಂ ಧನಂ ದೇಹಿ । ಅಥವಾ ಯದ್ವಸೂಪ ಮಾಸ್ಯಸ್ಮಭ್ಯಂ ದಾತುಂ ತದ್ಧನಂ ಗೃಹಾದಿಲಕ್ಷಣಂ ತಚ್ಚ ರಯಿಂ ದಾನಾರ್ಹಂ ಗೋಹಿರಣ್ಯಾದಿಕಂ ಚ ದೇಹೀತ್ಯಪುನರುಕ್ತಿಃ ॥**

॥ ಪ್ರತಿಪದಾರ್ಥ ॥

**ವಿಶ್ವೇಭಿಃ**—ಸಮಸ್ತವಾದ । **ದೇವೇಭಿಃ**—ದೇವತೆಗಳೊಡನೆ ಕೂಡಿರುವವನೂ । **ಊರ್ಜೋ**

**ನಪಾತ್**—ಶಕ್ತಿಪುತ್ರನೂ । **ಭದ್ರಶೋಚೇ**—ಮಂಗಳಕರವಾದ ಪ್ರಕಾಶವುಳ್ಳವನೂ ಆದ ಎಲೈ ಅಗ್ನಿಯೇ। **ಸಃ**—ಪ್ರಸಿದ್ಧನಾದ ನೀನು । **ನಃ**—ನಮಗೆ । **ವಿಶ್ವವಾರಂ**—ಸಕಲರಿಂದಲೂ ಅಪೇಕ್ಷಿತವಾದ । **ರಯಿಂ**—ಧನವನ್ನು । **ದೇಹಿ**—ಕೊಡು.

॥ ಭಾವಾರ್ಥ ॥

ಸಕಲವಾದ ದೇವತೆಗಳೊಡನೆ ಕೂಡಿರುವವನೂ, ಶಕ್ತಿಪುತ್ರನೂ, ಮಂಗಳಕರವಾದ ಪ್ರಕಾಶವುಳ್ಳವನೂ ಆದ ಎಲೈ ಅಗ್ನಿಯೇ, ಪ್ರಸಿದ್ಧನಾದ ನೀನು ನಮಗೆ ಸಕಲರಿಂದಲೂ ಅಪೇಕ್ಷಿತವಾದ ಧನವನ್ನು ಕೊಡು.

English Translation

Son of strength, auspicius in brilliance, associated with all the gods, give us all desirable wealth.

॥ ಸಂಹಿತಾಪಾಠಃ ॥

ನ ತಮಗ್ನೇ ಅರಾತಯೋ ಮರ್ತಂ ಯುವಂತ ರಾಯಃ ।
ಯಂ ತ್ರಾಯಸೇ ದಾಶ್ವಾಂಸಂ ॥ ೪ ॥

॥ ಪದಪಾಠಃ ॥

ನ । ತಂ । ಅಗ್ನೇ । ಅರಾತಯಃ । ಮರ್ತಂ । ಯುವಂತ । ರಾಯಃ ।
ಯಂ । ತ್ರಾಯಸೇ । ದಾಶ್ವಾಂಸಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತಂ ಸ್ತೋತಾರಮರಾತಯೋಽದಾನಶೀಲಾ ದ್ವೇಷಿಣೋ ರಾಯೋ ರಯಿಮಂತೋ ನ ಯುವಂತ । ನ ಪೃಥಕ್ಕುರ್ವಂತಿ । ರಾಯೋ ಧನಾದ್ವಾ ನ ಯುವಂತ । ಯಂ ದಾಶ್ವಾಂಸಂ ಹವಿರ್ದಾತಾರಂ ತ್ರಾಯಸೇ ಪಾಲಯಸೇ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಯಂ**—ಯಾವ । **ದಾಶ್ವಾಂಸಂ**—ಹವಿಸ್ಸನ್ನರ್ಪಿಸುವ ಯಜಮಾನನನ್ನು । **ತ್ರಾಯಸೇ**—ನೀನು ರಕ್ಷಿಸುವೆಯೋ । **ತಂ ಮರ್ತಂ**—ಅಂತಹ ಸ್ತೋತೃವನ್ನು । **ಅರಾತಯಃ**—ಶತ್ರುಗಳು । **ರಾಯಃ**—ಅವನ ಸಂಪತ್ತಿನಿಂದ । **ನ ಯುವಂತ**—ಬೇರೆಮಾಡಲಾರರು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಹವಿರ್ದಾತನಾದ ಯಜಮಾನನನ್ನು ನೀನು ರಕ್ಷಿಸುವೆಯೋ ಅಂತಹ ಸ್ತೋತೃವನ್ನು ಅವನ ಶತ್ರುಗಳು ಅವನ ಸಂಪತ್ತನ್ನಪಹರಿಸಿ ಅವನನ್ನು ರಿಕ್ತನನ್ನಾಗಿ ಮಾಡಲಾರರು

## English Translation

That sacrificing mortal whom you, Agni, protect, the niggardly connot seperate from wealth.

॥ ಸಂಹಿತಾಪಾಠಃ ॥

ಯಂ ತ್ವಂ ವಿಪ್ರ ಮೇಧಸಾತಾವಗ್ನೇ ಹಿನೋಷಿ ಧನಾಯ ।
ಸ ತವೋತೀ ಗೋಷು ಗಂತಾ ॥ ೫ ॥

॥ ಪದಪಾಠಃ ॥

ಯಂ । ತ್ವಂ । ವಿಪ್ರ । ಮೇಧಽಸಾತೌ । ಅಗ್ನೇ । ಹಿನೋಷಿ । ಧನಾಯ ।
ಸಃ । ತವ । ಊತೀ । ಗೋಷು । ಗಂತಾ ॥ ೫ ॥

॥ ಸಾಯಣ ಭಾಷ್ಯಂ ॥

ಹೇ ಅಗ್ನೇ ವಿಪ್ರ ತ್ವಂ ಯಂ ಮರ್ತ್ಯಂ ಮೇಧಸಾತೌ ಯಜ್ಞಸ್ಯ ಸಂಭಜನೇ ಹಿನೋಷಿ ಪ್ರೇರಯಸಿ ಧನಾಯ ಗವಾದಿಧನಲಾಭಾಯ ಸ ಯಜಮಾನಸ್ತವೋತ್ಯೋತ್ಯಾ ರಕ್ಷಣೇನ ಗೋಷು ಗಂತಾ ಭವತಿ । ಗೋಮಾನ್ ಭವತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ವಿಪ್ರ**—ಮೇಧಾವಿಯಾದ । **ಅಗ್ನೇ**—ಎಲೈ ಅಗ್ನಿಯೇ । **ತ್ವಂ**—ನೀನು । **ಯಂ**—ಯಾವ ಯಜಮಾನನನ್ನು । **ಧನಾಯ**—ಧನಲಾಭಕ್ಕಾಗಿ । **ಮೇಧಸಾತೌ**—ಯಜ್ಞನಿರ್ವಹಣಕಾರ್ಯದಲ್ಲಿ । **ಹಿನೋಷಿ**—ಪ್ರೇರಿಸುವೆಯೋ । **ಸಃ**—ಅದೇ ಯಜಮಾನನು । **ತವ**—ನಿನ್ನ । **ಊತೀ**—ರಕ್ಷಣೆಯಿಂದ । **ಗೋಷು**—ಗೋವುಗಳಿಗೆಲ್ಲಾ ಪ್ರಭುವಾಗಿ । **ಗಂತಾ**—ಅವುಗಳ ನಡುವೆ ಸಂಚರಿಸುತ್ತಾನೆ

॥ ಭಾವಾರ್ಥ ॥

ಮೇಧಾವಿಯಾದ ಎಲೈ ಅಗ್ನಿಯೇ, ನೀನು ಯಾವ ಯಜಮಾನನನ್ನು ಧನಲಾಭಕ್ಕಾಗಿ ಯಜ್ಞನಿರ್ವಹಣ ಕಾರ್ಯದಲ್ಲಿ ಪ್ರೇರಿಸುವೆಯೋ ಅದೇ ಯಜಮಾನನು ನಿನ್ನ ರಕ್ಷಣೆಯಿಂದ ಗೋವುಗಳಿಗೆಲ್ಲಾ ಪ್ರಭುವಾಗಿ ಅವುಗಳ ನಡುವೆ ಸಂಚರಿಸುತ್ತಾನೆ. (ಅತ್ಯಧಿಕವಾಗಿ ಗೋಸಂಪತ್ತನ್ನು ಪಡೆಯುತ್ತಾನೆ).

## English Translation

Wise (Agni), he whom in his performance of the sacrifice you incite to attain wealth, by your protection walks (lord) among crowds of cattle·

॥ ಸಂಹಿತಾಪಾಠಃ ॥

ತ್ವಂ ರಯಿಂ ಪುರುವೀರಮಗ್ನೇ ದಾಶುಷೇ ಮರ್ತಾಯ ।
ಪ್ರ ಣೋ ನಯ ವಸ್ಯೋ ಅಚ್ಛ ॥ ೬ ॥

॥ ಪದಪಾಠಃ ॥

ತ್ವಂ । ರಯಿಂ । ಪುರುಽವೀರಂ । ಅಗ್ನೇ । ದಾಶುಷೇ । ಮರ್ತಾಯ ।
ಪ್ರ । ನಃ । ನಯ । ವಸ್ಯಃ । ಅಚ್ಛ । ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವಂ ದಾಶುಷೇ ಹವಿರ್ದತ್ತವತೇ ಮರ್ತ್ಯಾಯ ಯಜಮಾನಾಯ ರಯಿಂ ಧನಂ ಪುರುವೀರಂ ಬಹುಭಿರ್ವೀರೈರ್ಯುಕ್ತಂ ಪ್ರಯಚ್ಛಸಿ । ಅತೋ ನೋಽಸ್ಮಾನಪಿ ವಸ್ಯೋ ವಸೀಯೋ ಧನಮಚ್ಛಾಭಿಪ್ರಾಪ್ತುಂ ಪ್ರ ಣಯ । ಪ್ರಾಪಯ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ತ್ವಂ—ನೀನು । ದಾಶುಷೇ—ಹವಿಸ್ಸನ್ನರ್ಪಿಸತಕ್ಕ । ಮರ್ತಾಯ—ಮಾನವನಿಗೆ । ಪುರುವೀರಂ—ಅನೇಕ ವೀರಪುತ್ರರಿಂದ ಕೂಡಿದ । ರಯಿಂ—ಧನವನ್ನು (ಕೊಡುತ್ತೀಯೆ) । ನಃ—ನಮಗೂ ಸಹ । ವಸ್ಯಃ—ಶ್ರೇಷ್ಠವಾದ ಧನವನ್ನು । ಅಚ್ಛ—ಸೇರುವಂತೆ । ಪ್ರ ಣಯ—ಉತ್ತಮರೀತಿಯಲ್ಲಿ ಒದಗಿಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನೀನು ಹವಿಸ್ಸನ್ನರ್ಪಿಸತಕ್ಕ ಮಾನವನಿಗೆ ಅನೇಕ ವೀರಪುತ್ರರಿಂದ ಕೂಡಿದ ಧನವನ್ನು ಕೊಡುತ್ತೀಯೆ. ನಮಗೂ ಸಹ ಶ್ರೇಷ್ಠವಾದ ಧನವು ಸೇರುವಂತೆ ಮಾಡು

## English Translation

You, Agni, give to the offerer wealth comprehending many male descendants ; conduct us to affluence.

॥ ಸಂಹಿತಾಪಾಠಃ ॥

ಉರುಷ್ಯಾ ಣೋ ಮಾ ಪರಾ ದಾ ಅಘಾಯತೇ ಜಾತವೇದಃ ।
ದುರಾಧ್ಯೇ೩ ಮರ್ತಾಯ ॥ ೭ ॥

॥ ಪದಪಾಠಃ ॥

ಉರುಷ್ಯ । ನಃ । ಮಾ । ಪರಾ । ದಾಃ । ಅಘಽಯತೇ । ಜಾತಽವೇದಃ ।
ದುಃಽಆಧ್ಯೇ । ಮರ್ತಾಯ ॥ ೭ ॥

॥ ಸಾಯಣಭಾಷ್ಯಂ ॥

ಹೇ ಜಾತವೇದೋ ಜಾತವಿದ್ಯ ಜಾತಧನ ವಾಗ್ನೇ ನೋಽಸ್ಮಾನುರುಷ್ಯ । ರಕ್ಷ । ಉರುಷ್ಯತೀ ರಕ್ಷಾಕರ್ಮೇತಿ ಯಾಸ್ಕಃ । ನಿ. ೫-೨೩ । ಮಾ ಪರಾ ದಾಃ । ಮಾ ಪರಾದೇಹ್ಯಸ್ಮಾನ್ । ಕಸ್ಮಾ ಇತಿ ಸ ಉಚ್ಯತೇ । ಅಘಾಯತೇಽಘಂ ಪಾಪಮಿಚ್ಛತೇ ದುರಾಧ್ಯೇ ದುರಾಧ್ಯಾನಾಯ ದುರ್ವಿಚಿಂತಕಾಯ ಹಿಂಸಾಬುದ್ಧಯೇ ಮರ್ತಾಯ ಮನುಷ್ಯಾಯ ॥

॥ ಪ್ರತಿಪದಾರ್ಥ ॥

**ಜಾತವೇದಃ**—ಸಕಲವನ್ನೂ ತಿಳಿದ ಎಲೈ ಅಗ್ನಿಯೇ । **ನಃ**—ನಮ್ಮನ್ನು । **ಉರುಷ್ಯ**—ರಕ್ಷಿಸು । **ಅಘಾಯತೇ**—ನಮಗೆ ಹಿಂಸೆಯನ್ನು ಮಾಡುವವನೂ । **ದುರಾಧ್ಯೇ**—ನಮಗೆ ಕೇಡನ್ನು ಬಯಸುವವನೂ ಆದ । **ಮರ್ತಾಯ**—ಮಾನವನಿಗೆ । **ಮಾ ಪರಾ ದಾಃ**—ಬಿಟ್ಟುಕೊಡಬೇಡ

॥ ಭಾವಾರ್ಥ ॥

ಸಕಲವನ್ನೂ ತಿಳಿದ ಎಲೈ ಅಗ್ನಿಯೇ, ನಮ್ಮನ್ನು ರಕ್ಷಿಸು. ನಮಗೆ ಹಿಂಸೆಯನ್ನು ಮಾಡುವವನೂ, ನಮಗೆ ಕೇಡನ್ನು ಬಯಸುವವನೂ ಆದ ಮಾನವನಿಗೆ ನಮ್ಮನ್ನು ಬಿಟ್ಟುಕೊಡಬೇಡ

English Translation

Defend us, Jatavedas ; deliver us not over to the malevolent, to the man whose thoughts are evil

॥ ಸಂಹಿತಾಪಾಠಃ ॥

ಅಗ್ನೇ ಮಾಕಿಷ್ಟೇ ದೇವಸ್ಯ ರಾತಿಮದೇವೋ ಯುಯೋತ ।
ತ್ವಮೀಶಿಷೇ ವಸೂನಾಂ ॥ ೮ ॥

॥ ಪದಪಾಠಃ ॥

ಅಗ್ನೇ । ಮಾಕಿಃ । ತೇ । ದೇವಸ್ಯ । ರಾತಿಂ । ಅದೇವಃ । ಯುಯೋತ ।
ತ್ವಂ । ಈಶಿಷೇ । ವಸೂನಾಂ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ದೇವಸ್ಯ ದ್ಯೋತಮಾನಸ್ಯ ತೇ ತವ ರಾತಿಂ ದಾನಂ ದತ್ತಂ ಧನಂ ವಾ ಕಶ್ಚಿದದೇವೋ ಮರ್ತ್ಯೋ ಮಾಕಿರ್ಯುಯೋತ । ಮೈವ ಪೃಥಕ್ಕರೋತು । ತ್ವಮೇವೇಶಿಷೇ । ಕಸ್ಯ । ವಸೂನಾಂ ಧನಾನಾಮೀಶ್ವರೋ ಭವಸಿ ದಾತುಂ । ಅನೇನಾಮಿಶ್ರಣೀಯಾಯಾ ರಾತೇಃ ಸದ್ಭಾವ ಉಕ್ತೋ ಭವತಿ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ದೇವಸ್ಯ—ಪ್ರಕಾಶಮಾನನಾದ । ತೇ—ನಿನ್ನಿಂದ ದತ್ತವಾದ । ರಾತಿಂ—ಧನವನ್ನು । ಅದೇವಃ—ದೈವಭಕ್ತಿಯಿಲ್ಲದ । ಮಾಕಿಃ ಯುಯೋತ—ಯಾವನೂ ಕಿತ್ತುಕೊಳ್ಳದಿರಲಿ । ವಸೂನಾಂ—ಸಕಲ ಧನಗಳಿಗೂ । ತ್ವಂ—ನೀನೇ । ಈಶಿಷೇ—ಪ್ರಭುವಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪ್ರಕಾಶಮಾನನಾದ ನಿನ್ನಿಂದ ದತ್ತವಾದ ಧನವನ್ನು ದೈವಭಕ್ತಿಯಿಲ್ಲದ ಯಾವನೂ ಕಿತ್ತುಕೊಳ್ಳದಿರಲಿ. ಸಕಲಧನಗಳಿಗೂ ನೀನೇ ಪ್ರಭುವಾಗಿದ್ದೀಯೆ.

English Translation

Agni, let not the godless take away the wealth which you, the divine have given, for you are the lord of treasures

॥ ಸಂಹಿತಾಪಾಠಃ ॥

ಸ ನೋ ವಸ್ವ ಉಪ ಮಾಸ್ಯೂರ್ಜೋ ನಪಾನ್ಮಾಹಿನಸ್ಯ ।
ಸಖೇ ವಸೋ ಜರಿತೃಭ್ಯಃ ॥ ೯ ॥

॥ ಪದಪಾಠಃ ॥

ಸಃ । ನಃ । ವಸ್ವಃ । ಉಪ । ಮಾಸಿ । ಊರ್ಜಃ । ನಪಾತ್ । ಮಾಹಿನಸ್ಯ ।
ಸಖೇ । ವಸೋ ಇತಿ । ಜರಿತೃಽಭ್ಯಃ ॥ ೯ ॥

॥ ಸಾಯಣಭಾಷ್ಯಂ ॥

**ಹೇ ಊರ್ಜೋ ನಪಾದ್ಬಲಸ್ಯಾನ್ನಸ್ಯ ಪುತ್ರ । ಬಲೇನ ಮಥ್ಯಮಾನತ್ವಾದಾಜ್ಯಲಕ್ಷಣೇನಾ-ನ್ನೇನ ಪ್ರವರ್ಧನಾದೂರ್ಜೋನಪಾತ್ತ್ವಂ। ಹೇ ಸಖೇ ಸಖಿವದ್ಧಿತಕಾರಿನ್ವಸೋ ವಾಸಕಾಗ್ನೇ ಸ ಸ್ತುತ್ಯತ್ವೇ-ನೈವ ಪ್ರಸಿದ್ಧಸ್ತ್ವಂ ಜರಿತೃಭ್ಯೋ ಗರಿತೃಭ್ಯಃ ಸ್ತೋತೃಭ್ಯೋ ನೋಽಸ್ಮಭ್ಯಂ ಮಾಹಿನಸ್ಯ ವಸ್ವಃ । ಮಾಹಿನ ಇತಿ ಮಹನ್ನಾಮ । ಮಹದ್ಧನಮುಪ ಮಾಸಿ । ಸಮೀಪೇ ಮಾಸಿ । ನಿರ್ಮಾಸಿ । ಪ್ರಯಚ್ಛಸೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಊರ್ಜೋ ನಪಾತ್**—ಶಕ್ತಿಪುತ್ರನೂ । **ಸಖೇ**—ಮಿತ್ರನೂ । **ವಸೋ**—ವಸತಿದಾಯಕನೂ ಆದ ಎಲೈ ಅಗ್ನಿಯೇ । **ಸಃ**—ಪ್ರಸಿದ್ಧನಾದ ನೀನು । **ಜರಿತೃಭ್ಯಃ**—ಸ್ತುತಿಕರ್ತರಾದ । **ನಃ**—ನಮಗೆ । **ಮಾಹಿನಸ್ಯ**—ಅತಿ ಮಹತ್ತಾದ । **ವಸ್ವಃ**—ಧನವನ್ನು । **ಉಪ ಮಾಸಿ**—ಒದಗಿಸಿ ಕೊಡುತ್ತೀಯೆ.

॥ ಭಾವಾರ್ಥ ॥

ಶಕ್ತಿಪುತ್ರನೂ, ಮಿತ್ರನೂ, ನಮಗೆ ವಸತಿದಾಯಕನೂ ಆದ ಎಲೈ ಅಗ್ನಿಯೇ, ಪ್ರಸಿದ್ಧನಾದ ನೀನು ಸ್ತುತಿಕರ್ತರಾದ ನಮಗೆ ಅತಿ ಮಹತ್ವವುಳ್ಳ ಧನವನ್ನು ಒದಗಿಸಿ ಕೊಡುತ್ತೀಯೆ.

English Translation

Son of strength, the friend, the giver of dwellings, you mete out abundant treasure to us your praisers

॥ ಸಂಹಿತಾಪಾಠಃ ॥

ಅಚ್ಛಾ ನಃ ಶೀರಶೋಚಿಷಂ ಗಿರೋ ಯಂತು ದರ್ಶತಂ ।
ಅಚ್ಛಾ ಯಜ್ಞಾಸೋ ನಮಸಾ ಪುರೂವಸುಂ ಪುರುಪ್ರಶಸ್ತ-
ಮೂತಯೇ ॥ ೧೦ ॥

॥ ಪದಪಾಠಃ ॥

ಅಚ್ಛ । ನಃ । ಶೀರऽಶೋಚಿಷಂ । ಗಿರಃ । ಯಂತು । ದರ್ಶತಂ ।
ಅಚ್ಛ । ಯಜ್ಞಾಸಃ । ನಮಸಾ । ಪುರುऽವಸುಂ । ಪುರುऽಪ್ರಶಸ್ತಂ । ಊತಯೇ ॥ ೧೦ ॥

॥ ಸಾಯಣಭಾಷ್ಯಂ ॥

ಪ್ರಾತರನುವಾಕೇ ಬಾರ್ಹತೇ ಛಂದಸ್ಯಚ್ಛಾ ನ ಇತ್ಯಾದ್ಯಾಃ ಷಡೃಚಃ । ತಥಾ ಚ ಸೂತ್ರಿತಂ । ಅಚ್ಛಾ ನಃ ಶೀರಶೋಚಿಷಮಿತಿ ಷಟ್ । ಆ. ४-೧೩ । ಇತಿ ॥ ದಶಮೇಽಹನಿ ಪ್ರಾತಃ ಸವನೇಽಚ್ಛಾ ವೋ ಅಗ್ನಿಮಿತಿ ತೃಚಸ್ಯ ಸ್ಥಾನೇಽಚ್ಛಾ ನ ಇತಿ ತೃಚೋಽಚ್ಛಾವಾಕವಾದಃ । ಸೂತ್ರಿತಂ ಚ । ಅಚ್ಛಾ ನಃ ಶೀರಶೋಚಿಷಂ ಪ್ರತಿ ಶ್ರುತಾಯ ವೋ ಧೃಷದಿತಿ ತೃಚೌ । ಆ. ೮-೧೨ । ಇತಿ ॥

ಅಚ್ಛಾಭಿಮುಖಂ ಯಂತು ಗಚ್ಛಂತು ನೋಽಸ್ಮಾಕಂ ಗಿರಃ ಸ್ತುತಯಃ । ಕಂ । ಶೀರಶೋಚಿಷ- ಮಶನಶೀಲಜ್ವಾಲಂ ದರ್ಶತಂ ಸರ್ವೈರ್ದರ್ಶನೀಯಮಗ್ನಿಂ । ತಥಾ ಯಜ್ಞಾಸೋ ಯಜ್ಞಾಶ್ಚಾಸ್ಮದೀಯಾ ನಮಸಾ ಹವಿಷ್ಯಾಜ್ಯಾದಿಲಕ್ಷಣೇನಾಚ್ಛಾಭಿಮುಖಂ ಯಂತು । ಗಚ್ಛಂತು । ಕೀದೃಶಂ । ಪುರುವಸುಂ ಪ್ರಭೂತಧನಂ ಪುರುಪ್ರಶಸ್ತಂ ಬಹುಸ್ತುತಂ । ಕಿಮರ್ಥಂ । ಊತಯೇಽಸ್ಮಾಕಂ ರಕ್ಷಣಾಯ ॥

॥ ಪ್ರತಿಪದಾರ್ಥ ॥

**ನಃ**—ನಮ್ಮ । **ಗಿರಃ**—ಸ್ತುತಿಗಳು । **ಶೀರಶೋಚಿಷಂ**—ಕಾಷ್ಠಾದಿಗಳನ್ನು ಭಕ್ಷಿಸುವ ಜ್ವಾಲೆಯುಳ್ಳವನೂ । **ದರ್ಶತಂ**—ಆಕರ್ಷಕವಾದ ರೂಪವುಳ್ಳವನೂ ಆದ ಅಗ್ನಿಗೆ । **ಅಚ್ಛ**—ಅಭಿಮುಖವಾಗಿ । **ಯಂತು**—ಹೋಗಿ ಸೇರಲಿ । **ಯಜ್ಞಾಸಃ**—ನಮ್ಮ ಯಜ್ಞಗಳೂ ಸಹ । **ನಮಸಾ**—ನಮ್ಮ ಹವಿಸ್ಸಿನ ರೂಪದಿಂದ । **ಪುರುವಸುಂ**—ಅತ್ಯಧಿಕವಾದ ಧನವುಳ್ಳವನೂ । **ಪುರುಪ್ರಶಸ್ತಂ**—ಅಧಿಕವಾಗಿ ಪ್ರಶಂಸಿತನೂ ಆದ ಅಗ್ನಿಯನ್ನು । **ಊತಯೇ**—ನಮ್ಮ ರಕ್ಷಣಾರ್ಥವಾಗಿ । **ಅಚ್ಛ**—ಅವನಿಗಭಿಮುಖವಾಗಿ ಹೋಗಿ ಸೇರಲಿ

॥ ಭಾವಾರ್ಥ ॥

ನಮ್ಮ ಸ್ತುತಿಗಳು, ಕಾಷ್ಠಾದಿಗಳನ್ನು ಭಕ್ಷಿಸುವ ಜ್ವಾಲೆಯುಳ್ಳವನೂ, ಆಕರ್ಷಕವಾದ ರೂಪವುಳ್ಳವನೂ ಆದ ಅಗ್ನಿಗೆ ಅಭಿಮುಖವಾಗಿ ಹೋಗಿ ಸೇರಲಿ ನಮ್ಮ ಯಜ್ಞಗಳೂ ಸಹ ನಮ್ಮ ಹವಿಸ್ಸಿನ ರೂಪದಿಂದ ಅತ್ಯಧಿಕವಾದ ಧನವುಳ್ಳವನೂ, ಅಧಿಕವಾಗಿ ಪ್ರಶಂಸಿತನೂ ಆದ ಅಗ್ನಿಯನ್ನು ನಮ್ಮ ರಕ್ಷಣಾರ್ಥವಾಗಿ ಅವನಿಗಭಿಮುಖವಾಗಿ ಹೋಗಿ ಸೇರಲಿ

## Engalish Translation

Let our voices come near the beautiful (Agni), him who bears devouring flames ; let our sacrifices with our oblations come near him, for our protection, who is rich in wealth and rich in praise

॥ ವಿಶೇಷವಿಷಯಗಳು ॥

ಪ್ರಾತರನುವಾಕಮಂತ್ರಪಠನಕಾಲದಲ್ಲಿ ಬೃಹತೀಛಂದಸ್ಸಿನ ಋಕ್ಕುಗಳಿಗಾಗಿ **ಅಚ್ಛಾ ನಃ** ಎಂದು ಮೊದಲಾಗುವ ಆರು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಅಚ್ಛಾ ನಃ ಶೀರಶೋಚಿಷಮಿತಿ ಷಟ್** ಎಂಬ ಸೂತ್ರದಿಂದ (ಆ. ४-೧೩) ವಿವೃತವಾಗಿರುವುದು. ಯಾಗದ ಹತ್ತನೆಯ ದಿವಸ

ಪ್ರಾತಃಸವನಕಾಲದಲ್ಲಿ **ಅಚ್ಛಾ ವೋ ಅಗ್ನಿಂ** ಎಂಬ ತೃಚಕ್ಕೆ ಬದಲಾಗಿ **ಅಚ್ಛಾ ನಃ** ಎಂಬ ತೃಚವನ್ನು ಅಚ್ಛಾವಾಕನೆಂಬ ಋತ್ವಿಜನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಅಚ್ಛಾ ನಃ ಶೀರಶೋಚಿಷಂ ಪ್ರತಿ ಶ್ರುತಾಯ ವೋ ಧೃಷದಿತಿ ತೃಚೌ** ಎಂಬ ಸೂತ್ರದಿಂದ (ಆ ೮-೧೨) ವಿವೃತವಾಗಿರುವುದು

॥ ಸಂಹಿತಾಪಾಠಃ ॥

ಅಗ್ನಿಂ ಸೂನುಂ ಸಹಸೋ ಜಾತವೇದಸಂ ದಾನಾಯ
ವಾರ್ಯಾಣಾಂ ।
ದ್ವಿತಾ ಯೋ ಭೂದಮೃತೋ ಮರ್ತ್ಯೇಷ್ವಾ ಹೋತಾ ಮಂದ್ರ-
ತಮೋ ವಿಶಿ ॥ ೧೧ ॥

॥ ಪದಪಾಠಃ ॥

ಅಗ್ನಿಂ । ಸೂನುಂ । ಸಹಸಃ । ಜಾತಽವೇದಸಂ । ದಾನಾಯ । ವಾರ್ಯಾಣಾಂ ।
ದ್ವಿತಾ । ಯಃ । ಭೂತ್ । ಅಮೃತಃ । ಮರ್ತ್ಯೇಷು । ಆ । ಹೋತಾ । ಮಂದ್ರಽತಮಃ ।
ವಿಶಿ ॥ ೧೧ ॥

॥ ಸಾಯಣಭಾಷ್ಯಂ ॥

ಅಗ್ನಿಂ ಸಹಸಃ ಸೂನುಂ ಬಲಸ್ಯ ಪುತ್ರಂ ಜಾತವೇದಸಂ ಜಾತಧನಂ ವಾರ್ಯಾಣಾಂ ವರಣೀಯಾನಾಂ ಗವಾದಿಧನಾನಾಂ ದಾನಾಯ ಗಿರೋಽಚ್ಛ ಯಂತ್ವಿತ್ಯನುವರ್ತತೇ । ಯೋಽಗ್ನಿರಮೃತೋಽಮರಣಧರ್ಮಾ ದೇವೇಷು ಭವತಿ ಸ ಮರ್ತ್ಯೇಷ್ವಾ । ಆಕಾರಶ್ಚಾರ್ಥೇ । ಮನುಷ್ಯೇಷು ಚಾಭೂತ್ ಅಭವದಿತ್ಯೇವಂ ದ್ವಿತಾ ದ್ವೈಧಂ ಭವತಿ । ದೇವೇಷ್ವಮೃತತ್ವಮಸ್ಯ ಪ್ರಸಿದ್ಧಂ ಮನುಷ್ಯೇಷು ಕೀದೃಶೋಽಭೂದಿತಿ ಉಚ್ಯತೇ । ವಿಶಿ ವಿಕ್ಷು ಯಜಮಾನರೂಪಾಸು ಪ್ರಜಾಸು ಹೋಮನಿಷ್ಪಾದಕೋ ಮಂದ್ರತಮೋ ಮಾದಯಿತೃತಮಶ್ಚ ಭವತಿ । ಅಚ್ಛ ಯಂತ್ವಿತಿ ಸಮನ್ವಯಃ । ಅಥವಾ । ಯೋಽಮೃತೋ ದ್ವಿತಾ ದ್ವಿತ್ವಂ ದ್ವೈಧಂ ದ್ವಿಪ್ರಕಾರೋಽಭೂತ್ । ಕಥಂ । ಮರ್ತ್ಯೇಷು ಸಾಮಾನ್ಯೇನ ಪಾಹಪಾಕಾದಿಸಾಧನೋಽಭವದಿತ್ಯೇತತ್ಪ್ರಸಿದ್ಧಂ ವಿಶಿ ಯಜಮಾನರೂಪಾಯಾಂ ತು ಹೋತಾ ಮಂದ್ರತಮೋಽಭವದಿತ್ಯೇವಂ ದ್ವಿತ್ವಂ ॥

॥ ಪ್ರತಿಪದಾರ್ಥ ॥

**ಮಂದ್ರತಮಃ**—ಹರ್ಷಕಾರಕನಾದ । **ಯಃ**—ಯಾವ ಅಗ್ನಿಯು । **ವಿಶಿ**—ಯಜ್ಞಕರ್ತರಾದ ಮಾನವರಲ್ಲಿ । **ಹೋತಾ**—ಹೋಮಸಂಪಾದಕನಾಗಿಯೂ । **ಮರ್ತ್ಯೇಷು ಆ**—ಉಳಿದ ಮಾನವರಲ್ಲಿ

ಪಾಕಸಾಧನನಾಗಿಯೂ । **ದ್ವಿತಾ**— ಎರಡು ವಿಧವಾದ । **ಅಮೃತಃ**—ಮರಣಧರ್ಮವುಳ್ಳವನಾಗಿಯೂ ಅಥವಾ । **ಭೂತ್**—ದೇವತೆಗಳಲ್ಲಿ ಅಮರ್ತ್ಯನೂ ಮತ್ತು ಮಾನವರಲ್ಲಿ ಯಜ್ಞಾದಿಸಾಧಕನೂ ಆಗಿರುವನೋ ಅಂತಹ । **ಸಹಸಃ ಸೂನುಂ**—ಶಕ್ತಿಪುತ್ರನೂ । **ಜಾತವೇದಸಂ**—ಸಕಲವನ್ನೂ ತಿಳಿದವನೂ ಆದ । **ಅಗ್ನಿಂ**—ಅಗ್ನಿಯನ್ನು । **ವಾರ್ಯಾಣಾಂ**—ಅಪೇಕ್ಷಿತಗಳಾದ ಧನಗಳ । **ದಾನಾಯ**—ದಾನಕ್ಕಾಗಿ (ನಮ್ಮ ಸ್ತುತಿಗಳು ಹೋಗಿ ಸೇರಲಿ).

॥ ಭಾವಾರ್ಥ ॥

ಹರ್ಷಕಾರಕನಾದ ಯಾವ ಅಗ್ನಿಯು ಯಜ್ಞಕರ್ತರಾದ ಮಾನವರಲ್ಲಿ ಹೋಮಸಂಪಾದಕನಾಗಿಯೂ ಉಳಿದ ಮಾನವರಲ್ಲಿ ಪಾಕಸಾಧನನಾಗಿಯೂ ಹೀಗೆ ಎರಡು ವಿಧದಲ್ಲಿದ್ದು ದೇವತೆಗಳಲ್ಲಿ ಅಮರ್ತ್ಯನಾಗಿ ಪ್ರಕಾಶಿಸುವನೋ ಅಂತಹ ಶಕ್ತಿಪುತ್ರನೂ ಸಕಲವನ್ನೂ ತಿಳಿದವನೂ ಆದ ಅಗ್ನಿಯನ್ನು ಅಪೇಕ್ಷಿತಗಳಾದ ಧನಗಳ ದಾನಕ್ಕಾಗಿ ಪ್ರಾಪ್ತಿಗಾಗಿ ನಮ್ಮ ಸ್ತುತಿಗಳು ಹೋಗಿ ನೇರಲಿ

English Translation

(Let them come near) Agni, Jatavedas, son of strength, for the giving of all desirable good things, who is doubly immortal as (perpetually burning) amongst mortals, and as the supremely exhilarating ministrant-priest amongst the sacrificers.

॥ ಸಂಹಿತಾಪಾಠಃ ॥

ಅಗ್ನಿಂ ವೋ ದೇವಯಜ್ಯಯಾಗ್ನಿಂ ಪ್ರಯತ್ಯಧ್ವರೇ ।
ಅಗ್ನಿಂ ಧೀಷು ಪ್ರಥಮಮಗ್ನಿಮರ್ವತ್ಯಗ್ನಿಂ ಕ್ಷೈತ್ರಾಯ ಸಾಧಸೇ ॥

॥ ಪದಪಾಠಃ ॥

ಅಗ್ನಿಂ । ವಃ । ದೇವಽಯಜ್ಯಯಾ । ಅಗ್ನಿಂ । ಪ್ರಽಯತಿ । ಅಧ್ವರೇ ।
ಅಗ್ನಿಂ । ಧೀಷು । ಪ್ರಥಮಂ । ಅಗ್ನಿಂ । ಅರ್ವತಿ । ಅಗ್ನಿಂ । ಕ್ಷೈತ್ರಾಯ । ಸಾಧಸೇ ॥೧೨॥

॥ ಸಾಯಣಭಾಷ್ಯಂ ॥

ಹೇ ಯಜಮಾನಾಃ ಯುಷ್ಮಾಕಂ ದೇವಯಜ್ಯಯಾ ದೇವಯಾಗೇನ ನಿಮಿತ್ತೇನ ದೇವಯಾಗಾರ್ಥಮಗ್ನಿಂ ಸ್ತೌಮೀತಿ ಶೇಷಃ । ತಥಾಗ್ನಿಮಧ್ವರೇ ಯಾಗೇ ಪ್ರಯತಿ ಪ್ರಕರ್ಷೇಣ ಗಚ್ಛತಿ ಪ್ರವೃತ್ತೇ ಸತಿ ಸ್ತೌಮಿ ಪ್ರಥಮಮಿತರದೇವೇಭ್ಯಃ । ತಥಾಗ್ನಿಮರ್ವತ್ಯಾಗತೇ ಭ್ರಾತೃವ್ಯೇ ಸ್ತೌಮಿ ಯಜ್ಞವಿಘ್ನಪರಿಹಾರಾರ್ಥಂ । ತಥಾ ಕ್ಷೈತ್ರಾಯ ಕ್ಷೇತ್ರಾಯ ಕ್ಷೇತ್ರಸಂಬಂಧಿನೇ ಸಾಧಸೇ ಸಾಧನಾಯ ಕ್ಷೈತ್ರ-

**ಲಾಭಾಯ ಸ್ತೌಮಿ । ಯದ್ವಾಕ್ಷೇತ್ರೇ ಕ್ಷೇತ್ರಲಾಭರೂಪಾಯ ಫಲಾಯ ಚ ಸ್ತೌಮಿ । ಏವಮಾದೌ ಮಧ್ಯೇಽಂತೇ ಚ ಸರ್ವದಾ ಸ್ತೌಮೀತ್ಯರ್ಥಃ ॥**

॥ ಪ್ರತಿಪದಾರ್ಥ ॥

(ಎಲೈ ಯಜಮಾನರೇ) **ವಃ**—ನಿಮ್ಮ । **ದೇವಯಜ್ಯಯಾ**-ದೇವತೆಗಳನ್ನು ಉದ್ದೇಶಿಸಿದ ಯಾಗಾರ್ಥವಾಗಿ । **ಅಗ್ನಿಂ**—ಅಗ್ನಿಯನ್ನು ಸ್ತುತಿಸುತ್ತೇನೆ । **ಅಧ್ವರೇ**—ಯಾಗವು । **ಪ್ರಯತಿ**—ನೆರವೇರುತ್ತಿರುವಾಗ । **ಅಗ್ನಿಂ**—ಅಗ್ನಿಯನ್ನು ಸ್ತುತಿಸುತ್ತೇನೆ । **ಧೀಷು**—ಪ್ರಜ್ಞಾವಂತರಾದ ದೇವತೆಗಳಲ್ಲಿ । **ಪ್ರಥಮಂ ಅಗ್ನಿಂ**—ಶ್ರೇಷ್ಠನಾದ ಅಗ್ನಿಯನ್ನು ಸ್ತುತಿಸುತ್ತೇನೆ । **ಅರ್ವತಿ**—ಶತ್ರುವಿನ ಆಗಮನಕಾಲದಲ್ಲೂ । **ಅಗ್ನಿಂ**—ಅಗ್ನಿಯನ್ನು ಸ್ತುತಿಸುತ್ತೇನೆ । **ಕ್ಷೈತ್ರಾಯ**—ಕ್ಷೇತ್ರಸಂಬಂಧಿಯಾದ । **ಸಾಧಸೇ**—ಲಾಭಸಾಧನೆಗಾಗಿ । **ಅಗ್ನಿಂ**—ಅಗ್ನಿಯನ್ನು ಸ್ತುತಿಸುತ್ತೇನೆ.

॥ ಭಾವಾರ್ಥ ॥

ಎಲೈ ಯಜಮಾನರೇ, ದೇವತೆಗಳನ್ನು ಉದ್ದೇಶಿಸಿದ ನಿಮ್ಮ ಯಾಗದ ಆರಂಭಕಾಲದಲ್ಲಿ ಅಗ್ನಿಯನ್ನು ಸ್ತುತಿಸುತ್ತೇನೆ. ಯಾಗವು ನೆರವೇರುತ್ತಿರುವಾಗ ಅಗ್ನಿಯನ್ನು ಸ್ತುತಿಸುತ್ತೇನೆ. ಪ್ರಜ್ಞಾವಂತರಾದ ದೇವತೆಗಳಲ್ಲಿ ಶ್ರೇಷ್ಠನಾದ ಅಗ್ನಿಯನ್ನು ಸ್ತುತಿಸುತ್ತೇನೆ. ಶತ್ರುವಿನ ಆಗಮನಕಾಲದಲ್ಲೂ ಅಗ್ನಿಯನ್ನು ಸ್ತುತಿಸುತ್ತೇನೆ. ಕ್ಷೇತ್ರ ಸಂಬಂಧಿಯಾದ ಲಾಭಸಾಧನೆಗಾಗಿ ಅಗ್ನಿಯನ್ನು ಸ್ತುತಿಸುತ್ತೇನೆ.

## English Translation

I praise Agni, (O sacrificers), for the inauguration of your divine offering, (I praise him) when the sacrifice is proceeding: (I praise) Agni first of the gods, at our rites, (I praise) Agni when the enemy approaches; (I praise) Agni for the attainment of land.

॥ ಸಂಹಿತಾಪಾಠಃ ॥

ಅಗ್ನಿರಿಷಾಂ ಸಖ್ಯೇ ದದಾತು ನ ಈಶೇ ಯೋ ವಾರ್ಯಾಣಾಂ ।
ಅಗ್ನಿಂ ತೋಕೇ ತನಯೇ ಶಶ್ವದೀಮಹೇ ವಸುಂ ಸಂತಂ
ತನೂಪಾಂ ॥ ೧೩ ॥

॥ ಪದಪಾಠಃ ॥

ಅಗ್ನಿಃ । ಇಷಾಂ । ಸಖ್ಯೇ । ದದಾತು । ನಃ । ಈಶೇ । ಯಃ । ವಾರ್ಯಾಣಾಂ ।
ಅಗ್ನಿಂ । ತೋಕೇ । ತನಯೇ । ಶಶ್ವತ್ । ಈಮಹೇ । ವಸುಂ । ಸಂತಂ । ತನೂಽಪಾಂ ॥

॥ ಸಾಯಣಭಾಷ್ಯಂ ॥

ಅಗ್ನಿರ್ದೇವಃ ಸಖ್ಯೇ ಸಮಾನಖ್ಯಾನಾಯ ನೋ ಮಹ್ಯಂ । ಸಖ್ಯುಃ ಕರ್ಮ ಸಖ್ಯಂ । ತಸ್ಮಿನ್ನಾ। ನೋಽಸ್ಮಭ್ಯಮಿಷಾಮಿಷೋಽನ್ನಾನಿ ದದಾತು । ಯೋಽಗ್ನಿರ್ವಾರ್ಯಾಣಾಂ ಧನಾನಾಮೀಶೇ ಈಷ್ಟೇ ಸ ದದಾತ್ವಿತಿ । ತಮೇವಾಗ್ನಿಂ ತೋಕೇ ಪುತ್ರಾರ್ಥಂ ತನಯೇ ತತ್ಪುತ್ರಾರ್ಥಂ ಚ ಶಶ್ವದ್ಬಹು ಧನಮನ್ನಂ ವೇಮಹೇ । ಯಾಚಾಮಹೇ । ವಾರ್ಯಾಣಾಮೀಶ ಇತ್ಯುಕ್ತತ್ವಾದೇವಂ ಲಭ್ಯತೇ । ಕೀದೃಶಮಗ್ನಿಂ । ವಸುಂ ವಾಸಕಂ ಸಂತಂ ಸರ್ವದಾ ವರ್ತಮಾನಂ ತನೂಪಾಮಂಗಾನಾಂ ಪಾಲಯಿತಾರಂ ॥

॥ ಪ್ರತಿಪದಾರ್ಥ ॥

ಯಃ—ಯಾವ ಅಗ್ನಿಯು । ವಾರ್ಯಾಣಾಂ—ಅಪೇಕ್ಷಿತಗಳಾದ ಸಕಲ ಧನಗಳಿಗೂ । ಈಶೇ—ಒಡೆಯನಾಗಿದ್ದಾನೆಯೋ ಅಂತಹ । ಅಗ್ನಿಃ—ಅಗ್ನಿಯು । ಸಖ್ಯೇ— ನಮ್ಮ ಮಿತ್ರಸಂಬಂಧವಿರುವುದರಿಂದ । ನಃ—ನಮಗೆ । ಇಷಾಂ—ಅನ್ನವನ್ನು । ದದಾತು—ಕೊಡಲಿ । ವಸುಂ—ವಸತಿದಾಯಕನೂ । ಸಂತಂ—ಶಾಶ್ವತವಾಗಿರುವವನೂ । ತನೂಪಾಂ—ಅಂಗರಕ್ಷಕನೂ ಆದ । ಅಗ್ನಿಂ—ಅಗ್ನಿಯನ್ನು । ತೋಕೇ—ಪುತ್ರಾರ್ಥವಾಗಿಯೂ । ತನಯೇ—ಪೌತ್ರಾರ್ಥವಾಗಿಯೂ । ಶಶ್ವತ್—ಅನೇಕವಿಧವಾಗಿ । ಈಮಹೇ—ಯಾಚಿಸುತ್ತೇವೆ

॥ ಭಾವಾರ್ಥ ॥

ಯಾವ ಅಗ್ನಿಯು ಅಪೇಕ್ಷಿತಗಳಾದ ಸಕಲ ಧನಗಳಿಗೂ ಒಡೆಯನಾಗಿದ್ದಾನೆಯೋ ಅಂತಹ ಅಗ್ನಿಯು ನಮ್ಮ ಮಿತ್ರಸಂಬಂಧವಿರುವುದರಿಂದ ನಮಗೆ ಅನ್ನವನ್ನು ಕೊಡಲಿ. ವಸತಿದಾಯಕನೂ, ಶಾಶ್ವತವಾಗಿರುವವನೂ, ಅಂಗರಕ್ಷಕನೂ ಆದ ಅಗ್ನಿಯನ್ನು ಪುತ್ರಾರ್ಥವಾಗಿಯೂ ಪೌತ್ರಾರ್ಥವಾಗಿಯೂ ಅನೇಕವಿಧವಾಗಿ ಯಾಚಿಸುತ್ತೇವೆ.

English Translation

May Agni in his friendship give us food, for he is the lord of all desirable things; we solicit abundance for our sons and grandsons from Agni, who is the giver of dwellings and the protector of our bodies.

॥ ಸಂಹಿತಾಪಾಠಃ ॥

ಅಗ್ನಿಮೀಳಿಷ್ವಾವಸೇ ಗಾಥಾಭಿಃ ಶೀರಶೋಚಿಷಂ ।

ಅಗ್ನಿಂ ರಾಯೇ ಪುರುಮೀಳ್ಹ ಶ್ರುತಂ ನರೋಽಗ್ನಿಂ ಸುದೀತಯೇ ಛರ್ದಿಃ ॥ ೧೪ ॥

॥ ಪದಪಾಠಃ ॥

ಅಗ್ನಿಂ । ಈಳಿಷ್ವ । ಅವಸೇ । ಗಾಥಾಭಿಃ । ಶೀರಽಶೋಚಿಷಂ ।

ಅಗ್ನಿಂ । ರಾಯೇ । ಪುರುಽಮೀಳ್ಹ । ಶ್ರುತಂ । ನರಃ । ಅಗ್ನಿಂ । ಸುಽದೀತಯೇ । ಛರ್ದಿಃ ॥

॥ ಸಾಯಣಭಾಷ್ಯಂ ॥

ಹೇ ಪುರುಮೀಳ್ಹ ತ್ವಮಗ್ನಿಮವಸ ಅವಯೋ ರಕ್ಷಣಾಯೇಳಿಷ್ವ । ಸ್ತುಹಿ ಗಾಥಾಭಿಃ । ಗಾಥೇತಿ ವಾಙ್ನಾಮ । ಮಂತ್ರರೂಪಾಭಿರ್ವಾಗ್ಭಿಃ । ಕೀದೃಶಂ । ಶೀರಶೋಚಿಷಂ ಶಯನಸ್ವಭಾವರೋಚಿಷ್ಕಂ । ತಥಾ ರಾಯ ಈಳಿಷ್ವ । ಶ್ರುತಮೇನಂ ನರೋ ಽನ್ಯೇಽಪಿ ಯಜಮಾನಾಃ ಸ್ತುವಂತಿ ಸ್ವಾರ್ಥಂ । ತಸ್ಮಾತ್ಸುದೀತಯೇ ಮಹ್ಯಮಗ್ನಿಂ ಛರ್ದಿರ್ಗೃಹಂ ಯಾಚಸ್ವೇತ್ಯೇವಂ ಸುದೀತಿಃ ಪುರುಮೀಳ್ಹಂ ಬ್ರೂತೇ॥

॥ ಪ್ರತಿಪದಾರ್ಥ ॥

**ಪುರುಮೀಳ್ಹ**—ಎಲೈ ಪುರುಮೀಳ್ಹನೆಂಬ ಋಷಿಯೇ । **ಶೀರಶೋಚಿಷಂ**—ಪ್ರಸರಿಸಿ ಹರಡಿರುವ ಪ್ರಭೆಯುಳ್ಳ । **ಅಗ್ನಿಂ**—ಅಗ್ನಿಯನ್ನು । **ಅವಸೇ**—ರಕ್ಷಣಾರ್ಥವಾಗಿ । **ಗಾಥಾಭಿಃ**—ಮಂತ್ರರೂಪವಾದ ವಾಕ್ಕುಗಳಿಂದ । **ಈಳಿಷ್ವ**—ಸ್ತುತಿಸು । **ರಾಯೇ**—ಧನಾರ್ಥವಾಗಿ । **ಶ್ರುತಂ ಅಗ್ನಿಂ**—ಪ್ರಸಿದ್ಧನಾದ ಈ ಅಗ್ನಿಯನ್ನೇ । **ನರಃ**—ಉಳಿದ ಮಾನವರೂ ಸ್ತುತಿಸುತ್ತಾರೆ (ಆದುದರಿಂದ) । **ಸುದೀತಯೇ**-ಸುದೀತಿನಾಮಕನಾದ ನನಗಾಗಿ । **ಅಗ್ನಿಂ**—ಅಗ್ನಿಯನ್ನು ಪ್ರಾರ್ಥಿಸಿ । **ಛರ್ದಿಃ**—ಗೃಹವನ್ನು ಯಾಚಿಸು

॥ ಭಾವಾರ್ಥ ॥

ಎಲೈ ಪುರುಮೀಳ್ಹನೆಂಬ ಋಷಿಯೇ, ಪ್ರಸರಿಸಿ ಹರಡಿರುವ ಪ್ರಭೆಯುಳ್ಳ ಅಗ್ನಿಯನ್ನು ರಕ್ಷಣಾರ್ಥವಾಗಿ ಮಂತ್ರರೂಪವಾದ ವಾಕ್ಕುಗಳಿಂದ ಸ್ತುತಿಸು ಧನಾರ್ಥವಾಗಿ ಪ್ರಸಿದ್ಧನಾದ ಈ ಅಗ್ನಿಯನ್ನೇ ಉಳಿದ ಮಾನವರೂ ಸ್ತುತಿಸುತ್ತಾರೆ. ಆದುದರಿಂದ ಸುದೀತಿನಾಮಕನಾದ ನನಗಾಗಿ ಅಗ್ನಿಯನ್ನು ಪ್ರಾರ್ಥಿಸಿ ಗೃಹವನ್ನು ಯಾಚಿಸು.

## English Translation

Laud with your hymns for our protection Agni, whose splendours lie outspread ; laud Agni for wealth, O Purumilha, for other offerers are lauding that far-famed one on their own behalf, solicit of Agni a house for (me) Suditi.

॥ ಸಂಹಿತಾಪಾಠಃ ॥

ಅಗ್ನಿಂ ದ್ವೇಷೋ ಯೋತವೈ ನೋ ಗೃಣೀಮಸ್ಯಗ್ನಿಂ ಶಂ ಯೋಶ್ಚ

ದಾತವೇ ।

ವಿಶ್ವಾಸು ವಿಕ್ಷ್ವವಿತೇವ ಹವ್ಯೋ ಭುವದ್ವಸ್ತುರ್ಋಷೂಣಾಂ ॥
॥ ೧೫ ॥

॥ ಪದಪಾಠಃ ॥

ಅಗ್ನಿಂ । ದ್ವೇಷಃ । ಯೋತವೈ । ನಃ । ಗೃಣೀಮಸಿ । ಅಗ್ನಿಂ । ಶಂ । ಯೋಃ । ಚ ।
ದಾತವೇ ।
ವಿಶ್ವಾಸು । ವಿಕ್ಷು । ಅವಿತಾಽಇವ । ಹವ್ಯಃ । ಭುವತ್ । ವಸ್ತುಃ । ಋಷೂಣಾಂ ॥ ೧೫ ॥

॥ ಸಾಯಣಭಾಷ್ಯಂ ॥

ಅಗ್ನಿಂ ದ್ವೇಷೋ ದ್ವೇಷ್ಟ್ರೂನ್ಯೋತವೈ ಪೃಥಕ್ಕರ್ತುಂ । ಗೃಣೀಮಸಿ । ಗೃಣೀಮಃ । ಸ್ತುಮಃ । ತಥಾಗ್ನಿಂ ಶಂ ಸುಖಂ ಯೋಶ್ಚ ಭಯಾನಾಮಮಿಶ್ರಣಂ ಚ ದಾತವೇ ದಾತುಂ । ಅಥವಾ ಶಂ ಸುಖಸ್ಯ ಯೋರ್ಮಿಶ್ರಣಾಯ ಚ ಗೃಣೀಮಸಿ । ಅಸ್ಮಿನ್ಪಕ್ಷೇ ದ್ವೇಷೋ ಯೋತವಾ ಇತ್ಯನೇನ ಸಹ ಸಮುಚ್ಚಯಾರ್ಥಶ್ಚಶಬ್ದಃ । ಸೋಽಗ್ನಿರ್ವಿಶ್ವಾಸು ಸರ್ವಾಸು ವಿಕ್ಷು ಪ್ರಜಾಸ್ವವಿತೇವ ರಕ್ಷಿತಾ ರಾಜೇವರ್ಷೂಣಾಮೃಷೀಣಾಮಸ್ಮಾಕಂ ವಸ್ತುರ್ವಾಸಕೋ ದೇವೋ ಹವ್ಯೋ ಭುವತ್ । ಭವತು । ಅಥವಾ । ಸರ್ವಾಸು ವಿಕ್ಷು ಯಜಮಾನರೂಪಾಸು ಪ್ರಜಾಸು ಮಧ್ಯ ಋಷೂಣಾಮೃಷೀಣಾಂ ಸೂಕ್ತದ್ರಷ್ಟ್ರೂಣಾಮಸ್ಮಾಕಮೇವ ಹವ್ಯೋ ಭವತು ವಸ್ತುಃ ಸರ್ವಸ್ಯ ವಾಸಕೋ ದೇವಃ ॥

॥ ಪ್ರತಿಪದಾರ್ಥ ॥

ನಃ—ನಮ್ಮ । ದ್ವೇಷಃ—ದ್ವೇಷಿಗಳನ್ನು । ಯೋತವೈ—ದೂರಕ್ಕೆ ಓಡಿಸಲು । ಅಗ್ನಿಂ—ಅಗ್ನಿಯನ್ನು । ಗೃಣೀಮಸಿ—ನಾವು ಸ್ತುತಿಸುತ್ತೇವೆ । ಶಂ—ಸುಖವನ್ನೂ । ಯೋಃ ಚ—ಭಯನಿವಾರಣವನ್ನೂ । ದಾತವೇ—ಉಂಟುಮಾಡಲೆಂದೂ । ಅಗ್ನಿಂ—ಅಗ್ನಿಯನ್ನು ಪ್ರಾರ್ಥಿಸುತ್ತೇವೆ । (ಸಃ—ಅದೇ ಅಗ್ನಿಯು) । ವಿಶ್ವಾಸು—ಸಮಸ್ತವಾದ । ವಿಕ್ಷು—ಪ್ರಜೆಗಳಲ್ಲಿಯೂ । ಅವಿತೇವ—ರಕ್ಷಕನಾದ ರಾಜನಂತೆ ಪ್ರಕಾಶಿಸುತ್ತಾ । ಋಷೂಣಾಂ—ಋಷಿಗಳಾದ ನಮಗೆ । ವಸುಃ—ವಸತಿದಾಯಕನಾಗಿಯೂ । ಹವ್ಯಃ—ಪೂಜ್ಯನಾಗಿಯೂ । ಭುವತ್—ಆಗಿರಲಿ.

॥ ಭಾವಾರ್ಥ ॥

ನಮ್ಮ ದ್ವೇಷಿಗಳನ್ನು ದೂರಕ್ಕೆ ಓಡಿಸಲು ನಾವು ಅಗ್ನಿಯನ್ನು ಸ್ತುತಿಸುತ್ತೇವೆ. ನಮಗೆ ಸುಖವನ್ನೂ, ಭಯನಿವಾರಣವನ್ನೂ ಉಂಟುಮಾಡಲೆಂದು ಅದೇ ಅಗ್ನಿಯನ್ನೇ ಪ್ರಾರ್ಥಿಸುತ್ತೇವೆ. ಅದೇ ಅಗ್ನಿಯು ಸಮಸ್ತವಾದ ಪ್ರಜೆಗಳಲ್ಲಿಯೂ ರಕ್ಷಕನಾದ ರಾಜನಂತೆ ಪ್ರಕಾಶಿಸುತ್ತಾ ಋಷಿಗಳಾದ ನಮಗೆ ವಸತಿದಾಯಕನಾಗಿಯೂ ಪೂಜ್ಯನಾಗಿಯೂ ಆಗಿರಲಿ

English Translation

We praise Agni that he may keep off our enemies; we praise Agni that he may give us joy and security; he may well be worshipped as the giver of dwellings to the Rishis, he who is as it were the protector of men.

## ಎಪ್ಪತ್ತೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಹವಿಷ್ಕೃಣುಧ್ವಮಿತ್ಯಷ್ಟಾದಶರ್ಚಂ ತೃತೀಯಂ ಸೂಕ್ತಂ । ಅತ್ರಾನುಕ್ರಮಣಿಕಾ । ಹವಿರ್ದೂರ್ಧ್ವ್ಯನಾ ಹರ್ಯತಃ ಪ್ರಾಗಾಥೋ ಹವಿಷಾಂ ಸ್ತುತಿರ್ವೇತಿ। ಪ್ರಗಾಥಪುತ್ರೋ ಹರ್ಯತ ಋಷಿಃ। ಪರಂ ಗಾಯತ್ರಂ ಪ್ರಾಗ್ವತ್ಸಪ್ರೇರಿತಿ ಪರಿಭಾಷಯಾ ಗಾಯತ್ರೀ ಛಂದಃ । ಆಗ್ನೇಯಂ ತ್ವಿತ್ಯುಕ್ತತ್ವಾದಗ್ನಿರ್ದೇವತಾ ಯದ್ವಾ ಹವಿಷಾಂ ಸ್ತೂಯಮಾನತ್ವಾತ್ತದ್ದೇವತಾಕಂ ವಾ ॥ ಸೂಕ್ತವಿನಿಯೋಗೋ ಲೈಂಗಿಕಃ ॥

ಅನುವಾದವು—ಹವಿಷ್ಕೃಣುಧ್ವಂ ಎಂಬ ಈ ಸೂಕ್ತವು ಎಂಟನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು ಇದರಲ್ಲಿ ಹದಿನೆಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪ್ರಗಾಥಪುತ್ರನಾದ ಹರ್ಯತ ಎಂಬುವನು ಋಷಿಯು: ಗಾಯತ್ರೀಛಂದಸ್ಸು. ಅಗ್ನಿಯು ದೇವತೆಯು, ಅಥವಾ ಹವಿಸ್ಸಿನ ಸ್ತುತಿ ಇರುವುದರಿಂದ ಆ ಸ್ತುತಿಯೇ ದೇವತೆಯು. ಅನುಕ್ರಮಣಿಕೆಯಲ್ಲಿ-ಹವಿರ್ದೂರ್ಧ್ವ್ಯನಾ ಹರ್ಯತಃ ಪ್ರಾಗಾಥೋ ಹವಿಷಾಂ ಸ್ತುತಿರ್ವಾ ಎಂದುಹೇಳಿರುವುದು. ವಿನಿಯೋಗವು ಲೈಂಗಿಕವು.

### ಸೂಕ್ತ—೭೨

ಮಂಡಲ—೮ ॥ ಅನುವಾಕ—೮ ॥ ಸೂಕ್ತ—೭೨ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೧೪, ೧೫, ೧೬, ೧೭ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೮ ॥
ಋಷಿಃ—ಹರ್ಯತಃ ಪ್ರಾಗಾಥಃ ॥
ದೇವತಾ—ಅಗ್ನಿರ್ಹವೀಂಷಿ ವಾ ॥
ಛಂದಃ—ಗಾಯತ್ರೀ ॥

। ಸಂಹಿತಾಪಾಠಃ ।

ಹವಿಷ್ಕೃಣುಧ್ವಮಾ ಗಮದಧ್ವರ್ಯುರ್ವನತೇ ಪುನಃ ।
ವಿದ್ವಾಁ ಅಸ್ಯ ಪ್ರಶಾಸನಂ ॥ ೧ ॥

॥ ಪದಪಾಠಃ ॥

ಹವಿಃ । ಕೃಣುಧ್ವಂ । ಆ । ಗಮತ್ । ಅಧ್ವರ್ಯುಃ । ವನತೇ । ಪುನರಿತಿ ।

ವಿದ್ವಾನ್ । ಅಸ್ಯ । ಪ್ರಶಾಸನಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಧ್ವರ್ಯುಸಂಬಂಧಿನೋ ಹವಿಷ್ಕರ್ತಾರಃ ಯೂಯಂ ಹವಿಃ ಕೃಣುಧ್ವಂ । ಕುರುಧ್ವಂ ಶೀಘ್ರಂ । ಯತ ಆ ಗಮತ್ ಆಜಗಾಮಾಯಮಗ್ನಿಃ ಅತಃ ಕೃಣುಧ್ವಂ । ಅಧ್ವರ್ಯುಃ ಪುನರ್ವನತೇ । ಸಂಭಜತೇ । ಕಿಂ। ಸಾಮರ್ಥ್ಯಾದಧ್ವರಮಿತಿ ಗಮ್ಯತೇ । ಕೀದೃಶೋಽಧ್ವರ್ಯುಃ। ಅಸ್ಯ ಹವಿಷಃ ಪ್ರಶಾಸನಂ ಪ್ರದಾನಂ ವಿದ್ವಾನ್ ॥

॥ ಪ್ರತಿಪದಾರ್ಥ ॥

(ಎಲೈ ಹವಿರ್ದಾತೃಗಳೇ) **ಆ ಗಮತ್**—ಅಗ್ನಿಯು ಇಲ್ಲಿ ಬಂದಿದ್ದಾನೆ । **ಹವಿಃ**—ಹವಿಸ್ಸನ್ನು। **ಕೃಣುಧ್ವಂ**—ಅವನಿಗರ್ಪಿಸಿರಿ । **ಅಸ್ಯ**—ಈ ಹವಿಸ್ಸಿನ । **ಪ್ರಶಾಸನಂ**—ಅರ್ಪಣೆಯನ್ನು । **ವಿದ್ವಾನ್**—ಅರಿತಿರುವ । **ಅಧ್ವರ್ಯುಃ**—ಅಧ್ವರ್ಯುವು । **ಪುನಃ**—ತಿರುಗಿಯೂ । **ವನತೇ**—ಯಜ್ಞವನ್ನಾಚರಿಸುತ್ತಾನೆ

॥ ಭಾವಾರ್ಥ ॥

ಎಲೈ ಹವಿರ್ದಾತೃಗಳೇ, ಅಗ್ನಿಯು ಇಲ್ಲಿಗೆ ಬಂದಿದ್ದಾನೆ. ಹವಿಸ್ಸನ್ನು ಅವನಿಗರ್ಪಿಸಿರಿ. ಈ ಹವಿಸ್ಸಿನ ಅರ್ಪಣೆಯನ್ನು ಅರಿತಿರುವ ಅಧ್ವರ್ಯುವು ಪುನಃ ಯಜ್ಞವನ್ನಾಚರಿಸುತ್ತಾನೆ.

English Translation

(Priests), present the oblation, for (Agni) has come; the Adhwaryu again offers (the sacrifice), well-skilled in its offerings.

॥ ಸಂಹಿತಾಪಾಠಃ ॥

ನಿ ತಿಗ್ಮಮಭ್ಯಂ೧ಶುಂ ಸೀದದ್ಧೋತಾ ಮನಾವಧಿ ।

ಜುಷಾಣೋ ಅಸ್ಯ ಸಖ್ಯಂ ॥ ೨ ॥

॥ ಪದಪಾಠ ॥

ನಿ । ತಿಗ್ಮಂ । ಅಭಿ । ಅಂಶುಂ । ಸೀದತ್ । ಹೋತಾ । ಮನೌ । ಅಧಿ ।

ಜುಷಾಣಃ । ಅಸ್ಯ । ಸಖ್ಯಂ ॥ ೨ ॥

॥ ಸಾಯಣಭಾಷ್ಯಂ ॥

ಹೋತರ್ತ್ವಿಕ್ ತಿಗ್ಮಂ ತೀಕ್ಷ್ಣಮಂಶುಂ ತಮಗ್ನಿಂ ನಿ ಷೀದತ್ । ನಿಷೀದತಿ । ಕೀದೃಶೋಃ ಹೋತಾ । ಅಸ್ಯಾಗ್ನೇಃ ಸಖ್ಯಂ ಮನಾವಧಿ ಯಜಮಾನೇ ಜುಷಾಣಃ ॥ ಅಧೀತಿ ಸಪ್ತಮ್ಯರ್ಥಾನುವಾದೀ ॥

॥ ಪ್ರತಿಪದಾರ್ಥ ॥

ಮನಾವಧಿ—ಯಜಮಾನನಲ್ಲಿ ಸ್ಥಾಪಿತವಾಗಿರುವ । ಅಸ್ಯ—ಈ ಅಗ್ನಿಯ । ಸಖ್ಯಂ—ಮಿತ್ರತ್ವವನ್ನು ಜುಷಾಣಃ—ಶ್ಲಾಘಿಸಿ ಸಂತೋಷಪಡುತ್ತಿರುವ । ಹೋತಾ—ಹೋತೃವು । ತಿಗ್ಮಂ—ತೀಕ್ಷ್ಣವಾದ । ಅಂಶುಂ ಅಭಿ—ಅಗ್ನಿಯ ಜ್ವಾಲೆಯ ಸಮೀಪದಲ್ಲಿ । ನಿ ಷೀದತ್—ಕುಳಿತುಕೊಳ್ಳುತ್ತಾನೆ

॥ ಭಾವಾರ್ಥ ॥

ಯಜಮಾನನಲ್ಲಿ ಸ್ಥಾಪಿತವಾಗಿರುವ ಈ ಅಗ್ನಿಯ ಮಿತ್ರತ್ವವನ್ನು ಶ್ಲಾಘಿಸಿ ಸಂತೋಷಪಡುತ್ತಿರುವ ಹೋತೃವು ತೀಕ್ಷ್ಣವಾದ ಅಗ್ನಿಯ ಜ್ವಾಲೆಯ ಸಮೀಪದಲ್ಲಿ ಕುಳಿತುಕೊಳ್ಳುತ್ತಾನೆ.

English Translation

The Hotri sits down by (Agni's) hot flame, rejoicing in his friendship towards the offerer

॥ ಸಂಹಿತಾಪಾಠಃ ॥

ಅಂತರಿಚ್ಛಂತಿ ತಂ ಜನೇ ರುದ್ರಂ ಪರೋ ಮನೀಷಯಾ ।
ಗೃಭ್ಣಂತಿ ಜಿಹ್ವಯಾ ಸಸಂ ॥ ೩ ॥

॥ ಪದಪಾಠಃ ॥

ಅಂತಃ । ಇಚ್ಛಂತಿ । ತಂ । ಜನೇ । ರುದ್ರಂ । ಪರಃ । ಮನೀಷಯಾ ।
ಗೃಭ್ಣಂತಿ । ಜಿಹ್ವಯಾ । ಸಸಂ ॥ ೩ ॥

॥ ಸಾಯಣಭಾಷ್ಯಂ ॥

ತಂ ರುದ್ರಂ । ರುದ್ದುಃಖಂ । ತಸ್ಯ ದ್ರಾವಯಿತಾರಂ । ಅಥವಾ ರುತ್ ಸ್ತುತಿಃ । ತಯಾ ಗಂತವ್ಯಂ । ಸ್ತುತ್ಯಮಿತ್ಯರ್ಥಃ । ತಾದೃಶಮಗ್ನಿಂ ಜನೇ ಯಜಮಾನಾರ್ಥಂ ಮನೀಷಯಾ ಸ್ವಪ್ರಜ್ಞಾನೇನ ಪರಃ ಪರಸ್ತಾತ್ಪರೋದೇಶ ಇಚ್ಛಂತಿ ಸ್ಥಾಪಯಿತುಂ । ತ ಏವ ಪಶ್ಚಾತ್ಸಸಂ ಸ್ವಪಂತಮಗ್ನಿಂ ಜಿಹ್ವಯಾ ॥ ಜನ್ಯೇ ಜನಕಶಬ್ದಃ ॥ ಜಿಹ್ವಾಪ್ರಭವಯಾ ಸ್ತುತ್ಯಾ ಗೃಭ್ಣಂತಿ । ಗೃಹ್ಣಂತ್ಯಂಗುಲಿಭಿಃ । ಅತ್ರ ಯಾಸ್ಕಃ । ಸ್ವಪ್ನಮೇತನ್ಮಧ್ಯಮಂ ಜ್ಯೋತಿರನಿತ್ಯದರ್ಶನಂ । ನಿ. ೫-೩ । ಇತಿ ॥

॥ ಪ್ರತಿಪದಾರ್ಥ ॥

**ರುದ್ರಂ**—ದುಃಖನಿವಾರಕನಾದ । **ತಂ**—ಅಗ್ನಿಯನ್ನು । **ಜನೇ**—ಯಜಮಾನನಿಗಾಗಿ । **ಮನೀಷಯಾ**—ತಮ್ಮ ಪ್ರಜ್ಞೆಯಿಂದ । **ಅಂತಃಪರಃ**—ಮುಂಭಾಗದ ಪ್ರದೇಶದಲ್ಲಿ । **ಇಚ್ಛಂತಿ**—ಸ್ಥಾಪಿಸಲಿಚ್ಛಿಸುತ್ತಾರೆ । **ಸಸಂ**—ಸುಪ್ತನಾಗಿರುವ ಅಗ್ನಿಯನ್ನು । **ಜಿಹ್ವಯಾ**—ಜಿಹ್ವೆಯಿಂದ ಉತ್ಪನ್ನವಾದ ಸ್ತುತಿಯೊಡನೆ । **ಗೃಭ್ಣಂತಿ**—ಪರಿಗ್ರಹಿಸುತ್ತಾರೆ.

॥ ಭಾವಾರ್ಥ ॥

ದುಃಖನಿವಾರಕನಾದ ಅಗ್ನಿಯನ್ನು ಯಜಮಾನನಿಗಾಗಿ ತಮ್ಮ ಪ್ರಜ್ಞೆಯಿಂದ ಮುಂಭಾಗವ ಪ್ರದೇಶದಲ್ಲಿ ಸ್ಥಾಪಿಸಲಿಚ್ಛಿಸುತ್ತಾರೆ. ಸುಪ್ತನಾಗಿರುವ ಅಗ್ನಿಯನ್ನು ಜಿಹ್ವೆಯಿಂದ ಉತ್ಪನ್ನವಾದ ಸ್ತುತಿಯೊಡನೆ ಪರಿಗ್ರಹಿಸುತ್ತಾರೆ.

English Translation

For the sake of the offerer, they seek by their skill to place Rudra in the fore front; they seize him, as he sleeps, with their tongue.

॥ ಸಂಹಿತಾಪಾಠಃ ॥

ಜಾಮ್ಯತೀತಪೇ ಧನುರ್ವಯೋಧಾ ಅರುಹದ್ವನಂ ।
ದೃಷದಂ ಜಿಹ್ವಯಾವಧೀತ್ ॥ ೪ ॥

॥ ಪದಪಾಠಃ ॥

ಜಾಮಿ । ಅತೀತಪೇ । ಧನುಃ । ವಯಃಽಧಾಃ । ಅರುಹತ್ । ವನಂ ।
ದೃಷದಂ । ಜಿಹ್ವಯಾ । ಆ । ಅವಧೀತ್ ॥ ೪ ॥

॥ ಸಾಯಣಭಾಷ್ಯಂ ॥

ವಯೋಧಾ ಅನ ಸ್ಯ ದಾತಾಗ್ನಿರ್ಮಧ್ಯಮಸ್ಥಾನೋ ಜಾಮಿ ಪ್ರವೃದ್ಧಂ ಸರ್ವಮತಿರಿಚ್ಯ ವರ್ತಮಾನಂ । ಜಾಮ್ಯತಿರೇಕನಾಮೇತಿ ಯಾಸ್ಕಃ । ನಿ. ೪-೨೦ । ಧನುರ್ಧನ್ವಾಂತರಿಕ್ಷಮತೀತಪೇ । ಅತಿತಪತಿ । ಅಥವಾಗ್ನೇರ್ಜಾಮಿ ಗಮನಶೀಲಂ ಧನುರತಿತಪತೇ ಸ್ವವಿರೋಧಿನಂ । ಸ ಚ ವಯೋಧಾ ಅನ್ನಸ್ಯ ದಾತಾಗ್ನಿರ್ವನಮುದಕಮರುಹತ್ । ಆರೋಹತಿ ವಿಮೋಕಾಯ । ತದರ್ಥಂ ಜಿಹ್ವಯಾ ಜ್ವಾಲಯಾ ದೃಷದಂ ಮೇಘಮವಧೀತ್ । ಹಂತಿ । ದಾವಾಗ್ನಿಪಕ್ಷೇ ವನಂ ತರುಸಮೂಹಂ ಹಂತಿ । ಜಿಹ್ವಯಾ ದೃಷದಂ ಕಠಿನಮಪಿ ಪಾಷಾಣಂ ಭಿನತ್ತೀತಿ ॥

॥ ಪ್ರತಿಪದಾರ್ಥ ॥

**ವಯೋಧಾಃ**— ಅನ್ನದಾತನಾದ ಅಗ್ನಿಯು । **ಜಾಮಿ**— ಪ್ರವೃದ್ಧವಾಗಿ ಬೆಳೆದಿರುವ । **ಧನುಃ**— ಅಂತರಿಕ್ಷವನ್ನು । **ಅತೀತಪೇ**— ದಹಿಸುವಂತೆ ಮಾಡುತ್ತಾನೆ । **ವನಂ**— ಉದಕವನ್ನು । **ಅರುಹತ್**— ಹತ್ತಿದ್ದಾನೆ । **ಜಿಹ್ವಯಾ**— ತನ್ನ ನಾಲಿಗೆಯಿಂದ । **ದೃಷದಂ**— ಮೇಘವನ್ನು । **ಆ ಅವಧೀತ್**— ಸೀಳುತ್ತಾನೆ.

॥ ಭಾವಾರ್ಥ ॥

ಅನ್ನದಾತನಾದ ಅಗ್ನಿಯು ಪ್ರವೃದ್ಧವಾಗಿ ಬೆಳೆದಿರುವ ಅಂತರಿಕ್ಷವನ್ನು ದಹಿಸುವಂತೆ ಮಾಡುತ್ತಾನೆ. ಉದಕವನ್ನು ಹತ್ತಿದ್ದಾನೆ ತನ್ನ ನಾಲಿಗೆಯಿಂದ ಮೇಘವನ್ನು ಸೀಳುತ್ತಾನೆ.

English Translation

(Agni), the giver of food, scorches the vast bow (of the sky); he mounts the water; he smites the cloud with his tongue.

॥ ಸಂಹಿತಾಪಾಠಃ ॥

ಚರನ್ವತ್ಸೋ ರುಶನ್ನಿಹ ನಿದಾತಾರಂ ನ ವಿಂದತೇ ।
ವೇತಿ ಸ್ತೋತವ ಅಂಬ್ಯಂ ॥ ೫ ॥

॥ ಪದಪಾಠಃ ॥

ಚರನ್ । ವತ್ಸಃ । ರುಶನ್ । ಇಹ । ನಿऽದಾತಾರಂ । ನ । ವಿಂದತೇ ।
ವೇತಿ । ಸ್ತೋತವೇ । ಅಂಬ್ಯಂ ॥ ೫ ॥

॥ ಸಾಯಣಭಾಷ್ಯಂ ॥

ವತ್ಸಃ । ವತ್ಸವಚ್ಚಾಪಲೇನ ಧಾವನಾದ್ವತ್ಸ ಇತ್ಯುಪಚರ್ಯತೇ । ಅಥವಾ ವತ್ಸ ಇವ ಸಂಚರನ್ । ಇವಶಬ್ದೋ ಲುಪ್ಯತೇ । ರುಶಚ್ಛ್ವೇತೋ ಭವನ್ನಿಹಾಸ್ಮಿಲ್ಲೋಕೇ ನಿದಾತಾರಂ ನಿರೋಧಕಂ ನ ವಿಂದತೇ । ನ ಲಭತೇ । ಕಿಂತು ಸ್ತೋತವೇ ಸ್ತೋತುಮಂಬ್ಯಂ ಸ್ತೋತಾರಂ ಸ್ವಯಂ ವೇತಿ । ಕಾಮಯತೇ । ಅಥವಾತ್ರ ವೈದ್ಯುತೋಽಗ್ನಿರುಚ್ಯತೇ । ವೈದ್ಯುತೋಽಯಂ ರುಶಂಶ್ಚರಂಶ್ಚೇಹಾಂತರಿಕ್ಷೇ ವತ್ಸಃ ಸರ್ವದಾ ವಸನ್ ವತ್ಸಸ್ಥಾನೀಯೋ ವಾ ಸನ್ನಿದಾತಾರಂ ನಿರೋಧಕಂ ನ ವಿಂದತೇ । ಕಿಂತು ಸ್ತೋತುಮಂಬ್ಯಂ ಮಾಧ್ಯಮಿಕಾಂ ವಾಚಂ ವೇತಿ ॥

॥ ಪ್ರತಿಪದಾರ್ಥ ॥

**ವತ್ಸಃ** (ಇವ) **ಚರನ್**—ಎಳೆಯ ಕರುವಿನಂತೆ ಸಂಚರಿಸುವವನೂ । **ರುಶನ್**—ಪ್ರಕಾಶಮಾನನೂ ಆದ ಅಗ್ನಿಯು । **ಇಹ**—ಈ ಲೋಕದಲ್ಲಿ । **ನಿದಾತಾರಂ**—ತನ್ನನ್ನು ತಡೆಗಟ್ಟುವವನನ್ನು । **ನ ವಿಂದತೇ**-ಹೊಂದುವುದಿಲ್ಲ । **ಸ್ತೋತವೇ**—ತನ್ನನ್ನು ಪ್ರಶಂಸಿಸಲು । **ಅಸ್ಪೃಧಂ**—ಸ್ತುತಿಕರ್ತನನ್ನು ಹೊಂದಲು । **ವೇತಿ**—ಇಚ್ಛಿಸುತ್ತಾನೆ । **ಅಥವಾ ವತ್ಸಃ**—ಸರ್ವದಾ ಅಂತರಿಕ್ಷದಲ್ಲೇ ವಾಸಿಸುತ್ತಾ । **ಚರನ್**—ಸಂಚರಿಸುವವನೂ । **ರುಶನ್**—ಪ್ರಕಾಶಮಾನನೂ ಆದ ವೈದ್ಯುತಾಗ್ನಿಯು । **ನಿದಾತಾರಂ**—ತನ್ನನ್ನು ತಡೆಗಟ್ಟುವವನನ್ನು । **ನ ವಿಂದತೇ**—ಹೊಂದುವುದಿಲ್ಲ । **ಸ್ತೋತವೇ**—ತನ್ನನ್ನು ಪ್ರಶಂಸಿಸಲು । **ಅಸ್ಪೃಧಃ**—ಮಾಧ್ಯಮಿಕಾ ವಾಕ್ಕನ್ನು । **ವೇತಿ**—ಇಚ್ಛಿಸುತ್ತಾನೆ.

॥ ಭಾವಾರ್ಥ ॥

ಎಳೆಯ ಕರುವಿನಂತೆ ಎಲ್ಲೆಲ್ಲೂ ಸಂಚರಿಸುವವನೂ, ಪ್ರಕಾಶಮಾನನೂ ಆದ ಅಗ್ನಿಯು ಈ ಲೋಕದಲ್ಲಿ ತನ್ನನ್ನು ತಡೆಗಟ್ಟುವವನನ್ನು ಹೊಂದುವುದಿಲ್ಲ. ತನ್ನನ್ನು ಪ್ರಶಂಸಿಸುವ ಸ್ತುತಿಕರ್ತನನ್ನು ಹೊಂದಲು ಇಚ್ಛಿಸುತ್ತಾನೆ

English Translation

Roaming like a calf and bright-shining, he finds here no hinderer ; he seeks a chanter to praise him

॥ ಸಂಹಿತಾಪಾಠಃ ॥

ಉತೋ ನ್ವಸ್ಯ ಯನ್ಮಹದಶ್ವಾವದ್ಯೋಜನಂ ಬೃಹತ್ ।
ದಾಮಾ ರಥಸ್ಯ ದದೃಶೇ ॥ ೬ ॥

॥ ಪದಪಾಠಃ ॥

ಉತೋ ಇತಿ । ನು । ಅಸ್ಯ । ಯತ್ । ಮಹತ್ । ಅಶ್ವऽವತ್ । ಯೋಜನಂ । ಬೃಹತ್ ।
ದಾಮಾ । ರಥಸ್ಯ । ದದೃಶೇ ॥ ೬ ॥

॥ ಸಾಯಣಭಾಷ್ಯಂ ॥

**ಉತೋ ಅಪಿ ಚ ನು ಕ್ಷಿಪ್ರಮಸ್ಯಾಗ್ನೇರ್ಯನ್ಮಹನ್ಮಾಹಾತ್ಮ್ಯಯುಕ್ತಮಶ್ವಾವತ್ಸಂವೃದ್ಧಾಶ್ವವದ್ಬೃಹನ್ಮಹತ್ಸ್ಥೂಲಂ ಯೋಜನಂ ದೃಶ್ಯತೇ । ತದೇವಾಹ । ರಥಸ್ಯ ದಾಮಾ ದದೃಶೇ ದೃಶ್ಯತೇ । ಅಂತರಿಕ್ಷೇ ರಥೇಽಶ್ವಾನ್ನಿಯೋಜಯತೀತ್ಯರ್ಥಃ । ತದಾ ದುಹಂತೀತ್ಯುತ್ತರತ್ರ ಸಂಬಂಧಃ ॥**

॥ ಪ್ರತಿಪದಾರ್ಥ ॥

**ಉತೋ**—ಮತ್ತು । **ಯತ್**—ಯಾವಾಗ । **ಅಸ್ಯ**—ಆದಿತ್ಯನ । **ಮಹಃ**—ಮಾಹಾತ್ಮ್ಯದಿಂದ ಕೂಡಿದುದೂ । **ಅಶ್ವಾವತ್**—ಅಶ್ವಸಂಬದ್ಧವಾದುದೂ । **ಬೃಹತ್**—ಸ್ಥೂಲವಾದುದೂ ಆದ । **ಯೋಜನಂ**—ರಥದೊಡನೆ ಸೇರುವಿಕೆಯು ಉಂಟಾಗುವುದೋ । **ನು**—ಆ ಒಡನೆಯೇ । **ರಥಸ್ಯ**—ಅವನ ರಥದ । **ದಾಮಾ**—ಸಂಚಾರಸರಣಿಯು । **ದದೃಶೇ**—ಗೋಚರವಾಗುತ್ತದೆ

॥ ಭಾವಾರ್ಥ ॥

ಯಾವಾಗ ಆದಿತ್ಯನ ಮಾಹಾತ್ಮ್ಯದಿಂದ ಕೂಡಿದುದೂ ಅಶ್ವಸಂಬದ್ಧವಾದುದೂ ಸ್ಥೂಲವಾದುದೂ ಆದ ರಥದೊಡನೆ ಸೇರುವಿಕೆಯು ಉಂಟಾಗುವುದೋ ಆ ಒಡನೆಯೇ ಅವನ ರಥದ ಸಂಚಾರಸರಣಿಯು ಗೋಚರವಾಗುತ್ತದೆ.

English Translation

As soon as the great stout harness of his horses is seen (in the sky), the traces of his chariot

॥ ಸಂಹಿತಾಪಾಠಃ ॥

ದುಹಂತಿ ಸಪ್ತೈಕಾಮುಪ ದ್ವಾ ಪಂಚ ಸೃಜತಃ ।
ತೀರ್ಥೇ ಸಿಂಧೋರಧಿ ಸ್ವರೇ ॥ ೭ ॥

॥ ಪದಪಾಠಃ ॥

ದುಹಂತಿ । ಸಪ್ತ । ಏಕಾಂ । ಉಪ । ದ್ವಾ । ಪಂಚ । ಸೃಜತಃ ।
ತೀರ್ಥೇ । ಸಿಂಧೋಃ । ಅಧಿ । ಸ್ವರೇ ॥ ೭ ॥

॥ ಸಾಯಣಭಾಷ್ಯಂ ॥

**ಅಭಿಷ್ಟವೇ ಘರ್ಮದಾಹೇ ದುಹಂತಿ ಸಪ್ತೇತ್ಯೇಷಾ । ಸೂತ್ರಿತಂ ಚ । ದುಹಂತಿ ಸಪ್ತೈಕಾಂ ಸಮಿದ್ಧೋ ಅಗ್ನಿರಶ್ವಿನಾ । ಆ. ೪-೭ । ಇತಿ ॥ ಗ್ರಾವಸ್ತೋತ್ರೇಽಪ್ಯೇಷಾ । ಸೂತ್ರಿತಂ ಚ । ದುಹಂತಿ ಸಪ್ತೈಕಾ-ಮುಧುಕ್ಷತ್ಪಿಪ್ಯುಷೀಮಿಷಂ । ಆ. ೫-೧೨ । ಇತಿ ॥**

**ಸಪ್ತರ್ತ್ವಿಜ ಏಕಾಂ ಘರ್ಮಂ ದುಹಂತಿ । ತೇಷಾಂ ಮಧ್ಯೇ ದ್ವಾ ದ್ವೌ ಪ್ರತಿಪ್ರಸ್ಥಾತಾ-ರಾವಧ್ವರ್ಯೂ ಪಂಚಾನ್ಯಾನುಪ ಸೃಜತಃ । ಪ್ರಯೋಜಯತಃ । ಕೇ ತೇ ಪಂಚ ತ ಉಚ್ಯಂತೇ । ಯಜ-ಮಾನಂ ಬ್ರಾಹ್ಮಣಂ ಹೋತಾರಮಾಗ್ನೀಧ್ರಂ ಪ್ರಸ್ತೋತಾರಮಿತಿ । ಕುತ್ರೇತಿ ಉಚ್ಯತೇ । ಸಿಂಧೋಃ**

ಕಸ್ಯಾಶ್ಚಿತ್ಸರಸ್ವತ್ಯಾದಿಪ್ರಖ್ಯಾತಾಯಾ ನದ್ಯಾಸ್ತೀರ್ಥೇ। ಯತ್ರಾಯಮೃಷಿರ್ಯಜತಿ ತತ್ರ। ಸ್ವರೇಽಧಿ॥ ಸ್ವರತಿಃ ಶಬ್ದಕರ್ಮಾ । ಅಧೀತಿ ಸಪ್ತಮ್ಯರ್ಥಾನುವಾದೀ॥ ಸ್ವರೋಪೇತೇ ಶಬ್ದವತಿ । ಯತ್ತೀರ್ಥಮೃತ್ವಿಜಾಂ ಓಂ ಶ್ರಾವಯೇತ್ಯಾದಿಶಬ್ದೈಃ ಶಬ್ದವದ್ಭವತಿ ತಸ್ಮಿನ್ನಿತ್ಯರ್ಥಃ॥

॥ ಪ್ರತಿಪದಾರ್ಥ ॥

**ಸಿಂಧೋಃ**—ಪ್ರಸಿದ್ಧವಾದ ನದಿಯ । **ಸ್ವರೇ ಅಧಿ**—ಶಬ್ದಯುಕ್ತವಾದ । **ತೀರ್ಥೇ**—ನೀರಿನ ದಡದ ಮೇಲೆ। **ಸಪ್ತ**—ಏಳು ಜನ ಋತ್ವಿಕ್ಕುಗಳೂ। **ಏಕಾಂ**—ಒಂದೇ ಆದ ಘರ್ಮವನ್ನು । **ದುಹಂತಿ**—ಕರೆಯುತ್ತಾರೆ। **ದ್ವಾ**—ಅವರಲ್ಲಿ ಇಬ್ಬರು । **ಪಂಚ**—ಉಳಿದ ಐದು ಜನಕ್ಕೂ । **ಉಪ ಸೃಜತಃ**—ನಿರ್ದೇಶವನ್ನು ಕೊಡುತ್ತಾನೆ.

॥ ಭಾವಾರ್ಥ ॥

ಪ್ರಸಿದ್ಧವಾದ ನದಿಯ ಶಬ್ದಯುಕ್ತವಾದ ನೀರಿನ ದಡದ ಮೇಲೆ ಏಳು ಜನ ಋತ್ವಿಕ್ಕುಗಳೂ ಸಹ ಒಂದೇ ಆದ ಘರ್ಮವನ್ನು ಕರೆಯುತ್ತಾರೆ ಅವರಲ್ಲಿ ಪ್ರತಿಪ್ರಸ್ಥಾತೃಗಳಿಬ್ಬರೂ ಸಹ ಯಜಮಾನ, ಬ್ರಹ್ಮ, ಹೋತೃ, ಆಗ್ನೀಧ್ರ ಮತ್ತು ಪ್ರಸ್ತೋತಾ ಎಂಬ ಐದು ಜನಕ್ಕೂ ನಿರ್ದೇಶವನ್ನು ಕೊಡುತ್ತಾರೆ.

## English Translation

Seven milk one (cow), the two direct the five, on the resounding shore of the river

॥ ವಿಶೇಷವಿಷಯಗಳು ॥

ಅಭಿಪ್ಲವೇಷ್ಟಿಯಲ್ಲಿ ಘರ್ಮದಾಹದಲ್ಲಿ **ದುಹಂತಿ ಸಪ್ತ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ದುಹಂತಿ ಸಪ್ತೈಕಾಂ ಸಮಿದ್ಧೋ ಅಗ್ನಿರಶ್ವಿನಾ** ಎಂಬ ಸೂತ್ರದಿಂದ (ಆ. ೪-೭) ವಿವೃತವಾಗಿರುವುದು. ಮತ್ತು ಗ್ರಾವಸ್ತೋತ್ರದಲ್ಲಿಯೂ ಸಹ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ದುಹಂತಿ ಸಪ್ತೈಕಾಮುಧುಕ್ಷತ್ಸ್ವಿಪ್ರ್ಯೃಷೀಮಿಷಂ** ಎಂಬ ಸೂತ್ರದಿಂದ (ಆ ೫-೧೨) ವಿವೃತವಾಗಿರುವುದು

॥ ಸಂಹಿತಾಪಾಠಃ ॥

**ಆ ದಶಭಿರ್ವಿವಸ್ವತ ಇಂದ್ರಃ ಕೋಶಮಚುಚ್ಯವೀತ್ ।**

**ಖೇದಯಾ ತ್ರಿವೃತಾ ದಿವಃ ॥ ೮ ॥**

॥ ಪದಪಾಠಃ ॥

**ಆ । ದಶಽಭಿಃ । ವಿವಸ್ವತಃ । । ಇಂದ್ರಃ। ಕೋಶಂ । ಅಚುಚ್ಯವೀತ್ ।**

**ಖೇದಯಾ । ತ್ರಿಽವೃತಾ । ದಿವಃ ॥ ೮ ॥**

॥ ಸಾಯಣಭಾಷ್ಯಂ ॥

ಪ್ರವರ್ಗ್ಯೇಽಭಿಪ್ಲವೇ ಗ್ರಾವ್ಣೋಽಭಿಷ್ಟವೇ ವಾ ದಶಭಿರಿತ್ಯೇಷಾ । ಸೂತ್ರಿತಂ ಚ । ಆ ದಶಭಿರ್ವಿವಸ್ವತೋ ದುಹಂತಿ ಸಪ್ತೈಕಾಂ । ಆ. ೪-೬ । ಅ. ೫-೧೨ । ಇತಿ ॥

ವಿವಸ್ವತಃ ಪರಿಚರತೋ ಯಜಮಾನಸ್ಯ ದಶಭಿರಂಗುಲೀಭಿರ್ಯಾಚಿತಃ ಸನ್ನಿಂದ್ರಃ ಕೋಶಂ । ಮೇಘನಾಮೈತತ್ । ಉದಕಸೇಚಕಂ ಮೇಘಂ ದಿವೋಽಂತರಿಕ್ಷಸಂಬಂಧಿನಂ ತತ್ಸಕಾಶಾದ್ವಾಚುಚ್ಯವೀತ್ । ವ್ಯದಾರಯದಿತ್ಯರ್ಥಃ । ಕೇನ ಸಾಧನೇನೇತಿ ತದುಚ್ಯತೇ । ತ್ರಿವೃತಾ ತ್ರಿಪ್ರಕಾರವರ್ತನವತಾ ಖೇದಯಾ ರಶ್ಮಿನಾ । ಯುದ್ವಾ । ಅತ್ರೇಂದ್ರಶಬ್ದೇನಾಗ್ನಿರಾದಿತ್ಯೋ ವಾ ಗೃಹ್ಯತೇ । ಖೇದಯಾ ತ್ರಿವೃತೇತಿ ಲಿಂಗಾತ್ ॥

॥ ಪ್ರತಿಪದಾರ್ಥ ॥

**ವಿವಸ್ವತಃ**—ಪೂಜಾನಿರತನಾದ ಯಜಮಾನನ । **ದಶಭಿಃ**—ಹತ್ತು ಅಂಗುಲಿಗಳಿಂದಲೂ ಪ್ರಾರ್ಥಿತನಾದ । **ಇಂದ್ರಃ**—ಇಂದ್ರನು । **ಕೋಶಂ**—ಮೇಘವನ್ನು । **ತ್ರಿವೃತಾ**—ಮೂರುವಿಧವಾದ । **ಖೇದಯಾ**—ರಶ್ಮಿರೂಪವಾದ ಸಾಧನಗಳಿಂದ । **ದಿವಃ**—ಅಂತರಿಕ್ಷದಿಂದ ಚದುರುವಂತೆ । **ಆ ಅಚುಚ್ಯವೀತ್**—ಸೀಳಿಹಾಕಿದ್ದಾನೆ.

॥ ಭಾವಾರ್ಥ ॥

ಪೂಜಾನಿರತನಾದ ಯಜಮಾನನ ಹತ್ತು ಅಂಗುಲಿಗಳಿಂದಲೂ ಪ್ರಾರ್ಥಿತನಾದ ಇಂದ್ರನು ಮೇಘವನ್ನು ಮೂರು ವಿಧವಾದ ರಶ್ಮಿರೂಪವಾದ ಸಾಧನದಿಂದಲೂ ಅಂತರಿಕ್ಷದಿಂದ ಚದುರುವಂತೆ ಸೀಳಿಹಾಕಿದ್ದಾನೆ

English Translation

Invoked by the ten (fingers) of the worshipper, Indra has caused the cloud to fall from heaven by his three-fold ray.

॥ ವಿಶೇಷವಿಷಯಗಳು ॥

ಪ್ರವರ್ಗ್ಯ ಮತ್ತು ಅಭಿಪ್ಲವೇಷ್ಟಿಗಳಲ್ಲಿ ಗ್ರಾವಾಭೀಷ್ಟವದಲ್ಲಿಯೂ ಸಹ **ಆ ದಶಭಿಃ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ದಶಭಿರ್ವಿವಸ್ವತೋ ದುಹಂತಿ ಸಪ್ತೈಕಾಂ** ಎಂಬ ಸೂತ್ರದಿಂದ (ಆ. ೪-೬ ; ೫-೧೨) ವಿವೃತವಾಗಿರುವುದು.

॥ ಸಂಹಿತಾಪಾಠ ॥

ಪರಿ ತ್ರಿಧಾತುರಧ್ವರಂ ಜೂರ್ಣಿರೇತಿ ನವೀಯಸೀ ।
ಮಧ್ವಾ ಹೋತಾರೋ ಅಂಜತೇ ॥ ೯ ॥

॥ ಪದಪಾಠಃ ॥

ಪರಿ । ತ್ರಿಽಧಾತುಃ । ಅಧ್ವರಂ । ಜೂರ್ಣಿಃ । ಏತಿ । ನವೀಯಸೀ ।

ಮಧ್ವಾ । ಹೋತಾರಃ । ಅಂಜತೇ ॥ ೯ ॥

॥ ಸಾಯಣಭಾಷ್ಯಂ ॥

ಅಯಮಗ್ನಿಸ್ತ್ರಿಧಾತುರ್ಲೋಹಿತಶುಕ್ಲಕೃಷ್ಣಭೇದೇನ ತ್ರಿವರ್ಣೋ ಜೂರ್ಣಿರ್ಜವೋ ವೇಗವಾನ್ನವೀಯಸೀ ನವೀಯಸ್ಯಾ ಜ್ವಾಲಯಾಧ್ವರಂ ಪ್ರವರ್ಗ್ಯಮೇತಿ । ಗಚ್ಛತಿ । ಹೋತಾರೋ ಹೋಮನಿಷ್ಪಾದಕಾ ಅಧ್ವರ್ಯ್ವಾದಯೋ ಮಧ್ವಾಜ್ಯಾದಿನಾ ಪರ್ಯಂಜತೇ । ಅಥವಾಗ್ನೇಸ್ತ್ರಿಸ್ತ್ರಿಪ್ರಕಾರಾ ಕ್ಷಿಪ್ರಾ ಜವತರಾ ಜ್ವಾಲಾ ಪರ್ಯೇತಿ ಮಹಾವೀರಂ । ತಂ ಮಧ್ವಾಂಜತ ಇತಿ ॥

॥ ಪ್ರತಿಪದಾರ್ಥ ॥

**ತ್ರಿಧಾತುಃ**—ಕೆಂಪು, ಬಿಳುಪು ಮತ್ತು ಕೃಷ್ಣವರ್ಣಗಳುಳ್ಳದ್ದೂ । **ಜೂರ್ಣಿಃ**—ವೇಗಶಾಲಿಯಾದದ್ದೂ । **ನವೀಯಸೀ**—ನೂತನವಾದದ್ದೂ ಆದ ಜ್ವಾಲೆಯಿಂದಕೂಡಿದ ಅಗ್ನಿಯು । **ಅಧ್ವರಂ**— ಯಜ್ಞಕ್ಕೆ । **ಏತಿ**—ಬರುತ್ತಾನೆ । **ಹೋತಾರಃ**—ಹೋತೃಗಳು । **ಮಧ್ವಾ**—ಮಧುರವಾದ ಆಜ್ಯಾದಿಗಳಿಂದ । **ಪರಿ ಅಂಜತೇ**—ಸುತ್ತಲೂ ಲೇಪಿಸಿ ಅಲಂಕರಿಸುತ್ತಾರೆ.

॥ ಭಾವಾರ್ಥ ॥

ಕೆಂಪು, ಬಿಳುಪು ಮತ್ತು ಕೃಷ್ಣವರ್ಣಗಳುಳ್ಳದ್ದೂ, ವೇಗಶಾಲಿಯಾದದ್ದೂ, ನೂತನವಾದದ್ದೂ ಆದ ಜ್ವಾಲೆಯಿಂದ ಕೂಡಿದ ಅಗ್ನಿಯು ಯಜ್ಞಕ್ಕೆ ಬರುತ್ತಾನೆ ಹೋತೃಗಳು ಮಧುರದಾದ ಆಜ್ಯಾದಿಗಳಿಂದ ಸುತ್ತಲೂ ಲೇಪಿಸಿ ಅಗ್ನಿಯನ್ನು ಅಲಂಕರಿಸುತ್ತಾರೆ.

English Translation

The three-hued fresh impetuous (blaze) goes swiftly round the sacrifice; the priests anoint it with butter

॥ ಸಂಹಿತಾಪಾಠಃ ॥

ಸಿಂಚಂತಿ ನಮಸಾವತಮುಚ್ಚಾಚಕ್ರಂ ಪರಿಜ್ಮಾನಂ ।

ನೀಚೀನಬಾರಮಕ್ಷಿತಂ ॥ ೧೦ ॥

॥ ಪದಪಾಠಃ ॥

ಸಿಂಚಂತಿ । ನಮಸಾ । ಅವತಂ । ಉಚ್ಚಾಽಚಕ್ರಂ । ಪರಿಽಜ್ಮಾನಂ ।

ನೀಚೀನಽಬಾರಂ । ಅಕ್ಷಿತಂ ॥ ೧೦ ॥

॥ ಸಾಯಣಭಾಷ್ಯಂ ॥

ನಮಸಾ ನಮನೇನಾವತಂ ಮಹಾವೀರಮುಚ್ಚಾಚಕ್ರಮುಪರಿಸ್ಥಿತಚಕ್ರಂ ಪರಿಜ್ಮಾನಂ ಪರಿಣ-ತ್ಯಾಭಂ ನೀಚೀನಬಾರಂ ನೀಚೀನದ್ವಾರಮಕ್ಷಿತಮಕ್ಷೀಣಂ ಈದೃಶಂ ಕ್ಷೀರಾದ್ಯವಶೇಷಯುಕ್ತಮಾಹವ-ನೀಯಸ್ಯೋಪರಿ ನಮನೇನ ಸಿಂಚಂತಿ । ಜುಹ್ವತಿ । ಮಹಾವೀರೇಣ ಹ್ಯಾಹವನೀಯೇ ಹೂಯತೇ ॥

॥ ಪ್ರತಿಪದಾರ್ಥ ॥

**ಅವತಂ**—ಮಹಾವೀರಸಂಜ್ಞಕವಾದುದೂ । **ಉಚ್ಚಾಚಕ್ರಂ**—ಮೇಲ್ಭಾಗದಲ್ಲಿ ಚಕ್ರಾಕಾರವುಳ್ಳದ್ದೂ । **ಪರಿಜ್ಮಾನಂ**—ಸರ್ವತ್ರ ವ್ಯಾಪ್ತವಾದುದೂ । **ನೀಚೀನಬಾರಂ**—ಅಧೋಭಾಗದಲ್ಲಿ ದ್ವಾರವುಳ್ಳದ್ದೂ । **ಅಕ್ಷಿತಂ**—ಕ್ಷಯರಹಿತವಾದುದೂ ಆದ ಅಗ್ನಿಜ್ವಾಲೆಯನ್ನು (ಮಹಾವೀರ ಪಾತ್ರೆಯನ್ನು)। **ನಮಸಾ**—ನಮಸ್ಕಾರಪೂರ್ವಕವಾಗಿ। **ಸಿಂಚಂತಿ**—ಆಜ್ಯಾದಿಗಳನ್ನು ಲೇಪಿಸಿ ಅಲಂಕರಿಸುತ್ತಾರೆ

॥ ಭಾವಾರ್ಥ ॥

ಮಹಾವೀರಸಂಜ್ಞಕವಾದುದೂ, ಮೇಲ್ಭಾಗದಲ್ಲಿ ಚಕ್ರಾಕಾರವುಳ್ಳದ್ದೂ, ಸರ್ವತ್ರ ವ್ಯಾಪ್ತವಾದುದೂ, ಅಧೋಭಾಗದಲ್ಲಿ ದ್ವಾರವುಳ್ಳದ್ದೂ, ಕ್ಷಯರಹಿತವಾದುದೂ ಆದ ಅಗ್ನಿಜ್ವಾಲೆಯನ್ನು ನಮಸ್ಕಾರಪೂರ್ವಕವಾಗಿ ಆಜ್ಯಾದಿಗಳನ್ನು ಲೇಪಿಸಿ ಅಲಂಕರಿಸುತ್ತಾರೆ.

## English Translation

They pour out with reverence the inexhaustible cauldron, as it goes round circular above and with an opening below.

॥ ಸಂಹಿತಾಪಾಠಃ ॥

ಅಭ್ಯಾರಮಿದದ್ರಯೋ ನಿಷಿಕ್ತಂ ಪುಷ್ಕರೇ ಮಧು ।

ಅವತಸ್ಯ ವಿಸರ್ಜನೇ ॥ ೧೧ ॥

॥ ಪದಪಾಠಃ ॥

ಅಭಿಽಆರಂ । ಇತ್ । ಅದ್ರಯಃ । ನಿಽಸಿಕ್ತಂ । ಪುಷ್ಕರೇ । ಮಧು ।

ಅವತಸ್ಯ । ವಿಽಸರ್ಜನೇ ॥ ೧೧ ॥

॥ ಸಾಯಣಭಾಷ್ಯಂ ॥

ಅದ್ರಯ ಆದ್ರಿಯಮಾಣಾ ಅಧ್ವರ್ಯ್ವಾದಯೋಽಭ್ಯಾರಮಿದಭಿಗಮ್ಯೈವ ನಿಷಿಕ್ತಮತಿರಿಕ್ತಂ ಮಧು ಪುಷ್ಕರೇ ವಪುಷ್ಕರೇ ಪ್ರವೃದ್ಧ ಉಪಯಮನೀಪಾತ್ರೇ ಸಿಂಚಂತಿ । ಅಗ್ನಿಹೋತ್ರಾರ್ಥಮವತಸ್ಯ ಮಹಾವೀರಸ್ಯ ವಿಸರ್ಜನೇ ವಿಸರ್ಜನಸಮಯೇ ಹೋಮಾನಂತರಂ ಖಲು ಮಹಾವೀರಮಾಸಂಧ್ಯ ಮಾಸಾದಯಂತಿ ॥

॥ ಪ್ರತಿಪದಾರ್ಥ ॥

**ಅವತಸ್ಯ**—ಮಹಾವೀರಸಂಜ್ಞಕವಾದ ಅಗ್ನಿಯ । **ವಿಸರ್ಜನೇ**—(ಆಹುತ್ಯನಂತರದ) ವಿಸರ್ಜನದ ಕಾಲದಲ್ಲಿ । **ಅದ್ರಯಃ**—ಪೂಜ್ಯಬುದ್ಧಿಯುಳ್ಳ ಋತ್ವಿಕ್ಕುಗಳು । **ಅಭ್ಯಾರಮಿತ್**—ಸಮಿಾಪಿಸಿ । **ನಿಷಿಕ್ತಂ**—ಆಹುತ್ಯನಂತರ ಉಳಿದಿರುವ । **ಮಧು**—ಮಧುರವಾದ ಆಜ್ಯವನ್ನು । **ಪುಷ್ಕರೇ**—ವಿಸ್ತೃತವಾರ ಉಪಯಮನೀ ಪಾತ್ರೆಯಲ್ಲಿ (ಸುರಿಯುತ್ತಾರೆ).

॥ ಭಾವಾರ್ಥ ॥

ಮಹಾವೀರಸಂಜ್ಞಕವಾದ ಆಹುತ್ಯನಂತರ ವಿಸರ್ಜನಕಾಲದಲ್ಲಿ ಪೂಜ್ಯಬುದ್ಧಿಯುಳ್ಳ ಋತ್ವಿಕ್ಕುಗಳು ಅಗ್ನಿಯನ್ನು ಸಮಿಾಪಿಸಿ ಆಹುತ್ಯನಂತರ ಉಳಿದಿರುವ ಮಧುರವಾದ ಆಜ್ಯವನ್ನು ವಿಸ್ತೃತವಾದ ಉಪಯಮನೀ ಪಾತ್ರೆಯಲ್ಲಿ ಸುರಿಯುತ್ತಾರೆ.

## English Translation

The reverent priests drawing near pour the superfluous butter into the large (spoon), when they set the cauldron down.

॥ ಸಂಹಿತಾಪಾಠಃ ॥

ಗಾವ ಉಪಾವತಾವತಂ ಮಹೀ ಯಜ್ಞಸ್ಯ ರಪ್ಸುದಾ ।

ಉಭಾ ಕರ್ಣಾ ಹಿರಣ್ಯಯಾ ॥ ೧೨ ॥

॥ ಪದಪಾಠಃ ॥

ಗಾವಃ । ಉಪ । ಅವತ । ಅವತಂ । ಮಹೀ ಇತಿ । ಯಜ್ಞಸ್ಯ । ರಪ್ಸುದಾ ।

ಉಭಾ । ಕರ್ಣಾ । ಹಿರಣ್ಯಯಾ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಗಾವೋ ಘರ್ಮದುಘಾಃ ಯೂಯಮವತಂ ಮಹಾವೀರಂ ಪ್ರತ್ಯುಪಾವತ । ಉಪಾಗಚ್ಛತ । ಯುಷ್ಮದ್ಯಜ್ಞಸ್ಯ ಘರ್ಮಯಾಗಸ್ಯ ಸಾಧನಭೂತೇ ರಪ್ಸುದಾ । ರಪ್ಸುದಾರಪ್ಸುದೇ ಆರಿಪ್ಸೋಃ ಫಲಪ್ರದೇ । ಲಿಪ್ಸೋರ್ವೇರಪ್ಸಿನೋರ್ದಾತವ್ಯೇ ವಾ । ಯದ್ವಾ ರಪಣಂ ಶಬ್ದನಂ । ರಪ್ ಮಂತ್ರಃ । ತೇನ ಸುಷ್ಠು ದಾತವ್ಯೇ । ಅಥವಾ ಷೂದ ಕ್ಷರಣೇ । ರಪಾ ಮಂತ್ರೇಣ ಕ್ಷಾರಣೀಯೇ ದೋಹನೀಯೇ । ಈದೃಶೇ ಗವಾಜಯೋಃ ಪಯಸೀ ಮಹೀ ಮಹತೀ ಬಹುಲೇ ಅಪೇಕ್ಷಿತೇ ಅತ ಉಪಾವತಂ । ಗೌರಜಾಯಾ ಅಪ್ಯುಪಲಕ್ಷಕಃ ಅಜಾಪಯಸೋಽಪಿ ಮಹಾವೀರೇ ಸೇಚನೀಯತ್ವಾತ್ । ಅಪಿ ಚಾಸ್ಯ ಮಹಾವೀರಸ್ಯೋಭೋಭೌ ಕರ್ಣಾ ಕರ್ಣಸ್ಥಾನೀಯೌ ದ್ವೌ ರುಕ್ಮೌ ಹಿರಣ್ಯಯಾ ಹಿರಣ್ಮಯೌ ಸುವರ್ಣರಜತಮಯಾವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಗಾವಃ**—ಎಲೈ ಅಜ ಮತ್ತು ಗೋವುಗಳೇ । **ಅವತಂ**—ಮಹಾವೀರದ ಸಮೀಪಕ್ಕೆ । **ಉಪಾವತ**—ಬನ್ನಿರಿ (ನಿಮ್ಮ ಕ್ಷೀರಗಳು) । **ಯಜ್ಞಸ್ಯ**—ಯಜ್ಞಕ್ಕೆ ಬೇಕಾದ । **ರಪ್ಸುದಾ**—ಫಲಪ್ರದವಾಗಿಯೂ । **ಮಹೀ**—ಮಹತ್ಸ್ವರೂಪವುಳ್ಳವಾಗಿಯೂ ಇವೆ । **(ಅಸ್ಯ)**—ಈ ಮಹಾವೀರಪಾತ್ರೆಯ । **ಉಭಾ ಕರ್ಣಾ**—ಕಿವಿಯಂತಿರುವ ಎರಡು ಪಾರ್ಶ್ವದ ಹಿಡಿಗಳೂ । **ಹಿರಣ್ಯಯಾ**—ಸುವರ್ಣ ಮತ್ತು ರಜತ (ಬೆಳ್ಳಿ) ಗಳಿಂದ ನಿರ್ಮಿತವಾಗಿವೆ

॥ ಭಾವಾರ್ಥ ॥

ಎಲೈ ಅಜ ಮತ್ತು ಗೋವುಗಳೇ, ಮಹಾವೀರದ ಸಮೀಪಕ್ಕೆ ಬನ್ನಿರಿ. ನಿಮ್ಮ ಕ್ಷೀರಗಳು ಯಜ್ಞಕ್ಕೆ ಬೇಕಾದ ಫಲಪ್ರದವಾಗಿಯೂ, ಮಹತ್ಸ್ವರೂಪವುಳ್ಳವಾಗಿಯೂ ಇವೆ. ಈ ಮಹಾವೀರಪಾತ್ರೆಯ ಕಿವಿಯಂತಿರುವ ಎರಡು ಪಾರ್ಶ್ವಗಳ ಹಿಡಿಗಳೂ ಸುವರ್ಣ ಮತ್ತು ರಜತಗಳಿಂದ ನಿರ್ಮಿತವಾಗಿವೆ

## English Translation

Draw nigh, you cows, to the cauldron, (the two kinds of milk) in the sacrifice are plentiful and fruit-giving; both ears (of the vessel) are golden.

॥ ಸಂಹಿತಾಪಾಠ. ॥

ಆ ಸುತೇ ಸಿಂಚತ ಶ್ರಿಯಂ ರೋದಸ್ಯೋರಭಿಶ್ರಿಯಂ ।

ರಸಾ ದಧೀತ ವೃಷಭಂ ॥ ೧೩ ॥

॥ ಪದಪಾಠಃ ॥

ಆ । ಸುತೇ । ಸಿಂಚತ । ಶ್ರಿಯಂ । ರೋದಸ್ಯೋಃ । ಅಭಿಽಶ್ರಿಯಂ ।
ರಸಾ । ದಧೀತ । ವೃಷಭಂ ॥ ೧೩ ॥

॥ ಸಾಯಣಭಾಷ್ಯಂ ॥

ಪ್ರವರ್ಗ್ಯೇಽಜಾಯಾಸಿ ಮಹಾವೀರ ಆನೀಯಮಾನ ಆ ಸುತ ಇತ್ಯೇಷಾ । ಸೂತ್ರಿತಂ ಚ । ಆ ಸುತೇ ಸಿಂಚತ ಶ್ರಿಯಮಿತ್ಯಾಜೇ । ಆ. ೪-೭ ॥ ಇತಿ ।

ಸುತೇ ದುಗ್ಧೇ ಗೋಃಪಯಸಿ ಶ್ರಿಯಂ ಶ್ರಯಣಮಾಜಂ ಪಯ ಆ ಸಿಂಚತ । ಸಿಂಚತ ಹೇ ಅಧ್ವರ್ಯವಃ । ಕೀದೃಶಮಾಜಂ। ರೋದಸ್ಯೋಃ ॥ ಕರ್ಮಣಿ ಷಷ್ಠ್ಯೇಷಾ॥ ದ್ಯಾವಾಪೃಥಿವ್ಯಾವಭಿಶ್ರಿಯ-ಮಭಿಶ್ರಯಂತಂ । ಅಗ್ನಿಸಂಯೋಗಾತ್ತಾವತ್ಪರ್ಯಂತಂ ಪ್ರವೃದ್ಧಮಿತ್ಯರ್ಥಃ । ಅಥವಾ ತತ್ಕಾವಶ್ವಿನಾ ದ್ಯಾವಾಪೃಥಿವ್ಯಾವಿತ್ಯೇಕೇ । ನಿ ೧೨-೧ । ಇತಿ ನಿರುಕ್ತತ್ವಾದಶ್ವಿನೋರಭಿಶ್ರಿಯಮಿತ್ಯರ್ಥಃ । ಸೇಚನಾ-ನಂತರಂ ರಸಾ ರಸ ಆಜೇ ಪಯಸಿ ವೃಷಭಂ ವರ್ಷಕಮಗ್ನಿಂ ದಧೀತ । ಸ್ಥಾಪಯತ । ಅಜಾಯಾ ಆಗ್ನೇಯಿತ್ವಾತ್ ಕ್ಷೀರಸ್ಯಾಪ್ಯಗ್ನಿಸಂಯೋಜನಮುಚಿತಂ। ಆಗ್ನೇಯೀ ವಾ ಏಷಾ ಯದಜೇತಿ ಬ್ರಾಹ್ಮಣಂ॥

॥ ಪ್ರತಿಪದಾರ್ಥ ॥

(ಎಲೈ ಅಧ್ವರ್ಯುಗಳೇ) **ರೋದಸ್ಯೋಃ**—ದ್ಯಾವಾಪೃಥಿವಿಗಳೆರಡರಲ್ಲೂ । **ಅಭಿಶ್ರಿಯಂ**—ವ್ಯಾಪಿಸಿ ಹರಡತಕ್ಕದ್ದೂ । **ಶ್ರಿಯಂ**—ಶ್ರಯಣಸಾಧನವಾದುದೂ ಆದ ಆಡಿನ ಹಾಲನ್ನು । **ಸುತೇ**—ಕರೆದಿರುವ ಹಸುವಿನ ಹಾಲಿನೊಂದಿಗೆ । **ಆ ಸಿಂಚತ**—ಸುರಿದು ಮಿಶ್ರಮಾಡಿರಿ। **ವೃಷಭಂ**-ವೃಷ್ಟಿಕಾರಕನೂ ಇಷ್ಟಾರ್ಥಪ್ರದನೂ ಆದ ಅಗ್ನಿಯನ್ನು । **ರಸಾ**—ಆಡಿನ ಹಾಲಿನಲ್ಲಿ । **ದಧೀತ**—ಸ್ಥಾಪಿಸಿರಿ.

॥ ಭಾವಾರ್ಥ ॥

ಎಲೈ ಅಧ್ವರ್ಯುಗಳೇ, ದ್ಯಾವಾಪೃಥಿವಿಗಳೆರಡರಲ್ಲೂ ವ್ಯಾಪಿಸಿ ಹರಡತಕ್ಕದ್ದೂ, ಶ್ರಯಣಸಾಧನವಾದುದೂ ಆದ ಆಡಿನ ಹಾಲನ್ನು ಕರೆದಿರುವ ಹಸುವಿನ ಹಾಲಿನೊಂದಿಗೆ ಸುರಿದು ಮಿಶ್ರಮಾಡಿರಿ. ವೃಷ್ಟಿಕಾರಕನೂ, ಇಷ್ಟಾರ್ಥಪ್ರದನೂ ಆದ ಅಗ್ನಿಯನ್ನು ಆಡಿನ ಹಾಲಿನಲ್ಲಿ ಸ್ಥಾಪಿಸಿರಿ.

## English Translation

Drop into the milked (stream) the admixture, which reaches, (as it boils), heaven and earth, set the bull in the liquor.

॥ ವಿಶೇಷವಿಷಯಗಳು ॥

ಪ್ರವರ್ಗ್ಯೇಷ್ಟಿಯಲ್ಲಿ ಆಡಿನ ಹಾಲನ್ನು ಮಹಾವೀರಕ್ಕಾಗಿ ತಂದಾಗ **ಆ ಸುತೇ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ಸುತೇ ಸಿಂಚತ ಶ್ರಿಯಮಿತ್ಯಾಜೇ** ಎಂಬ ಸೂತ್ರದಿಂದ (ಆ. ೪-೭) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ತೇ ಜಾನತ ಸ್ವಮೋಕ್ಯಂ೧ ಸಂ ವತ್ಸಾಸೋ ನ ಮಾತೃಭಿಃ ।
ಮಿಥೋ ನಸಂತ ಜಾಮಿಭಿಃ ॥ ೧೪ ॥

॥ ಪದಪಾಠಃ ॥

ತೇ । ಜಾನತ । ಸ್ವಂ । ಓಕ್ಯಂ । ಸಂ । ವತ್ಸಾಸಃ । ನ । ಮಾತೃಽಭಿಃ ।
ಮಿಥಃ । ನಸಂತ । ಜಾಮಿಽಭಿಃ ॥ ೧೪ ॥

॥ ಸಾಯಣಭಾಷ್ಯಂ ॥

ತೇ ತಾ ಗಾವೋ ಜಾನತ । ಜ್ಞಾತವತ್ಯಃ । ಅಥವಾ ಸಾಮಾನ್ಯಾಕಾರೇಣ ತ ಇತಿ ಪುಂನಿರ್ದೇಶಃ। ಕಿಂ । ಸ್ವಂ ಸ್ವಕೀಯಮೋಕ್ಯಂ ನಿವಾಸಂ ಮಹಾವೀರಂ । ತತ್ರ ದೋಗ್ಧುಮಾಗಮನ್ನಿತ್ಯರ್ಥಃ । ತದೇವಾಹ । ವತ್ಸಾಸೋ ವತ್ಸಾ ಮಾತೃಭಿರ್ನ ಜನನೀಭಿಃ ಸಹ ಯಥಾ ಸಂಗಚ್ಛಂತಿ ತದ್ವಜ್ಜಾಮಿಭಿರ್ಬಂಧುಭಿಃ ಸಹಿತಾ ಗಾವೋ ಮಿಥಃ ಪ್ರತ್ಯೇಕಂ ಸಂ ನಸಂತ । ಸಂಗಚ್ಛಂತೇ ಮಹಾವೀರಂ ॥

॥ ಪ್ರತಿಪದಾರ್ಥ ॥

**ವತ್ಸಾಸಃ**—ಕರುಗಳು । **ಮಾತೃಭಿಃ ನ**—ತಮ್ಮ ತಾಯಿಯರೊಡನಿರುವಾಗ ತಮ್ಮ ಸ್ವಸ್ಥಾನವನ್ನು ಅರಿಯುವಂತೆ । **ತೇ**—ಮಹಾವೀರಕ್ಕಾಗಿ ಕ್ಷೀರವನ್ನು ಕೊಡುವ ಗೋವುಗಳು । **ಸ್ವಂ**—ಯಾಗಕ್ಕಾಗಿ ತಮಗೆ ನಿರ್ದಿಷ್ಟವಾದ । **ಓಕ್ಯಂ**—ಸ್ಥಾನವನ್ನು । **ಜಾನತ**—ಅರಿತಿವೆ । **ಜಾಮಿಭಿಃ**—ತಮ್ಮ ಬಂಧುಗಳೊಡನೆ ಸೇರಿಕೊಂಡಿರುವ ಆ ಗೋವುಗಳು । **ಮಿಥಃ**—ಪ್ರತ್ಯೇಕವಾಗಿ ಬಂದು । **ಸಂ ನಸಂತ**—ಒಂದುಗೂಡುತ್ತವೆ.

॥ ಭಾವಾರ್ಥ ॥

ಕರುಗಳು ತಮ್ಮ ತಾಯಿಯರೊಡನಿರುವಾಗ ತಮ್ಮ ಸ್ವಸ್ಥಾನವನ್ನು ಅರಿಯುವಂತೆ ಮಹಾವೀರಕ್ಕಾಗಿ ಕ್ಷೀರವನ್ನು ಕೊಡುವ ಗೋವುಗಳು ಯಾಗಕ್ಕಾಗಿ ತಮಗೆ ನಿರ್ದಿಷ್ಟವಾದ ಸ್ಥಾನವನ್ನು ಅರಿತಿವೆ. ತಮ್ಮ ಬಂಧುಗಳೊಡನೆ ಸೇರಿಕೊಂಡಿರುವ ಆ ಗೋವುಗಳು ಪ್ರತ್ಯೇಕವಾಗಿ ಬಂದು ಒಂದುಗೂಡುತ್ತವೆ

## English Translation

They know their own abode, as calvs with their mothers, so they severally assemble with their cows.

॥ ಸಂಹಿತಾಪಾಠಃ ॥

ಉಪ ಸ್ರಕ್ವೇಷು ಬಪ್ಸತಃ ಕೃಣ್ವತೇ ಧರುಣಂ ದಿವಿ ।
ಇಂದ್ರೇ ಅಗ್ನಾ ನಮಃ ಸ್ವಃ ॥ ೧೫ ॥

॥ ಪದಪಾಠಃ ॥

ಉಪ । ಸ್ರಕ್ವೇಷು । ಬಪ್ಸತಃ । ಕೃಣ್ವತೇ । ಧರುಣಂ । ದಿವಿ ।
ಇಂದ್ರೇ । ಅಗ್ನಾ । ನಮಃ । ಸ್ವ ೧ ರಿತಿ ಸ್ವಃ ॥ ೧೫ ॥

॥ ಸಾಯಣಭಾಷ್ಯಂ ॥

ಮಹಾವೀರಸ್ಯ ಸ್ರಕ್ವೇಷು ಬಪ್ಸತೋ ಜ್ವಾಲಯಾ ಭಕ್ಷಯತೋಽಗ್ನೇರನ್ನಂ ಧರುಣಮಿಂದ್ರೇ ಅಗ್ನೇತಿ ವಕ್ಷ್ಯಮಾಣತ್ವಾದಿಂದ್ರಾಗ್ನ್ಯೋರ್ಧಾರಕಮಾಜಂ ದಿವ್ಯಂತರಿಕ್ಷ ಉಪ ಕೃಣ್ವತೇ । ಉಪಕುರ್ವತೇ। ಯದಾಗ್ನಿರ್ಮಹಾವೀರಂ ದಹತಿ ತದಾ ತಸ್ಯೋಪರ್ಯುಭಯವಿಧಂ ಕ್ಷೀರಮಾಸೇಚಯಂತೀತ್ಯರ್ಥಃ । ಏವಂ ಮಹಾವೀರ ಆಸಿಚ್ಯೇಂದ್ರೇಽಗ್ನಾಗ್ನೌ ಚ ಸ್ವಃ ಸರ್ವಂ ಗವ್ಯಮಾಜಂ ಚ ನಮೋಽನ್ನಂ । ಅಥವಾ ಸ್ವರಂತರಿಕ್ಷೇ । ಯೋಜಯಂತೀತಿ ಶೇಷಃ ॥

॥ ಪ್ರತಿಪದಾರ್ಥ ॥

**ಸ್ರಕ್ವೇಷು**—ಜ್ವಾಲೆಗಳಿಂದ । **ಬಪ್ಸತಃ**—ಭಕ್ಷಿಸುವ ಅಗ್ನಿಗೆ । **ಧರುಣಂ**—ಧಾರಕವಾದ ಅನ್ನವನ್ನು । **ದಿವಿ**—ಅಂತರಿಕ್ಷದಲ್ಲಿ । **ಉಪ ಕೃಣ್ವತೇ**—ಅಧ್ವರ್ಯುಗಳು ಅರ್ಪಿಸುತ್ತಾರೆ (ಅನಂತರ) । **ಸ್ವಃ**—ಸಕಲವಾದ । **ನಮಃ**—ಅನ್ನವನ್ನೂ । **ಇಂದ್ರೇ**—ಇಂದ್ರನಲ್ಲಿಯೂ । **ಅಗ್ನಾ**—ಅಗ್ನಿಯಲ್ಲಿಯೂ (ಅರ್ಪಿಸುತ್ತಾರೆ)

॥ ಭಾವಾರ್ಥ ॥

ಜ್ವಾಲೆಗಳಿಂದ ಭಕ್ಷಿಸುವ ಅಗ್ನಿಗೆ ಧಾರಕವಾದ ಅನ್ನವನ್ನು ಅಂತರಿಕ್ಷದಲ್ಲಿ ಅಧ್ವರ್ಯುಗಳು ಅರ್ಪಿಸುತ್ತಾರೆ. ಅನಂತರ ಸಕಲವಾದ ಅನ್ನವನ್ನೂ ಇಂದ್ರನಲ್ಲಿಯೂ ಅಗ್ನಿಯಲ್ಲಿಯೂ ಅರ್ಪಿಸುತ್ತಾರೆ.

English Translation

(The priests) minister in the sky the supporting (milk) to (Agni) who devours with his jaws; they minister all the food to Indra and Agni.

॥ ಸಂಹಿತಾಪಾಠಃ ॥

ಅಧುಕ್ಷತ್ಪಿಪ್ಯುಷೀಮಿಷಮೂರ್ಜಂ ಸಪ್ತಪದೀಮರಿಃ ।
ಸೂರ್ಯಸ್ಯ ಸಪ್ತ ರಶ್ಮಿಭಿಃ ॥ ೧೬ ॥

॥ ಪದಪಾಠಃ ॥

ಅಧುಕ್ಷತ್ । ಪಿಪ್ಯುಷೀಂ । ಇಷಂ । ಊರ್ಜಂ । ಸಪ್ತಽಪದೀಂ । ಅರಿಃ ।

ಸೂರ್ಯಸ್ಯ । ಸಪ್ತ । ರಶ್ಮಿಽಭಿಃ ॥ ೧೬ ॥

॥ ಸಾಯಣಭಾಷ್ಯಂ ॥

ಪ್ರವರ್ಗ್ಯೇ ಘರ್ಮದುಹಿ ದುಗ್ಧಾಯಾಮಧುಕ್ಷದಿತ್ಯೇಷಾ । ಸೂತ್ರಿತಂ ಚ । ದುಗ್ಧಾಯಾಮಧುಕ್ಷತ್ಪಿಪ್ಯುಷೀಂ । ಆ. ೪-೭ । ಇತಿ ॥ ಗ್ರಾವಸ್ತೋತ್ರೇಽಪ್ಯೇಷಾ । ಅಧುಕ್ಷತ್ಪಿಪ್ಯುಷೀಮಿಷಮಾ ಕಲಶೇಷು ಧಾವತಿ । ಆ. ೫-೧೨ । ಇತಿ ಸೂತ್ರಿತತ್ವಾತ್ ॥

ಅರಿರರಣಶೀಲೋ ವಾಯುಃ ಸೂರ್ಯಸ್ಯ ಸಪ್ತ ರಶ್ಮಿಭಿಃ ಸಾಧನೈಃ ಪಿಪ್ಯುಷೀಮಾಪ್ಯಾಯಯಿತ್ರೀಮಿಷಮನ್ನಮೂರ್ಜಂ ರಸಂ ಚ ಸಪ್ತಪದೀಂ ಸರ್ಪಣಸ್ವಭಾವಪಾದಾಂ ಮಾಧ್ಯಮಿಕಾಂ ವಾಚಂ ಘರ್ಮಧುಗ್ರೂಪೇಣಾವಸ್ಥಿತಾಮಧುಕ್ಷತ್ । ದುಗ್ಧವಾನ್ । ಯದ್ಯಪ್ಯಧ್ವರ್ಯುಃ ಪಾತ್ರೇಣ ಗಾಂ ದುಗ್ಧೇ ತಥಾಪ್ಯೇವಂ ಭಾವನಯಾ ಸಾಂಗಂ ಭವತಿ । ಮಾಧ್ಯಮಿಕಾಯಾ ವಾಚೋ ಮಧುಧುಕ್ತ್ವಂ ಹಿಂಕೃಣ್ವತೀ ಗೌರಮಿಮಾಮೇತ್ । ಋ. ೧-೧೬೪-೨೭,೨೮ । ಇತ್ಯಾದಿಷು ಪ್ರಸಿದ್ಧಂ ॥

॥ ಪ್ರತಿಪದಾರ್ಥ ॥

ಅರಿಃ—ಸಂಚಾರಸ್ವಭಾವವುಳ್ಳ ವಾಯುವು । ಸೂರ್ಯಸ್ಯ—ಸೂರ್ಯನ । ಸಪ್ತ ರಶ್ಮಿಭಿಃ—ಸಪ್ತಸಂಖ್ಯಾಕವಾದ ರಶ್ಮಿಗಳಿಂದಲೂ । ಪಿಪ್ಯುಷೀಂ—ತೃಪ್ತಿಕಾರಕವಾದ । ಇಷಂ—ಅನ್ನವನ್ನೂ । ಊರ್ಜಂ—ರಸವನ್ನೂ । ಸಪ್ತಪದೀಂ—ಸಪ್ತಪಾದರೂಪವುಳ್ಳ ಮಾಧ್ಯಮಿಕಾವಾಕ್ಕನ್ನೂ । ಅಧುಕ್ಷತ್—ಕರೆದಿದ್ದಾನೆ.

॥ ಭಾವಾರ್ಥ ॥

ಸರ್ವತ್ರ ಸಂಚಾರಸ್ವಭಾವವುಳ್ಳ ವಾಯುವು ಸೂರ್ಯನ ಸಪ್ತಸಂಖ್ಯಾಕವಾದ ರಶ್ಮಿಗಳಿಂದ ತೃಪ್ತಿಕಾರಕವಾದ ಅನ್ನವನ್ನೂ, ರಸವನ್ನೂ ಸಪ್ತಪಾದರೂಪವುಳ್ಳ ಮಾಧ್ಯಮಿಕಾವಾಕ್ಕನ್ನೂ ಕರೆದಿದ್ದಾನೆ.

## English Translation

The wind by means of the sun's seven rays milks the nourishing food and drink from the seven-stepped one.

॥ ವಿಶೇಷವಿಷಯಗಳು ॥

ಪ್ರವರ್ಗ್ಯೇಷ್ಟಿಯಲ್ಲಿ ಘರ್ಮದೋಹಾನಂತರ **ಅಧುಕ್ಷತ್** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ದುಗ್ಧಾಯಾಮಧುಕ್ಷತ್ಪಿಪ್ಯುಷೀಂ** ಎಂಬ ಸೂತ್ರದಿಂದ (ಆ. ೪-೭) ವಿವೃತವಾಗಿರುವುದು.

ಗ್ರಾವಸ್ತುತಿಯಲ್ಲಿಯೂ ಸಹ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಧುಕ್ಷತ್ಪಿಪ್ಯುಷೀ ಮಿಷಮಾ ಕಲಶೇಷು ಧಾವತಿ** ಎಂಬ ಸೂತ್ರದಿಂದ (೮ ೫-೧೨) ವಿವೃತವಾಗಿರುವುದ)

॥ ಸಂಹಿತಾಪಾಠಃ ॥

**ಸೋಮಸ್ಯ ಮಿತ್ರಾವರುಣೋದಿತಾ ಸೂರ ಆ ದದೇ ।**

**ತದಾತುರಸ್ಯ ಭೇಷಜಂ ॥ ೧೭ ॥**

॥ ಪದಪಾಠಃ ॥

**ಸೋಮಸ್ಯ । ಮಿತ್ರಾವರುಣಾ । ಉತ್ऽಇತಾ । ಸೂರೇ । ಆ । ದದೇ ।**

**ತತ್ । ಆತುರಸ್ಯ । ಭೇಷಜಂ ॥ ೧೭ ॥**

॥ ಸಾಯಣಭಾಷ್ಯಂ ॥

**ಹೇ ಮಿತ್ರಾವರುಣೌ ಸೂರೇ ಸೂರ್ಯೇ ಉದಿತೋದಿತೇ ಸೋಮಸ್ಯ ಸೋಮಮಾ ದದೇ । ಸ್ವೀಕರೋತಿ । ತತ್ರ ಹೇತುಮಾಹ । ತತ್ಸ್ವೀಕಾರರೂಪಂ ಕರ್ಮಾತುರಸ್ಯಾಸ್ಮದಾದೇರ್ಭೇಷಜಮೌಷಧಂ। ಹಿತಕರಮಿತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಮಿತ್ರಾವರುಣಾ**—ಎಲೈ ಮಿತ್ರಾವರುಣದೇವತೆಗಳೇ । **ಸೂರೇ**—ಸೂರ್ಯನು । **ಉದಿತಾ**—ಉದಯಿಸಿರುವಾಗ । **ಸೋಮಸ್ಯ**—ಸೋಮವನ್ನು । **ಆ ದದೇ**—ನಾನು ಸ್ವೀಕರಿಸುತ್ತೇನೆ । **ತತ್**—ಅದು **ಆತುರಸ್ಯ**—ವ್ಯಾಧಿಪೀಡಿತನಿಗೆ । **ಭೇಷಜಂ**—ಔಷಧಿಯರೂಪವಾಗಿದೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣದೇವತೆಗಳೇ, ಸೂರ್ಯನು ಉದಯಿಸಿರುವಾಗ ನಾನು ಸೋಮವನ್ನು ಸ್ವೀಕರಿಸುತ್ತೇನೆ ಅದು ವ್ಯಾಧಿಪೀಡಿತನಾದವನಿಗೆ ಔಷಧಿಯು ರೂಪದಲ್ಲಿದೆ.

English Translation

Mitra and Varuna, I take the Soma when the sun is risen ; it is medicine to the sick ;

॥ ಸಂಹಿತಾಪಾಠಃ ॥

ಉತೋ ನ್ವಸ್ಯ ಯತ್ಪದಂ ಹರ್ಯತಸ್ಯ ನಿಧಾನ್ಯಂ ।

ಪರಿ ದ್ಯಾಂ ಜಿಹ್ವಯಾತನತ್ ॥ ೧೮ ॥

॥ ಪದಪಾಠಃ ॥

ಉತೋ ಇತಿ । ನು । ಅಸ್ಯ । ಯತ್ । ಪದಂ । ಹರ್ಯತಸ್ಯ । ನಿಽಧಾನ್ಯಂ ।

ಪರಿ । ದ್ಯಾಂ । ಜಿಹ್ವಯಾ । ಅತನತ್ ॥ ೧೮॥

॥ ಸಾಯಣಭಾಷ್ಯಂ ॥

ಪವಮಾನೇ ಸೋಮ ಉತೋ ಅಪಿ ಚಾಸ್ಯ ಸೋಮದಾತುರ್ಹರ್ಯತಸ್ಯ ಪ್ರದಾನಂ ಕಾಮಯಮಾನಸ್ಯ ಮಮ ಯತ್ಪದಂ ನಿಧಾನ್ಯಂ ಹವಿಷಾಂ ನಿಧಾನಾರ್ಹಮುತ್ತರವೇದಿಲಕ್ಷಣಂ ತತ್ರ ಸ್ಥಿತ್ವಾಗ್ನಿರ್ದ್ಯಾಂ ಪರಿ ಪರಿತೋ ಜಿಹ್ವಯಾ ಜ್ವಾಲಯಾತನತ್ । ವ್ಯಾಪ್ನೋತ್ ॥

॥ಪ್ರತಿಪದಾರ್ಥ॥

**ಉತೋ ನು**—ಮತ್ತು । **ಹರ್ಯತಸ್ಯ**—ಹವಿಸ್ಸನ್ನರ್ಪಿಸಲು ಇಚ್ಛಿಸುವ । **ಅಸ್ಯ**—ಈ ಯಜಮಾನನಿಗೆ । **ಯತ್ಪದಂ**—ಯಾವ ಸ್ಥಾನವು । **ನಿಧಾನ್ಯಂ**—(ಅಗ್ನಿಗೆ) ಹವಿಸ್ಸನ್ನರ್ಪಿಸಲು ಯೋಗ್ಯವಾಗಿರುವುದೋ ಅಂತಹ ಉತ್ತರವೇದಿಯಲ್ಲಿ ಸ್ಥಾಪಿತನಾಗಿರುವ ಅಗ್ನಿಯು । **ದ್ಯಾಂ ಪರಿ**—ಅಂತರಿಕ್ಷದ ಸುತ್ತಲೂ । **ಜಿಹ್ವಯಾ**—ತನ್ನ ಜ್ವಾಲಾರೂಪದ ಜಿಹ್ವೆಯಿಂದ । **ಅತನತ್**—ವ್ಯಾಪಿಸಿದ್ದಾನೆ

॥ ಭಾವಾರ್ಥ ॥

ಹವಿಸ್ಸನ್ನು ಅರ್ಪಿಸಲು ಇಚ್ಛಿಸುವ ಈ ಯಜಮಾನನಿಗೆ ಅಗ್ನಿಗೆ ಹವಿಸ್ಸನ್ನರ್ಪಿಸಲು ಯಾವ ಸ್ಥಾನವು ಯೋಗ್ಯವಾಗಿರುವುದೋ ಅಂತಹ ಉತ್ತರವೇದಿಯಲ್ಲಿ ಸ್ಥಾಪಿತನಾಗಿರುವ ಅಗ್ನಿಯು ಅಂತರಿಕ್ಷದ ಸುತ್ತಲೂ ತನ್ನ ಜ್ವಾಲಾರೂಪದ ಜಿಹ್ವೆಯಿಂದ ವ್ಯಾಪಿಸಿದ್ದಾನೆ

## English Translation

Agni,—standing in the place which I, the eager offerer, choose as the spot for presenting the oblations,—fills the sky on every side with his blaze.

## ಎಪ್ಪತ್ತಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಉದೀರಾಥಾಮಿತ್ಯಷ್ಟಾದಶರ್ಚಂ ಚತುರ್ಥಂ ಸೂಕ್ತಮಾತ್ರೇಯಸ್ಯ ಗೋಪವನಸ್ಯ ಸಪ್ತವಧ್ರೇರ್ವಾರ್ಷಂ ಗಾಯತ್ರಮಾಶ್ವಿನಂ । ತಥಾ ಚಾನುಕ್ರಮಣಿಕಾ । ಉದೀರಾಥಾಂ ಗೋಪವನ ಆತ್ರೇಯಃ ಸಪ್ತವಧ್ರಿರ್ವಾಶ್ವಿನಮಿತಿ ॥ ಪ್ರಾತರನುವಾಕ ಆಶ್ವಿನೇ ಕ್ರತೌ ಗಾಯತ್ರೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಉದೀರಾಥಾಮಾ ಮೇ ಹವಮಿತಿ ಗಾಯತ್ರಂ । ಆ ೪-೧೫ । ಇತಿ ಸೂತ್ರಿತತ್ವಾತ್ ॥**

**ಉದೀರಾಥಾಂ** ಎಂಬ ಈ ಸೂಕ್ತವು ಎಂಟನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಪದಿನೆಂಟು ಋಕ್ಕುಗಳಿರುವವು ಈ ಸೂಕ್ತಕ್ಕೆ ಅತ್ರಿಗೋತ್ರೋದ್ಭವನಾದ ಗೋಪವನ ಅಥವಾ ಸಪ್ತವಧ್ರಿ ಎಂಬುವನು ಋಷಿಯು; ಅಶ್ವಿನೀದೇವತೆಗಳು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕಯಲ್ಲಿ—**ಉದೀರಾಥಾಂ ಗೋಪವನ ಆತ್ರೇಯಃ ಸಪ್ತವಧ್ರಿರ್ವಾಶ್ವಿನಂ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನ ಕಾಲದಲ್ಲಿ ಆಶ್ವಿನಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ಉದೀರಾಥಾಮಾ ಮೇ ಹವಮಿತಿ ಗಾಯತ್ರಂ** ಎಂಬ ಸೂತ್ರದಿಂದ (ಆ. ೪-೧೫) ವಿವೃತವಾಗಿರುವುದು

### ಸೂಕ್ತ—೭೩

ಮಂಡಲ—೮ ॥ ಅನುವಾಕ—೮ ॥ ಸೂಕ್ತ—೭೩ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೧೮, ೧೯, ೨೦ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೮ ॥
ಋಷಿಃ—ಗೋಪವನ ಆತ್ರೇಯಃ ಸಪ್ತವಧ್ರಿರ್ವಾ ॥
ದೇವತಾ—ಅಶ್ವಿನೌ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಉದೀರಾಥಾಮೃತಾಯತೇ ಯುಂಜಾಥಾಮಶ್ವಿನಾ ರಥಂ ।
ಅಂತಿ ಷದ್ಭೂತು ವಾಮವಃ ॥ ೧ ॥

॥ ಪದಪಾಠಃ ॥

ಉತ್ । ಈರಾಥಾಂ । ಋತಯತೇ । ಯುಂಜಾಥಾಂ । ಅಶ್ವಿನಾ । ರಥಂ ।
ಅಂತಿ । ಸತ್ । ಭೂತು । ವಾಂ । ಅವಃ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಅಶ್ವಿನಾಶ್ವಿನೌ ಋತಾಯತೇ ಯಜ್ಞಮಿಚ್ಛತೇ ಮಹ್ಯಂ ಮದರ್ಥಮುದೀರಾಥಾಂ । ಉದ್ಗಚ್ಛತಂ । ತದರ್ಥಂ ಹವಮಾಹ್ವಾನಂ ಯಜ್ಞಂ ವಾ ಪ್ರಾಪ್ತುಂ ಯುಂಜಾಥಾಂ । ಯೋಜಯತ-ಮಶ್ವೈ ರಥಂ । ವಾಂ ಯುವಯೋರವೋ ರಕ್ಷಣಮಂತ್ಯಸ್ಮದಂತಿಕೇ ಸದ್ವರ್ತಮಾನಂ ಭೂತು । ಭವತು ॥**

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಋತಾಯತೇ**-ಯಜ್ಞಮಾಡಲಿಚ್ಛಿಸುವ ನನ್ನನ್ನು ಅನುಗ್ರಹಿಸಲು । **ಉದೀರಾಥಾಂ**—ನನ್ನ ಯಜ್ಞಕ್ಕೆ ಬರಲು ಎದ್ದು ಸಿದ್ಧರಾಗಿರಿ । **ರಥಂ**—ನಿಮ್ಮ ರಥವನ್ನು । **ಯುಂಜಾಥಾಂ**—ಅಶ್ವಗಳೊಡನೆ ಸೇರಿಸಿರಿ । **ವಾಂ**—ನಿಮ್ಮ । **ಅವಃ**—ರಕ್ಷಣವು । **ಅಂತಿಷತ್**—ನಮ್ಮ ಸಮೀಪದಲ್ಲೇ ಇರುವುದಾಗಿ । **ಭೂತ್**—ಆಗಿರಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಯಜ್ಞಮಾಡಲಿಚ್ಛಿಸುವ ನನ್ನನ್ನು ಅನುಗ್ರಹಿಸಲು ನನ್ನ ಯಜ್ಞಕ್ಕೆ ಬರಲು ಸಿದ್ಧರಾಗಿರಿ. ನಿಮ್ಮ ರಥವನ್ನು ಅಶ್ವಗಳೊಡನೆ ಸೇರಿಸಿರಿ. ನಿಮ್ಮ ರಕ್ಷಣವು ಯಾವಾಗಲೂ ನಮ್ಮ ಸಮೀಪದಲ್ಲೇ ಇರುವಂತೆ ಅನುಗ್ರಹಿಸಿರಿ

English Translation

Rise, Ashwins, on my behalf, as I prepare to sacrifice, yoke your car, let your protection abide near me

॥ ಸಂಹಿತಾಪಾಠಃ ॥

ನಿಮಿಷಶ್ಚಿಜ್ಜವೀಯಸಾ ರಥೇನಾ ಯಾತಮಶ್ವಿನಾ ।
ಅಂತಿ ಷದ್ಭೂತು ವಾಮವಃ ॥ ೨ ॥

॥ ಪದಪಾಠಃ ॥

ನಿऽಮಿಷಃ । ಚಿತ್ । ಜವೀಯಸಾ । ರಥೇನ । ಆ । ಯಾತಂ । ಅಶ್ವಿನಾ ।
ಅಂತಿ । ಸತ್ । ಭೂತು । ವಾಂ । ಅವಃ ॥ ೨ ॥

॥ ಸಾಯಣಭಾಷ್ಯಂ ॥

**ನಿಮಿಷಶ್ಚಿನ್ನಿಮೇಷಾದಪಿ ಜವೀಯಸಾತಿಶಯವೇಗೇನ ರಥೇನಾ ಯಾತಂ । ಆಗಚ್ಛತಮಸ್ಮ-ದ್ಯಜ್ಞಂ ಹೇ ಅಶ್ವಿನಾ । ಶಿಷ್ಟಮುಕ್ತಂ ॥**

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ನಿಮಿಷಶ್ಚಿತ್**—ಕಣ್ಣುರೆಪ್ಪೆಯನ್ನು ಹೊಡೆಯುವುದಕ್ಕಿಂತಲೂ । **ಜವೀಯಸಾ**—ಅಧಿಕವಾದ ವೇಗದಿಂದ ಸಂಚರಿಸುವ । **ರಥೇನ**—ನಿಮ್ಮ ರಥದೊಡನೆ । **ಆ ಯಾತಂ**—ನಮ್ಮ ಯಜ್ಞಕ್ಕೆ ದಯಮಾಡಿರಿ । **ವಾಂ**—ನಿಮ್ಮ । **ಅವಃ**—ರಕ್ಷಣವು । **ಅಂತಿ ಷತ್**—ಯಾವಾಗಲೂ ನಮ್ಮ ಸಮೀಪದಲ್ಲೇ ಇರುವುದಾಗಿ । **ಭೂತು**—ಆಗಲಿ

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಕಣ್ಣುರೆಪ್ಪೆಯನ್ನು ಹೊಡೆಯುವುದಕ್ಕಿಂತಲೂ ಅಧಿಕವಾದ ವೇಗದಿಂದ ಸಂಚರಿಸುವ ನಿಮ್ಮ ರಥದೊಡನೆ ನಮ್ಮ ಯಜ್ಞಕ್ಕೆ ದಯಮಾಡಿರಿ ನಿಮ್ಮ ರಕ್ಷಣವು ಯಾವಾಗಲೂ ನಮ್ಮ ಸಮೀಪದಲ್ಲೇ ಇರುವಂತೆ ಅನಗ್ರಹಿಸಿರಿ.

## English Translation

Come, Ashwins, in your chariot which moves quicker than the twinkling of an eye; let your protection abide near me.

॥ ಸಂಹಿತಾಪಾಠಃ ॥

ಉಪ ಸ್ತೃಣೀತಮತ್ರಯೇ ಹಿಮೇನ ಘರ್ಮಮಶ್ವಿನಾ ।
ಅಂತಿ ಷದ್ಭೂತು ವಾಮವಃ ॥ ೩ ॥

॥ ಪದಪಾಠಃ ॥

ಉಪ । ಸ್ತೃಣೀತಂ । ಅತ್ರಯೇ । ಹಿಮೇನ । ಘರ್ಮಂ । ಅಶ್ವಿನಾ ।
ಅಂತಿ । ಸತ್ । ಭೂತು । ವಾಂ । ಅವಃ ॥ ೩ ॥

॥ ಸಾಯಣಭಾಷ್ಯಂ ॥

**ಅತ್ರಯೇ ಮಹರ್ಷಯೇಽಸುರೈರಗ್ನೌ ಪ್ರಕ್ಷಿಪ್ತಾಯ ತಸ್ಯ ಹಿತಾರ್ಥಂ ಘರ್ಮಮಗ್ನಿದಾಹಕಂ ಹಿಮೇನೋದಕೇನೋಪ ಸ್ತೃಣೀತಂ । ಉಪಸ್ತೀರ್ಣವಂತೌ । ಹಿಮೇನಾಗ್ನಿಂ ಘ್ರಂಸಮವಾರಯೇಥಾಂ । ಋ. ೧-೧೧೬-೮ । ಇತಿ ನಿಗಮಃ ॥**

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಅತ್ರಯೇ**—ಅಸುರರಿಂದ ಬೆಂಕಿಯಲ್ಲಿ ತಳ್ಳಲ್ಪಟ್ಟ ಅತ್ರಿಋಷಿಗೆ ಸಹಾಯಮಾಡಲು । **ಘರ್ಮಂ**—ದಹಿಸುವ ಅಗ್ನಿಯನ್ನು । **ಹಿಮೇನ**—ಶೀತಳವಾದ ಉದಕದಿಂದ ।

**ಉಪ ಸ್ತೃಣೀತಂ**—ಮರೆಸಿ ತಾಪವಿಲ್ಲದಂತೆ ಮಾಡಿದಿರಿ । **ವಾಂ**—ನಿಮ್ಮ । **ಅವಃ**—ರಕ್ಷಣವು । **ಅಂತಿ ಷತ್**—ಯಾವಾಗಲೂ ನಮ್ಮ ಸಮೀಪದಲ್ಲೇ ಇರುವಂತೆ । **ಭೂತು**—ಆಗಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಅಸುರರಿಂದ ಬೆಂಕಿಯಲ್ಲಿ ತಳ್ಳಲ್ಪಟ್ಟ ಅತ್ರಿಋಷಿಗೆ ಸಹಾಯಮಾಡಲು ದಹಿಸುವ ಅಗ್ನಿಯನ್ನು ಶೀತಳವಾದ ಉದಕದಿಂದ ಮರೆಸಿ ತಾಪವಿಲ್ಲದಂತೆ ಮಾಡಿದಿರಿ. ನಿಮ್ಮ ರಕ್ಷಣವು ಯಾವಾಗಲೂ ನಮ್ಮ ಸಮೀಪದಲ್ಲೇ ಇರುವಂತಾಗಲಿ.

English Translation

Aswins, you covered the hot (fire) with cold (water) for Atri; let your protection abide near me.

॥ ಸಂಹಿತಾಪಾಠಃ ॥

**ಕುಹ॑ ಸ್ಥಃ ಕುಹ॑ ಜಗ್ಮಥುಃ ಕುಹ॑ ಶ್ಯೇನೇವ॑ ಪೇತಥುಃ ।**

**ಅಂತಿ ಷದ್ಭೂ॑ತು ವಾಮವಃ॑ ॥ ೪ ॥**

॥ ಪದಪಾಠಃ ॥

ಕುಹ॑ । ಸ್ಥಃ । ಕುಹ॑ । ಜಗ್ಮಥುಃ । ಕುಹ॑ । ಶ್ಯೇನಾಽಇ॑ವ । ಪೇತಥುಃ ।

ಅಂತಿ॑ । ಸತ್ । ಭೂತು । ವಾಂ । ಅವಃ॑ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಅಶ್ವಿನೌ ಯುವಾಂ ಕುಹ ಕ್ವ ಸ್ಥಃ । ಭವಥಃ । ಇದಾನೀಂ ಕುಹ ಕ್ವ ಕುತ್ರ ಜಗ್ಮಥುಃ । ಗಚ್ಛತಃ ಸ್ವೇಚ್ಛಯಾ । ಕುಹ ಕ್ವ ವಾ ಶ್ಯೇನೇವ ಶ್ಯೇನಾವಿವ ಶೀಘ್ರಪತನೌ ಸಂತೌ ಪೇತಥುಃ । ಪತಥಃ । ಏವಮಚಿಂತ್ಯಸ್ವಭಾವೌ ಕೃಪಯಾ ಸಂನಿಹಿತೌ ಭವತಮಿತಿ ಶೇಷಃ । ತಾದೃಶಯೋಃ ವಾಮವೋಽಂತಿಕೇ ಭವತು ॥**

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ಕುಹ**—ಯಾವ ಪ್ರದೇಶದಲ್ಲಿ । **ಸ್ಥಃ**—ಇದ್ದೀರಿ । **ಕುಹ**—ಯಾವ ಪ್ರದೇಶಕ್ಕೆ । **ಜಗ್ಮಥುಃ**—ಹೋಗಿದ್ದಿರಿ । **ಕುಹ**—ಯಾವ ಪ್ರದೇಶಕ್ಕೆ । **ಶ್ಯೇನೇವ**—ಶ್ಯೇನಪಕ್ಷಿಯಂತೆ । **ಪೇತಥುಃ**—ವೇಗವಾಗಿ ಹಾರಿಹೋಗಿದ್ದಿರಿ । **ವಾಂ**—ನಿಮ್ಮ । **ಅವಃ**—ರಕ್ಷಣವು । **ಅಂತಿಷತ್**—ಯಾವಾಗಲೂ ನಮ್ಮ ಸಮೀಪದಲ್ಲೇ ಇರುವುದಾಗಿ । **ಭೂತು**—ಆಗಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು ಈಗ ಯಾವ ಪ್ರದೇಶದಲ್ಲಿದ್ದೀರಿ ? ಯಾವ ಪ್ರದೇಶಕ್ಕೆ ಹೋಗಿದ್ದಿರಿ ? ಶ್ಯೇನಪಕ್ಷಿಯಂತೆ ವೇಗವಾಗಿ ಎಲ್ಲಿಗೆ ಹಾರಿಹೋಗಿದ್ದೀರಿ ? ನಿಮ್ಮ ರಕ್ಷಣವು ಯಾವಾಗಲೂ ನಮ್ಮ ಸಮೀಪದಲ್ಲೇ ಇರುವಂತಾಗಲಿ.

English Translation

Where are you? whither are you gone? whither have you flown like hawks? Let your protection abide near me.

॥ ಸಂಹಿತಾಪಾಠಃ ॥

ಯದದ್ಯ ಕರ್ಹಿ ಕರ್ಹಿ ಚಿಚ್ಛುಶ್ರೂಯಾತಮಿಮಂ ಹವಂ ।
ಅಂತಿ ಷದ್ಭೂತು ವಾಮವಃ ॥ ೫ ॥

॥ ಪದಪಾಠಃ ॥

ಯತ್ । ಅದ್ಯ । ಕರ್ಹಿ । ಕರ್ಹಿ । ಚಿತ್ । ಶುಶ್ರೂಯಾತಂ । ಇಮಂ । ಹವಂ ।
ಅಂತಿ । ಸತ್ । ಭೂತು । ವಾಂ । ಅವಃ ॥ ೫ ॥

॥ ಸಾಯಣಭಾಷ್ಯಂ ॥

ಯದ್ಯಸ್ಮಾನ್ನ ನಿರ್ಧಾರ್ಯತೇಽತೋಽದ್ಯಾಸ್ಮಿನ್ಕಾಲೇ ಕರ್ಹಿ ಕಸ್ಮಿನ್ನಪಿ ದೇಶೇ ಕರ್ಹಿ ಕಸ್ಮಿನ್ನಪಿ ಕಾಲ ಇಮಂ ಹವಮಸ್ಮದೀಯಮಾಹ್ವಾನಂ ಶುಶ್ರೂಯಾತಂ । ಶೃಣುಯಾತಂ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ಯತ್**—ಒಂದು ವೇಳೆ । **ಅದ್ಯ**—ಈ ಕಾಲದಲ್ಲಿ । **ಕರ್ಹಿ**—ಯಾವ ಪ್ರದೇಶದಲ್ಲಿದ್ದರೂ । **ಕರ್ಹಿ ಚಿತ್**—ಯಾವ ಸಮಯದಲ್ಲಾದರೂ । **ಇಮಂ ಹವಂ**—ನನ್ನ ಈ ಪ್ರಾರ್ಥನೆಯನ್ನು । **ಶುಶ್ರೂಯಾತಂ**—ನೀವು ಕೇಳಿದ್ದೇ ಆದರೆ । **ವಾಂ**—ನಿಮ್ಮ । **ಅವಃ**—ರಕ್ಷಣವು । **ಅಂತಿಷತ್**—ನಮ್ಮ ಸಮೀಪದಲ್ಲಿಯೇ ಇರುವುದಾಗಿ । **ಭೂತು**—ಆಗಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಒಂದು ವೇಳೆ ಈ ಯಜ್ಞಕಾಲದಲ್ಲಿ ನೀವು ಯಾವ ಪ್ರದೇಶದಲ್ಲಿದ್ದರೂ ಯಾವ ಸಮಯದಲ್ಲಾದರೂ ನನ್ನ ಈ ಪ್ರಾರ್ಥನೆಯನ್ನು ಕೇಳಿದ್ದೇ ಆದರೆ, ನಿಮ್ಮ ರಕ್ಷಣವು ನಮ್ಮ ಸಮೀಪದಲ್ಲಿಯೇ ಇರುವಂತೆ ಅನುಗ್ರಹಿಸಿ.

## English Translation

If to-day, at some time, in some place, you would but hear my invocation,—let your protection abide near me.

॥ ಸಂಹಿತಾಪಾಠಃ ॥

ಅಶ್ವಿನಾ ಯಾಮಹೂತಮಾ ನೇದಿಷ್ಠಂ ಯಾಮ್ಯಾಪ್ಯಂ ।
ಅಂತಿ ಷದ್ಭೂತು ವಾಮವಃ ॥ ೬ ॥

॥ ಪದಪಾಠಃ ॥

ಅಶ್ವಿನಾ । ಯಾಮಽಹೂತಮಾ । ನೇದಿಷ್ಠಂ । ಯಾಮಿ । ಆಪ್ಯಂ ।
ಅಂತಿ । ಸತ್ । ಭೂತು । ವಾಂ । ಅವಃ ॥ ೬ ॥

॥ ಸಾಯಣಭಾಷ್ಯಂ ।

**ಯಾಮಹೂತಮಾತಿಶಯೇನ ಕಾಲೇ ಹ್ವಾತವ್ಯಾವಶ್ವಿನಾಶ್ವಿನೌ ಯಾಮಿ । ನೇದಿಷ್ಠಮಂತಿಕತಮ-ಮಾಪ್ಯಂ ಬಾಂಧವಂ ಚ ಯಾಮಿ ತಯೋಃ ॥**

॥ ಪ್ರತಿಪದಾರ್ಥ ॥

**ಅಶ್ವಿನಾ**—ಅಶ್ವಿನೀದೇವತೆಗಳು । **ಯಾಮಹೂತಮಾ**—ಆಪತ್ಕಾಲದಲ್ಲೆಲ್ಲಾ ಪ್ರಾರ್ಥಿತರಾಗಿ ಕರೆಯಲ್ಪಡತಕ್ಕವರಾಗಿದ್ದಾರೆ । **ನೇದಿಷ್ಠಂ**—ಅತ್ಯಂತ ಸಮೀಪಸ್ಥವಾದ । **ಆಪ್ಯಂ**—ಬಂಧುತ್ವವನ್ನು । **ಯಾಮಿ**—ಅವರಲ್ಲಿ ಸಂಪಾದಿಸುತ್ತೇನೆ । **ವಾಂ**—ನಿಮ್ಮಿಬ್ಬರ । **ಅವಃ**—ರಕ್ಷಣವು । **ಅಂತಿ ಷತ್**—ನಮಗೆ ಅತ್ಯಂತ ಸಮೀಪದಲ್ಲಿರುವುದಾಗಿ । **ಭೂತು**—ಆಗಲಿ

॥ ಭಾವಾರ್ಥ ॥

ಅಶ್ವಿನೀದೇವತೆಗಳು ಆಪತ್ಕಾಲದಲ್ಲೆಲ್ಲಾ ಪ್ರಾರ್ಥಿತರಾಗಿ ಕರೆಯಲ್ಪಡತಕ್ಕವರಾಗಿದ್ದಾರೆ ಅತ್ಯಂತ ಸಮೀಪಸ್ಥವಾದ ಬಂಧುತ್ವವನ್ನು ನಾನು ಅವರಲ್ಲಿ ಸಂಪಾದಿಸುತ್ತೇನೆ. ನಿಮ್ಮಿಬ್ಬರ ರಕ್ಷಣವು ನಮಗೆ ಅತ್ಯಂತ ಸಮೀಪದಲ್ಲಿಯೇ ಇರುವಂತೆ ಅನುಗ್ರಹಿಸಿ.

## English Translation

The Ashwins are earnestly to be invoked in emergency; I enter in to closest friendship with them, let your protection abide near me

॥ ಸಂಹಿತಾಪಾಠಃ ॥

ಅವಂತಮತ್ರಯೇ ಗೃಹಂ ಕೃಣುತಂ ಯುವಮಶ್ವಿನಾ ।

ಅಂತಿ ಷದ್ಭೂತು ವಾಮವಃ ॥ ೭ ॥

॥ ಪದಪಾಠಃ ॥

ಅವಂತಂ । ಅತ್ರಯೇ । ಗೃಹಂ । ಕೃಣುತಂ । ಯುವಂ । ಅಶ್ವಿನಾ ।

ಅಂತಿ । ಸತ್ । ಭೂತು । ವಾಂ । ಅವಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾ ಯುವಂ ಯುವಾಮತ್ರಯೇಽಗ್ನ್ಯಗಾರೇ ದಹ್ಯಮಾನಾಯಾವಂತಂ ರಕ್ಷಂತಂ ಗೃಹಂ ಕೃಣುತಂ । ಕೃತವಂತೌ । ತಾದೃಶಯೋರ್ವಾಮುವೋ ಭವತು ॥ ಅವಂತಮಿತಿ ವ್ಯತ್ಯಯೇನ ಪುಲ್ಲಿಂಗತಾ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಯುವಂ—ನೀವಿಬ್ಬರೂ । ಅತ್ರಯೇ—ಅಗ್ನಿಯಲ್ಲಿ ತಳ್ಳಲ್ಪಟ್ಟ ಅತ್ರಿಗಾಗಿ । ಅವಂತಂ—ರಕ್ಷಕವಾದ । ಗೃಹಂ—ಗೃಹವನ್ನು । ಕೃಣುತಂ—ನಿರ್ಮಿಸಿದಿರಿ । ವಾಂ—ನಿಮ್ಮ । ಅವಃ—ರಕ್ಷಣವು । ಅಂತಿಷತ್—ನಮಗೆ ಅತ್ಯಂತ ಸಮೀಪದಲ್ಲಿರುವುದಾಗಿ । ಭೂತು—ಆಗಿರಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವಿಬ್ಬರೂ ಅಸುರರಿಂದ ಅಗ್ನಿಯಲ್ಲಿ ತಳ್ಳಲ್ಪಟ್ಟ ಅತ್ರಿಗಾಗಿ ರಕ್ಷಕವಾದ ಗೃಹವನ್ನು ನಿರ್ಮಿಸಿದಿರಿ. ನಿಮ್ಮ ರಕ್ಷಣವು ನಮಗೆ ಅತ್ಯಂತ ಸಮೀಪದಲ್ಲಿರುವಂತೆ ಅನುಗ್ರಹಿಸಿರಿ.

English Translation

Aswins, you made a sheltering house for Atri; let your protection abide near me.

॥ ಸಂಹಿತಾಪಾಠಃ ॥

ವರೇಥೇ ಅಗ್ನಿಮಾತಪೋ ವದತೇ ವಲ್ಗ್ವತ್ರಯೇ ।

ಅಂತಿ ಷದ್ಭೂತು ವಾಮವಃ ॥ ೮ ॥

॥ ಪದಪಾಠಃ ॥

ವರೇಥೇ ಇತಿ । ಅಗ್ನಿಂ । ಆऽತಪಃ । ವದತೇ । ವಲ್ಗು । ಅತ್ರಯೇ ।

ಅಂತಿ । ಸತ್ । ಭೂತು । ವಾಂ । ಅವಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ವಲ್ಗು ಮನೋಹರಂ ವದತೇ ಸ್ತುವತೇऽತ್ರಯ ಆತಪ ಆತಪಾದೌಷ್ಣ್ಯಾದಗ್ನಿಂ ವರೇಥೇ । ಅನ್ಯತ್ಪೂರ್ವವತ್ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) ವಲ್ಗು—ಮನೋಹರವಾಗಿ । ವದತೇ—ಸ್ತುತಿಸಿದ । ಅತ್ರಯೇ—ಅತ್ರಿಗಾಗಿ । ಆತಪಃ—ದಹಿಸುವ ತೀಕ್ಷ್ಣತೆಯಿಂದ । ಅಗ್ನಿಂ—ಅಗ್ನಿಯನ್ನು । ವರೇಥೇ—ತಡೆಗಟ್ಟಿದಿರಿ । ವಾಂ—ನಿಮ್ಮ । ಅವಃ—ರಕ್ಷಣವು । ಅಂತಿಷತ್—ಅತ್ಯಂತ ಸಮೀಪದಲ್ಲಿರುವುದಾಗಿ । ಭೂತು—ಆಗಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಮನೋಹರವಾಗಿ ಸ್ತುತಿಸಿದ ಅತ್ರಿಗಾಗಿ ಅಗ್ನಿಯನ್ನು ಅವನ ದಹಿಸುವ ತೀಕ್ಷ್ಣತೆಯಿಂದ ತಡೆಗಟ್ಟಿದಿರಿ. ನಿಮ್ಮ ರಕ್ಷಣವು ನನಗೆ ಅತ್ಯಂತ ಸಮೀಪದಲ್ಲಿರುವಂತೆ ಅನುಗ್ರಹಿಸಿ

English Translation

You stayed the fire from its fierceness for Atri, while he praised you acceptably ; let your protection abide near me

॥ ಸಂಹಿತಾಪಾಠಃ ॥

ಪ್ರ ಸಪ್ತವಧ್ರಿರಾಶಸಾ ಧಾರಾಮಗ್ನೇರಶಾಯತ ।

ಅಂತಿ ಷದ್ಭೂತು ವಾಮವಃ ॥ ೯ ॥

॥ ಪದಪಾಠಃ ॥

ಪ್ರ । ಸಪ್ತऽವಧ್ರಿಃ । ಆऽಶಸಾ । ಧಾರಾಂ । ಅಗ್ನೇಃ । ಅಶಾಯತ ।

ಅಂತಿ । ಸತ್ । ಭೂತು । ವಾಂ । ಅವಃ ॥ ೯ ॥

॥ ಸಾಯಣಭಾಷ್ಯಂ ॥

**ಸಪ್ತವಧ್ರಿರ್ನಾಮ ಮಹರ್ಷಿರ್ಹೇ ಅಶ್ವಿನೌ ಯುವಯೋರಾಶಸಾಶಂಸನೇನ ಸ್ತುತ್ಯಾ ಮಂಜೂಷಾಯಾ ನಿರ್ಗತ್ಯಾಗ್ನೇರ್ಧಾರಾಂ ತಸ್ಯಾಂ ಮಂಜೂಷಾಯಾಂ ಪ್ರಾಶಾಯತ । ಆಶಾಯಯತ್ । ಸ್ವನಿರೋಧಿಕಾಂ ತಾಂ ದಗ್ಧವಾನಿತ್ಯರ್ಥಃ । ಸಪ್ತವಧ್ರೇಃ ಪೇಟಿಕಾಂತಃ ಪ್ರವೇಶೋಽಶ್ವಿನೋರನುಗ್ರಹಾನ್ನಿರ್ಗಮಶ್ಚ ವಿ ಜಿಹೀಷ್ವ ವನಸ್ಪತೇ । ಋ. ೫-೭೮-೫ । ಇತ್ಯತ್ರ ಸ್ಪಷ್ಟಮುಕ್ತಂ ॥**

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ಸಪ್ತವಧ್ರಿಃ**—ಸಪ್ತವಧ್ರಿಯೆಂಬ ಋಷಿಯು । **ಆಶಸಾ**—ನಿಮ್ಮನ್ನು ಪ್ರಶಂಸಿಸುವ ಸ್ತುತಿಯಿಂದ (ತನ್ನನ್ನು ಬಚ್ಚಿಟ್ಟಿದ್ದ ಪೆಟ್ಟಿಗೆಯಿಂದ ಹೊರಕ್ಕೆ ಬಂದು) । **ಅಗ್ನೇಃ**—ಅಗ್ನಿಯ । **ಧಾರಾಂ**—ಜ್ವಾಲೆಯನ್ನು । **ಪ್ರ ಅಶಾಯತ**—ಆ ಪೆಟ್ಟಿಗೆಯಲ್ಲಿಟ್ಟು ಅದನ್ನು ದಹಿಸುವಂತೆ ಮಾಡಿದನು । **ವಾಂ**—ನಿಮ್ಮ । **ಅವಃ**—ರಕ್ಷಣವು । **ಅಂತಿಷತ್**—ನಮಗೆ ಅತ್ಯಂತ ಸಮೀಪದಲ್ಲಿರುವುದಾಗಿ । **ಭೂತು**—ಆಗಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಸಪ್ತವಧ್ರಿಯೆಂಬ ಋಷಿಯು ನಿಮ್ಮನ್ನು ಪ್ರಶಂಸಿಸಿ ತನ್ನನ್ನು ಬಚ್ಚಿಟ್ಟಿದ್ದ ಪೆಟ್ಟಿಗೆಯಿಂದ ನಿಮ್ಮ ಸಹಾಯದ ಫಲವಾಗಿ ಹೊರಕ್ಕೆ ಬಂದು ಆ ಪೆಟ್ಟಿಗೆಯನ್ನು ಅಗ್ನಿಯಿಂದ ದಹಿಸುವಂತೆ ಮಾಡಿದನು. ನಿಮ್ಮ ರಕ್ಷಣವು ಯಾವಾಗಲೂ ನಮಗೆ ಅತ್ಯಂತ ಸಮೀಪಸ್ಥವಾಗಿರುವಂತೆಯೇ ಅನುಗ್ರಹಿಸು.

## English Translation

Through his praise of you Saptavadhri let the fire's flame-point (to his basket); let your protection abide near me.

॥ ಸಂಹಿತಾಪಾಠಃ ॥

ಇಹಾ ಗತಂ ವೃಷಣ್ವಸೂ ಶೃಣುತಂ ಮ ಇಮಂ ಹವಂ ।
ಅಂತಿ ಷದ್ಭೂತು ವಾಮವಃ ॥ ೧೦ ॥

॥ ಪದಪಾಠಃ ॥

ಇಹ । ಆ । ಗತಂ । ವೃಷಣ್ವಸೂ ಇತಿ ವೃಷಣ್ಽವಸೂ । ಶೃಣುತಂ । ಮೇ । ಇಮಂ । ಹವಂ ।
ಅಂತಿ । ಸತ್ । ಭೂತು । ವಾಂ । ಅವಃ ॥ ೧೦ ॥

॥ ಸಾಯಣಭಾಷ್ಯಂ ॥

**ಹೇ ವೃಷಣ್ವಸೂ ವರ್ಷಣಧನಾವಶ್ವಿನೌ ಇಹಾಸ್ಮಿನ್ಯಜ್ಞ ಆ ಗತಂ । ಆಗಚ್ಛತಂ । ತದರ್ಥಂ ನೋ ಮಮೇಮಂ ಹವಂ ಶೃಣುತಂ ॥**

॥ ಪ್ರತಿಪದಾರ್ಥ ॥

**ವೃಷಣ್ವಸೂ**—ನಮ್ಮ ಇಷ್ಟಾರ್ಥಗಳನ್ನು ಸುರಿಸಿಕೊಡುವ ಎಲೈ ಅಶ್ವಿನೀದೇವತೆಗಳೇ । **ಇಹ**—ನಮ್ಮ ಈ ಯಜ್ಞಕ್ಕೆ । **ಆ ಗತಃ**—ಬನ್ನಿರಿ । **ನೋ**—ನನ್ನ । **ಇಮಂ ಹವಂ**—ಈ ಪ್ರಾರ್ಥನೆಯನ್ನು । **ಶೃಣುತಂ**—ಕೇಳಿರಿ । **ವಾಂ**—ನಿಮ್ಮ । **ಅವಃ**—ರಕ್ಷಣವು । **ಅಂತಿಷತ್**—ನಮಗೆ ಅತ್ಯಂತ ಸಮೀಪದಲ್ಲೇ ಇರುವುದಾಗಿ । **ಭೂತು**—ಆಗಲಿ.

॥ ಭಾವಾರ್ಥ ॥

ನಮ್ಮ ಇಷ್ಟಾರ್ಥಗಳನ್ನೆಲ್ಲಾ ನೆರವೇರಿಸಿಕೊಡುವ ಎಲೈ ಅಶ್ವಿನೀದೇವತೆಗಳೇ, ನಮ್ಮ ಈ ಯಜ್ಞಕ್ಕೆ ಬನ್ನಿರಿ. ನನ್ನ ಈ ಪ್ರಾರ್ಥನೆಯನ್ನು ಕೇಳಿರಿ. ನಿಮ್ಮ ರಕ್ಷಣವು ನಮಗೆ ಅತ್ಯಂತ ಸಮೀಪದಲ್ಲೇ ಇರುವುದಾಗಿ ಆಗಲಿ.

English Translation

Come hither, lords of abundant wealth, hear this my invocation; let your protection abide near me

॥ ಸಂಹಿತಾಪಾಠ ॥

ಕಿಮಿದಂ ವಾಂ ಪುರಾಣವಜ್ಜರತೋರಿವ ಶಸ್ಯತೇ ।
ಅಂತಿ ಷದ್ಭೂತು ವಾಮವಃ ॥ ೧೧ ॥

॥ ಪದಪಾಠಃ ॥

ಕಿಂ । ಇದಂ । ವಾಂ । ಪುರಾಣऽವತ್ । ಜರತೋಃऽಇವ । ಶಸ್ಯತೇ ।
ಅಂತಿ । ಸತ್ । ಭೂತು । ವಾಂ । ಅವಃ ॥ ೧೧ ॥

॥ ಸಾಯಣಭಾಷ್ಯಂ ॥

**ಹೇ ಅಶ್ವಿನೌ ವಾಂ ಯುವಯೋರರ್ಥಮಾಗಮನಾಯ ಪುರಾಣವತ್ ಪುರಾಣಯೋರತಿವೃದ್ಧಯೋರಿವ । ತದೇವಾಹ । ಜರತೋರಿವ ಶಸ್ಯತೇ । ಪುನಃ ಪುನರಾಗಚ್ಛತಮಿತಿ ಶಸ್ಯತೇ । ಕಿಮಿದಂ । ಯಥಾ ಲೋಕೇ ವೃದ್ಧೋ ಜೀರ್ಣೋ ಬಹುವಾರಮಾಹೂತೋऽಪಿ ನಾಗಚ್ಛತಿ ತದ್ವದ್ಯುವಾಮಪೀತ್ಯರ್ಥಃ । ಏವಮಾನಾಗಮಾಪ್ಪ್ರವೀತಿ ॥**

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ವಾಂ**—ನಿಮ್ಮನ್ನುದ್ದೇಶಿಸಿದ ಈ ಸ್ತುತಿಯು । **ಪುರಾಣವತ್**—ಅತಂತ್ಯ ಹಿಂದಿನಕಾಲದಲ್ಲ ಉತ್ಪನ್ನರಾಗಿ । **ಜರತೋರಿವ**—ವೃದ್ಧರಾದುದರಿಂದ ಕಿವಿಯು ಕಿವುದಾಗಿ ಮತ್ತೆ ಮತ್ತೆ ಹೇಳಬೇಕಾಗುವಂತೆ । **ಶಸ್ಯತೇ**—ಪುನಃಪುನಃ ಪಠಿತವಾಗುತ್ತಿದೆಯಲ್ಲಾ । **ಕಿಂ ಇದಂ**—ಇದಕ್ಕೆ ಕಾರಣವೇನು ? । **ವಾಂ**-ನಿಮ್ಮ । **ಅವಃ**—ರಕ್ಷಣವು । **ಅಂತಿಷತ್**—ಅತ್ಯಂತ ಸಮೀಪದಲ್ಲಿರುವುದಾಗಿ । **ಭೂತು**—ಆಗಲಿ,

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಹಿಂದಿನ ಕಾಲದಲ್ಲಿ ಹುಟ್ಟಿದ ವೃದ್ಧರಲ್ಲಿ ಅವರು ಕಿವುಡರಾಗಿದ್ದರೆ ಎಷ್ಟು ಸಲ ಹೇಳಿದರೂ ಅವರ ಕಿವಿಗೆ ಬೀಳದಿರುವಂತೆ, ನಾನೂ ನಮ್ಮ ಪ್ರಶಂಸಾಯುತವಾದ ಸ್ತುತಿಯನ್ನು ನಿಮಗೆ ಪದೇ ಪದೇ ಅರ್ಪಿಸುತ್ತಿದ್ದೇನೆ ಆದರೂ ಸಹ ಅದು ನಿಮ್ಮ ಕಿವಿಗೆ ಬಿದ್ದಿರುವುದಿಲ್ಲ. ಇದಕ್ಕೆ ಕಾರಣವೇನು ? ನಿಮ್ಮ ರಕ್ಷಣವು ಸರ್ವದಾ ನಮ್ಮ ಸಮೀಪದಲ್ಲಿಯೇ ಇರುವಂತೆ ಅನುಗ್ರಹಿಸಿ.

English Translation

Why is this (repeated invocation) addresred to you as if you were decrepit like old men ? Let your protection abide near me

॥ ಸಂಹಿತಾಪಾಠಃ ॥

ಸಮಾನಂ ವಾಂ ಸಜಾತ್ಯಂ ಸಮಾನೋ ಬಂಧುರಶ್ವಿನಾ ।
ಅಂತಿ ಷದ್ಭೂತು ವಾಮವಃ ॥ ೧೨ ॥

॥ ಪದಪಾಠಃ ॥

ಸಮಾನಂ । ವಾಂ । ಸಜಾತ್ಯಂ । ಸಮಾನಃ । ಬಂಧುಃ । ಅಶ್ವಿನಾ ।
ಅಂತಿ । ಸತ್ । ಭೂತು । ವಾಂ । ಅವಃ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ವಾಂ ಯುವಯೋಃ ಪರಸ್ಪರಂ ಸಜಾತ್ಯಂ ಸಮಾನಜಾತಿತ್ವಂ ಸಮಾನಮೇಕಮೇವ । ಉಭಯೋರಪ್ಯಶ್ವರೂಪಾಯಾ ಸೂರ್ಯಪತ್ನ್ಯಾ ಉತ್ಪತ್ತೇಃ ಸಜಾತ್ಯಂ । ತಥಾ ಯುವಯೋರ್ಬಂಧುರ್ಬಂಧಕಃ ಸ್ತವಃ ಸಮಾನ ಏಕ ಏವ । ಅಥವರ್ಷಿರಹಂ ಸಮಾನ ಏಕ ಏವ ಬಂಧುಃ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ವಾಂ—ನಿಮ್ಮಿಬ್ಬರಿಗಿರತಕ್ಕ । ಸಜಾತ್ಯಂ—ವಂಶಸಂಬಂಧವು । ಸಮಾನಂ—ಒಂದೇ ಆಗಿದೆ । ಬಂಧುಃ—ಬಂಧುತ್ವವೂ ಸಹ । ಸಮಾನಃ—ಒಂದೇ ಆಗಿದೆ । ವಾಂ—ನಿಮ್ಮ । ಅವಃ—ರಕ್ಷಣವು । ಅಂತಿಷತ್— ನನಗೆ ಅತ್ಯಂತ ಸಮೀಪದಲ್ಲಿ ಇರುವುದಾಗಿ । ಭೂತ್—ಆಗಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮಿಬ್ಬರಿಗಿರತಕ್ಕ ವಂಶಸಂಬಂಧವು ಒಂದೇ ಆಗಿದೆ. ನಿಮ್ಮ ಬಂಧುತ್ವವೂ ಸಮಾನವಾಗಿದೆ. (ಆದುದರಿಂದ ನಾನು ನಿಮ್ಮಿಬ್ಬರಿಗೂ ಒಂದೇ ರೀತಿಯಲ್ಲಿ ಸೇರಿದವನಾಗಿದ್ದೇನೆ) ನಿಮ್ಮ ರಕ್ಷಣವು ನನಗೆ ಅತ್ಯಂತ ಸಮೀಪದಲ್ಲಿರುವಂತೆ ಅನುಗ್ರಹಿಸಿರಿ.

English Translation

Aswins, your relationship is common and you have a common kinsman ; let your protection abide near me

॥ ಸಂಹಿತಾಪಾಠಃ ॥

ಯೋ ವಾಂ ರಜಾಂಸ್ಯಶ್ವಿನಾ ರಥೋ ವಿಯಾತಿ ರೋದಸೀ ।
ಅಂತಿ ಷದ್ಭೂತು ವಾಮವಃ ॥ ೧೩ ॥

॥ ಪದಪಾಠಃ ॥

ಯಃ । ವಾಂ । ರಜಾಂಸಿ । ಅಶ್ವಿನಾ । ರಥಃ । ವಿऽಯಾತಿ । ರೋದಸೀ ಇತಿ ।
ಅಂತಿ । ಸತ್ । ಭೂತು । ವಾಂ । ಅವಃ ॥ ೧೩ ॥

॥ ಸಾಯಣಭಾಷ್ಯಂ ॥

ವಾಂ ಯುವಯೋರ್ಯೋ ರಥೋಽಸ್ತಿ ಸ ರಥೋ ರಜಾಂಸಿ ಲೋಕಾನ್ರೋದಸೀ ದ್ಯಾವಾಪೃಥಿವ್ಯೌ ಚ ವಿಯಾತಿ । ವಿಶೇಷೇಣ ಗಚ್ಛತಿ । ಅತಸ್ತೇನ ರಥೇನ ಶೀಘ್ರಮಾಗಚ್ಛತಮಿತಿ ಶೇಷಃ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ವಾಂ—ನಿಮ್ಮ । ಯಃ—ಯಾವ ಪ್ರಸಿದ್ಧವಾದ । ರಥಃ—ರಥವಿರುವುದೋ ಅದು । ರಜಾಂಸಿ -ಸಕಲ ಲೋಕಗಳನ್ನೂ । ರೋದಸೀ—ದ್ಯಾವಾಪೃಥಿವಿಗಳನ್ನೂ । ವಿಯಾತಿ—

**ಅತಿಶಯವಾಗಿ** ಸುತ್ತಿ ಸಂಚರಿಸುತ್ತದೆ | **ವಾಂ**—ನಿಮ್ಮ | **ಅವಃ**—ರಕ್ಷಣವು | **ಅಂತಿಷತ್**-ನಮತ ಅತ್ಯಂತ ಸಮೀಪದಲ್ಲಿ ಇರುವುದಾಗಿ | **ಭೂತು**—ಆಗಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮ ಪ್ರಸಿದ್ಧವಾದ ರಥವು ಸಕಲಲೋಕಗಳಲ್ಲಿಯೂ, ದ್ಯಾವಾಪೃಥಿವಿಗಳಲ್ಲೂ ಅತ್ಯತಿಶಯವಾಗಿ ಸಂಚರಿಸುತ್ತದೆ ನಿಮ್ಮ ರಕ್ಷಣವು ಯಾವಾಗಲೂ ನಮಗೆ ಸಮೀಪದಲ್ಲಿಯೇ ಇರುವಂತಾಗಲಿ.

## English Translation

Your chariot, Aswins, moves swiftly through the worlds, through heaven and earth ; let your protection abide near me

॥ ಸಂಹಿತಾಪಾಠಃ ॥

ಆ ನೋ॒ ಗವ್ಯೇ॑ಭಿ॒ರಶ್ವ್ಯೈ᳚ಃ ಸ॒ಹಸ್ರೈ॒ರುಪ॑ ಗಚ್ಛತಂ ।
ಅಂತಿ॑ ಷ॒ದ್ಭೂತು ವಾ॒ಮವ॑ಃ ॥ ೧೪ ॥

॥ ಪದಪಾಠಃ ॥

ಆ । ನಃ॒ । ಗವ್ಯೇ॑ಭಿಃ । ಅಶ್ವ್ಯೈ᳚ಃ । ಸ॒ಹಸ್ರೈ᳚ಃ । ಉಪ॑ । ಗ॒ಚ್ಛ॒ತ॒ಂ ।
ಅಂತಿ॑ । ಸತ್ । ಭೂ॒ತು॒ । ವಾ॒ಂ । ಅವ॑ಃ ॥ ೧೪ ॥

॥ ಸಾಯಣಭಾಷ್ಯಂ ॥

**ಹೇ ಅಶ್ವಿನೌ ನೋಽಸ್ಮಾನ್ ಸಹಸ್ರೈರಪರಿಮಿತೈರ್ಗವ್ಯೇಭಿರ್ಗೋಸಮೂಹೈರಶ್ವ್ಯೈರಶ್ವಸಮೂಹೈಶ್ಚೋಪ ಗಚ್ಛತಂ ॥**

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ನಃ**—ನಮ್ಮಲ್ಲಿಗೆ | **ಸಹಸ್ರೈಃ**—ಅಸಂಖ್ಯಾಕವಾದ | **ಗವ್ಯೇಭಿಃ**—ಗೋಸಮೂಹಗಳೊಡನೆಯೂ | **ಅಶ್ವ್ಯೈಃ**—ಅಶ್ವಸಮೂಹಗಳೊಡನೆಯೂ | **ಉಪ ಆ ಗಚ್ಛತಂ**—ದಯಮಾಡಿರಿ| **ವಾಂ**—ನಿಮ್ಮ | **ಅವಃ**—ರಕ್ಷಣವು | **ಅಂತಿಷತ್**—ಅತ್ಯಂತ ಸಮೀಪದಲ್ಲಿರುವುದಾಗಿ | **ಭೂತು**—ಆಗಲಿ

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಮ್ಮಲ್ಲಿಗೆ ಅಸಂಖ್ಯಾಕವಾದ ಗೋಸಮೂಹಗಳೊಡನೆಯೂ ಅಶ್ವಸಮೂಹಗಳೊಡನೆಯೂ ದಯಮಾಡಿರಿ. ನಿಮ್ಮ ರಕ್ಷಣವು ಯಾವಾಗಲೂ ನಮಗೆ ಅತ್ಯಂತ ಸಮೀಪದಲ್ಲಿಯೇ ಇರುವಂತಾಗಲಿ.

## Engalish Translation

Come to us with thousands of herds of cattle and horses; let your protection abide near me.

॥ ಸಂಹಿತಾಪಾಠಃ ॥

ಮಾ ನೋ ಗವ್ಯೇಭಿರಶ್ವ್ಯೈಃ ಸಹಸ್ರೇಭಿರತಿ ಖ್ಯತಂ ।
ಅಂತಿ ಷದ್ಭೂತು ವಾಮವಃ ॥ ೧೫ ॥

॥ ಪದಪಾಠಃ ॥

ಮಾ । ನಃ । ಗವ್ಯೇಭಿಃ । ಅಶ್ವ್ಯೈಃ । ಸಹಸ್ರೇಭಿಃ । ಅತಿ । ಖ್ಯತಂ ।
ಅಂತಿ । ಸತ್ । ಭೂತು । ವಾಂ । ಅವಃ ॥ ೧೫ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಗವ್ಯೇಭಿರ್ಗೋಸಮೂಹೈರಶ್ವ್ಯೈರಶ್ವಸಮೂಹೈಃ ಸಹಸ್ರೇಭಿಃ ಸಹಸ್ರಸಂಖ್ಯಾಕೈರ್ಯುಕ್ತಾವಸ್ಮಾನತಿ ಖ್ಯತಂ । ಅತೀತಿ ಪ್ರತೀತ್ಯಸ್ಮಿನ್ನರ್ಥೇ । ಮಾ ನಿವಾರಯತಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) ಸಹಸ್ರೇಭಿಃ—ಅಸಂಖ್ಯಾಕವಾದ । ಗವ್ಯೇಭಿಃ— ಗೋಸಮೂಹಗಳೊಡನೆಯೂ। ಅಶ್ವ್ಯೈಃ—ಅಶ್ವಸಮೂಹಗಳೊಡನೆಯೂ ಕೂಡಿರುವ ನೀವು । ನಃ—ನಮ್ಮನ್ನು । ಮಾ ಅತಿ ಖ್ಯತಂ—ದಾಟಿ (ಅಲಕ್ಷಿಸಿ) ಮುಂದೆ ಹೋಗಬೇಡಿರಿ । ವಾಂ—ನಿಮ್ಮ । ಅವಃ— ರಕ್ಷಣವು । ಅಂತಿಷತ್—ನನಗೆ ಅತ್ಯಂತ ಸಮೀಪದಲ್ಲಿಯೇ ಇರುವುದಾಗಿ । ಭೂತು—ಆಗಲಿ

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಅಸಂಖ್ಯಾಕವಾದ ಗೋಸಮೂಹಗಳೊಡನೆಯೂ ಮತ್ತು ಅಶ್ವಸಮೂಹಗಳೊಡನೆಯೂ ಕೂಡಿಕೊಂಡಿರುವ ನೀವು ನಮ್ಮನ್ನು ಲಕ್ಷಿಸದೇ ನಮ್ಮನ್ನು ದಾಟಿ ಮುಂದೆ ಹೋಗಬೇಡಿರಿ. ನಿಮ್ಮ ರಕ್ಷಣವು ಯಾವಾಗಲೂ ನನ್ನ ಸಮೀಪದಲ್ಲಿಯೇ ಇರುವಂತಾಗಲಿ

## English Translation

Pass us not by with your thousands of heards of cattle and horses; let your protection abide near me.

॥ ಸಂಹಿತಾಪಾಠಃ ॥

ಅರುಣಪ್ಸುರುಷಾ ಅಭೂದಕರ್ಜ್ಯೋತಿರ್ಋತಾವರೀ ।

ಅಂತಿ ಷದ್ಭೂತು ವಾಮವಃ ॥ ೧೬ ॥

॥ ಪದಪಾಠಃ ॥

ಅರುಣಽಪ್ಸುಃ । ಉಷಾಃ । ಅಭೂತ್ । ಅಕಃ । ಜ್ಯೋತಿಃ । ಋತಽವರೀ ।

ಅಂತಿ । ಸತ್ । ಭೂತು । ವಾಂ । ಅವಃ ॥ ೧೬ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಉಷಾ ಅರುಣಪ್ಸುಃ ಶುಭ್ರವರ್ಣಾಭೂತ್ । ಭವತಿ । ನ ಕೇವಲಂ ಸ್ವಯಂ ಜ್ಯೋತಿಸ್ತೇಜೋಽಕಃ ಕರೋತ್ಯಂತಿ ಸರ್ವತ ಋತಾವರ್ಯೃತವತ್ಯುಷಾಃ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) ಅರುಣಪ್ಸುಃ—ಶುಭ್ರವರ್ಣವುಳ್ಳ । ಉಷಾಃ—ಉಷೋದೇವಿಯು। ಅಭೂತ್—ಆವಿರ್ಭವಿಸಿದ್ದಾಳೆ । ಋತಾವರೀ—ಯಜ್ಞಕ್ಕೆ ಪ್ರಧಾನಳಾದ ಉಷಸ್ಸು । ಜ್ಯೋತಿಃ—ತನ್ನ ಪ್ರಭೆಯನ್ನು (ಸರ್ವತ್ರ) । ಅಕಃ— ಉಂಟುಮಾಡುತ್ತಾಳೆ (ಹರಡುತ್ತಾಳೆ) । ವಾಂ—ನಿಮ್ಮ । ಅವಃ—ರಕ್ಷಣವು । ಅಂತಿಷತ್—ನಮಗೆ ಅತ್ಯಂತ ಸಮೀಪದಲ್ಲಿ ಇರುವುದಾಗಿ । ಭೂತು—ಆಗಲಿ

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಶುಭ್ರವರ್ಣವುಳ್ಳ ಉಷೋದೇವಿಯು ಆವಿರ್ಭವಿಸಿದ್ದಾಳೆ ಯಜ್ಞಕ್ಕೆ ಪ್ರಧಾನಳಾದ ಉಷಸ್ಸು ತನ್ನ ಪ್ರಭೆಯನ್ನು ಎಲ್ಲೆಲ್ಲೂ ಬೀರಿದ್ದಾಳೆ ಎಲೈ ಅಶ್ವಿನೀದೇವತೆಗಳೇ, ನಿಮ್ಮ ರಕ್ಷಣವು ನಮಗೆ ಅತ್ಯಂತ ಸಮೀಪದಲ್ಲಿರುವುದಾಗಿ ಅನುಗ್ರಹಿಸಿ.

English Translation

The purple-tinted Dawn has appeared, the mistress of the sacrifice spreads her light; let your protection abide near me.

॥ ಸಂಹಿತಾಪಾಠಃ ॥

ಅಶ್ವಿನಾ ಸು ವಿಚಾಕಶದ್ವೃಕ್ಷಂ ಪರಶುಮಾ ಇವ ।

ಅಂತಿ ಷದ್ಭೂತು ವಾಮವಃ ॥ ೧೭ ॥

॥ ಪದಪಾಠಃ ॥

ಅಶ್ವಿನಾ । ಸು । ವಿऽಚಾಕಶತ್ । ವೃಕ್ಷಂ । ಪರಶುಮಾನ್ऽಇವ ।

ಅಂತಿ । ಸತ್ । ಭೂತು । ವಾಂ । ಅವಃ ॥ ೧೭ ॥

॥ ಸಾಯಣಭಾಷ್ಯಂ ॥

ಸು ವಿಚಾಕಶದತ್ಯಂತಂ ದೀಪ್ಯಮಾನಃ ಸೂರ್ಯೋಽಗ್ನಿರ್ವಾ ವೃಕ್ಷಂ ಪರಶುಮಾನಿವ ಸ ಯಥಾ ಶಕಲಯತಿ ತದ್ವತ್ತಮೋ ನಿಶಾರಯತೀತಿ ಶೇಷಃ । ದೃಷ್ಟಾಂತಸಾಮರ್ಥ್ಯಾದೇವ ಲಭ್ಯತೇ । ಯಸ್ಮಾದೇವಂ ತಸ್ಮಾದಶ್ವಿನಾಶ್ವಿನಾವಾಹ್ವಯ ಇತಿ ಶೇಷಃ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ಪರಶುಮಾನ್**—ಕೊಡಲಿಯನ್ನು ಹಿಡಿದಿರುವ ಸೌದೆಕಡಿಯುವವನು । **ವೃಕ್ಷಂ ಇವ**—ವೃಕ್ಷವನ್ನು ತುಂಡುಮಾಡಿ ಸೀಳುವಂತೆ । **ಸು ವಿಚಾಕಶತ್**—ಪ್ರಕಾಶಮಾನನಾದ ಸೂರ್ಯನು (ಅಥವಾ ಅಗ್ನಿಯು) ತಮಸ್ಸನ್ನು ಚದುರಿಸುತ್ತಾನೆ । **ವಾಂ**—ನಿಮ್ಮ । **ಅವಃ**—ರಕ್ಷಣವು । **ಅಂತಿ ಷತ್**—ನಮಗೆ ಅತ್ಯಂತ ಸಮೀಪದಲ್ಲಿ ಇರುವಂತೆ । **ಭೂತು**—ಆಗಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಕೊಡಲಿಯನ್ನು ಹಿಡಿದಿರುವ ಸೌದೆಕಡಿಯುವವನು ವೃಕ್ಷವನ್ನು ತುಂಡುಮಾಡಿ ಸೀಳುವಂತೆ ಪ್ರಕಾಶಮಾನನಾದ ಸೂರ್ಯನು ಅಥವಾ ಅಗ್ನಿಯು ತಮಸ್ಸನ್ನು (ಕಗ್ಗತ್ತಲೆಯನ್ನು) ಚದುರಿಸುತ್ತಾನೆ. ನಿಮ್ಮ ರಕ್ಷಣವು ಸರ್ವದಾ ನಮಗೆ ಸಮೀಪದಲ್ಲಿಯೇ ಇರುವಂತೆ ಅನುಗ್ರಹಿಸಿರಿ.

English Translation

Aswins, the splendidly-brilliant (sun cleaves the darkness) as the woodman with his axe a tree ; let your protection abide near me.

॥ ಸಂಹಿತಾಪಾಠಃ ॥

ಪುರಂ ನ ಧೃಷ್ಣವಾ ರುಜ ಕೃಷ್ಣಯಾ ಬಾಧಿತೋ ವಿಶಾ ।

ಅಂತಿ ಷದ್ಭೂತು ವಾಮವಃ ॥ ೧೮ ॥

॥ ಪದಪಾಠಃ ॥

ಪುರಂ । ನ । ಧೃಷ್ಣೋ ಇತಿ ಆ । ರುಜ । ಕೃಷ್ಣಯಾ । ಬಾಧಿತಃ । ವಿಶಾ ।

ಅಂತಿ । ಸತ್ । ಭೂತು । ವಾಂ । ಅವಃ ॥ ೧೮ ॥

॥ ಸಾಯಣಭಾಷ್ಯಂ ॥

**ಹೇ ಧೃಷ್ಣೋ ಧರ್ಷಕ ಸಪ್ತವಧ್ರೇ ತ್ವಂ ಕೃಷ್ಣಯಾಕರ್ಷಯಾ ವಿಶಾ ಪ್ರವೇಶಯಂತ್ಯಾ ಪೇಟಿಕಯಾ ಬಾಧಿತಸ್ತ್ವಂ ತತೋ ನಿರ್ಗತ್ಯ ತಾಮೇವಾರುಜ । ಪೀಡಯಾಶ್ವಿನೋರಸಂಗ್ರಹಾತ್ । ಏವಂ ಸ್ವಯಂ ಸ್ವಾತ್ಮಾನಂ ಪ್ರೇಷ್ಯತಿ । ಅಥವಾ ಗೋಪವನಃ ಸಪ್ತವಧ್ರಿಮೇವಂ ಬ್ರವೀತಿ । ವಾಂ ಯುವಯೋರವೋ ರಕ್ಷಣಂ ಗಮನಂ ವಾ ಸಮೀಪೇ । ತತ್ರ ತ್ರಿಷು ವರ್ಗೇಷ್ವಂತಿ ಷದಿತ್ಯುತ್ತರೋಽರ್ಧರ್ಚೋಽನ್ವಿತಪದಾಧ್ಯಾಹಾರೇಣ ಯೋಜ್ಯಃ ॥**

॥ ಪ್ರತಿಪದಾರ್ಥ ॥

**ಧೃಷ್ಣೋ**—ದೃಢವಾದ ಶಕ್ತಿಯುಳ್ಳ ಎಲೈ ಸಪ್ತವಧ್ರಿಯೇ । **ಕೃಷ್ಣಯಾ**—ಬಂಧನಮಾಡುವ । **ವಿಶಾ**—ಪೆಟ್ಟಿಗೆಯಿಂದ । **ಬಾಧಿತಃ**—ಹಿಂಸಿತನಾದ ನೀನು । **ಪುರಂ ನ**—ಶತ್ರುಪಟ್ಟಣವನ್ನು ಸೀಳಿ ಹೊರಕ್ಕೆ ಬರುವಂತೆ । **ಆ ರುಜ**—ಆ ಪೆಟ್ಟಿಗೆಯನ್ನು ಸೀಳಿ ಹೊರಕ್ಕೆ ಬಾ (ಎಲೈ ಅಶ್ವಿನೀದೇವತೆಗಳೇ) । **ವಾಂ**—ನಿಮ್ಮ । **ಅವಃ**—ರಕ್ಷಣವು । **ಅಂತಿಷತ್**—ನಮಗೆ ಅತ್ಯಂತ ಸಮೀಪದಲ್ಲಿಯೇ ಇರುವುದಾಗಿ । **ಭೂತು**—ಆಗಲಿ

॥ ಭಾವಾರ್ಥ ॥

ದೃಢವಾದ ಶಕ್ತಿಯುಳ್ಳ ಎಲೈ ಸಪ್ತವಧ್ರಿಯೇ, ಬಂಧನಮಾಡಿರುವ ಪೆಟ್ಟಿಗೆಯಿಂದ ಹಿಂಸಿತನಾದ ನೀನು ಶತ್ರುಪಟ್ಟಣವನ್ನು ಸೀಳಿ ಹೊರಕ್ಕೆ ಬರುವಂತೆ ಆ ಪೆಟ್ಟಿಗೆಯನ್ನು ಸೀಳಿ ಹೊರಕ್ಕೆ ಬಾ ಎಲೈ ಅಶ್ವಿನೀದೇವತೆಗಳೇ, ನಿಮ್ಮ ರಕ್ಷಣವು ನಮಗೆ ಅತ್ಯಂತ ಸಮೀಪದಲ್ಲಿಯೇ ಇರುವುದಾಗಿ ಆಗಲಿ.

English Translation

O bold Saptavadhri, distressed by the entangling and detaining (basket), break through it as through a city ; let your protection ( Aswins ) abide near me.

## ಎಪ್ಪತ್ತನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ವಿಶೋವಿಶೋ ವ ಇತಿ ಪಂಚದಶರ್ಚಂ ಪಂಚಮಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ವಿಶೋವಿಶೋ ವಃ ಪಂಚೋನಾಗ್ನೇಯಂ ತ್ವನುಷ್ಟುಮ್ಮುಖಾಸ್ತ್ರ್ಯಚಾಶ್ಚತ್ವಾರೋಽಂತ್ಯಾಸ್ತಿಸ್ರೋಽನುಷ್ಟುಭ ಆರ್ಕ್ಷಸ್ಯ ಶ್ರುತರ್ವಣೋ ದಾನಸ್ತುತಿರಿತಿ । ಅನುವೃತ್ತೇರ್ಗೋಪವನ ಋಷಿಃ । ಆದಿತಸ್ತ್ರಿಷು ತೃಚೇಷು ಸರ್ವಾಃ ಪ್ರಥಮಾ ಅನುಷ್ಟುಭೋ ದ್ವಿತೀಯಾತೃತೀಯೇ ಪ್ರಾಗ್ವತ್ಸಪ್ರಪರಿಭಾಷಯಾ ಗಾಯತ್ರ್ಯೌ ತ್ರಯೋದಶ್ಯಾದ್ಯಾಸ್ತಿಸ್ರೋಽನುಷ್ಟುಭಃ । ಅಸ್ಯೋತ್ತರಸ್ಯ ಚಾಗ್ನಿರ್ದೇವತಾ । ಅಂತ್ಯಾಸ್ತಿಸ್ರಃ**

**ಶ್ರುತರ್ವನಾಮ್ನೋ ರಾಜ್ಞೋ ದಾನಸ್ತುತಿಃ || ವ್ಯೋಮವಿಶ್ವದೇವಸ್ತುತ್ಪಂಚಶಾರದೀಯೇಽಷ್ವಿದಂ ಸೂಕ್ತ-ಮಾಜ್ಯಶಸ್ತ್ರಂ । ಸೂತ್ರಿತಂ ಚ । ವಿಶೋವಿಶೋ ವೋ ಅತಿಥಿಮಿತ್ಯಾಜ್ಯಂ । ಆ ೯-೮ । ಇತಿ ||**

ಅನುವಾದವು—**ವಿಶೋವಿಶೋ ವಃ** ಎಂಬ ಈ ಸೂಕ್ತವು ಎಂಟನೆಯ ಮಂಡಲದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಹದಿನೈದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ವಿಶೋವಿಶೋ ವಃ ಪಂಚೋನಾಗ್ನೇಯಂ ತ್ವನುಷ್ಟುಪ್ಪಮ್ಯುಗ್ಬಾಸ್ತೃಚಾಶ್ಚತ್ವಾರೋಽನ್ತ್ಯಾಸ್ತಿಸ್ರೋಽನುಷ್ಟುಭ ಆರ್ಕ್ಷಸ್ಯ ಶ್ರುತರ್ವಣೋ ದಾನಸ್ತುತಿಃ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಗೋಪವನಃ ಎಂಬುವನು ಋಷಿಯು; ಈ ಸೂಕ್ತದ ಮೊದಲಿನ ಮೂರು ತೃಚಗಳಲ್ಲಿ (ತೃಚವೆಂದರೆ ಮೂರು ಋಕ್ಕುಗಳು) ಮೊದಲನೆಯ ಋಕ್ಕು ಅನುಷ್ಟುಪ್, ಎರಡು ಮತ್ತು ಮೂರನೆಯ ಋಕ್ಕುಗಳು ಗಾಯತ್ರೀಛಂದಸ್ಕವು. ಹದಿಮೂರನೆಯ ಋಕ್ಕಿನಿಂದ ಮುಂದಿನ ಮೂರು ಋಕ್ಕುಗಳು ಅನುಷ್ಟುಪ್ ಛಂದಸ್ಕವು. ಈ ಸೂಕ್ತಕ್ಕೂ ಮುಂದಿನ ಸೂಕ್ತಕ್ಕೂ ಅಗ್ನಿಯು ದೇವತೆಯು. ಈ ಸೂಕ್ತದ ಕೊನೆಯ ಮೂರು ಋಕ್ಕುಗಳಿಗೆ ಶ್ರುತರ್ವಾ ಎಂಬ ರಾಜನ ದಾನಸ್ತುತಿಯೇ ದೇವತೆಯು. ವ್ಯೋಮ ವಿಶ್ವದೇವಸ್ತುತ್ ಪಂಚಶಾರದೀಯ ಗಳಲ್ಲಿ ಈ ಸೂಕ್ತವನ್ನು ಆಜ್ಯಶಸ್ತ್ರಮಂತ್ರಗಳಿಗಾಗಿ ಉಪಯೋಗಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ವಿಶೋವಿಶೋ ವೋಃ ಅಥಿತಿಮಿಥ್ಯಾಜ್ಯಂ** ಎಂಬ ಸೂತ್ರದಿಂದ (ಆ ೯-೮) ವಿವೃತವಾಗಿರುವುದು.

## ಸೂಕ್ತ—೭೪

ಮಂಡಲ—೮ ॥ ಅನುವಾಕ—೮ ॥ ಸೂಕ್ತ—೭೪ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೨೧, ೨೨, ೨೩ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ಗೋಪವನ ಅತ್ರೇಯಃ ॥
ದೇವತಾ—೧-೧೨. ಅಗ್ನಿಃ । ೧೦.೧೫. ಶ್ರುತರ್ವಣ ಆರ್ಕ್ಷ್ಯಸ್ಯ ದಾನಸ್ತುತಿಃ ॥
ಛಂದಃ—೧, ೪, ೭, ೧೦, ೧೩-೧೫ ಅನುಷ್ಟುಪ್ । ೨, ೩, ೫, ೬, ೮, ೯, ೧೧, ೧೨ ಗಾಯತ್ರೀ ॥

॥ ಸಂಹಿತಾಪಾಠಃ ॥

ವಿಶೋವಿಶೋ ವೋ ಅತಿಥಿಂ ವಾಜಯಂತಃ ಪುರುಪ್ರಿಯಂ ।
ಅಗ್ನಿಂ ವೋ ದುರ್ಯಂ ವಚಃ ಸ್ತುಷೇ ಶೂಷಸ್ಯ ಮನ್ಮಭಿಃ ॥೧॥

॥ ಪದಪಾಠಃ ॥

ವಿಶಃಽವಿಶಃ । ವಃ । ಅತಿಥಿಂ । ವಾಜಽಯಂತಃ । ಪುರುಽಪ್ರಿಯಂ ।
ಅಗ್ನಿಂ । ವಃ । ದುರ್ಯಂ । ವಚಃ । ಸ್ತುಷೇ । ಶೂಷಸ್ಯ । ಮನ್ಮಽಭಿಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅನ್ನ ಋತ್ವಿಜೋ ಯಜಮಾನಾಶ್ಚ ವೋ ಯೂಯಂ ವಾಜಯಂತೋಽನ್ನಮಿಚ್ಛಂತೋ ವಿಶೋ ವಿಶಃ ಸರ್ವಸ್ಯಾಃ ಪ್ರಜಾಯಾ ಅತಿಥಿಂ ಪೂಜ್ಯಂ ಪುರುಪ್ರಿಯಂ ಬಹುಪ್ರಿಯಮಗ್ನಿಂ ಸ್ತುತ್ಯಾ ಪರಿಚರತೇತಿ ಶೇಷಃ । ಅಹಂ ಚ ವೋ ಯುಷ್ಮದರ್ಥಂ ದುರ್ಯಂ ಗುಹಾ ಹಿತಂ ವಚೋ ನು ಸ್ತುಷೇ ಶೂಷಸ್ಯ ಸುಖಸ್ಯ ಲಾಭಾಯ । ಕೈಃ ಸಾಧನೈಃ । ಮನ್ಮಭಿರ್ಮನನೀಯೈಃ ಸ್ತೋತ್ರೈಃ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) ವಃ—ನೀವು । ವಾಜಯಂತಃ—ಅನ್ನಾಪೇಕ್ಷಿಗಳಾದ । ವಿಶೋವಿಶಃ—ಪ್ರತಿಯೊಬ್ಬ ಮಾನವಪ್ರಜೆಗೂ । ಅತಿಥಿಂ—ಪೂಜ್ಯನೂ । ಪುರುಪ್ರಿಯಂ—ಅನೇಕರಿಗೆ ಬೇಕಾದವನೂ ಆದ । ಅಗ್ನಿಂ—ಅಗ್ನಿಯನ್ನು ಉಪಚರಿಸಿರಿ । ವಃ—ನಿಮಗೋಸ್ಕರ । ಶೂಷಸ್ಯ—ಸುಖಾರ್ಥವಾಗಿ । ಮನ್ಮಭಿಃ—ಧ್ಯಾನಾತ್ಮಕವಾದ ಸ್ತುತಿಗಳಿಂದ । ದುರ್ಯಂ—ಗೃಹಸಂಬಂಧಿಯಾದ । ವಚಃ—ಸ್ತುತಿವಾಕ್ಯನ್ನು । ಸ್ತುಷೇ—ಪಠಿಸುತ್ತೇನೆ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ನೀವು ಅನ್ನಾಪೇಕ್ಷಿಗಳಾಗಿ ಪ್ರತಿಯೊಬ್ಬ ಮಾನವಪ್ರಜೆಗೂ ಪೂಜ್ಯನೂ, ಅನೇಕರಿಗೆ ಬೇಕಾದವನೂ ಆದ ಅಗ್ನಿಯನ್ನು ಉಪಚರಿಸಿರಿ. ನಿಮ್ಮ ಸುಖಾರ್ಥವಾಗಿ ಧ್ಯಾನಾತ್ಮಕವಾದ ಸ್ತುತಿಗಳಿಂದ ಗೃಹಸಂಬಂಧಿಯಾದ ಸ್ತುತಿವಾಕ್ಯನ್ನು ಪಠಿಸುತ್ತೇನೆ.

English Translation

Food-desiring (priests, worship) Agni, who is the guest of all man kind, beloved of many; I address to him in your behalf a domestic homage with hymns, for the attainment of happiness;

॥ ಸಂಹಿತಾಪಾಠಃ ॥

ಯಂ ಜನಾಸೋ ಹವಿಷ್ಮಂತೋ ಮಿತ್ರಂ ನ ಸರ್ಪಿರಾಸುತಿಂ ।
ಪ್ರಶಂಸಂತಿ ಪ್ರಶಸ್ತಿಭಿಃ ॥ ೨ ॥

॥ ಪದಪಾಠಃ ॥

ಯಂ । ಜನಾಸಃ । ಹವಿಷ್ಮಂತಃ । ಮಿತ್ರಂ । ನ । ಸರ್ಪಿಃಽಆಸುತಿಂ ।
ಪ್ರಽಶಂಸಂತಿ । ಪ್ರಶಸ್ತಿಽಭಿಃ ॥ ೨ ॥

॥ ಸಾಯಣಭಾಷ್ಯಂ ॥

ಯಮಗ್ನಿಂ ಜನಾಸೋ ಜನಾ ಯಜಮಾನಾ ಹವಿಷ್ಮಂತಃ ಸಂತೋ ಮಿತ್ರಂ ನ ಮಿತ್ರಮಿವಾದಿತ್ಯಮಿವ ಸಖಾಯಮಿವ ವಾ ಸರ್ಪಿರಾಸುತಿಂ ಸರ್ಪಿರಾಸೂಯತೇ ಹೂಯತೇ ಯಸ್ಮಿನ್ ತಾದೃಶಂ ಪ್ರಶಂಸಂತಿ ಸ್ತುವಂತಿ ಪ್ರಶಸ್ತಿಭಿಃ ಸ್ತುತಿಭಿಃ ಸ್ತುವ ಇತಿ ಶೇಷಃ ॥

॥ ಪ್ರತಿಪದಾರ್ಥ ॥

**ಮಿತ್ರಂ ನ**—ಮಿತ್ರನನ್ನು ಉಪಚರಿಸುವಂತೆ । **ಹವಿಷ್ಮಂತಃ**—ಹವಿಸ್ಸನ್ನು ಹೊಂದಿರುವ । **ಜನಾಸಃ**—ಯಜಮಾನರು । **ಸರ್ಪಿರಾಸುತಿಂ**—ಸ್ತುತಿಗಳಪೂರ್ವಕರಾಗಿ ಅರ್ಪಿಸಲ್ಪಡುವ ಹವಿಸ್ಸುಳ್ಳ । **ಯಃ**—ಯಾವ ಅಗ್ನಿಯನ್ನು । **ಪ್ರಶಸ್ತಿಭಿಃ**—ಸ್ತುತಿವಾಕ್ಯಗಳಿಂದ । **ಪ್ರಶಂಸಂತಿ**—ಸ್ತುತಿಸುವರೋ (ಆ ಅಗ್ನಿಯನ್ನು ಸ್ತುತಿಸುತ್ತೇನೆ)

॥ ಭಾವಾರ್ಥ ॥

ಹವಿಸ್ಸನ್ನು ಹೊಂದಿರುವ ಯಜಮಾನರು ಸ್ತುತಿಗಳ ಪೂರ್ವಕವಾಗಿ ಅರ್ಪಿಸಲ್ಪಡುವ ಹವಿಸ್ಸುಳ್ಳ ಯಾವ ಅಗ್ನಿಯನ್ನು ತಮ್ಮ ಮಿತ್ರರನ್ನು ಉಪಚರಿಸುವಂತೆ ಸ್ತುತಿವಾಕ್ಯಗಳಿಂದ ಪ್ರಶಂಸಿಸಿ ಆದರಿಸುವರೋ ಆ ಅಗ್ನಿಯನ್ನು ನಾನೂ ಸ್ತುತಿಸುತ್ತೇನೆ.

English Translation

(That Agni), to whom clarified butter is offered, whom men, bearing oblations, worship with praises as a friend ;

॥ ಸಂಹಿತಾಪಾಠಃ ॥

ಪನ್ಯಾಂಸಂ ಜಾತವೇದಸಂ ಯೋ ದೇವತಾತ್ಯುದ್ಯತಾ ।
ಹವ್ಯಾನ್ಯೈರಯದ್ದಿವಿ ॥ ೩ ॥

॥ ಪದಪಾಠಃ ॥

ಪನ್ಯಾಂಸಂ । ಜಾತಽವೇದಸಂ । ಯಃ । ದೇವಽತಾತಿ । ಉತ್ಽಯತಾ ।
ಹವ್ಯಾನಿ । ಐರಯತ್ । ದಿವಿ ॥ ೩ ॥

॥ ಸಾಯಣಭಾಷ್ಯಂ ॥

ಪನ್ಯಾಂಸಮತಿಶಯೇನ ಸ್ತೋತಾರಂ ಸಾಧು ಕೃತಮಿತಿ ಯಜಮಾನಂ ಸ್ತುವಂತಂ ಜಾತವೇದಸಂ ಜಾತಧನಂ ಜಾತವಿದ್ಯಂ ವಾ ಸ್ತುವ ಇತಿ ಶೇಷಃ । ಯೋಽಗ್ನಿರ್ದೇವತಾತಿ ದೇವತಾತೌ ಯಜ್ಞ ಉದ್ಯತೋದ್ಯತಾನಿ ಹವ್ಯಾನಿ ಹವೀಂಷಿ ದಿವ್ಯೈರಯತ್ ಪ್ರೇರಯತಿ ದಿವಿ ದೇವೇಭ್ಯಃ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಅಗ್ನಿಯು । **ದೇವತಾತಿ**—ದೇವತೆಗಳನ್ನುದ್ದೇಶಿಸಿದ ಯಜ್ಞದಲ್ಲಿ । **ಉದ್ಯತಾ**—ಅರ್ಪಿತವಾದ । **ಹವ್ಯಾನಿ**—ಹವಿಸ್ಸುಗಳನ್ನು । **ದಿವಿ**—ದೇವಲೋಕಕ್ಕೆ । **ಐರಯತ್**—ಪ್ರೇರಿಸಿ ಕಳುಹಿಸುವನೋ ಅಂತಹವನೂ । **ಪನ್ಯಾಂಸಂ**—ತನ್ನನ್ನು ಪೂಜಿಸುವ ಯಜಮಾನನನ್ನು ಪ್ರಶಂಸಿಸುವವನೂ । **ಜಾತವೇದಸಂ**—ಸಕಲವನ್ನೂ ತಿಳಿದವನೂ ಆದ ಅಗ್ನಿಯನ್ನು ಸ್ತುತಿಸುತ್ತೇನೆ.

॥ ಭಾವಾರ್ಥ ॥

ಯಾವ ಅಗ್ನಿಯು ದೇವತೆಗಳನ್ನುದ್ದೇಶಿಸಿದ ಯಜ್ಞದಲ್ಲಿ ಅರ್ಪಿತವಾದ ಹವಿಸ್ಸುಗಳನ್ನು ದೇವಲೋಕಕ್ಕೆ ಒಯ್ಯುವನೋ ಅಂತಹವನೂ, ತನ್ನನ್ನು ಪೂಜಿಸುವ ಯಜಮಾನನನ್ನು ಪ್ರಶಂಸಿಸುವವನೂ, ಸಕಲವನ್ನೂ ತಿಳಿದವನೂ ಆದ ಅಗ್ನಿಯನ್ನು ಸ್ತುತಿಸುತ್ತೇನೆ.

## English Translation

Jatavedas, the earnest praiser of his worshipper, who sends to heaven the oblations presented in the sacrifice

॥ ಸಂಹಿತಾಪಾಠಃ ॥

ಆಗನ್ಮ ವೃತ್ರಹಂತಮಂ ಜ್ಯೇಷ್ಠಮಗ್ನಿಮಾನವಂ ।
ಯಸ್ಯ ಶ್ರುತರ್ವಾ ಬೃಹನ್ನಾರ್ಕ್ಷೋ ಅನೀಕ ಏಧತೇ ॥ ೪ ॥

॥ ಪದಪಾಠಃ ॥

ಆ । ಅಗನ್ಮ । ವೃತ್ರಹನ್ऽತಮಂ । ಜ್ಯೇಷ್ಠಂ । ಅಗ್ನಿಂ । ಆನವಂ ।
ಯಸ್ಯ । ಶ್ರುತರ್ವಾ । ಬೃಹನ್ । ಆರ್ಕ್ಷಃ । ಅನೀಕೇ । ಏಧತೇ ॥ ೪ ॥

॥ ಸಾಯಣಭಾಷ್ಯಂ ॥

ವೃತ್ರಹಂತಮಂ ಪಾಪಾನಾಮತಿಶಯೇನ ಹಂತಾರಂ ಜ್ಯೇಷ್ಠಂ ಪ್ರಶಸ್ಯಮಾನವಂ ಮನುಷ್ಯಸಂಬಂಧಿನಂ ತೇಷಾಂ ಹಿತಕಾರಿಣಮಗ್ನಿಮಾಗನ್ಮ । ಆಗತಾ ವಯಂ ॥ ಪೂಜಾರ್ಥಂ ಬಹುವಚನಂ । ಯಸ್ಯಾಗ್ನೇರನೀಕೇ ಜ್ವಾಲಾಸಂಘೇ ಬೃಹನ್ಮಹಾನಾರ್ಕ್ಷ ಋಕ್ಷಪುತ್ರಃ ಶ್ರುತರ್ವಾ ನಾಮ ರಾಜೈಧತೇ । ವರ್ಧತೇ । ಕರ್ಮ ಕರೋತೀತ್ಯರ್ಥಃ । ತಮಗ್ನಿಮಾಗನ್ಮೇತಿ ಸಮನ್ವಯಃ । ಏವಂ ಶ್ರುತರ್ವಾಣಂ ಭಿಕ್ಷಯಾಗತೋ ಗೋಪವನೋಽಗ್ನಿಂ ಸ್ತೌತಿ ॥

॥ ಪ್ರತಿಪದಾರ್ಥ ॥

**ಯಸ್ಯ**—ಯಾವ ಅಗ್ನಿಯ । **ಅನೀಕೇ**—ಜ್ವಾಲಾರೂಪದ ಸೇನೆಯ ಸಹಾಯದಿಂದ । **ಬೃಹನ್**—ಮಾಹಾತ್ಮ್ಯದಿಂದ ಕೂಡಿದವನೂ । **ಆರ್ಕ್ಷಃ**—ಋಕ್ಷಪುತ್ರನೂ । **ಶ್ರುತರ್ವಾ**—ಶ್ರುತರ್ವನೆಂಬ ಹೆಸರುಳ್ಳವನೂ ಆದ ರಾಜನು । **ಏಧತೇ**—ವೃದ್ಧಿಯನ್ನು ಹೊಂದುವನೋ ಅಂತಹ । **ವೃತ್ರಹಂತಮಂ**—ಪಾಪಿಗಳ ನಾಶಕನೂ । **ಜ್ಯೇಷ್ಠಂ**—ಅತ್ಯಂತ ಪ್ರಶಸ್ಯನೂ । **ಆನವಂ**—ಮಾನವರಿಗೆ ಹಿತಕಾರಿಯೂ ಆದ । **ಅಗ್ನಿಂ**—ಅಗ್ನಿಯ ಸಮೀಪಕ್ಕೆ । **ಆ ಅಗನ್ಮ**—ನಾವು ಬಂದಿದ್ದೇವೆ.

॥ ಭಾವಾರ್ಥ ॥

ಯಾವ ಅಗ್ನಿಯ ಜ್ವಾಲಾರೂಪದ ಸೇನೆಯ ಸಹಾಯದಿಂದ ಮಾಹಾತ್ಮ್ಯದಿಂದ ಕೂಡಿದವನೂ, ಋಕ್ಷಪುತ್ರನೂ, ಶ್ರುತರ್ವನೆಂಬ ಹೆಸರುಳ್ಳವನೂ ಆದ ರಾಜನು ವೃದ್ಧಿಯನ್ನು ಹೊಂದುವನೋ ಅಂತಹ ಪಾಪಿಗಳ ನಾಶಕನೂ, ಅತ್ಯಂತ ಪ್ರಶಸ್ಯನೂ ಮಾನವರಿಗೆ ಹಿತಕಾರಿಯೂ ಆದ ಅಗ್ನಿಯ ಸಮೀಪಕ್ಕೆ ನಾವು ಬಂದಿದ್ದೇವೆ.

English Translation

We have come to that most excellent Agni, mightiest destroyer of the wicked, the benefactor of men, in whose army (of rays) Srutarvan the mighty son of Riksha, waxes great.

॥ ಸಂಹಿತಾಪಾಠಃ ॥

ಅಮೃತಂ ಜಾತವೇದಸಂ ತಿರಸ್ತಮಾಂಸಿ ದರ್ಶತಂ ।
ಘೃತಾಹವನಮೀಡ್ಯಂ ॥ ೫ ॥

॥ ಪದಪಾಠಃ ॥

ಅಮೃತಂ । ಜಾತಽವೇದಸಂ । ತಿರಃ । ತಮಾಂಸಿ । ದರ್ಶತಂ ।
ಘೃತಽಆಹವನಂ । ಈಡ್ಯಂ ॥ ೫ ॥

॥ ಸಾಯಣಭಾಷ್ಯಂ ॥

**ಸ ಏವಾಗತ್ಯ ಸ್ತೌತಿ । ಅಮೃತಮಮರಣಂ ಜಾತವೇದಸಂ ಜಾತತೇಜಆದ್ಯುಪಲಕ್ಷಣಧನಂ ತಮಾಂಸಿ ತಿರೋ ದರ್ಶತಂ । ದರ್ಶಯಂತಮಿತ್ಯರ್ಥಃ । ಘೃತಾಹವನಂ । ಘೃತಮಾಹೂಯತೇ ಯತ್ರ ತಂ । ಈಡ್ಯಂ ಸ್ತುತ್ಯಂ । ಈದೃಶಮಾಗನ್ಮೇತಿ ಸಂಬಂಧಃ ॥**

॥ ಪ್ರತಿಪದಾರ್ಥ ॥

**ಅಮೃತಂ**—ಮರಣಧರ್ಮರಹಿತನೂ । **ಜಾತವೇದಸಂ**—ಸಕಲವನ್ನೂ ಅರಿತವನೂ । **ತಮಾಂಸಿ**—ಕಗ್ಗತ್ತಲೆಗಳನ್ನು । **ತಿರಃ ದರ್ಶತಂ**—ನಾಶಪಡಿಸುವವನೂ । **ಘೃತಾಹವನಂ**—ಘೃತರೂಪವಾದ ಹವಿಸ್ಸನ್ನು ಅರ್ಪಿಸಲ್ಪಡುವವನೂ । **ಈಡ್ಯಂ**—ಪೂಜ್ಯನೂ ಆದ ಅಗ್ನಿಯನ್ನು ನಾವು ಸಮೀಪಿಸಿದ್ದೇವೆ.

॥ ಭಾವಾರ್ಥ ॥

ಮರಣಧರ್ಮರಹಿತನೂ, ಸಕಲವನ್ನೂ ಅರಿತವನೂ, ಕಗ್ಗತ್ತಲೆಗಳನ್ನು ನಾಶಪಡಿಸುವವನೂ, ಘೃತರೂಪವಾದ ಹವಿಸ್ಸಿನಿಂದ ಪೂಜಿಸಲ್ಪಡುವವನೂ, ಪ್ರಶಸ್ಯನೂ ಆದ ಅಗ್ನಿಯನ್ನು ನಾವು ಸಮೀಪಿಸಿದ್ದೇವೆ.

English Translation

(We have come) to the mortal Jatavedas, who shows light across the darkness, well worthy of praise, and receiving the offerings of ghi ;|

॥ ಸಂಹಿತಾಪಾಠಃ ॥

ಸಬಾಧೋ ಯಂ ಜನಾ ಇಮೇಽಗ್ನಿಂ ಹವ್ಯೇಭಿರೀಳತೇ ।
ಜುಹ್ವಾನಾಸೋ ಯತಸ್ರುಚಃ ॥ ೬ ॥

॥ ಪದಪಾಠಃ ॥

ಸ್ಽಬಾಧಃ । ಯಂ । ಜನಾಃ । ಇಮೇ । ಅಗ್ನಿಂ । ಹವ್ಯೇಭಿಃ । ಈಳತೇ ।
ಜುಹ್ವಾನಾಸಃ । ಯತಽಸ್ರುಚಃ ॥ ೬ ॥

॥ ಸಾಯಣಭಾಷ್ಯಂ ॥

ಇಮೇ ಸಬಾಧೋ ಬಾಧಸಹಿತಾ ಅಧ್ವರ್ಯ್ವಾದಯೋ ಯಮಗ್ನಿಂ ಹವ್ಯೇಭಿರ್ಹವಿರ್ಭಿರೀಳತೇ ಸ್ತುವಂತಿ । ಕೀದೃಶಾ ಜನಾಃ । ಜುಹ್ವನಾಸೋ ಯಾಗಂ ಕುರ್ವಾಣಾ ಯತಸ್ರುಚಸ್ತದರ್ಥಂ ಧೃತಸ್ರುಗ್ದಂಡಾಃ । ತಮಾಗನ್ಮೇತಿ ಸಮನ್ವಯಃ ॥

॥ ಪ್ರತಿಪದಾರ್ಥ ॥

**ಜುಹ್ವಾನಾಸಃ**—ಯಜ್ಞಮಾಡತಕ್ಕವರೂ । **ಯತಸ್ರುಚಃ**—ಘೃತಪೂರ್ಣವಾದ ಸ್ರುಕ್ಪಾತ್ರೆಯನ್ನು ಎತ್ತಿ ಹಿಡಿದಿರುವವರೂ । **ಸಬಾಧಃ**—ಒಟ್ಟಿಗೆ ಸೇರಿಕೊಂಡಿರುವವರೂ ಆದ । **ಇಮೇ ಜನಾಃ**—ಈ ಅಧ್ವರ್ಯುಗಳು । **ಯಂ ಅಗ್ನಿಂ**—ಯಾವ ಅಗ್ನಿಯನ್ನು । **ಹವ್ಯೇಭಿಃ**-ಹವಿಸ್ಸುಗಳಿಂದ । **ಈಳತೇ**-ಸ್ತುತಿಸುವರೋ (ಆ ಅಗ್ನಿಯನ್ನು ಸಮೀಪಿಸಿದ್ದೇವೆ).

॥ ಭಾವಾರ್ಥ ॥

ಯಜ್ಞಮಾಡತಕ್ಕವರೂ, ಘೃತಪೂರ್ಣವಾದ ಸ್ರುಕ್ಪಾತ್ರೆಯನ್ನು ಎತ್ತಿ ಹಿಡಿದಿರುವವರೂ, ಒಟ್ಟಿಗೆ ಸೇರಿಕೊಂಡಿರುವವರೂ ಆದ ಈ ಅಧ್ವರ್ಯುಗಳು ಯಾವ ಅಗ್ನಿಯನ್ನು ಹವಿಸ್ಸುಗಳಿಂದ ಸ್ತುತಿಸುವರೋ ಆ ಅಗ್ನಿಯನ್ನು ನಾವು ಸಮೀಪಿಸಿದ್ದೇವೆ

English Translation

That Agni, whom these crowding worshippers honour with oblations offering to him with up-lifted ladles.

॥ ಸಂಹಿತಾಪಾಠಃ ॥

ಇಯಂ ತೇ ನವ್ಯಸೀ ಮತಿರಗ್ನೇ ಅಧಾಯ್ಯಸ್ಮದಾ ।
ಮಂದ್ರ ಸುಜಾತ ಸುಕ್ರತೋಽಮೂರ ದಸ್ಮಾತಿಥೇ ॥ ೭ ॥

॥ ಪದಪಾಠಃ ॥

ಇಯಂ । ತೇ । ನವ್ಯಸೀ । ಮತಿಃ । ಅಗ್ನೇ । ಅಧಾಯಿ । ಅಸ್ಮತ್ । ಆ ।
ಮಂದ್ರ । ಸುऽಜಾತ । ಸುಕ್ರತೋ ಇತಿ ಸುऽಕ್ರತೋ । ಅಮೂರ । ದಸ್ಮ । ಅತಿಥೇ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಇಯಮಿದಾನೀಂ ಕ್ರಿಯಮಾಣಾ ನವ್ಯಸೀ ನವತರಾ ಸ್ತುತಿಸ್ತೇ ತವ ಸ್ವಭೂತಾಸ್ಮ-ದಸ್ಮತ್ತ್ವಧಾಯಿ । ಧೃತಾಭೂತ್ । ವಯಂ ತವ ಸ್ತುತಿಂ ಕುರ್ಮ ಇತ್ಯರ್ಥಃ । ಹೇ ಮಂದ್ರ ಮೋದಮಾನ ಸುಜಾತ ಶೋಭನಜನನ ಸುಕ್ರತೋ ಶೋಭನಕರ್ಮನ್ನಮೂರಾಮೂಢ ದಸ್ಮ ದರ್ಶನೀಯಾತಿಥೇಽ-ತಿಥಿವತ್ಪೂಜ್ಯೇತ್ಯಗ್ನೇರ್ವಿಶೇಷಣಾನಿ ॥

॥ ಪ್ರತಿಪದಾರ್ಥ ॥

**ಮಂದ್ರ**—ಹರ್ಷಕಾರಕನೂ । **ಸುಜಾತ**—ಉತ್ತಮವಾದ ಜನ್ಮವುಳ್ಳವನೂ । **ಸುಕ್ರತೋ**—ಉತ್ತಮವಾದ ಕರ್ಮವುಳ್ಳವನೂ । **ಅಮೂರ**—ಪ್ರಾಜ್ಞನೂ । **ದಸ್ಮ**—ಆಕರ್ಷಕವಾದ ರೂಪವುಳ್ಳವನೂ । **ಅತಿಥೇ**—ಪೂಜ್ಯನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ತೇ**—ನಿನ್ನನ್ನುದ್ದೇಶಿಸಿಮಾಡುವ । **ನವ್ಯಸೀ**—ನೂತನತರವಾದುದೂ ಆದ । **ಇಯಂ ಮತಿಃ**—ಈ ಸ್ತುತಿಯು । **ಅಸ್ಮತ್**—ನಮ್ಮಿಂದ । **ಆ ಅಧಾಯಿ**—ನಿನ್ನ ಪ್ರಶಂಸೆಗಾಗಿ ಧರಿಸಲ್ಪಟ್ಟಿವೆ

॥ ಭಾವಾರ್ಥ ॥

ಹರ್ಷಕಾರಕನೂ, ಉತ್ತಮವಾದ ಜನ್ಮವುಳ್ಳವನೂ, ಉತ್ತಮವಾದ ಕರ್ಮಕರ್ತನೂ, ಪ್ರಾಜ್ಞನೂ, ಆಕರ್ಷಕವಾದ ರೂಪವುಳ್ಳವನೂ, ಪೂಜ್ಯನೂ ಆದ ಎಲೈ ಅಗ್ನಿಯೇ, ನಿನ್ನನ್ನುದ್ದೇಶಿಸಿದುದೂ, ನೂತನವಾದುದೂ ಆದ ಈ ಸ್ತುತಿಯು ನಮ್ಮಿಂದ ನಿನ್ನ ಪ್ರಶಂಸೆಗಾಗಿ ಧರಿಸಲ್ಪಟ್ಟಿದೆ. (ನಿರ್ಮಿತವಾಗಿದೆ)

English Translation

This new hymn has been made by us for you, O joyful, well-born Agni, glorious in deeds, unbewildered, beautiful, the guest (of man);

॥ ಸಂಹಿತಾಪಾಠಃ ॥

ಸಾ ತೇ ಅಗ್ನೇ ಶಂತಮಾ ಚನಿಷ್ಠಾ ಭವತು ಪ್ರಿಯಾ ।
ತಯಾ ವರ್ಧಸ್ವ ಸುಷ್ಟುತಃ ॥ ೮ ॥

॥ ಪದಪಾಠಃ ॥

ಸಾ । ತೇ । ಅಗ್ನೇ । ಶಂऽತಮಾ । ಚನಿಷ್ಠಾ । ಭವತು । ಪ್ರಿಯಾ ।
ತಯಾ । ವರ್ಧಸ್ವ । ಸುऽಸ್ತುತಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಸಾಸ್ಮಾಭಿಃ ಕ್ರಿಯಮಾಣಾ ಸ್ತುತಿಃ ಶಂತಮಾತ್ಯಂತಂ ಸುಖಕರಾ ಚನಿಷ್ಠಾತಿಶಯೇನಾನ್ನವತೀ ತೇ ತವ ಪ್ರಿಯಾ ಭವತು । ತಯಾ ಸ್ತುತ್ಯಾ ಸುಷ್ಟುತಃ ಸುಷ್ಠು ಸ್ತುತಃ ಸನ್ ವರ್ಧಸ್ವ । ಪ್ರವೃದ್ಧೋ ಭವ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಸಾ**—ನಮ್ಮಿಂದ ನಿರ್ಮಿತವಾದ ಸ್ತುತಿಯು । **ಶಂತಮಾ**—ಅತ್ಯಂತ ಸುಖಕಾರಕವಾಗಿಯೂ । **ಚನಿಷ್ಠಾ**—ಅತಿಶಯವಾದ ಅನ್ನಯುಕ್ತವಾಗಿಯೂ । **ತೇ**—ನಿನಗೆ । **ಪ್ರಿಯಾ**—ಪ್ರಿಯವನ್ನುಂಟುಮಾಡುವುದಾಗಿಯೂ । **ಭವತು**—ಆಗಿರಲಿ । **ತಯಾ**—ಅದೇ ಸ್ತುತಿಯಿಂದ । **ಸುಷ್ಟುತಃ**—ಉತ್ತಮವಾಗಿ ಪ್ರಶಂಸಿತನಾದ ನೀನು । **ವರ್ಧಸ್ವ**—ವೃದ್ಧಿಯನ್ನು ಹೊಂದು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮ್ಮಿಂದ ನಿರ್ಮಿತವಾದ ಸ್ತುತಿಯು ಅತ್ಯಂತ ಸುಖಕಾರಕವಾಗಿಯೂ ಅತಿಶಯವಾದ ಅನ್ನಯುಕ್ತವಾಗಿಯೂ, ನಿನಗೆ ಪ್ರಿಯವನ್ನುಂಟುಮಾಡುವುದಾಗಿಯೂ ಆಗಿರಲಿ ಅದೇ ಸ್ತುತಿಯಿಂದ ಉತ್ತಮವಾಗಿ ಪ್ರಶಂಸಿತನಾದ ನೀನು ವೃದ್ಧಿಯನ್ನು ಹೊಂದು

## English Translation

Agni, may it be dear to you, most pleasant and most agreeable—well praised by it, do you wax great

॥ ಸಂಹಿತಾಪಾಠಃ ॥

ಸಾ ದ್ಯುಮ್ನೈರ್ದ್ಯುಮ್ನಿನೀ ಬೃಹದುಪೋಪ ಶ್ರವಸಿ ಶ್ರವಃ ।
ದಧೀತ ವೃತ್ರತೂರ್ಯೇ ॥ ೯ ॥

॥ ಪದಪಾಠಃ ॥

ಸಾ । ದ್ಯುಮ್ನೈಃ । ದ್ಯುಮ್ನಿನೀ । ಬೃಹತ್ । ಉಪऽಉಪ । ಶ್ರವಸಿ । ಶ್ರವಃ ।
ದಧೀತ । ವೃತ್ರऽತೂರ್ಯೇ ॥ ೯ ॥

॥ ಸಾಯಣಭಾಷ್ಯಂ ॥

ಸಾಸ್ಮಾಭಿಃ ಕ್ರಿಯಮಾಣಾ ಸ್ತುತಿರ್ದ್ಯುಮ್ನೈರ್ದ್ಯೋತಮಾನೈರನ್ನೈರಸ್ಮಭ್ಯಂ ಪ್ರದೇಯೈರ್ದ್ಯುಮ್ನಿನ್ಯನ್ನವತೀ ಶ್ರವಸಿ ಪೂರ್ವಸ್ಮಿನ್ವಿದ್ಯಮಾನೇऽನ್ನೇ ಪುನರಪಿ ಬೃಹನ್ಮಹಚ್ಛ್ರವೋऽನ್ನಮುಪೋಪ ದಧೀತ । ಪುನರುಪರಿಧಾರಯತು । ಉತ್ರೇತಿ ಉಚ್ಯತೇ । ವೃತ್ರತೂರ್ಯೇ ಸಂಗ್ರಾಮೇ । ಶತ್ರೋಃ ಸಂಬಂಧೀತಿ ಯಾವತ್ ॥

॥ ಪ್ರತಿಪದಾರ್ಥ ॥

**ಸಾ**—ನಮ್ಮಿಂದ ನಿರ್ಮಿತವಾಗಿ ಪಠಿತವಾದ ಈ ಸ್ತುತಿಯು । **ದ್ಯುಮ್ನೈಃ**—ಪ್ರಭಾಯುತವಾದ ಅನ್ನಸಂಪತ್ತುಗಳೊಡನೆ । **ದ್ಯುಮ್ನಿನೀ**—ಹೊಸ ಅನ್ನವನ್ನು ಯೋಜಿಸುವುದೂ । **ಶ್ರವಸಿ**—ಹಿಂದಿರತಕ್ಕ ನಮ್ಮ ಅನ್ನದೊಡನೆ । **ವೃತ್ರತೂರ್ಯೇ**—ಸಂಗ್ರಾಮದಲ್ಲಿ ಶತ್ರುಗಳಿಂದ ಅಪಹೃತವಾದುದೂ । **ಬೃಹತ್**—ಪ್ರಭೂತವಾದುದೂ ಆದ । **ಶ್ರವಃ**—ಹೊಸ ಅನ್ನವನ್ನು । **ಉಪೋಪ**—ಅತ್ಯಧಿಕವಾಗಿ । **ದಧೀತ**—ಸೇರಿಸಿ ವೃದ್ಧಿಗೊಳಿಸಲಿ

॥ ಭಾವಾರ್ಥ ॥

ನಮ್ಮಿಂದ ನಿರ್ಮಿತವಾಗಿ ಪಠಿತವಾದ ಈ ಸ್ತುತಿಯು ಪ್ರಭಾಯುತವಾದ ಅನ್ನಸಂಪತ್ತುಗಳೊಡನೆ ಹೊಸ ಅನ್ನವನ್ನು ಯೋಜಿಸುವುದೂ, ಹಿಂದಿರತಕ್ಕ ನಮ್ಮ ಅನ್ನದೊಡನೆ ಸಂಗ್ರಾಮದಲ್ಲಿ ಶತ್ರುಗಳಿಂದ ಅಪಹೃತವಾದುದೂ, ಪ್ರಭೂತವಾದುದೂ ಆದ ಹೊಸ ಅನ್ನವನ್ನು ಅತ್ಯಧಿಕವಾಗಿ ಸೇರಿಸಿ ವೃದ್ಧಿಗೊಳಿಸಲಿ.

English Translation

May this (hymn) the rich source of wealth, heap abundance o nour abundance (with stores won from our enemies) in battle

। ಸಂಹಿತಾಪಾಠಃ ।

ಅಶ್ವಮಿದ್ಗಾಂ ರಥಪ್ರಾಂ ತ್ವೇಷಮಿಂದ್ರಂ ನ ಸತ್ಪತಿಂ ।
ಯಸ್ಯ ಶ್ರವಾಂಸಿ ತೂರ್ವಥ ಪನ್ಯಂಪನ್ಯಂ ಚ ಕೃಷ್ಟಯಃ ॥ ೧೦ ॥

॥ ಪದಪಾಠಃ ॥

ಅಶ್ವಂ । ಇತ್ । ಗಾಂ । ರಥಽಪ್ರಾಂ । ತ್ವೇಷಂ । ಇಂದ್ರಂ । ನ । ಸತ್ಽಪತಿಂ ।
ಯಸ್ಯ । ಶ್ರವಾಂಸಿ । ತೂರ್ವಥ । ಪನ್ಯಂಽಪನ್ಯಂ । ಚ । ಕೃಷ್ಟಯಃ ॥ ೧೦ ॥

॥ ಸಾಯಣಭಾಷ್ಯಂ ॥

ಗಾಂ ಗಂತಾರಮಶ್ವಮಿತ್ । ಇಚ್ಛಬ್ದ ಇವಾರ್ಥೇ । ಅಶ್ವಮಿವ । ತಂ ಯಥಾ ಸ್ತುವಂತೇ ತಥೇತ್ಯರ್ಥಃ । ರಥಪ್ರಾಂ ರಥಾನಾಮಸ್ಮದೀಯಾನಾಂ ಪೂರಯಿತಾರಂ ಧನೈಃ ತಥಾ ತ್ವೇಷಂ ದೀಪ್ತಮಗ್ನಿಂ ಸತ್ಪತಿಂ ಸತಾಂ ಪಾಲಕಮಿಂದ್ರಂ ನೇಂದ್ರಮಿವೇಮಂ ಕೃಷ್ಟಯೋ ಮನುಷ್ಯಾಃ ಪರಿಚರತೇತಿ ಶೇಷಃ । ಯಸ್ಯಾಗ್ನೇರ್ಬಲೇನ ಶ್ರವಾಂಸ್ಯನ್ನಾನಿ ಶತ್ರುಸಂಬಂಧೀನಿ ತೂರ್ವಥ ತಥಾ ಪನ್ಯಂ ಪನ್ಯಂ ಚ ಯದ್ಯತ್ಸ್ತುತ್ಯಂ ಧನಮಸ್ತಿ ತದಪಿ ತೂರ್ವಥ ಹಿಂಸ್ಥ ॥

॥ ಪ್ರತಿಪದಾರ್ಥ ॥

**ಕೃಷ್ಟಯಃ**—ಎಲೈ ಮಾನವರೇ । **ಯಸ್ಯ**—ಯಾವ ಅಗ್ನಿಯ ಪ್ರಭಾವದಿಂದ । **ಶ್ರವಾಂಸಿ**—ಶತ್ರುಸಂಬಂಧಿಯಾದ ಅನ್ನಗಳನ್ನು । **ತೂರ್ವಥ**—ಅಪಹರಿಸಿ ತುಂಬಿಕೊಳ್ಳುವಿರೋ । **ಪನ್ಯಂ ಪನ್ಯಂ ಚ**—ಬೆಲೆಬಾಳುವ ಧನಗಳನ್ನೂ ಅಪಹರಿಸಿ ತುಂಬಿಕೊಳ್ಳುವಿರೋ ಅಂತಹ । **ಅಶ್ವಮಿತ್**—ಅಶ್ವದಂತೆ । **ಗಾಂ**—ಸಂಚರಿಸತಕ್ಕವನೂ । **ರಥಪ್ರಾಂ**—ನಮ್ಮ ರಥಗಳನ್ನು ಶತ್ರುಧನಗಳಿಂದ ತುಂಬುವವನೂ । **ತ್ವೇಷಂ**—ಪ್ರಭಾಯುತನೂ । **ಸತ್ಪತಿಂ**—ಸಜ್ಜನರ ಪಾಲಕನೂ । **ಇಂದ್ರಂ ನ**—ಇಂದ್ರನಂತೆ ಪೂಜ್ಯನೂ ಆದ ಅಗ್ನಿಯನ್ನು ಉಪಚರಿಸಿರಿ

॥ ಭಾವಾರ್ಥ ॥

ಎಲೈ ಮಾನವರೇ, ಯಾವ ಅಗ್ನಿಯ ಪ್ರಭಾವದಿಂದ ಶತ್ರುಸಂಬಂಧಿಯಾದ ಅನ್ನಗಳನ್ನು ಅಪಹರಿಸಿ ತುಂಬಿಕೊಳ್ಳುವಿರೋ, ಮತ್ತು ಅವರ ಬೆಲೆಬಾಳುವ ಧನಗಳನ್ನೂ ಅಪಹರಿಸಿ ತುಂಬಿಕೊಳ್ಳುವಿರೋ ಅಂತಹ, ಅಶ್ವದಂತೆ

ಸಂಚರಿಸತಕ್ಕವನ್ನೂ, ನಮ್ಮ ರಥಗಳನ್ನು ಶತ್ರುಧನಗಳಿಂದ ತುಂಬುವವನೂ, ಪ್ರಭಾಯುತನೂ, ಸಜ್ಜನರ ಪಾಲಕನೂ, ಇಂದ್ರನಂತೆ ಪೂಜ್ಯನೂ ಆದ ಅಗ್ನಿಯನ್ನು ಉಪಚರಿಸಿರಿ.

English Translation

(Worship), you men, the bright (Agni), who goes like a horse and fills our chariots (with spoil), who protects the good like Indra, and by whose might you ravage the stores ( of your enemies ) and all their wonderful (wealth).

॥ ಸಂಹಿತಾಪಾಠಃ ॥

ಯಂ ತ್ವಾ ಗೋಪವನೋ ಗಿರಾ ಚನಿಷ್ಠದಗ್ನೇ ಅಂಗಿರಃ ।
ಸ ಪಾವಕ ಶ್ರುಧೀ ಹವಂ ॥ ೧೧ ॥

॥ ಪದಪಾಠಃ ॥

ಯಂ । ತ್ವಾ । ಗೋಪವನಃ । ಗಿರಾ । ಚನಿಷ್ಠತ್ । ಅಗ್ನೇ । ಅಂಗಿರಃ ।
ಸಃ । ಪಾವಕ । ಶ್ರುಧಿ । ಹವಂ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯಂ ತ್ವಾ ತ್ವಾಂ ಗೋಪವನ ಋಷಿರ್ಗಿರಾ ಸ್ತುತ್ಯಾ ಚನಿಷ್ಠತ್ ಅತಿಶಯೇನಾನ್ನಪ್ರದಾತಾರಮಕರೋತ್ । ಸ ತಾದೃಶಾಗ್ನೇಽಂಗಿರಃ ಸರ್ವತ್ರ ಗಂತರಂಗಿರಸಾಂ ಮಧ್ಯ ಏಕ ವಾ ಪಾವಕ ಶೋಧಕ ಹವಂ ಗೋಪವನಸ್ಯ ಶ್ರುಧಿ । ಶೃಣು ॥

॥ ಪ್ರತಿಪದಾರ್ಥ ॥

**ಅಂಗಿರಃ**—ಅಂಗಿರಾ ಎಂಬ ಹೆಸರಿನಿಂದ ಪ್ರಸಿದ್ಧನೂ । **ಪಾವಕ**—ಶುದ್ಧಿಕಾರಕನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ಯಂ**—ಯಾವ । **ತ್ವಾ**—ನಿನ್ನನ್ನು । **ಗೋಪವನಃ**—ಗೋಪವನನೆಂಬ ಋಷಿಯು । **ಗಿರಾ**—ತನ್ನ ಸ್ತುತಿಯಿಂದ । **ಚನಿಷ್ಠತ್**—ಉತ್ತಮವಾದ ಅನ್ನಪ್ರದನನ್ನಾಗಿ ಮಾಡಿದನೋ । **ಸಃ**—ಅಂತಹ ನೀನು । **ಹವಂ**—ಆ ಗೋಪವನನ ಸ್ತುತಿಯನ್ನು । **ಶ್ರುಧಿ**—ಕೇಳು.

॥ ಭಾವಾರ್ಥ ॥

ಅಂಗಿರಾ ಎಂಬ ಹೆಸರಿನಿಂದ ಪ್ರಸಿದ್ಧನೂ, ಶುದ್ಧಿಕಾರಕನೂ ಆದ ಎಲೈ ಅಗ್ನಿಯೇ, ಯಾವ ನಿನ್ನನ್ನು ಗೋಪವನನೆಂಬ ಋಷಿಯು ತನ್ನ ಸ್ತುತಿಯಿಂದ ಉತ್ತಮವಾದ ಅನ್ನಪ್ರದನನ್ನಾಗಿ ಮಾಡಿದನೋ ಅಂತಹ ನೀನು ಆ ಗೋಪವನನ ಸ್ತುತಿಯನ್ನು ಕೇಳು.

## English Translation

Agni, Angiras, whom Gopavara by his praise has made the especial giver of food,—O purifier, hear his prayer

॥ ಸಂಹಿತಾಪಾಠಃ ॥

ಯಂ ತ್ವಾ ಜನಾಸ ಈಳತೇ ಸಬಾಧೋ ವಾಜಸಾತಯೇ ।

ಸ ಬೋಧಿ ವೃತ್ರತೂರ್ಯೇ ॥ ೧೨ ॥

॥ ಪದಪಾಠ ॥

ಯಂ । ತ್ವಾ । ಜನಾಸಃ । ಈಳತೇ । ಸಽಬಾಧಃ । ವಾಜಽಸಾತಯೇ ।

ಸಃ । ಬೋಧಿ । ವೃತ್ರಽತೂರ್ಯೇ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯಂ ತ್ವಾ ತ್ವಾಂ ಜನಾಸೋ ಜನಾಃ ಸ್ತೋತಾರೋ ವಾ ವಾಜಸಾತಯೇಽನ್ನಸ್ಯ ಲಾಭಾಯ ಸಬಾಧೋ ನಿರ್ಬಂಧರೂಪಬಾಧೋಪೇತಾಃ ಸಂತ ಈಳತೇ ಸ್ತುವಂತಿ ಸ ತ್ವಂ ವೃತ್ರತೂರ್ಯೇ ವೈರಿನಾಶನಾಯ ಪಾಪಕ್ಷಯಾಯ ವಾ ಬೋಧಿ । ಬುಧ್ಯಸ್ವ । ಅಥವಾ ವೃತ್ರಸ್ಯ ತೂರ್ಯೇ ಸಂಗ್ರಾಮೇ ಬೋಧಿ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯಂ**—ಯಾವ । **ತ್ವಾ**—ನಿನ್ನನ್ನು । **ಜನಾಸಃ**—ಸ್ತುತಿಕರ್ತರೆಲ್ಲಾ । **ಸಬಾಧಃ**—ಒಟ್ಟುಗೂಡಿಕೊಂಡು । **ವಾಜಸಾತಯೇ**—ಅನ್ನಲಾಭಾರ್ಥವಾಗಿ । **ಈಳತೇ**—ಸ್ತುತಿಸುವರೋ । **ಸಃ**—ಅಂತಹ ನೀನು । **ವೃತ್ರತೂರ್ಯೇ**—ಸಂಗ್ರಾಮದಲ್ಲಿ ನಮ್ಮ ಶತ್ರುಗಳನ್ನು ನಾಶಮಾಡಬೇಕು ಎಂಬುದನ್ನು । **ಬೋಧಿ**—ತಿಳಿ

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ನಿನ್ನನ್ನು ಸ್ತುತಿಕರ್ತರೆಲ್ಲರೂ ಒಟ್ಟುಗೂಡಿಕೊಂಡು ಅನ್ನಲಾಭಾರ್ಥವಾಗಿ ಸ್ತುತಿಸುವರೋ ಅಂತಹ ನೀನು ಸಂಗ್ರಾಮದಲ್ಲಿ ನಮ್ಮ ಶತ್ರುಗಳನ್ನು ನಾಶಮಾಡಬೇಕೆಂಬುದನ್ನು ತಿಳಿ.

## English Translation

O you whom the crowding worshippers praise for the obtainment of food, attend to them for the destruction of their enemies

॥ ಸಂಹಿತಾಪಾಠಃ ॥

ಅಹಂ ಹುವಾನ ಆರ್ಕ್ಷೇ ಶ್ರುತರ್ವಣಿ ಮದಚ್ಯುತಿ ।

ಶರ್ಧಾಂಸೀವ ಸ್ತುಕಾವಿನಾಂ ಮೃಕ್ಷಾ ಶೀರ್ಷಾ ಚತುರ್ಣಾಂ ॥

॥ ಪದಪಾಠಃ ॥

ಅಹಂ । ಹುವಾನಃ । ಆರ್ಕ್ಷೇ । ಶ್ರುತರ್ವಣಿ । ಮದಽಚ್ಯುತಿ ।

ಶರ್ಧಾಂಸಿಽಇವ । ಸ್ತುಕಾಽವಿನಾಂ । ಮೃಕ್ಷಾ । ಶೀರ್ಷಾ । ಚತುರ್ಣಾಂ ॥ ೧೩ ॥

॥ ಸಾಯಣಭಾಷ್ಯಂ ॥

ಅಹಮೃಷಿರ್ಹುವಾನೋ ಹೂಯಮಾನೋ ಯಜ್ಞಾದಿದೃಕ್ಷಾರ್ಥಂ ಶ್ರುತರ್ವಣ್ಯೇತನ್ನಾಮ್ನಿ ರಾಜನಿ ಮದಚ್ಯುತಿ ಶತ್ರೂಣಾಂ ಮದಸ್ಯ ಚ್ಯಾವಯಿತರಿ ಸ್ತುಕಾವಿನಾಂ । ಸ್ತುಕಾವಿನ ಊರ್ಣಾಯುವಃ । ಸುಕ್ತಃ ಕೇಶಸಂಘಾತಃ । ತದ್ವತಾಂ ಶರ್ಧಾಂಸೀವೋಚ್ಛ್ರಿತಾನಿ ಲೋಮಾನೀವ ತಾನಿ ಯಥಾ ಸ್ಪೃಶಂತಿ ತದ್ವದ್ಮೃಕ್ಷಾ ಮೃಕ್ಷಾಣಿ। ಮೃಜ್ಯಂತೆ ಇತಿ ಮೃಕ್ಷಾಃ ಕೇಶಾಃ। ತದ್ವಂತಿ ಮೃಕ್ಷಾಣಿ ಶೀರ್ಷಾ ಶೀರ್ಷಾಣಿ ಶಿರಾಂಸಿ। ಕೇಷಾಂ । ಚತುರ್ಣಾಂ ಶ್ರುತರ್ವಣಾ ಪ್ರದತ್ತಾನಾಮಶ್ವಾನಾಂ ಶಿರಾಂಸ್ಯುನ್ಮೃಜಾಮೀತಿ ಶೇಷಃ । ಅಥವಾ ಮೃಕ್ಷಾ ಮೃಕ್ಷೇಣ । ಮೃಕ್ಷನಸಾಧನತ್ವಾದ್ಮೃಕ್ಷೋ ಹಸ್ತಃ । ತೇನೋನ್ಮೃಜಾಮಿ ॥

॥ ಪ್ರತಿಪದಾರ್ಥ ॥

**ಆರ್ಕ್ಷೇ**—ಋಕ್ಷಪುತ್ರನೂ । **ಮದಚ್ಯುತಿ**—ಶತ್ರುಗಳ ಗರ್ವವನ್ನು ನಾಶಪಡಿಸುವವನೂ ಆದ । **ಶ್ರುತರ್ವಣಿ**—ಶ್ರುತರ್ವರಾಜನಮುಂದೆ । **ಹವಾನಃ**—ಕರೆಯಲ್ಪಟ್ಟ । **ಅಹಂ**—ನಾನು । **ಸ್ತುಕಾವಿನಾಂ**—ಪುಷ್ಕಳವಾಗಿ ಬೆಳೆದ ಕುರಿಗಳ । **ಶರ್ಧಾಂಸೀವ**—ಉಣ್ಣೆಯನ್ನು ಸವರುವಂತೆ । **ಚತುರ್ಣಾಂ**—ಶ್ರುತರ್ವನಿಂದ ನನಗೆ ದತ್ತವಾದ ನಾಲ್ಕು ಅಶ್ವಗಳ । **ಶೀರ್ಷಾ**—ತಲೆಗಳನ್ನು । **ಮೃಕ್ಷಾ**—ನನ್ನ ಕೈಯಿಂದ ಸವರುತ್ತೇನೆ.

॥ ಭಾವಾರ್ಥ ॥

ಋಕ್ಷಪುತ್ರನೂ, ಶತ್ರುಗಳ ಗರ್ವವನ್ನು ನಾಶಪಡಿಸುವವನೂ ಆದ ಶ್ರುತರ್ವರಾಜನ ಮುಂದೆ ಕರೆಯಲ್ಪಟ್ಟ ನಾನು ಪುಷ್ಕಳವಾಗಿ ಬೆಳೆದ ಕುರಿಗಳ ಉಣ್ಣೆಯನ್ನು ಸವರುವಂತೆ ಶ್ರುತರ್ವನಿಂದ ನನಗೆ ದತ್ತವಾದ ನಾಲ್ಕು ಅಶ್ವಗಳ ತಲೆಗಳನ್ನು ನನ್ನ ಕೈಯಿಂದ ಸವರುತ್ತೇನೆ.

## English Translation

Summoned before Shrutarvan, the son of Riksha, the humbler of the

pride of his enemies, (I stroke) with my hand the heads of the four horses (which he has given me), as (men stroke) the long wool of rams.

॥ ಸಂಹಿತಾಪಾಠಃ ॥

ಮಾಂ ಚತ್ವಾರ ಆಶವಃ ಶವಿಷ್ಠಸ್ಯ ದ್ರವಿತ್ನವಃ ।
ಸುರಥಾಸೋ ಅಭಿ ಪ್ರಯೋ ವಕ್ಷನ್ವಯೋ ನ ತುಗ್ರ್ಯಂ ॥ ೧೪ ॥

॥ ಪದಪಾಠಃ ॥

ಮಾಂ । ಚತ್ವಾರಃ । ಆಶವಃ । ಶವಿಷ್ಠಸ್ಯ । ದ್ರವಿತ್ನವಃ ।
ಸುऽರಥಾಸಃ । ಅಭಿ । ಪ್ರಯಃ । ವಕ್ಷನ್ । ವಯಃ । ನ । ತುಗ್ರ್ಯಂ ॥ ೧೪ ॥

॥ ಸಾಯಣಭಾಷ್ಯಂ ॥

ಮಾಂ ಶವಿಷ್ಠಸ್ಯಾತಿಶಯೇನಾನ್ನವತಃ ಶ್ರುತರ್ವಣೋ ರಾಜ್ಞಃ ಸಂಬಂಧಿನಶ್ಚತ್ವಾರ ಆಶವೋऽಶ್ವಾ ದ್ರವಿತ್ನವೋ ಗಮನಶೀಲಾಃ ಸುರಥಾಸಃ ಶೋಭನರಥಾ ಅಶ್ವಾಃ ಪ್ರಯೋऽನ್ನಂ ಶತ್ರೂಣಾಂ ಪ್ರತ್ಯಭಿ ವಕ್ಷನ್ । ಅಭಿವಹಂತಿ । ವಯೋ ನ ತುಗ್ರ್ಯಂ ಭುಜ್ಯಂ ಯಥಾಶ್ವಿಭ್ಯಾಂ ಪ್ರೇರಿತಾಶ್ಚತಸ್ರೋ ನಾವಃ ಸ್ವಗೃಹಂ ಪ್ರಾಪಯನ್ ತದ್ವದಿತಿ ॥

॥ ಪ್ರತಿಪದಾರ್ಥ ॥

**ವಯಃ**—ಅಶ್ವಿನೀದೇವತೆಗಳಿಂದ ದತ್ತವಾದ ನಾಲ್ಕು ನಾವೆಗಳು । **ತುಗ್ರ್ಯಂ ನ**—ಭುಜ್ಯುವನ್ನು ಹೊತ್ತುಕೊಂಡು ಮನೆಗೆ ತಲುಪಿಸಿದಂತೆ । **ಶವಿಷ್ಠಸ್ಯ**—ಅನ್ನಸಂಪತ್ತುಳ್ಳ ಶ್ರುತರ್ವನಿಂದ ದತ್ತವಾದವೂ । **ದ್ರವಿತ್ನವಃ**—ಗಮನಶೀಲವಾದವೂ । **ಸುರಥಾಸಃ**—ಉತ್ತಮವಾದ ರಥಕ್ಕೆ ಯೋಜಿತವಾದವೂ ಆದ । **ಚತ್ವಾರಃ ಆಶವಃ**—ನಾಲ್ಕು ಅಶ್ವಗಳೂ । **ಮಾಂ**—ನನ್ನನ್ನು । **ಪ್ರಯಃ ಅಭಿ**—ಶತ್ರುಗಳಿಗೆ ಸೇರಿದ ಅನ್ನಾಭಿಮುಖವಾಗಿ । **ವಕ್ಷನ್**—ವಹಿಸುತ್ತವೆ.

॥ ಭಾವಾರ್ಥ ॥

ಅಶ್ವಿನೀದೇವತೆಗಳಿಂದ ದತ್ತವಾದ ನಾಲ್ಕು ನಾವೆಗಳು ಭುಜ್ಯುವನ್ನು ಹೊತ್ತುಕೊಂಡು ಮನೆಗೆ ತಲಪಿಸಿದಂತೆ ಅನ್ನಸಂಪತ್ತುಳ್ಳ ಶ್ರುತರ್ವನಿಂದ ದತ್ತವಾದವೂ, ಗಮನಶೀಲವಾದವೂ, ಉತ್ತಮವಾದ ರಥಕ್ಕೆ ಯೋಜಿತವಾದವೂ ಆದ ನಾಲ್ಕು ಅಶ್ವಗಳೂ ಸಹ ನನ್ನನ್ನು ಶತ್ರುಗಳಿಗೆ ಸೇರಿದ ಅನ್ನಾಭಿಮುಖವಾಗಿ ವಹಿಸುತ್ತವೆ

## English Translation

Four swift horses of that most mighty king, yoked to a splendid car, bear me forth to seize the substance (of my enemies), as the ships bore home the son of Tugra.

॥ ಸಂಹಿತಾಪಾಠಃ ॥

ಸತ್ಯಮಿತ್ತ್ವಾ ಮಹೇನದಿ ಪರುಷ್ಣ್ಯವ ದೇದಿಶಂ ॥

ನೇಮಾಪೋ ಅಶ್ವದಾತರಃ ಶವಿಷ್ಠಾದಸ್ತಿ ಮರ್ತ್ಯಃ ॥ ೧೫ ॥

॥ ಪದಪಾಠಃ ॥

ಸತ್ಯಂ । ಇತ್ । ತ್ವಾ । ಮಹೇऽನದಿ । ಪರುಷ್ಣಿ । ಅವ । ದೇದಿಶಂ ॥

ನ । ಈಂ । ಆಪಃ । ಅಶ್ವऽದಾತರಃ । ಶವಿಷ್ಠಾತ್ । ಅಸ್ತಿ । ಮರ್ತ್ಯಃ । ೧೫ ॥

॥ ಸಾಯಣಭಾಷ್ಯಂ ॥

ಹೇ ಮಹೇನದಿ ಪರುಷ್ಣ್ಯೇತನ್ನಾಮಿಕೇ ತ್ವಾ ತ್ವಾಂ ಸತ್ಯಮಿತ್ ಸತ್ಯಮೇವಾವ ದೇದಿಶಂ ಆದಿಶಾಮಿ । ವದಾಮಿ । ಸದ್ಯಾಕಾರೇಣ ಸಂಬೋಧ್ಯಾಪಃ ಸಂಬೋಧಯತಿ । ಹೇ ಆಪಃ ಈಮಸ್ಮಾಚ್ಛವಿಷ್ಠಾದ್ಬಲವತ್ತಮಾಚ್ಛ್ರುತರ್ವಣೋऽಧಿಕಃ ಕಶ್ಚಿದಶ್ವದಾತರೋऽಶ್ವಾನಾಂ ದಾತೃತಮೋ ಮರ್ತ್ಯೋ ನಾಸ್ತಿ । ಪರುಷ್ಣ್ಯಾಸ್ತೀರೇ ರಾಜ್ಞೋऽಶ್ವಮೇಧಪ್ರತಿಗ್ರಹಾತ್ತಾಂ ಸಂಬೋಧ್ಯ ಬ್ರೂತೇ ॥

॥ ಪ್ರತಿಪದಾರ್ಥ ॥

ಪರುಷ್ಣಿ—ಪರುಷ್ಣಿಯೆಂಬ ಹೆಸರುಳ್ಳವಳೂ । ಮಹೇನದಿ—ಮಹತ್ಸ್ವರೂಪಳೂ ಆದ ಎಲೈ ನದಿಯೇ । ತ್ವಾ—ನಿನ್ನಮುಂದೆ । ಸತ್ಯಮಿತ್—ಸತ್ಯವಾಗಿಯೂ । ಅವ ದೇದಿಶಂ—ಘೋಷಿಸುತ್ತೇನೆ । ಆಪಃ—ಎಲೈ ನದ್ಯುದಕಗಳೇ । ಶವಿಷ್ಠಾತ್—ಅತ್ಯಂತ ಬಲಶಾಲಿಯಾದ । ಈಂ—ಈ ಶ್ರುತರ್ವನಿಗಿಂತಲೂ ಅಧಿಕವಾಗಿ । ಅಶ್ವದಾತರಃ—ಅಶ್ವದಾನಮಾಡತಕ್ಕ । ಮರ್ತ್ಯಃ—ಮಾನವನು । ನ ಅಸ್ತಿ—ಲೋಕದಲ್ಲಿ ಇಲ್ಲವೇ ಇಲ್ಲ

॥ ಭಾವಾರ್ಥ ॥

ಪರುಷ್ಣಿಯೆಂಬ ಹೆಸರುಳ್ಳವಳೂ, ಮಹತ್ಸ್ವರೂಪಳೂ ಆದ ಎಲೈ ನದಿಯೇ, ನಿನ್ನ ಮುಂದೆ ಸತ್ಯವಾಗಿಯೂ ಘೋಷಿಸುತ್ತೇನೆ. ಎಲೈ ನದ್ಯುದಕಗಳೇ, ಅತ್ಯಂತ ಬಲಶಾಲಿಯಾದ ಈ ಶ್ರುತರ್ವರಾಜನಿಗಿಂತಲೂ ಅಧಿಕವಾಗಿ ಅಶ್ವದಾನಮಾಡತಕ್ಕ ಮಾನವನು ಯಾರೂ ಈ ಲೋಕದಲ್ಲೇ ಇಲ್ಲ

## English Translation

Verily I address you, O great river Parushni; O waters, there is no mortal who gives horses more liberally than this most mighty (monarch)

# ಎಪ್ಪತ್ತೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಯುಕ್ಷ್ವಾ ಹೀತಿ ಷೋಡಶರ್ಚಂ ಷಷ್ಠಂ ಸೂಕ್ತಮಾಂಗಿರಸಸ್ಯ ವಿರೂಪಸ್ಯಾರ್ಷಂ ಗಾಯತ್ರಮಾಗ್ನೇಯಂ । ತಥಾ ಚಾನುಕ್ರಮಣಿಕಾ । ಯುಕ್ಷ್ವಾ ಹಿ ಷೋಳಶ ವಿರೂಪ ಇತಿ ॥ ದಶರಾತ್ರೇ ತೃತೀಯೇಽಹನೀದಂ ಸೂಕ್ತಮಾಜ್ಯಶಸ್ತ್ರಂ । ಸೂತ್ರಿತಂ ಚ । ತೃತೀಯೇ ಯುಕ್ಷ್ವಾ ಹೀತ್ಯಾಜ್ಯಂ । ಆ. ೭-೧೦ ॥ ಇತಿ ॥ ಪ್ರಾತರನುವಾಕೇಽಸ್ಯಾಗ್ನೇಯೇ ಗಾಯತ್ರೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಸೂತ್ರಿತಂ ಚ । ಯುಕ್ಷ್ವಾ ಹಿ ಪ್ರೇಷ್ಠಂ ವಃ । ಆ ೪-೧೩ । ಇತಿ ॥

ಅನುವಾದವು—**ಯುಕ್ಷ್ವಾ ಹಿ** ಎಂಬ ಈ ಸೂಕ್ತವು ಎಂಟನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಹದಿನಾರು ಋಕ್ಕುಗಳಿರುವವು. ಈ ಸೂಕ್ತಕ್ಕೆ ವಿರೂಪ ಆಂಗಿರಸಃ ಎಂಬುವನು ಋಷಿಯು, ಅಗ್ನಿಯು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಯುಕ್ಷ್ವಾ ಹಿ ಷೋಳಶ ವಿರೂಪಃ** ಎಂದು ಹೇಳಿರುವುದು ದಶರಾತ್ರವೆಂಬ ಯಾಗದ ಮೂರನೆಯ ದಿವಸ ಆಜ್ಯಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ-**ತೃತೀಯೇ ಯುಕ್ಷ್ವಾ ಹೀತ್ಯಾಜ್ಯಂ** ಎಂಬ ಸೂತ್ರದಿಂದ (ಆ. ೭-೧೦) ವಿವೃತವಾಗಿರುವುದು ಮತ್ತು ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ **ಯುಕ್ಷ್ವಾ ಹಿ ಪ್ರೇಷ್ಠಂ ವಃ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು.

## ಸೂಕ್ತ—೭೫

ಮಂಡಲ—೮ ॥ ಅನುವಾಕ—೮ ॥ ಸೂಕ್ತ—೭೫ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೨೪, ೨೫, ೨೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೬ ॥
ಋಷಿಃ—ವಿರೂಪಃ ॥
ದೇವತಾ—ಅಗ್ನಿಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಯುಕ್ಷ್ವಾ ಹಿ ದೇವಹೂತಮಾಁ ಅಶ್ವಾಁ ಅಗ್ನೇ ರಥೀರಿವ ।**
**ನಿ ಹೋತಾ ಪೂರ್ವ್ಯಃ ಸದಃ ॥ ೧ ॥**

॥ ಪದಪಾಠಃ ॥

ಯುಕ್ಷ್ವ । ಹಿ । ದೇವಽಹೂತಮಾನ್ । ಅಶ್ವಾನ್ । ಅಗ್ನೇ । ರಥೀಃಽಇವ ।
ನಿ । ಹೋತಾ । ಪೂರ್ವ್ಯಃ । ಸದಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ದೇವಹೂತಮಾನ್ ದೇವಾನಾಮಾಹ್ವಾತೃತಮಾನಶ್ವಾನ್ಯುಕ್ಷ್ವ । ಯೋಜಯ ರಥೇ। ರಥೀರಿವ ಯಥಾ ರಥೀ ಸ್ವಾಶ್ವಾನಿಷ್ಟದೇಶಗಮನಾಯ ಯೋಜಯತಿ ತದ್ವತ್ । ತಥಾ ಕೃತ್ವಾ ಹೋತಾ ತ್ವಂ ಪೂರ್ವ್ಯೋ ಮುಖ್ಯಃ ಸನ್ನಿ ಷದಃ । ಉಪವಿಶ ಚ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ರಥೀರಿವ—ರಥದ ಸಾರಥಿಯು ತನ್ನ ರಥಕ್ಕೆ ಅಶ್ವಗಳನ್ನು ಹೂಡುವಂತೆ । ದೇವಹೂತಮಾನ್—ದೇವತೆಗಳನ್ನು ಶ್ರೇಷ್ಠರೀತಿಯಲ್ಲಿ ಕರೆಯತಕ್ಕ । ಅಶ್ವಾನ್—ಅಶ್ವಗಳನ್ನು । ಯುಕ್ಷ್ವ ಹಿ—ರಥಕ್ಕೆ ಯೋಜಿಸು । ಹೋತಾ—ಹೋತೃರೂಪನೂ । ಪೂರ್ವ್ಯಃ—ಯಜ್ಞಕ್ಕೆ ಪ್ರಧಾನನೂ ಆದ ನೀನು । ನಿ ಷದಃ—ಆಸನದಲ್ಲಿ ಕುಳಿತುಕೊ

॥ ಭಾವಾರ್ಥ ॥

ಎಲೈ ಅಗ್ನಿಯೇ, ರಥದ ಸಾರಥಿಯು ತನ್ನ ರಥಕ್ಕೆ ಅಶ್ವಗಳನ್ನು ಹೂಡುವಂತೆ ದೇವತೆಗಳನ್ನು ಶ್ರೇಷ್ಠರೀತಿಯಲ್ಲಿ ಕರೆದು ತರತಕ್ಕ ಅಶ್ವಗಳನ್ನು ರಥಕ್ಕೆ ಯೋಜಿಸು ಹೋತೃರೂಪನೂ, ಯಜ್ಞಕ್ಕೆ ಪ್ರಧಾನನೂ ಆದ ನೀನು ಆಸನದಲ್ಲಿ ಕುಳಿತುಕೊ.

English Translation

Agni, like a charioteer yoke your good-invoking steeds; seat yourself first, the invoker

॥ ಸಂಹಿತಾಪಾಠಃ ॥

ಉತ ನೋ ದೇವ ದೇವಾँ ಅಚ್ಛಾ ವೋಚೋ ವಿದುಷ್ಟರಃ ।
ಶ್ರದ್ವಿಶ್ವಾ ವಾರ್ಯಾ ಕೃಧಿ ॥ ೨ ॥

॥ ಪದಪಾಠಃ ॥

ಉತ । ನಃ । ದೇವ । ದೇವಾನ್ । ಅಚ್ಛ । ವೋಚಃ । ವಿದುಃ೨ತರಃ ।
ಶ್ರತ್ । ವಿಶ್ವಾ । ವಾರ್ಯಾ । ಕೃಧಿ ॥ ೨ ॥

॥ ಸಾಯಣಭಾಷ್ಯಂ ॥

ಹೇ ದೇವಾಗ್ನೇ ಉತಾಪಿ ಚ ನೋಽಸ್ಮಾನ್ ದೇವಾನಚ್ಛಾ ವೋಚಃ। ಅಭಿಬ್ರೂಯಾಃ। ಸಮ್ಯಗನುಷ್ಠಿತವಂತ ಇತಿ । ತಥಾ ವಿದುಷ್ಟರೋ ವಿದ್ವತ್ತಮಾನ್ವೋಚಃ । ತಥಾ ಕೃತ್ವಾ ವಿಶ್ವಾ ಸರ್ವಾಣಿ ವಾರ್ಯಾ

ವರಣೀಯಾನಿ ಧನಾನಿ ದೇವಸಂಬಂಧೀನಿ ಶ್ರತ್ ಸತ್ಯಾನಿ ಕೃಧಿ । ಕುರ್ವಾಸ್ಮಾಕಂ । ಅಥವಾಸ್ಮದೀಯಾನಿ ಸರ್ವಾಣಿ ವರಣೀಯಾನಿ ಹವೀಂಷಿ ಶ್ರತ್ ಸತ್ಯಾನಿ ಕುರು । ದೇವಾನ್ ಪ್ರಾಪಯೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ದೇವ**—ದೇವತಾತ್ಮನಾದ ಎಲೈ ಅಗ್ನಿಯೇ । **ಉತ**—ಮತ್ತು । **ನಃ**—ನಮ್ಮನ್ನು । **ದೇವಾನ್ ಅಚ್ಛ**—ದೇವತೆಗಳ ಮುಂದೆ । **ವಿದುಷ್ಟರಃ**—ಅತಿಶಯವಾದ ತಿಳಿವಳಿಕೆಯುಳ್ಳವರೆಂದು । **ವೋಚಃ**—ಪ್ರಶಂಸಿಸಿ ಹೇಳು । **ವಿಶ್ವಾ**—ಸಮಸ್ತವಾದ । **ವಾರ್ಯಾ**—ಅಪೇಕ್ಷಿತವಾದ ಧನಗಳನ್ನೂ । **ಶ್ರತ್**—ಸತ್ಯಾತ್ಮಕವಾದುದನ್ನಾಗಿ । **ಕೃಧಿ**—ಮಾಡು.

॥ ಭಾವಾರ್ಥ ॥

ದೇವತಾತ್ಮನಾದ ಎಲೈ ಅಗ್ನಿಯೇ, ನಮ್ಮನ್ನು ದೇವತೆಗಳ ಮುಂದೆ ಅತಿಶಯವಾದ ತಿಳಿವಳಿಕೆಯುಳ್ಳವರೆಂದು ಪ್ರಶಂಸಿಸಿ ಹೇಳು. ನಮಗೆ ಸಮಸ್ತವಾದ ಧನಗಳನ್ನೂ ನಮ್ಮ ಅಪೇಕ್ಷೆಯಂತೆ ನಮ್ಮ ಅನುಭವಕ್ಕೆ ಯೋಗ್ಯವಾಗುವಂತೆ ಮಾಡು.

English Translation

Divine (Agni), proclaim us to the gods as profoundly skilled; assure to us all desirable things;

॥ ಸಂಹಿತಾಪಾಠಃ ॥

ತ್ವಂ ಹ ಯದ್ಯವಿಷ್ಠ್ಯ ಸಹಸಃ ಸೂನವಾಹುತ ।
ಋತಾವಾ ಯಜ್ಞಿಯೋ ಭುವಃ ॥ ೩ ॥

॥ ಪದಪಾಠಃ ॥

ತ್ವಂ । ಹ । ಯತ್ । ಯವಿಷ್ಠ್ಯ । ಸಹಸಃ । ಸೂನೋ ಇತಿ । ಆಽಹುತ ।
ಋತಽವಾ । ಯಜ್ಞಿಯಃ । ಭುವಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯವಿಷ್ಠ್ಯ ಯುವತಮ ಸಹಸಃ ಸೂನೋ ಬಲಸ್ಯ ಪುತ್ರಾಹುತ ಸರ್ವತೋ ಹುತಾಹುತೆ ವಾ ತ್ವಂ ಯದ್ಯದಾ ಹ ಖಲ್ವೃತಾವಾ ಸತ್ಯವಾನ್ ಯಜ್ಞಿಯೋ ಯಜ್ಞಾರ್ಹಶ್ಚ ಭುವಃ ಭವಸಿ ತದಾ ವಾರ್ಯಾಣಿ ಶ್ರತ್ಕುರ್ವತಿ ಸಂಬಂಧಃ ॥

॥ ಪ್ರತಿಪದಾರ್ಥ ॥

ಯವಿಷ್ಠ್ಯ—ಅತ್ಯಂತ ಯುವಕನೂ । ಸಹಸಃ ಸೂನೋ—ಶಕ್ತಿಪುತ್ರನೂ । ಆಹುತ—ಸರ್ವತ್ರ ಕರೆಯಲ್ಪಡುವವನೂ ಆದ ಎಲೈ ಅಗ್ನಿಯೇ । ತ್ವಂ—ನೀನು । ಯದ್ಧ—ಯಾವ ನಿನ್ನ ಪ್ರಭಾವದಿಂದ। ಋತಾವಾ-ಸತ್ಯವಂತನೂ । ಯಜ್ಞಿಯಃ—ಯಜ್ಞವಂತನೂ । ಭುವಃ—ಆಗಿರುವೆಯೋ (ಆ ಪ್ರಭಾವದಿಂದಲೇ ನಮ್ಮ ಇಷ್ಟಾರ್ಥಗಳನ್ನು ನೆರವೇರಿಸು).

॥ ಭಾವಾರ್ಥ ॥

ಅತ್ಯಂತ ಯುವಕನೂ, ಶಕ್ತಿಪುತ್ರನೂ, ಸರ್ವತ್ರ ಆಹ್ವಾನಿತನೂ ಆದ ಎಲೈ ಅಗ್ನಿಯೇ, ನೀನು ಯಾವ ನಿನ್ನ ಪ್ರಭಾವದಿಂದ ಸತ್ಯವಂತನೂ, ಯಜ್ಞವಂತನೂ ಆಗಿರುವೆಯೋ ಆ ಪ್ರಭಾವದಿಂದಲೇ ನಮ್ಮ ಇಷ್ಟಾರ್ಥಗಳನ್ನು ನೆರವೇರಿಸು

## English Translation

Since you are truthful and worthy of sacrifice, O most youthful, son of strength and everywhere honoured with offerings.

॥ ಸಂಹಿತಾಪಾಠಃ ॥

ಅಯಮಗ್ನಿಃ ಸಹಸ್ರಿಣೋ ವಾಜಸ್ಯ ಶತಿನಸ್ಪತಿಃ ।
ಮೂರ್ಧಾ ಕವೀ ರಯೀಣಾಂ ॥ ೪ ॥

॥ ಪದಪಾಠಃ ॥

ಅಯಂ । ಅಗ್ನಿಃ । ಸಹಸ್ರಿಣಃ । ವಾಜಸ್ಯ । ಶತಿನಃ । ಪತಿಃ ।
ಮೂರ್ಧಾ । ಕವಿಃ । ರಯೀಣಾಂ ॥ ೪ ॥

॥ ಸಾಯಣಭಾಷ್ಯಂ ॥

ದರ್ಶಪೂರ್ಣಮಾಸಯೋರಾಗ್ನೇಯಸ್ಯಾಯಮಗ್ನಿರಿತಿ ವೈಕಲ್ಪಿಕೀ ಯಾಜ್ಯಾ । ಸೂತ್ರಿತಂ ಚ । ಅಯಮಗ್ನಿಃ ಸಹಸ್ರಿಣ ಇತಿ ವೇದಂ ವಿಷ್ಣುರ್ವಿ ಚಕ್ರಮೇ । ಆ. ೧-೬ । ಇತಿ ॥

ಅಯಮಗ್ನಿಃ ಶತಿನಃ ಸಹಸ್ರಿಣಶ್ಚೋಕ್ತಸಂಖ್ಯೋಪೇತಸ್ಯ ವಾಜಸ್ಯಾನ್ನಸ್ಯ ಪತಿಃ ಸ್ವಾಮೀ ಮೂರ್ಧಾ ಶಿರೋವದುನ್ನತಃ ಶ್ರೇಷ್ಠಃ ಕವಿರ್ಮೇಧಾವೀ ರಯೀಣಾಂ ಧನಾನಾಮಪಿ ಪತಿರಿತಿ ಶೇಷಃ । ತದುಭಯಂ ಪ್ರಯಚ್ಛತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಯಂ ಅಗ್ನಿಃ**—ಪ್ರಸಿದ್ಧನಾದ ಈ ಅಗ್ನಿಯು । **ಶತಿನಃ**—ಶತಸಂಖ್ಯಾಕವೂ । **ಸಹಸ್ರಿಣಃ**—ಸಹಸ್ರಸಂಖ್ಯಾಕವೂ ಆದ । **ವಾಜಸ್ಯ**—ಅನ್ನಕ್ಕೆ । **ಪತಿಃ**—ಒಡೆಯನಾಗಿಯೂ । **ಮೂರ್ಧಾ**-ಶ್ರೇಷ್ಠನಾಗಿಯೂ । **ಕವಿಃ**—ಮೇಧಾವಿಯಾಗಿಯೂ । **ರಯೀಣಾಂ**—ಸಕಲಧನಗಳ ದಾತೃವಾಗಿಯೂ ಆಗಿದ್ದಾನೆ.

॥ ಭಾವಾರ್ಥ ॥

ಪ್ರಸಿದ್ಧನಾದ ಈ ಅಗ್ನಿಯು ಶತಸಂಖ್ಯಾಕವೂ, ಸಹಸ್ರಸಂಖ್ಯಾಕವೂ ಆದ ಅನ್ನಕ್ಕೆ ಒಡೆಯನಾಗಿಯೂ ಶ್ರೇಷ್ಠನಾಗಿಯೂ, ಮೇಧಾವಿಯಾಗಿಯೂ, ಸಕಲಧನಗಳ ದಾತೃವಾಗಿಯೂ ಆಗಿದ್ದಾನೆ.

English Translation

This Agni is the lord of hundredfold and thousandfold food; he is the head, the seer, (the lord) of wealth

॥ ವಿಶೇಷವಿಷಯಗಳು ॥

ದರ್ಶಪೂರ್ಣಮಾಸಯಾಗಗಳಲ್ಲಿ ಅಗ್ನಿಯನ್ನುದ್ದೇಶಿಸಿ ಹೋಮಮಾಡುವಾಗ **ಅಯಮಗ್ನಿಃ** ಎಂಬ ಈ ಋಕ್ಕನ್ನು ವೈಕಲ್ಪಿಕಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಅಯಮಗ್ನಿಃ ಸಹಸ್ರಿಣ ಇತಿ ವೇದಂ ವಿಷ್ಣುರ್ವಿ ಚಕ್ರಮೇ** ಎಂಬ ಸೂತ್ರದಿಂದ (ಆ ೧-೬) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ತಂ ನೇಮಿಮೃಭವೋ ಯಥಾ ನಮಸ್ವ ಸಹೂತಿಭಿಃ ।
ನೇದೀಯೋ ಯಜ್ಞಮಂಗಿರಃ ॥ ೫ ॥

॥ ಪದಪಾಠಃ ॥

ತಂ । ನೇಮಿಂ । ಋಭವಃ । ಯಥಾ । ಆ । ನಮಸ್ವ । ಸಹೂತಿಽಭಿಃ ।
ನೇದೀಯಃ । ಯಜ್ಞಂ । ಅಂಗಿರಃ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಅಂಗಿರಃ ತ್ವಂ ಸಹೂತಿಭಿಃ ಸಮಾನಾಹ್ವಾನೈರನ್ಯೈರ್ದೇವೈಃ ಸಹ ನೇದೀಯೋಽಂತಿಕತಮಂ ಯಜ್ಞಮಾ ನಮಸ್ವ । ಆನಮಯ । ಋಭವೋ ನೇಮಿಂ ರಥಮಿವ ॥**

॥ ಪ್ರತಿಪದಾರ್ಥ ॥

**ಅಂಗಿರಃ**—ಅಂಗಿರಾರೂಪನಾದ ಎಲೈ ಅಗ್ನಿಯೇ । **ಋಭವಃ**—ಋಭುಗಳು । **ನೇಮಿಂ ಯಥಾ**—ರಥದ ಚಕ್ರದ ಹಳಿಯನ್ನು ಬಗ್ಗಿಸುವಂತೆ । **ಸಹೂತಿಭಿಃ**—ನಿನ್ನೊಡನೆ ಆಹ್ವಾನವನ್ನು ಹೊಂದಿರುವ ಇತರ ದೇವತೆಗಳೊಡನೆ । **ನೇದೀಯಃ**—ಅತ್ಯಂತ ಸಮೀಪಸ್ಥವಾದ । **ತಂ ಯಜ್ಞಂ**—ಆದೇ ಯಜ್ಞಾಭಿಮುಖವಾಗಿ । **ಆ ನಮುಸ್ವ**— ಬಗ್ಗಿ ಬಾ.

॥ ಭಾವಾರ್ಥ ॥

ಅಂಗಿರಾರೂಪನಾದ ಎಲೈ ಅಗ್ನಿಯೇ, ಋಭುಗಳು ರಥದ ಚಕ್ರದ ಹಳಿಯನ್ನು ಬಗ್ಗಿಸುವಂತೆ ನಿನ್ನೊಡನೆ ಆಹ್ವಾನವನ್ನು ಹೊಂದಿರುವ ಇತರ ದೇವತೆಗಳೊಡಗೂಡಿ ಅತ್ಯಂತ ಸಮೀಪಸ್ಥವಾದ ಯಜ್ಞಾಭಿಮುಖವಾಗಿ ಬಗ್ಗಿ ಬಾ

## English Translation

O Angiras, with the deities associated in the invocation, draw this offering near you as the Ribhus (bend) the circumference of a wheel

॥ ಸಂಹಿತಾಪಾಠಃ ॥

ತಸ್ಮೈ ನೂನಮಭಿದ್ಯವೇ ವಾಚಾ ವಿರೂಪ ನಿತ್ಯಯಾ ।
ವೃಷ್ಣೇ ಚೋದಸ್ವ ಸುಷ್ಟುತಿಂ ॥ ೬ ॥

॥ ಪದಪಾಠಃ ॥

ತಸ್ಮೈ । ನೂನಂ । ಅಭಿऽದ್ಯವೇ । ವಾಚಾ । ವಿऽರೂಪ । ನಿತ್ಯಯಾ ।
ವೃಷ್ಣೇ । ಚೋದಸ್ವ । ಸುऽಸ್ತುತಿಂ ॥ ೬ ॥

॥ ಸಾಯಣಭಾಷ್ಯಂ ॥

**ಹೇ ವಿರೂಪ ನಾನಾರೂಪೈತನ್ನಾಮಕ ಮಹರ್ಷೇ ತ್ವಂ ತಸ್ಮೈ ಪ್ರಸಿದ್ಧಾಯಾಭಿದ್ಯವೇऽಭಿಗತತೃಪ್ತಯೇ ವೃಷ್ಣೇ ವರ್ಷಕಾಯಾಗ್ನಯೇ ನಿತ್ಯಯೋತ್ಪತ್ತಿರಹಿತಯಾ ವಾಚಾ ಮಂತ್ರರೂಪಯಾ ಸುಷ್ಟುತಿಂ ನೂನಮಿದಾನೀಂ ಚೋದಸ್ವ । ಸ್ತುಹೀತ್ಯೇವಮೃಷಿಃ ಸ್ವಾತ್ಮಾನಂ ಬ್ರವೀತಿ ಯಜಮಾನೋ ವಾ ಹೋತಾರಂ ವಿರೂಪಂ ॥**

॥ ಪ್ರತಿಪದಾರ್ಥ ॥

**ವಿರೂಪ**—ಎಲೈ ವಿರೂಪಸಂಜ್ಞಕನಾದ ಋಷಿಯೇ । **ತಸ್ಮೈ**—ಪ್ರಸಿದ್ಧನೂ । **ಅಭಿದ್ಯವೇ**-ವಿಸ್ತೃತವಾದ ಪ್ರಕಾಶವುಳ್ಳವನೂ । **ವೃಷ್ಣೇ**-ಇಷ್ಟಾರ್ಥಪ್ರದನೂ ಆದ ಅಗ್ನಿಯನ್ನುದ್ದೇಶಿಸಿ । **ನಿತ್ಯಯಾ**-ಉತ್ಪತ್ತಿರಹಿತವಾದದೂ।

**ವಾಚಾ**—ಮಂತ್ರರೂಪವಾದುದೂ ಆದ ವಾಕ್ಕಿನಿಂದ । **ಸುಷ್ಟುತಿಂ**—ಉತ್ತಮವಾದ ಸ್ತುತಿಯನ್ನು । **ನೂನಂ**—ಈಗ । **ಚೋದಸ್ವ**—ಪಠಿಸು.

॥ ಭಾವಾರ್ಥ ॥

ವಿರೂಪಸಂಜ್ಞಕನಾದ ಎಲೈ ಋಷಿಯೇ, ಪ್ರಸಿದ್ಧನೂ, ವಿಸ್ತೃತವಾದ ಪ್ರಕಾಶವುಳ್ಳವನೂ, ಇಷ್ಟಾರ್ಥಪ್ರದನೂ ಆದ ಅಗ್ನಿಯನ್ನುದ್ದೇಶಿಸಿ ನಿತ್ಯವಾದುದೂ ಮಂತ್ರರೂಪವಾದುದೂ ಆದ ವಾಕ್ಕಿನಿಂದ ಉತ್ತಮವಾದ ಸ್ತುತಿಯನ್ನು ಈಗ ಪಠಿಸು.

English Translation

Virupa, with constant voice address you praise to this well-pleased showerer (of blessings).

॥ ಸಂಹಿತಾಪಾಠಃ ॥

ಕಮು ಷ್ವಿದಸ್ಯ ಸೇನಯಾಗ್ನೇರಪಾಕಚಕ್ಷಸಃ ।

ಪಣಿಂ ಗೋಷು ಸ್ತರಾಮಹೇ ॥ ೭ ॥

॥ ಪದಪಾಠಃ ॥

ಕಂ । ಊಂ ಇತಿ । ಸ್ವಿತ್ । ಅಸ್ಯ । ಸೇನಯಾ । ಅಗ್ನೇಃ । ಅಪಾಕಽಚಕ್ಷಸಃ ।

ಪಣಿಂ । ಗೋಷು । ಸ್ತರಾಮಹೇ ॥ ೭ ॥

॥ ಸಾಯಣಭಾಷ್ಯಂ ॥

ಅಸ್ಯಾಗ್ನೇರಪಾಕಚಕ್ಷಸೋಽಸಲ್ಪಚಷ್ಟಪಸೋಽಗ್ನೇಃ ಸೇನಯಾ ಜ್ವಾಲಾರೂಪಯಾ ಗೋಷು ನಿಮಿತ್ತೇಷು ಕಮು ಷ್ವಿತ್ ಕಂ ಖಲು ಪಣಿಂ ಸ್ತರಾಮಹೇ । ಸ್ತರಣಂ ಹಿಂಸನಂ । ಇದಾನೀಂ ಬಲಿನಮಭಿಭವೇಮೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಪಾಕಚಕ್ಷಸಃ**—ಅತಿಪ್ರವೃದ್ಧವಾದ ಪ್ರಭೆಯುಳ್ಳ । **ಅಸ್ಯ ಅಗ್ನೇಃ**—ಈ ಅಗ್ನಿಯ । **ಸೇನಯಾ**—ಜ್ವಾಲಾರೂಪವಾದ ಸೇನೆಯ ಸಹಾಯದಿಂದ । **ಗೋಷು**—ಗೋವುಗಳನ್ನು ಪಡೆಯಲು । **ಕಮು ಷ್ವಿತ್ ಪಣಿಂ**—ಪಣಿರೂಪನಾದ ಯಾವ ಶತ್ರುವನ್ನು ತಾನೇ । **ಸ್ತರಾಮಹೇ**—ನಾವು ಜಯಿಸಬೇಕು.

॥ ಭಾವಾರ್ಥ ॥

ಅತಿ ಪ್ರವೃದ್ಧವಾದ ಪ್ರಭೆಯುಳ್ಳ ಈ ಅಗ್ನಿಯ ಜ್ವಾಲಾರೂಪವಾದ ಸೇನೆಯ ಸಹಾಯದಿಂದ ನಾವು ಸಕಲ ಶತ್ರುಗಳನ್ನೂ ಜಯಿಸಲು ಸಮರ್ಥರಾಗುತ್ತೇವೆ. ಪ್ರಕೃತದಲ್ಲಿ ಗೋವುಗಳನ್ನು ಹೊಂದಲು ಯಾವ ಶತ್ರುವನ್ನು ಎದುರಿಸಿ ಸೋಲಿಸೋಣ? ಅಂತಹ ಪಣಿರೂಪನಾದ ಶತ್ರುವು ಯಾವನಿರುತ್ತಾನೆ ?

English Translation

What strong enemy shall we overthrow, to win cows by the help of the host of this Agni of unmeasured radiance ?

॥ ಸಂಹಿತಾಪಾಠಃ ॥

ಮಾ ನೋ ದೇವಾನಾಂ ವಿಶಃ ಪ್ರಸ್ನಾತೀರಿವೋಸ್ರಾಃ ।
ಕೃಶಂ ನ ಹಾಸುರಘ್ನ್ಯಾಃ ॥ ೮ ॥

॥ ಪದಪಾಠಃ ॥

ಮಾ । ನಃ । ದೇವಾನಾಂ । ವಿಶಃ । ಪ್ರಸ್ನಾತೀಃಽಇವ । ಉಸ್ರಾಃ ।
ಕೃಶಂ । ನ । ಹಾಸುಃ । ಅಘ್ನ್ಯಾಃ ॥ ೮ ॥

॥ ಸಾಯಣಭಾಷ್ಯಂ ॥

ದೇವಾನಾಂ ಸರ್ವೇಷಾಂ ವಿಶಃ ಪ್ರಜಾಭೂತಾನ್ಪರಿಚಾರಕಾನ್ನೋಽಸ್ಮಾನ್ಮಾ ಹಾಸೀತ್। ಅಗ್ನಿರ್ಮಾ ಪರಿತ್ಯಜತು । ಪ್ರಸ್ನಾತೀರುಸ್ರಾ ಇವ ಪಯಃ ಕ್ಷರಂತೀರ್ಗಾವ ಇವ । ತಾ ಯಥಾ ನ ಮುಂಚಂತಿ । ಉಭಯಮಪಿ ನ ಪರಿತ್ಯಜತ್ವಿತ್ಯರ್ಥಃ । ಕಿಮಿವ । ಕೃಶಮಲ್ಪಂ ಸ್ವವತ್ಸಮಘ್ನ್ಯಾ ಗಾವೋ ಯಥಾ ನ ಹಾಸುಃ ನ ಪರಿತ್ಯಜಂತಿ ತದ್ವತ್ ॥

॥ ಪ್ರತಿಪದಾರ್ಥ ॥

ಅಘ್ನ್ಯಾಃ—ಗೋವುಗಳು । ಕೃಶಂ—ತಮ್ಮ ಎಳೆಯ ಕರುಗಳನ್ನು । (ಯಥಾ) ನ ಹಾಸುಃ—ಯಾವ ರೀತಿ ತ್ಯಾಗಮಾಡುವುದಿಲ್ಲವೋ ಅದರಂತೆ । ದೇವಾನಾಂ—ಸಕಲ ದೇವತೆಗಳಿಗೂ । ವಿಶಃ—ಪ್ರಜಾರೂಪರಾದ । ನಃ—ನಮ್ಮನ್ನು । ಪ್ರಸ್ನಾತೀಃ—ಪ್ರಭೂತವಾಗಿ ಕ್ಷೀರವನ್ನು ಕೊಡುವ । ಉಸ್ರಾಃ ಇವ—ಧೇನುಗಳಂತೆ ಉಪಕಾರಿಯಾಗಿರುವ ಅಗ್ನಿಯು । ಮಾ (ಹಾಸೀತ್)—ತ್ಯಜಿಸದಿರಲಿ.

॥ ಭಾವಾರ್ಥ ॥

ಗೋವುಗಳು ತಮ್ಮ ಎಳೆಯ ಕರುಗಳನ್ನು ಯಾವ ರೀತಿ ತ್ಯಜಿಸುವುದಿಲ್ಲವೋ ಅದರಂತೆ, ಸಕಲ ದೇವತೆಗಳಿಗೂ ಪ್ರಜಾರೂಪವಾದ ನನ್ನನ್ನು ಪ್ರಭೂತವಾಗಿ ಕ್ಷೀರವನ್ನು ಕೊಡುವ ಧೇನುಗಳಂತೆ ಉಪಕಾರಿಯಾಗಿರುವ ಅಗ್ನಿಯು ತ್ಯಜಿಸದಿರಲಿ.

English Translation

May he not ( forsake ) us, the liegemen of the gods, as the milk-streaming cows (forske not); the cows abandon not a little (calf).

॥ ಸಂಹಿತಾಪಾಠಃ ॥

ಮಾ ನಃ ಸಮಸ್ಯ ದೂಢ್ಯಃ ಪರಿದ್ವೇಷಸೋ ಅಂಹತಿಃ ।

ಊರ್ಮಿರ್ನ ನಾವಮಾ ವಧೀತ್ ॥ ೯ ॥

॥ ಪದಪಾಠಃ ॥

ಮಾ । ನಃ । ಸಮಸ್ಯ । ದುಃऽಧ್ಯಃ । ಪರಿऽದ್ವೇಷಸಃ । ಅಂಹತಿಃ ।

ಊರ್ಮಿಃ । ನ । ನಾವಂ । ಆ । ವಧೀತ್ ॥ ೯ ॥

॥ ಸಾಯಣಭಾಷ್ಯಂ ॥

ಸಮಸ್ಯ ಸರ್ವಸ್ಯ ಪರಿದ್ವೇಷಸಃ ಪರಿತೋ ದ್ವಿಷತೋ ದೂಢ್ಯಃ ಪಾಪಬುದ್ಧೇರಂಹತಿರ್ಹನನಂ ಮಾ ವಧೀತ್ । ಮಾ ಹಿಂಸ್ಯಾತ್ । ನಾವಮೂರ್ಮಿಃ ಸಮುದ್ರತರಂಗ ಇವ । ಸ ಯಥಾ ತಾಂ ಪೀಡಯತಿ ತದ್ವನ್ಮಾ ವಧೀದಿತ್ಯರ್ಥಃ । ಅತ್ರ ಮಾ ನಃ ಸರ್ವಸ್ಯ ದುರ್ಧಿಯಃ । ನಿ. ೫-೨೩ । ಇತ್ಯಾದಿ ನಿರುಕ್ತಂ ದ್ರಷ್ಟವ್ಯಂ ॥

॥ ಪ್ರತಿಪದಾರ್ಥ ॥

**ಊರ್ಮಿಃ**—ಸಮುದ್ರದ ಅಲೆಗಳು । **ನಾವಂ ನ**—ದೋಣಿಯಮೇಲೆ ಹೊಡೆದು ಅದನ್ನು ನಾಶಪಡಿಸುವಂತೆ । **ಸಮಸ್ಯ**—ಸಕಲವಾದವರೂ । **ಪರಿದ್ವೇಷಸಃ**—ನಮ್ಮನ್ನು ಸುತ್ತುವರಿದಿರುವವರೂ ಆದ ಶತ್ರುಗಳ । **ದೂಢ್ಯಃ**—ದುರ್ಬುದ್ಧಿಯುಳ್ಳ । **ಅಂಹತಿಃ**—ಹಿಂಸಾಪ್ರವೃತ್ತಿಯು । **ನಃ**—ನಮ್ಮನ್ನು । **ಮಾ ಆ ವಧೀತ್**—ನಾಶಪಡಿಸದಿರಲಿ

॥ ಭಾವಾರ್ಥ ॥

ಸಮುದ್ರದ ಅಲೆಗಳು ದೋಣಿಯಮೇಲೆ ಹೊಡೆದು ಅದನ್ನು ನಾಶಪಡಿಸುವಂತೆ ಸಕಲವಾದವರೂ ನಮ್ಮನ್ನು ಸುತ್ತುವರಿದಿರುವವರೂ ಆದ ಶತ್ರುಗಳ ದುರ್ಬುದ್ಧಿಯುಳ್ಳ ಹಿಂಸಾಪ್ರವೃತ್ತಿಯು ನಮ್ಮನ್ನು ನಾಶಪಡಿಸದಿರಲಿ

## English Translation

Let not the onset of any evil-minded adversary harm us as the wave (overwhelms) a ship.

॥ ವಿಶೇಷವಿಷಯಗಳು ॥

**ಸಮಸ್ಯ**—ಈ ಶಬ್ದವು ಸರ್ವನಾಮವೆಂದು ಪರಿಗಣಿಸಲ್ಪಟ್ಟಿದೆ. ಸಮಂ ಎಂದರೆ ಸಮಸ್ತವು ಎಂದರ್ಥವು ಯಾಸ್ಕರು—

**ಸಮಸ್ಯ । ಸಮಮಿತಿ ಪರಿಗ್ರಹಾರ್ಥೀಯಂ ಸರ್ವನಾಮಾನುದಾತ್ತಂ**

(ನಿ. ೫-೨೭)

ಎಂದು ನಿರ್ವಚನವನ್ನು ಹೇಳಿದಾರೆ—ಎಂದರೆ ಸಮಂ ಎಂಬ ಶಬ್ದವು ಪರಿಗ್ರಹಾರ್ಥದಲ್ಲಿ ಉಪಯೋಗಿಸಲ್ಪಡುವುದು. ಮತ್ತು ಇದು ಸರ್ವನಾಮವೆಂದು ಪ್ರಸಿದ್ಧವಾಗಿರುವುದು, ಇದರ ಸ್ವರವು ಸರ್ವಾನುದಾತ್ತವು ಎಂದು ಹೇಳಿ ಇದರ ಸಮರ್ಥನೆಗಾಗಿ ಪ್ರಕೃತ ಋಕ್ಕನ್ನೇ ಉದಾಹರಣೆಯಾಗಿ ತೆಗೆದುಕೊಂಡು ಅದಕ್ಕೆ ನಿರ್ವಚನವನ್ನು ಹೇಳಿದಾರೆ—

**ಮಾ ನಃ ಸರ್ವಸ್ಯ ದುರ್ಧಿಯಃ ಪಾಪಧಿಯಃ ಸರ್ವತೋ ದ್ವೇಷಸೋಂಹತಿರೂರ್ಮಿರಿವ ನಾವಮಾವಧೀತ್ । ಊರ್ಮಿರೂರ್ಣೋತೇರ್ನೌಃ ಪ್ರಣೋತ್ತವ್ಯಾ ಭವತಿ । ನಮತೇರ್ವಾ । ತತ್ಕಥಮನುದಾತ್ತಪ್ರಕೃತಿ ನಾಮ ಸ್ಯಾತ್ ದೃಷ್ಟವ್ಯಯಂ ತು ಭವತಿ ॥**

(ನಿ ೫-೨೩)

ನಮ್ಮ ವಿಷಯದಲ್ಲಿ ಕೆಟ್ಟಬುದ್ಧಿ ಎಂದರೆ ಪಾಪಬುದ್ಧಿಯಿಂದ ವರ್ತಿಸತಕ್ಕ ಶತ್ರುಜನರ ದುಷ್ಪ್ರವೃತ್ತಿಯು ನಮ್ಮನ್ನು ಹಿಂಸೆಪಡಿಸದಿರಲಿ. ಹೇಗೆಂದರೆ, ನೀರಿನಲ್ಲಿ ಇರುವ ದೋಣಿಯನ್ನು ನೀರಿನ ಅಲೆಗಳು ನಾಶ ಹೊಡೆದಪ್ಪಳಿಸುವಂತೆ ದುಷ್ಟಜನರ ಪಾಪಬುದ್ಧಿಯು ನಮ್ಮನ್ನು ಹಿಂಸಿಸದಿರಲಿ ಎಂದು ನೀರಿನ ಅಲೆಗಳಿಗೂ ದುಷ್ಟಜನರ ಪಾಪಬುದ್ಧಿಗಳಿಗೂ ದೃಷ್ಟಾಂತವನ್ನು ಹೇಳಿದೆ **ಊರ್ಮಿ**ಶಬ್ದವು ಆಚ್ಛಾದಿಸು ಎಂಬರ್ಥವುಳ್ಳ ಊರ್ಣೋತಿಧಾತುವಿನಿಂದ ನಿಷ್ಪನ್ನವಾಗಿದೆ. ಅಲೆಗಳು ದಡವನ್ನು ಪದೇಪದೆ ಮುಚ್ಚುತ್ತಿರುವುದರಿಂದ ಅಲೆಗಳಿಗೆ ಊರ್ಮಿ ಎಂಬ ಹೆಸರು ಬಂದಿದೆ **ನೌಃ** ಎಂಬ ಶಬ್ದವು ಎಳಿ ಅಥವಾ ತಳ್ಳು ಎಂಬರ್ಥವುಳ್ಳ ನಯತಿಧಾತುವಿನಿಂದ ನಿಷ್ಪನ್ನವಾಗಿದೆ. ಎಂದರೆ ನೀರಿನಮೇಲೆ ಎಳೆಯಲ್ಪಡುತ್ತದೆ ಅಥವಾ ಸಂಚರಿಸುತ್ತದೆ. ಆದ್ದರಿಂದ ನೌಕೆಗೆ (ದೋಣಿಗೆ) **ನೌಃ** ಎಂಬ ಹೆಸರು ಬಂದಿದೆ. ಅಥವಾ ಈ ಶಬ್ದವು ಬಗ್ಗು ಎಂಬರ್ಥವಿರುವ ನಮುಧಾತುವಿನಿಂದಲೂ ನಿಷ್ಪನ್ನವಾಗಬಹುದು. ಈಗ ಸಮಂ ಎಂಬ ಸರ್ವನಾಮಶಬ್ದವು ಸರ್ವಾನುದಾತ್ತವೆಂದು ಹೇಳಿದೆಯಷ್ಟೆ ನಾಮವ ಅಥವಾ ಸರ್ವನಾಮಪದಕ್ಕೆ ಸರ್ವಾನುದಾತ್ತಸಂಜ್ಞೆ ಇರುವುದು ವಿರುದ್ಧವಲ್ಲವೇ ಎಂದರೆ ಈ ಸಮಂ ಎಂಬ ಶಬ್ದವು ಸುಬಂತಪದದಂತೆ ಏಳು ವಿಭಕ್ತಿಗಳಲ್ಲಿಯೂ ಪ್ರತ್ಯಯಗಳೊಡನೆ ನಾನಾರೂಪಗಳನ್ನು ಹೊಂದಿ ಪ್ರಯೋಗಿಸಲ್ಪಡುವುದು ಪ್ರಕೃತ ಋಕ್ಕಿನಲ್ಲಿ ಸಮಸ್ಯ ಎಂದು ಷಷ್ಠೀ ಏಕವಚನದ ಪ್ರಯೋಗವಿದೆ ಅದರಂತೆ **ಉತೋ ಸಮಸ್ಮಿನ್ನಾಶಿಶೀಹಿ ನೋ ವಸೋ ವಾಜೇ ಸುಶಿಪ್ರ ಗೋಮತಿ** (ಋ. ಸಂ. ೮-೧-೮) ಎಂಬ ಋಕ್ಕಿನಲ್ಲಿ ಸಮಸ್ಮಿನ್ ಎಂಬ ಸಪ್ತಮ್ಯೇಕವಚನದ ಪ್ರಯೋಗವಿದೆ ಎಂದು ನಿರ್ವಚನದ ಮುಖ್ಯಾಭಿಪ್ರಾಯವು

॥ ಸಂಹಿತಾಪಾಠಃ ॥

ನಮಸ್ತೇ ಅಗ್ನ ಓಜಸೇ ಗೃಣಂತಿ ದೇವ ಕೃಷ್ಟಯಃ ।
ಅಮೈರಮಿತ್ರಮರ್ದಯ ॥ ೧೦ ॥

॥ ಪದಪಾಠಃ ॥

ನಮಃ । ತೇ । ಅಗ್ನೇ । ಓಜಸೇ । ಗೃಣಂತಿ । ದೇವ । ಕೃಷ್ಟಯಃ ।
ಅಮೈಃ । ಅಮಿತ್ರಂ । ಅರ್ದಯ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ದೇವ ತುಭ್ಯಂ ನಮೋ ಗೃಣಂತಿ । ನಮಸ್ಕಾರಶಬ್ದಮುಚ್ಚಾರಯಂತಿ । ಕಿಮರ್ಥಂ । ಓಜಸೇ ಬಲಾಯ । ಕೇ । ಕೃಷ್ಟಯೋ ಮನುಷ್ಯಾ ಯಜಮಾನಾಃ । ಅತೋಽಹಮಪಿ ಗೃಣಾಮೀತ್ಯರ್ಥಃ । ತಥಾಮೈರ್ಬಲೈರಮಿತ್ರಂ ಶತ್ರುಮರ್ದಯ । ನಾಶಯ ॥

॥ ಪ್ರತಿಪದಾರ್ಥ ॥

ದೇವ—ದೇವತಾತ್ಮನಾದ । ಅಗ್ನೇ—ಎಲೈ ಅಗ್ನಿಯೇ । ತೇ—ನಿನ್ನನ್ನುದ್ದೇಶಿಸಿ । ಕೃಷ್ಟಯಃ—ಮಾನವರು । ಓಜಸೇ—ಶಕ್ತಿಸಂಪಾದನೆಗಾಗಿ । ನಮಃ—ನಮಸ್ಕಾರಪೂರ್ವಕವಾದ ಸ್ತುತಿಯನ್ನು । ಗೃಣಂತಿ—ಪಠಿಸುತ್ತಾರೆ । ಅಮೈಃ—ನಿನ್ನ ಬಲಗಳಿಂದ । ಅಮಿತ್ರಂ—ಶತ್ರುವನ್ನು । ಅರ್ದಯ—ನಾಶಪಡಿಸು.

॥ ಭಾವಾರ್ಥ ॥

ದೇವತಾತ್ಮನಾದ ಎಲೈ ಅಗ್ನಿಯೇ, ಮಾನವರೆಲ್ಲರೂ ನಿನ್ನನ್ನುದ್ದೇಶಿಸಿ ಶಕ್ತಿಸಂಪಾದನೆಗಾಗಿ ನಮಸ್ಕಾರಪೂರ್ವಕವಾದ ಸ್ತುತಿಯನ್ನು ಪಠಿಸುತ್ತಾರೆ. (ಅದರಂತೆ ನಾನೂ ಸ್ತುತಿಸುತ್ತೇನೆ) ನಿನ್ನ ಬಲಗಳಿಂದ ಶತ್ರುಗಳನ್ನು ನಾಶಪಡಿಸು

English Translation

Divine Agni, men utter your praises for the attainment of strength; by strength destroy the enemy.

॥ ಸಂಹಿತಾಪಾಠಃ ॥

ಕುವಿತ್ಸು ನೋ ಗವಿಷ್ಟಯೇಽಗ್ನೇ ಸಂವೇಷಿಷೋ ರಯಿಂ ।
ಉರುಕೃದುರು ಣಸ್ಕೃಧಿ ॥ ೧೧ ॥

॥ ಪದಪಾಠಃ ॥

ಕುವಿತ್ । ಸು । ನಃ । ಗೋಽಇಷ್ಟಯೇ । ಅಗ್ನೇ । ಸಂಽವೇಷಿಷಃ । ರಯಿಂ ।

ಉರುಽಕೃತ್ । ಉರು । ನಃ । ಕೃಧಿ ॥ ೧೧ ॥

॥ ಸಾಯಣಭಾಷ್ಯಂ ॥

ಗ್ರಾಮ್ಯೇಣಾಗ್ನಿನಾ ವೈತಾನಿಕಸ್ಯ ಸಂಸರ್ಗೇಽಗ್ನಯೇ ಸಂವರ್ಗಾಯೇಷ್ಟಿಃ ಕಾರ್ಯಾ । ತತ್ರ ಕುವಿತ್ಸು ನ ಇತ್ಯನುವಾಕ್ಯಾ ಮಾ ನೋ ಅಸ್ಮಿನ್ನಿತಿ ಯಾಜ್ಯಾ । ಸೂತ್ರಿತಂ ಚ । ಕುವಿತ್ಸು ನೋ ಗವಿಷ್ಟಯೇ ಮಾ ನೋ ಅಸ್ಮಿನ್ಮಹಾಧನೇ । ಆ. ೩-೧೩ । ಇತಿ ॥

ಹೇ ಅಗ್ನೇ ತ್ವಂ ನೋಽಸ್ಮಾಕಂ ಗವಿಷ್ಟಯೇ ಗವಾಮೇಷಣಾಯ ಕುವಿದ್ಬಹು ರಯಿಂ ಧನಂ ಸಂವೇಷಿಷಃ । ಸಂಪ್ರಾಪಯ । ಉರುಕೃತ್ತ್ವಂ ನೋಽಸ್ಮಾನುರು ಕೃಧಿ । ಕುರು ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ನಃ**—ನಮಗೆ । **ಗವಿಷ್ಟಯೇ**—ಗೋವುಗಳನ್ನು । **ಕುವಿತ್**—ಅತ್ಯಧಿಕವಾದ । **ರಯಿಂ**—ಧನವನ್ನು । **ಸು ಸಂವೇಷಿಷಃ**—ಒದಗಿಸಿಕೊಡು । **ಉರುಕೃತ್**—ವೃದ್ಧಿಕಾರಕನಾದ ನೀನು । **ನಃ**—ನಮ್ಮನ್ನು । **ಉರು**—ಪ್ರವೃದ್ಧರನ್ನಾಗಿ । **ಕೃಧಿ**—ಮಾಡು.

॥ ಭಾವಾರ್ಥ ॥

ಎಲೈ ಅಗ್ನಿಯೇ, ನಮಗೆ ಗೋವುಗಳನ್ನು ಹೊಂದಲು ಅತ್ಯಧಿಕವಾದ ಧನವನ್ನು ಒದಗಿಸಿಕೊಡು. ವೃದ್ಧಿಕಾರಕನಾದ ನೀನು ನಮ್ಮನ್ನು ಪ್ರವೃದ್ಧರನಾಗಿ ಮಾಡು.

English Translation

Agni, send us abundance of wealth to satisfy our desires, giver of free space, grant us abundant room.

॥ ವಿಶೇಷವಿಷಯಗಳು ॥

ಸಂವರ್ಗಾಯೇಷ್ಟಿಯಲ್ಲಿ **ಕುವಿತ್ಸು ನಃ** ಎಂಬ ಈ ಋಕ್ಕನ್ನು ಅನುವಾಕ್ಯಾ ಮಂತ್ರವನ್ನಾಗಿಯೂ, ಇದರ ಮುಂದಿನ ಋಕ್ಕಾದ **ಮಾ ನೋ ಅಸ್ಮಿನ್** ಎಂಬ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿಯೂ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಕುವಿತ್ಸು ನೋ ಗವಿಷ್ಟಯೇ ಮಾ ನೋ ಅಸ್ಮಿನ್ಮಹಾಧನೇ** ಎಂಬ ಸೂತ್ರದಿಂದ (ಆ. ೩-೧೩) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಮಾ ನೋ ಅಸ್ಮಿನ್ಮಹಾಧನೇ ಪರಾ ವರ್ಗ್ಭಾರಭೃದ್ಯಥಾ ।
ಸಂವರ್ಗಂ ಸಂ ರಯಿಂ ಜಯ ॥ ೧೨ ॥

॥ ಪದಪಾಠಃ ॥

ಮಾ । ನಃ । ಅಸ್ಮಿನ್ । ಮಹಾಽಧನೇ । ಪರಾ । ವರ್ಕ್ । ಭಾರಽಭೃತ್ । ಯಥಾ ।
ಸಂಽವರ್ಗಂ । ಸಂ । ರಯಿಂ । ಜಯ ॥ ೧೨ ॥

॥ ಸಾಯಣಭಾಷ್ಯಂ ॥

**ನೋಽಸ್ಮಾನಸ್ಮಿನ್ಮಹಾಧನೇ ಸಂಗ್ರಾಮೇ ಮಾ ಪರಾ ವರ್ಕ್ । ಮಾ ಪರಿತ್ಯಾಕ್ಷೀಃ । ಭಾರಭೃದ್ಯಥಾ । ಭಾರವಾಹೀ ಯಥಾ ಭಾರಮಂತೇ ಪರಿತ್ಯಜತಿ ತದ್ವತ್ । ಸಂವರ್ಗಂ ಶತ್ರುಭ್ಯಃ ಸಹಾಚ್ಛಿದ್ಯಮಾನಂ ರಯಿಂ ಧನಂ ಸಂ ಜಯಾಸ್ಮದರ್ಥಂ ।**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಭಾರಭೃತ್**—ಭಾರವನ್ನು ಹೊತ್ತುಕೊಂಡಿರುವವನು । **ಯಥಾ**—ಯಾವ ರೀತಿ ತನ್ನ ಭಾರವನ್ನು ತ್ಯಜಿಸುವನೋ ಹಾಗೆ । **ನಃ**—ನಮ್ಮನ್ನು । **ಮಹಾಧನೇ**—ಪ್ರಭೂತವಾದ ಧನಕ್ಕಾಗಿ ನಡೆಯುವ **ಅಸ್ಮಿನ್**—ಈ ಸಂಗ್ರಾಮದಲ್ಲಿ । **ಮಾ ಪರಾ ವರ್ಕ್**—ತ್ಯಾಗಮಾಡಬೇಡ । **ಸಂವರ್ಗಂ**—ಶತ್ರುಗಳಿಂದ ಶೇಖರಿಸಲ್ಪಟ್ಟ । **ರಯಿಂ**—ಧನವನ್ನು । **ಸಂ ಜಯ**—ನಮಗೆ ಜಯಿಸಿಕೊಡು

॥ ಭಾವಾರ್ಥ ॥

ಎಲೈ ಅಗ್ನಿಯೇ, ಭಾರವನ್ನು ಹೊತ್ತುಕೊಂಡಿರುವವನು ಯಾವ ರೀತಿ ತನ್ನ ಭಾರವನ್ನು ತ್ಯಜಿಸುವನೋ ಹಾಗೆ ನಮ್ಮನ್ನು ಪ್ರಭೂತವಾದ ಧನಕ್ಕಾಗಿ ನಡೆಯುವ ಈ ಸಂಗ್ರಾಮದಲ್ಲಿ ತ್ಯಜಿಸಬೇಡ. ಶತ್ರುಗಳಿಂದ ಶೇಖರಿಸಲ್ಪಟ್ಟ ಧನವನ್ನು ನಮಗೆ ಜಯಿಸಿಕೊಡು.

English Translation

Leave us not in this conflict as a bearer his burden ; win for us the plundered wealth of our foes.

॥ ಸಂಹಿತಾಪಾಠಃ ॥

ಅನ್ಯಮಸ್ಮದ್ಭಿಯಾ ಇಯಮಗ್ನೇ ಸಿಷಕ್ತು ದುಚ್ಛುನಾ ।
ವರ್ಧಾ ನೋ ಅಮವಚ್ಛವಃ ॥ ೧೩ ॥

॥ ಪದಪಾಠಃ ॥

ಅನ್ಯಂ । ಅಸ್ಮತ್ । ಭಿಯೈ । ಇಯಂ । ಅಗ್ನೇ । ಸಿಸಕ್ತು । ದುಚ್ಛುನಾ ।

ವರ್ಧ । ನಃ । ಅಮಃऽವತ್ । ಶವಃ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ತ್ವದೀಯೇಯಂ ದುಚ್ಛುನಾ ಬಾಧಕಸಂಹತಿರಸ್ಮದನ್ಯಮುಸ್ತೋತಾರಂ ಭಿಯೈ ಭಯಾಯ ಸಿಷಕ್ತು । ಸೇವತಾಂ । ತ್ವಂ ಚ ನೋಽಸ್ಮಾಕಮಮವದ್ಬಲೋಪೇತಂ ಶವೋ ವೇಗಂ ವರ್ಧ । ವರ್ಧಯ ಸಂಗ್ರಾಮೇ ॥

॥ ಪ್ರತಿಪದಾರ್ಥ ॥

ಅಗ್ನೇ—ಎಲೈ ಅಗ್ನಿಯೇ । ದುಚ್ಛುನಾ—ಕೇಡನ್ನುಂಟುಮಾಡುವ । ಇಯಂ—ಈ ಶಕ್ತಿಯು । ಅಸ್ಮತ್—ನಮಗಿಂತಲೂ । ಅನ್ಯಂ—ಬೇರೆಯಾದ ಶತ್ರುವಿನ । ಭಿಯೈ- ಭಯಕಾರಕವಾಗಿ । ಸಿಷಕ್ತು—ಪ್ರಯೋಗಿಸಲ್ಪಡಲಿ । ನಃ—ನಮ್ಮ । ಅಮವತ್—ಶಕ್ತಿಯುತವಾದ । ಶವಃ—ವೇಗವನ್ನು । ವರ್ಧ—ಬೆಳೆಸು.

॥ ಭಾವಾರ್ಥ ॥

ಎಲೈ ಅಗ್ನಿಯೇ, ಕೇಡನ್ನುಂಟುಮಾಡುವ ಈ ಶಕ್ತಿಯು ನಮಗಿಂತಲೂ ಬೇರೆಯಾದ ಶತ್ರುವಿಗೆ ಭಯವನ್ನುಂಟುಮಾಡುವುದಾಗಿ ಪ್ರಯೋಗಿಸಲ್ಪಡಲಿ. ನಮ್ಮ ಶಕ್ತಿಯುತವಾದ ವೇಗವನ್ನು ಬೆಳೆಸು.

## English Translation

Agni, may your plagues pursue some other to terrify him ; increase our vigorous strength is battle.

॥ ಸಂಹಿತಾಪಾಠಃ ॥

ಯಸ್ಯಾಜುಷನ್ನಮಸ್ವಿನಃ ಶಮೀಮದುರ್ಮಖಸ್ಯ ವಾ ।

ತಂ ಘೇದಗ್ನಿರ್ವೃಧಾವತಿ ॥ ೧೪ ॥

॥ ಪದಪಾಠಃ ॥

ಯಸ್ಯ । ಅಜುಷತ್ । ನಮಸ್ವಿನಃ । ಶಮೀಂ । ಅದುಃऽಮಖಸ್ಯ । ವಾ ।

ತಂ । ಘ । ಇತ್ । ಅಗ್ನಿಃ । ವೃಧಾ । ಅವತಿ ॥ ೧೪ ॥

॥ ಸಾಯಣಭಾಷ್ಯಂ ॥

ಯಸ್ಯ ನಮಸ್ವಿನೋ ನಮಸ್ಕಾರವತೋಽದುರ್ಮಖಸ್ಯ ವಾದುಷ್ಟಯಾಗಸ್ಯ ವಾ ಶಮೀಂ ಕರ್ಮಾಜುಷತ್ ಅಸೇವತ ತಂ ಘೋತ್ರಮೇವ ಯಜಮಾನಂ ಸಂಗ್ರಾಮೇಽಗ್ನಿರ್ವೃಧಾವತಿ ವಿಶೇಷೇಣ ಗಚ್ಛತಿ । ಅತೋ ನಮೋಯುಕ್ತಾ ಅದುರ್ಮಖಾಶ್ಚ ಭವೇಮೇತಿ ॥

॥ ಪ್ರತಿಪದಾರ್ಥ ॥

**ನಮಸ್ವಿನಃ**—ನಮಸ್ಕಾರಯುತನಾದ । **ವಾ**—ಅಥವಾ । **ಅದುರ್ಮಖಸ್ಯ**—ಪಾಪರಹಿತವಾದ ಯಾಗವನ್ನು ಮಾಡುವ । **ಯಸ್ಯ**—ಯಾವ ಯಜಮಾನನ । **ಶಮೀಂ**—ಕರ್ಮವನ್ನು । **ಅಜುಷತ್**—ಅಗ್ನಿಯು ಸೇವಿಸುವನೋ । **ತಂ ಘೋತ್ರ್**—ಅಂತಹ ಯಜಮಾನನನ್ನೇ । **ಅಗ್ನಿಃ**—ಅಗ್ನಿಯು । **ವೃಧಾ**— ಅತ್ಯಧಿಕವಾಗಿ । **ಅವತಿ**—ರಕ್ಷಿಸುತ್ತಾನೆ

॥ ಭಾವಾರ್ಥ ॥

ನಮಸ್ಕಾರಯುತನಾದ ಅಥವಾ ಪಾಪರಹಿತವಾದ ಯಾಗವನ್ನು ಮಾಡುವ ಯಾವ ಯಜಮಾನನ ಕರ್ಮವನ್ನು ಅಗ್ನಿಯು ಸೇವಿಸುವನೋ ಅಂತಹ ಯಜಮಾನನನ್ನೇ ಅಗ್ನಿಯು ಅತ್ಯಧಿಕವಾಗಿ ರಕ್ಷಿಸುತ್ತಾನೆ

English Translation

Agni especially protects (in battle) that praiser or zealous sacrificer whose offerings he has attended

॥ ಸಂಹಿತಾಪಾಠಃ ॥

ಪರಸ್ಯಾ ಅಧಿ ಸಂವತೋಽವರಾಁ ಅಭ್ಯಾ ತರ ।
ಯತ್ರಾಹಮಸ್ಮಿ ತಾಁ ಅವ ॥ ೧೫ ॥

॥ ಪದಪಾಠಃ ॥

ಪರಸ್ಯಾಃ । ಅಧಿ । ಸಂಽವತಃ । ಅವರಾನ್ । ಅಭಿ । ಆ । ತರ ।
ಯತ್ರ । ಅಹಂ । ಅಸ್ಮಿ । ತಾನ್ । ಅವ ॥ ೧೫ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಪರಸ್ಯಾ ಅನ್ಯಾಯಾಃ ಸಂವತಃ ಸೇನಾಯಾ ಅವರಾನಸ್ಮಾನಸ್ಮದೀಯಾನಭ್ಯಭಿಮುಖಮಾ ಸರ್ವತಸ್ತರ । ತಾರಯ । ವೈರಿಸೇನಾ ಅಸ್ಮದ್ಭಟೈಃ ಪರಾಭಾವಯೇತ್ಯರ್ಥಃ । ಯತ್ರ ಯೋಽಸ್ಮದೀಯಪರಿಜನಮಧ್ಯೇಽಹಮಸ್ಮಿ ಸ್ವಾಮಿಮಾ ತಾನವ । ರಕ್ಷ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯತ್ರ**—ಯಾವ ಸೇನೆಗೆ । **ಅಹಂ**—ನಾನು । **ಅಸ್ಮಿ**—ಪ್ರಭುವಾಗಿದ್ದೇನೆಯೋ ಅಂತಹ । **ಅವರಾನ್**—ನನ್ನನ್ನು ಆಶ್ರಯಿಸಿರುವ ಸೇನಾಜನರನ್ನು । **ಪರಸ್ಯಾಃ ಅಧಿ**—ಶತ್ರುವಿಗೆ ಸೇರಿದ । **ಸಂವತಃ**—ಸೇನೆಯಿಂದ । **ಅಭಿ ಆ ತರ**—ಸುತ್ತಲೂ ಸಂರಕ್ಷಿಸು । **ತಾನ್**—ಅವರನ್ನು । **ಅವ**—ಕಾಪಾಡು

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಸೇನೆಗೆ ನಾನು ಪ್ರಭುವಾಗಿದ್ದೇನೆಯೋ ಅಂತಹ ನನ್ನ ಆಶ್ರಿತರಾದ ಸೇನಾಜನರನ್ನು ಶತ್ರುವಿಗೆ ಸೇರಿದ ಸೇನೆಯಿಂದ ಸುತ್ತಲೂ ಸಂರಕ್ಷಿಸು. ಅವರನ್ನು ಕಾಪಾಡು.

English Translation

Deliver us wholly from the hostile army, shield those among whom I am (lord).

॥ ಸಂಹಿತಾಪಾಠಃ ॥

ವಿದ್ಮಾ ಹಿ ತೇ ಪುರಾ ವಯಮಗ್ನೇ ಪಿತುರ್ಯಥಾವಸಃ ।

ಅಧಾ ತೇ ಸುಮ್ನಮೀಮಹೇ ॥ ೧೬ ॥

॥ ಪದಪಾಠಃ ॥

ವಿದ್ಮ । ಹಿ । ತೇ । ಪುರಾ । ವಯಂ । ಅಗ್ನೇ । ಪಿತುಃ । ಯಥಾ । ಅವಸಃ ।

ಅಧ । ತೇ । ಸುಮ್ನಂ । ಈಮಹೇ ॥ ೧೬ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಪಿತುಃ ಪಾಲಕಸ್ಯ ತೇ ತವಾವಸೋಽವೋ ರಕ್ಷಣಂ ಪುರಾ ಯಥಾ ತಥೇದಾನೀಮಪೀತಿ ವಿದ್ಮ । ಅಧ ತತ್ತೇ ತವ ಸುಮ್ನಂ ಸುಖಮೀಮಹೇ । ಯಾಚಾಮಹೇ । ಅಥವಾ ಪಿತುರ್ಯಥೇತಿ ದೃಷ್ಟಾಂತಃ । ಪಿತುಃ ಪಾಲನಂ ಪುತ್ರೋ ಯಥಾ ವೇತ್ತಿ ತಥೇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಪಿತುಃ**—ಪಾಲಕನಾದ । **ತೇ**—ನಿನ್ನ । **ಅವಸಃ**—ರಕ್ಷಣೆಯನ್ನು । **ವಯಂ**—ನಾವು । **ಪುರಾ ಯಥಾ**—ಹಿಂದೆಲ್ಲಾ ತಿಳಿದಂತೆಯೇ । **ವಿದ್ಮ ಹಿ**—ಈಗಲೂ ಅರಿತಿದ್ದೇವೆ । **ಅಧ**—ಆದುದರಿಂದ । **ತೇ**—ನಿನ್ನಿಂದ । **ಸುಮ್ನಂ**—ಸುಖವನ್ನು । **ಈಮಹೇ**—ಯಾಚಿಸುತ್ತೇವೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಪಾಲಕನಾದ ನಿನ್ನ ರಕ್ಷಣೆಯನ್ನು ನಾವು ಹಿಂದೆಲ್ಲಾ ಅರಿತಂತೆಯೇ ಈಗಲೂ ಅರಿತಿದ್ದೇವೆ. ಆದುದರಿಂದ ನಿನ್ನಿಂದ ಸುಖವನ್ನು ಯಾಚಿಸುತ್ತೇವೆ

English Translation

We know your protection, Agni, as of a father in former times, therefore we (again) desire of you that happiness.

## ಎಪ್ಪತ್ತಾರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಇಮಂ ನು ಮಾಯಿನಮಿತಿ ದ್ವಾದಶರ್ಚಂ ಸಪ್ತಮಂ ಸೂಕ್ತಂ ಕುರುಸುತಿರ್ನಾಮ ಕಾಣ್ವ ಋಷಿಃ । ಗಾಯತ್ರೀ ಛಂದಃ । ಇಂದ್ರೋ ದೇವತಾ । ತಥಾ ಚಾನುಕ್ರಾಂತಂ । ಇಮಂ ನು ದ್ವಾದಶ ಕುರುಸುತಿಃ ಕಾಣ್ವ ಇತಿ ॥ ವ್ಯೂಳ್ಹೇ ದಶರಾತ್ರೇ ಚತುರ್ಥೇಽಹನಿ ಮರುತ್ವತೀಯ ಆದ್ಯಸ್ತೃಚಃ । ಸೂತ್ರಿತಂ ಚ । ಇಮಂ ನು ಮಾಯಿನಂ ಹುವೇ ತ್ಯಮು ವಃ ಸತ್ರಾಸಾಹಂ । ಆ. ೮-೮. ಇತಿ ॥**

ಅನುವಾದವು—ಇಮಂ **ನು ಮಾಯಿನಂ** ಎಂಬ ಈ ಸೂಕ್ತವು ಎಂಟನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಕಣ್ವಗೋತ್ರೋದ್ಭವನಾದ ಕುರುಸುತಿಃ ಎಂಬುವನು ಋಷಿಯು, ಇಂದ್ರನು ದೇವತೆಯು; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಇಮಂ ನು ದ್ವಾದಶ ಕುರುಸುತಿಃ ಕಾಣ್ವಃ** ಎಂದು ಹೇಳಿರುವುದು. ವ್ಯೂಳ್ಹವೆಂಬ ದಶರಾತ್ರಯಾಗದಲ್ಲಿ ನಾಲ್ಕನೆಯ ದಿವಸ ಮರುತ್ವತೀಯಶಸ್ತ್ರಮಂತ್ರಗಳಲ್ಲಿ **ಇಮಂ ನು ಮಾಯಿನಂ** ಎಂದು ಮೊದಲಾಗುವ ಈ ಸೂಕ್ತದ ಮೊದಲಿನ ಮೂರು ಋಕ್ಕುಗಳನ್ನು ಪ್ರಾರಂಭದ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ- **ಇಮಂ ನು ಮಾಯಿನಂ ಹುವೇ ತ್ಯಮು ವಃ ಸತ್ರಾಸಾಹಂ** ಎಂಬ ಸೂತ್ರದಿಂದ (ಆ. ೮-೮) ವಿವೃತವಾಗಿರುವುದು.

## ಸೂಕ್ತ—೭೬

ಮಂಡಲ—೮ ॥ ಅನುವಾಕ—೮ ॥ ಸೂಕ್ತ—೭೬ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೨೭. ೨೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—ಕುರುಸುತಿಃ ಕಾಣ್ವಃ ॥
ದೇವತಾ—ಇಂದ್ರಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಇಮಂ ನು ಮಾಯಿನಂ ಹುವ ಇಂದ್ರಮೀಶಾನಮೋಜಸಾ ।
ಮರುತ್ವಂತಂ ನ ವೃಂಜಸೇ ॥ ೧ ॥

॥ ಪದಪಾಠಃ ॥

ಇಮಂ । ನು । ಮಾಯಿನಂ । ಹುವೇ । ಇಂದ್ರಂ । ಈಶಾನಂ । ಓಜಸಾ ।
ಮರುತ್ವಂತಂ । ನ । ವೃಂಜಸೇ ॥ ೧ ॥

॥ ಸಾಯಣಭಾಷ್ಯಂ ॥

ಇಮಂ ಮಾಯಿನಂ ಪ್ರಜಾವಂತಮೋಜಸಾ ಸ್ವಬಲೇನೇಶಾನಂ ಸರ್ವಸ್ಯ ಸ್ವಾಮಿನಂ ಮರುತ್ವಂತಂ ನ । ನೇತಿ ಸಂಪ್ರತ್ಯರ್ಥೇ । ಮರುದ್ಭಿಸ್ತದ್ವಂತಮಿದಾನೀಮಿಂದ್ರಂ ವೃಂಜಸೇ ಶತ್ರೂಣಾಂ ಛೇದನಾಯ ಹುವೇ । ಆಹ್ವಯಾಮಿ ॥

॥ ಪ್ರತಿಪದಾರ್ಥ ॥

ಮಾಯಿನಂ—ಪ್ರಜ್ಞಾವಂತನೂ । ಓಜಸಾ ನು—ಸ್ವಶಕ್ತಿಯಿಂದಲೇ । ಈಶಾನಂ—ಪ್ರಭುವಾಗಿರುವವನೂ । ಮರುತ್ವಂತಂ—ಮರುತ್ತುಗಳಿಂದ ಕೂಡಿದವನೂ ಆದ । ಇಮಂ ಇಂದ್ರಂ—ಈ ಇಂದ್ರನನ್ನು । ನ—ಈಗ । ವೃಂಜಸೇ—ಶತ್ರುಗಳ ನಾಶಕ್ಕಾಗಿ । ಹುವೇ—ಪ್ರಾರ್ಥಿಸಿ ಕರೆಯುತ್ತೇನೆ

॥ ಭಾವಾರ್ಥ ॥

ಪ್ರಜ್ಞಾವಂತನೂ, ಸ್ವಶಕ್ತಿಯಿಂದಲೇ ಪ್ರಭುವಾಗಿರುವವನೂ ಮರುತ್ತುಗಳಿಂದ ಕೂಡಿದವನೂ ಆದ ಈ ಇಂದ್ರನನ್ನು ಈಗ ಶತ್ರುಗಳ ನಾಶಕ್ಕಾಗಿ ಪ್ರಾರ್ಥಿಸಿ ಕರೆಯುತ್ತೇನೆ

English Translation

I invoke now for the destruction of my enemies the wise Indra attended by the Maruts, ruling all by his power

॥ ಸಂಹಿತಾಪಾಠಃ ॥

ಅಯಮಿಂದ್ರೋ ಮರುತ್ಸಖಾ ವಿ ವೃತ್ರಸ್ಯಾಭಿನಚ್ಛಿರಃ ।
ವಜ್ರೇಣ ಶತಪರ್ವಣಾ ॥ ೨ ॥

॥ ಪದಪಾಠಃ ॥

ಅಯಂ । ಇಂದ್ರಃ । ಮರುತ್ಽಸಖಾ । ವಿ । ವೃತ್ರಸ್ಯ । ಅಭಿನತ್ । ಶಿರಃ ।

ವಜ್ರೇಣ । ಶತಽಪರ್ವಣಾ ॥ ೨ ॥

॥ ಸಾಯಣಭಾಷ್ಯಂ ॥

**ಅಯಮಿಂದ್ರೋ ಮರುತ್ಸಖಾ ಮರುದ್ಯುಕ್ತೋ ವೃತ್ರಸ್ಯ ವ್ಯಭಿನತ್ ವ್ಯಚ್ಛಿನಚ್ಛಿರೋ ವಜ್ರೇಣ ಶತಪರ್ವಣಾ ಶತಸಂಧಿನಾ ॥**

॥ ಪ್ರತಿಪದಾರ್ಥ ॥

**ಮರುತ್ಸಖಾ**—ಮರುತ್ತುಗಳಿಗೆ ಮಿತ್ರನಾದ । **ಅಯಂ ಇಂದ್ರಃ**—ಈ ಇಂದ್ರನು (ಮರುತ್ತುಗಳ ಸಹಾಯದಿಂದ) । **ಶತಪರ್ವಣಾ**—ಶತಸಂಖ್ಯಾಕವಾದ ಸಂಧಿಬಂಧವುಳ್ಳ (ಅಲುಗುಗಳ್ಳ) । **ವಜ್ರೇಣ**—ವಜ್ರಾಯುಧದಿಂದ । **ವೃತ್ರಸ್ಯ**—ವೃತ್ರಾಸುರನ । **ಶಿರಃ**—ಶಿರಸ್ಸನ್ನು । **ವ್ಯಭಿನತ್**—ಸೀಳಿಹಾಕಿದ್ದಾನೆ.

॥ ಭಾವಾರ್ಥ ॥

ಮರುತ್ತುಗಳಿಗೆ ಮಿತ್ರನಾದ ಈ ಇಂದ್ರನು ಮರುತ್ತುಗಳ ಸಹಾಯದಿಂದ ಶತಸಂಖ್ಯಾಕವಾದ ಸಂಧಿಬಂಧವುಳ್ಳ (ಅಲುಗುಗಳುಳ್ಳ) ವಜ್ರಾಯುಧದಿಂದ ವೃತ್ರಾಸುರನ ಶಿರಸ್ಸನ್ನು ಸೀಳಿಹಾಕಿದ್ದಾನೆ.

English Translation

Indra, attended by the Maruts, has cleft the head of Vritra with his hundred-jointed thunderbolt.

॥ ಸಂಹಿತಾಪಾಠಃ ॥

ವಾವೃಧಾನೋ ಮರುತ್ಸಖೇಂದ್ರೋ ವಿ ವೃತ್ರಮೈರಯತ್ ।

ಸೃಜನ್ತ್ಸಮುದ್ರಿಯಾ ಅಪಃ ॥ ೩ ॥

॥ ಪದಪಾಠಃ ॥

ವವೃಧಾನಃ । ಮರುತ್ಽಸಖಾ । ಇಂದ್ರಃ । ವಿ । ವೃತ್ರಂ । ಐರಯತ್ ।

ಸೃಜನ್ । ಸಮುದ್ರಿಯಾಃ । ಅಪಃ ॥ ೩ ॥

॥ ಸಾಯಣಭಾಷ್ಯಂ ॥

ಅಯಮಿಂದ್ರೋ ವಾವೃಧಾನೋ ವರ್ಧಮಾನೋ ಮರುತ್ಸಖಾ ಮರುತ್ಸಹಾಯೋ ವೃತ್ರಂ ಮೇಘಂ ವ್ಯೈರಯತ್ । ವಿದಾರಿತವಾನ್ । ಕಿಂ ಕುರ್ವನ್ । ಸಮುದ್ರಿಯಾಃ । ಸಮುದ್ರಮಂತರಿಕ್ಷಂ । ತತ್ಸಂಬಂಧಿನ್ಯ ಅಪ ಅಪಸ್ಸೃಜನ್ ॥

॥ ಪ್ರತಿಪದಾರ್ಥ ॥

**ಮರುತ್ಸಖಾ**—ಮರುತ್ತುಗಳ ಸಹಾಯವನ್ನು ಹೊಂದಿರುವವನೂ । **ವಾವೃಧಾನಃ**—ವೃದ್ಧಿಯನ್ನು ಹೊಂದಿರುವವನೂ ಆದ । **ಇಂದ್ರಃ**—ಇಂದ್ರನು । **ಸಮುದ್ರಿಯಾಃ**—ಅಂತರಿಕ್ಷಸಂಬಂಧಿಯಾದ । **ಅಪಃ**—ಉದಕವನ್ನು । **ಸೃಜನ್**—ಬಿಡುಗಡೆಮಾಡುತ್ತಾ । **ವೃತ್ರಂ**—ಮೇಘವನ್ನು । **ವ್ಯೈರಯತ್**—ಸೀಳಿಹಾಕಿದ್ದಾನೆ.

॥ ಭಾವಾರ್ಥ ॥

ಮರುತ್ತುಗಳ ಸಹಾಯವನ್ನು ಹೊಂದಿರುವವನೂ, ವೃದ್ಧಿಯನ್ನು ಹೊಂದತಕ್ಕವನೂ ಆದ ಇಂದ್ರನು ಅಂತರಿಕ್ಷಸಂಬಂಧಿಯಾದ ಉದಕವನ್ನು ಬಿಡುಗಡೆಮಾಡುತ್ತಾ ಮೇಘವನ್ನು ಸೀಳಿದ್ದಾನೆ

## English Translation

Indra, increasing in might, attended by the Maruts, has torn Vritra asunder, letting loose the waters of the firmament

॥ ಸಂಹಿತಾಪಾಠಃ ॥

ಅಯಂ ಹ ಯೇನ ವಾ ಇದಂ ಸ್ವರ್ಮರುತ್ವತಾ ಜಿತಂ ।
ಇಂದ್ರೇಣ ಸೋಮಪೀತಯೇ ॥ ೪ ॥

॥ ಪದಪಾಠಃ ॥

ಅಯಂ । ಹ । ಯೇನ । ವೈ । ಇದಂ । ಸ್ವಃ । ಮರುತ್ವತಾ । ಜಿತಂ ।
ಇಂದ್ರೇಣ । ಸೋಮऽಪೀತಯೇ ॥ ೪ ॥

॥ ಸಾಯಣಭಾಷ್ಯಂ ॥

ಷಷ್ಠೇऽಹನಿ ಮರುತ್ವತೀಯೇऽಯಂ ಹ ಯೇನೇತಿ ಮರುತ್ವನ್ನಿವಿದ್ಧಾನೀಯಃ । ಸೂತ್ರಿತಂ ಚ । ಅಯಂ ಹ ಯೇನ ವಾ ಇದಮುಪ ನೋ ಹರಿಭಿಃ ಸುತಂ । ಆ. ೮-೮ ಇತಿ ॥

ಅಯಂ ಹ ಖಲ್ವಿಂದ್ರೋ ಯೇನ ವೈ ಯೇನ ಖಲು ಮರುತ್ವತಾ ಮರುದ್ಭಿರ್ಯುಕ್ತೇನೇಂದ್ರೇಣೇದಂ ಸ್ವಃ ಸ್ವರ್ಗಾಖ್ಯಂ ಸ್ಥಾನಮಿದಂ ಸ್ವಃ ಸರ್ವಂ ಕರ್ಮ ವಾ ಯದ್ವೇದಂ ಸರ್ವಂ ಜಗಜ್ಜಿತಂ । ಕಿಮರ್ಥಂ । ಸೋಮಪೀತಯೇ ಸೋಮಪಾನಾಯ ॥

॥ ಪ್ರತಿಪದಾರ್ಥ ॥

ಮರುತ್ವತಾ—ಮರುತ್ತುಗಳಿಂದ ಕೂಡಿದ । ಯೇನ—ಯಾವ । ಇಂದ್ರೇಣ ವೈ—ಇಂದ್ರನಿಂದಲೇ । ಸೋಮಪೀತಯೇ—ಸೋಮಪಾನಾರ್ಥವಾಗಿ । ಇದಂ ಸ್ವಃ—ಈ ಸ್ವರ್ಗವು । ಜಿತಂ—ಜಯಿಸಲ್ಪಟ್ಟಿತೋ । ಅಯಂ ಹ—ಆ ಇಂದ್ರನೇ ಇವನು.

॥ ಭಾವಾರ್ಥ ॥

ಮರುತ್ತುಗಳಿಂದ ಕೂಡಿದ ಯಾವ ಇಂದ್ರನಿಂದಲೇ ಸೋಮಪಾನಾರ್ಥವಾಗಿ ಈ ಸ್ವರ್ಗವು ಜಯಿಸಲ್ಪಟ್ಟಿತೋ ಆ ಇಂದ್ರನೇ ಇವನು

English Translation

This is that Indra, by whom assisted by the Maruts, yonder heaven was conquered, to quaff the Soma.

॥ ಸಂಹಿತಾಪಾಠಃ ॥

ಮರುತ್ವಂತಮೃಜೀಷಿಣಮೋಜಸ್ವಂತಂ ವಿರಪ್ಶಿನಂ ।
ಇಂದ್ರಂ ಗೀರ್ಭಿರ್ಹವಾಮಹೇ ॥ ೫ ॥

॥ ಪದಪಾಠಃ ॥

ಮರುತ್ವಂತಂ । ಋಜೀಷಿಣಂ । ಓಜಸ್ವಂತಂ । ವಿऽರಪ್ಶಿನಂ ।
ಇಂದ್ರಂ । ಗೀಃऽಭಿಃ । ಹವಾಮಹೇ ॥ ೫ ॥

॥ ಸಾಯಣಭಾಷ್ಯಂ ॥

ಮರುತ್ವಂತಂ ಮರುದ್ಭಿಸ್ತದ್ವಂತಮೃಜೀಷಿಣಂ । ಅಭಿಷುತಶೇಷ ಋಜೀಷಃ । ಸ ಚ ತೃತೀಯಸವನೇ ಪುನಃ ಸೂಯತೇ । ತದ್ವಂತಮೋಜಸ್ವಂತಂ । ಓಜೋ ನಾಮಾಷ್ಟಮೀ ದಶಾ । ಶರೀರವೃದ್ಧ್ಯುಪೇತಮಿತ್ಯರ್ಥಃ । ವಿರಪ್ಶಿನಂ । ಮಹನ್ನಾಮೈತತ್ । ಮಹಾಂತಂ ಏವಂಮಹಾನುಭಾವಮಿಂದ್ರಂ ಗೀರ್ಭಿಃ ಸ್ತುತಿಭಿರ್ಹವಾಮಹೇ । ಆಹ್ವಯಾಮಃ ॥

॥ ಪ್ರತಿಪದಾರ್ಥ ॥

**ಮರುತ್ವಂತಂ**—ಮರುತ್ತುಗಳೊಡಗೂಡಿದವನೂ । **ಋಜೀಷಿಣಂ**—ಋಜೀಷಸಂಜ್ಞಕವಾದ ಸೋಮವುಳ್ಳವನೂ । **ಓಜಸ್ವಂತಂ**—ಶಕ್ತಿಯುತನೂ । **ವಿರಪ್ಶಿನಂ**—ಮಹತ್ಸ್ವರೂಪವುಳ್ಳವನೂ ಆದ । **ಇಂದ್ರಂ**—ಇಂದ್ರನನ್ನು । **ಗೀರ್ಭಿಃ**—ಸ್ತುತಿಗಳಿಂದ । **ಹವಾಮಹೇ**—ಪ್ರಾರ್ಥಿಸಿ ಕರೆಯುತ್ತೇವೆ

॥ ಭಾವಾರ್ಥ ॥

ಮರುತ್ತುಗಳೊಡಗೂಡಿದವನೂ, ಋಜೀಷದಿಂದ ಲಬ್ಧವಾದ ಸೋಮವುಳ್ಳವನೂ, ಶಕ್ತಿಯುತನೂ, ಮಹತ್ಸ್ವರೂಪವುಳ್ಳವನೂ ಆದ ಇಂದ್ರನನ್ನು ಸ್ತುತಿಗಳಿಂದ ಪ್ರಾರ್ಥಿಸಿ ಕರೆಯುತ್ತೇವೆ.

English Translation

We invoke with our praises the mighty Indra, accompanied by the Maruts, the vigorous accepter of the residue of the oblation.

॥ ಸಂಹಿತಾಪಾಠಃ ॥

ಇಂದ್ರಂ ಪ್ರತ್ನೇನ ಮನ್ಮನಾ ಮರುತ್ವಂತಂ ಹವಾಮಹೇ ।
ಅಸ್ಯ ಸೋಮಸ್ಯ ಪೀತಯೇ ॥ ೬ ॥

॥ ಪದಪಾಠಃ ॥

ಇಂದ್ರಂ । ಪ್ರತ್ನೇನ । ಮನ್ಮನಾ । ಮರುತ್ವಂತಂ । ಹವಾಮಹೇ ।
ಅಸ್ಯ । ಸೋಮಸ್ಯ । ಪೀತಯೇ ॥ ೬ ॥

॥ ಸಾಯಣಭಾಷ್ಯಂ ॥

ಮರುತ್ವಂತಮಿಂದ್ರಂ ಪ್ರತ್ನೇನ ಪುರಾಣೇನ ಮನ್ಮನಾ ಮನನೀಯೇನ ಸ್ತೋತ್ರೇಣ ಹವಾಮಹೇಽಸ್ಯ ಸೋಮಸ್ಯ ಪೀತಯೇ ಪಾನಾಯ ।

॥ ಪ್ರತಿಪದಾರ್ಥ ॥

**ಮರುತ್ವಂತಂ**—ಮರುತ್ತುಗಳೊಡಗೂಡಿದವನಾದ । **ಇಂದ್ರಂ**—ಇಂದ್ರನನ್ನು । **ಪ್ರತ್ನೇನ**—ಪುರಾತನವಾದುದೂ । **ಮನ್ಮನಾ**—ಧ್ಯಾನಾತ್ಮಕವಾದುದೂ ಆದ ಸ್ತುತಿಯಿಂದ । **ಅಸ್ಯ ಸೋಮಸ್ಯ**—ಈ ಸೋಮದ । **ಪೀತಯೇ**—ಪಾನಾರ್ಥವಾಗಿ । **ಹವಾಮಹೇ**—ಕರೆಯುತ್ತೇವೆ.

॥ ಭಾವಾರ್ಥ ॥

ಮರುತ್ತುಗಳೊಡಗೂಡಿದ ಇಂದ್ರನನ್ನು ಪುರಾತನವಾದುದೂ, ಧ್ಯಾನಾತ್ಮಕವಾದುದೂ ಆದ ಸ್ತುತಿಯಿಂದ ಈ ಸೋಮದ ಪಾನಾರ್ಥವಾಗಿ ಕರೆಯುತ್ತೇವೆ.

## English Translation

With an ancient hymn we invoke Indra with the Maruts, to drink this Soma.

॥ ಸಂಹಿತಾಪಾಠಃ ॥

ಮರುತ್ವಾँ ಇಂದ್ರ ಮೀಢ್ವಃ ಪಿಬಾ ಸೋಮಂ ಶತಕ್ರತೋ ।

ಅಸ್ಮಿನ್ಯಜ್ಞೇ ಪುರುಷ್ಟುತ ॥ ೭ ॥

॥ ಪದಪಾಠಃ ॥

ಮರುತ್ವಾನ್ । ಇಂದ್ರ । ಮೀಢ್ವಃ । ಪಿಬ । ಸೋಮಂ । ಶತಕ್ರತೋ ಇತಿ ಶತऽಕ್ರತೋ ।
ಅಸ್ಮಿನ್ । ಯಜ್ಞೇ । ಪುರುऽಸ್ತುತ ॥ ೭ ॥

॥ ಸಾಯಣಭಾಷ್ಯಂ ॥

**ಪಂಚಮೇऽಹನಿ ಮರುತ್ವತೀಯೇ ಮರುತ್ವಾँ ಇಂದ್ರ ಮೀಢ್ವ ಇತಿ ತೃಚೋ ನಿವಿದ್ಧಾನೀಯಃ । ಸೂತ್ರಿತಂ ಚ । ಮರುತ್ವಾँ ಇಂದ್ರ ಮೀಢ್ವಸ್ತಮಿಂದ್ರಂ ವಾಜಯಾಮಸಿ । ಆ. ೮-೮ । ಇತಿ ॥**

**ಹೇ ಮೀಢ್ವಃ ಫಲಸ್ಯ ವೃಷ್ಟೇರ್ವಾ ಸೇಕ್ತಃ ಶತಕ್ರತೋ ಬಹುಕರ್ಮೇಂದ್ರ ತ್ವಂ ಮರುತ್ವಾನ್ ಸೋಮಂ ಪಿಬಾಸ್ಮಿನ್ಯಜ್ಞೇ ಹೇ ಪುರುಷ್ಟುತ ಬಹುಭಿರಾಹೂತ ॥**

॥ ಪ್ರತಿಪದಾರ್ಥ ॥

**ಪುರುಷ್ಟುತ**—ಅನೇಕರ ಸ್ತುತಿಗೆ ಪಾತ್ರನಾದವನೂ । **ಮೀಢ್ವಃ**—ವೃಷ್ಟಿಯನ್ನು ಸುರಿಸುವವನೂ । **ಶತಕ್ರತೋ**—ಅನೇಕ ಕರ್ಮಗಳ ಕರ್ತನೂ ಆದ । **ಇಂದ್ರ**—ಎಲೈ ಇಂದ್ರನೇ । **ಮರುತ್ವಾನ್**—ಮರುತ್ತುಗಳೊಡಗೂಡಿದ ನೀನು । **ಅಸ್ಮಿನ್ ಯಜ್ಞೇ**—ಈ ಯಜ್ಞದಲ್ಲಿ । **ಸೋಮಂ**—ಸೋಮವನ್ನು । **ಪಿಬ**—ಪಾನಮಾಡು

॥ ಭಾವಾರ್ಥ ॥

ಅನೇಕರ ಸ್ತುತಿಗೆ ಪಾತ್ರನಾದವನೂ, ವೃಷ್ಟಿಯನ್ನು ಸುರಿಸುವವನೂ, ಅನೇಕ ಕರ್ಮಗಳ ಕರ್ತನೂ ಆದ ಎಲೈ ಇಂದ್ರನೇ, ಮರುತ್ತುಗಳೊಡಗೂಡಿದ ನೀನು ಈ ಯಜ್ಞದಲ್ಲಿ ಸೋಮವನ್ನು ಪಾನಮಾಡು.

## English Translation

Indra, Satakratu, showerer (of blessings), drink the Soma at this offering, accompanied by the Maruts, O invoked of many.

॥ ವಿಶೇಷವಿಷಯಗಳು ॥

ಯಾಗದ ಐದನೆಯ ದಿವಸ ಮರುತ್ವತೀಯಶಸ್ತ್ರಮಂತ್ರಗಳನ್ನು ಪಠಿಸುವಾಗ **ಮರುತ್ವಾँ ಇಂದ್ರ ಮೀಢ್ವಃ** ಎಂದು ಮೊದಲಾಗುವ ಈ ತೃಚವನ್ನು ನಿವಿದ್ಧಾನೀಯಮಂತ್ರಗಳಲ್ಲಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಮರುತ್ವಾँ ಇಂದ್ರ ಮೀಢ್ವಸ್ತ್ವಮಿಂದ್ರಂ ವಾಜಯಾಮಸಿ** ಎಂಬ ಸೂತ್ರದಿಂದ (ಆ. ೮-೮) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

**ತುಭ್ಯೇದಿಂದ್ರ ಮರುತ್ವತೇ ಸುತಾಃ ಸೋಮಾಸೋ ಅದ್ರಿವಃ ।**

**ಹೃದಾ ಹೂಯಂತ ಉಕ್ಥಿನಃ ॥ ೮ ॥**

॥ ಪದಪಾಠಃ ॥

**ತುಭ್ಯ । ಇತ್ । ಇಂದ್ರ । ಮರುತ್ವತೇ । ಸುತಾಃ । ಸೋಮಾಸಃ । ಅದ್ರಿಽವಃ ।**

**ಹೃದಾ । ಹೂಯಂತೇ । ಉಕ್ಥಿನಃ ॥ ೩ ॥**

॥ ಸಾಯಣಭಾಷ್ಯಂ ॥

**ಹೇ ಅದ್ರಿವೋ ವಜ್ರವನ್ನಿಂದ್ರ ಮರುತ್ವತೇ ತುಭ್ಯೇತ್ತುಭ್ಯಮೇವ ಸೋಮಾಸಃ ಸುತಾಃ । ಅಭಿಷುತಾಃ । ತೇ ಚೋಕ್ಥಿನಃ ಶಸ್ತ್ರವಂತೋ ಹೃದಾ ಮನಸಾ ಭಕ್ತ್ಯಾ ಹೂಯಂತೇ ತ್ವದರ್ಥಂ ॥**

॥ ಪ್ರತಿಪದಾರ್ಥ ॥

**ಅದ್ರಿವಃ**—ವಜ್ರಾಯುಧಧಾರಿಯಾದ । **ಇಂದ್ರ**—ಎಲೈ ಇಂದ್ರನೇ । **ಮರುತ್ವತೇ**—ಮರುತ್ತುಗಳೊಡಗೂಡಿದ । **ತುಭ್ಯೇತ್**—ನಿನ್ನನ್ನೇ ಉದ್ದೇಶಿಸಿ । **ಸೋಮಾಸಃ**—ಈ ಸೋಮರಸಗಳು। **ಸುತಾಃ**—ಹಿಂಡಲ್ಪಟ್ಟಿವೆ । **ಉಕ್ಥಿನಃ**—ಉಕ್ಥರೂಪವಾದ ಸ್ತುತಿಗಳೊಡಗೂಡಿದ ಈ ಸೋಮರಸಗಳು । **ಹೃದಾ**—ಭಕ್ತಿಯುತವಾದ ಹೃದಯ:ದಿಂದ । **ಹೂಯಂತೇ**—ಅರ್ಪಿತವಾಗುತ್ತವೆ.

॥ ಭಾವಾರ್ಥ ॥

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ಮರುತ್ತುಗಳೊಡಗೂಡಿದ ನಿನ್ನನ್ನೇ ಉದ್ದೇಶಿಸಿ ಈ ಸೋಮರಸಗಳು ಹಿಂಡಲ್ಪಟ್ಟಿವೆ. ಉಕ್ಥರೂಪವಾದ ಸ್ತುತಿಗಳಿಂದ ಕೂಡಿದ ಈ ಸೋಮರಸಗಳು ಭಕ್ತಿಯುತವಾದ ಹೃದಯದಿಂದ ಅರ್ಪಿತವಾಗುತ್ತವೆ.

English Translation

Thunderer Indra, to you with the Maruts are these Soma-libations effused,—they are offered to you in faith, with recited hymns.

॥ ಸಂಹಿತಾಪಾಠಃ ॥

ಪಿಬೇದಿಂದ್ರ ಮರುತ್ಸಖಾ ಸುತಂ ಸೋಮಂ ದಿವಿಷ್ಟಿಷು ।

ವಜ್ರಂ ಶಿಶಾನ ಓಜಸಾ ॥ ೯ ॥

॥ ಪದಪಾಠಃ ॥

ಪಿಬ । ಇತ್ । ಇಂದ್ರ । ಮರುತ್ಽಸಖಾ । ಸುತಂ । ಸೋಮಂ । ದಿವಿಷ್ಟಿಷು ।

ವಜ್ರಂ । ಶಿಶಾನಃ । ಓಜಸಾ ॥ ೯ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಮರುತ್ಸಖಾ ತ್ವಂ ಸುತಮಭಿಷುತಂ ಸೋಮಂ ಪಿಬ । ಕಿಮರ್ಥಂ । ದಿವಿಷ್ಟಿಷ್ವ-ಸ್ಮಾಕಮಹ್ನಾಮಭಿಗಮನೇಷು ದಿವಃ ಸ್ವರ್ಗಸ್ಯ ವೈಷಣೇಷು ನಿಮಿತ್ತೇಷು । ಪೀತ್ವಾ ಚೌಜಸಾ ಬಲೇನ ಸೋಮಪಾನಜನಿತೇನ ವಜ್ರಂ ಶಿಶಾನಸ್ತೀಕ್ಷ್ಣೀಕುರ್ವನ್ । ಶತ್ರೂಞ್ಜಹೀತಿ ಭಾವಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಮರುತ್ಸಖಾ**—ಮರುತ್ತುಗಳೊಡಗೂಡಿದ ನೀನು । **ದಿವಿಷ್ಟಿಷು**—ನಮ್ಮ ಯಾಗದಿನಗಳಲ್ಲಿ । **ಸುತಂ**—ಹಿಂಡಿರುವ । **ಸೋಮಂ**—ಈ ಸೋಮವನ್ನು । **ದಿವಃ**—ಸ್ವರ್ಗನಿಮಿತ್ತವಾಗಿ । **ಪಿಬ**—ಪಾನಮಾಡು । **ಓಜಸಾ**—ನಿನ್ನ ಸೋಮಪಾನದ ಬಲಂದಿದ । **ವಜ್ರಂ**—ವಜ್ರಾಯುಧವನ್ನು । **ಶಿಶಾನಃ**—ಹರಿತವನ್ನಾಗಿ ಮಾಡಿಕೊಂಡು ಶತ್ರುಗಳನ್ನು ಜಯಿಸು

॥ ಭಾವಾರ್ಥ ॥

ಎಲೈ ಇಂದ್ರನೇ, ಮರುತ್ತುಗಳೊಡಗೂಡಿದ ನೀನು ನಮ್ಮ ಯಾಗದಿನಗಳಲ್ಲಿ ಹಿಂಡಿ ಸಿದ್ಧವಾಗಿರುವ ಈ ಸೋಮವನ್ನು ಸ್ವರ್ಗನಿಮಿತ್ತವಾಗಿ ಪಾನಮಾಡು. ನಿನ್ನ ಸೋಮಪಾನದ ಬಲದಿಂದ ವಜ್ರಾಯುಧವನ್ನು ಹರಿತವನ್ನಾಗಿ ಮಾಡಿಕೊಂಡು ಶತ್ರುಗಳನ್ನು ಜಯಿಸು.

English Translation

Drink, Indra, with your friends the Maruts, this Soma, effused on the recurring sacred days, and sharpen your thunderbolt with ( renewed ) vigour.

॥ ಸಂಹಿತಾಪಾಠಃ ॥

ಉ॒ತ್ತಿಷ್ಠ॒ನ್ನೋಜ॑ಸಾ ಸ॒ಹ ಪೀ॒ತ್ವೀ ಶಿಪ್ರೇ॑ ಅವೇಪಯಃ ।
ಸೋಮ॑ಮಿಂದ್ರ ಚ॒ಮೂ ಸು॒ತಂ ॥ ೧೦ ॥

॥ ಪದಪಾಠಃ ॥

ಉ॒ತ್ಽತಿಷ್ಠ॑ನ್ । ಓಜ॑ಸಾ । ಸ॒ಹ । ಪೀ॒ತ್ವೀ । ಶಿ॒ಪ್ರೇ ಇತಿ॑ । ಅ॒ವೇ॒ಪ॒ಯ॒ಃ ।
ಸೋಮ॑ಂ । ಇ॒ಂದ್ರ॒ । ಚ॒ಮೂ ಇತಿ॑ । ಸು॒ತಂ ॥ ೧೦ ॥

॥ ಸಾಯಣಭಾಷ್ಯಂ ॥

ಚತುರ್ವಿಂಶೇಽಹನಿ ಪ್ರಾತಃಸವನೇ ಬ್ರಾಹ್ಮಣಾಚ್ಛಂಸಿಶಸ್ತ್ರ ಉತ್ತಿಷ್ಠನ್ನಿತಿ ತೃಚಃ ಷಳಹಸ್ತೋತ್ರಿಯಃ । ಸೂತ್ರಿತಂ ಚ । ಉತ್ತಿಷ್ಠನ್ನೋಜಸಾ ಸಹ ಭಿಂಧಿ ವಿಶ್ವಾ ಅಪ ದ್ವಿಷಃ । ಆ. ೭.೨ । ಇತಿ ॥

ಹೇ ಇಂದ್ರ ತ್ವಂ ಪೀತ್ವೀ ಪೀತ್ವೌಜಸಾ ಬಲೇನ ಸಹೋತ್ತಿಷ್ಠನ್ಭಿಪ್ರೇ ಹನೂ ಅವೇಪಯಃ । ಅಕಂಪಯಃ । ಮದಾವೇಶಾದಿತಿ ಭಾವಃ । ಕಿಂ ಪೀತ್ವಾ । ಚಮೂ ಚಮ್ವೋರಧಿಷವಣಫಲಕಯೋಃ ಸುತಂ ಸೋಮಂ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಚಮೂ**—ಚಮೂಪಾತ್ರೆಗಳಲ್ಲಿ । **ಸುತಂ**—ಹಿಂಡಿ ಅರ್ಪಿತವಾದ । **ಸೋಮಂ**—ಸೋಮವನ್ನು । **ಪೀತ್ವೀ**—ಪಾನಮಾಡಿ । **ಓಜಸಾ ಸಹ**—ಆ ಬಲದೊಡನೆ । **ಉತ್ತಿಷ್ಠನ್**—ಮೇಲಕ್ಕೆ ಏಳುತ್ತಾ । **ಶಿಪ್ರೇ**—ನಿನ್ನ ಕೆನ್ನೆಗಳನ್ನು । **ಅವೇಪಯಃ**—ನಡುಗಿಸಿದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಚಮೂಪಾತ್ರೆಗಳಲ್ಲಿ ಹಿಂಡಿ ಅರ್ಪಿತವಾದ ಸೋಮವನ್ನು ಪಾನಮಾಡಿ ಆ ಬಲದೊಡನೆ ಮೇಲಕ್ಕೆ ಏಳುತ್ತಾ ನಿನ್ನ ಕೆನ್ನೆಗಳನ್ನು ನಡುಗಿಸಿದೆ.

## English Translation

Rising up in your strength, Indra, you shook your jaws, when you had quaffed the Soma pressed between the two boards.

॥ ವಿಶೇಷವಿಷಯಗಳು ॥

ಯಾಗದ ಚತುರ್ವಿಂಶವೆಂಬ ದಿನದ ಪ್ರಾತಃಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ **ಉತ್ತಿಷ್ಠನ್** ಎಂಬ ತೃಚವನ್ನು ಷಳಹಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— **ಉತ್ತಿಷ್ಠನ್ನೋಜಸಾ ಸಹ ಭಿಂಧಿ ವಿಶ್ವಾ ಅಪ ದ್ವಿಷ ಇತಿ ಬ್ರಾಹ್ಮಣಾಚ್ಛಂಸಿನಃ** ಎಂಬ ಸೂತ್ರದಿಂದ (ಆ. ೭-೨) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಅನು ತ್ವಾ ರೋದಸೀ ಉಭೇ ಕ್ರಕ್ಷಮಾಣಮಕೃಪೇತಾಂ ।
ಇಂದ್ರ ಯದ್ದಸ್ಯುಹಾಭವಃ ॥ ೧೧ ॥

॥ ಪದಪಾಠಃ ॥

ಅನು । ತ್ವಾ । ರೋದಸೀ ಇತಿ । ಉಭೇ ಇತಿ । ಕ್ರಕ್ಷಮಾಣಂ । ಅಕೃಪೇತಾಂ ।
ಇಂದ್ರ । ಯತ್ । ದಸ್ಯುऽಹಾ । ಅಭವಃ ॥ ೧೧ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಕ್ರಕ್ಷಮಾಣಂ ಶತ್ರೂನ್ನಿಲಿಖಂತಂ ತ್ವಾ ತ್ವಾಮುಭೇ ರೋದಸೀ ಉಭೇ ಅಪಿ ದ್ಯಾವಾ-ಪೃಥಿವ್ಯಾವನ್ವಕೃಪೇತಾಂ । ಅನುಕಲ್ಪಯೇತಾಂ । ಯದ್ಯದಾ ದಸ್ಯುಹಾಭವಃ ಭವಸಿ ತದಾ ॥**

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಯತ್**—ಯಾವಾಗ । **ದಸ್ಯುಹಾ**—ಶತ್ರುನಾಶಕನಾಗಿ । **ಅಭವಃ**—ನೀನು ಆಗುವೆಯೋ ಆಗ । **ಕ್ರಕ್ಷಮಾಣಂ**—ಶತ್ರುಗಳನ್ನು ಸೀಳಿಹಾಕುವ । **ತ್ವಾ**—ನಿನ್ನನ್ನು । **ಉಭೇ ರೋದಸೀ**—ದ್ಯಾವಾಪೃಥಿವಿಗಳೆರಡೂ । **ಅನು ಅಕೃಪೇತಾಂ**—ಅನುಸರಿಸಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವಾಗ ನೀನು ಶತ್ರುನಾಶಕನಾಗಿ ಆಗುವೆಯೋ, ಆಗ ಶತ್ರುಗಳನ್ನು ಸೀಳಿಹಾಕುವ ನಿನ್ನನ್ನು ದ್ಯಾವಾಪೃಥಿವಿಗಳೆರಡೂ ಅನುಸರಿಸಲಿ.

## English Translation

Let heaven and earth follow you Indra, as you smite; when you beat down the Dasyu.

॥ ಸಂಹಿತಾಪಾಠಃ ॥

ವಾಚಮುಷ್ಟಾಪದೀಮಹಂ ನವಸ್ರಕ್ತಿಮೃತಸ್ಪೃಶಂ ।
ಇಂದ್ರಾತ್ಪರಿ ತನ್ವಂ ಮಮೇ ೧೨ ॥

॥ ಪದಪಾಠಃ ॥

ವಾಚಂ । ಅಷ್ಟಾಽಪದೀಂ । ಅಹಂ । ನವಽಸ್ರಕ್ತಿಂ । ಋತಽಸ್ಪೃಶಂ ।
ಇಂದ್ರಾತ್ । ಪರಿ । ತನ್ವಂ । ಮಮೇ ॥ ೧೨ ॥

॥ ಸಾಯಣಭಾಷ್ಯಂ ॥

ಅಷ್ಟಾಪದೀಂ । ಅಷ್ಟಾಭಿರ್ದಿಗ್ಭಿರ್ವಿದಿಗ್ಭಿಃ ಸಾಷ್ಟಾಪದೀ । ನವಸ್ರಕ್ತಿಮುಪರಿ ಸ್ಥಿತೇನಾದಿತ್ಯೇನ ನವಸ್ರಕ್ತಿಂ । ಆಸು ದಿಕ್ಷು ವ್ಯಾಪ್ತಾಮಿತ್ಯರ್ಥಃ । ಋತಸ್ಪೃಶಂ ಯಜ್ಞಸ್ಪೃಶಂ ವಾಚಂ ಸ್ತುತಿಮಹಂ ಪರಿಪೂರ್ಣಾದಿಂದ್ರಾತ್ತನ್ವಂ ತನೂಂ ನ್ಯೂನಾಂ ಸತೀಂ ಪರಿ ಮಮೇ । ಅನ್ಯೂನೇಯತ್ತಾಂ ಕರೋಮೀತ್ಯರ್ಥಃ । ಕಾರ್ತ್ಸ್ನ್ಯೇನ ಸ್ವರೂಪಂ ಸ್ತುತ್ಯಾ ವಿಷಯೀಕರ್ತುಮಶಕ್ಯತ್ವಾದಿತಿ ಭಾವಃ ॥

॥ ಪ್ರತಿಪದಾರ್ಥ ॥

**ಅಷ್ಟಾಪದೀಂ**—ಎಂಟು ದಿಕ್ಕು ಮತ್ತು ವಿದಿಕ್ಕುಗಳಲ್ಲಿ ವ್ಯಾಪಿಸಿದುದೂ । **ನವಸ್ರಕ್ತಿಂ**—ಒಂಭತ್ತನೆಯ ಆದಿತ್ಯ ಮಂಡಲವನ್ನೂ ವ್ಯಾಪಿಸತಕ್ಕದ್ದೂ ಆದರೂ ಸಹ । **ಋತಸ್ಪೃಶಂ**— ಯಜ್ಞಸಂಬಂಧಿಯಾದ । **ವಾಚಂ**—ನನ್ನ ಸ್ತುತಿಯನ್ನು । **ಅಹಂ**—ನಾನು । **ಇಂದ್ರಾತ್**—ಪರಿಪೂರ್ಣನಾದ ಇಂದ್ರನಿಗಿಂತಲೂ । **ತನ್ವಂ**—ನ್ಯೂನವಾದುದನ್ನಾಗಿಯೇ । **ಪರಿ ಮಮೇ**—ತಿಳಿಯುತ್ತೇನೆ.

॥ ಭಾವಾರ್ಥ ॥

ಯಜ್ಞಸಂಬಂಧಿಯಾದ ನನ್ನ ಈ ಸ್ತುತಿಯು ಎಂಟು ದಿಕ್ಕು ಮತ್ತು ವಿದಿಕ್ಕುಗಳಲ್ಲಿ ವ್ಯಾಪಿಸಿದ್ದರೂ, ಒಂಭತ್ತನೆಯ ಆದಿತ್ಯಮಂಡಲವನ್ನೂ ವ್ಯಾಪಿಸಿದ್ದರೂ ಸಹ ಪರಿಪೂರ್ಣನಾದ ಇಂದ್ರನ ಪೂರ್ಣವಾದ ಗುಣವನ್ನು ಸಂಪೂರ್ಣವಾಗಿ ಪ್ರಶಂಸಿಸಲು ಶಕ್ತಿಯಿಲ್ಲದ್ದನ್ನಾಗಿಯೇ ನಾನು ತಿಳಿಯುತ್ತೇನೆ.

## English Translation

I make this sacrificial hymn, reaching to the eight points (of the sky) and rising to a ninth (the sun in the zenith), though it is less than ( the dimensions of) Indra

# ಎಪ್ಪತ್ತೇಳನೆಯ ಸೂಕ್ತವು.

॥ ವಿಶೇಷವಿಷಯಗಳು ॥

**ಜಜ್ಞಾನಇತ್ಯೇಕಾಪಶರ್ಚಮಷ್ಟಮಂ ಸೂಕ್ತಂ ಕಾಣ್ವಸ್ಯ ಕುರುಸುತೇರಾರ್ಷಂ । ಆದ್ಯಾ ನವ ಗಾಯತ್ರ್ಯೋ ದಶಮೀ ಬೃಹತ್ಯೇಕಾದಶೀ ಸತೋಬೃಹತೀ । ಇಂದ್ರೋ ದೇವತಾ । ತಥಾ ಚಾನುಕ್ರಾಂತಂ । ಜಜ್ಞಾನ ಏಕಾದಶ ಪ್ರಗಾಥಾಂತಮಿತಿ ॥ ಮಹಾವ್ರತೇ ನಿಷ್ಕೇವಲ್ಯೇ ಜಜ್ಞಾನೋ ನು ಶತಕ್ರತುರಿತ್ಯೇಷಾ । ತಥೈವ ಪಂಚಮಾರಣ್ಯಕೇ ಸೂತ್ರಿತಂ । ಜಜ್ಞಾನೋ ನು ಶತಕ್ರತುರಿತ್ಯೇಕಾ । ಐ. ಆ. ೫-೨-೩ । ಇತಿ ॥**

ಅನುವಾದವು—ಜಜ್ಞಾನಃ ಎಂಬ ಈ ಸೂಕ್ತವು ಎಂಟನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಕಣ್ವಗೋತ್ರಜನಾದ ಕುರುಸುತಿ ಎಂಬುವನು ಋಷಿಯು. ಈ ಸೂಕ್ತದಲ್ಲಿ ಮೊದಲಿನ ಒಂಭತ್ತು ಋಕ್ಕುಗಳು ಗಾಯತ್ರೀಛಂದಸ್ಕವು. ಹತ್ತನೆಯದು ಬೃಹತೀ, ಹನ್ನೊಂದನೆಯದು ಸತೋಬೃಹತೀಛಂದಸ್ಕವು. ಇಂದ್ರನು ದೇವತೆಯು , ಅನುಕ್ರಮಣಿಕೆಯಲ್ಲಿ—**ಜಜ್ಞಾನ ಏಕಾದಶ ಪ್ರಗಥಾಂತಂ** ಎಂದು ಹೇಳಿರುವುದು ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಪಠನಮಾಡುವಾಗ **ಜಜ್ಞಾನೋ ನು ಶತಕ್ರತುಃ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ—**ಜಜ್ಞಾನೋ ನು ಶತಕ್ರತುರಿತ್ಯೇಷಾ** ಎಂಬ ವಾಕ್ಯದಿಂದ (ಐ. ಆ. ೫-೩-೭) ವಿವೃತವಾಗಿರುವುದು.

## ಸೂಕ್ತ—೭೭

ಮಂಡಲ—೮ ॥ ಅನುವಾಕ—೮ ॥ ಸೂಕ್ತ—೭೭ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೨೯, ೩೦, ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ಕುರುಸುತಿಃ ಕಾಣ್ವಃ ॥
ದೇವತಾ—ಇಂದ್ರಃ ॥
ಛಂದಃ—೧-೯, ಗಾಯತ್ರೀ । ೧೦, ಬೃಹತೀ । ೧೧. ಸತೋಬೃಹತೀ ॥

। ಸಂಹಿತಾಪಾಠಃ ।

**ಜಜ್ಞಾನೋ ನು ಶತಕ್ರತುರ್ವಿ ಪೃಚ್ಛದಿತಿ ಮಾತರಂ ।**
**ಕ ಉಗ್ರಾಃ ಕೇ ಹ ಶೃಣ್ವಿರೇ ॥ ೧ ॥**

॥ ಪದಪಾಠಃ ॥

ಜಜ್ಞಾನಃ । ನು । ಶತಽಕ್ರತುಃ । ವಿ । ಪೃಚ್ಛತ್ । ಇತಿ । ಮಾತರಂ ।
ಕೇ । ಉಗ್ರಾಃ । ಕೇ । ಹ । ಶೃಣ್ವಿರೇ ॥ ೧ ॥

॥ ಸಾಯಣಭಾಷ್ಯಂ ॥

ಅಯಮಿಂದ್ರೋ ಜಜ್ಞಾನೋ ನು ಜಾಯಮಾನ ಏವ ಶತಕ್ರತುರ್ಬಹುಕರ್ಮೇತೀತ್ಥಂ ಮಾತರಂ ಸ್ವಜನನೀಂ ವಿಪೃಚ್ಛತಿ । ಕಿಮಿತಿ । ಕೇ ಉಗ್ರಾ ಉದ್ಗೂರ್ಣಬಲಾ ಲೋಕೇ । ಕೇ ಹ ಶೃಣ್ವಿರೇ । ಶ್ರೂಯಂತೇ ಗುಣೈಃ । ಕೇ ವಿಶ್ರುತಾ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಉಗ್ರಾಃ**—ಅತ್ಯಧಿಕವಾದ ಬಲವುಳ್ಳವರು । **ಕೇ ಕೇ ಹ**—ಯಾರು ಯಾರು । **ಶೃಣ್ವಿರೇ**—ಪ್ರಸಿದ್ಧರಾಗಿದ್ದಾರೆ । **ಇತಿ**—ಎಂಬುದಾಗಿ । **ಜಜ್ಞಾನೋ ನು**—ಉತ್ಪನ್ನನಾದೊಡನೆಯೇ । **ಶತಕ್ರತುಃ**—ಅನೇಕ ಕರ್ಮಕರ್ತನಾದ ಇಂದ್ರನು । **ಮಾತರಂ**—ತನ್ನ ಜನನಿಯನ್ನು । **ವಿ ಪೃಚ್ಛತ್**—ಕೇಳಿದನು.

॥ ಭಾವಾರ್ಥ ॥

ಅತ್ಯಧಿಕವಾದ ಬಲವುಳ್ಳ ವೀರ್ಯವಂತರು ಯಾರುಯಾರಿದ್ದಾರೆ ಮತ್ತು ಪ್ರಸಿದ್ಧರಾಗಿದ್ದಾರೆ ಎಂಬುದಾಗಿ ಅನೇಕ ಕರ್ಮಕರ್ತನಾದ ಇಂದ್ರನು ಉತ್ಪನ್ನನಾದೊಡನೆಯೇ ತನ್ನ ಜನನಿಯನ್ನು ಕೇಳಿದನು.

English Translation

As soon as he was born Satakratu asked his mother-Who are the mighty, who are renowned ?

॥ ಸಂಹಿತಾಪಾಠಃ ॥

ಆದೀಂ ಶವಸ್ಯಬ್ರವೀದೌರ್ಣವಾಭಮಹೀಶುವಂ ।
ತೇ ಪುತ್ರ ಸಂತು ನಿಷ್ಟುರಃ ॥ ೨ ॥

॥ ಪದಪಾಠಃ ॥

ಆತ್ । ಈಂ । ಶವಸೀ । ಅಬ್ರವೀತ್ । ಔರ್ಣಽವಾಭಂ । ಅಹೀಶುವಂ ।
ತೇ । ಪುತ್ರ । ಸಂತು । ನಿಃಽತುರಃ ॥ ೨ ॥

॥ ಸಾಯಣಭಾಷ್ಯಂ ॥

ಇಂದ್ರೇಣ ಪೃಷ್ಟಾ ಶವಸೀ ಮಾತಾನಂತರಮೇನ್ವೈತಮಿಂದ್ರಮಬ್ರವೀತ್ । ಕಿಮಿತಿ ಉಚ್ಯತೇ । ಔರ್ಣವಾಭಮಹೀಶುವಮೇತನ್ನಾಮಾನಾವಸುರೌ ತಿಷ್ಠತಃ । ತಾವುಕ್ತಾವನ್ಯೇ ಚ ತಾದೃಶಾ ಹೇ ಪುತ್ರ ತವ ನಿಷ್ಟುರೋ ನಿಸ್ತಾರಣೀಯಾಃ ಸಂತ್ವಿತಿ ॥

॥ ಪ್ರತಿಪದಾರ್ಥ ॥

ಪುತ್ರ—ಎಲೈ ಮಗುವೇ । ಔರ್ಣವಾಭಂ—ಔರ್ಣವಾಭನೆಂಬುವನೂ । ಅಹೀಶುವಂ—ಅಹೀಶುವನೆಂಬುವನೂ ಆದ ಇಬ್ಬರೂ । ತೇ—ನಿನಗೆ (ನಿನ್ನಿಂದ) । ನಿಷ್ಟುರಃ—ಕಠಿಣವಾಗಿ ಜಯಿಸಲ್ಪಡುವವರಾಗಿ। ಸಂತು—ಆಗಿದ್ದಾರೆ ಎಂಬುದಾಗಿ । ಆತ್ ಈಂ—ಇಂದ್ರನಿಂದ ಕೇಳಲ್ಪಟ್ಟಕೂಡಲೇ । ಶವಸೀ—ಶಕ್ತಿಯುತಳಾದ ಇಂದ್ರಜನನಿಯು । ಅಬ್ರವೀತ್—ಮಗನಿಗೆ ಹೇಳಿದಳು.

॥ ಭಾವಾರ್ಥ ॥

ಇಂದ್ರನಿಂದ ಕೇಳಲ್ಪಟ್ಟಕೂಡಲೇ ಶಕ್ತಿಯುತಳಾದ ಇಂದ್ರಜನನಿಯು ಎಲೈ ಮಗುವೇ, ಔರ್ಣವಾಭನೆಂಬುವನೂ, ಅಹೀಶುವನೆಂಬುವನೂಆದ ಇಬ್ಬರೂ ನಿನ್ನಿಂದ ಕಠಿಣವಾಗಿ ಜಯಿಸಲ್ಪಡುವವರಾಗಿದ್ದಾರೆ ಎಂಬುದಾಗಿ ಮಗನಿಗೆ ಹೇಳಿದಳು.

English Translation

His strong mother answered,—Aurnavabha and Ahishuva, be these my son, the foes whom you shall overcome.

॥ ಸಂಹಿತಾಪಾಠಃ ॥

ಸಮಿತ್ತಾನ್ವೃತ್ರಹಾಖಿದತ್ಖೇ ಅರಾँ ಇವ ಖೇದಯಾ ।

ಪ್ರವೃದ್ಧೋ ದಸ್ಯುಹಾಭವತ್ ॥ ೩ ॥

॥ ಪದಪಾಠಃ॥

ಸಂ । ಇತ್ । ತಾನ್ । ವೃತ್ರऽಹಾ । ಅಖಿದತ್ । ಖೇ । ಅರಾನ್ऽಇವ । ಖೇದಯಾ ।

ಪ್ರऽವೃದ್ಧಃ । ದಸ್ಯುऽಹಾ । ಅಭವತ್ ॥ ೩ ॥

॥ ಸಾಯಣಭಾಷ್ಯಂ ॥

ತಾಞ್ಛ್ವನನ್ಯೋಕ್ತಾನ್ ವೃತ್ರಹೇಂದ್ರಃ ಸಮಿತ್ಸಹೈವಾಖಿದತ್ । ಖೇದನಂ ನಾಮಾಕರ್ಷಣಂ । ಖೇ ರಥಚಕ್ರಸ್ಯ ನಾಭಾವರಾಂಶ್ಚಕ್ರಾಂಗಭೂತಾಞ್ಛಂಕೂನ್ ಖೇದಯಾ ರಜ್ಜ್ವೇವ । ತಯಾ ತಾನ್ಯಥಾ ಸಂಖಿದಂತಿ ತದ್ವತ್ । ತಥಾ ಕೃತ್ವಾ ದಸ್ಯುಹಾ ಶತ್ರುಘಾತೀಂದ್ರಃ ಪ್ರವೃದ್ಧೋಽಭವತ್ ॥

॥ ಪ್ರತಿಪದಾರ್ಥ ॥

**ವೃತ್ರಹಾ**—ವೃತ್ರನಾಶಕನಾದ ಇಂದ್ರನು । **ಸಮಿತ್**—ತಾಯಿಯಿಂದ ಹಾಗೆ ಹೇಳಲ್ಪಟ್ಟ ಒಡನೆಯೇ । **ಖೇ**—ರಥಚಕ್ರದ ಪರಿಧಿಯಲ್ಲಿ । **ಅರಾನ್**—ಅರಕಡ್ಡಿಗಳನ್ನು । **ಖೇದಯಾ** ಇವ-ಹಗ್ಗದಿಂದ ಕಟ್ಟಿ ಎಳೆದುಕೊಂಡು ಹೋಗುವಂತೆ । **ತಾನ್**—ಆ ಶತ್ರುಗಳನ್ನು । **ಅಖಿದತ್**—ದರದರನೆ ಎಳೆದುಕೊಂಡು ಹೋದನು । **ದಸ್ಯುಹಾ**—ಶತ್ರುನಾಶಕನಾದ ಅದೇ ಇಂದ್ರನು । **ಪ್ರವೃದ್ಧಃ**—ಬೆಳವಣಿಗೆಯುಳ್ಳವನಾಗಿ । **ಅಭವತ್**—ಆದನು

॥ ಭಾವಾರ್ಥ ॥

ವೃತ್ರನಾಶಕನಾದ ಇಂದ್ರನು ತಾಯಿಯಿಂದ ಹಾಗೆ ಹೇಳಲ್ಪಟ್ಟ ಒಡನೆಯೇ ರಥಚಕ್ರದ ಪರಿಧಿಯಲ್ಲಿ ಅರಕಡ್ಡಿಗಳನ್ನು ಹಗ್ಗದಿಂದ ಕಟ್ಟಿ ಎಳೆದುಕೊಂಡು ಹೋಗುವಂತೆ ಆ ಶತ್ರುಗಳನ್ನು ದರದರನೆ ಎಳೆದುಕೊಂಡು ಹೋದನು. ಶತ್ರುನಾಶಕನಾದ ಅದೇ ಇಂದ್ರನು ನಂತರ ಬೆಳವಣಿಗೆಯುಳ್ಳವನಾದನು.

English Translation

The slayer of Vritra dragged them along as spokes (are tied fast) with a rope in the nave of a chariot wheel. he swelled in vigour, the slayer of enemies

॥ ಸಂಹಿತಾಪಾಠಃ ॥

ಏಕಯಾ ಪ್ರತಿಧಾಪಿಬತ್ಸಾಕಂ ಸರಾಂಸಿ ತ್ರಿಂಶತಂ ।
ಇಂದ್ರಃ ಸೋಮಸ್ಯ ಕಾಣುಕಾ ॥ ೪ ॥

॥ ಪದಪಾಠಃ ॥

ಏಕಯಾ । ಪ್ರತಿಽಧಾ । ಅಪಿಬತ್ । ಸಾಕಂ । ಸರಾಂಸಿ । ತ್ರಿಂಶತಂ ।
ಇಂದ್ರಃ । ಸೋಮಸ್ಯ । ಕಾಣುಕಾ ॥ ೪ ॥

॥ ಸಾಯಣಭಾಷ್ಯಂ ॥

ಅಯಮಿಂದ್ರ ಏಕಯೈಕೇನ ಪ್ರತಿಧಾ ಪ್ರತಿಧಾನೇನ ಸಾಕಮೇಕಥೈವ ತ್ರಿಂಶತಮಪಿ । ಉಕ್ಥ-ಪಾತ್ರಾಣೀತ್ಯರ್ಥಃ । ಕೀದೃಶಾನಿ । ಸರಾಂಸಿ ಸೋಮಸ್ಯ ಪೂರ್ಣಾನಿ ಸೋಮರಸೇನ ಪೂರ್ಣಾನಿ ಕಾಣುಕಾ ಕಾಂತಾನಿ ಕ್ರಾಂತಾನಿ ವಾ ಸೋಮೇನ ಕೃತಾನಿ ವಾ ಸೋಮಪೂರ್ಣಾನ್ಯಪಿಬತ್ । ಪೀತ-ವಾನ್ ಮಾಧ್ಯಂದಿನಸವನೇ । ಯಾಜ್ಞಿಕಪ್ರಸಿದ್ಧ್ಯೈವಂ । ನೈರುಕ್ತಪ್ರಸಿದ್ಧ್ಯಾ ತು ಕಾಲಾಭಿ-ಮಾನೀಂದ್ರಃ । ತ್ರಿಂಶದಪರಪಕ್ಷಸ್ಯಾಹೋರಾತ್ರಾಸ್ತ್ರಿಂಶತ್ಪೂರ್ವಪಕ್ಷಸ್ಯ ಚ ಸಂತಿ। ತಾನೇಕರೂಪಮನು-ಭವತೀತಿ । ಏತತ್ಸರ್ವಮೇಕೇನ ಪ್ರತಿಧಾನೇನಾಪಿಬತ್ ' ನಿ. ೫-೧೧ । ಇತ್ಯಾದಿ ನಿರುಕ್ತೇ ತದ್ವ್ಯಾ-ಖ್ಯಾನೇ ಚ ಸ್ಪಷ್ಟಮುಕ್ತಂ । ತದತ್ರ ದ್ರಷ್ಟವ್ಯಂ ॥

॥ ಪ್ರತಿಪದಾರ್ಥ ॥

**ಸರಾಂಸಿ**—ಸರೋವರದಂತಿರುವುವೂ । **ಸೋಮಸ್ಯ**—ಸೋಮದಿಂದ ಭರಿತವಾದವೂ । **ಕಾಣುಕಾ**—ಆಕರ್ಷಕವಾದವೂ ಆದ । **ತ್ರಿಂಶತಂ**—ಮೂವತ್ತು ಪಾತ್ರೆಗಳ ಸೋಮವನ್ನು । **ಇಂದ್ರಃ**—ಇಂದ್ರನು । **ಏಕಯಾ ಪ್ರತಿಧಾ**—ಒಂದೇ ಗುಟುಕಿನಿಂದ । **ಸಾಕಂ**—ಒಂದೇ ಸಮನೆ । **ಅಪಿಬತ್**—ಪಾನಮಾಡಿದನು.

॥ ಭಾವಾರ್ಥ ॥

ಸರೋವರದಂತಿರುವುವೂ, ಸೋಮದಿಂದ ಭರಿತವಾದವೂ, ಆಕರ್ಷಕವಾದವೂ ಆದ ಮೂವತ್ತು ಪಾತ್ರೆಗಳ ಸೋಮವನ್ನು ಇಂದ್ರನು ಒಂದೇ ಗುಟುಕಿನಿಂದ ಒಂದೇ ಕಾಲದಲ್ಲಿ ಪಾನಮಾಡಿದನು

## English Translation

At one draught Indra drank at once thrity lakes filled with Soma.

॥ ವಿಶೇಷವಿಷಯಗಳು ॥

**ಕಾಣುಕಾ**—ಈ ಶಬ್ದದ ಅರ್ಥವನ್ನು ವಿವರಿಸುವುದಕ್ಕಾಗಿ ಯಾಸ್ಕರು ಈ ಋಕ್ಕಿಗೆ ನಿರ್ವಚನವನ್ನು ಹೇಳಿದಾರೆ

> ಏಕೇನ ಪ್ರತಿಧಾನೇನಾಪಿಬತ್ ಸಾಕಂ ಸಹೇತ್ಯರ್ಥಃ । ಇಂದ್ರಃ ಸೋಮಸ್ಯ ಕಾಣುಕಾ ಕಾಂತಕಾನೀತಿ ವಾ ಕ್ರಾಂತಕಾನೀತಿ ವಾ ಕೃತಕಾನೀತಿ ವಾ ।
>
> ಇಂದ್ರಃ ಸೋಮಸ್ಯ ಕಾಂತ ಇತಿ ವಾ ಕಣೇ ಘಾತ ಇತಿ ವಾ ಕಣೇ ಹತಃ ಕಾಂತಿಹತಃ ॥
>
> ತತ್ರೈತದ್ಯಾಜ್ಞಿಕಾ ವೇದಯಂತೇ । ತ್ರಿಂಶದುಕ್ಥಪಾತ್ರಾಣಿ ಮಾಧ್ಯಂದಿನೇ ಸವನ ಏಕದೇವತಾನಿ ತಾನ್ಯೇತಸ್ಮಿನ್ ಕಾಲ ಏಕೇನ ಪ್ರತಿಧಾನೇನ ಪಿಬಂತಿ ತಾನ್ಯತ್ರ ಸರಾಂಸ್ಯುಚ್ಯಂತೇ ॥
>
> ತ್ರಿಂಶದಪರಪಕ್ಷಸ್ಯಾಹೋರಾತ್ರಾಸ್ತ್ರಿಂಶತ್ ಪೂರ್ವಪಕ್ಷಸ್ಯೇತಿ ನೈರುಕ್ತಾಃ । ತದ್ಯಾ ಏತಾ-ಶ್ಚಾಂದ್ರಮಸ್ಯ ಆಗಾಮಿನ್ಯ ಆಪೋ ಭವಂತಿ ರಶ್ಮಯಸ್ತಾ ಅಪರಪಕ್ಷೇ ಪಿಬಂತಿ । ತಥಾಪಿ

**ನಿಗಮೋ ಭವತಿ—ಯಮಕ್ಷಿತಿಮಕ್ಷಿತಯಃ ಪಿಬಂತಿ ಇತಿ । ತಂ ಪೂರ್ವಪಕ್ಷ ಆಪ್ಯಾಯ-ಯಂತಿ ತಥಾಪಿ ನಿಗಮೋ ಭವತಿ—ಯಥಾ ದೇವಾ ಅಂಶುಮಾಪ್ಯಾಯಯಂತಿ ಇತಿ ॥**

(ನಿ ೫-೧೧)

**ಕಾಣುಕಾ**—ಎಂಬ ಶಬ್ದಕ್ಕೆ ಅನೇಕಾರ್ಥಗಳಿರುವವು. ಹೇಗೆಂದರೆ—**ಕಾಂತಕಾನೀತಿ ವಾ ಪ್ರಿಯಾ-ಣೀತ್ಯರ್ಥಃ**—ಅಪೇಕ್ಷಿತವಾದುದು ಅಥವಾ ಪ್ರಿಯಕರವಾದುದು ಅಥವಾ **ಕ್ರಾಂತಕಾನೀತಿ ವಾ ಸೋಮಸ್ಯ ಪೂರ್ಣಾನೀತ್ಯರ್ಥಃ**—ತುಂಬಲ್ಪಟ್ಟಿರುವುದು; ಎಂದರೆ ಸೋಮರಸದಿಂದ ಪೂರ್ಣವಾದುದು, ಅಥವಾ **ಕೃತಕಾನೀತಿ ವಾ । ಸಂಸ್ಕೃತಾನಿ ಋತ್ವಿಗ್ಭಿಃ ಇಂದ್ರಾರ್ಥಮೇವ**—ಇಂದ್ರನ ಪಾನಾರ್ಥವಾಗಿ ಋತ್ವಿಕ್ಕುಗಳಿಂದ ಮಂತ್ರಪೂರ್ವಕವಾಗಿ ಸಂಸ್ಕರಿಸಲ್ಪಟ್ಟಿರುವುದು ಎಂದು ಮೂರು ವಿಧವಾದ ಅರ್ಥವನ್ನು ಹೇಳಿರುವರು ಇವೆಲ್ಲವೂ **ಸರಾಂಸಿ** ಎಂಬ ಶಬ್ದಕ್ಕೆ ವಿಶೇಷಣವಾಗಿರುವವು ಎಂಬ ಪಕ್ಷದಲ್ಲಿ ಮಾಡಿರುವ ಅರ್ಥಗಳು ಮೂವತ್ತು ಸರೋವರಗಳ ತುಂಬಾ ಇರುವ ಮೇಲೆ ಹೇಳಿದ ಗುಣಗಳುಳ್ಳ ಸೋಮರಸವನ್ನು ಇಂದ್ರನು ಒಂದೇ ಗುಟುಕಿನಿಂದ ಪಾನಮಾಡಿದನು ಎಂದರ್ಥವು **ಸಾಕಂ** ಎಂದರೆ ಸಹ, ಒಂದೇಸಲಕ್ಕೆ ಎಂದರ್ಥವು ಸ್ವಲ್ಪಸ್ವಲ್ಪವಾಗಿ ಹೀರುತ್ತಾ ಕುಡಿಯಲಿಲ್ಲ. ಒಂದೇ ಸಲಕ್ಕೆ ಒಂದೇ ಗುಟುಕಿನಲ್ಲಿ ಎಲ್ಲವನ್ನೂ ಏಕಕಾಲದಲ್ಲಿ ಪಾನಮಾಡಿದನು ಎಂದಭಿಪ್ರಾಯವು

ಅಥವಾ **ಕಾಣುಕಾ** ಎಂಬ ಶಬ್ದವನ್ನು ಇಂದ್ರನಿಗೆ ವಿಶೇಷಣವೆಂದು ಭಾವಿಸುವುದಾದರೆ-**ಇಂದ್ರಃ ಸೋಮಸ್ಯ ಕಾಂತ ಇತಿ ವಾ ।** ಇಂದ್ರನು ಸೋಮರಸದಲ್ಲಿ ಅಭಿರುಚಿಯುಳ್ಳವನು, ಸೋಮರಸವನು ಪ್ರೀತಿಸುವವನು, ಅಥವಾ **ಕಣೇ, ಘಾತ ಇತಿ ವಾ ಕಣೇ ಹತಃ ಕಾಂತಿಹತಃ। ಕಾಂತಿರಭಿಲಾಷ ಇತ್ಯರ್ಥಃ।** ಇಂದ್ರನು ತನ್ನ ಅಭಿಲಾಷೆಯು ಪೂರ್ತಿಯಾಗುವವರಿಗೆ, ಯಥೇಚ್ಛವಾಗಿ ಪಾನಮಾಡುವವನು ಎಂಬ ಎರಡು ವಿಧವಾದ ಅರ್ಥಗಳನ್ನೂ ಹೇಳಬಹುದು.

**ಸರಾಂಸಿ ತ್ರಿಂಶತಂ**—ಇಲ್ಲಿ **ಸರಾಂಸಿ** ಎಂಬ ಶಬ್ದಕ್ಕೆ ಪಾತ್ರೆಗಳು ಎಂದರ್ಥವು. ಈ ಶಬ್ದಗಳಿಗೆ ಎರಡು ವಿಧವಾದ ಅರ್ಥಗಳನ್ನು ಹೇಳಬಹುದೆಂದು ಯಾಸ್ಕರು ಹೇಳಿದಾರೆ ಯಾಜ್ಞಿಕಪಕ್ಷ ಎಂದರೆ ಯಜ್ಞಯಾಗಾದಿಗಳಲ್ಲಿ ಪ್ರವೀಣರಾದವರು ಈ ರೀತಿ ಹೇಳುವರು—

**ತ್ರಿಂಶದುಕ್ಥಪಾತ್ರಾಣಿ ಮಾಧ್ಯಂದಿನೇ ಸವನ ಏಕದೇವತಾನಿ । ತತ್ರ ಹಿ ಮಾಧ್ಯಂದಿನೇ ಸವನೇ ಉಕ್ಥಪರ್ಯಾಯಾಃ ತ್ರಯಸ್ತ್ರಯೋಽಪ್ಯೈಂದ್ರಾ ಏವ ಭವಂತಿ ತ್ರಿಷ್ವಪಿ ಚೈತೇಷು ದಶದಶ ಚಮಸಾಃ । ತದಭಿಪ್ರಾಯೇಣ ತ್ರಿಂಶತ್ಸರಾಂಸೀತ್ಯುಕ್ತಂ ಮಂತ್ರದೃಶಾ ॥**

(ನಿರು. ವ್ಯಾಖ್ಯಾ)

ಮಾಧ್ಯಂದಿನ ಸವನಕಾಲದಲ್ಲಿ ಉಕ್ಥಪಾತ್ರೆಗಳೆಂಬ ಮೂವತ್ತು ಪಾತ್ರೆಗಳನ್ನೂ ಒಂದೇ ದೇವತೆಯನ್ನುದ್ದೇಶಿಸಿ (ಇಂದ್ರನನ್ನುದ್ದೇಶಿಸಿ) ಸಂಸ್ಕರಿಸಲ್ಪಡುವವು. ಆ ಪಾತ್ರೆಗಳನ್ನು ಸರಾಂಸಿ ಎಂದು ಹೇಳುವ ರೂಢಿ ಇದೆ. ಆದ್ದರಿಂದ ಇಂದ್ರನಿಗಾಗಿ ಮಾಧ್ಯಂದಿನಸವನದಲ್ಲಿ ಸಿದ್ಧಪಡಿಸಿರುವ ಮೂವತ್ತು ಪಾತ್ರೆಗಳ ತುಂಬ ಇರುವ ಸೋಮವನ್ನು ಇಂದ್ರನು ಒಂದೇಗುಟುಕಿನಲ್ಲಿ ಪಾನಮಾಡಿದನು ಎಂದು ಇಲ್ಲಿ ಹೇಳಲಾಗಿದೆ ಇದು ಯಾಜ್ಞಿಕರ ಅಭಿಪ್ರಾಯವು.

ಇನ್ನು ಎರಡನೆಯ ಪಕ್ಷದವರ ಅಭಿಪ್ರಾಯವು ಈ ರೀತಿಯಾಗಿದೆ—ಒಂದು ತಿಂಗಳಲ್ಲಿ ಪೂರ್ವಪಕ್ಷ, ಅಪರಪಕ್ಷ ಎಂದು ಎರಡು ಪಕ್ಷಗಳಿರುವವು ಒಂದು ಪಕ್ಷವೆಂದರೆ ಹದಿನೈದು ಹಗಲು ಮತ್ತು ಹದಿನೈದು ರಾತ್ರಿಗಳು ಒಟ್ಟು

ಮೂವತ್ತಾಗುವವು. ಅಪರಪಕ್ಷದಲ್ಲಿರುವ ಮೂವತ್ತು ಅಹೋರಾತ್ರಿಗಳಲ್ಲಿ ಚಂದ್ರನಲ್ಲಿರುವ ಸೋಮವನ್ನು ರಶ್ಮಿಗಳು ಹೀರುವವು. ಈ ವಿಷಯದಲ್ಲಿ—

**ಯಥಾ ದೇವಾ ಅಂಶುಮಾಪ್ಯಾಯಯಂತಿ ಯಮಕ್ಷಿತಿಮಕ್ಷಿತಯಃ ಪಿಬಂತಿ ।**
**ತೇನ ಚೇಂದ್ರೋ ವರುಣೋ ಬೃಹಸ್ಪತಿರಾಪ್ಯಾಯಯಂತು ಭುವನಸ್ಯ ಗೋಪಾಃ ॥**

ಎಂಬ ಶ್ರುತಿವಾಕ್ಯದ ಸಮರ್ಥನೆಯೂ ಇರುವುದು. ಇದು ನಿರುಕ್ತಕಾರರ ಅಭಿಪ್ರಾಯವು.

॥ ಸಂಹಿತಾಪಾಠಃ ॥

ಅಭಿ ಗಂಧರ್ವಮತೃಣದಬುಧ್ನೇಷು ರಜಃಸ್ವಾ ।
ಇಂದ್ರೋ ಬ್ರಹ್ಮಭ್ಯ ಇದ್ವೃಧೇ ॥ ೫ ॥

॥ ಪದಪಾಠಃ ॥

ಅಭಿ । ಗಂಧರ್ವಂ । ಅತೃಣತ್ । ಅಬುಧ್ನೇಷು । ರಜಃಽಸು । ಆ ।
ಇಂದ್ರಃ ಬ್ರಹ್ಮಽಭ್ಯಃ । ಇತ್ । ವೃಧೇ ॥ ೫ ॥

॥ ಸಾಯಣಭಾಷ್ಯಂ ॥

**ಅಯಮಿಂದ್ರೋ ಗಂಧರ್ವಂ । ಗಾಮುದಕಂ ಧಾರಯತೀತಿ ಗಂಧರ್ವೋ ಮೇಘಃ । ತಮ-ಭ್ಯಾತೃಣತ್ । ಸರ್ವತೋ ಹಿಂಸಿತವಾನ್ । ಕುತ್ರ । ಅಬುಧ್ನೇಷು ಪದನಿಧಾನಯೋಗ್ಯಸ್ಥಾನರಹಿತೇಷು ರಜಸು ಲೋಕೇಷು । ಅಂತರಿಕ್ಷಪ್ರದೇಶೇಷ್ವಿತ್ಯರ್ಥಃ । ಕಿಮರ್ಥಂ । ಬ್ರಹ್ಮಭ್ಯ ಇದ್ಬ್ರಹ್ಮಣೇಭ್ಯ ಏವ ವೃಧೇ ವರ್ಧನಾಯ ॥**

॥ ಪ್ರತಿಪದಾರ್ಥ ॥

**ಅಬುಧ್ನೇಷು**—ಪಾದವನ್ನಿಡುವುದಕ್ಕೆ ಆಧಾರವೇ ಇಲ್ಲದಿರುವ । **ರಜಃಸು**—ಅಂತರಿಕ್ಷಲೋಕಗಳಲ್ಲಿ । **ಬ್ರಹ್ಮಭ್ಯ ಇತ್**—ಕೇವಲ ಬ್ರಹ್ಮಜ್ಞಾನಿಗಳ । **ವೃಧೇ**—ವೃದ್ಧಿಗಾಗಿಯೇ (ವೃಷ್ಟ್ಯರ್ಥವಾಗಿ) । **ಇಂದ್ರಃ**—ಇಂದ್ರನು । **ಗಂಧರ್ವಂ**—ಮೇಘವನ್ನು । **ಅಭ್ಯಾತೃಣತ್**—ಸೀಳಿಹಾಕಿದನು.

॥ ಭಾವಾರ್ಥ ॥

ಪಾದವನ್ನಿಡುವುದಕ್ಕೆ ಆಧಾರವೇ ಇಲ್ಲದಿರುವ ಅಂತರಿಕ್ಷಲೋಕಗಳಲ್ಲಿ ಕೇವಲ ಬ್ರಹ್ಮಜ್ಞಾನಿಗಳ ವೃದ್ಧಿಗಾಗಿಯೇ ವೃಷ್ಟಿಯನ್ನು ಸುರಿಸಲು ಇಂದ್ರನು ಮೇಘವನ್ನು ಸೀಳಿಹಾಕಿದನು.

## English Translation

In the realms (of the sky) where the foot finds no resting-place, Indra shattered the cloud to bring increase to the Brahmans.

॥ ಸಂಹಿತಾಪಾಠಃ ॥

ನಿರಾವಿಧ್ಯದ್ಗಿರಿಭ್ಯ ಆ ಧಾರಯತ್ಪಕ್ವಮೋದನಂ ।

ಇಂದ್ರೋ ಬುಂದಂ ಸ್ವಾತತಂ ॥ ೬ ॥

॥ ಪದಪಾಠಃ ॥

ನಿಃ । ಅವಿಧ್ಯತ್ । ಗಿರಿಽಭ್ಯಃ । ಆ । ಧಾರಯತ್ । ಪಕ್ವಂ । ಓದನಂ ।

ಇಂದ್ರಃ । ಬುಂದಂ । ಸುಽಆತತಂ । ೬ ॥

॥ ಸಾಯಣಭಾಷ್ಯಂ ॥

ಅಯಮಿಂದ್ರೋ ಗಿರಿಭ್ಯೋ ಮೇಘೇಭ್ಯಃ ಸಕಾಶಾದುದಕಂ ನಿರ್ಗಮಯಿತುಂ ನಿರಾವಿಧ್ಯತ್ । ಸಂಪ್ರಾಹರತ್ತಾನೇವ ಮೇಘಾನ್ । ಕಿಂ ಕುರ್ವನ್ । ಪಕ್ವಂ ಪರಿಪಕ್ವಮೋದನಂ ಕುರ್ವನ್ಮನುಷ್ಯಾಣಾಮರ್ಥಾಯ । ಕೇನ ಸಾಧನೇನೇತಿ ತದುಚ್ಯತೇ । ಬುಂದಮಿಷುಂ ಸ್ವಾತತಂ ಸುಷ್ಠು ಸರ್ವತೋ ವಿಸ್ತೃತಮಾದಾಯೇತಿ ಶೇಷಃ ॥

॥ ಪ್ರತಿಪದಾರ್ಥ ॥

**ಇಂದ್ರಃ**—ಇಂದ್ರನು । **ಸ್ವಾತತಂ**—ಅತ್ಯಂತ ವಿಸ್ತೃತವಾಗಿರುವ । **ಬುಂದಂ**—ಬಾಣವನ್ನು ಪ್ರಯೋಗಿಸಿ **ಗಿರಿಭ್ಯಃ**—ಮೇಘಗಳಿಂದ । **ನಿರಾವಿಧ್ಯತ್**—(ಅವುಗಳನ್ನು ಸೀಳಿ) ವೃಷ್ಟಿಯನ್ನು ಸುರಿಸಿದನು । **ಪಕ್ವಂ**—ಪರಿಪಕ್ವವಾದ । **ಓದನಂ**—ಅನ್ನವನ್ನು । **ಆ ಧಾರಯತ್**—ಮಾನವರಿಗಾಗಿ ಧರಿಸಿದನು

॥ ಭಾವಾರ್ಥ ॥

ಇಂದ್ರನು ಅತ್ಯಂತ ವಿಸ್ತೃತವಾಗಿರುವ ಬಾಣವನ್ನು ಪ್ರಯೋಗಿಸಿ ಮೇಘಗಳಿಂದ ಅವುಗಳನ್ನು ಸೀಳಿ ವೃಷ್ಟಿಯನ್ನು ಸುರಿಸಿದನು. ಪರಿಪಕ್ವವಾದ ಅನ್ನವನ್ನು ಮಾನವರಿಗಾಗಿ ಧರಿಸಿದನು. (ಒದಗಿಸಿದನು)

## English Translation

Indra smote (rain) from the clouds with his far-stretched arrow, he secured boiled rice (for men).

॥ ವಿಶೇಷವಿಶಯಗಳು ॥

**ಬುಂದಂ-ಇಷುಂ** । ಬಾಣವನ್ನು; ಬುಂದಶಬ್ದಕ್ಕೆ ಯಾಸ್ಕರು ಈ ರೀತಿ ನಿರ್ವಚನವನ್ನು ಹೇಳಿದಾರೆ—

**ಬುಂದಃ । ಬುಂದ ಇಷುರ್ಭವತಿ । ಬುಂದೋ ವಾ ಭಿಂದೋ ವಾ ಭಯದೋ ವಾ ಭಾಸಮಾನೋ ದ್ರವತೀತಿ ವಾ । ನಿರವಿಧ್ಯದ್ಗಿರಿಭ್ಯ ಆಧಾರಯತ್ಪಕ್ವಮೋದನಂ । ಇಂದ್ರೋ ಬುಂದಂ ಸ್ವಾತತಂ । ನಿರವಿಧ್ಯದ್ಗಿರಿಭ್ಯ ಆಧಾರಯತ್ಪಕ್ವಮೋದನಮುದಕದಾನಂ ಮೇಘಂ । ಇಂದ್ರೋ ಬುಂದಂ ಸ್ವಾತತಂ ।**

(ನಿ ೬-೩೪)

**ಬುಂದ** ಎಂದರೆ ಬಾಣವು ಬಾಣವು ಲಕ್ಷ್ಯವಸ್ತುವನ್ನು ಚುಚ್ಚುವುದರಿಂದ ಅಥವಾ ಶತ್ರುಗಳಿಗೆ ಭಯವನ್ನುಂಟುಮಾಡುವುದರಿಂದ ಅಥವಾ ಬಿಲ್ಲಿನಿಂದ ಹೊರಟಾಗ ಪ್ರಕಾಶಿಸುವುದರಿಂದ ಬಾಣಕ್ಕೆ ಬುಂದವೆಂದು ಹೆಸರು ಈ ಶಬ್ದದ ಪ್ರಯೋಗವು ಪ್ರಕೃತ ಋಕ್ಕಿನಲ್ಲಿರುವುದು. ಇಂದ್ರನು ಪರ್ವತಗಳಲ್ಲಿ ನಿಂತು ಅಲ್ಲಿಂದ ಬಿಲ್ಲಿನಲ್ಲಿ ಬಾಣವನ್ನು ಹೂಡಿ ಅದನ್ನು ಆಕರ್ಣಾಂತವಾಗಿ ಎಳೆದು ವೃಷ್ಟಿಯನ್ನು ಸುರಿಸಲು ಸಮರ್ಥವಾಗಿರುವ ಎಂದರೆ ಹೆಚ್ಚಾದ ನೀರಿನಿಂದ ಪೂರ್ಣವಾದ ಮೇಘವನ್ನು ಸೀಳಿ ವೃಷ್ಟಿಯನ್ನು ಸುರಿಸಿದನು ಎಂದು ನಿರ್ವಚನದ ಅಭಿಪ್ರಾಯವು.

॥ ಸಂಹಿತಾಪಾಠಃ ॥

ಶತಬ್ರಧ್ನ ಇಷುಸ್ತವ ಸಹಸ್ರಪರ್ಣ ಏಕ ಇತ್ ।
ಯಮಿಂದ್ರ ಚಕೃಷೇ ಯುಜಂ ॥ ೭ ॥

। ಪದಪಾಠಃ ।

ಶತऽಬ್ರಧ್ನಃ । ಇಷುಃ । ತವ । ಸಹಸ್ರऽಪರ್ಣಃ । ಏಕಃ । ಇತ್ ।
ಯಂ । ಇಂದ್ರ । ಚಕೃಷೇ । ಯುಜಂ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ತವೇಷುಃ ಶತಬ್ರಧ್ನಃ ಶತಾಗ್ರಃ ಸಹಸ್ರಪರ್ಣಃ ಸಹಸ್ರಸಂಖ್ಯಾಕೈಃ ಪತ್ರೈಃ ಸಂವೃತಃ ಶೀಘ್ರಗಮನಾಯ । ಅಪರಿಮಿತಗಮನೋ ವಾ । ಸ ಚೈಕ ಇದೇಕ ಏವ । ಯಂ ಚೇಷುಂ ಯುಜಂ ಸಹಾಯಂ ಚಕೃಷೇ ಕರೋಷಿ ಯುದ್ಧಾಯ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಯಂ**—ಯಾವ ಬಾಣವನ್ನು । **ಯುಜಂ**—ನಿನ್ನ ಯುದ್ಧಕ್ಕೆ ಸಾಧನವನ್ನಾಗಿ । **ಚಕೃಷೇ**—ಮಾಡಿಕೊಳ್ಳುವೆಯೋ । **ಏಕ ಇತ್**—ಅಂತಹ ಒಂದೇ ಆದ । **ತವ ಇಷುಃ**—ನಿನ್ನ ಬಾಣವು ।

**ಶತಬ್ರಧ್ನಃ**—ನೂರು ಮೊನಚಾದ ತುದಿಗಳುಳ್ಳದ್ದೂ । **ಸಹಸ್ರಪರ್ಣಃ**—ಸಹಸ್ರಸಂಖ್ಯಾಕವಾದ ಪತ್ರವುಳ್ಳದ್ದೂ (ರೆಕ್ಕೆಗಳುಳ್ಳದ್ದೂ) ಆಗಿರುತ್ತದೆ

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವ ಬಾಣವನ್ನು ನಿನ್ನ ಯುದ್ಧಕ್ಕೆ ಸಾಧನವನ್ನಾಗಿ ಮಾಡಿಕೊಳ್ಳುವೆಯೋ, ಅಂತಹ ಒಂದೇ ಆದ ನಿನ್ನ ಬಾಣವು ನೂರು ಮೊನಚಾದ ತುದಿಗಳುಳ್ಳದ್ದೂ ಸಹಸ್ರಸಂಖ್ಯಾಕವಾದ ಪತ್ರವುಳ್ಳದ್ದೂ ಆಗಿರುತ್ತದೆ.

## English Translation

That single shaft of yours, Indra, which you make your ally, is hundred-pointed, thousand-feathered

॥ ಸಂಹಿತಾಪಾಠಃ ॥

ತೇನ ಸ್ತೋತೃಭ್ಯ ಆ ಭರ ನೃಭ್ಯೋ ನಾರಿಭ್ಯೋ ಅತ್ತವೇ ।
ಸದ್ಯೋ ಜಾತ ಋಭುಷ್ಠಿರ ॥ ೮ ॥

॥ ಪದಪಾಠಃ ॥

ತೇನ । ಸ್ತೋತೃಽಭ್ಯಃ । ಆ । ಭರ । ನೃಽಭ್ಯಃ । ನಾರಿಽಭ್ಯಃ । ಅತ್ತವೇ ।
ಸದ್ಯಃ । ಜಾತಃ । ಋಭುಽಸ್ಥಿರ ॥ ೮ ॥

॥ ಸಾಯಣಭಾಷ್ಯಂ ॥

ತೇನೇಷುಣಾ ಸ್ತೋತೃಭ್ಯೋಽಸ್ಮಭ್ಯಂ ನೃಭ್ಯೋ ಮನುಷ್ಯೇಭ್ಯಃ । ಪುತ್ರೇಭ್ಯ ಇತ್ಯರ್ಥಃ । ತಥಾ ನಾರಿಭ್ಯಃ ಸ್ತ್ರೀಭ್ಯಶ್ಚಾತ್ತವೇಽದನಾಯ ಪರ್ಯಾಪ್ತಂ ಧನಮಾಭರ । ಆಹರ । ಸದ್ಯಸ್ತದಾನೀಮೇವ ಜಾತೋಽಸ್ಮಾಭಿರ್ದತ್ತೇನ ಸೋಮೇನ ಪ್ರವೃದ್ಧಃ ಸನ್ ಹೇ ಋಭುಷ್ಠಿರ । ಉರುಃ ಪ್ರಭೂತಃ ಸ್ಥಿರಶ್ಚ ಸಂಗ್ರಾಮೇ ಸ ತಥೋಕ್ತಃ । ಹೇ ತಾದೃಶೇಂದ್ರ ತ್ವಮಾ ಭರೇತಿ ಸಮನ್ವಯಃ ॥

॥ ಪ್ರತಿಪದಾರ್ಥ ॥

**ಋಭುಷ್ಠಿರ**—ಯುದ್ಧಗಳಲ್ಲಿ ಸ್ಥಿರವಾದುದೂ ಮಹತ್ತಾದುದೂ ಆದ ಸ್ಥಿತಿಯುಳ್ಳ ಎಲೈ ಇಂದ್ರನೇ । **ಸದ್ಯಃ**—ನಾವು ಸೋಮವನ್ನು ಅರ್ಪಿಸಿದ ಒಡನೆಯೇ । **ಜಾತಃ**—ವೃದ್ಧಿಯನ್ನು ಹೊಂದಿದವನಾಗಿ । **ತೇನ**—ಅದೇ ಬಾಣದ ಸಹಾಯದಿಂದ । **ಸ್ತೋತೃಭ್ಯಃ**—ಸ್ತುತಿಕರ್ತರಾದ ನಮಗೂ । **ನೃಭ್ಯಃ**—ನಮ್ಮ ಪುತ್ರಾದಿಗಳಿಗೂ । **ನಾರಿಭ್ಯಃ**—ಹೆಂಗಸರಿಗೂ (ಪತ್ನ್ಯಾದಿಗಳಿಗೂ) । **ಅತ್ತವೇ**—ಭೋಗಾರ್ಥವಾಗಿ ಬೇಕಾದ ಸಂಪತ್ತನ್ನು । **ಆ ಭರ**—ಸಂಪಾದಿಸಿಕೊಡು

॥ ಭಾವಾರ್ಥ ॥

ಯುದ್ಧಗಳಲ್ಲಿ ಸ್ಥಿರವಾದುದೂ, ಮಹತ್ತಾದುದೂ ಆದ ಸ್ಥಿತಿಯುಳ್ಳ ಎಲೈ ಇಂದ್ರನೇ, ನಾವು ಸೋಮವನ್ನು ಅರ್ಪಿಸಿದೊಡನೆಯೇ ನೀನು ವೃದ್ಧಿಯನ್ನು ಹೊಂದಿದವನಾಗಿ ಅದೇ ಬಾಣದ ಸಹಾಯದಿಂದ ಸ್ತುತಿಕರ್ತರಾದ ನಮಗೂ ನಮ್ಮ ಪುತ್ರಾದಿಗಳಿಗೂ ಮತ್ತು ಪತ್ನ್ಯಾದಿಗಳಿಗೂ ಭೋಗಾರ್ಥವಾಗಿ ಬೇಕಾದ ಸಂಪತ್ತನ್ನು ಸಂಪಾದಿಸಿಕೊಡು.

English Translation

Forthwith increased ( by our offerings ), you, mighty and firm, by that (weapon) bring (wealth) for sustenance to us your praisers, our children, and our wives.

॥ ಸಂಹಿತಾಪಾಠಃ ॥

ಏತಾ ಚ್ಯೌತ್ನಾನಿ ತೇ ಕೃತಾ ವರ್ಷಿಷ್ಠಾನಿ ಪರೀಣಸಾ ।

ಹೃದಾ ವೀಡ್ವಧಾರಯಃ ॥ ೯ ॥

॥ ಪದಪಾಠಃ ॥

ಏತಾ । ಚ್ಯೌತ್ನಾನಿ । ತೇ । ಕೃತಾ । ವರ್ಷಿಷ್ಠಾನಿ । ಪರೀಣಸಾ ।

ಹೃದಾ । ವೀಳು । ಅಧಾರಯಃ । ೯ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತ್ವಯೈತೈತಾನಿ ಪುರತಃ ಸರ್ವೈರ್ದೃಶ್ಯಮಾನಾನಿ ವರ್ಷಿಷ್ಠಾನ್ಯತಿಶಯೇನ ಪ್ರವೃದ್ಧಾನಿ ಪರೀಣಸಾ ಪರಿತೋ ನತಾನಿ ಅತ ಏವ ಚ್ಯೌತ್ನಾನೀತಿ ಭಾವಃ । ಭೂಮೇಃ ಕೀಲವದ್ಧಾರಣಾಯ ಕೃತಾ ಕೃತಾನಿ । ಪರ್ವತಾಸ್ತ್ವಯಾ ಕೃತಾ ಇತ್ಯರ್ಥಃ । ಯಾ ಯಾನಿ ಹೃದಾ ಬುದ್ಧ್ಯಾ ವೀಳು ಸ್ಥಿರಾಣ್ಯಧಾರಯಃ । ಬುದ್ಧ್ಯಾ ಕರ್ತವ್ಯಾನೀತಿ ಯಾನ್ಯಧಾರಯಃ ತಾನೀಮಾನೀತಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ಏತಾ—ಸರ್ವವಿದಿತವಾಗಿ ಕಾಣುತ್ತಿರುವುದೂ । ವರ್ಷಿಷ್ಠಾನಿ—ಅತಿಪ್ರವೃದ್ಧವಾದುದೂ। ಪರೀಣಸಾ—ವಿಸ್ತೃತವಾಗಿ ವ್ಯಾಪಿಸಿರುವುದೂ । ಚ್ಯೌತ್ನಾನಿ—ಅತ್ಯುತ್ಕೃಷ್ಟವಾದ ಬಲವುಳ್ಳವೂ ಆದ ಸಕಲವೂ । ತೇ—ನಿನ್ನಿಂದಲೇ । ಕೃತಾ—ನಿರ್ಮಿತವಾಗಿವೆ (ಇವೆಲ್ಲವನ್ನೂ ಸಹ) । ಹೃದಾ—ನಿನ್ನ ಹೃದಯದಲ್ಲಿಯೇ । ವೀಳು—ಸ್ಥಿರವಾಗಿ । ಅಧಾರಯಃ—ಧರಿಸಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಸರ್ವರಿಗೂ ತಿಳಿಯುವಂತಿರುವುದೂ, ಅತಿ ಪ್ರವೃದ್ಧವಾದುದೂ, ವಿಸ್ತೃತವಾಗಿ ವ್ಯಾಪಿಸಿರುವುವೂ ಅತ್ಯುತ್ಕೃಷ್ಟವಾದ ಬಲವುಳ್ಳವೂ ಆದ ಸಕಲವಸ್ತುಗಳೂ ನಿನ್ನಿಂದಲೇ ನಿರ್ಮಿತವಾಗಿವೆ. ಇವೆಲ್ಲವನ್ನೂ ನಿನ್ನ ಮನಃಸಂಕಲ್ಪದಿಂದಲೇ ಧರಿಸಿದ್ದೀಯೆ.

English Translation

These gignatic far reaching efforts were put forth by you; you fiixed them firm in your thought.

॥ ಸಂಹಿತಾಪಾಠಃ ॥

ವಿಶ್ವೇತ್ತಾ ವಿಷ್ಣುರಾಭರದುರುಕ್ರಮಸ್ತ್ವೇಷಿತಃ ।
ಶತಂ ಮಹಿಷಾನ್ಕ್ಷೀರಪಾಕಮೋದನಂ ವರಾಹಮಿಂದ್ರ ಏಮುಷಂ॥

॥ ಪದಪಾಠಃ ॥

ವಿಶ್ವಾ । ಇತ್ । ತಾ । ವಿಷ್ಣುಃ । ಆ । ಅಭರತ್ । ಉರುऽಕ್ರಮಃ । ತ್ವಾऽಇಷಿತಃ ।
ಶತಂ । ಮಹಿಷಾನ್ । ಕ್ಷೀರऽಪಾಕಂ । ಓದನಂ । ವರಾಹಂ । ಇಂದ್ರಃ । ಏಮುಷಂ ॥೧೦॥

॥ ಸಾಯಣಭಾಷ್ಯಂ ॥

ಅಸ್ಯಾ ಋಚೋ ನಿರುಕ್ತೈತಿಹಾಸಿಕಮತಭೇದೇನ ದ್ವಿಧಾ ಯೋಜನಾ । ನೈರುಕ್ತಪಕ್ಷೇ ತಾವತ್ । ಹೇ ಇಂದ್ರ ತಾ ತಾನಿ ಯಾನಿ ತ್ವಯಾ ಸೃಷ್ಟವ್ಯಾನ್ಯುದಕಾನಿ ಗತಿ ತಾನಿ ವಿಷ್ಣುರ್ವ್ಯಾಪನಶೀಲ ಆದಿತ್ಯ ಆಭರತ್ । ಆ ಭರತಿ । ಲೋಕಾಯ ಪ್ರಯಚ್ಛತೀತ್ಯರ್ಥಃ । ಕೀದೃಶೋ ವಿಷ್ಣುಃ ಉರುಕ್ರಮೋ ಬಹುಗತಿಃ । ಕಿಂ ಸ್ವವಿರೋಧೇನೇತಿ ಆಹ । ತ್ವೇಷಿತಸ್ತ್ವಯಾ ಪ್ರೇರಿತಃ । ನ ಕೇವಲಮುದಕಾನ್ಯೇವ ಅಪಿ ಚ ಶತಂ ಮಹಿಷಾಞ್ಛತಸಂಖ್ಯಾಕಾನ್ಪಶೂನ್ । ಮಹಿಷಶಬ್ದೋ ಗವಾದೀನಾಮುಪಲಕ್ಷಕಃ । ಅಥವಾ ಶತಶಬ್ದೋಽಪರಿಮಿತವಚನೇ ಮಹಿಷ ಇತಿ ಮಹನ್ನಾಮ । ಅಸಂಖ್ಯಾತಾನ್ಮಹತೋ ಯಜ್ಞಾನ್ಯಜಮಾನೇಭ್ಯ ಆಭರತ್ । ದದಾತೀತ್ಯರ್ಥಃ । ಕಿಂಚ ಕ್ಷೀರಪಾಕಂ ಕ್ಷೀರಪಕ್ವಮೋದನಂ ಪಾಯಸಂ । ಏತಚ್ಚರುಪುರೋಡಾಶಾದೇರುಪಲಕ್ಷಕಂ । ತದ್ಯಜಮಾನೇಭ್ಯ ಆಭರತ್ । ಅಥವಾ ಸರ್ವಾರ್ಥಂ ವೃಷ್ಟಿಪ್ರದಾನದ್ವಾರೌದನಂ ಪ್ರಾಹರತ್ । ಕಿಂಚೇಂದ್ರೋ ವರಾಹಂ ಜಲಪೂರ್ಣಂ ಮೇಘಂ ಹಂತೀತಿ ಶೇಷಃ । ಕೀದೃಶಂ ತಂ । ಏಮುಷಂ ॥ ಆ ಇತ್ಯಸ್ಯ ಸ್ಥಾನೇ ಛಾಂದಸ ಏಕಾರಃ ॥ ಆಮುಷ-

ಮುದಕಸ್ಯ ಮೋಷಕಮಿತ್ಯರ್ಥಃ । ನಿರುಕ್ತಪಕ್ಷ ಏವಂ ॥ ಐತಿಹಾಸಿಕಪಕ್ಷೇ ಚರಕಬ್ರಾಹ್ಮಣ ಇತಿಹಾಸ ಆಮ್ನಾಯತೇ । ವಿಷ್ಣುರ್ಯಜ್ಞಃ । ಸ ದೇವೇಭ್ಯ ಆತ್ಮಾನಮಂತರಧಾತ್ । ತಮನ್ಯದೇವತಾ ನಾವಿದನ್ನಿಂದ್ರಸ್ತ್ವವೇತ್ । ಸ ಇಂದ್ರಮಬ್ರವೀತ್ ಕೋ ಭವಾನಿತಿ । ತಮಿಂದ್ರಃ ಪ್ರತ್ಯಬ್ರವೀದಹಂ ದುರ್ಗಾಣಾಮಸುರಾಣಾಂ ಚ ಹಂತಾ ಭವಾಂಸ್ತು ಕ ಇತಿ । ಸೋಽಬ್ರವೀದಹಂ ದುರ್ಗದಾಹರ್ತಾ ತ್ವಂ ತು ಯದಿ ದುರ್ಗಾಣಾಮಸುರಾಣಾಂ ಹಂತಾ ತತೋಽಯಂ ವಾರಾಹೋ ವಾಮಮೋಷ ಏಕವಿಂಶತ್ಯಾಃ ಪುರಾಂ ಪಾರೇಽಶ್ಮಮಯೀನಾಂ ವಸತಿ ತಸ್ಮಿನ್ನಸುರಾಣಾಂ ವಸು ವಾಮಮಸ್ತಿ ತಮಿಮಂ ಜಹೀತಿ । ತಸ್ಯೇಂದ್ರಸ್ತಾಃ ಪುರೋ ಭಿತ್ವಾ ಹೃದಯಮವಿಧ್ಯತ್ । ಅಥ ತತ್ರ ಯದಾಸೀತ್ತದ್ವಿಷ್ಣುರಾಹರದಿತಿ ಸೋಽಯಮಿತಿಹಾಸೋಽಸ್ಯೇದು ಮಾತುಃ ಸವನೇಷು । ಋ. ೧-೬೧-೭ । ವಿಶ್ವೇತ್ತಾ ವಿಷ್ಣುರಿತ್ಯಾಭ್ಯಾಂ ಪ್ರತಿಪಾದಿತಃ । ತಯೋರ್ಮಧ್ಯೇಽಸ್ಯೇದು ಮಾತುರಿತ್ಯತ್ರ ವಿಷ್ಣುನಾ ಹೇ ಇಂದ್ರ ತ್ವಂ ದುರ್ಗಾಣಾಂ ಹಂತೇತ್ಯಾತ್ಮಾನಂ ಕಥಯಸಿ ತರ್ಹಿ ವಾಮಮುಷಂ ವರಾಹಮಸುರಂ ಜಹೀತ್ಯುಕ್ತಾರ್ಥೋ ವಿಧ್ಯದ್ವರಾಹಮಿತಿ ಪಾದೇನ ಪ್ರತಿಪಾದಿತಃ । ಇಂದ್ರೇಣ ಚ ವಿಷ್ಣೋ ತ್ವಂ ದುರ್ಗದಾಹರ್ತೇತಿ ಬ್ರೂಷೇ ಮಯಾ ಪುರಾಣಿ ಜಿತಾನ್ಯಸುರಶ್ಚ ಘಾತಿತಸ್ತಸ್ಯ ವಾಮಂ ವಸ್ವಾನಯೇತ್ಯುಕ್ತೋ ವಿಷ್ಣುಮೂರ್ತಿಸ್ತಸ್ಯ ವರಾಹಾಸುರಸ್ಯ ಧನಂ ಮುಷ್ಣೋಷ । ಸೋಽರ್ಥೋ ಮುಷಾಯದ್ವಿಷ್ಣುಃ ಪಚತಮಿತಿ ಪಾದೇನ ಸೂಚಿತಃ । ಸ ಕಿಂ ಪುನರ್ಮುಷಿತವಾನಿತಿ ತದತ್ರೋಚ್ಯತೇ ವಿಶ್ವೇತ್ತೇತಿ । ಹೇ ಇಂದ್ರ ತ್ವೇಷಿತಸ್ತ್ವಯಾ ಪ್ರೇರಿತೋ ವಿಷ್ಣುರ್ಯಜ್ಞರೂಪೀ ತ್ವೇಷಿತಸ್ತ್ವಂ ದುರ್ಗದಾಹರ್ತಾ ಕಿಲ ತರ್ಹಿ ತ್ವಂ ತಸ್ಯ ಧನಾನ್ಯಾಹರೇತಿ ತ್ವಯಾ ಪ್ರೇರಿತಃ ಸನ್ನುರುಕ್ರಮೋ ಭೂತ್ವಾ ವಿಶ್ವೇತ್ತಾ ಯಾನಿ ತ್ವಯಾಹರ್ತವ್ಯಾನೀತ್ಯುಕ್ತಾನಿ ಯಾನಿ ಚ ತತ್ರ ಸ್ಥಿತಾನಿ ಸರ್ವಾಣ್ಯಾಭರತ್ । ಆಭರತು । ಕಾನಿ ತಾನೀತಿ । ಶತಂ ಮಹಿಷಾನಪರಿಮಿತಾನ್ಪಶ್ವಾದ್ಯರ್ಥಾನ್ ತೇಷಾಂ ವಾಹನರೂಪಾನ್ ಮಹಿಷಾನ್ವಾ ಕ್ಷೀರಪಾಕಮೋದನಂ ಚ ಪಕ್ವಮಾತ್ರಮೋದನಂ ಚಾಭರತ್ । ವಿಧ್ಯದ್ವರಾಹಮಿತ್ಯತ್ರೋಕ್ತೋಽರ್ಥಶ್ಚ ಚರಮಪಾದೇನೋಚ್ಯತೇ । ಇಂದ್ರಸ್ತು ವರಾಹಂ ವರಾಹಾರು ಸ್ವೀಕೃತಾಸುರಸರ್ವಸ್ವಂ ವರಾಹರೂಪಿಣಂ ವೈಮುಷಮೇಮುಷಸಾಮಾನ್ಯಧನ್ವೈಮುಷಂ ಧನಾನಾಮಾಮೋಷಕಂ ವರಾಹಮಸುರಂ ಹೃದಯೇಽವಿಧ್ಯದಿತಿ ಶೇಷಃ ।

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಉರುಕ್ರಮಃ**—ವಿಸ್ತೃತವಾದ ಸಂಚಾರವುಳ್ಳವನೂ । **ತ್ವೇಷಿತಃ**—ನಿನ್ನಿಂದಲೇ ಪ್ರೇರಿತನೂ । **ವಿಷ್ಣುಃ**—ವ್ಯಾಪಕನೂ ಆದ ಆದಿತ್ಯನು । **ತಾ ವಿಶ್ವಾ ಇತ್**—ನಿನ್ನಿಂದ ಸೃಷ್ಟವಾದ ಸಕಲ ಉದಕಗಳನ್ನೂ । **ಆ ಭರತ್**—ಭರಿಸುತ್ತಾನೆ । **ಶತಂ**—ಶತಸಂಖ್ಯಾಕವಾದ । **ಮಹಿಷಾನ್**—ಪಶುಗಳನ್ನೂ । **ಕ್ಷೀರಪಾಕಂ**—ಕ್ಷೀರದಿಂದ ಪಕ್ವಮಾಡಿದ । **ಓದನಂ**—ಅನ್ನವನ್ನೂ ಅವನೇ ಭರಿಸುತ್ತಾನೆ । **ಇಂದ್ರಃ**—ಇಂದ್ರನು । **ಏಮುಷಂ**—ಉದಕವನ್ನು ಧರಿಸಿರುವ (ಅಪಹರಿಸುವ) । **ವರಾಹಂ**—ಮೇಘವನ್ನು ಸೀಳುತ್ತಾನೆ

॥ ಭಾವಾರ್ಥ ॥

ಎಲೈ ಇಂದ್ರನೇ, ವಿಸ್ತೃತವಾದ ಸಂಚಾರವುಳ್ಳವನೂ, ನಿನ್ನಿಂದಲೇ ಪ್ರೇರಿತನೂ, ವ್ಯಾಪಕನೂ ಆದ ಆದಿತ್ಯನು ನಿನ್ನಿಂದ ಸೃಷ್ಟವಾದ ಸಕಲ ಉದಕಗಳನ್ನೂ ಭರಿಸುತ್ತಾನೆ ಶತಸಂಖ್ಯಾಕವಾದ ಪಶುಗಳನ್ನೂ ಕ್ಷೀರದಿಂದ ಪಕ್ವಮಾಡಿದ ಅನ್ನವನ್ನೂ ಅವನೇ ಭರಿಸುತ್ತಾನೆ ಇಂದ್ರನು ಉದಕಪೂರ್ಣವಾದ ಮೇಘವನ್ನು ಸೀಳುತ್ತಾನೆ

## English Translation

The wide-traversing Sun, depatched by you, brings (to the world) all these ( waters which you creat ); he brings hundreds of cattle and rice boiled in milk; it is Indra who slays the water-stealing boar.

॥ ವಿಶೇಷವಿಷಯಗಳು ॥

ಈ ಋಕ್ಕಿಗೆ ಎರಡು ವಿಧವಾದ ಅರ್ಥವಿವರಣೆ ಇದೆ ಒಂದು ನೈರುಕ್ತಪಕ್ಷವು, ಮತ್ತೊಂದು ಐತಿಹಾಸಕ್ಷ ಪಕ್ಷವು. ಈ ಎರಡು ವಿಧವಾದ ಅರ್ಥಗಳಲ್ಲದೆ ಯಾಸ್ಕರು ಈ ಋಕ್ಕಿಗೆ ನಿರ್ವಚನವನ್ನೂ ಹೇಳಿದಾರೆ. ಇವುಗಳನ್ನೆಲಾ ಇಲ್ಲಿ ಕ್ರಮವಾಗಿ ವಿವರಿಸುವುದು ಅವಶ್ಯಕವು.

### ನೈರುಕ್ತಪಕ್ಷದ ಅರ್ಥವಿವರಣೆ

(ಹೇ ಇಂದ್ರ—ಎಲೈ ಇಂದ್ರನೇ) । **ಉರುಕ್ರಮಃ**—ಬಹುವಿಧವಾದ ಗಮನವುಳ್ಳ ಎಂದರೆ ಯಾವಾಗಲೂ ಸಂಚರಿಸುತ್ತಲೇ ಇರುವ । **ವಿಷ್ಣುಃ**—ತನ್ನ ಕಿರಣಗಳಿಂದ ಸರ್ವತ್ರ ವ್ಯಾಪನಶೀಲನಾದ ಆದಿತ್ಯನು । **ತ್ವೇಷಿತಃ**—ನಿನ್ನಿಂದ ಪ್ರೇರಿತನಾಗಿ । **ತಾ**—ನಿನ್ನಿಂದ ಸೃಷ್ಟಿಸಲ್ಪಟ್ಟ ಉದಕಗಳನ್ನು । **ಆ ಭರತ್**—ಲೋಕೋಪಕಾರಾರ್ಥವಾಗಿ ಧರಿಸುತ್ತಾನೆ ಎಂದರೆ ಕೊಡುತ್ತಾನೆ । (ಮತ್ತು) **ಶತಂ ಮಹಿಷಾನ್**—ನೂರು ಪಶುಗಳನ್ನು ಅಥವಾ ಅನೇಕ ಪಶುಗಳನ್ನು । **(ಆ ಭರತ್)**—ಯಜ್ಞಮಾಡುವ ಯಜಮಾನರಿಗೆ ಕೊಡುತ್ತಾನೆ (ಮತ್ತು) । **ಕ್ಷೀರಪಾಕಂ**—ಹಾಲಿನಿಂದ ಪಕ್ವವಾದ । **ಓದನಂ**—ಪಾಯಸವನ್ನು ಎಂದರೆ ಚರುಪುರೋಡಾಶಾದಿರೂಪವಾದ ಹವಿರಾದಿಗಳನ್ನು । **(ಆ ಭರತ್)**—ಯಜಮಾನರಿಗೆ ಕೊಡುತ್ತಾನೆ । [**ಅಥವಾ ಓದನಂ**—ಭೂಮಿಯ ಮೇಲೆ ವೃಷ್ಟಿಯನ್ನು ಸುರಿಸುವುದರ ಮೂಲಕ ಸಸ್ಯಾದಿಗಳನ್ನು ಉತ್ಪತ್ತಿಮಾಡಿ ಅದರಿಂದ ಅನ್ನಾದ್ಯಾಹಾರಗಳ ಉತ್ಪತ್ತಿಗೆ ಕಾರಣವಾಗಿ ಅವುಗಳನ್ನು ಯಜಮಾನರಿಗೆ ಕೊಡುವನು] । ( ಮತ್ತು ) **ಇಂದ್ರಃ**—ಇಂದ್ರನು । **ಏಮುಷಂ**—ಜಲವನ್ನು ವೃಷ್ಟಿರೂಪದಲ್ಲಿ ಭೂಮಿಯ ಮೇಲೆ ಸುರಿಸದೆ ತಡೆವಿರತಕ್ಕ । **ವರಾಹಂ**—ಜಲಪೂರ್ಣವಾದ ಮೇಘವನ್ನು ಪ್ರಹರಿಸುತ್ತಾನೆ.

ಎಲೈ ಇಂದ್ರನೇ, ಸದಾಕಾಲದಲ್ಲಿಯೂ ಸಂಚರಿಸುತ್ತಲೇ ಇರುವ ಆದಿತ್ಯನು ತನ್ನ ರಶ್ಮಿಗಳ ಮೂಲಕ ಸಮುದ್ರಾದಿಜಲಾಶಯಗಳಲ್ಲಿರುವ ಉದಕವನ್ನು ಹೀರಿ ಆ ಉದಕವು ಮೇಘಗಳಾಗಿ ಪರಿವರ್ತಿತವಾಗುವಂತೆ ಮಾಡಿ ಭೂಮಿಯ ಮೇಲೆ ಲೋಕೋಪಕಾರಾರ್ಥವಾಗಿ ವೃಷ್ಟಿಯನ್ನು ಸುರಿಸುವನು. ಆದಿತ್ಯನು ಮಾಡುವ ಈ ಕಾರ್ಯವು ನಿನ್ನಿಂದ (ಇಂದ್ರನಿಂದ)ಲೇ ಪ್ರೇರಿತವಾಗಿರುವುದು ಎಂದರೆ ಇಂದ್ರನ ಆಜ್ಞೆಯಿಂದಲೇ ಆದಿತ್ಯನು ಲೋಕೋಪಕಾರಾರ್ಥವಾಗಿ ಭೂಮಿಯ ಮೇಲೆ ವೃಷ್ಟಿಯನ್ನು ಸುರಿಸುವನು. ಇದಲ್ಲದೆ ಯಜ್ಞಮಾಡುವ ಯಜಮಾನರ ಉಪಯೋಗಕ್ಕಾಗಿ ಅಸಂಖ್ಯಾತವಾದವೂ ಯಜ್ಞಾರ್ಹವಾದವೂ ಆದ ಪಶುಗಳನ್ನೂ ಕ್ಷೀರಪಕ್ವವಾದ ಅನ್ನಾದಿಗಳನ್ನೂ ಹೋಮಾರ್ಥವಾಗಿ ಕೊಡುವನು. ಈ ಕಾರ್ಯಗಳೆಲ್ಲವನ್ನೂ ಆದಿತ್ಯನು ಇಂದ್ರನಿಂದ ಪ್ರೇರಿತನಾಗಿಯೇ ಮಾಡುವನು. ಈ ಕೆಲಸಗಳನ್ನು ಇಂದ್ರನು ಆದಿತ್ಯನಿಂದ ಮಾಡಿಸಿ ತಾನೂ ಉದಕಗಳಿಂದ ಪೂರ್ಣವಾಗಿದ್ದರೂ ಅವುಗಳನ್ನು ಭೂಮಿಯಮೇಲೆ ವೃಷ್ಟಿರೂಪದಲ್ಲಿ ಬೀಳದಂತೆ ತಡೆದಿಟ್ಟುಕೊಂಡಿರುವ ಮೇಘಗಳನ್ನು ಪ್ರಹರಿಸಿ ವೃಷ್ಟಿಯನ್ನು ಸುರಿಸುವಂತೆ ಮಾಡುವನು ಇವೆಲ್ಲವೂ ಇಂದ್ರನ ಪ್ರಭಾವವೇ ಆಗಿದೆ.

ಮೇಲೆ ಹೇಳಿದ ವಿವರಣೆಯೆಲ್ಲವೂ ನಿರುಕ್ತಪಕ್ಷಕ್ಕೆ ಸೇರಿದ್ದಾಗಿದೆ ಇನ್ನು ಐತಿಹಾಸಿಕಪಕ್ಷದ ವಿವರಣೆಯೇನೆಂದು ವಿಮರ್ಶಿಮಾಡೋಣ ಈ ವಿಷಯದಲ್ಲಿ ಚರಕಬ್ರಾಹ್ಮಣದಲ್ಲಿ ಒಂದು ಇತಿಹಾಸವು ಉಕ್ತವಾಗಿರುವುದು-

**ವಿಷ್ಣುರ್ಯಜ್ಞಃ । ಸ ದೇವೇಭ್ಯ ಆತ್ಮಾನಮಂತರಧಾತ್ । ತಮನ್ಯದೇವತಾ ನಾವಿಂದನ್ನಿಂದ್ರಸ್ತ್ವವೇತ್ । ಸ ಇಂದ್ರಮಬ್ರವೀತ್ಕೋ ಭವಾನಿತಿ । ತಮಿಂದ್ರಃ ಪ್ರತ್ಯಬ್ರವೀದಹಂ ದುರ್ಗಾಣಾಮಸುರಾಣಾಂ ಚ ಹಂತಾ ಭವಾಂಸ್ತು ಕ ಇತಿ । ಸೋಽಬ್ರವೀದಹಂ ದುರ್ಗಾದಾಹರ್ತಾ ತ್ವಂ ತು ಯದಿ ದುರ್ಗಾಣಾಮಸುರಾಣಾಂ ಹಂತಾ ತತೋಽಯಂ ವರಾಹೋ ವಾಮಮೋಷ ಏಕವಿಂಶತ್ಯಾಃ ಪುರಾಂ ಪಾರೇಽಶ್ಮಮಯೀನಾಂ ವಸತಿ ತಸ್ಮಿನ್ನಸುರಾಣಾಂ ವಸು ವಾಮಮಸ್ತಿ ತಮಿಮಂ ಜಹೀತಿ । ತಸ್ಯೇಂದ್ರಸ್ತಾಃ ಪುರೋ ಭಿತ್ವಾ ಹೃದಯಮವಿಧ್ಯತ್ । ಅಥ ತತ್ರ ಯದಾಸೀತ್ತದ್ವಿಷ್ಣುರಾಹರದಿತಿ । ಸೋಽಯಮಿತಿಹಾಸಃ ॥**

ಇದರ ಮುಖ್ಯಾಭಿಪ್ರಾಯವೇನೆಂದರೆ-ವಿಷ್ಣುವೇ ಯಜ್ಞವು ಆ ಯಜ್ಞರೂಪಿಯಾದ ವಿಷ್ಣುವು ಒಂದಾನೊಂದುಕಾಲದಲ್ಲಿ ದೇವತೆಗಳನ್ನು ಬಿಟ್ಟು ಹೊರಟುಹೋಗಿ ಒಂದು ರಹಸ್ಯಸ್ಥಳದಲ್ಲಿದ್ದನು. ಇದು ಇತರದೇವತೆಗಳಿಗೆ ತಿಳಿಯಲಿಲ್ಲ ಇಂದ್ರನಿಗೆ ಮಾತ್ರ ತಿಳಿಯಿತು. ಆಗ ಇಂದ್ರನು ವಿಷ್ಣುವಿದ್ದ ಸ್ಥಳಕ್ಕೆ ಹೋದಾಗ ವಿಷ್ಣುವು ಇಂದ್ರನನ್ನು ಕುರಿತು ನೀನು ಯಾರೆಂದು ಅವನನ್ನು ಕೇಳಿದನು ವಿಷ್ಣುವಿಗೆ ಪ್ರತ್ಯುತ್ತರವಾಗಿ ಇಂದ್ರನು ನಾನು ದುರ್ಗಗಳನ್ನೂ ಅಸುರರನ್ನೂ ಧ್ವಂಸ ಮಾಡುವವನು ಆದರೆ, ನೀನು ಯಾರು ಎಂದನು ವಿಷ್ಣುವು ನಾನು ದುರ್ಗಾದಿಗಳಿಂದ ಅಸುರರಿಗೆ ಸೇರಿದ ಧನಾದಿಗಳನ್ನು ಅಪಹರಿಸಿ ತರುವವನು ನೀನು ಯಾರು ? ನೀನು ಮಾಡುವ ಕೆಲಸವೇನು ಎಂದು ಪುನಹ ಕೇಳಲು ಆದಕ್ಕೆ ವಿಷ್ಣುವು ಇಂತೆಂದನು—ನೀನು ಹೇಳಿದಂತೆ ದುರ್ಗಗಳ ಮತ್ತು ಅಸುರರ ಧನಾದಿಗಳನ್ನು ಧ್ವಂಸಮಾಡುವವನಾಗಿದ್ದಲ್ಲಿ, ಧನಾದಿಗಳನ್ನು ಅಪಹರಿಸಿ ತನ್ನಲ್ಲಿ ಇಟ್ಟುಕೊಂಡಿರುವ ವರಾಹನೆಂಬ ಅಸುರನು ಇಲ್ಲಿಂದ ಇಪ್ಪತ್ತೊಂದು ಪುರಗಳ (ಕೋಟೆಗಳ) ಕೊನೆಯಲ್ಲಿ ಕಲ್ಲುಗಳಿಂದ ಭದ್ರವಾಗಿ ಕಟ್ಟಲ್ಪಟ್ಟಿರುವ ಕೋಟೆಯಲ್ಲಿ ವಾಸಮಾಡುತ್ತಿರುವನು ಅವನಲ್ಲಿ ಅಸುರರ ಬಹಳವಾದ ಧನವಿರುವುದು ಆದ್ದರಿಂದ ಆ ಅಸುರನನ್ನು ಸಂಹರಿಸು ಎಂದನು ಅದನ್ನು ಕೇಳಿ ಇಂದ್ರನು ಅಸುರರ ಆ ಪಟ್ಟಣಗಳನ್ನು ಧ್ವಂಸಮಾಡಿ ವರಾಹ ಎಂಬ ಅಸುರನ ಹೃದಯವನ್ನು ಇರಿದು ಕೊಂದನು ಆಗ ವಿಷ್ಣುವು ಅಸುರನಲ್ಲಿದ್ದ ಧನವನ್ನೆಲ್ಲಾ ಅಲ್ಲಿಂದ ತಂದನು ಇದೇ ಈ ಇತಿಹಾಸದ ಮುಖ್ಯಾಭಿಪ್ರಾಯವು ಈ ವಿಷಯವು ಈ ಪ್ರಕೃತ ಋಕ್ಕಿನಲ್ಲಿಯೂ,

**ಅಸ್ಯೇದು ಮಾತುಃ ಸವನೇಷು ಸದ್ಯೋ ಮಹಃ ಪಿತುಂ ಪಪಿವಾಂಚಾರ್ವನ್ನಾ ।**
**ಮುಷಾಯದ್ವಿಷ್ಣುಃ ಪಚತಂ ಸಹೀಯಾನ್ವಿಧ್ಯದ್ವರಾಹಂ ತಿರೋ ಅದ್ರಿಮಸ್ತಾ ॥**

(ಋ. ಸಂ. ೧-೬೧-೭)

ಎಂಬ ಋಕ್ಕಿನಲ್ಲಿಯೂ ಹೇಳಿದೆಯೆಂದು ಭಾಷ್ಯಕಾರರು ಹೇಳಿ ಪ್ರಕೃತಋಕ್ಕಿನಲ್ಲಿರುವ ಮತ್ತು ಉದಾಹರಣೆಯಾಗಿ ಕೊಟ್ಟಿರುವ ವಾಕ್ಯಗಳಿಗೂ ಮೇಲೆ ಹೇಳಿದ ಇತಿಹಾಸಕ್ಕೂ ಹೊಂದಿಸಿ ಅರ್ಥವಿವರಣೆಮಾಡಿರುವರು—

**ಅಸ್ಯೇದು ಮಾತುಃ ಇತ್ಯತ್ರ ವಿಷ್ಣುನಾ ಹೇ ಇಂದ್ರ ತ್ವಂ ದುರ್ಗಾಣಾಂ ಹಂತೇತ್ಯಾತ್ಮಾನಂ ಕಥಯಸಿ ತರ್ಹಿ ವಾಮಮುಷಂ ವರಾಹಮಸುರಂ ಜಹೀತ್ಯುಕ್ತಾರ್ಥೋ ವಿಧ್ಯದ್ವರಾಹಂ ಇತಿ ಪಾದೇನ ಪ್ರತಿಪಾದಿತಃ ।**

ಮೇಲಿನ ಇತಿಹಾಸದಲ್ಲಿ ಹೇಳಿರುವ-"ಎಲೈ ಇಂದ್ರನೇ, ನೀನು ದುರ್ಗಗಳ ಮತ್ತು ಅಸುರರ ಸಂಹಾರಕನೆಂದು ಹೇಳಿಕೊಳ್ಳುವಿಯಷ್ಟೆ. ಹಾಗಾದರೆ ಧನಾದಿಗಳನ್ನು ಅಪಹರಿಸಿ ತನ್ನಲ್ಲಿ ಬಚ್ಚಿಟ್ಟುಕೊಂಡಿರುವ ವರಾಹನೆಂಬ ಅಸುರನನ್ನು ಸಂಹರಿಸು" ಎಂಬ ವಿಷ್ಣುವಿನ ವಾಕ್ಯಾರ್ಥವು-ಮೇಲೆ ಹೇಳಿದ **ಅಸ್ಯೇದು ಮಾತುಃ** ಎಂಬ ಉದಾಹರಣೆಯ ಋಕ್ಕಿನ **ವಿಧ್ಯದ್ವರಾಹಂ ತಿರೋ ಅದ್ರಿಮಸ್ತಾ** ಎಂಬ ಕೊನೆಯ ಪಾದದಲ್ಲಿ ಉಕ್ತವಾಗಿರುವುದು.

> **ಇಂದ್ರೇಣ ಚ ವಿಷ್ಣೋ ತ್ವಂ ದುರ್ಗಾದಾಹರ್ತೇತಿ ಬ್ರೂಷೇ ಮಯಾ ಪುರಾಣಿ ಜಿತಾನ್ಯಸುರಶ್ಚ ಘಾತಿತಸ್ತಸ್ಯ ವಾಮಂ ವಸ್ವಾನಯೇತ್ಯುಕ್ತೋ ವಿಷ್ಣುಮೂರ್ತಿಸ್ತಸ್ಯ ವರಾಹಾಸುರಸ್ಯ ಧನಂ ಮುಮೋಷ । ಸೋಽರ್ಥಃ ಮುಷಾಯದ್ವಿಷ್ಣುಃ ಪಚತಂ ಸಹೀಯಾನ್ ಇತಿ ಪಾದೇನ ಸೂಚಿತಃ ॥**

ಮತ್ತು ಇಂದ್ರನು ವಿಷ್ಣುವನ್ನು ಕುರಿತು—ಎಲೈ ವಿಷ್ಣುವೇ, ನೀನು ಅಸುರರ ದುರ್ಗಗಳಿಂದ ಅವರ ಧನಾದಿಗಳನ್ನು ಅಪಹರಿಸಿ ತರುವವನೆಂದು ಹೇಳಿಕೊಂಡಿದ್ದೀಯಷ್ಟೆ. ಈಗ ನಾನು ಅನೇಕ ಶತ್ರುಪಟ್ಟಣಗಳನ್ನು ಜಯಿಸಿ ಅಸುರನನ್ನು ಕೊಂದಿರುವೆನು ಆ ಅಸುರನಲ್ಲಿರುವ ಧನವನ್ನು ತೆಗೆದುಕೊಂಡುಬಾ ಎಂದು ಹೇಳಲು ವಿಷ್ಣುವು ಅದಕ್ಕೆ ಒಪ್ಪಿ ಆ ವರಾಹಾಸುರನಲ್ಲಿದ್ದ ಧನವನ್ನು ಅಪಹರಿಸಿ ತಂದನು. ಈ ವಿವರವು-**ಮುಷಾಯದ್ವಿಷ್ಣುಃ ಪಚತಂ ಸಹೀಯಾನ್** ಎಂಬ ಉದಾಹೃತ ಋಕ್ಕಿನ ಪಾದದಿಂದ ವ್ಯಕ್ತಪಡುವುದು.

> **ಸ ಕಿಂ ಪುನರ್ಮುಷಿತವಾನಿತಿ ತದತ್ರೋಚ್ಯತೇ । ವಿಶ್ವೇತ್ತಾ ಇತಿ । ಹೇ ಇಂದ್ರ ತ್ವೇಷಿತಸ್ತ್ವಯಾ ಪ್ರೇರಿತೋ ವಿಷ್ಣುರ್ಯಜ್ಞರೂಪೀ ತ್ವೇಷಿತಸ್ತ್ವಂ ದುರ್ಗಾದಾಹರ್ತಾ ಕಿಲ ತರ್ಹಿ ತ್ವಂ ತಸ್ಯ ಧನಾನ್ಯಾಹರೇತಿ ತ್ವಯಾ ಪ್ರೇರಿತಃ ಸನ್ನುರುಕ್ರಮೋ ಭೂತ್ವಾ ವಿಶ್ವೇತ್ತಾ ಯಾನಿ ಚ ತತ್ರ ಸ್ಥಿತಾನಿ ತಾನಿ ಸರ್ವಾಣ್ಯಾಭರತ್ । ಆಭರತು । ಕಾನಿ ತಾನೀತಿ । ಶತಂ ಮಹಿಷಾನಪರಿಮಿತಾನ್ ಪ್ರಶಸ್ತಾನ್ ಪದಾರ್ಥಾನ್ ತೇಷಾಂ ವಾಹನರೂಪಾನ್ ಮಹಿಷಾನ್ಕ್ಷೀರಪಾಕಮೋದನಂ ಚ ಪಕ್ವಮಾತ್ರಮೇವೌದನಂ ಚಾಭರತ್ ॥**

ಮತ್ತು ಆ ವಿಷ್ಣುವು ಪುನಃ ಇನ್ನೂ ಅನೇಕ ಪದಾರ್ಥಗಳನ್ನು ಅಪಹರಿಸಿ ತಂದನು ಎಂದು ಹೇಳಿದೆಯಷ್ಟೆ ಅವರ ವಿವರವನ್ನು ವಿಶ್ವೇತ್ತಾ ಎಂಬ ಪ್ರಕೃತ ಋಕ್ಕಿನಲ್ಲಿ ವಿಶದವಾಗಿ ಹೇಳಲಾಗಿದೆ—ಎಲೈ ಇಂದ್ರನೇ, ನೀನು ಯಜ್ಞರೂಪಿಯಾದ ವಿಷ್ಣುವನ್ನು ಕುರಿತು ಎಲೈ ವಿಷ್ಣುವೇ, ನೀನು ಅಸುರರ ದುರ್ಗಗಳಿಂದ ಧನಾದಿಗಳನ್ನು ಅಪಹರಿಸಿ ತರುವವನೆಂದು ಹೇಳಿಕೊಂಡಿರುವೆಯಷ್ಟೆ. ಹಾಗಾದರೆ ಈ ವರಾಹಾಸುರನಲ್ಲಿರುವ ಧನಾದಿಗಳನ್ನು ತೆಗೆದುಕೊಂಡು ಬಾ ಎಂಬುದಾಗಿ ನಿನ್ನಿಂದ (ಇಂದ್ರನಿಂದ) ಪ್ರೇರಿತನಾದಕೂಡಲೇ ವಿಷ್ಣುವು ಹಾಗೇ ಆಗಲೆಂದೊಪ್ಪಿ ಬೇಗಬೇಗನೆ ಅಸುರನ ಪಟ್ಟಣಕ್ಕೆ ಹೋಗಿ, ಅಸುರನಲ್ಲಿದ್ದ—ಎಂದರೆ ಯಾವ ಯಾವ ವಸ್ತುಗಳನ್ನು ತರಬೇಕೆಂದು ಹೇಳಿದ್ದನೋ ಆ ಧನಾದಿಗಳನ್ನೆಲ್ಲಾ ಅಪಹರಿಸಿ ತಂದನು ವಿಷ್ಣುವು ತಂದ ಆ ವಸ್ತುಗಳಾವವು ಎಂದರೆ ಅತ್ಯುತ್ತಮವಾದವೂ ಅಸಂಖ್ಯಾತವಾದವೂ ಆದ ಧನಾದಿ ಶ್ರೇಷ್ಠವಸ್ತುಗಳನ್ನೂ, ಅವುಗಳನ್ನು ಹೊತ್ತು ತರುವ ಮಹಿಷಾದಿಪಶುಗಳನ್ನೂ ಕ್ಷೀರಾದಿಗಳಿಂದ ಪಕ್ವಮಾಡಿದ ಅನ್ನಾದ್ಯಾಹಾರಗಳನ್ನೂ ಎಲ್ಲವನ್ನೂ ಇಂದ್ರನು ಹೇಳಿದಂತೆ ಅಪಹರಿಸಿ ತಂದನು ಎಂಬ ವಿವರವು ಪ್ರಕೃತ ಋಕ್ಕಿನಲ್ಲಿ ವಿಶದವಾಗಿ ಸೂಚಿತವಾಗಿರುವುದು.

**ವಿಧ್ಯದ್ವರಾಹಂ ಇತ್ಯತ್ರೋಕ್ತೋಽರ್ಥಶ್ಚ ಚರಮಪಾದೇನೋಚ್ಯತೇ । ಇಂದ್ರಸ್ತು ವರಾಹಾರಂ ಸ್ವೀಕೃತಾಸುರಸರ್ವಸ್ವಂ ವರಾಹರೂಪಿಣಂ ವೈಮುಷಮೇಮುಷನಾಮಾನಮಥವೈಮುಷಂ ಧನಾನಾಮಾಮೋಷಕಂ ವರಾಹಮಸುರಂ ಹೃದಯೇಽವಿಧ್ಯದಿತಿ ಶೇಷಃ ॥**

ಇನ್ನು ವಿಧ್ಯದ್ವರಾಹಮಿಂದ್ರ ಏಮುಷಂ ಎಂಬ ಪ್ರಕೃತ ಋಕ್ಕಿನ ಕೊನೆಯ ಪಾದದ ಅರ್ಥವನ್ನು ವಿವರಿಸುವರು. ಈ ವರಾಹನೆಂಬ ಅಸುರನು ವರಾಹ (ಹಂದಿ) ರೂಪಿಯಾಗಿದ್ದು ಬಹಳ ಧನವನ್ನು ಅನೇಕರಿಂದ ಅಪಹರಿಸಿಟ್ಟಿದ್ದನು. ಆದ್ದರಿಂದ ಇವನನ್ನು **ಏಮುಷಂ** ಎಂದರೆ **ಧನಾನಾಮಾಮೋಷಕಂ** ಧನವನ್ನು ಅಪಹರಿಸುವವನು ಎಂಬ ಹೆಸರಿನಿಂದ ಕರೆಯುವುದು ರೂಢಿಯು. ಇಂತಹ ವರಾಹರೂಪಿಯಾದ ಏಮುಷನೆಂಬ ಅಸುರನನ್ನು ಇಂದ್ರನು ತನ್ನ ಶಕ್ತಿ ಸಾಮರ್ಥ್ಯಗಳಿಂದ ಅವನ ಎದೆಯನ್ನು ತಿವಿದು ಕೊಂದನು ಎಂಬ ಅಭಿಪ್ರಾಯವು ಪ್ರಕೃತಋಕ್ಕಿನ ಕೊನೆಯ ಪಾದದಲ್ಲಿ ವಿವೃತವಾಗಿದೆ

ಕೃಷ್ಣಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿಯೂ ಈ ವಿಷಯದ ವಿವರಣೆಯು ಇದೇ ರೀತಿಯಾಗಿ ಹೇಳಲ್ಪಟ್ಟಿದೆ—

**ಯಜ್ಞೋ ದೇವೇಭ್ಯೋ ನಿಲಾಯತ ವಿಷ್ಣೂರೂಪಂ ಕೃತ್ವಾ ಸ ಪೃಥಿವೀಂ ಪ್ರಾವಿಶತ್ತಂ ದೇವಾ** ಹಸ್ತಾನ್ತ್ಸಗ್ಂ ರಭ್ಯೈಚ್ಛನ್ತಮಿಂದ್ರ **ಉಪ**ಯುಪರ್ಯತ್ಯಕ್ರಾಮತ್ಸೋಽಬ್ರವೀತ್ಕೋ- ಮಾಯಮುಪರ್ಯುಪರ್ಯತ್ಯಕ್ರಮೀದಿತ್ಯಹಂ **ದುರ್ಗೇ** ಹಂತೇತ್ಯಥ ಕಸ್ತ್ವಮಿತ್ಯಹಂ ದುರ್ಗಾದಾಹರ್ತೇತಿ ಸೋಽಬ್ರವೀದ್ದುರ್ಗೇ ವೈ ಹಂತಾವೋಚಥಾವರಾಹೋಽಯಂ ವಾಮ- **ಮೋಷಃ ಸಪ್ತಾನಾಂ ಗಿರೀಣಾಂ ಪರಸ್ತಾದ್ವಿತ್ತಂ ವೇದ್ಯಮಸುರಾಣಾಂ ಬಿಭರ್ತಿ ತಂ ಜಹಿ ಯದಿ** ದುರ್ಗೇ ಹಂತಾಸೀತಿ ಸದರ್ಭಪುಂಜೀಲಮುದ್ಗೃಹ್ಯ **ಸಪ್ತಗಿರೀನ್ ಭಿತ್ವಾ ತಮಹನ್ತ್ಸೋಽಬ್ರವಿದ್ದುರ್ಗಾದ್ವಾ** ಆಹರ್ತಾ **ವೋಚಥಾ** ಏತಮಾಹರೇತಿ **ತಮೇಭ್ಯೋ ಯಜ್ಞ ಏವ ಯಜ್ಞಮಾಹರದ್ಯತ್ತದ್ವಿತ್ತಂ ವೇದ್ಯಮಸುರಾಣಾಮವಿಂದಂತ ತದೇಕಂ ವೇದ್ಯೈ ವೇದಿತ್ವಂ ॥**

(ತೈ. ಸಂ. ೬.೨.೪-೨, ೩)

ಯಜ್ಞವೇದಿಗೆ ವೇದಿ ಎಂದು ಹೆಸರು ಹೇಗೆ ಬಂದಿತೆಂಬ ವಿಷಯವನ್ನು ವಿವರಿಸುವುದಕ್ಕಾಗಿ ಯಜುರ್ವೇದದಲ್ಲಿ ಒಂದು ಇತಿಹಾಸವು ಉಕ್ತವಾಗಿದೆ—

ಪೂರ್ವದಲ್ಲಿ ಕಾರಣಾಂತರದಿಂದ ಯಜ್ಞವು ವಿಷ್ಣುರೂಪವನ್ನು ಧರಿಸಿ ದೇವತೆಗಳನ್ನು ಬಿಟ್ಟು ಹೊರಟುಹೋಯಿತು. ಅನಂತರ ಯಜ್ಞರೂಪನಾದ ಆ ವಿಷ್ಣುವು ಭೂಮಿಯನ್ನು ಪ್ರವೇಶಿಸಿ ಯಾರಿಗೂ ತಿಳಿಯದಂತೆ ಅಡಗಿಕೊಂಡಿದ್ದನು. ದೇವತೆಗಳು ಅವನನ್ನು ಕಾಣದೆ ಒಬ್ಬರ ಕೈಯನ್ನೊಬ್ಬರು ಹಿಡಿದುಕೊಂಡು ಎಲ್ಲೆಲ್ಲೂ ಹುಡುಕುತ್ತಿದ್ದರು ಆದರೂ ಅವರಿಗೆ ವಿಷ್ಣುವಿರುವ ಸ್ಥಳವು ಸಿಕ್ಕಲಿಲ್ಲ. ಆದರೆ ಇಂದ್ರನು ವಿಷ್ಣುವು ಅಡಗಿಕೊಂಡಿದ್ದ ಪ್ರದೇಶದಮೇಲೆ ಹಾದುಹೋಗುವಾಗ, ಕೆಳಗಿದ್ದ ವಿಷ್ಣುವು–ಯಾರದು ? ನಾನಿರುವ ಈ ಸ್ಥಳದ ಮೇಲೆ ಹಾದು ಹೋಗುವವರು ? ಎನ್ನಲು, ಅದನ್ನು ಕೇಳಿ ಇಂದ್ರನು—ನಾನು, ಅಸುರರ ದುರ್ಗಗಳನ್ನು ಪ್ರಹರಿಸಿ ಧ್ವಂಸಮಾಡುವ

ಶೂರನೇ ನಾನು. ಆದರೆ ನೀನು ಯಾರು ? ಎಂದು ಕೇಳಿದನು. ಅದಕ್ಕೆ ವಿಷ್ಣುವು—ಅಸುರರ ದುರ್ಗಾದಿಗಳು ಧ್ವಂಸವಾದನೇಲೆ ಅಲ್ಲಿರತಕ್ಕ ಧನಾದಿವಸ್ತುಗಳನ್ನು ತರುವವನೇ ನಾನು ಎಂದು ಪ್ರತ್ಯುತ್ತರವಿತ್ತನು. ಮತ್ತು ಇಂದ್ರನನ್ನುದ್ದೇಶಿಸಿ—ಎಲೈ ಪುರುಷನೇ, ನೀನು ಹೇಳಿಕೊಳ್ಳುವಂತೆ ಶತ್ರುಪಟ್ಟಣಗಳನ್ನು ಧ್ವಂಸಮಾಡುವವನು ನೀನೇ ಆಗಿದ್ದರೆ ಇಲ್ಲಿಂದ ಮುಂದೆ ಏಳು ಪರ್ವತಗಳ ಆಚೆ ವರಾಹನೆಂಬ ಅಸುರನಿರುವನು ಅವನು ಅಸುರರ ಧನಾದಿಗಳನ್ನು ಅಪಹರಿಸಿ ತನ್ನ ಬಲವಾದ ಕೋಟೆಯೊಳಗೆ ಇಟ್ಟುಕೊಂಡಿರುವನು ನೀನು ಹೇಳಿಕೊಳ್ಳುವಂತೆ, ಅಸುರರ ದುರ್ಗಗಳನ್ನು ನಾಶಮಾಡುವ ಶಕ್ತಿ ನಿನಗಿದ್ದರೆ ಆ ವರಾಹನೆಂಬ ಅಸುರನನ್ನು ಪ್ರಹರಿಸಿ ಧ್ವಂಸಮಾಡು. ಆಗಮಾತ್ರ ನಿನ್ನ ಶಕ್ತಿಯು ಗೊತ್ತಾಗುವುದು ಎಂದನು ಅದನ್ನು ಕೇಳಿ ಇಂದ್ರನು ಸಮೀಪದಲ್ಲಿದ್ದ ದರ್ಭೆಯ ಗೊಂಚಲೊಂದನ್ನು ತೆಗೆದುಕೊಂಡು ಅದನ್ನೇ ತನ್ನ ಆಯುಧವನ್ನಾಗಿ ಮಾಡಿಕೊಂಡು ಅಭೇದ್ಯವಾದ ಏಳು ಪರ್ವತಗಳನ್ನೂ ಭೇದಿಸಿ ಆ ವರಹಾಸುರನನ್ನೂ ಹೊಡೆದು ಕೊಂದನು ಬಳಿಕ ವಿಷ್ಣುವನ್ನುದ್ದೇಶಿಸಿ ಎಲೈ ಪುರುಷನೇ, ನೀನು ಹೇಳಿದಂತೆ ಸಪ್ತಪರ್ವತಗಳನ್ನೂ ಸೀಳಿಹಾಕಿ ಅಲ್ಲಿದ್ದ ಅಸುರನನ್ನು ಕೊಂದಿರುವೆನು ಇದರಿಂದ ನನ್ನ ಶಕ್ತಿಸಾಮರ್ಥ್ಯಗಳು ಸ್ಪಷ್ಟವಾಯಿತಷ್ಟೆ ನೀನು ಹಿಂದೆ ಧ್ವಂಸವಾದ ಅಸುರರ ದುರ್ಗಾದಿಗಳಿಂದ ಅಲ್ಲಿರುವ ಧನಾದಿಗಳನ್ನು ತರುವವನೇ ನಾನು ಎಂದು ಹೇಳಿಕೊಂಡೆಯಷ್ಟೆ. ಈಗ ನೀನು ಹೇಳಿಕೊಂಡಂತೆ ಅಲ್ಲಿರುವ ಧನಾದಿವಸ್ತುಗಳನ್ನು ತೆಗೆದುಕೊಂಡು ಬಾ ಆಗ ನಿನ್ನ ಶಕ್ತಿಯು ವ್ಯಕ್ತವಾಗುವುದು ಎಂದು ಹೇಳಲು ವಿಷ್ಣುವು ಹಾಗೇ ಆಗಲೆಂದು ಹೇಳಿ ಯಜ್ಞರೂಪದಿಂದಲೇ ಆ ಅಸುರನಲ್ಲಿದ್ದ ಧನಾದಿವಸ್ತುಗಳನ್ನೂ ಅಪಹರಿಸಿ ದೇವತೆಗಳ ಸಮೀಪಕ್ಕೆ ತಂದನು. ಈ ರೀತಿ ಯಜ್ಞದಿಂದ ದೇವತೆಗಳು ಅಸುರರ ಧನಗಳನ್ನು ಪಡೆದದ್ದರಿಂದ ಯಜ್ಞಮಾಡುವ ಪ್ರದೇಶಕ್ಕೆ ವೇದಿ ಎಂದು ಹೆಸರು ಬಂದಿತು ಎಂದು ಈ ಇತಿಹಾಸದ ಮುಖ್ಯಾಭಿಪ್ರಾಯವು

ಯಾಸ್ಕರು **ವರಾಹಃ** ಎಂಬ ಶಬ್ದದ ಅರ್ಥವಿವರಣೆಮಾಡುವುದಕ್ಕಾಗಿ ಈ ರೀತಿ ನಿರ್ವಚನವನ್ನು ಹೇಳಿದಾರೆ—

> **ವರಾಹಃ । ವರಾಹೋ ಮೇಘೋ ಭವತಿ ವರಾಹಾರಃ । ವರಮಾಹಾರಮಾಹಾರ್ಷೀಃ ಇತಿ ಚ ಬ್ರಾಹ್ಮಣಂ । ವಿಧ್ಯದ್ವರಾಹಂ ತಿರೋ ಅದ್ರಿಮಸ್ತಾ ಇತ್ಯಪಿ ನಿಗಮೋ ಭವತಿ । ಅಯ-ಮಪೀತರೋ ವರಾಹ ಏತಸ್ಮಾದೇವ । ಬೃಹತಿ ಮೂಲಾನಿ ವರಂ ವರಂ ಮೂಲಂ ಬೃಹತೀತಿ ವಾ । ವರಾಹಮಿಂದ್ರ ಏಮುಷಂ ಇತ್ಯಪಿ ನಿಗಮೋ ಭವತಿ ॥**
>
> (ನಿ ೫-೪)

ವರಾಹವೆಂದರೆ ಮೇಘವು ಈ ಮೇಘವು ವೃಷ್ಟಿಯನ್ನು ಸುರಿಸುವುದರ ಮೂಲಕ ಉತ್ತಮವಾದ ಆಹಾರವನ್ನು ಒದಗಿಸುವುದರಿಂದ ಮೇಘಕ್ಕೆ ವರಾಹಾರ - ಧವಾ ವರಾಹ ಎಂಬ ಹೆಸರು ಬಂದಿದೆ **ವರಮಾಹಾರಮಾಹಾರ್ಷೀಃ** ಎಂಬುದು ಈ ವಿಧವಾದ ಅರ್ಥಸಮರ್ಥನೆಯನ್ನು ಮಾಡುವ ಬ್ರಾಹ್ಮಣವಾಕ್ಯವು. ವಿಧ್ಯದ್ವರಾಹಂ ತಿರೋ ಅದ್ರಿಮಸ್ತಾ ಎಂಬುದೂ ಇನ್ನೊಂದು ಶ್ರುತಿವಾಕ್ಯದ ಉದಾಹಣೆಯು. ಇದರಲ್ಲಿ-ಇಂದ್ರನು ದೂರದಿಂದಲೇ ತನ್ನ ವಜ್ರಾಯುಧವನ್ನು ಪ್ರಯೋಗಿಸಿ ಮೇಘವನ್ನು ಸೀಳಿದನು ಎಂಬ ಅಭಿಪ್ರಾಯವು ಸೂಚಿತವಾಗಿದೆ. ಆದರೆ ಈ ಉದಾಹರಣೆಯಲ್ಲಿ ವರಾಹಶಬ್ದಕ್ಕೆ ಮೇಘವೆಂಬ ಅರ್ಥವು ಸ್ಪಷ್ಟವಾಗಿದೆ ವರಾಹಶಬ್ದಕ್ಕೆ ಹಂದಿ ಎಂಬ ಇನ್ನೊಂದು ಅರ್ಥವೂ ಇರುವುದು. ಈ ಶಬ್ದವೂ (ವರಾಹ ಶಬ್ದವೂ) ಇದೇ ಮೂಲಧಾತುವಿನಿಂದ ನಿಷ್ಪನ್ನ ವಾಗಿದೆ. ಗಿಡಗಳ ಎಂದರ ಸಸ್ಯಾದಿಗಳ ಬೇರುಗಳನ್ನು ತನ್ನ ಕೋರೆದಾಡೆಗಳಿಂದ ಈಚೆಗೆ ಕಿತ್ತು ಹಾಕುವುದ

ರಿಂದಲೂ, ಉತ್ತಮವಾದ ಆ ಗೆಡ್ಡೆಗೆಣಸುಗಳನ್ನು ಬುಡಸಹಿತ ಕಿತ್ತು ಧ್ವಂಸಮಾಡುವುದರಿಂದಲೂ ಸೂಕರ ಅಥವಾ ಹಂದಿಗೆ ವರಾಹ ಎಂಬ ಹೆಸರು ಬಂದಿದೆ. ಈ ವಿಷಯದಲ್ಲಿ ಪ್ರಕೃತ ಋಕ್ಕಿನಲ್ಲಿರುವ ವರಾಹಮಿಂದ್ರ ಏಮುಷಂ-ಇಂದ್ರನು ಆಹಾರಧ್ವಂಸಕವಾದ ಹಂದಿಯನ್ನು (ಅಸುರನನ್ನು) ಸೀಳಿ ಕೊಂದನು-ಎಂಬ ಶ್ರುತಿವಾಕ್ಯವು ಈ ವಿಧವಾದ ಅರ್ಥದ ಸಮರ್ಥನೆಗೆ ಉದಾಹರಣೆಯಾಗಿದೆ ಇದೇ ನಿರುಕ್ತದ ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ತುವಿಕ್ಷಂ ತೇ ಸುಕೃತಂ ಸೂಮಯಂ ಧನುಃ ಸಾಧುರ್ಬುಂದೋ
ಹಿರಣ್ಯಯಃ ।
ಉಭಾ ತೇ ಬಾಹೂ ರಣ್ಯಾ ಸುಸಂಸ್ಕೃತ ಋದೂಪೇ ಚಿದೃದೂ-
ವೃಧಾ ॥ ೧೧ ॥

॥ ಪದಪಾಠಃ ॥

ತುವಿಽಕ್ಷಂ । ತೇ । ಸುಽಕೃತಂ । ಸುಽಮಯಂ । ಧನುಃ । ಸಾಧುಃ । ಬುಂದಃ । ಹಿರಣ್ಯಯಃ ।
ಉಭಾ । ತೇ । ಬಾಹೂ ಇತಿ । ರಣ್ಯಾ । ಸುಽಸಂಸ್ಕೃತಾ । ಋದುಽಪೇ । ಚಿತ್ ।
ಋದುಽವೃಧಾ ॥ ೧೧ ॥

॥ ಸಾಯಣಭಾಷ್ಯಂ ॥

ಏಷಾ ನಿರುಕ್ತ ಏಕಮಪಿ ಪದಂ ವಿಹಾಯ ಯಾಸ್ಕೇನ ವ್ಯಾಖ್ಯಾತಾ । ತದೇವ ಲಿಖ್ಯತೇ ತುವಿಕ್ಷಂ ಬಹುವಿಕ್ಷೇಪಂ ಮಹಾವಿಕ್ಷೇಪಂ ವಾ ತೇ ಸುಕೃತಂ ಸೂಮಯಂ ಸುಸುಖಂ ಧನುಃ ಸಾಧಯಿತಾ ತೇ ಬುಂದೋ ಹಿರಣ್ಮಯಃ । ಉಭೌ ತೇ ಬಾಹೂ ರಣ್ಯೌ ರಮಣೀಯೌ ಸಂಗ್ರಾಮ್ಯೌ ವಾ ಋದೂಪೇ ಅರ್ದನಪಾತಿನೌ ಗಮನಪಾತಿನೌ ಮರ್ಮಣ್ಯರ್ದನವೇಧಿನೌ ಗಮನವೇಧಿನೌ ವಾ ॥ ನಿ. ೬-೩೩ । ಇತಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ತೇ—ನಿನ್ನ । ಧನುಃ—ಧನುಸ್ಸು । ತುವಿಕ್ಷಂ—ಬಹುದೂರದ ಲಕ್ಷ್ಯವನ್ನು ಹೊಡೆಯತಕ್ಕದ್ದೂ । ಸುಕೃತಂ—ಉತ್ತಮವಾಗಿ ನಿರ್ಮಿತವಾದುದೂ । ಸುಮಯಂ—ಶೋಭನಯುಕ್ತವಾದು

ದಾಗಿಯೂ | **ಸಾಧುಃ**—ಉತ್ತಮವಾದ | **ಬುಂದಃ**—ಬಾಣವು | **ಹಿರಣ್ಯಯಃ**—ಸುವರ್ಣನಿರ್ಮಿತವಾಗಿಯೂ ಇವೆ | **ತೇ**—ನಿನ್ನ | **ಉಭಾ ಬಾಹೂ**—ಎರಡು ತೋಳುಗಳೂ ಸಹ | **ರಣ್ಯಾ**—ರಮಣೀಯವಾಗಿಯೂ | **ಸಂಸಂಸ್ಕೃತಾ**—ಉತ್ತಮವಾದ ನಿರ್ಮಾಣವುಳ್ಳವಾಗಿಯೂ | **ಋದುಪೇ ಚಿತ್**—ಶತ್ರುಗಳನ್ನು ಕೆಳಕ್ಕೆ ಉರುಳಿಸುವ ಶಕ್ತಿಯುಳ್ಳವಾಗಿಯೂ | **ಋದುವೃಧಾ**—ಕೆಳಕ್ಕುರುಳಿಸಿ ನಾಶಮಾಡತಕ್ಕ ಶಕ್ತಿಯುಳ್ಳವಾಗಿಯೂ ಇವೆ

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಧನುಸ್ಸು ಬಹುದೂರದ ಲಕ್ಷ್ಯವನ್ನು ಹೊಡೆಯತಕ್ಕದ್ದೂ, ಉತ್ತಮವಾಗಿ ನಿರ್ಮಿತವಾದುದೂ, ಶೋಭನಯುಕ್ತವಾದುದೂ ಮತ್ತು ನಿನ್ನ ಬಾಣವು ಸುವರ್ಣನಿರ್ಮಿತವಾಗಿಯೂ ಇವೆ. ನಿನ್ನ ಎರಡು ತೋಳುಗಳೂ ಸಹ ರಮಣೀಯವಾಗಿಯೂ ಉತ್ತಮವಾದ ನಿರ್ಮಾಣವುಳ್ಳವಾಗಿಯೂ ಶತ್ರುಗಳನ್ನು ಕೆಳಕ್ಕೆ ಉರುಳಿಸುವ ಶಕ್ತಿಯುಳ್ಳವಾಗಿಯೂ ಮತ್ತು ನಾಶಮಾಡುವ ಶಕ್ತಿಯುಳ್ಳವಾಗಿಯೂ ಇವೆ.

## English Translation

Far-darting is your well-made auspicious bow, unfailing is your golden arrow; your two warlike arms are ready equipped, destructively overthrowing, destructively piercing.

॥ ವಿಶೇಷವಿಷಯಗಳು ॥

ಬುಂದ ಶಬ್ದದ ಅರ್ಥವಿವರಣೆಮಾಡುವಾಗ ಯಾಸ್ಕರು ಪ್ರಕೃತ ಋಕ್ಕನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡು ಈ ಋಕ್ಕಿಗೆ ನಿರ್ವಚನವನ್ನು ಹೇಳಿದಾರೆ. ಬುಂದಶಬ್ದದ ಅರ್ಥವಿವರಣೆಯನ್ನು ನಾವು ಯಾಸ್ಕರು ಹೇಳಿರುವಂತೆ ಈ ಸೂಕ್ತದ ೬ ನೆಯ ಋಕ್ಕಿನ ವಿಶೇಷವಿಷಯಗಳಲ್ಲಿ ವಿವರಿಸಿದೇವೆ. ( page. 166 ) ಬುಂದವೆಂದರೆ ಬಾಣವು. ಪ್ರಕೃತ ಋಕ್ಕಿನ ನಿರ್ವಚನವು ಈರೀತಿ ಇದೆ—

> **ತುವಿಕ್ಷಂ ಬಹುವಿಕ್ಷೇಪಂ ಮಹಾವಿಕ್ಷೇಪಂ ವಾ | ತೇ ಸುಕೃತಂ ಸೂಮಯಂ ಸುಸುಖಂ ಧನುಃ ಸಾಧಯಿತಾ | ತೇ ಬುಂದೋ ಹಿರಣ್ಯಯ ಉಭೌ ತೇ ಬಾಹೂ ರಣ್ಯಾ ರಮಣೀಯೌ ಸಾಂಗ್ರಾಮ್ಯೌ ವಾ | ಋದೂಪೇ ಅರ್ದನಪಾತಿನೌ ಗಮನಪಾತಿನೌ ಶಬ್ದಪಾತಿನೌ ದೂರಪಾತಿನೌ ವಾ | ಮರ್ಮಣ್ಯರ್ದನವೇಧಿನೌ ಗಮನವೇಧಿನೌ ಶಬ್ದವೇಧಿನೌ ದೂರವೇಧಿನೌ ವಾ ||**
>
> (ನಿ. ೬-೩೪)

ಎಲೈ ಇಂದ್ರನೇ, ನಿನ್ನ ಬಾಣವು ಬಹಳ ಶಕ್ತಿಯುಳ್ಳದ್ದಾಗಿವೆ, ಬಹುದೂರದವರೆಗೂ ಹೋಗಲು ಶಕ್ತಿಯುಳ್ಳದ್ದಾಗಿದೆ ಅಥವಾ ಬಹಳ ಸಾಮರ್ಥ್ಯದಿಂದ ಬಿಡಲ್ಪಟ್ಟು ಹೋಗುವುದಾಗಿದೆ. ನಿನ್ನ ಧನುಸ್ಸಾದರೋ ಚೆನ್ನಾಗಿ ನಿರ್ಮಿತವಾದುದೂ, ಒಳ್ಳೆಯ ಆಕಾರವುಳ್ಳದ್ದು, ಆಹ್ಲಾದವನ್ನುಂಟುಮಾಡುವುದೂ ಆಗಿದೆ. ನಿನ್ನ ಬಾಣವು ಸುವರ್ಣನಿರ್ಮಿತವಾಗಿದೆ ನಿನ್ನ ಎರಡು ತೋಳುಗಳೂ ಸುಂದರವಾಗಿಯೂ ಯುದ್ಧಮಾಡಲು ಅತ್ಯಂತ ಶಕ್ತಿಯುಳ್ಳದ್ದಾಗಿಯೂ ಇವೆ. ಈ ಋಕ್ಕಿನಲ್ಲಿ ಉಪಯೋಗಿಸಿರುವ **ಋದೂಪೇ** ಎಂಬ ಶಬ್ದಕ್ಕೆ (ಬಾಣವು) ತನ್ನ ವೇಗವಾದ ಗತಿಯಿಂದ ಲಕ್ಷ್ಯವಸ್ತುವನ್ನು ಹೊಡೆದು ಕೆಡವತಕ್ಕದ್ದೂ ಅಥವಾ ರೇಂಕಾರಶಬ್ದದಿಂದ ಕೆಡವತಕ್ಕದ್ದೂ

ಅಥವಾ ವಸ್ತುವು ದೂರದಲ್ಲಿದ್ದರೂ ಅದನ್ನು ಸಮೀಪಿಸಿ ಹೊಡೆದು ಕೆಡವತಕ್ಕದ್ದೂ ಅಥವಾ ಲಕ್ಷ್ಯವಸ್ತುವಿನ ಮರ್ಮಪ್ರದೇಶಗಳನ್ನು (Vital or valnerable parts) ತನ್ನ ವೇಗವಾದ ಗಮನದಿಂದಲೂ, ಮೊನಚಾದ ತುದಿಯಿಂದಲೂ ಸೀಳುವುದು ಅಥವಾ ತನ್ನ ಭಯಂಕರವಾದ ಶಬ್ದದಿಂದಲಾಗಲಿ ವೇಗಗಮನದಿಂದಾಗಲಿ ದೂರದಲ್ಲಿರುವ ವಸ್ತುವನ್ನು ಚುಚ್ಚಿ ಸೀಳುವುದು ಎಂದು ಅನೇಕವಿಧವಾದ ಅರ್ಥಗಳನ್ನು ಯಾಸ್ಕರು ವಿವರಿಸಿದಾರೆ.

## ಎಪ್ಪತ್ತೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪುರೋಳಾಶಂ ನ ಇತಿ ದಶರ್ಚಂ ನವಮಂ ಸೂಕ್ತಂ ಕಾಣ್ವಸ್ಯ ಕುರುಸುತೇರಾರ್ಷಂ । ಆದ್ಯಾ ನವ ಗಾಯತ್ರ್ಯಃ ದಶಮೀ ಬೃಹತೀ । ಇಂದ್ರೋ ದೇವತಾ । ತಥಾ ಚಾನುಕ್ರಾಂತಂ । ಪುರೋಳಾಶಂ ದಶ ಬೃಹತ್ಯಂತಮಿತಿ । ಸೂಕ್ತವಿನಿಯೋಗೋ ಲೈಂಗಿಕಃ ॥ ಮಹಾವ್ರತೇ ನಿಷ್ಕೇವಲ್ಯೇ ಗಾಯತ್ರತೃಚಾಶೀತಾವಾದ್ಯಾಸ್ತಿಸ್ರ ಋಚಃ । ತಥಾ ಚ ಸೂತ್ರಿತಂ । ಪುರೋಳಾಶಂ ನೋ ಅಂಧಸ ಇತಿ ತಿಸ್ರಃ । ಐ. ಆ. ೫-೩ । ಇತಿ ॥**

ಅನುವಾದವು—**ಪುರೋಳಾಶಂ ನಃ** ಎಂಬ ಈ ಸೂಕ್ತವು ಎಂಟನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಪತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ **ಕುರುಸುತಿಃ ಕಾಣ್ವಃ** ಎಂಬುವನು ಋಷಿಯು, ಇಂದ್ರನು ದೇವತೆಯು, ಈ ಸೂಕ್ತದ ಮೊದಲಿನ ಒಂಭತ್ತು ಋಕ್ಕುಗಳು ಗಾಯತ್ರೀಛಂದಸ್ಕವು. ಹತ್ತನೆಯದು ಬೃಹತೀಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಪುರೋಳಾಶಂ ದಶ ಬೃಹತ್ಯಂತಂ** ಎಂದು ಹೇಳಿರುವುದು. ಸೂಕ್ತವಿನಿಯೋಗವು ಲೈಂಗಿಕವು ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ಮೊದಲ ಮೂರು ಋಕ್ಕುಗಳ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ—**ಪುರೋಳಾಶಂ ನೋ ಅಂಧಸ ಇತಿ ತಿಸ್ರಃ** ಎಂಬ ವಾಕ್ಯದಿಂದ (ಐ. ಆ. ೫-೨-೩) ಸಿದ್ದಿಷ್ಟವಾಗಿರುವುದು.

### ಸೂಕ್ತ—೭೮

ಮಂಡಲ—೮ । ಅನುವಾಕ—೮ । ಸೂಕ್ತ—೭೮ ।
ಅಷ್ಟಕ—೬ । ಅಧ್ಯಾಯ—೫ । ವರ್ಗ—೩೧. ೩೨ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ।
ಋಷಿಃ—ಕುರುಸುತಿಃ ಕಾಣ್ವಃ ।
ದೇವತಾ—ಇಂದ್ರಃ ।
ಛಂದಃ—೧-೯. ಗಾಯತ್ರೀ । ೧೦. ಬೃಹತೀ ॥

। ಸಂಹಿತಾಪಾಠಃ ।

ಪುರೋಳಾಶಂ ನೋ ಅಂಧಸ ಇಂದ್ರ ಸಹಸ್ರಮಾ ಭರ ।
ಶತಾ ಚ ಶೂರ ಗೋನಾಂ ॥ ೧ ॥

॥ ಪದಪಾಠಃ ॥

ಪುರೋಳಾಶಂ । ನಃ । ಅಂಧಸಃ । ಇಂದ್ರ । ಸಹಸ್ರಂ । ಆ । ಭರ ।

ಶತಾ । ಚ । ಶೂರ । ಗೋನಾಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಶೂರೇಂದ್ರ ಪುರೋಳಾಶಂ ಪುರೋ ದೀಯಮಾನಮೇತತ್ಸಂಜ್ಞಕಮಂಧಸೋಽನ್ನಂ ಸ್ವೀಕೃತ್ಯ ಗೋನಾಂ ಗವಾಂ ಸಹಸ್ರಂ ಶತಾ ಶತಾನಿ ಚ ನೋಽಸ್ಮಭ್ಯಮಾ ಭರ । ಆಹರ । ಅಥವಾ ನೋಽಸ್ಮಭ್ಯಂ ಪುರತೋ ದೀಯಮಾನಮಂಧಸೋಽಂಧೋ ವ್ಯಂಜನಂ ಸಹಸ್ರಂ ಸಹಸ್ರಸಂಖ್ಯಾಕಂ ಗೋಸಹಸ್ರಂ ಚಾಹರೇತಿ ಯೋಜ್ಯಂ ॥

॥ ಪ್ರತಿಪದಾರ್ಥ ॥

**ಶೂರ**—ಪರಾಕ್ರಮಿಯಾದ । **ಇಂದ್ರ**—ಎಲೈ ಇಂದ್ರನೇ । **ಪುರೋಳಾಶಂ**—ಪುರೋಡಾಶಸಂಜ್ಞಕವಾದ। **ಅಂಧಸಃ**—ಅನ್ನವನ್ನು (ಸ್ವೀಕರಿಸಿ) । **ನಃ**—ನಮಗೆ । **ಗೋನಾಂ**—ಗೋವುಗಳ । **ಸಹಸ್ರಂ**—ಸಹಸ್ರಸಂಖ್ಯೆಯನ್ನೂ । **ಶತಾ ಚ**—ಶತಸಂಖ್ಯೆಯನ್ನೂ । **ಆ ಭರ**—ತಂದೊದಗಿಸು.

॥ ಭಾವಾರ್ಥ ॥

ಪರಾಕ್ರಮಿಯಾದ ಎಲೈ ಇಂದ್ರನೇ, ಪುರೋಡಾಶಸಂಜ್ಞಕವಾದ ಅನ್ನವನ್ನು ಸ್ವೀಕರಿಸಿ ನಮಗೆ ಸಹಸ್ರಸಂಖ್ಯಾಕವೂ ಶತಸಂಖ್ಯಾಕವೂ ಆದ ಗೋವುಗಳನ್ನು ತಂದೊದಗಿಸು.

English Translation

(Accepting) our offering of sacrificial viands, O hero Indra, bring us thousands and hundreds of cows.

॥ ಸಂಹಿತಾಪಾಠಃ ॥

ಆ ನೋ ಭರ ವ್ಯಂಜನಂ ಗಾಮಶ್ವಮಭ್ಯಂಜನಂ ।

ಸಚಾ ಮನಾ ಹಿರಣ್ಯಯಾ ॥ ೨ ॥

॥ ಪದಪಾಠಃ ॥

ಆ । ನಃ । ಭರ । ವಿಽಅಂಜನಂ । ಗಾಂ । ಅಶ್ವಂ । ಅಭಿಽಅಂಜನಂ ।

ಸಚಾ । ಮನಾ । ಹಿರಣ್ಯಯಾ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ನೋಽಸ್ಮಭ್ಯಂ ವ್ಯಂಜನಂ ಗಾಮಶ್ವಮಭ್ಯಂಜನಂ ತೈಲಂ ಚಾ ಭರ। ಮನಾ, ಮಾನನೀಯಾನಿ ಹಿರಣ್ಯಯಾ ಹಿರಣ್ಮಯಾನ್ಯುಪಕರಣಾನಿ ಸಚಾ ಸಹಾಭರೇತಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ನಃ—ನಮಗೆ । ವ್ಯಂಜನಂ—ವ್ಯಂಜನಪದಾರ್ಥಗಳನ್ನೂ । ಗಾಂ—ಗೋವುಗಳನ್ನೂ । ಅಶ್ವಂ—ಅಶ್ವಗಳನ್ನೂ । ಅಭ್ಯಂಜನಂ—ತೈಲಾದಿಗಳನ್ನೂ । ಮನಾ—ಬೆಲೆಬಾಳುವ । ಹಿರಣ್ಯಯಾ—ಸುವರ್ಣಗಳನ್ನೂ । ಸಚಾ—ಒಟ್ಟಿಗೆ । ಆ ಭರ—ತಂದೊದಗಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ನಮಗೆ ವ್ಯಂಜನಪದಾರ್ಥಗಳನ್ನೂ, ಗೋವುಗಳನ್ನೂ, ಅಶ್ವಗಳನ್ನೂ, ತೈಲಾದಿಗಳನ್ನೂ ಬೆಲೆಬಾಳುವ ಸುವರ್ಣಗಳನ್ನೂ ಒಟ್ಟಿಗೆ ತಂದೊದಗಿಸು.

English Translation

Bring us condiments, cows, horses, and oil, (bring us) with them precious golden (vessels).

॥ ಸಂಹಿತಾಪಾಠಃ ॥

ಉತ ನಃ ಕರ್ಣಶೋಭನಾ ಪುರೂಣಿ ಧೃಷ್ಣವಾ ಭರ ।
ತ್ವಂ ಹಿ ಶೃಣ್ವಿಷೇ ವಸೋ ॥ ೩ ॥

॥ ಪದಪಾಠಃ ॥

ಉತ । ನಃ । ಕರ್ಣಽಶೋಭನಾ । ಪುರೂಣಿ । ಧೃಷ್ಣೋ ಇತಿ । ಆ । ಭರ ।
ತ್ವಂ । ಹಿ । ಶೃಣ್ವಿಷೇ । ವಸೋ ಇತಿ ॥ ೩ ॥

॥ ಸಾಯಣಭಾಷ್ಯಂ ॥

ಉತಾಪಿ ಚ ನೋಽಸ್ಮಭ್ಯಂ ಕರ್ಣಶೋಭನಾ ಕರ್ಣಾಭರಣಾನಿ ಪುರೂಣಿ ಬಹೂನ್ಯಾಭರ । ಹೇ ಧೃಷ್ಣೋ ಧರ್ಷಕೇಂದ್ರ ವಸೋ ವಾಸಯಿತರಿಂದ್ರ ತ್ವಂ ಹಿ ಖಲು ಶೃಣ್ವಿಷೇ । ಶ್ರೂಯಸೇ । ಕಿಮಿತಿ । ಉದಾರೋಽಯಮಿಂದ್ರ ಇತಿ ॥

॥ಪ್ರತಿಪದಾರ್ಥ॥

(ಎಲೈ ಇಂದ್ರನೇ) **ಉತ**—ಮತ್ತು । **ನಃ**—ನಮಗೆ । **ಕರ್ಣಶೋಭನಾ**—ಕಿವಿಗೆ ಅಲಂಕಾರಪ್ರಾಯವಾಗಿರುವ । **ಪುರೂಣಿ**—ಅನೇಕ ಆಭರಣಗಳನ್ನು । **ಆ ಭರ**—ತಂದೊದಗಿಸು । **ಧೃಷ್ಣೋ**—ಶತ್ರುಧರ್ಷಕನೂ । **ವಸೋ**—ವಸತಿದಾಯಕನೂ ಆದ ಎಲೈ ಇಂದ್ರನೇ । **ತ್ವಂ ಹಿ**—ನೀನೇ । **ಶೃಣ್ವಿಷೇ**—ಪ್ರಸಿದ್ಧನಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಮ್ಮ ಕಿವಿಗೆ ಅಲಂಕಾರಪ್ರಾಯವಾಗಿರುವ ಅನೇಕ ಆಭರಣಗಳನ್ನು ತಂದೊದಗಿಸು. ಶತ್ರುಧರ್ಷಕನೂ ವಸತಿದಾಯಕನೂ ಆದ ಎಲೈ ಇಂದ್ರನೇ, ನೀನೇ ಪ್ರಸಿದ್ಧನಾಗಿದ್ದೀಯೆ.

English Translation

O resolute one, bring us many ear-ornaments; giver of dwellings, you are renowned

॥ ಸಂಹಿತಾಪಾಠಃ ॥

ನಕೀಂ ವೃಧೀಕ ಇಂದ್ರ ತೇ ನ ಸುಷಾ ನ ಸುದಾ ಉತ ।
ನಾನ್ಯಸ್ತ್ವಚ್ಛೂರ ವಾಘತಃ ॥ ೪ ॥

॥ ಪದಪಾಠಃ ॥

ನಕೀಂ । ವೃಧೀಕಃ । ಇಂದ್ರ । ತೇ । ನ । ಸುऽಸಾಃ । ನ । ಸುऽದಾಃ । ಉತ ।
ನ । ಅನ್ಯಃ । ತ್ವತ್ । ಶೂರ । ವಾಘತಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತ್ವತ್ತೋಽನ್ಯಃ ಕಶ್ಚಿದ್ವೃಧೀಕೋ ವರ್ಧಯಿತಾ ನಕೀಂ ನೈವ । ತಥಾ ಸುಷಾಃ ಸುಷ್ಠು ಸಂಭಕ್ತಾ ಸಂಗ್ರಾಮಾದೌ ತ್ವತ್ತೋಽನ್ಯೋ ನ । ಉತಾಪಿ ಚ ಸುದಾಃ ಸುದಾತಾ ನ । ತಥಾ ಹೇ ಶೂರ ತ್ವತ್ತ್ವತ್ತೋಽನ್ಯೋ ವಾಘತಃ । ಋತ್ವಿಗ್ನಾಮೈತತ್ । ಋತ್ವಿಜೋ ಯಜಮಾನಸ್ಯ ತೇತಾ ನಾऽನ್ಯೋಽಸ್ತಿ ತ್ವಾಮೃತೇ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನನ್ನು ಬಿಟ್ಟು । **ವೃಧೀಕಃ**—ವೃದ್ಧಿಕಾರಕನು । **ನಕೀಂ**—ಬೇರೆ ಯಾರೂ ಇಲ್ಲವೇ ಇಲ್ಲ । **ಸುಷಾಃ**—ಸಂಗ್ರಾಮಾದಿಗಳಲ್ಲಿ ಶತ್ರುಧನವನ್ನು ಅಪಹರಿಸುವವರು । **ನ**—ನೀನಲ್ಲದೇ

ಬೇರಿಲ್ಲ । **ಉತ**—ಮತ್ತು । **ಸುದಾಃ**—ನಿನ್ನಂತಹ ಉತ್ತಮವಾದ ದಾನಿಗಳು । **ನ**—ಬೇರೆ ಯಾರೂ ಇಲ್ಲ । **ಶೂರ**—ಪರಾಕ್ರಮಿಯಾದ ಎಲೈ ಇಂದ್ರನೇ । **ತ್ವತ್**—ನಿನಗಿಂತಲೂ ಉತ್ತಮರಾದ । **ವಾಘತಃ**—ಯಜ್ಞನೇತೃಗಳು (ಋತ್ವಿಕ್ಕುಗಳು) । **ನ ಅನ್ಯಃ**— ಬೇರೆ ಯಾರೂ ಇಲ್ಲ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನನ್ನು ಬಿಟ್ಟು ಬೇರೆ ವೃದ್ಧಿಕಾರಕನಾರೂ ಇಲ್ಲ. ಸಂಗ್ರಾಮಾದಿಗಳಲ್ಲಿ ಶತ್ರುಧನವನ್ನು ಅಪಹರಿಸುವವರು ನೀನಲ್ಲದೇ ಬೇರೊಬ್ಬರಿಲ್ಲ. ನಿನ್ನಂತಹ ಉತ್ತಮವಾದ ದಾನಿಗಳು ಬೇರೆ ಯಾರೂ ಇಲ್ಲ. ಪರಾಕ್ರಮಿಯಾದ ಎಲೈ ಇಂದ್ರನೇ, ನಿನಗಿಂತಲೂ ಉತ್ತಮರಾದ ಋತ್ವಿಕ್ಕುಗಳೂ ಬೇರೆ ಯಾರೂ ಇಲ್ಲ.

English Translation

There is no prosperer other than you, no divider of the spoil, no giver of boons ; O hero, there is no (leader) of the sacrificer other than you

॥ ಸಂಹಿತಾಪಾಠಃ ॥

ನಕೀಮಿಂದ್ರೋ ನಿಕರ್ತವೇ ನ ಶಕ್ರಃ ಪರಿಶಕ್ತವೇ ।

ವಿಶ್ವಂ ಶೃಣೋತಿ ಪಶ್ಯತಿ ॥ ೩ ॥

॥ ಪದಪಾಠಃ ॥

ನಕೀಂ । ಇಂದ್ರಃ । ನಿऽಕರ್ತವೇ । ನ । ಶಕ್ರಃ । ಪರಿऽಶಕ್ತವೇ ।

ವಿಶ್ವಂ । ಶೃಣೋತಿ । ಪಶ್ಯತಿ ॥ ೩ ॥

॥ ಸಾಯಣಭಾಷ್ಯಂ ॥

**ಅಯಮಿಂದ್ರೋ ನಿಕರ್ತವೇ ನಿಕರ್ತುಂ ನಕೀಂ ನೈವ ಶಕ್ಯಃ । ತಥಾ ಶಕ್ರಃ ಶಕ್ತೋऽಯಂ ಪರಿಶಕ್ತವೇ ಪರಿಭಾವಾಯ ನ ಶಕ್ಯತ ಇತಿ । ಸ ತು ವಿಶ್ವಂ ಶೃಣೋತಿ ಪಶ್ಯತಿ ಚ ॥**

॥ ಪ್ರತಿಪದಾರ್ಥ ॥

**ಇಂದ್ರಃ**—ಇಂದ್ರನು । **ನಿಕರ್ತವೇ**—ಸ್ವಸ್ಥಾನದಿಂದ ಕೆಳಕ್ಕೆ ಇಳಿಸಲು । **ನಕೀಂ**—ಯಾರಿಂದಲೂಸಾಧ್ಯವಿಲ್ಲ । **ಶಕ್ರಃ**—ಸರ್ವಶಕ್ತನಾದ ಇಂದ್ರನು । **ಪರಿಶಕ್ತವೇ**—ಸೋಲಿಸಲ್ಪಡಲು । **ನ**—ಸಾಧ್ಯವಿಲ್ಲ (ಅದೇ ಇಂದ್ರನು) । **ವಿಶ್ವಂ** —ಸಮಸ್ತವನ್ನೂ । **ಶೃಣೋತಿ**—ಕೇಳುತ್ತಾನೆ । **ಪಶ್ಯತಿ**—ನೋಡುತ್ತಾನೆ.

॥ ಭಾವಾರ್ಥ ॥

ಇಂದ್ರನನ್ನು ಸ್ವಸ್ಥಾನದಿಂದ ಕೆಳಕ್ಕಿಳಿಸಲು ಯಾರಿಂದಲೂ ಸಾಧ್ಯವಿಲ್ಲ. ಸರ್ವಶಕ್ತನಾದ ಇಂದ್ರನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ. ಅದೇ ಇಂದ್ರನು ಸಕಲವನ್ನೂ ಕೇಳುತ್ತಾನೆ ಮತ್ತು ನೋಡುತ್ತಾನೆ.

English Translation

Indra cannot be brought low, he cannot be overpowered—he hears, he sees all.

॥ ಸಂಹಿತಾಪಾಠಃ ॥

ಸ ಮನ್ಯುಂ ಮರ್ತ್ಯಾನಾಮದಬ್ಧೋ ನಿ ಚಿಕೀಷತೇ ।

ಪುರಾ ನಿದಶ್ಚಿಕೀಷತೇ ॥ ೬ ॥

॥ ಪದಪಾಠಃ ॥

ಸಃ । ಮನ್ಯುಂ । ಮರ್ತ್ಯಾನಾಂ । ಅದಬ್ಧಃ । ನಿ । ಚಿಕೀಷತೇ ।

ಪುರಾ । ನಿದಃ । ಚಿಕೀಷತೇ ॥ ೬ ॥

॥ ಸಾಯಣಭಾಷ್ಯಂ ॥

ಸ ಇಂದ್ರೋ ಮನ್ಯುಂ ಕ್ರೋಧಂ । ಕೇಷಾಂ । ಮರ್ತ್ಯಾನಾಂ । ಅದಬ್ಧಃ ಕೇನಾಪ್ಯಹಿಂಸಿತಃ ಸನ್ನಿ ಚಿಕೀಷತೇ । ನಿಕರೋತಿ । ಕಿಂ ಮನ್ಯುಂ ಪ್ರಾಪ್ಯೈವ ನೇತ್ಯಾಹ । ನಿದೋ ನಿಂದಾಯಾಃ ಪುರಾ ಪೂರ್ವಮೇವ ಚಿಕೀಷತೇ । ಯದಾ ತಂ ನಿಂದಿತುಮಿಚ್ಛತಿ ಕಶ್ಚಿತ್ತತಃ ಪೂರ್ವಮೇವ ತಂ ನಿಕರೋತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಸಃ—ಪ್ರಸಿದ್ಧನಾದ ಇಂದ್ರನು । ಮರ್ತ್ಯಾನಾಂ—ಮಾನವರ । ಮನ್ಯುಂ—ಕ್ರೋಧವನ್ನು । ಅದಬ್ಧಃ—ಯಾರಿಂದಲೂ ಹಿಂಸಿತನಾಗದೇ । ನಿ ಚಿಕೀಷತೇ—ಕೆಳಗಿಳಿಯುವಂತೆ ಮಾಡುತ್ತಾನೆ । ನಿದಃ—ಅವನನ್ನು ನಿಂದಿಸುವುದಕ್ಕೆ । ಪುರಾ—ಪೂರ್ವಭಾವಿಯಾಗಿಯೇ। ಚಿಕೀಷತೇ—ಅಂತಹವರನ್ನು ವಿನೀತರನ್ನಾಗಿ ಮಾಡುತ್ತಾನೆ.

॥ ಭಾವಾರ್ಥ ॥

ಪ್ರಸಿದ್ಧನಾದ ಇಂದ್ರನು, ಮಾನವರ ಕ್ರೋಧವನ್ನು ಯಾರಿಂದಲೂ ಹಿಂಸಿತನಾಗದೇ ಕೆಳಗಿಳಿಯುವಂತೆ ಮಾಡುತ್ತಾನೆ. ಅವನನ್ನು ಯಾರಾದರೂ ನಿಂದಿಸಲಿಚ್ಛಿಸಿದರೆ ಅದಕ್ಕೆ ಪೂರ್ವಭಾವಿಯಾಗಿಯೇ ಅಂತಹವರನ್ನು ವಿನೀತರನ್ನಾಗಿ ಮಾಡುತ್ತಾನೆ.

## English Translation

Unharmed he brings low the wrath of mortals; before any one can reproach him, he brings him low.

॥ ಸಂಹಿತಾಪಾಠಃ ॥

ಕೃತ್ನ ಇತ್ಪೂರ್ಣಮುದರಂ ತುರಸ್ಯಾಸ್ತಿ ವಿಧತಃ ।
ವೃತ್ರಘ್ನಃ ಸೋಮಪಾವ್ನಃ ॥ ೭ ॥

॥ ಪದಪಾಠಃ ॥

ಕೃತ್ನಃ । ಇತ್ । ಪೂರ್ಣಂ । ಉದರಂ । ತುರಸ್ಯ । ಅಸ್ತಿ । ವಿಧತಃ ।
ವೃತ್ರಽಘ್ನಃ । ಸೋಮಽಪಾವ್ನಃ ॥ ೭ ॥

॥ ಸಾಯಣಭಾಷ್ಯಂ ॥

ತುರಸ್ಯ ತ್ವರಮಾಣಸ್ಯ ವೃತ್ರಘ್ನೋ ವೃತ್ರಂ ಹತವತಃ ಸೋಮಪಾವ್ನಃ ಸೋಮಪಾತುರುದರಂ ಕೃತ್ವ ಇತ್ ಕರ್ಮಣೈವ ಪೂರ್ಣಮಸ್ತಿ । ಭವತಿ । ಕಸ್ಯ ಕರ್ಮಣೇತಿ ಉಚ್ಯತೇ । ವಿಧತಃ ಪರಿಚರಿತೋ ಯಜಮಾನಸ್ಯ । ಯತಃ ಪರಿಚರಣಾಭಾವೇ ತಸ್ಯ ಕುಕ್ಷಿಪೂರ್ತ್ಯಭಾವೋಽತಸ್ತತ್ಪೂರ್ತಯೇ ಪರಿಚರ-ತೇತಿ ಶೇಷಃ ॥

॥ ಪ್ರತಿಪದಾರ್ಥ ॥

**ತುರಸ್ಯ**—ಶೀಘ್ರವಾಗಿ । **ವೃತ್ರಘ್ನಃ**—ವೃತ್ರನನ್ನು ನಾಶಪಡಿಸುವವನೂ । **ಸೋಮಪಾವ್ನಃ**—ಸೋಮವನ್ನು ಪಾನಮಾಡುವವನೂ ಆದ ಇಂದ್ರನ । **ಉದರಂ**—ಉದರವು । **ವಿಧತಃ**—ಅನ್ನವನ್ನು ಉಪಚರಿಸುವ ಯಜಮಾನನ । **ಕೃತ್ನ ಇತ್**—ಹವಿಷ್ಪ್ರದಾನಾದಿ ಕರ್ಮಗಳಿಂದಲೇ । **ಪೂರ್ಣಂ**—ತುಂಬಿದುದಾಗಿ । **ಅಸ್ತಿ**—ಆಗುತ್ತದೆ.

॥ ಭಾವಾರ್ಥ ॥

ಶೀಘ್ರವಾಗಿ ವೃತ್ರನನ್ನು ನಾಶಪಡಿಸುವವನೂ, ಸೋಮವನ್ನು ಪಾನಮಾಡುವವನೂ ಆದ ಇಂದ್ರನ ಉದರವು ಅವನನ್ನು ಉಪಚರಿಸುವ ಯಜಮಾನನ ಹವಿಷ್ಪ್ರದಾನಾದಿ ಕರ್ಮಗಳಿಂದಲೇ ತುಂಬುತ್ತದೆ.

## English Translation

The belly of the Soma-drinker, the eager slayer of Vritra, is filled by the sacrificer's offering.

॥ ಸಂಹಿತಾಪಾಠಃ ॥

ತ್ವೇ ವಸೂನಿ ಸಂಗತಾ ವಿಶ್ವಾ ಚ ಸೋಮ ಸೌಭಗಾ ।
ಸುದಾತ್ವಪರಿಹ್ವೃತಾ ॥ ೮ ॥

॥ ಪದಪಾಠಃ ॥

ತ್ವೇ ಇತಿ । ವಸೂನಿ । ಸಂऽಗತಾ । ವಿಶ್ವಾ । ಚ । ಸೋಮ । ಸೌಭಗಾ ।
ಸುऽದಾತು । ಅಪರಿऽಹ್ವೃತಾ ॥ ೮ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವೇ ತ್ವಯಿ ವಸೂನಿ ಧನಾನ್ಯಸ್ಮದಿಷ್ಟಾನಿ ಸಂಗತಾ ಸಂಗತಾನಿ । ತಥಾ ಹೇ ಸೋಮ ಸೋಮವನ್ನಿಂದ್ರ ತ್ವಯಿ ವಿಶ್ವಾ ಸರ್ವಾಣಿ ಸೌಭಗಾ ಸೌಭಾಗ್ಯಾನಿ ಸಂಗತಾನಿ । ತಥಾ ಸುದಾತು ಸುದಾನಾನ್ಯಪರಿಹ್ವೃತಾಕುಟಿಲಾನಿ । ಅತಸ್ತಾನಿ ಕುರ್ವಿತಿ ಭಾವಃ । ಯದ್ವಾ । ಇಂದ್ರಃ ಸೋಮಂ ಪೀತ್ವಾ ಸೋಮ ಇತ್ಯಭಿಹಿತಃ ಸೋಮಶ್ರುತೇಃ ॥

॥ ಪ್ರತಿಪದಾರ್ಥ ॥

**ಸೋಮ**—ಸೋಮವಂತನಾದ ಎಲೈ ಇಂದ್ರನೇ । **ತ್ವೇ**—ನಿನ್ನಲ್ಲಿಯೇ । **ವಸೂನಿ**—ಸಕಲಧನಗಳೂ । **ವಿಶ್ವಾ**—ಸಮಸ್ತವಾದ । **ಸೌಭಗಾ ಚ**—ಮಂಗಳದ್ರವ್ಯಗಳೂ । **ಅಪರಿಹ್ವೃತಾ**—ದೋಷರಹಿತವಾದ । **ಸುದಾತು**—ಉತ್ತಮವಾದ ದಾನದ್ರವ್ಯಗಳೂ **ಸಂಗತಾ**—ಒಟ್ಟಿಗೆ ಸೇರಿಕೊಂಡಿವೆ.

॥ ಭಾವಾರ್ಥ ॥

ಸೋಮವಂತನಾದ ಎಲೈ ಇಂದ್ರನೇ, ನಿನ್ನಲ್ಲಿಯೇ ಸಕಲಧನಗಳೂ, ಸಮಸ್ತವಾದ ಮಂಗಳದ್ರವ್ಯಗಳೂ, ದೋಷರಹಿತವಾದ ಉತ್ತಮ ದಾನದ್ರವ್ಯಗಳೂ ಒಟ್ಟಿಗೆ ಸೇರಿಕೊಂಡಿವೆ.

English Translation

In you, O drinker of the Soma, are treasures stored, and all precious things and unblemished gifts.

॥ ಸಂಹಿತಾಪಾಠಃ ॥

ತ್ವಾಮಿದ್ಯವಯುರ್ಮಮ ಕಾಮೋ ಗವ್ಯುರ್ಹಿರಣ್ಯಯುಃ ।
ತ್ವಾಮಶ್ವಯುರೇಷತೇ ॥ ೯ ॥

॥ ಪದಪಾಠಃ ॥

ತ್ವಾಂ । ಇತ್ । ಯವಽಯುಃ । ಮಮ । ಕಾಮಃ । ಗವ್ಯುಃ । ಹಿರಣ್ಯಽಯುಃ ।
ತ್ವಾಂ । ಅಶ್ವಽಯುಃ । ಆ । ಈಷತೇ ॥ ೯ ॥

॥ ಸಾಯಣಭಾಷ್ಯಂ ॥

ತ್ವಾಮಿತ್ತ್ವಾಮೇವೇಷತೇ । ಕಿಂ । ಮಮ ಕಾಮಃ । ಸ ಕೀದೃಶಃ । ಯವಯುರ್ಯವೇಚ್ಛುಃ ಸನ್ನೇಷತೇ । ತಥಾ ಗವ್ಯುಃ ಸನ್ನೇಷತೇ। ತಥಾ ಹಿರಣ್ಯಯುಶ್ಚ ಸನ್ನೇಷತೇ। ತಥಾಶ್ವಯುಶ್ಚ ಸನ್ನೇಷತೇ। ತಂ ಕಾಮಮಾಪ್ತೇಚ್ಛಂ ಕುರ್ವಿತಿ ಭಾವಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಯವಯುಃ**—ಯವಧಾನ್ಯವನ್ನಪೇಕ್ಷಿಸುವುದೂ । **ಗವ್ಯುಃ**—ಗೋವುಗಳನ್ನು ಅಪೇಕ್ಷಿಸುವುದೂ । **ಹಿರಣ್ಯಯುಃ**—ಸುವರ್ಣವನ್ನಿಚ್ಛಿಸುವುದೂ । **ಅಶ್ವಯುಃ**—ಅಶ್ವಾಪೇಕ್ಷಿಯಾದುದೂ ಆದ । **ಮಮ**—ನನ್ನ । **ಕಾಮಃ**—ಅಭಿಲಾಷೆಯು । **ತ್ವಾಂ ಇತ್**—ನಿನ್ನನ್ನೇ । **ಏಷತೇ**—ಅಪೇಕ್ಷಿಸುತ್ತದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಯವಧಾನ್ಯವನ್ನಪೇಕ್ಷಿಸಿವುದೂ, ಗೋವುಗಳನ್ನಪೇಕ್ಷಿಸುವುದೂ, ಸುವರ್ಣವನ್ನಿಚ್ಛಿಸುವುದೂ, ಅಶ್ವಾಪೇಕ್ಷಿಯಾದುದೂ ಆದ ನನ್ನ ಅಭಿಲಾಷೆಯು ನಿನ್ನನ್ನೇ ಅಪೇಕ್ಷಿಸುತ್ತದೆ

English Translation

To you my desire hastens, seeking barley, cows and gold-to you it hastens seeking horses

॥ ಸಂಹಿತಾಪಾಠಃ ॥

ತವೇದಿಂದ್ರಾಹಮಾಶಸಾ ಹಸ್ತೇ ದಾತ್ರಂ ಚನಾ ದದೇ ।
ದಿನಸ್ಯ ವಾ ಮಘವನ್ತ್ಸಂಭೃತಸ್ಯ ವಾ ಪೂರ್ಧಿ ಯವಸ್ಯ ಕಾಶಿನಾ ॥ ೧೦ ॥

॥ ಪದಪಾಠ ॥

ತವ । ಇತ್ । ಇಂದ್ರ । ಅಹಂ । ಆಽಶಸಾ । ಹಸ್ತೇ । ದಾತ್ರಂ । ಚನ । ಆ । ದದೇ ।
ದಿನಸ್ಯ । ವಾ । ಮಘಽವನ್ । ಸಂಽಭೃತಸ್ಯ । ವಾ । ಪೂರ್ಧಿ । ಯವಸ್ಯ । ಕಾಶಿನಾ ॥೧೦॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತವೇತ್ತ್ವೈವಾಶಸಾಶಂಸನೇನ ತ್ವಮಸ್ಮದೀಯಂ ಕ್ಷೇತ್ರಂ ಯವಸಮೃದ್ಧಂ ಕರೋಷೀತ್ಯಾಶಂಸನೇನ ಹಸ್ತೇ ದಾತ್ರಂ ಚನ ಲವನಸಾಧನಂ ದಾತ್ರಮುಪಾ್ಯ ದದೇ । ಸ್ವೀಕರೋಮಿ । ಕಿಮನೇನ ಪ್ರಯಾಸೇನ । ದಿನಸ್ಯ ವಾ ಪೂರ್ವಮೇವ ಛಿನ್ನಸ್ಯ ವಾ ಯವಸ್ಯ ಸಂಭೃತಸ್ಯ ವಾ ಪೂರ್ವಮೇವ ಛಿತ್ತ್ವಾ ನಿಷ್ಕೃತಸ್ಯ ರಾಶೀಕೃತಸ್ಯ ವಾ ಯವಸ್ಯ ಕಾಶಿನಾ ಮುಷ್ಟಿನಾ ಪೂರ್ಧಿ । ಪೂರಯ । ಆಶಂಸನಂ ದೇಹಿ ಚ ॥

॥ ಪ್ರತಿಪದಾರ್ಥ ॥

**ಮಘವನ್**—ಧನವಂತನಾದ । **ಇಂದ್ರ**—ಎಲೈ ಇಂದ್ರನೇ । **ತವ ಆಶಸಾ ಇತ್**—ನಿನ್ನ ಸಹಾಯದ ಭರವಸೆಯಿಂದಲೇ । **ಅಹಂ**—ನಾನು । **ಹಸ್ತೇ**—ನನ್ನ ಕೈಯಿನಲ್ಲಿ । **ದಾತ್ರಂ ಚನ**—ಯವವನ್ನು ಕುಯ್ಯಲು ಸಾಧನವಾದ ಕುಡುಗೋಲನ್ನು । **ಆ ದದೇ**—ಕೈಯಲ್ಲಿ ತೆಗೆದುಕೊಳ್ಳುತ್ತೇನೆ । **ದಿನಸ್ಯ ವಾ**—ನಾನು ಕೊಯ್ಯುವುದಕ್ಕಿಂತಲೂ ಪೂರ್ವಭಾವಿಯಾಗಿಯೇ ಕುಯ್ದಿದ್ದರೂ । **ವಾ**—ಅಥವಾ । **ಸಂಭೃತಸ್ಯ**—ಮೊದಲೇ ರಾಶಿಮಾಡಲ್ಪಟ್ಟಿದ್ದರೂ ಅಂತಹ । **ಯವಸ್ಯ**—ಯವಧಾನ್ಯದಿಂದ ತುಂಬಿದ । **ಕಾಶಿನಾ**—ಮುಷ್ಟಿಯಿಂದ । **ಪೂರ್ಧಿ**—ನನ್ನ ಆಸೆಯನ್ನು ಪೂರ್ಣಮಾಡು.

॥ ಭಾವಾರ್ಥ ॥

ಧನವಂತನಾದ ಎಲೈ ಇಂದ್ರನೇ, ನಿನ್ನ ಸಹಾಯದ ಭರವಸೆಯಿಂದಲೇ, ನಾನು ನನ್ನ ಕೈಯಿನಲ್ಲಿ ಯವವನ್ನುಕುಯ್ಯಲು ಸಾಧನವಾದ ಕುಡುಗೋಲನ್ನು ತೆಗೆದುಕೊಳ್ಳುತ್ತೇನೆ. ನಾನು ಕುಯ್ಯುವುದಕ್ಕಿಂತಲೂ ಪೂರ್ವಭಾವಿಯಾಗಿಯೇ ಕುಯ್ದಿದ್ದರೂ, ಅಥವಾ ಮೊದಲೇ ರಾಶಿಮಾಡಲ್ಪಟ್ಟಿದ್ದರೂ ಅಂತಹ ಯವಧಾನ್ಯದಿಂದ ತುಂಬಿದ ಮುಷ್ಟಿಯಿಂದ ನನ್ನ ಆಸೆಯನ್ನು ಪೂರ್ಣಮಾಡು.

### English Translation

I take my sickle also in hand, Indra, with a prayer to you; fill it, Maghavan, with a handful of barley already cut or piled.

## ಎಪ್ಪತ್ತೊಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅಯಂ ಕೃತ್ನುರಿತಿ ನವರ್ಚಂ ದಶಮಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ಅಯಂ ಕೃತ್ನುರ್ನವ ಕೃತ್ನುರ್ಭಾರ್ಗವಃ ಸೌಮ್ಯಮಂತ್ಯಾನುಷ್ಟುಬಿತಿ । ಭಾರ್ಗವಃ ಕೃತ್ನುರ್ಋಷಿಃ । ನವಮ್ಯನುಷ್ಟುಪ್ । ಅಷ್ಟೌ ಗಾಯತ್ರ್ಯಃ । ಸೋಮೋ ದೇವತಾ ॥ ವಿನಿಯೋಗೋ ಲೈಂಗಿಕಃ ॥**

ಅನುವಾದವು— **ಅಯಂ ಕೃತ್ನುಃ** ಎಂಬ ಈ ಸೂಕ್ತವು ಎಂಟನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭಾರ್ಗವಃ ಕೃತ್ನುಃ ಎಂಬುವನು ಋಷಿಯು ; ಅನುಕ್ರಮಣಿಕೆಯಲ್ಲಿ- **ಅಯಂ ಕೃತ್ನುರ್ನವ ಕೃತ್ನುರ್ಭಾರ್ಗವಃ ಸೌಮ್ಯಮಂತ್ಯಾನುಷ್ಟುಪ್** ಎಂದು ಹೇಳಿರುವುದು. ಸೋಮನು ದೇವತೆಯು, ಈ ಸೂಕ್ತದ ಒಂಭತ್ತನೆಯ ಋಕ್ಕು ಅನುಷ್ಟುಪ್ ಛಂದಸ್ಕವು. ಉಳಿದ ಋಕ್ಕುಗಳು ಗಾಯತ್ರೀಛಂದಸ್ಕವು ಸೂಕ್ತವಿನಿಯೋಗವು ಲೈಂಗಿಕವು

## ಸೂಕ್ತ—೭೯

ಮಂಡಲ—೮ ॥ ಅನುವಾಕ—೮ ॥ ಸೂಕ್ತ—೭೯ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೩೩, ೩೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಕೃತ್ನುರ್ಭಾರ್ಗವಃ ॥
ದೇವತಾ—ಅಗ್ನಿಃ ॥
ಛಂದಃ—೧-೮ ಗಾಯತ್ರೀ । ೯. ಅನುಷ್ಟುಪ್ ॥

॥ ಸಂಹಿತಾಪಾಠಃ ॥

**ಅಯಂ ಕೃತ್ನುರಗೃಭೀತೋ ವಿಶ್ವಜಿದುದ್ಭಿದಿತ್ಸೋಮಃ ।**

**ಋಷಿರ್ವಿಪ್ರಃ ಕಾವ್ಯೇನ ॥ ೧ ॥**

॥ ಪದಪಾಠಃ ॥

**ಅಯಂ । ಕೃತ್ನುಃ । ಅಗೃಭೀತಃ । ವಿಶ್ವಽಜಿತ್ । ಉತ್ಽಭಿತ್ । ಇತ್ । ಸೋಮಃ ।**

**ಋಷಿಃ । ವಿಪ್ರಃ । ಕಾವ್ಯೇನ ॥ ೧ ॥**

॥ ಸಾಯಣಭಾಷ್ಯಂ ॥

ಅಯಂ ಸೋಮಃ ಕೃತ್ನುಃ ಕರ್ತಾ ಸರ್ವಸ್ಯಾಗೃಭೀತೋಽನ್ಯೈರಗೃಹೀತೋ ವಿಶ್ವಜಿತ್ಸರ್ವಸ್ಯ ಜೇತೋದ್ಭಿತ್ಫಲಸ್ಯೋದ್ಭೇದಕಃ । ಅಥವಾ ವಿಶ್ವಜಿದುದ್ಭಿದೌ ಸೋಮಯಾಗೌ । ತಯೋರ್ನಿಷ್ಪಾದಕತ್ವಾತ್ತದ್ರೂಪಃ । ಋಷಿರ್ಜ್ಞಾನವಾನ್ವಿಪ್ರೋ ಮೇಧಾವೀ ವಿಪ್ರವತ್ಪೂಜ್ಯೋ ವಿಶೇಷೇಣ ಪೂರಕೋ ವಾ । ಏವಂ ಮಹಾನುಭಾವಃ ಸೋಮಃ ಕಾವ್ಯೇನ ಸ್ತೋತ್ರೇಣ ಸ್ತುತ್ಯೋ ಭವತೀತಿ ಶೇಷಃ ॥

॥ ಪ್ರತಿಪದಾರ್ಥ ॥

**ಕೃತ್ನುಃ**—ಸಕಲ ಕರ್ಮಕರ್ತನೂ । **ಅಗೃಭೀತಃ**—ಇತರರ ಕಡೆಗೆ ಸಿಕ್ಕದವನೂ । **ವಿಶ್ವಜಿತ್**—ಸಕಲವನ್ನೂ ಜಯಿಸುವವನೂ । **ಉದ್ಭಿತ್**—ಫಲದ ಉತ್ಪಾದಕನೂ । **ಋಷಿಃ**—ಪ್ರಜ್ಞಾವಂತನೂ । **ವಿಪ್ರಃ**—

ಮೇಧಾವಿಯೂ ಆದ । ಅಯಂ ಸೋಮ ಇತ್—ಈ ಸೋಮದೇವನೇ । ಕಾವ್ಯೇನ—ಸ್ತೋತ್ರದಿಂದಲೇ ಪ್ರಶಂಸಿತನಾಗುತ್ತಾನೆ.

॥ ಭಾವಾರ್ಥ ॥

ಸಕಲ ಕರ್ಮಕರ್ತನೂ, ಇತರರ ಕಡೆಗೆ ಸಿಕ್ಕದವನೂ, ಸಕಲವನ್ನೂ ಜಯಿಸುವವನೂ, ಫಲದ ಉತ್ಪಾದಕನೂ ಪ್ರಜ್ಞಾವಂತನೂ, ಮೇಧಾವಿಯೂ ಆದ ಈ ಸೋಮದೇವನೇ ಸ್ತೋತ್ರದಿಂದಲೇ ಪ್ರಶಂಸಿತನಾಗುತ್ತಾನೆ.

English Translation

This all-creating Soma, obstructed by none, the conqueror of all, the producer of fruit, the seer, the wise, (is to be praised) with a hymn

॥ ಸಂಹಿತಾಪಾಠಃ ॥

ಅಭ್ಯೂರ್ಣೋತಿ ಯನ್ನಗ್ನಂ ಭಿಷಕ್ತಿ ವಿಶ್ವಂ ಯತ್ತುರಂ ।
ಪ್ರೇಮಂಧಃ ಖ್ಯನ್ನಿಃ ಶ್ರೋಣೋ ಭೂತ್ ॥ ೨ ॥

॥ ಪದಪಾಠಃ ॥

ಅಭಿ । ಊರ್ಣೋತಿ । ಯತ್ । ನಗ್ನಂ । ಭಿಷಕ್ತಿ । ವಿಶ್ವಂ । ಯತ್ । ತುರಂ ।
ಪ್ರ । ಈಂ । ಅಂಧಃ । ಖ್ಯತ್ । ನಿಃ । ಶ್ರೋಣಃ । ಭೂತ್ ॥ ೨ ॥

॥ ಸಾಯಣಭಾಷ್ಯಂ ॥

ಅಯಂ ಸೋಮೋ ಯನ್ನಗ್ನಮಸ್ತಿ ತದಭ್ಯೂರ್ಣೋತಿ । ಆಚ್ಛಾದಯತಿ । ಯನ್ನಗ್ನಮಿವ ವಿಫಲಂ ವರ್ತತೇ ತದಾಚ್ಛಾದಯತಿ ಫಲೇನ । ಅಥವಾ ವಸ್ತ್ರಂ ಜನಯನ್ನಾಚ್ಛಾದಯತಿ । ತಥಾ ಯತ್ತುರಮಾತುರಂ ರುಗ್ಣಂ ವಿಶ್ವಂ ತದ್ಭಿಷಕ್ತಿ । ಭಿಷಜ್ಯತಿ । ಯಜ್ಞದ್ವಾರಾ ಸ್ವರ್ಗಸಾಧನೇನೌಷಧರೂಪೇಣ ಚ ಶರೀರಸಿದ್ಧಿಸಾಧನಸ್ಯ । ಅಂಧಃ ಸನ್ನಂಧೋಽಪಿ ಪ್ರ ಖ್ಯತ್ । ಪಶ್ಯತಿ । ಶ್ರೋಣೋಽಪಿ ಪಂಗುರಪಿ ನಿರ್ಭೂತ್ । ನಿರ್ಭವತಿ । ನಿರ್ಗಚ್ಛತಿ ।

॥ ಪ್ರತಿಪದಾರ್ಥ ॥

ಯತ್—ಯಾವ ವಸ್ತುವು । ನಗ್ನಂ—ಹೊದ್ದಿಕೆಯಿಲ್ಲದಿರುವುದೋ ಅದನ್ನು । (ಅಯಂ—ಈ ಸೋಮದೇವನು) । ಅಭ್ಯೂರ್ಣೋತಿ—ಹೊದ್ದಿಕೆಯಿಂದ ಆಚ್ಛಾದಿಸುತ್ತಾನೆ । ಯತ್—ಯಾವುದು । ತುರಂ—ರೋಗಗ್ರಸ್ತವಾಗಿರುವುದೋ । ವಿಶ್ವಂ—ಆ ಎಲ್ಲವನ್ನೂ । ಭಿಷಕ್ತಿ—ಔಷಧಿಯಿಂದ ವಾಸಿಮಾಡುತ್ತಾನೆ । ಅಂಧಃ ಸನ್—ಕುರುಡನಾದರೂ । ಪ್ರ ಖ್ಯತ್—ವಿಶೇಷವಾಗಿ ನೋಡುತ್ತಾನೆ । ಶ್ರೋಣಃ—ಕುಂಟನಾದರೂ । ನಿಃ ಭೂತ್—ಸಂಚರಿಸುತ್ತಾನೆ.

॥ ಭಾವಾರ್ಥ ॥

ಯಾವ ವಸ್ತುವು ಹೊದ್ದಿಕೆಯಿಲ್ಲದಿರುವುದೋ ಅದನ್ನು ಈ ಸೋಮದೇವನು ಹೊದ್ದಿಕೆಯಿಂದ ಆಚ್ಛಾದಿಸುತ್ತಾನೆ. ಯಾವುದು ರೋಗಗ್ರಸ್ತವಾಗಿರುವುದೋ ಆ ಎಲ್ಲವನ್ನೂ ಔಷಧಿಯಿಂದ ವಾಸಿಮಾಡುತ್ತಾನೆ. ಕುರುಡನಾದರೂ ವಿಶೇಷವಾಗಿ ನೋಡುತ್ತಾನೆ. ಕುಂಟನಾದರೂ ಸಂಚರಿಸುತ್ತಾನೆ.

## English Translation

He covers what is naked, he heals all that is sick, the blind sees, the lame walks.

॥ ಸಂಹಿತಾಪಾಠಃ ॥

ತ್ವಂ ಸೋಮ ತನೂಕೃದ್ಭ್ಯೋ ದ್ವೇಷೋಭ್ಯೋಽನ್ಯಕೃತೇಭ್ಯಃ ।
ಉರು ಯಂತಾಸಿ ವರೂಥಂ ॥ ೩ ॥

॥ ಪದಪಾಠಃ ॥

ತ್ವಂ । ಸೋಮ । ತನೂಕೃತ್ಽಭ್ಯಃ । ದ್ವೇಷಃಽಭ್ಯಃ । ಅನ್ಯಽಕೃತೇಭ್ಯಃ ।
ಉರು । ಯಂತಾ । ಅಸಿ । ವರೂಥಂ ॥ ೩ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ತನೂಕೃದ್ಭ್ಯಃ । ಕೃಶೀಕುರ್ವದ್ಭ್ಯಃ ಅಥವಾಂಗಾನಾಂ ವಿಚ್ಛೇದಕೇಭ್ಯೋ ದ್ವೇಷೋಭ್ಯಃ । ಶತ್ರುಕೃತೇಭ್ಯೋಽಪ್ರಿಯೇಭ್ಯಃ ಕೃತ್ಯೇಭ್ಯ ಇತ್ಯರ್ಥಃ। ವರೂಥಂ ವರಕಂ ರಕ್ಷಣಮುರು ಯಂತಾಸಿ । ಭವಸಿ ಸ್ತೋತೄಣಾಂ । ಅನ್ಯಕೃತಾನಿ ಹಿ ರಕ್ಷಾಂಸೀತಿ ಬ್ರಾಹ್ಮಣಂ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮದೇವನೇ । **ತ್ವಂ**—ನೀನು । **ತನೂಕೃದ್ಭ್ಯಃ**—ನಮ್ಮ ದೇಹವನ್ನು ಹಿಂಸಿಸಿ ಕೃಶವಾಗಿ ಮಾಡುವವರೂ । **ಅನ್ಯಕೃತೇಭ್ಯಃ**—ರಾಕ್ಷಸಸ್ವರೂಪವುಳ್ಳವರೂ ಆದ । **ದ್ವೇಷೋಭ್ಯಃ**—ಶತ್ರುಗಳ ಹಿಂಸೆಯಿಂದ । **ಉರು**—ಅಧಿಕವಾಗಿ । **ವರೂಥಂ**—ರಕ್ಷಣೆಯನ್ನು ನೀಡುವವನಾಗಿ । **ಯಂತಾಸಿ**—ಆಗುತ್ತೀಯೆ.

॥ ಭಾವಾರ್ಥ ॥

ಎಲೈ ಸೋಮದೇವನೇ, ನಮ್ಮ ದೇಹವನ್ನು ಹಿಂಸಿಸಿ ಕೃಶವಾಗಿ ಮಾಡುವವರೂ, ರಾಕ್ಷಸಸ್ವರೂಪವುಳ್ಳವರೂ ಆದ ಶತ್ರುಗಳ ಹಿಂಸೆಯಿಂದ ನಮಗೆ ನೀನು ಅಧಿಕವಾಗಿ ರಕ್ಷಣೆಯನ್ನು ನೀಡುತ್ತೀಯೆ.

## English Translation

Soma, you offer us a wide shelter from the wasting enmities wrought by our foes.

॥ ಸಂಹಿತಾಪಾಠಃ ॥

ತ್ವಂ ಚಿತ್ತೀ ತವ ದಕ್ಷೈರ್ದಿವ ಆ ಪೃಥಿವ್ಯಾ ಋಜೀಷಿನ್ ।
ಯಾವೀರಘಸ್ಯ ಚಿದ್ದ್ವೇಷಃ ॥ ೪ ॥

॥ ಪದಪಾಠಃ ॥

ತ್ವಂ । ಚಿತ್ತೀ । ತವ । ದಕ್ಷೈಃ । ದಿವಃ । ಆ । ಪೃಥಿವ್ಯಾಃ । ಋಜೀಷಿನ್ ।
ಯಾವೀಃ । ಅಘಸ್ಯ । ಚಿತ್ । ದ್ವೇಷಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಋಜೀಷಿನ್ ತೃತೀಯಸವನಗತೇನರ್ಜೀಷೇಣ ತದ್ವನ್ ಸೋಮ ತ್ವಂ ತವ ಚಿತ್ತೀ ಚಿತ್ತ್ಯಾ ಪ್ರಜ್ಞಯಾ ದಕ್ಷೈರ್ಬಲೈಶ್ಚ ದಿವ ಆ । ಆ ಇತಿ ಚಾರ್ಥೇ । ಪೃಥಿವ್ಯಾ ಆ ಪೃಥಿವ್ಯಾಶ್ಚ ಸಕಾಶಾದಘಸ್ಯ ಚಿದಸ್ಮಾಕಮಾಹಂತುರಪಿ ದ್ವೇಷಃ ಶತ್ರೋಃ ಕೃತ್ಯಾಂ ಯಾವೀಃ । ಪೃಥಕ್ಕುರು ॥

॥ ಪ್ರತಿಪದಾರ್ಥ ॥

**ಋಜೀಷಿನ್**—ಋಜೀಷಸಂಜ್ಞಕವಾದ ಸೋಮವುಳ್ಳ ಎಲೈ ಇಂದ್ರನೇ । **ತ್ವಂ**—ನೀನು । **ತವ**—ನಿನ್ನ । **ಚಿತ್ತೀ**—ಪ್ರಜ್ಞೆಯಿಂದಲೂ । **ದಕ್ಷೈಃ**—ಬಲಗಳಿಂದಲೂ । **ದಿವ ಆ**—ದ್ಯುಲೋಕದಲ್ಲಿರುವವರೂ । **ಪೃಥಿವ್ಯಾಃ**—ಪೃಥ್ವಿಯಲ್ಲಿರುವವರೂ । **ಅಘಸ್ಯ ಚಿತ್**—ನಮಗೆ ಕೇಡನ್ನು ಬಯಸುವವರೂ ಆದ । **ದ್ವೇಷಃ**—ಶತ್ರುಗಳ ಪಾಪಕೃತ್ಯವನ್ನು । **ಯಾವೀಃ**—ನಮಗೆ ಅಂಟದಿರುವಂತೆ ಮಾಡು.

॥ ಭಾವಾರ್ಥ ॥

ಋಜೀಷಸಂಜ್ಞಕವಾದ ಸೋಮವುಳ್ಳ ಎಲೈ ಇಂದ್ರನೇ, ನೀನು ನಿನ್ನ ಪ್ರಜ್ಞೆಯಿಂದಲೂ, ಬಲಗಳಿಂದಲೂ ಸಹ ದ್ಯುಲೋಕದಲ್ಲಿರುವವರೂ, ಪೃಥ್ವಿಯಲ್ಲಿರುವವರೂ ಮತ್ತು ನಮಗೆ ಕೇಡನ್ನು ಬಯಸುವವರೂ ಆದ ಶತ್ರುಗಳ ಪಾಪಕೃತ್ಯವನ್ನು ನಮಗೆ ಅಂಟದಿರುವಂತೆ ಮಾಡು

## English Translation

O Rijishin, by your wisdom and might, drive away the enmity of our oppressor from the heaven and the earth.

॥ ಸಂಹಿತಾಪಾಠಃ ॥

ಅರ್ಥಿನೋ ಯಂತಿ ಚೇದರ್ಥಂ ಗಚ್ಛಾನಿದ್ದದುಷೋ ರಾತಿಂ ।
ವವೃಜ್ಯುಸ್ತೃಷ್ಯತಃ ಕಾಮಂ ॥ ೫ ॥

॥ ಪದಪಾಠಃ ॥

ಅರ್ಥಿನಃ । ಯಂತಿ । ಚ । ಇತ್ । ಅರ್ಥಂ । ಗಚ್ಛಾನ್ । ಇತ್ । ದದುಷಃ । ರಾತಿಂ ।
ವವೃಜ್ಯುಃ । ತೃಷ್ಯತಃ । ಕಾಮಂ ॥ ೫ ॥

॥ ಸಾಯಣಭಾಷ್ಯಂ ॥

**ಅರ್ಥಿನೋ** ಧನಾನಿ ಕಾಮಯಮಾನಾ **ಯಂತಿ ಚೇತ್** । **ಯಂತಿ ಚಾರ್ಥಂ** ಪ್ರತಿ । ಗತ್ವಾ ಚ **ದದುಷೋ** ದಾತೂ **ರಾತಿಂ** ದಾನಂ **ಗಚ್ಛಾನಿತ್** । ಗಚ್ಛಂತಿ ಚ । ಗತೇಷು ಮಧ್ಯೇ ಯಂ ಹೇ ಸೋಮ ತ್ವಮನುಗೃಹ್ಣಾಸಿ ತಸ್ಯ **ತೃಷ್ಯತೋ** ಭಿಕ್ಷಮಾಣಸ್ಯ **ಕಾಮಂ ವವೃಜ್ಯುಃ** । ಪುನಃ ಕಾಮಾನಾವರ್ಜಯಂತಿ। ತಾವತ್ಪರ್ಯಂತಂ ಪೂರಯಂತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅರ್ಥಿನಃ**—ಧನಾಪೇಕ್ಷಿಗಳು । **ಅರ್ಥಂ ಚ ಇತ್**—ಧನವನ್ನೇ ಅಪೇಕ್ಷಿಸಿ । **ಯಂತಿ**—ಅದನ್ನು ಹುಡುಕುತ್ತಾ ಹೋಗುತ್ತಾರೆ । **ದದುಷಃ**—ದಾನವಂತನ । **ರಾತಿಂ**—ದಾನವನ್ನು ನಿರೀಕ್ಷಿಸಿ । **ಗಚ್ಛಾನಿತ್**—ಹೋಗುತ್ತಾರೆ (ಎಲೈ ಸೋಮನೇ) । **ತೃಷ್ಯತಃ**—ಇವರುಗಳ ನಡುವೆ ನಿನ್ನ ಅನುಗ್ರಹವನ್ನು ಪಡೆದ ಯಾಚಕನ । **ಕಾಮಂ**—ಇಷ್ಟಾರ್ಥವನ್ನು । **ವವೃಜ್ಯುಃ**—ತುಂಬಿಕೊಡುತ್ತಾರೆ.

॥ ಭಾವಾರ್ಥ ॥

ಧನಾಪೇಕ್ಷಿಗಳು ಧನವನ್ನೇ ಅಪೇಕ್ಷಿಸಿ ಅದನ್ನು ಹುಡುಕುತ್ತಾ ಹೋಗುತ್ತಾರೆ. ದಾನವಂತನ ದಾನವನ್ನು ನಿರೀಕ್ಷಿಸಿ ಹೋಗುತ್ತಾರೆ. ಎಲೈ ಸೋಮನೇ, ಇವರುಗಳ ನಡುವೆ ನಿನ್ನ ಅನುಗ್ರಹವನ್ನು ಪಡೆದ ಯಾಚಕನ ಇಷ್ಟಾರ್ಥವನ್ನು ತುಂಬಿಕೊಡುತ್ತಾರೆ

## English Translation

The petitioners seek for wealth, they attend the bounty of the liberal ; (by you) men pour out the desire of the thirsty

॥ ಸಂಹಿತಾಪಾಠಃ ॥

ವಿದದ್ಯತ್ಪೂರ್ವ್ಯಂ ನಷ್ಟಮುದೀಮೃತಾಯುಮೀರಯತ್ ।
ಪ್ರೇಮಾಯುಸ್ತಾರೀದತೀರ್ಣಂ ॥ ೬ ॥

॥ ಪದಪಾಠಃ ॥

ವಿದತ್ । ಯತ್ । ಪೂರ್ವ್ಯಂ । ನಷ್ಟಂ । ಉತ್ । ಈಂ । ಋತಽಯುಂ । ಈರಯತ್ ।
ಪ್ರ । ಈಂ । ಆಯುಃ । ತಾರೀತ್ । ಅತೀರ್ಣಂ ॥ ೬ ॥

॥ ಸಾಯಣಭಾಷ್ಯಂ ॥

ಯದ್ಯದಾ ಪೂರ್ವ್ಯಂ ಪುರಾಣಂ ನಷ್ಟಂ ಸ್ವಕೀಯಂ ಧನಂ ವಿದತ್ ಲಭತೇ ನಷ್ಟಧನ ಈಮೇನ-ಮೃತಾಯುಂ ನಷ್ಟಧನಲಾಭಾರ್ಥಂ ಯಜ್ಞಕಾಮಮುದೀರಯತ್ । ಪ್ರೇರಯತಿ । ಧನಂ ಸಾಧ-ಯತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಪೂರ್ವ್ಯಂ**—ಪುರಾತನವಾದುದೂ । **ನಷ್ಟಂ**—ನಷ್ಟವಾದುದೂ ಆದ ಧನವನ್ನು । **ವಿದತ್**—ಹೊಂದಲು । **ಋತಾಯುಂ**—ಯಜ್ಞಕಾಮನಾದ । **ಈಂ**—ಯಜಮಾನನನ್ನು (ಸೋಮನು) । **ಉದೀರಯತ್**—ಪ್ರೇರಿಸುವನೋ ಆಗ । **ಅತೀರ್ಣಂ**—ಯಜ್ಞನಿರತವಾದ । **ಈಂ ಆಯುಃ**—ಈ ಯಜ್ಞಕರ್ತನ ಆಯುಸ್ಸನ್ನು । **ಪ್ರ ತಾರೀತ್**—ವೃದ್ಧಿಪಡಿಸುತ್ತಾನೆ.

॥ ಭಾವಾರ್ಥ ॥

ಯಾವಾಗ ಪುರಾತನವಾದುದೂ ನಷ್ಟವಾದುದೂ ಆದ ಧನವನ್ನು ಹೊಂದಲು ಯಜ್ಞಕಾಮನಾದ ಯಜಮಾನನನ್ನು ಈ ಸೋಮನು ಪ್ರೇರಿಸುವನೋ ಆಗ ಯಜ್ಞನಿರತವಾದ ಈ ಯಜ್ಞಕರ್ತನ ಆಯುಸ್ಸನ್ನು ವೃದ್ಧಿಪಡಿಸುತ್ತಾನೆ.

English Translation

(Soma) urges him on when the sacrificer obtains ( by offerings ) his old lost wealth, he lengthens out his unending life.

॥ ಸಂಹಿತಾಪಾಠಃ ॥

ಸುಶೇವೋ ನೋ ಮೃಳಯಾಕುರದೃಪ್ತಕ್ರತುರವಾತಃ ।
ಭವಾ ನಃ ಸೋಮ ಶಂ ಹೃದೇ ॥ ೭ ॥

॥ ಪದಪಾಠಃ ॥

ಸುऽಶೇವಃ । ನಃ । ಮೃಳಯಾಕುಃ । ಅದೃಪ್ತऽಕ್ರತುಃ । ಅವಾತಃ ।

ಭವ । ನಃ । ಸೋಮ । ಶಂ । ಹೃದೇ ॥ ೭ ॥

॥ ಸಾಯಣಭಾಷ್ಯಂ ॥

ಹೇ ಸೋಮ ಪೀತಸ್ತ್ವಂ ನೋಽಸ್ಮಾಕಂ ಹೃದೇ ಹೃದಯೇ ವರ್ತಮಾನಃ ಸುಶೇವಃ . . . । ಅಪರೋ ನ ಪೂರಣಃ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮದೇವನೇ । **ನಃ**—ನಮ್ಮ । **ಹೃದೇ**—ಹೃದಯದಲ್ಲಿ । **ಸುಶೇವಃ**—ಸುಖವಾಗಿರತಕ್ಕವನೂ । **ಮೃಳಯಾಕುಃ**—ನಮಗೂ ಸುಖವನ್ನುಂಟುಮಾಡುವವನೂ । **ಅದೃಪ್ತಕ್ರತುಃ**—ಪ್ರಮಾದರಹಿತವಾದ ಪ್ರಜ್ಞೆಯುಳ್ಳವನೂ । **ಅವಾತಃ**—ಬೇರೆಕಡೆ ಹೋಗದಿರುವವನೂ ಆಗಿ । **ನಃ**—ನಮಗೆ । **ಶಂ**—ಮಂಗಳಕರನಾಗಿ । **ಭವ**—ಆಗು.

॥ ಭಾವಾರ್ಥ ॥

ಎಲೈ ಸೋಮದೇವನೇ, ನಮ್ಮ ಹೃದಯದಲ್ಲಿ ಸುಖವಾಗಿರತಕ್ಕವನೂ, ನಮಗೂ ಸುಖವನ್ನುಂಟುಮಾಡುವವನೂ, ಪ್ರಮಾದರಹಿತವಾದ ಪ್ರಜ್ಞೆಯುಳ್ಳವನೂ, ಬೇರೆಕಡೆ ಹೋಗದಿರುವವನೂ ಆಗಿ ನಮಗೆ ಮಂಗಳಕಾರಕನಾಗಿ ಆಗು.

English Translation

Most gracious and conferring joy, void of pride in your acts, and never failing, dwell, Soma, auspiciously in our hearts.

॥ ಸಂಹಿತಾಪಾಠಃ ॥

ಮಾ ನಃ ಸೋಮ ಸಂ ವೀವಿಜೋ ಮಾ ವಿ ಬೀಭಿಷಥಾ ರಾಜನ್ ।

ಮಾ ನೋ ಹಾರ್ದಿ ತ್ವಿಷಾ ವಧೀಃ ॥ ೮ ॥

॥ ಪದಪಾಠಃ ॥

ಮಾ । ನಃ । ಸೋಮ । ಸಂ । ವೀವಿಜಃ । ಮಾ । ವಿ । ಬೀಭಿಷಥಾಃ । ರಾಜನ್ ।

ಮಾ । ನಃ । ಹಾರ್ದಿ । ತ್ವಿಷಾ । ವಧೀಃ ॥ ೮ ॥

॥ ಸಾರಾರ್ಥ ॥

**ಹೇ ಸೋಮ ಪೀತಸ್ತ್ವಂ ನೋಽಸ್ಮಾನ್** [illegible] । [illegible] **ಕಾರ್ಷೀಃ । ಹೇ ರಾಜನ್ ಸೋಮ ಅಸ್ಮಾನ್ಮಾ ವಿ ಬೀಭಿಷಥಾ** । [illegible] । ನೋಽಸ್ಮಾಕಂ **ಹಾರ್ದಿ ಹೃದಯಂ ತ್ವಿಷಾ ದೀಪ್ತ್ಯಾ ಮಾ ವಧೀಃ** ॥

॥ [illegible] ॥

**ಸೋಮ**—ನಮ್ಮಿಂದ ಪಾನಮಾಡಲ್ಪಟ್ಟ ಎಲೈ [illegible] । **ನಃ**—ನಮ್ಮನ್ನು । **ಮಾ ಸಂ ವೀವಿಜಃ**—ಕಂಪಿಸಿ ನಡಗುವಂತೆ ಮಾಡಬೇಡ । [illegible]—ಪ್ರಭುವಾದ ಎಲೈ ಸೋಮನೇ । **ಮಾ ವಿ ಬೀಭಿಷಥಾಃ**—ಭಯಪಡಿಸಬೇಡ । **ನಃ**—[illegible] । [illegible]—ಹೃದಯವನ್ನು । **ತ್ವಿಷಾ**—ನಿನ್ನ ಉಗ್ರವಾದ ಪ್ರಭೆಯಿಂದ । **ಮಾ ವಧೀಃ**—ದಹಿಸುವಂತೆ ಮಾಡಬೇಡ.

॥ ಭಾವಾರ್ಥ ॥

ನಮ್ಮಿಂದ ಪಾನಮಾಡಲ್ಪಟ್ಟ ಎಲೈ ಸೋಮನೇ, ನಮ್ಮನ್ನು ಕಂಪಿಸಿ ನಡಗುವಂತೆ ಮಾಡಬೇಡ. ಪ್ರಭುವಾದ ಎಲೈ ಸೋಮನೇ, ನಮ್ಮನ್ನು ಭಯಪಡಿಸಬೇಡ. [illegible] ಹೃದಯವನ್ನು ನಿನ್ನ ಉಗ್ರವಾದ ಪ್ರಭೆಯಿಂದ ದಹಿಸುವಂತೆ ಮಾಡಬೇಡ

English Translation

O Soma, cause us not to tremble [illegible], O king, smite not our hearts with your brightness

॥ ಸಂಹಿತಾಪಾಠ ॥

ಅವ ಯತ್ಸ್ವೇ ಸಧಸ್ಥೇ ದೇವಾನಾಂ [illegible] ।
ರಾಜನ್ನಪ ದ್ವಿಷಃ ಸೇಧ ಮೀಢ್ವೋ ಅಪ ಸ್ರಿಧಃ [illegible] ॥ ೯ ॥

॥ ಪದಪಾಠಃ ॥

ಅವ । ಯತ್ । ಸ್ವೇ । ಸಧಸ್ಥೇ । ದೇವಾನಾಂ । [illegible] ।
ರಾಜನ್ । ಅಪ । ದ್ವಿಷಃ । ಸೇಧ । ಮೀಢ್ವಃ । ಅಪ । ಸ್ರಿಧಃ । [illegible] ॥

॥ ಸಾಯಣಭಾಷ್ಯಂ ॥

**ಸ್ವೇ ಸಧಸ್ಥೇ ಸ್ವಕೀಯೇ** ಸಹಸ್ಥಾನೇ ಗೃಹೇ ದೇವಾನಾಂ [illegible] ಸ ಪ್ರವಿಶಂತ್ವಿತಿ । **ಯದ್ಯದಾವೇಕ್ಷೇ** ಅಹಂ ತ್ವಂ ನೇಕ್ಷಸೇ ತದಾ ಹೇ ರಾಜನ್ ದ್ವಿಷೋಽಸ್ಮದ್ದ್ವೇಷ್ಟೄನಪ ಸೇಧ । **ಹೇ ಮೀಢ್ವಃ** ಸೋಮರಸಸ್ಯ ಸೇಕ್ತಃ ಸ್ರಿಧೋ ಹಿಂಸಕಾನಪ ಸೇಧ । ಭಿಂಧೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ರಾಜನ್**—ಪ್ರಭುವಾದ ಎಲೈ ಸೋಮದೇವನೇ । **ಸ್ವೇ**—ನನಗೆ ಸೇರಿದ । **ಸದಸ್ಥೇ**—ಗೃಹದಲ್ಲಿ । **ದೇವಾನಾಂ**—ದೇವತೆಗಳ ವಿಷಯದಲ್ಲಿ । **ದುರ್ಮತೀಃ**—ಕೆಟ್ಟಬುದ್ಧಿಯುಳ್ಳವರು ಪ್ರವೇಶಿಸದಿರಲೆಂದು । **ಯತ್**—ಯಾವಾಗ । **ಅವೇಕ್ಷೇ**—ನಾನು ಕಾಯುತ್ತಿರುವೆನೋ ಆಗ । **ದ್ವಿಷಃ**—ಅಂತಹ ಶತ್ರುಗಳನ್ನು । **ಅಪ ಸೇಧ**—ದೂರಕ್ಕೆ ಓಡಿಸು । **ಮೀಢ್ವಃ**—ಇಷ್ಟಾರ್ಥಗಳನ್ನು ಸುರಿಸಿಕೊಡುವ ಎಲೈ ಸೋಮನೇ । **ಸ್ರಿಧಃ**—ಅಂತಹ ಹಿಂಸಕರನ್ನು । **ಅಪ ಸೇಧ**—ದೂರಕ್ಕೆ ಓಡಿಸು.

॥ ಭಾವಾರ್ಥ ॥

ಪ್ರಭುವಾದ ಎಲೈ ಸೋಮದೇವನೇ, ನನ್ನ ಗೃಹದಲ್ಲಿ ದೇವತೆಗಳನ್ನು ಅಲಕ್ಷಿಸುವ ಕೆಟ್ಟಬುದ್ಧಿಯುಳ್ಳವರು ಪ್ರವೇಶಿಸದಿರಲೆಂದು ನಾನು ಯಾವಾಗ ಕಾಯುತ್ತಿರುವೆನೋ ಆಗ ಅಂತಹ ಶತ್ರುಗಳನ್ನು ದೂರಕ್ಕೆ ಓಡಿಸು. ಇಷ್ಟಾರ್ಥಗಳನ್ನು ಸುರಿಸಿಕೊಡುವ ಎಲೈ ಸೋಮನೇ, ಅಂತಹ ಹಿಂಸಕರನ್ನು ದೂರಕ್ಕೆ ಓಡಿಸು.

## English Translation

When in my house I watch against the enemies of the gods, then, O king drive away those who hate us,—O showerer of blessings, drive away those who would harm us.

## ಎಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ನಹ್ಯನ್ಯಮಿತಿ ದಶರ್ಚಮೇಕಾದಶಂ ಸೂಕ್ತಂ । ಅತ್ರೇಯಮನುಕ್ರಮಣಿಕಾ । ನ ಹ್ಯನ್ಯಂ ದಶೈಕದ್ಯೂರ್ನೌಧಸೋ ಗಾಯತ್ರೇಂಽತ್ಯಾ ದೈವೀ ತ್ರಿಷ್ಟುಬಿತಿ । ಏಕದ್ಯೂರ್ನಾಮಾ ನೋಧಸಃ ಪುತ್ರ ಋಷಿಃ । ಅಂತ್ಯಾ ತ್ರಿಷ್ಟುಪ್ ಸಾ ಚ ದೇವದೇವತ್ಯಾ ಶಿಷ್ಟಾ ಗಾಯತ್ರ್ಯ ಐಂದ್ರ್ಯಃ ॥ ದ್ವಿತೀಯೇ ಪರ್ಯಾಯೇ ಮೈತ್ರಾವರುಣಶಸ್ತ್ರ ಆದಿತೋಽಷ್ಟರ್ಚಃ । ಸೂತ್ರಿತಂ ಚ । ನ ಹ್ಯನ್ಯಂ ಬಳಾಕರಮಿತ್ಯಷ್ಟೌ। ಆ. ೬ ೪ । ಇತಿ ॥ ಮಹಾವ್ರತೇ ನಿಷ್ಕೇವಲ್ಯೇ ಗಾಯತ್ರತೃಚಾಶೀತಾವಾದ್ಯಾ ವಿನಿಯುಕ್ತಾ । ತಥಾ ಚ ಪಂಚಮಾರಣ್ಯಕೇ ಶೌನಕಃ। ನ ಹ್ಯನ್ಯಂ ಬಳಾಕರಮಿತ್ಯೇತಾಂ ಪ್ರತ್ಯವದಧಾತಿ । ಐ ಆ. ೫-೨-೩। ಇತಿ ॥**

ಅನುವಾದವು—**ನಹ್ಯನ್ಯಂ** ಎಂಬ ಈ ಸೂಕ್ತವು ಎಂಟನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—**ನಹ್ಯನ್ಯಂ ದಶೈಕದ್ಯೂರ್ನೌಧಸೋ ಗಾಯತ್ರೇಽನ್ತ್ಯಾ ದೈವೀ ತ್ರಿಷ್ಟುಪ್** ಎಂದು ಹೇಳಿರುವುದು. ಈ ಸೂಕ್ತಕ್ಕೆ ನೋಧಾಃ ಎಂಬ ಋಷಿಯ ಪುತ್ರನಾದ ಏಕದ್ಯೂಃ ಎಂಬ ಹೆಸರಿನವನು ಋಷಿಯು, ಇಂದ್ರನು ದೇವತೆಯು ; ಹತ್ತನೆಯ ಋಕ್ಕಿಗೆ ದೇವತೆಗಳು ದೇವತೆಯು ;

ಈ ಸೂಕ್ತದ ಕೊನೆಯ ಋಕ್ಕು ತ್ರಿಷ್ಟುಪ್ ಛಂದಸ್ಕವು ಉಳಿದ ಋಕ್ಕುಗಳು ಗಾಯತ್ರೀಛಂದಸ್ಕವು. ದ್ವಿತೀಯ ಪರ್ಯಾಯದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ಮೊದಲಿನ ಎಂಟು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ನಹ್ಯನ್ಯಂ ಬಳಾಕರಮಿತ್ಯಷ್ಟೌ** ಎಂಬ ಸೂತ್ರದಿಂದ (ಆ. ೬-೪) ವಿವೃತವಾಗಿರುವುದು. ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳನ್ನು ಪಠಿಸುವಾಗ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ಮೊದಲಿನ ಋಕ್ಕಿನ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ—**ನಹ್ಯನ್ಯಂ ಬಳಾಕರಮಿತ್ಯೇತಾಂ ಪ್ರತ್ಯವದಧಾತಿ** ಎಂಬ ವಾಕ್ಯದಿಂದ (ಐ ಆ. ೫-೨-೩) ಶೌನಕಮಹರ್ಷಿಯಿಂದ ನಿರ್ದಿಷ್ಟವಾಗಿರುವುದು

## ಸೂಕ್ತ—೮೦

ಮಂಡಲ—೮ ॥ ಅನುವಾಕ—೮ ॥ ಸೂಕ್ತ—೮೦ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೩೫, ೩೬, ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
ಋಷಿಃ—ಏಕದ್ಯೂನೌರ್ಧಸಃ ॥
ದೇವತಾ—೧-೯ ಇಂದ್ರಃ । ೧೦, ದೇವಾಃ ॥
ಛಂದಃ—೧-೯, ಗಾಯತ್ರೀ । ೧೦, ತ್ರಿಷ್ಟುಪ್ ॥

॥ ಸಂಹಿತಾಪಾಠಃ ॥

ನಹ್ಯ೧ನ್ಯಂ ಬಳಾಕರಂ ಮರ್ಡಿತಾರಂ ಶತಕ್ರತೋ ।
ತ್ವಂ ನ ಇಂದ್ರ ಮೃಳಯ ॥ ೧ ॥

॥ ಪದಪಾಠಃ ॥

ನಹಿ । ಅನ್ಯಂ । ಬಳಾ । ಅಕರಂ । ಮರ್ಡಿತಾರಂ । ಶತಕ್ರತೋ ಇತಿ ಶತಽಕ್ರತೋ ।
ತ್ವಂ । ನಃ । ಇಂದ್ರ । ಮೃಳಯ ॥ ೧ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ತ್ವತ್ತೋಽನ್ಯಂ ಮರ್ಡಿತಾರಂ ಸುಖಯಿತಾರಂ ಬಳಾ ಬಟ್ . ತನ್ನಾಕರಂ । ಕರೋಮಿ । ತಸ್ಮಾದ್ಧೇ ಇಂದ್ರ ತ್ವಂ ನೋಽಸ್ಮಾನ್ಮೃಳಯ ॥

॥ ಪ್ರತಿಪದಾರ್ಥ ॥

**ಶತಕ್ರತೋ**—ಅನೇಕ ಕರ್ಮಕರ್ತನಾದ ಎಲೈ ಇಂದ್ರನೇ । **ಅನ್ಯಂ**—ನಿನಗಿಂತಲೂ ಬೇರೆ । **ಮರ್ಡಿತಾರಂ**—ನಮಗೆ ಸುಖವನ್ನುಂಟುಮಾಡತಕ್ಕವನನ್ನು । **ಬಳಾ**—ಸತ್ಯವಾಗಿಯೂ । **ನ ಅಕರಂ**—ನಾನು ನೋಡಲಾರೆನು । **ಇಂದ್ರ**—ಎಲೈ ಇಂದ್ರನೇ । **ತ್ವಂ**—ನೀನು । **ನಃ**—ನಮ್ಮನ್ನು । **ಮೃಳಯ**—ಸುಖಪಡಿಸು.

॥ ಭಾವಾರ್ಥ ॥

ಅನೇಕ ಕರ್ಮಕರ್ತನಾದ ಎಲೈ ಇಂದ್ರನೇ, ನಿನಗಿಂತಲೂ ಬೇರೆ ನಮಗೆ ಸುಖವನ್ನುಂಟುಮಾಡತಕ್ಕವನನ್ನು ನಾನು ಸತ್ಯವಾಗಿಯೂ ನೋಡಲಾರೆನು. ಎಲೈ ಇಂದ್ರನೇ, ನೀನು ನಮ್ಮನ್ನು ಸುಖಪಡಿಸು.

English Translation

Other then you, Satakratu, I know no bestower of happiness; Indra, you make us happy

॥ ಸಂಹಿತಾಪಾಠಃ ॥

**ಯೋ ನಃ ಶಶ್ವತ್ಪುರಾವಿಥಾಮೃಧ್ರೋ ವಾಜಸಾತಯೇ ।**

**ಸ ತ್ವಂ ನ ಇಂದ್ರ ಮೃಳಯ ॥ ೨ ॥**

॥ ಪದಪಾಠಃ ॥

**ಯಃ । ನಃ । ಶಶ್ವತ್ । ಪುರಾ । ಆವಿಥ । ಅಮೃಧ್ರಃ । ವಾಜऽಸಾತಯೇ ।**
**ಸಃ । ತ್ವಂ । ನಃ । ಇಂದ್ರ । ಮೃಳಯ ॥ ೨ ॥**

॥ ಸಾಯಣಭಾಷ್ಯಂ ॥

**ಯೋಽಮೃಧ್ರೋಽಹಿಂಸಕೋ ನೋಽಸ್ಮಾನ್ವಾಜಸಾತಯೇ ಪುರಾ ಪೂರ್ವಮಾವಿಥ ರಕ್ಷಿತವಾನ್ ಹೇ ಇಂದ್ರ ಸ ತ್ವಂ ನೋಽಸ್ಮಾಞ್ಛಶ್ವತ್ಸದಾ ಮೃಳಯ । ಸುಖಯ ॥**

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಅಮೃಧ್ರಃ—ಅಹಿಂಸಕನಾದ । **ಯಃ—ಯಾವ ನೀನು । ನಃ—ನಮ್ಮನ್ನು । ವಾಜಸಾತಯೇ**—ಅನ್ನಲಾಭಾರ್ಥವಾಗಿ । ಪುರಾ—ಹಿಂದೆಲ್ಲಾ । **ಆವಿಥ—ರಕ್ಷಿಸಿದೆಯೋ । ಸಃ—ಅಂತಹ । ತ್ವಂ**—ನೀನು । ನಃ—ನಮ್ಮನ್ನು । ಶಶ್ವತ್—ಯಾವಾಗಲೂ । **ಮೃಳಯ—ಸುಖಪಡಿಸು.**

॥ ಭಾವಾರ್ಥ ॥

ಎಲೈ ಇಂದ್ರನೇ, ಅಹಿಂಸಕನಾದ ಯಾವ ನೀನು ನಮ್ಮನ್ನು ಅನ್ನಲಾಭಾರ್ಥವಾಗಿ ಹಿಂದೆಲ್ಲಾ ರಕ್ಷಿಸಿದೆಯೋ ಅಂತಹ ನೀನು ನಮ್ಮನ್ನು ಯಾವಾಗಲೂ ಸುಖಪಡಿಸು.

English Translation

O you, the invulnerable, who have always in former times protected us for the battle, you, Indra, make us happy.

॥ ಸಂಹಿತಾಪಾಠಃ ॥

ಕಿಮಂಗ ರಧ್ರಚೋದನಃ ಸುನ್ವಾನಸ್ಯಾವಿತೇದಸಿ ।
ಕುವಿತ್ಸ್ವಿಂದ್ರ ಣಃ ಶಕಃ ॥ ೩ ॥

॥ ಪದಪಾಠಃ ॥

ಕಿಂ । ಅಂಗ । ರಧ್ರಽಚೋದನಃ । ಸುನ್ವಾನಸ್ಯ । ಅವಿತಾ । ಇತ್ । ಅಸಿ ।
ಕುವಿತ್ । ಸು । ಇಂದ್ರ । ನಃ । ಶಕಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ರಧ್ರಚೋದನಃ । ರಧ್ರಂ ರಾಧಕಂ ಚೋದಯತೀತಿ ರಧ್ರಚೋದನಃ । ತಾದೃಶಸ್ತ್ವಂ ಸುನ್ವಾನಸ್ಯಾವಿತೇದಸಿ । ರಕ್ಷಕ ಏವ ಭವಸಿ । ಅತೋ ನೋಽಸ್ಮಾಕಂ ಕುವಿದ್ಬಹು ಸು ಸುಷ್ಠು ಶಕಃ । ಅಶಕಃ । ಶಕ್ತೋ ಭವ । ಬಹು ಧನಂ ಕುರ್ವಿತ್ಯರ್ಥಃ । ಅಸ್ಮಾನ್ವಾ ಬಹು ಕುರ್ವಿತಿ ॥

। ಪ್ರತಿಪದಾರ್ಥ ।

ಇಂದ್ರ—ಎಲೈ ಇಂದ್ರನೇ । ರಧ್ರಚೋದನಃ—ನಿನ್ನ ಆರಾಧಕನಿಗೆ ಉತ್ತೇಜಕನಾದ ನೀನು । ಸುನ್ವಾನಸ್ಯ—ನಿನಗೆ ಸೋಮವನ್ನು ಹಿಂಡಿ ಅರ್ಪಿಸುವವನಿಗೆ । ಅಂಗ—ಖಂಡಿತವಾಗಿಯೂ । ಅವಿತಾ ಇತ್ ಅಸಿ—ರಕ್ಷಕನೇ ಆಗಿದ್ದೀಯೆ । ನಃ—ನಮಗೆ । ಕುವಿತ್—ಅಧಿಕವಾಗಿಯೂ । ಸು—ಅತಿಶಯವಾಗಿಯೂ । ಶಕಃ—ಶಕ್ತಿಯುತನಾದ ಸಹಾಯಕನಾಗು

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಆರಾಧನೆಗೆ ಉತ್ತೇಜಕನಾದ ನೀನು ನಿನಗೆ ಸೋಮವನ್ನು ಹಿಂಡಿ ಅರ್ಪಿಸುವವನಿಗೆ ಖಂಡಿತವಾಗಿಯೂ ರಕ್ಷಕನೇ ಆಗಿದ್ದೀಯೆ. ನಮಗೆ ಅಧಿಕವಾಗಿಯೂ ಮತ್ತು ಅತಿಶಯವಾಗಿಯೂ ಶಕ್ತಿಯುತನಾದ ಸಹಾಯಕನಾಗು.

English Translation

Director of the worshipper, you are the guardian of the offerer ; help us mightily.

॥ ಸಂಹಿತಾಪಾಠಃ ॥

ಇಂದ್ರ ಪ್ರ ಣೋ ರಥಮವ ಪಶ್ಚಾಚ್ಚಿತ್ಸಂತಮದ್ರಿವಃ ।
ಪುರಸ್ತಾದೇನಂ ಮೇ ಕೃಧಿ ॥ ೪ ॥

॥ ಪದಪಾಠಃ ॥

ಇಂದ್ರ । ಪ್ರ । ನಃ । ರಥಂ । ಅವ । ಪಶ್ಚಾತ್ । ಚಿತ್ । ಸಂತಂ । ಅದ್ರಿಽವಃ ।

ಪುರಸ್ತಾತ್ । ಏನಂ । ಮೇ । ಕೃಧಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ನೋ ರಥಂ ಪ್ರಾವ । ಪ್ರರಕ್ಷ । ಕೀದೃಶಂ ರಥಂ । ಪಶ್ಚಾಚ್ಚಿತ್ಸಂತಂ । ಚಿದಪ್ಯರ್ಥೇ । ಅಸ್ಮತ್ಸಮಾನರಥಾನಾಂ ಪಶ್ಚಾದ್ಭೂತಮಪ್ಯೇನಂ ಮೇ ರಥಂ ಹೇ ಅದ್ರಿವೋ ವಜ್ರವನ್ನಿಂದ್ರ ಪುರಸ್ತಾದ್ವರ್ತಮಾನಂ ಕೃಧಿ । ಕುರು ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಪಶ್ಚಾಚ್ಚಿತ್ಸಂತಂ**—ಬಹಳ ಹಿಂದಕ್ಕೆ ಬಿದ್ದಿದ್ದರೂ ಸಹ । **ನಃ**—ನಮ್ಮ । **ರಥಂ**—ರಥವನ್ನು । **ಪ್ರ ಅವ**—ಪೂರ್ಣವಾಗಿ ರಕ್ಷಿಸು । **ಅದ್ರಿವಃ**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ । **ಮೇ**—ನನ್ನ । **ಏನಂ**—ಈ ರಥವನ್ನು । **ಪುರಸ್ತಾತ್**—ಉಳಿದ ರಥಗಳಿಗಿಂತಲೂ ಮುಂದಿರುವುದಾಗಿ । **ಕೃಧಿ**—ಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಉಳಿದ ರಥಗಳಿಗಿಂತಲೂ ನಮ್ಮ ರಥವು ಬಹಳ ಹಿಂದೆ ಬಿದ್ದಿದ್ದರೂ ಸಹ ನಮ್ಮ ರಥವನ್ನು ಪೂರ್ಣವಾಗಿ ರಕ್ಷಿಸು. ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ನನ್ನ ಈ ರಥವನ್ನು ಉಳಿದ ರಥಗಳಿಗಿಂತಲೂ ಮುಂದಿರುವುದನ್ನಾಗಿ ಮಾಡು.

English Translation

Indra, protect our chariot; though now left behind, set it in the front, O thunderer.

॥ ಸಂಹಿತಾಪಾಠಃ ॥

ಹಂತೋ ನು ಕಿಮಾಸಸೇ ಪ್ರಥಮಂ ನೋ ರಥಂ ಕೃಧಿ ।

ಉಪಮಂ ವಾಜಯು ಶ್ರವಃ ॥ ೫ ॥

॥ ಪದಪಾಠಃ ॥

ಹಂತೋ ಇತಿ । ನು । ಕಿಂ । ಆಸಸೇ । ಪ್ರಥಮಂ । ನಃ । ರಥಂ । ಕೃಧಿ ।

ಉಪಽಮಂ । ವಾಜಽಯು । ಶ್ರವಃ ॥ ೫ ॥

॥ ಸಾಯಣಭಾಷ್ಯಂ ॥

ಹಂತೇತ್ಯೇತದಾದಿ ಮುಖ್ಯಕೃದಾಮಂತ್ರಿತೇನ ಸಮಾನಂ । ಹೇ ಹಂತೇಂದ್ರ ನ್ವಿದಾನೀಂ ಕಿಂ ತ್ವಂ ತೂಷ್ಣೀಮಾಸಸೇ । ತತ್ರ ಕಿಂ ಕರೋಮೀತಿ ಚೇತ್ ಉಚ್ಯತೇ । ನೋ ರಥಂ ಪ್ರಥಮಂ ಸರ್ವೇಷಾಂ ಮುಖ್ಯಂ ಕೃಧಿ । ಕುರು । ವಾಜಯು ಸ್ವಾತ್ಮಕಮನ್ನಮಿಚ್ಛತ್ ಚ್ಛ್ರವೋಽನ್ನಂ ಹವಿರ್ಲಕ್ಷಣಮುಪಮಂ । ಅಂತಿಕನಾಮ್ಯೇತತ್ । ತವಾಂತಿಕಭೂತಂ ವರ್ತತೇ ಇತಿ ಶೇಷಃ । ಯಸ್ಮಾದೇವಂ ತಸ್ಮಾದ್ರಥಮಸ್ಮದೀಯಂ ಪ್ರಥಮಂ ಕೃಧೀತಿ ॥

॥ ಪ್ರತಿಪದಾರ್ಥ ॥

**ಹಂತೋ**—ಓ ಎಲೈ ಇಂದ್ರನೇ । **ನು**—ಈಗ । **ಕಿಂ**—ಏತಕ್ಕಾಗಿ । **ಆಸಸೇ**—ಸುಮ್ಮನಿದ್ದೀಯೆ ? । **ನಃ**—ನಮ್ಮ । **ರಥಂ**—ರಥವನ್ನು । **ಪ್ರಥಮಂ**—ಉಳಿದ ರಥಗಳಿಗಿಂತಲೂ ಮುಖ್ಯವಾದುದನ್ನಾಗಿ । **ಕೃಧಿ**—ಮಾಡು । **ವಾಜಯು**—ನಮಗೆ ಅನ್ನವನ್ನು ಇಚ್ಛಿಸುವ । **ಶ್ರವಃ**—ಹವಿಸ್ಸಿನ ರೂಪದ ಈ ಅನ್ನವು । **ಉಪಮಂ**—ನಿನ್ನ ಹತ್ತಿರದಲ್ಲಿಯೇ ಇದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಇನ್ನೂ ಏತಕ್ಕಾಗಿ ಸುಮ್ಮನಿದ್ದೀಯೆ ? ನಮ್ಮ ರಥವನ್ನು ಉಳಿದೆಲ್ಲಾ ರಥಗಳಿಗಿಂತಲೂ ಶ್ರೇಷ್ಠವಾದುದನ್ನಾಗಿ (ಮುಂದಾಗಿ) ಮಾಡು. ನಮಗೆ ಅನ್ನವನ್ನು ಇಚ್ಛಿಸುವ ಹವಿಸ್ಸಿನ ರೂಪದ ಈ ಅನ್ನವು ನಿನ್ನ ಹತ್ತಿರದಲ್ಲಿಯೇ ಇದೆ.

English Translation

Up, why do you sit still ? Make our chariot the first ; our food-seeking offering is near you

॥ ಸಂಹಿತಾಪಾಠಃ ॥

ಅವಾ ನೋ ವಾಜಯುಂ ರಥಂ ಸುಕರಂ ತೇ ಕಿಮಿತ್ಪರಿ ।

ಅಸ್ಮಾನ್ತ್ಸು ಜಿಗ್ಯುಷಸ್ಕೃಧಿ ॥ ೬ ॥

॥ ಪದಪಾಠಃ ॥

ಅವ । ನಃ । ವಾಜಽಯುಂ । ರಥಂ । ಸುಽಕರಂ । ತೇ । ಕಿಂ । ಇತ್ । ಪರಿ ।

ಅಸ್ಮಾನ್ । ಸು । ಜಿಗ್ಯುಷಃ । ಕೃಧಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ನೋ ವಾಜಯುಂ ಅನ್ನೇಚ್ಛುಂ ರಥಮವ । ರಕ್ಷ ಸಂಗ್ರಾಮೇ । ತೇ ತವ ಕಿಮಿತ್ ಕಿಮಪಿ ಸರ್ವಕರ್ತವ್ಯಜಾತಂ ಪರಿ ಪರಿತಃ ಸುಕರಂ ಸುಖೇನ ಕರ್ತವ್ಯಂ । ತವ ಕರ್ತುಮಶಕ್ಯಂ ನ ಕಿಂಚಿದಸ್ತಿ । ಯಸ್ಮಾದೇವಂ ತಸ್ಮಾತ್ಸು ಜಿಗ್ಯುಷಃ ಸುಷ್ಠು ಜೇತೄನ್ ಕುರು ಸಂಗ್ರಾಮೇ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ನಃ**—ನಮ್ಮ । **ವಾಜಯುಂ**—ಅನ್ನಾಪೇಕ್ಷಿಯಾದ । **ರಥಂ**—ರಥವನ್ನು । **ಅವ**—ರಕ್ಷಿಸು । **ಪರಿ**—ಎಲ್ಲಾ ಕಡೆಯೂ । **ತೇ**—ನಿನಗೆ । **ಕಿಂ ಇತ್**—ಪ್ರತಿಯೊಂದು ಕಾರ್ಯವೂ । **ಸುಕರಂ**—ಸುಲಭವಾಗಿಯೇ ಇರುತ್ತದೆ । **ಅಸ್ಮಾನ್**—ನಮ್ಮನ್ನು । **ಸು**—ಅತಿಶಯವಾಗಿ । **ಜಿಗ್ಯುಷಃ**—ಜಯಶಾಲಿಗಳಾಗುವಂತೆ । **ಕೃಧಿ**—ಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಅನ್ನಾಪೇಕ್ಷಿಯಾದ ನಮ್ಮ ರಥವನ್ನು ರಕ್ಷಿಸು. ನಿನಗೆ ಸಕಲ ಕಾರ್ಯಗಳೂ ಸಕಲ ಪ್ರದೇಶಗಳಲ್ಲಿಯೂ ಸುಲಭವಾಗಿಯೇ ಇವೆ. ನಮ್ಮನ್ನು ಶ್ರೇಷ್ಠರಾದ ಜಯಶಾಲಿಗಳಾಗುವಂತೆ ಮಾಡು.

English Translation

Protect our food-seeking chariot ; everything is easy for you to do ; make us completely victorious.

॥ ಸಂಹಿತಾಪಾಠಃ ॥

ಇಂದ್ರ ದೃಹ್ಯಸ್ವ ಪೂರಸಿ ಭದ್ರಾ ತ ಏತಿ ನಿಷ್ಕೃತಂ ।

ಇಯಂ ಧೀರ್ಋತ್ವಿಯಾವತೀ । ೭ ॥

॥ ಪದಪಾಠಃ ॥

ಇಂದ್ರ । ದೃಹ್ಯಸ್ವ । ಪೂಃ । ಅಸಿ । ಭದ್ರಾ । ತೇ । ಏತಿ । ನಿಃऽಕೃತಂ ।

ಇಯಂ । ಧೀಃ । ಋತ್ವಿಯऽವತೀ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ದೃಹ್ಯಸ್ವ । ದೃಢೋ ಭವ ಸಂಗ್ರಾಮೇ । ತ್ವಂ ಪೂರಸಿ । ಪೂರಯಸಿ । ಯಥಾ ಪುರಮವಿಚಲಿತಂ ತದ್ವತ್ತ್ವಮಸಿ । ಅಥವಾ । ಅಸ್ಮದೀಯೇ ಯಜ್ಞೇ ದೃಢೋ ಭವ । ತ್ವಂ ಪುನರಸ್ಮ-

ಯಜ್ಞಾಜಿಗಮಿಷುರ್ಮಾ ಭೂಃ । ತ್ವಂ ಪೂಃ ಪೂರಕಃ ಕಾಮಾನಾಮಸಿ । ಕಿಮತ್ರ ವಿದ್ಯತೆ ಇತಿ ಚೇತ್ ಉಚ್ಯತೇ । ನಿಷ್ಕೃತಂ ನಿಷ್ಕರ್ತಾರಂ ತೇ ತ್ವಾಂ ಭದ್ರಾ ಕಲ್ಯಾಣೀಯಂ ಧೀಃ ಸ್ತುತಿಃ ಕ್ರಿಯಾ ಋತ್ವಿ- ಯಾವತೀ । ಋತುಶಬ್ದಃ ಕಾಲೋಪಲಕ್ಷಕಃ । ಸ್ವಕಾಲೋಪೇತಾ ಸತ್ಯೇತಿ । ಗಚ್ಛತಿ । ಯದ್ವಾ । ತೇ ನಿಷ್ಕೃತಂ ಸ್ಥಾನಮೇತಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಪೂಃ—ಕೋಟೆಯಿಂದ ಕೂಡಿದ ಪಟ್ಟಣದಂತೆ । ಅಸಿ—ನೀನು ದೃಢನಾಗಿದ್ದೀಯೆ । ಧೃಷ್ಣು ಸ್ವ—ಸಂಗ್ರಾಮದಲ್ಲಿ ಅಚಲನಾಗಿ ನಿಲ್ಲು । ನಿಷ್ಕೃತಂ—ಶತ್ರುಗಳನ್ನು ತಿರಸ್ಕರಿಸಿ ಕಾಣುವ । ತ್ವಾ—ನಿನ್ನನ್ನು । ಋತ್ವಿಯಾವತೀ—ಕಾಲೋಚಿತವಾಗಿ ಪರಿತವಾಗತಕ್ಕದ್ದೂ । ಭದ್ರಾ— ಕಲ್ಯಾಣಾತ್ಮಕವಾದುದೂ ಆದ ಇಯಂ ಧೀಃ—ಈ ಸ್ತುತಿಯು । ಏತಿ—ಸಮಾಪಿಸುತ್ತದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಕೋಟೆಯಿಂದ ಕೂಡಿದ ಪಟ್ಟಣದಂತೆ ನೀನು ದೃಢನಾಗಿದ್ದೀಯೆ ಸಂಗ್ರಾಮದಲ್ಲಿ ಅಚಲನಾಗಿ ನಿಲ್ಲು. ಶತ್ರುಗಳನ್ನು ತಿರಸ್ಕರಿಸಿ ಕಾಣುವ ನಿನ್ನನ್ನು ಕಾಲೋಚಿತವಾಗಿ ಪರಿತವಾಗತಕ್ಕದ್ದೂ ಕಲ್ಯಾಣಾತ್ಮಕವಾದುದೂ ಆದ ಈ ಸ್ತುತಿಯು ಸಮಾಪಿಸುತ್ತದೆ.

## English Translation

Indra, be firm (in battle), you are (strong as) a city; to you, the repeller (of enemies), comes this auspicious sacrifice, offered in due season.

॥ ಸಂಹಿತಾಪಾಠಃ ॥

ಮಾ ಸೀಮವದ್ಯ ಆ ಭಾಗುರ್ವೀ ಕಾಷ್ಠಾ ಹಿತಂ ಧನಂ ।

ಅಪಾವೃಕ್ತಾ ಅರತ್ನಯಃ ॥ ೮ ॥

॥ ಪದಪಾಠಃ ॥

ಮಾ । ಸೀಂ । ಅವದ್ಯೇ । ಆ । ಭಾಕ್ । ಉರ್ವೀ । ಕಾಷ್ಠಾ । ಹಿತಂ । ಧನಂ ।

ಅಪಽವೃಕ್ತಾಃ । ಅರತ್ನಯಃ ॥ ೮ ॥

॥ ಸಾಯಣಭಾಷ್ಯಂ ॥

ಮಾಮಿಂದ್ರ ಸೀಂ ಸರ್ವತೋಽವದ್ಯೇ ನಿಂದಾ ಭಾಕ್ । ಮಾಭಜತು । ಸರ್ವತೋಽಪಿ ನ ಕುತಶ್ಚಿತ್ । ಪಾಪರಹಿತಾನಸ್ಮಾನ್ಕುರ್ವಿತ್ಯರ್ಥಃ । ಕಿಂಚೋರ್ವೀ ಕಾಷ್ಠಾ ಬಹ್ವಂತರಾಲ ಆಜ್ಯಂತಃ। ಆಜ್ಯಂತೋಽಪಿ ಕಾಷ್ಠೋ-

ಚ್ಯತೇ ಕ್ರಾಂತ್ವಾ ಸ್ಥಿತಾ ಭವತಿ । ನಿ. ೨-೧೫ । ಇತಿ ಯಾಸ್ಕಃ । ತತ್ರ ಹಿತಂ ನಿಹಿತಂ ಶತ್ರುಸಂಬಂಧಿ ಧನಮಸ್ಮಾಕಂ ಭವತ್ವಿತ್ಯರ್ಥಃ । ಅರತ್ನಯೋಽರಮಮಾಣಾಃ ಶತ್ರವೋಽಪಾವೃಕ್ತಾಃ ಸಂತ್ವಿತಿ ಶೇಷಃ ॥

॥ ಪ್ರತಿಪದಾರ್ಥ ॥

ಸೀಂ—ಸರ್ವತ್ರ । ಅವದ್ಯಃ—ನಿಂದೆಯು । ಮಾ ಆ ಭಾಕ್—ನಮ್ಮನ್ನು ಸಮೀಪಿಸದಿರಲಿ । ಕಾಷ್ಠಾ-ಯುದ್ಧದ ಕೊನೆಯ ಗುರಿಯು । ಉರ್ವೀ—ಇನ್ನೂ ಬಹಳ ದೂರದಲ್ಲಿದೆ । ಹಿತಂ—ಶತ್ರುಗಳಲ್ಲಿರತಕ್ಕ । ಧನಂ—ಧನವು ನಮಗೆ ಸೇರಲಿ । ಅರತ್ನಯಃ—ದುಃಖಕಾರಕರಾದ ಶತ್ರುಗಳು । ಅಪಾವೃಕ್ತಾಃ—ದೂರಸರಿದುಹೋಗಲಿ

॥ ಭಾವಾರ್ಥ ॥

ನಮ್ಮನ್ನು ನಿಂದೆಯು ಯಾವಕಡೆಯಿಂದಲೂ ಸಮೀಪಿಸದಿರಲಿ. ಯುದ್ಧದ ಕೊನೆಯ ಗುರಿಯು ಇನ್ನೂ ನಮಗೆ ಬಹಳ ದೂರದಲ್ಲಿದೆ ಶತ್ರುಗಳಲ್ಲಿರತಕ್ಕ ಧನವು ನಮಗೆ ಸೇರಲಿ ದುಃಖಕಾರಕರಾದ ನಮ್ಮ ಶತ್ರುಗಳು ದೂರಸರಿದುಹೋಗಲಿ

English Translation

Let not reproach reaeh us ; far off is the goal ; therc is the wealth stored ; may onr enemies be excluded.

॥ ಸಂಹಿತಾಪಾಠಃ ॥

ತುರೀಯಂ ನಾಮ ಯಜ್ಞಿಯಂ ಯದಾ ಕರಸ್ತದುಶ್ಮಸಿ ।

ಆದಿತ್ಪತಿರ್ನ ಓಹಸೇ ॥ ೯ ॥

॥ ಪದಪಾಠಃ ॥

ತುರೀಯಂ । ನಾಮ । ಯಜ್ಞಿಯಂ । ಯದಾ । ಕರಃ । ತತ್ । ಉಶ್ಮಸಿ ।

ಆತ್ । ಇತ್ । ಪತಿಃ । ನಃ । ಓಹಸೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಯಜ್ಞಿಯಂ ಯಜ್ಞಸಂಬಂಧಿ ತುರೀಯಂ ಚತುರ್ಥಂ ನಾಮ ಯದಾ ಕರಃ ಕರೋಷಿ ತದುಶ್ಮಸಿ । ಕಾಮಯಾಮಹೇ । ಆದಿದನಂತರಮೇವ ನಾಮಕಾಮಾನಂತರಮೇವ ಪತಿಃ ಪಾಲಕಸ್ತ್ವಂ ನೋಽಸ್ಮಾನೋಹಸೇ । ವಹಸಿ । ಪ್ರಾಪಯಸಿ । ನಕ್ಷತ್ರನಾಮ ಗುಹ್ಯಂ ನಾಮ ಪ್ರಕಾಶಂ ನಾಮೇತಿ ತ್ರೀಣಿ ನಾಮಾನಿ ಸೋಮಯಾಜೀತಿ ತುರೀಯಂ ನಾಮ ತಚ್ಚ ಯಜ್ಞಿಯಂ ॥

|| ಪ್ರತಿಪದಾರ್ಥ ||

(ಎಲೈ ಇಂದ್ರನೇ) **ಯಜ್ಞಿಯಂ**—ಯಜ್ಞಸಂಬಂಧಿಯಾದುದೂ । **ತುರೀಯಂ**—ಸೋಮಯಾಜಿಯೆಂಬ ನಾಲ್ಕನೆಯದೂ ಆದ । **ನಾಮ**—ಹೆಸರನ್ನು । **ಯದಾ**—ಯಾವಾಗ । **ಕರಃ**—ನೀನು ಧರಿಸುವೆಯೋ । **ತತ್**—ಆಗ ಅದನ್ನು । **ಉಶ್ಮಸಿ**—ನಾವು ಅಪೇಕ್ಷಿಸುತ್ತೇವೆ । **ಆತ್ ಇತ್**—ಆ ಅನಂತರವೇ । **ಪತಿಃ**—ಪಾಲಕನಾದ ನೀನು । **ನಃ**—ನಮಗೆ । **ಓಹಸೇ**—ನಮ್ಮ ಇಷ್ಟಾರ್ಥವನ್ನು ಹೊಂದಲು ಸಹಾಯಮಾಡುತ್ತೀಯೆ.

|| ಭಾವಾರ್ಥ ||

ಎಲೈ ಇಂದ್ರನೇ, ಯಜ್ಞಸಂಬಂಧಿಯಾದುದೂ, ನಕ್ಷತ್ರನಾಮ, ಗುಹ್ಯಂನಾಮ, ಪ್ರಕಾಶಂನಾಮ, ಸೋಮಯಾಜೀ ಎಂಬ ನಾಲ್ಕು ನಾಮಗಳಲ್ಲಿ ಸೋಮಯಾಜಿಯೆಂಬ ನಾಲ್ಕನೆಯದೂ ಆದ ಹೆಸರನ್ನು ನೀನು ಯಾವಾಗ ಧರಿಸುವೆಯೋ ಅದನ್ನು ನಾವು ಅಪೇಕ್ಷಿಸುತ್ತೇವೆ. ಆ ಅನಂತರವೇ, ಪಾಲಕನಾದ ನೀನು ನಮ್ಮನ್ನು ನಮಗೆ ನಮ್ಮ ಇಷ್ಟಾರ್ಥವನ್ನು ಹೊಂದಲು ಸಹಾಯಮಾಡುತ್ತೀಯೆ.

English Translation

When you assume your sacrificial fourth name, we long for it ; then you forthwith carry us as a protector

|| ಸಂಹಿತಾಪಾಠಃ ||

ಅವೀವೃಧದ್ವೋ ಅಮೃತಾ ಅಮಂದೀದೇಕದ್ಯೂರ್ದೇವಾ ಉತ
ಯಾಶ್ಚ ದೇವೀಃ ।
ತಸ್ಮಾ ಉ ರಾಧಃ ಕೃಣುತ ಪ್ರಶಸ್ತಂ ಪ್ರಾತರ್ಮಕ್ಷೂ ಧಿಯಾ-
ವಸುರ್ಜಗಮ್ಯಾತ್ ॥ ೧೦ ॥

|| ಪದಪಾಠ ||

ಅವೀವೃಧತ್ । ವಃ । ಅಮೃತಾಃ । ಅಮಂದೀತ್ । ಏಕಽದ್ಯೂಃ । ದೇವಾಃ । ಉತ ।
ಯಾಃ । ಚ । ದೇವೀಃ ।
ತಸ್ಮೈ । ಊಂ ಇತಿ । ರಾಧಃ । ಕೃಣುತ । ಪ್ರಽಶಸ್ತಂ । ಪ್ರಾತಃ । ಮಕ್ಷು । ಧಿಯಾಽವಸುಃ ।
ಜಗಮ್ಯಾತ್ ॥ ೧೦ ॥

॥ ಸಾಯಣಭಾಷ್ಯಂ ॥

**ಇಯಂ ವೈಶ್ವದೇವೀ । ಹೇ ದೇವಾಃ ಹೇ ಅಮೃತಾ** [illegible] **ವೃಧತ್ ವರ್ಧಯತಿ ಸ್ತುತ್ಯಾಮಂದೀತ್ ತರ್ಪಯತಿ ಸೋಮೈಃ** [illegible] **ದೇವೀರ್ದೇವ್ಯೋ ದೇವಪತ್ನ್ಯಃ ಯಾಶ್ಚ ಯೂಯಂ ಸ್ಥ** [illegible] । ತಸ್ಮೈ **ರಾಧೋ ಧನಂ ಪ್ರಶಸ್ತಂ ಪ್ರವೃದ್ಧಂ ಕೃಣುತ । ಕುರುತ ।** [illegible] **ಪ್ರಾತಃ ಪ್ರಾತರೇವ ಮಕ್ಷು ಕ್ಷಿಪ್ರಂ ಧಿಯಾವಸುಃ ಕರ್ಮ**[illegible] । ಅಗಚ್ಛತು । **ಇಂದ್ರಸ್ಯ ದೇವಸ್ವಾಮಿತ್ವಾದಾಧಿಕ್ಯದ್ಯೋತನಾಯ ಪುನ**[illegible] ॥

॥ ಪ್ರತಿಪದಾರ್ಥ ॥

**ದೇವಾಃ**—ಎಲೈ ದೇವತೆಗಳೇ । **ಉತ**—ಮತ್ತು । [illegible] —ಯಾವ ದೇವ ಪತ್ನಿಯರಿದ್ದೀರೋ ಅಂತಹ ದೇವಪತ್ನಿಯರೇ । **ಅಮೃತಾಃ**—ಮರಣಧರ್ಮ[illegible] । [illegible] । **ಏಕದ್ಯೂಃ**—ಏಕದ್ಯು ಎಂಬ ಹೆಸರುಳ್ಳ ಋಷಿಯು । **ಅವೀವೃಧತ್**—[illegible]ಪ್ರವೃದ್ಧರಾಗುವಂತೆ ಮಾಡಿದ್ದಾನೆ । **ಅಮಂದೀತ್**—ಸೋಮಾದ್ಯರ್ಪಣಗಳಿಂದ ತೃಪ್ತರಾಗು[illegible] । **ತಸ್ಮೈ**—ಅವನಿಗೆ । **ರಾಧಃ**—ಧನವನ್ನು । **ಪ್ರಶಸ್ತಂ**—ಉತ್ಕೃಷ್ಟವಾಗಿ ಬೆಳೆಯುವಂತೆ । **ಕೃಣುತ**—[illegible] । **ಧಿಯಾವಸುಃ**—ಕರ್ಮಕ್ಕೆ ಧನವಾಗಿ ಉಳ್ಳ ಇಂದ್ರನು । **ಮಕ್ಷು**—ಶೀಘ್ರವಾಗಿ । **ಪ್ರಾತಃ**—[illegible] । **ಜಗಮ್ಯಾತ್**—ಬರಲಿ.

॥ ಭಾವಾರ್ಥ ॥

ಎಲೈ ದೇವತೆಗಳೇ ಮತ್ತು ದೇವಪತ್ನಿಯರೇ, ಮರಣಧರ್ಮರಹಿತರಾದ ನಿಮ್ಮನ್ನು ಏಕದ್ಯು [illegible] ಋಷಿಯು ಸ್ತುತ್ಯಾದಿಗಳಿಂದ ಪ್ರವೃದ್ಧರಾಗುವಂತೆ ಮಾಡಿದ್ದಾನೆ ಸೋಮಾದ್ಯರ್ಪಣಗಳಿಂದ ತೃಪ್ತ[illegible] ಮಾಡಿದ್ದಾನೆ ಅವನ ಧನವು ಉತ್ಕೃಷ್ಟವಾಗಿ ಬೆಳೆಯುವಂತೆ ಮಾಡಿರಿ ಕರ್ಮವೇ ಧನವಾಗಿ [illegible] ಇಂದ್ರನು ಶೀಘ್ರವಾದ ಪ್ರಾತಃಕಾಲದಲ್ಲಿಯೇ ಬರಲಿ

## English Translation

O immortal gods and all you goddesses, Ekadyu has [illegible] you (with his praise) and rejoiced you (with his Soma-offerings), make his substance abundant, and may (Indra), who rewards pious acts with wealth, come speedily in the morning.

# ಎಂಭತ್ತೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ನವಮೇಽನುವಾಕೇ ತ್ರಯೋದಶ ಸೂಕ್ತಾನಿ । ತತ್ರಾ ತೂ ನ ಇಂದ್ರೇತಿ ನವರ್ಚಂ ಪ್ರಥಮಂ ಸೂಕ್ತಂ ಕಣ್ವಪುತ್ರಸ್ಯ ಕುಸೀದಿನ ಆರ್ಷಂ ಗಾಯತ್ರಮೈಂದ್ರಂ । ತಥಾ ಚಾನುಕ್ರಮ್ಯತೇ । ಆ ತೂ ನೋ ನವ ಕುಸೀದೀ ಕಾಣ್ವ ಇತಿ ॥ ಮಹಾವ್ರತೇ ನಿಷ್ಕೇವಲ್ಯೇ ಗಾಯತ್ರತೃಚಾಶೀತಾವೇತದಾದಿಕೇ ದ್ವೇ ಸೂಕ್ತೇ । ತಥೈವ ಪಂಚಮಾರಣ್ಯಕೇ ಸೂತ್ರಿತಂ ಚ ಶೌನಕೇನ । ಆ ತೂ ನ ಇಂದ್ರ ಕ್ಷುಮಂತಮಿತಿ ಸೂಕ್ತೇ ಸೂದದೋಹಾಃ । ಐ. ಆ. ೫-೨-೩ । ಇತಿ ॥ ದ್ವಿತೀಯೇ ಪರ್ಯಾಯೇ ಮೈತ್ರಾವರುಣೇ ಶಸ್ತ್ರ ಆದ್ಯಸ್ತೃಚಃ । ಸೂತ್ರಿತಂ ಚ । ಆ ತೂ ನ ಇಂದ್ರ ಕ್ಷುಮಂತಮಾ ಪ್ರ ದ್ರವ ಪರಾವತಃ । ಆ. ೬-೪ । ಇತಿ ॥**

ಅನುವಾದವು—ಎಂಟನೆಯ ಮಂಡಲದ ಒಂಭತ್ತನೆಯ ಅನುವಾಕದಲ್ಲಿ ಹದಿಮೂರು ಸೂಕ್ತಗಳಿರುವವು. ಅವುಗಳಲ್ಲಿ **ಆ ತೂ ನ ಇಂದ್ರ** ಎಂಬ ಸೂಕ್ತವು ಮೊದಲನೆಯದು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು ಈ ಸೂಕ್ತಕ್ಕೆ ಕಣ್ವಪುತ್ರನಾದ ಕುಸೀದೀ ಎಂಬುವನು ಋಷಿಯು; ಇಂದ್ರನು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಆ ತೂ ನೋ ನವ ಕುಸೀದೀ ಕಾಣ್ವಃ** ಎಂದು ಹೇಳಿರುವುದು. ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಪಠನದಲ್ಲಿ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ಮತ್ತು ಮುಂದಿನ ಸೂಕ್ತದ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ ಶೌನಕಮಹರ್ಷಿಯಿಂದ—**ಆ ತೂ ನ ಇಂದ್ರ ಕ್ಷುಮಂತಮಿತಿ ಸೂಕ್ತೇ ಸೂದದೋಹಾಃ** ಎಂಬ ವಾಕ್ಯದಿಂದ (ಐ.ಆ. ೫-೨-೩) ನಿರ್ದಿಷ್ಟವಾಗಿರುವುದು ಮತ್ತು ಎರಡನೇ ಪರ್ಯಾಯದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ ಈ ಸೂಕ್ತದ ಮೊದಲ ಮೂರು ಋಕ್ಕುಗಳನ್ನು ಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ತೂ ನ ಇಂದ್ರ ಕ್ಷುಮಂತಮಾ ಪ್ರ ದ್ರವ ಪರಾವತಃ** ಎಂಬ ಸೂತ್ರದಿಂದ (ಆ. ೬.೪) ವಿವೃತವಾಗಿರುವುದು.

## ಸೂಕ್ತ—೮೧

ಮಂಡಲ—೮ ॥ ಅನುವಾಕ—೯ ॥ ಸೂಕ್ತ—೮೧ ॥
ಅಷ್ಟಕ—೬ ॥ ಅಧ್ಯಾಯ—೫ ॥ ವರ್ಗ—೩೭, ೩೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಕುಸೀದೀ ಕಾಣ್ವಃ ॥
ದೇವತಾ—ಅಗ್ನಿಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಆ ತೂ ನ ಇಂದ್ರ ಕ್ಷುಮಂತಂ ಚಿತ್ರಂ ಗ್ರಾಭಂ ಸಂ ಗೃಭಾಯ ।**

**ಮಹಾಹಸ್ತೀ ದಕ್ಷಿಣೇನ ॥ ೧ ॥**

॥ ಪದಪಾಠಃ ॥

ಆ । ತು । ನಃ । ಇಂದ್ರ । ಕ್ಷುಽಮಂತಂ । ಚಿತ್ರಂ । ಗ್ರಾಭಂ । ಸಂ । ಗೃಭಾಯ ।

ಮಹಾಽಹಸ್ತೀ । ದಕ್ಷಿಣೇನ ॥ ೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಮಹಾಹಸ್ತೀ ಮಹಾಹಸ್ತವಾಂಸ್ತ್ವಂ ತು ತದಾನೀಮೇವಾಸ್ಮಭ್ಯಂ ದಾತುಂ ನೋಽಸ್ಮದರ್ಥಂ ಕ್ಷುಮಂತಂ ಶಬ್ದವಂತಂ । ಸ್ತುತ್ಯಮಿತ್ಯರ್ಥಃ । ಚಿತ್ರಂ ಚಾಯನೀಯಂ ಗ್ರಾಭಂ ಗ್ರಾಹಕಂ ಗ್ರಹಣಾರ್ಹಂ ವಾ ಧನಂ ದಕ್ಷಿಣೇನ ಹಸ್ತೇನಾ ಸಂ ಗೃಭಾಯ । ಅಭಿಮುಖ್ಯೇನ ಸಂಗೃಹಾಣ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಮಹಾಹಸ್ತೀ**—ಮಹತ್ವವುಳ್ಳ (ದೊಡ್ಡ) ಹಸ್ತಯುತನಾದ ನೀನು । **ತು**—ಒಡನೆಯೇ । **ನಃ**—ನಮಗೆ ದಾನಮಾಡಲು । **ಕ್ಷುಮಂತಂ**—ಪ್ರಶಸ್ಯವಾದುದೂ । **ಚಿತ್ರಂ**—ಆಕರ್ಷಕವಾದುದೂ । **ಗ್ರಾಭಂ**—ಗ್ರಹಣಯೋಗ್ಯವಾದುದೂ ಆದ ಧನವನ್ನು । **ದಕ್ಷಿಣೇನ**—ಬಲಗೈಯಿನಿಂದ । **ಆ ಸಂ ಗೃಭಾಯ**—ಹಿಡಿದುಕೊ

॥ ಭಾವಾರ್ಥ ॥

ಎಲೈ ಇಂದ್ರನೇ, ಮಹತ್ವವುಳ್ಳ ಹಸ್ತಯುತನಾದ ನೀನು, ನಮಗೆ ಒಡನೆಯೇ ದಾನಮಾಡಲು ಪ್ರಶಸ್ಯವಾದುದೂ, ಆಕರ್ಷಕವಾದುದೂ, ಗ್ರಹಣಯೋಗ್ಯವಾದುದೂ ಆದ ಧನವನ್ನು ಬಲಗೈಯಿನಿಂದ ಹಿಡಿದುಕೊ.

## English Translation

Indra, lord of the mighty hand, seize for us with your right hand marvellous praise-exciting (riches), worthy to be seized.

॥ ಸಂಹಿತಾಪಾಠಃ ॥

ವಿದ್ಮಾ ಹಿ ತ್ವಾ ತುವಿಕೂರ್ಮಿಂ ತುವಿದೇಷ್ಣಂ ತುವೀಮಘಂ ।

ತುವಿಮಾತ್ರಮವೋಭಿಃ ॥ ೨ ॥

॥ ಪದಪಾಠಃ ॥

ವಿದ್ಮ । ಹಿ । ತ್ವಾ । ತುವಿಽಕೂರ್ಮಿಂ । ತುವಿಽದೇಷ್ಣಂ । ತುವಿಽಮಘಂ ।

ತುವಿಽಮಾತ್ರಂ । ಅವಃಽಭಿಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾ ತ್ವಾಂ ವಿದ್ಮ ಹಿ । ಜಾನೀಮಃ ಖಲು । ಕೀದೃಶಮಿತಿ । ತುವಿಕೂರ್ಮಿಂ ಬಹುಕರ್ಮಾಣಂ ತುವಿದೇಷ್ಣಂ ಬಹುಪ್ರದೇಯಂ ತುವಿಮಘಂ ಬಹುಧನಂ ತುವಿಮಾತ್ರಂ ಬಹುಪ್ರಮಾಣಮವೋಭಿರ್ಯುಕ್ತಂ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತ್ವಾ**—ನಿನ್ನನ್ನು । **ತುವಿಕೂರ್ಮಿಂ**—ಬಹುವಿಧವಾದ ಕರ್ಮವುಳ್ಳವನೆಂದೂ । **ತುವಿದೇಷ್ಣಂ**—ಪ್ರಭೂತವಾಗಿ ದಾನಮಾಡುವವನೆಂದೂ । **ತುವಿಮಘಂ**—ಪ್ರಭೂತವಾದ ಧನವುಳ್ಳವನೆಂದೂ । **ತುವಿಮಾತ್ರಂ**—ವಿಸ್ತೃತವಾದ ಪ್ರಮಾಣವುಳ್ಳವನೆಂದೂ । **ಅವೋಭಿಃ**—ರಕ್ಷಣಾಯುತನೆಂದೂ । **ವಿದ್ಮ ಹಿ**—ನಾವು ತಿಳಿದೇ ಇದ್ದೇವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನನ್ನು ಅನೇಕ ವಿಧವಾದ ಕರ್ಮವುಳ್ಳವನೆಂದೂ, ಪ್ರಭೂತವಾಗಿ ದಾನಮಾಡುವವನೆಂದೂ ಪ್ರಭೂತವಾದ ಧನವುಳ್ಳವನೆಂದೂ, ವಿಸ್ತೃತವಾದ ಪ್ರಮಾಣವುಳ್ಳವನೆಂದೂ ರಕ್ಷಣಾಯುತನೆಂದೂ ನಾವು ತಿಳಿದೇ ಇದ್ದೇವೆ

English Translation

We know you the achiever of many great deeds, the bestower of many gifts, the lord of much wealth, vast in size, and full of protection (for your worshippers)

॥ ಸಂಹಿತಾಪಾಠಃ ॥

ನಹಿ ತ್ವಾ ಶೂರ ದೇವಾ ನ ಮರ್ತಾಸೋ ದಿತ್ಸಂತಂ ।
ಭೀಮಂ ನ ಗಾಂ ವಾರಯಂತೇ ॥ ೩ ॥

॥ ಪದಪಾಠಃ ॥

ನಹಿ । ತ್ವಾ । ಶೂರ । ದೇವಾಃ । ನ । ಮರ್ತಾಸಃ । ದಿತ್ಸಂತಂ ।
ಭೀಮಂ । ನ । ಗಾಂ । ವಾರಯಂತೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ಶೂರೇಂದ್ರ ತ್ವಾ ತ್ವಾಂ ದಿತ್ಸಂತಂ ದಾತುಮಿಚ್ಛಂತಂ ದೇವಾ ನಹಿ ವಾರಯಂತೇ । ನ ನಿವಾರಯಂತಿ । ತಥಾ ಮರ್ತಾಸೋ ಮರ್ತ್ಯಾ ಅಪಿ ನ ವಾರಯಂತೇ । ಭೀಮಂ ನ ಗಾಂ ಭಯಜನಕಂ ವೃಷಭಂ ಯವಸೇ ಪ್ರವೃತ್ತಮಿವ । ತಂ ಯಥಾ ವಾರಯಿತುಂ ನ ಶಕ್ನುವಂತಿ ತದ್ವತ್ ॥

॥ ಪ್ರತಿಪದಾರ್ಥ ॥

**ಶೂರ**—ಪರಾಕ್ರಮಿಯಾದ ಎಲೈ ಇಂದ್ರನೇ । **ಭೀಮಂ**— ಭಯಂಕರವಾದ । **ಗಾಂ ನ**—ವೃಷಭವನ್ನು ತಡೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ । **ದಿತ್ಸಂತಂ**—ದಾನಮಾಡಲಿಚ್ಛೆಯುಳ್ಳ । **ತ್ವಾ**—ನಿನ್ನನ್ನು । **ದೇವಾಃ**—ದೇವತೆಗಳು । **ನಹಿ ವಾರಯಂತೇ**—ತಡೆಯಲಾರರು । **ಮರ್ತಾಸಃ**— ಮಾನವರೂ । **ನ**—ತಡೆಯಲಾರರು

॥ ಭಾವಾರ್ಥ ॥

ಪರಾಕ್ರಮಿಯಾದ ಎಲೈ ಇಂದ್ರನೇ, ಭಯಂಕರವಾದ ವೃಷಭವನ್ನು ತಡೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ದಾನಮಾಡಲಿಚ್ಛೆಯುಳ್ಳ ನಿನ್ನನ್ನು ದೇವತೆಗಳು ತಡೆಯಲಾರರು ಮಾನವರೂ ತಡೆಯಲಾರರು.

English Translation

Hero, when you desire to give, neither gods nor men can stay you, as (they cannot stay) a terrible bull.

॥ ಸಂಹಿತಾಪಾಠಃ ॥

ಏತೋ ನ್ವಿಂದ್ರಂ ಸ್ತವಾಮೇಶಾನಂ ವಸ್ವಃ ಸ್ವರಾಜಂ ।

ನ ರಾಧಸಾ ಮರ್ಧಿಷನ್ನಃ ॥ ೪ ॥

॥ ಪದಪಾಠಃ ॥

ಏತೋ ಇತಿ । ನು । ಇಂದ್ರಂ । ಸ್ತವಾಮ । ಈಶಾನಂ । ವಸ್ವಃ । ಸ್ವಽರಾಜಂ ।

ನ । ರಾಧಸಾ । ಮರ್ಧಿಷತ್ । ನಃ ॥ ೪ ॥

॥ ಸಾಯಣಭಾಷ್ಯಂ ॥

ಪ್ರಥಮೇ ಪರ್ಯಾಯೇಽಚ್ಛಾವಾಕಶಸ್ತ್ರ ಏತೋ ನ್ವಿಂದ್ರಮಿತಿ ತೃಚಃ । ತಥಾ ಚ ಸೂತ್ರಿತಂ । ಏತೋ ನ್ವಿಂದ್ರಂ ಸ್ತವಾಮೇಶಾನಂ ಮಾ ನೋ ಅಸ್ಮಿನ್ಮಘವನ್ । ಆ. ೬-೪ । ಇತಿ ॥

ಹೇ ಅಸ್ಮದೀಯಾ ಜನಾಃ ಏತೋ । ಆಗಚ್ಛತೈವ ನು ಕ್ಷಿಪ್ರಂ । ಕಿಂ ಕರ್ತುಂ । ಸ್ತವಾಮೇಂದ್ರಂ । ಕೀದೃಶಂ ತಂ । ವಸ್ವೋ ವಸುನೋ ಧನಸ್ಯೇಶಾನಂ ಸ್ವಾಮಿನಂ ಸ್ವರಾಜಂ ಸ್ವಯಮೇವ ರಾಜಮಾನಂ ಸ್ವರ್ಗೇ ರಾಜಮಾನಂ ವಾ । ನೋಽಸ್ಮಾನಿಂದ್ರೇಣಾನುಗೃಹೀತಾನ್ರಾಧಸಾ ಧನೇನಾನ್ಯೋ ಧನೀ ನ ಮರ್ಧಿಷತ್ । ನ ಬಾಧತಾಂ । ಆಧ್ಯಾನಾಮಸ್ಮತ್ಸಮಾನಾನಾಮುಪಾಧ್ಯತ್ವಾಯ ಸ್ತವಾಮೇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಜನರೇ) **ವಸ್ವಃ**—ಧನಕ್ಕೆಲ್ಲಾ । **ಈಶಾನಂ**—ಪ್ರಭುವಾದವನೂ । **ಸ್ವರಾಜಂ**—ಸ್ವಯಂಪ್ರಕಾಶಮಾನನೂ ಆದ । **ಇಂದ್ರಂ**—ಇಂದ್ರನನ್ನು । **ಸ್ತವಾಮ**—ಸ್ತುತಿಸೋಣ । **ನು**—ಕ್ಷಿಪ್ರವಾಗಿ । **ಏತೋ**—ದಯಮಾಡಿರಿ । **ನಃ**—ನಮ್ಮನ್ನು । **ರಾಧಸಾ**—ಧನಮದದಿಂದ । **ನ ಮರ್ಧಿಷತ್**—ಯಾರೂ ಹಿಂಸಿಸದಿರಲಿ

॥ ಭಾವಾರ್ಥ ॥

ಎಲೈ ಜನರೇ, ಧನಕ್ಕೆಲ್ಲಾ ಪ್ರಭುವಾದವನೂ, ಸ್ವಯಂಪ್ರಕಾಶಕನೂ ಆದ ಇಂದ್ರನನ್ನು ಸ್ತುತಿಸೋಣ ಕ್ಷಿಪ್ರವಾಗಿ ದಯಮಾಡಿರಿ. ನಮ್ಮನ್ನು ತಮ್ಮ ಧನಮದದಿಂದ ಯಾರೂ ಹಿಂಸಿಸದಿರಲಿ

English Translation

Hasten hither, let us glorify Indra the lord of wealth, the self-resplendent, let none vex us by his wealth.

॥ ವಿಶೇಷವಿಷಯಗಳು ॥

ಪ್ರಥಮಪರ್ಯಾಯದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ **ಏತೋ ನ್ವಿಂದ್ರಂ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಏತೋ ನ್ವಿಂದ್ರಂ ಸ್ತವಾಮೇಶಾನಂ ಮಾ ನೋ ಅಸ್ಮಿನ್ಮಘವನ್** ಎಂಬ ಸೂತ್ರದಿಂದ (ಆ. ೬-೪) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಪ್ರ ಸ್ತೋಷದುಪ ಗಾಸಿಷಚ್ಛ್ರವತ್ಸಾಮ ಗೀಯಮಾನಂ ।
ಅಭಿ ರಾಧಸಾ ಜುಗುರತ್ ॥ ೫ ॥

॥ ಪದಪಾಠಃ ॥

ಪ್ರ । ಸ್ತೋಷತ್ । ಉಪ । ಗಾಸಿಷತ್ । ಶ್ರವತ್ । ಸಾಮ । ಗೀಯಮಾನಂ ।
ಅಭಿ । ರಾಧಸಾ । ಜುಗುರತ್ ॥ ೫ ॥

॥ ಸಾಯಣಭಾಷ್ಯಂ ॥

**ಪೂರ್ವಮಂತ್ರೇ ಸ್ತವಾಮೇತ್ಯುಕ್ತಂ । ತದೇವ ಸ್ತೋತ್ರಮಿಂದ್ರಃ ಪ್ರ ಸ್ತೋಷತ್ । ಪ್ರಸ್ತುತ್ವಾ ಚ ಗಾಸಿಷತ್ ಉಪಗಾನಂ ಚ ಕರೋತು । ತದರ್ಥಂ ಗೀಯಮಾನಂ ಸಾಮ ಸ್ತೋತ್ರಂ ಶ್ರವತ್ । ಶೃಣೋತು । ರಾಧಸಾ ಧನೇನ ಚ ಯುಕ್ತೋಽಸ್ಮಾನಭಿ ಜುಗುರತ್ ಅಭಿಗೃಣಾತು ॥**

॥ ಪ್ರತಿಪದಾರ್ಥ ॥

**(ಇಂದ್ರಃ**—ಇಂದ್ರನು) । **ಪ್ರ ಸ್ತೋಷತ್**—ಪ್ರಕರ್ಷವಾಗಿ ಸ್ತುತಿಸಲಿ । **ಉಪ ಗಾಸಿಷತ್**—ನಮ್ಮೊಡನೆ ಗಾನಮಾಡಲಿ । **ಗೀಯಮಾನಂ**—ನಮ್ಮಿಂದ ಗಾನಮಾಡಲ್ಪಡುವ । **ಸಾಮ**—ಸಾಮರೂಪವಾದ ಸ್ತೋತ್ರವನ್ನು । **ಶ್ರವತ್**—ಕೇಳಲಿ । **ರಾಧಸಾ**—ಧನದಿಂದ ಯುಕ್ತರಾದ ನಮ್ಮನ್ನು । **ಅಭಿ ಜುಗುರತ್**—ಸ್ವೀಕರಿಸಲಿ.

॥ ಭಾವಾರ್ಥ ॥

ಇಂದ್ರನೂ ಸಹ ನಮ್ಮೊಡನೆ ಪ್ರಕರ್ಷವಾಗಿ ಸ್ತುತಿಸಲಿ. ನಮ್ಮೊಡನೆ ಗಾನಮಾಡಲಿ. ನಮ್ಮಿಂದ ಗಾನಮಾಡಲ್ಪಡುವ ಸಾಮರೂಪವಾದ ಸ್ತೋತ್ರವನ್ನು ಕೇಳಲಿ. ಧನದಿಂದ ಯುಕ್ತರಾದ ನಮ್ಮನ್ನು ಸ್ವೀಕರಿಸಲಿ.

English Translation

May (Indra) sing the prelude, may he sing the accompaniment, may he listen to our hymn as it is chanted; may he, endowed with wealth, accept us favourably.

॥ ಸಂಹಿತಾಪಾಠಃ ॥

ಆ ನೋ ಭರ ದಕ್ಷಿಣೇನಾಭಿ ಸವ್ಯೇನ ಪ್ರ ಮೃಶ ।
ಇಂದ್ರ ಮಾ ನೋ ವಸೋರ್ನಿರ್ಭಾಕ್ ॥ ೬ ॥

॥ ಪದಪಾಠಃ ॥

ಆ । ನಃ । ಭರ । ದಕ್ಷಿಣೇನ । ಅಭಿ । ಸವ್ಯೇನ । ಪ್ರ । ಮೃಶ ।
ಇಂದ್ರ । ಮಾ । ನಃ । ವಸೋಃ । ನಿಃ । ಭಾಕ್ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ನೋಽಸ್ಮಭ್ಯಮಾ ಭರ । ಆಹೃತ್ಯ ದಕ್ಷಿಣೇನ ಸವ್ಯೇನ ಚ ಹಸ್ತೇನೋಭಾಭ್ಯಾಂ ಹಸ್ತಾಭ್ಯಾಮಭಿ ಪ್ರ ಮೃಶ । ಪ್ರಯಚ್ಛೇತ್ಯರ್ಥಃ । ನೋಽಸ್ಮಾನ್ವಸೋರ್ಧನಾನ್ಮಾ ನಿರ್ಭಾಕ್ । ಮಾ ನಿರ್ಭಾಕ್ಷೀಃ ॥**

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ನಃ**—ನಮಗೆ । **ದಕ್ಷಿಣೇನ**—ಬಲಗೈಯಿನಿಂದ । **ಆ ಭರ**—ಧನವನ್ನು ತೆಗೆದುಕೊಂಡು ಬಾ । **ಸವ್ಯೇನ**—ಎಡಗೈಯಿನಿಂದ । **ಅಭಿ ಪ್ರ ಮೃಶ**—ನಮಗೆ ದಾನಮಾಡು । **ನಃ**—ನಮ್ಮನ್ನು । **ವಸೋಃ**—ಧನದಿಂದ । **ಮಾ ನಿರ್ಭಾಕ್**—ಬೇರೆಯಾಗುವಂತೆ ಮಾಡಬೇಡ.

॥ ಭಾವಾರ್ಥ ॥

ಎಲೈ ಇಂದ್ರನೇ, ನಮಗೆ ಬಲಗೈಯಿನಿಂದ ಧನವನ್ನು ತೆಗೆದುಕೊಂಡು ಬಾ. ಎಡಗೈಯಿಂದ ನಮಗೆ ದಾನಮಾಡು. ನಮ್ಮನ್ನು ಧನದಿಂದ ಬೇರೆಯಾಗುವಂತೆ ಮಾಡಬೇಡ.

English Translation

Bring us (gifts) with your right hand, and with your left bestow them on us ; exclude us not, Indra, from wealth.

॥ ಸಂಹಿತಾಪಾಠಃ ॥

ಉಪ ಕ್ರಮಸ್ವಾ ಭರ ಧೃಷತಾ ಧೃಷ್ಣೋ ಜನಾನಾಂ ।

ಅದಾಶೂಷ್ಟರಸ್ಯ ವೇದಃ ॥ ೨ ॥

॥ ಪದಪಾಠಃ ॥

ಉಪ । ಕ್ರಮಸ್ವ । ಆ । ಭರ । ಧೃಷತಾ । ಧೃಷ್ಣೋ ಇತಿ । ಜನಾನಾಂ ।

ಅದಾಶೂಃऽತರಸ್ಯ । ವೇದಃ ॥ ೨ ॥

॥ ಸಾಯಣಭಾಷ್ಯಂ ॥

ದ್ವಿತೀಯೇ ಪರ್ಯಾಯೇಽಚ್ಛಾವಾಕಶಸ್ತ್ರ ಉಪ ಕ್ರಮಸ್ವೇತಿ ತೃಚಃ । ಸೂತ್ರಿತಂ ಚ । ಉಪ ಕ್ರಮಸ್ವಾ ಭರ ಧೃಷತಾ ತದಸ್ಮೈ ನವ್ಯಂ । ಆ ೬-೪ । ಇತಿ ॥

ಹೇ ಇಂದ್ರ ತ್ವಮುಪ ಕ್ರಮಸ್ವ । ಧನಂ ಪ್ರತ್ಯುಪಗಚ್ಛ । ಪ್ರವೃತ್ತೋ ಭವ ವಾ ದಾತುಂ । ಹೇ ಧೃಷ್ಣೋ ಧರ್ಷಕ ಶತ್ರೂಣಾಂ ಧೃಷತಾ ಧೃಷ್ಟೇನ ಚೇತಸಾ ಯುಕ್ತಃ ಸನ್ನಾ ಭರ । ಆಹರ ಚ । ಕಸ್ಯ ಧನಮಾಹರೇತಿ ಉಚ್ಯತೇ । ಜನಾನಾಂ ಮಧ್ಯೇಽದಾಶೂಷ್ಟರಸ್ಯಾತ್ಯಂತಮದಾತೃತಮಸ್ಯ ವೇದೋ ಧನಂ ॥

॥ ಪ್ರತಿಪದಾರ್ಥ ॥

**ಧೃಷ್ಣೋ**—ಶತ್ರುಗಳನ್ನು ಸೆದೆಬಡಿಯುವ ಎಲೈ ಇಂದ್ರನೇ । **ಉಪ ಕ್ರಮಸ್ವ**—ಶತ್ರುಧನವನ್ನು ಸಮೀಪಿಸು । **ಜನಾನಾಂ**—ಮಾನವರ ಮಧ್ಯೇ । **ಅದಾಶೂಷ್ಟರಸ್ಯ**—ದಾನರಹಿತನಾದವನ । **ವೇದಃ**—ಧನವನ್ನು । **ಧೃಷತಾ**—ನಿನ್ನ ದೃಢವಾದ ಶಕ್ತಿಯಿಂದ । **ಆ ಭರ**—ತೆಗೆದುಕೊಂಡು ಬಾ.

॥ ಭಾವಾರ್ಥ ॥

ಶತ್ರುಗಳನ್ನು ಸೆದೆಬಡಿಯುವ ಎಲೈ ಇಂದ್ರನೇ, ಶತ್ರುಧನವನ್ನು ಸಮೀಪಿಸು. ಮಾನವರ ಮಧ್ಯೆ ದಾನರಹಿತನಾದವನ ಧನವನ್ನು ನಿನ್ನ ದೃಢವಾದ ಶಕ್ತಿಯಿಂದ ತೆಗೆದುಕೊಂಡು ಬಾ

English Translation

Come hither, and bring us, daring one, with your resolute (mind), the wealth of him who is pre-eminently a niggard amongst men.

॥ ವಿಶೇಷವಿಷಯಗಳು ॥

ಎರಡನೆಯ ಪರ್ಯಾಯದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ **ಉಪ ಕ್ರಮಸ್ವ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಉಪ ಕ್ರಮಸ್ವಾ ಭರ ಧೃಷತಾ ತದಸ್ಮೈ ನವ್ಯಂ** ಎಂಬ ಸೂತ್ರದಿಂದ (ಆ. ೬–೪) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

**ಇಂದ್ರ ಯ ಉ ನು ತೇ ಅಸ್ತಿ ವಾಜೋ ವಿಪ್ರೇಭಿಃ ಸನಿತ್ವಃ ।**

**ಅಸ್ಮಾಭಿಃ ಸು ತಂ ಸನುಹಿ ॥ ೮ ॥**

॥ ಪದಪಾಠಃ ॥

**ಇಂದ್ರ । ಯಃ । ಊಂ ಇತಿ । ನು । ತೇ । ಅಸ್ತಿ । ವಾಜಃ । ವಿಪ್ರೇಭಿಃ । ಸನಿತ್ವಃ ।**

**ಅಸ್ಮಾಭಿಃ । ಸು । ತಂ । ಸನುಹಿ ॥ ೮ ॥**

॥ ಸಾಯಣಭಾಷ್ಯಂ ॥

**ಹೇ ಇಂದ್ರ ಯೋ ವಾಜೋಽನ್ನಂ ವಿಪ್ರೇಭಿರ್ಮೇಧಾವಿಭಿಃ ಸನಿತ್ವಃ ಸಂಭಜನೀಯಸ್ತೇ ತವಾಸ್ತಿ ತಂ ವಾಜಮಸ್ಮಾಭಿರ್ಯಾಚಿತಃ ಸನ್ ಅಸ್ಮಭ್ಯಂ ವಾ ಸು ಸುಷ್ಠು ಸನುಹಿ । ದೇಹಿ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನಲ್ಲಿ । **ಯಃ ಉ**—ಯಾವ । **ವಾಜಃ**—ಅನ್ನವು । **ವಿಪ್ರೇಭಿಃ**—ಮೇಧಾವಿಗಳಿಂದ । **ಸನಿತ್ವಃ**—ಆದರಿಸಲ್ಪಟ್ಟ । **ಅಸ್ತಿ**—ಇದೆಯೋ । **ತಂ**—ಆ ಅನ್ನವನ್ನು । **ಅಸ್ಮಾಭಿಃ**—ನಮ್ಮಿಂದ ಯಾಚಿತನಾದಾಗ । **ಸು**—ಅತಿಶಯವಾಗಿ । **ಸನುಹಿ**—ಕೊಡು

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನಲ್ಲಿರುವ ಯಾವ ಧನವನ್ನು ಮೇಧಾವಿಗಳೆಲ್ಲರೂ ಪ್ರಶಂಸಿಸಿ ಆದರಿಸುವರೋ ಆ ಧನವನ್ನು ನಮ್ಮಿಂದ ಯಾಚಿತನಾದಾಗ ನಮಗೆ ಕೊಡು.

## English Translation

O Indra, give us abundantly that wealth which is yours, and which is to be obtained by the wise (worshippers).

॥ ಸಂಹಿತಾಪಾಠಃ ॥

ಸದ್ಯೋಜುವಸ್ತೇ ವಾಜಾ ಅಸ್ಮಭ್ಯಂ ವಿಶ್ವಶ್ಚಂದ್ರಾಃ ।
ವಶೈಶ್ಚ ಮಕ್ಷೂ ಜರಂತೇ ॥ ೯ ॥

॥ ಪದಪಾಠಃ ॥

ಸದ್ಯಃಽಜುವಃ । ತೇ । ವಾಜಾಃ । ಅಸ್ಮಭ್ಯಂ । ವಿಶ್ವಽಚಂದ್ರಾಃ ।
ವಶೈಃ । ಚ । ಮಕ್ಷು । ಜರಂತೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತವ ವಾಜಾ ಅಸ್ಮಭ್ಯಂ ಸದ್ಯೋಜುವಃ ಶೀಘ್ರಂ ಗಂತಾರೋ ಭವಂತು । ಕೀದೃಶಾಸ್ತೇ । ವಿಶ್ವಚಂದ್ರಾಃ ಸರ್ವಹಿರಣ್ಯೋಪೇತಾ ಬಹೂನಾಮಾಹ್ಲಾದಕಾ ವಾ । ಅಸ್ಮದೀಯಾಶ್ಚ ಜನಾ ವಶೈಃ ಕಾಮ್ಯೈರನೇಕೈರ್ಯುಕ್ತಾ ಮಕ್ಷು ಶೀಘ್ರಂ ಜರಂತೇ । ಸ್ತುವಂತಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ವಶೈಃ**—ಕಾಮಪೂರಿತರಾದ ನಮ್ಮ ಜನರು । **ಮಕ್ಷು**—ಶೀಘ್ರವಾಗಿ । **ಜರಂತೇ**—ನಿನ್ನನ್ನು ಸ್ತುತಿಸುತ್ತಾರೆ । **ತೇ**—ನಿನ್ನ । **ವಿಶ್ವಚಂದ್ರಾಃ**—ಸಕಲರಿಗೂ ಆಹ್ಲಾದಕರವಾದ । **ವಾಜಾಃ**—ಅನ್ನಗಳು । **ಅಸ್ಮಭ್ಯಂ**—ನಮ್ಮಲ್ಲಿಗೆ । **ಸದ್ಯೋಜುವಃ**—ಶೀಘ್ರವಾಗಿ ಬರುವಂತೆ ಆಗಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಅನೇಕ ಕಾಮಗಳಿಂದ ಕೂಡಿದ ನಮ್ಮ ಜನರು ನಿನ್ನನ್ನು ಶೀಘ್ರವಾಗಿ ಸ್ತುತಿಸುತ್ತಾರೆ. ಸಕಲರಿಗೂ ಆಹ್ಲಾದಕರವಾದ ನಿನ್ನ ಅನ್ನಗಳು ನಮ್ಮಲ್ಲಿಗೆ ಶೀಘ್ರವಾಗಿ ಬರುವಂತೆ ಆಗಲಿ.

## English Translation

May your all-rejoicing riches speedily come to us; full of desires, men immediately offer their praises.

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ॥
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲ ಸಾಮ್ರಾಜ್ಯ-
ಧರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶ
ಋಕ್ಸಂಹಿತಾಭಾಷ್ಯೇ ಷಷ್ಠಾಷ್ಟಕೇ ಪಂಚಮೋಽಧ್ಯಾಯಃ ॥

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಆರನೆಯ ಅಷ್ಟಕದಲ್ಲಿ
ಐದನೆಯ ಅಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

## ಸಾಯಣಭಾಷ್ಯಸಹಿತಾ

# ಋಗ್ವೇದಸಂಹಿತಾ

## ಅಥ ಷಷ್ಠಾಷ್ಟಕೇ ಷಷ್ಠೋಽಧ್ಯಾಯಃ

## ಆರನೆಯ ಅಷ್ಟಕದಲ್ಲಿ ಆರನೆಯ ಅಧ್ಯಾಯವು

## ಎಂಟನೆಯಮಂಡಲದಲ್ಲಿ ಎಂಭತ್ತೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಆ ಪ್ರ ದ್ರವೇತಿ ನವರ್ಚಂ ದ್ವಿತೀಯಂ ಸೂಕ್ತಂ। ತಥಾ ಚಾನುಕ್ರಮ್ಯತೇ। ಆ ಪ್ರ ದ್ರವೇತಿ। ಋಷಿಶ್ಚಾನ್ಯಸ್ಮಾದಿತಿ ಪರಿಭಾಷಯಾ ಕಾಣ್ವಃ ಕುಸೀದ್ಯೃಷಿಃ । ಪ್ರಾಗ್ವತ್ಸಪ್ರಿಯಪರಿಭಾಷಯಾ ಗಾಯತ್ರೀ ಛಂದಃ । ಅನಾದೇಶಪರಿಭಾಷಯೇಂದ್ರೋ ದೇವತಾ ॥ ಮಹಾವ್ರತೇ ನಿಷ್ಕೇವಲ್ಯೇ ಸೂಕ್ತವಿನಿಯೋಗ

ಉಕ್ತಃ ॥ ದ್ವಿತೀಯೇ ರಾತ್ರಿಪರ್ಯಾಯೇ ಮೈತ್ರಾವರುಣಶಸ್ತ್ರ ಆ ಪ್ರ ದ್ರವೇತಿ ತೃಚೋಽನುರೂಪಃ । ಸೂತ್ರಿತಂ ಚ । ಆ ಪ್ರ ದ್ರವ ಪರಾವತೋ ನಹ್ಯನ್ಯಂ ಬಳಾಕರಮಿತ್ಯಷ್ಟೌ । ಆ. ೬-೪ । ಇತಿ ॥

ಅನುವಾದವು--ಆ ಪ್ರ ದ್ರವ ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು ಅನುಕ್ರಮಣಿಕೆಯಲ್ಲಿ-ಆ ಪ್ರ ದ್ರವ ಎಂದು ಹೇಳಿರುವುದು. ಕುಸೀದೀ ಕಾಣ್ವಃ ಎಂಬುವನು ಋಷಿಯು, ಇಂದ್ರನು ದೇವತೆಯು, ಗಾಯತ್ರೀಛಂದಸ್ಸು. ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಹಿಂದಿನ ಸೂಕ್ತದ ಪೀಠಿಕೆಯಲ್ಲಿಯೇ ಹೇಳಲಾಗಿದೆ. ಎರಡನೆಯ ರಾತ್ರಿಪರ್ಯಾಯದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ ಆ ಪ್ರ ದ್ರವ ಎಂದು ಮೊದಲಾದ ಈ ಸೂಕ್ತದ ನೊದಲಿನ ಮೂರು ಋಕ್ಕುಗಳನ್ನು ಅನುರೂಪತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ-ಆ ಪ್ರ ದ್ರವ ಪರಾವತೋ ನಹ್ಯನ್ಯಂ ಬಳಾಕರಮಿತ್ಯಷ್ಟೌ ಎಂಬ ಸೂತ್ರದಿಂದ (ಆ. ೫-೪) ವಿವೃತವಾಗಿರುವುದು.

## ಸೂಕ್ತ—೮೨

ಮಂಡಲ—೮ ॥ ಅನುವಾಕ—೯ ॥ ಸೂಕ್ತ—೮೨ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೧, ೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಕುಸೀದೀ ಕಾಣ್ವಃ ॥
ದೇವತಾ—ಇಂದ್ರಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಆ ಪ್ರ ದ್ರವ ಪರಾವತೋಽರ್ವಾವತಶ್ಚ ವೃತ್ರಹನ್ ।
ಮಧ್ವಃ ಪ್ರತಿ ಪ್ರಭರ್ಮಣಿ ॥ ೧ ॥

॥ ಪದಪಾಠಃ ॥

ಆ । ಪ್ರ । ದ್ರವ । ಪರಾऽವತಃ । ಅರ್ವಾऽವತಃ । ಚ । ವೃತ್ರऽಹನ್ ॥
ಮಧ್ವಃ । ಪ್ರತಿ । ಪ್ರऽಭರ್ಮಣಿ ॥ ೧ ॥

॥ ಸಾಯಣಭಾಷ್ಯಂ ॥

ಹೇ ವೃತ್ರಹನ್ನಪಾಮಾವರಕಸ್ಯ ವೃತ್ರಾಸುರಸ್ಯ ಹಂತರ್ಹೇ ಇಂದ್ರ ಪ್ರಭರ್ಮಣಿ । ಪ್ರಕೃಷ್ಟಾನಿ ಭರ್ಮಾಣಿ ಭರಣಾನಿ ಪಶುಗೃಹಾದಿಸಂಪಾದನಾನಿ ಯಸ್ಮಿನ್ ಸ ಪ್ರಭರ್ಮಾ ಯಜ್ಞಃ । ಯದ್ವಾ ।

**ಪ್ರಕೃಷ್ಟಾಃ ಕರ್ಮಣಿ ಕುಶಲಾ ಭರ್ಮಾಣೋ ದೇವಾನಾಂ ಹವಿಷ್ಪ್ರದಾನೇನ ಪೋಷಕಾ ಋತ್ವಿಜೋ ಯಸ್ಮಿನ್ನಿತಿ ಸ ತಥೋಕ್ತಃ । ಏತಾದೃಶೇ ಯಜ್ಞೇ ಮಧ್ವೋ ಮದಕರಾನ್ಸೋಮಾನ್ಪ್ರತಿ ಪರಾವತೋ ವಿಪ್ರಕೃಷ್ಟಾದ್ದೂರಸ್ಥಾದ್ದೇಶಾದಪ್ಯರ್ವಾವತಶ್ಚ ಸಮೀಪಸ್ಥಾದ್ದೇಶಾದಸ್ಮಾಭಿಮುಖ್ಯೇನ ಪ್ರ ದ್ರವ । ತ್ವಂ ತ್ವರಯಾಗಚ್ಛ ॥ ಮಧ್ವ ಇತಿ ವಾ ಛಂದಸೀತಿ ಪೂರ್ವಸವರ್ಣದೀರ್ಘಾಭಾವಃ ॥**

॥ ಪ್ರತಿಪದಾರ್ಥ ॥

**ಹೇ ವೃತ್ರಹನ್**—ವೃತ್ರಾಸುರಹಂತಕನಾದ ಎಲೈ ಇಂದ್ರನೇ । **ಪ್ರಭರ್ಮಣಿ**—ಈ ಯಜ್ಞದಲ್ಲಿ । **ಮಧ್ವಃ**—ಹರ್ಷಕಾರಕವಾದ ಸೋಮರಸವನ್ನು । **ಪ್ರತಿ**—ಲಕ್ಷಿಸಿ, ಅದನ್ನು ಪಾನಮಾಡುವುದಕ್ಕಾಗಿ । **ಪರಾವತಃ**—ನೀನು ದೂರದೇಶದಲ್ಲಿದ್ದರೆ ಅಲ್ಲಿಂದಾಗಲಿ । **ಅರ್ವಾವತಶ್ಚ**—ಸಮೀಪಪ್ರದೇಶದಲ್ಲಿದ್ದರೆ ಅಲ್ಲಿಂದಾಗಲಿ । **ಆ**—ನಮ್ಮ ಯಜ್ಞಾಭಿಮುಖವಾಗಿ । **ಪ್ರ ದ್ರವ**—ತ್ವರಿತವಾಗಿ ಬಾ.

। ಭಾವಾರ್ಥ ।

ಮೇಘಗಳಲ್ಲಿರುವ ಉದಕಗಳನ್ನು ವೃಷ್ಟಿರೂಪದಲ್ಲಿ ಸುರಿಸದಂತೆ ತಡೆಗಟ್ಟುತ್ತಿದ್ದ ವೃತ್ರಾಸುರನನ್ನು ಸಂಹರಿಸಿದ ಎಲೈ ಇಂದ್ರನೇ, ಈ ಯಜ್ಞದಲ್ಲಿ ಹರ್ಷಕಾರಕವಾದ ಸೋಮವನ್ನು ಪಾನಮಾಡುವುದಕ್ಕಾಗಿ ನೀನು ದೂರ ದೇಶದಲ್ಲಿದ್ದರೂ, ಸಮೀಪ ಪ್ರದೇಶದಲ್ಲದ್ದರೂ ಅಲ್ಲಿಂದ ನಮ್ಮ ಯಜ್ಞಾಭಿಮುಖವಾಗಿ ಬೇಗನೆ ಬಾ.

## English Translation

Hasten, slayer of Vritra, from afar or from nigh, to the exhilarating (Soma-libations) in the sacrifice.

॥ ವಿಶೇಷವಿಶಯಗಳು ॥

**ಪ್ರಭರ್ಮಣಿ**—ಯಜ್ಞದಲ್ಲಿ । ಈ ಶಬ್ದಕ್ಕೆ ಭಾಷ್ಯಕಾರರು ಎರಡು ವಿಧವಾದ ಅರ್ಥವನ್ನು ವಿವರಿಸಿರುವರು **ಪ್ರಕೃಷ್ಟಾನಿ ಭರ್ಮಾಣಿ ಭರಣಾನಿ ಪಶುಗೃಹಾದಿಸಂಪಾದನಾನಿ ಯಸ್ಮಿನ್ ಸ ಪ್ರಭರ್ಮಾ ಯಜ್ಞಃ ।** ಯಾವ ಯಜ್ಞಕರ್ಮವನ್ನು ಮಾಡುವುದರಿಂದ ಉತ್ಕೃಷ್ಟವೂ ಪೋಷಕವೂ ಆದ ಪಶುಗೃಹಾದಿಗಳನ್ನು ದೇವತೆಗಳ ಅನುಗ್ರಹದಿಂದ ಪಡೆಯಬಹುದೋ ಅಂತಹ ಯಜ್ಞಕರ್ಮಕ್ಕೆ **ಪ್ರಭರ್ಮಾ** ಎಂದು ಹೆಸರು ಅಥವಾ—**ಪ್ರಕೃಷ್ಟಾಃ ಕರ್ಮಣಿ ಕುಶಲಾ ಭರ್ಮಾಣೋ ದೇವಾನಾಂ ಹವಿಷ್ಪ್ರದಾನೇನ ಪೋಷಕಾ ಋತ್ವಿಜೋ ಯಸ್ಮಿನ್ನಿತಿ ಸ ತಥೋಕ್ತಃ ।** ಅಥವಾ ಈ ಯಜ್ಞಕರ್ಮದಲ್ಲಿ ಮಂತ್ರಗಳಲ್ಲಿಯೂ ಕ್ರಿಯಾದಿಗಳಲ್ಲಿಯೂ ಕುಶಲರಾದ ಋತ್ವಿಕ್ಕುಗಳು ದೇವತೆಗಳ ಪ್ರೀತ್ಯರ್ಥವಾಗಿ ಹವಿಷ್ಪ್ರದಾನಾದಿಗಳಿಂದ ದೇವತೆಗಳನ್ನು ತೃಪ್ತಿಪಡಿಸಿ ಅವರ ಅನುಗ್ರಹದಿಂದ ಯಜಮಾನರಿಗೆ ಧಾರಕರಾಗಿರುವರು ಎಂದರೆ ಪೋಷಕರಾಗಿರುವರು. ಆದ್ದರಿಂದ ಇಂತಹ ಕಾರ್ಯಕಲಾಪಯುಕ್ತವಾದ ಯಜ್ಞಕ್ಕೆ ಪ್ರಭರ್ಮಾ ಎಂದು ಹೆಸರು.

॥ ಸಂಹಿತಾಪಾಠಃ ॥

ತೀವ್ರಾಃ ಸೋಮಾಸ ಆ ಗಹಿ ಸುತಾಸೋ ಮಾದಯಿಷ್ಣವಃ ।
ಪಿಬಾ ದಧೃಗ್ಯಥೋಚಿಷೇ ॥ ೨ ॥

॥ ಪದಪಾಠಃ ॥

ತೀವ್ರಾಃ । ಸೋಮಾಸಃ । ಆ । ಗಹಿ । ಸುತಾಸಃ । ಮಾದಯಿಷ್ಣವಃ ॥
ಪಿಬ । ದಧೃಕ್ । ಯಥಾ । ಓಚಿಷೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೀವ್ರಾಸ್ತೀವ್ರಮದಾಃ । ಕ್ಷಿಪ್ರಂ ಮದಕಾರಿಣ ಇತ್ಯರ್ಥಃ । ಮಾದಯಿಷ್ಣವೋ ಮಾದನಶೀಲಾ ಮಾದನಕಾರಿಣೋ ಮೇಮೇ ಸೋಮಾಸಃ ಸೋಮಾಃ ಸುತಾಸಸ್ತ್ವದರ್ಥಮಭಿಷುತಾಃ । ತಸ್ಮಾದಾ ಗಹಿ । ಅಸ್ಮದೀಯಂ ಯಜ್ಞಂ ಪ್ರತ್ಯಾಗಚ್ಛ । ಆಗತ್ಯ ಚ ತಾನ್ ಪಿಬ । ಸೋಮಪಾನೇ ಕಾರಣಮಾಹ । ತ್ವಂ ಯಥಾ ದಧೃಗ್ಧೃಷ್ಟಸ್ತತ್ಪ್ರೀತೌ ಪ್ರಗಲ್ಭಃ ಸಂಸ್ತಾನೂಚಿಷೇ ಸಮವೈಷಿ ಸೇವಸೇ । ತತಸ್ತಾನ್ಯಥಾಕಾಮಂ ಪಿಬೇತ್ಯರ್ಥಃ ॥ ದಧೃಗಿತಿ ಞಿಧೃಷಾ ಪ್ರಾಗಲ್ಭ್ಯೇ ಇತ್ಯಸ್ಮಾದೃತ್ವಿಗ್ದಧೃಗಿತ್ಯಾದಿನಾ ಕ್ವಿನ್ಪ್ರತ್ಯಯಾಂತೋ ನಿಪಾತ್ಯತೇ । ಊಚಿಷೇ । ಉಚ ಸಮವಾಯೇ । ಛಾಂದಸೇ ಲೇಟಿ ರೂಪಂ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ತೀವ್ರಾಃ—ಬೇಗನೆ ಮದವನ್ನುಂಟುಮಾಡುವ । **ಮಾದಯಿಷ್ಣವಃ**—ಅತ್ಯಂತ ಹರ್ಷವನ್ನುಂಟುಮಾಡುವ । **ಸೋಮಾಸಃ**—ಸೋಮರಸಗಳು । **ಸುತಾಸಃ**—ನಿನಗಾಗಿ ಹಿಂಡಿ ಸಿದ್ಧವಾಗಿವೆ । **ಆ ಗಹಿ**—ಆದ್ದರಿಂದ ನಮ್ಮ ಯಜ್ಞಾಭಿಮುಖವಾಗಿ ದಯಮಾಡು । **ಯಥಾ**—(ಬಂದನಂತರ) ಯಾವಪ್ರಕಾರವಾಗಿ । **ಧೃಷ್ಟಃ**—ಸೋಮಪಾನದಿಂದ ಪ್ರೀತನಾದೆನೆಂದು । **ಊಚಿಷೇ**—ಹೇಳುವೆಯೋ ಹಾಗೆ ಎಂದರೆ ಯಥೇಷ್ಟವಾಗಿ । **ಪಿಬ**—ಪಾನಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಮದಕಾರಕವಾದುದೂ, ಹರ್ಷದಾಯಕವಾದುದೂ ಆದ ಸೋಮರಸಗಳು ನಿನಗಾಗಿ ಹಿಂಡಿ ಸಿದ್ಧವಾಗಿವೆ. ಆದ್ದರಿಂದ ನಮ್ಮ ಯಜ್ಞಾಭಿಮುಖವಾಗಿ ಬಂದು ಸೋಮಪಾನದಿಂದ ನಿನಗೆ ತೃಪ್ತಿಯಾಗುವಂತೆ ಯಥೇಷ್ಟವಾಗಿ ಪಾನಮಾಡು.

## English Translation

Come hither, the strong intoxicating Soma is effused: drink, since you are boldly devoted to it.

॥ ವಿಶೇಷವಿಷಯಗಳು ॥

**ತೀವ್ರಾಃ**—ಲತೆಗಳಿಂದ ಸೋಮರಸವನ್ನು ತೆಗೆದಮೇಲೆ ಅವುಗಳನ್ನು ಬಟ್ಟೆ ಮೊದಲಾದವುಗಳಿಂದ ಶೋಧಿಸಿ ಮಂತ್ರಾದಿಗಳಿಂದ ಸಂಸ್ಕರಿಸಿ ದೇವತೆಗಳಿಗೆ ಅರ್ಪಿಸಿ ಪಾನಮಾಡುವುದು ರೂಢಿಯು. ಈ ಸೋಮರಸಕ್ಕೆ ರುಚಿಯುಂಟಾಗುವುದಕ್ಕಾಗಿ ಕೆಲವು ಆಶಿರದ್ರವ್ಯಗಳನ್ನು ಸೇರಿಸುವರು. ಹಾಲನ್ನು ಮಿಶ್ರಮಾಡಿದ ಸೋಮರಸಕ್ಕೆ ಗವಾಶಿರವೆಂದೂ, ಮೊಸರನ್ನು ಮಿಶ್ರಮಾಡಿದ ಸೋಮರಸಕ್ಕೆ ದಧ್ಯಾಶಿರವೆಂದೂ, ಯವಧಾನ್ಯದ ಹಿಟ್ಟನ್ನು ಬೆರಸಿದ ಸೋಮರಸಕ್ಕೆ ಯವಾಶಿರವೆಂದೂ ಹೇಳುವರು. ಏನನ್ನೂ ಬೆರೆಸದೆ ಲತೆಯಿಂದ ತೆಗೆದ ಸೋಮರಸಕ್ಕೆ **ತೀವ್ರ** ಎಂದು ಹೇಳುವರು. ಏಕೆಂದರೆ ಇಂತಹ ಸೋಮರಸಕ್ಕೆ ಇತರ ಯಾವ ವಸ್ತುವೂ ಮಿಶ್ರವಾಗಿರುವುದಿಲ್ಲವಾದ್ದರಿಂದ ಇದರಲ್ಲಿ ಮದ (ಮತ್ತು) ವನ್ನುಂಟುಮಾಡುವ ಶಕ್ತಿಯು ಹೆಚ್ಚಾಗಿರುವುದು. ಇಂತಹ ತೀವ್ರವಾದ ಸೋಮರಸದಲ್ಲಿ ಇಂದ್ರನಿಗೆ ವಿಶೇಷವಾದ ಅಭಿರುಚಿಯಿರುವುದೆಂದು ಅನೇಕಸ್ಥಳಗಳಲ್ಲಿ ಉಕ್ತವಾಗಿದೆ.

। ಸಂಹಿತಾಪಾಠಃ ।

ಇಷಾ ಮಂದಸ್ವಾದು ತೇಽರಂ ವರಾಯ ಮನ್ಯವೇ ।

ಭುವತ್ತ ಇಂದ್ರ ಶಂ ಹೃದೇ ॥ ೩ ॥

॥ ಪದಪಾಠಃ ॥

ಇಷಾ । ಮಂದಸ್ವ । ಆತ್ । ಊಂ ಇತಿ । ತೇ । ಅರಂ । ವರಾಯ । ಮನ್ಯವೇ ।

ಭುವತ್ । ತೇ । ಇಂದ್ರ । ಶಂ । ಹೃದೇ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಇಷಾ ಸೋಮಲಕ್ಷಣೇನಾನ್ನೇನ ಮಂದಸ್ವ । ಮೋದಸ್ವ । ಹೃಷ್ಟೋ ಭವ । ಉ ಇತ್ಯವಧಾರಣೇ । ಆದನಂತರಮೇವ ತೇ ತವ ವರಾಯ ಶತ್ರುನಿವಾರಕಾಯ ಮನ್ಯವೇ ಕ್ರೋಧಾಯ ಸ ಸೋಮೋಽರಮಲಂ ಪರ್ಯಾಪ್ತೋ ಭವತು । ಕ್ರೋಧಶಮನೇ ಸಮರ್ಥೋ ಭವತು । ಯದಾ ಸೋಮಂ ಪಿಬತಿ। ತದಾ ಮನ್ಯುಂ ತ್ಯಜತೀತ್ಯರ್ಥಃ । ಕಿಂ ಚ ತೇ ತವ ಹೃದೇ ಹೃದಯೇ ಸ ಸೋಮಃ ಶಂ ಶಂಕರಃ ಸುಖಕರೋ ಭುವತ್ । ಭವತು ॥**

॥ ಪ್ರತಿಪದಾರ್ಥ ॥

**ಹೇ ಇಂದ್ರ**—ಎಲೈ ಇಂದ್ರನೇ । **ಇಷಾ**—ಸೋಮರೂಪವಾದ ಅನ್ನದಿಂದ ಎಂದರೆ ಸೋಮರಸಪಾನದಿಂದ । **ಮಂದಸ್ವ ಉ**—ಹೃಷ್ಟನಾಗು । **ಆತ್**—ಅನಂತರ । **ತೇ**—ನಿನ್ನ । **ವರಾಯ**—ಶತ್ರುಸಂಹಾರಕ್ಕಾಗಿ ಉಂಟಾದ ।

**ಮನ್ಯವೇ**—ಕ್ರೋಧವನ್ನು (ಕೋಪವನ್ನು) । **ಅರಂ**—(ಆ ಸೋಮಪಾನವು) ಶಮನವಾಡಲಿ (ಮತ್ತು) । **ತೇ**—ನಿನ್ನ । **ಹೃದೇ**—ಹೃದಯದಲ್ಲಿ ಆ ಸೋಮವು । **ಶಂ**—ಸುಖಕರವಾಗಿ ಎಂದರೆ ಸಂತೋಷವನ್ನುಂಟುಮಾಡುವುದಾಗಿ। **ಭುವತ್**—ಆಗಲಿ

॥ ಭಾವಾರ್ಥ ॥

ಎಲೈ ಇಂದ್ರನೇ ಸೋಮರೂಪವಾದ ಅನ್ನದಿಂದ ಎಂದರೆ ಸೋಮರಸಪಾನದಿಂದ ಹೃಷ್ಟನಾಗು. ಶತ್ರು ಸಂಹಾರಮಾಡುವುದಕ್ಕಾಗಿ ನಿನಗೆ ಉಂಟಾದ ಕೋಪವು ಸೋಮಪಾನದಿಂದ ಶಮನವಾಗಲಿ ಮತ್ತು ಆ ಸೋಮವು ನಿನ್ನ ಹೃದಯಕ್ಕೆ (ಮನಸ್ಸಿಗೆ) ಸಂತೋಷವನ್ನುಂಟುಮಾಡಲಿ.

## English Translation

Rejoice yourself with this food,—may it forthwith avail to (quench) your foe-restraining anger, may it produce happiness, Indra, in your heart.

|| ವಿಶೇಷವಿಷಯಗಳು ||

**ಸ ಸೋಮಃ ಕ್ರೋಧಶಮನೇ ಸಮರ್ಥೋ ಭವತು । ಯದಾ ಸೋಮಂ ಪಿಬತಿ ತದಾ ಮನ್ಯುಂ ತ್ಯಜತೀತ್ಯರ್ಥಃ ।** ಸೋಮಪಾನಮಾಡಿದರೆ ಕೋಪವೆಲ್ಲವೂ ಶಮನವಾಗುವುದು. ಎಂದರೆ ಕೋಪಶಮನಮಾಡುವ ಶಕ್ತಿಯು ಸೋಮರಸಕ್ಕೆ ಇದೆ. ಆದ್ದರಿಂದ ಇಂದ್ರನು ಸೋಮಪಾನಮಾಡಿದ ಕೂಡಲೇ ಶತ್ರುಸಂಹಾರಕ್ಕಾಗಿ ಅವನಲ್ಲಿದ್ದ ಕೋಪವೆಲ್ಲವೂ ಶಮನವಾಗಿ ಸಂತೋಷಚಿತ್ತನಾಗುವನು ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಆ ತ್ವಶತ್ರವಾ ಗಹಿ ನ್ಯುಕ್ಥಾನಿ ಚ ಹೂಯಸೇ ।
ಉಪಮೇ ರೋಚನೇ ದಿವಃ ॥ ೪ ॥

॥ ಪದಪಾಠಃ ॥

ಆ । ತು । ಅಶತ್ರೋ ಇತಿ । ಆ । ಗಹಿ । ನಿ । ಉಕ್ಥಾನಿ । ಚ । ಹೂಯಸೇ ।
ಉಪಮೇ । ರೋಚನೇ । ದಿವಃ ॥ ೪ ॥

॥ ಸಾಯಣಭಾಷ್ಯಂ ॥

**ತೃತೀಯೇ ಪರ್ಯಾಯ ಆ ತ್ವಶತ್ರವಿತ್ಯನುರೂಪಸ್ತೃಚಃ । ಸೂತ್ರಿತಂ ಚ । ಆ ತ್ವೇತಾ ನಿ ಷೀದತಾ ತ್ವಶತ್ರವಾ ಗಹಿ । ಆ. ೬-೪ । ಇತಿ ॥**

ಹೇ ಅಶತ್ರೋ ಸಪತ್ನರಹಿತ । ಅಸ್ಯ ಬಹುವಿಧಬಲತ್ವಾದ್ರಣಾಭಿಮುಖಂ ಗಂತಾರಃ ಶತ್ರವೋ ನ ಸಂತೀತ್ಯರ್ಥಃ । ತಾದೃಶೇಂದ್ರ ತು ಕ್ಷಿಪ್ರಮಾ ಗಹಿ । ಆಯಾಹಿ । ಅಸ್ಮದ್ಯಜ್ಞಂ ಪ್ರತ್ಯಾಗಚ್ಛ । ಯತೋ ದಿವಃ ಸ್ವತೇಜಸಾ ದೀಪ್ಯಮಾನಾದ್ದ್ಯುಲೋಕಾತ್ । ತತ್ರಸ್ಥೈರ್ದೇವೈರಿತ್ಯರ್ಥಃ । ರೋಚನೇಽಗ್ನಿಭಿರ್ದೀಪ್ಯಮಾನೇ ಲೋಕೇ ಚೋಪಮೇ ಸಮೀಪೇ । ಸ್ತೋತಾರಃ ಸ್ತೋತ್ರೈಃಸ್ತ್ರಾತ್ಮಕಂ ಶಬ್ದಂ ಕುರ್ವಂತ್ಯತ್ರೇತ್ಯುಪಮೋ ಯಜ್ಞಃ । ತಸ್ಮಿನ್ನಸ್ಮದೀಯೇ ಯಜ್ಞೇ ಚೋಕ್ಥಾನಿ ತ್ರಿವೃತ್ಪಂಚದಶಾದಿಲಕ್ಷಣಾನಿ ಸ್ತೋತ್ರಾಣಿ ಪ್ರತಿ ನಿ ಹೂಯಸೇ ತ್ವಂ ಸ್ತೋತವ್ಯತಯಾ ನಿತರಾಮಾಹೂಯಸೇ । ಯಸ್ಮಾದೇವಂ ತಸ್ಮಾದಾಗಚ್ಛತೇತಿ ಸಮನ್ವಯಃ ।

॥ ಪ್ರತಿಪದಾರ್ಥ ॥

**ಅಶತ್ರೋ**—ಶತ್ರುರಹಿತನಾದ ಎಲೈ ಇಂದ್ರನೇ । **ತು**—ಬೇಗನೆ । **ಆ ಗಹಿ**—ನಮ್ಮ ಯಜ್ಞಾಭಿಮುಖವಾಗಿ ದಯಮಾಡು । **ದಿವಃ**—ದ್ಯುಲೋಕದಿಂದ ಎಂದರೆ ಸ್ವರ್ಗಲೋಕದಲ್ಲಿರುವ ದೇವತೆಗಳಿಂದ । **ರೋಚನೇ**—ಪ್ರಕಾಶಮಾನವಾದ । **ಉಪಮೇ**—ನಮ್ಮ ಯಜ್ಞದಲ್ಲಿ । **ಉಕ್ಥಾನಿ**—ಸ್ತೋತ್ರಗಳನ್ನು ಪಠಿಸಿ । **ನಿ ಹೂಯಸೇ**—ನೀನು ಆಹ್ವಾನಿಸಲ್ಪಡುತ್ತೀಯೆ ಆದ್ದರಿಂದ ನಮ್ಮ ಯಜ್ಞಕ್ಕೆ ದಯಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಈಗ ನಾವು ಮಾಡುತ್ತಿರುವ ಈ ಯಜ್ಞದಲ್ಲಿ ಪ್ರಕಾಶಮಾನವಾದ ಸ್ವರ್ಗಲೋಕದಿಂದ ದೇವತೆಗಳು ಬಂದು ಕುಳಿತಿರುವರು. ಋತ್ವಿಗ್ಯಜಮಾನರು ಸ್ತೋತ್ರಗಳನ್ನು ಪಠಿಸುತ್ತಾ ನಿನ್ನನ್ನು ಆಹ್ವಾನಿಸುತ್ತಿರುವರು, ಆದ್ದರಿಂದ ನಮ್ಮ ಈ ಯಜ್ಞಕ್ಕೆ ದಯಮಾಡು.

## English Translation

O you who have no enemies, come hither; you are summoned from the resplendent heaven to the hymns at this our rite near at hand in this world illumined (by the sacred fires)

॥ ವಿಶೇಷವಿಷಯಗಳು ॥

**ಅಶತ್ರೋ—ಬಹುವಿಧಬಲತ್ವಾದ್ರಣಾಭಿಮುಖಂ ಗಂತಾರಃ ಶತ್ರವೋ ನ ಸಂತೀತ್ಯರ್ಥಃ** ಇಂದ್ರನಿಗೆ ಅತಿಶಯವಾದ ಶಕ್ತಿಸಾಮರ್ಥ್ಯಗಳಿರುವುದರಿಂದ ಯುದ್ಧದಲ್ಲಿ ಇಂದ್ರನನ್ನು ಎದುರಿಸಿ ಯುದ್ಧಮಾಡುವ ಶತ್ರುಗಳು ಯಾರೂ ಇರುವುದಿಲ್ಲ ಆದ್ದರಿಂದ ಇಂದ್ರನನ್ನು ಶತ್ರುರಹಿತನೆಂದು ಇಲ್ಲಿ ಕರೆಯಲಾಗಿದೆ.

**ದಿವಃ—ಸ್ವತೇಜಸಾ ದೀಪ್ಯಮಾನಾದ್ ದ್ಯುಲೋಕಾತ್ । ತತ್ರಸ್ಥೈರ್ದೇವೈರಿತ್ಯರ್ಥಃ ।** ಸ್ವರ್ಗಲೋಕವು ತನ್ನದೇ ಆದ ತೇಜಸ್ಸಿನಿಂದ ಅತಿಶಯವಾಗಿ ಬೆಳಗುತ್ತಿರುವುದು ಇಂತಹ ಸ್ವರ್ಗದಲ್ಲಿರುವ ದೇವತೆಗಳಿಂದ ಎಂದಭಿಪ್ರಾಯವು.

**ರೋಚನೇ—ಅಗ್ನಿಭಿರ್ದೀಪ್ಯಮಾನೇ** । ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿ, ಎಂಬ ಅಗ್ನಿಗಳಿಂದ ಪ್ರಕಾಶಮಾನವಾಗಿ ಬೆಳಗುತ್ತಿರುವ ಎಂದರ್ಥವು ಈ ಶಬ್ದವು **ಉಪಮೇ (ಯಜ್ಞೇ)** ಎಂಬ ಶಬ್ದಕ್ಕೆ ವಿಶೇಷಣವು.

**ಉಪಮೇ—ಸಮೀಪೇ । ಸ್ತೋತಾರಃ ಸ್ತೋತ್ರಶಸ್ತ್ರಾತ್ಮಕಂ ಶಬ್ದಂ ಕುರ್ವಂತ್ಯತ್ರೇತ್ಯುಪಮೋ ಯಜ್ಞಃ ।** ಉಪಮೇ ಎಂದರೆ ಸಮೀಪದಲ್ಲಿ ಎಂದು ಈ ಶಬ್ದಕ್ಕೆ ಸಾಮಾನ್ಯಾರ್ಥವಿದ್ದರೂ ಇಲ್ಲಿ (ಅಗ್ನಿಯ) ಸಮೀಪದಲ್ಲಿ ಸ್ತೋತೃಗಳು ಮತ್ತು ಋತ್ವಿಕ್ಕುಗಳು ಸ್ತೋತ್ರ ಮತ್ತು ಶಸ್ತ್ರಮಂತ್ರಗಳನ್ನು ಘಟ್ಟಿಯಾದ ಧ್ವನಿಯಿಂದ ಪಠಿಸುತ್ತಿರುವುದರಿಂದ ಇಲ್ಲಿ **ಉಪಮೇ** ಎಂಬ ಶಬ್ದಕ್ಕೆ ಯಜ್ಞೇ-ಯಜ್ಞದಲ್ಲಿ ಎಂಬರ್ಥವು ಉಕ್ತವಾಗಿರುವುದು.

**ಉಕ್ಥಾನಿ—ಸ್ತೋತ್ರಾಣಿ । ತ್ರಿವೃತ್ಪಂಚದಶಾದಿಲಕ್ಷಣಾನಿ ಸ್ತೋತ್ರಾಣಿ ।** ಸ್ತೋತ್ರ ಅಥವಾ ಸ್ತೋಮಗಳಲ್ಲಿ ತ್ರಿವೃತ್, ಪಂಚದಶ, ಸಪ್ತದಶ ಮೊದಲಾದ ಪ್ರಭೇದಗಳಿರುವವು ಅಂತಹ ಸ್ತೋತ್ರಗಳಿಂದ ಇಂದ್ರನನ್ನು ಆಹ್ವಾನಿಸಿ ಕರೆಯುವರು ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ತುಭ್ಯಾಯಮದ್ರಿಭಿಃ ಸುತೋ ಗೋಭಿಃ ಶ್ರೀತೋ ಮದಾಯ ಕಂ ।

ಪ್ರ ಸೋಮ ಇಂದ್ರ ಹೂಯತೇ ॥ ೫ ॥

॥ ಪದಪಾಠಃ ॥

ತುಭ್ಯ । ಅಯಂ । ಅದ್ರಿऽಭಿಃ । ಸುತಃ । ಗೋಭಿಃ । ಶ್ರೀತಃ । ಮದಾಯ । ಕಂ ।

ಪ್ರ । ಸೋಮಃ । ಇಂದ್ರ । ಹೂಯತೇ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಅದ್ರಿಭಿರಭಿಷವಸಾಧನೈರ್ಗ್ರಾವಭಿರಯಂ ಸೋಮಸ್ತುಭ್ಯಂ ತ್ವದರ್ಥಂ ಸುತೋऽಭಿಷುತಃ । ತತೋ ದಶಾಪವಿತ್ರೇಣ ಪೂತ್ವಾ ಗೋಭಿರ್ಗೋವಿಕಾರೈಃ ಕ್ಷೀರಾದಿಭಿಃ ಶ್ರೀತಃ ಸೋऽಸ್ಮಾಭಿಃ ಪರಾವತ ಏವ ಸಂಸ್ಕೃತಃ ಸೋಮಸ್ತವ ಮದಾಯ ಮದಾರ್ಥಂ ಕಂ ಸುಖೇನ ಪ್ರ ಹೂಯತೇ । ಅಗ್ನೌ ಸ್ವಾಹಾ ಕ್ರಿಯತೇ । ತಸ್ಮಾದಾಗತ್ಯ ಸೋಮಂ ಪಿಬ ॥**

॥ ಪ್ರತಿಪದಾರ್ಥ ॥

**ಹೇ ಇಂದ್ರ**—ಎಲೈ ಇಂದ್ರನೇ । **ಅದ್ರಿಭಿಃ**—ಸೋಮವನ್ನು ಜಜ್ಜಿ ಹಿಂಡುವುದಕ್ಕಾಗಿ ಉಪಯೋಗಿಸುವ ಕಲ್ಲುಗಳಿಂದ । **ಅಯಂ ಸೋಮಃ**—ಈ ಸೋಮರಸವು । **ತುಭ್ಯ ಸುತಃ**—ನಿನಗಾಗಿ ಹಿಂಡಿ ಸಿದ್ಧವಾಗಿದೆ । **ಗೋಭಿಃ**—ಗೋವಿಕಾರವಾದ ಹಾಲಿನಿಂದ । **ಶ್ರೀತಃ**—ಮಿಶ್ರಿತವಾಗಿದೆ । **ಸೋಮಃ**—ಇಂತಹ ಸೋಮರಸವು । **ಮದಾಯ**—ನಿನ್ನ ಹರ್ಷಾರ್ಥವಾಗಿ । **ಕಂ**—ಸುಖವಾಗಿ (ನಿನ್ನನ್ನುದ್ದೇಶಿಸಿ) ಅಗ್ನಿಯಲ್ಲಿ । **ಪ್ರ ಹೂಯತೇ**—ಸ್ವಾಹಾಕಾರಪೂರ್ವಕವಾಗಿ ಹೋಮಮಾಡಲ್ಪಡುತ್ತದೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಸೋಮಾಭಿಷವಣಸಾಧನಭೂತವಾದ ಕಲ್ಲುಗಳಿಂದ ಈ ಸೋಮರಸವು ನಿನಗಾಗಿ ಹಿಂಡಿ ಸಿದ್ಧವಾಗಿದೆ ಮತ್ತು ಹಾಲಿನಿಂದ ಮಿಶ್ರಿತವಾಗಿದೆ. ಇಂತಹ ಸೋಮರಸವು ನಿನ್ನ ಹರ್ಷಾರ್ಥವಾಗಿ ನಿನ್ನನ್ನುದ್ದೇಶಿಸಿ ಅಗ್ನಿಯಲ್ಲಿ ಸ್ವಾಹಾಕಾರಪೂರ್ವಕವಾಗಿ ಹೋಮಮಾಡಲ್ಪಡುತ್ತದೆ.

English Translation

Indra, this Soma, effused for you by the stones and mixed with milk is offered auspiciously (in the fire) for your exhilaration

॥ ಸಂಹಿತಾಪಾಠಃ ॥

ಇಂದ್ರ ಶ್ರುಧಿ ಸು ಮೇ ಹವಮಸ್ಮೇ ಸುತಸ್ಯ ಗೋಮತಃ ।
ವಿ ಪೀತಿಂ ತೃಪ್ತಿಮಶ್ನುಹಿ ॥ ೬ ॥

॥ ಪದಪಾಠಃ ॥

ಇಂದ್ರ । ಶ್ರುಧಿ । ಸು । ಮೇ । ಹವಂ । ಅಸ್ಮೇ ಇತಿ । ಸುತಸ್ಯ । ಗೋऽಮತಃ ।
ವಿ । ಪೀತಿಂ । ತೃಪ್ತಿಂ । ಅಶ್ನುಹಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಮೇ ಮದೀಯಂ ಹವಂ ತ್ವದ್ವಿಷಯಮಾಹ್ವಾನಂ ಸು ಸುಷ್ಠು ಶ್ರುಧಿ । ಶೃಣು । ಕಥಾಸ್ಮೇ ಅಸ್ಮಾಭಿಃ ಸುತಸ್ಯಾಭಿಷುತಸ್ಯ ಗೋಮತೋ ಗವ್ಯಕ್ಷೀರವತಃ । ಕ್ಷೀರೇಣ ಮಿಶ್ರಿತಸ್ಯೇತ್ಯರ್ಥಃ । ತಾದೃಶಸ್ಯ ಸೋಮಸ್ಯ ಪೀತಿಂ ಪಾನಂ ವ್ಯಶ್ನುಹಿ । ವಿವಿಧಂ ಪ್ರಾಪ್ನುಹಿ । ತತ್ಪಾನೇನ ವಿವಿಧಾಂ ತೃಪ್ತಿಂ ಚ ಗಚ್ಛ ॥ ಅಶೂ ವ್ಯಾಪ್ತೌ । ವ್ಯತ್ಯಯೇನ ಪರಸ್ಮೈಪದಂ ॥

॥ ಪ್ರತಿಪದಾರ್ಥ ॥

**ಹೇ ಇಂದ್ರ**—ಎಲೈ ಇಂದ್ರನೇ । **ಮೇ**—ನನ್ನ । **ಹವಂ**—ಆಹ್ವಾನವನ್ನು ಅಥವಾ ಪ್ರಾರ್ಥನೆಯನ್ನು । **ಸು**—ಚೆನ್ನಾಗಿ (ಮನಸ್ಸಿಟ್ಟು) । **ಶ್ರುಧಿ**—ಕೇಳು । **ಅಸ್ಮೇ**—ನಮ್ಮಿಂದ । **ಸುತಸ್ಯ**—ಹಿಂಡಲ್ಪಟ್ಟ । **ಗೋಮತಃ**-ಹಾಲಿನಿಂದ ಮಿಶ್ರಿತವಾದ ಸೋಮರಸದ । **ಪೀತಿಂ**—ಪಾನವನ್ನು (ಮಾಡಿ ಅದರಿಂದ) । **ತೃಪ್ತಿಂ**—ತೃಪ್ತಿಯನ್ನು । **ವಿ ಅಶ್ನುಹಿ**—ಹೊಂದು.

॥ ಭಾವಾರ್ಥ ॥

ಎಲೈ ಇಂದ್ರನೇ, ನಾನು ಮಾಡುವ ಈ ಪ್ರಾರ್ಥನೆಯನ್ನು ಅಥವಾ ಆಹ್ವಾನವನ್ನು ಚೆನ್ನಾಗಿ ಕೇಳು. ನಮ್ಮಿಂದ ಹಿಂಡಲ್ಪಟ್ಟು ಹಸುವಿನ ಹಾಲಿನಿಂದ ಮಿಶ್ರಿತವಾದ ಈ ಸೋಮರಸವನ್ನು ಪಾನಮಾಡಿ ಅದರಿಂದ ನಾನಾವಿಧ ತೃಪ್ತಿಯನ್ನು ಹೊಂದು.

## English Translation

Indra, hear with favour my call ; be present at the drinking of this our libation mixed with milk, and be satisfied.

॥ ಸಂಹಿತಾಪಾಠಃ ॥

ಯ ಇಂದ್ರ ಚಮಸೇಷ್ವಾ ಸೋಮಶ್ಚಮೂಷು ತೇ ಸುತಃ ।
ಪಿಬೇದಸ್ಯ ತ್ವಮೀಶಿಷೇ ॥ ೭ ॥

॥ ಪದಪಾಠಃ ॥

ಯಃ । ಇಂದ್ರ । ಚಮಸೇಷು । ಆ । ಸೋಮಃ । ಚಮೂಷು । ತೇ । ಸುತಃ ।
ಪಿಬ । ಇತ್ । ಅಸ್ಯ । ತ್ವಂ । ಈಶಿಷೇ ॥ ೭ ॥

॥ ಸಾಯಣಭಾಷ್ಯಂ ॥

ತೃತೀಯೇ ಪರ್ಯಾಯ ಏವಾಚ್ಛಾವಾಕಶಸ್ತ್ರೇ ಯ ಇಂದ್ರ ಚಮಸೇಷ್ವಿತಿ ತೃಚಃ । ಸೂತ್ರಿತಂ ಚ । ಯ ಇಂದ್ರ ಚಮಸೇಷ್ವಾ ಸೋಮಃ ಪ್ರ ವಃ ಸತಾಂ । ಆ. ೬-೪ । ಇತಿ ॥

ಹೇ ಇಂದ್ರ ತೇ ತ್ವದರ್ಥಂ ಸುತೋಽಭಿಷುತೋ ಯಃ ಸೋಮಶ್ಚಮಸೇಷ್ವೇತನ್ನಾಮಕೇಷು ಪಾತ್ರೇಷು ತಥಾ ಚಮೂಷು । ಚಮಂತಿ ಯಜಂತ್ಯತ್ರೇತಿ ಚಮ್ವೋ ಗ್ರಹಾಃ । ತೇಷು ಚಾ ಸರ್ವತೋಽಸ್ತಿ ಅಸ್ಯ ತಮೇತಂ ಸೋಮಂ ಪಿಬೇತ್ । ಇದವಧಾರಣೇ । ಪಿಬೈವ । ಕಥಮಸ್ಯ ಸೋಮಪಾನಯೋಗ್ಯತಾ ತತ್ರಾಹ । ಹೇ ಇಂದ್ರ ತ್ವಮೀಶಿಷೇ । ತಸ್ಯ ತ್ವಮೇವೇಶ್ವರೋ ಭವಸಿ ಖಲು । ಯತ ಏವಂ ತತಃ ಪಿಬೇತಿ ಸಮನ್ವಯಃ ॥ ಈಶ ಐಶ್ವರ್ಯೇ । ಲಟೀಶಃ ಸೇ । ಪಾ. ೭.೨.೭೭ ॥ ಇತೀಡಾಗಮಃ ॥

॥ ಪ್ರತಿಪದಾರ್ಥ ॥

**ಹೇ ಇಂದ್ರ**—ಎಲೈ ಇಂದ್ರನೇ । **ತೇ**—ನಿನಗಾಗಿ । **ಸುತಃ**—ಹಿಂಡಲ್ಪಟ್ಟ । **ಯಃ ಸೋಮಃ**—ಯಾವ ಸೋಮವು । **ಚಮಸೇಷು**— ಚಮಸಪಾತ್ರೆಗಳಲ್ಲಿಯೂ । **ಚಮೂಷು**—ಚಮೂ ಎಂಬ ಸೋಮಪಾನ ಮಾಡುವ ಗ್ರಹಪಾತ್ರೆಗಳಲ್ಲಿಯೂ । **ಆ**—ತುಂಬಿ ಸಿದ್ಧವಾಗಿದೆಯೋ । **ಅಸ್ಯ**—ಅಂತಹ ಈ ಸೋಮರಸವನ್ನು । **ಪಿಬ ಇತ್**—ಖಂಡಿತ ಪಾನಮಾಡು (ಏಕೆಂದರೆ) । **ತ್ವಂ**—ನೀನು । **ಈಶಿಷೇ**—ಆ ಸೋಮಕ್ಕೆಲ್ಲಾ ಒಡೆಯನಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನಗೆ ಅರ್ಪಿಸುವುದಕ್ಕಾಗಿ ಈಗತಾನೆ ಹಿಂಡಲ್ಪಟ್ಟ ಈ ಸೋಮರಸವು ಚಮಸಪಾತ್ರೆಗಳಲ್ಲಿಯೂ ಚಮೂ ಎಂಬ ಪಾನಪಾತ್ರೆಗಳಲ್ಲಿಯೂ ತುಂಬಿ ಸಿದ್ಧವಾಗಿದೆ. ಈ ಸೋಮಕ್ಕೆ ನೀನೇ ಪ್ರಭುವಾಗಿರುವೆ. ಆದ್ದರಿಂದ ಈ ಸೋಮರಸವನ್ನು ಖಂಡಿತ ಪಾನಮಾಡು.

## English Translation

Whatever Soma has been poured into the cups and the bowls for you drink it, Indra,—you are the sovereign.

॥ ವಿಶೇಷವಿಷಯಗಳು ॥

ಮೂರನೆಯ ಪರ್ಯಾಯದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ **ಯ ಇಂದ್ರ ಚಮಸೇಷು** ಎಂದು ಮೊದಲಾಗುವ ಈ ಸೂಕ್ತದ ೭-೯ ಮೂರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಯ ಇಂದ್ರ ಚಮಸೇಷ್ವಾ ಸೋಮಃ ಪ್ರ ವಃ ಸತಾಂ** ಎಂಬ ಸೂತ್ರದಿಂದ (ಆ. ೬-೪) ವಿವೃತವಾಗಿರುವುದು

॥ ಸಂಹಿತಾಪಾಠಃ ॥

ಯೋ ಅಪ್ಸು ಚಂದ್ರಮಾ ಇವ ಸೋಮಶ್ಚಮೂಷು ದದೃಶೇ ।
ಪಿಬೇದಸ್ಯ ತ್ವಮೀಶಿಷೇ ॥ ೮ ॥

॥ ಪದಪಾಠಃ ॥

ಯಃ । ಅಪ್ಽಸು । ಚಂದ್ರಮಾಃಽಇವ । ಸೋಮಃ । ಚಮೂಷು । ದದೃಶೇ ।
ಪಿಬ । ಇತ್ । ಅಸ್ಯ । ತ್ವಂ । ಈಶಿಷೇ ॥ ೮ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯೋ ಗೃಹೀತಃ ಸೋಮಶ್ಚಮೂಷು ಗ್ರಹೇಷು ದದೃಶೇ ಅಂತರ್ದೃಶ್ಯತೇ । ತತ್ರ ದೃಷ್ಟಾಂತಃ । ಚಂದ್ರಮಾ ಇವ ಯಥಾ ಚಂದ್ರಮಾ ಅಪ್ಸ್ವಂತರಿಕ್ಷೇ ನಿರ್ಮಲತಯಾ ದೃಶ್ಯತೇ ತದ್ವತ್। ಯದ್ವಾ । ಅಪ್ಸೂದಕೇಷು ಚಂದ್ರಮಾಃ ಪ್ರತಿಬಿಂಬತಯಾ ನಾನಾವಿಧೋ ದೃಶ್ಯತೇ ತಥಾಪ್ಯಗ್ರಹೇಷ್ವನೇಕರೂಪಃ ಸನ್ ದೃಶ್ಯತೇ । ತಮೇತಂ ಸೋಮಂ ಪಿಬೈವ । ಯತಸ್ತ್ವಮೇವೇಶಿಷೇ ಖಲು ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತ್ವಂ**—ನೀನು । **ಈಶಿಷೇ**—ಪ್ರಭುವಾಗಿದ್ದೀಯೆ । **ಅಪ್ಸು**—ನಿರ್ಮಲವಾದ ಅಂತರಿಕ್ಷದಲ್ಲಿ । **ಚಂದ್ರಮಾ ಇವ**—ಚಂದ್ರನು ಯಾವರೀತಿ ಪ್ರಕಾಶಿಸುವನೋ ಅದರಂತೆ ಸ್ವಚ್ಛವಾದ । [**ಅಥವಾ ಅಪ್ಸು**—ನೀರಿನಲ್ಲಿ । **ಚಂದ್ರಮಾ ಇವ**—ಪ್ರತಿಬಿಂಬಿತನಾದ ಚಂದ್ರನು ಕಾಣಿಸುವಂತೆ] । **ಚಮೂಷು**—ಗ್ರಹ (ಪಾನ) ಪಾತ್ರೆಗಳಲ್ಲಿ ತುಂಬಿರುವ । **ಯಃ ಸೋಮಃ**—ಯಾವ ಸೋಮವು । **ದದೃಶೇ**—ಕಂಗೊಳಿಸುವುದೋ । **ಅಸ್ಯ ಇತ್**—ಅಂತಹ ಈ ಸೋಮವನ್ನೇ । **ಪಿಬ**—ಪಾನಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಸಮಸ್ತಕ್ಕೂ ಪ್ರಭುವಾಗಿದ್ದೀಯೆ. ನಿರ್ಮಲವಾದ ಅಂತರಿಕ್ಷದಲ್ಲಿ ಚಂದ್ರನು ಯಾವರೀತಿ ಪ್ರಕಾಶಿಸುವನೋ ಅಥವಾ ಸ್ವಚ್ಛವಾದ ನೀರಿನಲ್ಲಿ ಚಂದ್ರನು ಯಾವರೀತಿ ಪ್ರತಿಬಿಂಬಿತನಾಗುವನೋ ಅಂತಹ ಸ್ವಚ್ಛವಾದ ಸೋಮರಸವು ಚಮೂ ಎಂಬ ಪಾನಪಾತ್ರೆಗಳಲ್ಲಿ ನಿನಗಾಗಿ ಸಿದ್ಧಪಡಿಸಿ ಇಟ್ಟಿದೆ. ಆ ಸೋಮವನ್ನೇ ಪಾನಮಾಡು.

English Translation

Whatever Soma, is seen in the vessels like the moon (reflected) in the waters, drink it,—you are the sovereign.

॥ ಸಂಹಿತಾಪಾಠಃ ॥

ಯಂ ತೇ ಶ್ಯೇನಃ ಪದಾಭರತ್ತಿರೋ ರಜಾಂಸ್ಯಸ್ಪೃತಂ ।
ಪಿಬೇದಸ್ಯ ತ್ವಮೀಶಿಷೇ ॥ ೯ ॥

॥ ಪದಪಾಠಃ ॥

ಯಂ । ತೇ । ಶ್ಯೇನಃ । ಪದಾ । ಆ । ಅಭರತ್ । ತಿರಃ । ರಜಾಂಸಿ । ಅಸ್ಪೃತಂ ।
ಪಿಬ । ಇತ್ । ಅಸ್ಯ । ತ್ವಂ । ಈಶಿಷೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಶ್ಯೇನಃ ಶಂಸನೀಯಃ ಪಕ್ಷೀ । ಪಕ್ಷಿರೂಪಧಾರಿಣೀ ಗಾಯತ್ರೀತ್ಯರ್ಥಃ । ಸ ಪಕ್ಷೀ ರಾಜಾಂಸ್ಯಂತರಿಕ್ಷಾದಿಲೋಕಸ್ಥಿತಾನ್ ಸೋಮಪಾಲಾನ್ ಗಂಧರ್ವಾಂಸ್ತಿರಸ್ತಿರಃಕುರ್ವನ್ನಸ್ಪೃತಂ ಶತ್ರುಭಿರಸ್ಪೃಷ್ಟಂ ಸಂತಂ ಯಂ ಸೋಮಂ ತೇ ತ್ವದರ್ಥಂ ಪದಾ ಪದ್ಭ್ಯಾಮಾಭರತ್ । ಪದೇತಿ ಸವನದ್ವಯಾಭಿಪ್ರಾಯಂ । ಸವನದ್ವಯ ಆಹೃತಂ ಸೋಮಂ ತ್ವಂ ಪಿಬ । ಗಾಯತ್ರೀ ಪಕ್ಷಿರೂಪಂ ಧಾರಯಿತ್ವಾ ಪದ್ಭ್ಯಾಂ ಸೋಮಮಾಹರದಿತ್ಯತ್ರಾರ್ಥೇ ಯಜುಬ್ರಾರ್ಹ್ಮಣಂ । ಪದ್ಭ್ಯಾಂ ದ್ವೇ ಸವನೇ ಸಮಗೃಹ್ಣಾನ್ಮುಖೇನೈಕಂ ತಸ್ಮಾದ್ದ್ವೇ ಸವನೇ ಶುಕ್ರವತೀ ಪ್ರಾತಃಸವನಂ ಚ ಮಾಧ್ಯಂದಿನಂ ಚ । ತೈ. ಸಂ ೬-೧-೬-೪ । ಇತಿ । ತಂ ಪಿಬೈವ । ತ್ವಮೇವ ತಸ್ಯೇಶ್ವರೋ ಭವಸಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ಶ್ಯೇನಃ—ಶ್ಯೇನಪಕ್ಷಿಯು । ರಜಾಂಸಿ—ಅಂತರಿಕ್ಷಾದಿಲೋಕಗಳಲ್ಲಿ ಸೋಮವನ್ನು ಕಾಯುತ್ತಿದ್ದ ಸೋಮಪಾಲಕರನ್ನೂ । ತಿರಃ—ತಿರಸ್ಕರಿಸಿ ಎಂದರೆ ಸೋಲಿಸಿ । ಅಸ್ಪೃತಂ—ಶತ್ರುಗಳಿಂದ

**ಸ್ಪರ್ಶಿಸಲ್ಪಡದಿರುವ** । **ಯಂ**—ಯಾವ ಸೋಮವನ್ನು । **ತೇ**—ನಿನಗರ್ಪಿಸುವುದಕ್ಕಾಗಿ । **ಪದಾ**—ತನ್ನ ಕಾಲುಗಳಿಂದ । **ಅಭರತ್**—ತಂದಿತೋ । **ಅಸ್ಯ ಇತ್**—ಅಂತಹ ಸೋಮರಸವನ್ನೇ ಪ್ರಾತಃಸವನಮಾಧ್ಯಂದಿನ ಸವನಗಳಲ್ಲಿ । **ಪಿಬ**—ಪಾನಮಾಡು । **ತ್ವಂ**—ನೀನು । **ಈಶಿಷೇ**—ಎಲ್ಲಕ್ಕೂ ಪ್ರಭುವಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಶ್ಯೇನಪಕ್ಷಿಯು ಸ್ವರ್ಗದಿಂದ ನಿನಗರ್ಪಿಸುವುದಕ್ಕಾಗಿ ಸೋಮವನ್ನು ತರುವಾಗ ಅಂತರಿಕ್ಷಾದಿ ಲೋಕಗಳಲ್ಲಿ ಅದರ ಕಾವಲಿಗಿದ್ದ ಗಂಧರ್ವಾದಿಗಳನ್ನು ಸೋಲಿಸಿ ಶತ್ರುಗಳಿಂದ ಸ್ಪರ್ಶವಾಗದಂತೆ ತನ್ನ ಎರಡು ಕಾಲುಗಳಿಂದ ಹಿಡಿದು ತಂದಿತು. ಅಂತಹ ಸೋಮವನ್ನೇ ಈ ಯಜ್ಞದ ಪ್ರಾತಃಸವನಮಾಧ್ಯಂದಿನಸವನಗಳಲ್ಲಿ ಪಾನಮಾಡು ನೀನು ಎಲ್ಲರಿಗೂ ಪ್ರಭುವಾಗಿದ್ದೀಯೆ.

## English Translation

Whatever Soma the hawk bore for you with its feet, having won it, till then inviolate, from the (guardians of the) upper worlds, drink it,-you are the sovereign

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಶ್ಯೇನಪಕ್ಷಿಯು ಸ್ವರ್ಗದಿಂದ ಸೋಮವನ್ನು ತರುವಾಗ ಅದರ ಪಾಲಕರಾಗಿದ್ದ ಗಂಧರ್ವರನ್ನು ಸೋಲಿಸಿ ಸೋಮಲತೆಗಳನ್ನು ತನ್ನ ಎರಡು ಕಾಲುಗಳಿಂದಲೂ ಕೊಕ್ಕಿನಿಂದಲೂ ಕಚ್ಚಿಕೊಂಡು ತಂದ ವಿಷಯದ ಪ್ರಸ್ತಾಪವಿದೆ ಗಾಯತ್ರೀಛಂದಸ್ಸೇ ಶ್ಯೇನಪಕ್ಷಿಯ ರೂಪದಿಂದ ಸ್ವರ್ಗದಲ್ಲಿದ್ದ ಸೋಮವನ್ನು ಭೂಮಿಗೆ ತಂದ ವಿಷಯವು ತೈತ್ತರೀಯಸಂಹಿತೆಯ **ಪದ್ಭ್ಯಾಂ ದ್ವೇ ಸವನೇ ಸಮಗೃಹ್ಣಾತ್** (ತೈ. ಸಂ. ೬-೧ ೬-೪) ಇತ್ಯಾದಿ ವಾಕ್ಯಗಳಲ್ಲಿ ವರ್ಣಿತವಾಗಿದೆಯೆಂದು ಭಾಷ್ಯಕಾರರು ಸೂಚಿಸಿದ್ದಾರೆ. ಆ ತೈತ್ತಿರೀಯಸಂಹಿತೆಯಲ್ಲಿ ಹೇಳಿರುವುದನ್ನೇ ವಿಸ್ತಾರವಾಗಿ ಇಲ್ಲಿ ವಿವರಿಸಲಾಗಿದೆ—

ಪೂರ್ವದಲ್ಲಿ ಸೋಮವು ದೇವಲೋಕದಲ್ಲಿ ಇದ್ದಿತಷ್ಟೆ. ಅದನ್ನು ಭೂಮಿಗೆ ತರಬೇಕೆಂದು ದೇವತೆಗಳು ಯೋಚಿಸಿ ಅದನ್ನು ತರಲು ಶಕ್ತರಾರು ಎಂದು ಆಲೋಚಿಸಿದಾಗ ಗಾಯತ್ರ್ಯಾದಿಛಂದಸ್ಸುಗಳೇ ಸೋಮವನ್ನು ತರಲು ಸಮರ್ಥವಾಗಿರುವವು ಎಂದು ನಿಶ್ಚಯಿಸಲಾಯಿತು.

> **ಜಗತ್ಯುದಪತಚ್ಚತುರ್ದಶಾಕ್ಷರಾ ಸತೀ ಸಾಽಪ್ರಾಪ್ಯ ನ್ಯವರ್ತತ ತಸ್ಯೈ ದ್ವೇ ಅಕ್ಷರೇ ಅಮೀಯೇತಾಗ್ಂ ಸಾ ಪಶುಭಿಶ್ಚ ದೀಕ್ಷಯಾ ಚಾಗಚ್ಛತ್ತಸ್ಮಾಜ್ಜಗತೀ ಛಂದಸಾಂ ಪಶವ್ಯತಮಾ ತಸ್ಮಾತ್ಪಶುಮಂತಂ ದೀಕ್ಷೋಪನಮತಿ ತ್ರಿಷ್ಟುಗುದಪತತ್ತ್ರಯೋದಶಾಕ್ಷರಾ ಸತೀ ಸಾಽಪ್ರಾಪ್ಯ ನ್ಯವರ್ತತ ತಸ್ಯೈ ದ್ವೇ ಅಕ್ಷರೇ ಅಮೀಯೇತಾಗ್ಂ ಸಾ ದಕ್ಷಿಣಾಭಿಶ್ಚ ತಪಸಾ ಚಾಗಚ್ಛತ್ತಸ್ಮಾತ್ತ್ರಿಷ್ಟುಭೋ ಲೋಕೇ ಮಾಧ್ಯಂದಿನೇ ಸವನೇ ದಕ್ಷಿಣಾ ನೀಯಂತ ಏತತ್ಖಲು ವಾವ ತಪ**

**ಇತ್ಯಾಹುರ್ಯಃ ಸ್ವಂ ದದಾತೀತಿ ಗಾಯತ್ರ್ಯುದಪತಚ್ಚತುರಕ್ಷರಾ ಸತ್ಯಜಯಾ ಜ್ಯೋತಿಷಾ ತಮಸ್ಯಾ ಅಜಾಭ್ಯರುಂಧತ ತದಜಾಯಾ ಅಜತ್ವಗ್‌ಂ ಸಾ ಸೋಮಂ ಚಾಹರಚ್ಚತ್ವಾರಿ ಚಾಕ್ಷರಾಣಿ ಸಾಷ್ಟಾಕ್ಷರಾ ಸಮಪದ್ಯತ ಬ್ರಹ್ಮವಾದಿನೋ ವದಂತಿ ಕಸ್ಮಾತ್ಸತ್ಯಾದ್ಗಾಯತ್ರೀ ಕನಿಷ್ಠಾ ಛಂದಸಾಗ್‌ಂ ಸತೀ ಯಜ್ಞಮುಖಂ ಪರೀಯಾಯೇತಿ ಯದೇವಾದಃ ಸೋಮಮಾಹರತ್ತಸ್ಮಾದ್ಯಜ್ಞಮುಖಂ ಪರ್ಯೈತ್ತಸ್ಮಾತ್ತೇಜಸ್ವಿನೀತಮಾ ಪದ್ಭ್ಯಾಂ ದ್ವೇ ಸವನೇ ಸಮಗೃಹ್ಣಾನ್ಮುಖೇನೈಕಂ ಯನ್ಮುಖೇನ ಸಮಗೃಹ್ಣಾತ್ತದಧಯತ್ತಸ್ಮಾದ್ದ್ವೇಸವನೇ ಶುಕ್ರವತೀ ಪ್ರಾತಃಸವನಂ ಚ ಮಾಧ್ಯಂದಿನಂ ಚ ತಸ್ಮಾತ್ತೃತೀಯಸವನನ್ನೃಜೀಷಮಭಿಷುಣ್ವಂತಿ ಧೀತಮಿವ ಹಿ ಮನ್ಯಂತೇ ಆತಿರಮವನಯತಿ ಸಶುಕ್ರತ್ವಾಯಾಥೋ ಸಂಭರತ್ಯೇವೈನತ್ ।**

(ತೈ. ಸಂ. ೬-೧-೬-೨, ૩, ೪, ೫)

ಆಗ ಮೊದಲು ಜಗತೀಛಂದಸ್ಸು ತಾನು ಸೋಮವನ್ನು ತರುತ್ತೇನೆಂದು ಹೊರಟು ಅಂತರಿಕ್ಷಕ್ಕೆ ನೆಗೆಯಿತು. ಆ ಕಾಲದಲ್ಲಿ ಜಗತೀಛಂದಸ್ಸಿನ ಒಂದೊಂದು ಪಾದಕ್ಕೂ ಹದಿನಾಲ್ಕು ಅಕ್ಷರಗಳಿದ್ದವು. ಆದರೆ ಸೋಮವನ್ನು ತರಲು ಸಾಧ್ಯವಾಗದೆ ಬಳಲಿ ಆಯಾಸದಿಂದ ಹಿಂದಕ್ಕೆ ಬಂದಿತು. ಆಗ ಅದು ಹದಿನಾಲ್ಕು ಅಕ್ಷರಗಳಲ್ಲಿ ಎರಡು ಅಕ್ಷರಗಳನ್ನು ಕಳೆದುಕೊಂಡಿತು. ಆದರೆ ಬರುವಾಗ ಅಲ್ಲಿದ್ದ ಯಜ್ಞಪಶುಗಳನ್ನೂ ದೀಕ್ಷಾಕ್ರಮವನ್ನೂ (ಯಜ್ಞದಲ್ಲಿ ದೀಕ್ಷೆವಹಿಸುವ ವಿಧಿ) ತನ್ನ ಜೊತೆಯಲ್ಲಿ ತಂದಿತು. ಆದುದರಿಂದ ಲೋಕದಲ್ಲಿ ಜಗತೀಛಂದಸ್ಸು ಬಹುಪಶುಗಳುಳ್ಳದ್ದೆಂದು ಪ್ರಸಿದ್ಧಿಯಾಯಿತು. ಮತ್ತು ಪಶುಸಂಪತ್ತಿನಿಂದ ಕೂಡಿದ ಯಜಮಾನನನ್ನು ದೀಕ್ಷೆಯು ಅನುಸರಿಸಿಯೇ ಇರುವುದು. ಅನಂತರ ತ್ರಿಷ್ಟುಪ್‌ಛಂದಸ್ಸು ತಾನು ಸೋಮವನ್ನು ತರುತ್ತೇನೆಂದು ಅಂತರಿಕ್ಷಕ್ಕೆ ನೆಗೆಯಿತು. ಆಗ ತ್ರಿಷ್ಟುಪ್‌ಛಂದಸ್ಸಿನ ಒಂದೊಂದು ಪಾದಕ್ಕೂ ಹದಿಮೂರು ಅಕ್ಷರಗಳಿದ್ದುವು. ತ್ರಿಷ್ಟುಪ್ ಛಂದಸ್ಸೂ ಸಹ ಸೋಮವನ್ನು ತರಲಾರದೆ ಬಳಲಿ ಬೆಂಡಾಗಿ ತನ್ನಲ್ಲಿದ್ದ ಹದಿಮೂರು ಅಕ್ಷರದಲ್ಲಿ ಎರಡಕ್ಷರಗಳನ್ನು ಕಳೆದುಕೊಂಡು ಹಿಂತಿರುಗಿ ಬಂದಿತು. ಬರುವಾಗ ಯಜ್ಞದಕ್ಷಿಣೆಯನ್ನೂ ತಪಸ್ಸನ್ನೂ ತನ್ನ ಜೊತೆಯಲ್ಲಿ ತಂದಿತು. ಆದುದರಿಂದ ಯಜ್ಞಮಾಡುವಾಗ ಮಾಧ್ಯಂದಿನಸವನದಲ್ಲಿ (ಋತ್ವಿಗ್ಜನರಿಗೆ) ದಕ್ಷಿಣೆಗಳನ್ನು ತಂದುಕೊಡುವರು. ತನ್ನಲ್ಲಿರುವ ವಸ್ತುವನ್ನು ದಾನಮಾಡುವುದೇ ತಪಸ್ಸೆಂದು ಹೇಳಲ್ಪಡುವುದು. ಅನಂತರ ಗಾಯತ್ರೀಛಂದಸ್ಸು ತಾನು ಸೋಮವನ್ನು ತರುತ್ತೇನೆಂದು ಹೊರಟು ಅಂತರಿಕ್ಷಕ್ಕೆ ಶ್ಯೇನಪಕ್ಷಿರೂಪದಿಂದ ಹಾರಿತು. ಆಗ ಗಾಯತ್ರೀಛಂದಸ್ಸಿಗೆ ಒಂದೊಂದು ಪಾದಕ್ಕೆ ನಾಲ್ಕು ಅಕ್ಷರಗಳಿದ್ದವು ಹೊರಡುವಾಗ ಗಾಯತ್ರಿಯು ತನ್ನ ಜೊತೆಯಲ್ಲಿ ಸಹಾಯಕ್ಕಾಗಿ ಪ್ರಕಾಶಮಾನವಾದ ಒಂದು ಹೆಣ್ಣು ಆಡನ್ನು ತೆಗೆದುಕೊಂಡುಹೋಯಿತು. ಈ ಆಡು ಸೋಮವನ್ನು ತರುವಾಗ ಗಾಯತ್ರಿಗೆ ಸಹಾಯಮಾಡಿತು ಆದುದರಿಂದ ಆಡಿಗೆ ಅಜಾ ಎಂಬ ಹೆಸರು ಪ್ರಸಿದ್ಧವಾಯಿತು ಅನಂತರ ಗಾಯತ್ರಿಯು ಸ್ವರ್ಗದಲ್ಲಿದ್ದ ಸೋಮವನ್ನೂ, ಜಗತೀ ಮತ್ತು ತ್ರಿಷ್ಟುಪ್‌ಛಂದಸ್ಸುಗಳು ಕಳೆದುಕೊಂಡಿದ್ದ ನಾಲ್ಕು ಅಕ್ಷರಗಳನ್ನೂ ಹಿಂದಕ್ಕೆ ತಂದಿತು. ತಾನು ಹಿಂದಕ್ಕೆ ತಂದ ನಾಲ್ಕು ಅಕ್ಷರಗಳೂ ತನಗೆ ಹಿಂದೆ ಇದ್ದ ನಾಲ್ಕು ಅಕ್ಷರಗಳೂ ಸೇರಿ ಗಾಯತ್ರಿಯು ಪ್ರತಿಯೊಂದು ಪಾದಕ್ಕೂ ಎಂಟು ಅಕ್ಷರಗಳಾದವು (ಜಗತೀಛಂದಸ್ಸಿಗೆ ಹನ್ನೆರಡು ಅಕ್ಷರಗಳೂ ತ್ರಿಷ್ಟುಪ್‌ಛಂದಸ್ಸಿಗೆ ೧೧ ಅಕ್ಷರಗಳೂ ಆದವು) ಬ್ರಹ್ಮವಾದಿಗಳು ಹೇಳುವಂತೆ ಇಲ್ಲಿ ಒಂದು ಸಂಶಯವು ತಲೆದೋರುವುದು. ಗಾಯತ್ರೀಛಂದಸ್ಸು ಎಲ್ಲಾ ಛಂದಸ್ಸುಗಳಿಗಿಂತಲೂ ಬಹಳ ಚಿಕ್ಕದಾಗಿದ್ದರೂ ಯಜ್ಞದಲ್ಲಿ ಹೇಗೆ ಪ್ರಾಮುಖ್ಯತೆ

ಯನ್ನು ಪಡೆಯಿತು ? ಎಂದರೆ, ಈ ಗಾಯತ್ರಿಯು ಸೋಮವನ್ನು ತಂದಿತು ಆದುದರಿಂದ ಯಜ್ಞಕರ್ಮಗಳಲ್ಲಿ ಗಾಯತ್ರೀಗೆ ಪ್ರಾಧಾನ್ಯತೆಯು ಉಂಟಾಗಿರುವುದು ಮತ್ತು ಇದು ಬಹಳ ತೇಜಸ್ಸಿನಿಂದಲೂ ಬೆಳಗುತ್ತಿರುವುದು. ಈ ಗಾಯತ್ರಿಯು ಸ್ವರ್ಗದಿಂದ ಸೋಮವನ್ನು ತರುವಾಗ ಶ್ಯೇನಪಕ್ಷಿಯ ರೂಪವನ್ನು ಧರಿಸಿ ತನ್ನ ಎರಡು ಪಾದಗಳಿಂದ (ಗಾಯತ್ರಿಯ ಎಂಟು ಅಕ್ಷರಗಳ ಮೂರು ಪಾದಗಳಲ್ಲಿ ಎರಡು ಕಾಲುಗಳೆಂದೂ ಮೂರನೆಯದು ಮುಖವೆಂದೂ ಹೇಳಲ್ಪಡುವುದು) ಪ್ರಾತಃಸವನ ಮತ್ತು ಮಾಧ್ಯಂದಿನಸವನ ಎಂಬ ಎರಡು ವಿಧವಾದ ಸವನಗಳನ್ನು ಹಿಡಿದುಕೊಂಡೂ, ಮುಖದಿಂದ (ಕೊಕ್ಕಿನಿಂದ) ಮೂರನೆಯದಾದ ತೃತೀಯಸವನವನ್ನು ಕಚ್ಚಿಕೊಂಡೂ ತಂದಿತು. ಕಾಲುಗಳಲ್ಲಿ ಹಿಡಿದಿದ್ದ ಪ್ರಾತಸ್ಸವನ ಮತ್ತು ಮಾಧ್ಯಂದಿನ ಸವನಗಳು ಏನೂ ವ್ಯತ್ಯಾಸವನ್ನು ಹೊಂದದೆ ಹಾಗೆಯೇ ಇದ್ದುದರಿಂದ ಆ ಎರಡು ಸವನಗಳಲ್ಲಿಯೂ ಸೋಮಲತೆಗಳನ್ನು ಜಜ್ಜಿ ಪ್ರಕಾಶಮಾನವಾದ ಮತ್ತು ಶುದ್ಧವಾದ ರಸವನ್ನು ಹಿಂಡಿ ತೆಗೆಯುವರು. ಆದರೆ ಕೊಕ್ಕಿನಿಂದ ತೃತೀಯಸವನವನ್ನು ತರುವಾಗ ಆ ಸೋಮಲತೆಯನ್ನು ಸ್ವಲ್ಪಮಟ್ಟಿಗೆ ಕಚ್ಚಿ ರಸವನ್ನು ಹಿಂಡಿ ಪಾನಮಾಡಿತೆಂದು ಭಾವಿಸುವುದರಿಂದ ತೃತೀಯಸವನ ಕಾಲದಲ್ಲಿ ಹೊಸ ಸೋಮಲತೆಗಳನ್ನು ಉಪಯೋಗಿಸದೆ ಪ್ರಾತಃಸ್ಸವನ ಮತ್ತು ಮಾಧ್ಯಂದಿನಸವನಗಳಲ್ಲಿ ರಸವನ್ನು ಒಂದಾವರ್ತಿ ಹಿಂಡಿ ತೆಗೆದು ಉಳಿದ ಸಿಪ್ಪೆಯಂತಿರುವ (ಋಜೀಷ) ಜಜ್ಜಿದ ಲತೆಗಳಿಂದಲೇ ಅಳಿದುಳಿದಿರುವ ರಸವನ್ನು ಮತ್ತೊಂದಾವರ್ತಿ ಚೆನ್ನಾಗಿ ಹಿಂಡಿ ತೆಗೆಯುವರು. ಹೀಗೆ ತೆಗೆಯುವ ರಸವು ಹೆಚ್ಚಾಗಿರುವುದಿಲ್ಲವಾದ್ದರಿಂದ ಇದರ ಜೊತೆಗೆ ಆಶಿರ ದ್ರವ್ಯಗಳನ್ನು (ಹಾಲು, ಮೊಸರು, ಹಿಟ್ಟು) ಸೇರಿಸಿ ಪಾನಯೋಗ್ಯವಾಗುವಂತೆ ಮಾಡುವರು

## ಎಂಭತ್ತಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ದೇವಾನಾಮಿತಿ ನವರ್ಚಂ ತೃತೀಯಂ ಸೂಕ್ತಂ ಕಾಣ್ವಸ್ಯ ಕುಸೀದಿನ ಆರ್ಷಂ ಗಾಯತ್ರಂ ವೈಶ್ವದೇವಂ । ತಥಾ ಚಾನುಕ್ರಮ್ಯತೇ । ದೇವಾನಾಂ ವೈಶ್ವದೇವಮಿತಿ ॥ ದಶರಾತ್ರೇಽಷ್ಟಮೇಽಹನಿ ವೈಶ್ವದೇವಶಸ್ತ್ರ ಇದಂ ಸೂಕ್ತಂ ವೈಶ್ವದೇವನಿವಿದ್ಧಾನಂ । ಸೂತ್ರಿತಂ ಚ । ದೇವಾನಾಮಿದವ ಇತಿ ವೈಶ್ವದೇವಂ । ಆ. ೮-೧೮ । ಇತಿ ॥

ಅನುವಾದವು—**ದೇವಾನಾಂ** ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಕಣ್ವಗೋತ್ರೋದ್ಭವನಾದ ಕುಸೀದೀ ಎಂಬುವನು ಋಷಿಯು ; ವಿಶ್ವೇದೇವತೆಗಳು ದೇವತೆಯು ; ಗಾಯತ್ರೀಛಂದಸ್ಸು, ಅನುಕ್ರಮಣಿಕೆಯಲ್ಲಿ-**ದೇವಾನಾಂ ವೈಶ್ವದೇವಂ** ಎಂದು ಹೇಳಿರುವುದು. ದಶರಾತ್ರವೆಂಬ ಯಾಗದ ಎಂಟನೇ ದಿನದಲ್ಲಿ ವೈಶ್ವದೇವಶಸ್ತ್ರಮಂತ್ರಪಠನಕಾಲದಲ್ಲಿ ಈ ಸೂಕ್ತವನ್ನು ವೈಶ್ವದೇವನಿವಿದ್ಧಾನಸೂಕ್ತವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ದೇವಾನಾಮಿದವ ಇತಿ ವೈಶ್ವದೇವಂ** ಎಂಬ ಸೂತ್ರದಿಂದ (ಆ. ೮-೧೦) ವಿವೃತವಾಗಿರುವುದು

## ಸೂಕ್ತ—೮೩

ಮಂಡಲ—೮ ॥ ಅನುವಾಕ—೯ ॥ ಸೂಕ್ತ—೮೩ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೩, ೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಕುಸೀದೀ ಕಾಣ್ವಃ ॥
ದೇವತಾ—ವಿಶ್ವೇದೇವಾಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ದೇವಾನಾಮಿದವೋ ಮಹತ್ತದಾ ವೃಣೀಮಹೇ ವಯಂ ।**
**ವೃಷ್ಣಾಮಸ್ಮಭ್ಯಮೂತಯೇ ॥ ೧ ॥**

॥ ಪದಪಾಠಃ ॥

**ದೇವಾನಾಂ । ಇತ್ । ಅವಃ । ಮಹತ್ । ತತ್ । ಆ । ವೃಣೀಮಹೇ । ವಯಂ ।**
**ವೃಷ್ಣಾಂ । ಅಸ್ಮಭ್ಯಂ । ಊತಯೇ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ದೇವಾಃ ದೇವಾನಾಂ । ಸ್ವತೇಜಸಾ ಸರ್ವತೋ ದೀಪ್ಯಮಾನಾನಾಂ । ಇದೇವಾರ್ಥೇ । ಯುಷ್ಮಾಕಮೇವ ಮಹದ್ವ್ಯಾಪ್ತಂ ಮಂಹನೀಯಂ ವಾವಃ ಪಾಲನಂ ಯದ್ವಿದ್ಯತೇ ತದ್ವೃಷ್ಣಾಂ ಕಾಮಾನಾಂ ವರ್ಷಿತ್ರೄಣಾಂ ಯುಷ್ಮಾಕಂ ಸ್ವಭೂತಂ ತದ್ರಕ್ಷಣಂ ಯಜಮಾನಾ ವಯಮಾ ವೃಣೀಮಹೇ। ಸಂಮತಾತ್ಸಂಭಜಾಮಹೇ । ಕಿಮರ್ಥಂ । ಅಸ್ಮಭ್ಯಮೂತಯೇ । ಪೂರ್ವಮಸ್ಮಭ್ಯಮಸ್ಮದರ್ಥಮಿತಿ ಸಾಧಾರಣ್ಯೇನೋಕ್ತ್ವಾ ತದ್ವಿಶಿನಷ್ಟಿ । ಊತಯ ಇತಿ । ಅಸ್ಮಾಕಂ ಪಾಲನಾಯೇತಿ ॥**

॥ ಪ್ರತಿಪದಾರ್ಥ ॥

(ಎಲೈ ದೇವತೆಗಳೇ) **ದೇವಾನಾಂ**—ದೇವತೆಗಳಾದ ನಿಮ್ಮ । **ಮಹತ್**—ವ್ಯಾಪ್ತವಾದ (ನಮ್ಮ ವಿಷಯವಾದ) । **ಅವಃ**—ಯಾವ ರಕ್ಷಣೆ ಇರುವುದೋ । **ವೃಷ್ಣಾಂ**—ಕಾಮಾರ್ಥಪ್ರದರಾದ ನಿಮ್ಮ । **ತತ್**—ಆ ರಕ್ಷಣೆಯನ್ನು । **ವಯಂ**—ಯಜಮಾನರಾದ ನಾವು । **ಅಸ್ಮಭ್ಯಂ**—ನಮ್ಮ । **ಊತಯೇ**—ರಕ್ಷಣೆಗಾಗಿ । **ಆ ವೃಣೀಮಹೇ**—ಪ್ರಾರ್ಥಿಸುತ್ತೇವೆ.

॥ ಭಾವಾರ್ಥ ॥

ಎಲೈ ದೇವತೆಗಳೇ, ಕಾಮಾರ್ಥಪ್ರದರಾದ ನೀವು ನಮ್ಮ ವಿಷಯದಲ್ಲಿ ಯಾವ ರಕ್ಷಣೆಯನ್ನು ಕೊಡಲಿಚ್ಛಿಸುವರೋ ಅಂತಹ ಮಹತ್ಸ್ವರೂಪವಾದ ಅಥವಾ ಸರ್ವವಿಷಯಗಳಲ್ಲಿಯೂ ವ್ಯಾಪ್ತವಾದ ರಕ್ಷಣೆಗಾಗಿ ಯಜಮಾನರಾದ ನಾವು ನಿಮ್ಮನ್ನು ಪ್ರಾರ್ಥಿಸಿ ಯಾಚಿಸುತ್ತೇವೆ.

## English Translation

We solicit that mighty protection of the desire-raining deities in our own behalf, for our own help.

॥ ಸಂಹಿತಾಪಾಠಃ ॥

ತೇ ನಃ ಸಂತು ಯುಜಃ ಸದಾ ವರುಣೋ ಮಿತ್ರೋ ಅರ್ಯಮಾ।

ವೃಧಾಸಶ್ಚ ಪ್ರಚೇತಸಃ ॥ ೨ ॥

॥ ಪದಪಾಠಃ ॥

ತೇ । ನಃ । ಸಂತು । ಯುಜಃ । ಸದಾ । ವರುಣಃ । ಮಿತ್ರಃ । ಅರ್ಯಮಾ ।

ವೃಧಾಸಃ । ಚ । ಪ್ರಽಚೇತಸಃ ॥ ೨ ॥

॥ ಸಾಯಣಭಾಷ್ಯಂ ॥

ತೇ ದೇವಾ ವರುಣಃ ಶತ್ರೂಣಾಂ ನಿವಾರಕೋ ಮಿತ್ರಃ ಸರ್ವೇಷಾಂ ಮಿತ್ರಭೂತೋಽರ್ಯಮಾ ಸತತಂ ಗಚ್ಛನ್ ಏತನ್ನಾಮಕಾಸ್ತೇ ತ್ರಯೋ ದೇವಾಃ ಸದಾ ಸರ್ವದಾ ಸರ್ವೇಷ್ವಹಃಸು ನೋಽಸ್ಮಾಕಂ ಯುಜಃ ಸಹಾಯಾಃ ಸಂತು । ಭವಂತು । ಅಗ್ನಿಹೋತ್ರಾದಿಕರ್ಮಣೀಂದ್ರಾದಿದೇವಾಃ ಸಹಾಗಮನಾದಿ-ಯಜ್ಞಪರಿಸಮಾಪನಾಂತೇಷು ಸಾಹಾಯ್ಯಂ ಕುರ್ವಂತ್ವಿತ್ಯರ್ಥಃ । ತತಃ ಪ್ರಚೇತಸಃ ಪ್ರಕೃಷ್ಟಜ್ಞಾನಾಃ । ಯದ್ವಾ । ಚೇತಃ । ಸ್ತೋತ್ರಂ । ಶೋಭನಸ್ತುತಯಃ । ತೇ ದೇವಾ ವೃಧಾಸೋ ವರ್ಧಕಾಶ್ಚಾಸ್ಮಾಕಂ ಧನಾದಿದಾನೇನ ವರ್ಧಯಿತಾರಶ್ಚ ಸಂತು ॥

॥ ಪ್ರತಿಪದಾರ್ಥ ॥

**ತೇ**—ಆ ದೇವತೆಗಳು ಎಂದರೆ । **ವರುಣಃ**—ಶತ್ರುನಿವಾರಕನಾದ ವರುಣನೂ । **ಮಿತ್ರಃ**—ಸರ್ವರ ವಿಷಯದಲ್ಲಿಯೂ ಸ್ನೇಹಿತನಂತೆ ಹಿತಕಾರಿಯಾದ ಮಿತ್ರನೂ । **ಅರ್ಯಮಾ**—ಸದಾಕಾಲದಲ್ಲಿಯೂ ಗಮನವುಳ್ಳ ಅರ್ಯಮನೂ ಈ ಮೂವರು ದೇವತೆಗಳೂ । **ಸದಾ**—ಸರ್ವಕಾಲದಲ್ಲಿಯೂ । **ನಃ**—ನಮಗೆ । **ಯುಜಃ**—ಸಹಾಯಕವಾಗಿ । **ಸಂತು**—ಇರಲಿ ॥ **ಪ್ರಚೇತಸಃ**—ಉತ್ತಮವಾದ ಜ್ಞಾನವುಳ್ಳ ಆ ದೇವತೆಗಳು । **ವೃಧಾಸಃ**—ನಮಗೆ ಅಭಿವೃದ್ಧಿಯನ್ನುಂಟುಮಾಡುವವರಾಗಿರಲಿ । **ಅಥವಾ** [**ಪ್ರಚೇತಸಃ**—ನಾವು ಮಾಡುವ ಉತ್ತಮವಾದ ಸ್ತುತಿಗಳು । **ವೃಧಾಸಃ ಚ**—ನಮಗೆ ವೃದ್ಧಿಕಾರಕವಾಗಿರಲಿ].

॥ ಭಾವಾರ್ಥ ॥

ಆ ದೇವತೆಗಳು ಎಂದರೆ, ಶತ್ರುನಾಶಕನಾದ ವರುಣ, ಸರ್ವರಿಗೂ ಸ್ನೇಹಿತನಾದ ಮಿತ್ರ, ಸದಾಗಮನವುಳ್ಳ ಅರ್ಯಮಾ ಎಂಬ ಈ ಮೂವರು ದೇವತೆಗಳೂ ಸದಾ ನಮಗೆ ಸಹಾಯಕರಾಗಿರಲಿ. ಉತ್ತಮವಾದ ಜ್ಞಾನಿಗಳಾದ ಆ ದೇವತೆಗಳು ನಮಗೆ ಅಭಿವೃದ್ಧಿಯನ್ನುಂಟುಮಾಡಲಿ.

English Translation

May those (deities) Varuna, Mitra, and Aryaman, be ever our allies and supremely wise helpers.

॥ ಸಂಹಿತಾಪಾಠಃ ॥

ಅತಿ ನೋ ವಿಷ್ಪಿತಾ ಪುರು ನೌಭಿರಪೋ ನ ಪರ್ಷಥ ।

ಯೂಯಮೃತಸ್ಯ ರಥ್ಯಃ ॥ ೩ ॥

॥ ಪದಪಾಠಃ ॥

ಅತಿ । ನಃ । ವಿಷ್ಪಿತಾ । ಪುರು । ನೌಭಿಃ । ಅಪಃ । ನ । ಪರ್ಷಥ ।

ಯೂಯಂ । ಋತಸ್ಯ । ರಥ್ಯಃ ॥ ೩ ॥

॥ ಸಾಯಣಭಾಷ್ಯಂ ॥

ಋತಸ್ಯ ಸತ್ಯಸ್ಯ ಯಜ್ಞಸ್ಯ ವಾ ಹೇ ರಥ್ಯೋ ನೇತಾರೋ ದೇವಾಃ । ಯದ್ವಾ । ಋತಸ್ಯೇತಿ ಸಂಬಂಧಿ .... .. ತ್ವಾತ್ಕರ್ತರ್ಯುಕ್ಷ್ಯತೇ । ಯಜ್ಞಸ್ಯ ಸಾಧಕಾ ಹೇ ರಥ್ಯೋ ರಥವಂತೋ ದೇವಾಃ ವಿಷ್ಪಿತಾ ವಿಷ್ಪಿತಾನಿ ವಿಪ್ರಾಪ್ತಾನಿ ವಿತತಾನಿ ಕುರು ॥ ಸುಪೋ ಲುಕ್ ॥ ಪುರೂಣಿ ಬಹೂನಿ ಶತ್ರುಬಲಾನಿ ಕರ್ಮಾಣಿ ನೋಽಸ್ಮಾನತಿ ಪರ್ಷಥ । ಪಾರಂ ಸಮಾಪ್ತಿಂ ರಕ್ಷಣೈರ್ಗಮಯತ । ತತ್ರ ದೃಷ್ಟಾಂತಃ । ನೌಭಿರಪೋ ನ । ಯಥಾ ನಾವಿಕೋಽಪ ಉದಕಾನಿ ನೌಭಿರ್ಜನಾಂಸ್ತೀರಂ ಪ್ರತಿ ಪ್ರಾಪಯತಿ ತದ್ವತ್ ॥

॥ ಪ್ರತಿಪದಾರ್ಥ ॥

**ಋತಸ್ಯ**—ಸತ್ಯಕ್ಕೆ ಅಥವಾ ಯಜ್ಞಕ್ಕೆ । **ರಥ್ಯಃ**—ನೇತೃಗಳಾದ ಎಲೈ ದೇವತೆಗಳೇ । [**ಅಥವಾ ಋತಸ್ಯ**—ಯಜ್ಞಕ್ಕೆ ಸಾಧನಭೂತರಾದ । **ರಥ್ಯಃ**—ರಥಸಂಚಾರಿಗಳಾದ ಎಲೈ ದೇವತೆಗಳೇ] । **ಯೂಯಂ**—ನೀವು । **ಅಪಃ**—ಆಳವಾದ ನೀರನ್ನು । **ನೌಭಿಃ ನ**—ನಾವೆಗಳಿಂದ ದಾಟುವಂತೆ । **ವಿಷ್ಪಿತಾ**—ಸುತ್ತಲೂ ಹರಡಿರುವ । **ಪುರು**—ಬಹುಸಂಖ್ಯಾಕರಾದ ಶತ್ರುಗಳ ಮಧ್ಯದಿಂದ ಅಥವಾ ದುಷ್ಕರ್ಮಗಳಿಂದ । **ನಃ**—ನಮ್ಮನ್ನು । **ಅತಿ ಪರ್ಷಥ**—ದಾಟಿಸಿ

॥ ಭಾವಾರ್ಥ ॥

ಯಜ್ಞಕ್ಕೆ ಮಾರ್ಗದರ್ಶಕರೂ, ರಥಸಂಚಾರಿಗಳೂ ಆದ ಎಲೈ ದೇವತೆಗಳೇ, ಆಳವಾದ ನೀರನ್ನು ನಾವೆಗಳಿಂದ ದಾಟುವಂತೆ ಸುತ್ತಲೂ ಇರುವ ಶತ್ರುಗಳಿಂದ ಅಥವಾ ದುಷ್ಕರ್ಮಗಳಿಂದ ನೀವು ನಮ್ಮನ್ನು ದಾಟಿಸಿರಿ.

English Translation

Charioteers of the sacrifice, you conduct us through the many wide-spread (forces of our enemies) as in ships across the waters.

॥ ಸಂಹಿತಾಪಾಠಃ ॥

ವಾಮಂ ನೋ ಅಸ್ತ್ವರ್ಯಮನ್ವಾಮಂ ವರುಣ ಶಂಸ್ಯಂ ।
ವಾಮಂ ಹ್ಯಾವೃಣೀಮಹೇ ॥ ೪ ॥

॥ ಪದಪಾಠಃ ॥

ವಾಮಂ । ನಃ । ಅಸ್ತು । ಅರ್ಯಮನ್ । ವಾಮಂ । ವರುಣ । ಶಂಸ್ಯಂ ।
ವಾಮಂ । ಹಿ । ಆऽವೃಣೀಮಹೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅರ್ಯಮನ್ ದೇವ ವಾಮಂ ವನನೀಯಂ ಸಂಭಜನೀಯಂ ಧನಂ ನೋऽಸ್ಮಾಕಮಸ್ತು। ಭವತು । ಹೇ ವರುಣ ಶಂಸ್ಯಂ ಸರ್ವಂ ಶಂಸನೀಯಂ ಸ್ತುತ್ಯಂ ವಾಮಂ ಧನಮಸ್ಮಾಕಮಸ್ತು । ಕುತಃ । ಹಿಶಬ್ದೋ ಹೇತೌ । ಯಸ್ಮಾತ್ಕಾರಣಾದ್ವಯಂ ವಾಮಂ ಧನಂ ಯುಷ್ಮಾನಾವೃಣೀಮಹೇ । ಯಾಚಾಮಹ ಇತ್ಯರ್ಥಃ । ತಸ್ಮಾನ್ನೋऽಸ್ತ್ವಿತ್ಯಾಶಾಸ್ತೇ ॥

॥ ಪ್ರತಿಪದಾರ್ಥ ॥

**ಹೇ ಅರ್ಯಮನ್**—ಎಲೈ ಅರ್ಯಮದೇವನೇ । **ವಾಮಂ**— ಸರ್ವರಿಂದಲೂ ಅಪೇಕ್ಷಿಸಲ್ಪಡುವ ಧನವು । **ನಃ**—ನಮಗೆ । **ಅಸ್ತು**—ಇರಲಿ । **ಹೇ ವರುಣ**—ಎಲೈ ವರುಣದೇವನೇ । **ಶಂಸ್ಯಂ**—ಪ್ರಶಸ್ತವಾದ ಅಥವಾ ಸ್ತುತ್ಯವಾದ । **ವಾಮಂ**—ಧನವು ನಮಗೆ ಇರಲಿ । **ಹಿ**—ಏಕೆಂದರೆ (ನಾವು) । **ವಾಮಂ**—ಧನವನ್ನು । **ಆವೃಣೀಮಹೇ**—ನಿಮ್ಮಿಂದ ಯಾಚಿಸುತ್ತೇವೆ.

॥ ಭಾವಾರ್ಥ ॥

ಎಲೈ ಅರ್ಯಮದೇವನೇ, ಸರ್ವರೂ ಅಪೇಕ್ಷಿಸುವ ಧನವು ನಮಗಿರಲಿ. ಎಲೈ ವರುಣನೇ, ಪ್ರಶಸ್ತವಾದ ಧನವೂ ನಮಗಿರಲಿ. ಏಕೆಂದರೆ ನಾವು ಧನವನ್ನು ಕೊಡಬೇಕೆಂದು ನಿಮ್ಮನ್ನು ಪ್ರಾರ್ಥಿಸುತ್ತೇವೆ.

## English Translation

Be wealth ours, Aryaman,—wealth worthy to be praised, Varuna; it is wealth which we ask

॥ ಸಂಹಿತಾಪಾಠಃ ॥

ವಾಮಸ್ಯ ಹಿ ಪ್ರಚೇತಸ ಈಶಾನಾಸೋ ರಿಶಾದಸಃ ।
ನೇಮಾದಿತ್ಯಾ ಅಘಸ್ಯ ಯತ್ ॥ ೫ ॥

॥ ಪದಪಾಠಃ ॥

ವಾಮಸ್ಯ । ಹಿ । ಪ್ರಽಚೇತಸಃ । ಈಶಾನಾಸಃ । ರಿಶಾದಸಃ ।
ನ । ಈಂ । ಆದಿತ್ಯಾಃ । ಅಘಸ್ಯ । ಯತ್ ॥ ೫ ॥

॥ ಸಾಯಣಭಾಷ್ಯಂ ॥

ಹೇ ಪ್ರಚೇತಸಃ ಪ್ರಕೃಷ್ಟಜ್ಞಾನಾಃ ಶೋಭನಸ್ತುತಯೋ ವಾ ಹೇ ರಿಶಾದಸೋ ರಿಶತಾಂ ಹಿಂಸತಾಂ ಶತ್ರೂಣಾಮಸಿತಾರಃ ಕ್ಷೇಪ್ತಾರೋ ದೇವಾಃ ಯೂಯಂ ವಾಮಸ್ಯ ವನನೀಯಸ್ಯ ಧನಸ್ಯೇಶಾನಾಸ ಈಶಾನಾಃ । ಹಿರವಧಾರಣೇ । ಈಶಾನಾ ಏವ ಸ್ವಾಮಿನ ಏವ ಭವಥ । ತಸ್ಮಾದ್ಯುಷ್ಮಾನ್ಯಾಚಾಮ ಇತ್ಯರ್ಥಃ ॥ ಈಶಾನಾಃ । ಈಶ ಐಶ್ವರ್ಯೇ । ಅನುದಾತ್ತೇತ್ । ತಾಸ್ಯನುದಾತ್ತೇದಿತಿ ಸ್ವರೇಣಾದ್ಯುದಾತ್ತತಾ ಭವತಿ । ನ ಸಂಬುದ್ಧಿಃ ॥ ತತೋ ಹೇ ಆದಿತ್ಯಾ ಅದಿತೇಃ ಪುತ್ರಾ ದೇವಾಃ ಈಮೇನಂ ಯಾಚಮಾನಂ ಮಾಂ ತದ್ಧನಂ ಪ್ರಾಪ್ನೋತು ಯದ್ಧನಮಘಸ್ಯ ಪಾಪಸ್ಯ ಸಂಬಂಧಿ ವಿದ್ಯತೇ ॥

॥ ಪ್ರತಿಪದಾರ್ಥ ॥

**ಪ್ರಚೇತಸಃ**—ಉತ್ತಮವಾದ ಜ್ಞಾನವುಳ್ಳವರೂ ಅಥವಾ ಉತ್ತಮವಾದ ಸ್ತುತಿಗೆ ಪಾತ್ರರೂ । **ರಿಶಾದಸಃ**—ಶತ್ರುಹಿಂಸಕರೂ ಆದ ಎಲೈ ದೇವತೆಗಳೇ ನೀವು । **ವಾಮಸ್ಯ**—ಸರ್ವರೂ ಅಪೇಕ್ಷಿಸುವ ಧನಕ್ಕೆ । **ಈಶಾನಾಸಃ**—ಒಡೆಯರಾಗಿಯೇ ಇದ್ದೀರಿ । **ಆದಿತ್ಯಾಸಃ**—ಅದಿತಿಪುತ್ರರಾದ ಎಲೈ ದೇವತೆಗಳೇ । **ಈಂ**—ನಿಮ್ಮನ್ನು ಯಾಚಿಸುತ್ತಿರುವ ನನ್ನನ್ನು । **ಅಘಸ್ಯ**—ಪಾಪಸಂಬಂಧವಾದ । **ಯತ್**—ಯಾವ ಧನವಿರುವುದೋ ಅದು । **ನ**—ನನಗೆ ಲಭಿಸದಿರಲಿ.

॥ ಭಾವಾರ್ಥ ॥

ಉತ್ತಮ ಜ್ಞಾನಿಗಳೂ ಅಥವಾ ಉತ್ತಮಸ್ತುತಿಗೆ ಪಾತ್ರರೂ ಶತ್ರುಹಿಂಸಕರೂ ಆದ ಎಲೈ ದೇವತೆಗಳೇ, ಸರ್ವರೂ ಅಪೇಕ್ಷಿಸುವ ಧನಕ್ಕೆ ನೀವೇ ಒಡೆಯರಾಗಿದ್ದೀರಿ. ಎಲೈ ಅದಿತಿಪುತ್ರರಾದ ದೇವತೆಗಳೇ, ನಿಮ್ಮನ್ನು ಯಾಚಿಸುತ್ತಿರುವ ನನಗೆ ಪಾಪಸಂಬಂಧವಾದ (ಅನ್ಯಾಯದಿಂದ ಲಬ್ಧವಾದ) ಯಾವ ಧನವೂ ಲಭಿಸದಿರಲಿ.

## English Translation

Mighty in wisdom, repellers of enemies, you are the lords of wealth ; be not mine the wealth, Adityas, which belongs to sin.

। ಸಂಹಿತಾಪಾಠಃ ।

ವಯಮಿದ್ವಃ ಸುದಾನವಃ ಕ್ಷಿಯಂತೋ ಯಾಂತೋ ಅಧ್ವನ್ನಾ ।
ದೇವಾ ವೃಧಾಯ ಹೂಮಹೇ ॥ ೬ ॥

॥ ಪದಪಾಠಃ ॥

ವಯಂ । ಇತ್ । ವಃ । ಸುऽದಾನವಃ । ಕ್ಷಿಯಂತಃ । ಯಾಂತಃ । ಅಧ್ವನ್ । ಆ ।
ದೇವಾಃ । ವೃಧಾಯ । ಹೂಮಹೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸುದಾನವಃ ಶೋಭನದಾನಾ ಹೇ ದೇವಾಃ ಕ್ಷಿಯಂತೋ ಗೃಹೇಷ್ವಗ್ನಿಹೋತ್ರಾರ್ಥಂ ನಿವಸಂತೋಽಧ್ವನ್ ॥ ಸುಪ್ತೋ ಲುಕ್ ॥ ಅಧ್ವನಿ ಸಮಿದಾಹರಣಾರ್ಥಂ ಯಾಂತೋ ಗಚ್ಛಂತೋಽಪಿ ವಯಮಿದ್ವೋ ಯುಷ್ಮಾನೇವ ವೃಧಾಯ ಹವಿರ್ಭಿರ್ವರ್ಧನಾಯ ಹೂಮಹೇ । ಆಹ್ವಯಾಮಃ । ಯದ್ವಾ । ವಯಂ ಗೃಹೇಷು ಗೃಹಾನ್ನಿರ್ಗಮನಕಾಲೇ ಮಾರ್ಗೇಷು ಚ ವೃಧಾಯಾಸ್ಮಾಕಂ ಧನಾದಿಭಿರ್ವರ್ಧನಾಯಾಹ್ವಯಾಮಃ ॥

॥ ಪ್ರತಿಪದಾರ್ಥ ॥

**ಸುದಾನವಃ**—ಉತ್ತಮವಾದ ದಾನಿಗಳಾದ । **ದೇವಾಃ**—ಎಲೈ ದೇವತೆಗಳೇ । **ವಯಂ**—ನಾವು । **ಕ್ಷಿಯಂತಃ**—ಅಗ್ನಿಹೋತ್ರಾದಿಕರ್ಮನಿರ್ವಹಣಾರ್ಥವಾಗಿ ನಮ್ಮ ಮನೆಗಳಲ್ಲಿಯೇ ಇದ್ದರೂ । **ಅಧ್ವನ್**—ಸಮಿದಾದಿಗಳನ್ನು ತರುವುದಕ್ಕಾಗಿ ಮಾರ್ಗಮಧ್ಯದಲ್ಲಿ । **ಯಾಂತಃ**—ಹೋಗುತ್ತಿದ್ದರೂ । **ವಃ ಇತ್**—ನಿಮ್ಮನ್ನೇ । **ವೃಧಾಯ**—ಹವಿರಾದಿಗಳಿಂದ ವೃದ್ಧಿಪಡಿಸುವುದಕ್ಕಾಗಿ ಅಥವಾ ಸ್ತೋತ್ರಾದಿಗಳಿಂದ ಸ್ತುತಿಸುವುದಕ್ಕಾಗಿ ಅಥವಾ ನಮ್ಮ ಧನಾಭಿವೃದ್ಧಿಗಾಗಿ । **ಹೂಮಹೇ**—ಪ್ರಾರ್ಥಿಸಿ ಕರೆಯುತ್ತೇವೆ

। ಭಾವಾರ್ಥ ।

ಉತ್ತಮವಾದ ದಾನಿಗಳಾದ ಎಲೈ ದೇವತೆಗಳೇ, ನಾವು ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡುತ್ತಾ ಮನೆಯಲ್ಲಿಯೇ ಇದ್ದರೂ ಅಥವಾ ಸಮಿದಾದಿಗಳನ್ನು ತರುವುದಕ್ಕಾಗಿ ಮಾರ್ಗಮಧ್ಯದಲ್ಲಿ ಹೋಗುತ್ತಿದ್ದರೂ, ನಿಮ್ಮನ್ನು ಸ್ತುತಿಸಿ ವೃದ್ಧಿಪಡಿಸುವುದಕ್ಕಾಗಿ ಅಥವಾ ನಮ್ಮ ಧನಾಭಿವೃದ್ಧಿಗಾಗಿ ನಿಮ್ಮನ್ನೇ ಪ್ರಾರ್ಥಿಸಿ ಕರೆಯುತ್ತೇವೆ.

English Translation

Bountcous deities, whether we dwell at home or go abroad on the road, we invoke you only to be nourished by our oblations.

॥ ಸಂಹಿತಾಪಾಠಃ ॥

ಅಧಿ ನ ಇಂದ್ರೈಷಾಂ ವಿಷ್ಣೋ ಸಜಾತ್ಯಾನಾಂ ।
ಇತಾ ಮರುತೋ ಅಶ್ವಿನಾ ॥ ೭ ॥

॥ ಪದಪಾಠಃ ॥

ಅಧಿ । ನಃ । ಇಂದ್ರ । ಏಷಾಂ । ವಿಷ್ಣೋ ಇತಿ । ಸऽಜಾತ್ಯಾನಾಂ ।
ಇತ । ಮರುತಃ । ಅಶ್ವಿನಾ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ವಿಷ್ಣೋ ಮರುತೋ ಹೇ ಅಶ್ವಿನಾಶ್ವಿನೌ ಹೇ ಇಂದ್ರಾದಯೋ ದೇವಾಃ ಸಜಾತ್ಯಾನಾಂ । ಸಮಾನಾಯಾಂ ಜಾತೌ ಭವಾಃ ಸಜಾತ್ಯಾ ಭ್ರಾತೃಮಿತ್ರಾದಯಃ। ತೇಷಾಂ ಮಧ್ಯೇ ನೋऽಸ್ಮಾನಧೀತ। ಯೂಯಂ ಸ್ತುತ್ಯತಯಾಧಿಗಚ್ಛತ ॥**

॥ ಪ್ರತಿಪದಾರ್ಥ ॥

**ಹೇ ಇಂದ್ರ**—ಎಲೈ ಇಂದ್ರನೇ । **ವಿಷ್ಣೋ**—ಎಲೈ ವಿಷ್ಣುವೇ । **ಮರುತಃ**—ಎಲೈ ಮರುದ್ದೇವತೆಗಳೇ **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ ನೀವೆಲ್ಲರೂ । **ಸಜಾತ್ಯಾನಾಂ ಏಷಾಂ**—ಒಂದೇಕುಲದಲ್ಲಿ ಉತ್ಪನ್ನರಾದ ಭ್ರಾತೃಮಿತ್ರಾದಿಬಂಧುಗಳ ಮಧ್ಯದಲ್ಲಿ । **ನಃ**—ನಮ್ಮ ಸಮೀಪಕ್ಕೆ । **ಅಧಿ ಇತ**—ಪ್ರಾರ್ಥಿತರಾಗಿ ದಯಮಾಡಿ.

॥ ಭಾವಾರ್ಥ ॥

ಇಂದ್ರ, ವಿಷ್ಣು, ಮರುತ್ತುಗಳು, ಅಶ್ವಿನಾ ಎಂಬ ಎಲೈ ಇಂದ್ರಾದಿದೇವತೆಗಳೇ, ಒಂದೇ ಕುಲದಲ್ಲಿ ಉತ್ಪನ್ನರಾದ ಬಂಧುಬಾಂಧವರ ಮಧ್ಯದಲ್ಲಿರುವ ನಮ್ಮ ಸಮೀಪಕ್ಕೆ ಪ್ರಾರ್ಥಿತರಾಗಿ ದಯಮಾಡಿ.

English Translation

Come to us, Indra, Vishnu, Maruts, and Adityas, from the midst of these your brethren

॥ ಸಂಹಿತಾಪಾಠಃ ॥

ಪ್ರ ಭ್ರಾತೃತ್ವಂ ಸುದಾನವೋಽಧ ದ್ವಿತಾ ಸಮಾನ್ಯಾ ।

ಮಾತುರ್ಗರ್ಭೇ ಭರಾಮಹೇ ॥ ೮ ॥

॥ ಪದಪಾಠಃ ॥

ಪ್ರ । ಭ್ರಾತೃಽತ್ವಂ । ಸುಽದಾನವಃ । ಅಧ । ದ್ವಿತಾ । ಸಮಾನ್ಯಾ ।

ಮಾತುಃ । ಗರ್ಭೇ । ಭರಾಮಹೇ ॥ ೮ ॥

॥ ಸಾಯಣಭಾಷ್ಯಂ ॥

ಹೇ ಸುದಾನವಃ ಶೋಭನದಾನಾ ಆದಿತ್ಯಾಃ ಅಧಾಥಾಸ್ಮತ್ಕೃತ್ಯಾಗಮನಾನಂತರಂ ವಯಂ ಸಮಾನ್ಯಾ ಸಮಾನ್ಯೇನ ॥ ಸುಪೋ ಡ್ಯಾದೇಶಃ ॥ ಪೂರ್ವಂ ಸರ್ವೇಷಾಂ ದೇವಾನಾಂ ಸಾಂಹತ್ಯೇನ ತತೋ ದ್ವಿತಾ ದ್ವಿಧಾ ದ್ವಿಪ್ರಕಾರೇಣ ಚ ಮಾತುರದಿತೇರ್ಗರ್ಭೇ ಸಂಜಾತಂ ಯುಷ್ಮಾಕಂ ಭ್ರಾತೃತ್ವಂ ವಿದ್ಯತೇ ತದಿದಾನೀಂ ವಯಂ ಪ್ರ ಭರಾಮಹೇ । ಪ್ರಭರಣಮುಚ್ಚಾರಣಂ ಪ್ರಕಾಶನಂ ವಾ । ಉಚ್ಚಾರಯಾಮಃ ಪ್ರಕಾಶಯಾಮೋ ವಾ । ಸರ್ವೇಷಾಂ ದೇವಾನಾಂ ದ್ವಂದ್ವಶೋ ಜನನಂ ತೈತ್ತಿರೀಯಕೇ ಸ್ಪಷ್ಟಮಭಿಹಿತಂ । ಅದಿತಿಃ ಪುತ್ರಕಾಮಾ ಸಾಧ್ಯೇಭ್ಯೋ ದೇವೇಭ್ಯೋ ಬ್ರಹ್ಮೌದನಮಪಚದಿತ್ಯುಪಕ್ರಮ್ಯ ತಸ್ಯೈ ಧಾತಾ ಚಾರ್ಯಮಾ ಚಾಜಾಯೇತಾಂ ॥ ತೈ. ಸಂ. ೬-೫-೬ ॥ ಇತ್ಯಾದಿನಾ ॥

॥ ಪ್ರತಿಪದಾರ್ಥ ॥

**ಸುದಾನವಃ**—ಉತ್ತಮದಾನಿಗಳಾದ ಎಲೈ ದೇವತೆಗಳೇ । **ಅಧ**—ನೀವು ನಮ್ಮ ಸಮೀಪಕ್ಕೆ ಬಂದನಂತರ (ನಾವು) **ಸಮಾನ್ಯಾ**—ಸಮಾನವಾದುದೂ । **ದ್ವಿತಾ**—ಎರಡು ಪ್ರಕಾರವಾದುದೂ ಆದ । **ಮಾತುಃ ಗರ್ಭೇ**—ದೇವಮಾತೃವಾದ ಅದಿತಿಯಗರ್ಭದಲ್ಲಿ ನಿಮ್ಮ ಉತ್ಪತ್ತಿಯಿಂದುಂಟಾದ । **ಭ್ರಾತೃತ್ವಂ**—ಸಹೋದರಭಾವವನ್ನು **ಪ್ರಭರಾಮಹೇ**— (ತಿಳಿದವರಾಗಿ) ಪ್ರಕಾಶಪಡಿಸುತ್ತೇವೆ.

॥ ಭಾವಾರ್ಥ ॥

ಉತ್ತಮ ದಾನಿಗಳಾದ ಎಲೈ ದೇವತೆಗಳೇ, ನೀವು ನಮ್ಮ ಸಮೀಪಕ್ಕೆ ಬಂದಮೇಲೆ ದೇವಮಾತೆಯಾದ ಅದಿತಿಯ ಗರ್ಭದಲ್ಲಿ ನೀವು ಸಾಮಾನ್ಯವಾಗಿಯೂ ಎರಡು ಪ್ರಕಾರವಾಗಿಯೂ ಉತ್ಪತ್ತಿಯಾಗಿ ಇದರಿಂದ ನಿಮ್ಮಲ್ಲಿ ಉಂಟಾದ ಪರಸ್ಪರ ಭ್ರಾತೃಸಂಬಂಧವನ್ನು ನಾವು ತಿಳಿದು ಪ್ರಕಾಶಪಡಿಸುತ್ತೇವೆ.

## English Translation

Bounteous (deities), we forthwith proclaim aloud that brotherhood of yours in your mother's womb, (first) in common union, then as born in diverse manner.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ದೇವತೆಗಳು ಅದಿತಿಯ ಪುತ್ರರಾಗಿ ಜನಿಸಿದಾಗ ಎಲ್ಲರಂತೆ ಸಾಮಾನ್ಯವಾದ ಉತ್ಪತ್ತಿಯಿಂದಲೂ, ಎರಡು ಪ್ರಕಾರವಾದ (ಎಂದರೆ ಜತೆಜತೆಯಾಗಿ) ಉತ್ಪತ್ತಿಯಿಂದಲೂ ಜನಿಸಿದರೆಂದು ಹೇಳಿ, ಆ ರೀತಿ ಇಬ್ಬಿಬ್ಬರು ಜತೆಯಾಗಿ ಜನಿಸಿದಾಗ ಆ ಇಬ್ಬರಿಗೆ ಇರುವ ಸಹೋದರಸಂಬಂಧವನ್ನು ನಾವು ತಿಳಿದಿದೇವೆ ಎಂದು ಋಷಿಯು ಇಲ್ಲಿ ವರ್ಣಿಸಿದಾನೆ. ಈ ವಿಷಯದಲ್ಲಿ ಭಾಷ್ಯಕಾರರು ತೈತ್ತಿರೀಯ ಸಂಹಿತಾವಾಕ್ಯವನ್ನು ಉದಾಹರಣೆಗಾಗಿಯೂ ವಿಷಯಸಮರ್ಥನೆಗಾಗಿಯೂ ಕೊಟ್ಟಿದಾರೆ–ಆದರೆ ಭಾಷ್ಯಕಾರರು ಹೇಳುವ **ಅದಿತಿಃ ಪುತ್ರಕಾಮಾ** ಎಂಬ ಅನುವಾಕದಲ್ಲಿ (ತೈ. ಸಂ. ೬-೫-೬) ಉದಾಹೃತವಿಷಯಗಳು ಒಂದು ಕ್ರಮದಲ್ಲಿಲ್ಲದೆ, ಮಧ್ಯದಲ್ಲಿ ಅನೇಕ ವಿಷಯಗಳ ಪ್ರಸ್ತಾಪವಿರುವುದರಿಂದಲೂ ಇದೇ ಶಬ್ದಗಳಿಂದ (ಅದಿತಿಃ ಪುತ್ರಕಾಮಾ ಎಂಬ ಶಬ್ದಗಳಿಂದ) ಪ್ರಾರಂಭವಾಗುವ ತೈತ್ತಿರೀಯ ಬ್ರಾಹ್ಮಣವಾಕ್ಯವನ್ನು ಉದಾಹರಿಸುವುದಕ್ಕೆ ಬದಲಾಗಿ ಭಾಷ್ಯಕಾರರು ಕೈತಪ್ಪಿನಿಂದ ಸಂಹಿತಾವಾಕ್ಯವನ್ನು ಉದಾಹರಿಸಿದಾರೆ ಸಂಹಿತಾವಾಕ್ಯದಲ್ಲಿ ವಿವರಿಸಿರುವ ಅರ್ಥವು ಪ್ರಕೃತ ಋಕ್ಕಿನಲ್ಲಿ ಸೂಚಿತವಾಗಿರುವ ಅಭಿಪ್ರಾಯಕ್ಕೆ ಸರಿಯಾಗಿ ಹೊಂದುವುದಿಲ್ಲ ಬ್ರಾಹ್ಮಣವಾಕ್ಯವನ್ನೇ ಉದಾಹರಿಸಬೇಕೆಂದು ಅವರ ಇಚ್ಛೆ ಇರಬಹುದು. ಆದ್ದರಿಂದ ಆ ಶ್ರುತಿವಾಕ್ಯವನ್ನು ಎಂದರೆ ಸಂಹಿತಾವಾಕ್ಯವನ್ನು ಇಲ್ಲಿ ವಿವರಿಸುವ ಅವಶ್ಯಕತೆಯು ತೋರುವುದಿಲ್ಲ. ಮತ್ತು **ಅದಿತಿಃ ಪುತ್ರಕಾಮಾ** ಎಂದು ಪ್ರಾರಂಭವಾಗುವ (ತೈ. ಬ್ರಾ. ೧-೧-೯) ತೈತ್ತಿರೀಯ ಬ್ರಾಹ್ಮಣ ಅನುವಾಕದಲ್ಲಿಯೂ ಈ ವಿಷಯದ ಪ್ರಸ್ತಾಪವು ಸ್ಪಷ್ಟವಾಗಿ ಉಕ್ತವಾಗಿರುವುದರಿಂದ ಅದನ್ನೇ ಇಲ್ಲಿ ವಿವರಿಸಲಾಗಿದೆ—

> **ಅದಿತಿಃ ಪುತ್ರಕಾಮಾ । ಸಾಧ್ಯೇಭ್ಯೋ ದೇವೇಭ್ಯೋ ಬ್ರಹ್ಮೌದನಮುಪಚತ್ । ತಸ್ಯಾ ಉಚ್ಛೇಷಣಮುದದುಃ । ತತ್ಪ್ರಾಶ್ನಾತ್ । ಸಾರೇತೋಽಧತ್ತ । ತಸ್ಯೈ ಧಾತಾ ಚಾರ್ಯಮಾ ಚಾಜಾಯೇತಾಂ । ಸಾ ದ್ವಿತೀಯಮುಪಚತ್ । ತಸ್ಯಾ ಉಚ್ಛೇಷಣಮುದದುಃ । ತತ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯೈ ಮಿತ್ರಶ್ಚ ವರುಣಶ್ಚಾಜಾಯೇತಾಂ । ಸಾ ತೃತೀಯಮುಪಚತ್ । ತಸ್ಯಾ ಉಚ್ಛೇಷಣಮುದದುಃ । ತತ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯಾ ಅಗ್ಂಶಶ್ಚ ಭಗಶ್ಚಾಜಾಯೇತಾಂ। ಸಾ ಚತುರ್ಥಮುಪಚತ್ । ತಸ್ಯಾ ಉಚ್ಛೇಷಣಮುದದುಃ। ತತ್ಪ್ರಾಶ್ನಾತ್ । ಸಾ ರೇತೋಽಧತ್ತ । ತಸ್ಯಾ ಇಂದ್ರಶ್ಚ ವಿವಸ್ವಾಗ್‌ಶ್ಚಾಜಾಯೇತಾಂ ॥**
>
> (ತೈ. ಬ್ರಾ. ೧-೧-೯-೧, ೨, ೩)

ಪೂರ್ವದಲ್ಲಿ ದೇವಮಾತೆಯಾದ ಅದಿತಿಯು ತನಗೆ ಪುತ್ರರಾಗಬೇಕೆಂದು ಬಯಸಿ ಸಾಧ್ಯ ಎಂಬ ದೇವತೆಗಳನ್ನುದ್ದೇಶಿಸಿ ಬ್ರಹ್ಮೌದನವೆಂಬ ವಿಶೇಷರೀತಿಯ ಹವಿಸ್ಸನ್ನು ಪಕ್ವಮಾಡಿ ಅವರಿಗೆ ಅರ್ಪಿಸಿದಳು. ಆ ದೇವತೆಗಳು ಅದನ್ನು ಭಕ್ಷಿಸಿ ಉಳಿದ ಶೇಷವನ್ನು ಅವಳಿಗೆ ಕೊಟ್ಟರು. ಅದಿತಿಯು ಅದನ್ನು ಭಕ್ಷಿಸಿ ಗರ್ಭವನ್ನು ಧರಿಸಿದಳು. ಆ ಗರ್ಭದಿಂದ ಅದಿತಿಗೆ ಧಾತಾ ಮತ್ತು ಅರ್ಯಮಾ ಎಂಬ ಇಬ್ಬರು ಪುತ್ರರು ಜನಿಸಿದರು ಅನಂತರ ಅದಿತಿಯು ಇದೇ ರೀತಿಯಾಗಿ ಎರಡನೆ ಸಲ ಅನ್ನವನ್ನು ಪಕ್ವಮಾಡಿ ಅವರಿಗೆ ಅರ್ಪಿಸಲು ಅವರು ಕೊಟ್ಟ ಶೇಷಭಕ್ಷಣದಿಂದ ಪುನಃ ಗರ್ಭವನ್ನು ಧರಿಸಿ ಮಿತ್ರ ಮತ್ತು ವರುಣ ಎಂಬ ಇಬ್ಬರು ಪುತ್ರರನ್ನು ಹಡೆದಳು ಅನಂತರ ಮೂರನೆಯಸಲವೂ

ಇದರಂತೆ ನಡೆಸಿ ಅಂಶ ಮತ್ತು ಭಗ ಎಂಬ ಇಬ್ಬರು ಪುತ್ರರನ್ನು ಹಡೆದಳು. ನಾಲ್ಕನೆಯಸಲ ಅನ್ನವನ್ನು ಪಕ್ವಮಾಡಿ ಅರ್ಪಿಸಿದಾಗ ಅವರು ಕೊಟ್ಟಶೇಷಭಕ್ಷಣದಿಂದ ಗರ್ಭವನ್ನು ಧರಿಸಲಾಗಿ ಅದಿತಿಗೆ ಆಗ ಇಂದ್ರ ಮತ್ತು ವಿವಸ್ವಾನ್ ಎಂಬಿಬ್ಬರು ಪುತ್ರರು ಜನಿಸಿದರು ಎಂದು ಮೇಲಿನ ವಾಕ್ಯಗಳ ಅಭಿಪ್ರಾಯವು ಇಲ್ಲಿ ಅದಿತಿಗೆ ಒಟ್ಟು ಎಂಟು ಮಂದಿ ಪುತ್ರರು ಜನಿಸಿದರೆಂದು ಹೇಳಿದೆಯಷ್ಟೆ. ಇದು ಈ ದೇವತೆಗಳ ಸಾಮಾನ್ಯಜನನವು ಎಂದರೆ ಲೋಕರೀತಿಯಾಗಿ ಮಾತೃವಿನ ಗರ್ಭದಿಂದ ಉತ್ಪತ್ತಿಯು ಈ ಕಾರಣದಿಂದ ಈ ಎಂಟು ಮಂದಿದೇವತೆಗಳೂ ಪರಸ್ಪರ ಭ್ರಾತೃತ್ವ ಅಥವಾ ಸಹೋದರಸಂಬಂಧವವುಳ್ಳವರೆಂದಾಯಿತು. ಇದನ್ನೇ ಪ್ರಕೃತ ಋಕ್ಕಿನಲ್ಲಿ **ಸವಾನಾ** ಎಂಬ ಶಬ್ದದಿಂದ ಋಷಿಯು ವಿವರಿಸಿದಾನೆ. ಇನ್ನು ದ್ವಿತಾ ಎಂದರೆ ಏನೆಂದು ವಿಮರ್ಶೆಮಾಡಿದಲ್ಲಿ–ಅದಿತಿಗೆ ಪ್ರತಿಯೊಂದುಸಲ ಗರ್ಭವನ್ನು ಧರಿಸಿದಾಗಲೂ ಇಬ್ಬರು ಪುತ್ರರಂತೆಯೇ ಜನಿಸಿದಾರೆ. ಮೊದಲನೆಯ ಗರ್ಭದಲ್ಲಿ ಧಾತಾ ಮತ್ತು ಅರ್ಯಮನೂ, ಎರಡನೆಯ ಗರ್ಭದಲ್ಲಿ ಮಿತ್ರ ಮತ್ತು ವರುಣನೂ, ಮೂರನೆಯ ಗರ್ಭದಲ್ಲಿ ಅಂಶ ಮತ್ತು ಭಗನೂ, ನಾಲ್ಕನೆಯ ಗರ್ಭದಲ್ಲಿ ಇಂದ್ರ ಮತ್ತುವಿವಸ್ವಂತನೂ ಜನಿಸಿದಾರೆ ಒಂದೇ ಗರ್ಭದಲ್ಲಿ ಇಬ್ಬಿಬ್ಬರಂತೆ ಜನಿಸಿರುವುದನ್ನು **ದ್ವಿತಾ** ಎಂದು ಋಷಿಯು ವರ್ಣಿಸಿದಾನೆ. ಎಂಟು ಮಂದಿ ಸಹೋದರರಲ್ಲಿ ಪರಸ್ಪರ ಸಾಮಾನ್ಯ ಭ್ರಾತೃತ್ವ ವಿರುವುದಲ್ಲದೆ ಒಂದೇ ಗರ್ಭದಲ್ಲಿ ಜನಿಸಿದ ಈರ್ವರಿಗೆ ದ್ವಿತಾ ಎಂದು ವಿಶೇಷರೀತಿಯ ಭ್ರಾತತ್ವವೂ ಉಂಟಾಗಿದೆ. ಈ ಅಭಿಪ್ರಾಯವನ್ನೇ ಋಷಿಯು **ದ್ವಿತಾ** ಎಂಬ ಶಬ್ದದಿಂದ ಸೂಚಿಸಿರುವನು. ಈ ದ್ವಿತಾ ಎಂಬ ಸಂಬಂಧವು ಒಂದೇ ಗರ್ಭದಲ್ಲಿ ಜನಿಸಿದ ಅದಿತಿಪುತ್ರರಿಗೆ ಮಾತ್ರ ಅನ್ವಯಿಸುವುದು. ಪ್ರಥಮಗರ್ಭದಲ್ಲಿ ಜನಿಸಿದ ಒಬ್ಬಪುತ್ರನೂ, ದ್ವಿತೀಯಗರ್ಭದಲ್ಲಿ ಜನಿಸಿದ ಮತ್ತೊಬ್ಬ ಪುತ್ರನೂ ದ್ವಿತಾ ಎಂಬ ಭ್ರಾತೃತ್ವಸಂಬಂಧವನ್ನು ಪಡೆಯಲಾರರು ಅವರದು ಸಾಮಾನ್ಯಭ್ರಾತೃತ್ವ. ಒಂದೇಗರ್ಭದಲ್ಲಿ ಜನಿಸಿದ ಧಾತಾ ಮತ್ತು ಅರ್ಯಮನು ದ್ವಿತಾ ಭ್ರಾತೃತ್ವಸಂಬಂಧವುಳ್ಳವರು ಅದರಂತೆ ಮಿತ್ರಾ ವರುಣರೂ, ಅಂಶಭಗರೂ, ಇಂದ್ರವಿವಸ್ವಂತರೂ ದ್ವಿತಾಭ್ರಾತೃತ್ವ ಸಂಬಂಧವುಳ್ಳವರೆಂದು ತಿಳಿಯಬೇಕು. ಈ ಒಟ್ಟು ಎಂಟು ಮಂದಿಗೂ ಇರುವ ಸಂಬಂಧವು ಸಾಮಾನ್ಯ ಭ್ರಾತೃತ್ವವು

॥ ಸಂಹಿತಾಪಾಠಃ ॥

ಯೂಯಂ ಹಿ ಷ್ಠಾ ಸುದಾನವ ಇಂದ್ರಜ್ಯೇಷ್ಠಾ ಅಭಿದ್ಯವಃ ।
ಅಧಾ ಚಿದ್ವ ಉತ ಬ್ರುವೇ ॥ ೯ ॥

॥ ಪದಪಾಠಃ ॥

ಯೂಯಂ । ಹಿ । ಸ್ಥ । ಸುऽದಾನವಃ । ಇಂದ್ರऽಜ್ಯೇಷ್ಠಾಃ । ಅಭಿऽದ್ಯವಃ ।
ಅಧ । ಚಿತ್ । ವಃ । ಉತ । ಬ್ರುವೇ ॥ ೯ ॥

॥ ಸಾಯಣಭಾಷ್ಯಂ ॥

**ಪೂರ್ವೋಽರ್ಧರ್ಚಃ ಸಿದ್ಧಃ । ಹೇ ಸುದಾನವಃ ಶೋಭನದಾನಾ ದೇವಾ ಇಂದ್ರಜ್ಯೇಷ್ಠಾಃ । ಇಂದ್ರೋ ಜ್ಯೇಷ್ಠೋ ಮುಖ್ಯೋ ಯೇಷಾಂ ತೇ ತಥೋಕ್ತಾಃ । ಸರ್ವದೇವಾ ಇಂದ್ರನೇತೃಕಾ ಇತ್ಯರ್ಥಃ।**

ತ್ವಾದೃಶಾ ಅಭಿದ್ಯವೋಽಭಿಗತದೀಪ್ತಯೋ ಯೂಯಂ ಹಿ ಸ್ಥ । ಅಸ್ಮದ್ಯಜ್ಞೇ ಭವಥ ಖಲು । ಹಿ ಪ್ರಸಿದ್ಧೌ । ಅಧ ಚಿದಥಾನಂತರಮೇವ ವೋ ಯುಷ್ಮಾನಹಂ ಬ್ರುವೇ । ಸ್ತೌಮಿ । ಉತಾಪಿ ಚ ಪುನಃ ಪುನಃ ಸ್ತೌಮೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಹೇ ಸುದಾನವಃ—ಉತ್ತಮದಾನಪ್ರದರಾದ ಎಲೈ ದೇವತೆಗಳೇ ನೀವು। ಇಂದ್ರ ಜ್ಯೇಷ್ಠಾಃ—ಇಂದ್ರನನ್ನೇ ನೇತೃವಾಗಿ ಉಳ್ಳವರು ಎಂದರೆ ನಿಮಗೆ ಇಂದ್ರನೇ ಮುಖಂಡನು । ಅಭಿದ್ಯವಃ—ಪ್ರಕಾಶಮಾನರಾದ ಎಲೈ ದೇವತೆಗಳೇ । ಯೂಯಂ—ನೀವು । ಸ್ಥ ಹಿ—ನಮ್ಮ ಯಜ್ಞಭೂಮಿಯಲ್ಲಿ ಇದ್ದೀರಲ್ಲವೇ । ಅಧ ಚಿತ್—ಅನಂತರದಲ್ಲಿಯೇ ಎಂದರೆ ನೀವು ನಮ್ಮ ಯಜ್ಞಭೂಮಿಯಲ್ಲಿ ಬಂದನಂತರ । ವಃ—ನಿಮ್ಮನ್ನು । ಬ್ರುವೇ—ಸ್ತುತಿಸುತ್ತೇನೆ । ಉತ—ಮತ್ತೆ ಮತ್ತೆ ಸ್ತುತಿಸುತ್ತೇನೆ.

॥ ಭಾವಾರ್ಥ ॥

ಉತ್ತಮವಾಗಿ ದಾನಮಾಡುವ ಎಲೈ ದೇವತೆಗಳೇ, ನಿಮಗೆ ಇಂದ್ರನೇ ಮುಖಂಡನಾಗಿರುವನು ಎಂದರೆ ನೀವು ಇಂದ್ರನ ನೇತೃತ್ವದಲ್ಲಿರುವಿರಿ ಪ್ರಕಾಶಮಾನರಾದ ಎಲೈದೇವತೆಗಳೇ. ನೀವು ನಮ್ಮಯಜ್ಞಭೂಮಿಯಲ್ಲಿ ಇರುವಿರಲ್ಲವೇ? ನೀವು ನಮ್ಮ ಯಜ್ಞದಲ್ಲಿ ಬಂದನಂತರ ನಾನು ನಿಮ್ಮನ್ನು ಪುನಃಪುನಃ ಸ್ತುತಿಸುತ್ತೇನೆ.

English Translation

Bounteous (deities) with Indra as your chief, be present here in your radiance; again and again I praise you.

## ಎಂಭತ್ತನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪ್ರೇಷ್ಠಂ ವ ಇತಿ ನವರ್ಚಂ ಚತುರ್ಥಂ ಸೂಕ್ತಂ ಕವೇಃ ಪುತ್ರಸ್ಯೋಶನಸ ಆರ್ಷಂ ಗಾಯತ್ರಮಾಗ್ನೇಯಂ । ತಥಾನುಕ್ರಮ್ಯತೇ । ಪ್ರೇಷ್ಠಮುಶನಾ ಕಾವ್ಯ ಆಗ್ನೇಯಮಿತಿ ॥ ಪ್ರಾತರನುವಾಕ ಆಗ್ನೇಯೇ ಕ್ರತೌ ಗಾಯತ್ರೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಸೂತ್ರಿತಂ ಚ । ಯುಕ್ಷ್ವಾ ಹಿ ಪ್ರೇಷ್ಠಂ ವಃ । ಆ. ೪-೧೩ । ಇತಿ ॥ ಅಭಿಪ್ಲವಿಕೇಷೂಕ್ಥೇಷು ಮೈತ್ರಾವರುಣೇ ಪ್ರೇಷ್ಠಂ ವ ಇತಿ ತೃಚೋ ವೈಕಲ್ಪಿಕಃ ಸ್ತೋತ್ರಿಯಃ ಸೂತ್ರಿಯಃ । ಸೂತ್ರಿತಂ ಚ । ಪ್ರೇಷ್ಠಂ ವೋ ಅತಿಥಿಂ ಶ್ರೇಷ್ಠಂ ಯವಿಷ್ಠ ಭಾರತ । ಆ. ೭-೮ । ಇತಿ ॥

ಅನುವಾದವು—ಪ್ರೇಷ್ಠಂ ವಃ ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಕವಿಯ ಪುತ್ರನಾದ ಉಶನಾಃ ಎಂಬುವನು ಋಷಿಯು ;

ಅಗ್ನಿಯು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ-**ಪ್ರೇಷ್ಠಮುಶನಾ ಕಾವ್ಯ ಅಗ್ನೇಯಂ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿಯೂ, ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನ ಶ್ರೌತಸೂತ್ರದ-**ಯುಕ್ಷ್ವಾ ಹಿ ಪ್ರೇಷ್ಠಂ ವಃ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು. ಅಭಿಪ್ಲವ ಸಂಬಂಧವಾದ ಉಕ್ಥ್ಯಯಾಗಗಳಲ್ಲಿ ಮೈತ್ರಾವರುಣನೆಂಬ ಋತ್ವಿಜನು **ಪ್ರೇಷ್ಠಂ ವಃ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ವೈಕಲ್ಪಿಕಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಪ್ರೇಷ್ಠಂ ವೋ ಅತಿಥಿಂ ಶ್ರೇಷ್ಠಂ ಯವಿಷ್ಠ ಭಾರತ** ಎಂಬ ಸೂತ್ರದಿಂದ (ಆ ೭-೮) ವಿವೃತವಾಗಿರುವುದು.

## ಸೂಕ್ತ—೮೪

ಮಂಡಲ—೮ । ಅನುವಾಕ—೯ । ಸೂಕ್ತ—೮೪ ।
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೫ ೬ ।
ಸೂಕ್ತದಲ್ಲಿರುವ 'ಋಕ್ಸಂಖ್ಯೆ—೯ ॥
ಋಷಿಃ—ಉಶನಾ ಕಾವ್ಯಃ ।
ದೇವತಾ—ಅಗ್ನಿಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರೇಷ್ಠಂ ವೋ ಅತಿಥಿಂ ಸ್ತುಷೇ ಮಿತ್ರಮಿವ ಪ್ರಿಯಂ ।
ಅಗ್ನಿಂ ರಥಂ ನ ವೇದ್ಯಂ ॥ ೧ ॥

॥ ಪದಪಾಠಃ ॥

ಪ್ರೇಷ್ಠಂ । ವಃ । ಅತಿಥಿಂ । ಸ್ತುಷೇ । ಮಿತ್ರಂऽಇವ । ಪ್ರಿಯಂ ।
ಅಗ್ನಿಂ । ರಥಂ । ನ । ವೇದ್ಯಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಯಜಮಾನಾಃ ಪ್ರೇಷ್ಠಂ ಯುಷ್ಮಾಕಂ ಧನದಾನೇನ ಪ್ರಿಯತಮಮತಿಥಿಂ ಯುಷ್ಮಾಭಿರತಿಥಿವತ್ಪೂಜ್ಯಂ । ಯದ್ವಾ ॥ ಅತ ಸಾತತ್ಯಗಮನೇ । ಋತನ್ಯಂಜೀತ್ಯಾದಿನಾತೇರಿಥಿನ್ ॥ ಸತತಂ ದೇವಾನಾಂ ಹವಿಃ ಪ್ರದಾತುಂ ಗಚ್ಛಂತಂ। ಮಿತ್ರಮಿವ ಸಖಾಯಮಿವ ಪ್ರಿಯಂ ಸ್ತೋತುಃ ಪ್ರೀಣನಕರಂ ರಥಂ ನ ರಥಮಿವ ವೇದ್ಯಂ । ವೇದೋ ಧನಂ । ಧನಹಿತಂ ಲಾಭಹೇತುಂ । ಯಥಾ ರಥೀ ರಥೇನ ಧನಂ ಲಭತೇ ತದ್ವತ್ ಸ್ತೋತಾರೋऽನೇನ ಧನಂ ಲಭಂತೇ । ತಾದೃಶಂ ಧನಲಾಭಕಾರಣಮಗ್ನಿಂ ವೋ ಯುಷ್ಮತ್ಕರ್ಮಸಿದ್ಧ್ಯರ್ಥಂ ಸ್ತುಷೇ । ಕಾವ್ಯ ಉಶನಾಃ ಸ್ತೌಮಿ ॥

॥ ಪ್ರತಿಪದಾರ್ಥ ॥

(ಎಲೈ ಯಜಮಾನರೇ) **ಪ್ರೇಷ್ಠಂ**—ನಿಮಗೆ ಅತ್ಯಂತ ಪ್ರೀತಿಪಾತ್ರನಾದವನೂ । **ಅತಿಥಿಂ**—ಅತಿಥಿಯಂತೆ ಪೂಜ್ಯನಾದವನೂ । **ಮಿತ್ರಮಿವ**—ಸ್ನೇಹಿತನಂತೆ । **ಪ್ರಿಯಂ**—ಹಿತಕಾರಿಯೂ । **ರಥಂ ನ ವೇದ್ಯಂ**—ರಥದ ತುಂಬಾ ಇರುವ ಧನದ ಪ್ರಾಪಕನೂ ಆದ । **ಅಗ್ನಿಂ**—ಅಗ್ನಿಯನ್ನು । **ವಃ**—ನಿಮ್ಮ ಕರ್ಮಸಿದ್ಧಿಗಾಗಿ । **ಸ್ತುಷೇ**—ಸ್ತೋತ್ರಮಾಡುತ್ತೇನೆ.

॥ ಭಾವಾರ್ಥ ॥

ಎಲೈ ಯಜಮಾನರೇ, ಅನೇಕರ ಪ್ರೀತಿಗೆ ಪಾತ್ರನಾದವನೂ, ಅತಿಥಿಯಂತೆ ಗೌರವಾನ್ವಿತನೂ, ಸ್ನೇಹಿತರಂತೆ ಹಿತಕಾರಿಯೂ ರಥದ ತುಂಬ ಇರುವ ಧನವನ್ನು ಸ್ತೋತೃಗಳಿಗೆ ಒದಗಿಸಿಕೊಡುವವನೂ ಆದ ಅಗ್ನಿಯನ್ನು ನಿಮ್ಮ ಕರ್ಮನಿರ್ವಹಣಕ್ಕಾಗಿ ಕವಿಪುತ್ರನಾದ ಉಶನಾ ಎಂಬ ನಾನು ಸ್ತುತಿಸುತ್ತೇನೆ

English Translation

I praise Agni your most beloved guest, dear as a friend, who brings wealth as a chariot ;

॥ ಸಂಹಿತಾಪಾಠಃ ॥

ಕವಿಮಿವ ಪ್ರಚೇತಸಂ ಯಂ ದೇವಾಸೋ ಅಧ ದ್ವಿತಾ ।
ನಿ ಮರ್ತ್ಯೇಷ್ವಾದಧುಃ ॥ ೨ ॥

॥ ಪದಪಾಠಃ ॥

ಕವಿಂಽಇವ । ಪ್ರಽಚೇತಸಂ । ಯಂ । ದೇವಾಸಃ । ಅಧ । ದ್ವಿತಾ ।
ನಿ । ಮರ್ತ್ಯೇಷು । ಆಽದಧುಃ ॥ ೨ ॥

॥ ಸಾಯಣಭಾಷ್ಯಂ ॥

ಅಧಾಪಿ ಚ ದೇವಾಸೋ ದೇವಾ ಇಂದ್ರಾದಯೋ ಯಮಗ್ನಿಂ ಮರ್ತ್ಯೇಷು ಮನುಷ್ಯೇಷು ದ್ವಿತಾ ದ್ವಿಧಾ ನ್ಯಾದಧುಃ ಗಾರ್ಹಪತ್ಯಾಹವನೀಯಾತ್ಮಕತ್ವೇನ ದ್ವಿಧಾ ನಿಹಿತವಂತಃ। ತತ್ರ ದೃಷ್ಟಾಂತಃ । ಕವಿಮಿವ ಪ್ರಚೇತಸಂ ಪ್ರಕೃಷ್ಟಜ್ಞಾನಂ ಕವಿಂ ಕ್ರಾಂತಕರ್ಮಾಣಂ ಪುರುಷಂ ಯಥಾ ದ್ವಿಧಾ ಕಾರ್ಯದ್ವಯೇಽನ್ಯೋ ನಿಯೋಜಯತಿ ತದ್ವತ್ । ಯದ್ವಾ । ದಿವಿ ಪೃಥಿವ್ಯಾಂ ಚ ನಿಹಿತವಂತಃ । ಭೂಮೌ ತು ಹವಿರಾಹರಣಾರ್ಥಂ ದಿವಿ ತು ಹವಿಷ್ಪ್ರದಾನಾರ್ಥಮಿತಿ ದ್ವೈಧಂ ವಿಧಾನಂ ಕೃತವಂತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಥ**—ಮತ್ತು । **ಕವಿಮಿವ ಪ್ರಚೇತಸಂ**—ಲೋಕವ್ಯವಹಾರದಲ್ಲಿ ಉತ್ತಮವಾದ ಜ್ಞಾನವುಳ್ಳವನೂ, ಮೇಧಾವಿಯೂ ಆದ ಪುರುಷನನ್ನು ಎರಡು ವಿಧವಾದ ಕಾರ್ಯಗಳನ್ನು ಮಾಡುವಂತೆ ಜನರು ನಿಯಮಿಸುವರೋ ಅದರಂತೆ । **ದೇವಾಸಃ**—ಇಂದ್ರಾದಿದೇವತೆಗಳು । **ಯಂ**—ಯಾವ ಅಗ್ನಿಯನ್ನು । **ಮರ್ತ್ಯೇಷು**—ಮಾನವರಲ್ಲಿ । **ದ್ವಿತಾ**—ಗಾರ್ಹಪತ್ಯ ಮತ್ತು ಆಹವನೀಯ ಎಂಬ ಎರಡುವಿಧ ರೂಪಗಳಿಂದ । **ನಿ ಅದಧುಃ**—ಸ್ಥಾಪಿಸಿದರೋ ಅಂತಹ ಅಗ್ನಿಯನ್ನು ಸ್ತುತಿಸುತ್ತೇನೆ.

॥ ಭಾವಾರ್ಥ ॥

ಮತ್ತು ಲೋಕವ್ಯವಹಾರದಲ್ಲಿ ಜನರು ಉತ್ತಮವಾದ ಎರಡು ಕೆಲಸಗಳನ್ನೂ ಚೆನ್ನಾಗಿ ಮಾಡುವುದಕ್ಕಾಗಿ ಶ್ರೇಷ್ಠವಾದ ಜ್ಞಾನವುಳ್ಳವನೂ, ಮೇಧಾವಿಯೂ ಆದ ಪುರುಷನನ್ನು ನೇಮಿಸುವಂತೆ ದೇವತೆಗಳು ಮಾನವರಲ್ಲಿ ಗಾರ್ಹಪತ್ಯ ಮತ್ತು ಆಹವನೀಯಗಳೆಂಬ ಎರಡುವಿಧ ರೂಪಗಳಲ್ಲಿ ಯಾವ ಅಗ್ನಿಯನ್ನು ಸ್ಥಾಪಿಸಿದರೋ ಅಂತಹ ಅಗ್ನಿಯನ್ನು ನಾನು ಸ್ತುತಿಸುತ್ತೇನೆ

English Translation

Whom the gods have set like a wise seer in a two-fold function among mortals

॥ ಸಂಹಿತಾಪಾಠಃ ॥

ತ್ವಂ ಯವಿಷ್ಠ ದಾಶುಷೋ ನೄँಃ ಪಾಹಿ ಶೃಣುಧೀ ಗಿರಃ ।

ರಕ್ಷಾ ತೋಕಮುತ ತ್ಮನಾ ॥ ೩ ॥

॥ ಪದಪಾಠಃ ॥

ತ್ವಂ । ಯವಿಷ್ಠ । ದಾಶುಷಃ । ನೄನ್ । ಪಾಹಿ । ಶೃಣುಧಿ । ಗಿರಃ ।

ರಕ್ಷ । ತೋಕಂ । ಉತ । ತ್ಮನಾ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಯವಿಷ್ಠ ಯುವತಮ । ಯದ್ವಾ ॥ ಯೌತೇಸ್ತೃಜಂತಸ್ಯೇಷ್ಠನಿ ರೂಪಂ ॥ ದೇವಾನಾಂ ಹವಿಷಾಂ ಮಿಶ್ರಯಿತೃತಮಾಗ್ನೇ ತ್ವಂ ದಾಶುಷೋ ಹವಿರ್ದತ್ತವತೋ ನೄನ್ ಕರ್ಮಣಾಂ ನೇತೄನ್ಯ-ಜಮಾನಾನ್ ಪಾಹಿ । ಧನಾದಿದಾನೇನ ರಕ್ಷ ॥ ನೄँಃ ಪಾಹೀತ್ಯತ್ರ ಸಂಹಿತಾಯಾಂ ನೄನ್ಪೇ । ಪಾ. ೮-೩-೧೦ । ಇತಿ ನಕಾರಸ್ಯ ರುತ್ವಂ । ಅತ್ರಾನುನಾಸಿಕಃ । ಪಾ. ೮.೩.೨ । ಇತಿ ಪೂರ್ವಸ್ಯಾನುನಾಸಿಕಃ ॥**

ಕಿಂಚ ಗಿರಸ್ತ್ವದ್ವಿಷಯಾಃ ಸ್ತುತೀಃ ಶೃಣುಧಿ । ಅವಹಿತಃ ಸ ಞ್ಛೃಣು ॥ ಶ್ರು ಶ್ರವಣೇ । ಶ್ರುಶೃಣುಪೃ ಇತ್ಯಾದಿನಾ ಹೇರ್ಧ್ಯಾದೇಶಃ ॥ ಉತಾಪಿ ಚ ತ್ಮನಾತ್ಮನೈವ ಸ್ವಯಮೇವ ತೋಕಮಸ್ಮದೀಯಂ ತನಯಂ ಪುತ್ರಂ ರಕ್ಷ । ಪಾಲಯ । ಆತ್ಮನೇತಿ ಸರ್ವತ್ರ ಸಂಬಧ್ಯತೇ । ಆತ್ಮನಾ ಸ್ವಯಮೇವ ರಕ್ಷ । ತ್ವದನ್ಯಂ ಪಾಲಯಿತಾರಂ ನ ವಿಂದಾಮಃ । ತ್ವಮೇವಾಸ್ಮದೀಯಂ ಸ್ತೋತ್ರಂ ಶೃಣು ॥

॥ ಪ್ರತಿಪದಾರ್ಥ ॥

**ಯವಿಷ್ಠ**—ಅತ್ಯಂತ ಯುವಕನಾದ ಎಲೈ ಅಗ್ನಿಯೇ । **ತ್ವಂ**—ನೀನು । **ನೄನ್**—ಯಜ್ಞಕರ್ಮನೇತೃಗಳಾದ ಯಜಮಾನರನ್ನು । **ಪಾಹಿ**—ಧನಾದಿದಾನದಿಂದ ರಕ್ಷಿಸು । **ಗಿರಃ**—ನಿನ್ನನ್ನುದ್ದೇಶಿಸಿ ಪಠಿಸುವ ಸ್ತುತಿವಾಕ್ಯಗಳನ್ನು । **ಶೃಣುಧಿ**—ಸಾವಧಾನದಿಂದ ಕೇಳು । **ಉತ**—ಮತ್ತು । **ತ್ಮನಾ**—ಸ್ವಯಂ ನೀನೇ । **ತೋಕಂ**—ನಮ್ಮ ಪುತ್ರರನ್ನು । **ರಕ್ಷ**—ರಕ್ಷಿಸು.

॥ ಭಾವಾರ್ಥ ॥

ಅತ್ಯಂತ ಯುವಕನಾದ ಎಲೈ ಅಗ್ನಿಯೇ, ನೀನು ಯಜ್ಞಕರ್ಮಗಳನ್ನು ನೆರವೇರಿಸುತ್ತಿರುವ ಯಜಮಾನರನ್ನು ಧನಾದಿಗಳಿಂದ ರಕ್ಷಿಸು. ನಿನ್ನನ್ನುದ್ದೇಶಿಸಿ ಪಠಿಸುವ ಸ್ತುತಿವಾಕ್ಯಗಳನ್ನು ಮನಸ್ಸಿಟ್ಟು ಸಾವಧಾನವಾಗಿ ಕೇಳು ಮತ್ತು ಸ್ವಯಂ ನೀನೇ ನಮ್ಮ ಪುತ್ರರನ್ನು ಸಂರಕ್ಷಿಸು.

## English Translation

Ever-youthful (Agni) protect your offerers, hear our praises, and yourself guard our offspring.

॥ ಸಂಹಿತಾಪಾಠಃ ॥

ಕಯಾ ತೇ ಅಗ್ನೇ ಅಂಗಿರ ಊರ್ಜೋ ನಪಾದುಪಸ್ತುತಿಂ ।
ವರಾಯ ದೇವ ಮನ್ಯವೇ ॥ ೪ ॥

॥ ಪದಪಾಠಃ ॥

ಕಯಾ । ತೇ । ಅಗ್ನೇ । ಅಂಗಿರಃ । ಊರ್ಜಃ । ನಪಾತ್ । ಉಪಸ್ತುತಿಂ ।
ವರಾಯ । ದೇವ । ಮನ್ಯವೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಂಗಿರೋಽಂಗಿರಸಾಂ ವರಿಷ್ಠ । ಯದ್ವಾ । ಅಂಗತಿ ಸರ್ವತ್ರ ಗಚ್ಛತೀತ್ಯಂಗಿರಾಃ । ತಾದೃಶ ಹೇ ಊರ್ಜೋ ನಪಾತ್ । ನಪಾದಿತ್ಯಪತ್ಯನಾಮ । ಅನ್ನಸ್ಯ ಪುತ್ರ । ಹವಿರ್ಭಿರ್ವರ್ಧಮಾನತ್ವಾತ್ ।

**ಯದ್ವಾ । ನಪಾದಿತಿ ನಪ್ತಾ । ಹವಿರ್ಲಕ್ಷಣಸ್ಯಾನ್ನಸ್ಯ ನಪ್ತಃ । ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯ-ಮುಪತಿಷ್ಠತೇ । ಆದಿತ್ಯಾಜ್ಜಾಯತೇ ವೃಷ್ಟಿರಿತಿ । ವೃಷ್ಟೇರೋಷಧಯ ಓಷಧೀಭ್ಯೋಽಗ್ನಿರಿತ್ಯನ್ನಸ್ಯ ನಪ್ತಾ । ಹೇ ದೇವ ದ್ಯೋತಮಾನಾಗ್ನೇ ವರಾಯ ಸರ್ವೈರ್ವರಣೀಯಾಯ ಮನ್ಯವೇ ಶತ್ರೂನತಿಮನ್ಯ-ಮಾನಾಯ ತೇ ತುಭ್ಯಂ ಕಯಾ ಕೀದೃಶ್ಯಾ ವಾಚೋಪಸ್ತುತಿಮುಪಸ್ತೋತ್ರಮುಹಂ ಭರೇಯಂ । ತ್ವಂ ಮಹಾನ್ ಖಲ್ವಹಮಲ್ಪಃ । ತದರ್ಥಂ ಸ್ತುತಿಂ ಕುರ್ಯಾಮಿತ್ಯೃಷಿರಗ್ನಿಂ ಪ್ರತಿ ವದತಿ ॥**

॥ ಪ್ರತಿಪದಾರ್ಥ ॥

**ಅಂಗಿರಃ**—ಅಂಗಿರ ಎಂಬ ಹೆಸರಿನಿಂದ ಪ್ರಸಿದ್ಧನಾದವನೂ । **ಊರ್ಜೋನಪಾತಂ**—ಅನ್ನಕ್ಕೆ ಪುತ್ರನೆನಿಸುವವನೂ । **ದೇವ**—ಪ್ರಕಾಶಮಾನನೂ ಆದ । **ಅಗ್ನೇ**—ಎಲೈ ಅಗ್ನಿಯೇ । **ವರಾಯ**—ಸರ್ವರಿಂದಲೂ ಅಪೇಕ್ಷಿಸಲ್ಪಡುವವನೂ । **ಮನ್ಯವೇ**—ಶತ್ರುಗಳನ್ನು ನಿರ್ಲಕ್ಷಿಸುವವನೂ ಆದ । **ತೇ**—ನಿನಗೆ । **ಕಯಾ**—ಯಾವ ವಿಧವಾದ ವಾಕ್ಯಗಳಿಂದ । **ಉಪಸ್ತುತಿಂ**—ಸ್ತೋತ್ರವನ್ನು ಅರ್ಪಿಸಬಲ್ಲೆನು ?

॥ ಭಾವಾರ್ಥ ॥

ಅಂಗಿರ ಎಂಬ ಹೆಸರಿನಿಂದ ಪ್ರಸಿದ್ಧನಾದವನೂ, ಅನ್ನಕ್ಕೆ ಪುತ್ರನೆನಿಸುವವನೂ, ಪ್ರಕಾಶಮಾನನೂ ಆದ ಎಲೈ ಅಗ್ನಿಯೇ, ಸರ್ವರಿಂದಲೂ ಅಪೇಕ್ಷಿಸಲ್ಪಡುವವನೂ, ಶತ್ರುಗಳನ್ನು ತಿರಸ್ಕಾರಭಾವದಿಂದ ನೋಡುವವನೂ ಆದ ನಿನಗೆ ಯಾವ ವಿಧವಾದ ವಾಕ್ಯಗಳಿಂದ ಸ್ತುತಿಯನ್ನು ನಿರ್ಮಿಸಿ ಪಠಿಸಬಲ್ಲೆನು ?

## English Translation

Divine Agni Angiras, son of food, with what voice (shall I utter) my praise to you, most excellent scorner of enemies ?

॥ ವಿಶೇಷವಿಷಯಗಳು ॥

**ಅಂಗಿರಃ—ಅಂಗತಿ ಸರ್ವತ್ರ ಗಚ್ಛತೀತ್ಯಂಗಿರಾಃ ।** ಸಮಸ್ತ ಪ್ರದೇಶಗಳಲ್ಲಿಯೂ ವ್ಯಾಪಿಸುವುದರಿಂದ ಅಥವಾ ಸರ್ವತ್ರ ಸಂಚಾರವಿರುವುದರಿಂದ ಅಗ್ನಿಗೆ ಅಂಗಿರಾಃ ಎಂಬ ಹೆಸರು ಬಂದಿದೆ. ಅಥವಾ ಅಗ್ನಿಗೆ ಅಂಗಿರಾಃ ಎಂಬ ಹೆಸರು ಬರಲು ಒಂದು ಐತಿಹಾಸಿಕವಿವರಣೆ ಇರುವುದು.

ಈ ಸೂಕ್ತದಲ್ಲಿಯೂ ಋಗ್ವೇದದ ಇನ್ನೂ ಅನೇಕ ಇತರ ಋಕ್ಕುಗಳಲ್ಲಿಯೂ **ಅಂಗಿರಃ** ಎಂಬ ಶಬ್ದವನ್ನು ಅಗ್ನಿಯನ್ನು ಸಂಬೋಧಿಸುವುದಕ್ಕಾಗಿ ಉಪಯೋಗಿಸಿದೆ. ಈ ವಿಚಾರದಲ್ಲಿ ವಿವರಣೆಯು ಅವಶ್ಯಕವಾಗಿರುವುದು. **ಯೇಽಙ್ಗಾರಾ ಆಸಂಸ್ತೇಽಙ್ಗಿರಸೋಽಭವನ್** (ಐ. ಬ್ರಾ ೩-೩೪) ಅಗ್ನಿ ಸಂಬಂಧವಾದ ಅಂಗಾರಗಳು (ಕೆಂಡಗಳು) ಅಂಗಿರಸರೆಂದು ಹೆಸರನ್ನು ಪಡೆದವು-ಎಂದು ಐತರೇಯಬ್ರಾಹ್ಮಣದಲ್ಲಿ ಪ್ರಜಾಪತಿದುಹಿತೃಧ್ಯಾನೋಪಾಖ್ಯಾನದಲ್ಲಿ ಹೇಳಿದೆ. ಪೂರ್ವದಲ್ಲಿ ಪ್ರಜಾಪತಿಯು (ಬ್ರಹ್ಮನು) ತನ್ನ ಮಗಳನ್ನು (ಉಷಸ್ಸು ಅಥವಾ ದ್ಯುರೂಪ) ಕೆಟ್ಟಭಾವನೆಯಿಂದ (ಕಾಮಲಾಲಸೆಯಿಂದ) ಮನಸ್ಸಿನಲ್ಲಿ ಧ್ಯಾನಿಸಿದನು. ಅದು ದೇವತೆಗಳಿಗೆ ಗೊತ್ತಾಗಿ ಈ ಕೆಟ್ಟಕೆಲಸವನ್ನು ಮಾಡದಂತೆ ತಡೆಯಬೇಕೆಂದು ಯೋಚಿಸಿದರು. ಆದರೆ ಪ್ರಜಾಪತಿ

ಯನ್ನು ಶಿಕ್ಷಿಸಿ ಈ ಕೆಲಸ ಮಾಡದಂತೆ ನಿರ್ಬಂಧಪಡಿಸಲು ದೇವತೆಗಳಿಗೆ ಶಕ್ತಿಯಿರಲಿಲ್ಲ. ಆದುದರಿಂದ ದೇವತೆಗಳೆಲ್ಲರೂ ಸೇರಿ ಘೋರವಾದ ತಮ್ಮ ತಮ್ಮ ಸ್ವರೂಪವನ್ನು ಒಟ್ಟಿಗೆ ಒಂದುಗೂಡಿಸಿ ರುದ್ರನೆಂಬ ದೇವನನ್ನು ಉತ್ಪನ್ನ ಮಾಡಿ, ಈ ಪ್ರಜಾಪತಿಯನ್ನು ಶಿಕ್ಷಿಸೆಂದು ಹೇಳಿದರು. ಇದನ್ನು ತಿಳಿದು ಪ್ರಜಾಪತಿಯು ಭೀತನಾಗಿ ಮೃಗರೂಪವನ್ನು ಧರಿಸಿ ಅಂತರಿಕ್ಷಕ್ಕೆ ನೆಗೆದನು. ಮೃಗನಕ್ಷತ್ರವೆಂಬ ಹೆಸರಿನಿಂದ ಇರುವ ಪ್ರಜಾಪತಿಯನ್ನು ಈಗಲೂ ನೋಡಬಹುದು. ಆಗ ರುದ್ರನು ಆರ್ದ್ರಾನಕ್ಷತ್ರರೂಪದಿಂದ ಕಾಣಿಸಿಕೊಂಡು ಪ್ರಜಾಪತಿಯಮೇಲೆ ಬಾಣಪ್ರಯೋಗ ಮಾಡಿದನು. ಆಗ ಪ್ರಜಾಪತಿಗೆ ವೀರ್ಯಸ್ಖಲನವಾಯಿತು. ಆ ವೀರ್ಯವನ್ನು ಮರುತ್ತುಗಳು ನಾನಾ ದೆಸೆಗೆ ಹರಡಿ ಭಸ್ಮಮಾಡಿದವು. ಅದರಿಂದ (ಆ ವೀರ್ಯದಿಂದ) ಮೊದಲು ಆದಿತ್ಯನೂ ಬಳಿಕ ಭೃಗುವಾರುಣಿಯೂ ಹುಟ್ಟಿದರು. ಉಳಿದ ಅಂಗಾರಗಳಿಂದ (ಕೆಂಡಗಳಿಂದ) ಅಂಗಿರಸರೆಂಬುವರ ಉತ್ಪತ್ತಿಯಾಯಿತು ಎಂದು ಹೇಳಿದೆ.

ಪುರಾಣಾದಿಗಳಲ್ಲಿ ಅಂಗಿರಾಃ ಎಂಬ ಋಷಿಯು ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬನೆಂದು ಹೇಳಿದೆ. ವೇದಗಳಲ್ಲಿ ಈ ಅಂಗಿರನೆಂಬುವನು ಬಹುಮುಖ್ಯನಾದ ಒಬ್ಬ ಋಷಿಯು ಮತ್ತು ಅನೇಕ ಪ್ರಸಿದ್ಧರಾದ ಋಷಿಗಳಿಗೆ ಮೂಲ ಪುರುಷನು. ಮಹಾಭಾರತದ ವನಪರ್ವದಲ್ಲಿ ಮಾರ್ಕಂಡೇಯಯುಧಿಷ್ಠಿರಸಂವಾದದಲ್ಲಿ ಈ ವಿಷಯವಿದೆ. ಕಾರಣಾಂತರದಿಂದ ಅಗ್ನಿಯು ತನ್ನ ಕರ್ತವ್ಯವನ್ನು ಬಿಟ್ಟು ಪ್ರಚ್ಛನ್ನವೇಷದಿಂದ ವನಕ್ಕೆ ಹೊರಟುಹೋದನು. ಆಗ ಅಂಗಿರಾ ಎಂಬ ಋಷಿಯು ಅಗ್ನಿಗೆ ಬದಲಾಗಿ ಯಜ್ಞದಲ್ಲಿ ದೇವತೆಗಳಿಗೆ ಹವಿರ್ಭಾಗಗಳನ್ನು ಒಯ್ಯುತ್ತ ಅಗ್ನಿಯ ಕೆಲಸವನ್ನು ಮಾಡುತ್ತಿದ್ದನು. ಮತ್ತು ಅಗ್ನಿಯನ್ನು ಹಿಂದಕ್ಕೆ ಬಂದು ತನ್ನ ಕರ್ತವ್ಯವನ್ನು ನೆರವೇರಿಸಬೇಕೆಂದು ಪ್ರಾರ್ಥಿಸಿದನು. ಅಗ್ನಿಯ ಕರ್ತವ್ಯಗಳನ್ನು ನೆರವೇರಿಸುತ್ತಿದ್ದುದರಿಂದ ಈ ಅಂಗಿರಾಋಷಿಗೆ ಅಗ್ನಿಯ ಪುತ್ರನೆಂದೂ ಈ ಋಷಿಯ ವಂಶೀಕರಿಗ ಅಂಗಿರಸ್ಸಗಳೆಂದೂ ಹೆಸರು ಪ್ರಸಿದ್ಧವಾಯಿತು.

ಇಂತಹ ಇನ್ನೂ ಕೆಲವು ಉಪಾಖ್ಯಾನಗಳು ಪುರಾಣಗಳಲ್ಲಿ ಇರುವವು. ಇವಲ್ಲದೆ ಋಗ್ವೇದ ಸಂಹಿತೆಯಲ್ಲಿಯೇ—

**ತೇ ಆಂಗಿರಸಃ ಸೂನವಸ್ತೇ ಅಗ್ನೇಃ ಪರಿಜಜ್ಞಿರೇ ।**

(ಋ. ಸಂ. ೧೦-೬೨-೫)

ಎಂದರೆ ಅಂಗಿರಸ್ಸೆಂಬ ಋಷಿಗಳು ಅಗ್ನಿಯ ಪುತ್ರರು ಎಂದು ಸ್ಪಷ್ಟವಾಗಿ ಹೇಳಿದೆ. ಈ ಋಕ್ಕನ್ನು ಭಾಷ್ಯಕಾರರು ಏಕೆ ಉದಹರಿಸಲಿಲ್ಲವೋ ತಿಳಿಯುವುದಿಲ್ಲ.

ಈ ಅಂಗಿರಾ ಎಂಬ ಋಷಿಯು ಬಹು ಪುರಾತನಕಾಲದವನೆಂದೂ ಋಗ್ವೇದದ ಅನೇಕ ಋಷಿಗಳು ಈತನನ್ನು ತಮ್ಮ ವಂಶದ ಮೂಲಪುರುಷನೆಂದು ಅಲ್ಲಲ್ಲಿ ಹೇಳಿಕೊಂಡಿರುವುದೂ ಋಗ್ವೇದದ ಕೆಲವು ಋಕ್ಕುಗಳಿಂದ ವ್ಯಕ್ತವಾಗುವುದು.

**ಮನುಷ್ವದಗ್ನೇ ಅಂಗಿರಸ್ವದಂಗಿರೋ ಯಯಾತಿವತ್ಸದನೇ ಪೂರ್ವವಚ್ಛುಚೇ ॥**

(ಋ. ಸಂ. ೧-೩೧-೧೭)

**ಅಂಗಿರಸ್ವನ್ಮಹಿವ್ರತ ಪ್ರಸ್ಕಣ್ವಸ್ಯ ಶ್ರುಧೀ ಹವಂ ॥**

(ಋ. ಸಂ. ೧-೪೫-೩)

**ದಧ್ಯಙ್ ಹ ಮೇ ಜನುಷಂ ಪೂರ್ವೋ ಅಂಗಿರಾಃ ಪ್ರಿಯಮೇಧಃ ಕಣ್ವೋ ಅತ್ರಿರ್ಮನುರ್ವಿದುಸ್ತೇ ಮೇ ಪೂರ್ವೇ ಮನುರ್ವಿದುಃ ॥**

(ಋ. ಸಂ. ೧-೧೩೯-೯)

ಈ ಋಕ್ಕುಗಳು ಅಂಗಿರಾಋಷಿಯು ಅನೇಕ ಋಷಿಗಳಿಗೆ ಪೂರ್ವೀಕನೆಂದು ತಿಳಿಸುವವು. ಈ ಅಂಗಿರಾಋಷಿಯ ವಂಶದವರಲ್ಲಿ ಅಥರ್ವನ್ ಎಂಬುವನು ಮುಖ್ಯನಾದವನು. ಇವನಿಗೆ ಬೃಹಸ್ಪತಿ, ಗೋತಮ, ವೃಷಣ ಎಂಬ ಮೂವರು ಪುತ್ರರು. ವೃಷಣನೆಂಬುವನು ಈ ಆಥರ್ವಣನಿಗೆ ಪಥ್ಯಾ ಎಂಬ ಪತ್ನಿಯಲ್ಲಿ ಹುಟ್ಟಿದ ಪುತ್ರನು. ಇವನ ವಿಚಾರವು ವೇದದಲ್ಲಿ ಅನೇಕಕಡೆ ಸೂಚಿಸಲ್ಪಟ್ಟಿದೆ. ವೃಷಣನ ಮಗನು ಸುಧನ್ವಾನ್ ಆಂಗಿರನೆಂಬುವನು. ಈ ಸುಧನ್ವನಿಗೆ ಋಭು, ವಿಭ್ವನ್, ವಾಜ ಎಂಬ ಮೂವರು ಪುತ್ರರು. ಈ ಮೂವರೂ ಋಭುಗಳೆಂದೇ ವೇದದಲ್ಲಿ ಹೇಳಲ್ಪಟ್ಟಿರುವರು. ಇವರು ತ್ವಷ್ಟೃಪ್ರಜಾಪತಿಯ ಶಿಷ್ಯರೆಂದು ಹೇಳಿದೆ. ಈ ಅಂಗಿರಾಋಷಿಯ ವಂಶದಲ್ಲಿ ಬೃಹಸ್ಪತಿ ಎಂಬ ಹೆಸರಿನ ಋಷಿಗಳು ಮೂವರಿದ್ದರು. ಹಿಂದೆ ಹೇಳಿದ ಋಭುಗಳೂ ಬೃಹಸ್ಪತಿಯೂ ದೇವತೆಗಳೆಂದು ಭಾವಿಸಲ್ಪಟ್ಟು ಅವರ ಸ್ತೋತ್ರರೂಪವಾದ ಅನೇಕ ಋಕ್ಕುಗಳು ಋಗ್ವೇದದಲ್ಲಿವೆ. ಈ ಮೂವರು ಬೃಹಸ್ಪತಿಗಳಲ್ಲಿ ಮೊದಲನೆಯವನು ಪಣಿ ಎಂಬ ದಸ್ಯುರಾಜನನ್ನು ಕೊಂದು ಆವನು ಅಪಹರಿಸಿದ್ದ ಗೋವುಗಳನ್ನು ಹಿಂದಕ್ಕೆ ತಂದನೆಂದೂ, ಅಂಶುಮತೀ ಎಂಬ ನದಿಯ ದಡದಮೇಲೆ ರಾಜ್ಯವಾಳುತ್ತಿದ್ದ ದಾಸನೆಂಬ ಮತ್ತೊಬ್ಬ ದಸ್ಯುಮುಖಂಡನನ್ನು ತನ್ನ ಹತ್ತುಸಾವಿರ ಅನುಚರರೊಡನೆ ಯುದ್ಧಮಾಡಿ ಸೋಲಿಸಿದನೆಂದೂ ಇತಿಹಾಸವಿದೆ ಮತ್ತೊಬ್ಬ ಬೃಹಸ್ಪತಿಯ ಮಗನಾದ ಭರದ್ವಾಜನೆಂಬ ಋಷಿಯು ಶಂಬರನೆಂಬ ದೈತ್ಯನನ್ನು ಸಂಹರಿಸಿದ ದಿವೋದಾಸನೆಂಬುವನಿಗೆ ಪುರೋಹಿತನಾಗಿದ್ದನು. ಅಂತೂ ಅಂಗಿರಾಋಷಿಯ ವಂಶವು ಬಹು ದೊಡ್ಡದು. ಮತ್ತು ಅನೇಕ ಪ್ರಸಿದ್ಧಪುರುಷರು ಈ ವಂಶದವರಾಗಿದ್ದರು ಋಗ್ವೇದದಲ್ಲಿ ಅನೇಕಕಡೆ ಎಂದರೆ ಅಗ್ನಿಶಬ್ದವನ್ನು ಉಪಯೋಗಿಸಬೇಕಾದ ಕಡೆಗಳಲ್ಲಿ ಅಂಗಿರ ಎಂಬ ಶಬ್ದದ ಪ್ರಯೋಗವು ಬಹಳವಾಗಿದೆ.

**ಊರ್ಜೋನಪಾತ್—ಅನ್ನಸ್ಯ ಪುತ್ರ ।** ಅಗ್ನಿಯು ಅನ್ನದ ಪುತ್ರನು ಹೇಗೆ ಎಂಬ ವಿಚಾರದಲ್ಲಿ— **ನಪಾದಿತ್ಯಪತ್ಯನಾಮ । ಹವಿರ್ಭಿರ್ವರ್ಧಮಾನತ್ವಾತ್ ।** ನಪಾತ್ ಎಂದರೆ ಅಪತ್ಯ ಅಥವಾ ಪುತ್ರನೆಂದು ಹೆಸರು ಅಗ್ನಿಯಲ್ಲಿ ಹೋಮಮಾಡುವ ಹವಿಸ್ಸಿನಿಂದ ಅಗ್ನಿಯು ಪ್ರವೃದ್ಧಮಾನನಾಗುವುದರಿಂದ ಅಗ್ನಿಯನು ಹವಿಸ್ಸಿನ ಅಥವಾ ಅನ್ನದ ಪುತ್ರನೆಂದು ಹೇಳಬಹುದು ಅಥವಾ **ನಪಾದಿತಿ ನಪ್ತಾ ಹವಿರ್ಲಕ್ಷಣಸ್ಯಾನ್ನಸ್ಯ ನಪ್ತಾಃ । ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ । ಆದಿತ್ಯಾಜ್ಜಾಯತೇ ವೃಷ್ಟಿಃ । ವೃಷ್ಟೇರೋಷಧಯ ಓಷಧೀಭ್ಯೋಽಗ್ನಿರಿತ್ಯನ್ನಸ್ಯ ನಪ್ತಾ ॥** ಅಥವಾ ಊರ್ಜೋನಪಾತ್ ಎಂಬ ಶಬ್ದಕ್ಕೆ ಅನ್ನದ ಮೊಮ್ಮಗನು (ಪುತ್ರನ ಪುತ್ರನು) ಎಂದೂ ಅರ್ಥವನ್ನೂ ಹೇಳಬಹುದು. ಅಗ್ನಿಯು ಹೇಗೆ ಅನ್ನದ ಮೊಮ್ಮಗನು ಎಂದರೆ—ಅಗ್ನಿಯಲ್ಲಿ ಹೋಮಮಾಡಿದ ಹವಿರಾದಿಗಳು ಸ್ವರ್ಗದಲ್ಲಿರುವ ಆದಿತ್ಯನಿಗೆ ಹೋಗಿ ಸೇರುವವು. ಆದಿತ್ಯನಿಂದ ವೃಷ್ಟಿ (ಮಳೆ) ಯೂ ವೃಷ್ಟಿಯಿಂದ ಓಷಧಿವನಸ್ಪತಿಗಳೂ, ಓಷಧಿಗಳಿಂದ (ವೃಕ್ಷಗಳಿಂದ ಎಂದರೆ ವೃಕ್ಷರೂಪವಾದ

ಅರಣಿಗಳಿಂದ) ಅಗ್ನಿಯೂ ಉತ್ಪನ್ನವಾಗುವುದು. ಆದುದರಿಂದ ಅಗ್ನಿಯು ಹವಿಸ್ಸಿನ ಅಥವಾ ಅನ್ನದ ನಪ್ತಾ ಎಂದರೆ ಮೊಮ್ಮಗನು ಎಂದು ಹೇಳಲ್ಪಡುವುದು

॥ ಸಂಹಿತಾಪಾಠಃ ॥

ದಾಶೇಮ ಕಸ್ಯ ಮನಸಾ ಯಜ್ಞಸ್ಯ ಸಹಸೋ ಯಹೋ ।

ಕದು ವೋಚ ಇದಂ ನಮಃ ॥ ೫ ॥

॥ ಪದಪಾಠಃ ॥

ದಾಶೇಮ । ಕಸ್ಯ । ಮನಸಾ । ಯಜ್ಞಸ್ಯ । ಸಹಸಃ । ಯಹೋ ಇತಿ ।

ಕತ್ । ಊಂ ಇತಿ । ವೋಚೇ । ಇದಂ । ನಮಃ ॥ ೫ ॥

॥ ಸಾಯಣಭಾಷ್ಯಂ ॥

ಋಷಿರಗ್ನಿಂ ಪ್ರತಿ ಬ್ರೂತೇ । ಹೇ ಸಹಸೋ ಯಹೋ । ಯಹುರಿತ್ಯಪತ್ಯನಾಮ । ಬಲೇನ ನಿಷ್ಪಾದ್ಯಮಾನತ್ವಾದ್ಬಲಸ್ಯ ಪುತ್ರ ಹೇ ಅಗ್ನೇ ಕಸ್ಯ ಕೀದೃಶಸ್ಯ ಯಜ್ಞಸ್ಯ ಯಜ್ಞವತೋ ಯಜನೀಯ-ದೇವವತೋ ಯಜಮಾನಸ್ಯ ಮನಸಾ ಯುಕ್ತಾಃ ಸಂತೋ ಹವೀಂಷಿ ತುಭ್ಯಂ ವಯಂ ದಾಶೇಮ । ಪ್ರಯಚ್ಛೇಮ ॥ ಪೂಜಾಯಾಂ ಬಹುವಚನಂ ॥ ಕಿಂಚ ತುಭ್ಯಮಿದಂ ನಮೋ ಹವಿರ್ನಮಸ್ಕಾರಂ ವಾ ಕತ್ ಕದಾ ವೋಚೇ । ಅಹಂ ವದಾಮಿ। ಉ ಇತಿ ಪ್ರಶ್ನೇ। ಋಷಿಃ ಕದಾ ಯಕ್ಷ್ಯಾಮಿ ಕದಾ ಸ್ತೋಷ್ಯಾ-ಮ್ಯಾತ್ಯಗ್ನಿಂ ಪೃಚ್ಛತಿ ॥ ವೋಚೇ । ವಚ್ಯಾದೇಶಸ್ಯ ಲುಙ್ಯಾತ್ಮನೇಪದ ಉತ್ತಮೈಕವಚನೇ ರೂಪಂ ॥

॥ ಪ್ರತಿಪದಾರ್ಥ ॥

**ಹೇ ಸಹಸೋ ಯಹೋ**—ಶಕ್ತಿಪ್ರಯೋಗದಿಂದ ಉತ್ಪನ್ನನಾಗುವ ಎಲೈ ಅಗ್ನಿಯೇ । **ಕಸ್ಯ**—ಯಾವ । **ಯಜ್ಞಸ್ಯ**—ಯಜಮಾನನ । **ಮನಸಾ**—ಮನಸ್ಸಿನಿಂದ ಯುಕ್ತರಾದ ನಾವು ನಿನಗಾಗಿ । **ದಾಶೇಮ**—ಹವಿಸ್ಸನ್ನು ಅರ್ಪಿಸೋಣ ? । **ಇದಂ ನಮಃ**—ಈ ಹವಿಸ್ಸನ್ನು ಅಥವಾ ನಮಸ್ಕಾರವನ್ನು । **ಕತ್**—ಯಾವಾಗ । **ವೋಚೇ ಉ**—ಅರ್ಪಿಸುವೆನು ಅಥವಾ ಹೇಳುವೆನು ?

॥ ಭಾವಾರ್ಥ ॥

ಶಕ್ತಿಪ್ರಯೋಗದಿಂದ ಜನಿಸುವ ಎಲೈ ಅಗ್ನಿಯೇ, ಯಾವ ಯಜ್ಞದ ಅಥವಾ ಯಜಮಾನನ ಇಷ್ಟಪ್ರಕಾರವಾಗಿ ನಿನಗೆ ಹವಿಸ್ಸನ್ನರ್ಪಿಸೋಣ ? ಈ ಹವಿಸ್ಸನ್ನು ಅಥವಾ ನಮಸ್ಕಾರಪೂರ್ವಕಸ್ತುತಿಯನ್ನು ಯಾವಾಗ ನಿನಗೆ ಅರ್ಪಿಸುವೆನು ?

English Translation

Son of strength, what worshipper's (offerings) shall we present to you with devoted mind, and when shall I utter to you this praise?

॥ ಸಂಹಿತಾಪಾಠಃ ॥

ಅಧಾ ತ್ವಂ ಹಿ ನಸ್ಕರೋ ವಿಶ್ವಾ ಅಸ್ಮಭ್ಯಂ ಸುಕ್ಷಿತೀಃ ।
ವಾಜದ್ರವಿಣಸೋ ಗಿರಃ ॥ ೬ ॥

॥ ಪ್ರತಿಪದಾರ್ಥ ॥

ಅಧ । ತ್ವಂ । ಹಿ । ನಃ । ಕರಃ । ವಿಶ್ವಾಃ । ಅಸ್ಮಭ್ಯಂ । ಸುಽಕ್ಷಿತೀಃ ।
ವಾಜಽದ್ರವಿಣಸಃ । ಗಿರಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಅಧಾನಂತರಂ ತ್ವಂ । ಹಿರವಧಾರಣೇ । ತ್ವಮೇವಾಸ್ಮಭ್ಯಂ ಕರಃ । ಕುರು । ದೇಹೀತ್ಯರ್ಥಃ ॥ ಕರೋತೇರ್ಲೇಟ್ಯಡಾಗಮಃ ॥ ಕಿಮಿತ್ಯಪೇಕ್ಷಾಯಾಮಾಹ । ನೋಽಸ್ಮದೀಯಾ ಗಿರಸ್ತ್ವದ್ವಿಷಯಾ ವಿಶ್ವಾಃ ಸರ್ವಾಃ ಸ್ತುತೀರೇವಂ ಕುರು ಯಥಾ ಸುಕ್ಷಿತೀಃ । ಕ್ಷಿಯಂತಿ ನಿವಸಂತ್ಯತ್ರೇತಿ ಕ್ಷಿತಯೋ ಗೃಹಾಃ । ಶೋಭನನಿವಾಸಾಃ । ಯದ್ವಾ । ಕ್ಷಿತಯೋ ಮನುಷ್ಯಾಃ । ಕಲ್ಯಾಣಪುತ್ರಪೌತ್ರಾದಿಯುಕ್ತಾಃ । ತಥಾ ವಾಜದ್ರವಿಣಸೋಽನ್ನಯುಕ್ತಧನವತೀಃ । ಅಥವಾ ವಾಜೋ ದೀಪ್ತಿಃ । ಸರ್ವತೋ ದೀಪ್ತಧನಾಶ್ಚ ಕುರು । ತ್ವಮಸ್ಮಾಭಿಃ ಸ್ತುತಃ ಸನ್ ಗೃಹಪುತ್ರಾನ್ನಧನಾದೀನಿ ದೇಹೀತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಅಧ**—ಅನಂತರ । **ತ್ವಂ ಹಿ**—ನೀನೇ । **ಅಸ್ಮಭ್ಯಂ**—ನಮಗೆ । **ಕರಃ**—ಧನಾದಿಗಳನ್ನು ಕೊಡು । **ನಃ**—ನಮ್ಮ । **ವಿಶ್ವಾಃ**—ಸಮಸ್ತವಾದ । **ಗಿರಃ**—ಸ್ತುತಿರೂಪವಾದ ವಾಕ್ಯಗಳು । **ಸುಕ್ಷಿತೀಃ**—ವಾಸಯೋಗ್ಯವಾದ ಗೃಹಗಳನ್ನು ಅಥವಾ ಪುತ್ರಪೌತ್ರಾದಿ ಸಂತತಿಯನ್ನು । **ವಾಜದ್ರವಿಣಸಃ**—ಅನ್ನ, ಧನ ಇವುಗಳಿಂದ ಸಮೃದ್ಧವಾಗಿರುವಂತೆ (**ಕರಃ**—ಮಾಡು).

॥ ಭಾವಾರ್ಥ ॥

ಎಲೈ ಅಗ್ನಿಯೇ, ನಿನ್ನನ್ನುದ್ದೇಶಿಸಿ ನಾವು ಪಠಿಸುವ ಸ್ತುತಿರೂಪವಾದ ವಾಕ್ಯಗಳು ನಿನ್ನ ಅನುಗ್ರಹದಿಂದ ನಮಗೆ ವಾಸಯೋಗ್ಯವಾದ ಗೃಹಗಳನ್ನೂ ಅಥವಾ ಪುತ್ರಪೌತ್ರಾದಿ ಸಂತತಿಗಳನ್ನೂ ಕೊಟ್ಟು ಆ ಗೃಹಾದಿಗಳು ಅನ್ನ ಧನ ಮೊದಲಾದ ಸಂಪತ್ಸಮೃದ್ಧವಾಗಿರುವಂತೆ ಆಗಲಿ.

## English Translation

Cause all our praises to bring to us excellent dwellings and abundance of wealth in food.

॥ ಸಂಹಿತಾಪಾಠಃ ॥

ಕಸ್ಯ ನೂನಂ ಪರೀಣಸೋ ಧಿಯೋ ಜಿನ್ವಸಿ ದಂಪತೇ ।

ಗೋಷಾತಾ ಯಸ್ಯ ತೇ ಗಿರಃ ॥ ೭ ॥

॥ ಪದಪಾಠಃ ॥

ಕಸ್ಯ । ನೂನಂ । ಪರೀಣಸಃ । ಧಿಯಃ । ಜಿನ್ವಸಿ । ದಂऽಪತೇ ।

ಗೋऽಸಾತಾ । ಯಸ್ಯ । ತೇ । ಗಿರಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ದಂಪತೇ । ಯದಾ ಗಾರ್ಹಪತ್ಯೇ ವರ್ತಸೇ ತದಾ ಜಾಯಾಪತಿಸ್ವರೂಪೋऽಸಿ । ತಸ್ಮಾದ್ದಂಪತಿಶಬ್ದೇನಾಗ್ನಿರಭಿಧೀಯತೇ । ತಥಾವಿಧ ಹೇ ಅಗ್ನೇ ನೂನಮಿದಾನೀಂ ಕಸ್ಯ ಕೀದೃಶಸ್ಯ ಜನಸ್ಯ ಪರೀಣಸೋ ಬಹೂನಿ ಧಿಯಃ ಕರ್ಮಾಣಿ ಜಿನ್ವಸಿ । ಪ್ರೀಣಯಸಿ ಯಸ್ಯ ತೇ ತವ ಸಂಬಂಧಿನ್ಯೋ ಗಿರಃ ಸ್ತುತಯೋ ಗೋಸಾತಾ ಗೋಸಾತೌ ಗವಾಂ ಲಾಭೇ ಭವಂತಿ ಖಲು । ತಸ್ಮಾತ್ತ್ವಂ ಕುತ್ರ ತಿಷ್ಠಸಿ । ಅಸ್ಮಾಕಮಿದಾನೀಂ ಗವೇಚ್ಛಾ ಪ್ರವರ್ತತೇ । ಯದ್ವಾ । ಹೇ ಅಗ್ನೇ ತ್ವಮಿದಾನೀಂ ಕಸ್ಯ ಕರ್ಮಾಣಿ ಪ್ರೀಣಯಸಿ । ನ ಕಸ್ಯಾಪೀತ್ಯರ್ಥಃ । ಅಸ್ಮಾಕಮೇವ ಕರ್ಮಾಣಿ ಪ್ರೀಣಯೇತಿ ಭಾವಃ ॥

ಪ್ರತಿಪದಾರ್ಥ ॥

**ದಂಪತೇ**—ಗಾರ್ಹಪತ್ಯಾಗ್ನಿಕುಂಡದಲ್ಲಿ ಸ್ಥಿತನಾಗಿರುವ ಜಾಯಾಪತಿಸ್ವರೂಪನಾದ ಎಲೈ ಅಗ್ನಿಯೇ । **ನೂನಂ**—ಈಗ । **ಕಸ್ಯ**—ಯಾರ । **ಪರೀಣಸಃ**—ಬಹಳವಾದ । **ಧಿಯಃ**—ಕರ್ಮಗಳು । **ಜಿನ್ವಸಿ**—ನಿನ್ನನ್ನು ಪ್ರೀತಿಗೊಳಿಸುತ್ತವೆ? । **ಯಸ್ಯ**—ಯಾರ (ಯಾರಿಂದ ಪಠಿತವಾದ) । **ತೇ ಗಿರಃ**—ನಿನ್ನನ್ನುದ್ದೇಶಿಸಿದ ಸ್ತುತಿ ವಾಕ್ಯಗಳು । **ಗೋಸಾತಾ**—ಗೋವುಗಳ ಲಾಭವನ್ನು ದೊರಕಿಸಿಕೊಡಬಲ್ಲವು ?

॥ ಭಾವಾರ್ಥ ॥

ಗಾರ್ಹಪತ್ಯಾಗ್ನಿಯಲ್ಲಿ ಸ್ಥಿತನಾಗಿರುವ ಎಲೈ ಅಗ್ನಿಯೇ, ನೀನು ಈಗ ಅನೇಕವಿಧವಾದ ಯಾರ ಯಜ್ಞ ಕರ್ಮಗಳಿಂದ ಸಂತೋಷಪಡುವೆ ? ನಿನ್ನನ್ನುದ್ದೇಶಿಸಿ ಪಠಿಸುವ ಯಾರ ಸ್ತುತಿವಾಕ್ಯಗಳಿಗೆ ಪ್ರೀತನಾಗಿ ಗೋವುಗಳನ್ನು ಅನುಗ್ರಹಿಸುವೆ ?

## English Translation

Whose many offerings do you gladden, Agni,—you who are the lord of the house, and whose praises bring wealth of cows ?

॥ ಸಂಹಿತಾಪಾಠಃ ॥

ತಂ ಮರ್ಜಯಂತ ಸುಕ್ರತುಂ ಪುರೋಯಾವಾನಮಾಜಿಷು ।
ಸ್ವೇಷು ಕ್ಷಯೇಷು ವಾಜಿನಂ ॥ ೮ ॥

॥ ಪದಪಾಠಃ ॥

ತಂ । ಮರ್ಜಯಂತ । ಸುऽಕ್ರತುಂ । ಪುರಃऽಯಾವಾನಂ । ಆಜಿಷು ।
ಸ್ವೇಷು । ಕ್ಷಯೇಷು । ವಾಜಿನಂ ॥ ೮ ॥

॥ ಸಾಯಣಭಾಷ್ಯಂ ॥

ಅಗ್ನಿಮಂಥನೇ ತಂ ಮರ್ಜಯಂತ ಸುಕ್ರತುಮಿತ್ಯೇಷಾ । ಸೂತ್ರಿತಂ ಚ । ತಂ ಮರ್ಜಯಂತ ಸುಕ್ರತುಂ ಯಜ್ಞೇನ ಯಜ್ಞಮಯಜಂತ ದೇವಾಃ । ಆ. ೨-೧೬ । ಇತಿ ॥

ಸುಕ್ರತಂ ಶೋಭನಪ್ರಜ್ಞಂ ಸುಕರ್ಮಾಣಂ ವಾಜಿಷು ಸಂಗ್ರಾಮೇಷು ಪುರೋಯಾವಾನಂ ಶತ್ರುಹನನಾರ್ಥಂ ಪುರತ ಏವ ಗಂತಾರಂ ವಾಜಿನಂ ಬಲವಂತಂ ತಾದೃಶಮಗ್ನಿಂ ಯಜಮಾನಾಃ ಸ್ವೇಷ್ವಾತ್ಮೀಯೇಷು ಕ್ಷಯೇಷು ಗೃಹೇಷು ಮರ್ಜಯಂತ । ನಿರ್ಮಥಿತಮಗ್ನಿಮಲಂಕುರ್ವಂತಿ । ಪರಿಚರಂತೀತಿ ಯಾವತ್ ॥

॥ ಪ್ರತಿಪದಾರ್ಥ ॥

**ಸುಕ್ರತುಂ**—ಒಳ್ಳೆಯ ಕರ್ಮಕರ್ತನೂ ಅಥವಾ ಯಜ್ಞಕರ್ಮನಿರ್ವಾಹಕನೂ । **ಆಜಿಷು**—ಯುದ್ಧಗಳಲ್ಲಿ । **ಪುರೋಯಾವಾನಂ**—ಶತ್ರುಗಳನ್ನು ಸಂಹರಿಸುವುದಕ್ಕಾಗಿ ಮುನ್ನುಗ್ಗುವವನೂ । **ವಾಜಿನಂ**—ಬಲಶಾಲಿಯೂ ಆದ ಅಗ್ನಿಯನ್ನು ಯಜಮಾನರು । **ಸ್ವೇಷು ಕ್ಷಯೇಷು**—ತಮ್ಮ ಸ್ವಗೃಹಗಳಲ್ಲಿ । **ಮರ್ಜಯಂತ**—ಅಲಂಕರಿಸಿ ಪೂಜಿಸುತ್ತಾರೆ.

॥ ಭಾವಾರ್ಥ ॥

ಒಳ್ಳೆಯ ಕರ್ಮಕರ್ತನೂ ಅಥವಾ ಯಜ್ಞಕರ್ಮನಿರ್ವಾಹಕನೂ ಯುದ್ಧಗಳಲ್ಲಿ ಶತ್ರುಗಳನ್ನು ಸಂಹರಿಸುವುದಕ್ಕಾಗಿ ಮುನ್ನುಗ್ಗುವವನೂ ಅತ್ಯಂತ ಬಲಶಾಲಿಯೂ ಆದ ಅಗ್ನಿಯನ್ನು ಯಜ್ಞಮಾಡುವ ಯಜಮಾನರು ತಮ್ಮ ತಮ್ಮ ಗೃಹಗಳಲ್ಲಿ ಅಲಂಕರಿಸಿ ಪೂಜಿಸುತ್ತಾರೆ.

## English Translation

They keep him bright in their houses, (Agni,) famed for glorious deeds, the mighty one who presses forward in battles.

॥ ವಿಶೇಷವಿಶಯಗಳು ॥

ಅಗ್ನಿಮಥನವೆಂಬ ಯಜ್ಞಾಂಗಕರ್ಮದಲ್ಲಿ **ತಂ ಮರ್ಜಯಂತ** ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ-**ತಂ ಮರ್ಜಯಂತ ಸುಕ್ರತುಂ ಯಜ್ಞೇನ ಯಜ್ಞಮಯಜಂತ ದೇವಾಃ** ಎಂಬ ಸೂತ್ರದಿಂದ (ಆ ೨-೧೬) ವಿವೃತವಾಗಿರುವುದು.

। ಸಂಹಿತಾಪಾಠಃ ।

ಕ್ಷೇತಿ ಕ್ಷೇಮೇಭಿಃ ಸಾಧುಭಿರ್ನಕಿರ್ಯಂ ಘ್ನಂತಿ ಹಂತಿ ಯಃ ।
ಅಗ್ನೇ ಸುವೀರ ಏಧತೇ ॥ ೯ ॥

॥ ಪದಪಾಠಃ ॥

ಕ್ಷೇತಿ । ಕ್ಷೇಮೇಭಿಃ । ಸಾಧುಽಭಿಃ । ನಕಿಃ । ಯಂ । ಘ್ನಂತಿ । ಹಂತಿ । ಯಃ ।
ಅಗ್ನೇ । ಸುಽವೀರಃ । ಏಧತೇ ॥ ೯ ॥

। ಸಾಯಣಭಾಷ್ಯಂ ।

**ಹೇ ಅಗ್ನೇ ಯೋ ಮನುಷ್ಯಃ ಸಾಧುಭಿಃ ಸಾಧಯದ್ಭಿಃ ಕ್ಷೇಮೇಭಿಃ ಪಾಲನೈಃ ಸಹ ಕ್ಷೇತಿ ಸ್ವಗೃಹೇ ನಿವಸತಿ । ತಥಾ ಯಂ ಜನಂ ನಕಿಃ ನ ಕೇಚನ ಘ್ನಂತಿ ನ ಹಿಂಸಂತಿ । ಯ ಏವ ಹಂತಿ ಶತ್ರೂನ್ ಸ್ವಯಮೇವ ಹಂತಿ । ಸ ಮನುಷ್ಯಸ್ತವ ಸ್ತೋತಾ ಖಲು । ಅನ್ಯಥಾ ತಸ್ಯೈತಾವನ್ನ ಘಟೇತ । ತತಃ ಸ ಸ್ತೋತಾ ಸುವೀರಃ ಶೋಭನಪುತ್ರಾದಿಯುಕ್ತಃ ಸನ್ನೇಧತೇ । ಆತ್ಮೀಯಗೃಹೇಷು ಧನಾದಿಭಿರ್ವರ್ಧತೇ ॥**

। ಪ್ರತಿಪದಾರ್ಥ ।

**ಅಗ್ನೇ**—ಎಲೈ ಅಗ್ನಿಯೇ । **ಯಃ**—ಯಾವ ಮನುಷ್ಯನು ನಿನ್ನನ್ನು ಸ್ತುತಿಸುವನೋ ಆ ಮನುಷ್ಯನು । **ಸಾಧುಭಿಃ**—ಉತ್ತಮವಾದ । **ಕ್ಷೇಮೇಭಿಃ**—ರಕ್ಷಣೆಗಳಿಂದ ಯುಕ್ತನಾಗಿ । **ಕ್ಷೇತಿ**—ತನ್ನ ಗೃಹದಲ್ಲಿ ವಾಸಮಾಡುತ್ತಾನೆ । **ಯಂ**—ಆ ಪುರುಷನನ್ನು । **ನಕಿಃ ಘ್ನಂತಿ**—ಯಾರೂ ಹಿಂಸಿಸುವುದಿಲ್ಲ । **ಯಃ**—ಆ ಪುರುಷನು ।

**ಹಂತಿ**—ತನ್ನ ಶತ್ರುಗಳನ್ನುಕೊಲ್ಲಲು ಸಮರ್ಥನಾಗುತ್ತಾನೆ! **ಸುವೀರಃ**—ವೀರರಾದ ಪುತ್ರಾದಿಗಳಿಂದ ಯುಕ್ತನಾಗಿ **ಏಧತೇ**—ಧನಾದಿಗಳಿಂದ ತನ್ನ ಗೃಹದಲ್ಲಿ ಅಭಿವೃದ್ಧಿಯನ್ನೈದುತ್ತಾನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಮಾನವನು ನಿನ್ನನ್ನು ಸ್ತುತಿಸುವನೋ ಆ ಮಾನವನು ಯಾವ ಬಾಧೆಯೂ ಇಲ್ಲದೆ, ಉತ್ತಮ ರಕ್ಷಣೆಗಳಿಂದ ಸಹಿತನಾಗಿ ತನ್ನ ಗೃಹದಲ್ಲಿ ವಾಸಮಾಡುತ್ತಾನೆ ಅವನನ್ನು ಯಾರೂ ಹಿಂಸಿಸಲಾರರು. ಅವನು ತನ್ನ ಶತ್ರುಗಳನ್ನು ಸಂಹರಿಸಲು ಶಕ್ತನಾಗುತ್ತಾನೆ ಮತ್ತುವೀರರಾದ ಪುತ್ರಾದಿಗಳಿಂದ ಯುಕ್ತನಾಗಿ ಧನ ಸಮೃದ್ಧಿಯಿಂದ ತನ್ನ ಗೃಹದಲ್ಲಿ ಸುಖವಾಗಿ ವಾಸಿಸುತ್ತಾನೆ.

## English Translation

He who dwells at home with all-efficient protections, whom none can harm, but who himself harms (his enemies),—he Agni, (your worshipper), waxes strong with heroic offspring.

## ಎಂಭತ್ತೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಆ ನೋ ಹವಮಿತಿ ನವರ್ಚಂ ಪಂಚಮಂ ಸೂಕ್ತಂ । ಕೃಷ್ಣೋ ನಾಮಾಂಗಿರಸ ಋಷಿಃ । ಗಾಯತ್ರೀ ಛಂದಃ । ಏತದಾದೀನಿ ತ್ರೀಣಿ ಸೂಕ್ತಾನ್ಯಶ್ವಿದೇವತ್ಯಾನಿ । ತಥಾ ಚಾನುಕ್ರಾಂತಂ । ಆ ನೋ ಕೃಷ್ಣ ಆಶ್ವಿನಂ ಹೀತಿ ॥ ಪ್ರಾತರನುವಾಕ ಆಶ್ವಿನೇ ಕ್ರತೌ ಗಾಯತ್ರೇ ಛಂದಸ್ಯಾಶ್ವಿನ ಶಸ್ತ್ರೇ ಚೇದಂ ಸೂಕ್ತಂ । ಸೂತ್ರಿತಂ ಚ । ಉದೀರಾಥಾಮಾ ನೋ ಹವಂ । ಆ ೪-೧೫ । ಇತಿ ॥**

ಅನುವಾದವು—**ಆ ನೋ ಹವಂ** ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಆಂಗಿರಸಃ ಕೃಷ್ಣಃ ಎಂಬುವನು ಋಷಿಯು ; ಗಾಯತ್ರೀಛಂದಸ್ಸು. ಈ ಸೂಕ್ತದಿಂದ ಮುಂದಿನ ಮೂರು ಸೂಕ್ತಗಳು ಅಶ್ವಿನೀದೇವತಾಕವು. ಅನುಕ್ರಮಣಿಕೆಯಲ್ಲಿ-**ಆ ನೋ ಕೃಷ್ಣ ಆಶ್ವಿನಂ ಹಿ** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಶ್ವಿನಕ್ರತು ಸಂಬಂಧವಾದ ಗಾಯತ್ರೀಛಂದಸ್ಸಿನ ಮಂತ್ರಗಳಿಗಾಗಿಯೂ ಆಶ್ವಿನಶಸ್ತ್ರಮಂತ್ರಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ-**ಉದೀರಥಾಮಾ ನೋ ಹವಂ** ಎಂಬ ಸೂತ್ರದಿಂದ (ಆ ೪-೧೫) ವಿವೃತವಾಗಿರುವುದು

## ಸೂಕ್ತ—೮೫

ಮಂಡಲ—೮ ॥ ಅನುವಾಕ—೯ ॥ ಸೂಕ್ತ—೮೫ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೬, ೮, ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಕೃಷ್ಣಃ ॥
ದೇವತಾ—ಅಶ್ವಿನೌ ॥
ಛಂದಃ—ಗಾಯತ್ರೀ, ॥

॥ ಸಂಹಿತಾಪಾಠಃ ॥

ಆ ಮೇ ಹವಂ ನಾಸತ್ಯಾಶ್ವಿನಾ ಗಚ್ಛತಂ ಯುವಂ ।
ಮಧ್ವಃ ಸೋಮಸ್ಯ ಪೀತಯೇ ॥ ೧ ॥

॥ ಪದಪಾಠಃ ॥

ಆ । ಮೇ । ಹವಂ । ನಾಸತ್ಯಾ । ಅಶ್ವಿನಾ । ಗಚ್ಛತಂ । ಯುವಂ ।
ಮಧ್ವಃ । ಸೋಮಸ್ಯ । ಪೀತಯೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ನಾಸತ್ಯಾ । ಅಸತ್ಯಮನಯೋರ್ನಾಸ್ತೀತಿ ನಾಸತ್ಯೌ । ತಾದೃಶೌ ಹೇ ಅಶ್ವಿನಾಶ್ವಿನೌ ಯುವಂ ಯುವಾಂ ಮೇ ಮದೀಯಂ ಹವಮಾಹ್ವಾನಂ ಶ್ರುತ್ವಾ । ಯದ್ವಾ । ಹವಂ । ಹೂಯತೇಽತ್ರೇತಿ ಹವೋ ಯಜ್ಞಃ ॥ ಕೇವಲಸ್ಯಾಧಿಕರಣೇಽಪ್ ಛಾಂದಸಃ ॥ ಮದೀಯಂ ಯಜ್ಞಂ ಪ್ರತಿ ಮಧ್ವೋ ಮದಕರಸ್ಯ ಸೋಮಸ್ಯ ಪೀತಯೇ ಪಾನಾಯ ತದರ್ಥಮಾ ಗಚ್ಛತಂ ॥

॥ ಪ್ರತಿಪದಾರ್ಥ ॥

**ಹೇ ನಾಸತ್ಯಾ**—ಅಸತ್ಯವನ್ನು ನುಡಿಯದಿರುವ । **ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಯುವಂ**—ನೀವು । **ಮೇ**—ನನ್ನ । **ಹವಂ**—ಆಹ್ವಾನವನ್ನು ಕೇಳಿ । **ಮಧ್ವಃ**—ಮದವನ್ನುಂಟುಮಾಡುವ । **ಸೋಮಸ್ಯ**—ಸೋಮರಸದ । **ಪೀತಯೇ**—ಪಾನಾರ್ಥವಾಗಿ । **ಆ ಗಚ್ಛತಂ**—ದಯಮಾಡಿ.

॥ ಭಾವಾರ್ಥ ॥

ಸತ್ಯಸ್ವರೂಪರಾದ ಎಲೈ ಅಶ್ವಿನೀದೇವತೆಗಳೇ, ನೀವು ನನ್ನ ಆಹ್ವಾನವನ್ನು ಕೇಳಿ, ಹರ್ಷಕಾರಕವಾದ ಸೋಮವನ್ನು ಪಾನಮಾಡುವುದಕ್ಕಾಗಿ ಇಲ್ಲಿಗೆ ದಯಮಾಡಿ.

## English Translation

Nasatyas, Aswins, come to my invocation, that you may drink the exhilarating Soma.

॥ ಸಂಹಿತಾಪಾಠಃ ॥

ಇಮಂ ಮೇ ಸ್ತೋಮಮಶ್ವಿನೇಮಂ ಮೇ ಶೃಣುತಂ ಹವಂ ।

ಮಧ್ವಃ ಸೋಮಸ್ಯ ಪೀತಯೇ ॥ ೨ ॥

॥ ಪದಪಾಠಃ ॥

ಇಮಂ । ಮೇ । ಸ್ತೋಮಂ । ಅಶ್ವಿನಾ । ಇಮಂ । ಮೇ । ಶೃಣುತಂ । ಹವಂ ।

ಮಧ್ವಃ । ಸೋಮಸ್ಯ । ಪೀತಯೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ಮೇ ಮದೀಯಮಿಮಂ ಸ್ತೋಮಂ ಸ್ತೋತ್ರಂ ಕಿಂ ಚ ನೇ ಮದೀಯಮಿಮಮಿದಮಾಗಮನವಿಷಯಂ ಹವಮಾಹ್ವಾನಂ ಚ ಶೃಣುತಂ ॥

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಮೇ**—ನನ್ನ । **ಇಮಂ ಸ್ತೋಮಂ**—ಈ ಸ್ತೋತ್ರವನ್ನೂ ಮತ್ತು । **ಮೇ**—ನನ್ನ । **ಇಮಂ ಹವಂ**—ಈ ಆಹ್ವಾನವನ್ನೂ । **ಶೃಣುತಂ**-ಕೇಳಿರಿ । **ಮಧ್ವಃ**—ಮದಕರವಾದ । **ಸೋಮಸ್ಯ**— ಸೋಮರಸದ । **ಪೀತಯೇ**—ಪಾನಾರ್ಥವಾಗಿ ಬನ್ನಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವು, ನಾನು ನಿಮ್ಮ ವಿಷಯವಾಗಿ ಮಾಡುವ ಸ್ತೋತ್ರವನ್ನೂ ಯಜ್ಞಭೂಮಿಗೆ ಬರಬೇಕೆಂಬ ನನ್ನ ಆಹ್ವಾನವನ್ನೂ ಕೇಳಿರಿ ಮದಕರವಾದ ಸೋಮವನ್ನು ಪಾನಮಾಡುವುದಕ್ಕಾಗಿ ಇಲ್ಲಿಗೆ ದಯಮಾಡಿ.

## English Translation

Ashwlns, hear this my hymn, this my invocation, that you may drink the exhilarating Soma.

॥ ಸಂಹಿತಾಪಾಠಃ ॥

ಅ॒ಯಂ ವಾ॒ಂ ಕೃಷ್ಣೋ॑ ಅಶ್ವಿನಾ॒ ಹವ॑ತೇ ವಾಜಿನೀವಸೂ ।
ಮಧ್ವ॒ಃ ಸೋಮ॑ಸ್ಯ ಪೀ॒ತಯೇ॑ ॥ ೩ ॥

॥ ಪದಪಾಠಃ ॥

ಅ॒ಯಂ । ವಾ॒ಂ । ಕೃಷ್ಣ॑ಃ । ಅ॒ಶ್ವಿ॒ನಾ॒ । ಹವ॑ತೇ । ವಾ॒ಜಿ॒ನೀ॒ವ॒ಸೂ॒ ಇತಿ॑ ವಾಜಿನೀಽವಸೂ ।
ಮಧ್ವ॑ಃ । ಸೋಮ॑ಸ್ಯ । ಪೀ॒ತಯೇ॑ ॥ ೩ ॥

॥ ಸಾಯಣಭಾಷ್ಯಂ ॥

ಹೇ ವಾಜಿನೀವಸೂ ಅನ್ನಯುಕ್ತಧನೌ ॥ ಅತ್ರೇನಿರನುವಾದಾರ್ಥಃ ॥ ಯದ್ವಾ । ವಾಜೋ ವಜನಂ ಕ್ರಿಯಾ । ತದ್ವತೀ ವಾಜಿನೀ । ತದ್ಯುಕ್ತಧನವಂತೌ ಹೇ ಅಶ್ವಿನಾಶ್ವಿನೌ ಅಯಂ ಕೃಷ್ಣೋ ನಾಮ ಮಂತ್ರದ್ರಷ್ಟರ್ಷಿರ್ವಾಂ ಯುವಾಂ ಹವತೇ । ಸ್ತುತಿಭಿರಾಹ್ವಯತಿ । ಕಿಮರ್ಥಂ । ಮಧ್ವಃ ಸೋಮಸ್ಯ ಪೀತಯ ಇತಿ ॥

॥ ಪ್ರತಿಪದಾರ್ಥ ॥

ವಾಜಿನೀವಸೂ—ಅನ್ನಯುಕ್ತರಾದ ಅಥವಾ ಕರ್ಮವೇ ಧನವಾಗಿ ಉಳ್ಳ । ಅಶ್ವಿನಾ—ಎಲೈ ಅಶ್ವಿನೀ ದೇವತೆಗಳೇ । ಅಯಂ ಕೃಷ್ಣಃ—ಕೃಷ್ಣನೆಂಬ ಹೆಸರಿನ ಋಷಿಯು (ನಾನು) । ವಾಂ—ನಿಮ್ಮನ್ನು । ಮಧ್ವಃ—ಮದಕರವಾದ । ಸೋಮಸ್ಯ—ಸೋಮರಸದ । ಪೀತಯೇ—ಪಾನಾರ್ಥವಾಗಿ । ಹವತೇ—ಪ್ರಾರ್ಥಿಸಿ ಕರೆಯುತ್ತಾನೆ.

॥ ಭಾವಾರ್ಥ ॥

ಅನ್ನಸಂಪದ್ಯುಕ್ತರಾದ ಎಲೈ ಅಶ್ವಿನೀದೇವತೆಗಳೇ, ಕೃಷ್ಣನೆಂಬ ಹೆಸರಿನ ಈ ಸೂಕ್ತದ್ರಷ್ಟೃವಾದ ಋಷಿಯು ಮದಕರವಾದ ಸೋಮವನ್ನು ಪಾನಮಾಡುವುದಕ್ಕಾಗಿ ನಿಮ್ಮನ್ನು ಪ್ರಾರ್ಥಿಸಿ ಕರೆಯುತ್ತಾನೆ.

## English Translation

Krishna invoke you, Aswins rich in sacrifices, that you may drink the exhilarating Soma.

॥ ಸಂಹಿತಾಪಾಠಃ ॥

ಶೃಣುತಂ ಜರಿತುರ್ಹವಂ ಕೃಷ್ಣಸ್ಯ ಸ್ತುವತೋ ನರಾ ।
ಮಧ್ವಃ ಸೋಮಸ್ಯ ಪೀತಯೇ ॥ ೪ ॥

॥ ಪದಪಾಠಃ ॥

ಶೃಣುತಂ । ಜರಿತುಃ । ಹವಂ । ಕೃಷ್ಣಸ್ಯ । ಸ್ತುವತಃ । ನರಾ ।
ಮಧ್ವಃ । ಸೋಮಸ್ಯ । ಪೀತಯೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ನರಾ ನರೌ ಸರ್ವಸ್ಯ ನೇತಾರಾವಶ್ವಿನೌ ಜರಿತುಃ ॥ ತಚ್ಛೀಲಾರ್ಥೇ ತೃನ್ । ವ್ಯತ್ಯಯೇನಾಂತೋದಾತ್ತತ್ವಂ ॥ ಜರಿತುಃ ಸ್ತವನಶೀಲಸ್ಯ ಸ್ತುವತಃ ಸ್ತೋತ್ರಂ ಕುರ್ವತಃ ಕೃಷ್ಣಸ್ಯೈತನ್ನಾಮಕಸ್ಯರ್ಷೇಃ ಸಂಬಂಧಿ ಹವಂ ಯುಷ್ಮದ್ವಿಷಯಮಾಹ್ವಾನಂ ಶೃಣುತಂ । ಯದ್ವಾ । ಜರಿತುರನ್ಯದೇವಾನಾಂ ಸ್ತೋತುಃ ಸ್ತುವತ ಇದಾನೀಂ ಯುವಯೋಃ ಸ್ತೋತ್ರಕಾರಿಣಸ್ತಸ್ಯ ಹವಂ ಶೃಣುತಂ । ಶಿಷ್ಟಂ ಗತಂ ॥

॥ ಪ್ರತಿಪದಾರ್ಥ ॥

**ಹೇ ನರಾ**—ಕರ್ಮನೇತೃಗಳಾದ ಅಥವಾ ಸರ್ವರಿಗೂ ಮಾರ್ಗದರ್ಶಕರಾದ ಎಲೈ ಅಶ್ವಿನೀದೇವತೆಗಳೇ ॥ **ಸ್ತುವತಃ**—ಸ್ತೋತ್ರವನ್ನು ಮಾಡುತ್ತಿರುವ । **ಜರಿತುಃ ಕೃಷ್ಣಸ್ಯ**—ಕೃಷ್ಣನೆಂಬ ಹೆಸರಿನ ಸ್ತೋತೃವಿನ । **ಹವಂ**—ಆಹ್ವಾನವನ್ನು । **ಶೃಣುತಂ**—ಕೇಳಿರಿ । ಅಥವಾ **ಜರಿತುಃ**—ಇತರ ದೇವತೆಗಳನ್ನು ಸ್ತೋತ್ರಮಾಡುವವನಾದರೂ । **ಸ್ತುವತಃ**—ಈಗ ನಿಮ್ಮನ್ನು ಸ್ತುತಿಸುತ್ತಿರುವ । **ಕೃಷ್ಣಸ್ಯ**—ಕೃಷ್ಣನೆಂಬ ಮಂತ್ರದ್ರಷ್ಟೃವಾದ ಋಷಿಯ । **ಹವಂ**—ಆಹ್ವಾನವನ್ನು । **ಶೃಣುತಂ**—ಕೇಳಿರಿ । **ಮಧ್ವಃ**—ಮದಕರವಾದ । **ಸೋಮಸ್ಯ**—ಸೋಮರಸದ । **ಪೀತಯೇ**—ಪಾನಾರ್ಥವಾಗಿ ದಯಮಾಡಿ.

॥ ಭಾವಾರ್ಥ ॥

ಸಮಸ್ತರಿಗೂ ಮಾರ್ಗದರ್ಶಕರಾದ ಎಲೈ ಅಶ್ವಿನೀದೇವತೆಗಳೇ, ಸ್ತುತಿಕರ್ತನೂ ನಿಮ್ಮನ್ನು ಸ್ತುತಿಸುತ್ತಿರುವವನೂ ಆದ ಕೃಷ್ಣನೆಂಬ ಹೆಸರಿನ ಋಷಿಯ ಆಹ್ವಾನವನ್ನು ಕೇಳಿ ಮದಕರವಾದ ಸೋಮದ ಪಾನಾರ್ಥವಾಗಿ ದಯಮಾಡಿ.

## English Translation

• Leaders (of all), hear the invocation of Krishna, the hymner, who praises you,—that you may drink the exhilarating Soma.

॥ ಸಂಹಿತಾಪಾಠಃ ॥

ಛರ್ದಿರ್ಯಂತಮದಾಭ್ಯಂ ವಿಪ್ರಾಯ ಸ್ತುವತೇ ನರಾ ।
ಮಧ್ವಃ ಸೋಮಸ್ಯ ಪೀತಯೇ ॥ ೫ ॥

॥ ಪದಪಾಠಃ ॥

ಛರ್ದಿಃ । ಯಂತಂ । ಅದಾಭ್ಯಂ । ವಿಪ್ರಾಯ । ಸ್ತುವತೇ । ನರಾ ।
ಮಧ್ವಃ । ಸೋಮಸ್ಯ । ಪೀತಯೇ ।

॥ ಸಾಯಣಭಾಷ್ಯಂ ॥

ಹೇ ನರಾ ನೇತಾರಾವಶ್ವಿನಾ ವಿಪ್ರಾಯ ಮೇಧಾವಿನೇ ಅತ ಏವ ಸ್ತುವತೇ ಸ್ತೋತ್ರಂ ಕುರ್ವತೇ ಕೃಷ್ಣಾಯರ್ಷಯೇಽದಾಭ್ಯಂ ॥ ದಭೇಶ್ಚೇತಿ ಣ್ಯತ್ಪ್ರತ್ಯಯಃ ॥ ಪರೈರಹಿಂಸ್ಯಂ ಛರ್ದಿರ್ಗೃಹಂ ಯಂತಂ । ಪ್ರಯಚ್ಛತಂ । ಕಿಮರ್ಥಂ । ಸೋಮಪಾನಾಯ । ಸ್ತೋತ್ರೇ ಗೃಹೇ ದೀಯಮಾನೇ ಸತಿ ತದಾ ಸ ಸೋಮಂ ಯುವಾಭ್ಯಾಂ ಪ್ರಯಚ್ಛತಿ ॥

ಪ್ರತಿಪದಾರ್ಥ

ಹೇ ನರಾ—ನೇತೃಗಳಾದ ಎಲೈ ಅಶ್ವಿನೀದೇವತೆಗಳೇ । ವಿಪ್ರಾಯ—ಮೇಧಾವಿಯೂ । ಸ್ತುವತೇ—ನಿಮ್ಮನ್ನು ಸ್ತೋತ್ರಮಾಡುತ್ತಿರುವವನೂ ಆದ ಕೃಷ್ಣನೆಂಬ ಋಷಿಗೆ । ಅದಾಭ್ಯಂ—ಬಾಧಾರಹಿತವಾದ । ಛರ್ದಿಃ—ಗೃಹವನ್ನು । ಯಂತಂ—ಕೊಡಿರಿ । ಮಧ್ವಃ—ಮದಕಾರಕವಾದ । ಸೋಮಸ್ಯ—ಸೋಮದ । ಪೀತಯೇ—ಪಾನಾರ್ಥವಾಗಿ ದಯಮಾಡಿ.

॥ ಭಾವಾರ್ಥ ॥

ಎಲೈ ನೇತೃಗಳಾದ ಅಶ್ವಿನೀದೇವತೆಗಳೇ, ಮದಕಾರಕವಾದ ಸೋಮಪಾನಾರ್ಥವಾಗಿ ದಯಮಾಡಿ, ಸೋಮಪಾನದಿಂದ ತೃಪ್ತಿಯನ್ನು ಹೊಂದಿ ನಿಮ್ಮನ್ನು ಸ್ತುತಿಸುತ್ತಿರುವ ಮೇಧಾವಿಯಾದ ಕೃಷ್ಣನೆಂಬ ಋಷಿಗೆ ಯಾವ ಬಾಧೆಯೂ ಇಲ್ಲದಿರುವ ಗೃಹವನ್ನು ಕೊಡಿರಿ

English Translation

Leaders, give to the sage who praises you an unassailable dwelling, that you may drink the exhilarating Soma.

॥ ಸಂಹಿತಾಪಾಠಃ ॥

ಗಚ್ಛತಂ ದಾಶುಷೋ ಗೃಹಮಿತ್ಥಾ ಸ್ತುವತೋ ಅಶ್ವಿನಾ ।
ಮಧ್ವಃ ಸೋಮಸ್ಯ ಪೀತಯೇ ॥ ೬ ॥

॥ ಪದಪಾಠಃ ॥

ಗಚ್ಛತಂ । ದಾಶುಷಃ । ಗೃಹಂ । ಇತ್ಥಾ । ಸ್ತುವತಃ । ಅಶ್ವಿನಾ ।
ಮಧ್ವಃ । ಸೋಮಸ್ಯ । ಪೀತಯೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ಇತ್ಥೇತ್ಥಮನೇನ ಪ್ರಕಾರೇಣ ಸ್ತುವತೋ ಯುವಯೋಃ ಸ್ತೋತ್ರಂ ಕುರ್ವತೋ ದಾಶುಷೋ ಹವೀಂಷಿ ದತ್ತವತೋ ಯಜಮಾನಸ್ಯ ಗೃಹಂ ಪ್ರತಿ ಗಚ್ಛತಂ । ಯುವಾಮಾ-ಗಚ್ಛತಂ । ಕಿಮರ್ಥಂ । ಮಧ್ವಃ ಸೋಮಸ್ಯ ಪೀತಯ ಇತಿ ॥

॥ ಪ್ರತಿಪದಾರ್ಥ ॥

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಇತ್ಥಾ—ಈ ಪ್ರಕಾರವಾಗಿ । ಸ್ತುವತಃ—ನಿಮ್ಮನ್ನು ಸ್ತುತಿಸುತ್ತಿರುವವನೂ । ದಾಶುಷಃ—ಹವಿಸ್ಸನ್ನು ಅರ್ಪಿಸುತ್ತಿರುವವನೂ ಆದ ಯಜಮಾನನ । ಗೃಹಂ—ಗೃಹಕ್ಕೆ । ಮಧ್ವಃ—ಹರ್ಷಕಾರಕವಾದ । ಸೋಮಸ್ಯ—ಸೋಮದ । ಪೀತಯೇ—ಪಾನಾರ್ಥವಾಗಿ । ಗಚ್ಛತಂ—ದಯಮಾಡಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಈ ಪ್ರಕಾರವಾಗಿ ನಿಮ್ಮನ್ನು ಸ್ತುತಿಸುತ್ತಲೂ ಹವಿಸ್ಸನ್ನು ಅರ್ಪಿಸುತ್ತಲೂ ಇರುವ ಯಜ್ಞಮಾಡುವ ಯಜಮಾನನ ಗೃಹಕ್ಕೆ ಮದಕರವಾದ ಸೋಮರಸದ ಪಾನಾರ್ಥವಾಗಿ ದಯಮಾಡಿ.

English Translation

Ashwins, come to the house of the offerer who thus praises you, that you may drink the exhilarating Soma

॥ ಸಂಹಿತಾಪಾಠಃ ॥

ಯುಂಜಾಥಾಂ ರಾಸಭಂ ರಥೇ ವೀಡ್ವಂಗೇ ವೃಷಣ್ವಸೂ ।
ಮಧ್ವಃ ಸೋಮಸ್ಯ ಪೀತಯೇ ॥ ೭ ॥

॥ ಪದಪಾಠಃ ॥

ಯುಂಜಾಥಾಂ । ರಾಸಭಂ । ರಥೇ । ವೀಳುಽಅಂಗೇ । ವೃಷಣ್ವಸೂ ಇತಿ ವೃಷಣ್ಽವಸೂ

ಮಧ್ವಃ । ಸೋಮಸ್ಯ । ಪೀತಯೇ ॥ ೭ ॥

॥ ಸಾಯಣಭಾಷ್ಯಂ ॥

ಹೇ ವೃಷಣ್ವಸೂ ವರ್ಷಣಶೀಲಧನವಂತಾವಶ್ವಿನೌ ಯುವಾಂ ವೀಡ್ವಂಗೇ । ವೀಳುರ್ದೃಢಃ । ದೃಢಾಂಗೋಪೇತೇ ಸ್ವರಥೇ ರಾಸಭಂ ಶಬ್ದಾಯಮಾನಮೇತನ್ನಾಮಕಮಶ್ವಂ ಯುಂಜಾಥಾಂ । ಸಂಯೋಜಯತಂ । ಕಿಮರ್ಥಂ । ಮಧ್ವಃ ಸೋಮಸ್ಯ ಪೀತಯ ಇತಿ । ರಾಸಭಾವಶ್ವಿನೋರಿತಿ ರಾಸಭಾವೇವಾಶ್ವಿನೋಃ ರಥಸ್ಯ ವಾಹನೌ ॥

॥ ಪ್ರತಿಪದಾರ್ಥ ॥

**ವೃಷಣ್ವಸೂ**—ಇಷ್ಟಾರ್ಥಗಳನ್ನು ಸುರಿಸುವ ಎಲೈ ಅಶ್ವಿನೀದೇವತೆಗಳೇ ನೀವು । **ವೀಡ್ವಂಗೇ**—ದೃಢವಾದ ನಾನಾಭಾಗಗಳುಳ್ಳ ನಿಮ್ಮ ರಥದಲ್ಲಿ । **ರಾಸಭಂ**—ನಿಮ್ಮ ವಾಹನವಾದ ರಾಸಭವನ್ನು (ಕತ್ತೆಯನ್ನು) । **ಮಧ್ವಃ**—ರುಚಿಕರವಾದ । **ಸೋಮಸ್ಯ**—ಸೋಮವನ್ನು । **ಪೀತಯೇ**—ಪಾನಮಾಡುವುದಕ್ಕಾಗಿ । **ಯುಂಜಾಥಾಂ**—ಸೇರಿಸಿ ಕಟ್ಟಿರಿ.

॥ ಭಾವಾರ್ಥ ॥

ಇಷ್ಟಾರ್ಥಪ್ರದರಾದ ಎಲೈ ಅಶ್ವಿನೀದೇವತೆಗಳೇ, ರುಚಿಕರವಾದ ಸೋಮರಸವನ್ನು ಪಾನಮಾಡಲು ಇಲ್ಲಿಗೆ ಬರುವುದಕ್ಕಾಗಿ ದೃಡಾಂಗವುಳ್ಳ ನಿಮ್ಮ ರಥಕ್ಕೆ ನಿಮ್ಮ ವಾಹನವಾದ ರಾಸಭವನ್ನು (ಕತ್ತೆಯನ್ನು) ಸೇರಿಸಿ ಕಟ್ಟಿರಿ.

## English Translation

You who possess showering wealth, yoke the ass to your firmly-built chariot, that you may drink the exhilarating soma.

॥ ಸಂಹಿತಾಪಾಠಃ ॥

ತ್ರಿವಂಧುರೇಣ ತ್ರಿವೃತಾ ರಥೇನಾ ಯಾತಮಶ್ವಿನಾ ।
ಮಧ್ವಃ ಸೋಮಸ್ಯ ಪೀತಯೇ ॥ ೮ ॥

॥ ಪದಪಾಠಃ ॥

ತ್ರಿಽವಂಧುರೇಣ । ತ್ರಿಽವೃತಾ । ರಥೇನ । ಆ । ಯಾತಂ । ಅಶ್ವಿನಾ ।

ಮಧ್ವಃ । ಸೋಮಸ್ಯ । ಪೀತಯೇ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ತ್ರಿವಂಧರೇಣ ತ್ರಿಫಲಕಾಸಂಘಟಿತೇನ ತ್ರಿವೃತಾ ತ್ರಿಕೋಣೇನ । ಯದ್ವಾ । ತ್ರಿವೃತಾ । ತ್ರೀಣಿ ಕವಚಾದಿಭಿರಾವರಣಾನಿ ಯಸ್ಯ ಸ ತಥೋಕ್ತಃ । ತೇನ ರಥೇನಾಸ್ಮದ್ಯಜ್ಞಂ ಪ್ರತ್ಯಾಯಾತಂ । ಯುವಾಮಾಗಚ್ಛತಂ ಚ । ಶಿಷ್ಟಂ ಗತಂ ॥

॥ ಪ್ರತಿಪದಾರ್ಥ

ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ತ್ರಿವಂಧುರೇಣ—ಮೂರು ಹಲಗೆಗಳನ್ನು ಸೇರಿಸಿ ಕಟ್ಟಿರುವುದೂ । ತ್ರಿವೃತಾ—ತ್ರಿಕೋಣಾಕಾರವಾದುದೂ ಅಥವಾ ಮೂರು ವಿಧವಾದ ರಕ್ಷಣಾ ಕವಚಾದಿಗಳಿಂದ ಆವೃತವಾದುದೂ ಆದ । ರಥೇನ—ರಥದಿಂದ । ಮಧ್ವಃ—ಮದಕರವಾದ । ಸೋಮಸ್ಯ—ಸೋಮವನ್ನು । ಪೀತಯೇ—ಪಾನ ಮಾಡುವುದಕ್ಕಾಗಿ । ಆ ಯಾತಂ—ಬನ್ನಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಮೂರು ಹಲಗೆಗಳನ್ನು ಸೇರಿಸಿ ಕಟ್ಟಿದ ಮೂಕೀಮುರವುಳ್ಳದ್ದೂ, ತ್ರಿಕೋಣಕಾರವಾದುದೂ ಅಥವಾ ಮೂರು ವಿಧವಾದ ರಕ್ಷಣಾವರಣಗಳಿಂದ ಯುಕ್ತವಾದುದೂ ಆದ ನಿಮ್ಮ ರಥದಲ್ಲಿ ಕುಳಿತು ಮದಕರವಾದ ಸೋಮವನ್ನು ಪಾನಮಾಡುವುದಕ್ಕಾಗಿ ಇಲ್ಲಿಗೆ ದಯಮಾಡಿ

English Translation

Aswins, come hither with your three seated triangular car, that you may drink the exhilarating soma.

॥ ಸಂಹಿತಾಪಾಠಃ ॥

ನೂ ಮೇ ಗಿರೋ ನಾಸತ್ಯಾಶ್ವಿನಾ ಪ್ರಾವತಂ ಯುವಂ ।

ಮಧ್ವಃ ಸೋಮಸ್ಯ ಪೀತಯೇ ॥ ೯ ॥

॥ ಪದಪಾಠಃ ॥

ನು । ಮೇ । ಗಿರಃ । ನಾಸತ್ಯಾ । ಅಶ್ವಿನಾ । ಪ್ರ । ಅವತಂ । ಯುವಂ ।

ಮಧ್ವಃ । ಸೋಮಸ್ಯ । ಪೀತಯೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ನಾಸತ್ಯಾಸತ್ಯರಹಿತೌ ಹೇ ಅಶ್ವಿನಾಶ್ವಿನೌ ಮೇ ಮದೀಯಾ ಗಿರಃ ಸ್ತುತಿಲಕ್ಷಣಾ ವಾಚಃ ಪ್ರತಿ ಯುವಂ ಯುವಾಂ ನು ಕ್ಷಿಪ್ರಂ ಪ್ರಾವತಂ । ಪ್ರಕರ್ಷೇಣಾಗಚ್ಛತಂ । ಯದ್ವಾ । ಮೇ ಗಿರಃ ಪ್ರಾವತಂ । ಆತ್ಮೀಯತಯಾ ಪ್ರರಕ್ಷತಂ । ಕಿಮರ್ಥಂ । ಮಧ್ವೋ ಮದಕರಸ್ಯ ಸೋಮಸ್ಯ ಪೀತಯೇ ಪಾನಾಯ ತದರ್ಥಂ । ಸರ್ವೇ ದೇವಾಃ ಸ್ತುತಿಭಿರಾಹೂತಾಃ ಸಂತೋ ಯಜ್ಞಂ ಪ್ರತ್ಯಾಗಚ್ಛಂತೀತಿ ಗಚ್ಛತಂ ರಕ್ಷತಂ ಚೇತಿ ಯುಕ್ತಂ ಭವತಿ ॥

॥ ಪ್ರತಿಪದಾರ್ಥ ॥

ನಾಸತ್ಯಾ—ಅಸತ್ಯವಾಕ್ಯಗಳನ್ನಾಡದ । ಅಶ್ವಿನಾ—ಎಲೈ ಅಶ್ವಿನೀದೇವತೆಗಳೇ । ಮೇ—ನನ್ನ । ಗಿರಃ—ಸ್ತುತಿರೂಪವಾದ ವಾಕ್ಯಗಳನ್ನು ಲಕ್ಷಿಸಿ । ಯುವಂ—ನೀವು । ಮಧ್ವಃ—ಮದಕರವಾದ । ಸೋಮಸ್ಯ—ಸೋಮದ । ಪೀತಯೇ—ಪಾನಾರ್ಥವಾಗಿ । ನು—ಬೇಗನೆ । ಪ್ರಾವತಂ—ಬನ್ನಿರಿ । ಅಥವಾ ಮೇ—ನನ್ನ । ಗಿರಃ—ಸ್ತುತಿರೂಪವಾದ ವಾಕ್ಯಗಳು । ಪ್ರಾವತಂ—ನನ್ನನ್ನು ರಕ್ಷಿಸಲಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಅಸತ್ಯವಾಕ್ಯಗಳನ್ನಾಡದ ಎಲೈ ಅಶ್ವಿನೀದೇವತೆಗಳೇ, ನನ್ನ ಸ್ತುತಿರೂಪವಾದ ವಾಕ್ಯಗಳನ್ನು ಲಕ್ಷಿಸಿ ನೀವು ಮದಕರವಾದ ಸೋಮದ ಪಾನಾರ್ಥವಾಗಿ ಬೇಗನೆ ಬನ್ನಿರಿ. ನನ್ನ ಸ್ತುತಿರೂಪವಾದ ವಾಕ್ಯಗಳು ನನ್ನನ್ನು ರಕ್ಷಿಸಲಿ.

English Translation

Nasatyas, Aswins, hasten quickly to my praise, that you may drink the exhilarating soma.

## ಎಂಭತ್ತಾರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಉಭಾ ಹಿ ದಸ್ರೇತಿ ಪಂಚರ್ಚಂ ಷಷ್ಠಂ ಸೂಕ್ತಂ । ವಿಶ್ವಕೋ ನಾಮ ಕೃಷ್ಣಸ್ಯ ಪುತ್ರಃ ಕೃಷ್ಣ ಏವ ವರ್ಷಿಃ । ಜಗತೀ ಛಂದಃ । ಅಶ್ವಿನೌ ದೇವತಾ । ತಥಾನುಕ್ರಮ್ಯತೇ । ಉಭಾ ಹಿ ಪಂಚ ವಿಶ್ವಕೋ ವಾ ಕಾರ್ಷ್ಣಿರ್ಜಾಗತಮಿತಿ ॥ ವಿನಿಯೋಗೋ ಲಿಂಗಾದವಗಂತವ್ಯಃ ॥

ಅನುವಾದವು—ಉಭಾ ಹಿ ದಸ್ರಾ ಎಂಬ ಈ ಸೂಕ್ತವು ಒಂಭತ್ತನೆಯ ಅನುವಾದಕದಲ್ಲಿ ಆರನೆಯ ಸೂಕ್ತವು. ಇವರಲ್ಲಿ ಐದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಕೃಷ್ಣ ಋಷಿಯ ಪುತ್ರನಾದ ವಿಶ್ವಕನೆಂಬುವನು

ಋಷಿಯು ಅಥವಾ ಕೃಷ್ಣನೇ ಋಷಿಯ ; ಅಶ್ವಿನೀದೇವತೆಗಳು ದೇವತೆಯು , ಜಗತೀಛಂದಸ್ಸು, ಅನುಕ್ರಮಣಿಕೆಯಲ್ಲಿ–**ಉಭಾ ಹಿ ಪಂಚ ವಿಶ್ವಕೋ ವಾ ಕಾರ್ಷ್ಣಿರ್ಜಾಗತಂ** ಎಂದು ಹೇಳಿರುವುದು. ವಿನಿಯೋಗವು ಲೈಂಗಿಕವು.

## ಸೂಕ್ತ—೮೬

ಮಂಡಲ—೮ ॥ ಅನುವಾಕ—೯ ॥ ಸೂಕ್ತ—೮೬ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೯ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೫ ॥
ಋಷಿಃ—ಕೃಷ್ಣೋ ವಿಶ್ವಕೋ ವಾ ಕಾರ್ಷ್ಣಿಃ ॥
ದೇವತಾ—ಅಶ್ವಿನೌ ॥
ಛಂದಃ—ಜಗತೀ ॥

॥ ಸಂಹಿತಾಪಾಠಃ ॥

ಉಭಾ ಹಿ ದಸ್ರಾ ಭಿಷಜಾ ಮಯೋಭುವೋಭಾ ದಕ್ಷಸ್ಯ ವಚಸೋ ಬಭೂವಥುಃ ।
ತಾ ವಾಂ ವಿಶ್ವಕೋ ಹವತೇ ತನೂಕೃಥೇ ಮಾ ನೋ ವಿ ಯೌಷ್ಟಂ ಸಖ್ಯಾ ಮುಮೋಚತಂ ॥ ೧ ॥

॥ ಪದಪಾಠಃ ॥

ಉಭಾ । ಹಿ । ದಸ್ರಾ । ಭಿಷಜಾ । ಮಯಃಽಭುವಾ । ಉಭಾ । ದಕ್ಷಸ್ಯ । ವಚಸಃ । ಬಭೂವಥುಃ ।
ತಾ । ವಾಂ । ವಿಶ್ವಕಃ । ಹವತೇ । ತನೂಽಕೃಥೇ । ಮಾ । ನಃ । ವಿ । ಯೌಷ್ಟಂ । ಸಖ್ಯಾ । ಮುಮೋಚತಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ದಸ್ರಾ ದರ್ಶನೀಯೌ । ಯದ್ವಾ ॥ ದಸು ಉಪಕ್ಷಯೇ ॥ ಸರ್ವೇಷಾಂ ಶತ್ರೂಣಾಮುಪಕ್ಷಪಯಿತಾರೌ । ಭಿಷಜಾ ದೇವಾನಾಂ ವೈದ್ಯೌ ಯದ್ವಾ ಭೀತೀನಾಂ ತ್ರಾಸಯಿತಾರೌ । ಯದಾ ನರೋಽಶ್ವಿನೌ ಸ್ತುವಂತಿ ತದಾ ತೌ ತೇಷಾಂ ಭೀತಿಮುಪನಯತ ಇತ್ಯರ್ಥಃ ॥ ಪೃಷೋದರಾದಿತ್ವಾದ್ರೂಪಸಿದ್ಧಿಃ ॥ ತಾದೃಶೌ ಅತ ಏವ ಮಯೋಭುವಾ ಮಯಸಃ ಸುಖಸ್ಯ ಭಾವಯಿತಾರಾವುಭಾ ಪರ-

ಸ್ವರಂ ದ್ವಿತ್ವಸಂಖ್ಯಾಪೂರಕಾವುಭೋಭೌ ದ್ವೌ ಯುವಾಂ ದಕ್ಷಸ್ಯೈತನ್ನಾಮಕಸ್ಯ ಪ್ರಜಾಪತೇರ್ವಚಸಃ ಸ್ತುತೇಃ ಸಂಬಂಧಿನೌ ಬಭೂವಥುಃ । ಹಿ ಪ್ರಸಿದ್ಧೌ । ಪುರಾ ಯುವಾಂ ದಕ್ಷೇಣಾಸ್ತಾವಿಷಾಥಾಂ ಖಲು । ತಾ ತಾದೃಶೌ ಪ್ರಶಸ್ತೌ ವಾಂ ಯುವಾಂ ವಿಶ್ವಕ ಏತನ್ನಾಮಕ ಋಷಿಸ್ತನೂಕೃಥೇ । ತನೋತಿ ಕುಲಮಿತಿ ತನೂಃ ಪುತ್ರಃ। ತಸ್ಯ ವಿಷ್ಣಾಪ್ವೋ ನಿಮಿತ್ತಂ ಹವತೇ । ಸ್ತುತಿಭಿರಾಹ್ವಯತಿ । ತಸ್ಮಾನ್ನೋಽಸ್ಮಾಕಂ ಸಖ್ಯಾ ಸಖ್ಯಾನಿ ಯುಷ್ಮ್ಯಯುಷ್ಮದ್ವ್ಯತಯಾ ಜಾತಾನಿ ಸಖಿತ್ವಾನಿ ಮಾ ವಿ ಯೌಷ್ಟಂ । ಮಾ ಪೃಥಕ್ಕುರುತಂ ॥ ಯೌತೇರ್ಲುಙಿ ಸಿಚಿ ರೂಪಂ ॥ ಕಿಂ ಚ ಯುವಾಂ ಮುಮೋಚತಂ। ಅಸ್ಮಾನಾಗಂತುಂ ರಥೇ ಸ್ಥಿತ್ವಾಶ್ವ-ಪ್ರಗ್ರಹಾನ್ಮುಂಚತಂ ॥ ಮುಂಚತೇರ್ಲೋಟಿ ಬಹುಲಂ ಛಂದಸೀತಿ ಶಪಃ ಶ್ಲುಃ । ಅಡಾಗಮಃ ॥ ಅತ್ರ ವಿಷ್ಣಾಪ್ವನಾಮಾನಂ ಪುತ್ರಮುದ್ದಿಶ್ಯ ತಸ್ಯ ಪಿತಾ ವಿಶ್ವಕೋ ಯುವಾಮಾಹ್ವಯತೀತ್ಯಾತ್ಮಾನಮಾಹ । ಯದ್ವಾ । ವಿಶ್ವಕಸ್ಯ ಪಿತಾ ಕೃಷ್ಣೋ ನಾಮರ್ಷಿರ್ಮಮ ಪುತ್ರೋ ವಿಶ್ವಕಃ ಪುತ್ರಾರ್ಥಂ ಯುವಾಮಭಿ-ಹ್ವಯತೀತಿ ವದತಿ ॥

॥ ಪ್ರತಿಪದಾರ್ಥ ॥

**ದಸ್ರಾ**—ಆಕರ್ಷಕವಾದ ರೂಪವುಳ್ಳವರೂ । **ಭಿಷಜಾ**—ದೇವತೆಗಳ ವೈದ್ಯರೂ । **ಮಯೋಭುವಾ**—ಸುಖವನ್ನುಂಟುಮಾಡುವವರೂ । **ಉಭಾ**—ಪರಸ್ಪರ ಜತೆಯಲ್ಲಿರುವವರೂ ಇಬ್ಬರೂ ಆದ ಎಲೈ ಅಶ್ವಿನೀದೇವತೆಗಳೇ ನೀವು । **ದಕ್ಷಸ್ಯ**—ದಕ್ಷಪ್ರಜಾಪತಿಯ । **ವಚಸಃ**—ಸ್ತುತಿಗೆ ಪಾತ್ರರಾಗಿ । **ಬಭೂವಥುಃ**—ಆಗಿದ್ದೀರಿ । **ಹಿ**—ಈ ವಿಷಯವು ಪ್ರಸಿದ್ಧವಾಗಿದೆ । **ತಾ**—ಆ ರೀತಿ ಪ್ರಸಿದ್ಧರಾದ । **ವಾಂ**—ನಿಮ್ಮನ್ನು । **ವಿಶ್ವಕಃ**—ವಿಶ್ವಕಸಂಜ್ಞಕನಾದ ಋಷಿಯು। **ತನೂಕೃಥೇ**—ತನ್ನ ಪುತ್ರನ ನಿಮಿತ್ತವಾಗಿ। **ಹವತೇ**—ಸ್ತುತಿಗಳಿಂದ ನಿಮ್ಮನ್ನು ಆಹ್ವಾನಮಾಡುತ್ತಾನೆ ಆದ್ದರಿಂದ। **ನಃ**—ನಮ್ಮ ವಿಷಯದಲ್ಲಿ ನಿಮಗಿರುವ । **ಸಖ್ಯಾ**- ಸಖಿತ್ವವನ್ನು । **ಮಾ ವಿ ಯೌಷ್ಟಂ**—ಬಿಟ್ಟು ಹೋಗುವಂತೆ ಮಾಡಬೇಡಿ ಮತ್ತು । **ಮುಮೋಚತಂ**—ನಮ್ಮ ಸಮೀಪಕ್ಕೆ ಬಂದಿರುವ ನೀವು ನಿಮ್ಮ ರಥದ ಕುದುರೆಗಳನ್ನು ಬಿಚ್ಚಿಬಿಡಿ.

॥ ಭಾವಾರ್ಥ ॥

ಆಕರ್ಷಕವಾದ ರೂಪಸಂಪನ್ನರಾದವರೂ, ದೇವತೆಗಳ ವೈದ್ಯರೂ, ಸರ್ವರಿಗೂ ಸುಖವನ್ನುಂಟುಮಾಡುವವರೂ, ಇಬ್ಬರಾದರೂ ಯಾವಾಗಲೂ ಜತೆಯಲ್ಲಿರುವವರೂ ಆದ ಎಲೈ ಅಶ್ವಿನೀದೇವತೆಗಳೇ, ನೀವು ದಕ್ಷ ಪ್ರಜಾಪತಿಯ ಸ್ತುತಿಗೆ ಪಾತ್ರರಾಗಿದ್ದಿರಿ. ಈ ವಿಷಯವು ಪ್ರಸಿದ್ಧವಾಗಿದೆ. ಇಂತಹ ನಿಮ್ಮನ್ನು ವಿಶ್ವಕನೆಂಬ ಋಷಿಯು (ಈ ಸೂಕ್ತದ ಋಷಿಯು) ತನ್ನ ಪುತ್ರನ ನಿಮಿತ್ತವಾಗಿ ಸ್ತುತಿಗಳಿಂದ ನಿಮ್ಮನ್ನು ಆಹ್ವಾನಮಾಡುತ್ತಾನೆ. ನಮ್ಮ ವಿಷಯದಲ್ಲಿ ನಿಮಗಿರುವ ಸ್ನೇಹಕ್ಕೆ ಚ್ಯುತಿಯನ್ನುಂಟುಮಾಡಬೇಡಿ ನಮ್ಮ ಸಮೀಪಕ್ಕೆ ಬಂದಿರುವ ನಿಮ್ಮ ರಥದ ಕುದುರೆಗಳನ್ನು ಇಲ್ಲಿಯೇ ಬಿಚ್ಚಿಬಿಡಿ.

## English Translation

Dasras, physicians, sources of happiness, you both were (the objects) of Daksha's praise; Vishwaka now invoks you for the sake of his son; sever not our friendships, but fling loose (your reins and gallop hither).

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಸೂಕ್ತದ್ರಷ್ಟೃವಾದ ವಿಶ್ವಕನೆಂಬ ಋಷಿಯು ತನ್ನ ಪುತ್ರನಾದ ವಿಷ್ಣಾಪು ಎಂಬುವನ ಪರವಾಗಿ ಅಶ್ವಿನೀದೇವತೆಗಳನ್ನು ಆಹ್ವಾನಮಾಡುತ್ತಾನೆಂದು ತನ್ನ ವಿಷಯವನ್ನೇ ಋಷಿಯು ಹೇಳಿಕೊಂಡಿದಾನೆ. ಅಥವಾ ವಿಶ್ವಕಋಷಿಯ ತಂದೆಯಾದ ಕೃಷ್ಣನೆಂಬ ಋಷಿಯು ತನ್ನ ಪುತ್ರನಾದ ವಿಶ್ವಕನು ತನ್ನ ಪುತ್ರನಾದ ವಿಷ್ಣಾಪು ಎಂಬುವನ ನಿಮಿತ್ತವಾಗಿ ಅಶ್ವಿನೀದೇವತೆಗಳನ್ನು ಆಹ್ವಾನಮಾಡುತ್ತಾನೆಂದೂ ಹೇಳಬಹುದು.

**ದಸ್ರಾ—ದರ್ಶನೀಯೌ ।** ಆಕರ್ಷಕವಾದ ರೂಪವುಳ್ಳವರು. **ಅಥವಾ ದಸು ಉಪಕ್ಷಯೇ। ಸರ್ವೇಷಾಂ ಶತ್ರೂಣಾಮುಪಕ್ಷಯಿತಾರೌ।** ದಸ್ರಾ ಎಂಬ ಶಬ್ದವು, ದಸು–ನಾಶಮಾಡು ಎಂಬ ಧಾತುವಿನಿಂದ ನಿಷ್ಪನ್ನವಾಗಬಹುದೆಂದು ಭಾವಿಸಿದರೆ, ಶತ್ರುಗಳನ್ನು ನಾಶಮಾಡುವವರು ಎಂದೂ ಅರ್ಥವು.

**ಭಿಷಜಾ—**ಈ ಶಬ್ದಕ್ಕೂ ಎರಡು ವಿಧವಾದ ಅರ್ಥವನ್ನು ಹೇಳಬಹುದು. **ಅಶ್ವಿನೌ ವೈ ದೇವಾನಾಂ ಭಿಷಜೌ** ಎಂಬ ಶ್ರುತಿವಾಕ್ಯದಂತೆ ಈ ಅಶ್ವಿನೀದೇವತೆಗಳು ದೇವತೆಗಳ ವೈದ್ಯರೆಂದು ಪ್ರಸಿದ್ಧರಾಗಿರುವರು. ಅಥವಾ **ಭೀತಾನಾಂ ತ್ರಾಸಯಿತಾರೌ। ಯದಾ ನರಾ ಅಶ್ವಿನೌ ಸ್ತುವಂತಿ ತದಾ ತೌ ತೇಷಾಂ ಭೀತಿಮಪನಯತ ಇತ್ಯರ್ಥಃ।** ಜನಗಳಿಗೆ ಉಂಟಾಗುವ ಭಯವನ್ನು ನಿವಾರಣೆಮಾಡುವವರು. ಎಂದರೆ ಜನಗಳು ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿದಾಗ ಈ ದೇವತೆಗಳು ಆ ಜನಗಳ ಭೀತಿಯನ್ನು ನಿವಾರಣೆಮಾಡುವರು. ಆದ್ದರಿಂದ ಭಯನಿವಾರಕರು ಎಂದೂ ಅರ್ಥವನ್ನು ಹೇಳಬಹುದು.

**ತನೂಕೃಥೇ—ತನೋತಿ ಕುಲಮಿತಿ ತನೂಃ ಪುತ್ರಃ ತಸ್ಯ ನಿಮಿತ್ತಂ।** ಕುಲವನ್ನು ವಿಸ್ತಾರ ಮಾಡುವವನಾದ್ದರಿಂದ ಎಂದರೆ ಸಂತತಿಯಿಂದ ವಂಶಾಭಿವೃದ್ಧಿಯನ್ನು ಮಾಡುವುದರಿಂದ ಪುತ್ರನಿಗೆ ತನೂಃ ಎಂದು ಹೆಸರು ಆ ಪುತ್ರನ ನಿಮಿತ್ತವಾಗಿ ಎಂದು ಶಬ್ದಾರ್ಥವು.

॥ ಸಂಹಿತಾಪಾಠಃ ॥

ಕಥಾ ನೂನಂ ವಾಂ ವಿಮನಾ ಉಪ ಸ್ತವದ್ಯುವಂ ಧಿಯಂ ದದಥುರ್ವಸ್ಯ-
ಇಷ್ಟಯೇ ।
ತಾ ವಾಂ ವಿಶ್ವಕೋ ಹವತೇ ತನೂಕೃಥೇ ಮಾ ನೋ ವಿ ಯೌಷ್ಟಂ ಸಖ್ಯಾ
ಮುಮೋಚತಂ ॥ ೨ ॥

॥ ಪದಪಾಠಃ ॥

ಕಥಾ । ನೂನಂ । ವಾಂ । ವಿಽಮನಾಃ । ಉಪ । ಸ್ತವತ್ । ಯುವಂ । ಧಿಯಂ । ದದಥುಃ । ವಸ್ಯಃಽ-
ಇಷ್ಟಯೇ ।

ತಾ । ವಾಂ । ವಿಶ್ವಕಃ । ಹವತೇ । ತನೂऽಕೃಥೇ । ಮಾ । ನಃ । ವಿ । ಯೌಷ್ಟಂ । ಸಖ್ಯಾ । ಮುಮೋ-
ಚತಂ ॥ ೨ ॥

॥ ಸಾಯಣ ಭಾಷ್ಯಂ ॥

ಹೇ ಅಶ್ವಿನಾ ವಿಮನಾ ಏತನ್ನಾಮಕ ಋಷಿರ್ನೂನಂ ಪುರಾ ಕಥಾ ಯುವಾಮುಪ ಸ್ತವತ್ । ಕಥಮುಪಾಸ್ತೌತ್ । ತೇನ ಸ್ತುತೌ ಯುವಂ ಯುವಾಂ ವಸ್ಯಇಷ್ಟಯೇ । ವಸ್ಯೋ ವಸೀಯಃ ಪ್ರಶಸ್ತಂ ಧನಂ । ತಸ್ಯಾಭಿಲಷಿತಸ್ಯೇಷ್ಟಯೇऽಭಿಗಮನಾಯ ಯದ್ವಾ ವಸಿಷ್ಠಧನಸ್ಯೇಷ್ಟಯೇ ಪ್ರಾಪ್ತಯೇ ಧಿಯಂ ಬುದ್ಧಿಂ ವಿಮನಸೇ ದದಥುಃ । ಅದದಾಥಾಂ ಖಲು ॥ ವಸ್ಯ ಇತಿ ವಸುಮಚ್ಛಬ್ದಾದೀಯಸುನಿ ವಿನ್ಮತೋರ್ಲುಗಿತಿ ಲುಕ್ । ಈಯಸುನ ಈಕಾರಲೋಪಶ್ಛಾಂದಸಃ ॥ ತಾದೃಶೌ ಯುವಾಂ ವಿಶ್ವಕೋ ಹವತ ಇತಿ ಗತಂ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) ವಿಮನಾಃ—ವಿಮನಾಃ ಎಂಬ ಋಷಿಯು । **ನೂನಂ**—ಪೂರ್ವದಲ್ಲಿ । **ಕಥಾ**—ಯಾವ ರೀತಿಯಾಗಿ । **ವಾಂ**—ನಿಮ್ಮನ್ನು । **ಉಪ ಸ್ತವತ್**—ಸ್ತೋತ್ರಮಾಡಿದನು । **ಯುವಂ**—ನೀವು (ಅವನ ಸ್ತುತಿಯಿಂದ ಪ್ರೀತರಾಗಿ ಅವನಿಗೆ) **ವಸ್ಯ ಇಷ್ಟಯೇ**—ಧನಪ್ರಾಪ್ತಿಯ ಮಾರ್ಗವಾದ । **ಧಿಯಂ**—ಬುದ್ಧಿಯನ್ನು । **ದಧತುಃ**—ಕೊಟ್ಟಿರಿ । **ತಾ**—ಆ ರೀತಿ ಪ್ರಸಿದ್ಧರಾದ । **ವಾಂ**—ನಿಮ್ಮನ್ನು । **ವಿಶ್ವಕಃ**—ವಿಶ್ವಕ ಸಂಜ್ಞಕನಾದ ಋಷಿಯು । **ತನೂಕೃಥೇ**—ತನ್ನ ಪುತ್ರನ ನಿಮಿತ್ತವಾಗಿ । **ಹವತೇ**—ಸ್ತುತಿಗಳಿಂದ ನಿಮ್ಮನ್ನು ಆಹ್ವಾನಮಾಡುತ್ತಾನೆ ಆದ್ದರಿಂದ । **ನಃ**—ನಮ್ಮ ವಿಷಯದಲ್ಲಿ ನಿಮಗಿರುವ । **ಸಖ್ಯಾ**—ಸಖಿತ್ವವನ್ನು । **ಮಾ ವಿ ಯೌಷ್ಟಂ**—ಬಿಟ್ಟುಹೋಗುವಂತೆ ಮಾಡಬೇಡಿ ಮತ್ತು । **ಮುಮೋಚತಂ**—ನಮ್ಮ ಸಮೀಪಕ್ಕೆ ಬಂದಿರುವ ನೀವು ನಿಮ್ಮ ರಥದ ಕುದುರೆಯನ್ನು ಬಿಚ್ಚಿಬಿಡಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ವಿಮನಾಃ ಎಂಬ ಋಷಿಯು ಪೂರ್ವದಲ್ಲಿ ನಿಮ್ಮನ್ನು ಅನೇಕವಿಧವಾಗಿ ಸ್ತುತಿಸಿದನು. ನೀವು ಅವನ ಸ್ತುತಿಯಿಂದ ಪ್ರೀತರಾಗಿ ಅವನಿಗೆ ಧನವನ್ನು ಸಂಪಾದಿಸುವ ಮಾರ್ಗದಲ್ಲಿ ತಿಳಿವಳಿಕೆಯನ್ನು ಕೊಟ್ಟಿರಿ. ಇಂತಹ ನಿಮ್ಮನ್ನು ವಿಶ್ವಕನೆಂಬ ಋಷಿಯು (ಈ ಸೂಕ್ತದ ಋಷಿಯು) ತನ್ನ ಪುತ್ರನ ನಿಮಿತ್ತವಾಗಿ ಸ್ತುತಿಗಳಿಂದ ನಿಮ್ಮನ್ನು ಆಹ್ವಾನಮಾಡುತ್ತಾನೆ. ನಮ್ಮ ವಿಷಯದಲ್ಲಿ ನಿಮಗಿರುವ ಸ್ನೇಹಕ್ಕೆ ಚ್ಯುತಿಯನ್ನುಂಟುಮಾಡಬೇಡಿ. ನಮ್ಮ ಸಮೀಪಕ್ಕೆ ಬಂದಿರುವ ನಿಮ್ಮ ರಥದ ಕುದುರೆಗಳನ್ನು ಇಲ್ಲಿಯೇ ಬಿಚ್ಚಿಬಿಡಿ.

## English Translation

How Vimanas once praised you, and you gave him understanding for the attainment of excellent wealth ! Vishwaka now invokes you for the

sake of his son ; sever not our friendships, but fling loose ( your reins and gallop hither ).

॥ ಸಂಹಿತಾಪಾಠಃ ॥

ಯುವಂ ಹಿ ಷ್ಮಾ ಪುರುಭುಜೇಮಮೇಧತುಂ ವಿಷ್ಣಾಪ್ವೇ ದದಥುರ್ವಸ್ಯ-
ಇಷ್ಟಯೇ ।
ತಾ ವಾಂ ವಿಶ್ವಕೋ ಹವತೇ ತನೂಕೃಥೇ ಮಾ ನೋ ವಿ ಯೌಷ್ಟಂ ಸಖ್ಯಾ
ಮುಮೋಚತಂ ॥ ೩ ॥

॥ ಪದಪಾಠಃ ॥

ಯುವಂ । ಹಿ । ಸ್ಮ । ಪುರುಽಭುಜಾ । ಇಮಂ । ಏಧತುಂ । ವಿಷ್ಣಾಪ್ವೇ । ದದಥುಃ । ವಸ್ಯಃಽಇಷ್ಟಯೇ ।
ತಾ । ವಾಂ । ವಿಶ್ವಕಃ । ಹವತೇ । ತನೂಽಕೃಥೇ । ಮಾ । ನಃ । ವಿ । ಯೌಷ್ಟಂ । ಸಖ್ಯಾ । ಮುಮೋ-
ಚತಂ ॥ ೩ ॥

॥ ಸಾಯಣಭಾಷ್ಯಂ ॥

ಹೇ ಪುರುಭುಜಾ ಪುರುಭುಜೌ ಪುರೂಣಾಂ ಬಹೂನಾಂ ಧನಾದಿದಾನೇನ ಭೋಜಯಿತಾರೌ । ಯದ್ವಾ । ಬಹೂನಾಂ ಸ್ತೋತೄಣಾಂ ಪಾಲಯಿತಾರಾವಶ್ವಿನಾ ಯುವಂ । ಹಿ ಶಬ್ದೋಽವಧಾರಣೇ । ಯುವಾಮೇವೇಮಮೇಧತುಂ । ಏಧತೇರ್ಧಿವಹೋಽಕ್ಷತುಃ । ಉ. ೧-೭೯ । ಇತಿ ಚತುಪ್ರತ್ಯಯಃ । ಚಿತ್ತ್ವಾದಂತೋದಾತ್ತಃ ॥ ಇಮಾಂ ಧನಾದಿವೃದ್ಧಿಂ ವಿಷ್ಣಾಪ್ವೇ । ವಿಷ್ಣೋಃ ಸರ್ವೇಷಾಂ ದೇವಾನಾಂ ಮುಖ್ಯತ್ವಾತ್ ತದ್ಗ್ರಹಣೇ ಸರ್ವೇ ದೇವಾ ಗೃಹೀತಾ ಭವಂತಿ । ವಿಷ್ಣ್ವಾದೀನ್ ಸರ್ವಾನ್ ದೇವಾನ್ ಆಪ್ನೋತೀತಿ ವಿಷ್ಣಾಪೂಃ ॥ ಪೃಷೋದರಾದಿಃ ॥ ಯದ್ವಾ । ವಿಷ್ಣುಂ ಸರ್ವಗೃಹೇಷು ವ್ಯಾಪ್ತಂ ಸೋಮಂ ಗಣಾದ-ವಿಶ್ರೇಣ ಪೃಣಾತೀತಿ । ತಸ್ಯ ಚತುರ್ಥೀ ವಿಷ್ಣಾಪ್ವ ಇತಿ । ಏತನ್ನಾಮಕೇ ಮಮ ಪುತ್ರೇ ಪೌತ್ರೇ ವಾ । ಪುತ್ರಾಯ ಪೌತ್ರಾಯ ವಾ । ಇಮಾಂ ಧನಾದಿವೃದ್ಧಿಂ ದದಥುಃ । ಅದತ್ತಂ । ಲಿಡರ್ಥೇ । ವಸ್ಯ-ಇಷ್ಟಯೇ ವಸೀಯಸಃ ಪ್ರಶಸ್ತಧನಸ್ಯೇಷ್ಟಯೇ ಇಚ್ಛಾಂ ಪೂರಯಿತುಂ ॥ ಕ್ರಿಯಾರ್ಥೋಪಪದಸ್ಯ । ಪಾ. ೨-೩-೧೪ । ಇತಿ ಚತುರ್ಥೀ ॥ ತಾ ವಾಮಿತಿ ಪೂರ್ವವದ್ವ್ಯಾಖ್ಯೇಯಂ ।

॥ ಪ್ರತಿಪದಾರ್ಥ ॥

ಪುರುಭುಜಾ—ಅನೇಕರ ಪಾಲಕರಾದ ಎಲೈ ಅಶ್ವಿನೀದೇವತೆಗಳೇ । ಯುವಂ—ನೀವು । ಇಮಂ ಏಧತುಂ—ಈ ಧನಾಭಿವೃದ್ಧಿಯನ್ನುಂಟುಮಾಡುವುದಕ್ಕಾಗಿ । ವಿಷ್ಣಾಪ್ವೇ—ವಿಷ್ಣಾಪು ಎಂಬ ನನ್ನ ಪುತ್ರನಲ್ಲಿ।

ವಸ್ಯ ಇಷ್ಟಯೇ—ಧನಪ್ರಾಪ್ತಿಗೆ ಸಾಧನವಾದ ಬುದ್ಧಿಯನ್ನು । ದಧತುಃ—ಅನುಗ್ರಹಿಸಿ ಕೊಟ್ಟಿರಿ । ತಾ—ಆರೀತಿ ಪ್ರಸಿದ್ಧರಾದ । ವಾಂ—ನಿಮ್ಮನ್ನು । ವಿಶ್ವಕಃ—ವಿಶ್ವಕಸಂಜ್ಞಕನಾದ ಋಷಿಯು । ತನೂಕೃಥೇ—ತನ್ನ ಪುತ್ರನ ನಿಮಿತ್ತವಾಗಿ । ಹವತೇ—ಸ್ತುತಿಗಳಿಂದ ನಿಮ್ಮನ್ನು ಆಹ್ವಾನಮಾಡುತ್ತಾನೆ ಆದ್ದರಿಂದ । ನಃ—ನಮ್ಮ ವಿಷಯದಲ್ಲಿ ನಿಮಗಿರುವ । ಸಖ್ಯಾ—ಸಖಿತ್ವವನ್ನು । ಮಾ ವಿ ಯೌಷ್ಟಂ—ಬಿಟ್ಟುಹೋಗುವಂತೆ ಮಾಡಬೇಡಿ ಮತ್ತು । ಮುಮೋಚತಂ—ನಮ್ಮ ಸಮೀಪಕ್ಕೆ ಬಂದಿರುವ ನೀವು ನಿಮ್ಮ ರಥದ ಕುದುರೆಗಳನ್ನು ಬಿಚ್ಚಿಬಿಡಿ.

॥ ಭಾವಾರ್ಥ ॥

ಅನೇಕ ಯಜಮಾನರ ಪಾಲಕರಾದ ಎಲೈ ಅಶ್ವಿನೀದೇವತೆಗಳೇ, ನೀವು ವಿಷ್ಣಾಪೂ ಎಂಬ ನನ್ನ ಪುತ್ರನಿಗೆ ಧನಾಭಿವೃದ್ಧಿಯನ್ನುಂಟುಮಾಡುವುದಕ್ಕಾಗಿ ಅವನಿಗೆ ಧನಪ್ರಾಪ್ತಿಗೆ ಸಾಧನವಾದ ಬುದ್ಧಿಯನ್ನು ಅನುಗ್ರಹಿಸಿ ಕೊಟ್ಟಿರಿ. ಇಂತಹ ನಿಮ್ಮನ್ನು ವಿಶ್ವಕನೆಂಬ ಋಷಿಯು (ಈ ಸೂಕ್ತದ ಋಷಿಯು ತನ್ನ ಪುತ್ರನ ನಿಮಿತ್ತವಾಗಿ ಸ್ತುತಿಗಳಿಂದ ನಿಮ್ಮನ್ನು ಆಹ್ವಾನಮಾಡುತ್ತಾನೆ. ನಮ್ಮ ವಿಷಯದಲ್ಲಿ ನಿಮಗಿರುವ ಸ್ನೇಹಕ್ಕೆ ಚ್ಯುತಿಯನ್ನುಂಟುಮಾಡಬೇಡಿ. ನಮ್ಮ ಸಮೀಪಕ್ಕೆ ಬಂದಿರುವ ನಿಮ್ಮ ರಥದ ಕುದುರೆಗಳನ್ನು ಇಲ್ಲಿಯೇ ಬಿಚ್ಚಿಬಿಡಿ.

## English Translation

Gladeners of many, you have given to Vishnapu this prosperity for the attainment of excellent wealth; Vishwaka now invokes you for the sake of his son, sever not our friendships, but fling loose (your reins and gallop hither).

॥ ವಿಶೇಷವಿಷಯಗಳು ॥

**ಪುರುಭುಜಾ**—ಈ ಶಬ್ದವು ಸಾಧಾರಣವಾಗಿ ಅಶ್ವಿನೀದೇವತೆಗಳ ಗುಣಗಳನ್ನು ವರ್ಣಿಸುವ ವಿಶೇಷಣ ಪದವಾಗಿಯೇ ಉಪಯೋಗಿಸಲ್ಪಡುವುದು. **ಪುರೂಣಾಂ ಬಹೂನಾಂ ಧನಾದಿದಾನೇನ ಭೋಜಯಿತಾರೌ ।** ಅನೇಕ ಜನರಿಗೆ ಧನಾದಿಗಳನ್ನು ಕೊಟ್ಟು ಪೋಷಿಸುವವರು ಅಥವಾ **ಬಹೂನಾಂ ಸ್ತೋತೄಣಾಂ ಪಾಲಯಿತಾರೌ।** ಸ್ತೋತ್ರಮಾಡುವ ಅನೇಕರನ್ನು ಪಾಲಿಸುವವರು ಎಂದು ಎರಡು ವಿಧ ಅರ್ಥಗಳನ್ನು ಹೇಳಿದಾರೆ.

**ವಿಷ್ಣಾಪ್ವೇ**—ಈ ಮಂತ್ರದ್ರಷ್ಟೃವಾದ ವಿಶ್ವಕಋಷಿಯ ಪುತ್ರನಿಗೆ ವಿಷ್ಣ್ವಾಪೂ ಎಂದು ಹೆಸರು. ಈ ಶಬ್ದಕ್ಕೆ ಭಾಷ್ಯಕಾರರು ಅವಯವಾರ್ಥವನ್ನು ಇಲ್ಲಿ ವಿವರಿಸಿರುವರು **ವಿಷ್ಣೋಃ ಸರ್ವೇಷಾಂ ದೇವಾನಾಂ ಮುಖ್ಯತ್ವಾತ್ ತದ್ಗ್ರಹಣೇ ಸರ್ವೇ ದೇವಾ ಗೃಹಿತಾ ಭವಂತಿ । ವಿಷ್ಣ್ವಾದೀನ್ ಕರ್ಮಣಾ ವ್ಯಾಪ್ನೋತೀತಿ ವಿಷ್ಣಾಪೂಃ ।** ವಿಷ್ಣುವು ಸರ್ವದೇವತೆಗಳಲ್ಲಿಯೂ ಮುಖ್ಯನಾದ್ದರಿಂದ ಇಲ್ಲಿ ವಿಷ್ಣುಶಬ್ದದಿಂದ ಸರ್ವ ದೇವತೆಗಳನ್ನೂ ಸೂಚಿಸಿದಂತಾಯಿತು ವಿಷ್ಣುವೇ ಮೊದಲಾದ ಸಮಸ್ತದೇವತೆಗಳನ್ನೂ ಯಜ್ಞಾದಿಕರ್ಮದಿಂದ ವ್ಯಾಪಿಸುವವನು ಎಂದರೆ ತೃಪ್ತಿಪಡಿಸುವವನಾದ್ದರಿಂದ ವಿಷ್ಣಾಪೂಃ ಎಂಬ ಹೆಸರು ಇದು ಒಂದು ವಿಧವಾದ ಅರ್ಥವು ಈ ಅರ್ಥದಲ್ಲಿ ಆಪ್ಲೃ ವ್ಯಾಪ್ತೌ ಎಂಬ ಧಾತುವಿನಿಂದ ಈ ಶಬ್ದದ ಉತ್ತರಾರ್ಧವು ನಿಷ್ಪನ್ನವಾಗಿದೆ. ಅಥವಾ ಈ ಶಬ್ದಕ್ಕೆ ಇನ್ನೊಂದು

ವಿಧ ಅರ್ಥವೂ ಸಾಧ್ಯವಾಗಬಹುದು. **ವಿಷ್ಣುಂ ಸರ್ವಗ್ರಹೇಷು ವ್ಯಾಪ್ತಂ ಸೋಮಂ ದಶಾಪವಿತ್ರೇಣಾ ಪುನಾತೀತಿ ವಿಷ್ಣಾಪೂಃ।** ಸರ್ವದೇವತೆಗಳ ಗ್ರಹಪಾತ್ರೆಗಳಲ್ಲಿಯೂ ವ್ಯಾಪ್ತವಾದ ವಿಷ್ಣುಗ್ರಹಪಾತ್ರೆಯಲ್ಲಿರುವ ಸೋಮವನ್ನು ದಶಾಪವಿತ್ರದಿಂದ ಶೋಧಿಸುವವನಾದ್ದರಿಂದ ವಿಷ್ಣಾಪೂ ಎಂಬ ಹೆಸರು. ಇಲ್ಲಿ ಈ ಶಬ್ದದ ಉತ್ತರಾರ್ಧವು ಆ ಎಂಬ ಉಪಸರ್ಗಪೂರ್ವಕವಾದ **ಪುನಾತಿ** ಧಾತುವಿನಿಂದ ನಿಷ್ಪನ್ನವಾಗಿದೆಯೆಂದು ಭಾವಿಸಬೇಕು.

ವಸ್ವ ಇಷ್ಟಯೇ— **ವಸೀಯಸಃ ಪ್ರಶಸ್ತಧನಸ್ಯೇಷ್ಟಯ ಇಚ್ಛಾಂ ಪೂರಯಿತುಂ ಇಮಾಂ ಧನಾದಿವೃದ್ಧಿಂ ದದಥುಃ ಅದತ್ತಂ।** ಪ್ರಶಸ್ತವಾದ ಧನವನ್ನು ಅಪೇಕ್ಷಿಸುತ್ತಿರುವ ವಿಷ್ಣಾಪುವಿನ ಇಚ್ಛೆಯನ್ನು ಪೂರೈಸುವುದಕ್ಕಾಗಿ ಅವನಿಗೆ ಧನಾಭಿವೃದ್ಧಿಯನ್ನುಂಟುಮಾಡಿದಿರಿ ಎಂದಭಿಪ್ರಾಯವು.

॥ ಸಂಹಿತಾಪಾಠಃ ॥

ಉತ ತ್ಯಂ ವೀರಂ ಧನಸಾಮೃಜೀಷಿಣಂ ದೂರೇ ಚಿತ್ಸಂತಮವಸೇ ಹವಾಮಹೇ ।
ಯಸ್ಯ ಸ್ವಾದಿಷ್ಠಾ ಸುಮತಿಃ ಪಿತುರ್ಯಥಾ ಮಾ ನೋ ವಿ ಯೌಷ್ಟಂ ಸಖ್ಯಾ ಮುಮೋಚತಂ ॥ ೪ ॥

॥ ಪದಪಾಠಃ ॥

ಉತ । ತ್ಯಂ । ವೀರಂ । ಧನಽಸಾಂ । ಋಜೀಷಿಣಂ । ದೂರೇ । ಚಿತ್ । ಸಂತಂ । ಅವಸೇ । ಹವಾಮಹೇ ।
ಯಸ್ಯ । ಸ್ವಾದಿಷ್ಠಾ । ಸುಽಮತಿಃ । ಪಿತುಃ । ಯಥಾ । ಮಾ । ನಃ । ವಿ । ಯೌಷ್ಟಂ । ಸಖ್ಯಾ । ಮುಮೋಚತಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಉತಾಪಿ ಚ ವೀರಂ ಕರ್ಮಣಿ ಸಮರ್ಥಂ ಧನಸಾಂ ಧನಾನಾಂ ಸಂಭಕ್ತಾರಮೃಜೀಷಿಣಂ । ಋಜೀಷ ಉಪಾರ್ಜಿತೋಽಭಿಷುತಃ ಸೋಮಃ । ತದ್ವಂತಂ ದೂರೇ ಚಿದ್ದೂರ ಏವ ಸಂತಂ। ಭವಂತಂ ವಿನಷ್ಟಮಿವ ತ್ಯಂ ತಂ ವಿಷ್ಣಾಪ್ವಮವಸೇಽಸ್ಮಾಕಂ ರಕ್ಷಣಾಯ ಹವಾಮಹೇ । ಆಹ್ವಯಾಮಃ ಪುತ್ರೋ ಹಿ ಪಿತರಂ ರಕ್ಷತೇ । ಕಿಂಚ ಯಸ್ಯ ಪುತ್ರಸ್ಯ ಪೌತ್ರಸ್ಯ ವಾ ಸುಮತಿಃ ಶೋಭನಾ ಸ್ತುತಿಃ ಸ್ವಾದುಷ್ಠಾ ಸ್ವಾದುತಮಾ । ಅತಿಶಯೇನ ದೇವಾನಾಂ ಸ್ವಾದುಕಾರಿಣೀತ್ಯರ್ಥಃ । ತತ್ರ ದೃಷ್ಟಾಂತಃ ।

**ಪಿತುರ್ಯಥಾ ಪಿತುರ್ವಿಶ್ವಕಸ್ಯ ಸ್ತುತಿರ್ಯಥಾ ದೇವಾನಾಂ ಪ್ರೀತಿಕರೀ ತದ್ವತ್। ತಸ್ಮಾತ್ತಮಾಹ್ವಯಾಮ ಇತಿ ಶೇಷಃ । ಮೇತಿ ಗತಾರ್ಥಃ ॥**

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ,) **ಉತ**—ಮತ್ತು । **ವೀರಂ**—ಯಜ್ಞಕರ್ಮಕುಶಲನೂ । **ಧನಸಾಂ**—ಧನವನ್ನು ಹಂಚಿಕೊಡುವವನೂ । **ಋಜೀಷಿಣಂ**—ಋಜೀಷವೆಂಬ ಒಂದು ಸಲ ಹಿಂಡಿದ ಸೋಮಲತೆಗಳನ್ನು ಪುನಃ ಹಿಂಡಿ ತೆಗೆದ ಸೋಮವನ್ನು ಸಿದ್ಧಪಡಿಸಿರುವವನೂ । **ದೂರೇ ಚಿತ್**—ದೂರದಲ್ಲಿಯೇ । **ಸಂತಂ**—ಇರುವವನೂ ಆದ । **ತ್ಯಂ**—ಆ ವಿಷ್ಣಾಪುವನ್ನು । **ಅವಸೇ**—ನಮ್ಮನ್ನು (ತಂದೆಯನ್ನು) ರಕ್ಷಿಸುವುದಕ್ಕಾಗಿ । **ಹವಾಮಹೇ**—ಕರೆಯುತ್ತೇವೆ, ಇದಲ್ಲದೆ । **ಯಸ್ಯ**—ಯಾವ ಪುತ್ರನ ಅಥವಾ ಪೌತ್ರನ । **ಸುಮತಿಃ**—ಉತ್ತಮವಾದ ಸ್ತುತಿಯು । **ಪಿತುಃ ಯಥಾ**—ತಂದೆಯಾದ ವಿಶ್ವಕ ಋಷಿಯ ಸ್ತುತಿಯಂತೆ । **ಸ್ವಾದಿಷ್ಠಾ**—ದೇವತೆಗಳಿಗೆ ಹಿತಕರವಾಗಿರುವುದೋ ಅಂತಹ ವಿಷ್ಣಾಪುವನ್ನು ಕರೆಯುತ್ತೇವೆ । **ನಃ**—ಎಲೈ ಅಶ್ವಿನೀದೇವತೆಗಳೆ, ನಮ್ಮ ವಿಷಯದಲ್ಲಿ ನಿಮಗಿರುವ । **ಸಖ್ಯಾ**—ಮಿತ್ರತ್ವಕ್ಕೆ । **ಮಾ ವಿ ಯೌಷ್ಟಂ**—ಚ್ಯುತಿಯುಂಟಾಗದಿರಲಿ । **ಮುಮೋಚತಂ**—ನಿಮ್ಮ ಅಶ್ವಗಳ ಹಗ್ಗವನ್ನು ಬಿಚ್ಚಿರಿ

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಯಜ್ಞಾದಿಕರ್ಮಗಳಲ್ಲಿ ಕುಶಲನೂ, ಧನವನ್ನು ಒದಗಿಸುವವನೂ ತೃತೀಯ ಸವನದಲ್ಲಿ ದೇವತೆಗಳಿಗೆ ಋಜೀಷದಿಂದ ತೆಗೆದ ಸೋಮವನ್ನು ಅರ್ಪಿಸುವವನೂ ತನ್ನ ತಂದೆಯಂತೆ ದೇವತೆಗಳಿಗೆ ಹಿತಕರವಾದ ಸ್ತುತಿಗಳನ್ನರ್ಪಿಸುವವನೂ, ದೂರದಲ್ಲಿರುವನೂ ಆದ ವಿಷ್ಣಾಪುವನ್ನು ನಮ್ಮ ರಕ್ಷಣೆಗಾಗಿ ಇಲ್ಲಿಗೆ ಬರುವಂತೆ ಕರೆಯುತ್ತೇವೆ. ಎಲೈ ಅಶ್ವಿನೀದೇವತೆಗಳೇ, ನಮ್ಮ ವಿಷಯದಲ್ಲಿ ನಿಮಗಿರುವ ಮಿತ್ರತ್ವಕ್ಕೆ ಚ್ಯುತಿಯು ಬಾರದಿರಲಿ ನಿಮ್ಮ ಕುದುರೆಗಳ ಹಗ್ಗವನ್ನು ಇಲ್ಲಿಯೇ ಬಿಚ್ಚಿಹಾಕಿರಿ.

English Translation

We summon that hero to our protection, (the enjoyer) of wealth, the possessor of the Soma, who now dwells afar off and whose hymn is most pleasing (to the gods) like his father's ; sever not our friendships, but fling loose (your reins and gallop hither).

॥ ಸಂಹಿತಾಪಾಠಃ ॥

ಋತೇನ ದೇವಃ ಸವಿತಾ ಶಮಾಯತ ಋತಸ್ಯ ಶೃಂಗಮುರ್ವಿಯಾ ವಿ ಪಪ್ರಥೇ ।

ಋತಂ ಸಾಸಾಹ ಮಹಿ ಚಿತ್ಪೃತನ್ಯತೋ ಮಾ ನೋ ವಿ ಯೌಷ್ಟಂ ಸಖ್ಯಾ ಮುಮೋಚತಂ ॥ ೫ ॥

॥ ಪದಪಾಠಃ ॥

ಋತೇನ । ದೇವಃ । ಸವಿತಾ । ಶಂಽಅಯತೇ । ಋತಸ್ಯ । ಶೃಂಗಂ । ಉರ್ವಿಯಾ । ವಿ । ಪಪ್ರಥೇ ।
ಋತಂ । ಸಸಾಹ । ಮಹಿ । ಚಿತ್ । ಪೃತನ್ಯತಃ । ಮಾ । ನಃ । ವಿ । ಯೌಷ್ಟಂ । ಸಖ್ಯಾ । ಮುಮೋಚತಂ ॥ ೫ ॥

॥ ಸಾಯಣಭಾಷ್ಯಂ ॥

ಋಷಿಃ ಸತ್ಯಪ್ರಶಂಸಾಂ ಕರೋತಿ । ಹೇ ಅಶ್ವಿನಾ ದೇವೋ ದ್ಯೋತಮಾನಃ ಸವಿತಾ ಸರ್ವಸ್ಯ ಸ್ವಸ್ವಕರ್ಮಣಿ ಪ್ರೇರಕ ಏತನ್ನಾಮಕೋ ದೇವ ಋತೇನ ಸತ್ಯೇನ ಶಮಾಯತೇ । ಸಾಯಂಕಾಲೇ ಸ್ವಕಿರಣಸಮೂಹಂ ಶಮಯತಿ । ತತೋಽನಂತರಂ ಸ ಏವ ಸವಿತಾ ಋತಸ್ಯ ಸತ್ಯಸ್ಯ ಶೃಂಗಮುಗ್ರಮುರ್ವಿಯೋರು ವಿಸ್ತೀರ್ಣಂ ಯಥಾ ಭವತಿ ತಥಾ ಪ್ರಾತಃಕಾಲೇ ವಿ ಪಪ್ರಥೇ । ವಿಶೇಷೇಣ ಪ್ರಥಯತಿ । ಸರ್ವತೋ ವಿಸ್ತಾರಯತಿ । ಕಿಂಚ ಪೃತನ್ಯತಃ ಪೃತನಾಮಿಚ್ಛತಃ ಸಂಯುಯುತ್ಸೋಃ ಶತ್ರೋರ್ಮಹಿ ಚಿನ್ಮಹದಪಿ ಬಲಮೃತಂ ಸತ್ಯಂ ಸ್ವಯಮೇವಾಭಿಭವತಿ । ಇತ್ಥಮೃತಂ ಪ್ರಶಸ್ತಮಭೂತ್ । ತಸ್ಮಾದ್ಯುವಾಮಪಿ ತೇನರ್ತೇನ ನೋಽಸ್ಮಾಕಂ ಸಖ್ಯಾನಿ ಮಾ ವಿ ಯೌಷ್ಟಂ । ಅತ್ರಾಗಂತುಮಶ್ವರಶ್ಮೀನ್ಮುಂಚತಮಿತಿ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ದೇವಃ**—ಪ್ರಕಾಶಮಾನನಾದ । **ಸವಿತಾ**—ಸರ್ವರನ್ನೂ ಪ್ರೇರಿಸುವ ಸವಿತೃದೇವನು । **ಋತೇನ**—ಸತ್ಯದ ಮಹತ್ವದಿಂದಲೇ । **ಶಮಾಯತೇ**—ಸಾಯಂಕಾಲದಲ್ಲಿ ತನ್ನ ಕಿರಣಗಳನ್ನು ಶಮನಗೊಳಿಸುತ್ತಾನೆ । **ಋತಸ್ಯ**—ಸತ್ಯದ । **ಶೃಂಗಂ**—ಮಹತ್ವವನ್ನು (ಪ್ರಕಟಿಸಲು) **ಉರ್ವಿಯಾ**—ವಿಸ್ತೀರ್ಣವಾದ ರಶ್ಮಿಸಮೂಹವನ್ನು । **ವಿ ಪಪ್ರಥೇ**—ಪ್ರಾತಃಕಾಲದಲ್ಲಿ ವಿಶೇಷವಾಗಿ ಹರಡುತ್ತಾನೆ ಇದಲ್ಲದೆ । **ಪೃತನ್ಯತಃ**—ಯುದ್ಧವನ್ನಿಚ್ಛಿಸುವ ಶತ್ರುವಿನ । **ಮಹಿ ಚಿತ್**—ಅಧಿಕವಾದ ಬಲವೂ । **ಋತಂ**—ಸತ್ಯದಿಂದಲೇ ಸೋಲನ್ನನುಭವಿಸುತ್ತದೆ । **ನಃ ಸಖ್ಯಾ**—ನಮಗೂ ನಿಮಗೂ ಇರುವ ಮಿತ್ರತ್ವಕ್ಕೆ । **ಮಾ ವಿ ಯೌಷ್ಟಂ**—ಚ್ಯುತಿಯುಂಟಾಗದಿರಲಿ । **ಮುಮೋಚತಂ**—ನಿಮ್ಮ ಕುದುರೆಗಳ ಹಗ್ಗವನ್ನು ಬಿಚ್ಚಿ ಇಲ್ಲಿಯೇ ನಿಲ್ಲಿಸಿರಿ.

॥ ಭಾವಾರ್ಥ ॥

ಈ ಋಕ್ಕಿನಲ್ಲಿ ಋಷಿಯು ಸತ್ಯದ ಪ್ರಶಂಸೆಯನ್ನು ಈ ರೀತಿ ಮಾಡುತ್ತಾನೆ ಎಲೈ ಅಶ್ವಿನೀದೇವತೆಗಳೇ, ಪ್ರಕಾಶಮಾನವಾದ ಸವಿತೃದೇವನು (ಸೂರ್ಯನು) ಸತ್ಯದ ಮಹತ್ವದಿಂದಲೇ ಅಸ್ತಮಾನಕಾಲದಲ್ಲಿ ತನ್ನ ಕಿರಣಗಳನ್ನು

ಉಪಶಮನಮಾಡುತ್ತಾನೆ. ಪುನಃ ಪ್ರಾತಃಕಾಲದಲ್ಲಿ ತನ್ನ ಕಿರಣಗಳನ್ನು ಎಲ್ಲೆಲ್ಲಿಯೂ ವಿಸ್ತಾರವಾಗಿ ಹರಡುವುದೂ ಸತ್ಯದ ಮಹಾತ್ಮ್ಯದಿಂದಲೇ ಆಗಿದೆ. ಯುದ್ಧಮಾಡಬೇಕೆಂದು ಮುನ್ನುಗ್ಗುವ ಶತ್ರುವಿನ ಬಲವೂ ಸತ್ಯದ ಮಹಾತ್ಮ್ಯದಿಂದಲೇ ಕುಗ್ಗುವುದು. ಎಲೈ ಅಶ್ವಿನೀದೇವತೆಗಳೇ ನಮಗೂ ನಿಮಗೂ ಇರುವ ಸಖಿತ್ವಕ್ಕೆ ಯಾವಾಗಲೂ ಚ್ಯುತಿಯುಂಟಾಗದಿರಲಿ ನಿಮ್ಮ ಕುದುರೆಗಳ ಪಗ್ಗಗಳನ್ನು ಬಿಚ್ಚಿ ನೀವು ಇಲ್ಲಿಯೇ ನಿಂತುಬಿಡಿ

English Translation

The sun-god by truth extinguishes his beams (in the evening); he spreads abroad (in the morning) the horn of truth; truth verily overcomes the might of the eager assailant; therefore sever not our friendships, but fling loose (your reins and gallop hither).

## ಎಂಭತ್ತೇಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ದ್ಯುಮ್ನಿನ್ನಾ ವಾಮಿತಿ ಷಡೃಚಂ ಸಪ್ತಮಂ ಸೂಕ್ತಂ । ತಥಾ ಚಾನುಕ್ರಮ್ಯತೇ । ದ್ಯುಮ್ನಿನ್ನಾ ಷಡ್ವಾಸಿಷ್ಠೋ ವಾ ದ್ಯುಮ್ನೀಕಃ ಪ್ರಿಯಮೇಧೋ ವಾ ಪ್ರಾಗಾಥಂ ಹೇತಿ । ವಸಿಷ್ಠಪುತ್ರೋ ದ್ಯುಮ್ನೀಕ ಋಷಿರಾಂಗಿರಸಃ ಪ್ರಿಯಮೇಧೋ ವಾ । ಉಭಯತ್ರ ವಾ ಶಬ್ದಾದ್ಯದೋಭಾವಪಿ ನ ಸ್ಯಾತಾಂ ತದಾ ಪ್ರಕೃತ ಆಂಗಿರಸಃ ಕೃಷ್ಣ ಏವ ಋಷಿಃ । ಅಯುಜೋ ಬೃಹತ್ಯೋ ಯುಜಃ ಸತೋಬೃಹತ್ಯಃ । ಅಶ್ವಿನೌ ದೇವತಾ ॥ ಪ್ರಾತರನುವಾಕ ಆಶ್ವಿನೇ ಕ್ರತೌ ಬಾರ್ಹತೇ ಛಂದಸ್ಯಾಶ್ವಿನಶಸ್ತ್ರೇ ಚೇದಂ ಸೂಕ್ತಂ । ಸೂತ್ರಿತಂ ಚ । ದ್ಯುಮ್ನಿನ್ನಾ ವಾಂ ಯತ್ಸ್ಥ ಇತಿ ಬಾರ್ಹತಂ । ಆ. ೪-೧೫ । ಇತಿ ॥

ಅನುವಾದವು—ದ್ಯುಮ್ನಿನ್ನಾ ವಾಂ ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ-ದ್ಯುಮ್ನಿನ್ನಾ ಷಡ್ವಾಸಿಷ್ಠೋ ವಾ ದ್ಯುಮ್ನೀಕಃ ಪ್ರಿಯಮೇಧೋ ವಾ ಪ್ರಾಗಾಥಂ ಹ ಎಂದು ಹೇಳಿರುವುದು. ಈ ಸೂಕ್ತಕ್ಕೆ ವಸಿಷ್ಠಪುತ್ರನಾದ ದ್ಯುಮ್ನೀಕನು ಅಥವಾ ಪ್ರಿಯಮೇಧ ಆಂಗಿರಸಃ ಎಂಬುವನು ಋಷಿಯು ಇವರಿಬ್ಬರೂ ಅಲ್ಲದಿದ್ದರೆ ಆಂಗಿರಸಃ ಕೃಷ್ಣಃ ಎಂಬುವನು ಋಷಿಯು. ಈ ಸೂಕ್ತದ ಅಸಮಸಂಖ್ಯೆಯ ಋಕ್ಕುಗಳು ಬೃಹತೀಛಂದಸ್ಕವು, ಸಮಸಂಖ್ಯೆಯ ಋಕ್ಕುಗಳು ಸತೋಬೃಹತೀಛಂದಸ್ಕವು. ಅಶ್ವಿನೀದೇವತೆಗಳು ದೇವತೆಯು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಶ್ವಿನ ಕ್ರತುಸಂಬಂಧವಾದ ಬೃಹತೀಛಂದಸ್ಸಿನ ಋಕ್ಕುಗಳಿಗಾಗಿಯೂ, ಆಶ್ವಿನಶಸ್ತ್ರಮಂತಗಳಿಗಾಗಿಯೂ ಈ ಸೂಕ್ತದ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ-ದ್ಯುಮ್ನಿನ್ನಾ ವಾಂ ಯತ್ಸ್ಥ ಇತಿ ಬಾರ್ಹತಂ ಎಂಬ ಸೂತ್ರದಿಂದ (ಆ. ೪-೧೫) ವಿವೃತವಾಗಿರುವುದು.

## ಸೂಕ್ತ—೮೭

ಮಂಡಲ ೮ ॥ ಅನುವಾಕ—೯ ॥ ಸೂಕ್ತ—೮೭ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೧೧ ।
ಸೂಕ್ತವರ್ಗಿಸಿ ಋಕ್ಸಂಖ್ಯಾ—೬ ॥
ಋಷಿಃ—ಕೃಷ್ಣೋ ದ್ಯುಮ್ನೀಕೋ ವಾ ವಾಸಿಷ್ಠಃ, ಪ್ರಿಯಮೇಧೋ ವಾ
ದೇವತಾ—ಅಶ್ವಿನೌ ॥
ಛಂದಃ—ಪ್ರಗಾಥಃ (ಅಯುಜ ಬೃಹತೀ ಯುಜಃ ಸತೋಬೃಹತ್ಯಃ) ।

॥ ಸಂಹಿತಾಪಾಠಃ ॥

ದ್ಯುಮ್ನೀ ವಾಂ ಸ್ತೋಮೋ ಅಶ್ವಿನಾ ಕ್ರಿವಿರ್ನ ಸೇಕ ಆ ಗತಂ ।
ಮಧ್ವಃ ಸುತಸ್ಯ ಸ ದಿವಿ ಪ್ರಿಯೋ ನರಾ ಪಾತಂ ಗೌರಾವಿವೇರಿಣೇ ॥

॥ ಪದಪಾಠಃ ॥

ದ್ಯುಮ್ನೀ । ವಾಂ । ಸ್ತೋಮಃ । ಅಶ್ವಿನಾ । ಕ್ರಿವಿಃ । ನ । ಸೇಕೇ । ಆ । ಗತಂ ।
ಮಧ್ವಃ । ಸುತಸ್ಯ । ಸಃ । ದಿವಿ । ಪ್ರಿಯಃ । ನರಾ । ಪಾತಂ । ಗೌರೌಇವ । ಇರಿಣೇ ॥ ೧ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ಅಯಮನುಪಕ್ಷೀಣಸ್ತೋತ್ರೋ ದ್ಯುಮ್ನೀಕ ಏತನ್ನಾಮಕ ಋಷಿರ್ವಾಂ ಯುವಯೋಃ ಸ್ತೋಮಃ ಸ್ತೋತಾ ಭವತಿ । ಯುಷ್ಮತ್ಸ್ತುತೌ ಕೃತಾಯಾಂ ಸ್ತೋತ್ರಾಣಿ ನಾಲ್ಪೀಭವಂತಿ ಕಿಂತು ಪುನರ್ವರ್ಧಂತ ಇತ್ಯರ್ಥಃ । ತತ್ರ ದೃಷ್ಟಾಂತಃ । ಕ್ರಿವಿರ್ನ । ಕ್ರಿವಿರಿತಿ ಕೂಪನಾಮ । ಕೂಪೋ ಯಥಾ ಸೇಕ ಉದಕಸೇಚನೇ ವೃಷ್ಟ್ಯಾ ಭವಂತ್ಯಾಂ ನಾಲ್ಪೋದಕೋ ಭವತಿ ತದ್ವತ್ । ಯದ್ವಾ । ವಾಂ ಯುವಯೋಃ ಸ್ತೋಮೋ ಯುಷ್ಮದ್ವಿಷಯಾ ಸ್ತುತಿರ್ದ್ಯುಮ್ನ್ಯನ್ನವತೀ ಖಲು । ಸ್ತೋತ್ರೇ ಕೃತೇ ತಸ್ಮಾ ಅನ್ನಾದಿಕಂ ಪ್ರಯಚ್ಛಥ ಇತ್ಯರ್ಥಃ । ತಸ್ಮಾದ್ಯುವಾಮಸ್ಮದೀಯಂ ಯಜ್ಞಂ ಪ್ರತ್ಯಾಗಚ್ಛತಂ । ಸ್ತೋತ್ರಾಣಿ ಶ್ರೋತುಮಾಗಚ್ಛತಂ । ಹೇ ನರಾ ನರೌ ನೇತಾರಾವಶ್ವಿನೌ ಸೋಽಯಂ ಸ್ತೋತಾ ದಿವಿ ದ್ಯೋತಮಾನೇಽಸ್ಮಿನ್ಯಜ್ಞೇ ಸುತಸ್ಯಾಭಿಷುತಸ್ಯ ಮಧ್ವೋ ಮದಕರಸ್ಯ ಸೋಮಸ್ಯ ಪ್ರಿಯಃ ಸ್ತೋತ್ರಕಾರಿತ್ವೇನ ಪ್ರಿಯತಮೋ ಭವತಿ । ತತಸ್ತೇನ ಸುತಂ ಸೋಮಂ ಪಾತಂ ಯುವಾಂ । ತತ್ರ ದೃಷ್ಟಾಂತಃ । ಗೌರಾವಿವ ಯಥಾ ತೃಷಿತೌ ಗೌರಾವೇತನ್ನಾಮಕೌ ಮೃಗಾವಿರಿಣ ತಟಾಕಾದಿಷೂದಕಪಾನಾರ್ಥಂ ಶೀಘ್ರಮಾಗಚ್ಛತಸ್ತದ್ವತ್ ॥

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । (**ಅಯಂ**—ಈ ಸೂಕ್ತದ್ರಷ್ಟೃವಾದ ದ್ಯುಮ್ನೀಕಋಷಿಯು) । **ವಾಂ**—ನಿಮ್ಮ । **ಸ್ತೋಮಃ**—ಸ್ತೋತೃವಾಗಿದ್ದಾನೆ. ಆ ಸ್ತೋತ್ರಗಳು । **ಕ್ರಿವಿಃ ನ**—ಮಳೆಗಾಲದಲ್ಲಿ ಭಾವಿಯ ನೀರು ಮೇಲಕ್ಕೇರುವಂತೆ । **ದ್ಯುಮ್ನಾ**—ಅತ್ಯಧಿಕವಾಗಿರುತ್ತವೆ. ಆದ್ದರಿಂದ ಸ್ತೋತ್ರಗಳನ್ನು । **ಆ ಗತಂ**—ಕೇಳುವುದಕ್ಕಾಗಿ ಇಲ್ಲಿಗೆ ದಯಮಾಡಿ । **ನರಾ**—ಯಜ್ಞಕರ್ಮನೇತೃಗಳಾದ ಎಲೈ ಅಶ್ವಿನೀದೇವತೆಗಳೇ । **ಸಃ**—ಸ್ತೋತ್ರಮಾಡುವ ಆ ದ್ಯುಮ್ನಾಕಋಷಿಯು । **ದಿವಿ**—ಪ್ರಕಾಶಮಾನವಾದ (ಚೆನ್ನಾಗಿ ನೆರವೇರುತ್ತಿರುವ) ಈ ಯಜ್ಞದಲ್ಲಿ । **ಸುತಸ್ಯ**—ಹಿಂಡಲ್ಪಟ್ಟಿರುವ । **ಮಧ್ವಃ**—ಮದಕಾರಕವಾದ ಸೋಮರಸದ । **ಪ್ರಿಯಃ**—ಪ್ರಿಯತಮನಾಗಿರುವನು ಆದ್ದರಿಂದ । **ಇರಿಣೇ**—ತಟಾಕಾದಿಜಲಾಶಯದ ಉದಕವನ್ನು ಪಾನಮಾಡುವುದಕ್ಕಾಗಿ ಬರುವ । **ಗೌರಾವಿವ**—ಗೌರಮೃಗಗಳಂತೆ । **ಪಾತಂ**—ಹಿಂಡಲ್ಪಟ್ಟಿರುವ ಸೋಮವನ್ನು ಪಾನಮಾಡಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಈ ಸೂಕ್ತದ್ರಷ್ಟೃವಾದ ದ್ಯುಮ್ನೀಕಋಷಿಯು ನಿಮ್ಮನ್ನು ಸ್ತುತಿಸುವ ಸ್ತೋತ್ರಗಳು, ಮಳೆಗಾಲದಲ್ಲಿ ಭಾವಿಯಲ್ಲಿ ನೀರು ಹೆಚ್ಚಾಗಿರುವಂತೆ, ಅತ್ಯಧಿಕವಾಗಿವೆ. ಎಲೈ ನೇತೃಗಳಾದ ಅಶ್ವಿನೀದೇವತೆಗಳೇ, ಆ ಸ್ತೋತ್ರಗಳನ್ನು ಕೇಳುವುದಕ್ಕಾಗಿ ಇಲ್ಲಿಗೆ ದಯಮಾಡಿ. ಮತ್ತು ಪ್ರಕಾಶಮಾನವಾದ ಎಂದರೆ ಚೆನ್ನಾಗಿ ನಡೆಯುತ್ತಿರುವ ಈ ಯಜ್ಞದಲ್ಲಿ ದ್ಯುಮ್ನಾಕಋಷಿಯು ಹಿಂಡಿ ಸಿದ್ಧಪಡಿಸಿರುವ ರುಚಿಕರವಾದ ಸೋಮವನ್ನು ಪಾನಮಾಡುವುದಕ್ಕಾಗಿ, ಇಲ್ಲಿಗೆ ಬಂದು ತಟಾಕಾದಿಜಲಾಶಯಗಳಲ್ಲಿ ಗೌರಮೃಗಗಳು ಉದಕವನ್ನು ಪಾನಮಾಡುವಂತೆ ಇಲ್ಲಿರುವ ಸೋಮವನ್ನು ಪಾನಮಾಡಿ.

English Translation

Aswins, your praise is filled with plenty as a well ( with water ) in time of rain ; hasten hither ; it is especially dear to the Soma when it is effused in the brilliant (offering), drink, leaders (of rites), as two Gauras (drink) at a pool.

। ಸಂಹಿತಾಪಾಠಃ ।

ಪಿಬತಂ ಘರ್ಮಂ ಮಧುಮಂತಮಶ್ವಿನಾ ಬರ್ಹಿಃ ಸೀದತಂ ನರಾ
ತಾ ಮಂದಸಾನಾ ಮನುಷೋ ದುರೋಣ ಆ ನಿ ಪಾತಂ ವೇದಸಾ ವಯಃ॥

। ಪದಪಾಠಃ ।

ಪಿಬತಂ । ಘರ್ಮಂ । ಮಧುಽಮಂತಂ । ಅಶ್ವಿನಾ । ಆ । ಬರ್ಹಿಃ । ಸೀದತಂ । ನರಾ ।
ತಾ । ಮಂದಸಾನಾ । ಮನುಷಃ । ದುರೋಣೇ । ಆ । ನಿ । ಪಾತಂ । ವೇದಸಾ । ವಯಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ಮಧುಮಂತಂ ಮದವಂತಂ । ಮದಕಾರಿಣಮಿತ್ಯರ್ಥಃ । ತಾದೃಶಂ ರಸವಂತಂ ವಾ ಘರ್ಮಂ ॥ ಘೃ ಕ್ಷರಣದೀಪ್ತ್ಯೋಃ ॥ ಪಾತ್ರೇಷು ಕ್ಷರಂತಂ ಸೋಮಂ ಪಿಬತಂ । ಯದ್ವಾ । ಮಧುಮಂತಂ । ಮಧುರ್ಮದಕರಃ ಸೋಮಃ । ತದ್ವಂತಂ ಘರ್ಮಂ ಮಹಾವೀರಪಾತ್ರಗತಂ ಕ್ಷೀರಂ। ಪಿಬತಂ ಸೋಮಂ ಚೇತಿ । ನ ತು ಸಾಹಚರ್ಯೇಣ ತದಸಂಭವಾತ್ । ಹೇ ನರಾ ನರೌ ನೇತಾರೌ ಸರ್ವಸ್ಯ ಹೇ ಅಶ್ವಿನೌ ಬರ್ಹಿರ್ಬರ್ಹಿಷಿ ಯಜ್ಞ ಆ ಸೀದತಂ । ಉಪವಿಶತಂ । ಯದ್ವಾ । ಪೂರ್ವಂ ದ್ವಿತೀಯಂ ಪಾದಂ ವ್ಯಾಖ್ಯಾಯ ಪ್ರಥಮಪಾದೋ ವ್ಯಾಖ್ಯೇಯಃ । ಉಪಸದನಾನಂತರಂ ಸೋಮಪಾನಂ ಯುಕ್ತಮಿತಿ । ಕಿಂಚ ಮನುಷೋ ಮನುಷ್ಯಸ್ಯ ದುರೋಣೇ ಗೃಹಭೂತೇಽಸ್ಮಿನ್ದೇವಯಜನೇ ಮಂದಸಾನಾ ಸೋಮಪಾನೇನ ಮೋದಮಾನೌ ತಾ ತೌ ಪೂರ್ವೋಕ್ತಲಕ್ಷಣೌ ಯುವಾಂ ವೇದಸಾ ಪುರೋಡಾಶಾದಿಲಕ್ಷಣೇನ ಹವಿಷಾ ಸಹ ವಯಃ ಸೋಮರೂಪಮನ್ನಮಾಗತ್ಯ ನಿ ಪಾತಂ । ನಿಪಿಬತಂ । ಯದ್ವಾ । ವೇದಸಾ ಧನೇನ ಸಹ ವಯೋಽಸ್ಮಾಕಮಾಯುರ್ನಿ ಪಾತಂ । ನಿತರಾಂ ರಕ್ಷತಂ ॥

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಮಧುಮಂತಂ**—ಮದಕಾರಕವಾದ । **ಘರ್ಮಂ**—ಪಾತ್ರೆಯಲ್ಲಿ ತೊಟ್ಟಿಕ್ಕುತ್ತಿರುವ ಸೋಮರಸವನ್ನು । **ಪಿಬತಂ**—ಪಾನಮಾಡಿ । **ಅಥವಾ ಮಧುಮಂತಂ**—ಮದಕರವಾದ ಸೋಮರಸದಂತೆ ಇರುವ । **ಘರ್ಮಂ**—ಮಹಾವೀರಪಾತ್ರೆಯಲ್ಲಿರುವ ಹಾಲನ್ನು । **ಪಿಬತಂ**—ಪಾನಮಾಡಿ] । **ನರಾ**—ನೇತೃಗಳಾದ ಎಲೈ ಅಶ್ವಿನೀದೇವತೆಗಳೇ । **ಬರ್ಹಿಃ**—ಈ ಯಜ್ಞಭೂಮಿಯಲ್ಲಿ । **ಆ ಸೀದತಂ**—ಕುಳಿತುಕೊಳ್ಳಿರಿ । **ಮನುಷಃ**—ಮಾನವನಾದ ಯಜಮಾನನ । **ದುರೋಣೇ**—ಯಜ್ಞಗೃಹದಲ್ಲಿ । **ಆ**—ಬಂದು । **ಮಂದಸಾನಾ**—ಸೋಮಪಾನದಿಂದ ಸಂತುಷ್ಟರಾದ । **ತಾ**—ಆ ನೀವು । **ವೇದಸಾ**—ಪುರೋಡಾಶಾದಿಹವಿರ್ಲಕ್ಷಣ ರೂಪವಾದ ಅನ್ನದಿಂದ ಸಹಿತವಾಗಿ । **ವಯಃ**—ಸೋಮರೂಪವಾದ ಅನ್ನವನ್ನು । **ನಿ ಪಾತಂ**—ಪಾನಮಾಡಿರಿ । [**ಅಥವಾ ವೇದಸಾ**—ಧನದಿಂದ ಸಹಿತವಾದ । **ವಯಃ**—ಅನ್ನವನ್ನು ಅಥವಾ ಆಯುಸ್ಸನ್ನು ನಮಗೆ । **ನಿ ಪಾತಂ**—ಕೊಟ್ಟು ರಕ್ಷಿಸಿರಿ]

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಮದಕರವಾದ ಸೋಮರಸವು ಜಜ್ಜಿದ ಲತೆಗಳಿಂದ ಪಾತ್ರೆಯಲ್ಲಿ ತೊಟ್ಟಿಕ್ಕುತ್ತಿರುವುದು. ಅದನ್ನು ಪಾನಮಾಡಿ. ಎಲೈ ನೇತೃಗಳಾದ ಅಶ್ವಿನೀದೇವತೆಗಳೇ, ಈ ನಮ್ಮ ಯಜ್ಞಭೂಮಿಯಲ್ಲಿ ಬಂದು ಕುಳಿತು, ಯಜಮಾನನ ಯಜ್ಞದಲ್ಲಿ ಹವಿರ್ಲಕ್ಷಣರೂಪವಾದ ಸೋಮವನ್ನು ಪಾನಮಾಡಿ ಸಂತುಷ್ಟರಾಗಿ ನಮಗೆ ಧನವನ್ನೂ ಅನ್ನವನ್ನೂ ಆಯುಸ್ಸನ್ನೂ ಕೊಟ್ಟು ರಕ್ಷಿಸಿರಿ.

## English Translation

Drink, Aswins, the exhilarating (Soma) as it drops (into the vessels) seat yourselves, leaders, on the sacrificial grass, rejoicing in the house of the worshipper, drink the sacred beverage with the oblation

॥ ಸಂಹಿತಾಪಾಠಃ ॥

ಆ ವಾಂ ವಿಶ್ವಾಭಿರೂತಿಭಿಃ ಪ್ರಿಯಮೇಧಾ ಅಹೂಷತ ।

ತಾ ವರ್ತಿರ್ಯಾತಮುಪ ವೃಕ್ತಬರ್ಹಿಷೋ ಜುಷ್ಟಂ ಯಜ್ಞಂ ದಿವಿಷ್ಟಿಷು ॥

॥ ಪದಪಾಠಃ ॥

ಆ । ವಾಂ । ವಿಶ್ವಾಭಿಃ । ಊತಿऽಭಿಃ । ಪ್ರಿಯऽಮೇಧಾಃ । ಅಹೂಷತ ।

ತಾ । ವರ್ತಿಃ । ಯಾತಂ । ಉಪ । ವೃಕ್ತऽಬರ್ಹಿಷಃ । ಜುಷ್ಟಂ । ಯಜ್ಞಂ । ದಿವಿಷ್ಟಿಷು ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ಪ್ರಿಯಮೇಧಾಃ । ಮೇಧೋ ಯಜ್ಞಃ । ಪ್ರಿಯತಮಯಜ್ಞಾ ಯಜಮಾನಾಃ । ಯದ್ವಾ । ಪ್ರಿಯಮೇಧಾ ಏತನ್ನಾಮಕ ಋಷಿಃ ॥ ಪೂಜಾಯಾಂ ಬಹುವಚನಂ ॥ ಯುಷ್ಮಾರ ಋಷಿರ್ವಾ ವಿಶ್ವಾಭಿರೂತಿಭಿಃ ಸರ್ವೈಃ ಪಾಲನೈಃ ಸಹ । ಅಥವಾವತಿ ಯಾಚ್ಞಾಕರ್ಮ । ಸರ್ವೈರಭಿಲಷಿತಯಾಚನೈಃ ಸಹಿತಾ ಅಹೂಷತ । ಆಹ್ವಾಸಿಷುಃ । ಆಹ್ವಾಸೀತ್ । ಆತ್ಮನಾ ಪಾಲನಹೇತುಕತ್ವೇನ । ಯದ್ವಾಭಿಲಷಿತದಾನಾಯ ವಾಮಾಹ್ವಯಂತಿ । ತತೋ ಯುವಾಂ ವೃಕ್ತಬರ್ಹಿಷ ಆಸ್ತರಣಾರ್ಥಂ ಛಿನ್ನಬರ್ಹಿಷೋ ಯಷ್ಟುಃ ಸಂಬಂಧಿ ಜುಷ್ಟಂ ಸರ್ವದೇವೇಷು ಸೇವಿತಂ ಪರ್ಯಾಪ್ತಂ ವಾ ಯಜ್ಞಂ ಯಜನೀಯಂ ಹವಿಃ ಪ್ರತಿ ದಿವಿಷ್ಟಿಷು ದಿವಸಾನಾಮಹ್ನಾಮಾಗಮನೇಷು ಪ್ರಾತಃಕಾಲೇಷು ಯಜ್ಞೇಷು ವಾ ವರ್ತಿಃ । ವರ್ತಂತೇಽತ್ರೇತಿ ವರ್ತಿರ್ಗೃಹಂ । ತದುಪಾ ಯಾತಂ । ಹವಿಃಸ್ವೀಕರಣಾರ್ಥಂ ಯುವಾಮಾಗಚ್ಛತಂ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ಪ್ರಿಯಮೇಧಾಃ**—ಪ್ರಿಯಮೇಧನೆಂಬ ಋಷಿಯು (ಅಥವಾ ಯಜಮಾನರು) । **ವಾಂ**—ನಿಮ್ಮನ್ನು । **ವಿಶ್ವಾಭಿಃ**—ಸಮಸ್ತವಾದ । **ಊತಿಭಿಃ**—ರಕ್ಷಣೆಗಳೊಡನೆ । **ಅಹೂಷತ**—ನಿಮ್ಮನ್ನು ಪ್ರಾರ್ಥಿಸಿ ಕರೆಯುತ್ತಾನೆ (ರೆ) । **ತಾ**—ಪ್ರಸಿದ್ಧರಾದ ನೀವು । **ವೃಕ್ತಬರ್ಹಿಷಃ**—ಯಜ್ಞದಲ್ಲಿ ದೇವತೆಗಳು ಕುಳಿತುಕೊಳ್ಳುವುದಕ್ಕಾಗಿ ದರ್ಭೆಗಳನ್ನು ಹರಡಿರುವ ಯಜಮಾನನ । **ಜುಷ್ಟಂ**—ಸಮಸ್ತದೇವತೆಗಳಿಗಿಂತಲೂ ವ್ಯಾಪ್ತವಾದ । **ಯಜ್ಞಂ**—ಯಜ್ಞಾರ್ಹವಾದ ಹವಿಸ್ಸನ್ನು ಲಕ್ಷಿಸಿ । **ದಿವಿಷ್ಟಿಷು**—ಪ್ರಾತಃಕಾಲಗಳಲ್ಲಿ ಅಥವಾ ಯಜ್ಞಗಳಲ್ಲಿ । **ವರ್ತಿಃ**—ಗೃಹಾಭಿಮುಖವಾಗಿ । **ಉಪ ಆ ಯಾತಂ**—ದಯಮಾಡಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಪ್ರಿಯಮೇಧಋಷಿಯು ಅಥವಾ ಯಜ್ಞಮಾಡುವ ಯಜಮಾನರು ನಿಮ್ಮನ್ನು ಸಮಸ್ತ ರಕ್ಷಣೆಗಳೊಡನೆ ಪ್ರಾರ್ಥಿಸಿ ಕರೆಯುತ್ತಾರೆ. ನೀವು ಯಜಮಾನನ ಯಜ್ಞಾರ್ಹವಾದ ಹವಿಸ್ಸನ್ನು ಲಕ್ಷಿಸಿ ಪ್ರಾತಃಕಾಲಗಳಲ್ಲಿ ಅವನ ಗೃಹಾಭಿಮುಖವಾಗಿ ದಯಮಾಡಿ.

English Translation

The worshippers have invoked you with all your protections; come in the early morning to the dwelling of him who has clipped the sacred grass, to the offering loved (by all the gods)

॥ ಸಂಹಿತಾಪಾಠಃ ॥

ಪಿಬತಂ ಸೋಮಂ ಮಧುಮಂತಮಶ್ವಿನಾ ಬರ್ಹಿಃ ಸೀದತಂ ಸುಮತ್ ।
ತಾ ವಾವೃಧಾನಾ ಉಪ ಸುಷ್ಟುತಿಂ ದಿವೋ ಗಂತಂ ಗೌರಾವಿವೇರಿಣಂ ॥೪॥

॥ ಪದಪಾಠ ॥

ಪಿಬತಂ । ಸೋಮಂ । ಮಧುಽಮಂತಂ । ಅಶ್ವಿನಾ । ಆ । ಬರ್ಹಿಃ । ಸೀದತಂ । ಸುಽಮತ್ ।
ತಾ । ವವೃಧಾನಾ । ಉಪ । ಸುಽಸ್ತುತಿಂ । ದಿವಃ । ಗಂತಂ । ಗೌರೌಽಇವ । ಇರಿಣಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ಮಧುಮಂತಂ ರಸವಂತಂ ಮದವಂತಂ ವಾ ಸೋಮಂ ಯುವಾಂ ಪಿಬತಂ । ತತೋ ಬರ್ಹಿರ್ಬರ್ಹಿಷಿ ಯಜ್ಞೇ ಸುಮಚ್ಛೋಭನಮಾ ಸೀದತಂ । ಪಶ್ಚಾದ್ವಾವೃಧಾನೌ ಸೋಮಪಾನೇನ ವೃದ್ಧೌ ತಾ ತೌ ಯುವಾಂ ದಿವೋ ದ್ಯುಲೋಕಾತ್ಸುಷ್ಟುತಿಮಸ್ಮಾಭಿಃ ಕ್ರಿಯಮಾಣಾಂ ಸ್ತುತಿಮುಪ ಗಂತಂ । ಉಪಗಚ್ಛತಂ । ತತ್ರ ದೃಷ್ಟಾಂತಃ । ಗೌರಾವಿವ ಯಥಾ ಗೌರಮೃಗಾವನ್ಯಸ್ಮಾದ್ದೇಶಾದಿರಿಣಂ ತಟಾಕಾದಿಕಂ ಪ್ರತಿ ಜಲಪಾನಾರ್ಥಮಾಗಚ್ಛತಸ್ತದ್ವತ್ ।

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ । **ಮಧುಮಂತಂ**—ಮದಕರವಾದ ಅಥವಾ ರಸವತ್ತಾದ । **ಸೋಮಂ**—ಸೋಮರಸವನ್ನು । **ಪಿಬತಂ**—ಪಾನಮಾಡಿರಿ ಬಳಿಕ । **ಬರ್ಹಿಃ**—ಯಜ್ಞಗೃಹದಲ್ಲಿ ಆಸನಾರ್ಥವಾಗಿ ಹರಡಿರುವ ದರ್ಭೆಗಳಮೇಲೆ । **ಸುಮತ್**—ಸುಖವಾಗಿ । **ಆ ಸೀದತಂ**—ಕುಳಿತುಕೊಳ್ಳಿರಿ ಅನಂತರ । **ವವೃಧಾನೌ**—ಸೋಮಪಾನದಿಂದ ಪ್ರವೃದ್ಧರಾದ । **ತಾ**—ಆ ನೀವು । **ಸುಷ್ಟುತಿಂ**—ನಾವು ಮಾಡುವ ಉತ್ತಮವಾದ ಸ್ತುತಿಯನ್ನು ಲಕ್ಷಿಸಿ । **ಗೌರಾವಿವ**—ಗೌರಮೃಗಗಳು ತಾವಿರುವ ಸ್ಥಳದಿಂದ । **ಇರಿಣಂ**—ನೀರನ್ನು ಕುಡಿಯುವುದಕ್ಕಾಗಿ ತಟಾಕಾದಿಜಲಾಶಯಕ್ಕೆ ಹೋಗುವಂತೆ । **ದಿವಃ**—ನೀವಿರುವ ಸ್ವರ್ಗಲೋಕದಿಂದ । **ಉಪ ಗಂತಂ**—ನಮ್ಮ ಸಮೀಪಕ್ಕೆ ಬನ್ನಿರಿ

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಯಜ್ಞಗೃಹದಲ್ಲಿ ಹಾಸಿರುವ ದರ್ಭಾಸನದಮೇಲೆ ಕುಳಿತುಕೊಳ್ಳಿರಿ. ಮದಕರವಾದ ಸೋಮವನ್ನು ಪಾನಮಾಡಿರಿ. ಗೌರಮೃಗಗಳು ತಾವಿರುವ ಸ್ಥಳದಿಂದ ಜಲಪಾನಕ್ಕಾಗಿ ಜಲಾಶಯಕ್ಕೆ ಹೋಗುವಂತೆ ನೀವು ನಾವು ಮಾಡುವ ಸ್ತುತಿಯನ್ನು ಲಕ್ಷಿಸಿ ಸ್ವರ್ಗಲೋಕದಿಂದ ನಮ್ಮ ಯಜ್ಞಭೂಮಿಗೆ ದಯಮಾಡಿ.

English Translation

Aswins, drink the exhilarating Soma, sit down in your radiance on the sacrificial grass; waxing strong (through the libation), come from heaven to our praises, as two Gauras to a pool.

॥ ಸಂಹಿತಾಪಾಠಃ ॥

ಆ ನೂನಂ ಯಾತಮಶ್ವಿನಾಶ್ವೇಭಿಃ ಪ್ರುಷಿತಪ್ಸುಭಿಃ ।

ದಸ್ರಾ ಹಿರಣ್ಯವರ್ತನೀ ಶುಭಸ್ಪತೀ ಪಾತಂ ಸೋಮಮೃತಾವೃಧಾ ।

॥ ಪದಪಾಠಃ ॥

ಆ । ನೂನಂ । ಯಾತಂ । ಅಶ್ವಿನಾ । ಅಶ್ವೇಭಿಃ । ಪ್ರುಷಿತಪ್ಸುಽಭಿಃ ।

ದಸ್ರಾ । ಹಿರಣ್ಯವರ್ತನೀ ಇತಿ ಹಿರಣ್ಯಽವರ್ತನೀ । ಶುಭಃ । ಪತೀ ಇತಿ । ಪಾತಂ । ಸೋಮಂ । ಋತಽವೃಧಾ ॥ ೫ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನಾಶ್ವಿನೌ ಯುವಾಂ ಪ್ರುಷಿತಪ್ಸುಭಿಃ ॥ ಪ್ಸು ಇತಿ ರೂಪನಾಮ । ಪ್ರುಷ ಸ್ನೇಹನ-ಸೇಚನಪೂರಣೇಷು ॥ ಸ್ನಿಗ್ಧರೂಪೈಃ । ದೀಪ್ತರೂಪೈರಿತ್ಯರ್ಥಃ । ತಾದೃಶೈಃ ಶೀಘ್ರಗಾಮಿಭಿರಶ್ವೈಃ ಸಹ ನೂನಮಿದಾನೀಮಾ ಯಾತಂ । ಅಸ್ಮದೀಯಂ ಯಜ್ಞಂ ಪ್ರತ್ಯಾಗಚ್ಛತಂ । ಹೇ ದಸ್ರಾ ದಸ್ರೌ ದರ್ಶನೀ-ಯಾವುಪಕ್ಷಪಯಿತಾರೌ ವಾ ಹೇ ಹಿರಣ್ಯವರ್ತನೀ । ವರ್ತತೇಽತ್ರೇತಿ ವರ್ತನೀ ರಥಃ । ಹಿರಣ್ಮಯರಥೌ ಹೇ ಶುಭಸ್ಪತೀ ಉದಕಸ್ಯ ಕಲ್ಯಾಣಸ್ಯ ವಾ ಪಾಲಯಿತಾರೌ ಹೇ ಋತಾವೃಧಾ ಸತ್ಯಸ್ಯ ಯಜ್ಞಸ್ಯ ವಾ ವರ್ಧಯಿತಾರೌ ಹೇ ಅಶ್ವಿನೌ ಯುವಾಂ ಶೀಘ್ರಮಾಗತ್ಯ ಸೋಮಂ ಪಾತಂ । ಪಿಬತಂ ॥

॥ ಪ್ರತಿಪದಾರ್ಥ ॥

**ಅಶ್ವಿನಾ**—ಎಲೈ ಅಶ್ವಿನೀದೇವತೆಗಳೇ, ನೀವು । **ಪ್ರುಷಿತಪ್ಸುಭಿಃ**—ಆಕರ್ಷಕವಾದ ರೂಪವುಳ್ಳ । **ಅಶ್ವೈಃ**—। ನಿಮ್ಮ ಅಶ್ವಗಳಿಂದ ಸಹಿತರಾಗಿ । **ನೂನಂ**—ಈಗಲೇ । **ಆ ಯಾತಂ**—ನಮ್ಮ ಯಜ್ಞಾಭಿಮುಖವಾಗಿ ದಯಮಾಡಿ

**ದಸ್ರಾ**—ಎಲೈ ಶತ್ರುನಾಶಕರಾದವರೂ । **ಹಿರಣ್ಯವರ್ತನೀ**—ಸುವರ್ಣಮಯವಾದ ರಥದಲ್ಲಿ ಕುಳಿತಿರುವವರೂ । **ಶುಭಸ್ಪತೀ**—ಉದಕಕ್ಕೆ ಪಾಲಕರೂ । **ಋತಾವೃಧಾ**—ಯಜ್ಞಕರ್ಮವನ್ನು ವೃದ್ಧಿಪಡಿಸುವವರೂ ಆದ ಎಲೈ ಅಶ್ವಿನೀದೇವತೆಗಳೇ ನೀವು । **ಸೋಮಂ**—ಸೋಮರಸವನ್ನು । **ಪಾತಂ**—ಪಾನಮಾಡಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ಆಕರ್ಷಕವಾದ ರೂಪವುಳ್ಳ ನಿಮ್ಮ ಅಶ್ವಗಳಿಂದ ಸಹಿತರಾಗಿ ಈಗಲೇ ನಮ್ಮ ಯಜ್ಞಾಭಿಮುಖವಾಗಿ ಬನ್ನಿರಿ. ಶತ್ರುನಾಶಕರೂ, ಸುವರ್ಣಮಯವಾದ ರಥವುಳ್ಳವರೂ, ಉದಕಕ್ಕೆ ಪಾಲಕರೂ, ಯಜ್ಞಕರ್ಮನಿರ್ವಾಹಕರೂ ಆದ ಎಲೈ ಅಶ್ವಿನೀದೇವತೆಗಳೇ, ನೀವು ಸೋಮರಸವನ್ನು ಪಾನಮಾಡಿರಿ.

English Translation

Come, Aswins, with your glossy steeds; Dasras, riding in golden chariots, lords of good fortune, upholders, of truth, drink the Soma.

॥ ಸಂಹಿತಾಪಾಠಃ ॥

ವಯಂ ಹಿ ವಾಂ ಹವಾಮಹೇ ವಿಪನ್ಯವೋ ವಿಪ್ರಾಸೋ ವಾಜಸಾತಯೇ।
ತಾ ವಲ್ಗೂ ದಸ್ರಾ ಪುರುದಂಸಸಾ ಧಿಯಾಶ್ವಿನಾ ಶ್ರುಷ್ಟ್ಯಾ ಗತಂ ॥ ೬ ॥

॥ ಪದಪಾಠಃ ॥

ವಯಂ । ಹಿ । ವಾಂ । ಹವಾಮಹೇ । ವಿಪನ್ಯವಃ । ವಿಪ್ರಾಸಃ । ವಾಜಽಸಾತಯೇ ।
ತಾ । ವಲ್ಗೂ ಇತಿ । ದಸ್ರಾ । ಪುರುಽದಂಸಸಾ । ಧಿಯಾ । ಅಶ್ವಿನಾ । ಶ್ರುಷ್ಟೀ । ಆ । ಗತಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಶ್ವಿನೌ ವಿಪನ್ಯವಃ ಸ್ತೋತಾರಃ ಅತ ಏವ ವಿಪ್ರಾಸೋ ವಿಪ್ರಾ ಮೇಧಾವಿನೋ ವಯಂ ವಾಜಸಾತಯೇಽನ್ನಲಾಭಾಯ ವಾಂ । ಹಿರವಧಾರಣೇ । ಯುವಾಮೇವ ಹವಾಮಹೇ । ಸ್ತುತಿಭಿರಾಹ್ವಯಾಮಃ । ತತೋ ವಲ್ಗೂ । ವಲ್ಗನಂ ಕುಶಲಗಮನಂ । ಕುಶಲಗಮನಶೀಲೌ ಪುರುದಂಸಸಾ ಬಹುಕರ್ಮಾಣೌ ತಾ ಯುವಾಂ ಧಿಯಾಸ್ಮದೀಯಯಾ ಸ್ತುತ್ಯಾಹೂತೌ ಸಂತೌ ಶ್ರುಷ್ಟೀ । ಶ್ರುಷ್ಟೀತಿ ಕ್ಷಿಪ್ರನಾಮ । ಕ್ಷಿಪ್ರಮಸ್ಮಭ್ಯಂ ಧನಾದಿದಾನಾಯಾ ಗತಂ । ಆಗಚ್ಛತಂ ॥

॥ ಪ್ರತಿಪದಾರ್ಥ ॥

(ಎಲೈ ಅಶ್ವಿನೀದೇವತೆಗಳೇ) **ವಿಪನ್ಯವಃ**—ನಿಮ್ಮನ್ನು ಸ್ತುತಿಸುವವರೂ । **ವಿಪ್ರಾಸಃ**-ಮೇಧಾವಿಗಳೂ ಆದ । **ವಯಂ**—ನಾವು । **ವಾಜಸಾತಯೇ**—ಅನ್ನಲಾಭಾರ್ಥವಾಗಿ। **ವಾಂ ಹಿ**-ನಿಮ್ಮನ್ನೇ । **ಹವಾಮಹೇ**—

ಪ್ರಾರ್ಥಿಸಿ ಕರೆಯುತ್ತೇವೆ । **ವಲ್ಗೂ**—ಕುರಲವಾದ ಪಾದಗತಿಯುಳ್ಳವರೂ । **ಪುರುದಂಸಸಾ**—ಅನೇಕ ಸಾಹಸ ಕರ್ಮಗಳನ್ನು ಮಾಡಿದವರೂ ಆದ ನೀವು । **ಧಿಯಾ**—ನಮ್ಮ ಸ್ತುತಿಯಿಂದ ಪ್ರಾರ್ಥಿತರಾಗಿ । **ಮಕ್ಷೂ**—ಶೀಘ್ರವಾಗಿ । **ಆ ಗತಂ**—ನಮ್ಮಲ್ಲಿಗೆ ದಯಮಾಡಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನಿಮ್ಮನ್ನು ಸ್ತುತಿಸುವವರೂ, ಮೇಧಾವಿಗಳೂ ಆದ ನಾವು ಅನ್ನಲಾಭಾರ್ಥವಾಗಿ ನಿಮ್ಮನ್ನೇ ಪ್ರಾರ್ಥಿಸಿ ಕರೆಯುತ್ತೇವೆ ಕುರಲಗಮನವುಳ್ಳವರೂ, ಅನೇಕ ಕರ್ಮಕರ್ತರೂ ಆದ ನೀವು ನಮ್ಮ ಸ್ತುತಿಯನ್ನು ಮನ್ನಿಸಿ ಶೀಘ್ರವಾಗಿ ನಮ್ಮಲ್ಲಿಗೆ ದಯಮಾಡಿ

## English Translation

We, your wise praisers, invoke you to the enjoyment of the sacrificial viands ; come quickly, Dasras, at the sound of our praise, Ashwins, graceful in your movements, abounding in mighty deeds.

## ಎಂಭತ್ತೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ತಂ ವೋ ದಸ್ಮಮಿತಿ ಷಡೃಚಮಷ್ಟಮಂ ಸೂಕ್ತಂ ಗೌತಮಸ್ಯ ನೋಧಸ ಆರ್ಷಂ । ತಥಾ ಚಾನುಕ್ರಮ್ಯತೇ । ತಂ ವೋ ದಸ್ಮಂ ನೋಧಾ ಇತಿ । ಪ್ರಾಗಾಥಂ ಚೇತ್ಯುಕ್ತತ್ವಾದೇತದಾದಿಸೂಕ್ತತ್ರಯಂ ಪ್ರಾಗಾಥಂ । ಇಂದ್ರೋ ದೇವತಾ ॥ ಮಹಾವ್ರತೇ ನಿಷ್ಕೇವಲ್ಯೇ ಬಾರ್ಹತತೃಚಾಶೀತಾವೇತತ್ಸೂಕ್ತಂ । ತಥಾ ಚ ಪಂಚಮಾರಣ್ಯಕೇ ಸೂತ್ರಿತಂ । ತಂ ವೋ ದಸ್ಮಮೃತೀಷಹಮಾ ನೋ ವಿಶ್ವಾಸು ಹವ್ಯಃ । ಐ. ಆ. ೫-೨-೪ ಇತಿ ॥ ಅಗ್ನಿಷ್ಟೋಮೇ ಮಾಧ್ಯಂದಿನಸವನೇಽಚ್ಛಾವಾಕಶಸ್ತ್ರೇ ತಂ ವೋ ದಸ್ಮಮಿತಿ ಪ್ರಗಾಥಃ ಸ್ತೋತ್ರಿಯಃ । ಸೂತ್ರಿತಂ ಚ । ತಂ ವೋ ದಸ್ಮಮೃತೀಷಹಂ ತತ್ತ್ವಾ ಯಾಮಿ ಸುವೀರ್ಯಮಿತಿ ಪ್ರಗಾಥೌ ಸ್ತೋತ್ರಿಯಾನುರೂಪೌ । ಆ ೫-೧೬ । ಇತಿ ॥ ಚಾತುರ್ವಿಂಶಿಕೇಽಹನಿ ಮಾಧ್ಯಂದಿನೇ ಸವನೇ ಬ್ರಾಹ್ಮಣಾಚ್ಛಂಸಿನೋ ವೈಕಲ್ಪಿಕಃ ಸ್ತೋತ್ರಿಯೋಽಯಮೇವ ಪ್ರಗಾಥಃ । ಆ. ೭-೪ ॥ ವಿಷುವತ್ಯಪಿ ಮಾಧ್ಯಂದಿನಸವನೇ ಬ್ರಾಹ್ಮಣಾಚ್ಛಂಸಿಶಸ್ತ್ರೇ ತಂ ವೋ ದಸ್ಮಮೃತೀಷಹಮಿತಿ ನೌಧಸಸ್ಯ ಯೋನಿಃ ಶಂಸನೀಯಾ । ತಂ ವೋ ದಸ್ಮಮೃತೀಷಹಮಭಿ ಪ್ರ ವಃ ಸುರಾಧಸಂ । ಆ. ೮-೬ । ಇತಿ ॥

ಅನುವಾದವು—**ತಂ ವೋ ದಸ್ಮಂ** ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಗೋತಮಪುತ್ರನಾದ ನೋಧಾಃ ಎಂಬುವನು ಋಷಿಯು, ಅನುಕ್ರಮಣಿಕೆಯಲ್ಲಿ—**ತಂ ವೋ ದಸ್ಮಂ ನೋಧಾಃ** ಎಂದು ಹೇಳಿರುವುದು ಈ ಸೂಕ್ತಕ್ಕೂ ಮುಂದಿನ ಎರಡು ಸೂಕ್ತಗಳಿಗೂ ಪ್ರಾಗಾಥಂ ಎಂಬ ಛಂದಸ್ಸು. ಇಂದ್ರನು ದೇವತೆಯು. ಮಹಾವ್ರತೇಷ್ಟಿಯಲ್ಲಿ

ನಿಷ್ಕೇವಲ್ಯಶಸ್ತ್ರಮಂತ್ರಪಠನಕಾಲದಲ್ಲಿ ಬೃಹತೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ—**ತಂ ವೋ ದಸ್ಮಮೃತೀಷಹಮಾ ನೋ ವಿಶ್ವಾಸು ಹವ್ಯಃ** ಎಂಬ ವಾಕ್ಯದಿಂದ (ಐ. ಆ. ೫-೨-೪) ನಿರ್ದಿಷ್ಟವಾಗಿರುವುದು. ಅಗ್ನಿಷ್ಟೋಮಯಾಗದ ಮಾಧ್ಯಂದಿನಸವನಕಾಲದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ **ತಂ ವೋ ದಸ್ಮಂ** ಎಂಬ ಪ್ರಗಾಥವನ್ನು (೨ ಋಕ್ಕುಗಳು) ಸ್ತೋತ್ರಿಯಪ್ರಗಾಥವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತಂ ವೋ ದಸ್ಮಮೃತೀಷಹಂ ತತ್ತ್ವಾ ಯಾಮಿ ಸುವೀರ್ಯಮಿತಿ ಪ್ರಗಾಥೌ ಸ್ತೋತ್ರಿಯಾನುರೂಪೌ** ಎಂಬ ಸೂತ್ರದಿಂದ (ಆ. ೫-೧೬) ವಿಸ್ತೃತವಾಗಿರುವುದು. ಯಾಗದ ಚಾತುರ್ವಿಂಶಿಕವೆಂಬ ದಿನದ ಮಾಧ್ಯಂದಿನಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಈ ಪ್ರಗಾಥವನ್ನು ವೈಕಲ್ಪಿಕಸ್ತೋತ್ರಿಯಪ್ರಗಾಥವನ್ನಾಗಿ ಪಠಿಸಬೇಕೆಂದು (ಆ. ೭-) ಎಂಬ ಸೂತ್ರದಲ್ಲಿ ವಿಸ್ತೃತವಾಗಿರುವುದು. ವಿಷುವತ್ ಎಂಬ ದಿನದ ಮಾಧ್ಯಂದಿನಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ—**ತಂ ವೋ** ದಸ್ಮಮೃತೀಷಹಂ ಎಂಬ ಋಕ್ಕಿನಿಂದ ಸಾಧಾ ಪಾಠಿಯ ಯಜ್ಞಸ್ಥಾನವನ್ನು ಪ್ರಶಂಸಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತಂ ವೋ ದಸ್ಮಮೃತೀಷಹಮಭಿ ಪ್ರ ವಃ ಸುರಾಧಸಂ** ಎಂಬ ಸೂತ್ರದಿಂದ (ಆ. ೮-೬) ವಿಸ್ತೃತವಾಗಿರುವುದು.

## ಸೂಕ್ತ—೮೮

ಮಂಡಲ—೮ ॥ ಅನುವಾಕ—೯ ॥ ಸೂಕ್ತ—೮೮ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೧೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ನೋಧಾಃ ॥
ದೇವತಾ—ಇಂದ್ರಃ ॥
ಛಂದಃ—ಪ್ರಾಗಾಥಂ (ಅಯುಜಃ ಬೃಹತ್ಯಃ ೦ ೨ ಜಃ ಸತೋಬೃಹತ್ಯಃ) ॥

॥ ಸಂಹಿತಾಪಾಠಃ ॥

**ತಂ ವೋ ದಸ್ಮಮೃತೀಷಹಂ ವಸೋರ್ಮಂದಾನಮಂಧಸಃ ।**
**ಅಭಿ ವತ್ಸಂ ನ ಸ್ವಸರೇಷು ಧೇನವ ಇಂದ್ರಂ ಗೀರ್ಭಿರ್ನವಾಮಹೇ ॥**

॥ ಪದಪಾಠಃ ॥

**ತಂ । ವಃ । ದಸ್ಮಂ । ಋತಿಽಸಹಂ । ವಸೋಃ । ಮಂದಾನಂ । ಅಂಧಸಃ ।**
**ಅಭಿ । ವತ್ಸಂ । ನ । ಸ್ವಸರೇಷು । ಧೇನವಃ । ಇಂದ್ರಂ । ಗೀಃಽಭಿಃ । ನವಾಮಹೇ ॥ ೧ ॥**

॥ ಸಾಯಣಭಾಷ್ಯಂ ॥

**ನೋಧಾ ಇಂದ್ರಂ ಸ್ತೌತಿ । ಹೇ ಋತ್ವಿಗ್ಯಜಮಾನಾಃ ದಸ್ಮಂ ದರ್ಶನೀಯಮೃತೀಷಹಂ । ಋತಯೋ ಬಾಧಕಾಃ ಶತ್ರವಃ । ತೇಷಾಮಭಿಭವಿತಾರಂ । ಪುನಃ ಕೀದೃಶಂ । ವಸೋರ್ವಾಸಯಿ-**

ತುರ್ದುಃಖಸ್ಯ ನಿವಾಸಯಿತುಃ । ಯದ್ವಾ । ವಸೋಃ ಪಾತ್ರೇ ನಿವಸತಃ । ತಾದೃಶಸ್ಯಾಂಧಸಃ ಸೋಮಲಕ್ಷಣಸ್ಯಾನ್ನಸ್ಯ ಪಾನೇನ ಮಂದಾನಂ ಮಂದಮಾನಂ ಮೋದಮಾನಂ ವೋ ಯುಷ್ಮ್ಯಯುಷ್ಮದ್ವ್ಯತ್ಯೇನ ಯುಷ್ಮತ್ಸಂಬಂಧಿನಂ ತಂ ತಾದೃಶಮಿಂದ್ರಂ ಗೀರ್ಭಿಃ ಸ್ತುತಿಲಕ್ಷಣಾಭಿರ್ವಾಗ್ಭಿರಭಿ ನವಾಮಹೇ ॥ ಸೂ ಸ್ತವನೇ ಸು ಶಬ್ದೇ ॥ ಅಭಿಷ್ಟುಮಃ । ಕುತ್ರೇತಿ । ಸ್ವಸರೇಷು । ಅತ್ರ ಯಾಸ್ಕಃ । ಸ್ವಸರಾಣ್ಯಹಾನಿ ಸ್ವಯಂ ಸಾರೀಣ್ಯಪಿ ವಾ ಸ್ವರಾದಿತ್ಯೋ ಭವತಿ ಸ ಏನಾನಿ ಸಾರಯತಿ । ನಿ. ೫ ೪ । ಇತಿ ॥ ಸೂರ್ಯನೇತೃಕೇಷು ದಿವಸೇಷು ವಯಮಭಿಷ್ಟುಮಃ । ತತ್ರ ದೃಷ್ಟಾಂತಃ । ವತ್ಸಂ ನ ಯಥಾ ಧೇನವೋ ನವಪ್ರಸೂತಿಕಾ ಧೇನವಃ ಸ್ವಸರೇಷು । ಸುಷ್ಠು ಸ್ತ್ಯಾಯಂತೇ ಪ್ರೇರ್ಯಂತೇ ಗಾವೋ ಯತ್ರೇತಿ ಸ್ವಸರಾಣಿ ಗೋಷ್ಠಾನಿ । ತೇಷು ವತ್ಸಮಭಿಲಕ್ಷ್ಯ ಶಬ್ದಯಂತಿ ತದ್ವತ್ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಗ್ಯಜಮಾನರೇ) **ದಸ್ಮಂ**—ಆಕರ್ಷಕವಾದ ರೂಪವುಳ್ಳವನೂ । **ಋತೀಷಹಂ**—ಶತ್ರುಗಳನ್ನು ಸೋಲಿಸುವವನೂ । **ವಸೋಃ**—ದುಃಖನಿವಾರಕನೂ । **ಅಂಧಸಃ**—ಸೋಮಪಾನದಿಂದ । **ಮಂದಾನಂ**—ಸಂತೋಷಪಡುವವನೂ । **ವಃ**—ಪೂಜ್ಯಪೂಜಕಭಾವದಿಂದ ನಿಮ್ಮ ಸಂಬಂಧಿಯೂ ಆದ । **ತಂ ಇಂದ್ರಂ**—ಆ ಇಂದ್ರನನ್ನು । **ಧೇನವಃ**—ಹೊಸದಾಗಿ ಕರುಗಳನ್ನು ಹಾಕಿರುವ ಗೋವುಗಳು । **ಸ್ವಸರೇಷು**—ಕೊಟ್ಟಿಗೆಗಳಲ್ಲಿ । **ವತ್ಸಂ ನ**—ತಮ್ಮ ಕರುಗಳ ಬಳಿಗೆ ಕೂಗುತ್ತಾ ಹೋಗುವಂತೆ । **ಗೀರ್ಭಿಃ**—ಸ್ತುತಿವಾಕ್ಯಗಳಿಂದ । **ಅಭಿ ನವಾಮಹೇ**—ನಾವು ಸ್ತೋತ್ರಮಾಡುತ್ತೇವೆ.

॥ ಭಾವಾರ್ಥ ॥

ಎಲೈ ಋತ್ವಿಗ್ಯಜಮಾನರೇ, ಆಕರ್ಷಕವಾದ ರೂಪವುಳ್ಳವನೂ, ಶತ್ರುಗಳನ್ನು ಸೋಲಿಸುವವನೂ, ದುಃಖನಿವಾರಕನೂ, ಸೋಮಪಾನದಿಂದ ತೃಪ್ತಿಪಡುವವನೂ, ಪೂಜ್ಯಪೂಜಕಭಾವದಿಂದ ನಿಮ್ಮ ಸಂಬಂಧಿಯೂ ಆದ ಇಂದ್ರನನ್ನು ಹೊಸದಾಗಿ ಕರುಹಾಕಿದ ಗೋವುಗಳು ಕೊಟ್ಟಿಗೆಗಳಲ್ಲಿ ತಮ್ಮ ಕರುಗಳನ್ನು ಆದರದಿಂದ ಕೂಗಿ ಸಮೀಪಿಸುವಂತೆ ನಾವು ಸ್ತುತಿವಾಕ್ಯಗಳಿಂದ ಪ್ರತಿದಿವಸವೂ ಸ್ತೋತ್ರಮಾಡುತ್ತೇವೆ

## English Translation

We offer praise with our hymns, as cows (low) to their calf in the stalls, to that handsome Indra of yours, (O priests), the overcomer of enemies, who rejoices in the excellent beverage.

॥ ವಿಶೇಷವಿಷಯಗಳು ॥

**ವಸೋಃ**—ವಾಸಯಿತುರ್ದುಃಖಸ್ಯ ನಿವಾಸಯಿತುಃ । ಸ್ತೋತ್ರಮಾಡುವವರ ದುಃಖವನ್ನು ನಾಶಮಾಡುವವನು ಅಥವಾ **ವಸೋಃ** ಎಂಬ ಶಬ್ದವನ್ನು **ಅಂಧಸಃ** ಎಂಬ ಶಬ್ದದೊಡನೆ ಸೇರಿಸಿ ಅರ್ಥ ಮಾಡಬಹುದು. ಆ ಸಂದರ್ಭದಲ್ಲಿ— ವಸೋಃ ಪಾತ್ರೇ ನಿವಸತಃ ತಾದೃಶಸ್ಯ ಅಂಧಸಃ ಸೋಮಲಕ್ಷಣಸ್ಯಾನ್ನಸ್ಯ ಪಾನೇನ ಮಂದಾನಂ । ಪಾತ್ರೆಯಲ್ಲಿ ತುಂಬಿಟ್ಟಿರುವ ಸೋಮಪಾನದಿಂದ ಸಂತೋಷಪಡುವವನು ಎಂದು ಅರ್ಥವು

**ಸ್ವಸರೇಷು**—ಈ ಶಬ್ದಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಿರುವರು. ಯಾಸ್ಕರು—**ಸ್ವಸರಾಣ್ಯಹಾನಿ ಸ್ವಯಂಸಾರೀಣ್ಯಪಿ ವಾ ಸ್ವರಾದಿತ್ಯೋ ಭವತಿ ಸ ಏನಾನಿ ಸಾರಯತಿ** (ನಿ ೫-೪) ಸ್ವಸರಾಣಿ ಎಂದರೆ ಹಗಲು ದಿನಗಳು. ಹಗಲಿನಲ್ಲಿ ಕಾಲವು ತಾನಾಗಿಯೇ ಮುಂದುವರಿಯುತ್ತಿರುವುದರಿಂದ ಅಥವಾ ಸ್ವಃ ಎಂದರೆ ಆದಿತ್ಯನು. ಈ ಆದಿತ್ಯನು ಈ ಹಗಲುಗಳನ್ನು ನಡೆಯುವಂತೆ ಮಾಡುತ್ತಿರುವನು ಎಂದರೆ ಸೂರ್ಯನ ಪ್ರಕಾಶದಿಂದಲೇ ಹಗಲುಗಳು ನಡೆಯುತ್ತಿರುವವು ಸೂರ್ಯನ ಪ್ರಕಾಶವಿಲ್ಲದಿದ್ದರೆ ಆ ಕಾಲವು ಹಗಲೇ ಅಲ್ಲ, ರಾತ್ರಿಯಾಗುವುದು. ಆದ್ದರಿಂದ ಹಗಲುಗಳು ಪ್ರವರ್ತಿಸುವುದಕ್ಕೆ ಸೂರ್ಯನೇ ಆಧಾರವು.

ಸ್ವಸರೇಷು —ಗೋಷ್ಠೇಷು । ಕೊಟ್ಟಿಗೆಗಳಲ್ಲಿ, **ಸುಷ್ಠ್ವಸ್ಯಂತೇ ಪ್ರೇರ್ಯಂತೇ ಗಾವೋ ಽತ್ರೇತಿ** ಸ್ವಸರಾಣಿ ಗೋಷ್ಠಾನಿ । ಗೋವುಗಳು ಇಲ್ಲಿ ಇರುವಂತೆ ಪ್ರೇರಿಸಲ್ಪಡುವವು ಎಂದರೆ ಈ ಕೊಟ್ಟಿಗೆಯಲ್ಲಿ ಕಟ್ಟಿಹಾಕಲ್ಪಡುವವು ಆದ್ದರಿಂದ ಸ್ವಸರೇಷು ಎಂದರೆ ಕೊಟ್ಟಿಗೆಗಳಲ್ಲಿ ಎಂದು ಅರ್ಥವು ಎಂದು ಭಾಷ್ಯಕಾರರು ಎರಡುವಿಧ ಅರ್ಥಗಳನ್ನೂ ವಿವರಿಸಿದ್ದಾರೆ.

॥ ಸಂಹಿತಾಪಾಠಃ ॥

ದ್ಯು॒ಕ್ಷಂ ಸು॒ದಾನುಂ॒ ತವಿ॑ಷೀಭಿ॒ರಾವೃ॑ತಂ ಗಿ॒ರಿಂ ನ ಪು॑ರು॒ಭೋಜ॑ಸಂ ।
ಕ್ಷು॒ಮಂತಂ॒ ವಾಜಂ॑ ಶ॒ತಿನಂ॑ ಸಹ॒ಸ್ರಿಣಂ॑ ಮ॒ಕ್ಷೂ ಗೋಮಂ॑ತಮೀಮಹೇ ॥

॥ ಪದಪಾಠಃ ॥

ದ್ಯು॒ಕ್ಷಂ । ಸು॒ಽದಾನುಂ॑ । ತವಿ॑ಷೀಭಿಃ । ಆಽವೃ॑ತಂ । ಗಿ॒ರಿಂ । ನ । ಪು॒ರು॒ಽಭೋಜ॑ಸಂ ।
ಕ್ಷು॒ಽಮಂತಂ॑ । ವಾಜಂ॑ । ಶ॒ತಿನಂ॑ । ಸ॒ಹ॒ಸ್ರಿಣಂ॑ । ಮ॒ಕ್ಷು । ಗೋಽಮಂ॑ತಂ । ಈ॒ಮ॒ಹೇ॒ ॥ ೨ ॥

॥ ಸಾಯಣಭಾಷ್ಯಂ ॥

ದ್ಯುಕ್ಷಂ ದೀಪ್ತಿನ್ನಾಂ ನಿವಾಸಸ್ಥಾನಂ । ಅತಿಶಯೇನ ದೀಪ್ತಮಿತ್ಯರ್ಥಃ । ಯದ್ವಾ । ದ್ಯುಕ್ಷಂ ದಿವಿ ದ್ಯುಲೋಕೇ ಕ್ಷಿಯಂತಂ ನಿವಸಂತಂ । ಸುದಾನಂ ಶೋಭನದಾನಂ ತವಿಷೀಭಿರ್ಬಲೈರಾವೃತಮಾಚ್ಛಾದಿತಂ । ಆವರಣೇ ದೃಷ್ಟಾಂತಃ । ಗಿರಿಂ ನ । ತವಿಷೀಭಿರ್ಬಲಯುಕ್ತೈರ್ಮೇಘೈರಾವೃತಂ ಶಿಲೋಚ್ಚಯಮಿವ ಸ್ಥಿತಂ । ಪುನಃ ಕೀದೃಶಂ । ಪುರುಭೋಜಸಂ ಸ್ತೋತೃಣಾಮಭಿಮತಪ್ರದಾನೇನ ಬಹುಭಿರ್ಭಜನೀಯಂ ಬಹುಭಿರ್ಭೋಜಯಿತವ್ಯಂ ಯದ್ವಾ ಬಹೂನಾಂ ಪಾಲಯಿತಾರಮಿಂದ್ರಂ ಕ್ಷುಮಂತಂ ॥ ಟುಕ್ಷು ಶಬ್ದೇ ॥ ಶಬ್ದವಂತಂ । ಅನೇನ ಪುತ್ರಾದಿಕಂ ಲಕ್ಷ್ಯತೇ । ಸ್ತೋತ್ರಾದೀನಿ ಕುರ್ವಾಣಂ ಶತಿನಂ ಸಹಸ್ರಿಣಂ ಶತಸಹಸ್ರಸಂಖ್ಯಾಕಧನಯುಕ್ತಂ ಗೋಮಂತಂ ಗವಾದಿಯುಕ್ತಂ ವಾಜಮನ್ನಂ ಮಕ್ಷು ಶೀಘ್ರಮೀಮಹೇ । ಯಾಚಾಮಹೇ । ಯದ್ವಾ । ಪೂರ್ವಾರ್ಧೋ ವಾಜವಿಶೇಷಣತ್ವೇನ ವಾ ಯೋಜನೀಯಃ । ಪ ದೀಪ್ತಂ ಶೋಭನಸೌರ್ಯಂ ಬಲಾದಿಯುಕ್ತಂ ಬಹುಭಿಃ ಪುತ್ರಮಿತ್ರಾದಿಭಿರ್ಭೋಕ್ತವ್ಯಂ ಶಬ್ದಾದಿಯುಕ್ತಮನ್ನಮಿಂದ್ರಂ ಯಾಚಾಮಹ ಇತಿ ॥

॥ ಪ್ರತಿಪದಾರ್ಥ ॥

**ದ್ಯುಕ್ಷಂ**—ಸ್ವರ್ಗಲೋಕದಲ್ಲಿ ವಾಸಿಸುವವನೂ । **ಸುದಾನುಂ**—ಉತ್ತಮವಾದ ದಾನಿಯೂ । **ತವಿಷೀಭಿಃ**—ತನ್ನ ಸ್ವಂತ ಶಕ್ತಿಸಾಮರ್ಥ್ಯಗಳಿಂದ । **ಆವೃತಂ**—ಯುಕ್ತನಾದವನೂ ಅಥವಾ । **ಗಿರಿಂ ನ ತವಿಷೀಭಿಃ**—ಮೇಘಗಳಿಂದ ಆಚ್ಛಾದಿತವಾದ ಪರ್ವತದಂತೆ ಬಲಾಢ್ಯನಾದವನೂ । **ಪುರುಭೋಜಸಂ**—ಅನೇಕ ಯಜಮಾನರಿಂದ ಬಹುವಿಧವಾಗಿ ಹವಿಸ್ಸನ್ನರ್ಪಿಸಲ್ಪಡುವವನೂ ಅಥವಾ ಬಹುಜನರ ಪಾಲಕನೂ ಆದ ಇಂದ್ರನನ್ನು (ಇಂದ್ರನಿಂದ) । **ಕ್ಷುಮಂತಂ**—ಶಬ್ದ ಮಾಡುತ್ತಿರುವ । **ಶತಿನಂ**—ಶತಸಂಖ್ಯಾಕವಾದುದೂ । **ಸಹಸ್ರಿಣಂ**—ಸಹಸ್ರಸಂಖ್ಯಾಕವಾದುದೂ ಆದ । **ಗೋಮಂತಂ**—ಗೋವುಗಳಿಂದ ಯುಕ್ತವಾದ । **ವಾಜಂ**—ಅನ್ನವನ್ನು । **ಮಕ್ಷೂ**—ಶೀಘ್ರವಾಗಿ । **ಈಮಹೇ**—ಯಾಚಿಸುತ್ತೇವೆ

॥ ಭಾವಾರ್ಥ ॥

ಸ್ವರ್ಗಲೋಕದಲ್ಲಿ ವಾಸಮಾಡುವವನೂ, ಮೇಘಗಳಿಂದ ಆಚ್ಛಾದಿತವಾದ ಪರ್ವತದಂತ ಅತ್ಯಂತ ಬಲಶಾಲಿಯೂ, ಅನೇಕರ ಪಾಲಕನೂ ಆದ ಇಂದ್ರನಿಂದ ನೂರಾರು ಮತ್ತು ಸಾವಿರಾರು ಗೋವುಗಳನ್ನೂ ಅನ್ನವನ್ನೂ ನಾವು ಯಾಚಿಸುತ್ತೇವೆ

English Translation

We solicit the radiant bounteous (Indra), surrounded by powers as a mountain (by clouds), the supporter of many,—( we solicit him ) speedily for renowned food, rich in cattle, and multiplied an hundred and a thousand fold.

॥ ಸಂಹಿತಾಪಾಠಃ ॥

ನ ತ್ವಾ ಬೃಹಂತೋ ಅದ್ರಯೋ ವರಂತ ಇಂದ್ರ ವೀಳವಃ ।
ಯದ್ದಿತ್ಸಸಿ ಸ್ತುವತೇ ಮಾವತೇ ವಸು ನಕಿಷ್ಟದಾ ಮಿನಾತಿ ತೇ ॥ ೩ ॥

॥ ಪದಪಾಠಃ ॥

ನ । ತ್ವಾ । ಬೃಹಂತಃ । ಅದ್ರಯಃ । ವರಂತೇ । ಇಂದ್ರ । ವೀಳವಃ ।
ಯತ್ । ದಿತ್ಸಸಿ । ಸ್ತುವತೇ । ಮಾವತೇ । ವಸು । ನಕಿಃ । ತತ್ । ಆ । ಮಿನಾತಿ । ತೇ ॥ ೩ ॥

॥ ಸಾಯಣಭಾಷ್ಯಂ ॥

**ಚಾತುರ್ವಿಂಶಿಕೇಽಹನಿ ಮಾಧ್ಯಂದಿನಸವನೇ ಬ್ರಾಹ್ಮಣಾಚ್ಛಂಸಿನೋ ನ ತ್ವಾ ಬೃಹಂತ ಇತಿ ವೈಕಲ್ಪಿಕೋಽನುರೂಪಃ । ಸೂತ್ರಿತಂ ಚ । ನ ತ್ವಾ ಬೃಹಂತೋ ಅದ್ರಯ ಉಭಯಂ ಶೃಣವಚ್ಚ ನಃ । ಆ. ೭-೪ । ಇತಿ ॥**

ಹೇ ಇಂದ್ರ ಬೃಹಂತೋ ಬಲೇನ ಮಹಾಂತಃ ಅತ ಏವ ವೀಳವಃ ಸರ್ವತೋ ದೃಢಾ ಅಪ್ಯದ್ರಯಃ ಪರ್ವತಾಸ್ತ್ವಾ ತ್ವಾಂ ನ ವರಂತೇ । ಬಲೇನ ನಿವಾರಯಂತಿ । ಅನಿವಾರಣಮೇವೋತ್ತರಾರ್ಧೇನ ವಿವೃಣೋತಿ । ಸ್ತುವತೇ ತ್ವದ್ವಿಷಯಂ ಸ್ತೋತ್ರಂ ಕುರ್ವತೇ ಮಾವತೇ ಮತ್ಸದೃಶಾಯ ಮಾದೃಶಾಯ ಸ್ತೋತ್ರೇ ಯದ್ವಸು ಯದ್ಧನಂ ದಿತ್ಸಸಿ ತ್ವಂ ದಾತುಮಿಚ್ಛಸಿ ತವ ದೇಯಂ ತದ್ಧನಂ ನಕಿರ್ನ ಕಶ್ಚಿದಾ ಮಿನಾತಿ । ಅಭಿಮುಖ್ಯೇನ ಹಿನಸ್ತಿ ॥ ಮೀಙ್ ಹಿಂಸಾಯಾಂ । ಮೀನಾತೇರ್ನಿಗಮೇ ಇತಿ ಹ್ರಸ್ವಃ । ಮಾವತೇ । ಯುಷ್ಮದಸ್ಮದ್ಭ್ಯಾಂ ಸಾದೃಶ್ಯ ಉಪಸಂಖ್ಯಾನಮಿತಿ ವತುಪ್ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಬೃಹಂತಃ—ಬಲದಿಂದ ದೊಡ್ಡವಾದವೂ । ವೀಳವಃ—ಸರ್ವಪ್ರಕಾರದಿಂದಲೂ ದೃಢವಾದವೂ ಆದ । ಅದ್ರಯಃ—ಪರ್ವತಗಳು । ತ್ವಾ—ನಿನ್ನನ್ನು । ನ ವರಂತೇ—ಬಲಪ್ರಯೋಗದಿಂದ ತಡೆಯಲಾರವು । ಸ್ತುವತೇ—ನಿನ್ನನ್ನು ಸ್ತೋತ್ರಮಾಡುತ್ತಿರುವ । ಮಾವತೇ—ನನ್ನಂತಹ ಪುರುಷನಿಗೆ । ಯತ್ ವಸು—ಯಾವ ಧನವನ್ನು । ದಿತ್ಸಸಿ—ನೀನು ಕೊಡಲಿಚ್ಛಿಸುವಿಯೋ । ತತ್—ಆ ಧನವನ್ನು "ಎಂದರೆ ಆ ಧನದಾನವನ್ನು । ನಕಿಃ—ಯಾರೂ । ಆ ಮಿನಾತಿ—ಹಿಂಸಿಸಲಾರರು ಎಂದರೆ ತಡೆಗಟ್ಟಲಾರರು.

॥ ಭಾವಾರ್ಥ ॥

ಎಲೈ ಇಂದ್ರನೇ, ಆಕಾರದಲ್ಲಿ ದೊಡ್ಡದಾಗಿರುವವೂ, ಅತ್ಯಂತ ದೃಢವಾದವೂ ಆದ ಪರ್ವತಗಳೂ ಸಹ ನಿನ್ನನ್ನು ಬಲಪ್ರಯೋಗದಿಂದ ತಡೆಯಲಾರವು ನಿನ್ನನ್ನು ಸ್ತೋತ್ರಮಾಡುತ್ತಿರುವ ನನ್ನಂತಹ ಪುರುಷನಿಗೆ ನೀನು ಕೊಡಬೇಕೆಂದು ಮನಸ್ಸುಮಾಡುವ ಧನದಾನವನ್ನು ತಡೆಯಲು ಯಾರೂ ಸಮರ್ಥರಲ್ಲ

## English Translation

The vast firm mountains cannot stop you, Indra,—whatever wealth you would give to a worshipper such as I, none can hinder you therein.

॥ ವಿಶೇಷವಿಷಯಗಳು ॥

ಯಾಗದ ಚಾತುರ್ವಿಂಶಿಕವೆಂಬ ದಿನದ ಮಾಧ್ಯಂದಿನಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ನ ತ್ವಾ ಬೃಹಂತಃ** ಎಂಬ ಋಕ್ಕನ್ನು ವೈಕಲ್ಪಾನುರೂಪಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ನ ತ್ವಾ ಬೃಹಂತೋ ಅದ್ರಯ ಉಭಯಂ ಶೃಣವಚ್ಚ ನಃ** ಎಂಬ ಸೂತ್ರದಿಂದ (ಆ ೬-೪) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

**ಯೋದ್ಧಾಸಿ ಕ್ರತ್ವಾ ಶವಸೋತ ದಂಸನಾ ವಿಶ್ವಾ ಜಾತಾಭಿ ಮಜ್ಮನಾ ।**

**ಆ ತ್ವಾಯಮರ್ಕ ಊತಯೇ ವವರ್ತತಿ ಯಂ ಗೋತಮಾ ಅಜೀಜನನ್ ॥**

॥ ಪದಪಾಠಃ ॥

ಯೋದ್ಧಾ । ಅಸಿ । ಕ್ರತ್ವಾ । ಶವಸಾ । ಉತ । ದಂಸನಾ । ವಿಶ್ವಾ । ಜಾತಾ । ಅಭಿ । ಮಜ್ಮನಾ ।

ಆ । ತ್ವಾ । ಅಯಂ । ಅರ್ಕಃ । ಊತಯೇ । ವವರ್ತತಿ । ಯಂ । ಗೋತಮಾಃ । ಅಜೀಜನನ್ ॥ ೪ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಕ್ರತ್ವಾ ವೃತ್ರಹನನಾದಿಕರ್ಮಣಾಪಿ ವಾ ಪ್ರಜ್ಞಾನೇನ ಶವಸಾತ್ಮೀಯೇನ ಬಲೇನ ಯೋದ್ಧಾ ಶತ್ರೂಣಾಂ ಸಂಪ್ರಹಾರಕೋಽಸಿ । ಉತಾಪಿ ಚ ತ್ವಂ ದಂಸಸಾ ಸ್ವಕೀಯೇನ ಕರ್ಮಣಾ ಮಜ್ಮನಾ ॥ ಮಜ ಮಜಿ ಶಬ್ದಾರ್ಥಾಃ । ಮಜಮಜೀ ಚೇತಿ ಮಜತಿಃ ಶಬ್ದಾರ್ಥಃ ॥ ಶತ್ರೂಣಾಮಾ-ಕ್ರೋಶನಸಮರ್ಥೇನ ಬಲೇನ ವಿಶ್ವಾ ಜಾತಾ ಸರ್ವಾಣಿ ಭೂತಜಾತಾನ್ಯಭಿಭವಸಿ । ಉಕ್ತಾರ್ಥಸ್ಯ ವಿಶ್ವಾ ಜಾತಾನ್ಯಭ್ಯಸ್ಮಿ ಮಹ್ನಾ । ಋ ೮-೧೦೦-೪ । ಇತ್ಯಾದಿಷ್ವಿಂದ್ರೇಣೈವೋಕ್ತತ್ವಾತ್ । ಏತಾದೃಶಂ ತ್ವಾ, ತ್ವಾಮರ್ಕಃ ॥ ಅರ್ಚ ಪೂಜಾಯಾಂ ॥ ಅರ್ಚನೀಯೋಽಯಂ ಮಂತ್ರಃ ಯದ್ವಾರ್ಕೋ ದೇವಾನಾಮ-ರ್ಚಕಃ ಪೂಜಕೋಽಯಂ ಸ್ತೋತೋತಯೇ ಸ್ವರಕ್ಷಣಾಯಾ ವವರ್ತತಿ । ಆವರ್ತಯತಿ । ಆತ್ಮಾಭಿ-ಮುಖ್ಯೇ ಕರೋತೀತ್ಯರ್ಥಃ ॥ ವರ್ತತೇರ್ಲೇಟಿ ಬಹುಲಂ ಶ್ಲುರಡಾಗಮಶ್ಚ ॥ ಯಂ ತ್ವಾಂ ಗೋತಮಾ ಗೋತಮಪುತ್ರಾ ನೋಧಃಪ್ರಭೃತಯೋಽಜೀಜನನ್ ಸ್ವಯಜ್ಞೇ ಪ್ರಾದುರಬೀಭವನ್ । ತಂ ತ್ವಾಮಯಂ ಮಂತ್ರಃ ಸ್ತೋತಾ ವಾವರ್ತಯತಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ನೀನು **ಕ್ರತ್ವಾ**—ವೃತ್ರಹನನಾದಿರೂಪವಾದ ನಿನ್ನ ಸಾಮರ್ಥ್ಯದಿಂದ ಅಥವಾ ಅತಿಶಯವಾದ ನಿನ್ನ ಪ್ರಜ್ಞಾನದಿಂದಲೂ । **ಶವಸಾ**—ನಿನ್ನ ಸ್ವಕೀಯವಾದ ಶಕ್ತಿಸಾಮರ್ಥ್ಯಗಳಿಂದಲೂ । **ಯೋದ್ಧಾ**—ಶತ್ರುಗಳೊಡನೆ ಹೋರಾಡುವ ಭಟನಾಗಿ । **ಅಸಿ**—ಇದ್ದೀಯೆ । **ಉತ**—ಮತ್ತು ನೀನು । **ದಂಸನಾ**—ನಿನ್ನ ಸಾಹಸಕಾರ್ಯದಿಂದಲೂ । **ಮಜ್ಮನಾ**—ಶತ್ರುಗಳನ್ನು ದಂಡಿಸುವ ಬಲದಿಂದಲೂ । **ವಿಶ್ವಾ ಜಾತಾ**—ಸಮಸ್ತ ಭೂತಜಾತಗಳನ್ನೂ (ಪ್ರಾಣಿಗಳನ್ನೂ) ಸೋಲಿಸುತ್ತೀಯೆ। **ಯಂ**—ಯಾವ ನಿನ್ನನ್ನು । **ಗೋತಮಾಃ**—ಗೋತಮ ಋಷಿಯ ನೋಧನೇ ಮೊದಲಾದ ಪುತ್ರರು । **ಅಜೀಜನನ್**—ತಮ್ಮ ಯಜ್ಞದಲ್ಲಿ ಪ್ರತ್ಯಕ್ಷನಾಗುವಂತೆ ಮಾಡಿದರೋ। **ತ್ವಾ**—ಅಂತಹ ನಿನ್ನನ್ನು । **ಅರ್ಕಃ**—ಪೂಜಾರ್ಹವಾದ। **ಅಯಂ**—ಈ ಮಂತ್ರವು । **ಊತಯೇ**—ಸ್ವರಕ್ಷಣಾರ್ಥವಾಗಿ । **ಆ ವವರ್ತತಿ**—ನಮ್ಮ ಅಭಿಮುಖವಾಗಿ ಕರೆತರಲಿ

॥ ಭಾವಾರ್ಥ ॥

ಎಲೈ ಇಂದ್ರನೇ, ವೃತ್ರಹನನಾದಿರೂಪವಾದ ನಿನ್ನ ಸಾಮರ್ಥ್ಯದಿಂದ ಅಥವಾ ಅತಿಶಯವಾದ ಪ್ರಜ್ಞೆಯಿಂದಲೂ, ನಿನ್ನ ಸ್ವಕೀಯವಾದ ಶಕ್ತಿಯಿಂದಲೂ ನೀನು ಶತ್ರುಗಳೊಡನೆ ಹೋರಾಡುವ ಉತ್ತಮ ಭಟನಾಗಿದ್ದೀಯೆ. ಮತ್ತು ನಿನ್ನ ಸಾಹಸಕಾರ್ಯವನ್ನು ಮಾಡುವ ಮತ್ತು ಶತ್ರುಗಳನ್ನು ದಂಡಿಸಲು ಸಮರ್ಥವಾದ

ಬಲದಿಂದ ನೀನು ಸಮಸ್ತರನ್ನೂ ಸೋಲಿಸಲು ಶಕ್ತನಾಗಿದ್ದೀಯೆ. ಗೋತಮಋಷಿಯ ಪುತ್ರರು ತಮ್ಮ ಯಜ್ಞದಲ್ಲಿ ಯಾವ ನಿನ್ನನ್ನು ಪ್ರತ್ಯಕ್ಷೀಕರಿಸಿದರೋ ಅಂತಹ ನಿನ್ನನ್ನು ಪೂಜಾರ್ಹವಾದ ಈ ಮಂತ್ರವು ನಮ್ಮ ರಕ್ಷಣಾರ್ಥವಾಗಿ ನಮ್ಮ ಅಭಿಮುಖವಾಗಿ ಇಲ್ಲಿಗೆ ಕರೆತರಲಿ

## English Translation

By your exploits and might you are a warrior; you overpower all beings by your deeds and prowess; this hymn which the Gotamas have made, causes you to turn hither for their protection.

॥ ಸಂಹಿತಾಪಾಠಃ ॥

ಪ್ರ ಹಿ ರಿರಿಕ್ಷ ಓಜಸಾ ದಿವೋ ಅಂತೇಭ್ಯಸ್ಪರಿ ।
ನ ತ್ವಾ ವಿವ್ಯಾಚ ರಜ ಇಂದ್ರ ಪಾರ್ಥಿವಮನು ಸ್ವಧಾಂ ವವಕ್ಷಿಥ ॥ ೫ ॥

॥ ಪದಪಾಠಃ ॥

ಪ್ರ । ಹಿ । ರಿರಿಕ್ಷೇ । ಓಜಸಾ । ದಿವಃ । ಅಂತೇಭ್ಯಃ । ಪರಿ ।
ನ । ತ್ವಾ । ವಿವ್ಯಾಚ । ರಜಃ । ಇಂದ್ರ । ಪಾರ್ಥಿವಂ । ಅನು । ಸ್ವಧಾಂ । ವವಕ್ಷಿಥ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ದಿವೋ ದ್ಯುಲೋಕಸ್ಯ ಪರ್ಯಂತೇಭ್ಯ ಓಜಸಾ । ಹಿರವಧಾರಣೇ । ಸ್ವಬಲೇನೈವ ಪ್ರ ರಿರಿಕ್ಷೇ । ಪ್ರಕರ್ಷೇಣಾತಿರಿಕ್ತೋ ಭವಸಿ ॥ ರಿಚೇರ್ಲೇಟಿ ಬಹುಲಂ ಛಂದಸೀತಿ ಶ್ಲುಃ । ಪ್ರತ್ಯಯಸ್ವರಃ ॥ ಕಿಂ ಚ ಹೇ ಇಂದ್ರ ಪಾರ್ಥಿವಂ ಪೃಥಿವ್ಯಾಂ ಭವೋ ರಜೋ ಲೋಕಸ್ತ್ವಾ ತ್ವಾಂ ಮಹತಾ ಸ್ವಶರೀರೇಣ ನ ವಿವ್ಯಾಚ । ನ ವ್ಯಾಪ್ನೋತಿ । ದ್ಯಾವಾಪೃಥಿವೀಭ್ಯಾಮಪಿ ಸ್ವತಃ ಸ ತ್ವಂ ಬಲೇನ ಸಮರ್ಥೋ ಭವಸೀತ್ಯರ್ಥಃ । ಏವಂಭೂತಃ ಸನ್ನಸ್ಮಾಕಂ ಸ್ವಧಾಮನ್ನಮುದಕಂ । ವಾನು ವವಕ್ಷಿಥ ಅನುವೋಢುಮಿಚ್ಛ ॥ ವಹೇಃ ಸನಂತಸ್ಯ ಛಾಂದಸೇ ಲಿಟಿ ರೂಪಂ । ಮಂತ್ರತ್ವಾದಾಮಭಾವಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ ನೀನು) **ದಿವಃ ಅಂತೇಭ್ಯಃ ಪರಿ**—ಸ್ವರ್ಗಲೋಕದ ಕೊನೆಯವರೆಗೂ । **ಓಜಸಾ**—ನಿನ್ನ ಸ್ವಬಲದಿಂದ । **ಪ್ರ ರಿರಿಕ್ಷೇ**—ಎಲ್ಲವನ್ನೂ ಮೀರಿಸಿದ್ದೀಯೆ । **ಇಂದ್ರ**—ಎಲೈ ಇಂದ್ರನೇ । **ಪಾರ್ಥಿವಂ ರಜಃ**—ಈ ಭೂಲೋಕವು (ತನ್ನ ದೊಡ್ಡ ಆಕಾರದಿಂದಲೂ) । **ತ್ವಾ**—ನಿನ್ನನ್ನು । **ವಿವ್ಯಾಚ**—ವ್ಯಾಪಿಸಲು ಸಮರ್ಥವಾಗಲಾರದು । **ಸ್ವಧಾಂ**—ಅನ್ನವನ್ನು ಅಥವಾ ಉದಕವನ್ನು । **ಅನು ವವಕ್ಷಿಥ**—ನಮಗೆ ವಹಿಸಲು ಇಚ್ಛಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಸ್ವರ್ಗಲೋಕದ ಕಟ್ಟಕಡೆಯ ತುದಿಯುವರೆಗೂ ನಿನ್ನ ಸ್ವಶಕ್ತಿಯಿಂದ ಸರ್ವತ್ರ ವ್ಯಾಪಿಸಿ ಎಲ್ಲವನ್ನೂ ಮೀರಿಸಿದ್ದೀಯೆ. ಎಲೈ ಇಂದ್ರನೇ, ಈ ಭೂಲೋಕವು ತನ್ನ ದೊಡ್ಡ ಆಕಾರದಿಂದಲೂ ಸಹ ನಿನ್ನನ್ನು ವ್ಯಾಪಿಸಲು ಸಮರ್ಥವಾಗಲಾರದು. ನೀನು ನಮಗೆ ಅನ್ನವನ್ನು ಅಥವಾ ಉದಕವನ್ನೂ ಕೊಡಲು ಮನಸ್ಸುಮಾಡು.

English Translation

Indra, by your might you extend beyond the limits of heaven, the region of the earth cannot contain you ; deign to bring us food

॥ ಸಂಹಿತಾಪಾಠಃ ॥

ನಕಿಃ ಪರಿಷ್ಟಿರ್ಮಘವನ್ಮಘಸ್ಯ ತೇ ಯದ್ದಾಶುಷೇ ದಶಸ್ಯಸಿ ।
ಅಸ್ಮಾಕಂ ಬೋಧ್ಯುಚಥಸ್ಯ ಚೋದಿತಾ ಮಂಹಿಷ್ಠೋ ವಾಜಸಾತಯೇ ॥

॥ ಪದಪಾಠಃ ॥

ನಕಿಃ । ಪರಿಷ್ಟಿಃ । ಮಘ್ಽವನ್ । ಮಘಸ್ಯ । ತೇ । ಯತ್ । ದಾಶುಷೇ । ದಶಸ್ಯಸಿ ।
ಅಸ್ಮಾಕಂ । ಬೋಧಿ । ಉಚಥಸ್ಯ । ಚೋದಿತಾ । ಮಂಹಿಷ್ಠಃ । ವಾಜ್ಽಸಾತಯೇ ॥ ೬ ॥

॥ ಸಾಯಣಭಾಷ್ಯಂ ॥

ಹೇ ಮಘವನ್ಧನವನ್ನಿಂದ್ರ ತೇ ತವ ಮಘಸ್ಯ ಮಂಹನೀಯಸ್ಯ ಧನಸ್ಯ ಪರಿಷ್ಟಿಃ ಪರಿಬಾಧಕೋ ನಿರೋದ್ಧಾ ನಕಿರ್ನ ಕಶ್ಚಿದಸ್ತಿ । ಯದ್ಯದಾ ದಾಶುಷೇ ಹವಿರ್ದತ್ತವತೇ ಯಜಮಾನಾಯ ದಶಸ್ಯಸಿ ಧನಂ ಪ್ರಯಚ್ಛಸಿ ತದಾ ತಸ್ಯ ನಿರೋಧಕೋ ನಾಸ್ತೀತ್ಯರ್ಥಃ । ತಥಾ ಸತಿ ಚೋದಿತಾ ಧನಾನಾಂ ಚೋದಯಿತಾ ಸ್ತೋತೃಭ್ಯಃ ಪ್ರೇರಯಿತಾ ಅತ ಏವ ಮಂಹಿಷ್ಠೋ ದಾತೃತಮೋ ಮಂಹನೀಯೋ ವಾ ಸ ತ್ವಮಸ್ಮಾಕಂ ಸಂಬಂಧ್ಯುಚಥಸ್ಯ ಸ್ತೋತ್ರಂ ವಾಜಸಾತಯೇಽನ್ನಲಾಭಾಯ ತದರ್ಥಂ ಕ್ರಿಯಮಾಣಮಿತಿ ಬೋಧಿ । ಬುಧ್ಯಸ್ವ । ಸ್ತೋತ್ರೇಣ ಸ್ತುತಃ ಸನ್ನಸ್ಮಭ್ಯಮನ್ನಾದಿಕಂ ಪ್ರಯಚ್ಛೇತಿ ಶೇಷಃ ॥ ಬೋಧಿ । ಬುಧ ಅವಬೋಧನೇ । ಭೌವಾದಿಕಃ । ಲೋಟಿ ಛಾಂದಸಃ ಶಪೋ ಲುಕ್ । ಧ್ಯಾದೇಶಃ ॥

ಪ್ರತಿಪದಾರ್ಥ

ಮಘವನ್—ಧನವಂತನಾದ ಎಲೈ ಇಂದ್ರನೇ । ಯತ್—ಯಾವಾಗ । ದಾಶುಷೇ—ಹವಿಸ್ಸನ್ನರ್ಪಿಸಿದ ಯಜಮಾನನಿಗೆ । ದಶಸ್ಯಸಿ—ಧನವನ್ನು ಕೊಡುವೆಯೋ ಆಗ । ತೇ—ನಿನ್ನ । ಮಘಸ್ಯ—ಶ್ರೇಷ್ಠವಾದ ಧನದ

ದಾನವನ್ನು । **ಪರಿಷ್ಟಿಃ**—ತಡೆಗಟ್ಟುವವನು । **ನಕಿಃ**—ಯಾರೂ ಇಲ್ಲ । **ಚೋದಿತಾ**—ಸ್ತೋತೃಜನರನ್ನು ಪ್ರೇರಿಸುವವನೂ । **ಮಂಹಿಷ್ಠಃ**—ಧನವನ್ನು ಅತಿಶಯವಾಗಿ ಕೊಡುವವನೂ ಆದ ನೀನು । **ವಾಜಸಾತಯೇ**—ಅನ್ನಲಾಭಾರ್ಥವಾಗಿ ನಾವು ಪಠಿಸುವ । **ಅಸ್ಮಾಕಂ**—ನಮ್ಮ ಸಂಬಂಧವಾದ । **ಉಚಥಸ್ಯ**—ಸ್ತೋತ್ರವನ್ನು । **ಬೋಧಿ**—ಕೇಳಿತಿಳಿ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನಗೆ ಹವಿಸ್ಸನ್ನರ್ಪಿಸುವ ಯಜಮಾನನಿಗೆ ಧನವನ್ನು ಕೊಡಬೇಕೆಂದು ಇಚ್ಛಿಸಿದಾಗ ಆ ಧನದಾನವನ್ನೂ ಕೊಡಬೇಡವೆಂದು ತಡೆಗಟ್ಟುವವರು ಯಾರೂ ಇಲ್ಲ. ಎಂದರೆ ಯಾರೂ ಸಮರ್ಥರಲ್ಲ. ಸ್ತೋತೃ ಜನರನ್ನು ಪ್ರೇರಿಸುವವನೂ ಅವರಿಗೆ ಅತಿಶಯವಾಗಿ ಧನವನ್ನು ಕೊಡುವವನೂ ಆದ ನೀನು ಅನ್ನಲಾಭಾರ್ಥವಾಗಿ ನಾವು ಪಠಿಸುವ ಸ್ತೋತ್ರವನ್ನು ಕೇಳಿ ತಿಳಿ.

English Translation

None can hinder your bounty, Maghavan, when you give wealth to your votary ; most liberal sender (of wealth), listen to our praise for the attainment of food.

## ಎಂಭತ್ತೊಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಬೃಹದಿಂದ್ರಾಯೇತಿ ಸಪ್ತರ್ಚಂ ನವಮಂ ಸೂಕ್ತಂ । ನೃಮೇಧಪುರುಮೇಧಾವೃಷೀ । ತೌ ಚಾನುಕ್ತತ್ವಾದಾಂಗಿರಸೌ । ಆದಿತೋ ದ್ವೌ ಪ್ರಗಾಥೌ । ಪಂಚಮೀಷಷ್ಠ್ಯಾವನುಷ್ಟುಭೌ ಸಪ್ತಮೀ ಬೃಹತೀ । ತಥಾ ಚಾನುಕ್ರಮ್ಯತೇ । ಬೃಹದಿಂದ್ರಾಯ ಸಪ್ತ ನೃಮೇಧಪುರುಮೇಧೌ ದ್ವ್ಯನುಷ್ಟುಬ್ಬೃಹತ್ಯಂತಮಿತಿ ॥ ಚಾತುರ್ವಿಂಶಿಕೇಽಹನಿ ಮರುತ್ವತೀಯೇ ಪ್ರಾಕೃತಾನ್ಮರುತ್ವತೀಯಾತ್ಪ್ರಗಾಥಾದೂರ್ಧ್ವಂ ದ್ವೌ ಮರುತ್ವತೀಯೌ ಪ್ರಗಾಥೌ ಶಂಸನೀಯೌ । ಬೃಹದಿಂದ್ರಾಯ ಗಾಯತೇತ್ಯಯಮಾದ್ಯಃ ಪ್ರಗಾಥಃ ಪೃಷ್ಠ್ಯಾಭಿಪ್ಲವಷಡಹಯೋರ್ದ್ವಿತೀಯೇಽಹನ್ಯಯಂ ಪ್ರಗಾಥಃ । ಸೂತ್ರಿತಂ ಚ । ಬೃಹದಿಂದ್ರಾಯ ಗಾಯತ ನಕಿಃ ಸುದಾಸೋ ರಥಮಿತಿ ಮರುತ್ವತೀಯ ಊರ್ಧ್ವಂ ನಿತ್ಯಾತ್ । ಆ ೭-೩ । ಇತಿ ॥**

ಅನುವಾದವು—**ಬೃಹದಿಂದ್ರಾಯ** ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ನೃಮೇಧ ಮತ್ತು ಪುರುಮೇಧ ಎಂಬಿಬ್ಬರು ಋಷಿಗಳು. ಅವರು ಅಂಗಿರಸಗೋತ್ರೋದ್ಭವರು ಇಂದ್ರನು ದೇವತೆಯು, ಈ ಸೂಕ್ತದ ಮೊದಲಿನ ನಾಲ್ಕು ಋಕ್ಕುಗಳಲ್ಲಿ ಒಂದನೆಯ ಮತ್ತು ಮೂರನೆಯ ಋಕ್ಕುಗಳು ಬೃಹತೀಛಂದಸ್ಕವು ; ಎರಡನೆಯ ಮತ್ತು ನಾಲ್ಕನೆಯ ಋಕ್ಕುಗಳು ಸತೋಬೃಹತೀಛಂದಸ್ಕವು. ಐದನೆಯ ಮತ್ತು ಆರನೆಯ ಋಕ್ಕುಗಳು ಅನುಷ್ಟುಪ್ ಛಂದಸ್ಕವು.

ಏಳನೆಯ ಋಕ್ಕು ಬೃಹತೀಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಬೃಹದಿಂದ್ರಾಯ ಸಪ್ತ ನೃಮೇಧಪುರುಮೇಧೌ ದ್ವ್ಯನುಷ್ಟುಬ್ಬೃಹತ್ಯಂತಂ** ಎಂದು ಹೇಳಿರುವುದು. ಯಾಗದ ಚಾತುರ್ವಿಂಶಿಕವೆಂಬ ದಿವಸದಲ್ಲಿ ಪ್ರಾಕೃತ ಮರುತ್ವತೀಯಶಸ್ತ್ರಮಂತ್ರಪಠನಕಾಲದಲ್ಲಿ ಮರುತ್ವತೀಯಪ್ರಗಾಥಮಂತ್ರಗಳನ್ನು ಪಠಿಸಬೇಕು. ಆ ಸಂದರ್ಭದಲ್ಲಿ ಬೃಹದಿಂದ್ರಾಯ ಗಾಯತ ಎಂದು ಮೊದಲಾಗುವ ಈ ಪ್ರಗಾಥಮಂತ್ರವನ್ನು ಪಠಿಸಬೇಕು. ಮತ್ತು ಪೃಷ್ಠ್ಯ ಅಭಿಪ್ಲವಷಡಹಗಳೆಂಬ ಯಾಗಗಳ ಎರಡನೆಯ ದಿವಸವೂ ಈ ಪ್ರಗಾಥಮಂತ್ರವನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಬೃಹದಿಂದ್ರಾಯ ಗಾಯತ ನಕಿಃ ಸುದಾಸೋ ರಥಮಿತಿ ಮರುತ್ವತೀಯಾ ಊರ್ಧ್ವಂ ನಿತ್ಯಾತ್** ಎಂಬ ಸೂತ್ರದಿಂದ (ಆ. ೭-೩) ವಿಸ್ತೃತವಾಗಿರುವುದು

## ಸೂಕ್ತ—೮೯

ಮಂಡಲ—೮ ॥ ಅನುವಾಕ—೯ ॥ ಸೂಕ್ತ—೮೯ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೧೨ ॥
ಸೂಕ್ತಗತಮಂತ್ರಸಂಖ್ಯಾ—೭ ॥
ಋಷಿಃ—ನೃಮೇಧಪುರುಮೇಧೌ ॥
ದೇವತಾ—ಇಂದ್ರಃ ॥
ಛಂದಃ—೧-೪ ಪ್ರಗಾಥಃ । ೫, ೬ ಅನುಷ್ಟುಪ್ । ೭ ಬೃಹತೀ ॥

॥ ಸಂಹಿತಾಪಾಠಃ ॥

ಬೃಹದಿಂದ್ರಾಯ ಗಾಯತ ಮರುತೋ ವೃತ್ರಹಂತಮಂ ।
ಯೇನ ಜ್ಯೋತಿರಜನಯನ್ನೃತಾವೃಧೋ ದೇವಂ ದೇವಾಯ ಜಾಗೃವಿ ॥೧॥

॥ ಪದಪಾಠಃ ॥

ಬೃಹತ್ । ಇಂದ್ರಾಯ । ಗಾಯತ । ಮರುತಃ । ವೃತ್ರಹಂತಮಂ ।
ಯೇನ । ಜ್ಯೋತಿಃ । ಅಜನಯನ್ । ಋತಾವೃಧಃ । ದೇವಂ । ದೇವಾಯ । ಜಾಗೃವಿ ॥ ೧ ॥

॥ ಸಾಯಣಭಾಷ್ಯಂ ॥

ಹೇ ಮರುತಃ ॥ ರು ಶಬ್ದೇ ॥ ಮಿತಂ ರುವಂತೀತಿ ಮರುತಃ । ಹೇ ಮಿತಭಾಷಿಣಃ ಸ್ತೋತಾರಃ ವೃತ್ರಹಂತಮಮತಿಶಯೇನ ಪಾಪವಿನಾಶನಂ ಬೃಹತ್ಸಾಮೇಂದ್ರಾಯೇಂದ್ರಾರ್ಥಂ ಗಾಯತ । ಅಸ್ಮದೀಯಯಜ್ಞೇ ಗಾನಂ ಕುರುತ । ಋತಾವೃಧಃ ಸತ್ಯಸ್ಯ ಯಜ್ಞಸ್ಯ ವಾ ವರ್ಧಕಾ ವಿಶ್ವೇದೇವಾ ದೇವಾಯ ದ್ಯೋತಮಾನಾಯೇಂದ್ರಾಯ ದೇವಂ ದೇವನಶೀಲಂ ಜಾಗೃವಿ ಸರ್ವೇಷಾಂ ಜಾಗರಣಶೀಲಂ ಜ್ಯೋತಿಃ ಸೂರ್ಯಂ ಯೇನ ಸಾಮ್ನಾಜನಯನ್ ಇಂದ್ರಾರ್ಥಮುದಪಾದಯನ್ ತತ್ಸಾಮ ಗಾಯತೇತಿ ॥

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುದ್ದೇವತೆಗಳೇ । **ಋತಾವೃಧಃ**—ಯಜ್ಞಕರ್ಮವನ್ನು ವೃದ್ಧಿಪಡಿಸುವ ಸಮಸ್ತ ದೇವತೆಗಳೂ । **ದೇವಾಯ**—ದೇವತಾತ್ಮನಾದ ಇಂದ್ರನಿಗಾಗಿ । **ದೇವಂ**—ಪ್ರಕಾಶಮಾನನೂ । **ಜಾಗೃವಿ**—ನಿದ್ರಾರಹಿತನೂ ಆದ । **ಜ್ಯೋತಿಃ**—ಸೂರ್ಯನನ್ನು । **ಯೇನ**—ಯಾವ ಸಾಮಮಂತ್ರದಿಂದ । **ಅಜನಯನ್**—ಉತ್ಪತ್ತಿಮಾಡಿದರೋ ಅಂತಹ । **ವೃತ್ರಹಂತಮಂ**—ಅತಿಶಯವಾಗಿ ಪಾಪನಾಶಕವಾದ । **ಬೃಹತ್**—ಬೃಹತ್ಸಾಮ ಮಂತ್ರವನ್ನು । **ಇಂದ್ರಾಯ**—ಇಂದ್ರನನ್ನುದ್ದೇಶಿಸಿ । **ಗಾಯತ**—ಪಠಿಸಿ ಗಾನಮಾಡಿರಿ

॥ ಭಾವಾರ್ಥ ॥

ಎಲೈ ಮರುದ್ದೇವತೆಗಳೇ, ಯಜ್ಞವನ್ನು ವೃದ್ಧಿಪಡಿಸುವ ಸಮಸ್ತ ದೇವತೆಗಳೂ ದೇವತಾತ್ಮನಾದ ಇಂದ್ರನಿಗಾಗಿ ಸದಾ ಜಾಗರೂಕನಾಗಿರುವ ಸೂರ್ಯನನ್ನು ಯಾವ ಸಾಮಮಂತ್ರದ ಸಾಮರ್ಥ್ಯದಿಂದ ಉತ್ಪತ್ತಿಮಾಡಿದರೋ ಪಾಪಪರಿಹಾರಕವಾದ ಅಂತಹ ಬೃಹತ್ಸಾಮಮಂತ್ರವನ್ನು ಇಂದ್ರನ ಪ್ರೀತ್ಯರ್ಥವಾಗಿ ಪಠಿಸಿ ಗಾನಮಾಡಿರಿ.

English Translation

Priests, sing to Indra the most sin-destroying Brihat-Saman, by which the upholders of truth produced the divine all-waking luminary for the god.

॥ ಸಂಹಿತಾಪಾಠಃ ॥

ಅಪಾಧಮದಭಿಶಸ್ತೀರಶಸ್ತಿಹಾಥೇಂದ್ರೋ ದ್ಯುಮ್ನ್ಯಾಭವತ್ ।
ದೇವಾಸ್ತ ಇಂದ್ರ ಸಖ್ಯಾಯ ಯೇಮಿರೇ ಬೃಹದ್ಭಾನೋ ಮರುದ್ಗಣ ॥೨॥

॥ ಪದಪಾಠಃ ॥

ಅಪ । ಅಧಮತ್ । ಅಭಿಽಶಸ್ತೀಃ । ಅಶಸ್ತಿಽಹಾ । ಅಥ । ಇಂದ್ರಃ । ದ್ಯುಮ್ನೀ । ಆ । ಅಭವತ್ ।
ದೇವಾಃ । ತೇ । ಇಂದ್ರ । ಸಖ್ಯಾಯ । ಯೇಮಿರೇ । ಬೃಹದ್ಭಾನೋ ಇತಿ ಬೃಹತ್ಽಭಾನೋ ।
ಮರುತ್ಽಗಣ ॥ ೨ ॥

॥ ಸಾಯಣಭಾಷ್ಯಂ ॥

ಅಶಸ್ತಿಹಾ ಸ್ತೋತ್ರಶಂಸನರಹಿತಾನಾಂ ಶತ್ರೂಣಾಂ ಹಂತೇಂದ್ರೋಽಭಿಶಸ್ತೀಃ ॥ ಶಸು ಹಿಂಸಾಯಾಂ ॥ ಅಭಿತೋ ಹಿಂಸಾ ಯೇಷಾಂ ತೇ । ತಾದೃಶಾನ್ । ಯದ್ವಾ । ಅಭಿಶಸ್ತೀಃ ಶತ್ರುಕೃತಾ ಹಿಂಸಾಃ ।

**ಅಪಾಧಮತ್ । ಅಪಾಗಮಯತ್ । ಅಥ ಶತ್ರುಹನನಾನಂತರಮಿಂದ್ರೋ ದ್ಯುಮ್ನೀ ಸರ್ವತ್ರ ದ್ಯೋತಮಾನಯಶೋಯುಕ್ತಃ । ಯದ್ವಾ । ತೇಷಾಂ ಧನಾಪಹರಣೇನ ಧನಾದಿಮಾನ್ । ಅಭವತ್ । ಸರ್ವತಃ ಪ್ರಸಿದ್ಧೋಽಭವತ್ । ಅಥೋತ್ತರೋಽರ್ಧಃ ಪ್ರತ್ಯಕ್ಷಕೃತಃ । ಹೇ ಬೃಹದ್ಭಾನೋ ಬೃಂಹಣಶೀಲತೇಜಸ್ಕ ಮಹಾದೀಪ್ತೇ ವಾ ಮರುದ್ಗಣ । ಮರುತಾಂ ಸಪ್ತ ಗಣಾ ಯಸ್ಯ ಸಂತಿ ಸ ತಥೋಕ್ತಃ । ತಾದೃಶ ಹೇ ಇಂದ್ರ ದೇವಾ ದ್ಯೋತಮಾನಾಃ ಸರ್ವೇ ದೇವಾಃ ಸಖ್ಯಾಯಾತ್ಮನಃ ಸಖಿಭಾವಾಯ ತೇ ತ್ವಾಂ ಯೇಮಿರೇ । ನಿಯಚ್ಛಂತಿ ॥**

॥ ಪ್ರತಿಪದಾರ್ಥ ॥

**ಅಶಸ್ತಿಹಾ**—ಸ್ತೋತ್ರಮಾಡದಿರುವ ಶತ್ರುಜನರನ್ನು ಸಂಹರಿಸುವ ಇಂದ್ರನು । **ಅಭಿಶಸ್ತೀಃ**—ಶತ್ರುಗಳು ಕೊಡುವ ಹಿಂಸೆಯನ್ನು । **ಅಪಾಧಮತ್**—ನಿವಾರಿಸುವನು । **ಅಥ**—ಅನಂತರ । **ಇಂದ್ರಃ**—ಇಂದ್ರನು । **ದ್ಯುಮ್ನೀ**—ಸರ್ವತ್ರ ಕೀರ್ತಿಯುಕ್ತನೆಂದು ಅಥವಾ ಧನವುಳ್ಳವನೆಂದು । **ಆ ಅಭವತ್**—ಪ್ರಸಿದ್ಧನಾದನು । **ಬೃಹದ್ಭಾನೋ**—ಅತಿಶಯವಾದ ತೇಜಸ್ಸಿನಿಂದ ಪ್ರಕಾಶಿಸುವ । **ಮರುದ್ಗಣ**—ಎಲೈ ಮರುತ್ಸಂಘವೇ । **ಇಂದ್ರ**—ಎಲೈ ಇಂದ್ರನೇ । **ದೇವಾಃ**—ಸಮಸ್ತ ದೇವತೆಗಳು । **ಸಖ್ಯಾಯ**—ಸ್ನೇಹಪ್ರಾಪ್ತಿಗಾಗಿ । **ತೇ**—ನಿನ್ನನ **ಯೇಮಿರೆ**—ಅಪೇಕ್ಷಿಸುತ್ತಾರೆ

॥ ಭಾವಾರ್ಥ ॥

ಸ್ತೋತ್ರಮಾಡದಿರುವ ಶತ್ರುಜನರ ಸಂಹಾರಕನಾದ ಇಂದ್ರನು ಶತ್ರುಗಳು ಕೊಡುವ ಹಿಂಸೆಯನ್ನು ನಿವಾರಿಸುವನು ಅನಂತರ ಅದೇ ಇಂದ್ರನು ಪ್ರಕಾಶಮಾನವಾದ ಕೀರ್ತಿಶಾಲಿಯೆಂದು ಪ್ರಸಿದ್ಧನಾದನು ಅತಿಶಯವಾದ ತೇಜಸ್ಸಿನಿಂದ ಬೆಳಗುವ ಎಲೈ ಮರುದ್ಗಣವೇ ಮತ್ತು ಎಲೈ ಇಂದ್ರನೇ, ಸಮಸ್ತ ದೇವತೆಗಳೂ ನಿನ್ನ ಸ್ನೇಹಪ್ರಾಪ್ತಿಗಾಗಿ ಅಪೇಕ್ಷಿಸುತ್ತಿದ್ದಾರೆ.

English Translation

Indra, the destroyer of those who offer not praise, has driven away the malevolent and has become glorious ; O Indra of mighty splendour, lord of the troops of Maruts, the gods press you for your friendship

॥ ಸಂಹಿತಾಪಾಠಃ ॥

**ಪ್ರ ವ ಇಂದ್ರಾಯ ಬೃಹತೇ ಮರುತೋ ಬ್ರಹ್ಮಾರ್ಚತ ।**
**ವೃತ್ರಂ ಹನತಿ ವೃತ್ರಹಾ ಶತಕ್ರತುರ್ವಜ್ರೇಣ ಶತಪರ್ವಣಾ ॥ ೩ ॥**

॥ ಪದಪಾಠಃ ॥

**ಪ್ರ । ವಃ । ಇಂದ್ರಾಯ । ಬೃಹತೇ । ಮರುತಃ । ಬ್ರಹ್ಮ । ಅರ್ಚತ ।**
**ವೃತ್ರಂ । ಹನತಿ । ವೃತ್ರಽಹಾ । ಶತಽಕ್ರತುಃ । ವಜ್ರೇಣ । ಶತಽಪರ್ವಣಾ ॥ ೩ ॥**

॥ ಸಾಯಣಭಾಷ್ಯಂ ॥

**ಅಗ್ನಿಷ್ಟೋಮೇ ಮರುತ್ವತೀಯೇ ಪ್ರ ವ ಇಂದ್ರಾಯೇತ್ಯಯಂ ಮರುತ್ವತೀಯಃ ಪ್ರಗಾಥಃ । ಸೂತ್ರಿತಂ ಚ । ಪ್ರ ವ ಇಂದ್ರಾಯ ಬೃಹತ ಇತಿ ಮರುತ್ವತೀಯಃ ಪ್ರಗಾಥಃ ॥ ಆ. ೫-೧೪ । ಇತಿ ॥**

**ಹೇ ಮರುತೋ ಮಿತರಾವಿಣಃ ಸ್ತೋತಾರಃ ಬೃಹತೇ ಮಹತೇ ವಃ ಸ್ತುತ್ಯಸ್ತೋತೃತ್ವಲಕ್ಷಣೇನ ಸಂಬಂಧೇನ ಯುಷ್ಮದೀಯಾಯೇಂದ್ರಾಯ ಬ್ರಹ್ಮ ಸಾಮಲಕ್ಷಣಂ ಸ್ತೋತ್ರಂ ಪ್ರಾರ್ಚತ । ಪ್ರೋಚ್ಚಾರಯತ । ತತೋ ವೃತ್ರಹಾ ವೃತ್ರಸ್ಯ ಪಾಪಸ್ಯ ವಾ ಹಂತಾ ಶತಕ್ರತುಃ ಶತವಿಧಕರ್ಮಾ ಬಹುವಿಧಪ್ರಜ್ಞೋ ವೇಂದ್ರೋ ಶತಪರ್ವಣಾ ಶತಸಂಖ್ಯಾಕಧಾರೇಣ ವಜ್ರೇಣೈತನ್ನಾಮಕೇನಾಯುಧೇನ ವೃತ್ರಮಪಾಮಾವರಕಂ ವೃತ್ರಾಖ್ಯಮಸುರಂ ಹನತಿ । ಯುಷ್ಮಾಭಿರಭಿಷ್ಟುತಃ ಸನ್ ಹಂತು ॥ ಹಂತೇರ್ಲೇಟ್ಯಡಾಗಮಃ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುದ್ದೇವತೆಗಳೇ । **ಬೃಹತೇ**—ಮಹಾಮಹಿಮನೂ । **ವಃ**—ನಿಮ್ಮ ಸಂಬಂಧಿಯೂ ಆದ । **ಇಂದ್ರಾಯ**—ಇಂದ್ರನನ್ನುದ್ದೇಶಿಸಿ । **ಬ್ರಹ್ಮ**—ಸಾಮಲಕ್ಷಣರೂಪವಾದ ಸ್ತೋತ್ರವನ್ನು । **ಪ್ರ ಅರ್ಚತ**—ಪಠಿಸಿರಿ (ಅನಂತರ) । **ವೃತ್ರಹಾ**—ವೃತ್ರಹಂತಕನಾದ । **ಶತಕ್ರತುಃ**—ಅನೇಕಸಾಹಸಕಾರ್ಯಕರ್ತನಾದ ಇಂದ್ರನು । **ಶತಪರ್ವಣಾ**—ನೂರಾರು ಅಲಗುಗಳುಳ್ಳ । **ವಜ್ರೇಣ**—ವಜ್ರಾಯುಧದಿಂದ । **ವೃತ್ರಂ**—ವಷ್ಟ್ಯುದಕಗಳನ್ನು ತಡೆಗಟ್ಟಿರುವ ವೃತ್ರಾಸುರನನ್ನು । **ಹನತಿ**—ಸಂಹರಿಸಲಿ.

॥ ಭಾವಾರ್ಥ ॥

ಎಲೈ ಮರುದ್ದೇವತೆಗಳೇ, ಮಹಾಮಹಿಮನೂ, ನಿಮ್ಮ (ರಾಜಪ್ರಜಾ) ಸಂಬಂಧಿಯೂ ಆದ ಇಂದ್ರನನ್ನುದ್ದೇಶಿಸಿ ಸಾಮಗಾನರೂಪವಾದ ಸ್ತೋತ್ರವನ್ನು ಪಠಿಸಿ ಅನಂತರ ವೃತ್ರ ಅಥವಾ ಪಾಪನಾಶಕನೂ, ಅನೇಕ ಸಾಹಸಕಾರ್ಯಕರ್ತನೂ ಆದ ಇಂದ್ರನು ನಿಮ್ಮಿಂದ ಸ್ತುತನಾಗಿ ನೂರಾರು ಅಲಗುಗಳುಳ್ಳ ತನ್ನ ವಜ್ರಾಯುಧದಿಂದ ವೃಷ್ಟ್ಯುದಕಗಳನ್ನು ತಡೆದಿರುವ ವೃತ್ರಾಸುರನನ್ನು ಸಂಹಾರಮಾಡಲಿ.

English Translation

Priests, utter forth the hymn to your great Indra; let Shatakratu, the slayer of Vritra, smite Vritra with his hundred-edged thunderbolt

॥ ವಿಶೇಷವಿಷಯಗಳು ॥

ಅಗ್ನಿಷ್ಟೋಮಯಾಗದಲ್ಲಿ ಪಠಿಸುವ ಮರುತ್ವತೀಯಶಸ್ತ್ರಮಂತ್ರಗಳಲ್ಲಿ **ಪ್ರ ವ ಇಂದ್ರಾಯ** ಎಂಬ ಈ ಪ್ರಗಾಥವನ್ನು (೩-೪ ಋಕ್ಕುಗಳನ್ನು) ಮರುತ್ವತೀಯಪ್ರಗಾಥವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ **ಪ್ರ ವ ಇಂದ್ರಾಯ ಬೃಹತ ಇತಿ ಮರುತ್ವತೀಯಃ ಪ್ರಗಾಥಃ** ಎಂಬ ಸೂತ್ರದಿಂದ (ಆ. ೫-೧೪) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಅಭಿ ಪ್ರ ಭರ ಧೃಷತಾ ಧೃಷನ್ಮನಃ ಶ್ರವಶ್ಚಿತ್ತೇ ಅಸದ್ಬೃಹತ್ ।

ಅರ್ಷಂತ್ವಾಪೋ ಜವಸಾ ವಿ ಮಾತರೋ ಹನೋ ವೃತ್ರಂ ಜಯಾ ಸ್ವಃ ॥೪॥

॥ ಪದಪಾಠಃ ॥

ಅಭಿ । ಪ್ರ । ಭರ । ಧೃಷತಾ । ಧೃಷತ್ऽಮನಃ । ಶ್ರವಃ । ಚಿತ್ । ತೇ । ಅಸತ್ । ಬೃಹತ್ ।

ಅರ್ಷಂತು । ಆಪಃ । ಜವಸಾ । ವಿ । ಮಾತರಃ । ಹನಃ । ವೃತ್ರಂ । ಜಯ । ಸ್ವಃರಿತಿ ಸ್ವಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಧೃಷನ್ಮನಃ ಶತ್ರೂಣಾಂ ಧರ್ಷಣಶೀಲಮನಸ್ಕೇಂದ್ರ ತೇ ತವೈವ ಬೃಹನ್ಮಹದತಿಪ್ರಭೂತಂ ಶ್ರವೋऽನ್ನಮಸತ್ । ಅಸ್ತಿ । ತದನ್ನಂ ಧೃಷತಾ ಧೃಷ್ಟೇನ ಮನಸಾ ಯುಕ್ತಃ ಸನ್ನಸ್ಮಭ್ಯಮಭಿ ಪ್ರ ಭರ । ಆಭಿಮುಖ್ಯೇನ ಪ್ರಕರ್ಷೇಣ ಸಂಪಾದಯ । ದೇಹೀತ್ಯರ್ಥಃ । ಹೇ ಇಂದ್ರ ಮಾತರೋऽಸ್ಮಾಕಮುತ್ಪಾದನಹೇತುತ್ವಾನ್ಮಾತೃಭೂತಾಃ । ಕಥಾಮಪಾಂ ಮಾತೃತ್ವಂ । ಅದ್ಭ್ಯಃ ಪೃಥಿವೀ ಪೃಥಿವ್ಯಾ ಓಷಧಯ ಇತ್ಯಾದಿಶ್ರುತೇಃ । ತಾದೃಶ್ಯ ಆಪೋ ಜವಸಾ ವೇಗೇನ ವ್ಯರ್ಷಂತು । ವಿವಿಧಂ ಭೂಮಿಂ ಪ್ರತಿ ಗಚ್ಛಂತು । ಕಥಮಾಪೋ ಗಚ್ಛಂತೀತಿ ಚೇತ್ ತದಾಹ । ವೃತ್ರಮಪಾಮಾವರಿತಾರಂ ಶತ್ರುಂ ಮೇಘಂ ಹನಃ । ಜಹಿ । ತಾಡಯ । ತತೋ ಮೇಘಭೇದನೇನೋದಕಾನಿ ವಿಗಚ್ಛಂತು । ಪುನರಪಿ ಸ್ವಃ ಸರ್ವಂ ಭೂತಜಾತಂ ಜಯ ॥

॥ ಪ್ರತಿಪದಾರ್ಥ ॥

**ಹೇ ಧೃಷನ್ಮನಃ**—ಶತ್ರುಗಳನ್ನು ಸೆದೆಬಡಿಯುವ ಎಲೈ ಇಂದ್ರನೇ । **ತೇ**—ನಿನ್ನ । **ಬೃಹತ್**—ಬಹಳವಾದ । **ಶ್ರವಃ ಚಿತ್**—ಅನ್ನವು । **ಅಸತ್**—ಇದೆಯಷ್ಟೆ ಆ ಅನ್ನವನ್ನು । **ಧೃಷತಾ**—ಉತ್ತಮವಾದ ಮನಸ್ಸಿನಿಂದ ನಮ್ಮ । **ಅಭಿ**—ಅಭಿಮುಖವಾಗಿ । **ಪ್ರ ಭರ**—ತಂದೊದಗಿಸು. (ಎಲೈ ಇಂದ್ರನೇ) । **ಮಾತರಃ**—ಮಾತೃವಿನಂತೆ ಪೋಷಕವಾದ । **ಆಪಃ**—ಉದಕಗಳು । **ಜವಸಾ**—ವೇಗವಾಗಿ । **ವಿ ಅರ್ಷಂತು**—ನಾನಾವಿಧರೀತಿಯಿಂದ ಭೂಮಿಯನ್ನು ಆವರಿಸಲಿ । **ವೃತ್ರಂ**—ಉದಕವನ್ನು ತಡೆಗಟ್ಟಿರುವ ಶತ್ರುವಾದ ವೃತ್ರನನ್ನು ಅಥವಾ ಮೇಘವನ್ನು । **ಹನಃ**—ಪ್ರಹರಿಸು (ಮತ್ತು) । **ಸ್ವಃ**—ಸಮಸ್ತಭೂತಜಾತಗಳನ್ನೂ ಎಂದರೆ ಪ್ರಾಣಿಗಳನ್ನು । **ಜಯ**—ಜಯಿಸು ಎಂದರೆ ತೃಪ್ತಿಗೊಳಿಸು.

॥ ಭಾವಾರ್ಥ ॥

ಶತ್ರುಗಳನ್ನು ಸೆದೆಬಡಿಯುವ ಮನಸ್ಸುಳ್ಳ ಎಲೈ ಇಂದ್ರನೇ, ನಿನ್ನಲ್ಲಿರುವ ಬಹಳವಾದ ಅನ್ನವನ್ನು ಉತ್ತಮವಾದ ಮನಸ್ಸಿನಿಂದ ನಮ್ಮ ಅಭಿಮುಖವಾಗಿ ತಂದೊದಗಿಸು. ಮಾತೃವಿನಂತೆ ಪೋಷಕವಾದ ಉದಕಗಳು ವೃಷ್ಟಿರೂಪ

ದಿಂದ ಭೂಮಿಯನ್ನು ವ್ಯಾಪಿಸಲಿ. ವೃಷ್ಟಿಯನ್ನು ಸುರಿಸದಿರುವ ಮೇಘವನ್ನು ಪ್ರಹರಿಸಿ ಸಮಸ್ತಭೂತಜಾತಗಳನ್ನು ತೃಪ್ತಿಗೊಳಿಸು.

English Translation

Daring-souled (Indra), there is abundance of food with you,—boldly bring it to us; let our mothers (the waters) impetuously spread over the earth; smite Vritra, and conquer all.

॥ ಸಂಹಿತಾಪಾಠಃ ॥

ಯಜ್ಜಾಯಥಾ ಅಪೂರ್ವ್ಯ ಮಘವನ್ವೃತ್ರಹತ್ಯಾಯ ।
ತತ್ಪೃಥಿವೀಮಪ್ರಥಯಸ್ತದಸ್ತಭ್ನಾ ಉತ ದ್ಯಾಂ ॥ ೫ ॥

॥ ಪದಪಾಠಃ ॥

ಯತ್ । ಜಾಯಥಾಃ । ಅಪೂರ್ವ್ಯ । ಮಘ್ಽವನ್ । ವೃತ್ರಽಹತ್ಯಾಯ ।
ತತ್ । ಪೃಥಿವೀಂ । ಅಪ್ರಥಯಃ । ತತ್ । ಅಸ್ತಭ್ನಾಃ । ಉತ । ದ್ಯಾಂ ॥ ೫ ॥

॥ ಸಾಯಣಭಾಷ್ಯಂ ॥

ಪ್ರಥಮೇ ಸ್ವರಸಾಮ್ನಿ ನಿಷ್ಕೇವಲ್ಯೇ ಯಜ್ಜಾಯಥಾ ಅಪೂರ್ವ್ಯೇತಿ ಸ್ತೋತ್ರಿಯಃ । ತಥಾ ಸೂತ್ರ್ಯತೇ । ತೇಷಾಂ ಸ್ತೋತ್ರಿಯಾ ಯಜ್ಜಾಯಥಾ ಅಪೂರ್ವ್ಯ । ಆ ೮-೫ । ಇತಿ ॥

ಹೇ ಅಪೂರ್ವ್ಯ ಸ್ವತೋ ವ್ಯತಿರಿಕ್ತೇನ ಪೂರ್ವ್ಯೇಣ ವರ್ಜಿತ ಹೇ ಮಘವನ್ ಮಂಹನೀಯಧನವನ್ನಿಂದ್ರ ವೃತ್ರಹತ್ಯಾಯ ವೃತ್ರಾಸುರಹನನಾಯ ಯದ್ಯದಾ ತ್ವಂ ಜಾಯಥಾಃ ಉತ್ಪನ್ನಃ ಪ್ರಾದುರ್ಭೂತೋಽಸಿ ತತ್ತದಾನೀಮೇವ ಪೃಥಿವೀಂ ಪ್ರಥಮಾನಾಮಪ್ರಥಯಃ । ಪ್ರಸಿದ್ಧಾಂ ದೃಢಾಮಕರೋಃ। ಉತಾಪಿ ಚ ತತ್ತದಾನೀಮೇವ ದ್ಯಾಂ ದ್ಯುಲೋಕಮಂತರಿಕ್ಷೇಣಾಸ್ತಭ್ನಾಃ । ನಿರುದ್ಧಾಮಕಾರ್ಷೀಃ । ಏತಾದೃಶಂ ವೀರ್ಯಂ ತ್ವದನ್ಯಸ್ಯ ನ ಸಂಭವತೀತ್ಯರ್ಥಂ ದ್ಯೋತಯಿತುಮಪೂರ್ವ್ಯೇತಿ ಪದಂ ॥

॥ ಪ್ರತಿಪದಾರ್ಥ ॥

**ಹೇ ಅಪೂರ್ವ್ಯ**—ನಿನಗಿಂತಲೂ ಪುರಾತನದೇವತೆಗಳಿಲ್ಲದ ಅಥವಾ ನಿನಗಿಂತಲೂ ಶ್ರೇಷ್ಠರಿಲ್ಲದ । **ಮಘವನ್**—ಧನವಂತನಾದ ಎಲೈ ಇಂದ್ರನೇ । **ವೃತ್ರಹತ್ಯಾಯ**—ವೃತ್ರಾಸುರನ ವಧಾರ್ಥವಾಗಿ । **ಯತ್**—ಯಾವಾಗ । **ತ್ವಂ**—ನೀನು । **ಜಾಯಥಾಃ**—ಉತ್ಪನ್ನನಾದೆಯೋ । **ತತ್**—ಆಗ । **ಪೃಥಿವೀಂ**—ವಿಸ್ತಾರವಾದ ಈ ಭೂಮಿಯನ್ನು । **ಅಪ್ರಥಯಃ**—ದೃಢವಾಗಿರುವಂತೆ ಮಾಡಿರುತ್ತೀಯೆ । **ಉತ**—ಮತ್ತು । **ತತ್**—ಆ ಕಾಲದಲ್ಲಿಯೇ । **ದ್ಯಾಂ**—ಸ್ವರ್ಗವನ್ನು (ಅಂತರಿಕ್ಷದಿಂದ) । **ಅಸ್ತಭ್ನಾಃ**—ಬೀಳದಂತೆ ದೃಢವಾಗಿ ನಿಲ್ಲಿಸಿರುವೆ.

॥ ಭಾವಾರ್ಥ ॥

ನಿನಗಿಂತಲೂ ಶ್ರೇಷ್ಠರು ಅಥವಾ ಪುರಾತನರಿಲ್ಲದ ಮತ್ತು ಧನವಂತನಾದ ಎಲೈ ಇಂದ್ರನೇ, ವೃತ್ರಾಸುರ ವಧಾರ್ಥವಾಗಿ ಯಾವಾಗ ನೀನು ಉತ್ಪನ್ನನಾದೆಯೋ ಆಗ ವಿಸ್ತಾರವಾದ ಈ ಭೂಮಿಯನ್ನು ದೃಢವಾಗಿರುವಂತೆ ಮಾಡಿರುವೆ ಮತ್ತು ಸ್ವರ್ಗವನ್ನು ಅಂತರಿಕ್ಷದಿಂದ ಕೆಳಕ್ಕೆ ಬೀಳದಂತೆಯೂ ದೃಢವಾಗಿ ನಿಲ್ಲಿಸಿರುವೆ.

English Translation

Maghavan, who had none before you, when you were born for the slaying of Vritra, then you did spread abroad the earth, then you did prop up the heavens.

॥ ವಿಶೇಷವಿಷಯಗಳು ॥

ಪ್ರಥಮಸ್ವರಸಾಮದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳನ್ನು ಪಠಿಸುವಾಗ **ಯಜ್ಞಾಯಥಾ ಅಪೂರ್ವ್ಯ** ಎಂಬ ಈ ಋಕ್ಕನ್ನು ಸ್ತೋತ್ರಿಯಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತೇಷಾಂ ಸ್ತೋತ್ರೀಯಾ ಯಜ್ಞಾಯಥಾ** ಅಪೂರ್ವ್ಯ ಎಂಬ ಸೂತ್ರದಿಂದ (ಆ. ೮-೫) ವಿನ್ಯಸ್ತವಾಗಿರುವುದು.

॥ ಸಂಹಿತಾಪಾಠಃ ॥

ತತ್ತೇ ಯಜ್ಞೋ ಅಜಾಯತ ತದರ್ಕ ಉತ ಹಸ್ಕೃತಿಃ ।
ತದ್ವಿಶ್ವಮಭಿಭೂರಸಿ ಯಜ್ಜಾತಂ ಯಚ್ಚ ಜಂತ್ವಂ ॥ ೬ ॥

॥ ಪದಪಾಠಃ ॥

ತತ್ । ತೇ । ಯಜ್ಞಃ । ಅಜಾಯತ । ತತ್ । ಅರ್ಕಃ । ಉತ । ಹಸ್ಕೃತಿಃ ।
ತತ್ । ವಿಶ್ವಂ । ಅಭಿऽಭೂಃ । ಅಸಿ । ಯತ್ । ಜಾತಂ । ಯತ್ । ಚ । ಜಂತ್ವಂ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಯದ್ಯದಾ ತ್ವಮಜಾಯಥಾಃ ತತ್ತದಾನೀಂ ತೇ ತ್ವದರ್ಥೋ ಯಜ್ಞೋಽಗ್ನಿಷ್ಟೋಮಾದಿರಜಾಯತ । ಸೋಮಪಾನಾರ್ಥಮಭೂತ್ । ಉತಾಪಿ ಚ ತದಾನೀಂ ಹಸ್ಕೃತಿಃ ॥ ಹಸೇ ಹಸನೇ ॥ ಹಾಸಕಾರೀ ಪ್ರೀತ್ಯರ್ಥಂ ಕ್ರಿಯಮಾಣೋ ಹರ್ಷಸ್ಯ ಸೂಚಕೋಽರ್ಕೋಽರ್ಚನೀಯೋ ಮಂತ್ರೋಽಪ್ಯಜಾಯತ । ಕಿಂಚ ತೇದಾ ಯಜ್ಜಾತಂ ಭೂತಜಾತಂ ಯಚ್ಚ ಜಂತ್ವಂ ॥ ಕೃತ್ಯಾರ್ಥೇ ತ್ವನ್ಪ್ರತ್ಯಯಃ ॥ ಜನಿತವ್ಯಂ ಯದ್ವಿಶ್ವಮಸ್ತಿ ತತ್ಸರ್ವಮಭಿಭೂರಸಿ । ಸ್ವಮಹಿಮ್ನಾಭಿಭೂತವಾನಸಿ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ ನೀನು ಯಾವಾಗ ಉತ್ಪನ್ನನಾದೆಯೋ) **ತತ್**—ಆಗ । **ತೇ**—ನಿನ್ನ ಪ್ರೀತ್ಯರ್ಥವಾಗಿಯೇ । **ಯಜ್ಞಃ**—ಅಗ್ನಿಷ್ಟೋಮಾದಿ ಯಜ್ಞವು । **ಅಜಾಯತ**—ಸೋಮಪಾನಾರ್ಥವಾಗಿ ಉಂಟಾಯಿತು । **ಉತ**—ಮತ್ತು । **ಹಸ್ಕೃತಿಃ**—ಹರ್ಷಸೂಚಕವಾದ । **ಅರ್ಕಃ**—ಪೂಜಾಯೋಗ್ಯವಾದ ಮಂತ್ರವೂ ಸಹ ಉತ್ಪನ್ನವಾಯಿತು (ಆಗ) । **ಯಜ್ಜಾತಂ**—ಹಿಂದೆ (ಇದುವರೆಗೆ) ಉತ್ಪನ್ನವಾದ ಪ್ರಾಣಿಗಳೂ । **ಯಚ್ಚ ಜಂತ್ವಂ**—ಮುಂದೆ ಹುಟ್ಟುವ ಪ್ರಾಣಿಗಳು ಯಾವವಿರುವವೋ । **ವಿಶ್ವಂ ತತ್**—ಆ ಸಮಸ್ತ ಭೂತಜಾತಗಳನ್ನೂ । **ಅಭಿಭೂರಸಿ**—ನಿನ್ನ ಮಹಿಮೆಯಿಂದಲೇ ಪರಾಭವಗೊಳಿಸುವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಉತ್ಪನ್ನನಾದಾಗ ನಿನ್ನನ್ನು ಉದ್ದೇಶಿಸಿಯೇ ಎಂದರೆ ನಿನ್ನ ಸೋಮಪಾನಾರ್ಥವಾಗಿಯೇ ಅಗ್ನಿಷ್ಟೋಮಾದಿಯಾಗಗಳೂ ಅವುಗಳನ್ನು ಅನುಷ್ಠಾನಮಾಡುವ ಮಂತ್ರಗಳೂ ಉತ್ಪನ್ನವಾದವು. ಮತ್ತು ಆಗ ಹಿಂದೆಉತ್ಪನ್ನವಾದ ಮತ್ತು ಮುಂದೆ ಉತ್ಪನ್ನವಾಗುವ ಸಕಲ ಜೀವಜಂತುಗಳನ್ನೂ ನೀನು ನಿನ್ನ ಮಹಿಮೆಯಿಂದಲೇ ಪರಾಭವಗೊಳಿಸುತ್ತೀಯೆ.

English Translation

Then was the sacrifice produced for you, then too the joyous hymn; then you surpass all, whatever has been or will be born.

॥ ಸಂಹಿತಾಪಾಠಃ ॥

ಆಮಾಸು ಪಕ್ವಮೈರಯ ಆ ಸೂರ್ಯಂ ರೋಹಯೋ ದಿವಿ ।
ಘರ್ಮಂ ನ ಸಾಮಂತಪತಾ ಸುವೃಕ್ತಿಭಿರ್ಜುಷ್ಟಂ ಗಿರ್ವಣಸೇ ಬೃಹತ್ ॥

॥ ಪದಪಾಠಃ ॥

ಆಮಾಸು । ಪಕ್ವಂ । ಐರಯಃ । ಆ । ಸೂರ್ಯಂ । ರೋಹಯಃ । ದಿವಿ ।
ಘರ್ಮಂ । ನ । ಸಾಮನ್ । ತಪತ । ಸುವೃಕ್ತಿಽಭಿಃ । ಜುಷ್ಟಂ । ಗಿರ್ವಣಸೇ । ಬೃಹತ್ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಆಮಾಸ್ವಪಕ್ವಾಸು ಗೋಷು ಪಕ್ವಂ ಪಯ ಐರಯಃ । ಪ್ರೈರಯಶ್ಚ । ತಥಾ ಮಂತ್ರಃ । ಆಮಾಸು ಚಿದ್ದಧಿಷೇ ಪಕ್ವಮಂತಃ । ಋ. ೧-೬೨-೯ । ಇತಿ । ಕಿಂಚ ದಿವಿ ದ್ಯುಲೋಕೇ ಸೂರ್ಯಮಾ ರೋಹಯಶ್ಚ । ಪೂರ್ವಂ ಪಣಯೋ ನಾಮಾಸುರಾ ಅಂಗಿರಸಾಂ ಗಾ ಅಪಹೃತ್ಯಾಂಧ-

**ಕಾರಾವೃತೇ ಕಸ್ಮಿಂಶ್ಚಿತ್ಪರ್ವತೇ ತಾಃ ಸ್ಥಾಪಿತವಂತಃ । ತತೋಽಂಗಿರಸ ಇಂದ್ರಂ ಸ್ತುತ್ವಾ ಗಾಃ ಪುನ-ರಸ್ಮಭ್ಯಮಾಹರೇತಿ ತೈರುಕ್ತ ಇಂದ್ರೋ ಗವಾಂ ಸ್ಥಾನಂ ತಮಸಾವೃತಂ ದೃಷ್ಟ್ವಾ ತತ್ರ ಗೋದರ್ಶನಾಯ ದ್ಯುಲೋಕೇ ಸರ್ವಪ್ರಕಾಶಕಂ ಸೂರ್ಯಮಾರೋಹಿತವಾನ್ ಸ್ಥಾಪಿತವಾನಸಿ ॥ ಚಾದಿಲೋಪೇ ವಿಭಾಷೇತಿ ಪೂರ್ವಸ್ಯೈರಯ ಇತ್ಯಸ್ಯ ನ ನಿಘಾತಃ ॥ ಅಥ ಪರೋಕ್ಷಕೃತೋಽರ್ಧರ್ಚಃ । ಹೇ ಸ್ತೋತಾರಃ ಸುವೃಕ್ತಿಭಿಃ ಶೋಭನಾಭಿಃ ಸ್ತುತಿಭಿಸ್ತಪತ । ಇಂದ್ರಂ ತೀಕ್ಷ್ಣೀಕುರುತ । ಇಂದ್ರಂ ಸ್ತುತಿಭಿಃ ಪ್ರವರ್ಧ-ಯತೇತ್ಯರ್ಥಃ । ತತ್ರ ದೃಷ್ಟಾಂತಃ । ಘರ್ಮಂ ನ ಯಥಾ ಘರ್ಮಂ ದೀಪನಶೀಲಂ ಪ್ರವರ್ಗ್ಯಂ ಸಾಮನ್ ॥ ಸುಪಾಂ ಸುಲುಗಿತಿ ತೃತೀಯಾಯಾ ಲುಕ್ ॥ ಸಾಮಭಿರ್ಯಥಾ ತಪಂತಿ ತದ್ವತ್ । ತತೋ ಗಿರ್ವಣಸೇ ಗೀರ್ಭಿರ್ವನನೀಯಾಯೇಂದ್ರಾಯ ಜುಷ್ಟಂ ಪ್ರೀತಿಕರಂ ಪರ್ಯಾಪ್ತಂ ವಾ ಬೃಹತ್ಸಾಮ ಗಾಯತ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಆಮಾಸು**—ಆಗತಾನೆ ಕರುವನ್ನು ಹಾಕಿದ ಗೋವುಗಳಲ್ಲಿ । **ಪಕ್ವಂ**—ಸಿದ್ಧವಾದ ಹಾಲನ್ನು । **ಐರಯಃ**—ತುಂಬಿಕೊಳ್ಳುವಂತೆ ಪ್ರೇರಿಸುತ್ತೀಯೆ । **ದಿವಿ**— ಸ್ವರ್ಗದಲ್ಲಿ ಎಂದರೆ ಅಂತರಿಕ್ಷದಲ್ಲಿ । **ಸೂರ್ಯಂ**—ಸೂರ್ಯನನ್ನು । **ಆ ರೋಹಯಃ**—ಸ್ಥಾಪಿಸಿದ್ದೀಯೆ. ಎಲೈ ಸ್ತೋತೃಗಳೇ । **ಸುವೃಕ್ತಿಭಿಃ**—ಉತ್ತಮವಾದ ಸ್ತುತಿವಾಕ್ಯಗಳಿಂದ । **ತಪತ**—ಇಂದ್ರನನ್ನು ಪ್ರಶಂಸೆಮಾಡಿರಿ । **ಘರ್ಮಂ ನ**—ಪ್ರಕಾಶಮಾನವಾದ ಘರ್ಮ ಅಥವಾ ಪ್ರವರ್ಗ್ಯೇಷ್ಟಿಯನ್ನು । **ಸಾಮನ್**—ಸಾಮಗಾನಗಳಿಂದ ಪ್ರಶಂಸೆಮಾಡುವಂತೆ । **ಗಿರ್ವಣಸೇ**—ಸ್ತುತಿವಾಕ್ಯಗಳಿಂದ ಒಲಿಯುವ ಇಂದ್ರನನ್ನುದ್ದೇಶಿಸಿ । **ಜುಷ್ಟಂ**—ಪ್ರಿಯಕರವಾದ । **ಬೃಹತ್**—ಬೃಹತ್ಸಾಮವೆಂಬ ಮಂತ್ರವನ್ನು ಪಠಿಸಿ ಗಾನಮಾಡಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಇದುವರೆವಿಗೂ ಹಾಲನ್ನು ಕೊಡದಿರುವುದೂ, ಈಗತಾನೇ ಕರುವನ್ನು ಹಾಕಿರುವುದೂ ಆದ ಗೋವಿನ ಕೆಚ್ಚಲುಗಳಲ್ಲಿ ಹಾಲು ತುಂಬಿಕೊಳ್ಳುವಂತೆ ಮಾಡುತ್ತೀಯೆ. ಅಂತರಿಕ್ಷದಲ್ಲಿ ಸೂರ್ಯನನ್ನು ಸ್ಥಾಪಿಸಿ ಸರ್ವತ್ರ ಪ್ರಕಾಶಿಸುವಂತೆ ಮಾಡಿದ್ದೀಯೆ. ಎಲೈ ಸ್ತೋತೃಜನರೇ, ಇಂದ್ರನನ್ನು ಸ್ತೋತ್ರಾದಿಗಳಿಂದ ಸ್ತುತಿಸಿ ಮತ್ತು ಘರ್ಮೇಷ್ಟಿಯಲ್ಲಿ ಸಾಮಗಾನದಿಂದ ವೃದ್ಧಿಪಡಿಸುವಂತೆ ಸ್ತುತಿವಾಕ್ಯಗಳಿಗೆ ಮೆಚ್ಚಿ ಒಲಿಯುವ ಇಂದ್ರನನ್ನು ಅವನಿಗೆ ಹಿತಕರವಾದ ಬೃಹತ್ಸಾಮವೆಂಬ ಸಾಮಮಂತ್ರದಿಂದ ಗಾನಮಾಡಿ ಸ್ತುತಿಸಿರಿ

## English Translation

In the immature (cows) you produced the mature (milk), you caused the sun to arise in heaven (Priests), excite (Indra) with your praises as men heat the Gharma with Saman-hymns; (sing) the acceptable Brihat-Saman to him who is to be honoured by song.

॥ ವಿಶೇಷವಿಷಯಗಳು ॥

**ಗಿರ್ವಣಸೇ**—ಈ ಶಬ್ದಕ್ಕೆ ಯಾಸ್ಕರು ಈರೀತಿ ನಿರುಕ್ತವನ್ನು ಹೇಳಿದಾರೆ—**ಗಿರ್ವಣಾ ದೇವೋ ಭವತಿ ಗೀರ್ಭಿರೇನಂ ವನಯಂತಿ । ಜುಷ್ಟಂ ಗಿರ್ವಣಸೇ ಬೃಹತ್ ಇತ್ಯಪಿ ನಿಗಮೋ ಭವತಿ** ॥ (ನಿ. ೬-೧೪) **ಗಿರ್ವಣಾಃ** ಎಂದರೆ ದೇವನು ಸ್ತುತಿವಾಕ್ಯಗಳಿಂದ ಈ ದೇವನನ್ನು ಒಲಿಸಿ ಪಡೆಯುವರು. ಎಂದರೆ ಸ್ತುತಿಗಳಿಗೆ ಮೆಚ್ಚಿ ಸ್ತೋತೃಜನರಿಗೆ ಒಲಿದು ಅವರ ಇಷ್ಟಾರ್ಥಗಳನ್ನು ಪೂರೈಸುವವನಾದ್ದರಿಂದ ಗಿರ್ವಣಾಃ ಎಂದರೆ ದೇವನು ಎಂಬರ್ಥವು ಈ ವಿಷಯದಲ್ಲಿ **ಜುಷ್ಟಂ ಗಿರ್ವಣಸೇ ಬೃಹತ್** ಎಂಬ ಪ್ರಕೃತಋಕ್ಕಿನ ವಾಕ್ಯವೇ ಉದಾಹರಣೆಯಾಗಿರುವುದು ಎಂದು ಹೇಳಿದಾರೆ

[illegible] ಇವರಿಗೂ [illegible] ಎಂದರೆ [illegible] [illegible] ಇಂದ್ರನ [illegible] **ಅವಸಾನು** [illegible] (ನಿ. [illegible]) ಎಂಬ [illegible]

[illegible] ದಿವಿ—[illegible] ಇಂದ್ರನೇ, ನೀನು [illegible] [illegible] ಈ [illegible] [illegible]

> [illegible]

ಪೂರ್ವದಲ್ಲಿ ಪಣಿಗಳೆಂಬ ಅಸುರರು ಅಂಗಿರಾಋಷಿಗಳ ಗೋವುಗಳನ್ನು ಅಪಹರಿಸಿ [illegible] ಗುಹೆಯಲ್ಲಿ ಬಚ್ಚಿಟ್ಟಿದ್ದರು. ಆಗ ಆ ಋಷಿಗಳು ತಮ್ಮ ಗೋವುಗಳನ್ನು [illegible] ಇಂದ್ರನನ್ನು ಪ್ರಾರ್ಥನೆಮಾಡಿ [illegible] ಇಂದ್ರನು ಗೋವುಗಳಿದ್ದ ಸ್ಥಾನವನ್ನು ತಿಳಿದು ಅವುಗಳನ್ನು ಬಿಡಿಸಿ [illegible] ತರುವುದಕ್ಕಾಗಿ ಅಲ್ಲಿ [illegible] ಗಾಢವಾದ ಕತ್ತಲೆಯನ್ನು ದೂರಗಲಾಡಿಸಲು [illegible] ಸೂರ್ಯನನ್ನು ಅಂತರಿಕ್ಷದಲ್ಲಿ ಬೆಳಗುವಂತೆ ಸ್ಥಾಪಿಸಿದನು. ಆ ಸೂರ್ಯನ ಪ್ರಕಾಶದಿಂದ ಗುಹೆಯು [illegible] ಅಲ್ಲಿದ್ದ ಗೋವುಗಳನ್ನು ಬಿಡಿಸಿ ತಂದು ಅಂಗಿರಾಋಷಿಗಳಿಗೆ ಕೊಟ್ಟನೆಂದು ಪೂರ್ವೇತಿಹಾಸದ ವಿಷಯದಲ್ಲಿ ಆ **ಸೂರ್ಯ-ಮಾರೋಹಯೋ ದಿವಿ** ಎಂಬ ವಾಕ್ಯವು ಈ ಋಕ್ಕಿನಲ್ಲಿ ಉಕ್ತವಾಗಿದೆ. ಈ ಇತಿಹಾಸದ ಪ್ರಸ್ತಾಪವು ಋಗ್ವೇದದ ಅನೇಕ ಋಕ್ಕುಗಳಲ್ಲಿ ಅಲ್ಲಲ್ಲಿ ಉಕ್ತವಾಗಿರುವುದು.

## ತೊಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಆ ನೋ ವಿಶ್ವಾಸ್ವಿತಿ ಷಡೃಚಂ ದಶಮಂ ಸೂಕ್ತಂ । ನೃಮೇಧಪುರುಮೇಧಾವೃಷೀ । ವಿಷಮ-ಸಂಖ್ಯಾಕಾ ಬೃಹತ್ಯಃ ಸಮಸಂಖ್ಯಾಕಾಃ ಸತೋಬೃಹತ್ಯಃ । ಇಂದ್ರೋ ದೇವತಾ । ತಥಾ ಚಾನುಕ್ರಾಂತಂ। ಆ ನೋ ವಿಶ್ವಾಸು ಷಡಿತಿ ॥ ಮಹಾವ್ರತೇ ನಿಷ್ಕೇವಲ್ಯೇ ಬಾರ್ಹತತೃಚಾಶೀತಾವೇತತ್ಸೂಕ್ತಂ । ಸೂತ್ರ್ಯತೇ ಹಿ ಪಂಚಮಾರಣ್ಯಕೇ । ಆ ನೋ ವಿಶ್ವಾಸು ಹವ್ಯೋ ಯಾ ಇಂದ್ರ ಭುಜ ಆಭರಃ । ಐ ಆ. ೫-೨ ೪ । ಇತಿ ॥**

ಅನುವಾದವು— **ಆ ನೋ ವಿಶ್ವಾಸು** ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ನೃಮೇಧ ಮತ್ತು ಪುರುಮೇಧ ಎಂಬಿಬ್ಬರೂ ಋಷಿಗಳು ಇಂದ್ರನು ದೇವತೆಯು, ಈ ಸೂಕ್ತದ ವಿಷಮಸಂಖ್ಯೆಯ ಋಕ್ಕುಗಳು ಬೃಹತೀಛಂದಸ್ಕವು, ಸಮ ಸಂಖ್ಯೆಯ ಋಕ್ಕುಗಳು ಸತೋಬೃಹತೀಛಂದಸ್ಕವು ಅನುಕ್ರಮಣಿಕೆಯಲ್ಲಿ— **ಆ ನೋ ವಿಶ್ವಾಸು ಷಟ್** ಎಂದು ಹೇಳಿರುವುದು ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರ ಮಂತ್ರಪಠನಕಾಲದಲ್ಲಿ ಬೃಹತೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ— **ಆ ನೋ ವಿಶ್ವಾಸು ಹವ್ಯೋ ಯಾ ಇಂದ್ರ ಭುಜ ಆಭರಃ** ಎಂಬ ವಾಕ್ಯದಿಂದ (ಐ ಆ. ೫-೨-೪) ನಿರ್ದಿಷ್ಟವಾಗಿರುವುದು

### ಸೂಕ್ತ—೯೦

ಮಂಡಲ—೮ । ಅನುವಾಕ—೯ । ಸೂಕ್ತ—೯೦ ॥
ಅಷ್ಟಕ—೬ । ಅಧ್ಯಾಯ—೬ । ವರ್ಗ—೧೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷೀ—ನೃಮೇಧಪುರುಮೇಧೌ ॥
ದೇವತಾ—ಇಂದ್ರಃ ॥
ಛಂದಃ—ಪ್ರಗಾಥಂ (ಅಯುಜಃ ಬೃಹತ್ಯಃ ಯುಜಃ ಸತೋಬೃಹತ್ಯಃ) ॥

॥ ಸಂಹಿತಾಪಾಠಃ ॥

**ಆ ನೋ ವಿಶ್ವಾಸು ಹವ್ಯ ಇಂದ್ರಃ ಸಮತ್ಸು ಭೂಷತು ।**
**ಉಪ ಬ್ರಹ್ಮಾಣಿ ಸವನಾನಿ ವೃತ್ರಹಾ ಪರಮಜ್ಯಾ ಋಚೀಷಮಃ ॥ ೧ ॥**

॥ ಪದಪಾಠಃ ॥

**ಆ । ನಃ । ವಿಶ್ವಾಸು । ಹವ್ಯಃ । ಇಂದ್ರಃ । ಸಮತ್ಽಸು ಭೂಷತು ।**
**ಉಪ । ಬ್ರಹ್ಮಾಣಿ । ಸವನಾನಿ । ವೃತ್ರಽಹಾ । ಪರಮಽಜ್ಯಾಃ । ಋಚೀಷಮಃ ॥ ೧ ॥**

॥ ಸಾಯಣಭಾಷ್ಯಂ ॥

**ಋಷಿರನಯೇಂದ್ರ ಏವಂ ಕರೋತ್ವಿತ್ಯಾಶಾಸ್ತೇ । ವಿಶ್ವಾಸು ಸರ್ವಾಸು ಸಮತ್ಸ್ವಸುರಯುದ್ಧೇಷು ಹವ್ಯಃ । ಸರ್ವೈರ್ದೇವೈರಾತ್ಮರಕ್ಷಣಾರ್ಥಮಾಹ್ವಾತವ್ಯಃ ಏತಾದೃಶ ಇಂದ್ರೋ ನೋಽಸ್ಮಾಕಂ ಬ್ರಹ್ಮಾಣಿ ಸ್ತೋತ್ರಾಣಿ ಹವೀರೂಪಾಣ್ಯನ್ನಾನಿ ವೋಪಾ ಭೂಷತು । ಉದಕಮನುಭಾವಯತು । ಸೇವತಾಮಿತ್ಯರ್ಥಃ । ಯದ್ವಾ । ಏತಾನ್ಯಲಂಕರೋತು । ತದಾಗಮನೇನ ಸ್ತೋತ್ರಾಣಿ ಹವೀಂಷಿ ವಾಲಂಕೃತಾನಿ ಭವಂತಿ । ತಥಾ ಸವನಾನಿ ಪ್ರಾತಃಸವನಾದೀನಿ ತ್ರೀಣಿ ಸವನಾನಿ ಚ ಭೂಷತು । ಕೀದೃಶ ಇಂದ್ರಃ । ವೃತ್ರಹಾ ವೃತ್ರಸ್ಯಾಸುರಸ್ಯ ಪಾಪಸ್ಯ ವಾ ಹಂತಾ ಪರಮಜ್ಯಾಃ । ಯುದ್ಧೇಷು ಶತ್ರುಹನನಾರ್ಥಂ ಪರಮಾವಿನಶ್ವರೀ ಜ್ಯಾ ಮೌರ್ವೀ ಯಸ್ಯ ಸ ತಥೋಕ್ತಃ । ಯದ್ವಾ । ಪರಮಾನ್ಬಲೇನ ಪ್ರಕೃಷ್ಟಾಞ್ಶತ್ರೂಞ್ಜ್ಯಿನಾತಿ ಹಿನಸ್ತೀತಿ ಪರಮಜ್ಯಾಃ । ಋಚೀಷಮಃ ಸ್ತುತ್ಯಾ ಸಮಃ ಸ್ತುತಿಭಿರಭಿಮುಖೀಕರಣೀಯಃ । ಏತಾದೃಗಿಂದ್ರಃ ಸ್ತೋತ್ರಾಣಿ ಭೂಷತ್ವಿತಿ ॥**

॥ ಪ್ರತಿಪದಾರ್ಥ ॥

**ವಿಶ್ವಾಸು**—ಸಮಸ್ತವಾದ । **ಸಮತ್ಸು**—ಅಸುರರೊಡನೆ ಮಾಡುವ ಯುದ್ಧಗಳಲ್ಲಿ । **ಹವ್ಯಃ**—ರಕ್ಷಣಾರ್ಥವಾಗಿ ಪ್ರಾರ್ಥಿಸಿ ಕರೆಯಲ್ಪಡುವವನೂ । **ವೃತ್ರಹಾ**—ವೃತ್ರಹಂತಕನೂ ಅಥವಾ ಪಾಪಪರಿಹಾರಕನೂ । **ಪರಮಜ್ಯಾಃ**—ನಾಶರಹಿತವಾದ ಧನುಸ್ಸಿನ ಹೆದೆಯುಳ್ಳವನೂ । **ಋಚೀಷಮಃ**—ಸ್ತುತಿಗಳಿಂದ ಅಭಿಮುಖನಾಗತಕ್ಕವನೂ ಆದ । **ಇಂದ್ರಃ**—ಇಂದ್ರನು । **ನಃ**—ನಮ್ಮ । **ಬ್ರಹ್ಮಾಣಿ**—ಸ್ತೋತ್ರಗಳನ್ನು ಅಥವಾ ಹವಿಸ್ಸಿನರೂಪವಾದ ಅನ್ನಗಳನ್ನು । **ಉಪ ಆಭೂಷತು**—ಸೇವಿಸಲಿ (ಅಥವಾ ಅಲಂಕರಿಸಲಿ) । **ಸವನಾನಿ**—ಪ್ರಾತಃಸವನಾದಿ ಸವನತ್ರಯಗಳನ್ನೂ ಸೇವಿಸಲಿ.

॥ ಭಾವಾರ್ಥ ॥

ಅಸುರರೊಡನೆ ನಡೆಯುವ ಸಮಸ್ತಯುದ್ಧಗಳಲ್ಲಿಯೂ ರಕ್ಷಣಾರ್ಥವಾಗಿ ಪ್ರಾರ್ಥಿಸಿ ಕರೆಯಲ್ಪಡುವವನೂ ವೃತ್ರಾಸುರಹಂತಕನೂ, ನಾಶರಹಿತವಾದ ಧನುಸ್ಸಿನ ಹೆದೆಯುಳ್ಳವನೂ, ಸ್ತುತಿಗಳಿಂದ ಪ್ರತ್ಯಕ್ಷನಾಗತಕ್ಕವನೂ ಆದ ಇಂದ್ರನು ನಮ್ಮ ಸ್ತೋತ್ರಗಳನ್ನು, ಸವನತ್ರಯಗಳನ್ನು ಅಲಂಕರಿಸಲಿ ಎಂದರೆ ಸೇವಿಸಲಿ.

English Translation

May Indra, who is to be invoked in all battles, regard our hymns and our libations,—he, the slayer of Vritra, who crushes the mightiest (foes), who is worthy of his praise.

॥ ವಿಶೇಷವಿಷಯಗಳು ॥

**ಉಪ ಆ ಭೂಷತು—ಏತಾನ್ಯಲಂಕರೋತು । ತದಾಗಮನೇನ ಸ್ತೋತ್ರಾಣಿ ಹವೀಂಷಿ ವಾಲಂಕೃತಾನಿ ಭವಂತಿ । ಸೇವತಾಮಿತ್ಯರ್ಥಃ ॥** ಇಂದ್ರನು ಯಜಮಾನನ ಯಜ್ಞಭೂಮಿಗೆ ಬಂದಾಗ ಅವನ ಸಂನಿಧಿಯಿಂದ ಸ್ತೋತ್ರಗಳು, ಹವಿಸ್ಸುಗಳು ಸವನತ್ರಯಗಳೂ ಮೊದಲಾದ ಯಜ್ಞಾಂಗಕರ್ಮಗಳೆಲ್ಲಕ್ಕೂ

ಒಂದುವಿಧವಾದ ಕಳೆಯು ಉಂಟಾಗಿ ಅಲಂಕರಿಸಿದಂತೆ ಕಾಣುವವು. ಎಂದರೆ ಅವುಗಳನ್ನು ಇಂದ್ರನು ಆದರದಿಂದ ಸ್ವೀಕರಿಸಲಿ ಎಂಬ ಆಶಂಸನೆಯನ್ನು ಋಷಿಯು ವ್ಯಕ್ತಪಡಿಸಿದಾನೆ

**ಪರಮಜ್ಯಾಃ—ಯುದ್ಧೇಷು ಶತ್ರುಹನನಾರ್ಥಂ ಪರಮವಿನಶ್ವರೀ ಜ್ಯಾ ಮೌರ್ವೀ ಯಸ್ಯ ಸ ತಥೋಕ್ತಃ ಯದ್ವಾ ಪರಮಾನ್ ಬಲೀನ ಪ್ರಕೃಷ್ಟಾನ್ ಶತ್ರೂನ್ ಜಿನಾತಿ ಹಿನಸ್ತೀತಿ ಪರಮಜ್ಯಾಃ ।** ಈ ಶಬ್ದಕ್ಕೆ ಎರಡುವಿಧ ಅರ್ಥಗಳನ್ನು ಹೇಳಿದಾರೆ. ಯುದ್ಧಗಳಲ್ಲಿ ಶತ್ರುವಧಾರ್ಥವಾಗಿ ಉಪಯೋಗಿಸುವ ಇಂದ್ರನ ಧನುಸ್ಸಿನ ಹೆದೆಯು (ಹಗ್ಗವು) ನಾಶವಿಲ್ಲದ್ದೂ ಎಂದರೆ ಕಿತ್ತುಹೋಗದೆ ಬಹಳಕಾಲ ಬಾಳಿಕೆಬರುವುದಾಗಿರುವುದು. ಇಂತಹ ಹೆದೆಯನ್ನುಳ್ಳ ಇಂದ್ರನೆಂದು ಒಂದುವಿಧವಾದ ಅರ್ಥವು , ಅಥವಾ ಇಂದ್ರನು ತನ್ನ ಶ್ರೇಷ್ಠವಾದ ಬಲದಿಂದ ಶಕ್ತಿಯುತರಾದ ಶತ್ರುಗಳನ್ನು ಹಿಂಸಿಸುವವನು ಎಂದು ಇನ್ನೊಂದುವಿಧವಾದ ಅರ್ಥವು

**ಋಚೀಷಮಃ—ಸ್ತುತ್ಯಾ ಸಮಃ ಸ್ತುತಿಭಿರಭಿಮುಖೀಕರಣೀಯಃ ।** ಇಂದ್ರನು ಪ್ರಸನ್ನನಾಗ ಬೇಕಾದರೆ ಅವನನ್ನು ಸ್ತೋತ್ರಾದಿಗಳಿಂದ ಸ್ತುತಿಸಿದರೆ ಮಾತ್ರ ಅವನು ಸ್ತೋತೃಜನರ ಅಭಿಮುಖವಾಗಿ ಪ್ರತ್ಯಕ್ಷ ನಾಗುವನು ಇಂತಹ ಇಂದ್ರನು ಎಂದಭಿಪ್ರಾಯವು

॥ ಸಂಹಿತಾಪಾಠಃ ॥

ತ್ವಂ ದಾತಾ ಪ್ರಥಮೋ ರಾಧಸಾಮಸ್ಯಸಿ ಸತ್ಯ ಈಶಾನಕೃತ್ ।
ತುವಿದ್ಯುಮ್ನಸ್ಯ ಯುಜ್ಯಾ ವೃಣೀಮಹೇ ಪುತ್ರಸ್ಯ ಶವಸೋ ಮಹಃ ॥ ೨ ॥

॥ ಪದಪಾಠಃ ॥

ತ್ವಂ । ದಾತಾ । ಪ್ರಥಮಃ । ರಾಧಸಾಂ । ಅಸಿ । ಅಸಿ । ಸತ್ಯಃ । ಈಶಾನಽಕೃತ್ ।
ತುವಿಽದ್ಯುಮ್ನಸ್ಯ । ಯುಜ್ಯಾ । ಆ । ವೃಣೀಮಹೇ । ಪುತ್ರಸ್ಯ । ಶವಸಃ । ಮಹಃ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಪ್ರಥಮಃ ಸರ್ವೇಷಾಂ ಮುಖ್ಯಸ್ತ್ವಂ ರಾಧಸಾಂ ಧನಾನಾಂ ದಾತಾಸಿ । ಯದ್ವಾ । ಧನದಾತೄಣಾಂ ಮಧ್ಯೇ ತ್ವಂ ಪ್ರಥಮಃ ಆದಿಮೋ ಭವಸಿ । ತಥೇಶಾನಕೃತ್ತ್ವಮ ಸ್ತೋತೄನೀಶಾನಾ. ನೈಶ್ವರ್ಯಯುಕ್ತಾನ್ । ಕುರ್ವಂಸ್ತ್ವಂ ಸತ್ಯಃ ಸತ್ಯಕರ್ಮಾಸಿ । ಯಥಾರ್ಥಕರ್ಮಾ ಭವಸೀತ್ಯರ್ಥಃ । ಯಸ್ಮಾದೇವಂ ತಸ್ಮಾದ್ವಯಂ ತುವಿದ್ಯುಮ್ನಸ್ಯ ಬಹುಧನವತೋ ಬಹ್ವನ್ನಸ್ಯ ವಾ ಶವಸೋ ಬಲಸ್ಯ ಪುತ್ರಸ್ಯ ಶತ್ರುವಧಾರ್ಥಂ ಬಲಕಾರಣತ್ವೇನೋತ್ಪನ್ನತ್ವಾತ್ತತ್ಪುತ್ರಸ್ಯ ಅತ ಏವ ಮಹೋ ಮಹತಸ್ತವ ಯುಜ್ಯಾ ಯೋಗ್ಯಾನಿ ಧನಾನ್ಯಾ ವೃಣೀಮಹೇ । ಸಂಭಜಾಮಹೇ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಪ್ರಥಮಃ**— ಸರ್ವರಿಗೂ ಮುಖ್ಯನಾದ । **ತ್ವಂ**— ನೀನು । **ರಾಧಸಾಂ**— ಧನಗಳನ್ನು । **ದಾತಾ ಅಸಿ**— ಕೊಡುವವನಾಗಿದ್ದೀಯೆ ಅಥವಾ । **ತ್ವಂ**— ನೀನು । **ರಾಧಸಾಂ**— ಧನದಾತೃಗಳ ಮಧ್ಯದಲ್ಲಿ । **ಪಥಮಃ ದಾತಾ ಅಸಿ**— ಉತ್ತಮದಾನಪ್ರದನಾಗಿದ್ದೀಯೆ ಹಾಗೆಯೇ । **ಈಶಾನಕೃತ್**— ನಿನ್ನನ್ನು ಸ್ತೋತ್ರ ಮಾಡುವ ಜನರನ್ನು ಐಶ್ವರ್ಯಯುಕ್ತರಾಗುವಂತೆ ಮಾಡುವ ನೀನು । **ಸತ್ಯಃ ಅಸಿ**— ಸತ್ಯಕರ್ಮಗಳ ಕರ್ತ ನಾಗಿದ್ದೀಯೆ (ಆದ್ದರಿಂದ ನಾವು) । **ತುವಿದ್ಯುಮ್ನಸ್ಯ**— ಪ್ರಭೂತವಾದ ಧನವುಳ್ಳವನೂ । **ಶವಸಃ ಪುತ್ರಸ್ಯ**— ಶತ್ರುವಧಾರ್ಥವಾಗಿ ಶಕ್ತಿಯುತನಾಗಿ ಉತ್ಪನ್ನನಾಗಿರುವ । **ಮಹಃ**— ಮಹತ್ಸ್ವರೂಪನಾದ ನಿನ್ನ ಅಥವಾ ನಿನ್ನಿಂದ। **ಯುಜ್ಯಾ**— ಯೋಗ್ಯವಾದ ಧನಗಳನ್ನು । **ಆ ವೃಣೀಮಹೇ**— ಯಾಚಿಸುತ್ತೇವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಧನದಾತೃಗಳಲ್ಲೆಲ್ಲಾ ಶ್ರೇಷ್ಠನಾದ ದಾನಿಯಾಗಿದ್ದೀಯೆ ಸ್ತೋತ್ರಮಾಡುವ ಜನರಿಗೆ ಐಶ್ವರ್ಯವನ್ನು ಕೊಟ್ಟು ಸಲಹುವ ನೀನು ಸತ್ಯಕರ್ಮಗಳನ್ನೇ ಮಾಡುತ್ತೀಯೆ. ಆದ್ದರಿಂದ ನಾವು ಬಹುಧನವುಳ್ಳವನೂ ಶತ್ರುವಧಾರ್ಥವಾಗಿ ಶಕ್ತಿಯುತನಾಗಿ ಉತ್ಪನ್ನನಾದವನೂ ಮಹತ್ಸ್ವರೂಪನೂ ಆದ ನಿನ್ನಿಂದ ಯೋಗ್ಯವಾದ ಎಂದರೆ ಅನುಭವಯೋಗ್ಯವಾದ ಧನಗಳನ್ನು ಯಾಚಿಸುತ್ತೇವೆ.

## English Translation

You are the chief giver of wealth, you are truthful and make your worshippers rulers; we solicit (blessings) worthy of you, lord of vast riches, mighty son of strength

॥ ಸಂಹಿತಾಪಾಠಃ ॥

ಬ್ರಹ್ಮಾ ತ ಇಂದ್ರ ಗಿರ್ವಣಃ ಕ್ರಿಯಂತೇ ಅನತಿದ್ಭುತಾ ।
ಇಮಾ ಜುಷಸ್ವ ಹರ್ಯಶ್ವ ಯೋಜನೇಂದ್ರ ಯಾ ತೇ ಅಮನ್ಮಹಿ ॥ ೩ ॥

॥ ಪದಪಾಠಃ ॥

ಬ್ರಹ್ಮ । ತೇ । ಇಂದ್ರ । ಗಿರ್ವಣಃ । ಕ್ರಿಯಂತೇ । ಅನತಿಽದ್ಭುತಾ ।
ಇಮಾ । ಜುಷಸ್ವ । ಹರಿಽಅಶ್ವ । ಯೋಜನಾ । ಇಂದ್ರ । ಯಾ । ತೇ । ಅಮನ್ಮಹಿ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಗಿರ್ವಣೋ ಗೀರ್ಭಿರ್ವನನೀಯೇಂದ್ರ ಅನತಿದ್ಭುತಾ । ಸರ್ವಾನತಿಕ್ರಮ್ಯ ನ ಭವಂತಿ । ಇಂದ್ರಗುಣವ್ಯಾಪಕಾನಿ । ಯಥಾರ್ಥಭೂತಾನೀತ್ಯರ್ಥಃ । ತಾದೃಶಾನಿ ಯಾನಿ ಬ್ರಹ್ಮಾಣಿ ಸ್ತೋತ್ರಾಣಿ**

ತೇ ತ್ವದರ್ಥಮಸ್ಮಾಭಿಃ ಕ್ರಿಯಂತೇ ಹೇ ಹರ್ಯಶ್ವ ಹರಿತಾಶ್ವವನ್ ಹೇ ಇಂದ್ರ ಯೋಜನಾನಿ ತವ ಸಮ್ಯಗ್ಯೋಜನಶೀಲಾನಿ ತಾನೀಮೇಮಾನಿ ಸ್ತೋತ್ರಾಣಿ ಜುಷಸ್ವ । ಸೇವಸ್ವ । ಕಿಂಚ ಹೇ ಇಂದ್ರ ತೇ ತ್ವದರ್ಥಂ ಯಾ ಯಾನಿ ಸ್ತೋತ್ರಾಣ್ಯಮನ್ಮಹಿ ವಯಮುಚ್ಚರಾಮಃ ತಾನಿ ಸರ್ವಾಣಿ ಸೇವಸ್ವ ॥

॥ ಪ್ರತಿಪದಾರ್ಥ ॥

**ಹೇ ಗಿರ್ವಣಃ**—ದೇವತಾತ್ಮನಾದ। **ಇಂದ್ರ**—ಎಲೈ ಇಂದ್ರನೇ । **ಅನತಿದ್ಭುತಾ**—ಇಂದ್ರನ ಗುಣಗಳನ್ನೇ ವರ್ಣಿಸುವ । **ಬ್ರಹ್ಮ**—ಸ್ತೋತ್ರಗಳು । **ತೇ**—ನಿನ್ನನ್ನುದ್ದೇಶಿಸಿ । **ಕ್ರಿಯಂತೇ**—ನಮ್ಮಿಂದ ಮಾಡಲ್ಪಡುತ್ತವೆ । **ಹರ್ಯಶ್ವ**—ಹರಿನಾಮಕ ಅಶ್ವಯುಕ್ತನಾದ ಎಲೈ ಇಂದ್ರನೇ । **ಯೋಜನಾ**—ನಿನಗೆ ಯೋಗ್ಯವಾದ । **ಯಾ**—ಯಾವ ಸ್ತೋತ್ರಗಳನ್ನು । **ತೇ**—ನಿನಗಾಗಿ । **ಅಮನ್ಮಹಿ**—ನಾವು ಪಠಿಸುವೆವೋ । **ಇಮಾ**—ಅಂತಹ ಸ್ತೋತ್ರಗಳನ್ನು । **ಇಂದ್ರ**—ಎಲೈ ಇಂದ್ರನೇ । **ಜುಷಸ್ವ**—ಸೇವಿಸು.

॥ ಭಾವಾರ್ಥ ॥

ದೇವತಾತ್ಮನಾದ ಎಲೈ ಇಂದ್ರನೇ, ನಿನ್ನ ಗುಣಗಳನ್ನೇ ವರ್ಣಿಸುವ ಸ್ತೋತ್ರಗಳು ನಿನ್ನನ್ನುದ್ದೇಶಿಸಿ ನಮ್ಮಿಂದ ನಿರ್ಮಿಸಲ್ಪಡುತ್ತವೆ. ಹರಿನಾಮಕ ಅಶ್ವಗಳುಳ್ಳ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ನಿನ್ನ ಘನತೆಗೆ ಯೋಗ್ಯವಾದ ಯಾವ ಸ್ತೋತ್ರಗಳನ್ನು ನಾವು ಪಠಿಸುವೆವೋ ಅಂತಹ ಸ್ತೋತ್ರಗಳನ್ನು ಸೇವಿಸು

English Translation

Indra, who are the object of hymns, unexaggerated praises are offered by us ; lord of bay steeds, accept these fitting hymns, which we have meditated for you.

॥ ಸಂಹಿತಾಪಾಠಃ ॥

ತ್ವಂ ಹಿ ಸತ್ಯೋ ಮಘವನ್ನನಾನತೋ ವೃತ್ರಾ ಭೂರಿ ನ್ಯೃಂಜಸೇ ।
ಸ ತ್ವಂ ಶವಿಷ್ಠ ವಜ್ರಹಸ್ತ ದಾಶುಷೇಽರ್ವಾಂಚಂ ರಯಿಮಾ ಕೃಧಿ ॥ ೪ ॥

॥ ಪದಪಾಠಃ ॥

ತ್ವಂ । ಹಿ । ಸತ್ಯಃ । ಮಘಽವನ್ । ಅನಾನತಃ । ವೃತ್ರಾ । ಭೂರಿ । ನಿಽಋಂಜಸೇ ।
ಸಃ । ತ್ವಂ । ಶವಿಷ್ಠ । ವಜ್ರಽಹಸ್ತ । ದಾಶುಷೇ । ಅರ್ವಾಂಚಂ । ರಯಿಂ । ಆ । ಕೃಧಿ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಮಘವನ್ ಧನವನ್ನಿಂದ್ರ ಸತ್ಯಃ ಸತ್ಯಕರ್ಮಾ ತ್ವಮೇವಾನಾನತಃ ಕೇಷಾಮಪ್ಯ-ಪ್ರಹ್ವಃ ಸನ್ ಭೂರಿ ಭೂರೀಣಿ ವೃತ್ರಾಣಿ ರಕ್ಷಾಂಸಿ ನ್ಯೃಂಜಸೇ । ತಾನಿ ಪ್ರಹ್ವೀಭಾವಯಸಿ । ನ್ಯಕ್ಕರೋ-ಷೀತ್ಯರ್ಥಃ । ಹಿರವಧಾರಣೇ । ಹೇ ಶವಿಷ್ಠ ಬಲೇನ ವೃದ್ಧತಮ ಹೇ ವಜ್ರಹಸ್ತ । ವಜ್ರೋ ಹಸ್ತೇ ಯಸ್ಯ ಸ ತಥೋಕ್ತಃ । ಹೇ ಇಂದ್ರ ಸ ತಾದೃಶಸ್ತ್ವಂ ದಾಶುಷೇ ತುಭ್ಯಂ ಹವಿರ್ದತ್ತವತೇ ಯಜಮಾ-ನಾಯ ರಯಿಂ ಧನಾದಿಕಮರ್ವಾಂಚಮರ್ವಾಚೀನಮಭಿಮುಖಂ ಯಥಾ ಗಚ್ಛತಿ ತಥಾ ತಮಾ ಕೃಧಿ । ಸಮಂತಾತ್ಕುರು ॥**

॥ ಪ್ರತಿಪದಾರ್ಥ ॥

**ಹೇ ಮಘವನ್**—ಧನವಂತನಾದ ಎಲೈ ಇಂದ್ರನೇ । **ಸತ್ಯಃ**—ಸತ್ಯಕರ್ಮಕರ್ತನಾದ । **ತ್ವಂ**—ನೀನು । **ಅನಾನತಃ**—ಯಾರಿಂದಲೂ ಬಗ್ಗಿಸಲ್ಪಡದೆ ಎಂದರೆ ಸೋಲಿಸಲ್ಪಡದೆ ಇದ್ದರೂ । **ಭೂರಿ ವೃತ್ರಾಣಿ**—ಅನೇಕ ರಾಕ್ಷಸರನ್ನು । **ನ್ಯೃಂಜಸೇ**—ನಿನ್ನ ಪಾದಾಕ್ರಾಂತರನ್ನಾಗಿ ಮಾಡುತ್ತೀಯೆ । **ಹೇ ಶವಿಷ್ಠ**-ಅತ್ಯಂತ ಬಲಶಾಲಿಯೂ। **ವಜ್ರಹಸ್ತ**—ವಜ್ರಾಯುಧಧಾರಿಯೂ ಆದ ಎಲೈ ಇಂದ್ರನೇ । **ಸಃ ತ್ವಂ**—ಅಂತಹ ನೀನು । **ದಾಶುಷೇ**—ಹವಿಸ್ಸನ್ನರ್ಪಿಸುವ ಯಜಮಾನನಿಗೆ । **ರಯಿಂ**—ಧನಾದಿಗಳು । **ಅರ್ವಾಂಚಂ**—ಅವನ ಅಭಿಮುಖವಾಗಿ ಪ್ರಾಪ್ತವಾಗುವಂತೆ । **ಆ ಕೃಧಿ**—ಮಾಡು.

॥ ಭಾವಾರ್ಥ ॥

ಧನವಂತನಾದ ಎಲೈ ಇಂದ್ರನೇ, ಸತ್ಯಕರ್ಮಕರ್ತನಾದ ನೀನು ಯಾರಿಂದಲೂ ತಗ್ಗಿಸಲ್ಪಡದಿದ್ದರೂ ನೀನು ಮಾತ್ರ ಅನೇಕ ರಾಕ್ಷಸರನ್ನು ನಿನಗೆ ತಗ್ಗುವಂತೆ ಮಾಡುತ್ತೀಯೆ. ಅತ್ಯಂತ ಬಲಶಾಲಿಯೂ, ವಜ್ರಾಯುಧಧಾರಿಯೂ ಆದ ಎಲೈ ಇಂದ್ರನೇ, ಇಂತಹ ಪರಾಕ್ರಮಿಯಾದ ನೀನು ನಿನಗೆ ಹವಿಸ್ಸನ್ನರ್ಪಿಸುವ ಯಜಮಾನನ ಅಭಿಮುಖವಾಗಿ ಧನಾದಿಗಳು ಹೋಗಿ ಸೇರುವಂತೆ ಮಾಡು.

## English Translation

You are truthful, Maghavan; unhumbled yourself, you humble many enemies; most mighty thunderer, cause wealth to meet your worshipper

॥ ಸಂಹಿತಾಪಾಠಃ ॥

ತ್ವಮಿಂದ್ರ ಯಶಾ ಅಸ್ಯೃಜೀಷೀ ಶವಸಸ್ಪತೇ ।
ತ್ವಂ ವೃತ್ರಾಣಿ ಹಂಸ್ಯಪ್ರತೀನ್ಯೇಕ ಇದನುತ್ತಾ ಚರ್ಷಣೀಧೃತಾ ॥ ೫ ॥

॥ ಪದಪಾಠಃ ॥

ತ್ವಂ । ಇಂದ್ರ । ಯಶಾಃ । ಅಸಿ । ಋಜೀಷೀ । ಶವಸಃ । ಪತೇ ।

ತ್ವಂ । ವೃತ್ರಾಣಿ । ಹಂಸಿ । ಅಪ್ರತೀನಿ । ಏಕಃ । ಇತ್ । ಅನುತ್ತಾ । ಚರ್ಷಣಿಽಧೃತಾ ॥ ೫ ॥

। ಸಾಯಣಭಾಷ್ಯಂ ।

ಚಾತುರ್ವಿಂಶಿಕೇಽಹನಿ ಮಾಧ್ಯಂದಿನಸವನೇ ಬ್ರಾಹ್ಮಣಾಚ್ಛಂಸಿಶಸ್ತ್ರೇ ತ್ವಮಿಂದ್ರ ಯಶಾ ಅಸೀತಿ ಪ್ರಗಾಥೋ ವೈಕಲ್ಪಿಕೋಽನುರೂಪಃ । ಸೂತ್ರ್ಯತೇ ಹಿ । ತ್ವಮಿಂದ್ರ ಯಶಾ ಅಸೀಂದ್ರ ಕ್ರತುಂ ನ ಆ ಭರ । ಆ. ೭-೪ । ಇತಿ ॥

ಹೇ ಶವಸಸ್ಪತೇ ಬಲಸ್ಯ ಪಾಲಯಿತರ್ಹೇ ಇಂದ್ರ ಋಜೀಷೀ । ಋಜೀಷ ಉಪಾ-ರ್ಜಿತೋಽಭಿಷುತಃ ಸೋಮಃ । ತದ್ವಾಂಸ್ತ್ವಂ ಯಶಾ ಯಶಸ್ವ್ಯಸಿ । ಕಥಮಸ್ಯ ಯಶಸ್ವಿತ್ವಂ ತದಾಹ । ಅಪ್ರತೀನಿ ಬಲಿಭಿರಪ್ಯಪ್ರತಿಗತಾನಿ ಅತ ಏವಾನುತ್ತಾನ್ಯನ್ಯೈರ್ನೋತ್ತುಮಶಕ್ಯಾನಿ ವೃತ್ರಾಣಿ ರಕ್ಷಾಂಸಿ ತ್ವಮೇಕ ಇದಸಹಾಯ ಏವ ಚರ್ಷಣೀಧೃತಾಸುರಾದಿಹನನದ್ವಾರೇಣ ಮನುಷ್ಯಾಣಾಂ ಧಾರಕೇಣ ವಜ್ರೇಣ ಹಂಸಿ । ಸಂಪ್ರಹರಸಿ । ಅತ ಏವಾಸ್ಯ ಯಶಸ್ವಿತ್ವಂ ॥

॥ ಪ್ರತಿಪದಾರ್ಥ ॥

**ಶವಸಸ್ಪತೇ**—ಶಕ್ತಿಗೆ ಪಾಲಕನಾದ । **ಇಂದ್ರ**—ಎಲೈ ಇಂದ್ರನೇ । **ಋಜೀಷೀ**—ಋಜೀಷವೆಂಬ ಒಂದಾವರ್ತಿ ಅಭಿಷುತವಾದ ಲತೆಗಳಿಂದ ಮತ್ತೆ ತೆಗೆದ ಸೋಮವನ್ನು ಇಚ್ಛಿಸುವ । **ತ್ವಂ**—ನೀನು । **ಯಶಾಃ ಅಸಿ**—ಕೀರ್ತಿಶಾಲಿಯಾಗಿದ್ದೀಯೆ । **ಅಪ್ರತೀನಿ**—ಅಪ್ರತಿಹತಶಕ್ತಿಯುಳ್ಳವರೂ । **ಅನುತ್ತಾ**—ಆದ್ದರಿಂದಲೇ ಇತರರಿಂದ ಸೋಲಿಸಲು ಅಶಕ್ಯರೂ ಆದ । **ವೃತ್ರಾಣಿ**—ಶತ್ರುಗಳಾದ ರಾಕ್ಷಸರುಗಳನ್ನು । **ತ್ವಂ ಏಕ ಇತ್**—ನೀನೊಬ್ಬನೇ ಯಾರ ಸಹಾಯವೂ ಇಲ್ಲದೆ । **ಚರ್ಷಣೀಧೃತಾ**—ಅಸುರವಧಾದಿಗಳಿಂದ ಮನುಷ್ಯರನ್ನು ಧರಿಸಿ ಕಾಪಾಡುವ ವಜ್ರಾಯುಧದಿಂದ । **ಹಂಸಿ**—ಸಂಹರಿಸುತ್ತೀಯೆ.

॥ ಭಾವಾರ್ಥ ॥

ಶಕ್ತಿಸಾಮರ್ಥ್ಯಗಳಿಗೆ ಪಾಲಕನಾಗಿರುವ ಎಲೈ ಇಂದ್ರನೇ, ಋಜೀಷವೆಂಬ ಒಂದಾವರ್ತಿ ಹಿಂಡಿದ ಸೋಮಲತೆಗಳಿಂದ ಮತ್ತೆ ತೆಗೆದ ಸೋಮರಸದಲ್ಲಿ ಅಭಿರುಚಿಯುಳ್ಳ ನೀನು ಕೀರ್ತಿಯುತನಾಗಿದ್ದೀಯೆ. ಏಕೆಂದರೆ, ಅಪ್ರತಿಹತಶಕ್ತಿಯುಳ್ಳವರೂ ಇತರರಿಂದ ನಿಗ್ರಹಿಸಲು ಸಾಧ್ಯವಿಲ್ಲದವರೂ ಆದ ಶತ್ರುಗಳಾದ ರಾಕ್ಷಸರನ್ನು ಯಾರ ಸಹಾಯವೂ ಇಲ್ಲದೆ ನೀನೊಬ್ಬನೇ ಶತ್ರುವಧದಿಂದ ಮನುಷ್ಯರನ್ನು ಕಾಪಾಡುವ ನಿನ್ನ ವಜ್ರಾಯುಧದಿಂದ ಸಂಹಾರ ಮಾಡುತ್ತೀಯೆ. ಇದೇ ನಿನ್ನ ಕೀರ್ತಿಗೆ ಕಾರಣವು.

## English Translation

You, Indra, lord of strength, are the glorious possessor of the offered

Soma ; alone with (your thunderbolt), that protector of men, you smite the enemies that none else could oppose or drive away.

॥ ಸಂಹಿತಾಪಾಠಃ ॥

ತಮು ತ್ವಾ ನೂನಮಸುರ ಪ್ರಚೇತಸಂ ರಾಧೋ ಭಾಗಮಿವೇಮಹೇ ।
ಮಹೀವ ಕೃತ್ತಿಃ ಶರಣಾ ತ ಇಂದ್ರ ಪ್ರ ತೇ ಸುಮ್ನಾ ನೋ ಅಶ್ನವನ್ ॥೬॥

॥ ಪದಪಾಠಃ ॥

ತಂ । ಊಂ ಇತಿ । ತ್ವಾ । ನೂನಂ । ಅಸುರ । ಪ್ರऽಚೇತಸಂ । ರಾಧಃ । ಭಾಗಂऽಇವ । ಈಮಹೇ ।
ಮಹೀऽಇವ । ಕೃತ್ತಿಃ । ಶರಣಾ । ತೇ । ಇಂದ್ರ । ಪ್ರ । ತೇ । ಸುಮ್ನಾ । ನಃ । ಅಶ್ನವನ್ ॥ ೬ ॥

॥ ಸಾಯಣಭಾಷ್ಯಂ ॥

ಹೇ ಅಸುರ ಬಲವನ್ ಪ್ರಾಣವನ್ ಹೇ ಇಂದ್ರ ಯ ಉಕ್ತಗುಣೋಽಸ್ತಿ ತಂ ಪ್ರಚೇತಸಂ ಪ್ರಕೃಷ್ಟಜ್ಞಾನಂ ತ್ವಾ । ಉ ಇತ್ಯವಧಾರಣೇ । ಪಿತ್ಯವತ್ಪ್ರೇಷಕಂ ತ್ವಾಮೇವ ರಾಧೋ ಧರ್ಮಾದಿಸಾಧನಂ ಧನಂ ನೂನಮಿದಾನೀಮೀಮಹೇ । ವಯಂ ಯಾಚಾಮಹೇ । ತತ್ರ ದೃಷ್ಟಾಂತಃ । ಭಾಗಮಿವ । ಯಥಾ ಕಶ್ಚಿತ್ಪಿತೃಭಾಗಭೂತಂ ಧನಂ ಯಾಚತೇ ತದ್ವದಿಂದ್ರೋ ಯಜಮಾನೇಭ್ಯಃ ಸ್ತೋತೃಭ್ಯಶ್ಚ ಧನಂ ಪ್ರಯಚ್ಛತ್ಯೇವ । ತಸ್ಮಾದ್ಭಾಗಭೂತಂ ಧನಂ ಯುಷ್ಮಾರೋ ವಯಂ ಯಾಚಾಮಹೇ । ಹೇ ಇಂದ್ರ ಮಹೀವ ಕೃತ್ತಿಃ । ಕೃತ್ತಿರ್ಯಶೋ ವಾನ್ನಂ ವಾ ॥ ಕೃತೀ ಛೇದನೇ । ಕರಣೇ ಕ್ತಿನ್ । ಕೃಂತತ್ಯನೇನೇತಿ ॥ ಈದೃಶೀ ಕೃತ್ತಿರಿವ ತೇ ತವ ಶರಣಾ ಶರಣಂ ಗೃಹಮಂತರಿಕ್ಷೇ ದ್ಯುಲೋಕೇ ಮಹದ್ವರ್ತತೇ । ಅತ್ರ ಯಾಸ್ಕಃ । ಕೃತ್ತಿಃ ಕೃಂತತೇರ್ಯಶೋ ವಾನ್ನಂ ವಾ ಮಹೀವ ಕೃತ್ತಿಃ ಶರಣಾ ತ ಇಂದ್ರ ಸುಮಹತ್ತ ಇಂದ್ರ ಶರಣಮಂತರಿಕ್ಷೇ ಕೃತ್ತಿರಿವೇತಿ । ನಿ. ೫-೨೨ । ಕಿಂ ಚ ತೇ ತವ ಸ್ವಭೂತಾನಿ ಸುಮ್ನಾ ಸುಮ್ನಾನಿ ಪುತ್ರಾದಿವಿಷಯಸುಖಾನಿ ಚ ನೋऽಸ್ಮಾನ್ಪ್ರಾಶ್ನವನ್ । ಪ್ರಕರ್ಷೇಣಾಶ್ನುವಂತಾಂ । ವ್ಯಾಪ್ನುವಂತು ॥ ಅಶ್ನೋತೇರ್ಲೇಟ್ಯಡಾಗಮಃ ॥

॥ ಪ್ರತಿಪದಾರ್ಥ ॥

ಅಸುರ—ಶಕ್ತಿಯುತನಾದ ಎಲೈ ಇಂದ್ರನೇ । ಭಾಗಮಿವ—ಪುತ್ರನಾದವನು ತನ್ನ ತಂದೆಯಿಂದ ತನ್ನ ಪಾಲಿನ ಆಸ್ತಿಯನ್ನು ಯಾಚಿಸುವಂತೆ । ತಂ—ಪ್ರಸಿದ್ಧನಾದ ಮತ್ತು । ಪ್ರಚೇತಸಂ—ಅತ್ಯುತ್ತಮ ಜ್ಞಾನಿಯಾದ । ತ್ವಾ ಉ—ನಿನ್ನನ್ನೇ । ರಾಧಃ—ಧನಾರ್ಥವಾಗಿ । ನೂನಂ—ಈಗ । ಈ ಮಹೇ—ನಾವು ಯಾಚಿಸುತ್ತೇವೆ । ಇಂದ್ರ—ಎಲೈ ಇಂದ್ರನೇ । ಮಹೀವ ಕೃತ್ತಿಃ—ಯಶಸ್ಸಿನಂತೆ ಅಥವಾ ಅನ್ನದಂತೆ ಮಹತ್ತಾದ । ತೇ—ನಿನ್ನ ।

**ಶರಣಾ**—ಗೃಹವು ಸ್ವರ್ಗಲೋಕದಲ್ಲಿರುವುದು । **ತೇ**-ನಿನ್ನ ಸಂಬಂಧವಾದ । **ಸುಮ್ನಾ**—ಪುತ್ರವಿಷಯಾದಿಸುಖಗಳು । **ನಃ**—ನಮ್ಮನ್ನು । **ಪ್ರ ಅಶ್ನವತ್**—ಬಂದು ಸೇರಲಿ.

॥ ಭಾವಾರ್ಥ ॥

ಶಕ್ತಿಯುತನಾದ ಎಲೈ ಇಂದ್ರನೇ, ಅತ್ಯುತ್ತಮವಾದ ಜ್ಞಾನಿಯಾದ ನಿನ್ನನ್ನೇ ನಾವು ಈಗ, ಪುತ್ರನಾದವನು ತಂದೆಯಿಂದ ತನ್ನ ಭಾಗವಾದ ಧನವನು ಯಾಚಿಸುವಂತೆ ಧನಾರ್ಥವಾಗಿ ಯಾಚಿಸುತ್ತೇವೆ. ಎಲೈ ಇಂದ್ರನೇ, ಯಶಸ್ಸಿನಂತೆ ಮಹತ್ತಾದ ನಿನ್ನ ಗೃಹವು ಸ್ವರ್ಗಲೋಕದಲ್ಲಿದೆ ನಿನ್ನ ಸಂಬಂಧವಾದ ಪುತ್ರಾದಿ ವಿಷಯಸುಖಗಳು ನಮ್ಮನ್ನು ಬಂದು ಸೇರಲಿ.

English Translation

Living one, who possess supreme knowledge, we verily ask you for wealth as though it were an inheritance ; your abode (in heaven), Indra, is vast like your glory ; may your blessings fill us.

## ತೊಂಭತ್ತೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಕನ್ಯಾ ವಾರಿತಿ ಸಪ್ತರ್ಚಮೇಕಾದಶಂ ಸೂಕ್ತಂ । ಅತ್ರೇಃ ಪುತ್ರ್ಯಪಾಲಾಖ್ಯಾ ತ್ವಗ್ದೋಷಪರಿಹಾರಾಯಾನೇನ ಸೂಕ್ತೇನೇಂದ್ರಂ ಸ್ತುತವತೀ । ಅತಃ ಸೈವಾರ್ಷಿಃ । ಪ್ರಥಮಾದ್ವಿತೀಯೇ ಪಂಕ್ತೀ ಶಿಷ್ಟಾಃ ಪಂಚಾನುಷ್ಟುಭಃ । ಇಂದ್ರೋ ದೇವತಾ । ತಥಾ ಚಾನುಕ್ರಾಂತಂ । ಕನ್ಯಾ ವಾಃ ಸಪ್ತಾತ್ರೇಯ್ಯಪಾಲೇತಿಹಾಸ ಐಂದ್ರ ಅನುಷ್ಟುಭಂ ದ್ವಿಪಂಕ್ತ್ಯಾದೀತಿ । ವಿನಿಯೋಗೋ ಲೈಂಗಿಕಃ ॥ ಅತ್ರೇತಿಹಾಸಮಾಚಕ್ಷತೇ । ಪುರಾ ಕಿಲಾತ್ರಿಸುತಾಪಾಲಾ ಬ್ರಹ್ಮವಾದಿನೀ ಕೇನಚಿತ್ಕಾರಣೇನ ತ್ವಗ್ದೋಷದುಷ್ಟಾ ಸತ್ಯತ ಏವ ದುರ್ಭಗೇತಿ ಭರ್ತ್ರಾ ಪರಿತ್ಯಕ್ತಾ ಪಿತುರಾಶ್ರಮೇ ತ್ವಗ್ದೋಷಪರಿಹಾರಾಯ ಚಿರಕಾಲಮಿಂದ್ರಮುದ್ದಿಶ್ಯ ತಪಸ್ತೇಪೇ । ಸಾ ಕದಾಚಿದಿಂದ್ರಸ್ಯ ಸೋಮಃ ಪ್ರಿಯಕರೋ ಭವತಿ ತಮಿಂದ್ರಾಯ ದಾಸ್ಯಾಮೀತಿ ಬುದ್ಧ್ವಾ ನದೀತೀರಂ ಪ್ರತ್ಯಾಗಮತ್ । ಸಾ ತತ್ರ ಸ್ನಾತ್ವಾ ಪಥಿ ಸೋಮಮುಪಲಭತ । ತಮಾದಾಯ ಗೃಹಂ ಪ್ರತ್ಯಾಗಚ್ಛಂತೀ ಮಾರ್ಗ ಏವ ತಂ ಚಖಾದ । ತದ್ಭಕ್ಷಣಕಾಲೇ ದಂತಘರ್ಷಣಜಾತಂ ಶಬ್ದಂ ಗ್ರಾವ್ಣಾಂ ಸೋಮಾಭಿಷವಧ್ವನಿಮಿತಿ ಮತ್ವಾ ತದಾನೀಮೇವೇಂದ್ರಃ ಸಮಾಗಮತ್ । ಆಗತ್ಯ ತಾಮುವಾಚ । ಕಿಮತ್ರ ಗ್ರಾವಾಣೋऽಭಿಷುಣ್ವಂತೀತಿ । ಸಾ ಪ್ರತ್ಯೂಚೇ । ಅತ್ರ ಕನ್ಯಾ ಸ್ನಾನಾರ್ಥಮಾಗತ್ಯ ಸೋಮಂ ದೃಷ್ಟ್ವಾ ತಂ ಭಕ್ಷಯತಿ ತದ್ಭಕ್ಷಣಜೋಽ ಧ್ವನಿರೇವ ನ ತು ಗ್ರಾವ್ಣಾಂ ಸೋಮಾಭಿಷವಧ್ವನಿರಿತಿ । ತಥಾ ಪ್ರತ್ಯುಕ್ತ ಇಂದ್ರಃ ಪರಾಜಾವರ್ತತ । ಗಚ್ಛಂತಮಿಂದ್ರಂ ಸಾ ಪುನರಬ್ರವೀತ್ । ಕಿಮರ್ಥಂ ನಿವರ್ತಸೇ ತ್ವಂ ಸೋಮಪಾನಾಯ ಗೃಹಂ ಗೃಹಂ ಪ್ರತಿಗಚ್ಛಸಿ । ಇದಾನೀಮತ್ರಾಪಿ

ಮಮ ದಂಷ್ಟ್ರಾಭ್ಯಾಮಭಿಷುತಂ ಸೋಮಂ ಪಿಬ ಧಾನಾ ದೀಂಶ್ಚ ಭಕ್ಷಯೇತಿ । ಸೈವೇಂದ್ರಮನಾದ್ರಿಯಮಾಣಾ ಸತೀ ಪುನರಪ್ಯಾಹ । ಅತ್ರಾಗತಂ ತ್ವಾಮಿಂದ್ರ ಇತಿ ನ ಜಾನಾಮಿ ತ್ವಯಿ ಗೃಹಮಾಗತೇ ಬಹುಮಾನಂ ಕರಿಷ್ಯಾಮೀತೀಂದ್ರಮುಕ್ತ್ವಾತ್ರ ಸಮಾಗತ ಇಂದ್ರ ಏವ ನಾನ್ಯ ಇತಿ ನಿಶ್ಚಿತ್ಯ ಸ್ವಾಸ್ಯೇ ನಿಹಿತಂ ಸೋಮಮಾಹ । ಹೇ ಸೋಮ ತ್ವಮಾಗತಾಯೇಂದ್ರಾಯ ಪೂರ್ವಂ ಶನೈಸ್ತತಃ ಶನಕೈಃ ಕ್ಷಿಪ್ರಂ ಪರಿಸ್ರವೇತಿ । ತತ ಇಂದ್ರಸ್ತಾಂ ಕಾಮಯಿತ್ವಾ ತಸ್ಯಾ ಆಸ್ಯ ಏವ ದಂಷ್ಟ್ರಾಭಿಷುತಂ ಸೋಮಮಪಾತ್। ತತ ಇಂದ್ರೇಣ ಸೋಮೇ ಪೀತೇ ಸತಿ ತ್ವಗ್ದೋಷಾದಹಂ ಭರ್ತ್ರಾ ಪರಿತ್ಯಕ್ತಾ ಸತೀದಾನೀಮಿಂದ್ರೇಣ ಸಂಗತೇತ್ಯಪಾಲಾಯಾಮುಕ್ತಾಯಾಮಿಂದ್ರಸ್ತಾಂ ವ್ಯಾಜಹಾರ । ಕಿಂ ಕಾಮಯಸೇ ತದಹಂ ಕರಿಷ್ಯಾಮೀತ್ಯುಕ್ತೇ ಸಾ ವರಮಚೀಕಮತ । ಮಮ ಪಿತುಃ ಶಿರೋ ರೋಮವರ್ಜಿತಂ ತಸ್ಯೋಷರಂ ಕ್ಷೇತ್ರಂ ಫಲಾದಿರಹಿತಂ ಮಮ ಗುಹ್ಯಸ್ಥಾನಮಪ್ಯರೋಮಶಮೇತಾನಿ ರೋಮಫಲಾದಿಯುಕ್ತಂ ಕುರ್ವಿತ್ಯುಕ್ತಾಯಾಂ ತತ್ಪಿತೃಶಿರಃಸ್ಥಿತಂ ಖಲತಿಮಪಹಾಯ ಕ್ಷೇತ್ರಂ ಚ ಫಲಾದಿಯುಕ್ತಂ ಕೃತ್ವೈತಸ್ಯಾಸ್ತ್ವಗ್ದೋಷಪರಿಹಾರಾಯ ಸ್ವಕೀಯರಥಚ್ಛಿದ್ರೇ ಶಕಟಸ್ಯ ಯುಗಸ್ಯ ಚ ಛಿದ್ರ ಏತಾಂ ತ್ರಿವಾರಂ ನಿಶ್ಚಕರ್ಷ । ತಸ್ಯಾಃ ಪೂರ್ವಾಪಹತಾ ಯಾ ತ್ವಕ್ ಶಲ್ಯಕೋ ದ್ವಿತೀಯಾ ಗೋಧಾ ತೃತೀಯಾ ಕೃಕಲಾಸೋಽಭೂತ್ । ತತ ಇಂದ್ರಸ್ತಾಮಪ್ಯಪಾಲಾಂ ಸೂರ್ಯಸದೃಶತ್ವಚಮಕರೋದಿತ್ಯೈತಿಹಾಸಿಕೀ ಕಥಾ । ಏತಚ್ಚ ಶಾಟ್ಯಾಯನಬ್ರಾಹ್ಮಣೇ ಸ್ಪಷ್ಟಮುಕ್ತಂ । ತದ್ಬ್ರಾಹ್ಮಣಂ ತತ್ತದೃಗ್ವ್ಯಾಖ್ಯಾನಸಮಯೇ ದರ್ಶಯಿಷ್ಯತೇ । ಏಷೋಽರ್ಥಃ ಕನ್ಯಾ ವಾರಿತ್ಯಾದಿಷ್ವೃಕ್ಷು ಪ್ರತಿಪಾದ್ಯತೇ ॥

ಅನುವಾದವು—**ಕನ್ಯಾ ವಾಃ** ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಅತ್ರಿಋಷಿಯ ಪುತ್ರಿಯಾದ ಅಪಾಲಾ ಎಂಬುವಳು ತನ್ನ ಚರ್ಮ ರೋಗ ಪರಿಹಾರಾರ್ಥವಾಗಿ ಈ ಸೂಕ್ತದಿಂದ ಇಂದ್ರನನ್ನು ಸ್ತೋತ್ರಮಾಡಿದಳು ಆದ್ದರಿಂದ ಈ ಸೂಕ್ತಕ್ಕೆ ಅತ್ರಿ ಪುತ್ರಿಯಾದ ಅಪಾಲಾ ಎಂಬ ಸ್ತ್ರೀಯೇ ಋಷಿಯು, ಇಂದ್ರನು ದೇವತೆಯು, ಈ ಸೂಕ್ತದ ಮೊದಲಿನ ಎರಡು ಋಕ್ಕುಗಳು ಪಂಕ್ತಿಚ್ಛಂದಸ್ಕವು. ಉಳಿದ ಐದು ಋಕ್ಕುಗಳು ಅನುಷ್ಟುಪ್ ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಕನ್ಯಾ ವಾಃ ಸಪ್ತಾತ್ರೇಯ್ಯಪಾಲೇತಿಹಾಸ ಐಂದ್ರ ಆನುಷ್ಟುಭಂ ದ್ವಿಪಂಕ್ತ್ಯಾದಿ** ಎಂದು ಹೇಳಿರುವುದು ಸೂಕ್ತವಿನಿಯೋಗವು ಲೈಂಗಿಕವು.

ಈ ಸೂಕ್ತದ ವಿಷಯದಲ್ಲಿ ಒಂದು ಪೂರ್ವೇತಿಹಾಸವಿರುವುದು—ಪೂರ್ವದಲ್ಲಿ ಅತ್ರಿಋಷಿಯ ಪುತ್ರಿಯೂ ಬ್ರಹ್ಮಜ್ಞಾನಿಯೂ ಆದ ಅಪಾಲಾ ಎಂಬ ಸ್ತ್ರೀಗೆ ಕಾರಣಾಂತರದಿಂದ ಚರ್ಮರೋಗ (ತೊನ್ನು) ಪ್ರಾಪ್ತವಾಗಿ ಅದರಿಂದ ನರಳುತ್ತಿದ್ದಳು. ಈ ಕಾರಣದಿಂದ ಇವಳ ಪತಿಯು ಇವಳನ್ನು ತ್ಯಜಿಸಿದ್ದನು. ಆದ್ದರಿಂದ ಈ ಅಪಾಲಾ ಎಂಬುವಳು ತನ್ನ ತಂದೆಯಾದ ಅತ್ರಿಋಷಿಯ ಆಶ್ರಮಕ್ಕೆ ಬಂದು ತನಗುಂಟಾದ ಚರ್ಮರೋಗಪರಿಹಾರಾರ್ಥವಾಗಿ ಇಂದ್ರನನ್ನು ಕುರಿತು ತಪಸ್ಸನ್ನುಮಾಡುತ್ತಿದ್ದಳು. ಆ ಸ್ತ್ರೀಯು ಒಂದು ಸಮಯದಲ್ಲಿ ಹೀಗೆ ಯೋಚಿಸಿದಳು—ಸೋಮರಸವು ಇಂದ್ರನಿಗೆ ಬಹಳ ಪ್ರಿಯವಾದುದು. ಆದ್ದರಿಂದ ಅದನ್ನು ಇಂದ್ರನಿಗೆ ತಂದು ಅರ್ಪಿಸುವೆನು ಎಂದು ಯೋಚಿಸಿ ಅಲ್ಲಿದ್ದ ನದೀತೀರಕ್ಕೆ ಹೋಗಿ ಸ್ನಾನಮಾಡಿ ಬರುವಾಗ ದಾರಿಯಲ್ಲಿ ಬೆಳೆದಿದ್ದ ಸೋಮಲತೆಗಳನ್ನು ಕಂಡು ಅವುಗಳನ್ನು ಕಿತ್ತು ತೆಗೆದುಕೊಂಡು ಮನೆಗೆ ಬರುತ್ತಿರುವಾಗ ಆ ಲತೆಯನ್ನು ಹಲ್ಲಿನಿಂದ (ಕಬ್ಬನ್ನು ಸಿಗಿಯುವಂತೆ) ಅಗಿಯುತ್ತಾ ಬರುತ್ತಿದ್ದಳು. ಆಗ ಹಲ್ಲಿನಿಂದ ಅಗಿಯುತ್ತಿರುವ ಶಬ್ದವು ಇಂದ್ರನಿಗೆ ಕೇಳಿಸಿ—ಇಲ್ಲಿ ಯಾರೋ ಯಜ್ಞದಲ್ಲಿ

ನನ್ನನ್ನುದ್ದೇಶಿಸಿ ಸೋಮರಸವನ್ನು ವಿಧ್ಯುಕ್ತವಾಗಿ ಕಲ್ಲುಗಳಿಂದ ಜಜ್ಜಿ ರಸವನ್ನು ತೆಗೆಯುತ್ತಿರುವರು. ಆ ಕಲ್ಲುಗಳ ಶಬ್ದವೇ ಇದೆಂದು ಇಂದ್ರನು ತಿಳಿದು ತಾನೇ ಆ ಸ್ತ್ರೀಯ ಬಳಿಗೆ ಬಂದು ಇಂತೆಂದನು—ಇದೇನು, ಇಲ್ಲಿ ಸೋಮಲತೆಗಳನ್ನು ಜಜ್ಜುತ್ತಿರುವ ಶಬ್ದಗಳು ಕೇಳಿಬರುತ್ತಿರುವುದಲ್ಲಾ ಎನಲು, ಆ ಸ್ತ್ರೀಯು—ಎಲೈ ಇಂದ್ರನೇ, ಇದು ಸೋಮಲತೆಗಳನ್ನು ಕಲ್ಲುಗಳಿಂದ ಕುಟ್ಟುವ ಶಬ್ದವಲ್ಲ. ಓರ್ವ ಕನ್ಯೆಯು ಸ್ನಾನಾರ್ಥವಾಗಿ ನದಿಗೆ ಹೋಗಿ ಬರುವಾಗ ದಾರಿಯಲ್ಲಿ ಸಿಕ್ಕಿದ ಸೋಮಲತೆಯನ್ನು ಅಗಿದು ತಿನ್ನುತ್ತಾ ಇರುವುದರಿಂದ ಅದರಿಂದ ಹೊರಟ ಶಬ್ದವೇ ಇದು. ಕಲ್ಲುಗಳಿಂದ ಜಜ್ಜುವ ಧ್ವನಿಯಲ್ಲ ಎಂದಳು. ಇದನ್ನು ಕೇಳಿ ಇಂದ್ರನು ಹಿಂತಿರುಗಿಹೋಗಲುಪಕ್ರಮಿಸಲು ಆ ಸ್ತ್ರೀಯು ಕರೆದು ಮತ್ತಿಂತೆಂದಳು—ಎಲೈ ಪುರುಷನೇ, ಏತಕ್ಕೆ ಹಿಂದಕ್ಕೆ ಹೋಗುವೆ? ನೀನು ಸೋಮಪಾನಾರ್ಥವಾಗಿ ಮನೆಮನೆಗೂ ಹೋಗುವಿಯಲ್ಲವೇ? ಈಗ ನಾನು ಹಲ್ಲುಗಳಿಂದ ಸಿಗಿದು ಜಗಿಯುತ್ತಿರುವ ಲತೆಗಳಿಂದ ಸೋಮರಸವು ಜನುಗುತ್ತಿರುವುದು. ಆದ್ದರಿಂದ ಈಗ ನೀನು ಈ ಸೋಮರಸವನ್ನೇ ಪಾನಮಾಡಿ ನಾನು ಕೊಡುವ ಧಾನ್ಯಾದಿಗಳನ್ನು ಭಕ್ಷಿಸು ಎಂದು ಹೇಳಿ, ಈ ಪುರುಷನು ಇಂದ್ರನೇ ಹೌದೋ ಅಲ್ಲವೋ ಎಂಬ ಶಂಕೆಯಿಂದ ಅವನನ್ನು ಕುರಿತು ಮತ್ತೆ—ಎಲೈ ಪುರುಷನೇ, ಇಲ್ಲಿಗೆ ಬಂದಿರುವ ನೀನು ಇಂದ್ರನೇ ಎಂದು ನನಗೆ ತಿಳಿಯದು. ಆದರೂ ನೀನು ನಮ್ಮ ಮನೆಗೆ ಬಂದರೆ ಬಹುಮಾನವನ್ನು ಕೊಡುವೆನು ಎಂದು ಹೇಳಿ ಇಲ್ಲಿಗೆ ಬಂದಿರುವ ಈ ಪುರುಷನು ಇಂದ್ರನೇ ಹೊರತು ಬೇರೆ ಯಾರೂ ಅಲ್ಲ ಎಂದು ಮನಸ್ಸಿನಲ್ಲಿ ನಿಶ್ಚಯಿಸಿ ತನ್ನ ಬಾಯಿಯಲ್ಲಿದ್ದ ಸೋಮರಸವನ್ನು ಕುರಿತು ಇಂತೆಂದಳು—ಎಲೈ ಸೋಮರಸವೇ, ನೀನು ಇಂದ್ರನಿಗಾಗಿ ಮೊದಲು ಸ್ವಲ್ಪಸ್ವಲ್ಪವಾಗಿಯೂ ಆಮೇಲೆ ಹೆಚ್ಚಾಗಿಯೂ ಜಿನುಗಿ ತೊಟ್ಟಿಕ್ಕು ಎಂದಳು. ಆಗ ಇಂದ್ರನು ಅವಳನ್ನು ಮೋಹಿಸಿ, ಅವಳು ತನ್ನ ಹಲ್ಲುಗಳಿಂದ ಅಗಿದು ಬಾಯಿಯಲ್ಲಿ ತುಂಬಿಕೊಂಡಿದ್ದ ಸೋಮರಸವನ್ನು ಪಾನಮಾಡಿದನು. ಇಂದ್ರನು ಸೋಮಪಾನಮಾಡಿದ ನಂತರ ಆ ಸ್ತ್ರೀಯು ಇಂದ್ರನನ್ನು ಕುರಿತು—ಚರ್ಮರೋಗದಿಂದ ಪೀಡಿತಳಾಗಿರುವ ನನ್ನನ್ನು ನನ್ನ ಪತಿಯು ಬಿಟ್ಟುಬಿಟ್ಟಿರುವನು. ಈಗ ಇಂದ್ರನೊಡನೆ ಸಮಾಗಮವುಂಟಾಗಿರುವುದು ಎನಲು ಅವಳನ್ನು ಕುರಿತು ಇಂದ್ರನು—ಎಲೌ ಸ್ತ್ರೀಯೇ, ನಿನ್ನ ಇಷ್ಟಾರ್ಥವೇನು? ಅದನ್ನು ಹೇಳು. ಅದನ್ನು ನಾನು ನಡೆಸಿಕೊಡುವೆನು ಎಂದನು. ಆ ಸ್ತ್ರೀಯು—ಹಾಗಾದರೆ ನೀನು ನನಗೆ ವರವನ್ನು ಕೊಡಬೇಕು; ನನ್ನ ತಂದೆಯ ತಲೆಯ ಕೂದಲುಗಳೆಲ್ಲಾ ಉದುರಿಹೋಗಿ ತಲೆಯು ಬೋಳಾಗಿರುವುದು ಮತ್ತು ಅವನು ವ್ಯವಸಾಯ ಮಾಡುವ ಹೊಲವೂ ಕರಲುಭೂಮಿಯಾಗಿ ಅದರಲ್ಲಿ ಈಗ ಏನೂ ಬೆಳೆಯುವುದಿಲ್ಲ, ಮತ್ತು ನನ್ನ ಗುಹ್ಯಸ್ಥಾನವು (ಉಪಸ್ಥಸ್ಥಾನವು) ರೋಮರಹಿತವಾಗಿರುವುದು ಎಂದರೆ ಗುಹ್ಯಸ್ಥಾನದಲ್ಲಿ ಕೂದಲುಗಳು ಬೆಳೆಯುವುದಿಲ್ಲ. ಆದ್ದರಿಂದ ಈಗ ನೀನು ನನ್ನ ತಂದೆಯ ಶಿರಸ್ಸಿನಲ್ಲಿ ಕೂದಲು ಬೆಳೆಯುವಂತೆಯೂ, ಅವನ ಹೊಲದಲ್ಲಿ ಸಸ್ಯಾದಿಗಳು ಬೆಳೆದು ಫಲಭರಿತವಾಗುವಂತೆಯೂ, ನನ್ನ ಗುಹ್ಯಪ್ರದೇಶದಲ್ಲಿ ಕೂದಲು ಬೆಳೆಯುವಂತೆಯೂ ಅನುಗ್ರಹಿಸು ಎಂದಳು. ಇದನ್ನು ಕೇಳಿ ಇಂದ್ರನು ಹಾಗೆಯೇ ಆಗಲೆಂದು ಅವಳ ತಂದೆಯ ಶಿರಸ್ಸನ್ನು ರೋಗಪರಿಹಾರದಿಂದ ರೋಗಯುಕ್ತವಾದದ್ದನ್ನಾಗಿಯೂ, ಅವನ ಹೊಲವನ್ನು ಫಲಯುಕ್ತವನ್ನಾಗಿಯೂ ಮಾಡಿ ಅನಂತರ ಆ ಸ್ತ್ರೀಯ ಚರ್ಮರೋಗ ಪರಿಹಾರಾರ್ಥವಾಗಿ ತನ್ನ ರಥದ ಛಿದ್ರದಲ್ಲಿಯೂ, ಗಾಡಿಯ ಛಿದ್ರದಲ್ಲಿಯೂ, ನೊಗದ ಛಿದ್ರದಲ್ಲಿಯೂ ಈ ಮೂರು ಛಿದ್ರಗಳಲ್ಲಿಯೂ ಆ ಸ್ತ್ರೀಯನ್ನು ಮೂರಾವರ್ತಿ ನುಗ್ಗಿಸಿದನು. ಆದರಿಂದ ಆ ಸ್ತ್ರೀಯ ಚರ್ಮವು ರೋಗರಹಿತವಾಗಿ ಸೂರ್ಯನ ಪ್ರಭೆಯಂತೆ ಕಾಂತಿಯುತವಾಗಿ ಆಯಿತು ಎಂಬ ಪೂರ್ವೇತಿಹಾಸವನ್ನು ಭಾಷ್ಯಕಾರರು ಇಲ್ಲಿ ಹೇಳಿ ಈ ವಿಷಯದಲ್ಲಿ ಶಾಟ್ಯಾಯನಬ್ರಾಹ್ಮಣದಲ್ಲಿ ಈ ವೃತ್ತಾಂತವು ಸ್ಪಷ್ಟವಾಗಿ ವರ್ಣಿಸಲಾಗಿದೆಯೆಂದೂ ಸಂದರ್ಭ ಬಂದಾಗ ಆಯಾ ಋಕ್ಕುಗಳಲ್ಲಿ ಈ ವಿಷಯವನ್ನು ವರ್ಣಿಸಲಾಗುವುದೆಂದೂ ಹೇಳಿದಾರೆ.

## ಸೂಕ್ತ—೯೧

ಮಂಡಲ—೮ । ಅನುವಾಕ—೯ । ಸೂಕ್ತ—೯೧ ।
ಅಷ್ಟಕ—೬ । ಅಧ್ಯಾಯ—೬ । ವರ್ಗ—೧೪ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ।
ಋಷಿಃ—ಅಪಾಲಾತ್ರೇಯೀ ।
ದೇವತಾ—ಇಂದ್ರಃ ॥
ಛಂದಃ—೧-೩. ಪಂಕ್ತಿಃ । ೪-೭. ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಕನ್ಯಾ೩ ವಾರವಾಯತೀ ಸೋಮಮಪಿ ಸ್ರುತಾವಿದತ್ ।
ಅಸ್ತಂ ಭರಂತ್ಯಬ್ರವೀದಿಂದ್ರಾಯ ಸುನವೈ ತ್ವಾ ಶಕ್ರಾಯ ಸುನವೈ ತ್ವಾ ॥

॥ ಪದಪಾಠಃ ॥

ಕನ್ಯಾ । ವಾಃ । ಅವऽಯತೀ । ಸೋಮಂ । ಅಪಿ । ಸ್ರುತಾ । ಅವಿದತ್ ।
ಅಸ್ತಂ । ಭರಂತೀ । ಅಬ್ರವೀತ್ । ಇಂದ್ರಾಯ । ಸುನವೈ । ತ್ವಾ । ಶಕ್ರಾಯ । ಸುನವೈ । ತ್ವಾ ॥ ೧ ॥

॥ ಸಾಯಣಭಾಷ್ಯಂ ॥

ವಾರುದಕಂ ಪ್ರತ್ಯವಾಯತೀ ಸ್ನಾನಾರ್ಥಮಭ್ಯವಗಚ್ಛಂತೀ ಕನ್ಯಾಪಾಲಾ ನಾಮ ಸ್ತ್ರೀ ಸ್ರುತಾ ಸ್ರುತೌ ಮಾರ್ಗೇ ಸೋಮಮಪ್ಯವಿದತ್ । ಅಲಭತ ॥ ವಿದ್ಲೃ ಲಾಭೇ । ಲಙಿ ರೂಪಂ ॥ ತಂ ಸೋಮಮಸ್ತಂ ಗೃಹಂಪ್ರತಿ ಭರಂತ್ಯಾಹರಂತೀ ಸಾ ಸೋಮಮಬ್ರವೀತ್ । ಹೇ ಸೋಮ ತ್ವಾ ತ್ವಾಮಿಂದ್ರಾಯ ಸುನವೈ । ಮಮ ದಂತೈರೇವಾಭಿಷುಣವೈ । ಪುನರ್ಹೇ ಸೋಮ ತ್ವಾ ತ್ವಾಂ ಶಕ್ರಾಯ ಸಮರ್ಥಾಯೇಂದ್ರಾಯ ಸುನವೈ । ಇದಾನೀಮೇವಾಭಿಷವಂ ಕರವೈ । ಸೋಮಭಕ್ಷಣಕಾಲೇ ದಂತಧ್ವನಿಂ ಗ್ರಾವಧ್ವನಿಮಿತಿ ಮತ್ವೇಂದ್ರಸ್ತಾಮಗಮತ್ । ಏಷೋಽರ್ಥಃ ಶಾಟ್ಯಾಯನಬ್ರಾಹ್ಮಣೇ ಸ್ಪಷ್ಟಮಭಿಹಿತಃ । ಸಾ ತೀರ್ಥಮಭ್ಯವಯಂತೀ ಸೋಮಾಂಶುಮವಿಂದತ್ತಂ ಸಮಖಾದತ್ತಸ್ಯೈ ಹ ಗ್ರಾವಾಣ ಇವ ದಂತಾ ಊದುಃ । ಸ ಇಂದ್ರ ಅಬ್ರವತ್ ಗ್ರಾವಾಣೋ ನ್ವೈ ವದಂತೀತಿ । ಸಾ ತಮಭಿವ್ಯಾಜಹಾರ ಕನ್ಯಾ ವಾರವಾಯತೀ ಸೋಮಮಪಿ ಸ್ರುತಾವಿದದಿತ್ಯಸ್ಯೈ ತ ಇಮೇ ಗ್ರಾವಾಣ ಇವ ದಂತಾ ವದಂತೀತಿ ವಿದಿತ್ವೇಂದ್ರಃ ಪರಾಙಾವರ್ತತೇ । ತಮಬ್ರವೀದಸೌ ಯ ಏಷಿ ವೀರಕ ಇತ್ಯಾದಿನೇತಿ ॥

॥ ಪ್ರತಿಪದಾರ್ಥ ॥

**ವಾಃ**—ನದಿಯ ನೀರಿನ ಬಳಿಗೆ । **ಅವಾಯತೀ**—ಸ್ನಾನಾರ್ಥವಾಗಿ ಹೋಗುತ್ತಿರುವ । **ಕನ್ಯಾ**—ಅಪಾಲಾ ಎಂಬ ಸ್ತ್ರೀಯು । **ಸ್ರುತಾ**—ಮಾರ್ಗಮಧ್ಯದಲ್ಲಿ । **ಸೋಮಂ ಅಪಿ**—ಸೋಮಲತೆಯನ್ನು । **ಅವಿದತ್**—ಕಂಡಳು

(ಅವಳಿಗೆ ಸೋಮಲತೆಯು ಸಿಕ್ಕಿತು) ಅನಂತರ । **ಅಸ್ತಂ**— ತನ್ನ ಗೃಹಾಭಿಮುಖವಾಗಿ ಬರುವಾಗ । **ಭರಂತೀ**— ಆ ಸೋಮವನ್ನು ತರುತ್ತಾ । **ಅಬ್ರವೀತ್**— ಇಂತೆಂದಳು (ಎಲೈ ಸೋಮವೇ) । **ತ್ವಾ**— ನಿನ್ನನ್ನು । **ಇಂದ್ರಾಯ**— ಇಂದ್ರನಿಗಾಗಿ ಎಂದರೆ ಇಂದ್ರನಿಗೆ ಅರ್ಪಿಸುವುದಕ್ಕಾಗಿ । **ಸುನವೈ**— ನನ್ನ ಹಲ್ಲುಗಳಿಂದ ಸಿಗಿಯುತ್ತೇನೆ (ಎಲೈ) ಸೋಮವೇ । **ತ್ವಾ**— ನಿನ್ನನ್ನು । **ಶಕ್ರಾಯ**— ಸಮರ್ಥನಾದ ಇಂದ್ರನಿಗಾಗಿ । **ಸುನವೈ**— ಹಲ್ಲಿನಿಂದ ಸಿಗಿದು ರಸವನ್ನು ಹೊರಹೊರಡುವಂತೆ ಮಾಡುತ್ತೇನೆ.

॥ ಭಾವಾರ್ಥ ॥

ನದಿಯ ನೀರಿನ ಬಳಿಗೆ ಸ್ನಾನಾರ್ಥವಾಗಿ ಹೋಗುತ್ತಿದ್ದ ಅಪಾಲಾ ಎಂಬ ಸ್ತ್ರೀಯು ಸ್ನಾನಾನಂತರ ಮನೆಗೆ ಬರುವಾಗ ದಾರಿಯಲ್ಲಿ ಸಿಕ್ಕಿದ ಸೋಮಲತೆಯನ್ನು ಕಂಡು ಎಲೈ ಸೋಮವೇ, ಇಂದ್ರನಿಗೆ ಅರ್ಪಿಸುವುದಕ್ಕಾಗಿ ನಿನ್ನನ್ನು ನನ್ನ ಹಲ್ಲುಗಳಿಂದ ಸಿಗಿದು ರಸವನ್ನು ಹೊರಡಿಸುತ್ತೇನೆ. ಎಲೈ ಸೋಮವೇ, ಶಕ್ತನಾದ ಇಂದ್ರನಿಗಾಗಿಯೇ ನಿನ್ನಿಂದ ರಸವನ್ನು ಹಲ್ಲುಗಳಿಂದ ಸಿಗಿದು ತೆಗೆಯುತ್ತೇನೆ ಎಂದಳು.

## English Translation

A young woman going to the water found Soma in the path, as she carried it home she said, I will press you for Indra, I will press you for Shakra.

॥ ವಿಶೇಷವಿಷಯಗಳು ॥

ಪ್ರಕೃತಋಕ್ಕಿನಲ್ಲಿ ಉಕ್ತಳಾದ ಅಪಾಲಾ ಎಂಬ ಸ್ತ್ರೀಯು ನದಿಯಿಂದ ಹಿಂತಿರುಗಿ ಬರುತ್ತಿರುವಾಗ ಮಾರ್ಗದಲ್ಲಿ ಸಿಕ್ಕಿದ ಸೋಮವನ್ನು ತನ್ನ ಹಲ್ಲುಗಳಿಂದ ಸಿಗಿಯುತ್ತಿರುವಾಗ ಆ ಧ್ವನಿಯು ಇಂದ್ರನಿಗೆ ಕೇಳಿಸಿತು ಆಗ ಇಂದ್ರನು ಇಲ್ಲಿ ಗ್ರಾವ (ಕಲ್ಲುಗಳಿಂದ) ಸೋಮವನ್ನು ಕುಟ್ಟುವ ಶಬ್ದವು ಕೇಳಿಸುತ್ತಿರುವುದು. ಆದ್ದರಿಂದ ಅಲ್ಲಿಗ ಹೋಗುವೆನು ಎಂದು ಯೋಚಿಸಿ ಅಲ್ಲಿಗೆ ಬಂದನು— ಈ ವಿವರವು ಶಾಟ್ಯಾಯನಬ್ರಾಹ್ಮಣದಲ್ಲಿ ಉಕ್ತವಾಗಿರುವುದನ್ನು ಭಾಷ್ಯಕಾರರು ಇಲ್ಲಿ ಉದಾಹರಿಸಿದ್ದಾರೆ—

> **ಸಾ ತೀರ್ಥಮಭ್ಯವಯಂತೀ ಸೋಮಾಂಶುಮವಿಂದತ್ತಂ ಸಮಖಾದತ್ತಸ್ಯೈ ಹ ಗ್ರಾವಾಣ ಇವ ದಂತಾ ಊದುಃ । ಸ ಇಂದ್ರ ಆದ್ರವತ್ ಗ್ರಾವಾಣೋ ವೈ ವದಂತೀತಿ । ಸಾ ತಮಭಿವ್ಯಾಜಹಾರ ಕನ್ಯಾ ವಾರವಾಯತೀ ಸೋಮಮಪಿ ಸ್ರುತಾವಿದದಿತ್ಯಸ್ಯೈ ತ ಇದಂ ಗ್ರಾವಾಣ ಇವ ದಂತಾ ವದಂತೀತಿ ವಿದಿತ್ವೇಂದ್ರಃ ಪರಾಜಾವರ್ತತ । ತಮಬ್ರವೀದಸೌ ಯ ಏಷಿ ವೀರಕ ಇತ್ಯಾದಿನಾ** ॥
>
> (ಶಾ. ಬ್ರಾ )

ಅಪಾಲಾ ಎಂಬ ಸ್ತ್ರೀಯು ನದಿಯಿಂದ ಹಿಂತಿರುಗಿ ಬರುವಾಗ ಅವಳಿಗೆ ಅಲ್ಲಿ ಬೆಳೆದಿದ್ದ ಸೋಮಲತೆಯು ಸಿಕ್ಕಿತು ಅದನ್ನು ಕಿತ್ತು ಹಲ್ಲಿನಿಂದ ಸಿಗಿದು ತಿನ್ನುತ್ತಾ ಬರುತ್ತಿರುವಾಗ ಹಲ್ಲಿನಿಂದ ಸಿಗಿಯುವ ಶಬ್ದವು ಸೋಮಲತೆಗಳನ್ನು ಕಲ್ಲಿನಿಂದ ಕುಟ್ಟುವ ಶಬ್ದದಂತೆ ಕೇಳಿಸುತ್ತಿತ್ತು. ಆದ್ದರಿಂದ ಈ ಶಬ್ದವು ಸೋಮಲತೆಯನ್ನು ಕಲ್ಲಿನಿಂದ

ಕುಟ್ಟುವ ಶಬ್ದವೇ ಇರಬಹುದೆಂದು ಇಂದ್ರನು ತಿಳಿದು ಅಲ್ಲಿಗೆ ಬೇಗ ಬಂದನು. ಆಗ ಆ ಸ್ತ್ರೀಯು ಇಂದ್ರನನ್ನು ಕುರಿತು ಎಲೈ ಪುರುಷನೇ, ನೀನು ಈ ಶಬ್ದವನ್ನು ಕೇಳಿ ಓಡಿಬಂದೆಯಷ್ಟೆ. ಇದು ನನ್ನ ಹಲ್ಲಿನಿಂದ ಹೊರಡುವ ಶಬ್ದ ಮಾತ್ರ. ಸೋಮಲತೆಗಳನ್ನು ಕಲ್ಲುಗಳಿಂದ ಕುಟ್ಟುವ ಶಬ್ದವಲ್ಲ ಎನಲು ಇಂದ್ರನು ಖಿನ್ನಮಾನಸನಾಗಿ ಹಿಂತಿರುಗಿಹೋಗಲನುವಾದನು. ಅದನ್ನು ಕಂಡು ಆ ಸ್ತ್ರೀಯು **ಅಸೌ ಯ ಏಷಿ** ಎಂಬ ಮುಂದಿನ ಋಕ್ಕಿನಿಂದ ಇಂದ್ರನನು ಪ್ರಶ್ನಿಸುವಳು

॥ ಸಂಹಿತಾಪಾಠಃ ॥

ಅಸೌ ಯ ಏಷಿ ವೀರಕೋ ಗೃಹಂಗೃಹಂ ವಿಚಾಕಶತ್ ।
ಇಮಂ ಜಂಭಸುತಂ ಪಿಬ ಧಾನಾವಂತಂ ಕರಂಭಿಣಮಪೂಪವಂತ-
ಮುಕ್ಥಿನಂ ॥ ೨ ॥

॥ ಪದಪಾಠಃ ॥

ಅಸೌ । ಯಃ । ಏಷಿ । ವೀರಕಃ ಗೃಹಂऽಗೃಹಂ । ವಿऽಚಾಕಶತ್ ।
ಇಮಂ । ಜಂಭऽಸುತಂ । ಪಿಬ । ಧಾನಾऽವಂತಂ । ಕರಂಭಿಣಂ । ಅಪೂಪऽವಂತಂ । ಉಕ್ಥಿನಂ ॥ ೨ ॥

॥ ಸಾಯಣಭಾಷ್ಯಂ ॥

ಸಾ ಶಕ್ರಮಬ್ರವೀತ್ । ಹೇ ಇಂದ್ರ ವೀರಕೋ ವೀರಃ ಸಮರ್ಥಸ್ತ್ವಂ ಯೋಽಸೌ ತ್ವಂ ವಿಚಾಕಶತ್ ॥ ಕಾಶೃ ದೀಪ್ತೌ । ಯಙ್ಲುಕಿ ಶತರಿ ರೂಪಂ । ಧಾತೋರ್ಹ್ರಸ್ವತ್ವಾಭಾವಃ ॥ ಅತ್ಯರ್ಥಂ ದೀಪ್ಯಮಾನಃ ಸನ್ ಗೃಹಂ ಗೃಹಂ ಯಜಮಾನಗೃಹಂ ಪ್ರತಿ ಸೋಮಪಾನಾಯ ತ್ವಮೇಷಿ । ಗಚ್ಛಸಿ । ಅತಸ್ತ್ವಮತ್ರಾಪಿ ಜಂಭಸುತಂ ಮಮ ದಂತೈರಭಿಷುತಮಿಮಂ ಸೋಮಂ ಪಿಬ । ಕೀದೃಶಂ । ಧಾನಾವಂತಂ । ಧಾನಾ ಭೃಷ್ಟಯವಾಃ । ತದ್ವಂತಂ ಕರಂಭಿಣಂ ಸಕ್ತುಮಂತಮಪೂಪವಂತಂ ಪುರೋಡಾಶೇನ ಸಹಿತಮುಕ್ಥಿನಂ ಸ್ತೋತ್ರಾದಿಯುಕ್ತಮೇತಾದೃಶಂ ಸೋಮಮತ್ರೈವ ಪಿಬೇತಿ । ಸಾ ಸೋಮೇನ ಸಹ ಧಾನಾದೀನಾವೇದಯತ್ ಸ್ತೋತ್ರಂ ಚಾಕಾರ್ಷೀದಿತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ವೀರಕಃ**—ಪರಾಕ್ರಮಶಾಲಿಯಾದ । **ಅಸೌ**—ಪ್ರಸಿದ್ಧನಾದ । **ಯಃ ತ್ವಂ**—(ಯಾವ) ನೀನು । **ವಿಚಾಕಶತ್**—ನಿನ್ನ ಸ್ವಪ್ರಕಾಶದಿಂದ ಬೆಳಗುತ್ತಾ । **ಗೃಹಂಗೃಹಂ**—ಅನೇಕ ಯಜಮಾನರ ಗೃಹಕ್ಕೆ । **ಏಷಿ**—ಸೋಮಪಾನಾರ್ಥವಾಗಿ ಹೋಗುತ್ತೀಯೆ ಆದ್ದರಿಂದ ನೀನು । **ಜಂಭಸುತಂ**—ನನ್ನ ಹಲ್ಲುಗಳಿಂದ ಅಗಿದು ಅದರಿಂದ ತೊಟ್ಟಿಕ್ಕುತ್ತಿರುವುದೂ । **ಧಾನಾವಂತಂ**—ಧಾನ್ಯಮಿಶ್ರವಾದುದೂ । **ಕರಂಭಿಣಂ**—ಹಿಟ್ಟು

ಮಿಶ್ರಿತವಾದುದೂ । **ಅಪೂಪವಂತಂ**—ಪುರೋಡಾಶಾದಿಸಹಿತವಾದುದೂ । **ಉಕ್ಥಿನಂ**—ಮಂತ್ರಪಠನಪೂರ್ವಕವಾಗಿ ಅರ್ಪಿತವಾಗುವುದೂ ಆದ । **ಇಮಂ**—ಈ ಸೋಮರಸವನ್ನು । **ಪಿಬ**—ಪಾನಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಪರಾಕ್ರಮಶಾಲಿಯಾದ ನೀನು ನಿನ್ನ ಮಹತ್ಸ್ವರೂಪದಿಂದ ಬೆಳಗುತ್ತಾ ಪ್ರತಿ ಯಜಮಾನರ ಗೃಹಕ್ಕೂ ಸೋಮಪಾನಾರ್ಥವಾಗಿ ಹೋಗುತ್ತೀಯೆ. ಆದ್ದರಿಂದ ನೀನು, ಈಗ ನಾನು ನನ್ನ ಹಲ್ಲುಗಳಿಂದ ಅಗಿಯುತ್ತಿರುವ ಸೋಮಲತೆಗಳಿಂದ ತೊಟ್ಟಿಕ್ಕುತ್ತಿರುವುದೂ ಧಾನ್ಯ ಹಿಟ್ಟು ಮತ್ತು ಪುರೋಡಾಶಾದಿಗಳಿಂದ ಮಿಶ್ರಿತವಾದುದೂ ಮಂತ್ರಪೂರ್ವಕವಾಗಿ ಅರ್ಪಿತವಾಗುವುದೂ ಆದ ಈ ಸೋಮರಸವನ್ನು ಪಾನಮಾಡು.

## English Translation

You, who goes from house to house, a hero bright in your splendour, drink this Soma pressed by my teeth, together with fried grains of barley, the karambha, cakes and hymns

॥ ಸಂಹಿತಾಪಾಠಃ ॥

ಆ ಚನ ತ್ವಾ ಚಿಕಿತ್ಸಾಮೋಽಧಿ ಚ ನ ತ್ವಾ ನೇಮಸಿ ।
ಶನೈರಿವ ಶನಕೈರಿವೇಂದ್ರಾಯೇಂದೋ ಪರಿ ಸ್ರವ ॥ ೩ ॥

॥ ಪದಪಾಠಃ ॥

ಆ । ಚನ । ತ್ವಾ । ಚಿಕಿತ್ಸಾಮಃ । ಅಧಿ । ಚನ । ತ್ವಾ । ನ । ಇಮಸಿ ।
ಶನೈಃಽಇವ । ಶನಕೈಃಽಇವ । ಇಂದ್ರಾಯ । ಇಂದೋ ಇತಿ । ಪರಿ । ಸ್ರವ ॥ ೩ ॥

॥ ಸಾಯಣಭಾಷ್ಯಂ ॥

ಪುನರಪಿ ಸಾ ತಮನಾದೃತ್ಯಾಹ । ಹೇ ಇಂದ್ರ । ಚನೇತಿ ನಿಪಾತಸಮುದಾಯೋಽವಧಾರಣಾರ್ಥೇ । ತ್ವಾ ತ್ವಾಮಾ ಚಿಕಿತ್ಸಾಮಃ । ಜ್ಞಾತುಮಿಚ್ಛಾಮ ಏವ । ಇಹ ಮಾರ್ಗ ಏವಾಗತಂ ತ್ವಾ ತ್ವಾಂ ನಾಧೀಮಸಿ । ನಾಧಿಗಚ್ಛಾಮಃ । ಅತ್ರಾಪಿ ಚನೇತ್ಯವಧಾರಣೇ । ಮಮ ಗೃಹಮಾಗಚ್ಛಂತಂ ತ್ವಾಮಿಂದ್ರ ಇತಿ ನ ಜಾನೀಮ ಏವೇತ್ಯಪಾಲಾ ತಮಿಂದ್ರಮುಕ್ತ್ವಾ ಸ್ವಾಸ್ಯೇ ಸ್ಥಿತಂ ಸೋಮಂ ಪ್ರತ್ಯಾಹ । ಹೇ ಇಂದೋ ಕ್ಷರಣಶೀಲ ಸೋಮ ಅಸ್ಮಾ ಆಗತಾಯೇಂದ್ರಾಯ ತದರ್ಥಂ ಪೂರ್ವಂ ಶನೈರ್ಮಂದಂ ಮಂದಂ ತತಃ ಶನಕೈರಿವ ॥ ಕುತ್ಸಿತಾರ್ಥೇಽಕಚ್॥ ಕುತ್ಸಿತಂ ಶನೈಃ ಶಕನೈಃ । ಕ್ಷಿಪ್ರಮಿತ್ಯರ್ಥಃ । ಕ್ಷಿಪ್ರಮೇವ ತ್ವಂ

ಪರಿ ಸ್ರವ । ಮದೀಯದಂಷ್ಟ್ರಾಭಿರಭಿಷೂಯಮಾಣಃ ಸನ್ ಪರಿತಃ ಕ್ಷರೇತಿ । ತಥಾ ಯಜ್ಞೇಷ್ವಪಿ ಗ್ರಾವಭಿರಭಿಷೂಯಮಾಣಃ ಸೋಮಃ ಪ್ರಥಮಂ ಶನೈಃ ಪರಿಸ್ರವತಿ ತತಃ ಶನಕೈಃ ಕ್ಷಿಪ್ರಮಿತಿ ತದಭಿಪ್ರಾಯೇಣೋಕ್ತಂ । ತತ ಇಂದ್ರ ಏತದ್ವಾಕ್ಯಂ ಶ್ರುತ್ವಾ ತದಾನೀಮೇವಮಭಿಷುತಂ ಸೋಮಂ ಯಜ್ಞಸ್ಥಾನೀಯಾದಪಾಲಾಮುಖಾದೇವಾಧಾಸೀತ್ । ಉಕ್ತಾರ್ಥಃ ಶಾಟ್ಯಾಯನಕಬ್ರಾಹ್ಮಣೇ ಸ್ಪಷ್ಟಮಭ್ಯಧಾಯಿ । ಅನಾದ್ರಿಯಮಾಣೈವ ತಮಬ್ರವೀದಾ ಚನ ತ್ವಾ ಚಿಕಿತ್ಸಾಮೋಽಧಿ ಚನ ತ್ವಾ ನೇಮಸೀತಿ । ಪುರಾ ಮಾಂ ಸರ್ವಯಚಾರ್ಪಾಲಾ ಸ್ವಾತ್ತೀತ್ಯುಪಪರ್ಯಾವರ್ತತ ಶನೈರಿವ ಶನಕೈರಿವೇಂದ್ರಾಯೇಂದೋ ಪರಿ ಸ್ರವೇತಿ ಹ ವಾ ಅಸ್ಯೈ ಮುಖಾತ್ಸೋಮಂ ನಿರಧಯತ್ಸೋಮಪೀಥ ಇಹ ವಾ ಅಸ್ಯ ಭವತಿ ಯ ಏವಂ ವಿದ್ವಾನ್ ಸ್ತ್ರೀಮುಪಜಿಘ್ರತೀತಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ತ್ವಾ ಚನ—ನಿನ್ನನ್ನೇ । ಆ ಚಿಕಿತ್ಸಾಮಃ—ತಿಳಿಯಲು ಇಚ್ಛಿಸುತ್ತೇವೆ । ತ್ವಾ—ಈ ಮಾರ್ಗದಲ್ಲಿ ಹೋಗುತ್ತಿರುವ ನಿನ್ನನ್ನು । ನ—ಈಗ । ಅಧಿ ಇಮಸಿ ಚನ—ತಿಳಿಯಲಾರದಾಗಿದ್ದೇವೆ । ಇಂದೋ—(ನನ್ನ ಬಾಯಿನಿಂದ) ತೊಟ್ಟಿಕ್ಕುತ್ತಿರುವ ಎಲೈ ಸೋಮವೇ । ಇಂದ್ರಾಯ—ಇಂದ್ರನಿಗಾಗಿ । ಶನೈಃ—(ಮೊದಲು) ಸ್ವಲ್ಪಸ್ವಲ್ಪವಾಗಿಯೂ (ಅನಂತರ) । ಶನಕೈಃ—ಬೇಗಬೇಗನೆ । ಪರಿ ಸ್ರವ—ಜಿನುಗುತ್ತಾ ಪ್ರವಹಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ನಾವು ನಿನ್ನ ಮಹತ್ವ್ಸರೂಪವನ್ನು ತಿಳಿಯಲಾರೆವು ಆದರೂ ತಿಳಿಯಬೇಕೆಂದು ಇಚ್ಛಿಸುತ್ತೇವೆ. ನನ್ನ ಬಾಯಿನಿಂದ ತೊಟ್ಟಿಕ್ಕುತ್ತಿರುವ ಎಲೈ ಸೋಮರಸವೇ, ಇಂದ್ರನ ಪಾನಾರ್ಥವಾಗಿ ಮೊದಲು ಸ್ವಲ್ಪಸ್ವಲ್ಪವಾಗಿ ಜಿನುಗುತ್ತಿದ್ದರೂ ಕ್ರಮೇಣ ಬೇಗಬೇಗನೆ ಜಿನುಗಿ ಹರಿದುಬಾ

## English Translation

We wish to know you, but here we know you not. O Soma, flow forth for Indra first slowly, then quickly.

॥ ಸಂಹಿತಾಪಾಠಃ ॥

ಕುವಿಚ್ಛಕತ್ಕುವಿತ್ಕರತ್ಕುವಿನ್ನೋ ವಸ್ಯಸಸ್ಕರತ್ ।
ಕುವಿತ್ಪತಿದ್ವಿಷೋ ಯತೀರಿಂದ್ರೇಣ ಸಂಗಮಾಮಹೈ ॥ ೪ ॥

॥ ಪದಪಾಠಃ ॥

ಕುವಿತ್ । ಶಕತ್ । ಕುವಿತ್ । ಕರತ್ । ಕುವಿತ್ । ನಃ । ವಸ್ಯಸಃ । ಕರತ್ ।
ಕುವಿತ್ । ಪತಿಽದ್ವಿಷಃ । ಯತೀಃ । ಇಂದ್ರೇಣ । ಸಂಽಗಮಾಮಹೈ ॥ ೪ ॥

॥ ಸಾಯಣಭಾಷ್ಯಂ ॥

**ಸೋಽಯಂ ಪೀಃಕವಾನಿಂದ್ರೋಽಸ್ಮಾನೇವಂ ಕರೋತ್ವಿತ್ಯಾಹ । ಸ ಇಂದ್ರಃ ಕುವಿದ್ಬಹುವಾರ-ಮಸ್ಮಾಞ್ಛಕತ್ । ಶಕ್ತಾನ್ ಸಮರ್ಥಾನ್ ಕರೋತು । ಕಿಂಚ ಕುವಿದ್ಬಹು ಚಾಸ್ಮಭ್ಯಂ ಕರತ್ । ಕರೋತು । ಕಿಂಚ ಸ ಏವೇಂದ್ರೋ ನೋಽಸ್ಮಾನ್ಕುವಿದ್ಬಹುಕೃತ್ವೋ ವಸ್ಯಸೋ ವಸೀಯಸೋಽತಿಶ-ಯೇನ ವಸುಮತಃ ಕರೋತು ॥ ಕರೋತೇಃ ಶಕ್ನೋತೇಶ್ಚ ಲೇಟ್ಯಡಾಗಮಃ ॥ ಇದಾನೀಮಾತ್ರೇಯ್ಯು-ಹಮೇವಂ ಕರಿಷ್ಯಾಮೀತಿ ವದತಿ । ಪೂರ್ವಂ ಕುವಿದ್ಬಹುಪತಿದ್ವಿಷಸ್ತ್ವಗ್ದೋಷಾತ್ಪತಿಭಿರ್ಭರ್ತೃಭಿರ್ಬಹು-ವಾರಂ ದ್ವಿಷ್ಟಾ ಅತ ಏವ ಯತೀಃ ಪತಿಭ್ಯಃ ಸಕಾಶಾದಿತೋ ಗಚ್ಛಂತ್ಯೋ ವಯಂ ಕೈಶ್ಚಿದಪ್ಯನೂಹ್ಯ-ಮಾನಾಃ ಸತ್ಯಃ ಸಂಪ್ರತೀಂದ್ರೇಣ ಸಹ ಸಂಗಮಾಮಹೈ । ಸಂಗಾಚ್ಛಾಮಹೈ । ಸರ್ವತ್ರ ಪೂಜಾರ್ಥೇ ಬಹುವಚನಂ । ಸಂಗಮಶಬ್ದೇನೇಂದ್ರೋಽಪಾಲಾಮುಚಕಮತೇತಿ ॥**

॥ ಪ್ರತಿಪದಾರ್ಥ ॥

(ಆ ಇಂದ್ರನು) **ಕುವಿತ್**—ಅನೇಕವಿಧವಾಗಿ । **ಶಕತ್**—ನಮ್ಮನ್ನು ಶಕ್ತರನ್ನಾಗಿ ಮಾಡಲಿ । **ಕುವಿತ್**—ಬಹಳವಾಗಿ । **ಕರತ್**—ನಮಗೆ ಕೊಡಲಿ । **ನಃ**—ನಮ್ಮನ್ನು । **ಕುವಿತ್**—ಬಹುವಿಧವಾಗಿ । **ವಸ್ಯಸಃ**—ಧನಯುಕ್ತರನ್ನಾಗಿ । **ಕರತ್**—ಮಾಡಲಿ । **ಕುವಿತ್**—ಬಹಳವಾಗಿ । **ಪತಿದ್ವಿಷಃ**—ನನ್ನ ತ್ವಗ್ದೋಷನಿಮಿತ್ತವಾಗಿ ಪತಿಯಿಂದ ದ್ವೇಷಿಸಲ್ಪಟ್ಟು । **ಯತೀಃ**—ಪತಿಯ ಸಮೀಪದಿಂದ ಹೊರಡಿಸಲ್ಪಟ್ಟಿರುವ ನಾವು (ನಾನು) ಈಗ । **ಇಂದ್ರೇಣ**—ಇಂದ್ರನೊಡನೆ । **ಸಂಗಮಾಮಹೈ**—ಸೇರಿಕೊಳ್ಳುವಂತಾಗಲಿ

॥ ಭಾವಾರ್ಥ ॥

ಇಂದ್ರನು ನಮ್ಮನ್ನು ಬಹಳವಾಗಿ ಶಕ್ತರನ್ನಾಗಿ ಮಾಡಿ ನಮಗೆ ಬಹುವಿಧವಾದ ಧನಾದಿಗಳನ್ನು ಕೊಡಲಿ. ನನ್ನ ತ್ವಗ್ದೋಷನಿಮಿತ್ತವಾಗಿ ಪತಿಯ ಗೃಹದಿಂದ ಹೊರದೂಡಲ್ಪಟ್ಟ ನಾನು ಇಂದ್ರನೊಡನೆ ಸೇರಿಕೊಳ್ಳುವಂತಾಗಲಿ.

English Translation

May (Indra) repeatedly make us powerful, may he do abundantly for us, may he repeatedly make us very rich, often hated by our husband and forced to leave him, may we be united to Indra.

॥ ಸಂಹಿತಾಪಾಠಃ ॥

ಇಮಾನಿ ತ್ರೀಣಿ ವಿಷ್ಟಪಾ ತಾನೀಂದ್ರ ವಿ ರೋಹಯ ।

ಶಿರಸ್ತತಸ್ಯೋರ್ವರಾಮಾದಿದಂ ಮ ಉಪೋದರೇ ॥ ೫ ॥

॥ ಪದಪಾಠಃ ॥

ಇಮಾನಿ । ತ್ರೀಣಿ । ವಿಷ್ಟಪಾ । ತಾನಿ । ಇಂದ್ರ । ವಿ । ರೋಹಯ ।

ಶಿರಃ । ತತಸ್ಯ । ಉರ್ವರಾಂ । ಆತ್ । ಇದಂ । ಮೇ । ಉಪ । ಉದರೇ ॥ ೫ ॥

॥ ಸಾಯಣಭಾಷ್ಯಂ ॥

ಇಂದ್ರೇಣ ಕಿಂ ಕಾಮಯಸೇ ತದ್ಬ್ರೂಹೀತ್ಯಾಮಿತ್ಯುಕ್ತಾ ಸಾ ವರಮನಯಾ ಪ್ರಾರ್ಥಯತೇ । ಹೇ ಇಂದ್ರ ಇಮಾನಿ ತ್ರೀಣಿ ವಿಷ್ಟಪಾನಿ ಸ್ಥಾನಾನಿ ಸಂತಿ । ತಾನಿ ತ್ರೀಣಿ ಸ್ಥಾನಾನಿ ವಿ ರೋಹಯ । ಉತ್ಪಾದಯ । ಕಾನಿ ತಾನಿ । ತತಸ್ಯ ಮಮ ಪಿತುಃ ರೋಮವರ್ಜಿತಂ ಶಿರಃ । ಖಲತಿಮಿತ್ಯರ್ಥಃ । ತಚ್ಛಾಪಗಮಯ । ರೋಮಶಂ ಕುರ್ವಿತ್ಯರ್ಥಃ । ಉರ್ವರಾಂ ತಸ್ಯೋಷರಂ ಕ್ಷೇತ್ರಂ ಸರ್ವಸಸ್ಯಾಢ್ಯಂ ಕುರು । ಆದನಂತರಂ ಮೇ ಮಮೋಪೋದರ ಉಪೋದರಸ್ಯ ಸಮೀಪೇ ಯದಿದಂ ಸ್ಥಾನಂ । ಗುಹ್ಯಮಿತ್ಯರ್ಥಃ। ತಚ್ಚ ತ್ವಗ್ದೋಷೇ ಸತ್ಯಸಂಜಾತರೋಮಕಂ । ತದಪಿ ತ್ವಗ್ದೋಷಪರಿಹಾರೇಣ ರೋಮಯುಕ್ತಂ ಕುರು। ಏತಾನಿ ತ್ರೀಣಿ ಸ್ಥಾನಾನಿ । ಏಷೋಽರ್ಥಃ ಶಾಟ್ಯಾಯನಕೇ ಪ್ರಪಂಚೇನೋಕ್ತಃ । ತಾಮಬ್ರವೀದಪಾಲೇ ಕಿಂ ಕಾಮಯಸೀತಿ । ಸಾಬ್ರವೀದಿಮಾನಿ ತ್ರೀಣಿ ವಿಷ್ಟಪೇತಿ ಖಲತಿರ್ಹಾಸ್ಯ ಪಿತಾ ಸ ತಂ ಹಾಖಲತಿಂ ಚಕಾರೋರ್ವರಾ ಹಾಸ್ಯ ನ ಜಜ್ಞೇ ಸೋ ಜಜ್ಞ । ಉಪಸ್ಥೇ ಹಾಸ್ಯೈ ರೋಮಾಣಿ ನಾಸುಸ್ತಾನ್ಯಸ್ಯೈ ಹ ಜಜ್ಞಿರ ಇತ್ಯಸ್ಯೋತ್ತರಾ ಭೂಯಸೇ ನಿವರ್ತನಾಯಾಪೌ ಚ ಯಾ ನ ಇತಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಇಮಾನಿ ತ್ರೀಣಿ ವಿಷ್ಟಪಾ—ಈ ಮೂರು ಸ್ಥಾನಗಳಿರುವವು । ತಾನಿ—ಅವುಗಳನ್ನು ಎಂದರೆ ಅವುಗಳಲ್ಲಿ । ವಿ ರೋಹಯ—ಉತ್ಪತ್ತಿಯಾಗುವಂತೆ ಮಾಡು । ತತಸ್ಯ ಶಿರಃ—ನನ್ನ ತಂದೆಯ ರೋಮವರ್ಜಿತವಾದ ಬೋಳುತಲೆಯನ್ನು ರೋಮಯುಕ್ತವನ್ನಾಗಿ ಮಾಡು । ಉರ್ವರಾಂ—ತನ್ನ ತಂದೆಯ ಕರಲು ಭೂಮಿಯನ್ನು ಸಸ್ಯಯುಕ್ತವನ್ನಾಗಿ ಮಾಡು । ಆತ್—ಅನಂತರ । ಮೇ—ನನ್ನ । ಉಪ ಉದರೇ—ಕಿಬ್ಬೊಟ್ಟೆಯ ಸಮೀಪದಲ್ಲಿರುವ । ಇದಂ—ಈ ಗುಹ್ಯಪ್ರದೇಶವನ್ನು ರೋಮಯುಕ್ತವನ್ನಾಗಿ ಮಾಡು.

। ಭಾವಾರ್ಥ ।

ಎಲೈ ಇಂದ್ರನೇ, ಈಗ ನೀನು ಸರಿಪಡಿಸಬೇಕಾದ ಮೂರು ಸ್ಥಾನಗಳಿರುವವು. ನನ್ನ ತಂದೆಯ ಕೂದಲಿಲ್ಲದ ಬೋಳುತಲೆಯಲ್ಲಿ ಪುನಃ ಕೂದಲುಗಳು ಬೆಳೆಯುವಂತೆ ಮಾಡು. ಮತ್ತು ಅವನ ಬಂಜರು ಭೂಮಿಯಾದ ಹೊಲದಲ್ಲಿ ಸಸ್ಯಾದಿಗಳು ಬೆಳೆದು ಫಲಸಮೃದ್ಧಿಯಾಗುವಂತೆ ಮಾಡು ಮತ್ತು ಚರ್ಮರೋಗದ ನಿಮಿತ್ತವಾಗಿ ನನ್ನ ಕಿಬ್ಬೊಟ್ಟೆಯ ಕೆಳಭಾಗದಲ್ಲಿ ಗುಹ್ಯಪ್ರದೇಶದಲ್ಲಿ ಕೂದಲು ಬೆಳೆಯದೇ ಇರುವುದನ್ನು ಸರಿಪಡಿಸಿ ಮತ್ತೆ ಕೂದಲು ಬೆಳೆಯುವಂತೆ ಮಾಡು.

English Translation

These three places,—you cause them all to grow,—my father's (bald) head, his (barren) field, and my body

॥ ಸಂಹಿತಾಪಾಠಃ ॥

ಅಸೌ ಚ ಯಾ ನ ಉರ್ವರಾದಿಮಾಂ ತನ್ವಂ೧ ಮಮ ।
ಅಥೋ ತತಸ್ಯ ಯಚ್ಛಿರಃ ಸರ್ವಾ ತಾ ರೋಮಶಾ ಕೃಧಿ ॥ ೬ ॥

॥ ಪದಪಾಠಃ ॥

ಅಸೌ । ಚ । ಯಾ । ನಃ । ಉರ್ವರಾ । ಆತ್ । ಇಮಾಂ । ತನ್ವಂ । ಮಮ ।
ಅಥೋ ಇತಿ । ತತಸ್ಯ । ಯತ್ । ಶಿರಃ । ಸರ್ವಾ । ತಾ । ರೋಮಶಾ । ಕೃಧಿ ॥ ೬ ॥

॥ ಸಾಯಣಭಾಷ್ಯಂ ॥

ಉಕ್ತಮೇವಾರ್ಥಮನಯಾ ವಿವೃಣೋತಿ । ನೋಽಸ್ಮಾಕಂ ಪಿತುರ್ಯಾಸಾ ಉರ್ವರಾ ಯದಿದಮೂಷರಂ ಕ್ಷೇತ್ರಮಸ್ತಿ । ಆದನಂತರಂ ಮಮೇಮಾಂ ತನ್ವಮಿದಂ ತ್ವಗ್ದೋಷದುಷ್ಟಂ ಗುಹ್ಯ-ಸ್ಥಾನಂ । ಅಥೋ ಅಥಾಪಿ ಚ ತತಸ್ಯ ತಾತಸ್ಯ ಯಚ್ಛಿರೋ ರೋಮವರ್ಜಿತಮಸ್ತಿ । ಏತಾನಿ ಸರ್ವಾ ಸರ್ವಾಣಿ ತಾನೀಮಾನಿ ತ್ರೀಣಿ ಸ್ಥಾನಾನಿ ರೋಮಶಾ ರೋಮಶಾನಿ ಕೃಧಿ । ಕುರು ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ನಃ**—ನಮ್ಮ (ತಂದೆಯ) । **ಉರ್ವರಾ**—ಬಂಜರುಭೂಮಿಯಾದ । **ಯಾ ಅಸೌ**—ಯಾವ ಹೊಲವಿದೆಯೋ ಅದನ್ನೂ । **ಆತ್**—ಅನಂತರ । **ಮಮ**—ನನ್ನ । **ಇಮಾಂ ತನ್ವಂ**—ಚರ್ಮರೋಗದಿಂದ ಕೂಡಿದ ಶರೀರವನ್ನೂ ಎಂದರೆ ಗುಹ್ಯಪ್ರದೇಶವನ್ನೂ । **ಅಥೋ**—ಅನಂತರ । **ತತಸ್ಯ**—ನನ್ನ ತಂದೆಯ । **ಯತ್ ಶಿರಃ**-ರೋಮವರ್ಜಿತವಾದ ಬೋಳುತಲೆಯು ಯಾವುದಿದೆಯೋ ಅದನ್ನೂ । **ಸರ್ವಾ**-ಈ ಮೂರು ಪ್ರದೇಶಗಳನ್ನೂ । **ರೋಮಶಾ**—ರೋಮಯುಕ್ತವನ್ನಾಗಿ ಎಂದರೆ ಚೆನ್ನಾಗಿ ಕೂದಲು ಬೆಳೆಯುವಂತೆ । **ಕೃಧಿ**—ಮಾಡು

॥ ಭಾವಾರ್ಥ ॥

ಎಲೈ ಇಂದ್ರನೇ, ನನ್ನ ತಂದೆಯ ಬಂಜರುಭೂಮಿಯಾದ ಹೊಲದಲ್ಲಿ ಸಸ್ಯಾದಿಗಳು ಬೆಳೆಯುವಂತೆಯೂ, ಚರ್ಮರೋಗದಿಂದ ನನ್ನ ಗುಹ್ಯಪ್ರದೇಶದಲ್ಲಿ ಕೂದಲು ಬೆಳೆಯದಿರುವುದರಿಂದ ಅಲ್ಲಿ ಪುನಃ ಕೂದಲು ಬೆಳೆಯುವಂತೆಯೂ, ಮತ್ತು ನನ್ನ ತಂದೆಯ ಬೋಳು ತಲೆಯಲ್ಲಿ ಮುಂಚಿನಂತೆ ಕೂದಲು ಬೆಳೆಯುವಂತೆಯೂ ಮಾಡು.

English Translation

This field which is our (father's), and this my body and the head of my father,—you make all these bear a crop.

॥ ಸಂಹಿತಾಪಾಠಃ ॥

ಖೇ ರಥಸ್ಯ ಖೇಽನಸಃ ಖೇ ಯುಗಸ್ಯ ಶತಕ್ರತೋ ।
ಅಪಾಲಾಮಿಂದ್ರ ತ್ರಿಷ್ಪೂತ್ವ್ಯಕೃಣೋಃ ಸೂರ್ಯತ್ವಚಂ ॥ ೭ ॥

॥ ಪದಪಾಠಃ ॥

ಖೇ । ರಥಸ್ಯ । ಖೇ । ಅನಸಃ । ಖೇ । ಯುಗಸ್ಯ । ಶತಕ್ರತೋ ಇತಿ ಶತಽಕ್ರತೋ ।
ಅಪಾಲಾಂ । ಇಂದ್ರ । ತ್ರಿಃ । ಪೂತ್ವೀ । ಅಕೃಣೋಃ । ಸೂರ್ಯಽತ್ವಚಂ ॥ ೭ ॥

॥ ಸಾಯಣಭಾಷ್ಯಂ ॥

ಅನಯಾಪಾಲಾಂ ಸೂರ್ಯಸದೃಶಪ್ರಭಾಮಕರೋದಿತ್ಯಾಹ । ಹೇ ಶತಕ್ರತೋ ಹೇ ಶತಸಂಖ್ಯಾಕಯಜ್ಞ ಬಹುವಿಧಪ್ರಜ್ಞ ವಾ ಹೇ ಇಂದ್ರ ರಥಸ್ಯ ಸ್ಥೂಲಸ್ಯ ಖೇ ಪೃಥುತರೇ ಛಿದ್ರೇ ತಥಾನಸಃ ಶಕಟಸ್ಯ ಖೇ ತದಪೇಕ್ಷಯಾಲ್ಪೇ ಛಿದ್ರೇ ಯುಗಸ್ಯ ಖೇ ಚಾಲ್ಪತರೇ ಸೂಕ್ಷ್ಮೇ ಛಿದ್ರೇ ರಥಶಕಟಯುಗಾನಾಂ ಛಿದ್ರೇಷು ತ್ವಗ್ದೋಷಪರಿಹಾರಾಯ ತ್ರಿಸ್ತ್ರಿವಾರಂ ನಿಷ್ಕರ್ಷಣೇನ ಪೂತ್ವೀ ಶೋಧಯಿತ್ವಾ ತತೋಽಪಾಲಾಮೇತನ್ನಾಮಿಕಾಮತ್ರಿಸುತಾಂ ಬ್ರಹ್ಮವಾದಿನೀಂ ಸೂರ್ಯತ್ವಚಂ ಸೂರ್ಯಸಮಾನತ್ವಚಮಕೃಣೋಃ । ಅಕರೋಃ । ಕಲ್ಯಾಣತನುರೂಪಭಾಜಮಕರೋರಿತ್ಯರ್ಥಃ । ಶಾಟ್ಯಾಯನಕಬ್ರಾಹ್ಮಣೇ ಸ್ಪಷ್ಟಮಭಿಹಿತಃ । ತಾಂ ಖೇ ರಥಸ್ಯಾತ್ಯಬೃಹತ್ಸಾ ಗೋಧಾಘನತ್ವಾಂ ಖೇಽನಸೋಽತ್ಯಬೃಹತ್ಸಾ ಸಂಶ್ಲಿಷ್ಟಕಾಭವತ್ತದೇಷಾಭ್ಯನೂಚ್ಯತೇ ಖೇ ರಥಸ್ಯ ಖೇಽನಸ ಇತಿ । ತಸ್ಯೈ ಹ ಯತ್ಕಲ್ಯಾಣತಮಂ ರೂಪಾಣಾಂ ತದ್ರೂಪಮಾಸೇತಿ ತ್ವಗ್ದೋಷಾಪನಯನಾಯಾಕ್ಷಾದಿದ್ವಾರೇಷ್ವತಿಕರ್ಷಣಮಿತಿ । ಯಸ್ತ್ವಗ್ದೋಷದೂಷಿತಃ ಸನ್ನೇತತ್ಸೂಕ್ತಂ ಪಠತಿ ತಸ್ಯ ತ್ವಗ್ದೋಷಮಪಗಮಯ್ಯ ಸೂರ್ಯಸದೃಶಕಾಂತಿಮಿಂದ್ರಃ ಕರೋತೀತಿ ಸೂಕ್ತಂ ಪ್ರಶಸ್ಯತೇ ॥

॥ ಪ್ರತಿಪದಾರ್ಥ ॥

**ಶತಕ್ರತೋ**—ಬಹು ಕರ್ಮಯುಕ್ತನಾದ । **ಇಂದ್ರ**—ಎಲೈ ಇಂದ್ರನೇ । **ರಥಸ್ಯ**—ನಿನ್ನ ರಥದ । **ಖೇ**—ಮಧ್ಯದಲ್ಲಿರುವ ದೊಡ್ಡ ಛಿದ್ರದಲ್ಲಿಯೂ, ಹಾಗೆಯೇ **ಅನಸಃ**—ಗಾಡಿಯ (ಮಧ್ಯದಲ್ಲಿರುವ) । **ಖೇ**—ಸಾಧಾರಣವಾದ ಛಿದ್ರದಲ್ಲಿಯೂ । **ಯುಗಸ್ಯ**—ಗಾಡಿಯ ನೊಗದ । **ಖೇ**—ಸಣ್ಣದಾದ ಛಿದ್ರದಲ್ಲಿಯೂ । **ತ್ರಿಃ**—ಮೂರಾವರ್ತಿ ನುಗ್ಗಿಸಿ । **ಪೂತ್ವೀ**—ಶುದ್ಧಿಗೊಳಿಸಿ । **ಅಪಾಲಾಂ**—ಅಪಾಲಾ ಎಂಬ ಅತ್ರಿಪುತ್ರಿಯನ್ನೂ । **ಸೂರ್ಯತ್ವಚಂ**—ಸೂರ್ಯನಂತೆ ಪ್ರಕಾಶಮಾನವಾದ ಚರ್ಮವುಳ್ಳವಳನ್ನಾಗಿ । **ಅಕೃಣೋಃ**—ಮಾಡಿರುವೆ.

॥ ಭಾವಾರ್ಥ ॥

ಬಹು ಸಾಹಸಕರ್ಮಗಳನ್ನೆಸಗುವ ಎಲೈ ಇಂದ್ರನೇ ನೀನು ನಿನ್ನ ರಥದ ಮಧ್ಯದಲ್ಲಿರುವ ಛಿದ್ರದಲ್ಲಿ ಎಂದರೆ ದೊಡ್ಡ ಕಂಡಿಯಲ್ಲಿಯೂ ಅನಂತರ ಗಾಡಿಯ ಕಂಡಿಯಲ್ಲಿಯೂ, ಅನಂತರ ನೊಗದ ಸಣ್ಣ ರಂಧ್ರದಲ್ಲಿಯೂ ಅಪಾಲೆ ಎಂಬ ಅತ್ರಿಪುತ್ರಿಯನ್ನು ಮೂರಾವರ್ತಿ ನುಗ್ಗಿಸಿ ಅವಳನ್ನು ಚರ್ಮರೋಗರಹಿತಳನ್ನಾಗಿಯೂ, ಶುದ್ಧಳನ್ನಾಗಿಯೂ ಮಾಡಿ ಆ ಸ್ತ್ರೀಯು ಸೂರ್ಯನಂತೆ ಶರೀರಕಾಂತಿಯಿಂದ ಬೆಳಗುವಂತೆ ಮಾಡಿರುತ್ತೀಯೆ.

## English Translation

Thrice, Shatakratu, you purify Apala, in the hole of the chariot, in the hole of the cart, and in the hole of the yoke, and you made her with a skin resplendent like the sun

॥ ವಿಶೇಷವಿಷಯಗಳು ॥

ಈ ಸೂಕ್ತದ ಏಳು ಋಕ್ಕುಗಳಲ್ಲಿಯೂ ಹೇಳಿರುವ ಪ್ರತ್ಯೇಕ ವಿಷಯಗಳನ್ನು ಕ್ರೋಢೀಕರಿಸಿ ಅರ್ಥಯುಕ್ತವಾದ ಇತಿಹಾಸವನ್ನಾಗಿ ಮಾಡಿರುವ ವಿವರಣೆಯನ್ನು ಈ ಸೂಕ್ತದ ಪೀಠಿಕೆಯಲ್ಲಿಯೇ ವಿವರಿಸಲಾಗಿದೆ, ಅದನ್ನು ಪ್ರಾರಂಭದಲ್ಲಿ ಓದಿದರೆ ಸೂಕ್ತದ ಋಕ್ಕುಗಳ ಅಭಿಪ್ರಾಯವು ಮುಂದಟ್ಟಾಗುವುದು.

## ತೊಂಭತ್ತೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪಾಂತಮಾ ವ ಇತಿ ತ್ರಯಸ್ತ್ರಿಂಶದೃಚಂ ದ್ವಾದಶಂ ಸೂಕ್ತಮಾಂಗಿರಸಸ್ಯ ಶ್ರುತಕಕ್ಷಸ್ಯ ಸುಕಕ್ಷಸ್ಯ ವಾರ್ಷಮೈಂದ್ರಂ । ಆದ್ಯಾನುಷ್ಟುಪ್ ಶಿಷ್ಟಾ ಗಾಯತ್ರ್ಯಃ । ತಥಾನುಕ್ರಮ್ಯತೇ । ಪಾಂತಂ ತ್ರಯಸ್ತ್ರಿಂಶಚ್ಛ್ರುತಕಕ್ಷಃ ಸುಕಕ್ಷೋ ವಾದ್ಯಾನುಷ್ಟುಬಿತಿ ॥ ಮಹಾವ್ರತೇ ಗಾಯತ್ರತೃಚಾಶೀತೌ ಪ್ರಥಮಾವರ್ಜಮಿದಂ ಸೂಕ್ತಮುತ್ತರಂ ಚ । ಪಂಚಮಾರಣ್ಯಕೇ ಸೂತ್ರಿತಂ ಚ । ಪುರುಹೂತಂ ಪುರುಷ್ಟುತಮಿತಿ ಶೇಷಃ । ಐ ಆ. ೫.೨.೩ । ಇತಿ ॥ ಪ್ರಥಮೇ ರಾತ್ರಿಪರ್ಯಾಯೇ ಹೋತುಃ ಶಸ್ತ್ರ ಆದ್ಯೌ ತೃಚೌ ಸ್ತೋತ್ರಿಯಾನುರೂಪೌ । ಸೂತ್ರಿತಂ ಚ । ಪಾಂತಮಾ ವೋ ಅಂಧಸೋಽಪಾದು ಶಿಪ್ರಿನ್ನಂಧಸಃ । ಆ ೬.೪ । ಇತಿ ॥**

ಅನುವಾದವು—**ಪಾಂತಮಾ ವಃ** ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಮೂವತ್ತಮೂರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಶ್ರುತಕಕ್ಷ ಅಥವಾ ಸುಕಕ್ಷ ಎಂಬುವನು ಋಷಿಯು, ಇಂದ್ರನು ದೇವತೆಯು; ಈ ಸೂಕ್ತದ ಮೊದಲಿನ ಋಕ್ಕು ಅನುಷ್ಟುಪ್‌ಛಂದಸ್ಕವು. ಉಳಿದ ಋಕ್ಕುಗಳು ಗಾಯತ್ರೀಛಂದಸ್ಕವು ಅನುಕ್ರಮಣಿಕೆಯಲ್ಲಿ—**ಪಾಂತಂ ತ್ರಯಸ್ತ್ರಿಂಶಚ್ಛ್ರುತಕಕ್ಷಃ ಸುಕಕ್ಷೋ ವಾದ್ಯಾನುಷ್ಟುಪ್** ಎಂದು ಹೇಳಿರುವುದು. ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಿಗಾಗಿಯೂ ಗಾಯತ್ರೀ

ಛಂದಸ್ಸಿನ ಋಕ್ಕುಗಳಿಗಾಗಿಯೂ ಈ ಸೂಕ್ತದ ಮೊದಲನೆಯ ಋಕ್ಕನ್ನು ಬಿಟ್ಟು ಉಳಿದ ಋಕ್ಕುಗಳ ಮತ್ತು ಮುಂದಿನಸೂಕ್ತದ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ—**ಪುರುಹೂತಂ ಪುರುಷ್ಟುತಮಿತಿ ಶೇಷಃ** ಎಂಬ ವಾಕ್ಯದಿಂದ (ಐ. ಆ ೫-೨ ೩) ನಿರ್ದಿಷ್ಟವಾಗಿರುವುದು ಮತ್ತು ಪ್ರಥಮರಾತ್ರಿಪರ್ಯಾಯದಲ್ಲಿ ಹೋತೃವು ಪಠಿಸುವ ಶಸ್ತ್ರಮಂತ್ರಗಳಲ್ಲಿ ಈ ಸೂಕ್ತದ ಎರಡು ತೃಚಗಳನ್ನು (ಆರು ಋಕ್ಕುಗಳನ್ನು) ಸ್ತೋತ್ರಿಯ ಮತ್ತು ಅನುರೂಪತೃಚಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪಾಂತಮಾ ವೋ ಅಂಧಸೋಽಪಾದು ಶಿಪ್ರ್ಯಂಧಸಃ** ಎಂಬ ಸೂತ್ರದಿಂದ (ಆ. ೬-೪) ವಿವೃತವಾಗಿರುವುದು

## ಸೂಕ್ತ—೯೨

**ಮಂಡಲ—೮ ॥ ಅನುವಾಕ—೯ ॥ ಸೂಕ್ತ—೯೨ ॥**
**ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೧೫, ೧೬, ೧೭, ೧೮, ೧೯, ೨೦ ॥**
ಸೂಕ್ತದಲ್ಲಿರುವ ಋಕ್ಸಂಖ್ಯೆ—೩೩ ॥
ಋಷಿಃ—ಶ್ರುತಕಕ್ಷಃ ಸುಕಕ್ಷೋ ವಾ ॥
ದೇವತಾ—ಇಂದ್ರಃ ॥
ಛಂದಃ—೧ ಅನುಷ್ಟುಪ್ । ೨-೩೩ ಗಾಯತ್ರೀ ॥

॥ ಸಂಹಿತಾಪಾಠಃ ॥

ಪಾಂತಮಾ ವೋ ಅಂಧಸ ಇಂದ್ರಮಭಿ ಪ್ರ ಗಾಯತ ।
ವಿಶ್ವಾಸಾಹಂ ಶತಕ್ರತುಂ ಮಂಹಿಷ್ಠಂ ಚರ್ಷಣೀನಾಂ ॥ ೧ ॥

॥ ಪದಪಾಠಃ ॥

ಪಾಂತಂ । ಆ । ವಃ । ಅಂಧಸಃ । ಇಂದ್ರಂ । ಅಭಿ । ಪ್ರ । ಗಾಯತ ।
ವಿಶ್ವಽಸಹಂ । ಶತಽಕ್ರತುಂ । ಮಂಹಿಷ್ಠಂ । ಚರ್ಷಣೀನಾಂ ॥ ೧ ॥

॥ ಸಾಯಣಭಾಷ್ಯಂ ॥

ಹೇ ಋತ್ವಿಜಃ ವೋ ಯುಷ್ಮದೀಯಮಂಧಸಃ ಸೋಮಲಕ್ಷಣಮನ್ನಮಾ ಪಾಂತಮಾಭಿಮುಖ್ಯೇನ ಪಿಬಂತಂ ॥ ಪಾ ಪಾನೇ । ಛಾಂದಸಃ ಶಪೋ ಲುಕ್ । ಸರ್ವೇ ವಿಧಯಶ್ಛಂದಸಿ ವಿಕಲ್ಪ್ಯಂತ ಇತಿ ನ ಲೋಕಾವ್ಯಯೇತಿ ಷಷ್ಠೀಪ್ರತಿಷೇಧಾಭಾವಃ । ತತೋಽಂಧಸ ಇತ್ಯಸ್ಯ ಕರ್ತೃಕರ್ಮಣೋರಿತಿ ಷಷ್ಠೀ ॥ ಸೋಮಮಾಭಿಮುಖ್ಯೇನ ಪಿಬಂತಮೇತಾದೃಶಮಿಂದ್ರಂ ಪ್ರ ಗಾಯತ । ಪ್ರಕರ್ಷೇಣಾಭಿಷ್ಟುತ । ಕೀದೃಶಂ । ವಿಶ್ವಸಹಂ ಸರ್ವೇಷಾಂ ಶತ್ರೂಣಾಮಭಿಭವಿತಾರಂ ಸರ್ವೇಷಾಂ ಭೂತಜಾತಾನಾಂ ವಾ ಅತ ಏವ ಶತಕ್ರತುಂ ಬಹುವಿಧಪ್ರಜ್ಞಂ ಬಹುವಿಧಕರ್ಮಾಣಂ ವಾ ಚರ್ಷಣೀನಾಂ ಮನುಷ್ಯಾಣಾಂ ಮಂಹಿಷ್ಠಂ ಧನಸ್ಯ ದಾತೃತಮಂ । ಯದ್ವಾ । ಯಜಮಾನಾನಾಂ ಯಷ್ಟವ್ಯತ್ವೇನ ಪೂಜನೀಯಮಿಂದ್ರಂ ಗಾಯತೇತಿ ಸಮನ್ವಯಃ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಗ್ಜನರೇ) **ವಃ**—ನಿಮ್ಮ । **ಅಂಧಸಃ**—ಸೋಮರೂಪವಾದ ಅನ್ನವನ್ನು । **ಆ ಪಾತಂ**—ಅಭಿಲಕ್ಷಿಸಿ ಅದನ್ನು ಪಾನಮಾಡುವವನೂ । **ವಿಶ್ವಸಹಂ**—ಸಮಸ್ತ ಶತ್ರುಗಳನ್ನೂ ಸೋಲಿಸುವವನೂ । **ಶತಕ್ರತುಂ**—ಅನೇಕ ಕರ್ಮಕರ್ತನೂ । **ಚರ್ಷಣೀನಾಂ**—ತನ್ನನ್ನು ಭಜಿಸುವ ಮನುಷ್ಯರಿಗೆ । **ಮಂಹಿಷ್ಠಂ**—ಅತಿಶಯವಾಗಿ ಧನವನ್ನು ಕೊಡುವವನೂ ಆದ । **ಇಂದ್ರಂ**—ಇಂದ್ರನನ್ನುದ್ದೇಶಿಸಿ । **ಪ್ರ ಗಾಯತ**—ವಿಶೇಷರೀತಿಯಿಂದ ಸ್ತುತಿಸಿ ಗಾನಮಾಡಿರಿ.

॥ ಭಾವಾರ್ಥ ॥

ಎಲೈ ಋತ್ವಿಗ್ಜನರೇ, ನೀವು ಸಿದ್ಧಪಡಿಸಿರುವ ಸೋಮವನ್ನು ಪಾನಮಾಡುವವನೂ, ಸಮಸ್ತ ಶತ್ರುಗಳನ್ನೂ ಸೋಲಿಸುವವನೂ, ಅನೇಕ ಸಾಹಸ ಕರ್ಮಕರ್ತನೂ, ಯಜಮಾನರಿಗೆ ಅತಿಶಯವಾಗಿ ಧನಾದಿಗಳನ್ನು ಕೊಡುವವನೂ ಆದ ಇಂದ್ರನನ್ನು ವಿಶೇಷರೀತಿಯಿಂದ ಸ್ತುತಿಸಿ ಗಾನಮಾಡಿರಿ.

English Translation

Sing, priests, that Indra, who drinks your offered beverage,—the foe-subduing Shatakratu, most liberal of men.

॥ ಸಂಹಿತಾಪಾಠಃ ॥

ಪುರುಹೂತಂ ಪುರುಷ್ಟುತಂ ಗಾಥಾನ್ಯಂ೧ ಸನಶ್ರುತಂ ।
ಇಂದ್ರ ಇತಿ ಬ್ರವೀತನ ॥ ೨ ॥

॥ ಪದಪಾಠಃ ॥

ಪುರುಽಹೂತಂ । ಪುರುಽಸ್ತುತಂ । ಗಾಥಾನ್ಯಂ । ಸನಽಶ್ರುತಂ ।
ಇಂದ್ರಃ । ಇತಿ । ಬ್ರವೀತನ ॥ ೨ ॥

॥ ಸಾಯಣಭಾಷ್ಯಂ ॥

ಹೇ ಋತ್ವಿಗ್ಯಜಮಾನಾಃ ಪುರುಹೂತಂ ಯಜ್ಞೇಷು ಬಹುಭಿರಾಹೂತಂ ಪುರುಷ್ಟುತಂ ಬಹುಭಿಃ ಸ್ತೋತ್ರಶಸ್ತ್ರಾದಿಭಿಃ ಸ್ತುತಂ ಅತ ಏವ ಗಾಥಾನ್ಯಂ ಗಾಥಾಯೋಗ್ಯಂ ಗಾತವ್ಯಂ ಸನಶ್ರುತಂ ಸನಾತನತಯಾ ಪ್ರಸಿದ್ಧಂ ಏವಂವಿಧಂ ದೇವಮಿಂದ್ರ ಇತಿ ಸ್ತುಯಾಯಂ ಬ್ರವೀತನ । ಬ್ರೂಯಾತ ॥ ಬ್ರೂಞ್ ವ್ಯಕ್ತಾಯಾಂ ವಾಚೀತ್ಯಸ್ಯ ಲೋಟಿ ವ್ಯತ್ಯಯೇನ ಶ್ನುಮಸ್ತನಬಾದೇಶಃ । ಅತ ಏವ ಗುಣಃ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಗ್ಯಜಮಾನರೇ) **ಪುರುಹೂತಂ**— ಯಜ್ಞಗಳಲ್ಲಿ ಅನೇಕರಿಂದ ಆಹ್ವಾನಿಸಲ್ಪಡುವವನೂ । **ಪುರುಷ್ಟುತಂ**— ಅನೇಕ ಶಸ್ತ್ರಮಂತ್ರಗಳಿಂದ ಸ್ತುತಿಸಲ್ಪಡುವವನೂ । **ಗಾಥಾನ್ಯಂ**— ಆದ್ದರಿಂದಲೇ ಗಾನದಿಂದ ಸ್ತುತಿಸಲ್ಪಡುವವನೂ । **ಸನಶ್ರುತಂ**— ಪುರಾತನನೂ ಆದ ದೇವನನ್ನು (ನೀವು) । **ಇಂದ್ರ ಇತಿ**— ಇಂದ್ರನೆಂದು । **ಬ್ರವೀತನ**— ಹೇಳಿರಿ.

॥ ಭಾವಾರ್ಥ ॥

ಎಲೈ ಋತ್ವಿಗ್ಯಜಮಾನರೇ, ಯಜ್ಞದಲ್ಲಿ ಅನೇಕರಿಂದ ಪ್ರಾರ್ಥಿತನಾಗಿ ಕರೆಯಲ್ಪಡುವವನೂ, ಅನೇಕ ಶಸ್ತ್ರಮಂತ್ರಗಳಿಂದಲೂ ಗಾನಗಳಿಂದಲೂ ಸ್ತುತಿಸಲ್ಪಡುವವನೂ ಪುರಾತನನಾದವನೂ ಆದ ಯಾವ ದೇವನುಂಟೋ ಅವನನ್ನೇ ಇಂದ್ರನೆಂದು ತಿಳಿದು ಹೇಳಿರಿ

## English Translation

Proclaim that deity as Indra, who is invoked by many, who is praised by many, who is worthy of songs and renowened as eternal.

॥ ಸಂಹಿತಾಪಾಠಃ ॥

ಇಂದ್ರ ಇನ್ನೋ ಮಹಾನಾಂ ದಾತಾ ವಾಜಾನಾಂ ನೃತುಃ ।
ಮಹಾ ಅಭಿಜ್ಞ್ವಾ ಯಮತ್ ॥ ೩ ॥

॥ ಪದಪಾಠಃ ॥

ಇಂದ್ರಃ । ಇತ್ । ನಃ । ಮಹಾನಾಂ । ದಾತಾ । ವಾಜಾನಾಂ । ನೃತುಃ ।
ಮಹಾನ್ । ಅಭಿऽಜ್ಞು । ಆ । ಯಮತ್ ॥ ೩ ॥

॥ ಸಾಯಣಭಾಷ್ಯಂ ॥

ಇಂದ್ರ ಇತ್ಪೂರ್ವೋಕ್ತಲಕ್ಷಣ ಇಂದ್ರ ಏವ ನೋಽಸ್ಮಭ್ಯಂ ಮಹಾನಾಂ ಮಹತಾಂ ವಾಜಾನಾಮನ್ನಾನಾಂ । ಯದ್ವಾ । ಮಹಾನಾಂ ವರ್ಣವ್ಯತ್ಯಯಃ ॥ ಮಘಾನಾಂ ಧನಾನಾಂ ವಾಜಾನಾಮನ್ನಾನಾ ಚ । ದಾತಾ ಭವತು । ಕೀದೃಶಃ । ನೃತುಃ ॥ ನೃತಿಶೃಧ್ಯೋಃ ಕೂಃ । ಉ. ೧-೯೩ । ಇತಿ ಕೂಪ್ರತ್ಯಯಃ ಹ್ರಸ್ವಶ್ಛಾಂದಸಃ ॥ ಸರ್ವಸ್ಯ ನರ್ತಯಿತಾ । ಯದ್ವಾ ॥ ನೃ ನಯೇ । ಔಣಾದಿಕಸ್ತುಪ್ರತ್ಯಯಃ । ಧಾತೋರ್ಹ್ರಸ್ವಶ್ಛಾಂದಸಃ ॥ ಸ್ತೋತೃಭ್ಯೋ ಗವಾದಿನೇತಾ । ಅತ ಏವ ಮಹಾನ್ ಸ ಇಂದ್ರೋಽಭಿಜ್ಞ್ವಭಿಗತಜಾನುಕಮಸ್ಮಭ್ಯಮಾ ಯಮತ್ । ಆಯಚ್ಛತು । ದದಾತು । ಯದ್ವಾ । ಸ ಇಂದ್ರೋಽಭಿಜ್ಞ್ವಸ್ಮದಭಿಮುಖಮಾಗಚ್ಛದ್ಧನಂ ಸ್ವಹಸ್ತಯೋಃ ಪರಿಗೃಹ್ಯಾಸ್ಮಾಸ್ನಯತು । ಧನಂ ಯತ್ವಾಸ್ಮಭ್ಯಂ ಪ್ರದಾತ್ವಿತ್ಯರ್ಥಃ ॥

ಪ್ರತಿಪದಾರ್ಥ

**ನಃ**—ನಮಗೆ (ಇಂದ್ರನು) | **ಮಹಾನಾಂ**—ಶ್ರೇಷ್ಠವಾದ (ಅಥವಾ ಬಹಳವಾದ) | **ವಾಜಾನಾಂ**—ಅನ್ನಗಳನ್ನು ಅಥವಾ ಧನಗಳನ್ನು | **ದಾತಾ**—ಕೊಡುವವನಾಗಲಿ | **ನೃತುಃ**—ಸ್ತೋತೃಜನರಿಗೆ ಗೋವುಗಳನ್ನು ತಂದುಕೊಡುವವನೂ | **ಮಹಾನ್**—ಮಹತ್ಸ್ವರೂಪನೂ ಆದ | **ಇಂದ್ರ ಇತ್**—ಹಿಂದೆ ಹೇಳಿದ ಆ ಇಂದ್ರನೇ | **ಅಬಿಜ್ಞು**—ಮೊಣಕಾಲೂರಿ ಪ್ರಾರ್ಥಿಸುತ್ತಿರುವ ನಮ್ಮಗಳಿಗೆ | **ಆ ಯಮತ್**—ಧನಾದಿಗಳನ್ನು ಕೊಡಲಿ.

॥ ಭಾವಾರ್ಥ ॥

ಸ್ತೋತೃಜನರಿಗೆ ಗವಾದಿಗಳನ್ನು ಒದಗಿಸಿಕೊಡುವವನೂ ಮಹತ್ಸ್ವರೂಪನೂ ಆದ ಆ ಇಂದ್ರನೇ, ಮೊಣಕಾಲನ್ನೂರಿ ಪ್ರಾರ್ಥಿಸುತ್ತಿರುವ ನಮಗೆ ಧನಾದಿಗಳನ್ನು ಕೊಡಲಿ ಮತ್ತು ಶ್ರೇಷ್ಠವಾದ ಅನ್ನಗಳನ್ನೂ ಕೊಡಲಿ.

English Translation

May Indra who causes all to rejoice, be the giver of plenteous food to us; may he, the mighty, bring us (riches) we are praying on our knees.

॥ ಸಂಹಿತಾಪಾಠಃ ॥

ಅಪಾದು ಶಿಪ್ರ್ಯಂಧಸಃ ಸುದಕ್ಷಸ್ಯ ಪ್ರಹೋಷಿಣಃ ।

ಇಂದೋರಿಂದ್ರೋ ಯವಾಶಿರಃ ॥ ೪ ॥

॥ ಪದಪಾಠಃ ।

ಅಪಾತ್ । ಊಂ ಇತಿ । ಶಿಪ್ರೀ । ಅಂಧಸಃ । ಸುऽದಕ್ಷಸ್ಯ । ಪ್ರऽಹೋಷಿಣಃ ।

ಇಂದೋಃ । ಇಂದ್ರಃ । ಯವऽಆಶಿರಃ ॥ ೪ ॥

। ಸಾಯಣಭಾಷ್ಯಂ ।

ಶಿಪ್ರೀ । ಶಿಪ್ರೇ ಹನೂ ನಾಸಿಕೇ ವಾ । ಶೋಭನಹನುಃ । ಯದ್ವಾ । ಶಿಪ್ರಾಃ ಶೀರ್ಷಣ್ಯಾಃ ಸುಶಿರಸ್ತ್ರಾಣಃ। ಸ ಇಂದ್ರ ಏವ ಪ್ರಹೋಷಿಣಃ ಪ್ರಕರ್ಷೇಣ ದೇವಾನ್ ಹವಿರ್ಭಿರ್ಜುಹ್ವತಃ ಸುದಕ್ಷಸ್ಯೈತನ್ನಾಮಕಸ್ಯರ್ಷೇಃ ಸಂಬಂಧಿ ಯವಾಶಿರಃ ॥ ಶ್ರೀಞ್ ಪಾಕೇ ಶ್ರೀಞ್‌ಪೂರ್ವಸ್ಯಾಪಸ್ಪೃಧೇಥಾಮಾನೃಚುರಿತ್ಯಾದಿನಾ ಧಾತೋಃ ಶಿರಾದೇಶಃ ॥ ಯವೈರಾಮಿಶ್ರಿತಂ ಯವೈಃ ಸಹ ಪಕ್ವಮಿಂದೋಃ ಸರ್ವತಃ ಪಾತ್ರೇಷು ಕ್ಷರದಂಧಸಃ ಸೋಮಲಕ್ಷಣಮನ್ನಮಪಾತ್ । ಅಪಿಬತ್ । ಯದ್ವಾ । ಅಸ್ಯ ಸೋಮಸ್ಯ ಭಾಗಮಿಂದ್ರಾರ್ಥಂ ಪರಿಕಲ್ಪಿತಂ ಸೋಮಾಂಶಮಪಿಬತ್ । ಉ ಇತ್ಯವಧಾರಣೇ ॥

॥ ಪ್ರತಿಪದಾರ್ಥ ॥

ಶಿಪ್ರೀ—ಆಕರ್ಷಕವಾದ ಕೆನ್ನೆ ಅಥವಾ ನಾಸಿಕವುಳ್ಳ ಅಥವಾ ಶಿರಸ್ತ್ರಾಣವುಳ್ಳ । ಇಂದ್ರಃ—ಇಂದ್ರನು । ಪ್ರಹೋಷಿಣಃ—ದೇವತೆಗಳನ್ನು ಹವಿರಾದಿಗಳಿಂದ ಆಹ್ವಾನಮಾಡುತ್ತಿರುವ । ಸುದಕ್ಷಸ್ಯ—ಸುದಕ್ಷನೆಂಬ ಋಷಿಯು ಅರ್ಪಿಸಿದ । ಯವಾಶಿರಃ—ಯವಧಾನ್ಯದ ಹಿಟ್ಟಿನಿಂದ ಮಿಶ್ರಿತವಾದ । ಇಂದೋಃ—ಪಾತ್ರೆಗಳಲ್ಲಿ ತುಂಬಿರುವ । ಅಂಧಸಃ—ಸೋಮರೂಪದ ಅನ್ನವನ್ನು । ಅಪಾತ್—ಪಾನಮಾಡಿದನು । ಉ—ನಿಶ್ಚಯವು.

॥ ಭಾವಾರ್ಥ ॥

ಆಕರ್ಷಕವಾದ ಕೆನ್ನೆ ಅಥವಾ ಶಿರಸ್ತ್ರಾಣವುಳ್ಳ ಇಂದ್ರನು, ದೇವತೆಗಳನ್ನು ಹವಿರಾದಿಗಳಿಂದ ಆಹ್ವಾನ ಮಾಡುತ್ತಿರುವ ಸುದಕ್ಷನೆಂಬ ಋಷಿಯು ಪಾತ್ರೆಗಳಲ್ಲಿ ತುಂಬಿ ಅರ್ಪಿಸಿದ ಯವಧಾನ್ಯಮಿಶ್ರಿತವಾದ ಸೋಮರಸವನ್ನು ಪಾನಮಾಡಿದನು. ಇದು ಸತ್ಯವು

English Translation

India, the handsome-jawed, has diunk of the diopping Soma-beverage mixed with bailey, (the offering) of Sudaksha assiduous in sacrifice

॥ ಸಂಹಿತಾಪಾಠಃ ॥

ತಮ್ವಭಿ ಪ್ರಾರ್ಚತೇಂದ್ರಂ ಸೋಮಸ್ಯ ಪೀತಯೇ ।

ತದಿದ್ಧ್ಯಸ್ಯ ವರ್ಧನಂ ॥ ೫ ॥

॥ ಪದಪಾಠಃ ॥

ತಂ । ಊಂ ಇತಿ । ಅಭಿ । ಪ್ರ । ಅರ್ಚತ । ಇಂದ್ರಂ । ಸೋಮಸ್ಯ । ಪೀತಯೇ ।

ತತ್ । ಇತ್ । ಹಿ । ಅಸ್ಯ । ವರ್ಧನಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಋತ್ವಿಜಃ ತಮು ತಮೇವೇಂದ್ರಮಭ್ಯಾಭಿಮುಖ್ಯೇನ ಪ್ರಾರ್ಚತ । ಪ್ರಕರ್ಷೇಣ ಸ್ತುತ । ಕಿಮರ್ಥಂ । ಸೋಮಸ್ಯ ಪೀತಯೇಽತ್ರಾಗತ್ಯ ಸೋಮಪಾನಾಯ । ಕಿಮರ್ಥಂ ಸೋಮಪಾನಾಯೇತಿ ವಿಶೇಷ್ಯತೇ ತದಾಹ । ತದಿತ್ತತ್ಸೋಮಪಾನಮೇವಾಸ್ಯೇಂದ್ರಸ್ಯ ವರ್ಧನಂ ವರ್ಧಕಂ ಭವತಿ ಖಲು । ತಸ್ಮಾತ್ಸೋಮಪಾನಜಹರ್ಷಾಯ ಪ್ರಾರ್ಚತ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ಸೋಮಸ್ಯ**—ಸೋಮರಸದ । **ಪೀತಯೇ**—ಪಾನಾರ್ಥವಾಗಿ । **ತಮು ಇಂದ್ರಂ**—ಆ ಇಂದ್ರನನ್ನೇ । **ಅಭಿ**—ಆಭಿಮುಖ್ಯವಾಗಿ । **ಪ್ರಾರ್ಚತ**—ಹೆಚ್ಚಾಗಿ ಸ್ತುತಿಸಿ । **ತದಿತ್**—ಆ ಸೋಮಪಾನವೇ । **ಅಸ್ಯ**—ಆ ಇಂದ್ರನಿಗೆ । **ವರ್ಧನಂ**—ವೃದ್ಧಿಯನ್ನು (ಹರ್ಷವನ್ನುಂಟು) ಮಾಡುವುದು.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಸೋಮರಸವನ್ನು ಪಾನಮಾಡುವುದಕ್ಕಾಗಿ ಆ ಇಂದ್ರನನ್ನೇ ಸ್ತುತಿಸಿ. ಏಕೆಂದರೆ ಆ ಸೋಮಪಾನವೇ ಇಂದ್ರನಿಗೆ ಹರ್ಷದಾಯಕವಾಗಿರುವುದು

English Translation

Loudly praise that Indra that he may drink the Soma,—it is this which gives him strength.

॥ ಸಂಹಿತಾಪಾಠಃ ॥

ಅಸ್ಯ ಪೀತ್ವಾ ಮದಾನಾಂ ದೇವೋ ದೇವಸ್ಯೌಜಸಾ ।

ವಿಶ್ವಾಭಿ ಭುವನಾ ಭುವತ್ ॥ ೬ ॥

॥ ಪದಪಾಠಃ ॥

ಅಸ್ಯ । ಪೀತ್ವಾ । ಮದಾನಾಂ । ದೇವಃ । ದೇವಸ್ಯ । ಓಜಸಾ ।

ವಿಶ್ವಾ । ಅಭಿ । ಭುವನಾ । ಭುವತ್ ॥ ೬ ॥

॥ ಸಾಯಣಭಾಷ್ಯಂ ॥

ದೇವೋ ದ್ಯೋತಮಾನ ಇಂದ್ರೋಽಸ್ಯಾಸ್ಮಾಭಿರ್ದೀಯಮಾನಸ್ಯ ಸೋಮಸ್ಯ ಮದಾನಾಂ ಮದಕರಾನ್ರಸಾನ್ ಪೀತ್ವಾ ಪಾನಂ ಕೃತ್ವಾ । ಯದ್ವಾ । ಅಸ್ಯೈತಂ ಸೋಮಂ ಪೀತ್ವಾ ತಥಾ ಮದಾನಾಂ ಮದಸಾಧನಾದೀನಿ ಭಕ್ಷಯಿತ್ವಾ । ದೇವಸ್ಯ ಗೃಹೇಷು ಶೋಭಮಾನಸ್ಯ ಯದ್ವಾ ದೇವನಶೀಲಸ್ಯ ದೇವೈಃ ಕಾಮ್ಯಮಾನಸ್ಯ ಸೋಮಸ್ಯ ಪಾನಜಾತೇನೌಜಸಾ ಬಲೇನ ವಿಶ್ವಾ ಭುವನಾ ಸರ್ವಾಣಿ ಭುವನಾನಿ ಭೂತಜಾತಾನ್ಯಭಿ ಭುವತ್ । ಅಭಿಭವತಿ । ಸೋಮಸ್ಯ ತಾ ಮದ ಇಂದ್ರಶ್ಚಕಾರ । ಋ ೨.೧೫.೨ । ಇತ್ಯಾದಿಷು ಸೋಮಪಾನಮದೇ ಸರ್ವಾಣಿ ವೃತ್ರಹನನಾದಿಕರ್ಮಾಣಿ ಚಕಾರೇತ್ಯೇವಮಂತ್ರಾಪಿ ಸರ್ವಾಣಿ ಭೂತಾನಿ ಭುವನಾದೀನಿ ಕರ್ಮಾಣ್ಯಕಾರ್ಷೀದಿತಿ ॥

॥ ಪ್ರತಿಪದಾರ್ಥ ॥

**ದೇವಃ**—ಪ್ರಕಾಶಮಾನನಾದ ಇಂದ್ರನು । **ಅಸ್ಯ**—ನಮ್ಮಿಂದ ಅರ್ಪಿತವಾದ ಸೋಮರಸದ । **ಮದಾನಾಂ**—ಮದಕರವಾದ ರಸಗಳನ್ನು । **ಪೀತ್ವಾ**—ಪಾನಮಾಡಿ । **ದೇವಸ್ಯ**—ದೇವತೆಗಳಿಂದ ಅರ್ಪಿತವಾದ ಸೋಮಪಾನದಿಂದ ಲಬ್ಧವಾದ । **ಓಜಸಾ**—ಬಲದಿಂದ । **ವಿಶ್ವಾ ಭುವನಾ**—ಸಮಸ್ತ ಭೂತಜಾತಗಳನ್ನು । **ಅಭಿ ಭುವತ್**—ಪರಾಭವಗೊಳಿಸುತ್ತಾನೆ.

॥ ಭಾವಾರ್ಥ ॥

ದೇವತಾತ್ಮನಾದ ಇಂದ್ರನು ನಮ್ಮಿಂದ ಅರ್ಪಿತವಾದ ಮದಕರವಾದ ಸೋಮವನ್ನು ಪಾನಮಾಡಿ ಅದರಿಂದ ಲಬ್ಧವಾದ ಬಲದಿಂದ ಸಮಸ್ತಪ್ರಾಣಿಗಳನ್ನೂ ಪರಾಭವಗೊಳಿಸುತ್ತಾನೆ

English Translation

The god, having quaffed its exhilarations, by the strength of the divine (Soma) has conquered all worlds

॥ ಸಂಹಿತಾಪಾಠಃ ॥

ತ್ವಮು ವಃ ಸತ್ರಾಸಾಹಂ ವಿಶ್ವಾಸು ಗೀರ್ಷ್ವಾಯತಂ ।
ಆ ಚ್ಯಾವಯಸ್ಯೂತಯೇ ॥ ೭ ॥

॥ ಪದಪಾಠಃ ॥

ತ್ವಂ । ಊಂ ಇತಿ । ವಃ । ಸತ್ರಾಽಸಹಂ । ವಿಶ್ವಾಸು । ಗೀರ್ಷು । ಆಽಯತಂ ।
ಆ । ಚ್ಯವಯಸಿ । ಊತಯೇ ॥ ೭ ॥

॥ ಸಾಯಣಭಾಷ್ಯಂ ॥

**ಪ್ರಥಮೇ ಪರ್ಯಾಯೇ ಹೋತುಃ ಶಸ್ತ್ರೇ ತ್ವಮು ವ ಸತ್ರಾಸಾಹಮಿತ್ಯಾದಿಸೂಕ್ತಶೇಷಃ । ಸೂತ್ರಿತಂ ಚ । ತ್ವಮು ವಃ ಸತ್ರಾಸಾಹಮಿತಿ ಸೂಕ್ತಶೇಷೋಽಭಿ ತ್ವಂ ಮೇಷಂ । ಆ ೬.೪ । ಇತಿ ॥ ಅಪ್ತೋರ್ಯಾಮೋಽಚ್ಛಾವಾಕಾತಿರಿಕ್ತೋಕ್ಥ್ಯೇ ತ್ವಮು ವಃ ಸತ್ರಾಸಾಹಮಿತಿ ತೃಚೋ ವೈಕಲ್ಪಿಕಃ ಸ್ತೋತ್ರಿಯಃ । ಸೂತ್ರಿತಂ ಚ । ತ್ವಮು ವಃ ಸತ್ರಾಸಾಹಂ ಸತ್ರಾ ತೇ ಅನು ಕೃಷ್ಟಯ ಇತಿ ವಾ ಸ್ತೋತ್ರಿಯಾನುರೂಪೌ । ಆ. ೯-೧೧ । ಇತಿ ॥ ವ್ಯೂಳ್ಹಸ್ಯ ದಶರಾತ್ರಸ್ಯ ಚತುರ್ಥೇಽಹನಿ ನಿಷ್ಕೇವಲ್ಯ ಏಷ ಏವ ತೃಚೋ ನಿವಿದ್ಧಾನೀಯಃ । ಸೂತ್ರಿತಂ ಚ । ಇಮಂ ಸು ಮಾಯಿನಂ ಹುವೇ ತ್ವಮು ವಃ ಸತ್ರಾಸಾಹಂ । ಆ. ೮-೮ । ಇತಿ ॥**

**ಯಜಮಾನಃ ಸ್ತೋತಾರಂ ಸಂಬೋಧ್ಯಾಹ । ಹೇ ಸ್ತೋತಃ ಸತ್ರಾಸಾಹಂ । ಸತ್ರಾಶಬ್ದೋ ಬಹುವಾಚೀ । ಬಹೂನಾಮಭಿಭವಿತಾರಂ । ಯದ್ವಾ । ಶತ್ರೂನ್ ಸ್ವಬಲೇನ ಸಂಗತ್ಯ ಜೇತಾರಂ । ವೋ ಯುಷ್ಮದೀಯೇಷು ವಿಶ್ವಾಸು ಗೀರ್ಷು ಸರ್ವೇಷು ಸ್ತೋತ್ರೇಷ್ವಾಯತಂ ವಿಸ್ತೃತಂ । ಸರ್ವತ್ರೇಂದ್ರ ಏವ ಸ್ತೂಯತೇ । ತಸ್ಮಾತ್ತೇಷು ವಿತತಂ ತ್ಯಂ । ಉ ಇತ್ಯವಧಾರಣೇ । ತಮೇವೇಂದ್ರಮೂತಯೇಽಸ್ಮ-ದ್ರಕ್ಷಣಾಯಾ ಚ್ಯಾವಯಸಿ । ಚ್ಯುಙ್ ಪ್ಲುಙ್ ಗತೌ ॥ ತ್ವದೀಯೈಃ ಸ್ತೋತ್ರೈರ್ಯಜ್ಞಂ ಪ್ರತ್ಯಾಭಿ-ಮುಖ್ಯೇನಾಗಮಯ ॥**

॥ ಪ್ರತಿಪದಾರ್ಥ

(**ಹೇ ಸ್ತೋತಃ**—ಎಲೈ ಸ್ತೋತೃವೇ) । **ಸತ್ರಾಸಾಹಂ**—ಅನೇಕ ಶತ್ರುಗಳನ್ನು ಸೋಲಿಸುವವನೂ । **ನಃ**—ನಿಮ್ಮ । **ವಿಶ್ವಾಸು**—ಸಮಸ್ತವಾದ । **ಗೀರ್ಷು**—ಸ್ತುತಿರೂಪದ ವಾಕ್ಯಗಳಲ್ಲಿ । **ಆಯತಂ**—ವಿಸ್ತಾರವಾಗಿ ಪ್ರಶಂಸಿಸಲ್ಪಡುವವನೂ । **ತ್ಯಂ ಉ**—ಪ್ರಸಿದ್ಧನೂ ಆದ ಆ ಇಂದ್ರನನ್ನೇ । **ಊತಯೇ**—ನಮ್ಮ ರಕ್ಷಣಾರ್ಥವಾಗಿ। **ಆ ಚ್ಯಾವಯಸಿ**—ಯಜ್ಞಾಭಿಮುಖವಾಗಿ ಬರುವಂತೆ ಪ್ರೇರಿಸು.

॥ ಭಾವಾರ್ಥ ॥

ಎಲೈ ಸ್ತೋತೃವೇ, ಅನೇಕ ಶತ್ರುಜನರನ್ನು ಸೋಲಿಸುವವನೂ, ನಿಮ್ಮ ಸಮಸ್ತ ಸ್ತೋತ್ರಗಳಲ್ಲಿಯೂ ಪ್ರಶಂಸಿಸಲ್ಪಡುವವನೂ ಪ್ರಸಿದ್ಧನೂ ಆದ ಆ ಇಂದ್ರನನ್ನೇ ನಮ್ಮ ರಕ್ಷಣಾರ್ಥವಾಗಿ ಯಜ್ಞಾಭಿಮುಖವಾಗಿ ಬರುವಂತೆ ಆಹ್ವಾನಿಸು.

## English Translation

Bring hither for our protection Indra the conqurer of many, who pervades all your praises,

॥ ವಿಶೇಷವಿಷಯಗಳು ॥

ಪ್ರಥಮಪರ್ಯಾಯದಲ್ಲಿ ಹೋತೃವು ಪಠಿಸುವ ಶಸ್ತ್ರಮಂತ್ರಗಳಲ್ಲಿ **ತ್ಯಮು ವಃ ಸತ್ರಾಸಹಂ** ಎಂಬ ಋಕ್ಕಿನಿಂದ ಈ ಸೂಕ್ತವನ್ನು ಕೊನೆಯವರೆಗೂ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತ್ಯಮು ವಃ ಸತ್ರಾಸಾ-ಹಮಿತಿ ಸೂಕ್ತಶೇಷೋಽಭಿ ತ್ಯಂ ಮೇಷಂ** ಎಂಬ ಸೂತ್ರದಿಂದ (ಆ ೬-೪) ವಿಶ್ವತವಾಗಿರುವುದು ಅಪ್ತೋ**ರ್ಯಾಮವೆಂಬ** ಯಾಗದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಪಠಿಸುವ ಅತಿರಿಕ್ತೋಕ್ಥಮಂತ್ರಗಳಲ್ಲಿ **ತ್ಯಮು ವಃ ಸತ್ರಾಸಾಹಂ** ಎಂಬ ತೃಚವನ್ನು (ಮೂರು ಋಕ್ಕುಗಳನ್ನು) ವೈಕಲ್ಪಿಕಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತ್ಯಮು ವಃ ಸತ್ರಾಸಾಹಂ ಸತ್ರಾ ತೇ ಅನು ಕೃಷ್ಟಯ ಇತಿ ವಾ ಸ್ತೋತ್ರಿ-ಯಾನುರೂಪೌ** ಎಂಬ ಸೂತ್ರದಿಂದ (ಆ. ೯-೧೧) ವಿಶ್ವತವಾಗಿರುವುದು ವ್ಯೂಳ್ಹವೆಂಬ ದಶರಾತ್ರಯಾಗದ ನಾಲ್ಕನೆಯ ದಿವಸ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿಯೂ ಈ ತೃಚವನ್ನು ನಿವಿದ್ಧಾನೀಯತೃಚವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಇಮಂ ನು ಮಾಯಿನಂ ಹುವೇ ತ್ಯಮು ವಃ ಸತ್ರಾಸಾಹಂ** ಎಂಬ ಸೂತ್ರದಿಂದ (ಆ ೮-೮) ವಿಶ್ವತವಾಗಿರುವುದು

॥ ಸಂಹಿತಾಪಾಠಃ ॥

ಯುಧ್ಮಂ ಸಂತಮನರ್ವಾಣಂ ಸೋಮಪಾಮನಪಚ್ಯುತಂ ।
ನರಮವಾರ್ಯಕ್ರತುಂ ॥ ೮ ॥

॥ ಪದಪಾಠಃ ॥

ಯುಧ್ಮಂ । ಸಂತಂ । ಅನರ್ವಾಣಂ । ಸೋಮಽಪಾಂ । ಅನಪಽಚ್ಯುತಂ ।
ನರಂ । ಅವಾರ್ಯಽಕ್ರತುಂ ॥ ೮ ॥

॥ ಸಾಯಣಭಾಷ್ಯಂ ॥

ಏವಂಗುಣೋಪೇತಮಿಂದ್ರಮಾಗಮಯೇತ್ಯಾಹ । ಯುಧ್ಮಂ ಶತ್ರೂಣಾಂ ಸಂಪ್ರಹರಕಂ ಸಂತಂ ಅತ ಏವಾನರ್ವಾಣಮನ್ಯೈರಪ್ರತ್ಯೃತಮನಭಿಗತಂ ತಸ್ಮಾದನಪಚ್ಯುತಂ ಸಂಗ್ರಾಮೇಷು ಶತ್ರುಭಿರಹಿಂಸಿತಂ ಸೋಮಪಾಂ ಸೋಮಸ್ಯ ಪಾತಾರಮಸ್ಯ ಸೋಮಸ್ಯ ಮದೇ ಸತ್ಯವಾರ್ಯಕ್ರತುಂ ಭಟೈರನಿವಾರಣೀಯಕರ್ಮಾಣಂ ನರಂ ಸರ್ವಸ್ಯ ನೇತಾರಂ । ಏತಂವ್ಯಗ್ಗುಣೋಪೇತಮಿಂದ್ರಮಾಗಮಯೇತಿ ಪೂರ್ವೇಣ ಸಹ ಸಂಬಂಧಃ ॥

॥ ಪ್ರತಿಪದಾರ್ಥ ॥

**ಯುಧ್ಮಂ**—ಶತ್ರುಗಳನ್ನು ಯುದ್ಧದಲ್ಲಿ ಸಂಹಾರಮಾಡುವವನೂ । **ಸಂತಂ**—ಯುದ್ಧದಲ್ಲಿ ಹೆದರದೆ ಸ್ಥಿರವಾಗಿ ನಿಲ್ಲುವವನೂ । **ಅನರ್ವಾಣಂ**—ಇತರರಿಂದ ಎದುರಿಸಲು ಅಶಕ್ಯನಾದವನೂ । **ಅನಪಚ್ಯುತಂ**—ಯುದ್ಧಗಳಲ್ಲಿ ಶತ್ರುಗಳಿಂದ ಹಿಂಸಿಸಲ್ಪಡದವನೂ । **ಸೋಮಪಾಂ**—ಸೋಮವನ್ನು ಪಾನಮಾಡುವವನೂ । **ಅವಾರ್ಯಕ್ರತುಂ**—ಭಟರಿಂದ ತಡೆಯಲು ಅಶಕ್ಯನಾದವನೂ । **ನರಂ**—ಸಮಸ್ತರಿಗೂ ನಾಯಕನಾದವನೂ ಆದ ಇಂದ್ರನನ್ನು (ಯಜ್ಞಾಭಿಮುಖವಾಗಿ ಆಹ್ವಾನಿಸು).

॥ ಭಾವಾರ್ಥ ॥

ಎಲೈ ಸ್ತೋತೃವೇ, ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸುವವನೂ, ಶತ್ರುಗಳಿಗೆ ಹೆದರಿ ಓಡಿಹೋಗದೆ ಸ್ಥಿರವಾಗಿ ನಿಲ್ಲುವವನೂ, ಇತರರಿಂದ ಎದುರಿಸಲು ಅಶಕ್ಯನಾದವನೂ, ಶತ್ರುಗಳನ್ನು ಹಿಂಸಿಸುವವನೂ, ಸೋಮಪಾನಮಾಡುವವನೂ, ಭಟರಿಂದ ತಡೆಯಲು ಅಶಕ್ಯನಾದವನೂ, ಸಮಸ್ತರಿಗೂ ನಾಯಕನಾದವನೂ ಆದ ಇಂದ್ರನನ್ನು ಆಹ್ವಾನಿಸು.

English Translation

The warrior, whom none oppose and non can harm, the quaffer of the Soma, the leader whose deeds cannot be hindered.

॥ ಸಂಹಿತಾಪಾಠಃ ॥

ಶಿಕ್ಷಾ ಣ ಇಂದ್ರ ರಾಯ ಆ ಪುರು ವಿದ್ವಾಂ ಋಚೀಷಮ ।
ಅವಾ ನಃ ಪಾರ್ಯೇ ಧನೇ ॥ ೯ ॥

॥ ಪದಪಾಠಃ ॥

ಶಿಕ್ಷ । ನಃ । ಇಂದ್ರ । ರಾಯಃ । ಆ । ಪುರು । ವಿದ್ವಾನ್ । ಋಚೀಷಮ ।
ಅವ । ನಃ । ಪಾರ್ಯೇ । ಧನೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ಋಚೀಷಮ ಸ್ತುತ್ಯಾ ಸಮ । ಯದ್ವಾ ॥ ಈಷ ಗತಿಹಿಂಸಾದರ್ಶನೇಷು । ಅಸ್ಮಾದಮ-ಪ್ರತ್ಯಯಃ ॥ ಸರ್ವೈರ್ಗಂತವ್ಯ ದರ್ಶನೀಯ ವಾ । ಉಕ್ತಗುಣೋಪೇತ ಹೇ ಇಂದ್ರ ವಿದ್ವಾನ್ ಸರ್ವ-ವಿಷಯಜ್ಞಾನವಾಂಸ್ತ್ವಂ ಶತ್ರುಭ್ಯ ಆಹೃತ್ಯ ರಾಯೋ ಧನಾನಿ ನೋಽಸ್ಮಭ್ಯಂ ಪುರು ಬಹುವಾರಂ ಶಿಕ್ಷ । ಪ್ರಯಚ್ಛ । ಯದ್ವಾ । ಪುರ್ವಿತಿ ರಾಯೋ ವಿಶೇಷಣಂ । ಬಹೂನಿ ಧನಾನಿ ಪ್ರಯಚ್ಛ । ಕಿಂಚ ಪಾರ್ಯೇ। ಪಾರಾಃ ಶತ್ರವಃ । ತತ್ರಭವೇ ಧನ ಆಜಿಹಿರ್ಷಿತೇ ಶತ್ರುಧನೇ ನೋಽಸ್ಮಾನವ । ರಕ್ಷ । ಶತ್ರೂನ್ ಹತ್ವಾ ತದ್ಧನೇನಾಸ್ಮಾನ್ ಪಾಲಯೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಹೇ ಋಚೀಷಮ**—ಸ್ತುತಿಗಳಿಂದ ಪ್ರಾಪ್ಯನಾದ । **ಇಂದ್ರ**—ಎಲೈ ಇಂದ್ರನೇ । **ವಿದ್ವಾನ್**—ಸರ್ವ ವಿಷಯಗಳಲ್ಲಿಯೂ ತಿಳುವಳಿಕೆಯುಳ್ಳ ನೀನು । **ರಾಯಃ**—ಶತ್ರುಗಳಿಂದ ತಂದ ಧನವನ್ನು । **ನಃ**—ನಮಗೆ । **ಪುರು**—ಬಹಳವಾಗಿ । **ಶಿಕ್ಷ**—ಕೊಡು । **ಪಾರ್ಯೇ**—ಶತ್ರುಸಂಬಂಧವಾದ ಎಂದರೆ ಶತ್ರುಗಳಿಂದ ಲಬ್ಧವಾದ । **ಧನೇ**—ಧನದಲ್ಲಿ ಎಂದರ ಧನವನ್ನು ಕೊಟ್ಟು । **ನಃ**—ನಮ್ಮನ್ನು । **ಅವ**—ರಕ್ಷಿಸು.

॥ ಭಾವಾರ್ಥ ॥

ಸ್ತುತಿಪ್ರಿಯನಾದ ಎಲೈ ಇಂದ್ರನೇ, ಸರ್ವವಿಷಯಗಳಲ್ಲಿಯೂ ತಿಳುವಳಿಕೆಯುಳ್ಳ ನೀನು ಶತ್ರುಗಳಿಂದ ತಂದ ಧನವನ್ನು ಬಹಳವಾಗಿ ನಮಗೆ ಕೊಡು. ಯುದ್ಧದಲ್ಲಿ ಶತ್ರುಗಳನ್ನು ಜಯಿಸಿ ತಂದ ಆ ಧನವನ್ನು ಕೊಟ್ಟು ನಮ್ಮನ್ನು ರಕ್ಷಿಸು.

## English Translation

O you worthy of our praise, you who know all things, repeatedly give us riches, protect us by the wealth of our enemies.

॥ ಸಂಹಿತಾಪಾಠಃ ॥

ಅತಶ್ಚಿದಿಂದ್ರ ಣ ಉಪಾ ಯಾಹಿ ಶತವಾಜಯಾ ।

ಇಷಾ ಸಹಸ್ರವಾಜಯಾ ॥ ೧೦ ॥

॥ ಪದಪಾಠಃ ॥

ಅತಃ । ಚಿತ್ । ಇಂದ್ರ । ನಃ । ಉಪ । ಆ । ಯಾಹಿ । ಶತऽವಾಜಯಾ ।

ಇಷಾ । ಸಹಸ್ರऽವಾಜಯಾ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಅತಶ್ಚಿದಸ್ಮಾದ್ದ್ಯುಲೋಕಾದೇವ ಯುದ್ಧಾಸ್ಮಾಚ್ಛತ್ರುಸ್ಥಾನಾತ್ ಶತವಾಜಯಾ ಶತಸಂಖ್ಯಾಕಬಲಯುಕ್ತೇನ ತಥಾ ಸಹಸ್ರವಾಜಯಾ । ವಾಜೋऽನ್ನಂ । ಸಹಸ್ರಸಂಖ್ಯಾನ್ನವತಾ ಬಹುಬಲಾನ್ನೇನೇಷಾನ್ನರಸೇನ ಯುಕ್ತಃ ಸನ್ನೋऽಸ್ಮಾನುಪಾ ಯಾಹಿ । ಅಧಿಕಮಾಭಿಮುಖ್ಯೇನಾಗಚ್ಛ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಅತಶ್ಚಿತ್**—ದ್ಯುಲೋಕದಿಂದ । **ಶತವಾಜಯಾ**— ಬಹಳಬಲಯುಕ್ತವಾದ । **ಸಹಸ್ರವಾಜಯಾ**—ಅಪರಿಮಿತವಾದ । **ಇಷಾ**—ಅನ್ನದಿಂದ ಯುಕ್ತನಾಗಿ । **ನಃ**—ನಮ್ಮ ಸಮೀಪಕ್ಕೆ । **ಉಪಾ ಯಾಹಿ**—ದಯಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ದ್ಯುಲೋಕದಿಂದ ಅಥವಾ ಶತ್ರುಜನರನ್ನು ಸೋಲಿಸಿ ಆ ಯುದ್ಧಭೂಮಿಯಿಂದ ಬಹಳ ಬಲಯುಕ್ತವಾದುದೂ, ಅಪರಿಮಿತವಾದುದೂ ಆದ ಅನ್ನದಿಂದ ಯುಕ್ತನಾಗಿ ನಮ್ಮ ಸಮೀಪಕ್ಕೆ ದಯಮಾಡು.

English Translation

Come to us, Indra, from thence with food of a hundred-fold strength, of a thousand-fold strength.

॥ ಸಂಹಿತಾಪಾಠಃ ॥

ಅಯಾಮ ಧೀವತೋ ಧಿಯೋऽರ್ವದ್ಭಿಃ ಶಕ್ರ ಗೋದರೇ ।

ಜಯೇಮ ಪೃತ್ಸು ವಜ್ರಿವಃ ॥ ೧೧ ॥

। ಪದಪಾಠಃ ॥

ಅಯಾಮ । ಧೀऽವತಃ । ಧಿಯಃ । ಅರ್ವತ್ऽಭಿಃ । ಶಕ್ರ । ಗೋऽದರೇ ।

ಜಯೇಮ । ಪೃತ್ऽಸು । ವಜ್ರಿऽವಃ ॥ ೧೧ ॥

। ಸಾಯಣಭಾಷ್ಯಂ ।

ಹೇ ಶಕ್ರ ಸಮರ್ಥೇಂದ್ರ ಧೀವತಃ ॥ ಛಂದಸೀರ ಇತಿ ಮತುಪೋ ವತ್ವಂ ॥ ಕರ್ಮಕರಣಾತ್ಕರ್ಮವಂತೋ ವಯಂ ಧಿಯೋ ಯುದ್ಧಜಯಾರ್ಥಂ ಕರ್ಮಾಣ್ಯಯಾಮ । ಗಚ್ಛಾಮ । ತಥೋ ಗೋದರೇ ॥ ದೄ ವಿದಾರಣೇ । ಅಚ ಇರಿತೀಃಪ್ರತ್ಯಯಃ ॥ ಗವಾಂ ಪರ್ವತಾನಾಂ ದಾರಯಿತರ್ಹೇ ವಜ್ರಿವೋ ವಜ್ರವನ್ । ಯದ್ವಾ । ವಜನಂ ಗಮನಂ ವಜ್ರಃ । ತದ್ವಾನ್ ಕುಲಿಶಃ । ತದ್ವನ್ನಿಂದ್ರ ಪೃತ್ಸು-ಸಂಗ್ರಾಮೇಷ್ವರ್ವದ್ಭಿಃ ಸರ್ವತೋ ಗಂತೃಭಿಸ್ತ್ವಯಾ ದತ್ತೈರಶ್ವೈರ್ಜಯೇಮ । ವಯಂ ತವಾದಾತ್ಯಾ-ಙ್ಕ್ಷೇಷ್ಯಾಮಃ ॥

। ಪ್ರತಿಪದಾರ್ಥ ।

**ಶಕ್ರ**—ಸಮರ್ಥನಾದ ಎಲೈ ಇಂದ್ರನೇ (ನಾವು) । **ಧೀವತಃ**—ಯುದ್ಧಜಯಾರ್ಥವಾಗಿ ಮಾಡುವ ಯಜ್ಞಾದಿ ಕರ್ಮಗಳನ್ನು । **ಅಯಾಮ**—ನೆರವೇರಿಸೋಣ । **ಗೋದರೇ**—ಪರ್ವತಗಳನ್ನು ಸೀಳಿಹಾಕುವವನೂ । **ವಜ್ರಿವಃ**—ವಜ್ರಾಯುಧಧಾರಿಯೂ ಆದ ಎಲೈ ಇಂದ್ರನೇ । **ಪೃತ್ಸು**—ಯುದ್ಧಗಳಲ್ಲಿ । **ಅರ್ವದ್ಭಿಃ**—ಸರ್ವತ್ರ ಸಂಚರಿಸಬಲ್ಲ ಅಶ್ವಗಳಿಂದ । **ಜಯೇಮ**—ನಾವು ಶತ್ರುಗಳನ್ನು ಜಯಿಸುವಂತಾಗಲಿ

॥ ಭಾವಾರ್ಥ ।

ಸರ್ವಸಮರ್ಥನಾದ ಎಲೈ ಇಂದ್ರನೇ, ಯುದ್ಧದಲ್ಲಿ ಜಯವನ್ನು ಪಡೆಯಬೇಕೆಂಬ ಅಪೇಕ್ಷೆಯಿಂದ ನಾವು ಮಾಡುತ್ತಿರುವ ಯಜ್ಞಾದಿಕರ್ಮಗಳನ್ನು ನೆರವೇರಿಸೋಣ. ಪರ್ವತವನ್ನು ಸೀಳುವವನೂ, ವಜ್ರಾಯುಧಧಾರಿಯೂ ಆದ ಎಲೈ ಇಂದ್ರನೇ, ನಾವು ಸರ್ವತ್ರ ಸಂಚರಿಸಬಲ್ಲ ಅಶ್ವಗಳಿಂದ ಸಹಿತರಾಗಿ ಯುದ್ಧಗಳಲ್ಲಿ ಶತ್ರುಗಳನ್ನು ಜಯಿಸೋಣ.

## English Translation

Shakra, let us go, proved in deeds, to deeds: thunderer, cleaver of mountains, let us conquer in battles by your steeds

॥ ಸಂಹಿತಾಪಾಠ. ।

ವಯಮುತ್ವಾ ಶತಕ್ರತೋ ಗಾವೋ ನ ಯವಸೇಷ್ವಾ ।

ಉಕ್ಥೇಷು ರಣಯಾಮಸಿ ॥ ೧೨ ॥

॥ ಪದಪಾಠಃ ॥

ವಯಂ । ಊಂ ಇತಿ । ತ್ವಾ । ಶತಕ್ರತೋ ಇತಿ ಶತಽಕ್ರತೋ । ಗಾವಃ । ನ । ಯವಸೇಷು । ಆ ।

ಉಕ್ಥೇಷು । ರಣಯಾಮಸಿ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಬಹುಪ್ರಜ್ಞಾನ ಬಹುಕರ್ಮನ್ವೇಂದ್ರ ತ್ವಾ ಸರ್ವತಃ । ಉ ಇತ್ಯವಧಾರಣೇ । ತ್ವಾಮೇವೋಕ್ಥೇಷು ಸ್ತೋತ್ರಶಸ್ತ್ರಾದಿಕೇಷು ವಯಂ ರಣಯಾಮಸಿ ॥ ಇದಂತೋ ಮಸಿಃ ॥ ಆರಾ-ಯಾಮಃ । ಶಬ್ದಯಾಮಃ । ರಮಯಾಮ ಇತ್ಯರ್ಥಃ । ತತ್ರ ದೃಷ್ಟಾಂತಃ । ಗಾವೋ ನ ಯಥಾ ಗೋಪಾಲೋ ಯವಸೇಷು ತೃಣವಿಶೇಷೇಷ್ವಗಾವೋ ಗಾಃ ಪಶೂನಾ ಸಮಂತಾದ್ರಮಯತಿ ತದ್ವತ್ ॥ ಗಾವ ಇತಿ ಸರ್ವವಿಧೀನಾಂ ಛಂದಸಿ ವಿಕಲ್ಪಿತತ್ವಾದೌತ್ವಾಭಾವಃ ॥

॥ ಪ್ರತಿಪದಾರ್ಥ ॥

**ಶತಕ್ರತೋ**—ಬಹು ಕರ್ಮಕರ್ತನಾದ ಅಥವಾ ಬಹು ಜ್ಞಾನಸಂಪನ್ನನಾದ ಎಲೈ ಇಂದ್ರನೇ । **ಯವಸೇಷು**—ಹುಲ್ಲುಗಾವಲುಗಳಲ್ಲಿ ಗೋಪಾಲಕನು । **ಗಾವೋ ನ**—ತನ್ನ ಗೋವುಗಳನ್ನು । **ಆ**—ಚೆನ್ನಾಗಿ ಮೇಯಿಸಿ ತೃಪ್ತಿಪಡಿಸುವಂತೆ । **ತ್ವಾ ಉ**—ನಿನ್ನನ್ನೇ । **ಉಕ್ಥೇಷು**—ಸ್ತೋತ್ರಶಸ್ತ್ರಾದಿಮಂತ್ರಗಳಿಂದ । **ರಣಯಾಮಸಿ**—ಸ್ತುತಿಸಿ ಸಂತೋಷಪಡಿಸುತ್ತೇವೆ.

॥ ಭಾವಾರ್ಥ ॥

ಎಲೈ ಬಹುಕರ್ಮಕರ್ತನಾದ ಇಂದ್ರನೇ, ಗೋಪಾಲಕನು ತನ್ನ ಗೋವುಗಳನ್ನು ಹುಲ್ಲುಗಾವಲುಗಳಲ್ಲಿ ಮೇಯಿಸಿ ತೃಪ್ತಿಪಡಿಸುವಂತೆ ನಾವು ನಿನ್ನನ್ನೇ ಉಕ್ಥಶಸ್ತ್ರಾದಿಮಂತ್ರಗಳನ್ನು ಪಠಿಸಿ ತೃಪ್ತಿಪಡಿಸುತ್ತೇವೆ

English Translation

We refresh you Shatakratu, with our praises, as (the herdsman) the cattle with (different kinds of) pasture.

॥ ಸಂಹಿತಾಪಾಠಃ ॥

ವಿಶ್ವಾ ಹಿ ಮರ್ತ್ಯತ್ವನಾನುಕಾಮಾ ಶತಕ್ರತೋ ।

ಅಗನ್ಮ ವಜ್ರಿನ್ನಾಶಸಃ ॥ ೧೩ ॥

॥ ಪದಪಾಠಃ ॥

ವಿಶ್ವಾ । ಹಿ । ಮರ್ತ್ಯಽತ್ವನಾ । ಅನುಽಕಾಮಾ । ಶತಕ್ರತೋ ಇತಿ ಶತಽಕ್ರತೋ ।

ಅಗನ್ಮ । ವಜ್ರಿನ್ । ಆಽಶಸಃ ॥ ೧೩ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಬಹುಪ್ರಜ್ಞೇಂದ್ರ ಮರ್ತ್ಯತ್ವನಾ ಮರ್ತ್ಯತ್ವಾನಿ ॥ ಸುಪಾಂ ಸುಲುಗಿತಿ ವಿಭಕ್ತೇ. ರಾಜಾದೇಶಃ । ಸಂಜ್ಞಾಪೂರ್ವಕಸ್ಯ ವಿಧೇರನಿತ್ಯತ್ವಾದ್ಗೀರ್ಘಾಭಾವಃ ॥ ವಿಶ್ವಾ ಹಿ ವಿಶ್ವಾನ್ಯೇವ ಮರ್ತ್ಯತ್ವಾನ್ಯನುಕಾಮಾ ಕಾಮಾನಭಿಲಾಷನನುಗತಾನಿ ಕಾಮೋಪೇತಾನೀತ್ಯರ್ಥಃ । ಮನುಷ್ಯಾಃ ಕ್ಷ್ಯ ತಾನಿ ಕಾಮಯಂತ ಇತ್ಯರ್ಥಃ । ತಥಾ ಸತಿ ಹೇ ವಜ್ರಿನ್ ವಜ್ರವನ್ನಿಂದ್ರ ವಯಮಪ್ಯಾಶಸ ಆಶಂಸನಾನಿ ಧನಾದಿಕಾಮಾನಗನ್ಮ । ಅವಗಚ್ಛಾಮಃ ॥ ಗಮೇರ್ಲೇಟಿ ಬಹುಲಂ ಛಂದಸೀತಿ ಶಪೋ ಲುಕ್ । ಮ್ವೋಶ್ಚೇತಿ ಮಕರಾಸ್ಯ ನಕಾರಃ ॥

॥ ಪ್ರತಿಪದಾರ್ಥ ॥

ಶತಕ್ರತೋ—ಬಹುಪ್ರಜ್ಞಾಪಕನಾದ ಎಲೈ ಇಂದ್ರನೇ (ನಾವು) । ಮರ್ತ್ಯತ್ವನಾ—ಮಾನವರಿಗೆ ಸಹಜವಾದ । ವಿಶ್ವಾ—ಸಮಸ್ತವಾದ । ಅನುಕಾಮಾ—ಅಭಿಲಾಷೆಗಳನ್ನುಳ್ಳವರಾಗಿದ್ದೇವೆ ಆದ್ದರಿಂದ । ಹೇ ವಜ್ರಿನ್—ವಜ್ರಾಯುಧಧಾರಿಯಾದ ಎಲೈ ಇಂದ್ರನೇ । ಆಶಸಃ—ನಮ್ಮ ಮನೋಭೀಷ್ಟಗಳನ್ನು । ಅಗನ್ಮ—ನಾವು ಹೊಂದುವಂತಾಗಲಿ.

॥ ಭಾವಾರ್ಥ ॥

ಬಹುಪ್ರಜ್ಞಾಪಕನಾದ ಎಲೈ ಇಂದ್ರನೇ, ಮಾನವರಿಗೆ ಸಹಜವಾದ ಸಮಸ್ತ ಅಭಿಲಾಷೆಗಳು ನಮಗೂ ಇವೆ. ಆದ್ದರಿಂದ ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ನಮ್ಮ ಆ ಧನಾದಿ ಅಭಿಲಾಷೆಗಳನ್ನೂ ನಾವು ಹೊಂದುವಂತಾಗಲಿ

English Translation

All mortal natures, Shatakratu, are moved by desire; let our wishes, be granted O thnnderer.

॥ ಸಂಹಿತಾಪಾಠ ॥

ತ್ವೇ ಸು ಪುತ್ರ ಶವಸೋಽವೃತ್ರನ್ಕಾಮಕಾತಯಃ ।

ನ ತ್ವಾಮಿಂದ್ರಾತಿ ರಿಚ್ಯತೇ ॥ ೧೪ ॥

॥ ಪದಪಾಠಃ ॥

ತ್ವೇ ಇತಿ । ಸು । ಪುತ್ರ । ಶವಸಃ । ಅವೃತ್ರನ್ । ಕಾಮಽಕಾತಯಃ ।

ನ । ತ್ವಾಂ । ಇಂದ್ರ । ಅತಿ । ರಿಚ್ಯತೇ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ಶವಸಸ್ಪುತ್ರ ಬಲನಿಮಿತ್ತಮುತ್ಪನ್ನ ತ್ವಾದೃಶಬಲಸ್ಯ ಪುತ್ರೇಂದ್ರ ಕಾಮಕಾತಯಃ । ಕೈ ಗೈ ರೈ ಶಬ್ದೇ ॥ ಕಾಮಪರಾಃ ಕಾತಯಃ ಶಬ್ದಾ ಯೇಷಾಂ ಭವಂತಿ ತೇ ತಥೋಕ್ತಾಃ । ತಾದೃಶಾ ಮನುಷ್ಯಾಸ್ತ್ವೇ ತ್ವಯಿ ಸ್ವವೃತ್ರನ್ । ಸ್ವಸ್ವಕಾಮಾಭಿಪೂರಣಾರ್ಥಂ ಸುಷ್ಠು ವರ್ತಂತೇ । ತಸ್ಮಾನ್ಮರ್ತ್ಯತ್ವಾನಿ ಕಾಮೋಪೇತಾನೀತ್ಯುತ್ಪನ್ನಂ ॥ ವೃತು ವರ್ತನೇ । ಲಙಿ ಚ್ಛಾಂದಸೋ ವಿಕರಣಸ್ಯ ಲುಕ್ । ಬಹುಲಂ ಛಂದಸೀತಿ ರುಡಾಗಮಃ ॥ ಯತ ಏವಂ ತತೋ ಹೇ ಇಂದ್ರ ತ್ವಾಂ ಕಶ್ಚಿದಪಿ ದೇವೋ ನಾತಿ ರಿಚ್ಯತೇ । ಬಲೇನ ಧನೇನ ವಾತಿರಿಕ್ತಃ ಸಮರ್ಥೋ ನಾಸ್ತಿ ॥

॥ ಪ್ರತಿಪದಾರ್ಥ ॥

**ಶವಸಃ ಪುತ್ರ**—ಬಲನಿಮಿತ್ತವಾಗಿ ಉತ್ಪನ್ನನಾದ ಎಲೈ ಇಂದ್ರನೇ । **ಕಾಮಕಾತಯಃ** - ಮನುಷ್ಯರು । ಬಯಸುವ ಸಮಸ್ತ ವಸ್ತುಗಳೂ । **ತ್ವೇ**—ನಿನ್ನಲ್ಲಿ । **ಸು**—ಅತಿಶಯವಾಗಿ । **ಅವೃತ್ರನ್**—ಇರುವವು ಆದ್ದರಿಂದ । **ಇಂದ್ರ**—ಎಲೈ ಇಂದ್ರನೇ । **ತ್ವಾ**—ನಿನ್ನನ್ನು । **ನ ಅತಿ ರಿಚ್ಯತೇ**—ಧನದಿಂದಾಗಲಿ ಬಲದಿಂದಾಗಲಿ ಯಾರೂ ಮೀರಿಸಲಾರರು

॥ ಭಾವಾರ್ಥ ॥

ಬಲಪ್ರದರ್ಶನಾರ್ಥವಾಗಿಯೇ ಉತ್ಪನ್ನನಾದ ಎಲೈ ಇಂದ್ರನೇ, ಮನುಷ್ಯರು ಅಪೇಕ್ಷಿಸುವ ವಸ್ತುಗಳೆಲ್ಲವೂ ಅತಿಶಯವಾಗಿ ನಿನ್ನಲ್ಲಿರುವವು. ಆದ್ದರಿಂದ ಎಲೈ ಇಂದ್ರನೇ, ಧನದಿಂದಾಗಲಿ, ಬಲದಿಂದಾಗಲಿ ನಿನ್ನನ್ನು ಮೀರಿಸುವ ಶಕ್ತಿಯು ಯಾರಿಗೂ ಇಲ್ಲ.

## English Translation

O son of strength, men, uttering their desires, abide happily in you; none, Indra, surpass you.

॥ ಸಂಹಿತಾಪಾಠಃ ॥

ಸ ನೋ ವೃಷನ್ತ್ಸನಿಷ್ಠಯಾ ಸಂ ಘೋರಯಾ ದ್ರವಿತ್ನ್ವಾ ।

ಧಿಯಾವಿಡ್ಢಿ ಪುರಂಧ್ಯಾ ॥ ೧೫ ॥

ಸಃ । ನಃ । ವೃಷನ್ । ಸನಿಷ್ಠಯಾ । ಸಂ । ಘೋರಯಾ । ದ್ರವಿತ್ನ್ವಾ ।

ಧಿಯಾ । ಅವಿಡ್ಢಿ । ಪುರಂಽಧ್ಯಾ । ೧೫ ॥

॥ ಸಾಯಣಭಾಷ್ಯಂ ॥

ಹೇ ವೃಷನ್ ಕಾಮಾನಾಂ ವರ್ಷಿತರಿಂದ್ರ ಸ ಪೂರ್ವೋಕ್ತಲಕ್ಷಣಸ್ತ್ವಂ ಸನಿಷ್ಠಯಾ ॥ ಷಣು ದಾನೇ ॥ ಧನಾದೇರ್ದಾತೃತಮಯಾ ಘೋರಯಾ ಸಪತ್ನಾನಾಂ ಭಯಕಾರಿಣ್ಯಾ ಅತ ಏವ ದ್ರವಿತ್ನ್ವಾ ದ್ರಾವಯಿತ್ರ್ಯಾ ಶತ್ರೂಣಾಂ ಪಲಾಯಿತ್ರ್ಯಾ ॥ ದ್ರವತೇರಿತ್ನುಚ್‌ಪ್ರತ್ಯಯಃ ॥ ಪುರಂಧ್ಯಾ ಬಹೂನಾಂ ಧಾರಯಿತ್ರ್ಯಾ ಧಿಯಾ ತಾದೃಶೇನ ಕರ್ಮಣಾ ನೋಽಸ್ಮಾನ್ ಸಮವಿಡ್ಢಿ । ಸಮಂತಾತ್ಪಾಲಯ ॥ ಅವತೇರ್ಲೋಟಿ ಬಹುಲಂ ಛಂದಸೀತಿ ಶಪೋ ಲುಕ್ । ಬಹುಲವಚನಾತ್ಸಿಪ ಇಡಾಗಮಃ ॥ ಅಸ್ಮಾನ್ಧನ-ದಾನಾದಿನಾ ರಕ್ಷೇತ್ಯರ್ಥಃ ॥

॥ ಪ್ರತಿಪದಾರ್ಥ ॥

ವೃಷನ್—ಇಷ್ಟಾರ್ಥಗಳನ್ನು ಸುರಿಸುವ ಎಲೈ ಇಂದ್ರನೇ । ಸಃ—ಹಿಂದೆ ಹೇಳಿದ ಗುಣಗಳುಳ್ಳ ನೀನು । ಘೋರಯಾ—ಶತ್ರುಗಳಿಗೆ ಭಯಂಕರವಾದುದೂ ಆದ್ದರಿಂದಲೇ । ದ್ರವಿತ್ನ್ವಾ—ಶತ್ರುಗಳನ್ನು ಓಡಿಸುವ ಶಕ್ತಿಯುಳ್ಳದ್ದೂ । ಪುರಂಧ್ಯಾ—ಅನೇಕರನ್ನು ಧರಿಸಿ ಪೋಷಿಸುವ ಸಾಮರ್ಥ್ಯವುಳ್ಳದ್ದೂ ಆದ । ಧಿಯಾ—ನಿನ ಸಾಹಸಕರ್ಮದಿಂದ । ನಃ—ನಮ್ಮನ್ನು । ಸಂ ಅವಿಡ್ಢಿ—ಚೆನ್ನಾಗಿ ಪಾಲನೆಮಾಡು.

॥ ಭಾವಾರ್ಥ ॥

ಇಷ್ಟಾರ್ಥಪ್ರದನಾದ ಎಲೈ ಇಂದ್ರನೇ, ಹಿಂದೆ ಹೇಳಿದ ಗುಣವಿಶಿಷ್ಟನಾದ ನೀನು ಶತ್ರುಗಳಿಗೆ ಭಯಂಕರವಾದುದೂ ಅವರನ್ನು ಓಡಿಸುವ ಶಕ್ತಿಯುಳ್ಳದ್ದೂ ಅನೇಕರನ್ನು ಪೋಷಿಸುವುದೂ ಆದ ನಿನ್ನ ಸಾಹಸಯುಕ್ತವಾದ ಕರ್ಮದಿಂದ ನಮ್ಮನ್ನು ಅತಿಶಯವಾಗಿ ಪಾಲನೆಮಾಡು

English Translation

Showrer (of blessings), protect us by your action, which is most bounteous yet awful, foe-terrifying yet many-cherishing.

॥ ಸಂಹಿತಾಪಾಠಃ ॥

ಯಸ್ತೇ ನೂನಂ ಶತಕ್ರತವಿಂದ್ರ ದ್ಯುಮ್ನಿತಮೋ ಮದಃ ।

ತೇನ ನೂನಂ ಮದೇ ಮದೇಃ ॥ ೧೬ ॥

॥ ಪದಪಾಠಃ ॥

ಯಃ । ತೇ । ನೂನಂ । ಶತಕ್ರತೋ ಇತಿ ಶತऽಕ್ರತೋ । ಇಂದ್ರ । ದ್ಯುಮ್ನಿಽತಮಃ । ಮದಃ।

ತೇನ । ನೂನಂ । ಮದೇ । ಮದೇರಿತಿ ಮದೇಃ ॥ ೧೬ ॥

॥ ಸಾಯಣಭಾಷ್ಯಂ ॥

ಅತ್ರ ಸೋಮಃ ಸ್ತೂಯತೇ । ಹೇ ಶತಕ್ರತೋ ಶತವಿಧಪ್ರಜ್ಞಾನ ಹೇ ಇಂದ್ರ ದ್ಯುಮ್ನಿತಮೋ ಯಶಸ್ವಿತಮೋ ಯೋ ಮದಃ । ಮಾದ್ಯಂತ್ಯನೇನೇತಿ ಮದಃ ಸೋಮಃ । ಯಃ ಸೋಮೋ ನೂನಂ ಪುರಾ ತೇ ತ್ವದರ್ಥಮಸ್ಮಾಭಿರಭಿಷುತೋऽಸ್ತಿ ತೇನಾಸ್ಮಾಭಿಃ ಪ್ರದೀಯಮಾನೇನ ಸೋಮೇನ ನೂನಮಿದಾನೀಂ ಮದೇ ತತ್ಪಾನೇನ ಮದೇ ತವ ಸಂಜಾತೇ ಸತ್ಯಸ್ಮಾನಪಿ ಮದೇಃ । ಧನಾದಿದಾನೇನ ತ್ವಂ ಮಾದಯ ॥ ಮದೀ ಹರ್ಷೇ ॥ ಅತ್ರಾಂತರ್ಣೀತಣ್ಯರ್ಥಃ । ಬಹುಲಮಿತಿ ಶಪ್ ॥

॥ ಪ್ರತಿಪದಾರ್ಥ ॥

**ಶತಕ್ರತೋ**—ಬಹುವಿಧಜ್ಞಾನವುಳ್ಳ । **ಇಂದ್ರ**—ಎಲೈ ಇಂದ್ರನೇ । **ದ್ಯುಮ್ನಿತಮಃ**—ಕೀರ್ತಿಯುತವಾದುದೂ । **ಯಃ ಮದಃ**—ಮದಕಾರಕವಾದುದೂ ಆದ ಯಾವ ಸೋಮವು । **ನೂನಂ**— ಪೂರ್ವದಲ್ಲಿ ನಮ್ಮಿಂದ । **ತೇ**—ನಿನಗಾಗಿ ಹಿಂಡಲ್ಪಟ್ಟಿತೋ । **ತೇನ**—ಅಂತಹ ಸೋಮರಸದಿಂದ । **ನೂನಂ**—ಈಗ । **ಮದೇ**—ನಿನಗೆ ಸಂತೋಷವುಂಟಾಗಿರುವುದರಿಂದ । **ಮದೇಃ**—ನಮ್ಮನ್ನೂ ಧನಾದಿದಾನದಿಂದ ಸಂತೋಷಪಡಿಸು.

॥ ಭಾವಾರ್ಥ ॥

ಬಹುವಿಧಜ್ಞಾನವುಳ್ಳ ಎಲೈ ಇಂದ್ರನೇ, ಕೀರ್ತಿಯುತವಾದುದೂ ಮದಕಾರಕವಾದುದೂ ಆದ ಯಾವ ಸೋಮರಸವು ಪೂರ್ವದಲ್ಲಿ ನಮ್ಮಿಂದ ನಿನಗಾಗಿ ಹಿಂಡಲ್ಪಟ್ಟಿತೋ ಅಂತಹ ಸೋಮರಸದಿಂದ ಹರ್ಷಗೊಂಡಾಗ ನಮ್ಮನ್ನೂ ಧನಾದಿದಾನದಿಂದ ಹರ್ಷಗೊಳಿಸು

## English Translation

Rejoice us, Indra, Satakratu, as you rejoice in that most glorious exhilaration of the Soma

॥ ಸಂಹಿತಾಪಾಠಃ ॥

ಯಸ್ತೇ ಚಿತ್ರಶ್ರವಸ್ತಮೋ ಯ ಇಂದ್ರ ವೃತ್ರಹಂತಮಃ ।

ಯ ಓಜೋದಾತಮೋ ಮದಃ ॥ ೧೭ ॥

॥ ಪದಪಾಠಃ ॥

ಯಃ । ತೇ । ಚಿತ್ರಶ್ರವಃಽತಮಃ । ಯಃ । ಇಂದ್ರ । ವೃತ್ರಹನ್ಽತಮಃ ।

ಯಃ । ಓಜಃಽದಾತಮಃ । ಮದಃ ॥ ೧೭ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಚಿತ್ರಶ್ರವಸ್ತಮೋಽತಿಶಯೇನ ನಾನಾವಿಧಕೀರ್ತಿಯೋ ಮದಃ ಸೋಮಸ್ತೇ ತ್ವದರ್ಥಮಸ್ಮಾಭಿರಭಿಷುತಃ । ಯಃ ಸೋಮೋ ವೃತ್ರಹಂತಮೋಽತಿಶಯೇನ ಪಾಪಾನಾಂ ಹಂತಾ । ಕಿಂಚ ಯಃ ಸೋಮ ಓಜೋದಾತಮೋಽತಿಶಯೇನ ಬಲಸ್ಯ ದಾತಾ । ತೇನಾಸ್ಮಾಭಿರ್ದೀಯಮಾನೇನ ಸೋಮೇನ ತ್ವಂ ಮಾದ್ಯೇರಿತಿ ಪೂರ್ವೇಣ ಸಂಬಂಧಃ ॥

॥ ಪ್ರತಿಪದಾರ್ಥ ॥

ಇಂದ್ರ — ಎಲೈ ಇಂದ್ರನೇ । ಚಿತ್ರಶ್ರವಸ್ತಮಃ — ನಾನಾವಿಧ ಕೀರ್ತಿಯುತವಾದ । ಯಃ ಮದಃ — ಯಾವ ಸೋಮವು । ತೇ — ನಿನ್ನನ್ನುದ್ದೇಶಿಸಿ ನಮ್ಮಿಂದ ಹಿಂಡಲ್ಪಟ್ಟಿತೋ । ಯಃ — ಯಾವ ಸೋಮವು । ವೃತ್ರಹಂತಮಃ — ಪಾಪಪರಿಹಾರಕವಾಗಿರುವುದೋ । ಯಃ — ಯಾವ ಸೋಮವು । ಓಜೋದಾತಮಃ — ಬಲಪ್ರದವಾಗಿರುವುದೋ ಅಂತಹ ಸೋಮಪಾನದಿಂದ ಹರ್ಷಿತನಾಗಿ ನಮ್ಮನ್ನು ಧನಾದಿದಾನಗಳಿಂದ ಸಂತೋಷಪಡಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ನಾನಾವಿಧಕೀರ್ತಿಯುತವಾದ ಯಾವ ಸೋಮರಸವು ನಿನಗಾಗಿ ನಮ್ಮಿಂದ ಹಿಂಡಲ್ಪಟ್ಟಿತೋ ಯಾವ ಸೋಮವು ಪಾಪಪರಿಹಾರಕವಾಗಿರುವುದೋ ಯಾವ ಸೋಮವು ಬಲಪ್ರದವಾಗಿರುವುದೋ ಅಂತಹ ಸೋಮಪಾನದಿಂದ ತೃಪ್ತನಾಗಿ ನಮ್ಮನ್ನೂ ಧನದಾನದಿಂದ ತೃಪ್ತಿಪಡಿಸು.

## English Translation

That Soma of yours, Indra, which is most widely renowned, most destructive of your enemies and most renovating to your strength.

॥ ಸಂಹಿತಾಪಾಠಃ ॥

ವಿದ್ಮಾ ಹಿ ಯಸ್ತೇ ಅದ್ರಿವಸ್ತ್ವಾದತ್ತಃ ಸತ್ಯ ಸೋಮಪಾಃ ।

ವಿಶ್ವಾಸು ದಸ್ಮ ಕೃಷ್ಟಿಷು ॥ ೧೮ ॥

॥ ಪದಪಾಠಃ ॥

ವಿದ್ಮ । ಹಿ । ಯಃ । ತೇ । ಅದ್ರಿಽವಃ । ತ್ವಾಽದತ್ತಃ । ಸತ್ಯ । ಸೋಮಽಪಾಃ ।

ವಿಶ್ವಾಸು । ದಸ್ಮ । ಕೃಷ್ಟಿಷು ॥ ೧೮ ॥

॥ ಸಾಯಣಭಾಷ್ಯಂ ॥

ಹೇ ಅದ್ರಿವಃ । ಅದ್ರಿರ್ವಜ್ರಃ । ತದ್ವನ್ ಹೇ ಸತ್ಯ ಯಥಾರ್ಥಕರ್ಮನ್ ಸೋಮಪಾಃ ಸೋಮಸ್ಯ ಪಾತರ್ದಸ್ಮ ದರ್ಶನೀಯ ಯದ್ವಾ ಶತ್ರೂಣಾಮುಪಕ್ಷಪಯಿತರಿಂದ್ರ ವಿಶ್ವಾಸು ಕೃಷ್ಟಿಷು ಸರ್ವೇಷು ಸೋಮಸ್ಯ ದಾತೃಷು ಯಜಮಾನೇಷು ತ್ವಾದತ್ತಸ್ತ್ವಯಾ ದತ್ತಸ್ತೇ ತ್ವದೀಯೋ ಯೋ ರಯಿರಸ್ತಿ ತಂ ವಿದ್ಮ ಹಿ । ಯಷ್ಟ್ವರೋ ವಯಮಪಿ ಜಾನೀಮ ಏವ । ಯದ್ವಾ । ಹೇ ಇಂದ್ರ ಸರ್ವೇಷು ಯಷ್ಟೃಷು ಮಧ್ಯೇ ವಯಂ ತೇ ತ್ವದೀಯಮೇವ ನಾನ್ಯದೀಯಮಿತಿ ತಂ ಸೋಮಂ ಜಾನೀಮ ಏವ ಯಃ ಸೋಮಸ್ತ್ವದತ್ತೋಽಸ್ಮಾಭಿಸ್ತ್ವದರ್ಥಂ ದೀಯತೇ । ಅತ್ರ ತ್ವಾದೇಶಶ್ಛಾಂದಸಃ ॥

॥ ಪ್ರತಿಪದಾರ್ಥ ॥

**ಅದ್ರಿವಃ**—ವಜ್ರಾಯುಧಧಾರಿಯೂ । **ಸತ್ಯ**—ನ್ಯಾಯವಾದ ಕಾರ್ಯವನ್ನೇ ಮಾಡುವವನೂ । **ಸೋಮಪಾಃ**—ಸೋಮರಸವನ್ನು ಪಾನಮಾಡುವವನೂ । **ದಸ್ಮ**—ಆಕರ್ಷಕವಾದ ರೂಪವುಳ್ಳವನೂ ಅಥವಾ ಶತ್ರುಗಳನ್ನು ನಾಶಮಾಡವವನೂ ಆದ ಎಲೈ ಇಂದ್ರನೇ । **ವಿಶ್ವಾಸು**—ಸಮಸ್ತರಾದ । **ಕೃಷ್ಟಿಷು**—ಸೋಮವನ್ನು ಅರ್ಪಿಸುವ ಯಜಮಾನರಲ್ಲಿ । **ತ್ವಾದತ್ತಃ**—ನಿನ್ನಿಂದ ಕೊಡಲ್ಪಟ್ಟುದೂ । **ತೇ**—ನಿನ್ನ ಸಂಬಂಧವಾದುದೂ ಆದ । **ಯಃ**—ಯಾವ ಧನವಿದೆಯೋ ಅದನ್ನು । **ವಿದ್ಮ ಹಿ**—ನಾವು ತಿಳಿದೇ ಇದ್ದೇವೆ ।

॥ ಭಾವಾರ್ಥ ॥

ವಜ್ರಾಯುಧಧಾರಿಯೂ, ನ್ಯಾಯವಾದ ಕಾರ್ಯಗಳನ್ನೇ ಮಾಡುವವನೂ ಆಕರ್ಷಕವಾದ ರೂಪವುಳ್ಳವನೂ ಆದ ಎಲೈ ಇಂದ್ರನೇ, ಸೋಮವನ್ನು ಅರ್ಪಿಸುವ ಸಮಸ್ತ ಯಜಮಾನರಲ್ಲಿಯೂ ನಿನ್ನಿಂದ ಕೊಡಲ್ಪಟ್ಟ ಯಾವ ದ್ರವ್ಯವಿರುವುದೋ ಅದು ನಿನ್ನದೇ ಆಗಿರುವುದೆಂದು ಎಂದರೆ ನೀನೇ ಅವರಿಗೆ ಅನುಗ್ರಹಮಾಡಿ ಕೊಟ್ಟಿರುವ ಧನವೆಂದು ನಾವು ತಿಳಿದೇ ಇದ್ದೇವೆ.

English Translation

Thunderer, smiter of enemies, truthful drinker of the Soma, we know (the wealth) which is given by you to all your votaries

॥ ಸಂಹಿತಾಪಾಠಃ ॥

ಇಂದ್ರಾಯ ಮದ್ವನೇ ಸುತಂ ಪರಿ ಷ್ಟೋಭಂತು ನೋ ಗಿರಃ ।

ಅರ್ಕಮರ್ಚಂತು ಕಾರವಃ ॥ ೧೯ ॥

॥ ಸಂಹಿತಾ ॥

ಇಂದ್ರಾ॑ಯ । ಮ॒ದ್ವನೇ॑ । ಸು॒ತಂ । ಪರಿ॑ । ಸ್ತೋ॒ಭಂ॒ತು॒ । ನಃ॒ । ಗಿರಃ॑ ।

ಅ॒ರ್ಕಂ । ಅ॒ರ್ಚಂ॒ತು॒ । ಕಾ॒ರವಃ॑ ॥ ೧೯ ॥

॥ ಸಾಯಣಭಾಷ್ಯಂ ॥

ಪ್ರಥಮೇ ಪರ್ಯಾಯೇಽಚ್ಛಾವಾಕಸ್ಯೇಂದ್ರಾಯ ಮದ್ವನೇ ಸುತಮಿತಿ ಸ್ತೋತ್ರಿಯಃ । ಸೂತ್ರಿತಂ ಚ । ಇಂದ್ರಾಯ ಮದ್ವನೇ ಸುತಮಿಂದ್ರಮಿದ್ಗಾಥಿನೋ ಬೃಹತ್ । ಆ. ೬-೪ । ಇತಿ ॥

ಮದ್ವನೇ ॥ ಮಾದ್ಯತೇಃ ಕ್ವನಿಪ್ ॥ ಮದನಶೀಲಾಯೇಂದ್ರಾಯ ತದರ್ಥಂ ಸುತಮಭಿಷುತಂ ಸೋಮಂ ನೋಽಸ್ಮದೀಯಾ ಗಿರಃ ಸ್ತುತಿಲಕ್ಷಣಾ ವಾಚಃ ಪರಿ ಷ್ಟೋಭಂತು । ಸ್ತೋಭತಿಃ ಸ್ತುತಿಕರ್ಮಾ । ಪರಿತಃ ಸೋಮಂ ಸ್ತುವಂತು । ತತಃ ಕಾರವಃ ಸ್ತುತಿಕಾರಿಣಃ ಸ್ತೋತಾರಶ್ಚಾರ್ಕಂ ಸರ್ವೈರರ್ಚನೀಯಂ ಸೋಮಮರ್ಚಂತು । ಪೂಜಯಂತು ॥

॥ ಪ್ರತಿಪದಾರ್ಥ ॥

**ಮದ್ವನೇ**— ಸೋಮಪಾನದಿಂದ ಮತ್ತನಾಗುವ । **ಇಂದ್ರಾಯ**— ಇಂದ್ರನನ್ನುದ್ದೇಶಿಸಿ । **ಸುತಂ**— ಹಿಂಡಲ್ಪಡುವ ಸೋಮವನ್ನು । **ನಃ**— ನಮ್ಮ । **ಗಿರಃ**— ಸ್ತುತಿರೂಪವಾದ ವಾಕ್ಯಗಳು । **ಪರಿ ಸ್ತೋಭಂತು**— ಚೆನ್ನಾಗಿ ಸ್ತುತಿಸಲಿ । **ಕಾರವಃ**— ಸ್ತುತಿಕರ್ತರು । **ಅರ್ಕಂ**— ಸರ್ವರಿಂದಲೂ ಪೂಜ್ಯವಾದ ಸೋಮವನ್ನು । **ಅರ್ಚಂತು**— ಪೂಜಿಸಲಿ.

॥ ಭಾವಾರ್ಥ ॥

ಸೋಮಪಾನದಿಂದ ತೃಪ್ತಿಪಡುವ ಇಂದ್ರನನ್ನುದ್ದೇಶಿಸಿ ಹಿಂಡಲ್ಪಡುವ ಸೋಮವನ್ನು ನಮ್ಮ ಸ್ತುತಿರೂಪವಾದ ವಾಕ್ಯಗಳು ಚೆನ್ನಾಗಿ ಸ್ತುತಿಸಲಿ. ಸ್ತೋತ್ರಮಾಡುವ ಜನರು ಸರ್ವರಿಂದಲೂ ಪೂಜಾರ್ಹವಾದ ಸೋಮವನ್ನು ಪೂಜಿಸಲಿ.

## English Translation

Let our voices praise on every side the (Soma) effused to the exhilarated Indra ; let the priests do honour to the (Soma) honoured of all.

॥ ವಿಶೇಷವಿಷಯಗಳು ॥

ಪ್ರಥಮಪರ್ಯಾಯದಲ್ಲಿ ಅಚ್ಛಾವಾಕನೆಂಬ ಋತ್ವಿಜನು **ಇಂದ್ರಾಯ ಮದ್ವನೇ ಸುತಂ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— **ಇಂದ್ರಾಯ ಮದ್ವನೇ ಸುತಮಿಂದ್ರಮಿದ್ಗಾಥಿನೋ ಬೃಹತ್** ಎಂಬ ಸೂತ್ರದಿಂದ (ಆ. ೬-೪) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಯಸ್ಮಿನ್ವಿಶ್ವಾ ಅಧಿ ಶ್ರಿಯೋ ರಣಂತಿ ಸಪ್ತ ಸಂಸದಃ ।

ಇಂದ್ರಂ ಸುತೇ ಹವಾಮಹೇ ॥ ೨೦ ॥

॥ ಪದಪಾಠಃ ॥

ಯಸ್ಮಿನ್ । ವಿಶ್ವಾಃ । ಅಧಿ । ಶ್ರಿಯಃ । ರಣಂತಿ । ಸಪ್ತ । ಸಂಽಸದಃ ।

ಇಂದ್ರಂ । ಸುತೇ । ಹವಾಮಹೇ ॥ ೨೦ ॥

॥ ಸಾಯಣಭಾಷ್ಯಂ ॥

**ಯಸ್ಮಿನ್ನಿಂದ್ರೇ ವಿಶ್ವಾಃ ಸರ್ವಾಃ ಶ್ರಿಯಃ ಕಾಂತಯೋಽಧ್ಯಧಿಕಂ ಭವಂತಿ । ಅತಿಶಯೇನ ತೇಜಸ್ವೀತ್ಯರ್ಥಃ । ಕಿಂ ಚ ಸಪ್ತ ಸಪ್ತಸಂಖ್ಯಾಕಾಃ ಸಂಸದಃ । ಸಮ್ಯಗ್ಯಜ್ಞೇಷು ಕರ್ಮಕರಣಾರ್ಥಂ ಸೀದಂತೀತಿ ಸಂಸದೋ ಹೋತ್ರಕಾಃ । ಯಸ್ಮಿನ್ರಣಂತಿ ಸೋಮಪ್ರದಾನಾರ್ಥಂ ರಮಂತೇ । ಯದ್ವಾ । ಯಂ ಶಬ್ದಯಂತಿ ಸ್ತುವಂತಿ । ತಂ ಪೂರ್ವೋಕ್ತಲಕ್ಷಣಮಿಂದ್ರಂ ಸುತೇ ಸೋಮೇಽಭಿಷುತೇ ಸತಿ ಹವಾಮಹೇ । ವಯಂ ಸೋಮಪಾನಾಯಾಹ್ವಯಾಮಃ ॥**

॥ ಪ್ರತಿಪದಾರ್ಥ ॥

**ಯಸ್ಮಿನ್**—ಯಾವ ಇಂದ್ರನಲ್ಲಿ । **ವಿಶ್ವಾಃ**—ಸಮಸ್ತವಾದ । **ಶ್ರಿಯಃ**—ಕಾಂತಿಗಳು । **ಅಧಿ**—ಅಧಿಕವಾಗಿರುವವೋ ಮತ್ತು । **ಸಪ್ತ**—ಸಪ್ತಸಂಖ್ಯಾಕರಾದ । **ಸಂಸದಃ**—ಯಜ್ಞಕರ್ಮದಲ್ಲಿ ಭಾಗವಹಿಸುವ ಹೋತ್ರಾದಿ ಋತ್ವಿಕ್ಕುಗಳು । **ಯಸ್ಮಿನ್**—ಯಾವ ಇಂದ್ರನನ್ನು । **ರಣಂತಿ**—ಸ್ತುತಿಸುವರೋ । **ಇಂದ್ರಂ**—ಅಂತಹ ಗುಣವಿಶಿಷ್ಟನಾದ ಇಂದ್ರನನ್ನು । **ಸುತೇ**—ಸೋಮವು ಹಿಂಡಲ್ಪಟ್ಟು ಸಿದ್ಧವಾದಾಗ । **ಹವಾಮಹೇ**—ಸೋಮಪಾನಾರ್ಥವಾಗಿ ನಾವು ಪ್ರಾರ್ಥಿಸಿ ಕರೆಯುತ್ತೇವೆ.

॥ ಭಾವಾರ್ಥ ॥

ಯಾವ ಇಂದ್ರನಲ್ಲಿ ಅತಿಶಯವಾದ ಕಾಂತಿಗಳಿರುವವೋ ಮತ್ತು ಯಜ್ಞಕರ್ಮದಲ್ಲಿ ಭಾಗವಹಿಸುವ ಹೋತ್ರಾದಿ ಏಳು ಮಂದಿ ಋತ್ವಿಕ್ಕುಗಳು ಯಾವ ಇಂದ್ರನನ್ನು ಸ್ತುತಿಸುವರೋ ಅಂತಹ ಇಂದ್ರನನ್ನು ಸೋಮರಸವು ಹಿಂಡಿ ಸಿದ್ಧಪಡಿಸಲ್ಪಟ್ಟಾಗ ಸೋಮಪಾನಾರ್ಥವಾಗಿ ನಾವು ಪ್ರಾರ್ಥಿಸಿ ಕರೆಯುತ್ತೇವೆ

## English Translation

We invoke, now that the Soma is effused, that Indra in whom all graces are at their height, and in whom the seven associated priests rejoice.

॥ ಸಂಹಿತಾಪಾಠಃ ॥

ತ್ರಿಕದ್ರುಕೇಷು ಚೇತನಂ ದೇವಾಸೋ ಯಜ್ಞಮತ್ನತ ।

ತಮಿದ್ವರ್ಧಂತು ನೋ ಗಿರಃ ॥ ೨೧ ॥

॥ ಪದಪಾಠಃ ॥

ತ್ರಿಽಕದ್ರುಕೇಷು । ಚೇತನಂ । ದೇವಾಸಃ । ಯಜ್ಞಂ । ಅತ್ನತ ।

ತಂ । ಇತ್ । ವರ್ಧಂತು । ನಃ । ಗಿರಃ ॥ ೨೧ ॥

॥ ಸಾಯಣಭಾಷ್ಯಂ ॥

ಹೇ ದೇವಾಸೋ ದೇವಾಃ ತ್ರಿಕದ್ರುಕೇಷ್ವಾಭಿಪ್ಲವಿಕೇಷ್ವಹಃಸು । ಜ್ಯೋತಿರ್ಗೌರಾಯುರಿತಿ ತ್ರಿಕದ್ರುಕಾಃ । ತೇಷು ಚೇತನಂ ॥ ಚಿತೀ ಸಂಜ್ಞಾನೇ ॥ ಚೇತಂತಿ ಜಾನಂತ್ಯನೇನ ಸ್ವರ್ಗಾದಿಕಮಿತಿ ಚೇತನಃ । ಜ್ಞಾನಸಾಧನಂ ಯಜ್ಞಮತ್ನತ । ಅತನ್ವತ । ಸ್ವೈಃ ಸ್ವೈಃ ಕರ್ಮಭಿಃ ಪಾಲನೈಶ್ಚ ವಿಸ್ತಾರಿತವಂತಃ ॥ ತನು ವಿಸ್ತಾರೇ । ಲಙಿ ಬಹುಲಂ ಛಂದಸೀತಿ ವಿಕರಣಸ್ಯ ಲುಕ್ । ತನಿಪತ್ಯೋಶ್ಛಂದಸೀತ್ಯುಪಧಾಲೋಪಃ ॥ ತಮಿತ್ತಮೇವಾಸ್ಮದೀಯಂ ಯಜ್ಞಂ ನೋಽಸ್ಮಾಕಂ ಗಿರಃ ಸ್ತುತಿಲಕ್ಷಣಾ ವಾಚೋ ವರ್ಧಂತು । ವರ್ಧಯಂತು ॥

॥ ಪ್ರತಿಪದಾರ್ಥ ॥

**ದೇವಾಸಃ**—ಇಂದ್ರಾದಿದೇವತೆಗಳು । **ತ್ರಿಕದ್ರುಕೇಷು**—ಅಭಿಪ್ಲವಯಾಗದ ಮೊದಲ ಮೂರು ದಿನಗಳಲ್ಲಿ । **ಚೇತನಂ**—ಸ್ವರ್ಗಾದಿಗಳಿಗೆ ಸಾಧನಭೂತವಾದ ಜ್ಞಾನವನ್ನುಂಟುಮಾಡುವ । **ಯಜ್ಞಂ**—ಯಜ್ಞವನ್ನು । **ಅತ್ನತ**—ಅನುಷ್ಠಾನಮಾಡಿದರು । **ನಃ**—ನಮ್ಮ । **ಗಿರಃ**—ಸ್ತುತಿರೂಪವಾದ ವಾಕ್ಯಗಳು । **ತಮಿತ್**—ಅಂತಹ ನಮ್ಮ ಯಜ್ಞವನ್ನೇ । **ವರ್ಧಂತು**—ವೃದ್ಧಿಪಡಿಸಲಿ.

॥ ಭಾವಾರ್ಥ ॥

ಇಂದ್ರಾದಿದೇವತೆಗಳೆಲ್ಲರೂ ಸೇರಿ ಅಭಿಪ್ಲವಯಾಗದ ಜ್ಯೋತಿಃ, ಗೌಃ, ಆಯುಃ ಎಂಬ ಮೊದಲ ಮೂರು ದಿನಗಳಲ್ಲಿ ಸ್ವರ್ಗಪ್ರಾಪ್ತಿಗೆ ಸಾಧನವಾದ ಜ್ಞಾನವನ್ನುಂಟುಮಾಡುವ ಯಜ್ಞವನ್ನು ಅನುಷ್ಠಾನಮಾಡಿ ನೆರವೇರಿಸಿದರು. ಅಂತಹ ಆ ಯಜ್ಞವನ್ನು ನಮ್ಮ ಸ್ತುತಿವಾಕ್ಯಗಳು ವೃದ್ಧಿಪಡಿಸಲಿ.

## English Translation

The gods extended the heaven-revealing sacrifice in the Trikadruka days,—may our praises prosper it.

॥ ಸಂಹಿತಾಪಾಠಃ ॥

ಆ ತ್ವಾ ವಿಶಂತ್ವಿಂದವಃ ಸಮುದ್ರಮಿವ ಸಿಂಧವಃ ।

ನ ತ್ವಾಮಿಂದ್ರಾತಿ ರಿಚ್ಯತೇ ॥ ೨೨ ॥

॥ ಪದಪಾಠಃ ॥

ಆ । ತ್ವಾ । ವಿಶಂತು । ಇಂದವಃ । ಸಮುದ್ರಂऽಇವ । ಸಿಂಧವಃ ।

ನ । ತ್ವಾಂ । ಇಂದ್ರ । ಅತಿ । ರಿಚ್ಯತೇ ॥ ೨೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಇಂದವಃ ಸ್ರವಂತೋऽಸ್ಮಾಭಿರಭಿಷುತಾಃ ಸೋಮಾಸ್ತ್ವಾ ತ್ವಾಮಾ ವಿಶಂತು। ಸರ್ವತಃ ಪ್ರವಿಶಂತು । ತತ್ರ ದೃಷ್ಟಾಂತಃ । ಸಮುದ್ರಮಿವ ಸಿಂಧವಃ ಸ್ಯಂದಮಾನಾ ನದ್ಯೋ ಯಥಾ ಸಮುದ್ರಂ ಜಲಾಶಯಂ ಸರ್ವತಃ ಪ್ರವಿಶಂತಿ ತದ್ವತ್ । ಯತ ಏವಂ ತಸ್ಮಾತ್ ಹೇ ಇಂದ್ರ ತ್ವಾಂ ಕಶ್ಚಿದಪಿ ದೇವೋ ಬಲೇನ ಧನೇನ ವಾ ನಾತಿ ರಿಚ್ಯತೇ । ನಾತಿರಿಕ್ತೋऽಸ್ತಿ । ಸಾಮರ್ಥ್ಯಾಂತ್ತ್ವತ್ತೋऽಧಿಕೋ ನಾಸ್ತೀತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ಸಿಂಧವಃ—ನದಿಗಳು ಎಲ್ಲಾ ದಿಕ್ಕುಗಳಿಂದಲೂ । ಸಮುದ್ರಮಿವ – ಸಮುದ್ರವನ್ನು ಪ್ರವೇಶಿಸುವಂತೆ । ಇಂದವಃ—ನಮ್ಮಿಂದ ಹಿಂಡಲ್ಪಟ್ಟು ಜಿನುಗುತ್ತಿರುವ ಸೋಮರಸಗಳು । ತ್ವಾ—ನಿನ್ನನ್ನು । ಆ ವಿಶಂತು—ಚೆನ್ನಾಗಿ ಪ್ರವೇಶಿಸಲಿ । ಇಂದ್ರ—ಎಲೈ ಇಂದ್ರನೇ । ತ್ವಾಂ –ನಿನ್ನನ್ನು (ದೇವನಾಗಲಿ, ಮನುಷ್ಯನಾಗಲಿ ಯಾರೂ) । ನ ಅತಿ ರಿಚ್ಯತೇ—ಶಕ್ತಿಸಾಮರ್ಥ್ಯಗಳಲ್ಲಿ ಮೀರಿಸಲಾರರು.

॥ ಭಾವಾರ್ಥ ॥

ಎಲೈ ಇಂದ್ರನೇ, ನದಿಗಳು ಸಮುದ್ರವನ್ನು ನಾನಾದಿಕ್ಕುಗಳಿಂದ ಬಂದು ಸೇರುವಂತೆ ನಮ್ಮಿಂದ ಹಿಂಡಲ್ಪಟ್ಟು ಹರಿಯುತ್ತಿರುವ ಈ ಸೋಮರಸಗಳು ನಿನ್ನನ್ನು ಚೆನ್ನಾಗಿ ಪ್ರವೇಶಿಸಲಿ. ಎಲೈ ಇಂದ್ರನೇ, ದೇವನಾಗಲಿ ಮನುಷ್ಯನಾಗಲಿ ಯಾರೂ ಸಹ ನಿನ್ನನ್ನು ಶಕ್ತಿಸಾಮರ್ಥ್ಯಗಳಲ್ಲಿ ಮೀರಿಸಲಾರರು.

## English Translation

Let Soma-drops enter you as the rivers the sea; none, Indra, surpasses you.

॥ ಸಂಹಿತಾಪಾಠಃ ॥

ವಿವ್ಯಕ್ಥ ಮಹಿನಾ ವೃಷನ್ಭಕ್ಷಂ ಸೋಮಸ್ಯ ಜಾಗೃವೇ ।
ಯ ಇಂದ್ರ ಜಠರೇಷು ತೇ ॥ ೨೪ ॥

॥ ಪದಪಾಠಃ ॥

ವಿವ್ಯಕ್ಥ । ಮಹಿನಾ । ವೃಷನ್ । ಭಕ್ಷಂ । ಸೋಮಸ್ಯ । ಜಾಗೃವೇ ।
ಯಃ । ಇಂದ್ರ । ಜಠರೇಷು । ತೇ ॥ ೨೪ ॥

॥ ಸಾಯಣಭಾಷ್ಯಂ ॥

ಹೇ ವೃಷನ್ ಕಾಮಾನಾಂ ವರ್ಷಿತರ್ಹೇ ಜಾಗೃವೇ ಜಾಗರಣಶೀಲೇಂದ್ರ ತ್ವಂ ತಸ್ಯ ಸೋಮಸ್ಯ ಭಕ್ಷಂ ಪಾನಂ ಪ್ರತಿ ಮಹಿನಾ ಸ್ವಮಹಿಮ್ನಾ ವಿವ್ಯಕ್ಥ । ಸರ್ವತೋ ವ್ಯಾಪ್ತವಾನಸಿ ॥ ವ್ಯಚೇರ್ಲಿಟಿ ಲ್ಯಿಡಭ್ಯಾಸಸ್ಯೋಭಯೇಷಾಂ । ಪಾ ೬-೧-೧೭ । ಇತಿ ಸಂಪ್ರಸಾರಣಂ ॥ ಹೇ ಇಂದ್ರ ಯಃ ಸೋಮಸ್ತೇ ಜಠರೇಷೂದರೇಷು ಪ್ರವಿಶತಿ ತಸ್ಯ ಪಾನಂ ವ್ಯಾಪ್ತವಾನಸೀತಿ ಶೇಷಃ ॥

॥ ಪ್ರತಿಪದಾರ್ಥ ॥

**ವೃಷನ್**—ಇಷ್ಟಾರ್ಥಗಳನ್ನು ಸುರಿಸುವವನೂ । **ಜಾಗೃವೇ ಇಂದ್ರ**—ಸದಾ ಎಚ್ಚರಿಕೆಯಿಂದಿರುವವನೂ ಆದ ಎಲೈ ಇಂದ್ರನೇ । **ಯಃ**—ಯಾವ ಸೋಮವು । **ತೇ**—ನಿನ್ನ । **ಜಠರೇಷು**—ಉದರಗಳಲ್ಲಿ ಪ್ರವೇಶಮಾಡುವುದೋ ಅಂತಹ । **ಸೋಮಸ್ಯ**—ಸೋಮರಸದ । **ಭಕ್ಷಂ**—ಪಾನವನ್ನು । **ಮಹಿನಾ**—ನಿನ್ನ ಸ್ವಮಹಿಮೆಯಿಂದ । **ವಿವ್ಯಕ್ಥ**—ಸರ್ವತ್ರ ವ್ಯಾಪಿಸುವಂತೆ ಮಾಡಿದ್ದೀಯೆ

॥ ಭಾವಾರ್ಥ ॥

ಇಷ್ಟಾರ್ಥಗಳನ್ನು ಸುರಿಸುವವನೂ, ಯಾವಾಗಲೂ ಜಾಗರೂಕನಾಗಿರುವವನೂ ಆದ ಎಲೈ ಇಂದ್ರನೇ ಯಾವ ಸೋಮವು ನಿನ್ನ ಜಠರವನ್ನು ಪ್ರವೇಶಿಸುವುದೋ ಆ ಸೋಮವು ನಿನ್ನ ಸರ್ವಾಂಗಗಳಲ್ಲಿಯೂ ವ್ಯಾಪಿಸಿ ಮದಕಾರಕವಾಗುವಂತೆ ಮಾಡುತ್ತೀಯೆ. ಇದು ನಿನ್ನ ಮಹಿಮೆಯು

## English Translation

Indra, showerer (of blessings), wakeful one, you have attained by your might the drinking of the Soma which enters into your belly

॥ ಸಂಹಿತಾಪಾಠಃ ॥

ಅರಂ ತ ಇಂದ್ರ ಕುಕ್ಷಯೇ ಸೋಮೋ ಭವತು ವೃತ್ರಹನ್ ।

ಅರಂ ಧಾಮಭ್ಯ ಇಂದವಃ ॥ ೨೪ ॥

॥ ಪದಪಾಠಃ ॥

ಅರಂ । ತೇ । ಇಂದ್ರ । ಕುಕ್ಷಯೇ । ಸೋಮಃ । ಭವತು । ವೃತ್ರಽಹನ್ ।

ಅರಂ । ಧಾಮಽಭ್ಯಃ । ಇಂದವಃ ॥ ೨೪ ॥

॥ ಸಾಯಣಭಾಷ್ಯಂ ॥

ಹೇ ವೃತ್ರಹನ್ ವೃತ್ರಸ್ಯಾಪಾಮಾವರಕಸ್ಯಾಸುರಸ್ಯ ಪಾಪಸ್ಯ ವಾ ಹಂತರ್ಹೇ ಇಂದ್ರ ಸೋಮೋಽಸ್ಮಾಭಿರ್ದೀಯಮಾನಸ್ತೇ ತವ ಕುಕ್ಷಯೇಽರಮಲಂ ಪರ್ಯಾಪ್ತೋ ಭವತು । ಕಿಂಚೇಂದವಃ ಸರ್ವತಃ ಕ್ಷರಣಶೀಲಾಃ ಸೋಮಾಸ್ತವ ಧಾಮಭ್ಯೋ ನಾನಾವಿಧೇಭ್ಯಃ ಶರೀರೇಭ್ಯಸ್ತವ ತೇಜೋಭ್ಯೋ ವಾರಮಲಂ ಪರ್ಯಾಪ್ತಾ ಭವಂತು । ಅನೇನ ತೇಜಸಾ ಹವಿರ್ಭಾಕ್ತ್ವಮಸ್ತೀತಿ ಸೂಚಿತಂ । ಅಸ್ಮದೀಯಾಃ ಸೋಮಾ ಏವ ತವ ಕುಕ್ಷಯೇ ದೇಹೇಭ್ಯೋಽಪಿ ಪರ್ಯಾಪ್ತಾ ಭವಂತು ನಾನ್ಯದೀಯಾ ಇತಿ ಭಾವಃ ॥

॥ ಪ್ರತಿಪದಾರ್ಥ ॥

**ವೃತ್ರಹನ್**—ವೃತ್ರಾಸುರಹಂತಕನಾದ । **ಇಂದ್ರ**—ಎಲೈ ಇಂದ್ರನೇ । **ಸೋಮಃ**—ನಮ್ಮಿಂದ ಅರ್ಪಿತವಾಗುವ ಸೋಮವು । **ತೇ**—ನಿನ್ನ । **ಕುಕ್ಷಯೇ**—ಉದರಕ್ಕೆ । **ಅರಂ ಭವತು**—ಸಾಕಾಗುವಂತಾಗಲಿ । **ಇಂದವಃ**—ಹರಿಡುವ ಸ್ವಭಾವವುಳ್ಳ ಸೋಮರಸಗಳು । **ಧಾಮಭ್ಯಃ**—ನಿನ್ನ ಅವಯವಗಳಲ್ಲೆಲ್ಲಾ । **ಅರಂ**—ವ್ಯಾಪಿಸಲಿ.

॥ ಭಾವಾರ್ಥ ॥

ವೃತ್ರಾಸುರಹಂತಕನಾದ ಎಲೈ ಇಂದ್ರನೇ, ನಮ್ಮಿಂದ ಅರ್ಪಿತವಾಗುವ ಸೋಮವು ನಿನ್ನ ಉದರವನ್ನು ತುಂಬುವುದಕ್ಕೆ ಸಾಕಾಗುವಂತಾಗಲಿ. ಹರಿಡುವ ಸ್ವಭಾವವುಳ್ಳ ಆ ಸೋಮರಸಗಳು ನಿನ್ನ ಅಂಗಾಂಗಗಳಲ್ಲಿ ಲ್ಲಾ ಸರ್ವತ್ರ ವ್ಯಾಪಿಸಲಿ.

## English Translation

Indra, slayer of Vritra, may the Soma be enough for your belly, may the drops be enough for your (various) bodies.

॥ ಸಂಹಿತಾಪಾಠಃ ॥

ಅರಮಶ್ವಾಯ ಗಾಯತಿ ಶ್ರುತಕಕ್ಷೋ ಅರಂ ಗವೇ ।
ಅರಮಿಂದ್ರಸ್ಯ ಧಾಮ್ನೇ ॥ ೨೫ ॥

॥ ಪದಪಾಠಃ ॥

ಅರಂ । ಅಶ್ವಾಯ । ಗಾಯತಿ । ಶ್ರುತಽಕಕ್ಷಃ । ಅರಂ । ಗವೇ ।
ಅರಂ । ಇಂದ್ರಸ್ಯ । ಧಾಮ್ನೇ ॥ ೨೫ ॥

॥ ಸಾಯಣಭಾಷ್ಯಂ ॥

ಶ್ರುತಕಕ್ಷೋ ನಾಮರ್ಷಿರ್ಗವಾಶ್ವಾದಿಂದ್ರಂ ಸ್ತೌತಿ । ಅಯಂ ಶ್ರುತಕಕ್ಷ ಏತನ್ನಾಮ ಋಷಿ-ರಶ್ವಾಯೇಂದ್ರೇಣ ದೀಯಮಾನಾಯಾಶ್ವಾಯೈತದರ್ಥಮರಮಲಂ ಗಾಯತಿ । ಇಂದ್ರವಿಷಯಂ ಸ್ತೋತ್ರಂ ಕರೋತಿ । ತಥಾ ಗವೇಽರಮಲಂ ಗಾಯತಿ । ಇಂದ್ರಸ್ಯೇಂದ್ರಕರ್ತೃಕಾಯ ಧಾಮ್ನೇ ಗೃಹಾಯ ತದರ್ಥಂ ಚಾರಂ ಪರ್ಯಾಪ್ತಂ ಸ್ತೌತಿ । ಯದಶ್ವಾದಿಕಮಿಂದ್ರಃ ಪ್ರಯಚ್ಛತಿ ತಸ್ಮೈ ಗಾಯ-ತೀತಿ । ಯದ್ವಾ ॥ ಇಂದ್ರಸ್ಯೇತಿ ಕರ್ಮಣಿ ಷಷ್ಠೀ ॥ ಗವಾದಿಲಾಭಾರ್ಥಮಿಂದ್ರಂ ಸ್ತೌತಿ ॥

॥ ಪ್ರತಿಪದಾರ್ಥ ॥

**ಶ್ರುತಕಕ್ಷಃ**—ಶ್ರುತಕಕ್ಷನೆಂಬ ಈ ಸೂಕ್ತದ್ರಷ್ಟೃವಾದ ಋಷಿಯು । **ಅಶ್ವಾಯ**—ಅಶ್ವಲಾಭಕ್ಕಾಗಿ । **ಅರಂ ಗಾಯತಿ**—ಇಂದ್ರನನ್ನು ಸ್ತುತಿಸುತ್ತಾನೆ ಹಾಗೆಯೇ । **ಗವೇ**—ಗೋವುಗಳಿಗಾಗಿಯೂ । **ಅರಂ**—ಸ್ತುತಿಸುತ್ತಾನೆ । **ಇಂದ್ರಸ್ಯ**—ಇಂದ್ರನು ಕೊಡಬೇಕಾದ । **ಧಾಮ್ನೇ**—ಗೃಹಕ್ಕಾಗಿಯೂ । **ಅರಂ**—ಸ್ತುತಿಸಿ ಪ್ರಾರ್ಥಿಸುತ್ತಾನೆ.

॥ ಭಾವಾರ್ಥ ॥

ಶ್ರುತಕಕ್ಷನೆಂಬ ಈ ಸೂಕ್ತದ್ರಷ್ಟೃವಾದ ಋಷಿಯು ಅಶ್ವಗಳಿಗಾಗಿಯೂ, ಗೋವುಗಳಿಗಾಗಿಯೂ ವಾಸಮಾಡುವ ಗೃಹಕ್ಕಾಗಿಯೂ ಇಂದ್ರನನ್ನು ಸ್ತುತಿಸಿ ಪ್ರಾರ್ಥಿಸುತ್ತಾನೆ

English Translation

Srutakaksha sings enough for a horse, enough for a cow, enough for a house of Indra's.

॥ ಸಂಹಿತಾಪಾಠಃ ॥

ಅರಂ ಹಿ ಷ್ಮಾ ಸುತೇಷು ಣಃ ಸೋಮೇಷ್ವಿಂದ್ರ ಭೂಷಸಿ ।
ಅರಂ ತೇ ಶಕ್ರ ದಾವನೇ ॥ ೨೬ ॥

॥ ಪದಪಾಠಃ ॥

**ಅರಂ । ಹಿ । ಸ್ಮ । ಸುತೇಷು । ನಃ । ಸೋಮೇಷು । ಇಂದ್ರ । ಭೂಷಸಿ ।**

**ಅರಂ । ತೇ । ಶಕ್ರ । ದಾವನೇ ॥ ೨೬ ॥**

॥ ಸಾಯಣಭಾಷ್ಯಂ ॥

**ಹೇ ಇಂದ್ರ ಸುತೇಷ್ವಭಿಷುತೇಷು ನೋಽಸ್ಮದೀಯೇಷು ಸೋಮೇಷು । ಹಿ ಸ್ಮೇತ್ಯವಧಾರಣೇ । ತ್ವಮೇವ ತೇಷಾಂ ಪಾನೇಽಲಂ ಪರ್ಯಾಪ್ತೋ ಭೂಷಸಿ । ಭವಸಿ । ಯದ್ವಾ । ಸೋಮೇಷ್ವಭಿಷುತೇಷು ಸತ್ಸು ನೋಽಸ್ಮಾಕಂ ಪರ್ಯಾಪ್ತಂ ಧನಂ ಭೂಷಸಿ ॥ ಭೂ ಪ್ರಾಪ್ತೌ ॥ ತ್ವಂ ಪ್ರಾಪಯ । ತಥಾ ಭವತಿ ಹೇ ಶಕ್ರ ಸಮರ್ಥೇಂದ್ರ ದಾವನೇ ಧನಾದಿಕಸ್ಯ ದಾತ್ರೇ ತೇ ತುಭ್ಯಮಸ್ಮಾಭಿರ್ದೀಯಮಾನಾಃ ಸೋಮಾ ಅರಮಲಂ ಪರ್ಯಾಪ್ತಾ ಭವಂತು ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ನಃ**—ನಮ್ಮ ಸಂಬಂಧವಾದ । **ಸುತೇಷು**—ಹಿಂಡಲ್ಪಟ್ಟ । **ಸೋಮೇಷು**—ಸೋಮರಸಗಳ ಪಾನದಲ್ಲಿ । **ಅರಂ ಹಿ ಸ್ಮ ಭೂಷಸಿ**—ಚೆನ್ನಾಗಿ ತೃಪ್ತಿಯನ್ನು ಹೊಂದು । **ಶಕ್ರ**—ಸಮರ್ಥನಾದ ಎಲೈ ಇಂದ್ರನೇ । **ದಾವನೇ**—ಧನಾದಿಗಳನ್ನು ಕೊಡುವ । **ತೇ**—ನಿನಗೆ ನಾವು ಅರ್ಪಿಸುವ ಸೋಮರಸಗಳು । **ಅರಂ**—ಸಾಕಾಗುವಷ್ಟಾಗಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ನಾವು ಹಿಂಡಿ ಸಿದ್ಧಪಡಿಸಿರುವ ಸೋಮರಸಗಳ ಪಾನದಲ್ಲಿ ನಿನಗೆ ತೃಪ್ತಿಯುಂಟಾಗಲಿ. ಧನಾದಿಗಳನ್ನು ಕೊಡುವ ನಿನಗೆ ನಾವು ಅರ್ಪಿಸುವ ಸೋಮರಸಗಳು ಸಾಕಾಗುವಂತಿರಲಿ

English Translation

When our Soma-libations are effused, you are abundantly able (to drink them),—may they be enough for you, the bounteous

॥ ಸಂಹಿತಾಪಾಠಃ ॥

ಪರಾಕಾತ್ತಾಚ್ಚಿದದ್ರಿವಸ್ತ್ವಾಂ ನಕ್ಷಂತ ನೋ ಗಿರಃ ।

ಅರಂ ಗಮಾಮ ತೇ ವಯಂ ॥ ೨೭ ॥

॥ ಪದಪಾಠಃ ॥

**ಪರಾಕಾತ್ತಾತ್ । ಚಿತ್ । ಅದ್ರಿಽವಃ । ತ್ವಾಂ । ನಕ್ಷಂತ । ನಃ । ಗಿರಃ ।**

**ಅರಂ । ಗಮಾಮ । ತೇ । ವಯಂ ॥ ೨೭ ॥**

॥ ಸಾಯಣಭಾಷ್ಯಂ ॥

ಹೇ ಅದ್ರಿವೋ ವಜ್ರವನ್ನಿಂದ್ರ ನೋಽಸ್ಮದೀಯಾ ಗಿರ ಇತೋ ನಿರ್ಗತಾಃ ಸ್ತುತಯಃ ಪರಾಕಾತ್ತಾತ್ । ಚಿದಪ್ಯರ್ಥಃ । ಅತಿದೂರಾದಪಿ ತ್ವಾಂ ನಕ್ಷಂತ । ವ್ಯಾಪ್ನುವಂತು । ಕಿಮುತ ಸಮೀಪಾತ್ತ್ವಾಮಶ್ನುವಂತಾಮಿತಿ ॥ ನಕ್ಷತೇರ್ವ್ಯಾಪ್ತಿಕರ್ಮಣೋ ನಶತೇರ್ವಾ ಲೇಟಿ ಸಿಪಿ ರೂಪಂ ॥ ಏವಂ ಸತಿ ಸ್ತೋತಾರೋ ವಯಂ ತೇ ತ್ವದೀಯಂ ಧನಮರಮಲಂ ಪರ್ಯಾಪ್ತಂ ಗಮಾಮ । ತ್ವತ್ತೋ ಗಚ್ಛಾಮ ॥

॥ ಪ್ರತಿಪದಾರ್ಥ ॥

**ಅದ್ರಿವಃ**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ । **ನಃ**—ನಮ್ಮ । **ಗಿರಃ**—ಸ್ತುತಿರೂಪವಾದ ವಾಕ್ಯಗಳು । **ಪರಾಕಾತ್ತಾತ್**—ಅತಿ ದೂರಪ್ರದೇಶದಿಂದಲೂ ಸಹ । **ತ್ವಾಂ**—ನಿನ್ನನ್ನು । **ನಕ್ಷಂತ**—ವ್ಯಾಪಿಸಲಿ । **ವಯಂ**—ನಾವು । **ತೇ**—ನಿನ್ನ ಸಂಬಂಧವಾದ ಧನವನ್ನು । **ಅರಂ**—ಯಥೇಚ್ಛವಾಗಿ । **ಗಮಾಮ**—ನಿನ್ನಿಂದ ಪಡೆಯುವಂತಾಗಲಿ.

॥ ಭಾವಾರ್ಥ ॥

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ನಮ್ಮ ಸ್ತೋತ್ರಗಳು ಅತಿ ದೂರಪ್ರದೇಶದಿಂದಲೂ ಸಹ ನಿನ್ನ ಸಮೀಪಕ್ಕೆ ಬಂದು ಸೇರಲಿ. ನೀನು ನಮಗೆ ಕೊಡಬೇಕೆಂದಿರುವ ಧನವನ್ನು ಯಥೇಚ್ಛವಾಗಿ ಪಡೆಯುವಂತಾಗಲಿ.

English Translation

May our praises reach you, thunderer, even from afar; may we obtain your (wealth) abundantly.

॥ ಸಂಹಿತಾಪಾಠಃ ॥

ಏವಾ ಹ್ಯಸಿ ವೀರಯುರೇವಾ ಶೂರ ಉತ ಸ್ಥಿರಃ ।
ಏವಾ ತೇ ರಾಧ್ಯಂ ಮನಃ ॥ ೨೮ ॥

॥ ಪದಪಾಠಃ ॥

ಏವ । ಹಿ । ಅಸಿ । ವೀರಽಯುಃ । ಏವ । ಶೂರಃ । ಉತ । ಸ್ಥಿರಃ ।
ಏವ । ತೇ । ರಾಧ್ಯಂ । ಮನಃ । ೨೮ ॥

॥ ಸಾಯಣಭಾಷ್ಯಂ ॥

ಅಭಿಪ್ಲವಿಕೇಷೂಕ್ಥ್ಯೇಷು ತೃತೀಯಸವನೇ ಬ್ರಾಹ್ಮಣಾಚ್ಛಂಸಿನ ಏವಾ ಹ್ಯಸಿ ವೀರಯುರಿತಿ ವೈಕಲ್ಪಿಕಃ ಸ್ತೋತ್ರಿಯಃ । ಸೂತ್ರಿತಂ ಚ । ಏವಾ ಹ್ಯಸಿ ವೀರಯುರೇವಾ ಹ್ಯಸ್ಯ ಸೂನೃತಾ । ಆ. ೭-೮ ಇತಿ ॥

**ಹೇ ಇಂದ್ರ ತ್ವಂ ವೀರಯುರ್ವೀರಾನ್ಯುದ್ಧಕರ್ಮಣಿ ಸಮರ್ಥಾನ್ ಹಂತುಂ ಕಾಮಯಮಾನ ಏವಾಸಿ । ಭವಸಿ ಖಲು । ಹಿ ಪ್ರಸಿದ್ಧೌ । ಅತ ಏವ ತ್ವಂ ಶೂರಃ ಸಾಮರ್ಥ್ಯವಾನೇವ ಭವಸಿ । ಉತಾಪಿ ಚ ಸ್ಥಿರಃ ಸಂಗ್ರಾಮೇ ಧೈರ್ಯವಾನ್ ಭವಸಿ । ಏಕತ್ರ ಸ್ಥಿತ್ವೈವ ಶತ್ರೂನ್ ಸಂಪ್ರಹರಸೀತ್ಯರ್ಥಃ । ಏವಂ ಸತಿ ತೇ ತವ ಮನೋ ರಾಧ್ಯಂ ಸ್ತುತಿಭಿರಾರಾಧನೀಯಮೇವ ಯತೋಽನೇನ ಮನಸಾ ತ್ವಂ ಶತ್ರುವಧಂ ಸಂಗ್ರಾಮೇ ಧೈರ್ಯಾದಿಕಂ ಚ ಕರೋಷೀತಿ । ತವ ಮನ ಏವ ಸರ್ವೈಃ ಸ್ತುತ್ಯಮಿತ್ಯರ್ಥಃ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ ನೀನು) **ವೀರಯುಃ ಏವ**—ಯುದ್ಧದಲ್ಲಿ ಶತ್ರುವೀರರುಗಳನ್ನು ಕೊಲ್ಲಲು ಇಚ್ಛೆಯುಳ್ಳವನಾಗಿಯೇ । **ಅಸಿ**—ಇದ್ದೀಯೆ । **ಹಿ**—ಪ್ರಸಿದ್ಧವು । **ಏವ ತ್ವಂ**—ಆದ್ದರಿಂದಲೇ ನೀನು । **ಶೂರಃ**—ಶಕ್ತಿ ಸಾಮರ್ಥ್ಯವುಳ್ಳವನಾಗಿದ್ದೀಯೆ । **ಉತ**—ಇದಲ್ಲದೆ । **ಸ್ಥಿರಃ**—ಯುದ್ಧದಲ್ಲಿ ಶತ್ರುಗಳಿಗೆ ಹೆದರಿ ಓಡಿಹೋಗದೆ ಧೈರ್ಯವಾಗಿ ನಿಲ್ಲುವೆ. ಆದ್ದರಿಂದಲೇ । **ತೇ**—ನಿನ್ನ । **ಮನಃ**—ಮನಸ್ಸು । **ರಾಧ್ಯಂ ಏವ**—ಸ್ತುತಿಗಳಿಂದ ಪ್ರಶಂಸಿಸಲ್ಪಡಲು ಅರ್ಹವಾಗಿದೆ

॥ ಭಾವಾರ್ಥ ॥

ಎಲೈ ಇಂದ್ರನೇ ನೀನು ಯುದ್ಧದಲ್ಲಿ ಶತ್ರುವೀರರನ್ನು ಕೊಲ್ಲಲು ಇಚ್ಛೆಯುಳ್ಳವನಾಗಿಯೇ ಇದ್ದೀಯೆ ಇದು ಪ್ರಸಿದ್ಧವಾಗಿಯೇ ಇದೆ ಆದ್ದರಿಂದಲೇ ನೀನು ಶಕ್ತಿಸಾಮರ್ಥ್ಯವುಳ್ಳವನಾಗಿದ್ದೀಯೆ. ಮತ್ತು ಯುದ್ಧದಲ್ಲಿ ಶತ್ರುಗಳಿಗೆ ಬೆನ್ನುಕೊಟ್ಟದೆ ಧೈರ್ಯವಾಗಿ ನಿಲ್ಲುವೆ ಈ ಕಾರಣಗಳಿಂದ ನಿನ್ನ ಮನಸ್ಥೈರ್ಯವು ಪ್ರಶಂಸಿಸಲ್ಪಡಲು ಯೋಗ್ಯವಾಗಿದೆ

## English Translation

You verily love to smite the mighty, you are a hero and firm (in battle), your mind is to be propitiated (by praise).

॥ ವಿಶೇಷವಿಷಯಗಳು ॥

ಅಭಿಪ್ಲವಸಂಬಂಧವಾದ ಉಕ್ಥ್ಯಯಾಗಗಳಲ್ಲಿ ತೃತೀಯಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪಠಿಸಬೇಕಾದ ಮಂತ್ರಗಳಲ್ಲಿ **ಏವಾ ಹ್ಯಸಿ ವೀರಯುಃ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ವೈಕಲ್ಪಿಕ ಸ್ತೋತ್ರಿಯ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಏವಾ ಹ್ಯಸಿ ವೀರಯುರೇವಾ ಹ್ಯಸ್ಯ ಸೂನೃತಾ** ಎಂಬ ಸೂತ್ರದಿಂದ (ಆ. ೭-೮) ವಿವೃತವಾಗಿರುವುದು

॥ ಸಂಹಿತಾಪಾಠಃ ॥

**ಏವಾ ರಾತಿಸ್ತುವೀಮಘ ವಿಶ್ವೇಭಿರ್ಧಾಯಿ ಧಾತೃಭಿಃ ।**

**ಅಧಾ ಚಿದಿಂದ್ರ ಮೇ ಸಚಾ ॥ ೨೯ ॥**

॥ ಪದಪಾಠಃ ॥

ಏವ । ರಾತಿಃ । ತುವಿsಮಘ । ವಿಶ್ವೇಭಿಃ । ಧಾಯಿ । ಧಾತೃsಭಿಃ ।

ಅಧ । ಚಿತ್ । ಇಂದ್ರ । ಮೇ । ಸಚಾ ॥ ೨೯ ॥

॥ ಸಾಯಣಭಾಷ್ಯಂ ॥

**ಹೇ ತುವಿಮಘ । ತುವಿರಿತಿ ಬಹುನಾಮ । ಬಹುಧನವನ್ನಿಂದ್ರ ವಿಶ್ವೇಭಿರ್ವಿಶ್ವೈರ್ಧಾತೃಭಿಃ ಕರ್ಮಧಾರಕೈಃ । ಯದ್ವಾ । ದೇವಾನಾಂ ಹವಿರ್ದಾನೇನ ಪೋಷಯಿತೃಭಿಃ ಸರ್ವೈರ್ಯಜಮಾನೈಸ್ತವ ರಾತಿರ್ಗವಾಶ್ವಧನಾದಿದಾನಂ ಧಾಯಿ । ಧೈರ್ಧಾಯತ ಏವ ॥ ದಧಾತೇರ್ಲುಙಿ ಕರ್ಮಣಿ ರೂಪಂ ॥ ಚಿದೇವಾರ್ಥೇ । ಅಧಾತ ಏವ ಹೇ ಇಂದ್ರೈವಂವಿಧ ತ್ವಂ ಮೇ ಯಷ್ಟುರ್ಮಮಾಪಿ ಸಚಾ ಧನಾದಿ-ದಾನೇನ ಕರ್ಮಸಹಾಯೋ ಭವ ॥**

॥ ಪ್ರತಿಪದಾರ್ಥ ॥

**ತುವೀಮಘ**— ಬಹು ಧನೋಪೇತನಾದ ಎಲೈ ಇಂದ್ರನೇ । **ವಿಶ್ವೇಭಿಃ**— ಸಮಸ್ತರಾದ । **ಧಾತೃಭಿಃ**— ಕರ್ಮಧಾರಕರಾದ ಯಜಮಾನರಿಂದ । **ರಾತಿ**— ಗವಾಶ್ವಾದಿಗಳ ದಾನವು । **ಧಾಯಿ ಏವ**— ನೆರವೇರಿಸಲ್ಪಡುತ್ತದೆ । **ಅಧ ಚಿತ್**— ಆದ್ದರಿಂದಲೇ । **ಇಂದ್ರ**— ಎಲೈ ಇಂದ್ರನೇ ನೀನು । **ಮೇ**— ಯಜ್ಞಮಾಡುವ ನನಗೆ । **ಸಚಾ**— ಧನಾದಿದಾನದಿಂದ ಕರ್ಮಸಹಾಯಕನಾಗಿರು.

॥ ಭಾವಾರ್ಥ ॥

ಬಹುಧನೋಪೇತನಾದ ಎಲೈ ಇಂದ್ರನೇ, ಕರ್ಮಾನುಷ್ಠಾನಮಾಡುವ ಸಮಸ್ತ ಯಜಮಾನರಿಂದ ಗವಾಶ್ವಾದಿಗಳ ದಾನವು ನೆರವೇರಿಸಲ್ಪಡುತ್ತದೆ. ಆದ್ದರಿಂದಲೇ, ಎಲೈ ಇಂದ್ರನೇ ನೀನು ಯಜ್ಞಮಾಡುವ ನನಗೆ ಧನಾದಿಗಳನ್ನು ಕೊಟ್ಟು ಕರ್ಮಸಹಾಯಕನಾಗಿರು.

## English Translation

Lord of great wealth, your bounty is possessed by all your worshippers; therefore, Indra, be also my ally.

॥ ಸಂಹಿತಾಪಾಠಃ ॥

ಮೋ ಷು ಬ್ರಹ್ಮೇವ ತಂದ್ರಯುರ್ಭುವೋ ವಾಜಾನಾಂ ಪತೇ ।

ಮತ್ಸ್ವಾ ಸುತಸ್ಯ ಗೋಮತಃ ॥ ೩೦ ॥

॥ ಪದಪಾಠಃ ॥

ಮೋ ಇತಿ । ಸು । ಬ್ರಹ್ಮಾಽಇವ । ತಂದ್ರಯುಃ । ಭುವಃ । ವಾಜಾನಾಂ । ಪತೇ ।

ಮತ್ಸ್ವ । ಸುತಸ್ಯ । ಗೋಽಮತಃ ॥ ೩೦ ॥

॥ ಸಾಯಣಭಾಷ್ಯಂ ॥

ಹೇ ವಾಜಾನಾಂ ಪತೇಽನ್ನಾನಾಂ ಪತೇ ಬಲಾನಾಂ ವಾ ಹೇ ಇಂದ್ರ ತಂದ್ರಯುರ್ನಿಷ್ಕಾರಣಂ ನಿವೃತ್ತಕರ್ಮವತ್ತ್ವಾದಾಲಸ್ಯಯುಕ್ತೋ ಬ್ರಹ್ಮೇವ ಬ್ರಾಹ್ಮಣ ಇವ । ಅಥಾಪಿ ತದ್ವದರ್ಥೇ ಭಾಷ್ಯತೇ । ನಿ. ೬-೩೧ । ಇತಿ ಯಾಸ್ಕೋಕ್ತಮನುಸೃತ್ಯ ತಂದ್ರಯುಕ್ತ ಇತ್ಯುಕ್ತಂ । ಅಥವಾ ಯಾಗಾದಿಕರ್ಮಪರಿತ್ಯಾಗೇನಾಲಸ್ಯಮಿಚ್ಛನ್ನಾಸ್ತಿಕೋ ಬ್ರಾಹ್ಮಣ ಇವ ತ್ವಂ ಮೋ ಷು ಭುವಃ । ಸುಷ್ಠು ಮಾ ಭವಃ । ಸರ್ವದಾಸ್ಮತ್ಕರ್ಮಾನ್ವಿತೋ ಭವೇತ್ಯಾಶಾಸನಂ । ತದೇವಾಹ । ಸುತಸ್ಯಾಭಿಷುತಸ್ಯ ತತೋ ಗೋಮತೋ ಗವ್ಯೇನ ಕ್ಷೀರೇಣ ದಧ್ನಾ ವಾ ಮಿಶ್ರಣವತಃ ಸೋಮಸ್ಯ ಪಾನೇನ ಮತ್ಸ್ವ । ಮಾದ್ಯ । ಹೃಷ್ಟೋ ಭವ ॥

॥ ಪ್ರತಿಪದಾರ್ಥ ॥

**ವಾಜಾನಾಂ**—ಅನ್ನಗಳಿಗೆ ಅಥವಾ ಬಲಗಳಿಗೆ । **ಪತೇ**—ಒಡೆಯನಾದ ಎಲೈ ಇಂದ್ರನೇ । **ತಂದ್ರಯುಃ**—ಸೋಮಾರಿಯಾದ । **ಬ್ರಹ್ಮೇವ**—ಬ್ರಾಹ್ಮಣನಂತೆ (ನೀನು) । **ಮೋ ಷು ಭುವಃ**—ಆಗಿರಬೇಡ । **ಸುತಸ್ಯ**—ಹಿಂಡಲ್ಪಟ್ಟಿರುವ । **ಗೋಮತಃ**—ಹಾಲಿನಿಂದ ಅಥವಾ ಮೊಸರಿನಿಂದ ಮಿಶ್ರಿತವಾದ ಸೋಮಪಾನದಿಂದ । **ಮತ್ಸ್ವ**—ಹರ್ಷಿತನಾಗು

॥ ಭಾವಾರ್ಥ ॥

ಅನ್ನಗಳಿಗೆ ಅಥವಾ ಶಕ್ತಿಸಾಮರ್ಥ್ಯಗಳಿಗೆ ಒಡೆಯನಾದ ಎಲೈ ಇಂದ್ರನೇ, ಯಜ್ಞಾದಿಕರ್ಮಗಳನ್ನು ಮಾಡದೆ ಆಲಸನಾಗಿ ಸೋಮಾರಿಯಾದ ಬ್ರಾಹ್ಮಣನಂತೆ ಇರಬೇಡ. ನಿನಗಾಗಿ ಹಿಂಡಲ್ಪಟ್ಟ ಗೋವಿಕಾರವಾದ ಹಾಲು, ಅಥವಾ ಮೊಸರಿನಿಂದ ಮಿಶ್ರಿತವಾದ ಸೋಮರಸವನ್ನು ಪಾನಮಾಡಿ ಹರ್ಷಿತನಾಗು.

## English Translation

Be not like a lazy Brahman, O lord of food; rejoice yourself by drinking the effused Soma mixed with milk.

॥ ಸಂಹಿತಾಪಾಠಃ ॥

ಮಾ ನ ಇಂದ್ರಾಭ್ಯಾ೩ದಿಶಃ ಸೂರೋ ಅಕ್ತುಷ್ವಾ ಯಮನ್ ।

ತ್ವಾ ಯುಜಾ ವನೇಮ ತತ್ ॥ ೩೧ ॥

॥ ಪದಪಾಠಃ ॥

ಮಾ । ನಃ । ಇಂದ್ರ । ಅಭಿ । ಆऽದಿಶಃ । ಸೂರಃ । ಅಕ್ತುಷು । ಆ । ಯಮನ್ ।
ತ್ವಾ । ಯುಜಾ । ವನೇಮ । ತತ್ ॥ ೩೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಆದಿಶ ಆದೇಷ್ಟಾರಃ ಸಮಂತಾದಾಯುಧಾನ್ಯತಿವಿಸೃಜಂತಃ ಸೂರಃ॥ ಸೃ ಗತೌ ॥ ಸರ್ವತ್ರ ಸರಣಶೀಲಾ ರಾಕ್ಷಸಾ ಅಕ್ತುಷು ರಾತ್ರಿಷು ದಿವಾಪಿ ನೋऽಸ್ಮಾಕಂ ಮಾಭ್ಯಾ ಯಮನ್ । ಆಭಿಮುಖ್ಯೇನ ಮಾ ನಿಯಂತಾರೋ ಭವಂತು । ಯದ್ಯಾಗತಾಶ್ಚೇತ್ ತದಾ ತದ್ರಕ್ಷಃಕುಲಂ ತ್ವಾ ತ್ವಯಾ ಯುಜಾ ಸಹಾಯೇನ ವಯಂ ವನೇಮ । ಹಿಂಸಾಮ ॥ ಶ್ನಥ ಕ್ನಥ ಕ್ರಥ ಕ್ಲಥ ಹಿಂಸಾರ್ಥಾ ವನು ಚೇತ್ಯತ್ರ ಪಠಿತತ್ವಾದ್ಧಿಂಸಾರ್ಥಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಆದಿಶಃ**—ಆಯುಧಕ್ಷೇಪಣಕುಶಲರೂ । **ಸೂರಃ**—ಸರ್ವತ್ರ ಸಂಚರಿಸುವವರೂ ಆದ ರಾಕ್ಷಸರು । **ಅಕ್ತುಷು**—ರಾತ್ರಿಗಳಲ್ಲಿ (ಹಗಲಿನಲ್ಲಿಯೂ ಸಹ) । **ನಃ**—ನಮಗೆ । **ಮಾ ಅಭಿ ಆ ಯಮನ್**—ನಿಯಂತೃಗಳಾಗದಿರಲಿ । **ತತ್**—ಆ ರಾಕ್ಷಸಸಮೂಹವನ್ನು । **ತ್ವಾ ಯುಜಾ**—ನಿನ್ನ ಸಹಾಯದಿಂದ । **ವನೇಮ**—ನಾವು ಹಿಂಸಿಸುವಂತಾಗಲಿ.

॥ ಭಾವಾರ್ಥ ॥

ಎಲೈ ಇಂದ್ರನೇ, ಆಯುಧಗಳನ್ನು ಉಪಯೋಗಿಸುವುದರಲ್ಲಿ ಅತಿ ಕುಶಲರೂ ಸರ್ವತ್ರ ಸಂಚರಿಸುವವರೂ ಆದ ರಾಕ್ಷಸರು ರಾತ್ರಿಕಾಲಗಳಲ್ಲಿ (ಮತ್ತು ಹಗಲಿನಲ್ಲಿ) ನಮ್ಮ ನಿಯಂತೃಗಳಾಗದಿರಲಿ ಎಂದರೆ ನಾವು ಅವರ ಅಧೀನಕ್ಕೆ ಒಳಗಾಗದಿರಲಿ. ಆ ರಾಕ್ಷಸಸಮೂಹವನ್ನು ನಾವು ನಿನ್ನ ಸಹಾಯದಿಂದ ಸಂಹರಿಸುವಂತಾಗಲಿ

English Translation

Indra, let not the threatening prowling (demons) obstruct us at night ; let us smite them with you as our helper.

॥ ಸಂಹಿತಾಪಾಠಃ ॥

ತ್ವಯೇದಿಂದ್ರ ಯುಜಾ ವಯಂ ಪ್ರತಿ ಬ್ರುವೀಮಹಿ ಸ್ಪೃಧಃ ।
ತ್ವಮಸ್ಮಾಕಂ ತವ ಸ್ಮಸಿ ॥ ೩೨ ॥

॥ ಪದಪಾಠಃ ॥

ತ್ವಯಾ । ಇತ್ । ಇಂದ್ರ । ಯುಜಾ । ವಯಂ । ಪ್ರತಿ । ಬ್ರುವೀಮಹಿ । ಸ್ಪೃಧಃ ।
ತ್ವಂ । ಅಸ್ಮಾಕಂ । ತವ । ಸ್ಮಸಿ ॥ ೩೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಯೇತ್ । ಇದವಧಾರಣೇ । ತ್ವಯೈವ ಯುಜಾ ಸಹಾಯೇನ ಸ್ಪೃಧಃ ಸ್ಪರ್ಧಮಾನಾಞ್ಛತ್ರೂನ್ವಯಂ ಪ್ರತಿ ಬ್ರುವೀಮಹಿ । ನಿರಾಕುರ್ವೀಮಹಿ । ಪ್ರತಿವಚನಂ ನಿರಾಕರಣಂ । ಉತ್ತರಾರ್ಧೇನೇಂದ್ರಸಾಹಾಯ್ಯಮೇವ ಪ್ರತಿಪಾದಯತಿ । ಹೇ ಇಂದ್ರ ತ್ವಮಸ್ಮಾಕಂ ಭವಸಿ । ಸ್ತುತ್ಯಸ್ತೋತೃಯುಷ್ಮ್ಯುಯಷ್ಮವ್ಯತಯಾ ತ್ವಮಸ್ಮಾಕಂ ಭವಸಿ ವಯಂ ತವ ಸ್ಮಸಿ । ಭವಾಮಃ । ತಥಾರಣ್ಯಕಂ । ತ್ವಮಿದಂ ಸರ್ವಂ ಭವಸಿ ತವ ವಯಂ ಸ್ಮಃ । ತ್ವಮಸ್ಮಾಕಮಸೀತಿ ತಸ್ಮಾತ್ತ್ವಯಾ ಸಹಾಯೇನ ಶತ್ರೂನ್ಹನ್ಯಾಮೇತಿ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ತ್ವಯಾ ಇತ್ ಯುಜಾ**—ನಿನ್ನ ಸಹಾಯದಿಂದಲೇ । **ಸ್ಪೃಧಃ**—ನಮ್ಮೊಡನೆ ಹೋರಾಡುವ ಶತ್ರುಗಳನ್ನು । **ವಯಂ**—ನಾವು । **ಪ್ರತಿ ಬ್ರುವೀಮಹಿ**—ನಿರಾಕರಿಸುವಂತಾಗಲಿ (ಎಲೈ ಇಂದ್ರನೇ) । **ತ್ವಂ**—ನೀನು । **ಅಸ್ಮಾಕಂ**—ನಮಗೆ ಸೇರಿದವನಾಗಿದ್ದೀಯೆ (ನಾವೂ ಸಹ) । **ತವ ಸ್ಮಸಿ**—ನಿನ್ನವರಾಗಿಯೇ ಇದ್ದೇವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನೊಡನಿರುವ ನಾವು ನಿನ್ನ ಸಹಾಯದಿಂದಲೇ ನಮ್ಮೊಡನೆ ಹೋರಾಡುವ ಶತ್ರುಗಳನ್ನು ನಾವು ನಿರಾಕರಿಸುವಂತಾಗಲಿ. ನೀನು ನಮ್ಮವನಾಗಿದ್ದೀಯೆ ನಾವೂ ಸಹ ನಿನ್ನವರಾಗಿಯೇ ಇದೇವೆ.

English Translation

With you, Indra, as our helper, let us answer our enemies ; you are ours, we are yours

॥ ಸಂಹಿತಾಪಾಠಃ ॥

ತ್ವಾಮಿದ್ಧಿ ತ್ವಾಯವೋಽನುನೋನುವತಶ್ಚರಾನ್ ।

ಸಖಾಯ ಇಂದ್ರ ಕಾರವಃ ॥ ೩೩ ॥

॥ ಪದಪಾಠಃ ॥

ತ್ವಾಂ । ಇತ್ । ಹಿ । ತ್ವಾಽಯವಃ । ಅನುಽನೋನುವತಃ । ಚರಾನ್ ।

ಸಖಾಯಃ । ಇಂದ್ರ । ಕಾರವಃ ॥ ೩೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಕರ್ಮೋಪದ್ರವಪರಿಹಾರಾದನಂತರಂ ತ್ವಾಯವಸ್ತ್ವಾಂ ಧನಾದಿದಾನಾರ್ಥಂ ಕಾಮಯಮಾನಾಃ ಅತ ಏವಾನುನೋನುವತಃ ॥ ನೌತೇರ್ಯಙ್ಲುಗಂತಸ್ಯ ಶತರಿ ರೂಪಂ । ಅನು-

ಕ್ರಮೇಣ ಪುನಃಪುನಃ ಸ್ತುತಿಂ ಕುರ್ವಂತಃ ತಸ್ಮಾತ್ತವ ಸಖಾಯಃ ಸಖಿಭೂತಾಃ ಕಾರವಃ ಸ್ತೋತಾರ-ಸ್ತ್ವಾಮಿತ್ । ಇದವಧಾರಣೇ । ತ್ವಾಮೇವ ಚರಾನ್ । ಸ್ತುತಿಭಿಃ ಪರಿಚರಂತು ಖಲು ॥ ಹೀತಿ ಪ್ರಸಿ-ದ್ಧ್ಯರ್ಥಃ । ಚರತೇರ್ಲೇಟ್ಯಡಾಗಮಃ । ಹಿಯೋಗಾದನಿಘಾತಃ ॥

॥ ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । ತ್ವಾಯವಃ—ಧನಾದಿದಾನಾರ್ಥವಾಗಿ ನಿನ್ನನ್ನು ಅಪೇಕ್ಷಿಸುತ್ತಿರುವವರೂ । ಅನುನೋನುವತಃ—ಮತ್ತೆ ಮತ್ತೆ ನಿನ್ನನ್ನು ಸ್ತೋತ್ರಮಾಡುತ್ತಿರುವವರೂ । ಸಖಾಯಃ—ನಿನಗೆ ಸ್ನೇಹಿತರಾದವರೂ ಆದ । ಕಾರವಃ—ಸ್ತೋತೃಜನಗಳು । ತ್ವಾಮಿತ್—ನಿನ್ನನ್ನೇ । ಚರಾನ್—ಸ್ತೋತ್ರಗಳಿಂದ ಉಪಚರಿಸಲಿ । ಹಿ—ಪ್ರಸಿದ್ಧವು.

॥ ಭಾವಾರ್ಥ ॥

ಎಲೈ ಇಂದ್ರನೇ, ಧನಾದಿದಾನಾರ್ಥವಾಗಿ ನಿನ್ನನ್ನು ಅಪೇಕ್ಷಿಸುತ್ತಿರುವವರೂ ಮತ್ತೆ ಮತ್ತೆ ನಿನ್ನನ್ನು ಸ್ತೋತ್ರಮಾಡುತ್ತಿರುವವರೂ ನಿನಗೆ ಸ್ನೇಹಿತರಾದವರೂ ಆದ ಸ್ತೋತೃಗಳು ನಿನ್ನನ್ನೇ ಸ್ತುತಿಮಂತ್ರಗಳಿಂದ ಉಪಚರಿಸಲಿ.

English Translation

Indra, may your friends, the chanters, worship you devouted to your service aud again and again reciting your praise,

## ತೊಂಭತ್ತಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಉದ್ಘೇತಿ ಚತುಸ್ತ್ರಿಂಶದೃಚಂ ತ್ರಯೋದಶಂ ಸೂಕ್ತಂ ಸುಕಕ್ಷಸ್ಯಾರ್ಷಂ ಗಾಯತ್ರಮೈಂದ್ರಂ । ಅಂತ್ಯಾ ತ್ವಿಂದ್ರಭುರ್ದೇವತಾಕಾ । ತಥಾ ಚಾನುಕ್ರಾಂತಂ । ಉದ್ಘ ಚತುಸ್ತ್ರಿಂಶತ್ಸುಕಕ್ಷೋಽಂತ್ಯೈಂದ್ರಾ-ರ್ಭವೀತಿ ॥ ದ್ವಿತೀಯೇ ಪರ್ಯಾಯೇ ಹೋತುಃ ಶಸ್ತ್ರ ಉತ್ತಮಾವರ್ಜಮೇತತ್ಸೂಕ್ತಂ । ಸೂತ್ರಿತಂ ಚ । ಉದ್ಘೇದಭೀತ್ಯುತ್ತಮಾಮುದ್ಧರೇತ್ । ಆ. ೬ ೪ । ಇತಿ ॥ ಮಹಾವ್ರತೇಽಪ್ಯಸ್ಯ ವಿನಿಯೋಗಃ ಪೂರ್ವಸೂಕ್ತೇನ ಸಹೋಕ್ತಃ ॥ ಜ್ಯೋತಿಷ್ಟೋಮೇ ಬ್ರಾಹ್ಮಣಾಚ್ಛಂಸಿಶಸ್ತ್ರ ಆದ್ಯಸ್ತೃಚಃ । ಸೂತ್ರಿತಂ ಚ । ಉದ್ಘೇದಭೀತಿ ತಿಸ್ರ ಇಂದ್ರ ಕ್ರತುವಿದಂ ಸುತಮಿತಿ ಯಾಜ್ಯಾ । ಆ. ೫-೧೦ । ಇತಿ ॥ ತಥಾಪ್ತೋ-ರ್ಯಾಮೇ ಮೈತ್ರಾವರುಣಾತಿರಿಕ್ತೋಕ್ಥ್ಯೇಽಯಂ ತೃಚೋಽನುರೂಪಃ । ಸೂತ್ರಿತಂ ಚ । ಯದದ್ಯ ಕಚ್ಚ ವೃತ್ರಹನ್ನುದ್ಘೇದಭಿ ಶ್ರುತಾಮಘಮಾ ನೋ ವಿಶ್ವಾಭಿಃ । ಆ. ೯ ೧೧ । ಇತಿ ॥

ಅನುವಾದವು—ಉದ್ಘ ಎಂಬ ಈ ಸೂಕ್ತವು ಒಂಭತ್ತನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ಮೂವತ್ತನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸುಕಕ್ಷನೆಂಬುವನು ಋಷಿಯು ; ಇಂದ್ರನು ದೇವತೆಯು ; ಗಾಯತ್ರೀಛಂದಸ್ಸು. ಕೊನೆಯ ಋಕ್ಕಿಗೆ ಇಂದ್ರನು ಮತ್ತು ಋಭುಗಳು ದೇವತೆಯು. ಅನುಕ್ರಮಣಿಕೆಯಲ್ಲಿ—

**ಉದ್ಘ ಚತುಸ್ತ್ರಿಂಶತ್ಸುಕಕ್ಷೋಽನ್ತ್ಯೈಂದ್ರಾರ್ಭವೀ** ಎಂದು ಹೇಳಿರುವುದು. ದ್ವಿತೀಯಪರ್ಯಾಯದಲ್ಲಿ ಹೋತೃವು ಪಠಿಸಬೇಕಾದ ಶಸ್ತ್ರಮಂತ್ರಗಳಿಗಾಗಿ ಈ ಸೂಕ್ತದ ಕೊನೆಯ ಋಕ್ಕನ್ನು ಬಿಟ್ಟು ಉಳಿದ ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ-**ಉದ್ಘೇದಭೀತ್ಯುತ್ತಮಾಮುದ್ಧರೇತ್** ಎಂಬ ಸೂತ್ರದಿಂದ ( ಆ. ೬-೪ ) ವಿವೃತವಾಗಿರುವುದು. ಮಹಾವ್ರತೇಷ್ಟಿಯಲ್ಲಿಯೂ ಈ ಸೂಕ್ತ ಮತ್ತು ಹಿಂದಿನಸೂಕ್ತದ ವಿನಿಯೋಗ ವಿರುವುದೆಂದು ಹಿಂದಿನ ಸೂಕ್ತದ ವಿನಿಯೋಗದಲ್ಲಿಯೇ ಹೇಳಲಾಗಿದೆ. ಜ್ಯೋತಿಷ್ಟೋಮಯಾಗದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ ಈ ಸೂಕ್ತದ ಮೊದಲಿನ ಮೂರು ಋಕ್ಕುಗಳನ್ನು ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಉದ್ಘೇದಭೀತಿ ತಿಸ್ರ ಇಂದ್ರ ಕ್ರತುವಿದಂ ಸುತಮಿತಿ ಯಾಜ್ಯಾ** ಎಂಬ ಸೂತ್ರದಿಂದ ( ಆ. ೫-೧೦ ) ವಿವೃತವಾಗಿರುವುದು. ಮತ್ತು ಅಪ್ತೋರ್ಯಾಮವೆಂಬ ಯಾಗದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ ಅತಿರಿಕ್ತೋಕ್ಥಮಂತ್ರಗಳಲ್ಲಿ ಈ ತೃಚವನ್ನು ಅನುರೂಪ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಯದದ್ಯ ಕಚ್ಚ ವೃತ್ರಹನ್ನುದ್ಘೇದಭಿ ಶ್ರುತಾಮಘಮಾ ನೋ ವಿಶ್ವಾಭಿಃ** ಎಂಬ ಸೂತ್ರದಿಂದ (ಆ. ೯-೧೧) ವಿವೃತವಾಗಿರುವುದು.

## ಸೂಕ್ತ—೯೩

ಮಂಡಲ—೮ ॥ ಅನುವಾಕ—೯ ॥ ಸೂಕ್ತ—೯೩ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೨೧, ೨೨, ೨೩, ೨೪, ೨೫, ೨೬, ೨೭ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೩೪ ॥
ಋಷಿಃ—ಸುಕಕ್ಷಃ ॥
ದೇವತಾ—೧-೩೩. ಇಂದ್ರಃ । ೩೪ ಇಂದ್ರ ಋಭವಶ್ಚ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಉದ್ಘೇದಭಿ ಶ್ರುತಾಮಘಂ ವೃಷಭಂ ನರ್ಯಾಪಸಂ ।
ಅಸ್ತಾರಮೇಷಿ ಸೂರ್ಯ ॥ ೧ ॥

॥ ಪದಪಾಠಃ ॥

ಉತ್ । ಘ । ಇತ್ । ಅಭಿ । ಶ್ರುತಽಮಘಂ । ವೃಷಭಂ । ನರ್ಯಽಅಪಸಂ ।
ಅಸ್ತಾರಂ । ಏಷಿ । ಸೂರ್ಯ ॥ ೧ ॥

॥ ಸಾಯಣಭಾಷ್ಯಂ ॥

ಸುಕಕ್ಷ ಇಂದ್ರಗುಣಾನಾಹ । ಹೇ ಸೂರ್ಯ । ದ್ವಾದಶಸು ಭಾನುಷ್ವಿಂದ್ರೋಽಪಿ ಸೂರ್ಯಾತ್ಮನಾ ಪಠಿತಃ । ತಸ್ಮಾತ್ಸೂರ್ಯಾತ್ಮಕ ಸುವೀರ್ಯ ಹೇ ಇಂದ್ರ ಶ್ರುತಮಘಂ ಸರ್ವದಾ ದೇಯತ್ವೇನ ವಿಖ್ಯಾತ-

**ದನಂ ಅತ ಏವ ವೃಷಭಂ ಯಾಚಮಾನಾನಾಂ ಧನಸ್ಯ ವರ್ಷಿತಾರಂ ನರ್ಯಾಪಸಂ । ನರಹಿತಂ ನರ್ಯಂ। ನರಹಿತಕರ್ಮಾಣಮಸ್ತಾರಂ ದಾನಶೌಂಡಮೌದಾರ್ಯವಂತಂ ಏತಾದೃಶಾನುಭಾವಮಭಿತ ಉದೇಷಿ । ಇದವಧಾರಣೇ । ತ್ವಮೇವ ತಸ್ಯ ರಂಜ್ಞೇ ಸೂರ್ಯಾತ್ಮನೋದ್ಗತೋಽಸಿ । ಘೇತಿ ಪ್ರಸಿದ್ಧೌ ॥**

॥ ಪ್ರತಿಪದಾರ್ಥ ॥

**ಸೂರ್ಯ**—ಸೂರ್ಯಾತ್ಮಕನಾದ ಎಲೈ ಇಂದ್ರನೇ । **ಶ್ರುತಮಘಂ**—ಪ್ರಸಿದ್ಧವಾದ ಧನವುಳ್ಳವನೂ । **ವೃಷಭಂ**—ಯಾಚಿಸುವವರಿಗೆ ಧನಾದಿಗಳನ್ನು ಸುರಿಸಿಕೊಡುವವನೂ । **ನರ್ಯಾಪಸಂ**—ಮನುಷ್ಯರಿಗೆ ಹಿತಕರವಾದ ಕರ್ಮಗಳನ್ನೇ ಮಾಡುವವನೂ। ಅಸ್ತಾರಂ—ಔದಾರ್ಯಶೀಲನೂ ಆದ ಸೂರ್ಯರೂಪವುಳ್ಳವನಾಗಿ । **ಉತ್ ಏಷಿ ಇತ್**—ಉದಯಿಸುತ್ತೀಯೆ । ಘ—ಇದು ಪ್ರಸಿದ್ಧವು.

॥ ಭಾವಾರ್ಥ ॥

ಎಲೈ ಇಂದ್ರನೇ, ಪ್ರಸಿದ್ಧನಾದ ಧನವುಳ್ಳವನೂ, ತನ್ನನ್ನು ಯಾಚಿಸುವವರಿಗೆ ಧನಾದಿಗಳನ್ನು ಕೊಡುವವನೂ ಮನುಷ್ಯರಿಗೆ ಹಿತಕರವಾದ ಕೆಲಸಗಳನ್ನೇ ಮಾಡುವವನೂ, ಅತ್ಯಂತ ಔದಾರ್ಯಯುತನೂ ಆದ ನೀನು ಸೂರ್ಯ ರೂಪದಿಂದ ಉದಯಿಸುತ್ತೀಯೆ. ಇದು ಪ್ರಸಿದ್ಧವು.

English Translation

You rise, O sun, on (the sacrifice of Indra) the showerer (of blessings), the bountiful giver, famed for his wealth, the benefactor of men,

॥ ಸಂಹಿತಾಪಾಠಃ ॥

ನವ ಯೋ ನವತಿಂ ಪುರೋ ಬಿಭೇದ ಬಾಹ್ವೋಜಸಾ ।
ಅಹಿಂ ಚ ವೃತ್ರಹಾವಧೀತ್ ॥ ೨ ॥

॥ ಪದಪಾಠಃ ॥

ನವ । ಯಃ । ನವತಿಂ । ಪುರಃ । ಬಿಭೇದ । ಬಾಹುಽಓಜಸಾ ।
ಅಹಿಂ । ಚ । ವೃತ್ರಽಹಾ । ಅವಧೀತ್ ॥ ೨ ॥

॥ ಸಾಯಣಭಾಷ್ಯಂ ॥

**ಯ ಇಂದ್ರೋ ನವ ನವತಿಂ ನವನವತಿಸಂಖ್ಯಾಕಾ ಏಕೋನಶತಸಂಖ್ಯಾಕಾಃ ಶಂಬರಸ್ಯ ಪುರಃ ಪುರೀರ್ಬಾಹ್ವೋಜಸಾ ಸ್ವಬಾಹುಬಲೇನೈವ ಬಿಭೇದ । ದಿವೋದಾಸಾಯ ಭಿನತ್ತಿ ಸ್ಮ । ತಥಾ ಚ ಮಂತ್ರಃ।**

ದಿವೋದಾಸಾಯ ನವತಿಂ ಚ ನವೇಂದ್ರಃ ಪುರೋ ವ್ಯೈರಚ್ಛಂಬರಸ್ಯ । ಋ. ೨.೧೯.೬ । ಇತಿ । ಸ ವೃತ್ರಹಾ ವೃತ್ರಾಸುರಸ್ಯ ಹಂತಾ ಸ ಇಂದ್ರೋಽಹಿಂ ಚ ಕೇನಾಪ್ಯಹಂತವ್ಯಂ ಮೇಘಮುಪಾಮಾವರಕಂ ವೃತ್ರಂ ವಾವಧೀತ್ । ಸ ಇಂದ್ರೋಽಸ್ಮಾಕಂ ಧನಂ ದದಾತ್ವಿತ್ಯುತ್ತರೇಣ ಸಂಬಂಧಃ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಇಂದ್ರನು । **ನವ ನವತಿಂ**—ತೊಂಬತೊಂಭತ್ತು ಸಂಖ್ಯಾಕವಾದ । **ಪುರಃ**—ಶಂಬರಾಸುರನ ಪಟ್ಟಣಗಳನ್ನು । **ಬಾಹ್ವೋಜಸಾ**—ನಿನ್ನ ಬಾಹುಬಲದಿಂದಲೇ । **ಬಿಭೇದ**—ಧ್ವಂಸಮಾಡಿದನೋ । **ಸಃ**—ಆ ಇಂದ್ರನು । **ವೃತ್ರಹಾ**—ವೃತ್ರಾಸುರನ ಹಂತಕನಾಗಿದ್ದಾನೆ । **ಅಹಿಂ ಚ**—ಯಾರಿಂದಲೂ ಸಂಹರಿಸಲು ಸಾಧ್ಯವಿಲ್ಲದಿದ್ದ ವೃತ್ರನನ್ನು ಅಥವಾ ಉದಕನಿರೋಧವಾದ ಮೇಘವನ್ನು । **ಅವಧೀತ್**—ಹಿಂಸಿಸುತ್ತಾನೆ.

॥ ಭಾವಾರ್ಥ ॥

ಯಾವ ಇಂದ್ರನು ಶಂಬರಾಸುರನ ತೊಂಬತೊಂಭತ್ತು ಪಟ್ಟಣಗಳನ್ನು ತನ್ನ ಬಾಹುಬಲದಿಂದಲೇ ಸೀಳಿ ಹಾಕಿದನೋ ಅಂತಹ ಇಂದ್ರನು ಯಾರಿಂದಲೂ ಸಂಹರಿಸಲು ಸಾಧ್ಯವಿಲ್ಲದಿದ್ದ ವೃತ್ರಾಸುರನನ್ನು ಸಂಹಾರಮಾಡಿ ಉದಕನಿರೋಧಕವಾದ ಮೇಘವನ್ನು ಪ್ರಹರಿಸಿ ವೃಷ್ಟಿಯನ್ನುಂಟುಮಾಡುತ್ತಾನೆ.

English Translation

Who cleft the ninety-nine cities by the strength of his arm, and, slayer of Vritra, smote Ahi.

॥ ಸಂಹಿತಾಪಾಠಃ ॥

ಸ ನ ಇಂದ್ರಃ ಶಿವಃ ಸಖಾಶ್ವಾವದ್ಗೋಮದ್ಯವಮತ್ ।
ಉರುಧಾರೇವ ದೋಹತೇ ॥ ೩ ॥

॥ ಪದಪಾಠಃ ॥

ಸಃ । ನಃ । ಇಂದ್ರಃ । ಶಿವಃ । ಸಖಾ । ಅಶ್ವಽವತ್ । ಗೋಽಮತ್ । ಯವಽಮತ್ ।
ಉರುಧಾರಾಽಇವ । ದೋಹತೇ ॥ ೩ ॥

॥ ಸಾಯಣಭಾಷ್ಯಂ ॥

ಸ ಪೂರ್ವೋಕ್ತಲಕ್ಷಣಃ ಶಿವಃ ಕಲ್ಯಾಣತಮಃ ಸಖಾ ಯುಷ್ಮ್ಯಯುಷ್ಮನ್ಯಸ್ತೋತೃಸ್ತುತ್ಯಲಕ್ಷಣೇನ ಸಂಬಂಧೇನಾಸ್ಮಾಕಂ ಮಿತ್ರಭೂತಃ ಏತಾದೃಶ ಇಂದ್ರೋಽಶ್ವವದಶ್ವಯುಕ್ತಂ ಗೋಮತ್

ಪಶ್ವಾದಿಸಹಿತಂ ಯುವಮತ್ ॥ ಅಯುವಾದಿಭ್ಯಃ । ಪಾ. ೮-೨-೯ । ಇತಿ ಮಪ್ರತಿಷೇಧಾನ್ಮತುಪೋ ವತ್ವಾಭಾವಃ ॥ ಯುವ ಇತಿ ಧಾನ್ಯವಿಶೇಷಃ । ಧಾನ್ಯಯುಕ್ತಂ ಧನಂ ನೋಽಸ್ಮಭ್ಯಂ ದೋಹತೇ । ದೋಗ್ಧು । ದದಾತು । ತತ್ರ ದೃಷ್ಟಾಂತಃ । ಉರುಧಾರೇವ ಪ್ರಭೂತಪಯೋಧಾರಾ ಯದ್ವಾ ಬಹೂನಾಂ ಪೋಷಯಿತ್ರೀ ಗೌರ್ಯಥಾ ವತ್ಸಸ್ಯ ಪಯೋ ದೋಗ್ಧಿ ತಥಾ ಪ್ರಭೂತಂ ಧನಮಸ್ಮಾಕಂ ದೋಗ್ಧು । ದದಾತು ॥ ದುಹೇರ್ಲೇಟ್ಯಡಾಗಮಃ ॥

॥ ಪ್ರತಿಪದಾರ್ಥ ॥

**ಸಃ**—ಪೂರ್ವೋಕ್ತಗುಣವಿಶಿಷ್ಟನಾದವನೂ । **ಶಿವಃ**—ಮಂಗಳಕರನೂ । **ಸಖಾ**—ನಮಗೆ ಮಿತ್ರಭೂತನೂ ಆದ । **ಇಂದ್ರಃ**—ಇಂದ್ರನು । **ಅಶ್ವವತ್**—ಅಶ್ವಗಳಿಂದ ಸಹಿತವಾದುದೂ । **ಗೋಮತ್**—ಗೋವುಗಳಿಂದ ಸಹಿತವಾದುದೂ। **ಯುವಮತ್**—ಯುವಧಾನ್ಯಸಹಿತವಾದುದೂ ಆದ ಧನವನ್ನು । **ನಃ**—ನಮಗೆ । **ಉರುಧಾರೇವ**—ಹಾಲನ್ನು ಕರೆಯುವ ಗೋವು ಬಹಳವಾಗಿ ಹಾಲನ್ನು ಧಾರಾರೂಪವಾಗಿ ಸುರಿಸುವಂತೆ । **ದೋಹತೇ**—ಒದಗಿಸಿಕೊಡಲಿ.

॥ ಭಾವಾರ್ಥ ॥

ಪೂರ್ವೋಕ್ತಗುಣವಿಶಿಷ್ಟನೂ, ಮಂಗಳಕರನೂ, ನಮಗೆ ಸ್ನೇಹಿತನೂ ಆಗಿರುವ ಇಂದ್ರನು, ಹಾಲನ್ನು ಕರೆಯುವ ಗೋವು ಚೆನ್ನಾಗಿ ಹಾಲನ್ನು ಒದಗಿಸಿಕೊಡುವಂತೆ ನಮಗೆ ಅಶ್ವಗಳು, ಗೋವುಗಳು, ಯುವಾದಿಧಾನ್ಯಗಳು ಮೊದಲಾದವುಗಳನ್ನು ಯಥೇಷ್ಟವಾಗಿ ಒದಗಿಸಿಕೊಡಲಿ

English Translation

May Indra, our auspicious friend, milk for us, like a richly-streaming (cow), wealth of horses, cows, and barley.

॥ ಸಂಹಿತಾಪಾಠಃ ॥

ಯುದದ್ಯ ಕಚ್ಚ ವೃತ್ರಹನ್ನುದಗಾ ಅಭಿ ಸೂರ್ಯ ।
ಸರ್ವಂ ತದಿಂದ್ರ ತೇ ವಶೇ ॥ ೪ ॥

॥ ಪದಪಾಠಃ ॥

ಯತ್ । ಅದ್ಯ । ಕತ್ । ಚ । ವೃತ್ರಽಹನ್ । ಉತ್ಽಅಗಾಃ । ಅಭಿ । ಸೂರ್ಯ ।
ಸರ್ವಂ । ತತ್ । ಇಂದ್ರ । ತೇ । ವಶೇ ॥ ೪ ॥

॥ ಸಾಯಣಭಾಷ್ಯಂ ॥

ಅಪ್ತೋರ್ಯಾಮೇ ಮೈತ್ರಾವರುಣಾತಿರಿಕ್ತೋಕ್ಥೇ ಯದದ್ಯೇತಿ ತೃಚಃ ಸ್ತೋತ್ರಿಯಃ। ಸೂತ್ರಂ ತು ಪೂರ್ವೇಣ ತೃಚೇನ ಸಹೋದಾಹೃತಂ ॥

ಹೇ ವೃತ್ರಹನ್ ವೃತ್ರಸ್ಯಸಾವರಾವರಕಸ್ಯ ಮೇಘಸ್ಯ ಹಂತರ್ಹೇ ಸೂರ್ಯ ಸೂರ್ಯಾತ್ಮಕೇಂದ್ರ ಅದ್ಯಾಸ್ಮಿನ್ದಿನೇ ಯತ್ಕಚ್ಚ ಯತ್ಕಿಂಚಿತ್ಪದಾರ್ಥಜಾತಮಭ್ಯಭಿಮುಖೀಕೃತ್ಯೋದಗಾಃ ॥ ಇಣ್ ಗತೌ । ಉತ್ಪೂರ್ವಃ। ತಸ್ಯ ಲುಙಿ ಗಾದೇಶಃ ॥ ಸ್ವಕೀಯತೇಜಸೋದ್ಗತಃ ಪ್ರಾದುರ್ಭೂತೋಽಸಿ ತದಾ ತತ್ಸರ್ವಂ ಸ್ಥಾವರಜಂಗಮಾತ್ಮಕಂ ಜಗತ್ತೇ ತವ ವಶೇ ಭವತಿ । ತ್ವದಧೀನಂ ಭವತಿ । ಉದಿತೇ ಸೂರ್ಯೇ ತ್ವದರ್ಥಂ ಪ್ರಾಕ್ಕರ್ಮ ಕುರ್ವಂತಿ ಜುಹ್ವತಿ ಚ ॥

॥ ಪ್ರತಿಪದಾರ್ಥ ॥

ವೃತ್ರಹನ್—ಉದಕವನ್ನು ಮಳೆಗರೆಯದೆ ತಡೆದಿರುವ ಮೇಘವನ್ನು ಪ್ರಹರಿಸುವ । ಸೂರ್ಯ—ಸೂರ್ಯಾತ್ಮನಾದ । ಇಂದ್ರ—ಎಲೈ ಇಂದ್ರನೇ । ಅದ್ಯ—ಈ ದಿನ । ಯತ್ ಕಚ್ಚ—ಯಾವ ಒಂದು ನಿರ್ದಿಷ್ಟ ಪದಾರ್ಥವನ್ನು । ಅಭಿ—ಅಭಿಲಕ್ಷಿಸಿ । ಉದಗಾಃ—ಉದಯಿಸುತ್ತೀಯೋ । ತತ್—ಆಗ । ಸರ್ವಂ—ಸ್ಥಾವರ ಜಂಗಮಾತ್ಮಕವಾದ ಈ ಜಗತ್ತು । ತೇ—ನಿನ್ನ । ವಶೇ—ಅಧೀನದಲ್ಲಿರುವುದು

॥ ಭಾವಾರ್ಥ ॥

ಉದಕನಿರೋಧಿಯಾದ ಮೇಘವನ್ನು ಪ್ರಹರಿಸಿ ವೃಷ್ಟಿಯನ್ನು ಸುರಿಸುವವನೂ, ಸೂರ್ಯಾತ್ಮಕನೂ ಆದ ಎಲೈ ಇಂದ್ರನೇ, ಈ ದಿನ ನಿರ್ದಿಷ್ಟವಾದ ಈ ಪ್ರಪಂಚವನ್ನು ಅಭಿಲಕ್ಷಿಸಿ ಯಾವಾಗ ಉದಯಿಸುವೆಯೋ ಆಗ ಸ್ಥಾವರ ಜಂಗಮಾತ್ಮಕವಾದ ಈ ಸಮಸ್ತ ಜಗತ್ತೂ ನಿನ್ನ ಅಧೀನದಲ್ಲಿರುವುದು.

## English Translation

Whatsoever, O sun, slayer of Vritra, you have risen upon to-day, – it is all, Indra, under your power.

॥ ಸಂಹಿತಾಪಾಠಃ ॥

ಯದ್ವಾ ಪ್ರವೃದ್ಧ ಸತ್ಪತೇ ನ ಮರಾ ಇತಿ ಮನ್ಯಸೇ ।
ಉತೋ ತತ್ಸತ್ಯಮಿತ್ತವ ॥ ೫ ॥

॥ ಪದಪಾಠಃ ॥

ಯತ್ । ವಾ । ಪ್ರऽವೃದ್ಧ । ಸತ್ऽಪತೇ । ನ । ಮರೈ । ಇತಿ । ಮನ್ಯಸೇ ।
ಉತೋ ಇತಿ । ತತ್ । ಸತ್ಯಂ । ಇತ್ । ತವ ॥ ೫ ॥

॥ ಸಾಯಣಭಾಷ್ಯಂ ॥

ವಾಶಬ್ದಃ ಸಮುಚ್ಚಯೇ । ಅಪಿ ಚ ಹೇ ಪ್ರವೃದ್ಧ ಸ್ವಬಲೇನ ಪ್ರವರ್ಧಮಾನ ಸತ್ಪತೇ ಸತಾಂ ಪತೇ ಸ್ವಪ್ರಕಾಶಾಧಿಕ್ಯೇನ ಸತಾಂ ನಕ್ಷತ್ರಾಣಾಂ ಪತೇ ಹೇ ಇಂದ್ರ ನ ಮರಾ ಇತಿ ಮನುಷ್ಯವದ್ವಾರ್ಧಕ್ಯೇನಾಹಂ ನ ಮ್ರಿಯ ಇತಿ ಯದ್ಯದಿ ಮನ್ಯಸೇ ಬುಧ್ಯಸೇ ॥ ಮೃಙ್ ಪ್ರಾಣತ್ಯಾಗೇ । ಲೇಟ್ಯಡಾಗಮಃ । ವೈತೋಽನ್ಯತ್ರೇತ್ಯೈಕಾರಃ ॥ ಉತೋ ಅಪಿ ಚ ತವ ತನ್ನ ಮ್ರಿಯ ಇತಿ ಮನನಂ ಸತ್ಯಮಿದ್ಯಥಾರ್ಥಮೇವ । ಇಂದ್ರೋ ನ ಮ್ರಿಯತ ಇತ್ಯರ್ಥೇ ಮಂತ್ರಾಂತರಂ । ನಹ್ಯಸ್ಯಾ ಅಪರಂ ಚನ ಜರಸಾ ಮರತೇ ಪತಿಃ । ಋ. ೧೦-೮೬-೧೧ । ಇತಿ ॥

॥ ಪ್ರತಿಪದಾರ್ಥ ॥

**ವಾ**—ಮತ್ತು। **ಪ್ರವೃದ್ಧ**—ಸ್ವಬಲದಿಂದ ಪ್ರವರ್ಧಮಾನನೂ। **ಸತ್ಪತೇ**—ಸಜ್ಜನರ ಪಾಲಕನೂ (ಅಥವಾ ನಕ್ಷತ್ರಗಳ ಪಾಲಕನೂ) ಆದ ಎಲೈ ಇಂದ್ರನೇ । **ನ ಮರೈ ಇತಿ**—ಮನುಷ್ಯರಂತೆ ನಾನು ಮೃತನಾಗುವುದಿಲ್ಲವೆಂದು । **ಯತ್ ಮನ್ಯಸೇ**—ನೀನು ಒಂದು ವೇಳೆ ತಿಳಿದಿದ್ದರೆ । **ಉತೋ**—ಮತ್ತು । **ತವ ತತ್**—ಮೃತನಾಗುವುದಿಲ್ಲವೆಂಬ ನಿನ್ನ ಆ ತಿಳುವಳಿಕೆಯು। **ಸತ್ಯಂ ಇತ್**— ಯಥಾರ್ಥವಾಗಿಯೇ ಇದೆ.

॥ ಭಾವಾರ್ಥ ॥

ಮತ್ತು ಸ್ವಬಲದಿಂದ ಅತಿಶಯವಾಗಿ ಪ್ರವರ್ಧಮಾನನೂ, ಸಜ್ಜನರ ಪಾಲಕನೂ ಆದ ಎಲೈ ಇಂದ್ರನೇ, "ಮನುಷ್ಯರಂತೆ ವಯಸ್ಸಾಗಿ ನಾನು ಮೃತನಾಗುವುದಿಲ್ಲ" ವೆಂದು ನೀನು ತಿಳಿದಿದ್ದರೆ ಆ ನಿನ್ನ ತಿಳುವಳಿಕೆಯು ಯಥಾರ್ಥವೇ ಆಗಿದೆ

## English Translation

When, swelling in your might, lord of the good, you think "I shall not die," that thought of yours is indeed true

॥ ವಿಶೇಷವಿಷಯಗಳು ॥

ಇಂದ್ರನಿಗೆ ಜರಾಮರಣಗಳಿಲ್ಲ ಎಂಬ ವಿಷಯದಲ್ಲಿ— **ನ ಹ್ಯಸ್ಯಾ ಅಪರಂ ಚನ ಜರಸಾ ಮರತೇ ಪತಿಃ** (ಋ. ಸಂ. ೧೦-೮೬-೧೧) ಎಂಬ ಶ್ರುತಿವಾಕ್ಯವನ್ನು ಭಾಷ್ಯಕಾರರು ಉದಾಹರಣೆಯಾಗಿ ಹೇಳಿದಾರೆ.

॥ ಸಂಹಿತಾಪಾಠಃ ॥

**ಯೇ ಸೋಮಾಸಃ ಪರಾವತಿ ಯೇ ಅರ್ವಾವತಿ ಸುನ್ವಿರೇ ।**

**ಸರ್ವಾಂಸ್ತಾँ ಇಂದ್ರ ಗಚ್ಛಸಿ ॥ ೬ ॥**

॥ ಪದಪಾಠಃ ॥

ಯೇ । ಸೋಮಾಸಃ । ಪರಾವತಿ । ಯೇ । ಅರ್ವಾವತಿ । ಸುನ್ವಿರೇ ।

ಸರ್ವಾನ್ । ತಾನ್ । ಇಂದ್ರ । ಗಚ್ಛಸಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯೇ ಸೋಮಾಸಃ ಸೋಮಾಃ ಪರಾವತಿ ವಿಪ್ರಕೃಷ್ಟೇಽತಿದೂರದೇಶೇ ಯೇ ಸೋಮಾ ಅರ್ವಾವತ್ಯಂತಿಕತಮೇ ದೇಶೇ ಚ ಸುನ್ವಿರೇ ॥ ಛಂದಸಿ ದ್ವಿರ್ವಚನಸ್ಯ ವಿಕಲ್ಪಿತತ್ವಾದತ್ರ ದ್ವಿರ್ವಚನಾಭಾವಃ ॥ ಯೇ ಸೋಮಾ ಋತ್ವಿಗ್ಭಿರಭಿಷೂಯಂತೇ ಸರ್ವಾನ್ ದೂರೇ ಸಮೀಪೇ ಚಾಭಿಷೂಯಮಾಣಾಂಸ್ತಾನ್ ಸೋಮಾನ್ ಗಚ್ಛಸಿ । ತತ್ಪಾನಾರ್ಥಂ ಯುಗಪತ್ಪ್ರಾಪ್ನೋಷಿ । ಅನೇನೇಂದ್ರಸ್ಯ ಸರ್ವಗತತ್ವಂ ಸೂಚಿತಂ ಚ ॥

ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । ಪರಾವತಿ—ದೂರದೇಶದಲ್ಲಿ । ಯೇ ಸೋಮಾಸಃ—ಯಾವ ಸೋಮರಸಗಳು । ಸುನ್ವಿರೇ—ಋತ್ವಿಕ್ಕುಗಳಿಂದ ಹಿಂಡಲ್ಪಡುವವೋ । ಅರ್ವಾವತಿ—ಸಮೀಪಪ್ರದೇಶದಲ್ಲಿ । ಯೇ ಸೋಮಾಃ—ಯಾವ ಸೋಮರಸಗಳು ಹಿಂಡಲ್ಪಡುವವೋ । ಸರ್ವಾನ್ ತಾನ್—ಆ ಎರಡು ವಿಧವಾದ ಸೋಮರಸಗಳನ್ನಭಿಲಕ್ಷಿಸಿ । ಗಚ್ಛಸಿ—ನೀನು ಹೋಗುತ್ತೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ಋತ್ವಿಗ್ಯಜಮಾನರು ಸೋಮರಸಗಳನ್ನು ದೂರದೇಶದಲ್ಲಿ ಹಿಂಡಿದರೂ ಸಮೀಪಪ್ರದೇಶದಲ್ಲಿ ಹಿಂಡಿದರೂ ಎಲ್ಲೇ ಹಿಂಡಲಿ ಆ ಸೋಮರಸಗಳನ್ನು ಪಾನಮಾಡುವುದಕ್ಕಾಗಿ ನೀನು ಅಲ್ಲಿಗೆಲ್ಲಾ ಏಕಕಾಲದಲ್ಲಿ ಹೋಗುತ್ತೀಯೆ

## English Translation

You go at once, Indra, to all those Soma-libations which are effused afar or effused near.

॥ ಸಂಹಿತಾಪಾಠಃ ॥

ತಮಿಂದ್ರಂ ವಾಜಯಾಮಸಿ ಮಹೇ ವೃತ್ರಾಯ ಹಂತವೇ ।

ಸ ವೃಷಾ ವೃಷಭೋ ಭುವತ್ ॥ ೭ ॥

॥ ಪದಪಾಠಃ ॥

ತಂ । ಇಂದ್ರಂ । ವಾಜಯಾಮಸಿ । ಮಹೇ । ವೃತ್ರಾಯ । ಹಂತವೇ ।

ಸಃ । ವೃಷಾ । ವೃಷಭಃ । ಭುವತ್ ॥ ೭ ॥

॥ ಸಾಯಣಭಾಷ್ಯಂ ॥

ಅಪ್ತೋರ್ಯಾಮೇ ಬ್ರಾಹ್ಮಣಾಚ್ಛಂಸಿನೋಽತಿರಿಕ್ತೋಕ್ಥೇ ತಮಿಂದ್ರಂ ವಾಜಯಾಮಸೀತಿ ಸ್ತೋತ್ರಿಯಸ್ತೃಚಃ । ಸೂತ್ರಿತಂ ಚ । ತಮಿಂದ್ರಂ ವಾಜಯಾಮಸಿ ಮಹಾಂ ಇಂದ್ರೋ ಯ ಓಜಸಾ । ಆ. ೯-೧೧ । ಇತಿ ॥ ವ್ಯೂಳ್ಹಸ್ಯ ದಶರಾತ್ರಸ್ಯ ಪಂಚಮೇಽಹನಿ ನಿಷ್ಕೇವಲ್ಯೇಽಯಮೇವ ತೃಚೋ ನಿವಿದ್ಧಾನೀಯಃ । ಸೂತ್ರಿತಂ ಚ ವ್ಯೂಳ್ಹಶ್ಚೇದಿತಿ ಖಂಡೇ । ಮರುತ್ವಾಂ ಇಂದ್ರ ಮೀಢ್ವಸ್ತಮಿಂದ್ರಂ ವಾಜಯಾಮಸಿ । ಆ. ೮-೮ ಇತಿ ॥

ಯಜಮಾನಾ ಆಹುಃ । ತಂ ಪೂರ್ವೋಕ್ತಲಕ್ಷಣಮಿಂದ್ರಂ ವಾಜಯಾಮಸಿ । ವಾಜಯಾಮಃ । ಸೋಮೇನ ಸ್ತುತಿಭಿರ್ವಾಜವಂತಂ ಬಲವಂತಂ ಕುರ್ಮಃ । ಕಿಮರ್ಥಂ । ಮಹೇ ಮಹತೇ ವೃತ್ರಾಯಾಪಾಮಾವರಕಂ ವೃತ್ರಾಸುರಂ ಹಂತವೇ ಹಂತುಂ । ಸೋಮಪಾನೇನ ಮತ್ತಃ ಸ್ತುತಿಭಿರ್ವಾ ಸ್ತುತಃ ಸನ್ ವೃಷಾ ಧನಾನಾಂ ಸೇಕ್ತಾ ದಾತಾ ಸ ಇಂದ್ರೋ ವೃಷಭೋಽಸ್ಮಾಕಂ ಸ್ತೋತೄಣಾಂ ಸೋಮಸ್ಯ ದಾತೄಣಾಂ ಧನಾದಿಸೇಚಕೋ ದಾತಾ ಭುವತ್ । ಭವತು ॥

॥ ಪ್ರತಿಪದಾರ್ಥ ॥

ಮಹೇ—ಬಲಶಾಲಿಯಾದ । ವೃತ್ರಾಯ—ವೃತ್ರಾಸುರನನ್ನು । ಹಂತವೇ—ಸಂಹಾರಮಾಡುವುದಕ್ಕಾಗಿ । ತಂ ಇಂದ್ರಂ—ಆ ಇಂದ್ರನನ್ನು । ವಾಜಯಾಮಸಿ—ಸ್ತೋತ್ರಗಳಿಂದ ಸ್ತುತಿಸಿ ಶಕ್ತಿಯುತನನ್ನಾಗಿ ಮಾಡುತ್ತೇವೆ । ವೃಷಾ—ಕಾಮವರ್ಷಕನಾದ । ಸಃ—ಆ ಇಂದ್ರನು । ವೃಷಭಃ—ನಮಗೆ ಧನಾದಿಗಳನ್ನು ಕೊಡುವವನಾಗಿ । ಭುವತ್—ಆಗಲಿ

॥ ಭಾವಾರ್ಥ ॥

ವೃತ್ರಾಸುರನನ್ನು ಸಂಹಾರಮಾಡಲು ಇಂದ್ರನು ಶಕ್ತಿಯುತನಾಗುವಂತೆ ಸ್ತೋತ್ರಗಳಿಂದ ಆ ಇಂದ್ರನನ್ನು ಸ್ತುತಿಸುತ್ತೇವೆ ಕಾಮವರ್ಷಕನೂ, ಶಕ್ತಿಯುತನೂ ಆದ ಆ ಇಂದ್ರನು ನಮಗೆ ಧನಾದಿಗಳನ್ನು ಕೊಡುವಂತಾಗಲಿ.

## English Translation

We invigorate that (great) Indra for the slaying of mighty Vritra; may he be a bounteous showerer (of wealth).

॥ ವಿಶೇಷವಿಷಯಗಳು ॥

ಅಗ್ನಿಷ್ಟೋಮವೆಂಬ ಯಾಗದಲ್ಲಿ ಬ್ರಾಹ್ಮಣಾಚ್ಛಂಸಿ ಎಂಬ ಋತ್ವಿಜನು ಪಠಿಸಬೇಕಾದ ಅತಿರಿಕ್ತೋಕ್ತ ಮಂತ್ರಗಳಲ್ಲಿ **ತಮಿಂದ್ರಂ ವಾಜಯಾಮಸಿ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಸ್ತೋತ್ರಿಯ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತಮಿಂದ್ರಂ ವಾಜಯಾಮಸಿ ಮಹಾँ ಇಂದ್ರೋ ಯ ಓಜಸಾ** ಎಂಬ ಸೂತ್ರದಿಂದ (ಆ ೯-೧೧) ವಿವೃತವಾಗಿರುವುದು ವ್ಯೂಳ್ಹವೆಂಬ ದಶರಾತ್ರಯಾಗದ ಐದನೆಯ ದಿವಸ ನಿಷ್ಕೇವಲ್ಯ ಶಸ್ತ್ರಮಂತ್ರಗಳಲ್ಲಿ ಈ ತೃಚವನ್ನು ನಿವಿದ್ಧಾನೀಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಮರುತ್ವಾँ ಇಂದ್ರ ಮೀಢ್ವಸ್ತಮಿಂದ್ರಂ ವಾಜಯಾಮಸಿ** ಎಂಬ ಸೂತ್ರದಿಂದ (ಆ ೮-೮) ವಿವೃತವಾಗಿರುವುದು,

॥ ಸಂಹಿತಾಪಾಠಃ ॥

ಇಂದ್ರಃ ಸ ದಾಮನೇ ಕೃತ ಓಜಿಷ್ಠಃ ಸ ಮದೇ ಹಿತಃ ।
ದ್ಯುಮ್ನೀ ಶ್ಲೋಕೀ ಸ ಸೋಮ್ಯಃ ॥ ೮ ॥

॥ ಪದಪಾಠಃ ॥

ಇಂದ್ರಃ । ಸಃ । ದಾಮನೇ । ಕೃತಃ । ಓಜಿಷ್ಠಃ । ಸಃ । ಮದೇ । ಹಿತಃ ।
ದ್ಯುಮ್ನೀ । ಶ್ಲೋಕೀ । ಸಃ । ಸೋಮ್ಯಃ ॥ ೮ ॥

॥ ಸಾಯಣಭಾಷ್ಯಂ ॥

**ಸ ಇಂದ್ರೋ ದಾಮನೇ ಸ್ತೋತೃಭ್ಯೋ ಧನಾದಿದಾನಾಯೈವ ಕೃತಃ । ಪ್ರಜಾಪತಿನಾ ಸೃಷ್ಟಃ । ಕಿಂ ಚೌಜಿಷ್ಠ ಓಜಸ್ವಿತಮಃ ಸ ಏವೇಂದ್ರಃ ಮದೇ । ಮಾದ್ಯಂತ್ಯನೇನೇತಿ ಮದಃ ಸೋಮಃ । ತಸ್ಮಿಂಶ್ಚ ಪ್ರಜಾಪತಿನಾ ಸೃಷ್ಟಿಕಾಲೇ ಹಿತಃ । ಸೋಮಪಾನಾರ್ಥಂ ಚ ನಿಹಿತ ಇತ್ಯರ್ಥಃ । ದ್ಯುಮ್ನೀ । ದ್ಯುಮ್ನಂ ದ್ಯೋತತೇರ್ಯಶೋ ವಾನ್ನಂ ವೇತಿ । ಯಶಸ್ವ್ಯನ್ನವಾನ್ವಾ ತ ಏವ ಶ್ಲೋಕೀ । ಶ್ಲೋಕಃ ಸ್ತುತಿಃ । ತದ್ವಾನ್ ಸ ಇಂದ್ರಃ ಸೋಮ್ಯಃ ಸೋಮಾರ್ಹೋ ಭವತಿ ॥**

॥ ಪ್ರತಿಪದಾರ್ಥ ॥

**ಸಃ ಇಂದ್ರಃ**—ಅದೇ ಇಂದ್ರನು । **ದಾಮನೇ**—ಸ್ತೋತ್ರಮಾಡುವ ಜನರಿಗೆ ಧನಾದಿಗಳನ್ನು ಕೊಡುವುದಕ್ಕಾಗಿಯೇ । **ಕೃತಃ**—ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದ್ದಾನೆ । **ಓಜಿಷ್ಠಃ**—ಬಲಶಾಲಿಯಾದ । **ಸಃ**—ಆ ಇಂದ್ರನು । **ಮದೇ**—ಸೋಮಪಾನಾರ್ಥವಾಗಿ । **ಹಿತಃ**—ನಿರ್ದಿಷ್ಟನಾಗಿದ್ದಾನೆ । **ದ್ಯುಮ್ನೀ**—ಯಶೋವಂತನೂ ಅಥವಾ ಅನ್ನವಂತನೂ । **ಶ್ಲೋಕೀ**—ಸ್ತುತ್ಯರ್ಹನೂ ಆದ । **ಸಃ**—ಆ ಇಂದ್ರನು । **ಸೋಮ್ಯಃ**—ಸೋಮಪಾನ ಮಾಡಲು ಅರ್ಹನಾಗಿದ್ದಾನೆ.

॥ ಭಾವಾರ್ಥ ॥

ಆ ಇಂದ್ರನು ತನ್ನನ್ನು ಸ್ತೋತ್ರಮಾಡುವ ಜನರಿಗೆ ಧನಾದಿಗಳನ್ನು ಕೊಡುವುದಕ್ಕಾಗಿ ಪ್ರಜಾಪತಿಯಿಂದ ಸೃಷ್ಟಿಸಲ್ಪಟ್ಟಿದ್ದಾನೆ ಬಲಶಾಲಿಯಾದ ಆ ಇಂದ್ರನು ಸೋಮಪಾನಾರ್ಥವಾಗಿ ನಿರ್ದಿಷ್ಟನಾಗಿದ್ದಾನೆ ಆದ್ದರಿಂದ ಯಶೋವಂತನೂ, ಅನ್ನವಂತನೂ, ಸ್ತುತ್ಯರ್ಹನೂ ಆದ ಆ ಇಂದ್ರನು ಸೋಮಪಾನಮಾಡಲು ಅರ್ಹನಾಗಿದ್ದಾನೆ.

## English Translation

Indra was created for giving, he, the most mighty, was set over the texhilaratıng Soma , he the glorious one, the lord of praise, is worthy of he Soma.

॥ ಸಂಹಿತಾಪಾಠಃ ॥

ಗಿರಾ ವಜ್ರೋ ನ ಸಂಭೃತಃ ಸಬಲೋ ಅನಪಚ್ಯುತಃ ।
ವವಕ್ಷ ಋಷ್ವೋ ಅಸ್ತೃತಃ ॥ ೯ ॥

॥ ಪದಪಾಠಃ ॥

ಗಿರಾ । ವಜ್ರಃ । ನ । ಸಂऽಭೃತಃ । ಸऽಬಲಃ । ಅನಪऽಚ್ಯುತಃ ।
ವವಕ್ಷೇ । ಋಷ್ವಃ । ಅಸ್ತೃತಃ ॥ ೯ ॥

॥ ಸಾಯಣಭಾಷ್ಯಂ ॥

ಗಿರಾ ಸ್ತುತಿಲಕ್ಷಣಯಾ ವಾಚಾ ಸ್ತೋತೃಭಿಃ ಸಂಭೃತ ಉತ್ಪಾದಿತಸ್ತೀಕ್ಷ್ಣೀಕೃತಃ । ತತ್ರ ದೃಷ್ಟಾಂತಃ । ವಜ್ರೋ ನ । ವಜ್ರ ಆಯುಧಂ । ತತ್ಕರ್ತೃಭಿರ್ನಿಶಿತಧಾರೋ ಯಥಾ ಭವತಿ ತೀಕ್ಷ್ಣೀಕ್ರಿಯತೇ ತದ್ವತ್ ಸ್ತೋತೃಭಿಃ ಸ್ತುತ್ಯಾ ಸಂಭೃತಃ ಅತ ಏವ ಸಬಲೋ ಬಲಸಹಿತಃ ತಸ್ಮಾದನಪಚ್ಯುತಃ ಪರೈರಪ್ರಚ್ಯುತಃ । ಅನಭಿಗತ ಇತ್ಯರ್ಥಃ । ತಾದೃಶ ಋಷ್ವೋ ಮಹಾನ್ ದೀಪ್ಯಮಾನೋ ವಾಸ್ತೃತೋ ಯುದ್ಧೇ ಶತ್ರುಭಿರಹಿಂಸಿತ ಇಂದ್ರೋ ವವಕ್ಷೇ । ಸ್ತೋತೃಭ್ಯೋ ಧನಾದಿಕಂ ವೋಢುಮಿಚ್ಛತಿ ॥

॥ ಪ್ರತಿಪದಾರ್ಥ ॥

**ವಜ್ರೋ ನ**—ಆಯುಧವು ಹರಿತಮಾಡಲ್ಪಡುವಂತೆ । **ಗಿರಾ**—ಸ್ತುತಿರೂಪವಾದ ವಾಕ್ಯದಿಂದ । **ಸಂಭೃತಃ**—ಸ್ತೋತ್ರಮಾಡುವವರಿಂದ ಪ್ರಶಂಸಿತನಾದವನೂ । **ಸಬಲಃ**—ಬಲಸಹಿತನಾದವನೂ । **ಅನಪಚ್ಯುತಃ**—ಇತರರಿಂದ ಅಬಾಧಿತನಾದವನೂ । **ಋಷ್ವಃ**—ಮಹತ್ಸ್ವರೂಪವುಳ್ಳವನೂ ಅಥವಾ ಪ್ರಕಾಶಮಾನನಾದವನೂ । **ಅಸ್ತೃತಃ**—ಶತ್ರುಗಳಿಂದ ಯುದ್ಧದಲ್ಲಿ ಹಿಂಸಿಸಲು ಸಾಧ್ಯವಿಲ್ಲದವನೂ ಆದ ಆ ಇಂದ್ರನು । **ವವಕ್ಷೇ**—ಸ್ತೋತೃಜನರಿಗೆ ಧನಾದಿಗಳನ್ನು ವಹಿಸಿ ತಂದುಕೊಡುತ್ತಾನೆ

॥ ಭಾವಾರ್ಥ ॥

ಆಯುಧವನ್ನು ಉಜ್ಜಿ ಹರಿತವಾಡುವಂತೆ ಸ್ತೋತ್ರಾದಿಗಳಿಂದ ಸ್ತುತಿಸಿ ಪೂಜಾರ್ಹನಾಗಿ ಮಾಡಲ್ಪಡುವವನೂ ಅತ್ಯಂತ ಬಲಶಾಲಿಯೂ ಇತರರಿಂದ ಅಹಿಂಸಿತನೂ, ಯುದ್ಧದಲ್ಲಿ ಶತ್ರುಗಳ ಹಿಂಸೆಗೆ ಬಗ್ಗದಿರುವವನೂ ಆದ ಆ ಇಂದ್ರನು ತನ್ನನ್ನು ಸ್ತೋತ್ರಮಾಡುವವರಿಗೆ ಧನಾದಿಗಳನ್ನು ತಂದು ಕೊಡುತ್ತಾನೆ.

English Translation

The mighty (Indra), unassailed by his foes, hastens to confer wealth on his worshippers,—rendered keen by their praises, as a weapon, full of strength and invincible.

॥ ಸಂಹಿತಾಪಾಠ ॥

ದುರ್ಗೇ ಚಿನ್ನಃ ಸುಗಂ ಕೃಧಿ ಗೃಣಾನ ಇಂದ್ರ ಗಿರ್ವಣಃ ।
ತ್ವಂ ಚ ಮಘವನ್ವಶಃ ॥ ೧೦ ॥

॥ ಪದಪಾಠಃ ॥

ದುಃಽಗೇ । ಚಿತ್ । ನಃ । ಸುಽಗಂ । ಕೃಧಿ । ಗೃಣಾನಃ । ಇಂದ್ರ । ಗಿರ್ವಣಃ ।
ತ್ವಂ । ಚ । ಮಘಽವನ್ । ವಶಃ ॥ ೧೦ ॥

॥ ಸಾಯಣಭಾಷ್ಯಂ ॥

**ಹೇ ಗಿರ್ವಣೋ ಗೀರ್ಭಿರ್ವನನೀಯೇಂದ್ರ ಗೃಣಾನಃ ಸ್ತೋತೃಭಿಃ ಸ್ತೂಯಮಾನಸ್ತ್ವಂ ನೋಽಸ್ಮಾಕಂ ದುರ್ಗೇ ಚಿದ್ದುರ್ಗಮೇಽಪಿ ಮಾರ್ಗೇ ಸುಗಂ ಸುಗಮಂ ಪಂಥಾನಂ ಕೃಧಿ । ತಥಾ ಕುರು । ಹೇ ಮಘವನ್ಧನವನ್ನಿಂದ್ರ ತ್ವಂ । ಚಶಬ್ದಶ್ಚೇದರ್ಥೇ । ಯದಿ ವಶಃ ಸೋಮಪಾನಾರ್ಥಂ ತತ್ರ್ತದಾತ್ಮನಸ್ಮಾನ್ಕಾಮಯೇಥಾಃ ತದಾ ಪಂಥಾನಂ ಶೋಭನಗಮನಂ ಕುರುಷ್ವ ॥ ವಷ್ಟೇರ್ಲೇಟ್ಯಡಾಗಮಃ । ಚಶಬ್ದಯೋಗಾದನಿಘಾತಃ ॥**

॥ ಪ್ರತಿಪದಾರ್ಥ ॥

**ಗಿರ್ವಣಃ**— ಸ್ತುತಿಗಳಿಂದ ಲಬ್ಧನಾಗುವ । **ಇಂದ್ರ**—ಎಲೈ ಇಂದ್ರನೇ । **ಗೃಣಾನಃ**—ಸ್ತೋತೃಜನರಿಂದ ಪ್ರಶಂಸಿಸಲ್ಪಡುವ ನೀನು । **ನಃ**—ನಮಗೆ । **ದುರ್ಗೇ ಚಿತ್**—ಅತ್ಯಂತ ದುರ್ಗಮವಾದ ಮಾರ್ಗದಲ್ಲಿಯೂ ಸಹ । **ಸುಗಂ**—ಸುಖಕರವಾದ ಮಾರ್ಗವನ್ನು । **ಕೃಧಿ**—ಮಾಡಿಕೊಡು । **ಮಘವನ್**—ಧನವಂತನಾದ ಎಲೈ ಇಂದ್ರನೇ । **ತ್ವಂ ಚ**—ನೀನು । **ವಶಃ**—ಸೋಮವನ್ನು ಅರ್ಪಿಸುವ ನಮ್ಮ ಸಮೀಪಕ್ಕೆ ಬರಲು ಇಚ್ಛಿಸುವೆ.

॥ ಭಾವಾರ್ಥ ॥

ಸ್ತುತ್ಯರ್ಹನಾದ ಎಲೈ ಇಂದ್ರನೇ, ಸ್ತೋತೃಜನರಿಂದ ಪ್ರಶಂಸಿಸಲ್ಪಡುವ ನೀನು ನಮಗೆ ಅತ್ಯಂತ ದುರ್ಗಮವಾದ ಸ್ಥಳಗಳಲ್ಲಿಯೂ ಸುಖವಾಗಿ ಹೋಗುವಂತೆ ಅನುಕೂಲವಾದ ಮಾರ್ಗವನ್ನು ಕಲ್ಪಿಸಿಕೊಡು. ಧನವಂತನಾದ

ಎಲೈ ಇಂದ್ರನೇ, ಇಂದೇ ಸೋಮವನ್ನು ಅರ್ಪಿಸಲು ಸಿದ್ಧರಾಗಿರುವ ನಮ್ಮ ಸಮೀಪಕ್ಕೆ ಸೋಮಪಾನಾರ್ಥವಾಗಿ ಬರಲು ನೀನು ಇಚ್ಛಿಸತಕ್ಕವನೇ ಆಗಿರುವೆ.

## English Translation

Indra, worthy of our praise, hymned by us, make our path plain even in the midst of difficulties, (hear us), Maghavan, if you love us ;

॥ ಸಂಹಿತಾಪಾಠಃ ॥

ಯಸ್ಯ ತೇ ನೂ ಚಿದಾದಿಶಂ ನ ಮಿನಂತಿ ಸ್ವರಾಜ್ಯಂ ।
ನ ದೇವೋ ನಾಧ್ರಿಗುರ್ಜನಃ ॥ ೧೧ ॥

॥ ಪದಪಾಠಃ ॥

ಯಸ್ಯ । ತೇ । ನು । ಚಿತ್ । ಆಽದಿಶಂ । ನ । ಮಿನಂತಿ । ಸ್ವಽರಾಜ್ಯಂ ।
ನ । ದೇವಃ । ನ । ಅಧ್ರಿಽಗುಃ । ಜನಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯಸ್ಯ ತೇ ತವಾದಿಶಂ । ಆದಿಶತಿ ನಯತಿ ಸರ್ವತ್ರಾನಯತೀತ್ಯಾದಿಗ್ಬಲಂ ॥ ಔಣಾದಿಕಃ ಕರಣೇ ಪ್ರತ್ಯಯಃ ॥ ಯದ್ವಾ । ಆದೇಶ ಏವಾದಿಗಾಜ್ಞಾ ॥ ಭಾವೇ ಕ್ವಿಪ್ ॥ ತ್ವದೀಯಾಮಾಜ್ಞಾಂ ನೂ ಚಿದಿದಾನೀಂ ಪುರಾ ಚ ನ ಮಿನಂತಿ ಕೇಚಿದಪಿ ನ ಹಿಂಸಂತಿ । ಕಿಂ ಚ ಸ್ವರಾಜ್ಯಂ ತವ ಸ್ವಭೂತಂ ರಾಜ್ಯಂ ಚ । ಯದ್ವಾ । ಸ್ವಶಬ್ದೇನ ಸ್ವರ್ಗೋಽಭಿಧೀಯತೇ । ಸ್ವರ್ಗಸ್ವಾಮಿತ್ವಂ ಚ । ನಾ ಹಿಂಸಂತಿ । ಹಿಂಸಕಾನಾಹ । ನ ದೇವೋ ತ್ವದನ್ಯೋ ದೇವೋಽಪಿ ಚ ತಥಾಪ್ಯಧ್ರಿಗುರಧೃತಗಮನಃ ಸಂಗ್ರಾಮೇ ತ್ವರಮಾಣೋ ವೀರೋಽಪಿ ನ ಚ ಜನಃ ಪ್ರಾದುರ್ಭೂತೋ ಮನುಷ್ಯೋಽಪಿ । ಏತೇ ನ ಮಿನಂತೀತ್ಯರ್ಥಃ ॥

॥ ಪ್ರತಿಪದಾರ್ಥ ।

(ಎಲೈ ಇಂದ್ರನೇ) **ಯಸ್ಯ ತೇ**—ಯಾವ ನಿನ್ನ । **ಆದಿಶಂ**—ಆಜ್ಞೆಯನ್ನು । **ನೂ ಚಿತ್**—ಹಿಂದೆ ಅಥವಾ ಈಗ ಎಂದರೆ ಯಾವಾಗಲೂ । **ನ ಮಿನಂತಿ**—ಯಾರೂ ಮೀರಲಾರರು । **ಸ್ವರಾಜ್ಯಂ**—ನಿನ್ನ ಸ್ವರ್ಗಾಧಿಪತ್ಯವನ್ನು ಯಾರೂ ಹಿಂಸಿಸುವುದಿಲ್ಲ । **ನ ದೇವಃ**—ನೀನಲ್ಲದೆ ಇತರ ಯಾವ ದೇವನೂ । **ಅಧ್ರಿಗುಃ**—ವೇಗಗಮನವುಳ್ಳ ಯಾವ ವೀರನೂ । **ಜನಃ**—ಇದುವರೆಗೆ ಉತ್ಪನ್ನವಾಗಿರುವ ಯಾವ ಮಾನವನೂ ಸಹ । **ನ ಚ**—ನಿನ್ನನ್ನೂ ಹಿಂಸಿಸಲಾರರು ಅಥವಾ ನಿನ್ನ ಆಜ್ಞೆಯನ್ನು ಮೀರಲಾರರು.

॥ ಭಾವಾರ್ಥ ।

ಎಲೈ ಇಂದ್ರನೇ, ನಿನ್ನ ಆಜ್ಞೆಯನ್ನು ಅಥವಾ ಶಕ್ತಿಯನ್ನು ಯಾರೂ ಯಾವಾಗಲೂ ಎದುರಿಸಲು ಸಮರ್ಥರಲ್ಲ. ನಿನ್ನ ಸ್ವರ್ಗಾಧಿಪತ್ಯವನ್ನು ಯಾರೂ ಪ್ರಶ್ನಿಸುವಂತಿಲ್ಲ. ನೀನಲ್ಲದೆ ಇತರ ಯಾವ ದೇವನೂ, ವೀರನೂ ಮಾನವನೂ ನಿನ್ನನ್ನು ಹಿಂಸಿಸಲಾರರು ಅಥವಾ ನಿನ್ನ ಆಜ್ಞೆಯನ್ನು ಮೀರಲಾರರು.

English Translation

You whose command and rightful empire neither god nor irresistible hero can harm.

॥ ಸಂಹಿತಾಪಾಠಃ ॥

ಅಧಾ ತೇ ಅಪ್ರತಿಷ್ಕುತಂ ದೇವೀ ಶುಷ್ಮಂ ಸಪರ್ಯತಃ ।
ಉಭೇ ಸುಶಿಪ್ರ ರೋದಸೀ ॥ ೧೨ ॥

॥ ಪದಪಾಠಃ ॥

ಅಧ । ತೇ । ಅಪ್ರತಿऽಸ್ಕುತಂ । ದೇವೀ ಇತಿ । ಶುಷ್ಮಂ । ಸಪರ್ಯತಃ ।
ಉಭೇ ಇತಿ । ಸುऽಶಿಪ್ರ । ರೋದಸೀ ಇತಿ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಸುಶಿಪ್ರ ಸುಹನೋ ಶೋಭನಶಿರಸ್ತ್ರಾಣೇಂದ್ರ ಅಧಾಪಿ ಚ ದೇವೀ ದೇವ್ಯೌ ಸ್ವತೇಜಸಾ ದೀಪ್ಯಮಾನೇ ಉಭೇ ರೋದಸೀ ದ್ಯಾವಾಪೃಥಿವ್ಯಾವಪ್ರತಿಷ್ಕುತಂ ॥ ಸ್ಕು ಇತಿ ಸೌತ್ರೋ ಧಾತುಃ ಸ್ತಂಭನೇ ವರ್ತತೇ ॥ ಶತ್ರುಭಿರಪ್ರತಿರೋಧನೀಯಂ ಶುಷ್ಮಂ ಪರಬಲಶೋಷಕಂ ಬಲಂ ಸಪರ್ಯತಃ । ಪೂಜಯತಃ । ತ್ವದಧೀನೇ ಏವ ಭವತಃ ॥

॥ ಪ್ರತಿಪದಾರ್ಥ ॥

**ಸುಶಿಪ್ರ**—ಆಕರ್ಷಕವಾದ ಕೆನ್ನೆಯುಳ್ಳ ಅಥವಾ ಶಿರಸ್ತ್ರಾಣವುಳ್ಳ ಎಲೈ ಇಂದ್ರನೇ । **ಅಧ**—ಮತ್ತು । **ದೇವೀ**—ಪ್ರಕಾಶಮಾನರಾದ (ಅಥವಾ ದೇವತಾತ್ಮರಾದ) । **ಉಭೇ ರೋದಸೀ**—ದ್ಯಾವಾಪೃಥಿವಿಗಳು । **ಅಪ್ರತಿಷ್ಕುತಂ**—ಅಪ್ರತಿಹತವಾದ ಎಂದರೆ ಯಾರಿಂದಲೂ ಎದುರಿಸಲು ಅಸಾಧ್ಯವಾದ । **ತೇ ಶುಷ್ಮಂ**—ನಿನ್ನ ಶಕ್ತಿಸಾಮರ್ಥ್ಯವನ್ನು । **ಸಪರ್ಯತಃ**—ಗೌರವಿಸುತ್ತವೆ.

॥ ಭಾವಾರ್ಥ ॥

ಆಕರ್ಷಕವಾದ ಕೆನ್ನೆಯುಳ್ಳ ಎಲೈ ಇಂದ್ರನೇ, ಪ್ರಕಾಶಮಾನರಾದ ದ್ಯಾವಾಪೃಥಿವಿಗಳು ಎಂದರೆ ಭೂಮಿ ಮತ್ತು ಸ್ವರ್ಗಲೋಕಗಳು ಯಾರಿಂದಲೂ ಎದುರಿಸಲು ಸಾಧ್ಯವಾಗದ ನಿನ್ನ ಮಹಾ ಶಕ್ತಿಸಾಮರ್ಥ್ಯವನ್ನು ಗೌರವಿಸುತ್ತವೆ.

## English Translation

Yes, deity of the handsome jaw, the two goddesses, heaven and earth both worship your resistless consuming might.

॥ ಸಂಹಿತಾಪಾಠಃ ॥

ತ್ವಮೇತದಧಾರಯಃ ಕೃಷ್ಣಾಸು ರೋಹಿಣೀಷು ಚ ।
ಪರುಷ್ಣೀಷು ರುಶತ್ಪಯಃ ॥ ೧೩ ॥

॥ ಪದಪಾಠಃ ॥

ತ್ವಂ । ಏತತ್ । ಅಧಾರಯಃ । ಕೃಷ್ಣಾಸು । ರೋಹಿಣೀಷು । ಚ ।
ಪರುಷ್ಣೀಷು । ರುಶತ್ । ಪಯಃ ॥ ೧೩ ॥

॥ ಸಾಯಣಭಾಷ್ಯಂ ॥

ಅಸ್ಯ ಸಾಮರ್ಥ್ಯಮೇವೋಪಪಾದಯತಿ । ಹೇ ಇಂದ್ರ ಕೃಷ್ಣಾಸು ಕೃಷ್ಣವರ್ಣಾಸು ಗೋಷು ತಥಾ ರೋಹಿಣೀಷು ॥ ವರ್ಣಾದನುದಾತ್ತಾತ್ತೋಪಧಾತ್ತೋ ನಃ । ಪಾ. ೪.೧-೩೯ । ಇತಿ ಙೀಪ್ ॥ ರೋಹಿತವರ್ಣಾಸು ಚ ಗೋಷು ರುಶತ್ ॥ ರೋಚತೇರ್ದೀಪ್ತಿಕರ್ಮಣಃ ॥ ದೀಪ್ಯಮಾನಂ ಶ್ವೇತಮೇತತ್ಪರಿದೃಶ್ಯಮಾನಂ ಪಯಃ ಕ್ಷೀರಂ ತ್ವಮಧಾರಯಃ । ಧಾರಯಸಿ । ತಸ್ಮಾತ್ತ್ವದ್ಬಲಂ ಪೂಜಯತ ಇತಿ ಸಮನ್ವಯಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತ್ವಂ**—ನೀನು । **ಕೃಷ್ಣಾಸು**—ಕಪ್ಪುವರ್ಣವುಳ್ಳ ಗೋವುಗಳಲ್ಲಿಯೂ । **ರೋಹಿಣೀಷು**—ಕೆಂಪುವರ್ಣವುಳ್ಳ ಗೋವುಗಳಲ್ಲಿಯೂ । **ಪರುಷ್ಣೀಷು ಚ**—ಮಿಶ್ರಬಣ್ಣವುಳ್ಳ ಗೋವುಗಳಲ್ಲಿಯೂ । **ರುಶತ್**—ಒಂದೇ ವಿಧವಾಗಿ ಬೆಳ್ಳಗಿರುವ । **ಪಯಃ**—ಹಾಲನ್ನು । **ಅಧಾರಯಃ**—ತುಂಬುತ್ತೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಕಪ್ಪುಬಣ್ಣದ ಗೋವುಗಳಲ್ಲಿಯೂ, ಕೆಂಪುಬಣ್ಣದ ಗೋವುಗಳಲ್ಲಿಯೂ, ಕಪ್ಪುಬಿಳುಪು ಅಥವಾ ಕೆಂಪುಬಿಳುಪು ಮಿಶ್ರಿತವಾದ ಗೋವುಗಳಲ್ಲಿಯೂ ಸಹ ಒಂದೇವಿಧವಾಗಿ ಬೆಳ್ಳಗಿರುವ ಹಾಲನ್ನು ತುಂಬುತ್ತೀಯೆ.

## English Translation

It is you that keep this bright milk in the black, red, and spotted cows.

॥ ವಿಶೇಷವಿಷಯಗಳು ॥

ಬಿಳೀಬಣ್ಣದ ಹಸುವು ಬೆಳ್ಳಗಿರುವ ಹಾಲನ್ನು ಕೊಡುವದು ಸಹಜವಾಗಿರುವದು. ಆದರೆ ಹಸುವು ಬೆಳ್ಳಗಿರಲಿ, ಕಪ್ಪಗಿರಲಿ, ಕೆಂಪಗಿರಲಿ ಅಥವಾ ಮಿಶ್ರಬಣ್ಣದ್ದಾಗಿರಲಿ ಈ ಎಲ್ಲಾ ವಿಧವಾದ ಹಸುಗಳಲ್ಲಿಯೂ ದೊರಕುವ ಹಾಲು ಬೆಳ್ಳಗೆ ಒಂದೇ ವಿಧವಾಗಿರುವುದು. ಇದು ನಿನ್ನ ಮಾಹಾತ್ಮ್ಯವು ಎಂದು ಇಂದ್ರನ ವಹತ್ತ್ವವನ್ನು ಋಷಿಯು ವರ್ಣಿಸಿದಾನೆ

॥ ಸಂಹಿತಾಪಾಠಃ ॥

ವಿ ಯದಹೇರಧ ತ್ವಿಷೋ ವಿಶ್ವೇ ದೇವಾಸೋ ಅಕ್ರಮುಃ ।
ವಿದನ್ಮೃಗಸ್ಯ ತಾಁ ಅಮಃ ॥ ೧೪ ॥

॥ ಪದಪಾಠ ॥

ವಿ । ಯತ್ । ಅಹೇಃ । ಅಧ । ತ್ವಿಷಃ । ವಿಶ್ವೇ । ದೇವಾಸಃ । ಅಕ್ರಮುಃ ।
ವಿದತ್ । ಮೃಗಸ್ಯ । ತಾನ್ । ಅಮಃ ॥ ೧೪ ॥

॥ ಸಾಯಣಭಾಷ್ಯಂ ॥

**ಅಥಾಪಿ ಚಾಹೇರಹಂತವ್ಯಸ್ಯ ವೃತ್ರಾಸುರಸ್ಯ ತ್ವಿಷಸ್ತೇಜೋರೂಪಾದುಚ್ಛ್ವಾಸಾದ್ಭೀತಾಃ ಯದ್ವಾ ತಸ್ಯ ಪ್ರಭಾವೇನ ಪರಿಗಮಿತಾ ವಿಶ್ವೇ ಸರ್ವೇ ದೇವಾಸೋ ದೇವಾ ಯದ್ಯದಾ ವ್ಯಕ್ರಮುಃ ವಿವಿಧಂ ಪಾದವಿಹರಣಮಕುರ್ವನ್ । ಸ್ವಸ್ಥಾನಂ ಪರಿತ್ಯಜ್ಯಾನ್ಯಂ ದೇಶಮಗಚ್ಛನ್ನಿತ್ಯರ್ಥಃ । ತದಾನೀಂ ಮೃಗಸ್ಯ । ಏವಂ ತಾನ್ ಭೀಷಯಿತುಂ ವೃತ್ರೋ ಮೃಗರೂಪೋऽಭವತ್ । ತದ್ರೂಪಸ್ಯ ಸಂಬಂಧ್ಯಮಃ ಸರ್ವತೋ ಗಮನಶೀಲಂ ಬಲಂ ತಜ್ಜಾತಂ ಭಯಂ ವಾ ತಾನ್ ಸರ್ವಾನ್ದೇವಾನ್ವಿದತ್ । ಅವಿಂದತ್ । ಪ್ರಾಪ್ನೋದಿತ್ಯರ್ಥಃ । ತಸ್ಯಾಸುರಸ್ಯೇಂದ್ರೋ ನಿವಾರಕೋ ಹಂತಾಭವದಿತ್ಯುತ್ತರೇಣ ಸಂಬಂಧಃ ॥**

॥ ಪ್ರತಿಪದಾರ್ಥ ॥

**ಅಧ**—ಇದಲ್ಲದೆ । **ಅಹೇಃ**—ಕೊಲ್ಲಲ್ಪಡಲು ಸಾಧ್ಯವಿಲ್ಲದ ವೃತ್ರಾಸುರನ । **ತ್ವಿಷಃ**—ತೇಜೋರೂಪವಾದ ಉಚ್ಛ್ವಾಸದಿಂದ ಹೆದರಿದ । **ವಿಶ್ವೇ ದೇವಾಸಃ**—ದೇವತೆಗಳೆಲ್ಲರೂ । **ವಿ ಅಕ್ರಮುಃ**—ನಾನಾದಿಕ್ಕುಗಳಿಗೆ ಓಡಿಹೋದರು ( ಆಗ ) । **ಮೃಗಸ್ಯ**—ಮೃಗರೂಪಧಾರಿಯಾದ । **ಅಮಃ**—ಸರ್ವತ್ರ ವ್ಯಾಪಿಸಿರುವ ಆ ವೃತ್ರನ ಬಲವು (ಅಥವಾ) ಭಯವು) । **ತಾನ್**—ಆ ದೇವತೆಗಳನ್ನು । **ವಿದತ್**—ವ್ಯಾಪಿಸಿತು.

॥ ಭಾವಾರ್ಥ ॥

ಇದಲ್ಲದೆ ಯಾರಿಂದಲೂ ಕೊಲ್ಲಲು ಸಾಧ್ಯವಿಲ್ಲದ ಆ ವೃತ್ರಾಸುರ ತೇಜೋರೂಪವಾದ ಉಚ್ಛ್ವಾಸನಿಶ್ವಾಸಗಳನ್ನು ಕಂಡು ದೇವತೆಗಳೆಲ್ಲರೂ ಹೆದರಿ ನಾನಾದಿಕ್ಕುಗಳಿಗೆ ಓಡಿಹೋದರು. ಮೃಗ (ಜಿಂಕೆ) ರೂಪಧಾರಿಯಾದ ಆ ವೃತ್ರನ ಸರ್ವತ್ರ ವ್ಯಾಪಿಸಿರುವ ಬಲವು ಅಥವಾ ಭಯವು ಆ ದೇವತೆಗಳನ್ನು ಆವರಿಸಿತು.

## English Translation

When all the gods fled in various directions from the splendour of the demon Ahi, and when fear of the deer seized them.

॥ ಸಂಹಿತಾಪಾಠಃ ॥

ಆದು ಮೇ ನಿವರೋ ಭುವದ್ವೃತ್ರಹಾದಿಷ್ಟ ಪೌಂಸ್ಯಂ ।
ಅಜಾತಶತ್ರುರಸ್ತೃತಃ ॥ ೧೫ ॥

॥ ಪದಪಾಠಃ ॥

ಆತ್ । ಊಂ ಇತಿ । ಮೇ । ನಿऽವರಃ । ಭುವತ್ । ವೃತ್ರऽಹಾ । ಅದಿಷ್ಟ । ಪೌಂಸ್ಯಂ ।
ಅಜಾತऽಶತ್ರುಃ । ಅಸ್ತೃತಃ ॥ ೧೫ ॥

॥ ಸಾಯಣಭಾಷ್ಯಂ ॥

ಆತ್ । ಉ ಇತ್ಯವಧಾರಣೇ । ದೇವಾನಾಂ ಭೀತ್ಯಾ ಸರ್ವತೋ ಗಮನಾನಂತರಮೇವ ಮೇ ಸ್ತೋತೃಸ್ತುತ್ಯಲಕ್ಷಣೇನ ಸಂಬಂಧೇನ ಮಮ ಸಂಬಂಧ್ಯಯಮಿಂದ್ರೋ ನಿವರೋ ವೃತ್ರಾಸುರಸ್ಯ ನಿವಾರಯಿತಾ ಹಂತಾ ಭುವತ್ । ಅಭವತ್। ತತೋ ವೃತ್ರಹಾ ವೃತ್ರಸ್ಯ ಹಂತೇಂದ್ರಃ ಪೌಂಸ್ಯಂ ॥ ಪುಂಸಃ ಕರ್ಮ ಪೌಂಸ್ಯಂ । ಯದ್ವಾ । ಸ್ತ್ರೀಪುಂಸಾಭ್ಯಾಂ । ಪಾ. ೪-೧-೮೭ । ಇತಿ ಭವಾರ್ಥೇ ಸ್ನಞ್ । ನಕಾರಸ್ಯ ಯಕಾರೋ ವರ್ಣವ್ಯತ್ಯಯೇನ । ಪುಂಸೀಂದ್ರೇ ಭವಂ ॥ ಯದ್ವಾ । ಬಲನಾಮೈತತ್ । ಸ್ವಬಲಂ ಅದಿಷ್ಟ। ತಸ್ಯ ರಾಜ್ಯೇ ದಿಶತಿ । ನಿದಧಾತಿ। ತದ್ರಾಜ್ಯಂ ಸ್ವವಶಮಕರೋದಿತ್ಯರ್ಥಃ। ತತಃ ಪ್ರಭೃತೀಂದ್ರೋऽಜಾತ-ಶತ್ರುರನುತ್ಪನ್ನಶತ್ರುರಸ್ತೃತಃ ಸಂಗ್ರಾಮೇ ಪರೈರಹಿಂಸಿತಶ್ಚಾಭವತ್ ॥

॥ ಪ್ರತಿಪದಾರ್ಥ ॥

**ಆತ್ ಉ**—ಅನಂತರ । **ಮೇ**—ನನ್ನ (ಸ್ತುತಿಗೆ ಪಾತ್ರನಾದ ಇಂದ್ರನು) । **ನಿವರಃ**—ವೃತ್ರಾಸುರನ ಸಂಹಾರಕನಾಗಿ । **ಭುವತ್**—ಆಗಿದ್ದಾನೆ । **ವೃತ್ರಹಾ**—ವೃತ್ರಹಂತಕನಾದ ಇಂದ್ರನು । **ಪೌಂಸ್ಯಂ**—ತನ್ನ ಸ್ವಬಲವನ್ನು । **ಅದಿಷ್ಟ**—ತನ್ನ ರಾಜ್ಯದಲ್ಲಿ ಸ್ಥಾಪಿಸಿದನು (ಅನಂತರ ಆ ಇಂದ್ರನು) । **ಅಜಾತಶತ್ರುಃ**—ತನಗೆ ಶತ್ರುಗಳೇ ಹುಟ್ಟಿರದಂತೆಯೂ । **ಅಸ್ತೃತಃ**—ಯುದ್ಧದಲ್ಲಿ ಶತ್ರುಗಳಿಂದ ಅಹಿಂಸಿತನಾಗಿಯೂ ಆದನು.

॥ ಭಾವಾರ್ಥ ॥

ಅನಂತರ ನನ್ನ ಸ್ತುತಿಗೆ ಪಾತ್ರನಾದ ಆ ಇಂದ್ರನು ವೃತ್ರಾಸುರನ ಸಂಹಾರಕನಾಗಿ ತನ್ನ ಸ್ವಶಕ್ತಿಸಾಮರ್ಥ್ಯಗಳನ್ನು ತನ್ನ ಪ್ರಭುತ್ವದಲ್ಲಿ ಎಂದರೆ ರಾಜ್ಯದಲ್ಲಿ ಸ್ಥಾಪಿಸಿದನು. ಅನಂತರ ಆ ಇಂದ್ರನಿಗೆ ಯಾರೂ ಶತ್ರುಗಳೇ ಇಲ್ಲದಂತಾಯಿತು. ಯುದ್ಧದಲ್ಲಿಯೂ ಅವನನ್ನು ಎದುರಿಸಿ ಹಿಂಸಿಸುವವನೇ ಇಲ್ಲದಂತಾಯಿತು.

## English Translation

Then was my Indra the repeller; then did the smiter of Vritra put forth his might, he who has no existent enemies, the invincible.

॥ ಸಂಹಿತಾಪಾಠಃ ॥

ಶ್ರುತಂ ವೋ ವೃತ್ರಹಂತಮಂ ಪ್ರ ಶರ್ಧಂ ಚರ್ಷಣೀನಾಂ ।

ಆ ಶುಷೇ ರಾಧಸೇ ಮಹೇ ॥ ೧೬ ॥

॥ ಪದಪಾಠಃ ॥

ಶ್ರುತಂ । ವಃ । ವೃತ್ರಹನ್ಽತಮಂ । ಪ್ರ । ಶರ್ಧಂ । ಚರ್ಷಣೀನಾಂ ।

ಆ । ಶುಷೇ । ರಾಧಸೇ । ಮಹೇ ॥ ೧೬ ॥

॥ ಸಾಯಣಭಾಷ್ಯಂ ॥

**ಹೇ ಋತ್ವಿಗ್ಯಷ್ಟಾರಃ ಶ್ರುತಂ ಬಲವತ್ತಯಾ ಪ್ರಸಿದ್ಧಂ ಅತ ಏವ ವೃತ್ರಹಂತಮಮತಿಶಯೇನ ವೃತ್ರಹಂತಾರಂ ಶರ್ಧಂ ಬಲಭೂತಂ ವೇಗವಂತಂ ವಾ ಏತಾದೃಶಮಿಂದ್ರಂ ಚರ್ಷಣೀನಾಂ ಮನುಷ್ಯಾಣಾಂ ವೋ ಯುಷ್ಮಾಕಮಾಶುಷೇ ॥ ಆಶ್ನೋತೇರ್ಲೇಟ್ಯುತ್ತಮ ಇಟಿ ಸಿಪ್ । ವ್ಯತ್ಯಯೇನೋಪ್ರತ್ಯಯಃ । ಬಹುಲಂ ಛಂದಸೀತ್ಯಡಾಗಮಃ ॥ ತಮಿಂದ್ರಂ ಸ್ತುತಿಭಿಃ ಪ್ರೀಣಯಿತ್ವಾ ಯುಷ್ಮಭ್ಯಂ ಪ್ರಕರ್ಷೇಣಾಶ್ನವೈ । ಪ್ರಯಚ್ಛಾಮೀತ್ಯರ್ಥಃ । ಕಿಮರ್ಥಂ । ಮಹೇ ಮಹತೇ ರಾಧಸೇ ಧನಾಯ ಧನಂ ಯುಷ್ಮಭ್ಯಂ ದಾತುಂ ॥**

॥ ಪ್ರತಿಪದಾರ್ಥ ॥

(ಎಲೈ ಋತ್ವಿಗ್ಯಜಮಾನರೇ) **ಶ್ರುತಂ**— ಬಲಶಾಲಿಯೆಂದು ಪ್ರಸಿದ್ಧನೂ । **ವೃತ್ರಹಂತಮಂ**— ಅತಿಶಯವಾಗಿ ವೃತ್ರನನ್ನು ಸಂಹಾರಮಾಡಿದವನೂ । **ಶರ್ಧಂ**— ಅತ್ಯಂತ ಬಲಶಾಲಿಯೂ ಅಥವಾ ತ್ವರಿತಗಮನವುಳ್ಳವನೂ ಆದ ಇಂದ್ರನನ್ನು । **ಚರ್ಷಣೀನಾಂ**— ಮಾನವರಾದ । **ವಃ**— ನಿಮ್ಮ । **ಮಹೇ**— ಪ್ರಭೂತವಾದ । **ರಾಧಸೇ**— ಧನಪ್ರಾಪ್ತಿಗಾಗಿ । **ಆಶಿಷೇ**— ಪ್ರಾರ್ಥಿಸಿ ಕರೆಯುತ್ತೇನೆ

॥ ಭಾವಾರ್ಥ ॥

ಎಲೈ ಋತ್ವಿಗ್ಯಜಮಾನರೇ, ಬಲಶಾಲಿಯೆಂದು ಪ್ರಸಿದ್ಧನೂ, ವೃತ್ರನನ್ನು ಸಂಹಾರಮಾಡಿದವನೂ ಅತ್ಯಂತ ತ್ವರಿತಗಮನವುಳ್ಳವನೂ ಆದ ಇಂದ್ರನನ್ನು ಮಾನವರಾದ ನಿಮಗೆ ಬಹಳವಾದ ಧನವನ್ನು ಕೊಡುವುದಕ್ಕಾಗಿ ಪ್ರಾರ್ಥಿಸಿ ಕರೆಯುತ್ತೇನೆ.

## English Translation

(Priests), I bring to you men, for great wealth, that renowned and mighty one who utterly destroyed Vritra.

॥ ಸಂಹಿತಾಪಾಠಃ ॥

ಅಯಾ ಧಿಯಾ ಚ ಗವ್ಯಯಾ ಪುರುಣಾಮನ್ಪುರುಷ್ಟುತ ।
ಯತ್ಸೋಮೇಸೋಮ ಆಭವಃ ॥ ೧೭ ॥

॥ ಪದಪಾಠಃ ॥

ಅಯಾ । ಧಿಯಾ । ಚ । ಗವ್ಯಽಯಾ । ಪುರುಽನಾಮನ್ । ಪುರುಽಸ್ತುತ ।
ಯತ್ । ಸೋಮೇಽಸೋಮೇ । ಆ । ಅಭವಃ ॥ ೧೭ ॥

॥ ಸಾಯಣಭಾಷ್ಯಂ ॥

ಹೇ ಪುರುನಾಮನ್ ಬಹುವಿಧಶಕ್ರವೃತ್ರಹಾದಿನಾಮೋಪೇತ । ಯದ್ವಾ । ಬಹುಸ್ತುತಿಮನ್ । ನಾಮಯಂತಿ ಸ್ತುತ್ಯಂ ದೇವಂ ವಶಂ ನಯಂತೀತಿ ನಾಮ ಸ್ತೋತ್ರಂ । ಅತ ಏವ ಪುರುಷ್ಟುತ ಬಹುಭಿರಭಿಷ್ಟುತೇಂದ್ರ ಸೋಮೇ ಸೋಮೇಽಸ್ಮದೀಯೇಷು ಸೋಮೇಷು ತ್ವಂ ಯದಾಭವಃ ತೇಷಾಂ ಪಾನಾರ್ಥಂ ಸಮಂತಾದಭವಃ । ತದಾ ವಯಮಯಾನಯಾ । ಈದೃಶ್ಯಾ । ಗವ್ಯಯಾ ಗಾ ಆತ್ಮನ ಇಚ್ಛಂತ್ಯಾ ಧಿಯಾನಯಾ ಬುದ್ಧ್ಯಾ ಯುಕ್ತಾ ಭವೇಮ । ಸೋಮಂ ಪೀತವತಿ ತ್ವಯಿ ವಯಂ ಗವಾದಿಯುಕ್ತಾ ಭವೇಮೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಪುರುನಾಮನ್**—ಶಕ್ರ, ವೃತ್ರಹಾ ಎಂಬಿವೇ ಮೊದಲಾದ ಅನೇಕ ಹೆಸರುಗಳುಳ್ಳವನೂ ಅಥವಾ ಬಹುವಿಧ ಸ್ತುತಿಗಳಿಂದ ಸ್ತುತಿಸಲ್ಪಡುವವನೂ । **ಪುರುಷ್ಟುತ**—ಅನೇಕರಿಂದ ಪ್ರಶಂಸಿಸಲ್ಪಡುವವನೂ ಆದ ಎಲೈ ಇಂದ್ರನೇ । **ಸೋಮೇ ಸೋಮೇ**—ನಾವು ನೆರವೇರಿಸುವ ಪ್ರತಿ ಸೋಮಾಭಿಷವದಲ್ಲಿಯೂ । **ಆ ಅಭವಃ**—ನೀನು ಸೋಮ ಪಾನಾರ್ಥವಾಗಿ ಬರುವಾಗ (ನಾವು) । **ಅಯಾ**—ಈ । **ಗವ್ಯಯಾ**—ಗೋವುಗಳನ್ನು ಅಪೇಕ್ಷಿಸುವ । **ಧಿಯಾ**—ಬುದ್ಧಿಯಿಂದ ಯುಕ್ತರಾಗಿರುತ್ತೇವೆ.

॥ ಭಾವಾರ್ಥ ॥

ಶಕ್ರ ವೃತ್ರಹಾ ಮೊದಲಾದ ಅನೇಕ ಹೆಸರುಗಳಿಂದ ಪ್ರಸಿದ್ಧನೂ ಅನೇಕರಿಂದ ಸ್ತುತಿಸಲ್ಪಡುವವನೂ ಆದ ಎಲೈ ಇಂದ್ರನೇ, ನಾವು ಸೋಮವನ್ನು ಹಿಂಡುವ ಪ್ರತಿ ಸೋಮಯಾಗದಲ್ಲಿಯೂ ನೀನು ಸೋಮಪಾನಾರ್ಥವಾಗಿ ನಮ್ಮಲ್ಲಿಗೆ ಬರುವಾಗ ನಾವು ನಿನ್ನಿಂದ ಗೋವುಗಳನ್ನು ಪಡೆಯಬೇಕೆಂಬ ಬುದ್ಧಿಯುಳ್ಳವರಾಗಿರುತ್ತೇವೆ.

## English Translation

O you bearing many names and praised by many, when you are present at our various Soma-libations, may we be endowed with a cows-desiring mind.

॥ ಸಂಹಿತಾಪಾಠಃ ॥

ಬೋಧಿನ್ಮನಾ ಇದಸ್ತು ನೋ ವೃತ್ರಹಾ ಭೂರ್ಯಾಸುತಿಃ ।
ಶೃಣೋತು ಶಕ್ರ ಆಶಿಷಂ ॥ ೧೮ ॥

॥ ಪದಪಾಠಃ ॥

ಬೋಧಿತ್ಽಮನಾಃ । ಇತ್ । ಅಸ್ತು । ನಃ । ವೃತ್ರಽಹಾ । ಭೂರಿಽಆಸುತಿಃ ।
ಶೃಣೋತು । ಶಕ್ರಃ । ಆಽಶಿಷಂ ॥ ೧೮ ॥

॥ ಸಾಯಣಭಾಷ್ಯಂ ॥

ಅಯಂ ಪರೋಕ್ಷಕೃತಃ । ವೃತ್ರಹಾ ವೃತ್ರಹಂತಾ ಭೂರ್ಯಾಸುತಿಃ । ಬಹುಷು ದೇಶೇಷ್ವಿಂದ್ರಾರ್ಥಂ ಸೋಮ ಆಸೂಯತೇಽಭಿಷೂಯತ ಇತಿ ತಾದೃಶಃ ಯದ್ವಾ । ಬಹೂನಿ ಸೋಮಾದಿಹವೀಂಷೀಂದ್ರಾರ್ಥಮಾಸೂಯಂತೇ ಹೂಯಂತ ಇತಿ ತಾದೃಶಃ । ಬೋಧಿನ್ಮನಾಃ ॥ ಬುಧ ಅವಗಮನೇ। ಔಣಾದಿಕ ಇತಿಪ್ರತ್ಯಯಃ ॥ ಯಸ್ಯ ಮನಃ ಸ್ತೋತ್ರ್ಯಾಣಾಮಭಿಮತಂ ಬುಧ್ಯತೇ ಜಾನಾತೀತಿ ತಥೋಕ್ತಃ । ಇದವಧಾರಣೇ । ನೋಽಸ್ಮಾಕಂ ಬೋಧಿನ್ಮನಾ ಏವಾಸ್ತು । ಸರ್ವದಾಸ್ಮದಭೀಪ್ಸಿತಾನಿ ಜಾನಾತ್ವಿತ್ಯರ್ಥಃ । ಯದ್ವಾ । ಏತಾದೃಶ ಇಂದ್ರೋ ನೋಽಸ್ಮಾಕಂ ಯಜ್ಞೇ ಭವತ್ವಿತಿ । ತತಃ ಶಕ್ರಃ ಸಂಗ್ರಾಮೇ ಶತ್ರುಹನನಸಮರ್ಥ ಇಂದ್ರ ಆಶಿಷಮಸ್ಮದೀಯಾಂ ಸ್ತುತಿಮಾಶಾಸನಂ ವಾ ಶೃಣೋತು ॥

॥ ಪ್ರತಿಪದಾರ್ಥ ॥

**ವೃತ್ರಹಾ**—ವೃತ್ರಾಸುರಹಂತಕನೂ । **ಭೂರ್ಯಾಸುತಿಃ**—ಅನೇಕರ ಅಥವಾ ಅನೇಕ ಪ್ರದೇಶಗಳಲ್ಲಿ ಸೋಮಾಭಿಷವಕ್ಕೆ ಪಾತ್ರನಾದವನೂ । **ಬೋಧಿನ್ಮನಃ**—ಸ್ತೋತೃಜನರ ಮನೋಭಿಪ್ರಾಯವನ್ನು ತಿಳಿಯುವವನೂ ಆದ ಇಂದ್ರನು । **ನಃ**—ನಮ್ಮ ಯಜ್ಞದಲ್ಲಿ । **ಅಸ್ತು ಇತ್**—ಯಾವಾಗಲೂ ಇರಲಿ । **ಶಕ್ರಃ**—ಸರ್ವಸಮರ್ಥನಾದ ಆ ಇಂದ್ರನು । **ಆಶಿಷಂ**—ನಮ್ಮ ಪ್ರಾರ್ಥನೆಯನ್ನು । **ಶೃಣೋತು**—ಕೇಳಲಿ.

॥ ಭಾವಾರ್ಥ ॥

ವೃತ್ರಾಸುರಹಂತಕನೂ, ಅನೇಕ ಪ್ರದೇಶಗಳಲ್ಲಿ ಅಥವಾ ಅನೇಕರ ಸೋಮಾಭಿಷವಕ್ಕೆ ಪಾತ್ರನಾದವನೂ ಆದ ಇಂದ್ರನು ಸ್ತೋತ್ರಮಾಡುತ್ತಿರುವ ನಮ್ಮ ಮನೋಗತವನ್ನು ತಿಳಿದವನಾಗಿ ನಮ್ಮ ಯಜ್ಞದಲ್ಲಿ ಬಂದಿರಲಿ. ಮತ್ತು

ಯುದ್ಧದಲ್ಲಿ ಶತ್ರುಗಳನ್ನು ಸಂಹರಿಸಲು ಸಮರ್ಥನಾದ ಆ ಇಂದ್ರನು ನಮ್ಮ ಅಭೀಷ್ಟವನ್ನು ಸೂಚಿಸುವ ಪ್ರಾರ್ಥನೆಯನ್ನು ಆದರದಿಂದ ಕೇಳಲಿ.

English Translation

May the slayer of Vritra, to whom many libations are offered, know our desires,—may Sakra hear our praises.

॥ ಸಂಹಿತಾಪಾಠಃ ॥

ಕಯಾ ತ್ವಂ ನ ಊತ್ಯಾಭಿ ಪ್ರ ಮಂದಸೇ ವೃಷನ್ ।

ಕಯಾ ಸ್ತೋತೃಭ್ಯ ಆ ಭರ ॥ ೧೯ ॥

॥ ಪದಪಾಠಃ ॥

ಕಯಾ । ತ್ವಂ । ನಃ । ಊತ್ಯಾ । ಅಭಿ । ಪ್ರ । ಮಂದಸೇ । ವೃಷನ್ ।

ಕಯಾ । ಸ್ತೋತೃಽಭ್ಯಃ । ಆ । ಭರ ॥ ೧೯ ॥

॥ ಸಾಯಣಭಾಷ್ಯಂ ॥

ಜ್ಯೋತಿಷ್ಟೋಮೇ ಚಾತುರ್ವಿಂಶಿಕೇಽಹನಿ ಮಾಧ್ಯಂದಿನೇ ಮೈತ್ರಾವರುಣಸ್ಯ ಕಯಾ ತ್ವಂ ನ ಊತ್ಯೇತಿ ತೃಚೋಽನುರೂಪಃ । ಸೂತ್ರಿತಂ ಚ । ಹೋತ್ರಕಾಣಾಂ ಕಯಾ ನಶ್ಚಿತ್ರ ಆ ಭುವತ್ ಕಯಾ ತ್ವಂ ನ ಊತ್ಯಾ ಆ. ೭.೪ । ಇತಿ ॥

ಹೇ ವೃಷನ್ ಕಾಮಾನಾಂ ವರ್ಷಿತರಿಂದ್ರ ಕಯಾ ಕೇನೋತ್ಯಾ ॥ ಅವ ರಕ್ಷಣಾದಿಸು ಗತ್ಯರ್ಥೇ । ಊತಿಯೂತ್ಯಾದಿನಾ ನಿಪಾತಿತಃ ॥ ಕೇನಾಭಿಗಮನೇನ ನೋಽಸ್ಮಾನಭ್ಯಭಿತಃ ಪ್ರ ಮಂದಸೇ । ಪ್ರಕರ್ಷೇಣ ಮಾದಯಸಿ । ಅಸ್ಮದೀಯಂ ಯಜ್ಞಂ ಪ್ರತಿ ಸೋಮಪಾನಾರ್ಥಮಾಗಮನೇನ ವಾ ತ್ವದೀಯಸ್ತುತಿಶ್ರವಣಾರ್ಥಮಾಗಮನೇನ ವಾ ಕದಾಸ್ಮಾನ್ ಪ್ರಮಾದಯಸೀತಿ । ಕಿಂಚ ಕಯಾ ಕೇನಾಭಿಗಮನೇನ ಸ್ತೋತೃಭ್ಯೋಽಸ್ಮಭ್ಯಂ ಧನಮಾ ಭರಾಬಿಭರ್ಷೀತೀಂದ್ರಂ ಸ್ತೋತಾ ಪೃಚ್ಛತಿ ॥

॥ ಪ್ರತಿಪದಾರ್ಥ ॥

**ವೃಷನ್**—ಅಭಿಮತವರ್ಷಕನಾದ ಎಲೈ ಇಂದ್ರನೇ । **ತ್ವಂ**—ನೀನು । **ಕಯಾ ಊತ್ಯಾ**—ಯಾವ ವಿಧವಾದ ನಿನ್ನ ರಕ್ಷಣೆಯಿಂದ । **ನಃ**—ನಮ್ಮನ್ನು । **ಅಭಿ**—ಸರ್ವವಿಧದಲ್ಲಿಯೂ । **ಪ್ರ ಮಂದಸೇ**—ಸಂತೋಷಪಡಿಸುತ್ತೀಯೆ ? । **ಕಯಾ**—ಯಾವ ನಿನ್ನ ಆಗಮನದಿಂದ । **ಸ್ತೋತೃಭ್ಯಃ**—ಸ್ತೋತ್ರಮಾಡುತ್ತಿರುವ ನಮಗೆ । **ಆ ಭರ**—ಧನವನ್ನು ತಂದು ಒದಗಿಸುತ್ತೀಯೆ ?

। ಭಾವಾರ್ಥ ।

ಕಾಮುವರ್ಷಕನಾದ ಎಲೈ ಇಂದ್ರನೇ, ನೀನು ಯಾವ ವಿಧವಾದ ನಿನ್ನ ರಕ್ಷಣೆ ಅಥವಾ ಗಮನದಿಂದ ನಮ್ಮನ್ನು ವಿಶೇಷವಾಗಿ ಸಂತೋಷಪಡಿಸುತ್ತಿ ? ಯಾವ ನಿನ್ನ ಆಗಮನದಿಂದ ಸ್ತೋತ್ರಮಾಡುತ್ತಿರುವ ನಮಗೆ ಧನವನ್ನು ತಂದು ಒದಗಿಸುತ್ತಿ ?

English Translation

Showerer, (of blessings), with what coming of yours do you gladden us, with what coming you bring (wealth) to your worshippers?

|| ವಿಶೇಷವಿಷಯಗಳು ||

ಜ್ಯೋತಿಷ್ಟೋಮಯಾಗದ ಚಾತುರ್ವಿಂಶಿಕವೆಂಬ ದಿನದ ಮಾಧ್ಯಂದಿನ ಸವನಕಾಲದಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ **ಕಯಾ ತ್ವಂ ನ ಊತ್ಯಾ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ಅನುರೂಪತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಹೋತ್ರಕಾಣಾಂ ಕಯಾ ನಶ್ಚಿತ್ರ ಆ ಭುವತ್ ಕಯಾ ತ್ವಂ ನ ಊತ್ಯಾ** ಎಂಬ ಸೂತ್ರದಿಂದ (ಆ. ೭-೪) ವಿವೃತವಾಗಿರುವುದು

॥ ಸಂಹಿತಾಪಾಠಃ ॥

ಕಸ್ಯ ವೃಷಾ ಸುತೇ ಸಚಾ ನಿಯುತ್ವಾನ್ವೃಷಭೋ ರಣತ್ ।
ವೃತ್ರಹಾ ಸೋಮಪೀತಯೇ । ೨೦ ॥

॥ ಪದಪಾಠಃ ॥

ಕಸ್ಯ । ವೃಷಾ । ಸುತೇ । ಸಚಾ । ನಿಯುತ್ವಾನ್ । ವೃಷಭಃ । ರಣತ್ ।
ವೃತ್ರಽಹಾ । ಸೋಮಽಪೀತಯೇ ॥ ೨೦ ॥

॥ ಸಾಯಣಭಾಷ್ಯಂ ॥

ವೃಷೇಂದ್ರಃ ಕಸ್ಯ ಯಜಮಾನಸ್ಯ ಸಚಾ ಸುತ ಋಗ್ಭಿಃ ಸಹಾಭಿಷುತೇ ಸೋಮೇ । ಅನೇನ ತದ್ವಾನ್ಯಜ್ಞೋ ಲಕ್ಷ್ಯತೇ । ಕಸ್ಯ ಯಜ್ಞೇ ಸೋಮಪೀತಯೇ ಸೋಮಪಾನಾಯ ತದರ್ಥಂ ರಣತ್ । ರಮತೇ । ಕೀದೃಶಃ । ನಿಯುತ್ವಾನ್ । ನಿತರಾಂ ಯುವಂತಿ ಮಿಶ್ರಯಂತಿ ಸ್ವಬಲೇನ ಶತ್ರೂನಿತಿ ನಿಯುತೋ ಮರುತಃ । ತದ್ವಾನ್ । ಯದ್ವಾ । ನಿಯುತ ಇತಿ ವಾಯೋರ್ವಾಹನಾಶ್ವಾಃ । ಸ ವಾಯುಃ ಕದಾಚಿತ್ಸಂಗ್ರಾಮ ಇಂದ್ರಾಯ ಸ್ವಾಶ್ವಾನದಾತ್ । ತದ್ವಾನ್ । ವೃಷಭೋ ಧನಾನಾಮಪಾಂ ವಾ ವರ್ಷಕೋ ವೃತ್ರಹಾ ವೃತ್ರಸ್ಯ ಹಂತೇಂದ್ರಃ ಕಸ್ಯ ಯಜ್ಞೇ ರಮತೇ । ಇದಾನೀಂ ನೋಽಸ್ಮದೀಯಂ ಯಾಗಂ ಪ್ರತ್ಯಾಗಚ್ಛತು । ಯದ್ವಾ । ಕಸ್ಯಾಧ್ವರೇ ರಮತೇ । ನ ಕುತ್ರಾಪಿ । ಕಿಂತ್ವಸ್ಮದ್ಯಜ್ಞ ಏವ ಸೋಮಪಾನಾರ್ಥಂ ಸಂಕ್ರೀಡತೇ ॥

॥ ಪ್ರತಿಪದಾರ್ಥ ॥

**ನಿಯುತ್ವಾನ್**—ತನ್ನ ಬಲದಿಂದ ಶತ್ರುಗಳೊಡನೆ ಯುದ್ಧದಲ್ಲಿ ಹೋರಾಡುವವನೂ ಅಥವಾ ನಿಯುತ್ ಎಂಬ ವಾಯುವಿನ ಅಶ್ವದಿಂದ ಸಹಿತನಾದವನೂ। **ವೃಷಭಃ**—ಧನಗಳನ್ನು ಅಥವಾ ಉದಕಗಳನ್ನು ಸುರಿಸುವವನೂ। **ವೃತ್ರಹಾ**—ವೃತ್ರಾಸುರಹಂತಕನೂ। **ವೃಷಾ**—ಕಾಮವರ್ಷಕನೂ ಆದ ಇಂದ್ರನು। **ಕಸ್ಯ**-ಯಾವ ಯಜಮಾನನ। **ಸುತೇ ಸಚಾ**—ಋತ್ವಿಗ್ಗನರಿಂದ ಸಹಿತವಾದ ಸೋಮಾಭಿಷವದಲ್ಲಿ ಎಂದರೆ ಯಾವ ಯಜಮಾನನ ಯಜ್ಞದಲ್ಲಿ। **ಸೋಮಪೀತಯೇ**—ಸೋಮಪಾನಾರ್ಥವಾಗಿ। **ರಣತ್**—ಸಂತೋಷಪಡುತ್ತಿರುವನು?

॥ ಭಾವಾರ್ಥ ॥

ಯುದ್ಧದಲ್ಲಿ ಶತ್ರುವಿನೊಡನೆ ಹೋರಾಡುವವನೂ ಅಥವಾ ವಾಯುದೇವನ ಅಶ್ವವುಳ್ಳವನೂ ಧನಾದಿಗಳನ್ನು ಸ್ತೋತೃಜನರಿಗೆ ಒದಗಿಸಿಕೊಡುವವನೂ, ವೃತ್ರಾಸುರಹಂತಕನೂ ಕಾಮವರ್ಷಕನೂ ಆದ ಇಂದ್ರನು ಋತ್ವಿಗ್ಗನರಿಂದ ಸಹಿತವಾಗಿ ಸೋಮಾಭಿಷವಕರ್ಮವನ್ನು ನೆರವೇರಿಸುತ್ತಿರುವ ಯಾವ ಯಜಮಾನನ ಯಜ್ಞದಲ್ಲಿ ಸೋಮಪಾನದಿಂದ ಸಂತೋಷಪಡುತ್ತಿರುವನು?

## English Translation

At whose hymn-accompanied libations does the showerer, the lord of the Niyuts, the slayer of Vritra, rejoice to drink the Soma?

॥ ಸಂಹಿತಾಪಾಠಃ ॥

ಅಭೀ ಷು ಣಸ್ತ್ವಂ ರಯಿಂ ಮಂದಸಾನಃ ಸಹಸ್ರಿಣಂ ।
ಪ್ರಯಂತಾ ಬೋಧಿ ದಾಶುಷೇ ॥ ೨೧ ॥

॥ ಪದಪಾಠಃ ॥

ಅಭಿ । ಸು । ನಃ । ತ್ವಂ । ರಯಿಂ । ಮಂದಸಾನಃ । ಸಹಸ್ರಿಣಂ ।
ಪ್ರऽಯಂತಾ । ಬೋಧಿ । ದಾಶುಷೇ ॥ ೨೧ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ತ್ವಂ ಮಂದಸಾನೋಽಸ್ಮಾಭಿರ್ದತ್ತೇನ ಸೋಮೇನ ಮೋದಮಾನಃ ಸನ್ ಸಹಸ್ರಿಣಂ ಸಹಸ್ರಸಂಖ್ಯಾಕಂ ಧನಂ ನೋಽಸ್ಮಭ್ಯಂ ಸು ಸುಷ್ಠ್ವಭ್ಯಾಭರ । ತದೇವಾಹ । ತ್ವಂ ದಾಶುಷೇ ಹವಿರ್ದತ್ತವತೇ ಯಜಮಾನಾಯ ಪ್ರಯಂತಾ ಧನಾದೇಃ ಪ್ರದಾತಾ ಕರ್ಮಣೋ ನಿಯಂತಾ ವಾ ಭವಾನೀತಿ ಬೋಧಿ । ಬುಧ್ಯಸ್ವ ॥ ಬುಧ ಅವಗಮನೇ । ಭೌವಾದಿಕಃ । ಲೋಟಿ ಛಾಂದಸೋ ವಿಕರಣಸ್ಯ ಲುಕ್ । ಹೇರ್ಧಿಃ । ಧಿತ್ವೇ ಧಕಾರಲೋಪಶ್ಛಾಂದಸಃ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತ್ವಂ**—ನೀನು । **ಮಂದಸಾನಃ**—ನಮ್ಮಿಂದ ಅರ್ಪಿತವಾದ ಸೋಮಪಾನದಿಂದ ಸಂತೋಷಗೊಂಡು । **ಸಹಸ್ರಿಣಂ**—ಸಹಸ್ರಸಂಖ್ಯಾಕವಾದ ಅಥವಾ ಅಪರಿಮಿತವಾದ । **ರಯಿಂ**—ಧನವನ್ನು । **ನಃ**—ನಮಗೆ । **ಸು ಅಭಿ**—ವಿಶೇಷವಾಗಿ ತಂದೊದಗಿಸು । **ದಾಶುಷೇ**—ಹವಿಸ್ಸನ್ನರ್ಪಿಸುವ ಯಜಮಾನನಿಗೆ । **ಪ್ರಯಂತಾ**—ಧನಾದಿಗಳನ್ನು ನೀನು ಕೊಡಬೇಕಾಗಿರುವುದೆಂದು । **ಬೋಧಿ**—ತಿಳಿ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ನಮ್ಮಿಂದ ಅರ್ಪಿತವಾಗುವ ಸೋಮಪಾನದಿಂದ ತೃಪ್ತನಾಗಿ ನನಗೆ ಸಹಸ್ರ ಸಂಖ್ಯಾಕವಾದ ಎಂದರೆ ಅಪರಿಮಿತವಾದ ಧನವನ್ನು ನನಗೆ ತಂದೊದಗಿಸು. ಹವಿಸ್ಸನ್ನರ್ಪಿಸುವ ಯಜಮಾನನಿಗೆ ನೀನೇ ಧನಾದಿಗಳನ್ನು ಕೊಡುವವನೆಂಬ ವಿಷಯವನ್ನು ತಿಳಿ.

English Translation

Rejoicing (in our oblations), bring us wealth a thousandfold; remember that you are the giver of your votary

॥ ಸಂಹಿತಾಪಾಠಃ ॥

ಪತ್ನೀವಂತಃ ಸುತಾ ಇಮ ಉಶಂತೋ ಯಂತಿ ವೀತಯೇ ।
ಅಪಾಂ ಜಗ್ಮಿರ್ನಿಚುಂಪುಣಃ ॥ ೨೨ ॥

॥ ಪದಪಾಠಃ ॥

ಪತ್ನೀಽವಂತಃ । ಸುತಾಃ । ಇಮೇ । ಉಶಂತಃ । ಯಂತಿ । ವೀತಯೇ ।
ಅಪಾಂ । ಜಗ್ಮಿಃ । ನಿಽಚುಂಪುಣಃ ॥ ೨೨ ॥

॥ ಸಾಯಣಭಾಷ್ಯಂ ॥

ಪತ್ನೀವಂತಃ । ಸೋಮಸ್ಯೈಕಾರ್ಥೇ ಪತ್ನ್ಯಃ ಪಾಲಯಿತ್ರ್ಯಃ ಆಪೋ ವಸತೀವರ್ಯ ಏಕಧನಾಶ್ಚ । ತದ್ವಂತಃ ಸುತಾ । ಅಸ್ಮಾಭಿರಭಿಷುತಾ ಇಮೇ ಗೃಹಸ್ಥಾಪಿತಮಸಸ್ಥಾಪಿತ ಸೋಮಾ ಉಶಂತ ಅನ್ನಸ್ಥಾನಂ ಕಾಮಯಮಾನಾಃ ಸಂತೋ ಯಂತಿ । ಇಂದ್ರಂ ಗಚ್ಛಂತಿ । ... ಮರ್ಥಂ । ವೀತಯ ಅನ್ನಸ್ಯ ಪಾನಾಯ । ಕಿಂಚ ನಿಚುಂಪುಣಃ । ನಿಚಾಂತತೃಪ್ಣಃ । ನಿ. ೫ ೧೭ । ಇತಿ ಯಾಸ್ಕಃ । ... ನಿಚಾಂತೋ ನಕ್ತಿತಃ ಪೃಣಃ ಪ್ರೀಣಯಿತಾ । ಯದ್ವಾ । ನೀಚಮನೇನ ಪ್ರೀಣಾತೀತಿ ... ತೀತಿ ನಿಚುಂಪುಣಃ । ಅಭಿಷುತಸ್ಯ ಸೋಮಸ್ಯಾಪ್ಸು ಪ್ರಕ್ಷೇಪಾತ್ಸಂಭವಾತ್ತಸ್ಮಾದಾರ್ಧ್ಯಪೃಷ್ಠೇ ಸರಸಃ

ಸೋಮೋ ಗೃಹ್ಯತೇ । ತಾದೃಶಃ ಸೋಮೋಽಪಾಂ ಜಗ್ಮಿಃ ॥ ಅಪಾಮಿತಿ ನ ಲೋಕಾವ್ಯಯೇತಿ ಷಷ್ಠೀ-ಪ್ರತಿಷೇಧಾಭಾವಶ್ಛಾಂದಸಃ ॥ ಅಪ ಇತ್ಯರ್ಥಃ । ಯದ್ವಾ । ಅಪಾಂ ಮಧ್ಯಂ ವಾಪಃ ಪ್ರತಿ ವಾ ಜಗ್ಮಿರ್ಗ-ಮನಶೀಲಃ ಸಾಧುಗಂತಾ ವಾ । ಸೋಮಶ್ಚೇಂದ್ರಂ ಗಚ್ಛತಿ । ಸ ಹ್ಯವಭೃಥಕಾಲ ಋಜೀಷಮಪ್ಸು ಪ್ರಾಸ್ಯಂತೀತಿ ವಚನಾದಪ್ಸ್ವೃಜೀಷರೂಪಃ ಪ್ರಕ್ಷಿಪ್ಯತೇ । ತದಾಹಾಪಾಂ ಜಗ್ಮಿರಿತಿ ।

॥ ಪ್ರತಿಪದಾರ್ಥ ॥

**ಪತ್ನೀವಂತಃ**—ವಸತೀವರೀ ಮತ್ತು ಏಕಧನಾ ಎಂಬ ಪಾತ್ರೆಗಳಲ್ಲಿರುವ ಜಲದಿಂದ ಮಿಶ್ರಿತವಾದ । **ಸುತಾಃ**—ಈಗತಾನೆ ಹಿಂಡಲ್ಪಟ್ಟಿರುವ । **ಇಮೇ**—ಗ್ರಹ ಮತ್ತು ಚಮಸಪಾತ್ರೆಗಳಲ್ಲಿ ತುಂಬಿರುವ ಈ ಸೋಮ ರಸಗಳು । **ಉಶಂತ**—ಇಂದ್ರನಿಂದ ಪಾನವನ್ನು ಅಪೇಕ್ಷಿಸುತ್ತಾ । **ವೀತಯೇ**—ಪಾನಾರ್ಥವಾಗಿ । **ಯಂತಿ**—ಇಂದ್ರನನ್ನು ಸೇರುತ್ತವೆ । **ನಿಚುಂಪುಣಃ**—ಭಕ್ಷಣದಿಂದ ಎಂದರೆ ಪಾನದಿಂದ ತೃಪ್ತಿಯನ್ನುಂಟುಮಾಡುವುದೂ । **ಅಪಾಂ ಜಗ್ಮಿಃ**—ನೀರಿನಲ್ಲಿ ನೆನೆಯಿಸಿರುವ ಋಜೀಷದಿಂದ ಹಿಂಡಿ ತೆಗೆದಿರುವುದೂ ಆದ ಸೋಮರಸವು ಇಂದ್ರನ ಪಾನಾರ್ಥವಾಗಿ ಅವನಲ್ಲಿಗೇ ಹೋಗಿ ಸೇರುತ್ತದೆ.

॥ ಭಾವಾರ್ಥ ॥

ವಸತೀವರೀ ಮತ್ತು ಏಕಧನಾ ಎಂಬ ಕಲಶಸ್ಥ ಜಲಮಿಶ್ರಿತವಾದುದೂ ಈಗತಾನೆ ಹಿಂಡಲ್ಪಟ್ಟಿರುವುದೂ ಆದ ಈ ಸೋಮರಸಗಳು ಇಂದ್ರನ ಪಾನಾರ್ಥವಾಗಿಯೇ ಸಿದ್ಧವಾಗಿ ಅವನನ್ನೇ ಸೇರುತ್ತವೆ. ಎಂದರೆ ಇಂದ್ರನು ಆ ಸೋಮವನ್ನೇ ಪಾನಮಾಡುತ್ತಾನೆ ಮತ್ತು ಪಾನಮಾಡುವುದರಿಂದ ತೃಪ್ತಿಯನ್ನುಂಟುಮಾಡುವುದೂ ನೀರಿನಲ್ಲಿ ನೆನೆಯಿಸಿದ ಋಜೀಷ ಎಂಬ ಹಿಂಡಿದ ಸೋಮಲತೆಗಳಿಂದ ಮತ್ತೆ ಹಿಂಡಿ ತೆಗೆದ ಸೋಮರಸವೂ ಸಹ ಇಂದ್ರನಿಗೇ ಅರ್ಪಿತವಾಗುತ್ತದೆ

## English Translation

These Soma-libations with their wives proceed (to Indra) longing to be drunk ; the stale Soma, pleasing to the taste, goes to the waters

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿರುವ **ನಿಚುಂಪುಣಃ** ಎಂಬ ಶಬ್ದಕ್ಕೆ ಎರಡು ಮೂರು ವಿಧವಾದ ಅರ್ಥಗಳನ್ನು ವಿವರಿಸಿ ಯಾಸ್ಕರು ನಿರ್ವಚನವನ್ನು ಹೇಳಿದಾರೆ—

> ನಿಚುಂಪುಣಃ । ನಿಚುಂಪುಣಃ ಸೋಮೋ ನಿಚಾಂತಪೃಣೋ ನಿಚಮನೇನ ಪ್ರೀಣಾತಿ । ಪತ್ನೀವಂತಃ ಸುತಾ ಇಮ ಉಶಂತೋ ಯಂತಿ ವೀತಯೇ । ಅಪಾಂ ಜಗ್ಮಿರ್ನಿಚುಂಪುಣಃ । ಪತ್ನೀವಂತಃ ಸುತಾ ಇಮೇಽದ್ಭಿಃ ಸೋಮಾಃ ಕಾಮಯಮಾನಾ ಯಂತಿ ವೀತಯೇ ಪಾನಾಯಾಪಾಂ ಗಂತಾ ನಿಚುಂಪುಣಃ ॥

(ನಿ. ೫-೧೮)

ನಿಚುಂಪುಣ ಎಂದರೆ ಸೋಮವು, ಮದಕಾರಕವಾದ ಆಹಾರವು ಏಕೆಂದರೆ ಇದನ್ನು (ಸೋಮವನ್ನು) ನೀರಿ ನೊಡನೆ ಬೆರಸಿ ಪಾನಮಾಡಿದಲ್ಲ ಮದ ಅಥವಾ ಹರ್ಷವುಂಟಾಗುವುದು. ಆದ್ದರಿಂದ ಸೋಮಕ್ಕೆ ನಿಚುಂಪುಣ

ವೆಂದು ಹೆಸರು ಹಿಂಡಲ್ಪಟ್ಟ ಈ ಸೋಮರಸಗಳು ತಮ್ಮ ಸಹಾಯಕವಾದ ನೀರಿನೊಡನೆ ಮಿಶ್ರಿತವಾಗಿ ಪಾನಾರ್ಥವಾಗಿ ಪಾನಮಾಡುವವರ ಬಳಿಗೆ ಆದರದಿಂದ ಸಮೀಪಿಸಿ ಹೋಗುವವು. ಎಂದರೆ ಸೋಮವನ್ನು ಪಾನಮಾಡುವವರು ಉದಕ (ವಸತೀವರೀ ಎಂಬ ಕಲಶದ ನೀರಿನಿಂದ) ಮಿಶ್ರಿತವಾದ ಸೋಮರಸವನ್ನು ಆದರದಿಂದ ಪಾನಮಾಡುವರು. ಇಲ್ಲಿ **ಪತ್ನೀವಂತಃ** ಎಂಬ ಶಬ್ದಕ್ಕೆ **ಪತ್ನೀಭಿಃ ಅದ್ಭಿಃ ತದ್ವಂತಃ** ನೀರಿನಿಂದ ಮಿಶ್ರವಾದ ಎಂದರ್ಥವು. ಆದ್ದರಿಂದ ನೀರಿನಿಂದ ಮಿಶ್ರವಾದ ಸೋಮರಸಕ್ಕೆ ನಿಚುಂಪುಣವೆಂದು ಹೆಸರು.

**ಸಮುದ್ರೋಽಪಿ ನಿಚುಂಪುಣ ಉಚ್ಯತೇ । ನಿಚಮನೇನ ಪೂರ್ಯತೇ ॥**

ನಿಚುಂಪುಣವೆಂದರೆ ಸಮುದ್ರವೆಂದೂ ಅರ್ಥವಾಗುವುದು ಏಕೆಂದರೆ ಉದಕದಿಂದ ತುಂಬಲ್ಪಟ್ಟಿರುವುದರಿಂದ ಸಮುದ್ರವನ್ನೂ ನಿಚುಂಪುಣವೆಂದು ಕರೆಯುತ್ತಾರೆ.

**ಅವಭೃಥೋಽಪಿ ನಿಚುಂಪುಣ ಉಚ್ಯತೇ ನೀಚೈರಸ್ಮಿನ್ ಕ್ವಣಂತಿ ನೀಚೈರ್ದಧತೀತಿ ವಾ ।**
**ಅವಭೃಥ ನಿಚುಂಪುಣ ಇತ್ಯಪಿ ನಿಗಮೋ ಭವತಿ । ನಿಚುಂಪುಣ ನಿಚುಂಕುಣೇತಿ ॥**

(ನಿ ೫-೧೮)

ಯಜ್ಞದ ಕೊನೆಯ ದಿವಸದ ಕರ್ಮವಾದ ಅವಭೃಥಕ್ಕೂ ನಿಚುಂಪುಣವೆಂದು ಹೆಸರು ಏಕೆಂದರೆ ಆದಿವಸದ ಕರ್ಮದಲ್ಲಿ ಮಂತ್ರಾದಿಗಳನ್ನು **ನೀಚೈರಸ್ಮಿನ್ ಕ್ವಣಂತಿ** ಬಹಳ ಮೆತ್ತಗೆ, ಮೆಲ್ಲಿನೆ ಧ್ವನಿಯಿಂದ ಪಠಿಸುವರು ಅಥವಾ ಆದಿವಸದಲ್ಲಿ **ನೀಚೈರ್ದಧತೀತಿ ವಾ** ಎಂದರೆ ಯಜ್ಞಪಾತ್ರೆಗಳನ್ನು ನೀಚರಾದವರು ಎಂದರೆ ಸೇವಕರು, ಪರಿಚಾರಕರೇ ಮೊದಲಾದವರು ಕೊಂಡೊಯ್ಯುವರು ಆದ್ದರಿಂದ ಅವಭೃಥಕ್ಕೆ ನಿಚುಂಪುಣವೆಂದು ಹೆಸರು ಕೆಲವುಕಡೆ ನಿಚುಂಕುಣವೆಂಬ ಶಬ್ದಪ್ರಯೋಗವಿರುವುದು. ಈ ಶಬ್ದಕ್ಕೂ ಇದೇ ಅರ್ಥವು ಎಂದರೆ ನಿಚುಂಪುಣ ಮತ್ತು ನಿಚುಂಕುಣ ಎಂಬ ಈ ಎರಡು ಶಬ್ದಗಳೂ ಸಮಾನಾರ್ಥವನ್ನು ಸೂಚಿಸುವ ಪರ್ಯಾಯಪದಗಳು. ಅವಭೃಥ ನಿಚುಂಪುಣ ನಿಚೇರುರಸಿ ನಿಚಂಕುಣ ಎಂಬುದು ಈ ವಿಷಯದಲ್ಲಿ ಶ್ರುತಿವಾಕ್ಯದ ಉದಾಹರಣೆಯು.

॥ ಸಂಹಿತಾಪಾಠಃ ॥

**ಇಷ್ಟಾ ಹೋತ್ರಾ ಅಸೃಕ್ಷತೇಂದ್ರಂ ವೃಧಾಸೋ ಅಧ್ವರೇ ।**
**ಅಚ್ಛಾವಭೃಥಮೋಜಸಾ ॥ ೨೩ ॥**

॥ ಪದಪಾಠಃ ॥

**ಇಷ್ಟಾಃ । ಹೋತ್ರಾಃ । ಅಸೃಕ್ಷತ । ಇಂದ್ರಂ । ವೃಧಾಸಃ । ಅಧ್ವರೇ ।**
**ಅಚ್ಛ । ಅವಽಭೃಥಂ । ಓಜಸಾ ॥ ೨೩ ॥**

ಸಾಯಣಭಾಷ್ಯಂ ॥

ಅಪಾಂ ಜಗ್ಮಿರಿತಿ ಸಾಮರ್ಥ್ಯಾದವಭೃಥದಿನ ಏವ ರ ವಿ ಜಃ ಕುರ್ವಂತೀತ್ಯುಕ್ತಂ। ತತ್ರ ಸಂಗಾದಾಹ । ಅಧ್ವರೇಽಸ್ಮದೀಯೇ ಯಜ್ಞೇ ವೃಧಾಸೋ ಹವಿರ್ಭಿರಿಂದ್ರಂ ವರ್ಧಯಂತ ಇಷ್ಟಾ ಇಷ್ಟವಂತೋ ಯಾಗಂ ಕೃತವಂತಃ ಸಪ್ತಸಂಖ್ಯಾಕಾ ಹೋತ್ರಾ ಹೋತ್ರಕಾ ಅವಭೃಥಮಂತ್ಯದಿವಸಮಚ್ಛಾ ಪ್ರತ್ಯೋಜಸಾ ಸ್ವತೇಜಸಾ ಸಹಿತಾ ಇಂದ್ರಮಸೃಕ್ಷತ । ವಿಸೃಜಂತಿ । ಯಾವದವಭೃಥಂ ಸಪ್ತಹೋತ್ರಕಾ ಯಜಂತೀತಿ ॥

॥ ಪ್ರತಿಪದಾರ್ಥ ॥

**ಅಧ್ವರೇ**—ನಾವು ಮಾಡುತ್ತಿರುವ ಯಜ್ಞದಲ್ಲಿ । **ವೃಧಾಸಃ**—ಹವಿರಾದಿಗಳಿಂದ ಇಂದ್ರನನ್ನು ವೃದಿಪಡಿಸುವವರೂ । **ಇಷ್ಟಾಃ**—ಯಜ್ಞಕರ್ಮವನ್ನು ನೆರವೇರಿಸುತ್ತಿರುವವರೂ ಆದ । **ಹೋತ್ರಾಃ**—ಹೋತೃವರ್ಗದ ಏಳು ಜನ ಋತ್ವಿಕ್ಕುಗಳು । **ಅವಭೃಥಂ**—ಯಜ್ಞದ ಕೊನೆಯದಿವಸದಲ್ಲಿ ಮಾಡಬೇಕಾದ ಅವಭೃಥಕರ್ಮವನ್ನು । **ಅಚ್ಛ**—ಅಭಿಲಕ್ಷಿಸಿ । **ಓಜಸಾ**—ತಮ್ಮ ತೇಜಸ್ಸಿನಿಂದ ಸಹಿತರಾಗಿ । **ಇಂದ್ರಂ**—ಇಂದ್ರನನ್ನು । **ಅಸೃಕ್ಷತ**—ಸ್ವಸ್ಥಾನಕ್ಕೆ ಹೋಗಲು ಬೀಳ್ಕೊಟ್ಟರು.

। ಭಾವಾರ್ಥ ।

ನಾವು ಮಾಡುತ್ತಿರುವ ಈ ಯಜ್ಞದಲ್ಲಿ ಹವಿರಾದಿಗಳನ್ನು ಅರ್ಪಿಸಿ ಇಂದ್ರನನ್ನು ತೃಪ್ತಿಪಡಿಸುವವರೂ ಯಜ್ಞಕರ್ಮದಲ್ಲಿ ಭಾಗವಹಿಸುವವರೂ ಆದ ಹೋತೃವರ್ಗದ ಏಳು ಮಂದಿ ಋತ್ವಿಕ್ಕುಗಳು ತಮ್ಮ ತೇಜಸ್ಸಿನಿಂದ ಸಹಿತರಾಗಿ ಯಜ್ಞದ ಕೊನೆಯ ದಿವಸವಾದ ಅವಭೃತಕಾಲದಲ್ಲಿ ಎಂದರೆ ಯಜ್ಞವು ಸಮಾಪ್ತಿಯಾದಾಗ ಇಂದ್ರನನ್ನು ಅವನ ಸ್ವಸ್ಥಾನಕ್ಕೆ ಬೀಳ್ಕೊಟ್ಟರು

English Translation

The sacrificing priests, invigorating (Indra) by their offerings at the sacrifice, have by their might dismissed him at the Avabritha

॥ ಸಂಹಿತಾಪಾಠಃ ॥

ಇಹ ತ್ವಾ ಸಧಮಾದ್ಯಾ ಹರೀ ಹಿರಣ್ಯಕೇಶ್ಯಾ ।
ವೋಳ್ಹಾಮಭಿ ಪ್ರಯೋ ಹಿತಂ ॥ ೨೪ ॥

॥ ಪದಪಾಠಃ ॥

ಇಹ । ತ್ವಾ । ಸಧಽಮಾದ್ಯಾ । ಹರೀ ಇತಿ । ಹಿರಣ್ಯಽಕೇಶ್ಯಾ ।
ವೋಳ್ಹಾಂ । ಅಭಿ । ಪ್ರಯಃ । ಹಿತಂ ॥ ೨೪ ॥

॥ ಸಾಯಣಭಾಷ್ಯಂ ॥

ಏಷಾ ವ್ಯಾಖ್ಯಾತಾ । ಋ ೮-೩೨-೨೯ । ಅತ್ರಾಪಿ ವಾಕ್ಯಾರ್ಥೋ ವಿಧೀಯತೇ । ಸಧಮಾದ್ಯೇಂದ್ರೇಣ ಸಹ ಹವಿರ್ಭಿಸ್ತರ್ಪಯಿತವ್ಯೌ ಯದ್ವಾ ಸಂಗ್ರಾಮೇ ಸಹ ಮಾದ್ಯಂತೌ ಹಿರಣ್ಯಕೇಶ್ಯಾ ಹಿರಣ್ಮಯಸ್ಕಂಧಗತಕೇಶವಂತೌ ತ್ಯಾ ತೌ ಪ್ರಸಿದ್ಧೌ ಹರೀ ಹರಿತವರ್ಣಾವೇತನ್ನಾಮಕಾವಶ್ವಾವಿಹಾಸ್ಮಿನ್ಯಜ್ಞೇ ಹಿತಂ . . . . ವಾದಿಷು ನಿಹಿತಂ ಹಿತಕರಂ ವಾ ಪ್ರಯೋ ಹವೀರೂಪಮನ್ನಮಭಿಲಕ್ಷ್ಯ ವೋಳ್ಹಾಂ । ಇಂದ್ರಂ ವಹತಾಂ । ಪ್ರಾಪಯತಾಮಿತಿ ॥

॥ ಪ್ರತಿಪದಾರ್ಥ ॥

**ತ್ಯಾ**—ಪ್ರಸಿದ್ಧವಾದವೂ । **ಸಧಮಾದ್ಯಾ**—ಯಾವಾಗಲೂ ಜತೆಯಲ್ಲಿಯೇ ಸಂತೋಷದಿಂದಿರುವವೂ । **ಹಿರಣ್ಯಕೇಶ್ಯಾ**—ಕತ್ತಿನಮೇಲೆ ಸುವರ್ಣದಂತೆ ಥಳಥಳಿಸುವ ಕೇಶಪಂಕ್ತಿಯುಳ್ಳವೂ ಆದ । **ಹರೀ**-ಹರಿಸಂಜ್ಞಕವಾದ ಇಂದ್ರನ ಅಶ್ವಗಳು । **ಹಿತಂ**—ಹಿತಕರವಾದ । **ಪ್ರಯಃ**—ಸೋಮರೂಪವಾದ ಅನ್ನವನ್ನು । **ಅಭಿ**—ಅಭಿಲಕ್ಷಿಸಿ । **ಇಹ**—ಈ ಯಜ್ಞದಲ್ಲಿ । **ವೋಳ್ಹಾಂ**—ಇಂದ್ರನನ್ನು ವಹಿಸಿ ಕರೆತರಲಿ

॥ ಭಾವಾರ್ಥ ॥

ಈ ಯಜ್ಞದಲ್ಲಿ, ಪ್ರಸಿದ್ಧವಾದವೂ ಯಾವಾಗಲೂ ಜತೆಯಲ್ಲಿಯೇ ಇರುತ್ತಾ ಸಂತೋಷಪಡುತ್ತಿರುವವೂ, ಕತ್ತಿನಮೇಲೆ ಸುವರ್ಣದಂತೆ ಥಳಥಳಿಸುವ ಕೇಶಪಂಕ್ತಿಯಿಂದ ಶೋಭಿಸುವವೂ ಆದ ಹರೀ ಎಂಬ ಇಂದ್ರನ ಎರಡು ಕುದುರೆಗಳು ಹಿತಕರವಾದ ಸೋಮರೂಪವಾದ ಅನ್ನವನ್ನು ಎಂದರೆ ಸೋಮರಸವನ್ನು ಪಾನಮಾಡುವುದಕ್ಕಾಗಿ ಇಂದ್ರನನ್ನು ಇಲ್ಲಿ ವಹಿಸಿ ಕರೆತರಲಿ.

English Translation

May those two golden-maned steeds together exulting bring him to our wholesome offering

॥ ಸಂಹಿತಾಪಾಠಃ ॥

ತುಭ್ಯಂ ಸೋಮಾಃ ಸುತಾ ಇಮೇ ಸ್ತೀರ್ಣಂ ಬರ್ಹಿರ್ವಿಭಾವಸೋ ।
ಸ್ತೋತೃಭ್ಯ ಇಂದ್ರಮಾ ವಹ ॥ ೨೫ ॥

॥ ಪದಪಾಠಃ ॥

ತುಭ್ಯಂ । ಸೋಮಾಃ । ಸುತಾಃ । ಇಮೇ । ಸ್ತೀರ್ಣಂ । ಬರ್ಹಿಃ । ವಿಭಾವಸೋ ಇತಿ ವಿಭಾऽವಸೋ ।
ಸ್ತೋತೃऽಭ್ಯಃ । ಇಂದ್ರಂ । ಆ । ವಹ ॥ ೨೫ ॥

ಸಾಯಣಭಾಷ್ಯಂ ।

ಹೇ ವಿಭಾವಸೋ ವಿಶೇಷೇಣ ಭಾಸಮಾನವಸುಮನ್ । ಯದ್ವಾ । ವಿಶಿಷ್ಟಾ ಭಾ ವಿಭಾಃ ಪ್ರಕೃಷ್ಟದೀಪ್ತಯಃ । ನಿವಸತ್ಯತ್ರೇತಿ ವಿಭಾವಸುರಗ್ನಿಃ । ಹೇ ತಾದೃಶಾಗ್ನೇ ತುಭ್ಯಂ ತ್ವದರ್ಥಮಿಮೇ ಸೋಮಾಃ ಸುತಾ ಅಭಿಷುತಾಃ । ತಥಾ ಬರ್ಹಿಃ ಸ್ತೀರ್ಣಂ । ತಸ್ಮಾತ್ ಸ್ತೋತೃಭ್ಯೋಽಸ್ಮಭ್ಯಮಸ್ಮ-ದರ್ಥಮಿಂದ್ರಂ ಸೋಮಪಾನಾರ್ಥಮಾ ವಹ । ಆಹ್ವಯ । ಯಜ್ಞಂ ಪ್ರತಿ ಪ್ರಾಪಯೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ವಿಭಾವಸೋ**—ತೇಜಸ್ಸೇ ಧನವಾಗಿವುಳ್ಳ ಎಲೈ ಅಗ್ನಿಯೇ । **ತುಭ್ಯಂ**—ನಿನ್ನನ್ನುದ್ದೇಶಿಸಿ । **ಇಮೇ ಸೋಮಾಃ**—ಈ ಸೋಮರಸಗಳು । **ಸುತಾಃ**—ಹಿಂಡಿ ಸಿದ್ಧವಾಗಿವೆ (ಮತ್ತು) । **ಬರ್ಹಿಃ**—ಕತ್ತರಿಸಿದ ದರ್ಭೆಯು । **ಸ್ತೀರ್ಣಂ**—ಆಸನಾರ್ಥವಾಗಿ ಹರಡಲಾಗಿದೆ (ಆದ್ದರಿಂದ) । **ಸ್ತೋತೃಭ್ಯಃ**—ನಿನ್ನನ್ನು ಸ್ತುತಿಸುತ್ತಿರುವ ನಮಗಾಗಿ । **ಇಂದ್ರಂ**—ಇಂದ್ರನನ್ನು । **ಆ ವಹ**—ಸೋಮಪಾನಾರ್ಥವಾಗಿ ಕರೆದುಕೊಂಡು ಬಾ

॥ ಭಾವಾರ್ಥ ॥

ತೇಜಸ್ಸೇ ಧನವಾಗಿವುಳ್ಳ ಎಂದರೆ ಅತ್ಯಂತ ತೇಜಸ್ವಿಯಾದ ಎಲೈ ಅಗ್ನಿಯೇ, ನಿನಗಾಗಿಯೇ ಈ ಸೋಮರಸಗಳು ಹಿಂಡಿ ಸಿದ್ಧವಾಗಿವೆ ಆಸನಾರ್ಥವಾಗಿ ಕತ್ತರಿಸಿದ ದರ್ಭೆಗಳನ್ನು ಹರಡಿ ಸಿದ್ಧಪಡಿಸಲಾಗಿದೆ. ಆದ್ದರಿಂದ ಈಗ ನಿನ್ನನ್ನು ಸ್ತುತಿಸುತ್ತಿರುವ ನಮಗಾಗಿ ಇಂದ್ರನನ್ನು ಸೋಮಪಾನಾರ್ಥವಾಗಿ ಕರೆದುಕೊಂಡು ಬಾ

English Translation

Resplendent (Agni), these Soma-libations are effused for you, and the clipped grass is spread, bring Indra hither for his worshippers.

॥ ಸಂಹಿತಾಪಾಠಃ ॥

ಆ ತೇ ದಕ್ಷಂ ವಿ ರೋಚನಾ ದಧದ್ರತ್ನಾ ವಿ ದಾಶುಷೇ ।
ಸ್ತೋತೃಭ್ಯ ಇಂದ್ರಮರ್ಚತ ॥ ೨೬ ॥

॥ ಪದಪಾಠಃ ॥

ಆ । ತೇ । ದಕ್ಷಂ । ವಿ । ರೋಚನಾ । ದಧತ್ । ರತ್ನಾ । ವಿ । ದಾಶುಷೇ ।
ಸ್ತೋತೃಽಭ್ಯಃ । ಇಂದ್ರಂ । ಅರ್ಚತ ॥ ೨೬ ॥

॥ ಸಾಯಣಭಾಷ್ಯಂ ॥

ಋಷಿರ್ಋತ್ವಿಗ್ಯಜಮಾನಾನ್ ಪ್ರತ್ಯಾಹ । ಹೇ ಯುಷ್ಮಃ ದಾಶುಷ ಇಂದ್ರಾಯ ಹವಿರ್ದತ್ತವತೇ ` ಭ್ಯಂ ರೋಚನಾ ರೋಚನಂ ದೀಪ್ಯಮಾನಂ ದಕ್ಷಂ ಬಲಮಾಭಿಮುಖ್ಯೇನ ವಿ ದಧತ್ । ಇಂದ್ರೋ

ವಿದಧಾತು । ಯದ್ವಾ । ರೋಚನಮಿತಿ ಸ್ವರ್ಗಃ । ದೇವತೇಜಸಾ ದೀಪ್ತಂ ರೋಚನನಾಮಾನಂ ಲೋಕಂ ವಿದಧಾತು । ತಥಾ ರತ್ನಾ ರತ್ನಾನಿ ಚ ತುಭ್ಯಂ ಕರೋತು ॥ ಡು ಧಾಞ್ ಧಾರಣಪೋಷಣಯೋಃ । ಲೇಟಿ ಛಾಂದಸಂ ... ಲೇಟಿ ವಾ । ಪಾ ೭-೩-೭೦ । ಇತ್ಯಾಕಾರಲೋಪಃ । ಅಡಾಗಮಃ ॥ ಹೇ ಸ್ತೋತಾರಃ ಸ್ತೋತೃಭ್ಯ ಇಂದ್ರವಿಷಯಸ್ತೋತ್ರಕಾರಿಭ್ಯೋ ಯುಷ್ಮಭ್ಯಂ ಚ ಬಲರತ್ನಾದಿಕಮಿಂದ್ರಃ ಕುರುತಾಂ । ತಸ್ಮಾತ್ತಮಿಂದ್ರಂ ಯೂಯಮರ್ಚತ । ಹವಿರ್ಭಿಃ ಸ್ತುತಿಭಿಶ್ಚ ಪೂಜಯತ ॥

॥ ಪ್ರತಿಪದಾರ್ಥ ॥

(ಎಲೈ ಯಷ್ಟೃವೇ) **ದಾಶುಷೇ**—ಇಂದ್ರನಿಗೆ ಹವಿಸ್ಸನ್ನರ್ಪಿಸಿರುವ । **ತೇ**—ನಿನಗಾಗಿ । **ರೋಚನಾ**—ಪ್ರಕಾಶಮಾನವಾದ । **ದಕ್ಷಂ**—ಬಲವನ್ನು । **ಆ**—ಅತಿಶಯವಾಗಿ । **ವಿ ದಧತ್**—ಇಂದ್ರನು ಕೊಡಲಿ । [**ಅಥವಾ ರೋಚನಾ ವಿ ದಧತ್**—ಸ್ವರ್ಗವನ್ನು ಇಂದ್ರನು ಕೊಡಲಿ] । **ರತ್ನಾ**—ರಮಣೀಯವಾದ ರತ್ನಗಳನ್ನೂ ನಿನಗೆ ಕೊಡಲಿ (ಎಲೈ ಸ್ತೋತೃಜನರೇ) । **ಸ್ತೋತೃಭ್ಯಃ**—ಇಂದ್ರನನ್ನು ಸ್ತುತಿಸುತ್ತಿರುವ ನಿಮಗೆ ರತ್ನಾದಿಗಳನ್ನು ಇಂದ್ರನು ಕೊಡಲಿ (ಆದ್ದರಿಂದ ನೀವು) । **ಇಂದ್ರಂ**—ಇಂದ್ರನನ್ನು । **ಅರ್ಚತ**—ಹವಿರಾದಿಗಳಿಂದ ಅರ್ಚಿಸಿರಿ.

॥ ಭಾವಾರ್ಥ ॥

ಎಲೈ ಯಷ್ಟೃವೇ ಇಂದ್ರನಿಗೆ ಹವಿಸ್ಸನ್ನರ್ಪಿಸುತ್ತಿರುವ ನಿನಗೆ ಪ್ರಕಾಶಮಾನವಾದ ಬಲವನ್ನು ಅಥವಾ ಸ್ವರ್ಗವನ್ನು ಇಂದ್ರನು ಕೊಡಲಿ. ಹಾಗೆಯೇ ರತ್ನಗಳನ್ನು ಕೊಡಲಿ. ಎಲೈ ಸ್ತೋತೃಜನರೇ, ಇಂದ್ರನನ್ನು ಸ್ತುತಿಸುತ್ತಿರುವ ನಿಮಗೂ ಇಂದ್ರನು ರತ್ನಾದಿಗಳನ್ನು ಕೊಡಲಿ. ಆದ್ದರಿಂದ ನೀವು ಇಂದ್ರನನ್ನು ಹವಿರಾದಿಗಳಿಂದ ಅರ್ಚಿಸಿ ತೃಪ್ತಿಪಡಿಸಿ

English Translation

May he give strength and his brilliant heaven and precious things to you his worshipper, and to his praising priests; worship Indra.

॥ ಸಂಹಿತಾಪಾಠಃ ॥

ಆ ತೇ ದಧಾಮೀಂದ್ರಿಯಮುಕ್ಥಾ ವಿಶ್ವಾ ಶತಕ್ರತೋ ।

ಸ್ತೋತೃಭ್ಯ ಇಂದ್ರ ಮೃಳಯ ॥ ೨೭ ॥

॥ ಪದಪಾಠಃ ॥

ಆ । ತೇ । ದಧಾಮಿ । ಇಂದ್ರಿಯಂ । ಉಕ್ಥಾ । ವಿಶ್ವಾ । ಶತಕ್ರತೋ ಇತಿ ಶತऽಕ್ರತೋ ।

ಸ್ತೋತೃऽಭ್ಯಃ । ಇಂದ್ರ । ಮೃಳಯ ॥ ೨೭ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಇಂದ್ರ ತೇ ತವೇಂದ್ರಿಯಂ ವೀರ್ಯವಂತಂ ಸೋಮಂ ವಿಶ್ವೋಕ್ಥಾ ಸರ್ವಾಣಿ ಸ್ತೋತ್ರಾಣ್ಯಾ ದಧಾಮಿ । ಸಂಪಾದಯಾಮಿ । ಹೇ ಇಂದ್ರ ತ್ವಂ ಸ್ತೋತೃಭ್ಯೋ ಮೃಳಯ । ಸುಖಯ ॥

॥ ಪ್ರತಿಪದಾರ್ಥ ॥

ಶತಕ್ರತೋ—ಅನೇಕ ಸಾಹಸಕರ್ಮಕರ್ತನಾದ ಎಲೈ ಇಂದ್ರನೇ । ತೇ—ನಿನಗಾಗಿ । ಇಂದ್ರಿಯಂ—ಮದಜನಕವಾದ ಸೋಮನನ್ನೂ । ವಿಶ್ವಾ ಉಕ್ಥಾನಿ—ಸಮಸ್ತ ಸ್ತುತಿಗಳನ್ನೂ । ಆ ದಧಾಮಿ—ನಿರ್ಮಿಸಿ ಅರ್ಪಿಸುತ್ತೇನೆ । ಇಂದ್ರ—ಎಲೈ ಇಂದ್ರನೇ ನೀನು । ಸ್ತೋತೃಭ್ಯಃ—ನಿನ್ನ ಸ್ತುತಿಕರ್ತರನ್ನು । ಮೃಳಯ—ಸುಖಪಡಿಸು

॥ ಭಾವಾರ್ಥ ॥

ಅನೇಕ ಸಾಹಸಕಾರ್ಯಗಳನ್ನು ಮಾಡುವ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ಮದಕರವಾದ ಸೋಮವನ್ನೂ ಅನೇಕ ಸ್ತುತಿಗಳನ್ನೂ ನಿರ್ಮಿಸಿ ಅರ್ಪಿಸುತ್ತೇನೆ. ಎಲೈ ಇಂದ್ರನೇ ನಿನ್ನ ಸ್ತುತಿಕರ್ತರನ್ನು ಸುಖಪಡಿಸು.

English Translation

I prepare, Satakratu, your strong (Soma) and all your praises; be gracious, Indra, to your hymners

॥ ಸಂಹಿತಾಪಾಠಃ ॥

ಭದ್ರಂಭದ್ರಂ ನ ಆ ಭರೇಷಮೂರ್ಜಂ ಶತಕ್ರತೋ ।
ಯದಿಂದ್ರ ಮೃಳಯಾಸಿ ನಃ ॥ ೨೮ ॥

॥ ಪದಪಾಠಃ ॥

ಭದ್ರಂಽಭದ್ರಂ । ನಃ । ಆ । ಭರ । ಇಷಂ । ಊರ್ಜಂ । ಶತಕ್ರತೋ ಇತಿ ಶತಽಕ್ರತೋ ।
ಯತ್ । ಇಂದ್ರ । ಮೃಳಯಾಸಿ । ನಃ ॥ ೨೮ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಶತವಿಧಕರ್ಮನ್ ಶತಪ್ರಜ್ಞ ವೇಂದ್ರ ಭದ್ರಂ ಭದ್ರಂ ಕಲ್ಯಾಣತಮಮಥ ಸುಖೋತ್ಪಾದಕಂ ವಾ ಧನಂ ನೋಽಸ್ಮಭ್ಯಮಾ ಭರ । ಆಸಂಪಾದಯ । ದೇಹಿ । ತಥೇಷಮನ್ನಮೂರ್ಜಮನ್ನರಸಂ ಯದ್ವಾ ಬಲವದನ್ನಂ ಚ ದೇಹಿ । ನೋಽಸ್ಮಾನ್ಯದ್ಯದಿ ಮೃಳಯಾಸಿ ಸುಖಯಸಿ ತರ್ಹಿ ತದ್ಧನಾದಿಕಂ ದೇಹೀತಿ ॥ ಮೃಡ ಸುಖನೇ । ಣ್ಯಂತಸ್ಯ ಲೇಟ್ಯೈಡಾಗಮಃ ॥

॥ ಪ್ರತಿಪದಾರ್ಥ

**ಶತಕ್ರತೋ**—ಅನೇಕ ವೀರ್ಯಕರ್ಮಕರ್ತನಾದ ಅಥವಾ ಬಹುವಿಧ ಜ್ಞಾನೋಪೇತನಾದ । **ಇಂದ್ರ**—ಎಲೈ ಇಂದ್ರನೇ । **ಯತ್**—ಒಂದುವೇಳೆ । **ನಃ**—ನಮ್ಮನ್ನು । **ಮೃಳಯಾಸಿ**—ಸುಖಪಡಿಸುವಿಯಾದರೆ । **ಭದ್ರಂ ಭದ್ರಂ**—ಕಲ್ಯಾಣಕಾರಕವೂ ಸುಖಕರವೂ ಆದ ಧನವನ್ನು । **ನಃ**—ನಮಗೆ । **ಆ ಭರ**—ತಂದೊದಗಿಸು (ಹಾಗೆಯೇ) । **ಇಷಂ**—ಅನ್ನವನ್ನೂ । **ಊರ್ಜಂ**—ರಸವನ್ನು ಅಥವಾ ಪುಷ್ಟಿಕರವಾದ ಅನ್ನವನ್ನೂ ಕೊಡು

॥ ಭಾವಾರ್ಥ ॥

ಬಹುಕರ್ಮಕರ್ತನಾದ ಅಥವಾ ಬಹುವಿಧ ಪ್ರಜ್ಞೋಪೇತನಾದ ಎಲೈ ಇಂದ್ರನೇ, ಒಂದುವೇಳೆ ನಮಗೆ ಸುಖವನ್ನುಂಟುಮಾಡಬೇಕೆಂಬ ಇಚ್ಛೆಯು ನಿನಗಿದ್ದಲ್ಲಿ ಮಂಗಳಕರವೂ ಸುಖಕರವೂ ಆದ ಧನವನ್ನೂ ಅನ್ನವನ್ನೂ ರಸವನ್ನೂ ನಮಗೆ ತಂದೊದಗಿಸು.

English Translation

Bring us what is most auspicious, Satakratu, (bring us) food and strength, if you have favour to us, Indra

॥ ಸಂಹಿತಾಪಾಠಃ ॥

ಸ ನೋ ವಿಶ್ವಾನ್ಯಾ ಭರ ಸುವಿತಾನಿ ಶತಕ್ರತೋ ।
ಯದಿಂದ್ರ ಮೃಳಯಾಸಿ ನಃ ॥ ೨೯ ॥

॥ ಪದಪಾಠಃ ॥

ಸಃ । ನಃ । ವಿಶ್ವಾನಿ । ಆ । ಭರ । ಸುವಿತಾನಿ । ಶತಕ್ರತೋ ಇತಿ ಶತಽಕ್ರತೋ ।
ಯತ್ । ಇಂದ್ರ । ಮೃಳಯಾಸಿ । ನಃ ॥ ೨೯ ॥

॥ ಸಾಯಣಭಾಷ್ಯಂ ॥

**ಹೇ ಶತಕ್ರತೋ ಇಂದ್ರ ಸ ಪೂರ್ವೋಕ್ತಲಕ್ಷಣಸ್ತ್ವಂ ವಿಶ್ವಾನಿ ಸರ್ವಾಣಿ ಸುವಿತಾನಿ ಸುಷ್ಠ್ವೇಯತೇ ಪ್ರಾಪ್ಯತೇ ಯೇಷ್ವಿತಿ ಸುವಿತಾನಿ ಮಂಗಲಾನಿ ॥ ಸುಪೂರ್ವಾದೇತೇಃ ಕ್ತೇ ಪ್ರತ್ಯಯ ಉವಙಾದೇಶಃ ॥ ಸರ್ವಾನಭ್ಯುದಯಾನ್ನೋಽಸ್ಮಭ್ಯಮಾಹರ । ಹೇ ಇಂದ್ರ ಯದಿ ನೋಽಸ್ಮಾನ್ ಸುಖಯಸಿ ತರ್ಹಿ ಧನಾದಿಸಹಿತಾನಭ್ಯುದಯಾನ್ದೇಹೀತಿ ॥**

॥ ಪ್ರತಿಪದಾರ್ಥ ॥

**ಶತಕ್ರತೋ ಇಂದ್ರ**—ಬಹುವಿಧಪ್ರಜ್ಞೋಪೇತನಾದ ಎಲೈ ಇಂದ್ರನೇ । **ಯತ್**—ಒಂದುವೇಳೆ । **ನಃ**—ನಮ್ಮನ್ನು । **ಮೃಳಯಾಸಿ**—ಸುಖಪಡಿಸುವ ಇಚ್ಛೆಯು ನಿನಗಿದ್ದಲ್ಲಿ । **ಸಃ**—ಪೂರ್ವೋಕ್ತಗುಣವಿಶಿಷ್ಟನಾದ ನೀನು ।

**ವಿಶ್ವಾನಿ**—ಸಮಸ್ತವಾದ । **ಸುವಿತಾನಿ**—ಮಂಗಳಗಳನ್ನು ಅಥವಾ ಶ್ರೇಯಸ್ಸನ್ನು । **ನಃ**—ನಮಗೆ । **ಆ ಭರ**—ಉಂಟುಮಾಡು.

॥ ಭಾವಾರ್ಥ ॥

ಬಹುವಿಧಪ್ರಜ್ಞೋಪೇತನಾದ ಎಲೈ ಇಂದ್ರನೇ, ನಮಗೆ ಸುಖವನ್ನುಂಟುಮಾಡಬೇಕೆಂಬ ಅಪೇಕ್ಷೆಯು ನಿನಗಿದ್ದಲ್ಲಿ ನೀನು ನಮಗೆ ಸಮಸ್ತವಾದ ಶ್ರೇಯಸ್ಸುಗಳನ್ನು ಉಂಟುಮಾಡು.

English Translation

Bring us all blessings, Satakratu, if you have favour to us, Indra.

॥ ಸಂಹಿತಾಪಾಠಃ ॥

ತ್ವಾಮಿದ್ವೃತ್ರಹಂತಮ ಸುತಾವಂತೋ ಹವಾಮಹೇ ।
ಯದಿಂದ್ರ ಮೃಳಯಾಸಿ ನಃ ॥ ೩೦ ॥

॥ ಪದಪಾಠಃ ॥

ತ್ವಾಂ । ಇತ್ । ವೃತ್ರಹನ್ऽತಮ । ಸುತಽವಂತಃ । ಹವಾಮಹೇ ।
ಯತ್ । ಇಂದ್ರ । ಮೃಳಯಾಸಿ । ನಃ ॥ ೩೦ ॥

॥ ಸಾಯಣಭಾಷ್ಯಂ ॥

ಹೇ ವೃತ್ರಹಂತಮಾತಿಶಯೇನ ವೃತ್ರಸ್ಯಾಪಾಮಾವರಕಸ್ಯ ಹಂತರಿಂದ್ರ ಸುತವಂತೋಽಭಿಷುತಸೋಮವಂತೋ ವಯಂ । ಇದವಧಾರಣೇ । ತ್ವಾಮಿತ್ತ್ವಾಮೇವ ಹವಾಮಹೇ । ಅಸ್ಮದ್ಯಜ್ಞಮಾಗತ್ಯ ಸೋಮಪಾನಾಯಾಹ್ವಯಾಮಃ । ಹೇ ಇಂದ್ರ ನೋಽಸ್ಮಾನ್ಯದಿ ಸುಖಯಸಿ ತರ್ಹ್ಯಾಹ್ವಯಾಮ ಇತಿ ॥

॥ ಪ್ರತಿಪದಾರ್ಥ ॥

**ವೃತ್ರಹಂತಮ**—ವೃತ್ರಾಸುರನನ್ನು ಸಂಹರಿಸಿದ । **ಇಂದ್ರ**—ಎಲೈ ಇಂದ್ರನೇ । **ಯತ್**—ಒಂದುವೇಳೆ । **ನಃ**—ನಮ್ಮನ್ನು । **ಮೃಳಯಾಸಿ**—ಸುಖಪಡಿಸುವಿಯಾದರೆ । **ಸುತವಂತಃ**—ಸೋಮರಸವನ್ನು ಹಿಂಡಿ ಸಿದ್ಧಪಡಿಸಿಕೊಂಡಿರುವ ನಾವು । **ತ್ವಾಮಿತ್**—ನಿನ್ನನ್ನೇ । **ಹವಾಮಹೇ**—ಸೋಮಪಾನಾರ್ಥವಾಗಿ ಪ್ರಾರ್ಥಿಸಿ ಕರೆಯುತ್ತೇವೆ.

॥ ಭಾವಾರ್ಥ ॥

ವೃತ್ರಾಸುರಹಂತಕನಾದ ಎಲೈ ಇಂದ್ರನೇ, ನೀನು ನಮ್ಮನ್ನು ಸುಖಪಡಿಸಬೇಕೆಂಬ ಇಚ್ಛೆಯು ನಿನಗಿದ್ದರೆ ಆಗ ನಿನಗೆ ಅರ್ಪಿಸಲು ಸೋಮರಸವನ್ನು ಹಿಂಡಿ ಸಿದ್ಧಪಡಿಸಿಕೊಂಡಿರುವ ನಾವು ನಮ್ಮ ಯಜ್ಞದಲ್ಲಿ ಸೋಮಪಾನಾರ್ಥವಾಗಿ ನಿನ್ನನ್ನೇ ಪ್ರಾರ್ಥಿಸಿ ಕರೆಯುತ್ತೇವೆ.

English Translation

Bearing the effused libation, we invoke you, mighty slayer of Vritra if you have favour to us, Indra.

॥ ಸಂಹಿತಾಪಾಠ ॥

ಉಪ ನೋ ಹರಿಭಿಃ ಸುತಂ ಯಾಹಿ ಮದಾನಾಂ ಪತೇ ।
ಉಪ ನೋ ಹರಿಭಿಃ ಸುತಂ ॥ ೩೧ ॥

॥ ಪದಪಾಠಃ ॥

ಉಪ । ನಃ । ಹರಿಽಭಿಃ । ಸುತಂ । ಯಾಹಿ । ಮದಾನಾಂ । ಪತೇ ।
ಉಪ । ನಃ । ಹರಿಽಭಿಃ । ಸುತಂ ॥ ೩೧ ॥

॥ ಸಾಯಣಭಾಷ್ಯಂ ॥

ವ್ಯೂಳ್ಹಸ್ಯ ದಶರಾತ್ರಸ್ಯ ಷಷ್ಠೇಽಹನಿ ನಿಷ್ಕೇವಲ್ಯ ಉಪ ನೋ ಹರಿಭಿರಿತಿ ತೃಚೋ ನಿವಿದ್ಧಾನೀಯಃ । ಸೂತ್ರಿತಂ ಚ । ಅಯಂ ಹ ಯೇನ ವಾ ಇದಮುಪ ನೋ ಹರಿಭಿಃ ಸುತಂ । ಆ. ೮-೮ । ಇತಿ ॥

ಹೇ ಮದಾನಾಂ ಪತೇ । ಮಾದ್ಯಂತ್ಯೇನೇನೇತಿ ಮದಾಃ ಸೋಮಾಃ ॥ ಮದೋಽನುಪಸರ್ಗ ಇತಿ ಕರಣೇಽಪ್ಪ್ರತ್ಯಯಃ ॥ ಸೋಮಾನಾಂ ಸ್ವಾಮಿನ್ನಿಂದ್ರ ಹರಿಭಿರಾ ಶತೇನ ಹರಿಭಿಃ । ಋ. ೨-೧೮-೬ । ಇತ್ಯಾದಿಷು ಬಹೂನಾಮಶ್ವಾನಾಂ ಶ್ರುತೇಽತ್ರಾಪಿ ಶತಸಹಸ್ರಸಂಖ್ಯಾಕೈರಶ್ವೈಃ ಸಹ ನೋಽಸ್ಮಾಕಂ ಯಜ್ಞೇ ಸುತಮಭಿಷುತಂ ಸೋಮಮುಪ ಯಾಹಿ । ತತ್ಪಾನಾರ್ಥಂ ಶೀಘ್ರಮಾಯಾಹಿ । ಪುನರುಪ ನ ಇತ್ಯಾದರಾರ್ಥಂ ॥

॥ ಪ್ರತಿಪದಾರ್ಥ ॥

**ಮದಾನಾಂ ಪತೇ**—ಮದಕಾರಕವಾದ ಸೋಮರಸಕ್ಕೆ ಒಡೆಯನಾದ ಎಲೈ ಇಂದ್ರನೇ । **ಹರಿಭಿಃ**—ಅನೇಕ ಅಶ್ವಗಳಿಂದ ಸಹಿತನಾಗಿ । **ನಃ**—ನಮ್ಮ ಯಜ್ಞದಲ್ಲಿ । **ಸುತಂ**—ಹಿಂಡಲ್ಪಟ್ಟಿರುವ ಸೋಮವನ್ನು ಅಭಿಲಕ್ಷಿಸಿ । **ಉಪ ಯಾಹಿ**—ದಯಮಾಡು । **ಸುತಂ**—ಹಿಂಡಲ್ಪಟ್ಟಿರುವ ಸೋಮರಸದ ಪಾನಾರ್ಥವಾಗಿ । **ಹರಿಭಿಃ**—ನಿನ್ನ ಕುದುರೆಗಳೊಡನೆ । **ನಃ ಉಪ**—ನಮ್ಮ ಬಳಿಗೆ ದಯಮಾಡು.

॥ ಭಾವಾರ್ಥ ॥

ಮದಕಾರಕವಾದ ಸೋಮರಸಕ್ಕೆ ಒಡೆಯನಾದ ಎಲೈ ಇಂದ್ರನೇ, ನಮ್ಮ ಯಜ್ಞದಲ್ಲಿ ಹಿಂಡಲ್ಪಟ್ಟು ಸಿದ್ಧವಾಗಿರುವ ಸೋಮರಸದ ಪಾನಾರ್ಥವಾಗಿ ನಮ್ಮ ಬಳಿಗೆ ನಿನ್ನ ಅನೇಕ ಅಶ್ವಗಳೊಡನೆ ಕೂಡಿ ದಯಮಾಡು.

## English Translation

Come with your steeds to our effused libation, lord of the Soma,—come with your steeds to our effused libation

॥ ವಿಶೇಷವಿಷಯಗಳು ॥

ವ್ಯೂಳ್ಹವೆಂಬ ದಶರಾತ್ರಯಾಗದ ಆರನೆಯ ದಿವಸ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ **ಉಪ ನೋ ಹರಿಭಿಃ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ನಿವಿದ್ಧಾನೀಯತೃಚವನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ-**ಅಯಂ ಹ ಯೇನ ವಾ ಇದಮುಪ ನೋ ಹರಿಭಿಃ ಸುತಂ** ಎಂಬ ಸೂತ್ರದಿಂದ ( ಆ. ೮-೮ ) ವಿವೃತವಾಗಿರುವುದು.

। ಸಂಹಿತಾಪಾಠಃ ।

ದ್ವಿತಾ ಯೋ ವೃತ್ರಹಂತಮೋ ವಿದ ಇಂದ್ರಃ ಶತಕ್ರತುಃ ।

ಉಪ ನೋ ಹರಿಭಿಃ ಸುತಂ ॥ ೩೨ ॥

॥ ಪದಪಾಠಃ ।

ದ್ವಿತಾ । ಯಃ । ವೃತ್ರಹನ್ಽತಮಃ । ವಿದೇ । ಇಂದ್ರಃ । ಶತಽಕ್ರತುಃ ।

ಉಪ । ನಃ । ಹರಿಽಭಿಃ । ಸುತಂ ॥ ೩೨ ॥

। ಸಾಯಣಭಾಷ್ಯಂ ।

**ವೃತ್ರಹಂತಮೋಽತಿಶಯೇನ ವೃತ್ರಸ್ಯ ಹಂತಾ ಶತಕ್ರತುರ್ನಾನಾವಿಧಕರ್ಮಾ ಯ ಇಂದ್ರೋ ದ್ವಿತಾ ದ್ವಿಧಾ ವಿದೇ ವೃತ್ರವಧಾದಾವುಗ್ರಕರ್ಮಾ ಜಗದ್ರಕ್ಷಣಕಾಲೇ ಶಾಂತಕರ್ಮೇತಿ ದ್ವಿಪ್ರಕಾರೇಣ ಸರ್ವೈರ್ಜ್ಞಾಯತೇ॥ ವಿದ ಜ್ಞಾನೇ । ಕರ್ಮಣಿ ವಿಹಿತಸ್ಯ ತಪ್ರತ್ಯಯಸ್ಯ ಲೋಪಸ್ತ ಆತ್ಮನೇಪದೇಷ್ವಿತಿ ತಲೋಪಃ ॥ ಸ ತ್ವಂ ಹರಿಭಿಃ ಸಹ ಸುತಂ ಸೋಮಮುಪಯಾಹಿ ॥**

॥ ಪ್ರತಿಪದಾರ್ಥ ।

**ವೃತ್ರಹಂತಮಃ**—ವೃತ್ರಾಸುರನನ್ನು ಸಂಹಾರಮಾಡಿದವನೂ । **ಶತಕ್ರತುಃ**—ಅನೇಕ ಸಾಹಸಕಾರ್ಯ ಕರ್ತನೂ ಆದ । **ಯಃ ಇಂದ್ರಃ**—ಯಾವ ಇಂದ್ರನು । **ದ್ವಿತಾ**—ಎರಡು ವಿಧವಾದ ಎಂದರೆ ವೃತ್ರವಧಾದಿಕಾಲದಲ್ಲಿ ಉಗ್ರಕರ್ಮವನ್ನೂ ಜಗದ್ರಕ್ಷಣಕಾಲದಲ್ಲಿ ಶಾಂತಕರ್ಮವನ್ನೂ ಎಂಬ ಎರಡುವಿಧ ಕರ್ಮಗಳನ್ನೂ । **ವಿದೇ**—ತಿಳಿದಿರುವನೋ (ಅಂತಹ ಇಂದ್ರನು) । **ನಃ**—ನಮ್ಮ ಸಂಬಂಧವಾದ । **ಸುತಂ**—ಹಿಂಡಲ್ಪಟ್ಟಿರುವ ಸೋಮವನ್ನು ಲಕ್ಷಿಸಿ । **ಹರಿಭಿಃ**—ತನ್ನ ಕುದುರೆಗಳೊಡನೆ । ಉಪ-- ದಯಮಾಡಲಿ.

॥ ಭಾವಾರ್ಥ ॥

ವೃತ್ರಾಸುರನನ್ನು ಸಂಹರಿಸಿದವನೂ ಬಹುವಿಧ ಸಾಹಸಕರ್ಮಕರ್ತನೂ ಆದ ಯಾವ ಇಂದ್ರನು ವೃತ್ರವಧಾದಿ ಕಾಲದಲ್ಲಿ ಕ್ರೂರವಾದ ಕರ್ಮವನ್ನೂ ಜಗದ್ರಕ್ಷಣಕಾಲದಲ್ಲಿ ಶಾಂತಕರ್ಮವನ್ನೂ ಮಾಡಬೇಕೆಂದು ತಿಳಿದಿರುವನೋ ಅಂತಹ ಇಂದ್ರನು ನಾವು ಸಿದ್ಧಪಡಿಸಿರುವ ಸೋಮವನ್ನು ಪಾನಮಾಡುವುದಕ್ಕಾಗಿ ನಮ್ಮ ಬಳಿಗೆ ತನ್ನ ಕುದುರೆಗಳೊಡನೆ ದಯಮಾಡಲಿ

English Translation

Indra, Satakratu, mighty slayer of Vritra, you whose power is known in a two-fold way, come with your steeds to our effused libation.

॥ ಸಂಹಿತಾಪಾಠಃ ॥

ತ್ವಂ ಹಿ ವೃತ್ರಹನ್ನೇಷಾಂ ಪಾತಾ ಸೋಮಾನಾಮಸಿ ।

ಉಪ ನೋ ಹರಿಭಿಃ ಸುತಂ ॥ ೩೩ ॥

॥ ಪದಪಾಠಃ ॥

ತ್ವಂ । ಹಿ । ವೃತ್ರಽಹನ್ । ಏಷಾಂ । ಪಾತಾ । ಸೋಮಾನಾಂ । ಅಸಿ ।

ಉಪ । ನಃ । ಹರಿಽಭಿಃ । ಸುತಂ ॥ ೩೩ ॥

॥ ಸಾಯಣಭಾಷ್ಯಂ ॥

**ಹೇ ವೃತ್ರಹನ್ ವೃತ್ರಸ್ಯ ಪಾಪಸ್ಯ ವಾ ಹಂತರಿಂದ್ರ । ಹಿಶಬ್ದೋ ಹೇತ್ವರ್ಥೇ । ಯಸ್ಮಾತ್ತ್ವಮೇಷಾಮಸ್ಮದೀಯಾನಾಂ ಸೋಮಾನಾಂ ಪಾತಾ ಪಾನಕರ್ತಾಸಿ ಭವಸಿ ॥ ಏಷಾಮಿತೀದಮೋಽನ್ವಾದೇಶೇಽಶಾದೇಶೋಽನುದಾತ್ತಶ್ಚ ॥ ಅತಸ್ತ್ವಮಶ್ವೈಃ ಸಹ ಸೋಮಂ ಪಾತುಮುಪಯಾಹಿ । ಆಗಚ್ಛ ॥**

॥ ಪ್ರತಿಪದಾರ್ಥ ॥

**ವೃತ್ರಹನ್**—ವೃತ್ರಾಸುರಹಂತಕನಾದ ಅಥವಾ ಪಾಪಪರಿಹಾರಕನಾದ ಎಲೈ ಇಂದ್ರನೇ । **ಹಿ**—ಯಾವ ಕಾರಣದಿಂದ । **ತ್ವಂ**—ನೀನು । **ಏಷಾಂ**—ನಾವು ಸಿದ್ಧಪಡಿಸಿರುವ । **ಸೋಮಾನಾಂ**—ಸೋಮರಸಗಳನ್ನು । **ಪಾತಾ**—ಪಾನಮಾಡುವವನಾಗಿ । **ಅಸಿ**—ಆಗಿದ್ದೀಯೋ ಆ ಕಾರಣದಿಂದ । **ನಃ ಸುತಂ**—ನಮ್ಮ ಸೋಮವನ್ನು ಅಭಿಲಕ್ಷಿಸಿ । **ಹರಿಭಿಃ**—ನಿನ್ನ ಅಶ್ವಗಳೊಡನೆ । **ಉಪ**—ನಮ್ಮ ಬಳಿಗೆ ದಯಮಾಡು.

॥ ಭಾವಾರ್ಥ ॥

ವೃತ್ರಾಸುರನ ಹಂತಕನಾದ ಅಥವಾ ಪಾಪಪರಿಹಾರಕನಾದ ಎಲೈ ಇಂದ್ರನೇ, ನೀನು, ನಾವು ನಿನಗಾಗಿ ಸಿದ್ಧಪಡಿಸಿರುವ ಸೋಮರಸಗಳನ್ನು ಪಾನಮಾಡುವವನಾಗಿದ್ದೀಯೆ. ಆದ್ದರಿಂದ ಆ ನಮ್ಮ ಸೋಮರಸದ ಪಾನಾರ್ಥವಾಗಿ ನಿನ್ನ ಕುದುರೆಗಳೊಡನೆ ನಮ್ಮ ಬಳಿಗೆ ದಯಮಾಡು.

## English Translation

Slayer of Vritra, you are the drinker of these Soma juices, come with your steeds to our effused libation.

॥ ಸಂಹಿತಾಪಾಠಃ ॥

ಇಂದ್ರ ಇಷೇ ದದಾತು ನ ಋಭುಕ್ಷಣಮೃಭುಂ ರಯಿಂ ।
ವಾಜೀ ದದಾತು ವಾಜಿನಂ ॥ ೩೪॥

॥ ಪದಪಾಠಃ ॥

ಇಂದ್ರಃ । ಇಷೇ । ದದಾತು । ನಃ । ಋಭುಕ್ಷಣಂ । ಋಭುಂ । ರಯಿಂ ।
ವಾಜೀ । ದದಾತು । ವಾಜಿನಂ ॥ ೩೪ ॥

॥ ಸಾಯಣಭಾಷ್ಯಂ ॥

ವ್ಯೂಳ್ಹಸ್ಯ ದಶರಾತ್ರಸ್ಯ ನವಮೇಽಹನಿ ವೈಶ್ವದೇವೇಽಭಿಪ್ಲವತೃಚಸ್ಯೇಂದ್ರ ಇಷೇ ದದಾತು ನಸ್ತೇ ನೋ ರತ್ನಾನಿ ಧತ್ತನೇತಿ ದ್ವೇ ಋಚಾವಾರ್ಭವ್ಯೌ । ಸೂತ್ರಿತಂ ಚ । ಇಂದ್ರ ಇಷೇ ದದಾತು ನಸ್ತೇ ನೋ ರತ್ನಾನಿ ಧತ್ತನೇತ್ಯೇಕಾ ದ್ವೇ ಚ । ಆ ೮-೧೧ । ಇತಿ ॥

ಇಂದ್ರ ಏವಾಸ್ಮಾಭಿಃ ಸ್ತುತ ಇಷ್ಟಃ ಸನ್ನೃಭುಕ್ಷಣಂ ॥ ವಾ ಷಪೂರ್ವಸ್ಯೇತಿ ದೀರ್ಘಾಭಾವಃ ॥ ಯಾಗಾದಿಕರ್ಮಕರಣೇನ ಮಹಾಂತಂ ಸರ್ವೇಷಾಂ ಭ್ರಾತೄಣಾಂ ಶ್ರೇಷ್ಠಂ ವಾ । ಅಥವಾ ತೃತೀಯಸವನೇ ಪ್ರಜಾಪತಿಸವಿತ್ರೋರ್ಮಧ್ಯೇ ಸೋಮಪಾತೃತ್ವಾನ್ಮಹಾಂತಂ । ರಯಿಂ ದಾತಾರಮೃಭುಂ ಸೋಮಪಾನೇನಾಮರ್ತ್ಯತ್ವಂ ಪ್ರಾಪ್ತಂ ತಾದೃಶಮೇತನ್ನಾಮಕಂ ದೇವಂ ನೋಽಸ್ಮಭ್ಯಮಿಷೇಽನ್ನಾರ್ಥಂ ದದಾತು । ಪ್ರಯಚ್ಛತು । ತಥಾ ವಾಜೀ ಬಲವಾನಿಂದ್ರೋ ವಾಜಿನಂ ಬಲವಂತಮನ್ನವಂತಂ ವಾ ವಾಜನಾಮಾನಂ ಕನೀಯಾಂಸಂ ಭ್ರಾತರಂ ಚಾಸ್ಮಾಕಮನ್ನಲಾಭಾಯ ದದಾತು ॥

॥ ಪ್ರತಿಪದಾರ್ಥ ॥

**ಇಂದ್ರಃ**—ನಮ್ಮಿಂದ ಈ ರೀತಿ ಸ್ತುತನಾದ ಇಂದ್ರನು । **ಋಭುಕ್ಷಣಂ**—ಶ್ರೇಷ್ಠನಾದ ಎಂದರೆ ಋಭು, ವಿಭು, ವಾಜ ಎಂಬ ಮೂರು ಮಂದಿ ಸಹೋದರರಲ್ಲಿ ಹಿರಿಯನಾದ । **ರಯಿಂ**—ಧನವನ್ನು ಕೊಡುವ । **ಋಭುಂ**—ಋಭುವೆಂಬ ಹೆಸರಿನ ದೇವನನ್ನು । **ನಃ**—ನಮಗೆ । **ಇಷೇ**—ಅನ್ನವನ್ನು ಒದಗಿಸಕೊಡುವುದಕ್ಕಾಗಿ । **ದದಾತು**—ಕರತರಲಿ (ಹಾಗೆಯೇ) । **ವಾಜೀ**—ಬಲವುಳ್ಳ ಇಂದ್ರನು । **ವಾಜಿನಂ**—ಅನ್ನವುಳ್ಳ ವಾಜನೆಂಬ ಕನಿಷ್ಠ ಸಹೋದರನನ್ನೂ ಅನ್ನಲಾಭಕ್ಕಾಗಿ । **ದದಾತು**—ಕರೆತಂದು ಕೊಡಲಿ.

॥ ಭಾವಾರ್ಥ ॥

ಈ ರೀತಿ ನಮ್ಮಿಂದ ಸ್ತುತನಾದ ಇಂದ್ರನು ಋಭುಗಳಲ್ಲಿ ಎಂದರೆ ಋಭು, ವಿಭು, ವಾಜ ಎಂಬ ಮೂರುಮಂದಿ ಸಹೋದರರಲ್ಲಿ ಧನದಾತೃವಾದ ಋಭುವೆಂಬ ಜ್ಯೇಷ್ಠಸಹೋದರನನ್ನು ನಮಗೆ ಅನ್ನನನ್ನು ಒದಗಿಸಿಕೊಡುವುದಕ್ಕಾಗಿ ನಮ್ಮ ಬಳಿಗೆ ಕಳುಹಿಸಿಕೊಡಲಿ. ಹಾಗೆಯೇ ಶಕ್ತಿಯುತನಾದ ಅದೇ ಇಂದ್ರನು ನಮ್ಮ ಅನ್ನಲಾಭಾರ್ಥವಾಗಿ ಕನಿಷ್ಠ ಸಹೋದರನಾದ ವಾಜನೆಂಬುವನನ್ನು ಕಳುಹಿಸಿಕೊಡಲಿ.

## English Translation

May Indra bring to us the bounteous Ribhu Ribhukshana to partake of our sacrificial viands; may he, the mighty, bring the mighty (Vaja)

॥ ವಿಶೇಷವಿಷಯಗಳು ॥

ವ್ಯೂಳ್ಹವೆಂಬ ದಶರಾತ್ರಯಾಗದ ಒಂಭತ್ತನೆಯ ದಿವಸ ವೈಶ್ವದೇವಶಸ್ತ್ರಮಂತ್ರಗಳನ್ನು ಪಠಿಸುವಾಗ ಅಭಿಪ್ಲವತೃಚದಲ್ಲಿ **ಇಂದ್ರ ಇಷೇ ದದಾತು ನಃ** ಮತ್ತು **ತೇ ನೋ ರತ್ನಾನಿ ಧತ್ತನೇತಿ** ಎಂಬ ಎರಡು ಋಕ್ಕುಗಳನ್ನು ಋಭುದೇವತಾಕ ಋಕ್ಕುಗಳನ್ನಾಗಿ ಸೇರಿಸಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ-**ಇಂದ್ರ ಇಷೇ ದದಾತು ನಸ್ತೇನೋ ರತ್ನಾನಿ ಧತ್ತನೇತ್ಯೇಕಾ ದ್ವೇ ಚ** ಎಂಬ ಸೂತ್ರದಿಂದ (ಆ. ೮-೧೧) ವಿವೃತವಾಗಿರುವುದು.

ಋಭುಗಳ ವಿಷಯವನ್ನು ನಾವು ಸಂದರ್ಭಬಂದಾಗ ಅಲ್ಲಲ್ಲಿ ಕೆಲವು ವಿವರಣೆಗಳನ್ನು ಹೇಳಿದೇವೆ. ಆದರೂ ಅವರ ವಿಷಯಕವಾದ ಇನ್ನು ಕೆಲವು ವಿವರಗಳನ್ನು ಇಲ್ಲಿ ಕೊಡುವುದು ಅವಶ್ಯಕವಾಗಿದೆ.

**ಋಭುಗಳ ಕಲಾಕೌಶಲ್ಯದ ವಿವರಣೆ.**

ತ್ವಷ್ಟೃವಿನಿಂದ ನಿರ್ಮಿತವಾದಾಗ ಒಂದೇ ಆಗಿ ಇದ್ದ ಚಮಸಪಾತ್ರೆಯನ್ನು ನಾಲ್ಕರಷ್ಟನ್ನಾಗಿ ಮಾಡಿದಿರಿ ಎಂದು ಋಭುಗಳ ಕಲಾಕೌಶಲ್ಯವನ್ನು ಶ್ಲಾಘಿಸಿದೆ

**ಉತ ತ್ಯಂ ಚಮಸಂ ನವಂ ತ್ವಷ್ಟುರ್ದೇವಸ್ಯ ನಿಷ್ಕೃತಂ ।**
**ಅಕರ್ತ ಚತುರಃ ಪುನಃ ।** (ಋ. ಸಂ ೧-೨೦-೬)

ಎಂಬ ಋಕ್ಕಿನಲ್ಲಿ ಹೇಳಿರುವಂತೆಯೂ ಮತ್ತು ಇದೇ ವಿವರವನ್ನು ಮುಂದೆಯೂ

**ಜ್ಯೇಷ್ಠ ಆಹ ಚಮಸಾ ದ್ವಾ ಕರೇತಿ ಕನೀಯಾನ್ತ್ರೀನ್ಕೃಣವಾಮೇತ್ಯಾಹ ।**
**ಕನಿಷ್ಠ ಆಹ ಚತುರಸ್ಕರೇತಿ ತ್ವಷ್ಟ ಋಭವಸ್ತತ್ಪನಯದ್ವಚೋ ವಃ ॥**
**(ಋ. ಸಂ. ೪-೩೩-೫)**

ಇತ್ಯಾದಿ ಋಕ್ಕುಗಳಲ್ಲಿ ಹೇಳುವಂತೆಯೂ ಸಹ ಒಂದಾದ ಪಾತ್ರೆಯನ್ನು ತಮ್ಮ ಕಲಾಕೌಶಲ್ಯದಿಂದ ನಾಲ್ಕನ್ನಾಗಿ ಮಾಡಿದ ವಿಷಯವು ಪ್ರಸಿದ್ಧವಾಗಿದೆ. ಈ ಕಾರ್ಯದಲ್ಲೂ ಸಹ ತ್ವಷ್ಟೃವಿನ ಶಿಕ್ಷಣದಿಂದ ಇವರಿಗೆ ಈ ಶಕ್ತಿಯು ಬಂದಿತೆಂದೂ, ಇವರು ತ್ವಷ್ಟೃವಿನ ಶಿಷ್ಯರಾಗಿದ್ದರೆಂಬುದೂ ಬೃಹದ್ದೇವತೆಯಲ್ಲಿ ಉಕ್ತವಾಗಿದೆ.

ಸುಧನ್ವನ ಆಂಗಿರಸಸ್ಯಾಸನ್ಪುತ್ರಾಸ್ತ್ರಯಃ ಪುರಾ ।
ಋಭುರ್ವಿಭ್ವಾ ಚ ವಾಜಶ್ಚ ಶಿಷ್ಯಾಸ್ತ್ವಷ್ಟುಶ್ಚ ತೇಽಭವನ್ ॥
ಶಿಕ್ಷಯಾಮಾಸ ತಾಂಸ್ತ್ವಷ್ಟಾ ತ್ವಾಷ್ಟ್ರಂ ಯತ್ಕರ್ಮ ಕಿಂಚನ ।
ಪರಿನಿಷ್ಠಿತಕರ್ಮಾಣೋ ವಿಶ್ವೇದೇವಾ ಉಪಾಹ್ವಯನ್ ॥
ವಿಶ್ವೇಷಾಂ ತೇ ತತಶ್ಚಕ್ರುರ್ವಾಹನಾನ್ಯಾಯುಧಾನಿ ಚ ।
ಧೇನುಂ ಸಬರ್ದುಘಾಂ ಚಕ್ರುರಮೃತಂ ಸಬರುಚ್ಯತೇ ॥
ಬೃಹಸ್ಪತೇರಥಾಶ್ವಿಭ್ಯಾಂ ರಥಂ ದಿವ್ಯಂ ತ್ರಿವಂಧುರಂ ।
ಇಂದ್ರಾಯ ಚ ಹರೀ ದೇವಪ್ರಹಿತೇನಾಗ್ನಿನಾಪಿ ಯತ್ ॥
ಏಕಂ ಚಮಸಮಿತ್ಯುಕ್ತೇ ಜ್ಯೇಷ್ಠ ಆಹೇತ್ಯಥೋ ದಿವಿ ।
ಉಕ್ತ್ವಾ ತತಶ್ಚತುಶ್ಚಮಸಾನ್ ಯಥೋಕ್ತಂ ತೇನ ಹರ್ಷಿತಾಃ ॥
ತ್ವಷ್ಟಾ ಚ ಸವಿತಾ ಚೈವ ದೇವದೇವಃ ಪ್ರಜಾಪತಿಃ ॥
ಸರ್ವಾನ್ದೇವಾನ್ ಸಮಾಮಂತ್ರ್ಯ ಅಮೃತತ್ವಂ ದದುಶ್ಚ ತೇ ॥
ತೇಷಾಮಾದ್ಯಾಂತ್ಯಯೋರ್ನಾಮ್ನಾ ದೃಶ್ಯತೇ ಬಹುವತ್ ಸ್ತವಃ ।
ತೃತೀಯಸವನೇ ತೇಷಾಂ ತೈಸ್ತು ಭಾಗಃ ಪ್ರಕಲ್ಪಿತಃ ॥
ಅಪಿಬತ್ಸೋಮಮಿಂದ್ರಶ್ಚ ತೈಸ್ತತ್ರ ಸವನೇ ಸಹ ।

(ಬೃ. ದೇ ೩-೮೩ರಿಂದ ೮೯)

ಪೂರ್ವದಲ್ಲಿ ಸುಧನ್ವಪುತ್ರರಾದ ಋಭು, ವಿಭ್ವ, ವಾಜ ಎಂಬ ಮೂವರೂ ಸಹ ತ್ವಷ್ಟೃವಿನ ಶಿಷ್ಯರಾದರು. ಸಕಲಕಲಾಕುಶಲನಾದ ತ್ವಷ್ಟೃವು ಅವರಿಗೂ ಸಹ ಎಲ್ಲಾ ಕಲೆಗಳನ್ನೂ ಕಲಿಸಿದನು. ಆಗ ಕಲೆಗಳಲ್ಲಿ ಸಿಪುಣರಾದ ವಿಶ್ವೇದೇವರು ಅವರನ್ನು ಪ್ರತಿಭಟನಾದೃಷ್ಟಿಯಿಂದ ಎದುರಿಸಿದರು. ಆಗ ಇವರು ಸಕಲದೇವತೆಗಳಿಗೂ ಸಹ ಆಯುಧಗಳನ್ನೂ ವಾಹನಗಳನ್ನೂ ಸಿರ್ಮಿಸಿಕೊಟ್ಟರು. ಅನಂತರ ಅಮೃತದಾಯಿಯಾದ ಧೇನುವನ್ನು ಸೃಷ್ಟಿಸಿದರು. ಬೃಹಸ್ಪತಿ ಮತ್ತು ಅಶ್ವಿನೀದೇವತೆಗಳಿಗೆ, ಆಸನತ್ರಯಗಳುಳ್ಳ ರಥಗಳನ್ನೂ ಇಂದ್ರನಿಗೆ ಅಶ್ವಗಳನ್ನೂ ಮತ್ತು ದೇವತೆಗಳಿಂದ ದೂತನಾಗಿ ಕಳುಹಲ್ಪಟ್ಟ ಅಗ್ನಿಗೆ ಯಥೋಕ್ತವಾದುದನ್ನೂ, ಎಂದರೆ,

**ಕಿಮು ಶ್ರೇಷ್ಠಃ ಕಿಂ ಯವಿಷ್ಠೋ ನ ಆಜಗನ್ಕಿಮೀಯತೇ ದೂತ್ಯಂ೧ ಕದ್ಯದೂಚಿಮ ।**
**ನ ನಿಂದಿಮ ಚಮಸಂ ಯೋ ಮಹಾಕುಲೋಽಗ್ನೇ ಭ್ರಾತರ್ದ್ರುಣ ಇದ್ಭೂತಿಮೂದಿಮ ॥**
**ಏಕಂ ಚಮಸಂ ಚತುರಃ ಕೃಣೋತನ ತದ್ವೋ ದೇವಾ ಅಬ್ರುವನ್ತದ್ವ ಆಗಮಂ ।**
**ಸೌಧನ್ವನಾ ಯದ್ಯೇವಾ ಕರಿಷ್ಯಥ ಸಾಕಂ ದೇವೈರ್ಯಜ್ಞಿಯಾಸೋ ಭವಿಷ್ಯಥ ॥**
**ಅಗ್ನಿಂ ದೂತಂ ಪ್ರತಿ ಯದಬ್ರವೀತನಾಶ್ವಃ ಕರ್ತ್ವೋ ರಥ ಉತೇಹ ಕರ್ತ್ವಃ ।**
**ಧೇನುಃ ಕರ್ತ್ವಾ ಯುವಶಾ ಕರ್ತ್ವಾ ದ್ವಾ ತಾನಿ ಭ್ರಾತರನು ವಃ ಕೃತ್ವ್ಯೇಮಸಿ ॥**

(ಋ ಸಂ. ೧-೧೬೧-೧ ರಿಂದ ೩)

ಎಂಬ ಋಕ್ಕುಗಳಲ್ಲಿ ವರ್ಣಿಸಿರುವಂತೆ ಅಗ್ನಿಯು ದೇವದೂತನಾಗಿ ಸುಧನ್ವಪುತ್ರರಲ್ಲಿಗೆ ಹೋಗಿ ಒಂದೇ ಆಗಿರುವ ಚಮಸ ಪಾತ್ರೆಯನ್ನು ನಾಲ್ಕನ್ನಾಗಿ ಮಾಡಿ ದೇವತೆಗಳಿಗೆ ಸಹಾಯಮಾಡಿದರೆ ಆಗ ಅವರ ಜೊತೆಯಲ್ಲಿ ಸೋಮರಸ ಪಾನಕ್ಕೆ ಅರ್ಹತೆಯನ್ನು ಅವರು ಪಡೆಯುವರೆಂದು ಹೇಳಿದಾಗ ಅವರು ನಿಮಗೆ ಇದೊಂದು ಕೆಲಸಮಾತ್ರವಲ್ಲದೇ ಅಶ್ವನಿರ್ಮಾಣವಾಗಲಿ, ರಥನಿರ್ಮಾಣವಾಗಲಿ ಅಥವಾ ಧೇನುನಿರ್ಮಾಣವಾಗಲಿ, ಅಥವಾ ವೃದ್ಧರಾದ ಮಾತಾಪಿತೃಗಳನ್ನು ಯುವಕರನ್ನಾಗಿ ಮಾಡುವುದಾಗಲಿ ಇವೆಲ್ಲಾ ನಮ್ಮಿಂದ ಸಾಧ್ಯವಾಗಿದ್ದು, ಆದರಂತೆಯೇ ಈಗಲೂ ಸಹ ನಿಮಗೆ ಅಪೇಕ್ಷಿತವಾದುದನ್ನೆಲ್ಲಾ ಮಾಡಿಕೊಡುವೆವು ಎಂದು ಅದನ್ನು ಮಾಡಿಕೊಟ್ಟರು ಎಂಬ ವಿಷಯವನ್ನು ಇಲ್ಲಿ ಸೂಚಿಸಿದೆಯಾದ್ದರಿಂದ ಅಂತಹ ಕುಶಲಕಾರ್ಯದಿಂದ ಅಗ್ನಿಗೆ ಸಹಾಯವನ್ನು ಮಾಡಿದರು ಆಗ ತ್ವಷ್ಟೃವೂ ಸವಿತೃವೂ, ದೇವದೇವನಾದ ಪ್ರಜಾಪತಿಯೂ ಸಕಲದೇವತೆಗಳನ್ನೂ ಕರೆದು ಋಭುಗಳಿಗೆ ಅಮೃತತ್ವವು ಲಭಿಸುವಂತೆ ಅನುಗ್ರಹಿಸಿದರು. ಆಗ (ಅವರನ್ನು ಮೊದಲು ತಿರಸ್ಕರಿಸಿದ್ದ) ಇಂದ್ರನೂ ಸಹ ಅವರೊಂದಿಗೆ ಸೋಮರಸವನ್ನು ಪಾನಮಾಡಿದನು ಎಂಬ ಕಥೆಯು ಬೃಹದ್ದೇವತೆಯಲ್ಲಿ ಉಕ್ತವಾಗಿದೆ.

ಸಾಯಣ ಭಾಷ್ಯದಲ್ಲಿ ಹೇಳಿರುವ ಒಂದು ಕಥೆಯು ಈ ರೀತಿಯಿದೆ. **ಪುರಾ ಕಸ್ಯಚಿದೃಷೇರ್ಧೇನುರ್ಮ್ರಿತಾ। ಸ ಋಷಿಸ್ತಸ್ಯಾ ಧೇನೋರ್ವತ್ಸಂ ದೃಷ್ಟ್ವಾ ಋಭುಂ ತುಷ್ಟಾವ। ಋಭವಸ್ತತ್ಸದೃಶೀಮನ್ಯಾಂ ಧೇನುಂ ಕೃತ್ವಾ ತದಿಯೇನ ಚರ್ಮಣಾ ಸಂವೀಯ ತೇನ ವತ್ಸೇನ ಸಮಯೋಜಯನ್ನಿತಿ ।** ಹಿಂದೆ ಒಬ್ಬ ಋಷಿಯ ಧೇನುವು ಮೃತವಾದಾಗ ಅದರ ಸಣ್ಣ ಕರುವಿನ ಮೇಲಿನ ಕನಿಕರದಿಂದ ಆದಕ್ಕೆ ಸಹಾಯಮಾಡಬೇಕೆಂದು ಋಭುಗಳನ್ನು ಕುರಿತು ಪ್ರಾರ್ಥಿಸಿದನು. ಆಗ ಋಭುಗಳು ಬೇರೆ ಹಸುವನ್ನು ಸೃಷ್ಟಿಸಿ ಅದಕ್ಕೆ ಸತ್ತ ಹಸುವಿನ ಚರ್ಮವನ್ನು ಹೊದ್ದಿಸಿ ಆ ಕರುವಿನೊಂದಿಗೆ ಸೇರುವಂತೆ ಮಾಡಿದರು. ಇದು ಇವರ ಮಹಿಮೆ ಸ್ಕಂದಸ್ವಾಮಿಗಳ ವಿವರಣೆಯಂತೆ,

> **ಅತ್ರೇತಿಹಾಸಮಾಚಕ್ಷತೇ । ಋಷೇಃ ಕಸ್ಯಚಿದಗ್ನಿಹೋತ್ರಧೇನುಸ್ತರುಣವತ್ಸಾ ಮಮಾರ । ತಸ್ಯಾಂ ವಿಕರ್ತಿತಾಯಾಂ ಆರುದತಾ ವತ್ಸೇನ ಉದ್ವೇಜಿತಃ ಋಭೂನ್ ಸ್ವಪಿತರೌ ವೃದ್ಧೌ ಪುನರ್ಯುವಾನೌ ಕುರ್ವತೋ ದದರ್ಶ । ತಾನುವಾಚ। ಮಮಾಸ್ಯಗ್ನಿಹೋತ್ರಧೇನುಂ ಮೃತಾಂ ಪುನರ್ಜೀವಯತೇತಿ । ತಸ್ಯ ಸ್ವಮಾಹಾತ್ಮ್ಯೇನ ತಸ್ಮಾಚ್ಚರ್ಮಣಃ ತಾಮೇವ ಗಾಂ ಅಶೇಷಾವಯವೋಪೇತಾಂ ಚಕ್ರುಃ ಇತಿ । ತದೇತದಿಹೋಚ್ಯತೇ ನಿಶ್ಚರ್ಮಣ ಇತಿ ॥**

ಒಬ್ಬ ಋಷಿಯ ಅಗ್ನಿಹೋತ್ರಧೇನುವು ತನ್ನ ಎಳೆಯ ಕರುವನ್ನು ಬಿಟ್ಟು ಸತ್ತುಹೋಯಿತು ಅದನ್ನು ಕುಯ್ಯುವಾಗ ಆ ಎಳೆಯ ಕರುವಿನ ಆರ್ತನಾದವನ್ನು ಕೇಳಿ ಕನಿಕರದಿಂದ ಋಷಿಯು ಋಭುಗಳನ್ನು ಜ್ಞಾಪಿಸಿಕೊಂಡನು ಅವರು ತಮ್ಮ ವೃದ್ಧರಾದ ಮಾತಾಪಿತೃಗಳನ್ನು ಪುನಃ ವಯಸ್ಕರನ್ನಾಗಿ ಮಾಡುತ್ತಿದ್ದರು ಅವರ ಆ ಶಕ್ತಿಯನ್ನು ನೋಡಿ ಮೃತವಾದ ತನ್ನ ಅಗ್ನಿಹೋತ್ರಧೇನುವನ್ನೂ ಬದುಕಿಸಬೇಕೆಂದು ಕೇಳಿಕೊಂಡನು. ಅವರು ಸತ್ತುಹೋಗಿದ್ದ ಆ ಹಸುವನ್ನು ಆದೇ ವಿಕರ್ತಿತವಾದ ಚರ್ಮದ ಹೊದ್ದಿಕೆಯಿಂದ ಪೂರ್ಣವಾದ ಅವಯವಗಳುಳ್ಳದ್ದನ್ನಾಗಿ ಮಾಡಿ ಆ ಹಸುವನ್ನು ಬದುಕಿಸಿದರು ಎಂದು ಹೇಳಿದೆ.

## ಋಭುಗಳು ಸವಿತೃವಿನ ಮನೆಯಲ್ಲಿ ಆತಿಥ್ಯವನ್ನು ಪಡೆದ ವಿಚಾರ

ಈ ಇತಿಹಾಸವನ್ನು ಸ್ಕಂದಸ್ವಾಮಿಗಳು ಒಂದು ವಿಧವಾಗಿಯೂ, ಸಾಯಣರು ಇನ್ನೊಂದು ವಿಧವಾಗಿಯೂ ವಿವರಿಸಿದ್ದಾರೆ ಈ ಸಂದರ್ಭದಲ್ಲಿ,

ತ್ರೇಹಿಹಾಸಮಾಚಕ್ಷತೇ । ಋಭವೋ ಯಜ್ಞಿಯತ್ವಂ ಪ್ರಾರ್ಥಯಮಾನಾಃ ಪ್ರಜಾಪತೇಃ ಸಕಾಶಮುಗಮನ್ । ಅಥ ಪ್ರಜಾಪತಿಃ ಸವಿತಾರಮಾಹೂಯಾವೋಚತ್। ಏತೇಽಪಿ ಯಜ್ಞಿಯಾ ಭವಂತ್ವಿತಿ । ತಥೇತಿ ಸವಿತಾ ಪ್ರತಿಪದ್ಯ ತಾನ್ ಸ್ವಗೃಹಂ ನೀತ್ವಾ ದ್ವಾದಶ ದಿನಾನ್ಯಾತಿಥ್ಯಮೇಷಾಮಕಾರ್ಷೀದಿತಿ । ತದೇತದ್ವಾಮದೇವೋ ವಕ್ಷ್ಯತಿ ।

ಋಭುಗಳು ಯಜ್ಞದಲ್ಲಿ ಭಾಗವಹಿಸಿ ಹವಿಸ್ಸನ್ನು ಸ್ವೀಕರಿಸಲು ಅರ್ಹತೆಯನ್ನು ಪಡೆಯಬೇಕೆಂದು ಇಚ್ಛಿಸಿ ಪ್ರಜಾಪತಿಯ ಸಮೀಪಕ್ಕೆ ಹೋದರು. ಆಗ ಪ್ರಜಾಪತಿಯು ಸವಿತೃವನ್ನು ಕರೆದು ಇವರೂ ಸಹ ಯಜ್ಞಾರ್ಹರಾಗಲಿ (ಅದಕ್ಕೆ ಸಹಾಯಮಾಡು) ಎಂದು ಹೇಳಿದನಂತರ ಸವಿತೃವು ಹಾಗೇ ಆಗಲೆಂದು ಒಪ್ಪಿಕೊಂಡು ತನ್ನ ಮನೆಗೆ ಕರೆದುಕೊಂಡು ಹೋಗಿ ಹನ್ನೆರಡು ದಿನಗಳು ಅವರಿಗೆ ಅತಿಥಿಸತ್ಕಾರವನ್ನು ನೆರವೇರಿಸಿದನು ಎಂದು ಸ್ಕಂದಸ್ವಾಮಿಗಳು ಕಥೆಯನ್ನು ಸಂಕ್ಷೇಪವಾಗಿ ಹೇಳಿ, ಈ ಕಥಾ ಸಂದರ್ಭವನ್ನು ಸೂಚಿಸತಕ್ಕ,

ದ್ವಾದಶ ದ್ಯೂನ್ಯದಗೋಹ್ಯಸ್ಯಾತಿಥ್ಯೇ ರಣನ್ನೃಭವಃ ಸಸಂತಃ ।
ಸುಕ್ಷೇತ್ರಾಕೃಣ್ವನ್ನನಯಂತ ಸಿಂಧೂನ್ಧನ್ವಾತಿಷ್ಠನ್ನೋಷಧೀರ್ನಿಮ್ನಮಾಪಃ ॥

(ಋ ಸಂ. ೪-೩೩-೭)

ಈ ಋಕ್ಕನ್ನು ಉದಾಹರಿಸಿದ್ದಾರೆ. ಇದೇ ಸಂದರ್ಭದಲ್ಲಿ ಸಾಯಣರು **ಋಭುಗಳು ಸವಿತೃವಿನ** ಮನೆಗೆ ಹೋಗಲು ಒದಗಿದ ಕಾರಣವನ್ನು ತಿಳಿಸತಕ್ಕ ಅಂಶವನ್ನು ಸೂಚಿಸಿದ್ದಾರೆ.

ದಾಶುಷಃ ಪ್ರಾತಃಸವನಾದಿಷ್ವಗ್ನ್ಯಾದಿಭಿರಪಸಾರಿತೇಭ್ಯ ಋಭುಭ್ಯಃ ಸೋಮಪಾನಂ ದತ್ತವತಃ ಸವಿತುಃ ಗೃಹಂ ನಿವಾಸಸ್ಥಾನಂ ತೃತೀಯಸವನಾಖ್ಯಮಗಚ್ಛತ ಪ್ರಾಪ್ತಾಃ ।

ಪ್ರಾತಃಸವನಾದಿಗಳಲ್ಲ ಅಗ್ನ್ಯಾದಿದೇವತೆಗಳಿಂದ ತಿರಸ್ಕರಿಸಲ್ಪಟ್ಟು ಹೊರಕ್ಕೆ ಕಳುಹಿಸಲ್ಪಟ್ಟ ಋಭುಗಳಾದ ನಿಮಗೆ ಸೋಮಪಾನವನ್ನು ಅರ್ಪಿಸಿದ ಸವಿತೃವಿನ ತೃತೀಯಸವನರೂಪವಾದ ಯಜ್ಞಗೃಹವನ್ನು ಪ್ರವೇಶಿಸಿದಿರಿ ಎಂದು ಅಗ್ನ್ಯಾದಿಗಳಿಂದ ಸಂಭವಿಸಿದ ತಿರಸ್ಕಾರದ ವಿಷಯವನ್ನೂ ಹೇಳಿದ್ದಾರೆ ಈ ವಿಷಯವು ಐತರೇಯ ಬ್ರಾಹ್ಮಣದಲ್ಲಿ ವಿಶದವಾಗಿ ಉಕ್ತವಾಗಿದೆ

ಋಭವೋ ವೈ ದೇವೇಷು ತಪಸಾ ಸೋಮಪೀಥಮಭ್ಯಜಯಂಸ್ತೇಭ್ಯಃ ಪ್ರಾತಃಸವನೇ ವಾಚಿ ಕಲ್ಪಯಿಷಂಸ್ತಾನಗ್ನಿರ್ವಸುಭಿಃ ಪ್ರಾತಃಸವನಾದನುದತ ತೇಭ್ಯೋ ಮಾಧ್ಯಂದಿನೇ ಸವನೇ ವಾಚಿ ಕಲ್ಪಯಿಷಂಸ್ತಾನಿಂದ್ರೋ ರುದ್ರೈರ್ಮಾಧ್ಯಂದಿನಾತ್ಸವನಾದನುದತ ತೇಭ್ಯಸ್ತೃತೀಯಸವನೇ ವಾಚಿ ಕಲ್ಪಯಿಷಂಸ್ತಾನ್ವಿಶ್ವೇ ದೇವಾ ಅನೋನುದ್ಯಂತ ನೇಹ ಪಾಸ್ಯಂತಿ ನೇಹೇತಿ ಸ ಪ್ರಜಾಪತಿರಬ್ರವೀತ್ಸವಿತಾರಂ ತವ ವಾ ಇಮೇಽಂತೇವಾಸಾಸ್ತ್ವಮೇವೈಭಿಃ ಸಂಪಿಬಸ್ವೇತಿ ಸ ತಥೇತ್ಯಬ್ರವೀತ್ಸವಿತಾ ತಾನ್ವೈಃ ತ್ವಮುಭಯತಃ ಪರಿಪಿಬೇತಿ ತಾನ್ಪ್ರಜಾಪತಿರುಭಯತಃ ಪರ್ಯಪಿಬತ್ । ಇತಿ ॥ (ಐ. ಬ್ರಾ ೩ ೩೦)

ಋಭುಗಳು ತಮ್ಮ ತಪಃಸಾಧನೆಯಿಂದಲೂ ಉತ್ಕಟವಾದ ಇಚ್ಛೆಯಿಂದಲೂ ದೇವತೆಗಳ ನಡುವೆ ಸೋಮಪಾನವನ್ನು ಸಂಪಾದಿಸಿದರು. ಮೊದಲು ಪ್ರಾತಃಸವನದಲ್ಲಿ ಅದನ್ನು ಹೊಂದಲು ಇಚ್ಛಿಸಿದಾಗ ಅಗ್ನಿಯು ವಸುಗ

ಗಳೊಂದಿಗೆ, ಸೇರಿಕೊಂಡು ಅವರನ್ನು ತಿರಸ್ಕರಿಸಿ ಅಟ್ಟಿಬಿಟ್ಟನು ಆಗ ಮಾಧ್ಯಂದಿನ ಸವನದಲ್ಲಿ ಅದನ್ನು ಪಡೆಯಲಿಚ್ಛಿಸಿದಾಗ ಇಂದ್ರನು ರುದ್ರರೊಂದಿಗೆ ಸೇರಿಕೊಂಡು ಅವರನ್ನು ಅಟ್ಟಿಬಿಟ್ಟನು ಪುನಃ ತೃತೀಯಸವನದಲ್ಲಿ ಅದನ್ನು ಪಡೆಯಲಿಚ್ಛಿಸಿದಾಗ ವಿಶ್ವೇದೇವತೆಗಳು ' ನೀವು ಇಲ್ಲಿ ಖಂಡಿತ ಸೋಮಪಾನಮಾಡಲರ್ಹರಲ್ಲ, ನೀವು ಮಾಡಕೂಡದು ' ಎಂದು ಕಠಿಣವಾದ ಮಾತಿನಿಂದ ಅಲ್ಲಿಯೂ ತಿರಸ್ಕರಿಸಿದರು. ಆಗ ಪ್ರಜಾಪತಿಯು ಸವಿತೃವನ್ನು ಕುರಿತು ' ಈ ಋಭುಗಳು ನಿನ್ನ ಶಿಷ್ಯರು. ನೀನು ಇವರೊಂದಿಗೆ ಸೋಮಪಾನವನ್ನು ಮಾಡು ' ಎಂದನು. ಅನಂತರ ಸವಿತೃವು ಒಪ್ಪಿಕೊಂಡನು. ಪ್ರಜಾಪತಿಯೂ ಸಹ ಅವರ ಅಕ್ಕಪಕ್ಕದಲ್ಲೇ ಸೋಮರಸವನ್ನು ಪಾನಮಾಡಿದನು, ಎಂಬುದಾಗಿ ಐತರೇಯ ಬ್ರಾಹ್ಮಣದಲ್ಲಿ ವಿಸ್ತಾರವಾಗಿ ಹೇಳಿರುವ ಸನ್ನಿವೇಶವನ್ನು ಸಾಯಣರು ಸೂಕ್ಷ್ಮವಾಗಿ ಹೇಳಿದ್ದಾರೆ.

### ಋಭುಗಳು ಯಾರು ?

ಋಭುಗಳೆಂಬುವರು ಪೂರ್ವದಲ್ಲಿ ಮನುಷ್ಯರಾಗಿದ್ದು ತಮ್ಮ ಉತ್ತಮವಾದ ನಡವಳಿಕೆಗಳಿಂದಲೂ ಸತ್ಕರ್ಮಾನುಷ್ಠಾನದಿಂದಲೂ ದೇವತ್ವವನ್ನು ಪಡೆದರೆಂದು ಋಗ್ವೇದದಲ್ಲಿ ಅನೇಕಕಡೆ ಹೇಳಲ್ಪಟ್ಟಿರುವುದು. ಪೂರ್ವದಲ್ಲಿ ಅಂಗಿರಾಋಷಿಗೆ ನೀತಿಮಂಜರಿ ಎಂಬ ಓರ್ವ ಪುತ್ರನಿದ್ದನು ಇವನ ವಂಶದಲ್ಲಿ ಸುಧನ್ವಾ ಎಂಬ ಋಷಿಗೆ ಋಭು, ವಿಭು, ವಾಜ ಎಂಬ ಮೂವರು ಪುತ್ರರಿದ್ದರು. ಇವರು ಸತ್ಕರ್ಮಾನುಷ್ಠಾನ, ದೇವತೆಗಳಿಗೆ ಸಹಾಯಮಾಡುವುದು ಮೊದಲಾದ ಒಳ್ಳೆಯ ಕೆಲಸಗಳಿಂದ ದೇವತೆಗಳ ಜನ್ಮವನ್ನು ಪಡೆದರು ಅಥವಾ ದೇವತೆಗಳಾದರು ಎಂದು ಪ್ರತೀತಿ ಇದೆ. ಈ ಋಭು ಮೊದಲಾದ ಸುಧನ್ವನ ಮೂವರು ಪುತ್ರರಿಗೂ ಋಭುಗಳೆಂದು ಹೇಳುವ ರೂಢಿಇದೆ. ಹಿರಿಯವನ ಹೆಸರಿನಿಂದಲೇ ಈ ಮೂವರು ಪುತ್ರರೂ ಕರೆಯಲ್ಪಡುವರು ಇವರು ತ್ವಷ್ಟೃವಿನ ಶಿಷ್ಯರಾದುದರಿಂದ ಇವರನ್ನು ದೇವಶಿಲ್ಪಿಗಳೆಂದೂ ಹೇಳುವರು. ಇವರು ಇಂದ್ರನೇ ಮೊದಲಾದ ದೇವತೆಗಳಿಗೆ ಬೇಕಾದ ಸಲಕರಣೆಗಳನ್ನು ಎಂದರೆ ಇಂದ್ರನ ರಥವನ್ನೂ ಅಗ್ನಿಯ ಚಮಸಪಾತ್ರೆಯನ್ನೂ ಮಾಡಿಕೊಟ್ಟರೆಂದು ಅಲ್ಲಲ್ಲಿ ಹೇಳಿದೆ. ಈ ಸೂಕ್ತದಲ್ಲಿ ಇವರು ಮಾಡಿದ ಕೆಲವು ಕೆಲಸಗಳ ವಿವರಣೆ ಇರುವುದು. ಇವರಿಗೆ ಅದ್ಭುತವಾದ ಶಕ್ತಿಯಿರುವುದೆಂದೂ ಇವರು ಎಂತಹ ಕೆಲಸಗಳನ್ನಾದರೂ ಮಾಡಲು ಸಮರ್ಥರೆಂದೂ ಅಲ್ಲಲ್ಲಿ ವರ್ಣನೆಗಳಿವೆ. ದೇವತೆಗಳಿಗಿರುವ ಶಕ್ತಿಸಾಮರ್ಥ್ಯಗಳೇ ಇವರಿಗೂ ಇರುವುದರಿಂದ ಇವರನ್ನು ದೇವತೆಗಳ ಗುಂಪಿಗೆ ಸೇರಿದವರೆಂದು ಭಾವಿಸಿ ಋಷಿಗಳು ಇವರನ್ನೂ ಇವರು ಮಾಡಿರುವ ಕಾರ್ಯಗಳನ್ನೂ ವಿಧವಿಧವಾಗಿ ವರ್ಣಿಸಿರುವರು. ಇವರು ಸೂರ್ಯಮಂಡಲದಲ್ಲಿ ವಾಸವಾಗಿದ್ದು ಸೂರ್ಯರಶ್ಮಿಗಳ ಮೂಲಕ ಕಾರ್ಯಗಳನ್ನು ಮಾಡುವರೆಂದು ಪ್ರತೀತಿ ಇರುವುದು

## ತೊಂಭತ್ತನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ದಶಮೇಽನುವಾಕೇ ದಶ ಸೂಕ್ತಾನಿ । ತತ್ರ ಗೌರ್ಧಯತೀತಿ ದ್ವಾದಶರ್ಚಮಾದ್ಯಂ ಸೂಕ್ತಮಾಂಗಿರಸಸ್ಯ ಬಿಂದುನಾಮ್ನಃ ಪೂತದಕ್ಷನಾಮ್ನೋ ವಾರ್ಷಂ ಗಾಯತ್ರಂ ಮರುದ್ದೇವತಾಕಂ । ತಥಾ**

**ಚಾನುಕ್ರಮ್ಯತೇ । ಗೌರ್ಧಯತಿ ದ್ವಾದಶ ಬಿಂದುಃ ಪೂತದಕ್ಷೋ ವಾ ಮಾರುತಮಿತಿ ॥ ಸೂಕ್ತವಿನಿ-ಯೋಗೋ ಲೈಂಗಿಕಃ ॥ ಪ್ರಾತಃಸವನೇ ಸೋಮಾತಿರಿಕ್ತ ಏಕಂ ಶಸ್ತ್ರಮುಪಜಾಯತೇ । ತತ್ರಾದ್ಯ-ಸ್ತೃಚೋಽನುರೂಪಃ । ಸೂತ್ರಿತಂ ಚ । ಅಸ್ತಿ ಸೋಮೋ ಅಯಂ ಸುತೋ ಗೌರ್ಧಯತಿ ಮರುತಾಮಿತಿ ಸ್ತೋತ್ರಿಯಾನುರೂಪೌ । ಆ. ೬-೭ । ಇತಿ ॥**

ಅನುವಾದವು—ಋಗ್ವೇದಸಂಹಿತೆಯ ಎಂಟನೆಯ ಮಂಡಲದ ಹತ್ತನೆಯ ಅನುವಾಕದಲ್ಲಿ ಹತ್ತು ಸೂಕ್ತಗಳಿರುವವು ಅವುಗಳಲ್ಲಿ **ಗೌರ್ಧಯತಿ** ಎಂಬ ಸೂಕ್ತವು ಮೊದಲನೆಯದು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು ಈ ಸೂಕ್ತಕ್ಕೆ ಅಂಗಿರಸ ಪುತ್ರನಾದ ಬಿಂದುಃ ಎಂಬುವನು ಅಥವಾ ಪೂತದಕ್ಷನೆಂಬುವನು ಋಷಿಯು, ಮರುತ್ತುಗಳು ದೇವತೆಯು ; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಗೌರ್ಧಯತಿ ದ್ವಾದಶ ಬಿಂದುಃ ಪೂತದಕ್ಷೋ ವಾ ಮಾರುತಂ** ಎಂದು ಹೇಳಿರುವುದು. ಸೂಕ್ತವಿನಿಯೋಗವು ಲೈಂಗಿಕವು. ಪ್ರಾತಸ್ಸವನಕಾಲದಲ್ಲಿ ಸೋಮದೇವತೆಯನ್ನುದ್ದೇಶಿಸಿ ಪಠಿಸುವ ಅತಿರಿಕ್ತಮಂತ್ರಗಳಲ್ಲಿ ಒಂದು ಶಸ್ತ್ರಮಂತ್ರವನ್ನು ಪಠಿಸಬೇಕು. ಆ ಸಂದರ್ಭದಲ್ಲಿ ಈ ಸೂಕ್ತದ ಮೊದಲಿನ ಮೂರು ಋಕ್ಕುಗಳನ್ನು ಅನುರೂಪತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ-**ಅಸ್ತಿ ಸೋಮೋ ಅಯಂ ಸುತೋ ಗೌರ್ಧಯತಿ ಮರುತಾಮಿತಿ ಸ್ತೋತ್ರಿಯಾನುರೂಪೌ** ಎಂಬ ಸೂತ್ರದಿಂದ (ಆ. ೬-೭) ವಿವೃತವಾಗಿರುವುದು.

## ಸೂಕ್ತ—೯೪

ಮಂಡಲ—೮ । ಅನುವಾಕ—೧೦ । ಸೂಕ್ತ—೯೪ ।
ಅಷ್ಟಕ—೬ । ಅಧ್ಯಾಯ—೬ ॥ ವರ್ಗ—೨೮, ೨೯ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ।
ಋಷಿಃ—ಬಿಂದುಃ ಪೂತದಕ್ಷೋ ವಾ ।
ದೇವತಾ—ಮರುತಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಗೌರ್ಧಯತಿ ಮರುತಾಂ ಶ್ರವಸ್ಯುರ್ಮಾತಾ ಮಘೋನಾಂ ।
ಯುಕ್ತಾ ವಹ್ನೀ ರಥಾನಾಂ ॥ ೧ ॥

॥ ಪದಪಾಠಃ ॥

ಗೌಃ । ಧಯತಿ । ಮರುತಾಂ । ಶ್ರವಸ್ಯುಃ । ಮಾತಾ । ಮಘೋನಾಂ ।
ಯುಕ್ತಾ । ವಹ್ನಿಃ । ರಥಾನಾಂ ॥ ೧ ॥

॥ ಸಾಯಣಭಾಷ್ಯಂ ॥

ಮಘೋನಾಂ ಧನವತಾಂ ಮರುತಾಂ ಮಾತಾ ನಿರ್ಮಾತ್ರೀ ಗೌಃ ಪೃಶ್ನಿರೂಪಾ । ಪೃಶ್ನಿಯೈ ವೈ ಪಯಸೋ ಮರುತೋ ಜಾತಾ ಇತಿ ಶ್ರುತೇಃ । ಯದ್ವಾ । ಗೌರ್ಮಾಧ್ಯಮಿಕೀ ವಾಕ್ । ತಸ್ಯಾ ಏವ ಮಧ್ಯಮಸ್ಥಾನೇ ಮರುತಾಮಪಿ ವರ್ತನಾತ್ತೇಷಾಂ ತತ್ಪುತ್ರತ್ವಮುಪಚರ್ಯತೇ । ಧಯತಿ । ಸೋಮಂ ಪಿಬತಿ ಪಾಯಯತಿ ವಾ ಸ್ವಪುತ್ರಾನ್ಮರುತಃ । ಕಮಿಚ್ಛಂತೀ । ಶ್ರವಸ್ಯುರನ್ನಂ ಕಾಮಯಮಾನಾ । ಕೀದೃಶೀ । ರಥಾನಾಂ ಮಾರುತಾನಾಂ ವಹ್ನಿಃ ಪೃಷತೀಭಿರ್ವಡವಾಭಿರ್ವೋಢ್ರೀ ಸಂಯೋಜಯಿತ್ರೀ ಸಾ ಯುಕ್ತಾ ಸರ್ವತ್ರ ಸಮಂತಾತ್ಪೂಜ್ಯಾ ಭವತಿ ॥

॥ ಪ್ರತಿಪದಾರ್ಥ ॥

ಮಘೋನಾಂ—ಧನವಂತರಾದ । ಮರುತಾಂ—ಮರುದ್ದೇವತೆಗಳಿಗೆ । ಮಾತಾ—ತಾಯಿಯಾದ । ಗೌಃ—ಪೃಶ್ನಿಯೆಂಬ ಗೋವು ಅಥವಾ ಮಾಧ್ಯಮಿಕವಾಕ್ । ಧಯತಿ—ಸೋಮವನ್ನು ಪಾನಮಾಡುತ್ತದೆ ಅಥವಾ ತನ್ನ ಪುತ್ರರಾದ ಮರುತ್ತುಗಳಿಗೆ ಸೋಮಪಾನಮಾಡಿಸುತ್ತಾಳೆ । ಶ್ರವಸ್ಯುಃ—ಅನ್ನವನ್ನಿಚ್ಛಿಸುವವಳೂ । ರಥಾನಾಂ—ಮರುದ್ದೇವತೆಗಳ ರಥಗಳಿಗೆ । ವಹ್ನಿಃ—ಪೃಷತೀ ಎಂಬ ಅಶ್ವಗಳನ್ನು । ಯುಕ್ತಾ—ಹೂಡುವವಳೂ ಆದ ಮರುದ್ದೇವತೆಗಳ ಮಾತೆಯು ಸರ್ವತ್ರ ಪೂಜ್ಯಳಾಗಿದ್ದಾಳೆ.

॥ ಭಾವಾರ್ಥ ॥

ಧನವಂತರಾದ ಮರುದ್ದೇವತೆಗಳಿಗೆ ಮಾತೆಯಾದ ಪೃಶ್ನಿಯು ಸೋಮವನ್ನು ಪಾನಮಾಡುತ್ತಾಳೆ ಅಥವಾ ತನ್ನ ಪುತ್ರರಾದ ಮರುತ್ತುಗಳಿಗೆ ಪಾನಮಾಡಿಸುತ್ತಾಳೆ ಅನ್ನವನ್ನಿಚ್ಛಿಸುವವಳೂ ಮರುದ್ದೇವತೆಗಳ ರಥಗಳಿಗೆ ಅವರ ಅಶ್ವಗಳಾದ ಪೃಷತೀ ಎಂಬ ವಾಹನಗಳನ್ನು ಯೋಜಿಸುವವಳೂ ಆದ ಪೃಶ್ನಿಯೆಂಬ ಗೋರೂಪಳಾದ ಮರುನ್ಮಾತೆಯು ಎಲ್ಲರಿಂದಲೂ ಪೂಜಿಸಲ್ಪಡುತ್ತಾಳೆ

## English Translation

The cow (Prishni), the food-desiring mother of the wealthy Maruts, drinks the (Soma), she is worthy of all honour who yokes (the mares) to their chariots.

॥ ಸಂಹಿತಾಪಾಠಃ ॥

ಯಸ್ಯಾ ದೇವಾ ಉಪಸ್ಥೇ ವ್ರತಾ ವಿಶ್ವೇ ಧಾರಯಂತೇ ।
ಸೂರ್ಯಾಮಾಸಾ ದೃಶೇ ಕಂ ॥ ೨ ॥

॥ ಪದಪಾಠಃ ॥

ಯಸ್ಯಾಃ । ದೇವಾಃ । ಉಪಸ್ಥೇ । ವ್ರತಾ । ವಿಶ್ವೇ । ಧಾರಯಂತೇ ।
ಸೂರ್ಯಾಮಾಸಾ । ದೃಶೇ । ಕಂ ॥ ೨ ॥

॥ ಸಾಯಣಭಾಷ್ಯಂ ॥

ಗೌಃ ಸರ್ವದೇವಮಯಿಾತ್ಯಾಹ । ಯಸ್ಯಾ ಮರುತಾಂ ಮಾತುರ್ಗೋರುಪಸ್ಥೇ ವರ್ತಮಾನಾ ವಿಶ್ವೇ ಸರ್ವೇ ದೇವಾ ವ್ರತಾ ವ್ರತಾನಿ ಸ್ವಸ್ವಕರ್ಮಾಣಿ ಧಾರಯಂತೇ ಬಿಭ್ರತಿ । ಇಯಮೇವಾಸ್ಮಾಕಂ ಸ್ತವಯೋರ್ಮಿಶ್ರಿತಸ್ಯ ಸೋಮಸ್ಯ ದಾತ್ರೀತಿ ಸರ್ವೇ ತತ್ಸಮಿಾಪೇ ತಿಷ್ಠಂತೀತ್ಯರ್ಥಃ । ಕಿಂಚ ಸೂರ್ಯಾ-ಮಾಸಾ ॥ ಮಾತಿ ಸ್ವಕಲಾಭಿಸ್ತಿಥೀನಿತಿ ಮಾಶ್ಚಂದ್ರಮಾಃ । ದೇವತಾದ್ವಂದ್ವೇ ಚೇತ್ಯುಭಯಪದಪ್ರಕೃತಿ-ಸ್ವರತ್ವಂ ॥ ಸೂರ್ಯಾಚಂದ್ರಮಸೌ ದೃಶೇ ದರ್ಶನಾಯ ಸರ್ವಲೋಕಪ್ರಕಾಶನಾಯ ಚ ಯಸ್ಯಾ ಗೋಃ ಸಮಿಾಪೇ ಕಂ ಸುಖೇನ ವರ್ತಮಾನೌ ಭವತಃ । ಸೇಯಂ ಗೌಃ ಸೋಮಂ ಧಯತೀತಿ ಪೂರ್ವೇಣ ಸಮನ್ವಯಃ ॥

॥ ಪ್ರತಿಪದಾರ್ಥ ॥

**ಯಸ್ಯಾಃ**—ಗೋರೂಪಳಾದ ಮರುದ್ದೇವತೆಗಳ ಮಾತೆಯ । **ಉಪಸ್ಥೇ**—ಸಮಿಾಪದಲ್ಲಿ । **ವಿಶ್ವೇ ದೇವಾಃ**—ಸಮಸ್ತ ದೇವತೆಗಳಿಗೂ । **ವ್ರತಾ**—ತಮ್ಮ ತಮ್ಮ ಕರ್ಮಗಳನ್ನು । **ಧಾರಯಂತೆ**—ಧರಿಸುತ್ತಾರೆ ಎಂದರೆ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿ ಗೋಮಾತೆಯ ಸಮಿಾಪದಲ್ಲಿ ನೆಲೆಸಿರುತ್ತಾರೆ । **ಸೂರ್ಯಾಮಾಸಾ**—ಸೂರ್ಯಚಂದ್ರರು । **ದೃಶೇ**—ಜನರಿಗೆ ಗೋಚರಿಸುವುದಕ್ಕಾಗಿ । **ಕಂ**—ಆ ಗೋವಿನ ಸಮಿಾಪದಲ್ಲಿಯೇ ಸುಖವಾಗಿ ನೆಲಸಿರುತ್ತಾರೆ.

॥ ಭಾವಾರ್ಥ ॥

ಮರುದ್ದೇವತೆಗಳ ಮಾತೆಯಾದ ಪೃಶ್ನಿಯೆಂಬ ಗೋಮಾತೆಯ ಸಮಿಾಪದಲ್ಲಿ ಸಮಸ್ತ ದೇವತೆಗಳೂ ತಮ್ಮ ತಮ್ಮ ಕರ್ಮಗಳಲ್ಲಿ ನಿರತರಾಗಿ ನೆಲಸಿರುತ್ತಾರೆ ಸೂರ್ಯಚಂದ್ರರೂ ಸಹ ಅದೇರೀತಿ ಆ ಗೋಮಾತೆಯ ಸಮಿಾಪದಲ್ಲಿಯೇ ಲೋಕದ ಜನರಿಗೆ ಗೋಚರಿಸುತ್ತಾ ಸುಖವಾಗಿ ನೆಲೆಸಿರುತ್ತಾರೆ.

## English Translation

She, in whose presence all the gods observe their functions, and the sun and moon move in peace to enlighten the world.

॥ ಸಂಹಿತಾಪಾಠಃ ॥

ತತ್ಸು ನೋ ವಿಶ್ವೇ ಅರ್ಯ ಆ ಸದಾ ಗೃಣಂತಿ ಕಾರವಃ ।
ಮರುತಃ ಸೋಮಪೀತಯೇ ॥ ೩ ॥

॥ ಪದಪಾಠಃ ॥

ತತ್ । ಸು । ನಃ । ವಿಶ್ವೇ । ಅರ್ಯಃ । ಆ । ಸದಾ । ಗೃಣಂತಿ । ಕಾರವಃ ।
ಮರುತಃ । ಸೋಮಽಪೀತಯೇ ॥ ೩ ॥

॥ ಸಾಯಣಭಾಷ್ಯಂ ॥

ಅಯಾಃ ಸ್ತೋತ್ರಕರಣಾರ್ಥಮಿತಸ್ತತೋ ಗಂತಾರೋ ನೋಽಸ್ಮದೀಯಾ ವಿಶ್ವೇ ಸರ್ವೇ ಕಾರವಃ ಸ್ತೋತಾರಸ್ತನ್ಮರುತಾಂ ಬಲಂ ಸದಾ ಸರ್ವದಾ ಗೃಣಂತಿ । ಆಭಿಮುಖ್ಯೇನ ಸ್ತುತಿಭಿಃ ಸ್ತುವಂತಿ। ಕಿಮರ್ಥಂ। ಸೋಮಪೀತಯೇಽಸ್ಮಾಭಿರ್ದೀಯಮಾನಂ ಸೋಮಂ ಪಾತುಂ। ಮರುತ ಏತನ್ನಾಮಕಾ ದೇವಾ ಅಸ್ಮಾಭಿರಾಹ್ವಾತವ್ಯಾಃ ಖಲು । ತತಃ ಪುರಸ್ತಾದ್ಬಲಂ ಸ್ತುವಂತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಯಾಃ**—ಗಮನಶೀಲರಾದವರೂ । **ನಃ**—ನಮ್ಮ ಸಂಬಂಧಿಗಳಾದವರೂ ಆದ । **ವಿಶ್ವೇ ಕಾರವಃ**—ಸಮಸ್ತ ಸ್ತೋತೃಜನರೂ । **ತತ್**—ಆ ಮರುದ್ದೇವತೆಗಳ ಬಲವನ್ನು (ಮಹತ್ವನ್ನು) । **ಸದಾ**—ಸರ್ವಕಾಲದಲ್ಲಿಯೂ । **ಸು ಆ ಗೃಣಂತಿ**—ಚೆನ್ನಾಗಿ ಸ್ತುತಿಸುತ್ತಾರೆ। **ಸೋಮಪೀತಯೇ**—ನಮ್ಮಿಂದ ಅರ್ಪಿತವಾಗುವ ಸೋಮವನ್ನು ಪಾನಮಾಡುವುದಕ್ಕಾಗಿ । **ಮರುತಃ**—ಆ ಮರುದ್ದೇವತೆಗಳು ನಮ್ಮಿಂದ ಆಹ್ವಾನಿಸಲ್ಪಡುತ್ತಾರೆ

॥ ಭಾವಾರ್ಥ ॥

ಸ್ತೋತ್ರಮಾಡುವುದಕ್ಕಾಗಿ ಯಜ್ಞವೇದಿಯಲ್ಲಿ ಇಲ್ಲಿಂದಲ್ಲಿಗೆ ಹೋಗುತ್ತಿರುವವರೂ, ನಮಗೆ ಸೇರಿದವರೂ ಆದ ಎಲ್ಲಾ ಸ್ತೋತೃಜನರೂ ಮರುದ್ದೇವತೆಗಳ ಮಹತ್ವ್ವರೂಪವನ್ನು ಸರ್ವಕಾಲದಲ್ಲಿಯೂ ಚೆನ್ನಾಗಿ ಸ್ತುತಿಸುತ್ತಾರೆ ಮತ್ತು ನಾವು ಅರ್ಪಿಸುವ ಸೋಮವನ್ನು ಪಾನಮಾಡುವುದಕ್ಕಾಗಿ ಮರುದ್ದೇವತೆಗಳು ನಮ್ಮಿಂದ ಪ್ರಾರ್ಥಿತರಾಗಿ ಆಹ್ವಾನಿಸಲ್ಪಡುತ್ತಾರೆ.

English Translation

Therefore all our priests in their worship always sing the Maruts that they may drink the Soma

॥ ಸಂಹಿತಾಪಾಠಃ ॥

ಅಸ್ತಿ ಸೋಮೋ ಅಯಂ ಸುತಃ ಪಿಬಂತ್ಯಸ್ಯ ಮರುತಃ ।

ಉತ ಸ್ವರಾಜೋ ಅಶ್ವಿನಾ ॥ ೪ ॥

॥ ಪದಪಾಠಃ ॥

ಅಸ್ತಿ । ಸೋಮಃ । ಅಯಂ । ಸುತಃ । ಪಿಬಂತಿ । ಅಸ್ಯ । ಮರುತಃ ।

ಉತ । ಸ್ವಽರಾಜಃ । ಅಶ್ವಿನಾ ॥ ೪ ॥

॥ ಸಾಯಣಭಾಷ್ಯಂ ॥

**ಪೂರ್ವತ್ರಾಭಿಹಿತ ಏವ ಶಸ್ತ್ರೇಽಸ್ತಿ ಸೋಮ ಇತಿ ಸ್ತೋತ್ರಿಯಸ್ತೃಚಃ । ಸೂತ್ರಂ ತು ಪೂರ್ವೇಣ ಸಹೋದಾಹೃತಂ ॥**

**ಅಯಂ ಪುರೋವರ್ತೀ ಸೋಮಃ ಸುತೋ ಮರುದರ್ಥಮಸ್ಮಾಭಿರಭಿಷುತೋಽಸ್ತಿ । ವಿದ್ಯತೇ । ತಸ್ಮಾದಸ್ಯ । ಅನ್ವಾದೇಶೇ । ಏನಂ ಸುತಂ ಸೋಮಂ ಸ್ವರಾಜಃ ಸ್ವಯಂ ದೀಪ್ಯಮಾನಾಃ । ಸ್ವತೇಜಸಾ ನಾನ್ಯದೀಯೇನೇತ್ಯರ್ಥಃ । ತಾದೃಶಾ ಮರುತಃ ಪಿಬಂತಿ । ಉತಾಪಿ ಚಾಶ್ವಿನಾಶ್ವಿನೌ ಚ ಸೋಮಂ ಪಿಬತಃ ॥**

॥ ಪ್ರತಿಪದಾರ್ಥ ॥

**ಅಯಂ ಸೋಮಃ**—ನಮ್ಮ ಮುಂದಿರುವ ಈ ಸೋಮವು । **ಸುತಃ ಅಸ್ತಿ**—ಮರುದ್ದೇವತೆಗಳಿಗಾಗಿ ನಮ್ಮಿಂದ ಹಿಂಡಲ್ಪಟ್ಟಿದೆ (ಆದ್ದರಿಂದ) । **ಅಸ್ಯ**—ಈ ಸೋಮವನ್ನು । **ಸ್ವರಾಜಃ**—ಸ್ವಪ್ರಭೆಯಿಂದ ಬೆಳಗುವ । **ಮರುತಃ**—ಮರುದ್ದೇವತೆಗಳು । **ಪಿಬಂತಿ**—ಪಾನಮಾಡುತ್ತಾರೆ । **ಉತ**—ಮತ್ತು । **ಅಶ್ವಿನಾ**—ಅಶ್ವಿನೀ ದೇವತೆಗಳೂ ಈ ಸೋಮವನ್ನು ಪಾನಮಾಡುತ್ತಾರೆ

॥ ಭಾವಾರ್ಥ ॥

ನಮ್ಮ ಮುಂದೆ ಸಿದ್ಧಪಡಿಸಲ್ಪಟ್ಟಿರುವ ಈ ಸೋಮರಸವು ಮರುದ್ದೇವತೆಗಳ ಪಾನಾರ್ಥವಾಗಿ ನಮ್ಮಿಂದ ಹಿಂಡಲ್ಪಟ್ಟಿದೆ. ಆದ್ದರಿಂದ ಸ್ವಪ್ರಭೆಯಿಂದ ಬೆಳಗುವ ಮರುದ್ದೇವತೆಗಳೂ ಮತ್ತು ಅಶ್ವಿನೀದೇವತೆಗಳೂ ಈ ಸೋಮವನ್ನು ಪಾನಮಾಡುತ್ತಾರೆ.

## English Translation

This soma is effused (by us); the self-resplendent Maruts drink of it and the Aswins.

॥ ಸಂಹಿತಾಪಾಠಃ ॥

ಪಿಬಂತಿ ಮಿತ್ರೋ ಅರ್ಯಮಾ ತನಾ ಪೂತಸ್ಯ ವರುಣಃ ।
ತ್ರಿಷಧಸ್ಥಸ್ಯ ಜಾವತಃ ॥ ೫ ॥

॥ ಪದಪಾಠಃ ॥

ಪಿಬಂತಿ । ಮಿತ್ರಃ । ಅರ್ಯಮಾ । ತನಾ । ಪೂತಸ್ಯ । ವರುಣಃ ।
ತ್ರಿಽಸಧಸ್ಥಸ್ಯ । ಜಾಽವತಃ ॥ ೫ ॥

॥ ಸಾಯಣಭಾಷ್ಯಂ ॥

**ನ ಕೇವಲಂ ಮರುತ ಏವ ಸೋಮಪಾತಾರಃ ಕ್ಿಂತ್ವೇತೇಽಪೀತ್ಯಾಹ । ಮಿತ್ರಃ ಸರ್ವೇಷಾಂ ಸ್ವಸ್ವಕರ್ಮಣಿ ಪ್ರವರ್ತಕತ್ವಾತ್ಸಖಿಭೂತೋಽರ್ಯಮಾ ಚ ವರುಣೋ ದುಃಖಾದೀನಾಂ ಶತ್ರೂಣಾಂ ನಾವರಿತಾ ನಿವಾರಕಃ । ಏತನ್ನಾಮಕಾಸ್ತ್ರಯೋ ದೇವಾಸ್ತನಾ । ತತನ್ಮೂರ್ಣಾರ್ಸ್ತುಕೇನೇತಿ ತನಂ ದಶಾಪವಿತ್ರಂ ॥ ಸುಪಾಂ ಸುಲುಗಿತಿ ತೃತೀಯಾಯಾ ಆಲಾದೇಶಃ । ತೆನಾದ್ಯುದಾತ್ತಃ ॥ ತನಾ ಪೂತಸ್ಯ ಶೋಧಿತಂ ತ್ರಿಸಧಸ್ಥಸ್ಯ । ಸಹ ತಿಷ್ಠಂತ್ಯತ್ರೇತಿ ಸದಸ್ಥಂ ಸ್ಥಾನಂ । ದ್ರೋಣಕಲಶಾಧವನೀಯಪೂತಭೃದಾತ್ಮಾನಿ ತ್ರೀಣಿ ಸ್ಥಾನಾನಿ ಯಸ್ಯ ತತ್ತಥೋಕ್ತಂ ತಾದೃಶಂ ಜಾವತಃ ಸ್ತುತ್ಯಜನವಂತಮಿಮಂ ಸೋಮಂ ಪಿಬಂತಿ । ದ್ವಿತೀಯಾರ್ಥೇ ಷಷ್ಠ್ಯಃ ॥**

॥ ಪ್ರತಿಪದಾರ್ಥ ॥

**ಮಿತ್ರಃ**—ಸರ್ವರಿಗೂ ಸ್ನೇಹಿತನಂತಿರುವ ಮಿತ್ರನೆಂಬ ದೇವನೂ । **ಅರ್ಯಮಾ**—ಅರ್ಯಮದೇವನೂ । **ವರುಣಃ**—ಸರ್ವರ ದುಃಖವನ್ನು ನಿವಾರಿಸುವ ವರುಣದೇವನೂ ಈ ಮೂರುಮಂದಿ ದೇವತೆಗಳೂ । **ತನಾ**—ದಶಾಪವಿತ್ರದಿಂದ । **ಪೂತಸ್ಯ**—ಶೋಧಿಸಲ್ಪಟ್ಟಿರುವುದೂ । **ತ್ರಿಷಧಸ್ಥಸ್ಯ**—ದ್ರೋಣಕಲಶ, ಆಧವನೀಯ ಮತ್ತು ಪೂತಭೃತ್ ಎಂಬ ಮೂರು ವಿಧ ಪಾತ್ರೆಗಳಲ್ಲಿ ತುಂಬಿಟ್ಟಿರುವ । **ಜಾವತಃ**—ಸ್ತೋತೃಜನರಿಂದ ಸ್ತುತಿಪೂರ್ವಕವಾಗಿ ಅರ್ಪಿಸಲ್ಪಡುವ ಸೋಮವನ್ನು । **ಪಿಬಂತಿ**—ಪಾನಮಾಡುತ್ತಾರೆ

॥ ಭಾವಾರ್ಥ ॥

ಸರ್ವರಿಗೂ ಸ್ನೇಹಿತನಂತೆ ಹಿತಕರನಾದ ಮಿತ್ರನೂ, ಅರ್ಯಮನೂ, ದುಃಖನಿವಾರಕನಾದ ವರುಣನೂ ಈ ಮೂರುಮಂದಿ ದೇವತೆಗಳೂ ದಶಾಪವಿತ್ರದಿಂದ ಶೋಧಿಸಲ್ಪಟ್ಟು ದ್ರೋಣಕಲಶ, ಆಧವನೀಯ ಪೂತಭೃತ್ ಎಂಬ ಮೂರುವಿಧ ಪಾತ್ರೆಗಳಲ್ಲಿ ತುಂಬಿ ಮಂತ್ರಪುರಸ್ಸರವಾಗಿ ಸ್ತೋತೃಜನರಿಂದ ಅರ್ಪಿತವಾಗುವ ಈ ಸೋಮರಸವನ್ನು ಪಾನಮಾಡುತ್ತಾರೆ

## English Translation

Mitra, Aryaman, and Varuna drink (the Soma), purified by the straining cloth, abiding in three places, and granting posterity.

॥ ಸಂಹಿತಾಪಾಠಃ ॥

**ಉತೋ ನ್ವಸ್ಯ ಜೋಷಮಾ ಇಂದ್ರಃ ಸುತಸ್ಯ ಗೋಮತಃ ।**

**ಪ್ರಾತರ್ಹೋತೇವ ಮತ್ಸತಿ ॥ ೬ ॥**

॥ ಪದಪಾಠಃ ॥

ಉತೋ । ಇತಿ । ನು । ಅಸ್ಯ । ಜೋಷಂ । ಆ । ಇಂದ್ರಃ । ಸುತಸ್ಯ । ಗೋಽಮತಃ ।

ಪ್ರಾತಃ । ಹೋತಾಽಇವ । ಮತ್ಸತಿ ॥ ೬ ॥

॥ ಸಾಯಣಭಾಷ್ಯಂ ॥

ಉತೋ ಅಪಿ ಚೇಂದ್ರಃ ಸುತಸ್ಯಾಸ್ಮಾಭಿರಭಿಷುತಸ್ಯ ಗೋಮತೋ ಗವ್ಯೈರ್ಮಿಶ್ರಣವತೋಽಸ್ಯ । ಅನ್ವಾದೇಶಃ । ಪೂರ್ವವದ್ದಶಾಪವಿತ್ರೇಣ ಪೂತಸ್ಯ ಸೋಮಸ್ಯ ಜೋಷಂ ಪಾನರೂಪಾಂ ಸೇವಾಂ ಪ್ರಾತಃ ಪ್ರಾತಃಸವನೇ ನು ಕ್ಷಿಪ್ರಮಾ ಮತ್ಸತಿ ॥ ಮದಿ ಸ್ತುತ್ಯಾದಿಷು ॥ ಅಭಿಮುಖ್ಯೇನ ಸ್ತೌತಿ । ಯದ್ವಾ । ಸೋಮಮೇವಾಕಾಮಯತೇ । ತತ್ರ ದೃಷ್ಟಾಂತಃ । ಹೋತೇವ ಯಥಾ ಹೋತಾ ಪ್ರಾತಃಸವನೇ ದೇವಾನಭಿಷ್ಟೌತಿ ದೇವಾನ್ ಸ್ತೋತುಂ ವಾಭಿನಾಂಛತಿ ॥

॥ ಪ್ರತಿಪದಾರ್ಥ ॥

**ಉತೋ**—ಇದಲ್ಲದೆ । **ಇಂದ್ರಃ**—ಇಂದ್ರನು । **ಸುತಸ್ಯ**—ನಮ್ಮಿಂದ ಹಿಂಡಲ್ಪಟ್ಟಿರುವ । **ಗೋಮತಃ**—ಗೋವಿಕಾರವಾದ ಹಾಲು ಅಥವಾ ಮೊಸರಿನಿಂದ ಮಿಶ್ರಿತವಾದ । **ಅಸ್ಯ**—ದಶಾಪವಿತ್ರದಿಂದ ಶೋಧಿತವಾದ ಈ ಸೋಮರಸದ। **ಜೋಷಂ**—ಪಾನರೂಪವಾದ ಸೇವನೆಯನ್ನು । **ಹೋತೇವ**—ಪ್ರಾತಃಸವನಕಾಲದಲ್ಲಿ ಹೋತೃವೆಂಬ ಋತ್ವಿಜನು ಯಾವರೀತಿ ದೇವತೆಗಳನ್ನು ಸ್ತುತಿಸುವನೋ ಆರೀತಿ । **ಪ್ರಾತಃ**—ಪ್ರಾತಃಸವನಕಾಲದಲ್ಲಿ । **ನು**—ಬೇಗನೆ । **ಆ ಮತ್ಸ್ಯತಿ**—ಪ್ರಶಂಸಿಸುತ್ತಾನೆ ಅಥವಾ ಸೋಮಪಾನವನ್ನು ಅಪೇಕ್ಷಿಸುತ್ತಾನೆ.

॥ ಭಾವಾರ್ಥ ॥

ಇದಲ್ಲದೆ ಇಂದ್ರನೂ ಸಹ ನಮ್ಮಿಂದ ಹಿಂಡಲ್ಪಟ್ಟು ದಶಾಪವಿತ್ರದಿಂದ ಶೋಧಿತವಾಗಿ ಹಾಲು ಅಥವಾ ಮೊಸರಿನಿಂದ ಮಿಶ್ರಿತವಾಗಿ ಸಿದ್ಧವಾಗಿರುವ ಸೋಮರಸದ ಸೇವನೆಯನ್ನು ಪ್ರಾತಃಸವನಕಾಲದಲ್ಲಿ ಹೋತೃವು ದೇವತೆಗಳನ್ನು ಸ್ತುತಿಸುವಂತೆ ಸ್ತುತಿಸುತ್ತಾನೆ ಅಥವಾ ಸೋಮಪಾನವನ್ನು ಇಚ್ಛಿಸುತ್ತಾನೆ.

English Translation

Indra also is eager in the morning to drink this effused (Soma) mixed with milk, as a priest (to praise the gods).

॥ ಸಂಹಿತಾಪಾಠಃ ॥

ಕದತ್ವಿಷಂತ ಸೂರಯಸ್ತಿರ ಆಪ ಇವ ಸ್ರಿಧಃ ।

ಅರ್ಷಂತಿ ಪೂತದಕ್ಷಸಃ ॥ ೭ ॥

॥ ಪದಪಾಠಃ ॥

ಕತ್ । ಅತ್ವಿಷಂತ । ಸೂರಯಃ । ತಿರಃ । ಆಪಃಽಇವ । ಸ್ರಿಧಃ ।

ಅರ್ಷಂತಿ । ಪೂತಽದಕ್ಷಸಃ ॥ ೭ ॥

॥ ಸಾಯಣಭಾಷ್ಯಂ ॥

ಋಷಿರ್ಮರುತೋ ಬಹುವಾರಂ ಸ್ತುತ್ವೇದಾನೀಮಾತ್ಮಾನಂ ವಿತರ್ಕಯತಿ । ಸೂರಯಃ ಪ್ರಾಜ್ಞಾ ಆಪ ಇವೋದಕಾನೀವ ತಿರೋ ಯಥೋದಕಾನಿ ತಿರ್ಯಗ್ಗಚ್ಛಂತಿ ತದ್ವತ್ತಿರಶ್ಚೀನಗತಯಃ ಸಂತಃ ಕತ್ಕದಾತ್ವಿಷಂತ ॥ ತ್ವಿಷ ದೀಪ್ತೌ ॥ ಅಂತರಿಕ್ಷೇ ಕದಾ ದೀಪ್ಯಂತೇ । ಕಿಂಚ ಸ್ರಿಧಃ ಶತ್ರೂಣಾಂ-ಶೋಷಕಾ ಹಂತಾರಸ್ತ ಇಮೇ ಮರುತಃ ಪೂತದಕ್ಷಸಃ ಶುದ್ಧಬಲಾಃ ಸಂತಃ ಕದಾ ವಾರ್ಷಂತಿ । ಅಸ್ಮದೀಯಂ ಯಜ್ಞಂ ಪ್ರತ್ಯಾಗಚ್ಛಂತಿ ॥

॥ ಪ್ರತಿಪದಾರ್ಥ ॥

**ಸೂರಯಃ**—ಪ್ರಾಜ್ಞರು (ಮರುತ್ತುಗಳು) । **ಆಪ ಇವ ತಿರಃ**—ನೀರು ತಗ್ಗಾದ ಪ್ರದೇಶಕ್ಕೇ ಹರಿದು ಹೋಗುವಂತೆ ಅಧೋದೃಷ್ಟಿಯುಳ್ಳವರಾಗಿ । **ಕತ್**-ಯಾವಾಗ । **ಅತ್ವಿಷಂತ**—ಎತ್ತರವಾದ ಅಂತರಿಕ್ಷದಿಂದ ನಮ್ಮನ್ನು ಬಗ್ಗಿನೋಡುತ್ತಾರೆ । **ಸ್ನಿಗ್ಧಃ**—ಶತ್ರುಶೋಷಕರಾದ ಈ ಮರುತ್ತುಗಳು । **ಪೂತದಕ್ಷಸಃ**—ಶುದ್ಧಬಲವುಳ್ಳವರಾಗಿ । **ಅರ್ಷಂತಿ**—ನಮ್ಮ ಯಜ್ಞಾಭಿಮುಖವಾಗಿ ಯಾವಾಗ ಬರುತ್ತಾರೆ ?

॥ ಭಾವಾರ್ಥ ॥

ಹರಿಯುವ ನೀರು ತಗ್ಗಾದ ಪ್ರದೇಶಕ್ಕೇ ಕೆಳಮುಖವಾಗಿ ಹರಿದುಹೋಗುವಂತೆ ಪ್ರಾಜ್ಞರಾದ ಮರುತ್ತುಗಳು ಅಧೋದೃಷ್ಟಿಯುಳ್ಳವರಾಗಿರುತ್ತಾರೆ. ಆದ್ದರಿಂದ ಶತ್ರುಶೋಷಕರೂ, ಶುದ್ಧ ಬಲವುಳ್ಳವರೂ ಆದ ಮರುದ್ದೇವತೆಗಳು ತಾವು ಇರುವ ಅಂತರಿಕ್ಷದಿಂದ ಕೆಳಮುಖವಾಗಿ ನಮ್ಮ ಯಜ್ಞಭೂಮಿಗೆ ಯಾವಾಗ ಬರುತ್ತಾರೆ ?

## English Translation

When do the sages flash like waters across (the sky)? when do the Maruts, pure in vigour, destroyers of enemies, come to our offering?

॥ ಸಂಹಿತಾಪಾಠಃ ॥

ಕದ್ವೋ ಅದ್ಯ ಮಹಾನಾಂ ದೇವಾನಾಮವೋ ವೃಣೇ ।

ತ್ಮನಾ ಚ ದಸ್ಮವರ್ಚಸಾಂ ॥ ೮ ॥

॥ ಪದಪಾಠಃ ॥

**ಕತ್ । ವಃ । ಅದ್ಯ । ಮಹಾನಾಂ । ದೇವಾನಾಂ । ಅವಃ । ವೃಣೇ ।**

**ತ್ಮನಾ । ಚ । ದಸ್ಮಽವರ್ಚಸಾಂ ॥ ೮ ॥**

॥ ಸಾಯಣಭಾಷ್ಯಂ ॥

**ಹೇ ಮರುತಃ ಮಹಾನಾಂ ಮಂಹನೀಯಾಂ ಮಹತಾಂ ವಾ ತ್ಮನಾ ಚಾತ್ಮನೈವಾಲಂಕರಣೈರ್ವಿನಾಪಿ ದಸ್ಮವರ್ಚಸಾಂ ದರ್ಶನೀಯತೇಜಸ್ಕಾನಾಂ ಅತ ಏವ ದೇವಾನಾಂ ದ್ಯೋತಮಾನಾನಾಂ ವೋ ಯುಷ್ಮಾಕಮವಃ ಪಾಲನಂ ಕತ್ ಕದಾಹಂ ವೃಣೇ । ಸಂಭಜೇ ॥ ವೃಙ್ ಸಂಭಕ್ತೌ । ಕ್ರ್ಯಾದಿಕಃ ॥**

॥ ಪ್ರತಿಪದಾರ್ಥ ॥

(ಎಲೈ ಮರುದ್ದೇವತೆಗಳೇ) **ಮಹಾನಾಂ**—ಮಹತ್ಸ್ವರೂಪವುಳ್ಳವರೂ ಅಥವಾ ಶ್ರೇಷ್ಠರಾದವರೂ । **ತ್ಮನಾ ಚ**—ಯಾವ ಅಲಂಕಾರಾದಿಗಳ ಸಹಾಯವೂ ಇಲ್ಲದೆ ತಾವಾಗಿಯೇ । **ದಸ್ಮವರ್ಚಸಾಂ**—ಅತ್ಯಂತ ತೇಜಸ್ಸಿನಿಂದ ಬೆಳಗುವವರೂ । **ದೇವಾನಾಂ**—ಪ್ರಕಾಶಮಾನರೂ ಆದ । **ವಃ**—ನಿಮ್ಮ । **ಅವಃ**—ರಕ್ಷಣೆಯನ್ನು । **ಕತ್**—ಯಾವಾಗ । **ಅದ್ಯ**—ಈ ಯಜ್ಞದಲ್ಲಿ । **ವೃಣೇ**—ನಾನು ಹೊಂದುವೆನು ?

॥ ಭಾವಾರ್ಥ ॥

ಎಲೈ ಮರುದ್ದೇವತೆಗಳೇ, ಮಹತ್ಸ್ವರೂಪವುಳ್ಳವರೂ ಅಲಂಕಾರಾದಿ ಯಾವ ಸಹಾಯವೂ ಇಲ್ಲದೆ ಕೇವಲ ಸ್ವಪ್ರಭೆಯಿಂದಲೇ ಬೆಳಗುತ್ತಿರುವವರೂ ದೇವತಾತ್ಮರೂ ಆದ ನಿಮ್ಮ ರಕ್ಷಣೆಯನ್ನು ಈ ಯಜ್ಞಭೂಮಿಯಲ್ಲಿ ನಾನು ಯಾವಾಗ ಹೊಂದುವೆನು ?

English Translation

O shall I to-day possess your protection, mighty deities, beautifully bright in yourselves (though unadorned) ?

॥ ಸಂಹಿತಾಪಾಠಃ ॥

**ಆ ಯೇ ವಿಶ್ವಾ ಪಾರ್ಥಿವಾನಿ ಪಪ್ರಥನ್ರೋಚನಾ ದಿವಃ ।**

**ಮರುತಃ ಸೋಮಪೀತಯೇ ॥ ೯ ॥**

॥ ಪದಪಾಠಃ ॥

**ಆ । ಯೇ । ವಿಶ್ವಾ । ಪಾರ್ಥಿವಾನಿ । ಪಪ್ರಥನ್ । ರೋಚನಾ । ದಿವಃ ।**

**ಮರುತಃ । ಸೋಮಽಪೀತಯೇ ॥ ೯ ॥**

। ಸಾಯಣಭಾಷ್ಯಂ ।

ಯೇ ಮರುತಃ ವಿಶ್ವಾ ವಿಶ್ವಾನಿ ಪಾರ್ಥಿವಾನಿ ಪೃಥಿವ್ಯಾಂ ಭವಾನಿ ಭೂತಜಾತಾನಿ ದಿವಃ ದ್ಯುಲೋಕಸ್ಯ ರೋಚನಾ ರೋಚಮಾನಾನಿ ಜ್ಯೋತೀಂಷಿ ಚಾ ಪಪ್ರಥನ್ ಸರ್ವತ್ರ ವಿಸ್ತಾರಿತಾನ್ಯಕಾರ್ಷುಃ ॥ ಪ್ರಥ ಪ್ರಖ್ಯಾನೇ । ಣ್ಯಂತಸ್ಯ ಚಙ್ಯತ್ಸ್ಮೃದೃತ್ವರಪ್ರಥಮ್ರದಸ್ತೃಸ್ಪಶಾಂ । ಪಾ ೭-೪-೯೫ । ಇತ್ಯಭ್ಯಾಸಸ್ಯಾದಾದೇಶಃ । ಚಙ್ಯನ್ಯತರಸ್ಯಾಮಿತಿ ಸ್ವರೇಣ ಮಧ್ಯೋದಾತ್ತಃ ॥ ತಾದೃಶಾನ್ಮರುತೋ ದೇವಾನ್ ಸೋಮಪೀತಯೇ ಸೋಮಪಾನಾಯಾಹಮಾಹ್ವಯಾಮಿ ॥

॥ ಪ್ರತಿಪದಾರ್ಥ ॥

**ಯೇ ಮರುತಃ**—ಯಾವ ಮರುದ್ದೇವತೆಗಳು । **ವಿಶ್ವಾ**—ಸಮಸ್ತವಾದ । **ಪಾರ್ಥಿವಾನಿ**—ಪೃಥಿವಿ ಸಂಬಂಧವಾದ ಎಂದರೆ ಭೂಮಿಯಲ್ಲಿರುವ ಪ್ರಾಣಿಸಮೂಹವನ್ನು । **ದಿವಃ**—ಸ್ವರ್ಗಲೋಕದ । **ರೋಚನಾ**—ಪ್ರಕಾಶದಿಂದ ಅಥವಾ ಪ್ರಕಾಶಮಾನವಾದ ನಕ್ಷತ್ರಗಳಿಂದ । **ಆ ಪಪ್ರಥನ್**—ವ್ಯಾಪಿಸಿ ತುಂಬುವಂತೆ ಮಾಡಿದರೋ। **ಮರುತಃ**—ಅಂತಹ ಮರುದ್ದೇವತೆಗಳನ್ನು । **ಸೋಮಪೀತಯೇ**—ಸೋಮಪಾನಾರ್ಥವಾಗಿ ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಯಾವ ಮರುದ್ದೇವತೆಗಳು ಈ ಭೂಲೋಕದಲ್ಲಿರುವ ಸಮಸ್ತ ಪ್ರಾಣಿಗಳನ್ನೂ ಅಂತರಿಕ್ಷದ ಅಥವಾ ಸ್ವರ್ಗದ ಪ್ರಕಾಶದಿಂದ ವ್ಯಾಪಿಸಿ ಬೆಳಗುವಂತೆ ಮಾಡಿದರೋ ಅಂತಹ ಮರುದ್ದೇವತೆಗಳನ್ನು ಸೋಮಪಾನಾರ್ಥವಾಗಿ ಪ್ರಾರ್ಥಿಸಿ ಕರೆಯುತ್ತೇನೆ.

English Translation

(We invoke) those Maruts to drink our Soma, who have spread out all the things of earth and the luminaries of heaven.

॥ ಸಂಹಿತಾಪಾಠಃ ॥

ತ್ಯಾನ್ನು ಪೂತದಕ್ಷಸೋ ದಿವೋ ವೋ ಮರುತೋ ಹುವೇ ।
ಅಸ್ಯ ಸೋಮಸ್ಯ ಪೀತಯೇ ॥ ೧೦ ॥

। ಪದಪಾಠಃ ।

ತ್ಯಾನ್ । ನು । ಪೂತಽದಕ್ಷಸಃ । ದಿವಃ । ವಃ । ಮರುತಃ । ಹುವೇ ।
ಅಸ್ಯ । ಸೋಮಸ್ಯ । ಪೀತಯೇ ॥ ೧೧ ॥

॥ ಸಾಯಣಭಾಷ್ಯಂ ॥

**ಹೇ ಮರುತೋ ಮಿತರಾವಿಣ ಏತನ್ನಾಮಿಕಾ ದೇವಾಃ ಪೂತದಕ್ಷಸಃ ಪರಿಶುದ್ಧಬಲಾನ್ ದಿವಃ ಸ್ವತೇಜಸಾ ದೀಪ್ಯಮಾನಾನ್ । ಯದ್ವಾ । ದಿವೋ ದ್ಯುಲೋಕಸ್ಥಿತಾನ್ ತ್ಯಾಂಸ್ತಾನ್ ಪ್ರಸಿದ್ಧಾನ್ವೋ ಯುಷ್ಮಾನ್ನು ಕ್ಷಿಪ್ರಂ ಹುವೇ । ಆಹ್ವಯಾಮಿ । ಕಿಮರ್ಥಂ । ಅಸ್ಯಾಸ್ಮದೀಯಸ್ಯ ಸೋಮಸ್ಯ ಪೀತಯೇ ಪಾನಾಯ ॥**

॥ ಪ್ರತಿಪದಾರ್ಥ ॥

**ಮರುತಃ**—ಎಲೈ ಮರುದ್ದೇವತೆಗಳೇ । **ಪೂದದಕ್ಷಸಃ**—ಪರಿಶುದ್ಧವಾದ ಬಲವುಳ್ಳವರೂ । **ದಿವಃ**—ಸ್ವಪ್ರಕಾಶದಿಂದ ಬೆಳಗುವವರೂ ಅಥವಾ । **ದಿವಃ**—ಸ್ವರ್ಗಲೋಕದಲ್ಲಿರುವ । **ತ್ಯಾನ್**—ಪ್ರಸಿದ್ಧರಾದ । **ವಃ**—ನಿಮ್ಮನ್ನು । **ನು**—ಶೀಘ್ರವಾಗಿ । **ಅಸ್ಯ ಸೋಮಸ್ಯ**—ಈ ಸೋಮವನ್ನು । **ಪೀತಯೇ**—ಪಾನಮಾಡುವುದಕ್ಕಾಗಿ । **ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ

॥ ಭಾವಾರ್ಥ ॥

ಎಲೈ ಮರುದ್ದೇವತೆಗಳೇ, ಪರಿಶುದ್ಧವಾದ ಬಲವುಳ್ಳವರೂ ಸ್ವಪ್ರಕಾಶದಿಂದ ಬೆಳಗುತ್ತಿರುವವರೂ ಸ್ವರ್ಗಲೋಕವಾಸಿಗಳೂ ಪ್ರಸಿದ್ಧರೂ ಆದ ನಿಮ್ಮನ್ನು ಈ ಸೋಮವನ್ನು ಪಾನಮಾಡುವುದಕ್ಕಾಗಿ ಪ್ರಾರ್ಥಿಸಿ ಕರೆಯುತ್ತೇನೆ.

English Translation

O Maruts, I invoke you, resplendent of pure vigour, to drink this Soma.

॥ ಸಂಹಿತಾಪಾಠಃ ॥

ತ್ಯಾನ್ನು ಯೇ ವಿ ರೋದಸೀ ತಸ್ತಭುರ್ಮರುತೋ ಹುವೇ ।
ಅಸ್ಯ ಸೋಮಸ್ಯ ಪೀತಯೇ ॥ ೧೧ ॥

॥ ಪದಪಾಠಃ ॥

**ತ್ಯಾನ್ । ನು । ಯೇ । ವಿ । ರೋದಸೀ ಇತಿ । ತಸ್ತಭುಃ । ಮರುತಃ । ಹುವೇ ।**
**ಅಸ್ಯ । ಸೋಮಸ್ಯ । ಪೀತಯೇ ॥ ೧೧ ॥**

॥ ಸಾಯಣಭಾಷ್ಯಂ ॥

**ಯೇ ಮರುತೋ ರೋದಸೀ ದ್ಯಾವಾಪೃಥಿವ್ಯೌ ವಿ ತಸ್ತಭುಃ ಸ್ವಬಲೇನೈವಾತ್ಯರ್ಥಂ ಸ್ತಬ್ಧೇ ಚಕ್ರುಃ । ತೇ ರೋದಸೀ ಸ್ವಾಧೀನೇ ಅಕಾರ್ಷುರಿತ್ಯರ್ಥಃ । ತ್ಯಾಂಸ್ತಾನ್ ಸರ್ವತಃ ಪ್ರಸಿದ್ಧಾನ್ನು ಕ್ಷಿಪ್ರಮಹಂ ಹುವೇ । ಆಹ್ವಯಾಮಿ । ಕಿಮರ್ಥಂ । ಅಸ್ಯೇತ್ಯಾದಿ ॥**

॥ ಪ್ರತಿಪದಾರ್ಥ ॥

**ಯೇ ಮರುತಃ**—ಯಾವ ಮರುದ್ದೇವತೆಗಳು । **ರೋದಸೀ**—ದ್ಯಾವಾಪೃಥಿವಿಗಳನ್ನು । **ವಿ ತಸ್ತಭುಃ**—ತಮ್ಮ ಸ್ವಸಾಮರ್ಥ್ಯದಿಂದ ಸ್ತಂಭನಮಾಡಿದರೋ ಎಂದರೆ ತಮ್ಮ ಅಧೀನವನ್ನಾಗಿ ಮಾಡಿದರೋ । **ತ್ಯಾನ್**—ಅಂತಹ ಪ್ರಸಿದ್ಧರಾದ ಮರುದ್ದೇವತೆಗಳನ್ನು । **ನು**—ಬೇಗನೆ । **ಅಸ್ಯ ಸೋಮಸ್ಯ**—ಈ ಸೋಮವನ್ನು । **ಪೀತಯೇ**—ಪಾನಮಾಡುವುದಕ್ಕಾಗಿ । **ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಯಾವ ಮರುದ್ದೇವತೆಗಳು ಭೂಮ್ಯಂತರಿಕ್ಷಗಳನ್ನು ತಮ್ಮ ಸ್ವಸಾಮರ್ಥ್ಯದಿಂದ ವಶಪಡಿಸಿಕೊಂಡು ತಮ್ಮ ಅಧೀನದಲ್ಲಿಟ್ಟುಕೊಂಡಿರುವರೋ ಅಂತಹ ಪ್ರಸಿದ್ಧರಾದ ಈ ಮರುದ್ದೇವತೆಗಳನ್ನು ನಾನು ಸಿದ್ಧಪಡಿಸಿರುವ ಈ ಸೋಮವನ್ನು ಪಾನಮಾಡಲು ಬೇಗನೆ ಪ್ರಾರ್ಥಿಸಿ ಕರೆಯುತ್ತೇನೆ.

English Translation

I invoke those Maruts to drink this Soma, who have established heaven and earth.

॥ ಸಂಹಿತಾಪಾಠಃ ॥

ತ್ಯಂ ನು ಮಾರುತಂ ಗಣಂ ಗಿರಿಷ್ಠಾಂ ವೃಷಣಂ ಹುವೇ ।
ಅಸ್ಯ ಸೋಮಸ್ಯ ಪೀತಯೇ ॥ ೧೨ ॥

॥ ಪದಪಾಠಃ ॥

ತ್ಯಂ । ನು । ಮಾರುತಂ । ಗಣಂ । ಗಿರಿऽಸ್ಥಾಂ । ವೃಷಣಂ । ಹುವೇ ।
ಅಸ್ಯ । ಸೋಮಸ್ಯ । ಪೀತಯೇ ॥ ೧೨ ॥

॥ ಸಾಯಣಭಾಷ್ಯಂ ॥

**ತ್ಯಂ ತಂ ಸರ್ವತ್ರ ವಿಸ್ತೃತಂ ಗಿರಿಷ್ಠಾಂ ಗಿರಿಷು ಮೇಘೇಷು ಪರ್ವತೇಷು ವಾ ತಿಷ್ಠಂತಂ ವೃಷಣಮುದಕಾನಾಂ ಕಾಮಾನಾಂ ವಾ ವರ್ಷಿತಾರಂ ಮಾರುತಂ ಮರುತ್ಸಂಬಂಧಿನಂ ಗಣಂ ಸಂಘಂ ಹುವೇ । ಬಿಂದುರಹಮಾಹ್ವಯಾಮಿ । ಕಿಂ ಪ್ರಯೋಜನಂ । ಅಸ್ಯಾಸ್ಮದೀಯಸ್ಯ ಸೋಮಸ್ಯ ಪೀತಯೇ ಪಾನಾಯ ॥**

॥ ಪ್ರತಿಪದಾರ್ಥ ॥

**ತ್ಯಂ**—ಪ್ರಸಿದ್ಧವಾದುದೂ । **ಗಿರಿಷ್ಠಾಂ**—ಪರ್ವತಪ್ರದೇಶಗಳಲ್ಲಿ ಅಥವಾ ಮೇಘಸಮೂಹಗಳಲ್ಲಿ ಸಂಚರಿಸುತ್ತಿರುವುದೂ । **ವೃಷಣಂ**—ಕಾಮ ಅಥವಾ ಉದಕವನ್ನು ಸುರಿಸುವುದೂ ಆದ । **ಮಾರುತಂ ಗಣಂ**—ಮರುದ್ದೇವತೆಗಳ ಗುಂಪನ್ನು । **ಅಸ್ಯ ಸೋಮಸ್ಯ**—ನಾನು ಸಿದ್ಧಪಡಿಸಿರುವ ಈ ಸೋಮದ । **ಪೀತಯೇ**—

ಪಾನಾರ್ಥವಾಗಿ । ನು—ಬೇಗನೆ । ಹುವೇ—ಈ ಸೂಕ್ತದ್ರಷ್ಟೃವೂ ಬಿಂದುನಾಮಕನೂ ಆದ ನಾನು ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಪ್ರಸಿದ್ಧವಾದುದೂ ಪರ್ವತಪ್ರದೇಶಗಳಲ್ಲಿ ಅಥವಾ ಮೇಘಗಳ ಗುಂಪಿನಲ್ಲಿ ಬೀಸುತ್ತಿರುವುದೂ, ಕಾಮ ಅಥವಾ ಉದಕವನ್ನು ಸುರಿಸುವುದೂ ಆದ ಮರುದ್ದೇವತೆಗಳ ಗುಂಪನ್ನು ನಾನು ಸಿದ್ಧಪಡಿಸಿರುವ ಈ ಸೋಮರಸದ ಪಾನಾರ್ಥವಾಗಿ ಈ ಸೂಕ್ತದ್ರಷ್ಟೃವೂ ಬಿಂದು ಎಂಬ ಹೆಸರಿನವನೂ ಆದ ನಾನು ಬೇಗನೆ ಪ್ರಾರ್ಥಿಸಿ ಕರೆಯುತ್ತೇನೆ.

## English Translation

I invoke that band of the Maruts, abiding in the clouds, the showrers, to drink this Soma.

## ತೊಂಭತ್ತೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಆ ತ್ವೇತಿ ನವರ್ಚಂ ದ್ವಿತೀಯಂ ಸೂಕ್ತಮಾನುಷ್ಟುಭಮೈಂದ್ರಂ । ತಿರಶ್ಚೀರ್ನಾಮಾಂಗಿರಸ ಋಷಿಃ । ತಥಾ ಚಾನುಕ್ರಮ್ಯತೇ । ಆ ತ್ವಾ ನವ ತಿರಶ್ಚೀರಾನುಷ್ಟುಭಮಿತಿ ॥ ಅಭಿಪ್ಲವಿಕೇಷೂಕ್ಥ್ಯೇಷು ತೃತೀಯಸವನೇಽಚ್ಛಾವಾಕಸ್ಯಾ ತ್ವಾ ಗಿರ ಇತಿ ತೃಚೋ ವೈಕಲ್ಪಿಕೋಽನುರೂಪಃ । ಸೂತ್ರ್ಯತೇ ಹಿ । ಗಾಯಂತಿ ತ್ವಾ ಗಾಯತ್ರಿಣ ಆ ತ್ವಾ ಗಿರೋ ರಥೀರಿವ । ಆ. ೭-೮ । ಇತಿ ।**

ಅನುವಾದವು—**ಆ ತ್ವಾ ಗಿರಃ** ಎಂಬ ಈ ಸೂಕ್ತವು ಹತ್ತನೆಯ ಮಂಡಲದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಆಂಗಿರಸಪುತ್ರನಾದ ತಿರಶ್ಚೀಃ ಎಂಬುವನು ಋಷಿಯು ; ಇಂದ್ರನು ದೇವತೆಯು ; ಅನುಷ್ಟುಪ್ ಛಂದಸ್ಸು ಅನುಕ್ರಮಣಿಕೆಯಲ್ಲಿ—**ಆ ತ್ವಾ ನವ ತಿರಶ್ಚೀರಾನುಷ್ಟುಭಂ** ಎಂದು ಹೇಳಿರುವುದು. ಅಭಿಪ್ಲವಸಂಬಂಧವಾದ ಉಕ್ಥ್ಯಯಾಗಗಳ ತೃತೀಯಸವನಕಾಲದಲ್ಲಿ ಅಚ್ಛಾವಾಕನೆಂಬ ಋತ್ವಿಜನು **ಆ ತ್ವಾ ಗಿರಃ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ವೈಕಲ್ಪಿಕಾನುರೂಪತೃಚವನ್ನಾಗಿ ಪಠಿಸ ಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಗಾಯಂತಿ ತ್ವಾ ಗಾಯತ್ರಿಣ ಆ ತ್ವಾ ಗಿರೋ ರಥೀರಿವ** ಎಂಬ ಸೂತ್ರದಿಂದ (ಆ ೭.೮) ವಿವೃತವಾಗಿರುವುದು.

## ಸೂಕ್ತ—೯೫

ಮಂಡಲ—೮ ॥ ಅನುವಾಕ—೧೦ ॥ ಸೂಕ್ತ—೯೫ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೩೦, ೩೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ತಿರಶ್ಚೀಃ ॥
ದೇವತಾ—ಇಂದ್ರಃ ॥
ಛಂದಃ—ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಆ ತ್ವಾ ಗಿರೋ ರಥೀರಿವಾಸ್ಥುಃ ಸುತೇಷು ಗಿರ್ವಣಃ ।
ಅಭಿ ತ್ವಾ ಸಮನೂಷತೇಂದ್ರ ವತ್ಸಂ ನ ಮಾತರಃ ॥ ೧ ॥

॥ ಪದಪಾಠಃ ॥

ಆ । ತ್ವಾ । ಗಿರಃ । ರಥೀಃऽಇವ । ಅಸ್ಥುಃ । ಸುತೇಷು । ಗಿರ್ವಣಃ ।
ಅಭಿ । ತ್ವಾ । ಸಂ । ಅನೂಷತ । ಇಂದ್ರ । ವತ್ಸಂ । ನ । ಮಾತರಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಗಿರ್ವಣೋ ಗೀರ್ಭಿರ್ವನನೀಯೇಂದ್ರ ಸುತೇಷು ಸೋಮೇಷ್ವಭಿಷುತೇಷು ಸತ್ಸು ಗಿರೋಽಸ್ಮಾಕಂ ಸ್ತುತಿಲಕ್ಷಣಾ ವಾಚಸ್ತ್ವಾ ತ್ವಾಮಾಸ್ಥುಃ । ಆಭಿಮುಖ್ಯೇನ ಶೀಘ್ರಂ ತಿಷ್ಠಂತಿ । ತತ್ರ ದೃಷ್ಟಾಂತಃ । ರಥೀರಿವ ಯಥಾ ರಥವಾನ್ರಥೇನ ಗಚ್ಛನ್ವೀರಃ ಪ್ರಾಪ್ಯಂ ದೇಶಂ ಕ್ಷಿಪ್ರಂ ಗಚ್ಛತಿ ತದ್ವದಸ್ಮಾಭಿರಭಿಗಂತವ್ಯಂ ತ್ವಾಂ ಸ್ತುತಯೋಽಭಿಗಚ್ಛಂತಿ । ಕಿಂ ಚ ಹೇ ಇಂದ್ರ ಅಸ್ಮದೀಯಾ ಗಿರಸ್ತ್ವಾ ತ್ವಾಮಭಿಲಕ್ಷ್ಯ ಸಮನೂಷತ । ಸಮ್ಯಕ್ ಶಬ್ದಾಯಂತೇ । ಸ್ತುವಂತೀತ್ಯರ್ಥಃ ॥ ಣೂ ಸ್ತವನೇ । ಕುಟಾದಿಃ । ತಸ್ಯ ಲುಙಿ ರೂಪಂ ॥ ತತ್ರ ದೃಷ್ಟಾಂತಃ । ವತ್ಸಂ ನ ಮಾತರಃ । ಯಥಾ ಮಾತರೋ ಗಾವೋ ವತ್ಸಮಭಿಲಕ್ಷ್ಯ ಹಂಭಾರವಾದಿಶಬ್ದಂ ಕುರ್ವಂತಿ ತದ್ವತ್ ॥

। ಪ್ರತಿಪದಾರ್ಥ ।

**ಗಿರ್ವಣಃ**—ಸ್ತುತಿಪ್ರಿಯನಾದ ಎಲೈ ಇಂದ್ರನೇ । **ರಥೀರಿವ**—ರಥದ ಯಜಮಾನನು ತನ್ನಿಷ್ಟಬಂದ ಪ್ರದೇಶಕ್ಕೆ ಹೋಗುವಂತೆ । **ಸುತೇಷು**—ಸೋಮವನ್ನು ಹಿಂಡಿರುವ ಕಾಲದಲ್ಲಿ । **ಗಿರಃ**—ನಮ್ಮ ಸ್ತುತಿಗಳು । **ತ್ವಾ**—ನಿನ್ನನ್ನು ಲಕ್ಷಿಸಿ । **ಆ ಅಸ್ಥುಃ**—ಶೀಘ್ರವಾಗಿ ಬಂದು ಸೇರುತ್ತವೆ । **ಇಂದ್ರ**—ಎಲೈ ಇಂದ್ರನೇ । **ಮಾತರಃ**—ತಾಯಿಯರಾದ ಗೋವುಗಳು । **ವತ್ಸಂ ನ**—ತಮ್ಮ ಕರುಗಳನ್ನು ಕರೆಯುವಾಗ ಆದರದಿಂದ ಕೂಗಿಕೊಳ್ಳುವಂತೆ । **ತ್ವಾ ಅಭಿ**—ನಿನ್ನನ್ನುದ್ದೇಶಿಸಿ । **ಸಮನೂಷತ**—ನಮ್ಮ ಸ್ತುತಿವಾಕ್ಯಗಳು ಶಬ್ದಮಾಡುತ್ತವೆ

। ಭಾವಾರ್ಥ ।

ಸ್ತುತಿಪ್ರಿಯನಾದ ಎಲೈ ಇಂದ್ರನೇ, ರಥದ ಯಜಮಾನನು ತನ್ನಿಷ್ಟಬಂದ ಪ್ರದೇಶಕ್ಕೆ ಹೋಗುವಂತೆ, ಸೋಮವನ್ನು ಹಿಂಡಿರುವ ಕಾಲದಲ್ಲಿ ನಮ್ಮ ಸ್ತುತಿಗಳು ನಿನ್ನನ್ನು ಲಕ್ಷಿಸಿ ಶೀಘ್ರವಾಗಿ ಬಂದು ಸೇರುತ್ತವೆ. ಎಲೈ ಇಂದ್ರನೇ, ತಾಯಿಯಾದ ಗೋವುಗಳು ತಮ್ಮ ಕರುಗಳನ್ನು ಕರೆಯುವಾಗ ಆದರದಿಂದ ಕೂಗಿಕೊಳ್ಳುವಂತೆ ನಿನ್ನನ್ನುದ್ದೇಶಿಸಿ ನಮ್ಮ ಸ್ತುತಿವಾಕ್ಯಗಳು ಶಬ್ದಮಾಡುತ್ತವೆ.

## English Translation

O Indra worthy of praise, when the Soma is effused, our songs hasten to you as a charioteer (to his goal); they low towards you as cows towards their calves

॥ ಸಂಹಿತಾಪಾಠಃ ॥

ಆ ತ್ವಾ ಶುಕ್ರಾ ಅಚುಚ್ಯವುಃ ಸುತಾಸ ಇಂದ್ರ ಗಿರ್ವಣಃ ।
ಪಿಬಾ ತ್ವ೧ಸ್ಯಾಂಧಸ ಇಂದ್ರ ವಿಶ್ವಾಸು ತೇ ಹಿತಂ ॥ ೨ ॥

॥ ಪದಪಾಠಃ ॥

ಆ । ತ್ವಾ । ಶುಕ್ರಾಃ । ಅಚುಚ್ಯವುಃ । ಸುತಾಸಃ । ಇಂದ್ರ । ಗಿರ್ವಣಃ ।
ಪಿಬ । ತು । ಅಸ್ಯ । ಅಂಧಸಃ । ಇಂದ್ರ । ವಿಶ್ವಾಸು । ತೇ । ಹಿತಂ ॥ ೨ ॥

॥ ಸಾಯಣ ಭಾಷ್ಯಂ ॥

ಹೇ ಗಿರ್ವಣೋ ಗೀರ್ಭಿರ್ವನನೀಯ ಹೇ ಇಂದ್ರ ಶುಕ್ರಾ ಗ್ರಹೇಷು ಪಾತ್ರೇಷು ಚ ದೀಪ್ಯಮಾನಾಃ ಸುತಾಸೋಽಸ್ಮಾಭಿರಭಿಷುತಾಃ ಸೋಮಾಸ್ತ್ವಾ ತ್ವಾಮಾಚುಚ್ಯವುಃ । ಆಗಚ್ಛಂತು ॥ ಚ್ಯುಙ್ ಪ್ಲುಙ್ ಗತೌ । ಲುಙಿ ಬಹುಲಂ ಛಂದಸೀತಿ ಶಪಃ ಶ್ಲುಃ ॥ ತತಸ್ತ್ವಮಸ್ಮಾಭಿರ್ದೀಯಮಾನಸ್ಯಾಂಧಸಃ ಸೋಮಸ್ಯ ಭವದೀಯಂ ಭಾಗಂ ತು ಕ್ಷಿಪ್ರಂ ಪಿಬ । ತದೇವೋಪಪಾದಯತಿ । ಹೇ ಇಂದ್ರ ವಿಶ್ವಾಸು ಸರ್ವಾಸು ದಿಕ್ಷು ತೇ ತ್ವದರ್ಥಂ ಸೋಮಪುರೋಡಾಶಾದಿಹವಿರ್ಹಿತಂ ಭವತಿ ॥

॥ ಪ್ರತಿಪದಾರ್ಥ ॥

**ಗಿರ್ವಣಃ**—ಸ್ತುತಿಪ್ರಿಯನಾದ । **ಇಂದ್ರ**—ಎಲೈ ಇಂದ್ರನೇ । **ಶುಕ್ರಾಃ**—ಪ್ರಕಾಶಮಾನವಾದವೂ । **ಸುತಾಸಃ**—ನಮ್ಮಿಂದ ಹಿಂಡಲ್ಪಟ್ಟವೂ ಆದ ಸೋಮರಸಗಳು । **ತ್ವಾ**—ನಿನ್ನನ್ನು । **ಆ ಅಚುಚ್ಯವುಃ**—ಬಂದು ಸೇರಿಕೊಳ್ಳಲಿ । **ಅಸ್ಯ ಅಂಧಸಃ**—ಈ ಸೋಮರಸದ ನಿನ್ನ ಭಾಗವನ್ನು । **ತು**—ಕ್ಷಿಪ್ರವಾಗಿ । **ಪಿಬ**—ಪಾನಮಾಡು । **ಇಂದ್ರ**—ಎಲೈ ಇಂದ್ರನೇ । **ವಿಶ್ವಾಸು**—ಸಮಸ್ತ ದಿಕ್ಕುಗಳಲ್ಲಿಯೂ । **ತೇ**—ನಿನ್ನನ್ನುದ್ದೇಶಿಸಿ । **ಹಿತಂ**—ಸೋಮಾದಿ ಹವಿಸ್ಸುಗಳು ಅರ್ಪಿತವಾಗಿವೆ

॥ ಭಾವಾರ್ಥ ॥

ಸ್ತುತಿಪ್ರಿಯನಾದ ಎಲೈ ಇಂದ್ರನೇ, ಪ್ರಕಾಶಮಾನವಾದವೂ, ನಮ್ಮಿಂದ ಹಿಂಡಲ್ಪಟ್ಟವೂ ಆದ ಸೋಮರಸಗಳು ನಿನ್ನನ್ನು ಬಂದು ಸೇರಿಕೊಳ್ಳಲಿ ಈ ಸೋಮರಸದ ನಿನ್ನ ಭಾಗವನ್ನು ಕ್ಷಿಪ್ರವಾಗಿ ಪಾನಮಾಡು ಎಲೈ ಇಂದ್ರನೇ, ಸಮಸ್ತ ದಿಕ್ಕುಗಳಲ್ಲಿಯೂ ನಿನ್ನನ್ನುದ್ದೇಶಿಸಿ ಸೋಮಾದಿ ಹವಿಸ್ಸುಗಳು ಅರ್ಪಿತವಾಗಿವೆ.

## English Translation

Indra worthy of praise, let the bright Soma-libations come to you ; drink your portion of the beveragr ; Indra, in all places it is fit for you.

॥ ಸಂಹಿತಾಪಾಠಃ ॥

ಪಿಬಾ ಸೋಮಮಿಂದ್ರ ಮದಾಯ ಕಮಿಂದ್ರ ಶ್ಯೇನಾಭೃತಂ ಸುತಂ ।
ತ್ವಂ ಹಿ ಶಶ್ವತೀನಾಂ ಪತೀ ರಾಜಾ ವಿಶಾಮಸಿ ॥ ೩ ॥

॥ ಪದಪಾಠಃ ॥

ಪಿಬ । ಸೋಮಂ । ಮದಾಯ । ಕಂ । ಇಂದ್ರ । ಶ್ಯೇನಽಆಭೃತಂ । ಸುತಂ ।
ತ್ವಂ । ಹಿ । ಶಶ್ವತೀನಾಂ । ಪತಿಃ । ರಾಜಾ । ವಿಶಾಂ । ಅಸಿ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಶ್ಯೇನಾಭೃತಂ ॥ ಹೃಗ್ರಹೋರ್ಭಶ್ಛಂದಸೀತಿ ಹಕಾರಸ್ಯ ಭಕಾರಃ ॥ ದ್ಯುಲೋಕಾಚ್ಛ್ಯೇನರೂಪಯಾ ಗಾಯತ್ರ್ಯಾಹೃತಂ ಸುತಮಭಿಷುತಂ ಸೋಮಂ ಮದಾಯ ಹರ್ಷಾಯ ಪಿಬ । ಕಮಿತಿ ಪೂರಣಃ ಸುಖಾರ್ಥೋ ವಾ । ಸುಖೇನ ಸೋಮಂ ಪಿಬ । ಹಿ ಶಬ್ದೋ ಹೇತೌ । ಹಿ ಯಸ್ಮಾತ್ತ್ವಂ ಶಶ್ವತೀನಾಂ ಬಹ್ವೀನಾಂ ವಿಶಾಂ ಮರುದ್ಗಣಾನಾಂ ಸರ್ವೇಷಾಂ ದೇವಗಣಾನಾಂ ಚ ಪತಿ ಪಾಲಯಿತಾ ಸ್ವಾಮ್ಯಸಿ ಭವಸಿ ತಥಾ ರಾಜಾ ಸ್ವತೇಜಸಾ ದೀಪ್ಯಮಾನಶ್ಚಾಸಿ । ಅತಸ್ತ್ವಂ ಪೂರ್ವಂ ಸೋಮಂ ಪಿಬ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಶ್ಯೇನಾಭೃತಂ**—ಶ್ಯೇನರೂಪವಾದ ಗಾಯತ್ರಿಯಿಂದ ತರಲ್ಪಟ್ಟುದೂ । **ಸುತಂ**—ಹಿಂಡಿರುವುದೂ ಆದ । **ಸೋಮಂ**—ಸೋಮವನ್ನು । **ಮದಾಯ**—ನಿನ್ನ ಹರ್ಷಕ್ಕಾಗಿ । **ಪಿಬ**—ಪಾನಮಾಡು । **ಹಿ**—ಏತಕ್ಕೆಂದರೆ । **ತ್ವಂ**—ನೀನು । **ಶಶ್ವತೀನಾಂ**—ಅನೇಕ ಸಂಖ್ಯೆಯುಳ್ಳ । **ವಿಶಾಂ**—ದೇವಮಾನವಾದಿ ಪ್ರಜೆಗಳಿಗೆಲ್ಲಾ । **ಪತಿಃ**—ಪಾಲಕನಾಗಿ । **ಅಸಿ**—ಆಗಿದ್ದೀಯೆ । **ರಾಜಾ**—ಸ್ವಯಂ ಪ್ರಕಾಶಮಾನನಾಗಿ ಇದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಅನೇಕವಾದ ದೇವಮಾನವಾದಿ ಪ್ರಜೆಗಳಿಗೆಲ್ಲಾ ಪ್ರಭುವೂ ಪಾಲಕನೂ ಆಗಿದ್ದೀಯೆ. ಸ್ವಯಂ ಪ್ರಕಾಶಮಾನನಾಗಿದ್ದೀಯೆ. ಆದುದರಿಂದ, ಶ್ಯೇನರೂಪವಾದ ಗಾಯತ್ರಿಯಿಂದ ತರಲ್ಪಟ್ಟುದೂ, ಇಲ್ಲಿ ಹಿಂಡಿರುವುದೂ ಆದ ಸೋಮವನ್ನು ನಿನ್ನ ಹರ್ಷಕ್ಕಾಗಿ ಪಾನಮಾಡು.

English Translation

Drink to your fill, Indra, the effused Soma brought by the hawk, you are the lord of all the divine hosts, you are the self-resplendent.

॥ ಸಂಹಿತಾಪಾಠಃ ॥

ಶ್ರುಧೀ ಹವಂ ತಿರಶ್ಚ್ಯಾ ಇಂದ್ರ ಯಸ್ತ್ವಾ ಸಪರ್ಯತಿ ।
ಸುವೀರ್ಯಸ್ಯ ಗೋಮತೋ ರಾಯಸ್ಪೂರ್ಧಿ ಮಹಾಁ ಅಸಿ ॥೪॥

॥ ಪದಪಾಠಃ ॥

ಶ್ರುಧಿ । ಹವಂ । ತಿರಶ್ಚ್ಯಾಃ । ಇಂದ್ರ । ಯಃ । ತ್ವಾ । ಸಪರ್ಯತಿ ।
ಸುऽವೀರ್ಯಸ್ಯ । ಗೋऽಮತಃ । ರಾಯಃ । ಪೂರ್ಧಿ । ಮಹಾನ್ । ಅಸಿ ॥ ೪ ॥

॥ ಸಾಯಣಭಾಷ್ಯಂ ॥

ಅಭಿಪ್ಲವಿಕೇಷೂಕ್ಥ್ಯೇಷು ತೃತೀಯಸವನೇಽಚ್ಛಾವಾಕಸ್ಯ ಶ್ರುಧೀ ಹವಂ ತಿರಶ್ಚ್ಯಾ ಇತಿ ವೈಕಲ್ಪಿಕಃ ಸ್ತೋತ್ರಿಯಃ । ಸೂತ್ರಿತಂ ಚ । ಶ್ರುಧೀ ಹವಂ ತಿರಶ್ಚ್ಯಾ ಆಶ್ರುತ್ಕರ್ಣ ಶ್ರುಧೀ ಹವಂ । ಆ. ೭-೮ । ಇತಿ ॥

ಹೇ ಇಂದ್ರ ಯಸ್ತ್ವಾ ತ್ವಾಂ ಸಪರ್ಯತಿ ॥ ಸಪರಶಬ್ದಃ ಕಂಡ್ವಾದಿಃ ॥ ಹವಿರ್ಭಿಃ ಪರಿಚರತಿ ತಾದೃಶಸ್ಯ ತಿರಶ್ಚ್ಯಾ ಏತನ್ನಾಮಕಸ್ಯರ್ಷೇರ್ಮಮ ಹವಂ ಸ್ತುತಿಭಿಸ್ತ್ವದ್ವಿಷಯಮಾಹ್ವಾನಂ ಶ್ರುಧಿ । ಶೃಣು । ಶ್ರುತ್ವಾ ಚ ಹೇ ಇಂದ್ರ ತ್ವಂ ಸುವೀರ್ಯಸ್ಯ ಶೋಭನವೀರ್ಯೋಪೇತಸ್ಯ । ಯದ್ವಾ । ವೀರೇ ಪುತ್ರೇ ಭವಂ ವೀರ್ಯಂ । ಸುಪುತ್ರಸ್ಯ । ಗೋಮತೋ ಗವಾದಿಪಶುಮತೋ ರಾಯೋ ಧನಸ್ಯ ದಾನೇನ ಪೂರ್ಧಿ । ಅಸ್ಮಾನ್ಪೂರಯ । ಏತತ್ಸಾಮರ್ಥ್ಯಂ ಕುತ ಇತ್ಯತ ಆಹ । ತ್ವಂ ಮಹಾನ್ ಗುಣಾಧಿಕೋ ದೇವಾನಾಂ ಶ್ರೇಷ್ಠಶ್ಚಾಸಿ । ಭವಸಿ ಖಲು ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ಯಃ—ಯಾರು । ತ್ವಾ—ನಿನ್ನನ್ನು । ಸಪರ್ಯತಿ—ಪೂಜಿಸುವನೋ ಅಂತಹ । ತಿರಶ್ಚ್ಯಾಃ—ತಿರಶ್ಚಿಸಂಜ್ಞಕನಾದ ಋಷಿಯ । ಹವಂ—ಸ್ತುತಿಯನ್ನು । ಶ್ರುಧಿ-ಕೇಳು । ಸುವೀರ್ಯಸ್ಯ—ವೀರ ಪುತ್ರರಿಂದೊಡಗೂಡಿದುದೂ । ಗೋಮತಃ—ಗೋವುಗಳಿಂದ ಕೂಡಿದುದೂ ಆದ । ರಾಯಃ—ಧನದ ದಾನದಿಂದ । ಪೂರ್ಧಿ—ನಮ್ಮ ಇಷ್ಟಾರ್ಥಗಳನ್ನು ನೆರವೇರಿಸು । (ತ್ವಂ—ನೀನು) । ಮಹಾನ್—ಮಹತ್ಸ್ವರೂಪವುಳ್ಳವನಾಗಿ । ಅಸಿ—ಆಗಿದ್ದೀಯೆ,

॥ ಭಾವಾರ್ಥ ॥

ಎಲೈ ಇಂದ್ರನೇ, ಯಾರು ನಿನ್ನನ್ನು ಪೂಜಿಸುವನೋ ಅಂತಹ ತಿರಶ್ಚಿಸಂಜ್ಞಕನಾದ ಋಷಿಯು ಸ್ತುತಿಯನ್ನು ಕೇಳು. ವೀರ ಪುತ್ರರಿಂದೊಡಗೂಡಿದುದೂ, ಗೋವುಗಳಿಂದ ಕೂಡಿದುದೂ ಆದ ಧನದ ದಾನದಿಂದ ನಮ್ಮ ಇಷ್ಟಾರ್ಥಗಳನ್ನು ನೆರವೇರಿಸು. ನೀನು ಮಹತ್ಸ್ವರೂಪವುಳ್ಳವನಾಗಿ ಆಗಿದ್ದೀಯೆ.

English Translation

Hear, Indra, the prayer of Tirashchi who worships you, and satisfy him with wealth bringing gallant offspring and cattle,—for you are mighty.

॥ ವಿಶೇಷವಿಷಯಗಳು ॥

ಅಭಿಪ್ಲವಸಂಬಂಧವಾದ ಉಕ್ಥ್ಯಯಾಗಗಳಲ್ಲಿ ತೃತೀಯಸವನಕಾಲದಲ್ಲಿ ಅಚ್ಛಾವಾಕನೆಂಬ ಋತ್ವಿಜನು ಶ್ರುಧೀ ಹವಂ ತಿರಶ್ಚ್ಯಾಃ ಎಂದು ನೊದಲಾಗುವ ಮೂರು ಋಕ್ಕುಗಳನ್ನು ವೈಕಲ್ಪಿಕಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—ಶ್ರುಧೀ ಹವಂ ತಿರಶ್ಚ್ಯಾ ಆಶ್ರುತ್ಕರ್ಣ ಶ್ರುಧೀ ಹವಂ ಎಂಬ ಸೂತ್ರದಿಂದ (ನಿ. ೬-೮) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಇಂದ್ರ ಯಸ್ತೇ ನವೀಯಸೀಂ ಗಿರಂ ಮಂದ್ರಾಮಜೀಜನತ್ ।
ಚಿಕಿತ್ವಿನ್ಮನಸಂ ಧಿಯಂ ಪ್ರತ್ನಾಮೃತಸ್ಯ ಪಿಪ್ಯುಷೀಂ ॥ ೫ ॥

॥ ಪದಪಾಠಃ ॥

ಇಂದ್ರ । ಯಃ । ತೇ । ನವೀಯಸೀಂ । ಗಿರಂ । ಮಂದ್ರಾಂ । ಅಜೀಜನತ್ ।
ಚಿಕಿತ್ವಿತ್ऽಮನಸಂ । ಧಿಯಂ । ಪ್ರತ್ನಾಂ । ಋತಸ್ಯ । ಪಿಪ್ಯುಷೀಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯೋ ಯಜಮಾನೋ ನವೀಯಸೀಂ ನವತರಾಂ ಪುನಃಪುನಃಕ್ರಿಯಮಾಣತಯಾ ಮಂದ್ರಾಂ ಮದಕರೀಂ ಗಿರಂ ಸ್ತುತಿಲಕ್ಷಣಾಂ ವಾಚಂ ತೇ ತ್ವದರ್ಥಮಜೀಜನತ್ ಉದಪೀಪದತ್ । ಅಕಾರ್ಷೀದಿತ್ಯರ್ಥಃ । ತಸ್ಮೈ ಸ್ತೋತ್ರೇ ತ್ವಂ ಪ್ರತ್ನಾಂ ಪುರಾತನಮೃತಸ್ಯ ಸತ್ಯಸ್ಯ ಸಂಬಂಧಿ । ಯದ್ವಾ । ತೃತೀಯಾರ್ಥೇ ಷಷ್ಠೀ । ಸತ್ಯೇನ ಪಿಪ್ಯುಷೀಂ ಪ್ರವೃದ್ಧಂ ॥ ಲಿಡ್ಯಙಭ್ಯೋಶ್ಚೇತಿ ಪ್ಯಾಯತೇಃ ಪೀಭಾವಃ ॥ ತಾದೃಶಂ ಚಿಕಿತ್ವಿನ್ಮನಸಂ ॥ ಕಿತ ಜ್ಞಾನೇ । ಕ್ವಸೌ ರೂಪಂ । ಅಕಾರಸ್ಯೇಕಾರಶ್ಛಾಂದಸಃ ॥ ಚಿಕಿತ್ವಾಂಸಿ

ಜ್ಞಾತಾನಿ ಸರ್ವೇಷಾಂ ಹೃದಯಾನಿ ಯಯೇತಿ ॥ ಅಮಾಯಯಾ ಕ್ರಿಯಮಾಣಂ ಯತ್ತ್ರಾಣಂ ರಕ್ಷಣಂ ಸರ್ವೇಷಾಂ ಹೃದಯಂ ಪ್ರಜ್ಞಾಪಯತೀತಿ ತದತೀಂದ್ರಿಯಾರ್ಥದರ್ಶಕಂ ಧಿಯಂ ರಕ್ಷಣಾಖ್ಯಂ ತಸ್ಮೈ ಕುರು ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ, । ಯಃ—ಯಾವ ಯಜಮಾನನು । ನವೀಯಸೀಂ—ನೂತನವಾದುದೂ । ಮಂದ್ರಾಂ—ಹರ್ಷಜನಕವಾದುದೂ ಆದ । ಗಿರಂ—ಸ್ತುತಿರೂಪವಾದ ವಾಕ್ಕನ್ನು । ತೇ—ನಿನ್ನನ್ನುದ್ದೇಶಿಸಿ । ಅಜೀಜನತ್—ನಿರ್ಮಿಸಿದ್ದಾನೆಯೋ ಆ ಸ್ತುತಿಕರ್ತನಿಗಾಗಿ । ಪ್ರತ್ನಾಂ—ಪುರಾತನವಾದುದೂ । ಋತಸ್ಯ—ತನ್ನ ಸತ್ಯಸ್ವರೂಪದಿಂದ । ಪಿಪ್ಯುಷೀಂ—ಅತ್ಯಂತ ಪ್ರವೃದ್ಧವಾದುದೂ । ಚಿಕಿತ್ವಿನ್ಮನಸಂ—ತನ್ನ ಪ್ರಭಾವದಿಂದ ಸಕಲರ ಮನಸ್ಸನ್ನೂ ತಿಳಿಯತಕ್ಕದ್ದೂ ಆದ । ಧಿಯಂ—ರಕ್ಷಣಾರೂಪವಾದ ಕರ್ಮವನ್ನು ನೆರವೇರಿಸು.

॥ ಭಾವಾರ್ಥ ॥

ಎಲೈ ಇಂದ್ರನೇ, ಯಾವ ಯಜಮಾನನು ನೂತನವಾದುದೂ, ಹರ್ಷಜನಕವಾದುದೂ ಆದ ಸ್ತುತಿರೂಪವಾದ ವಾಕ್ಕನ್ನು ನಿನ್ನನ್ನುದ್ದೇಶಿಸಿ ನಿರ್ಮಿಸುತ್ತಾನೆಯೋ, ಆ ಸ್ತುತಿಕರ್ತನಿಗಾಗಿ ಪುರಾತನವಾದುದೂ, ತನ್ನ ಸತ್ಯಸ್ವರೂಪದಿಂದ ಅತ್ಯಂತ ಪ್ರವೃದ್ಧವಾದುದೂ ತನ್ನ ಪ್ರಭಾವದಿಂದ ಸಕಲರ ಮನಸ್ಸನ್ನೂ ತಿಳಿಯತಕ್ಕದ್ದೂ ಆದ ರಕ್ಷಣಾರೂಪವಾದ ಕರ್ಮವನ್ನು ನೆರವೇರಿಸು

English Translation

To him who has made for you this newest joy-giving hymn, Indra, (extend), your ancient truthful providence to which all hearts are known.

॥ ಸಂಹಿತಾಪಾಠಃ ॥

ತಮು ಷ್ಟವಾಮ ಯಂ ಗಿರ ಇಂದ್ರಮುಕ್ಥಾನಿ ವಾವೃಧುಃ ।
ಪುರೂಣ್ಯಸ್ಯ ಪೌಂಸ್ಯಾ ಸಿಷಾಸಂತೋ ವನಾಮಹೇ ॥ ೬ ॥

॥ ಪದಪಾಠಃ ॥

ತಂ । ಊಂ ಇತಿ । ಸ್ತವಾಮ । ಯಂ । ಗಿರಃ । ಇಂದ್ರಂ । ಉಕ್ಥಾನಿ । ವವೃಧುಃ ।
ಪುರೂಣಿ । ಅಸ್ಯ । ಪೌಂಸ್ಯಾ । ಸಿಸಾಸಂತಃ । ವನಾಮಹೇ ॥ ೬ ॥

॥ ಸಾಯಣಭಾಷ್ಯಂ ॥

ಋಷಯಃ ಪರಸ್ಪರಮಾಹುಃ । ತಂ ಪೂರ್ವೋಕ್ತಲಕ್ಷಣಂ । ಉ ಇತ್ಯವಧಾರಣೇ ತಮೇವೇಂದ್ರಂ ...ಮ । ಸ್ತುತಿಭಿಃ ಸ್ತುಮಃ । ಯಮಿಂದ್ರಂ ಗಿರೋಽಸ್ಮಾಕಂ ಸ್ತುತಯ ಉಕ್ಥಾನಿ ಶಸ್ತ್ರಾಣಿ ಚ

**ವಾವೃಧುಃ ಪ್ರಾವರ್ಧಯನ್ ತಂ ಸ್ತುಮಃ । ತತೋ ವಯಮಸ್ಯೇಂದ್ರಸ್ಯ ಪುರೂಣಿ ಬಹೂನಿ ಪೌಂಸ್ಯಾ ವೀರ್ಯಾಣಿ ಸಿಸಾಸಂತಃ ॥ ಷಣ ಸಂಭಕ್ತೌ । ಸನೀಡಭಾವಪಕ್ಷ ಆತ್ವೇ ಕೃತೇ ಸನೋತೇರನ ಇತಿ ಸಾಂಹಿತಿಕಂ ಷತ್ವಂ ॥ ತಾನಿ ವೀರ್ಯಾಣಿ ಸಂಭಕ್ತುಮಿಚ್ಛಂತೋ ವನಾಮಹೇ । ತಮಿಂದ್ರಂ ಸ್ತುತಿಭಿಃ ಸಂಭಜಾಮಹೇ ॥**

॥ ಪ್ರತಿಪದಾರ್ಥ ॥

**ಯಂ ಇಂದ್ರಂ**—ಯಾವ ಇಂದ್ರನನ್ನು । **ಗಿರಃ**—ನಮ್ಮ ಸ್ತುತಿವಾಕ್ಯಗಳೂ। **ಉಕ್ಥಾನಿ**—ನಮ್ಮ ಶಸ್ತ್ರ ಮಂತ್ರಗಳೂ । **ವಾವೃಧುಃ**—ಪುಷ್ಟನಾಗುವಂತೆ ಮಾಡಿದವೋ । **ತಮು**—ಆ ಇಂದ್ರನನ್ನೇ । **ಸ್ತವಾಮ**—ನಾವು ಸ್ತುತಿಸೋಣ । **ಅಸ್ಯ**—ಈ ಇಂದ್ರನ । **ಪುರೂಣಿ**—ಅನೇಕವಿಧವಾದ । **ಪೌಂಸ್ಯಾ**—ವೀರ್ಯಕರ್ಮಗಳನ್ನು । **ಸಿಷಾಸಂತಃ**—ಪ್ರಶಂಸಿಸಲಿಚ್ಛಿಸಿ । **ವನಾಮಹೇ**—ಈ ಇಂದ್ರನನ್ನು ನಾವು ಗೌರವಿಸುತ್ತೇವೆ.

॥ ಭಾವಾರ್ಥ ॥

ಯಾವ ಇಂದ್ರನನ್ನು ನಮ್ಮ ಸ್ತುತಿಗಳೂ ಶಸ್ತ್ರಮಂತ್ರಗಳೂ ಪುಷ್ಟನಾಗುವಂತೆ ಮಾಡಿದವೋ, ಆ ಇಂದ್ರನನ್ನೇ ನಾವು ಸ್ತುತಿಸೋಣ ಈ ಇಂದ್ರನ ಅನೇಕವಿಧವಾದ ವೀರ್ಯಕರ್ಮಗಳನ್ನು ಪ್ರಶಂಸಿಸಲಿಚ್ಛಿಸಿ ಈ ಇಂದ್ರನನ್ನು ನಾವು ಗೌರವಿಸುತ್ತೇವೆ.

English Translation

Let us praise that Indra whom our chants and hymns have magnified; we worship him, desirous to honour his many deeds of might.

॥ ಸಂಹಿತಾಪಾಠಃ ॥

ಏತೋ ನ್ವಿಂದ್ರಂ ಸ್ತವಾಮ ಶುದ್ಧಂ ಶುದ್ಧೇನ ಸಾಮ್ನಾ ।
ಶುದ್ಧೈರುಕ್ಥೈರ್ವಾವೃಧ್ವಾಂಸಂ ಶುದ್ಧ ಆಶೀರ್ವಾನ್ಮಮತ್ತು ॥೭॥

॥ ಪದಪಾಠಃ ॥

ಏತೋ ಇತಿ । ನು । ಇಂದ್ರಂ । ಸ್ತವಾಮ । ಶುದ್ಧಂ । ಶುದ್ಧೇನ । ಸಾಮ್ನಾ ।
ಶುದ್ಧೈಃ । ಉಕ್ಥೈಃ । ವವೃಧ್ವಾಂಸಂ । ಶುದ್ಧಃ । ಆಶೀಃऽವಾನ್ । ಮಮತ್ತು ॥ ೭ ॥

॥ ಸಾಯಣಭಾಷ್ಯಂ ॥

**ಅತ್ರೇತಿಹಾಸಮಾಚಕ್ಷತೇ । ಪುರಾ ಕಿಲೇಂದ್ರೋ ವೃತ್ರಾದಿಕಾನಸುರಾನ್ ಹತ್ವಾ ಬ್ರಹ್ಮಹತ್ಯಾದಿದೋಷೇಣಾತ್ಮಾನಮಪರಿಶುದ್ಧಮಿತ್ಯಮನ್ಯತ । ತತಸ್ತದ್ದೋಷಪರಿಹಾರಾಯೇಂದ್ರ ಋಷೀನವೋಚತ್ । ಅಪೂತಂ ಮಾಂ ಯುಷ್ಮದೀಯೇನ ಸಾಮ್ನಾ ಶುದ್ಧಂ ಕುರುತೇತಿ । ತತಸ್ತೇ ಚ ಶುದ್ಧೈ-**

ತ್ಪಾದಕೇನ ಸಾಮ್ನಾ ಶಸ್ತ್ರೈಶ್ಚ ಪರಿಶುದ್ಧಮಕಾರ್ಷುಃ । ಪಶ್ಚಾತ್ಪೂತಾಯೇಂದ್ರಯಾಗಾದಿಕರ್ಮಾಣಿ ಸೋಮಾದೀನಿ ಹವೀಂಷಿ ಪ್ರಾದುರಿತಿ । ಏಷೋಽರ್ಥಃ ಶಾಟ್ಯಾಯನಕಬ್ರಾಹ್ಮಣೇ ಪ್ರತಿಪಾದಿತಃ । ಇಂದ್ರೋ ವಾಸುರಾನ್ಹತ್ವಾಪೂತ ಇವಾಮೇಧ್ಯೋಽಮನ್ಯತ । ಸೋಽಕಾಮಯತ ಶುದ್ಧಮೇವ ಮಾ ಸಂತಂ ಶುದ್ಧೇನ ಸಾಮ್ನಾ ಸ್ತುಯುರಿತಿ । ಸ ಋಷೀನಬ್ರವೀತ್ ಸ್ತುತ ಮೇತಿ । ತತ ಋಷಯಃ ಸಾಮಾಪಶ್ಯನ್ । ತೇನಾಸ್ತುವನ್ನೇತೋ ನ್ವಿಂದ್ರಮಿತಿ । ತತೋ ವಾ ಇಂದ್ರಃ ಪೂತಃ ಶುದ್ಧೋ ಮೇಧ್ಯೋಽಭವದಿತಿ ॥ ತಥಾ ಚಾಸ್ಯಾ ಋಚೋಽಯಮರ್ಥಃ । ಋಷಯಃ ಪರಸ್ಪರಂ ಬ್ರುವಂತಿ । ಸು ಕ್ಷಿಪ್ರಮೇತೋ । ಗಚ್ಛತೈವ । ಆಗತ್ಯ ಚ ಶುದ್ಧೇನ ಶುದ್ಧ್ಯುತ್ಪಾದಕೇನ ಸಾಮ್ನಾ ತಥಾ ಶುದ್ಧೈಃ ಶುದ್ಧಿಹೇತುಭಿರುಕ್ಥೈಃ ಶಸ್ತ್ರೈಶ್ಚೇಂದ್ರಂ ಶುದ್ಧಮಪಾಪಿನಂ ಕೃತ್ವಾ ಸ್ತವಾಮ । ಸ್ತುಯಾಮ । ತತಃ ಸಾಮಶಸ್ತ್ರೈಶ್ಚ ವಾವೃಧ್ವಾಂಸಂ ಪಾಪರಾಹಿತ್ಯೇನ ವರ್ಧಮಾನಂ ತಮಿಮಮಿಂದ್ರಂ ಶುದ್ಧೋ ದಶಾಪವಿತ್ರೇಣಾಶೀರ್ವಾನಾಶ್ರಯಣವಾನ್ ಗವ್ಯಾದಿಭಿಃ ॥ ಛಂದಸೀರ ಇತಿ ಮತುಪೋ ವತ್ವಂ ॥ ತಾದೃಶಃ ಸೋಮೋ ಮಮತ್ತು । ಇಂದ್ರಂ ಮಾದಯತು ॥ ಮಾದಯತೇಶ್ಛಾಂದಸಃ ಶ್ಲುಃ ॥

॥ ಪ್ರತಿಪದಾರ್ಥ ॥

(ಎಲೈ ಋಷಿಗಳೇ) **ಸು**—ಕ್ಷಿಪ್ರವಾಗಿ । **ಏತೋ**—ಒಟ್ಟುಗೂಡಿ ಬನ್ನಿರಿ । **ಶುದ್ಧೇನ**—ಶುದ್ಧಿಕಾರಕವಾದ । **ಸಾಮ್ನಾ**—ಸಾಮದಿಂದಲೂ । **ಶುದ್ಧೈಃ**-ಶುದ್ಧಿಸಾಧನಗಳಾದ । **ಉಕ್ಥೈಃ**-ಶಸ್ತ್ರಮಂತ್ರಗಳಿಂದಲೂ । **ಇಂದ್ರಂ**—ಇಂದ್ರನನ್ನು । **ಶುದ್ಧಂ**—ದೋಷರಹಿತನಾಗುವಂತೆ । **ಸ್ತವಾಮ**—ಸ್ತುತಿಸೋಣ (ಅನಂತರ) । **ಶುದ್ಧಃ**—ದಶಾಪವಿತ್ರದಿಂದ ಶುದ್ಧಿಯನ್ನು ಪಡೆದುದೂ । **ಆಶೀರ್ವಾನ್**—ಕ್ಷೀರಾದ್ಯಾಶ್ರಯಣದ್ರವ್ಯಗಳಿಂದ ಕೂಡಿದುದೂ ಆದ ಸೋಮವು । **ವಾವೃಧ್ವಾಂಸಂ**—ದೋಷರಾಹಿತ್ಯದಿಂದ ಪುಷ್ಟನಾದ ಇಂದ್ರನನ್ನು । **ಮಮತ್ತು**—ಹರ್ಷಗೊಳಿಸಲಿ

॥ ಭಾವಾರ್ಥ ॥

ಎಲೈ ಋಷಿಗಳೇ, ಕ್ಷಿಪ್ರವಾಗಿ ಒಟ್ಟುಗೂಡಿ ಬನ್ನಿರಿ. ಶುದ್ಧಿಕಾರಕವಾದ ಸಾಮದಿಂದಲೂ, ಶುದ್ಧಿಸಾಧನಗಳಾದ ಶಸ್ತ್ರಮಂತ್ರಗಳಿಂದಲೂ ಇಂದ್ರನನ್ನು ದೋಷರಹಿತನಾಗುವಂತೆ ಸ್ತುತಿಸೋಣ. ಅನಂತರ, ದಶಾಪವಿತ್ರದಿಂದ ಶುದ್ಧಿಯನ್ನು ಪಡೆದುದೂ, ಕ್ಷೀರಾದ್ಯಾಶ್ರಯಣದ್ರವ್ಯಗಳಿಂದ ಕೂಡಿದುದೂ ಆದ ಸೋಮವು ದೋಷರಾಹಿತ್ಯದಿಂದ ಪುಷ್ಟನಾದ ಇಂದ್ರನನ್ನು ಹರ್ಷಗೊಳಿಸಲಿ.

## English Translation

Come, let us praise the purified Indra with a pure Saman and with pure recited hymns; let the pure (Soma) mixed with milk gladden him waxing strong.

॥ ವಿಶೇಷವಿಷಯಗಳು ॥

ಈ ಋಕ್ಕಿನ ಮತ್ತು ಮುಂದಿನ ಎರಡು ಋಕ್ಕುಗಳ ವಿಷಯದಲ್ಲಿ ಭಾಷ್ಯಕಾರರು ಒಂದು ಪೂರ್ವೇತಿಹಾಸವನ್ನು ಹೇಳಿರುವರು—

**ಅತ್ರೇತಿಹಾಸಮಾಚಕ್ಷತೇ । ಪುರಾ ಕಿಲೇಂದ್ರೋ ವೃತ್ರಾದಿಕಾನಸುರಾನ್ ಹತ್ವಾ ಬ್ರಹ್ಮಹತ್ಯಾದಿದೋಷೇಣಾತ್ಮಾನಮಪರಿಶುದ್ಧಮಿತ್ಯಮನ್ಯತ। ತತಸ್ತದ್ದೋಷಪರಿಹಾರಾಯೇಂದ್ರ ಋಷೀ-**

ನವೋಚತ್ । ಅಪೂತಂ ಮಾಂ ಯುಷ್ಮದೀಯೇನ ಸಾಮ್ನಾ ಶುದ್ಧಂ ಕುರುತೇತಿ । ತತಸ್ತೇ ಚ ಶುದ್ಧ್ಯುತ್ಪಾದಕೇನ ಸಾಮ್ನಾ ಶಸ್ತ್ರೈಶ್ಚ ಪರಿಶುದ್ಧಮಕಾರ್ಷುಃ । ಪಶ್ಚಾತ್ಪೂತಾಯೇಂ- ದ್ರಾಯ ಯಾಗಾದಿಕರ್ಮಾಣಿ ಸೋಮಾದೀನಿ ಹವೀಂಷಿ ಪ್ರಾದುರಿತಿ ।

ಪೂರ್ವದಲ್ಲಿ ಇಂದ್ರನು ವೃತ್ರನೇ ಮೊದಲಾದ ಅನೇಕ ಅಸುರರನ್ನು ಕೊಂದದ್ದರಿಂದ ತನಗೆ ಬ್ರಹ್ಮಹತ್ಯಾ ದೋಷವು ಪ್ರಾಪ್ತವಾಯಿತೆಂದು ತಿಳಿದು ಆ ದೋಷಪರಿಹಾರಕ್ಕಾಗಿ ಋಷಿಗಳನ್ನು ಕುರಿತು—ಎಲೈ ಋಷಿಗಳೇ, ಬ್ರಹ್ಮಹತ್ಯಾದೋಷದಿಂದ ಅಶುದ್ಧನಾದ ನನ್ನನ್ನು ಪರಿಶುದ್ಧನನ್ನಾಗಿ ಮಾಡಬೇಕು ಇದಕ್ಕಾಗಿ ನೀವು ಸಂದರ್ಭೋ ಚಿತವಾದ ಸಾಮಮಂತ್ರಗಳಿಂದ ಸ್ತುತಿಸಿ ಶುದ್ಧನನ್ನಾಗಿ ಮಾಡಿ ಎಂದನು ಅನಂತರ ಆ ಋಷಿಗಳು ಇಂದ್ರನನ್ನು ಶುದ್ಧಿಮಾಡುವುದಕ್ಕಾಗಿ ಅದಕ್ಕೆ ಬೇಕಾದ ಸಾಮಮಂತ್ರಗಳನ್ನೂ, ಶಸ್ತ್ರಮಂತ್ರಗಳನ್ನೂ ಪಠಿಸಿ ಇಂದ್ರನನ್ನು ಪೂರ್ವದಂತೆ ಪರಿಶುದ್ಧನನ್ನಾಗಿ ಮಾಡಿದರು. ಅನಂತರ ಶುದ್ಧನಾದ ಇಂದ್ರನನ್ನುದ್ದೇಶಿಸಿ ಯಜ್ಞಯಾಗಾದಿ ಕರ್ಮಗಳನ್ನು ನೆರವೇರಿಸಿ, ಸೋಮ, ಹವಿಸ್ಸು ಮೊದಲಾದವನ್ನು ಅರ್ಪಿಸಿದರು ಎಂದು ಈ ಇತಿಹಾಸದ ಅಭಿಪ್ರಾಯವು. ಈ ವಿಷಯವು (ಸಾಮವೇದದ) ಶಾಟ್ಯಾಯನಬ್ರಾಹ್ಮಣದಲ್ಲಿ ಹೇಳಲಾಗಿದೆಯೆಂದು ಅದನ್ನು ಇಲ್ಲಿ ಉದಾಹರಿಸಿರುವರು.

ಇಂದ್ರೋ ವಾ ಅಸುರಾನ್ ಹತ್ವಾಪೂತ ಇವಾಮೇಧ್ಯೋಽಮನ್ಯತ । ಸೋಽಕಾಮಯತ ಶುದ್ಧ- ಮೇವ ಮಾ ಸಂತಂ ಶುದ್ಧೇನ ಸಾಮ್ನಾ ಸ್ತುಯುರಿತಿ । ಸ ಋಷೀನಬ್ರವೀತ್ ಸ್ತುತ ಮೇತಿ । ತತ ಋಷಯಃ ಸಾಮಾಪಶ್ಯನ್ । ತೇನಾಸ್ತುವನ್ನೇತೋ ನ್ವಿಂದ್ರಮಿತಿ । ತತೋ ವಾ ಇಂದ್ರಃ ಪೂತಃ ಶುದ್ಧೋ ಮೇಧ್ಯೋಽಭವತ್ ॥

ಮೇಲೆ ಹೇಳಿದ ಅರ್ಥವೇ ಇಲ್ಲಿಯೂ ಉಕ್ತವಾಗಿರುವುದು. ಋಷಿಗಳು ಇಂದ್ರನ ಆಜ್ಞೆಯಂತೆ **ಏತೋನ್ವಿಂದ್ರಃ** (ಸಾಮವೇದ. ೩೫೦, ೧೪೦೨) **ಇಂದ್ರ ಶುದ್ಧೋ ನ ಆಗಹಿ** (ಸಾಮ. ೧೪೦೩) **ಇಂದ್ರ ಶುದ್ಧೋ ಹಿ ನೋ ರಯಿಂ** (ಸಾಮ. ೧೪೦೪) ಎಂಬ ಮೂರು ಮಂತ್ರಗಳನ್ನು ತಮ್ಮ ದಿವ್ಯದೃಷ್ಟಿಯಿಂದ ಅರಿತು ಇಂದ್ರನನ್ನು ಸ್ತುತಿಸಿದರು. ಆದರಿಂದ ಇಂದ್ರನು ಶುದ್ಧನಾದನು. ಈ ವಿಷಯವೇ ಈ ಋಕ್ಕುಗಳಲ್ಲಿ ಹೇಳಿದೆಯೆಂದು ಈ ಋಕ್ಕುಗಳ ಅರ್ಥವಿಷಯದಲ್ಲಿ ಮೇಲಿನ ಇತಿಹಾಸವನ್ನು ಪೀಠಿಕಾರೂಪವಾಗಿ ಹೇಳಿರುವರು

॥ ಸಂಹಿತಾಪಾಠಃ ॥

ಇಂದ್ರ ಶುದ್ಧೋ ನ ಆ ಗಹಿ ಶುದ್ಧಃ ಶುದ್ಧಾಭಿರೂತಿಭಿಃ ।
ಶುದ್ಧೋ ರಯಿಂ ನಿ ಧಾರಯ ಶುದ್ಧೋ ಮಮದ್ಧಿ ಸೋಮ್ಯಃ ॥

॥ ಪದಪಾಠಃ ॥

ಇಂದ್ರ । ಶುದ್ಧಃ । ನಃ । ಆ । ಗಹಿ । ಶುದ್ಧಃ । ಶುದ್ಧಾಭಿಃ । ಊತಿಽಭಿಃ ।
ಶುದ್ಧಃ । ರಯಿಂ । ನಿ । ಧಾರಯ । ಶುದ್ಧಃ । ಮಮದ್ಧಿ । ಸೋಮ್ಯಃ ॥ ೮ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಶುದ್ಧೋಽಸ್ಮದೀಯೈಃ ಸಾಮಭಿಃ ಶಸ್ತ್ರೈಶ್ಚ ಪರಿಶುದ್ಧಸ್ತ್ವಂ ನೋಽಸ್ಮಾನಾ ಗಹಿ । ಆಗಚ್ಛ । ಶುದ್ಧಾಭಿರೂತಿಭಿಃ । ಊತಯೋ ಮರುತಃ । ಅವಂತಿ ಸರ್ವತ್ರ ಗಚ್ಛಂತೀತಿ ವಾ । ತೇಽಪಿ ಸಾಮಭಿಃ ಶಸ್ತ್ರೈಃ ಪರಿಪೂತಾಃ । ತೈರ್ಮರುದ್ಭಿಃ ಸಹ ಶುದ್ಧಃ ಪಾಪರಹಿತಸ್ತ್ವಮಾ ಗಹಿ । ಆಗತ್ಯ ಚ ಶುದ್ಧಸ್ತ್ವಂ ರಯಿಂ ಧನಮಸ್ಮಾಸು ನಿ ಧಾರಯ । ನಿತರಾಂ ಸ್ಥಾಪಯ । ಕಿಂಚ ಶುದ್ಧಸ್ತ್ವಂ ಚ ಸೋಮ್ಯಃ ಸೋಮಾರ್ಹೋ ಭೂತ್ವಾ ಮಮದ್ಧಿ । ಸೋಮೇನ ಮಾದ್ಯ ॥ ಮದೀ ಹರ್ಷೇ । ಲೋಟಿ ಬಹುಲಂ ಛಂದಸೀತಿ ಶಪಃ ಶ್ಲುಃ ॥**

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಶುದ್ಧಃ**—ನಮ್ಮ ಶಸ್ತ್ರಾದಿಗಳಿಂದ ಪರಿಶುದ್ಧನಾದ ನೀನು । **ನಃ**—ನಮ್ಮಲ್ಲಿಗೆ । **ಆ ಗಹಿ**—ದಯಮಾಡು । **ಶುಧ್ಧಾಭಿಃ**—ಪರಿಶುದ್ಧರಾದವರೂ । **ಊತಿಭಿಃ**—ನಿನ್ನ ರಕ್ಷಕರೂ ಆದ ಮರುತ್ತುಗಳೊಂದಿಗೆ । **ಶುದ್ಧಃ**—ದೋಷರಹಿತನಾದ ನೀನು ದಯಮಾಡು । **ಶುದ್ಧಃ**—ಕಳಂಕರಹಿತನಾದ ನೀನು । **ರಯಿಂ**—ಧನವನ್ನು । **ನಿ ಧಾರಯ**—ನಮ್ಮಲ್ಲಿ ಸ್ಥಾಪಿಸಿಡು । **ಶುದ್ಧಃ**—ಪರಿಶುದ್ಧನಾದ ನೀನು । **ಸೋಮ್ಯಃ**—ಸೋಮಪಾನದ ಅರ್ಹತೆಯನ್ನು ಹೊಂದಿ । **ಮಮದ್ಧಿ**—ಸೋಮಪಾನದಿಂದ ಹರ್ಷವನ್ನು ಹೊಂದು.

॥ ಭಾವಾರ್ಥ ॥

ಎಲೈ ಇಂದ್ರನೇ, ನಮ್ಮ ಶಸ್ತ್ರಾದಿಮಂತ್ರಗಳಿಂದ ಪರಿಶುದ್ಧನಾದ ನೀನು ನಮ್ಮಲ್ಲಿಗೆ ದಯಮಾಡು. ಪರಿಶುದ್ಧರಾದವರೂ ನಿನ್ನ ರಕ್ಷಕರೂ ಆದ ಮರುತ್ತುಗಳೊಂದಿಗೆ ದೋಷರಹಿತನಾದ ನೀನು ದಯಮಾಡು. ಕಳಂಕರಹಿತನಾದ ನೀನು ನಮ್ಮಲ್ಲಿ ಧನವನ್ನು ಸ್ಥಾಪಿಸಿಡು. ಪರಿಶುದ್ಧನಾದ ನೀನು ಸೋಮಪಾನದ ಅರ್ಹತೆಯನ್ನು ಹೊಂದಿ ಸೋಮಪಾನದಿಂದ ಲಭಿಸುವ ಹರ್ಷವನ್ನು ಹೊಂದು.

English Translation

Come to us, Indra, purified, purified with your pure protecting hosts; purified, establish wealth in us; purified and now worthy of the Soma, rejoice.

॥ ಸಂಹಿತಾಪಾಠಃ ॥

ಇಂದ್ರ ಶುದ್ಧೋ ಹಿ ನೋ ರಯಿಂ ಶುದ್ಧೋ ರತ್ನಾನಿ ದಾಶುಷೇ ।
ಶುದ್ಧೋ ವೃತ್ರಾಣಿ ಜಿಘ್ನಸೇ ಶುದ್ಧೋ ವಾಜಂ ಸಿಷಾಸಸಿ ॥ ೯ ॥

॥ ಪದಪಾಠಃ ॥

ಇಂದ್ರ । ಶುದ್ಧಃ । ಹಿ । ನಃ । ರಯಿಂ । ಶುದ್ಧಃ । ರತ್ನಾನಿ । ದಾಶುಷೇ ।
ಶುದ್ಧಃ । ವೃತ್ರಾಣಿ । ಜಿಘ್ನಸೇ । ಶುದ್ಧಃ । ವಾಜಂ । ಸಿಸಾಸಸಿ ॥ ೯ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಶುದ್ಧಃ । ಹಿರವಧಾರಣೇ । ಶುದ್ಧ ಏವ ತ್ವಂ ರಯಿಂ ಧನಂ ನೋಽಸ್ಮಭ್ಯಂ ಪ್ರಯಚ್ಛ । ತಥಾ ಶುದ್ಧಸ್ತ್ವಂ ದಾಶುಷೇ ಹವಿರ್ದತ್ತವತೇ ಯಜಮಾನಾಯ ರತ್ನಾನಿ ರಮಣೀಯಾನಿ ಧನಾದೀನಿ ಚ ದೇಹಿ । ತತಃ ಶುದ್ಧಃ ಪಾಪರಹಿತಸ್ತ್ವಂ ವೃತ್ರಾಣ್ಯಪಾವಾರಕಾನ್ ಕರ್ಮವಿಘ್ನಕಾರಿಣಃ ಶತ್ರೂನ್ ಪಾಪಾನಿ ವಾ ಜಿಘ್ನಸೇ । ಹಂಸಿ । ತತಃ ಶುದ್ಧಃ ಶತ್ರುಹನನದೋಷಪರಿಹಾರಾಯಾಸ್ಮದೀಯೈಃ ಸಾಮಭಿಃ ಶಸ್ತ್ರೈಃ ಪರಿಶುದ್ಧಸ್ತ್ವಂ ವಾಜಮನ್ನಮಸ್ಮಭ್ಯಂ ಸಿಸಾಸಸಿ । ಪ್ರದಾತುಮಿಚ್ಛಸಿ । ಯದಾ ಯದಾ ಶತ್ರೂನಹಂ ಹನ್ಯಾಂ ತದಾ ತದಾ ಶುದ್ಧ್ಯುತ್ಪಾದಕೈಃ ಸಾಮಭಿಃ ಶಸ್ತ್ರೈಶ್ಚ ಯೂಯಂ ಮಾಂ ಪರಿಶುದ್ಧಂ ಕುರುತೇತ್ಯಸ್ಮಭ್ಯಮನ್ನಂ ದಾತುಮಿಚ್ಛಸೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಶುದ್ಧಃ**—ಪರಿಶುದ್ಧನಾದ ನೀನು । **ರಯಿಂ**—ಧನವನ್ನು । **ನಃ**—ನಮಗೆ ಕೊಡು । **ಶುದ್ಧಃ**—ಕಳಂಕರಹಿತನಾದ ನೀನು । **ದಾಶುಷೇ**—ಹವಿರ್ದಾತೃವಾದ ಯಜಮಾನನಿಗೆ । **ರತ್ನಾನಿ**—ರಮಣೀಯವಾದ ಧನಗಳನ್ನು ಕೊಡು । **ಶುದ್ಧಃ**—ಪಾಪರಹಿತನಾದ ನೀನು । **ವೃತ್ರಾಣಿ**—ವಿಘ್ನಕಾರಿಗಳಾದ ಅಸುರ ಶಕ್ತಿಗಳನ್ನು । **ಜಿಘ್ನಸೇ**—ನಾಶಮಾಡು । **ಶುದ್ಧಃ**—ಪಾಪರಹಿತನಾದ ನೀನು । **ವಾಜಂ**—ಅನ್ನವನ್ನು । **ಸಿಷಾಸಸಿ**—ನಮಗೆ ಕೊಡಲಿಚ್ಛಿಸು

॥ ಭಾವಾರ್ಥ ॥

ಎಲೈ ಇಂದ್ರನೇ, ಪರಿಶುದ್ಧನಾದ ನೀನು ನಮಗೆ ಧನವನ್ನು ಕೊಡು ಕಳಂಕರಹಿತನಾದ ನೀನು ಹವಿರ್ದಾತನಾದ ಯಜಮಾನರಿಗೆ ರಮಣೀಯವಾದ ಧನಗಳನ್ನು ಕೊಡು ಪಾಪರಹಿತನಾದ ನೀನು ವಿಘ್ನಕಾರಿಗಳಾದ ಅಸುರಶಕ್ತಿಗಳನ್ನು ನಾಶಮಾಡು ಪಾಪರಹಿತನಾದ ನೀನು ನಮಗೆ ಅನ್ನವನ್ನು ಕೊಡಲು ಇಚ್ಛಿಸು

English Translation

Purified, Indra, give us wealth, purified, give to your worshipper preceious things; purified, you smite your enemies; purified, you desire to give us food

## ತೊಂಭತ್ತಾರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅಸ್ಮಾ ಇತ್ಯೇಕವಿಂಶತ್ಯೃಚಂ ತೃತೀಯಂ ಸೂಕ್ತಂ । ಅತ್ರಾನುಕ್ರಮ್ಯತೇ । ಅಸ್ಮೈ ಸೈಕಾ ದ್ಯುತಾನೋ ವಾ ಮಾರುತಸ್ತ್ರೈಷ್ಟುಭಂ ಚತುರ್ಥೀ ವಿರಾಳಿಷ್ಯಾಮಿತಿ ಮಾರುತಃ ಪಾದಃ ಪರ್ಯೆಂದ್ರಾ-**

**ಬಾರ್ಹಸ್ಪತ್ಯೇತಿ । ದ್ಯುತಾನಾಖ್ಯೋ ಮರುತಾಂ ಪುತ್ರ ಋಷಿಸ್ತಿರಶ್ಚೀರ್ನಾಮಾಂಗಿರಸೋ ವಾ । ಚತುರ್ಥೀ ವಿರಾಟ್ । ಶಿಷ್ಟಾಸ್ತ್ರಿಷ್ಟುಭಃ । ಇಂದ್ರೋ ದೇವತಾ । ಇಷ್ಕ್ಯಾಮಿ ವೋ ಮರುತ ಇತಿ ಪಾದೋ ಮರುದ್ದೇವತ್ಯಃ । ಅಥ ದ್ರಪ್ಸ ಇತ್ಯೇಷಾ ತ್ವಿಂದ್ರಾಬೃಹಸ್ಪತಿದೇವತಾಕಾ ॥ ಸೂಕ್ತವಿನಿಯೋಗೋ ಲಿಂಗಾದವಗಂತವ್ಯಃ ॥**

ಅನುವಾದವು— **ಅಸ್ಮೈ** ಎಂಬ ಈ ಸೂಕ್ತವು ಹತ್ತನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಇಪ್ಪತ್ತೊಂದು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ— **ಅಸ್ಮೈ ಸೈಕಾ ದ್ಯುತಾನೋ ವಾ ಮಾರುತಸ್ತ್ರೈಷ್ಟುಭಂ ಚತುರ್ಥೀ ವಿರಾಳಿಷ್ಕ್ಯಾಮೀತಿ ಮಾರುತಃ ಪಾದಃ ಪರ್ಯೈಂದ್ರಾಬಾರ್ಹಸ್ಪತ್ಯಾ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಮರುದ್ದೇವತೆಗಳ ಪುತ್ರನಾದ ದ್ಯುತಾನ ಎಂಬುವನು ಅಥವಾ ತಿರಶ್ಚೀಃ ಆಂಗಿರಸಃ ಎಂಬುವನು ಋಷಿಯು ; ಇಂದ್ರನು ದೇವತೆಯು ; ಈ ಸೂಕ್ತದ ನಾಲ್ಕನೆಯ ಋಕ್ಕು ವಿರಾಟ್‌ಛಂದಸ್ಕವು ; ಉಳಿದ ಋಕ್ಕುಗಳು ತ್ರಿಷ್ಟುಪ್‌ಛಂದಸ್ಕವು. **ಇಷ್ಕ್ಯಾಮಿ ವಃ** ಎಂಬ ಹದಿನಾಲ್ಕನೆಯ ಋಕ್ಕಿನ ನಾಲ್ಕನೆಯ ಪಾದವು ಮರುದ್ದೇವತಾಕವು ; **ಅಥ ದ್ರಪ್ಸಃ** ಎಂಬ ಹದಿನೈದನೆಯ ಋಕ್ಕು ಇಂದ್ರಾಬೃಹಸ್ಪತೀದೇವತಾಕವು ಸೂಕ್ತವಿನಿಯೋಗವು ಲೈಂಗಿಕವು.

## ಸೂಕ್ತ—೯೬

ಮಂಡಲ—೮ ॥ ಅನುವಾಕ—೧೦ ॥ ಸೂಕ್ತ—೯೬ ॥
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೩೨, ೩೩, ೩೪, ೩೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೨೧ ॥
ಋಷಿಃ—ತಿರಶ್ಚೀರ್ದ್ಯುತಾನೋ ವಾ ಮಾರುತಃ ॥
ದೇವತಾ—೧-೧೩ ೧೪ ರಲ್ಲಿ ೩ನೇ ಪಾದ ೧೬-೨೧. ಇಂದ್ರಃ । ೧೪ ರಲ್ಲಿ ೪ನೇ ಪಾದ ಮರುತಃ । ೧೫. ಇಂದ್ರಾಬೃಹಸ್ಪತೀ ॥
ಛಂದಃ—೧-೩, ೫-೨೧. ತ್ರಿಷ್ಟುಪ್ । ೪. ವಿರಾಟ್ ॥

॥ ಸಂಹಿತಾಪಾಠಃ ॥

ಅಸ್ಮಾ ಉಷಾಸ ಆತಿರಂತ ಯಾಮಮಿಂದ್ರಾಯ ನಕ್ತಮೂರ್ಮ್ಯಾಃ ಸುವಾಚಃ ।
ಅಸ್ಮಾ ಆಪೋ ಮಾತರಃ ಸಪ್ತ ತಸ್ಥುರ್ನೃಭ್ಯಸ್ತರಾಯ ಸಿಂಧವಃ ಸುಪಾರಾಃ ॥ ೧ ॥

॥ ಪದಪಾಠಃ ॥

ಅಸ್ಮೈ । ಉಷಸಃ । ಆ । ಅತಿರಂತ । ಯಾಮಂ । ಇಂದ್ರಾಯ । ನಕ್ತಂ । ಊರ್ಮ್ಯಾಃ । ಸುಽವಾಚಃ ।
ಅಸ್ಮೈ । ಆಪಃ । ಮಾತರಃ । ಸಪ್ತ । ತಸ್ಥುಃ । ನೃಽಭ್ಯಃ । ತರಾಯ । ಸಿಂಧವಃ । ಸುಽಪಾರಾಃ ॥ ೧ ॥

॥ ಸಾಯಣಭಾಷ್ಯಂ ॥

ಇಂದ್ರಸಾಮರ್ಥ್ಯಾದ್ಭೀತಾ ಉಷಸ ಉಷಃಕಾಲಾ ಅಸ್ಮೈ ಪೂರ್ವೋಕ್ತಗುಣೋಪೇತಾಯೇಂದ್ರಾಯ ಯಾಮಂ ಸ್ವಸ್ವಗಮನಮಾತಿರಂತ । ತಿರತಿರ್ವರ್ಧನಕರ್ಮಾ । ಸಮಂತಾದವರ್ಧಯಂತ । ಯಥಾ ಪೂರ್ವಮುದ್ಯಂತಿ ತಥೇದಾನೀಮಪ್ಯಸ್ಮಾ ಉದ್ಗತಾ ಅಭವನ್ । ತಥೋರ್ವ್ಯಾಃ ॥ ರಾತ್ರಿನಾಮೈತತ್ । ಋ ಗತಿಪ್ರಾಪಣಯೋಃ । ಅರ್ತೇರೂ ಚ । ಉ.೪-೪೪ । ಇತಿ ವಿಪ್ರತ್ಯಯಃ । ಭವೇ ಛಂದಸೀತಿ ಯತ್ ॥ ಸರ್ವೈರಭಿಗಂತವ್ಯಾಃ । ರಾತ್ರೌ ಹಿ ಸರ್ವೇ ಸ್ವನಿವಾಸಂ ಗಚ್ಛಂತಿ । ಸ್ವನಿಲಯಪ್ರಾಪ್ತಿಹೇತುಭೂತಾ ರಾತ್ರಯಃ । ನಕ್ತಮಪರರಾತ್ರಿಕಾಲೇ ಸುವಾಚಃ ಶೋಭನವಾಚೋ ಭವಂತಿ । ತಸ್ಮಿನ್ ಕಾಲೇ ಹಿ ಸರ್ವೇ ವೇದಾಧ್ಯಯನಾದೀನಿ ಕುರ್ವಂತಿ । ತಸ್ಮಾತ್ಕಲ್ಯಾಣವಾಚೋಽಭವನ್ । ಇಂದ್ರೇಽನುಶಾಸತಿ ವೇದಾದ್ಯನುಮಾನೇ ನಿರತಾ ಅಭವನ್ । ತಥಾಪಃ ॥ ಆಪ್ಲೃ ವ್ಯಾಪ್ತೌ ॥ ಸರ್ವತೋ ವ್ಯಾಪ್ತಾ ಮಾತರೋ ಜಗತಾಂ ನಿರ್ಮಾತ್ರ್ಯಃ ಸಪ್ತ ಸಪ್ತಸಂಖ್ಯಾಕಾಃ ಸಿಂಧವಃ ಸ್ಯಂದಮಾನಾ ಗಂಗಾದ್ಯಾ ನದ್ಯಃ । ಯದ್ವಾ । ಸರ್ಪಣಶೀಲಾಃ ಸಿಂಧವಃ ಸರಿತಃ । ತಾಸಾಮಾವರಕಸ್ಯಾಹೇರ್ಹನನೋತ್ಪಾದಿತ್ವಾದಸ್ಮಾ ಇಂದ್ರಾಯ ನೃಭ್ಯಸ್ತರಾಯ ಮನುಷ್ಯಾಣಾಂ ಸುಖೇನ ತರಣಾರ್ಥಂ ಸುಪಾರಾಃ ಶೋಭನಪಾರಾಃ ಸುಖೇನ ತರ್ತುಂ ಯೋಗ್ಯಾ ಅಭವನ್ನಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಅಸ್ಮೈ**—ಹಿಂದೆ ವರ್ಣಿತವಾದ ಗುಣಗಳುಳ್ಳ । **ಇಂದ್ರಾಯ**—ಇಂದ್ರನಿಗಾಗಿ । **ಉಷಸಃ**—ಉಷಃಕಾಲಗಳು । **ಯಾಮಂ**—ತಮ್ಮ ಉದಯರೂಪವಾದ ಆಗಮನವನ್ನು । **ಆತಿರಂತ**—ಬೆಳಸಿಕೊಂಡು ಹೋಗುತ್ತವೆ । **ಊರ್ವ್ಯಾಃ**—ರಾತ್ರಿಕಾಲಕ್ಕೆ ಸಂಬಂಧಿಸಿದ । **ನಕ್ತಂ**—ಉತ್ತಮವಾದ ಕೊನೆಯ ಯಾಮವು । **ಸುವಾಚಃ**—ವೇದಘೋಷರೂಪವಾದ ವಾಕ್ಕಿನಿಂದ ಕೂಡಿರುತ್ತದೆ । **ಮಾತರಃ**—ಜಗನ್ನಿರ್ಮಾತ್ರಿಯರೂ । **ಸಪ್ತ**—ಸಪ್ತಸಂಖ್ಯಾಕರೂ ಆದ । **ಸಿಂಧವಃ**—ಗಂಗಾದಿ ನದಿಗಳೂ । **ಆಪಃ**—ಅಬ್ದೇವತೆಗಳೂ । **ಅಸ್ಮೈ**—ಈ ಇಂದ್ರನ ತೃಪ್ತಿಗಾಗಿಯೇ । **ನೃಭ್ಯಃ ತರಾಯ**—ಮಾನವರಿಗೆ ಸುಖವಾಗಿ ದಾಟಲು ಯೋಗ್ಯವಾಗುವಂತೆ । **ಸುಪಾರಾಃ**—ಉತ್ತಮವಾದ ದಡಗಳನ್ನು ಹೊಂದಿರುವುದಾಗಿ । **ತಸ್ಥುಃ**—ಇರುತ್ತವೆ.

॥ ಭಾವಾರ್ಥ ॥

ಮಹಾತ್ಮನಾದ ಇಂದ್ರನಿಗಾಗಿ ಉಷಃಕಾಲಗಳು ತಮ್ಮ ಉದಯರೂಪವಾದ ಆಗಮನವನ್ನು ಬೆಳೆಸಿಕೊಂಡು ಹೋಗುತ್ತವೆ. ರಾತ್ರಿಕಾಲಕ್ಕೆ ಸಂಬಂಧಿಸಿದ ಉತ್ತಮವಾದ ಕೊನೆಯ ಯಾಮವು ವೇದಘೋಷರೂಪವಾದ ವಾಕ್ಕಿನಿಂದ ಕೂಡಿರುತ್ತದೆ. ಜಗನ್ನಿರ್ಮಾತ್ರಿಯರೂ ಸಪ್ತಸಂಖ್ಯಾಕರೂ ಆದ ಗಂಗಾದಿ ನದಿಗಳೂ ಅಬ್ದೇವತೆಗಳೂ ಈ ಇಂದ್ರನ ತೃಪ್ತಿಗಾಗಿಯೇ ಮಾನವರಿಗೆ ಸುಖವಾಗಿ ದಾಟಲು ಯೋಗ್ಯವಾಗಿರುವಂತೆ ಉತ್ತಮವಾದ ದಡಗಳನ್ನು ಹೊಂದಿರುವುದಾಗಿ ಇರುತ್ತವೆ.

## English Translation

For him the dawns prolonged their rising; for Indra the nights uttered auspicious voices by night, for him the waters, the mothers, the seven rivers, stood, offering an easy passage for men to cross over.

॥ ಸಂಹಿತಾಪಾಠಃ ॥

ಅತಿವಿದ್ಧಾ ವಿಥುರೇಣಾ ಚಿದಸ್ತ್ರಾ ತ್ರಿಃ ಸಪ್ತ ಸಾನು ಸಂಹಿತಾ ಗಿರೀಣಾಂ ।
ನ ತದ್ದೇವೋ ನ ಮರ್ತ್ಯಸ್ತುತುರ್ಯಾದ್ಯಾನಿ ಪ್ರವೃದ್ಧೋ ವೃಷಭಶ್ಚಕಾರ ॥

॥ ಪದಪಾಠಃ ॥

ಅತಿऽವಿದ್ಧಾ । ವಿಥುರೇಣ । ಚಿತ್ । ಅಸ್ತ್ರಾ । ತ್ರಿಃ । ಸಪ್ತ । ಸಾನು । ಸಂऽಹಿತಾ । ಗಿರೀಣಾಂ ।
ನ । ತತ್ । ದೇವಃ । ನ । ಮರ್ತ್ಯಃ । ತುತುರ್ಯಾತ್ । ಯಾನಿ । ಪ್ರऽವೃದ್ಧಃ । ವೃಷಭಃ । ಚಕಾರ ॥೨॥

॥ ಸಾಯಣಭಾಷ್ಯಂ ॥

ವಿಥುರೇಣ ॥ ವರ್ಣವ್ಯತ್ಯಯಃ ॥ ಚಿದಪ್ಯರ್ಥೇ । ವಿಥುರೇಣಾಸಹಾಯೇನಾಪ್ಯಸ್ತ್ರಾ ॥ ಅಸು ಕ್ಷೇಪಣೇ। ತಾಚ್ಛೀಲಿಕಸ್ತೃನ್ । ಶತ್ರುಕ್ಷೇಪಣಶೀಲೇನೇಂದ್ರೇಣ । ಯದ್ವಾ । ಅಸ್ತ್ರಾ ಸ್ತ್ರೇಣ ವಜ್ರೇಣ। ತ್ರಿಃ ಸಪ್ತೈಕವಿಂಶತಿಸಂಖ್ಯಾನಿ ಸಂಹಿತಾ ಸಂಹಿತಾನ್ಯೇಕತ್ರ ಸಂಘೀಭೂತಾನಿ ಗಿರೀಣಾಂ ಸಪ್ತಾನಾಂ ಪರ್ವತಾನಾಂ ಸಾನು ಸೂನೂನ್ಯತಿವಿದ್ಧಾನಿ । ಅತೀತ್ಯ ತಾಡಿತಾನಿ । ತೇನ ಮುಕ್ತೋ ವಜ್ರಪಾತಸ್ತಾನಿ ಭಿತ್ತ್ವಾಗಮದಿತ್ಯರ್ಥಃ । ಅತ್ರ ತೈತ್ತಿರೀಯಕಂ ಬ್ರಾಹ್ಮಣಂ । ದರ್ಭಪಿಂಜೂಲಮುದ್ಧೃತ್ಯ ಸಪ್ತ ಗಿರೀನ್ ಭಿತ್ತ್ವಾ ತಮಹನ್ನಿತ್ಯಾದಿ । ತೈ. ಸಂ. ೬-೨-೪-೩ । ತಸ್ಯೇಂದ್ರಸ್ಯ ತತ್ತಾನಿ ಸಾನುಭೇದನಾದೀನಿ ಕರ್ಮಾಣಿ ದೇವ ಇಂದ್ರಾದ್ವ್ಯತಿರಿಕ್ತೋ ದೇವೋ ಮರ್ತ್ಯೋ ಮನುಷ್ಯೋ ವಾ ನ ತುತುರ್ಯಾತ್ । ನ ತರೇತ್ । ತಥಾ ಕರ್ತುಂ ನ ಶಕ್ನೋತೀತ್ಯರ್ಥಃ ॥ ತೄ ಪ್ಲವನತರಣಯೋಃ । ಲಿಙಿ ಚ್ಛಾಂದಸಃ ಶಪಃ ಶ್ಲುಃ । ಬಹುಲಂ ಛಂದಸೀತ್ಯುತ್ವಂ । ಯದ್ವಾ । ತುರ ತ್ವರಣೇ । ಜುಹೋತ್ಯಾದಿಕಃ ॥ ಪ್ರವೃದ್ಧಃ ಸೋಮಪಾನೇನ ಬಲೇನ ವಾ ಪ್ರವೃದ್ಧೋ ವೃಷಭಃ ಕಾಮಾನಾಮುದಕಾನಾಂ ವಾ ವರ್ಷಕ ಇಂದ್ರೋ ಯಾನಿ ಕರ್ಮಾಣಿ ಚಕಾರ ಕೃತವಾನ್ ತಾನಿ ದೇವೋ ಮನುಷ್ಯೋ ವಾ ನ ತಥಾ ಕರ್ತುಂ ಶಕ್ನೋತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ವಿಥುರೇಣ ಚಿತ್**—ಇತರರ ಸಹಾಯವಿಲ್ಲದಿದ್ದರೂ ಸಹ । **ಅಸ್ತ್ರಾ**—ಶತ್ರುಗಳನ್ನು ಉರುಳಿಸುವ ವಜ್ರಾಯುಧದಿಂದ । **ತ್ರಿಃ ಸಪ್ತ**-ಇಪ್ಪತ್ತೊಂದು ಸಂಖ್ಯೆಯುಳ್ಳವೂ । **ಸಂಹಿತಾ**—ದೃಢವಾಗಿ ಒಟ್ಟಿಗೆ ಸೇರಿಕೊಂಡವೂ ಆದ । **ಗಿರೀಣಾಂ**—ಪರ್ವತಗಳ । **ಸಾನು**—ಪ್ರಸ್ಥಭೂಮಿಗಳು । **ಅತಿವಿದ್ಧಾ**—(ಇಂದ್ರನಿಂದ) ಹೊಡೆಯಲ್ಪಟ್ಟವೆ। **ಪ್ರವೃದ್ಧಃ**—ಸೋಮಪಾನದಿಂದ ಪುಷ್ಟನಾದವನೂ । **ವೃಷಭಃ**—ಕಾಮವರ್ಷಕನೂ ಆದ ಇಂದ್ರನು । **ಯಾನಿ**—ಯಾವ ವೀರ್ಯಕರ್ಮಗಳನ್ನು । **ಚಕಾರ**—ನೆರವೇರಿಸಿದನೋ । **ತತ್**—ಅಂತಹ ವೀರ್ಯಕರ್ಮಗಳನ್ನು । **ದೇವಃ**—ಇತರ ದೇವತೆಗಳಲ್ಲಿ ಯಾರೇ ಆಗಲಿ । **ಮರ್ತ್ಯಃ**—ಯಾವ ಮಾನವನಾಗಲಿ । **ನ ತುತುರ್ಯಾತ್**—ಮಾಡಲು ಶಕ್ತನಾಗುವುದಿಲ್ಲ.

॥ ಭಾವಾರ್ಥ ॥

ಇತರರ ಸಹಾಯವಿಲ್ಲದಿದ್ದರೂ ಸಹ ಶತ್ರುಗಳನ್ನು ಉರುಳಿಸುವ ವಜ್ರಾಯುಧದಿಂದ ಇಪ್ಪತ್ತೊಂದು ಸಂಖ್ಯೆಯುಳ್ಳವೂ, ದೃಢವಾಗಿ ಒಟ್ಟಿಗೆ ಸೇರಿಕೊಂಡವೂ ಆದ ಪರ್ವತಗಳ ಪ್ರಸ್ಥಭೂಮಿಗಳು ಇಂದ್ರನಿಂದ ಹೊಡೆಯಲ್ಪಟ್ಟವೆ. ಸೋಮಪಾನದಿಂದ ಪುಷ್ಟನಾದವನೂ, ಕಾಮವರ್ಷಕನೂ ಆದ ಇಂದ್ರನು ಯಾವ ವೀರ್ಯ ಕರ್ಮಗಳನ್ನು ನೆರವೇರಿಸಿದನೋ ಅಂತಹ ವೀರ್ಯಕರ್ಮಗಳನ್ನು ಇತರ ದೇವತೆಗಳಲ್ಲಿ ಯಾರೇ ಆಗಲಿ ಅಥವಾ ಯಾವ ಮಾನವನಾಗಲಿ ಮಾಡಲು ಶಕ್ತನಾಗುವುದಿಲ್ಲ.

## English Translation

By him the thrower, unaided, were pierced asunder the thrice seven table-lands of the mountains heaped together; neither god nor mortal could do what he, the showerer, in his full-grown strength has done.

॥ ವಿಶೇಷವಿಷಯಗಳು ॥

**ಗಿರೀಣಾಂ ಸಾನು ಅತಿವಿದ್ಧಾ ತ್ರಿಃ ಸಪ್ತ ಸಂಹಿತಾ ವಿಧುರೇಣ ಅಸ್ತ್ರಾ ಚಿತ್—**

ಇಂದ್ರನು ತನ್ನ ಶತ್ರುಧರ್ಷಕವಾದ ವಜ್ರಾಯುಧದಿಂದ ನೂರು ನೂರರಂತೆ ಸೇರಿಕೊಂಡಿರುವ ಏಳ ಪರ್ವತಗಳ ಗುಂಪನ್ನು ಹೊಡೆದು ಧ್ವಂಸಮಾಡಿದನು ಎಂದು ಇಲ್ಲಿ ಹೇಳಿದೆ. ಈ ವಿಷಯವು ಯಜುರ್ವೇದದ ತೈತ್ತಿರೀಯ ಸಂಹಿತೆಯಲ್ಲಿ ಅಲ್ಪಸ್ವಲ್ಪವ್ಯತ್ಯಾಸದೊಡನೆ ಈ ರೀತಿ ವಿವರಿಸಲ್ಪಟ್ಟಿದೆ—

> **ಯಜ್ಞೋ ದೇವೇಭ್ಯೋ ನಿಲಾಯತ ವಿಷ್ಣೂ ರೂಪಂ ಕೃತ್ವಾ ಸ ಪೃಥಿವೀಂ ಪ್ರಾವಿಶತ್ತಂ ದೇವಾ ಹಸ್ತಾನ್ತ್ಸಗ್ಂ ರಭ್ಯೈಚ್ಛನ್ತಮಿಂದ್ರ ಉಪರ್ಯುಪರ್ಯತ್ಯಕ್ರಾಮತ್ಸೋಽಬ್ರವೀತ್ಕೋ ಮಾಯಮುಪರ್ಯುಪರ್ಯತ್ಯಕ್ರಮೀದಿತ್ಯಹಂ ದುರ್ಗೇ ಹನ್ತೇತ್ಯಥ ಕಸ್ತ್ವಮಿತ್ಯಹಂ ದುರ್ಗಾದಾಹರ್ತೇತಿ ಸೋಽಬ್ರವೀದ್ದುರ್ಗೇ ವೈ ಹನ್ತಾವೋಚಥಾವರಾಹೋಽಯಂ ವಾಮಮೋಷಃ ಸಪ್ತಾನಾಂ ಗಿರೀಣಾಂ ಪರಸ್ತಾದ್ವಿತ್ತಂ ವೇದ್ಯಮಸುರಾಣಾಂ ಬಿಭರ್ತಿ ತಂ ಜಹಿ ಯದಿ ದುರ್ಗೇ ಹನ್ತಾಸೀತಿ ಸ ದರ್ಭಪುಂಜೀಲಮುದ್ವೃಹ್ಯ ಸಪ್ತಗಿರೀನ್ ಭಿತ್ತ್ವಾ ತಮಹನ್ತ್ಸೋಽಬ್ರವೀದ್ದುರ್ಗಾದ್ವಾ ಆಹರ್ತಾ ವೋಚಥಾ ಏತಮಾಹರೇತಿ ತಮೇಭ್ಯೋ ಯಜ್ಞ ಏವ ಯಜ್ಞಮಾಹರದ್ಯತ್ತದ್ವಿತ್ತಂ ವೇದ್ಯಮಸುರಾಣಾಮವಿಂದಂತ ತದೇಕಂ ವೇದ್ಯೈ ವೇದಿತ್ವಂ ॥**
>
> (ತೈ. ಸಂ. ೬-೨-೪-೨, ೩)

ಯಜ್ಞವೇದಿಗೆ ವೇದಿ ಎಂದು ಹೆಸರು ಹೇಗೆ ಬಂದಿತೆಂಬ ವಿಷಯವನ್ನು ವಿವರಿಸುವುದಕ್ಕಾಗಿ ಯಜುರ್ವೇದದಲ್ಲಿ ಒಂದು ಇತಿಹಾಸವು ಉಕ್ತವಾಗಿದೆ—

ಪೂರ್ವದಲ್ಲಿ ಕಾರಣಾಂತರದಿಂದ ಯಜ್ಞವು ವಿಷ್ಣುರೂಪವನ್ನು ಧರಿಸಿ ದೇವತೆಗಳನ್ನು ಬಿಟ್ಟು ಹೊರಟುಹೋಯಿತು. ಅನಂತರ ಯಜ್ಞರೂಪನಾದ ಆ ವಿಷ್ಣುವು ಭೂಮಿಯನ್ನು ಪ್ರವೇಶಿಸಿ ಯಾರಿಗೂ ತಿಳಿಯದಂತೆ

ಅಡಗಿಕೊಂಡಿದ್ದನು ದೇವತೆಗಳು ಅವನನ್ನು ಕಾಣದೆ ಒಬ್ಬರ ಕೈಯನ್ನೊಬ್ಬರು ಹಿಡಿದುಕೊಂಡು ಎಲ್ಲೆಲ್ಲೂ ಹುಡುಕುತ್ತಿದ್ದರು ಆದರೂ ಅವರಿಗೆ ವಿಷ್ಣುವಿರುವ ಸ್ಥಳವು ಸಿಕ್ಕಲಿಲ್ಲ. ಆದರೆ ಇಂದ್ರನು ವಿಷ್ಣುವು ಅಡಗಿಕೊಂಡಿದ್ದ ಪ್ರದೇಶದಮೇಲೆ ಹಾದುಹೋಗುವಾಗ, ಕೆಳಗಿದ್ದ ವಿಷ್ಣುವು-ಯಾರದು ? ನಾನಿರುವ ಈ ಸ್ಥಳದ ಮೇಲೆ ಹಾದು ಹೋಗುವವರು ? ಎನ್ನಲು, ಅದನ್ನು ಕೇಳಿ ಇಂದ್ರನು—ನಾನು, ಅಸುರರ ದುರ್ಗಗಳನ್ನು ಪ್ರಹರಿಸಿ ಧ್ವಂಸಮಾಡುವ ಶೂರನೇ ನಾನು. ಆದರೆ ನೀನು ಯಾರು ? ಎಂದು ಕೇಳಿದನು. ಅದಕ್ಕೆ ವಿಷ್ಣುವು—ಅಸುರರ ದುರ್ಗಾದಿಗಳು ಧ್ವಂಸವಾದಮೇಲೆ ಅಲ್ಲಿರತಕ್ಕ ಧನಾದಿವಸ್ತುಗಳನ್ನು ತರುವವನೇ ನಾನು ಎಂದು ಪ್ರತ್ಯುತ್ತರವಿತ್ತನು. ಮತ್ತು ಇಂದ್ರನನ್ನುದ್ದೇಶಿಸಿ—ಎಲೈ ಪುರುಷನೇ, ನೀನು ಹೇಳಿಕೊಳ್ಳುವಂತೆ ಶತ್ರುಪಟ್ಟಣಗಳನ್ನು ಧ್ವಂಸಮಾಡುವವನು ನೀನೇ ಆಗಿದ್ದರ ಇಲ್ಲಿಂದ ಮುಂದೆ ಏಳು ಪರ್ವತಗಳ ಆಚೆ ವರಾಹನೆಂಬ ಅಸುರನಿರುವನು. ಅವನು ಅಸುರರ ಧನಾದಿಗಳನ್ನು ಅಪಹರಿಸಿ ತನ್ನ ಬಲವಾದ ಕೋಟೆಯೊಳಗೆ ಇಟ್ಟುಕೊಂಡಿರುವನು ನೀನು ಹೇಳಿಕೊಳ್ಳುವಂತೆ ಅಸುರರ ದುರ್ಗಗಳನ್ನು ನಾಶಮಾಡುವ ಶಕ್ತಿ ನಿನಗಿದ್ದರೆ ಆ ವರಾಹನೆಂಬ ಅಸುರನನ್ನು ಪ್ರಹರಿಸಿ ಧ್ವಂಸಮಾಡು ಆಗಮಾತ್ರ ನಿನ್ನ ಶಕ್ತಿಯು ಗೊತ್ತಾಗುವುದು ಎಂದನು ಅದನ್ನು ಕೇಳಿ ಇಂದ್ರನು ಸಮೀಪದಲ್ಲಿದ್ದ ದರ್ಭೆಯ ಗೊಂಚಲೊಂದನ್ನು ತೆಗೆದುಕೊಂಡು ಅದನ್ನೇ ತನ್ನ ಆಯುಧವನ್ನಾಗಿ ಮಾಡಿಕೊಂಡು ಅಭೇದ್ಯವಾದ ಏಳು ಪರ್ವತಗಳನ್ನೂ ಚ್ಛೇದಿಸಿ ಆ ವರಾಹಾಸುರನನ್ನೂ ಹೊಡೆದು ಕೊಂದನು. ಬಳಿಕ ವಿಷ್ಣುವನ್ನುದ್ದೇಶಿಸಿ ಎಲೈ ಪುರುಷನೇ, ನೀನು ಹೇಳಿದಂತೆ ಸಪ್ತಪರ್ವತಗಳನ್ನೂ ಸೀಳಿಹಾಕಿ ಅಲ್ಲಿದ್ದ ಅಸುರನನ್ನು ಕೊಂದಿರುವೆನು. ಇದರಿಂದ ನನ್ನ ಶಕ್ತಿಸಾಮರ್ಥ್ಯಗಳು ಸ್ಪಷ್ಟವಾಯಿತಷ್ಟೆ ನೀನು ಹಿಂದೆ ಧ್ವಂಸವಾದ ಅಸುರರ ದುರ್ಗಾದಿಗಳಿಂದ ಅಲ್ಲಿರುವ ಧನಾದಿಗಳನ್ನು ತರುವವನೇ ನಾನು ಎಂದು ಹೇಳಿಕೊಂಡಿರುವೆಯಷ್ಟೆ ಈಗ ನೀನು ಹೇಳಿಕೊಂಡಂತೆ ಅಲ್ಲಿರುವ ಧನಾದಿವಸ್ತುಗಳನ್ನು ತೆಗೆದುಕೊಂಡು ಬಾ ಆಗ ನಿನ್ನ ಶಕ್ತಿಯು ವ್ಯಕ್ತವಾಗುವುದು ಎಂದು ಹೇಳಲು ವಿಷ್ಣುವು ಹಾಗೇ ಆಗಲೆಂದು ಹೇಳಿ ಯಜ್ಞರೂಪದಿಂದಲೇ ಆ ಅಸುರನಲ್ಲಿದ್ದ ಧನಾದಿವಸ್ತುಗಳನ್ನೂ ಅಪಹರಿಸಿ ದೇವತೆಗಳ ಸಮೀಪಕ್ಕೆ ತಂದನು. ಈ ರೀತಿ ಯಜ್ಞದಿಂದ ದೇವತೆಗಳು ಅಸುರರ ಧನಗಳನ್ನು ಪಡೆದದ್ದರಿಂದ ಯಜ್ಞಮಾಡುವ ಪ್ರದೇಶಕ್ಕೆ ವೇದಿ ಎಂದು ಹೆಸರು ಬಂದಿತು ಎಂದು ಈ ಇತಿಹಾಸದ ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಇಂದ್ರಸ್ಯ ವಜ್ರ ಆಯಸೋ ನಿಮಿಶ್ಲ ಇಂದ್ರಸ್ಯ ಬಾಹ್ವೋರ್ಭೂಯಿಷ್ಠ-
ಮೋಜಃ ।
ಶೀರ್ಷನ್ನಿಂದ್ರಸ್ಯ ಕ್ರತವೋ ನಿರೇಕ ಆಸನ್ನೇಷಂತ ಶ್ರುತ್ಯಾ ಉಪಾಕೇ ॥೩॥

॥ ಪದಪಾಠಃ ॥

ಇಂದ್ರಸ್ಯ । ವಜ್ರಃ । ಆಯಸಃ । ನಿऽಮಿಶ್ಲಃ । ಇಂದ್ರಸ್ಯ । ಬಾಹ್ವೋಃ । ಭೂಯಿಷ್ಠಂ । ಓಜಃ ।

ಶೀರ್ಷನ್ । ಇಂದ್ರಸ್ಯ । ಕ್ರತವಃ । ನಿರೇಕೇ । ಆಸನ್ । ಆ । ಈಷಂತ । ಶ್ರುತ್ಯೈ । ಉಪಾಕೇ ॥ ೩ ॥

॥ ಸಾಯಣಭಾಷ್ಯಂ ॥

ಉಕ್ತಗುಣಸ್ಯೇಂದ್ರಸ್ಯ ವಜ್ರ ಆಯಸೋऽಯಸಾ ನಿರ್ಮಿತಃ । ಅಯೋಮಯ ಇತ್ಯರ್ಥಃ । ಸ ವಜ್ರ ಇಂದ್ರೇಣ ಸ್ವಹಸ್ತೇ ನಿಮಿಶ್ಲಃ ಸಂಮಿಶ್ರೋऽತ್ಯಂತಂ ಸಂಬದ್ಧಃ ಕೃತಃ । ಅತ ಏವೇಂದ್ರಸ್ಯ ಬಾಹ್ವೋರ್ಭುಜಯೋರ್ಭೂಯಿಷ್ಠಂ ಬಹುತಮಮೋಜೋ ವೀರ್ಯಮಸ್ತಿ ॥ ತಥಾ ನಿರೇಕೇ ॥ ನಿ-ಪೂರ್ವಾದ್ರಿಚ್ಯತೇರ್ವಾ ನಿಷ್ಪೂರ್ವಾದೇತೇರ್ವೇತಿ ಸಂದೇಹಾದನವಗ್ರಹಃ ॥ ನಿರ್ಗಮನೇ ಯದಾ ಯುದ್ಧಾರ್ಥಮಿಂದ್ರೋ ನಿರ್ಗಚ್ಛತಿ ತದಾನೀಮಿಂದ್ರಸ್ಯ ಶೀರ್ಷಞ್ಛಿರಸಿ ಕ್ರತವಃ ಕರ್ಮಾಣಿ ಶಿರಸ್ತ್ರಾಣ-ನಿಧಾನಾದೀನಿ । ಯದ್ವಾ । ಶಿರ ಇತಿ ಗಲಪ್ರಭೃತ್ಯೂರ್ಧ್ವಮಂಗಮುಚ್ಯತೇ । ತತ್ರತ್ಯಾಭ್ಯಾಮಕ್ಷಿಭ್ಯಾಂ ದರ್ಶನಪ್ರೇರಣಾದೀನಿ ಕರ್ಮಾಣಿ ಭವಂತಿ । ತಥಾಸನ್ ॥ ಆಸ್ಯಸ್ಯಾಸನ್ನಾದೇಶಃ ॥ ಆಸ್ಯೇ ಚ ಯಾನಿ ಕರ್ಮಾಣಿ ಯುದ್ಧಾರ್ಥಂ ವಾಜಿನೋ ಗಜಾನ್ ಸಂನಾಹಯತೇತ್ಯಾದೀನಿ ಭವಂತಿ । ಕಿಂಚ ಶ್ರುತ್ಯೈ ಸಂಗ್ರಾಮಾಯ ನಿರ್ಗಚ್ಛತೋऽನುಶಾಸತ ಇಂದ್ರಸ್ಯ ವಾಕ್ಯಶ್ರವಣಾರ್ಥಂ ಸರ್ವ ಉಪಜೀವಿನೋ ಭೃತ್ಯಾ ಉಪಾಕೇऽಂತಿಕ ಏಷಂತೆ । ಅಯಮಿಂದ್ರೋऽಸ್ಮಾನ್ ಕುತ್ರ ಕುತ್ರ ಕಾರ್ಯೇ ನಿಯೋಕ್ಷ್ಯತೀತ್ಯೇತೇನ ಮನಸಾ ತದಂತಿಕೇ ಸಮಂತಾದಾಗಚ್ಛಂತಿ ॥ ಈಷ ಗತಿಹಿಂಸಾದರ್ಶನೇಷು ಭೌವಾದಿಕಃ ॥

॥ ಪ್ರತಿಪದಾರ್ಥ ॥

**ಇಂದ್ರಸ್ಯ**—ಇಂದ್ರನ । **ಆಯಸಃ**—ಉಕ್ಕಿನಿಂದ ನಿರ್ಮಿತವಾದ । **ವಜ್ರಃ**—ವಜ್ರಾಯುಧವು । **ನಿಮಿಶ್ಲಃ**—ಭದ್ರವಾಗಿ ಅವನಿಂದ ಹಿಡಿಯಲ್ಪಟ್ಟಿದೆ । **ಇಂದ್ರಸ್ಯ**—ಇಂದ್ರನ । **ಬಾಹ್ವೋಃ**—ಭುಜಗಳಲ್ಲಿ । **ಭೂಯಿಷ್ಠಂ**—ಅತ್ಯಧಿಕವಾದ । **ಓಜಃ**—ವೀರ್ಯವಿರುತ್ತದೆ । **ನಿರೇಕೇ**-ಇಂದ್ರನು ಯುದ್ಧಾರ್ಥವಾಗಿ ಹೊರಟಾಗ । **ಇಂದ್ರಸ್ಯ**—ಇಂದ್ರನ । **ಶೀರ್ಷನ್**—ತಲೆಯಲ್ಲಿ । **ಕ್ರತವಃ**—ಶಿರಸ್ತ್ರಾಣಾದ್ಯಲಂಕಾರಗಳೂ । **ಆಸನ್**—ಯುದ್ಧಕಾಲದಲ್ಲಿ ಬಾಯಿನಲ್ಲಿ ಮಾಡತಕ್ಕ ಆದೇಶಾದಿ ಕರ್ಮಗಳೂ (ತುಂಬಿರುತ್ತವೆ) । **ಶ್ರುತ್ಯೈ**—ಇಂದ್ರನ ಆದೇಶಗಳನ್ನು ಪರಿಪಾಲಿಸಲು । **ಉಪಾಕೇ**—ಇವನ ಸಮೀಪದಲ್ಲಿಯೇ । **ಏಷಂತ**—ಇವನ ಭೃತ್ಯಾದಿಗಳೆಲ್ಲರೂ ಒಟ್ಟುಗೂಡಿ ಸಂಚರಿಸುತ್ತಿರುವರು

॥ ಭಾವಾರ್ಥ ॥

ಉಕ್ಕಿನಿಂದ ನಿರ್ಮಿತವಾದ ವಜ್ರಾಯುಧವು ಇಂದ್ರನಿಂದ ಭದ್ರವಾಗಿ ಹಿಡಿಯಲ್ಪಟ್ಟಿದೆ ಅವನ ಬಾಹುಗಳಲ್ಲಿ ಅತ್ಯಧಿಕವಾದ ವೀರ್ಯವಿರುತ್ತದೆ. ಇಂದ್ರನು ಯುದ್ಧಾರ್ಥವಾಗಿ ಹೊರಟಾಗ ಇಂದ್ರನ ತಲೆಯಲ್ಲಿ ಶಿರಸ್ತ್ರಾಣಾದ್ಯಲಂಕಾರಗಳೂ, ಯುದ್ಧಕಾಲದಲ್ಲಿ ಬಾಯಿನಲ್ಲಿ ಮಾಡತಕ್ಕ ಆದೇಶಾದಿಕರ್ಮಗಳೂ ತುಂಬಿರುತ್ತವೆ. ಇಂದ್ರನ ಆದೇಶಗಳನ್ನು ಪರಿಪಾಲಿಸಲು ಇವನ ಸಮೀಪದಲ್ಲಿಯೇ, ಇವನ ಭೃತ್ಯಾದಿಗಳೆಲ್ಲರೂ ಒಟ್ಟುಗೂಡಿ ಸಂಚರಿಸುತ್ತಿರುವರು.

## English Translation

**Indra's iron thunderbolt is grasped firmly in his hand; enormous strength resides in his arms; when he goes forth (to battle), there is ample employment for his head and his mouth, and (his followers) rush near him to hear his commands.**

॥ ಸಂಹಿತಾಪಾಠಃ ॥

ಮನ್ಯೇ ತ್ವಾ ಯಜ್ಞಿಯಂ ಯಜ್ಞಿಯಾನಾಂ ಮನ್ಯೇ ತ್ವಾ ಚ್ಯವನಮಚ್ಯುತಾನಾಂ ।
ಮನ್ಯೇ ತ್ವಾ ಸತ್ವನಾಮಿಂದ್ರ ಕೇತುಂ ಮನ್ಯೇ ತ್ವಾ ವೃಷಭಂ ಚರ್ಷಣೀನಾಂ ॥ ೪ ॥

॥ ಪದಪಾಠಃ ॥

ಮನ್ಯೇ । ತ್ವಾ । ಯಜ್ಞಿಯಂ । ಯಜ್ಞಿಯಾನಾಂ । ಮನ್ಯೇ । ತ್ವಾ । ಚ್ಯವನಂ । ಅಚ್ಯುತಾನಾಂ ।
ಮನ್ಯೇ । ತ್ವಾ । ಸತ್ವನಾಂ । ಇಂದ್ರ । ಕೇತುಂ । ಮನ್ಯೇ । ತ್ವಾ । ವೃಷಭಂ । ಚರ್ಷಣೀನಾಂ ॥ ೪ ॥

॥ ಸಾಯಣಭಾಷ್ಯಂ ॥

ಏತದಾದಯಃ ಪ್ರತ್ಯಕ್ಷಾಃ । ಹೇ ಇಂದ್ರ ತ್ವಾ ತ್ವಾಂ ಯಜ್ಞಿಯಾನಾಂ ಯಜ್ಞಾರ್ಹಾಣಾಂ ದೇವಾನಾಮಪಿ ಯಜ್ಞಿಯಂ ಪುರಸ್ತಾದೇವ ಯಜ್ಞಾರ್ಹಮಿತಿ ಮನ್ಯೇ । ಅವಬುಧ್ಯೇ । ತಥಾ ತ್ವಾ ತ್ವಾಮಚ್ಯುತಾನಾಂ ಚ್ಯುತಿರಹಿತಾನಾಮಪಿ ಪರ್ವತಾನಾಂ ಚ್ಯವನಂ ಚ್ಯಾವಯಿತಾರಂ ವಜ್ರೇಣ ವಿಭೇದಕಮಿತಿ ಮನ್ಯೇ । ಜಾನಾಮಿ । ಯದ್ವಾ । ಅಚ್ಯುತಾನಾಂ ಬಲೇನ ಚ್ಯಾವಯಿತುಮಶಕ್ಯಾನಾಂ ಬಲಿನಾಂ ವೀರಾಣಾಮಪಿ ಸ್ವಬಲೇನ ವಿದ್ರಾವಯಿತಾರಮಿತಿ ಜಾನೇ । ಕಿಂಚ ಹೇ ಇಂದ್ರ ಸತ್ವನಾಂ ॥ ಷಣ ಸಂಭಕ್ತೌ । ಕ್ವನಿಪ್ ॥ ಸಂಭಜಮಾನಾನಾಂ ಭಟಾನಾಂ ಕೇತುಮುಚ್ಛ್ರಿತಮಿತಿ ಮನ್ಯೇ । ಯದ್ವಾ । ಸತ್ವನಾಂ ಸ್ತುತಿಭಿರ್ಹವಿರ್ಭಿರ್ವಾ ಸಂಭಕ್ತೄಣಾಂ ಯಷ್ಟೄಣಾಂ ಕೇತುಮಾತ್ಮನಃ ಪ್ರಜ್ಞಾಪಕಂ ತೇಷಾಂ ಪೂಜನೀಯಮಿತಿ ವಾ ಮನ್ಯೇ । ತಥಾ ತ್ವಾ ತ್ವಾಂ ಚರ್ಷಣೀನಾಂ ಮನುಷ್ಯಾಣಾಂ ವೃಷಭಮಭಿಮತಫಲವರ್ಷಕಮಿತಿ ಮನ್ಯೇ । ಜಾನಾಮಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತ್ವಾ**—ನಿನ್ನನ್ನು । **ಯಜ್ಞಿಯಾನಾಂ**—ಯಜ್ಞಾರ್ಹರಾದ ದೇವತೆಗಳಲ್ಲಿ । **ಯಜ್ಞಿಯಂ**—ಅತ್ಯುತ್ತಮನಾದ ಯಜ್ಞಭಾಗಿಯೆಂದು । **ಮನ್ಯೇ**—ತಿಳಿದಿದ್ದೇನೆ । **ತ್ವಾ**—ನಿನ್ನನ್ನು । **ಅಚ್ಯುತಾನಾಂ**—ಸ್ಥಿರವಾದ ಪರ್ವತಗಳ । **ಚ್ಯವನಂ**—ಭೇದಕನೆಂದು । **ಮನ್ಯೇ**—ತಿಳಿದಿದ್ದೇನೆ । **ಇಂದ್ರ**—ಎಲೈ ಇಂದ್ರನೇ । **ಸತ್ವನಾಂ**—ವೀರ್ಯವಂತರಾದ ಯೋಧರಿಗೆಲ್ಲಾ । **ಕೇತುಂ**—ಧ್ವಜದಂತೆ ಉನ್ನತಸ್ಥಾನದಲ್ಲಿರುವವನೆಂದು । **ತ್ವಾ**—ನಿನ್ನನ್ನು । **ಮನ್ಯೇ**—ತಿಳಿದಿದ್ದೇನೆ । **ತ್ವಾ**—ನಿನ್ನನ್ನು । **ಚರ್ಷಣೀನಾಂ**—ಮಾನವರಿಗೆಲ್ಲಾ । **ವೃಷಭಂ**—ಇಷ್ಟಾರ್ಥಪ್ರದನೆಂದೂ । **ಮನ್ಯೇ**—ತಿಳಿದಿದ್ದೇನೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಯಜ್ಞಾರ್ಹರಾದ ದೇವತೆಗಳಲ್ಲೆಲ್ಲಾ ನೀನೇ ಅತ್ಯುತ್ತಮನಾದ ಯಜ್ಞಭಾಗಿಯೆಂದೂ ನೀನೇ ಅಚಲವಾದ ಪರ್ವತಗಳ ಭೇದಕನೆಂದೂ ತಿಳಿದಿದ್ದೇನೆ. ಅಲ್ಲದೇ, ವೀರ್ಯವಂತರಾದ **ಯೋಧರಿಗೆಲ್ಲಾ**

ಅತ್ಯುನ್ನತವಾದ ಸ್ಥಾನದಲ್ಲಿರುವ ನೀನೇ ಅವರ ನಡುವೆ ಧ್ವಜಪ್ರಾಯನೆಂದೂ, ನೀನೇ ಮಾನವರಿಗೆಲ್ಲಾ ಇಷ್ಟಾರ್ಥಪ್ರದನೆಂದೂ ತಿಳಿದಿದ್ದೇನೆ.

English Translation

I think you the most worthy among those worthy of sacrifice; I think you the overthrower of the imperishable (mountains); I think you, Indra, the banner of warriors; I think you the showerer (of blessings) to men.

। ಸಂಹಿತಾಪಾಠಃ ।

ಆ ಯದ್ವಜ್ರಂ ಬಾಹ್ವೋರಿಂದ್ರ ಧತ್ಸೇ ಮದಚ್ಯುತಮಹಯೇ ಹಂತವಾ ಉ ।
ಪ್ರ ಪರ್ವತಾ ಅನವಂತ ಪ್ರ ಗಾವಃ ಪ್ರ ಬ್ರಹ್ಮಾಣೋ ಅಭಿನಕ್ಷಂತ ಇಂದ್ರಂ ॥ ೫ ॥

॥ ಪದಪಾಠಃ ॥

ಆ । ಯತ್ । ವಜ್ರಂ । ಬಾಹ್ವೋಃ । ಇಂದ್ರ । ಧತ್ಸೇ । ಮದಽಚ್ಯುತಂ । ಅಹಯೇ । ಹಂತವೈ । ಊಂ ಇತಿ ।
ಪ್ರ । ಪರ್ವತಾಃ । ಅನವಂತ । ಪ್ರ । ಗಾವಃ । ಪ್ರ । ಬ್ರಹ್ಮಾಣಃ । ಅಭಿಽನಕ್ಷಂತಃ । ಇಂದ್ರಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಬಾಹ್ವೋರ್ವಜ್ರಮಾಯುಧಂ । ಕೀದೃಶಂ । ಮದಚ್ಯುತಂ ಶತ್ರೂಣಾಂ ಮದಸ್ಯ ಚ್ಯಾವಯಿತಾರಂ ಯದ್ಯದಾ ಧತ್ಸೇ ಆದಧಾಸಿ । ಕಿಮರ್ಥಂ । ಅಹಯೇಽಹಿನಾಮಾನಮಸುರಂ ಮೇಘಂ ವಾ ಹಂತವೈ । ಉ ಇತ್ಯವಧಾರಣೇ । ಹಂತುಮೇವ । ಕಿಂಚ ಯದಾ ವೇಂದ್ರೇಣಾಹಿನಾಮಕೇಽಸುರೇ ಹತೇ ಸತಿ ಪರ್ವತಾ ಜಗದಾಪೂರಕಾ ಮೇಘಾಃ ಪ್ರಾನವಂತ ॥ ನು ಶಬ್ದೇ ॥ ಪ್ರಕರ್ಷೇಣಾಶಬ್ದಯನ್ । ಯದಾ ವಾ ಗಾವಸ್ತತ್ಸ್ಥಾನ್ಯುದಕಾನಿ ಚ ಪ್ರಕರ್ಷೇಣ ಧ್ವನಿಮಕುರ್ವನ್ । ಉದಕಾನ್ಯಧ್ವನಯನ್ನಿತ್ಯತ್ರ ಯಾಜುಷೋ ನಿಗಮಃ । ಯದದಃ ಸಂಪ್ರಯತೀರಹಾವನದತಾ ಹತೇ ತಸ್ಮಾದಾ ನದ್ಯೋ ನಾಮ ಸ್ಥ । ಅಥ. ೩-೧೩-೧ , ತೈ. ಸಂ. ೫-೬-೧-೨ । ಇತಿ । ತುರೀಯಃ ಪಾದಃ ಪರೋಕ್ಷಃ । ತದಾನೀಮಭಿನಕ್ಷಂತ ಅಭಿತ ಇಂದ್ರಂ ಸ್ತುತಿಭಿರ್ಹವಿರ್ಭಿರ್ಗಚ್ಛಂತೋ ಬ್ರಹ್ಮಾಣೋ ಬ್ರಾಹ್ಮಣಾ ಇಂದ್ರಂ ಪರ್ಯಚರನ್ । ಯದ್ವಾ । ಬ್ರಹ್ಮಾಣಃ ॥ ಬೃಹ ವೃದ್ಧೌ ॥ ಪ್ರವೃದ್ಧಾಃ ಪರ್ವತಾದಯ ಇಂದ್ರಮಸ್ತುವನ್ನಿತಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । **ಯತ್**—ಯಾವಾಗ। **ಮದಚ್ಯುತಂ**—ಶತ್ರುಗಳ ಗರ್ವವನ್ನು ನಾಶಪಡಿಸುವ । **ವಜ್ರಂ**—ವಜ್ರಾಯುಧವನ್ನು । **ಅಹಯೇ**—ಅಹಿನಾಮಕನಾದ ಅಸುರನನ್ನು । **ಹಂತವೈ**—ನಾಶಪಡಿಸಲು । **ಬಾಹ್ವೋಃ**—ನಿನ್ನ ತೋಳುಗಳಿಂದ । **ಆ ಧತ್ಸೇ**—ಧರಿಸುವೆಯೋ (ಯಾವಾಗ) । **ಪರ್ವತಾಃ**—ಮೇಘಗಳು । **ಪ್ರ ಅನವಂತ**—ನಿನಗೆ ಬೆದರಿ ಶಬ್ದಮಾಡುವುವೋ (ಯಾವಾಗ) । **ಗಾವಃ ಪ್ರ**—ಮೇಘಸ್ಥವಾದ ಉದಕಗಳೂ ಶಬ್ದಮಾಡುವುವೋ ಆಗ । **ಅಭಿನಕ್ಷಂತಃ**—ಸ್ತುತಿಗಳೊಡನೆ ನಿನ್ನನ್ನು ಸುತ್ತುವರಿದು ಸೇರುವ । **ಬ್ರಹ್ಮಾಣಃ**—ಸ್ತುತಿಕರ್ತರು । **ಇಂದ್ರಂ ಪ್ರ**—ಈಶ್ವರನಾದ ನಿನ್ನನ್ನು ಉಪಚರಿಸುವರು.

॥ ಭಾವಾರ್ಥ ॥

ಎಲೈ ಇಂದ್ರನೇ, ಶತ್ರುಗಳ ಮದವನ್ನು ನಾಶಪಡಿಸುವ ವಜ್ರಾಯುಧವನ್ನು ನೀನು ಯಾವಾಗ ಅಹಿಯನ್ನು ನಾಶಪಡಿಸಲು ಕೈಯಲ್ಲಿ ಹಿಡಿಯುವೆಯೋ, ಯಾವಾಗ ನಿನಗೆ ಬೆದರಿ ಮೇಘಗಳೂ ಮೇಘಸ್ಥವಾದ ಉದಕಗಳೂ ಶಬ್ದಮಾಡಿ ನಿನ್ನ ಮುಂದೆ ಬಾಗುವುವೋ ಆಗ ಸ್ತುತಿಗಳೊಡನೆ ನಿನ್ನನ್ನು ಸಮೀಪಿಸಿ ಸುತ್ತುವರಿಯುವ ಸ್ತುತಿಕರ್ತರು ಈಶ್ವರನಾದ ನಿನ್ನನ್ನು ಉಪಚರಿಸುವರು.

English Translation

When, Indra, you grasp in your arms your pride humbling thunderbolt to smite Ahi, when the mountain-clouds loudly roar and the cows loudly bellow, then the Brahmans offer their worship to Indra.

॥ ಸಂಹಿತಾಪಾಠಃ ॥

ತಮು ಷ್ಟವಾಮ ಯ ಇಮಾ ಜಜಾನ ವಿಶ್ವಾ ಜಾತಾನ್ಯವರಾಣ್ಯಸ್ಮಾತ್ ।
ಇಂದ್ರೇಣ ಮಿತ್ರಂ ದಿಧಿಷೇಮ ಗೀರ್ಭಿರುಪೋ ನಮೋಭಿರ್ವೃಷಭಂ ವಿಶೇಮ ॥ ೬ ॥

॥ ಪದಪಾಠಃ ॥

**ತಂ । ಊಂ ಇತಿ । ಸ್ತವಾಮ । ಯಃ । ಇಮಾ । ಜಜಾನ । ವಿಶ್ವಾ । ಜಾತಾನಿ । ಅವರಾಣಿ । ಅಸ್ಮಾತ್ ।**
**ಇಂದ್ರೇಣ । ಮಿತ್ರಂ । ದಿಧಿಷೇಮ । ಗೀಃಽಭಿಃ । ಉಪೋ ಇತಿ । ನಮಃಽಭಿಃ । ವೃಷಭಂ । ವಿಶೇಮ ॥ ೬ ॥**

॥ ಸಾಯಣಭಾಷ್ಯಂ ॥

**ಪರಸ್ಪರಂ ಸ್ತೋತಾರ ಆಹುಃ । ತಮು ತಮೇವೇಂದ್ರಂ ವಯಂ ಸಂಹತ್ಯ ಸ್ತವಾಮ । ಸ್ತೋತ್ರಂ ಕರವಾಮ । ಯ ಇಂದ್ರ ಇಮೇಮಾನಿ ಭೂತಾನಿ ಜಜಾನ ಜನಯಾಮಾಸ । ತಸ್ಮಾದಸ್ಮಾದಿಂದ್ರಾದೇವ**

ವಿಶ್ವಾ ವಿಶ್ವಾನಿ ಸರ್ವಾಣಿ ವಸ್ತುಜಾತಾನಿ ಸರ್ವಾಣಿ ಜಗಂತಿ ಅವರಾಣ್ಯವರಕಾಲೀನಾನಿ ಪಶ್ಚಾದ್ಭವಾನಿ ಭವಂತಿ । ತೇನಾನೇನೇಂದ್ರೇಣ ವಯಂ ಗೀರ್ಭಿಃ ಸ್ತುತಿಭಿರ್ಮಿತ್ರಂ । ಲುಪ್ತಭಾವಪ್ರತ್ಯಯೋಽಯಂ ನಿರ್ದೇಶಃ । ಮೈತ್ರೀಂ ದಿಧಿಷೇಮ ॥ ಧಿಷ ಧಾರಣ ಇತಿ ಧಾತುಂ ಕೇಚಿದ್ವದಂತಿ ॥ ಯುದ್ವಾ । ಮಿತ್ರಂ ॥ ಛಾಂದಸ-ಮೇಕವಚನಂ । ವಯಮಿಂದ್ರೇಣ ಸಹ ಮಿತ್ರಾಣಿ ಸುಹೃದೋ ಭವೇಮೇತಿ ಗೀರ್ಭಿರಿಂದ್ರಂ ಶಬ್ದಯೇಮ॥ ಧಿಷ ಶಬ್ದೇ । ಜುಹೋತ್ಯಾದಿಕಃ । ಅತ್ರ ವ್ಯತ್ಯಯೇನ ದ್ವಿವಿಕರಣತಾ ಶ್ಲುಶ್ಚ ಶಶ್ಚ ॥ ತತೋ ನಮೋಭಿಃ ಪ್ರಯಮಾಣೈರ್ನಮಸ್ಕಾರೈರ್ದೀಯಮಾನೈರ್ಹವಿರ್ಭಿರ್ವಾ ವೃಷಭಂ ಕಾಮಾನಾಂವರ್ಷಕಮಿಂದ್ರಮುಪ ಪ್ರೋಣಿಶೇಮ । ಅಸ್ಮದಭಿಮುಖಮೇವ ಕುರ್ಯಾಮ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಇಂದ್ರನು । **ಇಮಾ**—ಸಕಲ ಜಗತ್ತನ್ನೂ । **ಜಜಾನ**— ಉತ್ಪನ್ನಮಾಡಿದನೋ । **ತಮು**—ಅದೇ ಇಂದ್ರನನ್ನು । **ಸ್ತವಾಮ**—ಸ್ತುತಿಸೋಣ । **ಅಸ್ಮಾತ್**—ಈ ಇಂದ್ರನಿಂದಲೇ । **ವಿಶ್ವಾ ಜಾತಾನಿ**-ಉತ್ಪನ್ನವಾದ ಸಕಲ ವಿಶ್ವವೂ । **ಅವರಾಣಿ**—ಅರ್ವಾಚೀನವಾಗಿವೆ (ಅವನಷ್ಟು ಸನಾತನವಲ್ಲ) । **ಗೀರ್ಭಿಃ**—ನಮ್ಮ ಸ್ತುತಿಗಳಿಂದ । **ಇಂದ್ರೇಣ**—ಇಂದ್ರನೊಡನೆ । **ಮಿತ್ರಂ**—ಸಖಿತ್ವವನ್ನು । **ದಿಧಿಷೇಮ**—ಸಂಪಾದಿಸೋಣ । **ವೃಷಭಂ**—ಕಾಮವರ್ಷಕನಾದ ಇಂದ್ರನನ್ನು । **ನಮೋಭಿಃ**—ಹವಿಸ್ಸುಗಳೊಡನೆ ಕೂಡಿ । **ಉಪ ಪ್ರೋಣಿಶೇಮ**—ಸಮೀಪಿಸೋಣ.

॥ ಭಾವಾರ್ಥ ॥

ಯಾವ ಇಂದ್ರನು ಸಕಲ ಜಗತ್ತನ್ನೂ ಉತ್ಪನ್ನಮಾಡಿದನೋ, ಅದೇ ಇಂದ್ರನನ್ನು ಸ್ತುತಿಸೋಣ ಈ ಇಂದ್ರನಿಂದಲೇ ಉತ್ಪನ್ನವಾದ ಸಕಲ ವಿಶ್ವವೂ ಅವನಿಗಿಂತಲೂ ಈಚಿನದಾಗಿದೆ ನಮ್ಮ ಸ್ತುತಿಗಳಿಂದ ಇಂದ್ರನೊಡನೆ ಸಖಿತ್ವವನ್ನು ಸಂಪಾದಿಸೋಣ. ಕಾಮವರ್ಷಕನಾದ ಇಂದ್ರನನ್ನು ಹವಿಸ್ಸುಗಳೊಡಗೂಡಿ ಸಮೀಪಿಸೋಣ

English Translation

Let us praise that Indra who produced all these things, to him all beings are subsequent; may we maintain friendship with Indra by our hymns, let us bring the showerer (of blessings) near us by our praises.

॥ ಸಂಹಿತಾಪಾಠಃ ॥

ವೃತ್ರಸ್ಯ ತ್ವಾ ಶ್ವಸಥಾದೀಷಮಾಣಾ ವಿಶ್ವೇ ದೇವಾ ಅಜಹುರ್ಯೇ ಸಖಾಯಃ ।

ಮರುದ್ಭಿರಿಂದ್ರ ಸಖ್ಯಂ ತೇ ಅಸ್ತ್ವಥೇಮಾ ವಿಶ್ವಾಃ ಪೃತನಾ ಜಯಾಸಿ ॥೭॥

॥ ಪದಪಾಠಃ ॥

ವೃತ್ರಸ್ಯ । ತ್ವಾ । ಶ್ವಸಥಾತ್ । ಈಷಮಾಣಾಃ । ವಿಶ್ವೇ । ದೇವಾಃ । ಅಜಹುಃ । ಯೇ । ಸಖಾಯಃ ।
ಮರುತ್ಽಭಿಃ । ಇಂದ್ರ । ಸಖ್ಯಂ । ತೇ । ಅಸ್ತು । ಅಥ । ಇಮಾಃ । ವಿಶ್ವಾಃ । ಪೃತನಾಃ । ಜಯಾಸಿ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತವ ಯೇ ವಿಶ್ವೇ ದೇವಾಃ ಪ್ರಾಕ್ ಸಖಾಯಃ ಸಂಗ್ರಾಮೇ ಸಖಿತ್ವಂ ಕುರ್ಯಾಮೇತಿ ಮಿತ್ರಾಣ್ಯಭವನ್ ತೇ ಸರ್ವೇ ದೇವಾ ವೃತ್ರಸ್ಯ ವೃತ್ರಾಸುರಸ್ಯ ಶ್ವಸಥಾತ್ ॥ ಶ್ವಸೇರೌಣಾದಿಕೋಽಥಪ್ರತ್ಯಯಃ ॥ ಸರ್ವಾನಾಗಚ್ಛತೋ ದೃಷ್ಟ್ವಾ ತೇಷಾಂ ಭೀತ್ಯುತ್ಪಾದನಾಯ ವೃತ್ರಾಸುರಃ ಶ್ವಾಸಮುಕ್ತಾಸೀತ್ । ಶ್ವಾಸಾದ್ಭೀತಾಃ ಸಂತಃ ಅತ ಏವೇಷಮಾಣಾಃ ಸರ್ವತಃ ಪಲಾಯಮಾನಾಸ್ತ್ವಾ ತ್ವಾಮಜಹುಃ । ಸಂಗ್ರಾಮೇ ತ್ಯಕ್ತವಂತಃ । ಏವಂ ಸತಿ ಹೇ ಇಂದ್ರ ಮರುದ್ಭಿಃ ಸಹ ಸಖ್ಯಂ ಸಖಿಭಾವಸ್ತೇ ತವಾಸ್ತು । ಯೇ ಮರುತಸ್ತ್ವಾಂ ನ ಪರಿತ್ಯಜಂತಿ ತೈಃ ಸಹೇತಿ । ಅಥಾನಂತರಮಿಮಾ ವಿಶ್ವಾಃ ಪೃತನಾಃ ಶತ್ರುಸೇನಾ ಜಯಾಸಿ । ಸ್ವಬಲೇನಾಭಿಭವಸಿ । ಅನೇನ ವೃತ್ರಘ್ನಂ ತಮಿಂದ್ರಮಾಹ । ಅತ್ರೇಂದ್ರೋ ವೈ ವೃತ್ರಂ ಹನಿಷ್ಯನ್ನಿತ್ಯಾದಿ ಬ್ರಾಹ್ಮಣಮನುಸಂಧೇಯಂ ॥ ಐ-ಬ್ರಾ.-೩-೨೦ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಯೇ ವಿಶ್ವೇ ದೇವಾಃ**—ಯಾವ ಸಕಲ ದೇವತೆಗಳೂ । **ಸಖಾಯಃ**—ಹಿಂದೆ ನಿನ್ನ ಮಿತ್ರರಾಗಿದ್ದರೋ ಅವರೆಲ್ಲರೂ । **ವೃತ್ರಸ್ಯ**—ವೃತ್ರಾಸುರನ । **ಶ್ವಸಥಾತ್**—ನಿಃಶ್ವಾಸರೂಪದ ಶಬ್ದದಿಂದ ಬೆದರಿದವರಾಗಿ । **ಈಷಮಾಣಾಃ**—ಪಲಾಯನಮಾಡುತ್ತಾ । **ತ್ವಾ**—ನಿನ್ನನ್ನು । **ಅಜಹುಃ**—ತ್ಯಾಗಮಾಡಿದರು । **ಇಂದ್ರ**—ಎಲೈ ಇಂದ್ರನೇ । **ಮರುದ್ಭಿಃ**—ಮರುತ್ತುಗಳೊಡನೆ ಮಾತ್ರ । **ತೇ**—ನಿನ್ನ । **ಸಖ್ಯಂ**—ಮಿತ್ರತ್ವವು । **ಅಸ್ತು**—ಸ್ಥಿರವಾಗಿರಲಿ । **ಅಥ**—ಆ ಮಿತ್ರತ್ವವಿದ್ದರೆ । **ವಿಶ್ವಾಃ**—ಸಮಸ್ತವಾದ । **ಇಮಾಃ ಪೃತನಾಃ**—ಈ ಶತ್ರು ಸೈನ್ಯಗಳನ್ನೆಲ್ಲಾ । **ಜಯಾಸಿ**— ಜಯಿಸಬಲ್ಲೆ

॥ ಭಾವಾರ್ಥ ॥

ಎಲೈ ಇಂದ್ರನೇ, ನಿನಗೆ ಹಿಂದೆಲ್ಲಾ ಮಿತ್ರರಾಗಿದ್ದ ಸಕಲ ದೇವತೆಗಳೂ ಸಹ ವೃತ್ರಾಸುರನ ನಿಃಶ್ವಾಸ ರೂಪವಾದ ಶಬ್ದದಿಂದ ಬೆದರಿದವರಾಗಿ ದಿಕ್ಕುತೋಚದೇ ಪಲಾಯನಮಾಡುತ್ತಾ ನಿನ್ನನ್ನು ತ್ಯಾಗಮಾಡಿದರು. ನೀನು ಮಾತ್ರ ಮರುತ್ತುಗಳೊಡನೆ ಸ್ಥಿರವಾದ ಸಖಿತ್ವವನ್ನು ಹೊಂದಿರು. ಆ ಮಿತ್ರಸಹಾಯದಿಂದ ಖಂಡಿತ ಸಕಲ ಶತ್ರು ಸೈನ್ಯಗಳನ್ನೂ ಜಯಿಸಬಲ್ಲೆ.

## English Translation

All the gods who were your friends forsook you, flying away at the snorting of Vritra; O Indra, let there be friendship to you with the Maruts; then you conquer all these hostile armies

॥ ವಿಶೇಷವಿಷಯಗಳು ॥

ಪೂರ್ವದಲ್ಲಿ ಇಂದ್ರನು ವೃತ್ರಾಸುರನೊಡನೆ ಯುದ್ಧಮಾಡುವ ಸಂದರ್ಭದಲ್ಲಿ ಇಂದ್ರನ ಜತೆಯಲ್ಲಿದ್ದ ದೇವತೆಗಳು ವೃತ್ರಾಸುರನ ಭಯಂಕರವಾದ ನಿಃಶ್ವಾಸಶಬ್ದಕ್ಕೆ ಹೆದರಿ ಓಡಿಹೋದರು. ಇಂದ್ರನಿಗೆ ದೇವತೆಗಳ ಸಹಾಯವಿಲ್ಲವಾಯಿತು. ಆ ಕಾಲದಲ್ಲಿ ಮರುದ್ದೇವತೆಗಳು ಮಾತ್ರ ಇಂದ್ರನನ್ನು ಬಿಟ್ಟು ಅಗಲದೆ ಇಂದ್ರನ ಸಮೀಪದಲ್ಲಿಯೇ ಇದ್ದು ಅವನಿಗೆ ಯುದ್ಧದಲ್ಲಿ ಪ್ರೋತ್ಸಾಹವನ್ನು ಮಾಡುತ್ತಿದ್ದರು. ಈ ರೀತಿ ಕಷ್ಟಕಾಲದಲ್ಲಿ ಸಹಾಯಮಾಡಿದ್ದರಿಂದ ಮರುದ್ದೇವತೆಗಳಿಗೂ ಇಂದ್ರನಿಗೂ ದೃಢವಾದ ಸ್ನೇಹವುಂಟಾಯಿತು ಎಂಬ ಪೂರ್ವೇತಿಹಾಸದ ವಿವರಣೆಯು ಈ ಋಕ್ಕಿನಲ್ಲಿ ಉಕ್ತವಾಗಿದೆ. ಈ ವಿಷಯದ ವಿವರಣೆಯು ಐತರೇಯಬ್ರಾಹ್ಮಣದಲ್ಲಿ ಈ ರೀತಿ ಇದೆ

**ಇಂದ್ರೋ ವೈ ವೃತ್ರಂ ಹನಿಷ್ಯನ್ಸರ್ವಾ ದೇವತಾ ಅಬ್ರವೀದನು ಮೋಪತಿಷ್ಠಧ್ವಮುಪ ಮಾ ಹ್ವಯಧ್ವಮಿತಿ ತಥೇತಿ ತಂ ಹನಿಷ್ಯಂತ ಆದ್ರವನ್ಸೋಽವೇನ್ಮಾಂ ವೈ ಹನಿಷ್ಯಂತ ಆದ್ರವಂತಿ ಹನ್ತೇಮಾನ್ಭೀಷಯಾ ಇತಿ ತಾನಭಿಪ್ರಾಶ್ವಸೀತ್ತಸ್ಯ ಶ್ವಸಥಾದೀಷಮಾಣಾ ವಿಶ್ವೇ ದೇವಾ ಅದ್ರವನ್ಮರುತೋ ಹೈನಂ ನಾಜಹುಃ ಪ್ರಹರ ಭಗವೋ ಜಹಿ ವೀರಯಸ್ವೇತ್ಯೇವೈನಮೇತಾಂ ವಾಚಂ ವದಂತ ಉಪಾತಿಷ್ಠಂತ ॥**

(ಐ. ಬ್ರಾ. ೧೨-೨೦)

ಪೂರ್ವದಲ್ಲಿ ಇಂದ್ರನು ವೃತ್ರಾಸುರನನ್ನು ಸಂಹಾರಮಾಡಲು ಪ್ರಯತ್ನಮಾಡಿ ಸಕಲ ದೇವತೆಗಳನ್ನೂ ತನ್ನ ಬಳಿಗೆ ಕರೆದು—ಎಲೈ ದೇವತೆಗಳೇ, ಈಗ ನಾನು ವೃತ್ರಾಸುರನನ್ನು ಸಂಹರಿಸಲು ಉದ್ಯುಕ್ತನಾಗಿರುವೆನು. ನೀವೆಲ್ಲರೂ ನನ್ನೊಡನಿದ್ದು ನನಗೆ ಸಹಾಯಮಾಡಬೇಕು ಎನ್ನಲು ದೇವತೆಗಳು ಹಾಗೆಯೇ ಆಗಲೆಂದೊಪ್ಪಿ ಇಂದ್ರನ ಜತೆಯಲ್ಲಿಯೇ ಬಂದರು. ವೃತ್ರನು ದೇವತೆಗಳು ಬರುವುದನ್ನು ನೋಡಿ, ಈ ದೇವತೆಗಳು ನನ್ನನ್ನು ಕೊಲ್ಲಲು ಬರುತ್ತಿರುವರು. ಇದಕ್ಕೆ ಒಂದು ಉಪಾಯವನ್ನು ಮಾಡುವೆನು. ನನ್ನ ಶರೀರವನ್ನು ದೊಡ್ಡದಾಗಿ ಬೆಳೆಸಿ ಇವರನ್ನು ಹೆದರಿಸುವೆನು ಎಂದು ಮನಸ್ಸಿನಲ್ಲಿ ಯೋಚಿಸಿದನು. ಆದರಂತೆ ತನ್ನ ಶರೀರವನ್ನು ಅತ್ಯಂತ ದೊಡ್ಡದಾಗಿ ಆಗುವಂತೆ ಮಾಡಿದನು. (ಹಿಂದೆ ವೃತ್ರನು ಬೆಳೆಯುತ್ತಿದ್ದಾಗ ಪ್ರತಿದಿನವೂ ಬಿಲ್ಲಿನಿಂದ ಹೊಡೆದ ಬಾಣವು ಎಷ್ಟುದೂರ ಹೋಗುವುದೋ ಅಷ್ಟು ಪ್ರಮಾಣ ಪರ್ಯಂತರ ಬೆಳೆಯುತ್ತಿದ್ದನೆಂದು—**ಸ ಇಷುಮಾತ್ರಮಿಷುಮಾತ್ರಂ ವಿಷ್ವಙ್ಙವರ್ಧತ ಸ ಇಮಾಂಲ್ಲೋಕಾನವೃಣೋದ್ಯದಿಮಾಂಲ್ಲೋಕಾನವೃಣೋತ್ತದ್ವೃತ್ರಸ್ಯ ವೃತ್ರತ್ವಂ** ಎಂಬ ಶ್ರುತಿವಾಕ್ಯದಲ್ಲಿ ಹೇಳಿದೆ. ಎಂದರೆ ಈ ಅಸುರನು ಪ್ರತಿದಿನವೂ ಬಿಲ್ಲಿನಿಂದ ಹೊರಟ ಬಾಣವು ಹೋಗುವ ಪ್ರಮಾಣಪರ್ಯಂತರ ಬೆಳೆಯುತ್ತಾ ಈ ಲೋಕವನ್ನೆಲ್ಲಾ ಆವರಿಸಿದನು. ಈ ರೀತಿ ಲೋಕವನ್ನೆಲ್ಲಾ ಆವರಿಸಿದ್ದರಿಂದ ಈ ಅಸುರನಿಗೆ ವೃತ್ರಾಸುರನೆಂಬ ಹೆಸರು ಬಂದಿತು ಎಂದು ಹಿಂದೆ ಒಂದು ಸಂದರ್ಭದಲ್ಲಿ ಹೇಳಲಾಗಿದೆ. ಬಳಿಕ ವೃತ್ರನು ತನ್ನ ಅತಿ ದೊಡ್ಡದಾದ ಶರೀರವನ್ನು ಪ್ರದರ್ಶಿಸಿ ಭಯಂಕರವಾದ ತನ್ನ ನಿಃಶ್ವಾಸದಿಂದ ದೇವತೆಗಳಿಗೆ ಭಯವನ್ನುಂಟುಮಾಡಿದನು. ದೇವತೆಗಳು ಈ ಅಸುರನ ಬೃಹದಾಕಾರವನ್ನೂ, ಕೆಂಡವನ್ನುಗುಳುವಂತಿರುವ ಇವನ ಭಯಂಕರವಾದ ನಿಃಶ್ವಾಸವನ್ನೂ ಕಂಡು ಭೀತರಾಗಿ ನಾನಾ ದಿಕ್ಕುಗಳಿಗೆ ಓಡಿಹೋದರು. ಆ ಕಾಲದಲ್ಲಿ ಈ ವೃತ್ರಾಸುರನ ನಿಃಶ್ವಾಸರೂಪವಾದ ವಾಯುವು ಸಕಲವನ್ನೂ ಸುಡುತ್ತಿರುವ ಪ್ರಲಯಕಾಲದ ವಾಯುವಿನಂತೆ ಅತಿ ಭಯಂಕರವಾಗಿದ್ದಿತು. ಈ ವಾಯುವಿನ ಮುಂದೆ ದೇವತೆಗಳು ಕೇವಲ ಪರಮಾಣುಗಳಂತೆ ಕಾಣುತ್ತಿದ್ದರು ಈರೀತಿ ದೇವತೆಗಳು ಹೆದರಿ ಓಡಿಹೋದರೂ ಇಂದ್ರನೊಡನಿದ್ದ ಮರುದ್ದೇವತೆಗಳು ಮಾತ್ರ ಇಂದ್ರನನ್ನು ಬಿಟ್ಟಗಲದೆ—ಎಲೈ ಭಗವಂತನಾದ ಇಂದ್ರನೇ, ಹೆದರಬೇಡ, ನಿನ್ನ ವಜ್ರಾಯುಧದಿಂದ

ಈ ಅಸುರನನ್ನು ಹೊಡೆದು ಕೊಲ್ಲು ಮತ್ತು ನಿನ್ನ ಪರಾಕ್ರಮವನ್ನು ಜನರಿಗೆ ತಿಳಿಯುವಂತೆ ಪ್ರಕಟಿಸು ಎಂದು ನಾನಾ ವಿಧವಾಗಿ ಪ್ರೋತ್ಸಾಹಮಾಡುತ್ತಿದ್ದರು

**ತದೇತದೃಷಿಃ ಪಶ್ಯನ್ನಭ್ಯನೂವಾಚ ವೃತ್ರಸ್ಯ ತ್ವಾ ಶ್ವಸಥಾದೀಷಮಾಣಾ ವಿಶ್ವೇ ದೇವಾಅಜಹುರ್ಯೇ ಸಖಾಯಃ। ಮರುದ್ಭಿರಿಂದ್ರ ಸಖ್ಯಂ ತೇ ಅಸ್ತ್ವಥೇಮಾ ವಿಶ್ವಾಃ ಪೃತನಾ ಜಯಾಸೀತಿ ॥** (ಐ. ಬ್ರಾ ೧೨-೨೦)

ಈ ವಿಷಯವನ್ನೇ ಋಷಿಯು ತನ್ನ ದಿವ್ಯದೃಷ್ಟಿಯಿಂದ ತಿಳಿದು ಅದನ್ನೇ ಈ ಪ್ರಕೃತಋಕ್ಕಿನಲ್ಲಿ ಹೇಳಿರುವನು—ಎಲೈ ಇಂದ್ರನೇ, ವೃತ್ರಾಸುರನ ಸಂಹಾರಕಾಲದಲ್ಲಿ ನಿನ್ನೊಡನಿದ್ದ ದೇವತೆಗಳೆಲ್ಲರೂ ವೃತ್ರನ ನಿಃಶ್ವಾಸವನ್ನು ಕಂಡು ಹೆದರಿ ಓಡಿಹೋದರು. ಆದರೆ ನಿನ್ನ ಸ್ನೇಹಿತರಾದ ಮರುತ್ತುಗಳು ಮಾತ್ರ ನಿನ್ನನ್ನು ಬಿಟ್ಟುಹೋಗಲಿಲ್ಲ. ಆದ್ದರಿಂದ ಎಲೈ ಇಂದ್ರನೇ, ಈ ಮರುದ್ದೇವತೆಗಳೊಡನೆ ನಿನ್ನ ಸ್ನೇಹವು ಶಾಶ್ವತವಾಗಿರಲಿ ನೀನು ಇವರ ಸಹಾಯದಿಂದ ಅನೇಕ ಶತ್ರುಸೇನೆಗಳನ್ನು ಜಯಿಸಲು ಶಕ್ತನಾಗುವೆ ಎಂದು ಋಷಿಯು ಇಂದ್ರನನ್ನು ಸ್ತುತಿಸಿರುವನು.

**ಸೋಽವೇದಿಮೋ ವೈ ಕಿಲ ಮೇ ಸಚಿವಾ ಇಮೇ ಮಾಕಾಮಯಂತ ಹಂತೇಮಾನಸ್ಮಿನ್ನುಕ್ಥ ಆಭಜಾ ಇತಿ ತಾನೇತಸ್ಮಿನ್ನುಕ್ಥ ಆಭಜದಥಹೈತೇ ತರ್ಹ್ಯುಭೇ ಏವ ನಿಷ್ಕೇವಲ್ಯೇ ಉಕ್ಥೇ ಆಸತುಃ। ಮರುತ್ವತೀಯಂ ಗ್ರಹಂ ಗೃಹ್ಣಾತಿ ಮರುತ್ವತೀಯಂ ಪ್ರಗಾಥಂ ಶಂಸತಿ ಮರುತ್ವತೀಯಂ ಸೂಕ್ತಂ ಶಂಸತಿ ಮರುತ್ವತೀಯಾಂ ನಿವಿದಂ ದಧಾತಿ ಮರುತಾಂ ಸಾ ಭಕ್ತಿಃ ॥** (ಐ. ಬ್ರಾ. ೧೨-೨೦)

ಅನಂತರ ಇಂದ್ರನು ತನ್ನ ಮನಸ್ಸಿನಲ್ಲಿ ಈ ರೀತಿ ಯೋಚಿಸಿದನು.—ಈ ಮರುತ್ತುಗಳು ಯುದ್ಧಕಾಲದಲ್ಲಿ ನನ್ನನ್ನು ಬಿಟ್ಟಗಲದೆ ನನ್ನ ಜತೆಯಲ್ಲಿಯೇ ಇದ್ದು ನನಗೆ ಸಹಾಯಮಾಡಿರುವರು. ಆದ್ದರಿಂದ ಇವರು ನನಗೆ ಹಿತಚಿಂತಕರಾದ ಸ್ನೇಹಿತರು ಇವರಿಗೆ ಏನಾದರೊಂದು ಉಪಕಾರವನ್ನು ಮಾಡಬೇಕು ಎಂದು ಯೋಚಿಸಿ ಮಾಧ್ಯಂದಿನಸವನಕಾಲದಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ ಮರುದ್ದೇವತೆಗಳಿಗೆ ಭಾಗವನ್ನು ಕಲ್ಪಿಸಿದನು ಹಿಂದೆ ನಿಷ್ಕೇವಲ್ಯಶಸ್ತ್ರಮಂತ್ರಗಳಲ್ಲಿ ಇಂದ್ರನಿಗೆ ಮಾತ್ರ ಭಾಗವಿದ್ದಿತು. ಮರುದ್ದೇವತೆಗಳಿಗೆ ಯಾವ ಭಾಗವೂ ಇರಲಿಲ್ಲ. ಈಗ ಇಂದ್ರನ ಅನುಗ್ರಹದಿಂದ ಇಂದ್ರನಿಗೂ, ಮರುದ್ದೇವತೆಗಳಿಗೂ ಭಾಗವು ಕಲ್ಪಿತವಾಯಿತು. ಆದ್ದರಿಂದ ಆ ಕಾಲದಲ್ಲಿ ಅಧ್ವರ್ಯುವು ಮರುದ್ದೇವತೆಗಳನ್ನುದ್ದೇಶಿಸಿ ಮರುತ್ವತೀಯ ಗ್ರಹಪಾತ್ರೆಯನ್ನು ಸ್ವೀಕರಿಸುವನು (ಕಲ್ಪಿಸುವನು) ಮರುದ್ದೇವತೆಗಳನ್ನುದ್ದೇಶಿಸಿ ಪ್ರಗಾಥವನ್ನು ಗಾನಮಾಡುವನು. ಅವರನ್ನುದ್ದೇಶಿಸಿ ಸೂಕ್ತವನ್ನೂ ಪಠಿಸುವನು. ಶಸ್ತ್ರಮಂತ್ರಗಳ ಮಧ್ಯದಲ್ಲಿ ಮರುದ್ದೇವತಾಕವಾದ ನಿವಿದ್ಧಾನೀಯಸೂಕ್ತವನ್ನೂ ಸೇರಿಸಿ ಪಠಿಸುವನು. ಇವೆಲ್ಲವೂ ಇಂದ್ರನು ತನ್ನ ಸ್ನೇಹಿತರಾದ ಮರುದ್ದೇವತೆಗಳಿಗೆ ಯಜ್ಞದಲ್ಲಿ ಕಲ್ಪಿಸಿದ ಭಾಗವು.

॥ ಸಂಹಿತಾಪಾಠಃ ॥

ತ್ರಿಃ ಷ॒ಷ್ಟಿಸ್ತ್ವಾ॑ ಮ॒ರುತೋ॑ ವಾವೃಧಾ॒ನಾ ಉ॒ಸ್ರಾ ಇ॑ವ ರಾ॒ಶಯೋ॑

ಯ॒ಜ್ಞಿಯಾ॑ಸಃ ।

ಉಪ ತ್ವೇಮಃ ಕೃಧಿ ನೋ ಭಾಗಧೇಯಂ ಶುಷ್ಮಂ ತ ಏನಾ ಹವಿಷಾ
ವಿಧೇಮ ॥ ೮ ॥

॥ ಪದಪಾಠಃ ॥

ತ್ರಿಃ । ಷಷ್ಟಿಃ । ತ್ವಾ । ಮರುತಃ । ವವೃಧಾನಾಃ । ಉಸ್ರಾಃಽಇವ । ರಾಶಯಃ । ಯಜ್ಞಿಯಾಸಃ ।

ಉಪ । ತ್ವಾ । ಆ । ಇಮಃ । ಕೃಧಿ । ನಃ । ಭಾಗಽಧೇಯಂ । ಶುಷ್ಮಂ । ತೇ । ಏನಾ । ಹವಿಷಾ ।
ವಿಧೇಮ ॥ ೮ ॥

॥ ಸಾಯಣಭಾಷ್ಯಂ ॥

ಪ್ರಸಂಗಾದೇತಾವಂತೋ ಮರುತಃ ಸಹಾಯಾ ಅಭವನ್ನಿತ್ಯಾಹ । ಹೇ ಇಂದ್ರ ತ್ರಿಸ್ತ್ರಯಃ ॥ ಜಸಃ ಸುಪಾಂ ಸುಲುಗಿತಿ ಸುಃ ॥ ಷಷ್ಟಿಃತ್ರ್ಯುತ್ತರಸಂಖ್ಯಾಕಾ ಮರುತಃ । ತೇ ಚ ತೈತ್ತಿರೀಯಕೇ ಈದೃಙ್ಚಾನ್ಯಾದೃಙ್ಚೇತ್ಯಾದಿನಾ । ತೈ. ಸಂ. ೪.೬.೫.೫ । ನವಸು ಗಣೇಷು ಸಪ್ತ ಸಪ್ತ ನಿಪಾದಿತಾಃ । ತತ್ರಾದಿತಃ ಪಂಚ ಗಣಾಃ ಸಂಹಿತಾಯಾಮಾಮ್ನಾಯಂತೇ । ಸ್ವತವಾಂಶ್ಚ ಪ್ರಘಾಸೀ ಚ ಸಾಂತಪನಶ್ಚ ಗೃಹಮೇಧೀ ಚ ಕ್ರೀಡೀ ಚ ಶಾಕೀ ಚೋಜ್ಜೇಷೀ । ವಾ.ಸ. ೧೭-೮೫ । ಇತಿ ಖೈಲಿಕಃ ಷಷ್ಠೋ ಗಣಃ । ತತೋ ಧುನಿಶ್ಚ ಧ್ವಾಂತಶ್ಚೇತ್ಯಾದ್ಯಾಸ್ತ್ರಯೋಽರಣ್ಯೇಽನುವಾಕ್ಯಾಃ । ತೈ. ಆ. ೪-೨೪ । ಇತ್ಥಂ ತ್ರಯಃ ಷಷ್ಟಿಸಂಖ್ಯಾಕಾ ಉಸ್ರಾ ಇವ ರಾಶಯೋ ಗಾವ ಇವ ಸಂಘೀಭೂತಾಸ್ತೇ ತ್ವಾಂ ವಾವೃಧಾನಾಃ ಸ್ವಬಲೇನ ವರ್ಧಿತವಂತಃ । ತೇ ಮರುತೋ ಯಜ್ಞಿಯಾಸೋ ಯಜ್ಞಾರ್ಹಾ ಅಭವನ್ । ತಂ ಮರುತ್ಸಹಾಯ-ಮಿಂದ್ರಂ ತ್ವಾ ತ್ವಾಂ ವಯಮೇಮಃ । ಉಪಗಚ್ಛಾಮಃ । ತತಸ್ತ್ವಂ ನೋಽಸ್ಮಭ್ಯಂ ಭಾಗಧೇಯಂ ಭಜನೀಯಂ ಧನಂ ಕೃಧಿ । ಕುರು। ಪಶ್ಚಾದ್ವಯಮಪ್ಯೇನೈನೇನ ಸೋಮಲಕ್ಷಣೇನ ಹವಿಷಾ ತೇ ತುಭ್ಯಂ ಶುಷ್ಮಂ ಶತ್ರೂಣಾಂ ಶೋಷಕಂ ಬಲಂ ವಿಧೇಮ॥ ವಿಧ ವಿಧಾನೇ॥ ವಿದಧ್ಮಃ । ಕುರ್ಮ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) ತ್ರಿಃ ಷಷ್ಟಿಃ—ಅರವತ್ತುಮೂರು ಸಂಖ್ಯೆಯುಳ್ಳ । ಮರುತಃ—ಮರುತ್ತುಗಳು । ರಾಶಯಃ ಉಸ್ರಾ ಇವ—ಗುಂಪುಕಟ್ಟಿಕೊಂಡಿರುವ ಗೋಸಂಘಗಳಂತೆ । ತ್ವಾ—ನಿನ್ನನ್ನು ಸುತ್ತುವರಿದು । ವಾವೃಧಾನಾಃ—ನಿನ್ನನ್ನು ಪುಷ್ಟಿಗೊಳಿಸುತ್ತಾ । ಯಜ್ಞಿಯಾಸಃ—ಯಜ್ಞಾರ್ಹರಾದರು । ತ್ವಾ—ನಿನ್ನನ್ನು । ಉಪೇಮಃ—ನಾವು ಸಮೀಪಿಸುತ್ತೇವೆ । ನಃ—ನಮಗಾಗಿ । ಭಾಗಧೇಯಂ—ಪೂಜ್ಯವಾದ ಧನವನ್ನು । ಕೃಧಿ—ಉತ್ಪನ್ನಮಾಡು । ಏನಾ ಹವಿಷಾ—ಸೋಮರೂಪವಾದ ಈ ಹವಿಸ್ಸಿನಿಂದ । ತೇ—ನಿನಗೆ । ಶುಷ್ಮಂ—ಬಲವನ್ನು । ವಿಧೇಮ—ಉತ್ಪನ್ನಮಾಡುತ್ತೇವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಅರವತ್ತುಮೂರು ಸಂಖ್ಯೆಯುಳ್ಳ ಮರುತ್ತುಗಳು ಗುಂಪುಕಟ್ಟಿಕೊಂಡಿರುವ ಗೋಸಂಘಗಳಂತೆ ನಿನ್ನನ್ನು ಸುತ್ತುವರಿದು ನಿನ್ನನ್ನು ಪುಷ್ಟಿಗೊಳಿಸುತ್ತಾ ಯಜ್ಞಾರ್ಹರಾದರು. ನಿನ್ನನ್ನು ನಾವು ಸಮೀಪಿಸುತ್ತೇವೆ. ನಮಗಾಗಿ ಪೂಜ್ಯವಾದ ಧನವನ್ನು ಉತ್ಪನ್ನಮಾಡು. ಸೋಮರೂಪವಾದ ಹವಿಸ್ಸಿನಿಂದ ನಿನಗೆ ಬಲವನ್ನು ಉತ್ಪನ್ನ ಮಾಡುತ್ತೇವೆ.

## English Translation

These sixty-three Maruts were worthy of sacrifice, nourishing your vigour like cows gathered together; we come to you grant us our portion; so will we produce strength in you by this offering.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಮರುದ್ದೇವತೆಗಳ ಸಂಖ್ಯೆಯು **ತ್ರಿಃ ಷಷ್ಟಿಃ**—ಅರವತ್ತಮೂರು ಎಂದು ಹೇಳಿದೆ. ಸಾಧಾರಣವಾಗಿ ಇತರ ಕಡೆಗಳಲ್ಲಿ **ಸಪ್ತಗಣಾ ವೈ ಮರುತಃ** ಎಂದು ಮರುದ್ದೇವತೆಗಳಲ್ಲಿ ಏಳು ಗುಂಪುಗಳಿರುವುವೆಂದೂ ಪ್ರತಿಯೊಂದು ಗುಂಪಿನಲ್ಲಿಯೂ ಏಳೇಳು ಮರುತ್ತುಗಳು ಇರುವರೆಂದೂ ಇವರ ಒಟ್ಟು ಸಂಖ್ಯೆಯು ೭×೭=೪೯ ನಲವತ್ತೊಂಭತ್ತೆಂದೂ ಹೇಳಲಾಗಿದೆ. ಆದರೆ ಪ್ರಕೃತಋಕ್ಕಿನಲ್ಲಿ ಮರುದ್ದೇವತೆಗಳ ಗಣಗಳು ಒಟ್ಟು ಒಂಭತ್ತೆಂದೂ ಪ್ರತಿಗಣದಲ್ಲಿಯೂ ಏಳು ಏಳರಂತೆ ಇವರ ಸಂಖ್ಯೆಯು ೬೩ ಎಂದೂ ಹೇಳಿರುವುದಕ್ಕೆ ಶ್ರುತಿವಾಕ್ಯದ ಸಮರ್ಥನೆಯನ್ನು ಭಾಷ್ಯಕಾರರು ಹೇಳಿದಾರೆ. **ಈದೃಂಚಾನ್ಯಾದೃಂಚ** ( ತೈ. ಸಂ. ೪-೬-೫-೫ ) ತೈತ್ತಿರೀಯ ಸಂಹಿತಾವಾಕ್ಯದಲ್ಲಿ ಮರುತ್ತುಗಳು ೬೩ ಎಂದು ಹೇಳಿದೆ ಮತ್ತು ವಾಜಸನೇಯ ಸಂಹಿತೆಯಲ್ಲಿ ಈ ಮರುದ್ದೇವತೆಗಳ ಗುಂಪುಗಳ ಹೆಸರನ್ನೂ ಹೇಳಿದೆ. **ಸ್ವತವಾನ್, ಪ್ರಘಾಸೀ, ಸಾಂಪತನಃ, ಗೃಹಮೇಧೀ, ಕ್ರೀಡೀ, ಶಾಕೀ, ಉಜ್ಜೇಷೀ** ಎಂದು ಏಳುಗಣಗಳ ಹೆಸರನ್ನೂ ಹೇಳಿದೆ. ತೈತ್ತಿರೀಯ ಆರಣ್ಯಕದಲ್ಲಿ—**ಧುನಿಃ, ಧ್ವಾಂತಃ** ಎಂದು ಇನ್ನೆರಡು ಗಣಗಳ ಹೆಸರುಗಳು ಪಠಿತವಾಗಿವೆ. ಆದ್ದರಿಂದ ಒಟ್ಟು ೯ ಗಣಗಳಲ್ಲಿ ಏಳೇಳರಂತೆ ೯×೭=೬೩ ಒಟ್ಟು ಮರುತ್ತುಗಳ ಸಂಖ್ಯೆಯು ೬೩ ಎಂದು ಈ ಋಕ್ಕಿನಲ್ಲಿ ಋಷಿಯು ಹೇಳಿದಾನೆ.

। ಸಂಹಿತಾಪಾಠಃ ।

**ತಿಗ್ಮಮಾಯುಧಂ ಮರುತಾಮನೀಕಂ ಕಸ್ತ ಇಂದ್ರ ಪ್ರತಿ ವಜ್ರಂ ದಧರ್ಷ।**
**ಅನಾಯುಧಾಸೋ ಅಸುರಾ ಅದೇವಾಶ್ಚಕ್ರೇಣ ತಾँ ಅಪ ವಪ ಋಜೀಷಿನ್॥**

॥ ಪದಪಾಠಃ ।

**ತಿಗ್ಮಂ । ಆಯುಧಂ । ಮರುತಾಂ । ಅನೀಕಂ । ಕಃ । ತೇ । ಇಂದ್ರ । ಪ್ರತಿ । ವಜ್ರಂ । ದಧರ್ಷ ।**
**ಅನಾಯುಧಾಸಃ । ಅಸುರಾಃ । ಅದೇವಾಃ । ಚಕ್ರೇಣ। ತಾನ್ । ಅಪ। ವಪ । ಋಜೀಷಿನ್ ॥ ೯ ॥**

॥ ಸಾಯಣಭಾಷ್ಯಂ ।

**ಹೇ ಇಂದ್ರ ತೇ ತವ ಸ್ವಭೂತಂ ತಿಗ್ಮಂ ತೀಕ್ಷ್ಣಮಾಯುಧಂ। ಆಯುಧ್ಯತೇऽನೇನೇತ್ಯಾಯುಧಂ ಧನುಃ। ತತ್ರ ಮರುತಾಂ ತ್ರಯಃಷಷ್ಟಿಸಂಖ್ಯಾನಾಂ ತ್ವತ್ಸಹಾಯಾನಾಮನೀಕಂ ಸಂಘಂ ತೇ ತ್ವದೀಯಂ**

ವಜ್ರಂ ಚ ಕಃ ಕೋ ವಾ ದೇವೋ ಮನುಷ್ಯೋ ವಾ ಪ್ರತಿ ದಧರ್ಷ । ಪ್ರತಿಕೂಲಮಭಿಭವತಿ । ಅಭಿಭಾವುಕೋ ನಾಸ್ತೀತ್ಯರ್ಥಃ ॥ ಧೃಷ ಪ್ರಸಹನೇ । ಆ ಧೃಷಾದ್ವಾ । ಧಾ. ೩೪ । ಇತಿ ವಿಭಾಷಿತಣಿಚ್ । ತದಭಾವೇ ಲಿಟಿ ರೂಪಂ ॥ ಅತ ಏವಾನಾಯುಧಾಸೋ ಧನುರಾದ್ಯಾಯುಧವರ್ಜಿತಾ ಅದೇವಾ ದೇವವರ್ಜಿತಾ ದೇವದ್ವಿಷೋ ಯೇಽಸುರಾಃ ಸಂತಿ ಹೇ ಋಜೀಷಿನ್ । ಅಪಾರ್ಜಿತೋಽಭಿಷುತ್ಯಃ ಸೋಮಃ ಋಜೀಷಂ । ತದ್ವನ್ನಿಂದ್ರ ತಾನಸುರಾಂಶ್ಚಕ್ರೇಣ ಚಕ್ರಸಮಾನವೀರ್ಯೇಣ ಚಕ್ರರೂಪೇಣ ವಜ್ರೇಣ ವಾಪ ವಪ । ಅಪಗತಾನ್ ಕುರು । ಅಪನುದೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಋಜೀಷಿನ್**—ಋಜೀಷಸಂಜ್ಞಕವಾದ ಸೋಮವುಳ್ಳ । **ಇಂದ್ರ**—ಎಲೈ ಇಂದ್ರನೇ । **ತೇ**—ನಿನ್ನ । **ತಿಗ್ಮಂ**—ತೀಕ್ಷ್ಣವಾದ । **ಆಯುಧಂ**—ಧನುಸ್ಸನ್ನೂ । **ಮರುತಾಂ**—ನಿನ್ನ ಸಹಾಯಕರಾದ ಮರುತ್ತುಗಳ । **ಅನೀಕಂ**—ಸಮುದಾಯವನ್ನೂ । **ವಜ್ರಂ**—ನಿನ್ನ ವಜ್ರಾಯುಧವನ್ನೂ । **ಕಃ**—ಯಾರುತಾನೇ । **ಪ್ರತಿ ದಧರ್ಷ**—ಪ್ರತಿಭಟಿಸಬಲ್ಲನು ? । **ಅನಾಯುಧಾಸಃ**—ಆಯುಧರಹಿತರೂ । **ಅದೇವಾಃ**—ದೇವತೆಗಳಿಂದ ವರ್ಜಿತರೂ ಆದ । **ಅಸುರಾಃ**—ಯಾವ ಅಸುರರಿರುವರೋ । **ತಾನ್**—ಅವರನ್ನೆಲ್ಲಾ । **ಚಕ್ರೇಣ**—ಚಕ್ರರೂಪವಾದ ನಿನ್ನ ವಜ್ರಾಯುಧದಿಂದ । **ಅಪ ವಪ**—ದೂರಕ್ಕೆ ಓಡಿಸು

॥ ಭಾವಾರ್ಥ ॥

ಋಜೀಷಸಂಜ್ಞಕವಾದ ಸೋಮಪ್ರಿಯನಾದ ಎಲೈ ಇಂದ್ರನೇ, ನಿನ್ನ ತೀಕ್ಷ್ಣವಾದ ಧನುಸ್ಸನ್ನೂ ನಿನಗೆ ಸಹಾಯಕರಾದ ಮರುತ್ತುಗಳ ಸಮುದಾಯವನ್ನೂ, ನಿನ್ನ ವಜ್ರಾಯುಧವನ್ನೂ ಯಾರು ತಾನೇ ಪ್ರತಿಭಟಿಸಬಲ್ಲರು ? ಆಯುಧರಹಿತರೂ ದೇವತೆಗಳಿಂದ ವರ್ಜಿತರೂ ಆದ ಯಾವ ಅಸುರರಿರುವರೋ ಅವರನ್ನೆಲ್ಲಾ ಚಕ್ರರೂಪವಾದ ನಿನ್ನ ವಜ್ರಾಯುಧದಿಂದ ದೂರಕ್ಕೆ ಓಡಿಸು.

English Translation

Your sharp bow, the host of Maruts, and your thunderbolt who, Indra, has ever withstood ? The Asuras are weaponless and abandoned by the gods, drive them away by your discus, O Rijishin.

॥ ಸಂಹಿತಾಪಾಠಃ ॥

ಮಹ ಉಗ್ರಾಯ ತವಸೇ ಸುವೃಕ್ತಿಂ ಪ್ರೇರಯ ಶಿವತಮಾಯ ಪಶ್ವಃ ।
ಗಿರ್ವಾಹಸೇ ಗಿರ ಇಂದ್ರಾಯ ಪೂರ್ವೀರ್ಧೇಹಿ ತನ್ವೇ ಕುವಿದಂಗ ವೇದತ್ ॥ ೧೦ ॥

॥ ಪದಪಾಠಃ ।

ಮಹೇ । ಉಗ್ರಾಯ । ತವಸೇ । ಸುಽವೃಕ್ತಿಂ । ಪ್ರ । ಈರಯ । ಶಿವಽತಮಾಯ । ಪಶ್ವಃ ।

ಗಿರ್ವಾಹಸೇ । ಗಿರಃ । ಇಂದ್ರಾಯ । ಪೂರ್ವೀಃ । ಧೇಹಿ । ತನ್ವೇ । ಕುವಿತ್ । ಅಂಗ । ವೇದತ್ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಸ್ತೋತಃ ಮಹೇ ಮಹತೇ ಗುಣೈರುಗ್ರಾಯ ಬಲೇನೋದ್ಗೂರ್ಣಾಯ ತವಸೇ ॥ ತು ಇತಿ ಧಾತುರ್ವೃದ್ಧ್ಯರ್ಥಃ॥ ಪ್ರವೃದ್ಧಾಯ ಶಿವತಮಾಯ ಕಲ್ಯಾಣತಮಾಯೇಂದ್ರಾಯ ಸುವೃಕ್ತಿಂ ಶೋಭನಾಂ ಸ್ತುತಿಂ ಪ್ರೇರಯ । ಚೋದಯ । ಕುರು । ಕಿಮರ್ಥಂ । ಪಶ್ವಃ ಪಶೋಃ । ದ್ವಿಪಾಚ್ಚತುಷ್ಪಾಚ್ಚ । ಪಶೋರ್ಮಮಾಸ್ಮದೀಯಾಯ ಗವೇ ।ವಾ । ಯದ್ವಾ ಪಶೋರತೀಂದ್ರಿಯಾರ್ಥಂ ದ್ರಷ್ಟುರ್ಮಮ ಧನಾದಿಕಂ ದಾತುಂ ಗವೇ ಸುಖಾದಿಕಂ ಪ್ರದಾತುಮಿಂದ್ರಾಯ ಸ್ತುತಿಂ ಪ್ರೇರಯ । ಏತದೇವಾಹ । ಹೇ ಸ್ತೋತಃ ಗಿರ್ವಾಹಸೇ ಗೀರ್ಭಿಃ ಸ್ತುತಿಭಿರುಹ್ಯಮಾನಾಯೇಂದ್ರಾಯ ಪೂರ್ವೀರ್ಬಹ್ವೀರ್ಗಿರಃ ಸ್ತುತೀರ್ಧೇಹಿ । ಕುರು । ತತಃ ಸ ಇಂದ್ರಸ್ತನ್ವೇ । ತನೋತಿ ಕುಲಮಿತಿ ತನೂಸ್ತನಯಃ । ತಸ್ಮೈ ಪುತ್ರಾಯ ಸ್ವಶರೀರಾಯಾತ್ಮನೇ ವಾ ಕುವಿತ್ । ಬಹುನಾಮೈತತ್ । ಬಹುಧನಮಂಗ ಕ್ಷಿಪ್ರಂ ವೇದತ್ । ಲಂಭಯತು । ದದಾತು ॥ ವಿದ್ಲೃ ಲಾಭೇ । ಲೇಟ್ಯಡಾಗಮಃ । ಕುವಿಚ್ಛಬ್ದಯೋಗಾದನಿಘಾತಃ ॥

॥ ಪ್ರತಿಪದಾರ್ಥ

(ಎಲೈ ಸ್ತುತಿಕರ್ತನೇ) **ಮಹೇ**—ಮಹದ್ಗುಣಯುಕ್ತನೂ । **ಉಗ್ರಾಯ**—ಅತ್ಯಧಿಕವಾದ ಬಲವುಳ್ಳವನೂ । **ತವಸೇ**—ಅತ್ಯಂತ ಪ್ರವೃದ್ಧನೂ । **ಶಿವತಮಾಯ**—ಕಲ್ಯಾಣಾತ್ಮಕನೂ ಆದ ಇಂದ್ರನನ್ನುದ್ದೇಶಿಸಿ । **ಪಶ್ವಃ**—ಪಶುದಾನಕ್ಕೆ ಅವನು ಸಂಕಲ್ಪಿಸುವಂತೆ । **ಸುವೃಕ್ತಿಂ**—ಉತ್ತಮವಾದ ಸ್ತುತಿಯನ್ನು । **ಪ್ರೇರಯ**—ನಿರ್ಮಿಸಿ ಅರ್ಪಿಸು । **ಗಿರ್ವಾಹಸೇ**—ಸ್ತುತಿಗಳಿಂದ ವಹಿಸಲ್ಪಡುವ । **ಇದ್ರಾಯ**—ಇಂದ್ರನಿಗೆ । **ಪೂರ್ವೀಃ**—ಅನೇಕವಾದ। **ಗಿರಃ**—ಸ್ತುತಿಗಳನ್ನು । **ಧೇಹಿ**—ನಿರ್ಮಿಸಿ ಅರ್ಪಿಸು । **ತನ್ವೇ**—ನನಗೆ । **ಕುವಿತ್**—ಅತ್ಯಧಿಕವಾದ ಧನವನ್ನು । **ಅಂಗ**—ಕ್ಷಿಪ್ರವಾಗಿ । **ವೇದತ್**—ಆ ಇಂದ್ರನು ನನಗೆ ಕೊಡಲಿ

॥ ಭಾವಾರ್ಥ ॥

ಎಲೈ ಸ್ತುತಿಕರ್ತನೇ, ಮಹದ್ಗುಣಯುಕ್ತನೂ, ಅತ್ಯಧಿಕವಾದ ಬಲವುಳ್ಳವನೂ, ಅತ್ಯಂತ ಪ್ರವೃದ್ಧನೂ, ಕಲ್ಯಾಣಾತ್ಮಕನೂ ಆದ ಇಂದ್ರನನ್ನುದ್ದೇಶಿಸಿ ನಮಗೆ ಪಶುದಾನವನ್ನು ಮಾಡಲು ಅವನು ಸಂಕಲ್ಪಿಸುವಂತೆ ಉತ್ತಮವಾದ ಸ್ತುತಿಯನ್ನು ನಿರ್ಮಿಸಿ ಅರ್ಪಿಸು. ಸ್ತುತಿಗಳಿಂದ ವಹಿಸಲ್ಪಡುವ ಇಂದ್ರನಿಗೆ ಅನೇಕವಾದ ಸ್ತುತಿಗಳನ್ನು ಅರ್ಪಿಸು. ಇಂದ್ರನು ತತ್ಫಲವಾಗಿ ನನಗೆ ಅತ್ಯಧಿಕವಾದ ಧನವನ್ನು ಕ್ಷಿಪ್ರವಾಗಿ ಕೊಡಲಿ.

## English Translation

Send forth an excellent hymn to great (Indra), the strong, mighty, and most fortunate, (that he may prosper) my cattle; utter many praises to Indra who is borne by praise, may he speedily give much wealth to me.

॥ ಸಂಹಿತಾಪಾಠಃ ॥

ಉಕ್ಥವಾಹಸೇ ವಿಭ್ವೇ ಮನೀಷಾಂ ದ್ರುಣಾ ನ ಪಾರಮೀರಯಾ ನದೀನಾಂ॥
ನಿ ಸ್ಪೃಶ ಧಿಯಾ ತನ್ವಿ ಶ್ರುತಸ್ಯ ಜುಷ್ಟತರಸ್ಯ ಕುವಿದಂಗ ವೇದತ್ ॥ ೧೧ ॥

॥ ಪದಪಾಠಃ ॥

ಉಕ್ಥऽವಾಹಸೇ । ವಿऽಭ್ವೇ । ಮನೀಷಾಂ । ದ್ರುಣಾ । ನ । ಪಾರಂ । ಈರಯ । ನದೀನಾಂ ॥
ನಿ । ಸ್ಪೃಶ । ಧಿಯಾ । ತನ್ವಿ । ಶ್ರುತಸ್ಯ । ಜುಷ್ಟऽತರಸ್ಯ । ಕುವಿತ್ । ಅಂಗ । ವೇದತ್ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ಸ್ತೋತಃ ಉಕ್ಥವಾಹಸ ಉಕ್ಥೈಃ ಸ್ತೋತ್ರಶಸ್ತ್ರಾದಿಭಿರುಹ್ಯಮಾನಾಯ ಅತ ಏವ ವಿಭ್ವೇ ಮಹತೇ ಯದ್ವಾ ಶತ್ರೂಣಾಮಭಿಭವಿತ್ರ ಇಂದ್ರಾಯೇಂದ್ರಾರ್ಥಂ ಮನೀಷಾಂ ಮನಸ ಈಶಾಂ ಸ್ತುತಿಮೀರಯ । ಪ್ರೇರಯ । ತತ್ರ ದೃಷ್ಟಾಂತಃ । ದ್ರುಣಾ ನ ಯಥಾ ನಾವಿಕೋ ನದೀನಾಂ ನದಮಾನಾನಾಂ ಸರಿತಾಂ ಪಾರಂ ತೀರಂ ಪ್ರತಿ ಪಥಿಕಂ ದ್ರುಣಾ ನಾವಾ ಪ್ರಾಪಯತಿ ತದ್ವದಿಂದ್ರಂ ಪ್ರತಿ ಸ್ತುತಿಂ ಗಮಯೇತಿ । ಕಿಂಚ ನಿ ಸ್ಪೃಶ ನಿತರಾಂ ಧನಂ ಸ್ಪರ್ಶಯ ಗಮಯ ತನ್ವ್ಯಾತ್ಮನಿ ಪುತ್ರೇ ವಾ । ಕೀದೃಶಂ । ಶ್ರುತಸ್ಯ ಸರ್ವತ್ರ ವಿಶ್ರುತಸ್ಯ ಪ್ರಸಿದ್ಧಸ್ಯ ಜುಷ್ಟತರಸ್ಯಾತ್ಯರ್ಥಂ ಪ್ರೀಣಯಿತುರಿಂದ್ರಸ್ಯ ಸ್ವಭೂತಂ । ಧನಂ ಧಿಯಾ ತ್ವದೀಯಯಾ ಸ್ತುತ್ಯಾ ಕರ್ಮಣಾ ವಾತ್ಮಾನಂ ಗಮಯ । ತತಸ್ತ್ವಯಾಭಿಷ್ಟುತ ಇಂದ್ರಃ ಕುವಿದ್ಬಹು ಧನಂ ಕ್ಷಿಪ್ರಂ ವೇದತ್ । ಲಂಭಯತು । ದದಾತು ॥

॥ ಪ್ರತಿಪದಾರ್ಥ ॥

(ಎಲೈ ಸ್ತುತಿಕರ್ತನೇ) **ದ್ರುಣಾ**—ನಾವಿಕರು ತನ್ನ ದೋಣಿಯಿಂದ । **ನದೀನಾಂ**—ನದಿಗಳ । **ಪಾರಂ ನ**—ದಡವನ್ನು ಪ್ರಯಾಣಿಕನು ಸೇರುವಂತೆ ಮಾಡುವ ರೀತಿಯಲ್ಲಿ । **ಉಕ್ಥವಾಹಸೇ**—ಶಸ್ತ್ರಾದಿಗಳಿಂದ ವಹಿಸಲ್ಪಡುವವನೂ । **ವಿಭ್ವೇ**—ಮಹತ್ಸ್ವರೂಪವುಳ್ಳವನೂ ಆದ ಇಂದ್ರನಿಗೆ । **ಮನೀಷಾಂ**—ಉತ್ತಮವಾದ ಸ್ತುತಿಯನ್ನು । **ಈರಯ**—ಪ್ರೇರಿಸಿ ಅರ್ಪಿಸು । **ಶ್ರುತಸ್ಯ**—ಪ್ರಸಿದ್ಧನೂ । **ಜುಷ್ಟತರಸ್ಯ**—ಪ್ರಿಯಕಾರಕನೂ ಆದ ಇಂದ್ರನಿಗೆ ಸೇರಿದ ಧನವನ್ನು । **ತನ್ವೇ**—ನನಗೆ । **ನಿಸ್ಪೃಶ**—ಬಂದುಸೇರುವಂತೆ ಮಾಡು । **ಧಿಯಾ**—ಸ್ತುತಿಯಿಂದ ಪ್ರೀತನಾದ ಇಂದ್ರನು । **ಕುವಿತ್**—ಅತ್ಯಧಿಕವಾದ ಧನವನ್ನು । **ಅಂಗ**—ಕ್ಷಿಪ್ರವಾಗಿ । **ವೇದತ್**—ನನಗೆ ಒದಗಿಸಲಿ.

॥ ಭಾವಾರ್ಥ ॥

ಎಲೈ ಸ್ತುತಿಕರ್ತನೇ, ನಾವಿಕನು ತನ್ನ ದೋಣಿಯಿಂದ ನದಿಗಳ ದಡವನ್ನು ಪಥಿಕರು ಹೋಗಿ ಸೇರುವಂತೆ ಮಾಡುವ ರೀತಿಯಲ್ಲಿ ಶಸ್ತ್ರಾದಿಗಳಿಂದ ವಹಿಸಲ್ಪಡುವವನೂ, ಮಹತ್ಸ್ವರೂಪವುಳ್ಳವನೂ ಆದ ಇಂದ್ರನಿಗೆ ಉತ್ತಮವಾದ

ಸ್ತುತಿಯನ್ನು ಪ್ರೇರಿಸಿ ಅರ್ಪಿಸು. ಪ್ರಸಿದ್ಧನೂ, ಪ್ರಿಯಕಾರಕನೂ ಆದ ಇಂದ್ರನಿಗೆ ಸೇರಿದ ಧನವನ್ನು ನನಗೆ ಬಂದು ಸೇರುವಂತೆ ಮಾಡು ಸ್ತುತಿಯಿಂದ ಪ್ರೀತನಾದ ಇಂದ್ರನು ನನಗೆ ಕ್ಷಿಪ್ರವಾಗಿ ಅತ್ಯಧಿಕವಾದ ಧನವನ್ನು ಒದಗಿಸಲಿ.

English Translation

Send forth your praise to mighty Indra who is borne by hymns, as (a sailor sends a traveller) in a ship across the rivers; bring to me by your rites that wealth which belongs to him renowned and beneficent; may he speedily give much wealth.

॥ ಸಂಹಿತಾಪಾಠಃ ॥

ತದ್ವಿವಿಡ್ಢಿ ಯತ್ತ ಇಂದ್ರೋ ಜುಜೋಷತ್ಸ್ತುಹಿ ಸುಷ್ಟುತಿಂ ನಮಸಾ ವಿವಾಸ ।
ಉಪ ಭೂಷ ಜರಿತರ್ಮಾ ರುವಣ್ಯಃ ಶ್ರಾವಯಾ ವಾಚಂ ಕುವಿದಂಗ ವೇದತ್ ॥ ೧೨ ॥

॥ ಪದಪಾಠಃ ॥

ತತ್ । ವಿವಿಡ್ಢಿ । ಯತ್ । ತೇ । ಇಂದ್ರಃ । ಜುಜೋಷತ್ । ಸ್ತುಹಿ । ಸುऽಸ್ತುತಿಂ । ನಮಸಾ । ಆ । ವಿವಾಸ ।
ಉಪ । ಭೂಷ । ಜರಿತಃ । ಮಾ । ರುವಣ್ಯಃ । ಶ್ರವಯ । ವಾಚಂ । ಕುವಿತ್ । ಅಂಗ । ವೇದತ್ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಋತ್ವಿಕ್ ತತ್ ಸೋಮಾದಿಹವಿಃ ಸ್ತೋತ್ರಂ ವಾ ವಿವಿಡ್ಢಿ । ವ್ಯಾಪಯ । ತಾನೀಂದ್ರಾರ್ಥಂ ಕುರ್ವಿತ್ಯರ್ಥಃ । ತೇ ತವ ಸ್ವಭೂತಂ ಯದ್ಧವಿಃ ಸ್ತೋತ್ರಂ ವೇಂದ್ರೋ ಜುಜೋಷತ್ ಸ್ವೀಕುರ್ಯಾತ್ ತತ್ಕುರು ॥ ಜುಷೀ ಪ್ರೀತಿಸೇವನಯೋಃ। ಲೇಟಿ ಶಪಃ ಶ್ಲುಃ। ಅಡಾಗಮಃ । ಛಾಂದಸತ್ವಾನ್ನಾಭ್ಯಸ್ತಸ್ಯೇತಿ ಗುಣಪ್ರತಿಷೇಧಾಭಾವಃ ॥ ಹೇ ಸ್ತೋತಃ ಸುಷ್ಟುತಿಂ ಸುಸ್ತುತಿಂ । ಶೋಭಮಾನಾ ಸ್ತುತಿರ್ಯಸ್ಯ ಸ ತಥೋಕ್ತಃ । ತಾದೃಶಮಿಂದ್ರಂ ಸ್ತುಹಿ । ತಥಾ ನಮಸಾ ಸ್ತೋತ್ರೇಣ ಹವಿಷಾ ವಾ ಆ ವಿವಾಸ । ಇಂದ್ರಮಾಭಿಮುಖ್ಯೇನ ಪರಿಚರ ॥ ವಿವಾಸತಿಃ ಪರಿಚರಣಕರ್ಮಾ । ಲೋಟಿ ರೂಪಂ ॥ ಹೇ ಜರಿತಃ ಸ್ತೋತಃ ಉಪ ಭೂಷ ॥ ಭೂಷ ಅಲಂಕಾರೇ॥ ಅಲಂಕೃತೋ ಭವ । ಮಾ ರುವಣ್ಯಃ । ಧನಾಭಾವಾನ್ಮಾ ಧ್ವನಯಃ । ಮಾ ರೋದೀರಿತ್ಯರ್ಥಃ । ಧನಾಗಮನೇ ಕಾರಣಮಾಹ । ಹೇ ಸ್ತೋತಃ ವಾಚಂ ಸ್ತುತಿಮಿಂದ್ರಂ ಶ್ರಾವಯ । ಜ್ಞಾಪಯ । ತತಸ್ತ್ವಯಾ ಸ್ತುತ ಇಂದ್ರಸ್ತುಭ್ಯಂ ಕುವಿದ್ಬಹು ಧನಂ ಕ್ಷಿಪ್ರಂ ಪ್ರಯಚ್ಛತು ॥

॥ ಪ್ರತಿಪದಾರ್ಥ ॥

(ಎಲೈ ಸ್ತುತಿಕರ್ತನೇ) **ಯತ್**—ಯಾವ ನಿನ್ನ ಸ್ತೋತ್ರವನ್ನು । **ಇಂದ್ರಃ**—ಇಂದ್ರನು । **ಜುಜೋಷತ್**—ಸ್ವೀಕರಿಸಿ ಸೇವಿಸುವನೋ । **ತೇ**—ನಿನ್ನಿಂದ ನಿರ್ಮಿತವಾದ । **ತತ್**—ಆ ಸ್ತೋತ್ರವನ್ನು । **ವಿವಿಡ್ಢಿ**—ಇಂದ್ರನಿಗೆ ಅರ್ಪಿಸು । **ಸುಷ್ಟುತಂ**—ಉತ್ತಮವಾದ ಸ್ತುತಿಗೆ ಪಾತ್ರನಾದ ಇಂದ್ರನನ್ನು । **ಸ್ತುಹಿ**—ಪ್ರಶಂಸಿಸು । **ನಮಸಾ**—ಹವಿಸ್ಸಿನಿಂದ ಕೂಡಿ । **ಆ ವಿವಾಸ**—ಇಂದ್ರನನ್ನು ಉಪಚರಿಸು । **ಜರಿತಃ**—ಎಲೈ ಸ್ತುತಿಕರ್ತನೇ । **ಉಪ ಭೂಷ**—ಇಂದ್ರನನ್ನಲಂಕರಿಸು । **ಮಾ ರುವಣ್ಯಃ**—ಧನಾಭಾವದಿಂದ ದುಃಖಿಸಬೇಡ । **ವಾಚಂ**—ನಿನ್ನ ಸ್ತುತಿವಾಕ್ಯವನ್ನು । **ಶ್ರಾವಯ**—ಇಂದ್ರನ ಕಿವಿಗೆ ಬೀಳುವಂತೆಮಾಡು । **ಅಂಗ ಕುವಿತ್**—ಆ ಇಂದ್ರನು ನಿನಗೆ ಕ್ಷಿಪ್ರವಾಗಿ ಅತ್ಯಧಿಕವಾದ ಧನವನ್ನು । **ವೇದತ್**—ಕೊಡಲಿ.

॥ ಭಾವಾರ್ಥ ॥

ಎಲೈ ಸ್ತುತಿಕರ್ತನೇ, ಯಾವ ನಿನ್ನ ಸ್ತೋತ್ರವನ್ನು ಇಂದ್ರನು ಸ್ವೀಕರಿಸಿ ಸೇವಿಸುವನೋ, ನಿನ್ನಿಂದ ನಿರ್ಮಿತವಾದ ಆ ಸ್ತೋತ್ರವನ್ನು ಇಂದ್ರನಿಗೆ ಅರ್ಪಿಸು. ಉತ್ತಮವಾದ ಸ್ತುತಿಗೆ ಪಾತ್ರನಾದ ಇಂದ್ರನನ್ನು ಪ್ರಶಂಸಿಸು. ಹವಿಸ್ಸಿನಿಂದ ಕೂಡಿ ಇಂದ್ರನನ್ನು ಉಪಚರಿಸು. ಎಲೈ ಸ್ತುತಿಕರ್ತನೇ, ಇಂದ್ರನನ್ನಲಂಕರಿಸು ಧನಾಭಾವದಿಂದ ದುಃಖಿಸಬೇಡ. ನಿನ್ನ ಸ್ತುತಿವಾಕ್ಯವನ್ನು ಇಂದ್ರನ ಕಿವಿಗೆ ಬೀಳುವಂತೆ ಮಾಡು. ಆ ಇಂದ್ರನು ನಿನಗೆ ಕ್ಷಿಪ್ರವಾಗಿ ಅತ್ಯಧಿಕವಾದ ಧನವನ್ನು ಕೊಡಲಿ.

## English Translation

Perform those rites of yours that Indra may accept them ; praise him to whom praise belongs, worship him with your service ; O priest, adorn yourself, grieve not (for poverty) ; let Indra hear your praise, may he speedily give much wealth.

॥ ಸಂಹಿತಾಪಾಠಃ ॥

ಅವ ದ್ರಪ್ಸೋ ಅಂಶುಮತೀಮತಿಷ್ಠದಿಯಾನಃ ಕೃಷ್ಣೋ ದಶಭಿಃ ಸಹಸ್ರೈಃ ।
ಆವತ್ತಮಿಂದ್ರಃ ಶಚ್ಯಾ ಧಮಂತಮಪ ಸ್ನೇಹಿತೀರ್ನೃಮಣಾ ಅಧತ್ತ ॥೧೩॥

॥ ಪದಪಾಠಃ ॥

ಅವ । ದ್ರಪ್ಸಃ । ಅಂಶುಽಮತೀಂ । ಅತಿಷ್ಠತ್ । ಇಯಾನಃ । ಕೃಷ್ಣಃ । ದಶಽಭಿಃ । ಸಹಸ್ರೈಃ ॥
ಆವತ್ । ತಂ । ಇಂದ್ರಃ । ಶಚ್ಯಾ । ಧಮಂತಂ । ಅಪ । ಸ್ನೇಹಿತೀಃ । ನೃಽಮನಾಃ । ಅಧತ್ತ ॥ ೧೩ ॥

॥ ಸಾಯಣಭಾಷ್ಯಂ ॥

ಪೃಷ್ಠ್ಯಷಡಹಗತೇಷೂಕ್ಥ್ಯೇಷು ತೃತೀಯಸವನೇ ಬ್ರಾಹ್ಮಣಾಚ್ಛಂಸಿಶಸ್ತ್ರೇಽವ ದ್ರಪ್ಸ ಇತಿ ತೃಚಃ । ಸೂತ್ರಿತಂ ಚ । ಅವ ದ್ರಪ್ಸೋ ಅಂಶುಮತೀಮತಿಷ್ಠದಿತಿ ತ್ರಿಸ್ರೋಽಚ್ಛಾ ಮ ಇಂದ್ರಮಿತಿ ನಿತ್ಯಮೈಕಾಹಿಕಂ । ಆ. ೮-೩ । ಇತಿ ॥

ಅತ್ರೇತಿಹಾಸಮಾಚಕ್ಷತೇ ಕಿಲ । ಕೃಷ್ಣೋ ನಾಮಾಸುರೋ ದಶಸಹಸ್ರಸಂಖ್ಯೈರಸುರೈಃ ಪರಿವೃತಃ ಸನ್ನಂಶುಮತೀನಾಮಧೇಯಾಯಾ ನದ್ಯಾಸ್ತೀರೇಽತಿಷ್ಠತ್ । ತತ್ರಂ ತಂ ಕೃಷ್ಣಮುದಕಮಧ್ಯೇ ಸ್ಥಿತಮಿಂದ್ರೋ ಬೃಹಸ್ಪತಿನಾ ಸಹಾಗಚ್ಛತ್ । ಆಗತ್ಯ ತಂ ಕೃಷ್ಣಂ ತಸ್ಯಾನುಚರಾಂಶ್ಚ ಬೃಹಸ್ಪತಿ-ಸಹಾಯೋ ಜಘಾನೇತಿ ॥ ಕೇಚಿದನ್ಯಥಾ ವದಂತಿ। ತೇಷಾಂ ಕಥಾ ಹೇತುಃ। ದ್ರಪ್ಸ ಇತ್ಯುದಕಕಣೋಽ-ಭಿಧೀಯತೇ ಸ ತು ಸೋಮೋ ದ್ರಪ್ಸಶ್ಚಸ್ಕಂದ । ಋ. ೧೦-೧೭-೧೧ । ಇತ್ಯಾದಿಷು ಸೋಮಪರತ್ವೇನೋ-ಕ್ತತ್ವಾತ್ । ಏತತ್ಪದಮಾಶ್ರಿತ್ಯಾಹುಃ ॥ ಅಪಕ್ರಮ್ಯ ತು ದೇವೇಭ್ಯಃ ಸೋಮೋ ವೃತ್ರಭಯಾರ್ದಿತಃ । ನದೀಮಂಶುಮತೀಂ ನಾಮಾಭ್ಯತಿಷ್ಠತ್ಕುರೂನ್ಪ್ರತಿ ॥ ತಂ ಬೃಹಸ್ಪತಿನೈಕೇನ ಸೋಽಭ್ಯಯಾದ್ವೃತ್ರಹಾ ಸಹ । ಯೋತ್ಸ್ಯಮಾನಂ ಸುಸಂಹೃಷ್ಟೈರ್ಮರುದ್ಭಿರ್ವಿವಿಧಾಯುಧೈಃ ॥ ದೃಷ್ಟ್ವಾ ತಾನಾಯತಃ ಸೋಮಃ ಸ್ವಬಲೇನ ವ್ಯವಸ್ಥಿತಃ । ಮನ್ವಾನೋ ವೃತ್ರಮಾಯಾಂತಂ ಜಿಘಾಂಸುಮರಿಸೇನಯಾ ॥ ವ್ಯವಸ್ಥಿತಂ ಧನುಷ್ಮಂತಂ ತಮುವಾಚ ಬೃಹಸ್ಪತಿಃ । ಮರುತ್ಪತಿರಯಂ ಸೋಮ ಪ್ರೇಹಿ ದೇವಾನ್ಪುನರ್ವಿಭೋ । ಸೋಽಬ್ರವೀನ್ನೇತಿ ತಂ ಶಕ್ರ ಓಜಸೈವ ಬಲಾದ್ಬಲೀ । ಇಯಾಯ ದೇವಾನಾದಾಯ ತಂ ಪಪುರ್ವಿಧಿವ-ತ್ಸುರಾಃ ॥ ಜಘ್ನುಃ ಪೀತ್ವಾ ಚ ದೈತ್ಯಾನಾಂ ಸಮರೇ ನವತೀರ್ನವ । ತದವ ದ್ರಪ್ಸ ಇತ್ಯಸ್ಮಿನ್ ದ್ವ್ಯೃಚೇ ಸರ್ವಂ ನಿಗದ್ಯತೇ ।। ಬೃ. ೬-೯೧೮ ರಿಂದ ೯೨೫॥ ಏತದನಾರ್ಷತ್ವೇ ನಾದರಣೀಯಂ ಭವತಿ ॥ ಏಷೋಽರ್ಥಃ ಕ್ರಮೇಣಾಕ್ಷರ್ಪಕ್ಷ್ಯತೇ । ತಥಾ ಚಾಸ್ಯಾ ಋಚೋಽಯಮರ್ಥಃ । ದ್ರಪ್ಸಃ । ದ್ರುತಂ ಸರತಿ ಗಚ್ಛತೀತಿ ದ್ರಪ್ಸಃ ॥ ಪೃಷೋದರಾದಿಃ ॥ ದ್ರುತಂ ಗಚ್ಛನ್ ದಶಭಿಃ ಸಹಸ್ರೈರ್ದಶಸಹಸ್ರಸಂಖ್ಯೈರಸುರೈರಿಯಾನಃ ಕೃಷ್ಣ ಏತನ್ನಾಮಕೋಽಸುರೋಽಂಶುಮತೀಂ ನಾಮ ನದೀಮವಾತಿಷ್ಠತ್ । ಅವತಿಷ್ಠತೇ। ತತಃ ಶಚ್ಯಾ ಕರ್ಮಣಾ ಪ್ರಜ್ಞಾನೇನ ವಾ ಧಮಂತಮುದಸ್ಯಾಂತರುಚ್ಛ್ವಸಂತಂ ಯದ್ವಾ ಜಗದ್ಭೀತಿಕರಂ ಶಬ್ದಂ ಕುರ್ವಂತಂ ತಂ ಕೃಷ್ಣಮಸುರಮಿಂದ್ರೋ ಮರುದ್ಭಿಃ ಸಹಾವತ್ । ಪ್ರಾಪ್ನೋತ್ । ಪಶ್ಚಾತ್ತಂ ಕೃಷ್ಣಮಸುರಂ ತಸ್ಯಾನುಚರಾಂಶ್ಚ ಹತವಾನಿತಿ ವದತಿ । ನೃಮಣಾ ನೃಷು ಮನೋ ಯಸ್ಯ ಸಃ । ಯದ್ವಾ। ಕರ್ಮನೇತೃಷ್ವೃತ್ವಿಕ್ಷ್ವೇಕವಿಧಂ ಮನೋ ಯಸ್ಯ ಸ ತಥೋಕ್ತಃ । ತಾದೃಶಃ ಸನ್ ಸ್ನೇಹಿತೀಃ। ಸ್ನೇಹತಿರ್ವಧಕರ್ಮಸು ಪಠಿತಃ । ಸರ್ವಸ್ಯ ಹಿಂಸಿತ್ರೀಸ್ತಸ್ಯ ಸೇನಾ ಅಪಾಧತ್ತ । ಅಪಧಾನಂ ಹನನಂ । ಅವಧೀದಿತ್ಯರ್ಥಃ । ಅಪ ಸ್ನೀಹಿತಿಂ ನೃಮಣಾ ಅಧದ್ರಾ ಇತಿ ಛಂದೋಗಾಃ ಪಠಂತಿ । ಸಾ.ಸಂ. ೧-೪-೧-೪-೧ । ತಸ್ಯಾನುಚರಾನ್ ಹತ್ವಾ ತಂ ದ್ರುತಂ ಗಚ್ಛಂತಮಸುರಮಪಾಧತ್ತ । ಹತವಾನ್ ॥

॥ ಪ್ರತಿಪದಾರ್ಥ ॥

ದ್ರಪ್ಸಃ—ವೇಗಗಾಮಿಯೂ । **ದಶಭಿಃ ಸಹಸ್ರೈಃ**—ಹತ್ತುಸಾವಿರ ಸಂಖ್ಯೆಯುಳ್ಳ ಅಸುರರೊಡನೆ । **ಇಯಾನಃ**—ಕೂಡಿಕೊಂಡಿರುವವನೂ ಆದ । **ಕೃಷ್ಣಃ**—ಕೃಷ್ಣನೆಂಬ ಅಸುರನು । **ಅಂಶುಮತೀಂ**—ಅಂಶುಮತಿ ಯೆಂಬ ನದಿಯಲ್ಲಿ । **ಅವಾತಿಷ್ಠತ್**—ದೀರ್ಘವಾಗಿ ಮಲಗಿದ್ದನು । **ಧಮಂತಂ**—ಜಗದ್ಭೀತಿಕರವಾದ ಶಬ್ದವನ್ನು ಮಾಡುತ್ತಿದ್ದ । **ತಂ**—ಆ ಅಸುರನನ್ನು । **ಇಂದ್ರಃ**—ಇಂದ್ರನು । **ಶಚ್ಯಾ**—ತನ್ನ ಕುಶಲತೆಯಿಂದಲೂ ಮರುತ್ತುಗಳ ಸಹಾಯದಿಂದಲೂ । **ಆವತ್**—ಸಮೀಪಿಸಿದನು । **ನೃಮಣಾಃ**—ಮಾನವನಿಗೆ ಹಿತವನ್ನುಂಟುಮಾಡಬೇಕೆಂಬ ಬುದ್ಧಿಯುಳ್ಳ ಇಂದ್ರನು । **ಸ್ನೇಹಿತೀಃ**—ಹಿಂಸಕರಾದ ಅವನ ಸೇನೆಗಳನ್ನೆಲ್ಲಾ । **ಅಪಾಧತ್ತ**—ನಾಶಮಾಡಿದನು.

॥ ಭಾವಾರ್ಥ ॥

ವೇಗಗಾಮಿಯೂ, ಹತ್ತುಸಾವಿರಸಂಖ್ಯೆಯುಳ್ಳ ಅಸುರರೊಡನೆ ಕೂಡಿದವನೂ ಆದ ಕೃಷ್ಣನೆಂಬ ಅಸುರನು ಅಂಶುಮತಿಯೆಂಬ ನದಿಯಲ್ಲಿ ದೀರ್ಘವಾಗಿ ಮಲಗಿದ್ದನು ಜಗದ್ಭೀತಿಕರವಾದ ಶಬ್ದವನ್ನು ಮಾಡುತ್ತಿದ್ದ ಆ ಅಸುರನನ್ನು ಇಂದ್ರನು ತನ್ನ ಕುಶಲತೆಯಿಂದಲೂ, ಮರುತ್ತುಗಳ ಸಹಾಯದಿಂದಲೂ ಸವಿಸಾಪಿಸಿದನು. ಮಾನವರಿಗೆ ಹಿತವನ್ನುಂಟು ಮಾಡಬೇಕೆಂಬ ಬುದ್ಧಿಯುಳ್ಳ ಇಂದ್ರನು ಜಗತ್ತಿಗೆ ಹಿಂಸಕವಾದ ಅವನ ಸೇನೆಗಳನ್ನೆಲ್ಲಾ ನಾಶಪಡಿಸಿದನು

English Translation

The swift-moving Krishna with ten thousand ( demons ) stood on the Amshumati; by his might Indra caught him snorting (in the water) ; he, benevolent to man, smote his malicious (bands).

॥ ವಿಶೇಷವಿಷಯಗಳು ॥

ಪೃಷ್ಠ್ಯಷಡಹಗಳಲ್ಲಿರುವ ಉಕ್ಥ್ಯಯಾಗಗಳಲ್ಲಿ ತೃತೀಯ ಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ **ಅವ ದ್ರಪ್ಸಃ** ಎಂಬ ತೃಚವನ್ನು ( ಮೂರು ಋಕ್ಕುಗಳನ್ನು ) ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಅವ ದ್ರಪ್ಸೋ ಅಂಶಮತೀಮತಿಷ್ಠದಿತಿ ತಿಸ್ರೋಽಚ್ಛಾ ಮ ಇಂದ್ರಮಿತಿ ನಿತ್ಯನ್ಯೈಕಾಹಿಕೇಂ** ಎಂಬ ಸೂತ್ರದಿಂದ (ಆ. ೮-೩) ವಿನ್ಯತವಾಗಿರುವುದು.

ಈ ಋಕ್ಕಿನಲ್ಲಿಯೂ ಮುಂದಿನ ಎರಡು ಋಕ್ಕುಗಳಲ್ಲಿಯೂ ಇಂದ್ರನು ಕೃಷ್ಣನೆಂಬ ಅಸುರನನ್ನು ಸಂಹಾರ ಮಾಡಿದ ವಿಷಯವು ಉಕ್ತವಾಗಿದೆ. ಈ ಸಂದರ್ಭದಲ್ಲಿ ಒಂದು ಪೂರ್ವೇತಿಹಾಸವಿದೆ—

> **ಅತ್ರೇತಿಹಾಸಮಾಚಕ್ಷತೇ । ಕೃಷ್ಣೋ ನಾಮಾಸುರೋ ದಶಸಹಸ್ರಸಂಖ್ಯೈರಸುರೈಃ ಪರಿವೃತಃ ಸನ್ನಂಶುಮತೀನಾಮಧೇಯಾಯಾ ನದ್ಯಾಸ್ತೀರೇಽತಿಷ್ಠತ್ । ತತ್ರ ತಂ ಕೃಷ್ಣಮುದಕಮಧ್ಯೇ ಸ್ಥಿತಮಿಂದ್ರೋ ಬೃಹಸ್ಪತಿನಾ ಸಹಾಗಚ್ಛತ್ । ಆಗತ್ಯ ತಂ ಕೃಷ್ಣಂ ತಸ್ಯಾನುಚರಾಂಶ್ಚ ಬೃಹಸ್ಪತಿಸಹಾಯೋ ಜಘಾನೇತಿ ।**

ಕೃಷ್ಣನೆಂಬ ಅಸುರನು ಹತ್ತುಸಹಸ್ರಸೈನಿಕರೊಡನೆ ಅಂಶುಮತೀ ಎಂಬ ನದಿಯ ತೀರದಲ್ಲಿ ಬೀಡುಬಿಟ್ಟಿದ್ದನು. ಸುತ್ತಲೂ ನದಿಯನೀರಿನಿಂದ ಆವೃತನಾಗಿ ನೀರಿನ ಮಧ್ಯದಲ್ಲಿ ಅಜೇಯನಾಗಿದ್ದ ಅಸುರನನ್ನು ಸಂಹಾರಮಾಡಲು ಇಂದ್ರನು ಬೃಹಸ್ಪತಿಯೊಡನೆ ಅಲ್ಲಿಗೆ ಬಂದು ಬೃಹಸ್ಪತಿಯ ಸಹಾಯದಿಂದ ಆ ಕೃಷ್ಣಾಸುರನನ್ನೂ ಅವನ ಹತ್ತು ಸಾವಿರ ಯುದ್ಧಭಟರನ್ನೂ ಸಂಹರಿಸಿದನು ಎಂಬ ವೃತ್ತಾಂತವು ಈ ಋಕ್ಕಿನಲ್ಲಿ ವರ್ಣಿತವಾಗಿದೆ. ಈ ವಿಚಾರದಲ್ಲಿ ಕೆಲವರು ಮತ್ತೊಂದು ವಿಧವಾಗಿ ಹೇಳುವರು—

> **ಕೇಚಿದನ್ಯಥಾ ವದಂತಿ । ತೇಷಾಂ ಕಥಾ ಹೇತುಃ । ದ್ರಪ್ಸ ಇತ್ಯುದಕಕಣೋಽಭಿಧೀಯತೇ ಸ ತು ಸೋಮೋ ದ್ರಪ್ಸಶ್ಚಸ್ಕಂದ (ಋ ಸಂ. ೧೦-೧೭-೧೧) ಇತ್ಯಾದಿಷು ಸೋಮಪರತ್ವೇನೋಕ್ತತ್ವಾತ್ । ಏತತ್ಪದಮಾಶ್ರಿತ್ಯಾಹುಃ—**

ಅಪಕ್ರಮ್ಯ ತು ದೇವೇಭ್ಯಃ ಸೋಮೋ ವೃತ್ರಭಯಾರ್ದಿತಃ ।
ನದೀಮಂಶುಮತೀಂ ನಾಮಾಭ್ಯತಿಷ್ಠತ್ ಕುರೂನ್ ಪ್ರತಿ ॥
ತಂ ಬೃಹಸ್ಪತಿನೈಕೇನ ಸೋಽಭ್ಯಯಾದ್ವೃತ್ರಹಾ ಸಹ ।
ಯೋತ್ಸ್ಯಮಾನಃ ಸುಸಂಹೃಷ್ಟೈರ್ಮರುದ್ಭಿರ್ವಿವಿಧಾಯುಧೈಃ ॥
ದೃಷ್ಟ್ವಾ ತಾನಾಯತಃ ಸೋಮಃ ಸ್ವಬಲೇನ ವ್ಯವಸ್ಥಿತಃ ।
ಮನ್ವಾನೋ ವೃತ್ರಮಾಯಾಂತಂ ಜಿಘಾಂಸುಮರಿಸೇನಯಾ ॥
ವ್ಯವಸ್ಥಿತಂ ಧನುಷ್ಮಂತಂ ತಮುವಾಚ ಬೃಹಸ್ಪತಿಃ ।
ಮರುತ್ಪತಿರಯಂ ಸೋಮ ಪ್ರೇಹಿ ದೇವಾನ್ ಪುನರ್ವಿಭೋ ॥
ಸೋಽಬ್ರವೀನ್ನೇತಿ ತಂ ಶಕ್ರಃ ಸ್ವರ್ಗ ಏವ ಬಲಾದ್ಬಲೀ ।
ಇಯಾಯ ದೇವಾನಾದಾಯ ತಂ ಪಪುರ್ವಿಧಿವತ್ಸುರಾಃ ॥
ಜಘ್ನುಃ ಪೀತ್ವಾ ಚ ದೈತ್ಯಾನಾಂ ಸಮರೇ ನವತೀರ್ನವ ।
ತದವ ದ್ರಪ್ಸ ಇತ್ಯಸ್ಮಿನ್ ತೃಚೇ ಸರ್ವಂ ನಿಗದ್ಯತೇ ॥

(ಬೃ. ದೇ. ೬-೧೦೯ ರಿಂದ ೧೧೫)

ಕೆಲವರು ಈ ಋಕ್ಕುಗಳ ವಿಷಯದಲ್ಲಿ ಬೇರೆ ವಿಧವಾದ ಇತಿಹಾಸವನ್ನು ಹೇಳುವರು ಅವರ ಕಥಾಸರಣಿಯು ಈ ರೀತಿ ಇದೆ—ದ್ರಪ್ಸ ಎಂಬ ಶಬ್ದಕ್ಕೆ ಉದಕಕಣ ಎಂಬರ್ಥವಿರುವುದು ಮತ್ತು ಈ ಅರ್ಥವನ್ನನುಸರಿಸಿ ದ್ರಪ್ಸಶಬ್ದಕ್ಕೆ ಸೋಮವೆಂದೂ ಅನೇಕಕಡೆ ಅರ್ಥಮಾಡಲಾಗಿದೆ ದ್ರಪ್ಸಶ್ಚಸ್ಕಂದ (ಋ. ಸಂ. ೧೦-೧೭-೧೧) ಎಂಬ ಋಕ್ಕಿನಲ್ಲಿ ದ್ರಪ್ಸ ಶಬ್ದಕ್ಕೆ ಸೋಮವೆಂದು ಅರ್ಥಮಾಡಿದೆ ಆದ್ದರಿಂದ ದ್ರಪ್ಸಶಬ್ದಕ್ಕೆ ಸೋಮವೆಂಬ ಅರ್ಥವನ್ನು ಪರಿಗ್ರಹಿಸಿ ಈ ಇತಿಹಾಸವನ್ನು ಬೃಹದ್ದೇವತಾಗ್ರಂಥದಲ್ಲಿ ಹೇಳಲಾಗಿದೆ—ಪೂರ್ವದಲ್ಲಿ ವೃತ್ರಾಸುರನ ಭಯದಿಂದ ಸೋಮವು ದೇವತೆಗಳನ್ನು ಬಿಟ್ಟು ಬೇರೆ ಪ್ರದೇಶಕ್ಕೆ ಹೊರಟುಹೋಗಿ ಕುರುದೇಶದಲ್ಲಿರುವ ಅಂಶುಮತೀ ಎಂಬ ನದಿಯ ತೀರದಲ್ಲಿದ್ದಿತು. ವೃತ್ರಾಸುರನನ್ನು ಸಂಹಾರಮಾಡಿದ ನಂತರ ಇಂದ್ರನು ಬೃಹಸ್ಪತಿಯೊಡನೆ ಅಲ್ಲಿಗೆ ಬಂದನು. ಆಗ ಇಂದ್ರನ ಜತೆಯಲ್ಲಿ ನಾನಾವಿಧ ಆಯುಧಗಳಿಂದ ಸುಸಜ್ಜಿತರಾದ ಮರುದ್ದೇವತೆಗಳೂ ಇದ್ದರು ಆಗ ಸೋಮದೇವತೆಯು ಇಂದ್ರನನ್ನೂ ಅವನ ಜತೆಯಲ್ಲಿದ್ದ ಆಯುಧೋಪೇತರಾದ ಮರುತ್ತುಗಳನ್ನೂ ದೂರದಿಂದ ನೋಡಿ—ನನ್ನನ್ನು ಕೊಲ್ಲುವುದಕ್ಕಾಗಿ ವೃತ್ರಾಸುರನು ತನ್ನ ಸೇನೆಯೊಡನೆ ಬರುತ್ತಿರುವನು ಎಂದು ತಿಳಿದು ಅವನನ್ನೂ ಅವನ ಸೇನೆಯನ್ನು ಎದುರಿಸುವುದಕ್ಕಾಗಿ ತನ್ನ ಧನುಸ್ಸನ್ನು ಸಜ್ಜುಗೊಳಿಸಿ ಯುದ್ಧಕ್ಕೆ ಸಿದ್ಧನಾದನು. ಯುದ್ಧಮಾಡಲು ಸಿದ್ಧನಾದ ಸೋಮನನ್ನು ನೋಡಿ ಬೃಹಸ್ಪತಿಯು—ಎಲೈ ಸೋಮನೇ, ನಮ್ಮೊಡನಿರುವವನು ವೃತ್ರನಲ್ಲ, ಇವನು ಮರುತ್ತುಗಳಿಗೆ ಪಾಲಕನಾದ ಇಂದ್ರನು. ಆದ್ದರಿಂದ ನೀನು ಹೆದರಬೇಕಾಗಿಲ್ಲ. ದೇವತೆಗಳಾದ ನಮ್ಮ ಬಳಿಗೆ ಮತ್ತೆ ಬಾ ಎಂದನು. ಆದರೂ ಸೋಮನಿಗೆ ಸಂಶಯವು ಪರಿಹಾರವಾಗಲಿಲ್ಲ. ನಾನು ಬರುವುದಿಲ್ಲವೆಂದನು. ಆದ್ದರಿಂದ ಶಕ್ತಿಯುತನಾದ ಇಂದ್ರನು ಸ್ವರ್ಗದಲ್ಲಿದ್ದ ದೇವತೆಗಳನ್ನು ಅಲ್ಲಿಗೆ ಕರೆದುಕೊಂಡು ಬಂದು ಇಂದ್ರನೂ ದೇವತೆಗಳೂ ಎಲ್ಲರೂ ಸೇರಿ ವಿಧಿವತ್ತಾಗಿ ಸೋಮವನ್ನು ಬಲಾತ್ಕಾರದಿಂದ ಪಾನಮಾಡಿದರು. ಅನಂತರ ಯುದ್ಧದಲ್ಲಿ ತೊಂಭತ್ತೊಂಭತ್ತು ಮಂದಿ ಬಲಿಷ್ಠರಾದ ದೈತ್ಯರನ್ನು ಸಂಹರಿಸಿದರು ಈ ವಿಷಯವೇ ಅವದ್ರಪ್ಸ ಎಂದು ಮೊದಲಾಗುವ ಮೂರು ಋಕ್ಕುಗಳಲ್ಲಿ ಹೇಳಲಾಗಿದೆ ಎಂದು ಈ ಇತಿಹಾಸದ ಅಭಿಪ್ರಾಯವು. ಈ ಅಭಿಪ್ರಾಯವು ಅಷ್ಟು ಸಮಂಜಸವಾಗಿಲ್ಲವೆಂದು ಪೂರ್ವದ

ಋಷಿಗಳ ಮತವಾಗಿದೆ. ಮೊದಲು ಹೇಳಿದ ಕೃಷ್ಣಾಸುರನನ್ನು ಸಂಹಾರಮಾಡಿದನೆಂದು ವಿವರಿಸಿರುವ ಪಕ್ಷವೇ ಯುಕ್ತವಾಗಿರುವುದು ಎಂದು ಭಾಷ್ಯಕಾರರು ಹೇಳಿ ಅದರಂತೆ ಈ ಋಕ್ಕುಗಳಿಗೆ ಅರ್ಥ ವಿವರಣೆಮಾಡಿರುವರು

॥ ಸಂಹಿತಾಪಾಠಃ ॥

ದ್ರಪ್ಸಮಪಶ್ಯಂ ವಿಷುಣೇ ಚರಂತಮುಪಹ್ವರೇ ನದ್ಯೋ ಅಂಶುಮತ್ಯಾಃ ।
ನಭೋ ನ ಕೃಷ್ಣಮವತಸ್ಥಿವಾಂಸಮಿಷ್ಯಾಮಿ ವೋ ವೃಷಣೋ ಯುಧ್ಯ-
ತಾಜೌ ॥ ೧೪ ॥

॥ ಪದಪಾಠಃ. ॥

ದ್ರಪ್ಸಂ । ಅಪಶ್ಯಂ । ವಿಷುಣೇ । ಚರಂತಂ । ಉಪऽಹ್ವರೇ । ನದ್ಯಃ । ಅಂಶುऽಮತ್ಯಾಃ ॥
ನಭಃ । ನ । ಕೃಷ್ಣಂ । ಅವತಸ್ಥಿऽವಾಂಸಂ । ಇಷ್ಯಾಮಿ । ವಃ । ವೃಷಣಃ । ಯುಧ್ಯತ । ಆಜೌ ॥ ೧೪ ॥

॥ ಸಾಯಣಭಾಷ್ಯಂ ॥

ತುರೀಯಪಾದೋ ಮಾರುತಃ । ಮರುತಃ ಪ್ರತಿ ಯದ್ವಾಕ್ಯಮಿಂದ್ರ ಉವಾಚ ತದತ್ರ ಕೀರ್ತ್ಯತೇ । ಹೇ ಮರುತಃ ದ್ರಪ್ಸಂ ದ್ರುತಗಾಮಿನಂ ಕೃಷ್ಣಮಹಮಪಶ್ಯಂ । ಅದರ್ಶಂ । ಕುತ್ರ ವರ್ತಮಾನಂ । ವಿಷುಣೇ ವಿಷ್ವಗಂಚನೇ ಸರ್ವತೋ ವಿಸ್ತೃತೇ ದೇಶೇ । ಯದ್ವಾ। ವಿಷುಣೋ ವಿಷಮಃ। ವಿಷಮೇ ಪರೈರದೃಶ್ಯೇ ಗುಹಾರೂಪೇ ದೇಶೇ । ಚರಂತಂ ಪರಿತೋ ಗಚ್ಛಂತಂ । ಕಿಂಚಾಂಶುಮತ್ಯಾ ಏತನ್ನಾಮಿಕಾಯಾ ನದ್ಯೋ ನದ್ಯಾ ಉಪಹ್ವರೇऽತ್ಯಂತಂ ಗೂಢಸ್ಥಾನೇ ನಭೋ ನ ನಭಸಿ ಯಥಾ-ದಿತ್ಯೋ ದೀಪ್ಯತೇ ತದ್ವತ್ತತ್ರ ದೀಪ್ಯಮಾನಮವತಸ್ಥಿವಾಂಸಮುದಕಸ್ಯಾಂತರವಸ್ಥಿತಂ ಕೃಷ್ಣಮೇತನ್ನಾ-ಮಕಮಸುರಮಪಶ್ಯಂ । ತಸ್ಮಿನ್ದೃಷ್ಟೇ ಸತಿ ಹೇ ವೃಷಣಃ ಕಾಮಾನಾಮುದಕಾನಾಂ ವಾ ಸೇಕ್ತಾರೋ ಮರುತಃ ವೋ ಯುಷ್ಮಾನ್ ಯುದ್ಧಾರ್ಥಮಿಷ್ಯಾಮಿ । ಅಹಮಿಚ್ಛಾಮಿ । ತತೋ ಯೂಯಂ ತಮಿಮಂ ಕೃಷ್ಣಮಾಜೌ । ಅಜಂತಿ ಗಚ್ಛಂತ್ಯತ್ರ ಯೋದ್ಧಾರ ಆಯುಧಾನಿ ಪ್ರಕ್ಷೇಪಯಂತೀತಿ ವಾಜಿಃ ಸಂಗ್ರಾಮಃ। ತಸ್ಮಿನ್ಯುಧ್ಯತ । ಸಂಹರತ । ವಾಕ್ಯಭೇದಾದನಿಘಾತಃ । ಕೇಚಿದಿಷ್ಯಾಮಿ ವೋ ಮರುತ ಇತಿ ಪಠಂತಿ । ತತ್ರ ಹೇ ಮರುತಃ ವೋ ಯುಷ್ಮಾನಿಚ್ಛಾಮೀತ್ಯರ್ಥೋ ಭವತಿ ॥

॥ ಪ್ರತಿಪದಾರ್ಥ ॥

**ವೃಷಣಃ**—ಇಷ್ಟಾರ್ಥಪ್ರದರಾದ ಎಲೈ ಮರುತ್ತುಗಳೇ । **ವಿಷುಣೇ**—ವಿಸ್ತೃತವಾದ ಗುಹೆಯ ಪ್ರದೇಶದಲ್ಲಿ । **ಚರಂತಂ**—ಸುತ್ತುತ್ತಿರುವವನೂ । **ದ್ರಪ್ಸಂ**—ವೇಗಗಾಮಿಯೂ । **ನಭೋ ನ**—ಅಂತರಿಕ್ಷದಲ್ಲಿ ಆದಿತ್ಯನು ಪ್ರಕಾಶಿಸುವಂತೆ । **ಅಂಶುಮತ್ಯಾಃ**—ಅಂಶುಮತಿಯೆಂಬ । **ನದ್ಯಾಃ**—ನದಿಯ । **ಅಪಹ್ವರೇ**— ಗೂಢವಾದ

ಪ್ರದೇಶದಲ್ಲಿ । **ಅವತಸ್ಥಿವಾಂಸಂ**—ಉದಕದ ಮಧ್ಯೇ ಪ್ರಕಾಶಿಸುತ್ತಾ ವ್ಯಾಪಿಸಿರುವವನೂ ಆದ । **ಕೃಷ್ಣಂ**—ಕೃಷ್ಣನೆಂಬ ಅಸುರನನ್ನು । **ಅಪಶ್ಯಂ**—ನಾನು ನೋಡಿದೆನು । (**ವೃಷಣಃ**—ಇಷ್ಟಾರ್ಥಪ್ರದರಾದ ಎಲೈ ಮರುತ್ತುಗಳೇ) । **ವಃ**—ನಿಮ್ಮ ಸಹಾಯವನ್ನು । **ಇಷ್ಯಾಮಿ**—ನಾನು ಅಪೇಕ್ಷಿಸುತ್ತೇನೆ । **ಆಜೌ**—ಯುದ್ಧದಲ್ಲಿ । **ಯುಧ್ಯತ**—ಅವನೊಡನೆ ಹೋರಾಡಿ ನಾಶಪಡಿಸಿರಿ.

॥ ಭಾವಾರ್ಥ ॥

ಇಷ್ಟಾರ್ಥಪ್ರದರಾದ ಎಲೈ ಮರುತ್ತುಗಳೇ, ವಿಸ್ತೃತವಾದ ಗುಹೆಯ ಪ್ರದೇಶದಲ್ಲಿ ಸುತ್ತುತ್ತಿರುವವನೂ, ವೇಗಗಾಮಿಯೂ ಅಂತರಿಕ್ಷದಲ್ಲಿ ಆದಿತ್ಯನು ಪ್ರಕಾಶಿಸುವಂತೆ ಅಂಶುಮತಿಯೆಂಬ ನದಿಯ ಗೂಢವಾದ ಪ್ರದೇಶದಲ್ಲಿ ಉದಕದ ಮಧ್ಯೆ ಪ್ರಕಾಶಿಸುತ್ತಾ ವ್ಯಾಪಿಸಿರುವವನೂ ಆದ ಕೃಷ್ಣನೆಂಬ ಅಸುರನನ್ನು ನಾನು ನೋಡಿದೆನು. ಇಷ್ಟಾರ್ಥ ಪ್ರದರಾದ ಎಲೈ ಮರುತ್ತುಗಳೇ, ನಿಮ್ಮ ಸಹಾಯವನ್ನು ನಾನು ಅಪೇಕ್ಷಿಸುತ್ತೇನೆ. ಯುದ್ಧದಲ್ಲಿ ಅವನೊಡನೆ ಹೋರಾಡಿ ಅವನನ್ನು ನಾಶಪಡಿಸಿರಿ.

## English Translation

"I have seen the swift-moving (demon) lurking] in an inaccessible place, in the depths of the river Amshumati, (I have seen) Krishna standing there as (the sun) in a cloud ; I appeal to you, showerers ; conquer him in battle."

॥ ಸಂಹಿತಾಪಾಠಃ ॥

ಅಧ ದ್ರಪ್ಸೋ ಅಂಶುಮತ್ಯಾ ಉಪಸ್ಥೇಽಧಾರಯತ್ತನ್ವಂ ತಿತ್ವಿಷಾಣಃ ।
ವಿಶೋ ಅದೇವೀರಭ್ಯಾಽಚರಂತೀರ್ಬೃಹಸ್ಪತಿನಾ ಯುಜೇಂದ್ರಃ ಸಸಾಹೇ ॥

॥ ಪದಪಾಠಃ ॥

ಅಧ । ದ್ರಪ್ಸಃ । ಅಂಶುಽಮತ್ಯಾಃ । ಉಪಽಸ್ಥೇ । ಅಧಾರಯತ್ । ತನ್ವಂ । ತಿತ್ವಿಷಾಣಃ ॥
ವಿಶಃ । ಅದೇವೀಃ । ಅಭಿ । ಆಽಚರಂತೀಃ । ಬೃಹಸ್ಪತಿನಾ । ಯುಜಾ । ಇಂದ್ರಃ । ಸಸಹೇ ॥ ೧೫ ॥

॥ ಸಾಯಣಭಾಷ್ಯಂ ॥

ಅಥಾಥ ದ್ರಪ್ಸೋ ದ್ರುತಗಾಮೀ ಕೃಷ್ಣೋಽಂಶುಮತ್ಯಾ ನದ್ಯಾ ಉಪಸ್ಥೇ ಸಮೀಪೇ ತಿತ್ವಿಷಾಣೋ ದೀಪ್ಯಮಾನಃ ಸಂಸ್ತನ್ವಮಾತ್ಮೀಯಂ ಶರೀರಮಧಾರಯತ್ । ಪರ್ಯೈರಹಿಂಸ್ಯತ್ವೇನ ಬಿಭರ್ತಿ । ಯದ್ವಾ । ಬಲಪ್ರಾಪ್ತ್ಯರ್ಥಂ ಸ್ವಶರೀರಮಾಹಾರಾದಿಭಿರಪೋಷಯತ್ । ತತ್ರೇಂದ್ರೋ ಗತ್ವಾ ಬೃಹಸ್ಪತಿನೈತನ್ನಾಮಕೇನ ದೇವೇನ ಯುಜಾ ಸಹಾಯೇನಾದೇವೀರದ್ಯೋತಮಾನಾಃ। ಕೃಷ್ಣರೂಪಾ ಇತ್ಯರ್ಥಃ।

ಯುದ್ಧಾ । ಪಾಪಯುಕ್ತತ್ವಾದಸ್ತುತ್ಯಾಃ । ಆಚರಂತೀರಾಗಚ್ಛಂತೀರ್ವಿಶೋಽಸುರಸೇನಾ ಅಭಿ ಸಸಹೇ । ಜಘಾನ । ತವಮುವಧೀದಿತ್ಯರ್ಥಃ ಪ್ರಸಂಗಾದವಗನ್ತವ್ಯತೀ ॥

॥ ಪ್ರತಿಪದಾರ್ಥ ॥

**ಅಧ**—ಅನಂತರ । **ದ್ರಪ್ಸಃ**—ವೇಗಗಾಮಿಯಾದ ಕೃಷ್ಣಾಸುರನು । **ಅಂಶುಮತ್ಯಾಃ**—ಅಂಶುಮತೀ ನದಿಯ । **ಉಪಸ್ಥೇ**—ಸಮೀಪದಲ್ಲಿ । **ತಿತ್ವಿಷಾಣಃ**—ಪ್ರಕಾಶಿಸುತ್ತಾ । **ತನ್ವಂ**—ತನ್ನ ಶರೀರವನ್ನು । **ಅಧಾರಯತ್**—ಪೋಷಿಸುತ್ತಿದ್ದನು । **ಇಂದ್ರಃ**—ಇಂದ್ರನು । **ಬೃಹಸ್ಪತಿನಾ**—ಬೃಹಸ್ಪತಿದೇವನೊಡನೆ । **ಯುಜಾ**—ಕೂಡಿಕೊಂಡು । **ಅದೇವೀಃ**—ಪ್ರಕಾಶರಹಿತರಾದವರೂ । **ಆಚರಂತೀಃ**—ಎದುರುಬಿದ್ದವರೂ ಆದ । **ವಿಶಃ**—ಆ ಅಸುರಸೇನೆಗಳನ್ನು । **ಅಭಿ ಸಸಹೇ**—ನಾಶಪಡಿಸಿದರು

॥ ಭಾವಾರ್ಥ ॥

ವೇಗಗಾಮಿಯಾದ ಕೃಷ್ಣಾಸುರನು ಅಂಶುಮತೀನದಿಯ ಸಮೀಪದಲ್ಲಿ ಪ್ರಕಾಶಿಸುತ್ತಾ ತನ್ನ ಶರೀರವನ್ನು ಪೋಷಿಸುತ್ತಿದ್ದನು ಇಂದ್ರನು ಬೃಹಸ್ಪತಿದೇವನೊಡನೆ ಕೂಡಿಕೊಂಡು ಪ್ರಕಾಶರಹಿತರಾದವರೂ, ಎದುರುಬಿದ್ದವರೂ ಆದ ಅಸುರಸೇನೆಗಳನ್ನು ನಾಶಪಡಿಸಿದರು.

## English Translation

Then the swift-moving one shining forth assumed his own body by the Amshumati, and Indra with Brihaspati as his ally smote the godless hosts as they drew near.

॥ ಸಂಹಿತಾಪಾಠಃ ॥

ತ್ವಂ ಹ ತ್ಯತ್ಸಪ್ತಭ್ಯೋ ಜಾಯಮಾನೋಽಶತ್ರುಭ್ಯೋ ಅಭವಃ ಶತ್ರುರಿಂದ್ರ। ಗೂಳ್ಹೇ ದ್ಯಾವಾಪೃಥಿವೀ ಅನ್ವವಿಂದೋ ವಿಭುಮದ್ಭ್ಯೋ ಭುವನೇಭ್ಯೋ ರಣಂ ಧಾಃ ॥ ೧೬ ॥

॥ ಪದಪಾಠಃ ॥

ತ್ವಂ । ಹ । ತ್ಯತ್ । ಸಪ್ತಽಭ್ಯಃ । ಜಾಯಮಾನಃ । ಅಶತ್ರುಽಭ್ಯಃ । ಅಭವಃ । ಶತ್ರುಃ । ಇಂದ್ರ । ಗೂಳ್ಹೇ ಇತಿ । ದ್ಯಾವಾಪೃಥಿವೀ ಇತಿ । ಅನು । ಅವಿಂದಃ । ವಿಭುಮತ್ಽಭ್ಯಃ । ಭುವನೇಭ್ಯಃ । ರಣಂ । ಧಾಃ ॥ ೧೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಖಲು ತ್ಯತ್ತತ್ಕರ್ಮ ಕೃತವಾನಸಿ । ಕಿಂ ತತ್ ಉಚ್ಯತೇ । ಜಾಯಮಾನಸ್ತ್ವಂ ಪ್ರಾದುರ್ಭವನ್ನೇವಾಶತ್ರುಭ್ಯಃ ಶತ್ರುರಹಿತೇಭ್ಯಃ ಸಪ್ತಭ್ಯಃ ಕೃಷ್ಣವೃತ್ರನಮುಚಿಶಂಬರಾದಿಸಪ್ತಭ್ಯೋ ಬಲವದ್ಭ್ಯಃ ಶತ್ರುಭ್ಯಃ ತದರ್ಥಂ ಶತ್ರುರಭವಃ । ಯದ್ವಾ । ಸಪ್ತಭ್ಯಃ । ಸಪ್ತೈವಾಂಗಿರಸಃ । ಸಪ್ತಭ್ಯೋಽಂಗಿರೋಭ್ಯೋ ಗವಾನಯನಾರ್ಥಂ ಪ್ರಾದುರ್ಭವನ್ನೇವಾಶತ್ರುಭ್ಯೋ ಬಲವದ್ಭ್ಯಃ ಪಣಿಭ್ಯಃ ಶತ್ರುರಭವಃ । ಕಿಂಚ ಹೇ ಇಂದ್ರ ತ್ವಂ ಗೂಳ್ಹೇ ತಮಸಾ ಗೂಢೇ ಸಂವೃತೇ ದ್ಯಾವಾಪೃಥಿವೀ ದ್ಯಾವಾಪೃಥಿವ್ಯೌ ಸೂರ್ಯಾತ್ಮನಾ ತೇ ಪ್ರಕಾಶ್ಯಾನುಕ್ರಮೇಣಾವಿಂದಃ । ಅಲಭಥಾಃ । ತಥಾ ವಿಭುಮದ್ಭ್ಯೋ ಮಹತ್ತ್ವಯುಕ್ತೇಭ್ಯೋ ಭುವನೇಭ್ಯೋ ಲೋಕೇಭ್ಯೋ ರಣಂ ರಮಣಂ ಧಾಃ । ಧಾರಯಸಿ । ವಿದಧಾಸೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ತ್ವಂ ಹ**—ನೀನೇ । **ತ್ಯತ್**—ಪ್ರಸಿದ್ಧವಾದ ಶಕ್ತಿಯನ್ನು ಹೊಂದಿದ್ದೀಯೆ (ಅದೇನೆಂದರೆ) । **ಜಾಯಮಾನಃ**—ನೀನು ಉತ್ಪನ್ನನಾದೊಡನೆಯೇ । **ಅಶತ್ರುಭ್ಯಃ**—ಅಪ್ರತಿಹತರಾದ । **ಸಪ್ತಭ್ಯಃ**—ಕೃಷ್ಣವೃತ್ರಾದಿ ಏಳು ಅಸುರರಿಗೂ । **ಶತ್ರುಃ ಅಭವಃ**—ನಾಶಕನಾದ ಶತ್ರುವಾದೆ । **ಗೂಳ್ಹೇ**—ಗಭೀರವಾದ ಅಂಧಕಾರದಲ್ಲಿ ಅಡಗಿದ್ದ । **ದ್ಯಾವಾಪೃಥಿವೀ**—ದ್ಯಾವಾಪೃಥಿವಿಗಳನ್ನು । **ಅನು ಅವಿಂದಃ**—ಸೂರ್ಯಪ್ರಕಾಶದಿಂದ ಎಲ್ಲರಿಗೂ ಗೋಚರವಾಗುವಂತೆ ಮಾಡಿದೆ । **ವಿಭುಮದ್ಭ್ಯಃ**—ಮಹತ್ವದಿಂದ ಕೂಡಿದ । **ಭುವನೇಭ್ಯಃ**—ಲೋಕಗಳಿಗೆಲ್ಲಾ । **ರಣಂ**—ಸಂತೋಷವನ್ನು । **ಧಾಃ**—ಉಂಟುಮಾಡಿ ಒದಗಿಸಿದ್ದೀಯೆ

॥ ಭಾವಾರ್ಥ ॥

ಎಲೈ ಇಂದ್ರನೇ, ಪ್ರಸಿದ್ಧವಾದ ಶಕ್ತಿಯನ್ನು ನೀನೊಬ್ಬನೇ ಮಾತ್ರ ಹೊಂದಿದ್ದೀಯೆ. ಅದೇನೆಂದರೆ, ನೀನು ಉತ್ಪನ್ನನಾದೊಡನೆಯೇ ಅಪ್ರತಿಹತರಾದ ಕೃಷ್ಣವೃತ್ರಾದಿ ಏಳು ಮಂದಿ ಅಸುರರಿಗೂ ನಾಶಕನಾದ ಶತ್ರುವಾದೆ. ಗಭೀರವಾದ ಅಂಧಕಾರದಲ್ಲಿ ಅಡಗಿದ್ದ ದ್ಯಾವಾಪೃಥಿವಿಗಳನ್ನು ಸೂರ್ಯಪ್ರಕಾಶದಿಂದ ಎಲ್ಲರಿಗೂ ಗೋಚರವಾಗುವಂತೆ ಮಾಡಿದೆ. ಮಹತ್ವದಿಂದ ಕೂಡಿದ ಲೋಕಗಳಿಗೆಲ್ಲಾ ಸಂತೋಷವನ್ನುಂಟುಮಾಡಿದೆ.

## English Translation

As soon as you were born, Indra, you were an enemy to those seven who had no enemy; you recovered the heavens and earth when concealed (in darkness); you cause joy to the mighty worlds.

॥ ಸಂಹಿತಾಪಾಠಃ ॥

**ತ್ವಂ ಹ ತ್ಯದಪ್ರತಿಮಾನಮೋಜೋ ವಜ್ರೇಣ ವಜ್ರಿನ್ಧೃಷಿತೋ ಜಘಂಥ ।**
**ತ್ವಂ ಶುಷ್ಣಸ್ಯಾವಾತಿರೋ ವಧತ್ರೈಸ್ತ್ವಂ ಗಾ ಇಂದ್ರ ಶಚ್ಯೇದವಿಂದಃ ॥೧೭॥**

॥ ಪದಪಾಠಃ ॥

ತ್ವಂ । ಹ । ತ್ಯತ್ । ಅಪ್ರತಿಽಮಾನಂ । ಓಜಃ । ವಜ್ರೇಣ । ವಜ್ರಿನ್ । ಧೃಷಿತಃ । ಜಘಂಥ ।

ತ್ವಂ । ಶುಷ್ಣಸ್ಯ । ಅವ । ಅತಿರಃ । ವಧತ್ರೈಃ । ತ್ವಂ । ಗಾಃ । ಇಂದ್ರ । ಶಚ್ಯಾ । ಇತ್ । ಅವಿಂದಃ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಹ ತ್ವಂ ಖಲು ತ್ಯದೇತತ್ಕರ್ಮಾಕಾರ್ಷೀಃ । ಕಿಂ ತತ್ ಅಭಿಧೀಯತೇ । ಹೇ ವಜ್ರಿನ್ ವಜ್ರವನ್ನಿಂದ್ರ ಧೃಷಿತೋ ಧೃಷ್ಟಃ ಸಂಗ್ರಾಮೇಷು ಶತ್ರುಹನನೇ ಕುಶಲಃ ಸನ್ । ಯದ್ವಾ । ಧೃಷ್ಣೋ ಧೀರಃ ಸನ್ನಪ್ರತಿಮಾನಂ । ಪ್ರತಿಮಾನಮುಪಮಾ । ನಿರುಪಮಂ । ಅಸ್ಯ ಸದೃಶಮನ್ಯದೀಯಂ ವೀರ್ಯಂ ನಾಸ್ತೀತ್ಯರ್ಥಃ । ತಾದೃಶಂ ಶುಷ್ಣಸ್ಯೌಜೋ ಬಲಂ ವಜ್ರೇಣಾಯುಧೇನ ಜಘಂಥ । ಹತವಾನಸಿ ॥ ಅಭ್ಯಾಸಾಚ್ಚೇತಿ ಹಂತೇರ್ಘತ್ವಂ ॥ ಪೂರ್ವಂ ಶುಷ್ಣಸ್ಯ ಬಲಂ ವಿನಾಶ್ಯೇದಾನೀಂ ಶುಷ್ಣಮಪಿ ಹತವಾನಿತ್ಯಾಹ । ತ್ವಂ ವಧತ್ರೈರ್ಹನನಸಾಧನೈರಾಯುಧೈಃ ಶುಷ್ಣಸ್ಯ ॥ ಕ್ರಿಯಾಗ್ರಹಣಂ ಕರ್ತವ್ಯಮಿತಿ ಸಂಪ್ರದಾನಸಂಜ್ಞಾ । ಚತುರ್ಥ್ಯರ್ಥೇ ಬಹುಲಮಿತಿ ಷಷ್ಠೀ ॥ ಶುಷ್ಣಮವಾತಿರಃ । ಕುತ್ಸಾಯ ರಾಜರ್ಷಯೇಽವಾಙ್ಮುಖಂ ಕೃತ್ವಾವಧೀಃ । ತಥಾ ಚ ನಿಗಮಃ । ಕುತ್ಸಾಯ ಶುಷ್ಣಮಶುಷಂ ನಿ ಬರ್ಹೀಃ । ಋ. ೪-೧೬-೧೨ । ಇತಿ । ತಥಾ ಹೇ ಇಂದ್ರ ತ್ವಂ ಶಚ್ಯಾ ಸ್ವಕೀಯಯಾ ಪ್ರಜ್ಞಯಾ ಕರ್ಮಣಾ ವಾ ಗಾಃ ಶತ್ರೂನ್ ಹತ್ವಾ ತೇಷಾಂ ಗಾ ಅವಿಂದಃ । ಅಲಭಥಾಃ । ಯದ್ವಾ । ಅಂಗಿರಸಾಂ ಗಾಃ ಪಣೀನ್ ಸಂಪ್ರಹೃತ್ಯ ಲಬ್ಧವಾನಸಿ ॥

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತ್ವಂ ಹ**—ನೀನೊಬ್ಬನೇ । **ತ್ಯತ್**—ಪ್ರಖ್ಯಾತಿಯನ್ನು ಕೊಡುವ ಕೆಲಸವನ್ನು ಮಾಡಿದ್ದೀಯೆ । **ವಜ್ರಿನ್**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ । **ಧೃಷಿತಃ**—ಧೀರನಾದ ನೀನು । **ಶುಷ್ಣಸ್ಯ**—ಶುಷ್ಣನ । **ಅಪ್ರತಿಮಾನಂ**—ಅಸಾಧಾರಣವಾದ । **ಓಜಃ**—ಬಲವನ್ನು । **ವಜ್ರೇಣ**—ವಜ್ರಾಯುಧದಿಂದ । **ಜಘಂಥ**—ನಾಶಮಾಡಿದ್ದೀಯೆ । **ತ್ವಂ**—ನೀನು । **ವಧತ್ರೈಃ**—ವಧಸಾಧನಗಳಾದ ಆಯುಧಗಳಿಂದ। **ಶುಷ್ಣಸ್ಯ**—ಶುಷ್ಣನನ್ನು । **ಅವಾತಿರಃ**—ಕೊಂದಿರುವೆ । **ಇಂದ್ರ**—ಎಲೈ ಇಂದ್ರನೇ, । **ತ್ವಂ**—ನೀನು । **ಶಚ್ಯಾ ಇತ್**—ನಿನ್ನ ಪ್ರಜ್ಞಾಯುತವಾದ ಕರ್ಮದಿಂದಲೇ । **ಗಾಃ**—ಶತ್ರುಗಳಲ್ಲಿ ನಿಕ್ಷಿಪ್ತವಾಗಿದ್ದ ಗೋವುಗಳನ್ನು । **ಅವಿಂದಃ**—ಪಡೆದಿರುವೆ

॥ ಭಾವಾರ್ಥ ॥

ಎಲೈ ಇಂದ್ರನೇ, ಖ್ಯಾತಿದಾಯಕವಾದ ಕೆಲಸವನ್ನು ನೀನೊಬ್ಬನೇ ಮಾಡಿರುವೆ ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ಧೀರನಾದ ನೀನು ಶುಷ್ಣನ ಅಸಾಧಾರಣವಾದ ಬಲವನ್ನು ವಜ್ರಾಯುಧದಿಂದ ನಾಶಮಾಡಿದ್ದೀಯೆ. ವಧಸಾಧನಗಳಾದ ಆಯುಧಗಳಿಂದ ಶುಷ್ಣನನ್ನು ಕೊಂದಿರುವೆ. ಎಲೈ ಇಂದ್ರನೇ, ನಿನ್ನ ಪ್ರಜ್ಞಾಯುತವಾದ ಕರ್ಮಗಳಿಂದಲೇ ನೀನು ಶತ್ರುಗಳಲ್ಲಿ ನಿಕ್ಷಿಪ್ತವಾಗಿದ್ದ ಗೋವುಗಳನ್ನು ಪಡೆದಿರುವೆ.

## English Translation

Thunderer, you, the resolute one, smtoe that unrivalled might with your bolt; you destroyed Sushna with your weapons, you recovered the cows, Indra, by your wisdom.

॥ ಸಂಹಿತಾಪಾಠಃ ॥

ತ್ವಂ ಹ ತ್ಯದ್ವೃಷಭ ಚರ್ಷಣೀನಾಂ ಘನೋ ವೃತ್ರಾಣಾಂ ತವಿಷೋ ಬಭೂಥ ।

ತ್ವಂ ಸಿಂಧೂಂರಸೃಜಸ್ತಸ್ತಭಾನಾನ್ ತ್ವಮಪೋ ಅಜಯೋ ದಾಸಪತ್ನೀಃ ॥

॥ ಪದಪಾಠಃ ॥

ತ್ವಂ । ಹ । ತ್ಯತ್ । ವೃಷಭ । ಚರ್ಷಣೀನಾಂ । ಘನಃ । ವೃತ್ರಾಣಾಂ । ತವಿಷಃ । ಬಭೂಥ ।

ತ್ವಂ । ಸಿಂಧೂನ್ । ಅಸೃಜಃ । ತಸ್ತಭಾನಾನ್ । ತ್ವಂ । ಅಪಃ । ಅಜಯಃ । ದಾಸऽಪತ್ನೀಃ ॥ ೧೮ ॥

॥ ಸಾಯಣಭಾಷ್ಯಂ ॥

ತ್ವಂ ಖಲು ತತ್ಕರ್ಮ ಕೃತವಾನಸಿ । ಕಿಂ ತತ್ । ಹೇ ವೃಷಭ ಕಾಮಾನಾಂ ವರ್ಷಿತರಿಂದ್ರ ಚರ್ಷಣೀನಾಂ ಯಷ್ಟ್ರೂಣಾಂ ಮನುಷ್ಯಾಣಾಂ ಭಾವಿತಾನಾಂ ವೃತ್ರಾಣಾಮುಪದ್ರವಾಣಾಂ ಘನೋ ಹಂತಾ ॥ ಅಮೂರ್ತ್ಯರ್ಥೇऽಪಿ ಚ್ಛಂದೋವಿಷಯತ್ವಾನ್ನಿಪಾತನಂ ॥ ತಾದೃಶಸ್ತ್ವಂ ತವಿಷಃ ಪ್ರವೃದ್ಧೋ ಬಲವಾನ್ವಾ ಬಭೂಥ । ಬಭೂವಿಥ ॥ ಬಭೂಥಾ ತತಂಥೇತೀಡಭಾವೋ ನಿಪಾತ್ಯತೇ ॥ ತತಸ್ತ್ವಂ ತಸ್ತಭಾನಾನಸುರೈರ್ನಿರುಧ್ಯಮಾನಾಃ ಸಿಂಧೂನ್ ಗಂಗಾದ್ಯಾಃ ಸಪ್ತ ನದೀಃ ಸರಣಾಯಾಸೃಜಃ । ಪಶ್ಚಾತ್ತ್ವಂ ದಾಸಪತ್ನೀಃ । ದಾಸಾ ಉಪಕ್ಷಪಯಿತಾರಃ ಶತ್ರವಃ । ತೇ ಪತಯಃ ಸ್ವಾಮಿನೋ ಯಾಸಾಂ ತಾಃ ॥ ನಿತ್ಯಂ ಸಪತ್ನ್ಯಾದಿಷು । ಪಾ. ೪-೧-೩೫ । ಇತ್ಯತ್ರ ದಾಸಾಚ್ಚೇತ್ಯುಪಸಂಖ್ಯಾನಾದ್ ಙೀಪ್ ॥ ಅಸುರಸ್ವಾಮಿಕಾ ಅಪೋऽಜಯಃ । ಜಿತವಾನಸಿ । ತಾನಸುರಾಞ್ಜಿತ್ವೋದಕಾನಿ ಚ ಪ್ರಾಸೃಜ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ವೃಷಭ**—ಇಷ್ಟಾರ್ಥಪ್ರದನಾದ ಎಲೈ ಇಂದ್ರನೇ, । **ತ್ವಂ ಹ**—ನೀನೊಬ್ಬನೇ । **ತ್ಯತ್**—ಆ ಕಾರ್ಯವನ್ನು ನಿರ್ವಹಿಸಬಲ್ಲೆ। **ಚರ್ಷಣೀನಾಂ**—ಯಜ್ಞಕರ್ತರಾದ ಮಾನವರಿಗೆ । **ವೃತ್ರಾಣಾಂ**—ಪ್ರತಿಬಂಧಕಗಳಾದ ಎಲ್ಲಕ್ಕೂ। **ಘನಃ**—ನಾಶಕನಾದ ನೀನು । **ತವಿಷಃ**—ಅದಕ್ಕೆ ಶಕ್ತಿಯುತನಾಗಿ । **ಬಭೂಥ**—ಆಗಿದ್ದೀಯೆ । **ತ್ವಂ**—ನೀನು । **ತಸ್ತಭಾನಾನ್**—ಅಸುರರಿಂದ ಪ್ರತಿಬದ್ಧವಾದ । **ಸಿಂಧೂನ್**—ಗಂಗಾದಿ ನದಿಗಳನ್ನು । **ಅಸೃಜಃ**—ಪ್ರವಹಿಸುವಂತೆ

ಮಾಡಿದೆ (ಬಿಡಿಸಿದೆ) । ತ್ವಂ—ನೀನು । ದಾಸಪತ್ನೀಃ—ಅಸುರರ ಪ್ರಭುತ್ವಕ್ಕೆ ಒಳಗಾದ । ಅಪಃ—ಉದಕಗಳನ್ನು। ಅಜಯಃ—ಸ್ವಾಧೀನಪಡಿಸಿಕೊಂಡಿರುವೆ

॥ ಭಾವಾರ್ಥ ॥

ಇಷ್ಟಾರ್ಥಪ್ರದನಾದ ಎಲೈ ಇಂದ್ರನೇ, ನೀನೊಬ್ಬನೇ ಇಂತಹ ಕಾರ್ಯವನ್ನು ನಿರ್ವಹಿಸಬಲ್ಲೆ. ಅದೇನೆಂದರೆ , ಯಜ್ಞಕರ್ತರಾದ ಮಾನವರಿಗೆ ಪ್ರತಿಬಂಧಕಗಳಾದ ಎಲ್ಲಕ್ಕೂ ನಾಶಕನಾದ ನೀನು। ತದ್ಯೋಗ್ಯವಾದ ಶಕ್ತಿಯನ್ನು ಬೆಳೆಸಿರುವೆ. ಅಸುರರಿಂದ ಪ್ರತಿಬದ್ಧವಾದ ಗಂಗಾದಿನದಿಗಳನ್ನು ನೀನೇ ಬಿಡಿಸಿ ಪ್ರವಹಿಸುವಂತೆ ಮಾಡಿರುವೆ. ಅಸುರರ ಪ್ರಭುತ್ವಕ್ಕೆ ಒಳಗಾದ ಉದಕಗಳನ್ನು ನಿನ್ನ ಸ್ವಾಧೀನಪಡಿಸಿಕೊಂಡಿರುವೆ.

## English Translation

You, showerer, were the mighty destroyer of the hindrances of your worshippers; you set free the obstructed rivers, you won the waters which the Dasas had mastered.

॥ ಸಂಹಿತಾಪಾಠಃ ॥

ಸ ಸುಕ್ರತೂ ರಣಿತಾ ಯಃ ಸುತೇಷ್ವನುತ್ತಮನ್ಯುರ್ಯೋ ಅಹೇವ ರೇವಾನ್।
ಯ ಏಕ ಇನ್ನರ್ಯಪಾಂಸಿ ಕರ್ತಾ ಸ ವೃತ್ರಹಾ ಪ್ರತೀದನ್ಯಮಾಹುಃ ॥೧೯॥

॥ ಪದಪಾಠಃ ॥

ಸಃ । ಸುऽಕ್ರತುಃ । ರಣಿತಾ । ಯಃ । ಸುತೇಷು । ಅನುತ್ತऽಮನ್ಯುಃ । ಯಃ । ಅಹಾऽಇವ । ರೇವಾನ್।
ಯಃ । ಏಕಃ । ಇತ್ । ನರಿ । ಅಪಾಂಸಿ । ಕರ್ತಾ । ಸಃ । ವೃತ್ರऽಹಾ । ಪ್ರತಿ । ಇತ್ । ಅನ್ಯಂ । ಆಹುಃ ॥

॥ ಸಾಯಣಭಾಷ್ಯಂ ॥

ಅಥ ಪರೋಕ್ಷಕೃತಾಃ । ಸ ಇಂದ್ರಃ ಸುಕ್ರತುಃ ಶೋಭನಪ್ರಜ್ಞಃ ಶೋಭನಕರ್ಮಾ ಭವತಿ ಯಃ ಸುತೇಷ್ವಭಿಷುತೇಷು ಸೋಮೇಷು ರಣಿತಾ ತತ್ಪಾನಾರ್ಥಂ ರಮಣಶೀಲಃ ಕಿಂಚಾನುತ್ತಮನ್ಯುಃ ಪರೈರನುನ್ನಕ್ರೋಧಃ ಶತ್ರುಭಿರ್ನೋತ್ತುಮಶಕ್ಯಃ ತಾದೃಶೋ ಯ ಇಂದ್ರೋ ರೇವಾನ್ಧನವಾನ್ । ತತ್ರ ದೃಷ್ಟಾಂತಃ । ಅಹೇವ ಯಥಾಹಾಹಾನಿ ದಿವಸಾ ಧನವಂತಃ । ದಿವಸೇಷು ಹಿ ಧನಾನಿ ಪ್ರಾದುರ್ಭವಂತಿ ನ ರಾತ್ರಿಷು । ತದ್ವತ್ । ತಥಾ ಯ ಇಂದ್ರ ಏಕ ಇದಸಹಾಯ ಏವ ನರಿ ಕರ್ಮನೇತರಿ ಮನುಷ್ಯೇऽಪಾಂಸಿ ಕರ್ಮಾಣಿ ಕರ್ತಾ ಕರ್ಶಂಶೀಲೋ ಭವತಿ ॥ ತಾಚ್ಛೀಲಕಸ್ತೃನ್ । ಅತ ಏವ ಷಷ್ಠೀಪ್ರತಿಷೇಧಃ ॥ ಸ ಪೂರ್ವೋಕ್ತಗುಣೋಪೇತ ಇಂದ್ರೋ ವೃತ್ರಹಾ । ಅಪಾಮಾವರಕಸ್ಯಾಸುರಸ್ಯೋಪದ್ರವಸ್ಯ ವಾ ಹಂತೃತ್ವಾದ್ವೃತ್ರಹೇತಿ ಸರ್ವೈಃ ಶ್ರೂಯತೇ । ತಮೇವೇಂದ್ರಮನ್ಯಂ ಪ್ರತಿ । ಇದವಧಾರಣೇ । ಅನ್ಯಂ ಪ್ರತ್ಯೇವಾಹುಃ । ಇಂದ್ರಃ ಸರ್ವಮನ್ಯಂ ಶತ್ರುಸಂಘಂ ಪ್ರತಿ ಭವತಿ । ಅಭಿಭವತ್ಯೇವೇತಿ ವದಂತಿ ॥

॥ ಪ್ರತಿಪದಾರ್ಥ ॥

**ಸಃ**—ಪ್ರಸಿದ್ಧನಾದ ಇಂದ್ರನು । **ಸುಕ್ರತುಃ**—ಉತ್ತಮವಾದ ಕರ್ಮಕರ್ತನಾಗಿದ್ದಾನೆ । **ಯಃ**—ಯಾವ ಇಂದ್ರನು । **ಸುತೇಷು**—ಸೋಮರಸವು ಹಿಂಡಿದಾಗ । ರಣಿತಾ—ಹರ್ಷಪೂರಿತನಾಗಿಯೂ । **ಅನುತ್ತಮನ್ಯುಃ**—ಅಪ್ರತಿಹತವಾದ ಕ್ರೋಧಯುಕ್ತನಾಗಿಯೂ ಇರುವನೋ । **ಯಃ**—ಯಾರು । **ಅಹೇವ**—ದಿವಸಗಳಂತೆ । ರೇವಾನ್—ಧನಯುಕ್ತನಾಗಿರುವನೋ । **ಯಃ**—ಯಾರು। ಏಕ **ಇತ್**—ನಿಸ್ಸಹಾಯಕನಾಗಿ (ಅದ್ವಿತೀಯನಾಗಿ) **ನರಿ**—ಮಾನವರಲ್ಲಿ ವಿಹಿತವಾದ । **ಅಪಾಂಸಿ**-ಕರ್ಮಗನ್ನು । **ಕರ್ತಾಃ**—ಮಾಡಬಲ್ಲನೋ । **ಸಃ**—ಅದೇ ಇಂದ್ರನು । **ವೃತ್ರಹಾ**—ವೃತ್ರಹಂತಕನೆಂದೂ । **ಅನ್ಯಂ ಪ್ರತಿ ಇತ್**—ಶತ್ರುಗಳನ್ನು ಎದುರಿಸಿ ಜಯಿಸುವವನೆಂದೂ । **ಆಹುಃ**—ತಿಳಿದವರು ಹೇಳುತ್ತಾರೆ.

॥ ಭಾವಾರ್ಥ ॥

ಪ್ರಸಿದ್ಧನಾದ ಇಂದ್ರನು ಉತ್ತಮವಾದ ಕರ್ಮಕರ್ತನಾಗಿದ್ದಾನೆ. ಯಾವ ಇಂದ್ರನು ಸೋಮರಸವು ಹಿಂಡಿದಾಗ ಹರ್ಷಪೂರಿತನಾಗಿಯೂ ಅಪ್ರತಿಹತವಾದ ಕ್ರೋಧಯುಕ್ತನಾಗಿಯೂ ಇರುವನೋ, ಯಾರು ದಿವಸಗಳಂತೆ ಧನಯುಕ್ತನಾಗಿರುವನೋ, ಯಾರು ಅದ್ವಿತೀಯನಾಗಿ ಮಾನವರಲ್ಲಿ ವಿಹಿತವಾದ ಕರ್ಮವನ್ನು ಮಾಡಬಲ್ಲನೋ, ಅದೇ ಇಂದ್ರನು ವೃತ್ರಹಂತಕನೆಂದೂ, ಶತ್ರುಗಳನ್ನು ಎದುರಿಸುವವನೆಂದೂ ತಿಳಿದವರು ಹೇಳುತ್ತಾರೆ.

## English Translation

He who noble in his exploits rejoices in the Soma-libations, he whose wrath cannot be repelled and who is wealthy as the days, he who alone performs the rites for his worshipper,—he, the slayer of Vritra, men say, is a match for all others.

॥ ಸಂಹಿತಾಪಾಠಃ ॥

**ಸ ವೃತ್ರಹೇಂದ್ರಶ್ಚರ್ಷಣೀಧೃತ್ತಂ ಸುಷ್ಟುತ್ಯಾ ಹವ್ಯಂ ಹುವೇಮ ।**
**ಸ ಪ್ರಾವಿತಾ ಮಘವಾ ನೋಽಧಿವಕ್ತಾ ಸ ವಾಜಸ್ಯ ಶ್ರವಸ್ಯಸ್ಯ ದಾತಾ ॥೨೦॥**

॥ ಪದಪಾಠಃ ॥

**ಸಃ । ವೃತ್ರಽಹಾ । ಇಂದ್ರಃ । ಚರ್ಷಣಿಽಧೃತ್ । ತಂ । ಸುಽಸ್ತುತ್ಯಾ । ಹವ್ಯಂ । ಹುವೇಮ ।**
**ಸಃ । ಪ್ರಽಅವಿತಾ । ಮಘಽವಾ । ನಃ । ಅಧಿಽವಕ್ತಾ । ಸಃ । ವಾಜಸ್ಯ । ಶ್ರವಸ್ಯಸ್ಯ । ದಾತಾ ॥ ೨೦ ॥**

॥ ಸಾಯಣಭಾಷ್ಯಂ ॥

**ಸ ವೃತ್ರಹಾ ವೃತ್ರಸ್ಯ ಹಂತಾ ಸ ಇಂದ್ರಶ್ಚರ್ಷಣಿಧೃನ್ಮನುಷ್ಯಾಣಾಂ ಧನಾದಿದಾನೇನ ಪೋಷಕೋ ಭವತಿ । ತಮಿಂದ್ರಂ ವಯಂ ಸುಷ್ಟುತ್ಯಾ ಶೋಭನಯಾ ಸ್ತುತ್ಯಾ ಹುವೇಮ । ಅಸ್ಮದ್ಯಜ್ಞೇಷ್ವಾಹ್ವ-**

ಯಾಮಃ । ಕಿಮರ್ಥಂ ಯೂಯಮಾಹ್ವಯಥೇತಿ ಚೇತ್ ಕಾರಣಂ ಬ್ರೂಮಃ । ಸ ಇಂದ್ರ ಪ್ರಾವಿತಾ ಪ್ರಕರ್ಷೇಣಾಸ್ಮಾಕಂ ರಕ್ಷಿತಾ ಭವತಿ । ಕಿಂ ಚ ಮಘವಾ ಧನವಾನಿಂದ್ರೋ ನೋಽಸ್ಮಾಕಮಧಿವಕ್ತಾಧಿಕಂ ವಕ್ತಾ ಬಹುಮಾನೇನ ವಕ್ತಾ ಭವತಿ । ಯದ್ವಾ । ಧನದಾನೇನಾಸ್ಮಾನಧಿಕಂ ವಕ್ತುಮರ್ಹತಿ ॥ ಅಹೇರ್ ಕೃತ್ಯತೃಚಶ್ಚ । ಪಾ. ೩-೩-೧೬೯ । ಇತಿ ತೃಚ್ ॥ ಕಿಂಚ ಸ ಏವೇಂದ್ರಃ ಶ್ರವಸ್ಯಸ್ಯ ಶ್ರವಸಃ ಕೀರ್ತೇರ್ನಿ-ಮಿತ್ತಸ್ಯ ವಾಜಸ್ಯಾನ್ನಸ್ಯ । ಯದ್ವಾ । ಶ್ರವಸೋಽನ್ನಸ್ಯ ಹಿತಾಯ ವಾಜಸ್ಯ ಬಲಸ್ಯ । ದಾತಾ ಭವತಿ ಖಲು । ತಸ್ಮಾದೇವಂಗುಣಮಿಂದ್ರಂ ವಯಮಾಹ್ವಯಾಮಃ ॥

। ಪ್ರತಿಪದಾರ್ಥ ।

**ವೃತ್ರಹಾ**—ವೃತ್ರಹಂತಕನಾದ । **ಸಃ ಇಂದ್ರಃ**—ಅದೇ ಇಂದ್ರನು । **ಚರ್ಷಣೀಧೃತ್**—ಮಾನವರಿಗೆ ಧನಾದಿದಾನಗಳಿಂದ ಧಾರಕನಾಗಿದ್ದಾನೆ । **ಹವ್ಯಂ**—ಪೂಜ್ಯನಾದ । **ತಂ**—ಅದೇ ಇಂದ್ರನನ್ನು । **ಸುಷ್ಟುತ್ಯಾ**—ಉತ್ತಮವಾದ ಸ್ತುತಿಯಿಂದ । **ಹುವೇಮ**—ಪ್ರಾರ್ಥಿಸಿ ಕರೆಯೋಣ । **ಸಃ**—ಅದೇ ಇಂದ್ರನು । **ಪ್ರಾವಿತಾ**—ಉತ್ತಮವಾದ ರಕ್ಷಕನಾಗಿದ್ದಾನೆ । **ಮಘವಾ**—ಧನವಂತನಾದ ಇಂದ್ರನು । **ನಃ**—ನಮಗೆ । **ಅಧಿವಕ್ತಾ**—ಉತ್ತೇಜಕವಾದ ಮಾತುಗಳನ್ನಾಡುವವನು । **ಸಃ**—ಅದೇ ಇಂದ್ರನು । **ಶ್ರವಸ್ಯಸ್ಯ**—ಕೀರ್ತಿಗೂ । **ವಾಜಸ್ಯ**—ಅನ್ನಕ್ಕೂ । **ದಾತಾ**—ಪ್ರದಾತೃವಾಗಿದ್ದಾನೆ.

। ಭಾವಾರ್ಥ ।

ವೃತ್ರಹಂತಕನಾದ ಇಂದ್ರನು ಧನಾದಿದಾನಗಳಿಂದ ಮಾನವರಿಗೆ ಪೋಷಕನಾಗಿದ್ದಾನೆ. ಪೂಜ್ಯನಾದ ಅದೇ ಇಂದ್ರನನ್ನು ಉತ್ತಮವಾದ ಸ್ತುತಿಯಿಂದ ಪ್ರಾರ್ಥಿಸಿ ಕರೆಯೋಣ. ಅದೇ ಇಂದ್ರನು ನಮಗೆ ಉತ್ತಮವಾದ ರಕ್ಷಕನಾಗಿದ್ದಾನೆ. ಧನವಂತನಾದ ಇಂದ್ರನು ನಮಗೆ ಉತ್ತೇಜಕವಾದ ಮಾತುಗಳನ್ನಾಡುತ್ತಾನೆ ಅದೇ ಇಂದ್ರನು ನಮಗೆ ಕೀರ್ತಿಯನ್ನೂ ಅನ್ನವನ್ನೂ ದಾನಮಾಡುತ್ತಾನೆ.

## English Translation

Indra is the slayer of Vritra, the cherisher of men ; let us invoke him, worthy of invocation, with an excellent hymn ; he is Maghavan, our protector, our encourager, he is the bestower of food that brings fame.

॥ ಸಂಹಿತಾಪಾಠಃ ॥

**ಸ ವೃತ್ರಹೇಂದ್ರ ಋಭುಕ್ಷಾಃ ಸದ್ಯೋ ಜಜ್ಞಾನೋ ಹವ್ಯೋ ಬಭೂವ ।**

**ಕೃಣ್ವನ್ನಪಾಂಸಿ ನರ್ಯಾ ಪುರೂಣಿ ಸೋಮೋ ನ ಪೀತೋ ಹವ್ಯಃ ಸಖಿಭ್ಯಃ ॥ ೨೧ ॥**

॥ ಪದಪಾಠಃ ॥

ಸಃ । ವೃತ್ರ॒ऽಹಾ । ಇಂದ್ರಃ॑ । ಋ॒ಭು॒ಕ್ಷಾಃ । ಸ॒ದ್ಯಃ । ಜ॒ಜ್ಞಾ॒ನಃ । ಹವ್ಯಃ॑ । ಬ॒ಭೂ॒ವ॒ ।

ಕೃ॒ಣ್ವನ್ । ಅಪಾಂ॑ಸಿ । ನರ್ಯಾ॑ । ಪು॒ರೂಣಿ॑ । ಸೋಮಃ॑ । ನ । ಪೀ॒ತಃ । ಹವ್ಯಃ॑ । ಸಖಿ॑ऽಭ್ಯಃ ॥ ೨೧ ॥

॥ ಸಾಯಣಭಾಷ್ಯಂ ॥

ಋಭುಕ್ಷಾಃ ಸ ಮಹಾನ್ । ಯದ್ವಾ । ಋಭುಶಬ್ದೇನರ್ಭ್ವಾದಯಸ್ತ್ರಯೋ ಗೃಹ್ಯಂತೇ । ಋಭುಭಿಃ ಸಹ ಕ್ಷಿಯತಿ ನಿವಸತೀತಿ ತಾದೃಶಃ । ವೃತ್ರಹಾ ಸ ಇಂದ್ರಃ ಸದ್ಯಸ್ತದಾನೀಮೇವ ಜಜ್ಞಾನಃ ಪ್ರಾದುರ್ಭವನ್ಹವ್ಯಃ ಸರ್ವೈಃ ಸ್ತೋತೃಭಿರ್ಯಷ್ಟೃಭಿರಾಹ್ವಾತವ್ಯೋ ಬಭೂವ। ಕಿಂಚ ನರ್ಯಾ ನರ್ಯಾಣಿ। ನರಾ ಮನುಷ್ಯಾಃ ಕರ್ಮನೇತಾರಃ । ತೇಭ್ಯೋ ಹಿತಾನಿ ಪುರೂಣಿ ಬಹೂನ್ಯಪಾಂಸಿ ಕರ್ಮಾಣಿ ಕೃಣ್ವನ್ ಕುರ್ವನ್ ಸಖಿಭ್ಯೋ ಹವಿಷ್ಪ್ರದಾನೇನೋಪಕಾರತ್ವಾನ್ಮಿತ್ರೇಭ್ಯ ಋತ್ವಿಗ್ಭ್ಯೋ ಹವ್ಯ ಆಹ್ವಾತವ್ಯೋ ಹವನಯೋಗ್ಯೋ ವಾಭೂತ್ । ತತ್ರ ದೃಷ್ಟಾಂತಃ । ಸೋಮೋ ನ ಯಥಾ ಪೀತಃ ಸೋಮೋ ಯಷ್ಟೃಭ್ಯಃ ಸ್ವರ್ಗಾದಿಫಲಾನಿ ಕುರ್ವನ್ದೇವೈರಾಹ್ವಾತವ್ಯೋ ಭವತಿ ತದ್ವತ್ ॥

॥ ಪ್ರತಿಪದಾರ್ಥ ॥

**ಋಭುಕ್ಷಾಃ**—ಋಭುಗಳೊಂದಿಗೆ ವಾಸಿಸುವವನೂ । **ವೃತ್ರಹಾ**—ವೃತ್ರಹಂತಕನೂ ಆದ । **ಸಃ ಇಂದ್ರಃ**—ಅದೇ ಇಂದ್ರನು । **ಜಜ್ಞಾನಃ**—ಉತ್ಪನ್ನನಾಗಿ । **ಸದ್ಯಃ**—ಆ ಒಡನೆಯೇ । **ಹವ್ಯಃ**—ಸಕಲರ ಸ್ತುತಿಗೂ ಪಾತ್ರನಾಗಿ । **ಬಭೂವ**—ಆದನು । **ಪೀತಃ**—ದೇವತೆಗಳ ಪಾನಕ್ಕೆ ಯೋಗ್ಯವಾದ । **ಸೋಮೋ ನ**—ಸೋಮವು ಅವರ ಆಹ್ವಾನಕ್ಕೆ ಪಾತ್ರವಾಗುವಂತೆ । **ನರ್ಯಾ**—ಮಾನವರಿಗೆ ಹಿತಕರವೂ । **ಪುರೂಣಿ**—ಅನೇಕವಿಧವಾದವೂ ಆದ । **ಅಪಾಂಸಿ**—ಕರ್ಮಗಳನ್ನು । **ಕೃಣ್ವನ್**—ಮಾಡುತ್ತಾ । **ಸಖಿಭ್ಯಃ**—ತನ್ನ ಮಿತ್ರರಾದ ಋತ್ವಿಕ್ಕುಗಳಿಗೆ । **ಹವ್ಯಃ**—ಆಹ್ವಾನಪಾತ್ರನಾದನು.

॥ ಭಾವಾರ್ಥ ॥

ಋಭುಗಳೊಂದಿಗೆ ವಾಸಿಸುವವನೂ, ವೃತ್ರಹಂತಕನೂ ಆದ ಇಂದ್ರನು, ತಾನು ಉತ್ಪನ್ನನಾದೊಡನೆಯೇ ಸಕಲರ ಸ್ತುತಿಗೂ ಪಾತ್ರನಾದನು. ದೇವತೆಗಳ ಪಾನಕ್ಕೆ ಯೋಗ್ಯವಾದ ಸೋಮವು ಅವರ ಆದರದ ಆಹ್ವಾನಕ್ಕೆ ಪಾತ್ರವಾಗುವಂತೆ, ಇಂದ್ರನೂ ಸಹ ಅನೇಕವಿಧವಾದವೂ ಮಾನವರಿಗೆ ಹಿತಕರವಾದವೂ ಆದ ಕರ್ಮಗಳನ್ನು ಮಾಡುತ್ತಾ ತನ್ನ ಮಿತ್ರರಾದ ಋತ್ವಿಕ್ಕುಗಳ ಆಹ್ವಾನಕ್ಕೆ ಪಾತ್ರನಾಗಿ ಪೂಜ್ಯನಾಗಿದ್ದಾನೆ.

## English Translation

As soon as he was born, he, Indra, the slayer of Vritra, the chief of the Ribhus, was worthy to be invoked, he, performing many sacred acts for men, is worthy to be invoked for his friends like the quaffed Soma juice.

## ತೊಂಭತ್ತೇಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಯಾ ಇಂದ್ರೇತಿ ಪಂಚದಶರ್ಚಂ ಚತುರ್ಥಂ ಸೂಕ್ತಂ ಕಾಶ್ಯಪಸ್ಯ ರೇಭಸ್ಯಾರ್ಷಮೈಂದ್ರಂ । ದಶಮ್ಯತಿಜಗತೀ ದ್ವಾಪಂಚಾಶದಕ್ಷರಾ । ಏಕಾದಶೀದ್ವಾದಶ್ಯಾವುಪರಿಷ್ಟಾದ್ಬೃಹತ್ಯೌ ತ್ರ್ಯಷ್ಟಕಾಂತದ್ವಾದಶಕವತ್ಯೌ । ತ್ರಯೋದಶ್ಯತಿಜಗತೀ । ಚತುರ್ದಶೀ ತ್ರಿಷ್ಟುಪ್ । ಪಂಚದಶೀ ಜಗತೀ । ಶಿಷ್ಟಾ ಬೃಹತ್ಯಃ। ತಥಾ ಚಾನುಕ್ರಮ್ಯತೇ । ಯಾ ಇಂದ್ರ ಪಂಚೋನಾ ರೇಭಃ ಕಾಶ್ಯಪೋ ಬಾರ್ಹತಮತಿಜಗತ್ಯುಪರಿಷ್ಟಾದ್ಬೃಹತ್ಯಾವತಿಜಗತೀ ತ್ರಿಷ್ಟುಬ್ಜಗತೀತ್ಯಂತತ ಇತಿ ॥ ಸೂಕ್ತವಿನಿಯೋಗೋ ಲೈಂಗಿಕಃ ॥ ಮಹಾವ್ರತೇ ನಿಷ್ಕೇವಲ್ಯೇ ಬಾರ್ಹತತೃಚಾಶೀತೌ ಯಾ ಇಂದ್ರೇತ್ಯಾದಿ ನವರ್ಚಃ । ತಥೈವ ಪಂಚಮಾರಣ್ಯಕೇ ಸೂತ್ರ್ಯತೇ । ಯಾ ಇಂದ್ರ ಭುಜ ಆಭರ ಇತಿ ನವ ಸೂದದೋಹಾಃ । ಐ. ಆ. ೫-೨-೪ । ಇತಿ ॥ ಚಾತುರ್ವಿಂಶಿಕೇಽಹನಿ ಮಾಧ್ಯಂದಿನಸವನೇ ಬ್ರಾಹ್ಮಣಾಚ್ಛಂಸಿನೋ ವೈಕಲ್ಪಿಕಾನುರೂಪತೃಚಸ್ಯ ಯಾ ಇಂದ್ರೇತ್ಯಾದಿಕೇ ದ್ವೇ ದ್ವಿತೀಯಾತೃತೀಯೇ । ಸೂತ್ರ್ಯತೇ ಚ । ತಮಿಂದ್ರಂ ಜೋಹವೀಮಿ ಯಾ ಇಂದ್ರ ಭುಜ ಆಭರ ಇತ್ಯೇಕಾ ದ್ವೇ ವಾ । ಆ. ೭-೪ । ಇತಿ ॥**

ಅನುವಾದವು—**ಯಾ ಇಂದ್ರ** ಎಂಬ ಈ ಸೂಕ್ತವು ಹತ್ತನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಹದಿನೈದು ಋಕ್ಕುಗಳಿರುವವು. ಈ ಸೂಕ್ತಕ್ಕೆ—ರೇಭಃ ಕಾಶ್ಯಪಃ ಎಂಬುವನು ಋಷಿಯು ; ಇಂದ್ರನು ದೇವತೆಯು ; ಈ ಸೂಕ್ತದ ಹತ್ತನೆಯ ಋಕ್ಕು ಐವತ್ತೆರಡು ಅಕ್ಷರಗಳ ಅತಿಜಗತೀ ಎಂಬ ಛಂದಸ್ಸಿನದು ; ಹನ್ನೊಂದು ಮತ್ತು ಹನ್ನೆರಡನೆಯ ಋಕ್ಕುಗಳು ಉಪರಿಷ್ಟಾದ್ಬೃಹತೀ ಎಂಬ ಛಂದಸ್ಕವು. ಈ ಛಂದಸ್ಸಿನಲ್ಲಿ ನಾಲ್ಕು ಪಾದಗಳಿದ್ದು ಮೊದಲಿನ ಮೂರು ಪಾದಗಳಿಗೆ ಎಂಟೆಂಟು ಅಕ್ಷರಗಳೂ, ಕೊನೆಯ ಪಾದಕ್ಕೆ ಹನ್ನೆರಡು ಅಕ್ಷರಗಳೂ ಇರುವವು ; ಹದಿಮೂರನೆಯ ಋಕ್ಕು ಅತಿಜಗತೀಛಂದಸ್ಕವು ; ಹದಿನಾಲ್ಕನೆಯದು ತ್ರಿಷ್ಟುಪ್‌ಛಂದಸ್ಕವು , ಹದಿನೈದನೆಯದು ಜಗತೀಛಂದಸ್ಕವು ; ಉಳಿದ ಋಕ್ಕುಗಳು ಬೃಹತೀಛಂದಸ್ಕವು ಅನುಕ್ರಮಣಿಕೆಯಲ್ಲಿ—**ಯಾ ಇಂದ್ರ ಪಂಚೋನಾ ರೇಭಃ ಕಾಶ್ಯಪೋ ಬಾರ್ಹತಮತಿಜಗತ್ಯುಪರಿಷ್ಟಾದ್ಬೃಹತ್ಯಾವತಿಜಗತೀ ತ್ರಿಷ್ಟುಬ್ಜಗತೀತ್ಯಂತತಃ** ಎಂದು ಹೇಳಿರುವುದು. ಸೂಕ್ತವಿನಿಯೋಗವು ಲೈಂಗಿಕವು. ಮಹಾವ್ರತೇಷ್ಟಿಯಲ್ಲಿ ನಿಷ್ಕೇವಲ್ಯಶಸ್ತ್ರಮಂತ್ರಪಠನಮಾಡುವಾಗ ಬೃಹತೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ **ಯಾ ಇಂದ್ರ** ಎಂದು ಮೊದಲಾಗುವ ಒಂಭತ್ತು ಋಕ್ಕುಗಳ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣಕ್ಯದಲ್ಲಿ—**ಯಾ ಇಂದ್ರ ಭುಜ ಆಭರ ಇತಿ ನವ ಸೂದದೋಹಾಃ** ಎಂಬ ವಾಕ್ಯದಿಂದ (ಐ. ಆ. ೫-೨-೪) ನಿರ್ದಿಷ್ಟವಾಗಿರುವುದು ಮತ್ತು ಯಾಗದ ಚಾತುರ್ವಿಂಶಿಕವೆಂಬ ದಿನದ ಮಾಧ್ಯಂದಿನಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪಠಿಸುವ ಅನುರೂಪತೃಚದಲ್ಲಿ **ಯಾ ಇಂದ್ರ** ಎಂದು ಮೊದಲಾಗುವ ಎರಡು ಋಕ್ಕುಗಳನ್ನು ತೃಚದ ಎರಡು ಮತ್ತು ಮೂರನೆಯ ಋಕ್ಕುಗಳನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ತಮಿಂದ್ರಂ ಜೋಹವೀಮಿ ಯಾ ಇಂದ್ರ ಭುಜ ಆಭರ ಇತ್ಯೇಕಾ ದ್ವೇ ಚ** ಎಂಬ ಸೂತ್ರದಿಂದ (ಆ. ೭-೪) ವಿವೃತವಾಗಿರುವುದು.

## ಸೂಕ್ತ—೯೭

ಮಂಡಲ—೮ ॥ ಅನುವಾಕ—೧೦ ॥ ಸೂಕ್ತ—೯೭ ।
ಅಷ್ಟಕ—೬ ॥ ಅಧ್ಯಾಯ—೬ ॥ ವರ್ಗ—೩೬, ೩೭, ೩೮ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೫ ॥
ಋಷಿಃ—ರೇಭಃ ಕಾಶ್ಯಪಃ ॥
ದೇವತಾ—ಇಂದ್ರಃ ॥
ಛಂದಃ—೧-೯ ಬೃಹತೀ । ೧೦, ೧೩. ಅತಿಜಗತೀ । ೧೧, ೧೨ ಉಪರಿಷ್ಟಾದ್ಬೃಹತೀ ।
೧೪. ತ್ರಿಷ್ಟುಪ್ । ೧೫. ಜಗತೀ ।

॥ ಸಂಹಿತಾಪಾಠಃ ॥

ಯಾ ಇಂದ್ರ ಭುಜ ಆಭರಃ ಸ್ವರ್ವಾಁ ಅಸುರೇಭ್ಯಃ ।
ಸ್ತೋತಾರಮಿನ್ಮಘವನ್ನಸ್ಯ ವರ್ಧಯ ಯೇ ಚ ತ್ವೇ ವೃಕ್ತಬರ್ಹಿಷಃ ॥ ೧ ॥

॥ ಪದಪಾಠಃ ॥

ಯಾಃ । ಇಂದ್ರ । ಭುಜಃ । ಆ । ಅಭರಃ । ಸ್ವಃऽವಾನ್ । ಅಸುರೇಭ್ಯಃ ।
ಸ್ತೋತಾರಂ । ಇತ್ । ಮಘಃऽವನ್ । ಅಸ್ಯ । ವರ್ಧಯ । ಯೇ । ಚ । ತ್ವೇ ಇತಿ । ವೃಕ್ತಃऽಬರ್ಹಿಷಃ ॥

। ಸಾಯಣಭಾಷ್ಯಂ ।

ಋಷಿರಿಂದ್ರಂ ಪ್ರಾರ್ಥಯತೇ । ಹೇ ಇಂದ್ರ ಸ್ವರ್ವಾನ್ ಸುಖವಾನ್ ಸ್ವರ್ಗವಾನ್ವಾ । ಅಥವಾ ಸ್ವಃಶಬ್ದಃ ಸರ್ವಪರ್ಯಾಯಃ । ಸರ್ವಂ ಭೂತಜಾತಂ । ಆತ್ಮನ ಏವೋತ್ಪನ್ನತ್ವಾತ್ತದ್ವಾನ್ । ಏವಂ-ಗುಣಸ್ತ್ವಂ ಯಾ ಯಾನಿ ಭುಜೋ ಭೋಕ್ತವ್ಯಾನಿ ಧನಾನ್ಯಸುರೇಭ್ಯೋ ಬಲವದ್ಭ್ಯೋ ರಾಕ್ಷಸೇಭ್ಯ ಆಭರಃ ಆಹರಃ ತಾನ್ ಹತ್ವಾಹೃತವಾನಸಿ ॥ ಹೃಗ್ರಹೋರಿತಿ ಭಕಾರಾದೇಶಃ ॥ ಅತ ಏವ ಹೇ ಮಘವನ್ ಧನವನ್ನಿಂದ್ರ ಅಸ್ಯ ॥ ಅನ್ವಾದೇಶೇऽಶಾದೇಶಃ ॥ ಏತಸ್ಯಾಹೃತಸ್ಯ ಧನಸ್ಯ ದಾನೇನ ಸ್ತೋತಾರಮಿತ್ತ್ವ ಸ್ತೋತ್ರಕಾರಿಣಮೇವ ವರ್ಧಯ । ವೃದ್ಧಿಮಂತಂ ಕುರು । ಯೇ ಚಾನ್ಯೇ ಯುಷ್ಮಾರಸ್ತ್ವದರ್ಥಂ ವೃಕ್ತ-ಬರ್ಹಿಷಃ ಸ್ತೀರ್ಣಬರ್ಹಿಷೋ ಭವಂತಿ ಅತಸ್ತಾಂಶ್ಚ ಧನೇನ ವರ್ಧಯ ॥

॥ ಪ್ರತಿಪದಾರ್ಥ ॥

**ಮಘವನ್**—ಧನವಂತನಾದ । **ಇಂದ್ರ**—ಎಲೈ ಇಂದ್ರನೇ । **ಸ್ವರ್ವಾನ್**—ಸಕಲಭೂತಗಳನ್ನೂ ಒಳಗೊಂಡ ನೀನು । **ಯಾಃ**—ಯಾವ । **ಭುಜಃ**—ಭೋಗಸಾಧನಗಳಾದ ಧನಗಳನ್ನು । **ಅಸುರೇಭ್ಯಃ**—ಅಸುರರಿಂದ । **ಆಭರಃ**—ಅಪಹರಿಸಿಕೊಂಡು ಬಂದಿರುವೆಯೋ । **ಅಸ್ಯ**—ಅದೇ ಧನದ ಪ್ರದಾನದಿಂದ । **ಸ್ತೋತಾರಂ ಇತ್**—ಸ್ತುತಿಕರ್ತರನ್ನೇ । **ವರ್ಧಯ**—ಪುಷ್ಟಿಗೊಳಿಸು । **ಯೇ**—ಯಾವ । **ಅನ್ಯೇ ಚ**—ಇತರ ಯಜ್ಞಕರ್ತರೂ ಸಹ । **ತ್ವೇ**—ನಿನಗಾಗಿ । **ವೃಕ್ತಬರ್ಹಿಷಃ**— ದರ್ಭಾಸನಗಳನ್ನು ಸಿದ್ಧಪಡಿಸುವರೋ ಅವರನ್ನೂ ಪುಷ್ಟಿಗೊಳಿಸು.

॥ ಭಾವಾರ್ಥ ॥

ಧನವಂತನಾದ ಎಲೈ ಇಂದ್ರನೇ, ಸಕಲ ಭೂತಗಳನ್ನೂ ಒಳಗೊಂಡ ನೀನು ಅಸುರರಿಂದ ಯಾವ ಭೋಗಸಾಧನಗಳಾದ ಧನಗಳನ್ನು ಅಪಹರಿಸಿಕೊಂಡು ಬಂದಿರುವೆಯೋ, ಅದೇ ಧನದ ಪ್ರಧಾನದಿಂದ ಸ್ತುತಿಕರ್ತರ ವೃದ್ಧಿಗೆ ಕಾರಣನಾಗು. ನಿನ್ನ ಪೂಜೆಗಾಗಿ ದರ್ಭಾಸನವನ್ನು ಸಂಸ್ಕರಿಸಿ ಸಿದ್ಧಗೊಳಿಸಿರುವ ಇತರ ಯಜ್ಞಕರ್ತರಿಗೂ ವೃದ್ಧಿಕಾರಕನಾಗು.

English Translation

Indra, lord of heaven, with those good things which you have carried off from the Asuras you prosper, O Maghavan, your praiser and those who have spread for you the clipped grass.

॥ ಸಂಹಿತಾಪಾಠಃ ॥

ಯಮಿಂದ್ರ ದಧಿಷೇ ತ್ವಮಶ್ವಂ ಗಾಂ ಭಾಗಮವ್ಯಯಂ ।
ಯಜಮಾನೇ ಸುನ್ವತಿ ದಕ್ಷಿಣಾವತಿ ತಸ್ಮಿನ್ತಂ ಧೇಹಿ ಮಾ ಪಣೌ ॥ ೨ ॥

॥ ಪದಪಾಠಃ ॥

ಯಂ । ಇಂದ್ರ । ದಧಿಷೇ । ತ್ವಂ । ಅಶ್ವಂ । ಗಾಂ । ಭಾಗಂ । ಅವ್ಯಯಂ ।

ಯಜಮಾನೇ । ಸುನ್ವತಿ । ದಕ್ಷಿಣಾऽವತಿ । ತಸ್ಮಿನ್ । ತಂ । ಧೇಹಿ । ಮಾ । ಪಣೌ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಯಮಶ್ವಂ ಗಮನಸಾಧನಾನ್ ಹರೀನ್ ಗಾಮಗ್ನಿಹೋತ್ರಕರ್ಮಣಿ ಪಯಃಪ್ರದಾನೇನೋಪಕಾರಿಕಾ ಗಾ ಅವ್ಯಯಂ ವ್ಯಯರಹಿತಮವಿನಶ್ವರಂ ಭಾಗಂ ಭಜನೀಯಂ ಧನಂ । ಸರ್ವತ್ರೈಕತ್ವಮವಿವಕ್ಷಿತಂ । ಏತಾನ್ಯಾತ್ರುಭ್ಯ ಆಹೃತ್ಯ ದಧಿಷೇ ಬಿಭರ್ಷಿ ತಂ ಸರ್ವಂ ಸುನ್ವತಿ ಸೋಮಾಭಿಷವಂ ಕುರ್ವತಿ ದಕ್ಷಿಣಾವತಿ ಯಜ್ಞ ಋತ್ವಿಗ್ಭ್ಯೋ ದಕ್ಷಿಣಾದೇಯತ್ವೇನ ತದ್ವತಿ ಯಜಮಾನೇ ಯಾಗಂ ಕುರ್ವಾಣೇ ತಸ್ಮಿಂಸ್ತ್ವಂ ಧೇಹಿ । ಸರ್ವತ್ರ ಧನಾದಿದಾನಂ ಮಾ ಕುರ್ವಿತ್ಯಾಹ । ಮಾ ಪಣೌ ॥ ಪಣ ವ್ಯವಹಾರೇ ॥ ದ್ರವ್ಯವ್ಯವಹಾರಾದಯಷ್ಟಾ ಜನಃ ಪಣಿಃ । ತಸ್ಮಿನ್ನೇತತ್ಸರ್ವಂ ಮಾ ದೇಹಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ತ್ವಂ—ನೀನು । ಯಂ—ಯಾವ । ಅಶ್ವಂ—ಅಶ್ವಗಳನ್ನೂ । ಗಾಂ—ಗೋವುಗಳನ್ನೂ । ಅವ್ಯಯಂ—ನಾಶರಹಿತವೂ । ಭಾಗಂ—ಪೂಜ್ಯವೂ ಆದ ಧನವನ್ನೂ । ದಧಿಷೇ—ಅಸುರರಿಂದ ಅಪಹರಿಸಿಕೊಂಡು ಬಂದಿರುವೆಯೋ । ತಂ—ಅವೆಲ್ಲವನ್ನೂ । ಸುನ್ವತಿ—ಸೋಮವನ್ನು ಹಿಂಡಿ ಅರ್ಪಿಸುವವನೂ ।

**ದಕ್ಷಿಣಾವತಿ**—ಋತ್ವಿಕ್ಕುಗಳಿಗೆ ಉದಾರವಾಗಿ ದಕ್ಷಿಣೆಯನ್ನು ಕೊಡತಕ್ಕವನೂ ಆದ । **ತಸ್ಮಿನ್ ಯಜಮಾನೇ**—ಅದೇ ಯಜ್ಞಕರ್ತನಲ್ಲಿಯೇ । **ಧೇಹಿ**— ತುಂಬಿಡು । **ಪಣೌ**—ಕರ್ಮಭ್ರಷ್ಟನಾದ ಲೋಭಿಗೆ । **ಮಾ**—ಕೊಡಬೇಡ.

॥ ಭಾವಾರ್ಥ ।

ಎಲೈ ಇಂದ್ರನೇ, ನೀನು ಯಾವ ಅಶ್ವಗಳನ್ನೂ, ಗೋವುಗಳನ್ನೂ ನಾಶರಹಿತವೂ ಪೂಜ್ಯವೂ ಆದ ಧನಗಳನ್ನೂ ಅಸುರರಿಂದ ಅಪಹರಿಸಿಕೊಂಡು ಬಂದಿರುವೆಯೋ ಅವೆಲ್ಲವನ್ನೂ ಸಹ ಸೋಮವನ್ನು ಹಿಂಡಿ ಅರ್ಪಿಸುವವನೂ, ಋತ್ವಿಕ್ಕುಗಳಿಗೆ ಉದಾರವಾಗಿ ದಕ್ಷಿಣೆಯನ್ನು ಕೊಡತಕ್ಕವನೂ ಆದ ಅದೇ ಯಜ್ಞಕರ್ತನಲ್ಲಿಯೇ ತುಂಬಿಡು. ಕರ್ಮಭ್ರಷ್ಟನಾದ ಲೋಭಿಗೆ ಕೊಡಬೇಡ

English Translation

Those horses, those cows, that imperishable wealth which you have seized (from your enemies),—bestow them on the sacrificer who offers the Soma and is liberal to the priests,—not on the niggard.

॥ ಸಂಹಿತಾಪಾಠಃ ॥

ಯ ಇಂದ್ರ ಸಸ್ತ್ಯವ್ರತೋಽನುಷ್ವಾಪಮದೇವಯುಃ ।
ಸ್ವೈಃ ಷ ಏವೈರ್ಮುಮುರತ್ಪೋಷ್ಯಂ ರಯಿಂ ಸನುತರ್ಧೇಹಿ ತಂ ತತಃ ॥೩॥

॥ ಪದಪಾಠಃ ॥

ಯಃ । ಇಂದ್ರ । ಸಸ್ತಿ । ಅವ್ರತಃ । ಅನುऽಸ್ವಾಪಂ । ಅದೇವऽಯುಃ ।
ಸ್ವೈಃ । ಸಃ । ಏವೈಃ । ಮುಮುರತ್ । ಪೋಷ್ಯಂ । ರಯಿಂ । ಸನುತಃ । ಧೇಹಿ । ತಂ । ತತಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಅದೇವಯುರ್ದೇವಾನ್ ಯಷ್ಟ್ರಾನಕಾಮಯಮಾನೋಽವ್ರತೋ ವ್ರತರಹಿತಃ ಕರ್ಮರಹಿತೋ ಭೂತ್ವಾನುಸ್ವಾಪಮನುವೃತ್ತಸ್ವಪ್ನಂ ಯಥಾ ಭವತಿ ತಥಾ ಯಃ ಸಸ್ತಿ ಸ್ವಪಿತಿ । ಷಸ ಸ್ವಪ್ನೇ । ಅದಾದಿಕಃ ॥ ಸ ಜನಃ ಸ್ವೈರಾತ್ಮೀಯೈರೇವೈರ್ಗಮನೈರೇವ ಪೋಷ್ಯಂ ಪೋಷಣೀಯಂ ರಯಿಂ ಸ್ವೀಯಂ ಧನಂ ಮುಮುರತ್ । ಮಾರಯತು । ವಿನಾಶಯತು । ಅಮಾರ್ಗೈರ್ದ್ಯೂತಾದಿಭಿಸ್ತಸ್ಯ ಧನಂ ನಶ್ಯತು ನ ತು ದೇವಾನಾಂ ಹವಿಷ್ಪ್ರದಾನೇನೇತಿ । ತತಸ್ತ್ವಂ ತಮಯಷ್ಟಾರಂ ಜನಂ । ಸನುತರಿತ್ಯಂತರ್ಹಿತನಾಮ । ಸನುತರಂತರ್ಹಿತೇ ಕರ್ಮರಹಿತೇ ಕಸ್ಮಿಂಶ್ಚಿದ್ದೇಶೇ ಧೇಹಿ । ಸ್ಥಾಪಯ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಅದೇವಯುಃ**—ದೇವಪೂಜೆಯಲ್ಲಿ ಆಸಕ್ತಿಯಿಲ್ಲದವನೂ । **ಅವ್ರತಃ**—ಕರ್ಮರಹಿತನೂ ಆಗಿ । **ಯಃ**—ಯಾವ ನಾಸ್ತಿಕನು । **ಅನುಸ್ವಾಪಂ**—ಯಾವಾಗಲೂ ಅಲಸನಾಗಿ । **ಸಸ್ತಿ**—ನೈಮರೆತು ಮಲಗಿರುವನೋ । **ಸಃ**—ಅವನು । **ಸ್ವೈಃ**—ತನ್ನ । **ಏನೈಃ**—ದುಷ್ಟವ್ಯವಹಾರಗಳ ಫಲವಾಗಿ । **ಪೋಷ್ಯಂ**—ತನ್ನಿಂದ ಪೋಷಿತವಾಗುವ । **ರಯಿಂ**—ಧನವನ್ನು । **ಮುಮುರತ್**—ಕಳೆದುಕೊಳ್ಳಲಿ । **ತತಃ**—ಆ ಕರ್ಮಭ್ರಷ್ಟತ್ವದ ಫಲವಾಗಿ । **ತಂ**—ಆ ನಾಸ್ತಿಕನನ್ನು । **ಸನುತಃ**—ಗಭೀರವಾದ ಅಂಧಕಾರದಲ್ಲಿ । **ಧೇಹಿ**—ತಳ್ಳಿಬಿಡು

॥ ಭಾವಾರ್ಥ ॥

ಎಲೈ ಇಂದ್ರನೇ, ದೇವಪೂಜೆಯಲ್ಲಿ ಆಸಕ್ತಿಯಿಲ್ಲದವನೂ, ಕರ್ಮರಹಿತನೂ ಆಗಿ ಯಾವ ನಾಸ್ತಿಕನು ಯಾವಾಗಲೂ ಅಲಸನಾಗಿ ನೈಮರೆತು ಮಲಗಿರುವನೋ ಅವನು ತನ್ನ ದುಷ್ಟವ್ಯವಹಾರಗಳ ಫಲವಾಗಿ ತನ್ನಿಂದ ಪೋಷಿತವಾಗುವ ಸಕಲ ಧನಗಳನ್ನೂ ಕಳೆದುಕೊಳ್ಳಲಿ. ಆ ಕರ್ಮಭ್ರಷ್ಟತ್ವದ ಫಲವಾಗಿ ಆ ನಾಸ್ತಿಕನನ್ನು ಗಭೀರವಾದ ಅಂಧಕಾರದಲ್ಲಿ ತಳ್ಳಿಬಿಡು.

English Translation

Let him, Indra, who sleeps away careless of the gods and offering no sacrifices,—let him lose his precious wealth by his own evil courses, and then you stow him away in some hidden place.

॥ ಸಂಹಿತಾಪಾಠಃ ॥

ಯಚ್ಛಕ್ರಾಸಿ ಪರಾವತಿ ಯದರ್ವಾವತಿ ವೃತ್ರಹನ್ ।
ಅತಸ್ತ್ವಾ ಗೀರ್ಭಿರ್ದ್ಯುಗದಿಂದ್ರ ಕೇಶಿಭಿಃ ಸುತಾವಾँ ಆ ವಿವಾಸತಿ ॥ ೪ ॥

॥ ಪದಪಾಠಃ ॥

ಯತ್ । ಶಕ್ರ । ಅಸಿ । ಪರಾऽವತಿ । ಯತ್ । ಅರ್ವಾऽವತಿ । ವೃತ್ರऽಹನ್ ।
ಅತಃ । ತ್ವಾ । ಗೀಃऽಭಿಃ । ದ್ಯುऽಗತ್ । ಇಂದ್ರ । ಕೇಶಿऽಭಿಃ । ಸುತऽವಾನ್ । ಆ । ವಿವಾಸತಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಶಕ್ರ ಶತ್ರುಹನನಸಮರ್ಥೇಂದ್ರ ಯದ್ಯದಾ ಪರಾವತಿ ವಿಪ್ರಕೃಷ್ಟೇऽತಿದೂರೇ ದ್ಯುಲೋಕೇ ದೇಶೇऽಸಿ ವಿದ್ಯಸೇ ಹೇ ವೃತ್ರಹನ್ ವೃತ್ರಸ್ಯ ಹಂತರಿಂದ್ರ ಯದ್ಯದ್ಯರ್ವಾವತ್ಯರ್ವಾಚೀನೇ ಅಸ್ಮಾಪದಥ ಸ್ಮಾತ್ಸಿಸ್ಥಿತೇ ತದಪೇಕ್ಷಯಾ ಸಮೀಪೇ ದೇಶೇऽಂತರಿಕ್ಷೇ ಭವಸಿ ತಸ್ಮಾದಪಿ ಅತೋऽಸ್ಮಾದ್ದ್ಯುಲೋ-

ಕಾದ್ವಾ ದ್ಯುಗತ್ ॥ ಗಮ್ಲೃ ಗತೌ । ಕ್ವಿಪಿ ಗಮಃ ಕ್ವಾವಿತ್ಯನುನಾಸಿಕಲೋಪಃ । ತುಕ್ । ಸುಪಾಂ ಸುಲುಗಿತಿ ಲುಕ್ ॥ ದ್ಯುಲೋಕಂ ಪ್ರತಿ ಗಚ್ಛದ್ಭಿಃ ಸ್ವಭಾಸಾ ಸರ್ವತೋ ಗಚ್ಛದ್ಭಿಃ ಕೇಶಿಭಿಃ ಕೇಶವದ್ಭಿರ್ಹರಿಭಿರಿವ ಸ್ಥಿತಾಭಿರ್ಗೀರ್ಭಿಃ ಸ್ತುತಿಭಿಸ್ತ್ವಾ ತ್ವಾಂ ಸುತವಾನಭಿಷುತಸೋಮಃ ಯಜಮಾನ ಆ ವಿವಾಸತಿ । ಆತ್ಮೀಯಂ ಯಜ್ಞಂ ಪ್ರತ್ಯಾಗಮಯತಿ ತ್ವಾಮೇತೈಃ ಸ್ತೋತ್ರೈಃ ಪರಿಚರತೀತಿ ವಾ ॥

॥ ಪ್ರತಿಪದಾರ್ಥ ॥

ಶಕ್ರ—ಶತ್ರುವನ್ನು ಕೊಲ್ಲಲು ಸಮರ್ಥನೂ । ವೃತ್ರಹನ್—ವೃತ್ರಹಂತಕನೂ ಆದ । ಇಂದ್ರ—ಎಲೈ ಇಂದ್ರನೇ । ಯತ್—ಒಂದುವೇಳೆ । ಪರಾವತಿ—ಅತಿ ದೂರವಾದ ದ್ಯುಲೋಕದಲ್ಲಿ । ಅಸಿ—ನೀನಿದ್ದರೂ । ಯತ್—ಅಥವಾ ಒಂದು ವೇಳೆ । ಅರ್ವಾವತಿ—ಅದಕ್ಕಿಂತಲೂ ಕೆಳಪ್ರದೇಶವಾದ ಅಂತರಿಕ್ಷದಲ್ಲಿದ್ದರೂ । ಅತಃ—ಅಲ್ಲಿಂದಲೇ । ದ್ಯುಗತ್—ಅಂತರಿಕ್ಷಗಾಮಿಯೂ । ಕೇಶಿಭಿಃ—ಉತ್ತಮವಾದ ಕೇಶಗಳುಳ್ಳವೂ ಆದ ಅಶ್ವಗಳಂತಿರುವ । ಗೀರ್ಭಿಃ—ಸ್ತುತಿವಾಕ್ಕುಗಳಿಂದ । ತ್ವಾ—ನಿನ್ನನ್ನು । ಸುತವಾನ್—ಯಜಮಾನನು । ಆ ವಿವಾಸತಿ—ಪೂಜಿಸುತ್ತಾನೆ

। ಭಾವಾರ್ಥ ।

ಶತ್ರುವನ್ನು ಕೊಲ್ಲಲು ಸಮರ್ಥನೂ, ವೃತ್ರಹಂತಕನೂ ಆದ ಎಲೈ ಇಂದ್ರನೇ, ಒಂದು ವೇಳೆ ಅತಿದೂರವಾದ ದ್ಯುಲೋಕದಲ್ಲಿದ್ದರೂ, ಅಥವಾ ಒಂದು ವೇಳೆ ಅದಕ್ಕಿಂತಲೂ ಕೆಳಗಿನ ಪ್ರದೇಶವಾದ ಅಂತರಿಕ್ಷದಲ್ಲಿದ್ದರೂ ಅಲ್ಲಿಂದಲೇ ಅಂತರಿಕ್ಷಗಾಮಿಯಾದವೂ, ಉತ್ತಮವಾದ ಕೇಶಗಳುಳ್ಳವೂ ಆದ ಅಶ್ವಗಳಂತಿರುವ ಸ್ತುತಿವಾಕ್ಕುಗಳಿಂದ ನಿನ್ನನ್ನು ಯಜಮಾನನು ಪೂಜಿಸುತ್ತಾನೆ.

English Translation

Whether, Shakra, you are in the far-distant region, or whether, slayer of Vritra, you are in the lower,—the sacrificer longs to bring you, Indra, from thence by his hymns as by heaven-going steeds ;

। ಸಂಹಿತಾಪಾಠಃ ।

ಯದ್ವಾಸಿ ರೋಚನೇ ದಿವಃ ಸಮುದ್ರಸ್ಯಾಧಿ ವಿಷ್ಟಪಿ ।
ಯತ್ಪಾರ್ಥಿವೇ ಸದನೇ ವೃತ್ರಹಂತಮ ಯದಂತರಿಕ್ಷ ಆ ಗಹಿ ॥ ೫ ॥

॥ ಪದಪಾಠಃ ॥

ಯತ್ । ವಾ । ಅಸಿ । ರೋಚನೇ । ದಿವಃ । ಸಮುದ್ರಸ್ಯ । ಅಧಿ । ವಿಷ್ಟಪಿ ।
ಯತ್ । ಪಾರ್ಥಿವೇ । ಸದನೇ । ವೃತ್ರಹನ್ऽತಮ । ಯತ್ । ಅಂತರಿಕ್ಷೇ । ಆ । ಗಹಿ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಯದ್ವಾ ಯದಿ ವಾ ದಿವೋ ದ್ಯುಲೋಕಸ್ಯ ರೋಚನೇ ದೀಪನಶೀಲೇ ಸ್ಥಾನೇ ಭವಸಿ । ಯದ್ವಾ ಸಮುದ್ರಸ್ಯ ಮಧ್ಯೇಽಧ್ಯಧಿಗತೇ ವಿಷ್ಟಪಿ ವಿಷ್ಟಪೇ ತತ್ಸಂಬದ್ಧೇ ಕಸ್ಮಿಂಶ್ಚಿತ್ಸ್ಥಾನೇ ಭವಸಿ । ಹೇ ವೃತ್ರಹಂತಮಾತಿಶಯೇನ ವೃತ್ರಸ್ಯಾಸುರಸ್ಯ ಪಾಪಸ್ಯ ವಾ ಹಂತರಿಂದ್ರ ಯದ್ಯದಿ ವಾ ಪಾರ್ಥಿವೇ ಪೃಥಿವ್ಯಾಂ ಭವೇ ಸದನೇ ಸ್ಥಾನೇ ನಿವಸೇ । ಯದಿ ವಾಂತರಿಕ್ಷೇ ತಸ್ಮಿಲ್ಲೋಕೇ ವರ್ತಸೇ । ಯತ್ರಕುತ್ರ ಭವಸಿ ತಥಾಪ್ಯಸ್ಮದೀಯಂ ಯಜ್ಞಂ ಪ್ರತ್ಯಾ ಗಹಿ । ಆಗಚ್ಛ ॥

॥ ಪ್ರತಿಪದಾರ್ಥ ॥

**ವೃತ್ರಹಂತಮ**—ಅತಿ ಸುಲಭವಾಗಿ ವೃತ್ರನನ್ನು ಕೊಲ್ಲತಕ್ಕ ಎಲೈ ಇಂದ್ರನೇ । **ಯದ್ವಾ**—ಒಂದುವೇಳೆ । **ದಿವಃ**—ದ್ಯುಲೋಕದ । **ರೋಚನೇ ಅಸಿ**—ಪ್ರಕಾಶಮಾನವಾದ ಸ್ಥಾನದಲ್ಲಿದ್ದರೂ ಅಥವಾ । **ಸಮುದ್ರಸ್ಯ ಅಧಿ**—ಸಮುದ್ರಮಧ್ಯದಲ್ಲಿರುವ । **ವಿಷ್ಟಪಿ**—ಪ್ರದೇಶದಲ್ಲಿದ್ದರೂ । **ಯತ್**—ಅಥವಾ ಒಂದುವೇಳೆ । **ಪಾರ್ಥಿವೇ**—ಪೃಥ್ವಿಗೆ ಸಂಬಂಧಿಸಿದ । **ಸದನೇ**—ಯಜ್ಞಗೃಹದಲ್ಲೆಲ್ಲಾದರೂ ಇದ್ದರೂ । **ಅಂತರಿಕ್ಷೇ**—ಅಥವಾ ಅಂತರಿಕ್ಷಪ್ರದೇಶದಲ್ಲಿದ್ದರೂ ಅಲ್ಲಿಂದೆಲ್ಲಾ । **ಆ ಗಹಿ**—ದಯಮಾಡು.

॥ ಭಾವಾರ್ಥ ॥

ಅತಿ ಸುಲಭವಾಗಿ ವೃತ್ರನನ್ನು ಕೊಲ್ಲತಕ್ಕ ಎಲೈ ಇಂದ್ರನೇ ಒಂದುವೇಳೆ ನೀನು ದ್ಯುಲೋಕದ ಪ್ರಕಾಶಮಾನವಾದ ಸ್ಥಾನದಲ್ಲಿದ್ದರೂ, ಅಥವಾ ಸಮುದ್ರಮಧ್ಯದಲ್ಲಿರುವ ಪ್ರದೇಶದಲ್ಲಿದ್ದರೂ, ಅಥವಾ ಒಂದು ವೇಳೆ ಪೃಥ್ವಿಗೆ ಸಂಬಂಧಿಸಿದ ಯಜ್ಞಗೃಹದಲ್ಲೆಲ್ಲಾದರೂ ಇದ್ದರೂ ಅಥವಾ ಅಂತರಿಕ್ಷಪ್ರದೇಶದಲ್ಲಿದ್ದರೂ ಅಲ್ಲಿಂದೆಲ್ಲಾ ದಯಮಾಡು.

## English Translation

Or whether you are in the bringhtness of heaven, or whether in some region in the midst of the sea, or whether, mightiest slayer of Vritra, in some abode in the earth, or whether in the firmament,—come to us.

॥ ಸಂಹಿತಾಪಾಠಃ ॥

ಸ ನಃ ಸೋಮೇಷು ಸೋಮಪಾಃ ಸುತೇಷು ಶವಸಸ್ಪತೇ ।
ಮಾದಯಸ್ವ ರಾಧಸಾ ಸೂನೃತಾವತೇಂದ್ರ ರಾಯಾ ಪರೀಣಸಾ ॥ ೬ ॥

॥ ಪದಪಾಠಃ ॥

ಸಃ । ನಃ । ಸೋಮೇಷು । ಸೋಮಽಪಾಃ । ಸುತೇಷು । ಶವಸಃ । ಪತೇ ।
ಮಾದಯಸ್ವ । ರಾಧಸಾ । ಸೂನೃತಾಽವತಾ । ಇಂದ್ರ । ರಾಯಾ । ಪರೀಣಸಾ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸೋಮಪಾಃ ಸೋಮಸ್ಯ ಪಾತಃ ಹೇ ಶವಸಸ್ಪತೇ ಬಲಸ್ಯ ಪಾಲಯಿತರಿಂದ್ರ ಸ ಪೂರ್ವೋಕ್ತಲಕ್ಷಣಸ್ತ್ವಂ ಸುತೇಷ್ವಸ್ಮಾಭಿರಭಿಷುತೇಷು ಸೋಮೇಷು ನೋಽಸ್ಮಾನ್ರಾಧಸಾ ಬಲಸಾಧನೇನಾನ್ನೇನ ಸೂನೃತಾವತಾನೃತರಹಿತತ್ವೋಪೇತೇನ। ಯದ್ವಾ। ಸೂನೃತೇತಿ ವಾಙ್ನಾಮ। ಶೋಭನವಾಕ್ಯಯುಕ್ತೇನ। ಅನೇನ ಪುತ್ರಾದಿಕಂ ಲಕ್ಷ್ಯತೇ । ಪುತ್ರೋಪೇತೇನಾನ್ನೇನ । ಪರೀಣಸಾ । ಬಹುನಾಮೈತತ್ । ಬಹುನಾ ರಾಯಾ ಧನೇನ ಚ ನೋಽಸ್ಮಾನ್ಮಾದಯಸ್ವ । ಮೋದಯ । ಸೋಮಸ್ಯ ಪ್ರದಾತೃಭ್ಯೋಽಸ್ಮಭ್ಯಮನ್ನಪುತ್ರಧನಾದಿಕಂ ದೇಹೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸೋಮಪಾಃ**—ಸೋಮವನ್ನು ಪಾನಮಾಡತಕ್ಕವನೂ । **ಶವಸಸ್ಪತೇ**—ಶಕ್ತಿಪಾಲಕನೂ ಆದ । **ಇಂದ್ರ**—ಎಲೈ ಇಂದ್ರನೇ । **ಸಃ**—ಪ್ರಸಿದ್ಧನಾದ ನೀನು । **ಸುತೇಷು**—ನಮ್ಮಿಂದ ಹಿಂಡಲ್ಪಟ್ಟ । **ಸೋಮೇಷು**—ಸೋಮರಸಗಳು ನಿನಗಾಗಿ ಸಿದ್ಧವಾಗಿರುವಾಗ । **ನಃ**—ನಮ್ಮನ್ನು । **ರಾಧಸಾ**—ಶಕ್ತಿಸಾಧಕವಾದ ಅನ್ನದಿಂದಲೂ । **ಸೂನೃತಾವತಾ**—ಉತ್ತಮವಾದ ಉತ್ತೇಜಕವಾಕ್ಕುಳ್ಳದ್ದೂ । **ಪರೀಣಸಾ**—ಅತ್ಯಧಿಕವಾದುದೂ ಆದ । **ರಾಯಾ**—ಧನದಾನದಿಂದಲೂ । **ಮಾದಯಸ್ವ**—ನಮ್ಮನ್ನು ತೃಪ್ತಿಗೊಳಿಸು.

॥ ಭಾವಾರ್ಥ ॥

ಸೋಮವನ್ನು ಪಾನಮಾಡತಕ್ಕವನೂ, ಶಕ್ತಿಪಾಲಕನೂ ಆದ ಎಲೈ ಇಂದ್ರನೇ, ಪ್ರಸಿದ್ಧನಾದ ನೀನು ನಮ್ಮಿಂದ ಹಿಂಡಲ್ಪಟ್ಟ ಸೋಮರಸಗಳು ನಿನಗೆ ಅರ್ಪಿಸಲು ಸಿದ್ಧವಾಗಿರುವಾಗ ನಮ್ಮನ್ನು ಶಕ್ತಿಸಾಧಕವಾದ ಅನ್ನದಿಂದಲೂ, ಉತ್ತಮವಾದ ಉತ್ತೇಜಕವಾಕ್ಕುಳ್ಳದ್ದೂ, ಅತ್ಯಧಿಕವಾದುದೂ ಆದ ಧನದಾನದಿಂದಲೂ ನಮ್ಮನ್ನು ತೃಪ್ತಿಗೊಳಿಸು.

## English Translation

Indra, drinker of the Soma, lord of strength, now that our Soma-libations have been effused, gladden us with wholesome food and ample wealth.

॥ ಸಂಹಿತಾಪಾಠಃ ॥

ಮಾ ನ ಇಂದ್ರ ಪರಾ ವೃಣಗ್ಭವಾ ನಃ ಸಧಮಾದ್ಯಃ ।

ತ್ವಂ ನ ಊತೀ ತ್ವಮಿನ್ನ ಆಪ್ಯಂ ಮಾ ನ ಇಂದ್ರ ಪರಾ ವೃಣಕ್ ॥ ೭ ॥

॥ ಪದಪಾಠಃ ॥

ಮಾ । ನಃ । ಇಂದ್ರ । ಪರಾ । ವೃಣಕ್ । ಭವ । ನಃ । ಸಧಽಮಾದ್ಯಃ ।

ತ್ವಂ । ನಃ । ಊತೀ । ತ್ವಂ । ಇತ್ । ನಃ । ಆಪ್ಯಂ । ಮಾ । ನಃ । ಇಂದ್ರ । ಪರಾ । ವೃಣಕ್ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ನೋ ಹವಿಷಾಂ ಪ್ರದಾತ್ರ್ಯಾನಸ್ಮಾನ್ಮಾ ಪರಾ ವೃಣಕ್ । ಮಾ ಪರಿತ್ಯಾಕ್ಷೀಃ ॥ ವೃಜೀ ವರ್ಜನೇ । ರೌಧಾದಿಕಃ । ಲಙಿ ರೂಪಂ ॥ ತದೇವಾಹ । ತ್ವಂ ನೋಽಸ್ಮಾಕಂ ಸೋಮೇನ ಸಧಮಾದ್ಯಃ ಸಧಮಾದನಶೀಲೋ ಭವ । ಕಿಂಚ ಹೇ ಇಂದ್ರ ನೋಽಸ್ಮಾಂಸ್ತ್ವಮೇವೋತ್ಯೋತ್ಯಾಂ ಸ್ಥಾಪಯ । ಯುದ್ವಾ । ಊತೀ ॥ ವ್ಯತ್ಯಯೇನ ಕರ್ತರಿ ಕ್ತಿಚಿ ವಾ ನಿಪಾತಿತಃ ॥ ತ್ವಮೇವಾಸ್ಮಾಕಂ ರಕ್ಷಿತಾ ಖಲು । ತಥಾ ತ್ವಮಿತ್ । ಇದವಧಾರಣೇ । ತ್ವಮೇವಾಸ್ಮಾಕಮಾಪ್ಯಂ ಜ್ಞಾತೇಯಂ। ತ್ವಮೇವ ಬಂಧುರಿತ್ಯರ್ಥಃ। ಅತ ಏವ ಮಾ ನ ಇಂದ್ರ ಪರಾವೃಣಗಿತ್ಯೇಷ ಗತಾರ್ಥಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ನಃ**—ಯಜ್ಞಕರ್ತರಾದ ನಮ್ಮನ್ನು । **ಮಾ ಪರಾ ವೃಣಕ್**—ತ್ಯಾಗ ಮಾಡಬೇಡ । **ನಃ**—ನಮ್ಮ । **ಸಧಮಾದ್ಯಃ**—ಹರ್ಷಗಳನ್ನು ನಮ್ಮೊಡನೆ ಸೇರಿ ಅನುಭವಿಸುವವನಾಗಿ । **ಭವ**—ಆಗಿರು । **ನಃ**—ನಮ್ಮನ್ನು । **ತ್ವಂ**—ನೀನು । **ಊತೀ**—ರಕ್ಷಣೆಯೊಂದಿಗೆ ಕೂಡಿರಿಸು । **ಇಂದ್ರ**—ಎಲೈ ಇಂದ್ರನೇ । **ತ್ವಮಿತ್**—ನೀನೊಬ್ಬನೇ । **ಆಪ್ಯಂ**—ನನಗೆ ಬಂಧುವು । **ನಃ**—ನಮ್ಮನ್ನು । **ಮಾ ಪರಾ ವೃಣಕ್**—ಖಂಡಿತ ತ್ಯಾಗಮಾಡಬೇಡ.

॥ ಭಾವಾರ್ಥ ॥

ಎಲೈ ಇಂದ್ರನೇ, ಯಜ್ಞಕರ್ತರಾದ ನಮ್ಮನ್ನು ತ್ಯಾಗಮಾಡಬೇಡ. ನಮ್ಮೊಡನೆ ಸೇರಿ ನಮ್ಮ ಹರ್ಷಗಳನ್ನು ನೀನೂ ಅನುಭವಿಸು. ನಮ್ಮನ್ನು ನಿನ್ನ ರಕ್ಷಣೆಯೊಡನೆ ಸೇರಿರಿಸು ಎಲೈ ಇಂದ್ರನೇ, ನೀನೊಬ್ಬನೇ ನಮಗೆ ಬಂಧುವು. ನಮ್ಮನ್ನು ಖಂಡಿತ ತ್ಯಾಗಮಾಡಬೇಡ.

## English Translation

Leave us not, Indra, but share our joy ; you are our protection, you are our kindred ; Indra, leave us not.

। ಸಂಹಿತಾಪಾಠಃ ।

ಅಸ್ಮೇ ಇಂದ್ರ ಸಚಾ ಸುತೇ ನಿ ಷದಾ ಪೀತಯೇ ಮಧು ।
ಕೃಧೀ ಜರಿತ್ರೇ ಮಘವನ್ನವೋ ಮಹದಸ್ಮೇ ಇಂದ್ರ ಸಚಾ ಸುತೇ ॥ ೮ ॥

॥ ಪದಪಾಠಃ ॥

ಅಸ್ಮೇ ಇತಿ । ಇಂದ್ರ । ಸಚಾ । ಸುತೇ । ನಿ । ಸದ । ಪೀತಯೇ । ಮಧು ।

ಕೃಧಿ । ಜರಿತ್ರೇ । ಮಘಽವನ್ । ಅವಃ । ಮಹತ್ । ಅಸ್ಮೇ ಇತಿ । ಇಂದ್ರ । ಸಚಾ । ಸುತೇ ॥ ೮ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಅಸ್ಮೇ ಅಸ್ಮಾಭಿಃ ಸಚಾ ಸಹ ಸುತೇಽಭಿಷುತೇ ಸೋಮೇ ನಿ ಷದ । ಅಸ್ಮದೀಯೇ ಯಜ್ಞೇ ನಿಷೀದ । ಕಿಮರ್ಥಂ । ಮಧು ಪೀತಯೇ ಮಧುನಃ ॥ ಸುಪಾಂ ಸುಲುಗಿತಿ ಜಸೋ ಲುಕ್ ॥ ಮದಕರಸ್ಯ ಸೋಮಸ್ಯ ಪೀತಯೇ ಪಾನಾರ್ಥಂ । ಕಿಂಚ ಹೇ ಮಘವನ್ ಧನವನ್ನಿಂದ್ರ ಮಹದವೋ ರಕ್ಷಣಂ ಜರಿತ್ರೇ ಕೃಧಿ । ಕುರು । ಕಸ್ಮಿನ್ ಸತಿ । ಅಸ್ಮೇ ಇಂದ್ರ ಸಚಾ ಸುತ ಇತಿ ವ್ಯಾಖ್ಯಾತಃ ಪಾದಃ ॥

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಅಸ್ಮೇ**—ನಮ್ಮೊಡನೆ । **ಸಚಾ**—ಕೂಡಿಕೊಂಡು । **ಸುತೇ**—ಹಿಂಡಿರುವ ಸೋಮವು ಸಿದ್ಧವಾಗಿರುವಾಗ । **ಮಧು**—ಮಧುರವಾದ ಸೋಮವನ್ನು । **ಪೀತಯೇ**—ಪಾನಮಾಡಲು । **ನಿ ಷದ**—ನಮ್ಮ ಯಜ್ಞಸ್ಥಾನದಲ್ಲಿ ಕುಳಿತುಕೊ । **ಮಘವನ್**—ಧನವಂತನಾದ । **ಇಂದ್ರ**—ಎಲೈ ಇಂದ್ರನೇ । **ಸುತೇ**—ಸೋಮವು ಹಿಂಡಿ ಸಿದ್ಧವಾಗಿರುವಾಗ । **ಅಸ್ಮೇ ಸಚಾ**—ನಮ್ಮೊಡಗೂಡಿ । **ಜರಿತ್ರೇ**—ಸ್ತುತಿಕರ್ತನಿಗೆ । **ಮಹತ್**—ಅತ್ಯಧಿಕವಾದ । **ಅವಃ**—ರಕ್ಷಣವನ್ನು । **ಕೃಧಿ**—ಉಂಟುಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ಹಿಂಡಿರುವ ಸೋಮವು ಸಿದ್ಧವಾಗಿರುವಾಗ ಮಧುರವಾದ ಸೋಮವನ್ನು ಪಾನಮಾಡಲು ನಮ್ಮೊಡನೆ ಕೂಡಿ ನಮ್ಮ ಯಜ್ಞಸ್ಥಾನದಲ್ಲಿ ಕುಳಿತುಕೊ. ಧನವಂತನಾದ ಎಲೈ ಇಂದ್ರನೇ, ಸೋಮವು ಹಿಂಡಿ ಸಿದ್ಧವಾಗಿರುವಾಗ, ನಮ್ಮೊಡಗೂಡಿ ಸ್ತುತಿಕರ್ತನಿಗೆ ಅತ್ಯಧಿಕವಾದ ರಕ್ಷಣೆಯನ್ನು ಉಂಟುಮಾಡು

English Translation

Sit with us, Indra, at the oblation to drink the Soma; Maghavan, perform a mighty protection for your worshipper, (seated) with us at the oblation.

॥ ಸಂಹಿತಾಪಾಠಃ ॥

ನ ತ್ವಾ ದೇವಾಸ ಆಶತ ನ ಮರ್ತ್ಯಾಸೋ ಅದ್ರಿವಃ ।
ವಿಶ್ವಾ ಜಾತಾನಿ ಶವಸಾಭಿಭೂರಸಿ ನ ತ್ವಾ ದೇವಾಸ ಆಶತ ॥ ೯ ॥

॥ ಪದಪಾಠಃ ॥

ನ । ತ್ವಾ । ದೇವಾಸಃ । ಆಶತ । ನ । ಮರ್ತ್ಯಾಸಃ । ಅದ್ರಿಽವಃ ॥
ವಿಶ್ವಾ । ಜಾತಾನಿ । ಶವಸಾ । ಅಭಿಽಭೂಃ । ಅಸಿ । ನ । ತ್ವಾ । ದೇವಾಸಃ । ಆಶತ ॥ ೯ ॥

॥ ಸಾಯಣಭಾಷ್ಯಂ ॥

ಹೇ ಅದ್ರಿವೋ ವಜ್ರವನ್ನಿಂದ್ರ ತ್ವಾ ತ್ವಾಂ ದೇವಾಸಸ್ತ್ವದನ್ಯೇ ಸರ್ವೇ ದೇವಾ ನಾಶತ। ಸ್ವಕರ್ಮಣಾ ಸ್ವಬಲೇನ ವಾ ನ ವ್ಯಾಪ್ನುವಂತಿ। ನ ಮರ್ತ್ಯಾಸೋ ಮರ್ತ್ಯಾ ಮನುಷ್ಯಾಶ್ಚ ನ ವ್ಯಾಪ್ನುವಂತಿ। ಕುತ ಏವ ತದವಸೀಯತೇ। ತದಾಹ। ವಿಶ್ವಾ ವಿಶ್ವಾನಿ ಸರ್ವಾಣಿ ಜಾತಾನಿ ಭೂತಜಾತಾನಿ ಶವಸಾ ಸ್ವಬಲೇನೈವಾಭಿಭೂರಸಿ। ಅಭಿಭಾವುಕೋಽಸಿ ಭವಸಿ। ತಸ್ಮಾನ್ನ ತ್ವಾ ದೇವಾಸ ಆಶತೇತಿ ಗತಾರ್ಥಃ॥

॥ ಪ್ರತಿಪದಾರ್ಥ ॥

**ಅದ್ರಿವಃ**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ। **ತ್ವಾ**—ನಿನ್ನನ್ನು। **ದೇವಾಸಃ**—ದೇವತೆಗಳಾರೂ। **ನ ಆಶತ**—ಮೀರಿಸಲಾರರು। **ನ ಮರ್ತ್ಯಾಸಃ**—ಮಾನವರಲ್ಲಾರೂ ನಿನಗಿಂತಲೂ ಅಧಿಕರಾಗಿರಲಾರರು। **ವಿಶ್ವಾ**—ಸಮಸ್ತವಾದ। **ಜಾತಾನಿ**—ಉತ್ಪನ್ನ ವಸ್ತುಗಳನ್ನೂ। **ಶವಸಾ**—ನಿನ್ನ ಸ್ವಬಲದಿಂದ। **ಅಭಿಭೂಃ ಅಸಿ**—ನೀನೇ ಮೀರಿ ಎಲ್ಲಕ್ಕಿಂತಲೂ ಅಧಿಕನಾಗಿದ್ದೀಯೆ। **ದೇವಾಸಃ**—ದೇವತೆಗಳಲ್ಲಾರೂ। **ತ್ವಾ**—ನಿನಗಿಂತಲೂ। **ನ ಆಶತ**—ಅಧಿಕರಾಗಿರಲಾರರು.

॥ ಭಾವಾರ್ಥ ॥

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ದೇವತೆಗಳಲ್ಲಾಗಲಿ ಅಥವಾ ಮಾನವರಲ್ಲಾಗಲಿ ನಿನ್ನ ಸಮಾನರಾಗಲಿ ಅಥವಾ ನಿನಗೆ ಮೀರಿದ ಶಕ್ತಿಯುಳ್ಳವರಾಗಲಿ ಇಲ್ಲ. ಸಕಲ ಭೂತತತ್ತ್ವಗಳನ್ನೂ ನೀನೊಬ್ಬನೇ ನಿನ್ನ ಸ್ವಶಕ್ತಿಯಿಂದ ಮೀರಿ ನಿಂತಿದ್ದೀಯೆ.

English Translation

Thunderer, neither gods nor mortals equal you by their acts; you surpass all beings by your might, the gods equal you not.

॥ ಸಂಹಿತಾಪಾಠಃ ॥

ವಿಶ್ವಾಃ ಪೃತನಾ ಅಭಿಭೂತರಂ ನರಂ ಸಜೂಸ್ತತಕ್ಷುರಿಂದ್ರಂ ಜಜನುಶ್ಚ ರಾಜಸೇ।

ಕ್ರತ್ವಾ ವರಿಷ್ಠಂ ವರ ಆಮುರಿಮುತೋಗ್ರಮೋಜಿಷ್ಠಂ ತವಸಂ ತರಸ್ವಿನಂ॥

॥ ಪದಪಾಠಃ ॥

ವಿಶ್ವಾಃ। ಪೃತನಾಃ। ಅಭಿಽಭೂತರಂ। ನರಂ। ಸಽಜೂಃ। ತತಕ್ಷುಃ। ಇಂದ್ರಂ। ಜಜನುಃ। ಚ। ರಾಜಸೇ।

ಕ್ರತ್ವಾ। ವರಿಷ್ಠಂ। ವರೇ। ಆಽಮುರಿಂ। ಉತ। ಉಗ್ರಂ। ಓಜಿಷ್ಠಂ। ತವಸಂ। ತರಸ್ವಿನಂ॥ ೧೦॥

॥ ಸಾಯಣಭಾಷ್ಯಂ ॥

**ಚಾತುರ್ವಿಂಶಿಕೇಽಹನಿ ಮಾಧ್ಯಂದಿನಸವನೇ ಬ್ರಾಹ್ಮಣಾಚ್ಛಂಸಿನೋ ವಿಶ್ವಾಃ ಪೃತನಾ ಇತಿ ವೈಕಲ್ಪಿಕಃ ಸ್ತೋತ್ರಿಯಃ । ಸೂತ್ರಿತಂ ಚ । ವಿಶ್ವಾಃ ಪೃತನಾ ಅಭಿಭೂತರಂ ನರಂ ತಮಿಂದ್ರಂ ಜೋಹವೀಮಿ ॥ ಆ. ೭-೪ । ಇತಿ ।**

ವಿಶ್ವಾಃ ಸರ್ವಾಃ ವ್ಯಾಪ್ತಾ ವಾ ಪೃತನಾಃ ॥ ಪೃಙ್ ವ್ಯಾಯಾಮೇ ॥ ವ್ಯಾಪ್ರಿಯಂತ ಇತಿ ಪೃತನಾಃ ಸೇನಾಃ । ಸಜೂಃ ಪರಸ್ಪರಂ ಸಂಗತಾಃ ಸತ್ಯೋಽಭಿಭೂತರಂ ಶತ್ರೂಣಾಮತ್ಯರ್ಥಮಭಿಭವಿತಾರಂ ನರಂ ಸರ್ವಸ್ಯ ನೇತಾರಮಿಂದ್ರಂ ತತಕ್ಷುಃ । ಆಯುಧಾದಿಭಿಸ್ತೀಕ್ಷ್ಣೀಕುರ್ವಂತಿ । ಆಯುಧವಂತಮಶ್ವವಂತಂ ಚ ಚಕ್ರುರಿತ್ಯರ್ಥಃ । ಯದ್ವಾ । ಪೃತನಾ ಇತಿ ಸಂಗ್ರಾಮಾಃ । ವ್ಯಾಪ್ರಿಯಂತೇಽತ್ರೇತಿ ಪೃತನಾಃ ಸಂಗ್ರಾಮಾಃ । ಸರ್ವಾನೇವ ಸಂಗ್ರಾಮಾನಭಿಭಾವುಕಮಿಂದ್ರಂ ಸ್ತೋತಾರೋಽನ್ಯೋನ್ಯಂ ಸಂಗತಾಃ ಸ್ತುತಿಭಿಸ್ತೀಕ್ಷ್ಣಮಕುರ್ವನ್ । ಸ್ತುತೇ ಸತಿ ಬಲವಾನ್ಭವತೀತಿ । ಯದ್ವಾ । ಯಷ್ಟಾರೋ ಹವಿಷ್ಪ್ರದಾನೇನ ವೀರ್ಯವಂತಂ ಕುರ್ವಂತೀತಿ। ಕಿಂಚ ಸ್ತೋತಾರೋ ರಾಜಸೇ॥ ರಾಜತೇಸ್ತುಮರ್ಥೇಽಸೇಪ್ರತ್ಯಯಃ ॥ ಆತ್ಮನೋ ವಿರಾಜನಾರ್ಥಂ ಪ್ರಕಾಶನಾರ್ಥಂ ಸೂರ್ಯಾತ್ಮಾನಮಿಂದ್ರಂ ಜಜನುಃ । ಜನಯಾಮಾಸುಃ । ಸ್ತೋತ್ರಂ ಯಜ್ಞೇ ಪ್ರಾದುರಭಾವಯನ್ನಿತ್ಯರ್ಥಃ । ಉತಾಪಿ ಚ ಕ್ರತ್ವಾ ಸ್ವೀಯೈರ್ವೃತ್ರವಧಾದಿಕರ್ಮಭಿಶ್ಚೈವ ವರಿಷ್ಠಮುರುತಮಮಾಮುರಿಂ ಶತ್ರೂಣಾಮಾಭಿಮುಖ್ಯೇನ ಮಾರಯಿತಾರಮಿಂದ್ರಂ ವರೇ ವರಣೀಯೇ ಧನೇ ಸ್ತೋತಾರಶ್ಚಕ್ರುಃ । ಆತ್ಮನಾಂ ಧನಲಾಭಾರ್ಥಂ ಸ್ತುವಂತೀತ್ಯರ್ಥಃ । ಕೀದೃಶಂ । ಉಗ್ರಮುದ್ಗೂರ್ಣಬಲಂ ಅತ ಏವೌಜಿಷ್ಠಮೋಜಸ್ವಿತಮಂ ತವಸಂ ಪ್ರವೃದ್ಧಂ ತರಸ್ವಿನಂ ಸಂಗ್ರಾಮೇ ಶತ್ರುವಧಾರ್ಥಂ ವೇಗವಂತಮಿಂದ್ರಂ ಧನಾರ್ಥಂ ಸ್ತುವಂತಿ ॥

॥ ಪ್ರತಿಪದಾರ್ಥ ॥

**ವಿಶ್ವಾಃ**—ಸಮಸ್ತವಾದ । **ಪೃತನಾಃ**—ಋತ್ವಿಗಾದಿಗಳೂ । **ಸಜೂಃ**—ಒಟ್ಟಿಗೆ ಸೇರಿಕೊಂಡು । **ಅಭಿಭೂತರಂ**—ಶತ್ರುಗಳನ್ನು ಸೋಲಿಸುವವನೂ । **ನರಂ**—ನೇತೃವೂ ಆದ । **ಇಂದ್ರಂ**—ಇಂದ್ರನನ್ನು । **ತತಕ್ಷುಃ**—(ಹವಿಷ್ಪ್ರದಾನಾದಿಗಳಿಂದ) ವೀರ್ಯವಂತನನ್ನಾಗಿ ಮಾಡಿದರು । **ರಾಜಸೇ**—ಸ್ವಪ್ರಕಾಶಾರ್ಥವಾಗಿ । **ಜಜನುಃ**—ಅವನನ್ನು ಆವಿರ್ಭೂತನಾಗುವಂತೆ ಮಾಡಿದ್ದಾರೆ । **ಉತ**—ಮತ್ತು । **ಕ್ರತ್ವಾ**—ತಮ್ಮ ಉತ್ತಮವಾದ ಕರ್ಮಗಳಿಂದ । **ವರಿಷ್ಠಂ**—ಅತ್ಯುತ್ತಮನೂ । **ಆಮುರಿಂ**—ಶತ್ರುಗಳ ಮೇಲೆ ಬಿದ್ದು ನಾಶಮಾಡುವವನೂ । **ಉಗ್ರಂ**—ಅತ್ಯಧಿಕವಾದಬಲವುಳ್ಳವನೂ । **ಓಜಿಷ್ಠಂ**—ಅತಿಶಯವಾದ ವೀರ್ಯವುಳ್ಳವನೂ । **ತವಸಂ**—ಶಕ್ತಿಯುತನೂ । **ತರಸ್ವಿನಂ**—ವೇಗಗಾಮಿಯೂ ಆದ ಇಂದ್ರನನ್ನು । **ವರೇ**—ಉತ್ತಮವಾದ ಸ್ತುತಿಪಾತ್ರನನ್ನಾಗಿ ಮಾಡಿದರು.

॥ ಭಾವಾರ್ಥ ॥

ಸಮಸ್ತವಾದ ಋತ್ವಿಗಾದಿಗಳೂ ಒಟ್ಟಿಗೆ ಸೇರಿಕೊಂಡು ಶತ್ರುಗಳನ್ನು ಸೋಲಿಸುವವನೂ, ನೇತೃವೂ ಆದ ಇಂದ್ರನನ್ನು ಹವಿಷ್ಪ್ರದಾನಾದಿಗಳಿಂದ ವೀರ್ಯವಂತನನ್ನಾಗಿ ಮಾಡಿದರು. ಸ್ವಪ್ರಕಾಶಾರ್ಥವಾಗಿ ಅವನನ್ನು ಆವಿರ್ಭೂತನಾಗುವಂತೆ ಮಾಡಿದರು. ತಮ್ಮ ಉತ್ತಮವಾದ ಕರ್ಮಗಳಿಂದ ಅತ್ಯುತ್ತಮನೂ, ಶತ್ರುಗಳನ್ನು ಪ್ರತಿಭಟಿಸಿ

ನಾಶಮಾಡುವವನೂ, ಅತ್ಯಧಿಕವಾದ ವೀರ್ಯವಂತನೂ, ಓಜಸ್ವಿಯೂ, ವೇಗಗಾಮಿಯೂ ಆದ ಇಂದ್ರನನ್ನು ಉತ್ತಮವಾದ ಸ್ತುತಿಪಾತ್ರನನ್ನಾಗಿ ಮಾಡಿದ್ದಾರೆ

English Translation

The assembled (priests) have roused Indra, the leader, the conqueror in all battles; they have created him ( by their hymns ) to shine,—him the mightiest in his acts, the smiter of enemies for spoil, the terrible, the most powerful, the stalwart, the furious.

॥ ವಿಶೇಷವಿಷಯಗಳು ॥

ಯಾಗದ ಚಾತುರ್ವಿಂಶಿಕವೆಂಬ ದಿನದ ಮಾಧ್ಯಂದಿನಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ವಿಶ್ವಾಃ ಪೃತನಾಃ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು ವೈಕಲ್ಪಿಕಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ವಿಶ್ವಾಃ ಪೃತನಾ ಅಭಿಭೂತರಂ ನರಂ ತಮಿಂದ್ರಂ ಜೋಹವೀಮಿ** ಎಂಬ ಸೂತ್ರದಿಂದ (ಆ. ೭-೪) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

**ಸಮೀಂ ರೇಭಾಸೋ ಅಸ್ವರನ್ನಿಂದ್ರಂ ಸೋಮಸ್ಯ ಪೀತಯೇ ।**

**ಸ್ವರ್ಪತಿಂ ಯದೀಂ ವೃಧೇ ಧೃತವ್ರತೋ ಹ್ಯೋಜಸಾ ಸಮೂತಿಭಿಃ ॥ ೧೧ ॥**

॥ ಪದಪಾಠಃ ॥

**ಸಂ । ಈಂ । ರೇಭಾಸಃ । ಅಸ್ವರನ್ । ಇಂದ್ರಂ । ಸೋಮಸ್ಯ । ಪೀತಯೇ ।**

**ಸ್ವಃಽಪತಿಂ । ಯತ್ । ಈಂ । ವೃಧೇ । ಧೃತಽವ್ರತಃ । ಹಿ । ಓಜಸಾ । ಸಂ । ಊತಿಽಭಿಃ ॥ ೧೧ ॥**

॥ ಸಾಯಣಭಾಷ್ಯಂ ॥

**ರೇಭಾಸಃ ॥ ರೇಭೃ ಶಬ್ದೇ ॥ ಶಬ್ದಯಿತಾರಃ ಸ್ತೋತಾರಃ । ಯದ್ವಾ । ರೇಭಾಸಃ ಕಶ್ಯಪಪುತ್ರಾ ರೇಭಾಸ ಏತನ್ನಾಮಕಾ ಋಷಯಃ । ಈಮೇನಮಿಂದ್ರಂ ಸಮಸ್ವರನ್ । ಸಮ್ಯಗಶಬ್ದಯನ್ । ಸಮಸ್ತುವನ್ । ಕಿಮರ್ಥಂ । ಸೋಮಸ್ಯ ಪೀತಯೇ ಸೋಮಪಾನಾಯ । ಕಿಂಚ ಸ್ವರ್ಪತಿಂ ಸ್ವರ್ಗಸ್ಯ ಪಾಲಯಿತಾರಂ ಧನಸ್ಯ ಸ್ವಾಮಿನಂ ವೇನಮೇನಮಿಂದ್ರಂ ಯದ್ಯದಾ ವೃಧೇ ಹವಿರ್ಭಿರ್ವರ್ಧನಾಯ ಸಂಸ್ತುವಂತಿ ತದಾ ಧೃತವತೋ ಧೃತಕರ್ಮೇಂದ್ರ ಓಜಸಾ ಬಲೇನ ಸ್ತೋತೃಭಿರೂತಿಭಿರ್ಮರುದ್ಭಿಃ ಪಾಲನೈಶ್ಚ ಸಹ ಸಂಗಚ್ಛತೇ । ಸ್ತುತಿಭಿರ್ಬಲಂ ಮರುದ್ಭಿಃ ಪಾಲನಂ ಚೇಂದ್ರಸ್ಯ ಭವತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ರೇಭಾಸಃ**—ಸ್ತುತಿಕರ್ತರು । **ಈಂ ಇಂದ್ರಂ**—ಈ ಇಂದ್ರನನ್ನು । **ಸೋಮಸ್ಯ**—ಸೋಮರಸದ । **ಪೀತಯೇ**—ಪಾನಾರ್ಥವಾಗಿ । **ಸಮಸ್ವರನ್**—ಒಟ್ಟಿಗೆ ಸೇರಿ ಸ್ತುತಿಸಿದರು । **ಸ್ವರ್ಪತಿಂ**—ಸ್ವರ್ಗಪಾಲಕನಾದ । **ಈಂ**—ಈ ಇಂದ್ರನನ್ನು । **ಯತ್**—ಯಾವಾಗ । **ವೃಧೇ**—ಅವನ ಪುಷ್ಟಿಗಾಗಿ ಸ್ತುತಿಸುವರೋ ಆಗ । **ಧೃತವ್ರತಃ**–ನಿಯಮಧಾರಿಯಾದ ಇಂದ್ರನು । **ಓಜಸಾ**—ತನ್ನ ಶಕ್ತಿಯೊಡನೆಯೂ । **ಊತಿಭಿಃ**—ರಕ್ಷಕವಾದ ಮರುತ್ತುಗಳೊಡನೆಯೂ । **ಸಂ**—ಕೂಡಿಕೊಳ್ಳುತ್ತಾನೆ

॥ ಭಾವಾರ್ಥ ॥

ಸ್ತುತಿಕರ್ತರು (ಅಥವಾ ರೇಭರೆಂಬ ಋಷಿಗಳು) ಈ ಇಂದ್ರನನ್ನು ಸೋಮರಸದ ಪಾನಾರ್ಥವಾಗಿ ಒಟ್ಟಿಗೆ ಸೇರಿಸ್ತುತಿಸಿದ್ದಾರೆ. ಸ್ವರ್ಗಪಾಲಕನಾದ ಈ ಇಂದ್ರನನ್ನು ಯಾವಾಗ ಅವನ ವೃಷ್ಟಿಗಾಗಿ ಸ್ತುತಿಸುವರೋ ಆಗ ನಿಯಮಧಾರಿಯಾದ ಇಂದ್ರನು ತನ್ನ ಶಕ್ತಿಯೊಡನೆಯೂ ರಕ್ಷಕವಾದ ಮರುತ್ತುಗಳೊಡನೆಯೂ ಕೂಡಿಕೊಳ್ಳುತ್ತಾನೆ.

English Translation

The Rebhas have together praised Indra that he may drink the Soma ; when (they praise) the lord of heaven that he may wax strong (by the oblations), then he, observant of pious rites, is united to his strength and his protecting guards.

॥ ಸಂಹಿತಾಪಾಠಃ ॥

ನೇಮಿಂ ನಮಂತಿ ಚಕ್ಷಸಾ ಮೇಷಂ ವಿಪ್ರಾ ಅಭಿಸ್ವರಾ ।
ಸುದೀತಯೋ ವೋ ಅದ್ರುಹೋಽಪಿ ಕರ್ಣೇ ತರಸ್ವಿನಃ ಸಮೃಕ್ವಭಿಃ ॥೧೨॥

॥ ಪದಪಾಠಃ ॥

ನೇಮಿಂ । ನಮಂತಿ । ಚಕ್ಷಸಾ । ಮೇಷಂ । ವಿಪ್ರಾಃ । ಅಭಿಽಸ್ವರಾ ।
ಸುಽದೀತಯಃ । ವಃ । ಅದ್ರುಹಃ । ಅಪಿ । ಕರ್ಣೇ । ತರಸ್ವಿನಃ । ಸಂ । ಋಕ್ವಽಭಿಃ ॥ ೧೨ ॥

॥ ಸಾಯಣಭಾಷ್ಯಂ ॥

ನೇಮಿಂ । ಅರಾನ್ಯಥಾ ನೇಮಿರ್ವ್ಯಾಪ್ನೋತಿ ತದ್ವತ್ಸರ್ವಂ ವ್ಯಾಪ್ನೋತೀ । ತಾದೃಶಂ ನಮನಶೀಲಮಿಂದ್ರಂ ಚಕ್ಷಸಾ ದರ್ಶನಮಾತ್ರೇಣೈವ ನಮಂತಿ । ಕಾಶ್ಯಪಾ ರೇಭಾಃ ಸ್ತೋತಾರೋ ವಾ ನಮಸ್ಕುರ್ವಂತಿ । ತತೋ ವಿಪ್ರಾ ಮೇಧಾವಿನೋ ಮೇಷಂ । ಇಂದ್ರೋ ಮೇಷೋ ಭೂತ್ವಾ ಮೇಧಾತಿಥಿಂ ಸ್ವರ್ಗಮನಯತ್ । ತಸ್ಮಾನ್ಮೇಧಾತಿಥೇರ್ಮೇಷಭೂತಮಿಂದ್ರಮಭಿಸ್ವರಾಭಿಸ್ವರೇಣ ಸ್ತೋತ್ರೇಣ ಪ್ರಣ–

ಮಂತಿ । ಇದಾನೀಂ ಯಜಮಾನಃ ಸ್ತೋತೄನಾಹ । ಅಪಿ ಚ ಸುದೀತಯಃ ಶೋಭನದೀಪ್ತಯೋಽದ್ರುಹಃ ಕಸ್ಯಾಪ್ಯದ್ರೋಗ್ಧಾರೋ ವೋ ಯೂಯಂ ॥ ಛಾಂದಸೋ ವಸಾದೇಶಃ ॥ ತರಸ್ವಿನಃ ಕರ್ಮಸು ಸ್ತೋತ್ರೇಷು ವಾ ತ್ವರಾಯುಕ್ತಾಃ ಸಂತ ಇಂದ್ರಸ್ಯ ಕರ್ಣೇ ಶ್ರೋತ್ರಸಮೀಪ ಋಕ್ವಭಿರರ್ಚನಾಯುಕ್ತೈರ್ಮಂತ್ರೈಃ । ಯದ್ವಾ । ಋಚೋ ಬಹ್ವ್ಯೋ ಯೇಷು ಸಂತಿ ತೈಃ ಶಸ್ತ್ರಾದಿಭಿಃ । ಸಂಸ್ತುತ । ಇಂದ್ರೋ ಯಥಾ ಯುಷ್ಮದೀಯಾನಿ ಸ್ತೋತ್ರಶಸ್ತ್ರಾದೀನಿ ಶೃಣೋತಿ ತಥಾ ಸಮ್ಯಗಭಿಷ್ಟುತೇತ್ಯರ್ಥಃ ॥

॥ ಪ್ರತಿಪದಾರ್ಥ ॥

**ನೇಮಿಂ**—ಚಕ್ರದ ಅರಗಳನ್ನು ಹೊರವಲಯವು ಸುತ್ತುವರಿಯುವಂತೆ ಸಕಲ ಭೂತಗಳನ್ನೂ ಒಳಗೊಂಡಿರುವ ಇಂದ್ರನನ್ನು । **ಚಕ್ಷಸಾ**—ದರ್ಶನಮಾತ್ರದಿಂದಲೇ । **ನಮಂತಿ**—ಸ್ತುತಿಕರ್ತರು (ಅಥವಾ ರೇಭರು) ನಮಸ್ಕರಿಸುತ್ತಾರೆ । **ವಿಪ್ರಾಃ**—ಮೇಧಾವಿಗಳಾದ ಸ್ತುತಿಕರ್ತರು । **ಮೇಷಂ**—ಮೇಷರೂಪಿಯಾದ ಇಂದ್ರನನ್ನು । **ಅಭಿಸ್ವರಾ**—ಸ್ತುತಿಪೂರ್ವಕವಾಗಿ ನಮಸ್ಕರಿಸುತ್ತಾರೆ । **ಅಪಿ**—ಮತ್ತು । **ಸುದೀತಯಃ**—ಉತ್ತಮವಾದ ಕಾಂತಿಯುಕ್ತರೂ । **ಅದ್ರುಹಃ**—ದ್ರೋಹರಹಿತರೂ ಆದ ಎಲೈ ಸ್ತುತಿಕರ್ತರೇ । **ವಃ**—ನೀವು । **ತರಸ್ವಿನಃ**—ಕರ್ಮಕುಶಲರಾಗಿ । **ಕರ್ಣೇ**—ಇಂದ್ರನ ಕಿವಿಯ ಹತ್ತಿರ । **ಋಕ್ವಭಿಃ**—ಪೂಜ್ಯವಾದ ಮಂತ್ರಗಳಿಂದ । **ಸಂ**—ಸ್ತುತಿಸಿರಿ.

॥ ಭಾವಾರ್ಥ ॥

ಚಕ್ರದ ಹೊರವಲಯವು ಚಕ್ರದ ಅರಗಳನ್ನು ಸುತ್ತುವರಿಯುವಂತೆ ಸಕಲಭೂತಗಳನ್ನೂ ಆವರಿಸಿ ಒಳಗೊಂಡಿರುವ ಇಂದ್ರನನ್ನು ಸ್ತುತಿಕರ್ತರು ದರ್ಶನಮಾತ್ರದಿಂದಲೇ ನಮಸ್ಕರಿಸುತ್ತಾರೆ. ಮೇಷರೂಪಿಯಾದ ಇಂದ್ರನನ್ನು ಸ್ತುತಿಪೂರ್ವಕವಾಗಿ ನಮಸ್ಕರಿಸುತ್ತಾರೆ. ಉತ್ತಮವಾದ ಕಾಂತಿಯುಕ್ತರೂ, ದ್ರೋಹರಹಿತರೂ ಆದ ಎಲೈ ಸ್ತುತಿಕರ್ತರೇ, ನೀವು ಕರ್ಮಕುಶಲರಾಗಿ ಇಂದ್ರನ ಕಿವಿಯ ಹತ್ತಿರ ಪೂಜ್ಯವಾದ ಮಂತ್ರಗಳಿಂದ ಸ್ತುತಿಸಿರಿ.

## English Translation

At the first sight (the Rebhas) bow to him who is the circumference of the wheel, the priests (worship) with their praise (Indra) the ram: radiant and unharming, you also, full of earnestness, sing in his ear with your hymns.

॥ ಸಂಹಿತಾಪಾಠಃ ॥

ತಮಿಂದ್ರಂ ಜೋಹವೀಮಿ ಮಘವಾನಮುಗ್ರಂ ಸತ್ರಾ ದಧಾನಮಪ್ರತಿ-
ಷ್ಕುತಂ ಶವಾಂಸಿ ।
ಮಂಹಿಷ್ಠೋ ಗೀರ್ಭಿರಾ ಚ ಯಜ್ಞಿಯೋ ವವರ್ತದ್ರಾಯೇ ನೋ ವಿಶ್ವಾ
ಸುಪಥಾ ಕೃಣೋತು ವಜ್ರೀ ॥ ೧೩ ॥

॥ ಪದಪಾಠಃ ॥

ತಂ । ಇಂದ್ರಂ । ಜೋಹವೀಮಿ । ಮಘsವಾನಂ । ಉಗ್ರಂ । ಸತ್ರಾ । ಧಧಾನಂ । ಅಪ್ರತಿsಸ್ಕುತಂ । ಶವಾಂಸಿ ॥

ಮಂಹಿಷ್ಠಃ । ಗೀಃsಭಿಃ । ಆ । ಚ । ಯಜ್ಞಿಯಃ । ವವರ್ತತ್ । ರಾಯೇ । ನಃ । ವಿಶ್ವಾ । ಸುsಪಥಾ । ಕೃಣೋತು । ವಜ್ರೀ ॥ ೧೩ ॥

॥ ಸಾಯಣಭಾಷ್ಯಂ ॥

ಪೂರ್ವೋಕ್ತ ಏವ ಶಸ್ತ್ರೇ ವೈಕಲ್ಪಿಕಸ್ಯಾನುರೂಪತೃಚಸ್ಯ ತಮಿಂದ್ರಮಿತ್ಯಾದ್ಯಾಃ । ಸೂತ್ರಮುದಾಹೃತಂ ॥

ತಂ ಪೂರ್ವೋಕ್ತಗುಣೋಪೇತಮಿಂದ್ರಂ ಜೋಹವೀಮಿ । ಯಷ್ಟಾಹಂ ಪುನರಾಹ್ವಯಾಮಿ ॥ ಹ್ವಯತೇರಭ್ಯಸ್ತಸ್ಯ ಚೇತಿ ಸಂಪ್ರಸಾರಣಂ ॥ ಕೀದೃಶಂ । ಮಘವಾನಂ ಮಂಹನೀಯಧನವಂತಮುಗ್ರಮುದ್ಗೂರ್ಣಬಲಂ ಸತ್ರಾ ಸತ್ಯಂ ಯಥಾರ್ಥಮೇವ ಶವಾಂಸಿ ಬಲಾನಿ ದಧಾನಂ ಅತ ಏವಾಪ್ರತಿಷ್ಕುತಂ ಶತ್ರುಭಿರಪ್ರತಿರೋಧನೀಯಮಾಹ್ವಯಾಮಿ । ಕಿಂಚ ಮಂಹಿಷ್ಠಃ ಪೂಜ್ಯತಮೋ ದಾತೃತಮೋ ವಾ ಯಜ್ಞಿಯೋ ಯಜ್ಞಾರ್ಹ ಇಂದ್ರೋ ಗೀರ್ಭಿರಸ್ಮದೀಯಾಭಿಃ ಸ್ತುತಿಭಿರಾ ವವರ್ತಚ್ಚ । ಯಜ್ಞೇಷ್ವಾಭಿಮುಖ್ಯೇನ ವರ್ತತಾಂ ಚ ॥ ವರ್ತತೇರ್ಣ್ಯಂತಸ್ಯ ಚಙಿ ರೂಪಂ । ಚವಾಯೋಗೇ ಪ್ರಥಮೇತಿ ನ ನಿಘಾತಃ । ಚಙ್ಯನ್ಯತರಸ್ಯಾಮಿತಿ ಸ್ವರಃ ॥ ತತೋ ವಜ್ರೀ ವಜ್ರವಾನಿಂದ್ರೋ ನೋಽಸ್ಮಾಕಂ ರಾಯೇ ಧನಾಯ ವಿಶ್ವಾ ವಿಶ್ವಾನಿ ಸರ್ವಾಣ್ಯೇವ ಸುಪಥಾ ಸುಮಾರ್ಗಾಣಿ ಕೃಣೋತು ಚ । ಕರೋತು । ಧನಂ ಸರ್ವದಿಕ್ಸ್ಥಮಸ್ಮಾನ್ ಪ್ರಾಪ್ನೋತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಮಘವಾನಂ**—ಧನವಂತನೂ । **ಉಗ್ರಂ**—ಅತ್ಯಧಿಕವಾದ ಬಲವುಳ್ಳವನೂ । **ಸತ್ರಾ**—ಸತ್ಯಾತ್ಮಕವಾದ । **ಶವಾಂಸಿ**—ಬಲಗಳನ್ನು । **ದಧಾನಂ**—ಹೊಂದಿರುವವನೂ । **ಅಪ್ರತಿಷ್ಕುತಂ**—ಅಪ್ರತಿಹತನೂ ಆದ । **ತಂ ಇಂದ್ರಂ**—ಆ ಇಂದ್ರನನ್ನೇ । **ಜೋಹವೀಮಿ**—ಪದೇ ಪದೇ ಪ್ರಾರ್ಥಿಸಿ ಕರೆಯುತ್ತೇನೆ । **ಮಂಹಿಷ್ಠಃ**—ಅತ್ಯಂತ ಪೂಜ್ಯನೂ । **ಯಜ್ಞಿಯಃ**—ಯಜ್ಞಾರ್ಹನೂ ಆದ ಇಂದ್ರನು । **ಗೀರ್ಭಿಃ**—ಸ್ತುತಿಗಳಿಂದ ಪ್ರೀತನಾಗಿ । **ಆ ವವರ್ತತ್ ಚ**—ಯಜ್ಞಾಭಿಮುಖವಾಗಿ ಬರಲಿ । **ವಜ್ರೀ**—ವಜ್ರಾಯುಧಧಾರಿಯಾದ ಇಂದ್ರನು । **ನಃ**—ನಮಗೆ । **ರಾಯೇ**—ಧನಲಾಭಾರ್ಥವಾಗಿ । **ವಿಶ್ವಾ**—ಸಮಸ್ತವಾದ । **ಸುಪಥಾ**—ಸನ್ಮಾರ್ಗಗಳನ್ನೂ । **ಕೃಣೋತು**—ನಿರ್ಮಿಸಲಿ.

॥ ಭಾವಾರ್ಥ ॥

ಧನವಂತನೂ ಅತ್ಯಧಿಕವಾದ ಬಲವುಳ್ಳವನೂ, ಸತ್ಯಾತ್ಮಕವಾದ ಬಲಗಳನ್ನು ಹೊಂದಿರುವವನೂ, ಅಪ್ರತಿಹತನೂ ಆದ ಇಂದ್ರನನ್ನೇ ಪದೇ ಪದೇ ಪ್ರಾರ್ಥಿಸಿ ಕರೆಯುತ್ತೇನೆ. ಅತ್ಯಂತ ಪೂಜ್ಯನೂ, ಯಜ್ಞಾರ್ಹನೂ ಆದ ಇಂದ್ರನು ಸ್ತುತಿಗಳಿಂದ ಪ್ರೀತನಾಗಿ ಯಜ್ಞಾಭಿಮುಖವಾಗಿ ಬರಲಿ. ವಜ್ರಾಯುಧಧಾರಿಯಾದ ಇಂದ್ರನು ನಮಗೆ ಧನಲಾಭಾರ್ಥವಾಗಿ ಸಮಸ್ತ ಸನ್ಮಾರ್ಗಗಳನ್ನೂ ನಿರ್ಮಿಸಲಿ.

॥ ಭಾವಾರ್ಥ ॥

ಓಂದೆ ಹೇಳಿದ ಶಸ್ತ್ರಮಂತ್ರಗಳಲ್ಲಿ (ಈ ಸೂಕ್ತದ ೧೦ ನೇ ಋಕ್ಕು) ವೈಕಲ್ಪಿಕಾನುರೂಪತೃಚವನ್ನು ಪಠಿಸುವಾಗ ತಮಿಂದ್ರಂ ಎಂಬ ಈ ಋಕ್ಕನ್ನು ತೃಚದ ಮೊದಲನೆಯ ಋಕ್ಕನ್ನಾಗಿ ಪಠಿಸಬೇಕೆಂದು ಹಿಂದೆ ಹೇಳಿದ ಸೂತ್ರದಲ್ಲಿಯೇ ಉದಾಹರಿಸಲಾಗಿದೆ

## English Translation

Again and again I invoke the strong Indra, Maghavan, who alone really possess might, the irresistible; may he draw nigh through our songs most bounteous and worthy of sacrifice; may he, the thunderer, make all things prosperous for our wealth.

॥ ಸಂಹಿತಾಪಾಠಃ ॥

ತ್ವಂ ಪುರ ಇಂದ್ರ ಚಿಕಿದೇನಾ ವ್ಯೋಜಸಾ ಶ್ಯವಿಷ್ಠ ಶಕ್ರ ನಾಶಯಧ್ಯೈ ।
ತ್ವದ್ವಿಶ್ವಾನಿ ಭುವನಾನಿ ವಜ್ರಿನ್ದ್ಯಾವಾ ರೇಜೇತೇ ಪೃಥಿವೀ ಚ ಭೀಷಾ ॥೧೪॥

॥ ಪದಪಾಠಃ ॥

ತ್ವಂ । ಪುರಃ । ಇಂದ್ರ । ಚಿಕಿತ್ । ಏನಾಃ । ವಿ । ಓಜಸಾ । ಶವಿಷ್ಠ । ಶಕ್ರ । ನಾಶಯಧ್ಯೈ ।
ತ್ವತ್ । ವಿಶ್ವಾನಿ । ಭುವನಾನಿ । ವಜ್ರಿನ್ । ದ್ಯಾವಾ । ರೇಜೇತೇ ಇತಿ । ಪೃಥಿವೀ ಇತಿ । ಚ । ಭೀಷಾ ॥

॥ ಸಾಯಣಭಾಷ್ಯಂ ॥

ಹೇ ಶವಿಷ್ಠ ಬಲವತ್ತಮ ಅತ ಏವ ಹೇ ಶಕ್ರ ಶತ್ರುಹನನಸಮರ್ಥ ಹೇ ಇಂದ್ರ ತ್ವಮೇನಾಃ ॥ ಅನ್ವಾದೇಶೇ ॥ ಏತಾನಿ ಪುರಃ ಶಂಬರಸ್ಯ ಪುರಾಣ್ಯೋಜಸಾ ಸ್ವೀಯೇನೈವ ತೇಜಸಾ ವಿ ನಾಶಯಧ್ಯೈ ವಿನಾಶಯಿತುಂ ಚಿಕಿಜ್ಜ್ಞಾತಾ ಭವಸಿ ॥ ನಶೇರ್ಣ್ಯಂತಾಚ್ಛಧ್ಯೈಪ್ರತ್ಯಯಃ ॥ ಪುನರಪಿ ಸಾಮರ್ಥ್ಯಂ ಪ್ರಶಂಸತಿ । ಹೇ ವಜ್ರಿನ್ ವಜ್ರವನ್ನಿಂದ್ರ ವಿಶ್ವಾನಿ ಸರ್ವಾಣಿ ಭುವನಾನಿ ಭೂತಜಾತಾನಿ ತ್ವತ್ತ್ವತ್ತೋ ಭೀತ್ಯಾ ಕಂಪಂತೇ । ತಥಾ ದ್ಯಾವಾಪೃಥಿವೀ ॥ ದಿವೋ ದ್ಯಾವೇತಿ ದ್ಯಾವಾದೇಶಃ । ಅದ್ಯುದಾತ್ತತ್ವಂ । ಪೃಥಿವೀ ಜೀಷಂತತ್ವೇನಾಂತೋದಾತ್ತಃ । ದೇವತಾದ್ವಂದ್ವೇ ಚೇತ್ಯುಭಯಪದಪ್ರಕೃತಿಸ್ವರತ್ವಂ । ವಿಪ್ರಕರ್ಷಸ್ತು ಛಾಂದಸಃ ॥ ದ್ಯಾವಾಪೃಥಿವೀ ಚ ಭೀಷಾ ತ್ವತ್ತೋ ಭೀತ್ಯಾ ರೇಜೇತೇ । ಕಂಪೇತೇ । ಅರೇಜೇತಾಂ ರೋದಸೀ । ಋ. ೧-೩೧-೩ । ಇತಿ ನಿಗಮಃ । ಸರ್ವೇ ತ್ವದಧೀನಾ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಶವಿಷ್ಠ**—ಅತ್ಯತಿಶಯವಾದ ಶಕ್ತಿಯುಳ್ಳವನೂ । **ಶಕ್ರ**—ಶತ್ರುನಾಶಕನೂ ಆದ । **ಇಂದ್ರ**—ಎಲೈ ಇಂದ್ರನೇ । **ತ್ವಂ**—ನೀನು । **ಏನಾಃ**—ಪ್ರಸಿದ್ಧವಾದ । **ಪುರಃ**—ಶಂಬರನ ಪಟ್ಟಣಗಳನ್ನು । **ಓಜಸಾ**—ನಿನ್ನ ಶಕ್ತಿಯಿಂದ । **ವಿ ನಾಶಯಧ್ಯೈ**—ನಾಶಮಾಡುವುದಕ್ಕೆ । **ಚಿಕೇತ್**—ಯುಕ್ತಿಯನ್ನು ತಿಳಿದಿದ್ದೀಯೆ । **ವಜ್ರಿನ್**—ವಜ್ರಾಯುಧಧಾರಿಯಾದ ಎಲೈ ಇಂದ್ರನೇ । **ವಿಶ್ವಾ**—ಸಮಸ್ತವಾದ । **ಭುವನಾನಿ**—ಭೂತಜಾತಗಳೂ । **ತ್ವತ್**—ನಿನಗಾಗಿ (ಬೆದರುತ್ತವೆ) । **ದ್ಯಾವಾಪೃಥಿವೀ ಚ**—ದ್ಯಾವಾಪೃಥಿವಿಗಳೂ ಸಹ । **ಭೀಷಾ**—ನಿನ್ನ ಬೆದರಿಕೆಯಿಂದಲೇ । **ರೇಜೇತೇ**—ನಡಗುತ್ತವೆ.

॥ ಭಾವಾರ್ಥ ॥

ಅತ್ಯತಿಶಯವಾದ ಶಕ್ತಿಯುಳ್ಳವನೂ, ಶತ್ರುನಾಶಕನೂ ಆದ ಎಲೈ ಇಂದ್ರನೇ, ನೀನು ಪ್ರಸಿದ್ಧವಾದ ಶಂಬರನ ಪಟ್ಟಣಗಳನ್ನು ನಿನ್ನ ಶಕ್ತಿಯಿಂದ ನಾಶಮಾಡುವುದಕ್ಕೆ ಯುಕ್ತಿಯನ್ನು ತಿಳಿದಿದ್ದೀಯೆ ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ಸಮಸ್ತವಾದ ಭೂತಜಾತಗಳೂ ನಿನಗಾಗಿ ಬೆದರುತ್ತವೆ. ದ್ಯಾವಾಪೃಥಿವಿಗಳೂ ನಿನ್ನ ಬೆದರಿಕೆಯಿಂದಲೇ ನಡಗುತ್ತವೆ.

English Translation

Indra, mighty Sakra, you know how to destroy those cities (of (Sambhara) by your strength at you all worlds tremble, thunderer,—heaven and earth (tremble) with fear.

। ಸಂಹಿತಾಪಾಠಃ ।

ತನ್ಮ ಋತಮಿಂದ್ರ ಶೂರ ಚಿತ್ರ ಪಾತ್ವಪೋ ನ ವಜ್ರಿನ್ದುರಿತಾತಿ ಪರ್ಷಿ ಭೂರಿ ।
ಕದಾ ನ ಇಂದ್ರ ರಾಯ ಆ ದಶಸ್ಯೇರ್ವಿಶ್ವಪ್ಸ್ನ್ಯಸ್ಯ ಸ್ಪೃಹಯಾಯ್ಯಸ್ಯ ರಾಜನ್ ॥ ೧೫ ॥

॥ ಪದಪಾಠಃ ॥

ತತ್ । ಮಾ । ಋತಂ । ಇಂದ್ರ । ಶೂರ । ಚಿತ್ರ । ಪಾತು । ಅಪಃ । ನ । ವಜ್ರಿನ್ । ದುಃಽಇತಾ । ಅತಿ । ಪರ್ಷಿ । ಭೂರಿ ।
ಕದಾ । ನಃ । ಇಂದ್ರ । ರಾಯಃ । ಆ । ದಶಸ್ಯೇಃ । ವಿಶ್ವಽಪ್ಸ್ನ್ಯಸ್ಯ । ಸ್ಪೃಹಯಾಯ್ಯಸ್ಯ । ರಾಜನ್ ॥

। ಸಾಯಣಭಾಷ್ಯಂ ।

**ಹೇ ಶೂರ ಬಲವಂಶ್ಚಿತ್ರ ಚಾಯನೀಯ ವಿವಿಧರೂಪ ವಾ । ಇಂದ್ರೋ ಮಾಯಾಭಿಃ ಪುರುರೂಪ ಈಯತೇ । ಋ. ೬.೪೭.೧೮ । ಇತ್ಯಾದಿಷು ದೃಷ್ಟತ್ವಾತ್ । ಬಹುವಿಧರೂಪ ಹೇ ಇಂದ್ರ ತತ್**

ಪ್ರಶಸ್ತಂ ತ್ವದೀಯಮನೃತಂ ಸತ್ಯಂ ಮಾ ಮಾಂ ಪಾತು । ಸರ್ವತೋ ರಕ್ಷತು । ಕಿಂಚ ಹೇ ವಜ್ರಿನ್ ವಜ್ರವನ್ನಿಂದ್ರ ಭೂರಿ ॥ ಸುಪೋ ಲುಕ್ ॥ ಭೂರೀಣಿ ಬಹೂನಿ ದುರಿತಾ ದುರಿತಾನಿ ಪಾಪಾನ್ಯತಿ ಪರ್ಷಿ । ಅತೀತ್ಯ ಪಾರಯ । ತತ್ರ ದೃಷ್ಟಾಂತಃ ॥ ಅಪೋ ನ ಯಥಾ ನಾವಿಕ ಉದಕಾನಿ ಮನುಷ್ಯಾನ್ಪಾರಯತಿ ತದ್ವದಸ್ಮಾನ್ಪಾಪಾನಿ ಪಾರಯ । ಹೇ ರಾಜನ್ ದೀಪ್ಯಮಾನ ಹೇ ಇಂದ್ರ ವಿಶ್ವಪ್ಸ್ನ್ಯಸ್ಯ ॥ ಪ್ಸ ಇತಿ ರೂಪನಾಮ । ರೂಪೇ ಸಾಧು ಪ್ಸ್ನ್ಯಂ । ನಕಾರೋಽಪಜನಶ್ಛಾಂದಸಃ ॥ ಬಹುರೂಪಂ ತತ್ ಸ್ಪೃಹಯಾ-ಯ್ಯಸ್ಯ ಸರ್ವೈಃ ಸ್ಪೃಹಣೀಯಂ ರಾಯಃ ॥ ಕ್ರಿಯಾಗ್ರಹಣಮಿತಿ ಸಂಪ್ರದಾನಸಂಜ್ಞಾ । ಚತುರ್ಥ್ಯರ್ಥೇ ಬಹುಲಮಿತಿ ಷಷ್ಠೀ ॥ ತದ್ಧನಂ ನೋಽಸ್ಮಭ್ಯಮಾ ಅಭಿಮುಖ್ಯೇನ ಕದಾ ದಶಸ್ಯೇಃ । ಕಸ್ಮಿನ್ಕಾಲೇ ಪ್ರಯಚ್ಛೇಃ । ತದಾ ತವ ಸ್ವಭೂತಂ ಸತ್ಯಂ ಮಾ ರಕ್ಷತು । ಮಹ್ಯಂ ಧನಂ ದತ್ವಾ ಕರ್ಮಾಣಿ ಚ ಮಯಾನುಷ್ಠಾಪ್ಯ ಮಾಂ ಪಾಪರಹಿತಂ ಕುರ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

ಶೂರ—ಪರಾಕ್ರಮಿಯೂ । ಚಿತ್ರ—ಆಕರ್ಷಕವಾದ ರೂಪವುಳ್ಳವನೂ ಆದ । ಇಂದ್ರ—ಎಲೈ ಇಂದ್ರನೇ । ತತ್—ಪ್ರಶಸ್ತ್ಯವಾದ । ಋತಂ—ನಿನ್ನ ಸತ್ಯಸ್ವರೂಪವು । ಮಾ—ನನ್ನನ್ನು । ಪಾತು—ರಕ್ಷಿಸಲಿ । ವಜ್ರಿನ್—ವಜ್ರಾಯುಧಧಾರಿಯಾದ ಎಲೈ ಇಂದ್ರನೇ । ಅಪೋ ನ—ನಾವಿಕನು ಉದಕಗಳನ್ನು ದಾಟಿಸಿ ದಡವನ್ನು ಸೇರಿಸುವಂತೆ । ಭೂರಿ—ಅತ್ಯಧಿಕವಾದ । ದುರಿತಾ—ನಮ್ಮ ಪಾಪಗಳನ್ನೂ । ಅತಿ ಪರ್ಷಿ—ದಾಟಿಸಿ ಕರೆಯನ್ನು ಸೇರಿಸು । ರಾಜನ್—ಪ್ರಕಾಶಮಾನನಾದ । ಇಂದ್ರ—ಎಲೈ ಇಂದ್ರನೇ । ವಿಶ್ವಪ್ಸ್ನ್ಯಸ್ಯ-ಅನೇಕರೂಪವುಳ್ಳದ್ದೂ । ಸ್ಪೃಹಯಾಯ್ಯಸ್ಯ—ಅತ್ಯಾಕರ್ಷಕವಾದುದೂ ಆದ । ರಾಯಃ—ಧನವನ್ನು । ನಃ ಆ—ನಮಗಭಿಮುಖವಾಗಿ । ಕದಾ—ಯಾವಾಗ । ದಶಸ್ಯೇಃ—ಕಳುಹಿಸಿಕೊಡುವೆ ?

॥ ಭಾವಾರ್ಥ ॥

ಪರಾಕ್ರಮಿಯೂ, ಆಕರ್ಷಕವಾದ ರೂಪವುಳ್ಳವನೂ ಆದ ಎಲೈ ಇಂದ್ರನೇ, ಪ್ರಶಸ್ತ್ಯವಾದ ನಿನ್ನ ಸತ್ಯ ಸ್ವರೂಪವು ನನ್ನನ್ನು ರಕ್ಷಿಸಲಿ. ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ನಾವಿಕನು ಉದಕಗಳನ್ನು ದಾಟಿಸಿ ದಡವನ್ನು ಸೇರಿಸುವಂತೆ ಅತ್ಯಧಿಕವಾದ ನಮ್ಮ ಪಾಪಗಳನ್ನು ದಾಟಿಸಿ ದಡವನ್ನು ಸೇರಿಸು. ಪ್ರಕಾಶಮಾನನಾದ ಎಲೈ ಇಂದ್ರನೇ, ಅನೇಕರೂಪವುಳ್ಳದ್ದೂ, ಅತ್ಯಾಕರ್ಷಕವಾದುದೂ ಆದ ಧನವನ್ನು ನಮಗಭಿಮುಖವಾಗಿ ಯಾವಾಗ ಕಳುಹಿಸಿಕೊಡುವೆ ?

English Translation

Indra, hero assuming many forms, may that truthfulness of yours protect me ; bear us, thunderer, over our many sins as over waters ; when, radiant Indra, will you give us some wealth, desirable to all, manifold in its kinds ?

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ॥
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲಸಾಮ್ರಾಜ್ಯ-ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶ ಋಕ್ಸಂಹಿತಾಭಾಷ್ಯೇ ಷಷ್ಠಾಷ್ಟಕೇ ಷಷ್ಠೋಽಧ್ಯಾಯಃ ॥

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಆರನೆಯ ಅಷ್ಟಕದಲ್ಲಿ
ಆರನೆಯ ಅಧ್ಯಾಯವು ಸಮಾಪ್ತವಾದುದು.

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

॥ ಶುಭಂ ಭೂಯಾತ್ ॥

॥ ಮಂಗಳಂ ॥

॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

## ಸಾಯಣಭಾಷ್ಯಸಹಿತಾ

# ಋಗ್ವೇದಸಂಹಿತಾ

## ಅಥ ಷಷ್ಠಾಷ್ಟಕೇ ಸಪ್ತಮೋಽಧ್ಯಾಯಃ

## ಆರನೆಯ ಅಷ್ಟಕದಲ್ಲಿ ಏಳನೆಯ ಅಧ್ಯಾಯವು

## ಎಂಟನೆಯಮಂಡಲದಲ್ಲಿ ತೊಂಭತ್ತೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಅಥ ಷಷ್ಠಸ್ಯ ಸಪ್ತಮೋಽಧ್ಯಾಯ ಆರಭ್ಯತೇ । ತತ್ರೇಂದ್ರಾಯೇತಿ ದ್ವಾದಶರ್ಚಂ ಪಂಚಮಂ ಸೂಕ್ತಮಾಂಗಿರಸಸ್ಯ ನೃಮೇಧಸ್ಯಾರ್ಷಮೈಂದ್ರಂ । ಸಪ್ತಮೀ ದಶಮ್ಯೇಕಾದಶ್ಯೌ ಚ ತಿಸ್ರಃ ಕಕುಭೋ ಮಧ್ಯಮಪಾದಸ್ಯ ದ್ವಾದಶಾಕ್ಷರತ್ವಾತ್ । ಮಧ್ಯಮಶ್ಚೇತ್ಕಕುಪ್ । ಅನು ೫.೩ । ಇತಿ ಹಿ ತಲ್ಲಕ್ಷಣಂ । ನವಮೀದ್ವಾದಶ್ಯೌ ಪುರಉಷ್ಣಿಹೌ । ಪ್ರಥಮಪಾದಸ್ಯ ದ್ವಾದಶಾಕ್ಷರತ್ವಾತ್ । ಆದ್ಯಶ್ಚೇತ್ಪುರ ಉಷ್ಣಿಕ್ ।

ಅನು. ೫-೨ । ಇತಿ ಹಿ ತಲ್ಲಕ್ಷಣಂ । ಶಿಷ್ಟಾ ಉಷ್ಣಿಹಃ । ತಥಾ ಚಾನುಕ್ರಮ್ಯತೇ । ಇಂದ್ರಾಯ ದ್ವಾದಶ ನೃಮೇಧ ಔಷ್ಣಿಹಂ ಸಪ್ತಮ್ಯುಪಾಂತ್ಯೇ ಚ ಕಕುಭೋಂತ್ಯಾನವಮ್ಯೌ ಪುರಉಷ್ಣಿಹಾವಿತಿ ॥ ಮಹಾವ್ರತೇ ಔಷ್ಣಿಹತೃಚಾಶೀತಾವಿದಂ ಸೂಕ್ತಂ । ತಥೈವ ಪಂಚಮಾರಣ್ಯಕೇ ಸೂತ್ರಿತಂ। ಇಂದ್ರಾಯ ಸಾಮಗಾಯತ ಸಖಾಯ ಆ ಶಿಷಾಮಹಿ । ಐ. ಆ ೫-೨-೫ । ಇತಿ ॥ ಅಭಿಪ್ಲವಿಕೇಷೂಕ್ಥ್ಯೇಷು ತೃತೀಯಸವನೇ ಬ್ರಾಹ್ಮಣಾಚ್ಛಂಸಿನ ಇಂದ್ರಾಯ ಸಾಮ ಗಾಯತೇತಿ ವೈಕಲ್ಪಿಕಃ ಸ್ತೋತ್ರಿಯಸ್ತೃಚಃ । ಸೂತ್ರಿತಂ ಚ । ಇಂದ್ರಾಯ ಸಾಮ ಗಾಯತ ಸಖಾಯ ಆ ಶಿಷಾಮಹಿ । ಆ. ೭.೮ । ಇತಿ ॥ **ಪೂರ್ವೋಕ್ತಸ್ಯೈವ ಬ್ರಾಹ್ಮಣಾಚ್ಛಂಸಿನ ಅಭಿಪ್ಲವಿಕೇಷೂಕ್ಥ್ಯೇಷ್ವೇಂದ್ರ ನೋ ಗಧೀತಿ ವೈಕಲ್ಪಿತಃ ಸ್ತೋತ್ರಿಯಃ । ಸೂತ್ರಿತಂ ಚ । ಐಂದ್ರ ನೋ ಗಧ್ಯೇದು ಮಧ್ವೋ ಮದಿಂತರಂ । । ಆ. ೭-೮ । ಇತಿ ॥ ಉಕ್ಥ್ಯೇ ತೃತೀಯ-ಸವನೇಽಚ್ಛಾವಾಕಸ್ಯಾಧಾ ಹೀಂದ್ರೇತಿ ಸ್ತೋತ್ರಿಯಸ್ತೃಚಃ । ಸೂತ್ರಿತಂ ಚ । ಅಧಾ ಹೀಂದ್ರ ಗಿರ್ವಣ ಇಯಂ ತ ಇಂದ್ರ ಗಿರ್ವಣಃ । ಆ. ೬-೧ । ಇತಿ ॥ ಪೂರ್ವೋಕ್ತ ಏವ ಶಸ್ತ್ರೇ ತ್ವಂ ನ ಇಂದ್ರಾ ಭರೇತಿ ತೃಚೋ ವೈಕಲ್ಪಿಕಃ ಸ್ತೋತ್ರಿಯಃ । ಸೂತ್ರಿತಂ ಚ । ತ್ವಂ ನ ಇಂದ್ರಾ ಭರ ವಯಮು ತ್ವಾಮಪೂರ್ವ್ಯ ಯೋ ನ ಇದಮಿದಂ ಪುರಾ ॥ ಆ. ೭-೮ । ಇತಿ ॥**

ಅನುವಾದವು—ಈಗ ಆರನೆಯ ಅಷ್ಟಕದ ಏಳನೆಯ ಅಧ್ಯಾಯದ ವಾಖ್ಯಾನವನ್ನು ಪ್ರಾರಂಭಿಸಲಾಗುವುದು. ಈ ಅಧ್ಯಾಯದ ಪ್ರಾರಂಭದಲ್ಲಿ **ಇಂದ್ರಾಯ ಸಾಮ ಗಾಯತ** ಎಂಬ ಸೂಕ್ತವಿರುವುದು ಇದು ಎಂಟನೆಯ ಮಂಡಲದ ಹತ್ತನೆಯ ಅನುವಾಕದಲ್ಲಿ ಐದನೆಯ ಸೂಕ್ತವು ಇದರಲ್ಲಿ ಹನ್ನೆರಡು ಋಕ್ಕುಗಳಿರುವವು ಈ ಸೂಕ್ತಕ್ಕೆ ನೃಮೇಧ ಆಂಗಿರಸಃ ಎಂಬುವನು ಋಷಿಯು ; ಇಂದ್ರನು ದೇವತೆಯು , ಈ ಸೂಕ್ತದ ಏಳು, ಹತ್ತು, ಹನ್ನೊಂದನೆಯ ಋಕ್ಕುಗಳ ಮಧ್ಯಮಪಾದವು ಹನ್ನೆರಡು ಅಕ್ಷರಗಳುಳ್ಳದ್ದಾಗಿರುವುದರಿಂದ ಈ ಮೂರು ಋಕ್ಕುಗಳೂ ಕಕುಪ್ ಛಂದಸ್ಕವು. **ಮಧ್ಯಮಶ್ಚೇತ್ಕಕುಪ್** ಎಂದು (ಅನು. ೫-೨) ಇದರ ಲಕ್ಷಣವಿರುವುದು. ಒಂಭತ್ತು ಮತ್ತು ಹನ್ನೆರಡನೆಯ ಋಕ್ಕುಗಳು ಪುರಉಷ್ಣಿಕ್‌ಛಂದಸ್ಕವು. ಈ ಋಕ್ಕುಗಳ ಪ್ರಥಮ ಪಾದಗಳಲ್ಲಿ ಹನ್ನೆರಡು ಅಕ್ಷರಗಳಿರುವುದರಿಂದ **ಆದ್ಯಶ್ಚೇತ್ ಪುರಉಷ್ಣಿಕ್** ಎಂಬ ಅನುಕ್ರಮಣಿಕೆಯ (ಅನು. ೫-೨) ವಾಕ್ಯಾನುಸಾರವಾಗಿ ಈ ಋಕ್ಕುಗಳಿಗೆ ಪುರಉಷ್ಣಿಕ್‌ಛಂದಸ್ಸೆಂದು ಹೆಸರು. ಈ ಸೂಕ್ತದ ಉಳಿದ ಋಕ್ಕುಗಳು ಉಷ್ಣಿಕ್‌ಛಂದಸ್ಕವು. ಅನುಕ್ರಮಣಿಕೆಯಲ್ಲಿ—**ಇಂದ್ರಾಯ ದ್ವಾದಶ ನೃಮೇಧ ಔಷ್ಣಿಹಂ ಸಪ್ತಮ್ಯುಪಾಂತ್ಯೇ ಚ ಕಕುಭೋಽನ್ತ್ಯಾನವಮ್ಯೌ ಪುರಉಷ್ಣಿಹೌ** ಎಂದು ಹೇಳಿರುವುದು. ಮಹಾವ್ರತೇಷ್ಟಿಯಲ್ಲಿ ಉಷ್ಣಿಕ್‌ಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ವಿನಿಯೋಗವಿರುವುದೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ—**ಇಂದ್ರಾಯ ಸಾಮಗಾಯತ ಸಖಾಯ ಆ ಶಿಷಾಮಹಿ** ಎಂಬ ವಾಕ್ಯದಿಂದ (ಐ ಆ. ೫-೨-೫) ನಿರ್ದಿಷ್ಟವಾಗಿರುವುದು. ಅಭಿಪ್ಲವ ಸಂಬಂಧವಾದ ಉಕ್ಥ್ಯಯಾಗಗಳಲ್ಲಿ ತೃತೀಯಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಪಠಿಸುವ ಶಸ್ತ್ರಮಂತ್ರಗಳಲ್ಲಿ **ಇಂದ್ರಾಯ ಸಾಮ ಗಾಯತ** ಎಂಬ ತೃಚವನ್ನು ವೈಕಲ್ಪಿಕಸ್ತೋತ್ರಿಯ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತ ಸೂತ್ರದ—ಇಂ**ದ್ರಾಯ ಸಾಮಗಾಯತ ಸಖಾಯ ಆ ಶಿಷಾಮಹಿ** ಎಂಬ ಸೂತ್ರದಿಂದ ( ಆ. ೭ ೮ ) ವಿವೃತವಾಗಿರುವುದು. ಹಿಂದೆ ಹೇಳಿದ ಅಭಿಪ್ಲವ ಸಂಬಂಧವಾದ **ಉಕ್ಥ್ಯ**ಯಾಗಗಳಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ಐಂದ್ರ ನೋ ಗಧಿ** ಎಂದು ಈ ಸೂಕ್ತದ ೪-೬ ಋಕ್ಕುಗಳನ್ನು ವೈಕಲ್ಪಿಕಸ್ತೋತ್ರಿಯ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಐಂದ್ರ ನೋ ಗಧ್ಯೇದು ಮಧ್ವೋ ಮದಿಂತರಂ** ಎಂಬ ಸೂತ್ರ

ದಿಂದ (ಆ- ೭-೮) ವಿವೃತವಾಗಿರುವುದು. ಮತ್ತು ಉಕ್ಥ್ಯಯಾಗದ ತೃತೀಯಸವನಕಾಲದಲ್ಲಿ ಅಚ್ಛಾವಾಕನೆಂಬ ಋತ್ವಿಜನು— ಅಧಾ ಹೀಂದ್ರ ಎಂದು ಪ್ರಾರಂಭವಾಗುವ ಈ ಸೂಕ್ತದ ೭-೯ ಋಕ್ಕುಗಳನ್ನು ಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ— ಅಧಾ ಹೀಂದ್ರ ಗಿರ್ವಣ ಇಯಂ ತ ಇಂದ್ರ ಗಿರ್ವಣಃ ಎಂಬ ಸೂತ್ರದಿಂದ (ಆ ೬-೧) ವಿವೃತವಾಗಿರುವುದು ಹಿಂದೆ ಹೇಳಿದ ಶಸ್ತ್ರಮಂತ್ರಗಳಲ್ಲಿಯೇ ತ್ವಂ ನ ಇಂದ್ರಾ ಭರ ಎಂದು ಮೊದಲಾಗುವ ಈ ಸೂಕ್ತದ ೧೦-೧೨ ಋಕ್ಕುಗಳನ್ನು ವೈಕಲ್ಪಿಕಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ— ತ್ವಂ ನ ಇಂದ್ರಾ ಭರ ವಯಮು ತ್ವಾಮನುಪೂರ್ವ್ಯ ಯೋ ನ ಇದಮಿದಂ ಪುರಾ ಎಂಬ ಸೂತ್ರದಿಂದ (ಆ. ೭-೮) ವಿವೃತವಾಗಿರುವುದು

## ಸೂಕ್ತ—೯೮

ಮಂಡಲ—೮ ॥ ಅನುವಾಕ—೧೦ ॥ ಸೂಕ್ತ—೯೮ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೧, ೨ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—ನೃಮೇಧಃ ॥
ದೇವತಾ—ಇಂದ್ರಃ ॥
ಛಂದಃ—೧-೬, ೮. ಉಷ್ಣಿಕ್ । ೭, ೧೦, ೧೧. ಕಕುಬ್ । ೯, ೧೨. ಪುರಉಷ್ಣಿಕ್ ॥

॥ ಸಂಹಿತಾಪಾಠಃ ॥

**ಇಂದ್ರಾಯ ಸಾಮ ಗಾಯತ ವಿಪ್ರಾಯ ಬೃಹತೇ ಬೃಹತ್ ।**
**ಧರ್ಮಕೃತೇ ವಿಪಶ್ಚಿತೇ ಪನಸ್ಯವೇ ॥ ೧ ॥**

॥ ಪದಪಾಠಃ ॥

**ಇಂದ್ರಾಯ । ಸಾಮ । ಗಾಯತ । ವಿಪ್ರಾಯ । ಬೃಹತೇ । ಬೃಹತ್ ।**
**ಧರ್ಮऽಕೃತೇ । ವಿಪಃऽಚಿತೇ । ಪನಸ್ಯವೇ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ಉದ್ಗಾತಾರಃ ವಿಪ್ರಾಯ ಮೇಧಾವಿನೇ ಬೃಹತೇ ಮಹತೇ ಧರ್ಮಕೃತೇ ಕರ್ಮಣಃ ಕರ್ತ್ರೇ ವಿಪಶ್ಚಿತೇ ವಿದುಷೇ ಪನಸ್ಯವೇ ಸ್ತುತಿಮಿಚ್ಛತ ಇಂದ್ರಾಯ ಬೃಹದ್ಬೃಹನ್ನಾಮಕಂ ಸಾಮ ಗಾಯತ ॥ ಪಠತ ॥**

॥ ಪ್ರತಿಪದಾರ್ಥ ॥

(ಎಲೈ ಉದ್ಗಾತೃಗಳೇ) **ವಿಪ್ರಾಯ**—ಮೇಧಾವಿಯೂ । **ಬೃಹತೇ**—ಮಹತ್ಸ್ವರೂಪನೂ । **ಧರ್ಮಕೃತೇ**—ಅಸಾಧಾರಣವಾದ ಕರ್ಮಕರ್ತನೂ । **ವಿಪಶ್ಚಿತೇ**—ಪ್ರಾಜ್ಞನೂ । **ಪನಸ್ಯವೇ**—ಸ್ತುತಿಪ್ರಿಯನೂ ಆದ ।

**ಇಂದ್ರಾಯ**—ಇಂದ್ರನನ್ನುದ್ದೇಶಿಸಿ | **ಬೃಹತ್**—ಬೃಹತ್ಸಂಜ್ಞಕವಾದ | **ಸಾಮ**—ಸಾಮವನ್ನು | **ಗಾಯತ**—ಗಾನರೂಪದಲ್ಲಿ ಪಠಿಸಿರಿ.

॥ ಭಾವಾರ್ಥ ॥

ಎಲೈ ಉದ್ಗಾತೃಗಳೇ, ಮೇಧಾವಿಯೂ, ಮಹತ್ಸ್ವರೂಪನೂ, ಅಸಾಧಾರಣವಾದ ಕರ್ಮಕರ್ತನೂ, ಪ್ರಾಜ್ಞನೂ, ಸ್ತುತಿಪ್ರಿಯನೂ ಆದ ಇಂದ್ರನನ್ನು ಉದ್ದೇಶಿಸಿ ಬೃಹತ್ಸಾಮವನ್ನು ಗಾನರೂಪದಲ್ಲಿ ಪಠಿಸಿರಿ.

English Translation

Sing a Saman to Indra, a Brihat to the mighty sage, to the performer of religious rites, the all-knowing one who longs for praise.

॥ ಸಂಹಿತಾಪಾಠಃ ॥

ತ್ವಮಿಂದ್ರಾಭಿಭೂರಸಿ ತ್ವಂ ಸೂರ್ಯಮರೋಚಯಃ ।
ವಿಶ್ವಕರ್ಮಾ ವಿಶ್ವದೇವೋ ಮಹಾँ ಅಸಿ ॥ ೨ ॥

॥ ಪದಪಾಠಃ ॥

ತ್ವಂ । ಇಂದ್ರ । ಅಭಿಽಭೂಃ । ಅಸಿ । ತ್ವಂ । ಸೂರ್ಯಂ । ಅರೋಚಯಃ ।
ವಿಶ್ವಽಕರ್ಮಾ । ವಿಶ್ವಽದೇವಃ । ಮಹಾನ್ । ಅಸಿ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ತ್ವಮಭಿಭೂಃ ಶತ್ರೂಣಾಮಭಿಭವಿತಾಸಿ । ಭವಸಿ । ಕಿಂಚ ತ್ವಂ ಸೂರ್ಯಮಾದಿತ್ಯಮರೋಚಯಃ । ತೇಜೋಭಿರದೀಪಯಃ । ಕಿಂ ಚ ವಿಶ್ವಕರ್ಮಾ ವಿಶ್ವಸ್ಯ ಕರ್ತಾಸಿ ವಿಶ್ವದೇವಃ ಸರ್ವದೇವಶ್ಚಾಸಿ । ತಥಾ ಚ ಯಜುರ್ಬ್ರಾಹ್ಮಣಂ । ಅಗ್ನಿಂ ವಾ ಅನ್ವನ್ಯಾ ದೇವತಾ ಇಂದ್ರಮನ್ವನ್ಯಾ ಇತಿ । ಅತೋ ಮಹಾನ್ ಸರ್ವಾಧಿಕೋಽಸಿ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ | **ತ್ವಂ**—ನೀನು | **ಅಭಿಭೂಃ**—ಶತ್ರುಧರ್ಷಕನಾಗಿ | **ಅಸಿ**—ಆಗಿದ್ದೀಯೆ | **ತ್ವಂ**—ನೀನು | **ಸೂರ್ಯಂ**—ಸೂರ್ಯನನ್ನು | **ಅರೋಚಯಃ**—ಪ್ರಕಾಶಿಸುವಂತೆ ಮಾಡಿದೆ | **ವಿಶ್ವಕರ್ಮಾ**—ಸಕಲ ಲೋಕಗಳ ನಿರ್ಮಾಪಕನೂ | **ಅಸಿ**—ಆಗಿದ್ದೀಯೆ | **ವಿಶ್ವದೇವಃ**—ಸಕಲದೇವತೆಗಳ ಸ್ವರೂಪನೂ | **ಮಹಾನ್**—ಮಹಾತ್ಮನೂ ಆಗಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಶತ್ರುಗಳನ್ನೆಲ್ಲಾ ಸದೆಬಡಿದು ಸೋಲಿಸುವವನಾಗಿದ್ದೀಯೆ. ನೀನೇ ಸೂರ್ಯನನ್ನು ಪ್ರಕಾಶಿಸುವಂತೆ ಮಾಡಿದೆ. ಸಕಲ ಲೋಕಗಳ ನಿರ್ಮಾಪಕನೂ ನೀನೇ ಆಗಿದ್ದೀಯೆ. ನೀನೇ ಸಕಲ ದೇವತೆಗಳ ಸ್ವರೂಪನೂ ಮಹಾತ್ಮನೂ ಆಗಿದ್ದೀಯೆ

English Translation

You are the conqueror, Indra ; you have lighted up the sun ; you are the maker of all, the lord of all the gods, the mighty.

॥ ಸಂಹಿತಾಪಾಠಃ ॥

ವಿಭ್ರಾಜಞ್ಜ್ಯೋತಿಷಾ ಸ್ವ೩ರಗಚ್ಛೋ ರೋಚನಂ ದಿವಃ ।

ದೇವಾಸ್ತ ಇಂದ್ರ ಸಖ್ಯಾಯ ಯೇಮಿರೇ ॥ ೩ ॥

॥ ಪದಪಾಠಃ ॥

ವಿಽಭ್ರಾಜನ್ । ಜ್ಯೋತಿಷಾ । ಸ್ವಃ । ಅಗಚ್ಛಃ । ರೋಚನಂ । ದಿವಃ ।

ದೇವಾಃ । ತೇ । ಇಂದ್ರ । ಸಖ್ಯಾಯ । ಯೇಮಿರೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಜ್ಯೋತಿಷಾ ತೇಜಸಾ ದಿವ ಆದಿತ್ಯಸ್ಯ ರೋಚನಂ ಪ್ರಕಾಶಕಮಧಿಕರಣತ್ವೇನ ಸ್ವಃ ಸ್ವರ್ಗಂ ವಿಭ್ರಾಜನ್ ಪ್ರಕಾಶಯನ್ನಗಚ್ಛಃ। ಪ್ರಾಪ್ನೋಃ। ಕಿಂಚ ದೇವಾಃ ಸರ್ವೇ ತೇ ತವ ಸಖ್ಯಾಯ ಮಿತ್ರತ್ವಾಯ ಯೇಮಿರೇ । ತ್ವಂ ಸ್ವನಾತ್ಮಾನಂ ನಿಯಮಿತವಂತಃ । ಅಸ್ಮಾಕಮಿಂದ್ರಃ ಸಖಾ ಯಥಾ ಸ್ಯಾದಿತಿ ಸರ್ವೇ ದೇವಾ ಯತ್ನಮಾಕಾರ್ಷುರಿತ್ಯರ್ಥಃ ॥

॥ ಪ್ರತಿಪದಾರ್ಥ

ಇಂದ್ರ—ಎಲೈ ಇಂದ್ರನೇ । ಜ್ಯೋತಿಷಾ—ನಿನ್ನ ತೇಜಸ್ಸಿನಿಂದ। ದಿವಃ—ಆದಿತ್ಯನ । ರೋಚನಂ—ಪ್ರಕಾಶಕ್ಕೆ ಆಧಾರವಾದ । ಸ್ವಃ—ಸ್ವರ್ಗವನ್ನು । ವಿಭ್ರಾಜನ್—ಬೆಳಗುತ್ತಾ । ಅಗಚ್ಛಃ—ವ್ಯಾಪಿಸಿ ಸಂಚರಿಸುತ್ತೀಯೆ । ದೇವಾಃ—ಸಕಲದೇವತೆಗಳೂ । ತೇ—ನಿನ್ನೊಂದಿಗೆ । ಸಖ್ಯಾಯ—ಮಿತ್ರತ್ವವನ್ನು ಸಂಪಾದಿಸಲು । ಯೇಮಿರೇ—ವಿನಯದಿಂದ ಪ್ರಯತ್ನಿಸುತ್ತಾರೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ತೇಜಸ್ಸಿನಿಂದ ನೀನು ಆದಿತ್ಯನ ಪ್ರಕಾಶಕ್ಕೆ ಆಧಾರವಾದ ಸ್ವರ್ಗವನ್ನು ಬೆಳಗಿಸುತ್ತಾ ಅಂತರಿಕ್ಷವನ್ನೆಲ್ಲಾ ವ್ಯಾಪಿಸಿ ಸಂಚರಿಸುತ್ತೀಯೆ. ಸಕಲದೇವತೆಗಳೂ ನಿನ್ನೊಂದಿಗೆ ಮಿತ್ರತ್ವವನ್ನು ಸಂಪಾದಿಸಲು ವಿನಯದಿಂದ ಪ್ರಯತ್ನಿಸುತ್ತಾರೆ.

English Translation

You have pervaded the light of the sky, illumining heaven by your splendour ; the gods, Indra, submissively solicit your friendship.

॥ ಸಂಹಿತಾಪಾಠಃ ॥

ಐಂದ್ರ ನೋ ಗಧಿ ಪ್ರಿಯಃ ಸತ್ರಾಜಿದಗೋಹ್ಯಃ ।

ಗಿರಿರ್ನ ವಿಶ್ವತಸ್ಪೃಥುಃ ಪತಿರ್ದಿವಃ ॥ ೪ ॥

॥ ಪದಪಾಠಃ ॥

ಆ । ಇಂದ್ರ । ನಃ । ಗಧಿ । ಪ್ರಿಯಃ । ಸತ್ರಾsಜಿತ್ । ಅಗೋಹ್ಯಃ ।

ಗಿರಿಃ । ನ । ವಿಶ್ವತಃ । ಪೃಥುಃ । ಪತಿಃ । ದಿವಃ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ಪ್ರಿಯಃ ಪ್ರಿಯತಮಃ ಸತ್ರಾಜಿನ್ಮಹತಾಂ ಜೇತಾಗೋಹ್ಯಃ ಕೇನಾಪಿ ಗೂಹಿತುಮಶಕ್ಯೋ ಗಿರಿರ್ನ ಪರ್ವತ ಇವ ವಿಶ್ವತಃ ಸರ್ವತಃ ಪೃಥುಃ ಪೃಥುತಮೋ ದಿವಃ ಸ್ವರ್ಗಸ್ಯ ಪತಿರೀಶ್ವರಸ್ತ್ವಂ ನೋsಸ್ಮಾನಾ ಗಧಿ । ಆಗಚ್ಛ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ಪ್ರಿಯಃ**—ಎಲ್ಲರಿಗೂ ಬೇಕಾದವನೂ । **ಸತ್ರಾಜಿತ್**—ಶಕ್ತಿಯುತರನ್ನು ಸೋಲಿಸುವವನೂ । **ಅಗೋಹ್ಯಃ**—ಯಾರಿಂದಲೂ ಮುಚ್ಚಲು ಸಾಧ್ಯವಲ್ಲದವನೂ । **ಗಿರಿರ್ನ**— ಪರ್ವತದಂತೆ । **ವಿಶ್ವತಃ**—ಸರ್ವತ್ರ । **ಪೃಥುಃ**— ವಿಸ್ತೃತವಾಗಿ ವ್ಯಾಪಿಸಿರುವವನೂ । **ದಿವಃ**—ಸ್ವರ್ಗಕ್ಕೆ । **ಪತಿಃ**—ಒಡೆಯನೂ ಆದ ನೀನು । **ನಃ**—ನಮಗೆ । **ಆ ಗಧಿ**—ಅಭಿಮುಖನಾಗಿ ಬಾ.

॥ ಭಾವಾರ್ಥ ॥

ಎಲೈ ಇಂದ್ರನೇ, ಎಲ್ಲರಿಗೂ ಬೇಕಾದವನೂ, ಅತ್ಯಧಿಕವಾದ ಶಕ್ತಿಯುತರನ್ನು ಸೋಲಿಸುವವನೂ, ಯಾರಿಂದಲೂ ಮುಚ್ಚಲು ಸಾಧ್ಯವಿಲ್ಲದವನೂ, ಪರ್ವತದಂತೆ ಸರ್ವತ್ರ ವಿಸ್ತೃತವಾಗಿ ವ್ಯಾಪಿಸಿ ಇರುವವನೂ ಸ್ವರ್ಗಕ್ಕೆ ಒಡೆಯನೂ ಆದ ನೀನು ನಮಗೆ ಅಭಿಮುಖನಾಗಿ ಬಾ.

English Translation

Come to us Indra, beloved one, triumphant, and whom none can conceal—lord of heaven, vast on all sides as a mountain.

॥ ಸಂಹಿತಾಪಾಠಃ ॥

ಅಭಿ ಹಿ ಸತ್ಯ ಸೋಮಪಾ ಉಭೇ ಬಭೂಥ ರೋದಸೀ ।
ಇಂದ್ರಾಸಿ ಸುನ್ವತೋ ವೃಧಃ ಪತಿರ್ದಿವಃ ॥ ೫ ॥

॥ ಪದಪಾಠಃ ॥

ಅಭಿ । ಹಿ । ಸತ್ಯ । ಸೋಮಽಪಾಃ । ಉಭೇ ಇತಿ । ಬಭೂಥ । ರೋದಸೀ ಇತಿ ।
ಇಂದ್ರ । ಅಸಿ । ಸುನ್ವತಃ । ವೃಧಃ । ಪತಿಃ । ದಿವಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸತ್ಯ ಸೋಮಪಾಃ ಸೋಮಸ್ಯ ಪಾತರಿಂದ್ರ ಯಸ್ತ್ವಮುಭೇ ರೋದಸೀ ದ್ಯಾವಾಪೃಥಿವ್ಯಾವಭಿ ಬಭೂಥ ಸಾಮರ್ಥ್ಯೇನಾಭಿಭವಸಿ ಸ ತ್ವಂ ಸುನ್ವತಃ ಸೋಮಾಭಿಷವಂ ಕುರ್ವತೋ ಯಜಮಾನಸ ವೃಧೋ ವರ್ಧಕೋಽಸಿ । ದಿವಃ ಸ್ವರ್ಗಸ್ಯಾಪಿ ಪತಿರೀಶ್ವರೋಽಸಿ ॥

॥ ಪ್ರತಿಪದಾರ್ಥ ॥

**ಸತ್ಯ**—ಸತ್ಯಾತ್ಮಕನೂ । **ಸೋಮಪಾಃ**—ಸೋಮಪಾನವನ್ನು ಮಾಡುವವನೂ ಆದ । **ಇಂದ್ರ**—ಎಲೈ ಇಂದ್ರನೇ । **ಉಭೇ ರೋದಸೀ**—ದ್ಯಾವಾಪೃಥಿವಿಗಳೆರಡನ್ನೂ । **ಅಭಿ ಬಭೂಥ ಹಿ**—ನೀನು ಆಕ್ರಮಿಸಿ ವ್ಯಾಪಿಸಿದ್ದೀಯೆ । **ಸುನ್ವತಃ**—ಸೋಮವನ್ನು ಹಿಂಡಿ ಅರ್ಪಿಸುವ ಯಜಮಾನನಿಗೆ । **ವೃಧಃ**--ವೃದ್ಧಿಕಾರಕನಾಗಿದ್ದೀಯೆ । **ದಿವಃ**—ಸ್ವರ್ಗಕ್ಕೂ । **ಪತಿಃ ಅಸಿ**—ಈಶ್ವರನಾಗಿದ್ದೀಯೆ.

॥ ಭಾವಾರ್ಥ ॥

ಸತ್ಯಾತ್ಮಕನೂ, ಸೋಮಪಾನವನ್ನು ಮಾಡುವವನೂ, ಆದ ಎಲೈ ಇಂದ್ರನೇ, ನೀನು ದ್ಯಾವಾಪೃಥಿವಿಗಳೆರಡನ್ನೂ ವ್ಯಾಪಿಸಿ ಆಕ್ರಮಿಸಿದ್ದೀಯೆ. ಸೋಮವನ್ನು ಹಿಂಡಿ ಅರ್ಪಿಸುವ ಯಜಮಾನನಿಗೆ ವೃದ್ಧಿಕಾರಕನಾಗಿದ್ದೀಯೆ ಸ್ವರ್ಗಕ್ಕೂ ಈಶ್ವರನಾಗಿದ್ದೀಯೆ.

English Translation

Truthful drinker of the Soma, you surpass heaven and earth; O Indra, you are the fosterer of him who prepares the libation, you are the lord of heaven.

॥ ಸಂಹಿತಾಪಾಠಃ ॥

ತ್ವಂ ಹಿ ಶಶ್ವತೀನಾಮಿಂದ್ರ ದರ್ತಾ ಪುರಾಮಸಿ ।
ಹಂತಾ ದಸ್ಯೋರ್ಮನೋರ್ವೃಧಃ ಪತಿರ್ದಿವಃ ॥ ೬ ॥

॥ ಪದಪಾಠಃ ॥

ತ್ವಂ । ಹಿ । ಶಶ್ವತೀನಾಂ । ಇಂದ್ರ । ದರ್ತಾ । ಪುರಾಂ । ಅಸಿ ।
ಹಂತಾ । ದಸ್ಯೋಃ । ಮನೋಃ । ವೃಧಃ । ಪತಿಃ । ದಿವಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ಶಶ್ವತೀನಾಂ ಬಹ್ವೀನಾಂ ಪುರಾಂ ಶತ್ರುನಗರೀಣಾಂ ದರ್ತಾಸಿ । ದಾರಯಿತಾ ಭವಸಿ । ಕಿಂಚ ದಸ್ಯೋರುಪಕ್ಷಪಯಿತುರಸುರಸ್ಯ ಹಂತಾಸಿ । ಘಾತಕೋ ಭವಸಿ । ಮನೋರ್ಮನುಷ್ಯಸ್ಯ ಯಾಗಾದಿಕಂ ಕುರ್ವತೋ ವೃಧೋ ವರ್ಧಕಶ್ಚಾಸಿ । ದಿವಃ ಸ್ವರ್ಗಸ್ಯಾಪಿ ಪತಿರೀಶ್ವರೋಽಸಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ತ್ವಂ ಹಿ—ನೀನು ಒಬ್ಬನೇ । ಶಶ್ವತೀನಾಂ—ಅನೇಕವಾದ । ಪುರಾಂ—ಶತ್ರುಪಟ್ಟಣಗಳಿಗೆ । ದರ್ತಾ—ಸೀಳಿ ನಾಶಪಡಿಸುವವನಾಗಿ । ಅಸಿ—ಆಗಿದ್ದೀಯೆ । ದಸ್ಯೋಃ—ಹಿಂಸಿತನಾದ ಅಸುರನಿಗೆ । ಹಂತಾ—ನಾಶಕನೂ ಆಗಿದ್ದೀಯೆ । ಮನೋಃ—ಯಜ್ಞಕರ್ತನಾದ ಮಾನವನಿಗೆ । ವೃಧಃ—ವೃದ್ಧಿಕಾರಕನೂ ಆಗಿದ್ದೀಯೆ । ದಿವಃ—ಸ್ವರ್ಗಕ್ಕೆ । ಪತಿಃ—ಈಶ್ವರನೂ ಆಗಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನೊಬ್ಬನೇ ಅನೇಕವಾದ ಶತ್ರುಪಟ್ಟಣಗಳನ್ನು ಸೀಳಿ ನಾಶಪಡಿಸುವವನಾಗಿದ್ದೀಯೆ. ಹಿಂಸಕನಾದ ಅಸುರನಿಗೆ ನಾಶಕನೂ ಆಗಿದ್ದೀಯೆ. ಯಜ್ಞಕರ್ತನಾದ ಮಾನವನಿಗೆ ವೃದ್ಧಿಕಾರಕನೂ, ಸ್ವರ್ಗಕ್ಕೆ ಈಶ್ವರನೂ ಆಗಿದ್ದೀಯೆ.

English Translation

You, Indra, are the stormer of many hostile cities, the slayer of the Dasyu, the fosterer of man, the lord of heaven.

॥ ಸಂಹಿತಾಪಾಠಃ ॥

ಅಧಾ ಹೀಂದ್ರ ಗಿರ್ವಣ ಉಪ ತ್ವಾ ಕಾಮಾನ್ಮಹಃ ಸಸೃಜ್ಮಹೇ ।
ಉದೇವ ಯಂತ ಉದಭಿಃ ॥ ೭ ॥

॥ ಪದಪಾಠಃ ॥

ಅಧ । ಹಿ । ಇಂದ್ರ । ಗಿರ್ವಣಃ । ಉಪ । ತ್ವಾ । ಕಾಮಾನ್ । ಮಹಃ । ಸಸೃಜ್ಮಹೇ ।

ಉದಾಽಇವ । ಯಂತಃ । ಉದಽಭಿಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ಗಿರ್ವಣೋ ಗೀರ್ಭಿರ್ವನನೀಯೇಂದ್ರ ಅಧಾ ಹಿ ಸಂಪ್ರತಿ ಹಿ ತ್ವಾ ತ್ವಾಂ ಮಹೋ ಮಹತಃ ಕಾಮಾನ್ಕಮನೀಯಾನ್ ಸ್ತೋಮಾನುಪ ಸಸೃಜ್ಮಹೇ । ಉಪಸೃಜಾಮಃ । ಪ್ರಾಪಯಾಮ ಇತ್ಯರ್ಥಃ । ತತ್ರ ದೃಷ್ಟಾಂತಮಾಹ। ಉದೇವ ಯಥೋದಕೇನ ಯಂತೋ ಗಚ್ಛಂತ ಉದಭಿರಂಜಲಿನೋತ್ಕ್ಷಿಪ್ತೋ-ದಕೈಃ ಸಮೀಪಸ್ಥಾನ್ಪುರುಷಾನ್ ಕ್ರೀಡಾರ್ಥಂ ಸಂಸೃಜಂತಿ ತದ್ವದಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಗಿರ್ವಣಃ**—ಸ್ತುತಿಗಳಿಂದ ಪೂಜಿಸಲ್ಪಡತಕ್ಕ । **ಇಂದ್ರ**—ಎಲೈ ಇಂದ್ರನೇ । **ಉದೇವ**—ನೀರಿನಲ್ಲಿ । **ಯಂತಃ**—ಸಂಚರಿಸುವ (ಕ್ರೀಡಿಸುವ) ಪುರುಷರು । **ಉದಭಿಃ**—ಅಂಜಲಿಯಿಂದ ತೆಗೆದ ಉದಕಗಳಿಂದ ತಮ್ಮ ಮಿತ್ರರ ಮೇಲೆ ಕ್ರೀಡಾರ್ಥವಾಗಿ ಎರಚುವಂತೆ । **ಅಧಾ ಹಿ**—ಈಗಲೇ । **ತ್ವಾ**—ನಿನ್ನನ್ನು ಉದ್ದೇಶಿಸಿ । **ಮಹಃ**—ಮಹತ್ತಾದವೂ । **ಕಾಮಾನ್**—ಆಕರ್ಷಕವಾದವೂ ಆದ ಸ್ತೋತ್ರಗಳನ್ನು । **ಉಪ ಸಸೃಜ್ಮಹೇ**—ನಿನಗೆ ಅರ್ಪಿಸುತ್ತೇವೆ

॥ ಭಾವಾರ್ಥ ॥

ಸ್ತುತಿಗಳಿಂದ ಪೂಜಿಸಲ್ಪಡತಕ್ಕ ಎಲೈ ಇಂದ್ರನೇ, ನೀರಿನಲ್ಲಿ ಕ್ರೀಡಾರ್ಥವಾಗಿ ಸಂಚರಿಸುವ ಪುರುಷರು ತಮ್ಮ ಅಂಜಲಿಗಳಿಂದ ತುಂಬಿ ತೆಗೆದ ನೀರನ್ನು ತಮ್ಮ ಮಿತ್ರರ ಮೇಲೆ ಕ್ರೀಡಾರ್ಥವಾಗಿ ಎರಚುವಂತೆ, ಈಗಲೇ ನಿನ್ನನ್ನು ಉದ್ದೇಶಿಸಿ ಮಹತ್ತಾದವೂ ಆಕರ್ಷಕವಾದವೂ ಆದ ಸ್ತೋತ್ರಗಳನ್ನು ನಿರ್ಮಿಸಿ ನಿನಗೆ ಅರ್ಪಿಸುತ್ತೇವೆ.

English Translation

Indra, worthy of hymns, we send our earnest praises to you as men going by water (splash their friends) with handfuls

॥ ಸಂಹಿತಾಪಾಠಃ ॥

ವಾರ್ಣ ತ್ವಾ ಯವ್ಯಾಭಿರ್ವರ್ಧಂತಿ ಶೂರ ಬ್ರಹ್ಮಾಣಿ ।

ವಾವೃಧ್ವಾಂಸಂ ಚಿದದ್ರಿವೋ ದಿವೇದಿವೇ ॥ ೮ ॥

॥ ಪದಪಾಠಃ ॥

ವಾಃ । ನ । ತ್ವಾ । ಯವ್ಯಾಭಿಃ । ವರ್ಧಂತಿ । ಶೂರ । ಬ್ರಹ್ಮಾಣಿ ।

ವವೃಧ್ವಾಂಸಂ । ಚಿತ್ । ಅದ್ರಿಽವಃ । ದಿವೇಽದಿವೇ ॥ ೮ ॥

॥ ಸಾಯಣಭಾಷ್ಯಂ ॥

ಹೇ ಅದ್ರಿವೋ ವಜ್ರಿಞ್ಶೂರೇಂದ್ರ ವಾರ್ಣ ಯಥೋದಕಮುದಕಸ್ಥಾನಂ ಯವ್ಯಾಭಿರ್ನದೀಭಿಃ । ಅವನಯೋ ಯವ್ಯಾ ಇತಿ ನದೀನಾಮಸು ಪಾಠಾತ್ । ವರ್ಧಂತಿ ವರ್ಧಯಂತಿ ತಥಾ ಬ್ರಹ್ಮಾಣಿ ಸ್ತೋತ್ರೈರ್ವವೃಧ್ವಾಂಸಂ ಚಿತ್ ಯಥಾ ನಿರುಪಕಂ ದೇಶಂ ನದೀಭಿಸ್ತಥಾ ನ ಕಿಂತು ಪ್ರವೃದ್ಧಮೇವ ತ್ವಾಂ ದಿವೇದಿವೇಽಸ್ವಹಂ ವರ್ಧಯಂತಿ । ಸ್ತೋತಾರೋ ವರ್ಧಯಂತಿ ॥

॥ ಪ್ರತಿಪದಾರ್ಥ ॥

**ಅದ್ರಿವಃ**—ವಜ್ರಾಯುಧಧಾರಿಯೂ । **ಶೂರ**—ಪರಾಕ್ರಮಿಯೂ ಆದ ಎಲೈ ಇಂದ್ರನೇ । **ಯವ್ಯಾಭಿಃ**—ನದಿಗಳಿಂದ । **ವಾರ್ಣ**—ಸಮುದ್ರವು ವೃದ್ಧಿಯನ್ನು ಹೊಂದುವಂತೆ । **ದಿವೇದಿವೇ**—ಪ್ರತಿದಿನವೂ । **ವವೃಧ್ವಾಂಸಂ ಚಿತ್**—ಸ್ವಭಾವವಾಗಿಯೇ ವೃದ್ಧಿಯನ್ನು ಹೊಂದುವ ನಿನ್ನನ್ನು । **ಬ್ರಹ್ಮಾಣಿ**—ಸ್ತುತಿಗಳು । **ವರ್ಧಂತಿ**–ಇನ್ನೂ ಅಧಿಕವಾಗಿ ಬೆಳೆಯುವಂತೆ ಮಾಡುತ್ತವೆ.

॥ ಭಾವಾರ್ಥ ॥

ವಜ್ರಾಯುಧಧಾರಿಯೂ ಪರಾಕ್ರಮಿಯೂ ಆದ ಎಲೈ ಇಂದ್ರನೇ, ಪ್ರತಿದಿನವೂ ಸ್ವಾಭಾವಿಕವಾಗಿಯೇ ವೃದ್ಧಿಯನ್ನು ಹೊಂದುವ ನಿನ್ನನ್ನು ಸಮುದ್ರವು ನದಿಗಳಿಂದ ಅಧಿಕವಾಗಿ ಬೆಳೆಯುವಂತೆ ನಮ್ಮ ಸ್ತುತಿಗಳು ಇನ್ನೂ ಅಧಿಕವಾದ ವೃದ್ಧಿಯನ್ನು ಹೊಂದುವಂತೆ ಮಾಡುತ್ತವೆ.

## English Translation

As the lake (swells) with the rivers, so our praises, O hero, O thunderer, augment you as you grow more and more day by day.

॥ ಸಂಹಿತಾಪಾಠಃ ॥

ಯುಂಜಂತಿ ಹರೀ ಇಷಿರಸ್ಯ ಗಾಥಯೋರೌ ರಥ ಉರುಯುಗೇ ।

ಇಂದ್ರವಾಹಾ ವಚೋಯುಜಾ ॥ ೯ ॥

॥ ಪದಪಾಠಃ ॥

ಯುಂಜಂತಿ । ಹರೀ ಇತಿ । ಇಷಿರಸ್ಯ । ಗಾಥಯಾ । ಉರೌ । ರಥೇ । ಉರುಽಯುಗೇ ।

ಇಂದ್ರಽವಾಹಾ । ವಚಃಽಯುಜಾ ॥ ೯ ॥

॥ ಸಾಯಣಭಾಷ್ಯಂ ॥

ಇಷಿರಸ್ಯ ಗಮನಶೀಲಸ್ಯೇಂದ್ರಸ್ಯೋರುಯುಗೇ ಮಹಾಯುಗ ಉರೌ ಮಹತಿ ರಥ ಇಂದ್ರವಾ-ಹೇಂದ್ರಸ್ಯ ವಾಹನಭೂತೌ ವಚೋಯುಜಾ ವಚನಮಾತ್ರೇಣೈವ ಯುಜ್ಯಮಾನೌ ಹರೀ ಅಶ್ವೌ ಗಾಥಯಾ ಸ್ತೋತ್ರೇಣ ಸ್ತೋತಾರೋ ಯುಂಜಂತಿ । ಯೋಜಯಂತಿ ॥

॥ ಪ್ರತಿಪದಾರ್ಥ ॥

**ಇಷಿರಸ್ಯ**—ಸಂಚಾರಶೀಲನಾದ ಇಂದ್ರನ । **ಉರುಯುಗೇ**—ದೀರ್ಘವಾದ ನೊಗವುಳ್ಳದ್ದೂ । **ಉರೌ**—ಮಹತ್ತಾದುದೂ ಆದ । **ರಥೇ**—ರಥಕ್ಕೆ । **ಇಂದ್ರವಾಹಾ**—ಇಂದ್ರನನ್ನು ವಹಿಸಲು ಯೋಗ್ಯವಾದವೂ । **ವಚೋ-ಯುಜಾ**—ವಾಜ್ಮಾತ್ರದಿಂದಲೇ ಯೋಜಿಸಲ್ಪಡುವುವೂ ಆದ । **ಹರೀ**—ಅಶ್ವಗಳನ್ನು । **ಗಾಥಯಾ**—ಸ್ತುತಿ ಪೂರ್ವಕವಾಗಿ । **ಯುಂಜಂತಿ**—ಸ್ತುತಿಕರ್ತರು ಸೇರಿಸುತ್ತಾರೆ.

॥ ಭಾವಾರ್ಥ ॥

ಸಂಚಾರಶೀಲನಾದ ಇಂದ್ರನ ದೀರ್ಘವಾದ ನೊಗವುಳ್ಳದ್ದೂ, ಮಹತ್ತಾದುದೂ ಆದ ರಥಕ್ಕೆ ಇಂದ್ರನನ್ನು ವಹಿಸಲು ಯೋಗ್ಯವಾದವೂ ವಾಜ್ಮಾತ್ರದಿಂದಲೇ ಯೋಜಿಸಲ್ಪಡುವವೂ ಆದ ಅಶ್ವಗಳನ್ನು ಸ್ತುತಿಪೂರ್ವಕವಾಗಿ ಸ್ತುತಿಕರ್ತರು ಸೇರಿಸುತ್ತಾರೆ.

English Translation

(The priests) by their hymn yoke in the swift deity's huge broad-yoked chariot the two Indra-bearing steeds yoked at a word

॥ ಸಂಹಿತಾಪಾಠಃ ॥

ತ್ವಂ ನ ಇಂದ್ರಾ ಭರ ಓಜೋ ನೃಮ್ಣಂ ಶತಕ್ರತೋ ವಿಚರ್ಷಣೇ ।
ಆ ವೀರಂ ಪೃತನಾಷಹಂ ॥ ೧೦ ॥

॥ ಪದಪಾಠಃ ॥

ತ್ವಂ । ನಃ । ಇಂದ್ರ । ಆ । ಭರ । ಓಜಃ । ನೃಮ್ಣಂ । ಶತಕ್ರತೋ ಇತಿ ಶತಽಕ್ರತೋ । ವಿಽಚರ್ಷಣೇ । ಆ । ವೀರಂ । ಪೃತನಾಽಸಹಂ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಶತಕ್ರತೋ ಬಹುಕರ್ಮನ್ ವಿಚರ್ಷಣೇ ವಿದ್ರಷ್ಟರಿಂದ್ರ ತ್ವಂ ನೋಽಸ್ಮಭ್ಯಮೋಜೋ ಬಲಂ ನೃಮ್ಣಂ ಧನಂ । ಗಯೋ ನೃಮ್ಣಮಿತಿ ಧನನಾಮಸು ಪಾಠಾತ್ । ಆ ಭರ । ಆಹರ । ವೀರಂ ವೀರ್ಯೋಪೇತಂ ಪೃತನಾಷಹಂ ಸೇನಾಸಹಂ ಸೇನಾಮಭಿಭವಿತಾರಂ ತ್ವಾಮಾ ಯಾಚಾಮಹ ಇತಿ ಶೇಷಃ ॥

॥ ಪ್ರತಿಪದಾರ್ಥ ॥

**ವಿಚರ್ಷಣೇ**—ವಿವೇಕದೃಷ್ಟಿಯಿಂದ ನೋಡತಕ್ಕ ಪ್ರಾಜ್ಞನೂ । **ಶತಕ್ರತೋ**—ಅನೇಕ ಕರ್ಮಕರ್ತನೂ ಆದ । **ಇಂದ್ರ**—ಎಲೈ ಇಂದ್ರನೇ । **ತ್ವಂ**—ನೀನು । **ನಃ**—ನಮಗೆ । **ಓಜಃ**—ಬಲವನ್ನೂ । **ನೃಮ್ಣಂ**—ಧನವನ್ನೂ । **ಆ ಭರ**—ಒದಗಿಸಿಕೊಡು । **ವೀರಂ**—ಪರಾಕ್ರಮಿಯೂ । **ಪೃತನಾಷಹಂ**—ಶತ್ರುಸೇನೆಗಳನ್ನು ಸೋಲಿಸುವವನೂ ಆದ ನಿನ್ನನ್ನು । **ಆ (ಯಾಚಾಮಹೇ)**—ಬೇಡಿಕೊಳ್ಳುತ್ತೇವೆ.

॥ ಭಾವಾರ್ಥ ॥

ವಿವೇಕದೃಷ್ಟಿಯಿಂದ ಸಕಲವನ್ನೂ ನೋಡತಕ್ಕ ಪ್ರಾಜ್ಞನೂ, ಅನೇಕ ಕರ್ಮಕರ್ತನೂ ಆದ ಎಲೈ ಇಂದ್ರನೇ, ನೀನು ನಮಗೆ ಧನವನ್ನೂ ಬಲವನ್ನೂ ಕೊಡು ಪರಾಕ್ರಮಿಯೂ, ಶತ್ರುಸೇನೆಗಳನ್ನು ಸೋಲಿಸುವವನೂ ಆದ ನಿನ್ನನ್ನು ಬೇಡಿಕೊಳ್ಳುತ್ತೇವೆ.

English Translation

Indra, all-beholding Maghavan, bring us strength and wealth; (we solicit you) the host-overpowering champion.

॥ ಸಂಹಿತಾಪಾಠಃ ॥

ತ್ವಂ ಹಿ ನಃ ಪಿತಾ ವಸೋ ತ್ವಂ ಮಾತಾ ಶತಕ್ರತೋ ಬಭೂವಿಥ ।
ಅಧಾ ತೇ ಸುಮ್ನಮೀಮಹೇ ॥ ೧೧ ॥

॥ ಪದಪಾಠಃ ॥

ತ್ವಂ । ಹಿ । ನಃ । ಪಿತಾ । ವಸೋ ಇತಿ । ತ್ವಂ । ಮಾತಾ । ಶತಕ್ರತೋ ಇತಿ ಶತಽಕ್ರತೋ । ಬಭೂವಿಥ ।
ಅಧ । ತೇ । ಸುಮ್ನಂ । ಈಮಹೇ ॥ ೧೧ ॥

॥ ಸಾಯಣಭಾಷ್ಯಂ ॥

**ಹೇ ವಸೋ ವಾಸಯಿತಃ ಶತಕ್ರತೋ ಬಹುಕರ್ಮನ್ನಿಂದ್ರ ತ್ವಂ ನೋಽಸ್ಮಾಕಂ ಪಿತಾ ಪಿತೃವತ್ಪಾಲಕೋ ಬಭೂವಿಥ । ಭವ । ತ್ವಂ ಮಾತಾ ಮಾತೃವದ್ಧಾರಕಶ್ಚ ಬಭೂವಿಥ । ಅಧಾಥ ಚ ವಯಂ ತೇ ತವ ಸ್ವಭೂತಂ ಸುಮ್ನಂ ಸುಖಮೀಮಹೇ । ಯಾಚಾಮಹೇ ॥**

॥ ಪ್ರತಿಪದಾರ್ಥ ॥

**ವಸೋ**—ವಸತಿದಾಯಕನೂ । **ಶತಕ್ರತೋ**—ಅನೇಕ ಕರ್ಮಕರ್ತನೂ ಆದ ಎಲೈ ಇಂದ್ರನೇ । **ತ್ವಂ ಹಿ**—ನೀನೇ । **ನಃ**—ನಮಗೆ । **ಪಿತಾ**—ಪಾಲಕನಾದ ಪಿತೃರೂಪನೂ । **ಬಭೂವಿಥ**—ಆಗಿದ್ದೀಯೆ । **ತ್ವಂ**—

ನೀನೇ । **ಮಾತಾ**—ಮಾತೃರೂಪನೂ ಆಗಿದ್ದೀಯೆ । **ಅಥ**—ಆದುದರಿಂದಲೇ । **ತೇ**—ನಿನ್ನಿಂದ ಒದಗುವ । **ಸುಮ್ನಂ**—ಸುಖವನ್ನು । **ಈಮಹೇ**—ಯಾಚಿಸುತ್ತೇವೆ

॥ ಭಾವಾರ್ಥ ॥

ವಸತಿದಾಯಕನೂ, ಅನೇಕ ಕರ್ಮಕರ್ತನೂ ಆದ ಎಲೈ ಇಂದ್ರನೇ, ನಮಗೆ ಪಾಲಕನಾದ ಪಿತೃವೂ ನೀನೇ, ಧಾರಕಳಾದ ಮಾತೃವೂ ನೀನೇ ಆಗಿದ್ದೀಯೆ. ಆದುದರಿಂದಲೇ ನಿನ್ನಿಂದ ಲಬ್ಧವಾಗುವ ಸುಖವನ್ನು ಯಾಚಿಸುತ್ತೇವೆ

English Translation

You have been our father, O giver of dwellings, you our mother O Shatakratu ; we pray for that happiness which is yours.

॥ ಸಂಹಿತಾಪಾಠಃ ॥

ತ್ವಾಂ ಶುಷ್ಮಿನ್ಪುರುಹೂತ ವಾಜಯಂತಮುಪ ಬ್ರುವೇ ಶತಕ್ರತೋ ।

ಸ ನೋ ರಾಸ್ವ ಸುವೀರ್ಯಂ ॥ ೧೨ ॥

॥ ಪದಪಾಠಃ ॥

ತ್ವಾಂ । ಶುಷ್ಮಿನ್ । ಪುರುऽಹೂತ । ವಾಜऽಯಂತಂ । ಉಪ । ಬ್ರುವೇ । ಶತಕ್ರತೋ ಇತಿ ಶತಕ್ರऽತೋ ।

ಸಃ । ನಃ । ರಾಸ್ವ । ಸುऽವೀರ್ಯಂ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಶುಷ್ಮಿನ್ಬಲವನ್ ಪುರುಹೂತ ಬಹುಭಿರ್ಯಜಮಾನೈರಾಹೂತ ಶತಕ್ರತೋ ಬಹುಕರ್ಮನ್ನಿಂದ್ರ ವಾಜಯಂತಂ ಬಲಮಿಚ್ಛಂತಂ ತ್ವಾಮುಪ ಬ್ರುವೇ । ಉಪಸ್ತೌಮಿ । ಸ ತ್ವಂ ನೋऽಸ್ಮಭ್ಯಂ ಸುವೀರ್ಯಂ ಧನಂ ರಾಸ್ವ । ದೇಹಿ ॥

॥ ಪ್ರತಿಪದಾರ್ಥ ॥

**ಶುಷ್ಮಿನ್**—ಶಕ್ತಿಯುತನೂ । **ಪುರುಹೂತ**—ಅನೇಕರ ಆಹ್ವಾನಕ್ಕೆ ಪಾತ್ರನೂ । **ಶತಕ್ರತೋ**—ಅನೇಕ ಕರ್ಮಗಳಿಗೆ ಕರ್ತನೂ ಆದ ಎಲೈ ಇಂದ್ರನೇ । **ವಾಜಯಂತಂ**—ಬಲವನ್ನೇ ಅಪೇಕ್ಷಿಸುವ । **ತ್ವಾಂ**—ನಿನ್ನನ್ನು । **ಉಪ ಬ್ರುವೇ**—ಸ್ತುತಿಸುತ್ತೇನೆ । **ಸಃ**—ಪ್ರಸಿದ್ಧನಾದ ನೀನು । **ನಃ**—ನಮಗೆ । **ಸುವೀರ್ಯಂ**—ಉತ್ತಮವಾದ ಶಕ್ತಿಯಿಂದ ಕೂಡಿದ ಧನವನ್ನು । **ರಾಸ್ವ**—ಕೊಡು.

॥ ಭಾವಾರ್ಥ ॥

ಶಕ್ತಿಯುತನೂ, ಅನೇಕರ ಆಹ್ವಾನಕ್ಕೆ ಪಾತ್ರನೂ, ಅನೇಕ ಕರ್ಮಗಳಿಗೆ ಕರ್ತನೂ ಆದ ಎಲೈ ಇಂದ್ರನೇ,

ಬಲವನ್ನೇ ಅಪೇಕ್ಷಿಸುವ ನಿನ್ನನ್ನು ಸ್ತುತಿಸುತ್ತೇನೆ. ಪ್ರಸಿದ್ಧನಾದ ನೀನು ನಮಗೆ **ಉತ್ತಮವಾದ ಶಕ್ತಿಯಿಂದ ಕೂಡಿದ** ಧನವನ್ನು ಕೊಡು.

**English Translation**

Mighty Shatakratu, invoked by many, I praise you desirous of offerings; you give us wealth

## ತೊಂಭತ್ತೊಂಭತ್ತನೆಯ ಸೂಕ್ತವು.

|| ಸಾಯಣಭಾಷ್ಯಂ ||

**ತ್ವಾಮಿದಾ ಹ್ಯ ಇತ್ಯಷ್ಟರ್ಚಂ ಷಷ್ಠಂ ಸೂಕ್ತಂ ನೃಮೇಧಸ್ಯಾರ್ಷಂ । ಅಯುಜೋ ಬೃಹತ್ಯೋ ಯುಜಃ ಸತೋಬೃಹತ್ಯಃ । ತಥಾ ಚಾನುಕ್ರಾಂತಂ । ತ್ವಾಮಿದಾಷ್ಟೌ ಪ್ರಾಗಾಥಮಿತಿ ॥ ಚಾತುರ್ವಿಂಶಿಕೇಽಹನಿ ಮಾಧ್ಯಂದಿನೇ ಸವನೇಽಚ್ಛಾವಾಕಸ್ಯ ತ್ವಾಮಿದಾ ಹ್ಯಃ । ಆ. ೭-೪ । ಇತಿ ॥ ಮಹಾವ್ರತೇಽಪಿ ನಿಷ್ಕೇವಲ್ಯೇ ಬಾರ್ಹತತೃಚಾಶೀತಾವಯಂ ಪ್ರಗಾಥಃ। ತಥೈವ ಪಂಚಮಾರಣ್ಯಕೇ ಸೂತ್ರಿತಂ । ತ್ವಾಮಿದಾ ಹ್ಯೋ ನರ ಇತ್ಯೇತಂ ಪ್ರಗಾಥಂ ಪ್ರತ್ಯವದಧಾತಿ । ಐ. ಆ. ೫.೨-೪ । ಇತಿ ॥ ಚಾತುರ್ವಿಂಶಿಕೇಽಹನಿ ಮಾಧ್ಯಂದಿನೇ ಸವನೇ ಬ್ರಾಹ್ಮಣಾಚ್ಛಂಸಿನಃ ಶ್ರಾಯಂತ ಇವೇತಿ ವೈಕಲ್ಪಿಕಃ ಸ್ತೋತ್ರಿಯಃ ಪ್ರಗಾಥಃ । ಸೂತ್ರಿತಂ ಚ । ಶ್ರಾಯಂತ ಇವ ಸೂರ್ಯಂ ಬಣ್ಮಹಾँ ಅಸಿ ಸೂರ್ಯ । ಆ. ೭.೪ । ಇತಿ ॥ ಚಾತುರ್ವಿಂಶಿಕೇಽಹನಿ ಮಾಧ್ಯಂದಿನೇ ತ್ವಮಿಂದ್ರ ಪ್ರತೂರ್ತಿಷು ತ್ವಮಿಂದ್ರ ಯಶಾ ಅಸಿ । ಆ. ೭-೪ । ಇತಿ ॥ ತಸ್ಮಿನ್ನೇವಾಹನಿ ನಿಷ್ಕೇವಲ್ಯೇ ವೈರಾಜಯೋನಿಭೂತೋಽಯಂ ಪ್ರಗಾಥಃ ಶಂಸನೀಯಃ। ಸೂತ್ರಿತಂ ಚ। ತಯೋರಕ್ರಿಯಮಾಣಸ್ಯ ಯೋನಿಂ ಶಂಸೇದ್ವೈರೂಪವೈರಾಜಶಾಕ್ವರರೈವತಾನಾಂ ಚ । ಆ. ೭-೩ । ಇತಿ॥**

ಅನುವಾದವು—**ತ್ವಾಮಿದಾ ಹ್ಯಃ** ಎಂಬ ಈ ಸೂಕ್ತವು ಹತ್ತನೆಯ ಅನುವಾಕದಲ್ಲಿ ಆರನೆಯ **ಸೂಕ್ತವು.** ಇದರಲ್ಲಿ ಎಂಟು ಋಕ್ಕುಗಳಿರುವವು ಈ ಸೂಕ್ತಕ್ಕೆ ನೃಮೇಧನು ಋಷಿಯು ; ಇಂದ್ರನು ದೇವತೆಯು ; ಈ ಸೂಕ್ತದಲ್ಲಿ ಅಸಮ ಸಂಖ್ಯೆಯ ಋಕ್ಕುಗಳು ಬೃಹತೀಛಂದಸ್ಕವು ; ಸಮಸಂಖ್ಯೆಯ ಋಕ್ಕುಗಳು ಸತೋಬೃಹತೀಛಂದಸ್ಕವು. ಅನುಕ್ರಮಣಿಕೆಯಲ್ಲಿ—**ತ್ವಾಮಿದಾಷ್ಟೌ ಪ್ರಾಗಾಥಂ** ಎಂದು ಹೇಳಿರುವುದು ಯಾಗದ ಚಾತುರ್ವಿಂಶಿಕವೆಂಬ ದಿನದ ಮಾಧ್ಯಂದಿನಸವನಕಾಲದಲ್ಲಿ ಅಚ್ಛಾವಾಕನೆಂಬ ಋತ್ವಿಜನು **ತ್ವಾಮಿದಾ ಹ್ಯಃ** ಎಂಬ ಪ್ರಾಗಾಥವನ್ನು (ಎರಡು ಋಕ್ಕುಗಳನ್ನು) ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದಲ್ಲಿ (ಆ. ೭-೪) ಉಕ್ತವಾಗಿರುವುದು. ಮಹಾವ್ರತೇಷ್ಟಿಯಲ್ಲಿಯೂ ನಿಷ್ಕೇವಲ್ಯ ಶಸ್ತ್ರಮಂತ್ರಪಠನಮಾಡುವಾಗ ಬೃಹತೀಛಂದಸ್ಸಿನ ಋಕ್ಕುಗಳಲ್ಲಿ ಈ ಪ್ರಗಾಥವನ್ನು ಪಠಿಸಬೇಕೆಂದು ಐತರೇಯಾರಣ್ಯಕದ ಪಂಚಮಾರಣ್ಯಕದಲ್ಲಿ-**ತ್ವಾಮಿದಾ ಹ್ಯೋ ನರ ಇತ್ಯೇತಂ ಪ್ರಗಾಥಂ ಪ್ರತ್ಯವದಧಾತಿ** ಎಂಬ ವಾಕ್ಯದಿಂದ (ಐ. ಆ. ೫.೨-೪) ನಿರ್ದಿಷ್ಟವಾಗಿರುವುದು. ಯಾಗದ ಚಾತುರ್ವಿಂಶಿಕವೆಂಬ ದಿನದ ಮಾಧ್ಯಂದಿನ ಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ಶ್ರಾಯಂತಇವ** ಎಂಬ ಪ್ರಗಾಥವನ್ನು (೩-೪ ಋಕ್ಕುಗಳನ್ನು) ವೈಕಲ್ಪಿಕಸ್ತೋತ್ರಿಯಪ್ರಗಾಥವನ್ನಾಗಿ ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಶ್ರಾಯಂತ ಇವ**

**ಸೂರ್ಯಂ ಬಣ್ಮಹಾँ ಅಸಿ ಸೂರ್ಯ** ಎಂಬ ಸೂತ್ರದಿಂದ ( ಆ. ೭-೪ ) ವಿವೃತವಾಗಿರುವುದು. ಮತ್ತು ಚಾತುರ್ವಿಂಶಿಕವೆಂಬ ದಿನದ ಮಾಧ್ಯಂದಿನಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು **ತ್ವಮಿಂದ್ರ ಪ್ರತೂರ್ತಿಷು** ಎಂಬ ಪ್ರಗಾಥವನ್ನು (೫-೬ನೇ ಋಕ್ಕುಗಳನ್ನು) ಪಠಿಸಬೇಕೆಂದು ಆಶ್ವಲಾಯನ ಶ್ರೌತ ಸೂತ್ರದ—**ತ್ವಮಿಂದ್ರ ಪ್ರತೂರ್ತಿಷು ತ್ವಮಿಂದ್ರ ಯಶಾ ಅಸಿ** ಎಂಬ ಸೂತ್ರದಿಂದ ( ಆ ೭-೪ ) ವಿವೃತವಾಗಿರುವುದು. ಯಾಗದ ಅದೇ ದಿವಸ ನಿಷ್ಕೇವಲ್ಯಶಸ್ತ್ರಮಂತ್ರಗಳನ್ನು ಪಠಿಸುವಾಗ ವೈರಾಜಯೋನಿಭೂತವಾದ ಇದೇ ಪ್ರಗಾಥವನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತ ಸೂತ್ರದ—**ತಯೋರಕ್ರಿಯಮಾಣಸ್ಯ ಯೋನಿಂ ಶಂಸೇದ್ವೈರೂಪವೈರಾಜಶಾಕ್ವರರೈವತಾನಾಂ ಚ** ಎಂಬ ಸೂತ್ರದಿಂದ (ಆ ೭-೩) ವಿವೃತವಾಗಿರುವುದು.

## ಸೂಕ್ತ—೯೯

ಮಂಡಲ—೮ ॥ ಅನುವಾಕ—೧೦ ॥ ಸೂಕ್ತ—೯೯ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
ಋಷಿಃ—ನೃಮೇಧಃ ॥
ದೇವತಾ—ಇಂದ್ರಃ ॥
ಛಂದಃ—ಪ್ರಾಗಾಥಂ । (ಅಯುಜಃ ಬೃಹತ್ಯಃ । ಯುಜಃ ಸತೋಬೃಹತ್ಯಃ )

। ಸಂಹಿತಾಪಾಠಃ ।

ತ್ವಾಮಿದಾ ಹ್ಯೋ ನರೋಽಪೀಪ್ಯನ್ವಜ್ರಿನ್ಭೂರ್ಣಯಃ ।
ಸ ಇಂದ್ರ ಸ್ತೋಮವಾಹಸಾಮಿಹ ಶ್ರುಧ್ಯುಪ ಸ್ವಸರಮಾ ಗಹಿ ॥ ೧ ॥

॥ ಪದಪಾಠಃ ॥

ತ್ವಾಂ । ಇದಾ । ಹ್ಯಃ । ನರಃ । ಅಪೀಪ್ಯನ್ । ವಜ್ರಿನ್ । ಭೂರ್ಣಯಃ ।
ಸಃ । ಇಂದ್ರ । ಸ್ತೋಮಽವಾಹಸಾಂ । ಇಹ । ಶ್ರುಧಿ । ಉಪ । ಸ್ವಸರಂ । ಆ । ಗಹಿ ॥ ೧ ॥

॥ ಸಾಯಣಭಾಷ್ಯಂ ।

**ಹೇ ವಜ್ರಿನ್ ವಜ್ರವನ್ನಿಂದ್ರ ಯಂ ತ್ವಾಂ ಭೂರ್ಣಯೋ ಹವಿರ್ಭಿರ್ಭರಣಶೀಲಾ ನರಃ ಕರ್ಮಣಾಂ ನೇತಾರೋ ಯಜಮಾನಾ ಇದಾದ್ಯ ಹ್ಯಶ್ಚಾಪೀಪ್ಯನ್ ಸೋಮಮಪಾಯಯನ್ ಸ ತ್ವಂ ಸ್ತೋಮವಾಹಸಾಂ ಸ್ತೋತ್ರವಾಹಕಾನಾಮಸ್ಮಾಕಂ ಸ್ತೋತ್ರಮಿಹ ಯಜ್ಞೇ ಶ್ರುಧಿ । ಶೃಣು । ಸ್ವಸರಂ ಚ ಗೃಹಂ ಚ । ದುರ್ಯಾಃ ಸ್ವಸರಾಣೀತಿ ಗೃಹನಾಮಸು ಪಾಠಾತ್** । ಉಪಾ ಗಹಿ । **ಉಪಾಗಚ್ಛ** ॥

॥ ಪ್ರತಿಪದಾರ್ಥ ॥

ವಜ್ರಿನ್—ವಜ್ರಾಯುಧಧಾರಿಯಾದ । ಇಂದ್ರ—ಎಲೈ ಇಂದ್ರನೇ । **ತ್ವಾ**—ನಿನಗೆ । **ಭೂರ್ಣಯಃ**—ಹವಿಸ್ಸುಗಳಿಂದ ತುಂಬಿದ ಪಾತ್ರೆಗಳುಳ್ಳ । **ನರಃ**—ಯಜಮಾನರು । **ಇದಾ**—ಈಗಲೂ । **ಹ್ಯಃ**—ನೆನ್ನೆಯೂ

**ಅಪೀಪ್ಯನ್**—ಸೋಮಪಾನವನ್ನು ಮಾಡಿಸಿದ್ದಾರೆ । **ಸಃ**—ಅಂತಹ ಪ್ರಸಿದ್ಧನಾದ ನೀನು । **ಸ್ತೋಮವಾಹಸಾಂ**—ಸ್ತೋತ್ರಗಳನ್ನು ವಹಿಸಿ ಅರ್ಪಿಸುವ ನಮ್ಮ ಸ್ತೋತ್ರಗಳನ್ನು । **ಇಹ**—ಈ ಯಜ್ಞದಲ್ಲಿ । **ಶ್ರುಧಿ**—ಕೇಳು । **ಸ್ವಸರಂ**—ನಮ್ಮ ಯಜ್ಞಗೃಹಕ್ಕೂ ಸಹ । **ಉಪ ಆ ಗಹಿ**—ದಯಮಾಡು.

॥ ಭಾವಾರ್ಥ ॥

ವಜ್ರಾಯುಧಧಾರಿಯಾದ ಎಲೈ ಇಂದ್ರನೇ, ಹವಿಸ್ಸುಗಳಿಂದ ತುಂಬಿದ ಪಾತ್ರೆಗಳನ್ನು ಹಿಡಿದಿರುವ ಯಜಮಾನರು ನಿನಗೆ ಈಗಲೂ ಮತ್ತು ನೆನ್ನೆಯೂ ಸೋಮಪಾನವನ್ನು ಮಾಡಿಸಿದ್ದಾರೆ. ಅಂತಹ ಪ್ರಸಿದ್ಧನಾದ ನೀನು ನಿನ್ನ ಪ್ರಶಂಸೆ ಗಳನ್ನು ವಹಿಸಿ ಅರ್ಪಿಸುವ ನಮ್ಮ ಸ್ತೋತ್ರಗಳನ್ನು ಈ ಯಜ್ಞದಲ್ಲಿ ಕೇಳು. ನಮ್ಮ ಯಜ್ಞ ಗೃಹಕ್ಕೂ ದಯಮಾಡು.

English Translation

Thunderer, your worshippers, ready with their oblations, have to day and yesterday made you drink (the Soma); listen, Indra, here to us who offer you praise and come to our dwelling.

॥ ಸಂಹಿತಾಪಾಠಃ ॥

ಮತ್ಸ್ವಾ ಸುಶಿಪ್ರ ಹರಿವಸ್ತದೀಮಹೇ ತ್ವೇ ಆ ಭೂಷಂತಿ ವೇಧಸಃ ।
ತವ ಶ್ರವಾಂಸ್ಯುಪಮಾನ್ಯುಕ್ಥ್ಯಾ ಸುತೇಷ್ವಿಂದ್ರ ಗಿರ್ವಣಃ ॥ ೨ ॥

॥ ಪದಪಾಠಃ ॥

ಮತ್ಸ್ವ । ಸುऽಶಿಪ್ರ । ಹರಿऽವಃ । ತತ್ । ಈಮಹೇ । ತ್ವೇ ಇತಿ । ಆ । ಭೂಷಂತಿ । ವೇಧಸಃ ।
ತವ । ಶ್ರವಾಂಸಿ । ಉಪऽಮಾನಿ । ಉಕ್ಥ್ಯಾ । ಸುತೇಷು । ಇಂದ್ರ । ಗಿರ್ವಣಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಸುಶಿಪ್ರ ಶೋಭನಹನೋ ಶೋಭನೋಷ್ಣೀಷಿನ್ವಾ ಹರಿವೋऽಶ್ವವನ್ ಗಿರ್ವಣೋ ಗೀರ್ಭಿರ್ವನನೀಯೇಂದ್ರ ತ್ವೇ ತ್ವಯಿ ವೇಧಸಃ ಪರಿಚಾರಕಾ ಆ ಭೂಷಂತಿ । ಆಭವಂತಿ । ಮತ್ಸ್ವ ಸೋಮೇನ ಮಾದಯಾತ್ಮಾನಂ । ಕಿಂಚ ತತ್ತ್ವಾಂ ವಯಮೀಮಹೇ । ಯಾಚಾಮಹೇ । ಕಿಂ ಯಾಚ್ಯಮಿತ್ಯತ್ರಾಹ । ಸುತೇಷು ಸೋಮೇಷ್ವಭಿಷುತೇಷು ಸತ್ಸು ತವ ಶ್ರವಾಂಸ್ಯನ್ನಾನ್ಯುಪಮಾನ್ಯುಪಮಾನಭೂತಾನ್ಯುಕ್ಥ್ಯಾ ಪ್ರಶಂಸ್ಯಾನಿ ಚ ಸಂತ್ವಿತಿ ॥

॥ ಪ್ರತಿಪದಾರ್ಥ ॥

**ಸುಶಿಪ್ರ**—ಉತ್ತಮವಾದ ಕೆನ್ನೆಯುಳ್ಳವನೂ । **ಹರಿವಃ**—ಅಶ್ವೋಪೇತನೂ । **ಗಿರ್ವಣಃ**—ಸ್ತುತಿಗಳಿಂದ ಪೂಜಿತನೂ ಆದ । **ಇಂದ್ರ**—ಎಲೈ ಇಂದ್ರನೇ । **ತ್ವೇ**—ನಿನ್ನ ಸುತ್ತಲೂ । **ವೇಧಸಃ**—ಪರಿಚಾರಕರು । ಆ

**ಭೂಷಂತಿ**—ಸುತ್ತುವರಿದು ನಿಂತಿದ್ದಾರೆ । **ಮತ್ಸ್ವ**—ಸೋಮಪಾನದಿಂದಸಂತೃಪ್ತನಾಗು ಎಂದು। **ತತ್**—ನಿನ್ನನ್ನು। **ಈಮಹೇ**—ಯಾಚಿಸುತ್ತೇವೆ । **ಸುತೇಷು**—ಸೋಮರಸವು ಹಿಂಡಿದ ಈ ಕಾಲದಲ್ಲಿ । **ತವ**—ನಿನ್ನ । **ಶ್ರವಾಂಸಿ**—ಅನ್ನಗಳು (ಹವಿಸ್ಸುಗಳು) **ಉಪಮಾನಿ**—ಮಾದರಿಯಾಗಿಯೂ । **ಉಕ್ಥ್ಯಾ**—ಪ್ರಶಂಸನೀಯವಾಗಿಯೂ ಆಗಿರಲಿ.

॥ ಭಾವಾರ್ಥ ॥

ಉತ್ತಮವಾದ ಕೆನ್ನೆಯುಳ್ಳವನೂ, ಅಶ್ವೋಪೇತನೂ, ಸ್ತುತಿಗಳಿಂದ ಪೂಜಿತನೂ ಆದ ಎಲೈ ಇಂದ್ರನೇ, ನಿನ್ನ ಸುತ್ತಲೂ ಪರಿಚಾರಕರು ಸುತ್ತುವರಿದು ನಿಂತಿದ್ದಾರೆ. "ಸೋಮಪಾನದಿಂದ ಸಂತೃಪ್ತನಾಗು" ಎಂದು ನಾವು ನಿನ್ನನ್ನು ಯಾಚಿಸುತ್ತೇವೆ ಸೋಮರಸವು ಹಿಂಡಲ್ಪಟ್ಟ ಈ ಕಾಲದಲ್ಲಿ ನಿನ್ನ ಅನ್ನಗಳು ಮಾದರಿಯಾಗಿಯೂ ಪ್ರಶಂಸನೀಯವಾಗಿಯೂ ಇರಲಿ.

English Translation

Handsome-jawed lord of steeds, rejoice (in the libation); we pray to you, your votaries come to you; Indra, worthy of praise, may your food be a pattern and excellent.

॥ ಸಂಹಿತಾಪಾಠಃ ॥

ಶ್ರಾಯಂತ ಇವ ಸೂರ್ಯಂ ವಿಶ್ವೇದಿಂದ್ರಸ್ಯ ಭಕ್ಷತ ॥
ವಸೂನಿ ಜಾತೇ ಜನಮಾನ ಓಜಸಾ ಪ್ರತಿ ಭಾಗಂ ನ ದೀಧಿಮ ॥ ೩ ॥

॥ ಪದಪಾಠಃ ॥

ಶ್ರಾಯಂತಃऽಇವ । ಸೂರ್ಯಂ । ವಿಶ್ವಾ । ಇತ್ । ಇಂದ್ರಸ್ಯ । ಭಕ್ಷತ ।
ವಸೂನಿ । ಜಾತೇ । ಜನಮಾನೇ । ಓಜಸಾ । ಪ್ರತಿ । ಭಾಗಂ । ನ । ದೀಧಿಮ ॥ ೩ ॥

॥ ಸಾಯಣಭಾಷ್ಯಂ ॥

ಹೇ ಅಸ್ಮದೀಯಾ ಜನಾಃ ಶ್ರಾಯಂತ ಇವ ಸೂರ್ಯಂ ಯಥಾ ಸಮಾಶ್ರಿತಾ ರಶ್ಮಯಃ ಸೂರ್ಯಂ ಭಜಂತೇ ತಥೇಂದ್ರಸ್ಯ ವಿಶ್ವೇದ್ವಿಶ್ವಾನ್ಯೇವ ಧನಾನಿ ಭಕ್ಷತ । ಭಜತ । ಸ ಚ ಯಾನಿ ವಸೂನಿ ಧನಾನಿ ಜಾತ ಉತ್ಪನ್ನೇ ಜನಮಾನೇ ಜನಿಷ್ಯಮಾಣೇ ಚೌಜಸಾ ಬಲೇನ ಕರೋತಿ ಭಾಗಂ ನ ಪಿತ್ರ್ಯಂ ಭಾಗಮಿವ ತಾನಿ ಧನಾನಿ ಪ್ರತಿ ದೀಧಿಮ । ಪ್ರತಿಧಾರಯಾಮೇತಿ। ಯದ್ವಾ। ಶ್ರಾಯಂತ ಇವ ಸೂರ್ಯಂ ಯಥಾ ಸಮಾಶ್ರಿತಾ ರಶ್ಮಯಃ ಸೂರ್ಯಮುಪತಿಷ್ಠಂತೇ ತಥೇಂದ್ರಸ್ಯ ವಿಶ್ವಾ ವಿಶ್ವಾನಿ ವಿಭಕ್ತುಮಿಚ್ಛಂತಃ ಸಮಾಶ್ರಿತಾ ಮರುತ ಇಂದ್ರಮುಪತಿಷ್ಠಂತ ಇತಿ ಶೇಷಃ । ಉಪಸ್ಥಾಯ ಚ ಮರುತೋ ವಸೂನ್ಯುದಕ–

**ಲಕ್ಷಣಾನಿ ಧನಾನಿ ಜಾತೇ ಜಾತಾಯ ಜನಮಾನೇ ಜನಿಷ್ಯಮಾಣಾಯ ಚ ಮನುಷ್ಯಾಯ ಚೌಜಸಾ ಬಲೇನ ಭಕ್ಷತ । ವಿಭಜಂತೇ । ತತ್ರ ಚಾಸ್ಮಾಕಂ ಯೋ ಭಾಗಸ್ತಂ ಭಾಗಂ। ನೇತಿ ಸಂಪ್ರತ್ಯರ್ಥೇ। ಪ್ರತೀತ್ಯೇಷೋಽನ್ವಿತ್ಯೇತಸ್ಯ ಸ್ಥಾನೇ। ಅನು ದೀಧಿಮ। ವಯಮನುಧ್ಯಾಯಾಮ । ತಥಾ ಚ ಯಾಸ್ಕಃ। ಸಮಾಶ್ರಿತಾಃ ಸೂರ್ಯಮುಪತಿಷ್ಠಂತೇ । ಅಪಿ ವೋಪಮಾರ್ಥೇ ಸ್ಯಾತ್ಸೂರ್ಯಮಿವೇಂದ್ರಮುಪತಿಷ್ಠಂತ ಇತಿ । ಸರ್ವಾಣೀಂದ್ರಸ್ಯ ಧನಾನಿ ವಿಭಕ್ಷ್ಯಮಾಣಾಃ । ಸ ಯಥಾ ಧನಾನಿ ವಿಭಜತಿ ಜಾತೇ ಚ ಜನಿಷ್ಯಮಾಣೇ ಚ ತಂ ವಯಂ ಭಾಗಮನುಧ್ಯಾಯಾಮ । ನಿ. ೬.೮ । ಇತಿ ॥**

॥ ಪ್ರತಿಪದಾರ್ಥ ॥

**ಸೂರ್ಯಂ**—ಸೂರ್ಯನನ್ನು । **ಶ್ರಾಯಂತ ಇವ**—ಆಶ್ರಯಿಸಿರುವ ರಶ್ಮಿಗಳೆಲ್ಲವೂ ಸೂರ್ಯನನ್ನೇ ಸೇವಿಸುವಂತೆ। **ವಿಶ್ವೇತ್**—ಸಕಲ ಧನಗಳೂ ಸಹ। **ಇಂದ್ರಸ್ಯ**—ಇಂದ್ರನನ್ನೇ। **ಭಕ್ಷತ**—ಸೇವಿಸುತ್ತವೆ। (**ಸಃ**—ಅದೇ ಇಂದ್ರನು)। **ವಸೂನಿ**—ಆ ಧನಗಳನ್ನು । **ಜಾತೇ**—ಉತ್ಪನ್ನವಾಗಿರುವುವೂ । **ಜನಮಾನೇ**—ಮುಂದಕ್ಕೆ ಹುಟ್ಟತಕ್ಕವೂ ಆದ ಸಕಲ ಭೂತಗಳಿಗೂ । **ಓಜಸಾ**—ತನ್ನ ಬಲದಿಂದ ಹಂಚುತ್ತಾನೆ । **ಭಾಗಂ ನ**—ಪಿತ್ರಾರ್ಜಿತವಾದ ಆಸ್ತಿಯಲ್ಲಿ ಪುತ್ರರು ಭಾಗವನ್ನು ನಿರೀಕ್ಷಿಸುವಂತೆ। **ಪ್ರತಿ ದೀಧಿಮ**—ಇಂದ್ರನ ಧನದಲ್ಲಿ ನಮ್ಮ ಭಾಗವನ್ನು ನಿರೀಕ್ಷಿಸಿ ಧ್ಯಾನ ಮಾಡೋಣ.

॥ ಭಾವಾರ್ಥ ॥

ಸೂರ್ಯನನ್ನು ಆಶ್ರಯಿಸಿರುವ ರಶ್ಮಿಗಳೆಲ್ಲವೂ ಸೂರ್ಯನನ್ನೇ ಸೇವಿಸುವಂತೆ ಸಕಲಧನಗಳೂ ಸಹ ಇಂದ್ರನನ್ನೇ ಸೇವಿಸುತ್ತವೆ. ಅದೇ ಇಂದ್ರನು ಆ ಧನಗಳನ್ನು ಉತ್ಪನ್ನವಾಗಿರುವುವೂ ಮುಂದಕ್ಕೆ ಹುಟ್ಟತಕ್ಕವೂ ಆದ ಸಕಲ ಭೂತಗಳಿಗೂ ತನ್ನ ಬಲದಿಂದ ಹಂಚುತ್ತಾನೆ. ಪಿತ್ರಾರ್ಜಿತವಾದ ಆಸ್ತಿಯಲ್ಲಿ ಪುತ್ರರು ಭಾಗವನ್ನು ನಿರೀಕ್ಷಿಸುವಂತೆ ಇಂದ್ರನ ಧನದಲ್ಲಿ ನಮ್ಮ ಭಾಗವನ್ನೂ ನಿರೀಕ್ಷಿಸಿ ಧ್ಯಾನಿಸೋಣ

## English Translation

As the gathering (rays) proceed to the sun, so ( the Maruts proceed ) to Indra, and by their power divide all his treasures among those who have been or will be born ; may we meditate on our share.

॥ ವಿಶೇಷವಿಷಯಗಳು ॥

**ವಿಶ್ವೇತ್ ಭಕ್ಷತ** ಎಂಬುದಕ್ಕೆ ಸಕಲ ಮರುತ್ತುಗಳೂ ಇಂದ್ರನನ್ನೇ ಸೇವಿಸುತ್ತವೆ ಎಂಬರ್ಥವನ್ನೂ ತಿಳಿಸಿದೆ. ಆ ಮರುತ್ತುಗಳೇ ಇಂದ್ರನ ಧನವನ್ನು ಸಕಲ ಭೂತಗಳಿಗೂ ಹಂಚುತ್ತವೆ ಎಂದು ಮುಂದಿನ ವಾಕ್ಯದ ತಾತ್ಪರ್ಯ. **ಶ್ರಾಯಂತಃ** ಎಂಬ ಶಬ್ದಕ್ಕೆ ಅರ್ಥವಿವರಣೆಮಾಡುವಾಗ ಈ ಮಂತ್ರಕ್ಕೆ ನಿರುಕ್ತದಲ್ಲಿ ಈರೀತಿ ವಿವರಣೆಯಿರುತ್ತದೆ —

> **ಶ್ರಾಯಂತಃ । ಶ್ರಾಯಂತ ಇವ ಸೂರ್ಯಂ ವಿಶ್ವೇದಿಂದ್ರಸ್ಯ ಭಕ್ಷತ । ವಸೂನಿ ಜಾತೇ ಜನಮಾನ ಓಜಸಾ ಪ್ರತಿ ಭಾಗಂ ನ ದೀಧಿಮ ॥ ಸಮಾಶ್ರಿತಾಃ ಸೂರ್ಯಮುಪತಿಷ್ಠಂತೇ । ಅಪಿ ವೋಪಮಾರ್ಥೇ ಸ್ಯಾತ್ । ಸೂರ್ಯಮಿವೇಂದ್ರಮುಪತಿಷ್ಠಂತ ಇತಿ । ಸರ್ವಾಣೀಂದ್ರಸ್ಯ ಧನಾನಿ**

**ವಿಭಕ್ಷ್ಯಮಾಣಾಃ । ಸ ಯಥಾ ಧನಾನಿ ವಿಭಜತಿ ಜಾತೇ ಚ ಜನಿಷ್ಯಮಾಣೇ ಚ । ತಂ ವಯಂ ಭಾಗಮನುಧ್ಯಾಯಾಮ ಓಜಸಾ ಬಲೇನ । ಓಜ ಓಜತೇರ್ವೋಬ್ಜತೇರ್ವಾ ॥**

( ನಿ ೬-೮ )

ಇಲ್ಲಿ **ಶ್ರಾಯಂತಃ** ಎಂಬ ಶಬ್ದಕ್ಕೆ ಆಶ್ರಯಿಸಿರುವ ಎಂದರ್ಥವು. **ಶ್ರಾಯಂತ ಇವ ಸೂರ್ಯಂ** ಎಂಬ ವಾಕ್ಯಕ್ಕೆ ಸೂರ್ಯನನ್ನು ಆಶ್ರಯಿಸಿರುವಂತೆ ಎಂದರ್ಥವು ಈ ವಾಕ್ಯಕ್ಕೆ ಎರಡು ವಿಧವಾದ ಅರ್ಥವನ್ನು ಹೇಳಬಹುದು. ಸೂರ್ಯನನ್ನೇ ಆಶ್ರಯಿಸುತ್ತಾ ಅವನನ್ನು ಧ್ಯಾನಿಸುತ್ತಾರೆ ಎಂದು ಒಂದುವಿಧವಾದ ಅರ್ಥವು ಅಥವಾ ಈ ವಾಕ್ಯವನ್ನು ಉಪಮಾನವಾಕ್ಯವನ್ನಾಗಿ ತೆಗೆದುಕೊಳ್ಳಬಹುದು ಸೂರ್ಯನನ್ನು (ರಶ್ಮಿಗಳು) ಆಶ್ರಯಿಸುವಂತೆ ವಿಶ್ವೇದಿಂದ್ರಸ್ಯ ಸಮಸ್ತ ಧನಗಳೂ ಇಂದ್ರನನ್ನು ಆಶ್ರಯಿಸುತ್ತವೆ ಎಂದರೆ, ಇಂದ್ರನಲ್ಲಿ ಸ್ಥಾಪಿತವಾಗಿರುತ್ತವೆ. ಅಂತಹ ಸಮಸ್ತ ಧನಗಳನ್ನು ಇಂದ್ರನು ಈಗ ಹುಟ್ಟಿರುವ ಮತ್ತು ಮುಂದೆ ಹುಟ್ಟುವ ಪ್ರಾಣಿಗಳಿಗೆ (ಜನರಿಗೆ) ಹಂಚಿಕೊಡುತ್ತಾನೆ. ಹೇಗೆಂದರೆ ಸೂರ್ಯನ ಕಿರಣಗಳ ಉಪಯೋಗವನ್ನು ಈಗ ಹುಟ್ಟಿರುವ ಮತ್ತು ಮುಂದೆ ಹುಟ್ಟುವ ಸಕಲ ಜೀವಜಂತುಗಳೂ ಅನುಭವಿಸುವಂತೆ ಇಂದ್ರನಲ್ಲಿರುವ ಸಮಸ್ತಧನವೂ ಈಗ ಹುಟ್ಟಿರುವ ಮತ್ತು ಮುಂದೆ ಹುಟ್ಟುವ ಸಕಲ ಜನರಿಗೂ ಇಂದ್ರನಿಂದ ಹಂಚಲ್ಪಡುವುದೆಂದಭಿಪ್ರಾಯವು ಇಂದ್ರನು ನಮಗೆ ಹಂಚಿಕೊಡುವ ನಮ್ಮ ಭಾಗದ ಧನವನ್ನು ನಾವು ನಮ್ಮ ಸ್ವಶಕ್ತಿಯಿಂದ ಎಂದರೆ ಇಂದ್ರನನ್ನು ಪ್ರಾರ್ಥಿಸುವುದರಿಂದ ಹೊಂದೋಣ. ಅಥವಾ ಇಂದ್ರನು ತನ್ನ ಸ್ವಶಕ್ತಿಯಿಂದ ತನ್ನಲ್ಲಿರುವ ಧನದಲ್ಲಿ ನಮ್ಮ ಭಾಗವನ್ನು ನಮಗೆ ಕೊಡುವಂತೆ ಇಂದ್ರನನ್ನು ಪ್ರಾರ್ಥಿಸೋಣ ಶಕ್ತಿ ಎಂಬರ್ಥವನ್ನು ಸೂಚಿಸುವ ಓಜಃ ಎಂಬ ಶಬ್ದವು ವೃದ್ಧಿಯಾಗು, ಬಲವಾಗಿರು ಎಂಬರ್ಥವುಳ್ಳ ಓಜ್ ಧಾತುವಿನಿಂದಾಗಲಿ, ನಿಯಂತ್ರಣಮಾಡು, ಹತೋಟಿಯಲ್ಲಿಡು ಎಂಬರ್ಥವುಳ್ಳ **ಉಬ್ಜ್** ಧಾತುವಿನಿಂದಾಗಲಿ ನಿಷ್ಪನ್ನವಾಗಬಹುದು, ಎಂದು ನಿರ್ವಚನದ ಮುಖ್ಯಾಭಿಪ್ರಾಯವು.

॥ ಸಂಹಿತಾಪಾಠಃ ॥

ಅನರ್ಶರಾತಿಂ ವಸುದಾಮುಪ ಸ್ತುಹಿ ಭದ್ರಾ ಇಂದ್ರಸ್ಯ ರಾತಯಃ ।
ಸೋ ಅಸ್ಯ ಕಾಮಂ ವಿಧತೋ ನ ರೋಷತಿ ಮನೋ ದಾನಾಯ ಚೋದಯನ್ ॥ ೪ ॥

॥ ಪದಪಾಠಃ ॥

ಅನರ್ಶಽರಾತಿಂ । ವಸುಽದಾಂ । ಉಪ । ಸ್ತುಹಿ । ಭದ್ರಾಃ । ಇಂದ್ರಸ್ಯ । ರಾತಯಃ ।
ಸಃ । ಅಸ್ಯ । ಕಾಮಂ । ವಿಧತಃ । ನ । ರೋಷತಿ । ಮನಃ । ದಾನಾಯ । ಚೋದಯನ್ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಸ್ತೋತಾರಃ ಅನರ್ಶರಾತಿಮಪಾಪಕದಾನಂ । ಅಪಾಪಿಷ್ಠಸ್ಯ ದಾತಾರಮಿತ್ಯರ್ಥಃ । ತಥಾ ಚ ಯಾಸ್ಕಃ । ಅನರ್ಶರಾತಿಮನಶ್ಲೀಲದಾನಮಶ್ಲೀಲಂ ಪಾಪಕಂ । ನಿ. ೬-೨೩ । ಇತಿ । ವಸುದಾಂ ಧನಸ್ಯ**

ದಾತಾರಮಿಂದ್ರಮುಪ ಸ್ತುಹಿ । ಯತ ಇಂದ್ರಸ್ಯ ರಾತಯೋ ದಾನಾನಿ ಭದ್ರಾಃ ಕಲ್ಯಾಣಾನಿ । ಮಹದೈಶ್ವರ್ಯಕಾರೀಣೀತ್ಯರ್ಥಃ । ಯತಶ್ಚ ಸ ಇಂದ್ರಃ ಸ್ವಕೀಯಂ ಮನೋ ದಾನಾಯಾಭೀಪ್ಸಪ್ರದಾನಾಯ ಚೋದಯನ್ ಪ್ರೇರಯನ್ ವಿಧತಃ ಪರಿಚರತೋಽಸ್ಯ ಸ್ತೋತುಃ ಕಾಮಮಿಚ್ಛಾಂ ನ ರೋಷತಿ ನ ಹಿನಸ್ತಿ ॥

॥ ಪ್ರತಿಪದಾರ್ಥ ॥

(ಎಲೈ ಸ್ತುತಿಕರ್ತನೇ) **ಅನರ್ಶರಾತಿಂ**—ಪಾಪರಹಿತವೂ ಶುದ್ಧವೂ ಆದ ವಸ್ತುಗಳನ್ನು ದಾನಮಾಡುವವನೂ **ವಸುದಾಂ**—ಧನಪ್ರದನೂ ಆದ ಇಂದ್ರನನ್ನು । **ಉಪ ಸ್ತುಹಿ**—ಪ್ರಶಂಸಿಸು । **ಇಂದ್ರಸ್ಯ**—ಇಂದ್ರನ । **ರಾತಯಃ**—ದಾನಗಳು । **ಭದ್ರಾಃ**—ಕಲ್ಯಾಣಾತ್ಮಕವಾಗಿವೆ । **ಸಃ**—ಆದೇ ಇಂದ್ರನು । **ಮನಃ**—ತನ್ನ ಮನಸ್ಸನ್ನು । **ದಾನಾಯ**—ದಾನಕ್ಕಾಗಿ । **ಚೋದಯನ್**—ಪ್ರೇರಿಸುತ್ತಾ । **ವಿಧತಃ**—ತನ್ನನ್ನು ಸೇವಿಸುವ । **ಅಸ್ಯ**—ಈ ಸ್ತುತಿಕರ್ತನ । **ಕಾಮಂ**—ಇಚ್ಛೆಯನ್ನು । **ನ ರೋಷತಿ**—ಭಂಗಪಡಿಸುವುದಿಲ್ಲ

॥ ಭಾವಾರ್ಥ ॥

ಎಲೈ ಸ್ತುತಿಕರ್ತನೇ, ಪಾಪರಹಿತವೂ, ಶುದ್ಧವೂ ಆದ ವಸ್ತುಗಳನ್ನು ದಾನಮಾಡುವವನೂ, ಧನಪ್ರದನೂ ಆದ ಇಂದ್ರನನ್ನು ಪ್ರಶಂಸಿಸು. ಇಂದ್ರನ ದಾನಗಳು ಕಲ್ಯಾಣಾತ್ಮಕವಾಗಿವೆ ಆದೇ ಇಂದ್ರನು ತನ್ನ ಮನಸ್ಸನ್ನು ದಾನಕ್ಕಾಗಿ ಪ್ರೇರಿಸುತ್ತಾ ತನ್ನನ್ನು ಸೇವಿಸುವ ಈ ಸ್ತುತಿಕರ್ತನ ಇಚ್ಛೆಯನ್ನು ಭಂಗಪಡಿಸುವುದಿಲ್ಲ.

English Translation

Praise him the bestower of wealth, whose gifts are never evil; Indra's gifts are fortunate; he directs his mind to the gift and mars not the desire of his worshipper

॥ ವಿಶೇಷವಿಷಯಗಳು ॥

ಅನರ್ಶರಾತಿಂ ಎಂಬ ಶಬ್ದಕ್ಕೆ ಯಾಸ್ಕರು ಈ ರೀತಿ ನಿರ್ವಚನವನ್ನು ಹೇಳಿದಾರೆ—

**ಅನರ್ಶರಾತಿಂ । ಅನರ್ಶರಾತಿಮನಶ್ಲೀಲದಾನಮಶ್ಲೀಲಂ ಪಾಪಕಮಶ್ರಿಮದ್ವಿಷಮಂ । ಅನರ್ಶರಾತಿಂ ವಸುದಾಮುಪಸ್ತುಹಿ ಇತ್ಯಪಿ ನಿಗಮೋ ಭವತಿ ॥**

(ನಿ ೬-೨೩)

**ಅರ್ಶ** ಎಂದರೆ ಅಶ್ಲೀಲ, ಪಾಪಕರ; ಅನರ್ಶವೆಂದರೆ ಅಶ್ಲೀಲವಲ್ಲದ್ದು, ಪಾಪಕರವಲ್ಲದ್ದು, ಉತ್ತಮವಾದ್ದು; ರಾತಿಂ ಎಂದರೆ ದಾನ, ಕೊಡುವುದು. ಆದ್ದರಿಂದ ಅನರ್ಶರಾತಿಂ ಎಂದರೆ ಅಶ್ಲೀಲವಲ್ಲದ ಅಥವಾ ಪಾಪಕರವಲ್ಲದ ಅಥವಾ ಶ್ರೇಷ್ಠವಾದ ದಾನವು ಎಂದರ್ಥವು. ಇಂದ್ರನು ಭಕ್ತರಿಗೆ ಕೊಡುವ ಧನಾದಿದಾನವು ಪಾಪಕರವಲ್ಲದ್ದು ಶ್ರೇಷ್ಠವಾದುದು ಎಂದಭಿಪ್ರಾಯವು. ಈ ವಿಷಯದಲ್ಲಿ ಈ ಋಕ್ಕೇ ಶ್ರುತಿವಾಕ್ಯದ ಉದಾಹರಣೆಯಾಗಿದೆ

॥ ಸಂಹಿತಾಪಾಠಃ ॥

ತ್ವಮಿಂದ್ರ ಪ್ರತೂರ್ತಿಷ್ವಭಿ ವಿಶ್ವಾ ಅಸಿ ಸ್ಪೃಧಃ ।

ಅಶಸ್ತಿಹಾ ಜನಿತಾ ವಿಶ್ವತೂರಸಿ ತ್ವಂ ತೂರ್ಯ ತರುಷ್ಯತಃ ॥ ೫ ॥

॥ ಪದಪಾಠಃ ॥

ತ್ವಂ । ಇಂದ್ರ । ಪ್ರಽತೂರ್ತಿಷು । ಅಭಿ । ವಿಶ್ವಾಃ । ಅಸಿ । ಸ್ಪೃಧಃ ।

ಅಶಸ್ತಿಽಹಾ । ಜನಿತಾ । ವಿಶ್ವಽತೂಃ । ಅಸಿ । ತ್ವಂ । ತೂರ್ಯ । ತರುಷ್ಯತಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಂ ಪ್ರತೂರ್ತಿಷು ಸಂಗ್ರಾಮೇಷು ವಿಶ್ವಾಃ ಸರ್ವಾಃ ಸ್ಪೃಧೋ ಯುದ್ಧಕಾರಿಣೀಃ ಶತ್ರುಸೇನಾ ಅಭ್ಯಸಿ । ಅಭಿಭವಸಿ । ಕಿಂಚ ಹೇ ತೂರ್ಯ ಶತ್ರೂಣಾಂ ಬಾಧಕೇಂದ್ರ ತ್ವಮಶಸ್ತಿಹಾ ದೈವ್ಯಾನಾಮಶಸ್ತೀನಾಂ ಹಂತಾಸಿ । ಜನಿತಾಸುರೇಭ್ಯೋಽಶಸ್ತೀನಾಂ ಜನಯಿತಾ ಚಾಸಿ । ವಿಶ್ವತೂಃ ಸರ್ವಸ್ಯ ಶತ್ರುವರ್ಗಸ್ಯ ಹಿಂಸಿತಾ ಚಾಸಿ । ತರುಷ್ಯತೋ ಬಾಧಕಾಂಶ್ಚ ಬಾಧಮಾನೋಽಸಿ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ತ್ವಂ—ನೀನು । ಪ್ರತೂರ್ತಿಷು—ಯುದ್ಧಗಳಲ್ಲಿ । ವಿಶ್ವಾಃ—ಸಮಸ್ತವಾದ । ಸ್ಪೃಧಃ—ಪ್ರತಿಭಟಿಸುವ ಶತ್ರುಸೇನೆಗಳನ್ನೂ । ಅಭ್ಯಸಿ—ಸೋಲಿಸುವೆ । ತೂರ್ಯ—ಶತ್ರುಹಿಂಸಕನಾದ ಎಲೈ ಇಂದ್ರನೇ । ತ್ವಂ—ನೀನು । ಅಶಸ್ತಿಹಾ—ಕೇಡನ್ನು ಬಯಸುವ ಅಸುರರ ಹಂತಕನಾಗಿ । ಅಸಿ—ಆಗಿದ್ದೀಯೆ । ಜನಿತಾ—ಅಸುರರಿಗೆ ಅಮಂಗಳವನ್ನುಂಟುಮಾಡುವವನೂ ಆಗಿದ್ದೀಯೆ । ವಿಶ್ವತೂಃ—ಸಕಲ ಶತ್ರುವರ್ಗಕ್ಕೂ ಹಿಂಸಕನೂ ಆಗಿದ್ದೀಯೆ । ತರುಷ್ಯತಃ—ನಿನ್ನ ಭಕ್ತರನ್ನು ಹಿಂಸಿಸುವವರಿಗೆ ನೀನು ಹಿಂಸಕನಾಗಿದ್ದೀಯೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನೀನು ಯುದ್ಧಗಳಲ್ಲಿ ಪ್ರತಿಭಟಿಸುವ ಸಕಲ ಶತ್ರುಸೇನೆಗಳನ್ನೂ ಸೋಲಿಸುವೆ ಶತ್ರು ಹಿಂಸಕನಾದ ಎಲೈ ಇಂದ್ರನೇ, ಕೇಡನ್ನು ಬಯಸುವ ಅಸುರರಿಗೆ ಹಂತಕನಾಗಿದ್ದೀಯೆ. ಅಸುರರಿಗೆ ಅಮಂಗಳವನ್ನುಂಟು ಮಾಡುವವನೂ, ಹಿಂಸಕರಾದ ಸಕಲ ಸತ್ರುವರ್ಗಕ್ಕೂ ಹಿಂಸಕನಾಗಿಯೂ ಆಗಿದ್ದೀಯೆ

## English Translation

Indra, you conquer in battles all opposing hosts ; O opposer who beat down those who would oppose, you are the smiter of the wicked, the bringrr (of evil to your enemies), and the destroyer of all.

॥ ಸಂಹಿತಾಪಾಠಃ ॥

ಅನು ತೇ ಶುಷ್ಮಂ ತುರಯಂತಮೀಯತುಃ ಕ್ಷೋಣೀ ಶಿಶುಂ ನ ಮಾತರಾ ।
ವಿಶ್ವಾಸ್ತೇ ಸ್ಪೃಧಃ ಶ್ನಥಯಂತ ಮನ್ಯವೇ ವೃತ್ರಂ ಯದಿಂದ್ರ ತೂರ್ವಸಿ ॥೬॥

॥ ಪದಪಾಠಃ ॥

ಅನು । ತೇ । ಶುಷ್ಮಂ । ತುರಯಂತಂ । ಈಯತುಃ । ಕ್ಷೋಣೀ ಇತಿ । ಶಿಶುಂ । ನ । ಮಾತರಾ ।
ವಿಶ್ವಾಃ । ತೇ । ಸ್ಪೃಧಃ । ಶ್ನಥಯಂತ । ಮನ್ಯವೇ । ವೃತ್ರಂ । ಯತ್ । ಇಂದ್ರ । ತೂರ್ವಸಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತವ ಶುಷ್ಮಂ ಬಲಂ ತುರಯಂತಂ ಹಿಂಸಂತಂ ಶತ್ರುಂ ಕ್ಷೋಣೀ ದ್ಯಾವಾಪೃಥಿವ್ಯೌ ಮಾತರಾ ಮಾತರೌ ಶಿಶುಂ ನ ಶಿಶುಮಿವಾನ್ವೀಯತುಃ । ಅನುಗಚ್ಛತಃ । ಗಮನಮಾತ್ರೇ ದೃಷ್ಟಾಂತಃ । ಕಿಂಚ ಹೇ ಇಂದ್ರ ತ್ವಂ ಯದ್ಯಸ್ಮಾದ್ವೃತ್ರಂ ಶತ್ರುಂ ತೂರ್ವಸಿ ಹಂಸಿ ಅತಸ್ತೇ ತವ ಮನ್ಯವೇ ಕ್ರೋಧಾಯ ವಿಶ್ವಾಃ ಸರ್ವಾಃ ಸ್ಪೃಧಃ ಸಂಗ್ರಾಮಕಾರಿಣ್ಯಃ ಸೇನಾಃ ಶ್ರಥಯಂತ । ಶ್ರಥಿತಾಃ ಖಿನ್ನಾ ಭವಂತಿ ।'

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ಮಾತರಾ**—ಮಾತೃಗಳು । **ಶಿಶುಂ ನ**—ಮಗುವನ್ನೇ ಅನುಸರಿಸಿ ಹೋಗುವಂತೆ । **ಕ್ಷೋಣೀ**—ದ್ಯಾವಾಪೃಥಿವಿಗಳು । **ತೇ**—ನಿನ್ನ । **ತುರಯಂತಂ**—ಶತ್ರುನಾಶಕವಾದ । **ಶುಷ್ಮಂ**—ಬಲವನ್ನು । **ಅನು ಈಯತುಃ**—ಅನುಸರಿಸುತ್ತವೆ । **ಇಂದ್ರ**—ಎಲೈ ಇಂದ್ರನೇ । **ಯತ್**—ಯಾವ ಪ್ರಭಾವದಿಂದ । **ವೃತ್ರಂ**—ವೃತ್ರಾಸುರನನ್ನು । **ತೂರ್ವಸಿ**—ಕೊಂದಿದ್ದೀಯೋ (ಆದುದರಿಂದಲೇ) । **ತೇ**—ನಿನ್ನ । **ಮನ್ಯವೇ**—ಕ್ರೋಧಕ್ಕೆ **ವಿಶ್ವಾಃ ಸ್ಪೃಧಃ**—ಪ್ರತಿಭಟಿಸುವ ಸೈನ್ಯಗಳೆಲ್ಲವೂ । **ಶ್ರಥಯಂತ**—ಭೀತಿಗೊಳ್ಳುತ್ತವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ತಾಯಿಯರು ಮಗುವನ್ನೇ ಅನುಸರಿಸಿ ಹೋಗುವಂತೆ ದ್ಯಾವಾಪೃಥಿವಿಗಳು ನಿನ್ನ ಶತ್ರುನಾಶಕವಾದ ಬಲವನ್ನು ಅನುಸರಿಸುತ್ತವೆ. ಎಲೈ ಇಂದ್ರನೇ, ಯಾವ ಪ್ರಭಾವದಿಂದ ನೀನು ವೃತ್ರಾಸುರನನ್ನು ಕೊಂದಿದ್ದೀಯೋ ಆ ಪ್ರಭಾವದಿಂದಲೇ ನಿನ್ನ ಕ್ರೋಧಕ್ಕೆ ನಿನ್ನನ್ನು ಪ್ರತಿಭಟಿಸುವ ಸಕಲ ಸೈನ್ಯಗಳೂ ಭೀತಿಗೊಳ್ಳುತ್ತವೆ.

## English Translation

Heaven and earth follow your destructive energy as mothers their child; since you smite Vritra, all the hostile hosts, Indra, faint at your wrath.

॥ ಸಂಹಿತಾಪಾಠಃ ॥

ಇತ ಊತೀ ವೋ ಅಜರಂ ಪ್ರಹೇತಾರಮಪ್ರಹಿತಂ ।
ಆಶುಂ ಜೇತಾರಂ ಹೇತಾರಂ ರಥೀತಮಮತೂರ್ತಂ ತುಗ್ರ್ಯಾವೃಧಂ ॥೭॥

॥ ಪದಪಾಠಃ ॥

ಇತಃ । ಊತೀ । ವಃ । ಅಜರಂ । ಪ್ರಽಹೇತಾರಂ । ಅಪ್ರಽಹಿತಂ ।
ಆಶುಂ । ಜೇತಾರಂ । ಹೇತಾರಂ । ರಥಿಽತಮಂ । ಅತೂರ್ತಂ । ತುಗ್ರ್ಯಽವೃಧಂ ॥ ೭ ॥

॥ ಸಾಯಣಭಾಷ್ಯಂ ॥

ಹೇ ಅಸ್ಮದೀಯಜನಾಃ ವೋ ಯೂಯಮಜರಂ ಜರಾರಹಿತಂ ಪ್ರಹೇತಾರಂ ಶತ್ರೂಣಾಂ ಪ್ರೇರಕಮಪ್ರಹಿತಂ ಕೇನಾಪ್ಯಪ್ರೇಷಿತಮಾಶುಂ ವೇಗವಂತಂ ಜೇತಾರಂ ಶತ್ರೂಣಾಂ ಹೇತಾರಂ ಗಂತಾರಂ ರಥೀತಮಂ ರಥಿನಾಂ ಶ್ರೇಷ್ಠಮತೂರ್ತಂ ಕೇನಾಪ್ಯಹಿಂಸಿತಂ ತುಗ್ರ್ಯಾವೃಧಮುದಕಸ್ಯ ವರ್ಧಯಿತಾರಮಿಂದ್ರಮೂತ್ಯೂತ್ಯೈ ರಕ್ಷಣಾಯೇತಃ ಕುರುತ । ಪುರಸ್ಕುರುತ ಇತಿ ಯಾವತ್ ॥

॥ ಪ್ರತಿಪದಾರ್ಥ ॥

(ಎಲೈ ಸ್ತುತಿಕರ್ತರೇ) **ವಃ**—ನೀವು । **ಅಜರಂ**-ಕ್ಷಯರಹಿತನೂ । **ಪ್ರಹೇತಾರಂ**—ಶತ್ರುಗಳನ್ನು ಓಡಿಸುವವನೂ । **ಅಪ್ರಹಿತಂ**—ಅಪ್ರಹಿತನೂ । **ಆಶುಂ**—ಶೀಘ್ರಗಾಮಿಯೂ । **ಜೇತಾರಂ**—ಶತ್ರುಗಳನ್ನು ಜಯಿಸುವವನೂ । **ಹೇತಾರಂ**—ಶತ್ರುಗಳ ಮೇಲೆ ಎದುರುಬೀಳುವವನೂ । **ರಥೀತಮಂ**—ಉತ್ತಮವಾದ ರಥವುಳ್ಳವನೂ । **ಅತೂರ್ತಂ**—ಯಾರಿಂದಲೂ ಅಹಿಂಸಿತನೂ । **ತುಗ್ರ್ಯಾವೃಧಂ**—ಉದಕವನ್ನು ವೃದ್ಧಿಪಡಿಸುವವನೂ ಆದ ಇಂದ್ರನನ್ನು । **ಊತೀ**—ರಕ್ಷಣಾರ್ಥವಾಗಿ । **ಇತಃ**—ನಮ್ಮ ಕಡೆಗೆ ಬರಮಾಡಿರಿ.

॥ ಭಾವಾರ್ಥ ॥

ಎಲೈ ಸ್ತುತಿಕರ್ತರೇ, ಕ್ಷಯರಹಿತನೂ, ಶತ್ರುಗಳನ್ನು ಓಡಿಸುವವನೂ, ಶತ್ರುಗಳ ಮೇಲೆ ಎದುರುಬಿಳುವವನೂ ಉತ್ತಮವಾದ ರಥವುಳ್ಳವನೂ ಯಾರಿಂದಲೂ ಅಹಿಂಸಿತನೂ ಉದಕವನ್ನು ವೃದ್ಧಿಪಡಿಸುವವನೂ ಆದ ಇಂದ್ರನನ್ನು ರಕ್ಷಣಾರ್ಥವಾಗಿ ನಮ್ಮ ಕಡೆಗೆ ಬರಮಾಡಿರಿ.

## English Translation

(Worshippers), summon hither for proteotion him who never grows old, the repeller (of enemies), himself never repelled, the swift conquerer, the driver, the best of charioteers, unharmed of any. the augementer of water.

॥ ಸಂಹಿತಾಪಾಠಃ ॥

ಇಷ್ಕರ್ತಾರಮನಿಷ್ಕೃತಂ ಸಹಸ್ಕೃತಂ ಶತಮೂತಿಂ ಶತಕ್ರತುಂ ।

ಸಮಾನಮಿಂದ್ರಮವಸೇ ಹವಾಮಹೇ ವಸವಾನಂ ವಸೂಜುವಂ ॥ ೮ ॥

॥ ಪದಪಾಠಃ ॥

ಇಷ್ಕರ್ತಾರಂ । ಅನಿಃऽಕೃತಂ । ಸಹಃऽಕೃತಂ । ಶತಂऽಊತಿಂ । ಶತऽಕ್ರತುಂ ।

ಸಮಾನಂ । ಇಂದ್ರಂ । ಅವಸೇ । ಹವಾಮಹೇ । ವಸವಾನಂ । ವಸುऽಜುವಂ ॥ ೮ ॥

॥ ಸಾಯಣಭಾಷ್ಯಂ ॥

ಇಷ್ಕರ್ತಾರಂ ಶತ್ರೂಣಾಂ ಸಂಸ್ಕರ್ತಾರಮನಿಷ್ಕೃತಂ ಸ್ವಯಮನ್ಯೈರಸಂಸ್ಕೃತಂ ಸಹಸ್ಕೃತಂ ಬಲೇನ ಕೃತಂ ಶತಮೂತಿಂ ಬಹುರಕ್ಷಣಂ ಶತಕ್ರತುಂ ಬಹುಪ್ರಜ್ಞಂ ಬಹುಕರ್ಮಾಣಂ ವಾ ಸಮಾನಂ ಬಹೂನಾಂ ಸಾಧಾರಣಂ ವಸವಾನಂ ಧನಾನ್ಯಾಚ್ಛಾದಯಂತಂ ವಸೂಜುವಂ ಯಜಮಾನೇಭ್ಯೋ ವಸೂನಾಂ ಪ್ರೇರಯಿತಾರಮಿಂದ್ರಮವಸೇ ರಕ್ಷಣಾಯ ವಯಂ ಹವಾಮಹೇ । ಹ್ವಯಾಮಃ ॥

॥ ಪ್ರತಿಪದಾರ್ಥ ॥

**ಇಷ್ಕರ್ತಾರಂ**—ಶತ್ರುಗಳನ್ನು ಕೊನೆಗಾಣಿಸುವವನೂ । **ಅನಿಷ್ಕೃತಂ**—ಶತ್ರುಗಳ ಹಿಂಸೆಗೆ ಸಿಲುಕದವನೂ । **ಸಹಸ್ಕೃತಂ**—ಶಕ್ತಿಯುತನೂ । **ಶತಮೂತಿಂ**—ನಾನಾವಿಧವಾದ ರಕ್ಷಣೆಯುಳ್ಳವನೂ । **ಶತಕ್ರತುಂ**—ಅನೇಕ ವಿಧವಾದ ಕರ್ಮ ಅಥವಾ ಪ್ರಜ್ಞೆಯುಳ್ಳವನೂ । **ಸಮಾನಂ**—ಎಲ್ಲರಿಗೂ ಸಾಧಾರಣನೂ । **ವಸವಾನಂ**—ಧನರೂಪವಾದ ಹೊದ್ದಿಕೆಯನ್ನು ಹೊದಿಸುವವನೂ । **ವಸೂಜುವಂ**—ಧನಪ್ರದನೂ ಆದ । **ಇಂದ್ರಂ**—ಇಂದ್ರನನ್ನು । **ಅವಸೇ**—ರಕ್ಷಣಾರ್ಥವಾಗಿ । **ಹವಾಮಹೇ**—ನಾವು ಕರೆಯುತ್ತೇವೆ.

॥ ಭಾವಾರ್ಥ ॥

ಶತ್ರುಗನನ್ನು ಕೊನೆಗಾಣಿಸುವವನೂ, ಶತ್ರುಗಳ ಹಿಂಸೆಗೆ ಸಿಲುಕದವನೂ, ಶಕ್ತಿಯುತನೂ, ನಾನಾವಿಧವಾದ ರಕ್ಷಣೆಗಳಿಂದ ಕೂಡಿದವನೂ ಅನೇಕವಿಧವಾದ ಕರ್ಮ ಅಥವಾ ಪ್ರಜ್ಞೆಯುಳ್ಳವನೂ ಎಲ್ಲರಿಗೂ ಸಾಧಾರಣನೂ ಧನರೂಪವಾದ ಹೊದ್ದಿಕೆಯನ್ನು ಹೊದಿಸುವವನೂ ಧನಪ್ರದನೂ ಆದ ಇಂದ್ರನನ್ನು ರಕ್ಷಣಾರ್ಥವಾಗಿ ನಾವು ಕರೆಯುತ್ತೇವೆ.

English Translation

We solicit for our protection Indra, the consecrator of others but himself consecrated by none, produced by strength, possessing a hundredfold protection, prossessing hundredfold knowledge, a common deity to many, hiding treasures in his store house and sending wealth (to his votaries)

# ನೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅಯಂ ತ ಇತಿ ದ್ವಾದಶರ್ಚಂ ಸಪ್ತಮಂ ಸೂಕ್ತಂ ಭೃಗುಗೋತ್ರಸ್ಯ ನೇಮಸ್ಯಾರ್ಷಂ । ಅಯಮಸ್ಮಿ ಜರಿತರಿತಿ ದ್ವ್ಯೃಚೇನೇಂದ್ರೋ ನೇಮಸಮೀಪಮೇತ್ಯ ಸ್ವಕೀಯಂ ಮಾಹಾತ್ಮ್ಯಮವೋಚತ್ ಅತಸ್ತಸ್ಯ ದ್ವ್ಯೃಚಸ್ಯ ಸ ಏವರ್ಷಿಃ । ಯಸ್ಯ ವಾಕ್ಯಂ ಸ ಋಷಿಃ । ಅನು. ೨-೪ । ಇತಿ ನ್ಯಾಯಾತ್ । ಷಷ್ಠೀಜಗತೀ । ಸಪ್ತಮ್ಯಾದ್ಯಾಸ್ತಿಸ್ರೋಽನುಷ್ಟುಭಃ । ಶಿಷ್ಟಾಸ್ತ್ರಿಷ್ಟುಭಃ । ಇಂದ್ರೋ ದೇವತಾ । ಯದ್ವಾಗ್ವದಂತೀ ದೇವೀಂ ವಾಚಮಿತ್ಯೇತೇ ವಾಗ್ದೇವತ್ಯೇ ಶಿಷ್ಟಾ ಐಂದ್ರ್ಯಃ । ತಥಾ ಚಾನುಕ್ರಾಂತಂ । ಅಯಂ ದ್ವಾದಶ ನೇಮೋ ಭಾರ್ಗವಸ್ತ್ರೈಷ್ಟುಭಂ ಷಷ್ಠೀ ಜಗತೀ ಪರಾಸ್ತಿಸ್ರೋಽನುಷ್ಟುಭೋಽಯಮಿತಿ ದ್ವ್ಯೃಚೇನೇಂದ್ರ ಆತ್ಮಾನಮಸ್ತೌದುಪಾಂತ್ಯೇ ವಾಚ್ಯಾವಿತಿ ॥ ವಾಗ್ದೇವತ್ಯೇ ಪಶೌ ಯದ್ವಾಗ್ವದಂತೀತಿ ವಪಾಯಾ ಅನುವಾಕ್ಯಾ । ಸೂತ್ರಿತಂ ಚ । ಯದ್ವಾಗ್ವದಂತ್ಯವಿಚೇತನಾನಿ ಪತಂಗೋ ವಾಚಂ ಮನಸಾ ಬಿಭರ್ತಿ । ಆ. ೭-೮ । ಇತಿ ॥ ಪೂರ್ವೋಕ್ತ ಏವ ಪಶೌ ದೇವೀಂ ವಾಚಮಿತಿ ಹವಿಷೋ ಯಾಜ್ಯಾ । ಸೂತ್ರಿತಂ ಚ । ದೇವೀಂ ವಾಚಮಜನಯಂತ ದೇವಾ ಜನೀಯಂತೋ ನ್ವಗ್ರವ ಇತಿ ತಿಸ್ರಃ । ಆ. ೩-೮ । ಇತಿ ॥ ಪ್ರಯಾಣಸಮಯೇ ವಯಸಾಮಮನೋಜ್ಞಾ ವಾಚಃ ಶ್ರುತ್ವೈತಾಂ ಜಪೇತ್ । ಸೂತ್ರಿತಂ ಚ। ಕನಿಕ್ರದಜ್ಜನುಷಂ ಪ್ರಬ್ರುವಾಣ ಇತಿ ಸೂಕ್ತೇ ಜಪೇದ್ದೇವೀಂ ವಾಚಮಜನಯಂತ ದೇವಾ ಇತಿ ಚ । ಆ. ಗೃ ೩-೧೦-೯ ॥ ಇತಿ ॥**

ಅನುವಾದವು—**ಅಯಂ ತೇ** ಎಂಬ ಈ ಸೂಕ್ತವು ಹತ್ತನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಹನ್ನೆರಡು ಋಕ್ಕುಗಳಿರುವವು ಈ ಸೂಕ್ತಕ್ಕೆ ಭೃಗುಗೋತ್ರೋತ್ಪನ್ನನಾದ ನೇಮನೆಂಬುವನು ಋಷಿಯು , **ಅಯಮಸ್ಮಿ ಜರಿತಃ** ಎಂಬ ಎರಡು ಋಕ್ಕುಗಳಲ್ಲಿ (೪, ೫ನೇ ಋಕ್ಕುಗಳು) ಇಂದ್ರನು ನೇಮ ಋಷಿಯ ಸಮೀಪಕ್ಕೆ ಹೋಗಿ ತನ್ನಮಾಹಾತ್ಮ್ಯವನ್ನು ಅವನಿಗೆ ಹೇಳಿದನು ಎಂಬ ವಿಷಯವಿರುವುದರಿಂದ ಆ ಎರಡು ಋಕ್ಕುಗಳಿಗೆ ಇಂದ್ರನೇ ದೇವತೆಯು : **ಯಸ್ಯ ವಾಕ್ಯಂ ಸ ಋಷಿಃ** (ಅನು. ೨-೪) ಎಂಬ ನ್ಯಾಯಾನುಸಾರವಾಗಿ ಋಕ್ಕಿನಲ್ಲಿರುವ ವಿಷಯವನ್ನು ಯಾರು ಹೇಳಿರುವರೋ ಆ ಋಕ್ಕಿಗೆ ಅವರೇ ಋಷಿಗಳು ಎಂದು ನ್ಯಾಯವಿರುವುದು ಈ ಸೂಕ್ತದ ಆರನೆಯ ಋಕ್ಕು ಜಗತೀ ಛಂದಸ್ಕವು. ಏಳರಿಂದ ಮುಂದಿನ ಮೂರು ಋಕ್ಕುಗಳು (೭-೯) ಅನುಷ್ಟುಪ್ ಛಂದಸ್ಕವು, ಉಳಿದ ಋಕ್ಕುಗಳು ತ್ರಿಷ್ಟುಪ್ ಛಂದಸ್ಕವು. ಇಂದ್ರನು ದೇವತೆಯು ; ಆದರೆ **ಯದ್ವಾಗ್ವದಂತೀ** ಎಂಬ ಹತ್ತನೆಯ ಋಕ್ಕೂ **ದೇವೀಂ ವಾಚಂ** ಎಂಬ ಹನ್ನೊಂದನೆಯ ಋಕ್ಕೂ ವಾಗ್ದೇವತಾಕವು-ಉಳಿದ ಋಕ್ಕುಗಳು ಇಂದ್ರದೇವತಾಕವು ಅನುಕ್ರಮಣಿಕೆಯಲ್ಲಿ—**ಅಯಂ ತೇ ದ್ವಾದಶ ನೇಮೋ ಭಾರ್ಗವಸ್ತ್ರೈಷ್ಟುಭಂ ಷಷ್ಠೀ ಜಗತೀ ಪರಾಸ್ತಿ-ಸ್ರೋಽನುಷ್ಟುಭೋಽಯಮಿತಿ ದ್ವ್ಯೃಚೇನೇಂದ್ರ ಆತ್ಮಾನಮಸ್ತೌದುಪಾಂತ್ಯೇ ವಾಚ್ಯಾ**ಎಂದು ಹೇಳಿರುವುದು ಯದ್ವಾಗ್ವದಂತೀ ಎಂಬ ೧೦ನೇಯ ಋಕ್ಕನ್ನು ವಾಗ್ದೇವತಾಕವಾದ ಪಶುಹೋಮದಲ್ಲಿ ವಪಾಹೋಮಮಾಡುವಾಗ ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತ ಸೂತ್ರದ—**ಯದ್ವಾಗ್ವದಂತ್ಯವಿಚೇತನಾನಿ ಪತಂಗೋ ವಾಚಂ ಮನಸಾ ಬಿಭರ್ತಿ** ಎಂಬ ಸೂತ್ರದಿಂದ (ಆ ೩-೮) ವಿಸ್ತೃತವಾಗಿರುವುದು ಅದೇ ಪಶುಯಾಗದಲ್ಲಿ ಹವಿಸ್ಸನ್ನು ಹೋಮಮಾಡುವಾಗ **ದೇವೀಂ ವಾಚಂ** ಎಂಬ ೧೧ನೆಯ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸ

ಬೇಕೆಂದು ಆಶ್ವಲಾಯನ ಶ್ರೌತಸೂತ್ರದ-**ದೇವೀಂ ವಾಚಮಜನಯಂತ ದೇವಾ ಜನೀಯಂತೋ ನ್ವಗ್ರವ ಇತಿ ತಿಸ್ರಃ** ಎಂಬ ಸೂತ್ರದಿಂದ ( ಆ. ೩-೮ ) ವಿವೃತವಾಗಿರುವುದು. ಪ್ರಯಾಣಕಾಲದಲ್ಲಿ ವಯಸ್ಸಾದ ಹಿರಿಯರು ಆಹಿತವಾದ ವಾಕ್ಯಗಳನ್ನಾಡಿದಲ್ಲಿ ಆಗ **ದೇವೀಂ ವಾಚಂ** ಎಂಬ ೧೧ನೆಯ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನ ಗೃಹ್ಯಸೂತ್ರದ—**ಕನಿಕ್ರದಜ್ಜನುಷಂ ಪ್ರಬ್ರುವಾಣ ಇತಿ ಸೂಕ್ತೇ ಜಪೇದ್ದೇವೀಂ ವಾಚಮಜನಯಂತ ದೇವಾ ಇತಿ ಚ** ಎಂಬ ಸೂತ್ರದಿಂದ (ಆ. ಗೃ. ೩-೧೦-೯) ವಿವೃತವಾಗಿರುವುದು.

## ಸೂಕ್ತ—೧೦೦

ಮಂಡಲ—೮ ॥ ಅನುವಾಕ—೧೦ ॥ ಸೂಕ್ತ—೧೦೦ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೪, ೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೨ ॥
ಋಷಿಃ—೧-೩, ೬-೧೨. ನೇಮೋ ಭಾರ್ಗವಃ । ೪-೫. ಇಂದ್ರಃ ॥
ದೇವತಾ—೧-೯, ೧೨. ಇಂದ್ರಃ । ೧೦, ೧೧. ವಾಕ್ ॥
ಛಂದಃ—೧-೫, ೧೦-೧೨. ತ್ರಿಷ್ಟುಪ್ । ೬. ಜಗತೀ । ೭-೯. ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಅಯಂ ತ ಏಮಿ ತನ್ವಾ ಪುರಸ್ತಾದ್ವಿಶ್ವೇ ದೇವಾ ಅಭಿ ಮಾ ಯಂತಿ ಪಶ್ಚಾತ್ ।
ಯದಾ ಮಹ್ಯಂ ದೀಧರೋ ಭಾಗಮಿಂದ್ರಾದಿನ್ಮಯಾ ಕೃಣವೋ ವೀರ್ಯಾಣಿ ॥ ೧ ॥

॥ ಪದಪಾಠಃ ॥

ಅಯಂ । ತೇ । ಏಮಿ । ತನ್ವಾ । ಪುರಸ್ತಾತ್ । ವಿಶ್ವೇ । ದೇವಾಃ । ಅಭಿ । ಮಾ । ಯಂತಿ । ಪಶ್ಚಾತ್ । ಯದಾ । ಮಹ್ಯಂ । ದೀಧರಃ । ಭಾಗಂ । ಇಂದ್ರ । ಆತ್ । ಇತ್ । ಮಯಾ । ಕೃಣವಃ । ವೀರ್ಯಾಣಿ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತವ ಪುರಸ್ತಾದಗ್ರತಸ್ತನ್ವಾ ಪುತ್ರೇಣ ಸಹಾಯಮಹಮೇಮಿ । ಶತ್ರೂನಭಿಭವಿತುಂ ಗಚ್ಛಾಮಿ । ತವಾಗ್ರತೋ ಗಚ್ಛಂತಂ ಮಾಂ ವಿಶ್ವೇ ದೇವಾಸ್ತ್ವಯಾ ಸಹ ಪಶ್ಚಾದಭಿ ಯಂತಿ । ಅಭಿಗಚ್ಛಂತಿ । ಯದ್ವಾ ತ್ವಂ ಮಹ್ಯಂ ಭಾರ್ಗವಾಯ ನೇಮಾಯ ಭಾಗಂ ಶತ್ರುಷು ಸ್ಥಿತಂ ಭಾಗಂ ದೀಧರಃ ಧಾರಯಸಿ ಆದಿದನಂತರಮೇವ ಮಯಾ ಸಹ ಮಚ್ಛತ್ರೂಞ್ಜೇತುಂ ವೀರ್ಯಾಣಿ ಪೌರುಷಾಣಿ ಕೃಣವಃ । ಕುರು । ಯದಿ ಶತ್ರುಷು ಸ್ಥಿತಂ ಧನಂ ಮಹ್ಯಂ ದಿತ್ಸಸಿ ತರ್ಹಿ ಶತ್ರುಜಯಾರ್ಥಂ ಗಚ್ಛತಃ ಸಪುತ್ರಸ್ಯ ಮಮ ಸಾಹಾಯ್ಯಂ ಕುರ್ವಿತಿ ಭಾವಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ। **ತೇ**—ನಿನ್ನ। **ಪುರಸ್ತಾತ್**—ಮುಂಭಾಗದಲ್ಲಿ। **ತನ್ವಾ**—ಪುತ್ರನೊಡಗೂಡಿ। **ಅಯಂ**—ನಾನು। **ಏಮಿ**—ಶತ್ರುಜಯಕ್ಕಾಗಿ ಮುನ್ನುಗ್ಗುತ್ತಿದ್ದೇನೆ। **ವಿಶ್ವೇ ದೇವಾಃ**—ಸಕಲ ದೇವತೆಗಳೂ। **ಪಶ್ಚಾತ್**—ತದನಂತರ। **ಮಾ ಅಭಿ ಯಂತಿ**—ನನ್ನ ಸಹಾಯಾರ್ಥವಾಗಿ ಬರುತ್ತಾರೆ। **ಯದಾ**—ಒಂದುವೇಳೆ। **ಮಹ್ಯಂ**—ನನಗೆ। **ಭಾಗಂ**—ಶತ್ರುಧನದಲ್ಲಿ ಒಂದು ಭಾಗವನ್ನು। **ದೀಧರಃ**—ನೀನು ಧರಿಸಿದ್ದೇ ಆದರೆ। **ಆದಿತ್**—ಒಡನೆಯೇ। **ಮಯಾ**—ನನ್ನೊಡನೆ ಸಹಾಯಮಾಡಲು। **ವೀರ್ಯಾಣಿ**—ಶತ್ರುನಾಶಕವಾದ ಶಕ್ತಿಗಳನ್ನು। **ಕೃಣವಃ**—ಉತ್ಪನ್ನಮಾಡು.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನ ಮುಂಭಾಗದಲ್ಲಿ ಪುತ್ರನೊಡಗೂಡಿ ನಾನು ಶತ್ರುಜಯಕ್ಕಾಗಿ ಮುನ್ನುಗ್ಗುತ್ತಿದ್ದೇನೆ ಸಕಲ ದೇವತೆಗಳೂ ನನ್ನ ಸಹಾಯಕ್ಕಾಗಿ ಹಿಂದೆ ಬರುತ್ತಿದ್ದಾರೆ. ಎಲೈ ಇಂದ್ರನೇ, ಶತ್ರುಧನದಲ್ಲಿ ನನಗೂ ಒಂದು ಭಾಗವನ್ನು ಕೊಡಿಸಬೇಕೆಂದು ನೀನು ಸಂಕಲ್ಪಿಸಿದ್ದೇ ಆದರೆ, ಆಗ ಶತ್ರುಜಯಕ್ಕೆ ಸಹಾಯಮಾಡುವ ಶಕ್ತಿಯನ್ನು ನನ್ನಲ್ಲಿ ಉತ್ಪನ್ನಮಾಡು.

English Translation

I here go before you with my son, the Vishwe Devas follow after me ; if Indra you keep wealth for me then put forth your strength on my side

॥ ಸಂಹಿತಾಪಾಠಃ ॥

ದಧಾಮಿ ತೇ ಮಧುನೋ ಭಕ್ಷಮಗ್ರೇ ಹಿತಸ್ತೇ ಭಾಗಃ ಸುತೋ ಅಸ್ತು ಸೋಮಃ ।
ಅಸಶ್ಚ ತ್ವಂ ದಕ್ಷಿಣತಃ ಸಖಾ ಮೇಽಧಾ ವೃತ್ರಾಣಿ ಜಂಘನಾವ ಭೂರಿ ॥೨॥

॥ ಪದಪಾಠಃ ॥

ದಧಾಮಿ । ತೇ । ಮಧುನಃ । ಭಕ್ಷಂ । ಅಗ್ರೇ । ಹಿತಃ । ತೇ । ಭಾಗಃ । ಸುತಃ । ಅಸ್ತು । ಸೋಮಃ ।
ಅಸಃ । ಚ । ತ್ವಂ । ದಕ್ಷಿಣತಃ । ಸಖಾ । ಮೇ । ಅಧ । ವೃತ್ರಾಣಿ । ಜಂಘನಾವ । ಭೂರಿ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತೇ ತುಭ್ಯಂ ಮಧುನೋ ಮದಕರಸ್ಯ ಸೋಮಸ್ಯ ಭಕ್ಷಮಗ್ರೇ ಪ್ರಥಮಂ ದಧಾಮಿ। ಧಾರಯಾಮಿ । ಸುತೋಽಭಿಷುತೋ ಭಾಗೋ ಭಜನೀಯಃ ಸೋಮಸ್ತೇ ತವ ಹೃದಯೇ ಹಿತೋ

**ನಿಹಿತೋಽಸ್ತು । ಭವತು । ಅಪಿ ಚ ತ್ವಂ ಮೇ ಮಮ ದಕ್ಷಿಣತೋ ದಕ್ಷಿಣಪಾರ್ಶ್ವೇ ಸಖಾ ಸನ್ನಸಃ । ಸ್ಥಿತೋ ಭವ । ಅಧಾಥ ಭೂರಿ ಬಹೂನಿ ವೃತ್ರಾಣ್ಯಸ್ಮದೀಯಾಞ್ಛತ್ರೂಞ್ಜಂಘನಾವ । ತ್ವಮಹಂ ಚೋಭಾವಾವಾಂ ಹನ್ವಃ ॥**

॥ ಪ್ರತಿಪದಾರ್ಥ ॥

(ಎಲೈ ಇಂದ್ರನೇ) **ತೇ**—ನಿನ್ನನ್ನುದ್ದೇಶಿಸಿ । **ಮಧುನಃ**—ಮಧುರವಾದ ಸೋಮದ । **ಭಕ್ಷಂ**—ಭಕ್ಷಣಾರ್ಹವಾದ ಭಾಗವನ್ನು । **ಅಗ್ರೇ**—ಉಳಿದ ದೇವತೆಗಳಿಗಿಂತಲೂ ಮೊದಲು ಅರ್ಪಿಸಲು । **ದಧಾಮಿ**—ಹಿಡಿದಿದ್ದೇನೆ । **ಸುತಃ**—ಹಿಂಡಿರುವುದೂ । **ಭಾಗಃ**—ಭೋಗಾರ್ಹವಾದುದೂ ಆದ । **ಸೋಮಃ**—ಸೋಮವು । **ತೇ**—ನಿನ್ನ ಜಠರದಲ್ಲಿ । **ಹಿತಃ ಅಸ್ತು**—ತುಂಬಿಡಲ್ಪಡಲಿ । **ತ್ವಂ**—ನೀನು । **ಮೇ**—ನನಗೆ । **ದಕ್ಷಿಣತಃ**—ಬಲಭಾಗದಲ್ಲಿ । **ಸಖಾ**—ಮಿತ್ರನಂತೆ । **ಅಸಃ**—ಇರು । **ಅಧ**—ಅನಂತರ । **ಭೂರಿ**—ಅನೇಕವಾದ । **ವೃತ್ರಾಣಿ**-ಶತ್ರುಗಳನ್ನೂ । **ಜಂಘನಾವ**—ನಾವಿಬ್ಬರೂ ಸೇರಿ ನಾಶಮಾಡೋಣ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ಮಧುರವಾದ ಸೋಮದ ಭಕ್ಷಣಾರ್ಹವಾದ ಭಾಗವನ್ನು ಉಳಿದ ದೇವತೆಗಳಿಗಿಂತಲೂ ಮೊದಲು ಅರ್ಪಿಸಲು ಹಿಡಿದಿದ್ದೇನೆ. ಹಿಂಡಿರುವುದೂ ಭೋಗಾರ್ಹವಾದುದೂ ಆದ ಸೋಮವು ನಿನ್ನ ಜಠರದಲ್ಲಿ ತುಂಬಿಡಲ್ಪಡಲಿ. ನೀನು ನನಗೆ ಬಲಭಾಗದಲ್ಲಿ ನನ್ನ ಮಿತ್ರನಂತಿರು. ಅನಂತರ ಅನೇಕವಾದ ಶತ್ರುಗಳನ್ನು ನಾವಿಬ್ಬರೂ ಸೇರಿ ನಾಶಮಾಡೋಣ.

## English Translation

I offer the beverage of the exhilarating drink first to you, let the effused enjoyable Soma be placed within you ; be a friend on my right hand, then will we two smite our many enemies.

॥ ಸಂಹಿತಾಪಾಠಃ ॥

ಪ್ರ ಸು ಸ್ತೋಮಂ ಭರತ ವಾಜಯಂತ ಇಂದ್ರಾಯ ಸತ್ಯಂ ಯದಿ ಸತ್ಯಮಸ್ತಿ ।
ನೇಂದ್ರೋ ಅಸ್ತೀತಿ ನೇಮ ಉ ತ್ವ ಆಹ ಕ ಈಂ ದದರ್ಶ ಕಮಭಿ ಷ್ಟವಾಮ ॥ ೩ ॥

॥ ಪದಪಾಠಃ ॥

ಪ್ರ । ಸು । ಸ್ತೋಮಂ । ಭರತ । ವಾಜಽಯಂತಃ । ಇಂದ್ರಾಯ । ಸತ್ಯಂ । ಯದಿ । ಸತ್ಯಂ । ಅಸ್ತಿ ।
ನ । ಇಂದ್ರಃ । ಅಸ್ತಿ । ಇತಿ । ನೇಮಃ । ಊಂ ಇತಿ । ತ್ವಃ । ಆಹ । ಕಃ । ಈಂ । ದದರ್ಶ । ಕಂ । ಅಭಿ । ಸ್ತವಾಮ ॥

॥ ಸಾಯಣಭಾಷ್ಯಂ ॥

ಹೇ ಜನಾಃ ವಾಜಯಂತಃ ಸಂಗ್ರಾಮಮಿಚ್ಛಂತೋ ಯೂಯಂ । ಪೌಂಸ್ಯೇ ವಾಜ ಇತಿ ಸಂಗ್ರಾಮನಾಮಸು ಪಾಠಾತ್ । ಇಂದ್ರಾಯ ಸತ್ಯಂ ಸತ್ಯಭೂತಂ ಸ್ತೋಮಂ ಸು ಸುಷ್ಠು ಪ್ರ ಭರತ । ಇಂದ್ರೋಽಸ್ತೀತ್ಯೇತದ್ಯದಿ ಸತ್ಯಮಸ್ತಿ ಭವತಿ । ಇಂದ್ರಾಸ್ತಿತ್ವೇ ಕಃ ಸಂದೇಹಃ । ತತ್ರಾಹ । ನೇಮ ಉ ಭಾರ್ಗವೋ ನೇಮ ಏವೇಂದ್ರೋ ನಾಮ ತ್ವಃ ಕಶ್ಚಿನ್ನಾಸ್ತೀತ್ಯಾಹ । ತತ್ರ ಕಾರಣಂ ದರ್ಶಯತಿ । ಕ ಈಮೇನಮಿಂದ್ರಂ ದದರ್ಶ । ಅದ್ರಾಕ್ಷೀತ್ । ನ ಕೋಽಪ್ಯಪಶ್ಯತ್ । ಅತಃ ಕಂ ಪಯಮಭಿ ಷ್ಟವಾಮ । ಅಭಿಷ್ಟುಮಃ । ತಸ್ಮಾದಿಂದ್ರೋ ನಾಮ ಕಶ್ಚಿದ್ವಿದ್ಯತ ಇತಿ ವಾದಮಾತ್ರಂ ನ ತು ತತ್ಸತ್ಯಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಮಿತ್ರರೇ) **ವಾಜಯಂತಃ**—ಸಂಗ್ರಾಮಾಪೇಕ್ಷಿಗಳಾದ ನೀವು । **ಇಂದ್ರಾಯ**—ಇಂದ್ರನನ್ನುದ್ದೇಶಿಸಿ । **ಸತ್ಯಂ**—ಖಂಡಿತವಾಗಿಯೂ । **ಸ್ತೋಮಂ**—ಸ್ತೋತ್ರವನ್ನು । **ಸು**—ಅತಿಶಯವಾಗಿ । **ಪ್ರ ಭರತ**—ಅರ್ಪಿಸಿರಿ । **ಯದಿ**—ಒಂದು ವೇಳೆ । **ಸತ್ಯಂ**—ಖಂಡಿತವಾಗಿಯೂ । **ಅಸ್ತಿ**—ಇಂದ್ರನು ಇದ್ದದ್ದೇ ಆದರ ಆಗ ಅರ್ಪಿಸಿರಿ । **ನೇಮ ಉ**—ಭೃಗುಪುತ್ರನಾದ ನೇಮನು । **ಇಂದ್ರಃ**—ಇಂದ್ರನೆಂಬ ಹೆಸರುಳ್ಳ । **ತ್ವಃ**—ಯಾರೂ । **ನ**—ಇಲ್ಲವು ಎಂದು । **ಆಹ**—ಹೇಳಿದ್ದಾನೆ । **ಕಃ**—ಯಾರು । **ಈಂ**—ಈ ಇಂದ್ರನನ್ನು । **ದದರ್ಶ**—ನೋಡಿದ್ದಾರೆ ? । **ಕಂ**—ಯಾರನ್ನು ತಾನೇ । **ಅಭಿ ಷ್ಟವಾಮ**—ನಾವು ಸ್ತುತಿಸೋಣ?

॥ ಭಾವಾರ್ಥ ॥

ಎಲೈ ಮಿತ್ರರೇ, ಸಂಗ್ರಾಮಾಪೇಕ್ಷಿಗಳಾದ ನೀವು ಇಂದ್ರನನ್ನು ಉದ್ದೇಶಿಸಿ ಖಂಡಿತವಾಗಿಯೂ ಸ್ತೋಮವನ್ನರ್ಪಿಸಿರಿ. ಒಂದು ವೇಳೆ ಇಂದ್ರನೆಂಬುವನು ಇದ್ದದ್ದೇ ಆದರೆ ಆಗ ಅರ್ಪಿಸಿರಿ. ಭೃಗುಪುತ್ರನಾದ ನೇಮನು "ಇಂದ್ರನೆಂಬ ಹೆಸರುಳ್ಳ ಯಾರೂ ಇಲ್ಲ" ಎಂದು ಹೇಳಿದ್ದಾನೆ ಈ ಇಂದ್ರನನ್ನು ನೋಡಿರುವರು ತಾನೇ ಯಾರು ? ಯಾರನ್ನು ತಾನೇ ನಾವು ಸ್ತುತಿಸೋಣ?

## English Translation

Offer fervently, my war-loving companions, true praise to Indra, if he truly exists; Nema says "verily there is no Indra," who has ever seen him ? whom shall we praise ?

॥ ಸಂಹಿತಾಪಾಠಃ ॥

ಅಯಮಸ್ಮಿ ಜರಿತಃ ಪಶ್ಯ ಮೇಹ ವಿಶ್ವಾ ಜಾತಾನ್ಯಭ್ಯಸ್ಮಿ ಮಹ್ನಾ ।
ಋತಸ್ಯ ಮಾ ಪ್ರದಿಶೋ ವರ್ಧಯಂತ್ಯಾದರ್ದಿರೋ ಭುವನಾ ದರ್ದರೀಮಿ॥

॥ ಪದಪಾಠಃ ॥

ಅಯಂ । ಅಸ್ಮಿ । ಜರಿತರಿತಿ । ಪಶ್ಯ । ಮಾ । ಇಹ । ವಿಶ್ವಾ । ಜಾತಾನಿ । ಅಭಿ । ಅಸ್ಮಿ । ಮಹ್ನಾ ।
ಋತಸ್ಯ । ಮಾ । ಪ್ರಽದಿಶಃ । ವರ್ಧಯಂತಿ । ಆಽದರ್ದಿರಃ । ಭುವನಾ । ದರ್ದರೀಮಿ ॥ ೪ ॥

॥ ಸಾಯಣಭಾಷ್ಯಂ ॥

ಏವಂ ನೇಮಸ್ಯರ್ಷೇರ್ವಚನಮಾಕರ್ಣ್ಯೇಂದ್ರಸ್ತಸ್ಯ ಸಮೀಪಮಾಜಗಾಮ । ಆಗತ್ಯ ಚಾತ್ಮಾನಮನೇನ ದ್ವ್ಯರ್ಚೇನ ಸ್ತೌತಿ । ಹೇ ಜರಿತಃ ಸ್ತೋತಃ ಅಯಮಹಮಸ್ಮಿ । ಇಹ ತವ ಸಮೀಪೇ ಸ್ಥಿತಂ ಮಾ ಮಾಂ ಪಶ್ಯ । ವಿಶ್ವಾ ಸರ್ವಾಣಿ ಜಾತಾನಿ ಭುವನಾನಿ ಮಹ್ನಾ ಮಹತ್ತ್ವೇನಾಭ್ಯಸ್ಮಿ । ಅಹಮಭಿಭವಾಮಿ । ಕಿಂಚ ಮಾಮೃತಸ್ಯ ಸತ್ಯಸ್ಯ ಯಜ್ಞಸ್ಯ ವಾ ಪ್ರದಿಶಃ ಪ್ರದೇಷ್ಟಾರೋ ವಿದ್ವಾಂಸಃ ಸ್ತೋತ್ರೈರ್ವರ್ಧಯಂತಿ । ಅಪಿ ಚಾದರ್ದಿರ ಆದರಣಶೀಲೋಽಹಂ ಭುವನಾ ಭುವನಾನಿ ಶತ್ರುಭೂತಾನಿ ದರ್ದರೀಮಿ । ಭೃಶಂ ವಿದಾರಯಾಮಿ ॥

॥ ಪ್ರತಿಪದಾರ್ಥ ॥

ಜರಿತಃ—ಎಲೈ ಸ್ತೋತೃವೇ । ಅಯಂ—ಇಂದ್ರನಾದ ನಾನು । ಅಸ್ಮಿ—ಇಲ್ಲಿದ್ದೇನೆ । ಇಹ—ನಿನ್ನ ಸಮೀಪದಲ್ಲಿಯೇ ಇರುವ । ಮಾ—ನನ್ನನ್ನು । ಪಶ್ಯ—ನೋಡು । ವಿಶ್ವಾ—ಸಮಸ್ತವಾದ । ಜಾತಾನಿ—ಭುವನಗಳನ್ನೂ । ಮಹ್ನಾ—ನನ್ನ ಮಹತ್ವದಿಂದ । ಅಭ್ಯಸ್ಮಿ—ವ್ಯಾಪಿಸಿ ನಿಂತಿದ್ದೇನೆ । ಋತಸ್ಯ—ಸತ್ಯಾತ್ಮಕವಾದ ಯಜ್ಞದ । ಪ್ರದಿಶಃ—ನೇತೃಗಳಾದ ಪ್ರಾಜ್ಞರು । ಮಾ—ನನ್ನನ್ನು । ವರ್ಧಯಂತಿ—ತಮ್ಮ ಸ್ತುತಿಗಳಿಂದ ಪ್ರವೃದ್ಧನಾಗುವಂತೆ ಮಾಡುತ್ತಾರೆ । ಆದರ್ದಿರಃ—ನಾಶಮಾಡುವ ಶಕ್ತಿಯುಳ್ಳ ನಾನು । ಭುವನಾ—ಶತ್ರು ಪಟ್ಟಣಗಳನ್ನೆಲ್ಲಾ । ದರ್ದರೀಮಿ—ಸೀಳಿಹಾಕುತ್ತೇನೆ.

॥ ಭಾವಾರ್ಥ ॥

ಎಲೈ ಸ್ತೋತೃವೇ, ಇಗೋ ಇಂದ್ರನಾದ ನಾನು ಇಲ್ಲಿಯೇ ಇದ್ದೇನೆ. ನಿನ್ನ ಸಮೀಪದಲ್ಲಿಯೇ ಇರುವ ನನ್ನನ್ನು ನೋಡು. ಸಮಸ್ತವಾದ ಭುವನಗಳನ್ನೂ ನನ್ನ ಮಹತ್ವದಿಂದ ವ್ಯಾಪಿಸಿ ನಿಂತಿದ್ದೇನೆ. ಸತ್ಯಾತ್ಮಕವಾದ ಯಜ್ಞಕ್ಕೆ ನೇತೃಗಳಾದ ಪ್ರಾಜ್ಞರು ನನ್ನನ್ನು ತಮ್ಮ ಸ್ತುತಿಗಳಿಂದ ಬೆಳೆಯುವಂತೆ ಮಾಡುತ್ತಾರೆ. ನಾಶಮಾಡುವ ಶಕ್ತಿಯುಳ್ಳ ನಾನು ಶತ್ರು ಪಟ್ಟಣಗಳನ್ನೆಲ್ಲಾ ಸೀಳಿಹಾಕುತ್ತೇನೆ.

## English Translation

(Indra speaks) "Here I am, worshipper, behold me here; I overpower all beings by my might; the offerers of sacrifice magnify me by their praises, I, the shatterer, shatter the worlds.

॥ ವಿಶೇಷವಿಷಯಗಳು ॥

ಹಿಂದಿನ ಋಕ್ಕಿನಲ್ಲಿ—ಇಂದ್ರನೆಂಬುವನು ಯಾರೂ ಇಲ್ಲ. ಈ ಇಂದ್ರನನ್ನು ನೋಡಿರುವವರು ತಾನೇ ಯಾರು? ಯಾರನ್ನು ನಾವು ಸ್ತುತಿಸೋಣ? ಎಂದು ಋಷಿಯು ಇಂದ್ರನ ವಿಷಯದಲ್ಲಿ ಸಂಶಯವನ್ನು ವ್ಯಕ್ತಪಡಿಸಿದ್ದನ್ನು ಕೇಳಿ ಇಂದ್ರನು ಋಷಿಯ ಸಮೀಪಕ್ಕೆ ಹೋಗಿ ತನ್ನ ಸ್ವರೂಪವನ್ನೂ ಮಹಾತ್ಮ್ಯವನ್ನೂ ಅವನಿಗೆ ತಿಳಿಯಪಡಿಸಿದನೆಂದು ಈ ಋಕ್ಕಿನಲ್ಲಿಯೂ ಮುಂದಿನ ಋಕ್ಕಿನಲ್ಲಿಯೂ ವರ್ಣಿಸಲಾಗಿದೆ.

॥ ಸಂಹಿತಾಪಾಠಃ ॥

ಆ ಯನ್ಮಾ ವೇನಾ ಅರುಹನ್ನೃತಸ್ಯ ಏಕಮಾಸೀನಂ ಹರ್ಯತಸ್ಯ ಪೃಷ್ಠೇ ।
ಮನಶ್ಚಿನ್ಮೇ ಹೃದ ಆ ಪ್ರತ್ಯವೋಚದಚಿಕ್ರದಞ್ಛಿಶುಮಂತಃ ಸಖಾಯಃ ॥

॥ ಪದಪಾಠಃ ॥

ಆ । ಯತ್ । ಮಾ । ವೇನಾಃ । ಅರುಹನ್ । ಋತಸ್ಯ । ಏಕಂ । ಆಸೀನಂ । ಹರ್ಯತಸ್ಯ । ಪೃಷ್ಠೇ ।
ಮನಃ । ಚಿತ್ । ಮೇ । ಹೃದೇ । ಆ । ಪ್ರತಿ । ಅವೋಚತ್ । ಅಚಿಕ್ರದನ್ । ಶಿಶುಽಮಂತಃ ।
ಸಖಾಯಃ ॥ ೫ ॥

॥ ಸಾಯಣಭಾಷ್ಯಂ ॥

ಯದ್ಯದಾ ಯ ಋತಸ್ಯ ಯಜ್ಞಸ್ಯ ಯಜ್ಞಂ ॥ ಕರ್ಮಣಿ ಷಷ್ಠೀ ॥ ವೇನಾಃ ಕಾಮಯಮಾನಾ ಹರ್ಯತಸ್ಯ ಕಾಂತಸ್ಯಾಂತರಿಕ್ಷಸ್ಯ ಪೃಷ್ಠ ಆಸೀನಮುಪವಿಷ್ಟಮೇಕಂ ಮಾ ಮಾಮಾರುಹನ್ ತದಾನೀಂ ತೇಷಾಂ ಭವತಾಮಾರೋಹಂ ಮನಶ್ಚಿನ್ಮನ ಏವ ಮೇ ಮಮ ಹೃದೇ ಹೃದಯಾಯ ಪ್ರತ್ಯವೋಚತ್ । ಅಬ್ರವೀತ್ । ಅಜ್ಞಾಸಿಷಂ ಚ ತದಾಹ್ವಾನಂ ಶಿಶುಮಂತಃ ಪುತ್ರಯುಕ್ತಾಃ ಸಖಾಯಃ ಪ್ರಿಯಾ ಆಮಾ ಅಚಿಕ್ರದನ್ ಮಾಂ ಕ್ರಂದಂತೀತಿ ॥

॥ ಪ್ರತಿಪದಾರ್ಥ

ಯತ್—ಯಾವಾಗ । ಋತಸ್ಯ—ಯಜ್ಞವನ್ನು । ವೇನಾಃ—ಆದರಿಸುವವರೆಲ್ಲರೂ । ಹರ್ಯತಸ್ಯ—ಮನೋಹರವಾದ ಅಂತರಿಕ್ಷದ । ಪೃಷ್ಠೇ—ಮಧ್ಯಭಾಗದಲ್ಲಿ । ಆಸೀನಂ—ಕುಳಿತಿದ್ದವನೂ । ಏಕಂ—

ಅದ್ವಿತೀಯನೂ ಆದ । ಮಾ—ನನ್ನಲ್ಲಿಗೆ । ಆ ಅರುಹನ್—ಹತ್ತಿಬಂದರೋ (ಆಗ) । ಮನಶ್ಚಿತ್—ನನ್ನ ಮನಸ್ಸಾದರೋ । ಮೇ—ನನ್ನ । ಹೃದೇ– ಹೃದಯಕ್ಕೆ ಹೊಕ್ಕು । ಪ್ರತ್ಯವೋಚತ್—ಈ ರೀತಿ ಹೇಳಿತು । ಶಿಶುಮಂತಃ—ಪುತ್ರಯುಕ್ತರಾದವರೂ । ಸಖಾಯಃ—ನನ್ನ ಮಿತ್ರರೂ । ಅಚಿಕ್ರದನ್– ನನಗಾಗಿ ಕೂಗಿಕೊಳ್ಳುತ್ತಿದ್ದಾರೆ.

॥ ಭಾವಾರ್ಥ ॥

ಮನೋಹರವಾದ ಅಂತರಿಕ್ಷದ ಮಧ್ಯಭಾಗದಲ್ಲಿ ಕುಳಿತಿದ್ದವನೂ ಅದ್ವಿತೀಯನೂ ಆದ ನನ್ನಲ್ಲಿಗೆ ಯಾವಾಗ ಯಜ್ಞವನ್ನು ಆದರಿಸುವವರೆಲ್ಲರೂ ಹತ್ತಿಬಂದರೋ ಆಗ ನನ್ನ ಮನಸ್ಸು ನನ್ನ ಹೃದಯದೊಳಕ್ಕೆ ಪ್ರವೇಶಿಸಿ " ಪುತ್ರ ಯುಕ್ತರಾದವರೂ ನನ್ನ ಮಿತ್ರರೂ ನನಗಾಗಿ ಕೂಗಿಕೊಳ್ಳುತ್ತಿದ್ದಾರೆ" ಎಂದು ತಿಳಿಸಿತು.

English Translation

"When the lovers of sacrifice ascended to me sitting alone on the back of my well-loved (firmament), then my mind verily proclaimed to my heart, 'my friends with their children are crying to me'."

॥ ಸಂಹಿತಾಪಾಠಃ ॥

ವಿಶ್ವೇತ್ತಾ ತೇ ಸವನೇಷು ಪ್ರವಾಚ್ಯಾ ಯಾ ಚಕರ್ಥ ಮಘವನ್ನಿಂದ್ರ ಸುನ್ವತೇ ।
ಪಾರಾವತಂ ಯತ್ಪುರುಸಂಭೃತಂ ವಸ್ವಪಾವೃಣೋಃ ಶರಭಾಯ ಋಷಿಬಂಧವೇ ॥ ೬ ॥

॥ ಪದಪಾಠಃ ॥

ವಿಶ್ವಾ । ಇತ್ । ತಾ । ತೇ । ಸವನೇಷು । ಪ್ರऽವಾಚ್ಯಾ । ಯಾ । ಚಕರ್ಥ । ಮಘऽವನ್ । ಇಂದ್ರ । ಸುನ್ವತೇ ।
ಪಾರಾವತಂ । ಯತ್ । ಪುರುऽಸಂಭೃತಂ । ವಸು । ಅಪऽಅವೃಣೋಃ । ಶರಭಾಯ । ಋಷಿऽಬಂಧವೇ ॥

॥ ಸಾಯಣಭಾಷ್ಯಂ ॥

ಸ್ವಸಮೀಪಮಾಗತಮಿಂದ್ರಂ ದೃಷ್ಟ್ವಾ ಸಂತುಷ್ಟ ಋಷಿರಿಂದ್ರಸ್ಯ ವಿವಿಧಾನಿ ಕರ್ಮಾಣಿ ದಾನಂ ಚ ವಿಶ್ವೇತ್ತಾ ತ ಇತ್ಯನೇನ ದ್ವ್ಯಚೇನ ಸ್ತೌತಿ । ಹೇ ಮಘವನ್ನಿಂದ್ರ ತ್ವಂ ಸವನೇಷು ಯಜ್ಞೇಷು ಸುನ್ವತೇ ಸೋಮಾಭಿಷವಂ ಕುರ್ವತೇ ಯಜಮಾನಾಯ ಯಾ ಯಾನಿ ಕರ್ಮಾಣಿ ಚಕರ್ಥ ಅಕರೋಃ ತೇ ತವ ತಾ [illegible]ನಿ ಕರ್ಮಾಣಿ ಪ್ರವಾಚ್ಯಾ ಪ್ರವಕ್ತವ್ಯಾನಿ ವಿಶ್ವೇದನಂತಾನ್ಯೇವ । ಕಿಂಚ ತ್ವಂ ಪಾರಾವತಂ

ಪರಾವನ್ನಾಮಕಸ್ಯ ಕಸ್ಯಚಿಚ್ಛತ್ರೋಃ ಸ್ವಭೂತಂ ಯದ್ಧನಮಸ್ತಿ ತದೃಷಿಬಂಧವೇ ಶರಭಾಯ ಶರಭನಾಮ ಋಷಯೇऽಪಾವೃಣೋಃ । ಅಪವೃತವಾನಸಿ । ಪುರುಸಂಭೃತಂ ಯಥಾ ಬಹುಸಂಭೃತಂ ಭವತಿ ॥

॥ ಪ್ರತಿಪದಾರ್ಥ ॥

**ಮಘವನ್**—ಧನವಂತನಾದ । **ಇಂದ್ರ**—ಎಲೈ ಇಂದ್ರನೇ । **ಸವನೇಷು**—ಯಜ್ಞಗಳಲ್ಲಿ । **ಸುನ್ವತೇ**—ಸೋಮವನ್ನು ಹಿಂಡಿ ಅರ್ಪಿಸುವ ಯಜಮಾನನಿಗೆ । **ಯಾ**—ಯಾವ ಸಹಾಯಕರ್ಮಗಳನ್ನು । **ಚಕರ್ಥ**—ಮಾಡಿದೆಯೋ । **ತೇ**—ನಿನ್ನ । **ವಿಶ್ವೇತ್**—ಸಮಸ್ತವಾದ । **ತಾ**—ಆ ಕರ್ಮಗಳೆಲ್ಲವೂ । **ಪ್ರವಾಚ್ಯಾ**—ಪ್ರಶಂಸಾರ್ಹವೇ ಆಗಿವೆ । **ಪಾರಾವತಂ**—ಪರಾವನ್ನಾಮಕನಾದ ಶತ್ರುವಿಗೆ ಸೇರಿದುದೂ । **ಪುರುಸಂಭೃತಂ**—ಬಹುಕಾಲ ಶೇಖರಿಸಲ್ಪಟ್ಟುದೂ ಆದ । **ಯತ್ ವಸು**—ಯಾವ ಧನವಿದೆಯೋ ಅದನ್ನು । **ಋಷಿಬಂಧವೇ**—ಋಷಿಗಳಿಗೆಲ್ಲಾ ಆಪ್ತನಾದ । **ಶರಭಾಯ**—ಶರಭನೆಂಬ ಋಷಿಗೆ । **ಅಪಾವೃಣೋಃ**—ಸೇರುವಂತೆ ಮಾಡಿದೆ.

॥ ಭಾವಾರ್ಥ ॥

ಧನವಂತನಾದ ಎಲೈ ಇಂದ್ರನೇ, ಯಜ್ಞಗಳಲ್ಲಿ ಸೋಮವನ್ನು ಹಿಂಡಿ ಅರ್ಪಿಸುವ ಯಜಮಾನನಿಗೆ ಯಾವ ಸಹಾಯ ಕರ್ಮಗಳನ್ನು ಮಾಡಿದೆಯೋ ನಿನ್ನ ಸಮಸ್ತವಾದ ಆ ಕರ್ಮಗಳೆಲ್ಲವೂ ಪ್ರಶಂಸಾರ್ಹವೇ ಆಗಿವೆ. ಪರಾವನ್ನಾಮಕನಾದ ಶತ್ರುವಿಗೆ ಸೇರಿದುದೂ, ಬಹುಕಾಲ ಶೇಖರಿಸಲ್ಪಟ್ಟುದೂ ಆದ ಯಾವ ಧನವಿದೆಯೋ ಅದನ್ನು ಋಷಿಗಳಿಗೆಲ್ಲಾ ಆಪ್ತನಾದ ಶರಭನೆಂಬ ಋಷಿಗೆ ಸೇರುವಂತೆ ಮಾಡಿದೆ.

English Translation

Verily all those deeds of yours Maghavan, are to be proclaimed, which you have achieved for him who offers libations in the sacrifices; that wealth of Paravat, collected by many, you have opened to Sharabha, the kinsman of the Rishi.

। ಸಂಹಿತಾಪಾಠಃ ।

ಪ್ರ ನೂನಂ ಧಾವತಾ ಪೃಥಙ್ನೇಹ ಯೋ ವೋ ಅವಾವರೀತ್ ।
ನ ಷೀಂ ವೃತ್ರಸ್ಯ ಮರ್ಮಣಿ ವಜ್ರಮಿಂದ್ರೋ ಅಪೀಪತತ್ ॥ ೭ ॥

॥ ಪದಪಾಠಃ ॥

ಪ್ರ । ನೂನಂ । ಧಾವತ । ಪೃಥಕ್ । ನ । ಇಹ । ಯಃ । ವಃ । ಅವಾವರೀತ್ ।
ನ । ಸೀಂ । ವೃತ್ರಸ್ಯ । ಮರ್ಮಣಿ । ವಜ್ರಂ । ಇಂದ್ರಃ । ಅಪೀಪತತ್ ॥ ೭ ॥

॥ ಸಾಯಣಭಾಷ್ಯಂ ॥

ಯಃ ಶತ್ರುರ್ನೂನಮಿದಾನೀಂ ಪ್ರ ಧಾವತ ಪ್ರಧಾವತಿ । ಪೃಥಗಿಹ ಪೃಥಙ್ನ ತಿಷ್ಠತಿ ಚ ಯೋ ಯುಷ್ಮಾನ್ನಾವಾವರೀತ್ ನ ನಿವಾರಯತಿ ಚ ತಸ್ಯ ವೃತ್ರಸ್ಯ ಶತ್ರೋರ್ಮರ್ಮಣಿ ಮರ್ಮಸ್ಥಾನ ಇಂದ್ರೋ ವಜ್ರಂ ಕುಲಿಶಂ ನ್ಯಪೀಪತತ್ । ನಿತರಾಮಪಾತಯತ್ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಶತ್ರುವು । **ನೂನಂ**—ಈಗ । **ಪ್ರ ಧಾವತ**—ಓಡಿಹೋಗುತ್ತಿದ್ದಾನೆಯೋ । **ಪೃಥಕ್**—ಪ್ರತ್ಯೇಕವಾಗಿ । **ಇಹ**—ಇಲ್ಲಿ । **ವಃ**—ನಿಮ್ಮನ್ನು । **ನ ಅವಾವರೀತ್**—ತಡೆಗಟ್ಟುವುದಿಲ್ಲವೋ । **ವೃತ್ರಸ್ಯ**—ಅಂತಹ ಶತ್ರುವಿನ । **ಮರ್ಮಣಿ**—ಮರ್ಮಸ್ಥಾನದಲ್ಲಿ । **ಇಂದ್ರಃ**—ಇಂದ್ರನು । **ವಜ್ರಂ**—ವಜ್ರಾಯುಧವನ್ನು । **ಸೀಂ**—ಖಂಡಿತವಾಗಿಯೂ । **ನಿ ಅಪೀಪತತ್**—ಪ್ರವೇಶಿಸುವಂತೆ ಪ್ರಯೋಗಿಸಿದ್ದಾನೆ.

॥ ಭಾವಾರ್ಥ ॥

ಯಾವ ಶತ್ರುವು ಈಗ ಓಡಿಹೋಗುತ್ತಿದ್ದಾನೆಯೋ, ಮತ್ತು ಇಲ್ಲಿ ಪ್ರತ್ಯೇಕವಾಗಿ ನಿಂತು ನಿಮ್ಮನ್ನು ತಡೆಗಟ್ಟುವುದಿಲ್ಲವೋ ಅಂತಹ ಶತ್ರುವಿನ ಮರ್ಮಸ್ಥಾನದಲ್ಲಿ ಇಂದ್ರನು ತನ್ನ ವಜ್ರಾಯುಧವನ್ನು ಪ್ರವೇಶಿಸುವಂತೆ ಪ್ರಯೋಗಿಸಿದ್ದಾನೆ.

## English Translation

Haste now severally forward ; he is not here who stopped your way,-has not Indra let fall his thunderbolt in the very vitals of that enemy ?

॥ ಸಂಹಿತಾಪಾಠಃ ॥

**ಮನೋಜವಾ ಅಯಮಾನ ಆಯಸೀಮತರತ್ಪುರಂ ।**
**ದಿವಂ ಸುಪರ್ಣೋ ಗತ್ವಾಯ ಸೋಮಂ ವಜ್ರಿಣ ಆಭರತ್ ॥ ೮ ॥**

॥ ಪದಪಾಠಃ ॥

ಮನಃಽಜವಾಃ । ಅಯಮಾನಃ । ಆಯಸೀಂ । ಅತರತ್ । ಪುರಂ ।
ದಿವಂ । ಸುಽಪರ್ಣಃ । ಗತ್ವಾಯ । ಸೋಮಂ । ವಜ್ರಿಣೇ । ಆ । ಅಭರತ್ ॥ ೮ ॥

॥ ಸಾಯಣಭಾಷ್ಯಂ ॥

ಸುಪರ್ಣೋ ಗರುತ್ಮಾನ್ ಮನೋಜವಾ ಮನೋವೇಗೋಽಯಮಾನೋ ಗಚ್ಛನ್ನಾಯಸೀಂ ಹಿರಣ್ಮಯೀಂ ಪುರಂ ನಗರೀಮತರತ್ । ಅತಾರೀತ್ । ತತೋ ದಿವಂ ಸ್ವರ್ಗಂ ಗತ್ವಾಯ ಗತ್ವಾ ವಜ್ರಿಣ ಇಂದ್ರಾಯ ಸೋಮಮಾಭರತ್ । ಆಹರಚ್ಚ ॥

॥ ಪ್ರತಿಪದಾರ್ಥ ॥

**ಸುಪರ್ಣಃ**—ಗುರುತ್ಮಂತನು । **ಮನೋಜವಾಃ**—ಮನೋವೇಗದಿಂದ ಕೂಡಿ । **ಅಯವಾನಃ**—ಹಾರುತ್ತಾ । **ಆಯಸೀಂ**—ಚಿನ್ನದಿಂದ ನಿರ್ಮಿತವಾದ । **ಪುರಂ**—ಪಟ್ಟಣವನ್ನು । **ಅತರತ್**—ಪ್ರವೇಶಿಸಿದನು । **ದಿವಂ**—ಸ್ವರ್ಗಕ್ಕೆ । **ಗತ್ವಾಯ**—ಹೋಗಿ । **ವಜ್ರಿಣೇ**—ವಜ್ರಾಯುಧಧಾರಿಯಾದ ಇಂದ್ರನಿಗೆ । **ಸೋಮಂ**—ಸೋಮವನ್ನು **ಅಭರತ್**—ತಂದೊದಗಿಸಿದನು.

॥ ಭಾವಾರ್ಥ ॥

ಗುರುತ್ಮಂತನು (ಸುಪರ್ಣನು) ಮನೋವೇಗದಿಂದ ಕೂಡಿ ಹಾರುತ್ತಾ ಚಿನ್ನದಿಂದ ನಿರ್ಮಿತವಾದ ಪಟ್ಟಣವನ್ನು ಪ್ರವೇಶಿಸಿದನು. ಸ್ವರ್ಗಕ್ಕೆ ಹೋಗಿ ವಜ್ರಾಯುಧಧಾರಿಯಾದ ಇಂದ್ರನಿಗೆ ಸೋಮವನ್ನು ತಂದೊದಗಿಸಿದನು.

## English Translation

Suparna, rushing swift as thought, passed through the iron city ; then having gone to heaven he brought the Soma to the thunderer.

॥ ಸಂಹಿತಾಪಾಠಃ ॥

**ಸಮುದ್ರೇ ಅಂತಃ ಶಯತ ಉದ್ನಾ ವಜ್ರೋ ಅಭೀವೃತಃ ।**
**ಭರಂತ್ಯಸ್ಮೈ ಸಂಯತಃ ಪುರಃ ಪ್ರಸ್ರವಣಾ ಬಲಿಂ ॥ ೯ ॥**

॥ ಪದಪಾಠಃ ॥

ಸಮುದ್ರೇ । ಅಂತರಿತಿ । ಶಯತೇ । ಉದ್ನಾ । ವಜ್ರಃ । ಅಭಿऽವೃತಃ ।
ಭರಂತಿ । ಅಸ್ಮೈ । ಸಂऽಯತಃ । ಪುರಃऽಪ್ರಸ್ರವಣಾಃ । ಬಲಿಂ ॥ ೯ ॥

॥ ಸಾಯಣಭಾಷ್ಯಂ ॥

**ಯೋ ವಜ್ರಃ ಸಮುದ್ರೇऽಂತಃ ಸಮುದ್ರಸ್ಯ ಮಧ್ಯೇ ಶಯತೇ ಶೇತೇ ಯಶ್ಚೋದ್ನೋದಕೇನಾಭಿವೃತೋऽಸ್ಮೈ ವಜ್ರಾಯ ಸಂಯತಃ ಸಂಗ್ರಾಮಸ್ಯ । ಸಗ್ಮನ್ ಸಂಯತ ಇತಿ ಸಂಗ್ರಾಮನಾಮಸು ಪಾಠಾತ್ ॥ ಪುರಃಪ್ರಸ್ರವಣಾಃ ಪುರಸ್ತಾದ್ಗಚ್ಛಂತಃ ಶತ್ರವೋ ಬಲಿಮುಪಹಾರಂ ಭರಂತಿ । ಧಾರಯಂತಿ । ತಸ್ಯ ಚ್ಛೇದ್ಯಾ ಭವಂತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

ವಜ್ರಃ—ಇಂದ್ರನ ವಜ್ರಾಯುಧವು । **ಸಮುದ್ರೇ**—ಸಮುದ್ರದ । **ಅಂತಃ**—ಮಧ್ಯಭಾಗದಲ್ಲಿ **ಶಯತೇ**—ಬಿದ್ದಿರುತ್ತದೆ । **ಉದ್ನಾ**—ಜಲದಿಂದ । **ಅಭಿವೃತಃ**—ಸುತ್ತುವರಿಯಲ್ಪಟ್ಟದೆ । **ಅಸ್ಮೈ**—ಈ ವಜ್ರಾ

ಯುಧಕ್ಕೆ । ಸಂಯತಃ—ಯುದ್ಧದ । ಪುರಃಪ್ರಸ್ರವಣಾಃ—ಮುಂದುಗಡೆಯಲ್ಲಿ ಓಡಾಡುವ ಶತ್ರುಗಳು । ಬಲಿಂ—ಬಲಿಯನ್ನು । ಭರಂತಿ—ಧರಿಸುತ್ತಾರೆ (ಅವರೆಲ್ಲರೂ ಈ ವಜ್ರಾಯುಧಕ್ಕೆ ಬಲಿಯಾಗುತ್ತಾರೆ)

॥ ಭಾವಾರ್ಥ ॥

ಇಂದ್ರನ ವಜ್ರಾಯುಧವು ಸಮುದ್ರದ ಮಧ್ಯಭಾಗದಲ್ಲಿ ಬಿದ್ದಿರುತ್ತದೆ ಜಲದಿಂದ ಸುತ್ತುವರಿಯಲ್ಪಟ್ಟಿದೆ. ಈ ವಜ್ರಾಯುಧಕ್ಕೆ ಯುದ್ಧದ ಮುಂಭಾಗದಲ್ಲಿ ಓಡಾಡುವ ಶತ್ರುಗಳೆಲ್ಲರೂ ಬಲಿಯಾಗುತ್ತಾರೆ.

## English Translation

The thunderbolt lies in the midst of the sea, covered with the waters; (the foes) flying in front of the battle bring offerings of submission to it.

॥ ಸಂಹಿತಾಪಾಠ. ॥

ಯದ್ವಾಗ್ವದಂತ್ಯವಿಚೇತನಾನಿ ರಾಷ್ಟ್ರೀ ದೇವಾನಾಂ ನಿಷಸಾದ ಮಂದ್ರಾ ।
ಚತಸ್ರ ಊರ್ಜಂ ದುದುಹೇ ಪಯಾಂಸಿ ಕ್ವ ಸ್ವಿದಸ್ಯಾಃ ಪರಮಂ
ಜಗಾಮ ॥ ೧೦ ॥

॥ ಪದಪಾಠಃ ॥

ಯತ್ । ವಾಕ್ । ವದಂತೀ । ಅವಿऽಚೇತನಾನಿ । ರಾಷ್ಟ್ರೀ । ದೇವಾನಾಂ । ನಿऽಸಸಾದ । ಮಂದ್ರಾ ।
ಚತಸ್ರಃ । ಊರ್ಜಂ । ದುದುಹೇ । ಪಯಾಂಸಿ । ಕ್ವ । ಸ್ವಿತ್ । ಅಸ್ಯಾಃ । ಪರಮಂ । ಜಗಾಮ ॥ ೧೦ ॥

॥ ಸಾಯಣಭಾಷ್ಯಂ ॥

ರಾಷ್ಟ್ರೀ ರಾಜನಶೀಲಾ ದೇವಾನಾಂ ಮಂದ್ರಾ ಮಾದಯಿತ್ರೀ ವಾ ಯದ್ಯದಾ ವಾಗವಿಚೇತನಾನಿ ವಿಜ್ಞಾನರಹಿತಾನಪ್ರಜ್ಞಾತಾನರ್ಥಾನ್ವದಂತೀ ಪ್ರಜ್ಞಾಪಯಂತೀ ನಿಷಸಾದ ಯಜ್ಞೇ ನಿಷೀದತಿ ತದಾ ಚತಸ್ರೋ ದಿಶಃ ಪ್ರತ್ಯೂರ್ಜಮನ್ನಂ ಪಯಾಂಸಿ ತತ್ಕಾರಣಭೂತಾನ್ಯುದಕಾನಿ ದುದುಹೇ । ಅಸ್ಯಾ ಮಾಧ್ಯಮಿಕಾಯಾ ವಾಚಃ ಸ್ವಭೂತಂ ಯತ್ಪರಮಂ ಶ್ರೇಷ್ಠಂ ತತ್ ಕ್ವ ಜಗಾಮ । ಕ್ವ ಗಚ್ಛತೀತಿ ನ ದೃಶ್ಯತ ಇತ್ಯರ್ಥಃ । ತಥಾ ಚ ಯಾಸ್ಕಃ । ಯದ್ವಾಗ್ವದಂತ್ಯವಿಚೇತನಾನ್ಯವಿಜ್ಞಾತಾನಿ ರಾಷ್ಟ್ರೀ ದೇವಾನಾಂ ನಿಷಸಾದ ಮಂದ್ರಾ ಮದನಾ ಚತಸ್ರೋಽನು ದಿಶ ಊರ್ಜಂ ದುದುಹೇ ಪಯಾಂಸಿ ಕ್ವ ಸ್ವಿದಸ್ಯಾಃ ಪರಮಂ ಜಗಾಮೇತಿ ಯತ್ಪೃಥಿವೀಂ ಗಚ್ಛತೀತಿ ವಾ ಯದಾದಿತ್ಯರಶ್ಮಯೋ ಹರಂತೀತಿ ವಾ । ನಿ. ೧೧-೨೮ । ಇತಿ ॥

॥ ಪ್ರತಿಪದಾರ್ಥ ॥

**ರಾಷ್ಟ್ರೀ**—ಪ್ರಭುತ್ವದಿಂದ ಪ್ರಕಾಶಿಸುವವಳೂ । **ದೇವಾನಾಂ**—ದೇವತೆಗಳಿಗೆ । **ಮಂದ್ರಾ**—ಸಂತೋಷ ಕಾರಕಳೂ ಆದ । **ವಾಕ್**—ಮಾಧ್ಯಮಿಕಾ ವಾಗ್ದೇವಿಯು । **ಯತ್**—ಯಾವಾಗ । **ಅವಿಚೇತನಾನಿ**—ಮಾನವರ ಪ್ರಜ್ಞೆಗೆ ಅರ್ಥವಾಗದಂತಹ ವಾಕ್ಕುಗಳನ್ನು । **ವದಂತೀ**—ಉಚ್ಚರಿಸುತ್ತಾ । **ನಿಷಸಾದ**—ಯಜ್ಞ ಭೂಮಿಯಲ್ಲಿ ಕುಳಿತಳೋ (ಆಗ) । **ಚತಸ್ರಃ**—ನಾಲ್ಕು ದಿಕ್ಕುಗಳಲ್ಲಿಯೂ । **ಊರ್ಜಂ**—ಅನ್ನವನ್ನೂ । **ಪಯಾಂಸಿ**—ಉದಕ ಗಳನ್ನೂ । **ದುದುಹೇ**—ಕರೆದಳು । **ಅಸ್ಯಾಃ**—ಈ ವಾಗ್ದೇವಿಯ । **ಪರಮಂ**—ಶ್ರೇಷ್ಠವಾದ ಮೂಲತತ್ತ್ವವು । **ಕ್ವ ಸ್ವಿತ್**—ಎಲ್ಲಿಗೆ ತಾನೇ । **ಜಗಾಮ**—ಹೋಯಿತು (ಎಂಬುದು ಯಾರಿಗೂ ತಿಳಿಯದು).

॥ ಭಾವಾರ್ಥ ॥

ಸ್ವಪ್ರಭುತ್ವದಿಂದ ಪ್ರಕಾಶಿಸುವವಳೂ, ದೇವತೆಗಳಿಗೆ ಸಂತೋಷಕಾರಕಳೂ ಆದ ಮಾಧ್ಯಮಿಕಾವಾಗ್ದೇವಿಯು ಯಾವಾಗ ಮಾನವರ ಪ್ರಜ್ಞೆಗೆ ಅರ್ಥವಾಗದಂತಹ ವಾಕ್ಕುಗಳನ್ನು ಉಚ್ಚರಿಸುತ್ತಾ ಯಜ್ಞಭೂಮಿಯಲ್ಲಿ ಕುಳಿತಳೋ ಆಗ ನಾಲ್ಕು ದಿಕ್ಕುಗಳಲ್ಲಿಯೂ ಅನ್ನವನ್ನೂ ಉದಕವನ್ನೂ ಕರೆದಳು. ಈ ವಾಗ್ದೇವಿಯ ಶ್ರೇಷ್ಠವಾದ ಮೂಲತತ್ತ್ವವು ಎಲ್ಲಿಗೆ ತಾನೇ ಹೋಯಿತು ಎಂಬುದು ಯಾರಿಗೂ ತಿಳಿಯದು.

English Translation

When Vach, the queen, the gladdener of the gods, sits down ( in the sacrifice) uttering things not to be uderstood, she milks water and food for the four quarters (of the earth), whither now is her best portion gone ?

॥ ವಿಶೇಷವಿಷಯಗಳು ॥

ಈ ಋಕ್ಕಿಗೂ ಮುಂದಿನ ಋಕ್ಕಿಗೂ ಯಾಸ್ಕರು ವಾಗ್ದೇವತೆಯ ವಿಷಯದಲ್ಲಿ ಉದಾಹರಣೆಯನ್ನು ಕೊಡು ವುದಕ್ಕಾಗಿ ನಿರ್ವಚನವನ್ನು ಹೇಳಿರುವರು—

**ಯದ್ವಾಗ್ವದಂತ್ಯವಿಚೇತನಾನ್ಯವಿಜ್ಞಾತಾನಿ ರಾಷ್ಟ್ರೀ ದೇವಾನಾಂ ನಿಷಸಾದ ಮಂದ್ರಾ ಮದನಾ ಚತಸ್ರೋಽನು ದಿಶ ಊರ್ಜಂ ದುದುಹೇ ಪಯಾಂಸಿ ಕ್ವ ಸ್ವಿದಸ್ಯಾಂ ಪರಮಂ ಜಗಾಮೇತಿ ಯತ್ಪೃಥಿವೀಂ ಗಚ್ಛತೀತಿ ವಾ ಯದಾದಿತ್ಯರಶ್ಮಯೋ ಹರಂತೀತಿ ವಾ ॥**

( ನಿ. ೧೧—೨೮ )

ಯಾವಾಗ ವಾಗ್ದೇವತೆಯು (ಅಥವಾ ಮಾಧ್ಯಮಿಕಾವಾಕ್—ಎಂದರೆ ಅಂತರಿಕ್ಷಸ್ಥವಾದ ಮೇಘಗರ್ಜನೆ) ದೇವತೆಗಳ ಮಧ್ಯದಲ್ಲಿ ಹರ್ಷಕಾರಕಳಾಗಿ ರಾಣಿಯಂತೆ ಕುಳಿತು ಯಾರಿಗೂ ತಿಳಿಯದ ಎಂದರೆ ಶಬ್ದಮಾತ್ರವಿದ್ದು ಅರ್ಥವು ತಿಳಿಯ ದಿರುವಂತೆ ಇರುವ ಮಾತುಗಳನ್ನಾಡುವಳೋ ಆಗ ನಾಲ್ಕು ದಿಕ್ಕುಗಳೂ ಹಾಲನ್ನೂ ಆಹಾರವನ್ನೂ ಉದಕವನ್ನೂ ಯಥೇಚ್ಛವಾಗಿ ಕರೆಯುವವು, ಆದರೆ, ಆ ದೇವತೆಯ ಉತ್ತಮವಾದ ಭಾಗವು ಎಲ್ಲಿಗೆ ಹೋಗುವುದು ? ಆ ಶ್ರೇಷ್ಠ ಭಾಗವು ಭೂಮಿಗೆ ಹೋಗುವುದೇ ಅಥವಾ ಅದನ್ನು ಆದಿತ್ಯನ ರಶ್ಮಿಗಳು ಕೊಂಡೊಯ್ಯುವವೇ ? (ಇದು ಯಾರಿಗೂ ತಿಳಿಯದು)

ಪ್ರಕೃತ ಋಕ್ಕಿನಲ್ಲಿ ವಾಗ್ದೇವತೆಯೆಂದರೆ ಮಾಧ್ಯಮಿಕಾ ವಾಕ್ ಎಂದು ಅರ್ಥಮಾಡಿದಲ್ಲಿ, ಅಂತರಿಕ್ಷಸ್ಥವಾದ ಮೇಘಗರ್ಜನೆ ಎಂದರೆ ಸಿಡಿಲು ಎಂದು ಹೇಳುವ ಪಕ್ಷದಲ್ಲಿ—ಅಂತರಿಕ್ಷದಲ್ಲಿ ಮೇಘಗಳು ಆವರಿಸಿರುವಾಗ ಅವುಗಳ ಮಧ್ಯದಲ್ಲಿ ದೇದೀಪ್ಯಮಾನವಾಗಿ ಪ್ರಕಾಶಿಸುವ ಮಿಂಚನ್ನೇ ಈ ವಾಗ್ದೇವತೆಯು ದೇವತೆಗಳ ಮಧ್ಯದಲ್ಲಿ ಪ್ರಕಾಶಮಾನಳಾಗಿ ಕುಳಿತಿರುವ ರಾಣಿಯೆಂದೂ, ಮೇಘ ಮಂಡಲದಿಂದ ಹೊರಡುವ ಶಿಡಿಲು ಗರ್ಜನೆಯೇ ವಾಗ್ದೇವತೆಯ ಅಸ್ಪಷ್ಟವಾದ ಎಂದರೆ ಧ್ವನಿಯುಕ್ತವಾಗಿದ್ದರೂ ಅರ್ಥವಾಗದಂತಿರುವ ಮಾತುಗಳೆಂದೂ, ಈ ಜನಪ್ರಿಯವಾದ ಧ್ವನಿಯನ್ನು ವಾಗ್ದೇವತೆಯು ಮಾಡಿದಾಗ ನಾಲ್ಕು ದಿಕ್ಕುಗಳಲ್ಲಿಯೂ ಧಾರಕಾರವಾಗಿ ಬೀಳುವ ಮಳೆಯನ್ನೇ ಹಾಲೆಂದೂ, ಉದಕವೆಂದೂ, ಆಹಾರವೆಂದೂ ಋಷಿಯು ಪ್ರಕಾರಾಂತರವಾಗಿ ವರ್ಣಿಸಿದಾನೆ. ಆದರೆ ಈ ದೇವತೆಯ ಶ್ರೇಷ್ಠವಾದ ರೂಪವು ಯಾವುದೆಂದು ಯಾರಿಗೂ ತಿಳಿಯದು. ಅದು ಭೂಮಿಗೆ ಪುನಃ ಬರುವುದೇ ಅಥವಾ ಸೂರ್ಯರಶ್ಮಿಗಳಿಂದ ಅಪಹೃತವಾಗಿ ಆದಿತ್ಯನ (ಸ್ವರ್ಗದ) ಬಳಿಗೆ ಹೋಗುವುದೇ, ಯಾವುದೂ ಯಾರಿಗೂ ತಿಳಿಯದು ಎಂದು ವಾಗ್ದೇವತೆಯ ಮಹತ್ಸ್ವರೂಪವನ್ನೂ ಮಾನವರ ಅಲ್ಪತ್ವವನ್ನೂ ಋಷಿಯು ವ್ಯಕ್ತಪಡಿಸಿದಾನೆ.

॥ ಸಂಹಿತಾಪಾಠಃ ॥

ದೇವೀಂ ವಾಚಮಜನಯಂತ ದೇವಾಸ್ತಾಂ ವಿಶ್ವರೂಪಾಃ ಪಶವೋ ವದಂತಿ ।
ಸಾ ನೋ ಮಂದ್ರೇಷಮೂರ್ಜಂ ದುಹಾನಾ ಧೇನುರ್ವಾಗಸ್ಮಾನುಪ ಸುಷ್ಟುತೈತು ॥ ೧೧ ॥

॥ ಪದಪಾಠಃ ॥

ದೇವೀಂ । ವಾಚಂ । ಅಜನಯಂತ । । ದೇವಾಃ । ತಾಂ । ವಿಶ್ವऽರೂಪಾಃ । ಪಶವಃ । ವದಂತಿ ।
ಸಾ । ನಃ । ಮಂದ್ರಾ । ಇಷಂ । ಊರ್ಜಂ । ದುಹಾನಾ । ಧೇನುಃ । ವಾಕ್ । ಅಸ್ಮಾನ್ । ಉಪ । ಸುऽಸ್ತುತಾ । ಆ । ಏತು ॥ ೧೧ ॥

॥ ಸಾಯಣಭಾಷ್ಯಂ ॥

ಏಷಾ ಮಾಧ್ಯಮಿಕಾ ವಾಕ್ ಸರ್ವಪ್ರಾಣ್ಯಂತರ್ಗತಾ ಧರ್ಮಾಭಿವಾದಿನೀ ಭವತೀತಿ ವಿಭೂತಿಮುಪದರ್ಶಯತಿ । ಯಾಂ ದೇವೀಂ ದ್ಯೋತಮಾನಾಂ ಮಾಧ್ಯಮಿಕಾಂ ವಾಚಂ ದೇವಾ ಮಾಧ್ಯಮಿಕಾ ಅಜನಯಂತ ಜನಯಂತಿ ತಾಂ ವಾಚಂ ವಿಶ್ವರೂಪಾಃ ಸರ್ವರೂಪಾ ವ್ಯಕ್ತವಾಚೋऽವ್ಯಕ್ತವಾಚಶ್ಚ ಪಶವೋ ವದಂತಿ । ತತ್ಪೂರ್ವಕತ್ವಾದ್ವಾಕ್ಪ್ರವೃತ್ತೇಃ । ಸಾ ವಾಗ್ದೇವೀ ಮಂದ್ರಾ ಮದನಾ ಸ್ತುತ್ಯಾ ಹರ್ಷಯಿತ್ರೀ ವಾ ವೃಷ್ಟಿಪ್ರದಾನೇನಾಸ್ಮಭ್ಯಮಿಷಮನ್ನಮೂರ್ಜಂ ಪಯೋಘೃತಾದಿರೂಪಂ ರಸಂ ಚ ದುಹಾನಾ ಕ್ಷರಂತೀ ಧೇನುರ್ಧೇನುಭೂತಾ ಸುಷ್ಟುತಾಸ್ಮಾಭಿಃ ಸ್ತುತಾಸ್ಮಾನ್ನೇಮಾನುಪೈತು। ಉಪಗಚ್ಛತು।

ವರ್ಷಣಾಯೋದ್ಯುಕ್ತೇತ್ಯರ್ಥಃ । ತಥಾ ಚ ಯಾಸ್ಕಃ । ದೇವೀಂ ವಾಚಮಜನಯಂತ ದೇವಾಸ್ತಾಂ ವಿಶ್ವರೂಪಾಃ ಪಶವೋ ವದಂತಿ ವ್ಯಕ್ತವಾಚಶ್ಚಾವ್ಯಕ್ತವಾಚಶ್ಚ ಸಾ ನೋ ಮದನಾನ್ನಂ ಚ ರಸಂ ಚ ದುಹಾನಾ ಧೇನುರ್ವಾಗಸ್ಮಾನುಪೈತು ಸುಷ್ಟುತಾ । ನಿ. ೧೧-೨೯ । ಇತಿ ॥

॥ ಪ್ರತಿಪದಾರ್ಥ ॥

**ದೇವೀಂ**—ಪ್ರಕಾಶಮಾನಳಾದ । **ವಾಚಂ**— ವಾಗ್ದೇವಿಯನ್ನು । **ದೇವಾಃ**—ದೇವತೆಗಳು । **ಅಜನಯಂತ**—ಉತ್ಪನ್ನಮಾಡಿದರು । **ತಾಂ**—ಅದೇ ವಾಗ್ದೇವಿಯನ್ನು । **ವಿಶ್ವರೂಪಾಃ**—ನಾನಾವಿಧವಾದ ರೂಪವುಳ್ಳ । **ಪಶವಃ**—ಪಶುಗಳು । **ವದಂತಿ**—ಪ್ರಶಂಸಿಸುತ್ತವೆ । **ಸಾ ವಾಕ್**—ಅದೇ ವಾಗ್ದೇವಿಯು । **ನಃ**—ನಮಗೆ । **ಮಂದ್ರಾ**—ಹರ್ಷಕಾರಕಳಾಗಿಯೂ । **ಇಷಂ**—ಅನ್ನವನ್ನು । **ಊರ್ಜಂ**—ಕ್ಷೀರಾದಿ ರಸಗಳನ್ನು । **ದುಹಾನಾ**—ಕರೆಯುತ್ತಲೂ । **ಧೇನುಃ**—ಪ್ರಭೂತವಾದ ಕ್ಷೀರವುಳ್ಳ ಧೇನುರೂಪವನ್ನಾಶ್ರಯಿಸಿ । **ಸುಷ್ಟುತಾ**—ಅತಿಶಯವಾಗಿ ಸ್ತುತಿಸಲ್ಪಡುತ್ತಾ । **ಅಸ್ಮಾನ್**—ನಮ್ಮಲ್ಲಿಗೆ । **ಉಪ ಏತು**—ದಯಮಾಡಲಿ.

॥ ಭಾವಾರ್ಥ ॥

ಪ್ರಕಾಶಮಾನಳಾದ ವಾಗ್ದೇವಿಯನ್ನು ದೇವತೆಗಳು ಉತ್ಪನ್ನಮಾಡಿದರು. ಅದೇ ವಾಗ್ದೇವಿಯನ್ನು ನಾನಾವಿಧವಾದ ರೂಪವುಳ್ಳ ಪಶುಗಳು ಪ್ರಶಂಸಿಸುತ್ತವೆ. ಅದೇ ವಾಗ್ದೇವಿಯು ನಮಗೆ ಹರ್ಷಕಾರಕಳಾಗಿಯೂ ಅನ್ನವನ್ನೂ ಕ್ಷೀರಾದಿ ರಸಗಳನ್ನೂ ಕರೆಯುತ್ತಲೂ ಪ್ರಭೂತವಾದ ಕ್ಷೀರವುಳ್ಳ ಧೇನುರೂಪವನ್ನಾಶ್ರಯಿಸಿ ಅತಿಶಯವಾಗಿ ಸ್ತುತಿಸಲ್ಪಡುತ್ತಾ ನಮ್ಮಲ್ಲಿಗೆ ದಯಮಾಡಲಿ.

English Translation

The gods produced the goddess Vach; animals of every kind utter her; may she, Vach, the all-gladdening cow, yielding meat and drink, come to us, worthily praised

॥ ವಿಶೇಷವಿಷಯಗಳು ॥

ಈ ಋಕ್ಕಿನ ವಿಷಯದಲ್ಲಿ ಯಾಸ್ಕರ ನಿರುಕ್ತವು ಈರೀತಿ ಇದೆ—

**ದೇವೀಂ ವಾಚಮಜನಯಂತ ದೇವಾಸ್ತಾಂ ಸರ್ವರೂಪಾಃ ಪಶವೋ ವದಂತಿ ವ್ಯಕ್ತವಾಚಶ್ಚಾ-ವ್ಯಕ್ತವಾಚಶ್ಚ ಸಾ ನೋ ಮದನಾನ್ನಂ ಚ ರಸಂ ಚ ದುಹಾನಾ ಧೇನುರ್ವಾಗಸ್ಮಾನುಪೈತು ಸುಷ್ಟುತಾ ॥**

( ನಿ ೧೧-೨೯ )

ದೇವತೆಗಳು ವಾಗ್ದೇವತೆಯನ್ನು ಸೃಷ್ಟಿಸಿದರು. ಈ ವಾಗ್ದೇವತಾರೂಪವಾದ ವಾಕ್ಕನ್ನು (ಅಥವಾ ಮಾತುಗಳನ್ನು, ಭಾಷೆಯನ್ನು) ನಾನಾರೂಪಗಳುಳ್ಳ ಸಮಸ್ತ ಪ್ರಾಣಿಗಳೂ ಬಳಸುವವು ಎಂದರೆ ವ್ಯಕ್ತಶಬ್ದಗಳಿಂದಲೂ ಅರ್ಥದಿಂದಲೂ ಕೂಡಿರುವ ವಾಕ್ಯಗಳನ್ನು ಮನುಷ್ಯಾದಿಗಳು ಮಾತನಾಡುವರು ಅವ್ಯಕ್ತವೂ ಅಸ್ಪಷ್ಟವೂ ವರ್ಣಾತ್ಮಕವಲ್ಲದ್ದೂ ಆದ ಶಬ್ದಾದಿಗಳನ್ನು ಗವಾದಿ ಪಶುಗಳು ಮಾಡುವವು ಇವು ಅವ್ಯಕ್ತವಾಕ್ಯಗಳೆಂದು ಹೇಳಲ್ಪಡು

ವವು ಎಂದರೆಈ ಅವ್ಯಕ್ತಶಬ್ದಗಳ ಅಭಿಪ್ರಾಯವು ಮನುಷ್ಯರಿಗೆ ತಿಳಿಯುವುದಿಲ್ಲ. ಇಂತಹ ವ್ಯಕ್ತಾವ್ಯಕ್ತಶಬ್ದಸ್ವರೂಪಳಾದ ವಾಗ್ದೇವತೆಯು ನಮಗೆ ಹಾಲನ್ನು ಕರೆಯುವ ಧೇನುವಿನಂತೆ ಪ್ರೀತಿಪಾತ್ರಳಾಗಿ ಹಿತಕರವಾದ ಅನ್ನಾದಿಗಳನ್ನು ಎಂದರೆ ಹಾಲು, ಘೃತ ಮೊದಲಾದವನ್ನೂ, ರಸಾದಿಗಳನ್ನೂ ಎಂದರೆ ಸಸ್ಯಾದಿಗಳಿಂದ ಉತ್ಪನ್ನವಾಗುವ ಪುಷ್ಟಿಕರವಾದ ಆಹಾರಾದಿಗಳನ್ನೂ ಯಥೇಚ್ಛವಾಗಿ ಕರೆಯುತ್ತಾ ಎಂದರೆ ಅನುಗ್ರಹಿಸುತ್ತಾ ನಮ್ಮ ಸಮೀಪಕ್ಕೆ ಬರಲಿ ಮತ್ತು ನಮ್ಮಿಂದ ಸ್ತುತಿಸಲ್ಪಡಲಿ ಎಂದು ನಿರ್ವಚನಾಭಿಪ್ರಾಯವು.

॥ ಸಂಹಿತಾಪಾಠಃ ॥

ಸಖೇ ವಿಷ್ಣೋ ವಿತರಂ ವಿ ಕ್ರಮಸ್ವ ದ್ಯೌರ್ದೇಹಿ ಲೋಕಂ ವಜ್ರಾಯ ವಿಷ್ಕಭೇ ।
ಹನಾವ ವೃತ್ರಂ ರಿಣಚಾವ ಸಿಂಧೂನಿಂದ್ರಸ್ಯ ಯಂತು ಪ್ರಸವೇ ವಿಸೃಷ್ಟಾಃ ॥

॥ ಪದಪಾಠಃ ॥

ಸಖೇ । ವಿಷ್ಣೋ ಇತಿ । ವಿಽತರಂ । ವಿ । ಕ್ರಮಸ್ವ । ದ್ಯೌಃ । ದೇಹಿ । ಲೋಕಂ । ವಜ್ರಾಯ । ವಿಽಸ್ಕಭೇ ।
ಹನಾವ । ವೃತ್ರಂ । ರಿಣಚಾವ । ಸಿಂಧೂನ್ । ಇಂದ್ರಸ್ಯ । ಯಂತು । ಪ್ರಽಸವೇ । ವಿಽಸೃಷ್ಟಾಃ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಸಖೇ ವಿಷ್ಣೋ ತ್ವಂ ವಿತರಮತ್ಯಂತಂ ವಿ ಕ್ರಮಸ್ವ । ವಿಕ್ರಮಂ ಕುರು । ಹೇ ದ್ಯೌಃ ತ್ವಂ ವಜ್ರಾಯ ವಜ್ರಸ್ಯ ವಿಷ್ಕಭೇ ವಿಷ್ಕಂಭನಾಯ ಲೋಕಮವಕಾಶಂ ದೇಹಿ ॥ ಪ್ರಯಚ್ಛ । ಹೇ ವಿಷ್ಣೋ ತ್ವಂ ಚಾಹಂ ಚೋಭಾವಾವಾಂ ವೃತ್ರಮಸುರಂ ಹನಾವ । ಹನ್ವಃ । ಸಿಂಧೂನ್ ವೃತ್ರಾವಷ್ಟಬ್ಧಾ ನದೀಶ್ಚ ರಿಣಚಾವ । ನಯಾವಃ । ತೇಽಮೀ ವಿಸೃಷ್ಟಾಃ ಸಿಂಧವ ಇಂದ್ರಸ್ಯ ಪ್ರಸವೇ ಯಂತು । ಪ್ರೇರಣೇ ಗಚ್ಛಂತು । ತಮಿಮಮರ್ಥಂ ಸಂಗೃಹ್ಯ ಶ್ಲೋಕೈಃ ಶೌನಕೋ ದರ್ಶಯತಿ । ತ್ರೀಲ್ಲೋಕಾನಭಿವೃತ್ಯೈತಾನ್ವೃತ್ರಸ್ತಸ್ಥೌ ಸ್ವಯಾ ತ್ವಿಷಾ । ತಂ ನಾಶಕದ್ಧಂತುಮಿಂದ್ರೋ ವಿಷ್ಣುಮಭ್ಯೇತ್ಯ ಸೋಽಬ್ರವೀತ್ ॥ ವೃತ್ರಂ ಹನಿಷ್ಯೇ ತಿಷ್ಠಸ್ವ ವಿಕ್ರಮ್ಯಾದ್ಯ ಮಮಾಂತಿಕೇ । ಉದ್ಯತಸ್ಯ ತು ವಜ್ರಸ್ಯ ದ್ಯೌರ್ದದಾತು ಮಮಾಂತರಂ ॥ ತಥೇತಿ ವಿಷ್ಣುಸ್ತಚ್ಚಕ್ರೇ ದ್ಯೌಶ್ಚಾಸ್ಯ ವಿವರಂ ದದೌ ॥ ತದೇತದಖಿಲಂ ಪ್ರೋಕ್ತಂ ಸಖೇ ವಿಷ್ಣೋ ಇತಿ ತ್ವೃಚಾ । ಬೃ. ೬,೯೩೧-೯೩೩ । ಇತಿ ॥

॥ ಪ್ರತಿಪದಾರ್ಥ -

ಸಖೇ—ಮಿತ್ರಭೂತನಾದ । ವಿಷ್ಣೋ—ಎಲೈ ವಿಷ್ಣುವೇ । ವಿತರಂ—ಅತ್ಯಂತ ವಿಸ್ತೃತನಾಗಿ । ವಿ ಕ್ರಮಸ್ವ—ಲೋಕಗಳನ್ನು ಆಕ್ರಮಿಸು । ದ್ಯೌಃ—ಎಲೈ ದ್ಯುಲೋಕಾಧಿದೇವತೆಯೇ । ವಜ್ರಾಯ—ವಜ್ರಾಯುಧದ । ವಿಷ್ಕಭೇ—ಪ್ರಸರಣಕ್ಕಾಗಿ । ಲೋಕಂ—ಅವಕಾಶವನ್ನು । ದೇಹಿ—ಕೊಡು (ಎಲೈ ವಿಷ್ಣುವೇ) ।

**ವೃತ್ರಂ**—ವೃತ್ರಾಸುರನನ್ನು । **ಹನಾವ**—ನಾವಿಬ್ಬರೂ ಕೊಲ್ಲೋಣ । **ಸಿಂಧೂನ್**—ನದಿಗಳನ್ನು । **ರಿಣಚಾವ**—ಪ್ರವಹಿಸುವಂತೆ ಮಾಡೋಣ । **ವಿಸೃಷ್ಟಾಃ**—ನಮ್ಮಿಂದ ಬಿಡಿಸಲ್ಪಟ್ಟ ನದಿಗಳು। **ಇಂದ್ರಸ್ಯ**—ಇಂದ್ರನ। **ಪ್ರಸವೇ**—ಆಜ್ಞಾವರ್ತಿಯಾಗಿ । **ಯಂತು**—ಪ್ರವಹಿಸಲಿ.

॥ ಭಾವಾರ್ಥ ॥

ಮಿತ್ರಭೂತನಾದ ಎಲೈ ವಿಷ್ಣುವೇ, ಅತ್ಯಂತ ವಿಸ್ತೃತನಾಗಿ ನೀನು ಲೋಕಗಳನ್ನೆಲ್ಲಾ ಆಕ್ರಮಿಸು ಎಲೈ ದ್ಯುಲೋಕಾಧಿದೇವತೆಯೇ, ವಜ್ರಾಯುಧದ ಪ್ರಸರಣಕ್ಕಾಗಿ ಅವಕಾಶವನ್ನು ಕಲ್ಪಿಸಿಕೊಡು. ಎಲೈ ವಿಷ್ಣುವೇ, ವೃತ್ರಾಸುರನನ್ನು ನಾವಿಬ್ಬರೂ ಕೊಲ್ಲೋಣ. ನದಿಗಳನ್ನು ಪ್ರವಹಿಸುವಂತೆ ಮಾಡೋಣ ನಮ್ಮಿಂದ ಬಿಡಿಸಲ್ಪಟ್ಟ ನದಿಗಳು ಇಂದ್ರನ ಆಜ್ಞಾವರ್ತಿಯಾಗಿ ಪ್ರವಹಿಸಲಿ.

## English Translation

O Vishnu my friend, stride forth lustily ; O heaven, give room to contain the thunderbolt ; let us smite Vritra, let us open the rivers ; let them flow, set free, at the command of Indra.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ವೃತ್ರವಧಾರ್ಥವಾಗಿ ಇಂದ್ರನು ತನಗೆ ಸಹಾಯಮಾಡಬೇಕೆಂದು ವಿಷ್ಣುವನ್ನು ಪ್ರಾರ್ಥಿಸಿರುವುದನ್ನು ಹೇಳಲಾಗಿದೆ. ಈ ವಿಷಯವು ಬೃಹದ್ದೇವತೆಯಲ್ಲಿ ಶೌನಕಮಹರ್ಷಿಯಿಂದ ಈರೀತಿ ಉಕ್ತವಾಗಿದೆ

> **ತ್ರೀನ್ಲೋಕಾನಭಿವೃತ್ಯೈತಾನ್ ವೃತ್ರಸ್ತಸ್ಥೌ ಸ್ವಯಾ ತ್ವಿಷಾ । ತಂ ನಾಶಕದ್ಧಂತುಮಿಂದ್ರೋ ವಿಷ್ಣುಮಭ್ಯೇತ್ಯ ಸೋಽಬ್ರವೀತ್ ! ವೃತ್ರಂ ಹನಿಷ್ಯೇ ತಿಷ್ಠಸ್ವ ವಿಕ್ರಮ್ಯಾದ್ಯ ಮಮಾಂತಿಕೇ ॥ ಉದ್ಯತಸ್ಯ ತು ವಜ್ರಸ್ಯ ದ್ಯೌರ್ದದಾತು ಮಮಾಂತರಂ । ತಥೇತಿ ವಿಷ್ಣುಸ್ತಚ್ಚಕ್ರೇ ದ್ಯೌಶ್ಚಾಸ್ಯ ವಿವರಂ ದದೌ । ತದೇತದಖಿಲಂ ಪ್ರೋಕ್ತಂ ಸಖೇ ವಿಷ್ಣೋ ಇತಿ ತ್ವೃಚಾ ॥**
>
> (ಬೃ. ದೇ ೬-೧೨೧ ರಿಂದ ೧೨೪)

ಪೂರ್ವದಲ್ಲಿ ವೃತ್ರಾಸುರನು ಅತಿ ಪ್ರವೃದ್ಧನಾಗಿ ಬೆಳೆದು ತನ್ನ ಸ್ವಸಾಮರ್ಥ್ಯದಿಂದ ಮೂರು ಲೋಕಗಳನ್ನು ವ್ಯಾಪಿಸಿ ನಿಂತಿದ್ದನು. ಅಂತಹ ಬೃಹತ್ಶರೀರವುಳ್ಳ ವೃತ್ರನನ್ನು ಕೊಲ್ಲಲು ಇಂದ್ರನಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಆಗ ಇಂದ್ರನು ವಿಷ್ಣುವಿನ ಸಮೀಪಕ್ಕೆಹೋಗಿ, ಎಲೈ ಮಿತ್ರನಾದ ವಿಷ್ಣುವೇ, ಈಗ ನಾನು ವೃತ್ರನನ್ನು ಕೊಲ್ಲಲು ಉದ್ಯುಕ್ತನಾಗಿರುವೆನು ಈ ವಿಷಯದಲ್ಲಿ ನೀನು ನನಗೆ ಸಹಾಯಮಾಡಬೇಕು ನಿನ್ನ ಅತ್ಯಂತ ವಿಸ್ತೃತವಾದ ಪಾದವಿಕ್ಷೇಪದಿಂದ (ವಿಕ್ರಮದಿಂದ) ನನ್ನ ಬಳಿ ಇದ್ದು ನನಗೆ ಸಹಾಯಕನಾಗಿರು. ನನ್ನ ವಜ್ರಾಯುಧವನ್ನು ಎತ್ತಿ ಹೊಡೆಯುವುದಕ್ಕಾಗಿ ದ್ಯುಲೋಕವು ಎಂದರೆ ಅಂತರಿಕ್ಷವು ನನಗೆ ಅವಕಾಶವನ್ನು ಕಲ್ಪಿಸಲಿ ಎಂದು ಪ್ರಾರ್ಥಿಸಿದನು. ಅದಕ್ಕೆ ವಿಷ್ಣುವು ಒಪ್ಪಿ ಹಾಗೆಯೇ ಮಾಡಿದನು. ಅಂತರಿಕ್ಷವೂ ಸ್ಥಳಾವಕಾಶವನ್ನೂ ಕಲ್ಪಿಸಿಕೊಟ್ಟಿತು.। ಈ ವಿಷಯವನ್ನೇ ಈ ಋಕ್ಕಿನಲ್ಲಿ **ಸಖೇ ವಿಷ್ಣೋ** ಎಲೈ ಸ್ನೇಹಿತನಾದ ವಿಷ್ಣುವೇ, ಇತ್ಯಾದಿ ಶಬ್ದಗಳಿಂದ ವಿವರಿಸಲಾಗಿದೆ ಎಂದು ಬೃಹದ್ದೇವತಾಗ್ರಂಥದಲ್ಲಿ ಉಕ್ತವಾಗಿರುವುದು.

# ನೂರೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಋಧಗಿತಿ ಷೋಡಶರ್ಚಮಷ್ಟಮಂ ಸೂಕ್ತಂ । ಅತ್ರಾನುಕ್ರಮ್ಯತೇ । ಋಧಕ್ ಷೋಡಶ ಜಮದಗ್ನಿರ್ಭಾರ್ಗವೋ ಮೈತ್ರಾವರುಣಂ ಪ್ರಾಗಾಥಂ ತ್ರಿಷ್ಟುಬಂತಂ ತೃತೀಯಾದಿ ಗಾಯತ್ರೀ ಸತೋಬೃಹತೀ ಸ್ತೋತ್ರಂ ರಾಜಸ್ವೃಕ್ಸಪಃ ದಾದಿತ್ಯಾಶ್ವಿನ್ಯೌ ವಾಯವ್ಯೇ ಸೌರ್ಯೌ ಬೃಹತ್ಯುಷಸ್ಯಾ ಸೂರ್ಯಪ್ರಭಾಸ್ತುತಿರ್ವಾ ಪಾವಮಾನೀ ಗವ್ಯೇ ಇತಿ। ಭೃಗುಗೋತ್ರೋ ಜಮದಗ್ನಿರ್ಋಷಿಃ। ಚತುರ್ದಶ್ಯಾದ್ಯಾಸ್ತಿಸ್ರಸ್ತ್ರಿಷ್ಟುಭಃ। ತ್ರಯೋದಶೀ ಬೃಹತೀ ಶಿಷ್ಟಾನಾಮಯುಜೋ ಬೃಹತ್ಯೋ ಯುಜಃ ಸತೋಬೃಹತ್ಯಃ । ತೃತೀಯಾ ಗಾಯತ್ರೀ । ಸ್ತೋತ್ರಂ ರಾಜಸು ಗಾಯತೇತಿ ಪಾದೇನ ಸಹಿತಾ ತೇ ಹಿನ್ವಿರ ಇತ್ಯಾದಿತ್ಯದೇವತಾಕಾ। ಆ ಮೋ ವಚಾಂಸೀತಿ ದ್ವೇ ಅಶ್ವಿದೇವತಾಕೇ। ಆ ನೋ ಯಜ್ಞಂ ದಿವಿಸ್ಪೃಶಮಿತಿ ದ್ವೇ ವಾಯುದೇವತ್ಯೇ। ಬಣ್ಮಹಾँ ಅಸಿ ಸೂರ್ಯೇತಿ ದ್ವೇ ಸೂರ್ಯದೇವತ್ಯೇ । ಇಯಂ ಯಾ ನೀಚೀತ್ಯೇಷೋಷೋದೇವತ್ಯಾ । ಯದ್ವಾ । ಸೂರ್ಯಪ್ರಭಾನಯಾ ಸ್ತೂಯತೇ । ಅತಃ ಸೈವ ದೇವತಾ । ಪ್ರಜಾ ಹ ತಿಸ್ರ ಇತ್ಯೇಷಾ ಪವಮಾನದೇವತಾಕಾ । ಮಾತಾ ರುದ್ರಾಣಾಮಿತಿ ದ್ವೇ ಗೋದೇವತ್ಯೇ । ಶಿಷ್ಟಾಃ ಪಂಚರ್ಚೋ ಮೈತ್ರಾವರುಣ್ಯಃ ॥ ಸೂಕ್ತವಿನಿಯೋಗೋ ಲೈಂಗಿಕಃ ॥ ಸಂಗ್ರಾಮಾರ್ಥಂ ರಾಜ್ಞಃ ಸಂನಹನೇ ಪ್ರ ಯೋ ವಾಂ ಮಿತ್ರಾವರುಣೇತಿ ದ್ವೇ ರಾಜಾನಂ ವಾಚಯೇತ್। ಸೂತ್ರಿತಂ ಚ । ಅಭೀವರ್ತಂ ವಾಚಯತಿ ಪ್ರ ಯೋ ವಾಂ ಮಿತ್ರಾವರುಣೇತಿ ಚ ದ್ವೇ ॥ ಆ. ಗೃ. ೩-೧೨-೧೨ । ಇತಿ ॥ ಪೃಷ್ಠ್ಯಸ್ಯ ಪಂಚಮೇಽಹನಿ ಪ್ರಉಗೇ ವಾಯವ್ಯತೃಚಸ್ಯಾ ನೋ ಯಜ್ಞಮಿತ್ಯಾದಿಕೇ ದ್ವೇ ಋಚಾವಾದ್ಯೇ ಸೂತ್ರಿತಂ ಚ । ಆ ನೋ ಯಜ್ಞಂ ದಿವಿಸ್ಪೃಶಮಿತಿ ದ್ವೇ ಆ ನೋ ವಾಯೋ ಮಹೇ ತನ ಇತ್ಯೇಕಾ । ಆ. ೭-೧೨ । ಇತಿ ॥ ಆಶ್ವಿನಂ ಶಂಸಿಷ್ಯನ್ ಹೋತಾ ಬಣ್ಮಹಾँ ಅಸಿ ಸೂರ್ಯೇತಿ ದ್ವಾಭ್ಯಾಮಗ್ನಿಂ ಜುಹುಯಾತ್ । ಸೂತ್ರಿತಂ ಚ । ಬಣ್ಮಹಾँ ಅಸಿ ಸೂರ್ಯೇತಿ ದ್ವಾಭ್ಯಾಮಿಂದ್ರಂ ವೋ ವಿಶ್ವತಸ್ಪರೀತಿ ಚ । ಆ. ೬ ೫ । ಇತಿ॥ ಮಾಧ್ಯಂದಿನಸವನೇ ಸೋಮಾತಿರೇಕ ಏಕಂ ಶಸ್ತ್ರಮುಪಜಾಯತೇ । ತತ್ರ ಬಣ್ಮಹಾँ ಅಸೀತಿ ಪ್ರಗಾಥಃ ಸ್ತೋತ್ರಿಯಃ । ಸೂತ್ರಿತಂ ಚ । ಬಣ್ಮಹಾँ ಅಸಿ ಸೂರ್ಯೋಪತ್ಯದ್ದರ್ಶತಂ ವಪುರಿತಿ ಪ್ರಗಾಥೌ ಸ್ತೋತ್ರಿಯಾನುರೂಪೌ । ಆ. ೬-೭ ॥ ಇತಿ । ಅಯಮೇವ ಪ್ರಗಾಥಶ್ಚಾತುರ್ವಿಂಶಿಕೇ ಮಾಧ್ಯಂದಿನೇ ಬ್ರಾಹ್ಮಣಾಚ್ಛಂಸಿನೋ ವೈಕಲ್ಪಿಕೋಽನುರೂಪಃ । ಸೂತ್ರಿತಂ ಚ। ಶ್ರಾಯಂತ ಇವ ಸೂರ್ಯಂ ಬಣ್ಮಹಾँ ಅಸಿ ಸೂರ್ಯ । ಆ. ೭-೪ । ಇತಿ ॥ ಮಧುಪರ್ಕೇ ಗಾಮುತ್ಸೃಜ್ಯ ಮಾತಾ ರುದ್ರಾಣಾಮಿತಿ ಜಪೇತ್ । ಸೂತ್ರಿತಂ ಚ । ಮಾತಾ ರುದ್ರಾಣಾಂ ದುಹಿತಾ ವಸೂನಾಮಿತಿ ಜಪಿತ್ವೋಮುತ್ಸೃಜತೇತ್ಯಸ್ಸೃಕ್ಷ್ಯನ್ । ಆ. ಗೃ ೧-೨೪-೨೫ । ಇತಿ ॥

ಅನುವಾದವು—ಋಧಕ್ ಎಂಬ ಈ ಸೂಕ್ತವು ಪತ್ತನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು ಇದರಲ್ಲಿ ಹದಿನಾರು ಋಕ್ಕುಗಳಿರುವವು. ಅನುಕ್ರಮಣಿಕೆಯಲ್ಲಿ—ಋಧಕ್ ಷೋಡಶ ಜಮದಗ್ನಿರ್ಭಾರ್ಗವೋ ಮೈತ್ರಾವರುಣಂ ಪ್ರಾಗಾಥಂ ತ್ರಿಷ್ಟುಬಂತಂ ತೃತೀಯಾದಿ ಗಾಯತ್ರೀ ಸತೋಬೃಹತೀ ಸ್ತೋತ್ರಂ ರಾಜಸ್ವೃಕ್ಸಪಾದಾದಿತ್ಯಾಶ್ವಿನ್ಯೌ ವಾಯವ್ಯೇ ಸೌರ್ಯೌ ಬೃಹತ್ಯುಷಸ್ಯಾ ಸೂರ್ಯಪ್ರಭಾಸ್ತುತಿರ್ವಾ ಪಾವಮಾನೀ

**ಗನ್ಯೇ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಭೃಗುಗೋತ್ರೋತ್ಪನ್ನನಾದ ಜಮದಗ್ನಿಯು ಋಷಿಯು. ಈ ಸೂಕ್ತದಲ್ಲಿ ಹದಿನಾಲ್ಕನೆಯ ಋಕ್ಕಿನಿಂದ ಮುಂದಿನ ಮೂರು ಋಕ್ಕುಗಳು (೧೪-೧೬) ತ್ರಿಷ್ಟುಪ್‌ಛಂದಸ್ಕವು. ಹದಿಮೂರನೆಯ ಋಕ್ಕು ಬೃಹತೀಛಂದಸ್ಕವು. ಉಳಿದ ಋಕ್ಕುಗಳಲ್ಲಿ ಅಸಮಸಂಖ್ಯೆಯ ಋಕ್ಕುಗಳು ಬೃಹತೀಛಂದಸ್ಕವು. ಸಮಸಂಖ್ಯೆಯ ಋಕ್ಕುಗಳು ಸತೋಬೃಹತೀಛಂದಸ್ಕವು. ಮೂರನೆಯ ಋಕ್ಕು ಗಾಯತ್ರೀಛಂದಸ್ಕವು. **ಸ್ತೋತ್ರಂ ರಾಜಸು ಗಾಯತ** ಎಂಬ ಐದನೆಯ ಋಕ್ಕಿನ ನಾಲ್ಕನೆಯ ಪಾದವೂ, ಆರನೆಯ ಋಕ್ಕೂ ಆದಿತ್ಯದೇವತಾಕವು. **ಆ ನೋ ವಚಾಂಸಿ** ಎಂದು ಮೊದಲಾಗುವ ೭, ೮ನೆಯ ಎರಡು ಋಕ್ಕುಗಳು ಅಶ್ವಿನೀದೇವತಾಕವು. **ಆ ನೋ ಯಜ್ಞಂ ದಿವಿಸ್ಪೃಶಂ** ಎಂಬ ಎರಡು ಋಕ್ಕುಗಳು (೯-೧೦ ಋಕ್ಕುಗಳು) ವಾಯುದೇವತಾಕವು. **ಬಣ್ಮಹಾँ ಅಸಿ ಸೂರ್ಯ** ಎಂಬ ಎರಡು ಋಕ್ಕುಗಳು (೧೧-೧೨ ಋಕ್ಕುಗಳು) ಸೂರ್ಯದೇವತಾಕವು. **ಇಯಂ ಯಾ ನೀಚೀ** ಎಂಬ ಋಕ್ಕು ಉಷೋದೇವತಾಕವು ಅಥವಾ ಈ ಋಕ್ಕಿನಲ್ಲಿ ಸೂರ್ಯಪ್ರಭೆಯ ಸ್ತುತಿಯೂ ಇರುವುದು. ಆದ್ದರಿಂದ ಈ ಋಕ್ಕಿಗೆ ಸೂರ್ಯಪ್ರಭೆಯ ಸ್ತುತಿಯೇ ದೇವತೆಯೆಂದು ಹೇಳಬಹುದು. **ಪ್ರಜಾ ಹ ತಿಸ್ರಃ** ಎಂಬ ಹದಿನಾಲ್ಕನೆಯ ಋಕ್ಕು ಪವಮಾನದೇವತಾಕವು. **ಮಾತಾ ರುದ್ರಾಣಾಂ** ಎಂಬ ಎರಡು ಋಕ್ಕುಗಳು (೧೫-೧೬ ಋಕ್ಕುಗಳು) ಗೋದೇವತಾಕವು. ಉಳಿದ ಈ ಸೂಕ್ತದ ಐದು ಋಕ್ಕುಗಳು ಮಿತ್ರಾವರುಣದೇವತಾಕವು. ಸೂಕ್ತ ವಿನಿಯೋಗವು ಲೈಂಗಿಕವು. ಯುದ್ಧಾರ್ಥವಾಗಿ ಸನ್ನದ್ಧನಾಗಿ ಹೊರಟಿರುವ ರಾಜನಿಂದ ಜಯವನ್ನು ಗಳಿಸುವುದಕ್ಕಾಗಿ **ಪ್ರ ಯೋ ವಾಂ ಮಿತ್ರಾವರುಣಾ** ಎಂಬ ಎರಡು ಋಕ್ಕುಗಳನ್ನು (೩-೪ ಋಕ್ಕುಗಳನ್ನು) ಹೇಳಿಸಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**ಅಭೀವರ್ತಂ ವಾಚಯತಿ ಪ್ರ ಯೋ ವಾಂ ಮಿತ್ರಾವರುಣೇತಿ ಚ ದ್ವೇ** ಎಂಬ ಸೂತ್ರದಿಂದ (ಆ. ಗೃ ೩-೧೨-೧೨) ವಿಸ್ತೃತವಾಗಿರುವುದು. ಪೃಷ್ಠ್ಯಯಾಗದ ಐದನೆಯ ದಿವಸ ಪ್ರಉಗಶಸ್ತ್ರ ಮಾಡುವ ಸಮಯದಲ್ಲಿ ವಾಯುಸ್ತೃಚದ ಮೊದಲನೆ ಎರಡು ಋಕ್ಕುಗಳಿಗಾಗಿ **ಆ ನೋ ಯಜ್ಞಂ** ಎಂಬ ಎರಡು ಋಕ್ಕುಗಳನ್ನು (೯-೧೦ ಋಕ್ಕುಗಳು) ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ನೋ ಯಜ್ಞಂ ದಿವಸ್ಪೃಶಮಿತಿ ದ್ವೇ ಆ ನೋ ವಾಯೋ ಮಹೇ ತನ ಇತ್ಯೇಕಾ** ಎಂಬ ಸೂತ್ರದಿಂದ (ಆ ೮-೧೦) ವಿಸ್ತೃತವಾಗಿರುವುದು. ವಿಷ್ಣುವಿನ ಮಂತ್ರಗಳನ್ನು ಪಠಿಸುವಾಗ ಹೋತೃವು **ಬಣ್ಮಹಾँ ಅಸಿ ಸೂರ್ಯ** ಎಂಬ ಎರಡು ಋಕ್ಕುಗಳನ್ನು (೧೧-೧೨ ಋಕ್ಕುಗಳು) ಪಠಿಸ ಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಬಣ್ಮಹಾँ ಅಸಿ ಸೂರ್ಯೇತಿ ದ್ವಾಭ್ಯಾಂ ಮಿಂದ್ರಂ ವೋ ವಿಶ್ವತಸ್ಪರೀತಿ ಚ** ಎಂಬ ಸೂತ್ರದಿಂದ (ಆ ೬-೫) ವಿಸ್ತೃತವಾಗಿರುವುದು. ಮಾಧ್ಯಂದಿನಸವನಕಾಲದಲ್ಲಿ ನೇಷ್ಟಾತಿರಿಕ್ತದಲ್ಲಿ ಒಂದು ಶಸ್ತ್ರ ಮಂತ್ರವನ್ನು ಪಠಿಸಬೇಕು. ಆಗ **ಬಣ್ಮಹಾँ ಅಸಿ** ಎಂಬ ಪ್ರಗಾಥವನ್ನು (೧೧-೧೨ ಋಕ್ಕುಗಳನ್ನು) ಸ್ತೋತ್ರಿಯಪ್ರಗಾಥವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತ **ಸೂತ್ರದ ಬಣ್ಮಹಾँ ಅಸಿ ಸೂರ್ಯೋಽಯಂ ತ್ವಮಪ್ರರತೇಂ ವಪುರಿತಿ ಪ್ರಗಾಥೌ ಸ್ತೋತ್ರಿಯಾನುರೂಪೌ** ಎಂಬ ಸೂತ್ರದಿಂದ (ಆ ೬-೭) ವಿಸ್ತೃತವಾಗಿರುವುದು. ಈ ಪ್ರಗಾಥವನ್ನೇ (೧೧-೧೨ ಋಕ್ಕುಗಳನ್ನು) ಮಾಸ ಚಾತುರ್ಮಾಸಿಕವೆಂಬ ದಿನದ ಮಾಧ್ಯಂದಿನಸವನಕಾಲದಲ್ಲಿ ಬ್ರಾಹ್ಮಣಾಚ್ಛಂಸಿಯೆಂಬ ಋತ್ವಿಜನು ಶಸ್ತ್ರ ಶಸ್ತ್ರದ ಪ್ರಗಾಥವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಶ್ರಾಯಂತ ಇವ ಸೂರ್ಯಂ ಬಣ್ಮಹಾँ ಅಸಿ ಸೂರ್ಯ** ಎಂಬ ಸೂತ್ರದಿಂದ (ಆ ೭-೪) ವಿಸ್ತೃತವಾಗಿರುವುದು. ಮಧುಪರ್ಕವೆಂಬ ಗೃಹ್ಯಕರ್ಮದಲ್ಲಿ **ಮಾತಾ ರುದ್ರಾಣಾಂ** ಎಂಬ ಈ ಋಕ್ಕನ್ನು (೧೫ನೇ ಋಕ್ಕನ್ನು) ಪಠಿಸಿ ಗೋವನ್ನು ಉತ್ಸರ್ಜನಮಾಡಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಮಾತಾ ರುದ್ರಾಣಾಂ ದುಹಿತಾ ವಸೂನಾಮಿತಿ ಜಪಿತ್ವೋಂ ಮುತ್ಸೃಜತೇತ್ಯುತ್ಸ್ರಕ್ಷ್ಯನ್** ಎಂಬ ಸೂತ್ರದಿಂದ (ಆ. ಗೃ. ೧-೨೪-೨೫) ವಿಸ್ತೃತವಾಗಿರುವುದು

## ಸೂಕ್ತ—೧೦೧

ಮಂಡಲ—೮ ॥ ಅನುವಾಕ—೧೦ ॥ ಸೂಕ್ತ—೧೦೧ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೬, ೭, ೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೬ ॥
ಋಷಿಃ—ಜಮದಗ್ನಿರ್ಭಾರ್ಗವಃ ॥
ದೇವತಾ—೧-೪, ೫ರಲ್ಲಿ ಮೂರುಪಾದಗಳು. ಮಿತ್ರಾವರುಣೌ । ೫ರಲ್ಲಿ ನಾಲ್ಕನೆಯ ಪಾದ, ೬. ಆದಿತ್ಯಾಃ । ೭-೮. ಅಶ್ವಿನೌ । ೯-೧೦. ವಾಯುಃ । ೧೧-೧೨. ಸೂರ್ಯಃ । ೧೦. ಉಷಾಃ ಸೂರ್ಯಪ್ರಭಾ ವಾ । ೧೪. ಪವಮಾನಃ । ೧೫-೧೬. ಗೌಃ ।
ಛಂದಃ—೧, ೫, ೭, ೯, ೧೧, ೧೩. ಬೃಹತೀ । ೨, ೪, ೬, ೮, ೧೦, ೧೨. ಸತೋಬೃಹತೀ । ೩. ಗಾಯತ್ರೀ । ೧೪-೧೬. ತ್ರಿಷ್ಟುಪ್ ॥

। ಸಂಹಿತಾಪಾಠಃ ।

**ಋಧಗಿತ್ಥಾ ಸ ಮರ್ತ್ಯಃ ಶಶಮೇ ದೇವತಾತಯೇ ।**
**ಯೋ ನೂನಂ ಮಿತ್ರಾವರುಣಾವಭಿಷ್ಟಯ ಆಚಕ್ರೇ ಹವ್ಯದಾತಯೇ ॥೧॥**

॥ ಪದಪಾಠಃ ॥

**ಋಧಕ್ । ಇತ್ಥಾ । ಸಃ । ಮರ್ತ್ಯಃ । ಶಶಮೇ । ದೇವಽತಾತಯೇ ।**

**ಯಃ । ನೂನಂ । ಮಿತ್ರಾವರುಣೌ । ಅಭಿಷ್ಟಯೇ । ಆಽಚಕ್ರೇ । ಹವ್ಯಽದಾತಯೇ ॥ ೧ ॥**

। ಸಾಯಣಭಾಷ್ಯಂ ।

ಯೋ ಮನುಷ್ಯೋ ನೂನಂ ಕ್ಷಿಪ್ರಂ ಹವ್ಯದಾತಯೇ ಹವಿಷಾಂ ಪ್ರದಾತ್ರೇ ಯಜಮಾನಾಯ ಮಿತ್ರಾವರುಣಾವಭಿಷ್ಟಯೇಽಭಿಮತಸಿದ್ಧ್ಯರ್ಥಮಾಚಕ್ರೇಽಭಿಮುಖೌ ಕರೋತಿ ಸ ಮರ್ತ್ಯೋ ಮನುಷ್ಯ ಋಧಕ್ ಸತ್ಯಮಿತ್ಥೇತ್ಥಂ ದೇವತಾತಯೇ ಯಜ್ಞಾರ್ಥಂ ಶಶಮೇ । ಹವಿಃ ಸಂಸ್ಕರೋತಿ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಮಾನವನು । **ನೂನಂ**—ಕ್ಷಿಪ್ರವಾಗಿ । **ಹವ್ಯದಾತಯೇ**—ಹವಿಸ್ಸನ್ನು ಅರ್ಪಿಸುವ ಯಜಮಾನನಲ್ಲಿಗೆ । **ಮಿತ್ರಾವರುಣೌ**—ಮಿತ್ರಾವರುಣರನ್ನು । **ಅಭಿಷ್ಟಯೇ**—ಇಷ್ಟಾರ್ಥಸಿದ್ಧಿಗಾಗಿ । **ಆಚಕ್ರೇ**—ಅವನ ಅಭಿಮುಖವಾಗಿ ಕರೆತರುವನೋ । **ಸಃ ಮರ್ತ್ಯಃ**—ಅದೇ ಮಾನವನು । **ಋಧಕ್**—ಸತ್ಯವಾಗಿಯೂ । **ಇತ್ಥಾ**—ಇದೇ ರೀತಿಯಲ್ಲಿ । **ದೇವತಾತಯೇ**—ಯಜ್ಞಾರ್ಥವಾಗಿ । **ಶಶಮೇ**—ಹವಿಸ್ಸನ್ನು ಸಂಸ್ಕರಿಸುತ್ತಾನೆ.

॥ ಭಾವಾರ್ಥ ॥

ಯಾವ ಮಾನವನು ಹವಿಸ್ಸನ್ನರ್ಪಿಸುವ ಯಜಮಾನನಲ್ಲಿಗೆ ಮಿತ್ರಾವರುಣರನ್ನು ಅವನ ಇಷ್ಟಾರ್ಥಸಿದ್ಧಿಗಾಗಿ ಕ್ಷಿಪ್ರವಾಗಿ ಅವನ ಅಭಿಮುಖವಾಗಿ ಕರೆಯುವನೋ ಅದೇ ಮಾನವನು ಸತ್ಯವಾಗಿಯೂ ಯಜ್ಞಾರ್ಥವಾಗಿ ಹವಿಸ್ಸನ್ನು ಸಂಸ್ಕರಿಸುತ್ತಾನೆ

English Translation

That man verily consecrates the oblation for the sacrifice, who brings, qucikly Mitra and Varuna to the offerer for the attainment of his desires.

॥ ಸಂಹಿತಾಪಾಠಃ ॥

ವರ್ಷಿಷ್ಠಕ್ಷತ್ರಾ ಉರುಚಕ್ಷಸಾ ನರಾ ರಾಜಾನಾ ದೀರ್ಘಶ್ರುತ್ತಮಾ ।
ತಾ ಬಾಹುತಾ ನ ದಂಸನಾ ರಥರ್ಯತಃ ಸಾಕಂ ಸೂರ್ಯಸ್ಯ ರಶ್ಮಿಭಿಃ ॥೨॥

॥ ಪದಪಾಠಃ ॥

ವರ್ಷಿಷ್ಠಽಕ್ಷತ್ರಾ । ಉರುಽಚಕ್ಷಸಾ । ನರಾ । ರಾಜಾನಾ । ದೀರ್ಘಶ್ರುತ್ಽತಮಾ ।
ತಾ । ಬಾಹುತಾ । ನ । ದಂಸನಾ । ರಥರ್ಯತಃ । ಸಾಕಂ । ಸೂರ್ಯಸ್ಯ । ರಶ್ಮಿಽಭಿಃ ॥ ೨ ॥

॥ ಸಾಯಣಭಾಷ್ಯಂ ॥

ವರ್ಷಿಷ್ಠಕ್ಷತ್ರಾತಿಶಯೇನ ವೃದ್ಧಬಲಾವುರುಚಕ್ಷಸಾ ಮಹಾದರ್ಶನೌ ನರಾ ನೇತಾರೌ ಕರ್ಮಣಾಂ ರಾಜಾನಾ ದೀಪ್ಯಮಾನೌ ದೀರ್ಘಶ್ರುತ್ತಮಾತಿಶಯೇನ ವಿದ್ವಾಂಸೌ ತಾ ತೌ ಮಿತ್ರಾವರುಣೌ ಬಾಹುತಾ ನ ಭುಜಾವಿವ ಸೂರ್ಯಸ್ಯ ರಶ್ಮಿಭಿಃ ಕಿರಣೈಃ ಸಾಕಂ ಸಹ ದಂಸನಾ ದಂಸನಾನಿ ಕರ್ಮಾಣಿ । ಅಪ್ನೋ ದಂಸ ಇತಿ ಕರ್ಮನಾಮಸು ಪಾಠಾತ್ । ರಥರ್ಯತಃ । ಪ್ರಾಪ್ನುತಃ । ಯಥಾ ಬಾಹೂ ಸಹ ಕರ್ಮ ಪ್ರಾಪ್ನುತಃ ತಥಾ ಮಿತ್ರಾವರುಣೌ ಸಹ ಯಜ್ಞಂ ಪ್ರಾಪ್ನುತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

ವರ್ಷಿಷ್ಠಕ್ಷತ್ರಾ— ಅತ್ಯಧಿಕವಾದ ಬಲವುಳ್ಳವರೂ । ಉರುಚಕ್ಷಸಾ— ದೀರ್ಘದೃಷ್ಟಿಯುಳ್ಳವರೂ । ನರಾ— ಕರ್ಮಕ್ಕೆ ನೇತೃಗಳೂ । ರಾಜಾನಾ— ಪ್ರಕಾಶಮಾನರೂ । ದೀರ್ಘಶ್ರುತ್ತಮಾ— ಅತ್ಯಂತ ಜ್ಞಾನಿಗಳೂ ಆದ । ತಾ— ಆ ಮಿತ್ರಾವರುಣರು । ಬಾಹುತಾ ನ— ತಮ್ಮ ಭುಜಬಲಗಳಿಂದಲೋ ಎಂಬಂತೆ ಇರುವ । ಸೂರ್ಯಸ್ಯ— ಸೂರ್ಯನ । ರಶ್ಮಿಭಿಃ ಸಾಕಂ— ಕಿರಣಗಳೊಡನೆ । ದಂಸನಾ— ಕರ್ಮಗಳನ್ನು । ರಥರ್ಯತಃ— ನೆರವೇರಿಸುತ್ತಾರೆ

॥ ಭಾವಾರ್ಥ ॥

ಅತ್ಯಧಿಕವಾದ ಬಲವುಳ್ಳವರೂ, ದೀರ್ಘದೃಷ್ಟಿಯುಳ್ಳವರೂ, ಕರ್ಮಕ್ಕೆ ನೇತೃಗಳೂ, ಪ್ರಕಾಶಮಾನರೂ ಅತ್ಯಂತ ಜ್ಞಾನಿಗಳೂ ಆದ ಆ ಮಿತ್ರಾವರುಣರು ತಮ್ಮ ಭುಜಗಳಿಂದಲೋ ಎಂಬಂತೆ ಇರುವ ಸೂರ್ಯನ ಕಿರಣಗಳೊಡನೆ ಕರ್ಮಗಳನ್ನು ನೆರವೇರಿಸುತ್ತಾರೆ.

English Translation

Those two leaders of rites, great in might, far-seeing, resplendent, and most far-hearing, perform their deeds, like two arms, by the help of the rays of the sun.

॥ ಸಂಹಿತಾಪಾಠಃ ॥

ಪ್ರ ಯೋ ವಾಂ ಮಿತ್ರಾವರುಣಾಜಿರೋ ದೂತೋ ಅದ್ರವತ್ ।

ಅಯಃಶೀರ್ಷಾ ಮದೇರಘುಃ ॥ ೩ ॥

॥ ಪದಪಾಠಃ ॥

ಪ್ರ । ಯಃ । ವಾಂ । ಮಿತ್ರಾವರುಣಾ । ಅಜಿರಃ । ದೂತಃ । ಅದ್ರವತ್ ।

ಅಯಃऽಶೀರ್ಷಾ । ಮದೇऽರಘುಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಮಿತ್ರಾವರುಣೌ ವಾಂ ಯುವಾಮಜಿರೋ ಗಮನಶೀಲೋ ಯೋ ಯಜಮಾನಃ ಪ್ರಾದ್ರವತ್ ಅಭಿಗಚ್ಛತಿ ಸ ದೇವಾನಾಂ ದೂತೋ ಭವತಿ । ಅಯಃಶೀರ್ಷಾ ಹಿರಣ್ಯಾಲಂಕೃತಶಿರಸ್ಕಶ್ಚ ಭವತಿ । ಮದೇರಘುರ್ಮದಕರೇ ಧನೇ ಗಂತಾ ಚ ಭವತಿ ॥

॥ ಪ್ರತಿಪದಾರ್ಥ ॥

ಮಿತ್ರಾವರುಣಾ—ಎಲೈ ಮಿತ್ರಾವರುಣರೇ । ಅಜಿರಃ—ಗಮನಶಾಲಿಯಾದ । ಯಃ—ಯಾವ ಯಜಮಾನನು । ವಾಂ—ನಿಮ್ಮಲ್ಲಿಗೆ । ಪ್ರ ಅದ್ರವತ್—ಶೀಘ್ರವಾಗಿ ಬಂದು ಸೇರುವನೋ ಅವನು । ದೂತಃ—ದೇವದೂತನಾಗುತ್ತಾನೆ । ಅಯಃಶೀರ್ಷಾ—ಲೋಹಮಯವಾದ ಕಿರೀಟವನ್ನು ಧರಿಸಿ । ಮದೇರಘುಃ—ಸಂತೋಷಕರವಾದ ಧನವನ್ನು ಪಡೆಯುತ್ತಾನೆ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ಗಮನಶಾಲಿಯಾದ ಯಾವ ಯಜಮಾನನು ನಿಮ್ಮಲ್ಲಿಗೆ ಶೀಘ್ರವಾಗಿ ಬಂದು ಸೇರುವನೋ ಅವನು ದೇವದೂತನಾಗುತ್ತಾನೆ. ಲೋಹಮಯವಾದ ಕಿರೀಟವನ್ನು ಧರಿಸಿ ಸಂತೋಷಕರವಾದ ಧನವನ್ನು ಪಡೆಯುತ್ತಾನೆ.

## English Translation

Mitra, and Varuna, he who hastens to appear before you, becomes the messenger of the gods ; he wears an iron helmet, he exults in his wealth.

॥ ವಿಶೇಷವಿಷಯಗಳು ॥

**ಅಯಃ ಶೀರ್ಷಾ**—ಎಂಬುವುದಕ್ಕೆ ಸಾಯಣರು ಸುವರ್ಣಮಯವಾದ ಕಿರೀಟದಿಂದ ಅಲಂಕೃತವಾದ ಶಿರಸ್ಸು ಎಂದರ್ಥಮಾಡಿದ್ದಾರೆ

॥ ಸಂಹಿತಾಪಾಠಃ ॥

**ನ ಯಃ ಸಂಪೃಚ್ಛೇ ನ ಪುನರ್ಹವೀತವೇ ನ ಸಂವಾದಾಯ ರಮತೇ ।**

**ತಸ್ಮಾನ್ನೋ ಅದ್ಯ ಸಮೃತೇರುರುಷ್ಯತಂ ಬಾಹುಭ್ಯಾಂ ನ ಉರುಷ್ಯತಂ ॥೪॥**

॥ ಪದಪಾಠಃ ॥

ನ । ಯಃ । ಸಂऽಪೃಚ್ಛೇ । ನ । ಪುನಃ । ಹವೀತವೇ । ನ । ಸಂऽವಾದಾಯ । ರಮತೇ ।

ತಸ್ಮಾತ್ । ನಃ । ಅದ್ಯ । ಸಂऽಋತೇಃ । ಉರುಷ್ಯತಂ । ಬಾಹುऽಭ್ಯಾಂ । ನಃ । ಉರುಷ್ಯತಂ ॥ ೪ ॥

॥ ಸಾಯಣಭಾಷ್ಯಂ ॥

ಯಃ ಶತ್ರುಃ ಸಂಪೃಚ್ಛೇ ಸಂಪ್ರಶ್ನಾಯ ನ ರಮತೇ ನ ಕ್ರೀಡತೇ ನ ಚ ಪುನಃಪುನರ್ಹವೀತವೇ ಹವನಾಯ ರಮತೇ ನ ಚ ಸಂವಾದಾಯ ರಮತೇ ತಸ್ಮಾಚ್ಛತ್ರೋಃ ಸಮೃತೇಃ ಸಂಗ್ರಾಮಾನ್ನೋಽಸ್ಮಾನದ್ಯೋರುಷ್ಯತಂ ಹೇ ಮಿತ್ರಾವರುಣೌ ಯುವಾಂ ರಕ್ಷತಂ । ಕಿಂಚ ತಸ್ಯ ಶತ್ರೋರ್ಬಾಹುಭ್ಯಾಂ ನೋಽಸ್ಮಾನುರುಷ್ಯತಂ । ರಕ್ಷತಂ ॥

॥ ಪ್ರತಿಪದಾರ್ಥ ॥

(ಎಲೈ ಮಿತ್ರಾವರುಣರೇ) **ಯಃ**—ಯಾವ ಶತ್ರುವು । **ಸಂಪೃಚ್ಛೇ**—ಸಂತೋಷದಿಂದ ಕುಶಲಪ್ರಶ್ನಾದಿಗಳನ್ನು ಮಾಡುವುದಕ್ಕೆ । **ನ ರಮತೇ**—ಇಷ್ಟಪಡುವುದಿಲ್ಲವೋ । **ನ ಹವೀತವೇ**—ನಮ್ಮನ್ನು ಪದೇ ಪದೇ ಕರೆಯುದಕ್ಕೂ ಇಷ್ಟಪಡುವುದಿಲ್ಲವೋ । **ನ ಚ ಸಂವಾದಾಯ**—ನಮ್ಮೊಡನೆ ಸಂಭಾಷಣೆಯನ್ನು ಮಾಡುವುದಕ್ಕೂ ಇಚ್ಛಿಸುವುದಿಲ್ಲವೋ । **ತಸ್ಮಾತ್**—ಅಂತಹ ಶತ್ರುವಿನೊಡನೆ ನಡೆಯುವ । **ಸಮೃತೇಃ**—ಯುದ್ಧದಿಂದ । **ನಃ**—ನಮ್ಮನ್ನು । **ಅದ್ಯ**—ಈಗ । **ಉರುಷ್ಯತಂ**—ರಕ್ಷಿಸಿರಿ । **ನಃ**—ನಮ್ಮನ್ನು । **ಬಾಹುಭ್ಯಾಂ**—ಅವನ ಬಾಹುಗಳಿಂದಲೂ । **ಉರುಷ್ಯತಂ**—ರಕ್ಷಿಸಿರಿ.

॥ ಭಾವಾರ್ಥ ॥

ಎಲೈ ಮಿತ್ರಾವರುಣರೇ, ಯಾವ ಶತ್ರುವು ಸಂತೋಷದಿಂದ ನಮ್ಮೊಡನೆ ಶುಕಲಪ್ರಶ್ನಾದಿಗಳನ್ನು ಮಾಡಲು ಇಷ್ಟಪಡುವುದಿಲ್ಲವೋ ನಮ್ಮನ್ನು ಪದೇ ಪದೇ ಕರೆಯುವುದಕ್ಕೂ ಇಷ್ಟಪಡುವುದಿಲ್ಲವೋ ನಮ್ಮೊಡನೆ ಸಂಭಾಷಣೆಯನು ಮಾಡುವುದಕ್ಕೂ ಇಷ್ಟಪಡುವುದಿಲ್ಲವೋ ಅಂತಹ ಶತ್ರುವಿನೊಡನೆ ನಡೆಯುವ ಯುದ್ಧದಿಂದ ನಮ್ಮನ್ನು ರಕ್ಷಿಸಿರಿ, ನಮ್ಮನ್ನು ಅವನ ಬಾಹುಗಳಿಂದಲೂ ರಕ್ಷಿಸಿರಿ.

English Translation

He who has no pleasure in questioning, nor in repeated calling nor in dialogue,—defend us to-day from him and from his encounter, defend us from his arms.

॥ ಸಂಹಿತಾಪಾಠಃ ॥

ಪ್ರ ಮಿತ್ರಾಯ ಪ್ರಾರ್ಯಮ್ಣೇ ಸಚಥ್ಯಮೃತಾವಸೋ ।
ವರೂಥ್ಯಂ೧ವರುಣೇ ಛಂದ್ಯಂ ವಚಃ ಸ್ತೋತ್ರಂ ರಾಜಸು ಗಾಯತ ॥ ೫ ॥

॥ ಪದಪಾಠಃ ॥

ಪ್ರ । ಮಿತ್ರಾಯ । ಪ್ರ । ಅರ್ಯಮ್ಣೇ । ಸಚಥ್ಯಂ । ಋತವಸೋ ಇತ್ಯೃತಽವಸೋ ।
ವರೂಥ್ಯಂ । ವರುಣೇ । ಛಂದ್ಯಂ । ವಚಃ । ಸ್ತೋತ್ರಂ । ರಾಜಽಸು । ಗಾಯತ ॥ ೫ ॥

॥ ಸಾಯಣಭಾಷ್ಯಂ ॥

ಹೇ ಋತವಸೋ ಯಜ್ಞಧನ ಮಿತ್ರಾಯ ಸಚಥ್ಯಂ ಸೇವಾರ್ಹಂ ವರೂಥ್ಯಂ ಯಜ್ಞಗೃಹೇ ಭವಂ ಚ ಸ್ತೋತ್ರಂ ಪ್ರ ಗಾಯತ । ಪ್ರಕರ್ಷೇಣ ಗಾಯತ । ಅರ್ಯಮ್ಣೇ ಚ ಪ್ರ ಗಾಯತ । ವರುಣೇ ಛಂದ್ಯಂ ಪ್ರೀಣನಸಾಧನಂ ಚೈತಾದೃಶಂ ವಚಃ ಪ್ರ ಗಾಯತ । ಪ್ರಗಾಯತೇತಿ ಬಹುವಚನಂ ಪೂಜಾರ್ಥಂ । ಏತದೇವ ದರ್ಶಯತಿ । ರಾಜಸು ಮಿತ್ರಾದಿಷು ರಾಜಸು ಸ್ತೋತ್ರಂ ಗಾಯತ । ಪಠತ । ಮಿತ್ರಾದೀಂಸ್ತ್ರೀನ್ರಾಜ್ಞಃ ಸ್ತುತೇತಿ ಸಮುದಾಯಾರ್ಥಃ ॥

॥ ಪ್ರತಿಪದಾರ್ಥ ॥

ಋತವಸೋ—ಯಜ್ಞವೇ ಧನವಾಗಿ ಉಳ್ಳ ಎಲೈ ಸ್ತೋತೃವೇ । ಮಿತ್ರಾಯ—ಮಿತ್ರನನ್ನುದ್ದೇಶಿಸಿ । ಸಚಥ್ಯಂ—ಸೇವೆಗೆ ಅರ್ಹವಾದುದೂ । ವರೂಥ್ಯಂ—ಯಜ್ಞಗೃಹದಲ್ಲಿ ನಿರ್ಮಿತವಾದುದೂ ಆದ ಸ್ತೋತ್ರವನ್ನು ಪ್ರ ಗಾಯತ—ಗಾನರೂಪದಲ್ಲಿ ಪಠಿಸು । ಅರ್ಯಮ್ಣೇ—ಅರ್ಯಮದೇವನನ್ನೂ ಉದ್ದೇಶಿಸಿ । ಪ್ರ (ಗಾಯತ)—

ಗಾನರೂಪದಲ್ಲಿ ಪಠಿಸು । **ವರುಣೇ**—ವರುಣನನ್ನುದ್ದೇಶಿಸಿ । **ಛಂದ್ಯಂ**—ಪ್ರೀತಿಕರವಾದ । **ವಚಃ**—ಸ್ತುತಿಯನ್ನು ಪಠಿಸು । **ರಾಜಸು**—ಮಿತ್ರಾದಿ ಪ್ರಭುಗಳನ್ನು ಪ್ರಶಂಸಿಸುವ । **ಸ್ತೋತ್ರಂ**—ಸ್ತೋತ್ರವನ್ನು ಪಠಿಸು.

। ಭಾವಾರ್ಥ ।

ಯಜ್ಞವೇ ಧನವಾಗಿವುಳ್ಳ ಎಲೈ ಸ್ತೋತೃವೇ, ಮಿತ್ರನನ್ನುದ್ದೇಶಿಸಿ ಸೇವೆಗೆ ಅರ್ಹವಾದುದೂ, ಯಜ್ಞಗೃಹದಲ್ಲಿ ನಿರ್ಮಿತವಾದುದೂ ಆದ ಸ್ತೋತ್ರವನ್ನು ಗಾನರೂಪದಲ್ಲಿ ಪಠಿಸು. ಅರ್ಯಮನನ್ನೂ ವರುಣನನ್ನೂ ಉದ್ದೇಶಿಸಿ ಪ್ರೀತಿಕಾರಕವಾದ ಸ್ತುತಿಯನ್ನು ಪಠಿಸು. ಮಿತ್ರಾದಿಪ್ರಭುಗಳನ್ನು ಪ್ರಶಂಸಿಸುವ ಸ್ತುತಿಯನ್ನು ಪಠಿಸು.

English Translation

O you rich in offerings, sing to mitra, sing to Aryaman, a reverential hymn produced in the sacrificial chamber ; sing a propitiating address to Varuna ; sing a hymn of praise to the kings.

। ಸಂಹಿತಾಪಾಠಃ ।

ತೇ ಹಿನ್ವಿರೇ ಅರುಣಂ ಜೇನ್ಯಂ ವಸ್ವೇಕಂ ಪುತ್ರಂ ತಿಸೃಣಾಂ ।

ತೇ ಧಾಮಾನ್ಯಮೃತಾ ಮರ್ತ್ಯಾನಾಮದಬ್ಧಾ ಅಭಿ ಚಕ್ಷತೇ ॥ ೬ ॥

॥ ಪದಪಾಠಃ ।

ತೇ । ಹಿನ್ವಿರೇ । ಅರುಣಂ । ಜೇನ್ಯಂ । ವಸು । ಏಕಂ । ಪುತ್ರಂ । ತಿಸೃಣಾಂ ।

ತೇ । ಧಾಮಾನಿ । ಅಮೃತಾಃ । ಮರ್ತ್ಯಾನಾಂ । ಅದಬ್ಧಾಃ । ಅಭಿ । ಚಕ್ಷತೇ ॥ ೬ ॥

॥ ಸಾಯಣಭಾಷ್ಯಂ ।

ಅರುಣಮರುಣವರ್ಣಂ ಜೇನ್ಯಂ ಜಯಸಾಧನಂ ವಸು ವಾಸಕಂ ತಿಸೃಣಾಂ ಪೃಥಿವ್ಯಾದೀನಾಮೇಕಂ ಪುತ್ರಂ ತೇ ದೇವಾ ಹಿನ್ವಿರೇ । ಪ್ರೇರಯಂತಿ ತ್ರೈಲೋಕ್ಯಸ್ಯ ತಮೋನಿವಾರಣಾಯ । ಕಿಂಚಾದಬ್ಧಾಃ ಕೇನಾಪ್ಯಹಿಂಸಿತಾ ಅಮೃತಾ ಮರಣರಹಿತಾಸ್ತೇ ದೇವಾ ಮರ್ತ್ಯಾನಾಂ ಮನುಷ್ಯಾಣಾಂ ಧಾಮಾನಿ ಸ್ಥಾನಾನ್ಯಭಿ ಚಕ್ಷತೇ । ಅಭಿಪಶ್ಯಂತಿ ॥

। ಪ್ರತಿಪದಾರ್ಥ ।

ಅರುಣಂ—ಹೊಂಬಣ್ಣವುಳ್ಳವನೂ । ಜೇನ್ಯಂ—ಜಯಸಾಧಕನೂ । ವಸು—ವಸತಿದಾಯಕನೂ । ತಿಸೃಣಾಂ—ಪೃಥಿವ್ಯಾದಿ ಮೂರು ಲೋಕಗಳಿಗೂ । ಏಕಂ—ಒಬ್ಬನೇ ಆದ । ಪುತ್ರಂ— ಪುತ್ರನೂ ಆದ ಸೂರ್ಯನನ್ನು । ತೇ—ದೇವತೆಗಳು । ಹಿನ್ವಿರೇ—ತಮೋನಿವಾರಣೆಗಾಗಿ ಕಳುಹಿದ್ದಾರೆ । ಅದಬ್ಧಾಃ—ಅಹಿಂಸಿತ

ರಾಜ[illegible] | ಅಮೃತಾಃ— ಮರಣಧರ್ಮರಹಿತರೂ ಆದ | ತೇ—ಆದೇ ದೇವತೆಗಳು | ಮರ್ತ್ಯಾನಾಂ— ಮಾನ[illegible] | **ಧಾಮಾನಿ**—ಸ್ಥಾನಗಳನ್ನು | **ಅಭಿ ಚಕ್ಷತೇ**—ಸುತ್ತುವರಿದು ನೋಡುತ್ತಾರೆ

॥ ಭಾವಾರ್ಥ ॥

ಹೊಂಬಣ್ಣವುಳ್ಳವನೂ, ಜಯಸಾಧಕನೂ, ವಸತಿದಾಯಕನೂ ಪೃಥಿವ್ಯಾದಿ ಮೂರು ಲೋಕಗಳಿಗೂ ಒಬ್ಬನೇ ಆದ ಪುತ್ರನೂ ಆದ ಸೂರ್ಯನನ್ನು ದೇವತೆಗಳು ತಮೋನಿವಾರಣೆಗಾಗಿ ಕಳುಹಿಸಿದ್ದಾರೆ. ಅಹಿಂಸಿತರಾದವರೂ ಮರಣಧರ್ಮರಹಿತರೂ ಆದ ಆದೇ ದೇವತೆಗಳು ಮಾನವರ ಸಕಲ ಸ್ಥಾನಗಳನ್ನೂ ಸೂಕ್ಷ್ಮದೃಷ್ಟಿಯಿಂದ ಸುತ್ತುವರಿದು ನೋಡುತ್ತಾರೆ,

English Translation

It was these who sent the red victory-giving Vasu, the one son of the three (worlds); they, the invincible, the immoratal, overlook the abodes of men

॥ ಸಂಹಿತಾಪಾಠಃ ॥

ಆ ವೋ ವಚಾಂಸ್ಯುದ್ಯತಾ ದ್ಯುಮತ್ತಮಾನಿ ಕರ್ತ್ವಾ ।
ಉಭಾ ಯಾತಂ ನಾಸತ್ಯಾ ಸಜೋಷಸಾ ಪ್ರತಿ ಹವ್ಯಾನಿ ವೀತಯೇ ॥ ೨ ॥

॥ ಪದಪಾಠಃ ॥

ಆ । ವೋ । ವಚಾಂಸಿ । ಉತ್ಽಯತಾ । ದ್ಯುಮತ್ಽತಮಾನಿ । ಕರ್ತ್ವಾ ।
ಉಭಾ । ಯಾತಂ । ನಾಸತ್ಯಾ । ಸಽಜೋಷಸಾ । ಪ್ರತಿ । ಹವ್ಯಾನಿ । ವೀತಯೇ ॥ ೨ ॥

॥ ಸಾಯಣಭಾಷ್ಯಂ ॥

ಹೇ ನಾಸತ್ಯಾ ನಾಸತ್ಯೌ ಸತ್ಯಸ್ಯ ಪ್ರಣೇತಾರೌ ಸಜೋಷಸಾ ಸಂಗತಾವುಭೌ ಯುವಾಂ ವೋ ಜಮದಗ್ನೇರ್ಮಮೋದ್ಯತೋದ್ಯತಾನಿ ದ್ಯುಮತ್ತಮಾನಿ ದೀಪ್ತತಮಾನಿ ವಚಾಂಸಿ ಸ್ತೋತ್ರರೂಪಾಣಿ ವಾಕ್ಯಾನಿ ಕರ್ತ್ವಾ ಕರ್ಮಾಣಿ ಚಾ ಯಾತಂ । ಕಿಂಚ ಹವ್ಯಾನಿ ಹವೀಂಷಿ ವೀತಯೇ ಭಕ್ಷಣಾಯ ಪ್ರತಿ ಗಚ್ಛತಂ ॥

॥ ಪ್ರತಿಪದಾರ್ಥ ॥

**ನಾಸತ್ಯಾ**— ಎಲೈ ಅಶ್ವಿನೀದೇವತೆಗಳೇ | ಉಭಾ—ನೀವಿಬ್ಬರೂ | **ಸಜೋಷಸಾ**—ಒಟ್ಟುಗೂಡಿದವರಾಗಿ | **ವೋ**—ನನ್ನ | ಉದ್ಯತಾ—ಗಟ್ಟಿಯಾಗಿ ಉಚ್ಚರಿಸಿ ಸಂತತವಾಗುವವೂ | **ದ್ಯುಮತ್ತಮಾನಿ**— ಅತ್ಯತಿಶಯವಾದ ಕಾಂತಿಯುಳ್ಳವೂ ಆದ | **ವಚಾಂಸಿ**—ಸ್ತುತಿವಾಕ್ಯಗಳಿಗೂ | **ಕರ್ತ್ವಾ**—ಕರ್ಮಗಳಿಗೂ ಅಭಿಮುಖವಾಗಿ | **ಆ ಯಾತಂ**—ಬನ್ನಿರಿ | **ಹವ್ಯಾನಿ**—ಹವಿಸ್ಸುಗಳನ್ನು | **ವೀತಯೇ**—ಭಕ್ಷಿಸಲು | **ಪ್ರತಿ**—ಬನ್ನಿರಿ.

॥ ಭಾವಾರ್ಥ ॥

ಎಲೈ ಅಶ್ವಿನೀದೇವತೆಗಳೇ, ನೀವಿಬ್ಬರೂ ಒಟ್ಟುಗೂಡಿದವರಾಗಿ ಗಟ್ಟಿಯಾಗಿ ಉಚ್ಚರಿಸಿ ಪಠಿತವಾಗುವುವೂ ಅತ್ಯತಿಶಯವಾದ ಕಾಂತಿಯುಳ್ಳವೂ ಆದ ಸ್ತುತಿವಾಕ್ಯಗಳಿಗೂ, ನನ್ನ ಕರ್ಮಗಳಿಗೂ ಅಭಿಮುಖವಾಗಿ ಬನ್ನಿರಿ. ನನ್ನಿಂದ ಅರ್ಪಿತವಾಗುವ ಹವಿಸ್ಸುಗಳನ್ನು ಭಕ್ಷಿಸಲು ಬನ್ನಿರಿ.

English Translation

O associated Nasatyas, come both of you to my uplifted glorious praises and my rites, come to partake of my offerings.

॥ ಸಂಹಿತಾಪಾಠಃ ॥

ರಾತಿಂ ಯದ್ವಾಮರಕ್ಷಸಂ ಹವಾಮಹೇ ಯುವಾಭ್ಯಾಂ ವಾಜಿನೀವಸೂ ।
ಪ್ರಾಚೀಂ ಹೋತ್ರಾಂ ಪ್ರತಿರಂತಾವಿತಂ ನರಾ ಗೃಣಾನಾ ಜಮದಗ್ನಿನಾ॥೮॥

॥ ಪದಪಾಠಃ॥

ರಾತಿಂ । ಯತ್ । ವಾಂ । ಅರಕ್ಷಸಂ । ಹವಾಮಹೇ । ಯುವಾಭ್ಯಾಂ । ವಾಜಿನೀವಸೂ ಇತಿ ವಾಜಿನೀऽ-
ವಸೂ ।
ಪ್ರಾಚೀಂ । ಹೋತ್ರಾಂ । ಪ್ರऽತಿರಂತಾ । ಇತಂ । ನರಾ । ಗೃಣಾನಾ । ಜಮತ್ऽಅಗ್ನಿನಾ ॥ ೮ ॥

॥ ಸಾಯಣಭಾಷ್ಯಂ ॥

ಹೇ ವಾಜಿನೀವಸೂ ಅನ್ನಧನಾವಶ್ವಿನೌ ವಾಂ ಯುವಯೋಃ ಸಂಬಂಧಿ ಯದರಕ್ಷಸಂ ರಕ್ಷೋವರ್ಜಿತಂ ದಾನಮಸ್ತಿ ತಸ್ಯದಾ ಹವಾಮಹೇ । ಏತದೇವ ವಿಶದಯತಿ । ಯುವಾಭ್ಯಾಂ ಕ್ರಿಯಮಾಣಾಂ ರಾತಿಂ ದಾನಂ ಹವಾಮಹ ಇತಿ । ತದಾನೀಂ ಪ್ರಾಚೀಂ ಪ್ರಾಙ್ಮುಖಾಂ ಹೋತ್ರಾಂ ಸ್ತುತಿಂ ಪ್ರತಿರಂತಾ **ವರ್ಧಯಂತಾ ನರಾ ನೇತಾರಾ ಜಮದಗ್ನಿನರ್ಷಿಣಾ ಗೃಣಾನಾ ಸ್ತೂಯಮಾನಾ ಚ ಸಂತಾವಿತಂ । ಆಗಚ್ಛತಂ ॥**

॥ ಪ್ರತಿಪದಾರ್ಥ ॥

**ವಾಜಿನೀವಸೂ**—ಅನ್ನವೇ ಧನವಾಗಿ ಉಳ್ಳ ಎಲೈ ಅಶ್ವಿನೀದೇವತೆಗಳೇ । **ವಾಂ**—ನಿಮ್ಮ ಸಂಬಂಧಿ ಯಾದುದೂ । **ಅರಕ್ಷಸಂ**—ರಾಕ್ಷಸರ ಹಿಂಸೆಯಿಂದ ವರ್ಜಿತವಾದುದೂ । **ಯುವಾಭ್ಯಾಂ**—ನಿಮ್ಮಿಂದ ದತ್ತವಾಗುವುದೂ ಆದ । **ರಾತಿಂ**—ಧನವನ್ನು । **ಯತ್**—ಯಾವಾಗ । **ಹವಾಮಹೇ**—ನಾವು ಯಾಚಿಸುವೆವೋ ಆಗ । **ಪ್ರಾಚೀಂ**—ಪ್ರಾಙ್ಮುಖವಾಗಿ ಪಠಿತವಾಗುವ । **ಹೋತ್ರಾಂ**—ನಮ್ಮ ಸ್ತುತಿಯನ್ನು । **ಪ್ರತಿ ರಂತಾ**—

ಬೆಳೆಸುವವರೂ । ನರಾ—ನೇತೃಗಳೂ । ಜಮದಗ್ನಿನಾ—ಜಮದಗ್ನಿಯಿಂದ । ಗೃಣಾನಾ—ಸ್ತುತರೂ ಆಗಿ । ಇತಂ—ದಯಮಾಡಿರಿ.

॥ ಭಾವಾರ್ಥ ॥

ಅನ್ನವೇ ಧನವಾಗಿ ಉಳ್ಳ ಎಲೈ ಅಶ್ವಿನೀದೇವತೆಗಳೇ, ನಿಮ್ಮ ಸಂಬಂಧಿಯಾದುದೂ, ರಾಕ್ಷಸರ ಹಿಂಸೆಯಿಂದ ವರ್ಜಿತವಾದುದೂ, ನಿಮ್ಮಿಂದ ದತ್ತವಾದುದೂ ಆದ ದಾನವನ್ನು ಯಾವಾಗ ನಾವು ಯಾಚಿಸುವೆವೋ ಆಗ ಪ್ರಾಙ್ಮುಖವಾಗಿ ಪಠಿತವಾಗುವ ನಮ್ಮ ಸ್ತುತಿಯನ್ನು ಬೆಳೆಸುವವರೂ ನೇತೃಗಳೂ, ಜಮದಗ್ನಿಯಿಂದ ಸ್ತುತರಾಗುವವರೂ ಆದ ನೀವು ದಯಮಾಡಿರಿ

English Translation

Deities rich in food, when we solicit your bounty, that ( wealth ) which demons cannot thwart,—then, helping our praise directed to the east, come, leaders of rites, worshipped by Jamadagni.

॥ ಸಂಹಿತಾಪಾಠಃ ॥

ಆ ನೋ ಯಜ್ಞಂ ದಿವಿಸ್ಪೃಶಂ ವಾಯೋ ಯಾಹಿ ಸುಮನ್ಮಭಿಃ ।
ಅಂತಃ ಪವಿತ್ರ ಉಪರಿ ಶ್ರೀಣಾನೋಽಯಂ ಶುಕ್ರೋ ಅಯಾಮಿ ತೇ ॥೯॥

॥ ಪದಪಾಠಃ ॥

ಆ । ನಃ । ಯಜ್ಞಂ । ದಿವಿಽಸ್ಪೃಶಂ । ವಾಯೋ ಇತಿ । ಯಾಹಿ । ಸುಮನ್ಮಽಭಿಃ ।
ಅಂತರಿತಿ । ಪವಿತ್ರೇ । ಉಪರಿ । ಶ್ರೀಣಾನಃ । ಅಯಂ । ಶುಕ್ರಃ । ಅಯಾಮಿ । ತೇ ॥ ೯ ॥

॥ ಸಾಯಣಭಾಷ್ಯಂ ॥

ಹೇ ವಾಯೋ ತ್ವಂ ನೋಽಸ್ಮಾಕಂ ದಿವಿಸ್ಪೃಶಂ ತಂ ಯಜ್ಞಮಾ ಯಾಹಿ । ಕಿಮರ್ಥಮಾಗಮನಮಿತ್ಯತ್ರಾಹ । ಸುಮನ್ಮಭಿಃ ಸುಷ್ಟುತಿಭಿರಂತಃ ಪವಿತ್ರೇ ಪವಿತ್ರಸ್ಯ ಮಧ್ಯ ಉಪರಿ ಶ್ರೀಣಾನಃ ಶ್ರಯಮಾಣೋ ನಿಷಿಚ್ಯಮಾನೋಽಯಂ ಶುಕ್ರಃ ಸೋಮಸ್ತೇ ತುಭ್ಯಮಯಾಮಿ । ನಿಯತ ಆಸೀದಿತಿ ॥

॥ ಪ್ರತಿಪದಾರ್ಥ ॥

ವಾಯೋ—ಎಲೈ ವಾಯುವೇ । ದಿವಿಸ್ಪೃಶಂ—ಸ್ವರ್ಗವನ್ನು ಮುಟ್ಟುವ । ನಃ ಯಜ್ಞಂ—ನಮ್ಮ ಯಜ್ಞಕ್ಕೆ । ಆ ಯಾಹಿ—ದಯಮಾಡು । ಸುಮನ್ಮಭಿಃ—ಉತ್ತಮವಾದ ಸ್ತುತಿಗಳೊಡನೆ । ಅಂತಃ ಪವಿತ್ರೇ—ದಶಾಪವಿತ್ರದ ಮಧ್ಯಭಾಗದ । ಉಪರಿ—ಮೇಲೆ । ಶ್ರೀಣಾನಃ—ಸೇಕಿಸಲ್ಪಡುವುದೂ । ಶುಕ್ರಃ—ಪ್ರಕಾಶಮಾನವಾದುದೂ ಆದ । ಅಯಂ—ಈ ಸೋಮವನ್ನು । ತೇ—ನಿನ್ನನ್ನುದ್ದೇಶಿಸಿ । ಅಯಾಮಿ—ಅರ್ಪಿಸುವೆನು.

॥ ಭಾವಾರ್ಥ ॥

ಎಲೈ ವಾಯುವೇ, ಸ್ವರ್ಗವನ್ನು ಮುಟ್ಟುವ ನಮ್ಮ ಈ ಯಜ್ಞಕ್ಕೆ ದಯಮಾಡು. ಉತ್ತಮವಾದ ಸ್ತುತಿಗಳೊಡನೆ ದಶಾಪವಿತ್ರದ ಮಧ್ಯಭಾಗದ ಮೇಲೆ ಸೇಕಿಸಲ್ಪಡುವುದೂ, ಪ್ರಕಾಶಮಾನವಾದುದೂ ಆದ ಈ ಸೋಮವನ್ನು ನಿನ್ನನ್ನುದ್ದೇಶಿಸಿ ಅರ್ಪಿಸುವೆನು.

English Translation

Come, Vayu, to our heaven-reaching sacrifice with its beautiful hymns of praise ; this bright Soma has been kept for you-poured out upon the middle of the straining cloth·

॥ ಸಂಹಿತಾಪಾಠಃ ॥

ವೇತ್ಯಧ್ವರ್ಯುಃ ಪಥಿಭೀ ರಜಿಷ್ಠೈಃ ಪ್ರತಿ ಹವ್ಯಾನಿ ವೀತಯೇ ।
ಅಧಾ ನಿಯುತ್ವ ಉಭಯಸ್ಯ ನಃ ಪಿಬ ಶುಚಿಂ ಸೋಮಂ ಗವಾಶಿರಂ ॥ ೧೦॥

॥ ಪದಪಾಠಃ ॥

ವೇತಿ । ಅಧ್ವರ್ಯುಃ । ಪಥಿऽಭಿಃ । ರಜಿಷ್ಠೈಃ । ಪ್ರತಿ । ಹವ್ಯಾನಿ । ವೀತಯೇ ।
ಅಧ । ನಿಯುತ್ವಃ । ಉಭಯಸ್ಯ । ನಃ । ಪಿಬ । ಶುಚಿಂ । ಸೋಮಂ । ಗೋಽಆಶಿರಂ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ನಿಯುತ್ವೋ ನಿಯುತ್ಸಂಜ್ಞಕಾಶ್ವವನ್ವಾಯೋ ಅಧ್ವರ್ಯುರ್ಹವಿರ್ಧಾನಾದ್ರಜಿಷ್ಠೈರ್ಋಜುತಮೈಃ ಪಥಿಭಿರ್ಮಾರ್ಗೈರ್ವೇತಿ । ಗಚ್ಛತಿ । ವೀತಯೇ ಭಕ್ಷಣಾಯ ತವ ಭಕ್ಷಣಾನಿ ಹವ್ಯಾನಿ ಹವೀಂಷಿ ಚ ಪ್ರತಿ ನಯತೀತಿ ಶೇಷಃ । ಅಧಾಥ ನೋऽಸ್ಮಾಕಂ ಸಂಬಂಧಿನಮುಭಯಸ್ಯೋಭಯವಿಧಂ ಸೋಮಂ ॥ ಕರ್ಮಣಿ ಷಷ್ಠೀ ॥ ಪಿಬ । ಉಭಯವಿಧತ್ವಂ ದರ್ಶಯತಿ । ಶುಚಿಂ ಶುದ್ಧಂ ಸೋಮಂ ಗವಾಶಿರಂ ಗವ್ಯೇನ ಪಯಸಾ ಮಿಶ್ರಿತಂ ಚೇತಿ ॥

॥ ಪ್ರತಿಪದಾರ್ಥ ॥

ನಿಯುತ್ವಃ— ನಿಯುತ್ಸಂಜ್ಞಕವಾದ ಅಶ್ವವುಳ್ಳ ಎಲೈ ವಾಯುವೇ । ಅಧ್ವರ್ಯುಃ— ಅಧ್ವರ್ಯುವು । ರಜಿಷ್ಠೈಃ—ಅತ್ಯಂತ ನೇರವಾದ । ಪಥಿಭಿಃ—ಮಾರ್ಗಗಳಿಂದ । ವೇತಿ—ಬರುತ್ತಾನೆ । ವೀತಯೇ— ನಿನ್ನ ಭಕ್ಷಣಕ್ಕಾಗಿ । ಹವ್ಯಾನಿ—ಹವಿಸ್ಸುಗಳನ್ನು । ಪ್ರತಿ (ನಯತಿ)—ತಂದರ್ಪಿಸುತ್ತಾನೆ । ಅಧ—ಅನಂತರ । ನಃ—

ನಮ್ಮಿಂದ ಅರ್ಪಿತವಾದ । **ಶುಚಿಂ**—ಶುದ್ಧವಾದುದೂ । **ಗವಾಶಿರಂ**—ಕ್ಷೀರಾದಿಗಳಿಂದ ಮಿಶ್ರಿತವಾದುದೂ (ಹೀಗೆ) । **ಉಭಯಸ್ಯ**—ಎರಡು ಬಗೆಯುಳ್ಳ । **ಸೋಮಂ**—ಸೋಮವನ್ನು । **ಪಿಬ**—ಪಾನಮಾಡು

॥ ಭಾವಾರ್ಥ ॥

ನಿಯುತ್ಸಂಜ್ಞಕವಾದ ಅಶ್ವವುಳ್ಳ ಎಲೈ ವಾಯುವೇ, ಅಧ್ವರ್ಯುವು ಅತ್ಯಂತ ನೇರವಾದ ಮಾರ್ಗಗಳಿಂದ ಬರುತ್ತಾನೆ ನಿನ್ನ ಭಕ್ಷಣಕ್ಕಾಗಿ ಹವಿಸ್ಸುಗಳನ್ನು ತಂದರ್ಪಿಸುತ್ತಾನೆ. ಅನಂತರ ನಮ್ಮಿಂದ ಅರ್ಪಿತವಾದ ಶುದ್ಧವಾದುದೂ, ಕ್ಷೀರಾದಿಗಳಿಂದ ಮಿಶ್ರಿತವಾದುದೂ ಹೀಗೆ ಎರಡು ಬಗೆಯುಳ್ಳ ಸೋಮವನ್ನು ಪಾನಮಾಡು.

English Translation

The ministrant priest comes by the straightest paths, he brings the oblations for your enjoyment ; then lord of the Niyut steeds, drink of both kinds, the Soma pure and that mixed with milk.

। ಸಂಹಿತಾಪಾಠಃ ।

ಬಣ್ಮಹಾँ ಅಸಿ ಸೂರ್ಯ ಬಳಾದಿತ್ಯ ಮಹಾँ ಅಸಿ ।
ಮಹಸ್ತೇ ಸತೋ ಮಹಿಮಾ ಪನಸ್ಯತೇಽದ್ಧಾ ದೇವ ಮಹಾँ ಅಸಿ ॥ ೧೧ ॥

॥ ಪದಪಾಠಃ ।

ಬಟ್ । ಮಹಾನ್ । ಅಸಿ । ಸೂರ್ಯ । ಬಟ್ । ಆದಿತ್ಯ । ಮಹಾನ್ । ಅಸಿ ।
ಮಹಃ । ತೇ । ಸತಃ । ಮಹಿಮಾ । ಪನಸ್ಯತೇ । ಅದ್ಧಾ । ದೇವ । ಮಹಾನ್ । ಅಸಿ ॥ ೧೧ ॥

। ಸಾಯಣಭಾಷ್ಯಂ ।

**ಹೇ ಸೂರ್ಯ ತ್ವಂ ಮಹಾಂಸ್ತೇಜಸಾಧಿಕೋಽಸಿ । ಬಟ್ ಸತ್ಯಂ । ನೈತನ್ಮಿಥ್ಯೇತ್ಯರ್ಥಃ । ಹೇ ಆದಿತ್ಯಾದಿತೇಃ ಪುತ್ರ ತ್ವಂ ಮಹಾನ್ ಬಲೇನಾಪ್ಯಧಿಕೋಽಸಿ । ಬಟ್ ಸತ್ಯಂ । ಮಹೋ ಮಹತಃ ಸತೋ ಭವತಸ್ತೇ ಮಹಿಮಾ ಮಹತ್ತ್ವಂ ಪನಸ್ಯತೇ । ಸ್ತೋತೃಭಿಃ ಸ್ತೂಯತೇ । ಹೇ ದೇವ ದ್ಯೋತಮಾನಾದಿಗುಣಯುಕ್ತ ಸೂರ್ಯ ತ್ವಂ ಮಹಾನ್ ವೀರ್ಯೇಣಾಪ್ಯಧಿಕೋಽಸಿ। ಭವಸಿ । ಅದ್ಧಾ ಸತ್ಯಮೇವ। ಅತ್ರ ನ ಸಂಶಯ ಇತ್ಯರ್ಥಃ । ಬಟ್ ಸತ್ರಾದ್ಧೇತಿ ಸತ್ಯನಾಮಸು ಪಾಠಾತ್ ॥**

॥ ಪ್ರತಿಪದಾರ್ಥ ॥

**ಸೂರ್ಯ**—ಎಲೈ ಸೂರ್ಯನೇ । (**ತ್ವಂ**—ನೀನು) । **ಮಹಾನ್**—ತೇಜಸ್ಸಿನಿಂದ ಅಧಿಕನಾಗಿರುವೆ । **ಬಟ್**—ಇದು ಸತ್ಯವು । **ಆದಿತ್ಯ**—ಅದಿತಿಪುತ್ರನಾದ ಎಲೈ ಸೂರ್ಯನೇ । **ಮಹಾನ್**—ಶಕ್ತಿಯಿಂದಲೂ ಅಧಿಕನಾಗಿ ।

**ಅಸಿ**—ಆಗಿದ್ದೀಯೆ । **ಬಟ್**—ಇದೂ ಸತ್ಯವು । **ಮಹಃ**—ಮಹತ್ಸ್ವರೂಪವುಳ್ಳ । **ಸತಃ ತೇ**—ನಿನ್ನ । **ಮಹಿಮಾ**—ಮಾಹಾತ್ಮ್ಯವು । **ಪನಸ್ಯತೇ**—ಸ್ತೋತ್ರಗಳಿಂದ ಸ್ತುತಿಸಲ್ಪಡುತ್ತದೆ । **ದೇವ**—ದೇವತಾತ್ಮನಾದ ಎಲೈ ಸೂರ್ಯನೇ । **ಮಹಾನ್**—ವೀರ್ಯಾಧಿಕ್ಯವುಳ್ಳವನಾಗಿ । **ಅಸಿ**—ಆಗಿದ್ದೀಯೆ । **ಅದ್ಧಾ**—ಇದು ಸತ್ಯವು.

॥ ಭಾವಾರ್ಥ ॥

ಎಲೈ ಸೂರ್ಯನೇ, ನೀನು ತೇಜಸ್ಸಿನಿಂದ ಅಧಿಕನಾಗಿ ಆಗಿದ್ದೀಯೆ. ಇದು ಸತ್ಯವು ಅದಿತಿಪುತ್ರನಾದ ಎಲೈ ಸೂರ್ಯನೇ, ನೀನು ಶಕ್ತಿಯಿಂದಲೂ ಅಧಿಕನಾಗಿದ್ದೀಯೆ ಇದೂ ಸತ್ಯವು. ಮಹತ್ಸ್ವರೂಪವುಳ್ಳ ನಿನ್ನ ಮಾಹಾತ್ಮ್ಯವು ಸ್ತೋತ್ರಗಳಿಂದ ಸ್ತುತಿಸಲ್ಪಡುತ್ತದೆ. ದೇವತಾತ್ಮನಾದ ಎಲೈ ಸೂರ್ಯನೇ, ನೀನು ವೀರ್ಯಾಧಿಕ್ಯವುಳ್ಳವನಾಗಿ ಆಗಿದ್ದೀಯೆ ಇದು ಸತ್ಯವು.

## English Translation

Verily you are great, O Sun ; verily, Aditya, you are great ; the greatness, of you, the great one, is praised ; verily you are great, O god

॥ ಸಂಹಿತಾಪಾಠಃ ॥

ಬಟ್ ಸೂರ್ಯ ಶ್ರವಸಾ ಮಹಾಁ ಅಸಿ ಸತ್ರಾ ದೇವ ಮಹಾಁ ಅಸಿ ।
ಮಹ್ನಾ ದೇವಾನಾಮಸುರ್ಯಃ ಪುರೋಹಿತೋ ವಿಭು ಜ್ಯೋತಿರದಾಭ್ಯಂ ॥

॥ ಪದಪಾಠಃ ॥

ಬಟ್ । ಸೂರ್ಯ । ಶ್ರವಸಾ । ಮಹಾನ್ । ಅಸಿ । ಸತ್ರಾ । ದೇವ । ಮಹಾನ್ । ಅಸಿ ।
ಮಹ್ನಾ । ದೇವಾನಾಂ । ಅಸುರ್ಯಃ । ಪುರಃऽಹಿತಃ । ವಿऽಭು । ಜ್ಯೋತಿಃ । ಅದಾಭ್ಯಂ ॥ ೧೨ ॥

॥ ಸಾಯಣಭಾಷ್ಯಂ ॥

ಹೇ ಸೂರ್ಯ ತ್ವಂ ಶ್ರವಸಾ ಶ್ರವಣೇನ ಮಹಾನ್ ಸರ್ವಾಧಿಕೋಽಸಿ ಬಟ್ ಸತ್ಯಂ । ಹೇ ದೇವ ದ್ಯೋತಮಾನ ಸೂರ್ಯ ತ್ವಂ ದೇವಾನಾಂ ಮಧ್ಯೇ ಮಹ್ನಾ ಮಹತ್ತ್ವೇನ ಮಹಾನಧಿಕೋಽಸಿ ಸತ್ರಾ ಸತ್ಯಮೇವ । ಅಸುರ್ಯೋಽಸುರಾಣಾಂ ಹಂತಾ ಚಾಸಿ. । ಕಿಂಚ ತ್ವಂ ದೇವಾನಾಂ ಪುರೋಹಿತೋ ಹಿತೋಪದೇಷ್ಟಾಸಿ । ಕಿಂಚ ತಜ್ಜ್ಯೋತಿಸ್ತೇಜೋ ವಿಭು ಮಹದದಾಭ್ಯಂ ಕೇನಾಪ್ಯಹಿಂಸ್ಯಂ ಚ ॥

॥ ಪ್ರತಿಪದಾರ್ಥ ॥

**ಸೂರ್ಯ**—ಎಲೈ ಸೂರ್ಯನೇ । **ಶ್ರವಸಾ**—ಕೀರ್ತಿಯಿಂದ । **ಮಹಾನ್**—ಎಲ್ಲರಿಗಿಂತಲೂ ಅಧಿಕನಾಗಿ । **ಅಸಿ**—ಆಗಿದ್ದೀಯೆ । **ಬಟ್**—ಇದು ಸತ್ಯವು । **ದೇವ**—ಪ್ರಕಾಶಮಾನನಾದ ಎಲೈ ಸೂರ್ಯನೇ । **ದೇವಾನಾಂ**—

ದೇವತೆಗಳ ನಡುವೆ । **ಮಹ್ನಾ**—ಮಾಹಾತ್ಮ್ಯದಿಂದ । **ಮಹಾನ್**—ಅತ್ಯಧಿಕನಾಗಿ । **ಅಸಿ**—ಆಗಿದ್ದೀಯೆ । **ಸತ್ರಾ**—ಇದು ಸತ್ಯವು । **ಅಸುರ್ಯಃ**—ಅಸುರರ ನಾಶಕನಾಗಿದ್ದೀಯೆ । **ಪುರೋಹಿತಃ**—ದೇವತೆಗಳಿಗೆ ಹಿತೋಪದೇಶಕನೂ ಆಗಿದ್ದೀಯೆ । **ಜ್ಯೋತಿಃ**—ನಿನ್ನ ತೇಜಸ್ಸು । **ವಿಭುಃ**—ಸರ್ವವ್ಯಾಪಿಯಾಗಿಯೂ । **ಅದಾಭ್ಯಂ**—ಅಪ್ರತಿಹತವಾಗಿಯೂ ಇರುತ್ತದೆ.

॥ ಭಾವಾರ್ಥ ॥

ಎಲೈ ಸೂರ್ಯನೇ, ನೀನು ಕೀರ್ತಿಯಿಂದ ಎಲ್ಲರಿಗಿಂತಲೂ ಅಧಿಕನಾಗಿದ್ದೀಯೆ. ಇದು ಸತ್ಯವು. ಪ್ರಕಾಶಮಾನನಾದ ಎಲೈ ಸೂರ್ಯನೇ, ದೇವತೆಗಳ ನಡುವೆ ನೀನು ಮಾಹಾತ್ಮ್ಯದಿಂದ ಅತ್ಯಧಿಕನಾಗಿ ಇದ್ದೀಯೆ. ಇದು ಸತ್ಯವು. ನೀನು ಅಸುರರ ನಾಶಕನೂ, ದೇವತೆಗಳಿಗೆ ಹಿತೋಪದೇಶಕನೂ ಆಗಿದ್ದೀಯೆ ನಿನ್ನ ತೇಜಸ್ಸು ಸರ್ವವ್ಯಾಪಿಯಾಗಿಯೂ ಅಪ್ರತಿಹತವಾಗಿಯೂ ಇರುತ್ತದೆ

English Translation

Verily, O Sun, you are great in fame ; O god, you are indeed mighty among the gods in might ; you are the slayer of the Asuras, and the preceptor(of the gods); your glory is widespread and to be marred by none.

॥ ಸಂಹಿತಾಪಾಠಃ ॥

ಇಯಂ ಯಾ ನೀಚ್ಯರ್ಕಿಣೀ ರೂಪಾ ರೋಹಿಣ್ಯಾ ಕೃತಾ ।
ಚಿತ್ರೇವ ಪ್ರತ್ಯದರ್ಶ್ಯಾಯತ್ಯಂತರ್ದಶಸು ಬಾಹುಷು ॥ ೧೩ ॥

॥ ಪದಪಾಠಃ ॥

ಇಯಂ । ಯಾ । ನೀಚೀ । ಅರ್ಕಿಣೀ । ರೂಪಾ । ರೋಹಿಣ್ಯಾ । ಕೃತಾ ।
ಚಿತ್ರಾಽಇವ । ಪ್ರತಿ । ಅದರ್ಶಿ । ಆಽಯತೀ । ಅಂತಃ । ದಶಽಸು । ಬಾಹುಷು ॥ ೧೩ ॥

॥ ಸಾಯಣಭಾಷ್ಯಂ ॥

ಅಸ್ಯಾಮೃಚ್ಯುಷಸಃ ಸ್ತುತಿಃ ಸೂರ್ಯಪ್ರಭಾಯಾ ವಾ । ಯೇಯಂ ನೀಚ್ಯವಾಙ್ಮುಖ್ಯರ್ಕಿಣೀ ಸ್ತುತಿಮತೀ ರೂಪಾ ರೂಪವತೀ ರೋಹಿಣ್ಯಾ ಪ್ರಕಾಶಯುಕ್ತಾ ಕೃತೋಷಾಃ ಸೂರ್ಯಪ್ರಭಾ ವೋತ್ಪಾದಿತಾ ಸಾಂತಬ್ರಹ್ಮಾಂಡಸ್ಯ ಮಧ್ಯೇ ಬಾಹುಷು ಬಾಹುಸ್ಥಾನೀಯಾಸು ದಶಸು ದಶಸಂಖ್ಯಾಕಾಸು ದಿಕ್ಷ್ವಾಯತ್ಯಾಗಚ್ಛತೀ ಚಿತ್ರೇವ ಚಿತ್ರಾ ಗೌರಿವ ಪ್ರತ್ಯದರ್ಶಿ । ಸರ್ವೈರದೃಶ್ಯತ ॥

॥ ಪ್ರತಿಪದಾರ್ಥ ॥

**ಯಾ ಇಯಂ**—ಯಾವ ಈ ಸೂರ್ಯಪ್ರಭೆಯು । **ನೀಚೀ**—ಅಧೋಮುಖವಾದ ಪ್ರಸರವುಳ್ಳವಳೂ । **ಅರ್ಕಿಣೀ**—ಸ್ತುತಿಪಾತ್ರಳೂ । **ರೂಪಾ**—ಸೌಂದರ್ಯವತಿಯೂ । **ರೋಹಿಣ್ಯಾ**—ಪ್ರಕಾಶಯುಕ್ತಳೂ ಆಗಿ । **ಕೃತಾ**—ನಿರ್ಮಿತಳಾಗಿದ್ದಾಳೆಯೋ ಅವಳು । **ಅಂತಃ**—ಬ್ರಹ್ಮಾಂಡದ ಮಧ್ಯದಲ್ಲಿ । **ಬಾಹುಷು**—ತನ್ನ ಬಾಹುಸ್ಥಾನೀಯವಾದ । **ದಶಸು**—ಹತ್ತು ದಿಕ್ಕುಗಳಲ್ಲಿಯೂ । **ಆಯತೀ**—ಬರುತ್ತಿರುವಾಗ । **ಚಿತ್ರೇವ**—ಚಿತ್ರವರ್ಣವುಳ್ಳ ಗೋವಿನಂತೆ । **ಪ್ರತ್ಯದರ್ಶಿ**—ಕಾಣಲ್ಪಡುತ್ತಾಳೆ.

॥ ಭಾವಾರ್ಥ ॥

ಯಾವ ಈ ಸೂರ್ಯಪ್ರಭೆಯೆಂಬದೇವಿಯು ಅಧೋಮುಖವಾದ ಪ್ರಸರವುಳ್ಳವಳೂ, ಸ್ತುತಿಯುಕ್ತಳೂ, ಸೌಂದರ್ಯವತಿಯೂ, ಪ್ರಕಾಶಯುಕ್ತಳೂ ಆಗಿ ನಿರ್ಮಿತಳಾಗಿದ್ದಾಳೆಯೋ ಅವಳು ಬ್ರಹ್ಮಾಂಡದ ಮಧ್ಯದಲ್ಲಿ ತನ್ನ ಬಾಹುಸ್ಥಾನೀಯವಾದ ಹತ್ತು ದಿಕ್ಕುಗಳಲ್ಲಿಯೂ ಬರುತ್ತಿರುವಾಗ ಚಿತ್ರವರ್ಣವುಳ್ಳ ಗೋವಿನಂತೆ ಕಾಣಲ್ಪಡುತ್ತಾಳೆ

## English Translation

She who was created beautiful and bright, bending downwards and receiving all praise, has been seen within (the world), like a brindled cow, advancing to the ten regions (spread out) like arms

॥ ವಿಶೇಷವಿಷಯಗಳು ॥

**ಯಾ ಇಯಂ**—ಎಂಬುದಕ್ಕೆ ಯಾವ ಈ ಉಷೋದೇವಿಯು ಎಂದೂ ಅರ್ಥಮಾಡಬಹುದು ಉಳಿದ ವಿಶೇಷಣಗಳೆಲ್ಲವೂ ಉಷೋದೇವಿಯ ಸ್ವರೂಪವನ್ನೂ ವರ್ಣಿಸುತ್ತವೆ

॥ ಸಂಹಿತಾಪಾಠಃ ॥

ಪ್ರಜಾ ಹ ತಿಸ್ರೋ ಅತ್ಯಾಯಮೀಯುರ್ನ್ಯ೧ನ್ಯಾ ಅರ್ಕಮಭಿತೋ ವಿವಿಶ್ರೇ ।
ಬೃಹದ್ಧ ತಸ್ಥೌ ಭುವನೇಷ್ವಂತಃ ಪವಮಾನೋ ಹರಿತ ಆ ವಿವೇಶ ॥ ೧೪ ॥

॥ ಪದಪಾಠಃ ॥

ಪ್ರಽಜಾಃ । ಹ । ತಿಸ್ರಃ । ಅತಿಽಆಯಂ । ಈಯುಃ । ನಿ । ಅನ್ಯಾಃ । ಅರ್ಕಂ । ಅಭಿತಃ । ವಿವಿಶ್ರೇ ।
ಬೃಹತ್ । ಹ । ತಸ್ಥೌ । ಭುವನೇಷು । ಅಂತರಿತಿ । ಪವಮಾನಃ । ಹರಿತಃ । ಆ । ವಿವೇಶ ॥ ೧೪ ॥

॥ ಸಾಯಣಭಾಷ್ಯಂ ॥

**ಯಾಸ್ತಿಸ್ರಃ ಪ್ರಜಾ ಅತ್ಯಾಯಮೀಯುಃ ಅತ್ಯಾಯಮಾಯನ್ ಅನ್ಯಾಸ್ತಾ ಇಮಾಃ ಪ್ರಜಾ ಅರ್ಕಮರ್ಚನೀಯಮಗ್ನಿಮಭಿತೋ ವಿವಿಶ್ರೇ । ಅಭಿತೋ ನಿವಿಷ್ಟಾಸ್ತತೋ ನ ಪರಾಬಭೂವುಃ । ಭುವನೇಷ್ವಂತರ್ಮಧ್ಯೇ ಬೃಹನ್ಮಹಾನಸಾವಾದಿತ್ಯಃ। ಪ್ರಜಾಪತಿರಿತ್ಯೇಕೇ। ತಸ್ಥೌ। ಪ್ರಕಾಶಯನ್ನತಿಷ್ಠತ್। ಹರಿತೋ ದಿಶಃ ಪವಮಾನೋ ವಾಯುರಾ ವಿವೇಶ । ಆವಿಷ್ಟಃ । ತಥಾ ಚೈತರೇಯಬ್ರಾಹ್ಮಣಂ । ಪ್ರಜಾ ಹ ತಿಸ್ರೋ ಅತ್ಯಾಯಮೀಯುರಿತಿ ಯಾ ವೈ ತಾ ಇಮಾಃ ಪ್ರಜಾಸ್ತಿಸ್ರೋ ಅತ್ಯಾಯಮಾಯಂಸ್ತಾನೀ-ಮಾನಿ ವಯಾಂಸಿ ವಂಗಾವಗಧಾಶ್ಚೇರಪಾದಾಃ । ನ್ಯನ್ಯಾ ಅರ್ಕಮಭಿತೋ ವಿವಿಶ್ರ ಇತಿ ತಾ ಇಮಾಃ ಪ್ರಜಾ ಅರ್ಕಮಭಿತೋ ನಿವಿಷ್ಟಾ ಇಮಮೇವಾಗ್ನಿಂ ಬೃಹದ್ಧ ತಸ್ಥೌ ಭವನೇಷ್ವಂತರಿತ್ಯದ ಉ ಏವ ಬೃಹದ್ಭುವನೇಷ್ವಂತರಸಾವಾದಿತ್ಯಃ ಪವಮಾನೋ ಹರಿತ ಆ ವಿವೇಶೇತಿ ವಾಯುರೇವ ಪವಮಾನೋ ದಿಶೋ ಹರಿತ ಆವಿಷ್ಟಃ॥ ಐ ಆ. ೨-೧-೧। ಇತಿ। ವಾಜಸನೇಯಿನೋಽಪ್ಯಾಮನಂತಿ । ಸ ತಪೋಽತಪ್ಯತ ಸ ಪ್ರಜಾ ಅಸೃಜತ ತಾ ಅಸ್ಯ ಪ್ರಜಾಃ ಸೃಷ್ಟಾಃ ಪರಾಬಭೂವುಸ್ತಾನೀಮಾನಿ ವಯಾಂಸೀತ್ಯುಪಕ್ರಮ್ಯ ಪ್ರಜಾ ಹ ತಿಸ್ರೋ ಅತ್ಯಾಯಮೀಯುರಿತಿ ಯಾ ಅಮೂಃ ಪ್ರಜಾ ಅತ್ಯಾಯನ್ ನ್ಯನ್ಯಾ ಅರ್ಕಮಭಿತೋ ವಿವಿಶ್ರ ಇತ್ಯಗ್ನಿರ್ವಾ ಅರ್ಕಸ್ತಮಿಮಾಃ ಪ್ರಜಾ ಅಭಿತೋ ನಿವಿಷ್ಟಾಸ್ತಾ ಇಮಾಃ ಪರಾಭೂತಾಃ । ಬೃಹದ್ಧ ತಸ್ಥೌ ಭುವನೇಷ್ವಂತರಿತಿ ಪ್ರಜಾಪತಿಮೇವೈತದಭ್ಯನೂಕ್ತಂ ಪವಮಾನೋ ಹರಿತ ಆ ವಿವೇಶೇತಿ ದಿಶೋ ವೈ ಹರಿತಸ್ತಾ ಅಯಂ ಪವಮಾನ ಆವಿಷ್ಟಃ । ಶತ. ೨-೫-೧-೧ ರಿಂದ ೫ । ಇತಿ ॥**

॥ ಪ್ರತಿಪದಾರ್ಥ ॥

**ತಿಸ್ರಃ ಹ ಪ್ರಜಾಃ**—ಪ್ರಜಾಪತಿಯಿಂದ ಸೃಷ್ಟವಾದ ಮೂರು ವಿಧವಾದ ಪ್ರಜೆಗಳೂ । **ಅತ್ಯಾಯಂ**—ಸಾವನ್ನು । **ಈಯುಃ**—ಹೊಂದಿದವು । **ಅನ್ಯಾಃ**—ಉಳಿದವು । **ಅರ್ಕಂ ಅಭಿತಃ**—ಪೂಜ್ಯನಾದ ಅಗ್ನಿಯನ್ನು ಸುತ್ತುವರಿದು । **ನಿ ವಿವಿಶ್ರೇ**—ಆಶ್ರಯಿಸಿ ಕುಳಿತವು । **ಬೃಹತ್**—ಮಹಾತ್ಮನಾದ ಆದಿತ್ಯನು । **ಭುವನೇಷು ಅಂತಃ**—ಸಕಲಲೋಕಗಳ ಮಧ್ಯಭಾಗದಲ್ಲಿ । **ತಸ್ಥೌ ಹ**—ಸ್ಥಾಪಿತನಾಗಿದ್ದಾನೆ । **ಪವಮಾನಃ**—ವಾಯುವು । **ಹರಿತಃ**—ಸಕಲ ದಿಕ್ಕುಗಳನ್ನೂ । **ಆ ವಿವೇಶ**—ಪ್ರವೇಶಿಸಿದ್ದಾನೆ.

॥ ಭಾವಾರ್ಥ ॥

ಪ್ರಜಾಪತಿಯಿಂದ ಸೃಷ್ಟವಾದ ಮೂರು ವಿಧವಾದ ಪ್ರಜೆಗಳೂ ಸಾವನ್ನು ಹೊಂದಿದವು. ಉಳಿದ ಪ್ರಜೆಗಳು ಪೂಜ್ಯನಾದ ಅಗ್ನಿಯನ್ನು ಆಶ್ರಯಿಸಿ ಕುಳಿತವು. ಮಹಾತ್ಮನಾದ ಆದಿತ್ಯನು ಸಕಲಲೋಕಗಳ ಮಧ್ಯಭಾಗದಲ್ಲಿ ಸ್ಥಾಪಿತನಾಗಿದ್ದಾನೆ. ವಾಯುವು ಸಕಲ ದಿಕ್ಕುಗಳನ್ನೂ ಪ್ರವೇಶಿಸಿದ್ದಾನೆ.

## English Translation

Three kinds of creatures went to destruction ; the others came before Agni ; the mighty one (the Sun) stood within the worlds ; (Vayu), the purifier, entered the quarters of the sky.

॥ ಸಂಹಿತಾಪಾಠಃ ॥

ಮಾತಾ ರುದ್ರಾಣಾಂ ದುಹಿತಾ ವಸೂನಾಂ ಸ್ವಸಾದಿತ್ಯಾನಾಮಮೃತಸ್ಯ ನಾಭಿಃ ।
ಪ್ರ ನು ವೋಚಂ ಚಿಕಿತುಷೇ ಜನಾಯ ಮಾ ಗಾಮನಾಗಾಮದಿತಿಂ ವಧಿಷ್ಟ ॥ ೧೫ ॥

॥ ಪದಪಾಠಃ ॥

ಮಾತಾ । ರುದ್ರಾಣಾಂ । ದುಹಿತಾ । ವಸೂನಾಂ । ಸ್ವಸಾ । ಆದಿತ್ಯಾನಾಂ । ಅಮೃತಸ್ಯ । ನಾಭಿಃ ।
ಪ್ರ । ನು । ವೋಚಂ । ಚಿಕಿತುಷೇ । ಜನಾಯ । ಮಾ । ಗಾಂ । ಅನಾಗಾಂ । ಅದಿತಿಂ । ವಧಿಷ್ಟ ॥೧೫॥

॥ ಸಾಯಣಭಾಷ್ಯಂ ॥

ಅಸ್ಮಿನ್ ದ್ವ್ಯೃಚೇ ಗೌಃ ಸ್ತೂಯತೇ । ಯಾ ಗೌ ರುದ್ರಾಣಾಂ ಮರುತಾಂ ಮಾತಾ ಜನನೀ ವಸೂನಾಂ ದುಹಿತಾ ಪುತ್ರ್ಯಾದಿತ್ಯಾನಾಂ ಸ್ವಸಾ ಭಗಿನ್ಯಮೃತಸ್ಯ ಪಯಸೋ ನಾಭಿರಾವಾಸಸ್ಥಾನಂ ತಾಮನಾಗಾಮನಾಗಸಮದಿತಿಮದೀನಾಂ ಗಾಂ ಗೋರೂಪಾಂ ದೇವೀಂ ಮಾ ವಧಿಷ್ಟ ಹೇ ಜನಾಃ ಮಾ ಹಿಂಸಿಷ್ಟೇತಿ ಚಿಕಿತುಷೇ ಚೇತನಾವತೇ ಜನಾಯ ನ್ವಿದಾನೀಂ ಪ್ರ ವೋಚಂ । ಅಹಂ ಪ್ರಾವೋಚಮಿತಿ ಶುಶ್ರೂಷಮಾಣೇಭ್ಯ ಉಪದೇಶಃ ॥

॥ ಪ್ರತಿಪದಾರ್ಥ ॥

ರುದ್ರಾಣಾಂ—ರುದ್ರರಿಗೆ । ಮಾತಾ—ಜನನಿಯೂ । ವಸೂನಾಂ—ವಸುಗಳಿಗೆ । ದುಹಿತಾ—ಪುತ್ರಿಯೂ । ಆದಿತ್ಯಾನಾಂ—ಆದಿತ್ಯರಿಗೆ । ಸ್ವಸಾ—ಭಗಿನಿಯೂ । ಅಮೃತಸ್ಯ—ಅಮೃತರೂಪವಾದ ಕ್ಷೀರಕ್ಕೆ । ನಾಭಿಃ—ಉತ್ಪತ್ತಿಸ್ಥಾನವೂ । ಅನಾಗಾಂ—ಪಾಪರಹಿತಳೂ । ಅದಿತಿಂ—ಪೂಜ್ಯಳೂ । ಗಾಂ—ಗೋರೂಪಳೂ ಆದ ದೇವಿಯನ್ನು । ಮಾ ವಧಿಷ್ಟ—ಹಿಂಸಿಸಬೇಡಿರಿ ಎಂದು । ಚಿಕಿತುಷೇ—ಪ್ರಾಜ್ಞರಾದ । ಜನಾಯ—ಜನರಿಗೆ। ನು—ಈಗ । ಪ್ರ ವೋಚಂ—ಹೇಳಿದೆನು.

॥ ಭಾವಾರ್ಥ ॥

ರುದ್ರರಿಗೆ (ಮರುತ್ತುಗಳಿಗೆ) ಜನನಿಯೂ, ವಸುಗಳಿಗೆ ಪುತ್ರಿಯೂ, ಆದಿತ್ಯರಿಗೆ ಭಗಿನಿಯೂ, ಅಮೃತರೂಪವಾದ ಕ್ಷೀರಕ್ಕೆಉತ್ಪತ್ತಿಸ್ಥಾನವೂ, ಪಾಪರಹಿತಳೂ, ಪೂಜ್ಯಳೂ, ಗೋರೂಪಳೂ ಆದ ದೇವಿಯನ್ನು ಹಿಂಸಿಸಬೇಡಿರಿ ಎಂದು ಪ್ರಾಜ್ಞರಾದ ಜನರಿಗೆ ಈಗ ಹೇಳಿದೆನು (ಹೇಳುತ್ತೇನೆ).

## English Translation

(She who is) the mother of the Rudras, the Daughter of the Vasus, the sister of the Adityas, the home of ambrosia,—I have spoken to men of understanding,—kill not her, the sinless inviolate cow.

॥ ಸಂಹಿತಾಪಾಠಃ ॥

ವಚೋವಿದಂ ವಾಚಮುದೀರಯಂತೀಂ ವಿಶ್ವಾಭಿರ್ಧೀಭಿರುಪತಿಷ್ಠಮಾನಾಂ।
ದೇವೀಂ ದೇವೇಭ್ಯಃ ಪರ್ಯೇಯುಷೀಂ ಗಾಮಾ ಮಾವೃಕ್ತ ಮರ್ತ್ಯೋ
ದಭ್ರಚೇತಾಃ ॥ ೧೬ ॥

॥ ಪದಪಾಠಃ ॥

ವಚಃऽವಿದಂ । ವಾಚಂ । ಉತ್ऽಈರಯಂತೀ । ವಿಶ್ವಾಭಿಃ । ಧೀಭಿಃ । ಉಪऽತಿಷ್ಠಮಾನಾಂ ।
ದೇವೀಂ । ದೇವೇಭ್ಯಃ । ಪರಿ । ಆऽಈಯುಷೀಂ । ಗಾಂ । ಆ । ಮಾ । ಅವೃಕ್ತ । ಮರ್ತ್ಯಃ । ದಭ್ರऽ-
ಚೇತಾಃ ॥ ೧೬ ॥

॥ ಸಾಯಣಭಾಷ್ಯಂ ॥

ವಚೋವಿದಂ ವಚಸೋ ಲಂಭಯಿತ್ರೀಂ ವಾಚಮುದೀರಯಂತೀಂ ಪಯಃ ಪೀತ್ವಾ ಪಶ್ಚಾದ್ವಾಚಮುದೀರಯಂತೀಂ । ಕ್ಷುಧಿತೋ ಹಿ ಜನೋ ನ ವಾಚಮುದೀರಯತಿ ಭುಕ್ತ್ವಾ ಪಶ್ಚಾದುದೀರಯತಿ । ವಿಶ್ವಾಭಿಃ ಸರ್ವಾಭಿರ್ಧೀಭಿರ್ವಾಗ್ಭಿರುಪತಿಷ್ಠಮಾನಾಂ ದೇವೀಂ ದ್ಯೋತಮಾನಾಂ ದೇವೇಭ್ಯೋ ದೇವಾರ್ಥಂ ಮಾ ಮಾಮೇಯುಷೀಮುಪಗಚ್ಛಂತೀಂ ಗಾಂ ದಭ್ರಚೇತಾ ಅಲ್ಪಬುದ್ಧಿರ್ಮರ್ತ್ಯೋ ಮನುಷ್ಯಃ ಪರ್ಯಾವೃಕ್ತ । ಪರಿವರ್ಜಯತಿ ॥

॥ ಪ್ರತಿಪದಾರ್ಥ ॥

**ವಚೋವಿದಂ**—ವಾಕ್ಕನ್ನು ತಿಳಿಸಿಕೊಡುವವಳೂ । **ವಾಚಂ**—ವಾಕ್ಕನ್ನು । **ಉದೀರಯಂತೀಂ**—ಉಚ್ಚರಿಸುವವಳೂ । **ವಿಶ್ವಾಭಿಃ**—ಸಮಸ್ತವಾದ । **ಧೀಭಿಃ**—ವಾಕ್ಕುಗಳಿಂದಲೂ । **ಉಪತಿಷ್ಠಮಾನಾಂ**—ಸೇವಿಸಲ್ಪಡುವವಳೂ । **ದೇವೀಂ**—ಪ್ರಕಾಶಮಾನಳೂ । **ದೇವೇಭ್ಯಃ**—ದೇವತೆಗಳ ಪೂಜೆಗಾಗಿ । **ಮಾಂ**—ನನಗೆ । **ಏಯುಷೀಂ**—ಸಹಾಯಮಾಡಲು ಬರುವವಳೂ । **ಗಾಂ**—ಗೋರೂಪಳೂ ಆದ ಈ ದೇವಿಯನ್ನು । **ದಭ್ರಚೇತಾಃ**—ಅಲ್ಪಬುದ್ಧಿಯುಳ್ಳ । **ಮರ್ತ್ಯಃ**—ಮಾನವನು ಮಾತ್ರ । **ಪರಿ ಆ ಅವೃಕ್ತ**—ಪರಿತ್ಯಜಿಸುತ್ತಾನೆ.

॥ ಭಾವಾರ್ಥ ॥

ವಾಕ್ಕನ್ನು ತಿಳಿಸಿಕೊಡುವವಳೂ, ವಾಕ್ಕನ್ನು ಉಚ್ಚರಿಸುವವಳೂ, ಸಮಸ್ತವಾದ ವಾಕ್ಕುಗಳಿಂದಲೂ ಸೇವಿಸಲ್ಪಡುವವಳೂ, ಪ್ರಕಾಶಮಾನಳೂ, ದೇವತೆಗಳ ಪೂಜೆಗಾಗಿ ನನಗೆ ಸಹಾಯಮಾಡಲು ಬರುವವಳೂ ಗೋರೂಪಳೂ ಆದ ಈ ದೇವಿಯನ್ನು ಅಲ್ಪಬುದ್ಧಿಯುಳ್ಳ ಮಾನವನು ಮಾತ್ರ ಪರಿತ್ಯಜಿಸುತ್ತಾನೆ.

## English Translation

The divine cow, who herself utt ers speech and gives speech to others who comes attended by every kind of utterance, who helps me for my worship of the gods,—it is only the fool who abandons her.

---

## ನೂರ ಎರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ತ್ವಮಗ್ನ ಇತಿ ದ್ವಾವಿಂಶತ್ಯೃಚಂ ನವಮಂ ಸೂಕ್ತಂ ಗಾಯತ್ರಮಾಗ್ನೇಯಂ । ಭೃಗುಗೋತ್ರಃ ಪ್ರಯೋಗೋ ನಾಮರ್ಷಿಃ। ಬಾರ್ಹಸ್ಪತ್ಯಃ ಪಾವಕವಿಶೇಷೇಣ ವಿಶಿಷ್ಟೋಽಗ್ನಿರ್ಋಷಿರ್ವಾ। ಯದ್ವಾ। ಸಹೋನಾಮ್ನಃ ಪುತ್ರೌ ಗೃಹಪತಿಯವಿಷ್ಠಸಂಜ್ಞಕೌ ದ್ವಾವಗ್ನೀ । ತೌ ಸಹೇದಂ ಸೂಕ್ತಮಪಶ್ಯತಾಂ । ತಸ್ಮಾದಸ್ಯ ತಾವೃಷೀ । ಅಥವಾ ತಯೋರನ್ಯತರಃ । ತಥಾ ಚಾನುಕ್ರಾಂತಂ । ತ್ವಮಗ್ನೇ ದ್ವ್ಯಧಿಕಾ ಭಾರ್ಗವಃ ಪ್ರಯೋಗೋ ಬಾರ್ಹಸ್ಪತ್ಯೋ ವಾಗ್ನಿಃ ಪಾವಕಃ ಸಹಸಃ ಸುತಯೋರ್ವಾಗ್ನ್ಯೋರ್ಗೃಹಪತಿಯವಿಷ್ಠಯೋರ್ವಾನ್ಯತರ ಆಗ್ನೇಯಂ ತ್ವಿತಿ॥ ಪ್ರಾತರನುವಾಕಸ್ಯಾಗ್ನೇಯೇ ಕ್ರತೌ ಗಾಯತ್ರೇ ಛಂದಸ್ಯಾದಿತೋಽಷ್ಟಾದಶರ್ಚಃ । ಸೂತ್ರಿತಂ ಚ । ತ್ವಮಗ್ನೇ ಬೃಹದ್ವಯ ಇತ್ಯಷ್ಟಾದಶಾರ್ಚಂತಸ್ತ್ವೇತಿ ಸೂಕ್ತೇ । ಆ ೪-೧೩ । ಇತಿ॥ ದೇವಸುವಾಂ ಹವಿಃಷ್ವಗ್ನೇರ್ಗೃಹಪತೇರನುವಾಕ್ಯಾ ತ್ವಮಗ್ನೇ ಬೃಹದ್ವಯ ಇತ್ಯೇಷಾ । ಸೂತ್ರಿತಂ ಚ । ತ್ವಮಗ್ನೇ ಬೃಹದ್ವಯೋ ಹವ್ಯವಾಳಗ್ನಿರಜರಃ ಪಿತಾ ನಃ । ಆ. ೪-೧೧ । ಇತಿ ॥ ಅನ್ವಾರಂಭಣೀಯಾಯಾಮಗ್ನೇರ್ಭಗಿನೋಽನುವಾಕ್ಯಾ ಆ ಸವಂ ಸವಿತುರಿತ್ಯೇಷಾ । ಸೂತ್ರಿತಂ ಚ । ಆ ಸವಂ ಸವಿತುರ್ಯಥಾ ಸ ನೋ ರಾಧಾಂಸ್ಯಾ ಭರ । ಆ. ೨-೮ । ಇತಿ ॥ ಅಭಿಪ್ಲವಿಕೇಷೂಕ್ಥೇಷು ತೃತೀಯಸವನೇ ಮೈತ್ರಾವರುಣಸ್ಯಾಗ್ನಿಂ ವೋ ವೃಧಂತಮಿತಿ ವೈಕಲ್ಪಿಕಃ ಸ್ತೋತ್ರಿಯಸ್ತೃಚಃ। ಸೂತ್ರಿತಂ ಚ । ಅಗ್ನಿಂ ವೋ ವೃಧಂತಮಗ್ನೇ ಯಂ ಯಜ್ಞಮಧ್ವರಂ । ಆ । ೭-೮ । ಇತಿ ॥ ದಶಮೇಽಹನೀಮಂ ನೋ ಯಜ್ಞಮಿತಿ ಸ್ತೋಕಸೂಕ್ತಸ್ಯ ದ್ವಿತೀಯಸ್ಯ ಸ್ಥಾನೇಽಗ್ನೇ ಘೃತಸ್ಯೇತ್ಯೇಷಾ । ಸೂತ್ರಿತಂ ಚ । ಸ್ತೋಕಸೂಕ್ತಸ್ಯ ದ್ವಿತೀಯತೃತೀಯಯೋಃ ಸ್ಥಾನೇಽಗ್ನೇ ಘೃತಸ್ಯ ಧೀತಿಭಿರುಭೇ ಸುಶ್ಚಂದ್ರ ಸರ್ಪಿಷ ಇತ್ಯೇತೇ । ಆ. ೮-೧೨ । ಇತಿ ॥**

ಅನುವಾದವು- **ತ್ವಮಗ್ನೇ** ಎಂಬ ಈ ಸೂಕ್ತವು ಹತ್ತನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಇಪ್ಪತ್ತೆರಡು ಋಕ್ಕುಗಳಿರುವವು. ಈ ಸೂಕ್ತಕ್ಕೆ ಭೃಗುಗೋತ್ರೋತ್ಪನ್ನನಾದ ಪ್ರಯೋಗ ಎಂಬುವನು ಋಷಿಯು, ಅಥವಾ ಅಗ್ನಿಃ ಪಾವಕಃ ಬಾರ್ಹಸ್ಪತ್ಯಃ ಎಂಬುವನು ಋಷಿಯು. ಅಗ್ನಿಯು ದೇವತೆಯು, ಗಾಯತ್ರೀಛಂದಸ್ಸು. ಅಥವಾ ಈ ಸೂಕ್ತಕ್ಕೆ ಸಹಃ ಎಂಬ ಋಷಿಯ ಪುತ್ರರಾದ ಗೃಹಪತಿ ಮತ್ತು ಯವಿಷ್ಠ ಎಂಬ ಹೆಸರಿನ ಇಬ್ಬರು ಋಷಿಗಳಿಗೆ ಅಗ್ನೀ ಎಂಬ ಹೆಸರೂ ಇರುವುದು. ಈ ಇಬ್ಬರು ಋಷಿಗಳು ಈ ಸೂಕ್ತವನ್ನು ಪ್ರತ್ಯಕ್ಷೀಕರಿಸಿದರು. ಆದ್ದರಿಂದ ಈ ಸೂಕ್ತಕ್ಕೆ ಅವರಿಬ್ಬರೂ ಋಷಿಗಳು. ಅಥವಾ ಇವರಲ್ಲದೆ ಮತ್ತೆ ಬೇರೆ ಯಾರಾದರೂ ಈ ಸೂಕ್ತಕ್ಕೆ

ಋಷಿಯಾಗಿರಬಹುದು. ಅನುಕ್ರಮಣಿಕೆಯಲ್ಲಿ—**ತ್ವಮಗ್ನೇ ದ್ವ್ಯಧಿಕಾ ಭಾರ್ಗವಃ ಪ್ರಯೋಗೋ ಬಾರ್ಹಸ್ಪತ್ಯೋ ವಾಗ್ನಿಃ ಪಾವಕಃ ಸಹಸಃ ಸುತಯೋರ್ವಾಗ್ನ್ಯೋರ್ಗೃಹಪತಿಯವಿಷ್ಠಯೋರ್ವಾನ್ಯತರ ಆಗ್ನೇಯಂ ತು** ಎಂದು ಹೇಳಿರುವುದು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯಕ್ರತುಸಂಬಂಧವಾದ ಗಾಯತ್ರೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ಮೊದಲ ಹದಿನೆಂಟು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—**ತ್ವಮಗ್ನೇ ಬೃಹದ್ವಯ ಇತ್ಯಷ್ಟಾದಶಾರ್ಚಂತಸ್ತ್ವೇತಿ ಸೂಕ್ತೇ** ಎಂಬ ಸೂತ್ರದಿಂದ (ಆ. ೪-೧೩) ವಿವೃತವಾಗಿರುವುದು. ದೇವಸುವ ಎಂಬ ದೇವತೆಗಳನ್ನುದ್ದೇಶಿಸಿ ಮಾಡುವ ಎಂಟು ಹವಿರ್ಹೋಮಗಳಲ್ಲಿ ಗೃಹಪತಿರಗ್ನಿ ಎಂಬ ದೇವತೆಗಳನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ತ್ವಮಗ್ನೇ ಬೃಹದ್ವಯ** ಎಂಬ ಈ ಸೂಕ್ತದ ಮೊದಲನೆಯ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ತ್ವಮಗ್ನೇ ಬೃಹದ್ವಯೋ ಹವ್ಯವಾಳಗ್ನಿರಜರಃ ಪಿತಾ ನಃ** ಎಂಬ ಸೂತ್ರದಿಂದ (ಆ. ೪-೧೧) ವಿವೃತವಾಗಿರುವುದು ಅನ್ವಾರಂಭಣೀಯೇಷ್ಟಿಯಲ್ಲಿ ಅಗ್ನಿರ್ಭಗಿನ್ ಎಂಬ ದೇವತೆಯನ್ನುದ್ದೇಶಿಸಿ ಮಾಡುವ ಹೋಮದಲ್ಲಿ **ಆ ಸವಂ ಸವಿತುಃ** ಎಂಬ ಈ ಸೂಕ್ತದ ಆರನೆಯ ಋಕ್ಕನ್ನು ಅನುವಾಕ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ಸವಂ ಸವಿತುರ್ಯಥಾ ಸ ನೋ ರಾಧಾಂಸ್ಯಾ ಭರ** ಎಂಬ ಸೂತ್ರದಿಂದ (ಆ. ೨.೮) ವಿವೃತವಾಗಿರುವುದು. ಅಭಿಪ್ಲವಸಂಬಂಧವಾದ ಉಕ್ಥ್ಯಯಾಗಗಳಲ್ಲಿ ತೃತೀಯಸವನಕಾಲದಲ್ಲಿ ಮೈತ್ರಾವರುಣನೆಂಬ ಋತ್ವಿಜನು **ಅಗ್ನಿಂ ವೋ ವೃಧಂತಂ** ಎಂದು ಮೊದಲಾಗುವ ೭-೯ ಮೂರು ಋಕ್ಕುಗಳನ್ನು ವೈಕಲ್ಪಿಕಸ್ತೋತ್ರಿಯ ತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಅಗ್ನಿಂ ವೋ ವೃಧಂತಮಗ್ನೇ ಯಂ ಯಜ್ಞಮಧ್ವರಂ** ಎಂಬ ಸೂತ್ರದಿಂದ (ಆ- ೭ ೮) ವಿವೃತವಾಗಿರುವುದು. ಮತ್ತು ಯಾಗದ ಹತ್ತನೆಯ ದಿವಸ **ಇಮಂ ನೋ ಯಜ್ಞಂ** ಎಂಬ ಸ್ತೋಕಸೂಕ್ತದ ಎರಡನೆಯ ಋಕ್ಕಿನ ಸ್ಥಾನದಲ್ಲಿ **ಅಗ್ನೇ ಘೃತಸ್ಯ** ಎಂಬ ಹದಿನಾರನೆಯ ಋಕ್ಕನ್ನು ಪಠಿಸಬಹುದೆಂದು ಆಶ್ವಲಾಯನಶ್ರೌತಸೂತ್ರದ—**ಸ್ತೋಕಸೂಕ್ತಸ್ಯ ದ್ವಿತೀಯತೃತೀಯಯೋಃ ಸ್ಥಾನೇಽಗ್ನೇ ಘೃತಸ್ಯ ಧೀತಿಭಿರುಭೇ ಸುಶ್ಚಂದ್ರ ಸರ್ಪಿಷ ಇತ್ಯೇತೇ** ಎಂಬ ಸೂತ್ರದಿಂದ (ಆ. ೮-೧೨) ವಿವೃತವಾಗಿರುವುದು.

## ಸೂಕ್ತ—೧೦೨

ಮಂಡಲ—೮ ॥ ಅನುವಾಕ—೧೦ ॥ ಸೂಕ್ತ—೧೦೨ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೯, ೧೦, ೧೧, ೧೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೨೨ ॥
ಋಷಿಃ—ಪ್ರಯೋಗೋ ಭಾರ್ಗವ ಅಗ್ನಿರ್ವಾ ಪಾವಕೋ ಬಾರ್ಹಸ್ಪತ್ಯಃ। ಅಥವಾಗ್ನೀ ಗೃಹಪತಿಯವಿಷ್ಠೌ ಸಹಸಃ ಸುತೌ ತಯೋರ್ವಾನ್ಯತರಃ ।
ದೇವತಾ—ಅಗ್ನಿಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ತ್ವಮ॒ಗ್ನೇ ಬೃ॒ಹದ್ವಯೋ॒ ದಧಾ॑ಸಿ ದೇವ ದಾ॒ಶುಷೇ॑ ।**

**ಕ॒ವಿರ್ಗೃ॒ಹಪ॑ತಿ॒ರ್ಯುವಾ॑ ॥ ೧ ॥**

॥ ಪದಪಾಠಃ ॥

ತ್ವಂ । ಅಗ್ನೇ । ಬೃಹತ್ । ವಯಃ । ದಧಾಸಿ । ದೇವ । ದಾಶುಷೇ ।

ಕವಿಃ । ಗೃಹಽಪತಿಃ । ಯುವಾ ॥ ೧ ॥

॥ ಸಾಯಣಭಾಷ್ಯಂ ॥

ಹೇ ದೇವ ದ್ಯೋತಮಾನಾಗ್ನೇ ಕವಿಃ ಕ್ರಾಂತಕರ್ಮಾ ಗೃಹಪತಿರ್ಗೃಹಪಾಲಕೋ ಯುವಾ ನಿತ್ಯಂ ತರುಣಸ್ತ್ವಂ ದಾಶುಷೇ ಹವಿಷಾಂ ಪ್ರದಾತ್ರೇ ಯಜಮಾನಾಯ ಬೃಹದ್ವಯೋ ಮಹದನ್ನಂ ದಧಾಸಿ । ಪ್ರಯಚ್ಛಸೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ದೇವ**—ದೇವತಾತ್ಮಕನಾದ । **ಅಗ್ನೇ**-ಎಲೈ ಅಗ್ನಿಯೇ । **ಕವಿಃ**—ಪ್ರಜ್ಞಾಯುತವಾದ ಕರ್ಮಕಾರಿಯೂ । **ಗೃಹಪತಿಃ**—ಗೃಹಗಳಿಗೆ ಪಾಲಕನೂ । **ಯುವಾ**—ನಿತ್ಯತರುಣನೂ ಆದ । **ತ್ವಂ** —ನೀನೇ । **ದಾಶುಷೇ**—ಹವಿಸ್ಸನ್ನರ್ಪಿಸುವ ಯಜಮಾನನಿಗೆ । **ಬೃಹತ್**—ಪ್ರಭೂತವಾದ । **ವಯಃ**—ಅನ್ನವನ್ನು । **ದಧಾಸಿ**—ಕೊಡುವವನಾಗಿದ್ದೀಯೆ.

॥ ಭಾವಾರ್ಥ ॥

ದೇವತಾತ್ಮನಾದ ಎಲೈ ಅಗ್ನಿಯೇ, ಪ್ರಜ್ಞಾಯುತವಾದ ಕರ್ಮಕಾರಿಯೂ ಗೃಹಗಳಿಗೆ ಪಾಲಕನೂ ನಿತ್ಯತರುಣನೂ ಆದ ನೀನೇ ಹವಿಸ್ಸನ್ನರ್ಪಿಸುವ ಯಜಮಾನನಿಗೆ ಪ್ರಭೂತವಾದ ಅನ್ನವನ್ನು ಕೊಡುವವನಾಗಿದ್ದೀಯೆ.

English Translation

Divine Agni, the ever young, the wise, the protector of the household, it is you who give abundant food to the worshipper.

॥ ಸಂಹಿತಾಪಾಠಃ ॥

ಸ ನ ಈಳಾನಯಾ ಸಹ ದೇವಾँ ಅಗ್ನೇ ದುವಸ್ಯುವಾ ।

ಚಿಕಿದ್ವಿಭಾನವಾ ವಹ ॥ ೨ ॥

॥ ಪದಪಾಠಃ ॥

ಸಃ । ನಃ । ಈಳಾನಯಾ । ಸಹ । ದೇವಾನ್ । ಅಗ್ನೇ । ದುವಸ್ಯುವಾ ।

ಚಿಕಿತ್ । ವಿಭಾನೋ ಇತಿ । ವಿಽಭಾನೋ । ಆ । ವಹ ॥ ೨ ॥

॥ ಸಾಯಣಭಾಷ್ಯಂ ॥

ಹೇ ವಿಭಾನೋ ವಿಶಿಷ್ಟದೀಪ್ತೇಽಗ್ನೇ ಚಿಕಿತ್ವಾನ್ ಜ್ಞಾತಾ ಸನ್ನೋಽಸ್ಮಾಕಂ ದುವಸ್ಯುವಾ ಪರಿಚರಣ-ಶೀಲಯೇಳಾನಯಾ ಸ್ತುವತ್ಯಾ ವಾಚಾ ಸಹ ದೇವಾನಾ ವಹ ॥

॥ ಪ್ರತಿಪದಾರ್ಥ ॥

ವಿಭಾನೋ—ವಿಶಿಷ್ಟವಾದ ಕಾಂತಿಯಿಂದ ಕೂಡಿದ । **ಅಗ್ನೇ**—ಎಲೈ ಅಗ್ನಿಯೇ । **ಸಃ**—ದಿವ್ಯಗುಣಗಳುಳ್ಳ ಅದೇ ನೀನು । **ಚಿಕಿತ್**—ಎಲ್ಲವನ್ನೂ ಅರಿತವನಾಗಿ । **ದುವಸ್ಯುವಾ**—ಸೇವೆಗೆ ಯೋಗ್ಯವಾದುದೂ । **ಈಳಾನಯಾ ಸಹ**—ಸ್ತುತಿರೂಪವಾದುದೂ ಆದ ವಾಕ್ಕಿನೊಡನೆ । **ದೇವಾನ್**—ದೇವತೆಗಳನ್ನು । **ನಃ**—ನಮ್ಮಲ್ಲಿಗೆ । **ಆ ವಹ**—ಕರೆದುಕೊಂಡು ಬಾ

॥ ಭಾವಾರ್ಥ ॥

ವಿಶಿಷ್ಟವಾದ ಕಾಂತಿಯಿಂದ ಕೂಡಿದ ಎಲೈ ಅಗ್ನಿಯೇ, ದಿವ್ಯಗುಣಗಳುಳ್ಳ ಪ್ರಸಿದ್ಧನಾದ ಅದೇ ನೀನು ಎಲ್ಲವನ್ನೂ ಅರಿತವನಾಗಿ ಸೇವೆಗೆ ಯೋಗ್ಯವಾದುದೂ ಸ್ತುತಿರೂಪವಾದುದೂ ಆದ ವಾಕ್ಕಿನೊಡನೆ ದೇವತೆಗಳನ್ನು ನಮ್ಮಲ್ಲಿಗೆ ಕರೆದುಕೊಂಡು ಬಾ.

English Translation

Resplendent one, the all-knower, bring the gods hither with this our reverential hymn of praise

॥ ಸಂಹಿತಾಪಾಠಃ ॥

ತ್ವಯಾ ಹ ಸ್ವಿದ್ಯುಜಾ ವಯಂ ಚೋದಿಷ್ಠೇನ ಯವಿಷ್ಠ್ಯ ।
ಅಭಿ ಷ್ಮೋ ವಾಜಸಾತಯೇ ॥ ೩ ॥

॥ ಪದಪಾಠಃ ॥

ತ್ವಯಾ । ಹ । ಸ್ವಿತ್ । ಯುಜಾ । ವಯಂ । ಚೋದಿಷ್ಠೇನ । ಯವಿಷ್ಠ್ಯ ।
ಅಭಿ । ಸ್ಮಃ । ವಾಜಽಸಾತಯೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ಯವಿಷ್ಠ್ಯ ಯುವತಮಾಗ್ನೇ ಚೋದಿಷ್ಠೇನಾತಿಶಯೇನ ಧನಾನಾಂ ಪ್ರೇರಯಿತ್ರಾ ತ್ವಯಾ ಯುಜಾ ಸ್ವಿದ್ಧ ಸಹಾಯೇನೈವ ವಯಂ ಭಾರ್ಗವಃ ಪ್ರಯೋಗೋ ಬಾರ್ಹಸ್ಪತ್ಯಾಃ ಪಾವಕಾ ಅಗ್ನಯೋ ವಾ ವಾಜಸಾತಯೇಽನ್ನಲಾಭಾಯಾಭಿ ಸ್ಮಃ । ಶತ್ರೂನಭಿಭವೇಮ ॥

॥ ಪ್ರತಿಪದಾರ್ಥ ॥

**ಯವಿಷ್ಠ್ಯ**—ಅತ್ಯಂತ ಯುವಕನಾದ ಎಲೈ ಅಗ್ನಿಯೇ । **ಚೋದಿಷ್ಠೇನ**—ಅತಿಶಯವಾಗಿ ಧನವನ್ನು ಒದಗಿಸುವ । **ತ್ವಯಾ ಯುಜಾ ಸ್ವಿತ್ ಹ**—ನಿನ್ನ ಸಹಾಯದಿಂದ ಮಾತ್ರನೇ । **ವಯಂ**—ಭೃಗುವಂಶೋತ್ಪನ್ನರಾದ ನಾವು । **ವಾಜಸಾತಯೇ**—ಅನ್ನಲಾಭಕ್ಕಾಗಿ । **ಅಭಿ ಷ್ಮಃ**—ಶತ್ರುಗಳನ್ನು ಸೋಲಿಸಬಲ್ಲೆವು

॥ ಭಾವಾರ್ಥ ॥

ಅತ್ಯಂತ ಯುವಕನಾದ ಎಲೈ ಅಗ್ನಿಯೇ, ಅತಿಶಯವಾಗಿ ಧನವನ್ನು ಒದಗಿಸುವ ನಿನ್ನ ಸಹಾಯದಿಂದ ಮಾತ್ರನೇ, ಭೃಗುವಂಶೋತ್ಪನ್ನರಾದ ನಾವು ಅನ್ನಲಾಭಕ್ಕಾಗಿ ಶತ್ರುಗಳನ್ನು ಸೋಲಿಸಬಲ್ಲೆವು.

## English Translation

O ever youthful one, with you as our ally, the sender of wealth, we overcome (our enemies) for the attainment of food.

॥ ಸಂಹಿತಾಪಾಠಃ ॥

ಔರ್ವಭೃಗುವಚ್ಛುಚಿಮಪ್ನವಾನವದಾ ಹುವೇ ।
ಅಗ್ನಿಂ ಸಮುದ್ರವಾಸಸಂ ॥ ೪ ॥

॥ ಪದಪಾಠಃ ॥

**ಔರ್ವಭೃಗುऽವತ್ । ಶುಚಿಂ । ಅಪ್ನವಾನऽವತ್ । ಆ । ಹುವೇ ।**

**ಅಗ್ನಿಂ । ಸಮುದ್ರऽವಾಸಸಂ ॥ ೪ ॥**

॥ ಸಾಯಣಭಾಷ್ಯಂ ॥

**ಸಮುದ್ರವಾಸಸಂ ಸಮುದ್ರಮಧ್ಯವರ್ತಿನಂ ವಾಡವಂ ಶುಚಿಂ ಶುದ್ಧಮಗ್ನಿಮೌರ್ವಭೃಗುವದ್ಯಥೌರ್ವಭೃಗುರಪ್ನವಾನವದ್ಯಥಾಪ್ನವಾನಸ್ತಥಾ ಹುವೇ । ಆಹ್ವಯಾಮ್ಯಹಂ ॥**

॥ ಪ್ರತಿಪದಾರ್ಥ

**ಸಮುದ್ರವಾಸಸಂ**—ಸಮುದ್ರದ ಮಧ್ಯದಲ್ಲಿ ಬಡಬಾಗ್ನಿ ರೂಪದಿಂದಿರುವವನೂ । **ಶುಚಿಂ**—ಶುದ್ಧನೂ ಆದ । **ಅಗ್ನಿಂ**—ಅಗ್ನಿಯನ್ನು । **ಔರ್ವಭೃಗುವತ್**—ಔರ್ವಭೃಗುವಿನಂತೆಯೂ । **ಅಪ್ನವಾನವತ್**—ಅಪ್ನವಾನನಂತೆಯೂ । **ಆ ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ಸಮುದ್ರಮಧ್ಯದಲ್ಲಿ ಬಡಬಾಗ್ನಿ ರೂಪದಿಂದಿರುವವನೂ ಶುದ್ಧನೂ ಆದ ಅಗ್ನಿಯನ್ನು ಔರ್ವಭೃಗುವಿನಂತೆಯೂ ಅಪ್ನವಾನನಂತೆಯೂ ಪ್ರಾರ್ಥಿಸಿ ಕರೆಯುತ್ತೇನೆ.

## English Translation

Like Aurva Bhrigu and like Apnavana, I invoke the pure Agni, dwelling in the midst of the sea.

॥ ಸಂಹಿತಾಪಾಠಃ ॥

ಹುವೇ ವಾತಸ್ವನಂ ಕವಿಂ ಪರ್ಜನ್ಯಕ್ರಂದ್ಯಂ ಸಹಃ ।
ಅಗ್ನಿಂ ಸಮುದ್ರವಾಸಸಂ ॥ ೫ ॥

॥ ಪದಪಾಠಃ ॥

ಹುವೇ । ವಾತಽಸ್ವನಂ । ಕವಿಂ । ಪರ್ಜನ್ಯಽಕ್ರಂದ್ಯಂ । ಸಹಃ ।
ಅಗ್ನಿಂ । ಸಮುದ್ರಽವಾಸಸಂ ॥ ೫ ॥

॥ ಸಾಯಣಭಾಷ್ಯಂ ॥

ವಾತಸ್ವನಂ ವಾತಸದೃಶಧ್ವನಿಂ ಕವಿಂ ಕ್ರಾಂತಕರ್ಮಾಣಂ ಪರ್ಜನ್ಯಕ್ರಂದ್ಯಂ ಪರ್ಜನ್ಯಸದೃಶಕ್ರಂದನಂ ಸಹಃ ಸಹಸ್ವಿನಂ ವಾಡವಮಗ್ನಿಂ ಹುವೇ ಹ್ವಯಾಮಿ । ಅನ್ಯದ್ಗತಂ ॥

॥ ಪ್ರತಿಪದಾರ್ಥ ॥

**ವಾತಸ್ವನಂ**—ವಾಯುವಿನಂತೆ ಶಬ್ದಮಾಡುವವನೂ । **ಕವಿಂ**—ಪ್ರಜ್ಞಾಯುತವಾದ ಕರ್ಮಕಾರಿಯೂ **ಪರ್ಜನ್ಯಕ್ರಂದ್ಯಂ**—ಪರ್ಜನ್ಯನಂತೆ ಗರ್ಜಿಸುವವನೂ । **ಸಹಃ**—ಶಕ್ತಿಯುತನೂ । **ಸಮುದ್ರವಾಸಸಂ**—ಸಮುದ್ರಮಧ್ಯದಲ್ಲಿರುವವನೂ ಆದ । **ಅಗ್ನಿಂ**—ಬಡಬಾಗ್ನಿಯನ್ನು । **ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ.

॥ ಭಾವಾರ್ಥ ॥

ವಾಯುವಿನಂತೆ ಶಬ್ದಮಾಡುವವನೂ, ಪ್ರಜ್ಞಾಯುತವಾದ ಕರ್ಮಕಾರಿಯೂ, ಪರ್ಜನ್ಯನಂತೆ ಗರ್ಜಿಸುವವನೂ ಶಕ್ತಿಯುತನೂ ಸಮುದ್ರಮಧ್ಯದಲ್ಲಿರುವವನೂ ಆದ ಬಡಬಾಗ್ನಿಯನ್ನು ಪ್ರಾರ್ಥಿಸಿ ಕರೆಯುತ್ತೇನೆ.

## English Translation

I invoke Agni dwelling in the midst of the sea, the wise one, roaring like the wind, mighty, with a voice like Parjanya's.

॥ ಸಂಹಿತಾಪಾಠಃ ॥

ಆ ಸವಂ ಸವಿತುರ್ಯಥಾ ಭಗಸ್ಯೇವ ಭುಜಿಂ ಹುವೇ ।

ಅಗ್ನಿಂ ಸಮುದ್ರವಾಸಸಂ ॥ ೬ ॥

॥ ಪದಪಾಠಃ ॥

ಆ । ಸವಂ । ಸವಿತುಃ । ಯಥಾ । ಭಗಸ್ಯಽಇವ । ಭುಜಿಂ । ಹುವೇ ।

ಅಗ್ನಿಂ । ಸಮುದ್ರಽವಾಸಸಂ ॥ ೬ ॥

॥ ಸಾಯಣಭಾಷ್ಯಂ ॥

ಸವಿತುಃ ಪ್ರೇರಕಸ್ಯ ದೇವಸ್ಯ ಸವಂ ಯಥಾ ಪ್ರಸವಮಿವ ಭಗಸ್ಯೇವ ಭುಜಿಂ ಭಗಾಖ್ಯಸ್ಯ ದೇವಸ್ಯ ಭೋಗಮಿವ ಚ ಸಮುದ್ರವಾಸಸಮಗ್ನಿಂ ಹುವೇ । ಆಹ್ವಯಾಮಿ ॥

॥ ಪ್ರತಿಪದಾರ್ಥ ॥

**ಸವಿತುಃ**—ಜಗತ್ಪ್ರೇರಕನಾದ ಸವಿತೃವಿನ । **ಸವಂ ಯಥಾ**—ಸತ್ವದಂತಿರುವವನೂ । **ಭಗಸ್ಯ**—ಭಗನಿಂದ ದತ್ತವಾಗುವ । **ಭುಜಿಂ ಇವ**—ಭೋಗದಂತಿರುವವನೂ । **ಸಮುದ್ರವಾಸಸಂ**—ಸಮುದ್ರದ ಮಧ್ಯವರ್ತಿಯಾದವನೂ ಆದ । **ಅಗ್ನಿಂ**—ಬಡಬಾಗ್ನಿಯನ್ನು । **ಆ ಹುವೇ**—ಪ್ರಾರ್ಥಿಸಿ ಕರೆಯುತ್ತೇನೆ

॥ ಭಾವಾರ್ಥ ॥

ಜಗತ್ಪ್ರೇರಕನಾದ ಸವಿತೃವಿನ ಸತ್ವದಂತಿರುವವನೂ, ಭಗನಿಂದ ದತ್ತವಾಗುವ ಭೋಗದಂತಿರುವವನೂ, ಸಮುದ್ರದ ಮಧ್ಯವರ್ತಿಯಾದವನೂ ಆದ ಬಡಬಾಗ್ನಿಯನ್ನು ಪ್ರಾರ್ಥಿಸಿ ಕರೆಯುತ್ತೇನೆ.

English Translation

I invoke Agni dwelling in the midst of the sea, like the energy of Savitri, like the enjoyments granted by Bhaga.

॥ ಸಂಹಿತಾಪಾಠಃ ॥

ಅಗ್ನಿಂ ವೋ ವೃಧಂತಮಧ್ವರಾಣಾಂ ಪುರೂತಮಂ ।

ಅಚ್ಛಾ ನಪ್ತ್ರೇ ಸಹಸ್ವತೇ ॥ ೭ ॥

॥ ಪದಪಾಠಃ ॥

ಅಗ್ನಿಂ । ವಃ । ವೃಧಂತಂ । ಅಧ್ವರಾಣಾಂ । ಪುರುಽತಮಂ ।

ಅಚ್ಛ । ನಪ್ತ್ರೇ । ಸಹಸ್ವತೇ ॥ ೭ ॥

॥ ಸಾಯಣಭಾಷ್ಯಂ ॥

ಅಧ್ವರಾಣಾಮಹಿಂಸ್ಯಾನಾಂ ಬಲಿನಾಂ ನಪ್ತ್ರೇ ಬಂಧುಂ ಸಹಸ್ವತೇ ಬಲವಂತಂ॥ ವಿಭಕ್ತಿವ್ಯತ್ಯಯಃ॥ ವೃಧಂತಂ ಜ್ವಾಲಾಭಿರ್ವರ್ಧಮಾನಂ ಪುರೂತಮಮತಿಶಯೇನ ಬಹುಮಗ್ನಿಮೃತ್ವಿಜೋ ವೋ ಯೂಯಮಚ್ಛ । ಅಭಿಗಚ್ಛತ ॥

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ಅಧ್ವರಾಣಾಂ**—ಅಪ್ರತಿಹತವಾದ ಶಕ್ತಿಯುಳ್ಳವರಿಗೆ । **ನಪ್ತ್ರೇ**—ಬಂಧುವಾದವನೂ । **ಸಹಸ್ವತೇ**—ಶಕ್ತಿಯುತನೂ । **ವೃಧಂತಂ**—ಜ್ವಾಲಾರೂಪದಿಂದ ಬೆಳೆಯುವವನೂ । **ಪುರೂತಮಂ**—ಅನೇಕವಿಧವಾದ ರೂಪವುಳ್ಳವನೂ ಆದ । **ಅಗ್ನಿಂ**—ಅಗ್ನಿಯನ್ನು । **ವಃ**—ನೀವು । **ಅಚ್ಛ**—ಪೂಜೆಗಾಗಿ ಸಮೀಪಿಸಿರಿ

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಅಪ್ರತಿಹತವಾದ ಶಕ್ತಿಯುಳ್ಳವರಿಗೆ ಬಂಧುವಾದವನೂ, ಶಕ್ತಿಯುತನೂ, ಜ್ವಾಲಾರೂಪದಿಂದ ಬೆಳೆಯುವವನೂ, ಅನೇಕವಿಧವಾದ ರೂಪವುಳ್ಳವನೂ ಆದ ಅಗ್ನಿಯನ್ನು ನೀವು ಪೂಜೆಗಾಗಿ ಸಮೀಪಿಸಿರಿ.

## English Translation

(Draw) near to Agni the strong, the mightiest, him who expands (with his flames), the grandson of the invincible ones.

॥ ಸಂಹಿತಾಪಾಠಃ ॥

ಅಯಂ ಯಥಾ ನ ಆಭುವತ್ತ್ವಷ್ಟಾ ರೂಪೇವ ತಕ್ಷ್ಯಾ ।

ಅಸ್ಯ ಕ್ರತ್ವಾ ಯಶಸ್ವತಃ ॥ ೮ ॥

॥ ಪದಪಾಠಃ ॥

ಅಯಂ । ಯಥಾ । ನಃ । ಆಽಭುವತ್ । ತ್ವಷ್ಟಾ । ರೂಪಾಽಇವ । ತಕ್ಷ್ಯಾ ।

ಅಸ್ಯ । ಕ್ರತ್ವಾ । ಯಶಸ್ವತಃ ॥ ೮ ॥

॥ ಸಾಯಣಭಾಷ್ಯಂ ॥

**ಅಯಮಗ್ನಿರ್ನೋಽಸ್ಮಾಂಸ್ತಕ್ಷ್ಯಾ ವಿಕರ್ತವ್ಯಾನಿ ರೂಪೇವ ತ್ವಷ್ಟಾ ರೂಪಾಣಿ ವರ್ಧಕಿರಿವ ಯಥಾ ಯೇನ ಪ್ರಕಾರೇಣಾಭುವತ್ ಆಭವತಿ ತಥೈನಮಗ್ನಿಮಭಿಗಚ್ಛತೇತ್ಯರ್ಥಃ । ಕಿಂಚ ವಯಮ- ಸ್ಯಾಗ್ನೇಃ ಕ್ರತ್ವಾ ಪ್ರಜ್ಞಾನೇನ ಯುಕ್ತಾ ಯಶಸ್ವತೋ ಯಶಸ್ವಂತೋ ಭವೇಮೇತಿ ಶೇಷಃ ॥**

॥ ಪ್ರತಿಪದಾರ್ಥ ॥

**ತ್ವಷ್ಟಾ**—ಮರಗೆಲಸದವನು । **ತಕ್ಷ್ಯಾ**—ಕತ್ತರಿಸಿ ಸಂಸ್ಕರಿಸಲ್ಪಡಬೇಕಾದ ಮರದಲ್ಲಿ । **ರೂಪೇವ ಯಥಾ**-ಸುಂದರವಾದ ರೂಪವನ್ನು ನಿರ್ಮಿಸುವಂತೆ । **ಅಯಂ**—ಈ ಅಗ್ನಿಯು । **ನಃ**—ನಮ್ಮನ್ನು । **ಅಭುವತ್**—ಸಂಸ್ಕರಿಸಿ ಶುದ್ಧಿಗೊಳಿಸುತ್ತಾನೆ । **ಅಸ್ಯ**—ಈ ಅಗ್ನಿಯ । **ಕ್ರತ್ವಾ**—ಪ್ರಾಜ್ಞತೆಯಿಂದ ಕೂಡಿದ ನಾವು । **ಯಶಸ್ವತಃ**—ಯಶಸ್ವಿಗಳಾಗಿ ಆಗೋಣ.

॥ ಭಾವಾರ್ಥ ॥

ಮರಗೆಲಸದವನು ಮರವನ್ನು ಕತ್ತರಿಸಿ ಅದನ್ನು ಸಂಸ್ಕರಿಸಿ ಸುಂದರವಾದ ರೂಪವನ್ನು ನಿರ್ಮಿಸುವಂತೆ ಈ ಅಗ್ನಿಯು ನಮ್ಮನ್ನು ಸಂಸ್ಕರಿಸಿ ಶುದ್ಧಿಗೊಳಿಸುತ್ತಾನೆ. ಈ ಅಗ್ನಿಯ ಪ್ರಾಜ್ಞತೆಯಿಂದ ಕೂಡಿದ ನಾವು ಯಶಸ್ವಿಗಳಾಗಿ ಆಗೋಣ.

## English Translation

(Draw near) that he may deal with us as a carpenter deals with the timber he has to cut; may we become renowned by his skill.

॥ ಸಂಹಿತಾಪಾಠಃ ॥

ಅಯಂ ವಿಶ್ವಾ ಅಭಿ ಶ್ರಿಯೋಽಗ್ನಿರ್ದೇವೇಷು ಪತ್ಯತೇ ।
ಆ ವಾಜೈರುಪ ನೋ ಗಮತ್ ॥ ೯ ॥

॥ ಪದಪಾಠಃ ॥

ಅಯಂ । ವಿಶ್ವಾಃ । ಅಭಿ । ಶ್ರಿಯಃ । ಅಗ್ನಿಃ । ದೇವೇಷು । ಪತ್ಯತೇ ।
ಆ । ವಾಜೈಃ । ಉಪ । ನಃ । ಗಮತ್ ॥ ೯ ॥

॥ ಸಾಯಣಭಾಷ್ಯಂ ॥

**ಮನುಷ್ಯಾಣಾಂ ವಿಶ್ವಾಃ ಸರ್ವಾಃ ಶ್ರಿಯಃ ಸಂಪದೋ ದೇವೇಷು ದೇವಾನಾಂ ಮಧ್ಯೇ ಯೋಽಯಮಗ್ನಿರಭಿ ಪತ್ಯತೇ ಅಭಿಗಚ್ಛತಿ ಸೋಽಗ್ನಿರ್ನೋಽಸ್ಮಾನಪಿ ವಾಜೈರನ್ನೈರುಪಾ ಗಮತ್ । ಉಪಾಗಚ್ಛತು ॥**

|| ಪ್ರತಿಪದಾರ್ಥ ||

**ದೇವೇಷು**—ದೇವತೆಗಳ ಮಧ್ಯದಲ್ಲಿ । **ಅಯಂ ಅಗ್ನಿಃ**—ಈ ಅಗ್ನಿಯು । **ವಿಶ್ವಾಃ**—ಸಮಸ್ತವಾದ । **ಶ್ರಿಯಃ**—ಸಂಪತ್ತುಗಳನ್ನೂ । **ಅಭಿ ಪತ್ಯತೇ**—ಸಂಪಾದಿಸಿ ಕೊಡುವವನಾಗಿದ್ದಾನೆ (ಆದುದರಿಂದ) । **ನಃ**—ನಮ್ಮಲ್ಲಿಗೆ । **ವಾಜೈಃ**—ಅನ್ನಗಳೊಂದಿಗೆ । **ಉಪ ಆ ಗಮತ್**—ಈ ಅಗ್ನಿಯು ಸಮೀಪಿಸಲಿ

|| ಭಾವಾರ್ಥ ||

ದೇವತೆಗಳ ಮಧ್ಯದಲ್ಲಿ ಈ ಅಗ್ನಿಯೇ ನಮಗೆ ಸಕಲಸಂಪತ್ತುಗಳನ್ನೂ ಒದಗಿಸಿ ಕೊಡುವವನಾಗಿದ್ದಾನೆ. ಆದುದರಿಂದ ಈ ಅಗ್ನಿಯೇ ನಮ್ಮಲ್ಲಿಗೆ ಅನ್ನಗಳೊಂದಿಗೆ ಸಮೀಪಿಸಲಿ.

English Translation

Among the gods Agni has to do with all the successes ( of men ); may he come to us with abundance of food.

। ಸಂಹಿತಾಪಾಠಃ ।

ವಿಶ್ವೇಷಾಮಿಹ ಸ್ತುಹಿ ಹೋತೄಣಾಂ ಯಶಸ್ತಮಂ ।
ಅಗ್ನಿಂ ಯಜ್ಞೇಷು ಪೂರ್ವ್ಯಂ ॥ ೧೦ ॥

। ಪದಪಾಠಃ ।

ವಿಶ್ವೇಷಾಂ । ಇಹ । ಸ್ತುಹಿ । ಹೋತೄಣಾಂ । ಯಶಃऽತಮಂ ।
ಅಗ್ನಿಂ । ಯಜ್ಞೇಷು । ಪೂರ್ವ್ಯಂ ॥ ೧೦ ॥

॥ ಸಾಯಣಭಾಷ್ಯಂ ॥

**ವಿಶ್ವೇಷಾಂ ಸರ್ವೇಷಾಂ ಹೋತೄಣಾಂ ಮಧ್ಯೇ ಯಶಸ್ತಮಂ ಯಶಸ್ವಿತಮಂ ಯಜ್ಞೇಷು ಪೂರ್ವ್ಯಂ ಮುಖ್ಯಮಗ್ನಿಮಿಹಾಸ್ಮದೀಯೇ ಯಜ್ಞೇ ಹೇ ಸ್ತೋತಃ ಸ್ತುಹಿ ॥**

। ಪ್ರತಿಪದಾರ್ಥ ।

(ಎಲೈ ಸ್ತುತಿಕರ್ತನೇ) **ವಿಶ್ವೇಷಾಂ**—ಸಮಸ್ತವಾದ । **ಹೋತೄಣಾಂ**—ಹೋತೃಗಳ ನಡುವೆ । **ಯಶಸ್ತಮಂ**—ಅತ್ಯಂತ ಯಶಸ್ವಿಯಾದವನೂ । **ಯಜ್ಞೇಷು**—ಯಜ್ಞಗಳಲ್ಲಿ । **ಪೂರ್ವ್ಯಂ**—ಮುಖ್ಯನೂ ಆದ । **ಅಗ್ನಿಂ**—ಅಗ್ನಿಯನ್ನು । **ಇಹ**—ಈ ಯಜ್ಞದಲ್ಲಿ । **ಸ್ತುಹಿ**—ಸ್ತುತಿಸು.

॥ ಭಾವಾರ್ಥ ॥

ಎಲೈ ಸ್ತುತಿಕರ್ತನೇ, ಸಮಸ್ತವಾದ ಹೋತೃಗಳ ನಡುವೆ ಅತ್ಯಂತ ಯಶಸ್ವಿಯಾದವನೂ, ಯಜ್ಞಗಳಲ್ಲಿ ಮುಖ್ಯನೂ ಆದ ಅಗ್ನಿಯನ್ನು ಈ ಯಜ್ಞಕಾಲದಲ್ಲಿ ಸ್ತುತಿಸು.

## English Translation

Praise at our rite Agni, the most glorious of all ministrant priests, the foremost in the sacrifices

। ಸಂಹಿತಾಪಾಠಃ ।

ಶೀರಂ ಪಾವಕಶೋಚಿಷಂ ಜ್ಯೇಷ್ಠೋ ಯೋ ದಮೇಷ್ವಾ ।
ದೀದಾಯ ದೀರ್ಘಶ್ರುತ್ತಮಃ ॥ ೧೧ ॥

॥ ಪದಪಾಠಃ ।

ಶೀರಂ । ಪಾವಕಽಶೋಚಿಷಂ । ಜ್ಯೇಷ್ಠಃ । ಯಃ । ದಮೇಷು । ಆ ॥
ದೀದಾಯ । ದೀರ್ಘಶ್ರುತ್ಽತಮಃ ॥ ೧೧ ॥

। ಸಾಯಣಭಾಷ್ಯಂ ।

ಜ್ಯೇಷ್ಠೋ ದೇವಾನಾಂ ಮುಖ್ಯೋ ಧೀರ್ಘಶ್ರುತ್ತಮೋಽತಿಶಯೇನ ವಿದ್ವಾನಗ್ನಿರ್ದಮೇಷು ಯಜ್ವನಾಂ ಗೃಹೇಷ್ವಾ ದೀದಾಯ । ಆದೀಪ್ಯತೇ । ತಂ ಶೀರಮನುಶಾಯಿನಂ । ತಥಾ ಚ ಯಾಸ್ಕಃ । ಅನುಶಾಯಿನಮಿತಿ ವಾಶಿನಮಿತಿ ವಾ । ನಿ. ೪-೧೪ । ಇತಿ । ಪಾವಕಶೋಚಿಷಂ ಪಾವಕದೀಪ್ತಿಂ ಸ್ತುಹೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಅಗ್ನಿಯು । **ಜ್ಯೇಷ್ಠಃ**—ದೇವತೆಗಳಿಗೆಲ್ಲಾ ಮುಖ್ಯನೂ । **ದೀರ್ಘಶ್ರುತ್ತಮಃ**—ಅತ್ಯಂತ ವಿಸ್ತೃತವಾದ ಜ್ಞಾನವುಳ್ಳವನೂ ಆಗಿ । **ದಮೇಷು**—ಯಜ್ಞಗೃಹಗಳಲ್ಲಿ । **ಆ ದೀದಾಯ**—ಪ್ರಕಾಶಿಸುತ್ತಾನೆಯೋ ಅಂತಹ । **ಶೀರಂ**—ಯಜ್ಞಗೃಹದಲ್ಲಿ ಸ್ಥಿತನಾಗಿರುವವನೂ । **ಪಾವಕಶೋಚಿಷಂ**—ಶುದ್ಧಿಕಾರಕವಾದ ಜ್ವಾಲೆಯುಳ್ಳವನೂ ಆದ ಅಗ್ನಿಯನ್ನು ಸ್ತುತಿಸು.

॥ ಭಾವಾರ್ಥ ॥

ಯಾವ ಅಗ್ನಿಯು ದೇವತೆಗಳಿಗೆಲ್ಲಾ ಮುಖ್ಯನೂ, ಅತ್ಯಂತ ವಿಸ್ತೃತವಾದ ಜ್ಞಾನವುಳ್ಳವನೂ ಆಗಿ ಯಜ್ಞಗೃಹಗಳಲ್ಲಿ ಪ್ರಕಾಶಿಸುವನೋ ಅಂತಹ ಯಜ್ಞಗೃಹಗಳಲ್ಲಿ ಸ್ಥಿತನಾಗಿರುವವನೂ ಶುದ್ಧಿಕಾರಕವಾದ ಜ್ವಾಲೆಯುಳ್ಳವನೂ ಆದ ಅಗ್ನಿಯನ್ನು ಸ್ತುತಿಸು.

## English Translation

(Praise him) the dweller in the sacrifice of purifying radiance, who shines, the chief of the gods and omniscient, in the houses (of the sacrificers)

|| ವಿಶೇಷವಿಷಯಗಳು ||

**ಶೀರಂ ಪಾವಕಶೋಚಿಷಂ**—ಈ ಶಬ್ದಗಳಿಗೆ ಯಾಸ್ಕರು ತಮ್ಮ ನಿರುಕ್ತದಲ್ಲಿ—**ಶೀರಂ । ಶೀರಂ ಪಾವಕಶೋಚಿಷಂ । ಪಾವಕದೀಪ್ತಿಂ । ಅನುಶಾಯಿನಮಿತಿ ವಾಶಿನಮಿತಿ ವಾ** (ನಿ. ೪-೧೪) ಎಂದು ನಿರ್ವಚನವನ್ನು ಹೇಳಿದಾರೆ. ಎಂದರೆ ಈ ಎರಡು ಶಬ್ದಗಳೂ ಅಗ್ನಿಯ ಸ್ವಭಾವಸಿದ್ಧವಾದ ಗುಣಗಳನ್ನು ವರ್ಣಿಸುವುದರಿಂದ ಅಗ್ನಿಯ ಹೆಸರುಗಳೇ ಆಗಿವೆ. **ಶೀರಂ** ಎಂದರೆ ಅನುಶಾಯಿನಂ ಅಥವಾ **ಆಶಿನಂ ।** ಅಗ್ನಿಯು ಕಾಷ್ಠಾದಿಗಳಲ್ಲಿ ಗೂಢವಾಗಿ ಸುಪ್ತನಾಗಿರುವನು. ಎಂದರೆ ಕಾಷ್ಠಾದಿಗಳಲ್ಲಿ ಅಗ್ನಿಯು ನೆಲೆಸಿದ್ದರೂ ಯಾರಿಗೂ ಗೋಚರವಾಗುವುದಿಲ್ಲ. ಅದರ ಒಳಗೇ ವಿಲೀನನಾಗಿ ಇರುವನು ಮಥನಾದಿಕ್ರಿಯೆಯಿಂದ ಮಾತ್ರ ಎಲ್ಲರಿಗೂ ಗೋಚರಿಸುವನು. ಅಥವಾ ಸರ್ವಪ್ರಾಣಿಗಳಲ್ಲಿಯೂ ಅಗ್ನಿಯು ವ್ಯಾಪಿಸಿರುವನು. ಸರ್ವಪ್ರಾಣಿಗಳ ಉದರಗಳಲ್ಲಿ ಸ್ಥಿತನಾಗಿ ಜಾಠರಾಗಿ ಎಂಬಭಿಧಾನದಿಂದ ಪ್ರಾಣಿಗಳು ಭಕ್ಷಿಸುವ ಆಹಾರಾದಿಗಳನ್ನು ಪಚನಮಾಡುತ್ತಾ ಶರೀರದ ಸಮಸ್ತ ಭಾಗಗಳಲ್ಲಿಯೂ ಔಷ್ಣ್ಯದಿಂದ ವ್ಯಾಪಿಸಿರುವನು. ಈ ಕಾರಣದಿಂದಲೇ ಪ್ರಾಣಿಗಳ ಶರೀರವೆಲ್ಲವೂ ಒಂದು ಕ್ಲಿಪ್ತಪ್ರಮಾಣದ ಔಷ್ಣದಿಂದ ವ್ಯಾಪಿಸಿ ಬೆಚ್ಚಗಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ ಎಂದು ಶೀರಂ ಎಂಬ ಶಬ್ದಕ್ಕೆ ಎರಡುವಿಧವಾದ ಅರ್ಥವನ್ನು ವಿವರಿಸಿರುವರು **ಪಾವಕಶೋಚಿಷಂ** ಎಂದರೆ ಶುದ್ಧವಾದ ತೇಜಸ್ಸಿನಿಂದ ಬೆಳಗುತ್ತಿರುವ ಎಂದರ್ಥವು.

|| ಸಂಹಿತಾಪಾಠಃ ||

ತಮರ್ವಂತಂ ನ ಸಾನಸಿಂ ಗೃಣೀಹಿ ವಿಪ್ರ ಶುಷ್ಮಿಣಂ ।
ಮಿತ್ರಂ ನ ಯಾತಯಜ್ಜನಂ || ೧೨ ||

ಪದಪಾಠಃ

ತಂ । ಅರ್ವಂತಂ । ನ । ಸಾನಸಿಂ । ಗೃಣೀಹಿ । ವಿಪ್ರ । ಶುಷ್ಮಿಣಂ ।
ಮಿತ್ರಂ । ನ । ಯಾತಯತ್ಽಜನಂ || ೧೨ ||

|| ಸಾಯಣಭಾಷ್ಯಂ ||

**ಹೇ ವಿಪ್ರ ಮೇಧಾವಿನ್ ಸ್ತೋತಃ ಅರ್ವಂತಂ ನಾಶ್ವಮಿವ ಸಾನಸಿಂ ಸಂಭಜನೀಯಂ ಶುಷ್ಮಿಣಂ ಬಲಿನಂ ಮಿತ್ರಂ ನ ಸಖಾಯಮಿವ ಯಾತಯಜ್ಜನಂ ಹತಶತ್ರುಜನಂ ತಮಗ್ನಿಂ ಗೃಣೀಹಿ । ಸ್ತುಹಿ ||**

|| ಪ್ರತಿಪದಾರ್ಥ ||

**ವಿಪ್ರ**—ಮೇಧಾವಿಯಾದ ಎಲೈ ಸ್ತುತಿಕರ್ತನೇ । **ಅರ್ವಂತಂ ನ**—ಶೀಘ್ರಗಾಮಿಯಾದ ಅಶ್ವದಂತೆ । **ಸಾನಸಿಂ**—ಸುಖಾಗಮನವನ್ನು ನೀಡಿ ಪೂಜಿಸಲ್ಪಡುವವನೂ । **ಶುಷ್ಮಿಣಂ**—ಶಕ್ತಿಯುತನೂ । **ಮಿತ್ರಂ ನ**—ಸ್ನೇಹಿತನಂತೆ । **ಯಾತಯಜ್ಜನಂ**—ಶತ್ರುಜನರನ್ನು ಕೊಂದವನೂ ಆದ । **ತಂ**—ಅದೇ ಅಗ್ನಿಯನ್ನು । **ಗೃಣೀಹಿ**—ಸ್ತುತಿಸು.

॥ ಭಾವಾರ್ಥ ॥

ಮೇಧಾವಿಯಾದ ಎಲೈ ಸ್ತುತಿಕರ್ತನೇ, ಶೀಘ್ರಗಾಮಿಯಾದ ಅಶ್ವ... ... ಪೂಜಿಸಲ್ಪಡುವವನೂ, ಶಕ್ತಿಯುತನೂ, ಸ್ನೇಹಿತನಂತೆ ಶತ್ರುಗಳನ್ನು ... ಆದ ಅದೇ ... ಸ್ತುತಿಸು.

English Translation

O priest, glorify him who is welcome and strong ... a horse, and who like a friend conquers all our foes

॥ ಸಂಹಿತಾಪಾಠಃ ॥

ಉಪ ತ್ವಾ ಜಾಮಯೋ ಗಿರೋ ದೇದಿಶತೀರ್ಹ...ವಿಷ್ಕೃತಃ ।
ವಾಯೋರನೀಕೇ ಅಸ್ಥಿರನ್ ॥ ೧೩ ॥

॥ ಪದಪಾಠಃ ॥

ಉಪ । ತ್ವಾ । ಜಾಮಯಃ । ಗಿರಃ । ದೇದಿಶತೀಃ । ಹವಿಃऽಕೃತಃ ।
ವಾಯೋಃ । ಅನೀಕೇ । ಅಸ್ಥಿರನ್ ॥ ೧೩ ॥

॥ ಸಾಯಣಭಾಷ್ಯಂ ॥

**ಹೇ ಅಗ್ನೇ ಹವಿಷ್ಕೃತೋ ಯಜಮಾನಾರ್ಥಂ ಗಿರಃ ಸ್ತುತ... ...ಯಃ ಸ್ವ... ದೇದಿಶತೀಸ್ತವ ಗುಣಾನ್ದಿಶಂತ್ಯಸ್ತ್ವಾ ತ್ವಾಮುಪತಿಷ್ಠಂತೇ । ... ಸಮೀ... ಸಮೇಧಯಂತ್ಯೋऽಸ್ಥಿರನ್ । ಅತಿಷ್ಠಂಶ್ಚ ॥**

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಹವಿಷ್ಕೃತಃ**—ಹವಿಸ್ಸನ್ನು ಅರ್ಪಿಸುವ ಯಜಮಾನನಿಗಾಗಿ । **ಗಿರಃ**—ಸ್ತು... **ಜಾಮಯಃ**—ಸಹೋದರಿಯರಂತೆ । **ದೇದಿಶತೀಃ**—ನಿನ್ನ ಗುಣಗಳನ್ನು ಪ್ರ... ...ಸುತ್ತಾ । **ತ್ವಾ** ನಿನ್ನನ್ನು ಸೇವಿಸುತ್ತವೆ । **ವಾಯೋಃ**—ವಾಯುವಿನ । **ಅನೀಕೇ**—ಸಮೀಪದಲ್ಲಿ । **ಅಸ್ಥಿರನ್**-ಪ್ರಜ್ವಲಿಸುವಂತೆ ಮಾಡುತ್ತಾ ಇವೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ಹವಿಸ್ಸನ್ನು ಅರ್ಪಿಸುವ ಯಜಮಾನನ ಕಲ್ಯಾಣಾರ್ಥವಾಗಿ ಸ್ತುತಿಗಳು ಸಹೋ... ಇದ್ದು ನಿನ್ನ ಗುಣಗಳನ್ನು ಪ್ರಶಂಸಿಸುತ್ತಾ ನಿನ್ನನ್ನು ಸೇವಿಸುತ್ತವೆ. ವಾಯುವಿನ ಸಮೀ...ದಲ್ಲಿ ನಿನ್ನನ್ನು ... ...ಸುವಂತೆ ಮಾಡುತ್ತಾ ಇವೆ.

## English Translation

The sister praises of the worshipper rise to you, proclaiming your glories ; they stand kindling you in the presence of Vayu.

॥ ಸಂಹಿತಾಪಾಠಃ ॥

ಯಸ್ಯ ತ್ರಿಧಾತ್ವವೃತಂ ಬರ್ಹಿಸ್ತಸ್ಥಾವಸಂದಿನಂ ।
ಆಪಶ್ಚಿನ್ನಿ ದಧಾ ಪದಂ ॥ ೧೪ ॥

॥ ಪದಪಾಠಃ ॥

ಯಸ್ಯ । ತ್ರಿऽಧಾತು । ಅವೃತಂ । ಬರ್ಹಿಃ । ತಸ್ಥೌ । ಅಸಂऽದಿನಂ ।
ಆಪಃ । ಚಿತ್ । ನಿ । ದಧ । ಪದಂ ॥ ೧೪ ॥

॥ ಸಾಯಣಭಾಷ್ಯಂ ॥

ಯಸ್ಯಾಗ್ನೇಸ್ತ್ರಿಧಾತು ತ್ರಿರವೃತಮನಾವೃತಂ ಚಾಸಂದಿನಮಬದ್ಧಂ ಚ । ಸ್ತರಣಕಾಲೇ ಹಿ ಬರ್ಹಿರಬದ್ಧಂ ಭವತಿ । ಬರ್ಹಿಸ್ತಸ್ಥೌ ಆಸನಾರ್ಥಂ ತಿಷ್ಠತಿ ತಸ್ಮಿನ್ನಗ್ನಾವಾಪಶ್ಚಿದಾಪೋऽಪಿ ಪದಂ ನಿ ದಧ । ನಿದಧತಿ । ಆಂತರಿಕ್ಷ್ಯಾ ಮಾಧ್ಯಮಿಕೇ ಪದಂ ನಿದಧತೀತ್ಯರ್ಥಃ ॥

। ಪ್ರತಿಪದಾರ್ಥ ।

**ಯಸ್ಯ**—ಯಾವ ಅಗ್ನಿಯ ಪೂಜೆಗಾಗಿ । **ತ್ರಿಧಾತು**—ಮೂರು ಪದರಗಳುಳ್ಳವೂ । **ಅವೃತಂ**—(ನಿರ್ದಿಷ್ಟವಾದ ಸಂಖ್ಯೆಯಿಲ್ಲದೆ) ಗ್ರಂಥಿಯೊಡಗೂಡಿದವೂ । **ಅಸಂದಿನಂ**—ಗ್ರಂಥಿಯಿಲ್ಲದಿರುವುವೂ ಆದ । **ಬರ್ಹಿಃ**—ದರ್ಭಾಸನಗಳು । **ತಸ್ಥೌ**—ಇರಿಸಲ್ಪಟ್ಟವೆಯೋ ಆ ಅಗ್ನಿಯಲ್ಲಿ । **ಆಪಶ್ಚಿತ್**—ಉದಕಗಳೂ ಕೂಡ । **ಪದಂ**—ಸ್ಥಾನವನ್ನು । **ನಿ ದಧ**—ಹೊಂದಿರುತ್ತವೆ

॥ ಭಾವಾರ್ಥ ॥

ಯಾವ ಅಗ್ನಿಯ ಪೂಜೆಗಾಗಿ ಮೂರು ಪದರಗಳುಳ್ಳವೂ ನಿರ್ದಿಷ್ಟವಾದ ಸಂಖ್ಯೆಯಿಲ್ಲದೆ ಗ್ರಂಥಿಯಿಂದ ಕೂಡಿದವೂ, ಗ್ರಂಥಿಯಿಲ್ಲದಿರುವುವೂ ಆದ ದರ್ಭಾಸನಗಳು ಇರಿಸಲ್ಪಟ್ಟವೆಯೋ ಆ ಅಗ್ನಿಯಲ್ಲಿ ಉದಕಗಳೂ ಕೂಡ ತಮ್ಮ ಸ್ಥಾನವನ್ನು ಹೊಂದಿರುತ್ತವೆ.

## English Translation

The waters find their place in him, for whom the triple-jointed grass is spread unlimited and untied (in the sacrifice).

॥ ಸಂಹಿತಾಪಾಠಃ ॥

ಪದಂ ದೇವಸ್ಯ ಮೀಳ್ಹುಷೋಽನಾಧೃಷ್ಟಾಭಿರೂತಿಭಿಃ ।

ಭದ್ರಾ ಸೂರ್ಯ ಇವೋಪದೃಕ್ ॥ ೧೫ ॥

॥ ಪದಪಾಠಃ ॥

ಪದಂ । ದೇವಸ್ಯ । ಮೀಳ್ಹುಷಃ । ಅನಾಧೃಷ್ಟಾಭಿಃ । ಊತಿಽಭಿಃ ।

ಭದ್ರಾ । ಸೂರ್ಯಃಽಇವ । ಉಪಽದೃಕ್ ॥ ೧೫ ॥

॥ ಸಾಯಣಭಾಷ್ಯಂ ॥

ಮೀಳ್ಹುಷಃ ಕಾಮಾನಾಂ ಸೇಕ್ತುರ್ದೇವಸ್ಯ ದ್ಯೋತಮಾನಸ್ಯಾಗ್ನೇಃ ಪದಂ ಸ್ಥಾನಮನಾಧೃಷ್ಟಾಭಿ ಶತ್ರುಭಿರನಾಧೃಷ್ಟಾಭಿರೂತಿಭೀ ರಕ್ಷಾಭಿರ್ಭಜನೀಯಂ ಭವತೀತ್ಯರ್ಥಃ । ತಥೈವಾಸ್ಯೋಪದೃಗುಪದ್ರಷ್ಟಿರಪಿ ಸೂರ್ಯ ಇವ ಯಥಾ ಸೂರ್ಯಸ್ತದ್ವದ್ಭದ್ರಾ ಮನುಷ್ಯೈರ್ಭಜನೀಯಾ ಭವತಿ ॥

॥ ಪ್ರತಿಪದಾರ್ಥ ॥

**ಮೀಳ್ಹುಷಃ**—ಇಷ್ಟಾರ್ಥಪ್ರದನೂ । **ದೇವಸ್ಯ**—ಪ್ರಕಾಶಮಾನನೂ ಆದ ಅಗ್ನಿಯ । **ಪದಂ**—ಸ್ಥಾನವು। **ಅನಾಧೃಷ್ಟಾಭಿಃ**—ಶತ್ರುಗಳಿಂದ ಅಪ್ರತಿಹತವಾದ **ಊತಿಭಿಃ**—ರಕ್ಷಣೆಗಳೊಂದಿಗೆ ಕೂಡಿರುತ್ತದೆ । **ಉಪದೃಕ್**—ಈ ಅಗ್ನಿಯ ದಿವ್ಯರೂಪವೂ ಸಹ । **ಸೂರ್ಯ ಇವ**—ಸೂರ್ಯನಂತೆ। **ಭದ್ರಾ**—ಮನುಷ್ಯರ ಪೂಜೆಗೆ ಅರ್ಹವಾಗಿರುತ್ತದೆ.

॥ ಭಾವಾರ್ಥ ॥

ಇಷ್ಟಾರ್ಥಪ್ರದನೂ, ಪ್ರಕಾಶಮಾನನೂ ಆದ ಅಗ್ನಿಯ ಸ್ಥಾನವು ಶತ್ರುಗಳಿಂದ ಅಪ್ರತಿಹತವಾದ ರಕ್ಷಣೆಗಳೊಂದಿಗೆ ಕೂಡಿರುತ್ತದೆ. ಈ ಅಗ್ನಿಯ ದಿವ್ಯರೂಪವೂ ಸಹ ಸೂರ್ಯನಂತೆ ಮಾನವರ ಪೂಜೆಗೆ ಅರ್ಹವಾಗಿರುತ್ತದೆ.

English Translation

Auspicious is the place of the god who pours forth all desires with inviolable protections ; auspicious is his apppearance like the Sun's-

॥ ಸಂಹಿತಾಪಾಠಃ ॥

ಅಗ್ನೇ ಘೃತಸ್ಯ ಧೀತಿಭಿಸ್ತೇಪಾನೋ ದೇವ ಶೋಚಿಷಾ ।

ಆ ದೇವಾನ್ವಕ್ಷಿ ಯಕ್ಷಿ ಚ ॥ ೧೬ ॥

॥ ಪದಪಾಠಃ ॥

ಅಗ್ನೇ । ಘೃತಸ್ಯ । ಧೀತಿऽಭಿಃ । ತೇಪಾನಃ । ದೇವ । ಶೋಚಿಷಾ ।

ಆ । ದೇವಾನ್ । ವಕ್ಷಿ । ಯಕ್ಷಿ । ಚ ॥ ೧೬ ॥

॥ ಸಾಯಣಭಾಷ್ಯಂ ॥

ಹೇ ದೇವ ದ್ಯೋತಮಾನಾಗ್ನೇ ಘೃತಸ್ಯ ದೀಪ್ತಿಸಾಧನಸ್ಯಾಜ್ಯಸ್ಯ ಧೀತಿಭಿರ್ನಿಧಾನೈಸ್ತೇಪಾನಸ್ತ-ಪಞ್ಛೋಚಿಷಾ ಜ್ವಾಲಯಾ ದೇವಾನ್ ಪ್ರತ್ಯಾ ವಕ್ಷಿ । ಆವಹ । ಯಕ್ಷಿ । ಯಜ ಚ ॥

॥ ಪ್ರತಿಪದಾರ್ಥ ॥

ದೇವ—ಪ್ರಕಾಶಮಾನನಾದ । ಅಗ್ನೇ—ಎಲೈ ಅಗ್ನಿಯೇ । ಘೃತಸ್ಯ—ಪ್ರಕಾಶಸಾಧನವಾದ ಆಜ್ಯದ । ಧೀತಿಭಿಃ—ಅರ್ಪಣೆಗಳಿಂದ । ತೇಪಾನಃ—ಪ್ರಜ್ವಲಿಸುತ್ತಾ । ಶೋಚಿಷಾ—ನಿನ್ನ ಜ್ವಾಲೆಗಳ ಮೂಲಕ । ದೇವಾನ್—ದೇವತೆಗಳಲ್ಲಿಗೆ । ಆ ವಕ್ಷಿ—ನಮ್ಮ ಹವಿಸ್ಸುಗಳನ್ನು ತೆಗೆದುಕೊಂಡು ಹೋಗಿ ಅರ್ಪಿಸು । ಯಕ್ಷಿ ಚ—ಅವರನ್ನು ಪೂಜಿಸು

॥ ಭಾವಾರ್ಥ ॥

ಪ್ರಕಾಶಮಾನನಾದ ಎಲೈ ಅಗ್ನಿಯೇ, ಪ್ರಕಾಶಸಾಧನವಾದ ಆಜ್ಯದ ಅರ್ಪಣೆಗಳಿಂದ ಪ್ರಜ್ವಲಿಸುತ್ತಾ ನಿನ್ನ ಜ್ವಾಲೆಗಳಮೂಲಕ ದೇವತೆಗಳಲ್ಲಿಗೆ ನಮ್ಮ ಹವಿಸ್ಸುಗಳನ್ನು ತೆಗೆದುಕೊಂಡು ಹೋಗಿ ಅರ್ಪಿಸು. ಅವರನ್ನು ಪೂಜಿಸು.

English Translation

Divine Agni, blazing with radiance, through our oblations of ghi, bear (our sacrifice) to the gods and offer it.

॥ ಸಂಹಿತಾಪಾಠಃ ॥

ತಂ ತ್ವಾಜನಂತ ಮಾತರಃ ಕವಿಂ ದೇವಾಸೋ ಅಂಗಿರಃ ।

ಹವ್ಯವಾಹಮಮರ್ತ್ಯಂ ॥ ೧೭ ॥

॥ ಪದಪಾಠಃ ॥

ತಂ । ತ್ವಾ । ಅಜನಂತ । ಮಾತರಃ । ಕವಿಂ । ದೇವಾಸಃ । ಅಂಗಿರಃ ।

ಹವ್ಯऽವಾಹಂ । ಅಮರ್ತ್ಯಂ ॥ ೧೭ ॥

॥ ಸಾಯಣಭಾಷ್ಯಂ ॥

**ಹೇ ಅಂಗಿರೋಽಗ್ನೇ ಕವಿಂ ಕ್ರಾಂತಕರ್ಮಾಣಮಮರ್ತ್ಯಂ ಮರಣರಹಿತಂ ಹವ್ಯವಾಹಂ ಹವಿಷಾಂ ವೋಢಾರಂ ತಂ ಪ್ರಸಿದ್ಧಂ ತ್ವಾ ತ್ವಾಂ ದೇವಾಸೋ ದೇವಾ ಮಾತರ ಇವಾಜನಂತ। ಜನಯಾಂತಿ ॥**

॥ ಪ್ರತಿಪದಾರ್ಥ ॥

**ಅಂಗಿರಃ—** ಅಂಗಿರಾನಾಮಕನಾದ ಎಲೈ ಅಗ್ನಿಯೇ, । **ಕವಿಂ—**ಪ್ರಜ್ಞಾಯುತವಾದ ಕರ್ಮವುಳ್ಳವನೂ । **ಅಮರ್ತ್ಯಂ—**ಮರಣರಹಿತನೂ । **ಹವ್ಯವಾಹಂ—**ದೇವತೆಗಳಿಗೆ ಹವಿಸ್ಸನ್ನು ವಹಿಸುವವನೂ । **ತಂ—**ಪ್ರಸಿದ್ಧನೂ ಆದ । **ತ್ವಾ—**ನಿನ್ನನ್ನು । **ದೇವಾಸಃ—**ದೇವತೆಗಳು । **ಮಾತರ ಇವ—**ತಾಯಿಯರಂತೆ । **ಅಜನಂತ—**ಉತ್ಪನ್ನ ಮಾಡಿದ್ದಾರೆ

॥ ಭಾವಾರ್ಥ ॥

ಅಂಗಿರಾನಾಮಕನಾದ ಎಲೈ ಅಗ್ನಿಯೇ, ಪ್ರಜ್ಞಾಯುತವಾದ ಕರ್ಮವುಳ್ಳವನೂ ಮರಣರಹಿತನೂ ದೇವತೆಗಳಿಗೆ ಹವಿಸ್ಸನ್ನು ವಹಿಸುವವನೂ ಪ್ರಸಿದ್ಧನೂ ಆದ ನಿನ್ನನ್ನು ದೇವತೆಗಳು ತಾಯಿಯರಂತೆ ಉತ್ಪನ್ನಮಾಡಿದ್ದಾರೆ.

## English Translation

The gods, as mothers, have borne you Angiras, the seer, the immortal, the bearer of the oblation.

॥ ಸಂಹಿತಾಪಾಠಃ ॥

ಪ್ರಚೇತಸಂ ತ್ವಾ ಕವೇಽಗ್ನೇ ದೂತಂ ವರೇಣ್ಯಂ ।
ಹವ್ಯವಾಹಂ ನಿ ಷೇದಿರೇ ॥ ೧೮ ॥

॥ ಪದಪಾಠಃ ॥

ಪ್ರಽಚೇತಸಂ । ತ್ವಾ । ಕವೇ । ಅಗ್ನೇ । ದೂತಂ । ವರೇಣ್ಯಂ ।
ಹವ್ಯಽವಾಹಂ । ನಿ । ಸೇದಿರೇ ॥ ೧೮ ॥

॥ ಸಾಯಣಭಾಷ್ಯಂ ॥

**ಹೇ ಕವೇ ಕ್ರಾಂತಕರ್ಮನ್ನಗ್ನೇ ಪ್ರಚೇತಸಂ ಪ್ರಕೃಷ್ಟಬುದ್ಧಿಂ ವರೇಣ್ಯಂ ವರಣೀಯಂ ದೂತಂ ದೇವಾನಾಂ ಹವ್ಯವಾಹಂ ಹವಿಷಾಂ ವೋಢಾರಂ ತ್ವಾ ತ್ವಾಂ ನಿಷೇದಿರೇ । ದೇವಾ ನಿಷೀದಂತಿ ॥**

॥ ಪ್ರತಿಪದಾರ್ಥ ॥

**ಕವೇ**—ಮೇಧಾಯುತವಾದ ಕರ್ಮವುಳ್ಳ । **ಅಗ್ನೇ**—ಎಲೈ ಅಗ್ನಿಯೇ, । **ಪ್ರಚೇತಸಂ**—ಉತ್ಕೃಷ್ಟವಾದ ಬುದ್ಧಿಯುಳ್ಳವನೂ । **ವರೇಣ್ಯಂ**—ಪೂಜ್ಯನೂ । **ದೂತಂ**—ದೇವದೂತನೂ । **ಹವ್ಯವಾಹಂ**—ಹವಿಸ್ಸನ್ನು ವಹಿಸುವವನೂ ಆದ । **ತ್ವಾ**—ನಿನ್ನನ್ನು । **ನಿ ಷೇದಿರೇ**—ಆಸನದಲ್ಲಿ ಕುಳಿತುಕೊಳ್ಳುವಂತೆ ಮಾಡಿದ್ದಾರೆ.

॥ ಭಾವಾರ್ಥ ॥

ಮೇಧಾಯುತವಾದ ಕರ್ಮವುಳ್ಳ ಎಲೈ ಅಗ್ನಿಯೇ, ಉತ್ಕೃಷ್ಟವಾದ ಬುದ್ಧಿಯುಳ್ಳವನೂ ಪೂಜ್ಯನೂ ದೇವದೂತನೂ ಹವಿಸ್ಸನ್ನು ವಹಿಸುವವನೂ ಆದ ನಿನ್ನನ್ನು ಆಸನದಲ್ಲಿ ಕುಳಿತುಕೊಳ್ಳುವಂತೆ ಮಾಡಿದ್ದಾರೆ.

English Translation

The gods seat you in your place, O wise Agni, the seer, the messenger the most excellent, the bearer of the oblation.

॥ ಸಂಹಿತಾಪಾಠಃ ॥

ನಹಿ ಮೇ ಅಸ್ತ್ಯಘ್ನ್ಯಾ ನ ಸ್ವಧಿತಿರ್ವನನ್ವತಿ ।
ಅಥೈತಾದೃಗ್ಭರಾಮಿ ತೇ ॥ ೧೯ ॥

॥ ಪದಪಾಠಃ ॥

ನಹಿ । ಮೇ । ಅಸ್ತಿ । ಅಘ್ನ್ಯಾ । ನ । ಸ್ವऽಧಿತಿಃ । ವನನ್ऽವತಿ ।
ಅಥ । ಏತಾದೃಕ್ । ಭರಾಮಿ । ತೇ । ೧೯ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಮೇ ಮಮ ಭಾರ್ಗವಸ್ಯ ಪ್ರಯೋಗಸ್ಯರ್ಷೇರಘ್ನ್ಯಾ ಗೌಃ । ಅಘ್ನ್ಯೇಸ್ರೇತಿ ಗೋನಾಮಸು ಪಾಠಾತ್ । ನಹ್ಯಸ್ತಿ ನ ವಿದ್ಯತೇ ಯಸ್ಯಾಃ ಪಯಸಾಜ್ಯೇನ ಚ ತ್ವಾಂ ಯಜೇಯ । ಕಿಂಚ ಸ್ವಧಿತಿರ್ನಹಿ ವನನ್ವತಿ ಕಾಷ್ಠಾನಿ ಹಂತಿ ಯೈಃ ಕಾಷ್ಠೈಸ್ತ್ವಾಂ ಸಮಿಂಧೀಯ । ಅಥೈತಾದೃಗಗ್ನಿಹೋತ್ರಾರ್ಥಂ ಪಯಸೋ ದೋಗ್ಧ್ರೀಂ ಗಾಮಿಂಧನಸಾಧನಾನಿ ಚೈತತ್ಸರ್ವಂ ತೇ ತುಭ್ಯಮಹಂ ಭರಾಮಿ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಮೇ**—ನನ್ನಲ್ಲಿ । **ಅಘ್ನ್ಯಾ**—ಪೂಜೆಗಾಗಿ ಕ್ಷೀರಾದಿಗಳನ್ನು ಒದಗಿಸುವ ಗೋವು । **ನಹಿ ಅಸ್ತಿ**—ಇಲ್ಲವೇ ಇಲ್ಲ । **ವನನ್ವತಿ**—ಸಮಿತ್ತುಗಳಿಗಾಗಿ ವೃಕ್ಷಾದಿಗಳನ್ನು ಕಡಿಯಲು ಸಾಧನವಾದ । **ಸ್ವಧಿತಿಃ**

ನ—ಕೊಡಲಿಯೂ ಸಹ ನನ್ನಲ್ಲಿಲ್ಲ । ಅಥ—ಆದರೂ ಸಹ ! ಏತಾದೃಕ್-ಗೋವಿನ ಹಾಲನ್ನೂ ಮತ್ತು ಇಂಧನ ಸಾಧನವಾದ ಕಾಷ್ಠಗಳನ್ನೂ । ತೇ—ನಿನಗೆ । ಭರಾಮಿ—ತಂದೊಪ್ಪಿಸುತ್ತೇನೆ.

॥ ಭಾವಾರ್ಥ ॥

ಎಲೈ ಅಗ್ನಿಯೇ, ನನ್ನಲ್ಲಿ ಪೂಜೆಗಾಗಿ ಕ್ಷೀರಾದಿಗಳನ್ನು ಒದಗಿಸುವ ಗೋವು ಇಲ್ಲವೇ ಇಲ್ಲ. ಸಮಿತ್ತುಗಳಿಗಾಗಿ ವೃಕ್ಷಾದಿಗಳನ್ನು ಕಡಿಯಲು ಸಾಧನವಾದ ಕೊಡಲಿಯೂ ನನ್ನಲ್ಲಿಲ್ಲ. ಆದರೂ ಸಹ ಗೋವಿನ ಕ್ಷೀರವನ್ನೂ ಮತ್ತು ಇಂಧನ ಸಾಧನವಾದ ಕಾಷ್ಠಗಳನ್ನೂ ನಿನಗೆ ತಂದೊಪ್ಪಿಸುತ್ತೇನೆ.

## English Translation

No cow is mine, and no axe is at hand to cleave wood, but yet I bring both these to you,

॥ ವಿಶೇಷವಿಷಯಗಳು ॥

ಮುಂದಿನ ಋಕ್ಕಿನ ವಿಶೇಷವಿಷಯಗಳನ್ನು ನೋಡಿ

॥ ಸಂಹಿತಾಪಾಠಃ ॥

ಯದ॑ಗ್ನೇ॒ ಕಾನಿ॒ ಕಾನಿ॑ ಚಿ॒ದಾ ತೇ॒ ದಾರೂ॑ಣಿ ದ॒ಧ್ಮಸಿ॑ ।

ತಾ ಜು॑ಷಸ್ವ ಯವಿಷ್ಠ್ಯ ॥ ೨೦ ॥

॥ ಪದಪಾಠಃ ॥

ಯತ್ । ಅ॒ಗ್ನೇ॒ । ಕಾನಿ॑ । ಕಾನಿ॑ । ಚಿ॒ತ್ । ಆ । ತೇ॒ । ದಾರೂ॑ಣಿ । ದ॒ಧ್ಮಸಿ॑ ।

ತಾ । ಜು॒ಷ॒ಸ್ವ॒ । ಯ॒ವಿ॒ಷ್ಠ್ಯ॒ ॥ ೨೦ ॥

॥ ಸಾಯಣಭಾಷ್ಯಂ ॥

ಪೂರ್ವಸ್ಯಾಮೃಚ್ಯುಕ್ತಸ್ಯೈವಾರ್ಥಸ್ಯ ವಿವರಣಮತ್ರ। ಹೇ ಯವಿಷ್ಠ್ಯ ಯುವತಮಾಗ್ನೇ ತುಭ್ಯಂ ಯದ್ಯದಾ ಕಾನಿ ಕಾನಿ ಚಿದ್ಯಾನಿ ಕಾನ್ಯಪಿ ದಾರೂಣಿ ಕಾಷ್ಠಾನ್ಯಾ ದಧ್ಮಸಿ ಆಧಾರಯಾಮಿ ತದಾ ತಾ ತಾನ್ಯಪರಶುವೃಕ್ಣಾನ್ಯಪಿ ಜುಷಸ್ವ । ಸೇವಸ್ವ । ತಥಾ ಚ ಯಜುರ್ಬ್ರಾಹ್ಮಣಂ । ನ ಹ ಸ್ಮ ವೈ ಪುರಾಗ್ನಿರಪರಶುವೃಕ್ಣಂ ದಹತಿ ತದಸ್ಮೈ ಪ್ರಯೋಗ ಏವರ್ಷಿರಸ್ವದಯದ್ಯದಗ್ನೇ ಯಾನಿ ಕಾನಿ ಚೇತಿ ಸಮಿಧಮಾದಧಾತ್ಯಪರಶುವೃಕ್ಣಮೇವಾಸ್ಮೈ ಸ್ವದಯತಿ ಸರ್ವಮಸ್ಮೈ ಸ್ವದತೇ । ತೈ. ಸಂ. ೫-೧-೧೦-೧ । ಇತಿ ॥

॥ ಪ್ರತಿಪದಾರ್ಥ ॥

ಯವಿಷ್ಠ್ಯ—ಅತ್ಯಂತ ಯುವಕನಾದ । ಅಗ್ನೇ—ಎಲೈ ಅಗ್ನಿಯೇ । ಯತ್—ಯಾವಾಗ। ಕಾನಿ ಕಾನಿ ಚಿತ್—ಯಾವ ಯಾವ ವಿಧವಾದ । ದಾರೂಣಿ—ಕಾಷ್ಠಗಳನ್ನು । ತೇ—ನಿನಗೆ । ಆ ದಧ್ಮಸಿ—ನಾವು ಸಮರ್ಪಿಸುವೆವೋ । ತಾ—ಅವನ್ನೆಲ್ಲಾ । ಜುಷಸ್ವ—ಸೇವಿಸು.

॥ ಭಾವಾರ್ಥ ॥

ಅತ್ಯಂತ ಯುವಕನಾದ ಎಲೈ ಅಗ್ನಿಯೇ, ಯಾವ ಯಾವ ವಿಧವಾದ ಕಾಷ್ಠಗಳನ್ನು ನಿನಗೆ ನಾವು ತಂದರ್ಪಿಸುವೆವೋ ಅವನ್ನೆಲ್ಲಾ ಸೇವಿಸು.

## English Translation

Most youthful ( Agni ), when we offer any kinds of timber to you, you accept them all.

॥ ವಿಶೇಷವಿಷಯಗಳು ॥

ಪ್ರಯೋಗನೆಂಬ ಈ ಸೂಕ್ತದ ಋಷಿಯು—ತಾನು ಅತಿದರಿದ್ರನಾದುದರಿಂದ ತನ್ನಲ್ಲಿ ಯಜ್ಞಸಾಧನವಾದ ಗೋವುಗಳಿಲ್ಲ ಎಂದರೆ ಕ್ಷೀರ ಆಜ್ಯ ಘೃತ ಇವುಗಳನ್ನು ಯಜ್ಞಕ್ಕೆ ಒದಗಿಸಲು ಅವಶ್ಯಕವಾದ ಗೋವುಗಳಿಲ್ಲ. ಅಗ್ನಿಯನ್ನು ಚೆನ್ನಾಗಿ ಪ್ರಜ್ವಲವನ್ನಾಗಿ ಮಾಡಲು ಅವಶ್ಯಕವಾಗಿ ಬೇಕಾಗುವ ಕಾಷ್ಠಾದಿಗಳನ್ನು ಕಡಿದು ತಂದು ಹಾಕುವುದಕ್ಕಾಗಿ ಕೊಡಲಿಯೂ ನನ್ನಲ್ಲಿಲ್ಲ ಎಂದು ತನ್ನ ದೈನ್ಯವನ್ನು ವ್ಯಕ್ತಪಡಿಸಿ ತಾನು ಅರ್ಪಿಸುವ ತನಗೆ ಸಾಧ್ಯವಾದ ಹವಿರಾದಿದ್ರವ್ಯಗಳಿಂದಲೂ ಕಾಷ್ಠಾಗಳಿಂದಲೂ ಅಗ್ನಿಯು ತೃಪ್ತನಾಗಿ ಅವುಗಳನ್ನು ಸೇವೀಸಬೇಕೆಂದು ಅಗ್ನಿಯನ್ನು ಬೇಡಿಕೊಂಡಿದಾನೆ. ಈ ವಿಷಯದಲ್ಲಿ ಪ್ರಕೃತ ಋಕ್ಕನ್ನೇ ಉದಾಹರಿಸಿ ಅದರ ವಿಷಯವಾಗಿರುವ ಯಜುಬ್ರಾರ್ಹ್ಮಣ ವಾಕ್ಯನನ್ನು ಭಾಷ್ಯಕಾರರು ಉಲ್ಲೇಖಿಸಿದಾರೆ—

ನ ಹ ಸ್ಮ ವೈ ಪುರಾಗ್ನಿರಪರಶುವೃಕ್ಣಂ ದಹತಿ ತದಸ್ಮೈ ಪ್ರಯೋಗ ಏವರ್ಷಿರಸ್ವದಯದ್ಯದಗ್ನೇ ಯಾನಿ ಕಾನಿ ಚೇತಿ ಸಮಿಧಮಾ ದಧಾತ್ಯಪರಶುವೃಕ್ಣಮೇವಾಸ್ಮೈ ಸ್ವದಯತಿ ಸರ್ವಮಸ್ಮೈ ಸ್ವದತೇ ॥

( ತೈ. ಸಂ. ೫-೧-೧-೧೦-೧ )

ಪೂರ್ವದಲ್ಲಿ ಕೊಡಲಿಯಿಂದ ಕಡಿಯುದೇ ಹಾಗೆಯೇ ಕಾಡಿನಲ್ಲಿ ಬಿದ್ದಿದ್ದ ಕಾಷ್ಠಾದಿಗಳನ್ನು ಯಜ್ಞಾಗ್ನಿಯಲ್ಲಿ ಹಾಕಿದಲ್ಲಿ ಅಗ್ನಿಯು ಅವುಗಳನ್ನು ದಹಿಸುತ್ತಿರಲಿಲ್ಲ ಆದರೆ ಪ್ರಯೋಗನೆಂಬ ಋಷಿಯು, ತನ್ನಲ್ಲಿ ಕಾಷ್ಠಚ್ಛೇದನಸಾಧನವಾದ ಕೊಡಲಿಯು ಇಲ್ಲವೆಂದೂ ಆದ್ದರಿಂದ ಕೊಡಲಿಯಿಂದ ಕಡಿಯದೇ ಇರುವ ಕಾಷ್ಠಗಳನ್ನು ನಿನಗೆ ಪ್ರಿಯವಾದ ಘೃತವೆಂದೇ ಭಾವಿಸಿ ಪರಿಗ್ರಹಿಸಿ ದಹಿಸಬೇಕೆಂದೂ ಬೇಡಿಕೊಳ್ಳಲಾಗಿ ಅಗ್ನಿಯು ಆ ಋಷಿಯ ಪ್ರಾರ್ಥನೆಯನ್ನು ಮನ್ನಿಸಿ ಅವನು ಅರ್ಪಿಸಿದ ಕಾಷ್ಠಗಳನ್ನು ದಹಿಸಿದನು ಎಂಬ ಪೂರ್ವೇತಿಹಾಸವು ಈ ಸಂದರ್ಭದಲ್ಲಿ ಉಕ್ತವಾಗಿದೆ.

॥ ಸಂಹಿತಾಪಾಠಃ ॥

ಯದತ್ತ್ಯುಪಜಿಹ್ವಿಕಾ ಯದ್ವಮ್ರೋ ಅತಿಸರ್ಪತಿ ।

ಸರ್ವಂ ತದಸ್ತು ತೇ ಘೃತಂ ॥ ೨೧ ॥

॥ ಪದಪಾಠಃ ॥

ಯತ್ । ಅತ್ತಿ । ಉಪऽಜಿಹ್ವಿಕಾ । ಯತ್ । ವಮ್ರಃ । ಅತಿऽಸರ್ಪತಿ ।
ಸರ್ವಂ । ತತ್ । ಅಸ್ತು । ತೇ । ಘೃತಂ ॥ ೨೧ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಯತ್ಕಾಷ್ಠಾದಿಕಮುಪಜಿಹ್ವಿಕಾ । ಉಪಜಿಘ್ರತೀತ್ಯುಪಜಿಹ್ವಿಕಾ । ಅತ್ತಿ ಭಕ್ಷಯತಿ । ಯಚ್ಚ ಕಾಷ್ಠಾದಿಕಂ ವಮ್ರಃ । ವಮತ್ಯುದಕಮಿತಿ ವಮ್ರಃ । ಉಪಜಿಹ್ವಿಕಾವಮ್ರಶಬ್ದೌ ಯದ್ಯಪಿ ಪರ್ಯಾಯೌ ತಥಾಪಿ ಪೃಥಗುಪಾದಾನಾದ್ವಮ್ರಶಬ್ದಸ್ತದ್ವಿಶೇಷೇ ಪರ್ಯವಸ್ಯತಿ । ಸೋಽಪ್ಯತಿಸರ್ಪತಿ ಅತಿಗಚ್ಛತಿ । ತತ್ಸರ್ವಂ ತೇ ತವ ಘೃತಂ ಘೃತಸದೃಶಮಸ್ತು । ಯಥಾ ಘೃತಂ ತವ ಪ್ರಿಯಕರಂ ಭವತಿ ತಥಾ ಪ್ರಿಯಕರಂ ಭವತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಅಗ್ನಿಯೇ) **ಯತ್**—ಯಾವ ಕಾಷ್ಠಾದಿಗಳನ್ನು । **ಉಪಜಿಹ್ವಿಕಾ**—ಗೆಜ್ಜಿಲೇ ಮುಂತಾದ ಕ್ರಿಮಿಗಳು । **ಅತ್ತಿ**—ಭಕ್ಷಿಸಿವೆಯೋ । **ಯತ್**—ಯಾವ ಕಾಷ್ಠಾದಿಗಳನ್ನು । **ವಮ್ರಃ**—ವಮ್ರಸಂಜ್ಞಕವಾದ ಕ್ರಿಮಿಗಳು । **ಅತಿಸರ್ಪತಿ**—ಕೊರೆದಿವೆಯೋ । **ತತ್ ಸರ್ವಂ**—ಆ ಎಲ್ಲಾ ಕಾಷ್ಠವಿಶೇಷಗಳೂ । **ತೇ**—ನಿನಗೆ । **ಘೃತಂ**—ಘೃತದಂತೆ ಪ್ರಿಯಕಾರಕವಾಗಿ । **ಅಸ್ತು**—ಆಗಿರಲಿ

॥ ಭಾವಾರ್ಥ ॥

ಎಲೈ ಅಗ್ನಿಯೇ, ಯಾವ ಕಾಷ್ಠಾದಿಗಳನ್ನು ಗೆಜ್ಜಿಲೇ ಮುಂತಾದ ಕ್ರಿಮಿಗಳು ಭಕ್ಷಿಸಿವೆಯೋ, ಯಾವ ಕಾಷ್ಠಾದಿಗಳನ್ನು ವಮ್ರಸಂಜ್ಞಕವಾದ ಕ್ರಿಮಿಗಳು ಕೊರೆದಿವೆಯೋ ಆ ಎಲ್ಲಾ ಕಾಷ್ಠವಿಶೇಷಗಳೂ ನಿನಗೆ ಘೃತದಂತೆಯೇ ಪ್ರಿಯಕಾರಕವಾಗಿರಲಿ

English Translation

Whatever timber the ant has gnawed, whatever the emmet has infested,—may it all be welcome to you as ghi.

॥ ವಿಶೇಷವಿಷಯಗಳು ॥

**ಉಪಜಿಹ್ವಿಕಾ** ಮತ್ತು **ವಮ್ರಾ** ಎಂಬ ಶಬ್ದಗಳ ವಿಷಯದಲ್ಲಿ ಯಾಸ್ಕರು ನಿರುಕ್ತವನ್ನು ಈ ರೀತಿ ಹೇಳಿರುವರು—

**ವಮ್ರಾಭಿರುಪಜಿಹ್ವಿಕಾ ಇತಿ ಸೀಮಿಕಾನಾಂ । ವಮ್ರ್ಯೋ ವಮನಾತ್ । ಸೀಮಿಕಾ ಸ್ಯಮನಾತ್ । ಉಪಜಿಹ್ವಿಕಾ ಉಪಜಿಘ್ರ್ಯಃ । ಯದತ್ತ್ಯುಪಜಿಹ್ವಿಕಾ ಯದ್ವಮ್ರೋ ಅತಿಸರ್ಪತಿ । ಇತ್ಯಪಿ ನಿಗಮೋ ಭವತಿ ॥**

(ನಿ. ೩—೨೦)

**ವಮ್ರಾ** ಮತ್ತು **ಉಪಜಿಹ್ವಿಕಾ** ಎಂಬ ಶಬ್ದಗಳು **ಸೀಮಿಕಾ** ಎಂದರೆ ಗೆಜ್ಜಲು ಇರುವೆಗಳನ್ನು (emmets, white ants) ಸೂಚಿಸುವ ಪರ್ಯಾಯಪದಗಳು, **ವಮ್ರ್ಯೋ ವಮನಾತ್ । ವಮ್ರೀ** ಎಂಬ ಶಬ್ದವು **ವಮನ** ಕಾರುವುದು ವಮನಮಾಡುವುದು ಎಂಬರ್ಥವುಳ್ಳ ವಮನಶಬ್ದದಿಂದ ನಿಷ್ಪನ್ನವಾಗಿದೆ. **ಈ ವಿಧವಾದ** ಇರುವೆಗಳು ಉದಕವನ್ನು ಹೀರಿ ಅದನ್ನು ಮಣ್ಣಿನ ಮೇಲೆ **ಕಾರಿ ಅಥವಾ ವಮನಮಾಡಿ** ಮಣ್ಣನ್ನು ಹಸಿಯಾಗಿಯೂ ಮೃದುವಾಗಿಯೂ ಮಾಡುವವು. ಆದ್ದರಿಂದ ಗೆಜ್ಜಲು ಇರುವೆಗಳಿಗೆ **ವಮ್ರೀ** ಎಂದು ಹೆಸರು. **ಉಪಜಿಹ್ವಿಕಾಃ** ಎಂದರೆ **ಉಪಜಿಘ್ರ್ಯಃ** ಈ ಇರುವೆಗಳಿಗೆ ಮೂಸಿನೋಡುವ ಘ್ರಾಣೇಂದ್ರಿಯಗಳು ಅತಿ ಚುರುಕಾಗಿರುವವು ವಾಸನೆಯಿಂದಲೇ ಇವುಗಳು ಪದಾರ್ಥಗಳ ಸ್ವರೂಪವನ್ನು ಚೆನ್ನಾಗಿ ತಿಳಿದುಕೊಂಡು ತಮಗೆ ತಿನ್ನಲು ಯೋಗ್ಯವಾದವುಗಳನ್ನು ಭಕ್ಷಿಸುವವು. ಇಂತಹ ತೀಕ್ಷ್ಣವಾದ ಘ್ರಾಣೇಂದ್ರಿಯಗಳಿರುವ ಗೆಜ್ಜಲು ಇರುವೆಗಳಿಗೆ **ಉಪಜಿಹ್ವಿಕಾ** ಎಂದು ಹೆಸರು. **ಸೀಮಿಕ** ಎಂಬ ಶಬ್ದಕ್ಕೆ **ಸೀಮಿಕಾಃ ಸ್ಯಮನಾತ್ । ಸ್ಯಮಂತಿ ಹಿ ತಾ ನಿತ್ಯಮೇವ ಗಚ್ಛಂತಿ । ಸೀಮಿಕ** ಎಂಬ ಶಬ್ದವು ಹೋಗು, ಸಂಚರಿಸು ಎಂಬ ಅರ್ಥವುಳ್ಳ ಸ್ಯಮಂತಿಧಾತುವಿನಿಂದ ನಿಷ್ಪನ್ನವಾಗಿದೆ. ಈ ಇರುವೆಗಳು ಆಹಾರಾರ್ಥವಾಗಿ ಯಾವಾಗಲೂ ಬಿಡುವಿಲ್ಲದೆ ಸಂಚರಿಸುತ್ತಲೇ ಇರುವುದರಿಂದ ಅಥವಾ ಆಹಾರಕ್ಕಾಗಿ ವೃಕ್ಷಾದಿಗಳನ್ನು (ಮರ ಅಥವಾ ಮರದ ಸಾಮಾನುಗಳನ್ನು) ವ್ಯಾಪಿಸುವುದರಿಂದ ಈ ಗೆಜ್ಜಲು ಇರುವೆಗಳಿಗೆ **ಸೀಮಿಕ** ಎಂಬ ಹೆಸರು ಬಂದಿದೆ. ಈ ವಿಷಯದಲ್ಲಿ **ಯದತ್ತ್ಯುಪಜಿಹ್ವಿಕಾ ಯದ್ವಮ್ರೋ ಅತಿಸರ್ಪತಿ** ಎಂಬ ಪ್ರಕೃತಋಕ್ಕಿನ ವಾಕ್ಯವೇ ಶ್ರುತಿವಾಕ್ಯದ ಉದಾಹರಣೆಯಾಗಿರುವುದು ಎಂದು ನಿರ್ವಚನಾಭಿಪ್ರಾಯವು.

॥ ಸಂಹಿತಾಪಾಠಃ ॥

ಅ॒ಗ್ನಿಮಿಂ॒ಧಾನೋ॒ ಮನ॑ಸಾ॒ ಧಿಯಂ॑ ಸಚೇತ॒ ಮರ್ತ್ಯಃ॑ ।

ಅ॒ಗ್ನಿಮೀ॑ಧೇ ವಿ॒ವಸ್ವ॑ಭಿಃ ॥ ೨೨ ॥

॥ ಪದಪಾಠಃ ॥

ಅ॒ಗ್ನಿಂ । ಇಂ॒ಧಾನಃ । ಮನ॑ಸಾ । ಧಿಯ॑ಂ । ಸ॒ಚೇ॒ತ॒ । ಮರ್ತ್ಯಃ॑ ।

ಅ॒ಗ್ನಿಂ । ಈ॒ಧೇ॒ । ವಿ॒ವಸ್ವ॑ಽಭಿಃ ॥ ೨೨ ॥

॥ ಸಾಯಣಭಾಷ್ಯಂ ॥

**ಮರ್ತ್ಯೋ ಮನುಷ್ಯೋಽಗ್ನಿಮಿಂಧಾನಃ ಕಾಷ್ಠೈಃ ಪ್ರಜ್ವಲಯನ್ ಮನಸೈವ ಶ್ರದ್ಧಧಾನೋ ಧಿಯಂ ಕರ್ಮ ಸಚೇತ । ಕಾಲೇ ಭಜೇತ । ವಿವಸ್ವಭಿರ್ಋತ್ವಿಗ್ಭಿಶ್ಚಾಗ್ನಿಮೇವೇಧೇ । ಪ್ರಜ್ವಲತಿ ॥**

॥ ಪ್ರತಿಪದಾರ್ಥ ॥

**ಮರ್ತ್ಯಃ**—ಮಾನವನು । **ಅಗ್ನಿಂ**—ಅಗ್ನಿಯನ್ನು । **ಇಂಧಾನಃ**—ಕಾಷ್ಠಗಳಿಂದ ಪ್ರಜ್ವಲಿಸುವಂತೆ ಮಾಡುವಾಗ। **ಮನಸಾ**—ಮನಃಪೂರ್ವಕವಾದ ಶ್ರದ್ಧೆಯಿಂದ। **ಧಿಯಂ**—ಆ ಕರ್ಮವನ್ನು। **ಸಚೇತ**—ನೆರವೇರಿಸತಕ್ಕದ್ದು।

**ವಿವಸ್ವಭಿಃ**—ಪ್ರಾಜ್ಞರಾದ ಋತ್ವಿಕ್ಕುಗಳ ಸಹಾಯದಿಂದ । **ಅಗ್ನಿಂ**—ಅಗ್ನಿಯನ್ನು । **ಈಧೇ**—ಪ್ರಜ್ವಲಿಸುವಂತೆ ಮಾಡಬೇಕು.

॥ ಭಾವಾರ್ಥ ॥

ಮಾನವನು ಅಗ್ನಿಯನ್ನು ಕಾಷ್ಠಗಳಿಂದ ಪ್ರಜ್ವಲಿಸುವಂತೆ ಮಾಡುವಾಗ ಮನಃಪೂರ್ವಕವಾದ ಶ್ರದ್ಧೆಯಿಂದ ಆ ಕರ್ಮವನ್ನು ನೆರವೇರಿಸತಕ್ಕದ್ದು. ಪ್ರಾಜ್ಞರಾದ ಋತ್ವಿಕ್ಕುಗಳ ಸಹಾಯದಿಂದ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡಬೇಕು.

English Translation

Let a man, when he kindles Agni, perform the ceremony with a (devout) mind ; he kindles him with the priests.

## ನೂರಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅದರ್ಶೀತಿ ಚತುರ್ದಶರ್ಚಂ ದಶಮಂ ಸೂಕ್ತಂ ಕಾಣ್ವಸ್ಯ ಸೋಭರೇರಾರ್ಷಂ । ಅತ್ರಾನುಕ್ರಮ್ಯತೇ। ಅದರ್ಶಿ ಷಳೂನಾ ಸೋಭರಿರ್ಬಾರ್ಹತಂ ಪಂಚಮ್ಯಾದ್ಯಯುಜಃ ಸತೋಬೃಹತ್ಯೋಽಷ್ಟಮ್ಯಾದಿಯುಜಃ ಕಕುಬ್ಗಾಯತ್ರೀ ಕಕುಬನುಷ್ಟುಬಂತ್ಯಾಗ್ನಿಮಾರುತೀತಿ। ಪಂಚಮೀಸಪ್ತಮೀನವಮ್ಯೇಕಾದಶೀತ್ರಯೋದಶ್ಯಃ ಪಂಚ ಸತೋಬೃಹತ್ಯಃ । ಅಷ್ಟಮೀದ್ವಾದಶ್ಯೌ ಕಕುಭೌ ದಶಮೀ ಗಾಯತ್ರೀ ಚತುರ್ದಶ್ಯನುಷ್ಟುಪ್ ಶಿಷ್ಟಾ ಬೃಹತ್ಯಃ । ಆಗ್ನೇಯಂ। ತ್ವಿತ್ಯುಕ್ತತ್ವಾದಗ್ನಿರ್ದೇವತಾ । ಅಂತ್ಯಾಯಾಸ್ತ್ವಗ್ನಿರ್ಮರುತಶ್ಚ ॥ ಪ್ರಾತರನುವಾಕಸ್ಯಾಗ್ನೇಯೇ ಕ್ರತೌ ಬಾರ್ಹತೇ ಛಂದಸ್ಯಾದಿತಃ ಸಪ್ತರ್ಚಃ। ಸೂತ್ರಿತಂ ಚ। ಅದರ್ಶಿ ಗಾತುವಿತ್ತಮ ಇತಿ ಸಪ್ತೇತಿ ಬಾರ್ಹತಂ । ಆ. ೪-೧೩ ॥ ಆಭಿಪ್ಲವಿಕೇಷೂಕ್ಥ್ಯೇಷು ಮೈತ್ರಾವರುಣಸ್ಯ ವೈಕಲ್ಪಿಕಃ ಸ್ತೋತ್ರಿಯಸ್ತೃಚಃ। ಸೂತ್ರಿತಂ ಚ। ಮಾ ಚಿದಾಗ್ನೇ ಯಾಹಿ ಮರುತ್ಸಖಾ ಯತ್ತೇ ರಾಜನ್ನಗ್ನ ಇತಿ ॥**

ಅನುವಾದವು— **ಅದರ್ಶಿ** ಎಂಬ ಈ ಸೂಕ್ತವು ಹತ್ತನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಹದಿನಾಲ್ಕು ಋಕ್ಕುಗಳಿರುವವು. ಈ ಸೂಕ್ತಕ್ಕೆ ಸೋಭರಿಃ ಕಾಣ್ವ: ಎಂಬುವನು ಋಷಿಯು, ಅನುಕ್ರಮಣಿಕೆಯಲ್ಲಿ— **ಅದರ್ಶಿ ಷಳೂನಾ ಸೋಭರಿರ್ಬಾರ್ಹತಂ ಪಂಚಮ್ಯಾದ್ಯಯುಜಃ ಸತೋಬೃಹತ್ಯೋಽಷ್ಟಮ್ಯಾದಿಯುಜಃ ಕಕುಬ್ಗಾಯತ್ರೀ ಕಕುಬನುಷ್ಟುಬಂತ್ಯಾಗ್ನಿಮಾರುತೀ** ಎಂದು ಹೇಳಿರುವುದು. ಈ ಸೂಕ್ತದ ಐದು, ಏಳು, ಒಂಭತ್ತು, ಹನ್ನೊಂದು, ಹದಿಮೂರನೆಯ ಋಕ್ಕುಗಳು (೫ ಋಕ್ಕುಗಳು) ಸತೋಬೃಹತೀಛಂದಸ್ಕವು ; ಎಂಟು, ಹನ್ನೆರಡು ಎಂಬ ಎರಡು ಋಕ್ಕುಗಳು ಕಕುಪ್‌ಛಂದಸ್ಕವು. ಹತ್ತನೆಯ ಋಕ್ಕು ಗಾಯತ್ರೀಛಂದಸ್ಕವು. ಹದಿನಾಲ್ಕನೆಯದು ಅನುಷ್ಟುಪ್‌ಛಂದಸ್ಕವು ; ಉಳಿದ ಋಕ್ಕುಗಳು ಬೃಹತೀಛಂದಸ್ಕವು. ಅಗ್ನಿಯು ದೇವತೆಯು ; ಕೊನೆಯ ಋಕ್ಕಿಗೆ ಅಗ್ನಿ ಮತ್ತು ಮರುತ್ತುಗಳು ದೇವತೆಯು. ಪ್ರಾತರನುವಾಕಮಂತ್ರಪಠನಕಾಲದಲ್ಲಿ ಆಗ್ನೇಯ

ಕ್ರತುಸಂಬಂಧವಾದ ಬೃಹತೀಛಂದಸ್ಸಿನ ಋಕ್ಕುಗಳಿಗಾಗಿ ಈ ಸೂಕ್ತದ ಮೊದಲಿನ ಏಳು ಋಕ್ಕುಗಳ ವಿನಿಯೋಗವಿರುವುದೆಂದು ಆಶ್ವಲಾಯನಶ್ರೌತಸೂತ್ರದ—ಅದರ್ಶಿ **ಗಾತುವಿತ್ತಮ ಇತಿ ಸಪ್ತೇತಿ ಬಾರ್ಹತಂ** ಎಂಬ ಸೂತ್ರದಿಂದ ( ಆ. ೪-೧೩ ) ವಿನ್ಯತವಾಗಿರುವುದು. ಅಭಿಪ್ಲವಸಂಬಂಧವಾದ ಉಕ್ಥ್ಯಯಾಗಗಳಲ್ಲಿ ಮೈತ್ರಾವರುಣನೆಂಬ ಋತ್ವಿಜನು ಪ್ರ **ಮಂಹಿಷ್ಠಾಯ** ಎಂದು ಮೊದಲಾಗುವ ಮೂರು ಋಕ್ಕುಗಳನ್ನು (೮-೧೦ ಋಕ್ಕುಗಳನ್ನು) ವೈಕಲ್ಪಿಕಸ್ತೋತ್ರಿಯತೃಚವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಪ್ರ ಮಂಹಿಷ್ಠಾಯ ಗಾಯತ ಪ್ರ ಸೋ ಅಗ್ನೇ ತವೋತಿಭಿಃ** ಎಂಬ ಸೂತ್ರದಿಂದ (ಆ. ೭-೮) ವಿನ್ಯತವಾಗಿರುವುದು ಮತ್ತು ಅಧ್ಯಾಯೋಪಾಕರಣ ಮತ್ತು ಉತ್ಸರ್ಜನಕರ್ಮಗಳ ಪ್ರಧಾನಹೋಮದಲ್ಲಿ ಮಂಡಲಾಂತ್ಯಋಕ್ಕುಗಳಿಗಾಗಿ **ಆಗ್ನೇ ಯಾಹಿ** ಋಂಬ ಈ ಸೂಕ್ತದ ಕೊನೆಯ ಋಕ್ಕನ್ನು (೧೪ನೇ ಋಕ್ಕನ್ನು) ಪಠಿಸಿ ಹೋಮಮಾಡಬೇಕೆಂದು ಆಶ್ವಲಾಯನಗೃಹ್ಯಸೂತ್ರದ—**ಮಾ ಚಿದಾಗ್ನೇ ಯಾಹಿ ಮರುತ್ಸಖಾ ಯತ್ತ್ರೇ ರಾಜನ್ನಗ್ನೇ** ಎಂಬ ಸೂತ್ರದಿಂದ (ಆ ಗೃ. ೩.೫-೭) ವಿನ್ಯತವಾಗಿರುವುದು.

## ಸೂಕ್ತ—೧೦೩

ಮಂಡಲ—೮ ॥ ಅನುವಾಕ—೧೦ ॥ ಸೂಕ್ತ—೧೦೩ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೧೩, ೧೪, ೧೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೪ ॥
ಋಷಿಃ—ಸೋಭರಿಃ ಕಾಣ್ವಃ ॥
ದೇವತಾ—೧-೧೩. ಅಗ್ನಿಃ । ೧೪. ಅಗ್ನಿರ್ಮರುತಶ್ಚ ॥
ಛಂದಃ—೧-೪, ೬ ಬೃಹತೀ । ೫. ವಿರಾಡ್ರೂಪಾ । ೭, ೯, ೧೧, ೧೩. ಸತೋಬೃಹತೀ । ೮, ೧೨. ಕಕುಪ್ । ೧೦. ಹ್ರಸೀಯಸೀ । ೧೪. ಅನುಷ್ಟುಪ್ ॥

॥ ಸಂಹಿತಾಪಾಠಃ ॥

ಅದರ್ಶಿ ಗಾತುವಿತ್ತಮೋ ಯಸ್ಮಿನ್ವ್ರತಾನ್ಯಾದಧುಃ ।
ಉಪೋ ಷು ಜಾತಮಾರ್ಯಸ್ಯ ವರ್ಧನಮಗ್ನಿಂ ನಕ್ಷಂತ ನೋ ಗಿರಃ ॥ ೧ ॥

॥ ಪದಪಾಠಃ ॥

ಅದರ್ಶಿ । ಗಾತುವಿತ್ಽತಮಃ । ಯಸ್ಮಿನ್ । ವ್ರತಾನಿ । ಆಽದಧುಃ ।
ಉಪೋ ಇತಿ । ಸು । ಜಾತಂ । ಆರ್ಯಸ್ಯ । ವರ್ಧನಂ । ಅಗ್ನಿಂ । ನಕ್ಷಂತ । ನಃ । ಗಿರಃ ॥

॥ ಸಾಯಣಭಾಷ್ಯಂ ॥

ಯಸ್ಮಿನ್ನಗ್ನೌ ವ್ರತಾನಿ ಕರ್ಮಾಣ್ಯಾದಧುಃ ಯಜಮಾನಾ ಆದಧನ್ ಗಾತುವಿತ್ತಮೋಽತಿಶಯೇನ ಮಾರ್ಗಾಣಾಂ ಜ್ಞಾತಾ ಸೋಽಗ್ನಿರದರ್ಶಿ । ಪ್ರಾದುರಭೂತ್ । ಕಿಂಚ ಸು ಜಾತಂ ಸಮ್ಯಕ್ಪ್ರಾದುರ್ಭೂ-

ತಮುಸ್ಯಾರ್ಯಸ್ಯೋತ್ತಮವರ್ಣಸ್ಯ ವರ್ಧನಂ ವರ್ಧಯಿತಾರಮಗ್ನಿಂ ನೋಽಸ್ಮಾಕಂ ಗಿರಃ ಸ್ತುತಿರೂಪಾ ವಾಚ ಉಷ್ರೋ ನಕ್ಷಂತ । ಉಪಗಚ್ಛಂತ್ಯೇವ ॥ ನಕ್ಷ ಗತಾಮಿತಿ ಧಾತುಃ ॥

॥ ಪ್ರತಿಪದಾರ್ಥ ॥

ಯಸ್ಮಿನ್—ಯಾವ ಅಗ್ನಿಯಲ್ಲಿ । ವ್ರತಾನಿ—ಕರ್ಮಗಳನ್ನೆಲ್ಲಾ । ಆದಧುಃ—ಯಜಮಾನಾದಿಗಳು ಅರ್ಪಿಸುವರೋ । ಗಾತುವಿತ್ತಮಃ—ಸನ್ಮಾರ್ಗಗಳನ್ನೆಲ್ಲಾ ಅರಿತ ಅದೇ ಅಗ್ನಿಯು । ಅದರ್ಶಿ—ಪ್ರಾದುರ್ಭೂತನಾಗಿದ್ದಾನೆ (ನಮಗೆ ಕಾಣಿಸಿಕೊಂಡಿದ್ದಾನೆ) । ಸುಜಾತಂ—ಉತ್ತಮವಾದ ಜನ್ಮವುಳ್ಳವನೂ । ಆರ್ಯಸ್ಯ—ಆರ್ಯಜನಕ್ಕೆ । ವರ್ಧನಂ—ವೃದ್ಧಿಯನ್ನುಂಟುಮಾಡುವವನೂ ಆದ । ಅಗ್ನಿಂ—ಅಗ್ನಿಯನ್ನು । ನಃ—ನಮ್ಮ । ಗಿರಃ—ಸ್ತುತಿರೂಪವಾದ ವಾಕ್ಕುಗಳು । ಉಸ್ರೋ ನಕ್ಷಂತ—ಸಮೀಪಿಸುತ್ತವೆ.

॥ ಭಾವಾರ್ಥ ॥

ಯಾವ ಅಗ್ನಿಯಲ್ಲಿ ಯಜಮಾನಾದಿಗಳು ಕರ್ಮಗಳನ್ನೆಲ್ಲಾ ಅರ್ಪಿಸುವರೋ, ಸನ್ಮಾರ್ಗಗಳನ್ನೆಲ್ಲಾ ಅರಿತ ಅದೇ ಅಗ್ನಿಯು ನಮಗೆ ಕಾಣಿಸಿಕೊಂಡಿದ್ದಾನೆ. ಉತ್ತಮವಾದ ಜನ್ಮವುಳ್ಳವನೂ ಆರ್ಯಜನಕ್ಕೆ ವೃದ್ಧಿಯನ್ನುಂಟುಮಾಡುವವನೂ ಆದ ಅಗ್ನಿಯನ್ನು ನಮ್ಮ ಸ್ತುತಿರೂಪವಾದ ವಾಕ್ಕುಗಳು ಸಮೀಪಿಸುತ್ತವೆ.

English Translation

He, in whom they offer the sacrifices, has appeared,—he who knows all ways; our praises rise to Agni, auspiciously born, the helper of the Arya.

॥ ಸಂಹಿತಾಪಾಠಃ ॥

ಪ್ರ ದೈವೋದಾಸೋ ಅಗ್ನಿರ್ದೇವಾँ ಅಚ್ಛಾ ನ ಮಜ್ಮನಾ ।
ಅನು ಮಾತರಂ ಪೃಥಿವೀಂ ವಿ ವಾವೃತೇ ತಸ್ಥೌ ನಾಕಸ್ಯ ಸಾನವಿ ॥

॥ ಪದಪಾಠಃ ॥

ಪ್ರ । ದೈವಃಽದಾಸಃ । ಅಗ್ನಿಃ । ದೇವಾನ್ । ಅಚ್ಛ । ನ । ಮಜ್ಮನಾ ।
ಅನು । ಮಾತರಂ । ಪೃಥಿವೀಂ । ವಿ । ವವೃತೇ । ತಸ್ಥೌ । ನಾಕಸ್ಯ । ಸಾನವಿ ॥ ೨ ॥

॥ ಸಾಯಣಭಾಷ್ಯಂ ॥

ದೈವೋದಾಸೋ ದಿವೋದಾಸೇನಾಹೂಯಮಾನೋಽಗ್ನಿರ್ಮಾತರಂ । ಸರ್ವಸ್ಯ ಲೋಕಸ್ಯ ಧಾರಣವತ್ತ್ವಾತ್ಪೃಥಿವೀ ಮಾತಾ । ತಾಂ ಪೃಥಿವೀಮನುಲಕ್ಷ್ಯ ಪ್ರತಿ ದೇವಾಂಸ್ತಸ್ಯ ದಿವೋದಾಸಸ್ಯ ಯಜ್ಞೇ

ದೇವಾನನು ಪ್ರತಿ ಹವಿರ್ವೋಢುಂ ನ ಪ್ರ ವಿ ವಾವೃತೇ। ಯಸ್ಮಾದೇನಮಗ್ನಿಂ ದಿವೋದಾಸೋ ಮಜ್ಮನಾ ಬಲೇನಾಜುಹಾವ ತಸ್ಮಾದಯಮಗ್ನಿರ್ನಾಕಸ್ಯ ಸ್ವರ್ಗಸ್ಯ ಸಾನವಿ ಸಮುಚ್ಛ್ರಿತೇ ದೇಶೇ ಸ್ವಾಯತನ ಏವ ತಸ್ಥೌ । ಅತಿಷ್ಠತ್ ॥

। ಪ್ರತಿಪದಾರ್ಥ ।

**ದೈವೋದಾಸಃ**—ದಿವೋದಾಸನಿಂದ ಕರೆಯಲ್ಪಟ್ಟ । **ಅಗ್ನಿಃ**—ಅಗ್ನಿಯು । **ಮಾತರಂ**—ಲೋಕಕ್ಕೆಲಾ ಮಾತೃಭೂತವಾದ । **ಪೃಥಿವೀಂ ಅಚ್ಛ**—ಪೃಥ್ವಿಯ ಪರವಾಗಿ । **ದೇವಾನ್ ಅನು**—ದೇವತೆಗಳಿಗೆ ಹವಿಸ್ಸನ್ನು ವಹಿಸಲು । **ನ ಪ್ರ ವಿ ವಾವೃತೇ**—ಹಿಂತಿರುಗಲಿಲ್ಲ । **ಮಜ್ಮನಾ**—ದಿವೋದಾಸನು ತನ್ನ ಬಲಪ್ರಯೋಗದಿಂದ ಕರೆದುದರಿಂದ । **ನಾಕಸ್ಯ**—ಸ್ವರ್ಗದ । **ಸಾನವಿ**—ತಪ್ಪಲು ಪ್ರದೇಶದ ಮೇಲೆ । **ತಸ್ಥೌ**—ನಿಂತುಬಿಟ್ಟನು.

। ಭಾವಾರ್ಥ ।

ದೇವೋದಾಸನಿಂದ ಕರೆಯಲ್ಪಟ್ಟ ಅಗ್ನಿಯು ಲೋಕಕ್ಕೆಲ್ಲಾ ಮಾತೃಭೂತವಾದ ಪೃಥ್ವಿಯ ಪರವಾಗಿ ದೇವತೆಗಳು ಹವಿಸ್ಸನ್ನು ವಹಿಸಲು ಹೋಗಿ ಹಿಂತಿರುಗಲಿಲ್ಲ. ದಿವೋದಾಸನು ತನ್ನ ಬಲಪ್ರಯೋಗದಿಂದ ಕರೆದುದರಿಂದ ಸ್ವರ್ಗದ ತಪ್ಪಲು ಪ್ರದೇಶದಮೇಲೆಯೇ ನಿಂತುಬಿಟ್ಟನು.

English Translation

Agni, when invoked by Divodasa, ran along the mother Earth as with might, towards the gods ; he took his place in the height of heaven.

। ಸಂಹಿತಾಪಾಠಃ ।

ಯಸ್ಮಾದ್ರೇಜಂತ ಕೃಷ್ಟಯಶ್ಚರ್ಕೃತ್ಯಾನಿ ಕೃಣ್ವತಃ ।
ಸಹಸ್ರಸಾಂ ಮೇಧಸಾತಾವಿವ ತ್ಮನಾಗ್ನಿಂ ಧೀಭಿಃ ಸಪರ್ಯತ ॥೩॥

॥ ಪದಪಾಠಃ ॥

ಯಸ್ಮಾತ್ । ರೇಜಂತ । ಕೃಷ್ಟಯಃ । ಚರ್ಕೃತ್ಯಾನಿ । ಕೃಣ್ವತಃ ।
ಸಹಸ್ರಸಾಂ। ಮೇಧಸಾತೌಽಇವ । ತ್ಮನಾ । ಅಗ್ನಿಂ । ಧೀಭಿಃ । ಸಪರ್ಯತ ॥ ೩ ॥

॥ ಸಾಯಣಭಾಷ್ಯಂ ॥

ಯಸ್ಮಾತ್ಕಾರಣಾಚ್ಚರ್ಕೃತ್ಯಾನಿ ಕರ್ತವ್ಯಾನಿ ಕರ್ಮಾಣಿ ಕೃಣ್ವತಃ ಕುರ್ವಾಣಾನ್ಮನುಷ್ಯಾನ್ ಕೃಷ್ಟಯ ಇತರೇ ಮನುಷ್ಯಾ ರೇಜಂತೇ ಕಂಪಂತೇ ತಸ್ಮಾದಿದಾನೀಂ ಹೇ ಜನಾಃ ಯೂಯಂ ಸಹಸ್ರಸಾಂ

**ವಾಂ ಧನಾನಾಂ ಚ ಸಹಸ್ರಸ್ಯ ದಾತಾರಮಗ್ನಿಂ ಮೇಧಸಾತೌ ಯಜ್ಞೇ ಧೀಭಿಃ ಕರ್ತವ್ಯೈಃ ಕರ್ಮಭಿ-ರ್ನಾತ್ಮನೈವ ಸಪರ್ಯತ । ಪರಿಚರತ ।**

॥ ಪ್ರತಿಪದಾರ್ಥ ॥

( ಎಲೈ ಮಾನವರೇ ) **ಯಸ್ಮಾತ್**—ಯಾವ ಕಾರಣದಿಂದ । **ಚರ್ಕೃತ್ಯಾನಿ**—ಮಾಡಬೇಕಾದ ಕರ್ಮಗಳನ್ನು । **ಕೃಣ್ವತಃ** ಮಾಡತಕ್ಕ ಪುರುಷನಿಗೆ । **ಕೃಷ್ಟಯಃ**—ಕರ್ಮರಹಿತರಾದ ಜನರೆಲ್ಲರೂ । **ರೇಜಂತೇ**—ದರಿ ನಡಗುವರೋ ( ಆದುದರಿಂದಲೇ ) । **ಸಹಸ್ರಸಾಂ**—ಸಹಸ್ರ ಸಂಖ್ಯೆಯಲ್ಲಿ ಗೋವುಗಳನ್ನೂ ಧನಗಳನ್ನೂ ಕೊಡತಕ್ಕ । **ಅಗ್ನಿಂ**—ಅಗ್ನಿಯನ್ನು । **ಮೇಧಸಾತೌ**—ಯಜ್ಞದಲ್ಲಿ । **ಧೀಭಿಃ**—ನಿಮ್ಮ ಕರ್ತವ್ಯ ಕರ್ಮಗಳಿಂದ । **ತ್ಮನಾ**—ಸ್ವಯಂ ಪ್ರೇರಿತರಾಗಿಯೇ । **ಸಪರ್ಯತ**—ಪೂಜಿಸಿರಿ

॥ ಭಾವಾರ್ಥ ॥

ಎಲೈ ಮಾನವರೇ, ಯಾವ ಕಾರಣದಿಂದ ಮಾಡಬೇಕಾದ ಕರ್ಮಗಳನ್ನು ಮಾಡತಕ್ಕ ಪುರುಷನಿಗೆ ಕರ್ಮರಹಿತರಾದ ಜನರೆಲ್ಲರೂ ಬೆದರಿ ನಡಗುವರೋ ಆದುದರಿಂದಲೇ, ಸಹಸ್ರ ಸಂಖ್ಯೆಯಲ್ಲಿ ಗೋವುಗಳನ್ನೂ ಧನಗಳನ್ನೂ ಕೊಡತಕ್ಕ ಅಗ್ನಿಯನ್ನು ಯಜ್ಞದಲ್ಲಿ ನಿಮ್ಮ ಕರ್ತವ್ಯ ಕರ್ಮಗಳಿಂದ ಸ್ವಯಂ ಪ್ರೇರಿತರಾಗಿಯೇ ಪೂಜಿಸಿರಿ.

English Translation

Since men tremble before those who perform the sacred sacrifices, therefore you devoutly worship in the solemn rite Agni the bestower of thousands of cows.

॥ ಸಂಹಿತಾಪಾಠಃ ॥

ಪ್ರ ಯಂ ರಾಯೇ ನಿನೀಷಸಿ ಮರ್ತೋ ಯಸ್ತೇ ವಸೋ ದಾಶತ್।
ಸ ವೀರಂ ಧತ್ತೇ ಅಗ್ನ ಉಕ್ಥಶಂಸಿನಂ ತ್ಮನಾ ಸಹಸ್ರಪೋಷಿಣಂ ॥

॥ ಪದಪಾಠಃ ॥

ಪ್ರ । ಯಂ । ರಾಯೇ । ನಿನೀಷಸಿ । ಮರ್ತಃ । ಯಃ । ತೇ । ವಸೋ ಇತಿ । ದಾಶತ್ ।
ಸಃ । ವೀರಂ । ಧತ್ತೇ । ಅಗ್ನೇ । ಉಕ್ಥಽಶಂಸಿನಂ । ತ್ಮನಾ । ಸಹಸ್ರಽಪೋಷಿಣಂ ॥ ೪ ॥

॥ ಸಾಯಣಭಾಷ್ಯಂ ॥

**ಹೇ ವಸೋ ವಾಸಕಾಗ್ನೇ ತ್ವಂ ಯಂ ತವ ಸ್ತೋತಾರಂ ರಾಯೇ ಧನಾರ್ಥಂ ಪ್ರ ನಿನೀಷಸಿ ಪ್ರನೇತುಮಿಚ್ಛಸಿ ಯಶ್ಚ ಮರ್ತೋ ಮನುಷ್ಯಸ್ತೇ ತುಭ್ಯಂ ದಾಶತ್ ಹವೀಂಷಿ ಪ್ರಯಚ್ಛತಿ ಸ ಮನುಷ್ಯ**

**ಉಕ್ಥಶಂಸಿನಮುಕ್ಥಾನಾಂ ಶಂಸಿತಾರಂ ತ್ಮನಾತ್ಮನೈವ ಸಹಸಪ್ರೋಷಿಣಂ ಬಹುಧನಂ ವೀರಂ ಪುತ್ರಂ ಧತ್ತೇ ಧಾರಯತಿ ॥**

। ಪ್ರತಿಪದಾರ್ಥ ॥

**ವಸೋ**—ವಸತಿದಾಯಕನಾದ । **ಅಗ್ನೇ**—ಎಲೈ ಅಗ್ನಿಯೆ, । (**ತ್ವಂ**—ನೀನು) । **ಯಂ**—ಯಾವ ಸ್ತುತಿ ಕರ್ತನನ್ನು । **ರಾಯೇ**—ಧನಲಾಭಕ್ಕಾಗಿ । **ಪ್ರ ನಿನೀಷಸಿ**—ಕರೆದೊಯ್ಯುವೆಯೋ। **ಯಃ**—ಯಾವ। **ಮರ್ತಃ**—ಮಾನವನು । **ತೇ**—ನಿನಗೆ । **ದಾಶತ್**— ಹವಿಸ್ಸನ್ನರ್ಪಿಸುವನೋ। **ಸಃ**—ಆ ಮಾನವನು। **ತ್ಮನಾ**—ತಾನಾಗಿಯೇ. । **ಉಕ್ಥಶಂಸಿನಂ**—ಶಸ್ತ್ರ ಮತ್ತು ಸ್ತೋತ್ರಾದಿಗಳಿಂದ ನಿನ್ನನ್ನು ಪ್ರಶಂಸಿಸುವವನೂ । **ಸಹಸ್ರಪೋಷಿಣಂ**—ಅತ್ಯಧಿಕವಾದ ಧನಕ್ಕೆ ಪತಿಯಾದವನೂ । **ವೀರಂ**—ಶಕ್ತಿಯುತನೂ ಆದ ಪುತ್ರನನ್ನು । **ಧತ್ತೇ**—ಹೊಂದುತ್ತಾನೆ.

॥ ಭಾವಾರ್ಥ ।

ವಸತಿದಾಯಕನಾದ ಎಲೈ ಅಗ್ನಿಯೇ, ನೀನು ಯಾವ ಸ್ತುತಿಕರ್ತನನ್ನು ಧನಲಾಭಕ್ಕಾಗಿ ಕರೆದೊಯ್ಯುವೆಯೋ, ಯಾವ ಮಾನವನು ನಿನಗೆ ಹವಿಸ್ಸನ್ನರ್ಪಿಸುವನೋ ಆ ಮಾನವನು ತಾನಾಗಿಯೇ ಶಸ್ತ್ರ ಮತ್ತು ಸ್ತೋತ್ರಾದಿಗಳಿಂದ ನಿನ್ನನ್ನು ಪ್ರಶಂಸಿಸುವವನೂ, ಅತ್ಯಧಿಕವಾಗಿ ಧನಕ್ಕೆ ಪತಿಯಾದವನೂ, ಶಕ್ತಿಯುತನೂ ಆದ ಪುತ್ರನನ್ನು ಹೊಂದುತ್ತಾನೆ

English Translation

Agni, bestower of dwellings, that mortal whom you wish to lead to wealth, and who gives offerings to you, possesses of himself a strong son, a reciter of hymns and a lord of great wealth

। ಸಂಹಿತಾಪಾಠಃ ।

ಸ ದೃಳ್ಹೇ ಚಿದಭಿ ತೃಣತ್ತಿ ವಾಜಮರ್ವತಾ ಸ ಧತ್ತೇ ಅಕ್ಷಿತಿ ಶ್ರವಃ ।
ತ್ವೇ ದೇವತ್ರಾ ಸದಾ ಪುರೂವಸೋ ವಿಶ್ವಾ ವಾಮಾನಿ ಧೀಮಹಿ ॥

॥ ಪದಪಾಠಃ ॥

ಸಃ । ದೃಳ್ಹೇ । ಚಿತ್ । ಅಭಿ । ತೃಣತ್ತಿ । ವಾಜಂ । ಅರ್ವತಾ । ಸಃ । ದತ್ತೇ । ಅಕ್ಷಿತಿ । ಶ್ರವಃ ।
ತ್ವೇ ಇತಿ । ದೇವಽತ್ರಾ । ಸದಾ । ಪುರುವಸೋ ಇತಿ ಪುರುಽವಸೋ । ವಿಶ್ವಾ । ವಾಮಾನಿ । ಧೀಮಹಿ ॥ ೫ ॥

॥ ಸಾಯಣಭಾಷ್ಯಂ ॥

ಹೇ ಪುರೂವಸೋ ಬಹುಧನಾಗ್ನೇ ಯಸ್ತುಭ್ಯಂ ಹವೀಂಷಿ ಪ್ರಯಚ್ಛತಿ ಸ ಯಜಮಾನೋ ದೃಳ್ಹೇ ಚಿದ್ದೃಢೇಽಪಿ ಶತ್ರುಪುರೇ ಸ್ಥಿತಂ ವಾಜಮನ್ನಮರ್ವತಾಶ್ವೇನಾಭಿ ತೃಣತ್ತಿ । ಹಿನಸ್ತಿ । ಯಥಾ ಸ ಯಜಮಾನೋಽಕ್ಷಿತ್ಯಕ್ಷೀಣಂ ಶ್ರವೋಽನ್ನಂ ಧತ್ತೇ ಧಾರಯತಿ । ತಥಾ ಚ ಸತಿ ತುಭ್ಯಂ ಹವಿಷಾಂ ಪ್ರದಾತಾರೋ ವಯಮಪಿ ದೇವತ್ರಾ ದೇವೇ ತ್ವೇ ತ್ವಯಿ ಸ್ಥಿತಾ ವಿಶ್ವಾ ಸರ್ವಾಣಿ ವಾಮಾನಿ ವನನೀಯಾನಿ ಧನಾನಿ ಸದಾ ಸರ್ವದಾ ಧೀಮಹಿ । ಧಾರಯಾಮಃ ॥

॥ ಪ್ರತಿಪದಾರ್ಥ ॥

**ಪುರೂವಸೋ**—ಅತ್ಯಧಿಕವಾದ ಧನವುಳ್ಳ ಎಲೈ ಅಗ್ನಿಯೇ, । **ಸಃ**—ನಿನ್ನ ಪೂಜಕನಾದ ಯಜಮಾನನು। **ದೃಳ್ಹೇ ಚಿತ್**—ಅತ್ಯಂತ ಬಲವಾದ ರಕ್ಷಣೆಯುಳ್ಳ ಶತ್ರುಪಟ್ಟಣದಲ್ಲಿದ್ದರೂ ಸಹ । **ವಾಜಂ**—ಅನ್ನವನ್ನು । **ಅರ್ವತಾ**—ತನ್ನ ಅಶ್ವದ ಸಹಾಯದಿಂದ । **ಅಭಿ ತೃಣತ್ತಿ**—ಕಸಿದುಕೊಳ್ಳುತ್ತಾನೆ । **ಸಃ**—ಅದೇ ಯಜಮಾನನು । **ಅಕ್ಷಿತಿ**—ನಾಶರಹಿತವಾದ । **ಶ್ರವಃ**—ಅನ್ನವನ್ನು । **ಧತ್ತೇ**—ಹೊಂದುತ್ತಾನೆ, (ಅದರಂತೆಯೇ ನಾವೂ ಸಹ) । **ದೇವತ್ರಾ**—ದೇವತಾತ್ಮನಾದ । **ತೇ**—ನಿನ್ನಲ್ಲಿರತಕ್ಕ । **ವಿಶ್ವಾ**—ಸಮಸ್ತವೂ । **ವಾಮಾನಿ**—ಆಕರ್ಷಕವೂ ಆದ ಧನಗಳನ್ನು । **ಸದಾ**—ಯಾವಾಗಲೂ । **ಧೀಮಹಿ**—ಹೊಂದುವಂತಾಗಲಿ

॥ ಭಾವಾರ್ಥ ॥

ಅತ್ಯಧಿಕವಾದ ಧನವುಳ್ಳ ಎಲೈ ಅಗ್ನಿಯೇ, ನಿನ್ನ ಪೂಜಕನಾದ ಯಜಮಾನನು ಅತ್ಯಂತ ಬಲವಾದ ರಕ್ಷಣೆಯುಳ್ಳ ಶತ್ರುಪಟ್ಟಣದಲ್ಲಿದ್ದರೂ ಸಹ ಶತ್ರುವಿನ ಅನ್ನವನ್ನು ತನ್ನ ಅಶ್ವದ ಸಹಾಯದಿಂದ ಕಸಿದುಕೊಳ್ಳುತ್ತಾನೆ. ಅದೇ ಯಜಮಾನನು ನಾಶರಹಿತವಾದ ಅನ್ನವನ್ನು ಹೊಂದುತ್ತಾನೆ. ಅದರಂತಯೇ ನಾವೂ ಸಹ ದೇವತಾತ್ಮನಾದ ನಿನ್ನಲ್ಲಿರತಕ್ಕ ಆಕರ್ಷಕವಾದ ಸಮಸ್ತ ಧನಗಳನ್ನೂ ಯಾವಾಗಲೂ ಹೊಂದುವಂತಾಗಲಿ.

## English Translation

Lord of vast wealth, he (your worshipper) spoils with his steed food laid up even in strongholds, he possesses imperishable wealth ; in you divine we ever possess all desirable treasures

॥ ಸಂಹಿತಾಪಾಠಃ ॥

ಯೋ ವಿಶ್ವಾ ದಯತೇ ವಸು ಹೋತಾ ಮಂದ್ರೋ ಜನಾನಾಂ ।
ಮಧೋರ್ನ ಪಾತ್ರಾ ಪ್ರಥಮಾನ್ಯಸ್ಮೈ ಪ್ರ ಸ್ತೋಮಾ ಯಂತ್ಯ-
ಗ್ನಯೇ ॥ ೬ ॥

॥ ಪದಪಾಠಃ ॥

ಯಃ । ವಿಶ್ವಾ । ದಯತೇ । ವಸು । ಹೋತಾ । ಮಂದ್ರಃ । ಜನಾನಾಂ ।

ಮಧೋಃ । ನ । ಪಾತ್ರಾ । ಪ್ರಥಮಾನಿ । ಅಸ್ಮೈ । ಪ್ರ । ಸ್ತೋಮಾಃ । ಯಂತಿ । ಅಗ್ನಯೇ ॥

॥ ಸಾಯಣಭಾಷ್ಯಂ ॥

ಹೋತಾ ದೇವಾನಾಮಾಹ್ವಾತಾ ಮಂದ್ರೋ ಮೋದಮಾನೋ ಯೋಽಗ್ನಿರ್ವಿಶ್ವಾ ಸರ್ವಾಣಿ ವಸು ವಸೂನಿ ಧನಾನಿ ಜನಾನಾಂ ಜನೇಭ್ಯೋ ದಯತೇ ಪ್ರಯಚ್ಛತಿ ತಸ್ಮಾ ಅಸ್ಮಾ ಅಗ್ನಯೇ ಮಧೋರ್ನ ಮದಕರಸ್ಯ ಸೋಮಸ್ಯೇವ ಪ್ರಥಮಾನಿ ಮುಖ್ಯಾನಿ ಪಾತ್ರಾಣಿ ಸೋಮಾಃ ಪ್ರ ಯಂತಿ । ಪ್ರಗಚ್ಛಂತಿ ॥

॥ ಪ್ರತಿಪದಾರ್ಥ ॥

**ಹೋತಾ**—ದೇವತೆಗಳನ್ನು ಯಜ್ಞಕ್ಕೆ ಕರೆಯುವವನೂ । **ಮಂದ್ರಃ**—ಸಂತುಷ್ಟಮನಸ್ಕನೂ ಆದ । **ಯಃ**—ಯಾವ ಅಗ್ನಿಯು । **ವಿಶ್ವಾ**—ಸಮಸ್ತವಾದ । **ವಸು**—ಧನವನ್ನೂ । **ಜನಾನಾಂ**—ಯಜಮಾನರಿಗೆ । **ದಯತೇ**—ಕೊಡುವನೋ । **ಅಸ್ಮೈ**—ಅಂತಹ । **ಅಗ್ನಯೇ**—ಅಗ್ನಿಗಭಿಮುಖವಾಗಿ । **ಸ್ತೋಮಾಃ**—ನಮ್ಮ ಸ್ತೋಮಗಳು । **ಮಧೋಃ**—ಮಧುಕರವಾದ ಸೋಮದ । **ಪ್ರಥಮಾನಿ ಪಾತ್ರಾ ನ**—ಮುಖ್ಯಪಾತ್ರೆಗಳಂತೆ । **ಪ್ರ ಯಂತಿ**—ಹೋಗಿ ಸೇರುತ್ತವೆ.

॥ ಭಾವಾರ್ಥ ॥

ದೇವತೆಗಳನ್ನು ಯಜ್ಞಕ್ಕೆ ಕರೆಯುವವನೂ, ಸಂತುಷ್ಟಮನಸ್ಕನೂ ಆದ ಯಾವ ಅಗ್ನಿಯು ಸಮಸ್ತವಾದ ಧನವನ್ನೂ ಯಜಮಾನರಿಗೆ ಕೊಡುವನೋ ಅಂತಹ ಅಗ್ನಿಗಭಿಮುಖವಾಗಿ ನಮ್ಮ ಸ್ತೋಮಗಳು ಮಧುಕರವಾದ ಸೋಮದ ಮುಖ್ಯಪಾತ್ರೆಗಳಿಗೆ ಸೋಮವು ಹೋಗಿ ಸೇರುವಂತೆ ಹೋಗಿ ಸೇರುತ್ತವೆ.

## English Translation

To him the invoker of the gods, who ever rejoicing distributes all wealth to men,—to Agni proceed our praises like the principal cups of the exhilarating Soma.

॥ ಸಂಹಿತಾಪಾಠಃ ॥

ಅಶ್ವಂ ನ ಗೀರ್ಭೀ ರಥ್ಯಂ ಸುದಾನವೋ ಮರ್ಮೃಜ್ಯಂತೇ

ದೇವಯವಃ ।

ಉಭೇ ತೋಕೇ ತನಯೇ ದಸ್ಮ ವಿಶ್ಪತೇ ಪರ್ಷಿ ರಾಧೋ
ಮಘೋನಾಂ ॥ ೭ ॥

॥ ಪದಪಾಠಃ ॥

ಅಶ್ವಂ । ನ । ಗೀಃऽಭಿಃ । ರಥ್ಯಂ । ಸುऽದಾನವಃ । ಮರ್ಮೃಜ್ಯಂತೇ । ದೇವऽಯವಃ ।
ಉಭೇ ಇತಿ । ತೋಕೇ ಇತಿ । ತನಯೇ । ದಸ್ಮ । ವಿಶ್ಪತೇ । ಪರ್ಷಿ । ರಾಧಃ । ಮಘೋನಾಂ ॥

॥ ಸಾಯಣಭಾಷ್ಯಂ ॥

ಹೇ ದಸ್ಮ ದರ್ಶನೀಯ ವಿಶ್ಪತೇ ವಿಶಾಂ ಪತೇऽಗ್ನೇ ಯಂ ತ್ವಾಂ ಸುದಾನವಃ ಶೋಭನದಾನಾ ದೇವಯವೋ ದೇವಾನಾತ್ಮನ ಇಚ್ಛಂತೋ ಯಜಮಾನಾ ರಥ್ಯಂ ರಥಸ್ಯ ವೋಢಾರಮಶ್ವಂ ನಾಶ್ವಮಿವ ಗೀರ್ಭಿಃ ಸ್ತುತಿಭಿರ್ಮರ್ಮೃಜ್ಯಂತೇ ಪರಿಚರಂತಿ ಸ ತ್ವಮಸ್ಮಾಕಂ ಯಜಮಾನಾನಾಂ ತೋಕೇ ಪುತ್ರೇ ತನಯೇ ಪೌತ್ರೇ ಚೋಭೇ ಉಭಯಸ್ಮಿನ್ಮಘೋನಾಂ ಧನವತಾಂ ರಾಯೋ ಧನಂ ಪರ್ಷಿ । ಪ್ರಯಚ್ಛ ॥

॥ ಪ್ರತಿಪದಾರ್ಥ ॥

**ದಸ್ಮ**—ಆಕರ್ಷಕವಾದ ರೂಪವುಳ್ಳವನೂ । **ವಿಶ್ಪತೇ**—ಪ್ರಜೆಗಳ ಪಾಲಕನೂ ಆದ ಎಲೈ ಅಗ್ನಿಯೇ । **ಸುದಾನವಃ**—ಶ್ರೇಷ್ಠವಾದ ಹವಿಸ್ಸನ್ನು ದಾನಮಾಡುವವರೂ । **ದೇವಯವಃ**—ದೇವತೆಗಳ ಸಹಾಯವನ್ನಿಚ್ಛಿಸುವವರೂ ಆದ ಯಜಮಾನರು । **ರಥ್ಯಂ**—ರಥವನ್ನು ವಹಿಸುವ । **ಅಶ್ವಂ ನ**—ಅಶ್ವವನ್ನುಪಚರಿಸುವಂತೆ । **ಗೀರ್ಭಿಃ**—ಸ್ತುತಿಗಳಿಂದ । **ಮರ್ಮೃಜ್ಯಂತೇ**—ನಿನ್ನನ್ನು ಉಪಚರಿಸುತ್ತಾರೆ (ಅಂತಹ ನೀನು) । **ತೋಕೇ**—ನಮ್ಮ ಪುತ್ರರಿಗೂ । **ತನಯೇ**—ತತ್ಪುತ್ರರಿಗೂ । **ಉಭೇ**—ಈ ಎರಡು ಗುಂಪಿಗೂ । **ಮಘೋನಾಂ**—ಧನವಂತರ। **ರಾಯಃ**—ಧನವನ್ನು । **ಪರ್ಷಿ**—ಒದಗಿಸಿಕೊಡು

॥ ಭಾವಾರ್ಥ ॥

ಆಕರ್ಷಕವಾದ ರೂಪವುಳ್ಳವನೂ, ಪ್ರಜೆಗಳ ಪಾಲಕನೂ ಆದ ಎಲೈ ಅಗ್ನಿಯೇ, ಶ್ರೇಷ್ಠವಾದ ಹವಿಸ್ಸನ್ನು ದಾನಮಾಡುವವರೂ, ದೇವತೆಗಳ ಸಹಾಯವನ್ನಿಚ್ಛಿಸುವವರೂ ಆದ ಯಜಮಾನರು ರಥವನ್ನು ವಹಿಸುವ ಅಶ್ವವನ್ನುಪಚರಿಸುವಂತೆ ಸ್ತುತಿಗಳಿಂದ ನಿನ್ನನ್ನು ಉಪಚರಿಸುತ್ತಾರೆ. ಅಂತಹ ನೀನು ನಮ್ಮ ಪುತ್ರರಿಗೂ, ತತ್ಪುತ್ರರಿಗೂ ಈ ಎರಡು ಗುಂಪಿಗೂ ಧನವಂತರ ಧನವನ್ನು ಒದಗಿಸಿಕೊಡು

English Translation

The liberal worshippers with their hymns honour you harnessed to the car like a horse; graceful lord of men, grant wealth to us rich in children and grand children.

॥ ಸಂಹಿತಾಪಾಠಃ ॥

ಪ್ರ ಮಂಹಿಷ್ಠಾಯ ಗಾಯತ ಋತಾವ್ನೇ ಬೃಹತೇ ಶುಕ್ರಶೋಚಿಷೇ ।
ಉಪಸ್ತುತಾಸೋ ಅಗ್ನಯೇ ॥ ೮ ॥

॥ ಪದಪಾಠಃ ॥

ಪ್ರ । ಮಂಹಿಷ್ಠಾಯ । ಗಾಯತ । ಋತಽವ್ನೇ । ಬೃಹತೇ । ಶುಕ್ರಽಶೋಚಿಷೇ । ಉಪಽಸ್ತುತಾಸಃ । ಅಗ್ನಯೇ ॥ ೮ ॥

॥ ಸಾಯಣಭಾಷ್ಯಂ ॥

ಹೇ ಯೂಯಮುಪಸ್ತುತಾಸ ಉಪಸ್ತೋತಾರಃ ಮಂಹಿಷ್ಠಾಯ ದಾತೃತಮಾಯರ್ತಾವ್ನೇ ಯಜ್ಞವತೇ ಸತ್ಯವತೇ ವಾ ಬೃಹತೇ ಮಹತೇ ಶುಕ್ರಶೋಚಿಷೇ ದೀಪ್ತತೇಜಸೇಽಗ್ನಯೇ ಸ್ತೋತ್ರಂ ಪಠತ ॥

॥ ಪ್ರತಿಪದಾರ್ಥ ॥

**ಉಪಸ್ತುತಾಸಃ**—ಎಲೈ ಉಪಸ್ತೋತೃಗಳೇ । **ಮಂಹಿಷ್ಠಾಯ**—ಅತ್ಯುದಾರವಾದ ದಾನಿಯೂ । **ಋತಾವ್ನೇ**—ಯಜ್ಞವಂತನೂ । **ಬೃಹತೇ**—ಮಹತ್ಸ್ವರೂಪವುಳ್ಳವನೂ । **ಶುಕ್ರಶೋಚಿಷೇ**—ಪ್ರಕಾಶಮಾನವಾದ ತೇಜಸ್ಸುಳ್ಳವನೂ ಆದ । **ಅಗ್ನಯೇ**—ಅಗ್ನಿಯನ್ನುದ್ದೇಶಿಸಿ । **ಪ್ರ ಗಾಯತ**—ಸ್ತೋತ್ರವನ್ನು ಪಠಿಸಿರಿ.

॥ ಭಾವಾರ್ಥ ॥

ಎಲೈ ಉಪಸ್ತೋತೃಗಳೇ, ಅತ್ಯುದಾರವಾದ ದಾನಿಯೂ, ಯಜ್ಞವಂತನೂ, ಮಹತ್ಸ್ವರೂಪವುಳ್ಳವನೂ, ಪ್ರಕಾಶಮಾನವಾದ ತೇಜಸ್ಸುಳ್ಳವನೂ ಆದ ಅಗ್ನಿಯನ್ನುದ್ದೇಶಿಸಿ ಸ್ತೋತ್ರವನ್ನು ಪಠಿಸಿ ಗಾನಮಾಡಿರಿ

## English Translation

Singers of hymns, sing aloud to the mighty Agni, most bounteous, observant of truth and radiant with brightness.

॥ ಸಂಹಿತಾಪಾಠಃ ॥

ಆ ವಂಸತೇ ಮಘವಾ ವೀರವದ್ಯಶಃ ಸಮಿದ್ಧೋ ದ್ಯುಮ್ನ್ಯಾಹುತಃ ।

ಕುವಿನ್ನೋ ಅಸ್ಯ ಸುಮತಿರ್ನವೀಯಸ್ಯಚ್ಛಾ ವಾಜೇಭಿರಾ-
ಗಮತ್ ॥ ೯ ॥

॥ ಪದಪಾಠಃ ॥

ಆ । ಮಂಸತೇ । ಮಘಽವಾ । ವೀರಽವತ್ । ಯಶಃ । ಸಂಽಇದ್ಧಃ । ದ್ಯುಮ್ನೀ । ಆಽಹುತಃ ।
ಕುವಿತ್ । ನಃ । ಅಸ್ಯ । ಸುಽಮತಿಃ । ನವೀಯಸೀ । ಅಚ್ಛ । ವಾಜೇಭಿಃ । ಆಽಗಮತ್ ॥ ೯ ॥

॥ ಸಾಯಣಭಾಷ್ಯಂ ॥

ಮಘವಾ ಧನವಾನ್ ದ್ಯುಮ್ನ್ಯನ್ನವಾನ್ ಯಶಸ್ವೀ ವಾ । ತಥಾ ಚ ಯಾಸ್ಕಃ । ದ್ಯುಮ್ನಂ ದ್ಯೋತತೇರ್ಯಶೋ ವಾನ್ನಂ ವಾ । ನಿ. ೫-೫ । ಇತಿ । ಯಶೋ ಯಶಸ್ಕರಮನ್ನಮಾ ಮಂಸತೇ । ಯಜಮಾನೇಭ್ಯ ಆ ಪ್ರಯಚ್ಛತಿ । ಅಸ್ಯಾಗ್ನೇರ್ನವೀಯಸೀ ನವತರಾ ಸುಮತಿರನುಗ್ರಹಬುದ್ಧಿರ್ನೋಽಸ್ಮಾನಚ್ಛ ಪ್ರತಿ ವಾಜೇಭಿರನ್ನೈಃ ಸಹ ಕುವಿದ್ಬಹುವಾರಂ । ಸಲಿಲಂ ಕುವಿದಿತಿ ಬಹುನಾಮಸು ಪಾಠಾತ್ । ಆಗಮತ್ । ಆಗಚ್ಛತು ॥

॥ ಪ್ರತಿಪದಾರ್ಥ ॥

**ಸಮಿದ್ಧಃ**—ಪ್ರಜ್ವಲಿತನಾದವನೂ । **ಆಹುತಃ** - ಆಹುತಿಯನ್ನರ್ಪಿಸಲ್ಪಟ್ಟವನೂ । **ಮಘವಾ**—ಧನವಂತನೂ । **ದ್ಯುಮ್ನೀ**—ಅನ್ನವಂತನೂ ಆದ -ಗ್ನಿಯು । **ಯಶಃ**—ಯಶಸ್ಕರವಾದ ಅನ್ನವನ್ನು । **ಆ ಮಂಸತೇ**—ಯಜಮಾನರಿಗೆ ತುಂಬಿಸುತ್ತಾನೆ । **ಅಸ್ಯ**—ಈ ಅಗ್ನಿಯ । **ನವೀಯಸೀ**—ನೂತನವಾದ । **ಸುಮತಿಃ**—ಅನುಗ್ರಹಬುದ್ಧಿಯು । **ನಃ ಅಚ್ಛ**—ನಮಗಭಿಮುಖವಾಗಿ । **ವಾಜೇಭಿಃ**—ಅನ್ನಗಳೊಡನೆ । **ಕುವಿತ್** —ಅನೇಕವೇಳೆ । **ಆ ಗಮತ್** —ಬಂದು ಸೇರಲಿ.

॥ ಭಾವಾರ್ಥ ॥

ಪ್ರಜ್ವಲಿತನಾದವನೂ, ಆಹುತಿಯನ್ನರ್ಪಿಸಲ್ಪಟ್ಟವನೂ, ಧನವಂತನೂ, ಅನ್ನವಂತನೂ ಆದ ಅಗ್ನಿಯು ಯಶಸ್ಕರವಾದ ಅನ್ನವನ್ನು ಯಜಮಾನನಿಗೆ ತುಂಬಿಸುತ್ತಾನೆ ಈ ಅಗ್ನಿಯ ನೂತನವಾದ ಅನುಗ್ರಹಬುದ್ಧಿಯು ನಮಗಭಿಮುಖವಾಗಿ ಅನ್ನಗಳೊಡನೆ ಅನೇಕವೇಳೆ ಬಂದು ಸೇರಲಿ

## English Translation

The wealthy and glorious (Agni), when invoked and kindled, pours forth on his votaries abundance of food with children ; may his ever fresh favour continually come to us with all kinds of food.

॥ ಸಂಹಿತಾಪಾಠಃ ॥

ಪ್ರೇಷ್ಠಮು ಪ್ರಿಯಾಣಾಂ ಸ್ತುಹ್ಯಾಸಾವಾತಿಥಿಂ ।
ಅಗ್ನಿಂ ರಥಾನಾಂ ಯಮಂ ॥ ೧೦ ॥

॥ ಪದಪಾಠಃ ॥

ಪ್ರೇಷ್ಠಂ । ಊಂ ಇತಿ । ಪ್ರಿಯಾಣಾಂ । ಸ್ತುಹಿ । ಆಽಸಾವ । ಅತಿಥಿಂ ।
ಅಗ್ನಿಂ । ರಥಾನಾಂ । ಯಮಂ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಆಸಾವ ಸ್ತೋತಃ ಪ್ರಿಯಾಣಾಂ ಪ್ರೇಷ್ಠಂ ಪ್ರಿಯತಮಮತಿಥಿಮಭ್ಯಾಗತಂ ರಥಾನಾಂ ಯಮಂ ಯಂತಾರಮಗ್ನಿಮೇವ ಸ್ತುಹಿ ॥

॥ ಪ್ರತಿಪದಾರ್ಥ ॥

ಆಸಾವ—ಎಲೈ ಸ್ತುತಿಕರ್ತನೇ । ಪ್ರಿಯಾಣಾಂ—ಆಪ್ತರಲ್ಲೆಲ್ಲಾ । ಪ್ರೇಷ್ಠಂ—ಅತ್ಯಂತ ಪ್ರಿಯತಮನೂ । ಅತಿಥಿಂ—ಅತಿಥಿಯಂತೆ ಪೂಜ್ಯನೂ । ರಥಾನಾಂ—ರಥಗಳಿಗೆ । ಯಮಃ—ನಿಯಂತೃವೂ ಆದ । ಅಗ್ನಿಂ ಉ—ಅಗ್ನಿಯನ್ನೇ । ಸ್ತುಹಿ—ಸ್ತುತಿಸು.

॥ ಭಾವಾರ್ಥ ॥

ಎಲೈ ಸ್ತುತಿಕರ್ತನೇ, ಆಪ್ತರಲ್ಲೆಲ್ಲಾ ಅತ್ಯಂತ ಪ್ರಿಯತಮನೂ, ಅತಿಥಿಯಂತೆ ಪೂಜ್ಯನೂ, ರಥಗಳಿಗೆ ನಿಯಂತೃವೂ ಆದ ಅಗ್ನಿಯನ್ನೇ ಸ್ತುತಿಸು.

English Translation

Praise, singer of hymns, the guest, Agni the dearest of the dear, the driver of chariots.

॥ ಸಂಹಿತಾಪಾಠಃ ॥

ಉದಿತಾ ಯೋ ನಿದಿತಾ ವೇದಿತಾ ವಸ್ವಾ ಯಜ್ಞಿಯೋ ವವರ್ತತಿ।
ದುಷ್ಟರಾ ಯಸ್ಯ ಪ್ರವಣೇ ನೋರ್ಮಯೋ ಧಿಯಾ ವಾಜಂ
ಸಿಷಾಸತಃ ॥ ೧೧ ॥

॥ ಪದಪಾಠಃ ॥

ಉತ್ಽಇತಾ । ಯಃ । ನಿಽದಿತಾ । ವೇದಿತಾ । ವಸು । ಆ । ಯಜ್ಞಿಯಃ । ವವರ್ತತಿ ।

ದುಸ್ತರಾಃ । ಯಸ್ಯ । ಪ್ರವಣೇ । ನ । ಊರ್ಮಯಃ । ಧಿಯಾ । ವಾಜಂ । ಸಿಸಾಸತಃ ॥

॥ ಸಾಯಣಭಾಷ್ಯಂ ॥

**ವೇದಿತಾ ವೇತ್ತಾ ಯಜ್ಞಿಯೋ ಯಜ್ಞಾರ್ಹೋ ಯೋಗ್ನಿರುದಿತೋದಿತಾನ್ಯುದ್ಗತಾನಿ ನಿದಿತಾ ನಿದಿತಾನಿ ಶ್ರುತಾನಿ ಚ ವಸು ವಸೂನಿ ಧನಾನ್ಯಾ ವವರ್ತತಿ ಆವರ್ತಯತಿ । ಧಿಯಾ ಕರ್ಮಣಾ ವಾಜಂ ಸಂಗ್ರಾಮಂ ಸಿಷಾಸತಃ ಸಂಭಕ್ತುಮಿಚ್ಛತೋ ಯಸ್ಯ ಚಾಗ್ನೇರ್ಜ್ವಾಲಾಃ ಪ್ರವಣೇ ನೋರ್ಮಯಃ ಪ್ರವಣಾಭಿಮುಖಾಃ ಸಮುದ್ರಸ್ಯ ತರಂಗಾ ಇವ ದುಸ್ತರಾಸ್ತರ್ತುಮಶಕ್ಯಾಃ । ತಮಗ್ನಿಂ ಹೇ ಸ್ತೋತಃ ಸ್ತುಹೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ವೇದಿತಾ**—ಎಲ್ಲವನ್ನೂ ತಿಳಿದವನೂ । **ಯಜ್ಞಿಯಃ**—ಪೂಜಾರ್ಹನೂ ಆದ । **ಯಃ**—ಯಾವ ಅಗ್ನಿಯು । **ಉದಿತಾ**—ನಿಧಿಯಿಂದ ಮೇಲೆದ್ದುದೂ । **ನಿದಿತಾ**—ಪ್ರಸಿದ್ಧವಾದುದೂ ಆದ । **ವಸು**—ಧನವನ್ನು । **ಆ ವವರ್ತತಿ**—ಯಜಮಾನರಿಗೆ ಒದಗಿಸಿಕೊಡುವನೋ । **ಧಿಯಾ**—ಕರ್ಮದಿಂದ । **ವಾಜಂ**—ಸಂಗ್ರಾಮವನ್ನು । **ಸಿಷಾಸತಃ**—ನೆರವೇರಿಸಲಿಚ್ಛಿಸುವ । **ಯಸ್ಯ**—ಯಾವ ಅಗ್ನಿಯ ಜ್ವಾಲೆಗಳು । **ಪ್ರವಣೇ**—ತಗ್ಗಿನ ಪ್ರದೇಶದಲ್ಲಿ ಹರಿಯುವ । **ಊರ್ಮಯೋ ನ**—ಸಮುದ್ರದ ಅಲೆಗಳಂತೆ । **ದುಸ್ತರಾಃ**—ಅಪ್ರತಿಹತವಾಗಿರುವುವೋ ( ಆ ಅಗ್ನಿಯನ್ನು ಸ್ತುತಿಸು )

॥ ಭಾವಾರ್ಥ ॥

ಎಲ್ಲವನ್ನೂ ತಿಳಿದವನೂ, ಪೂಜಾರ್ಹನೂ ಆದ ಯಾವ ಅಗ್ನಿಯು ನಿಧಿಯಿಂದ ಮೇಲೆದ್ದುದೂ ಪ್ರಸಿದ್ಧವಾದುದೂ ಆದ ಧನವನ್ನು ಯಜಮಾನರಿಗೆ ಒದಗಿಸಿ ಕೊಡುವನೋ ಮತ್ತು ಕರ್ಮದಿಂದ ಸಂಗ್ರಾಮವನ್ನು ನೆರವೇರಿಸಲಿಚ್ಛಿಸುವ ಯಾವ ಅಗ್ನಿಯ ಜ್ವಾಲೆಗಳು ತಗ್ಗಿನ ಪ್ರದೇಶದಲ್ಲಿ ಹರಿಯುವ ಮತ್ತು ಸಮುದ್ರದ ಅಲೆಗಳಂತೆ ಅಪ್ರತಿಹತವಾಗಿರುವುವೋ ಆ ಅಗ್ನಿಯನು ಸ್ತುತಿಸು.

English Translation

(Praise him) the knower, worthy of the sacrifice, who brings to us treasures which have come up (from the depths) and are far-renowned,—whose (flames), as he hastens to wage the battle by means of our sacred rite and hard to be passed through as waves rushing down a declivity

॥ ಸಂಹಿತಾಪಾಠಃ ॥

ಮಾ ನೋ ಹೃಣೀತಾಮತಿಥಿರ್ವಸುರಗ್ನಿಃ ಪುರುಪ್ರಶಸ್ತ ಏಷಃ ।
ಯಃ ಸುಹೋತಾ ಸ್ವಧ್ವರಃ ॥ ೧೨ ॥

॥ ಪದಪಾಠಃ ॥

ಮಾ । ನಃ । ಹೃಣೀತಾಂ । ಅತಿಥಿಃ । ವಸುಃ । ಅಗ್ನಿಃ । ಪುರುऽಪ್ರಶಸ್ತಃ । ಏಷಃ ।
ಯಃ । ಸುऽಹೋತಾ । ಸುऽಅಧ್ವರಃ ॥ ೧೨ ॥

॥ ಸಾಯಣಭಾಷ್ಯಂ ॥

ವಸುರ್ವಾಸಕೋऽತಿಥಿರತಿಥಿವತ್ಪ್ರಿಯಃ ಪುರುಪ್ರಶಸ್ತೋ ಬಹುಭಿಃ ಸ್ತುತಃ ಸುಹೋತಾ ಸುಷ್ಠು ದೇವಾನಾಮಾಹ್ವಾತಾ ಸ್ವಧ್ವರಃ ಸುಯಜ್ಞಶ್ಚ ಯೋऽಗ್ನಿಃ ಸ ಏಷೋऽಗ್ನಿರ್ನೋऽಸ್ಮಭ್ಯಂ ಮಾ ಹೃಣೀತಾಂ । ಕೇನಾಪಿ ನ ರುಧ್ಯತಾಂ । ಕೇನಾಪ್ಯನವರುದ್ಧಃ ಸನ್ನಗ್ನಿರಸ್ಮಭ್ಯಮಭೀಷ್ಟಂ ಪ್ರಯಚ್ಛತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ವಸುಃ**—ವಸತಿದಾಯಕನೂ । **ಅತಿಥಿಃ**—ಅತಿಥಿಯಂತೆ ಪೂಜ್ಯನೂ । **ಪುರುಪ್ರಶಸ್ತಃ**—ಅನೇಕರ ಪ್ರಶಂಸೆಗೆ ಪಾತ್ರನೂ । **ಸುಹೋತಾ**—ಉತ್ತಮವಾದ ಹೋತೃವೂ । **ಸ್ವಧ್ವರಃ**—ಶ್ರೇಷ್ಠವಾದ ಯಜ್ಞಕರ್ತನೂ ಆದ । **ಯಃ**—ಯಾವ । **ಅಗ್ನಿಃ**—ಅಗ್ನಿಯಿರುವನೋ । **ಏಷಃ**—ಅದೇ ಅಗ್ನಿಯು । **ನಃ**—ನಮ್ಮ ಇಷ್ಟಾರ್ಥವನ್ನು ನೆರವೇರಿಸುವಾಗ । **ಮಾ ಹೃಣೀತಾಂ**—ಯಾರಿಂದಲೂ ತಡೆಯಲ್ಪಡದಿರಲಿ.

॥ ಭಾವಾರ್ಥ ॥

ವಸತಿದಾಯಕನೂ, ಅತಿಥಿಯಂತೆ ಪೂಜ್ಯನೂ, ಅನೇಕರ ಪ್ರಶಂಸೆಗೆ ಪಾತ್ರನೂ, ಉತ್ತಮವಾದ ಹೋತೃವೂ ಶ್ರೇಷ್ಠವಾದ ಯಜ್ಞಕರ್ತನೂ ಆದ ಯಾವ ಅಗ್ನಿಯಿರುವನೋ ಅದೇ ಅಗ್ನಿಯು ನಮ್ಮ ಇಷ್ಟಾರ್ಥವನ್ನು ನೆರವೇರಿಸುವಾಗ ಯಾರಿಂದಲೂ ತಡೆಯಲ್ಪಡದಿರಲಿ

## English Translation

May none hinder Agni from coming to us, our guest, the giver of of dwellings, praised by many,—(Agni) who is the excellent invoker of the gods, who offers an excellent sacrifice

॥ ಸಂಹಿತಾಪಾಠಃ ॥

ಮೋ ತೇ ರಿಷನ್ಯೇ ಅಚ್ಛೋಕ್ತಿಭಿರ್ವಸೋಽಗ್ನೇ ಕೇಭಿಶ್ಚಿದೇವೈಃ ।
ಕೀರಿಶ್ಚಿದ್ಧಿ ತ್ವಾಮೀಟ್ಟೇ ದೂತ್ಯಾಯ ರಾತಹವ್ಯಃ ಸ್ವಧ್ವರಃ ॥೧೩॥

॥ ಪದಪಾಠಃ ॥

ಮೋ ಇತಿ । ತೇ । ರಿಷನ್ । ಯೇ । ಅಚ್ಛೋಕ್ತಿಽಭಿಃ । ವಸೋ ಇತಿ । ಅಗ್ನೇ । ಕೇಭಿಃ ।
ಚಿತ್ । ಏವೈಃ ।
ಕೀರಿಃ । ಚಿತ್ । ಹಿ । ತ್ವಾಂ । ಈಟ್ಟೇ । ದೂತ್ಯಾಯ । ರಾತಽಹವ್ಯಃ । ಸುಽಅಧ್ವರಃ॥

॥ ಸಾಯಣಭಾಷ್ಯಂ ॥

ಹೇ ವಸೋ ವಾಸಕಾಗ್ನೇ ತ್ವಾಂ ಯೇ ಮನುಷ್ಯಾ ಅಚ್ಛೋಕ್ತಿಭಿರಭಿಷ್ಟುತಿಭಿಃ ಕೇಭಿಃ ಕೈಃ ಸುಖಕರೈರೇವೈಶ್ಚಿದಭಿಗಮನೈರಪಿ ತೇ ಸ್ತೋತಾರೋ ಮೋ ರಿಷನ್ । ಮೈವ ಹಿಂಸಂತಾಂ । ರಾತಹವ್ಯೋ ದತ್ತಹವಿಷ್ಕಃ ಕೀರಿಶ್ಚಿತ್ ಸ್ತೋತಾಪಿ ದೂತ್ಯಾಯ ಹವಿರ್ವಹನಾದಿಲಕ್ಷಣಾಯ ದೂತಕರ್ಮಣೇ ತ್ವಾಮೀಟ್ಟೇ ಹಿ । ಸ್ತೌತಿ ಖಲು ॥

॥ ಪ್ರತಿಪದಾರ್ಥ

**ವಸೋ**—ವಸತಿದಾಯಕನಾದ । **ಅಗ್ನೇ**—ಎಲೈ ಅಗ್ನಿಯೇ । **ಯೇ**—ಯಾವ ಸ್ತುತಿಕರ್ತರು । **ಕೇಭಿಃ**—ಸುಖಕರವಾದವೂ । **ಏವೈಶ್ಚಿತ್**—ನಿನ್ನನ್ನು ಪೂಜಿಸುವುವೂ ಆದ । **ಅಚ್ಛೋಕ್ತಿಭಿಃ**—ಉತ್ತಮವಾದ ಸ್ತುತಿಗಳಿಂದ (ನಿನ್ನನ್ನು ಪ್ರಶಂಸಿಸುವರೋ) । **ತೇ**—ಅದೇ ಸ್ತೋತೃಗಳು । **ಮೋ ರಿಷನ್**—ಯಾರಿಂದಲೂ ಹಿಂಸಿತರಾಗದಿರಲಿ । **ರಾತಹವ್ಯಃ**—ಹವಿಸ್ಸನ್ನರ್ಪಿಸಿ ಪೂಜಿಸುವ । **ಸ್ವಧ್ವರಃ**—ಉತ್ತಮವಾದ ಯಜ್ಞಕರ್ತನೂ । **ಕೀರಿಶ್ಚಿತ್**—ಸ್ತುತಿಕರ್ತನೂ ಸಹ । **ದೂತ್ಯಾಯ**—ದೇವತೆಗಳಿಗೆ ಹವಿಸ್ಸನ್ನು ವಹಿಸಲು । **ತ್ವಾಂ ಹಿ**—ನಿನ್ನನ್ನೇ । **ಈಟ್ಟೇ**—ಸ್ತುತಿಸುತ್ತಾನೆ.

॥ ಭಾವಾರ್ಥ ॥

ವಸತಿದಾಯಕನಾದ ಎಲೈ ಅಗ್ನಿಯೇ, ಯಾವ ಸ್ತುತಿಕರ್ತರು ಸುಖಕರವಾದವೂ ನಿನ್ನನ್ನು ಪೂಜಿಸುವುವೂ ಆದ ಉತ್ತಮವಾದ ಸ್ತುತಿಗಳಿಂದ ನಿನ್ನನ್ನು ಪ್ರಶಂಸಿಸುವರೋ, ಅದೇ ಸ್ತೋತೃಗಳು ಯಾರಿಂದಲೂ ಹಿಂಸಿತರಾಗದಿರಲಿ. ಹವಿಸ್ಸನ್ನರ್ಪಿಸಿ ಪೂಜಿಸುವ ಉತ್ತಮವಾದ ಯಜ್ಞಕರ್ತನೂ, ಸ್ತುತಿಕರ್ತನೂ ಸಹ ದೇವತೆಗಳಿಗೆ ಹವಿಸ್ಸನ್ನು ವಹಿಸಲು ನಿನ್ನನ್ನೇ ಸ್ತುತಿಸುತ್ತಾನೆ.

## English Translation

Agni, giver of dwellings, let not those come to harm, who approach you in whatsoever manner with hymns of praise; the worshipper who offers his libation and duly performs the rite praises you that you may be the bearer of the sacrifice.

॥ ಸಂಹಿತಾಪಾಠಃ ॥

ಅಗ್ನೇ ಯಾಹಿ ಮರುತ್ಸಖಾ ರುದ್ರೇಭಿಃ ಸೋಮಪೀತಯೇ ।
ಸೋಭರ್ಯಾ ಉಪ ಸುಷ್ಟುತಿಂ ಮಾದಯಸ್ವ ಸ್ವರ್ಣರೇ ॥ ೧೪ ॥

॥ ಪದಪಾಠಃ ॥

ಆ । ಅಗ್ನೇ । ಯಾಹಿ । ಮರುತ್ऽಸಖಾ । ರುದ್ರೇಭಿಃ । ಸೋಮऽಪೀತಯೇ ।
ಸೋಭರ್ಯಾಃ । ಉಪ । ಸುऽಸ್ತುತಿಂ । ಮಾದಯಸ್ವ । ಸ್ವಃऽನರೇ ॥ ೧೪ ॥

॥ ಸಾಯಣಭಾಷ್ಯಂ ॥

ಹೇ ಅಗ್ನೇ ಮರುತ್ಸಖಾ ಮರುತಾಂ ಪ್ರಿಯಸ್ತ್ವಂ ಸ್ವರ್ಣರೇऽಸ್ಮಾಕಂ ಯಜನಲಕ್ಷಣೇ ಕರ್ಮಣಿ ಸೋಮಪೀತಯೇ ಸೋಮಪಾನಾಯ ರುದ್ರೇಭೀ ರುದ್ರೈರ್ಮರುದ್ಭಿಃ ಸಹಾ ಯಾಹಿ । ಆಗಚ್ಛ । ಸೋಭರ್ಯಾಃ ಸೋಭರೇರ್ಮಮ ಸುಷ್ಟುತಿಂ ಶೋಭನಾಂ ಸ್ತುತಿಂ ಚೋಪಾಗಚ್ಛ । ಮಾದಯಸ್ವ । ಸ್ತುತಿಂ ಶ್ರುತ್ವಾ ಸೋಮಂ ಪೀತ್ವಾತ್ಮಾನಂ ಮಾದಯ ಚ ॥

॥ ಪ್ರತಿಪದಾರ್ಥ ॥

**ಅಗ್ನೇ**—ಎಲೈ ಅಗ್ನಿಯೇ । **ಮರುತ್ಸಖಾ**—ಮರುತ್ತುಗಳ ಮಿತ್ರನಾದ ನೀನು । **ಸ್ವರ್ಣರೇ** ನಮ್ಮ ಉತ್ತಮವಾದ ಯಜ್ಞದಲ್ಲಿ । **ಸೋಮಪೀತಯೇ**—ಸೋಮಪಾನಾರ್ಥವಾಗಿ । **ರುದ್ರೇಭಿಃ**—ಮರುತ್ತುಗಳೊಡನೆ। **ಆ ಯಾಹಿ**—ದಯಮಾಡು । **ಸೋಭರ್ಯಾಃ**—ಸೋಭರಿನಾಮಕನಾದ ನನ್ನ । **ಸುಷ್ಟುತಿಂ ಉಪ**—ಉತ್ತಮವಾದ ಸ್ತುತಿಯನ್ನು ಸೇವಿಸು । **ಮಾದಯಸ್ವ**—ಹರ್ಷವನ್ನೂ ಹೊಂದು

॥ ಭಾವಾರ್ಥ ॥

ಎಲೈ ಅಗ್ನಿಯೇ, ಮರುತ್ತುಗಳ ಮಿತ್ರನಾದ ನೀನು ನಮ್ಮ ಉತ್ತಮವಾದ ಯಜ್ಞದಲ್ಲಿ ಸೋಮಪಾನಾರ್ಥವಾಗಿ ಮರುತ್ತುಗಳೊಡನೆ ದಯಮಾಡು. ಸೋಭರಿನಾಮಕನಾದ ನನ್ನ ಉತ್ತಮವಾದ ಸ್ತುತಿಯನ್ನು ಸೇವಿಸು. ತತ್ಫಲವಾದ ಹರ್ಷವನ್ನೂ ಹೊಂದು

## English Translation

Agni, you have the Maruts as your friends, come with the Rudras to drink the Soma ; come to the praises of Sobhari ; delight yourself at our solemn rite

ವೇದಾರ್ಥಸ್ಯಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲ ಸಾಮ್ರಾಜ್ಯ-
ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶ
ಋಕ್ಸಂಹಿತಾಭಾಷ್ಯೇ ಅಷ್ಟಮಂ ಮಂಡಲಂ ಸಮಾಪ್ತಂ ॥

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಎಂಟನೆಯ ಮಂಡಲವು ಸಮಾಪ್ತವು.

॥ ಓಂ ತತ್ಸತ್ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ।

॥ ಶುಭಂ ಭೂಯಾತ್ ॥

॥ ಮಂಗಳಂ ॥



॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

## ಸಾಯಣಭಾಷ್ಯಸಹಿತಾ

# ಋಗ್ವೇದಸಂಹಿತಾ

## ಒಂಭತ್ತನೆಯ ಮಂಡಲವು.

### ಆರನೆಯ ಅಷ್ಟಕದಲ್ಲಿ ಏಳನೆಯ ಅಧ್ಯಾಯವು.

---

### ಪೀಠಿಕೆ.

ಇಲ್ಲಿ ಅವಶ್ಯಕವಾಗಿ ಸೇರಿಸಬೇಕಾದ ಮಂಡಲದ ಪೀಠಿಕೆಯು ಬರೆದು ಸಿದ್ಧವಾಗಿಲ್ಲವಾದ್ದರಿಂದ ಆ ಪೀಠಿಕೆಯನ್ನೂ, ಈ ಮಂಡಲದ ಏಕೈಕದೇವತೆಯಾದ ಸೋಮದೇವತೆಯ ಸಂಬಂಧವಾದ ವಿಸ್ತಾರವಾದ ವಿಷಯಗಳನ್ನೂ ಮುಂದಿನ ಭಾಗದಲ್ಲಿ ಎಂದರೆ 20ನೇ ಭಾಗದ ಆದಿಯಲ್ಲಿ ವಿವರಿಸಲಾಗಿದೆ.

## ಒಂಭತ್ತನೆಯ ಮಂಡಲದಲ್ಲಿ ಮೊದಲನೆಯ ಸೂಕ್ತವು.

। ಸಾಯಣಭಾಷ್ಯಂ ।

**ನವಮೇ ಮಂಡಲೇ ಸಪ್ತಾನುವಾಕಾಃ । ತತ್ರ ಪ್ರಥಮೇಽನುವಾಕೇ ಚತುರ್ವಿಂಶತಿಸಂಖ್ಯಾಕಾನಿ ಸೂಕ್ತಾನಿ । ತತ್ರ ಸ್ವಾದಿಷ್ಠಯೇತಿ ದಶರ್ಚಂ ಪ್ರಥಮಂ ಸೂಕ್ತಂ । ಅತ್ರಾನುಕ್ರಮ್ಯತೇ । ಸ್ವಾದಿಷ್ಠಯಾ**

**ದಶ ಮಧುಚ್ಛಂದಾ ಇತಿ । ವೈಶ್ವಾಮಿತ್ರೋ ಮಧುಚ್ಛಂದಾ ಋಷಿಃ । ಪ್ರಾಗ್ವತ್ಸಪ್ರಿಯಪರಿಭಾಷಯಾ ಗಾಯತ್ರೀ ಛಂದಃ। ನವಮಂ ಮಂಡಲಂ ಪಾವಮಾನಂ ಸೌಮ್ಯಮಿತಿ ವಚನಾತ್ ಪವಮಾನಗುಣವಿಶಿಷ್ಟಃ ಸೋಮೋ ದೇವತಾ ॥ ಗ್ರಾವಸ್ತೋತ್ರೇಽರ್ಬುದಸೂಕ್ತಸ್ಯ ಪ್ರಾಗುತ್ತಮಾಯಾ ಇದಮಾದಿಕಂ ಸರ್ವಂ ಪಾವಮಾನಂ ವಿಕಲ್ಪೇನಾವಪನೀಯಂ । ಸೂತ್ರಿತಂ ಚ । ಪ್ರೈತೇ ವದಂತ್ವಿತ್ಯರ್ಬುದಂ ಪ್ರಾಗುತ್ತಮಾಯಾ ಆ ವ ಋಂಜಸೇ ಪ್ರ ವೋ ಗ್ರಾವಾಣ ಇತಿ ಸೂಕ್ತಯೋರಂತರೋಪರಿಷ್ಟಾತ್ಪುರಸ್ತಾದ್ವಾ ಪಾವಮಾನೀ-ರೋಪ್ಯ ಯಥಾರ್ಥಮಾ ವಾ ಗ್ರಹಗ್ರಹಣಾತ್ । ಆ. ೫-೧೨। ಇತಿ॥ ಉಪಾಕರ್ಮಣಿ ಮಂಡಲಾದಿಗ್ರಹಣ ಆದ್ಯಾ । ಸೂತ್ರಂ ಪೂರ್ವಮೇವೋದಾಹೃತಂ ॥**

ಅನುವಾದವು—ಋಗ್ವೇದಸಂಹಿತೆಯ ಒಂಭತ್ತನೆಯ ಮಂಡಲದಲ್ಲಿ ಏಳು ಅನುವಾಕಗಳಿರುವವು. ಅವುಗಳಲ್ಲಿ ಮೊದಲನೆಯ ಅನುವಾಕದಲ್ಲಿ ಇಪ್ಪತ್ತನಾಲ್ಕು ಸೂಕ್ತಗಳಿರುವವು. ಅವುಗಳಲ್ಲಿ **ಸ್ವಾದಿಷ್ಠಯಾ** ಎಂಬ ಈ ಸೂಕ್ತವು ಮೊದಲನೆಯದು ಅನುಕ್ರಮಣಿಕೆಯಲ್ಲಿ—**ಸ್ವಾದಿಷ್ಠಯಾ ದಶ ಮಧುಚ್ಛಂದಾ** ಎಂದು ಹೇಳಿರುವುದು. ಈ ಸೂಕ್ತಕ್ಕೆ ಮಧುಚ್ಛಂದಾ ವೈಶ್ವಾಮಿತ್ರಃ ಎಂಬುವನು ಋಷಿಯು, ಗಾಯತ್ರೀಛಂದಸ್ಸು **ನವಮಂ ಮಂಡಲಂ ಪಾವಮಾನಂ ಸೌಮ್ಯಂ** ಎಂಬ ವಚನಾನುಸಾರವಾಗಿ ಪವಮಾನಗುಣವಿಶಿಷ್ಟನಾದ ಸೋಮನು ದೇವತೆಯು, ಗ್ರಾವಸ್ತೋತ್ರದಲ್ಲಿ ( ಸೋಮಾಭಿಷವಸಾಧನವಾದ ಕಲ್ಲುಗಳನ್ನು ಸ್ತುತಿಸುವ ಸಂದರ್ಭದಲ್ಲಿ ) ಅರ್ಬುದ ಸೂಕ್ತದ ಆದಿಯಲ್ಲಿಯೂ ಮತ್ತು ಅಂತ್ಯದಲ್ಲಿಯೂ ಈ ಸೂಕ್ತವೇ ಮೊದಲಾದ ಸಮಸ್ತ ಪವಮಾನಸೋಮದೇವತಾಕವಾದ ಸ್ತೋತ್ರವನ್ನು ವಿಕಲ್ಪವಾಗಿ ಆವಪನಾರ್ಥವಾಗಿ (ಸ್ತೋಮಾಭಿವೃದ್ಧ್ಯರ್ಥವಾಗಿ) ಪಠಿಸಬಹುದೆಂದು ಆಶ್ವಲಾಯನ ಶ್ರೌತಸೂತ್ರದ—**ಪ್ರೈತೇ ವದಂತ್ವಿತ್ಯರ್ಬುದಂ ಪ್ರಾಗುತ್ತಮಾಯಾ ಆ ವ ಋಂಜಸೇ ಪ್ರ ವೋ ಗ್ರಾವಾಣ ಇತಿ ಸೂಕ್ತಯೋರಂತರೋಪರಿಷ್ಟಾತ್ಪುರಸ್ತಾದ್ವಾ ಪಾವಮಾನೀರೋಪ್ಯ ಯಥಾರ್ಥಮಾ ವಾ ಗ್ರಹ-ಗ್ರಹಣಾತ್** ಎಂಬ ಸೂತ್ರದಿಂದ (ಆ. ೫-೧೨) ವಿಸ್ತೃತವಾಗಿರುವುದು. ಅಧ್ಯಾಯೋಪಾಕರ್ಮ ಮತ್ತು ಉತ್ಸರ್ಜನ ಕರ್ಮಗಳ ಪ್ರಧಾನ ಹೋಮಗಳಲ್ಲಿ ಮಂಡಲಾದಿ ಋಕ್ಕುಗಳಿಗಾಗಿ ಈ ಸೂಕ್ತದ ಮೊದಲನೆಯ ಋಕ್ಕಿನ ವಿನಿಯೋಗವಿರುವುದು. ಸೂತ್ರವನ್ನು ಹಿಂದೆಯೇ ಉದಾಹರಿಸಲಾಗಿದೆ.

## ಸೂಕ್ತ—೧

**ಮಂಡಲ—೯ । ಅನುವಾಕ—೧ । ಸೂಕ್ತ—೧ ।**
**ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೧೬,೧೭ ॥**
**ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥**
**ಋಷಿಃ—ಮಧುಚ್ಛಂದಾಃ ।**
**ದೇವತಾ—ಪವಮಾನಃ ಸೋಮಃ ॥**
**ಛಂದಃ—ಗಾಯತ್ರೀ ॥**

। ಸಂಹಿತಾಪಾಠಃ ॥

**ಸ್ವಾದಿಷ್ಠಯಾ ಮದಿಷ್ಠಯಾ ಪವಸ್ವ ಸೋಮ ಧಾರಯಾ ।**
**ಇಂದ್ರಾಯ ಪಾತವೇ ಸುತಃ ॥ ೧ ॥**

॥ ಪದಪಾಠಃ ॥

ಸ್ವಾದಿಷ್ಠಯಾ । ಮದಿಷ್ಠಯಾ । ಪವಸ್ವ । ಸೋಮ । ಧಾರಯಾ ।

ಇಂದ್ರಾಯ । ಪಾತವೇ । ಸುತಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಸೋಮ ಇಂದ್ರಾಯ ಪಾತವೇ ಪಾತುಂ ಸುತೋಽಭಿಷುತಸ್ತ್ವಂ ಸ್ವಾದಿಷ್ಠಯಾ ಸ್ವಾದುತಮಯಾ ಮದಿಷ್ಠಯಾತಿಶಯೇನ ಮಾದಯಿತ್ರ್ಯಾ ಧಾರಯಾ ಪವಸ್ವ । ಕ್ಷರ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ಇಂದ್ರಾಯ**—ಇಂದ್ರನಿಗೆ । **ಪಾತವೇ**—ಪಾನಾರ್ಥವಾಗಿ । **ಸುತಃ**—ಹಿಂಡಲ್ಪಟ್ಟ ನೀನು । **ಸ್ವಾದಿಷ್ಠಯಾ**—ಅತ್ಯುತ್ತಮವಾದುದೂ ಅತ್ಯಂತ ರುಚಿಕರವಾದುದೂ । **ಮದಿಷ್ಠಯಾ**—ಸಂತೋಷದಾಯಕವಾದುದೂ ಆದ । **ಧಾರಯಾ**—ಪ್ರವಾಹದಿಂದ । **ಪವಸ್ವ**—ಸ್ರವಿಸು (ಹರಿಯುವವನಾಗು)

॥ ಭಾವಾರ್ಥ ॥

ಎಲೈ ಸೋಮನೇ, ಇಂದ್ರನಿಗೆ ಪಾನಾರ್ಥವಾಗಿ ಹಿಂಡಲ್ಪಟ್ಟ ನೀನು ಅತ್ಯಂತ ರುಚಿಕರವಾದುದೂ, ಸಂತೋಷದಾಯಕವಾದುದೂ ಆದ ಪ್ರವಾಹರೂಪದಿಂದ ಹರಿಯುವವನಾಗು

English Translation

Flow, Soma, in a most sweet and exhilarating stream, effused for Indra to drink.

॥ ಸಂಹಿತಾಪಾಠಃ ॥

ರಕ್ಷೋಹಾ ವಿಶ್ವಚರ್ಷಣಿರಭಿ ಯೋನಿಮಯೋಹತಂ ।

ದ್ರುಣಾ ಸಧಸ್ಥಮಾಸದತ್ ॥ ೨ ॥

॥ ಪದಪಾಠಃ ॥

ರಕ್ಷಃऽಹಾ । ವಿಶ್ವऽಚರ್ಷಣಿಃ । ಅಭಿ । ಯೋನಿಂ । ಅಯಃऽಹತಂ ।

ದ್ರುಣಾ । ಸಧऽಸ್ಥಂ । ಆ । ಅಸದತ್ ॥ ೨ ॥

॥ ಸಾಯಣಭಾಷ್ಯಂ ॥

**ರಕ್ಷೋಹಾ ರಕ್ಷಸಾಂ ಹಂತಾ ವಿಶ್ವಚರ್ಷಣಿರ್ವಿಶ್ವಸ್ಯ ದ್ರಷ್ಟಾ ಸೋಮೋಽಯೋಹತಂ ಹಿರಣ್ಯೇನ ಹತಂ । ತಥಾ ಚ ಬ್ರಾಹ್ಮಣಂ । ಹಿರಣ್ಯಪಾಣಿರಭಿಷುಣೋತೀತಿ । ದ್ರುಣಾ ದ್ರೋಣಕಲಶೇನಾಧಿಷವಣ-ಫಲಕಾಭ್ಯಾಂ ವಾ ಸಧಸ್ಥಂ ಸಹಸ್ಥಾನಂ ಯೋನಿಮಭಿಷವಸ್ಥಾನಮಭ್ಯಾಸದತ್ । ಅಭ್ಯಾಸೀದತಿ ॥**

॥ ಪ್ರತಿಪದಾರ್ಥ ॥

**ರಕ್ಷೋಹಾ**—ರಾಕ್ಷಸರ ಹಂತಕನೂ । **ವಿಶ್ವಚರ್ಷಣಿಃ**—ಸಕಲವನ್ನೂ ನೋಡುವ ಶಕ್ತಿಯುಳ್ಳವನೂ ಆದ ಸೋಮನು । **ಅಯೋಹತಂ**—ಸುವರ್ಣದಿಂದ ಕುಟ್ಟಲ್ಪಟ್ಟುದೂ । **ದ್ರುಣಾ**—ದ್ರೋಣಕಲಶದೊಂದಿಗೆ । **ಸಧಸ್ಥಂ**—ಒಟ್ಟಿಗಿರುವುದೂ ಆದ । **ಯೋನಿಂ**—ತನ್ನ ಅಭಿಷವಸ್ಥಾನವನ್ನು (ಹಿಂಡುವ ಪ್ರದೇಶವನ್ನು) । **ಅಭಾಸದತ್**—ಸೇರಿಕೊಂಡಿದ್ದಾನೆ.

॥ ಭಾವಾರ್ಥ ॥

ರಾಕ್ಷಸರ ಹಂತಕನೂ, ಸಕಲವನ್ನೂ ನೋಡುವ ಶಕ್ತಿಯುಳ್ಳವನೂ ಆದ ಸೋಮನು ಸುವರ್ಣದಿಂದ ಕುಟ್ಟಲ್ಪಟ್ಟುದೂ, ದ್ರೋಣಕಲಶದೊಂದಿಗೆ ಒಟ್ಟಿಗಿರುವುದೂ ಆದ ತನ್ನನ್ನು ಹಿಂಡುವ ಪ್ರದೇಶವನ್ನು ಸೇರಿಕೊಂಡಿದ್ದಾನೆ.

## English Translation

The all-beholding destroyer of Rakshasas has stepped upon his gold-smitten brithplace, united with the wooden cask.

॥ ವಿಶೇಷವಿಷಯಗಳು ॥

**ಯೋನಿಂ**—ಎಂದರೆ ರಸೋತ್ಪತ್ತಿಸ್ಥಾನವೆಂದರ್ಥ.

॥ ಸಂಹಿತಾಪಾಠಃ ॥

**ವರಿವೋಧಾತಮೋ ಭವ ಮಂಹಿಷ್ಠೋ ವೃತ್ರಹಂತಮಃ ।**

**ಪರ್ಷಿ ರಾಧೋ ಮಘೋನಾಂ ॥ ೩ ॥**

॥ ಪದಪಾಠಃ ॥

**ವರಿವಃಽಧಾತಮಃ । ಭವ । ಮಂಹಿಷ್ಠಃ । ವೃತ್ರಹನ್ಽತಮಃ ।**

**ಪರ್ಷಿ । ರಾಧಃ । ಮಘೋನಾಂ ॥ ೩ ॥**

॥ ಸಾಯಣಭಾಷ್ಯಂ ॥

**ಹೇ ಸೋಮ ತ್ವಂ ವರಿವೋಧಾತಮೋಽತಿಶಯೇನ ಧನಾನಾಂ ದಾತಾ ಭವ । ವೇದೋ ವರಿವ ಇತಿ ಧನನಾಮಸು ಪಾಠಾತ್ । ಮಂಹಿಷ್ಠೋ ದಾತೃತಮಶ್ಚ ಭವ । ಸರ್ವದಾತೃತ್ವಮುಕ್ತ್ರೋಚ್ಯತ ಇತ್ಯಪುನರುಕ್ತಿಃ । ವೃತ್ರಹಂತಮೋಽತಿಶಯೇನ ಶತ್ರೂಣಾಂ ಹಂತಾ ಭವ । ಕಿಂಚ ಮಘೋನಾಂ ಧನವತಾಂ ಶತ್ರೂಣಾಂ ರಾಧೋ ಧನಂ ಚ ಪರ್ಷಿ । ಅಸ್ಮಭ್ಯಂ ಪ್ರಯಚ್ಛ ॥**

॥ ಪ್ರತಿಪದಾರ್ಥ ॥

(ಎಲೈ ಸೋಮನೇ) (**ತ್ವಂ**—ನೀನು) । **ವರಿವೋಧಾತಮಃ**--ಅತ್ಯುದಾರವಾಗಿ ಧನದಾನವನ್ನು ಮಾಡುವವನಾಗಿ । **ಭವ**—ಆಗಿರು । **ಮಂಹಿಷ್ಠಃ**—ಅನ್ನಾದಿಗಳನ್ನು ದಾನಮಾಡುವವನಾಗಿರು । **ವೃತ್ರಹಂತಮಃ**—ಶತ್ರುನಾಶಕನಾಗಿರು । **ಮಘೋನಾಂ**—ಧನವಂತರಾದ ಶತ್ರುಗಳ । **ರಾಧಃ**—ಧನವನ್ನು । **ಪರ್ಷಿ**—ನಮಗೆ ಕಸಿದುಕೊಡು

॥ ಭಾವಾರ್ಥ ॥

ಎಲೈ ಸೋಮನೇ, ನೀನು ಅತ್ಯುದಾರವಾಗಿ ನಮಗೆ ಧನದಾನವನ್ನು ಕೊಡುವವನಾಗಿರು. ಅನ್ನಾದಿಗಳನ್ನೂ ದಾನಮಾಡು. ನಮ್ಮ ಶತ್ರುನಾಶಕನಾಗಿರು. ಧನವಂತನಾದ ಶತ್ರುಗಳ ಧನವನ್ನು ನಮಗೆ ಕಸಿದುಕೊಡು.

English Translation

Be the lavish giver of wealth, most bounteous, the destroyer of enemies; bestow on us the riches of the affuent

॥ ಸಂಹಿತಾಪಾಠಃ ॥

ಅಭ್ಯರ್ಷ ಮಹಾನಾಂ ದೇವಾನಾಂ ವೀತಿಮಂಧಸಾ ।
ಅಭಿ ವಾಜಮುತ ಶ್ರವಃ ॥ ೪ ॥

॥ ಪದಪಾಠಃ ॥

ಅಭಿ । ಅರ್ಷ । ಮಹಾನಾಂ । ದೇವಾನಾಂ । ವೀತಿಂ । ಅಂಧಸಾ ।
ಅಭಿ । ವಾಜಂ । ಉತ । ಶ್ರವಃ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತ್ವಂ ಮಹಾನಾಂ ಮಹತಾಂ ದೇವಾನಾಂ ವೀತಿಂ ಯಜ್ಞಮಂಧಸಾ ಧಾನಾದ್ಯನ್ನೇನ ಸಹಾಭ್ಯರ್ಷ । ಅಭಿಗಚ್ಛ । ಉತಾಪಿ ಚಾಭಿಗಚ್ಛಂಸ್ತ್ವಂ ವಾಜಂ ಬಲಂ ಶ್ರವೋಽನ್ನಂ ಚಾಭಿಗಮಯಾಸ್ಮಾನಿತ್ಯರ್ಥಃ ॥**

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ಮಹಾನಾಂ**—ಮಾಹಾತ್ಮ್ಯವುಳ್ಳ । **ದೇವಾನಾಂ**—ದೇವತೆಗಳ ಪೂಜಕವಾದ । **ವೀತಿಂ**—ಯಜ್ಞವನ್ನು ಕುರಿತು । **ಅಂಧಸಾ**—ಅನ್ನಗಳೊಡನೆ । **ಅಭ್ಯರ್ಷ**—ದಯಮಾಡು । **ಉತ**—ಮತ್ತು । **ವಾಜಂ**—ಬಲವನ್ನೂ । **ಶ್ರವಃ**—ಅನ್ನವನ್ನೂ । **ಅಭಿ (ಅರ್ಷ)**—ನಮಗೆ ಒದಗಿಸು.

॥ ಭಾವಾರ್ಥ ॥

ಎಲೈ ಸೋಮನೇ, ಮಾಹಾತ್ಮ್ಯದಿಂದ ಕೂಡಿದ ದೇವತೆಗಳ ಪೂಜಕವಾದ ಯಜ್ಞಕ್ಕೆ ಅನ್ನಗಳೊಡನೆ ದಯಮಾಡು. ಬಲವನ್ನೂ ಅನ್ನವನ್ನೂ ನಮಗೆ ಅದರೊಂದಿಗೆ ಒದಗಿಸು.

## English Translation

Come with food to the sacrifice of the mighty gods, and bring to us strength and sustenance.

॥ ಸಂಹಿತಾಪಾಠಃ ॥

ತ್ವಾಮಚ್ಛಾ ಚರಾಮಸಿ ತದಿದರ್ಥಂ ದಿವೇದಿವೇ ।

ಇಂದೋ ತ್ವೇ ನ ಆಶಸಃ ॥ ೫ ॥

॥ ಪದಪಾಠಃ ॥

ತ್ವಾಂ । ಅಚ್ಛ । ಚರಾಮಸಿ । ತತ್ । ಇತ್ । ಅರ್ಥಂ । ದಿವೇऽದಿವೇ ।

ಇಂದೋ ಇತಿ । ತ್ವೇ ಇತಿ । ನಃ । ಆऽಶಸಃ । ೫ ॥

॥ ಸಾಯಣಭಾಷ್ಯಂ ॥

**ಹೇ ಇಂದೋ ಯಾಗೇಷು ಕ್ಲಿದ್ಯಮಾನ ಸೋಮ ತ್ವಾಮಚ್ಛ ತ್ವಾಂ ಪ್ರತಿ ಚರಾಮಸಿ ।** ವಯಂ ಚರಾಮಃ । **ದಿವೇದಿವೇ ಪ್ರತಿದಿನಮಸ್ಮಾಕಂ ತದಿತ್ತದೇವ ತತ್ಪರಿಚರಣಮೇವಾರ್ಥಂ ಕಾರ್ಯಂ** ನಾನ್ಯತ್ಕಾರ್ಯಮಸ್ತಿ । **ನೋऽಸ್ಮಾಕಮಾಶಸ ಆಶಂಸನಾನ್ಯಪಿ ತ್ವೇ ತ್ವಯ್ಯೇವ ನಾನ್ಯತ್ರ ॥**

॥ ಪ್ರತಿಪದಾರ್ಥ ॥

**ಇಂದೋ**—ಯಜ್ಞದಲ್ಲಿ ಪ್ರವಾಹರೂಪದಲ್ಲಿ ಹರಿಯುವ ಎಲೈ ಸೋಮನೇ, । **ತ್ವಾಂ ಅಚ್ಛ**—ನಿನಗಭಿಮುಖವಾಗಿ । **ಚರಾಮಸಿ**—ನಾವು ಸಂಚರಿಸುತ್ತೇವೆ। ದಿವೇದಿವೇ-ಪ್ರತಿದಿನವೂ । **ತದಿತ್**—ನಿನ್ನ ಪೂಜೆಗಾಗಿಯೆ। **ಅರ್ಥಂ**—ನಮ್ಮ ಕಾರ್ಯಕಲಾಪಗಳೆಲ್ಲವೂ ಇವೆ । **ನಃ**—ನಮ್ಮ। **ಆಶಸಃ**—ಸ್ತುತಿಗಳೂ ಸಹ । **ತ್ವೇ**—ನಿನ್ನಲ್ಲಿಯೇ ಅರ್ಪಿತವಾಗುತ್ತವೆ.

॥ ಭಾವಾರ್ಥ ॥

ಯಜ್ಞದಲ್ಲಿ ಪ್ರವಾಹರೂಪದಲ್ಲಿ ಹರಿಯತಕ್ಕ ಎಲೈ ಸೋಮನೆ, ನಿನಗಭಿಮುಖವಾಗಿ ನಾವು ಸಂಚರಿಸುತ್ತೇವೆ. ಪ್ರತಿದಿನವೂ ನಿನ್ನ ಪೂಜೆಗಾಗಿಯೇ ನಮ್ಮ ಕಾರ್ಯಕಲಾಪಗಳೆಲ್ಲವೂ ಇರುತ್ತವೆ. ನಮ್ಮ ಸ್ತುತಿಗಳೂ ಸಹ ನಿನ್ನಲ್ಲಿಯೇ ಅರ್ಪಿತವಾಗುತ್ತವೆ.

English Translation

To you we come, O dropping (Soma), for you only is this our worship day by day, our prayers are to you, none other

॥ ಸಂಹಿತಾಪಾಠಃ ॥

ಪುನಾತಿ ತೇ ಪರಿಸ್ರುತಂ ಸೋಮಂ ಸೂರ್ಯಸ್ಯ ದುಹಿತಾ ।
ವಾರೇಣ ಶಶ್ವತಾ ತನಾ ॥ ೬ ॥

॥ ಪದಪಾಠಃ ॥

ಪುನಾತಿ । ತೇ । ಪರಿಽಸ್ರುತಂ । ಸೋಮಂ । ಸೂರ್ಯಸ್ಯ । ದುಹಿತಾ ।
ವಾರೇಣ । ಶಶ್ವತಾ । ತನಾ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸೋಮ ತೇ ತವ ಪರಿಸ್ರುತಂ ಕ್ಷರಂತಂ ಸೋಮಂ ಸೋಮರಸಂ ಸೂರ್ಯಸ್ಯ ದುಹಿತಾ ಶ್ರದ್ಧಾ ದೇವೀ ವಾರೇಣ ಬಾಲೇನ ಶಶ್ವತಾ ಶಾಶ್ವತೇನ ತನಾ ವಿಸ್ತೃತೇನ ಪುನಾತಿ । ತಥಾ ಚ ವಾಜಸನೇಯಿನ ಆಮನಂತಿ । ಶ್ರದ್ಧಾ ವೈ ಸೂರ್ಯಸ್ಯ ದುಹಿತಾ ಶ್ರದ್ಧಾ ಹ್ಯೇನಂ ಪುನಾತೀತಿ ॥

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ತೇ**— ನಿನ್ನ । **ಪರಿಸ್ರುತಂ**—ಸ್ರವಿಸಿ ಹರಿಯುವ । **ಸೋಮಂ**— ರಸವನ್ನು । **ಸೂರ್ಯಸ್ಯ**— ಸೂರ್ಯನ । **ದುಹಿತಾ**— ಮಗಳಾದ ಶ್ರದ್ಧಾದೇವಿಯು । **ಶಶ್ವತಾ**— ನಿತ್ಯವಾದುದೂ । **ತನಾ**— ವಿಸ್ತೃತವಾಗಿ ಹರಡಿದುದೂ ಆದ । **ವಾರೇಣ** — ಕೂದಲಿನಿಂದ । **ಪುನಾತಿ**— ಶುದ್ಧಿಗೊಳಿಸುತ್ತಾಳೆ

॥ ಭಾವಾರ್ಥ ॥

ಎಲೈ ಸೋಮನೇ, ಪ್ರವಾಹರೂಪದಲ್ಲಿ ಹರಿಯತಕ್ಕ ನಿನ್ನ ರಸವನ್ನು ಸೂರ್ಯನ ಮಗಳಾದ ಶ್ರದ್ಧಾದೇವಿಯು ನಿತ್ಯವಾದುದೂ ವಿಸ್ತೃತವಾಗಿ ಹರಡಿದುದೂ ಆದ ಕೂದಲಿನಿಂದ ಶುದ್ಧಿಗೊಳಿಸುತ್ತಾಳೆ

## English Translation

The daughter of the Sun purifies your gushing streams through the eternal outstretched hair.

॥ ಸಂಹಿತಾಪಾಠಃ ॥

ತಮೀಮಣ್ವೀಃ ಸಮರ್ಯ ಆ ಗೃಭ್ಣಂತಿ ಯೋಷಣೋ ದಶ ।
ಸ್ವಸಾರಃ ಪಾರ್ಯೇ ದಿವಿ ॥ ೭ ॥

॥ ಪದಪಾಠಃ ॥

ತಂ । ಈಂ । ಅಣ್ವೀಃ । ಸ್ಽಮರ್ಯೇ । ಆ । ಗೃಭ್ಣಂತಿ । ಯೋಷಣಃ । ದಶ ।
ಸ್ವಸಾರಃ । ಪಾರ್ಯೇ । ದಿವಿ ॥ ೭ ॥

॥ ಸಾಯಣಭಾಷ್ಯಂ ॥

ಸಮರ್ಯೇ ಸಮನುಷ್ಯೇ ಯಜ್ಞೇ ಪಾರ್ಯೇ ದಿವಿ ಸೌತ್ಯೇಽಹನಿ ಯೋಷಣಃ ಸ್ತ್ರಿಯಃ ಸ್ವಸಾರಃ ಸ್ವಯಂ ಸರಂತ್ಯೋ ದಶಸಂಖ್ಯಾಕಾ ಅಣ್ವೀರಣ್ವ್ಯೋಽಂಗುಲಯಃ । ಅಗ್ರುವೋಽಣ್ವ್ಯ ಇತ್ಯಂಗುಲಿನಾಮಸು ಪಾಠಾತ್ । ತಮೀಂ ತಮೇತಂ ಸೋಮಮಾ ಗೃಭ್ಣಂತಿ । ಅಗೃಹ್ಣಂತಿ ॥

॥ ಪ್ರತಿಪದಾರ್ಥ ॥

**ಸಮರ್ಯೇ**—ಮಾನವರಿಂದ ತುಂಬಿತ ಯಜ್ಞದಲ್ಲಿ । **ಪಾರ್ಯೇ ದಿವಿ**—ಕೊನೆಯ ದಿನ । **ಯೋಷಣಃ**—ಸ್ತ್ರೀರೂಪವಾಗಿರುವುವೂ । **ಸ್ವಸಾರಃ**—ಸಹೋದರಿಯರಂತಿರುವುವೂ ಆದ । **ದಶ ಅಣ್ವೀಃ**—ಹತ್ತು ಬೆರಳುಗಳೂ **ತಮೀಂ**—ಆ ಸೋಮವನ್ನೇ । **ಆ ಗೃಭ್ಣಂತಿ**—ಹಿಡಿದಿರುತ್ತವೆ.

॥ ಭಾವಾರ್ಥ ॥

ಮಾನವರಿಂದ ತುಂಬಿದ ಯಜ್ಞದಲ್ಲಿ ಕೊನೆಯ ದಿನ ಸ್ತ್ರೀರೂಪವಾಗಿರುವುವೂ ಸಹೋದರಿಯರಂತಿರುವುವೂ ಆದ ಹತ್ತು ಬೆರಳುಗಳೂ ಸಹ ಆ ಸೋಮವನ್ನೇ ಹಿಡಿದಿರುತ್ತವೆ.

## English Translation

The ten sister-fingers seize you in the sacrifice, on the final day (of the oblation).

॥ ಸಂಹಿತಾಪಾಠಃ ॥

ತಮೀಂ ಹಿನ್ವಂತ್ಯಗ್ರುವೋ ಧಮಂತಿ ಬಾಕುರಂ ದೃತಿಂ ।

ತ್ರಿಧಾತು ವಾರಣಂ ಮಧು ॥ ೮ ॥

॥ ಪದಪಾಠಃ ॥

ತಂ । ಈಂ । ಹಿನ್ವಂತಿ । ಅಗ್ರುವಃ । ಧಮಂತಿ । ಬಾಕುರಂ । ದೃತಿಂ ।

ತ್ರಿಽಧಾತು । ವಾರಣಂ । ಮಧು ॥ ೮ ॥

॥ ಸಾಯಣಭಾಷ್ಯಂ ॥

ತಮೀಮೇನಂ ಸೋಮಮಗ್ರುವೋಽಂಗುಲಯೋ ಹಿನ್ವಂತಿ । ಅಭಿಷವದೇಶಂ ಪ್ರತಿ ಪ್ರೇರಯಂತಿ । ಪ್ರೇರಯಿತ್ವಾ ಚ ಬಾಕುರಂ ಭಾಸಮಾನಂ ದೃತಿಂ ದೃತಿಸದೃಶಾಂಶುಮೇನಂ ಸೋಮಂ ಧಮಂತಿ । ಅಭಿಷುಣ್ವಂತಿ । ಯದ್ಯಪಿ ಧಮತಿರಭಿಷವಕರ್ಮಾ ನ ಭವತಿ ತಥಾಪ್ಯೌಚಿತ್ಯಾದತ್ರಾಭಿಷವಪರೋ ಭವಿಷ್ಯತಿ । ತದೇತತ್ಸೋಮಾತ್ಮಕಂ ಮಧು ವಸ್ತು ತ್ರಿಧಾತು ತ್ರಿಸ್ಥಾನಂ । ದ್ರೋಣಕಲಶ ಆಧವನೀಯಃ ಪೂತಭೃದಿತಿ ತ್ರಿಧಾತವಃ । ವಾರಣಂ ಶತ್ರೂಣಾಂ ವಾರಕಂ ಚ ಭವತಿ ॥

॥ ಪ್ರತಿಪದಾರ್ಥ ॥

**ತಂ ಈಂ**—ಇದೇ ಸೋಮವನ್ನು । **ಅಗ್ರುವಃ**—ಬೆರಳುಗಳು । **ಹಿನ್ವಂತಿ**—ಹಿಂಡುವ ಪ್ರದೇಶಕ್ಕೆ ಒಯ್ಯುತ್ತವೆ । **ಬಾಕುರಂ**—ಪ್ರಕಾಶಮಾನವಾದುದೂ । **ದೃತಿಂ**—ನೀರಿನ ಚೀಲದಂತೆ ಹೊಳೆಯುವುದೂ ಆದ ಸೋಮವನ್ನು। **ಧಮಂತಿ**—ಕುಟ್ಟಿ ಹಿಂಡುತ್ತಾನೆ। **ಮಧು**—(ಅನಂತರ) ।ರುಚಿಕರವಾದ ಅದರ ರಸವು। **ತ್ರಿಧಾತು**-ದ್ರೋಣಕಲಶ, ಆಧವನೀಯ ಮತ್ತು ಪೂತಭೃತ್ತೆಂಬ ಪಾತ್ರೆಗಳಲ್ಲಿ ಸ್ಥಾಪಿತವೂ । **ವಾರಣಂ**-ಶತ್ರುಗಳನ್ನು ತಡೆಗಟ್ಟುವುದೂ ಆಗುತ್ತದೆ.

॥ ಭಾವಾರ್ಥ ॥

ಇದೇ ಸೋಮವನ್ನು ಬೆರಳುಗಳು ಹಿಂಡುವ ಪ್ರದೇಶಕ್ಕೆ ಒಯ್ಯುತ್ತವೆ. ಪ್ರಕಾಶಮಾನವಾದುದೂ, ನೀರಿನ ಚೀಲದಂತೆ ಹೊಳೆಯುವುದೂ ಆದ ಸೋಮವನ್ನು ಕುಟ್ಟಿ ಹಿಂಡುತ್ತವೆ. ಅನಂತರ ರುಚಿಕರವಾದ ಅದರ ರಸವು ದ್ರೋಣಕಲಶ, ಆಧವನೀಯ ಮತ್ತು ಪೂತಭೃತ್ತೆಂಬ ಪಾತ್ರೆಗಳಲ್ಲಿ ಸ್ಥಾಪಿತವೂ ಶತ್ರುಗಳನ್ನು ತಡೆಗಟ್ಟುವುದೂ ಆಗುತ್ತದೆ.

## English Translation

The fingers press the Soma, they squeeze it glittering like a water-skin; its juice becomes threefold, enemy-averting.

॥ ಸಂಹಿತಾಪಾಠಃ ॥

ಅಭೀಮಮಘ್ನ್ಯಾ ಉತ ಶ್ರೀಣಂತಿ ಧೇನವಃ ಶಿಶುಂ ।

ಸೋಮಮಿಂದ್ರಾಯ ಪಾತವೇ ॥ ೯ ॥

॥ ಪದಪಾಠಃ ॥

ಅಭಿ । ಇಮಂ । ಅಘ್ನ್ಯಾಃ । ಉತ । ಶ್ರೀಣಂತಿ । ಧೇನವಃ । ಶಿಶುಂ ।

ಸೋಮಂ । ಇಂದ್ರಾಯ । ಪಾತವೇ ॥ ೯ ॥

॥ ಸಾಯಣಭಾಷ್ಯಂ ॥

**ಉತಾಪಿ ಚೇಮಮೇನಂ ಶಿಶುಂ ಬಾಲಂ ಸೋಮಮಘ್ನ್ಯಾ ಅಹಂತವ್ಯಾ ಧೇನವೋ ಗಾವ ಇಂದ್ರಾಯ ಪಾತವೇ ಪಾತುಮಭಿ ಶ್ರೀಣಂತಿ । ಸ್ವಕೀಯೇನ ಪಯಸಾ ಸಂಸ್ಕುರ್ವಂತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಉತ**—ಮತ್ತು। **ಶಿಶುಂ**—ಈಗ ತಾನೇ ಹೊಸದಾಗಿ ಹಿಂಡಿದ। **ಇಮಂ ಸೋಮಂ**—ಈ ಸೋಮವನ್ನು। **ಅಘ್ನ್ಯಾಃ**—ಹಿಂಸೆಗೆ ಒಳಪಡದವೂ । **ಧೇನವಃ**—ಪುಷ್ಕಲವಾದ ಕ್ಷೀರಾದಿಗಳಿಂದ ಕೂಡಿದವೂ ಆದ ಧೇನುಗಳು । **ಇಂದ್ರಾಯ**—ಇಂದ್ರನಿಗೆ। **ಪಾತವೇ**—ಪಾನಮಾಡುವುದಕ್ಕೋಸ್ಕರ। **ಅಭಿ ಶ್ರೀಣಂತಿ**—ತಮ್ಮ ಕ್ಷೀರಾದಿಗಳೊಂದಿಗೆ ಮಿಶ್ರಮಾಡಿ ಸಂಸ್ಕರಿಸುತ್ತವೆ.

॥ ಭಾವಾರ್ಥ ॥

ಈಗ ತಾನೇ ಹೊಸದಾಗಿ ಹಿಂಡಿದ ಈ ಸೋಮವನ್ನು ಹಿಂಸೆಗೆ ಒಳಪಡದವೂ ಪುಷ್ಕಲವಾದ ಕ್ಷೀರಾದಿಗಳಿಂದ ಕೂಡಿದವೂ ಆದ ಧೇನುಗಳು ಇಂದ್ರನಿಗೆ ಪಾನಮಾಡುವುದಕ್ಕೋಸ್ಕರ ತಮ್ಮ ಕ್ಷೀರಾದಿಗಳೊಂದಿಗೆ ಮಿಶ್ರಮಾಡಿ ಸಂಸ್ಕರಿಸುತ್ತವೆ.

English Translation

The inviolable cows mingle this fresh Soma with their milk for Indra to drink.

॥ ಸಂಹಿತಾಪಾಠಃ ॥

ಅಸ್ಯೇದಿಂದ್ರೋ ಮದೇಷ್ವಾ ವಿಶ್ವಾ ವೃತ್ರಾಣಿ ಜಿಘ್ನತೇ ।

ಶೂರೋ ಮಘಾ ಚ ಮಂಹತೇ ॥ ೧೦ ॥

॥ ಪದಪಾಠಃ ॥

ಅಸ್ಯ । ಇತ್ । ಇಂದ್ರಃ । ಮದೇಷು । ಆ । ವಿಶ್ವಾ । ವೃತ್ರಾಣಿ । ಜಿಘ್ನತೇ ।

ಶೂರಃ । ಮಘಾ । ಚ । ಮಂಹತೇ ॥೧೦॥

॥ ಸಾಯಣಭಾಷ್ಯಂ ॥

ಶೂರೋ ವೀರ ಇಂದ್ರೋಽಸ್ಯೇದಸ್ಯ ಸೋಮಸ್ಯೈವ ಮದೇಷು ವಿಶ್ವಾ ವಿಶ್ವಾನಿ ವೃತ್ರಾಣಿ ಶತ್ರೂನಾ ಜಿಘ್ನತೇ । ಆಹಂತಿ । ಮಘಾ ಮಘಾನಿ ಧನಾನಿ ಚ ಮಂಹತೇ । ಯಜಮಾನೇಭ್ಯಃ ಪ್ರಯಚ್ಛತಿ ॥

॥ ಪ್ರತಿಪದಾರ್ಥ ॥

ಶೂರಃ—ಪರಾಕ್ರಮಿಯಾದ । ಇಂದ್ರಃ—ಇಂದ್ರನು । ಅಸ್ಯೇತ್—ಇದೇ ಸೋಮದ ಪಾನದಿಂದ । ಮದೇಷು—ಹರ್ಷವುಂಟಾದಾಗ । ವಿಶ್ವಾ—ಸಮಸ್ತವಾದ । ವೃತ್ರಾಣಿ—ಶತ್ರುಗಳನ್ನೂ । ಆ ಜಿಘ್ನತೇ—ಕೊಲ್ಲುತ್ತಾನೆ । ಮಘಾ ಚ—ಧನಗಳನ್ನೂ ಮಂಹತೇ—ಯಜಮಾನರಿಗೆ ಕೊಡುತ್ತಾನೆ

॥ ಭಾವಾರ್ಥ ॥

ಪರಾಕ್ರಮಿಯಾದ ಇಂದ್ರನು ಇದೇ ಸೋಮದ ಪಾನದಿಂದ ಹರ್ಷವುಂಟಾದಾಗ ಸಮಸ್ತವಾದ ಶತ್ರುಗಳನ್ನೂ ಕೊಲ್ಲುತ್ತಾನೆ. ಯಜಮಾನರಿಗೆ ಧನಗಳನ್ನು ಒದಗಿಸುತ್ತಾನೆ.

English Translation

In the exhilaration of this draught the hero Indra smites all his enemies and bestows wealth (on his worshippers).

## ಎರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪವಸ್ವೇತಿ ದಶರ್ಚಂ ದ್ವಿತೀಯಂ ಸೂಕ್ತಂ ಕಾಣ್ವಸ್ಯ ಮೇಧಾತಿಥೇರಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ । ತಥಾ ಚಾನುಕ್ರಾಂತಂ । ಪವಸ್ವ ಮೇಧಾತಿಥಿರಿತಿ ॥ ಉಕ್ತೋ ವಿನಿಯೋಗಃ ॥

ಅನುವಾದವು—ಪವಸ್ವ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಹತ್ತು ಋಕ್ಕುಗಳಿರುವವು ಈ ಸೂಕ್ತಕ್ಕೆ ಮೇಧಾತಿಥಿಃ ಕಾಣ್ವಃ ಎಂಬುವನು ಋಷಿಯು, ಪವಮಾನ

ಸೋಮವು ದೇವತೆಯು ; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪವಸ್ವ ಮೇಧಾತಿಥಿಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಗಲಾಗಿದೆ.

## ಸೂಕ್ತ—೨

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೨ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೧೮, ೧೯ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
ಋಷಿಃ—ಮೇಧಾತಿಥಿಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಪವಸ್ವ ದೇವವೀರತಿ ಪವಿತ್ರಂ ಸೋಮ ರಂಹ್ಯಾ ।**
**ಇಂದ್ರಮಿಂದೋ ವೃಷಾ ವಿಶ ॥ ೧ ॥**

॥ ಪದಪಾಠಃ ॥

**ಪವಸ್ವ । ದೇವSವೀಃ । ಅತಿ । ಪವಿತ್ರಂ । ಸೋಮ । ರಂಹ್ಯಾ ।**
**ಇಂದ್ರಂ । ಇಂದೋ ಇತಿ । ವೃಷಾ । ಆ । ವಿಶ ॥ ೧ ॥**

॥ ಸಾಯಣಭಾಷ್ಯಂ ॥

**ಹೇ ಸೋಮ ದೇವವೀರ್ದೇವಕಾಮಸ್ತ್ವಂ ರಂಹ್ಯಾ ವೇಗೇನ ಪವಿತ್ರಂ ಯಥಾ ಭವತಿ ತಥಾತಿ ಪವಸ್ವ । ಅತಿಕ್ಷರ । ಕಿಂಚ ಹೇ ಇಂದೋ ವೃಷಾ ಸೇಚಕಸ್ತ್ವಮಿಂದ್ರಮಾ ವಿಶ । ಪ್ರವಿಶ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ, । **ದೇವವೀಃ**—ದೇವತೆಗಳನ್ನು ಸೇವಿಸಲಿಚ್ಛಿಸುವ ನೀನು । **ರಂಹ್ಯಾ**—ವೇಗದಿಂದಲೂ । **ಪವಿತ್ರಂ**—ಶುದ್ಧನಾಗಿರುವಂತೆಯೂ । **ಅತಿ ಪವಸ್ವ**—ಪ್ರವಹಿಸು । **ಇಂದೋ**—ಪ್ರವಿಸತಕ್ಕ ಎಲೆ, ಸೋಮನೇ, । **ವೃಷಾ**—ಕಾಮವರ್ಷಕನಾದ ನೀನು । **ಇಂದ್ರಂ**—ಇಂದ್ರನನ್ನು । **ಆ ವಿಶ**—ಪ್ರವೇಶಿಸು

॥ ಭಾವಾರ್ಥ ॥

ಎಲೈ ಸೋಮನೇ, ದೇವತೆಗಳನ್ನು ಸೇವಿಸಲಿಚ್ಛಿಸುವ ನೀನು ವೇಗದಿಂದಲೂ ಶುದ್ಧನಾಗಿರುವಂತೆಯೂ ಪ್ರವಹಿಸು. ಪ್ರವಿಸತಕ್ಕ ಎಲೈ ಸೋಮನೇ, ಕಾಮವರ್ಷಕನಾದ ನೀನು ಇಂದ್ರನನ್ನು ಪ್ರವೇಶಿಸು.

## English Translation

Flow on, Soma, seeking the gods, hastening on in your purifying course; enter Indra, O Indu, the showerer.

॥ ಸಂಹಿತಾಪಾಠಃ ॥

ಆ ವಚ್ಯಸ್ವ ಮಹಿ ಪ್ಸರೋ ವೃಷೇಂದೋ ದ್ಯುಮ್ನವತ್ತಮಃ ।
ಆ ಯೋನಿಂ ಧರ್ಣಸಿಃ ಸದಃ ॥ ೨ ॥

॥ ಪದಪಾಠಃ ॥

ಆ । ವಚ್ಯಸ್ವ । ಮಹಿ । ಪ್ಸರಃ । ವೃಷಾ । ಇಂದೋ ಇತಿ । ದ್ಯುಮ್ನವತ್ಽತಮಃ ।
ಆ । ಯೋನಿಂ । ಧರ್ಣಸಿಃ । ಸದಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದೋ ಸೋಮ ಮಹಿ ಮಹಾನ್ವೃಷಾ ಕಾಮಾನಾಂ ವರ್ಷಕೋ ದ್ಯುಮ್ನವತ್ತಮೋ ಯಶಸ್ವಿತಮೋ ಧರ್ಣಸಿರ್ಧರ್ತಾ ತ್ವಂ ಪ್ಸರಃ ಪಾನೀಯಮಂಧ ಆ ವಚ್ಯಸ್ವ। ಅಸ್ಮಾನ್ಪ್ರತ್ಯಾಗಮಯ । ಯೋನಿಂ ಸ್ವಕೀಯಂ ಸ್ಥಾನಮಾ ಸದಃ । ಆಸೀದ ಚ ॥

॥ ಪ್ರತಿಪದಾರ್ಥ ॥

ಇಂದೋ—ಎಲೈ ಸೋಮನೇ, । ಮಹಿ—ಮಹಾತ್ಮನೂ । ವೃಷಾ—ಇಷ್ಟಾರ್ಥಪ್ರದನೂ । ದ್ಯುಮ್ನವತ್ತಮಃ—ಅತ್ಯಂತ ಯಶಸ್ವಿಯೂ । ಧರ್ಣಸಿಃ—ಜಗದ್ಧಾರಕನೂ ಆದ ನೀನು । ಪ್ಸರಃ—ಪಾನಕ್ಕೆ ಯೋಗ್ಯವೂ ರಸರೂಪವೂ ಆದ ಅನ್ನವನ್ನು । ಆ ವಚ್ಯಸ್ವ—ನಮಗೆ ಒದಗಿಸಿಕೊಡು । ಯೋನಿಂ—ನಿನ್ನ ಉತ್ಪತ್ತಿಸ್ಥಾನವನ್ನು। ಆ ಸದಃ—ಆಶ್ರಯಿಸಿ ಕುಳಿತುಕೊ.

॥ ಭಾವಾರ್ಥ ॥

ಎಲೈ ಸೋಮನೇ, ಮಹಾತ್ಮನೂ, ಇಷ್ಟಾರ್ಥಪ್ರದನೂ ಅತ್ಯಂತ ಯಶಸ್ವಿಯೂ ಜಗದ್ಧಾರಕನೂ ಆದ ನೀನು ಪಾನಕ್ಕೆ ಯೋಗ್ಯವೂ ರಸರೂಪವೂ ಆದ ಅನ್ನವನ್ನು ನಮಗೆ ಒದಗಿಸಿಕೊಡು. ನಿನ್ನ ಉತ್ಪತ್ತಿಸ್ಥಾನವನ್ನು ಆಶ್ರಯಿಸಿ ಕುಳಿತುಕೊ

## English Translation

O Indu, you, the mighty showerer (of blessings) most glorious upholder, send us food, and sit down in your own place.

॥ ಸಂಹಿತಾಪಾಠಃ ॥

ಅಧುಕ್ಷತ ಪ್ರಿಯಂ ಮಧು ಧಾರಾ ಸುತಸ್ಯ ವೇಧಸಃ ।

ಅಪೋ ವಸಿಷ್ಟ ಸುಕ್ರತುಃ । ೩ ॥

॥ ಪದಪಾಠಃ ॥

ಅಧುಕ್ಷತ । ಪ್ರಿಯಂ । ಮಧು । ಧಾರಾ । ಸುತಸ್ಯ । ವೇಧಸಃ ।

ಅಪಃ । ವಸಿಷ್ಟ । ಸುऽಕ್ರತುಃ ॥ ೩ ॥

॥ ಸಾಯಣಭಾಷ್ಯಂ ॥

**ಸುತಸ್ಯಾಭಿಷುತಸ್ಯ ವೇಧಸೋऽಭಿಲಷಿತಸ್ಯ ವಿಧಾತುರ್ಯಸ್ಯಸೋಮಸ್ಯ ಧಾರಾ ಪ್ರಿಯಂ ಪ್ರೀತಿಕರಂ ಮಧ್ವಮೃತಮಧುಕ್ಷತ ದುಗ್ಧೇ ಸ ಸುಕ್ರತುಃ ಸುಕರ್ಮಾ ಸೋಮೋऽಪೋ ವಸತೀವರೀರ್ವಸಿಷ್ಟ । ಆಚ್ಛಾದಯತಿ ॥**

॥ ಪ್ರತಿಪದಾರ್ಥ ॥

**ಸುತಸ್ಯ**—ಹಿಂಡಿರುವುದೂ । **ವೇಧಸ್ಯ**—ಅಪೇಕ್ಷಿತವಾದುದನ್ನು ನಿರ್ಮಿಸಿಕೊಡುವುದೂ ಆದ ಸೋಮದ । **ಧಾರಾ**—ಪ್ರವಾಹವು । **ಪ್ರಿಯಂ**—ಹಿತಕರವಾದುದೂ । **ಮಧು**—ರುಚಿಕರವಾದುದೂ ಆದ ಅಮೃತವನ್ನು । **ಅಧುಕ್ಷತ**—ಕರೆಯುತ್ತದೆ । **ಸುಕ್ರತುಃ**—ಉತ್ತಮವಾದ ಕರ್ಮವುಳ್ಳ ಸೋಮವು । **ಅಪಃ**—ವಸತೀವರೀ ಸಂಜ್ಞಕವಾದ ಉದಕದಿಂದ । **ವಸಿಷ್ಟ**—ಹೊದ್ದಿಸಲ್ಪಟ್ಟಿದೆ.

॥ ಭಾವಾರ್ಥ ॥

ಹಿಂಡಿ ಸಿದ್ಧವಾಗಿರುವುದೂ, ಅಪೇಕ್ಷಿತವಾದುದನ್ನು ನಿರ್ಮಿಸಿಕೊಡುವುದಕ್ಕೂ ಆದ ಸೋಮರಸದ ಪ್ರವಾಹವು ಹಿತಕರವಾದುದೂ ರುಚಿಕರವಾದುದೂ ಆದ ಅಮೃತವನ್ನು ಕರೆಯುತ್ತದೆ. ಉತ್ತಮವಾದ ಕರ್ಮವುಳ್ಳ ಸೋಮವು ವಸತೀವರೀ ಸಂಜ್ಞಕವಾದ ಉದಕದಿಂದ ಹೊದ್ದಿಸಲ್ಪಟ್ಟಿದೆ.

English Translation

The stream of the effused creative Soma milks out the joy-giving ambrosia; the accomplisher of holy rites veils itself in the waters.

॥ ಸಂಹಿತಾಪಾಠಃ ॥

ಮಹಾಂತಂ ತ್ವಾ ಮಹೀರನ್ವಾಪೋ ಅರ್ಷಂತಿ ಸಿಂಧವಃ ।

ಯದ್ಗೋಭಿರ್ವಾಸಯಿಷ್ಯಸೇ ॥ ೪ ॥

॥ ಪದಪಾಠಃ ॥

ಮಹಾಂತಂ । ತ್ವಾ । ಮಹೀಃ । ಅನು । ಆಪಃ । ಅರ್ಷಂತಿ । ಸಿಂಧವಃ ।

ಯತ್ । ಗೋಭಿಃ । ವಾಸಯಿಷ್ಯಸೇ । ೪ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ಯದ್ಯದಾ ಯಜ್ಞೇ ಗೋಭಿರ್ಗೋರ್ವಿಕಾರೈಃ ಪಯೋಭಿರ್ವಾಸಯಿಷ್ಯಸೇ ಆಚ್ಛಾದಯಿಷ್ಯಸೇ ತತ್ತದಾ ಮಹಾಂತಂ ತ್ವಾಮನು ಪ್ರತಿ ಸಿಂಧವಃ ಸ್ಯಂದಮಾನಾ ಮಹೀರ್ಮಹತ್ಯ ಆಪೋಽರ್ಷಂತಿ । ಗಚ್ಛಂತಿ ॥

॥ ಪ್ರತಿಪದಾರ್ಥ ॥

(ಎಲೈ ಸೋಮವೇ) **ಯತ್**—ಯಾವಾಗ । **ಗೋಭಿಃ**—ಗೋವುಗಳಿಂದ ಉತ್ಪನ್ನವಾದ ಕ್ಷೀರಾದಿಗಳಿಂದ **ವಾಸಯಿಷ್ಯಸೇ**—ಹೊದ್ದಿಸಲ್ಪಡುವೆಯೋ ಆಗ । **ಮಹಾಂತಂ ತ್ವಾ ಅನು**—ಮಹಾತ್ಮನಾದ ನಿನ್ನನ್ನು ಸೇರಲು । **ಸಿಂಧವಃ**—ಪ್ರವಹಿಸತಕ್ಕವೂ । **ಮಹೀಃ**—ಮಹತ್ಸ್ವರೂಪವುಳ್ಳವೂ ಆದ । **ಆಪಃ** - ಉದಕಗಳು । **ಅರ್ಷಂತಿ**—ಹರಿದು ಬಂದು ಸೇರುತ್ತವೆ.

॥ ಭಾವಾರ್ಥ ॥

ಎಲೈ ಸೋಮವೇ, ನೀನು ಯಾವಾಗ ಗೋವುಗಳಿಂದ ಉತ್ಪನ್ನವಾದ ಕ್ಷೀರಾದಿಗಳಿಂದ ಹೊದ್ದಿಸಲ್ಪಡುವೆಯೋ (ಮಿಶ್ರಿತವಾಗುವೆಯೋ) ಆಗ ಮಹಾತ್ಮನಾದ ನಿನ್ನನ್ನು ಸೇರಲು ಪ್ರವಹಿಸತಕ್ಕವೂ ಮಹತ್ಸ್ವರೂಪವುಳ್ಳವೂ ಆದ ಉದಕಗಳು ಹರಿದು ಬಂದು ಸೇರುತ್ತವೆ.

English Translation

(Soma), when you will veil yourself in the milk, the mighty streaming waters flow to you, the mighty one.

॥ ಸಂಹಿತಾಪಾಠಃ ॥

ಸಮುದ್ರೋ ಅಪ್ಸು ಮಾಮೃಜೇ ವಿಷ್ಟಂಭೋ ಧರುಣೋ ದಿವಃ ।

ಸೋಮಃ ಪವಿತ್ರೇ ಅಸ್ಮಯುಃ ॥ ೫ ॥

॥ ಪದಪಾಠಃ ॥

ಸಮುದ್ರಃ । ಅಪ್ಽಸು । ಮಮೃಜೇ । ವಿಷ್ಟಂಭಃ । ಧರುಣಃ । ದಿವಃ ।

ಸೋಮಃ । ಪವಿತ್ರೇ । ಅಸ್ಮಽಯುಃ ॥ ೫ ॥

॥ ಸಾಯಣಭಾಷ್ಯಂ ॥

**ಸಮುದ್ರಃ । ಸಮುದ್ದ್ರವಂತ್ಯಸ್ಮಾದ್ರಸಾ ಇತಿ ಸಮುದ್ರಃ । ವಿಷ್ಟಂಭೋ ದಿವಃ ಸ್ವರ್ಗಸ್ಯ ಧರುಣೋ ಧಾರಕಶ್ಚಾಸ್ಮಯುರಸ್ಮತ್ಕಾಮಃ ಸೋಮೋಽಪ್ಸೂದಕೇಷು ಮಮೃಜೇ । ಮೃಜ್ಯತೇ । ಪವಿತ್ರೇಽಭಿಷಿಚ್ಯತ ಇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಸಮುದ್ರಃ**—ರಸರೂಪದಲ್ಲಿ ಪ್ರಹಿಸುವುದೂ । **ವಿಷ್ಟಂಭಃ**—ಲೋಕಕ್ಕೆ ಆಧಾರಭೂತವೂ । **ದಿವಃ**—ಅಂತರಿಕ್ಷಕ್ಕೆ । **ಧರುಣಃ**—ಧಾರಕವಾದುದೂ । **ಅಸ್ಮಯುಃ**—ನಮ್ಮನ್ನು ಅನುಗ್ರಹಿಸಲು ಅಪೇಕ್ಷಿಸುವುದೂ ಆದ । **ಸೋಮಃ**—ಸೋಮವು । **ಅಪ್ಸು**—ಉದಕಗಳಲ್ಲಿ । **ಮಮೃಜೇ**—ಶುದ್ಧಿಗೊಳಿಸಲ್ಪಡುತ್ತದೆ । **ಪವಿತ್ರೇ**—ಶುದ್ಧಿಕಾರಕವಾದ ದಶಾಪವಿತ್ರದಲ್ಲಿಯೂ ಹರಿದು ಶುದ್ಧಿಗೊಳಿಸಲ್ಪಡುತ್ತದೆ

॥ ಭಾವಾರ್ಥ ॥

ರಸರೂಪದಲ್ಲಿ ಪ್ರವಹಿಸುವುದೂ, ಲೋಕಕ್ಕೆ ಆಧಾರಭೂತವಾದುದೂ, ಅಂತರಿಕ್ಷಕ್ಕೆ ಧಾರಕವಾದುದೂ, ನಮ್ಮನ್ನು ಅನುಗ್ರಹಿಸಲು ಅಪೇಕ್ಷಿಸುವುದೂ, ಆದ ಸೋಮವು ಉದಕಗಳಲ್ಲಿ ಸೇರಿ ಶುದ್ಧಿಗೊಳಿಸಲ್ಪಡುತ್ತದೆ. ಶುದ್ಧಿಕಾರಕವಾದ ದಶಾಪವಿತ್ರದಲ್ಲಿಯೂ ಪ್ರವೇಶಿಸಿ ಪೂರ್ಣವಾದ ಶುದ್ಧಿಯನ್ನು ಹೊಂದುತ್ತದೆ.

English Translation

The juice-distilling Soma, the sustainer, the supporter of heaven, is purified in the water,—favouring us. (it is poured) into the straining clotlr.

॥ ಸಂಹಿತಾಪಾಠಃ ॥

ಅಚಿಕ್ರದದ್ವೃಷಾ ಹರಿರ್ಮಹಾನ್ಮಿತ್ರೋ ನ ದರ್ಶತಃ ।
ಸಂ ಸೂರ್ಯೇಣ ರೋಚತೇ ॥ ೬ ॥

॥ ಪದಪಾಠಃ ॥

**ಅಚಿಕ್ರದತ್ । ವೃಷಾ । ಹರಿಃ । ಮಹಾನ್ । ಮಿತ್ರಃ । ನ । ದರ್ಶತಃ ।**
**ಸಂ । ಸೂರ್ಯೇಣ । ರೋಚತೇ ॥ ೬ ॥**

॥ ಸಾಯಣಭಾಷ್ಯಂ ॥

**ವೃಷಾ ಕಾಮಾನಾಂ ವರ್ಷಕೋ ಹರಿರ್ಹರಿತವರ್ಣೋ ಮಹಾನ್ ಸರ್ವೋತ್ತಮೋ ಮಿತ್ರೋ ನ ಯಥಾ ಸಖಾ ತದ್ವದ್ದರ್ಶತೋ ದರ್ಶನೀಯೋ ಯೋಽಯಂ ಸೋಮೋಽಚಿಕ್ರದತ್ ಶಬ್ದಂ ಕರೋತಿ ಸೋಽಯಂ ಸೋಮಃ ಸೂರ್ಯೇಣ ಸಹ ರೋಚತೇ । ದಿವಿ ಪ್ರಕಾಶತೇ ॥**

॥ ಪ್ರತಿಪದಾರ್ಥ ॥

**ವೃಷಾ**— ಇಷ್ಟಾರ್ಥಪ್ರದವಾದುದೂ । **ಹರಿಃ**—ಪಚ್ಚೆಯ ವರ್ಣವುಳ್ಳದ್ದೂ । **ಮಹಾನ್**—ಅತ್ಯುತ್ತಮವಾದುದೂ । **ಮಿತ್ರೋ ನ**—ಸ್ನೇಹಿತನಂತೆ । **ದರ್ಶತಃ**—ಆಕರ್ಷಕವಾದ ರೂಪವುಳ್ಳದ್ದೂ ಆದ ಸೋಮವು । **ಅಚಿಕ್ರದತ್**—ಶಬ್ದವನ್ನು ಮಾಡುತ್ತದೆ । **ಸೂರ್ಯೇಣ**—ಸೂರ್ಯನೊಂದಿಗೆ । **ಸಂರೋಚತೇ**—ಅಂತರಿಕ್ಷದಲ್ಲಿ ಪ್ರಕಾಶಿಸುತ್ತದೆ

॥ ಭಾವಾರ್ಥ ॥

ಇಷ್ಟಾರ್ಥಪ್ರವಾದುದೂ, ಪಚ್ಚೆಯ ವರ್ಣವುಳ್ಳದ್ದೂ, ಅತ್ಯುತ್ತಮವಾದುದೂ ಸ್ನೇಹಿತನಂತೆ ಆಕರ್ಷಕವಾದ ರೂಪವುಳ್ಳದ್ದೂ ಆದ ಸೋಮವು ಶಬ್ದವನ್ನು ಮಾಡುತ್ತದೆ. ಸೂರ್ಯನೊಂದಿಗೆ ಅಂತರಿಕ್ಷದಲ್ಲಿ ಪ್ರಕಾಶಿಸುತ್ತದೆ.

English Translation

The mighty golden-hued showerer of blessings utters a sound as it drops, beautiful as a friend ; it shines (in the heavens) with the sun.

॥ ಸಂಹಿತಾಪಾಠಃ ॥

ಗಿರಸ್ತ ಇಂದ ಓಜಸಾ ಮರ್ಮೃಜ್ಯಂತೇ ಅಪಸ್ಯುವಃ ।
ಯಾಭಿರ್ಮದಾಯ ಶುಂಭಸೇ ॥ ೭ ॥

॥ ಪದಪಾಠಃ ॥

ಗಿರಃ । ತೇ । ಇಂದೋ ಇತಿ । ಓಜಸಾ । ಮರ್ಮೃಜ್ಯಂತೇ । ಅಪಸ್ಯುವಃ ।
ಯಾಭಿಃ । ಮದಾಯ । ಶುಂಭಸೇ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಇಂದೋ ತೇ ತವೌಜಸಾ ಬಲೇನಾಪಸ್ಯುವಃ ಕರ್ಮೇಚ್ಛಾಸಂಬಂಧಿನ್ಯಸ್ತಾ ಗಿರಃ ಸ್ತುತಯೋ ಮರ್ಮೃಜ್ಯಂತೇ ಶೋಧ್ಯಂತೇ ಯಾಭಿರ್ಗೀರ್ಭಿಸ್ತ್ವಂ ಮದಾಯ ಹ್ಷರಷ್ಯಾಂಭಸೇ ಅಲಂಕ್ರಿಯಸೇ ॥**

॥ ಪ್ರತಿಪದಾರ್ಥ ॥

ಇಂದೋ—ಎಲೈ ಸೋಮನೇ । **ಯಾಭಿಃ**—ಯಾವ ಸ್ತುತಿಗಳಿಂದ । **ಮದಾಯ**—**ಹರ್ಷಕ್ಕಾಗಿ** । **ಶುಂಭಸೇ**—ನೀನು ಅಲಂಕರಿಸಲ್ಪಡುವೆಯೋ ಅಂತಹವೂ । **ಅಪಸ್ಯುವಃ**—ಕರ್ಮಕಾಲಗಳಲ್ಲಿ ಪಠಿತವಾಗುವುವೂ ಆದ । **ಗಿರಃ**—ಸ್ತುತಿವಾಕ್ಯಗಳು । **ತೇ**—ನಿನ್ನ । **ಓಜಸಾ**—ಬಲದಿಂದ । **ಮರ್ಮೃಜ್ಯಂತೇ**—ಶುದ್ಧಿಗೊಳಿಸಲ್ಪಡುತ್ತವೆ.

। ಭಾವಾರ್ಥ ।

ಎಲೈ ಸೋಮನೇ, ಯಾವ ಸ್ತುತಿಗಳಿಂದ ಹರ್ಷಲಾಭಕ್ಕಾಗಿ ನೀನು ಅಲಂಕರಿಸಲ್ಪಡುವೆಯೋ ಅಂತಹವೂ ಕರ್ಮಕಾಲಗಳಲ್ಲಿ ಪಠಿತವಾಗುವುವೂ ಆದ ಸ್ತುತಿವಾಕ್ಯಗಳು ನಿನ್ನ ಬಲದಿಂದ ಶುದ್ಧಿಗೊಳಿಸಲ್ಪಡುತ್ತವೆ

English Translation

O Indu, by your power the busy voices are hallowed which adorn you as you drop for our exhilaration.

॥ ಸಂಹಿತಾಪಾಠಃ ॥

ತಂ ತ್ವಾ ಮದಾಯ ಘೃಷ್ವಯ ಉ ಲೋಕಕೃತ್ನುಮೀಮಹೇ ।
ತವ ಪ್ರಶಸ್ತಯೋ ಮಹೀಃ ॥ ೮ ॥

। ಪದಪಾಠಃ ॥

ತಂ । ತ್ವಾ । ಮದಾಯ । ಘೃಷ್ವಯೇ । ಊಂ ಇತಿ । ಲೋಕऽಕೃತ್ನುಂ । ಈಮಹೇ ।
ತವ । ಪ್ರऽಶಸ್ತಯಃ । ಮಹೀಃ ॥ ೮ ॥

॥ ಸಾಯಣಭಾಷ್ಯಂ ।

ಹೇ ಸೋಮ ಯಸ್ಯ ತವ ಪ್ರಶಸ್ತಯಃ ಪ್ರಶಂಸಾ ಮಹೀರ್ಮಹತ್ಯೋ ಘೃಷ್ವಯ ಉ ತ್ವತ್ಪ್ರಸಾದಾಚ್ಛತ್ರೂಣಾಂ ಘರ್ಷಣಶೀಲಾಯ ಯಜಮಾನಾಯೈವ ಲೋಕಕೃತ್ನುಮುತ್ತಮಸ್ಯ ಲೋಕಸ್ಯ ಕರ್ತಾರಂ ತಂ ತ್ವಾಂ ಸೋಮಂ ಮದಾಯೇಮಹೇ । ವಯಂ ಯಾಚಾಮಹೇ ॥

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ತವ**—ನಿನ್ನ । **ಪ್ರಶಸ್ತಯಃ**—ಸ್ತುತಿವಾಕ್ಯಗಳು । **ಮಹೀಃ**—ಮಹತ್ವದಿಂದ ಕೂಡಿವೆ । **ಘೃಷ್ವಯೇ ಉ**—ನಿನ್ನ ಅನುಗ್ರಹದಿಂದ ಶತ್ರುಗಳನ್ನು ನಾಶಮಾಡಬಲ್ಲ ಯಜಮಾನನಿಗೆ । **ಲೋಕಕೃತ್ನುಂ**—ಉತ್ತಮವಾದ ಲೋಕವನ್ನು ಒದಗಿಸಬಲ್ಲ । **ತಂ ತ್ವಾ**—ಅಂತಹ ನಿನ್ನನ್ನು । **ಮದಾಯ**—ಹರ್ಷಲಾಭಕ್ಕಾಗಿ । **ಈಮಹೇ**—ಯಾಚಿಸುತ್ತೇವೆ.

। ಭಾವಾರ್ಥ ।

ಎಲೈ ಸೋಮನೇ, ನಿನ್ನ ಸ್ತುತಿವಾಕ್ಯಗಳು ಮಹತ್ವದಿಂದ ಕೂಡಿವೆ. ನಿನ್ನ ಅನುಗ್ರಹದಿಂದ ಶತ್ರುಗಳನ್ನು ನಾಶಮಾಡಬಲ್ಲ ಯಜಮಾನನಿಗೆ ಉತ್ತಮವಾದ ಲೋಕವನ್ನು ಒದಗಿಸಬಲ್ಲ ನಿನ್ನನ್ನು ಹರ್ಷಲಾಭಕ್ಕಾಗಿ ನಾವು ಯಾಚಿಸುತ್ತೇವೆ.

## English Translation

We ask you for exhilaration, you the giver of the highest world to your foe-crushing worshipper,—great are your praises.

॥ ಸಂಹಿತಾಪಾಠಃ ॥

ಅಸ್ಮಭ್ಯಮಿಂದವಿಂದ್ರಯುರ್ಮಧ್ವಃ ಪವಸ್ವ ಧಾರಯಾ ।
ಪರ್ಜನ್ಯೋ ವೃಷ್ಟಿಮಾँಇವ ॥ ೯ ॥

॥ ಪದಪಾಠಃ ॥

ಅಸ್ಮಭ್ಯಂ । ಇಂದೋ ಇತಿ । ಇಂದ್ರऽಯುಃ । ಮಧ್ವಃ । ಪವಸ್ವ । ಧಾರಯಾ ।
ಪರ್ಜನ್ಯಃ । ವೃಷ್ಟಿಮಾನ್ऽಇವ ॥ ೯ ॥

॥ ಸಾಯಣಭಾಷ್ಯಂ ॥

**ಹೆ ಇಂದೋ ಸೋಮ ಇಂದ್ರಯುರಿಂದ್ರಕಾಮಸ್ತ್ವಂ ಮಧ್ವೋ ಮದಕರಸ್ಯಾಮೃತಸ್ಯ ಧಾರಯಾ ಪರ್ಜನ್ಯೋ ವೃಷ್ಟಿಮಾನಿವ ಯಥಾ ವರ್ಷವಾನ್ಪರ್ಜನ್ಯೋ ಮೇಘಸ್ತಥಾಸ್ಮಭ್ಯಂ ಮೇಧಾತಿಥಿಭ್ಯಃ ಪವಸ್ವ । ಕ್ಷರ ॥**

॥ ಪ್ರತಿಪದಾರ್ಥ ॥

**ಇಂದೋ**—ಎಲೈ ಸೋಮವೇ । **ವೃಷ್ಟಿಮಾನಿವ**—ಮಳೆಯಿಂದ ತುಂಬಿದ । **ಪರ್ಜನ್ಯಃ**—ಮೇಘ ರಾಜನು ವೃಷ್ಟಿಯನ್ನು ಸುರಿಸುವಂತೆ । **ಇಂದ್ರಯುಃ**-ಇಂದ್ರನಿಗೆ ತೃಪ್ತಿಯನ್ನುಂಟುಮಾಡಬೇಕೆಂದಿಚ್ಛಿಸುವ ನೀನು । **ಮಧ್ವಃ**—ಮಧುರವಾದ ಅಮೃತದ । **ಧಾರಯಾ**—ಪ್ರವಾಹದೊಡನೆ । **ಅಸ್ಮಭ್ಯಂ**—ನಮಗಾಗಿ । **ಪವಸ್ವ**—ಹರಿದು ಬಾ.

॥ ಭಾವಾರ್ಥ ॥

ಎಲೈ ಸೋಮವೇ, ಮಳೆಯಿಂದ ತುಂಬಿದ ಮೇಘರಾಜನು ವೃಷ್ಟಿಯನ್ನು ಸುರಿಸುವಂತೆ ಇಂದ್ರನಿಗೆ ತೃಪ್ತಿಯನ್ನು ಉಂಟುಮಾಡಬೇಕೆಂದಿಚ್ಛಿಸುವ ನೀನು ಮಧುರವಾದ ಅಮೃತದ ಪ್ರವಾಹದೊಡನೆ ನಮಗಾಗಿ ಹರಿದು ಬಾ.

## English Translation

Indu, you, longing for Indra, stream upon us with a shower of ambrosia, like a raining cloud.

॥ ಸಂಹಿತಾಪಾಠಃ ॥

ಗೋಷಾ ಇಂದೋ ನೃಷಾ ಅಸ್ಯಶ್ವಸಾ ವಾಜಸಾ ಉತ ।
ಆತ್ಮಾ ಯಜ್ಞಸ್ಯ ಪೂರ್ವ್ಯಃ ॥ ೧೦ ॥

॥ ಪದಪಾಠಃ ॥

ಗೋಽಸಾಃ । ಇಂದೋ ಇತಿ । ನೃಽಸಾಃ । ಅಸಿ । ಅಶ್ವಽಸಾಃ । ವಾಜಽಸಾಃ । ಉತ ।
ಆತ್ಮಾ । ಯಜ್ಞಸ್ಯ । ಪೂರ್ವ್ಯಃ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಇಂದೋ ಯಜ್ಞಸ್ಯ ಪೂರ್ವ್ಯಃ ಪ್ರತ್ನ ಆತ್ಮಾತ್ಮಭೂತಸ್ತ್ವಂ ಗೋಷಾ ಅಸ್ಮಭ್ಯಂ ಗವಾಂ ದಾತಾಸಿ । ಭವಸಿ । ನೃಷಾಃ ಪುತ್ರಾಣಾಂ ದಾತಾ ಚಾಸಿ । ಅಶ್ವಸಾ ಅಶ್ವಾನಾಂ ದಾತಾ ಚಾಸಿ । ಉತಾಪಿ ಚ ವಾಜಸಾ ಅನ್ನಾನಾಂ ದಾತಾ ಚಾಸಿ ॥

॥ ಪ್ರತಿಪದಾರ್ಥ ॥

ಇಂದೋ—ಎಲೈ ಸೋಮನೇ । **ಯಜ್ಞಸ್ಯ**—ಯಜ್ಞಕ್ಕೆ । **ಪೂರ್ವ್ಯಃ**—ಪುರಾತನನಾದ । **ಆತ್ಮಾ**—ಆತ್ಮಸ್ವರೂಪನಾಗಿರುವ ನೀನು । **ಗೋಷಾಃ ಅಸಿ**—ನಮಗೆ ಗೋವುಗಳನ್ನು ಕೊಡುವವನಾಗಿ ಆಗಿದ್ದೀಯೆ । **ನೃಷಾಃ**—ಪುತ್ರಾದಿ ಪ್ರಜೆಗಳನ್ನು ಕೊಡುವವನಾಗಿದ್ದೀಯೆ । **ಅಶ್ವಸಾಃ**—ಅಶ್ವದಾನವನ್ನು ಮಾಡುತ್ತೀಯೆ । **ಉತ**—ಮತ್ತು । **ವಾಜಸಾಃ**—ಅನ್ನ ಪ್ರದನಾಗಿಯೂ ಇದ್ದೀಯೆ

॥ ಭಾವಾರ್ಥ ॥

ಎಲೈ ಸೋಮನೇ, ಯಜ್ಞಕ್ಕೆ ಅತ್ಯಂತ ಪುರಾತನವಾದ ಆತ್ಮಸ್ವರೂಪನಾಗಿರುವ ನೀನು ನಮಗೆ ಗೋವುಗಳನ್ನು ಕೊಡುವವನಾಗಿ ಇದ್ದೀಯೆ. ಅಶ್ವದಾನವನ್ನು ಮಾಡುತ್ತೀಯೆ. ಮತ್ತು ನಮ್ಮ ಸ್ಥಿತಿಗಳಿಗಾಗಿ ಉತ್ತಮವಾದ ಅನ್ನವನ್ನೂ ಕೊಡುವವನಾಗಿ ಇದ್ದೀಯೆ.

English Translation

Indu, you are the giver of cows, of children, of horses, and of food ; you are the primeval soul of the sacrifice.

# ಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಏಷ ದೇವ ಇತಿ ದಶರ್ಚಂ ತೃತೀಯಂ ಸೂಕ್ತಮಾಜೀಗರ್ತೇಃ ಶುನಃಶೇಪಸ್ಯಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ ಅನುಕ್ರಾಂತಂ ಚ । ಏಷ ಶುನಃಶೇಪ ಇತಿ ॥ ಉಕ್ತೋ ವಿನಿಯೋಗಃ ॥**

ಅನುವಾದವು— **ಏಷ ದೇವಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು ಇದರಲ್ಲಿ ಹತ್ತು ಋಕ್ಕುಗಳಿರುವವು ಈ ಸೂಕ್ತಕ್ಕೆ ಶುನಃಶೇಪ ಆಜೀಗರ್ತಿಃ ಎಂಬುವನು ಋಷಿಯು , ಪವಮಾನ ಸೋಮವು ದೇವತೆಯು , ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ **ಏಷ ಶುನಃಶೇಪ** ಎಂದು ಹೇಳಿರುವುದು ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

## ಸೂಕ್ತ—೩

ಮಂಡಲ—೯ । ಅನುವಾಕ—೧ । ಸೂಕ್ತ—೩ ॥
ಅಷ್ಟಕ—೬ । ಅಧ್ಯಾಯ—೭ । ವರ್ಗ—೨೦, ೨೧ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
ಋಷಿಃ—ಶುನಃಶೇಪಃ ॥
ದೇವತಾ—ಪವಮಾನ ಸೋಮಃ ॥
ಛಂದಃ—ಗಾಯತ್ರೀ ॥

। ಸಂಹಿತಾಪಾಠಃ ।

ಏಷ ದೇವೋ ಅಮರ್ತ್ಯಃ ಪರ್ಣವೀರಿವ ದೀಯತಿ ।
ಅಭಿ ದ್ರೋಣಾನ್ಯಾಸದಂ ॥ ೧ ॥

॥ ಪದಪಾಠಃ ॥

ಏಷಃ । ದೇವಃ । ಅಮರ್ತ್ಯಃ । ಪರ್ಣವೀಃऽಇವ । ದೀಯತಿ ।
ಅಭಿ । ದ್ರೋಣಾನಿ । ಆऽಸದಂ ॥ ೧ ॥

॥ ಸಾಯಣಭಾಷ್ಯಂ ॥

**ದೇವೋ ದ್ಯೋತಮಾನೋಽಮರ್ತ್ಯೋ ಮರಣರಹಿತ ಏಷ ಸೋಮೋ ದ್ರೋಣಾನಿ ದ್ರೋಣಕಲಶಾನ್ಯಭ್ಯಭಿಲಕ್ಷ್ಯಾಸದಮಾಸದನಾರ್ಥಂ ಪರ್ಣವೀರಿವ ಯಥಾ ಪಕ್ಷೀ ತಥಾ ವೇಗೇನ ದೀಯತಿ । ಗಚ್ಛತಿ ॥**

॥ ಪ್ರತಿಪದಾರ್ಥ ॥

**ದೇವಃ**—ಪ್ರಕಾಶಮಾನವಾದುದೂ । **ಅಮರ್ತ್ಯಃ**—ಮರಣಧರ್ಮರಹಿತವಾದುದೂ ಆದ । **ಏಷಃ**—ಈ ಸೋಮವು । **ದ್ರೋಣಾನಿ**—ದ್ರೋಣಕಲಶಗಳನ್ನು । **ಅಭಿ**—ಲಕ್ಷಿಸಿ । **ಆಸದಂ**— ತನ್ನ ಸಹಜವಾದ ಆಸನದಲ್ಲಿ ಸ್ಥಿತವಾಗಲು । **ಪರ್ಣವೀರಿವ**—ಪಕ್ಷಿಯು ಹಾರಿಬರುವಷ್ಟು ವೇಗದಿಂದ । **ದೀಯತಿ**—ಬರುತ್ತದೆ.

॥ ಭಾವಾರ್ಥ ॥

ಪ್ರಕಾಶಮಾನವಾದುದೂ, ಮರಣಧರ್ಮರಹಿತವಾದದೂ ಆದ ಈ ಸೋಮವು ದ್ರೋಣಕಲಶಗಳನ್ನು ಲಕ್ಷಿಸಿ ತನ್ನ ಸಹಜವಾದ ಆಸನದಲ್ಲಿ ಸ್ಥಿತವಾಗಲು ಪಕ್ಷಿಯು ಹಾರಿಬರುವಷ್ಟು ವೇಗದಿಂದ ಬರುತ್ತದೆ.

English Translation

The divine immortal (Soma) hastens as a bird to settle on the sacrificial vessels.

॥ ಸಂಹಿತಾಪಾಠಃ ॥

ಏಷ ದೇವೋ ವಿಪಾ ಕೃತೋಽತಿ ಹ್ವರಾಂಸಿ ಧಾವತಿ ।
ಪವಮಾನೋ ಅದಾಭ್ಯಃ ॥ ೨ ॥

॥ ಪದಪಾಠಃ ॥

ಏಷಃ । ದೇವಃ । ವಿಪಾ । ಕೃತಃ । ಅತಿ । ಹ್ವರಾಂಸಿ । ಧಾವತಿ ।
ಪವಮಾನಃ । ಅದಾಭ್ಯಃ ॥ ೨ ॥

॥ ಸಾಯಣಭಾಷ್ಯಂ ॥

**ವಿಪಾಂಗುಲ್ಯಾ । ಅಥರ್ಯೋ ವಿಪ ಇತ್ಯಂಗುಲಿನಾಮಸು ಪಾಠಾತ್ । ಕೃತೋಽಭಿಷುತ ಏಷ ಸೋಮೋ ದೇವಃ ಪವಮಾನಃ ಕ್ಷರನ್ನದಾಭ್ಯಃ ಕೇನಾಪ್ಯಹಿಂಸಿತಶ್ಚ ಸನ್ ಹ್ವರಾಂಸಿ ಶತ್ರೂನತಿ ಧಾವತಿ । ಹಂತುಮಭಿಗಚ್ಛತಿ ॥**

॥ ಪ್ರತಿಪದಾರ್ಥ ॥

**ವಿಪಾ**—ಅಂಗುಲಿಗಳಿಂದ । **ಕೃತಃ**—ಹಿಂಡಲ್ಪಟ್ಟುದೂ । **ದೇವಃ**—ಪ್ರಕಾಶಮಾನವಾದುದೂ ಆದ । **ಏಷಃ**—ಈ ಸೋಮವು । **ಪವಮಾನಃ**—ಪ್ರವಹಿಸುತ್ತಾ (ಪ್ರವಿಸುತ್ತಾ) । **ಅದಾಭ್ಯಃ**—ಯಾರ ಹಿಂಸೆಗೂ ಒಳಗಾಗದೇ । **ಹ್ವರಾಂಸಿ**—ಶತ್ರುಗಳನ್ನು । **ಅತಿ ಧಾವತಿ**—ನಾಶಪಡಿಸಲು ಶೀಘ್ರವಾಗಿ ಓಡುತ್ತದೆ.

॥ ಭಾವಾರ್ಥ ॥

ಅಂಗುಲಿಗಳಿಂದ ಹಿಂಡಲ್ಪಟ್ಟುದೂ, ಪ್ರಕಾಶಮಾನವಾದುದೂ ಆದ ಈ ಸೋಮವು ಪ್ರವಿಸುತ್ತಾ ಯಾರ ಹಿಂಸೆಗೂ ಒಳಗಾಗದೆ ಶತ್ರುಗಳನ್ನು ನಾಶಪಡಿಸಲು ಶೀಘ್ರವಾಗಿ ಓಡುತ್ತದೆ. (ಪ್ರವಿಸುತ್ತದೆ)

## English Translation

This divine (Soma), expressed by the fingers, and dropping inviolable, rushes against the enemies.

॥ ಸಂಹಿತಾಪಾಠಃ ॥

**ಏಷ ದೇವೋ ವಿಪನ್ಯುಭಿಃ ಪವಮಾನ ಋತಾಯುಭಿಃ ।**
**ಹರಿರ್ವಾಜಾಯ ಮೃಜ್ಯತೇ ॥ ೩ ॥**

॥ ಪದಪಾಠಃ ॥

**ಏಷಃ । ದೇವಃ । ವಿಪನ್ಯುಽಭಿಃ । ಪವಮಾನಃ । ಋತಯುಽಭಿಃ ।**
**ಹರಿಃ । ವಾಜಾಯ । ಮೃಜ್ಯತೇ ॥ ೩ ॥**

॥ ಸಾಯಣಭಾಷ್ಯಂ ॥

**ಪವಮಾನಃ ಕ್ಷರನ್ನೇಷ ಸೋಮೋ ದೇವೋ ವಿಪನ್ಯುಭಿಃ ಸ್ತೋತೃಭಿರ್ಋತಾಯುಭಿರ್ಯಜ್ಞಕಾಮೈರ್ಹರಿರಶ್ವ ಇವ ವಾಜಾಯ ಸಂಗ್ರಾಮಾರ್ಥಂ ಮೃಜ್ಯತೇ । ಸ್ತುತಿಭಿರಲಂಕ್ರಿಯತೇ ॥**

॥ ಪ್ರತಿಪದಾರ್ಥ ॥

**ವಾಜಾಯ**—ಸಂಗ್ರಾಮಾರ್ಥವಾಗಿ ಹೊರಟಿರುವ । **ಹರಿಃ**—ಅಶ್ವವು ಅಲಂಕರಿಸಲ್ಪಡುವಂತೆ । **ಪವಮಾನಃ**—ಶುದ್ಧವಾಗಿ ಸ್ರವಿಸುತ್ತಿರುವುದೂ । **ದೇವಃ**—ದೈವೀಗುಣವುಳ್ಳದ್ದೂ ಆದ । **ಏಷಃ**—ಈ ಸೋಮವು । **ವಿಪನ್ಯುಭಿಃ**—ಸ್ತುತಿಕರ್ತರಿಂದ । **ಋತಾಯುಭಿಃ**—ಯಜ್ಞಕರ್ಮಗಳ ಮೂಲಕ । **ಮೃಜ್ಯತೇ**—ಅಲಂಕರಿಸಲ್ಪಡುತ್ತದೆ.

॥ ಭಾವಾರ್ಥ ॥

ಸಂಗ್ರಾಮಾರ್ಥವಾಗಿ ಹೊರಟಿರುವ ಅಶ್ವವು ಅಲಂಕರಿಸಲ್ಪಡುವಂತೆ ಶುದ್ಧವಾಗಿ ಸ್ರವಿಸುತ್ತಿರುವುದೂ, ದೈವೀಗುಣವುಳ್ಳದ್ದೂ ಆದ ಈ ಸೋಮವು ಸ್ತುತಿಕರ್ತರಿಂದ ಯಜ್ಞಕರ್ಮಗಳ ಮೂಲಕ ಅಲಂಕರಿಸಲ್ಪಡುತ್ತದೆ.

## English Translation

This divine (Soma), as it drops is adorned (with hymns) by the sacrifice-desiring priests as a horse for battle

॥ ಸಂಹಿತಾಪಾಠಃ ॥

ಏಷ ವಿಶ್ವಾನಿ ವಾರ್ಯಾ ಶೂರೋ ಯನ್ನಿವ ಸತ್ವಭಿಃ ।

ಪವಮಾನಃ ಸಿಷಾಸತಿ ॥ ೪ ॥

॥ ಪದಪಾಠಃ ॥

ಏಷಃ । ವಿಶ್ವಾನಿ । ವಾರ್ಯಾ । ಶೂರಃ । ಯನ್ಽಇವ । ಸತ್ವಽಭಿಃ ।

ಪವಮಾನಃ । ಸಿಸಾಸತಿ ॥ ೪ ॥

॥ ಸಾಯಣಭಾಷ್ಯಂ ॥

**ಪವಮಾನಃ ಕ್ಷರಞ್ಛೂರೋ ವೀರ ಏಷ ಸೋಮೋ ದೇವೋ ವಿಶ್ವಾನಿ ಸರ್ವಾಣಿ ವಾರ್ಯಾ ವರಣೀಯಾನಿ ಧನಾನಿ ಸತ್ವಭಿರ್ಬಲೈರ್ಯನ್ನಿವ ಗಚ್ಛನ್ನಿವ ಸಿಷಾಸತಿ । ಅಸ್ಮದರ್ಥಂ ಸಂಭಕ್ತುಮಿಚ್ಛತಿ ॥**

॥ ಪ್ರತಿಪದಾರ್ಥ

**ಪವಮಾನಃ**—ಶುದ್ಧಿಕಾರಕವಾದುದೂ । **ಶೂರಃ**—ಶಕ್ತಿಯುತವಾದುದೂ । **ಏಷಃ**—ದೇವತಾತ್ಮವೂ ಆದ ಈ ಸೋಮವು । **ವಾರ್ಯಾ**—ಸರ್ವರಿಂದಲೂ ಅಪೇಕ್ಷಿತವಾದ । **ವಿಶ್ವಾನಿ**—ಸಮಸ್ತ ಧನವನ್ನೂ । **ಸತ್ವಭಿಃ**—ತನ್ನ ಶಕ್ತಿಗಳಿಂದಲೇ । **ಯನ್ನಿವ**—ಆಕ್ರಮಿಸಿ ಪಡೆಯುವಂತೆ ಹೊಂದಿ । **ಸಿಷಾಸತಿ**—ನಮಗೆ ಹಂಚಲ್ಪಡುತ್ತದೆ.

॥ ಭಾವಾರ್ಥ ॥

ಶುದ್ಧಿಕಾರಕವಾಗಿರುವುದೂ, ಶಕ್ತಿಯುತವಾದುದೂ, ದೇವತಾತ್ಮವೂ ಆದ ಈ ಸೋಮವು ಸರ್ವರಿಂದಲೂ ಅಪೇಕ್ಷಿತವಾದ ಸಮಸ್ತ ಧನವನ್ನೂ ತನ್ನ ಶಕ್ತಿಗಳಿಂದಲೇ ಆಕ್ರಮಿಸಿ ಪಡೆಯುವಂತೆ ಹೊಂದಿ ನಮಗೆ ಹಂಚಲ್ಪಡುತ್ತದೆ.

English Translation

This strong one, as it drops, seems to encompass all desirable things with its power and seeks to bestow them upon us.

॥ ಸಂಹಿತಾಪಾಠಃ ॥

ಏಷ ದೇವೋ ರಥರ್ಯತಿ ಪವಮಾನೋ ದಶಸ್ಯತಿ ।

ಆವಿಷ್ಕೃಣೋತಿ ವಗ್ವನುಂ ॥ ೫ ॥

॥ ಪದಪಾಠಃ ॥

ಏಷಃ । ದೇವಃ । ರಥರ್ಯತಿ । ಪವಮಾನಃ । ದಶಸ್ಯತಿ ।
ಆವಿಃ । ಕೃಣೋತಿ । ವಗ್ವನುಂ ॥ ೫ ॥

॥ ಸಾಯಣಭಾಷ್ಯಂ ॥

**ಪವಮಾನಃ ಕ್ಷರನ್ನೇಷ ಸೋಮೋ ದೇವೋ ರಥರ್ಯತಿ । ಅಸ್ಮದೀಯಂ ಯಾಗಂ ಪ್ರತ್ಯಾಗಮನಾಯ ರಥಂ ಕಾಮಯತೇ । ದಶಸ್ಯತಿ । ಆಗತ್ಯ ಚಾಸ್ಮಭ್ಯಮಭಿಲಷಿತಂ ಪ್ರಯಚ್ಛತಿ । ವಗ್ವನುಂ ಶಬ್ದಮಾವಿಷ್ಕೃಣೋತಿ । ಅಭಿಷೂಯಮಾಣಃ ಪ್ರಕಟಯತಿ ॥**

॥ ಪ್ರತಿಪದಾರ್ಥ ॥

**ಪವಮಾನಃ**—ಸ್ರವಿಸುವುದೂ । **ದೇವಃ**—ದೇವತಾತ್ಮವೂ ಆದ। ಏಷಃ—ಈ ಸೋಮವು । **ರಥರ್ಯತಿ**—ನಮ್ಮ ಯಾಗಕ್ಕೆ ಬರಲು ರಥವನ್ನು ಇಚ್ಛಿಸುತ್ತದೆ । **ದಶಸ್ಯತಿ**—ನಮ್ಮ ಇಷ್ಟಾರ್ಥವನ್ನು ಒದಗಿಸಿಕೊಡುತ್ತದೆ । **ವಗ್ವನುಂ**—ತಾನು ಬರುವ ಶಬ್ದವನ್ನು । **ಆವಿಷ್ಕೃಣೋತಿ**—ಪ್ರಕಟಪಡಿಸುತ್ತದೆ

॥ ಭಾವಾರ್ಥ ॥

ಸ್ರವಿಸುವುದೂ, ದೇವತಾತ್ಮವೂ ಆದ ಈ ಸೋಮವು ನಮ್ಮ ಯಾಗಕ್ಕೆ ಬರಲು ರಥವನ್ನು ಇಚ್ಛಿಸುತ್ತದೆ. ನಮ್ಮ ಇಷ್ಟಾರ್ಥವನ್ನು ಒದಗಿಸಿಕೊಡುತ್ತದೆ. ತಾನು ಬರುವ ಶಬ್ದವನ್ನು ಪ್ರಕಟಪಡಿಸುತ್ತದೆ.

English Translation

This divine (Soma), as it drops, prepares its chariot (to come to us); it flings us our boons, it utters a sound.

॥ ಸಂಹಿತಾಪಾಠ ॥

ಏಷ ವಿಪ್ರೈರಭಿಷ್ಟುತೋಽಪೋ ದೇವೋ ವಿ ಗಾಹತೇ ।
ದಧದ್ರತ್ನಾನಿ ದಾಶುಷೇ ॥ ೬ ॥

॥ ಪದಪಾಠಃ ॥

ಏಷಃ । ವಿಪ್ರೈಃ । ಅಭಿಽಸ್ತುತಃ । ಅಪಃ । ದೇವಃ । ವಿ । ಗಾಹತೇ ।
ದಧತ್ । ರತ್ನಾನಿ । ದಾಶುಷೇ ॥ ೬ ॥

॥ ಸಾಯಣಭಾಷ್ಯಂ ॥

ವಿಪ್ರೈರ್ಮೇಧಾವಿಭಿಃ ಸ್ತೋತೃಭಿರಭಿಷ್ಟುತಃ ಪರಿತಃ ಸ್ತುತ ಏಷ ಸೋಮೋ ದೇವೋ ದಾಶುಷೇ ಹವಿಷಾಂ ಪ್ರದಾತ್ರೇ ಯಜಮಾನಾಯ ರತ್ನಾನಿ ರಮಣೀಯಾನಿಧನಾನಿ ದಧದ್ಧಾರಯನ್ಪ್ರಯಚ್ಛನ್ನಪೋ ವಸತೀವರೀರ್ವಿ ಗಾಹತೇ । ಪ್ರವಿಶತಿ ॥

॥ ಪ್ರತಿಪದಾರ್ಥ ॥

ವಿಪ್ರೈಃ—ಮೇಧಾವಿಗಳಾದ ಸ್ತೋತೃಗಳಿಂದ । ಅಭಿಷ್ಟುತಃ—ಸುತ್ತಲೂ ಸ್ತುತಿಸಲ್ಪಡುವುದೂ । ದೇವಃ—ದೇವತಾತ್ಮಪಾದುದೂ ಆದ । ಏಷಃ—ಈ ಸೋಮವು । ದಾಶುಷೇ—ಹವಿಸ್ಸನ್ನರ್ಪಿಸುವ ಯಜಮಾನನಿಗೆ । ರತ್ನಾನಿ—ರಮಣೀಯವಾದ ಧನಗಳನ್ನು । ದಧತ್—ಕೊಡುತ್ತಾ । ಅಪಃ—ವಸತೀವರೀಸಂಜ್ಞಕವಾದ ಉದಕಗಳನ್ನು । ವಿ ಗಾಹತೇ—ಪ್ರವೇಶಿಸುತ್ತದೆ.

॥ ಭಾವಾರ್ಥ ॥

ಮೇಧಾವಿಗಳಾದ ಸ್ತೋತೃಗಳಿಂದ ಸುತ್ತಲೂ ಸ್ತುತಿಸಲ್ಪಡುವುದೂ, ದೇವತಾತ್ಮವಾದುದೂ ಆದ ಈ ಸೋಮವು ಹವಿಸ್ಸನ್ನರ್ಪಿಸುವ ಯಜಮಾನನಿಗೆ ರಮಣೀಯವಾದ ಧನಗಳನ್ನು ಕೊಡುತ್ತಾ ವಸತೀವರೀಸಂಜ್ಞಕವಾದ ಉದಕಗಳನ್ನು ಪ್ರವೇಶಿಸುತ್ತದೆ.

English Translation

This divine (Soma), praised by the priests and giving wealth to the worshipper, plunges into the waters.

॥ ಸಂಹಿತಾಪಾಠಃ ॥

ಏಷ ದಿವಂ ವಿ ಧಾವತಿ ತಿರೋ ರಜಾಂಸಿ ಧಾರಯಾ ।
ಪವಮಾನಃ ಕನಿಕ್ರದತ್ ॥ ೭ ॥

॥ ಪದಪಾಠಃ ॥

ಏಷಃ । ದಿವಂ । ವಿ । ಧಾವತಿ । ತಿರಃ । ರಜಾಂಸಿ । ಧಾರಯಾ ।
ಪವಮಾನಃ । ಕನಿಕ್ರದತ್ ॥ ೭ ॥

॥ ಸಾಯಣಭಾಷ್ಯಂ ॥

ಧಾರಯಾ ಪವಮಾನಃ ಕ್ಷರನ್ನೇಷ ಸೋಮಃ ಕನಿಕ್ರದದಭಿಷೂಯಮಾಣಃ ಶಬ್ದಂ ಕುರ್ವನ್ರಜಾಂಸಿ ಲೋಕಾಂಸ್ತಿರಸ್ತಿರಸ್ಕುರ್ವನ್ನ್ಯಾಗಾದ್ದಿವಂ ಸ್ವರ್ಗಂ ವಿ ಧಾವತಿ । ಗಚ್ಛತಿ ॥

॥ ಪ್ರತಿಪದಾರ್ಥ ॥

**ಧಾರಯಾ**—ಪ್ರವಾಹರೂಪದಿಂದಲೂ । **ಪವಮಾನಃ**—ಶುದ್ಧವಾಗಿಯೂ ಸ್ರವಿಸುವ । **ಏಷಃ**—ಈ ಸೋಮವು । **ಕನಿಕ್ರದತ್**—ಶಬ್ದವನ್ನು ಮಾಡುತ್ತಾ । **ರಜಾಂಸಿ**—ಲೋಕಗಳನ್ನೆಲ್ಲಾ । **ತಿರಃ**—ಹಿಂದಕ್ಕೆ ತಳ್ಳಿ । **ದಿವಃ**—ಸ್ವರ್ಗಕ್ಕೆ । **ವಿ ಧಾವತಿ**—ವೇಗದಿಂದ ಹೋಗಿ ಸೇರುತ್ತದೆ

॥ ಭಾವಾರ್ಥ ॥

ಪ್ರವಾಹರೂಪದಿಂದಲೂ ಶುದ್ಧವಾಗಿಯೂ ಸ್ರವಿಸುವ ಈ ಸೋಮವು ಶಬ್ದವನ್ನು ಮಾಡುತ್ತಾ ಲೋಕಗಳನ್ನೆಲ್ಲಾ ಹಿಂದಕ್ಕೆ ತಳ್ಳಿ ವೇಗದಿಂದ ಸ್ವರ್ಗಕ್ಕೆ ಹೋಗಿ ಸೇರುತ್ತದೆ

English Translation

Making a sound as it drops in a continued stream, it rushes across the worlds into heaven.

॥ ಸಂಹಿತಾಪಾಠಃ ॥

ಏಷ ದಿವಂ ವ್ಯಾಸರತ್ತಿರೋ ರಜಾಂಸ್ಯಸ್ಪೃತಃ ।
ಪವಮಾನಃ ಸ್ವಧ್ವರಃ ॥ ೮ ॥

॥ ಪದಪಾಠಃ ॥

ಏಷಃ । ದಿವಂ । ವಿ । ಆ । ಅಸರತ್ । ತಿರಃ । ರಜಾಂಸಿ । ಅಸ್ಪೃತಃ ।
ಪವಮಾನಃ । ಸುಽಅಧ್ವರಃ ॥ ೮ ॥

॥ ಸಾಯಣಭಾಷ್ಯಂ ॥

**ಪವಮಾನಃ ಕ್ಷರನ್ನೇಷ ಸೋಮಃ ಸ್ವಧ್ವರಃ ಸುಯಜ್ಞೋಽಸ್ಪೃತಃ ಕೇನಾಪ್ಯಹಿಂಸಿತಃ ಸನ್ರಜಾಂಸಿ ಲೋಕಾಂಸ್ತಿರಸ್ತಿರಸ್ಕುರ್ವನ್ನ್ಯಙ್ಞಾದ್ದಿವಂ ಪ್ರತಿ ವ್ಯಾಸರತ್ । ವಿಸರತಿ । ಗಚ್ಛತಿ ॥**

॥ ಪ್ರತಿಪದಾರ್ಥ ॥

**ಪವಮಾನಃ**—ಶುದ್ಧವಾಗಿ ಸ್ರವಿಸತಕ್ಕ । **ಏಷಃ**—ಈ ಸೋಮವು । **ಸ್ವಧ್ವರಃ**—ಉತ್ತಮವಾದ ಯಜ್ಞ ನಿರ್ವಹಣದಿಂದ । **ಅಸ್ಪೃತಃ**—ಅಪ್ರತಿಹತವಾದ ಶಕ್ತಿಯುಳ್ಳದ್ದಾಗಿ । **ರಜಾಂಸಿ**—ಲೋಕಗಳನ್ನೆಲ್ಲಾ । **ತಿರಃ**—ಹಿಂದುಳಿಯುವಂತೆ ಮಾಡಿ । **ದಿವಂ**—ಸ್ವರ್ಗಕ್ಕೆ । **ವ್ಯಾಸರತ್**—ಹೋಗಿ ಸೇರುತ್ತದೆ.

॥ ಭಾವಾರ್ಥ ॥

ಪ್ರವಾಹರೂಪದಲ್ಲಿ ಸ್ರವಿಸತಕ್ಕ ಈ ಸೋಮವು ಉತ್ತಮವಾದ ಯಜ್ಞವನ್ನು ನಿರ್ವಹಿಸಿ ಅಪ್ರತಿಹತವಾದ ಶಕ್ತಿಯುಳ್ಳದ್ದಾಗಿ ಲೋಕಗಳನ್ನೆಲ್ಲಾ ಹಿಂದುಳಿಯುವಂತೆ ಮಾಡಿ ಸ್ವರ್ಗಕ್ಕೆ ಹೋಗಿ ಸೇರುತ್ತದೆ.

English Translation

As it drops, completing the sacrifice, it passes across the worlds inviolable to heaven.

॥ ಸಂಹಿತಾಪಾಠಃ ॥

ಏಷ ಪ್ರತ್ನೇನ ಜನ್ಮನಾ ದೇವೋ ದೇವೇಭ್ಯಃ ಸುತಃ ।
ಹರಿಃ ಪವಿತ್ರೇ ಅರ್ಷತಿ ॥ ೯ ॥

॥ ಪದಪಾಠಃ ॥

ಏಷಃ । ಪ್ರತ್ನೇನ । ಜನ್ಮನಾ । ದೇವಃ । ದೇವೇಭ್ಯಃ । ಸುತಃ ।
ಹರಿಃ । ಪವಿತ್ರೇ । ಅರ್ಷತಿ ॥ ೯ ॥

॥ ಸಾಯಣಭಾಷ್ಯಂ ॥

ಹರಿರ್ಹರಿತವರ್ಣೋ ದೇವೋ ದ್ಯೋತಮಾನ ಏಷ ಸೋಮಃ ಪ್ರತ್ನೇನ ಪುರಾಣೇನ ಜನ್ಮನಾ ಜನನೇನ ದೇವೇಭ್ಯೋ ದೇವಾರ್ಥಂ ಸುತೋಽಭಿಷುತಃ ಸನ್ ಪವಿತ್ರೇ ಸ್ಥಾತುಮರ್ಷತಿ । ಗಚ್ಛತಿ ॥

॥ ಪ್ರತಿಪದಾರ್ಥ ॥

**ಹರಿಃ**—ಪಚ್ಚೆವರ್ಣವುಳ್ಳದ್ದೂ । **ದೇವಃ**—ಪ್ರಕಾಶಮಾನವಾದುದೂ ಆದ । **ಏಷಃ**—ಈ ಸೋಮವು । **ಪ್ರತ್ನೇನ**—ತನ್ನ ಪುರಾತನವಾದ । **ಜನ್ಮನಾ**—ಜನ್ಮದಿಂದ । **ದೇವೇಭ್ಯಃ**—ದೇವತೆಗಳಿಗಾಗಿ । **ಸುತಃ**—ಹಿಂಡಲ್ಪಟ್ಟು । **ಪವಿತ್ರೇ**—ಶೋಧಕವಾದ ದಶಾಪವಿತ್ರದಲ್ಲಿ ಸೇರಲು । **ಅರ್ಷತಿ**—ಹೋಗುತ್ತದೆ

॥ ಭಾವಾರ್ಥ ॥

ಪಚ್ಚೆವರ್ಣವುಳ್ಳದ್ದೂ, ಪ್ರಕಾಶಮಾನವಾದುದೂ ಆದ ಈ ಸೋಮವು ತನ್ನ ಪುರಾತನವಾದ ಜನ್ಮದಿಂದ ದೇವತೆಗಳಿಗಾಗಿ ಹಿಂಡಲ್ಪಟ್ಟು ಶೋಧಕವಾದ ದಶಾಪವಿತ್ರದಲ್ಲಿ ಸೇರಲು ಹೋಗುತ್ತದೆ.

English Translation

Divine and expressed for the gods by an ancient birth, the golden-hued (Soma) flows into the straining-cloth.

॥ ಸಂಹಿತಾಪಾಠಃ ॥

ಏಷ ಉ ಸ್ಯ ಪುರುವ್ರತೋ ಜಜ್ಞಾನೋ ಜನಯನ್ನಿಷಃ ।
ಧಾರಯಾ ಪವತೇ ಸುತಃ ॥ ೧೦ ॥

॥ ಪದಪಾಠಃ ॥

ಏಷಃ । ಊಂ ಇತಿ । ಸ್ಯಃ । ಪುರುಽವ್ರತಃ । ಜಜ್ಞಾನಃ । ಜನಯನ್ । ಇಷಃ ।

ಧಾರಯಾ । ಪವತೇ । ಸುತಃ ॥ ೧೮ ॥

॥ ಸಾಯಣಭಾಷ್ಯಂ ॥

ಸ್ಯ ಏಷ ಉ ಸೋಮ ಏವ ಪುರುವ್ರತೋ ಬಹುಕರ್ಮಾ ಜಜ್ಞಾನೋ ಜಾಯಮಾನ ಏವೇಷೋಽನ್ನಾನಿ ಜನಯನ್ನುತ್ಪಾದಯನ್ ಸುತೋಽಭಿಷುತಃ ಸನ್ ಧಾರಯಾ ಪವತೇ ಕ್ಷರತಿ ॥

॥ ಪ್ರತಿಪದಾರ್ಥ ॥

ಸ್ಯಃ—ಪ್ರಸಿದ್ಧರಾದ । ಏಷ ಉ—ಇದೇ ಸೋಮವು । ಪುರುವ್ರತಃ—ಅನೇಕಕರ್ಮವುಳ್ಳದ್ದಾಗಿಯೂ । ಜಜ್ಞಾನಃ—ಯಜ್ಞಾರ್ಥವಾಗಿ ಉತ್ಪನ್ನವಾದುದಾಗಿಯೂ । ಇಷಃ—ಅನ್ನಗಳನ್ನು । ಜನಯನ್—ಉತ್ಪನ್ನ ಮಾಡುತ್ತಲೂ । ಸುತಃ—ಹಿಂಡಲ್ಪಟ್ಟು । ಧಾರಯಾ—ಪ್ರವಾಹರೂಪದಿಂದ । ಪವತೇ—ಹರಿಯುತ್ತದೆ

॥ ಭಾವಾರ್ಥ ॥

ಪ್ರಸಿದ್ಧವಾದ ಇದೇ ಸೋಮವು ಅನೇಕ ಕರ್ಮಗಳುಳ್ಳದ್ದಾಗಿಯೂ, ಯಜ್ಞಾರ್ಥವಾಗಿ ಉತ್ಪನ್ನವಾದುದಾಗಿಯೂ ಅನ್ನಗಳನ್ನು ಉತ್ಪನ್ನಮಾಡುತ್ತಾ ಹಿಂಡಲ್ಪಟ್ಟು ಪ್ರವಾಹ ರೂಪದಿಂದ ಹರಿಯುತ್ತದೆ

English Translation

Produced at our rite and producing abundant food, the Soma, efficacious in sacrifices, flows effused in a stream.

## ನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಸನಾ ಚೇತಿ ದಶರ್ಚಂ ಚತುರ್ಥಂ ಸೂಕ್ತಮಾಂಗಿರಸಕುಲಸ್ಯ ಹಿರಣ್ಯಸ್ತೂಪಸ್ಯಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ । ಅನುಕ್ರಾಂತಂ ಚ । ಸನ ಹಿರಣ್ಯಸ್ತೂಪ ಇತಿ ॥ ಉಕ್ತೋ ವಿನಿಯೋಗಃ ॥

ಅನುವಾದವು—ಸನಾ ಚ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು ಇದರಲ್ಲಿ ಹತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಆಂಗಿರಸಗೋತ್ರದ ಹಿರಣ್ಯಸ್ತೂಪನೆಂಬುವನು ಋಷಿಯು ಪವಮಾನಸೋಮವು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ ಸನ ಹಿರಣ್ಯಸ್ತೂಪಃ ಎಂದ ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೪

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೪ ।
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೨೨, ೨೩ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೦ ॥
ಋಷಿಃ—ಹಿರಣ್ಯಸ್ತೂಪಃ ।
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಸನಾ ಚ ಸೋಮ ಜೇಷಿ ಚ ಪವಮಾನ ಮಹಿ ಶ್ರವಃ ।

ಅಥಾ ನೋ ವಸ್ಯಸಸ್ಕೃಧಿ ॥ ೧ ॥

॥ ಪದಪಾಠಃ ॥

ಸನ । ಚ । ಸೋಮ । ಜೇಷಿ । ಚ । ಪವಮಾನ । ಮಹಿ । ಶ್ರವಃ ।

ಅಥ । ನಃ । ವಸ್ಯಸಃ । ಕೃಧಿ ॥ ೧ ॥

॥ ಸಾಯಣಭಾಷ್ಯಂ ॥

ಹೇ ಮಹಿ ಶ್ರವೋ ಮಹದನ್ನ ಪವಮಾನ ಸೋಮ ಸನ । ಅಸ್ಮದ್ಯಾಗೇ ಯಜನೀಯಾನ್ ದೇವಾನ್ ಭಜ । ಜೇಷಿ ಚ । ಯಾಗವಿಧ್ವಂಸಕಾರಿಣೋ ರಾಕ್ಷಸಾಂಶ್ಚ ಜಯ । ಅಥ ದೇವಾನ್ಪ್ರಾಪ್ಯ ರಾಕ್ಷಸಾಂಶ್ಚ ಜಿತ್ವಾನಂತರಂ ನೋಽಸ್ಮಾನ್ವಸ್ಯಸಃ ಶ್ರೇಯಸಃ ಕೃಧಿ । ಕುರು । ಶ್ರೇಯೋಽಸ್ಮಭ್ಯಂ ದೇಹೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಮಹಿ—ಮಹತ್ಸ್ವರೂಪವುಳ್ಳವನೂ । ಶ್ರವಃ – ಅನ್ನಯುಕ್ತನೂ । ಪವಮಾನ—ಶುದ್ಧವಾದ ಪ್ರವಾಹ ರೂಪನೂ ಆದ । ಸೋಮ—ಎಲೈ ಸೋಮನೇ । ಸನ ಚ—ನಮ್ಮ ಯಾಗದಲ್ಲಿ ದೇವತೆಗಳನ್ನು ಆರಾಧಿಸು । ಜೇಷಿ ಚ—ಶತ್ರುಗಳನ್ನು ಜಯಿಸು । ಅಥ—ಅನಂತರ । ನಃ—ನಮ್ಮನ್ನು । ವಸ್ಯಸಃ—ಶ್ರೇಯಸ್ಸಿನಿಂದ ಕೂಡಿದವರನ್ನಾಗಿ । ಕೃಧಿ—ಮಾಡು.

॥ ಭಾವಾರ್ಥ ॥

ಮಹತ್ಸ್ವರೂಪವುಳ್ಳವನೂ, ಅನ್ನಯುಕ್ತನೂ, ಶುದ್ಧವಾದ ಪ್ರವಾಹರೂಪನೂ ಆದ ಎಲೈ ಸೋಮನೇ, ನಮ್ಮ ಯಾಗದಲ್ಲಿ ದೇವತೆಗಳನ್ನು ಆರಾಧಿಸು. ಶತ್ರುಗಳನ್ನು ಜಯಿಸು. ಅನಂತರ ನಮ್ಮನ್ನು ಶ್ರೇಯಸ್ಸಿನಿಂದ ಕೂಡಿದವರನ್ನಾಗಿ ಮಾಡಿ ಸುಖವನ್ನುಂಟುಮಾಡು.

## English Translation

Pure-dropping (Soma), bounteous food, welcome (the gods at our rite) and overcome (the demons); and make us happy.

॥ ಸಂಹಿತಾಪಾಠಃ ॥

ಸನಾ ಜ್ಯೋತಿಃ ಸನಾ ಸ್ವರ್ವಿಶ್ವಾ ಚ ಸೋಮ ಸೌಭಗಾ ।
ಅಥಾ ನೋ ವಸ್ಯಸಸ್ಕೃಧಿ ॥ ೨ ॥

॥ ಪದಪಾಠಃ ॥

ಸನ । ಜ್ಯೋತಿಃ । ಸನ । ಸ್ವಃ । ವಿಶ್ವಾ । ಚ । ಸೋಮ । ಸೌಭಗಾ ।
ಅಥ । ನಃ । ವಸ್ಯಸಃ । ಕೃಧಿ ॥ ೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ಜ್ಯೋತಿಸ್ತೇಜಃ ಸನ । ಅಸ್ಮಭ್ಯಂ ಪ್ರಯಚ್ಛ । ಅಪಿ ಚ ಸ್ವಃ ಸ್ವರ್ಗಂ ಸನ । ಅಸ್ಮಭ್ಯಂ ದೇಹಿ । ವಿಶ್ವಾ ವಿಶ್ವಾನಿ ಸೌಭಗಾ ಸೌಭಾಗ್ಯಾನಿ ಚ ಸನ । ಸಿದ್ಧಮನ್ಯತ್ ॥

॥ ಪ್ರತಿಪದಾರ್ಥ ॥

**ಸೋಮ** ದೇವತಾತ್ಮನಾದ ಎಲೈ ಸೋಮನೇ । **ಜ್ಯೋತಿಃ**—ತೇಜಸ್ಸನ್ನು । **ಸನ**—ನಮಗೆ ಒದಗಿಸಿಕೊಡು । **ಸ್ವಃ**—ಸ್ವರ್ಗವನ್ನು । **ಸನ**—ಸಿಕ್ಕುವಂತೆ ಮಾಡು । **ವಿಶ್ವಾ**—ಸಮಸ್ತವಾದ । **ಸೌಭಗಾ ಚ**—ಸೌಖ್ಯಗಳನ್ನೂ ಒದಗಿಸಿಕೊಡು । **ಅಥ**—ಅನಂತರ । **ನಃ**—ನಮ್ಮನ್ನು । **ವಸ್ಯಸಃ**—ಶ್ರೇಯಸ್ಸಿನಿಂದ ಕೂಡಿದವರನ್ನಾಗಿ । **ಕೃಧಿ**—ಮಾಡು

॥ ಭಾವಾರ್ಥ ॥

ದೇವತಾತ್ಮನಾದ ಎಲೈ ಸೋಮನೇ, ನಮಗೆ ತೇಜಸ್ಸನ್ನು ಒದಗಿಸಿಕೊಡು. ನಮಗೆ ಸ್ವರ್ಗಲಾಭವಾಗುವಂತೆ ಮಾಡು. ನಮಗೆ ಸಮಸ್ತವಾದ ಸೌಖ್ಯಗಳನ್ನೂ ಒದಗಿಸಿಕೊಡು. ಅನಂತರ ನಮ್ಮನ್ನು ಶ್ರೇಯಸ್ಸಿನಿಂದ ಕೂಡಿದವರನ್ನಾಗಿ ಮಾಡು.

## English Translation

Soma, give us brightness, give us heaven, give us all good things, and make us happy.

॥ ಸಂಹಿತಾಪಾಠಃ ॥

ಸನಾ ದಕ್ಷಮುತ ಕ್ರತುಮಪ ಸೋಮ ಮೃಧೋ ಜಹಿ ।
ಅಥಾ ನೋ ವಸ್ಯಸಸ್ಕೃಧಿ ॥ ೩ ॥

॥ ಪದಪಾಠಃ ॥

ಸನ । ದಕ್ಷಂ । ಉತ । ಕ್ರತುಂ । ಅಪ । ಸೋಮ । ಮೃಧಃ । ಜಹಿ ।
ಅಥ । ನಃ । ವಸ್ಯಸಃ । ಕೃಧಿ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತ್ವಂ ದಕ್ಷಂ ಬಲಂ ಸನ । ಅಸ್ಮಭ್ಯಂ ದೇಹಿ । ಉತಾಪಿ ಚ ಕ್ರತುಂ ಪ್ರಜ್ಞಾನಂ ಸನ । ಮೃಧೋ ಹಿಂಸಕಾಞ್ಛತ್ರೂಂಶ್ಚಾಪ ಜಹಿ । ಮಾರಯ ಸಿದ್ಧಮನ್ಯತ್ ॥**

॥ ಪ್ರತಿಪದಾರ್ಥ ॥

**ಸೋಮ**—ಎಲ್ಲೈ ಸೋಮದೇವನೇ । **ದಕ್ಷಂ**—ನಮಗೆ ಶಕ್ತಿಯನ್ನು । **ಸನ**—ಒದಗಿಸಿಕೊಡು । **ಉತ**—ಮತ್ತು । **ಕ್ರತುಂ**—ಉತ್ತಮವಾದ ಜ್ಞಾನವನ್ನು ಉಂಟುಮಾಡು । **ಮೃಧಃ**—ನಮ್ಮ ಹಿಂಸಕರಾದ ಶತ್ರುಗಳನ್ನು । **ಅಪ ಜಹಿ**—ನಾಶಪಡಿಸು । **ಅಥ**—ಅನಂತರ । **ನಃ**—ನಮ್ಮನ್ನು । **ವಸ್ಯಸಃ**—ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ । **ಕೃಧಿ**—ಮಾಡು.

॥ ಭಾವಾರ್ಥ ॥

ಎಲೈ ಸೋಮದೇವನೇ, ನಮಗೆ ಶಕ್ತಿಯನ್ನು ಒದಗಿಸಿಕೊಡು. ಮತ್ತು ಜ್ಞಾನವನ್ನು ಉಂಟುಮಾಡು. ನಮ್ಮ ಹಿಂಸಕರಾದ ಶತ್ರುಗಳನ್ನು ನಾಶಪಡಿಸು. ಅನಂತರ ನಮ್ಮನ್ನು ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ ಮಾಡು.

English Translation

Soma, give us strength, give us wisdom, drive away our enemies; and make us happy.

॥ ಸಂಹಿತಾಪಾಠಃ ॥

ಪವೀತಾರಃ ಪುನೀತನ ಸೋಮಮಿಂದ್ರಾಯ ಪಾತವೇ ।
ಅಥಾ ನೋ ವಸ್ಯಸಸ್ಕೃಧಿ ॥ ೪ ॥

॥ ಪದಪಾಠಃ ॥

ಪವೀತಾರಃ । ಪುನೀತನ । ಸೋಮಂ । ಇಂದ್ರಾಯ । ಪಾತವೇ ।

ಅಥ । ನಃ । ವಸ್ಯಸಃ । ಕೃಧಿ ॥ ೪ ॥

॥ ಸಾಯಣಭಾಷ್ಯಂ ॥

ಹೇ ಪವೀತಾರಃ ಸೋಮಾಭಿಷವಕರ್ತಾರಃ ಯೂಯಮಿಂದ್ರಾಯ ಪಾತವೇ ಪಾತುಂ ಸೋಮಂ ಪುನೀತನ । ಅಭಿಷುಣುತ । ಸಿದ್ಧಮನ್ಯತ್ ॥

॥ ಪ್ರತಿಪದಾರ್ಥ ॥

**ಪವೀತಾರಃ**—ಸೋಮವನ್ನು ಹಿಂಡತಕ್ಕ ಎಲೈ ಋತ್ವಿಕ್ಕುಗಳೇ । **ಇಂದ್ರಾಯ**—ಇಂದ್ರನಿಗೆ । **ಪಾತವೇ**—ಪಾನಮಾಡುವುದಕ್ಕಾಗಿ । **ಸೋಮಂ**—ಸೋಮವನ್ನು । **ಪುನೀತನ**—ಶುದ್ಧವಾಗಿ ಹಿಂಡಿರಿ । **ಅಥ**—ಅನಂತರ । (**ಸೋಮ**—ಎಲೈ ಸೋಮದೇವನೇ) । **ನಃ**—ನಮ್ಮನ್ನು । **ವಸ್ಯಸಃ**—ಶ್ರೇಯೋಯುಕ್ತರನ್ನಾಗಿಯೂ ಸುಖಯುಕ್ತರನ್ನಾಗಿಯೂ । **ಕೃಧಿ**—ಮಾಡು.

॥ ಭಾವಾರ್ಥ ॥

ಸೋಮವನ್ನು ಹಿಂಡತಕ್ಕ ಎಲೈ ಋತ್ವಿಕ್ಕುಗಳೇ, ಇಂದ್ರನಿಗೆ ಪಾನಮಾಡುವುದಕ್ಕಾಗಿ ಸೋಮವನ್ನು ಶುದ್ಧವಾಗಿ ಹಿಂಡಿರಿ. ಅನಂತರ, ಎಲೈ ಸೋಮದೇವನೇ, ನಮ್ಮನ್ನು ಶ್ರೇಯೋಯುಕ್ತರನ್ನಾಗಿಯೂ ಸುಖಯುಕ್ತರನ್ನಾಗಿಯೂ ಮಾಡು

English Translation

Priests, press out the Soma for Indra to drink ; (O Soma), make us happy.

॥ ಸಂಹಿತಾಪಾಠಃ ॥

ತ್ವಂ ಸೂರ್ಯೇ ನ ಆ ಭಜ ತವ ಕ್ರತ್ವಾ ತವೋತಿಭಿಃ ।

ಅಥಾ ನೋ ವಸ್ಯಸಸ್ಕೃಧಿ ॥ ೫ ॥

॥ ಪದಪಾಠಃ ॥

ತ್ವಂ । ಸೂರ್ಯೇ । ನಃ । ಆ । ಭಜ । ತವ । ಕ್ರತ್ವಾ । ತವ । ಊತಿಽಭಿಃ ।

ಅಥ । ನಃ । ವಸ್ಯಸಃ । ಕೃಧಿ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ತವ ಕ್ರತ್ವಾ ತವೋತಿಭಿಸ್ತ್ವತ್ಕರ್ತೃಕೇಣ ಕರ್ಮಣಾ ತ್ವತ್ಕರ್ತೃಕಾಭಿಃ ರಕ್ಷಾಭಿಶ್ಚ ನೋಽಸ್ಮಾನ್ ಸೂರ್ಯೇ ಆ ಭಜ । ಪ್ರಾಪಯ । ಸಿದ್ಧಮನ್ಯತ್ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ತ್ವಂ**—ನೀನು । **ತವ**—ನಿನ್ನ । **ಕ್ರತ್ವಾ**—ಉತ್ತಮವಾದ ಕರ್ಮಗಳಿಂದಲೂ । **ತವ**—ನಿನ್ನ । **ಊತಿಭಿಃ**—ರಕ್ಷಣೆಗಳಿಂದಲೂ । **ನಃ**—ನಮ್ಮನ್ನು । **ಸೂರ್ಯೇ**—ಸೂರ್ಯನಲ್ಲಿ । **ಆ ಭಜ**—ಕರೆದುಕೊಂಡು ಹೋಗಿ ಸೇರಿಸು । **ಅಥ**—ಅನಂತರ । **ನಃ**—ನಮ್ಮನ್ನು । **ವಸ್ಯಸಃ**—ಶ್ರೇಯೋಯುಕ್ತರನ್ನಾಗಿಯೂ ಮತ್ತು ಸುಖಯುಕ್ತರನ್ನಾಗಿಯೂ । **ಕೃಧಿ**—ಮಾಡು.

॥ ಭಾವಾರ್ಥ ॥

ಎಲೈ ಸೋಮದೇವನೇ, ನೀನು ನಿನ್ನ ಉತ್ತಮವಾದ ಕರ್ಮಗಳಿಂದಲೂ, ನಿನ್ನ ಉತ್ತಮವಾದ ಕರ್ಮಗಳಿಂದಲೂ ನಮ್ಮನ್ನು ಸೂರ್ಯನಲ್ಲಿ ಕರೆದುಕೊಂಡು ಹೋಗಿ ಸೇರಿಸು. ಅನಂತರ ನಮ್ಮನ್ನು ಶ್ರೇಯೋಯುಕ್ತರನ್ನಾಗಿಯೂ ಮತ್ತು ಸುಖಯುಕ್ತರನ್ನಾಗಿಯೂ ಮಾಡು.

English Translation

( O Soma ), by your power and your protections bring us to the sun, and make us happy.

॥ ಸಂಹಿತಾಪಾಠಃ ॥

**ತವ ಕ್ರತ್ವಾ ತವೋತಿಭಿರ್ಜ್ಯೋಕ್ಪಶ್ಯೇಮ ಸೂರ್ಯಂ ।**

**ಅಥಾ ನೋ ವಸ್ಯಸಸ್ಕೃಧಿ ॥ ೬ ॥**

॥ ಪದಪಾಠಃ ॥

**ತವ । ಕ್ರತ್ವಾ । ತವ । ಊತಿಽಭಿಃ । ಜ್ಯೋಕ್ । ಪಶ್ಯೇಮ । ಸೂರ್ಯಂ ।**

**ಅಥ । ನಃ । ವಸ್ಯಸಃ । ಕೃಧಿ । ೬ ॥**

॥ ಸಾಯಣಭಾಷ್ಯಂ ॥

ಹೇ ಸೋಮ ತವ ಕ್ರತ್ವಾ ಪ್ರಜ್ಞಾನೇನ ತವೋತಿಭೀ ರಕ್ಷಾಭಿಶ್ಚ ಜ್ಯೋಕ್ ಚಿರಂ ಪಶ್ಯೇಮ ಸೂರ್ಯಂ । ಪಶ್ಯಾಮ । ದ್ರಕ್ಷ್ಯಾಮಃ । ಸಿದ್ಧಮನ್ಯತ್ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ತವ**—ನಿನ್ನ । **ಕ್ರತ್ವಾ**—ಉತ್ತಮವಾದ ಜ್ಞಾನದಿಂದಲೂ । **ತವ**—ನಿನ್ನ । **ಊತಿಭಿಃ**—ರಕ್ಷಣೆಗಳಿಂದಲೂ ಕೂಡಿ । **ಜ್ಯೋಕ್**—ಚಿರಕಾಲ । **ಸೂರ್ಯಂ**—ಸೂರ್ಯನನ್ನು । **ಪಶ್ಯೇಮ**—ನಾವು ನೋಡುವಂತಾಗಲಿ । **ಅಥ**—ಮತ್ತು । **ನಃ**—ನಮ್ಮನ್ನು । **ವಸ್ಯಸಃ**—ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ । **ಕೃಧಿ**—ಮಾಡು.

॥ ಭಾವಾರ್ಥ ॥

ಎಲೈ ಸೋಮದೇವನೇ, ನಿನ್ನ ಉತ್ತಮವಾದ ಜ್ಞಾನದಿಂದಲೂ ನಿನ್ನ ರಕ್ಷಣೆಗಳಿಂದಲೂ ಕೂಡಿ ಚಿರಕಾಲ ಸೂರ್ಯನನ್ನು ನಾವು ನೋಡುವಂತಾಗಲಿ. ಮತ್ತು ನಮ್ಮನ್ನು ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ ಮಾಡು.

English Translation

By your wisdom and your protections may we long behold the sun ; and you make us happy.

॥ ಸಂಹಿತಾಪಾಠಃ ॥

ಅಭ್ಯರ್ಷ ಸ್ವಾಯುಧ ಸೋಮ ದ್ವಿಬರ್ಹಸಂ ರಯಿಂ ।
ಅಥಾ ನೋ ವಸ್ಯಸಸ್ಕೃಧಿ ॥ ೭ ॥

॥ ಪದಪಾಠಃ ॥

ಅಭಿ । ಅರ್ಷ । ಸುಽಆಯುಧ । ಸೋಮ । ದ್ವಿಽಬರ್ಹಸಂ । ರಯಿಂ ।
ಅಥ । ನಃ । ವಸ್ಯಸಃ । ಕೃಧಿ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಸ್ವಾಯುಧ ಶೋಭನಾಯುಧ ಸೋಮ ತ್ವಂ ದ್ವಿಬರ್ಹಸಂ ದ್ವಯೋರ್ದ್ಯಾವಾಪೃಥಿವ್ಯೋಃ ಸ್ಥಾನಯೋಃ ಪರಿವೃಢಂ ರಯಿಂ ಧನಮಭ್ಯರ್ಷ । ಅಸ್ಮಾನಭಿಗಮಯ । ಸಿದ್ಧಮನ್ಯತ್ ॥**

॥ ಪ್ರತಿಪದಾರ್ಥ ॥

**ಸ್ವಾಯುಧ**—ಉತ್ತಮವಾದ ಆಯುಧವುಳ್ಳ । **ಸೋಮ**—ಎಲೈ ಸೋಮನೇ । **ದ್ವಿಬರ್ಹಸಂ**—ದ್ಯಾವಾಪೃಥಿವಿಗಳೆರಡರಲ್ಲಿಯೂ ತುಂಬಿರುವ । **ರಯಿಂ**—ಧನವನ್ನು । (**ಅಸ್ಮಭ್ಯಂ**—ನಮಗೆ) । **ಅಭ್ಯರ್ಷ**—ಒದಗಿಸಿಕೊಡು । **ಅಥ**—ಅನಂತರ । **ನಃ**—ನಮ್ಮನ್ನು । **ವಸ್ಯಸಃ**—ಸುಖಯುಕ್ತರನ್ನಾಗಿ । **ಕೃಧಿ**—ಮಾಡು.

॥ ಭಾವಾರ್ಥ ॥

ಉತ್ತಮವಾದ ಆಯುಧವುಳ್ಳ ಎಲೈ ಸೋಮನೇ, ದ್ಯಾವಾಪೃಥಿವಿಗಳೆರಡರಲ್ಲಿಯೂ ತುಂಬಿರುವ ಧನವನ್ನು ನಮಗೆ ಒದಗಿಸಿಕೊಡು. ಅನಂತರ ನಮ್ಮನ್ನು ಸುಖಯುಕ್ತರನ್ನಾಗಿ ಮಾಡು.

## English Translation

Bright-weaponed Soma, shower upon us wealth abundant for both worlds; and make us happy.

॥ ಸಂಹಿತಾಪಾಠಃ ॥

ಅಭ್ಯರ್ಷಾನಪಚ್ಯುತೋ ರಯಿಂ ಸಮತ್ಸು ಸಾಸಹಿಃ ।

ಅಥಾ ನೋ ವಸ್ಯಸಸ್ಕೃಧಿ ॥ ೮ ॥

॥ ಪದಪಾಠಃ ॥

ಅಭಿ । ಅರ್ಷ । ಅನಪಽಚ್ಯುತಃ । ರಯಿಂ । ಸಮತ್ಽಸು । ಸಸಹಿಃ ।

ಅಥ । ನಃ । ವಸ್ಯಸಃ । ಕೃಧಿ ॥ ೮ ॥

॥ ಸಾಯಣಭಾಷ್ಯಂ ॥

**ಹೇ ಸೋಮ ಸಮತ್ಸು ಸಂಗ್ರಾಮೇಷ್ವನಪಚ್ಯುತಃ ಶತ್ರುಭಿರನಾಹತಃ ಸಾಸಹಿಃ ಶತ್ರೂಣಾಮಭಿಭವಿತಾ ತ್ವಂ ರಯಿಂ ಧನಮಭ್ಯರ್ಷ । ಅಸ್ಮಾನಭಿಗಮಯ । ಸಿದ್ಧಮನ್ಯತ್ ॥**

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ಸಮತ್ಸು**—ಯುದ್ಧಗಳಲ್ಲಿ । **ಅನಪಚ್ಯುತಃ**—ಅಪ್ರತಿಹತನಾಗಿಯೂ । **ಸಾಸಹಿಃ**—ಶತ್ರುಗಳನ್ನು ಸದೆಬಡಿಯುವವನಾಗಿಯೂ ಆದ ನೀನು । **ರಯಿಂ**—ಧನವನ್ನು । **ಅಭ್ಯರ್ಷ**—ನಮಗೆ ಒದಗಿಸಿಕೊಡು । **ಅಥ** - ಅನಂತರ । **ನಃ**—ನಮ್ಮನ್ನು । **ವಸ್ಯಸಃ**-ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ । **ಕೃಧಿ**—ಮಾಡು.

॥ ಭಾವಾರ್ಥ ॥

ಎಲೈ ಸೋಮದೇವನೇ, ಯುದ್ಧಗಳಲ್ಲಿ ಅಪ್ರತಿಹತನಾಗಿಯೂ ಶತ್ರುಗಳನ್ನು ಸದೆಬಡಿಯುವವನಾಗಿಯೂ ಆದ ನೀನು ನಮಗೆ ಧನವನ್ನು ಒದಗಿಸಿಕೊಡು ಅನಂತರ ನಮ್ಮನ್ನು ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ ಮಾಡು.

## English Translation

O you who are unvanquished in battle, smiter of enemies, shower wealth upon us, and make us happy

। ಸಂಹಿತಾಪಾಠಃ ।

ತ್ವಾಂ ಯಜ್ಞೈರವೀವೃಧನ್ಪವಮಾನ ವಿಧರ್ಮಣಿ ।
ಅಥಾ ನೋ ವಸ್ಯಸಸ್ಕೃಧಿ ॥ ೯ ॥

॥ ಪದಪಾಠಃ ॥

ತ್ವಾಂ । ಯಜ್ಞೈಃ । ಅವೀವೃಧನ್ । ಪವಮಾನ । ವಿಽಧರ್ಮಣಿ ।
ಅಥ । ನಃ । ವಸ್ಯಸಃ । ಕೃಧಿ ॥ ೯ ॥

। ಸಾಯಣಭಾಷ್ಯಂ ।

**ಹೇ ಪವಮಾನ ಸೋಮ ಯಜಮಾನಾನಾಂ ವಿಧಾರಣಾಯ ಪ್ರವೃತ್ತಂ ತ್ವಾಂ ಯಜ್ಞೈರ್ವಿಧರ್ಮಣ್ಯಾತ್ಮವಿಧಾರಣಾರ್ಥಮವೀವೃಧನ್ । ಯಜಮಾನಾ ವರ್ಧಯಂತಿ । ಸಿದ್ಧಮನ್ಯತ್ ॥**

। ಪ್ರತಿಪದಾರ್ಥ ।

**ಪವಮಾನ**—ಶುದ್ಧವಾದ ಪ್ರವಾಹದಿಂದ ಪ್ರವಿಸುವ ಎಲೈ ಸೋಮನೇ । **ತ್ವಾಂ**—ನಿನ್ನನ್ನು **ಯಜ್ಞೈಃ**—ಯಜ್ಞಗಳಿಂದ । **ವಿಧರ್ಮಣಿ**—ತಮ್ಮ ತಮ್ಮ ವೈಯಕ್ತಿಕವೂ ವಿಶಿಷ್ಟವೂ ಆದ ಧಾರಣೆಗಾಗಿ । **ಅವೀವೃಧನ್**—ಯಜಮಾನರು ನಿನ್ನ ಬೆಳೆವಣಿಗೆಯನ್ನುಂಟುಮಾಡುತ್ತಾರೆ । **ಅಥ**—ಅನಂತರ । **ನಃ**—ನಮ್ಮನ್ನು । **ವಸ್ಯಸಃ**—ಶ್ರೇಯಸ್ಸಿನಿಂದಲಕ ಸುಖದಿಂದಲೂ ಕೂಡಿದವರನ್ನಾಗಿ । **ಕೃಧಿ**—ಮಾಡು

॥ ಭಾವಾರ್ಥ ॥

ಶುದ್ಧವಾದ ಪ್ರವಾಹದಿಂದ ಪ್ರವಿಸುವ ಎಲೈ ಸೋಮನೇ, ನಿನ್ನನ್ನು ಯಜ್ಞಗಳಿಂದ ತಮ್ಮ ತಮ್ಮ ವೈಯಕ್ತಿಕವೂ ವಿಶಿಷ್ಟವೂ ಆದ ಧಾರಣೆಗಾಗಿ ಯಜಮಾನರು ನಿನ್ನ ಬೆಳೆವಣಿಗೆಯನ್ನುಂಟುಮಾಡುತ್ತಾರೆ. ಅನಂತರ ನಮ್ಮನ್ನು ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ ಮಾಡು.

## English Translation

Pure-dropping (Soma), they glorify you with the holy rites for their own upholding ; make us happy

। ಸಂಹಿತಾಪಾಠಃ ।

ರಯಿಂ ನಶ್ಚಿತ್ರಮಶ್ವಿನಮಿಂದೋ ವಿಶ್ವಾಯುಮಾಭರ ।
ಅಥಾ ನೋ ವಸ್ಯಸಸ್ಕೃಧಿ ॥ ೧೦ ॥

॥ ಪದಪಾಠಃ ॥

ರಯಿಂ । ನಃ । ಚಿತ್ರಂ । ಅಶ್ವಿನಂ । ಇಂದೋ ಇತಿ । ವಿಶ್ವಽಆಯುಂ । ಆ । ಭರ ।
ಅಥ । ನಃ । ವಸ್ಯಸಃ । ಕೃಧಿ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಇಂದೋ ಯಾಗೇಷು ಕ್ಲಿದ್ಯಮಾನ ಸೋಮ ತ್ವಂ ಚಿತ್ರಂ ನಾನಾವಿಧಮಶ್ವಿನಮಶ್ವವಂತಂ ಚ ವಿಶ್ವಾಯುಂ ಸರ್ವಗಾಮಿನಂ ರಯಿಂ ನೋಽಸ್ಮಭ್ಯಮಾ ಭರ । ಆಹರ । ಸಿದ್ಧಮನ್ಯತ್ ॥

॥ ಪ್ರತಿಪದಾರ್ಥ ॥

ಇಂದೋ—ಯಾಗಗಳಲ್ಲಿ ಸ್ರವಿಸುವ ಎಲೈ ಸೋಮನೇ । ಚಿತ್ರಂ—ನಾನಾವಿಧವಾದುದೂ । ಅಶ್ವಿನಂ—ಅಶ್ವಯುಕ್ತವಾದುದೂ । ವಿಶ್ವಾಯುಂ—ಸರ್ವತ್ರ ವ್ಯಾಪಿಸತಕ್ಕದ್ದೂ ಆದ । ರಯಿಂ—ಧನವನ್ನು । ನಃ—ನಮಗೆ । ಆ ಭರ—ತಂದೊದಗಿಸು । ಅಥ—ಅನಂತರ । ನಃ—ನಮ್ಮನ್ನು । ವಸ್ಯಸಃ—ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ । ಕೃಧಿ—ಮಾಡು.

॥ ಭಾವಾರ್ಥ ॥

ಯಾಗಗಳಲ್ಲಿ ಪ್ರವಾಹರೂಪದಿಂದ ಸ್ರವಿಸುವ ಎಲೈ ಸೋಮನೇ, ನಾನಾವಿಧವಾದುದೂ, ಅಶ್ವಯುಕ್ತವಾದುದೂ ಸರ್ವತ್ರ ವ್ಯಾಪಿಸತಕ್ಕದ್ದೂ ಆದ ಧನವನ್ನು ನಮಗೆ ತಂದೊದಗಿಸು. ಅನಂತರ ನಮ್ಮನ್ನು ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ ಮಾಡು.

English Translation

Indu, bring to us varied wealth, abundant in horses and all-reaching; and make us happy

## ಐದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಸಮಿದ್ಧ ಇತ್ಯೇಕಾದಶರ್ಚಂ ಪಂಚಮಂ ಸೂಕ್ತಂ ಕಾಶ್ಯಪಸ್ಯಾಸಿತಸ್ಯ ದೇವಲಸ್ಯ ವಾರ್ಷಂ । ಅಷ್ಟಮ್ಯಾದ್ಯಾಶ್ಚತಸ್ರೋಽನುಷ್ಟುಭಃ ಶಿಷ್ಟಾಃ ಸಪ್ತ ಗಾಯತ್ರ್ಯಃ । ನರಾಶಂಸವರ್ಜಿತಾಃ ಸಮಿದಾದಯಃ ಕ್ರಮೇಣ ಪ್ರತ್ಯೃಚಂ ದೇವತಾಃ । ತಥಾ ಚಾನುಕ್ರಾಂತಂ । ಸಮಿದ್ಧ ಏಕಾದಶ ಕಾಶ್ಯಪೋಽಸಿತೋ ದೇವಲೋ ವಾ ವಿಂಶತಿಃ ಸೂಕ್ತಾನ್ಯಾದ್ಯಮಾಪ್ರಿಯಂ ಚತುರನುಷ್ಟುಬಂತಮಿತಿ ॥ ಕಾಶ್ಯಪಸ್ಯ ಪಾವಮಾನ-ಮಿದಮಾಪ್ರೀಸೂಕ್ತಂ । ಸೂತ್ರಿತಂ ಚ । ಸಮಿದ್ಧೋ' ಅದ್ಯೇತಿ ಸರ್ವೇಷಾಂ ಯಥರ್ಷಿ ವಾ । ಆ. ೩-೨ । ಇತಿ ॥

ಅನುವಾದವು—**ಸಮಿದ್ಧಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಹನ್ನೊಂದು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅಸಿತಃ ಕಾಶ್ಯಪಃ ಎಂಬುವನು ಅಥವಾ ದೇವಲನೆಂಬುವನು ಋಷಿಯು. ಈ ಸೂಕ್ತದ ಎಂಟನೆಯ ಋಕ್ಕಿನಿಂದ ಮುಂದಿನ ನಾಲ್ಕು ಋಕ್ಕುಗಳು (೮-೧೧ ಋಕ್ಕುಗಳು) ಅನುಷ್ಟುಪ್‌ಛಂದಸ್ಕವು. ಉಳಿದ ಏಳು ಋಕ್ಕುಗಳೂ ಗಾಯತ್ರೀಛಂದಸ್ಕವು ಇದು ಆಪ್ರೀಸೂಕ್ತವು ಇದರಲ್ಲಿ ನರಾಶಂಸದೇವತೆಯು ಇರುವುದಿಲ್ಲ. ಉಳಿದ ಸಮಿದ್ಧಾಗ್ನಿ ಮೊದಲಾದ ಆಪ್ರೀಸೂಕ್ತದ ದೇವತೆಗಳೇ ಈ ಸೂಕ್ತದ ಹನ್ನೊಂದು ಋಕ್ಕುಗಳಿಗೂ ಕ್ರಮವಾಗಿ ದೇವತೆಗಳು. ಅನುಕ್ರಮಣಿಕೆಯಲ್ಲಿ—**ಸಮಿದ್ಧ ಏಕಾದಶ ಕಾಶ್ಯಪೋಽಸಿತೋ ದೇವಲೋ ವಾ ವಿಂಶತಿಃ ಸೂಕ್ತಾನ್ಯಾದ್ಯಮಾಪ್ರಿಯಶ್ಚತುರನುಷ್ಟುಬಂತಂ** ಎಂದು ಹೇಳಿರುವುದು. ಕಾಶ್ಯಪಗೋತ್ರದವರಿಗೆ ಇದು ಪವಮಾನಸಂಬಂಧವಾದ ಆಪ್ರೀಸೂಕ್ತವು. ಈ ವಿಷಯದಲ್ಲಿ—**ಸಮಿದ್ಧೋ ಅದ್ಯೇತಿ ಸರ್ವೇಷಾಂ ಯಥರ್ಷಿ ವಾ** ಎಂಬ ಸೂತ್ರದಲ್ಲಿ (ಆ. ೩-೨) ನಿವೃತಿ ಇರುವುದು.

## ಸೂಕ್ತ—೫

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೫ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೨೪, ೨೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೧೧ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಆಪ್ರಿಯಃ । ಪವಮಾನಃ ಸೋಮಃ । (೧ ಇಧ್ಮಃ ಸಮಿದ್ಧೋಽಗ್ನಿರ್ವಾ । ೨ ತನೂನಪಾತ್ । ೩. ಇಳಃ । ೪ ಬರ್ಹಿಃ । ೫ ದೇವೀರ್ದ್ವಾರಃ । ೬. ಉಷಾಸಾನಕ್ತಾ । ೭ ದೈವ್ಯಾ ಹೋತಾರಾ ಪ್ರಚೇತಸಾ । ೮ ತಿಸ್ರೋ ದೇವ್ಯಃ ಸರಸ್ವತೀಳಾಭಾರತ್ಯಃ । ೯. ತ್ವಷ್ಟಾ । ೧೦ ವನಸ್ಪತಿಃ । ೧೧ ಸ್ವಾಹಾಕೃತಯಃ ॥
ಛಂದಃ—೧-೭. ಗಾಯತ್ರೀ । ೮-೧೧. ಅನುಷ್ಟುಪ್ ॥

॥ ಸಂಹಿತಾಪಾಠಃ ॥

**ಸಮಿದ್ಧೋ ವಿಶ್ವತಸ್ಪತಿಃ ಪವಮಾನೋ ವಿ ರಾಜತಿ ।**
**ಪ್ರೀಣನ್ವೃಷಾ ಕನಿಕ್ರದತ್ ॥ ೧ ॥**

॥ ಪದಪಾಠಃ ॥

**ಸಂಽಇದ್ಧಃ । ವಿಶ್ವತಃ । ಪತಿಃ । ಪವಮಾನಃ । ವಿ । ರಾಜತಿ ।**
**ಪ್ರೀಣನ್ । ವೃಷಾ । ಕನಿಕ್ರದತ್ ॥ ೧ ॥**

॥ ಸಾಯಣಭಾಷ್ಯಂ ॥

**ಆಪ್ರೀವತ್ಸೋಮಸ್ತುತಿರತ್ರ । ಸಮಿದ್ಧಃ ಸಮ್ಯಗ್ದೀಪ್ತೋ ವಿಶ್ವತಸ್ಪತಿಃ ಸರ್ವತಃ ಸ್ವಾಮೀ ವೃಷಾ ಕಾಮಾನಾಂ ವರ್ಷಿತಾ ಪವಮಾನಃ ಸೋಮಃ ಕನಿಕ್ರದದಭಿಷೂಯಮಾಣಃ ಶಬ್ದಂ ಕುರ್ವನ್ಪ್ರೀಣನ್ದೇವಾನ್ಪ್ರೀಣಯನ್ವಿ ರಾಜತಿ । ಯಾಗೇಷು ಪ್ರಕಾಶತೇ ॥**

॥ ಪ್ರತಿಪದಾರ್ಥ ॥

**ಸಮಿದ್ಧಃ**—ಪ್ರಜ್ವಲಿತವಾಗಿ ಪ್ರಕಾಶಿಸುವುದೂ । **ವಿಶ್ವತಸ್ಪತಿಃ**—ಸರ್ವತ್ರ ಪ್ರಭುತ್ವವುಳ್ಳದ್ದೂ । **ವೃಷಾ**—ಇಷ್ಟಾರ್ಥಪ್ರದವಾದುದೂ । **ಪವಮಾನಃ**—ಶುದ್ಧವಾದುದೂ ಆದ ಸೋಮವು । **ಕನಿಕ್ರದತ್**—ಶಬ್ದಮಾಡುತ್ತಲೂ । **ಪ್ರೀಣನ್**—ದೇವತೆಗಳಿಗೆ ತೃಪ್ತಿಯನ್ನುಂಟುಮಾಡುತ್ತಲೂ । **ವಿ ರಾಜತಿ**—ಯಜ್ಞಗಳಲ್ಲಿ ಪ್ರಕಾಶಿಸುತ್ತದೆ.

॥ ಭಾವಾರ್ಥ ॥

ಪ್ರಜ್ವಲಿತವಾಗಿ ಪ್ರಕಾಶಿಸುವುದೂ, ಸರ್ವತ್ರ ಪ್ರಭುತ್ವವುಳ್ಳದ್ದೂ ಇಷ್ಟಾರ್ಥಪ್ರದವಾದುದೂ ಶುದ್ಧವಾದುದೂ ಆದ ಸೋಮವು ಶಬ್ದಮಾಡುತ್ತಲೂ ದೇವತೆಗಳಿಗೆ ತೃಪ್ತಿಯನ್ನುಂಟುಮಾಡುತ್ತಲೂ ಯಜ್ಞಗಳಲ್ಲಿ ಪ್ರಕಾಶಿಸುತ್ತದೆ.

English Translation

The pure-flowing (Soma) shines forth in its brightness, the universal lord,—the showerer of blessings, the rejoicer, uttering a loud sound.

॥ ಸಂಹಿತಾಪಾಠಃ ॥

ತನೂನಪಾತ್ಪವಮಾನಃ ಶೃಂಗೇ ಶಿಶಾನೋ ಅರ್ಷತಿ ।
ಅಂತರಿಕ್ಷೇಣ ರಾರಜತ್ ॥ ೨ ॥

॥ ಪದಪಾಠಃ ॥

ತನೂ ಽ ನಪಾತ್ । ಪವಮಾನಃ । ಶೃಂಗೇ ಇತಿ । ಶಿಶಾನಃ । ಅರ್ಷತಿ ।
ಅಂತರಿಕ್ಷೇಣ । ರಾರಜತ್ ॥ ೨ ॥

॥ ಸಾಯಣಭಾಷ್ಯಂ ॥

**ತನೂನಪಾತ್ಪವಮಾನಃ ಸೋಮಃ । ತನೂನಪಾದತ್ರ ಸೋಮೋ ಭವತಿ । ತಥಾ ಚ ಶ್ರೂಯತೇ । ಅದ್ಭ್ಯೋಽಂಶವೋ ಜಾಯಂತೇ ತತಃ ಸೋಮೋ ಜಾಯತ ಇತಿ । ಶೃಂಗೇ ದೀಪ್ತೇ ಉನ್ನತಪ್ರದೇಶೇ । ಹೃಣೀಃ ಶೃಂಗಾಣೀತಿ ಜ್ವಲನ್ನಾಮಸು ಪಾಠಾತ್ । ಶಿಶಾನಸ್ತೀಕ್ಷ್ಣೀಕುರ್ವನ್ನಂತರಿಕ್ಷೇಣ ರಾರಜದರ್ಷತಿ । ದ್ರೋಣಕಲಶಂ ಪ್ರತಿ ಗಚ್ಛತಿ । ತಥಾ ಚಾಮ್ನಾಯತೇ । ದ್ವಾಭ್ಯಾಂ ಧಾರಾಭ್ಯಾಮಾಗ್ರಯಣಂ ಗೃಹ್ಣಾತೀತಿ ॥**

॥ ಪ್ರತಿಪದಾರ್ಥ ॥

**ತನೂನಪಾತ್**—ತನೂನಪಾತ್ಸಂಜ್ಞಕನಾದ । **ಪವಮಾನಃ**—ಸೋಮದೇವನು । **ಶೃಂಗೇ**—ಪ್ರಭಾಯುತವಾದ ಉನ್ನತಪ್ರದೇಶದಲ್ಲಿ । **ಶಿಶಾನಃ**—ತೀಕ್ಷ್ಣತೆಯಿಂದ ಕೂಡಿದವನಾಗಿಯೂ । **ರಾರಜತ್**—ಪ್ರಕಾಶಿಸುತ್ತಲೂ । **ಅಂತರಿಕ್ಷೇಣ**—ಅಂತರಿಕ್ಷಮಾರ್ಗದಿಂದ । **ಅರ್ಷತಿ**—ಯಜ್ಞಪ್ರದೇಶಕ್ಕೆ ಬರುತ್ತಾನೆ.

॥ ಭಾವಾರ್ಥ ॥

ತನೂನಪಾತ್ಸಂಜ್ಞಕನಾದ ಸೋಮದೇವನು, ಪ್ರಭಾಯುತವಾದ ಉನ್ನತಪ್ರದೇಶದಲ್ಲಿ ತೀಕ್ಷ್ಣತೆಯಿಂದ ಕೂಡಿದವನಾಗಿಯೂ ಪ್ರಕಾಶಿಸುತ್ತಲೂ ಅಂತರಿಕ್ಷಮಾರ್ಗದಿಂದ ಯಜ್ಞಪ್ರದೇಶಕ್ಕೆ ಬರುತ್ತಾನೆ.

English Translation

The pure-flowing Tanunapat, rushes sharpening its splendour on the height and hastens through the sky.

॥ ಸಂಹಿತಾಪಾಠಃ ॥

ಈಳೇನ್ಯಃ ಪವಮಾನೋ ರಯಿರ್ವಿ ರಾಜತಿ ದ್ಯುಮಾನ್ ।
ಮಧೋರ್ಧಾರಾಭಿರೋಜಸಾ ॥ ೩ ॥

॥ ಪದಪಾಠಃ ॥

ಈಳೇನ್ಯಃ । ಪವಮಾನಃ । ರಯಿಃ । ವಿ । ರಾಜತಿ । ದ್ಯುಽಮಾನ್ ।
ಮಧೋಃ । ಧಾರಾಭಿಃ । ಓಜಸಾ ॥ ೩ ॥

॥ ಸಾಯಣಭಾಷ್ಯಂ ॥

**ಈಳೇನ್ಯಃ ಸ್ತುತ್ಯಃ ಪವಮಾನಃ ಸೋಮೋ ರಯಿರಭೀಷ್ಟಸ್ಯ ದಾತಾ ದ್ಯುಮಾನ್ದೀಪ್ತಿಮಾಂಶ್ಚ ಸನ್ಮಧೋರುದಕಸ್ಯ ಧಾರಾಭಿಃ ಸಹ ಕ್ಷರನ್ನೋಜಸಾ ಬಲೇನ ವಿ ರಾಜತಿ । ಪ್ರಕಾಶತೇ ॥**

॥ ಪ್ರತಿಪದಾರ್ಥ ॥

**ರಯಿಃ**— ಧನಪ್ರದನೂ । **ದ್ಯುಮಾನ್**—ಕಾಂತಿಯುತನೂ । **ಈಳೇನ್ಯಃ**—ಅತ್ಯಂತ ಸ್ತುತ್ಯನೂ ಆದ । **ಪವಮಾನಃ**—ಸೋಮದೇವನು । **ಮಧೋಃ**—ಉದಕದ । **ಧಾರಾಭಿಃ**—ಪ್ರವಾಹಗಳೊಡನೆ ಕೂಡಿ । **ಓಜಸಾ**— ತನ್ನ ಶಕ್ತಿಯಿಂದಲೇ । **ವಿ ರಾಜತಿ**—ಪ್ರಕಾಶಿಸುತ್ತಾನೆ.

॥ ಭಾವಾರ್ಥ ॥

ಧನಪ್ರದನೂ, ಕಾಂತಿಯುತನೂ, ಅತ್ಯಂತ ಸ್ತುತ್ಯನೂ ಆದ ಸೋಮದೇವನು ಉದಕದ ಪ್ರವಾಹಗಳೊಡನೆ ಕೂಡಿ ತನ್ನ ಶಕ್ತಿಯಿಂದಲೇ ಪ್ರಕಾಶಿಸುತ್ತಿದ್ದಾನೆ

English Translation

The pure-flowing bright (Soma), the bounteous giver, worthy of all praise, shines forth in its might with the streams of water.

॥ ಸಂಹಿತಾಪಾಠಃ ॥

ಬರ್ಹಿಃ ಪ್ರಾಚೀನಮೋಜಸಾ ಪವಮಾನಃ ಸ್ತೃಣನ್ಹರಿಃ ।
ದೇವೇಷು ದೇವ ಈಯತೇ ॥ ೪ ॥

॥ ಪದಪಾಠಃ ॥

ಬರ್ಹಿಃ । ಪ್ರಾಚೀನಂ । ಓಜಸಾ । ಪವಮಾನಃ । ಸ್ತೃಣನ್ । ಹರಿಃ ।
ದೇವೇಷು । ದೇವಃ । ಈಯತೇ ॥ ೪ ॥

॥ ಸಾಯಣಭಾಷ್ಯಂ ॥

ಹರಿರ್ಹರಿತವರ್ಣೋ ದೇವೋ ದ್ಯೋತಮಾನಃ ಸೋಮಃ ಪವಮಾನೋ ದೇವೇಷು ಯಜ್ಞೇಷು ಬರ್ಹಿಃ ಪ್ರಾಚೀನಂ ಪ್ರಾಚೀನಾಗ್ರಂ ಸ್ತೃಣನ್ ಸ್ತಾರಯನ್ನೋಜಸಾ ಬಲೇನೇಯತೇ ಗಚ್ಛತಿ ॥

॥ ಪ್ರತಿಪದಾರ್ಥ ॥

**ಹರಿಃ**—ಹಚ್ಚಿ ವರ್ಣವುಳ್ಳವನೂ । **ದೇವಃ**—ಪ್ರಕಾಶಮಾನನೂ ಆದ । **ಪವಮಾನಃ**—ಸೋಮದೇವನು । **ದೇವೇಷು**—ಯಜ್ಞಗಳಲ್ಲಿ । **ಪ್ರಾಚೀನಂ**—ಪೂರ್ವದಿಕ್ಕಿಗೆ ತಿರುಗಿಸಿದ ಅಗ್ರವುಳ್ಳ । **ಬರ್ಹಿಃ**—ದರ್ಭಾಸನವನ್ನು । **ಸ್ತೃಣನ್**—ಹಾಸಿಕೊಂಡು । **ಓಜಸಾ**—ತನ್ನ ಶಕ್ತಿಯಿಂದ । **ಈಯತೇ**—ಮುನ್ನುಗ್ಗುತ್ತಾನೆ.

॥ ಭಾವಾರ್ಥ ॥

ಹಚ್ಚಿವರ್ಣವುಳ್ಳವನೂ, ಪ್ರಕಾಶಮಾನನೂ ಆದ ಸೋಮದೇವನು ಯಜ್ಞಗಳಲ್ಲಿ ಪೂರ್ವದಿಕ್ಕಿಗೆ ತಿರುಗಿಸಿದ ಅಗ್ರವುಳ್ಳ ದರ್ಭಾಸನವನ್ನು ಹಾಸಿಕೊಂಡು ತನ್ನ ಶಕ್ತಿಯಿಂದ ಮುನ್ನುಗ್ಗುತ್ತಾನೆ

English Translation

The bright golden-hued pure-flowing one rushes in its might, strewing the sacred grass in the sacrifice with its points towards the east

॥ ಸಂಹಿತಾಪಾಠಃ ॥

ಉದಾತೈರ್ಜಿಹತೇ ಬೃಹದ್ದ್ವಾರೋ ದೇವೀರ್ಹಿರಣ್ಯಯೀಃ ।
ಪವಮಾನೇನ ಸುಷ್ಟುತಾಃ ॥ ೫ ॥

॥ ಪದಪಾಠಃ ॥

ಉತ್ । ಆತ್ಯೈಃ । ಜಿಹತೇ । ಬೃಹತ್ । ದ್ವಾರಃ । ದೇವೀಃ । ಹಿರಣ್ಯಯೀಃ ।

ಪವಮಾನೇನ । ಸುऽಸ್ತುತಾಃ ॥ ೫ ॥

॥ ಸಾಯಣಭಾಷ್ಯಂ ॥

ಹಿರಣ್ಯಯೀರ್ಹಿರಣ್ಮಯ್ಯೋ ದ್ವಾರೋ ದೇವೀರ್ದ್ವಾರೋ ದೇವ್ಯಃ ಪವಮಾನೇನ ಸೋಮೇನ ಸಹ ಸುಷ್ಟುತಾಃ ಸ್ತೋತೃಭಿಃ ಸಮ್ಯಕ್ ಸ್ತುತಾಃ ಸತ್ಯೋ ಬೃಹದ್ಬೃಹತೀಭ್ಯೋ ಮಹತೀಭ್ಯ ಆತ್ಯೈರಾತಾಭ್ಯೋ ದಿಗ್ಭ್ಯಃ । ಆತಾ ಆಶಾ ಇತಿ ದಿಙ್ನಾಮಸು ಪಾಠಾತ್ । ಉಜ್ಜಿಹತೇ । ಉದ್ಗಚ್ಛಂತಿ ॥

॥ ಪ್ರತಿಪದಾರ್ಥ ॥

**ಹಿರಣ್ಯಯೀಃ**—ಸುವರ್ಣನಿರ್ಮಿತವಾದವೂ । **ದೇವೀಃ**—ದೇವತಾತ್ಮವೂ ಆದ । **ದ್ವಾರಃ**—ದ್ವಾರಗಳು । **ಪವಮಾನೇನ**—ಸೋಮದೇವನೊಡಗೂಡಿ । **ಸುಷ್ಟುತಾಃ**—ಉತ್ತಮವಾಗಿ ಸ್ತುತಿಸಲ್ಪಟ್ಟು । **ಬೃಹತ್**—ಮಹದಾಕಾರವುಳ್ಳ । **ಆತ್ಯೈಃ**—ದಿಕ್ಕುಗಳಿಂದ । **ಉಜ್ಜಿಹತೇ**—ಮೇಲಕ್ಕೇಳುತ್ತವೆ.

॥ ಭಾವಾರ್ಥ ॥

ಸುವರ್ಣನಿರ್ಮಿತವಾದವೂ, ದೇವತಾತ್ಮವೂ ಆದ ದ್ವಾರಗಳು ಸೋಮದೇವನೊಡಗೂಡಿ ಉತ್ತಮವಾಗಿ ಸ್ತುತಿಸಲ್ಪಟ್ಟು ಮಹದಾಕಾರವುಳ್ಳ ದಿಕ್ಕುಗಳಿಂದ ಮೇಲಕ್ಕೇಳುತ್ತವೆ.

English Translation

The bright golden doors, praised by the priests together with the Soma, rise up from the vast horizon

॥ ಸಂಹಿತಾಪಾಠಃ ॥

ಸುಶಿಲ್ಪೇ ಬೃಹತೀ ಮಹೀ ಪವಮಾನೋ ವೃಷಣ್ಯತಿ ।

ನಕ್ತೋಷಾಸಾ ನ ದರ್ಶತೇ ॥ ೬ ॥

॥ ಪದಪಾಠಃ ॥

ಸುಶಿಲ್ಪೇ ಇತಿ ಸುऽಶಿಲ್ಪೇ । ಬೃಹತೀ ಇತಿ । ಮಹೀ ಇತಿ । ಪವಮಾನಃ । ವೃಷಣ್ಯತಿ ।

ನಕ್ತೋಷಸಾ । ನ । ದರ್ಶತೇ ಇತಿ ॥ ೬ ॥

॥ ಸಾಯಣಭಾಷ್ಯಂ ॥

ಸುಶಿಲ್ಪೇ ಸುರೂಪೇ ಬೃಹತೀ ಪರಿವೃಢೇ ಮಹೀ ಮಹತ್ಯೌ ನ ಸಂಪ್ರತಿ ದರ್ಶತೇ ದರ್ಶನೀಯೇ ನಕ್ತೋಷಾಸಾ ನಕ್ತೋಷಾಸೌ ಪವಮಾನಃ ಸೋಮೋ ವೃಷಣ್ಯತಿ । ಕಾಮಯತೇ ॥

॥ ಪ್ರತಿಪದಾರ್ಥ ॥

**ಸುಶಿಲ್ಪೇ**—ಶ್ರೇಷ್ಠವಾದ ರೂಪವುಳ್ಳವರೂ । **ಬೃಹತೀ**—ವಿಸ್ತೃತವಾದವರೂ । **ಮಹೀ**—ಮಾಹಾತ್ಮ್ಯವುಳ್ಳವರೂ । **ನ**—ಈ ಕಾಲದಲ್ಲಿ । **ದರ್ಶತೇ**—ಕಾಣಿಸಿಕೊಳ್ಳುವವರೂ ಆದ । **ನಕ್ತೋಷಾಸಾ**—ರಾತ್ರಿ ಮತ್ತು ಅಹಸ್ಸುಗಳ ಅಭಿಮಾನದೇವತೆಗಳನ್ನು । **ಪವಮಾನಃ**—ಸೋಮನು । **ವೃಷಣ್ಯತಿ**—ಅಪೇಕ್ಷಿಸುತ್ತಾನೆ.

॥ ಭಾವಾರ್ಥ ॥

ಶ್ರೇಷ್ಠವಾದ ರೂಪವುಳ್ಳವರೂ, ವಿಸ್ತೃತವಾಗಿ ಹರಡಿರುವವರೂ, ಮಾಹಾತ್ಮ್ಯವುಳ್ಳವರೂ ಈ ಕಾಲದಲ್ಲಿ ಕಾಣಿಸಿಕೊಳ್ಳುವವರೂ ಆದ ರಾತ್ರಿ ಮತ್ತು ಅಹಸ್ಸುಗಳ ಅಭಿಮಾನದೇವತೆಗಳನ್ನು ಸೋಮನು ಅಪೇಕ್ಷಿಸುತ್ತಾನೆ.

## English Translation

The pure-flowing (Soma) longs for the fair-formed wide-reaching mighty Night and Dawn not yet visible.

॥ ಸಂಹಿತಾಪಾಠಃ ॥

ಉಭಾ ದೇವಾ ನೃಚಕ್ಷಸಾ ಹೋತಾರಾ ದೈವ್ಯಾ ಹುವೇ ।
ಪವಮಾನ ಇಂದ್ರೋ ವೃಷಾ ॥ ೭ ॥

॥ ಪದಪಾಠಃ ॥

ಉಭಾ । ದೇವಾ । ನೃಽಚಕ್ಷಸಾ । ಹೋತಾರಾ । ದೈವ್ಯಾ । ಹುವೇ ।
ಪವಮಾನಃ । ಇಂದ್ರಃ । ವೃಷಾ ॥ ೭ ॥

॥ ಸಾಯಣಭಾಷ್ಯಂ ॥

ನೃಚಕ್ಷಸಾ ಮನುಷ್ಯಾಣಾಂ ದ್ರಷ್ಟಾರೌ ದೈವ್ಯಾ ದೈವ್ಯೌ ದೇವಸಂಬಂಧಿನೌ ಹೋತಾರಾ ಹೋತಾರಾವುಭೋಭೌ ದೇವಾ ದೇವೌ ಹುವೇ । ಆಹ್ವಯಾಮಿ ಯಜ್ಞೇ । ಪವಮಾನಃ ಸೋಮ ಇಂದ್ರೋ ದೀಪ್ತಃ । ತಥಾ ಚ ಯಾಸ್ಕಃ । ಇಂದ್ರ ಇರಾಂ ದೃಣಾತೀತಿ ವೇರಾಂ ದಾರಯತ ಇತಿ ವೇರಾಂ ಧಾರಯತೀತಿ ವೇಂಧೇ ಭೂತಾನೀತಿ ವಾ ತದ್ಯದೇನಂ ಪ್ರಾಣೈಃ ಸಮೈಂಧತ ತದಿಂದ್ರಸ್ಯೇಂದ್ರತ್ವಮಿತಿ ವಿಜ್ಞಾಯತೇ । ನಿ. ೧೦-೮ । ಇತಿ । ವೃಷಾ ಕಾಮಾನಾಂ ವರ್ಷಿತಾ ಚ ಭವತೀತಿ ॥

॥ ಪ್ರತಿಪದಾರ್ಥ ॥

**ನೃಚಕ್ಷಸಾ**—ಮಾನವರ ವ್ಯವಹಾರಗಳನ್ನು ನೋಡತಕ್ಕವರೂ । **ದೈವ್ಯಾ**—ದೇವತಾ ಸಂಬಂಧಿಗಳೂ । **ದೇವಾ**—ದೇವತಾತ್ಮರೂ ಆದ । **ಉಭಾ ಹೋತಾರಾ**—ಇಬ್ಬರು ಹೋತೃಗಳನ್ನೂ । **ಹುವೇ**—ಯಜ್ಞಕ್ಕೆ ಕರೆಯುತ್ತೇನೆ । **ಪವಮಾನಃ**—ಶುದ್ಧವಾದ ಪ್ರವಾಹವುಳ್ಳ ಸೋಮನು । **ಇಂದ್ರುಃ**—ಕಾಂತಿಯುತನೂ । **ವೃಷಾ**-ಕಾಮವರ್ಷಕನೂ ಆಗಿದ್ದಾನೆ

॥ ಭಾವಾರ್ಥ ॥

ಮಾನವರ ವ್ಯವಹಾರಗಳನ್ನು ನೋಡತಕ್ಕವರೂ, ದೇವತಾಸಂಬಂಧಿಗಳೂ, ದೇವತಾತ್ಮರೂ ಆದ ಇಬ್ಬರು ಹೋತೃಗಳನ್ನೂ ಯಜ್ಞಕ್ಕೆ ಕರೆಯುತ್ತೇನೆ ಶುದ್ಧವಾದ ಪ್ರವಾಹವುಳ್ಳ ಸೋಮನು ಕಾಂತಿಯುತನೂ ಕಾಮವರ್ಷಕನೂ ಆಗಿದ್ದಾನೆ

English Translation

I invoke the two divine priests, the two deities who behold men—the pure-flowing (Soma) is radiant and the showerer (of benefits)

॥ ಸಂಹಿತಾಪಾಠಃ ॥

ಭಾರತೀ ಪವಮಾನಸ್ಯ ಸರಸ್ವತೀಳಾ ಮಹೀ ।
ಇಮಂ ನೋ ಯಜ್ಞಮಾ ಗಮನ್ತಿಸ್ರೋ ದೇವೀಃ ಸುಪೇಶಸಃ ॥

॥ ಪದಪಾಠಃ ॥

ಭಾರತೀ । ಪವಮಾನಸ್ಯ । ಸರಸ್ವತೀ । ಇಳಾ । ಮಹೀ ।
ಇಮಂ । ನಃ । ಯಜ್ಞಂ । ಆ । ಗಮನ್ । ತಿಸ್ರಃ । ದೇವೀಃ । ಸುऽಪೇಶಸಃ ॥ ೮ ॥

॥ ಸಾಯಣಭಾಷ್ಯಂ ॥

**ಭಾರತೀ ಭಾರತ್ಯಾಖ್ಯಾ ಸರಸ್ವತೀ ಸರಸ್ವತ್ಯಾಖ್ಯಾ ಚ ಮಹೀ ಮಹತೀಳಾಖ್ಯಾ ಚ ತಿಸ್ರಃ ಸುಪೇಶಸಃ ಸುರೂಪಾ ದೇವೀರ್ದೇವ್ಯೋ ನೋಽಸ್ಮಾಕಂ ಪವಮಾನಸ್ಯ ಸೋಮಸ್ಯ ಸಂಬಂಧಿನಮಿಮಂ ಯಜ್ಞಂ ಪ್ರತ್ಯಾ ಗಮನ್ । ಆಗಚ್ಛಂತು ॥**

॥ ಪ್ರತಿಪದಾರ್ಥ ॥

**ಸುಪೇಶಸಃ**—ಉತ್ತಮವಾದ ರೂಪವುಳ್ಳವರೂ । **ದೇವೀಃ**—ದೇವತಾತ್ಮರೂ ಆದ । **ಭಾರತೀ**—ಭಾರತೀ ದೇವಿಯೂ । **ಸರಸ್ವತೀ**—ಸರಸ್ವತೀದೇವಿಯೂ । **ಮಹೀ**—ಮಹತ್ಸ್ವರೂಪವುಳ್ಳ । **ಇಳಾ**—ಇಳಾದೇವಿಯೂ ।

**ತಿಸ್ರಃ**—ಈ ಮೂವರೂ । **ನಃ**—ನಮ್ಮ । **ಪವಮಾನಸ್ಯ**—ಸೋಮಸಂಬಂಧಿಯಾದ । **ಇಮಂ ಯಜ್ಞಂ**—ಈ ಯಜ್ಞಕ್ಕೆ । **ಆ ಗಮನ್**—ದಯಮಾಡಲಿ.

॥ ಭಾವಾರ್ಥ ॥

ಉತ್ತಮವಾದ ರೂಪವುಳ್ಳವರೂ, ದೇವತಾತ್ಮರೂ ಆದ ಭಾರತೀ, ಸರಸ್ವತೀ, ಇಳಾ ಎಂಬ ಈ ಮೂವರು ದೇವಿಯರೂ ಸಹ ಸೋಮಸಂಬಂಧಿಯಾದ ನಮ್ಮ ಈ ಯಜ್ಞಕ್ಕೆ ದಯಮಾಡಲಿ.

## English Translation

May the three beautiful goddesses Bharati, Saraswati and mighty Ila come to this our offering of the Soma.

॥ ಸಂಹಿತಾಪಾಠಃ ॥

ತ್ವಷ್ಟಾ॑ರಮಗ್ರ॒ಜಾಂ ಗೋ॒ಪಾಂ ಪು॑ರೋ॒ಯಾವಾ॑ನ॒ಮಾ ಹು॑ವೇ ।
ಇಂ॒ದುರಿಂ॒ದ್ರೋ ವೃಷಾ॒ ಹರಿಃ॒ ಪವ॑ಮಾನಃ ಪ್ರ॒ಜಾಪ॑ತಿಃ ॥ ೯ ॥

॥ ಪದಪಾಠಃ ॥

ತ್ವಷ್ಟಾ॑ರಂ । ಅ॒ಗ್ರ॒ಽಜಾಂ । ಗೋ॒ಪಾಂ । ಪು॒ರಃ॒ಽಯಾವಾ॑ನಂ । ಆ । ಹು॒ವೇ॒ ।
ಇಂದು॑ಃ । ಇಂದ್ರ॑ಃ । ವೃಷಾ॑ । ಹರಿ॑ಃ । ಪವ॑ಮಾನಃ । ಪ್ರ॒ಜಾಽಪ॑ತಿಃ ॥ ೯ ॥

॥ ಸಾಯಣಭಾಷ್ಯಂ ॥

**ಅಗ್ರಜಾಮಗ್ರೇ ಜಾತಂ ಗೋಪಾಂ ಪ್ರಜಾನಾಂ ಪಾಲಯಿತಾರಂ ಪುರೋಯಾವಾನಂ ದೇವಾನಾಂ ಪುರಸ್ತಾದ್ಗಂತಾರಂ ತ್ವಷ್ಟಾರಂ ದೇವಮಾ ಹುವೇ । ಆಹ್ವಯಾಮಿ ಯಜ್ಞೇ । ಹರಿರ್ಹರಿತವರ್ಣಃ ಪವಮಾನ ಇಂದುಃ ಸೋಮ ಇಂದ್ರೋ ದೇವಾನಾಮೀಶ್ವರೋ ವೃಷಾ ಕಾಮಾನಾಂ ವರ್ಷಿತಾ ಚ ಪ್ರಜಾಪತಿಃ ಪ್ರಜಾನಾಂ ಪಾಲಯಿತಾ ಚ ಭವತೀತಿ** ॥

॥ ಪ್ರತಿಪದಾರ್ಥ ॥

**ಅಗ್ರಜಾಂ**—ಎಲ್ಲಕ್ಕಿಂತಲೂ ಮೊದಲು ಉತ್ಪನ್ನನಾದವನೂ । **ಗೋಪಾಂ**—ಪ್ರಜೆಗಳ ಪಾಲಕನೂ । **ಪುರೋಯಾವಾನಂ**—ದೇವತೆಗಳ ಮುಂಭಾಗದಲ್ಲಿ ಸಂಚರಿಸುವವನೂ ಆದ । **ತ್ವಷ್ಟಾರಂ**—ತ್ವಷ್ಟೃದೇವನನ್ನು । **ಆ ಹುವೇ**—ಯಜ್ಞಕ್ಕೆ ಕರೆಯುತ್ತೇನೆ । **ಹರಿಃ**—ಪಚ್ಚೆವರ್ಣವುಳ್ಳವನೂ । **ಪವಮಾನಃ**—ಶುದ್ಧವಾದ ಪ್ರವಾಹವುಳ್ಳವನೂ ಆದ । **ಇಂದುಃ**—ಸೋಮನು । **ಇಂದ್ರಃ**—ದೇವತೆಗಳಿಗೆ ಒಡೆಯನಾಗಿಯೂ । **ವೃಷಾ**—ಕಾಮವರ್ಷಕನಾಗಿಯೂ । **ಪ್ರಜಾಪತಿಃ**—ಪ್ರಜೆಗಳಿಗೆ ಪಾಲಕನಾಗಿಯೂ ಇದ್ದಾನೆ.

॥ ಭಾವಾರ್ಥ ॥

ಎಲ್ಲಕ್ಕಿಂತಲೂ ಮೊದಲು ಉತ್ಪನ್ನನಾದವನೂ, ಪ್ರಜೆಗಳ ಪಾಲಕನೂ ದೇವತೆಗಳ ಅಗ್ರಭಾಗದಲ್ಲಿ ಸಂಚರಿಸುವವನೂ ಆದ ತ್ವಷ್ಟೃದೇವನನ್ನು ಯಜ್ಞಕ್ಕೆ ಕರೆಯುತ್ತೇನೆ. ಪಚ್ಚೆವರ್ಣವುಳ್ಳವನೂ, ಶುದ್ಧವಾದ ಪ್ರವಾಹವುಳ್ಳವನೂ ಆದ ಸೋಮನು ದೇವತೆಗಳಿಗೆ ಒಡೆಯನಾಗಿಯೂ ಕಾಮವರ್ಷಕನಾಗಿಯೂ ಪ್ರಜೆಗಳಿಗೆ ಪಾಲಕನಾಗಿಯೂ ಇದ್ದಾನೆ

English Translation

I invoke Twashtri, the first-born, the protector, the leader; the golden-coloured pure-flowing Indu is Indra, the showerer, the lord of all creatures.

॥ ಸಂಹಿತಾಪಾಠಃ ॥

ವನಸ್ಪತಿಂ ಪವಮಾನ ಮಧ್ವಾ ಸಮಂಗ್ಧಿ ಧಾರಯಾ ।
ಸಹಸ್ರವಲ್ಶಂ ಹರಿತಂ ಭ್ರಾಜಮಾನಂ ಹಿರಣ್ಯಯಂ ॥ ೧೦ ॥

॥ ಪದಪಾಠಃ ॥

ವನಸ್ಪತಿಂ । ಪವಮಾನ । ಮಧ್ವಾ । ಸಂ । ಅಂಗ್ಧಿ । ಧಾರಯಾ ।
ಸಹಸ್ರವಲ್ಶಂ । ಹರಿತಂ । ಭ್ರಾಜಮಾನಂ । ಹಿರಣ್ಯಯಂ ॥ ೧೦ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಸೋಮ ಹರಿತಂ ಹರಿತವರ್ಣಂ ಹಿರಣ್ಯಯಂ ಕದಾಚಿದ್ಧಿರಣ್ಯಯವರ್ಣಂ ಚ ಭ್ರಾಜಮಾನಂ ದೀಪ್ಯಮಾನಂ ಸಹಸ್ರವಲ್ಶಂ ಸಹಸ್ರಶಾಖಂ ವನಸ್ಪತಿಂ ದೇವಂ ಧಾರಯಾ ಧಾರಾಮಯೇಣ ಮಧ್ವಾ ಮಧುನಾ ಸಮಙ್ಗ್ಧಿ । ಅಂಙ್ಕ್ಷ್ವ । ಸಂಸ್ಕುರ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಪವಮಾನ**—ಎಲೈ ಸೋಮದೇವನೇ, । **ಹರಿತಂ**. -ಪಚ್ಚೆವರ್ಣವುಳ್ಳವನೂ (ಅಥವಾ ಹರಿತವರ್ಣವುಳ್ಳವನೂ) । **ಹಿರಣ್ಯಯಂ**—ಸುವರ್ಣನಿರ್ಮಿತನೂ । **ಭ್ರಾಜಮಾನಂ**—ಪ್ರಕಾಶಯುತನೂ । **ಸಹಸ್ರವಲ್ಶಂ**—ಸಹಸ್ರಶಾಖೆಯುಳ್ಳವನೂ ಆದ । **ವನಸ್ಪತಿಂ**—ವನಸ್ಪತಿದೇವನನ್ನು । **ಧಾರಯಾ**—ಪ್ರವಾಹರೂಪವಾದ । **ಮಧ್ವಾ**-ನಿನ್ನ ಮಧುವಿನಿಂದ । **ಸಮಂಗ್ಧಿ**—ಸಂಸ್ಕರಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಪಚ್ಚೆವರ್ಣವುಳ್ಳವನೂ, ಸುವರ್ಣ ನಿರ್ಮಿತನೂ, ಪ್ರಕಾಶಯುತನೂ, ಸಹಸ್ರಶಾಖೆಯುಳ್ಳವನೂ ಆದ ವನಸ್ಪತಿದೇವನನ್ನು ಪ್ರವಾಹರೂಪವಾದ ನಿನ್ನ ಮಧುವಿನಿಂದ ಸಂಸ್ಕರಿಸು.

English Translation

Pure Soma, consecrate with your streaming ambrosia the green bright golden-hued Vanaspati with its thousand branches.

॥ ಸಂಹಿತಾಪಾಠಃ ॥

ವಿಶ್ವೇ ದೇವಾಃ ಸ್ವಾಹಾಕೃತಿಂ ಪವಮಾನಸ್ಯಾ ಗತ ।
ವಾಯುರ್ಬೃಹಸ್ಪತಿಃ ಸೂರ್ಯೋಽಗ್ನಿರಿಂದ್ರಃ ಸಜೋಷಸಃ ॥ ೧೧ ॥

॥ ಪದಪಾಠಃ ॥

ವಿಶ್ವೇ । ದೇವಾಃ । ಸ್ವಾಹಾಽಕೃತಿಂ । ಪವಮಾನಸ್ಯ । ಆ । ಗತ ।
ವಾಯುಃ । ಬೃಹಸ್ಪತಿಃ । ಸೂರ್ಯಃ । ಅಗ್ನಿಃ । ಇಂದ್ರಃ । ಸಽಜೋಷಸಃ ॥ ೧೧ ॥

॥ ಸಾಯಣಭಾಷ್ಯಂ ॥

ಹೇ ವಿಶ್ವೇ ದೇವಾಃ ವಾಯುರ್ಬೃಹಸ್ಪತಿಶ್ಚ ಸೂರ್ಯಶ್ಚಾಗ್ನಿಶ್ಚೇಂದ್ರಶ್ಚ ಸರ್ವೇ ಯೂಯಂ ಸಜೋಷಸಃ ಸಂಗತಾಃ ಸಂತಃ ಪವಮಾನಸ್ಯ ಸೋಮಸ್ಯ ಸ್ವಾಹಾಕೃತಿಂ ಸ್ವಾಹಾಕಾರಂ ಪ್ರತ್ಯಾ ಗತ । ಪ್ರತ್ಯಾಗಚ್ಛತ ॥

॥ ಪ್ರತಿಪದಾರ್ಥ ॥

ವಿಶ್ವೇ ದೇವಾಃ—ಎಲ್ಲೈ ವಿಶ್ವೇದೇವತೆಗಳೇ, । ಪವಮಾನಸ್ಯ—ಸೋಮದೇವನ । ಸ್ವಾಹಾಕೃತಿಂ—ಸ್ವಾಹಾಕಾರಪೂರ್ವಕವಾದ ಯಜ್ಞಕ್ಕೆ । ಗತ—ದಯಮಾಡಿರಿ । ವಾಯುಃ—ವಾಯುವೂ । ಬೃಹಸ್ಪತಿಃ—ಬೃಹಸ್ಪತಿಯೂ । ಸೂರ್ಯಃ—ಸೂರ್ಯನೂ । ಅಗ್ನಿಃ—ಅಗ್ನಿಯೂ । ಇಂದ್ರಃ—ಇಂದ್ರನೂ । ಸಜೋಷಸಃ—ಇವರೆಲ್ಲರೂ ಒಟ್ಟುಗೂಡಿದವರಾಗಿ ಬರಲಿ

॥ ಭಾವಾರ್ಥ ॥

ಎಲ್ಲೈ ವಿಶ್ವೇದೇವತೆಗಳೇ, ಸೋಮದೇವನ ಸ್ವಾಹಾಕಾರ ಪೂರ್ವಕವಾದ ಯಜ್ಞಕ್ಕೆ ದಯಮಾಡಿರಿ ವಾಯುವೂ, ಬೃಹಸ್ಪತಿಯೂ ಸೂರ್ಯನೂ, ಅಗ್ನಿಯೂ ಇಂದ್ರನೂ ಇವರೆಲ್ಲರೂ ಒಟ್ಟುಗೂಡಿದವರಾಗಿ ಬರಲಿ

English Translation

O all you gods, come together to the consecration of the Soma,—Vayu, Brihaspati, Surya, Agni and Indra.

# ಆರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಮಂದ್ರಯೇತಿ ನವರ್ಚಂ ಷಷ್ಠಂ ಸೂಕ್ತಂ ಕಾಶ್ಯಪಸ್ಯಾಸಿತಸ್ಯ ದೇವಲಸ್ಯ ವಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ ॥**

ಅನುವಾದವು—**ಮಂದ್ರಯಾ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅಸಿತಃ ಕಾಶ್ಯಪಃ ಅಥವಾ ದೇವಲ ಎಂಬುವನು ಋಷಿಯು ಪವಮಾನಸೋಮವು ದೇವತೆಯು; ಗಾಯತ್ರೀಛಂದಸ್ಸು

## ಸೂಕ್ತ—೬

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೬ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೨೬, ೨೭ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಮಂದ್ರಯಾ ಸೋಮ ಧಾರಯಾ ವೃಷಾ ಪವಸ್ವ ದೇವಯುಃ ।
ಅವ್ಯೋ ವಾರೇಷ್ವಸ್ಮಯುಃ ॥ ೧ ॥

॥ ಪದಪಾಠಃ ॥

ಮಂದ್ರಯಾ । ಸೋಮ । ಧಾರಯಾ । ವೃಷಾ । ಪವಸ್ವ । ದೇವಽಯುಃ ।
ಅವ್ಯಃ । ವಾರೇಷು । ಅಸ್ಮಽಯುಃ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಸೋಮ ವೃಷಾ ಕಾಮಾನಾಂ ವರ್ಷಿತಾ ದೇವಯುರ್ದೇವಕಾಮೋಽಸ್ಮಯುರಸ್ಮತ್ಕಾಮ-ಶ್ಚಾವ್ಯೋಽವೇರ್ವಾರೇಷು ವಾಲೇಷು ದಶಾಪವಿತ್ರೇ ಮಂದ್ರಯಾ ಮದಕರಯಾ ಧಾರಯಾ ಪವಸ್ವ ಕ್ಷರ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ, । **ವೃಷಾ**—ಇಷ್ಟಾರ್ಥಪ್ರದನೂ, । **ದೇವಯುಃ**—ದೇವಪೂಜೆಯಲ್ಲಿ ಇಚ್ಛೆಯುಳ್ಳವನೂ । **ಅಸ್ಮಯುಃ**—ನಮ್ಮನ್ನು ಅನುಗ್ರಹಿಸಲಿಚ್ಛಿಸುವವನೂ ಆಗಿ । **ಅವ್ಯಃ ವಾರೇಷು**—ದಶಾ

ಪವಿತ್ರದಲ್ಲಿ ಶೋಧಕವಾದ ಉಣ್ಣೆಯ ಎಳೆಗಳಮೇಲೆ । **ಮಂದ್ರಯಾ**—ಆಹ್ಲಾದಕವಾದ । **ಧಾರಯಾ**—ಪ್ರವಾಹ ದಿಂದ । **ಪವಸ್ವ**—ಸ್ರವಿಸು

॥ ಭಾವಾರ್ಥ ॥

ಎಲೈ ಸೋಮನೇ, ಇಷ್ಟಾರ್ಥಪ್ರದನೂ, ದೇವಪೂಜೆಯಲ್ಲಿ ಇಚ್ಛೆಯುಳ್ಳವನೂ ನಮ್ಮನ್ನು ಅನುಗ್ರಹಿಸಲಿಚ್ಛೆಯುಳ್ಳವನೂ ಆಗಿ ದಶಾಪವಿತ್ರದಲ್ಲಿ ನಿನ್ನನ್ನು ಶುದ್ಧಿಮಾಡತಕ್ಕ ಉಣ್ಣೆಯ ಕೂದಲುಗಳ ಮೇಲೆ ಆಹ್ಲಾದಕರವಾದ ಪ್ರವಾಹವುಳ್ಳವನಾಗಿ ಸ್ರವಿಸು.

English Translation

Soma, you are the showrer (of benefits); devoted to the gods, favourable to us, flow with your exhilarating stream into the woollen seive.

॥ ಸಂಹಿತಾಪಾಠಃ ॥

ಅಭಿ ತ್ಯಂ ಮದ್ಯಂ ಮದಮಿಂದವಿಂದ್ರ ಇತಿ ಕ್ಷರ ।

ಅಭಿ ವಾಜಿನೋ ಅರ್ವತಃ ॥ ೨ ॥

॥ ಪದಪಾಠಃ ॥

ಅಭಿ । ತ್ಯಂ । ಮದ್ಯಂ । ಮದಂ । ಇಂದೋ ಇತಿ । ಇಂದ್ರಃ । ಇತಿ । ಕ್ಷರ ।

ಅಭಿ । ವಾಜಿನಃ । ಅರ್ವತಃ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಇಂದೋ ಸೋಮ ತ್ವಮಿಂದ್ರ ಈಶ್ವರ ಇತಿ ಕೃತ್ವಾ ತ್ಯಂ ತಂ ಮದ್ಯಂ ಮದಕರಂ ಮದಂ ರಸಮಭಿ ಕ್ಷರ । ವರ್ಷ । ವಾಜಿನೋ ಬಲವತೋಽರ್ವತೋಽಶ್ವಾಂಶ್ಚಾಸ್ಮದರ್ಥಮಭಿ ಕ್ಷರೇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಇಂದೋ**—ಎಲೈ ಸೋಮನೇ, । **ಇಂದ್ರಃ ಇತಿ**—ನೀನೇ ಸರ್ವೇಶ್ವರನೆಂದು ತಿಳಿದು । **ತ್ಯಂ**—ಪ್ರಸಿದ್ಧವಾದುದೂ । **ಮದ್ಯಂ**—ಹರ್ಷಜನಕವಾದುದೂ ಆದ । **ಮದಂ**—ರಸವನ್ನು । **ಅಭಿ ಕ್ಷರ**—ಸ್ರವಿಸುವಂತೆ ಮಾಡು । **ವಾಜಿನಃ**—ಶಕ್ತಿಯುತವಾದ । **ಅರ್ವತಃ**—ಅಶ್ವಗಳನ್ನು । **ಅಭಿ ( ಕ್ಷರ )**—ಉತ್ಪನ್ನವಾಗುವಂತೆ ಮಾಡು (ಚಲಿಸುವಂತೆ ಮಾಡು).

॥ ಭಾವಾರ್ಥ ॥

ಎಲೈ ಸೋಮನೇ, ನೀನೇ ಸರ್ವೇಶ್ವರನೆಂದು ತಿಳಿದು ಪ್ರಸಿದ್ಧವಾದುದೂ, ಹರ್ಷಜನಕವಾದುದೂ ಆದ ರಸವನ್ನೂ ಸಹ ಉತ್ಪನ್ನವಾಗುವಂತೆ ಮಾಡು. (ಚಲಿಸುವಂತೆ ಮಾಡು).

## English Translation

Indu, you, as sovereign, effuse that exhilarating juice, and pour forth vigorous steeds.

॥ ಸಂಹಿತಾಪಾಠಃ ॥

ಅಭಿ ತ್ಯಂ ಪೂರ್ವ್ಯಂ ಮದಂ ಸುವಾನೋ ಅರ್ಷ ಪವಿತ್ರ ಆ ।
ಅಭಿ ವಾಜಮುತ ಶ್ರವಃ ॥ ೩ ॥

॥ ಪದಪಾಠಃ ॥

ಅಭಿ । ತ್ಯಂ । ಪೂರ್ವ್ಯಂ । ಮದಂ । ಸುವಾನಃ । ಅರ್ಷ । ಪವಿತ್ರೇ । ಆ ।
ಅಭಿ । ವಾಜಂ । ಉತ । ಶ್ರವಃ ॥ ೩ ॥

। ಸಾಯಣಭಾಷ್ಯಂ ।

ಹೇ ಸೋಮ ಸುವಾನೋಽಭಿಷೂಯಮಾಣಸ್ತ್ವಂ ಪೂರ್ವ್ಯಂ ಪ್ರತ್ನಂ ತ್ಯಂ ತಂ ಪ್ರಸಿದ್ಧಂ ಮದಂ ಮದಕರಂ ರಸಂ ಪವಿತ್ರ ಆ ಸಮಂತಾದಭ್ಯರ್ಷ । ಅಭಿಗಮಯ। ವಾಜಂ ಬಲಮಸ್ಮಾನಭ್ಯರ್ಷ । ಉತಾಪಿ ಚ ಶ್ರವೋಽನ್ನಮಭ್ಯರ್ಷ ॥

। ಪ್ರತಿಪದಾರ್ಥ ।

(ಎಲೈ ಸೋಮನೇ) **ಸುವಾನಃ**—ಹಿಂಡಲ್ಪಡತಕ್ಕ ನೀನು । **ಪೂರ್ವ್ಯಂ**— ಪುರಾತನವಾದುದೂ । **ತ್ಯಂ**—ಪ್ರಸಿದ್ಧವಾದುದೂ । **ಮದಂ**—ಮದಕರವಾದುದೂ ಆದ ರಸವನ್ನು । **ಪವಿತ್ರೇ**-ದಶಾಪವಿತ್ರದಲ್ಲಿ । **ಆ**—ಸುತ್ತಲೂ । **ಅಭ್ಯರ್ಷ**—ಸ್ರವಿಸುವಂತೆ ಮಾಡು । **ವಾಜಂ**—ಶಕ್ತಿಯನ್ನೂ । **ಅಭ್ಯರ್ಷ**—ಉತ್ಪನ್ನಮಾಡು । **ಉತ**—ಮತ್ತು। **ಶ್ರವಃ**—ಅನ್ನವನ್ನೂ ಉತ್ಪನ್ನಮಾಡು.

। ಭಾವಾರ್ಥ ।

ಎಲೈ ಸೋಮನೇ, ನಮ್ಮಿಂದ ಹಿಂಡಲ್ಪಡತಕ್ಕ ನೀನು ಪುರಾತನವಾದುದೂ ಪ್ರಸಿದ್ಧವಾದುದೂ ಮದಕರವಾದುದೂ ಆದ ರಸವನ್ನು ದಶಾಪವಿತ್ರದ ಸುತ್ತಲೂ ಸ್ರವಿಸುವಂತೆ ಮಾಡು. ನಮ್ಮಲ್ಲಿ ಶಕ್ತಿಯನ್ನುಂಟುಮಾಡು. ಅನ್ನವನ್ನು ಉತ್ಪನ್ನಮಾಡಿ ನಮಗೆ ಲಭಿಸುವಂತೆ ಮಾಡು.

## English Translation

Rain out through the filter, while pressed, that ancient exhilarating fluid, and pour us forth strength and food.

॥ ಸಂಹಿತಾಪಾಠಃ ॥

ಅನು ದ್ರಪ್ಸಾಸ ಇಂದವ ಆಪೋ ನ ಪ್ರವತಾಸರನ್ ।
ಪುನಾನಾ ಇಂದ್ರಮಾಶತ ॥ ೪ ॥

॥ ಪದಪಾಠಃ ॥

ಅನು । ದ್ರಪ್ಸಾಸಃ । ಇಂದವಃ । ಆಪಃ । ನ । ಪ್ರವತಾ । ಅಸರನ್ ।
ಪುನಾನಾಃ । ಇಂದ್ರಂ । ಆಶತ ॥ ೪ ॥

॥ ಸಾಯಣಭಾಷ್ಯಂ ॥

ದ್ರಪ್ಸಾಸೋ ದ್ರುತಗತಯಃ ಪುನಾನಾಃ ಕ್ಷರಂತ ಇಂದವಃ ಸೋಮಾಃ ಪ್ರವತಾ ಪ್ರವಣೇನ ಮಾರ್ಗೇಣಾಪೋ ನಾಪ ಇವೇಂದ್ರಮನ್ವಸರನ್ । ಅನುಗಚ್ಛಂತಿ । ಆಶತ । ವ್ಯಾಪ್ನುವಂತಿ ಚ ॥

॥ ಪ್ರತಿಪದಾರ್ಥ ॥

ದ್ರಪ್ಸಾಸಃ— ವೇಗವಾದ ಗಮನವುಳ್ಳವೂ । ಪುನಾನಾಃ— ಪ್ರವಿಸುವುವೂ ಆದ । ಇಂದವಃ— ಸೋಮರಸಗಳು । ಪ್ರವತಾ—ತಗ್ಗುಪ್ರದೇಶದಲ್ಲಿ ಹರಿಯುವ । ಆಪೋ ನ— ಉದಕಗಳಂತೆ ವೇಗವಾಗಿ । ಇಂದ್ರಂ ಅನು- ಇಂದ್ರನಿಗಭಿಮುಖವಾಗಿ । ಅಸರನ್—ಪ್ರವಹಿಸುತ್ತವೆ । ಆಶತ—ಅವನ ಶರೀರದಲ್ಲಿ ವ್ಯಾಪಿಸುತ್ತವೆ.

॥ ಭಾವಾರ್ಥ ॥

ವೇಗವಾಗಿ ಗಮನವುಳ್ಳವೂ ಪ್ರವಿಸುವುವೂ ಆದ ಸೋಮರಸಗಳು ತಗ್ಗುಪ್ರದೇಶದಲ್ಲಿ ಹರಿಯುವ ಉದಕಗಳಂತೆ ವೇಗವಾಗಿ ಇಂದ್ರನಿಗಭಿಮುಖವಾಗಿ ಪ್ರವಹಿಸುತ್ತವೆ. ಅವನ ಶರೀರದಲ್ಲಿ ವ್ಯಾಪಿಸುತ್ತವೆ.

English Translation

The quickly-falling drops, as they filter, follow Indra and reach him, like waters rushing down a declivity.

॥ ಸಂಹಿತಾಪಾಠಃ ॥

ಯಮತ್ಯಮಿವ ವಾಜಿನಂ ಮೃಜಂತಿ ಯೋಷಣೋ ದಶ ।
ವನೇ ಕ್ರೀಳಂತಮತ್ಯವಿಂ ॥ ೫ ॥

॥ ಪದಪಾಠಃ ॥

ಯಂ । ಅತ್ಯಂಽಇವ । ವಾಜಿನಂ । ಮೃಜಂತಿ । ಯೋಷಣಃ । ದಶ ।

ವನೇ । ಕ್ರೀಳಂತಂ । ಅತಿಽಅವಿಂ ॥ ೫ ॥

॥ ಸಾಯಣಭಾಷ್ಯಂ ॥

**ಅತ್ಯವಿಂ ದಶಾಪವಿತ್ರಮತಿಕ್ರಮ್ಯ ವನೇಽರಣ್ಯೇ ಕ್ರೀಳಂತಂ ವರ್ತಮಾನಂ ಯಂ ಸೋಮಂ ದಶ ದಶಸಂಖ್ಯಾಕಾ ಯೋಷಣಃ ಸ್ತ್ರಿಯಃ । ಅಂಗುಲಯ ಇತ್ಯರ್ಥಃ । ತಥಾ ಚ ನಿಗಮಾಂತರಂ । ತಮೀಮಣ್ವೀಃ ಸಮರ್ಯ ಆ ಗೃಭ್ಣಂತಿ ಯೋಷಣೋ ದಶ । ಋ. ೯-೧-೭ । ಇತಿ । ವಾಜಿನಂ ಬಲಿನಮತ್ಯಮಿವಾಶ್ವಮಿವ ಮೃಜಂತಿ ಪರಿಚರಂತಿ । ಉತ್ತರಯಾ ಸಹಾನ್ವಯಃ ॥**

॥ ಪ್ರತಿಪದಾರ್ಥ ॥

**ಅತ್ಯವಿಂ**—ದಶಾಪವಿತ್ರದಿಂದ ಹೊರಕ್ಕೆ ಬಂದು । **ವನೇ**—ಅರಣ್ಯದಲ್ಲಿ । **ಕ್ರೀಳಂತಂ**—ನಲಿಯುತ್ತಿರುವ। **ಯಂ**—ಯಾವ ಅದೇ ಸೋಮವನ್ನು। **ದಶ ಯೋಷಣಃ**—ಹತ್ತು ಅಂಗುಲಿಗಳೂ। **ವಾಜಿನಂ**—ಶಕ್ತಿಯುತವಾದ । **ಅತ್ಯಂ ಇವ**—ಅಶ್ವವನ್ನು ಮಾನವರು ಉಪಚರಿಸುವಂತೆ । **ಮೃಜಂತಿ**—ಉಪಚರಿಸಿ ಸಂಸ್ಕರಿಸುತ್ತವೆ.

॥ ಭಾವಾರ್ಥ ॥

ದಶಾಪವಿತ್ರದಿಂದ ಹೊರಕ್ಕೆ ಬಂದು ಅರಣ್ಯದಲ್ಲಿ ನಲಿಯುತ್ತಿರುವ ಯಾವ ಅದೇ ಸೋಮವನ್ನು ಹತ್ತು ಅಂಗುಲಿಗಳೂ ಸಹ ಶಕ್ತಿಯುತವಾದ ಅಶ್ವವನ್ನು ಮಾನವರು ಉಪಚರಿಸುವಂತೆ ಉಪಚರಿಸಿ ಸಂಸ್ಕರಿಸುತ್ತವೆ.

English Translation

That which sporting in the wood and spurting beyond the sieve, the ten sisters press, as (men rub down) a strong horse.

॥ ಸಂಹಿತಾಪಾಠಃ ॥

ತಂ ಗೋಭಿರ್ವೃಷಣಂ ರಸಂ ಮದಾಯ ದೇವವೀತಯೇ ।

ಸುತಂ ಭರಾಯ ಸಂಸೃಜ ॥ ೬ ॥

॥ ಪದಪಾಠಃ ॥

ತಂ । ಗೋಭಿಃ । ವೃಷಣಂ । ರಸಂ । ಮದಾಯ । ದೇವಽವೀತಯೇ ।

ಸುತಂ । ಭರಾಯ । ಸಂ । ಸೃಜ ॥ ೬ ॥

॥ ಸಾಯಣಭಾಷ್ಯಂ ॥

ವೃಷಣಂ ಕಾಮಾನಾಂ ವರ್ಷಿತಾರಂ ದೇವವೀತಯೇ ದೇವಾನಾಂ ಪಾನಾಯ ಮದಾಯ ಸುತಮಭಿಷುತಂ ತಂ ರಸಂ ಭರಾಯ ಸಂಗ್ರಾಮಾಯ ಗೋಭಿಃ ಪಯೋಭಿಃ ಸಂ ಸೃಜ । ಸಂಯೋಜಯ ॥

॥ ಪ್ರತಿಪದಾರ್ಥ ॥

**ವೃಷಣಂ**—ಕಾಮವರ್ಷಕವಾದುದೂ। **ದೇವವೀತಯೇ**—ದೇವತೆಗಳ ಪಾನಕ್ಕಾಗಿಯೂ। **ಮದಾಯ**—ಅವರಿಗೆ ಹರ್ಷವನ್ನುಂಟುಮಾಡುವುದಕ್ಕೂ । **ಸುತಂ**—ಹಿಂಡಲ್ಪಟ್ಟುದೂ। **ತಂ**—ಪ್ರಸಿದ್ಧವಾದುದೂ ಆದ । **ರಸಂ**—ಸೋಮರಸವನ್ನು । **ಭರಾಯ**—ಸಂಗ್ರಾಮಕ್ಕಾಗಿ । **ಗೋಭಿಃ**—ಕ್ಷೀರಾದಿಗಳೊಂದಿಗೆ । **ಸಂ ಸೃಜ**—ಸೇರಿಸಿ ಸಂಸ್ಕರಿಸು.

॥ ಭಾವಾರ್ಥ ॥

ಕಾಮವರ್ಷಕವಾದುದೂ, ದೇವತೆಗಳ ಪಾನಕ್ಕಾಗಿಯೂ ಅವರಿಗೆ ಹರ್ಷವನ್ನುಂಟುಮಾಡುವುದಕ್ಕೂ ಹಿಂಡಲ್ಪಟ್ಟುದೂ ಪ್ರಸಿದ್ಧವಾದುದೂ ಆದ ಸೋಮರಸವನ್ನು ಸಂಗ್ರಾಮಕ್ಕಾಗಿ ಕ್ಷೀರಾದಿಗಳೊಂದಿಗೆ ಸೇರಿಸಿ ಸಂಸ್ಕರಿಸು.

English Translation

That desire-showering liquor, effused for the drink of the gods and for our exhilaration,—mix with milk for prowess in battle.

॥ ಸಂಹಿತಾಪಾಠಃ ॥

ದೇವೋ ದೇವಾಯ ಧಾರಯೇಂದ್ರಾಯ ಪವತೇ ಸುತಃ ।
ಪಯೋ ಯದಸ್ಯ ಪೀಪಯತ್ ॥ ೭ ॥

॥ ಪದಪಾಠಃ ॥

ದೇವಃ । ದೇವಾಯ । ಧಾರಯಾ । ಇಂದ್ರಾಯ । ಪವತೇ । ಸುತಃ ।
ಪಯಃ । ಯತ್ । ಅಸ್ಯ । ಪೀಪಯತ್ ॥ ೭ ॥

॥ ಸಾಯಣಭಾಷ್ಯಂ ॥

ದೇವಾಯ ದ್ಯೋತಮಾನಾಯೇಂದ್ರಾಯ ಸುತೋಽಭಿಷುತೋ ದೇವೋ ದ್ಯೋತಮಾನಃ ಸೋಮೋ ಧಾರಯಾ ಪವತೇ । ಕ್ಷರತಿ । ಯದ್ಯಸ್ಮಾದಸ್ಯ ಸೋಮಸ್ಯ ಪಯಃ ಪೀಪಯತ್ ಇಂದ್ರಮಾಪ್ಯಾಯಿತವತ್ । ತಸ್ಮಾದ್ಧಾರಯಾ ಪವತ ಇತ್ಯರ್ಥಃ ।

॥ ಪ್ರತಿಪದಾರ್ಥ ॥

**ಯತ್**— ಯಾವ ನಿಮಿತ್ತವಾಗಿ । **ಅಸ್ಯ**— ಈ ಸೋಮದ । **ಪಯಃ**—ರಸವು । **ಪೀಪಯತ್**— ಇಂದ್ರನನ್ನು ಪುಷ್ಟಿಗೊಳಿಸುವುದೋ ಆದುದರಿಂದಲೇ । **ದೇವಾಯ**—ದೇವತಾತ್ಮನಾದ । **ಇಂದ್ರಾಯ**— ಇಂದ್ರನಿಗಾಗಿ । **ಸುತಃ**—ಹಿಂಡಲ್ಪಟ್ಟದ್ದೂ । **ದೇವಃ**—ಪ್ರಕಾಶಮಾನವಾದುದೂ ಆದ ಸೋಮವು । **ಧಾರಯಾ**— ಪ್ರವಾಹರೂಪದಿಂದ । **ಪವತೇ**— ಪ್ರವಿಸುತ್ತದೆ

॥ ಭಾವಾರ್ಥ ॥

ಯಾವ ನಿಮಿತ್ತವಾಗಿ ಈ ಸೋಮದ ರಸವು ಇಂದ್ರನನ್ನು ಪುಷ್ಟಿಗೊಳಿಸುವುದೋ ಆದುದರಿಂದಲ ದೇವತಾತ್ಮನಾದ ಇಂದ್ರನಿಗಾಗಿ ಹಿಂಡಲ್ಪಟ್ಟದ್ದೂ ಪ್ರಕಾಶಮಾನವಾದುದೂ ಆದ ಸೋಮವು ಪ್ರವಾಹರೂಪದಿಂದ ಪ್ರವಿಸುತ್ತದೆ

English Translation

The divine Soma, when effused, flows to the divine Indra in a stream since its milk fattens him.

॥ ಸಂಹಿತಾಪಾಠಃ ॥

ಆತ್ಮಾ ಯಜ್ಞಸ್ಯ ರಂಹ್ಯಾ ಸುಷ್ವಾಣಃ ಪವತೇ ಸುತಃ ।
ಪ್ರತ್ನಂ ನಿ ಪಾತಿ ಕಾವ್ಯಂ ॥ ೮ ॥

॥ ಪದಪಾಠಃ ॥

ಆತ್ಮಾ । ಯಜ್ಞಸ್ಯ । ರಂಹ್ಯಾ । ಸುಸ್ವಾನಃ । ಪವತೇ । ಸುತಃ ।
ಪ್ರತ್ನಂ । ನಿ । ಪಾತಿ । ಕಾವ್ಯಂ ॥ ೮ ॥

॥ ಸಾಯಣಭಾಷ್ಯಂ ॥

**ಯಜ್ಞಸ್ಯಾತ್ಮಾತ್ಮಭೂತಃ ಸುತೋಽಭಿಷುತಃ ಸೋಮಃ ಸುಷ್ವಾಣೋಃ ಯಜಮಾನೇಭ್ಯಃ ಕಾಮಾನ್ ಪ್ರೇರಯನ್ ರಂಹ್ಯಾ ವೇಗೇನ ಪವತೇ । ಕ್ಷರತಿ । ಪ್ರತ್ನಂ ಪುರಾತನಂ ಕಾವ್ಯಮಾತ್ಮನಃ ಕವಿತ್ವಂ ಚ ನಿ ಪಾತಿ । ಅಭಿಕ್ಷರತಿ ॥**

॥ ಪ್ರತಿಪದಾರ್ಥ ॥

**ಯಜ್ಞಸ್ಯ**—ಯಜ್ಞಕ್ಕೆ । **ಆತ್ಮಾ**—ಆತ್ಮಭೂತವಾದುದೂ । **ಸುತಃ**-ಹಿಂಡಲ್ಪಟ್ಟದ್ದೂ ಆದ ಸೋಮವು । **ಸುಷ್ವಾಣಃ**—ಯಜಮಾನರ ಇಷ್ಟಾರ್ಥಗಳನ್ನು ಒದಗಿಸುತ್ತಾ । **ರಂಹ್ಯಾ**—ವೇಗದಿಂದ । **ಪವತೇ**—ಹರಿಯುತ್ತದೆ। **ಪ್ರತ್ನಂ**—ಪುರಾತನವಾದ । **ಕಾವ್ಯಂ**— ತನ್ನ ಸೃಷ್ಟಿಶಕ್ತಿಯನ್ನು । **ನಿ ಪಾತಿ**—ರಕ್ಷಿಸುತ್ತದೆ.

॥ ಭಾವಾರ್ಥ ॥

ಯಜ್ಞಕ್ಕೆ ಆತ್ಮಭೂತವಾದುದೂ, ಹಿಂಡಲ್ಪಟ್ಟುದೂ ಆದ ಸೋಮವು ಯಜಮಾನರ ಇಷ್ಟಾರ್ಥಗಳನ್ನು ಒದಗಿಸುತ್ತಾ ವೇಗದಿಂದ ಹರಿಯುತ್ತದೆ. ಪುರಾತನವಾದ ತನ್ನ ಸೃಷ್ಟಿಶಕ್ತಿಯನ್ನು ರಕ್ಷಿಸಿಕೊಳ್ಳುತ್ತದೆ.

English Translation

The soul of the sacrifice, Soma, flows ; with speed bringing blessings, and maintains his ancient seer-hood

॥ ಸಂಹಿತಾಪಾಠಃ ॥

ಏವಾ ಪುನಾನ ಇಂದ್ರಯುರ್ಮದಂ ಮದಿಷ್ಠ ವೀತಯೇ ।
ಗುಹಾ ಚಿದ್ದಧಿಷೇ ಗಿರಃ ॥ ೯ ॥

॥ ಪದಪಾಠಃ ॥

ಏವ । ಪುನಾನಃ । ಇಂದ್ರಯುಃ । ಮದಂ । ಮದಿಷ್ಠ । ವೀತಯೇ ।
ಗುಹಾ । ಚಿತ್ । ದಧಿಷೇ । ಗಿರಃ ॥ ೯ ॥

॥ ಸಾಯಣಭಾಷ್ಯಂ ॥

ಹೇ ಮದಿಷ್ಠಾತಿಶಯೇನ ಮದಕರ ಸೋಮ ಇಂದ್ರಯುರಿಂದ್ರಕಾಮಸ್ತ್ವಂವೀತಯ ಇಂದ್ರಸ್ಯ ಪಾನಾಯೈವೈವಂ ಮದಂ ಪುನಾನಃ ಕ್ಷರನ್ಗುಹಾ ಗುಹಾಯಾಂ । ಯಜ್ಞಶಾಲಾಯಾಮಿತ್ಯರ್ಥಃ । ಗಿರಶ್ಚಿಚ್ಛಬ್ದಾನಪಿ ದಧಿಷೇ । ಅಭಿಷವವೇಲಾಯಾಮುಪರವೇಷು ಧಾರಯಸಿ । ಕರೋಷೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಮದಿಷ್ಠ**—ಅತ್ಯಂತವಾಗಿ ಹರ್ಷವನ್ನುಂಟುಮಾಡತಕ್ಕ ಎಲೈ ಸೋಮವೆ । **ಇಂದ್ರಯುಃ**—ಇಂದ್ರನನ್ನು ಸೇವಿಸಲಿಚ್ಛಿಸುವ ನೀನು । **ವೀತಯೇ**—ಇಂದ್ರನ ಪಾನಕ್ಕಾಗಿ । **ಏವ**—ಇದೇ ಪ್ರಕಾರವಾಗಿ । **ಮದಂ**—ರಸವನ್ನು । **ಪುನಾನಃ**—ಸುರಿಸುತ್ತಾ । **ಗುಹಾ**—ಯಜ್ಞದ ರಹಸ್ಯಪ್ರದೇಶದಲ್ಲಿ । **ಗಿರಶ್ಚಿತ್**—ಶಬ್ದಗಳನ್ನೂ । **ದಧಿಷೇ**—ಉತ್ಪನ್ನಮಾಡುತ್ತೀಯೆ

॥ ಭಾವಾರ್ಥ ॥

ಅತ್ಯಂತವಾಗಿ ಹರ್ಷವನ್ನುಂಟುಮಾಡತಕ್ಕ ಎಲೈ ಸೋಮವೇ, ಇಂದ್ರನನ್ನು ಸೇವಿಸಲಿಚ್ಛಿಸುವ ನೀನು ಇಂದ್ರನ ಪಾನಕ್ಕಾಗಿ ಇದೇ ಪ್ರಕಾರವಾಗಿ ರಸವನ್ನು ಸುರಿಸುತ್ತಾ ಯಜ್ಞದ ರಹಸ್ಯಪ್ರದೇಶದಲ್ಲಿ ಶಬ್ದಗಳನ್ನು ಉತ್ಪನ್ನಮಾಡುತ್ತೀಯೆ.

## English Translation

Most exciting (Soma), devoted to Indra, as you pour forth the exhilarating juice for his driking, you emit sounds in the secret ( hall of sacrifice.)

## ಏಳನೆಯ ಸೂಕ್ತವು.

। ಸಾಯಣಭಾಷ್ಯಂ ।

**ಅಸೃಗ್ರಮಿತಿ ನವರ್ಚಂ ಸಪ್ತಮಂ ಸೂಕ್ತಂ । ಅಸೃಗ್ರಮಿತ್ಯನುಕ್ರಾಂತಂ । ಅಸಿತೋ ದೇವಲೋ ವರ್ಷಿಃ । ತೌ ಚ ಕಶ್ಯಪಗೌತ್ರಜೌ । ಗಾಯತ್ರಂ ಛಂದಃ । ಸೋಮಃ ಪವಮಾನೋ ದೇವತಾ । ಉಕ್ತೋ ವಿನಿಯೋಗಃ ॥**

ಅನುವಾದವು—**ಅಸೃಗ್ರಂ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಏಳನೆಯ ಸೂಕ್ತವು ಇದರಲ್ಲಿ ಒಂಭತ್ತು ಋಕ್ಕುಗಳಿರುವವು ಈ ಸೂಕ್ತಕ್ಕೆ **ಅಸಿತಃ** ಅಥವಾ **ದೇವಲಃ** ಎಂಬುವನು ಋಷಿಯು ; ಇವರಿಬ್ಬರೂ ಕಾಶಪಗೋತ್ರೋದ್ಭವರು. ಪವಮಾನಸೋಮನು ದೇವತೆಯು , ಗಾಯತ್ರೀಛಂದಸ್ಸು, ಅನುಕ್ರಮಣಿಕೆಯಲ್ಲಿ-**ಅಸೃಗ್ರಂ** ಎಂದು ಮೊದಲಾಗಿ ಹೇಳಿರುವುದು. ಸೂಕ್ತದ ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

### ಸೂಕ್ತ—೭

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೭ ।
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೨೮, ೨೯ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

। ಸಂಹಿತಾಪಾಠಃ ॥

ಅಸೃಗ್ರಮಿಂದವಃ ಪಥಾ ಧರ್ಮನ್ನೃತಸ್ಯ ಸುಶ್ರಿಯಃ ।
ವಿದಾನಾ ಅಸ್ಯ ಯೋಜನಂ ॥ ೧ ॥

॥ ಪದಪಾಠಃ ॥

ಅಸೃಗ್ರಂ । ಇಂದವಃ । ಪಥಾ । ಧರ್ಮನ್ । ಋತಸ್ಯ । ಸುऽಶ್ರಿಯಃ ।
ವಿದಾನಾಃ । ಅಸ್ಯ । ಯೋಜನಂ ॥ ೧ ॥

॥ ಸಾಯಣಭಾಷ್ಯಂ ॥

**ಸುಶ್ರಿಯಃ ಶೋಭನಶ್ರಯಣಾ ಅಸ್ಯೇಂದ್ರಸ್ಯ ಯೋಜನಂ ಸಂಬಂಧಂ ವಿದಾನಾ ಜಾನಂತ ಇಂದವಃ ಸೋಮಾ ಧರ್ಮನ್ ಕರ್ಮಣ್ಯೃತಸ್ಯ ಯಜ್ಞಸ್ಯ ಪಥಾ ಮಾರ್ಗೇಣಾಸೃಗ್ರಂ । ಸೃಜ್ಯಂತೇ ॥**

॥ ಪ್ರತಿಪದಾರ್ಥ

**ಸುಶ್ರಿಯಃ**—ಉತ್ತಮವಾದ ಕ್ಷೀರಾದಿ ಶ್ರಯಣದ್ರವ್ಯಮಿಶ್ರಿತವಾದ। **ಇಂದವಃ**—ಸೋಮರಸಗಳು। **ಅಸ್ಯ**—ಈ ಇಂದ್ರನೊಂದಿಗಿರುವ । **ಯೋಜನಂ**—ಸಂಬಂಧವನ್ನು । **ವಿದಾನಾಃ**—ತಿಳಿದವಾಗಿ । **ಧರ್ಮನ್**—ಕರ್ಮಕಾಲದಲ್ಲಿ । **ಋತಸ್ಯ**—ಯಜ್ಞದ । **ಪಥಾ**—ಮಾರ್ಗದಿಂದ । **ಅಸೃಗ್ರಂ**—ಸ್ರವಿಸಿ ಪ್ರವಹಿಸುತ್ತವೆ.

॥ ಭಾವಾರ್ಥ ॥

ಉತ್ತಮವಾದ ಕ್ಷೀರಾದಿಶ್ರಯಣದ್ರವ್ಯಗಳಿಂದ ಮಿಶ್ರಿತವಾದ ಸೋಮರಸಗಳು ಈ ಇಂದ್ರನೊಂದಿಗಿರುವ ಸಂಬಂಧವನ್ನು ಅರಿತು ಈ ಕರ್ಮಕಾಲದಲ್ಲಿ ಯಜ್ಞದ ಮಾರ್ಗದಿಂದ ಸ್ರವಿಸಿ ಪ್ರವಹಿಸುತ್ತವೆ.

English Translation

The excellent streams (of the Soma), feeling a union with Indra, flow forth in the ceremony by the path of sacrifice.

॥ ಸಂಹಿತಾಪಾಠಃ ॥

ಪ್ರ ಧಾರಾ ಮಧ್ವೋ ಅಗ್ರಿಯೋ ಮಹೀರಪೋ ವಿ ಗಾಹತೇ ।
ಹವಿರ್ಹವಿಷ್ಷು ವಂದ್ಯಃ ॥ ೨ ॥

॥ ಪದಪಾಠಃ ॥

ಪ್ರ । ಧಾರಾ । ಮಧ್ವಃ । ಅಗ್ರಿಯಃ । ಮಹೀಃ । ಅಪಃ । ವಿ । ಗಾಹತೇ ।
ಹವಿಃ । ಹವಿಃಷು । ವಂದ್ಯಃ ॥ ೨ ॥

॥ ಸಾಯಣಭಾಷ್ಯಂ ॥

**ಹವಿಷ್ಷು ಹವಿಷಾಂ ಮಧ್ಯೇ ವಂದ್ಯಃ ಸ್ತುತ್ಯೋ ಹವಿರ್ಹವಿರಾತ್ಮಕೋ ಯಃ ಸೋಮೋ ಮಹೀರ್ಮಹತೀರಪೋ ವಸತೀವರೀರ್ವಿ ಗಾಹತೇ ತಸ್ಯ ಮಧ್ವಃ ಸೋಮಸ್ಯಾಗ್ರಿಯೋ ಮುಖ್ಯಾ ಧಾರಾಃ ಪ್ರ ಪತಂತೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಹವಿಷ್ಷು**—ಹವಿಸ್ಸುಗಳಲ್ಲೆಲ್ಲಾ । **ವಂದ್ಯಃ**—ಸ್ತುತ್ಯವಾದ । **ಹವಿಃ**—ಹವಿಸ್ಸಿನ ರೂಪದ ಸೋಮವು । **ಮಹೀಃ**—ಮಹದ್ಗುಣಗಳುಳ್ಳ । **ಅಪಃ**—ವಸತೀವರೀಸಂಜ್ಞಕವಾದ ಉದಕಗಳಲ್ಲಿ । **ವಿ ಗಾಹತೇ**—ಪ್ರವೇಶಿಸಿ

ಮಿಶ್ರವಾಗುತ್ತವೆ । **ಮಧ್ವಃ**—ಸೋಮರಸದ । **ಅಗ್ರಿಯಃ**—ಮುಖ್ಯವಾದ । **ಧಾರಾಃ**—ಪ್ರವಾಹಗಳು । **ಪ್ರ (ಪತಂತಿ)**— ಹರಿಯುತ್ತವೆ.

॥ ಭಾವಾರ್ಥ ॥

ಹವಿಸ್ಸುಗಳಲ್ಲೆಲ್ಲಾ ಸ್ತುತ್ಯವಾದ ಹವಿಸ್ಸಿನ ರೂಪದ ಸೋಮವು ಮಹದ್ಗುಣಗಳುಳ್ಳ ವಸತೀವರೀಸಂಜ್ಞಕವಾದ ಉದಕಗಳಲ್ಲಿ ಪ್ರವೇಶಿಸಿ ಮಿಶ್ರವಾಗುತ್ತದೆ. ಸೋಮರಸದ ಮುಖ್ಯವಾದ ಪ್ರವಾಹಗಳು ಹರಿಯುತ್ತವೆ.

English Translation

That which is to be praised as the oblation among oblations is immersed in the great (holy) waters, the stream of honey, the pre-eminet.

॥ ಸಂಹಿತಾಪಾಠ ॥

ಪ್ರ ಯುಜೋ ವಾಚೋ ಅಗ್ರಿಯೋ ವೃಷಾವ ಚಕ್ರದದ್ವನೇ ।
ಸದ್ಮಾಭಿ ಸತ್ಯೋ ಅಧ್ವರಃ ॥ ೩ ॥

॥ ಪದಪಾಠಃ ॥

ಪ್ರ । ಯುಜಃ । ವಾಚಃ । ಅಗ್ರಿಯಃ । ವೃಷಾ । ಅವ । ಚಕ್ರದತ್ । ವನೇ ।
ಸದ್ಮ । ಅಭಿ । ಸತ್ಯಃ । ಅಧ್ವರಃ ॥ ೩ ॥

॥ ಸಾಯಣಭಾಷ್ಯಂ ॥

ಏತದೇವ ದರ್ಶಯತಿ । ವೃಷಾ ಕಾಮಾನಾಂ ವರ್ಷಕಃ ಸತ್ಯಃ ಸತ್ಯಭೂತೋಽಧ್ವರೋ ಹಿಂಸಾವರ್ಜಿತೋಽಗ್ರಿಯೋ ಮುಖ್ಯಃ ಸೋಮಃ ಸದ್ಮ ಯಜ್ಞಗೃಹಮಭಿ ಪ್ರತಿ ವನ ಉದಕೇ ಯುಜೋ ಯುಕ್ತಾ ವಾಚಃ ಪ್ರಾವ ಚಕ್ರದತ್ । ಅವಕ್ರಂದತಿ । ಶಬ್ದಾನ್ ಕರೋತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ವೃಷಾ**—ಇಷ್ಟಾರ್ಥಪ್ರದವಾದುದೂ । **ಸತ್ಯಃ**—ಸತ್ಯಾತ್ಮಕವಾದುದೂ । ಅಧ್ವರಃ—ಹಿಂಸಾರಹಿತವಾದುದೂ । **ಅಗ್ರಿಯಃ**—ಮುಖ್ಯವಾದುದೂ ಆದ ಸೋಮವು । **ಸದ್ಮ ಅಭಿ**—ಯಜ್ಞಗೃಹದಲ್ಲಿ । **ವನೇ**—ಉದಕದಲ್ಲಿ । **ಯುಜಃ**—ಸೇರಿಕೊಂಡು । **ವಾಚಃ**—ವಾಗ್ರೂಪದಿಂದ । **ಪ್ರ ಅವ ಚಕ್ರದತ್**—ಶಬ್ದಮಾಡುತ್ತದೆ

॥ ಭಾವಾರ್ಥ ॥

ಇಷ್ಟಾರ್ಥಪ್ರದವಾದುದೂ, ಸತ್ಯಾತ್ಮಕವಾದುದೂ, ಹಿಂಸಾರಹಿತವಾದುದೂ, ಮುಖ್ಯವೂ ಆದ ಸೋಮವು ಯಜ್ಞಗೃಹದಲ್ಲಿ ಉದಕದಲ್ಲಿ ಸೇರಿಕೊಂಡು ವಾಗ್ರೂಪದಿಂದ ಶಬ್ದಮಾಡುತ್ತವೆ.

## English Translation

The pre-eminent (Soma), the showerer of benefits, the truthful, the indestructible, utters continuous sounds in the water, towards the sacrificial hall

॥ ಸಂಹಿತಾಪಾಠಃ ॥

ಪರಿ ಯತ್ಕಾವ್ಯಾ ಕವಿರ್ನೃಮ್ಣಾ ವಸಾನೋ ಅರ್ಷತಿ ।
ಸ್ವರ್ವಾಜೀ ಸಿಷಾಸತಿ ॥ ೪ ॥

॥ ಪದಪಾಠಃ ॥

ಪರಿ । ಯತ್ । ಕಾವ್ಯಾ । ಕವಿಃ । ನೃಮ್ಣಾ । ವಸಾನಃ । ಅರ್ಷತಿ ।
ಸ್ವ೨ಃ । ವಾಜೀ । ಸಿಸಾಸತಿ ॥ ೪ ॥

॥ ಸಾಯಣಭಾಷ್ಯಂ ॥

ಕವಿಃ ಕ್ರಾಂತಕರ್ಮಾ ಸೋಮೋ ನೃಮ್ಣಾ ನೃಮ್ಣಾನಿ ಧನಾನಿ ವಸಾನ ಆಚ್ಛಾದಯನ್ ಸ್ತೋತೄಣಾಂ ಕಾವ್ಯಾ ಕಾವ್ಯಾನಿ ಕವಿಕರ್ಮಾಣಿ ಸ್ತೋತ್ರಾಣಿ ಯದ್ಯದಾ ಪರ್ಯರ್ಷತಿ ಪರಿಗಚ್ಛತಿ ತದಾ ಸ್ವಃ ಸ್ವರ್ಗೇ ವಾಜೀ ಬಲವಾನನ್ನವಾನ್ವೇಂದ್ರಃ ಸಿಷಾಸತಿ । ಯಾಗಂ ಪ್ರತ್ಯಾಗಂತುಂ ಸ್ವಕೀಯಂ ಬಲಂ ಸಂಭಕ್ತುಮಿಚ್ಛತಿ ॥

॥ ಪ್ರತಿಪದಾರ್ಥ ॥

**ಕವಿಃ**—ಪ್ರಜ್ಞಾಯುತವಾದ ಕರ್ಮವುಳ್ಳ ಸೋಮನು । **ನೃಮ್ಣಾ**—ಧನಗಳ ರೂಪದ ವಸ್ತ್ರಗಳನ್ನು । **ವಸಾನಃ**—ಹೊದ್ದಿಕೊಂಡು । **ಕಾವ್ಯಾ**—ಸ್ತುತಿಕರ್ತರ ಸ್ತುತಿಗಳನ್ನು । **ಯತ್**—ಯಾವಾಗ । **ಪರಿ ಅರ್ಷತಿ**—ಸುತ್ತುವರಿದು ಸಂಚರಿಸುವನೋ ಆಗ । **ಸ್ವಃ**—ಸ್ವರ್ಗದಲ್ಲಿರುವ । **ವಾಜೀ**—ಶಕ್ತಿಯುತನಾದ ಇಂದ್ರನು । **ಸಿಷಾಸತಿ**—ಯಜ್ಞಕ್ಕೆ ಬರಬೇಕೆಂದಿಚ್ಛಿಸುತ್ತಾನೆ

॥ ಭಾವಾರ್ಥ ॥

ಪ್ರಜ್ಞಾಯುತವಾದ ಕರ್ಮವುಳ್ಳ ಸೋಮನು ಧನಗಳ ರೂಪದ ವಸ್ತ್ರಗಳನ್ನು ಹೊದ್ದಿಕೊಂಡು ಸ್ತುತಿಕರ್ತರ ಸ್ತುತಿಗಳನ್ನು ಸುತ್ತುವರಿದು ಯಾವಾಗ ಸಂಚರಿಸುವನೋ ಆಗ ಸ್ವರ್ಗದಲ್ಲಿರುವ ಶಕ್ತಿಯುತನಾದ ಇಂದ್ರನು ಯಜ್ಞಕ್ಕೆ ಬರಬೇಕೆಂದಿಚ್ಛಿಸುತ್ತಾನೆ.

## English Translation

When the seer (Soma), wearing ample treasures, goes round the praises (of his worshippers), then the mighty (Indra), in heaven is eager to repair to the oblation.

॥ ಸಂಹಿತಾಪಾಠಃ ॥

ಪವಮಾನೋ ಅಭಿ ಸ್ಪೃಧೋ ವಿಶೋ ರಾಜೇವ ಸೀದತಿ ।
ಯದೀಮೃಣ್ವಂತಿ ವೇಧಸಃ ॥ ೫ ॥

॥ ಪದಪಾಠಃ ॥

ಪವಮಾನಃ । ಅಭಿ । ಸ್ಪೃಧಃ । ವಿಶಃ । ರಾಜಾಽಇವ । ಸೀದತಿ ।
ಯತ್ । ಈಂ । ಋಣ್ವಂತಿ । ವೇಧಸಃ ॥ ೫ ॥

॥ ಸಾಯಣಭಾಷ್ಯಂ ॥

ಯದ್ಯದೇನೋನಂ ಸೋಮಂ ವೇಧಸಃ ಕರ್ಮಣಾಂ ಕರ್ತಾರ ಋಣ್ವಂತಿ ಪ್ರೇರಯಂತಿ ತದಾ ಪವಮಾನಃ ಕ್ಷರನ್ನೇಷ ಸೋಮಃ ಸ್ಪೃಧಃ ಸ್ಪರ್ಧಮಾನಾನ್ಯಾಗವಿಘ್ನಕಾರಿಣೋ ರಾಕ್ಷಸಾನ್ವಿಶಃ ಸ್ಪರ್ಧಮಾನಾನ್ಮನುಷ್ಯಾನ್ ರಾಜೇವ ಯಥಾ ರಾಜಾ ತದ್ವದಭಿ ಷೀದತಿ । ನಾಶಯಿತುಮಭಿಗಚ್ಛತಿ ॥

॥ ಪ್ರತಿಪದಾರ್ಥ ॥

**ಯತ್**—ಯಾವಾಗ । **ಈಂ**—ಈ ಸೋಮನನ್ನು । **ವೇಧಸಃ**—ಕರ್ಮಕರ್ತರಾದ ಯಜಮಾನರು । **ಋಣ್ವಂತಿ**—ಪ್ರವಹಿಸುವಂತೆ ಪ್ರೇರಿಸುವರೋ ಆಗ । **ಪವಮಾನಃ**- ಶುದ್ಧವಾದ ಪ್ರವಾಹವುಳ್ಳ ಈ ಸೋಮನು । **ಸ್ಪೃಧಃ**—ಎದುರುಬಿದ್ದು ಸ್ಪರ್ಧಿಸುವ ಅಸುರರನ್ನೂ । **ವಿಶಃ**—ಶತ್ರುಭೂತರಾದ ಮಾನವರನ್ನೂ । **ರಾಜೇವ**-ದೊರೆಯಂತೆ । **ಅಭಿ ಷೀದತಿ**—ನಾಶಪಡಿಸುತ್ತಾನೆ.

॥ ಭಾವಾರ್ಥ ॥

ಕರ್ಮಕರ್ತರಾದ ಯಜಮಾನರು ಯಾವಾಗ ಈ ಸೋಮನನ್ನು ಪ್ರವಹಿಸುವಂತೆ ಪ್ರೇರಿಸುವರೋ ಆಗ ಶುದ್ಧವಾದ ಪ್ರವಾಹವುಳ್ಳ ಈ ಸೋಮನು ಎದುರುಬಿದ್ದು ಸ್ಪರ್ಧಿಸುವ ಅಸುರರನ್ನೂ ಶತ್ರುಭೂತರಾದ ಮಾನವರನ್ನೂ ಸಹ ರಾಜನು ಶತ್ರುಗಳನ್ನು ನಾಶಪಡಿಸುವಂತೆ ನಾಶಪಡಿಸುತ್ತಾನೆ

English Translation

When the priests excite it, the flowing Soma like a king destroys opposing (demons and) men.

॥ ಸಂಹಿತಾಪಾಠಃ ॥

ಅವ್ಯೋ ವಾರೇ ಪರಿ ಪ್ರಿಯೋ ಹರಿರ್ವನೇಷು ಸೀದತಿ ।
ರೇಭೋ ವನುಷ್ಯತೇ ಮತೀ ॥ ೬ ॥

॥ ಪದಪಾಠಃ ॥

ಅವ್ಯಃ । ವಾರೇ । ಪರಿ । ಪ್ರಿಯಃ । ಹರಿಃ । ವನೇಷು । ಸೀದತಿ ।
ರೇಭಃ । ವನುಷ್ಯತೇ । ಮತೀ ॥ ೬ ॥

॥ ಸಾಯಣಭಾಷ್ಯಂ ॥

ಹರಿರ್ಹರಿತವರ್ಣಃ ಪ್ರಿಯೋ ದೇವಾನಾಂ ಪ್ರಿಯತಮ ಏವ ಸೋಮೋ ವನೇಷೂದಕೇಷು ಸಂಪೃಕ್ತೋಽವ್ಯೋಽವೇರ್ವಾರೇ ವಾಲೋಽಪೇತೇ ಪರಿ ಷೀದತಿ । ಕಿಂಚ ರೇಭೋಽಭಿಷವವೇಲಾಯಾಮುಪರವೇಷು ಶಬ್ದಂ ಕುರ್ವನ್ಮತೀ ಮತ್ಯಾ ಸ್ತುತ್ಯಾ ವನುಷ್ಯತೇ । ಸೇವ್ಯತೇ ॥

॥ ಪ್ರತಿಪದಾರ್ಥ ॥

ಹರಿಃ—ಪಚ್ಚೆವರ್ಣವುಳ್ಳವನೂ । ಪ್ರಿಯಃ— ದೇವತೆಗಳಿಗೆ ಪ್ರಿಯತಮನೂ ಆದ ಸೋಮನು । ವನೇಷು—ಉದಕಗಳೊಡನೆ ಸೇರಿ । ಅವ್ಯಃ—ದಶಾಪವಿತ್ರದ । ವಾರೇ—ಉಣ್ಣೆಯ ಮೇಲೆ । ಪರಿ ಷೀದತಿ—ಶುದ್ಧಿಗಾಗಿ ಆ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾನೆ । ರೇಭಃ—ಶಬ್ದವನ್ನುಂಟುಮಾಡುತ್ತಾ । ಮತೀ—ಸ್ತುತಿಯಿಂದ । ವನುಷ್ಯತೇ—ಸೇವಿಸಲ್ಪಡುತ್ತಾನೆ

॥ ಭಾವಾರ್ಥ ॥

ಪಚ್ಚೆವರ್ಣವುಳ್ಳವನೂ, ದೇವತೆಗಳಿಗೆ ಪ್ರಿಯತಮನೂ ಆದ ಸೋಮನು ಉದಕಗಳೊಡನೆ ಸೇರಿ ಪವಿತ್ರದ ಉಣ್ಣೆಯ ಮೇಲೆ ಶುದ್ಧಿಗಾಗಿ ಕುಳಿತುಕೊಳ್ಳುತ್ತಾನೆ. ಹಿಂಡುವ ಕಾಲದಲ್ಲಿ ಶಬ್ದವನ್ನುಂಟು ಮಾಡುತ್ತಾ ಸ್ತುತಿಯಿಂದ ಸೇವಿಸಲ್ಪಡುತ್ತಾನೆ.

## English Translation

The green-tinted (Soma), dear to the gods, commingled with the water, sits down upon the woollen sieve, uttering a sound it is greeted by praise

॥ ಸಂಹಿತಾಪಾಠಃ ॥

ಸ ವಾಯುಮಿಂದ್ರಮಶ್ವಿನಾ ಸಾಕಂ ಮದೇನ ಗಚ್ಛತಿ ।
ರಣಾ ಯೋ ಅಸ್ಯ ಧರ್ಮಭಿಃ ॥ ೭ ॥

॥ ಪದಪಾಠಃ ॥

ಸಃ । ವಾಯುಃ । ಇಂದ್ರಂ । ಅಶ್ವಿನಾ । ಸಾಕಂ । ಮದೇನ । ಗಚ್ಛತಿ ।
ರಣ । ಯಃ । ಅಸ್ಯ । ಧರ್ಮಽಭಿಃ ೭ ॥

॥ ಸಾಯಣಭಾಷ್ಯಂ ॥

ಯೋ ಯಜಮಾನೋಽಸ್ಯ ಸೋಮಸ್ಯ ಧರ್ಮಭಿಃ ಕರ್ಮಭಿಃ ಕ್ರಿಯಮಾಣಾಭಿಷವಾ ... ರಮತೇ ಸ ಯಜಮಾನೋ ವಾಯುಮಿಂದ್ರಂ ಚಾಶ್ವಿನಾಶ್ವಿನೌ ಚ ಮದೇನ ಸಾಕಂ ಸಹ ... ಪ್ರಾಪ್ನೋತಿಃ ।

॥ ಪ್ರತಿಪದಾರ್ಥ ॥

ಯಃ—ಯಾವ ಯಜಮಾನನು । ಅಸ್ಯ—ಈ ಸೋಮದ । ಧರ್ಮಭಿಃ—ಅಭಿಷವವೇ ... ಕರ್ಮಗಳಲ್ಲಿ । ರಣ—ಸಂತೋಷದಿಂದ ನಿರತನಾಗುವನೋ । ಸಃ—ಅದೇ ಯಜಮಾನನು । ವಾಯುಂ—... ವನ್ನೂ । ಇಂದ್ರಂ—ಇಂದ್ರನನ್ನೂ । ಅಶ್ವಿನಾ—ಅಶ್ವಿನೀದೇವತೆಗಳನ್ನೂ । ಮದೇನ ಸಾಕಂ—... ಕೂಡಿ । ಗಚ್ಛತಿ—ಸಮೀಪಿಸುತ್ತಾನೆ

॥ ಭಾವಾರ್ಥ ॥

ಯಾವ ಯಜಮಾನನು ಈ ಸೋಮವನ್ನು ಹಿಂಡುವುದೇ ಮುಂತಾದ ಕರ್ಮಗಳಲ್ಲಿ ನಿರತನಾಗಿರುವನೋ, ಅದೇ ಯಜಮಾನನು ವಾಯುವನ್ನೂ ಇಂದ್ರನನ್ನೂ, ಅಶ್ವಿನೀದೇವತೆಗಳನ್ನೂ ಹರ್ಷದೊಡನೆ ಸಮೀಪಿಸುತ್ತಾನೆ

English Translation

He who is assiduous in the functions of (providing and pr...) the Soma, goes with exhilaration to Vayu, Indra, and the Ashwins

॥ ಸಂಹಿತಾಪಾಠಃ ॥

ಆ ಮಿತ್ರಾವರುಣಾ ಭಗಂ ಮಧ್ವಃ ಪವಂತ ಊರ್ಮಯಃ ।
ವಿದಾನಾ ಅಸ್ಯ ಶಕ್ಮಭಿಃ ॥ ೮ ॥

॥ ಪದಪಾಠಃ ॥

ಆ । ಮಿತ್ರಾವರುಣಾ । ಭಗಂ । ಮಧ್ವಃ । ಪವಂತೇ । ಊರ್ಮಯಃ ।
ವಿದಾನಾಃ । ಅಸ್ಯ । ಶಕ್ಮಽಭಿಃ ॥ ೮ ॥

॥ ಸಾಯಣಭಾಷ್ಯಂ ॥

ಯೇಷಾಂ ಯಜಮಾನಾನಾಂ ಮಧ್ವಃ ಸೋಮಸ್ಯೋರ್ಮಯಸ್ತರಂಗಾ ಮಿತ್ರಾವರುಣಾ ಮಿತ್ರಾವರುಣೌ ದೇವೌ ಭಗಂ ಭಗಾಖ್ಯಂ ದೇವಂ ಚ ಪ್ರತಿ ಪವಂತೇ ಕ್ಷರಂತಿ ತೇ ಯಜಮಾನಾ ಅಸ್ಯ ಸೋಮಸ್ಯೇಮಂ ಸೋಮಂ ವಿದಾನಾ ಜಾನಂತಃ ಶಕ್ಮಭಿಃ ಸುಖೈಃ ಸಂಗಚ್ಛಂತ ಇತಿ ಶೇಷಃ ॥

॥ ಪ್ರತಿಪದಾರ್ಥ ॥

**ಮಧ್ವಃ** ಮಧುರವಾದ ಸೋಮರಸದ । **ಊರ್ಮಯಃ**—ಅಲೆಗಳು । **ಮಿತ್ರಾವರುಣಾ**—ಮಿತ್ರಾವರುಣರನ್ನೂ । **ಭಗಂ**—ಭಗನನ್ನೂ ಲಕ್ಷಿಸಿ । **ಆ ಪವಂತೇ**—ಪ್ರವಿಸುತ್ತವೆ । **ಅಸ್ಯ**—ಈ ಸೋಮದ ಪ್ರಭಾವವನ್ನು । **ವಿದಾನಾಃ**—ತಿಳಿದ ಜನರು । **ಶಕ್ಮಭಿ**—ಸುಖಗಳಿಂದ ಯುಕ್ತರಾಗುತ್ತಾರೆ

॥ ಭಾವಾರ್ಥ ॥

ಮಧುರವಾದ ಸೋಮರಸದ ಅಲೆಗಳು ಮಿತ್ರಾವರುಣರನ್ನೂ ಭಗನನ್ನೂ ಲಕ್ಷಿಸಿ ಪ್ರವಿಸುತ್ತವೆ. ಈ ಸೋಮದ ಪ್ರಭಾವವನ್ನು ತಿಳಿದ ಜನರು ಸುಖಗಳಿಂದ ಯುಕ್ತರಾಗುತ್ತಾರೆ.

## English Translation

Streams of the sweet Soma flow to Mitra and Varuna and to Bhaga; the worshippers knowing its (virtues are rewarded) with happiness.

॥ ಸಂಹಿತಾಪಾಠಃ ॥

ಅಸ್ಮಭ್ಯಂ ರೋದಸೀ ರಯಿಂ ಮಧ್ವೋ ವಾಜಸ್ಯ ಸಾತಯೇ ।
ಶ್ರವೋ ವಸೂನಿ ಸಂ ಜಿತಂ ॥ ೯ ॥

॥ ಪದಪಾಠಃ ॥

ಅಸ್ಮಭ್ಯಂ । ರೋದಸೀ ಇತಿ । ರಯಿಂ । ಮಧ್ವಃ । ವಾಜಸ್ಯ । ಸಾತಯೇ ।
ಶ್ರವಃ । ವಸೂನಿ । ಸಂ । ಜಿತಂ ॥ ೯ ॥

॥ ಸಾಯಣಭಾಷ್ಯಂ ॥

**ಹೇ ರೋದಸೀ ದ್ಯಾವಾಪೃಥಿವ್ಯೌ ಯುವಾಂ ಮಧ್ವೋ ದೇವಾನಾಂ ಮೋದಯಿತುರ್ವಾಜಸ್ಯ ಸೋಮಾತ್ಮಕಸ್ಯಾನ್ನಸ್ಯ ಸಾತಯೇ ಲಾಭಾಯಾಸ್ಮಭ್ಯಂ ಕಾಶ್ಯಪಾಸಿತೇಭ್ಯಃ ಕಾಶ್ಯಪದೇವಲೇಭ್ಯೋ ವಾ ರಯಿಂ ಧನಂ ಶ್ರವೋಽನ್ನಂ ಚ ವಸೂನಿ ವಾಸಕಾನ್ಯನ್ಯಾನ್ಯಪಿ ಪಶ್ವಾದೀನಿ ಧನಾನಿ ಸಂ ಜಿತಂ । ಸಂಜಯತಂ । ಪ್ರಯಚ್ಛತಮಿತ್ಯರ್ಥಃ ॥**

॥ ಪ್ರತಿಪದಾರ್ಥ ॥

**ರೋದಸೀ**—ಎಲೈ ದ್ಯಾವಾಪೃಥಿವಿಗಳೇ, । **ಮಧ್ವಃ**—ದೇವತೆಗಳಿಗೆ ಸಂತೃಪ್ತಿಯನ್ನು ಉಂಟುಮಾಡುವುದೂ । **ವಾಜಸ್ಯ**—ಸೋಮರೂಪವೂ ಆದ ಈ ಅನ್ನದ । **ಸಾತಯೇ**—ಲಾಭಕ್ಕಾಗಿ । **ಅಸ್ಮಭ್ಯಂ**—ನಮಗೆ । **ರಯಿಂ**—ಧನವನ್ನು । **ಶ್ರವಃ**—ಅನ್ನವನ್ನೂ । **ವಸೂನಿ**—ಧನಗಳನ್ನೂ । **ಸಂ ಜಿತಂ**—ಒದಗಿಸಿ ಕೊಡಿರಿ.

॥ ಭಾವಾರ್ಥ ॥

ಎಲೈ ದ್ಯಾವಾಪೃಥಿವಿಗಳೇ, ದೇವತೆಗಳಿಗೆ ಸಂತೃಪ್ತಿಯನ್ನುಂಟುಮಾಡುವುದೂ, ಸೋಮರೂಪದ [illegible] ಈ ಅನ್ನದ ಲಾಭಕ್ಕಾಗಿ ನಮಗೆ ಧನವನ್ನೂ ಅನ್ನವನ್ನೂ ಧನಗಳನ್ನು ಒದಗಿಸಿಕೊಡಿರಿ.

English Translation

Heaven and earth, for the acquisition of this exhilarating Soma food, win for us, wealth, food, and treasures

## ಎಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಏತೇ ಸೋಮಾ ಇತಿ ನವರ್ಚಮಷ್ಟಮಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಅ[illegible]ಂ ಚ । ಏತೇ ಸೋಮಾ ಇತಿ॥ ಉಕ್ತಃ ಸೂಕ್ತವಿನಿಯೋಗಃ॥ ಗ್ರಾವಸ್ತೋತ್ರೇ ಗಾಣಗಾರಿಮತೇನಾ[illegible]ಪ-ಕರಣೇ ಸೋಮೇ ವೃಜ್ಯಮಾನೇ ವೃಜಂತಿ ತ್ವೇತ್ಯೇಷಾ । ಸೂತ್ರಿತಂ ಚ । ಅಥಾಪರಮ[illegible]ಂ ಕುರ್ಯಾದಿತಿ ಗಾಣಗಾರಿರಾ ಪ್ಯಾಯಸ್ವ ಸಮೇತು ತ ಇತಿ ತಿಸ್ರೋ ವೃಜಂತಿ ತ್ವಾ ದಶ ಕ್ಷಿಪಃ [illegible]-೧೨ । ಇತಿ ॥**

ಅನುವಾದವು—**ಏತೇಸೋಮಾಃ** ಎಂಬ ಈ ಸೂಕ್ತವು ಮೊದಲನೇ ಅನುವಾಕದಲ್ಲಿ [illegible] ಸೂಕ್ತವು ಇದರಲ್ಲಿ ಒಂಭತ್ತು ಋಕ್ಕುಗಳಿರುವವು ಈ ಸೂಕ್ತಕ್ಕೆ ಋಷಿದೇವತಾ ಛಂದಸ್ಸುಗಳು [illegible] ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ—**ಏತೇ ಸೋಮಾಃ** ಎಂದು ಹೇಳಿರುವುದು. ಸೂಕ್ತದ ವಿನಿ[illegible] ಹಿಂದೆಯೇ ಹೇಳಲಾಗಿದೆ ಗ್ರಾವಸ್ತೋತ್ರದಲ್ಲಿ ಗಾಣಗಾರಿ ಎಂಬ ಆಚಾರ್ಯರ ಮತದ[illegible] **ಸೋಮಾಭಿರೂಪಕರಣದಲ್ಲಿ ವೃಜಂತಿ ತ್ವಾ** ಎಂಬ ನಾಲ್ಕನೆಯ ಋಕ್ಕನ್ನು ಪಠಿಸಬೇಕೆಂದು [illegible] ಶ್ರೌತಸೂತ್ರದ-**ಅಥಾಪರಮಭಿರೂಪಂ ಕುರ್ಯಾದಿತಿ ಗಾಣಗಾರಿರಾ ಪ್ಯಾಯಸ್ವ ಸಮೇತು** [illegible] **ತಿಸ್ರೋ ವೃಜಂತಿ ತ್ವಾ ದಶ ಕ್ಷಿಪಃ** ಎಂಬ ಸೂತ್ರದಿಂದ (ಆ. ೫ ೧೨) ವ್ಯಕ್ತವಾಗಿರುವುದು.

### ಸೂಕ್ತ—೮

ಮಂಡಲ—೯ । ಅನುವಾಕ -೧ । ಸೂಕ್ತ —೮ ॥
ಅಷ್ಟಕ—೬ । ಅಧ್ಯಾಯ—೭ । ವರ್ಗ—೩೦, ೩೧ ।
ಸೂಕ್ತದಲ್ಲಿರುವ ಋಕ್ಸಂಖ್ಯೆ -೯ ॥
ಋಷಿ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ ಗಾಯತ್ರೀ ।

॥ ಸಂಹಿತಾಪಾಠಃ ॥

ಏತೇ ಸೋಮಾ ಅಭಿ ಪ್ರಿಯಮಿಂದ್ರಸ್ಯ ಕಾಮಮಕ್ಷರನ್ ।
ವರ್ಧಂತೋ ಅಸ್ಯ ವೀರ್ಯಂ ॥ ೧ ॥

॥ ಪದಪಾಠಃ ॥

ಏತೇ । ಸೋಮಾಃ । ಅಭಿ । ಪ್ರಿಯಂ । ಇಂದ್ರಸ್ಯ । ಕಾಮಂ । ಅಕ್ಷರನ್ ।
ವರ್ಧಂತಃ । ಅಸ್ಯ । ವೀರ್ಯಂ ॥ ೧ ॥

॥ ಸಾಯಣಭಾಷ್ಯಂ ॥

ಏತ ಅಭಿಷುತಾ ಇಮೇ ಸೋಮಾ ಅಸ್ಯೇಂದ್ರಸ್ಯ ವೀರ್ಯಂ ಶಕ್ತಿಂ ವರ್ಧಂತೋ ವರ್ಧಯಂತ ಇಂದ್ರಸ್ಯ ಕಾಮಂ ಕಾಮ್ಯಂ ಪ್ರಿಯಂ ಪ್ರೀತಿಕರಂ ರಸಮಭ್ಯಕ್ಷರನ್ । ಅಭಿಷವಂತೇ । ಅಭ್ಯವರ್ಷನ್ ॥

॥ ಪ್ರತಿಪದಾರ್ಥ ॥

ಏತೇ—ಇಲ್ಲಿ ಹಿಂಡಿ ಸಿದ್ಧವಾಗಿರುವ । ಸೋಮಾಃ—ಸೋಮರಸಗಳು । ಅಸ್ಯ—ಈ ಇಂದ್ರನ। ವೀರ್ಯಂ—ಶಕ್ತಿಯನ್ನು । ವರ್ಧಂತಃ—ಬೆಳೆಸುತ್ತಾ । ಇಂದ್ರಸ್ಯ—ಇಂದ್ರನಿಗೆ । ಕಾಮಂ—ಆಕರ್ಷಕವಾದುದೂ! ಪ್ರಿಯಂ—ಪ್ರೀತಿಕಾರಕವಾದುದೂ ಆದ ರಸವನ್ನು ಃ ಅಭ್ಯಕ್ಷರನ್—ಸ್ರವಿಸುವಂತೆ ಮಾಡುತ್ತವೆ

॥ ಭಾವಾರ್ಥ ॥

ಇಲ್ಲಿ ಹಿಂಡಿ ಸಿದ್ಧವಾಗಿರುವ ಈ ಸೋಮಗಳು ಈ ಇಂದ್ರನ ಶಕ್ತಿಯನ್ನು ಬೆಳೆಸುತ್ತಾ ಇಂದ್ರನಿಗೆ ಆಕರ್ಷಕವಾದುದೂ, ಪ್ರೀತಿಕಾರಕವಾದುದೂ ಆದ ರಸವನ್ನು ಸ್ರವಿಸುವಂತೆ ಮಾಡುತ್ತವೆ

## English Translation

These Soma juices destil the dear desire of Indra, increasing his vigour.

॥ ಸಂಹಿತಾಪಾಠಃ ॥

ಪುನಾನಾಸಶ್ಚಮೂಷದೋ ಗಚ್ಛಂತೋ ವಾಯುಮಶ್ವಿನಾ ।
ತೇ ನೋ ಧಾಂತು ಸುವೀರ್ಯಂ ॥ ೨ ॥

॥ ಪದಪಾಠಃ ॥

ಪುನಾನಾಸಃ । ಚಮೂಽಸದಃ । ಗಚ್ಛಂತಃ । ವಾಯುಂ । ಅಶ್ವಿನಾ ।

ತೇ । ನಃ । ಧಾಂತು । ಸುಽವೀರ್ಯಂ ॥ ೨ ॥

॥ ಸಾಯಣಭಾಷ್ಯಂ ॥

ತೇ ಪ್ರಸಿದ್ಧಾಃ ಸೋಮಾಃ ಪುನಾನಾಸಃ ಪುನಾನಾ ಅಭಿಷೂಯಮಾಣಾಶ್ಚಮೂಷದಶ್ಚಮಸೇಷು ಸೀದಂತೋ ವಾಯುಮಶ್ವಿನಾಶ್ವಿನೌ ಚ ಗಚ್ಛಂತಃ ಪ್ರಾಪ್ನುವಂತೋ ನೋಽಸ್ಮಭ್ಯಂ ಸುವೀರ್ಯಂ ಶೋಭನವೀರ್ಯಂ ಧಾಂತು । ಧಾರಯಂತು । ಪ್ರಯಚ್ಛಂತ್ವಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಪುನಾನಾಸಃ**— ಶುದ್ಧವಾಗಿ ಹಿಂಡಲ್ಪಟ್ಟವೂ । **ಚಮೂಷದಃ**— ಚಮಸ ಪಾತ್ರೆಯಲ್ಲಿರುವುವೂ ಆದ **ತೇ**— ಆ ಸೋಮರಸಗಳು । **ವಾಯುಂ**— ವಾಯುವನ್ನೂ । **ಅಶ್ವಿನಾ**— ಅಶ್ವಿನೀದೇವತೆಗಳನ್ನೂ । **ಗಚ್ಛಂತಃ**— ಸಮೀಪಿಸುತ್ತಾ । **ನಃ**— ನಮಗೆ । **ಸುವೀರ್ಯಂ**— ಉತ್ತಮವಾದ ವೀರ್ಯವನ್ನು । **ಧಾಂತು**— ಉತ್ಪನ್ನಮಾಡಲಿ.

॥ ಭಾವಾರ್ಥ ॥

ಶುದ್ಧವಾಗಿ ಹಿಂಡಲ್ಪಟ್ಟವೂ ಚಮಸಪಾತ್ರೆಯಲ್ಲಿರುವುವೂ ಆದ ಆ ಸೋಮರಸಗಳು ವಾಯುವನ್ನೂ ಅಶ್ವಿನೀದೇವತೆಗಳನ್ನೂ ಸಮೀಪಿಸುತ್ತಾ ನಮಗೆ ಉತ್ತಮವಾದ ವೀರ್ಯವನ್ನು ಉತ್ಪನ್ನಮಾಡಲಿ.

## English Translation

Pure-flowing, filling the ladles, and proceeding to Vayu and the Ashwins, many they sustain our energy.

॥ ಸಂಹಿತಾಪಾಠಃ ॥

ಇಂದ್ರಸ್ಯ ಸೋಮ ರಾಧಸೇ ಪುನಾನೋ ಹಾರ್ದಿ ಚೋದಯ ।

ಋತಸ್ಯ ಯೋನಿಮಾಸದಂ ॥ ೩ ॥

॥ ಪದಪಾಠಃ ॥

ಇಂದ್ರಸ್ಯ । ಸೋಮ । ರಾಧಸೇ । ಪುನಾನಃ । ಹಾರ್ದಿ । ಚೋದಯ ।

ಋತಸ್ಯ । ಯೋನಿಂ । ಆಽಸದಂ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಸೋಮ ಪುನಾನೋಽಭಿಷೂಯಮಾಣೋ ಹಾರ್ದ್ಯಭಿಲಷಿತಸ್ತ್ವಮಿಂದ್ರಸ್ಯ ರಾಧಸೇ ಸಂರಾಧನಾಯರ್ತಸ್ಯ ಯಜ್ಞಸ್ಯ ಯೋನಿಂ ಸ್ಥಾನಮಾಸದಂ । ಯಥೇಂದ್ರ ಆಸೀದತಿ ತಥೇಂದ್ರಂ ಚೋದಯ । ಪ್ರೇರಯ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮವೇ । **ಪುನಾನಃ**—ಶುದ್ಧವಾಗಿ ಹಿಂಡಲ್ಪಡುವ ನೀನು । **ಹಾರ್ದಿ**—ಎಲ್ಲರಿಂದಲೂ ಅಪೇಕ್ಷಿತನಾಗಿ । **ಇಂದ್ರಸ್ಯ**—ಇಂದ್ರನ । **ರಾಧಸೇ**—ಆರಾಧನೆಗಾಗಿ । **ಋತಸ್ಯ**—ಯಜ್ಞದ । **ಯೋನಿಂ**—ಸ್ಥಾನದಲ್ಲಿ । **ಆಸದಂ**—ಇಂದ್ರನು ಬಂದು ಕುಳಿತುಕೊಳ್ಳುವಂತೆ । **ಚೋದಯ**—ಪ್ರೇರಿಸು.

॥ ಭಾವಾರ್ಥ ॥

ಎಲೈ ಸೋಮವೇ, ಶುದ್ಧವಾಗಿ ಹಿಂಡಲ್ಪಡತಕ್ಕ ನೀನು ಎಲ್ಲರಿಂದಲೂ ಅಪೇಕ್ಷಿತನಾಗಿ ಇಂದ್ರನ ಆರಾಧನೆಗಾಗಿ ಯಜ್ಞದ ಸ್ಥಾನದಲ್ಲಿ ಅವನು ಬಂದು ಕುಳಿತುಕೊಳ್ಳುವಂತೆ ಪ್ರೇರಿಸು

English Translation

Soma, pure-flowing, desired for the gratification of Indra, you impel him to sit in the place of sacrifice.

॥ ಸಂಹಿತಾಪಾಠಃ ॥

ಮೃಜಂತಿ ತ್ವಾ ದಶ ಕ್ಷಿಪೋ ಹಿನ್ವಂತಿ ಸಪ್ತ ಧೀತಯಃ ।

ಅನು ವಿಪ್ರಾ ಅಮಾದಿಷುಃ ॥ ೪ ॥

॥ ಪದಪಾಠಃ ॥

ಮೃಜಂತಿ । ತ್ವಾ । ದಶ । ಕ್ಷಿಪಃ । ಹಿನ್ವಂತಿ । ಸಪ್ತ । ಧೀತಯಃ ।

ಅನು । ವಿಪ್ರಾಃ । ಅಮಾದಿಷುಃ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತ್ವಾ ತ್ವಾಂ ದಶ ದಶಸಂಖ್ಯಾಕಾಃ ಕ್ಷಿಪೋಽಂಗುಲಯಃ । ವ್ರಿಶಃ ಕ್ಷಿಪ ಇತ್ಯಂಗುಲಿನಾಮಸು ಪಾಠಾತ್ । ಮೃಜಂತಿ । ಪರಿಚರಂತಿ । ಸಪ್ತ ಸಪ್ತಸಂಖ್ಯಾಕಾ ಧೀತಯೋ ಹೋತ್ರಕಾಶ್ಚ ತ್ವಾ ತ್ವಾಂ ಹಿನ್ವಂತಿ । ಸ್ವಸ್ವವ್ಯಾಪಾರೈಃ ಪ್ರೀಣಯಂತಿ । ವಿಪ್ರಾ ಮೇಧಾವಿನಶ್ಚ ತ್ವಾಮನ್ವಮಾದಿಷುಃ । ಅನುಮಾದಯಂತಿ ॥**

॥ ಪ್ರತಿಪದಾರ್ಥ ॥

(ಎಲೈ ಸೋಮವೇ) **ತ್ವಾ**—ನಿನ್ನನ್ನು । **ದಶ**—ಹತ್ತುಸಂಖ್ಯೆಯುಳ್ಳ । **ಕ್ಷಿಪಃ**—ಅಂಗುಲಿಗಳು । **ಮೃಜಂತಿ**—ಉಪಚರಿಸುತ್ತವೆ । **ಸಪ್ತ**—ಏಳುಜನ । **ಧೀತಯಃ**—ಹೋತೃಗಳೂ । **ಹಿನ್ವಂತಿ**—ಉಪಚರಿಸುತ್ತಾರೆ । **ವಿಪ್ರಾಃ**—ಮೇಧಾವಿಗಳಾದ ಯಜಮಾನರು । **ಅನು ಅಮಾದಿಷುಃ**—ನಿನ್ನನ್ನು ಹರ್ಷಗೊಳಿಸುತ್ತಾರೆ.

॥ ಭಾವಾರ್ಥ ॥

ಎಲೈ ಸೋಮವೇ, ನಿನ್ನನ್ನು ಹತ್ತು ಬೆರಳುಗಳೂ ಸೇವಿಸುತ್ತವೆ. ಏಳು ಜನ ಹೋತೃಗಳೂ ಉಪಚರಿಸುತ್ತಾರೆ. ಮೇಧಾವಿಗಳಾದ ಯಜಮಾನರು ನಿನ್ನನ್ನು ಹರ್ಷಗೊಳಿಸುತ್ತಾರೆ.

## English Translation

The ten fingers strain you, the seven priests caress you, the worshippers gladden you.

॥ ಸಂಹಿತಾಪಾಠಃ ॥

ದೇವೇಭ್ಯಸ್ತ್ವಾ ಮದಾಯ ಕಂ ಸೃಜಾನಮತಿ ಮೇಷ್ಯಃ ।
ಸಂ ಗೋಭಿರ್ವಾಸಯಾಮಸಿ ॥ ೫ ॥

॥ ಪದಪಾಠಃ ॥

ದೇವೇಭ್ಯಃ । ತ್ವಾ । ಮದಾಯ । ಕಂ । ಸೃಜಾನಂ । ಅತಿ । ಮೇಷ್ಯಃ ।
ಸಂ । ಗೋಭಿಃ । ವಾಸಯಾಮಸಿ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಸೋಮ ಮೇಷ್ಯೋಽವೇರ್ಲೋಮಾನಿ ಕಮುದಕಂ ಚಾತ್ಯಭಿ ಸೃಜಾನಂ ತ್ವಾ ತ್ವಾಂ ದೇವೇಭ್ಯೋ ದೇವಾನಾಂ ॥ ವಿಭಕ್ತಿವ್ಯತ್ಯಯಃ ॥ ಮದಾಯ ಮದಾರ್ಥಂ ಗೋಭಿರ್ಗೋವಿಕಾರೈಃ ಪಯೋಭಿಃ ಸಂ ವಾಸಯಾಮಸಿ । ಸಂವಾಸಯಾಮಃ ॥**

॥ ಪ್ರತಿಪದಾರ್ಥ ॥

(ಎಲೈ ಸೋಮವೇ) **ಮೇಷ್ಯಃ**—ಉಣ್ಣೆಯಮೇಲೆಯೂ । **ಕಂ**—ಉದಕದ ಜೊತೆಯಲ್ಲಿಯೂ । **ಅತಿ ಸೃಜಾನಂ**—ಕೂಡಿಕೊಂಡು ಪ್ರವಹಿಸುವ । **ತ್ವಾ**—ನಿನ್ನನ್ನು । **ದೇವೇಭ್ಯಃ**—ದೇವತೆಗಳ । **ಮದಾಯ**—ಹರ್ಷಕ್ಕಾಗಿ । **ಗೋಭಿಃ**—ಕ್ಷೀರಾದಿಗಳೊಡನೆ । **ಸಂ ವಾಸಯಾಮಸಿ**—ಸೇರಿಸಿ ಸಂಸ್ಕರಿಸುತ್ತೇವೆ.

॥ ಭಾವಾರ್ಥ ॥

ಎಲೈ ಸೋಮವೇ, ಉದಕದೊಂದಿಗೆ ಮಿಶ್ರಿತವಾಗಿ ದಶಾಪವಿತ್ರದ ಉಣ್ಣೆಯಮೂಲಕ ಶುದ್ಧವಾಗಿ ಪ್ರವಹಿಸುವ ನಿನ್ನನ್ನು ದೇವತೆಗಳ ತೃಪ್ತಿಗಾಗಿ ಕ್ಷೀರಾದಿಗಳೊಡನೆ ಸೇರಿಸಿ ಸಂಸ್ಕರಿಸುತ್ತೇವೆ.

## English Translation

As you stream on the water and the woollen sieve, we wrap you up with milk for the exhilaration of the gods.

। ಸಂಹಿತಾಪಾಠಃ ।

ಪುನಾನಃ ಕಲಶೇಷ್ವಾ ವಸ್ತ್ರಾಣ್ಯರುಷೋ ಹರಿಃ ।

ಪರಿ ಗವ್ಯಾನ್ಯವ್ಯತ ॥ ೬ ॥

॥ ಪದಪಾಠಃ ॥

ಪುನಾನಃ । ಕಲಶೇಷು । ಆ । ವಸ್ತ್ರಾಣಿ । ಅರುಷಃ । ಹರಿಃ ।

ಪರಿ । ಗವ್ಯಾನಿ । ಅವ್ಯತ ॥ ೬ ॥

॥ ಸಾಯಣಭಾಷ್ಯಂ ॥

**ಪುನಾನಃ ಪೂಯಮಾನಃ ಕಲಶೇಷು ಕುಂಭೇಷು ನಿಷಿಚ್ಯಮಾನೋಽರುಷ ಆರೋಚಮಾನೋ, ಹರಿರ್ಹರಿತವರ್ಣಃ ಸೋಮೋ ಗವ್ಯಾನಿ ದಧ್ಯಾದೀನಿ ವಸ್ತ್ರಾಣಿ ವಾಸಾಂಸೀವ ಪರ್ಯವ್ಯತ । ಪರ್ಯಾಚ್ಛಾದಯತಿ ॥**

॥ ಪ್ರತಿಪದಾರ್ಥ ॥

**ಪುನಾನಃ**—ಶುದ್ಧಿಮಾಡಲ್ಪಟ್ಟದ್ದೂ । **ಕಲಶೇಷು**—ಕುಂಭಾದಿಗಳಲ್ಲಿ ಸುರಿಯಲ್ಪಟ್ಟದ್ದೂ । **ಅರುಷಃ**—ಆಕರ್ಷಕವಾದುದೂ । **ಹರಿಃ**—ಪಚ್ಚೆವರ್ಣವುಳ್ಳದ್ದೂ ಆದ ಸೋಮವು । **ವಸ್ತ್ರಾಣಿ ಆ**—ವಸ್ತ್ರಗಳನ್ನು ಹೊದ್ದುಕೊಳ್ಳುವಂತೆ । **ಗವ್ಯಾನಿ**—ಗೋವಿಕಾರಗಳಾದ ಕ್ಷೀರಾದಿಗಳನ್ನು । **ಪರಿ ಅವ್ಯತ**—ಸುತ್ತಲೂ ಆವರಿಸುವಂತೆ ಮಾಡಿಕೊಳ್ಳುತ್ತದೆ.

। ಭಾವಾರ್ಥ ।

ಶುದ್ಧಿಮಾಡಲ್ಪಟ್ಟದ್ದೂ, ಕುಂಭಾದಿಗಳಲ್ಲಿ ಸುರಿಯಲ್ಪಟ್ಟದ್ದೂ, ಆಕರ್ಷಕವಾದುದೂ, ಪಚ್ಚೆವರ್ಣವುಳ್ಳದ್ದೂ ಆದ ಸೋಮವು ವಸ್ತ್ರಗಳನ್ನು ಹೊದ್ದುಕೊಳ್ಳುವಂತೆ ಗೋವಿಕಾರಗಳಾದ ಕ್ಷೀರಾದಿಗಳನ್ನು ಸುತ್ತಲೂ ಆವರಿಸುವಂತೆ ಮಾಡಿಕೊಳ್ಳುತ್ತದೆ (ಕ್ಷೀರಾದಿಗಳೊಡನೆ ಮಿಶ್ರಿತವಾಗುತ್ತದೆ).

## English Translation

Purified in the pitchers, radiant, and green-tinted, the Soma puts on the raiment derived from the cow.

॥ ಸಂಹಿತಾಪಾಠಃ ॥

ಮಘೋನ ಆ ಪವಸ್ವ ನೋ ಜಹಿ ವಿಶ್ವಾ ಅಪ ದ್ವಿಷಃ ।
ಇಂದೋ ಸಖಾಯಮಾ ವಿಶ ॥ ೭ ॥

॥ ಪದಪಾಠಃ ॥

ಮಘೋನಃ । ಆ । ಪವಸ್ವ । ನಃ । ಜಹಿ । ವಿಶ್ವಾಃ । ಅಪ । ದ್ವಿಷಃ ।
ಇಂದೋ ಇತಿ । ಸಖಾಯಂ । ಆ । ವಿಶ ॥ ೭ ॥

॥ ಸಾಯಣಭಾಷ್ಯಂ ॥

ಹೇ ಇಂದೋ ಸೋಮ ಮಘೋನೋ ಧನವತೋ ನೋಽಸ್ಮಾನ್ಪ್ರತಿ ಪವಸ್ವ । ಕ್ಷರ । ವಿಶ್ವಾಃ ವಿಶ್ವಾನ್ ದ್ವಿಷೋ ದ್ವೇಷ್ಟ್ರೂನಪ ಜಹಿ। ಮಾರಯ ಚ। ಸಖಾಯಂ ಪ್ರಿಯಮಿಂದ್ರಮಾ ವಿಶ ।ಅಪ್ನುಹಿ ಚ॥

॥ ಪ್ರತಿಪದಾರ್ಥ ॥

ಇಂದೋ—ಎಲೈ ಸೋಮವೇ । ಮಘೋನಃ—ಧನವಂತರೂ ನಿನ್ನ ಪೂಜಕರೂ ಆದ । ನಃ ಆ—ನಮಗಭಿಮುಖವಾಗಿ । ಪವಸ್ವ—ಸ್ರವಿಸು । ವಿಶ್ವಾ—ಸಮಸ್ತವಾದ । ದ್ವಿಷಃ—ಶತ್ರುಗಳನ್ನೂ । ಅಪ ಜಹಿ—ನಾಶಪಡಿಸು । ಸಖಾಯಂ—ನಿನ್ನ ಮಿತ್ರನಾದ ಇಂದ್ರನನ್ನು । ಆ ವಿಶ—ಪ್ರವೇಶಿಸು.

॥ ಭಾವಾರ್ಥ ॥

ಎಲೈ ಸೋಮವೇ, ಧನವಂತರೂ ನಿನ್ನ ಪೂಜಕರೂ ಆದ ನಮಗಭಿಮುಖವಾಗಿ ಸ್ರವಿಸು. ಸಮಸ್ತವಾದ ಶತ್ರುಗಳನ್ನೂ ನಾಶಪಡಿಸು. ನಿನ್ನ ಮಿತ್ರನಾದ ಇಂದ್ರನನ್ನು ಪ್ರವೇಶಿಸು.

English Translation

Flow to us, your wealthy (worshippers); destroy all our enemies Indu, enter your friend.

॥ ಸಂಹಿತಾಪಾಠಃ ॥

ವೃಷ್ಟಿಂ ದಿವಃ ಪರಿ ಸ್ರವ ದ್ಯುಮ್ನಂ ಪೃಥಿವ್ಯಾ ಅಧಿ ।
ಸಹೋ ನಃ ಸೋಮ ಪೃತ್ಸು ಧಾಃ ॥ ೮ ॥

॥ ಪದಪಾಠಃ ॥

ವೃಷ್ಟಿಂ । ದಿವಃ । ಪರಿ । ಸ್ರವ । ದ್ಯುಮ್ನಂ । ಪೃಥಿವ್ಯಾಃ । ಅಧಿ ।

ಸಹಃ । ನಃ । ಸೋಮ । ಪೃತ್ಽಸು । ಧಾಃ ॥ ೮ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತ್ವಂ ದಿವೋ ದ್ಯುಲೋಕಾದ್ವೃಷ್ಟಿಂ ವರ್ಷಂ ಪರಿ ಸ್ರವ । ವರ್ಷ । ಪೃಥಿವ್ಯಾ ಅಧಿ ಪೃಥಿವ್ಯಾಂ । ಅಧಿಃ ಸಪ್ತಮ್ಯರ್ಥಾನುವಾದಃ । ದ್ಯುಮ್ನಮನ್ನಂ ಚೋತ್ಪಾದಯೇತಿ ಶೇಷಃ । ನೋಽಸ್ಮಾಕಂ ಸಹೋ ಬಲಂ ಚ ಪೃತ್ಸು ಸಂಗ್ರಾಮೇಷು ಧಾಃ । ಧೇಹಿ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ದಿವಃ**—ಅಂತರಿಕ್ಷದಿಂದ । **ವೃಷ್ಟಿಂ**—ಮಳೆಯನ್ನು । **ಪರಿ ಸ್ರವ**—ಸುರಿಸು । **ಪೃಥಿವ್ಯಾ ಅಧಿ**—ಪೃಥ್ವಿಯ ಮೇಲೆ । **ದ್ಯುಮ್ನಂ**—ಅನ್ನವನ್ನು ಉತ್ಪನ್ನಮಾಡು । **ಪೃತ್ಸು**—ಸಂಗ್ರಾಮಗಳಲ್ಲಿ । **ನಃ**—ನಮಗೆ । **ಸಹಃ**—ಬಲವನ್ನು । **ಧಾಃ**—ಒದಗಿಸಿಕೊಡು

॥ ಭಾವಾರ್ಥ ॥

ಎಲೈ ಸೋಮನೇ, ಅಂತರಿಕ್ಷದಿಂದ ಮಳೆಯನ್ನು ಸುರಿಸು. ಭೂಮಿಯಮೇಲೆ ಅನ್ನವನ್ನು ಉತ್ಪನ್ನಮಾಡು. ಸಂಗ್ರಾಮಗಳಲ್ಲಿ ನಮಗೆ ಬಲವನ್ನು ಒದಗಿಸಿಕೊಡು.

English Translation

Pour down rain from heaven, and abundance upon the earth ; uphold our strength, Soma, in battles.

॥ ಸಂಹಿತಾಪಾಠಃ ॥

ನೃಚಕ್ಷಸಂ ತ್ವಾ ವಯಮಿಂದ್ರಪೀತಂ ಸ್ವರ್ವಿದಂ ।

ಭಕ್ಷೀಮಹಿ ಪ್ರಜಾಮಿಷಂ ॥ ೯ ॥

॥ ಪದಪಾಠಃ ॥

ನೃಽಚಕ್ಷಸಂ । ತ್ವಾ । ವಯಂ । ಇಂದ್ರಽಪೀತಂ । ಸ್ವಃಽವಿದಂ ।

ಭಕ್ಷೀಮಹಿ । ಪ್ರಽಜಾಂ । ಇಷಂ ॥ ೯ ॥

॥ ಸಾಯಣಭಾಷ್ಯಂ ॥

ಹೇ ಸೋಮ ನೃಚಕ್ಷಸಂ ನೃಣಾಂ ದ್ರಷ್ಟಾರಂ ಸ್ವರ್ವಿದಂ ಸರ್ವಜ್ಞಮಿಂದ್ರಪೀತಮಿಂದ್ರೇಣ ಪೀತಂ ತ್ವಾ ತ್ವಾಂ ಪಿಬಂತೋ ವಯಂ ಕಾಶ್ಯಪಾಸಿತಾಃ ಕಾಶ್ಯಪದೇವಲಾ ವಾ ಪ್ರಜಾಂ ಪುತ್ರಾದಿಕಾಮಿಷಮನ್ನಂ ಚ ಭಕ್ಷೀಮಹಿ । ಭಜೇಮಹಿ ॥

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ನೃಚಕ್ಷಸಂ**—ಮಾನವರ ವ್ಯವಹಾರವನ್ನು ನೋಡತಕ್ಕವನೂ । **ಸ್ವರ್ವಿದಂ**—ಸರ್ವಜ್ಞನೂ । **ಇಂದ್ರಪೀತಂ**—ಇಂದ್ರನಿಂದ ಪಾನಮಾಡಲ್ಪಟ್ಟವನೂ ಆದ । **ತ್ವಾ**—ನಿನ್ನನ್ನು । **ವಯಂ**—ನಾವು ಪಾನಮಾಡಿ । **ಪ್ರಜಾಂ**—ಪುತ್ರಾದಿಪ್ರಜೆಗಳನ್ನೂ । **ಇಷಂ**—ಅನ್ನವನ್ನೂ । **ಭಕ್ಷೀಮಹಿ**—ಅನುಭವಿಸುವಂತಾಗಲಿ.

॥ ಭಾವಾರ್ಥ ॥

ಎಲೈ ಸೋಮನೇ, ಮಾನವರ ವ್ಯವಹಾರಗಳನ್ನೆಲ್ಲಾ ನೋಡತಕ್ಕವನೂ, ಸರ್ವಜ್ಞನೂ, ಇಂದ್ರನಿಂದ ಪಾನಮಾಡಲ್ಪಟ್ಟವನೂ ಆದ ನಿನ್ನನ್ನು ನಾವು ಪಾನಮಾಡಿ ಪುತ್ರಾದಿಪ್ರಜೆಗಳನ್ನೂ ಅನ್ನವನ್ನೂ ಅನುಭವಿಸುವಂತಾಗಲಿ

English Translation

(Adoring) you, the contemplator of men, the beverage of Indra and the knower of all things, may we be blessed with progeny and food.

## ಒಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪರಿ ಪ್ರಿಯೇತಿ ನವರ್ಚಂ ನವಮಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪರಿ ಪ್ರಿಯೇತ್ಯನುಕ್ರಾಂತಂ ॥ ಉಕ್ತೋ ವಿನಿಯೋಗಃ ॥

ಅನುವಾದವು ಪರಿಪ್ರಿಯಾ ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು ಈ ಸೂಕ್ತದ ಋಷಿದೇವತಾ ಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಇರುವವು. ಅನುಕ್ರಮಣಿಕೆಯಲ್ಲಿ ಪರಿ ಪ್ರಿಯಾ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

### ಸೂಕ್ತ—೯

ಮಂಡಲ—೯ । ಅನುವಾಕ—೧ । ಸೂಕ್ತ—೯ ॥
ಅಷ್ಟಕ—೬ । ಅಧ್ಯಾಯ—೭ । ವರ್ಗ—೩೨, ೩೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪರಿ ಪ್ರಿಯಾ ದಿವಃ ಕವಿರ್ವಯಾಂಸಿ ನಪ್ತ್ಯೋರ್ಹಿತಃ ।
ಸುವಾನೋ ಯಾತಿ ಕವಿಕ್ರತುಃ ॥ ೧ ॥

॥ ಪದಪಾಠಃ ॥

ಪರಿ । ಪ್ರಿಯಾ । ದಿವಃ । ಕವಿಃ । ವಯಾಂಸಿ । ನಪ್ತ್ಯೋಃ । ಹಿತಃ ।
ಸುವಾನಃ । ಯಾತಿ । ಕವಿऽಕ್ರತುಃ ॥ ೧ ॥

॥ ಸಾಯಣಭಾಷ್ಯಂ ॥

ಕವಿರ್ಮೇಧಾವೀ ಕವಿಕ್ರತುಃ ಕ್ರಾಂತಪ್ರಜ್ಞಃ ಕ್ರಾಂತಕರ್ಮಾ ವಾ ಸೋಮೋ ನಪ್ತ್ಯೋರಧಿಷವಣಫಲಕಯೋರ್ಹಿತೋ ನಿಹಿತಃ ಸುವಾನೋऽಭಿಷೂಯಮಾಣೋ ದಿವೋ ದ್ಯುಲೋಕಸ್ಯ ಪರಿ ಪ್ರಿಯಾತಿಪ್ರಿಯಾಣಿ ವಯಾಂಸಿ ಗ್ರಾವ್ಣಃ । ತಥಾ ಚ ಮಂತ್ರವರ್ಣಃ । ವಯಾಂಸಿ ಶ್ಯೇನಾ ಅತಿಥಯಃ ಪರ್ವತಾನಾಂ ಕಕುಭ ಇತಿ । ಯಾತಿ । ಗಚ್ಛತಿ ॥

॥ ಪ್ರತಿಪದಾರ್ಥ ॥

**ಕವಿಃ**—ಮೇಧಾವಿಯೂ । **ಕವಿಕ್ರತುಃ**—ಪ್ರಜ್ಞಾಯುತವಾದ ಕರ್ಮವುಳ್ಳದ್ದೂ ಆದ ಸೋಮವು । **ನಪ್ತ್ಯೋಃ**—ಹಿಂಡುವ ಹಲಗೆಗಳ ನಡುವೆ । **ಹಿತಃ**—ಇಡಲ್ಪಟ್ಟು । **ಸುವಾನಃ**—ಹಿಂಡಲ್ಪಟ್ಟಾಗ । **ದಿವಃ**—ದ್ಯುಲೋಕಕ್ಕೆ । **ಪರಿ ಪ್ರಿಯಾ**—ಅತ್ಯಂತ ಪ್ರಿಯವಾದ । **ವಯಾಂಸಿ**—ಹಿಂಡುವ ಕಲ್ಲುಗಳಿಗಭಿಮುಖವಾಗಿ । **ಯಾತಿ**—ಹೋಗುತ್ತದೆ.

॥ ಭಾವಾರ್ಥ ॥

ಮೇಧಾವಿಯೂ, ಪ್ರಜ್ಞಾಯುತವಾದ ಕರ್ಮವುಳ್ಳದ್ದೂ ಆದ ಸೋಮವು ಹಿಂಡುವ ಹಲಗೆಗಳ ನಡುವೆ ಇಡಲ್ಪಟ್ಟು ಹಿಂಡಲ್ಪಟ್ಟಾಗ ದ್ಯುಲೋಕಕ್ಕೆ ಅತ್ಯಂತ ಪ್ರಿಯವಾದ ಹಿಂಡುವ ಕಲ್ಲುಗಳಿಗಭಿಮುಖವಾಗಿ ಹೋಗುತ್ತದೆ.

English Translation

The seer (Soma) having wise designs, when placed between the two boards and effused, proceeds to the stones which are most dear to heaven.

॥ ಸಂಹಿತಾಪಾಠಃ ॥

ಪ್ರಪ್ರ ಕ್ಷಯಾಯ ಪನ್ಯಸೇ ಜನಾಯ ಜುಷ್ಟೋ ಅದ್ರುಹೇ ।
ವೀತ್ಯರ್ಷ ಚನಿಷ್ಠಯಾ ॥ ೨ ॥

॥ ಪದಪಾಠಃ ॥

ಪ್ರಽಪ್ರ । ಕ್ಷಯಾಯ । ಪನ್ಯಸೇ । ಜನಾಯ । ಜುಷ್ಟಃ । ಅದ್ರುಹೇ ।

ವೀತಿ । ಅರ್ಷ । ಚನಿಷ್ಠಯಾ ॥ ೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ಪ್ರಪ್ರಾತ್ಯಂತಂ ಕ್ಷಯಾಯ ತವ ನಿವಾಸಭೂತಾಯಾದ್ರುಹೇಽದ್ರೋಗ್ಧ್ರೇ ಚ ಪನ್ಯಸೇ ಸ್ತೋತ್ರೇ ಜನಾಯ ಮನುಷ್ಯಾಯ ವೀತೀ ವೀತ್ಯೈ ಭಕ್ಷಣಾಯ ಜುಷ್ಟಃ ಪರ್ಯಾಪ್ತಸ್ತ್ವಂ ಚನಿಷ್ಠಯಾನ್ನವತ್ತಮಯಾ ಧಾರಯಾರ್ಷ । ಯಾಗಂ ಪ್ರತಿ ಗಚ್ಛ ॥

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ಪ್ರಪ್ರ**—ಅತ್ಯತಿಶಯವಾಗಿ । **ಕ್ಷಯಾಯ**—ನಿನಗೆ ನಿವಾಸಭೂತನಾದವನೂ । **ಅದ್ರುಹೇ**—ದ್ರೋಹರಹಿತನೂ । **ಪನ್ಯಸೇ**—ಸ್ತುತಿಕರ್ತನೂ ಆದ । **ಜನಾಯ**—ಯಜಮಾನನಿಗೆ । **ವೀತೀ**—ಪಾನಕ್ಕಾಗಿ । **ಜುಷ್ಟ**—ಸಂತೃಪ್ತನಾದ ನೀನು । **ಚನಿಷ್ಠಯಾ**—ಅನ್ನಯುಕ್ತವಾದ ಧಾರೆಯಿಂದ । **ಅರ್ಷ**—ಯಾಗಭೂಮಿಗೆ ಪ್ರಸರಿಸು.

॥ ಭಾವಾರ್ಥ ॥

ಎಲೈ ಸೋಮನೇ, ಅತ್ಯತಿಶಯವಾಗಿ ನಿನಗೆ ನಿವಾಸಭೂತನಾದವನೂ, ದ್ರೋಹರಹಿತನೂ ಆದ ಯಜಮಾನನಿಗೆ ಪಾನಕ್ಕಾಗಿ ಸಂತೃಪ್ತನಾದ ನೀನು ಅನ್ನಯುಕ್ತವಾದ ಧಾರೆಯಿಂದ ಯಾಗಭೂಮಿಗೆ ಪ್ರಸರಿಸು.

English Translation

Go forth in a most abundant stream, ample for his sustenance, to the guileless man, your owner who praises you.

॥ ಸಂಹಿತಾಪಾಠಃ ॥

ಸ ಸೂನುರ್ಮಾತರಾ ಶುಚಿರ್ಜಾತೋ ಜಾತೇ ಅರೋಚಯತ್ ।

ಮಹಾನ್ಮಹೀ ಋತಾವೃಧಾ ॥ ೩ ॥

॥ ಪದಪಾಠಃ ॥

ಸಃ । ಸೂನುಃ । ಮಾತರಾ । ಶುಚಿಃ । ಜಾತಃ । ಜಾತೇ ಇತಿ । ಅರೋಚಯತ್ ।

ಮಹಾನ್ । ಮಹೀ ಇತಿ । ಋತಽವೃಧಾ ॥ ೩ ॥

॥ ಸಾಯಣಭಾಷ್ಯಂ ॥

**ಜಾತ ಉತ್ಪನ್ನಃ ಶುಚಿರ್ವಿಶುದ್ಧೋ ಮಹಾನ್ಮಹಿರುತ್ತಮಃ ಸ ಸೋಮಾಖ್ಯಃ ಸೂನುಃ ಪುತ್ರೋ ಮಹೀ ಮಹತ್ಯಾವೃತಾವೃಧಾ ಯಜ್ಞಸ್ಯ ವರ್ಧಯಿತ್ರ್ಯೌ ಜಾತೇ ವಿಶ್ವಸ್ಯ ಜನಯಿತ್ರ್ಯೌ ಮಾತರಾತ್ಮನೋ ಮಾತರೌ ದ್ಯಾವಾಪೃಥಿವ್ಯಾವರೋಚಯತ್ । ರೋಚಯತಿ । ದೀಪಯತಿ ॥**

॥ ಪ್ರತಿಪದಾರ್ಥ ॥

**ಜಾತಃ**—ಯಜ್ಞಾರ್ಥವಾಗಿ ಉತ್ಪನ್ನನೂ । **ಶುಚಿಃ**—ಪರಿಶುದ್ಧನೂ । **ಮಹಾನ್**—ಮಹದ್ಗುಣಗಳುಳ್ಳವನೂ **ಸಃ**—ಸೋಮನೆಂಬ ಪ್ರಸಿದ್ಧನೂ ಆದ । **ಸೂನುಃ**—ಪುತ್ರನು । **ಮಹೀ**—ಮಹತ್ಸ್ವರೂಪವುಳ್ಳವರೂ । **ಋತಾವೃಧಾ**—ಯಜ್ಞವರ್ಧಕರಾದವರೂ । **ಜಾತೇ**—ವಿಶ್ವಕ್ಕೆ ಉತ್ಪಾದಕರೂ । **ಮಾತರಾ**—ತನ್ನ ಜನನಿಯರೂ ಆದ ದ್ಯಾವಾಪೃಥಿವಿಗಳನ್ನು । **ಅರೋಚಯತ್**—ಪ್ರಕಾಶಗೊಳಿಸುತ್ತಾನೆ.

॥ ಭಾವಾರ್ಥ ॥

ಯಜ್ಞಾರ್ಥವಾಗಿ ಉತ್ಪನ್ನನೂ, ಪರಿಶುದ್ಧನೂ, ಮಹದ್ಗುಣಗಳುಳ್ಳವನೂ, ಸೋಮನೆಂದು ಪ್ರಸಿದ್ಧನೂ ಆದ ಪುತ್ರನು ಮಹತ್ಸ್ವರೂಪವುಳ್ಳವರೂ ಯಜ್ಞವರ್ಧಕರಾದವರೂ ವಿಶ್ವಕ್ಕೆ ಉತ್ಪಾದಕರೂ, ತನ್ನ ಜನನಿಯರೂ ಆದ ದ್ಯಾವಾಪೃಥಿವಿಗಳನ್ನು ಪ್ರಕಾಶಗೊಳಿಸುತ್ತಾನೆ

English Translation

That mighly and pure son, when born, illumines his mighty parents (heaven and earth), the progenitors (of all things), the augmenters of the sacrifice.

॥ ಸಂಹಿತಾಪಾಠಃ ॥

**ಸ ಸಪ್ತ ಧೀತಿಭಿರ್ಹಿತೋ ನದ್ಯೋ ಅಜಿನ್ವದದ್ರುಹಃ ।**

**ಯಾ ಏಕಮಕ್ಷಿ ವಾವೃಧುಃ ॥ ೪ ॥**

॥ ಪದಪಾಠಃ ॥

ಸಃ । ಸಪ್ತ । ಧೀತಿಽಭಿಃ। ಹಿತಃ । ನದ್ಯಃ । ಅಜಿನ್ವತ್ । ಅದ್ರುಹಃ ।

ಯಾಃ । ಏಕಂ । ಅಕ್ಷಿ । ವವೃಧುಃ ॥ ೪ ॥

॥ ಸಾಯಣಭಾಷ್ಯಂ ॥

**ಯಾ ನದ್ಯೋ ಯಮೇಕಂ ಮುಖ್ಯಂ ಸೋಮಮಕ್ಷ್ಯಕ್ಷೀಣಂ ವವೃಧುಃ ವರ್ಧಯಂತಿ ಸ ಸೋಮೋ ಧೀತಿಭಿರಂಗುಲಿಭಿಃ । ರಶನಾ ಧೀತಯ ಇತ್ಯಂಗುಲಿನಾಮಸು ಪಾಠಾತ್ । ಹಿತೋ ನಿಹಿತಃ ಸನ್ನದ್ರುಹೋ ದ್ರೋಹವರ್ಜಿತಾಃ ಸಪ್ತ ಸಪ್ತಸಂಖ್ಯಾಕಾ ನದ್ಯೋ ನದೀರಜಿನ್ವನ್ । ಪ್ರೀಣಯತಿ ॥**

॥ ಪ್ರತಿಪದಾರ್ಥ ॥

**ಯಾಃ**—ಯಾವ ಸಪ್ತನದಿಗಳೂ । (**ಯಂ**—ಯಾವ) । **ಏಕಂ**—ಮುಖ್ಯನಾದ ಸೋಮನನ್ನು । **ಅಕ್ಷಿ**—ಕ್ಷಯಿಸದಂತೆ । **ವವೃಧುಃ**—ಬೆಳೆಸುತ್ತಾರೆಯೋ । **ಸಃ**—ಅದೇ ಸೋಮನು । **ಧೀತಿಭಿಃ**—ಅಂಗುಲಿಗಳ (ಬೆರಳುಗಳ) ನಡುವೆ । **ಹಿತಃ**—ಇಡಲ್ಪಟ್ಟು । **ಅದ್ರುಹಃ**—ದ್ರೋಹರಹಿತನಾಗಿ । **ಸಪ್ತ ನದ್ಯಃ**—ಅದೇ ಸಪ್ತನದಿಗಳನ್ನು । **ಅಜಿನ್ವತ್**—ಪ್ರೀತಿಗೊಳಿಸುತ್ತಾನೆ

॥ ಭಾವಾರ್ಥ ॥

ಯಾವ ಸಪ್ತನದಿಗಳೂ, ಯಾವ ಮುಖ್ಯನಾದ ಸೋಮನನ್ನು ಕ್ಷಯಿಸಿದಂತೆ ಬೆಳೆಸುತ್ತಾರೆಯೋ ಅದೇ ಸೋಮನು ಬೆರಳುಗಳ ನಡುವೆ ಇಡಲ್ಪಟ್ಟು ದ್ರೋಹರಹಿತನಾಗಿ ಅದೇ ಸಪ್ತನದಿಗಳನ್ನೂ ಪ್ರೀತಿಗೊಳಿಸುತ್ತಾನೆ.

English Translation

Effused by the fingers, ( Soma ) gladdens the seven guileless rivers, who have magnified him one and undecaying.

॥ ಸಂಹಿತಾಪಾಠಃ ॥

ತಾ ಅಭಿ ಸಂತಮಸ್ತೃತಂ ಮಹೇ ಯುವಾನಮಾ ದಧುಃ ।
ಇಂದುಮಿಂದ್ರ ತವ ವ್ರತೇ ॥ ೫ ॥

॥ ಪದಪಾಠಃ ॥

ತಾಃ । ಅಭಿ । ಸಂತಂ । ಅಸ್ತೃತಂ । ಮಹೇ । ಯುವಾನಂ । ಆ । ದಧುಃ ।
ಇಂದುಂ । ಇಂದ್ರ । ತವ । ವ್ರತೇ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಇಂದ್ರ ತವ ತ್ವದೀಯೇ ವ್ರತೇ ಕರ್ಮಣಿ ತಾ ಅಂಗುಲ್ಯಃ । ಪೂರ್ವತ್ರ ಧೀತಿಭಿರಿತ್ಯಂಗುಲೀನಾಮುಪಾತ್ತತ್ವಾತ್ತಚ್ಛಬ್ದೇನ ಪರಾಮರ್ಶಃ । ಸಂತಂ ವಿದ್ಯಮಾನಮಸ್ತೃತಮಹಿಂಸಿತಂ ಯುವಾನಂ ನಿತ್ಯತರುಣಮಿಂದುಂ ಸೋಮಂ ಮಹೇ ಮಹತೇಽಭಿಷವಾದಿಲಕ್ಷಣಾಯ ಕರ್ಮಣೇಽಭ್ಯಾದಧುಃ ॥**

॥ ಪ್ರತಿಪದಾರ್ಥ ॥

**ಇಂದ್ರ**—ಎಲೈ ಇಂದ್ರನೇ । **ತವ**—ನಿನ್ನನ್ನುದ್ದೇಶಿಸಿದ । **ವ್ರತೇ**—ಕರ್ಮದಲ್ಲಿ । **ತಾಃ**—ಬೆರಳುಗಳು **ಸಂತಂ**—ನಿತ್ಯವಾಗಿರತಕ್ಕದ್ದೂ । **ಅಸ್ತೃತಂ**—ಯಾರ ಹಿಂಸೆಗೂ ಒಳಪಡದಿರುವುದೂ । **ಯುವಾನಂ**—ನಿತ ತಾರುಣ್ಯವುಳ್ಳದ್ದೂ ಆದ । **ಇಂದುಂ**—ಸೋಮವನ್ನು । **ಮಹೇ**—ಮಹತ್ತಾದ ನಿನ್ನ ಕರ್ಮನಿಮಿತ್ತವಾಗಿ । **ಅಭಿ ಆ ದಧುಃ**—ಉತ್ಪನ್ನಮಾಡುತ್ತವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ನಿನ್ನನ್ನುದ್ದೇಶಿದ ಕರ್ಮದಲ್ಲಿ ಹತ್ತು ಬೆರಳುಗಳೂ ಸಹ ನಿತ್ಯವಾಗಿರತಕ್ಕದ್ದೂ, ಯಾ ಹಿಂಸೆಗೂ ಒಳಪಡದಿರುವುದೂ, ನಿತ್ಯ ತಾರುಣ್ಯವುಳ್ಳದ್ದೂ ಆದ ಸೋಮವನ್ನು ಮಹತ್ತಾದ ನಿನ್ನ ಕರ್ಮನಿಮಿತ್ತ ವಾಗಿ ಉತ್ಪನ್ನಮಾಡುತ್ತವೆ

English Translation

Indra, at your worship, they (the fingers) have provided the present indestructible, and ever-youthful Indu for your solemn service.

॥ ಸಂಹಿತಾಪಾಠಃ ॥

ಅಭಿ ವಹ್ನಿರಮರ್ತ್ಯಃ ಸಪ್ತ ಪಶ್ಯತಿ ವಾವಹಿಃ ।
ಕ್ರಿವಿರ್ದೇವೀರತರ್ಪಯತ್ ॥ ೬ ॥

॥ ಪದಪಾಠಃ ॥

ಅಭಿ । ವಹ್ನಿಃ । ಅಮರ್ತ್ಯಃ । ಸಪ್ತ । ಪಶ್ಯತಿ । ವಾವಹಿಃ ।
ಕ್ರಿವಿಃ । ದೇವೀಃ । ಅತರ್ಪಯತ್ ॥ ೬ ॥

॥ ಸಾಯಣಭಾಷ್ಯಂ ॥

ಯೋ ವಹ್ನಿರ್ಯಜ್ಞಸ್ಯ ಧುರೋ ವೋಢಾಮರ್ತ್ಯೋ ಮರಣರಹಿತೋ ವಾವಹಿರ್ದೇವಾನಾಂ ತೃಪ್ತೇರತ್ಯಂತಂ ವೋಢಾ ಚ ಸೋಮಃ ಸಪ್ತ ನದೀಃ ಪಶ್ಯತಿ ಸೋಽಯಂ ಕ್ರಿವಿಃ ಕೂಪರೂಪೇಣ ಪೂರ್ಣೋಽವಸ್ಥಿತಃ ಸನ್ದೇವೀರ್ನದೀರತರ್ಪಯತ್ । ತರ್ಪಯತಿ ॥

॥ ಪ್ರತಿಪದಾರ್ಥ ॥

**ವಹ್ನಿಃ**— ಯಜ್ಞಭಾರವನ್ನು ವಹಿಸುವವನೂ । **ಅಮರ್ತ್ಯಃ**— ಮರಣಧರ್ಮರಹಿತನೂ । **ವಾವಹಿಃ**— ದೇವತೆಗಳಿಗೆ ತೃಪ್ತಿವಾಹಕನೂ ಆದ ಸೋಮನು । **ಸಪ್ತ**— ಸಪ್ತಸಂಖ್ಯಾಕವಾದ ನದಿಗಳನ್ನೂ । **ಅಭಿ ಪಶ್ಯತಿ**— ಪೂರ್ಣವಾಗಿ ನೋಡುತ್ತಾನೆ । **ಕ್ರಿವಿಃ**— ಕೂಪರೂಪದಲ್ಲಿ ಪೂರ್ಣನಾಗಿರುವ ಅದೇ ಸೋಮನು । **ದೇವೀಃ**— ದೇವತಾತ್ಮಗಳಾದ ನದಿಗಳನ್ನು । **ಅತರ್ಪಯತ್**— ತೃಪ್ತಿಗೊಳಿಸುತ್ತಾನೆ.

॥ ಭಾವಾರ್ಥ ॥

ಯಜ್ಞಭಾರವನ್ನು ವಹಿಸುವವನೂ, ಮರಣಧರ್ಮರಹಿತನೂ ದೇವತೆಗಳಿಗೆ ತೃಪ್ತಿವಾಹಕನೂ ಆದ ಸೋಮನು ಸಪ್ತಸಂಖ್ಯಾಕವಾದ ನದಿಗಳನ್ನು ಪೂರ್ಣವಾಗಿ ನೋಡುತ್ತಾನೆ ಕೂಪರೂಪದಲ್ಲಿ (ಕಲಶದಲ್ಲಿ ತುಂಬಿರುವ) ಪೂರ್ಣನಾಗಿರುವ ಅದೇ ಸೋಮನು ದೇವತಾತ್ಮಗಳಾದ ನದಿಗಳನ್ನು ತೃಪ್ತಿಗೊಳಿಸುತ್ತಾನೆ.

## English Translation

The immoratal bearer (of the oblation), the conveyer (of content to the gods), beholds the seven rivers,—full as a well, he has satisfied the divine streams.

॥ ಸಂಹಿತಾಪಾಠಃ ॥

ಅವಾ ಕಲ್ಪೇಷು ನಃ ಪುಮಸ್ತಮಾಂಸಿ ಸೋಮ ಯೋಧ್ಯಾ ।
ತಾನಿ ಪುನಾನ ಜಂಘನಃ ॥ ೭ ॥

॥ ಪದಪಾಠಃ ॥

ಅವ । ಕಲ್ಪೇಷು । ನಃ । ಪುಮಃ । ತಮಾಂಸಿ । ಸೋಮ । ಯೋಧ್ಯಾ ।
ತಾನಿ । ಪುನಾನ । ಜಂಘನಃ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಪುಮಃ ಪುಮನ್ಸೋಮ ಕಲ್ಪೇಷು ಕಲ್ಪನೀಯೇಷ್ವಹಃಸು ನೋಽಸ್ಮಾನವ । ರಕ್ಷ । ಅಪಿ ಚ ಪುನಾನ ಹೇ ಪವಮಾನ ಸೋಮ ತ್ವಂ ಯೋಧ್ಯಾ ಯೋಧನೀಯಾನಿ ತಮಾಂಸಿ ರಕ್ಷಾಂಸಿ ಯಾನಿ ತಾನಿ ಜಂಘನಃ । ನಾಶಯ ॥**

॥ ಪ್ರತಿಪದಾರ್ಥ ॥

**ಪುಮಃ**—ಪುಂಶಕ್ತಿಯುಳ್ಳ ಎಲೈ ಸೋಮನೇ । **ಕಲ್ಪೇಷು**—ನಮ್ಮ ಯಜ್ಞದಿವಸಗಳಲ್ಲಿ । **ನಃ**—ನಮ್ಮನ್ನು । **ಅವ**—ರಕ್ಷಿಸು । **ಪುನಾನ**—ಶುದ್ಧಿಕಾರಕನಾದ । **ಸೋಮ**—ಎಲೈ ಸೋಮನೇ । **ಯೋಧ್ಯಾ**—ನಮ್ಮನ್ನು ಪ್ರತಿಭಟಿಸಿ ಯುದ್ಧಕ್ಕೆ ಕರೆಯುವವರೂ ! **ತಮಾಂಸಿ**—ಕಗ್ಗತ್ತಲೆಯಿಂದ ಕೂಡಿದುದೂ ಆದ । **ತಾನಿ**—ರಾಕ್ಷಸಶಕ್ತಿಗಳನ್ನು । ಜಂಘನಃ—ನಾಶಪಡಿಸು

॥ ಭಾವಾರ್ಥ ॥

ಪುಂಶಕ್ತಿಯುಳ್ಳ ಎಲೈ ಸೋಮನೇ, ನಮ್ಮ ಯಜ್ಞದಿವಸಗಳಲ್ಲಿ ನಮ್ಮನ್ನು ರಕ್ಷಿಸು. ಶುದ್ಧಿಕಾರಕನಾದ ಎಲೈ ಸೋಮನೇ, ನಮ್ಮನ್ನು ಪ್ರತಿಭಟಿಸಿ ಯುದ್ಧಕ್ಕೆ ಕರೆಯುವವರೂ ಕಗ್ಗತ್ತಲೆಯಲ್ಲಿ ಸಂಚರಿಸುವವರೂ ಆದ ರಾಕ್ಷಸ ಶಕ್ತಿಗಳನ್ನು ನಾಶಪಡಿಸು

## English Translation

Protect us, manly Soma, in the days of sacrifice; purifier. destroy those powers of darkness against which we must contend.

॥ ಸಂಹಿತಾಪಾಠಃ ॥

ನೂ ನವ್ಯಸೇ ನವೀಯಸೇ ಸೂಕ್ತಾಯ ಸಾಧಯಾ ಪಥಃ ।
ಪ್ರತ್ನವದ್ರೋಚಯಾ ರುಚಃ ॥ ೮ ॥

॥ ಪದಪಾಠಃ ॥

ನು । ನವ್ಯಸೇ । ನವೀಯಸೇ । ಸುಽಉಕ್ತಾಯ । ಸಾಧಯ । ಪಥಃ ।
ಪ್ರತ್ನಽವತ್ । ರೋಚಯ । ರುಚಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಸೋಮ ನವ್ಯಸೇ ನವ್ಯಾಯ ನೂತನಾಯ ನವೀಯಸೇ ಸ್ತುತ್ಯಾಯಾಸ್ಮಾಕಂ ಸೂಕ್ತಾಯ ಪಥೋ ಮಾರ್ಗಾನ್ನು ಕ್ಷಿಪ್ರಂ ಸಾಧಯ । ಅಭಿಗಚ್ಛ । ಅಪಿ ಚ ಪ್ರತ್ನವದ್ಯಥಾಪೂರ್ವಂ ರುಚಃ ಸ್ವದೀಪ್ತೀ ರೋಚಯ । ಪ್ರಕಾಶಯ ॥

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ನವ್ಯಸೇ**—ನೂತನವಾದುದೂ । **ನವೀಯಸೇ**—ಪ್ರಶಂಸಾರ್ಹವಾದುದೂ ಆದ । **ಸೂಕ್ತಾಯ**—ನಮ್ಮ ಸ್ತುತಿರೂಪವಾದ ಸೂಕ್ತಕ್ಕೆ । **ಪಥಃ**—ಉತ್ತಮವಾದ ಮಾರ್ಗವನ್ನು । **ನು**—ಕ್ಷಿಪ್ರವಾಗಿ । **ಸಾಧಯ**—ಸಂಪಾದಿಸಿಕೊಡು । **ಪ್ರತ್ನವತ್**—ಹಿಂದಿನಂತೆಯೇ । **ರುಚಃ**—ನಿನ್ನ ಕಾಂತಿಗಳನ್ನು । **ರೋಚಯ**—ಪ್ರಕಾಶಪಡಿಸು

॥ ಭಾವಾರ್ಥ ॥

ಎಲೈ ಸೋಮನೇ, ನೂತನವಾದುದೂ, ಪ್ರಶಂಸಾರ್ಹವಾದುದೂ ಆದ ನಮ್ಮ ಸ್ತುತಿರೂಪವಾದ ಸೂಕ್ತಕ್ಕೆ ಉತ್ತಮವಾದ ಮಾರ್ಗವನ್ನು ಕ್ಷಿಪ್ರವಾಗಿ ಸಂಪಾದಿಸಿಕೊಡು ಹಿಂದಿನಂತೆಯೇ ನಿನ್ನ ಕಾಂತಿಗಳನ್ನು ಪ್ರಕಾಶಪಡಿಸು.

English Translation

Quickly speed on the road for our new praiseworthy hymn; as of old display your radiance.

॥ ಸಂಹಿತಾಪಾಠಃ ॥

ಪವಮಾನ ಮಹಿ ಶ್ರವೋ ಗಾಮಶ್ವಂ ರಾಸಿ ವೀರವತ್ ।
ಸನಾ ಮೇಧಾಂ ಸನಾ ಸ್ವಃ ॥ ೯ ॥

॥ ಪದಪಾಠಃ ॥

ಪವಮಾನ । ಮಹಿ । ಶ್ರವಃ । ಗಾಂ । ಅಶ್ವಂ । ರಾಸಿ । ವೀರಽವತ್ ।

ಸನ । ಮೇಧಾಂ । ಸನ । ಸ್ವಃ । ರಿತಿ ಸ್ವಃ ॥ ೯ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಸೋಮ ಯಸ್ತ್ವಂ ವೀರವತ್ಪುತ್ರವನ್ಮಹಿ ಮಹಚ್ಛ್ರವೋಽನ್ನಂ ಗಾಂ ಚಾಶ್ವಂ ಚ ರಾಸಿ ಅಸ್ಮಭ್ಯಂ ಪ್ರಯಚ್ಛಸಿ ಸ ತ್ವಂ ಮೇಧಾಂ ಸನ । ಅಸ್ಮಭ್ಯಂ ಪ್ರಯಚ್ಛ । ಅಪಿ ಚ ಸ್ವರ್ಯ-ದಸ್ಮದಭಿಲಷಿತಂ ತತ್ಸರ್ವಂ ಸನ । ದೇಹಿ ॥

॥ ಪ್ರತಿಪದಾರ್ಥ ॥

**ಪವಮಾನ**—ಶುದ್ಧಿಕಾರಕನಾದ ಎಲೈ ಸೋಮನೇ । **ವೀರವತ್**—ವೀರರಾದ ಪುತ್ರರಿಂದ ಕೂಡಿದುದೂ । **ಮಹಿ**—ಮಹತ್ತಾದುದೂ ಆದ । **ಶ್ರವಃ**—ಅನ್ನವನ್ನೂ । **ಗಾಂ**— ಪಶುವನ್ನೂ । **ಅಶ್ವಂ**— ಅಶ್ವವನ್ನೂ । **ರಾಸಿ**— ನಮಗೆ ಒದಗಿಸಿಕೊಡು । **ಮೇಧಾಂ**— ಉತ್ತಮವಾದ ಜ್ಞಾನವನ್ನೂ । **ಸನ**—ಉತ್ಪನ್ನಮಾಡು । **ಸ್ವಃ**—ನಮ್ಮ ಸಕಲ ಇಷ್ಟಾರ್ಥಗಳನ್ನೂ । **ಸನ**— ನೆರವೇರಿಸು.

॥ ಭಾವಾರ್ಥ ॥

ಶುದ್ಧಿಕಾರಕನಾದ ಎಲೈ ಸೋಮನೇ, ವೀರರಾದ ಪುತ್ರರಿಂದ ಕೂಡಿದುದೂ, ಮಹತ್ತಾದುದೂ ಆದ ಅನ್ನವನ್ನೂ ಪಶುವನ್ನೂ, ಅಶ್ವವನ್ನೂ ನಮಗೆ ಒದಗಿಸಿಕೊಡು ಉತ್ತಮವಾದ ಜ್ಞಾನವನ್ನೂ ನಮ್ಮಲ್ಲಿ ಉತ್ಪನ್ನಮಾಡು. ನಮ್ಮ ಸಕಲ ಇಷ್ಟಾರ್ಥಗಳನ್ನೂ ನೆರವೇರಿಸು.

English Translation

Purifier (Soma), grant us abundant food with male offspring, and cattle and horse, give us understanding, give us all (we desire).

## ಹತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪ್ರ ಸ್ವಾನಾಸ ಇತಿ ನವರ್ಚಂ ದಶಮಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪ್ರ ಸ್ವಾನಾಸ ಇತ್ಯನುಕ್ರಾಂತಂ ॥ ಉಕ್ತೋ ವಿನಿಯೋಗಃ ॥

ಅನುವಾದವು—**ಪ್ರ ಸ್ವಾನಾಸಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ

ಇರುವವು. ಅನುಕ್ರಮಣಿಕೆಯಲ್ಲಿ—ಪ್ರ ಸ್ವಾನಾಸಃ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೧೦

ಮಂಡಲ—೯ । ಅನುವಾಕ—೧ । ಸೂಕ್ತ—೧೦ ।
ಅಷ್ಟಕ—೬ । ಅಧ್ಯಾಯ—೭ । ವರ್ಗ—೩೪, ೩೫ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ।
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ।
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

। ಸಂಹಿತಾಪಾಠಃ ।

**ಪ್ರ ಸ್ವಾನಾಸೋ ರಥಾ ಇವಾರ್ವಂತೋ ನ ಶ್ರವಸ್ಯವಃ ।**
**ಸೋಮಾಸೋ ರಾಯೇ ಅಕ್ರಮುಃ ॥ ೧ ॥**

॥ ಪದಪಾಠಃ ॥

ಪ್ರ । ಸ್ವಾನಾಸಃ । ರಥಾಃಽಇವ । ಅರ್ವಂತಃ । ನ । ಶ್ರವಸ್ಯವಃ ।
ಸೋಮಾಸಃ । ರಾಯೇ । ಅಕ್ರಮುಃ ॥ ೧ ॥

। ಸಾಯಣಭಾಷ್ಯಂ ।

ಪ್ರ ಸ್ವಾನಾಸೋಽಭಿಷವವೇಲಾಯಾಮುಪರವೇಷು ಶಬ್ದಂ ಕುರ್ವಂತಃ ಸೋಮಾಸಃ ಸೋಮಾ ರಥಾ ಇವ ಯಥಾ ಶಬ್ದಂ ಕುರ್ವಂತೋ ರಥಾ ಅರ್ವಂತೋ ನ ಯಥಾ ಶಬ್ದಂ ಕುರ್ವಂತೋಽಶ್ವಾಃ ತಥಾ ಶ್ರವಸ್ಯವಃ ಶತ್ರುಭ್ಯೋಽನ್ನಮಿಚ್ಛಂತೋ ರಾಯೇ ಯಜಮಾನಾನಾಂ ಧನಾಯಾಕ್ರಮುಃ । ಆಗಚ್ಛನ್ ॥

॥ ಪ್ರತಿಪದಾರ್ಥ ॥

**ರಥಾ ಇವ**—ರಥಗಳು ಶಬ್ದಮಾಡುವಂತೆಯೂ । **ಅರ್ವಂತೋ ನ**—ಅಶ್ವಗಳು ಶಬ್ದಮಾಡುವಂತೆಯೂ । **ಪ್ರ ಸ್ವಾನಾಸಃ**—ಹಿಂಡುವ ಕಾಲದಲ್ಲಿ ಶಬ್ದಮಾಡತಕ್ಕ । **ಸೋಮಾಸಃ**—ಸೋಮರಸಗಳು । **ಶ್ರವಸ್ಯವಃ**—ಶತ್ರುಗಳ ಧನವನ್ನು ಕಸಿದುಕೊಳ್ಳಲು ಇಚ್ಛೆಯಿಂದಲೂ । **ರಾಯೇ**—ಯಜಮಾನನಿಗೆ ಧನವನ್ನು ಕೊಡುವ ಇಚ್ಛೆಯಿಂದಲೂ । **ಅಕ್ರಮುಃ**—ಇಲ್ಲಿ ಬಂದಿವೆ.

॥ ಭಾವಾರ್ಥ ॥

ರಥಗಳು ಶಬ್ದಮಾಡುವಂತೆಯೂ, ಅಶ್ವಗಳು ಶಬ್ದಮಾಡುವಂತೆಯೂ ಹಿಂಡುವ ಕಾಲದಲ್ಲಿ ಶಬ್ದಮಾಡತಕ್ಕ ಸೋಮರಸಗಳು ಶತ್ರುಗಳ ಧನವನ್ನು ಕಸಿದುಕೊಳ್ಳುವ ಇಚ್ಛೆಯಿಂದಲೂ, ಯಜಮಾನನಿಗೆ ಧನವನ್ನು ಕೊಡುವ ಇಚ್ಛೆಯಿಂದಲೂ ಇಲ್ಲಿ ಬಂದಿವೆ.

English Translation

Longing for food the Soma-juices, uttering a sound like chariots or like horses, have come for the sake of riches.

॥ ಸಂಹಿತಾಪಾಠಃ ॥

ಹಿನ್ವಾನಾಸೋ ರಥಾ ಇವ ದಧನ್ವಿರೇ ಗಭಸ್ತ್ಯೋಃ ।
ಭರಾಸಃ ಕಾರಿಣಾಮಿವ ॥ ೨ ॥

॥ ಪದಪಾಠಃ ॥

ಹಿನ್ವಾನಾಸಃ । ರಥಾಃಽಇವ । ದಧನ್ವಿರೇ । ಗಭಸ್ತ್ಯೋಃ ।
ಭರಾಸಃ । ಕಾರಿಣಾಂಽಇವ ॥ ೨ ॥

॥ ಸಾಯಣಭಾಷ್ಯಂ ॥

**ಸೋಮಾ ರಥಾ ಇವ ಯಥಾ ರಥಾಸ್ತಥಾ ಹಿನ್ವಾನಾಸೋ ಹಿನ್ವಾನಾ ಯಾಗದೇಶಂ ಪ್ರತಿ ಗಚ್ಛಂತೋ ಭರಾಸೋ ಭರಾಃ ಕಾರಿಣಾಮಿವ ಯಥಾ ಭಾರವಾಹಿನಾಂ ಬಾಹ್ವೋರ್ಧ್ರಿಯಂತೇ ತಥಾ ಗಭಸ್ತ್ಯೋರ್ಋತ್ವಿಜಾಂ ಬಾಹ್ವೋಃ । ಗಭಸ್ತೀ ಬಾಹೂ ಇತಿ ಬಾಹುನಾಮಸು ಪಾಠಾತ್ । ದಧನ್ವಿರೇ । ಧ್ರಿಯಂತೇ ॥**

॥ ಪ್ರತಿಪದಾರ್ಥ ॥

**ರಥಾ ಇವ**—ರಥಗಳಂತೆ ವೇಗವಾಗಿ । **ಹಿನ್ವಾನಾಸಃ**—ಯಜ್ಞಪ್ರದೇಶಕ್ಕೆ ಬರುತ್ತಿರುವ ಸೋಮರಸಗಳು । **ಕಾರಿಣಾಮಿವ**—ಭಾರವನ್ನು ವಹಿಸುವವರ ಬಾಹುಗಳ ನಡುವೆ । **ಭರಾಸಃ**—ಭಾರಗಳು ವಹಿಸಲ್ಪಡುವಂತೆ । **ಗಭಸ್ತ್ಯೋಃ**—ಋತ್ವಿಕ್ಕುಗಳ ಬಾಹುಗಳ ನಡುವೆ । **ದಧನ್ವಿರೇ**—ಧರಿಸಲ್ಪಡುತ್ತವೆ

॥ ಭಾವಾರ್ಥ ॥

ರಥಗಳಂತೆ ವೇಗವಾಗಿ ಯಜ್ಞಪ್ರದೇಶಕ್ಕೆ ಬರುತ್ತಿರುವ ಸೋಮರಸಗಳು ಭಾರವನ್ನು ವಹಿಸುವವರ ಬಾಹುಗಳ ನಡುವೆ ಭಾರಗಳು ವಹಿಸಲ್ಪಡುವಂತೆ ಋತ್ವಿಕ್ಕುಗಳ ಬಾಹುಗಳ ನಡುವೆ ಧರಿಸಲ್ಪಡುತ್ತವೆ.

English Translation

Coming like chariots (to the sacrifice), they are upheld in the arms (of the priests) as burdens (in the arms) oflabourers.

॥ ಸಂಹಿತಾಪಾಠಃ ॥

ರಾಜಾನೋ ನ ಪ್ರಶಸ್ತಿಭಿಃ ಸೋಮಾಸೋ ಗೋಭಿರಂಜತೇ ।
ಯಜ್ಞೋ ನ ಸಪ್ತ ಧಾತೃಭಿಃ ॥ ೩ ॥

॥ ಪದಪಾಠಃ ॥

ರಾಜಾನಃ । ನ । ಪ್ರಶಸ್ತಿಽಭಿಃ । ಸೋಮಾಸಃ । ಗೋಭಿಃ । ಅಂಜತೇ ।
ಯಜ್ಞಃ । ನ । ಸಪ್ತ । ಧಾತೃಽಭಿಃ ॥ ೩ ॥

॥ ಸಾಯಣಭಾಷ್ಯಂ ॥

ಸೋಮಾಸಃ ಸೋಮಾಃ ಪ್ರಶಸ್ತಿಭಿಃ ಪ್ರಶಸ್ತಾಭಿಃ ಸ್ತುತಿರೂಪಾಭಿರ್ವಾಗ್ಭಿಃ ರಾಜಾನೋ ನ ಯಥಾ ರಾಜಾನಃ ಸ್ತುತಿರೂಪಾಭಿ ಸಪ್ತ ಧಾತೃಭಿಃ ಸಪ್ತ ಹೋತ್ರಾಭಿರ್ಯಜ್ಞೋ ನ ಯಥಾ ಚ ಯಜ್ಞಸ್ತಥಾ ಗೋಭಿರ್ಗೋವಿಕಾರೈಃ ಪಯೋಭಿರಂಜತೇ । ಅಜ್ಯಂತೇ । ಸಂಸ್ಕ್ರಿಯಂತ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

ರಾಜಾನಃ—ದೊರೆಗಳು । ಪ್ರಶಸ್ತಿಭಿಃ ನ—ಉತ್ತಮವಾದ ಸ್ತುತಿವಾಕ್ಯಗಳಿಂದ ಆವೃತರಾಗುವಂತೆಯೂ । ಯಜ್ಞಃ—ಯಜ್ಞವು । ಸಪ್ತ ಧಾತೃಭಿಃ ನ—ಏಳು ಜನ ಹೋತೃಗಳಿಂದ ಸುತ್ತುವರಿಯಲ್ಪಡುವಂತೆಯೂ । ಸೋಮಾಸಃ—ಸೋಮರಸಗಳು । ಗೋಭಿಃ—ಗೋವಿಕಾರಗಳಾದ ಕ್ಷೀರಾದಿಗಳಿಂದ । ಅಂಜತೇ—ಆವೃತವಾಗಿ । ಅಲಂಕರಿಸಲ್ಪಡುತ್ತವೆ

॥ ಭಾವಾರ್ಥ ॥

ದೊರೆಗಳು ಉತ್ತಮವಾದ ಸ್ತುತಿವಾಕ್ಯಗಳಿಂದ ಸುತ್ತುವರಿಯಲ್ಪಡುವಂತೆಯೂ, ಯಜ್ಞವು ಏಳು ಜನ ಹೋತೃಗಳಿಂದ ಸುತ್ತುವರಿಯಲ್ಪಡುವಂತೆಯೂ ಸಹ ಸೋಮರಸಗಳು ಗೋವಿಕಾರಗಳಾದ ಕ್ಷೀರಾದಿಗಳಿಂದ ಆವೃತವಾಗಿ ಅಲಂಕರಿಸಲ್ಪಡುತ್ತವೆ (ಕ್ಷೀರಾದಿಗಳಿಂದ ಮಿಶ್ರಿತವಾಗುತ್ತವೆ).

English Translation

The libations are annointed with milk as kings with praises, and (tended) as a sacrifice by seven priests.

॥ ಸಂಹಿತಾಪಾಠಃ ॥

ಪರಿ ಸುವಾನಾಸ ಇಂದವೋ ಮದಾಯ ಬರ್ಹಣಾ ಗಿರಾ ।
ಸುತಾ ಅರ್ಷಂತಿ ಧಾರಯಾ ॥ ೪ ॥

॥ ಪದಪಾಠಃ ॥

ಪರಿ । ಸುವಾನಾಸಃ । ಇಂದವಃ । ಮದಾಯ । ಬರ್ಹಣಾ । ಗಿರಾ ।
ಸುತಾಃ । ಅರ್ಷಂತಿ । ಧಾರಯಾ ॥ ೪ ॥

॥ ಸಾಯಣಭಾಷ್ಯಂ ॥

**ಸುವಾನಾಸಃ ಸುವಾನಾ ಅಭಿಷೂಯಮಾಣಾ ಇಂದವಃ ಸೋಮಾ ಬರ್ಹಣಾ ಮಹತ್ಯಾ ಗಿರಾ ಸ್ತುತಿರೂಪಯಾ ವಾಚಾ ಸುತಾ ಅಭಿಷುತಾಃ ಸಂತೋ ಮದಾಯ ಮದಾರ್ಥಂ ಧಾರಯಾ ಪರ್ಯರ್ಷಂತಿ ಪರಿತೋ ಗಚ್ಛಂತಿ** ॥

॥ ಪ್ರತಿಪದಾರ್ಥ ॥

**ಸುವಾನಾಸಃ**—ಹಿಂಡಲು ಸಿದ್ಧವಾಗಿರುವ । **ಇಂದವಃ**—ಸೋಮಗಳು । **ಬರ್ಹಣಾ**—ಮಹತ್ತಾದ । **ಗಿರಾ**—ಸ್ತುತಿವಾಕ್ಯದಿಂದ ಕೂಡಿ । **ಸುತಾಃ**—ಹಿಂಡಲ್ಪಟ್ಟು । **ಮದಾಯ**—ದೇವತೆಗಳ ಸಂತೃಪ್ತಿಗಾಗಿ । **ಧಾರಯಾ**—ಪ್ರವಾಹರೂಪದಲ್ಲಿ । **ಪರಿ ಅರ್ಷಂತಿ**—ಸುತ್ತಲೂ ಪ್ರವಹಿಸುತ್ತವೆ

॥ ಭಾವಾರ್ಥ ॥

ಹಿಂಡಲು ಸಿದ್ಧವಾಗಿರುವ ಸೋಮಗಳು ಮಹತ್ತಾದ ಸ್ತುತಿವಾಕ್ಯಪೂರ್ವಕವಾಗಿ ಹಿಂಡಲ್ಪಟ್ಟು ದೇವತೆಗಳ ಸಂತೃಪ್ತಿಗಾಗಿ ಪ್ರವಾಹರೂಪದಲ್ಲಿ ಸುತ್ತಲೂ ಪ್ರವಹಿಸುತ್ತವೆ.

English Translation

The Soma-juices, when poured forth, are effused with loud praise, and proceed in a stream to excite exhilaration.

॥ ಸಂಹಿತಾಪಾಠಃ ॥

ಅಪಾನಾಸೋ ವಿವಸ್ವತೋ ಜನಂತ ಉಷಸೋ ಭಗಂ ।
ಸೂರಾ ಅಣ್ವಂ ವಿ ತನ್ವತೇ ॥ ೫ ॥

॥ ಪದಪಾಠಃ ॥

ಆಪಾನಾಸಃ । ವಿವಸ್ವತಃ । ಜನಂತಃ। ಉಷಸಃ । ಭಗಂ ।

ಸೂರಾಃ । ಅಣ್ವಂ । ವಿ । ತನ್ವತೇ ॥ ೫ ॥

॥ ಸಾಯಣಭಾಷ್ಯಂ ॥

ವಿವಸ್ವತ ಇಂದ್ರಸ್ಯಾಪಾನಾಸ ಆಪಾನಭೂತಾ ಉಷಸೋ ಭಗಂ ಜನಂತೋ ಜನಯಂತಃ ಸೂರಾಃ ಸರಂತಃ ಸೋಮಾ ಅಣ್ವಂ ವಿ ತನ್ವತೇ । ಅಭಿಷವವೇಲಾಯಾಮುಪರವೇಷು ಶಬ್ದಂ ಕುರ್ವಂತಿ॥

॥ ಪ್ರತಿಪದಾರ್ಥ ॥

ವಿವಸ್ವತಃ—ಇಂದ್ರನಿಗೆ । ಆಪಾನಾಸಃ—ಉತ್ತಮವಾದ ಪಾನಭೂತವಾದವೂ । ಉಷಸಃ—ಉಷೋದೇವಿಗೆ । ಭಗಂ—ತೇಜಸ್ಸನ್ನು । ಜನಂತಃ—ಉತ್ಪನ್ನಮಾಡುವುವೂ । ಸೂರಾಃ—ಸ್ರವಿಸುವುವೂ ಆದ ಸೋಮರಸಗಳು । ಅಣ್ವಂ—ಶಬ್ದವನ್ನು । ವಿ ತನ್ವತೇ—ಹರಡುತ್ತವೆ.

॥ ಭಾವಾರ್ಥ ॥

ಇಂದ್ರನಿಗೆ ಉತ್ತಮವಾದ ಪಾನಭೂತವಾದವೂ, ಉಷೋದೇವಿಗೆ ತೇಜಸ್ಸನ್ನು ಉತ್ಪನ್ನಮಾಡುವುವೂ, ಸ್ರವಿಸುವುವೂ ಆದ ಸೋಮರಸಗಳು ಶಬ್ದವನ್ನು ಹರಡುತ್ತವೆ.

English Translation

The beverages of Vivaswat and producing the glory of the dawn, the issuing juices spread their sound.

॥ ಸಂಹಿತಾಪಾಠಃ ॥

ಅಪ ದ್ವಾರಾ ಮತೀನಾಂ ಪ್ರತ್ನಾ ಋಣ್ವಂತಿ ಕಾರವಃ ।

ವೃಷ್ಣೋ ಹರಸ ಆಯವಃ ॥ ೬ ॥

॥ ಪದಪಾಠಃ ॥

ಅಪ । ದ್ವಾರಾ । ಮತೀನಾಂ । ಪ್ರತ್ನಾಃ । ಋಣ್ವಂತಿ । ಕಾರವಃ ।

ವೃಷ್ಣಃ । ಹರಸೇ । ಆಯವಃ ॥ ೬ ॥

॥ ಸಾಯಣಭಾಷ್ಯಂ ॥

ಮತೀನಾಂ ಸ್ತುತೀನಾಂ ಕಾರವಃ ಕರ್ತಾರ ಋತ್ವಿಜಃ ಪ್ರತ್ನಾಃ ಪುರಾಣಾ ವೃಷ್ಣಃ ಸೇಚಕಸ್ಯ ಸೋಮಸ್ಯ ಹರಸ ಆಹರಸ ಆಹರ್ತಾರಶ್ಚಾಯವೋ ಮನುಷ್ಯಾ ದ್ವಾರಾ ಯಜ್ಞಸ್ಯ ದ್ವಾರಾಣ್ಯಪರ್ಣ್ವಂತಿ॥

॥ ಪ್ರತಿಪದಾರ್ಥ ॥

ಪ್ರತ್ನಾಃ—ಪುರಾತನರಾದವರೂ । ಮತೀನಾಂ-ಸ್ತುತಿಗಳಿಗೆ । ಕಾರವಃ—ನಿರ್ಮಾಪಕರೂ । ವೃಷ್ಣಃ—ಕಾಮವರ್ಷಕನಾದ ಸೋಮವನ್ನು । ಹರಸೇ—ವಹಿಸಿಕೊಂಡು ಬರಲು ನಿಯುಕ್ತರಾದ । ಆಯವಃ—ಮಾನವರು । ದ್ವಾರಾ— ಯಜ್ಞಗೃಹದ ದ್ವಾರಗಳನ್ನು । ಅಪ ಋಣ್ವಂತಿ—ತೆಗೆಯುತ್ತಾರೆ.

॥ ಭಾವಾರ್ಥ ॥

ಪುರಾತನರಾದವರೂ ಸ್ತುತಿನಿರ್ಮಾಪಕರೂ, ಕಾಮವರ್ಷಕವಾದ ಸೋಮವನ್ನು ವಹಿಸಿಕೊಂಡು ಬರಲು ನಿಯುಕ್ತರಾದ ಮಾನವರೂ ಯಜ್ಞಗೃಹದ ದ್ವಾರಗಳನ್ನು ತೆಗೆಯುತ್ತಾರೆ.

English Translation

The old makers of hymns, men the offerers of the Soma, throw open the doors (of the sacrifice).

॥ ಸಂಹಿತಾಪಾಠಃ ॥

ಸಮೀಚೀನಾಸ ಆಸತೇ ಹೋತಾರಃ ಸಪ್ತಜಾಮಯಃ ।
ಪದಮೇಕಸ್ಯ ಪಿಪ್ರತಃ ॥ ೭ ॥

॥ ಪದಪಾಠಃ ॥

ಸಂऽಈಚೀನಾಸಃ । ಆಸತೇ । ಹೋತಾರಃ । ಸಪ್ತऽಜಾಮಯಃ ।
ಪದಂ । ಏಕಸ್ಯ । ಪಿಪ್ರತಃ ॥ ೭ ॥

॥ ಸಾಯಣಭಾಷ್ಯಂ ॥

ಸಮೀಚೀನಾಸಃ ಸಮೀಚಿನಾ ಜಾಮಯೋ ಜಾಮಿಸದೃಶಾ ಏಕಸ್ಯ ಸೋಮಸ್ಯ ಪದಂ ಸ್ಥಾನಂ ಪಿಪ್ರತಃ ಪೂರಯಂತಃ ಸಪ್ತ ಹೋತಾರಃ ಸಪ್ತ ಹೋತ್ರಕಾ ಆಸತೇ । ಯಜ್ಞ ಉಪವಿಶಂತಿ ॥

॥ ಪ್ರತಿಪದಾರ್ಥ ॥

ಸಮೀಚೀನಾಸಃ—ಒಟ್ಟಿಗೆ ಒಂದೇ ಮನಸ್ಸಿನಿಂದ ಸೇರಿಕೊಂಡಿರುವವರೂ । ಸಪ್ತಜಾಮಯಃ—ಬಂಧುಗಳಂತಿರುವವರೂ ಪ್ರಸಂಖ್ಯಾಕರೂ ಆದ । ಹೋತಾರಃ— ಏಳು ಜನ ಹೋತೃಗಳೂ ಸಹ । ಏಕಸ್ಯ—ಒಂದೇ ಸೋಮದ । ಪದಂ—ಸ್ಥಾನವನ್ನು । ಪಿಪ್ರತಃ—ಸುತ್ತುವರಿದು । ಆಸತೇ—ಯಜ್ಞಭೂಮಿಯಲ್ಲಿ ಕುಳಿತಿದ್ದಾರೆ

॥ ಭಾವಾರ್ಥ ॥

ಒಂದೇ ಮನಸ್ಸಿನಿಂದ ಒಟ್ಟಿಗೆ ಸೇರಿಕೊಂಡಿರುವವರೂ, ಬಂಧುಗಳಂತಿರುವವರೂ ಆದ ಏಳು ಜನ ಹೋತೃಗಳೂ ಸಹ ಒಂದೇ ಸೋಮದ ಸ್ಥಾನವನ್ನು ಸುತ್ತುವರಿದು ಯಜ್ಞಭೂಮಿಯಲ್ಲಿ ಕುಳಿತಿದ್ದಾರೆ.

English Translation

The seven associated ministers like so many kinsmen filling the receptacle of the single (Soma), sit down (at the sacrifice).

॥ ಸಂಹಿತಾಪಾಠಃ ॥

ನಾಭಾ ನಾಭಿಂ ನ ಆ ದದೇ ಚಕ್ಷುಶ್ಚಿತ್ಸೂರ್ಯೇ ಸಚಾ ।
ಕವೇರಪತ್ಯಮಾ ದುಹೇ ॥ ೮ ॥

॥ ಪದಪಾಠಃ ॥

ನಾಭಾ । ನಾಭಿಂ । ನಃ । ಆ । ದದೇ । ಚಕ್ಷುಃ । ಚಿತ್ । ಸೂರ್ಯೇ । ಸಚಾ ।
ಕವೇಃ । ಅಪತ್ಯಂ । ಆ । ದುಹೇ ॥ ೮ ॥

॥ ಸಾಯಣಭಾಷ್ಯಂ ॥

ನಾಭಿಂ ಯಜ್ಞಸ್ಯ ನಾಭಿಭೂತಂ ಸೋಮಂ ನೋಽಸ್ಮಾಕಂ ನಾಭಾ ನಾಭಾವಹಮಾ ದದೇ । ಪಿಬಾಮೀತ್ಯರ್ಥಃ । ಪೀತಸೋಮಾನಾಮಸ್ಮಾಕಂ ಚಕ್ಷುಶ್ಚಿಚ್ಚಕ್ಷುರಪಿ ಸೂರ್ಯೇ ಸಚಾ ಸಂಗತಂ ಭವತಿ । ಕಿಂಚ ಕವೇಃ ಕ್ರಾಂತಕರ್ಮಣಃ ಸೋಮಸ್ಯಾಪತ್ಯಮಂಶುಮಾ ದುಹೇ । ಆಪೂರಯಾಮಿ ॥

॥ ಪ್ರತಿಪದಾರ್ಥ ॥

**ನಾಭಿಃ**—ಯಜ್ಞಕ್ಕೆ ನಾಭಿಭೂತವಾದ ಸೋಮವನ್ನು । **ನಃ**—ನಮ್ಮ । **ನಾಭಾ**—ಜಠರದಲ್ಲಿ ಸೇರುವಂತೆ । **ಆ ದದೇ**—ನಾವು ಪಾನಮಾಡುತ್ತೇವೆ । **ಚಕ್ಷುಶ್ಚಿತ್**—ನಮ್ಮ ಚಕ್ಷುಸ್ಸೂ ಸಹ । **ಸೂರ್ಯೇ**—ಸೂರ್ಯನಲ್ಲಿ । **ಸಚಾ**—ಸೇರಿಕೊಳ್ಳುತ್ತದೆ । **ಕವೇಃ**—ಪ್ರಜ್ಞಾಯುತವಾದ ಕರ್ಮವುಳ್ಳ ಸೋಮದ । **ಅಪತ್ಯಂ**—ಪುತ್ರರೂಪವಾದ ಅಂಶುವನ್ನು । **ಆ ದುಹೇ**—ತುಂಬುತ್ತೇನೆ.

॥ ಭಾವಾರ್ಥ ॥

ಯಜ್ಞಕ್ಕೆ ನಾಭಿಭೂತವಾದ ಸೋಮವನ್ನು ನಮ್ಮ ಜಠರದಲ್ಲಿ ಸೇರುವಂತೆ ನಾವು ಪಾನಮಾಡುತ್ತೇವೆ. ನಮ್ಮ ಚಕ್ಷುಸ್ಸೂ ಸಹ ಸೂರ್ಯನಲ್ಲಿ ಸೇರಿಕೊಳ್ಳುತ್ತದೆ. ಪ್ರಜ್ಞಾಯುತವಾದ ಕರ್ಮವುಳ್ಳ ಸೋಮದ ಪುತ್ರರೂಪವಾದ ಅಂಶುವನ್ನು ತುಂಬುತ್ತೇನೆ.

## English Translation

I take into my navel the navel of the sacrifice, my eye becomes associated with the sun, I fill the offspring of the sage.

|| ಸಂಹಿತಾಪಾಠಃ ||

ಅಭಿ ಪ್ರಿಯಾ ದಿವಸ್ಪದಮಧ್ವರ್ಯುರ್ಭಿರ್ಗುಹಾ ಹಿತಂ ।
ಸೂರಃ ಪಶ್ಯತಿ ಚಕ್ಷಸಾ ॥ ೯ ॥

|| ಪದಪಾಠಃ ||

ಅಭಿ । ಪ್ರಿಯಾ । ದಿವಃ । ಪದಂ । ಅಧ್ವರ್ಯುಽಭಿಃ । ಗುಹಾ । ಹಿತಂ ।
ಸೂರಃ । ಪಶ್ಯತಿ । ಚಕ್ಷಸಾ ॥ ೯ ॥

। ಸಾಯಣಭಾಷ್ಯಂ ।

ಸೂರಃ ಸುವೀರ್ಯ ಇಂದ್ರಶ್ಚಕ್ಷಸಾ ಚಕ್ಷುಷಾ ದಿವೋ ದೀಪ್ತಸ್ಯಾತ್ಮನಃ ಪ್ರಿಯಾ ಪ್ರಿಯಂ ಪದಮಧ್ವರ್ಯುರ್ಭಿರ್ಗುಹಾ ಗುಹಾಯಾಂ ಹೃದಯೇ ಹಿತಂ ನಿಹಿತಂ ಪೀತಂ ಸೋಮಮಮುಷ್ಯಭಿ ಪಶ್ಯತಿ ||

|| ಪ್ರತಿಪದಾರ್ಥ ||

**ಸೂರಃ**—ವೀರ್ಯವಂತನಾದ ಇಂದ್ರನು । **ದಿವಃ**—ತನ್ನ ಪ್ರಕಾಶಮಾನವಾದ ಆತ್ಮಕ್ಕೆ । **ಪ್ರಿಯಾ**—ಪ್ರೀತಿಕರವಾದುದೂ । **ಅಧ್ವರ್ಯುರ್ಭಿಃ**—ಅಧ್ವರ್ಯುಗಳಿಂದ । **ಗುಹಾ**—ರಹಸ್ಯವಾದ ತಮ್ಮ ಜಠರದಲ್ಲಿ । **ಹಿತಂ**—ಇಡಲ್ಪಟ್ಟುದೂ ಆದ । **ಪದಂ**—ಸೋಮದ ಸ್ಥಾನವನ್ನು । **ಚಕ್ಷಸಾ**—ತನ್ನ ದಿವ್ಯಚಕ್ಷುಸ್ಸಿನಿಂದ । **ಅಭಿ ಪಶ್ಯತಿ**—ಪೂರ್ಣವಾಗಿ ನೋಡುತ್ತಾನೆ.

|| ಭಾವಾರ್ಥ ||

ವೀರ್ಯವಂತನಾದ ಇಂದ್ರನು, ತನ್ನ ಪ್ರಕಾಶಮಾನನಾದ ಆತ್ಮಕ್ಕೆ ಪ್ರೀತಿಕರವಾದುದೂ, ಅಧ್ವರ್ಯುಗಳಿಂದ ರಹಸ್ಯವಾಗಿ ತನ್ನ ಜಠರದಲ್ಲಿ ಇಡಲ್ಪಟ್ಟುದೂ ಆದ ಸೋಮದ ಸ್ಥಾನವನ್ನು ತನ್ನ ದಿವ್ಯ ಚಕ್ಷುಸ್ಸಿನಿಂದ ಪೂರ್ಣವಾಗಿ ನೋಡುತ್ತಾನೆ.

## English Translation

The powerful (Indra) looks with the eye of his own resplendent self on the acceptable place of the Soma, fixed by the priests in the heart.

# ಹನ್ನೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ॥

ಉಪಾಸ್ಮೈ ಇತಿ ನವರ್ಚಮೇಕಾದಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಉಪಾಸ್ಮೈ ಇತ್ಯನುಕ್ರಾಂತಂ ॥ ಉಕ್ತಃ ಸೂಕ್ತವಿನಿಯೋಗಃ ॥ ಅಭಿಪ್ಲವೇ ಘರ್ಮದುಘಾವತ್ಸೇಽಪನೀಯಮಾನೇ ನಮಸೇದುಪೇತ್ಯೇಷಾ । ಸೂತ್ರಿತಂ ಚ । ನಮಸೇದುಪ ಸೀದತ ಸಂಜಾನಾನಾ ಉಪ ಸೀದನ್ನಭಿಜ್ಞು । ಆ. ೪-೭ । ಇತಿ ॥

ಅನುವಾದವು—**ಉಪಾಸ್ಮೈ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾ ಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಇರುವವು. ಅನುಕ್ರಮಣಿಕೆಯಲ್ಲಿ—**ಉಪಾಸ್ಮೈ** ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ. ಅಭಿಪ್ಲವದಲ್ಲಿ ಘರ್ಮದುಘಕ್ಕಾಗಿ ಗೋದೋಹನ ಕಾಲದಲ್ಲಿ ಕರುವನ್ನು ಬಿಡುಸುವಾಗ **ನಮಸೇದುಪ** ಎಂಬ ಆರನೆಯ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ನಮಸೇದುಪ ಸೀದತ ಸಂಜಾನಾನಾ ಉಪ ಸೀದನ್ನಭಿಜ್ಞು** ಎಂಬ ಸೂತ್ರದಿಂದ (ಆ. ೪-೭) ವಿವೃತವಾಗಿರುವುದು.

## ಸೂಕ್ತ—೧೧

ಮಂಡಲ—೯ । ಅನುವಾಕ—೧ । ಸೂಕ್ತ—೧೧ ॥
ಅಷ್ಟಕ—೬ । ಅಧ್ಯಾಯ—೭ । ವರ್ಗ—೩೬, ೩೭ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಉಪಾಸ್ಮೈ ಗಾಯತಾ ನರಃ ಪವಮಾನಾಯೇಂದವೇ ।**

**ಅಭಿ ದೇವಾँ ಇಯಕ್ಷತೇ ॥ ೧ ॥**

॥ ಪದಪಾಠಃ ॥

**ಉಪ । ಅಸ್ಮೈ । ಗಾಯತ । ನರಃ । ಪವಮಾನಾಯ । ಇಂದವೇ ।**

**ಅಭಿ । ದೇವಾನ್ । ಇಯಕ್ಷತೇ ॥ ೧ ॥**

॥ ಸಾಯಣಭಾಷ್ಯಂ ॥

ಹೇ ನರೋ ನೇತಾರ ಋತ್ವಿಜಃ ಯಜ್ಞಸ್ಯ ದೇವಾನಿಂದ್ರಾದೀನಭೀಯಕ್ಷತ ಅಭಿ ಯಷ್ಟುಮಿಚ್ಛತೇ ಪವಮಾನಾಯ ಕ್ಷರತೇಽಸ್ಮಾ ಅಭಿಷೂಯಮಾಣಾಯೇಂದವೇ ಸೋಮ ಗಾಯತ । ಉಪಗಾನಂ ಕುರುತ ॥

॥ ಪ್ರತಿಪದಾರ್ಥ ॥

ನರಃ—ಯಜ್ಞಕ್ಕೆ ನೇತೃಗಳಾದ ಎಲೈ ಋತ್ವಿಕ್ಕುಗಳೇ । ದೇವಾನ್--ಇಂದ್ರಾದಿದೇವತೆಗಳನ್ನು । ಅಭಿ ಇಯಕ್ಷತೇ—ಸಮಿಾಪಿಸಿ ಪೂಜಿಸಲಿಚ್ಛಿಸುವುದೂ । ಪವಮಾನಾಯ—ಶುದ್ಧವಾದ ಪ್ರವಾಹವುಳ್ಳದ್ದೂ ಆದ । ಅಸ್ಮೈ ಇಂದವೇ—ಈ ಸೋಮವನ್ನುದ್ದೇಶಿಸಿ । ಉಪ ಗಾಯತ—ಪ್ರಶಂಸಾತ್ಮಕವಾದ ಸ್ತುತಿಯನ್ನು ಗಾ... ...ಲ್ಲಿ ಪಠಿಸಿರಿ.

॥ ಭಾವಾರ್ಥ ॥

ಯಜ್ಞಕ್ಕೆ ನೇತೃಗಳಾದ ಎಲೈ ಋತ್ವಿಕ್ಕುಗಳೇ, ಇಂದ್ರಾದಿದೇವತೆಗಳನ್ನು ಸಮಿಾಪಿಸಿ ಪೂಜಿಸಲಿಚ್ಛಿಸುವುದೂ ಶುದ್ಧವಾದ ಪ್ರವಾಹವುಳ್ಳದ್ದೂ ಆದ ಈ ಸೋಮವನ್ನುದ್ದೇಶಿಸಿ ಪ್ರಶಂಸಾತ್ಮಕವಾದ ಸ್ತುತಿಯನ್ನು ಗಾನರೂಪದಲ್ಲಿ ಪಠಿಸಿರಿ.

## English Translation

Sing, leaders of rites, to this pure-flowing Indu, who is desi... ...of offering worship to gods.

॥ ಸಂಹಿತಾಪಾಠಃ ॥

ಅಭಿ ತೇ ಮಧುನಾ ಪಯೋಽಥರ್ವಾಣೋ ಅಶಿಶ್ರಯುಃ ।
ದೇವಂ ದೇವಾಯ ದೇವಯು ॥ ೨ ॥

॥ ಪದಪಾಠಃ ॥

ಅಭಿ । ತೇ । ಮಧುನಾ । ಪಯಃ । ಅಥರ್ವಾಣಃ । ಅಶಿಶ್ರಯುಃ ।
ದೇವಂ । ದೇವಾಯ । ದೇವಽಯು ॥ ೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ತೇ ತವ ದೇವಂ ದೇವನಶೀಲಂ ದೇವಯು ದೇವಯುಂ ದೇವಕಾಮ... ದೇವಾಯ ದೇವನಶೀಲಾಯೇಂದ್ರಾಯ ಮಧುನಾ ಪಯೋ ಗವ್ಯೇನ ಪಯಸಾಥರ್ವಾಣ ಋ... ಭ್ಯಶಿಶ್ರಯುಃ । ಅಭ್ಯಶ್ರೀಣನ್ । ಸಮಸ್ಕುರ್ವನ್ನಿತ್ಯರ್ಥಃ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) ದೇವಂ—ದಿವ್ಯಸ್ವರೂಪವುಳ್ಳದ್ದೂ । **ದೇವಯು—**ದೇವತೆಗಳ ಪೂಜೆಯನ್ನಿಚ್ಛಿಸುವ । **ತೇ—**ನಿನ್ನ ಸಂಬಂಧಿಯಾದುದೂ ಆದ ರಸವನ್ನು । **ದೇವಾಯ—**ದೇವತಾತ್ಮನಾದ ಇಂದ್ರನಿಗಾಗಿ । **ಮಧು—**ಅತ್ಯಂತ ರುಚಿಕರವಾದ । **ಪಯಃ—**ಕ್ಷೀರಾದಿಗಳೊಡನೆ । **ಅಥರ್ವಾಣಃ—**ಅಥರ್ವಸಂಜ್ಞಕರಾದ ಋಷಿಗಳು । **ಅಭಿ ಅಶಿಶ್ರಯುಃ—**ಮಿಶ್ರಮಾಡಿ ಸಂಸ್ಕರಿಸಿದ್ದಾರೆ.

॥ ಭಾವಾರ್ಥ ॥

ಎಲೈ ಸೋಮದೇವನೇ, ದಿವ್ಯಸ್ವರೂಪವುಳ್ಳದ್ದೂ, ದೇವತೆಗಳ ಪೂಜೆಯನ್ನಿಚ್ಛಿಸುವುದೂ, ನಿನ್ನ ಸಂಬಂಧಿಯಾದುದೂ ಆದ ರಸವನ್ನು ದೇವತಾತ್ಮನಾದ ಇಂದ್ರನಿಗಾಗಿ ಅತ್ಯಂತ ರುಚಿಕರವಾದ ಕ್ಷೀರಾದಿಗಳೊಡನೆ ಅಥರ್ವಸಂಜ್ಞಕರಾದ ಋಷಿಗಳು ಮಿಶ್ರಮಾಡಿ ಸಂಸ್ಕರಿಸಿದ್ದಾರೆ

English Translation

The Atharvans have mixed with sweet milk for the deity ( Indra ) your divine and god-devoted ( juice ).

॥ ಸಂಹಿತಾಪಾಠಃ ॥

ಸ ನಃ ಪವಸ್ವ ಶಂ ಗವೇ ಶಂ ಜನಾಯ ಶಮರ್ವತೇ ।

ಶಂ ರಾಜನ್ನೋಷಧೀಭ್ಯಃ ॥ ೩ ॥

॥ ಪದಪಾಠಃ ॥

ಸಃ । ನಃ । ಪವಸ್ವ । ಶಂ । ಗವೇ । ಶಂ । ಜನಾಯ । ಶಂ । ಅರ್ವತೇ ।

ಶಂ । ರಾಜನ್ । ಓಷಧೀಭ್ಯಃ ॥ ೩ ॥

॥ ಸಾಯಣಭಾಷ್ಯಂ ॥

**ಹೇ ರಾಜನ್ ದೀಪ್ಯಮಾನ ಸೋಮ ಸ ಪ್ರಸಿದ್ಧಸ್ತ್ವಂ ನೋಽಸ್ಮಾಕಂ ಗವೇ ಶಂ ಸುಖಂ ಪವಸ್ವ । ಕ್ಷರ । ಜನಾಯ ಪುತ್ರಾದಯೇ ಚ ಶಂ ಪವಸ್ವ । ಅರ್ವತೇಽಶ್ವಾಯ ಚ ಶಂ ಪವಸ್ವ । ಓಷಧೀಭ್ಯಶ್ಚ ಶಂ ಪವಸ್ವ ॥**

॥ ಪ್ರತಿಪದಾರ್ಥ ॥

**ರಾಜನ್—**ಪ್ರಕಾಶಮಾನನಾದ ಎಲೈ ಸೋಮನೇ । **ಸಃ—**ಪ್ರಸಿದ್ಧನಾದ ನೀನು । **ನಃ—**ನಮ್ಮ । **ಗವೇ—**ಗೋವುಗಳಿಗೆ । **ಶಂ—**ಸುಖವನ್ನು । **ಪವಸ್ವ—**ಒದಗಿಸು । **ಜನಾಯ—**ನಮ್ಮ ಪುತ್ರಾದಿಗಳಿಗೆ । **ಶಂ—**

ಸುಖವನ್ನುಂಟುಮಾಡು | **ಅರ್ವತೇ**—ನಮ್ಮ ಅಶ್ವಗಳಿಗೂ | **ಶಂ**—ಸುಖವನ್ನು ಕಲ್ಪಿಸು | **ಓಷಧೀಭ್ಯಃ—**ನಮ್ಮ ಮೂಲಿಕಾದಿಗಳಿಗೂ | **ಶಂ**—ಸುಖವನ್ನು ಒದಗಿಸು.

॥ ಭಾವಾರ್ಥ ॥

ಪ್ರಕಾಶಮಾನನಾದ ಎಲೈ ಸೋಮನೇ, ಪ್ರಸಿದ್ಧನಾದ ನೀನು ನಮ್ಮ ಗೋವುಗಳಿಗೆ ಸುಖವನ್ನು ಒದಗಿಸು. ನಮ್ಮ ಪುತ್ರಾದಿಗಳಿಗೆ ಸುಖವನ್ನುಂಟುಮಾಡು ನಮ್ಮ ಅಶ್ವಗಳಿಗೂ ಸುಖವನ್ನು ಕಲ್ಪಿಸು ನಮ್ಮ ಮೂಲಿಕಾದಿಗಳಿಗೂ ಸುಖವನ್ನು ಒದಗಿಸು.

English Translation

Radiant (Soma), pour prosperity upon our cattle, upon our people, upon our horses, and upon our plants.

॥ ಸಂಹಿತಾಪಾಠಃ ॥

ಬಭ್ರವೇ ನು ಸ್ವತವಸೇಽರುಣಾಯ ದಿವಿಸ್ಪೃಶೇ ।
ಸೋಮಾಯ ಗಾಥಮರ್ಚತ ॥ ೪ ॥

॥ ಪದಪಾಠಃ ॥

ಬಭ್ರವೇ । ನು । ಸ್ವಽತವಸೇ । ಅರುಣಾಯ । ದಿವಿಽಸ್ಪೃಶೇ ।
ಸೋಮಾಯ । ಗಾಥಂ । ಅರ್ಚತ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಸ್ತೋತಾರಃ ಬಭ್ರವೇ ಬಭ್ರುವರ್ಣಾಯ ಸ್ವತವಸೇ ಸ್ವಬಲಾಯಾರುಣಾಯ ಕದಾಚಿದರುಣವರ್ಣಾಯ ದಿವಿಸ್ಪೃಶೇ ದಿವಂ ಸ್ಪೃಶತೇ ಸೋಮಾಯ ನು ಕ್ಷಿಪ್ರಂ ಗಾಥಂ ಸ್ತುತಿರೂಪಾಂ ವಾಚಮರ್ಚತ । ಉಚ್ಚಾರಯತೇತ್ಯರ್ಥಃ ॥**

॥ ಪ್ರತಿಪದಾರ್ಥ ॥

(ಎಲೈ ಸ್ತೋತೃಗಳೇ) **ಬಭ್ರವೇ**—ಹಸರುಮಿಶ್ರಿತವಾದ ಕೆಂಪುವರ್ಣವುಳ್ಳದ್ದೂ | **ಸ್ವತವಸೇ**—ಸ್ವಯಂ ಶಕ್ತಿಯುಳ್ಳದ್ದೂ | **ಅರುಣಾಯ**—(ಒಂದೊಂದು ಸಲ) ಹೊಂಬಣ್ಣವುಳ್ಳದ್ದೂ | **ದಿವಿಸ್ಪೃಶೇ**—ಅಂತರಿಕ್ಷವನ್ನೂ ಮುಟ್ಟತಕ್ಕದ್ದೂ ಆದ | **ಸೋಮಾಯ—**ಸೋಮನನ್ನುದ್ದೇಶಿಸಿ | **ನು**—ಕ್ಷಿಪ್ರವಾಗಿ | **ಗಾಥಂ**—ಗಾನರೂಪವಾದ ಸ್ತುತಿಯನ್ನು | **ಅರ್ಚತ—**ಅರ್ಪಿಸಿರಿ.

॥ ಭಾವಾರ್ಥ ॥

ಎಲೈ ಸ್ತೋತೃಗಳೇ, ಹಸರುಮಿಶ್ರಿತವಾದ ಕೆಂಪುವರ್ಣವುಳ್ಳದ್ದೂ, ಸ್ವಯಂಶಕ್ತಿಯುಳ್ಳದ್ದೂ ಒಂದೊಂದು ಸಲ ಹೊಂಬಣ್ಣವುಳ್ಳದ್ದೂ ಅಂತರಿಕ್ಷವನ್ನು ಮುಟ್ಟತಕ್ಕದ್ದೂ ಆದ ಸೋಮವನ್ನುದ್ದೇಶಿಸಿ ಕ್ಷಿಪ್ರವಾಗಿ ಗಾನರೂಪವಾದ ಸ್ತುತಿಯನ್ನರ್ಪಿಸಿರಿ.

English Translation

Recite praises to the brown-coloured self-vigorous red heaven-touching Soma

॥ ಸಂಹಿತಾಪಾಠಃ ॥

ಹಸ್ತಚ್ಯುತೇಭಿರದ್ರಿಭಿಃ ಸುತಂ ಸೋಮಂ ಪುನೀತನ ।

ಮಧಾವಾ ಧಾವತಾ ಮಧು ॥ ೫ ॥

॥ ಪದಪಾಠಃ ॥

ಹಸ್ತಽಚ್ಯುತೇಭಿಃ । ಅದ್ರಿಽಭಿಃ । ಸುತಂ । ಸೋಮಂ । ಪುನೀತನ ।

ಮಧೌ । ಆ । ಧಾವತ । ಮಧು ॥ ೫ ॥

॥ ಸಾಯಣಭಾಷ್ಯಂ ॥

**ಹೇ ಋತ್ವಿಜಃ ಹಸ್ತಚ್ಯುತೇಭಿರ್ಹಸ್ತಪ್ರಚ್ಯುತೈರದ್ರಿಭಿರಭಿಷವಗ್ರಾವಭಿಃ ಸುತಮಭಿಷುತಂ ಸೋಮಂ ಪುನೀತನ । ಪವಿತ್ರೇ ಪಾವಯತ । ಅಪಿ ಚ ಮಧೌ ಮದಕರೇ ಸೋಮೇ ಮಧು ಗವ್ಯಂ ಪಯ ಆ ಧಾವತ । ಪ್ರಕ್ಷಿಪತ ॥**

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ಹಸ್ತಚ್ಯುತೇಭಿಃ**—ಕೈಗಳಿಂದ ಪ್ರಯೋಗಿಸಲ್ಪಟ್ಟ । **ಅದ್ರಿಭಿಃ**—ಹಿಂಡುವ ಕಲ್ಲುಗಳಿಂದ । **ಸುತಂ**—ಹಿಂಡಲ್ಪಟ್ಟ । **ಸೋಮಂ**-ಸೋಮವನ್ನು । **ಪುನೀತನ**-ದಶಾಪವಿತ್ರದಲ್ಲಿ ಶುದ್ಧಿಗೊಳಿಸಿರಿ । **ಮಧೌ**—ಮಧುಕರವಾದ ಈ ಸೋಮದಲ್ಲಿ । **ಮಧು**—ರುಚಿಯುಳ್ಳ ಕ್ಷೀರವನ್ನು । **ಆ ಧಾವತ**—ಸೇರಿಸಿ ಮಿಶ್ರಮಾಡಿರಿ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ಕೈಗಳಿಂದ ಪ್ರಯೋಗಿಸಲ್ಪಟ್ಟ ಹಿಂಡುವ ಕಲ್ಲುಗಳಿಂದ ಹಿಂಡಲ್ಪಟ್ಟ ಸೋಮವನ್ನು ದಶಾಪವಿತ್ರದಲ್ಲಿ ಶುದ್ಧಿಗೊಳಿಸಿರಿ. ಮಧುಕರವಾದ ಈ ಸೋಮದೊಡನೆ ರುಚಿಯುಳ್ಳ ಕ್ಷೀರವನ್ನುಸೇರಿಸಿ ಮಿಶ್ರಮಾಡಿರಿ.

English Translation

Purify the Soma which has been effused by the stones whirled by the hands ; mix the sweet (milk) in the inebriating juice.

॥ ಸಂಹಿತಾಪಾಠಃ ॥

ನಮ॑ಸೇದುಪ॑ ಸೀದತ ದ॒ಧ್ನೇದ॒ಭಿ ಶ್ರೀ॑ಣೀತನ ।

ಇಂ॒ದುಮಿಂದ್ರೇ॑ ದಧಾತನ ॥ ೬ ॥

॥ ಪದಪಾಠಃ ॥

ನಮ॑ಸಾ । ಇತ್ । ಉಪ॑ । ಸೀ॒ದ॒ತ॒ । ದ॒ಧ್ನಾ । ಇತ್ । ಅ॒ಭಿ । ಶ್ರೀ॒ಣೀ॒ತ॒ನ॒ ।

ಇಂದು॑ಂ । ಇಂದ್ರೇ॑ । ದ॒ಧಾ॒ತ॒ನ॒ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಋತ್ವಿಜಃ ನಮಸೇನ್ನಮಸ್ಕಾರೇಣೈವೋಪ ಸೀದತ । ಸೋಮಮುಪಗಚ್ಛತ । ದಧ್ನೇದ್ದಧ್ನೈವಾಭಿ ಶ್ರೀಣೀತನ । ಅಭಿಶ್ರೀಣೀತ ಚ । ಇಂದ್ರ ಇಂದುಂ ಸೋಮಂ ದಧಾತನ । ಧತ್ತ ಚ ॥**

॥ ಪ್ರತಿಪದಾರ್ಥ ॥

(ಎಲೈ ಋತ್ವಿಕ್ಕುಗಳೇ) **ನಮಸೇತ್**—ನಮಸ್ಕಾರಪೂರ್ವಕವಾಗಿಯೇ । **ಉಪ ಸೀದತ**—ಸೋಮವನ್ನು ಸಮೀಪಿಸಿರಿ । **ದಧ್ನೇತ್**—ದಧಿಯೊಂದಿಗೇ । **ಅಭಿ ಶ್ರೀಣೀತನ**—ಸೇರಿಸಿ ಮಿಶ್ರಮಾಡಿರಿ । **ಇಂದ್ರೇ**—ಇಂದ್ರನಲ್ಲಿಯೇ । **ಇಂದುಂ**—ಸೋಮವನ್ನು । **ದಧಾತನ**—ಅರ್ಪಿಸಿರಿ.

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ನಮಸ್ಕಾರಪೂರ್ವಕವಾಗಿಯೇ ಸೋಮವನ್ನು ಸಮೀಪಿಸಿರಿ ಅದನ್ನು ದಧಿಯೊಂದಿಗೇ ಸೇರಿಸಿ ಮಿಶ್ರಮಾಡಿರಿ. ಈ ಸೋಮವನ್ನು ಇಂದ್ರನಲ್ಲಿಯೇ ಅರ್ಪಿಸಿರಿ.

English Translation

Approach with reverence, mix (the libation) with the curds, offer the Soma to Indra

॥ ಸಂಹಿತಾಪಾಠಃ ॥

ಅ॒ಮಿ॒ತ್ರ॒ಹಾ ವಿಚ॑ರ್ಷಣಿಃ॒ ಪವ॑ಸ್ವ ಸೋಮ॒ ಶಂ ಗವೇ ।

ದೇ॒ವೇಭ್ಯೋ॑ ಅನುಕಾಮ॒ಕೃತ್ ॥ ೭ ॥

॥ ಪದಪಾಠಃ ॥

ಅಮಿತ್ರಽಹಾ । ವಿಽಚರ್ಷಣಿಃ । ಪವಸ್ವ । ಸೋಮ । ಶಂ । ಗವೇ ।

ದೇವೇಭ್ಯಃ । ಅನುಕಾಮಽಕೃತ್ ॥ ೭ ॥

॥ ಸಾಯಣಭಾಷ್ಯಂ ॥

ಹೇ ಸೋಮ ಅಮಿತ್ರಹಾಮಿತ್ರಾಣಾಂ ಹಂತಾ ವಿಚರ್ಷಣಿರ್ವಿದ್ರಷ್ಟಾ ದೇವೇಭ್ಯೋಽನುಕಾಮಕೃದಭೀಷ್ಟಸ್ಯ ಕರ್ತಾ ತ್ವಂ ಗವೇಽಸ್ಮಾಕಂ ಗವೇ ಶಂ ಸುಖಂ ಪವಸ್ವ । ಕ್ಷರ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । ಅಮಿತ್ರಹಾ—ಶತ್ರುನಾಶಕನೂ । ವಿಚರ್ಷಣಿಃ—ವಿವೇಕಪೂರ್ಣವಾದ ದೃಷ್ಟಿಯುಳ್ಳವನೂ । ದೇವೇಭ್ಯಃ—ದೇವತೆಗಳಿಗೂ ಸಹ । ಅನುಕಾಮಕೃತ್—ಇಷ್ಟಾರ್ಥಗಳನ್ನು ನೆರವೇರಿಸುವವನೂ ಆದ ನೀನು । ಗವೇ—ನಮ್ಮ ಗೋವುಗಳಿಗೆ । ಶಂ—ಸುಖವನ್ನು । ಪವಸ್ವ—ಒದಗಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಶತ್ರುನಾಶಕನೂ, ವಿವೇಕಪೂರ್ಣವಾದ ದೃಷ್ಟಿಯುಳ್ಳವನೂ ದೇವತೆಗಳ ಇಷ್ಟಾರ್ಥಗಳನ್ನು ನೆರವೇರಿಸುವವನೂ ಆದ ನೀನು ನಮ್ಮ ಗೋವುಗಳಿಗೆ ಸುಖವನ್ನು ಒದಗಿಸು

English Translation

Soma, slayer of our enemies, the wise one, the fulfiller of the desires of the gods, shed prosperity on our cattle.

॥ ಸಂಹಿತಾಪಾಠಃ ॥

ಇಂದ್ರಾಯ ಸೋಮ ಪಾತವೇ ಮದಾಯ ಪರಿ ಷಿಚ್ಯಸೇ ।

ಮನಶ್ಚಿನ್ಮನಸಸ್ಪತಿಃ ॥ ೮ ॥

ಪದಪಾಠಃ

ಇಂದ್ರಾಯ । ಸೋಮ । ಪಾತವೇ । ಮದಾಯ । ಪರಿ । ಸಿಚ್ಯಸೇ ।

ಮನಃಽಚಿತ್ । ಮನಸಃ । ಪತಿಃ ॥ ೮ ॥

॥ ಸಾಯಣಭಾಷ್ಯಂ ॥

ಹೇ ಸೋಮ ಮನಶ್ಚಿನ್ಮನಸೋ ಜ್ಞಾತಾ ಮನಸಸ್ಪತಿರೀಶ್ವರಸ್ತ್ವಮಿಂದ್ರಾಯೇಂದ್ರಸ್ಯ ಪಾತವೇ ಪಾನಾಯ ಮದಾಯ ಚ ಪರಿ ಷಿಚ್ಯಸೇ । ಪರಿತಃ ಪಾತ್ರೇಷು ಸಿಚ್ಯಸೇ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮದೇವನೇ । **ಮನಶ್ಚಿತ್**—ಗೂಢವಾದ ಮನಸ್ಸನ್ನೂ । **ಜ್ಞಾತಾ**-ಅರಿಯುವವನೂ । **ಮನಸಸ್ಪತಿಃ**—ಮನಸ್ಸಿಗೆ ಈಶ್ವರನೂ ಆದ ನೀನು । **ಇಂದ್ರಾಯ**—ಇಂದ್ರನಿಗೆ । **ಪಾತವೇ**—ಪಾನಕ್ಕಾಗಿಯೂ । **ಮದಾಯ**—ತತ್ಫಲವಾದ ಹರ್ಷಕ್ಕಾಗಿಯೂ । **ಪರಿಷಿಚ್ಯಸೇ**—ಸುತ್ತಲೂ ಪಾತ್ರೆಗಳಲ್ಲಿ ಸುರಿಸಲ್ಪಡುತ್ತೀಯೆ

॥ ಭಾವಾರ್ಥ ॥

ಎಲೈ ಸೋಮದೇವನೇ, ಗೂಢವಾದ ಮನಸ್ಸನ್ನೂ ಅರಿಯುವವನೂ ಮನಸ್ಸಿಗೆ ಈಶ್ವರನೂ ಆದ ನೀನು ಇಂದ್ರನಿಗೆ ಪಾನಕ್ಕಾಗಿಯೂ ತತ್ಫಲವಾದ ಹಷನಕ್ಕಾಗಿಯೂ ಸುತ್ತಲೂ ಪಾತ್ರೆಗಳಲ್ಲಿ ಸುರಿಸಲ್ಪಡುತ್ತೀಯೆ.

## English Translation

Soma, you are cognizant of the mind, lord of the mind, you are poured forth for Indra to drink for his exhilaration.

॥ ಸಂಹಿತಾಪಾಠಃ ॥

ಪವಮಾನ ಸುವೀರ್ಯಂ ರಯಿಂ ಸೋಮ ರಿರೀಹಿ ನಃ ।
ಇಂದವಿಂದ್ರೇಣ ನೋ ಯುಜಾ ॥ ೯ ॥

॥ ಪದಪಾಠಃ ॥

ಪವಮಾನ । ಸುऽವೀರ್ಯಂ । ರಯಿಂ । ಸೋಮ । ರಿರೀಹಿ । ನಃ ।
ಇಂದೋ ಇತಿ । ಇಂದ್ರೇಣ । ನಃ । ಯುಜಾ ॥ ೯ ॥

॥ ಸಾಯಣಭಾಷ್ಯಂ ॥

ಹೇ ಇಂದೋ ಕ್ಲಿದ್ಯಮಾನ ಪವಮಾನ ಸೋಮ ತ್ವಂ ಸುವೀರ್ಯಂ ಶೋಭನವೀರ್ಯೋಪೇತಂ ರಯಿಂ ಧನಂ ನೋऽಸ್ಮಾಕಂ ಸಂಬಂಧಿನೇಂದ್ರೇಣ ಯುಜಾ ಸಹಾಯೇನ ನೋऽಸ್ಮಭ್ಯಂ ರಿರೀಹಿ । ದೇಹಿ॥

॥ ಪ್ರತಿಪದಾರ್ಥ ॥

**ಇಂದ್ರೋ**—ಪ್ರವಿಸತಕ್ಕವನೂ । **ಪವಮಾನ**—ಶುದ್ಧಿಕಾರಕನೂ ಆದ । **ಸೋಮ**—ಎಲೈ ಸೋಮದೇವನೇ । **ಸುವೀರ್ಯಂ**—ಉತ್ತಮವಾದ ಶಕ್ತಿಯಿಂದ ಕೂಡಿದ। **ರಯಿಂ**—ಧನವನ್ನು । **ನಃ**—ನಮಗೆ । **ರಿರೀಹಿ**—

ಒದಗಿಸು । **ಇಂದ್ರೇಣ ಯುಜಾ**— ನಮ್ಮ ಸಂಬಂಧಿಯಾದ ಇಂದ್ರನ ಸಹಾಯದೊಡನೆ । **ನಃ**— ನಮಗೆ । (**ರಿರೀಹಿ**— ಒದಗಿಸು)

॥ ಭಾವಾರ್ಥ ॥

ಪ್ರವಿಸತಕ್ಕವನೂ, ಶುದ್ಧಿಕಾರಕನೂ ಆದ ಎಲೈ ಸೋಮದೇವನೇ, ಉತ್ತಮವಾದ ಶಕ್ತಿಯಿಂದ ಕೂಡಿದ ಧನವನ್ನು ನಮಗೆ ಒದಗಿಸಿಕೊಡು ನಮ್ಮ ಸಂಬಂಧಿಯಾದ ಇಂದ್ರನ ಸಹಾಯದೊಡನೆ ನಮಗೆ ಒದಗಿಸು.

## English Translation

Pure-dropping Soma, grant us wealth with excellent male offspring, —grant it to us, Indu, with Indra as our ally.

# ಹನ್ನೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಸೋಮಾ ಅಸೃಗ್ರಮಿತಿ ನವರ್ಚಂ ದ್ವಾದಶಂ ಸೂಕ್ತಂ। ಋಷ್ಯಾದ್ಯಾಃ ಪೂರ್ವವತ್ । ಸೋಮಾ ಅಸೃಗ್ರಮಿತ್ಯನುಕ್ರಾಂತಂ ॥ ಉಕ್ತೋ ವಿನಿಯೋಗಃ ॥**

ಅನುವಾದವು—**ಸೋಮಾ ಅಸೃಗ್ರಂ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಇರುವವು. ಅನುಕ್ರಮಣಿಕೆಯಲ್ಲಿ—**ಸೋಮಾ ಅಸೃಗ್ರಂ** ಎಂದು ಹೇಳಿರುವುದು ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೧೨

ಮಂಡಲ- ೯ ॥ ಅನುವಾಕ—೧ ॥ ಸೂಕ್ತ—೧೨ ॥
ಅಷ್ಟಕ—೬ ॥ ಅಧ್ಯಾಯ—೭ ॥ ವರ್ಗ—೩೮, ೩೯ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ— ಗಾಯತ್ರೀ ॥

॥ ಸಂಹಿತಾಪಾಠಃ ॥

ಸೋಮಾ ಅಸೃಗ್ರಮಿಂದವಃ ಸುತಾ ಋತಸ್ಯ ಸಾದನೇ ।
ಇಂದ್ರಾಯ ಮಧುಮತ್ತಮಾಃ ॥ ೧ ॥

॥ ಪದಪಾಠಃ ॥

ಸೋಮಾಃ । ಅಸೃಗ್ರಂ । ಇಂದವಃ । ಸುತಾಃ । ಋತಸ್ಯ । ಸದನೇ ।

ಇಂದ್ರಾಯ । ಮಧುಮತ್ಽತಮಾಃ ॥ ೧ ॥

॥ ಸಾಯಣಭಾಷ್ಯಂ ॥

ಸುತಾ ಅಭಿಷುತಾ ಮಧುಮತ್ತಮಾ ಅತಿಶಯೇನ ಮಧುಮಂತ ಇಂದವಃ ಸೋಮಾ ಋತಸ್ಯ ಯಜ್ಞಸ್ಯ ಸಾದನೇ ಗೃಹ ಇಂದ್ರಾಯೇಂದ್ರಾರ್ಥಮಸೃಗ್ರಂ । ಸೃಜ್ಯಂತೇ ॥

॥ ಪ್ರತಿಪದಾರ್ಥ ॥

**ಸುತಾಃ**—ಮಂತ್ರಪೂರ್ವಕವಾಗಿ ಹಿಂಡಲ್ಪಟ್ಟವೂ । **ಮಧುಮತ್ತಮಾಃ**—ಅತ್ಯಂತ ರುಚಿಕರವಾದುವೂ । **ಇಂದವಃ**—ಸ್ರವಿಸತಕ್ಕವೂ ಆದ । **ಸೋಮಾಃ**—ಸೋಮರಸಗಳು । **ಋತಸ್ಯ**—ಯಜ್ಞದ । **ಸಾದನೇ**—ಗೃಹದಲ್ಲಿ । **ಇಂದ್ರಾಯ**—ಇಂದ್ರಾರ್ಥವಾಗಿ । **ಅಸೃಗ್ರಂ**—ಉತ್ಪನ್ನಮಾಡಲ್ಪಟ್ಟವೆ.

॥ ಭಾವಾರ್ಥ ॥

ಮಂತ್ರಪೂರ್ವಕವಾಗಿ ಹಿಂಡಲ್ಪಟ್ಟವೂ, ಅತ್ಯಂತ ರುಚಿಕರವಾದವೂ, ಸ್ರವಿಸತಕ್ಕವೂ ಆದ ಸೋಮರಸಗಳು ಯಜ್ಞಗೃಹದಲ್ಲಿ ಇಂದ್ರಾರ್ಥವಾಗಿ ಉತ್ಪನ್ನಮಾಡಲ್ಪಟ್ಟವೆ

English Translation

The most sweet-flavoured Soma-libations are poured forth to Indra in the hall of sacrifice.

॥ ಸಂಹಿತಾಪಾಠಃ ॥

ಅಭಿ ವಿಪ್ರಾ ಅನೂಷತ ಗಾವೋ ವತ್ಸಂ ನ ಮಾತರಃ ।

ಇಂದ್ರಂ ಸೋಮಸ್ಯ ಪೀತಯೇ ॥ ೨ ॥

॥ ಪದಪಾಠಃ ॥

ಅಭಿ । ವಿಪ್ರಾಃ । ಅನೂಷತ । ಗಾವಃ । ವತ್ಸಂ । ನ । ಮಾತರಃ ।

ಇಂದ್ರಂ । ಸೋಮಸ್ಯ । ಪೀತಯೇ ॥ ೨ ॥

॥ ಸಾಯಣಭಾಷ್ಯಂ ॥

ವಿಪ್ರಾ ಮೇಧಾವಿನಃ ಸೋಮಸ್ಯ ಪೀತಯೇ ಪಾನಾಯೇಂದ್ರಂ ಮಾತರೋ ಜನಯಿತ್ರ್ಯೋ ಗಾವೋ ವತ್ಸಂ ನ ಯಥಾ ವತ್ಸಂ ಪ್ರತಿ ತದ್ವದಭ್ಯನೂಷತ । ಅಭಿಶಬ್ದಯಂತಿ ॥

॥ ಪ್ರತಿಪದಾರ್ಥ ॥

**ಮಾತರಃ**—ಕರುವನ್ನು ಹಾಕಿರುವ । **ಗಾವಃ**—ಗೋವುಗಳು । **ವತ್ಸಂ ನ**—ತಮ್ಮ ಕರುಗಳನ್ನು ಕೂಗಿ ಕರೆಯುವಂತೆ । **ವಿಪ್ರಾಃ**—ಮೇಧಾವಿಗಳಾದ ಸ್ತುತಿಕರ್ತರು । **ಸೋಮಸ್ಯ**—ಸೋಮರಸದ । **ಪೀತಯೇ**—ಪಾನಾರ್ಥವಾಗಿ । **ಇಂದ್ರಂ**—ಇಂದ್ರನನ್ನು । **ಅಭ್ಯನೂಷತ**—ಶಬ್ದಮಾಡಿ ಕರೆಯುತ್ತಾರೆ.

॥ ಭಾವಾರ್ಥ ॥

ಕರುವನ್ನು ಹಾಕಿರುವ ಗೋವುಗಳು ತಮ್ಮ ಕರುಗಳನ್ನು ಕೂಗಿ ಕರೆಯುವಂತೆ ಮೇಧಾವಿಗಳಾದ ಸ್ತುತಿಕರ್ತರು ಸೋಮರಸದ ಪಾನಾರ್ಥವಾಗಿ ಇಂದ್ರನನ್ನು ಶಬ್ದಮಾಡಿ (ಸ್ತುತಿಸಿ) ಕರೆಯುತ್ತಾರೆ.

## English Translation

The wise (priests) call upon Indra to drink the Soma as the mother cows low to their calves.

॥ ಸಂಹಿತಾಪಾಠಃ ॥

ಮದಚ್ಯುತ್ಕ್ಷೇತಿ ಸಾದನೇ ಸಿಂಧೋರೂರ್ಮಾ ವಿಪಶ್ಚಿತ್ ।
ಸೋಮೋ ಗೌರೀ ಅಧಿಶ್ರಿತಃ ॥ ೩ ॥

॥ ಪದಪಾಠಃ ॥

ಮದಽಚ್ಯುತ್ । ಕ್ಷೇತಿ । ಸದನೇ । ಸಿಂಧೋಃ । ಊರ್ಮಾ । ವಿಪಃಽಚಿತ್ ।
ಸೋಮಃ । ಗೌರೀ ಇತಿ । ಅಧಿ । ಶ್ರಿತಃ ॥ ೩ ॥

॥ ಸಾಯಣಭಾಷ್ಯಂ ॥

ಮದಚ್ಯುನ್ಮದಕರಸ್ಯ ರಸಸ್ಯ ಚ್ಯಾವಯಿತಾ ಸೋಮಃ ಸಾದನೇ ॥ ಸಂಹಿತಾಯಾಂ ದೀರ್ಘಶ್ಛಾಂದಸಃ॥ ಸ್ಥಾನೇ ಕ್ಷೇತಿ। ನಿವಸತಿ। ಏತದೇವ ವಿವೃಣೋತಿ। ಸಿಂಧೋರ್ನದ್ಯಾ ಊರ್ಮೋರ್ಮೌ ತರಂಗೇ। ವಸತೀವರೀಷ್ವಿತ್ಯರ್ಥಃ। ವಿಪಶ್ಚಿದ್ವಿದ್ವಾನ್ಸೋಮೋ ಗೌರೀ ಅಧಿ ಗೌರ್ಯಾಮಧಿ । ಅಧೀತಿ ಸಪ್ತಮ್ಯರ್ಥಾನುವಾದಃ । ಮಾಧ್ಯಮಿಕಾಯಾಂ ವಾಚಿ । ಗೌರೀ ಗಾಂಧರ್ವೀತಿ ವಾಙ್ನಾಮಸು ಪಾಠಾತ್ । ಶ್ರಿತಃ । ಮಿಶ್ರಯತಿ ॥

॥ ಪ್ರತಿಪದಾರ್ಥ ॥

**ಮದಚ್ಯುತ್**—ಹರ್ಷಕಾರಕವಾದ ರಸವನ್ನು ಸುರಿಸುವ ಸೋಮವು । **ಸಾದನೇ**—ಯಜ್ಞಗೃಹದಲ್ಲಿ । **ಸಿಂಧೋಃ**—ನದಿಯ । **ಊರ್ಮಾ**—ಅಲೆಯರೂಪದ ವಸತೀವರಿಯಲ್ಲಿ ಸೇರಿಕೊಂಡು । **ಕ್ಷೇತಿ**—ವಾಸಿಸುತ್ತದೆ । **ವಿಪಶ್ಚಿತ್**—ಎಲ್ಲವನ್ನೂ ಅರಿತ । **ಸೋಮಃ**—ಸೋಮವು । **ಗೌರೀ ಅಧಿ**—ಮಾಧ್ಯಮಿಕಾವಾಕ್ಕಿನೊಂದಿಗೆ ಸೇರಿ । **ಶ್ರಿತಃ**—ವಾಸಿಸುತ್ತದೆ.

॥ ಭಾವಾರ್ಥ ॥

ಹರ್ಷಕಾರಕವಾದ ರಸವನ್ನು ಸುರಿಸುವ ಸೋಮವು ಯಜ್ಞಗೃಹದಲ್ಲಿ ನದಿಯ ಅಲೆಯರೂಪದ ವಸತೀವರೀ-ಸಂಜ್ಞಕವಾದ ಉದಕದಲ್ಲಿ ಸೇರಿಕೊಂಡು ವಾಸಿಸುತ್ತದೆ. ಎಲ್ಲವನ್ನೂ ಅರಿತ ಸೋಮವು ಮಾಧ್ಯಮಿಕಾವಾಕ್ಕಿನೊಂದಿಗೆ ಸೇರಿ ವಾಸಿಸುತ್ತದೆ.

## English Translation

The wise Soma, the bestower of exhilaration, dwells in the hall of (sacrifice), mixed with the waves of the river to a chant in the middle tone.

॥ ಸಂಹಿತಾಪಾಠಃ ॥

ದಿವೋ ನಾಭಾ ವಿಚಕ್ಷಣೋಽವ್ಯೋ ವಾರೇ ಮಹೀಯತೇ ।
ಸೋಮೋ ಯಃ ಸುಕ್ರತುಃ ಕವಿಃ ॥ ೪ ॥

॥ ಪದಪಾಠಃ ॥

ದಿವಃ । ನಾಭಾ । ವಿಽಚಕ್ಷಣಃ । ಅವ್ಯಃ । ವಾರೇ । ಮಹೀಯತೇ ।
ಸೋಮಃ । ಯಃ । ಸುಽಕ್ರತುಃ । ಕವಿಃ ॥ ೪ ॥

॥ ಸಾಯಣಭಾಷ್ಯಂ ॥

**ಯಃ ಸುಕ್ರತುಃ ಸುಪ್ರಜ್ಞಃ ಕವಿಃ ಕ್ರಾಂತಕರ್ಮಾ ವಿಚಕ್ಷಣೋ ವಿದ್ರಷ್ಟಾ ಸ ಸೋಮೋ ದಿವೋಽಂತರಿಕ್ಷಸ್ಯ ನಾಭಾ ನಾಭೌ ನಾಭಿಭೂತೇಽವ್ಯೋಽವೇರ್ವಾರೇ ವಾಲೇ ಮಹೀಯತೇ । ಪೂಜ್ಯತೇ। ಪೂಯಮಾನಃ ಸ್ತೂಯತ ಇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಯಃ**—ಯಾರು । **ಕವಿಃ**—ಮೇಧಾವಿಯಾಗಿಯೂ । **ಸುಕ್ರತುಃ**—ಉತ್ತಮವಾದ ಕರ್ಮವುಳ್ಳವನಾಗಿಯೂ **ವಿಚಕ್ಷಣಃ**—ವಿವೇಕಯುತವಾದ ದೃಷ್ಟಿಯುಳ್ಳವನಾಗಿಯೂ ಆಗಿರುವನೋ ಅಂತಹ । **ಸೋಮಃ**—ಸೋಮನು । **ದಿವಃ**—ಅಂತರಿಕ್ಷದ । **ನಾಭಾ**—ನಾಭಿಪ್ರದೇಶದಲ್ಲಿ (ಮಧ್ಯಭಾಗದಲ್ಲಿ) । **ಅವ್ಯಃ ವಾರೇ** — ಶುದ್ಧಿಕಾರಕವಾದ ಉಣ್ಣೆಯ ಮೇಲೆ (ಶೋಧಿಸಲ್ಪಡುವಾಗ) । **ಮಹೀಯತೇ**—ಪೂಜಿಸಲ್ಪಡುತ್ತಾನೆ.

॥ ಭಾವಾರ್ಥ ॥

ಮೇಧಾವಿಯಾಗಿಯೂ, ಉತ್ತಮವಾದ ಕರ್ಮವುಳ್ಳವನಾಗಿಯೂ ವಿವೇಕಯುತವಾದ ದೃಷ್ಟಿಯುಳ್ಳವನಾಗಿಯೂ ಇರತಕ್ಕ ಸೋಮನು ಅಂತರಿಕ್ಷದ ಮಧ್ಯಭಾಗದಲ್ಲಿ ದಶಾಪವಿತ್ರದ ಶೋಧಕವಾದ ಉಣ್ಣೆಯ ಮೇಲೆ (ಶೋಧಿಸಲ್ಪಡುವಾಗ) ಪೂಜಿಸಲ್ಪಡುತ್ತಾನೆ.

English Translation

Soma, the observant, who is the wise seer, is worshipped in the navel of the sky, the woollen filter.

॥ ಸಂಹಿತಾಪಾಠಃ ॥

ಯಃ ಸೋಮಃ ಕಲಶೇಷ್ವಾ ಅಂತಃ ಪವಿತ್ರ ಆಹಿತಃ ।
ತಮಿಂದುಃ ಪರಿ ಷಸ್ವಜೇ ॥ ೫ ॥

॥ ಪದಪಾಠಃ ॥

ಯಃ । ಸೋಮಃ । ಕಲಶೇಷು । ಆ । ಅಂತರಿತಿ । ಪವಿತ್ರೇ । ಆಽಹಿತಃ ।
ತಂ । ಇಂದುಃ । ಪರಿ । ಸಸ್ವಜೇ ॥ ೫ ॥

॥ ಸಾಯಣಭಾಷ್ಯಂ ॥

ಯಃ ಸೋಮಃ ಕಲಶೇಷು ಕುಂಭೇಷ್ವಾ ಆಸ್ತೇ ಯಶ್ಚ ಪವಿತ್ರೇ ಪವಿತ್ರಸ್ಯಾಂತರ್ಮಧ್ಯ ಆಹಿತೋ ನಿಹಿತಃ ತಂ ಸ್ವಾಂಶಭೂತಂ ಸೋಮಮಿಂದುಃ ಸೋಮೋ ದೇವಃ ಪರಿ ಷಸ್ವಜೇ । ಪ್ರವಿಶತಿ ॥

॥ ಪ್ರತಿಪದಾರ್ಥ ॥

ಯಃ– ಯಾವ । ಸೋಮಃ—ಸೋಮವು । ಕಲಶೇಷು—ಕಲಶಪಾತ್ರೆಗಳಲ್ಲಿ । ಆ — ಇರುವುದೋ (ಮತ್ತು) । ಪವಿತ್ರೇ—ದಶಾಪವಿತ್ರದ । ಅಂತಃ—ಮಧ್ಯಭಾಗದಲ್ಲಿ । ಆಹಿತಃ—ಇಡಲ್ಪಟ್ಟಿರುವುದೋ । ತಂ—ಅಂತಹ ಸೋಮವನ್ನು । ಇಂದುಃ—ಸೋಮದೇವನು । ಪರಿ ಷಸ್ವಜೇ—ಅಪ್ಪಿಕೊಳ್ಳುವಂತೆ ಪ್ರವೇಶಿಸುತ್ತಾನೆ.

॥ ಭಾವಾರ್ಥ ॥

ಯಾವ ಸೋಮವು ಕಲಶಪಾತ್ರೆಗಳಲ್ಲಿರುವುದೋ ಮತ್ತು ದಶಾಪವಿತ್ರದ ಮಧ್ಯಭಾಗದಲ್ಲಿ ಇಡಲ್ಪಟ್ಟಿರುವುದೋ ಅಂತಹ ಸೋಮವನ್ನು ಸೋಮದೇವನು ಅಪ್ಪಿಕೊಳ್ಳುವಂತೆ ಪ್ರವೇಶಿಸುತ್ತಾನೆ.

English Translation

Indu has embraced that Soma which is collected in the ewers and has been passed through the filter.

॥ ಸಂಹಿತಾಪಾಠಃ ॥

ಪ್ರ ವಾಚಮಿಂದುರಿಷ್ಯತಿ ಸಮುದ್ರಸ್ಯಾಧಿ ವಿಷ್ಟಪಿ ।
ಜಿನ್ವನ್ಕೋಶಂ ಮಧುಶ್ಚುತಂ ॥ ೬ ॥

॥ ಪದಪಾಠಃ ॥

ಪ್ರ । ವಾಚಂ । ಇಂದುಃ । ಇಷ್ಯತಿ । ಸಮುದ್ರಸ್ಯ । ವಿಷ್ಟಪಿ ।
ಜಿನ್ವನ್ । ಕೋಶಂ । ಮಧುಽಶ್ಚುತಂ ॥ ೬ ॥

॥ ಸಾಯಣಭಾಷ್ಯಂ ॥

ಇಂದುಃ ಸೋಮೋ ಮಧುಶ್ಚುತಂ ಮಧುನಶ್ಚ್ಯಾವಕಂ ಕೋಶಂ ಮೇಘಂ । ಅಸುರಃ ಕೋಶ ಇತಿ ಮೇಘನಾಮಸು ಪಠಾತ್ । ಜಿನ್ವನ್ಪ್ರೀಣಯನ್ಸಮುದ್ರಸ್ಯಾಂತರಿಕ್ಷಸ್ಯಾಧಿ ವಿಷ್ಟಪಿ ವಿಷ್ಟಬ್ಧೇ ಸ್ಥಾನೇ ವಾಚಂ ಪ್ರೇಷ್ಯತಿ । ಪ್ರೇರಯತಿ । ಪವಿತ್ರೇ ಪೂಯಮಾನಃ ಶಬ್ದಂ ಕರೋತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಇಂದುಃ**—ಸೋಮನು । **ಮಧುಶ್ಚುತಂ**—ಮಧುರವಾದ ರಸವನ್ನು ಸುರಿಸುವ । **ಕೋಶಂ**—ಮೇಘವನ್ನು । **ಜಿನ್ವನ್**—ಹರ್ಷಗೊಳಿಸುತ್ತಾ । **ಸಮುದ್ರಸ್ಯ ಅಧಿ**—ಅಂತರಿಕ್ಷದ ಮೇಲೆ । **ವಿಷ್ಟಪಿ**—ಉತ್ತಮವಾದ ಆಸನದಲ್ಲಿ ಕುಳಿತು । **ವಾಚಂ**—ಶಬ್ದವನ್ನು । **ಪ್ರ ಇಷ್ಯತಿ**—ಪ್ರಯೋಗಿಸುತ್ತಾನೆ (ಉಂಟುಮಾಡುತ್ತಾನೆ)

॥ ಭಾವಾರ್ಥ ॥

ಸೋಮನು ಮಧುರವಾದ ರಸವನ್ನು ಸುರಿಸುವ ಮೇಘವನ್ನು ಹರ್ಷಗೊಳಿಸುತ್ತಾ ಅಂತರಿಕ್ಷದ ಮೇಲೆ ಉತ್ತಮವಾದ ಆಸನದಲ್ಲಿ ಕುಳಿತು ಶಬ್ದವನ್ನುಂಡುಮಾಡುತ್ತಾನೆ.

## English Translation

Indu emits a sound, abiding in the firmament of the sky, and delighting the nectar-shedding cloud.

॥ ಸಂಹಿತಾಪಾಠಃ ॥

ನಿತ್ಯಸ್ತೋತ್ರೋ ವನಸ್ಪತಿರ್ಧೀನಾಮಂತಃ ಸಬರ್ದುಘಃ ।
ಹಿನ್ವಾನೋ ಮಾನುಷಾ ಯುಗಾ ॥ ೭ ॥

॥ ಪದಪಾಠಃ ॥

ನಿತ್ಯಽಸ್ತೋತ್ರಃ । ವನಸ್ಪತಿಃ । ಧೀನಾಂ । ಅಂತರಿತಿ । ಸಬಃಽದುಘಃ ।

ಹಿನ್ವಾನಃ । ಮಾನುಷಾ । ಯುಗಾ ॥ ೭ ॥

॥ ಸಾಯಣಭಾಷ್ಯಂ ॥

ನಿತ್ಯಸ್ತೋತ್ರಃ ಸಂತತಸ್ತೋತ್ರಃ ಸಬರ್ದುಘೋಽಮೃತಸ್ಯ ದೋಗ್ಧಾ ವನಸ್ಪತಿರ್ವನಾನಾಂ ಪಾಲಯಿತಾ ಸೋಮೋ ಮಾನುಷಾ ಮಾನುಷಾಣಿ ಯುಗಾ ಯುಗಾನ್ಯಹೀನೈಕಾಹಾತ್ಮಕಾನಿ ಹಿನ್ವಾನಃ ಪ್ರೀಣಯನ್ಧೀನಾಂ ಕರ್ಮಣಾಮಂತರ್ಮಧ್ಯೇ ನಿವಸತೀತ್ಯರ್ಥಃ ॥

॥ ಪ್ರತಿಪದಾರ್ಥ

**ನಿತ್ಯಸ್ತೋತ್ರಃ**—ಶಾಶ್ವತವಾದ ಸ್ತುತಿಯುಳ್ಳವನೂ । **ಸಬರ್ದುಘಃ**—ಅಮೃತವನ್ನು ಕರೆಯುವವನೂ । **ವನಸ್ಪತಿಃ**—ವನಗಳಿಗೆ ಪಾಲಕನೂ ಆದ ಸೋಮನು । **ಮಾನುಷಾ**—ಮಾನವರಿಗೆ ಸೇರಿದ । **ಯುಗಾ**—ಅಹೀನಾದಿ ಕಾಲ ವಿಭಾಗಗಳನ್ನೆಲ್ಲಾ । **ಹಿನ್ವಾನಃ**—ಸಂತೋಷಗೊಳಿಸುತ್ತಾ । **ಧೀನಾಂ**—ಕರ್ಮಗಳ । **ಅಂತಃ**—ಮಧ್ಯದಲ್ಲಿ ವಾಸಿಸುತ್ತಾನೆ.

॥ ಭಾವಾರ್ಥ ॥

ಶಾಶ್ವತವಾಗಿ ಸ್ತುತಿಸಲ್ಪಡುವವನೂ, ಅಮೃತವನ್ನು ಕರೆಯುವವನೂ, ವನಗಳಿಗೆ ಪಾಲಕನೂ ಆದ ಸೋಮನು ಮಾನವರಿಗೆ ಸೇರಿದ ಅಹೀನಾದಿ ಕಾಲವಿಭಾಗಗಳನ್ನೆಲ್ಲಾ ಸಂತೋಷಗೊಳಿಸುತ್ತಾ ಕರ್ಮಗಳ ಮಧ್ಯದಲ್ಲಿ ವಾಸಿಸುತ್ತಾನೆ.

English Translation

Soma, whose praise is eternal, the lord of forests, the shedder of nectar and rejoicing the generations of men, (is present) in the midst of our sacred rites.

॥ ಸಂಹಿತಾಪಾಠಃ ॥

ಅಭಿ ಪ್ರಿಯಾ ದಿವಸ್ಪದಾ ಸೋಮೋ ಹಿನ್ವಾನೋ ಅರ್ಷತಿ ।
ವಿಪ್ರಸ್ಯ ಧಾರಯಾ ಕವಿಃ ॥ ೮ ॥

॥ ಪದಪಾಠಃ ॥

ಅಭಿ । ಪ್ರಿಯಾ । ದಿವಃ । ಪದಾ । ಸೋಮಃ । ಹಿನ್ವಾನಃ । ಅರ್ಷತಿ ।

ವಿಪ್ರಸ್ಯ । ಧಾರಯಾ । ಕವಿಃ ॥ ೮ ॥

॥ ಸಾಯಣಭಾಷ್ಯಂ ॥

**ಕವಿಃ ಕ್ರಾಂತಕರ್ಮಾ ಸೋಮೋ ದಿವೋಽಂತರಿಕ್ಷಾದ್ಧಿನ್ವಾನಃ ಪ್ರೇರ್ಯಮಾಣೋ ವಿಪ್ರಸ್ಯ ಮೇಧಾವಿನಃ ಸ್ವಸ್ಯ ಧಾರಯಾ ಪ್ರಿಯಾ ಪ್ರಿಯಾಣಿ ಪದಾನಿ ಸ್ಥಾನಾನ್ಯಭ್ಯರ್ಷತಿ । ಅಭಿಗಚ್ಛತಿ ॥**

॥ ಪ್ರತಿಪದಾರ್ಥ ॥

**ಕವಿಃ**—ಮೇಧಾಯುತನಾದ ಕರ್ಮವುಳ್ಳ । **ಸೋಮಃ**—ಸೋಮನು । **ದಿವಃ**—ಅಂತರಿಕ್ಷದಿಂದ । **ಹಿನ್ವಾನಃ**—ಕಳುಹಲ್ಪಟ್ಟವನಾಗಿ । **ವಿಪ್ರಸ್ಯ**—ಮೇಧಾವಿಯಾದ ಯಜಮಾನನಿಗೆ । **ಪ್ರಿಯಾ**—ಪ್ರೀತಿಕರವಾದ, । **ಪದಾ**—ಯಜ್ಞಸ್ಥಾನವನ್ನು । **ಧಾರಯಾ**—ಪ್ರವಾಹರೂಪದಿಂದ । **ಅಭಿ ಅರ್ಷತಿ**—ಬಂದು ಸೇರುತ್ತಾನೆ.

॥ ಭಾವಾರ್ಥ ॥

ಮೇಧಾಯುತವಾದ ಕರ್ಮವುಳ್ಳ ಸೋಮನು ಅಂತರಿಕ್ಷದಿಂದ ಕಳುಹಲ್ಪಟ್ಟವನಾಗಿ ಮೇಧಾವಿಯಾದ ಯಜಮಾನನಿಗೆ ಪ್ರೀತಿಕರವಾದ ಯಜ್ಞಸ್ಥಾನವನ್ನು ಪ್ರವಾಹರೂಪದಿಂದ ಬಂದು ಸೇರುತ್ತಾನೆ

English Translation

The sage Soma, urged from heaven, flows in a stream to the beloved abodes of his devout (worshipper)

॥ ಸಂಹಿತಾಪಾಠಃ ॥

**ಆ ಪವಮಾನ ಧಾರಯ ರಯಿಂ ಸಹಸ್ರವರ್ಚಸಂ ।**

**ಅಸ್ಮೇ ಇಂದೋ ಸ್ವಾಭುವಂ ॥ ೯ ॥**

॥ ಪದಪಾಠಃ ॥

**ಆ । ಪವಮಾನ । ಧಾರಯ । ರಯಿಂ । ಸಹಸ್ರಽವರ್ಚಸಂ ।**

**ಅಸ್ಮೇ ಇತಿ । ಇಂದೋ ಇತಿ । ಸುಽಆಭುವಂ ॥ ೯ ॥**

॥ ಸಾಯಣಭಾಷ್ಯಂ ॥

**ಹೇ ಪವಮಾನೇಂದೋ ಸೋಮ ತ್ವಂ ಸಹಸ್ರವರ್ಚಸಂ ಬಹುದೀಪ್ತಿಂ ಸ್ವಾಭುವಂ ಶೋಭನಭವನಂ ರಯಿಂ ಧನಮಸ್ಮೇ ಅಸ್ಮಾಸು ಧಾರಯ । ಪ್ರಕ್ಷಿಪೇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಪವಮಾನ**—ಶುದ್ಧವಾದ ಪ್ರವಾಹವುಳ್ಳ । **ಇಂದೋ**—ಎಲೈ ಸೋಮನೇ । **ಸಹಸ್ರವರ್ಚಸಂ**—ಅನೇಕವಿಧವಾಗಿ ಕಾಂತಿಯಿಂದ ಕೂಡಿದುದೂ । **ಸ್ವಾಭುವಂ**—ಉತ್ತಮವಾದ ಭವನದಿಂದ ಕೂಡಿದುದೂ ಆದ । **ರಯಿಂ**—ಧನವನ್ನು । **ಅಸ್ಮೇ**—ನಮಗೆ । **ಆ ಧಾರಯ**—ಕಳುಹಿಸಿಕೊಡು.

॥ ಭಾವಾರ್ಥ ॥

ಶುದ್ಧವಾದ ಪ್ರವಾಹವುಳ್ಳ ಎಲೈ ಸೋಮನೇ, ಅನೇಕವಿಧವಾದ ಕಾಂತಿಯಿಂದ ಕೂಡಿದುದೂ, ಉತ್ತಮವಾದ ವಸತಿಸ್ಥಾನಗಳಿಂದ ಕೂಡಿದುದೂ ಆದ ಧನವನ್ನು ನಮಗೆ ಕಳುಹಿಸಿಕೊಡು.

## English Translation

Purifying Indu, bestow upon us wealth of a thousand radiances excellent in its nature.

ವೇದಾರ್ಥಸ್ಯಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲ ಸಾಮ್ರಾಜ್ಯ-
ಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶ
ಋಕ್ಸಂಹಿತಾಭಾಷ್ಯೇ ಷಷ್ಠಾಷ್ಟಕೇ ಸಪ್ತಮೋಽಧ್ಯಾಯಃ ಸಮಾಪ್ತಃ ॥

॥ ಓಂ ತತ್ಸತ್ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಆರನೆಯ ಅಷ್ಟಕದ ಏಳನೆಯ ಅಧ್ಯಾಯವು ಸಮಾಪ್ತವು.

॥ ಓಂ ತತ್ಸತ್ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ।

॥ ಶುಭಂ ಭೂಯಾತ್ ॥

॥ ಮಂಗಳಂ ॥

॥ ಶ್ರೀ ॥

॥ ಶ್ರೀ ಮಹಾಗಣಾಧಿಪತಯೇ ನಮಃ ॥

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಂ ॥
ಯಸ್ಯ ನಿಶ್ವ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ।
ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥಮಹೇಶ್ವರಂ ॥
ವೇದಃ ಶಿವಃ ಶಿವೋ ವೇದೋ ವೇದಾಧ್ಯಾಯೀ ಸದಾಶಿವಃ ।
ತಸ್ಮಾತ್ಸರ್ವಪ್ರಯತ್ನೇನ ವೇದಮೇವ ಸದಾ ಜಪೇತ್ ॥

**ಸಾಯಣಭಾಷ್ಯಸಹಿತಾ**

# ಋಗ್ವೇದಸಂಹಿತಾ

## ಅಥ ಷಷ್ಠಾಷ್ಟಕೇಽಷ್ಟಮೋಽಧ್ಯಾಯಃ

### ಆರನೆಯ ಅಷ್ಟಕದಲ್ಲಿ ಎಂಟನೆಯ ಅಧ್ಯಾಯವು.

### ಒಂಭತ್ತನೆಯ ಮಂಡಲದಲ್ಲಿ ಹದಿಮೂರನೆಯ ಸೂಕ್ತವು

। ಸಾಯಣಭಾಷ್ಯಂ ।

**ತತ್ರ ಸೋಮಃ ಪುನಾನ ಇತಿ ನವರ್ಚಂ ತ್ರಯೋದಶಂ ಸೂಕ್ತಂ । ಅಸಿತೋ ದೇವಲೋ ವರ್ಷಿಃ। ಸೋಮೋ ದೇವತಾ । ಪವಮಾನಗುಣಃ ಸೋಮೋ ವಿಜ್ಞೇಯಃ ಕಾಶ್ಯಪಾವೃಷೀ ಇತಿ ವಿದ್ಯಾದನು- ಕ್ತೇಽಪಿ ಲಾಘವಾಯಾ ದೃಳ್ಹಚ್ಯುತಾತ್ । ಸೋಮ ಇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—ಋಗ್ವೇದಸಂಹಿತೆಯ ಒಂಭತ್ತನೆಯ ಮಂಡಲದಲ್ಲಿ **ಸೋಮಃ ಪುನಾನಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿಮೂರನೆಯದು. ಇದರಲ್ಲಿ ಒಂಭತ್ತು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅಸಿತಃ ಕಾಶ್ಯಪಃ ಅಥವಾ ದೇವಲಃ ಎಂಬುವನು ಋಷಿಯು; ಸೋಮವು ದೇವತೆಯು, ಈ ಮಂಡಲದ ಸೂಕ್ತಗಳಲ್ಲಿ ಸೋಮದೇವತೆಯನ್ನುದ್ದೇಶಿಸಿರುವ ಸ್ಥಳಗಳಲ್ಲೆಲ್ಲಾ ಪವಮಾನಗುಣವಿಶಿಷ್ಟನಾದ ಸೋಮನೆಂದೇ ತಿಳಿಯಬೇಕು. ಈ ಸೂಕ್ತದ ಅಸಿತಃ ಮತ್ತು ದೇವಲಃ ಎಂಬಿಬ್ಬರು ಋಷಿಗಳೂ ಕಾಶ್ಯಪಗೋತ್ರೋದ್ಭವರು. ಅನುಕ್ರಮಣಿಕೆಯಲ್ಲಿ **ಸೋಮಃ** ಎಂದು ಮುಂತಾಗಿ ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೧೩

ಮಂಡಲ—೯ । ಅನುವಾಕ—೧ । ಸೂಕ್ತ—೧೩ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೧, ೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೯ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಸೋಮಃ ಪುನಾನೋ ಅರ್ಷತಿ ಸಹಸ್ರಧಾರೋ ಅತ್ಯವಿಃ ।**
**ವಾಯೋರಿಂದ್ರಸ್ಯ ನಿಷ್ಕೃತಂ ॥ ೧ ॥**

॥ ಪದಪಾಠಃ ॥

**ಸೋಮಃ । ಪುನಾನಃ । ಅರ್ಷತಿ । ಸಹಸ್ರಽಧಾರಃ । ಅತಿಽಅವಿಃ ।**
**ವಾಯೋಃ । ಇಂದ್ರಸ್ಯ । ನಿಃಽಕೃತಂ ॥ ೧ ॥**

॥ ಸಾಯಣಭಾಷ್ಯಂ ॥

**ಅಯಂ ಪುನಾನಃ ಪಾವಕಃ ಸೋಮೋಽರ್ಷತಿ । ಗಚ್ಛತಿ । ಕೀದೃಶೋಽಯಂ ಪವಮಾನಃ । ಸಹಸ್ರಧಾರೋಽಪರಿಮಿತಧಾರೋಽತ್ಯವಿಃ । ಅತ್ರಾವಿಶಬ್ದೇನ ತಲ್ಲೋಮಾನ್ಯುಚ್ಯಂತೇ । ಅವಿಲೋಮಭಿರ್ನಿಷ್ಪಾದಿತಂ ದಶಾಪವಿತ್ರಮಿತ್ಯರ್ಥಃ । ತದತಿಕ್ರಮ್ಯ ಗಚ್ಛತೀತ್ಯವಿಃ । ಕಿಮರ್ಥಂ । ವಾಯೋರಿಂದ್ರಸ್ಯ ಚ ಪಾನಾಯೇತಿ ಶೇಷಃ । ಕಿಂ ಪ್ರತಿ । ನಿಷ್ಕೃತಂ । ನಿರಿತ್ಯೇಷ ಸಮಿತ್ಯೇತಸ್ಮಿನ್ನರ್ಥೇ । ಸಂಸ್ಕೃತಂ ಪಾತ್ರಂ ಪ್ರತಿ ॥**

॥ ಪ್ರತಿಪದಾರ್ಥ ॥

**ಪುನಾನಃ**—ಶುದ್ಧಿಕಾರಕನಾದವನೂ । **ಸಹಸ್ರಧಾರಃ**—ಅಪರಿಮಿತಸ್ಥಳಗಳಿಂದ ಧಾರೆಯಾಗಿ ಸ್ರವಿಸುವವನೂ । **ಅತ್ಯವಿಃ**—ಕುರಿಯ ಉಣ್ಣೆಯಿಂದ ನಿರ್ಮಿತವಾದ ವಸ್ತ್ರದಿಂದ ಶೋಧಿತನಾದವನೂ ಆದ ಸೋಮನು । **ವಾಯೋಃ**—ವಾಯುದೇವನ ಮತ್ತು । **ಇಂದ್ರಸ್ಯ**—ಇಂದ್ರನ ಪಾನಾರ್ಥವಾಗಿ । **ನಿಷ್ಕೃತಂ**—ಸಂಸ್ಕೃತನಾದ ಪಾತ್ರೆಯ ಸಮೀಪಕ್ಕೆ । **ಅರ್ಷತಿ**—ಹೋಗುತ್ತಾನೆ.

॥ ಭಾವಾರ್ಥ ॥

ಶುದ್ಧಿಕಾರಕನೂ, ಅಪರಿಮಿತವಾಗಿ ನಾನಾಕಡೆಗಳಿಂದ ಜಿನುಗುತ್ತಿರುವವನೂ, ಕುರಿಯ ಉಣ್ಣೆಯಿಂದ ನಿರ್ಮಿತವಾದ ವಸ್ತ್ರದಿಂದ ಅಥವಾ ದಶಾಪವಿತ್ರದಿಂದ ಶೋಧಿತನಾದವನೂ ಆದ ಸೋಮನು ವಾಯು ಮತ್ತು ಇಂದ್ರನ ಪಾನಾರ್ಥವಾಗಿ ಸಜ್ಜುಗೊಳಿಸಲ್ಪಟ್ಟ ಪಾತ್ರೆಯನ್ನು ಸಮೀಪಿಸುವನು

## English Translation

The purifying Soma, flowing in a thousand streams and passing the woollen filter, proceeds to the prepared vessel for Vayu and Inda.

॥ ವಿಶೇಷವಿಷಯಗಳು ॥

**ಸಹಸ್ರಧಾರಃ ಅತ್ಯವಿ** —ಸೋಮಲತೆಗಳನ್ನು ಕಲ್ಲಿನಿಂದ ಕುಟ್ಟಿ ರಸವನ್ನು ತೆಗೆಯುವಾಗ ರಸವು ನಾನಾ ಕಡೆಗಳಿಂದ ಜಿನುಗುವುದು. ಆ ರಸದಲ್ಲಿ ಲತೆಗಳ ಸಿಪ್ಪೆಗಳೇ ಮುಂತಾದವುಗಳಿರುವುದರಿಂದ ಪಾನಮಾಡಲು ಅನುಕೂಲವಾಗುವಂತೆ ಅದನ್ನು ಕುರಿಯ ಉಣ್ಣೆಯ ವಸ್ತ್ರದಿಂದ ಅಥವಾ ದಶಾಪವಿತ್ರದಿಂದ ಅಥವಾ ಹತ್ತು ಬೆರಳುಗಳಿಂದ ಶೋಧಿಸುವರು. ಶೋಧನೆಮಾಡಿದಮೇಲೆ ಯಜ್ಞದಲ್ಲಿ ಇಂದ್ರ ವಾಯುಗಳನ್ನುದ್ದೇಶಿಸಿ ಅರ್ಪಿಸುವುದಕ್ಕಾಗಿ ಸೋಮರಸವನ್ನು ತುಂಬಿಡುವ ದ್ರೋಣಕಲಶ, ಆಧವನೀಯ, ಪೂತಭೃತ್ ಎಂಬ ಸೋಮಸಂಗ್ರಹಣ ಪಾತ್ರೆಗಳಲ್ಲಿ ಶೇಖರಿಸುವರು. ಇದನ್ನೇ ಈ ಋಕ್ಕಿನಲ್ಲಿ ವರ್ಣಿಸಲಾಗಿದೆ.

। ಸಂಹಿತಾಪಾಠಃ ।

**ಪವಮಾನಮವಸ್ಯವೋ ವಿಪ್ರಮಭಿ ಪ್ರ ಗಾಯತ ।**

**ಸುಷ್ವಾಣಂ ದೇವವೀತಯೇ ॥ ೨ ॥**

॥ ಪದಪಾಠಃ ॥

**ಪವಮಾನಂ । ಅವಸ್ಯವಃ । ವಿಪ್ರಂ । ಅಭಿ । ಪ್ರ । ಗಾಯತ ।**

**ಸುಸ್ವಾನಂ । ದೇವऽವೀತಯೇ ॥ ೨ ॥**

॥ ಸಾಯಣಭಾಷ್ಯಂ ॥

**ಹೇ ಅವಸ್ಯವೋ ರಕ್ಷಣಕಾಮಾ ಉದ್ಗಾತ್ರಾದಯಃ ಯೂಯಂ** ಪವಮಾನಂ ಶೋಧ್ಯಮಾನಂ **ವಿಪ್ರಂ ವಿಶೇಷೇಣ ದೇವಾನಾಂ ಪ್ರೀಣಯಿತಾರಂ ವಿಪ್ರವಚ್ಛುದ್ಧಂ ವಾ । ಅಥವಾ । ವಿಪ್ರ ಇತಿ ಮೇಧಾವಿನಾಮ । ಮೇಧಾವಿನಂ । ದೇವವೀತಯೇ ದೇವಪಾನಾಯ ಸುಷ್ವಾಣಂ ಸೂಯಮಾನಮಭಿ ಪ್ರ** ಗಾಯತ **। ಅಭಿಮುಖ್ಯೇನ ಪ್ರಕರ್ಷೇಣ ಸ್ತುತ ॥**

। ಪ್ರತಿಪದಾರ್ಥ ॥

**ಅವಸ್ಯವಃ**—ರಕ್ಷಣೆಯನ್ನು ಅಪೇಕ್ಷಿಸುವ ಎಲೈ ಉದ್ಗಾತೃಗಳೇ ನೀವು । **ಪವಮಾನಂ**—ಶುದ್ಧಿಕಾರಕನೂ । **ವಿಪ್ರಂ**—ಮೇಧಾವಿಯೂ ಅಥವಾ ದೇವತೆಗಳನ್ನು ಹರ್ಷಗೊಳಿಸುವವನೂ । **ದೇವವೀತಯೇ**—ದೇವತೆಗಳ ಪಾನಾರ್ಥವಾಗಿ । **ಸುಷ್ವಾಣಂ**—ಹಿಂಡಲ್ಪಡುವವನೂ ಆದ ಸೋಮವನ್ನು । **ಅಭಿ**—ಅಭಿಲಕ್ಷಿಸಿ (ಉದ್ದೇಶಿಸಿ) । **ಪ್ರ ಗಾಯತ**—ಚೆನ್ನಾಗಿ ಸ್ತುತಿಸಿರಿ.

॥ ಭಾವಾರ್ಥ ॥

ರಕ್ಷಣೆಗಳನ್ನು ಬಯಸುವ ಎಲೈ ಉದ್ಗಾತೃಗಳೆಂಬ ಋತ್ವಿಜರೇ, ಶುದ್ಧಿಕಾರಕನೂ, ಮೇಧಾವಿಯೂ ಅಥವಾ ದೇವತೆಗಳಿಗೆ ಹರ್ಷವನ್ನುಂಟುಮಾಡುವವನೂ ದೇವತೆಗಳ ಪಾನಾರ್ಥವಾಗಿ ಹಿಂಡಲ್ಪಡುವವನೂ ಆದ ಸೋಮವನ್ನು ಉದ್ದೇಶಿಸಿ ಚೆನ್ನಾಗಿ ಸ್ತುತಿಸಿ ಗಾನಮಾಡಿ.

English Translation

Sing aloud, you who are desirous of (divine) protection, to the purifying wise Soma, effused for the beverage of the gods

॥ ಸಂಹಿತಾಪಾಠ ॥

ಪವಂತೇ ವಾಜಸಾತಯೇ ಸೋಮಾಃ ಸಹಸ್ರಪಾಜಸಃ ।

ಗೃಣಾನಾಃ ದೇವವೀತಯೇ ॥ ೩ ॥

॥ ಪದಪಾಠ ॥

ಪವಂತೇ । ವಾಜಽಸಾತಯೇ । ಸೋಮಾಃ । ಸಹಸ್ರಽಪಾಜಸಃ ।

ಗೃಣಾನಾಃ । ದೇವಽವೀತಯೇ ॥ ೩ ॥

॥ ಸಾಯಣಭಾಷ್ಯಂ ॥

**ಪವಂತೇ ಕ್ಷರಂತಿ ಸೋಮಾಃ । ಕಿಮರ್ಥಂ । ವಾಜಸಾತಯೇಽನ್ನಸ್ಯ ಲಾಭಾಯ । ಕೀದೃಶಾಃ । ಸಹಸ್ರಪಾಜಸೋ ಬಹುಬಲಾಃ । ಪಾತೄಣಾಂ ಬಲಪ್ರದಾ ಇತ್ಯರ್ಥಃ । ಗೃಣಾನಾಃ ॥ ಕರ್ಮಣಿ ಕರ್ತೃಪ್ರತ್ಯಯಃ ॥ ಸ್ತೂಯಮಾನಾಃ । ಪುನಃ ಕಿಮರ್ಥಂ । ದೇವವೀತಯೇ । ದೇವಾನಾಂ ವೀತಿರ್ಗತಿಃ ಪ್ರಾಪ್ತಿರ್ಭಕ್ಷಣಂ ವಾ ಯಸ್ಮಿನ್ಸ ದೇವವೀತಿರ್ಯಜ್ಞಃ । ತದರ್ಥಂ । ಯಜ್ಞಸಿದ್ಧಿಃ ಸಾಕ್ಷಾತ್ಪ್ರಯೋಜನಂ ತದ್ದ್ವಾರಾ ವಾಜಲಾಭ ಇತಿ ॥**

॥ ಪ್ರತಿಪದಾರ್ಥ ॥

**ದೇವವೀತಯೇ**—ಯಜ್ಞಾನುಷ್ಠಾನಕ್ಕಾಗಿಯೂ (ಆ ಮೂಲಕ) । **ವಾಜಸಾತಯೇ**—ಅನ್ನಲಾಭಾರ್ಥವಾಗಿಯೂ । **ಸಹಸ್ರಪಾಜಸಃ**—ಪಾನಮಾಡುವವರಿಗೆ ಬಲಪ್ರದವಾದವೂ । **ಗೃಣಾನಾಃ**—ಸ್ತುತಿಸಲ್ಪಡುವವೂ ಆದ । **ಸೋಮಾಃ**—ಸೋಮರಸಗಳು । **ಪವಂತೇ**—ಜಿನುಗುತ್ತಾ ಪ್ರವಹಿಸುತ್ತವೆ.

॥ ಭಾವಾರ್ಥ ॥

ಯಜ್ಞಾನುಷ್ಠಾನಕ್ಕಾಗಿಯೂ, ಆಮೂಲಕ ಅನ್ನಪ್ರಾಪ್ತಿಗಾಗಿಯೂ, ಪಾನಮಾಡುವವರಿಗೆ ಬಲಪ್ರದವಾದವೂ ಋತ್ವಿಜರಿಂದ ಸ್ತುತಿಸಲ್ಪಡುವವೂ ಆದ ಸೋಮರಸಗಳು ಹಿಂಡಲ್ಪಟ್ಟು ಜಿನುಗುತ್ತಾ ಪ್ರವಹಿಸುತ್ತವೆ.

## English Translation

The Soma-juices flow for the attainment of food,—giving abundance of strength and hymned (to become) the beverage of the gods.

। ಸಂಹಿತಾಪಾಠಃ ।

ಉತ ನೋ ವಾಜಸಾತಯೇ ಪವಸ್ವ ಬೃಹತೀರಿಷಃ ।
ದ್ಯುಮದಿಂದೋ ಸುವೀರ್ಯಂ ॥ ೪ ॥

॥ ಪದಪಾಠಃ ॥

ಉತ । ನಃ । ವಾಜಽಸಾತಯೇ । ಪವಸ್ವ । ಬೃಹತೀಃ । ಇಷಃ ।
ದ್ಯುಽಮತ್ । ಇಂದೋ ಇತಿ । ಸುಽವೀರ್ಯಂ ॥ ೪ ।

॥ ಸಾಯಣಭಾಷ್ಯಂ ॥

ಉತಾಪಿ ಚ ನೋಽಸ್ಮಾಕಂ ವಾಜಸಾತಯೇಽನ್ನಲಾಭಾಯ ಹೇ ಇಂದೋ ಸೋಮ ಬೃಹತೀರಿಷೋ ಮಹತೀ ರಸಧಾರಾ ದ್ಯುಮದ್ದೀಪ್ತಿಮತ್ಸುವೀರ್ಯಂ ಶೋಭನಸಾಮರ್ಥ್ಯಂ ಚ ಪವಸ್ವ। ಕ್ಷರ। ಶೋಭನಸಾಮರ್ಥ್ಯೋಪೇತಾ ಧಾರಾಃ ಪವಸ್ವೇತ್ಯರ್ಥಃ। ಅಥವಾ ವಾಜಸಾತಯೇ ಸಂಗ್ರಾಮಾಯ ಬೃಹತೀರಿಷೋ ದ್ಯುಮತ್ಸುವೀರ್ಯಂ ಸಂಪಾದಯಿತುಂ ಪವಸ್ವೇತಿ ಯೋಜ್ಯಂ ॥

। ಪ್ರತಿಪದಾರ್ಥ ।

**ಉತ**—ಮತ್ತು । **ನಃ**—ನಮಗೆ । **ವಾಜಸಾತಯೇ**—ಅನ್ನಲಾಭಾರ್ಥವಾಗಿ । **ಇಂದೋ**—ಎಲೈ ಸೋಮನೇ । **ಬೃಹತೀಃ ಇಷಃ**—ಬಹಳವಾದ ರಸಧಾರೆಗಳನ್ನೂ । **ದ್ಯುಮತ್**—ಪ್ರಕಾಶಮಾನವಾದ । **ಸುವೀರ್ಯಂ**—ಉತ್ತಮವಾದ ಶಕ್ತಿಸಾಮರ್ಥ್ಯವನ್ನೂ ಒದಗಿಸುತ್ತಾ । **ಪವಸ್ವ**—ಹರಿದು ಬಾ । [ಅಥವಾ **ವಾಜಸಾತಯೇ**—ಯುದ್ಧಾರ್ಥವಾಗಿ । **ಬೃಹತೀಃ ಇಷಃ**—ಪ್ರಭೂತವಾದ ಅನ್ನವನ್ನೂ । **ದ್ಯುಮತ್**—ಶ್ರೇಷ್ಠವಾದ । **ಸುವೀರ್ಯಂ**—ಶಕ್ತಿಸಾಮರ್ಥ್ಯವನ್ನುಂಟುಮಾಡುವುದಕ್ಕಾಗಿ । **ಪವಸ್ವ**-(ಲತೆಗಳಿಂದ) ಜಿನುಗುತ್ತಾ ಪ್ರವಹಿಸು].

॥ ಭಾವಾರ್ಥ ॥

ಮತ್ತು ಎಲೈ ಸೋಮನೇ, ಅನ್ನಲಾಭಾರ್ಥವಾಗಿ ಅಥವಾ ಯುದ್ಧಾರ್ಥವಾಗಿ ಬಹಳವಾದ ಅನ್ನವನ್ನೂ ಉತ್ತಮವಾದ ಶಕ್ತಿಸಾಮರ್ಥ್ಯಗಳನ್ನೂ ನಮಗೆ ಉಂಟುಮಾಡುವುದಕ್ಕಾಗಿ ನಾನಾಕಡೆಗಳಿಂದ ಧಾರೆಧಾರೆಯಾಗಿ ಜಿನುಗುತ್ತಾ ಪ್ರವಹಿಸು.

## English Translation

You, Indu, for our attainment of food pour forth abundant streams, and splendid and excellent vigour

॥ ಸಂಹಿತಾಪಾಠಃ ॥

ತೇ ನಃ ಸಹಸ್ರಿಣಂ ರಯಿಂ ಪವಂತಾಮಾ ಸುವೀರ್ಯಂ ।

ಸುವಾನಾ ದೇವಾಸ ಇಂದವಃ ॥ ೫ ॥

॥ ಪದಪಾಠಃ ॥

ತೇ । ನಃ । ಸಹಸ್ರಿಣಂ । ರಯಿಂ । ಪವಂತಾಂ । ಆ । ಸುಽವೀರ್ಯಂ ।

ಸುವಾನಾಃ । ದೇವಾಸಃ । ಇಂದವಃ ॥ ೫ ॥

॥ ಸಾಯಣಭಾಷ್ಯಂ ॥

ತ ಇಂದವಃ ಸೋಮಾ ನೋಽಸ್ಮಾಕಂ ಸಹಸ್ರಿಣಂ ಸಹಸ್ರಸಂಖ್ಯೋಪೇತಂ ರಯಿಂ ಧನಂ ಸುವೀರ್ಯಂ ಚಾ ಪವಂತಾಂ । ಕೀದೃಶಾಸ್ತೇ । ಸುವಾನಾಃ ಸೂಯಮಾನಾ ದೇವಾಸೋ ದ್ಯೋತನಾದಿಗುಣಯುಕ್ತಾಃ ॥

॥ ಪ್ರತಿಪದಾರ್ಥ ॥

**ಸುವಾನಾಃ**—ಕಲ್ಲುಗಳಿಂದ ಜಜ್ಜಿ ಹಿಂಡಲ್ಪಡುವುವೂ । **ದೇವಾಸಃ**—ಪ್ರಕಾಶಮಾನವಾದವೂ ಆದ । **ತೇ ಇಂದವಃ**—ಆ ಸೋಮರಸಗಳು । **ನಃ**—ನಮಗೆ । **ಸಹಸ್ರಿಣಂ**—ಅಪರಿಮಿತವಾದ । **ರಯಿಂ**—ಧನವನ್ನು । **ಸುವೀರ್ಯಂ ಚ**—ಶಕ್ತಿಸಾಮರ್ಥ್ಯಗಳನ್ನೂ । **ಆ ಪವಂತಾಂ**—ಕೊಡಲಿ

॥ ಭಾವಾರ್ಥ ॥

ಕಲ್ಲುಗಳಿಂದ ಜಜ್ಜಿ ಹಿಂಡಲ್ಪಡುವವೂ, ಪ್ರಕಾಶಮಾನವಾದವೂ ಎಂದರೆ ಸ್ವಚ್ಛವಾದವೂ ಆದ ಆ ಸೋಮರಸಗಳು ನಮಗೆ ಸಹಸ್ರ ಸಂಖ್ಯಾಕವಾದ ಅಥವಾ ಅಪರಿಮಿತವಾದ ಧನವನ್ನೂ ಶಕ್ತಿಸಾಮರ್ಥ್ಯಗಳನ್ನೂ ಕೊಡಲಿ.

## English Translation

May those divine libations, when effused, bring to us thousand-fold wealth and excellent vigour

॥ ಸಂಹಿತಾಪಾಠಃ ॥

ಅತ್ಯಾ ಹಿಯಾನಾ ನ ಹೇತೃಭಿರಸೃಗ್ರಂ ವಾಜಸಾಯೇ ।

ವಿ ವಾರಮವ್ಯಮಾಶವಃ ॥ ೬ ॥

॥ ಪದಪಾಠಃ ॥

ಅತ್ಯಾಃ । ಹಿಯಾನಾಃ । ನಃ । ಹೇತೃऽಭಿಃ । ಅಸೃಗ್ರಂ । ವಾಜऽಸಾತಯೇ ।

ವಿ । ವಾರಂ । ಅವ್ಯಂ । ಆಶವಃ ॥ ೬ ॥

॥ ಸಾಯಣಭಾಷ್ಯಂ ॥

ವಾಜಸಾತಯೇ ಸಂಗ್ರಾಮಾಯ ಹಿಯಾನಾಃ ಪ್ರೇರ್ಯಮಾಣಾ ಅತ್ಯಾ ನಾಶ್ವಾ ಇವ ತೇ ಯಥಾ ಪ್ರೇರಕೈಃ ಪ್ರೇರ್ಯಮಾಣಾಃ ಸಂಗ್ರಾಮಾಯ ಶೀಘ್ರಂ ಧಾವಂತಿ ತದ್ವದ್ಧೇತೃಭಿಃ ಪ್ರೇರಕೈಃ ಪ್ರೇರ್ಯಮಾಣಾ ಆಶವಃ ಶೀಘ್ರಗಾಮಿನಃ ಸೋಮಾ ವಾಜಸಾತಯೇऽನ್ನಲಾಭಾಯಾऽವ್ಯಂ ವಾರಂ ದಶಾಪವಿತ್ರಂ ವ್ಯಸೃಗ್ರಂ । ವ್ಯತಿಸೃಜ್ಯಂತೇ ॥

॥ ಪ್ರತಿಪದಾರ್ಥ ॥

**ವಾಜಸಾತಯೇ**— ಯುದ್ಧಾರ್ಥವಾಗಿ । **ಹಿಯಾನಾಃ**— ಪ್ರೇರಿಸಲ್ಪಡುವ । **ಅತ್ಯಾಃ ನ**— ಅಶ್ವಗಳಂತೆ । **ಹೇತೃಭಿಃ**— ಪ್ರೇರಕರಿಂದ ಪ್ರೇರಿಸಲ್ಪಡುವ ಎಂದರೆ ಅಧ್ವರ್ಯಾದಿಗಳಿಂದ ಕಲ್ಲುಗಳಿಂದ ಜಜ್ಜಿ ಹೊರಸೂಸುವ । **ಆಶವಃ**— ಬೇಗಬೇಗನೆ ಪ್ರವಿಸುತ್ತಿರುವ ಸೋಮರಸಗಳು । (**ವಾಜಸಾತಯೇ**— ಅನ್ನಲಾಭಾರ್ಥವಾಗಿ) । **ಅವ್ಯಂ ವಾರಂ**— ಕುರಿಯ ತುಪ್ಪಟದಿಂದ ಆವೃತವಾದ ದಶಾಪವಿತ್ರವನ್ನು । **ವಿ ಅಸೃಗ್ರಂ**— ದಾಟಿ ಹೊರಸೂಸುತ್ತವೆ.

॥ ಭಾವಾರ್ಥ ॥

ಯುದ್ಧದಲ್ಲಿ ಸವಾರರಿಂದ ಪ್ರೇರಿಸಲ್ಪಡುವ ಅಶ್ವಗಳು ಬೇಗಬೇಗನೆ ಧಾವಿಸುವಂತೆ ಅನ್ನಲಾಭಾರ್ಥವಾಗಿ ಮಾಡಲ್ಪಡುವ ಯಜ್ಞದಲ್ಲಿ ಅಧ್ವರ್ಯಾದಿ ಋತ್ವಿಗ್ಜನರಿಂದ ಕಲ್ಲುಗಳಿಂದ ಕುಟ್ಟಿ ಹಿಂಡಲ್ಪಡುವ ಎಂದರೆ ಪ್ರೇರಿಸಲ್ಪಡುವ ಸೋಮರಸಗಳು ಶೋಧನಾರ್ಥವಾಗಿ ಅಲ್ಲಿಯೇ ಇಟ್ಟಿರುವ ಕುರಿಯ ತುಪ್ಪಟದಿಂದ ಆಚ್ಛಾದಿತವಾದ ದಶಾಪವಿತ್ರವನ್ನು (ಶೋಧಿಸುವ ಯಂತ್ರವನ್ನು) ದಾಟಿಕೊಂಡು ಹೊರಸೂಸುತ್ತವೆ.

## English Translation

Like horses urged to battle by their drivers, the swift-flowing juices hasten through the woollen fleece

॥ ವಿಶೇಷವಿಷಯಗಳು ॥

**ಅವ್ಯಂ ವಾರಂ**—ಅವಿ ಎಂದರೆ ಹೆಣ್ಣು ಕುರಿ ಅಥವಾ ಕುರಿ ; ಅವ್ಯಂ ಎಂದರೆ ಕುರಿಯ ಸಂಬಂಧವಾದ ಉಣ್ಣೆಯು. ಈ ಉಣ್ಣೆಯಿಂದ ನಿರ್ಮಿತವಾದ ಬಟ್ಟೆಯನ್ನು ಒಂದು ಪಾತ್ರೆಯಮೇಲೆ ಹೊದಿಸಿ ಅದರಮೇಲೆ ಲತೆಯಿಂದ ಹಿಂಡಿದ ಸೋಮರಸವನ್ನು ಸುರಿಯುವರು. ಆ ರಸದಲ್ಲಿ ಸೇರಿಕೊಂಡಿರುವ ಸಿಪ್ಪೆ ಮುಂತಾದವು ಅದರಿಂದ ಶೋಧಿಸಲ್ಪಟ್ಟು ತಿಳಿಯಾಗಿಯೂ ಶುದ್ಧವಾಗಿಯೂ ಇರುವ ಸೋಮರಸವು ಪಾತ್ರೆಯಲ್ಲಿ ಬಂದು ನಿಲ್ಲುವುದು. ಕಬ್ಬಿನಿಂದ ಜಜ್ಜಿ ತೆಗೆಯುವ ರಸವನ್ನು ಬಟ್ಟೆಯಿಂದ ಶೋಧಿಸುವಂತೆ ಎಂದು ತಿಳಿಯಬೇಕು

॥ ಸಂಹಿತಾಪಾಠಃ ॥

**ವಾಶ್ರಾ ಅರ್ಷಂತೀಂದವೋಽಭಿ ವತ್ಸಂ ನ ಧೇನವಃ ।**

**ದಧನ್ವಿರೇ ಗಭಸ್ತ್ಯೋಃ ॥ ೭ ॥**

॥ ಪದಪಾಠಃ ॥

ವಾಶ್ರಾಃ । ಅರ್ಷಂತಿ । ಇಂದವಃ । ಅಭಿ । ವತ್ಸಂ । ನ । ಧೇನವಃ ।

ದಧನ್ವಿರೇ । ಗಭಸ್ತ್ಯೋಃ ॥ ೭ ॥

॥ ಸಾಯಣಭಾಷ್ಯಂ ॥

ವಾಶ್ರಾಃ ಶಬ್ದಯಂತ ಇಂದವಃ **ಸೋಮಾ ಅಭ್ಯರ್ಷಂತಿ ಅಭಿಗಚ್ಛಂತಿ ಪಾತ್ರಂ ಪ್ರತಿ ವಾಶ್ರಾಃ ಶಬ್ದಕಾರಿಣ್ಯಃ ಧೇನವೋ ನ । ತಾ ಯಥಾ ಶಬ್ದಯಂತ್ಯೋ ವತ್ಸಂ ಪ್ರತ್ಯಾಗಚ್ಛಂತಿ ತದ್ವತ್ । ತ ಏವ ಗಭಸ್ತ್ಯೋರ್ಬಾಹ್ವೋರ್ದಧನ್ವಿರೇ । ಧ್ರಿಯಂತೇ ಚ** ॥

॥ ಪ್ರತಿಪದಾರ್ಥ ॥

**ಧೇನವಃ**—ಗೋವುಗಳು । **ವತ್ಸಂ ನ**—ತಮ್ಮ ಕರುಗಳ ಬಳಿಗೆ ಕೂಗುತ್ತಾ ಹೋಗುವಂತೆ । **ಇಂದವಃ**—ಲತೆಗಳಿಂದ ಹೊರಸೂಸುವ ಸೋಮರಸಗಳು । **ವಾಶ್ರಾಃ**—ಜಳಜಳನೆ ಶಬ್ದಮಾಡುತ್ತಾ । **ಅಭಿ ಅರ್ಷಂತಿ**—ಸೋಮಾಭಿಷವಣಪಾತ್ರೆಯನ್ನು ಸಮೀಪಿಸುತ್ತವೆ । **(ತೇ—ಆ ಸೋಮರಸಗಳೇ)** । **ಗಭಸ್ತ್ಯೋಃ—(ಋತ್ವಿಗ್ಜನರ)** ಕೈಗಳಲ್ಲಿ । **ದಧನ್ವಿರೇ—**ಧರಿಸಲ್ಪಡುತ್ತವೆ.

॥ ಭಾವಾರ್ಥ ॥

ಗೋವುಗಳು ತಮ್ಮ ಕರುಗಳ ಸಮೀಪಕ್ಕೆ ಹೋಗುವಾಗ ಕೂಗುತ್ತಾ ಹೋಗುವಂತೆ ಲತೆಗಳಿಂದ ಹೊರ ಹೊರಟ ಸೋಮರಸಗಳು ಜಳಜಳನೆ ಶಬ್ದಮಾಡುತ್ತಾ ಸೋಮಾಭಿಷವಣ ಪಾತ್ರೆಯೊಳಕ್ಕೆ ಬೀಳುತ್ತವೆ. ಅನಂತರ ಆ ರಸಗಳನ್ನು ಋತ್ವಿಗಾದಿಗಳು ತಮ್ಮ ಕೈಗಳಿಂದ ಎತ್ತಿ ತೆಗೆದುಕೊಳ್ಳುತ್ತಾರೆ

## English Translation

Making a loud noise, the libations flow (to the vessel) like cows lowing to their calves; they are held in the arms (of the priests).

॥ ಸಂಹಿತಾಪಾಠಃ ॥

ಜುಷ್ಟ ಇಂದ್ರಾಯ ಮತ್ಸರಃ ಪವಮಾನ ಕನಿಕ್ರದತ್ ।
ವಿಶ್ವಾ ಅಪ ದ್ವಿಷೋ ಜಹಿ ॥ ೮ ॥

॥ ಪದಪಾಠಃ ॥

ಜುಷ್ಟಃ । ಇಂದ್ರಾಯ । ಮತ್ಸರಃ । ಪವಮಾನ । ಕನಿಕ್ರದತ್ ।
ವಿಶ್ವಾಃ । ಅಪ । ದ್ವಿಷಃ । ಜಹಿ ॥ ೮ ॥

॥ ಸಾಯಣಭಾಷ್ಯಂ ॥

ಇಂದ್ರಾಯ ಜುಷ್ಟಃ ಪ್ರಿಯಃ ಪರ್ಯಾಪ್ತೋ ಮತ್ಸರ. ಸೋಮೋ ಭವತೀತಿ ಶೇಷಃ । ಮತ್ಸರ. ಸೋಮೋ ಮಂದತೇಸ್ತೃಪ್ತಿಕರ್ಮಣ ಇತಿ ನಿರುಕ್ತಂ । ೨-೫ । ಹೇ ಪವಮಾನ ತ್ವಂ ಕನಿಕ್ರದಚ್ಛಬ್ದಯನ್ ವಿಶ್ವಾ ದ್ವಿಷಃ ಸರ್ವಾನಸ್ಮಾಕಂ ದ್ವೇಷ್ಟ್ರ್ಯನಪ ಜಹಿ ॥

॥ ಪ್ರತಿಪದಾರ್ಥ ॥

(ಆ ಸೋಮವು) **ಇಂದ್ರಾಯ**—ಇಂದ್ರನಿಗೆ । **ಜುಷ್ಟಃ**—ಪ್ರೀತಿಪಾತ್ರವಾದುದೂ । **ಮತ್ಸರಃ**—ಹರ್ಷದಾಯಕವೂ ಆಗಿರುತ್ತದೆ । **ಪವಮಾನ**—ಶುದ್ಧಿಕಾರಕನಾದ ಎಲೈ ಸೋಮದೇವನೇ ನೀನು । **ಕನಿಕ್ರದತ್**—ಶಬ್ಧಮಾಡುತ್ತಾ । **ವಿಶ್ವಾಃ ದ್ವಿಷಃ**—ನಮ್ಮ ಸಮಸ್ತ ಶತ್ರುಗಳನ್ನೂ । **ಅಪ ಜಹಿ**—ಜಯಿಸಿ ನಾಶಮಾಡು.

॥ ಭಾವಾರ್ಥ ॥

ಹಿಂಡಲ್ಪಡುವ ಸೋಮವು ಇಂದ್ರನಿಗೆ ಪ್ರಿಯವೂ ಹರ್ಷದಾಯಕವೂ ಆಗಿರುವುದು. ಎಲೈ ಶುದ್ಧಿಕಾರಕನಾದ ಸೋಮನೇ ನೀನು ಶಬ್ದಮಾಡುತ್ತಾ ನಮ್ಮ ಶತ್ರುಗಳೆಲ್ಲರನ್ನೂ ಜಯಿಸಿ ನಾಶಮಾಡು.

## English Translation

Acceptable and giving delight to Indra, pure (Soma), as you utter a sound, you destroy all our enemies

॥ ಸಂಹಿತಾಪಾಠಃ ॥

ಅಪಘ್ನಂತೋ ಅರಾವ್ಣಃ ಪವಮಾನಾಃ ಸ್ವರ್ದೃಶಃ ।

ಯೋನಾವೃತಸ್ಯ ಸೀದತ ॥ ೯ ॥

॥ ಪದಪಾಠ: ॥

ಅಪಽಘ್ನಂತಃ । ಅರಾವ್ಣಃ । ಪವಮಾನಾಃ । ಸ್ವಃಽದೃಶಃ ।

ಯೋನೌ । ಋತಸ್ಯ । ಸೀದತ ॥ ೯ ॥

॥ ಸಾಯಣಭಾಷ್ಯಂ ॥

**ಹೇ ಪವಮಾನಾಃ ಅರಾವ್ಣೋಽದಾನಾನಯಜಮಾನಾನಪಘ್ನಂತೋ ಹಿಂಸಂತಃ ಸ್ವರ್ದೃಶಃ ಸರ್ವತ್ರ ದ್ರಷ್ಟಾರಶ್ಚ ಯೂಯಮೃತಸ್ಯ ಯೋನೌ ಯಜ್ಞಸ್ಯ ಸ್ಥಾನೇ ಸೀದತ । ಅಥವಾ । ಸೋಮಪಾನಾರ್ಥಮುಕ್ತಲಕ್ಷಣಾ ದೇವಾಃ ಋತಸ್ಯ ಯೋನೌ ಸೀದತೇತಿ ಯೋಜ್ಯಂ ॥**

॥ ಪ್ರತಿಪದಾರ್ಥ ॥

**ಪವಮಾನಾಃ**—ಎಲೈ ಶುದ್ಧಿಕಾರಕವಾದ ಸೋಮರಸಗಳೇ । **ಅರಾವ್ಣಃ**—ದೇವತೆಗಳಿಗೆ ಹವಿಸ್ಸನ್ನರ್ಪಿಸದಿರುವ ಯಜಮಾನರನ್ನು (ಜನರನ್ನು) । **ಅಪಘ್ನಂತಃ**—ಹಿಂಸಿಸುತ್ತಾ । **ಸ್ವರ್ದೃಶಃ**—ಸರ್ವವನ್ನೂ ವೀಕ್ಷಿಸುವ ನೀವು । **ಋತಸ್ಯ**—ಯಜ್ಞದ । **ಯೋನೌ**—ವೇದಿಸ್ಥಾನದಲ್ಲಿ । **ಸೀದತ**—ಕುಳಿತುಕೊಳ್ಳಿರಿ । (**ಅಥವಾ ಪವಮಾನಾಃ**—ಶುದ್ಧಿಕಾರಕರಾದ ಎಲೈ ದೇವತೆಗಳೇ । **ಅರಾವ್ಣಃ**—ಹವಿಸ್ಸನ್ನರ್ಪಿಸದಿರುವ ಜನರನ್ನು । **ಅಪಘ್ನಂತಃ**—ಹಿಂಸಿಸುತ್ತಾ । **ಸ್ವರ್ದೃಶಃ**—ಸಮಸ್ತವನ್ನೂ ನೋಡುವ ನೀವು । **ಋತಸ್ಯ ಯೋನೌ**—ಯಜ್ಞವೇದಿಯಲ್ಲಿ । **ಸೀದತ**—ಸೋಮಪಾನಾರ್ಥವಾಗಿ ಬಂದು ಕುಳಿತುಕೊಳ್ಳಿ).

॥ ಭಾವಾರ್ಥ ॥

ಶುದ್ಧಿಕಾರಕವಾದ ಎಲೈ ಸೋಮರಸಗಳೇ, ದೇವತೆಗಳಿಗೆ ಹವಿಸ್ಸನ್ನು ಅರ್ಪಿಸದಿರುವ ಅದಾನಿಗಳಾದ ಜನರನ್ನು ಹಿಂಸಿಸುತ್ತಾ ಸಮಸ್ತವನ್ನೂ ನೋಡಿ ತಿಳಿಯಬಲ್ಲ ನೀವು ಯಜ್ಞವೇದಿಯಲ್ಲಿ ಕುಳಿತುಕೊಳ್ಳಿ ಎಂದರೆ ಸ್ಥಾಪಿತರಾಗಿ. ಅಥವಾ ಎಲೈ ದೇವತೆಗಳೇ ಪೂರ್ವೋಕ್ತಗುಣವಿಶಿಷ್ಟರಾದ ನೀವು ಸೋಮಪಾನಾರ್ಥವಾಗಿ ಯಜ್ಞವೇದಿಯಲ್ಲಿ ಬಂದು ಕುಳಿತುಕೊಳ್ಳಿ.

## English Translation

Pure (libations) beholding all things and destroying those who worship not, sit down in the place of sacrifice.

## ಹದಿನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪರಿ ಪ್ರೇತ್ಯಷ್ಟರ್ಚಂ ಚತುರ್ದಶಂ ಸೂಕ್ತಂ। ಋಷ್ಯಾದಿ ಪೂರ್ವವತ್ । ಪರಿ ಪ್ರಾಸಿಷ್ಯದಿತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—**ಪರಿ ಪ್ರ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ—**ಪರಿ ಪ್ರಾಸಿಷ್ಯ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೧೪

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೧೪ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೩, ೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪರಿ ಪ್ರಾಸಿಷ್ಯದತ್ಕವಿಃ ಸಿಂಧೋರೂರ್ಮಾವಧಿ ಶ್ರಿತಃ ।
ಕಾರಂ ಬಿಭ್ರತ್ಪುರುಸ್ಪೃಹಂ ॥ ೧ ॥

॥ ಪದಪಾಠಃ ॥

**ಪರಿ । ಪ್ರ । ಅಸಿಸ್ಯದತ್ । ಕವಿಃ । ಸಿಂಧೋಃ । ಊರ್ಮೌ । ಅಧಿ । ಶ್ರಿತಃ ।**
**ಕಾರಂ । ಬಿಭ್ರತ್ । ಪುರುಸ್ಪೃಹಂ ॥ ೧ ॥**

॥ ಸಾಯಣಭಾಷ್ಯಂ ॥

**ಪರಿ ಪ್ರಾಸಿಷ್ಯದತ್ ಪರಿಪ್ರಸ್ಯಂದತೇ ಕವಿರ್ಮೇಧಾವೀ । ಸೋಮಃ ಸಿಂಧೋರೂರ್ಮೌ ತರಂಗೇ ವಸತೀವರ್ಯುದಕರಸೇಽಧಿ ಶ್ರಿತ ಆಶ್ರಿತಃ । ಪುರುಸ್ಪೃಹಂ ಬಹುಭಿಃ ಸ್ಪೃಹಣೀಯಂ ಕಾರಂ ಶಬ್ದಂ ಬಿಭ್ರದ್ಧಾರಯನ್ ಪರಿಸ್ಯಂದತ ಇತಿ ಸಂಬಂಧಃ ॥**

॥ ಪ್ರತಿಪದಾರ್ಥ ॥

**ಕವಿಃ**—ಮೇಧಾವಿಯಾದ ಎಂದರೆ ಮೇಧಾವಿ ಋತ್ವಿಗ್ಜನರಿಂದ ಹಿಂಡಲ್ಪಟ್ಟ ಸೋಮರಸವು । **ಸಿಂಧೋಃ ಊರ್ಮೌ**—ನದಿಯ ಅಲೆಗಳಂತೆ ಅಥವಾ ವಸತೀವರ್ಯುದಕದಲ್ಲಿ । **ಅಧಿ ಶ್ರಿತಃ**—ಮಿಶ್ರಿತವಾಗಿ । **ಪುರುಸ್ಪೃಹಂ**—ಅನೇಕರಿಂದ ಅಪೇಕ್ಷಿಸಲ್ಪಡುವ । **ಕಾರಂ**—ಶಬ್ದವನ್ನು । **ಬಿಭ್ರತ್**—ಮಾಡುತ್ತಾ । **ಪರಿ ಪ್ರಾಸಿಷ್ಯದತ್**—ಸುತ್ತಲೂ ಹರಿದುಬರುತ್ತದೆ

॥ ಭಾವಾರ್ಥ ॥

ಮೇಧಾವಿಗಳಾದ ಋತ್ವಿಗ್ಜನರಿಂದ ಹಿಂಡಲ್ಪಟ್ಟ ಸೋಮರಸವು ವಸತೀವರ್ಯುದಕದಲ್ಲಿ ಮಿಶ್ರಿತವಾಗಿ ನದಿಯ ಅಲೆಗಳಂತೆ ಅನೇಕರಿಗೆ ಹಿತಕರವಾದ ಜಳಜಳವೆಂಬ ಶಬ್ದವನ್ನುಂಟುಮಾಡುತ್ತಾ ಪ್ರವಹಿಸುತ್ತದೆ.

English Translation

The wise (Soma) flows widely round, betaking itself to the waves of the river, and uttering a sound desired by many.

॥ ವಿಶೇಷವಿಷಯಗಳು ॥

**ಸಿಂಧೋಃ ಊರ್ಮೌ**—ನದಿಯ ಅಲೆಗಳಂತೆ ಹಿತಕರವಾದ ಶಬ್ದವನ್ನುಂಟುಮಾಡುತ್ತಾ ಅಥವಾ ವಸತೀವರೀ ಎಂಬ ಪಾತ್ರೆಯಲ್ಲಿರುವ ಉದಕದಿಂದ ಮಿಶ್ರಿತವಾದ.

**ಪುರುಸ್ಪೃಹಂ**—ಅನೇಕರಿಂದ ಅಪೇಕ್ಷಿಸಲ್ಪಡುವ ; ಸೋಮಪಾನಾಸಕ್ತರಾದ ಜನರು ಸೋಮರಸವು ಜಳಜಳನೆ ಶಬ್ದಮಾಡುತ್ತಾ ಹರಿಯುವುದನ್ನು ಕುತೂಹಲದಿಂದಲೂ ಆಸಕ್ತಿಯಿಂದಲೂ ನೋಡುತ್ತಾರೆ. ಆದ್ದರಿಂದ ಈ ಹಿತಕರವಾದ ಶಬ್ದವು ಸೋಮಪಾನಮಾಡುವವರಿಗೆ ಹರ್ಷದಾಯಕವಾಗಿರುತ್ತದೆ.

॥ ಸಂಹಿತಾಪಾಠಃ ॥

ಗಿರಾ ಯದೀ ಸಬಂಧವಃ ಪಂಚ ವ್ರಾತಾ ಅಪಸ್ಯವಃ ।
ಪರಿಷ್ಕೃಣ್ವಂತಿ ಧರ್ಣಸಿಂ ॥ ೨ ॥

॥ ಪದಪಾಠಃ ॥

ಗಿರಾ । ಯದಿ । ಸಽಬಂಧವಃ । ಪಂಚ । ವ್ರಾತಾಃ । ಅಪಸ್ಯವಃ ।
ಪರಿಽಕೃಣ್ವಂತಿ । ಧರ್ಣಸಿಂ ॥ ೨ ॥

॥ ಸಾಯಣಭಾಷ್ಯಂ ॥

**ಸಬಂಧವಃ ಸಮಾನಬಂಧನಾಃ ಪಂಚ ವ್ರಾತಾಃ ಪಂಚ ಜನಾಃ ಮನುಷ್ಯಾ ಯಜಮಾನಾ ಅಪಸ್ಯವಃ ಕರ್ಮೇಚ್ಛವೋ ಯದ್ಯದೇನಂ ಧರ್ಣಸಿಂ ಧಾರಕಂ ಸೋಮಂ ಗಿರಾ ಸ್ತುತ್ಯಾ ಪರಿಷ್ಕೃಣ್ವಂತಿ ಅಲಂಕುರ್ವಂತಿ । ಅಸ್ಯೋತ್ತರತ್ರಾನ್ವಯಃ ॥**

॥ ಪ್ರತಿಪದಾರ್ಥ ॥

**ಸಬಂಧವಃ**—ಸಮಾನಬಂಧನಗಳುಳ್ಳ ಎಂದರೆ ಸಮಾನಕಾರ್ಯ ವ್ಯವಹಾರಗಳಲ್ಲಿ ಆಸಕ್ತರಾದ । **ಪಂಚ ವ್ರಾತಾಃ**—ಬ್ರಾಹ್ಮಣಾದಿ ಚತುರ್ವರ್ಣವುಳ್ಳವರೂ ಮತ್ತು ನಿಷಾದರೂ ಆದ ಪಂಚಜನರು ಅಥವಾ ಅವರಲ್ಲಿ ಯಜಮಾನರು । **ಅಪಸ್ಯವಃ**—ಯಜ್ಞಾದಿಕರ್ಮಗಳನ್ನು ಮಾಡಬೇಕೆಂದು ಅಪೇಕ್ಷೆಯುಳ್ಳವರಾಗಿ । **ಧರ್ಣಸಿಂ**—ಧಾರಕವಾದ ಎಂದರೆ ಆಧಾರಭೂತವಾದ ಈ ಸೋಮನನ್ನು । **ಗಿರಾ**—ಸ್ತುತಿವಾಕ್ಯದಿಂದ । **ಪರಿಷ್ಕೃಣ್ವಂತಿ**—ಅಲಂಕರಿಸುತ್ತಾರೆ ಎಂದರೆ ಚೆನ್ನಾಗಿ ಸ್ತುತಿಸುತ್ತಾರೆ.

॥ ಭಾವಾರ್ಥ ॥

ಪರಸ್ಪರಸಂಬಂಧ ಕಾರ್ಯಗಳಲ್ಲಿ ಪ್ರವೃತ್ತರಾದವರೂ ಪಂಚಜನರೆಂದು ಪ್ರಸಿದ್ಧರಾದವರೂ ಆದ ಬ್ರಾಹ್ಮಣಾದಿ ವರ್ಣಗಳ ಯಜಮಾನರು ಯಜ್ಞಾದಿ ಕರ್ಮಾಪೇಕ್ಷಿಗಳಾದ ಸರ್ವರಿಗೂ ಧಾರಕವಾದ ಈ ಸೋಮನನ್ನು ಸ್ತುತಿ ವಾಕ್ಯದಿಂದ ಅಲಂಕರಿಸುತ್ತಾರೆ.

English Translation

When the five kindred sacrificing races, desirous of accomplishing rites, honour the sustaining (Soma) with their praise,—

॥ ವಿಶೇಷವಿಷಯಗಳು ॥

**ಪಂಚ ವ್ರಾತಾಃ**—ಪಂಚಜನರು ಬ್ರಾಹ್ಮಣಾದಿ ಚತುರ್ವರ್ಣದವರೂ ನಿಷಾದರೂ ಸೇರಿ ಆಗುವ ಐದುವಿಧ ಜನರು. ಈ ಪಂಚಜನರ ವಿಷಯದಲ್ಲಿ ವಿಸ್ತಾರವಾದ ವಿವರಣೆಯನ್ನೂ ಯಾಸ್ಕರ ನಿರ್ವಚನವನ್ನೂ ನಾವು ಹಿಂದ ಅನೇಕಸಂದರ್ಭಗಳಲ್ಲಿ ವಿವರಿಸಿದೇವೆ.

॥ ಸಂಹಿತಾಪಾಠಃ ॥

**ಆದಸ್ಯ ಶುಷ್ಮಿಣೋ ರಸೇ ವಿಶ್ವೇ ದೇವಾ ಅಮತ್ಸತ ।**
**ಯದೀ ಗೋಭಿರ್ವಸಾಯತೇ ॥ ೩ ॥**

॥ ಪದಪಾಠಃ ॥

**ಆತ್ । ಅಸ್ಯ । ಶುಷ್ಮಿಣಃ । ರಸೇ । ವಿಶ್ವೇ । ದೇವಾಃ । ಅಮತ್ಸತ ।**
**ಯದಿ । ಗೋಭಿಃ । ವಸಾಯತೇ ॥ ೩ ॥**

॥ ಸಾಯಣಭಾಷ್ಯಂ ॥

ಆತ್ಪರಿಷ್ಕರಣಾನಂತರಮೇವ ಶುಷ್ಮಿಣೋ ಬಲವತೋಽಸ್ಯ ಸೋಮಸ್ಯ ರಸೇ ವಿಶ್ವೇ ದೇವಾ ಅಮತ್ಸತ । ಅಮಾದ್ಯಂತ । ಯದಿ ಯದಾ ಗೋಭಿರ್ಗೋರ್ವಿಕಾರೈಃ । ವಿಕಾರೇ ಪ್ರಕೃತಿಶಬ್ದಃ । ಕ್ಷೀರಾದಿಭಿರ್ವಸಾಯತೇ ಆಚ್ಛಾದ್ಯತೇ ॥

॥ ಪ್ರತಿಪದಾರ್ಥ ॥

**ಆತ್**—ಸೋಮಪರಿಷ್ಕರಣಾನಂತರ ಈ ಸೋಮವು । **ಯದಿ**-ಯಾವಾಗ । **ಗೋಭಿಃ**—ಗೋವಿಕಾಗಳಾದ ಹಾಲು ಅಥವಾ ಮೊಸರಿನಿಂದ । **ವಸಾಯತೇ**—ಆಚ್ಛಾದಿತವಾಗುವುದೋ ಎಂದರೆ ಮಿಶ್ರಿತವಾಗಿ ಪಾನಕ್ಕೆ ಸಿದ್ಧವಾಗುವುದೋ ಆಗ । **ಶುಷ್ಮಿಣಃ**—ಶಕ್ತಿದಾಯಕವಾದ । **ಅಸ್ಯ ರಸೇ**—ಈ ಸೋಮರಸದ ಪಾನದಲ್ಲಿ । **ವಿಶ್ವೇ ದೇವಾಃ**—ಸಮಸ್ತದೇವತೆಗಳೂ । **ಅಮತ್ಸತ**—ಹರ್ಷವನ್ನು ಹೊಂದುತ್ತಾರೆ.

॥ ಭಾವಾರ್ಥ ॥

ಸೋಮಪರಿಷ್ಕರಣಾನಂತರ ಆ ಸೋಮರಸಕ್ಕೆ ಹಾಲು ಅಥವಾ ಮೊಸರನ್ನು ಮಿಶ್ರಮಾಡಿ ಪಾನಯೋಗ್ಯವಾಗುವಂತೆ ಮಾಡಿದಾಗ ಶಕ್ತಿಯುತವಾದ ಆ ಸೋಮರಸಪಾನದಲ್ಲಿ ಸಮಸ್ತದೇವತೆಗಳೂ ಹರ್ಷವನ್ನು ಪಡೆಯುತ್ತಾರೆ.

## English Translation

Then all the gods rejoice in the juice of this powerful ( libation ), when it is enveloped with milk and curds.

॥ ಸಂಹಿತಾಪಾಠಃ ॥

ನಿರಿಣಾನೋ ವಿ ಧಾವತಿ ಜಹಚ್ಛರ್ಯಾಣಿ ತಾನ್ವಾ ।
ಅತ್ರಾ ಸಂ ಜಿಘ್ನತೇ ಯುಜಾ ॥ ೪ ॥

॥ ಪದಪಾಠಃ ॥

ನಿಽರಿಣಾನಃ । ವಿ । ಧಾವತಿ । ಜಹತ್ । ಶರ್ಯಾಣಿ । ತಾನ್ವಾ ।
ಅತ್ರ । ಸಂ । ಜಿಘ್ನತೇ । ಯುಜಾ ॥ ೪ ॥

॥ ಸಾಯಣಭಾಷ್ಯಂ ॥

ಅಯಂ ಸೋಮೋ ನಿರಿಣಾನೋ ದಶಾಪವಿತ್ರಾದಧೋ ಗಚ್ಛನ್ವಿ ಧಾವತಿ । ವಿವಿಧಂ ಧಾವತಿ । .... .... .... . ಯದಾ ತಾನ್ವಾ । ತನು ದಶಾಪವಿತ್ರವಸ್ತ್ರಂ । ತತ್ಸಂಬಂಧೀನಿ ಶರ್ಯಾಣಿ . ದ್ವಾರಾಣಿ ಜಹತ್ ಅಧಃ ಸರತಿ । ಅತ್ರಾಸ್ಮಿನ್ಯಜ್ಞೇ ಯುಜಾ ಸಖಿಭೂತೇನೇಂದ್ರೇಣ ಸಹ ಸಂಜಿಘ್ನತೇ । ಸಂಗತೋ

ಭವತಿ । ವಸ್ತ್ರಸುಷಿರಾದ್ವಿನಿರ್ಗತ್ಯ ದಶಾಪವಿತ್ರಾದಧಃ ಸತ್ಪಾತ್ರಂ ವಿವಿಧಂ ಗಚ್ಛನ್ ಹೋಮದ್ವಾರೇಣೇಂದ್ರೇಣ ಸಂಗತೋ ಭವತೀತ್ಯರ್ಥಃ ॥

॥ ಪ್ರತಿಪದಾರ್ಥ ॥

(ಈ ಸೋಮವು) **ನಿರಿಣಾನಃ**—ದಶಾಪವಿತ್ರದಿಂದ ಶೋಧಿತವಾಗಿ ಕೆಳಮುಖವಾಗಿ ಪ್ರವಿಸುತ್ತಾ । **ವಿ ಧಾವತಿ**—ಹರಿದು ಬರುತ್ತದೆ । **ಶಾನ್ವಾ**—ದಶಾಪವಿತ್ರ ವಸ್ತ್ರಸಂಬಂಧವಾದ । **ಶರ್ಯಾಣಿ**—ದ್ವಾರಗಳನ್ನು (ಕಂಡಿಗಳನ್ನು) । **ಜಹತ್**—ನುಗ್ಗಿಬರುತ್ತಾ । **ಅತ್ರ**—ಈ ಯಜ್ಞದಲ್ಲಿ । **ಯುಜಾ**—ಮಿತ್ರನಾದ ಇಂದ್ರನೊಡನೆ। **ಸಂ ಜಿಘ್ನತೇ**—ಸೇರಿಕೊಳ್ಳುತ್ತದೆ

। ಭಾವಾರ್ಥ ।

ಈ ಸೋಮವು ದಶಾಪವಿತ್ರವಸ್ತ್ರದಿಂದ ಶೋಧಿತವಾಗಿ ಕೆಳಮುಖವಾಗಿ ಜಿನುಗುತ್ತಾ ದಶಾಪವಿತ್ರ ವಸ್ತ್ರದ ಕಂಡಿಗಳನ್ನು ಸೂಸಿ ನುಗ್ಗಿಬರುತ್ತಾ ವೇಗವಾಗಿ ಹರಿದುಬರುತ್ತದೆ. ಮತ್ತು ಈ ಯಜ್ಞದಲ್ಲಿ ಮಿತ್ರಭೂತನಾದ ಇಂದ್ರನೊಡನೆ ಸಂಗತವಾಗುತ್ತದೆ. ಎಂದರೆ ದಶಾಪವಿತ್ರದಿಂದ ಶೋಧಿತವಾದ ಸೋಮರಸವು ಸೋಮಪಾತ್ರೆಗಳಲ್ಲಿ ಶೇಖರಿತವಾಗಿ ಋತ್ವಿಗ್ಜನರಿಂದ ಹೋಮಮೂಲಕವಾಗಿ ಇಂದ್ರನಿಗೆ ಅರ್ಪಿತವಾಗುವುದು ಎಂದಭಿಪ್ರಾಯವು.

English Translation

Descending from filters it hastens (into the vessel), and passing through the cloth's interstices, it becomes united in this (sacrifice) with its friend (Indra)

॥ ಸಂಹಿತಾಪಾಠಃ ॥

ನಪ್ತೀಭಿರ್ಯೋ ವಿವಸ್ವತಃ ಶುಭ್ರೋ ನ ಮಾಮೃಜೇ ಯುವಾ ।
ಗಾಃ ಕೃಣ್ವಾನೋ ನ ನಿರ್ಣಿಜಂ ॥ ೫ ॥

॥ ಪದಪಾಠಃ ॥

ನಪ್ತೀಭಿಃ । ಯಃ । ವಿವಸ್ವತಃ । ಶುಭ್ರಃ । ನ । ಮಮೃಜೇ । ಯುವಾ ।
ಗಾಃ । ಕೃಣ್ವಾನಃ । ನ । ನಿಃऽನಿಜಂ ॥ ೫ ॥

॥ ಸಾಯಣಭಾಷ್ಯಂ ॥

ಯಃ ಸೋಮೋ ವಿವಸ್ವತಃ ಪರಿಚರಣವತೋ ಯಜಮಾನಸ್ಯ ನಪ್ತೀಭಿಃ ಪೌತ್ರಸ್ಥಾನೀಯಾಭಿಃ। ತಸ್ಯ ಹಸ್ತಃ ಪುತ್ರೋऽಂಗುಲಯಃ ಪೌತ್ರಸ್ಥಾನೀಯಾ ಇತ್ಯಭಿಪ್ರಾಯಃ । ಮಾಮೃಜೇ ಮೃಜ್ಯತೇ ಶುಭ್ರೋ ನ ದೀಪ್ತೋऽಶ್ವೋ ಯುವೇವ । ಯಥಾ ಪ್ರವೃದ್ಧೋऽಶ್ವೋ ಮೃಜ್ಯತೇ ಸ್ವಪರಿಚಾರಕೈ-

**ಸ್ತದ್ವತ್ಸ ಏವ ಯುವಾ ಮಿಶ್ರಣಶೀಲಃ ಸೋಮೋ ನಿರ್ಣಿಜಂ । ನಿರ್ಣಿಗಿತಿ ರೂಪನಾಮ । ಸ್ವಕೀಯಂ ರೂಪಂ ಗಾ ನ ಕೃಣ್ವಾನೋ ಗೋವಿಕಾರಾಂಶ್ಚ ಕುರ್ವಾಣೋ ಭವತೀತಿ ಶೇಷಃ ॥**

॥ ಪ್ರತಿಪದಾರ್ಥ ॥

**ಯಃ**—ಯಾವ ಸೋಮವು । **ವಿವಸ್ವತಃ**—ಶುಶ್ರೂಷೆಮಾಡುವ ಯಜಮಾನನ । **ನಪ್ತೀಭಿಃ**—ಪೌತ್ರರಂತಿರುವ ಬೆರಳುಗಳಿಂದ । **ಯುವಾ**—ಚೆನ್ನಾಗಿ ಬೆಳೆದು ಪ್ರವೃದ್ಧವಾಗಿರುವ । **ಶುಭ್ರೋ ನ**—ಉತ್ತಮವಾದ ಅಶ್ವವು ಉಪಚರಿಸಲ್ಪಡುವಂತೆ । **ಮಮೃಜೇ**—ಉಪಚರಿಸಲ್ಪಡುವುದೋ ಎಂದರೆ । **ನಿರ್ಣಿಜಂ**—ತನ್ನ ಸ್ವಕೀಯ ರೂಪವನ್ನು । **ಗಾಃ**—ಗೋವಿಕಾರಗಳಾದ ಹಾಲಿನೊಂದಿಗೆ । **ಕೃಣ್ವಾನಃ ನ**—ಮಿಶ್ರಮಾಡಲ್ಪಡುವುದೋ ಅಂತಹ ಸೋಮವು ಇಂದ್ರನೊಡನೆ ಸಂಗತವಾಗುವುದು.

॥ ಭಾವಾರ್ಥ ॥

ಚೆನ್ನಾಗಿ ಬೆಳೆದು ಪ್ರವೃದ್ಧವಾಗಿರುವ ಅಶ್ವವನ್ನು ಪರಿಚಾರಕರು ಮಾಲೀಸು ಮೊದಲಾದ ಕಾರ್ಯಗಳಿಂದ ಉಪಚರಿಸುವಂತೆ ಯಜ್ಞಮಾಡುವ ಯಜಮಾನರು ತಮ್ಮ ಪೌತ್ರರಂತಿರುವ ಹತ್ತು ಬೆರಳುಗಳಿಂದ ಶುದ್ಧವಾದ ಸೋಮರಸಕ್ಕೆ ಗೋವಿಕಾರವಾದ ಹಾಲನ್ನು ಅಥವಾ ಮೊಸರನ್ನು ಮಿಶ್ರಮಾಡುತ್ತಾರೆ. ಇಂತಹ ಸೋಮರಸವು ಇಂದ್ರನ ಪಾನಕ್ಕೆ ಯೋಗ್ಯವಾಗುತ್ತದೆ.

## English Translation

He who is rubbed down by the grandchildren of the sacrificer like a handsome young (horse), and renders his form like the produce of the cows,—

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಸೋಮರಸಕ್ಕೆ ಹಾಲು ಅಥವಾ ಮೊಸರನ್ನು ಮಿಶ್ರಮಾಡುವ ಕಾರ್ಯವನ್ನು ಕುದುರೆಯನ್ನು ಕೈಬೆರಳುಗಳಿಂದ ಮಾಲೀಸುಮಾಡುವ ಕೆಲಸಕ್ಕೆ ಹೋಲಿಸಿದೆ ಕುದುರೆಯನ್ನು ಪ್ರೀತಿಯಿಂದ ಮಾಲೀಸುಮಾಡುವಂತೆ ಸೋಮರಸಕ್ಕೆ ಹಾಲು ಮೊಸರನ್ನು ಸೇರಿಸಿ ರುಚಿಕರವಾಗುವಂತೆ ಮಾಡುವರು ಮತ್ತು ಬೆರಳುಗಳನ್ನು ಯಜಮಾನರ ಮೊಮ್ಮಕ್ಕಳೆಂದು ಇಲ್ಲಿ ವರ್ಣಿಸಿದೆ. ಹೇಗೆಂದರೆ ಯಜಮಾನರ ಹಸ್ತಗಳು ಶರೀರದ ಒಂದು ಭಾಗವಾದ್ದರಿಂದ ಅವುಗಳು ಯಜಮಾನರ ಪುತ್ರರೆಂದೂ, ಬೆರಳುಗಳು ಹಸ್ತಗಳ ಭಾಗವಾದುದರಿಂದ ಬೆರಳುಗಳು ಹಸ್ತಗಳ ಪುತ್ರರೆಂದೂ ಅಥವಾ ಯಜಮಾನರ ಮೊಮ್ಮಕ್ಕಳೆಂದೂ ಋಷಿಯು ಪ್ರಕಾರಾಂತರವಾಗಿ ಇಲ್ಲಿ ವರ್ಣಿಸಿರುವನು.

॥ ಸಂಹಿತಾಪಾಠಃ ॥

ಅತಿ ಶ್ರಿತೀ ತಿರಶ್ಚತಾ ಗವ್ಯಾ ಜಿಗಾತ್ಯಣ್ವ್ಯಾ ।

ವಗ್ನುಮಿಯರ್ತಿ ಯಂ ವಿದೇ ॥ ೬ ॥

॥ ಪದಪಾಠಃ ॥

ಅತಿ । ಶ್ರಿತೀ । ತಿರಶ್ಚತಾ । ಗವ್ಯಾ । ಜಿಗಾತಿ । ಅಣ್ವ್ಯಾ ।

ವಗ್ನುಂ । ಇಯರ್ತಿ । ಯಂ । ವಿದೇ ॥ ೬ ॥

॥ ಸಾಯಣಭಾಷ್ಯಂ ॥

ಅಣ್ವ್ಯಾಂಗುಲ್ಯಾಭಿಷೂಯಮಾಣಃ ಸೋಮೋ ಗವ್ಯಾ ಗವ್ಯಾನಿ ಶ್ರಿತೀ ಶ್ರಿತ್ಯೈ ಶ್ರಯಣಾರ್ಥಂ ತಿರಶ್ಚತಾ ತಿರಶ್ಚೀನಮತಿ ಜಿಗಾತಿ । ಅಂಶುಮತಿಕ್ರಮ್ಯ ಗಚ್ಛತಿ । ತಥಾಂಗುಲ್ಯಾಭಿಷೂಯಮಾಣೋ ವಗ್ನುಂ ಶಬ್ದಮಿಯರ್ತಿ । ಪ್ರೇರಯತಿ ॥

॥ ಪ್ರತಿಪದಾರ್ಥ ॥

**ಅಣ್ವ್ಯಾ**—ಅಂಗುಲಿಗಳಿಂದ ಶೋಧಿತವಾದ ಸೋಮರಸವು । **ಗವ್ಯಾ**—ಗೋವಿಕಾರಗಳಾದ ಹಾಲು ಮತ್ತು ಮೊಸರಿನೊಂದಿಗೆ । **ಶ್ರಿತೀ**—ಮಿಶ್ರಣಾರ್ಥವಾಗಿ (ಸೇರಿಕೊಳ್ಳುವುದಕ್ಕಾಗಿ) । **ತಿರಶ್ಚತಾ**—ಬೇರೆಬೇರೆ ಹರಿಯುತ್ತಾ । **ಅತಿ ಜಿಗಾತಿ**—ಒಟ್ಟಿಗೆ ಒಂದಾಗಿ ಸೇರಿ ಪ್ರವಹಿಸುತ್ತದೆ (ಆ ರೀತಿ ಹರಿಯುವಾಗ) । **ವಗ್ನುಂ**—ಜಳಜಳ ಎಂಬ ಶಬ್ದವನ್ನು । **ಇಯರ್ತಿ**—ಪ್ರೇರಿಸುತ್ತದೆ ಎಂದರೆ ಮಾಡುತ್ತದೆ । **ಯಂ**—ಆ ಶಬ್ದವನ್ನು । **ವಿದೇ**—ನಾನು ತಿಳಿಯುತ್ತೇನೆ ಎಂದರೆ ಕೇಳುತ್ತೇನೆ.

॥ ಭಾವಾರ್ಥ ॥

ಬೆರಳುಗಳಿಂದ ಶೋಧಿತವಾದ ಸೋಮರಸವು ಗೋವಿಕಾರಗಳಾದ ಹಾಲು ಮತ್ತು ಮೊಸರಿನೊಂದಿಗೆ ಸೇರಿಕೊಳ್ಳುವುದಕ್ಕಾಗಿ ಬೆರಳು ಸಂಧಿಗಳಿಂದ ಬೇರೆಬೇರೆಯಾಗಿ ಬೀಳುತ್ತಾ ಕೊನೆಗೆ ಒಟ್ಟಿಗೆ ಒಂದಾಗಿ ಸೇರಿ ಪಾತ್ರೆಯೊಳಕ್ಕೆ ಬೀಳುತ್ತದೆ. ಆರೀತಿ ಬೀಳುವಾಗ ಅದು ಮಾಡುವ ಜಳಜಳ ಎಂಬ ಶಬ್ದವನ್ನು ನಾನು ಕೇಳುತ್ತೇನೆ

English Translation

Expressed by the fingers, he proceeds obliquely to the produce of the cow to mix with it; it utters a sound which (the worshipper) recognizes.

॥ ಸಂಹಿತಾಪಾಠಃ ॥

ಅಭಿ ಕ್ಷಿಪಃ ಸಮಗ್ಮತ ಮರ್ಜಯಂತೀರಿಷಸ್ಪತಿಂ ।

ಪೃಷ್ಠಾ ಗೃಭ್ಣತ ವಾಜಿನಃ ॥ ೭ ॥

॥ ಪದಪಾಠಃ ॥

ಅಭಿ । ಕ್ಷಿಪಃ । ಸಂ । ಅಗ್ಮತ । ಮರ್ಜಯಂತೀಃ । ಇಷಃ । ಪತಿಂ ।

ಪೃಷ್ಠಾ । ಗೃಭ್ಣತ । ವಾಜಿನಃ ॥ ೭ ॥

। ಸಾಯಣಭಾಷ್ಯಂ ।

ಕ್ಷಿಪೋಽಂಗುಲಯೋ ಮರ್ಜಯಂತೀರಭಿಮೃಶಂತ್ಯ ಇಷಸ್ಪತಿಮನ್ನಾನಾಂ ಸ್ವಾಮಿನಂ ಸೋಮಮಭಿ ಸಮಗ್ಮತ । ಅಭಿಸಂಗಚ್ಛಂತೇ । ಸಂಗತ್ಯ ಚ ವಾಜಿನೋ ಬಲವತಃ ಸೋಮಸ್ಯ ಪೃಷ್ಠಾ ಪೃಷ್ಠಾನಿ ಗೃಭ್ಣತ । ಗೃಹ್ಣಂತ್ಯಭಿಷವಾಂಗುಲಯಃ ॥

। ಪ್ರತಿಪದಾರ್ಥ ।

ಕ್ಷಿಪಃ—ಕೈಬೆರಳುಗಳು । ಮರ್ಜಯಂತೀ—ಪರಸ್ಪರ ಸ್ಪರ್ಶಮಾಡುತ್ತಾ । ಇಷಸ್ಪತಿಂ—ಅನ್ನಕ್ಕೆ ಪ್ರಭುವಾದ ಸೋಮವನ್ನು । ಅಭಿ ಸಂ ಅಗ್ಮತ—ಸೇರಿಕೊಳ್ಳುತ್ತವೆ । ವಾಜಿನಃ—ಶಕ್ತಿದಾಯಕವಾದ ಸೋಮ ರಸದ । ಪೃಷ್ಠಾನಿ—ಮೇಲುಭಾಗಗಳನ್ನು । ಗೃಭ್ಣತ—ಬೆರಳುಗಳು ಹಿಡಿದುಕೊಳ್ಳುತ್ತವೆ

॥ ಭಾವಾರ್ಥ ॥

ಕೈ ಬೆರಳುಗಳಿಂದ ಸೋಮವನ್ನು ಶೋಧಿಸುವಾಗ ಬೆರಳುಗಳು ಪರಸ್ಪರ ಸೇರಿಕೊಂಡು ತಮ್ಮ ಮಧ್ಯಭಾಗ ದಲ್ಲಿರುವ ಸಣ್ಣ ಕಂಡಿಗಳಿಂದ ಮಾತ್ರ ಸೋಮವು ಶೋಧಿತವಾಗಿ ಈಚೆಗೆ ಬರುವಂತೆ ಎಂದರೆ ಸೋಸುವುದಕ್ಕೆ ಅವಕಾಶ ವುಂಟುಮಾಡುತ್ತವೆ ಶಕ್ತಿದಾಯಕವಾದ ಈ ಸೋಮರಸವನ್ನು ಜಜ್ಜಿದ ಲತೆಗಳಿಂದ ಹಿಂಡುವಾಗ ಕೈಬೆರಳುಗಳು ಜಜ್ಜಿದ ಲತೆಗಳನ್ನು ಹಿಂಡುವುದಕ್ಕಾಗಿ ಹಿಡಿದುಕೊಳ್ಳುತ್ತವೆ.

English Translation

The fingers combine expressing the lord of food, and they grasp the back of the vigorous (Soma).

॥ ವಿಶೇಷವಿಷಯಗಳು ॥

ಕೈಬೆರಳುಗಳನ್ನು ಅಡ್ಡಡ್ಡಲಾಗಿ ಸೇರಿಸಿ ಜಂದರಿಯಂತೆಮಾಡಿ ಅದರಿಂದ ಸೋಮರಸವನ್ನು ಸೋಸುವುದನ್ನೂ ಜಜ್ಜಿದ ಲತೆಗಳನ್ನು ಹಿಂಡಿ ಅದರಲ್ಲಿರುವ ರಸವನ್ನು ತೆಗೆಯುವುದಕ್ಕಾಗಿ ಅವುಗಳನ್ನು ಕೈಯಲ್ಲಿ ಹಿಡಿಯುವುದನ್ನೂ ಇಲ್ಲಿ ವರ್ಣಿಸಲಾಗಿದೆ

। ಸಂಹಿತಾಪಾಠಃ ।

ಪರಿ ದಿವ್ಯಾನಿ ಮರ್ಮೃಶದ್ವಿಶ್ವಾನಿ ಸೋಮ ಪಾರ್ಥಿವಾ ।
ವಸೂನಿ ಯಾಹ್ಯಸ್ಮಯುಃ ॥ ೮ ॥

॥ ಪದಪಾಠಃ ।

ಪರಿ । ದಿವ್ಯಾನಿ । ಮರ್ಮೃಶತ್ । ವಿಶ್ವಾನಿ । ಸೋಮ । ಪಾರ್ಥಿವಾ ।
ವಸೂನಿ । ಯಾಹಿ । ಅಸ್ಮಽಯುಃ ॥ ೮ ॥

॥ ಸಾಯಣಭಾಷ್ಯಂ ॥

**ಹೇ ಸೋಮ ದಿವ್ಯಾನಿ ಪಾರ್ಥಿವಾನಿ ಚ ವಿಶ್ವಾನಿ ಸರ್ವಾಣಿ ವಸೂನಿ ಧನಾನಿ ಪರಿ ಮೃರ್ಶ್ಯತ್ಪರಿಮೃಶನ್ಪರಿಗೃಹ್ಣನ್ನಸ್ಮಯುರಸ್ಮಾನ್ಕಾಮಯಮಾನೋ ಯಾಹಿ । ಆಗಚ್ಛ । ಏನಮಭಿಷುಣ್ವನ್ಪ್ರಸಂ ಸಂಬೋಧ್ಯ ಬ್ರೂತೇ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ಅಸ್ಮಯುಃ**—ನಮ್ಮನ್ನು ಅಪೇಕ್ಷಿಸುವ ನೀನು । **ದಿವ್ಯಾನಿ**—ದೇವಲೋಕದಲ್ಲಿರುವುದೂ । **ಪಾರ್ಥಿವಾ**—ಪೃಥಿವಿಯಲ್ಲಿರುವುದೂ ಆದ । **ವಿಶ್ವಾನಿ**—ಸಮಸ್ತವಾದ । **ವಸೂನಿ**—ಧನಗಳನ್ನು । **ಪರಿ ಮರ್ಮೃಶತ್**—ತೆಗೆದುಕೊಂಡು । **ಯಾಹಿ**—ನಮ್ಮ ಬಳಿಗೆ ಬಾ.

॥ ಭಾವಾರ್ಥ ॥

ಎಲೈ ಸೋಮದೇವನೇ, ನಮ್ಮನ್ನು ಅಪೇಕ್ಷಿಸುವ ಎಂದರೆ ನಮಗೆ ಹಿತವನ್ನು ಬಯಸುವ ನೀನು ದೇವಲೋಕದಲ್ಲಿರುವುದೂ, ಪೃಥಿವಿಯಲ್ಲಿರುವುದೂ ಆದ ಸಮಸ್ತ ಧನಗಳನ್ನು ತೆಗೆದುಕೊಂಡು ನಮ್ಮ ಬಳಿಗೆ ಬಾ.

## English Translation

Soma, you hold all the treasures of heaven and earth ; come favourably disposed to us.

## ಹದಿನೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಏಷ ಧಿಯೇತ್ಯಷ್ಟರ್ಚಂ ಪಂಚದಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಏಷ ಧಿಯೇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—**ಏಷ ಧಿಯಾ** ಎಂಬ ಈ ಸೂಕ್ತವು. ಮೊದಲನೆಯ ಅನುವಾಕದಲ್ಲಿ ಹದಿನೈದನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತದ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ **ಏಷ ಧಿಯಾ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೧೫

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೧೫ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೫ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಏಷ ಧಿಯಾ ಯಾತ್ಯಣ್ವ್ಯಾ ಶೂರೋ ರಥೇಭಿರಾಶುಭಿಃ ।
ಗಚ್ಛನ್ನಿಂದ್ರಸ್ಯ ನಿಷ್ಕೃತಂ ॥ ೧ ॥

॥ ಪದಪಾಠಃ ॥

ಏಷಃ । ಧಿಯಾ । ಯಾತಿ । ಅಣ್ವ್ಯಾ । ಶೂರಃ । ರಥೇಭಿಃ । ಆಶುಽಭಿಃ ।
ಗಚ್ಛನ್ । ಇಂದ್ರಸ್ಯ । ನಿಃಽಕೃತಂ ॥ ೧ ॥

॥ ಸಾಯಣಭಾಷ್ಯಂ ॥

ಏಷ ಸೋಮಃ ಶೂರೋ ವಿಕ್ರಾಂತೋಽಣ್ವ್ಯಾಂಗುಲ್ಯಾಭಿಷುತೋ ಧಿಯಾ ಕರ್ಮಣಾ ಯಾತಿ। ಗಚ್ಛತಿ। ಕಂ ದೇಶಂ ಪ್ರತಿ। ಉಚ್ಯತೇ। ಇಂದ್ರಸ್ಯ ನಿಷ್ಕೃತಂ ಸ್ಥಾನಂ ದಿವಂ ಪ್ರತಿ ರಥೇಭೀ ರಥೈರಾಶುಭಿಃ ಶೀಘ್ರಗಾಮಿಭಿರ್ಗಚ್ಛನ್ನಿಂದ್ರೇಣ ರಥೇಽವಸ್ಥಾಪ್ಯ ಸ್ವಸ್ಥಾನನಯನಾಯ । ಅಂಗುಲ್ಯಾಭಿಷೂಯಮಾಣಃ ಸನ್ ಹೋಮದ್ವಾರಾಗ್ನಿಂ ನಿಷ್ಪೀಡನದ್ವಾರಾ ಪಾತ್ರಂ ವಾ ಗಚ್ಛತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಶೂರಃ**— ವಿಕ್ರಾಂತಿಯುಳ್ಳ । **ಏಷಃ**— ಈ ಸೋಮವು । **ಅಣ್ವ್ಯಾ**—ಬೆರಳುಗಳ ಸಹಾಯದಿಂದ ಹಿಂಡಲ್ಪಟ್ಟು। **ಧಿಯಾ**-ಕರ್ಮದಿಂದ ಕೂಡಿ। **ಇಂದ್ರಸ್ಯ ನಿಷ್ಕೃತಂ**—ಇಂದ್ರನ ಸ್ವಸ್ಥಾನವಾದ ಸ್ವರ್ಗವನ್ನು ಕುರಿತು। **ಆಶುಭಿಃ**—ವೇಗವಾಗಿ ಸಂಚರಿಸುವ । **ರಥೈಃ**—ರಥಗಳಿಂದ । **ಗಚ್ಛನ್**—ಪ್ರಯಾಣಮಾಡುತ್ತಾ । **ಯಾತಿ**— ಹೋಗುತ್ತದೆ.

॥ ಭಾವಾರ್ಥ ॥

ವಿಕ್ರಾಂತಿಯುತವೂ ಬೆರಳುಗಳಿಂದ ಹಿಂಡಲ್ಪಟ್ಟುದೂ ಆದ ಈ ಸೋಮವು ಯಜ್ಞಕರ್ಮದಲ್ಲಿ ಸಂಸ್ಕರಿಸಲ್ಪಟ್ಟು ಅಗ್ನಿಯಲ್ಲಿ ಮಾಡುವ ಹೋಮದ ಮೂಲಕ ವೇಗವಾಗಿ ಸಂಚರಿಸುವ ರಥಗಳಲ್ಲಿ ಇಂದ್ರನ ಸ್ವಸ್ಥಾನವಾದ ಸ್ವರ್ಗಕ್ಕೆ ಇಂದ್ರನ ಪ್ರೀತ್ಯರ್ಥವಾಗಿ ಹೋಗುತ್ತದೆ

## English Translation

This heroic Soma expressed by the fingers proceeds by the sacrifice, hastening with swift chariots to Indra's abode

॥ ಸಂಹಿತಾಪಾಠಃ ॥

ಏಷ ಪುರೂ ಧಿಯಾಯತೇ ಬೃಹತೇ ದೇವತಾತಯೇ ।

ಯತ್ರಾಮೃತಾಸ ಆಸತೇ ॥ ೨ ॥

॥ ಪದಪಾಠಃ ॥

ಏಷಃ । ಪುರು । ಧಿಯಾऽಯತೇ । ಬೃಹತೇ । ದೇವऽತಾತಯೇ ।

ಯತ್ರ । ಅಮೃತಾಸಃ । ಆಸತೇ ॥ ೨ ॥

॥ ಸಾಯಣಭಾಷ್ಯಂ ॥

**ಏಷ ಸೋಮಃ ಪುರು ಬಹುಲಂ ಧಿಯಾಯತೇ । ಧಿಯಂ ಕರ್ಮೇಚ್ಛತಿ ॥ ಧೀಶಬ್ದಾದ್ಯಕಾರೋಪಜನಃ । ಯದ್ವಾ । ದ್ವಿತೀಯಾರ್ಥೇ ತೃತೀಯಾ । ಛಾಂದಸಶ್ಛಾಲುಕ್ ॥ ಕಸ್ಮೈ । ಬೃಹತೇ ಮಹತೇ ದೇವತಾತಯೇ ಯಜ್ಞಾಯ । ಯತ್ರ ಯಸ್ಮಿನ್ಯಜ್ಞೇऽಮೃತಾಸೋऽಮೃತಾ ದೇವಾ ಆಸತೇ ವಸಂತಿ ತದರ್ಥಂ ॥**

॥ ಪ್ರತಿಪದಾರ್ಥ ॥

**ಏಷಃ**—ಈ ಸೋಮವು । **ಯತ್ರ**—ಯಾವ ಯಜ್ಞದಲ್ಲಿ । **ಅಮೃತಾಸಃ**—ಮರಣರಹಿತರಾದ ದೇವತೆಗಳು । **ಆಸತೇ**—ವಾಸಮಾಡುವರೋ ಅಂತಹ । **ಬೃಹತೇ**—ಮಹತ್ತಾದ। **ದೇವತಾತಯೇ**—ಯಜ್ಞಕ್ಕೋಸ್ಕರ । **ಪುರು**—ಬಹಳವಾಗಿ । **ಧಿಯಾಯತೇ**—ಕರ್ಮವನ್ನಪೇಕ್ಷಿಸುತ್ತದೆ.

॥ ಭಾವಾರ್ಥ ॥

ಯಾವ ಯಜ್ಞದಲ್ಲಿ ಮರಣರಹಿತರಾದ ದೇವತೆಗಳು ಬಂದು ಕೂಡುವರೋ ಅಂತಹ ಮಹತ್ತಾದ ಯಜ್ಞಕ್ಕಾಗಿ ಈ ಸೋಮವು ಕರ್ಮವನ್ನು ಬಹಳವಾಗಿ ಅಪೇಕ್ಷಿಸುತ್ತದೆ

English Translation

This Soma engages in many holy rites for the great sacrifice where the immortals sit.

॥ ಸಂಹಿತಾಪಾಠಃ ॥

ಏಷ ಹಿತೋ ವಿ ನೀಯತೇऽಂತಃ ಶುಭ್ರಾವತಾ ಪಥಾ ।

ಯದೀ ತುಂಜಂತಿ ಭೂರ್ಣಯಃ ॥ ೩ ॥

॥ ಪದಪಾಠಃ ॥

ಏಷಃ । ಹಿತಃ । ವಿ । ನೀಯತೇ । ಅಂತರಿತಿ । ಶುಭ್ರಽವತಾ । ಪಥಾ ।

ಯದಿ । ತುಂಜಂತಿ । ಭೂರ್ಣಯಃ ॥ ೩ ॥

॥ ಸಾಯಣಭಾಷ್ಯಂ ॥

ಏಷ ಸೋಮೋ ಹಿತೋ ನಿಹಿತೋ ಹವಿರ್ಧಾನೇ ವಿ ನೀಯತೇ ತಸ್ಮಾತ್ಸ್ಥಾನಾದಾಹವನೀಯಂ ಪ್ರತಿ । ಅಂತಸ್ತಯೋರ್ಮಧ್ಯದೇಶೇ ಶುಭ್ರಾವತಾ ಶೋಭಾವತಾ ಪಥಾ ಮಾರ್ಗೇಣ ಯದಿ ಯದಾ ತುಂಜಂತಿ ಪ್ರಯಚ್ಛಂತಿ ದೇವೇಭ್ಯೋ ಭೂರ್ಣಯೋ ಭರಣಶೀಲಾ ಅಧ್ವರ್ಯ್ವಾದಯಃ । ತದಾ ವಿ ನೀಯತ ಇತಿ ಸಮನ್ವಯಃ ॥

॥ ಪ್ರತಿಪದಾರ್ಥ ॥

ಹಿತಃ—ಹವಿರ್ಧಾನ ಪ್ರದೇಶದಲ್ಲಿ ಇಡಲ್ಪಟ್ಟ । ಏಷಃ—ಈ ಸೋಮವು । ಅಂತಃ—ಹವಿರ್ಧಾನ ಮತ್ತು ಆಹವನೀಯ ಪ್ರದೇಶಗಳ ಮಧ್ಯದಲ್ಲಿ । ಶುಭ್ರಾವತಾ—ಸ್ವಚ್ಛವಾದ । ಪಥಾ—ಮಾರ್ಗದಿಂದ ತರಲ್ಪಟ್ಟು । ಯದಿ—ಯಾವಾಗ । ಭೂರ್ಣಯಃ—ಭರಣಶೀಲವಾದ ಅಧ್ವರ್ಯ್ವಾದಿ ಋತ್ವಿಗ್ಜನರು । ತುಂಜಂತಿ—ದೇವತೆಗಳಿಗೆ ಅರ್ಪಿಸುವರೋ ಆಗ । ವಿ ನೀಯತೇ—ಹವಿರ್ಧಾನ ಪ್ರದೇಶದಿಂದ ಆಹವನೀಯಕ್ಕೆ ತರಲ್ಪಡುತ್ತದೆ

॥ ಭಾವಾರ್ಥ ॥

ಅಧ್ವರ್ಯ್ವಾದಿ ಋತ್ವಿಗ್ಜನರು ದೇವತೆಗಳಿಗೆ ಸೋಮವನ್ನು ಅರ್ಪಿಸಬೇಕಾದಾಗ ಹವಿರ್ಧಾನದಲ್ಲಿ ಇಡಲ್ಪಟ್ಟಿರುವ ಆ ಸೋಮವನ್ನು ಉತ್ತರವೇದಿ ಪ್ರದೇಶಕ್ಕೆ ಉತ್ತಮವಾದ ಮಾರ್ಗದಿಂದ ಒಯ್ಯುತ್ತಾರೆ

English Translation

Placed (in the cart) he is brought by a brilliant path, when the offerers of the libation present him.

॥ ವಿಶೇಷವಿಷಯಗಳು ॥

ಇಲ್ಲಿ ಸೋಮಪ್ರಣಯನವೆಂಬ ಯಜ್ಞಾಂಗಕರ್ಮದ ವಿವರಣೆಯು ಸೂಚಿತವಾಗಿದೆ. ಹವಿರ್ಧಾನಪ್ರದೇಶದಲ್ಲಿ (ಅಥವಾ ಸೋಮಲತೆಗಳನ್ನು ತರುವ ಗಾಡಿಯಲ್ಲಿ) ಇದ್ದ ಸೋಮಲತೆಗಳನ್ನು ಆಹವನೀಯಾಗ್ನಿ ಇರುವ ಉತ್ತರ ವೇದಿಯ ಬಳಿಗೆ ಮಂತ್ರಪೂರ್ವಕವಾಗಿಯೂ ವಿಧಿವತ್ತಾಗಿಯೂ ತರುವ ಕರ್ಮಕ್ಕೆ ಸೋಮಪ್ರಣಯನವೆಂದು ಹೆಸರು ಐತರೇಯ ಬ್ರಾಹ್ಮಣದಲ್ಲಿ ಉಕ್ತವಾಗಿರುವ ಈ ಸೋಮಪ್ರಣಯನ ಕರ್ಮದ ವಿವರಣೆಯನ್ನು ನಾವು ಋ. ಸಂ. ಭಾಗ 15 ರಲ್ಲಿ 457-473 ಪುಟಗಳಲ್ಲಿ ಪೂರ್ವ ಮತ್ತು ಉತ್ತರ ಪೀಠಿಕೆ ಸಹಿತವಾಗಿ ವಿಸ್ತಾರವಾಗಿ ವಿವರಿಸಿದೇವೆ.

॥ ಸಂಹಿತಾಪಾಠಃ ॥

ಏಷ ಶೃಂಗಾಣಿ ದೋಧುವಚ್ಛಿಶೀತೇ ಯೂಥ್ಯೋ೩ ವೃಷಾ ।
ನೃಮ್ಣಾ ದಧಾನ ಓಜಸಾ ॥ ೪ ॥

ಪದಪಾಠಃ

ಏಷಃ । ಶೃಂಗಾಣಿ । ದೋಧುವತ್ । ಶಿಶೀತೇ । ಯೂಥ್ಯಃ । ವೃಷಾ ।
ನೃಮ್ಣಾ । ದಧಾನಃ । ಓಜಸಾ ॥ ೪ ॥

॥ ಸಾಯಣಭಾಷ್ಯಂ ॥

ಏಷ ಸೋಮಃ ಶೃಂಗಾಣಿ ಶೃಂಗವದುನ್ನತಾನಂಶೂನಭಿಷವಕಾಲೇ ದೋಧುವತ್ । ಧೂನೋತಿ। ಯೂಥ್ಯೋ ಯೂಥಾರ್ಹೋ ಯೂಥಪತಿರ್ವೃಷಾ ವೃಷಭೋ ಯಥಾ ಶಿಶೀತೇ ತೀಕ್ಷ್ಣೇ ಶೃಂಗೇ ಧೂನೋತಿ ತದ್ವತ್ । ಕೀದೃಶ ಏಷಃ । ಓಜಸಾ ಬಲೇನ ನೃಮ್ಣಾ ನೃಮ್ಣಾನಿ ಧನಾನಿ ದಧಾನೋಽಸ್ಮದರ್ಥಂ ಧಾರಯನ್ ॥

॥ ಪ್ರತಿಪದಾರ್ಥ ॥

**ಯೂಥ್ಯಃ**—ಹಿಂಡಿಗೆ ಸ್ವಾಮಿಯಾದ । **ವೃಷಾ**—ವೃಷಭವು । **ಶೃಂಗಾಣಿ ಶಿಶೀತೇ**—ತನ್ನ ಕೊಂಬುಗಳನ್ನು ಉಜ್ಜಿ ಹರಿತಮಾಡುವಂತೆ । **ಓಜಸಾ**—ತನ್ನ ಸ್ವಶಕ್ತಿಯಿಂದ । **ನೃಮ್ಣಾ**—ಧನಗಳನ್ನು । **ದಧಾನಃ**—ನಮ್ಮ ಜನರಿಗೆ ಒದಗಿಸುತ್ತಾ । **ಏಷಃ**—ಈ ಸೋಮವು । **ಶೃಂಗಾಣಿ**—ಶೃಂಗದಂತಿರುವ ಉನ್ನತಸ್ಥಾನಕ್ಕೆ ರಸದ ಬಿಂದುಗಳನ್ನು । **ದೋಧುವತ್**—ಮೇಲಕ್ಕೆ ಸಿಂಪಡಿಸುತ್ತದೆ.

॥ ಭಾವಾರ್ಥ ॥

ಹಿಂಡಿಗೆ ಒಡೆಯನಾದ ವೃಷಭವು ತನ್ನ ಕೊಂಬುಗಳನ್ನು ಉಜ್ಜಿ ಹರಿತಮಾಡುವಂತೆ ಈ ಸೋಮರಸದ ಹನಿಗಳು ಅಭಿಷವಕಾಲದಲ್ಲಿ ಮೇಲಕ್ಕೆ ಸಿಂಪಡಿಸುತ್ತಾ ತಮ್ಮ ಸ್ವಶಕ್ತಿಯಿಂದ ನಮ್ಮ ಜನರಿಗೆ ಧನಾದಿಗಳನ್ನು ಒದಗಿಸಿಕೊಡುತ್ತದೆ.

English Translation

He tosses his horns as a bull, the lord of the herd, sharpens his,—bearing treasures (for us) by his might.

॥ ಸಂಹಿತಾಪಾಠಃ ॥

ಏಷ ರುಕ್ಮಿಭಿರೀಯತೇ ವಾಜೀ ಶುಭ್ರೇಭಿರಂಶುಭಿಃ ।
ಪತಿಃ ಸಿಂಧೂನಾಂ ಭವನ್ ॥ ೫ ॥

॥ ಪದಪಾಠಃ ॥

ಏಷಃ । ರುಕ್ಮಿಽಭಿಃ । ಈಯತೇ । ವಾಜೀ । ಶುಭ್ರೇಭಿಃ । ಅಂಶುಽಭಿಃ ।

ಪತಿಃ । ಸಿಂಧೂನಾಂ । ಭವನ್ ॥ ೫ ॥

॥ ಸಾಯಣಭಾಷ್ಯಂ ॥

ಏಷ ಸೋಮೋ ರುಕ್ಮಿಭಿರಧ್ವರ್ಯ್ವಾದಿಭಿಃ ಸಹೇಯತೇ । ಗಚ್ಛತಿ । ಕೀದೃಶ ಏಷಃ । ವಾಜೀ ವೇಜನವಾಞ್ಛುಭ್ರೇಭಿಃ ಶುಭ್ರೈರ್ದೀಪ್ತೈರಂಶುಭಿರ್ವಿಶಿಷ್ಟಃ। ಅಥವಾ ರುಕ್ಮಿಭಿರಿತ್ಯೇತದಪ್ಯಂಶುವಿಶೇಷಣಂ। ಸಿಂಧೂನಾಂ ಸ್ಯಂದಮಾನಾನಾಂ ರಸಾನಾಂ ಪತಿರ್ಭವನ್ ಯು ಈಯತ ಇತಿ ॥

॥ ಪ್ರತಿಪದಾರ್ಥ ॥

**ವಾಜೀ**—ವೇಗವಾಗಿ ಹರಿಯುತ್ತಿರುವುದೂ । **ಶುಭ್ರೇಭಿಃ**—ಪ್ರಕಾಶಮಾನವಾದ ಅಥವಾ ಸ್ವಚ್ಛವಾದ । **ಅಂಶುಭಿಃ**—ಹನಿಗಳಿಂದ ಕೂಡಿರುವುದೂ ಆದ । **ಏಷಃ**—ಈ ಸೋಮವು । **ರುಕ್ಮಿಭಿಃ**—ಅಧ್ವರ್ಯ್ವಾದಿ ಋತ್ವಿಗ್ಜನರಿಂದ ಅಥವಾ ಬೆಳಗುತ್ತಿರುವ ಹನಿಗಳಿಂದ ಕೂಡಿ । **ಸಿಂಧೂನಾಂ**—ಹರಿಯುತ್ತಿರುವ ರಸಗಳಿಗೆಲ್ಲಾ । **ಪತಿಃ**—ಸ್ವಾಮಿಯಾಗಿ । **ಭವನ್**—ಇರುತ್ತದೆ

॥ ಭಾವಾರ್ಥ ॥

ಅಭಿಷವಣಕಾಲದಲ್ಲಿ ಜಜ್ಜಿದ ಲತೆಗಳಿಂದ ಹೊರಸೂಸಿ ವೇಗವಾಗಿ ಹರಿಯುತ್ತಿರುವುದೂ ಸ್ವಚ್ಛವಾದ ಹನಿಗಳಿಂದ (ಬಿಂದುಗಳಿಂದ) ಸಹಿತವಾದುದೂ ಆದ ಈ ಸೋಮವು ಅಧ್ವರ್ಯ್ವಾದಿ ಋತ್ವಿಗ್ಜನರಿಂದ ಕೂಡಿ, ಹರಿಯುವ ಸ್ವಭಾವವುಳ್ಳ ರಸಗಳಿಗೆಲ್ಲಾ ಅಧಿಪತಿಯಾಗಿರುವುದು ಎಂದರೆ ದ್ರವರೂಪದಲ್ಲಿರುವ ಪಾನೀಯಗಳಲ್ಲೆಲ್ಲಾ ಶ್ರೇಷ್ಠವಾಗಿರುವುದು.

## English Translation

He proceeds along impetous with golden brilliant rays, the lord of streams.

॥ ಸಂಹಿತಾಪಾಠಃ ॥

ಏಷ ವಸೂನಿ ಪಿಬ್ದನಾ ಪರುಷಾ ಯಯಿವಾँ ಅತಿ ।
ಅವ ಶಾದೇಷು ಗಚ್ಛತಿ ॥ ೬ ॥

॥ ಪದಪಾಠಃ ॥

ಏಷಃ । ವಸೂನಿ । ಪಿಬ್ದನಾ । ಪರುಷಾ । ಯಯಿಽವಾನ್ । ಅತಿ ।

ಅವ । ಶಾದೇಷು । ಗಚ್ಛತಿ ॥ ೬ ॥

॥ ಸಾಯಣಭಾಷ್ಯಂ ॥

ಏಷ ಸೋಮೋ ವಸೂನ್ಯಾಚ್ಛಾದಕಾನಿ ಪಿಬ್ದನಾ ಪಿಬ್ದನಾನಿ ಪೀಡಿತಾನಿ ರಕ್ಷಾಂಸಿ ಪರುಷಾ ಪರ್ವಣಾತ್ಯತಿಕ್ರಮ್ಯ ಯಯಿವಾನ್ಗಚ್ಛನ್ಶ್ಯಾದೇಷು ಶಾತನೀಯೇಷು ರಕ್ಷಃಸ್ವವ ಗಚ್ಛತಿ ॥

॥ ಪ್ರತಿಪದಾರ್ಥ ॥

ಏಷಃ— ಈ ಸೋಮವು । ವಸೂನಿ—ಅವಿತುಕೊಂಡಿರುವ । ಪಿಬ್ದನಾ—ಹಿಂಸಿಸುವ ಸ್ವಭಾವವುಳ್ಳ ರಾಕ್ಷಸರನ್ನು । ಪರುಷಾ— ತನ್ನ ಗಿಣ್ಣುಗಳಿಂದ । ಅತಿ—ಅತಿಕ್ರಮಿಸಿ । ಯಯಿವಾನ್—ಹೊರಸೂಸುತ್ತಾ । ಶಾದೇಷು—ಸಂಹರಿಸಲ್ಪಡಬೇಕಾದ ರಾಕ್ಷಸರಲ್ಲಿ (ರಾಕ್ಷಸರ ಬಳಿಗೆ) । ಅವ ಗಚ್ಛತಿ—ಮುನ್ನುಗ್ಗುತ್ತದೆ

॥ ಭಾವಾರ್ಥ ॥

ತನ್ನ ಗಿಣ್ಣುಗಳಿಂದ ಹೊರಸೂಸುವ ಈ ಸೋಮವು ಅವಿತುಕೊಂಡಿರುವ ರಾಕ್ಷಸರನ್ನು ಅತಿಕ್ರಮಿಸಿ ಹೊರಸೂಸುತ್ತಾ ಅವರನ್ನು ಕೊಲ್ಲಲು ಮುನ್ನುಗ್ಗುತ್ತದೆ.

English Translation

Overpowering at the juncture of time the discomfited concealers (the Rakshasas), he descends upon those doomed to destruction.

॥ ಸಂಹಿತಾಪಾಠಃ ॥

ಏತಂ ಮೃಜಂತಿ ಮರ್ಜ್ಯಮುಪ ದ್ರೋಣೇಷ್ವಾಯವಃ ।
ಪ್ರಚಕ್ರಾಣಂ ಮಹೀರಿಷಃ ॥ ೭ ॥

॥ ಪದಪಾಠಃ ॥

ಏತಂ । ಮೃಜಂತಿ । ಮರ್ಜ್ಯಂ । ಉಪ । ದ್ರೋಣೇಷು । ಆಯವಃ ।
ಪ್ರಽಚಕ್ರಾಣಂ । ಮಹೀಃ । ಇಷಃ ॥ ೭ ॥

॥ ಸಾಯಣಭಾಷ್ಯಂ ॥

ಆಯವೋ ಮನುಷ್ಯಾ ಋತ್ವಿಜ ಏತಂ ಸೋಮಂ ಮರ್ಜ್ಯಂ ಮಾರ್ಜನೀಯಮುಪ ಮೃಜಂತಿ । ನಿಷ್ಪೀಡಯಂತೀತ್ಯರ್ಥಃ । ಕುತ್ರ । ದ್ರೋಣೇಷು ದ್ರೋಣಕಲಶೇಷು । ಕೀದೃಶಂ । ಮಹೀರಿಷೋ ಮಹಾಂತ್ಯನ್ನಾನಿ ಪ್ರಚಕ್ರಾಣಂ ಕುರ್ವಾಣಂ । ಪ್ರಭೂತರಸಸ್ರಾವಿಣಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

ಆಯವಃ—ಮಾನವರಾದ ಋತ್ವಿಕ್ಕುಗಳು । ಮಹೀಃ ಇಷಃ—ಪ್ರಭೂತವಾದ ಅನ್ನವನ್ನು । ಪ್ರಚಕ್ರಾಣಂ—ಒದಗಿಸಿಕೊಡುವುದೂ । ಮರ್ಜ್ಯಂ-ದ್ರವರೂಪವಾದುದೂ ಆದ । ಏತಂ—ಈ ಸೋಮರಸವನ್ನು । ದ್ರೋಣೇಷು—ದ್ರೋಣಕಲಶಗಳಲ್ಲಿ । ಉಪ ಮೃಜಂತಿ—ಸಂಗ್ರಹಿಸಿ ಇಡುತ್ತಾರೆ.

॥ ಭಾವಾರ್ಥ ॥

ಮಾನವರಾದ ಋತ್ವಿಗ್ಜನರು ಪ್ರಭೂತವಾದ ಅನ್ನವನ್ನು ಒದಗಿಸಿಕೊಡುವುದೂ, ದ್ರವರೂಪವಾದುದೂ ಅಥವಾ ಪರಿಶುದ್ಧವಾದುದೂ ಆದ ಈ ಸೋಮರಸವನ್ನು ಹಿಂಡಿದಮೇಲೆ ಅದನ್ನು ಅಭಿಷವಪಾತ್ರೆಯಾದ ದ್ರೋಣ ಕಲಶಗಳಲ್ಲಿ ತುಂಬಿಡುತ್ತಾರೆ.

English Translation

The priests express into the vessels this juice which is to be purified, the bestower of abundant food

॥ ಸಂಹಿತಾಪಾಠಃ ॥

ಏತಮು ತ್ಯಂ ದಶ ಕ್ಷಿಪೋ ಮೃಜಂತಿ ಸಪ್ತ ಧೀತಯಃ ।
ಸ್ವಾಯುಧಂ ಮದಿಂತಮಂ ॥ ೮ ॥

॥ ಪದಪಾಠಃ ॥

ಏತಂ । ಊಂ ಇತಿ । ತ್ಯಂ । ದಶ । ಕ್ಷಿಪಃ । ಮೃಜಂತಿ । ಸಪ್ತ । ಧೀತಯಃ ।
ಸುऽಆಯುಧಂ । ಮದಿನ್ऽತಮಂ ॥ ೮ ॥

॥ ಸಾಯಣಭಾಷ್ಯಂ ॥

ಗ್ರಾವಸ್ತೋತ್ರೇ ಗಾಣಗಾರಿಮತೇನಾಭಿರೂಪಕರಣೇ ಮೃಜ್ಯಮಾನೇ ಸೋಮ ಏತಮು ತ್ಯಮಿತ್ಯೇಷಾ । ಸೂತ್ರಿತಂ ಚ । ಏತಮು ತ್ಯಂ ದಶ ಕ್ಷಿಪೋ ಮೃಜ್ಯಮಾನಃ ಸುಹಸ್ತ್ಯ। ಆ. ೫-೧೨ ಇತಿ॥

ತ್ಯಂ ತಮೇತಮೇವ ಸೋಮಂ ದಶ ಕ್ಷಿಪೋ ದಶಾಂಗುಲಯೋ ಮೃಜಂತಿ । ಪರಿಚರಂತಿ । ಸಪ್ತ ಧೀತಯಃ ಸಪ್ತರ್ತ್ವಿಜಶ್ಚ । ಋತ್ವಿಜೋಽಂಗುಲಿಭಿರ್ಮೃಜಂತೀತ್ಯರ್ಥಃ । ಕೀದೃಶಮೇತಂ । ಸ್ವಾಯುಧಂ ಶೋಭನಾಯುಧಂ ಮದಿಂತಮಂ ಮಾದಯಿತೃತಮಂ । ರಕ್ಷೋಹನನಸಾಮರ್ಥ್ಯಪ್ರದರ್ಶನಾಯ ಸ್ವಾಯುಧಶಬ್ದಶ್ರವಣಂ ॥

॥ ಪ್ರತಿಪದಾರ್ಥ ॥

ತ್ಯಂ—ಪ್ರಸಿದ್ಧವಾದುದೂ । ಸ್ವಾಯುಧಂ—ಉತ್ತಮವಾದ ಆಯುಧಸಮೇತವಾದುದೂ । ಮದಿಂತಮಂ—ಹರ್ಷವನ್ನುಂಟುಮಾಡುವುದೂ ಆದ । ಏತಂ ಉ—ಈ ಸೋಮವನ್ನೇ । ದಶ ಕ್ಷಿಪಃ—ಹತ್ತು

ಬೆರಳುಗಳು । **ಮೃಜಂತಿ**—ಸೇವಿಸುತ್ತವೆ (ಶುಶ್ರೂಷೆಮಾಡುತ್ತವೆ) । **ಸಪ್ತ ಧೀತಯಃ**-ಏಳುಮಂದಿ ಋತ್ವಿಕ್ಕುಗಳೂ ಸಹ ಈ ಸೋಮವನ್ನು ಉಪಚರಿಸುತ್ತಾರೆ.

॥ ಭಾವಾರ್ಥ ॥

ಪ್ರಸಿದ್ಧವಾದುದೂ ರಕ್ಷೋಹನನಸಾಮರ್ಥ್ಯವುಳ್ಳದ್ದರಿಂದ ಆಯುಧೋಪೇತವಾದುದೂ, ಹರ್ಷವನ್ನುಂಟು ಮಾಡುವುದೂ ಆದ ಈ ಸೋಮರಸವನ್ನು ಏಳುಮಂದಿ ಋತ್ವಿಕ್ಕುಗಳೂ ತಮ್ಮ ಹತ್ತು ಬೆರಳುಗಳಿಂದ ಪರಿಚರಿಸುತ್ತಾರೆ ಎಂದರೆ ಸಂಸ್ಕರಿಸುತ್ತಾರೆ.

English Translation

The ten fingers, the seven priests, express this (juice)-well-weaponed, and yielding great exhilaration.

॥ ವಿಶೇಷವಿಷಯಗಳು ॥

ಸೋಮಾಭಿಷವಕಾಲದಲ್ಲಿ ಗ್ರಾವಸ್ತುತಿಯನ್ನು ಮಾಡುವಾಗ ಗಾಣಗಾರಿ ಎಂಬ ಆಚಾರ್ಯರ ಮತಾನುಸಾರವಾಗಿ ಸೋಮವನ್ನು ಸಂಸ್ಕರಿಸುವಾಗ ಏತಮು ತ್ಯಂ ಎಂಬ ಈ ಋಕ್ಕನ್ನು ಪಠಿಸಬೇಕೆಂದು ಆಶ್ವಲಾಯನ ಶ್ರೌತಸೂತ್ರದ—**ಏತಮು ತ್ಯಂ ದಶ ಕ್ಷಿಪೋ ಮೃಜ್ಯಮಾನಃ ಸುಹಸ್ತ್ಯ** ಎಂಬ ಸೂತ್ರದಿಂದ (ಆ. ೫-೧೨) ವಿವೃತವಾಗಿರುವುದು.

## ಹದಿನಾರನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪ್ರ ತೇ ಸೋತಾರ ಇತ್ಯಷ್ಟರ್ಚಂ ಷೋಡಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪ್ರ ತ ಇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

**ಪ್ರ ತೇ ಸೋತಾರಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿನಾರನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತದ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಇರುವವು. ಅನುಕ್ರಮಣಿಕೆಯಲ್ಲಿ—**ಪ್ರ ತೇ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೧೬

ಮಂಡಲ—೯ । ಅನುವಾಕ—೧। ಸೂಕ್ತ—೧೬ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರ ತೇ ಸೋತಾರ ಓಣ್ಯೋ೩ ರಸಂ ಮದಾಯ ಘೃಷ್ವಯೇ ।
ಸರ್ಗೋ ನ ತಕ್ತ್ಯೇತಶಃ ॥ ೧ ॥

॥ ಪದಪಾಠಃ ॥

ಪ್ರ । ತೇ । ಸೋತಾರಃ । ಓಣ್ಯೋಃ । ರಸಂ । ಮದಾಯ । ಘೃಷ್ವಯೇ ।
ಸರ್ಗಃ । ನ । ತಕ್ತಿ । ಏತಶಃ ॥ ೧ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತೇ ತವ ರಸಂ ಸೋತಾರಃ ಸೋಮಾಭಿಷವಕರ್ತಾರ ಓಣ್ಯೋ ರಸಂ । ಲುಪ್ತೋಪಮಮೇತತ್ । ದ್ಯಾವಾಪೃಥಿವ್ಯೋ ರಸಮುದಕಮಿವ । ಅಥವೌಣ್ಯೋರ್ದ್ಯಾವಾಪೃಥಿವ್ಯೋರ್ಮಧ್ಯೇ ತಯೋಃ ಸಂಬಂಧಿನಂ ವಾ ರಸಂ। ಪ್ರ ಸ್ರಾವಯಂತೀತಿ ಶೇಷಃ । ಕಿಮರ್ಥಂ । ಘೃಷ್ವಯೇ ಶತ್ರುಘರ್ಷಣಶೀಲಾಯ ಮದಾಯೇಂದ್ರಸ್ಯ ಮದಾಯ । ಅಭಿಷವಜನಿತಃ ಸೋಮಃ ಸರ್ಗಃ ಸೃಷ್ಟ ಏತಶೋ ನಾಶ್ವ ಇವ ತಕ್ತಿ । ಗಚ್ಛತಿ ಪಾತ್ರಂ ಪ್ರತಿ ॥**

॥ ಪ್ರತಿಪದಾರ್ಥ ॥

(ಎಲೈ ಸೋಮವೇ) **ತೇ**—ನಿನ್ನ ರಸವನ್ನು । **ಸೋತಾರಃ**—ಹಿಂಡುವ ಋತ್ವಿಗ್ಜನರು । **ಓಣ್ಯೋಃ ರಸಂ**—ದ್ಯಾವಾಪೃಥಿವಿಗಳ ಮಧ್ಯದಲ್ಲಿರುವ ಉದಕದಂತೆ । **ಪ್ರ**—ಹಿಂಡಿ ಸ್ರವಿಸುವಂತೆ ಮಾಡುತ್ತಾರೆ । **ಘೃಷ್ವಯೇ**—ಶತ್ರುಗಳನ್ನು ಧ್ವಂಸಮಾಡುವ । **ಮದಾಯ**—ಇಂದ್ರನ ಹರ್ಷಾರ್ಥವಾಗಿ । **ಸರ್ಗಃ**—ಹಿಂಡಲ್ಪಟ್ಟಿರುವ ಈ ಸೋಮವು । **ಏತಶಃ ನ**—ಅಶ್ವವು (ಯುದ್ಧದಲ್ಲಿ ಮುನ್ನುಗ್ಗುವಂತೆ) । **ತಕ್ತಿ**—ದ್ರೋಣಕಲಶಾಭಿಮುಖವಾಗಿ ಹರಿದುಬರುತ್ತದೆ.

॥ ಭಾವಾರ್ಥ ॥

ಎಲೈ ಸೋಮವೇ ಸೋಮಾಭಿಷವಣಕಾರ್ಯದಲ್ಲಿ ನಿಯುಕ್ತರಾದ ಋತ್ವಿಗ್ಜನರು ನಿನ್ನ ರಸವನ್ನು ದ್ಯಾವಾಪೃಥಿವಿಗಳ ಮಧ್ಯದಲ್ಲಿ ಉದಕವು (ವೃಷ್ಟಿರೂಪದಲ್ಲಿ) ಸುರಿಯುವಂತೆ ಹಿಂಡಿ ಸ್ರವಿಸುವಂತೆ ಮಾಡುತ್ತಾರೆ. ಶತ್ರುಗಳನ್ನು ನಾಶಮಾಡುವ ಇಂದ್ರನ ಹರ್ಷಾರ್ಥವಾಗಿ ಸೃಷ್ಟವಾದ (ಹಿಂಡಲ್ಪಟ್ಟ) ಈ ಸೋಮವು ಯುದ್ಧದಲ್ಲಿ ಶತ್ರುಗಳ ಮೇಲೆ ಮುನ್ನುಗ್ಗುವ ಅಶ್ವದಂತೆ ಪ್ರವಾಹರೂಪದಲ್ಲಿ ಕಲಶಾಭಿಮುಖವಾಗಿ ಬೇಗನೆ ಹರಿದುಬರುತ್ತದೆ.

## English Translation

They who express you, the juice of heaven and earth, do it for the foe-destroying exhilaration (of Indra); your flow rushes as a swift horse.

॥ ಸಂಹಿತಾಪಾಠಃ ॥

ಕ್ರತ್ವಾ ದಕ್ಷಸ್ಯ ರಥ್ಯಮಪೋ ವಸಾನಮಂಧಸಾ ।
ಗೋಷಾಮಣ್ವೇಷು ಸಶ್ಚಿಮ ॥ ೨ ॥

॥ ಪದಪಾಠಃ ॥

ಕ್ರತ್ವಾ । ದಕ್ಷಸ್ಯ । ರಥ್ಯಂ । ಅಪಃ । ವಸಾನಂ । ಅಂಧಸಾ ।
ಗೋಽಸಾಂ । ಅಣ್ವೇಷು । ಸಶ್ಚಿಮ ॥ ೨ ॥

॥ ಸಾಯಣಭಾಷ್ಯಂ ॥

ವಯಮಭಿಷೋತಾರೋ ದಕ್ಷಸ್ಯ ಬಲಸ್ಯ ರಥ್ಯಂ ನೇತಾರಮಪ ಉದಕಾನಿ ರಸಾನ್ವಸಾನಮಾಚ್ಛಾದಯಂತಮಂಧಸಾ ಶ್ರಯಣಾನ್ನೇನ ಸಹಿತಂ ಗೋಷಾಂ ಗವಾಂ ಸೋತಾರಂ ಏವಮುಕ್ತಲಕ್ಷಣಂ ಸೋಮಂ ಕ್ರತ್ವಾ ಕರ್ಮಣಾಣ್ವೇಷ್ವಂಗುಲೀಷು ಸಶ್ಚಿಮ ಸಂಯೋಜಯಾಮಃ ॥

॥ ಪ್ರತಿಪದಾರ್ಥ ॥

(ಅಭಿಷವಕರ್ಮದಲ್ಲಿ ನಿರತರಾದ ನಾವು) **ದಕ್ಷಸ್ಯ**—ಶಕ್ತಿಯ । **ರಥ್ಯಂ**—ನೇತೃವಾದುದೂ । **ಅಪಃ**—ಉದಕಗಳನ್ನು । **ವಸಾನಂ**—ಆಚ್ಛಾದನೆಮಾಡುವುದೂ (ಉದಕದೊಡನೆ ಮಿಶ್ರಿತವಾಗುವುದೂ) । **ಅಂಧಸಾ**—ಶ್ರಯಣಾನ್ನದಿಂದ ಸಹಿತವಾದುದೂ ಆದ ಸೋಮವನ್ನು । **ಗೋಷಾಂ**-ಗೋವಿಕಾರವಾದ ಹಾಲಿನೊಡನೆ । **ಕ್ರತ್ವಾ**-ವಿಧ್ಯುಕ್ತಕರ್ಮದಿಂದ । **ಅಣ್ವೇಷು**—ಬೆರಳುಗಳಿಂದ । **ಸಶ್ಚಿಮ**—ಬೆರಸುತ್ತೇವೆ.

॥ ಭಾವಾರ್ಥ ॥

ಅಭಿಷವಕರ್ಮವನ್ನು (ಸೋಮರಸವನ್ನು ಹಿಂಡುವ ಕರ್ಮವನ್ನು) ಮಾಡುತ್ತಿರುವ ನಾವು ಬಲವನ್ನುಂಟುಮಾಡುವುದೂ, ಉದಕಗಳೊಡನೆ ಮಿಶ್ರಿತವಾಗುವುದೂ ಶ್ರಯಣಾನ್ನ ಸಹಿತವಾದುದೂ ಆದ ಸೋಮವನ್ನು ಗೋವುಗಳ ಹಾಲಿನಿಂದ ವಿಧ್ಯುಕ್ತ ಕರ್ಮಾನುಸಾರವಾಗಿ ಬೆರಳುಗಳಿಂದ ಬೆರಸುತ್ತೇವೆ,

## English Translation

In pious rite by our fingers we mix with the milk (the Soma), the bringer of strength, the sender of cows, who envelopes the water

॥ ಸಂಹಿತಾಪಾಠಃ ॥

ಅನಪ್ತಮಪ್ಸು ದುಷ್ಟರಂ ಸೋಮಂ ಪವಿತ್ರ ಆ ಸೃಜ ।
ಪುನೀಹೀಂದ್ರಾಯ ಪಾತವೇ ॥ ೩ ॥

॥ ಪದಪಾಠಃ ॥

ಅನಪ್ತಂ । ಅಪ್ಽಸು । ದುಸ್ತರಂ । ಸೋಮಂ । ಪವಿತ್ರೇ । ಆ । ಸೃಜ ।

ಪುನೀಹಿ । ಇಂದ್ರಾಯ । ಪಾತವೇ ॥ ೩ ॥

॥ ಸಾಯಣಭಾಷ್ಯಂ ॥

ಅನಪ್ತಂ ಶತ್ರುಭಿರನಾಪ್ತಮಪ್ಸ್ವಂತರಿಕ್ಷ್ಯಾಸು । ವರ್ತಮಾನಮಿತಿ ಶೇಷಃ । ದುಷ್ಟರಮನ್ಯೈರನಭಿಭಾವ್ಯಂ । ನ ಹಿ ಸೋಮಂ ಕಶ್ಚಿದಸ್ಯತಿಶೇರತಿ । ಈದೃಶಂ ಸೋಮಂ ಪವಿತ್ರೇ ದಶಾಪವಿತ್ರ ಆ ಸೃಜ ಪ್ರಕ್ಷಿಪ ಹೇ ಅಧ್ವರ್ಯೋ । ತತೋಽರ್ಚ್ಯತೇ । ಇಂದ್ರಾಯೇಂದ್ರಸ್ಯ ಪಾತವೇ ಪಾತುಂ ಪುನೀಹಿ ॥

॥ ಪ್ರತಿಪದಾರ್ಥ ॥

(ಎಲೈ ಅಧ್ವರ್ಯುವೇ) **ಅನಪ್ತಂ**—ಶತ್ರುಗಳಿಂದ ಸಮೀಪಿಸಲ್ಪಡಲು ಅಸಾಧ್ಯನೂ । **ಅಪ್ಸು**—ಅಂತರಿಕ್ಷದಲ್ಲಿ (ಸ್ವರ್ಗದಲ್ಲಿ)ರುವವನೂ । **ದುಷ್ಟರಂ**—ಇತರರಿಂದ ಸೋಲಿಸಲ್ಪಡದಿರುವವನೂ ಆದ । **ಸೋಮಂ**—ಸೋಮವನ್ನು । **ಪವಿತ್ರೇ**—ದಶಾಪವಿತ್ರದಲ್ಲಿ (ಶೋಧಿಸುವುದಕ್ಕಾಗಿ) **ಆ ಸೃಜ**—ಇಡು (ಅದನ್ನು) । **ಇಂದ್ರಾಯ ಪಾತವೇ**—ಇಂದ್ರನ ಪಾನಾರ್ಥವಾಗಿ । **ಪುನೀಹಿ**—ಶುದ್ಧಿಗೊಳಿಸು.

॥ ಭಾವಾರ್ಥ ॥

ಎಲೈ ಅಧ್ವರ್ಯುವೇ, ಶತ್ರುಗಳಿಂದ ಹೊಂದಲಸಾಧ್ಯನೂ, ಸ್ವರ್ಗದಲ್ಲಿ ವಾಸಿಸುವನೂ, ಇತರರಿಂದ ಸೋಲಿಸಲ್ಪಡದಿರುವವನೂ ಆದ ಸೋಮವನ್ನು ಶೋಧಿಸುವುದಕ್ಕಾಗಿ ದಶಾಪವಿತ್ರದಲ್ಲಿ ಇಡು. ಅನಂತರ ಅದನ್ನು ಇಂದ್ರನ ಪಾನಾರ್ಥವಾಗಿ ಶೋಧಿಸು.

English Translation

Cast into the filtering cloth the unassailable invincible (Soma), abiding in the waters (of the firmament) ; purify it for the drinking of Indra.

॥ ಸಂಹಿತಾಪಾಠಃ ॥

ಪ್ರ ಪುನಾನಸ್ಯ ಚೇತಸಾ ಸೋಮಃ ಪವಿತ್ರೇ ಅರ್ಷತಿ ।

ಕ್ರತ್ವಾ ಸಧಸ್ಥಮಾಸದತ್ ॥ ೪ ॥

॥ ಪದಪಾಠಃ ॥

ಪ್ರ । ಪುನಾನಸ್ಯ । ಚೇತಸಾ । ಸೋಮಃ । ಪವಿತ್ರೇ । ಅರ್ಷತಿ ।

ಕ್ರತ್ವಾ । ಸಧಽಸ್ಥಂ । ಆ । ಅಸದತ್ ॥ ೪ ॥

॥ ಸಾಯಣಭಾಷ್ಯಂ ॥

ಚೇತಸಾ ಸ್ತುತ್ಯಾ ಪುನಾನಸ್ಯ ಪೂಯಮಾನಸ್ಯಾಂಶೀಭೂತಃ ಸೋಮಃ ಪವಿತ್ರೇ ದಶಾಪವಿತ್ರೇಽರ್ಷತಿ । ಗಚ್ಛತಿ । ಅಥ ಪಶ್ಚಾತ್ ಕ್ರತ್ವಾ ಕರ್ಮಣಾ ಪ್ರಜ್ಞಾನೇನ ವಾ ಸಧಸ್ಥಂ ಸಹಸ್ಥಾನಂ ದ್ರೋಣಕಲಶ ಆಸದತ್ । ಆಸೀದತಿ ॥

॥ ಪ್ರತಿಪದಾರ್ಥ ॥

**ಚೇತಸಾ**—ಸ್ತುತಿಯಿಂದ । **ಪುನಾನಸ್ಯ**—ಶುದ್ಧಿಗೊಳಿಸಲ್ಪಡುವ (ಸಂಸ್ಕರಿಸಲ್ಪಡುವ) । **ಸೋಮಃ**—ಸೋಮವು । **ಪವಿತ್ರೇ**—ದಶಾಪವಿತ್ರಾಭಿಮುಖವಾಗಿ । **ಅರ್ಷತಿ**—ಹೋಗುವುದು (ಅನಂತರ) । **ಕ್ರತ್ವಾ**—ಕರ್ಮದಿಂದ ಅಥವಾ ಪ್ರಜ್ಞಾನದಿಂದ । **ಸಧಸ್ಥಂ**—ಸ್ವಸ್ಥಾನವಾದ ದ್ರೋಣಕಲಶದಲ್ಲಿ । **ಆಸದತ್**—ಕುಳಿತು ಕೊಳ್ಳುತ್ತದೆ.

॥ ಭಾವಾರ್ಥ ॥

ಸ್ತೋತ್ರಾದಿಗಳಿಂದ ಸಂಸ್ಕರಿಸಲ್ಪಡುವ ಸೋಮವು ಶೋಧನೆಗಾಗಿ ದಶಾಪವಿತ್ರದಕಡೆಗೆ ಹೋಗುವುದು. ಅನಂತರ ವಿಧ್ಯುಕ್ತಕರ್ಮದಿಂದ ತನ್ನ ಸ್ವಸ್ಥಾನವಾದ ದ್ರೋಣಕಲಶದಲ್ಲಿ ಬಂದು ನಿಲ್ಲುವುದು

English Translation

The Soma of him who is purified by worship flows upon the filter and settles in the place common with the ceremony.

॥ ಸಂಹಿತಾಪಾಠಃ ॥

ಪ್ರ ತ್ವಾ ನಮೋಭಿರಿಂದವ ಇಂದ್ರ ಸೋಮಾ ಅಸೃಕ್ಷತ ।
ಮಹೇ ಭರಾಯ ಕಾರಿಣಃ ॥ ೫ ॥

॥ ಪದಪಾಠಃ ॥

ಪ್ರ । ತ್ವಾ । ನಮಃಽಭಿಃ । ಇಂದವಃ । ಇಂದ್ರ । ಸೋಮಾಃ । ಅಸೃಕ್ಷತ ।
ಮಹೇ । ಭರಾಯ । ಕಾರಿಣಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದ್ರ ತ್ವಾ ತ್ವಾಂ ನಮೋಭಿರ್ನಮಸ್ಕಾರೋಪಲಕ್ಷಿತೈಃ ಸ್ತೋತ್ರೈರಥವಾನ್ನೈಃ ಸಹೇಂದವಃ ಸೋಮಾಃ ಪ್ರಾಸೃಕ್ಷತ । ಪ್ರಾಪ್ನುವಂತಿ । ಕಿಮರ್ಥಂ । ಮಹೇ ಮಹತೇ ಭರಾಯ ಸಂಗ್ರಾಮಾಯ । ಕೀದೃಶಾಃ । ಕಾರಿಣೋ ಬಲಕರಣಶೀಲಾಃ ॥

॥ ಪ್ರತಿಪದಾರ್ಥ ॥

ಇಂದ್ರ—ಎಲೈ ಇಂದ್ರನೇ । ತ್ವಾ—ನಿನ್ನನ್ನು । ನಮೋಭಿಃ—ನಮಸ್ಕಾರಪೂರ್ವಕವಾದ ಸ್ತೋತ್ರಗಳಿಂದ ಅಥವಾ ಹವಿರ್ಲಕ್ಷಣರೂಪವಾದ ಅನ್ನಗಳಿಂದ । ಕಾರಿಣಃ—ಬಲಕರವಾದವೂ । ಇಂದವಃ—ಜಿನುಗುತ್ತಿರುವವೂ ಆದ । ಸೋಮಾಃ—ಈ ಸೋಮರಸಗಳು । ಮಹೇ ಭರಾಯ—ಯುದ್ಧದಲ್ಲಿ ಜಯಲಾಭಾರ್ಥವಾಗಿ । ಪ್ರ ಅಸೃಕ್ಷತ—ಸಮಿಾಪಿಸುತ್ತವೆ.

॥ ಭಾವಾರ್ಥ ॥

ಎಲೈ ಇಂದ್ರನೇ, ಜಿನುಗುತ್ತಿರುವುವೂ ಪಾನಮಾಡಿದವರಿಗೆ ಬಲವನ್ನುಂಟುಮಾಡುವವೂ ಆದ ಈ ಸೋಮ ರಸಗಳು ದೊಡ್ಡದೊಡ್ಡ ಯುದ್ಧಗಳಲ್ಲಿ ಜಯಲಾಭಾರ್ಥವಾಗಿ ನಿನ್ನನ್ನು ನಮಸ್ಕಾರಪೂರ್ವಕವಾದ ಸ್ತೋತ್ರಗಳಿಂದ ಸಮಿಾಪಿಸುತ್ತವೆ.

English Translation

The Soma juices flow to you, Indra, with praises, giving you vigour for the great conflict.

॥ ಸಂಹಿತಾಪಾಠಃ ॥

ಪುನಾನೋ ರೂಪೇ ಅವ್ಯಯೇ ವಿಶ್ವಾ ಅರ್ಷನ್ನಭಿ ಶ್ರಿಯಃ ।
ಶೂರೋ ನ ಗೋಷು ತಿಷ್ಠತಿ ॥ ೬ ॥

॥ ಪದಪಾಠಃ ॥

ಪುನಾನಃ । ರೂಪೇ । ಅವ್ಯಯೇ । ವಿಶ್ವಾಃ । ಅರ್ಷನ್ । ಅಭಿ । ಶ್ರಿಯಃ ।
ಶೂರಃ । ನ । ಗೋಷು । ತಿಷ್ಠತಿ ॥ ೬ ॥

॥ ಸಾಯಣಭಾಷ್ಯಂ ॥

ಅವ್ಯಯೇಽವಿಮಯೇ ರೂಪೇ ರೂಪ್ಯಮಾಣೇ ವಸ್ತ್ರೇ ಪುನಾನಃ ಪೂಯಮಾನೋ ವಿಶ್ವಾಃ ಸರ್ವಾಃ ಶ್ರಿಯಃ ಶೋಭಾ ಅಭ್ಯರ್ಷನ್ನಭಿಗಚ್ಛನ್ಗೋಷು ನಿಮಿಶ್ರಾಸು ಶೂರೋ ನ ಶೂರ ಇವ ಸ ಯಥಾ ಸಂಗ್ರಾಮೇ ತಿಷ್ಠತಿ ತದ್ವದಸೌ ತಿಷ್ಠತಿ ಪಾತ್ರೇ ॥

॥ ಪ್ರತಿಪದಾರ್ಥ ॥

ಅವ್ಯಯೇ—ಕುರಿಯ ತುಪ್ಪಟದಿಂದ ನಿರ್ಮಿತವಾದ । ರೂಪೇ—ವಸ್ತ್ರದಲ್ಲಿ । ಪುನಾನಃ—ಶೋಧಿಸಲ್ಪಟ್ಟ ಈ ಸೋಮವು । ವಿಶ್ವಾಃ—ಸಮಸ್ತವಾದ । ಶ್ರಿಯಃ—ಕಾಂತಿಗಳಿಂದ ಬೆಳಗುತ್ತಾ । ಗೋಷು—ಗೋವುಗಳ

ನಿಮಿತ್ತವಾಗಿ (ಹಾಲಿನೊಡನೆ ಮಿಶ್ರಿತವಾಗುವುದಕ್ಕಾಗಿ) । **ಅಭಿ ಅರ್ಷನ್**—ಮುಂದೆ ಹೋಗುತ್ತಾ । **ಶೂರೋ ನ**—ಯುದ್ಧಭೂಮಿಯಲ್ಲಿ ಶೂರನು ಬಂದು ನಿಲ್ಲುವಂತೆ । **ತಿಷ್ಠತಿ**—ನಿಂತಿರುತ್ತದೆ

॥ ಭಾವಾರ್ಥ ॥

ಕುರಿಯ ತುಪ್ಪಟದಿಂದ ನಿರ್ಮಿತವಾದ ವಸ್ತ್ರದಿಂದ ಶೋಧಿತವಾದ ಈ ಸೋಮರಸವು ಶ್ರೇಷ್ಠವಾದ ಕಾಂತಿಯಿಂದ ಬೆಳಗುತ್ತಾ ಗೋವಿಕಾರವಾದ ಹಾಲಿನೊಡನೆ ಮಿಶ್ರಿತವಾಗುವುದಕ್ಕಾಗಿ ಶೂರನಾದ ಭಟರು ಯುದ್ಧ ಭೂಮಿಯಲ್ಲಿ ಬಂದು ನಿಲ್ಲುವಂತೆ ಕಾದು ನಿಂತಿರುತ್ತದೆ

## English Translation

Purified in his woollen robe, and attaining all honours, he stands as a hero amidst the cows.

॥ ಸಂಹಿತಾಪಾಠಃ ॥

ದಿವೋ ನ ಸಾನು ಪಿಪ್ಯುಷೀ ಧಾರಾ ಸುತಸ್ಯ ವೇಧಸಃ ।
ವೃಥಾ ಪವಿತ್ರೇ ಅರ್ಷತಿ ॥ ೭ ॥

॥ ಪದಪಾಠಃ ॥

ದಿವಃ । ನ । ಸಾನು । ಪಿಪ್ಯುಷೀ । ಧಾರಾ । ಸುತಸ್ಯ । ವೇಧಸಃ ।
ವೃಥಾ । ಪವಿತ್ರೇ । ಅರ್ಷತಿ ॥ ೭ ॥

॥ ಸಾಯಣಭಾಷ್ಯಂ ॥

**ದಿವೋ ನ ದ್ಯುಲೋಕಾದಂತರಿಕ್ಷಾದಿವ ಸಾನು ಸಮುಚ್ಛ್ರಿತಮುದಕಂ ತದ್ಯಥಾಧೋ ನಿಪತತಿ ತದ್ವದ್ವೇಧಸೋ ವಿಧಾತುರ್ಬಲಸ್ಯ ಕರ್ತುಃ ಸುತಸ್ಯಾಭಿಷುತಸ್ಯ ಸೋಮಸ್ಯ ಪಿಪ್ಯುಷ್ಯಾಪ್ಯಾಯಯಂತೀ ಧಾರಾ ವೃಥಾನಾಯಾಸೇನೈವ ಪವಿತ್ರೇ ದಶಾಪವಿತ್ರೇಽರ್ಷತಿ । ಗಚ್ಛತಿ ॥**

॥ ಪ್ರತಿಪದಾರ್ಥ ॥

**ದಿವಃ ನ**—ಉನ್ನತಪ್ರದೇಶವಾದ ಅಂತರಿಕ್ಷದಿಂದ ಬೀಳುವ ವೃಷ್ಟಿರೂಪವಾದ ಉದಕವು । **ಸಾನು**—ಕೆಳಭಾಗದಲ್ಲಿರುವ ಭೂಮಿಯ ತಪ್ಪಲುಪ್ರದೇಶಗಳಲ್ಲಿ ಬೀಳುವಂತೆ । **ವೇಧಸಃ**—ಶಕ್ತಿಪ್ರಯೋಗದಿಂದ । **ಸುತಸ್ಯ**—ಹಿಂಡಲ್ಪಡುವ ಸೋಮದ । **ಪಿಪ್ಯುಷೀ**—ತೃಪ್ತಿಕಾರಕವಾದ । **ಧಾರಾ**—ಪ್ರವಾಹವು । **ವೃಥಾ**—ಅನಾಯಾಸದಿಂದ (ಬಹು ಸುಲಭವಾಗಿ) । **ಪವಿತ್ರೇ**—ದಶಾಪವಿತ್ರದಲ್ಲಿ । **ಅರ್ಷತಿ**—ಬಂದು ಬೀಳುತ್ತದೆ.

॥ ಭಾವಾರ್ಥ ॥

ಎತ್ತರವಾದ ಅಂತರಿಕ್ಷಪ್ರದೇಶದಿಂದ ತಗ್ಗಿನಲ್ಲಿರುವ ಭೂಮಿಯಮೇಲೆ ವೃಷ್ಟ್ಯುದಕವು ಯಾವ ರೀತಿ ಸುಲಭವಾಗಿ ಬೀಳುವುದೋ ಅದರಂತೆ ಶಕ್ತಿಪ್ರಯೋಗದಿಂದ ಹಿಂಡಲ್ಪಡುವ ಸೋಮರಸದ ಪ್ರವಾಹವು ಅನಾಯಾಸವಾಗಿ ಹರಿದುಬಂದು ಶೋಧನೆಗಾಗಿ ಇಟ್ಟಿರುವ ದಶಾಪವಿತ್ರದಲ್ಲಿ ಬಂದು ಬೀಳುತ್ತದೆ.

English Translation

As the lofty rain from heaven, the nutritious stream of the invigorating Soma falls easily upon the straining cloth.

॥ ಸಂಹಿತಾಪಾಠಃ ॥

ತ್ವಂ ಸೋಮ ವಿಪಶ್ಚಿತಂ ತನಾ ಪುನಾನ ಆಯುಷು ।

ಅವ್ಯೋ ವಾರಂ ವಿ ಧಾವಸಿ ॥ ೮ ॥

॥ ಪದಪಾಠಃ ॥

ತ್ವಂ । ಸೋಮ । ವಿಪಃऽಚಿತಂ । ತನಾ । ಪುನಾನಃ । ಆಯುಷು ।

ಅವ್ಯಃ । ವಾರಂ । ವಿ । ಧಾವಸಿ ॥ ೮ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತ್ವಂ ವಿಪಶ್ಚಿತಂ ಸ್ತೋತಾರಮಾಯುಷು ಮನುಷ್ಯೇಷು ಮಧ್ಯೇ ರಕ್ಷಸಿ । ಅಥವಾ। ತೃತೀಯಾರ್ಥೇ ದ್ವಿತೀಯಾ। ವಿಪಶ್ಚಿತಾಧ್ವರ್ಯುಣಾ। ತನಾ ವಸ್ತ್ರೇಣ ಪುನಾನಃ ಪೂಯಮಾನಃ । ಅಥವಾ। ವಿಪಶ್ಚಿತಮಿಂದ್ರಂ ಪ್ರೀಣಯಿತುಂ ತನಾ ಪುನಾನಃ ಸನ್ । ಅವ್ಯೋ ವಾರಮವೇರ್ವಾಲಂ ವಿ ಧಾವಸಿ । ವಿವಿಧಂ ಗಚ್ಛಸಿ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ತ್ವಂ**—ನೀನು । **ಆಯುಷು**—ಮನುಷ್ಯರ ಮಧ್ಯದಲ್ಲಿ । **ವಿಪಶ್ಚಿತಂ**—ನಿನ್ನನ್ನು ಸ್ತುತಿಸುವವನನ್ನು ರಕ್ಷಿಸುತ್ತೀಯೆ । **ವಿಪಶ್ಚಿತಂ**—ಮೇಧಾವಿಯಾದ ಇಂದ್ರನನ್ನು ಸಂತೋಷಗೊಳಿಸುವುದಕ್ಕಾಗಿ ಅಧ್ವರ್ಯುವಿನಿಂದ । **ತನಾ**—ವಸ್ತ್ರದಿಂದ । **ಪುನಾನಃ**—ಶೋಧಿಸಲ್ಪಟ್ಟು । **ಅವ್ಯಃ ವಾರಂ** — ಕುರಿಯ ತುಪ್ಪಟದಿಂದ ನಿರ್ಮಿತವಾದ ವಸ್ತ್ರಾಭಿಮುಖವಾಗಿ (ಶೋಧಿಸಲ್ಪಡಲು) ' **ವಿಧಾವತಿ**—ದ್ರುತಗಮನದಿಂದ ಹೋಗುತ್ತೀಯೆ ।

॥ ಭಾವಾರ್ಥ ॥

ಎಲೈ ಸೋಮುವೇ, ಮನುಷ್ಯರ ಮಧ್ಯದಲ್ಲಿ ನಿನ್ನನ್ನು ಸ್ತುತಿಸುವ ಪುರುಷನನ್ನು ನೀನು ರಕ್ಷಿಸ . ಸೀ. ಅಧ್ವರ್ಯುವಿನಿಂದ ವಸ್ತ್ರದಿಂದ ಶೋಧಿಸಲ್ಪಟ್ಟು ಇಂದ್ರನ ಪ್ರೀತ್ಯರ್ಥವಾಗಿ ಕುರಿಯ ತುಪ್ಪಟದಿಂದ ನಿ ದ ವಸ್ತ್ರದೆಡೆಗೆ ಶೋಧನಾರ್ಥವಾಗಿ ಧಾವಿಸುತ್ತೀಯೆ

English Translation

You, Soma, ( protect ) the worshipper amongst men, and pu ' d by the cloth you wander through the woollen filter

## ಹದಿನೇಳನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪ್ರ ನಿಮ್ನೇನೇವೇತ್ಯಷ್ಟರ್ಚಂ ಸಪ್ತದಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪ್ರ ನಿಮ್ನೇನೇವೇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—**ಪ್ರ ನಿಮ್ನೇನೇವ**—ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿನೇಳನೆಯ ಸೂಕ್ತವು. ಇದರಲ್ಲಿ ಎಂಟು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ—**ಪ್ರ ನಿಮ್ನೇನೇವ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

## ಸೂಕ್ತ—೧೭

ಮಂಡಲ—೯ । ಅನುವಾಕ—೧ । ಸೂಕ್ತ—೧೭ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೭ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೮ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಪ್ರ ನಿಮ್ನೇನೇವ ಸಿಂಧವೋ ಘ್ನಂತೋ ವೃತ್ರಾಣಿ ಭೂರ್ಣಯಃ ।**
**ಸೋಮಾ ಅಸೃಗ್ರಮಾಶವಃ ॥ ೧ ॥**

॥ ಪದಪಾಠಃ ॥

ಪ್ರ । ನಿಮ್ನೇಽಇವ । ಸಿಂಧವಃ । ಘ್ನಂತಃ । ವೃತ್ರಾಣಿ । ಭೂರ್ಣಯಃ ।

ಸೋಮಾಃ । ಅಸೃಗ್ರಂ । ಆಶವಃ ॥ ೧ ॥

॥ ಸಾಯಣಭಾಷ್ಯಂ ॥

**ನಿಮ್ನೇನ ಪ್ರವಣೇನ ದೇಶೇನ ಸಿಂಧವೋ ನದ್ಯ ಇವ ತಥಾ ವೃತ್ರಾಣಿ ಶತ್ರೂನ್ ಘ್ನಂತೋ ಭೂರ್ಣಯಃ ಕ್ಷಿಪ್ರಗಮನಾ ಆಶವೋ ವ್ಯಾಪ್ತಾಃ ಸೋಮಾಃ ಪ್ರಾಸೃಗ್ರಂ । ಪ್ರಗಚ್ಛಂತಿ ದ್ರೋಣಕಲಶಂ ಪ್ರತಿ ॥**

॥ ಪ್ರತಿಪದಾರ್ಥ ॥

**ಸಿಂಧವಃ**— ನದಿಗಳು । **ನಿಮ್ನೇನೇವ**—ತಗ್ಗಾದ ಪ್ರದೇಶಗಳಲ್ಲಿ ವೇಗವಾಗಿ ಹರಿಯುವಂತೆ । **ವೃತ್ರಾಣಿ**—ಶತ್ರುಗಳನ್ನು । **ಘ್ನಂತಃ**—ನಾಶಮಾಡುವವೂ । **ಭೂರ್ಣಯಃ**—ವೇಗಗಮನವುಳ್ಳವೂ । **ಆಶವಃ** — ಸರ್ವತ್ರ ವ್ಯಾಪ್ತವೂ ಆದ । **ಸೋಮಾಃ**—ಈ ಸೋಮರಸಗಳು । **ಪ್ರ ಅಸೃಗ್ರಂ**—ದ್ರೋಣಕಲಶಾಭಿಮುಖವಾಗಿ ಬೇಗನೆ ಹರಿದುಹೋಗುತ್ತವೆ

॥ ಭಾವಾರ್ಥ ॥

ನದಿಗಳು ತಗ್ಗಾದ ಪ್ರದೇಶದಲ್ಲಿ ವೇಗವಾಗಿ ಹರಿಯುವಂತೆ ಶತ್ರುನಾಶಕವಾದುವೂ, ಬೇಗನೆ ಹರಿಯುವುವೂ, ಸರ್ವತ್ರವ್ಯಾಪ್ತವಾದವೂ ಆದ ಈ ಸೋಮರಸಗಳು ಸೋಮಸಂಗ್ರಹಣಕ್ಕಾಗಿ ಇಟ್ಟಿರುವ ದ್ರೋಣಕಲಶವೆಂಬ ಪಾತ್ರೆಗೆ ಬೇಗನೆ ಹರಿದು ಹೋಗಿ ಬೀಳುತ್ತವೆ

English Translation

Like rivers falling down a steep place, so the rapid foe-destroying pervading Soma-streams hurry (to the pitcher)

॥ ಸಂಹಿತಾಪಾಠಃ ॥

ಅಭಿ ಸುವಾನಾಸ ಇಂದವೋ ವೃಷ್ಟಯಃ ಪೃಥಿವೀಮಿವ ।

ಇಂದ್ರಂ ಸೋಮಾಸೋ ಅಕ್ಷರನ್ ॥ ೨ ॥

॥ ಪದಪಾಠಃ ॥

ಅಭಿ । ಸುವಾನಾಸಃ । ಇಂದವಃ । ವೃಷ್ಟಯಃ । ಪೃಥಿವೀಂಽಇವ ।

ಇಂದ್ರಂ । ಸೋಮಾಸಃ । ಅಕ್ಷರನ್ ॥ ೨ ॥

॥ ಸಾಯಣಭಾಷ್ಯಂ ॥

**ಸುವಾನಾಸಃ** ಸೂಯಮಾನಾ ಇಂದವೋ ದ್ರವರೂಪಾಃ **ಸೋಮಾಸಃ** ಸೋಮಾ ಇಂದ್ರಂ ಪ್ರೀಣಯಿತುಮಭ್ಯಕ್ಷರನ್ । ಕಿಮಿವ । ವೃಷ್ಟಯಃ ಪೃಥಿವೀಮಿವ ॥

॥ ಪ್ರತಿಪದಾರ್ಥ ॥

**ವೃಷ್ಟಯಃ**—ವೃಷ್ಟ್ಯುದಕಗಳು । **ಪೃಥಿವೀಮಿವ**—ಭೂಮಿಯಮೇಲೆ ಬೀಳುವಂತೆ । **ಸುವಾನಾಸಃ**—ಹಿಂಡಲ್ಪಟ್ಟ । **ಇಂದವಃ**—ದ್ರವರೂಪವಾಗಿ ಜಿನುಗುತ್ತಿರುವ । **ಸೋಮಾಸಃ**—ಈ ಸೋಮರಸಗಳು । **ಇಂದ್ರಂ**—ಇಂದ್ರನನ್ನು ಸಂತೋಷಪಡಿಸುವುದಕ್ಕಾಗಿ । **ಅಭಿ ಅಕ್ಷರನ್**—(ಲತೆಗಳಿಂದ) ತೊಟ್ಟಿಕ್ಕುತ್ತವೆ.

॥ ಭಾವಾರ್ಥ ॥

ಮಳೆಯ ಹನಿಗಳು ಭೂಮಿಯ ಮೇಲೆ ಬೀಳುವಂತೆ ಲತೆಗಳಿಂದ ಜಜ್ಜಿ ಹಿಂಡಲ್ಪಟ್ಟ ದ್ರವರೂಪವಾದ ಈ ಸೋಮರಸಗಳು ಇಂದ್ರನ ಪ್ರೀತ್ಯರ್ಥವಾಗಿ (ಜಜ್ಜಿದ ಲತೆಗಳಿಂದ) ತೊಟ್ಟಿಕ್ಕುತ್ತವೆ.

English Translation

The Soma-drops, as they are expressed, flow to Indra like the rains falling upon the earth.

॥ ಸಂಹಿತಾಪಾಠಃ ॥

ಅತ್ಯೂರ್ಮಿರ್ಮತ್ಸರೋ ಮದಃ ಸೋಮಃ ಪವಿತ್ರೇ ಅರ್ಷತಿ ।
ವಿಘ್ನನ್ರಕ್ಷಾಂಸಿ ದೇವಯುಃ ॥ ೩ ॥

॥ ಪದಪಾಠಃ ॥

ಅತಿऽಊರ್ಮಿಃ । ಮತ್ಸರಃ । ಮದಃ । ಸೋಮಃ । ಪವಿತ್ರೇ । ಅರ್ಷತಿ ।
ವಿऽಘ್ನನ್ । ರಕ್ಷಾಂಸಿ । ದೇವऽಯುಃ ॥ ೩ ॥

॥ ಸಾಯಣಭಾಷ್ಯಂ ॥

**ಅತ್ಯೂರ್ಮಿಃ** । ಅತಿಕ್ರಾಂತಾ ಊರ್ಮಯೋ ಯಸ್ಮಾತ್ಸೋಽತ್ಯೂರ್ಮಿಃ । ಅತಿಪ್ರವೃದ್ಧ ಇತ್ಯರ್ಥಃ । ಮತ್ಸರೋ ಮಾದನಶೀಲೋ ಮದೋ ಮದಾತ್ಮಕಃ ಸೋಮಃ ಪವಿತ್ರೇಽರ್ಷತಿ । ಗಚ್ಛತಿ । ಕಿಂ ಕುರ್ವನ್ । ರಕ್ಷಾಂಸಿ ವಿಘ್ನನ್ ಘಾತಯನ್ದೇವಯುರ್ದೇವಾನ್ಕಾಮಯಮಾನೋಽರ್ಷತೀತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಅತ್ಯೂರ್ಮಿಃ**—ಅತಿಪ್ರವೃದ್ಧನಾದ (ಪುರಾತನನಾದ) ವನೂ । **ಮತ್ಸರಃ**—ಹರ್ಷಕಾರಕನೂ । **ಮದಃ ಸೋ..** —ಮದಕಾರಕನೂ ಆದ ಈ ಸೋಮನು । **ರಕ್ಷಾಂಸಿ**—ರಾಕ್ಷಸರನ್ನು । **ವಿಘ್ನನ್** —ನಾಶಮಾಡುತ್ತಾ । **ದೇವಯುಃ**—ದೇವತೆಗಳನ್ನು ಇಚ್ಛಿಸುತ್ತಾ । **ಪವಿತ್ರೇ**—ದಶಾಪವಿತ್ರದ ಬಳಿಗೆ । **ಅರ್ಷತಿ**—ಹೋಗುತ್ತಾನೆ.

॥ ಭಾವಾರ್ಥ ॥

ಪುರಾತನನಾದವನೂ, ಹರ್ಷಕಾರಕನೂ, ಶಕ್ತಿದಾಯಕನೂ ಆದ ಸೋಮನು ರಾಕ್ಷಸರನ್ನು ನಾಶಮಾಡುತ್ತಾ ದೇವತೆಗಳ ಬಳಿಗೆ ಹೋಗಲು ಅಪೇಕ್ಷಿಸುವವನಾಗಿ ದಶಾಪವಿತ್ರದ ಬಳಿಗೆ ಶೋಧನಾರ್ಥವಾಗಿ ಹೋಗುತ್ತಾನೆ.

English Translation

Soma, with swelling waves, exhilarating, inebriating, flows to the straining-cloth, destroying the Rakshasas, and devoted to the gods.

॥ ಸಂಹಿತಾಪಾಠಃ ॥

ಆ ಕಲಶೇಷು ಧಾವತಿ ಪವಿತ್ರೇ ಪರಿ ಷಿಚ್ಯತೇ ।

ಉಕ್ಥೈರ್ಯಜ್ಞೇಷು ವರ್ಧತೇ ॥ ೪ ॥

॥ ಪದಪಾಠಃ ॥

ಆ । ಕಲಶೇಷು । ಧಾವತಿ । ಪವಿತ್ರೇ । ಪರಿ । ಸಿಚ್ಯತೇ ।

ಉಕ್ಥೈಃ । ಯಜ್ಞೇಷು । ವರ್ಧತೇ ॥ ೪ ॥

॥ ಸಾಯಣಭಾಷ್ಯಂ ॥

ಪವಿತ್ರೇಷ್ಟ್ಯಾಂ ದ್ವಿತೀಯಾಜ್ಯಭಾಗಸ್ಯಾ ಕಲಶೇಷ್ವಿತಿ ಯಾಜ್ಯಾ। ಸೂತ್ರಿತಂ ಚ । ಆ ಕಲಶೇಷು ಧಾವತಿ ಪವಿತ್ರೇ ಪರಿಷಿಚ್ಯತ ಇತ್ಯೇಕಾ । ಆ. ೬-೧೨ । ಇತಿ ॥

ಅಯಂ ಸೋಮಃ ಕಲಶೇಷ್ವಾ ಧಾವತಿ । ತದರ್ಥಂ ಪವಿತ್ರೇ ಪರಿ ಷಿಚ್ಯತೇಽಧ್ವರ್ಯುಭಿಃ । ಉಕ್ಥೈಃ ಸ್ತೋತ್ರೈರ್ಯಜ್ಞೇಷು ನಿಮಿತ್ತೇಷು ವರ್ಧತೇ । ಪ್ರವೃದ್ಧೋ ಭವತಿ ॥

॥ ಪ್ರತಿಪದಾರ್ಥ ॥

**(ಅಯಂ ಸೋಮಃ** — ಈ ಸೋಮವು) **ಕಲಶೇಷು** — ದ್ರೋಣಕಲಶಗಳಲ್ಲಿ ಸಿಕ್ಕುವುದಕ್ಕಾಗಿ । **ಆ ಧಾವತಿ**—ಬೇಗನೆ ಹರಿದು ಹೋಗುತ್ತದೆ । **ಪವಿತ್ರೇ**—ಶೋಧನಾರ್ಥವಾಗಿ ದಶಾಪವಿತ್ರದಲ್ಲಿ । **ಪರಿ ಷಿಚ್ಯತೇ**—

ಅಧ್ವರ್ಯ್ವಾದಿಋತ್ವಿಗ್ಜನರಿಂದ ಶೋಧಿಸಲ್ಪಡುತ್ತದೆ । ಯಜ್ಞೇಷು—ಯಜ್ಞಾರ್ಥವಾಗಿ । ಉಕ್ಥೈಃ—ಸ್ತೋತ್ರಗಳಿಂದ । ವರ್ಧತೇ—ಪ್ರಶಂಸಿಸಲ್ಪಡುತ್ತದೆ.

॥ ಭಾವಾರ್ಥ ॥

ಈ ಸೋಮವು ದ್ರೋಣಕಲಶಾಭಿಮುಖವಾಗಿ ಬೇಗನೆ ಹರಿದು ಹೋಗಿ ಅಧ್ವರ್ಯ್ವಾದಿಋತ್ವಿಗ್ಜನರಿಂದ ಶೋಧಿಸಲ್ಪಟ್ಟು ಯಜ್ಞಾರ್ಥವಾಗಿ ಸ್ತೋತ್ರಗಳಿಂದ ಪ್ರಶಂಸಿಸಲ್ಪಟ್ಟು ವೃದ್ಧಿಯನ್ನು ಹೊಂದುತ್ತದೆ.

English Translation

It flows to the pitchers, it is poured out upon the straining-cloth, it is magnified at sacrifices by praises.

॥ ವಿಶೇಷವಿಷಯಗಳು ॥

ಪವಿತ್ರೇಷ್ಟಿಯಲ್ಲಿ ದ್ವಿತೀಯಾಜ್ಯಭಾಗವನ್ನು ಹೋಮಮಾಡುವಾಗ **ಆ ಕಲಶೇಷು** ಎಂಬ ಈ ಋಕ್ಕನ್ನು ಯಾಜ್ಯಾಮಂತ್ರವನ್ನಾಗಿ ಪಠಿಸಬೇಕೆಂದು ಆಶ್ವಲಾಯನಶ್ರೌತಸೂತ್ರದ—**ಆ ಕಲಶೇಷು ಧಾವತಿ ಪವಿತ್ರೇ ಪರಿಷಿಚ್ಯತ ಇತ್ಯೇಕಾ** ಎಂಬ ಸೂತ್ರದಿಂದ (ಆ. ೫ ೧೨) ವಿವೃತವಾಗಿರುವುದು.

॥ ಸಂಹಿತಾಪಾಠಃ ॥

ಅತಿ ತ್ರೀ ಸೋಮ ರೋಚನಾ ರೋಹನ್ನ ಭ್ರಾಜಸೇ ದಿವಂ ।
ಇಷ್ಣನ್ತ್ಸೂರ್ಯಂ ನ ಚೋದಯಃ ॥ ೫ ॥

॥ ಪದಪಾಠಃ ॥

ಅತಿ । ತ್ರೀ । ಸೋಮ । ರೋಚನಾ । ರೋಹನ್ । ನ । ಭ್ರಾಜಸೇ । ದಿವಂ ।
ಇಷ್ಣನ್ । ಸೂರ್ಯಂ । ನ । ಚೋದಯಃ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ತ್ರೀ ರೋಚನಾ ತ್ರೀಣಿ ರೋಚನಾನಿ ತ್ರೀಂಲ್ಲೋಕಾನತ್ಯತಿಕ್ರಮ್ಯ ರೋಹನ್ನುಪರಿಸ್ಥಂ ದಿವಂ ದ್ಯುಲೋಕಂ ಭ್ರಾಜಸೇ । ಪ್ರಕಾಶಯಸಿ । ತಥೇಷ್ಣನ್ನಚ್ಛನ್ತ್ಸೂರ್ಯಂ ನ ಸೂರ್ಯಂ ಚ ಚೋದಯಃ । ಚೋದಯಸಿ । ಪ್ರೇರಯಸಿ । ನಶಬ್ದಶ್ಚಾರ್ಥೇ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ ನೀನು । **ತ್ರೀ ರೋಚನಾ**—ಮೂರು ಲೋಕಗಳನ್ನೂ । **ಅತಿ**—ಅತಿಕ್ರಮಿಸಿ । **ರೋಹನ್**—ಅವುಗಳ ಮೇಲಿರುವ । **ದಿವಂ**—ಸ್ವರ್ಗಲೋಕವನ್ನು । **ಭ್ರಾಜಸೇ**—ಪ್ರಕಾಶ

ಪಡಿಸುತ್ತೀಯೆ (ಬೆಳಗಿಸುವೆ) । ಇಷ್ಣನ್—ಮುಂದಕ್ಕೆ ಹೋಗುತ್ತಾ । **ಸೂರ್ಯಂ ನ**—ಸೂರ್ಯನನ್ನೂ । **ಚೋದಯಃ**—ಪ್ರೇರಿಸುತ್ತೀಯೆ.

। ಭಾವಾರ್ಥ ।

ಎಲೈ ಸೋಮನೇ, ನೀನು ಮೂರು ಲೋಕಗಳನ್ನೂ ಅತಿಕ್ರಮಿಸಿ ಹೋಗಿ ಅವುಗಳ ಮೇಲಿರುವ ಸ್ವರ್ಗಲೋಕವನ್ನೂ ಪ್ರಕಾಶಪಡಿಸುತ್ತೀಯೆ ಹಾಗೆಯೇ ಮುಂದಕ್ಕೆ ಹೋಗುತ್ತಾ ಸೂರ್ಯನನ್ನು ಅವನ ಕರ್ತವ್ಯಕರ್ಮದಲ್ಲಿ ಪ್ರೇರಿಸುತ್ತೀಯೆ

English Translation

Soma, mounting beyond the three words, you illumine heaven, and, moving, you urge on the sun

। ಸಂಹಿತಾಪಾಠಃ ॥

ಅಭಿ ವಿಪ್ರಾ ಅನೂಷತ ಮೂರ್ಧನ್ಯಜ್ಞಸ್ಯ ಕಾರವಃ ।
ದಧಾನಾಶ್ಚಕ್ಷಸಿ ಪ್ರಿಯಂ ॥ ೬ ॥

॥ ಪದಪಾಠಃ ॥

ಅಭಿ । ವಿಪ್ರಾಃ । ಅನೂಷತ । ಮೂರ್ಧನ್ । ಯಜ್ಞಸ್ಯ । ಕಾರವಃ ।
ದಧಾನಾಃ । ಚಕ್ಷಸಿ । ಪ್ರಿಯಂ ॥ ೬ ॥

॥ ಸಾಯಣಭಾಷ್ಯಂ ॥

**ಅಭ್ಯನೂಷತ ಅಭಿಷ್ಟುವಂತಿ ವಿಪ್ರಾ ಮೇಧಾವಿನಃ ಸ್ತೋತಾರಃ । ಕುತ್ರ । ಯಜ್ಞಸ್ಯ ಮೂರ್ಧನ್ಮೂರ್ಧನಿ । ಶಿರೋವದುತ್ತಮೇಽಭಿಷವದಿವಸ ಇತ್ಯರ್ಥಃ । ಕೀದೃಶಾಸ್ತೇ । ಕಾರವಃ ಕರ್ತಾರಃ ಪರಿಚರ್ಯಯಾ ಯಾಗಾನುಷ್ಠಾತಾರೋ ವಾ। ಚಕ್ಷಸಿ ದ್ರಷ್ಟರಿ ಸೋಮೇ ಪ್ರಿಯಂ ದಧಾನಾ ಅಭ್ಯನೂಷತೇತಿ ಸಮನ್ವಯಃ ॥**

। ಪ್ರತಿಪದಾರ್ಥ ।

**(ಸೋಮ**—ಎಲೈ ಸೋಮನೇ) । **ಕಾರವಃ**—ಯಾಗಾನುಷ್ಠಾನನಿರತರಾದ । **ವಿಪ್ರಾಃ**—ಮೇಧಾವಿಗಳಾದ ಸ್ತೋತೃಜನರು । **ಯಜ್ಞಸ್ಯ ಮೂರ್ಧನ್**—ಯಜ್ಞವೇದಿಯಲ್ಲಿ । **ಚಕ್ಷಸಿ**—ಸರ್ವವನ್ನೂ ನೋಡುವ ನಿನ್ನಲ್ಲಿ । **ಪ್ರಿಯಂ**—ಹಿತಕರವಾದ ಸ್ತೋತ್ರವನ್ನು । **ದಧಾನಾಃ**—ನಿರ್ಮಿಸಿ ಅರ್ಪಿಸುತ್ತಾ । **ಅಭಿ ಅನೂಷತ**—ನಿನ್ನನ್ನು ಸ್ತುತಿಸುತ್ತಾರೆ

॥ ಭಾವಾರ್ಥ ॥

ಎಲೈ ಸೋಮನೇ, ಯಜ್ಞಕರ್ಮನಿರತರೂ, ಮೇಧಾವಿಗಳೂ ಆದ ಸ್ತೋತೃಗಳು ಯಜ್ಞವೇದಿಯಲ್ಲಿ ಸರ್ವವನ್ನೂ ನೋಡಬಲ್ಲ ನಿನಗೆ ಹಿತಕರವಾದ ಸ್ತೋತ್ರಗಳನ್ನು ನಿರ್ಮಿಸಿ ಅರ್ಪಿಸುತ್ತಾ ನಿನಗಭಿಮುಖವಾಗಿ ನಿಂತು ಸ್ತುತಿಸುತ್ತಾರೆ.

## English Translation

The Sage performers (of pious rites) glorify (the Soma) at the head of the sacrifice, entertaining affection for him the all-beholding.

॥ ಸಂಹಿತಾಪಾಠಃ ॥

ತಮು ತ್ವಾ ವಾಜಿನಂ ನರೋ ಧೀಭಿರ್ವಿಪ್ರಾ ಅವಸ್ಯವಃ ।
ಮೃಜಂತಿ ದೇವತಾತಯೇ ॥ ೭ ॥

ಪದಪಾಠಃ

ತಂ । ಊಂ ಇತಿ । ತ್ವಾ । ವಾಜಿನಂ । ನರಃ । ಧೀಭಿಃ । ವಿಪ್ರಾಃ । ಅವಸ್ಯವಃ ।
ಮೃಜಂತಿ । ದೇವಽತಾತಯೇ ॥ ೭ ॥

। ಸಾಯಣಭಾಷ್ಯಂ ।

**ಹೇ ಸೋಮ ತಮು ತಮೇವ ತ್ವಾ ತ್ವಾಂ ವಾಜಿನಮನ್ನವಂತಂ ಗಮನವಂತಂ ವಾ ನರೋ ನೇತಾರೋ ವಿಪ್ರಾ ಮೇಧಾವಿನೋಽಧ್ವರ್ಯ್ವಾದಯೋ ಧೀಭಿಃ ಕರ್ಮಭಿರ್ಮೃಜಂತಿ । ಶೋಧಯಂತಿ । ದೇವತಾತಯೇ ಯಜ್ಞಾರ್ಥಂ । ಕಿಮಿಚ್ಛವಃ ಅವಸ್ಯವೋಽನ್ನಮಿಚ್ಛವಃ ॥**

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ನರಃ**—ಯಜ್ಞನೇತೃಗಳೂ । **ವಿಪ್ರಾಃ**—ಮೇಧಾವಿಗಳೂ ಆದ ಅಧ್ವರ್ಯ್ವಾದಿಗಳು **ವಾಜಿನಂ**—ಅನ್ನಯುಕ್ತನಾದ ಅಥವಾ ಗಮನಶೀಲನಾದ । **ತಮು ತ್ವಾ**—ಆ ನಿನ್ನನ್ನೇ । **ದೇವತಾತಯೇ**—ಯಜ್ಞಾರ್ಥವಾಗಿ । **ಅವಸ್ಯವಃ**—ಅನ್ನವನ್ನು ಬಯಸುತ್ತಾ । **ಧೀಭಿಃ**—ಯಜ್ಞಕರ್ಮಗಳಿಂದ । **ಮೃಜಂತಿ**—ಶೋಧಿಸುತ್ತಾರೆ ।

। ಭಾವಾರ್ಥ ।

ಎಲೈ ಸೋಮನೇ, ಯಜ್ಞನೇತೃಗಳೂ, ಮೇಧಾವಿಗಳೂ ಆದ ಅಧ್ವರ್ಯ್ವಾದಿ ಋತ್ವಿಗ್ಜನರು ಅನ್ನಾದ್ಯಾಹಾರವನ್ನು ಅಪೇಕ್ಷಿಸುವವರಾಗಿ ಅನ್ನಯುಕ್ತನಾದ ನಿನ್ನನ್ನೇ ಯಜ್ಞಾರ್ಥವಾಗಿ ಯಜ್ಞಕರ್ಮಗಳಿಂದ ಶೋಧಿಸುತ್ತಾರೆ.

## English Translation

Sages, leaders of rites, desirous of sustenance, purify you who are the giver of food, with pious rites for the offering

॥ ಸಂಹಿತಾಪಾಠಃ ॥

ಮಧೋರ್ಧಾರಾಮನು ಕ್ಷರ ತೀವ್ರಃ ಸಧಸ್ಥಮಾಸದಃ ।
ಚಾರುರ್‍ಋತಾಯ ಪೀತಯೇ ॥ ೮ ॥

॥ ಪದಪಾಠಃ ॥

ಮಧೋಃ । ಧಾರಾಂ । ಅನು । ಕ್ಷರ । ತೀವ್ರಃ । ಸಧಽಸ್ಥಂ । ಆ । ಅಸದಃ ।
ಚಾರುಃ । ಋತಾಯ । ಪೀತಯೇ ॥ ೮ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತ್ವಂ ಮಧೋರ್ಮಧುರರಸಸ್ಯ ಧಾರಾಮನು ಕ್ಷರ ಪ್ರವಹನ್ । ತೀವ್ರಸ್ತೀವ್ರರಸಃ ಸನ್ ಸಧಸ್ಥಂ ಸಹಸ್ಥಾನಮಭಿಷವಸ್ಥಾನಂ ಪವಿತ್ರಂ ವಾಸದಃ। ಸೀದ । ಚಾರುಶ್ಚರಣಶೀಲಃ ಸನ್ನೃತಾಯ ಯಜ್ಞಾರ್ಥಂ ಪೀತಯೇ ದೇವಾನಾಂ ಪಾನಾಯ ॥**

॥ ಪ್ರತಿಪದಾರ್ಥ ॥

(ಎಲೈ ಸೋಮವೇ ನೀನು) **ಮಧೋಃ**—ಮಧುರವಾದ ಸೋಮರಸದ । **ಧಾರಾಂ**—ಪ್ರವಾಹವನ್ನು । **ಅನು ಕ್ಷರ**—ಹರಿಯಿಸುತ್ತಾ । **ತೀವ್ರಃ**—ಶುದ್ಧರಸವುಳ್ಳವನಾಗಿ । **ಸಧಸ್ಥಂ**—ಅಭಿಷವಸ್ಥಾನದಲ್ಲಿ ಅಥವಾ ದಶಾಪವಿತ್ರದಲ್ಲಿ । **ಋತಾಯ**—ಯಜ್ಞಾರ್ಥವಾಗಿಯೂ । **ಪೀತಯೇ**—ದೇವತೆಗಳ ಪಾನಾರ್ಥವಾಗಿಯೂ । **ಚಾರುಃ**—ಉತ್ತಮ ರೂಪವುಳ್ಳವನಾಗಿ । **ಆ ಅಸದಃ**—ಕುಳಿತುಕೋ ।

॥ ಭಾವಾರ್ಥ ॥

ಎಲೈ ಸೋಮವೇ, ನೀನು ಮಧುರವಾದ ಸೋಮರಸದ ಧಾರೆಯನ್ನು ಹರಿಯಿಸುತ್ತಾ ಶುದ್ಧರಸವುಳ್ಳವನಾಗಿ ಅಭಿಷವಸ್ಥಾನದಲ್ಲಿ ಅಥವಾ ದಶಾಪವಿತ್ರದಲ್ಲಿ ಯಜ್ಞಾರ್ಥವಾಗಿಯೂ ದೇವತೆಗಳ ಪಾನಾರ್ಥವಾಗಿಯೂ ಉತ್ತಮರೂಪಯುಕ್ತನಾಗಿ ಕುಳಿತುಕೋ.

## English Translation

Pour forth the stream of the sweet beverage; sit down, sharp-flavoured in the receptacle, alert for drinking at the sacrifice.

# ಹದಿನೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪರಿ ಸುವಾನ ಇತಿ ಸಪ್ತರ್ಚಮಷ್ಟಾದಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪರಿ ಸುವಾನಃ ಸಪ್ತೇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—**ಪರಿ ಸುವಾನಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹದಿನೆಂಟನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತದ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಅನುಕ್ರಮಣಿಕೆಯಲ್ಲಿ—**ಪರಿ ಸುವಾನಃ ಸಪ್ತ** ಎಂದು ಹೇಳಿರುವುದು ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

## ಸೂಕ್ತ—೧೮

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೧೮ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಪರಿ ಸುವಾನೋ ಗಿರಿಷ್ಠಾಃ ಪವಿತ್ರೇ ಸೋಮೋ ಅಕ್ಷಾಃ ।**
**ಮದೇಷು ಸರ್ವಧಾ ಅಸಿ ॥ ೧ ॥**

॥ ಪದಪಾಠಃ ॥

**ಪರಿ । ಸುವಾನಃ । ಗಿರಿऽಸ್ಥಾಃ । ಪವಿತ್ರೇ । ಸೋಮಃ । ಅಕ್ಷಾರಿತಿ ।**
**ಮದೇಷು । ಸರ್ವऽಧಾಃ । ಅಸಿ ॥ ೧ ॥**

॥ ಸಾಯಣಭಾಷ್ಯಂ ॥

**ಅಯಂ ಸೋಮಃ ಪವಿತ್ರೇ ಪರ್ಯಕ್ಷಾಃ । ಪರಿಕ್ಷರತಿ । ಸುವಾನಃ ಸೂಯಮಾನೋ ಗಿರಿಷ್ಠಾ ಗಿರಿಸ್ಥಾಯೀ । ಗ್ರಾವಸು ವರ್ತಮಾನ ಇತ್ಯರ್ಥಃ । ಸ ತ್ವಂ ಮದೇಷು ಮಾದಕೇಷು ಸ್ತೋತೃಷು ಸರ್ವಧಾ ಅಸಿ । ಸರ್ವಸ್ಯ ಧಾತಾ ದಾತಾ ವಾ ಭವಸಿ ॥**

॥ ಪ್ರತಿಪದಾರ್ಥ ॥

**ಗಿರಿಷ್ಠಾಃ**—ಅಭಿಷವಸಾಧನವಾದ ಕಲ್ಲುಗಳ ಮಧ್ಯದಲ್ಲಿ ಇಡಲ್ಪಟ್ಟ । **ಸುವಾನಃ**—ಚೆನ್ನಾಗಿ ಹಿಂಡಲ್ಪಡುವ । **ಸೋಮಃ**—ಈ ಸೋಮವು । **ಪವಿತ್ರೇ**—ದಶಾಪವಿತ್ರದ । **ಪರಿ**—ಸುತ್ತಲೂ । **ಅಕ್ಷಾಃ**—ಸುರಿದು

ಹರಿಯುತ್ತದೆ (ಅಂತಹ ನೀನು) । **ಮದೇಷು**— ನಿನ್ನನ್ನು ಹರ್ಷಗೊಳಿಸುವ ಸ್ತೋತೃಜನರಿಗೆ । **ಸರ್ವಧಾ ಅಸಿ**— ಸಮಸ್ತ ಇಷ್ಟಾರ್ಥಗಳನ್ನು ಕೊಡುವವನಾಗಿದ್ದೀಯೆ ।

॥ ಭಾವಾರ್ಥ ॥

ಅಭಿಷವಸಾಧನವಾದ ಗ್ರಾವಗಳ ಮಧ್ಯದಲ್ಲಿ ಇಟ್ಟು ಚೆನ್ನಾಗಿ ಹಿಂಡಲ್ಪಡುವ ಈ ಸೋಮವು ಶೋಧನಾರ್ಥವಾಗಿ ಇಟ್ಟಿರುವ ದಶಾಪವಿತ್ರದಲ್ಲಿ ಬಿದ್ದು ಸುತ್ತಲೂ ಜಿನುಗುತ್ತಾ ಹರಿಯುತ್ತದೆ ಎಲೈ ಸೋಮವೇ, ಅಂತಹ ನೀನು ನಿನ್ನನ್ನು ಸ್ತುತಿಗಳಿಂದ ಹರ್ಷಗೊಳಿಸುವ ಸ್ತೋತೃಜನರಿಗೆ ಸಕಲವನ್ನೂ ಕೊಡುತ್ತೀಯೆ.

English Translation

Effused while pressed between the stones, the Soma flows upon the straining cloth ; you are the giver of all things to those who praise you.

। ಸಂಹಿತಾಪಾಠಃ ।

**ತ್ವಂ ವಿಪ್ರಸ್ತ್ವಂ ಕವಿರ್ಮಧು ಪ್ರ ಜಾತಮಂಧಸಃ ।**

**ಮದೇಷು ಸರ್ವಧಾ ಅಸಿ ॥ ೨ ॥**

॥ ಪದಪಾಠಃ ॥

ತ್ವಂ । ವಿಪ್ರಃ । ತ್ವಂ । ಕವಿಃ । ಮಧು । ಪ್ರ । ಜಾತಂ । ಅಂಧಸಃ ।

ಮದೇಷು । ಸರ್ವಽಧಾಃ । ಅಸಿ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತ್ವಂ ವಿಪ್ರೋ ವಿವಿಧಂ ಪ್ರೀಣಯಿತಾ ವಿಪ್ರಸದೃಶೋ ವಾ ತ್ವಂ ಚ ಕವಿರ್ಮೇಧಾವೀ । ಅತಸ್ತ್ವಮಂಧಸೋಽನ್ನಾಜ್ಜಾತಂ ಮಧು ಮಧುರರಸಂ ಪ್ರಯಚ್ಛಸೀತಿ ಶೇಷಃ ॥**

। ಪ್ರತಿಪದಾರ್ಥ ॥

(ಎಲೈ ಸೋಮವೇ) **ತ್ವಂ**— ನೀನು । **ವಿಪ್ರಃ**— ಮೇಧಾವಿಯು ಅಥವಾ ನಾನಾವಿಧವಾಗಿ ಎಲ್ಲರನ್ನೂ ಹರ್ಷಗೊಳಿಸುವವನು । **ತ್ವಂ**— ನೀನು । **ಕವಿಃ**— ಸಕಲವನ್ನೂ ತಿಳಿದ ಮೇಧಾವಿಯು (ಆದ್ದರಿಂದ ನೀನು) । **ಅಂಧಸಃ**— ಸೋಮರೂಪವಾದ ಅನ್ನದಿಂದ । **ಜಾತಂ**— ಉತ್ಪನ್ನವಾದ । **ಮಧು**— ಮಧುರವಾದ ರಸವನ್ನು । **ಪ್ರ**— ಕೊಡುತ್ತೀಯೇ । (ಎಲೈ ಸೋಮವೇ ನೀನು) । **ಮದೇಷು**— ನಿನ್ನನ್ನು ಹರ್ಷಗೊಳಿಸುವ ಸ್ತೋತೃಜನರಿಗೆ । **ಸರ್ವಧಾ ಅಸಿ**— ಸಕಲಾಭೀಷ್ಟಗಳನ್ನು ಕೊಡುತ್ತೀಯೆ ।

॥ ಭಾವಾರ್ಥ ॥

ಎಲೈ ಸೋಮನೇ, ನೀನು ಎಲ್ಲರನ್ನು ನಾನಾವಿಧವಾಗಿ ಹರ್ಷಗೊಳಿಸುವವನು, ಮೇಧಾವಿಯು, ಸೋಮ ರೂಪವಾದ ಅನ್ನದಿಂದ ಉತ್ಪನ್ನವಾದ ಮಧುರ ರಸವನ್ನು ಎಲ್ಲರಿಗೂ ಕೊಡುತ್ತೀಯೇ ಮತ್ತು ನೀನು ನಿನ್ನನ್ನು ಸ್ತುತಿಗಳಿಂದ ತೃಪ್ತಿಪಡಿಸುವ ಸ್ತೋತೃಜನರಿಗೆ ಸಕಲವನ್ನೂ ಕೊಡುತ್ತೀಯೆ.

English Translation

You are wise, you are a seer, you bestow the sweet ( beverage ) produced from the Soma plant ; you are the giver of all things to those who praise you

॥ ಸಂಹಿತಾಪಾಠಃ ॥

ತವ ವಿಶ್ವೇ ಸಜೋಷಸೋ ದೇವಾಸಃ ಪೀತಿಮಾಶತ ।
ಮದೇಷು ಸರ್ವಧಾ ಅಸಿ ॥ ೩ ॥

॥ ಪದಪಾಠಃ ॥

ತವ । ವಿಶ್ವೇ । ಸಽಜೋಷಸಃ । ದೇವಾಸಃ । ಪೀತಿಂ । ಆಶತ ।
ಮದೇಷು । ಸರ್ವಽಧಾಃ । ಅಸಿ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತವ ಪೀತಿಂ ಪಾನಂ ವಿಶ್ವೇ ದೇವಾಸೋ ದೇವಾಃ ಸಜೋಷಸಃ ಸಮಾನಪ್ರೀತಯಃ ಸಂತ ಆಶತ । ಪ್ರಾಪ್ನುವನ್ ॥**

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ತವ**—ನಿನ್ನ । **ಪೀತಿಂ**—ಪಾನವನ್ನು ಮಾಡಿ । **ವಿಶ್ವೇ**—ಸಮಸ್ತರಾದ । **ದೇವಾಸಃ**—ದೇವತೆಗಳು । **ಸಜೋಷಸಃ**—ಸಮಾನಪ್ರೀತಿಯುಳ್ಳವರಾಗಿ (ಹರ್ಷಯುಕ್ತರಾಗಿ) **ಆಶತ**-ಆಗುತ್ತಾರೆ । **ಮದೇಷು**—ನಿನ್ನನ್ನು ಸ್ತುತಿಗಳಿಂದ ಹರ್ಷಗೊಳಿಸುವ ಸ್ತೋತೃಗಳಿಗೆ । **ಸರ್ವಧಾ ಅಸಿ**—ಸಮಸ್ತ ಇಷ್ಟಾರ್ಥಗಳನ್ನು ಕೊಡುತ್ತೀಯೆ ।

॥ ಭಾವಾರ್ಥ ॥

ಎಲೈ ಸೋಮನೇ, ನಿನ್ನನ್ನು ಪಾನಮಾಡಿ ಸಮಸ್ತ ದೇವತೆಗಳೂ ಒಂದೇ ವಿಧವಾದ ಹರ್ಷವನ್ನು ಪಡೆಯುತ್ತಾರೆ. ನಿನ್ನನ್ನು ಸ್ತುತಿಸುವವರಿಗೆ ನೀನು ಸಕಲಾಭೀಷ್ಟಗಳನ್ನು ಒದಗಿಸಿಕೊಡುವೆ.

## English Translation

All the gods together pleased enjoy your drinking; you are the giver of all things to those who praise you

॥ ಸಂಹಿತಾಪಾಠಃ ॥

ಆ ಯೋ ವಿಶ್ವಾನಿ ವಾರ್ಯಾ ವಸೂನಿ ಹಸ್ತಯೋರ್ದಧೇ ।
ಮದೇಷು ಸರ್ವಧಾ ಅಸಿ ॥ ೪ ॥

॥ ಪದಪಾಠಃ ॥

ಆ । ಯಃ । ವಿಶ್ವಾನಿ । ವಾರ್ಯಾ । ವಸೂನಿ । ಹಸ್ತಯೋಃ । ದಧೇ ।
ಮದೇಷು । ಸರ್ವಽಧಾಃ । ಅಸಿ ॥ ೪ ॥

॥ ಸಾಯಣಭಾಷ್ಯಂ ॥

**ಯಃ ಸೋಮಃ ವಿಶ್ವಾನಿ ವಾರ್ಯಾ ವರಣೀಯಾನಿ ವಸೂನಿ ಧನಾನಿ ಸ್ತೋತುರ್ಹಸ್ತಯೋರಾ ದಧೇ ಕರೋತಿ । ಪ್ರಯಚ್ಛತೀತ್ಯರ್ಥಃ । ಮದೇಷು ಸರ್ವಧಾ ಅಸೀತಿ । ಅಥವಾ ಸ ಶುಷ್ಮೀತ್ಯುತ್ತರ-ಸಂಬಂಧಃ ॥**

॥ ಪ್ರತಿಪದಾರ್ಥ ॥

**ಯಃ**—ಯಾವ ಸೋಮವು । **ವಿಶ್ವಾನಿ**—ಸಮಸ್ತವಾದ । **ವಾರ್ಯಾ**—ಸರ್ವರಿಂದಲೂ ಅಪೇಕ್ಷಿಸಲ್ಪಡುವ । **ವಸೂನಿ**—ಧನಗಳನ್ನು । (**ಸ್ತೋತುಃ**—ಸ್ತೋತ್ರಮಾಡುವ ಪುರುಷನ) । **ಹಸ್ತಯೋಃ**—ಕೈಗಳಲ್ಲಿ । **ದಧೇ**—ಇಡುವನೋ (ಅಂತಹ ಎಲೈ ಸೋಮವೇ ನೀನು) । **ಮದೇಷು**—ನಿನ್ನನ್ನು ಹರ್ಷಗೊಳಿಸುವ ಜನರಿಗೆ । **ಸರ್ವಧಾ ಅಸಿ**—ಸಕಲವನ್ನೂ ತುಂಬಿ ಕೊಡುತ್ತೀಯೆ ।

॥ ಭಾವಾರ್ಥ ॥

ಯಾವ ಸೋಮದೇವನು ಸಕಲರೂ ಅಪೇಕ್ಷಿಸುವ ಸಮಸ್ತ ಧನಗಳನ್ನು ಸ್ತೋತ್ರಮಾಡುವ ಪುರುಷನ ಕೈಗಳಲ್ಲಿ ತುಂಬಿ ಕೊಡುವನೋ ಅಂತಹ ಎಲೈ ಸೋಮದೇವನೇ ನೀನು ನಿನ್ನನ್ನು ಸ್ತುತಿಸಿ ಹರ್ಷಗೊಳಿಸುವ ಜನರಿಗೆ ಸಮಸ್ತ ಇಷ್ಟಗಳನ್ನು ಒದಗಿಸಿಕೊಡುತ್ತೀಯೆ.

## English Translation

( You are he ) who places in the hands ( of the worshipper ) all desirable riches; you are the giver of all things to those who praise you.

॥ ಸಂಹಿತಾಪಾಠಃ ॥

**ಯು ಇಮೇ ರೋದಸೀ ಮಹೀ ಸಂ ಮಾತರೇವ ದೋಹತೇ ।**
**ಮದೇಷು ಸರ್ವಧಾ ಅಸಿ ॥ ೫ ॥**

॥ ಪದಪಾಠಃ ॥

**ಯಃ । ಇಮೇ ಇತಿ । ರೋದಸೀ ಇತಿ । ಮಹೀ ಇತಿ । ಸಂ । ಮಾತರಾಽಇವ । ದೋಹತೇ ।**
**ಮದೇಷು । ಸರ್ವಽಧಾಃ । ಅಸಿ ॥ ೫ ॥**

॥ ಸಾಯಣಭಾಷ್ಯಂ ॥

**ಯಃ ಸೋಮ ಇಮೇ ಮಹೀ ಮಹತ್ಯೌ ರೋದಸೀ ದ್ಯಾವಾಪೃಥಿವ್ಯೌ ಸಂ ದೋಹತೇ । ಉಭಯೋಃ ಸಾರಂ ಪರಿಗೃಹ್ಣಾತೀತ್ಯರ್ಥಃ । ಮಾತರೇವ ಯಥಾ ದ್ವೇ ಮಾತರಾವೇಕೋ ವತ್ಸೋ ದೋಹತೇ ತದ್ವತ್ ॥**

॥ ಪ್ರತಿಪದಾರ್ಥ ॥

**ಯಃ**—ಯಾವ ಸೋಮದೇವನು । **ಇಮೇ**—ಈ । **ಮಹೀ**—ಮಹತ್ತಾದ । **ರೋದಸೀ**—ದ್ಯಾವಾಪೃಥಿವಿಗಳನ್ನು (ಗಳಿಂದ) । **ಸಂ ದೋಹತೇ**—ಅವುಗಳ ಸಾರವನ್ನು ಸ್ವೀಕರಿಸಿ ಸ್ತೋತೃಜನರಿಗೆ ಒದಗಿಸುವನೋ (ಅಂತಹ ಎಲೈ ಸೋಮನೇ ನೀನು) । **ಮದೇಷು**—ನಿನ್ನನ್ನು ಸ್ತುತಿಗಳಿಂದ ಹರ್ಷಗೊಳಿಸುವ ಜನರಲ್ಲಿ । **ಸರ್ವಧಾ ಅಸಿ**—ಸಕಲ ಇಷ್ಟಗಳನ್ನು ತುಂಬಿಡುತ್ತೀಯೆ ।

॥ ಭಾವಾರ್ಥ ॥

ಯಾವ ಸೋಮದೇವನು ಅತ್ಯಂತ ವಿಸ್ತೃತವಾದ ಈ ದ್ಯಾವಾಪೃಥಿವಿಗಳಿಂದ ಅವುಗಳ ಸಾರಭೂತವಾದ ಶ್ರೇಷ್ಠವಸ್ತುಗಳನ್ನು ತೆಗೆದು ಸ್ತೋತೃಜನರಿಗೆ ಒದಗಿಸಿಕೊಡುವನೋ ಅಂತಹ ಎಲೈ ಸೋಮನೇ, ನೀನು ನಿನ್ನನ್ನು ಸ್ತುತಿಗಳಿಂದ ಹರ್ಷಗೊಳಿಸುವ ಸ್ತೋತೃಜನರಿಗೆ ಸಕಲೇಷ್ಟಾರ್ಥಗಳನ್ನು ಕೊಡುತ್ತೀಯೆ

English Translation

( You are he ) who milks this great heaven and earth like two mothers; you are the giver of all things to those who praise you

॥ ಸಂಹಿತಾಪಾಠಃ ॥

**ಪರಿ ಯೋ ರೋದಸೀ ಉಭೇ ಸದ್ಯೋ ವಾಜೇಭಿರರ್ಷತಿ ।**
**ಮದೇಷು ಸರ್ವಧಾ ಅಸಿ ॥ ೬ ॥**

॥ ಪದಪಾಠಃ ॥

ಪರಿ । ಯಃ । ರೋದಸೀ ಇತಿ । ಉಭೇ ಇತಿ । ಸದ್ಯಃ । ವಾಜೇಭಿಃ । ಅರ್ಷತಿ ।

ಮದೇಷು । ಸರ್ವऽಧಾಃ । ಅಸಿ ॥ ೬ ॥

॥ ಸಾಯಣಭಾಷ್ಯಂ ॥

ಯಃ ಸೋಮ ಉಭೇ ರೋದಸೀ ದ್ಯಾವಾಪೃಥಿವ್ಯೌ ಸದ್ಯಸ್ತದಾನೀಮೇವ ವಾಜೇಭಿರನ್ನೈಃ ಪರ್ಯರ್ಷತಿ ಪರಿಗಚ್ಛತಿ । ಸೋಮಮಾಹುತ್ಯಾ ದ್ಯಾವಾಪೃಥಿವ್ಯಾವನ್ನವತ್ಯೌ ಕರೋತೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಯಃ—ಯಾವ ಸೋಮದೇವನು । ಉಭೇ ರೋದಸೀ—ದ್ಯಾವಾಪೃಥಿವಿಗಳೆರಡನ್ನೂ । ಸದ್ಯಃ—ತಕ್ಷಣವೇ । ವಾಜೇಭಿಃ—ಅನ್ನಗಳಿಂದ ತುಂಬಿ । ಪರಿ ಅರ್ಷತಿ—ಸಮೃದ್ಧವನ್ನಾಗಿ ಮಾಡುವನೋ (ಅಂತಹ ಎಲೈ ಸೋಮನೇ ನೀನು) । ಮದೇಷು—ನಿನ್ನನ್ನು ಹರ್ಷಗೊಳಿಸುವ ಸ್ತೋತೃಜನರಿಗೆ । ಸರ್ವಧಾ ಅಸಿ—ಸರ್ವ ವಸ್ತುಗಳನ್ನು ಕೊಡುವವನಾಗಿದ್ದೀಯೆ ।

॥ ಭಾವಾರ್ಥ ॥

ಯಾವ ಸೋಮದೇವನು ದ್ಯಾವಾಪೃಥಿವಿಗಳೆರಡನ್ನೂ ತಕ್ಷಣವೇ ಅನ್ನಾದ್ಯಾಹಾರಗಳಿಂದ ತುಂಬಿ ಸಮೃದ್ಧಿಯನ್ನುಂಟುಮಾಡುವನೋ ಅಂತಹ ಎಲೈ ಸೋಮನೇ ನೀನು ನಿನ್ನನ್ನು ಸ್ತುತಿಸಿ ಹರ್ಷಗೊಳಿಸುವ ಜನರಿಗೆ ಸಕಲಾಭೀಷ್ಟಗಳನ್ನು ಒದಗಿಸಿಕೊಡುವೆ.

English Translation

(You are he) who at once supplies both heaven and earth with viands; you are the giver of all things to those who praise you.

॥ ಸಂಹಿತಾಪಾಠಃ ॥

ಸ ಶುಷ್ಮೀ ಕಲಶೇಷ್ವಾ ಪುನಾನೋ ಅಚಿಕ್ರದತ್ ।

ಮದೇಷು ಸರ್ವಧಾ ಅಸಿ ॥ ೭ ॥

॥ ಪದಪಾಠಃ ॥

ಸಃ । ಶುಷ್ಮೀ । ಕಲಶೇಷು । ಆ । ಪುನಾನಃ । ಅಚಿಕ್ರದತ್ ।

ಮದೇಷು । ಸರ್ವऽಧಾಃ । ಅಸಿ ॥ ೭ ॥

॥ ಸಾಯಣಭಾಷ್ಯಂ ॥

**ಉಕ್ತರೀತ್ಯಾ ಮಹಾನ್ಸ ಸೋಮಃ ಶುಷ್ಮೀ ಬಲವಾನ್ಪುನಾನಃ ಪೂಯಮಾನಃ ಸನ್ನಾಚಿಕ್ರದತ್ । ಶಬ್ದಂ ಕರೋತಿ । ಅತ್ರ ಸರ್ವತ್ರ ಯಥೋಚಿತಮುತ್ತರಪಾದೋ ನೇಯಃ ॥**

॥ ಪ್ರತಿಪದಾರ್ಥ ॥

**ಸಃ**—ಹಿಂದೆ ಹೇಳಿದ ಗುಣವಿಶಿಷ್ಟನಾದ ಸೋಮದೇವನು । **ಶುಷ್ಮೀ**—ಶಕ್ತಿಯುತನಾಗಿಯೂ । **ಪುನಾನಃ**—ಶೋಧಿಸಲ್ಪಟ್ಟವನಾಗಿಯೂ । **ಕಲಶೇಷು**—ದ್ರೋಣಕಲಶಗಳಲ್ಲಿ ಬೀಳುವಾಗ । **ಆ ಅಚಿಕ್ರದತ್**—ಜಳಜಳನೆ ಶಬ್ದವನ್ನು ಮಾಡುತ್ತಾನೆ (ಎಲೈ ಸೋಮದೇವನೇ ನೀನು) । **ಮದೇಷು**—ನಿನ್ನನ್ನು ಸ್ತುತಿಸಿ ಹರ್ಷಗೊಳಿಸುವ ಜನರಿಗೆ । **ಸರ್ವಧಾ ಅಸಿ**—ಸಕಲವನ್ನೂ ಕೊಡುವವನಾಗಿದ್ದೀಯೆ ।

॥ ಭಾವಾರ್ಥ ॥

ಹಿಂದೆ ಹೇಳಿದ ಸಮಸ್ತ ಗುಣವಿಶಿಷ್ಟನಾದ ಸೋಮನು ಶಕ್ತಿಯುತನಾಗಿಯೂ, ದಶಾಪವಿತ್ರದಲ್ಲಿ ಶೋಧಿತನಾಗಿಯೂ ಆಗಿ ದ್ರೋಣಕಲಶಗಳಲ್ಲಿ ಬೀಳುವಾಗ ಜಳಜಳನೆ ಶಬ್ದವನ್ನು ಮಾಡುತ್ತಾನೆ. ಅಂತಹ ಎಲೈ ಸೋಮನೇ ನೀನು ನಿನ್ನನ್ನು ಸ್ತುತಿಸಿ ಹರ್ಷಗೊಳಿಸುವ ಜನರಿಗೆ ಸಮಸ್ತ ಇಷ್ಟಾರ್ಥಗಳನ್ನು ಕೊಡುತ್ತೀಯೆ.

English Translation

This vigorous Soma, while being purified, murmurs in the pitchers; you are the giver of all things to those who praise you.

## ಹತ್ತೊಂಬತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಯತ್ಸೋಮೇತಿ ಸಪ್ತರ್ಚಮೇಕೋನವಿಂಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಯತ್ಸೋಮೇತ್ಯನುಕ್ರಾಂತಂ । ಗತೋ ವಿನಿಯೋಗಃ ॥**

ಅನುವಾದವು—**ಯತ್ಸೋಮ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಹತ್ತೊಂಭತ್ತನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ— **ಯತ್ಸೋಮ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೧೯

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೧೯ ।
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೯ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ।
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಯತ್ಸೋಮ ಚಿತ್ರಮುಕ್ಥ್ಯಂ ದಿವ್ಯಂ ಪಾರ್ಥಿವಂ ವಸು ।
ತನ್ನಃ ಪುನಾನ ಆ ಭರ ॥ ೧ ॥

॥ ಪದಪಾಠಃ ॥

ಯತ್ । ಸೋಮ । ಚಿತ್ರಂ । ಉಕ್ಥ್ಯಂ । ದಿವ್ಯಂ । ಪಾರ್ಥಿವಂ । ವಸು ।
ತತ್ । ನಃ । ಪುನಾನಃ । ಆ । ಭರ ॥ ೧ ॥

॥ ಸಾಯಣಭಾಷ್ಯಂ ॥

ಹೇ ಸೋಮ ಯಚ್ಚಿತ್ರಂ ಚಾಯನೀಯಮುಕ್ಥ್ಯಂ ಸ್ತುತ್ಯಂ ದಿವ್ಯಂ ದಿವಿ ಭವಂ ಪಾರ್ಥಿವಂ ಪೃಥಿವೀಸಂಬದ್ಧಂ ಚ ವಸು ಧನಮಸ್ತಿ ತನ್ನೋಽಸ್ಮಭ್ಯಂ ಪುನಾನಃ ಪೂಯಮಾನಃ ಸನ್ನಾ ಭರ। ಆಹರ ॥

॥ ಪ್ರತಿಪದಾರ್ಥ ॥

**ಸೋಮ**— ಎಲೈ ಸೋಮನೇ । **ಚಿತ್ರಂ**—ನಾನಾವಿಧವಾದವೂ । **ಉಕ್ಥ್ಯಂ**—ಪ್ರಶಸ್ತವಾದವೂ । **ದಿವ್ಯಂ**—ಸ್ವರ್ಗಲೋಕದಲ್ಲಿರುವವೂ । **ಪಾರ್ಥಿವಂ**—ಪೃಥಿವಿಯಲ್ಲಿರುವವೂ ಆದ । **ಯತ್ ವಸು**—ಯಾವ ಧನವಿರುವುದೋ । **ತತ್**—ಅದನ್ನು । **ನಃ**—ನಮಗೆ । **ಪುನಾನಃ**— ನೀನು ಶೋಧಿಸಲ್ಪಟ್ಟಾಗ (ಸ್ತುತಿಸಲ್ಪಟ್ಟಾಗ । **ಆ ಭರ**—ತಂದೊದಗಿಸು

॥ ಭಾವಾರ್ಥ ॥

ಎಲೈ ಸೋಮದೇವನೇ, ಸ್ವರ್ಗದಲ್ಲಿಯೂ, ಪೃಥಿವಿಯಲ್ಲಿಯೂ ನಾನಾವಿಧವಾದ ಮತ್ತು ಶ್ರೇಷ್ಠವಾದ ಯಾವ ಯಾವ ಧನವಿರುವುದೋ ಆದನ್ನು ನೀನು ಶೋಧಿಸಲ್ಪಟ್ಟಕೂಡಲೇ ನಮಗೆ ತಂದೊದಗಿಸು.

English Translation

Whatever wonderful glorious wealth there be in heaven or in earth you, Soma, being purified, bring it to us.

॥ ಸಂಹಿತಾಪಾಠಃ ॥

ಯುವಂ ಹಿ ಸ್ಥಃ ಸ್ವರ್ಪತೀ ಇಂದ್ರಶ್ಚ ಸೋಮ ಗೋಪತೀ ।
ಈಶಾನಾ ಪಿಪ್ಯತಂ ಧಿಯಃ ॥ ೨ ॥

॥ ಪದಪಾಠಃ ॥

ಯುವಂ । ಹಿ । ಸ್ಥಃ । ಸ್ವಃ ಪತೀ ಇತಿ ಸ್ವಃಽಪತೀ । ಇಂದ್ರಃ । ಚ । ಸೋಮ । ಗೋಪತೀ

ಇತಿ ಗೋಽಪತೀ ।

ಈಶಾನಾ । ಪಿನ್ವತಂ । ಧಿಯಃ ॥ ೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಮಿಂದ್ರಶ್ಚ ಯುವಂ ಹಿ ಯುವಾಂ ಹಿ ಖಲು ಸ್ವರ್ಪತೀ ಸರ್ವಸ್ಯ ಸ್ವಾಮಿನೌ ಸ್ಥಃ । ಭವಥಃ । ತಥಾ ಗೋಪತೀ ಗವಾಂ ಪಾಲಕಾವೀಶಾನೇಶ್ವರೌ ಸಂತೌ ಧಿಯೋಽಸ್ಮದೀಯಾನಿ ಕರ್ಮಾಣಿ ಪಿನ್ವತಂ । ಪ್ಯಾಯಯತಂ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮದೇವನೇ । **ತ್ವಂ**—ನೀನೂ । **ಇಂದ್ರಶ್ಚ**—ಇಂದ್ರನೂ । **ಯುವಂ ಹಿ**—ನೀವಿಬ್ಬರೂ । **ಸ್ವರ್ಪತೀ**—ಸಮಸ್ತಕ್ಕೂ ಒಡೆಯರಾಗಿ। **ಸ್ಥಃ**—ಇರುತ್ತೀರಿ (ಹಾಗೆಯೇ ನೀವಿಬ್ಬರೂ)। **ಗೋಪತೀ**—ಗೋವುಗಳ ಪಾಲಕರಾಗಿಯೂ । **ಈಶಾನಾ**—ಎಲ್ಲರಿಗೂ ಒಡೆಯರಾಗಿಯೂ ಇರುತ್ತೀರಿ । **ಧಿಯಃ**—ನಮ್ಮ ಯಜ್ಞಾದಿಕರ್ಮಗಳನ್ನು । **ಪಿನ್ವತಂ**—ವೃದ್ಧಿಪಡಿಸಿರಿ

॥ ಭಾವಾರ್ಥ ॥

ಎಲೈ ಸೋಮದೇವನೇ, ನೀನೂ ಇಂದ್ರನೂ ನೀವಿಬ್ಬರೂ ಸಮಸ್ತಕ್ಕೂ ಒಡೆಯರಾಗಿದ್ದೀರಿ. ಹಾಗೆಯೇ ಗೋವುಗಳ ಸಂರಕ್ಷಕರೂ ಎಲ್ಲರಿಗೂ ಪ್ರಭುಗಳೂ ಆಗಿದ್ದೀರಿ. ಆದ್ದರಿಂದ ನಾವು ಮಾಡುವ ಯಜ್ಞಾದಿ ಕರ್ಮಗಳನ್ನು ವೃದ್ಧಿಯಾಗುವಂತೆ ಮಾಡಿರಿ.

English Translation

You, Soma and Indra, are the lords of all, the lords of cattle, for the rulers, prosper our rites.

॥ ಸಂಹಿತಾಪಾಠಃ ॥

ವೃಷಾ ಪುನಾನ ಆಯುಷು ಸ್ತನಯನ್ನಧಿ ಬರ್ಹಿಷಿ ।

ಹರಿಃ ಸನ್ಯೋನಿಮಾಸದತ್ ॥ ೩ ॥

॥ ಪದಪಾಠಃ ॥

ವೃಷಾ । ಪುನಾನಃ । ಆಯುಷು । ಸ್ತನಯನ್ । ಅಧಿ । ಬರ್ಹಿಷಿ ।

ಹರಿಃ । ಸನ್ । ಯೋನಿಂ । ಆ । ಅಸದತ್ ॥ ೩ ॥

॥ ಸಾಯಣಭಾಷ್ಯಂ ॥

ವೃಷಾ ಕಾಮಾನಾಂ ವರ್ಷಕಃ ಸೋಮ ಆಯುಷು ಮನುಷ್ಯೇಷ್ವಧ್ವರ್ಯ್ವಾದಿಷು ಪುನಾನಃ ಸನ್ ಸ್ತನಯಚ್ಛಬ್ದಂ ಕರ್ವನ್ನಧಿ ಬರ್ಹಿಷಿ ! ಅಧೀತಿ ಸಪ್ತಮ್ಯರ್ಥಾನುವಾದೀ । ಅಸ್ತೀರ್ಣೇ ದರ್ಭೇ ಹರಿರ್ಹರಿತವರ್ಣಃ ಸನ್ಯೋನಿಂ ಸ್ವಕೀಯಂ ಸ್ಥಾನಮಾಸದತ್ । ಆಸೀದತಿ ॥

॥ ಪ್ರತಿಪದಾರ್ಥ ॥

**ವೃಷಾ**—ಕಾಮವರ್ಷಕನಾದ । **ಸೋಮಃ**—ಸೋಮದೇವನು । **ಆಯುಷು**—ಮಾನವರಾದ ಅಧ್ವರ್ಯ್ವಾದಿ ಋತ್ವಿಗ್ಜನರಲ್ಲಿ । **ಪುನಾನಃ**—ಶೋಧಿತನಾಗಿ । **ಸ್ತನಯನ್**—ಜಳಜಳನೆ ಶಬ್ದಮಾಡುತ್ತಾ । **ಅಧಿ ಬರ್ಹಿಷಿ**—ಆಸನಾರ್ಥವಾಗಿ ಹರಡಿರುವ ದರ್ಭೆಯಮೇಲೆ । **ಹರಿಃ ಸನ್**—ಹರಿತ (ಹಸರು) ವರ್ಣದಿಂದ ಶೋಭಿಸುತ್ತಾ । **ಯೋನಿಂ**—ತನ್ನ ಸ್ವಕೀಯವಾದ ಸ್ಥಾನದಲ್ಲಿ । **ಆ ಅಸದತ್**—ಕುಳಿತುಕೊಳ್ಳುತ್ತಾನೆ.

॥ ಭಾವಾರ್ಥ ॥

ಕಾಮವರ್ಷಕನಾದ ಸೋಮದೇವನು ಮಾನವರಾದ ಅಧ್ವರ್ಯ್ವಾದಿ ಋತ್ವಿಗ್ಜನರಿಂದ ಶೋಧಿಸಲ್ಪಟ್ಟು ಜಳಜಳನೆ ಶಬ್ದಮಾಡುತ್ತಾ ಆಸನಾರ್ಥವಾಗಿ ಹರಡಿರುವ ದರ್ಭೆಗಳಮೇಲೆ ತನ್ನ ಸ್ವಕೀಯವಾದ ಸ್ಥಾನದಲ್ಲಿ (ದ್ರೋಣಕಲಶದಲ್ಲಿ) ಕುಳಿತುಕೊಳ್ಳುತ್ತಾನೆ.

English Translation

The showerer (of benefits) being purified amongst men (lies) murmuring upon the sacred grass,—greentinted he sits down in his proper place.

॥ ಸಂಹಿತಾಪಾಠಃ ॥

ಅವಾವಶಂತ ಧೀತಯೋ ವೃಷಭಸ್ಯಾಧಿ ರೇತಸಿ ।
ಸೂನೋರ್ವತ್ಸಸ್ಯ ಮಾತರಃ ॥ ೪ ॥

॥ ಪದಪಾಠಃ ॥

ಅವಾವಶಂತ । ಧೀತಯಃ । ವೃಷಭಸ್ಯ । ಅಧಿ । ರೇತಸಿ ।
ಸೂನೋಃ । ವತ್ಸಸ್ಯ । ಮಾತರಃ ॥ ೪ ॥

॥ ಸಾಯಣಭಾಷ್ಯಂ ॥

ಧೀತಯೋ ಧೀಯಮಾನಾಃ ಸೋಮಾಖ್ಯೇನ ವತ್ಸೇನ ಪೀಯಮಾನಾ ವಸತೀವರ್ಯಃ ॥ ಕ್ತಿನ್ ವ್ಯತ್ಯಯೇನಾಂತೋದಾತ್ತಃ ॥ ಅಧಿ ರೇತಸಿ ಸ್ವಕೀಯೇ ಸಾರೇ ವೃಷಭಸ್ಯ ವರ್ಷಕಸ್ಯ ಸೋಮಸ್ಯ ।

ಸೋಮಮಿಶ್ರ್ಯರ್ಥಃ । ಅವಾವಶಂತ । ಪುನಃ ಕಾಮಯಂತೇ । ಸೋಮಮಾಪ್ಯಾಯಯಿತುಂ ಕಾಮಯಂತ ಇತ್ಯರ್ಥಃ । ತದೇವಾಹ । ಸೂನೋಃ ಸ್ವಪುತ್ರಸ್ಥಾನೀಯಸ್ಯ ವತ್ಸಸ್ಯ ಸೋಮಸ್ಯ ಮಾತರೋ ನಿರ್ಮಾತ್ರ್ಯಃ ಪ್ರವೃದ್ಧಿಕಾಮಾ ಮಾತೃಸ್ಥಾನೀಯಾ ಅವಾವಶಂತೇತಿ ಸಮನ್ವಯಃ ॥

॥ ಪ್ರತಿಪದಾರ್ಥ ॥

**ಧೀತಯಃ**—ಸೋಮವೆಂಬ ಕರುವಿನಿಂದ ಪಾನಮಾಡಲ್ಪಡುವ ವಸತೀವರಿಯ ಉದಕಗಳೂ । **ವೃಷಭಸ್ಯ**—ಕಾಮವರ್ಷಕವಾದ ಸೋಮದ । **ಅಧಿ ರೇತಸಿ**—ತನ್ನದೇ ಆದ ಸಾರದಲ್ಲಿ ಮಿಶ್ರಿತವಾಗಲು । **ಅವಾವಶಂತೆ**—ಪುನಃ ಪುನಃ ಅಪೇಕ್ಷಿಸುತ್ತದೆ (ಹೇಗೆಂದರೆ) । **ಸೂನೋಃ ವತ್ಸಸ್ಯ**—ತಮ್ಮ ಕರುವಿನ ವಿಷಯದಲ್ಲಿ । **ಮಾತರಃ**—ಮಾತೃಗಳಾದ ಗೋವುಗಳಂತೆ ವತ್ಸಭೂತವಾದ ಸೋಮವು ತನ್ನ ಮಾತೃಸ್ಥಾನೀಯವಾದ ವಸತೀವರ್ಯುದಕವನ್ನು ಪುನಃ ಪುನಃ ಅಪೇಕ್ಷಿಸುತ್ತದೆ.

॥ ಭಾವಾರ್ಥ ॥

ಕರುಗಳು ತಮ್ಮ ತಾಯಿಯ ಹಾಲನ್ನು ಪಾನಮಾಡಲು ಪುನಃ ಪುನಃ ಅಪೇಕ್ಷಿಸುವಂತೆ ಕರುವಿನಂತಿರುವ ಸೋಮರಸಗಳು ತನ್ನ ಮಾತೃಸ್ಥಾನೀಯವಾದ ವಸತೀವರ್ಯುದಕಗಳಲ್ಲಿ ಮಿಶ್ರಿತವಾಗಲು ಪುನಃ ಪುನಃ ಅಪೇಕ್ಷಿಸುತ್ತನೆ.

## English Translation

The mothers of the male calf, which are sucked by him, long to cherish the bull with their strength.

॥ ಸಂಹಿತಾಪಾಠಃ ॥

ಕುವಿದ್ವೃಷಣ್ಯಂತೀಭ್ಯಃ ಪುನಾನೋ ಗರ್ಭಮಾದಧತ್ ।
ಯಾಃ ಶುಕ್ರಂ ದುಹತೇ ಪಯಃ ॥ ೫ ॥

॥ ಪದಪಾಠಃ ॥

ಕುವಿತ್ । ವೃಷಣ್ಯಂತೀಭ್ಯಃ । ಪುನಾನಃ । ಗರ್ಭಂ । ಆऽದಧತ್ ।
ಯಾಃ । ಶುಕ್ರಂ । ದುಹತೇ । ಪಯಃ ॥ ೫ ॥

॥ ಸಾಯಣಭಾಷ್ಯಂ ॥

ವೃಷಣ್ಯಂತೀಭ್ಯೋ ವೃಷಣಂ ಸೋಮಮಾತ್ಮನಃ ಇಚ್ಛಂತೀಭ್ಯೋ ವಸತೀವರೀಭ್ಯಃ ಪುನಾನಃ ಪೂಯಮಾನೋ ಮಿಶ್ರ್ಯಮಾಣೋ ಗರ್ಭಂ ಸ್ವಗರ್ಭಸ್ಥಾನೀಯಂ ರಸಂ ಕುವಿದ್ಬಹು ಪ್ರಭೂತಮಾದಧತ್ । ಕರೋತಿ । ಯಾ ಆಪಃ ಶುಕ್ರಂ ದೀಪ್ತಂ ಪಯೋ ದುಹತೇ ಸ್ವವತ್ಸಾಯ ಸೋಮಾಯ ತಾಭ್ಯೋ ಗರ್ಭಮಾದಧತ್ ॥

॥ ಪ್ರತಿಪದಾರ್ಥ ॥

**ವೃಷಣ್ಯಂತೀಭ್ಯಃ**—ಸೋಮರಸವನ್ನಪೇಕ್ಷಿಸುತ್ತಿರುವ ವಸತೀವರ್ಯುದಕಗಳಿಗೆ ಮಿಶ್ರಿತವಾಗುವುದಕ್ಕಾಗಿ। **ಪುನಾನಃ**— ಶೋಧಿತವಾದ ಸೋಮವು । **ಗರ್ಭಂ**— ಗರ್ಭಸ್ಥಾನೀಯವಾದ ರಸವನ್ನು । **ಕುವಿತ್**— ಬಹಳವಾಗಿ । **ಆದಧತ್**— ಉಂಟುಮಾಡುತ್ತದೆ । **ಯಾಃ**— ಯಾವ ಆ ವಸತೀವರ್ಯುದಕಗಳು । **ಶುಕ್ರಂ**— ಪ್ರಕಾಶಮಾನವಾದ ಎಂದರೆ ಸ್ವಚ್ಛವಾದ । **ಪಯಃ**— ಹಾಲನ್ನು । **ದುಹತೇ**— ವತ್ಸಸ್ಥಾನೀಯವಾದ ಸೋಮಕ್ಕಾಗಿ ಕರೆಯುತ್ತವೆ

॥ ಭಾವಾರ್ಥ ॥

ಸೋಮರಸವನ್ನು ಅಪೇಕ್ಷಿಸುತ್ತಿರುವ ಮಾತೃಸ್ಥಾನೀಯವಾದ ವಸತೀವರ್ಯುದಕಗಳಲ್ಲಿ ಶೋಧಿತವಾದ ಅಥವಾ ಮಿಶ್ರಿತವಾದ ಸೋಮವು ಸಾರಭೂತವಾದ ತನ್ನ ರಸವನ್ನು ಬೆರೆಸಿ ಗರ್ಭವನ್ನು ಧರಿಸುವಂತೆ ಮಾಡುತ್ತದೆ. ಅನಂತರ ಆ ಉದಕಗಳು ತಮ್ಮ ವತ್ಸಸ್ಥಾನೀಯವಾದ ಸೋಮಕ್ಕೆ ಮಿಶ್ರವಾಡಲು ಶುದ್ಧವಾದ ಹಾಲನ್ನು ಕರೆಯುತ್ತವೆ.

## English Translation

The purified Soma has implanted many a germ in those ( waters ) desirous of conception, which yield bright milk.

॥ ವಿಶೇಷವಿಷಯಗಳು ॥

ಈ ಋಕ್ಕಿನ ಮತ್ತು ಹಿಂದಿನ ಋಕ್ಕಿನ ಅರ್ಥಾಭಿಪ್ರಾಯಗಳು ಸ್ಪಷ್ಟವಾಗಿಲ್ಲ ಋಷಿಯು ವಸತೀವರೀ ಪಾತ್ರೆಯಲ್ಲಿರುವ ಉದಕಗಳನ್ನು ಗೋವುಗಳೆಂದೂ ಸೋಮವನ್ನು ಕರುವೆಂದೂ ಕರೆದು ಸೋಮ ಮತ್ತು ಉದಕಗಳ ಮಿಶ್ರಣವನ್ನು ಕ್ಷೀರಪಾನಕಾಲದಲ್ಲಿ ಗೋವುಗಳು ತಮ್ಮ ಕರುವನ್ನು ಅಪೇಕ್ಷಿಸುವಂತೆ ಉದಕಗಳು ಸೋಮರಸದ ಮಿಶ್ರಣವನ್ನು ಅಪೇಕ್ಷಿಸುತ್ತವೆ ಎಂಬ ಉಪಮಾನದ ಮೂಲಕ ವರ್ಣಿಸಿದಾನೆ.

॥ ಸಂಹಿತಾಪಾಠಃ ॥

ಉಪ ಶಿಕ್ಷಾಪತಸ್ಥುಷೋ ಭಿಯಸಮಾ ಧೇಹಿ ಶತ್ರುಷು ।
ಪವಮಾನ ವಿದಾ ರಯಿಂ ॥ ೬ ॥

॥ ಪದಪಾಠಃ ॥

ಉಪ । ಶಿಕ್ಷ । ಅಪಽತಸ್ಥುಷಃ । ಭಿಯಸಂ । ಆ । ಧೇಹಿ । ಶತ್ರುಷು ।
ಪವಮಾನ । ವಿದಾಃ । ರಯಿಂ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಪವಮಾನ ಸೋಮ ಉಪ ಶಿಕ್ಷ । ತ್ವಂ ಸಮೀಪೇ ಕುರು । ಕಾನ್ । ಅಪತಸ್ಥುಷೋಽಪ-ಕ್ರಮ್ಯ ಸ್ಥಿತಾನ್ । ಅಸ್ಮದಭಿಮತಾನಿತ್ಯರ್ಥಃ । ಶತ್ರುಷ್ವಸ್ಮದ್ವಿರೋಧಿಷು ಭಿಯಸಂ ಭಯಮಾ ಧೇಹಿ । ಕುರು । ಜನಯ । ಅಸ್ಮಾಕಂ ತೇಷಾಂ ಶತ್ರೂಣಾಂ ರಯಿಂ ಧನಂ ವಿದಾಃ । ವಿಂದಸಿ ॥**

॥ ಪ್ರತಿಪದಾರ್ಥ ॥

**ಪವಮಾನ**—ಹರಿಯುತ್ತಿರುವ ಎಲೈ ಸೋಮನೇ । **ಅಪತಸ್ಥುಷಃ**—ದೂರದಲ್ಲಿರುವ ಎಂದರೆ ಇನ್ನೂ ನೆರವೇರದೇ ಇರುವ ನಮ್ಮ ಇಷ್ಟಾರ್ಥಗಳನ್ನು । **ಉಪ ಶಿಕ್ಷ**—ಸಮೀಪದಲ್ಲಿರುವಂತೆ ಎಂದರೆ ಪೂರ್ಣವಾಗುವಂತೆ ಮಾಡು । **ಶತ್ರುಷು**—ನಮ್ಮ ಶತ್ರುಗಳಲ್ಲಿ । **ಭಿಯಸಂ**—ಭಯವನ್ನು । **ಆ ಧೇಹಿ**—ಉಂಟುಮಾಡು । **ರಯಿಂ** — ಶತ್ರುಗಳಲ್ಲಿರುವ ಧನವನ್ನು । **ವಿದಾಃ**—ನಮಗಾಗಿ ಅಪಹರಿಸಿ ತಂದುಕೊಡು.

॥ ಭಾವಾರ್ಥ ॥

ಹರಿಯುತ್ತಿರುವ ಎಲೈ ಸೋಮನೇ, ದೂರದಲ್ಲಿರುವವರನ್ನು ಹತ್ತಿರದಲ್ಲಿರುವಂತೆ ಮಾಡು ಎಂದರೆ ಇನ್ನೂ ನೆರವೇರದಿರುವ ನಮ್ಮ ಇಷ್ಟಾರ್ಥಗಳನ್ನು ಪೂರಯಿಸು. ನಮ್ಮ ಶತ್ರುಗಳಲ್ಲಿ ಭಯವನ್ನುಂಟುಮಾಡು ಮತ್ತು ಅವರಲ್ಲಿರುವ ಧನವನ್ನು ನಮಗಾಗಿ ಅಪಹರಿಸಿ ತಂದುಕೊಡು

## English Translation

Bring near to us those who stand aloof, strike terror into our foes ; pure-flowing one, transfer to us their riches.

॥ ಸಂಹಿತಾಪಾಠಃ ॥

ನಿ ಶತ್ರೋಃ ಸೋಮ ವೃಷ್ಣ್ಯಂ ನಿ ಶುಷ್ಮಂ ನಿ ವಯಸ್ತಿರ ।
ದೂರೇ ವಾ ಸತೋ ಅಂತಿ ವಾ ॥ ೭ ॥

॥ ಪದಪಾಠಃ ॥

ನಿ । ಶತ್ರೋಃ । ಸೋಮ । ವೃಷ್ಣ್ಯಂ । ನಿ । ಶುಷ್ಮಂ । ನಿ । ವಯಃ । ತಿರ ।
ದೂರೇ । ವಾ । ಸತಃ । ಅಂತಿ । ವಾ ॥ ೭ ॥

॥ ಸಾಯಣಭಾಷ್ಯಂ ॥

**ಹೇ ಅಭಿಷೂಯಮಾಣ ಸೋಮ ತ್ವಂ ಶತ್ರೋರ್ವೃಷ್ಣ್ಯಂ ವರ್ಷಕಂ ಬಲಂ ನಿ ತಿರ । ನಿಪೂರ್ವಸ್ತಿರತಿರ್ನಾಶಾರ್ಥಃ । ನಾಶಯ । ತಥಾ ಶತ್ರೋಃ ಶುಷ್ಮಂ ಶೋಷಕಂ ತೇಜೋ ನಿ ತಿರ ।**

**ತಸ್ಯೈವ ವಯೋಽನ್ನಂ ಚ ನಿ ತಿರ । ಕೀದೃಶಸ್ಯ ಶತ್ರೋಃ । ದೂರೇ ವಾ ಸತೋಽಸ್ಮಚ್ಛತ್ರೋಃ ದೂರೇ ವರ್ತಮಾನಸ್ಯಾಂತಿ ವಾ ಸತೋಽಂತಿಕೇ ವರ್ತಮಾನಸ್ಯ ವಾ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ಶತ್ರೋಃ**—ನಮ್ಮ ಶತ್ರುವು । **ದೂರೇ ವಾ**—ದೂರದಲ್ಲಿದ್ದರೂ । **ಸತಃ ಅಂತಿ ವಾ**—ಅಥವಾ ಸಮೀಪದಲ್ಲಿದ್ದರೂ ಆ ಶತ್ರುವಿನ । **ವೃಷ್ಣ್ಯಂ**—ಬಲವನ್ನು । **ನಿ ತಿರ**—ನಾಶಮಾಡು। **ಶುಷ್ಮಂ**—ಅವನ ತೇಜಸ್ಸನ್ನು ಅಥವಾ ಸ್ಥೈರ್ಯವನ್ನೂ ನಾಶಮಾಡು । **ವಯಃ**—ಅವನಲ್ಲಿರುವ ಅನ್ನವನ್ನೂ ನಾಶಮಾಡು.

॥ ಭಾವಾರ್ಥ ॥

ಎಲೈ ಸೋಮನೇ, ದೂರದಲ್ಲಿ ಇರುವ ನಮ್ಮ ಶತ್ರುವಿನ ಅಥವಾ ಸಮೀಪದಲ್ಲಿರುವ ನಮ್ಮ ಶತ್ರುವಿನ ಬಲವನ್ನೂ, ಸ್ಥೈರ್ಯವನ್ನೂ, ಅನ್ನವನ್ನೂ ಸಂಪೂರ್ಣವಾಗಿ ನಾಶಮಾಡು.

English Translation

Destroy, Soma, the vigour, the energy, the subsistence of our enemy, whether he be far off or near

## ಇಪ್ಪತ್ತನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪ್ರ ಕವಿರಿತಿ ಸಪ್ತರ್ಚಂ ವಿಂಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪ್ರ ಕವಿರಿತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—**ಪ್ರ ಕವಿಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಇಪ್ಪತ್ತನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ—**ಪ್ರ ಕವಿಃ** ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

### ಸೂಕ್ತ—೨೦

ಮಂಡಲ—೯ । ಅನುವಾಕ—೧ । ಸೂಕ್ತ—೨೦ ।
ಅಷ್ಟಕ—೬ । ಅಧ್ಯಾಯ—೮ ॥ ವರ್ಗ—೧೦ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ।
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ।
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

। ಸಂಹಿತಾಪಾಠಃ ।

ಪ್ರ ಕವಿರ್ದೇವವೀತಯೇಽವ್ಯೋ ವಾರೇಭಿರರ್ಷತಿ ।
ಸಾಹ್ವಾನ್ವಿಶ್ವಾ ಅಭಿ ಸ್ಪೃಧಃ ॥ ೧ ॥

॥ ಪದಪಾಠಃ ॥

ಪ್ರ । ಕವಿಃ । ದೇವಽವೀತಯೇ । ಅವ್ಯಃ । ವಾರೇಭಿಃ । ಅರ್ಷತಿ ।
ಸಹ್ವಾನ್ । ವಿಶ್ವಾಃ । ಅಭಿ । ಸ್ಪೃಧಃ ॥ ೧ ॥

। ಸಾಯಣಭಾಷ್ಯಂ ।

**ಕವಿರ್ಮೇಧಾವೀ ಸೋಮೋ ದೇವವೀತಯೇ ದೇವಾನಾಂ ಪಾನಾಯಾವ್ಯೋಽವೇರ್ವಾರೇಭಿರ್ವಾರೈರ್ದಶಾಪವಿತ್ರೇಣ ಪ್ರಾರ್ಷತಿ । ಪ್ರಕರ್ಷೇಣ ಗಚ್ಛತಿ । ಸಾಹ್ವಾಞ್ಶತ್ರೂಣಾಂ ಸೋಢಾ ಸೋಮೋ ವಿಶ್ವಾಃ ಸ್ಪೃಧಃ ಸರ್ವಾನ್ಸಂಗ್ರಾಮಾನ್ಹಿಂಸಕಾನ್ವಾಭಿ ಭವತೀತಿ ಶೇಷಃ ॥**

॥ ಪ್ರತಿಪದಾರ್ಥ ।

**ಕವಿಃ**—ಮೇಧಾವಿಯಾದ ಸೋಮನು । **ದೇವವೀತಯೇ**—ದೇವತೆಗಳ ಪಾನಾರ್ಥವಾಗಿ । **ಅವ್ಯಃ ವಾರೇಭಿಃ**—ಕುರಿಯ ತುಪ್ಪಟದಿಂದ ನಿರ್ಮಿತವಾದ ವಸ್ತ್ರದಿಂದ ಅಥವಾ ದಶಾಪವಿತ್ರದಿಂದ ಶೋಧಿತನಾಗಿ । **ಪ್ರ ಅರ್ಷತಿ**—ದ್ರೋಣಕಲಶಾಭಿಮುಖವಾಗಿ ಪ್ರವಹಿಸುತ್ತಾನೆ । **ಸಾಹ್ವಾನ್**—ಶತ್ರುಗಳ ಹಿಂಸೆಯನ್ನು ಸಹಿಸಬಲ್ಲ ಸೋಮನು । **ವಿಶ್ವಾಃ**—ಸಮಸ್ತರಾದ । **ಸ್ಪೃಧಃ**—ಯುದ್ಧದಲ್ಲಿ ಹೋರಾಡುವ ಶತ್ರುಗಳನ್ನು । **ಅಭಿ (ಭವತಿ)**—ಸೋಲಿಸುತ್ತಾನೆ.

। ಭಾವಾರ್ಥ ।

ಮೇಧಾವಿಯಾದ ಸೋಮನು ದಶಾಪವಿತ್ರದಿಂದ ಶೋಧಿತನಾಗಿ ದೇವತೆಗಳ ಪಾನಾರ್ಥವಾಗಿ ದ್ರೋಣಕಲಶಾಭಿಮುಖವಾಗಿ ಪ್ರವಹಿಸುತ್ತಾನೆ. ಶತ್ರುಗಳ ಹಿಂಸೆಯನ್ನು ಸಹಿಸಬಲ್ಲ ಆ ಸೋಮನು ಯುದ್ಧದಲ್ಲಿ ಹೋರಾಡುವ ಸಮಸ್ತ ಶತ್ರುಗಳನ್ನು ಸೋಲಿಸುತ್ತಾನೆ.

## English Translation

The seer passes through the woollen fleece for the beverage of the gods, triumphing over all adversaries.

॥ ಸಂಹಿತಾಪಾಠಃ ॥

ಸ ಹಿ ಷ್ಮಾ ಜರಿತೃಭ್ಯ ಆ ವಾಜಂ ಗೋಮಂತಮಿನ್ವತಿ ।
ಪವಮಾನಃ ಸಹಸ್ರಿಣಂ ॥ ೨ ॥

॥ ಪದಪಾಠಃ ॥

ಸಃ । ಹಿ । ಸ್ಮ । ಜರಿತೃಽಭ್ಯಃ । ಆ । ವಾಜಂ । ಗೋಽಮಂತಂ । ಇನ್ವತಿ ।

ಪವಮಾನಃ । ಸಹಸ್ರಿಣಂ ॥ ೨ ॥

॥ ಸಾಯಣಭಾಷ್ಯಂ ॥

ಸ ಹಿ ಷ್ಮ ಸ ಖಲು ಪವಮಾನಃ ಸೋಮೋ ಜರಿತೃಭ್ಯಃ ಸ್ತೋತೃಭ್ಯೋ ಗೋಮಂತಂ ಬಹುಭಿರ್ಗೋಭಿರ್ಯುಕ್ತಂ ಸಹಸ್ರಿಣಂ ಸಹಸ್ರಸಂಖ್ಯಾಕಂ ವಾಜಮನ್ನಮಾಭಿಮುಖ್ಯೇನೇನ್ವತಿ । ವ್ಯಾಪ್ನೋತಿ । ಪ್ರಯಚ್ಛತೀತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸ ಹಿ ಷ್ಮ**—ಹಿಂದೆ ಹೇಳಿದ ಗುಣವಿಶಿಷ್ಟನಾದ । **ಪವಮಾನಃ**—ಆ ಸೋಮದೇವನೇ । **ಜರಿತೃಭ್ಯಃ**—ತನ್ನನ್ನು ಸ್ತೋತ್ರಮಾಡುವವರಿಗೆ । **ಗೋಮಂತಂ**—ಅನೇಕ ಗೋವುಗಳಿಂದ ಕೂಡಿದುದೂ । **ಸಹಸ್ರಿಣಂ**—ಸಹಸ್ರಸಂಖ್ಯಾಕವಾದುದು (ಅಪರಿಮಿತವಾದುದೂ) ಆದ । **ವಾಜಂ**—ಅನ್ನವನ್ನು । **ಆ ಇನ್ವತಿ**—ಒದಗಿಸಿಕೊಡತ್ತಾನೆ ।

॥ ಭಾವಾರ್ಥ ॥

ಹಿಂದೆ ಹೇಳಿದ ಆ ಸೋಮದೇವನೇ ತನ್ನನ್ನು ಸ್ತೋತ್ರಮಾಡುವ ಜನರಿಗೆ ಸಹಸ್ರಸಂಖ್ಯಾಕವಾದ ಅಥವಾ ಅಪರಿಮಿತವಾದ ಗೋವುಗಳನ್ನೂ, ಅನ್ನವನ್ನೂ ಒದಗಿಸಿಕೊಡುತ್ತಾನೆ.

English Translation

Verily he, the pure-flowing, bestows upon his praisers thousands of victuals with cattle.

॥ ಸಂಹಿತಾಪಾಠಃ ॥

ಪರಿ ವಿಶ್ವಾನಿ ಚೇತಸಾ ಮೃಶಸೇ ಪವಸೇ ಮತೀ ।

ಸ ನಃ ಸೋಮ ಶ್ರವೋ ವಿದಃ ॥ ೩ ॥

॥ ಪದಪಾಠಃ ॥

ಪರಿ । ವಿಶ್ವಾನಿ । ಚೇತಸಾ । ಮೃಶಸೇ । ಪವಸೇ । ಮತೀ ।

ಸಃ । ನಃ । ಸೋಮ । ಶ್ರವಃ । ವಿದಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ಚೇತಸಾ ಸ್ವೀಯೇನಾಸ್ಮದನುಕೂಲೇನ ಚಿತ್ತೇನ ವಿಶ್ವಾನಿ ಸರ್ವಾಣಿ ಧನಾನಿ ಪರಿ ವೃಣಕ್ಷಿ। ಪ್ರಯಚ್ಛಸೀತ್ಯರ್ಥಃ। ಮತೀ ಮತ್ಯಾ ಸ್ತುತ್ಯಾ ಪವಸೇ। ಕ್ಷರಸಿ ರಸಂ। ಸ ತ್ವಂ ಹೇ ಸೋಮ ನೋಽಸ್ಮಭ್ಯಂ ಶ್ರವೋಽನ್ನಂ ವಿದಃ। ದೇಹಿ॥

॥ ಪ್ರತಿಪದಾರ್ಥ ॥

(ಎಲೈ ಸೋಮನೇ ನೀನು) **ಚೇತಸಾ**—ನಮ್ಮಲ್ಲಿ ನಿನಗಿರುವ ಅನುಗ್ರಹಾತ್ಮಕನಾದ ಬುದ್ಧಿಯಿಂದ। **ವಿಶ್ವಾನಿ**—ಸಮಸ್ತ ಧನಗಳನ್ನು। **ಪರಿ ವೃಣಕ್ಷಿ**—ಕೊಡುತ್ತೀಯೆ। **ಮತೀ**—ನಾವು ಮಾಡುವ ಸ್ತುತಿಯಿಂದ (ಪ್ರೀತನಾಗಿ)। **ಪವಸೇ**—ರಸವನ್ನು ಸುರಿಸುತ್ತೀಯೆ। **ಸೋಮ**—ಎಲೈ ಸೋಮನೇ। **ಸಃ**—ಅಂತಹ ನೀನು। **ನಃ**—ನಮಗೆ। **ಶ್ರವಃ**—ಅನ್ನವನ್ನು। **ವಿದಃ**—ಒದಗಿಸಿಕೊಡು।

॥ ಭಾವಾರ್ಥ ॥

ಎಲೈ ಸೋಮನೇ ನೀನು ನಮ್ಮಲ್ಲಿಟ್ಟಿರುವ ಅನುಗ್ರಹಾತ್ಮಕಬುದ್ಧಿಯಿಂದ ಪ್ರೇರಿತನಾಗಿ ನಮಗೆ ಸಮಸ್ತ ಧನಗಳನ್ನೂ ಕೊಡುತ್ತೀಯೆ. ನಾವು ಮಾಡುವ ಸ್ತುತಿಯಿಂದ ಪ್ರೀತನಾಗಿ ರಸವನ್ನು ಸುರಿಸುತ್ತೀಯೆ. ಎಲೈ ಸೋಮನೇ ಅಂತಹ ನೀನು ನಮಗೆ ಅನ್ನವನ್ನು ಸಂಪಾದಿಸಿಕೊಡು.

## English Translation

By your favour you give to us all kinds of wealth, you flow at our praise ; grant us, O Soma, food.

॥ ಸಂಹಿತಾಪಾಠಃ ॥

ಅಭ್ಯರ್ಷ ಬೃಹದ್ಯಶೋ ಮಘವದ್ಭ್ಯೋ ಧ್ರುವಂ ರಯಿಂ।
ಇಷಂ ಸ್ತೋತೃಭ್ಯ ಆ ಭರ ॥ ೪ ॥

॥ ಪದಪಾಠಃ ॥

ಅಭಿ। ಅರ್ಷ। ಬೃಹತ್। ಯಶಃ। ಮಘವತ್ಽಭ್ಯಃ। ಧ್ರುವಂ। ರಯಿಂ।
ಇಷಂ। ಸ್ತೋತೃಽಭ್ಯಃ। ಆ। ಭರ॥ ೪॥

॥ ಸಾಯಣಭಾಷ್ಯಂ ॥

ಹೇ ಸೋಮ ಬೃಹದ್ಯಶೋ ಮಹತೀಂ ಕೀರ್ತಿಮಭ್ಯರ್ಷ। ಅಭಿಗಮಯ। ಮಘವದ್ಭ್ಯೋ ಹವಿಷ್ಮದ್ಭ್ಯೋಽಸ್ಮಭ್ಯಂ ಧ್ರುವಂ ರಯಿಂ ಧನಂ ಚಾಭ್ಯರ್ಷ। ಕಿಂಚೇಷಮನ್ನಂ ಸ್ತೋತೃಭ್ಯೋಽಸ್ಮಭ್ಯಮಾ ಭರ। ಆಹರ॥

|| ಪ್ರತಿಪದಾರ್ಥ ||

(ಎಲೈ ಸೋಮನೇ) **ಬೃಹತ್ ಯಶಃ**— ಬಹಳವಾದ ಕೀರ್ತಿಯನ್ನು । **ಅಭಿ ಅರ್ಷ**—ನಮಗೆ ಲಭಿಸುವಂತೆ ಮಾಡು । **ಮಘವದ್ಭ್ಯಃ**— ಹವಿಸ್ಸನ್ನರ್ಪಿಸುವ ನಮಗೆ । **ಧ್ರುವಂ**—ನಾಶರಹಿತವಾದ । **ರಯಿಂ—ಧನ**ವನ್ನೂ ಕೊಡು । **ಸ್ತೋತೃಭ್ಯಃ**—ನಿನ್ನನ್ನು ಸ್ತುತಿಸುತ್ತಿರುವ ನಮಗೆ । **ಇಷಂ**—ಅನ್ನವನ್ನೂ । **ಆ ಭರ**—ತಂದೊದಗಿಸು ।

|| ಭಾವಾರ್ಥ ||

ಎಲೈ ಸೋಮನೇ, ನೀನು ನಮಗೆ ಬಹಳವಾದ ಕೀರ್ತಿಯು ಲಭಿಸುವಂತೆ ಮಾಡು. ಹವಿಸ್ಸನ್ನರ್ಪಿಸುವ ನಮಗೆ ನಾಶರಹಿತವಾದ ಧನವನ್ನು ಕೊಡು. ನಿನ್ನನ್ನು ಸ್ತುತಿಸುತ್ತಿರುವ ನಮಗೆ ಅನ್ನವನ್ನೂ ತಂದೊದಗಿಸು.

English Translation

Bestow upon us great renown, grant durable riches to those who are profuse in their libations, bring food to your praisers.

। ಸಂಹಿತಾಪಾಠಃ ।

**ತ್ವಂ ರಾಜೇವ ಸುವ್ರತೋ ಗಿರಃ ಸೋಮಾ ವಿವೇಶಿಥ ।**

**ಪುನಾನೋ ವಹ್ನೇ ಅದ್ಭುತ ॥ ೫ ॥**

|| ಪದಪಾಠಃ ||

**ತ್ವಂ । ರಾಜಾಽಇವ । ಸುಽವ್ರತಃ । ಗಿರಃ । ಸೋಮ । ಆ । ವಿವೇಶಿಥ ।**

**ಪುನಾನಃ । ವಹ್ನೇ । ಅದ್ಭುತ ॥ ೫ ॥**

|| ಸಾಯಣಭಾಷ್ಯಂ ||

**ಹೇ ಸೋಮ ಸುವ್ರತಃ ಸುಕರ್ಮಾ ಪುನಾನಸ್ತ್ವಂ ರಾಜೇವ ಗಿರೋಽಸ್ಮದೀಯಾಃ ಸ್ತುತೀರಾವಿವೇಶಿಥ । ಆವಿಶಸಿ । ಹೇ ವಹ್ನೇ ವೋಢರದ್ಭುತ ಮಹನ್ಸೋಮ ॥**

। ಪ್ರತಿಪದಾರ್ಥ ॥

**ವಹ್ನೇ**—ಯಜ್ಞವಾಹಕನೂ । **ಅದ್ಭುತ**—ಆಶ್ಚರ್ಯಕರ್ಮಕರ್ತೃವೂ ಆದ । **ಸೋಮ**—ಎಲೈ ಸೋಮನೇ । **ಸುವ್ರತಃ**—ಉತ್ತಮವಾದ ಕರ್ಮವುಳ್ಳವನೂ । **ಪುನಾನಃ**—ಶುದ್ಧಿಕಾರಕನೂ ಆದ । **ತ್ವಂ**—ನೀನು । **ರಾಜೇವ**—ರಾಜನಂತೆ । **ಗಿರಃ**—ನಮ್ಮ ಸ್ತುತಿವಾಕ್ಯಗಳನ್ನು । **ಆ ವಿವೇಶಿಥ**—ಆದರದಿಂದ ಸ್ವೀಕರಿಸು.

|| ಭಾವಾರ್ಥ ||

ಯಜ್ಞನಿರ್ವಾಹಕನೂ, ಆಶ್ಚರ್ಯಕರ್ಮಕರ್ತನೂ ಆದ ಎಲೈ ಸೋಮನೇ, ಶುದ್ಧಿಕಾರಕನಾದ ನೀನು ಅನೇಕ ಶ್ರೇಷ್ಠಕರ್ಮಗಳನ್ನು ನಿರ್ವಹಿಸಿದ ರಾಜನಂತೆ ನಮ್ಮ ಸ್ತುತಿವಾಕ್ಯಗಳನ್ನು ಆದರದಿಂದ ಆಲಿಸು.

## English Translation

Purified one, doer of good deeds, you, Soma, enter our praises like a king O wonderful bearer (of our offerings).

॥ ಸಂಹಿತಾಪಾಠಃ ॥

ಸ ವಹ್ನಿರಪ್ಸು ದುಷ್ಟರೋ ಮೃಜ್ಯಮಾನೋ ಗಭಸ್ತ್ಯೋಃ ।
ಸೋಮಶ್ಚಮೂಷು ಸೀದತಿ ॥ ೬ ॥

॥ ಪದಪಾಠಃ ॥

ಸಃ । ವಹ್ನಿಃ । ಅಪ್ಽಸು । ದುಸ್ತರಃ । ಮೃಜ್ಯಮಾನಃ । ಗಭಸ್ತ್ಯೋಃ ।
ಸೋಮಃ । ಚಮೂಷು । ಸೀದತಿ ॥ ೬ ॥

॥ ಸಾಯಣಭಾಷ್ಯಂ ॥

ಸ ಸೋಮೋ ವಹ್ನಿರ್ವೋಢಾ ಯಜ್ಞಾದೇರಪ್ಸ್ವಂತರಿಕ್ಷೇ ವರ್ತಮಾನೋ ದುಷ್ಟರೋ ದುಃಖೇನಾನ್ಯೈಸ್ತರಣೀಯೋ ಮೃಜ್ಯಮಾನಃ ಶೋಧ್ಯಮಾನೋ ಗಭಸ್ತ್ಯೋರ್ಹಸ್ತಯೋರೇವಂಭೂತಃ ಸನ್ ಚಮೂಷು ಪಾತ್ರೇಷು ಸೀದತಿ ॥

॥ ಪ್ರತಿಪದಾರ್ಥ ॥

**ವಹ್ನಿಃ**—ಯಜ್ಞನಿರ್ವಾಹಕನೂ । **ಅಪ್ಸು**—ಅಂತರಿಕ್ಷದಲ್ಲಿ (ಸ್ವರ್ಗದಲ್ಲಿ) ಇರುವವನೂ । **ದುಷ್ಟರಃ**—ಇತರರಿಂದ ಹೊಂದಲಸಾಧ್ಯನೂ ಆದ । **ಸಃ ಸೋಮಃ**—ಆ ಸೋಮದೇವನು । **ಗಭಸ್ತ್ಯೋಃ**—ಹಸ್ತಗಳಲ್ಲಿ । **ಮೃಜ್ಯಮಾನಃ**—ಶೋಧಿಸಲ್ಪಟ್ಟವನಾಗಿ । **ಚಮೂಷು**—ಚಮೂ ಎಂಬ ಸೋಮವನ್ನಿಡುವ ಪಾತ್ರೆಗಳಲ್ಲಿ । **ಸೀದತಿ**—ಸ್ಥಾಪಿತನಾಗುತ್ತಾನೆ.

॥ ಭಾವಾರ್ಥ ॥

ಯಜ್ಞನಿರ್ವಾಹಕನೂ, ಅಂತರಿಕ್ಷಸ್ಥನೂ, ಇತರರಿಂದ ದುಸ್ಸಾಧ್ಯನೂ ಆದ ಅದೇ ಸೋಮನು ಋತ್ವಿಗ್ಜನರ ಹಸ್ತಗಳಲ್ಲಿ ಶೋಧಿಸಲ್ಪಟ್ಟವನಾಗಿ ಚಮೂಪಾತ್ರೆಗಳಲ್ಲಿ ಕುಳಿತುಕೊಳ್ಳುತ್ತಾನೆ (ಸ್ಥಾಪಿತನಾಗುತ್ತಾನೆ)

## English Translation

Soma, the bearer (of oblations), abiding in the waters of the firmament, difficult to be surpassed, being cleansed by our hands reposes in the vessels.*

॥ ಸಂಹಿತಾಪಾಠಃ ॥

ಕ್ರೀಳುರ್ಮಖೋ ನ ಮಂಹಯುಃ ಪವಿತ್ರಂ ಸೋಮ ಗಚ್ಛಸಿ ।

ದಧತ್ಸ್ತೋತ್ರೇ ಸುವೀರ್ಯಂ ॥ ೭ ॥

॥ ಪದಪಾಠಃ ॥

ಕ್ರೀಳುಃ । ಮಖಃ । ನ । ಮಂಹಯುಃ । ಪವಿತ್ರಂ । ಸೋಮ । ಗಚ್ಛಸಿ ।

ಧಧತ್ । ಸ್ತೋತ್ರೇ । ಸುಽವೀರ್ಯಂ ॥ ೭ ॥

॥ ಸಾಯಣಭಾಷ್ಯಂ ॥

ಹೇ ಸೋಮ ಕ್ರೀಳುಃ ಕ್ರೀಡನಶೀಲಸ್ತ್ವಂ ಮಂಹಯುಃ । ಮಂಹತಿರ್ದಾನಕರ್ಮಾ । ದಾನೇಚ್ಛುರ್ಮಖೋ ನ ದಾನಮಿವ ಪವಿತ್ರಂ ಗಚ್ಛಸಿ । ಕಿಂ ಕುರ್ವನ್ । ಸ್ತೋತ್ರೇ ಸ್ತುತಿಕರ್ತ್ರೇ ಸುವೀರ್ಯಂ ಶೋಭನವೀರ್ಯಂ ದಧತ್ಪ್ರಯಚ್ಛನ್ ॥

। ಪ್ರತಿಪದಾರ್ಥ ।

**ಸೋಮ**—ಎಲೈ ಸೋಮದೇವನೇ । **ಕ್ರೀಳುಃ**—ಕ್ರೀಡನಶೀಲನಾದ ನೀನು । **ಮಂಹಯುಃ**—ಸ್ತೋತೃಜನರಿಗೆ ದಾನವನ್ನು ಕೊಡಲಿಚ್ಛಿಸುತ್ತಾ । **ಸ್ತೋತ್ರೇ**—ಸ್ತುತಿಕರ್ತನಿಗೆ । **ಸುವೀರ್ಯಂ**—ಉತ್ತಮವಾದ ಶಕ್ತಿಯನ್ನು । **ದಧತ್**—ಕೊಡುತ್ತಾ । **ಮಖೋ ನ**—ದಾನದಂತೆ । **ಪವಿತ್ರಂ**—ದಶಾಪವಿತ್ರವನ್ನು । **ಗಚ್ಛಸಿ**—ಅಭಿಲಕ್ಷಿಸಿ ಹೋಗುತ್ತೀಯೆ

। ಭಾವಾರ್ಥ ।

ಎಲೈ ಸೋಮದೇವನೇ, ಕ್ರೀಡನಶೀಲನಾದ ನೀನು ನಿನ್ನನ್ನು ಸ್ತುತಿಸುವ ಜನರಿಗೆ ಇಷ್ಟಾರ್ಥವನ್ನು ಕೊಡಲು ಇಚ್ಛಿಸಿ ಅವನಿಗೆ ಉತ್ತಮವಾದ ಶಕ್ತಿಯನ್ನು ದಾನದಂತೆ ಕೊಡುತ್ತಾ ಶೋಧಿಸುವ ಸ್ಥಳವಾದ ದಶಾಪವಿತ್ರದ ಬಳಿಗೆ ಹೋಗುತ್ತೀಯೆ.

English Translation

Soma, you proceed to the straining-cloth, sportive and generous, like a gift, giving excellent vigour to him who praises you.

## ಇಪ್ಪತ್ತೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಏತೇ ಧಾವಂತೀತಿ ಸಪ್ತರ್ಚಮೇಕವಿಂಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಏತೇ ಧಾವಂತೀತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು— **ಏತೇ ಧಾವಂತಿ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಇಪ್ಪತ್ತೊಂದನೆಯ ಸೂಕ್ತವು ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೂ ಋಷಿದೇವತಾಛಂದಸ್ಸುಗಳು ಹಿಂದಿನಂತೆಯೇ. ಅನುಕ್ರಮಣಿಕೆಯಲ್ಲಿ— **ಏತೇ ಧಾವಂತಿ** ಎಂದು ಹೇಳಿರುವುದು ಸೂಕ್ತದ ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

### ಸೂಕ್ತ—೨೧

ಮಂಡಲ—೯ । ಅನುವಾಕ— ೧। ಸೂಕ್ತ—೨೧ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೧೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಏತೇ ಧಾವಂತೀಂದವಃ ಸೋಮಾ ಇಂದ್ರಾಯ ಘೃಷ್ವಯಃ ।**
**ಮತ್ಸರಾಸಃ ಸ್ವರ್ವಿದಃ ॥ ೧ ॥**

॥ ಪದಪಾಠಃ ॥

**ಏತೇ । ಧಾವಂತಿ । ಇಂದವಃ । ಸೋಮಾಃ । ಇಂದ್ರಾಯ । ಘೃಷ್ವಯಃ ।**
**ಮತ್ಸರಾಸಃ । ಸ್ವಃऽವಿದಃ ॥ ೧ ॥**

॥ ಸಾಯಣಭಾಷ್ಯಂ ॥

**ಏತೇ ಸೋಮಾ ಇಂದ್ರಾಯ ಧಾವಂತಿ । ಗಚ್ಛಂತಿ । ಕೀದೃಶಾ ಏತೇ । ಇಂದವಃ ಕ್ಲೇದಯಿತಾರೋ ದೀಪ್ತಾ ವಾ ಘೃಷ್ವಯೋ ಘರ್ಷಣಶೀಲಾಃ ಮತ್ಸರಾಸೋ ಮಾದಯಿತಾರಃ ಸ್ವರ್ವಿದಃ ಸ್ವರ್ಲೋಕಸ್ಯ ಲಂಭಯಿತಾರಃ ॥**

॥ ಪ್ರತಿಪದಾರ್ಥ ॥

**ಇಂದವಃ**—ದ್ರವರೂಪದಲ್ಲಿ ಜಿನುಗುತ್ತಿರುವವೂ ಅಥವಾ ಸ್ವಚ್ಛವಾದವೂ । **ಘೃಷ್ವಯಃ**—ಜಜ್ಜಿ ಹಿಂಡಲ್ಪಟ್ಟವೂ ಅಥವಾ ಶತ್ರುಧರ್ಷಕವಾದವೂ । **ಮತ್ಸರಾಸಃ**—ಹರ್ಷವನ್ನುಂಟುಮಾಡುವವೂ । **ಸ್ವರ್ವಿದಃ**—ಸ್ವರ್ಗಲೋಕವನ್ನು ಹೊಂದಿಸಿಕೊಡುವವೂ ಆದ । **ಏತೇ ಸೋಮಾಃ**—ಈ ಸೋಮರಸಗಳು । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಧಾವಂತಿ**—ಬೇಗನೆ ಹರಿದುಹೋಗುತ್ತವೆ ।

॥ ಭಾವಾರ್ಥ ॥

ದ್ರವರೂಪದಲ್ಲಿ ತೊಟ್ಟಿಕ್ಕುತ್ತಿರುವವೂ, ಜಜ್ಜಿ ಹಿಂಡಲ್ಪಡುವವೂ, ಪಾನಮಾಡುವವರಿಗೆ ಹರ್ಷವನ್ನುಂಟುಮಾಡುವವೂ, ಸ್ವರ್ಗಲೋಕಕ್ಕೆ ಸಾಧನಭೂತವೂ ಆದ ಈ ಸೋಮರಸಗಳು ಇಂದ್ರನ ಪಾನಾರ್ಥವಾಗಿ ಬೇಗನೆ ಹರಿದುಹೋಗುತ್ತವೆ.

English Translation

These flowing Soma-juices, foe-destroying, exhilarating, heaven-conferring, hasten to Indra.

॥ ಸಂಹಿತಾಪಾಠಃ ॥

ಪ್ರವೃಣ್ವಂತೋ ಅಭಿಯುಜಃ ಸುಷ್ವಯೇ ವರಿವೋವಿದಃ ।
ಸ್ವಯಂ ಸ್ತೋತ್ರೇ ವಯಸ್ಕೃತಃ ॥ ೨ ॥

॥ ಪದಪಾಠಃ ॥

ಪ್ರಽವೃಣ್ವಂತಃ । ಅಭಿಽಯುಜಃ । ಸುಸ್ವಯೇ । ವರಿವಃಽವಿದಃ ।
ಸ್ವಯಂ । ಸ್ತೋತ್ರೇ । ವಯಃಽಕೃತಃ ॥ ೨ ॥

॥ ಸಾಯಣಭಾಷ್ಯಂ ॥

ಪ್ರವೃಣ್ವಂತಃ ಸುವಾನಂ ಪ್ರಕರ್ಷೇಣ ಸಂಭಜಂತಃ ತಥಾಭಿಯುಜೋಽಭಿಯೋಜಯಿತಾರಃ ಸುಷ್ವಯೇ ಸುಷ್ವಸ್ವಭಿಷವಕರ್ತ್ರೇ ವರಿವೋವಿದಃ । ವರಿವ ಇತಿ ಧನನಾಮ । ತಸ್ಯ ಲಂಭಯಿತಾರಃ ಸ್ವಯಂ ಸ್ತೋತ್ರೇ ವಯಸ್ಕೃತೋಽನ್ನಸ್ಯ ಕರ್ತಾರಃ । ಏತೇ ಧಾವಂತೀತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಪ್ರವೃಣ್ವಂತಃ**—ಅಭಿಷವಕಾರ್ಯದಿಂದ (ಸೋಮಲತೆಯನ್ನು ಜಜ್ಜುವ ಕೆಲಸ) ಚೆನ್ನಾಗಿ ಸಂಸ್ಕರಿಸಲ್ಪಡುವವೂ । **ಅಭಿಯುಜಃ**—ಶತ್ರುಗಳನ್ನು ಎದುರಿಸುವವೂ । **ಸುಷ್ವಯೇ**—ಅಭಿಷವಕಾರ್ಯವನ್ನು ಚೆನ್ನಾಗಿ ಮಾಡುವವರಿಗೆ । **ವರಿವೋವಿದಃ**—ಧನವನ್ನು ಒದಗಿಸಿಕೊಡುವವೂ । **ಸ್ವಯಂ**—ತಾವೇ । **ಸ್ತೋತ್ರೇ**—ಸ್ತೋತ್ರ

ಮಾಡುವವರಿಗೆ । ವಯಸ್ಕೃತಃ—ಅನ್ನವನ್ನು ಸಂಪಾದಿಸಿಕೊಡುವವೂ ಆದ ಈ ಸೋಮರಸಗಳು ಇಂದ್ರನ ಪಾನಾರ್ಥವಾಗಿ ಹರಿಯುತ್ತವೆ ।

॥ ಭಾವಾರ್ಥ ॥

ಅಭಿಷವಕಾರ್ಯದಿಂದ ಚೆನ್ನಾಗಿ ಸಂಸ್ಕರಿಸಲ್ಪಡುವವೂ, ಶತ್ರುಗಳನ್ನು ಎದುರಿಸುವವೂ ಅಭಿಷವಕಾರ್ಯವನ್ನು ಚೆನ್ನಾಗಿ ಮಾಡುವ ಋತ್ವಿಗ್ಜನರಿಗೆ ಧನವನ್ನು ಒದಗಿಸಿಕೊಡುವವೂ, ಸ್ತೋತ್ರಮಾಡುವವರಿಗೆ ತಾವೇ ಸ್ವತಃ ಅನ್ನವನ್ನು ಸಂಪಾದಿಸಿಕೊಡುವವೂ ಆದ ಈ ಸೋಮರಸಗಳು ಇಂದ್ರನ ಪಾನಾರ್ಥವಾಗಿ ಪ್ರವಹಿಸುತ್ತವೆ.

## English Translation

Showing favour, assailing foes, giving wealth to him who rightly effuses them, and bestowing food spontaneously on their praiser.

॥ ಸಂಹಿತಾಪಾಠಃ ॥

ವೃಥಾ ಕ್ರೀಳಂತ ಇಂದವಃ ಸಧಸ್ಥಮಭ್ಯೇಕಮಿತ್ ।
ಸಿಂಧೋರೂರ್ಮಾ ವ್ಯಕ್ಷರನ್ ॥ ೩ ॥

॥ ಪದಪಾಠಃ ॥

ವೃಥಾ । ಕ್ರೀಳಂತಃ । ಇಂದವಃ । ಸಧऽಸ್ಥಂ । ಅಭಿ । ಏಕಂ । ಇತ್ ।
ಸಿಂಧೋಃ । ಊರ್ಮಾ । ವಿ । ಅಕ್ಷರನ್ ॥ ೩ ॥

॥ ಸಾಯಣಭಾಷ್ಯಂ ॥

ವೃಥಾನಾಯಾಸೇನ ಕ್ರೀಳಂತ ಇಂದವಃ ಸೋಮಾ ಏಕಮಿದೇಕಮೇವ ಸಧಸ್ಥಂ ಸ್ಥಾನಂ ದ್ರೋಣಕಲಶಂ ವಾಭ್ಯಕ್ಷರನ್ನಿತಿ ಶೇಷಃ । ಸಿಂಧೋರೂರ್ಮಾ ವಸತೀವರೀಷು ವ್ಯಕ್ಷರನ್ ॥

॥ ಪ್ರತಿಪದಾರ್ಥ ॥

ವೃಥಾ—ಅನಾಯಾಸದಿಂದ । ಕ್ರೀಳಂತಃ—ಕ್ರೀಡಿಸುತ್ತಿರುವ । ಇಂದವಃ—ಈ ಸೋಮರಸಗಳು । ಏಕಮಿತ್—ಒಂದೇ ಆದ । ಸಧಸ್ಥಂ—ಸಹಸ್ಥಾನವಾದ ದ್ರೋಣಕಲಶವನ್ನು । ಅಭಿ—ಅಭಿಲಕ್ಷಿಸಿ ಹರಿಯುತ್ತವೆ (ಮತ್ತು) ಸಿಂಧೋಃ ಊರ್ಮಾ—ವಸತೀವರ್ಯುದಕಗಳಲ್ಲಿ । ವ್ಯಕ್ಷರನ್—ಹೋಗಿ ಸೇರಿಕೊಳ್ಳುತ್ತವೆ ।

॥ ಭಾವಾರ್ಥ ॥

ಅನಾಯಾಸದಿಂದ ಕ್ರೀಡಿಸುತ್ತಿರುವ ಈ ಸೋಮರಸಗಳು ನಾನಾ ಸ್ಥಳಗಳಿಂದ ಜಿನುಗುತ್ತಿದ್ದರೂ ಎಲ್ಲವೂ ಒಟ್ಟಿಗೆ ಸೇರಿ ಒಂದೇ ಆದ ದ್ರೋಣಕಲಶಕ್ಕೆ ಹೋಗಿ ಬೀಳುತ್ತವೆ ಮತ್ತು ವಸತೀವರ್ಯುದಕಗಳಲ್ಲಿ (ಅಥವಾ ನದಿಯ ಅಲೆಗಳಂತೆ ಪ್ರವಹಿಸುತ್ತಾ ಹೋಗಿ) ಸೇರಿಕೊಳ್ಳುತ್ತವೆ.

English Translation

The effused juices come sporting lightly to the common receptacle, they drop into the wave of the river.

॥ ಸಂಹಿತಾಪಾಠಃ ॥

ಏತೇ ವಿಶ್ವಾನಿ ವಾರ್ಯಾ ಪವಮಾನಾಸ ಆಶತ ।
ಹಿತಾ ನ ಸಪ್ತಯೋ ರಥೇ ॥ ४ ॥

॥ ಪದಪಾಠಃ ॥

ಏತೇ । ವಿಶ್ವಾನಿ । ವಾರ್ಯಾ । ಪವಮಾನಾಸಃ । ಆಶತ ।
ಹಿತಾಃ । ನ । ಸಪ್ತಯಃ । ರಥೇ ॥ ४ ॥

॥ ಸಾಯಣಭಾಷ್ಯಂ ॥

**ಏತೇ ಸೋಮಾಃ ಪವಮಾನಾಸಃ ಪೂಯಮಾನಾ ವಿಶ್ವಾನಿ ವಾರ್ಯಾ ವಾರ್ಯಾಣಿ ವರಣೀಯಾನಿ ಧನಾನ್ಯಾಶತ । ವ್ಯಾಪ್ನುವನ್ । ರಥೇ ಹಿತಾಃ ಸ್ಥಾಪಿತಾ ನ ಸಪ್ತಯೋಽಶ್ವಾ ಇವ । ತೇ ಯಥಾ ರಥಮಭಿಮತಂ ದೇಶಂ ಪ್ರಾಪ್ನುವಂತಿ ತದ್ವದ್ಧನಮಸ್ಮಾಕಂ ಪ್ರಾಯಚ್ಛನ್ನಿತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಏತೇ**—ಈ ಸೋಮರಸಗಳು । **ಪವಮಾನಾಸಃ**—ಶೋಧಿಸಲ್ಪಟ್ಟವಾಗಿ । **ರಥೇ**—ರಥದಲ್ಲಿ । **ಹಿತಾಃ**—ಹೂಡಿರುವ । **ಸಪ್ತಯಃ ನ**—ಅಶ್ವಗಳಂತೆ । **ವಿಶ್ವಾನಿ**—ಸಮಸ್ತವಾದ । **ವಾರ್ಯಾ**—ಅಪೇಕ್ಷಿತವಾದ ಧನಗಳನ್ನು । **ಆಶತ**—ಒದಗಿಸಿಕೊಡುತ್ತವೆ ।

। ಭಾವಾರ್ಥ ।

ರಥದಲ್ಲಿ ಹೂಡಿರುವ ಅಶ್ವಗಳು ರಥವನ್ನು ನಿರ್ದಿಷ್ಟಪ್ರದೇಶಕ್ಕೆ ಒಯ್ಯುವಂತೆ ಶೋಧಿತವಾದ ಈ ಸೋಮರಸಗಳು ಸ್ತುತಿಕರ್ತರಿಗೆ ಅಪೇಕ್ಷಿತವಾದ ಸಮಸ್ತ ಧನಗಳನ್ನು ಒದಗಿಸಿಕೊಡುತ್ತವೆ.

English Translation

Like horses harnessed to a car these pure juices bring ( to us ) all desirable blessings

॥ ಸಂಹಿತಾಪಾಠಃ ॥

ಆಸ್ಮಿನ್ಪಿಶಂಗಮಿಂದವೋ ದಧಾತಾ ವೇನಮಾದಿಶೇ ।

ಯೋ ಅಸ್ಮಭ್ಯಮರಾವಾ ॥ ೫ ॥

॥ ಪದಪಾಠಃ ॥

ಆ । ಅಸ್ಮಿನ್ । ಪಿಶಂಗಂ । ಇಂದವಃ । ದಧಾತ । ವೇನಂ । ಆऽದಿಶೇ ।

ಯಃ । ಅಸ್ಮಭ್ಯಂ । ಅರಾವಾ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದವಃ ಸೋಮಾಃ ಅಸ್ಮಿನ್ಯಜಮಾನೇ ಪಿಶಂಗಂ ಬಹುರೂಪಂ ಮಣಿಮುಕ್ತಾಹಿರಣ್ಯಾದಿಭೇದೇನ ನಾನಾರೂಪಂ ವೇನಂ ಕಾಮಯಂತಂ ಬಹುವಿಧಂ ಕಾಮಮಾದಿಶೇಽಸ್ಮಭ್ಯಮಾದೇಶನಾಯಾ ದಧಾತ । ಆಯಚ್ಛತ । ಯೋ ಯಜಮಾನೋಽಸ್ಮಭ್ಯಮರಾವಾ .... .... ಪ್ರಯಚ್ಛತಿ ಪ್ರಾಪ್ತಕಾಮ ಏವ ಖಲ್ವೃತ್ವಿಗ್ಭ್ಯಃ ಪ್ರಯಚ್ಛತಿ ॥

॥ ಪ್ರತಿಪದಾರ್ಥ

ಇಂದವಃ—ಎಲೈ ಸೋಮರಸಗಳೇ । ಯಃ—ಯಾವ ಯಜಮಾನನು । ಅಸ್ಮಭ್ಯಂ—ಋತ್ವಿಗ್ಜನರಾದ ನಮಗೆ । ಅರಾವಾ—ಧನಾದಿಗಳನ್ನು ಕೊಡುವನೋ । ಅಸ್ಮಿನ್—ಆ ಯಜಮಾನನಿಗೆ । ಪಿಶಂಗಂ—ಅನೇಕ ವಿಧವಾದ । ವೇನಂ—ಅಪೇಕ್ಷಿತವಾದ ಇಷ್ಟವನ್ನು । ಆದಿಶೇ—ನಮ್ಮ ಇಷ್ಟಾನುಸಾರವಾಗಿ । ಆ ದಧಾತ—ಕೊಡುತ್ತೀರಿ ।

॥ ಭಾವಾರ್ಥ ॥

ಎಲೈ ಸೋಮರಸಗಳೇ, ಯಾವ ಯಜಮಾನನು ಋತ್ವಿಗ್ಜನರಾದ ನಮಗೆ ಯಥೇಷ್ಟವಾಗಿ ಧನಾದಿಗಳನ್ನು ಕೊಡುವನೋ ಅಂತಹ ಯಜಮಾನನಿಗೆ ನಮ್ಮ ಇಷ್ಟಾನುಸಾರವಾಗಿ ಅಪೇಕ್ಷಿತವಾದ ಅನೇಕವಿಧ ಧನಗಳನ್ನು ತುಂಬಿ ಕೊಡುತ್ತೀರಿ.

## English Translation

Effused Soma-juices, at our indication bestow manifold blessings on this (institutor of the sacrifice), who (at present) has given us plenty.

॥ ಸಂಹಿತಾಪಾಠಃ ॥

ಋಭುರ್ನ ರಥ್ಯಂ ನವಂ ದಧಾತಾ ಕೇತಮಾದಿಶೇ ।

ಶುಕ್ರಾಃ ಪವಧ್ವಮರ್ಣಸಾ ॥ ೬ ॥

॥ ಪದಪಾಠಃ ॥

ಋಭುಃ । ನ । ರಥ್ಯಂ । ನವಂ । ದಧಾತ । ಕೇತಂ । ಆऽದಿಶೇ ।

ಶುಕ್ರಾಃ । ಪವಧ್ವಂ । ಅರ್ಣಸಾ ॥ ೬ ॥

। ಸಾಯಣಭಾಷ್ಯಂ ।

ಋಭುರ್ನೋರು ಭಾಸಮಾನೋ ರಥಸ್ವಾಮೀವ ಸ ಯಥಾ ರಥ್ಯಂ ರಥಸ್ಯ ನೇತಾರಂ ನವಂ ಸ್ತುತ್ಯಂ ಕುಶಲಂ ಸಾರಥಿನಮಗ್ರ ಆಧತ್ತೇ ತದ್ವದಸ್ಮದೀಯೇऽಸ್ಮಿನ್ನಾದಿಶೇ ಸ್ವಾಮಿನಿ ಕೇತಂ ಪ್ರಜ್ಞಾನಂ ದಧಾತ । ಸ್ಥಾಪಯತ । ಹೇ ಸೋಮಾಃ ಯೋऽಸ್ಮಭ್ಯಂ ಪ್ರಯಚ್ಛತಿ ತಸ್ಮಿನ್ನಿತ್ಯರ್ಥಃ । ಹೇ ಸೋಮಾಃ ಅರ್ಣಸೋದಕೇನ ಶುಕ್ರಾ ದೀಪ್ತಾಃ ಸಂತಃ ಪವಧ್ವಂ । ಕ್ಷರಧ್ವಂ ॥

। ಪ್ರತಿಪದಾರ್ಥ ।

(ಎಲೈ ಸೋಮರಸಗಳೇ) ಉರು **ಋಭುರ್ನ**—ಪ್ರಕಾಶಮಾನನಾದ ಎಂದರೆ ತೇಜಸ್ವಿಯಾದ ರಥದ ಸ್ವಾಮಿಯು ಯಾವ ರೀತಿಯಾಗಿ । **ನವಂ**—ಸ್ತುತ್ಯನಾದ ಎಂದರೆ ಕುಶಲನಾದ । **ರಥ್ಯಂ**—ರಥವನ್ನು ನಡೆಸುವ ಸಾರಥಿಯನ್ನು ತನ್ನ ಮುಂದೆ ಕೂಡಿಸುವನೋ ಅದರಂತೆ । **ಆದಿಶೇ**—ನಮ್ಮ ಸ್ವಾಮಿಯಾದ ಯಜಮಾನನಲ್ಲಿ । **ಕೇತಂ**—ತಿಳುವಳಿಕೆಯನ್ನು ಎಂದರೆ ಉತ್ತಮ ಜ್ಞಾನವನ್ನು । **ದಧಾತ**—ಉಂಟುಮಾಡಿರಿ । (**ಹೇ ಸೋಮಾಃ**—ಎಲೈ ಸೋಮರಸಗಳೇ) । **ಅರ್ಣಸಾ**-ಉದಕದಿಂದ (ಮಿಶ್ರಿತವಾಗಿ) । **ಶುಕ್ರಾಃ**—ಪ್ರಕಾಶಮಾನವಾಗಿ ಎಂದರೆ ಸ್ವಚ್ಛವಾದ ಧಾರೆಯಿಂದ । **ಪವಧ್ವಂ**—ಪ್ರವಹಿಸಿ ।

॥ ಭಾವಾರ್ಥ ॥

ಎಲೈ ಸೋಮರಸಗಳೇ, ರಥಿಕನು ತನ್ನ ಮುಂದುಗಡೆ ಕುಶಲನಾದ ಸಾರಥಿಯನ್ನು ಸ್ಥಾಪಿಸುವಂತೆ ನಮ ಯಜಮಾನನಲ್ಲಿ ಉತ್ತಮವಾದ ಜ್ಞಾನವನ್ನು ತುಂಬಿರಿ. ಎಲೈ ಸೋಮರಸಗಳೇ ವಸತೀವರ್ಯುದಕದಿಂದ ಮಿಶ್ರಿತ ವಾಗಿ ಸ್ವಚ್ಛವಾದ ಧಾರೆಯಿಂದ ಪ್ರವಹಿಸಿ.

## English Translation

As a great man sets before him a commendable charioteer, so you grant knowledge to our lord, and flow glistening with water

। ಸಂಹಿತಾಪಾಠಃ ।

ಏತ ಉ ತ್ಯೇ ಅವೀವಶನ್ಕಾಷ್ಠಾಂ ವಾಜಿನೋ ಅಕ್ರತ ।

ಸತಃ ಪ್ರಾಸಾವಿಷುರ್ಮತಿಂ ॥ ೭ ॥

॥ ಪದಪಾಠಃ ॥

ಏತೇ । ಊಂ ಇತಿ । ತ್ಯೇ । ಅವೀವಶನ್ । ಕಾಷ್ಠಾಂ । ವಾಜಿನಃ । ಅಕ್ರತ ।
ಸತಃ । ಪ್ರ । ಅಸಾವಿಷುಃ । ಮತಿಂ ॥ ೭ ॥

॥ ಸಾಯಣಭಾಷ್ಯಂ ॥

ತ್ಯೇ ತ ಏತ ಉ ಏತ ಏವ ಸೋಮಾ ಅವೀವಶನ್ । ಕಾಮಯಂತೇ ಯಜ್ಞಂ । ಕಾಂತ್ವಾ ಚ ವಾಜಿನೋ ಬಲವಂತೋಽನ್ನವಂತೋ ವಾ ಸೋಮಾಃ ಕಾಷ್ಠಾಮಕ್ರತ । ನಿವಾಸಸ್ಥಾನಮಕುರ್ವನ್ । ದ್ರೋಣಕಲಶಾದುದ್ಗತಾ ಗ್ರಹಾನಿತ್ಯರ್ಥಃ । ಸತೋ ಯಜಮಾನಸ್ಯ ಸ್ತೋತುರ್ವಾ ಮತಿಂ ಬುದ್ಧಿಂ ಸ್ತುತಿಂ ವಾ ಪ್ರಾಸಾವಿಷುಃ । ಪ್ರೈರಯನ್ ॥

॥ ಪ್ರತಿಪದಾರ್ಥ ॥

**ತ್ಯೇ**—ಪ್ರಸಿದ್ಧವಾದ । **ಏತೇ ಉ**—ಆ ಸೋಮರಸಗಳೇ । **ಅವೀವಶನ್**—ಯಜ್ಞಕರ್ಮವನ್ನಪೇಕ್ಷಿಸುತ್ತವೆ । **ವಾಜಿನಃ**—ಶಕ್ತಿಯುತವಾದ ಅಥವಾ ಅನ್ನವುಳ್ಳ ಆ ಸೋಮರಸಗಳು । **ಕಾಷ್ಠಾಂ**—(ದ್ರೋಣಕಲಶದಲ್ಲಿ) ತಮ್ಮ ನಿವಾಸಸ್ಥಾನವನ್ನು । **ಅಕ್ರತ**—ನಿರ್ಮಿಸಿಕೊಂಡವು । **ಸತಃ**—ಯಜಮಾನನ ಅಥವಾ ಸ್ತೋತೃವಿನ । **ಮತಿಂ**—ಬುದ್ಧಿಯನ್ನು ಅಥವಾ ಸ್ತುತಿಯನ್ನು । **ಪ್ರಾಸಾವಿಷುಃ**—ಪ್ರೇರಿಸಿದವು ।

॥ ಭಾವಾರ್ಥ ॥

ಪ್ರಸಿದ್ಧವಾದ ಅದೇ ಸೋಮರಸಗಳು ಯಜ್ಞಕರ್ಮಾಪೇಕ್ಷಿಗಳಾಗಿ ಶಕ್ತಿಯುತರಾಗಿಯೂ, ಅನ್ನವಂತರಾಗಿಯೂ ಇದ್ದು ದ್ರೋಣಕಲಶವನ್ನೇ ತಮ್ಮನಿವಾಸಸ್ಥಾನವನ್ನಾಗಿ ಮಾಡಿಕೊಂಡವು ಎಂದರೆ ದ್ರೋಣಕಲಶದಲ್ಲಿ ಹೋಗಿ ಬಿದ್ದವು. ಅನಂತರ ತಮ್ಮನ್ನು ಸ್ತುತಿಸುವ ಸ್ತೋತೃವಿನ ಅಥವಾ ಯಜಮಾನನ ಬುದ್ಧಿಯನ್ನು ಸತ್ಕರ್ಮಾಚರಣೆಯಲ್ಲಿ ಪ್ರೇರಿಸಿದವು.

English Translation

These effused juices have desired (the sacrifice) ; powerful, they have made for themselves an abiding-place ; they have animated the intellect of the pious institutor of the rite.

## ಇಪ್ಪತ್ತೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಏತೇ ಸೋಮಾಸ ಇತಿ ಸಪ್ತರ್ಚಂ ದ್ವಾವಿಂಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಏತೇ ಸೋಮಾಸ ಇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥

ಅನುವಾದವು—**ಏತೇ ಸೋಮಾಸಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಇಪ್ಪತ್ತೆರಡನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು ಈ ಸೂಕ್ತಕ್ಕೂ ಹಿಂದಿನ ಸೂಕ್ತದಂತೆಯೇ ಋಷಿದೇವತಾಛಂದಸ್ಸುಗಳು ಅನುಕ್ರಮಣಿಕಯಲ್ಲಿ—**ಏತೇ ಸೋಮಾಸಃ** ಎಂದು ಹೇಳಿರುವುದು ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೨೨

ಮಂಡಲ—೯ । ಅನುವಾಕ—೧ । ಸೂಕ್ತ—೨೨ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೧೨ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಏತೇ ಸೋಮಾಸ ಆಶವೋ ರಥಾ ಇವ ಪ್ರ ವಾಜಿನಃ ।**
**ಸರ್ಗಾಃ ಸೃಷ್ಟಾ ಅಹೇಷತ ॥ ೧ ॥**

॥ ಪದಪಾಠಃ ॥

**ಏತೇ । ಸೋಮಾಸಃ । ಆಶವಃ । ರಥಾಃ.ಇವ । ಪ್ರ । ವಾಜಿನಃ ।**
**ಸರ್ಗಾಃ । ಸೃಷ್ಟಾಃ । ಅಹೇಷತ ॥ ೧ ॥**

॥ ಸಾಯಣಭಾಷ್ಯಂ ॥

**ಏತೇ ಪೂಯಮಾನಾಃ ಸೋಮಾಸಃ ಸೋಮಾಃ ಸೃಷ್ಟಾ ಅಧ್ವರ್ಯುಣಾಶವೋ ದಶಾಪವಿತ್ರಾದಧೋಗಮನೇ ಶೀಘ್ರಾಃ ಪ್ರಾಹೇಷತ । ಪ್ರಹೇಷಂತೇ । ಶೀಘ್ರಗಮನೇ ದೃಷ್ಟಾಂತದ್ವಯಂ । ಆಜೌ ಸೃಷ್ಟಾಃ ಶೀಘ್ರಾ ರಥಾ ಇವ ತಥೋಕ್ತಲಕ್ಷಣಾ ವಾಜಿನ ಇವ ವೇಗವಂತೋಽಶ್ವಾ ಇವ ॥**

॥ ಪ್ರತಿಪದಾರ್ಥ ॥

**ಏತೇ ಸೋಮಾಸಃ**—ಹರಿಯುತ್ತಿರುವ ಈ ಸೋಮರಸಗಳು । **ಸೃಷ್ಟಾಃ**—ಅಧ್ವರ್ಯುವಿನಿಂದ ಹಿಂಡಲ್ಪಟ್ಟು । **ಆಶವಃ**—ದಶಾಪವಿತ್ರದ ಸಮೀಪಕ್ಕೆ ಕೆಳಮುಖವಾಗಿ ವೇಗವಾಗಿ ಹರಿಯುವಾಗ । **ಸರ್ಗಾಃ**—ಯುದ್ಧದಲ್ಲಿ ಬಿಡಲ್ಪಟ್ಟ । **ರಥಾಃ ಇವ**—ವೇಗಗಮನವುಳ್ಳ ರಥಗಳಂತೆಯೂ । **ವಾಜಿನಃ**—ವೇಗವಾಗಿ ಓಡುವ ಅಶ್ವಗಳಂತೆಯೂ । **ಪ್ರ ಅಹೇಷತ**—ಘಟ್ಟಿಯಾಗಿ ಶಬ್ದಮಾಡುತ್ತವೆ.

॥ ಭಾವಾರ್ಥ ॥

ಅಧ್ವರ್ಯುವಿನಿಂದ ಹಿಂಡಲ್ಪಟ್ಟ ಈ ಸೋಮರಸಗಳು ದಶಾಪವಿತ್ರದ ಬಳಿಗೆ ಕೆಳಮುಖನಾಗಿ ಹರಿಯುತ್ತಿರುವಾಗ ಯುದ್ಧದಲ್ಲಿ ಸಾರಥಿಯಿಂದ ಪ್ರೇರಿತವಾಗಿ ವೇಗವಾಗಿ ಹೋಗುವ ರಥಗಳಂತೆಯೂ, ಅಶ್ವಗಳಂತೆಯೂ ಘಟ್ಟಿಯಾಗಿ ಶಬ್ದವನ್ನು ಮಾಡುತ್ತವೆ.

English Translation

These Soma-juices, when let out, neigh as they leap swiftly forth like chariots or rapid steeds let loose.

॥ ಸಂಹಿತಾಪಾಠಃ ॥

ಏತೇ ವಾತಾ ಇವೋರವಃ ಪರ್ಜನ್ಯಸ್ಯೇವ ವೃಷ್ಟಯಃ ।
ಅಗ್ನೇರಿವ ಭ್ರಮಾ ವೃಥಾ ॥ ೨ ॥

॥ ಪದಪಾಠಃ ॥

ಏತೇ । ವಾತಾಃऽಇವ । ಉರವಃ । ಪರ್ಜನ್ಯಸ್ಯऽಇವ । ವೃಷ್ಟಯಃ ।
ಅಗ್ನೇಃऽಇವ । ಭ್ರಮಾಃ । ವೃಥಾ ॥ ೨ ॥

॥ ಸಾಯಣಭಾಷ್ಯಂ ॥

ಏತೇ ಸೋಮಾ ಉರವೋ ಮಹಾಂತೋ ವಾತಾ ಇವ ವಾಯುವ ಇವ ವೃಥಾನಾಯಾಸೇನ ವ್ಯಾನಶುರಿತ್ಯುತ್ತರತ್ರ ಸಂಬಂಧನೀಯಂ । ಅಥವಾಧ್ಯಾಹಾರೇಣ ನಿಃಸರಂತೀತಿ ಯೋಜ್ಯಂ । ತಥಾ ಪರ್ಜನ್ಯಸ್ಯ ವೃಷ್ಟಯ ಇವ ವರ್ಷಾ ಯಥಾ ತದ್ವೈವ । ಕಿಂಚಾಗ್ನೇರ್ಭ್ರಮಾ ಭ್ರಮಣಾ ಜ್ವಾಲಾಸಂಚಾರಾ ಇವ ॥

॥ ಪ್ರತಿಪದಾರ್ಥ ॥

**ಏತೇ**—ಈ ಸೋಮರಸಗಳು । **ಉರವಃ**—ಪ್ರಚಂಡವಾದ । **ವಾತಾ ಇವ**—ಬಿರುಗಾಳಿಯಂತೆ ವೇಗವಾಗಿ ಸಂಚರಿಸುತ್ತವೆ । **ಪರ್ಜನ್ಯಸ್ಯೇವ**—ಪರ್ಜನ್ಯದೇವತೆಯು । **ವೃಷ್ಟಯಃ**—ಧಾರಾಕಾರವಾಗಿ ವೃಷ್ಟಿಸುರಿಸುವಂತೆಯೂ । **ಭ್ರಮಾಃ**—ಭ್ರಮಣಶೀಲವಾದ ಎಂದರೆ ಬೇಗನೆ ಸುತ್ತಲೂ ಹಬ್ಬುವ । **ಅಗ್ನೇರಿವ**—ಕಾಡುಕಿಚ್ಚಿನಂತೆಯೂ । **ವೃಥಾ**—ಅನಾಯಾಸವಾಗಿ ಹರಿಯುತ್ತಾ ಮುನ್ನುಗ್ಗುತ್ತದೆ.

॥ ಭಾವಾರ್ಥ ॥

ಹರಿಯುತ್ತಿರುವ ಈ ಸೋಮರಸಗಳು ಪ್ರಚಂಡವಾಗಿ ಎಂದರೆ ಅತ್ಯಂತ ವೇಗವಾಗಿ ಬೀಸುತ್ತಿರುವ ಬಿರುಗಾಳಿಯಂತೆಯೂ, ಪರ್ಜನ್ಯನು ಸುರಿಸುವ ಧಾರಾಕಾರವಾದ ಮಳೆಯಂತೆಯೂ, ಬೇಗನೆ ಎಲ್ಲೆಲ್ಲೂ ವ್ಯಾಪಿಸುವ ಕಾಡ್ಕಿಚ್ಚಿನಂತೆಯೂ ಅನಾಯಾಸವಾಗಿ ಮುನ್ನುಗ್ಗಿ ಹರಿಯುತ್ತವೆ.

## English Translation

Like strong winds, like the rains of Parjanya, like the swift whirling (flames) of fire.

॥ ಸಂಹಿತಾಪಾಠಃ ॥

ಏತೇ ಪೂತಾ ವಿಪಶ್ಚಿತಃ ಸೋಮಾಸೋ ದಧ್ಯಾಶಿರಃ ।
ವಿಪಾ ವ್ಯಾನಶುರ್ಧಿಯಃ ॥ ೩ ॥

॥ ಪದಪಾಠಃ ॥

ಏತೇ । ಪೂತಾಃ । ವಿಪಃಽಚಿತಃ । ಸೋಮಾಸಃ । ದಧಿಽಆಶಿರಃ ।
ವಿಪಾ । ವಿ । ಆನಶುಃ । ಧಿಯಃ ॥ ೩ ॥

॥ ಸಾಯಣಭಾಷ್ಯಂ ॥

ಏತೇ ಸೋಮಾಸಃ ಸೋಮಾಃ ಪೂತಾಃ ಶುದ್ಧಾ ವಿಪಶ್ಚಿತಃ ಪ್ರಾಜ್ಞಾ ದಧ್ಯಾಶಿರೋ ದಧ್ಯಾಶ್ರಯಣಾ ವಿಪಾ ಪ್ರಜ್ಞಾನೇನ ಧಿಯೋಽಸ್ಮದೀಯಾನಿ ಕರ್ಮಾಣಿ ವ್ಯಾನಶುಃ । ವ್ಯಾಪ್ನುವಂತಿ ॥

॥ ಪ್ರತಿಪದಾರ್ಥ ॥

**ಏತೇ ಸೋಮಾಸಃ**—ಈ ಸೋಮರಸಗಳು । **ಪೂತಾಃ**—ದಶಾಪವಿತ್ರದ ಶೋಧನೆಯಿಂದ ಶುದ್ಧಿಗೊಳಿಸಲ್ಪಟ್ಟಿವೆ । **ವಿಪಶ್ಚಿತಃ**—ವಿಶೇಷ ತಿಳುವಳಿಕೆಯಿಂದ ಕೂಡಿವೆ । **ದಧ್ಯಾಶಿರಃ**—ದಧಿಯಿಂದ (ಮೊಸರಿನಿಂದ) ಮಿಶ್ರಿತವಾಗಿವೆ । **ವಿಪಾ**—ತಮ್ಮ ಪ್ರಜ್ಞಾನದಿಂದ (ಬುದ್ಧಿಯಿಂದ) । **ಧಿಯಃ**—ನಮ್ಮ ಯಜ್ಞಾದಿಕರ್ಮಗಳನ್ನು । **ವ್ಯಾನಶುಃ**—ಸರ್ವತ್ರ ವ್ಯಾಪಿಸಿ ಅವನ್ನು ಸಾಂಗಗೊಳಿಸುತ್ತವೆ.

॥ ಭಾವಾರ್ಥ ॥

ಈ ಸೋಮರಸಗಳು ದಶಾಪವಿತ್ರದಿಂದ ಶೋಧಿಸಲ್ಪಟ್ಟು ಶುದ್ಧವಾಗಿವೆ. ವಿಶೇಷ ಪ್ರಜ್ಞೆಯಿಂದ ಕೂಡಿವೆ. ಮೊಸರಿನಿಂದ ಮಿಶ್ರಿತವಾಗಿವೆ. ತಮ್ಮ ಪ್ರಜ್ಞೆಯಿಂದ ನಮ್ಮ ಯಜ್ಞಕರ್ಮಗಳನ್ನು ಸರ್ವತ್ರ ವ್ಯಾಪಿಸಿ ಅವುಗಳನ್ನು ನಿರ್ವಹಿಸುತ್ತವೆ.

## English Translation

These pure Soma-juices, sagacious, mixed with curds, easily pervade our ceremonies with their intelligence.

॥ ಸಂಹಿತಾಪಾಠಃ ॥

ಏತೇ ವೃಷ್ಟಾ ಅಮರ್ತ್ಯಾಃ ಸಸೃವಾಂಸೋ ನ ಶಶ್ರಮುಃ ।
ಇಯಕ್ಷಂತಃ ಪಥೋ ರಜಃ ॥ ೪ ॥

॥ ಪದಪಾಠಃ ॥

ಏತೇ । ವೃಷ್ಟಾಃ । ಅಮರ್ತ್ಯಾಃ । ಸಸೃಽವಾಂಸಃ । ನ । ಶಶ್ರಮುಃ ।
ಇಯಕ್ಷಂತಃ । ಪಥಃ । ರಜಃ ॥ ೪ ॥

॥ ಸಾಯಣಭಾಷ್ಯಂ ॥

**ಏತೇ ಸೋಮಾ ವೃಷ್ಟಾ ದಶಾಪವಿತ್ರೇಣ ಶೋಧಿತಾ ಅಮರ್ತ್ಯಾ ಅಮರಣಧರ್ಮಾಣಃ ಸಸೃವಾಂಸೋ ಹವಿರ್ಧಾನಾತ್ಸರಂತಃ ಪಥೋ ಮಾರ್ಗಾನ್ರಜೋ ಲೋಕಾಂಶ್ಚೇಯಕ್ಷಂತೋ ಗಂತುಮಿಚ್ಛಂತೋ ನ ಶಶ್ರಮುಃ । ನ ಶಾಮ್ಯಂತಿ ॥**

॥ ಪ್ರತಿಪದಾರ್ಥ ॥

**ಏತೇ**—ಈ ಸೋಮರಸಗಳು । **ವೃಷ್ಟಾಃ**—ದಶಾಪವಿತ್ರದಿಂದ ಶೋಧಿಸಲ್ಪಟ್ಟಿವೆ । **ಅಮರ್ತ್ಯಾಃ**—ಮರಣಧರ್ಮರಹಿತವಾಗಿವೆ ಎಂದರೆ ನಾಶರಹಿತವಾಗಿವೆ । **ಸಸೃವಾಂಸಃ**-ಹವಿರ್ಧಾನ ಪ್ರದೇಶದಿಂದ ಪಹಿಸಲ್ಪಡುತ್ತಾ । **ಪಥಃ**—ಆ ಮಾರ್ಗಗಳನ್ನೂ । **ರಜಃ**—ಸಮಸ್ತಲೋಕಗಳನ್ನೂ । **ಇಯಕ್ಷಂತಃ**—ಅತಿಕ್ರಮಿಸುತ್ತಾ । **ನ ಶಶ್ರಮುಃ**—ದಾರಿಯಲ್ಲಿ ಎಲ್ಲಿಯೂ ವಿಶ್ರಾಂತಿಯನ್ನು ಪಡೆಯುವುದಿಲ್ಲ.

॥ ಭಾವಾರ್ಥ ॥

ಈ ಸೋಮರಸಗಳು ದಶಾಪವಿತ್ರದಿಂದ ಶೋಧಿತವಾಗಿವೆ ಮತ್ತು ಇವು ನಾಶರಹಿತವಾದವು ಹವಿರ್ಧಾನದಿಂದ ಉತ್ತರವೇದಿಯ ಬಳಿಗೆ ಒಯ್ಯಲ್ಪಡುವಾಗ ಆ ಮಾರ್ಗಗಳನ್ನೂ, ಸಮಸ್ತಲೋಕಗಳನ್ನೂ ಅತಿಕ್ರಮಿಸುತ್ತಾ ದಾರಿಯಲ್ಲಿ ಎಲ್ಲಿಯೂ ವಿಶ್ರಾಂತಿಯನ್ನು ಪಡೆಯುವುದಿಲ್ಲ.

## English Translation

Purified, immortal, issuing from the vessels, eager to traverse their (assigned) paths and the universe, they are never wearied.

॥ ಸಂಹಿತಾಪಾಠಃ ॥

ಏತೇ ಪೃಷ್ಠಾನಿ ರೋದಸೋರ್ವಿಪ್ರಯಂತೋ ವ್ಯಾನಶುಃ ।
ಉತೇದಮುತ್ತಮಂ ರಜಃ ॥ ೫ ॥

॥ ಪದಪಾಠಃ ॥

ಏತೇ । ಪೃಷ್ಠಾನಿ । ರೋದಸೋಃ । ವಿಽಪ್ರಯಂತಃ । ವಿ । ಆನಶುಃ ।

ಉತ । ಇದಂ । ಉತ್ಽತಮಂ । ರಜಃ ॥ ೫ ॥

॥ ಸಾಯಣಭಾಷ್ಯಂ ॥

ಏತೇ ಸೋಮಾ ರೋದಸೋರ್ದ್ಯಾವಾಪೃಥಿವ್ಯೋಃ ಪೃಷ್ಠಾನಿ ವಿಪ್ರಯಂತೋ ವಿವಿಧಂ ಗಚ್ಛಂತೋ ವ್ಯಾನಶುಃ । ವ್ಯಾಪ್ನುವಂತಿ । ಉತಾಪಿ ಚೇದಮುತ್ತಮಂ ರಜೋ ದ್ಯುಲೋಕಂ ವ್ಯಾನಶುಃ। ಆಹುತಿದ್ವಾರೇಣೇತಿ ಭಾವಃ । ರೋದಸೋರಿತ್ಯತ್ರಾಂತರಿಕ್ಷೋಽಭಿಪ್ರೇತಃ ॥

॥ ಪ್ರತಿಪದಾರ್ಥ ॥

ಏತೇ—ಈ ಸೋಮರಸಗಳು । ರೋದಸೋಃ—ದ್ಯಾವಾಪೃಥಿವಿಗಳ । ಪೃಷ್ಠಾನಿ—ಸಾನುಪ್ರದೇಶಗಳನ್ನು। ವಿಪ್ರಯಂತಃ—ದಾಟಿಹೋಗುತ್ತಾ । ವ್ಯಾನಶುಃ—ಎಲ್ಲೆಲ್ಲಿಯೂ ವ್ಯಾಪಿಸುತ್ತವೆ । ಉತ—ಮತ್ತು । ಇದಂ ಉತ್ತಮಂ ರಜಃ—ಈ ಉತ್ತಮಲೋಕವಾದ ಸ್ವರ್ಗಲೋಕವನ್ನು ವ್ಯಾಪಿಸುತ್ತವೆ.

॥ ಭಾವಾರ್ಥ ॥

ಈ ಸೋಮರಸಗಳು ದ್ಯಾವಾಪೃಥಿವಿಗಳ ಸಾನುಪ್ರದೇಶಗಳನ್ನು ದಾಟಿಹೋಗುವಾಗ ಎಲ್ಲೆಲ್ಲಿಯೂ ಹರಡಿ ವ್ಯಾಪಿಸುತ್ತವೆ ಮತ್ತು ದೇವತೆಗಳಿಗೆ ಅರ್ಪಿಸುವ ಆಹುತಿಯಮೂಲಕ ಉತ್ತಮವಾದ ಸ್ವರ್ಗಲೋಕವನ್ನೂ ಸೇರಿ ಅಲ್ಲಿಯೂ ವ್ಯಾಪಿಸುತ್ತದೆ.

English Translation

Spreading in various directions, they pervade the surface of earth and sky, you, and this highest heaven.

॥ ಸಂಹಿತಾಪಾಠಃ ॥

ತಂತುಂ ತನ್ವಾನಮುತ್ತಮಮನು ಪ್ರವತ ಆಶತ ।

ಉತೇದಮುತ್ತಮಾಯ್ಯಂ ॥ ೬ ॥

॥ ಪದಪಾಠಃ ॥

ತಂತುಂ । ತನ್ವಾನಂ । ಉತ್ಽತಮಂ । ಅನು । ಪ್ರಽವತಃ । ಆಶತ ।

ಉತ । ಇದಂ । ಉತ್ತಮಾಯ್ಯಂ ॥ ೬ ॥

॥ ಸಾಯಣಭಾಷ್ಯಂ ॥

ತಂತುಂ ಯಜ್ಞಂ ತನ್ವಾನಮುತ್ತಮಮುತ್ಕೃಷ್ಟಂ ಸೋಮಮನ್ವಾಶತ ಪ್ರವತೋ ನದ್ಯಃ । ಉತಾಪಿ ಚೇದಂ ಕರ್ಮಾನೇನ ಸೋಮೇನೋತ್ತಮಾಯ್ಯಮುತ್ತಮಿಾಕೃತಂ । ಅಥವಾ ತಂತುಂ ತನ್ವಾನಂ ಸೋಮಂ ಪ್ರವತೋಽಧಃಸ್ಥಿತಾಃ ಸರ್ವಾ ಅನ್ವಾಶತ । ಉತೇದಮುತ್ತಮಾಯ್ಯಂ ರಜಃ । ದ್ಯುಲೋಕ ಇತ್ಯರ್ಥಃ । ಸೋಽಪ್ಯನ್ವಶ್ನುತೇ ಪೃಥಿವ್ಯಾಂ ಚಾಂತರಿಕ್ಷೇ ಚ । ಉತ್ತಮಿಾಕೃತಮುತ್ತಮಾಯ್ಯಂ ॥

॥ ಪ್ರತಿಪದಾರ್ಥ ॥

**ತಂತುಂ**—ಯಜ್ಞಾಭಿಮುಖವಾಗಿ । **ತನ್ವಾನಂ**—ಹೋಗುತ್ತಿರುವ । **ಉತ್ತಮಂ**—ಉತ್ಕೃಷ್ಟವಾದ ಸೋಮವನ್ನು । **ಪ್ರವತಃ**—ತಗ್ಗಿನಲ್ಲಿ ಹರಿಯುವ ನದಿಗಳು । **ಅನು ಆಶತ**—ಅನುಸರಿಸಿ ಹೋಗುತ್ತವೆ । **ಉತ**—ಮತ್ತು । **ಇದಂ**—ಈ ಕಾರ್ಯವು । **ಉತ್ತಮಾಯ್ಯಂ**—(ಸೋಮರಸದ ಸಹವಾಸದಿಂದ) ಗೌರವಿಸಲ್ಪಡುವುದು.

॥ ಭಾವಾರ್ಥ ॥

ಯಜ್ಞಾಭಿಮುಖವಾಗಿ ವಿಸ್ತರಿಸಿ ಹೋಗುತ್ತಿರುವ ಸೋಮವನ್ನೇ ತಗ್ಗಿನಲ್ಲಿ ಹರಿಯುವ ನದಿಗಳು ಅನುಸರಿಸಿ ಹೋಗುತ್ತವೆ. ಈ ಕಾರ್ಯವು ಸೋಮರಸದ ಸಹವಾಸದಿಂದ ಗೌರವಾನ್ವಿತವಾಗಿ ಮಾಡಲ್ಪಟ್ಟಿರುವುದು. ಎಂದರೆ ಸೋಮವನ್ನು ಅನುಸರಿಸಿ ಹೋಗುವ ನದಿಗಳ ಕಾರ್ಯವು ಉತ್ತಮಕಾರ್ಯವೆಂದು ಪರಿಗಣಿಸಲ್ಪಡುವುದು.

## English Translation

Descending rivers follow this excellent (Soma) as it spreads out the sacrifice; this rite is glorified thereby.

॥ ಸಂಹಿತಾಪಾಠಃ ॥

ತ್ವಂ ಸೋಮ ಪಣಿಭ್ಯ ಆ ವಸು ಗವ್ಯಾನಿ ಧಾರಯಃ ।
ತತಂ ತಂತುಮಚಿಕ್ರದಃ ॥ ೭ ॥

॥ ಪದಪಾಠಃ ॥

ತ್ವಂ । ಸೋಮ । ಪಣಿಽಭ್ಯಃ । ಆ । ವಸು । ಗವ್ಯಾನಿ । ಧಾರಯಃ ।
ತತಂ । ತಂತುಂ । ಅಚಿಕ್ರದಃ ॥ ೭ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ಪಣಿಭ್ಯೋಽಸುರೇಭ್ಯೋ ಲುಬ್ಧಕೇಭ್ಯೋ ವಾ ಸಕಾಶಾದ್ಗವ್ಯಾನಿ ಗೋಹಿತಾನಿ ವಸು ವಸೂನಿ ಗೋಯೂಥಾನಿ ವಸೂನಿ ಚೇತಿ ವಾಹೃತ್ಯ ಧಾರಯಃ । ಧಾರಯಸಿ । ತಥಾ ತಂತುಂ ಯಜ್ಞಂ ಪ್ರತಿ ತತಂ ವಿಸ್ತೃತಂ ಯಥಾ ಭವತಿ ತಥಾಚಿಕ್ರದಃ । ಶಬ್ದಮಕಾರ್ಷೀಃ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ತ್ವಂ**—ನೀನು । **ಪಣಿಭ್ಯಃ**—ಪಣಿನಾಮಕ ಅಸುರರಿಂದ । **ಗವ್ಯಾನಿ**—ಗೋಸಮೂಹಗಳನ್ನೂ । **ವಸು**—ಧನಗಳನ್ನೂ । **ಆ ಧಾರಯಃ**—ಕಸಿದುಕೊಂಡು ಬಂದಿದ್ದೀಯೆ । **ತಂತುಂ**—ಯಜ್ಞವನ್ನು । **ತತಂ**—ವಿಸ್ತೃತವಾಗುವಂತೆ (ನೆರವೇರುವಂತೆ) । **ಅಚಿಕ್ರದಃ**—ಶಬ್ದಮಾಡಿರುವೆ.

॥ ಭಾವಾರ್ಥ ॥

ಎಲೈ ಸೋಮನೇ, ನೀನು ಪಣಿಗಳೆಂಬ ಅಸುರರು ದೇವತೆಗಳಿಂದ ಅಪಹರಿಸಿಕೊಂಡುಹೋಗಿದ್ದ ಗೋಸಮೂಹಗಳನ್ನೂ ಧನವನ್ನೂ ಕಸಿದುಕೊಂಡು ಹಿಂದಕ್ಕೆ ತಂದಿರುವೆ. ಮತ್ತು ಯಜ್ಞವನ್ನು ನೆರವೇರಿಸುವುದಕ್ಕಾಗಿ ಘಟ್ಟಿಯಾಗಿ ಶಬ್ದಮಾಡಿರುವೆ.

English Translation

You, Soma, hold the wealth of cows which you have won from the Panis ; you have called aloud at the outspread sacrifice.

## ಇಪ್ಪತ್ತ ಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಸೋಮಾ ಅಸೃಗ್ರಮಿತಿ ಸಪ್ತರ್ಚಂ ತ್ರಯೋವಿಂಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಸೋಮಾ ಅಸೃಗ್ರಮಿತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—**ಸೋಮಾ ಅಸೃಗ್ರಂ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಇಪ್ಪತ್ತಮೂರನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಹಿಂದಿನ ಸೂಕ್ತದಂತೆಯೇ ಋಷಿದೇವತಾ ಛಂದಸ್ಸುಗಳು. ಅನುಕ್ರಮಣಿಕೆಯಲ್ಲಿ—**ಸೋಮಾ ಅಸೃಗ್ರಂ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೨೩

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೨೩ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೧೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಸೋಮಾ ಅಸೃಗ್ರಮಾಶವೋ ಮಧೋರ್ಮದಸ್ಯ ಧಾರಯಾ ।

ಅಭಿ ವಿಶ್ವಾನಿ ಕಾವ್ಯಾ ॥ ೧ ॥

॥ ಪದಪಾಠಃ ॥

ಸೋಮಾಃ । ಅಸೃಗ್ರಂ । ಆಶವಃ । ಮಧೋಃ । ಮದಸ್ಯ । ಧಾರಯಾ ।

ಅಭಿ । ವಿಶ್ವಾನಿ । ಕಾವ್ಯಾ ॥ ೧ ॥

॥ ಸಾಯಣಭಾಷ್ಯಂ ॥

**ಆಶವಃ ಶೀಘ್ರಾಃ ಸೋಮಾ ಅಸೃಗ್ರಂ । ಅಸೃಗ್ರನ್ । ಸೃಜ್ಯಂತೇ । ಮಧೋರ್ಮಧುರಸ್ಯ ಮದಸ್ಯ ಮದಕರಸ್ಯ ಧಾರಯಾಸೃಗ್ರಮಿತಿ ಸಂಬಂಧಃ । ಕಿಂ ಪ್ರತಿ ಉಚ್ಯತೇ । ಅಭಿ ಲಕ್ಷೀಕೃತ್ಯ ವಿಶ್ವಾನಿ ಸರ್ವಾಣಿ ಕಾವ್ಯಾ ಕಾವ್ಯಾನಿ ಸ್ತೋತ್ರಾಣಿ ಪ್ರತಿ । ಸ್ತೋತ್ರಸಮುಯ ಇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಆಶವಃ**—ವೇಗವಾಗಿ ಹರಿಯುತ್ತಿರುವ । **ಸೋಮಾಃ**—ಸೋಮರಸಗಳು । **ವಿಶ್ವಾನಿ**—ಸಮಸ್ತವಾದ । **ಕಾವ್ಯಾ**—ಸ್ತೋತ್ರಗಳನ್ನು ಅಭಿಲಕ್ಷಿಸಿ । **ಮಧೋಃ**—ಮಧುರವಾದ । **ಮದಸ್ಯ**—ಆಹ್ಲಾದಕರವಾದ ರಸದ । **ಧಾರಯಾ**—ಪ್ರವಾಹದಿಂದ । **ಅಸೃಗ್ರಂ**—ಹೊರಸೂಸುತ್ತವೆ ।

॥ ಭಾವಾರ್ಥ ॥

ವೇಗವಾಗಿ ಹರಿಯುವ ಸ್ವಭಾವವುಳ್ಳ ಈ ಸೋಮರಸಗಳು ನಾವು ಮಾಡುವ ಸಮಸ್ತ ಸ್ತೋತ್ರಗಳನ್ನಭಿಲಕ್ಷಿಸಿ ಮಧುರವಾಗಿಯೂ, ಆಹ್ಲಾದಕರವಾಗಿಯೂ ಇರುವ ಧಾರೆಯಿಂದ ಹೊರಸೂಸುತ್ತವೆ.

English Translation

The swift-flowing Soma-juices have issued in a stream of the sweet exhilarating (beverage), at (the recital of) all the praises (of the sages)

॥ ಸಂಹಿತಾಪಾಠಃ ॥

ಅನು ಪ್ರತ್ನಾಸ ಆಯವಃ ಪದಂ ನವೀಯೋ ಅಕ್ರಮುಃ ।

ರುಚೇ ಜನಂತ ಸೂರ್ಯಂ ॥ ೨ ॥

॥ ಪದಪಾಠಃ ॥

ಅನು । ಪ್ರತ್ನಾಸಃ । ಆಯವಃ । ಪದಂ । ನವೀಯಃ । ಅಕ್ರಮುಃ ।

ರುಚೇ । ಜನಂತ । ಸೂರ್ಯಂ ॥ ೨ ॥

॥ ಸಾಯಣಭಾಷ್ಯಂ ॥

ಪ್ರತ್ನಾಸಃ ಪುರಾಣಾಃ ಕೇಚಿದಾಯವಃ ಶೀಘ್ರಗಮನಾ ಅಶ್ವಾ ನವೀಯೋ ನವತರಂ ಪದಮನ್ವ-ಕ್ರಮುಃ । ಅನುಕ್ರಮಂತೇ । ರೂಪಕವ್ಯಾಹಾರೇಣ ಸೋಮಾಃ ಸ್ತೂಯಂತೇ । ರುಚೇ ದೀಪ್ತ್ಯೈ । ಸೂರ್ಯಂ ಜನಂತ । ಕುರ್ವಂತಿ । ದೀಪ್ತಿಂ ಕುರ್ವಂತೀತ್ಯರ್ಥಃ । ಸೋಮಪ್ಯಾಯನೇನ ಹಿ ಚಂದ್ರೋ ರೋಚತೇ ॥

॥ ಪ್ರತಿಪದಾರ್ಥ ॥

**ಪ್ರತ್ನಾಸಃ**—ಪುರಾತನವಾದ ಎಂದರೆ ಚೆನ್ನಾಗಿ ಪಳಗಿದ । **ಆಯವಃ**—ಶೀಘ್ರಗಾಮಿಗಳಾದ ಅಶ್ವಗಳು **ನವೀಯಃ**—ಹೊಸದಾದ । **ಪದಂ**—ಪಾದವಿಕ್ಷೇಪವನ್ನು । **ಅನು ಅಕ್ರಮುಃ**—ಅನುಸರಿಸಿ ಹೋಗುತ್ತವೆ । **ರುಚೇ**—ಪ್ರಕಾಶಕ್ಕಾಗಿ । **ಸೂರ್ಯಂ**—ಸೂರ್ಯನನ್ನು । **ಜನಂತ**—ಉತ್ಪನ್ನ ಮಾಡುತ್ತವೆ ।

॥ ಭಾವಾರ್ಥ ॥

ಚೆನ್ನಾಗಿ ಪಳಗಿದ ಹಳೆಯ ಕುದುರೆಗಳು ನೂತನವಾದ ಪಾದಗತಿಯನ್ನು ಅನುಸರಿಸುತ್ತಾ ಹೋಗುತ್ತವೆ. ಮತ್ತು ಪ್ರಕಾಶಕ್ಕಾಗಿ ಸೂರ್ಯನನ್ನು ಉತ್ಪನ್ನಮಾಡುತ್ತವೆ.

English Translation

Ancient swift-going (horses), they (the juices) have traversed a new field,—they have generated the sun to give light.

॥ ವಿಶೇಷವಿಷಯಗಳು ॥

ಈ ಋಕ್ಕಿನಲ್ಲಿ ಸೋಮರಸಗಳನ್ನು ಅಶ್ವಗಳ ಶೀಘ್ರಗಮನದ ಹೋಲಿಕೆಯಿಂದ ಪ್ರಕಾರಾಂತರವಾಗಿ ವರ್ಣಿಸಲಾಗಿದೆ. ಸೂರ್ಯನ ಉತ್ಪತ್ತಿಯೆಂದರೆ ಸೂರ್ಯನ ಪ್ರಕಾಶದಿಂದ ಚಂದ್ರನು ಬೆಳಗುವನೆಂದಭಿಪ್ರಾಯವು.

॥ ಸಂಹಿತಾಪಾಠಃ ॥

ಆ ಪವಮಾನ ನೋ ಭರಾರ್ಯೋ ಅದಾಶುಷೋ ಗಯಂ ।

ಕೃಧಿ ಪ್ರಜಾವತೀರಿಷಃ ॥ ೩ ॥

॥ ಪದಪಾಠಃ ॥

ಆ । ಪವಮಾನ । ನಃ । ಭರ । ಅರ್ಯಃ । ಅದಾಶುಷಃ । ಗಯಂ ।

ಕೃಧಿ । ಪ್ರಜಾऽವತೀಃ । ಇಷಃ ॥ ೩ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಸೋಮ ತ್ವಂ ನೋಽಸ್ಮಭ್ಯಮರ್ಯೋಽರೇರದಾಶುಷೋಽಪ್ರಯಚ್ಛತೋ ಗಯಂ ಗೃಹಂ ಗೃಹೋಪಲಕ್ಷಿತಂ ಧನಮಾ ಭರ । ಆಹರ । ತಥಾಸ್ಮಭ್ಯಂ ಪ್ರಜಾವತೀರಿಷಶ್ಚ ಕೃಧಿ । ಕುರು ॥

॥ ಪ್ರತಿಪದಾರ್ಥ ॥

**ಪವಮಾನ**—ಸ್ರವಿಸುತ್ತಿರುವ ಎಲೈ ಸೋಮನೇ । **ನಃ**—ನಮಗೆ । **ಅರ್ಯಃ**—ಶತ್ರುವಿನ (ಮತ್ತು) । **ಅದಾಶುಷಃ**—ದೇವತೆಗಳಿಗೆ ಹವಿಸ್ಸನ್ನರ್ಪಿಸದಿರುವವನ । **ಗಯಂ**—ಗೃಹವನ್ನು ಎಂದರೆ ಗೃಹದಲ್ಲಿರುವ ಧನವನ್ನು **ಆ ಭರ**—ತಂದೊದಗಿಸು (ಮತ್ತು ನಮಗೆ) । **ಪ್ರಜಾವತೀಃ**—ಪುತ್ರಾದಿಗಳಿಂದ ಸಹಿತವಾದ । **ಇಷಃ**—ಅನ್ನಗಳನ್ನೂ । **ಕೃಧಿ**—ಉತ್ಪನ್ನಮಾಡಿಕೊಡು ।

॥ ಭಾವಾರ್ಥ ॥

ಸ್ರವಿಸುತ್ತಿರುವ ಎಲೈ ಸೋಮನೇ, ದೇವತೆಗಳಿಗೆ ಹವಿಸ್ಸನ್ನರ್ಪಿಸದಿರುವ ನಮ್ಮ ಶತ್ರುವಾದವನ ಗೃಹ ಅಥವಾ ಧನವನ್ನು ಅಪಹರಿಸಿ ನಮಗೆ ತಂದೊದಗಿಸು ಮತ್ತು ಪುತ್ರಾದಿ ಸಂತತಿ ಸಹಿತವಾದ ಅನ್ನವನ್ನು ಸಂಪಾದಿಸಿಕೊಡು.

English Translation

Bring to us, purifier, the house of our enemy who prssents no libations,—bestow upon us progeny-abounding food.

॥ ಸಂಹಿತಾಪಾಠಃ ॥

ಅಭಿ ಸೋಮಾಸ ಆಯವಃ ಪವಂತೇ ಮದ್ಯಂ ಮದಂ ।

ಅಭಿ ಕೋಶಂ ಮಧುಶ್ಚುತಂ ॥ ೪ ॥

॥ ಪದಪಾಠಃ ॥

ಅಭಿ । ಸೋಮಾಸಃ । ಆಯವಃ । ಪವಂತೇ । ಮದ್ಯಂ । ಮದಂ ।

ಅಭಿ । ಕೋಶಂ । ಮಧುಽಶ್ಚುತಂ ॥ ೪ ॥

॥ ಸಾಯಣಭಾಷ್ಯಂ ॥

**ಆಯುವೋ ಗಂತಾರಃ ಸೋಮಾಸಃ ಸೋಮಾ ಮದ್ಯಂ ಮದಕರಂ ರಸಮಭಿ ಪವಂತೇ । ಕ್ಷರಂತಿ। ತಥಾ ಮಧುಶ್ಚುತಂ ಮಧುಸ್ರಾವಿಣಂ ಕೋಶಂ । ರಸಾಧಾರೇಣ ಕೋಶಶಬ್ದೇನ ತತ್ರಾಮಿಶ್ರಿತೋ ರಸೋ ಲಕ್ಷ್ಯತೇ । ತಮಭಿ ಪವಂತೆ ಇತಿ ಶೇಷಃ ॥**

॥ ಪ್ರತಿಪದಾರ್ಥ ॥

**ಆಯವಃ**— ಹರಿಯುತ್ತಿರುವ । **ಸೋಮಾಸಃ**— ಈ ಸೋಮರಸಗಳು । **ಮದ್ಯಂ**— ಹರ್ಷಕಾರಕವಾದ । **ಮದಂ**— ಸೋಮರಸವನ್ನು । **ಅಭಿ ಪವಂತೇ**— ಸ್ರವಿಸುತ್ತವೆ (ಮತ್ತು) । **ಮಧುಶ್ಚುತಂ**— ಮಧುರವಾದ ರಸವಿರುವ । **ಕೋಶಂ**— ದ್ರೋಣಕಲಶದ ಕಡೆಗೆ । **ಅಭಿ ಪವಂತೇ**— ಶೀಘ್ರವಾಗಿ ಹರಿದುಹೋಗುತ್ತವೆ ।

॥ ಭಾವಾರ್ಥ ॥

ವೇಗವಾಗಿ ಹರಿಯುತ್ತಿರುವ ಈ ಸೋಮರಸಗಳು ಹರ್ಷಕಾರಕವೂ, ಶಕ್ತಿದಾಯಕವೂ ಆದ ರಸವನ್ನು ಸ್ರವಿಸುತ್ತಾ ಮಧುರವಾದ ರಸವನ್ನು ಶೇಖರಿಸಿಡುವ ದ್ರೋಣಕಲಶಾಭಿಮುಖವಾಗಿ ಶೀಘ್ರವಾಗಿ ಹರಿದುಹೋಗುತ್ತವೆ.

English Translation

The swift flowing Soma-juices diffuse exhilarating wine,-they flow to the honey-shedding receptacle.

॥ ಸಂಹಿತಾಪಾಠಃ ॥

ಸೋಮೋ ಅರ್ಷತಿ ಧರ್ಣಸಿರ್ದಧಾನ ಇಂದ್ರಿಯಂ ರಸಂ ।
ಸುವೀರೋ ಅಭಿಶಸ್ತಿಪಾಃ ॥ ೫ ॥

॥ ಪದಪಾಠಃ ॥

ಸೋಮಃ । ಅರ್ಷತಿ । ಧರ್ಣಸಿಃ । ದಧಾನಃ । ಇಂದ್ರಿಯಂ । ರಸಂ ।
ಸುಽವೀರಃ । ಅಭಿಶಸ್ತಿಽಪಾಃ ॥ ೫ ॥

॥ ಸಾಯಣಭಾಷ್ಯಂ ॥

**ಸೋಮೋಽರ್ಷತಿ । ಗಚ್ಛತಿ । ಕೀದೃಶಃ ಸಃ । ಧರ್ಣಸಿರ್ಧಾರಕೋ ಜಗತಾಂ ತಥೇಂದ್ರಿಯಮಿಂದ್ರಿಯವರ್ಧಕಂ ರಸಂ ದಧಾನೋ ಧಾರಯನ್ಸುವೀರಃ ಸುವೀರ್ಯೋಽಭಿಶಸ್ತಿಪಾ ಅಭಿಶಸ್ತೇಃ ಪಾತಾ। ಅಭಿತೋ ಹಿಂಸಾ ತತೋ ರಕ್ಷಕ ಇತ್ಯರ್ಥಃ । ಸೋಮಪಾನಂ ಬ್ರಹ್ಮಹತ್ಯಾದಿನಿಂದಾಮನುಮಾಷ್ಟೀತಿ ಪ್ರಸಿದ್ಧಂ ॥**

॥ ಪ್ರತಿಪದಾರ್ಥ ॥

**ಧರ್ಣಸಿಃ**—ಜಗದ್ಧಾರಕವಾದುದೂ । **ಇಂದ್ರಿಯಂ**—ಇಂದ್ರಿಯ (ಅವಯವ) ವರ್ಧಕವಾದ । **ರಸಂ**—ಸಾರವಸ್ತುವನ್ನು । **ದಧಾನಃ**—ಧರಿಸಿರುವುದೂ (ಒಳಗೊಂಡಿರುವುದೂ) । **ಸುವೀರಃ**—ಶ್ರೇಷ್ಠವಾದ ಶಕ್ತಿಯುತವಾದುದೂ । **ಅಭಿಶಸ್ತಿಪಾಃ**—ಸ್ತೋತೃವನ್ನು ಹಿಂಸಾದಿಗಳಿಂದ ರಕ್ಷಿಸುವುದೂ ಆದ । **ಸೋಮಃ**—ಸೋಮರಸವು । **ಅರ್ಷತಿ**—ಹರಿದುಹೋಗುತ್ತದೆ ।

॥ ಭಾವಾರ್ಥ ॥

ಜಗದ್ಧಾರಕವೂ ಇಂದ್ರಿಯಗಳಿಗೆ ಬಲವನ್ನು ಕೊಟ್ಟು ವೃದ್ಧಿಪಡಿಸುವುದೂ, ಸಾರಭೂತವಾದುದೂ, ಶ್ರೇಷ್ಠವಾದ ಶಕ್ತಿಯುತವಾದುದೂ, ಸ್ತೋತ್ರಮಾಡುವವರನ್ನು ಹಿಂಸಾದಿಗಳಿಂದ ರಕ್ಷಿಸುವುದೂ ಆದ ಸೋಮರಸವು ಶೀಘ್ರವಾಗಿ ಹರಿಯುತ್ತಿದೆ.

English Translation

The Soma flows, the sustainer (of the world), bearing a sense-invigorating essence,—heroic—a protector against calumny.

॥ ಸಂಹಿತಾಪಾಠಃ ॥

**ಇಂದ್ರಾಯ ಸೋಮ ಪವಸೇ ದೇವೇಭ್ಯಃ ಸಧಮಾದ್ಯಃ ।**

**ಇಂದೋ ವಾಜಂ ಸಿಷಾಸಸಿ ॥ ೬ ॥**

॥ ಪದಪಾಠಃ ॥

**ಇಂದ್ರಾಯ । ಸೋಮ । ಪವಸೇ । ದೇವೇಭ್ಯಃ । ಸಧऽಮಾದ್ಯಃ ।**

**ಇಂದೋ ಇತಿ । ವಾಜಂ । ಸಿಸಾಸಸಿ ॥ ೬ ॥**

॥ ಸಾಯಣಭಾಷ್ಯಂ ॥

**ಹೇ ಸೋಮ ಸಧಮಾದ್ಯಃ । ಸಧಮಾದೋ ಯಜ್ಞಃ । ತದರ್ಹಸ್ತ್ವಮಿಂದ್ರಾಯ ದೇವೇಭ್ಯಶ್ಚಾನ್ಯೇಭ್ಯಃ ಪವಸೇ । ಕ್ಷರಸೇ । ಹೇ ತಾದೃಶೇಂದೋ ಸೋಮ ಅಸ್ಮಭ್ಯಂ ವಾಜಮನ್ನಂ ಸಿಷಾಸಸಿ । ದಾತುಮಿಚ್ಛಸಿ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ಸಧಮಾದ್ಯಃ**—ಯಜ್ಞಾರ್ಹನಾದ ನೀನು । **ಇಂದ್ರಾಯ**—ಇಂದ್ರನಿಗಾಗಿಯೂ । **ದೇವೇಭ್ಯಃ**—ಇತರ ದೇವತೆಗಳ ಪಾನಾರ್ಥವಾಗಿಯೂ । **ಪವಸೇ**—ಸ್ರವಿಸುತ್ತೀಯೆ । **ಇಂದೋ**—ಅಂತಹ ಎಲೈ ಸೋಮನೇ (ನೀನು ನಮಗೆ) । **ವಾಜಂ**—ಅನ್ನವನ್ನು । **ಸಿಷಾಸಸಿ**—ಕೊಡಲು ಇಚ್ಛಿಸುತ್ತೀಯೆ ।

॥ ಭಾವಾರ್ಥ ॥

ಎಲೈ ಸೋಮನೇ, ಯಜ್ಞಾರ್ಹನಾದ ನೀನು ಇಂದ್ರನ ಮತ್ತು ಇತರ ದೇವತೆಗಳ ಪಾನಾರ್ಥವಾಗಿ ಸ್ರವಿಸುತ್ತೀಯೆ. ಎಲೈ ಸೋಮನೇ, ಅಂತಹ ನೀನು ನಮಗೆ ಅನ್ನವನ್ನು ಕೊಡಬೇಕೆಂದು ಇಚ್ಛಿಸುತ್ತೀಯೆ.

## English Translation

Soma, you are worthy of the sacrifice; you flow to Indra and to the gods, you, Indu, vouchsafe to give us food

॥ ಸಂಹಿತಾಪಾಠಃ ॥

**ಅಸ್ಯ ಪೀತ್ವಾ ಮದಾನಾಮಿಂದ್ರೋ ವೃತ್ರಾಣ್ಯಪ್ರತಿ ।**

**ಜಘಾನ ಜಘನಚ್ಚ ನು ॥ ೭ ॥**

॥ ಪದಪಾಠಃ ॥

ಅಸ್ಯ । ಪೀತ್ವಾ । ಮದಾನಾಂ । ಇಂದ್ರಃ । ವೃತ್ರಾಣಿ । ಅಪ್ರತಿ ।

ಜಘಾನ । ಜಘನತ್ । ಚ । ನು ॥ ೭ ॥

॥ ಸಾಯಣಭಾಷ್ಯಂ ॥

**ಮದಾನಾಂ ಮದಕರಾಣಾಂ ಮಧ್ಯೇಽತಿಶಯೇನ ಮದಕರಮಸ್ಯಾಮುಂ ಸೋಮಂ ಪೀತ್ವಾ ವೃತ್ರಾಣಿ ಶತ್ರೂನಪ್ರತಿಗತಃ ಸನ್ನಿಂದ್ರೋ ಜಘಾನ । ಹತವಾನ್ । ನು ಕ್ಷಿಪ್ರಂ ಜಘನಚ್ಚ । ಹಂತು ಚೇದಾನೀಮಪಿ ॥**

॥ ಪ್ರತಿಪದಾರ್ಥ ॥

**ಮದಾನಾಂ**—ಆಹ್ಲಾದವನ್ನುಂಟುಮಾಡುವ ರಸಗಳಲ್ಲಿ ಅತಿ ಶ್ರೇಷ್ಠವಾದ । **ಅಸ್ಯ ಅಮುಂ**—ಈ ಸೋಮರಸವನ್ನು । **ಇಂದ್ರಃ**—ಇಂದ್ರನು । **ಪೀತ್ವಾ**—ಪಾನಮಾಡಿ । **ವೃತ್ರಾಣಿ**—ಶತ್ರುಗಳನ್ನು । **ಜಘಾನ**—ಸಂಹಾರಮಾಡಿದನು । **ನು**—ಕ್ಷಿಪ್ರವಾಗಿ । **ಜಘನಚ್ಚ**—ಈಗಲೂ ಸಂಹಾರಮಾಡಲಿ.

॥ ಭಾವಾರ್ಥ ॥

ಆಹ್ಲಾದವನ್ನುಂಟುಮಾಡುವ ರಸಗಳಲ್ಲಿ ಅತ್ಯಂತ ರುಚಿಕರವಾದ ಈ ಸೋಮರಸವನ್ನು ಪಾನಮಾಡಿಯೇ ಇಂದ್ರನು ಶತ್ರುಗಳನ್ನು ಹಿಂದೆ ಸಂಹಾರಮಾಡಿದನು. ಈಗಲೂ ಸಂಹಾರಮಾಡಲಿ.

## English Translation

Having drunk of this chief of exhilarating draughts, Indra irresistible has slain his foes, and may he ever slay them.

# ಇಪ್ಪತ್ತನಾಲ್ಕನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪ್ರ ಸೋಮಾಸ ಇತಿ ಸಪ್ತರ್ಚಂ ಚತುರ್ವಿಂಶಂ ಸೂಕ್ತಂ । ಅಸಿತೋ ದೇವಲೋ ವರ್ಷಿರ್ಗಾಯತ್ರೀ ಛಂದಃ ಸೋಮೋ ದೇವತಾ । ಪ್ರ ಸೋಮಾಸ ಇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥

ಅನುವಾದವು—**ಪ್ರ ಸೋಮಾಸಃ** ಎಂಬ ಈ ಸೂಕ್ತವು ಮೊದಲನೆಯ ಅನುವಾಕದಲ್ಲಿ ಇಪ್ಪತ್ತನಾಲ್ಕನೆಯ ಸೂಕ್ತವು. ಇದರಲ್ಲಿ ಏಳು ಋಕ್ಕುಗಳಿರುವವು. ಈ ಸೂಕ್ತಕ್ಕೆ ಹಿಂದಿನ ಸೂಕ್ತದಂತೆಯೇ ಅಸಿತಃ ಕಾಶ್ಯಪಃ ಅಥವಾ ದೇವಲನೆಂಬುವನು ಋಷಿಯು, ಸೋಮನು ದೇವತೆಯು; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರ ಸೋಮಾಸಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೨೪

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೨೪ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೧೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೭ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರ ಸೋಮಾಸೋ ಅಧನ್ವಿಷುಃ ಪವಮಾನಾಸ ಇಂದವಃ ।
ಶ್ರೀಣಾನಾ ಅಪ್ಸು ಮೃಂಜತ ॥ ೧ ॥

॥ ಪದಪಾಠಃ ॥

ಪ್ರ । ಸೋಮಾಸಃ । ಅಧನ್ವಿಷುಃ । ಪವಮಾನಾಸಃ । ಇಂದವಃ ।
ಶ್ರೀಣಾನಾಃ । ಅಪ್ ऽ ಸು । ಮೃಂಜತ ॥ ೧ ॥

॥ ಸಾಯಣಭಾಷ್ಯಂ ॥

ಸೋಮಾಸಃ ಸೋಮಾಃ ಪವಮಾನಾಸಃ ಪೂಯಮಾನಾ ಇಂದವೋ ದೀಪ್ತಾಃ ಪ್ರಾಧನ್ವಿಷುಃ । ಧನ್ವತಿರ್ಗತಿಕರ್ಮಾ । ಪ್ರಗಚ್ಛಂತಿ । ಕಿಂಚ ಶ್ರೀಣಾನಾಃ ಗೋಭಿಃ ಶ್ರಯಮಾಣಾ ಅಪ್ಸು ವಸತೀವರೀಷು ಚ ಮೃಂಜತ ಮೃಜ್ಯಂತೇ ॥

॥ ಪ್ರತಿಪದಾರ್ಥ ॥

**ಸೋಮಾಸಃ**—ಈ ಸೋಮರಸಗಳು । **ಪವಮಾನಾಸಃ**—ಹಿಂಡಿ ಶೋಧಿಸಲ್ಪಟ್ಟು । **ಇಂದವಃ**—ಪ್ರಕಾಶಮಾನವಾಗಿ (ಸ್ವಚ್ಛವಾಗಿ) । **ಪ್ರ ಅಧನ್ವಿಷುಃ**—ಜಿನುಗಿ ಹರಿಯುತ್ತವೆ । **ಶ್ರೀಣಾನಃ**—ಗೋವಿಕಾರಗಳಾದ ಹಾಲು ಅಥವಾ ಮೊಸರಿನೊಂದಿಗೆ ಮಿಶ್ರಿತವಾಗಿ । **ಅಪ್ಸು**—ವಸತೀವರ್ಯುದಕಗಳಲ್ಲಿ । **ವ್ಯಂಜತ**—ಮಿಶ್ರಿತವಾಗುತ್ತವೆ

॥ ಭಾವಾರ್ಥ ॥

ಚೆನ್ನಾಗಿ ಹಿಂಡಿ ಶೋಧಿಸಲ್ಪಟ್ಟಿರುವ ಈ ಸೋಮರಸಗಳು ಸ್ವಚ್ಛವಾಗಿ ಬೆಳಗುತ್ತಾ ಹರಿಯುತ್ತವೆ ಹಾಲು ಅಥವಾ ಮೊಸರಿನಿಂದ ಮಿಶ್ರಿತವಾಗಿ ವಸತೀವರ್ಯುದಕಗಳೊಡನೆ ಸೇರಿಕೊಳ್ಳುತ್ತವೆ.

English Translation

The purified effused Soma-juices have flowed forth,—mixing (with curds and milk) they are cleansed in the waters.

॥ ಸಂಹಿತಾಪಾಠಃ ॥

ಅಭಿ ಗಾವೋ ಅಧನ್ವಿಷುರಾಪೋ ನ ಪ್ರವತಾ ಯತೀಃ ।
ಪುನಾನಾ ಇಂದ್ರಮಾಶತ ॥ ೨ ॥

॥ ಪದಪಾಠಃ ॥

ಅಭಿ । ಗಾವಃ । ಅಧನ್ವಿಷುಃ । ಆಪಃ । ನ । ಪ್ರऽವತಾ । ಯತೀಃ ।
ಪುನಾನಾಃ । ಇಂದ್ರಂ । ಆಶತ ॥ ೨ ॥

॥ ಸಾಯಣಭಾಷ್ಯಂ ॥

ಗಾವೋ ಗಮನಶೀಲಾಃ ಇಂದವೋऽಭ್ಯಧನ್ವಿಷುಃ । ಅಭಿಗಚ್ಛಂತಿ ದಶಾಪವಿತ್ರಂ । ಕಿಮಿವ । ಪ್ರವತಾ ಪ್ರವಣವತಾ ದೇಶೇನ ಯತೀರ್ಗಚ್ಛಂತ್ಯ ಆಪೋ ನಾಪ ಇವ । ಪಶ್ಚಾತ್ಪುನಾನಾ ಇಂದ್ರಂ ಪ್ರೀಣಯಿತುಮಾಶತ । ವ್ಯಾಪ್ನುವನ್ । ಆಹುತಿಪ್ರಣಾಡ್ಯೇಂದ್ರಮೇವ ವಾ ವ್ಯಾಪ್ನುವನ್ ॥

॥ ಪ್ರತಿಪದಾರ್ಥ ॥

**ಪ್ರವತಾ**—ತಗ್ಗಾದ ಪ್ರದೇಶಗಳಲ್ಲಿ । **ಯತೀಃ**—ಹರಿಯುತ್ತಿರುವ । **ಆಪೋ ನ**—ನೀರಿನಂತೆ । **ಗಾವಃ**—ಹರಿಯುವ ಸ್ವಭಾವವುಳ್ಳ ಈ ಸೋಮರಸಗಳು । **ಅಭಿ ಅಧನ್ವಿಷುಃ**—ದಶಾಪವಿತ್ರಾಭಿಮುಖವಾಗಿ ಪ್ರವಹಿಸುತ್ತವೆ । **ಇಂದ್ರಂ**—ಇಂದ್ರನನ್ನು । **ಪುನಾನಾಃ**—ಸಂತೋಷಪಡಿಸಲು । **ಆಶತ**—ಇಂದ್ರನನ್ನು ಸೇರುತ್ತವೆ.

॥ ಭಾವಾರ್ಥ ॥

ತಗ್ಗಾದ ಪ್ರದೇಶಗಳಲ್ಲಿ ವೇಗವಾಗಿ ಹರಿಯುವ ನೀರಿನಂತೆ ಹರಿಯುವ ಸ್ವಭಾವವುಳ್ಳ ಈ ಸೋಮರಸಗಳು ಶೋಧನೆಗಾಗಿ ದಶಾಪವಿತ್ರದ ಬಳಿಗೆ ಧಾವಿಸುತ್ತವೆ ಮತ್ತು ಇಂದ್ರನನ್ನು ಸಂತೋಷಗೊಳಿಸಲು (ಆಹುತಿಮೂಲಕ) ಇಂದ್ರನನ್ನು ಸೇರುತ್ತವೆ.

English Translation

The flowing juices rush (to the filter), like waters flowing down a declivity ; purified they gratify Indra.

॥ ಸಂಹಿತಾಪಾಠಃ ॥

ಪ್ರ ಪವಮಾನ ಧನ್ವಸಿ ಸೋಮೇಂದ್ರಾಯ ಪಾತವೇ ।

ನೃಭಿರ್ಯತೋ ವಿ ನೀಯಸೇ ॥ ೩ ॥

॥ ಪದಪಾಠಃ ॥

ಪ್ರ । ಪವಮಾನ । ಧನ್ವಸಿ । ಸೋಮ । ಇಂದ್ರಾಯ । ಪಾತವೇ ।

ನೃಽಭಿಃ । ಯತಃ । ವಿ । ನೀಯಸೇ ॥ ೩ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಸೋಮ ಇಂದ್ರಾಯೇಂದ್ರಸ್ಯ ಪಾತವೇ ಪಾನಾಯ ಪ್ರ ಧನ್ವಸಿ । ಪ್ರಗಚ್ಛಸ್ಯಾಹವನೀಯಂ ಪ್ರತಿ ಹವಿರ್ಧಾನಾತ್ । ತದೇವಾಹ । ನೃಭಿರ್ನೇತೃಭಿರ್ಋತ್ವಿಗ್ಭಿರ್ಯತೋ ವಿನೀತೋ ವಿ ನೀಯಸೇ ಹವಿರ್ಧಾನಾತ್ । ಅಥವಾ । ಪವಮಾನ ಪ್ರ ಧನ್ವಸಿ ಪಾತ್ರಂ ಪ್ರತೀಂದ್ರಪಾನಾಯ ತದರ್ಥಂ ಹವಿರ್ಧಾನಾದ್ವಿ ನೀಯಸೇ ॥

॥ ಪ್ರತಿಪದಾರ್ಥ ॥

**ಪವಮಾನ**– ಶುದ್ಧಿಕಾರಕನಾದ । **ಸೋಮ**—ಎಲೈ ಸೋಮನೇ ನೀನು । **ಇಂದ್ರಾಯ**— ಇಂದ್ರನ । **ಪಾತವೇ**—ಪಾನಾರ್ಥವಾಗಿ । **ಪ್ರ ಧನ್ವಸಿ**—(ಆಹವನೀಯಾಗ್ನಿಯ ಬಳಿಗೆ) ಹೋಗುತ್ತೀಯೆ । **ನೃಭಿಃ**—ಯಜ್ಞನೇತೃಗಳಾದ ಋತ್ವಿಕ್ಕುಗಳಿಂದ । **ಯತಃ**—ಹವಿರ್ಧಾನ ಪ್ರದೇಶದಿಂದ (ಗಾಡಿಯಿಂದ) ಆಹವನೀಯಾಗ್ನಿಯ ಸಮೀಪಕ್ಕೆ । **ವಿ ನೀಯಸೇ**—ಒಯ್ಯಲ್ಪಡುತ್ತೀಯೆ

॥ ಭಾವಾರ್ಥ ॥

ಶುದ್ಧಿಕಾರಕನಾದ ಎಲೈ ಸೋಮವೇ, ನೀನು ಇಂದ್ರನ ಪಾನಾರ್ಥವಾಗಿ ಆಹವನೀಯಾಗ್ನಿಯ ಬಳಿಗೆ ಹೋಗುತ್ತೀಯೆ. ಯಜ್ಞನೇತೃಗಳಾದ ಋತ್ವಿಗ್ಜನರಿಂದ ಹವಿರ್ಧಾನವೆಂಬ ಸೋಮವನ್ನು ತರುವ ಗಾಡಿಯಿಂದ ಉತ್ತರ ವೇದಿಯಲ್ಲಿರುವ ಆಹವನೀಯಾಗ್ನಿಯ ಸಮೀಪಕ್ಕೆ ಒಯ್ಯಲ್ಪಡುವೆ.

## English Translation

Purifier, Soma, you proceed to Indra for his drinking,—thence are you brought by the priests.

॥ ಸಂಹಿತಾಪಾಠಃ ॥

ತ್ವಂ ಸೋಮ ನೃಮಾದನಃ ಪವಸ್ವ ಚರ್ಷಣೀಸಹೇ ।
ಸಸ್ನಿರ್ಯೋ ಅನುಮಾದ್ಯಃ ॥ ೪ ॥

॥ ಪದಪಾಠಃ ॥

ತ್ವಂ । ಸೋಮ । ನೃಽಮಾದನಃ । ಪವಸ್ವ । ಚರ್ಷಣಿಽಸಹೇ ।
ಸಸ್ನಿಃ । ಯಃ । ಅನುಽಮಾದ್ಯಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ನೃಮಾದನೋ ನೃಣಾಂ ಮಾದಯಿತಾ ತ್ವಂ ಚರ್ಷಣೀಸಹೇ । ಚರ್ಷಣಯೋ ಮನುಷ್ಯಾ ದ್ವೇಷ್ಟಾರಃ । ತೇಷಾಂ ಸಮಭಿಭವಿತ್ರ ಇಂದ್ರಾಯ ಪವಸ್ವ । ಕ್ಷರ । ಯಸ್ತ್ವಂ ಸಸ್ನಿಃ ಶುದ್ಧೋಽನುಮಾದ್ಯಃ ಸ್ತುತ್ಯಃ ಸ ಪವಸ್ವೇತಿ ಸಮನ್ವಯಃ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ತ್ವಂ**—ನೀನು । **ನೃಮಾದನಃ**—ಮಾನವರಿಗೆ ಆಹ್ಲಾದಕರನಾಗಿರುವೆ । **ಯಃ**—ಯಾವ ನೀನು । **ಸಸ್ನಿಃ**—ಶುದ್ಧನೂ । **ಅನುಮಾದ್ಯಃ**—ಸ್ತುತ್ಯನೂ ಆಗಿರುವೆಯೋ । (**ಸಃ ತ್ವಂ**--ಅಂತಹ ನೀನು) । **ಚರ್ಷಣೀಸಹೇ**—ಮನುಷ್ಯರನ್ನು ದ್ವೇಷಿಸುವ ಶತ್ರುಗಳನ್ನು ಸೋಲಿಸುವ ಇಂದ್ರನ ಪಾನಾರ್ಥವಾಗಿ । **ಪವಸ್ವ**—ಪ್ರವಹಿಸು

॥ ಭಾವಾರ್ಥ ॥

ಎಲೈ ಸೋಮನೇ, ನೀನು ಮಾನವರಿಗೆ ಸಂತೋಷವನ್ನುಂಟುಮಾಡುವವನು, ಶುದ್ಧನೂ, ಸ್ತುತ್ಯನೂ ಆಗಿರುವ ನೀನು ಶತ್ರುಗಳನ್ನು ಸೋಲಿಸುವ ಇಂದ್ರನ ಪಾನಾರ್ಥವಾಗಿ ಪ್ರವಹಿಸು.

## English Translation

You, Soma, who are the exhilarator of men, flow to (Indra), the conqueror of enemies, you who are pure and to be worshipped.

॥ ಸಂಹಿತಾಪಾಠಃ ॥

ಇಂದೋ ಯದದ್ರಿಭಿಃ ಸುತಃ ಪವಿತ್ರಂ ಪರಿಧಾವಸಿ ।

ಅರಮಿಂದ್ರಸ್ಯ ಧಾಮ್ನೇ ॥ ೫ ॥

॥ ಪದಪಾಠಃ ॥

ಇಂದೋ ಇತಿ । ಯತ್ । ಅದ್ರಿಽಭಿಃ । ಸುತಃ । ಪವಿತ್ರಂ । ಪರಿಽಧಾವಸಿ ।

ಅರಂ । ಇಂದ್ರಸ್ಯ । ಧಾಮ್ನೇ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಇಂದೋ ತ್ವಂ ಯದ್ಯದಾಽದ್ರಿಭಿರ್ಗ್ರಾವಭಿಃ ಸುತೋಽಭಿಷುತಃ ಪವಿತ್ರಂ ದಶಾಪವಿತ್ರಂ ಪರಿಧಾವಸಿ ಪರಿಗಚ್ಛಸಿ ತದೇಂದ್ರಸ್ಯ ಧಾಮ್ನೇ ಸ್ಥಾನಾಯಾಧಾರಕಾಯೋದರಾಯ ವಾರಂ ಪರ್ಯಾಪ್ತೋ ಭವಸಿ ॥**

॥ ಪ್ರತಿಪದಾರ್ಥ ॥

**ಇಂದೋ**—ಎಲೈ ಸೋಮವೇ ನೀನು । **ಯತ್**—ಯಾವಾಗ । **ಅದ್ರಿಭಿಃ**—ಹಿಂಡುವ ಕಲ್ಲುಗಳಿಂದ । **ಸುತಃ**—ಜಜ್ಜಿ ಹಿಂಡಲ್ಪಟ್ಟು । **ಪವಿತ್ರಂ**—(ಶೋಧಿಸಲ್ಪಡುವುದಕ್ಕಾಗಿ) ದಶಾಪವಿತ್ರದ ಬಳಿಗೆ । **ಪರಿ ಧಾವಸಿ**—ವೇಗವಾಗಿ ಹರಿದುಹೋಗುವಿಯೋ ಆಗ । **ಇಂದ್ರಸ್ಯ**—ಇಂದ್ರನ । **ಧಾಮ್ನೇ**--ಸ್ಥಾನದಲ್ಲಿ ಎಂದರೆ ಉದರದಲ್ಲಿ । **ಅರಂ**—ವ್ಯಾಪಿಸುತ್ತೀಯೆ.

॥ ಭಾವಾರ್ಥ ॥

ಎಲೈ ಸೋಮವೇ, ನೀನು ಯಾವಾಗ ಹಿಂಡುವ ಕಲ್ಲುಗಳಿಂದ ಜಜ್ಜಿ ಹಿಂಡಲ್ಪಟ್ಟು ಶೋಧನೆಗಾಗಿ ದಶಾಪವಿತ್ರದ ಬಳಿಗೆ ಹರಿದುಹೋಗುವೆಯೋ ಆಗ ಇಂದ್ರನ ಉದರದಲ್ಲಿ ಸೇರಿ ವ್ಯಾಪಿಸುತ್ತೀಯೆ.

## English Translation

When, Indu, effused by the stones, you hasten to the filtering-cloth, you are an ample portion for Indra's belly.

॥ ಸಂಹಿತಾಪಾಠಃ ॥

ಪವಸ್ವ ವೃತ್ರಹಂತಮೋಕ್ಥೇಭಿರನುಮಾದ್ಯಃ ।

ಶುಚಿಃ ಪಾವಕೋ ಅದ್ಭುತಃ ॥ ೬ ॥

ಪದಪಾಠಃ

ಪವಸ್ವ । ವೃತ್ರಹನ್ಽತಮ । ಉಕ್ಥೇಭಿಃ । ಅನುಽಮಾದ್ಯಃ ।

ಶುಚಿಃ । ಪಾವಕಃ । ಅದ್ಭುತಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ವೃತ್ರಹಂತಮ ಶತ್ರೂಣಾಮತಿಶಯೇನ ಹಂತರಿಂದ್ರ ತ್ವಂ ಪವಸ್ವ । ಕ್ಷರ । ಕೀದೃಶಸ್ತ್ವಂ । ಉಕ್ಥೇಭಿಃ ಶಸ್ತ್ರೈರನುಮಾದ್ಯಃ ಸ್ತುತ್ಯಃ ಶುಚಿಃ ಶುದ್ಧಃ ಪಾವಕೋಽನ್ಯಸ್ಯ ಶೋಧಕೋಽದ್ಭುತೋ ಮಹಾನ್ । ಏವಂಮಹಾನುಭಾವಃ ಪವಸ್ವ ॥

॥ ಪ್ರತಿಪದಾರ್ಥ ॥

(ಎಲೈ ಸೋಮನೇ) **ವೃತ್ರಹಂತಮಃ**—ಶತ್ರುಗಳನ್ನು ಅತಿಶಯವಾಗಿ ಕೊಲ್ಲುವವನೂ । **ಉಕ್ಥೇಭಿಃ**—ಶಸ್ತ್ರಮಂತ್ರಗಳಿಂದ । **ಅನುಮಾದ್ಯಃ**—ಸ್ತುತಿಸಲ್ಪಡುವವನೂ । **ಶುಚಿಃ**—ಶುದ್ಧನೂ । **ಪಾವಕಃ**—ಪಾನ ಮಾಡುವವರನ್ನು ಶುದ್ಧಿಗೊಳಿಸುವವನೂ । **ಅದ್ಭುತಃ**—ಮಹತ್ಸ್ವರೂಪವುಳ್ಳವನೂ ಆದ ನೀನು । **ಪವಸ್ವ**—ಸ್ರವಿಸುತ್ತಾ ಪ್ರವಹಿಸು

॥ ಭಾವಾರ್ಥ ॥

ಎಲೈ ಸೋಮನೇ, ಶತ್ರುಗಳನ್ನು ಅತಿಶಯವಾಗಿ ಕೊಲ್ಲುವವನೂ, ಶಸ್ತ್ರಮಂತ್ರಗಳಿಂದ ಸ್ತುತಿಸಲ್ಪಡುವವನೂ ಸ್ವಯಂಶುದ್ಧನೂ, ಪಾನಮಾಡುವವರನ್ನು ಶುದ್ಧಿಗೊಳಿಸುವವನೂ, ಮಹತ್ಸ್ವರೂಪವುಳ್ಳವನೂ ಆದ ನೀನು ಸ್ರವಿಸುತ್ತಾ ಪ್ರವಹಿಸು.

## English Translation

Utter destroyer of enemies, flow forth, to be propitiated by praises, pure, purifying, wonderful.

॥ ಸಂಹಿತಾಪಾಠಃ ॥

ಶುಚಿಃ ಪಾವಕ ಉಚ್ಯತೇ ಸೋಮಃ ಸುತಸ್ಯ ಮಧ್ವಃ ।

ದೇವಾವೀರಘಶಂಸಹಾ ॥ ೭ ॥

॥ ಪದಪಾಠಃ ॥

ಶುಚಿಃ । ಪಾವಕಃ । ಉಚ್ಯತೇ । ಸೋಮಃ । ಸುತಸ್ಯ । ಮಧ್ವಃ ।

ದೇವಽಅವೀಃ । ಅಘಶಂಸಽಹಾ ॥ ೭ ॥

॥ ಸಾಯಣಭಾಷ್ಯಂ ॥

**ಸುತಸ್ಯಾಭಿಷುತಸ್ಯ ಮಧ್ವೋ ಮದಕರಸ್ಯ ವಲ್ಲ್ಯಾತ್ಮಕಃ ಸೋಮೋ ರಸರೂಪಃ ಶುಚಿಃ ಸ್ವಯಂ ಶುದ್ಧಃ ಪಾವಕಃ ಶೋಧಕಶ್ಚೋಚ್ಯತೇ। ತಥಾ ದೇವಾವೀರ್ದೇವಾನಾಮವಿತಾ ತರ್ಪಯಿತಾಘಶಂಸಹಾ। ಅಘಂ ಪಾಪಂ ಶಂಸತೀತ್ಯಘಶಂಸಾ ಅಸುರಾಃ। ತೇಷಾಂ ಹಂತೇತಿ ಚೋಚ್ಯತೇ ॥**

॥ ಪ್ರತಿಪದಾರ್ಥ ॥

**ಸುತಸ್ಯ**—ಹಿಂಡಲ್ಪಡುವ । **ಮಧ್ವಃ**—ಹರ್ಷಕಾರಕವಾದ ಸೋಮಲತೆಗಳಿಂದ ಉತ್ಪನ್ನವಾದ । **ಸೋಮಃ**—ರಸರೂಪವಾದ ಸೋಮವು । **ಶುಚಿಃ**—ಸ್ವಯಂಶುದ್ಧನಾದವನೂ । **ಪಾವಕಃ**—ಇತರರನ್ನು ಶುದ್ಧಿಗೊಳಿಸುವವನು ಎಂದು। **ಉಚ್ಯತೇ**—ಹೇಳಲ್ಪಡುತ್ತಾನೆ (ಹಾಗೆಯೇ ಈ ಸೋಮನು) । **ದೇವಾವೀಃ**—ದೇವತೆಗಳನ್ನು ತೃಪ್ತಿಪಡಿಸುವವನೂ । **ಅಘಶಂಸಹಾ**—ಪಾಪಿಷ್ಠರಾದ ಅಸುರರನ್ನು ಕೊಲ್ಲುವವನೂ ಎಂದೂ । (**ಉಚ್ಯತೇ**—ಹೇಳಲ್ಪಡುತ್ತಾನೆ).

॥ ಭಾವಾರ್ಥ ॥

ಸೋಮಲತೆಗಳನ್ನು ಜಜ್ಜಿ ಹಿಂಡಿ ತೆಗೆಯುವ ರಸರೂಪವಾದ ಸೋಮವು ಸ್ವಯಂಶುದ್ಧವೆಂದೂ ಇತರರನ್ನು ಶುದ್ಧಿಗೊಳಿಸುವುದೆಂದೂ ದೇವತೆಗಳನ್ನು ತೃಪ್ತಿಪಡಿಸುವುದೆಂದೂ ಪಾಪಕಾರ್ಯಗಳನ್ನು ಮಾಡುವ ಅಸುರರನ್ನು ಸಂಹರಿರುವುದೆಂದೂ ಜನರು ಹೇಳುತ್ತಾರೆ.

English Translation

Soma, (the yielder) of the exhilarating effusion, is called the pure, the purifier, the gratifier of the gods, the slayer of the wicked.

## ಇಪ್ಪತ್ತೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ದ್ವಿತೀಯೋಽನುವಾಕೇ ಷಟ್‌ತ್ರಿಂಶತ್ಸೂಕ್ತಾನಿ। ತತ್ರ ಪವಸ್ವೇತಿ ಷಡೃಚಂ ಪ್ರಥಮಂ ಸೂಕ್ತಂ ದೃಳ್ಹಚ್ಯುತನಾಮ್ನೋಽಗಸ್ತ್ಯಪುತ್ರಸ್ಯಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ। ಅನುಕ್ರಾಂತಂ ಚ। ಪವಸ್ವ ಷಟ್ ದೃಳ್ಹಚ್ಯುತ ಆಗಸ್ತ್ಯ ಇತಿ ॥ ಗತೋ ವಿನಿಯೋಗಃ ॥**

ಅನುವಾದವು— ಒಂಭತ್ತನೆಯ ಮಂಡಲದ ಎರಡನೆಯ ಅನುವಾಕದಲ್ಲಿ ಮೂವತ್ತಾರು ಸೂಕ್ತಗಳಿರುವವು ಅವುಗಳಲ್ಲಿ **ಪವಸ್ವ** ಎಂಬ ಈ ಸೂಕ್ತವು ಮೊದಲನೆಯದು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಆಗಸ್ತ್ಯಋಷಿಯ ಪುತ್ರನಾದ ದೃಳ್ಹಚ್ಯುತ ಎಂಬುವನು ಋಷಿಯು, ಪವಮಾನಸೋಮನು ದೇವತೆಯು, ಗಾಯತ್ರೀ ಛಂದಸ್ಸು ಅನುಕ್ರಮಣಿಕೆಯಲ್ಲಿ— **ಪವಸ್ವ ಷಟ್ ದೃಳ್ಹಚ್ಯುತ ಆಗಸ್ತ್ಯಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

## ಸೂಕ್ತ—೨೫

ಮಂಡಲ—೯ ॥ ಅನುವಾಕ—೧ ॥ ಸೂಕ್ತ—೨೫ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ— ೧೫॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಅಸಿತಃ ಕಾಶ್ಯಪೋ ದೇವಲೋ ವಾ ॥
ದೇವತಾ—ಪವಮಾನಃ ಸೋಮಃ ॥
ಛಂದಃ— ಗಾಯತ್ರೀ ॥

॥ ಸಂಹಿತಾಪಾಠಃ ॥

ಪವಸ್ವ ದಕ್ಷಸಾಧನೋ ದೇವೇಭ್ಯಃ ಪೀತಯೇ ಹರೇ ।
ಮರುದ್ಭ್ಯೋ ವಾಯವೇ ಮದಃ ॥ ೧ ॥

॥ ಪದಪಾಠಃ ॥

ಪವಸ್ವ । ದಕ್ಷಽಸಾಧನಃ । ದೇವೇಭ್ಯಃ । ಪೀತಯೇ । ಹರೇ ।
ಮರುತ್ಽಭ್ಯಃ । ವಾಯವೇ । ಮದಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಹರೇ ಹರಿತವರ್ಣ ಪಾಪಹರ್ತರ್ವಾ ಸೋಮ ದಕ್ಷಸಾಧನಃ । ದಕ್ಷೋ ಬಲಂ । ತಸ್ಯ ಸಾಧಕೋ ಮದೋ ಮದಕರಶ್ಚ ತ್ವಂ ಪವಸ್ವ । ಕ್ಷರ । ದೇವೇಭ್ಯ ಇಂದ್ರಾದಿಭ್ಯಃ ಪೀತಯೇ ಪಾನಾಯ । ತಥಾ ಮರುದ್ಭ್ಯೋ ವಾಯವೇ ಚ ಪೀತಯೇ ಪವಸ್ವ ॥

॥ ಪ್ರತಿಪದಾರ್ಥ ॥

ಹರೇ—ಹೊಂಬಣ್ಣವುಳ್ಳ ಅಥವಾ ಪಾಪಪರಿಹಾರಕನಾದ ಎಲೈ ಸೋಮನೇ । **ದಕ್ಷಸಾಧನಃ**—ಬಲವನ್ನು ಸಾಧಿಸಿ ಕೊಡುವವನೂ । **ಮದಃ**—ಹರ್ಷಕಾರಕನೂ ಆದ ನೀನು । **ದೇವೇಭ್ಯಃ**—ಇಂದ್ರಾದಿ ದೇವತೆಗಳ । **ಪೀತಯೇ**—ಪಾನಾರ್ಥವಾಗಿಯೂ । **ಮರುದ್ಭ್ಯಃ**—ಮರುದ್ದೇವತೆಗಳ ಮತ್ತು । **ವಾಯವೇ**—ವಾಯುದೇವತೆಯ ಪಾನಾರ್ಥವಾಗಿಯೂ । **ಪವಸ್ವ**—ಪ್ರವಹಿಸು ।

॥ ಭಾವಾರ್ಥ ॥

ಹೊಂಬಣ್ಣವುಳ್ಳ ಅಥವಾ ಪಾಪ ಪರಿಹಾರಕನಾದ ಎಲೈ ಸೋಮನೇ, ಪಾನಮಾಡುವವರಿಗೆ ಬಲವನ್ನು ಸಾಧಿಸಿಕೊಡುವವನೂ, ಹರ್ಷದಾಯಕನೂ ಆದ ನೀನು ಇಂದ್ರಾದಿ ದೇವತೆಗಳ, ಮರುತ್ತುಗಳ ಮತ್ತು ವಾಯುದೇವನ ಪಾನಾರ್ಥವಾಗಿ ಪ್ರವಿಸಿ ಪ್ರವಹಿಸು.

## English Translation

Green-tinted (Soma), you are the bestower of strength, the exhilarating, flow as a beverage for the gods, for the Maruts and for Vayu.

॥ ಸಂಹಿತಾಪಾಠಃ ॥

ಪವಮಾನ ಧಿಯಾ ಹಿತೋಽಭಿ ಯೋನಿಂ ಕನಿಕ್ರದತ್ ।

ಧರ್ಮಣಾ ವಾಯುಮಾ ವಿಶ ॥ ೨ ॥

॥ ಪದಪಾಠಃ ॥

ಪವಮಾನ । ಧಿಯಾ । ಹಿತಃ । ಅಭಿ । ಯೋನಿಂ । ಕನಿಕ್ರದತ್ ।

ಧರ್ಮಣಾ । ವಾಯುಂ । ಆ । ವಿಶ ॥ ೨ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಸೋಮ ಧಿಯಾ ಕರ್ಮಣಾಸ್ಮದ್ವ್ಯಾಪಾರೇಣಾಂಗುಲ್ಯಾ ವಾ ಹಿತೋ ಧೃತಃ ಸನ್ಕನಿಕ್ರದಚ್ಛಬ್ದಂ ಕುರ್ವನ್ಯೋನಿಂ ಸ್ಥಾನಂ ಗ್ರಹಂ ವಾಭಿ ವಿಶೇತಿ ಶೇಷಃ । ತದೇವಾಹ । ಧರ್ಮಣಾ ವಾಯುಂ । ವಾಯುಸಂಬಂಧಿ ಪಾತ್ರಮಿತ್ಯರ್ಥಃ । ತದಾ ವಿಶ । ಪ್ರವಿಶ ॥

॥ ಪ್ರತಿಪದಾರ್ಥ ॥

**ಪವಮಾನ**—ಎಲೈ ಶುದ್ಧಿಕಾರಕನಾದ ಸೋಮನೇ । **ಧಿಯಾ**—ನಮ್ಮ ಹಿಂಡುವ ಕಾರ್ಯದಿಂದ ಅಥವಾ ಬೆರಳುಗಳಿಂದ । **ಹಿತಃ**—ಧರಿಸಲ್ಪಟ್ಟು । **ಕನಿಕ್ರದತ್**—ಜಳಜಳನೆ ಶಬ್ದಮಾಡುತ್ತಾ । **ಯೋನಿಂ**—ಸ್ವಸ್ಥಾನವಾದ ದ್ರೋಣಕಲಶವನ್ನು ಅಥವಾ ಗ್ರಹಪಾತ್ರೆಯನ್ನು । **ಅಭಿ**—ಪ್ರವೇಶಿಸು । **ಧರ್ಮಣಾ**—ನಿನ್ನ ಸ್ವಕರ್ಮದಿಂದಲೇ (ನೀನಾಗಿಯೇ) । **ವಾಯುಂ**—ವಾಯುಸಂಬಂಧವಾದ ಗ್ರಹಪಾತ್ರೆಯನ್ನು । **ಆ ವಿಶ**—ಪ್ರವೇಶಿಸು ।

॥ ಭಾವಾರ್ಥ ॥

ಎಲೈ ಶುದ್ಧಿಕಾರಕನಾದ ಸೋಮನೇ, ನಮ್ಮ ಹಿಂಡುವ ಕಾರ್ಯದಿಂದ ಅಥವಾ ನಮ್ಮ ಬೆರಳುಗಳಿಂದ ಧರಿಸಲ್ಪಟ್ಟು ಜಳಜಳನೆ ಶಬ್ದಮಾಡುತ್ತಾ ನಿನ್ನ ಸ್ವಸ್ಥಾನವಾದ ದ್ರೋಣಕಲಶದಲ್ಲಿ ಅಥವಾ ಗ್ರಹಪಾತ್ರೆಯಲ್ಲಿ ಪ್ರವೇಶಿಸು. ನಿನ್ನ ಸ್ವಕರ್ಮದಿಂದಲೇ ಎಂದರೆ ನೀನಾಗಿಯೇ ಇತರರ ಪ್ರೇರಣೆಯಿಲ್ಲದೆ ವಾಯುದೇವತೆಯ ಗ್ರಹಪಾತ್ರೆಯನ್ನು ಪ್ರವೇಶಿಸು.

## English Translation

Purifying (Soma), placed suitably by the sacred rite, (enter) uttering a cry the (appointed) place, enter by the sacred function into Vayu.

॥ ಸಂಹಿತಾಪಾಠಃ ॥

ಸಂ ದೇವೈಃ ಶೋಭತೇ ವೃಷಾ ಕವಿರ್ಯೋನಾವಧಿ ಪ್ರಿಯಃ ।
ವೃತ್ರಹಾ ದೇವವೀತಮಃ ॥ ೩ ॥

॥ ಪದಪಾಠಃ ॥

ಸಂ । ದೇವೈಃ । ಶೋಭತೇ । ವೃಷಾ । ಕವಿಃ । ಯೋನೌ । ಅಧಿ । ಪ್ರಿಯಃ ।
ವೃತ್ರऽಹಾ । ದೇವऽವೀತಮಃ ॥ ೩ ॥

॥ ಸಾಯಣಭಾಷ್ಯಂ ॥

ಅಯಂ ಸೋಮಃ ಸಂ ಶೋಭತೇ ದೇವೈಃ ಸಹ ಯೋನೌ ಸ್ಥಾನೇ ಸ್ವೀಯೇऽಧಿಷ್ಠಿತೋ ವೃಷಾ ಕಾಮಾನಾಂ ವರ್ಷಕಃ ಕವಿಃ ಕ್ರಾಂತಪ್ರಜ್ಞಃ ಪ್ರಿಯಃ ಪ್ರಿಯಭೂತಃ ಸರ್ವೇಷಾಂ ಯದ್ವಾ ಪ್ರೀಣಯಿತಾ ವೃತ್ರಹಾ ವೃತ್ರಸ್ಯ ಹಂತಾ ದೇವವೀತಮೋऽತಿಶಯೇನ ದೇವಾನ್ಕಾಮಯಮಾನಃ ಏವಂಮಹಾನುಭಾವಃ ಸೋಮಃ ಸಂ ಶೋಭತೇ ॥

॥ ಪ್ರತಿಪದಾರ್ಥ ॥

ವೃಷಾ—ಕಾಮವರ್ಷಕನೂ । ಕವಿಃ—ಕ್ರಾಂತಪ್ರಜ್ಞನೂ । ಪ್ರಿಯಃ—ಸರ್ವರಿಗೂ ಪ್ರೀತಿಪಾತ್ರನಾದವನೂ ಅಥವಾ ಸರ್ವರಿಗೂ ಪ್ರಿಯವನ್ನುಂಟುಮಾಡುವವನೂ । ವೃತ್ರಹಾ-ಶತ್ರುಹಂತಕನೂ । ದೇವವೀತಮಃ-ದೇವತೆಗಳನ್ನು ಅತಿಶಯವಾಗಿ ಇಚ್ಛಿಸುವವನೂ ಆದ ಈ ಸೋಮನು । ದೇವೈಃ—ದೇವತೆಗಳಿಂದ ಸಹಿತನಾಗಿ । ಸಂ ಶೋಭತೇ—ಬಹಳವಾಗಿ ಪ್ರಕಾಶಿಸುತ್ತಾನೆ ।

॥ ಭಾವಾರ್ಥ ॥

ಕಾಮವರ್ಷಕನೂ, ಕ್ರಾಂತಪ್ರಜ್ಞನೂ, ಸರ್ವರಿಗೂ ಪ್ರಿಯನಾದವನೂ, ಶತ್ರುಹಂತಕನೂ, ದೇವತೆಗಳನ್ನು ಅತಿಶಯವಾಗಿ ಇಚ್ಛಿಸುವವನೂ ಆದ ಈ ಸೋಮದೇವನು ದೇವತೆಗಳಿಂದ ಸಹಿತನಾಗಿ ಚೆನ್ನಾಗಿ ಪ್ರಕಾಶಿಸುತ್ತಾನೆ.

English Translation

This Soma, the showerer (of benefits), the seer, the beloved, the destroyer of foes, the most devout, shines in its appointed place along with the gods.

॥ ಸಂಹಿತಾಪಾಠಃ ॥

ವಿಶ್ವಾ ರೂಪಾಣ್ಯಾವಿಶನ್ಪುನಾನೋ ಯಾತಿ ಹರ್ಯತಃ ।
ಯತ್ರಾಮೃತಾಸ ಆಸತೇ ॥ ೪ ॥

॥ ಪದಪಾಠಃ ॥

ವಿಶ್ವಾ । ರೂಪಾಣಿ । ಆऽವಿಶನ್ । ಪುನಾನಃ । ಯಾತಿ । ಹರ್ಯತಃ ।

ಯತ್ರ । ಅಮೃತಾಸಃ । ಆಸತೇ ॥ ೪ ॥

॥ ಸಾಯಣಭಾಷ್ಯಂ ॥

ವಿಶ್ವಾ ಸರ್ವಾಣಿ ರೂಪಾಣ್ಯಾವಿಶನ್ಪುನಾನಃ ಪೂಯಮಾನೋ ಹರ್ಯತಃ ಕಮನೀಯಃ ॥ ಹರ್ಯ ಗತಿಕಾಂತ್ಯೋಃ ॥ ಈದೃಶೋ ಯಾತಿ । ಗಚ್ಛತಿ । ಯತ್ರಾಮೃತಾಸೋಽಮೃತಾ ದೇವಾ ಆಸತೇ ತಿಷ್ಠಂತಿ ತಂ ದೇಶಂ ಯಾತಿ ॥

॥ ಪ್ರತಿಪದಾರ್ಥ ॥

**ಪುನಾನಃ**—ಶೋಧಿಸಲ್ಪಟ್ಟ । **ಹರ್ಯತಃ**—ಆಕರ್ಷಕವಾದ ರೂಪವುಳ್ಳ ಈ ಸೋಮದೇವನು । **ವಿಶ್ವಾ**—ಸಮಸ್ತವಾದ । **ರೂಪಾಣಿ**—ವಿಧವಿಧ ರೂಪಗಳನ್ನು । **ಆವಿಶನ್**—ಧರಿಸಿಕೊಂಡು । **ಯತ್ರ**—ಯಾವ ಪ್ರದೇಶದಲ್ಲಿ । **ಅಮೃತಾಸಃ**—ಮರಣರಹಿತರಾದ ದೇವತೆಗಳು । **ಆಸತೇ**—ಕುಳಿತಿರುವರೋ ಅಲ್ಲಿಗೆ । **ಯಾತಿ**—ಹೋಗುತ್ತಾನೆ ।

॥ ಭಾವಾರ್ಥ ॥

ದಶಾಪವಿತ್ರದಲ್ಲಿ ಶೋಧಿಸಲ್ಪಟ್ಟವನೂ, ಆಕರ್ಷಕವಾದ ರೂಪವುಳ್ಳವನೂ ಆದ ಈ ಸೋಮದೇವನು ನಾನಾ ವಿಧವಾದ ರೂಪಗಳನ್ನು ಧರಿಸಿಕೊಂಡು ಯಾವ ಪ್ರದೇಶದಲ್ಲಿ ಮರಣರಹಿತರಾದ ದೇವತೆಗಳು ಕುಳಿತಿರುವರೋ ಅಲ್ಲಿಗೆ ಹೋಗುತ್ತಾನೆ

English Translation

Pervading all forms, the pure, the desirable goes to the place where the immortals abide

॥ ವಿಶೇಷವಿಷಯಗಳು ॥

**ಯತ್ರ**—ಯಾವ ಪ್ರದೇಶದಲ್ಲಿ ಎಂದರೆ ದೇವತೆಗಳು ಬಂದು ಕುಳಿತಿರುವ ಯಜ್ಞವೇದಿಯಲ್ಲಿ.

**ವಿಶ್ವಾ ರೂಪಾಣಿ**—ನಾನಾ ರೂಪಗಳನ್ನು, ಇಲ್ಲಿ ಸೋಮದೇವನ ನಾನಾ ರೂಪಗಳೆಂದರೆ ಸ್ವಚ್ಛವಾದ, ತೀವ್ರವಾದ ಎಂದರೆ ಏನೂ ಬೆರಸಿಲ್ಲದ ಸೋಮರಸ. ಹಾಲಿನಿಂದ ಮಿಶ್ರಿತವಾದ ಗವಾಶಿರವೆಂಬ ಸೋಮರಸ, ಮೊಸರಿನಿಂದ ಮಿಶ್ರಿತವಾದ ದಧ್ಯಾಶಿರವೆಂಬ ಸೋಮರಸ, ಯವಧಾನ್ಯದ ಹಿಟ್ಟಿನಿಂದ ಮಿಶ್ರಿತವಾದ ಯವಾಶಿರವೆಂಬ ಸೋಮರಸ ಇತ್ಯಾದಿಗಳು.

॥ ಸಂಹಿತಾಪಾಠಃ ॥

ಅರುಷೋ ಜನಯನ್ಗಿರಃ ಸೋಮಃ ಪವತ ಆಯುಷಕ್ ।

ಇಂದ್ರಂ ಗಚ್ಛನ್ಕವಿಕ್ರತುಃ ॥ ೫ ॥

॥ ಪದಪಾಠಃ ॥

ಅರುಷಃ । ಜನಯನ್ । ಗಿರಃ । ಸೋಮಃ । ಪವತೇ । ಆಯುಷಕ್ ।

ಇಂದ್ರಂ । ಗಚ್ಛನ್ । ಕವಿಽಕ್ರತುಃ ॥ ೫ ॥

॥ ಸಾಯಣಭಾಷ್ಯಂ ॥

ಅರುಷ ಆರೋಚಮಾನಃ ಸೋಮೋ ಗಿರಃ ಶಬ್ದಾಞ್ಜನಯನ್ಪವತೇ । ಕ್ಷರತಿ । ಕಿಂ ಕುರ್ವನ್ । ಆಯುಷಗನುಷಕ್ತಮಿಂದ್ರಂ ಗಚ್ಛನ್ವ್ಯಾಪ್ನುವನ್ ಕವಿಕ್ರತುಃ ಕ್ರಾಂತಪ್ರಜ್ಞಃ ॥

॥ ಪ್ರತಿಪದಾರ್ಥ ॥

ಅರುಷಃ—ಪ್ರಕಾಶಮಾನನಾದವನೂ । ಕವಿಕ್ರತುಃ—ಕ್ರಾಂತಪ್ರಜ್ಞನೂ ಅಥವಾ ವಿವೇಕಜ್ಞಾನವುಳ್ಳವನೂ ಆದ । ಸೋಮಃ—ಸೋಮದೇವನು । ಆಯುಷಕ್—ಸೋಮಪಾನಾಸಕ್ತನಾದ । ಇಂದ್ರಂ—ಇಂದ್ರನ ಬಳಿಗೆ । ಗಚ್ಛನ್—ಹೋಗುತ್ತಾ । ಗಿರಃ ಜನಯನ್—ಜಳಜಳನೆ ಶಬ್ದಮಾಡುತ್ತಾ । ಪವತೇ—ಹರಿಯುತ್ತಾನೆ ।

॥ ಭಾವಾರ್ಥ ॥

ಪ್ರಕಾಶಮಾನವಾದ ರೂಪವುಳ್ಳವನೂ ವಿವೇಕಜ್ಞಾನಯುತನೂ ಆದ ಈ ಸೋಮದೇವನು ಸೋಮಪಾನಾಸಕ್ತನಾದ ಇಂದ್ರನ ಬಳಿಗೆ ಹೋಗುವಾಗ ಜಳಜಳನೆ ಶಬ್ದಮಾಡುತ್ತಾ ಪ್ರವಹಿಸುತ್ತಾನೆ.

## English Translation

Endowed with wisdom of the past, the brilliant Soma, generating sounds, flows forth continually proceeding to Indra.

॥ ಸಂಹಿತಾಪಾಠಃ ॥

ಆ ಪವಸ್ವ ಮದಿಂತಮ ಪವಿತ್ರಂ ಧಾರಯಾ ಕವೇ ।

ಅರ್ಕಸ್ಯ ಯೋನಿಮಾಸದಂ ॥ ೬ ॥

॥ ಪದಪಾಠಃ ॥

ಆ । ಪವಸ್ವ । ಮದಿನ್ಽತಮ । ಪವಿತ್ರಂ । ಧಾರಯಾ । ಕವೇ ।

ಅರ್ಕಸ್ಯ । ಯೋನಿಂ । ಆಽಸದಂ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಮದಿಂತಮ ಮಾದಯಿತೃತಮ ಕವೇ ಕ್ರಾಂತಪ್ರಜ್ಞ ಸೋಮ ತ್ವಂ ಪವಿತ್ರಮತಿಕ್ರಮ್ಯ ಧಾರಯಾ ಪವಸ್ವ । ಕಿಮರ್ಥಂ । ಅರ್ಕಸ್ಯಾರ್ಚನೀಯಸ್ಯೇಂದ್ರಸ್ಯ ಯೋನಿಮಾಸದಂ ಪ್ರಾಪ್ತುಂ ॥**

॥ ಪ್ರತಿಪದಾರ್ಥ ॥

**ಮದಿಂತಮ**—ಅತಿಶಯವಾಗಿ ಹರ್ಷವನ್ನುಂಟುಮಾಡುವವನೂ । **ಕವೇ**—ಕ್ರಾಂತಪ್ರಜ್ಞನೂ ಆದ ಎಲೆ ಸೋಮನೇ ನೀನು । **ಅರ್ಕಸ್ಯ**—ಪೂಜ್ಯನಾದ ಇಂದ್ರನ । **ಯೋನಿಂ**—ಸ್ಥಾನವನ್ನು । **ಆಸದಂ**—ಹೊಂದುವುದಕ್ಕಾಗಿ । **ಪವಿತ್ರಂ**—ಶೋಧನಸಾಧನವಾದ ದಶಾಪವಿತ್ರವನ್ನು ಅತಿಕ್ರಮಿಸಿ । **ಧಾರಯಾ**—ಪ್ರವಾಹರೂಪದಿಂದ । **ಆ ಪವಸ್ವ**— ಹರಿಯುತ್ತೀಯೆ ।

॥ ಭಾವಾರ್ಥ ॥

ಅತಿಶಯವಾಗಿ ಹರ್ಷವನ್ನುಂಟುಮಾಡುವವನೂ ಕ್ರಾಂತಪ್ರಜ್ಞನೂ ಆದ ಎಲೈ ಸೋಮನೇ ನೀನು ಪೂಜ್ಯನಾದ ಇಂದ್ರನ ಸ್ಥಾನಕ್ಕೆ ಹೋಗುವುದಕ್ಕಾಗಿ ದಶಾಪವಿತ್ರದಿಂದ ಹೊರಸೂಸಿ ಬಂದು ಪ್ರವಾಹರೂಪದಿಂದ ಹರಿಯುತ್ತೀಯೆ

English Translation

Most exhilarating and sage (Soma), flow through the filter in a stream, to attain the station of the adorable Indra

## ಇಪ್ಪತ್ತಾರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ತಮಮೃಕ್ಷಂತೇತಿ ಷಡೃಚಂ ದ್ವಿತೀಯಂ ಸೂಕ್ತಂ ದೃಳ್ಹಚ್ಯುತಪುತ್ರಸ್ಯೇಧ್ಮವಾಹನಾಮ್ನ ಆರ್ಷಂ ಗಾಯತ್ರಂ ಪವಮಾನಸೋಮದೇವತಾಕಂ । ಅನುಕ್ರಾಂತಂ ಚ । ತಮಮೃಕ್ಷಂತೇಧ್ಮವಾಹೋ ದಾರ್ಢಚ್ಯುತ ಇತಿ ॥ ಗತೋ ವಿನಿಯೋಗಃ ॥**

ಅನುವಾದವು—**ತಮಮೃಕ್ಷಂತ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಎರಡನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ದೃಳ್ಹಚ್ಯುತಪುತ್ರನಾದ ಇಧ್ಮವಾಹನೆಂಬುವನು ಋಷಿಯು, ಪವಮಾನಸೋಮನು ದೇವತೆಯು; ಗಾಯತ್ರೀಛಂದಸ್ಸು ಅನುಕ್ರಮಣಿಕೆಯಲ್ಲಿ—**ತಮಮೃಕ್ಷಂತೇಧ್ಮವಾಹೋ ದಾರ್ಢಚ್ಯುತಃ** ಎಂದು ಹೇಳಿರುವುದು ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

## ಸೂಕ್ತ—೨೬

ಮಂಡಲ—೯ । ಅನುವಾಕ— ೨। ಸೂಕ್ತ—೨೬ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೧೬ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಇಧ್ಮವಾಹೋ ದಾರ್ಢಚ್ಯುತಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ತಮಮೃಕ್ಷಂತ ವಾಜಿನಮುಪಸ್ಥೇ ಅದಿತೇರಧಿ ।
ವಿಪ್ರಾಸೋ ಅಣ್ವ್ಯಾ ಧಿಯಾ ॥ ೧ ॥

॥ ಪದಪಾಠಃ ॥

ತಂ । ಅಮೃಕ್ಷಂತ । ವಾಜಿನಂ । ಉಪಸ್ಥೇ । ಅದಿತೇಃ । ಅಧಿ ।
ವಿಪ್ರಾಸಃ । ಅಣ್ವ್ಯಾ । ಧಿಯಾ ॥ ೧ ॥

॥ ಸಾಯಣಭಾಷ್ಯಂ ॥

ತಂ ವಾಜಿನಮಶ್ವಮಶ್ವವದಾಶುಂ । ವ್ಯಾಪ್ತಮಿತ್ಯರ್ಥಃ । ಅದಿತೇಃ ಪೃಥಿವ್ಯಾ ಉಪಸ್ಥ ಉತ್ಸಂಗೇ । ಅಧೀತಿ ಸಪ್ತಮ್ಯರ್ಥಾನುವಾದೀ । ಅಮೃಕ್ಷಂತ । ಶೋಧಿತವಂತಃ । ಕೇ । ವಿಪ್ರಾಸೋ ಮೇಧಾವಿನೋಽಧ್ವರ್ಯ್ವಾದಯಃ । ಕೇನ ಸಾಧನೇನ । ಅಣ್ವ್ಯಾಂಗುಲ್ಯಾ ಧಿಯಾ ಪ್ರಜ್ಞಯಾ ಸ್ತುತ್ಯಾ ವಾಮೃಕ್ಷಂತ । ಅಥವಾಣ್ವ್ಯಾ ಸೂಕ್ಷ್ಮಯಾ ಧಿಯಾಂಗುಲ್ಯೇತಿ ವಿಶೇಷ್ಯವಿಶೇಷಣಭಾವಃ ॥

॥ ಪ್ರತಿಪದಾರ್ಥ ॥

**ವಿಪ್ರಾಸಃ**—ಮೇಧಾವಿಗಳಾದ ಅಧ್ವರ್ಯ್ವಾದಿ ಋತ್ವಿಗ್ಜನರು । **ವಾಜಿನಂ**—ಅಶ್ವಗಮನದಂತೆ ವೇಗವಾಗಿ ವ್ಯಾಪಿಸುವ ಸ್ವಭಾವವುಳ್ಳ ಈ ಸೋಮವನ್ನು । **ಅದಿತೇಃ**—ಪೃಥ್ವಿಯ । **ಉಪಸ್ಥೇ**—ಉತ್ಸಂಗಸ್ಥಾನವಾದ ದಶಾಪವಿತ್ರದಲ್ಲಿ । **ಅಣ್ವ್ಯಾ**—ತಮ್ಮ ಬೆರಳುಗಳಿಂದಲೂ । **ಧಿಯಾ**—ಸ್ತುತಿಪೂರ್ವಕವಾಗಿಯೂ । **ಅಮೃಕ್ಷಂತ**—ಶೋಧಿಸಿದ್ದಾರೆ.

॥ ಭಾವಾರ್ಥ ॥

ಮೇಧಾವಿಗಳಾದಅಧ್ವರ್ಯ್ವಾದಿ ಋತ್ವಿಜರು ವೇಗವಾಗಿ ಸರ್ವತ್ರ ವ್ಯಾಪಿಸುವ ಸ್ವಭಾವವುಳ್ಳ ಈ ಸೋಮವನ್ನು ಪೃಥಿವಿಯ ಉತ್ಸಂಗರೂಪವಾದ ದಶಾಪವಿತ್ರದ ಮೇಲಿಟ್ಟು ತಮ್ಮ ಬೆರಳುಗಳಿಂದಲೂ, ಸ್ತುತಿಪೂರ್ವಕವಾಗಿಯೂ (ಅಥವಾ ವಿಧ್ಯುಕ್ತಕರ್ಮಸಹಿತವಾಗಿಯೂ) ಶೋಧಿಸಿದ್ದಾರೆ.

## English Translation

The priests have cleansed that Soma, (swift as) a horse, on the lap of Aditi with fingers and with hymns

॥ ಸಂಹಿತಾಪಾಠಃ ॥

ತಂ ಗಾವೋ᳚ ಅ॒ಭ್ಯ॑ನೂಷತ ಸ॒ಹಸ್ರ॑ಧಾರ॒ಮಕ್ಷಿ॑ತಂ ।
ಇಂದುಂ᳚ ಧ॒ರ್ತಾರ॒ಮಾ ದಿ॒ವಃ ॥ ೨ ॥

॥ ಪದಪಾಠಃ ॥

ತಂ । ಗಾವಃ᳚ । ಅ॒ಭಿ । ಅ॒ನೂ॒ಷ॒ತ॒ । ಸ॒ಹಸ್ರ॑ऽಧಾರಂ । ಅಕ್ಷಿ॑ತಂ ।
ಇಂದುಂ᳚ । ಧ॒ರ್ತಾರಂ᳚ । ಆ । ದಿ॒ವಃ ॥ ೨ ॥

॥ ಸಾಯಣಭಾಷ್ಯಂ ॥

ತಂ ಸೋಮಂ ಗಾವೋ ಗಂತ್ರ್ಯಃ ಸ್ತುತಯೋಽಭ್ಯನೂಷತ । ಅಸ್ತುವನ್ । ಕೀದೃಶಂ ತಂ । ಸಹಸ್ರಧಾರಂ ಬಹುಧಾರಮಕ್ಷಿತಮಕ್ಷೀಣಮಿಂದುಂ ದೀಪ್ತಂ ದಿವೋ ದ್ಯುಲೋಕಸ್ಯಾ ಧರ್ತಾರಂ ಸರ್ವತೋ ಧಾರಕಂ । ಸೋಮಾಧಾರತ್ವಾದ್ದ್ಯುಲೋಕವಾಸಿನಾಂ ಸಂಸ್ಥಾನಸ್ಯ ॥

॥ ಪ್ರತಿಪದಾರ್ಥ ॥

**ಸಹಸ್ರಧಾರಂ**—ಅಪರಿಮಿತವಾದ ಧಾರಾಪ್ರವಾಹದಿಂದ ಜಿನುಗುತ್ತಿರುವುದೂ । **ಅಕ್ಷಿತಂ**—ಕ್ಷಯಿಸದಿರುವುದೂ ಎಂದರೆ ಪ್ರಭೂತವಾದುದೂ । **ಇಂದುಂ**—ಪ್ರಕಾಶಮಾನವಾದುದೂ । **ದಿವಃ**—ಸ್ವರ್ಗವನ್ನು । **ಆ ಧರ್ತಾರಂ**—ಧರಿಸಿ ಪೋಷಿಸುವುದೂ ಆದ । **ತಂ**—ಆ ಸೋಮವನ್ನು । **ಗಾವಃ**—ಸ್ತುತಿವಾಕ್ಯಗಳು । **ಅಭ್ಯನೂಷತ**—ಸ್ತುತಿಸುತ್ತವೆ.

॥ ಭಾವಾರ್ಥ ॥

ಅಪರಿಮಿತವಾದ ಧಾರೆಗಳಿಂದ ನಾನಾಮುಖವಾಗಿ ಸ್ರವಿಸುತ್ತಿರುವುದೂ, ಪ್ರಭೂತವಾದುದೂ, ಸ್ವಚ್ಛವಾದುದೂ ಸ್ವರ್ಗಲೋಕವನ್ನು ಧರಿಸಿ ಪೋಷಿಸುವುದೂ ಆದ ಈ ಸೋಮವನ್ನು ಋತ್ವಿಗ್ಜನರ ವಾಕ್ಯಗಳು ಪ್ರಶಂಸಿಸಿ ಸ್ತುತಿಸುತ್ತವೆ.

## English Translation

The chants celebrate that Indu flowing in a thousand streams, inexhaustible, the supporter of heaven.

॥ ಸಂಹಿತಾಪಾಠಃ ॥

ತಂ ವೇಧಾಂ ಮೇಧಯಾಹ್ಯನ್ಪವಮಾನಮಧಿ ದ್ಯವಿ ।

ಧರ್ಣಸಿಂ ಭೂರಿಧಾಯಸಂ ॥ ೩ ॥

॥ ಪದಪಾಠಃ ॥

ತಂ । ವೇಧಾಂ । ಮೇಧಯಾ । ಅಹ್ಯನ್ । ಪವಮಾನಂ । ಅಧಿ । ದ್ಯವಿ ।

ಧರ್ಣಸಿಂ । ಭೂರಿऽಧಾಯಸಂ ॥ ೩ ॥

॥ ಸಾಯಣಭಾಷ್ಯಂ ॥

ವೇಧಾಂ ವಿಧಾತಾರಂ ಪವಮಾನಂ ತಂ ಮೇಧಯಾ ಪ್ರಜ್ಞಯಾಹ್ಯನ್ । ಪ್ರಹಿಣ್ವಂತಿ । ಕಿಂ ಪ್ರತಿ । ಅಧಿ ದ್ಯವಿ ದ್ಯುಲೋಕಂ ಪ್ರತಿ । ಪುನಃ ಕೀದೃಶಂ । ಧರ್ಣಸಿಂ ಸರ್ವಸ್ಯ ಧಾರಕಂ ಭೂರಿಧಾಯಸಂ ಬಹೂನಾಂ ಕರ್ತಾರಂ ॥

॥ ಪ್ರತಿಪದಾರ್ಥ ॥

**ವೇಧಾಂ**—ಸರ್ವವನ್ನು ಸೃಷ್ಟಿಸುವವನೂ । **ಧರ್ಣಸಿಂ**—ಸರ್ವಕ್ಕೂ ಧಾರಕನಾದವನೂ । **ಭೂರಿಧಾಯಸಂ**—ಅನೇಕ ಕರ್ಮಗಳ ಕರ್ತನೂ । **ಪವಮಾನಂ**—ದಶಾಪವಿತ್ರದಲ್ಲಿ ಶೋಧಿತನಾದವನೂ ಆದ । **ತಂ**—ಆ ಸೋಮದೇವನನ್ನು (ಋತ್ವಿಗ್ಜನರು) । **ಮೇಧಯಾ**—ಪ್ರಜ್ಞೆಯಿಂದ ಎಂದರೆ ಸ್ತುತಿಗಳಿಂದ । **ಅಧಿ ದಿವಂ**—ದ್ಯುಲೋಕಾಭಿಮುಖವಾಗಿ । **ಅಹ್ಯನ್**—ಕಳುಹಿಸುತ್ತಾರೆ.

॥ ಭಾವಾರ್ಥ ॥

ಸರ್ವವನ್ನು ಉತ್ಪನ್ನಮಾಡುವವನೂ ಸರ್ವಕ್ಕೂ ಆಧಾರಭೂತನೂ, ಅನೇಕ ಕರ್ಮಗಳ ಕರ್ತನೂ ದಶಾಪವಿತ್ರದಲ್ಲಿ ಶೋಧಿತನಾದವನೂ ಆದ ಈ ಸೋಮದೇವನನ್ನು ಋತ್ವಿಗ್ಜನರು ತಮ್ಮ ಸ್ತುತಿಗಳಿಂದ ಸ್ತುತಿಸಿ ದ್ಯುಲೋಕಾಭಿಮುಖವಾಗಿ ಕಳುಹಿಸುತ್ತಾರೆ.

English Translation

They have elevated to heaven by their praise that creative purifying (Soma), the sustainer, the maker of many

॥ ವಿಶೇಷವಿಷಯಗಳು ॥

**ಮೇಧಯಾ ಅಧಿ ದಿವಂ ಅಹ್ಯನ್**—ಋತ್ವಿಗ್ಜನರು ಮಂತ್ರಪಠನಾದಿಗಳಿಂದ ಸೋಮವನ್ನು ಅಗ್ನಿಯಲ್ಲಿ ಆಹುತಿರೂಪದಿಂದ ಅರ್ಪಿಸಿ ಅದು ಅಗ್ನಿಯ ಮೂಲಕ ಸ್ವರ್ಗದಲ್ಲಿರುವ ಉದ್ದಿಷ್ಟದೇವತೆಗಳ ಬಳಿಗೆ ಹೋಗುವುದನ್ನು ಈ ಋಕ್ಕಿನಲ್ಲಿ ವರ್ಣಿಸಿದೆ

॥ ಸಂಹಿತಾಪಾಠಃ ॥

ತಮುಹ್ವನ್ತ್ಯುರಿಜೋರ್ಧಿಯಾ ಸಂವಸಾನಂ ವಿವಸ್ವತಃ ।
ಪತಿಂ ವಾಚೋ ಅದಾಭ್ಯಂ ॥ ೪ ॥

॥ ಪದಪಾಠಃ ॥

ತಂ । ಅಹ್ವನ್ । ಭುರಿಜೋಃ । ಧಿಯಾ । ಸಂऽವಸಾನಂ । ವಿವಸ್ವತಃ ।
ಪತಿಂ । ವಾಚಃ । ಅದಾಭ್ಯಂ ॥ ೪ ॥

॥ ಸಾಯಣಭಾಷ್ಯಂ ॥

ತಂ ಸೋಮಂ ವಿವಸ್ವತಃ ಪರಿಚರತ ಋತ್ವಿಜೋ ಭುರಿಜೋರ್ಬಾಹ್ವೋರ್ಧಿಯಾಂಗುಲ್ಯಾಹ್ವನ್ । ಪ್ರಾಹಿಣ್ವನ್ । ಕೀದೃಶಂ ತಂ । ಸಂವಶಾನಂ ವಸಂತಂ ಪಾತ್ರೇ ವಾಚಃ ಸ್ತುತೇಃ ಪತಿಂ ಸ್ವಾಮಿನಮದಾಭ್ಯಮದಂಭನೀಯಂ ॥

॥ ಪ್ರತಿಪದಾರ್ಥ ॥

**ಸಂವಸಾನಂ**—ಪಾತ್ರೆಯಲ್ಲಿಟ್ಟಿರುವುದೂ । **ವಾಚಃ**—ಸ್ತುತಿವಾಕ್ಯಗಳಿಗೆ । **ಪತಿಂ**—ಸ್ವಾಮಿಯೂ । **ಅದಾಭ್ಯಂ**—ಅಹಿಂಸಿತವಾದುದೂ ಆದ । **ತಂ**—ಆ ಸೋಮವನ್ನು । **ವಿವಸ್ವತಃ**—ಉಪಚರಿಸತಕ್ಕ ಋತ್ವಿಕ್ಕುಗಳು । **ಭುರಿಜೋಃ**—ತಮ್ಮ ಬಾಹುಗಳ । **ಧಿಯಾ**—ಬೆರಳಿನಿಂದ । **ಅಹ್ವನ್**—ವಹಿಸುತ್ತಾರೆ.

॥ ಭಾವಾರ್ಥ ॥

ದ್ರೋಣಕಲಶವೇ ಮೊದಲಾದ ಪಾತ್ರೆಗಳಲ್ಲಿರುವುದೂ, ಸ್ತುತ್ಯರ್ಹವಾದುದೂ, ಅಹಿಂಸಿತವಾದುದೂ ಆದ ಆ ಸೋಮವನ್ನು ಉಪಚರಿಸತಕ್ಕ ಅಧ್ವರ್ಯ್ವಾದಿಗಳು ತಮ್ಮ ಬಾಹುಗಳ ಬೆರಳುಗಳಿಂದ ವಹಿಸುತ್ತಾರೆ.

English Translation

The worshippers have elevated by the fingers of their arms that unconquerable lord of praise abiding (in the vessels).

॥ ಸಂಹಿತಾಪಾಠಃ ॥

ತಂ ಸಾನಾವಧಿ ಜಾಮಯೋ ಹರಿಂ ಹಿನ್ವಂತ್ಯದ್ರಿಭಿಃ ॥
ಹರ್ಯತಂ ಭೂರಿಚಕ್ಷಸಂ ॥ ೫ ॥

॥ ಪದಪಾಠಃ ॥

ತಂ । ಸಾನೌ । ಅಧಿ । ಜಾಮಯಃ । ಹರಿಂ । ಹಿನ್ವಂತಿ । ಅದ್ರಿಽಭಿಃ ।

ಹರ್ಯತಂ । ಭೂರಿಽಚಕ್ಷಸಂ ॥ ೫ ॥

॥ ಸಾಯಣಭಾಷ್ಯಂ ॥

ತಂ ಸೋಮಂ ಹರಿಂ ಹರಿತವರ್ಣಂ ಸಾನಾವಧಿ ಸಮುಚ್ಛ್ರಿತೇ ದೇಶೇ । ಅಧೀತಿ ಸಪ್ತಮ್ಯರ್ಥಾನುವಾದೀ । ಜಾಮಯೋಽಂಗುಲಯೋ ಹಿನ್ವಂತಿ । ಪ್ರೇರಯಂತಿ । ಅಧಿಷುಣ್ವಂತ್ಯದ್ರಿಭಿರ್ಗ್ರಾವಭಿಃ । ಕೀದೃಶಂ । ಹರ್ಯತಂ ಕಮನೀಯಂ ಭೂರಿಚಕ್ಷಸಂ ಬಹುದ್ರಷ್ಟಾರಂ ॥

। ಪ್ರತಿಪದಾರ್ಥ ।

**ಹರಿಂ**—ಹರಿತ (ಹಸರು) ವರ್ಣವುಳ್ಳದ್ದೂ । **ಹರ್ಯತಂ**—ಆಕರ್ಷಕವಾದ ರೂಪವುಳ್ಳದ್ದೂ । **ಭೂರಿ ಚಕ್ಷಸಂ**—ಎಲ್ಲವನ್ನೂ ಬಹಳವಾಗಿ ನೋಡುವುದೂ ಆದ । **ತಂ**—ಆ ಸೋಮವನ್ನು । **ಸಾನೌ ಅಧಿ**—ಉನ್ನತ ಪ್ರದೇಶದಲ್ಲಿ । **ಜಾಮಯಃ**—(ಋತ್ವಿಜರ) ಬೆರಳುಗಳು । **ಅದ್ರಿಭಿಃ**—ಸೋಮಲತೆಗಳನ್ನು ಜಜ್ಜುವ ಕಲ್ಲುಗಳಿಂದ। **ಹಿನ್ವಂತಿ**—ಜಜ್ಜಿ ರಸವನ್ನು ಹೊರಸೂಸುವಂತೆ ಪ್ರೇರಿಸುತ್ತವೆ.

। ಭಾವಾರ್ಥ ।

ಹರಿತವರ್ಣವುಳ್ಳದ್ದೂ, ಆಕರ್ಷಕವಾದ ರೂಪವುಳ್ಳದ್ದೂ ಎಲ್ಲವನ್ನೂ ವೀಕ್ಷಿಸುವುದೂ ಆದ ಆ ಸೋಮವನ್ನು ಅತ್ಯುನ್ನತ ಪ್ರದೇಶದಲ್ಲಿ ಋತ್ವಿಗ್ಜನರ ಬೆರಳುಗಳು ಸೋಮಲತೆಗಳನ್ನು ಜಜ್ಜುವ ಕಲ್ಲುಗಳಿಂದ ಜಜ್ಜಿ ರಸವು ಹೊರ ಸೂಸುವಂತೆ ಪ್ರೇರಿಸುತ್ತಾರೆ

English Translation

The sister-fingers in a raised place press out by the grinding stones that green-tinted (Soma), desirable and far-beholding.

। ಸಂಹಿತಾಪಾಠಃ ॥

ತಂ ತ್ವಾ ಹಿನ್ವಂತಿ ವೇಧಸಃ ಪವಮಾನ ಗಿರಾವೃಧಂ ।

ಇಂದವಿಂದ್ರಾಯ ಮತ್ಸರಂ ॥ ೬ ॥

। ಪದಪಾಠಃ ॥

ತಂ । ತ್ವಾ । ಹಿನ್ವಂತಿ । ವೇಧಸಃ । ಪವಮಾನ । ಗಿರಾಽವೃಧಂ ।

ಇಂದೋ ಇತಿ । ಇಂದ್ರಾಯ । ಮತ್ಸರಂ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಪವಮಾನ ಸೋಮ ಉಕ್ತಗುಣವಿಶಿಷ್ಟ ತ್ವಾ ತ್ವಾಂ ಹಿನ್ವಂತಿ । ಕಸ್ಮೈ । ಇಂದ್ರಾಯ । ಕೇ । ವೇಧಸೋ ವಿಧಾತಾರ ಋತ್ವಿಜಃ । ಕೀದೃಶಂ ತ್ವಾಂ । ಗಿರಾವೃಧಂ ಸ್ತುತ್ಯಾ ವರ್ಧಮಾನಮಿಂದುಂ ದೀ... ಸರೂಪಂ ವಾ ಮತ್ಸರಂ ಮದಕರಂ ॥**

॥ ಪ್ರತಿಪದಾರ್ಥ ॥

**ಪವಮಾನ**—ಶೋಧಿತನಾದ । **ಇಂದೋ**—ಎಲೈ ಸೋಮನೇ । **ಗಿರಾವೃಧಂ**—ಸ್ತುತಿವಾಕ್ಯಗಳಿಂದ ಪ್ರವೃದ್ಧ (ಪ್ರಶಂಸಿತ) ನಾದವನೂ । **ಮತ್ಸರಂ**—ಹರ್ಷಕಾರಕನೂ ಆದ । **ತಂ ತ್ವಾ**—ಅಂತಹ ನಿನ್ನನ್ನು । **ವೇಧಸಃ**—ವಿಧಾತೃಗಳಾದ ಎಂದರೆ ಯಜ್ಞಕರ್ಮಾನುಷ್ಠಾತೃಗಳಾದ ಋತ್ವಿಜರು । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಹಿನ್ವಂತಿ**—ಪ್ರೇರಿಸುತ್ತಾರೆ.

॥ ಭಾವಾರ್ಥ ॥

ದಶಾಪವಿತ್ರದಲ್ಲಿ ಶೋಧಿತನಾದ ಎಲೈ ಸೋಮನೇ, ಸ್ತುತಿವಾಕ್ಯಗಳಿಂದ ಪ್ರಶಂಸಿತನೂ, ಹರ್ಷಕಾರಕನೂ ಆದ ನಿನ್ನನ್ನು ಯಜ್ಞಾನುಷ್ಠಾನನಿರತರಾದ ಋತ್ವಿಗ್ಜನರು ಇಂದ್ರನ ಪಾನಾರ್ಥವಾಗಿ (ಅಗ್ನಿಯಲ್ಲಿ ಆಹುತಿಮೂಲಕ) ಪ್ರೇರಿಸಿ ಕಳುಹಿಸುತ್ತಾರೆ

English Translation

The worshippers offer you to Indra, purifier Indu, filled with praise and bestowing exhilaration.

## ಇಪ್ಪತ್ತೇಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಏಷ ಕವಿರಿತಿ ಷಡೃಚಂ ತೃತೀಯಂ ಸೂಕ್ತಂ ನೃಮೇಧನಾಮ್ನ ಆಂಗಿರಸಸ್ಯಾರ್ಷಂ ಗಾಯತ್ರಂ ಪಾವ್ಮಂ । ಏಷ ಕವಿರ್ನೃಮೇಧ ಇತ್ಯನುಕ್ರಾಂತಂ । ಉಕ್ತೋ ವಿನಿಯೋಗಃ ॥**

ಅನುವಾದವು— **ಏಷ ಕವಿಃ**—ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಮೂರನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು ಈ ಸೂಕ್ತಕ್ಕೆ ನೃಮೇಧ ಆಂಗಿರಸಃ ಎಂಬುವನು ಋಷಿಯು, ಪವಮಾನಸೋಮನು ದೇವತೆಯು ; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ— **ಏಷ ಕವಿರ್ನೃಮೇಧಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ,

### ಸೂಕ್ತ—೨೭

ಮಂಡಲ—೯ । ಅನುವಾಕ—೨ । ಸೂಕ್ತ—೨೭ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೧೭ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ನೃಮೇಧಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಏಷ ಕವಿರಭಿಷ್ಟುತಃ ಪವಿತ್ರೇ ಅಧಿ ತೋಶತೇ ।

ಪುನಾನೋ ಘ್ನನ್ನಪ ಸ್ರಿಧಃ ॥ ೧ ॥

॥ ಪದಪಾಠಃ ॥

ಏಷಃ । ಕವಿಃ । ಅಭಿऽಸ್ತುತಃ । ಪವಿತ್ರೇ । ಅಧಿ । ತೋಶತೇ ।

ಪುನಾನಃ । ಘ್ನನ್ । ಅಪ । ಸ್ರಿಧಃ ॥ ೧ ॥

॥ ಸಾಯಣಭಾಷ್ಯಂ ॥

ಏಷ ಸೋಮಃ ಕವಿರ್ಮೇಧಾವ್ಯಭಿಷ್ಟುತೋऽಭಿತಃ ಸ್ತುತಃ ಪವಿತ್ರೇऽಧಿ ದಶಾಪವಿತ್ರಮತೀತ್ಯ ತೋಶತೇ । ಯದ್ಯಪಿ ತೋಶತಿರ್ವಧಕರ್ಮಾ ತಥಾಪಿ ಹನನೇ ಗತಿಸದ್ಭಾವಾದತ್ರ ಗತಿಮಾತ್ರೇ ವರ್ತತೇ । ಗಚ್ಛತೀತ್ಯರ್ಥಃ । ಅಥವಾ । ಪವಿತ್ರೇऽಧಿ ಕೃಷ್ಣಾಜಿನೇ ತೋಶತೇ । ಹನ್ಯತೇ । ಪೀಡ್ಯತ ಇತ್ಯರ್ಥಃ । ಕಿಂ ಕುರ್ವನ್ । ಪುನಾನಃ ಪೂಯಮಾನಃ ಸ್ರಿಧಃ ಶತ್ರೂನಪ ಘ್ನನ್ನಪಗಮಯನ್ ॥

॥ ಪ್ರತಿಪದಾರ್ಥ ॥

**ಕವಿಃ**—ಮೇಧಾವಿಯೂ । **ಅಭಿಷ್ಟುತಃ**—ಸುತ್ತಲೂ ಇರುವ ಜನರಿಂದ ಸ್ತುತಿಸಲ್ಪಡುವವನೂ ಆದ । **ಏಷಃ**—ಈ ಸೋಮದೇವನು । **ಪುನಾನಃ**—ಶೋಧಿತನಾಗಿ । **ಸ್ರಿಧಃ**—ಶತ್ರುಗಳನ್ನು । **ಅಪ ಘ್ನನ್**—ನಾಶಮಾಡುತ್ತಾ । **ಪವಿತ್ರೇ ಅಧಿ**—ದಶಾಪವಿತ್ರದ ಮೇಲೆ ಶೋಧಿಸಲ್ಪಡುವುದಕ್ಕಾಗಿ । **ತೋಶತೇ**—ಅದರ ಬಳಿಗೆ ಹೋಗುತ್ತಾನೆ.

॥ ಭಾವಾರ್ಥ ॥

ಮೇಧಾವಿಯೂ ಸುತ್ತಲೂ ಇರುವ ಜನರಿಂದ ಸ್ತುತನಾದವನೂ ಆದ ಈ ಸೋಮದೇವನು ಶೋಧಿತನಾಗಿ ಶತ್ರುಗಳನ್ನು ನಾಶಮಾಡುತ್ತಾ ದಶಾಪವಿತ್ರದಲ್ಲಿ ಶೋಧಿಸಲ್ಪಡುವುದಕ್ಕೋಸ್ಕರ ಅದನ್ನು ಸಮೀಪಿಸುತ್ತಾನೆ.

## English Translation

This seer, the purifying (Soma), lauded by us, passes through the filtering cloth, driving away foes.

॥ ವಿಶೇಷವಿಷಯಗಳು ॥

**ತೋಶತೇ । ಯದ್ಯಪಿ ತೋಶತಿರ್ವಧಕರ್ಮಾ ತಥಾಪಿ ಹನನೇ ಗತಿಸದ್ಭಾವಾದತ್ರ ಗತಿಮಾತ್ರೇ ವರ್ತತೇ । ಗಚ್ಛತೀತ್ಯರ್ಥಃ ।** ತೋಶತಿಧಾತುವಿಗೆ ಕೊಲ್ಲು ಎಂಬರ್ಥವಿರುವುದರಿಂದ ಇಲ್ಲಿ ತೋಶತೇ ಕೊಲ್ಲುತ್ತಾನೆ ಎಂಬರ್ಥವಿರಬೇಕು. ಆದರೆ ಕೊಲ್ಲುವುದಕ್ಕಾಗಿ ಶತ್ರುವಿನ ಬಳಿಗೆ ಹೋಗಬೇಕಾಗಿರುವುದರಿಂದ ಇಲ್ಲಿ ಹೋಗು ಎಂಬ ಗತ್ಯರ್ಥದಲ್ಲಿ ಈ ಶಬ್ದವು ಪ್ರಯುಕ್ತವಾಗಿದೆ ಆದ್ದರಿಂದ ತೋಶತೇ ಎಂದರೆ ಹೋಗುತ್ತಾನೆ ಅಥವಾ ಸಮೀಪಿಸುತ್ತಾನೆ

ಎಂದರ್ಥವು ಎಂದು ಭಾಷ್ಯಕಾರರು ಈ ಶಬ್ದಕ್ಕೆ ಅರ್ಥವಿವರಣೆಮಾಡಿ ಇದಕ್ಕೆ ಇನ್ನೊಂದು ವಿಧವಾಗಿಯೂ ಅರ್ಥ ಮಾಡಬಹುದೆಂದು ಹೇಳಿದಾರೆ—ಅಥವಾ ಪವಿತ್ರೇಽಧಿ ಕೃಷ್ಣಾಜಿನೇ ತೋಶತೇ ಹನ್ಯತೇ । ಅಥವಾ ರಸವನ್ನು ಹಿಂಡುವಾಗ ಲತೆಗಳನ್ನು ಕೃಷ್ಣಾಜನದ ಮೇಲಿಟ್ಟು ಜಜ್ಜುವಾಗ ಅದನ್ನು ಸಂಹರಿಸಿದಂತಾಗುತ್ತದೆ ಎಂದು ಇನ್ನೊಂದು ವಿಧವಾದ ಅರ್ಥವೂ ಸಾಧ್ಯವೆಂದು ವಿವರಣೆಮಾಡಿದಾರೆ.

। ಸಂಹಿತಾಪಾಠಃ ।

ಏಷ ಇಂದ್ರಾಯ ವಾಯವೇ ಸ್ವರ್ಜಿತ್ಪರಿ ಷಿಚ್ಯತೇ ।

ಪವಿತ್ರೇ ದಕ್ಷಸಾಧನಃ ॥ ೨ ॥

॥ ಪದಪಾಠಃ ।

ಏಷಃ । ಇಂದ್ರಾಯ । ವಾಯವೇ । ಸ್ವಃಽಜಿತ್ । ಪರಿ । ಸಿಚ್ಯತೇ ।

ಪವಿತ್ರೇ । ದಕ್ಷಽಸಾಧನಃ ॥ ೨ ॥

॥ ಸಾಯಣಭಾಷ್ಯಂ ॥

ಏಷ ಸೋಮಃ ಸ್ವರ್ಜಿತ್ಸ್ವರ್ಗಸ್ಯ ಸರ್ವಸ್ಯ ವಾ ಜೇತೇಂದ್ರಾಯ ವಾಯವೇ ಚ ಪವಿತ್ರೇ ಪರಿ ಷಿಚ್ಯತೇ । ಕೀದೃಶ ಏಷಃ । ದಕ್ಷಸಾಧನೋ ಬಲಕಾರೀ ॥

॥ ಪ್ರತಿಪದಾರ್ಥ

ದಕ್ಷಸಾಧನಃ—ಬಲಕಾರಿಯಾದುದೂ । ಸ್ವರ್ಜಿತ್—ಸ್ವರ್ಗವನ್ನು ಅಥವಾ ಎಲ್ಲವನ್ನೂ ಜಯಿಸುವುದೂ ಆದ । ಏಷಃ—ಈ ಸೋಮವು । ಇಂದ್ರಾಯ—ಇಂದ್ರನ ಮತ್ತು । ವಾಯವೇ—ವಾಯುದೇವನ ಪಾನಾರ್ಥವಾಗಿ । ಪವಿತ್ರೇ—ದಶಾಪವಿತ್ರದಲ್ಲಿ । ಪರಿ ಷಿಚ್ಯತೇ—ಜಜ್ಜಿ ಹಿಂಡಲ್ಪಡುತ್ತದೆ

॥ ಭಾವಾರ್ಥ ॥

ಬಲಕಾರಿಯೂ ಸ್ವರ್ಗವನ್ನು ಅಥವಾ ಎಲ್ಲವನ್ನೂ ಜಯಿಸುವುದೂ ಆದ ಈ ಸೋಮವು ಇಂದ್ರ ಮತ್ತು ವಾಯುವಿನ ಪಾನಕ್ಕಾಗಿ ದಶಾಪವಿತ್ರದಲ್ಲಿ ಜಜ್ಜಿ ಹಿಂಡಲ್ಪಡುತ್ತದೆ ಅಥವಾ ಶೋಧಿತವಾಗುತ್ತದೆ.

English Translation

This invigorating heaven-conquering Soma is poured upon the filter for Indra and Vayu

॥ ಸಂಹಿತಾಪಾಠಃ ॥

ಏಷ ನೃಭಿರ್ವಿ ನೀಯತೇ ದಿವೋ ಮೂರ್ಧಾ ವೃಷಾ ಸುತಃ ।

ಸೋಮೋ ವನೇಷು ವಿಶ್ವವಿತ್ ॥ ೩ ॥

॥ ಪದಪಾಠಃ ॥

ಏಷಃ । ನೃಭಿಃ । ವಿ । ನೀಯತೇ । ದಿವಃ । ಮೂರ್ಧಾ । ವೃಷಾ । ಸುತಃ ।

ಸೋಮಃ । ವನೇಷು । ವಿಶ್ವಽವಿತ್ ॥ ೩ ॥

॥ ಸಾಯಣಭಾಷ್ಯಂ ॥

ಏಷ ಸೋಮೋ ನೃಭಿಃ ಕರ್ಮನೇತೃಭಿರೃತ್ವಿಗ್ಭಿರ್ವಿ ನೀಯತೇ । ವಿವಿಧಂ ನೀಯತೇ । ಏಷ ಕೀದೃಶಃ । ದಿವೋ ದ್ಯುಲೋಕಸ್ಯ ಮೂರ್ಧಾ ಶಿರೋವತ್ಪ್ರಧಾನಭೂತೋ ವೃಷಾಭಿಮತವರ್ಷಕಃ ಸುತೋಽಭಿಷುತಃ । ಕುತ್ರ ನೀಯತೇ । ವನೇಷು ವನನೀಯೇಷು ಪಾತ್ರೇಷು ವನಸಂಭೂತದ್ರುಮವಿಕಾರೇಷು ವಾ ಪಾತ್ರೇಷು । ವಿಶ್ವವಿತ್ಸರ್ವಜ್ಞ ಏಷ ಇತಿ ಸಮನ್ವಯಃ ॥

॥ ಪ್ರತಿಪದಾರ್ಥ ॥

**ದಿವಃ**—ಸ್ವರ್ಗಲೋಕದ । **ಮೂರ್ಧಾ**—ಶಿರಸ್ಸಿನಲ್ಲಿ ಪ್ರಧಾನಭೂತನಾದವನೂ । **ವೃಷಾ**—ಅಭಿಮತ ವರ್ಷಕನೂ । **ಸುತಃ**—ಲತೆಗಳಿಂದ ಜಜ್ಜಿ ಹಿಂಡಲ್ಪಡುವವನೂ । **ವಿಶ್ವವಿತ್**—ಸರ್ವಜ್ಞನೂ ಆದ । **ಏಷಃ ಸೋಮಃ**—ಈ ಸೋಮದೇವನು । **ನೃಭಿಃ**—ಯಜ್ಞಕರ್ಮನೇತೃಗಳಾದ ಋತ್ವಿಗ್ಜನರಿಂದ । **ವಿ ನೀಯತೇ**—ನಾನಾರೀತಿಯಿಂದ ಒಯ್ಯಲ್ಪಡುತ್ತಾನೆ.

॥ ಭಾವಾರ್ಥ ॥

ಸ್ವರ್ಗಲೋಕವಾಸಿಗಳಾದ ದೇವತೆಗಳಲ್ಲಿ ಮುಖ್ಯನಾದವನೂ, ಕಾಮವರ್ಷಕನೂ, ಲತೆಗಳಿಂದ ಜಜ್ಜಿ ಹಿಂಡಲ್ಪಟ್ಟವನೂ, ಸರ್ವಜ್ಞನೂ ಆದ ಆ ಸೋಮದೇವನು ಯಜ್ಞಕರ್ಮನೇತೃಗಳಾದ ಅಧ್ವರ್ಯ್ವಾದಿ ಋತ್ವಿಜರಿಂದ ವಿಶೇಷರೀತಿಯಲ್ಲಿ ಎಂದರೆ ವಿಧ್ಯುಕ್ತವಾಗಿ ಉತ್ತರವೇದಿಗೆ ಒಯ್ಯಲ್ಪಡುತ್ತಾನೆ.

## English Translation

This Soma, the showerer ( of benefits), the summit of heaven, the all-knowing, being expressed is brought by the priests into the wooden vessels.

॥ ಸಂಹಿತಾಪಾಠಃ ॥

ಏಷ ಗವ್ಯುರಚಿಕ್ರದತ್ಪವಮಾನೋ ಹಿರಣ್ಯಯುಃ ।

ಇಂದುಃ ಸತ್ರಾಜಿದಸ್ತೃತಃ ॥ ೪ ॥

॥ ಪದಪಾಠಃ ॥

ಏಷಃ । ಗವ್ಯುಃ । ಅಚಿಕ್ರದತ್ । ಪವಮಾನಃ । ಹಿರಣ್ಯಽಯುಃ ।

ಇಂದುಃ । ಸತ್ರಾಽಜಿತ್ । ಅಸ್ತೃತಃ ॥ ೪ ॥

॥ ಸಾಯಣಭಾಷ್ಯಂ ॥

ಏಷ ಸೋಮಃ ಪವಮಾನಃ ಪೂಯಮಾನೋಽಚಿಕ್ರದತ್ । ಶಬ್ದಂ ಕರೋತಿ । ಕಥಂಭೂತಃ ಸನ್ । ಗವ್ಯುರಸ್ಮಾಕಂ ಗಾ ಇಚ್ಛನ್ ಹಿರಣ್ಯಯುರ್ಧನಮಿಚ್ಛನ್ನಿಂದುರ್ದೀಪ್ತಃ ಸನ್ಸತ್ರಾಜಿನ್ಮಹತಃ ಶತ್ರೋರಸುರಾದೇರ್ಜೇತಾಸ್ತೃತಃ ಸ್ವಯಮನ್ಯೈರಹಿಂಸ್ಯಶ್ಚ ಸನ್ ॥

॥ ಪ್ರತಿಪದಾರ್ಥ ॥

**ಪವಮಾನಃ**—ಶುದ್ಧಿಕಾರಕನಾದ । ಏಷಃ—ಈ ಸೋಮದೇವನು । **ಗವ್ಯುಃ**—ನಮಗೆ ಗೋವುಗಳನ್ನು ಕೊಡಬೇಕೆಂದು ಇಚ್ಛಿಸುತ್ತಲೂ । **ಹಿರಣ್ಯಯುಃ**—ಧನವನ್ನು ಕೊಡಲಿಚ್ಛಿಸುತ್ತಲೂ । **ಇಂದುಃ**—ಪ್ರಕಾಶಮಾನನಾಗಿ । **ಸತ್ರಾಜಿತ್**—ಶತ್ರುಗಳಾದ ಅಸುರರನ್ನು ಜಯಿಸುತ್ತಲೂ । **ಅಸ್ತೃತಃ** - (ಆದರೆ) ತಾನು ಮಾತ್ರ ಇತರರಿಂದ ಅಹಿಂಸಿತನಾಗಿಯೂ ಇದ್ದು । **ಅಚಿಕ್ರದತ್**—ಶಬ್ದವನ್ನು ಮಾಡುತ್ತಾನೆ

॥ ಭಾವಾರ್ಥ ॥

ಶುದ್ಧಿಕಾರಕನಾದ ಈ ಸೋಮದೇವನು ನಮಗೆ ಗೋವುಗಳನ್ನೂ ಧನವನ್ನೂ ಕೊಡಲು ಇಚ್ಛಿಸುತ್ತಾ ಪ್ರಕಾಶಮಾನನಾಗಿ ಬೆಳಗುತ್ತಾ ಶತ್ರುಗಳಾದ ಅಸುರರನ್ನು ಜಯಿಸುತ್ತಾ ಆದರೆ ತಾನು ಮಾತ್ರ ಇತರರಿಂದ ಹಿಂಸೆಗೆ ಒಳಗಾಗದೆ ಇರುತ್ತಾ ಘಟ್ಟಿಯಾಗಿ ಶಬ್ದವನ್ನು ಮಾಡುತ್ತಾನೆ.

English Translation

This Indu resounds as it drops, yearning to give us cattle and gold, the conqueror of foes, the irresistible

॥ ಸಂಹಿತಾಪಾಠಃ ॥

ಏಷ ಸೂರ್ಯೇಣ ಹಾಸತೇ ಪವಮಾನೋ ಅಧಿ ದ್ಯವಿ ।
ಪವಿತ್ರೇ ಮತ್ಸರೋ ಮದಃ ॥ ೫ ॥

॥ ಪದಪಾಠಃ ॥

ಏಷಃ । ಸೂರ್ಯೇಣ । ಹಾಸತೇ । ಪವಮಾನಃ । ಅಧಿ । ದ್ಯವಿ ।
ಪವಿತ್ರೇ । ಮತ್ಸರಃ ಮದಃ ॥ ೫ ॥

॥ ಸಾಯಣಭಾಷ್ಯಂ ॥

ಏಷ ಪವಮಾನಃ ಪೂಯಮಾನಃ ಸೋಮಃ ಸೂರ್ಯೇಣ ದೇವೇನಾಧಿ ದ್ಯವಿ ದ್ಯುಲೋಕೇಽಂತರಿಕ್ಷೇ ಪವಿತ್ರೇ ಹಾಸತೇ । ಪರಿತ್ಯಜ್ಯತೇ । ಮತ್ಸರೋ ಮದಕರೋ ಮದಃ ಸೋಮಃ ।

ಯದ್ಯಪ್ಯಧ್ವರ್ಯುರ್ಹಸ್ತಾದ್ದಶಾಪವಿತ್ರೇ ಪರಿತ್ಯಜ್ಯತೇ ಸೋಮಃ ತಥಾಪ್ಯಂತರಿಕ್ಷೇ ಸೂರ್ಯೇಣ ಪವಿತ್ರೇ ತ್ಯಜ್ಯತ ಇತಿ ಭಾವನಾ ವೀರ್ಯವತ್ತ್ವಾಯ । ಸತ್ಸ್ವಪ್ಯನ್ಯದೇವೇಷು ಸೋಮಸ್ರಾವಣೇ ಸೂರ್ಯಸ್ಯ ಕಃ ಪ್ರಸಂಗ ಇತಿ ನ ವಾಚ್ಯಂ ಸೂರ್ಯರಶ್ಮಿಭಿರೇವ ಸೋಮಸ್ಯಾಪ್ಯಾಯನಾತ್ ॥

॥ ಪ್ರತಿಪದಾರ್ಥ ॥

**ಮತ್ಸರಃ**—ಹರ್ಷವನ್ನುಂಟುಮಾಡುವವನೂ । **ಮದಃ**—ಶಕ್ತಿದಾಯಕನೂ ಆದ । **ಪವಮಾನಃ**—ಶೋಧಿತನಾದ । **ಏಷಃ**—ಈ ಸೋಮದೇವನು । **ಸೂರ್ಯೇಣ**—ಸೂರ್ಯನಿಂದ । **ಅಧಿ ದ್ಯವಿ**—ದ್ಯುಲೋಕವಾದ ಅಂತರಿಕ್ಷಪ್ರದೇಶದಲ್ಲಿ । **ಪವಿತ್ರೇ**—ದಶಾಪವಿತ್ರದಲ್ಲಿ । **ಹಾಸತೇ**—ತ್ಯಜಿಸಲ್ಪಡುತ್ತಾನೆ

॥ ಭಾವಾರ್ಥ ॥

ಹರ್ಷದಾಯಕನೂ, ಶಕ್ತಿದಾಯಕನೂ ಆದ ಶೋಧಿತನಾದ ಈ ಸೋಮದೇವನು ದ್ಯುಲೋಕಪ್ರದೇಶವಾದ ಅಂತರಿಕ್ಷದಲ್ಲಿ ಸೂರ್ಯನಿಂದ ದಶಾಪವಿತ್ರದಲ್ಲಿ ತ್ಯಜಿಸಲ್ಪಡುತ್ತಾನೆ ಎಂದರೆ ಶೋಧಿಸಲ್ಪಡುತ್ತಾನೆ.

## English Translation

This pure-flowing exhilarating Soma is abandoned by the sun in the filtering-cloth the sky.

॥ ವಿಶೇಷವಿಷಯಗಳು ॥

ದಶಾಪವಿತ್ರದಲ್ಲಿ ಸೋಮರಸವನ್ನು ಅಧ್ವರ್ಯುವು ಸುರಿದು ಶುದ್ಧಿಗೊಳಿಸುತ್ತಾನೆ. ಆದರೆ ಅಂತರಿಕ್ಷದಲ್ಲಿ ಅದೇ ಸೋಮವು ಸೂರ್ಯರಶ್ಮಿಗಳಿಂದ ಶೋಧಿತವಾಗುತ್ತದೆ. ಸೂರ್ಯರಶ್ಮಿಗಳ ಸಂಪರ್ಕದಿಂದಲೇ ಸೋಮಕ್ಕೆ ಆಪ್ಯಾಯನವುಂಟಾಗುವುದು ಎಂದು ಭಾಷ್ಯಕಾರರ ವಿವರಣೆಯು.

॥ ಸಂಹಿತಾಪಾಠಃ ॥

ಏಷ ಶುಷ್ಮ್ಯಸಿಷ್ಯದದಂತರಿಕ್ಷೇ ವೃಷಾ ಹರಿಃ ।
ಪುನಾನ ಇಂದುರಿಂದ್ರಮಾ ॥ ೬ ॥

॥ ಪದಪಾಠಃ ॥

ಏಷಃ । ಶುಷ್ಮೀ । ಅಸಿಸ್ಯದತ್ । ಅಂತರಿಕ್ಷೇ । ವೃಷಾ । ಹರಿಃ ।
ಪುನಾನಃ । ಇಂದುಃ । ಇಂದ್ರಂ । ಆ ॥ ೬ ॥

॥ ಸಾಯಣಭಾಷ್ಯಂ ॥

ಏಷ ಶುಷ್ಮೀ ಬಲವಾನ್ಸೋಮೋಽಂತರಿಕ್ಷೇ ದಶಾಪವಿತ್ರೇಽಸಿಷ್ಯದತ್ । ಸ್ಯಂದತೇ । ಕೀದೃಶ ಏಷಃ । ವೃಷಾ ವರ್ಷಕೋ ಹರಿರ್ಹರಿತವರ್ಣಃ ಪುನಾನಃ ಪೂಯಮಾನ ಇಂದುರ್ದೀಪ್ತಶ್ಚೈವೇಂದ್ರಮಾ। ಇಂದ್ರಂ ಚಾಭಿಗಚ್ಛತೀತಿ ಶೇಷಃ । ಆ ಇತಿ ಚಾರ್ಥೇ ॥

॥ ಪ್ರತಿಪದಾರ್ಥ ॥

**ಶುಷ್ಮೀ**—ಬಲಯುತನೂ । **ವೃಷಾ**—ಕಾಮುವರ್ಷಕನೂ । **ಹರಿಃ**—ಹರಿತ (ಹಸರು) ವರ್ಣವುಳ್ಳವನೂ । **ಪುನಾನಃ**—ಶುದ್ಧಿಕಾರಕನಾದವನೂ । **ಇಂದುಃ**—ಪ್ರಕಾಶಮಾನನೂ ಆದ । **ಏಷಃ**—ಈ ಸೋಮದೇವನು । **ಅಂತರಿಕ್ಷೇ**—ದಶಾಪವಿತ್ರದಲ್ಲಿ । **ಅಸಿಷ್ಯದತ್**—ಪ್ರವಿಸುತ್ತಾನೆ । **ಇಂದ್ರಂ ಆ**—(ಆಹುತಿದ್ವಾರಾ) ಇಂದ್ರನನ್ನು ಸಮಿಾಪಿಸುತ್ತಾನೆ

॥ ಭಾವಾರ್ಥ ॥

ಶಕ್ತಿದಾಯಕನೂ, ಕಾಮುವರ್ಷಕನೂ, ಹೊಂಬಣ್ಣದಿಂದ ಶೋಭಿಸುವವನೂ, ಶುದ್ಧಿಕಾರಕನಾದವನೂ, ಪ್ರಕಾಶಮಾನನೂ ಆದ ಈ ಸೋಮದೇವನು ದಶಾಪವಿತ್ರದಲ್ಲಿ ಶೋಧಿಸಲ್ಪಡುವಾಗ ವಸ್ತ್ರದಿಂದ ಹೊರಸೂಸಿ ಪ್ರವಿಸುತ್ತಾನೆ. ಋತ್ವಿಜರಿಂದ ಅರ್ಪಿಸಲ್ಪಡುವ ಆಹುತಿಯ ಮೂಲಕ ಇಂದ್ರನ ಬಳಿಗೂ ಹೋಗುತ್ತಾನೆ.

English Translation

This powerful and purifyng showerer (of benefits), the green-tinted Indu, flows through the firmament to Indra

## ಇಪ್ಪತ್ತೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಏಷ ವಾಜೀತಿ ಷಡೃಚಂ ಚತುರ್ಥಂ ಸೂಕ್ತಂ ಪ್ರಿಯಮೇಧಸ್ಯಾರ್ಷಂ ಗಾಯತ್ರಂ ಸೌಮ್ಯಂ । ಏಷ ವಾಜೀ ಪ್ರಿಯಮೇಧ ಇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—**ಏಷ ವಾಜೀ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ನಾಲ್ಕನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪ್ರಿಯಮೇಧನೆಂಬುವನು ಋಷಿಯು, ಪವಮಾನಸೋಮನು ದೇವತೆಯು; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಏಷ ವಾಜೀ ಪ್ರಿಯಮೇಧಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೨೮

ಮಂಡಲ—೯ ॥ ಅನುವಾಕ—೨ ॥ ಸೂಕ್ತ—೨೮ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೧೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಪ್ರಿಯಮೇಧಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಏಷ ವಾಜೀ ಹಿತೋ ನೃಭಿರ್ವಿಶ್ವವಿನ್ಮನಸಸ್ಪತಿಃ ।

ಅವ್ಯೋ ವಾರಂ ವಿ ಧಾವತಿ ॥ ೧ ॥

॥ ಪದಪಾಠಃ ॥

ಏಷಃ । ವಾಜೀ । ಹಿತಃ । ನೃಽಭಿಃ । ವಿಶ್ವಽವಿತ್ । ಮನಸಃ । ಪತಿಃ ।

ಅವ್ಯಃ । ವಾರಂ । ವಿ । ಧಾವತಿ ॥ ೧ ॥

॥ ಸಾಯಣಭಾಷ್ಯಂ ॥

ಏಷ ಸೋಮೋ ವಾಜೀ ಗಮನಶೀಲೋ ಹಿತೋಧ್ವರ್ಯುಣಾ ಪಾತ್ರೇ ನಿಹಿತೋ ವಿಶ್ವವಿತ್ಸರ್ವಜ್ಞೋ ಮನಸಃ ಸ್ತೋತ್ರಸ್ಯ ಪತಿಃ ಸ್ವಾಮೀ । ಅಥವಾ ಸೋಮಸ್ಯ ಮನೋಭಿಮಾನಿತ್ವಾನ್ಮನಸಃ ಸ್ವಾಮಿತ್ವಂ ಚಂದ್ರಮಾ ಮನೋ ಭೂತ್ವಾ ಹೃದಯಂ ಪ್ರಾವಿಶದಿತಿ ಶ್ರುತೇಃ । ತಾದೃಶೋಽಸಾವವ್ಯೋ ವಾರಮವೇರ್ವಾಲಂ ದಶಾಪವಿತ್ರಂ ವಿ ಧಾವತಿ । ವಿವಿಧಂ ಗಚ್ಛತಿ ॥

॥ ಪ್ರತಿಪದಾರ್ಥ ॥

**ವಾಜೀ**—ಶೀಘ್ರವಾಗಿ ಹರಿಯುವವನೂ । **ಹಿತಃ**—ಅಧ್ವರ್ಯುವಿನಿಂದ ಪಾತ್ರೆಯಲ್ಲಿ ಇಡಲ್ಪಟ್ಟಿರುವವನೂ । **ವಿಶ್ವವಿತ್**—ಸಮಸ್ತವನ್ನು ತಿಳಿದವನೂ । **ಮನಸಃ**—ಸ್ತೋತ್ರಕ್ಕೆ । **ಪತಿಃ**—ಸ್ವಾಮಿಯೂ ಆದ । **ಏಷಃ**—ಈ ಸೋಮದೇವನು । **ಅವ್ಯಃ ವಾರಂ**—ಉಣ್ಣೆಯಿಂದ ನಿರ್ಮಿತವಾದ ದಶಾಪವಿತ್ರದ ಬಳಿಗೆ । **ವಿ ಧಾವತಿ**—ಬೇಗ ಬೇಗನೆ ಹರಿದುಹೋಗುತ್ತಾನೆ ।

॥ ಭಾವಾರ್ಥ ॥

ಶೀಘ್ರವಾಗಿ ಹರಿಯುವ ಸ್ವಭಾವವುಳ್ಳವನೂ, ಅಧ್ವರ್ಯುವಿನಿಂದ ಪಾತ್ರೆಯಲ್ಲಿ ಹಾಕಿಡಲ್ಪಟ್ಟವನೂ. ಸರ್ವಜ್ಞನೂ, ಸ್ತುತ್ಯರ್ಹನೂ ಆದ ಈ ಸೋಮದೇವನು ಶೋಧನಾರ್ಥವಾಗಿ ಉಣ್ಣೆಯಿಂದ ನಿರ್ಮಿತವಾದ ದಶಾಪವಿತ್ರದ ಬಳಿಗೆ ವೇಗವಾಗಿ ಹರಿದುಹೋಗುತ್ತಾನೆ.

## English Translation

This swift-flowing (Soma) placed ( in the vessels ) by the priests, all-knowing, the lord of praise, hastens to the woollen (filter).

। ಸಂಹಿತಾಪಾಠಃ ।

ಏಷ ಪವಿತ್ರೇ ಅಕ್ಷರತ್ಸೋಮೋ ದೇವೇಭ್ಯಃ ಸುತಃ ।
ವಿಶ್ವಾ ಧಾಮಾನ್ಯಾವಿಶನ್ ॥ ೨ ॥

॥ ಪದಪಾಠಃ ॥

ಏಷಃ । ಪವಿತ್ರೇ । ಅಕ್ಷರತ್ । ಸೋಮಃ । ದೇವೇಭ್ಯಃ । ಸುತಃ ।
ವಿಶ್ವಾ । ಧಾಮಾನಿ । ಆಽವಿಶನ್ ॥ ೨ ॥

। ಸಾಯಣಭಾಷ್ಯಂ ।

ಏಷ ಸೋಮೋ ದೇವೇಭ್ಯೋ ದೇವಾರ್ಥಂ ಸುತೋಽಭಿಷುತಃ ಸನ್ಪವಿತ್ರೇಽಕ್ಷರತ್ । ಸ್ರವತಿ । ವಿಶ್ವಾ ಸರ್ವಾಣಿ ಧಾಮಾನಿ ದೇವಶರೀರಾಣ್ಯಾವಿಶನ್ನಾವಿಶನ್ । ಪ್ರವೇಷ್ಟುಮಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಏಷಃ ಸೋಮಃ**–ಈ ಸೋಮವು । **ದೇವೇಭ್ಯಃ**—ದೇವತೆಗಳ ಪಾನಾರ್ಥವಾಗಿ । **ಸುತಃ**—ಹಿಂಡಲ್ಪಟ್ಟು । **ಪವಿತ್ರೇ**—ಶೋಧನಾರ್ಥವಾಗಿ ದಶಾಪವಿತ್ರದ ಮೂಲಕ । **ಅಕ್ಷರತ್**—ಹೊರಸೂಸುತ್ತಾ ಸ್ರವಿಸುತ್ತಿರುವುದು । **ವಿಶ್ವಾ**—ಸಮಸ್ತವಾದ । **ಧಾಮಾನಿ**—ತೇಜೋಯುತವಾದ ದೇವಶರೀರಗಳನ್ನು । **ಆವಿಶನ್**—ಪ್ರವೇಶಿಸುವುದಕ್ಕಾಗಿ ಸ್ರವಿಸುತ್ತಿರುವುದು ।

। ಭಾವಾರ್ಥ ।

ಈ ಸೋಮರಸವು ದೇವತೆಗಳ ಪಾನಾರ್ಥವಾಗಿ ಲತೆಗಳಿಂದ ಹಿಂಡಲ್ಪಟ್ಟು ಶೋಧಿಸಲ್ಪಡುವುದಕ್ಕಾಗಿ ದಶಾಪವಿತ್ರದಲ್ಲಿ ಬಿದ್ದು ಅಲ್ಲಿಂದ ಹೊರಸೂಸುತ್ತಾ ಸಮಸ್ತವಾದ ದೇವತೆಗಳ ಶರೀರವನ್ನು ಪ್ರವೇಶಿಸುವುದಕ್ಕಾಗಿ ಸ್ರವಿಸುತ್ತಿರುವುದು.

English Translation

This (Soma), effused for the gods, flows into the filter, penetrating all the (divine) forms

।। ಸಂಹಿತಾಪಾಠಃ ।।

ಏಷ ದೇವಃ ಶುಭಾಯತೇಽಧಿ ಯೋನಾವಮರ್ತ್ಯಃ ।
ೀವವೀತಮಃ ॥ ೩ ॥

॥ ಪದಪಾಠಃ॥

ಏಷಃ । ದೇವಃ । ಶುಭಾಯತೇ । ಅಧಿ । ಯೋನೌ । ಅಮರ್ತ್ಯಃ ।

ವೃತ್ರಽಹಾ । ದೇವಽವೀತಮಃ ॥ ೩ ॥

॥ ಸಾಯಣಭಾಷ್ಯಂ ॥

**ಏಷ ಸೋಮೋ ದೇವಃ ಶುಭಾಯತೇ ಶೋಭತೇ । ಕುತ್ರ । ಅಧಿ ಯೋನೌ ಸ್ವೀಯೇ ಸ್ಥಾನೇ । ಕೀದೃಶ ಏಷಃ । ಅಮರ್ತ್ಯೋಽಮರಣಧರ್ಮಾ ವೃತ್ರಹಾ ಶತ್ರುಹಂತಾ ದೇವವೀತಮೋ ವಿಶೇಷೇಣ ದೇವಾನಾಂ ಕಾಮಯಿತಾ ॥**

॥ ಪ್ರತಿಪದಾರ್ಥ ॥

**ಅಮರ್ತ್ಯಃ**—ನಾಶರಹಿತನೂ । **ವೃತ್ರಹಾ**—ಶತ್ರುಹಂತಕನೂ । **ದೇವವೀತಮಃ**—ಪಾನಾರ್ಥವಾಗಿ ದೇವತೆಗಳನ್ನು ಇಚ್ಛಿಸುವವನೂ ಆದ । **ಏಷಃ ದೇವಃ**—ಈ ಸೋಮದೇವನು । **ಅಧಿ ಯೋನೌ**—ತನ್ನ ಸ್ವಸ್ಥಾನದಲ್ಲಿ (ದ್ರೋಣಕಲಶದಲ್ಲಿ) ಕುಳಿತು । **ಶುಭಾಯತೇ**—ಶೋಭಿಸುತ್ತಿರುವನು ।

॥ ಭಾವಾರ್ಥ ॥

ನಾಶರಹಿತನೂ, ಶತ್ರುಹಂತಕನೂ, ದೇವತೆಗಳನ್ನು ಇಚ್ಛಿಸುವವನೂ ಆದ ಈ ಸೋಮದೇವನು ತನ್ನ ಸ್ವಸ್ಥಾನವಾದ ದ್ರೋಣಕಲಶದಲ್ಲಿ ಕುಳಿತು ಪ್ರಕಾಶಿಸುತ್ತಿರುವನು.

## English Translation

This divine immortal (Soma) is brilliant in his own place, the slayer of enemies, the most devoted to the gods.

॥ ಸಂಹಿತಾಪಾಠಃ ॥

ಏಷ ವೃಷಾ ಕನಿಕ್ರದದ್ದಶಭಿರ್ಜಾಮಿಭಿರ್ಯತಃ ।

ಅಭಿ ದ್ರೋಣಾನಿ ಧಾವತಿ ॥ ೪ ॥

॥ ಪದಪಾಠಃ ॥

ಏಷಃ । ವೃಷಾ । ಕನಿಕ್ರದತ್ । ದಶಽಭಿಃ । ಜಾಮಿಽಭಿಃ । ಯತಃ ।

ಅಭಿ । ದ್ರೋಣಾನಿ । ಧಾವತಿ ॥ ೪ ॥

॥ ಸಾಯಣಭಾಷ್ಯಂ ॥

ಏಷ ವೃಷಾ ವರ್ಷಿತಾ ಕಾಮಾನಾಂ ಕನಿಕ್ರದಚ್ಛಬ್ದಂ ಕುರ್ವನ್ದಶಭಿರ್ಜಾಮಿಭಿರಂಗುಲೀಭಿರ್ಯತೋ ಧೃತೋ ದ್ರೋಣಾನಿ ದ್ರುಮಮಯಾಣಿ ಪಾತ್ರಾಣ್ಯಭಿ ಧಾವತಿ । ಅಭಿಗಚ್ಛತಿ ॥

॥ ಪ್ರತಿಪದಾರ್ಥ ॥

**ವೃಷಾ**—ಕಾಮವರ್ಷಕನಾದ । **ಏಷಃ**—ಈ ಸೋಮದೇವನು । **ಕನಿಕ್ರದತ್**—ಜಳಜಳನೆ ಶಬ್ದಮಾಡುತ್ತಾ । **ದಶಭಿಃ ಜಾಮಿಭಿಃ**—ಹತ್ತು ಬೆರಳುಗಳಿಂದ । **ಯತಃ**—ಧರಿಸಲ್ಪಟ್ಟು । **ದ್ರೋಣಾನಿ**—ಮರದ ಪಾತ್ರೆಗಳ (ದ್ರೋಣಕಲಶಗಳ) ಬಳಿಗೆ । **ಅಭಿ ಧಾವತಿ**—ಬೇಗಬೇಗನೆ ಹೋಗುತ್ತಾನೆ.

॥ ಭಾವಾರ್ಥ ॥

ಇಷ್ಟಾರ್ಥಪ್ರದನಾದ ಈ ಸೋಮದೇವನು (ಋತ್ವಿಗ್ಜನರ) ಹತ್ತು ಬೆರಳುಗಳಿಂದ ಧರಿಸಲ್ಪಟ್ಟು ಜಳಜಳನೆ ಶಬ್ದಮಾಡುತ್ತಾ ಮರದ ಪಾತ್ರೆಗಳ ಬಳಿಗೆ ಬೇಗಬೇಗನೆ ಧಾವಿಸುತ್ತಾನೆ.

English Translation

This showerer (of desires), expressed by the ten fingers, hastens uttering a sound to the pitchers.

॥ ಸಂಹಿತಾಪಾಠಃ ॥

**ಏಷ ಸೂರ್ಯಮರೋಚಯತ್ಪವಮಾನೋ ವಿಚರ್ಷಣಿಃ ।**

**ವಿಶ್ವಾ ಧಾಮಾನಿ ವಿಶ್ವವಿತ್ ॥ ೫ ॥**

॥ ಪದಪಾಠಃ ॥

**ಏಷಃ । ಸೂರ್ಯಂ । ಅರೋಚಯತ್ । ಪವಮಾನಃ । ವಿऽಚರ್ಷಣಿಃ ।**

**ವಿಶ್ವಾ । ಧಾಮಾನಿ । ವಿಶ್ವऽವಿತ್ ॥ ೫ ॥**

॥ ಸಾಯಣಭಾಷ್ಯಂ ॥

ಏಷ ಸೋಮಃ ಸೂರ್ಯಮರೋಚಯತ್ । ರೋಚಯತಿ ಸ್ವರಸೇನ । ಪವಮಾನಃ ಪೂಯಮಾನೋ ವಿಚರ್ಷಣಿಃ ಸರ್ವಸ್ಯ ದ್ರಷ್ಟಾ ವಿಶ್ವವಿತ್ಸರ್ವವಿತ್ । ನ ಕೇವಲಂ ಸೂರ್ಯಂ ಕಿಂತು ವಿಶ್ವಾ ಸರ್ವಾಣಿ ಧಾಮಾನಿ ತೇಜಃಸ್ಥಾನಾನಿ ರೋಚಯತಿ ॥

॥ ಪ್ರತಿಪದಾರ್ಥ ॥

**ವಿಶ್ವಚರ್ಷಣಿಃ**—ಸರ್ವವನ್ನು ವೀಕ್ಷಿಸಬಲ್ಲವನೂ । **ಪವಮಾನಃ**—ಸ್ರವಿಸುತ್ತಿರುವವನೂ ಆದ । **ಏಷಃ**—ಈ ಸೋಮದೇವನು । **ಸೂರ್ಯಂ**—ಸೂರ್ಯನನ್ನು (ತನ್ನ ರಸದಿಂದ) । **ಅರೋಚಯತ್**—ಬೆಳಗುವಂತೆ ಮಾಡುತ್ತಾನೆ । **ವಿಶ್ವವಿತ್**—ಸರ್ವಜ್ಞನಾದ ಈ ಸೋಮದೇವನು । **ವಿಶ್ವಾ**—ಸಮಸ್ತವಾದ । **ಧಾಮಾನಿ**—ತೇಜಃಸ್ಥಾನಗಳಾದ ಅಂತರಿಕ್ಷ ಸ್ವರ್ಗಾದಿಗಳನ್ನು ಪ್ರಕಾಶಿಸುವಂತೆ ಮಾಡುತ್ತಾನೆ ।

॥ ಭಾವಾರ್ಥ ॥

ಸರ್ವವನ್ನು ವೀಕ್ಷಿಸುವವನೂ, ಸ್ರವಿಸುತ್ತಿರುವವನೂ ಆದ ಈ ಸೋಮದೇವನು ತನ್ನ ರಸದಿಂದ ಸೂರ್ಯನನ್ನು ಬೆಳಗುವಂತೆ ಮಾಡುತ್ತಾನೆ. ಅಷ್ಟೇ ಅಲ್ಲದೆ ಸರ್ವಜ್ಞನಾದ ಈ ಸೋಮನು ಅಂತರಿಕ್ಷಾದಿ ತೇಜಃಸ್ಥಾನಗಳನ್ನು ಪ್ರಕಾಶಪಡಿಸುತ್ತಾನೆ.

English Translation

This purified, all-contemplating, all-knowing (Soma) gives radiance to the sun and all the spheres (of light).

॥ ಸಂಹಿತಾಪಾಠಃ ॥

ಏಷ ಶುಷ್ಮ್ಯದಾಭ್ಯಃ ಸೋಮಃ ಪುನಾನೋ ಅರ್ಷತಿ ।
ದೇವಾವೀರಘಶಂಸಹಾ ॥ ೬ ॥

॥ ಪದಪಾಠಃ ॥

ಏಷಃ । ಶುಷ್ಮೀ । ಅದಾಭ್ಯಃ । ಸೋಮಃ । ಪುನಾನಃ । ಅರ್ಷತಿ ।
ದೇವऽಅವೀಃ । ಅಘಶಂಸऽಹಾ ॥ ೬ ॥

॥ ಸಾಯಣಭಾಷ್ಯಂ ॥

ಏಷ ಸೋಮಃ ಶುಷ್ಮೀ ಬಲವಾನದಾಭ್ಯೋऽದಂಭನೀಯಃ ಪುನಾನಃ **ಪೂಯಮಾನೋऽರ್ಷತಿ** । ಗಚ್ಛತಿ । ದೇವಾವೀರ್ದೇವಾನಾಮವಿತಾಘಶಂಸಹಾ । **ಅಘಾಣ್ಯಂಸಂತೀತ್ಯಘಶಂಸಾಃ** । **ತೇಷಾಂ ಹಂತಾ** ॥

॥ ಪ್ರತಿಪದಾರ್ಥ ॥

**ಶುಷ್ಮೀ**—ಶಕ್ತಿದಾಯಕನೂ । **ಅದಾಭ್ಯಃ**—ಅಹಿಂಸಿತನೂ । **ಪುನಾನಃ**—ಶುದ್ಧಿಕಾರಕನೂ । **ದೇವಾವೀಃ**—ದೇವತೆಗಳನ್ನು ಸಂರಕ್ಷಿಸುವವನೂ । **ಅಘಶಂಸಹಾ**—ಪಾಪಮಾಡುವವರನ್ನು ಕೊಲ್ಲುವವನೂ ಆದ । **ಏಷಃ ಸೋಮಃ**—ಈ ಸೋಮದೇವನು । **ಅರ್ಷತಿ**—ದಶಾಪವಿತ್ರದ ಬಳಿಗೆ ಹೋಗುತ್ತಾನೆ ।

॥ ಭಾವಾರ್ಥ ॥

ಈ ಸೋಮದೇವನು ಶಕ್ತಿದಾಯಕನು, ಅಹಿಂಸಿತನು, ಶುದ್ಧಿಕಾರಕನು, ದೇವತೆಗಳನ್ನು ಸಂರಕ್ಷಿಸುವವನು, ಪಾಪಿಷ್ಠರನ್ನು ಕೊಲ್ಲುವವನು. ಇಂತಹ ಈ ಸೋಮದೇವನು (ದಶಾಪವಿತ್ರದ ಬಳಿಗೆ) ಹರಿದು ಹೋಗುವನು.

English Translation

This powerful invincible purifying Soma proceeds the protector of the gods, the destroyer of the wicked.

## ಇಪ್ಪತ್ತೊಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪ್ರಾಸ್ಯೇತಿ ಷಡೃಚಂ ಪಂಚಮಂ ಸೂಕ್ತಂ ನೃಮೇಧಸ್ಯಾಂಗಿರಸಸ್ಯಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ । ಅನುಕ್ರಮ್ಯತೇ ಚ । ಪ್ರಾಸ್ಯ ನೃಮೇಧ ಇತಿ ॥ ಗತೋ ವಿನಿಯೋಗಃ॥**

ಅನುವಾದವು— **ಪ್ರಾಸ್ಯ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಐದನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ನೃಮೇಧ ಆಂಗಿರಸಃ ಎಂಬುವನು ಋಷಿಯು; ಪವಮಾನ ಸೋಮನು ದೇವತೆಯು; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ— **ಪ್ರಾಸ್ಯ ನೃಮೇಧಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೨೯

ಮಂಡಲ—೯ ॥ ಅನುವಾಕ—೨ ॥ ಸೂಕ್ತ—೨೯ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೧೯ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ನೃಮೇಧಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರಾಸ್ಯ ಧಾರಾ ಅಕ್ಷರನ್ವೃಷ್ಣಃ ಸುತಸ್ಯೌಜಸಾ ।
ದೇವಾँ ಅನು ಪ್ರಭೂಷತಃ ॥ ೧ ॥

॥ ಪದಪಾಠಃ ॥

ಪ್ರ । ಅಸ್ಯ । ಧಾರಾಃ । ಅಕ್ಷರನ್ । ವೃಷ್ಣಃ । ಸುತಸ್ಯ । ಓಜಸಾ ।

ದೇವಾನ್ । ಅನು । ಪ್ರ‌ಽಭೂಷತಃ ॥ ೧ ॥

॥ ಸಾಯಣಭಾಷ್ಯಂ ॥

**ಅಸ್ಯ ಸೋಮಸ್ಯ ವೃಷ್ಣೋ ವರ್ಷಕಸ್ಯ ಸುತಸ್ಯಾಭಿಷುತಸ್ಯ ದೇವಾನನು ಪ್ರಭೂಷತಃ ಪ್ರಭವಿತುಮಿಚ್ಛತ ಓಜಸಾ ಸ್ವವೀರ್ಯೇಣ ಧಾರಾಃ ಪ್ರಾಕ್ಷರನ್ । ಪ್ರಕರ್ಷೇಣ ಕ್ಷರಂತಿ ॥**

॥ ಪ್ರತಿಪದಾರ್ಥ ॥

**ಸುತಸ್ಯ**—ಹಿಂಡಲ್ಪಡುತ್ತಿರುವ । **ವೃಷ್ಣಃ**—ಕಾಮವರ್ಷಕನಾದ । **ಅಸ್ಯ**—ಈ ಸೋಮದೇವನ । **ಧಾರಾಃ**—ಹರಿಯುವ ಪ್ರವಾಹಗಳು । **ಓಜಸಾ**—ತಮ್ಮ ಶಕ್ತಿಯಿಂದ । **ದೇವಾನ್ ಅನು**—ದೇವತೆಗಳನ್ನು । **ಪ್ರಭೂಷತಃ**—ಶಕ್ತಿಯಲ್ಲಿ ಮೀರಿಸಬೇಕೆಂದು । **ಪ್ರ ಅಕ್ಷರನ್**—ಸ್ರವಿಸುತ್ತವೆ.

॥ ಭಾವಾರ್ಥ ॥

ಹಿಂಡಲ್ಪಡುತ್ತಿರುವ ಇಷ್ಟಾರ್ಥಪ್ರದವಾದ ಈ ಸೋಮದೇವನ ಧಾರಾರೂಪವಾದ ಪ್ರವಾಹಗಳು ತಮ್ಮ ಶಕ್ತಿಯಿಂದ ದೇವತೆಗಳನ್ನೂ ಶಕ್ತಿಯಲ್ಲಿ ಮೀರಿಸುವುದಕ್ಕಾಗಿ ಜಿನುಗುತ್ತಾ ಸ್ರವಿಸುತ್ತವೆ.

English Translation

The streams of this effused (Soma), the showerer (of benefits), flow forth, as it seeks to surpass the gods in strength.

॥ ಸಂಹಿತಾಪಾಠಃ ॥

ಸಪ್ತಿಂ ಮೃಜಂತಿ ವೇಧಸೋ ಗೃಣಂತಃ ಕಾರವೋ ಗಿರಾ ।

ಜ್ಯೋತಿರ್ಜಜ್ಞಾನಮುಕ್ಥ್ಯಂ ॥ ೨ ॥

॥ಪದಪಾಠಃ ॥

ಸಪ್ತಿಂ । ಮೃಜಂತಿ । ವೇಧಸಃ । ಗೃಣಂತಃ । ಕಾರವಃ । ಗಿರಾ ।

ಜ್ಯೋತಿಃ । ಜಜ್ಞಾನಂ । ಉಕ್ಥ್ಯಂ ॥ ೨ ॥

॥ ಸಾಯಣಭಾಷ್ಯಂ ॥

ಸಪ್ತಿಮಶ್ವಸ್ಥಾನೀಯಂ ಸರ್ಪಣಸ್ವಭಾವಂ ವಾ ಸೋಮಂ ಮೃಜಂತಿ। ಶೋಧಯಂತಿ । ಕೇ । ಗೃಣಂತಃ ಸ್ತುವಂತೋ ವೇಧಸೋ ವಿಧಾತಾರಃ ಕಾರವಃ ಕರ್ಮಕರ್ತಾರೋಽಧ್ವರ್ಯ್ವಾದಯೋ ಗಿರಾ ಸ್ತುತ್ಯಾ ಸಾಧನೇನ । ಕೀದೃಶಂ ಸಪ್ತಿಂ । ಜ್ಯೋತಿರ್ದೀಪ್ಯಮಾನಂ ಸೋಮಂ ಜಜ್ಞಾನಂ ಜಾಯಮಾನಂ। ಪ್ರವೃದ್ಧಮಿತ್ಯರ್ಥಃ। ಅಥವಾ ಜ್ಯೋತಿರ್ಜಾಯಮಾನಂ ಅಯಂ ವೈ ಜ್ಯೋತಿರ್ಯತ್ಸೋಮ ಇತಿ ಶ್ರುತೇಃ । ಉಕ್ಥ್ಯಂ ಸ್ತುತ್ಯಂ ॥

॥ ಪ್ರತಿಪದಾರ್ಥ ॥

**ಗೃಣಂತಃ**—ಸ್ತುತಿಸುತ್ತಿರುವವರೂ । **ವೇಧಸಃ ಕಾರವಃ**—ಯಜ್ಞಕರ್ಮಕರ್ತೃಗಳೂ ಆದ ಅಧ್ವರ್ಯ್ವಾದಿಗಳು । **ಗಿರಾ**—ಸ್ತುತಿರೂಪವಾದ ವಾಕ್ಯದಿಂದ । **ಸಪ್ತಿಂ**—ವೇಗವಾಗಿ ಹರಿಯುವ ಸ್ವಭಾವವುಳ್ಳದ್ದೂ । **ಜ್ಯೋತಿಃ**—ಪ್ರಕಾಶಮಾನವಾದುದೂ । **ಜಜ್ಞಾನಂ**—ಆಗತಾನೇ ಉತ್ಪನ್ನವಾದುದೂ । **ಉಕ್ಥ್ಯಂ**—ಸ್ತುತ್ಯರ್ಹವಾದುದೂ ಆದ ಸೋಮರಸವನ್ನು । **ಮೃಜಂತಿ**—ಶೋಧಿಸುತ್ತಾರೆ.

॥ ಭಾವಾರ್ಥ ॥

ಸ್ತುತಿಕರ್ತರೂ ಯಜ್ಞಕರ್ಮಕರ್ತರೂ ಆದ ಅಧ್ವರ್ಯ್ವಾದಿ ಋತ್ವಿಗ್ಜನರು ಸ್ತುತಿರೂಪವಾದ ಮಂತ್ರಗಳನ್ನು ಪಠಿಸುತ್ತಾ ವೇಗವಾಗಿ ಹರಿಯುವ ಸ್ವಭಾವವುಳ್ಳದ್ದೂ, ಪ್ರಕಾಶಮಾನವಾದುದೂ ಆಗತಾನೇ ಉತ್ಪನ್ನವಾಗುತ್ತಿರುವುದೂ, ಸ್ತುತ್ಯರ್ಹವೂ ಆದ ಸೋಮರಸವನ್ನು ಶೋಧಿಸುತ್ತಾರೆ.

## English Translation

The pious performers (of holy rites), the utterers of praise, purify by their laudation the radiant courser (the Soma) as soon as generated and meriting to be hymned.

॥ ಸಂಹಿತಾಪಾಠಃ ॥

ಸುಷಹಾ ಸೋಮ ತಾನಿ ತೇ ಪುನಾನಾಯ ಪ್ರಭೂವಸೋ ।
ವರ್ಧಾ ಸಮುದ್ರಮುಕ್ಥ್ಯಂ ॥ ೩ ॥

॥ ಪದಪಾಠಃ ॥

ಸುಽಸಹಾ । ಸೋಮ । ತಾನಿ । ತೇ । ಪುನಾನಾಯ । ಪ್ರಭುವಸೋ ಇತಿ ಪ್ರಭುಽವಸೋ ।
ವರ್ಧ । ಸಮುದ್ರಂ । ಉಕ್ಥ್ಯಂ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಸೋಮ ಪ್ರಭೂವಸೋ ಪ್ರಭೂತಧನ ಪುನಾನಾಯ ಪೂಯಮಾನಸ್ಯ ತೇ ತವ ತಾನಿ ತೇಜಾಂಸಿ ಸುಷಹಾಃ ಶೋಭನಾಭಿಭಾವುಕಾನಿ । ಯಸ್ಮಾದೇವಂ ತಸ್ಮಾತ್ತ್ವಮುದ್ರಂ ಸಮುದ್ರಸದೃಶಂ ದ್ರೋಣಕಲಶಮುಕ್ಥ್ಯಂ ಸ್ತುತ್ಯಂ ತಂ ವರ್ಧ । ವರ್ಧಯ । ಪೂರಯ ರಸೇನ ॥**

॥ ಪ್ರತಿಪದಾರ್ಥ ॥

**ಪ್ರಭೂವಸೋ**—ಬಹಳ ಧನವಂತನಾದ । **ಸೋಮ**—ಎಲೈ ಸೋಮನೇ । **ಪುನಾನಾಯ**—ಸ್ರವಿಸುತ್ತಿರುವ । **ತೇ**—ನಿನ್ನ । **ತಾನಿ**—ತೇಜಸ್ಸುಗಳು । **ಸುಸಹಾ**—ಶೋಭಾಯುಕ್ತವಾಗಿ ಶತ್ರುಗಳನ್ನು ಸೋಲಿಸುತ್ತವೆ (ಆದ್ದರಿಂದ) ।**ಉಕ್ಥ್ಯಂ**—ಸ್ತುತಿಪಾತ್ರವಾದ । **ಸಮುದ್ರಂ**—ಸಮುದ್ರದಂತೆ ಅತಿ ವಿಸ್ತಾರವಾದ ದ್ರೋಣ ಕಲಶವನ್ನು । **ವರ್ಧ**—ನಿನ್ನ ರಸದಿಂದ ತುಂಬು.

॥ ಭಾವಾರ್ಥ ॥

ಪ್ರಭೂತ ಧನೋಪೇತನಾದ ಎಲೈ ಸೋಮದೇವನೇ, ಸ್ರವಿಸುತ್ತಿರುವ ನಿನ್ನ ತೇಜಸ್ಸುಗಳು ಬಹಳ ಆಕರ್ಷವಾಗಿ ಶತ್ರುಗಳನ್ನು ಸೋಲಿಸುತ್ತವೆ ಆದ್ದರಿಂದ ಸ್ತುತ್ಯರ್ಹವಾದ ಮತ್ತು ಸಮುದ್ರದಂತೆ ವಿಶಾಲವಾದ ಈ ದ್ರೋಣ ಕಲಶವನ್ನು ನಿನ್ನ ರಸದಿಂದ ತುಂಬಿಸು.

English Translation

Soma, distributor of abundant wealth, those radiances of yours when you are purified are over-powering ; fill therefore the praiseworthy ocean-like (pitcher).

॥ ಸಂಹಿತಾಪಾಠಃ ॥

ವಿಶ್ವಾ ವಸೂನಿ ಸಂಜಯನ್ಪವಸ್ವ ಸೋಮ ಧಾರಯಾ ।
ಇನು ದ್ವೇಷಾಂಸಿ ಸಧ್ರ್ಯಕ್ ॥ ೪ ॥

॥ ಪದಪಾಠಃ ॥

ವಿಶ್ವಾ । ವಸೂನಿ । ಸಂಽಜಯನ್ । ಪವಸ್ವ । ಸೋಮ । ಧಾರಯಾ ।
ಇನು । ದ್ವೇಷಾಂಸಿ । ಸಧ್ರ್ಯಕ್ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಸೋಮ ವಿಶ್ವಾ ಸರ್ವಾಣಿ ವಸೂನ್ಯಸ್ಮದರ್ಥಂ ಸಂಜಯನ್ಪವಸ್ವ । ಕ್ಷರ ಧಾರಯಾ । ದ್ವೇಷಾಂಸಿ ದ್ವೇಷ್ಯಾಣಿ ಸರ್ವಾಣಿ ಸಧ್ರ್ಯಕ್ಸಹೈವೇನು । ಪ್ರೇರಯ ದೂರದೇಶಂ ಪ್ರತಿ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮದೇವನೇ । **ವಿಶ್ವಾ**—ಸಮಸ್ತವಾದ । **ವಸೂನಿ**—ಧನಗಳನ್ನು । **ಸಂಜಯನ್**—ನಮಗಾಗಿ ಗೆಲ್ಲುತ್ತಾ । **ಧಾರಯಾ**—ಧಾರೆಧಾರೆಯಾಗಿ । **ಪವಸ್ವ**—ಪ್ರವಹಿಸು । **ದ್ವೇಷಾಂಸಿ**—ನಮ್ಮ ಶತ್ರುಗಳನ್ನು । **ಸಧ್ರ್ಯಕ್**—ಆ ಕೂಡಲೇ । **ಇನು**—ದೂರದೇಶಕ್ಕೆ ಹೋಗುವಂತೆ ಪ್ರೇರಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ನಮಗೆ ಕೊಡುವುದಕ್ಕಾಗಿ (ಶತ್ರುಗಳಲ್ಲಿರುವ) ಸಮಸ್ತ ಧನವನ್ನೂ ಗೆಲ್ಲುವವನಾಗಿ ಧಾರೆಧಾರೆಯಾಗಿ ಪ್ರವಹಿಸು. ಆ ಕೂಡಲೇ ನಮ್ಮ ಶತ್ರುಗಳನ್ನು ದೂರದೇಶಕ್ಕೆ ಅಟ್ಟಿಬಿಡು.

English Translation

Flow, Soma, in a full stream, conquering for us all treasures,—drive our enemies away together.

॥ ಸಂಹಿತಾಪಾಠಃ ॥

ರಕ್ಷಾ ಸು ನೋ ಅರರುಷಃ ಸ್ವನಾತ್ಸಮಸ್ಯ ಕಸ್ಯ ಚಿತ್ ।
ನಿದೋ ಯತ್ರ ಮುಮುಚ್ಮಹೇ ॥ ೫ ॥

॥ ಪದಪಾಠಃ ॥

ರಕ್ಷ । ಸು । ನಃ । ಅರರುಷಃ । ಸ್ವನಾತ್ । ಸಮಸ್ಯ । ಕಸ್ಯ । ಚಿತ್ ।
ನಿದಃ । ಯತ್ರ । ಮುಮುಚ್ಮಹೇ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸೋಮ ನೋಽಸ್ಮಾನ್ಸು ಸುಷ್ಠು ರಕ್ಷ । ಪಾಲಯ । ಕಸ್ಮಾತ್ । ಅರರುಷೋಽದಾತುಃ ಸ್ವನಾಚ್ಛಬ್ದಾನ್ನಿಂದಾರೂಪಾತ್ । ಕಿಮೇಕಸ್ಯಾದಾನಶೀಲಸ್ಯ । ನ । ಸಮಸ್ಯ ಸರ್ವಸ್ಯ ಯೋಽಸ್ತಿ ತಸ ಸರ್ವಸ್ಯ ಕಸ್ಯಚಿತ್ । ಕಂಚನಾಮುಂಚನ್ನಿತ್ಯರ್ಥಃ । ನ ಕೇವಲಮದಾತುಃ ಸ್ವನಾತ್ । ಕಿಂ ತರ್ಹಿ । ಕಸ್ಯ ಚಿತ್ಕಸ್ಯಾಪಿ ನಿದೋ ನಿಂದಕಾದ್ರಕ್ಷ । ಯತ್ರ ಮುಮುಚ್ಮಹೇ ಯಸ್ಮಿನ್ರಕ್ಷಣೇ ಸತಿ ವಯಂ ಮುಕ್ತಾಃ ಭವೇಮ ತೇನ ರಕ್ಷಣೇನ ರಕ್ಷಯೇತಿ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ಸಮಸ್ಯ**—ಯಾವನಲ್ಲಿ ಸಮಸ್ತವೂ ಇದ್ದರೂ । **ಅರರುಷಃ**—ಯಾರಿಗೂ ಏನನ್ನೂ ಕೊಡದಿರುವ ಲೋಭಿಯ । **ಸ್ವನಾತ್**—ನಿಂದಾವಾಕ್ಯಗಳಿಂದ । **ನಃ**—ನಮ್ಮನ್ನು । **ಸು ರಕ್ಷ**—ರಕ್ಷಿಸು ।

**ನಿದಃ**—ನಮ್ಮನ್ನು ನಿಂದಿಸುವ । **ಕಸ್ಯ ಚಿತ್**—ಬೇರೆ ಯಾವ ಪುರುಷನಿಂದಲೂ ನಮ್ಮನ್ನು ರಕ್ಷಿಸು । **ಯತ್ರ**—ಆ ನಿನ್ನ ರಕ್ಷಣೆಯಲ್ಲಿ । **ಮುಮುಚ್ಮಹೇ**—ನಾವು ನಿಂದಾದಿಗಳಿಂದ ಮುಕ್ತರಾಗುವಂತಾಗಲಿ.

। ಭಾವಾರ್ಥ ।

ಎಲೈ ಸೋಮದೇವನೇ, ಸಮಸ್ತ ವಸ್ತುಗಳೂ ತನ್ನಲ್ಲಿದ್ದರೂ ಯಾರಿಗೂ ಏನನ್ನೂ ಕೊಡದಿರುವ ಲೋಭಿಯ ನಿಂದಾವಾಕ್ಯಗಳಿಂದ ನಮ್ಮನ್ನು ರಕ್ಷಿಸು. ಅಲ್ಲದೆ ನಮ್ಮನ್ನು ದೂಷಿಸುತ್ತಿರುವ ಇತರ ಪುರುಷನಿಂದಲೂ ನಮ್ಮನ್ನು ರಕ್ಷಿಸು. ನಿನ್ನ ಆ ರಕ್ಷಣೆಯಿಂದ ನಾವು ನಿಂದಾದಿಗಳಿಂದ ಮುಕ್ತರಾಗುವಂತಾಗಲಿ.

English Translation

Preserve us from the reproach of every one who makes no offerings, who utters blame,—that we may be free.

। ಸಂಹಿತಾಪಾಠಃ ॥

ಏಂದೋ॑ ಪಾರ್ಥಿ॑ವಂ ರ॒ಯಿಂ ದಿ॒ವ್ಯಂ ಪ॑ವಸ್ವ॒ ಧಾರ॑ಯಾ ।

ದ್ಯು॒ಮಂತ॒ಂ ಶುಷ್ಮ॒ಮಾ ಭ॑ರ ॥ ೬ ॥

॥ ಪದಪಾಠಃ ॥

ಆ । ಇ॒ಂದೋ॒ ಇತಿ॑ । ಪಾರ್ಥಿ॑ವಂ । ರ॒ಯಿಂ । ದಿ॒ವ್ಯಂ । ಪ॒ವ॒ಸ್ವ॒ । ಧಾರ॑ಯಾ ।

ದ್ಯು॒ಽಮಂತ॑ಂ । ಶುಷ್ಮ॑ಂ । ಆ । ಭ॒ರ॒ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಇಂದೋ ಕ್ಲಿದ್ಯಮಾನ ಸೋಮ ತ್ವಂ ಧಾರಯಾ ಪವಸ್ವ । ಸರ್ವತಃ ಕ್ಷರ । ಪಾರ್ಥಿವಂ ದಿವ್ಯಂ ಚ ರಯಿಂ ಧನಂ ದ್ಯುಮಂತಂ ದೀಪ್ತಿಮಂತಂ ಶುಷ್ಮಂ ಬಲಂ ಚಾ ಭರ । ಆಹರಾಸ್ಮಭ್ಯಂ ॥**

। ಪ್ರತಿಪದಾರ್ಥ ॥

**ಇಂದೋ**—ಸ್ರವಿಸುತ್ತಿರುವ ಎಲೈ ಸೋಮದೇವನೇ (ನೀನು) । **ಧಾರಯಾ**—ಧಾರೆಧಾರೆಯಾಗಿ । **ಪವಸ್ವ**—ಪ್ರವಹಿಸು । **ಪಾರ್ಥಿವಂ**—ಪೃಥಿವಿಯಲ್ಲಿರುವುದೂ । **ದಿವ್ಯಂ**—ಸ್ವರ್ಗದಲ್ಲಿರುವುದೂ ಆದ । **ರಯಿಂ**—ಧನವನ್ನೂ । **ದ್ಯುಮಂತಂ**—ತೇಜೋಯುತವಾದ । **ಶುಷ್ಮಂ**—ಬಲವನ್ನೂ । **ಆ ಭರ**—ನಮಗೆ ತಂದೊದಗಿಸು.

। ಭಾವಾರ್ಥ ।

ಸ್ರವಿಸುತ್ತಿರುವ ಎಲೈ ಸೋಮದೇವನೇ, ಧಾರೆಧಾರೆಯಾಗಿ ಪ್ರವಹಿಸು. ಪೃಥಿವಿಯಲ್ಲಿರುವುದೂ, ಸ್ವರ್ಗದಲ್ಲಿರುವುದೂ ಆದ ಧನವನ್ನೂ, ತೇಜಸ್ಸಿನಿಂದ ಕಳಕಳಿಸುವ ಬಲವನ್ನೂ ನಮಗೆ ತಂದೊದಗಿಸು.

## English Translation

Indu, pour to us in a stream terrestrial and celestial riches, bring brilliant vigour.

# ಮೂವತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪ್ರ ಧಾರಾ ಇತಿ ಷಡೃಚಂ ಷಷ್ಠಂ ಸೂಕ್ತಂ ಬಿಂದುನಾಮ್ನ ಆಂಗಿರಸಸ್ಯಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ । ಪ್ರ ಧಾರಾ ಬಿಂದುರಿತ್ಯನುಕ್ರಮಣಿಕಾ ॥ ಗತೋ ವಿನಿಯೋಗಃ ॥

ಅನುವಾದವು—ಪ್ರ ಧಾರಾಃ ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಆರನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಬಿಂದು ಆಂಗಿರಸಃ ಎಂಬುವನು ಋಷಿಯು; ಪವಮಾನ ಸೋಮನು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ-ಪ್ರ ಧಾರಾ ಬಿಂದುಃ ಎಂದು ಹೇಳಿರುವುದು. ಸೂಕ್ತವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೩೦

ಮಂಡಲ—೯ । ಅನುವಾಕ—೨ । ಸೂಕ್ತ—೩೦ ।
ಅಷ್ಟಕ—೬ । ಅಧ್ಯಾಯ—೮ । ವರ್ಗ—೨೦ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ।
ಋಷಿಃ—ಬಿಂದುಃ ।
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

। ಸಂಹಿತಾಪಾಠಃ ।

ಪ್ರ ಧಾರಾ ಅಸ್ಯ ಶುಷ್ಮಿಣೋ ವೃಥಾ ಪವಿತ್ರೇ ಅಕ್ಷರನ್ ।
ಪುನಾನೋ ವಾಚಮಿಷ್ಯತಿ ॥ ೧ ॥

॥ ಪದಪಾಠಃ ॥

ಪ್ರ । ಧಾರಾಃ । ಅಸ್ಯ । ಶುಷ್ಮಿಣಃ । ವೃಥಾ । ಪವಿತ್ರೇ । ಅಕ್ಷರನ್ ।
ಪುನಾನಃ । ವಾಚಂ । ಇಷ್ಯತಿ । ೧ ॥

॥ ಸಾಯಣಭಾಷ್ಯಂ ॥

ಶುಷ್ಮಿಣೋ ಬಲವತೋಽಸ್ಯ ಸೋಮಸ್ಯ ಧಾರಾಃ ಪವಿತ್ರೇ ದಶಾಪವಿತ್ರೇ ವೃಥಾಪ್ರಯತ್ನೇನಾಕ್ಷರನ್ । ಸ್ರವಂತಿ । ತದಾನೀಂ ಪುನಾನಃ ಪೂಯಮಾನಃ ಸೋಮೋ ವಾಚಂ ಸ್ತುತಿಂ ಸ್ವೀಯಂ ಧ್ವನಿಂ ವೇಷ್ಯತಿ । ಪ್ರೇರಯತಿ ॥

॥ ಪ್ರತಿಪದಾರ್ಥ ॥

**ಶುಷ್ಮಿಣಃ**—ಬಲಯುಕ್ತವಾದ | **ಅಸ್ಯ**—ಈ ಸೋಮದ । **ಧಾರಾಃ**—ಪ್ರವಾಹಗಳು । **ಪವಿತ್ರೇ**—ದಶಾಪವಿತ್ರದೊಳಕ್ಕೆ । **ವೃಥಾ**—ಅನಾಯಾಸವಾಗಿ । **ಅಕ್ಷರನ್**-ಸ್ರವಿಸುತ್ತವೆ । **ಪುನಾನಃ**-ಶೋಧಿಸಲ್ಪಡುವ ಆ ಸೋಮವು । **ವಾಚಂ**—ಸ್ತುತಿಯನ್ನು ಅಥವಾ ಶಬ್ದವನ್ನು । **ಇಷ್ಯತಿ**—ಪ್ರೇರಿಸುತ್ತದೆ ।

॥ ಭಾವಾರ್ಥ ॥

ಬಲದಾಯಕವಾದ ಈ ಸೋಮದ ಧಾರೆಗಳು ದಶಾಪವಿತ್ರದ ಮೇಲೆ ಸುಲಭವಾಗಿ ಹೋಗಿ ಬೀಳುತ್ತವೆ. ಅಲ್ಲಿ ಶೋಧಿಸಲ್ಪಟ್ಟ ನಂತರ ಸೋಮವು ಋತ್ವಿಗ್ಜನರನ್ನು ಸ್ತುತಿಸುವಂತೆ ಪ್ರೇರಿಸುತ್ತದೆ

## English Translation

The streams of this strong Soma flow without effort into the fitering-cloth ; purified, he excites praise.

॥ ಸಂಹಿತಾಪಾಠಃ ॥

ಇಂದುರ್ಹಿಯಾನಃ ಸೋತೃಭಿರ್ಮೃಜ್ಯಮಾನಃ ಕನಿಕ್ರದತ್ ।

ಇಯರ್ತಿ ವಗ್ನುಮಿಂದ್ರಿಯಂ ॥ ೨ ॥

॥ ಪದಪಾಠಃ ॥

ಇಂದುಃ । ಹಿಯಾನಃ । ಸೋತೃಽಭಿಃ । ಮೃಜ್ಯಮಾನಃ । ಕನಿಕ್ರದತ್ ।

ಇಯರ್ತಿ । ವಗ್ನುಂ । ಇಂದ್ರಿಯಂ ॥ ೨ ॥

॥ ಸಾಯಣಭಾಷ್ಯಂ ॥

ಅಯಮಿಂದುರ್ದೀಪ್ತಃ ಸೋಮೋ ಹಿಯಾನಃ ಪ್ರೇರ್ಯಮಾಣೋ ವ್ಯಾಪ್ರಿಯಮಾಣಃ । ಕೈಃ । ಸೋತೃಭಿರ್ಋತ್ವಿಗ್ಭಿಃ । ಪಶ್ಚಾದ್ದಶಾಪವಿತ್ರೇ ಮೃಜ್ಯಮಾನಃ ಶೋಧ್ಯಮಾನಃ ಕನಿಕ್ರದಚ್ಛಬ್ದಂ ಕುರ್ವನ್ನಿಂದ್ರಿಯಮಿಂದ್ರಸ್ಯ ಸಂಬಂಧಿನಮಿಂದ್ರಿಯಮಪಿ . . .... .... .... ಕರಂ ವಗ್ನುಂ ಶಬ್ದಮಿಯರ್ತಿ । ಪ್ರೇರಯತಿ ಗ್ರಹಣಸಮಯೇ ॥

॥ ಪ್ರತಿಪದಾರ್ಥ ॥

ಇಂದುಃ— ಪ್ರಕಾಶಮಾನವಾದ ಈ ಸೋಮವು । ಸೋತೃಭಿಃ—ರಸವನ್ನು ಹಿಂಡುವ ಋತ್ವಿಗ್ಜನರಿಂದ । ಹಿಯಾನಃ—ಪ್ರೇರಿಸಲ್ಪಡುತ್ತಾ । ಮೃಜ್ಯಮಾನಃ—ದಶಾಪವಿತ್ರದಲ್ಲಿ ಶೋಧಿಸಲ್ಪಟ್ಟು । ಕನಿಕ್ರದತ್—ಶಬ್ದ ಮಾಡುತ್ತದೆ । ಇಂದ್ರಿಯಂ— ಇಂದ್ರನ ವಿಷಯವಾಗಿ ಎಂದರೆ ಇಂದ್ರನನ್ನು ಅಪೇಕ್ಷಿಸುತ್ತಾ । ವಗ್ನುಂ—ಶಬ್ದವನ್ನು ಇಯರ್ತಿ— ಪ್ರೇರಿಸುತ್ತದೆ ।

॥ ಭಾವಾರ್ಥ ॥

ಜಿನುಗುತ್ತಿರುವುದೂ ಸ್ವಚ್ಛವಾದುದೂ ಆದ ಈ ಸೋಮರಸವು ಅಭಿಷವಣಕರ್ಮದಲ್ಲಿ ನಿರತರಾದ ಋತ್ವಿಗ್ಜನ ರಿಂದ ಹಿಂಡಲ್ಪಟ್ಟು ದಶಾಪವಿತ್ರದಲ್ಲಿ ಶೋಧಿಸಲ್ಪಡುವಾಗ ಜಳಜಳನೆ ಶಬ್ದಮಾಡುತ್ತದೆ. ಮತ್ತು ಇಂದ್ರನನ್ನು ಸ್ತುತಿ ಸುವಂತೆ (ಋತ್ವಿಗ್ಜನರನ್ನು) ಪ್ರೇರಿಸುತ್ತದೆ.

English Translation

This Indu, urged by the priests, and purified with a sound in the filter, utters a loud voice (in the oblation).

॥ ಸಂಹಿತಾಪಾಠಃ ॥

ಆ ನಃ ಶುಷ್ಮಂ ನೃಷಾಹ್ಯಂ ವೀರವಂತಂ ಪುರುಸ್ಪೃಹಂ ।
ಪವಸ್ವ ಸೋಮ ಧಾರಯಾ ॥ ೩ ॥

॥ ಪದಪಾಠಃ ॥

ಆ । ನಃ । ಶುಷ್ಮಂ । ನೃಽಸಹ್ಯಂ । ವೀರಽವಂತಂ । ಪುರುಽಸ್ಪೃಹಂ ।
ಪವಸ್ವ । ಸೋಮ । ಧಾರಯಾ ॥ ೩ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ಧಾರಯಾ ಪವಸ್ವ । ಕಿಂ । ಶುಷ್ಮಂ ಬಲಂ । ಕೀದೃಶಂ । ನೃಷಾಹ್ಯಂ ನೃಣಾಮಸ್ಮದ್ವಿರೋಧಿನಾಮಭಿಭಾವುಕಂ ವೀರವಂತಂ ಪುತ್ರೋಪೇತಂ ಪುರುಸ್ಪೃಹಂ ಬಹುಭಿಃ ಸ್ಪೃಹ-ಣೀಯಂ ಶುಷ್ಮಮಾ ಪವಸ್ವ । ಏತಸ್ಯ ಲಾಭಾಯ ಪವಸ್ವೇತ್ಯರ್ಥಃ ॥ ರಸಸ್ರಾವೇ ಸತಿ ಹೋಮದ್ವಾರಾ ತತ್ಸಿದ್ಧೇ ಶುಷ್ಮಂ ಪವಸ್ವೇತ್ಯುಪಚರ್ಯತೇ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮನೇ ನೀನು । ನೃಷಾಹ್ಯಂ—ಶತ್ರುಜನರನ್ನು ಸೋಲಿಸಲರ್ಹವಾದ । ವೀರವಂತಂ—ವೀರರಾದ ಪುತ್ರಾದಿಗಳಿಂದ ಸಹಿತವಾದ । ಪುರುಸ್ಪೃಹಂ—ಅನೇಕರಿಂದ ಅಪೇಕ್ಷಿಸಲ್ಪಡುವ ।

**ಶುಷ್ಮಂ**—ಬಲವನ್ನು ನಮಗೆ ಉಂಟುಮಾಡುವುದಕ್ಕಾಗಿ | **ಧಾರಯಾ**—ಧಾರೆಧಾರೆಯಾಗಿ | **ಆ ಪವಸ್ವ**—ಪ್ರವಹಿಸು |

॥ ಭಾವಾರ್ಥ ॥

ಎಲೈ ಸೋಮನೇ ನೀನು, ನಮಗೆ ಶತ್ರುಜನರನ್ನು ಸೋಲಿಸುವ ಸಾಮರ್ಥ್ಯವನ್ನೂ ವೀರರಾದ ಪುತ್ರಾದಿಗಳನ್ನೂ ಅನೇಕರಿಂದ ಅಪೇಕ್ಷಿಸಲ್ಪಡುವ ಶಕ್ತಿಯನ್ನೂ ಕೊಡುವುದಕ್ಕಾಗಿ ಧಾರೆಧಾರೆಯಾಗಿ ಪ್ರವಹಿಸು.

## English Translation

Pour upon us in a stream, Soma, foe-subduing strength, associated with male offspring and desired by many.

॥ ಸಂಹಿತಾಪಾಠಃ ॥

ಪ್ರ ಸೋಮೋ ಅತಿ ಧಾರಯಾ ಪವಮಾನೋ ಅಸಿಷ್ಯದತ್ ।
ಅಭಿ ದ್ರೋಣಾನ್ಯಾಸದಂ ॥ ೪ ॥

॥ ಪದಪಾಠಃ ॥

ಪ್ರ । ಸೋಮಃ । ಅತಿ । ಧಾರಯಾ । ಪವಮಾನಃ । ಅಸಿಸ್ಯದತ್ ।
ಅಭಿ । ದ್ರೋಣಾನಿ । ಆऽಸದಂ ॥ ೪ ॥

॥ ಸಾಯಣಭಾಷ್ಯಂ ॥

ಅಯಂ ಪವಮಾನಃ ಸೋಮೋ ಧಾರಯಾತ್ಯತಿಕ್ರಮ್ಯ ದಶಾಪವಿತ್ರಂ ಪ್ರಾಸಿಷ್ಯದತ್ । ಪ್ರಸ್ಯಂದತೇ । ಕಿಮರ್ಥಂ । ದ್ರೋಣಾನಿ ದ್ರೋಣಕಲಶಾದೀನ್ಯಾಸದಮಾಸಾದನಾಯ ॥

॥ ಪ್ರತಿಪದಾರ್ಥ ॥

**ಪವಮಾನಃ**—ಸ್ರವಿಸುತ್ತಿರುವ | **ಸೋಮಃ**—ಈ ಸೋಮರಸವು | **ದ್ರೋಣಾನಿ**—ದ್ರೋಣಕಲಶಾದಿ ಪಾತ್ರೆಗಳಲ್ಲಿ | **ಆಸದಂ**—ತುಂಬಿರುವುದಕ್ಕಾಗಿ | **ಧಾರಯಾ**—ಪ್ರವಾಹದಿಂದ ಹರಿಯುತ್ತಾ | **ಅತಿ**—ದಶಾಪವಿತ್ರವನ್ನು ದಾಟಿಕೊಂಡು | **ಪ್ರ ಅಸಿಷ್ಯದತ್**—ಸ್ರವಿಸಿ ಬೀಳುತ್ತದೆ |

॥ ಭಾವಾರ್ಥ ॥

ಸ್ರವಿಸುತ್ತಿರುವ ಈ ಸೋಮರಸವು ದ್ರೋಣಕಲಶಾದಿ ಪಾತ್ರೆಗಳಲ್ಲಿ ತುಂಬಿರುವುದಕ್ಕಾಗಿ ಪ್ರವಾಹರೂಪವಾಗಿ ಹರಿಯುತ್ತಾ ದಶಾಪವಿತ್ರದ ಮೇಲೆ ಬಿದ್ದು ಶೋಧಿಸಲ್ಪಟ್ಟನಂತರ ಅದರಿಂದ ಹೊರಸೂಸುತ್ತಾ ಕೆಳಮುಖವಾಗಿ ಸ್ರವಿಸಿ ಬೀಳುತ್ತದೆ.

## English Translation

This purified Soma flows out in a stream to take its place in the pitchers.

॥ ಸಂಹಿತಾಪಾಠಃ ॥

ಅಪ್ಸು ತ್ವಾ ಮಧುಮತ್ತಮಂ ಹರಿಂ ಹಿನ್ವಂತ್ಯದ್ರಿಭಿಃ ।
ಇಂದವಿಂದ್ರಾಯ ಪೀತಯೇ ॥ ೫ ॥

॥ ಪದಪಾಠಃ ॥

ಅಪ್ಽಸು । ತ್ವಾ । ಮಧುಮತ್ಽತಮಂ । ಹರಿಂ । ಹಿನ್ವಂತಿ । ಅದ್ರಿಽಭಿಃ ।
ಇಂದೋ ಇತಿ । ಇಂದ್ರಾಯ । ಪೀತಯೇ ॥ ೫ ॥

॥ ಸಾಯಣಭಾಷ್ಯಂ ॥

ಹೇ ಇಂದೋ ಸೋಮ ಅಪ್ಸು ವಸತೀವರೀಷೂದಕೇಷು ಮಧುಮತ್ತಮಮತಿಶಯೇನ ಮಧುಮಂತಂ ಹರಿಂ ಹರಿತವರ್ಣಂ ತ್ವಾ ತ್ವಾಮದ್ರಿಭಿರಭಿಷವಗ್ರಾವಭಿರ್ಹಿನ್ವಂತಿ । ಪ್ರೇರಯಂತಿ । ಕಿಮರ್ಥಂ । ಇಂದ್ರಾಯೇಂದ್ರಸ್ಯ ಪೀತಯೇ ಪಾನಾಯ ॥

॥ ಪ್ರತಿಪದಾರ್ಥ ॥

**ಇಂದೋ**—ಎಲೈ ಸೋಮವೇ । **ಮಧುಮತ್ತಮಂ**—ಅತ್ಯಂತ ಮಧುರವಾದುದೂ । **ಹರಿಂ**—ಹರಿತ ವರ್ಣದಿಂದಿರುವುದೂ ಆದ । **ತ್ವಾ**—ನಿನ್ನನ್ನು । **ಇಂದ್ರಾಯ**—ಇಂದ್ರನ । **ಪೀತಯೇ**—ಪಾನಾರ್ಥವಾಗಿ । **ಅದ್ರಿಭಿಃ**—ಜಜ್ಜುವ ಕಲ್ಲುಗಳಿಂದ । **ಹಿನ್ವಂತಿ**—ಜಜ್ಜಿ ರಸವನ್ನು ಸ್ರವಿಸುವಂತೆ ಪ್ರೇರಿಸುತ್ತಾರೆ ।

॥ ಭಾವಾರ್ಥ ॥

ಎಲೈ ಸೋಮಲತೆಯೇ, ಅತ್ಯಂತ ಮಧುರವಾದುದೂ ಹಸುರಬಣ್ಣದಿಂದಿರುವುದೂ ಆದ ನಿನ್ನನ್ನು ಇಂದ್ರನ ಪಾನಾರ್ಥವಾಗಿ ಋತ್ವಿಕ್ಕುಗಳು ಕಲ್ಲುಗಳಿಂದ ಜಜ್ಜಿ ರಸವನ್ನು ಹೊರಸೂಸುವಂತೆ ಪ್ರೇರಿಸುತ್ತಾರೆ.

## English Translation

Indu, they press you forth by the stones, most sweet-flavoured and green-tinted, into the waters for Indra to drink.

॥ ಸಂಹಿತಾಪಾಠಃ ॥

ಸುನೋತಾ ಮಧುಮತ್ತಮಂ ಸೋಮಮಿಂದ್ರಾಯ ವಜ್ರಿಣೇ ।
ಚಾರುಂ ಶರ್ಧಾಯ ಮತ್ಸರಂ ॥ ೬ ॥

॥ ಪದಪಾಠಃ ॥

ಸುನೋತ । ಮಧುಮತ್ऽತಮಂ । ಸೋಮಂ । ಇಂದ್ರಾಯ । ವಜ್ರಿಣೇ ।
ಚಾರುಂ । ಶರ್ಧಾಯ । ಮತ್ಸರಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಋತ್ವಿಜಃ ಯೂಯಂ ಮಧುಮತ್ತಮಂ ಮಧುರರಸೋಪೇತಂ ಸೋಮಮಿಂದ್ರಾಯ ವಜ್ರಿಣೇ ವಜ್ರಯುಕ್ತಾಯ ಸುನೋತ । ಸುನುತ । ಪುನಃ ಕೀದೃಶಂ । ಚಾರುಂ ಚರಣೀಯಂ ಮತ್ಸರಂ ಮದಕರಂ ಶರ್ಧಾಯಾಸ್ಮಾಕಂ ಬಲಾಯೇಂದ್ರಸ್ಯ ಪಾನಾಯ ಚ ಸೋಮಂ ಸುನುತೇತಿ ಬ್ರೂತೇ ಯಜಮಾನಃ ಸ್ವೀಯಾನ್ ॥

॥ ಪ್ರತಿಪದಾರ್ಥ

(ಎಲೈ ಋತ್ವಿಕ್ಕುಗಳೇ) ನೀವು, ಮಧುಮತ್ತಮಂ—ಅತ್ಯಂತ ಮಧುರವಾದು (ರುಚಿಕರವಾದ) ದೂ । ಚಾರುಂ—ಮನೋಹರವಾದುದೂ । ಮತ್ಸರಂ ಸೋಮಂ—ಹರ್ಷಕಾರಕವಾದುದೂ ಆದ ಸೋಮವನ್ನು । ವಜ್ರಿಣೇ—ವಜ್ರಾಯುಧಧಾರಿಯಾದ । ಇಂದ್ರಾಯ—ಇಂದ್ರನ ಪಾನಾರ್ಥವಾಗಿಯೂ । ಶರ್ಧಾಯ—ನಮಗೆ ಬಲವನ್ನುಂಟುಮಾಡುವುದಕ್ಕಾಗಿಯೂ। ಸುನೋತ—(ಕಲ್ಲುಗಳಿಂದ ಜಜ್ಜಿ ರಸವನ್ನು) ಹಿಂಡಿರಿ ।

॥ ಭಾವಾರ್ಥ ॥

ಎಲೈ ಋತ್ವಿಕ್ಕುಗಳೇ, ನೀವು ಅತ್ಯಂತ ಮಧುರವಾದುದೂ, ಮನೋಹರವಾದುದೂ, ಹರ್ಷದಾಯಕವೂ ಆದ ಸೋಮವನ್ನು ವಜ್ರಾಯುಧಧಾರಿಯಾದ ಇಂದ್ರನ ಪಾನಾರ್ಥವಾಗಿಯೂ ನಮಗೆ ಶಕ್ತಿಯನ್ನುಂಟುಮಾಡುವುದಕ್ಕಾಗಿಯೂ ಕಲ್ಲುಗಳಿಂದ ಜಜ್ಜಿ ಹಿಂಡಿರಿ.

English Translation

(Priests) express the most sweet-flavoured beautiful exhilarating Soma for Indra the thunderer, and for our invigoration.

# ಮೂವತ್ತೊಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪ್ರ ಸೋಮಾಸ ಇತಿ ಷಡೃಚಂ ಸಪ್ತಮಂ ಸೂಕ್ತಂ ರಾಹೂಗಣಸ್ಯ ಗೋತಮಸ್ಯಾರ್ಷಂ ಸೌಮ್ಯಂ' ಪ್ರ ಸೋಮಾಸೋ ಗೋತಮ ಇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು— **ಪ್ರ ಸೋಮಾಸಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಏಳನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ರಹೂಗಣಪುತ್ರನಾದ ಗೋತಮನು ಋಷಿಯು, ಪವಮಾನ ಸೋಮನು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ— **ಪ್ರ ಸೋಮಾಸೋ ಗೋತಮಃ** ಎಂದು ಹೇಳಿರುವುದು ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೩೧

ಮಂಡಲ—೯ । ಅನುವಾಕ—೨ । ಸೂಕ್ತ—೩೧ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೨೧ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ।
ಋಷಿಃ—ಗೋತಮಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

**ಪ್ರ ಸೋಮಾಸಃ ಸ್ವಾಧ್ಯಃ ಪವಮಾನಾಸೋ ಅಕ್ರಮುಃ ।**
**ರಯಿಂ ಕೃಣ್ವಂತಿ ಚೇತನಂ ॥ ೧ ॥**

॥ ಪದಪಾಠಃ ॥

**ಪ್ರ । ಸೋಮಾಸಃ । ಸುऽಆಧ್ಯಃ । ಪವಮಾನಾಸಃ । ಅಕ್ರಮುಃ ।**
**ರಯಿಂ । ಕೃಣ್ವಂತಿ । ಚೇತನಂ ॥ ೧ ॥**

॥ ಸಾಯಣಭಾಷ್ಯಂ ॥

**ಪ್ರಾಕ್ರಮುಃ । ಪ್ರಗಚ್ಛಂತಿ ಕಲಶಂ ಪ್ರತಿ । ಕೇ । ಸೋಮಸಃ ಸೋಮಾಃ । ಕೀದೃಶಾಃ । ಸ್ವಾಧ್ಯಃ ಸುಧ್ಯಾನಾಃ ಸುಕರ್ಮಾಣೋ ವಾ ಪವಮಾನಾಸಃ ಪೂಯಮಾನಾಃ । ತೇ ಚ ಚೇತನಂ ಪ್ರಜ್ಞಾಪನಂ ರಯಿಂ ಧನಂ ಕೃಣ್ವಂತಿ । ಕುರ್ವಂತ್ಯಸ್ಮಾಕಂ ।**

॥ ಪ್ರತಿಪದಾರ್ಥ ॥

**ಸ್ವಾಧ್ಯಃ**—ಉತ್ತಮಕರ್ಮಯುಕ್ತವಾದ । **ಪವಮಾನಾಸಃ**—ಪ್ರವಿಸುತ್ತಿರುವ । **ಸೋಮಾಸಃ**—ಈ ಸೋಮರಸಗಳು । **ಪ್ರ ಅಕ್ರಮುಃ**-ಕಲಶಾಭಿಮುಖವಾಗಿ ಪ್ರವಹಿಸುತ್ತವೆ (ಮತ್ತು ಅವು ಪಾನಮಾಡುವವರಿಗೆ)। **ಚೇತನಂ**—ಪ್ರಜ್ಞೆಯನ್ನೂ । **ರಯಿಂ**—ಧನವನ್ನೂ । **ಕೃಣ್ವಂತಿ**—ಒದಗಿಸಿಕೊಡುತ್ತವೆ.

॥ ಭಾವಾರ್ಥ ॥

ಉತ್ತಮಕರ್ಮಯುಕ್ತವಾದ ಎಂದರೆ ಶ್ರೇಷ್ಠವಾದ ಯಜ್ಞಕರ್ಮಗಳಲ್ಲಿ ಸ್ತುತಿಸಲ್ಪಡುವ, ಪ್ರವಿಸುತ್ತಿರುವ ಈ ಸೋಮರಸಗಳು ದ್ರೋಣಕಲಶಾಭಿಮುಖವಾಗಿ ಹರಿಯುತ್ತವೆ. ಮತ್ತು ಪಾನಮಾಡುವವರಿಗೆ ಪ್ರಜ್ಞೆಯನ್ನೂ ಧನವನ್ನೂ ಒದಗಿಸಿಕೊಡುತ್ತವೆ.

English Translation

The benevolent juices being purified flow forth, they confer intellectual wealth.

॥ ಸಂಹಿತಾಪಾಠಃ ॥

ದಿವಸ್ಪೃಥಿವ್ಯಾ ಅಧಿ ಭವೇಂದೋ ದ್ಯುಮ್ನವರ್ಧನಃ ।
ಭವಾ ವಾಜಾನಾಂ ಪತಿಃ ॥ ೨ ॥

॥ ಪದಪಾಠಃ ॥

ದಿವಃ । ಪೃಥಿವ್ಯಾಃ । ಅಧಿ । ಭವ । ಇಂದೋ ಇತಿ । ದ್ಯುಮ್ನऽವರ್ಧನಃ ।
ಭವ । ವಾಜಾನಾಂ । ಪತಿಃ ॥ ೨ ॥

॥ ಸಾಯಣಭಾಷ್ಯಂ ॥

**ಹೇ ಇಂದೋ ವಾಜಾನಾಮನ್ನಾನಾಂ ಪತಿಃ ಸ್ವಾಮೀ ತ್ವಂ ದಿವೋ ದ್ಯುಲೋಕಸ್ಯ ಪೃಥಿವ್ಯಾ ಭೂಲೋಕಸ್ಯ ದ್ಯುಮ್ನವರ್ಧನೋ ದ್ಯೋತಮಾನಸ್ಯ ಹಿರಣ್ಯಾದಿಲಕ್ಷಣಧನಸ್ಯ ವರ್ಧಯಿತಾ ಭವ। ಅಸ್ಮಾಕಂ ಲೋಕದ್ವಯೇ ಯದ್ದ್ಯುಮ್ನಮಸ್ತಿ ತಸ್ಯ ವರ್ಧಯಿತಾ ಭವಾಸ್ಮಭ್ಯಮಿತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಇಂದೋ**—ಎಲೈ ಸೋಮವೇ (ನೀನು) । **ವಾಜಾನಾಂ**—ಅನ್ನಗಳಿಗೆ । **ಪತಿಃ**—ಸ್ವಾಮಿಯು । **ಭವಃ**—ಆಗಿರುವೆ । **ದಿವಃ**—ಸ್ವರ್ಗಲೋಕದಲ್ಲಿರುವುದೂ । **ಪೃಥಿವ್ಯಾಃ ಅಧಿ**—ಭೂಲೋಕದಲ್ಲಿರುವುದೂ ಆದ । **ದ್ಯುಮ್ನವರ್ಧನಃ**—ಪ್ರಕಾಶಮಾನವಾದ ಹಿರಣ್ಯಾದಿಧನಗಳ ವೃದ್ಧಿಕಾರಕನಾಗಿ । **ಭವ**—ಆಗಿರುವೆ.

॥ ಭಾವಾರ್ಥ ॥

ಎಲೈ ಸೋಮನೇ, ನೀನು ಅನ್ನಾದ್ಯಾಹಾರಗಳಿಗೆ ಸ್ವಾಮಿಯಾಗಿರುವೆ. ಸ್ವರ್ಗ ಮತ್ತು ಭೂಲೋಕಗಳಲ್ಲಿ ಪ್ರಕಾಶಮಾನವಾದ ಎಂದರೆ ಶ್ರೇಷ್ಠವಾದ ಧನಗಳ ವೃದ್ಧಿಕಾರಕನಾಗಿಯೂ ಇರುವೆ.

English Translation

Indu, be (to us) the augmenter of the riches of heaven and earth, be the lord of food.

॥ ಸಂಹಿತಾಪಾಠಃ ॥

ತುಭ್ಯಂ ವಾತಾ ಅಭಿಪ್ರಿಯಸ್ತುಭ್ಯಮರ್ಷಂತಿ ಸಿಂಧವಃ ।

ಸೋಮ ವರ್ಧಂತಿ ತೇ ಮಹಃ ॥ ೩ ॥

॥ ಪದಪಾಠಃ ॥

ತುಭ್ಯಂ । ವಾತಾಃ । ಅಭಿऽಪ್ರಿಯಃ । ತುಭ್ಯಂ । ಅರ್ಷಂತಿ । ಸಿಂಧವಃ ।

ಸೋಮ । ವರ್ಧಂತಿ । ತೇ । ಮಹಃ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತುಭ್ಯಂ ತ್ವದರ್ಥಂ ವಾತಾ ವಾಯವೋऽಭಿಪ್ರಿಯೋऽಭಿತರ್ಪಯಿತಾರೋ ಭವಂತಿ। ತಥಾ ಸಿಂಧವಃ ಸ್ಯಂದಮಾನಾ ನದ್ಯಸ್ತುಭ್ಯಮರ್ಷಂತಿ । ಗಚ್ಛಂತಿ । ಅಭಿಷೂಯಮಾಣಸ್ಯ ತವಾಪ್ಯಾಯನಾಯೈವಂ ಕುರ್ವಂತೀತ್ಯರ್ಥಃ । ತ ಉಭಯೇऽಮೀ ತೇ ತವ ಮಹೋ ಮಹತ್ತ್ವಂ ವರ್ಧಂತಿ । ವರ್ಧಯಂತಿ ।**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ತುಭ್ಯಂ**—ನಿನಗಾಗಿ ಎಂದರೆ ನಿನ್ನ ಪ್ರೀತ್ಯರ್ಥವಾಗಿ । **ವಾತಾಃ**—ಗಾಳಿಗಳು । **ಅಭಿಪ್ರಿಯಃ**—ಪ್ರೀತಿಕಾರಕಗಳಾಗಿರುತ್ತವೆ ಎಂದರೆ ಹಿತಕರವಾಗಿ ಬೀಸುತ್ತವೆ ಹಾಗೆಯೇ । **ತುಭ್ಯಂ**—ನಿನ್ನ ಪ್ರೀತ್ಯರ್ಥವಾಗಿಯೇ । **ಸಿಂಧವಃ**—ಪ್ರವಹಿಸುವ ನದಿಗಳು । **ಅರ್ಷಂತಿ**—ಹರಿಯುತ್ತವೆ (ಈ ವಾಯುಗಳು ಮತ್ತು ನದಿಗಳೂ) । **ತೇ**—ನಿನ್ನ । **ಮಹಃ**—ಮಹತ್ತನ್ನು । **ವರ್ಧಂತಿ**—ಪ್ರಕಾಶಪಡಿಸುತ್ತವೆ

॥ ಭಾವಾರ್ಥ ॥

ಎಲೈ ಸೋಮನೇ, ನಿನ್ನ ಪ್ರೀತ್ಯರ್ಥವಾಗಿಯೇ ಗಾಳಿಗಳು ಹಿತಕರವಾಗಿ ಬೀಸುತ್ತವೆ. ನಿನ್ನ ಪ್ರೀತ್ಯರ್ಥವಾಗಿಯೇ ನದಿಗಳೂ ಪ್ರವಹಿಸುತ್ತವೆ. ಆದ್ದರಿಂದ ಈ ವಾಯುಗಳೂ, ನದಿಗಳೂ ನಿನ್ನ ಮಾಹಾತ್ಮ್ಯೆಯನ್ನು ಚೆನ್ನಾಗಿ ಪ್ರಕಾಶಪಡಿಸುತ್ತವೆ.

## English Translation

For you, Soma, the winds are gracious, for you the rivers flow, they magnify your greatness.

॥ ಸಂಹಿತಾಪಾಠಃ ॥

ಆ ಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮ ವೃಷ್ಣ್ಯಂ ।
ಭವಾ ವಾಜಸ್ಯ ಸಂಗಥೇ ॥ ೪ ॥

॥ ಪದಪಾಠಃ ॥

ಆ । ಪ್ಯಾಯಸ್ವ । ಸಂ । ಏತು । ತೇ । ವಿಶ್ವತಃ । ಸೋಮ । ವೃಷ್ಣ್ಯಂ ।
ಭವ । ವಾಜಸ್ಯ । ಸಂऽಗಥೇ ॥ ೪ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಂ ವಾಯುಭಿರದ್ಭಿಶ್ಚಾ ಪ್ಯಾಯಸ್ವ । ಪ್ರವೃದ್ಧೋ ಭವ । ತೇ ತ್ವಾಂ ವಿಶ್ವತೋ ವೃಷ್ಣ್ಯಂ ವರ್ಷಯೋಗ್ಯಂ ಬಲಂ ಸಮೇತು । ಸಂಗಚ್ಛತಾಂ । ಸಂಗಥೇ ಸಂಗ್ರಾಮೇ ವಾಜಸ್ಯಾನ್ನಸ್ಯ ಪ್ರಾಪಕೋ ಭವ ॥

॥ ಪ್ರತಿಪದಾರ್ಥ ॥

**ಸೋಮ**— ಎಲೈ ಸೋಮನೇ ನೀನು । **ಆ ಪ್ಯಾಯಸ್ವ**—ವಾಯುಗಳಿಂದಲೂ ನದಿಗಳಿಂದಲೂ ತೃಪ್ತಿಯನ್ನು ಹೊಂದು । **ತೇ**—ನಿನ್ನನ್ನು । **ವಿಶ್ವತಃ**—ಎಲ್ಲಾ ಕಡೆಯಲ್ಲಿಯೂ । **ವೃಷ್ಣ್ಯಂ**—ಕಾಮವರ್ಷಕವಾದ ಶಕ್ತಿಯು । **ಸಮೇತು**—ಬಂದು ಸೇರಿಕೊಳ್ಳಲಿ । **ಸಂಗಥೇ**—ಯುದ್ಧದಲ್ಲಿ । **ವಾಜಸ್ಯ**—ಅನ್ನದ । **ಭವ**—ಪ್ರಾಪಕನಾಗಿರು.

॥ ಭಾವಾರ್ಥ ॥

ಎಲೈ ಸೋಮನೇ, ನೀನು ಹಿತಕರವಾಗಿ ಬೀಸುವ ಗಾಳಿಗಳಿಂದಲೂ ಹರಿಯುವ ನದಿಗಳಿಂದಲೂ ತೃಪ್ತಿಯನ್ನು ಹೊಂದು ಅಥವಾ ಅಭಿವೃದ್ಧಿಯನ್ನೈದು. ಸರ್ವರಿಗೂ ಇಷ್ಟಾರ್ಥಗಳನ್ನು ಕೊಡುವ ಶಕ್ತಿಯು ನಿನ್ನಲ್ಲಿ ಎಲ್ಲೆಡೆಯಲ್ಲಿಯೂ ತುಂಬಿರಲಿ. ಯುದ್ಧದಲ್ಲಿ ನಮಗೆ ಅನ್ನವನ್ನು ಸಂಪಾದಿಸಿಕೊಡು.

## English Translation

Be well nourished, Soma; may vigour come to you from all sides, be (the giver) of strength in battle.

॥ ಸಂಹಿತಾಪಾಠಃ ॥

ತುಭ್ಯಂ ಗಾವೋ ಘೃತಂ ಪಯೋ ಬಭ್ರೋ ದುದುಹ್ರೇ ಅಕ್ಷಿತಂ।
ವರ್ಷಿಷ್ಠೇ ಅಧಿ ಸಾನವಿ ॥ ೫ ॥

॥ ಪದಪಾಠಃ ॥

ತುಭ್ಯಂ । ಗಾವಃ । ಘೃತಂ । ಪಯಃ । ಬಭ್ರೋ ಇತಿ । ದುದುಹ್ರೇ । ಅಕ್ಷಿತಂ ।
ವರ್ಷಿಷ್ಠೇ । ಅಧಿ । ಸಾನವಿ ॥ ೫ ॥

॥ ಸಾಯಣಭಾಷ್ಯಂ ॥

ಹೇ ಬಭ್ರೋ ಬಭ್ರುವರ್ಣ ಸೋಮ ತುಭ್ಯಂ ತ್ವದರ್ಥಂ ಗಾವೋ ಘೃತಂ ಪಯಶ್ಚಾಕ್ಷಿತಮಕ್ಷೀಣಂ ದುದುಹ್ರೇ । ದುಹತೇ । ವರ್ಷಿಷ್ಠೇ ಪ್ರವೃದ್ಧೇಽಧಿ ಸಾನವಿ ಸಮುಚ್ಛ್ರಿತೇ ಪ್ರದೇಶೇ ಸ್ಥಿತಾಯ ತುಭ್ಯಂ ॥

॥ ಪ್ರತಿಪದಾರ್ಥ ॥

ಬಭ್ರೋ—ಬಭ್ರುವರ್ಣವುಳ್ಳ (ಹೊಂಬಣ್ಣವುಳ್ಳ) ಎಲೈ ಸೋಮನೇ । ಅಧಿ ಸಾನವಿ—ಎತ್ತರವಾದ ಪರ್ವತಪ್ರದೇಶಗಳಲ್ಲಿ । ವರ್ಷಿಷ್ಠೇ—ಚೆನ್ನಾಗಿ ಬೆಳೆದು ಪ್ರವೃದ್ಧಮಾನನಾಗುವ । ತುಭ್ಯಂ—ನಿನಗಾಗಿ । ಗಾವಃ—ಗೋವುಗಳು । ಘೃತಂ—ತುಪ್ಪವನ್ನೂ । ಪಯಃ—ಹಾಲನ್ನೂ । ಅಕ್ಷಿತಂ—ಬಹಳವಾಗಿ । ದುದುಹ್ರೇ—ಕರೆಯುತ್ತವೆ.

॥ ಭಾವಾರ್ಥ ॥

ಹೊಂಬಣ್ಣದಿಂದ ಪ್ರಕಾಶಿಸುವ ಎಲೈ ಸೋಮನೇ, ಎತ್ತರವಾದ ಪರ್ವತಪ್ರದೇಶಗಳಲ್ಲಿ ಸಮೃದ್ಧವಾಗಿ ಬೆಳೆಯುವ ನಿನಗಾಗಿ ಗೋವುಗಳು ಹಾಲನ್ನೂ, ಘೃತವನ್ನೂ ಬಹಳವಾಗಿ ಕರೆಯುತ್ತವೆ.

## English Translation

Tawny-tinted (Soma), the cows yield butter and milk inexhaustible for you (set) on the highest summit.

॥ ವಿಶೇಷವಿಷಯಗಳು ॥

ಎತ್ತರವಾದ ಪರ್ವತಪ್ರದೇಶಗಳಲ್ಲಿ ಬೆಳೆಯುವ ಸೋಮಲತೆಗಳು ಬಹಳ ಶ್ರೇಷ್ಠವಾದವೆಂದೂ ಹೆಚ್ಚಾಗಿಯೂ ರುಚಿಕರವಾಗಿರುವ ರಸವನ್ನು ಹಿಂಡುವುದಾಗಿಯೂ ಇರುವುದೆಂದೂ ಪ್ರಸಿದ್ಧಿಯಾಗಿದೆ. ಮತ್ತು ಸೋಮರಸದೊಡನೆ ಮಿಶ್ರಿತವಾಗುವ ಹಾಲು, ಮೊಸರು, ಹೋಮಕ್ಕಾಗಿ ಘೃತ ಇವುಗಳನ್ನು ಗೋವುಗಳು ಒದಗಿಸುತ್ತವೆ ಎಂಬ ವಿಷಯವನ್ನು ಇಲ್ಲಿ ವರ್ಣಿಸಲಾಗಿದೆ.

॥ ಸಂಹಿತಾಪಾಠಃ ॥

ಸ್ವಾಯುಧಸ್ಯ ತೇ ಸತೋ ಭುವನಸ್ಯ ಪತೇ ವಯಂ ।

ಇಂದೋ ಸಖಿತ್ವಮುಶ್ಮಸಿ ॥ ೬ ॥

॥ ಪದಪಾಠಃ ॥

ಸುऽಆಯುಧಸ್ಯ । ತೇ । ಸತಃ । ಭುವನಸ್ಯ । ಪತೇ । ವಯಂ ।

ಇಂದೋ ಇತಿ । ಸಖಿऽತ್ವಂ । ಉಶ್ಮಸಿ ॥ ೬ ॥

॥ ಸಾಯಣಭಾಷ್ಯಂ ॥

ಹೇ ಭುವನಸ್ಯ ಭೂತಜಾತಸ್ಯ ಪತೇ ಸ್ವಾಮಿನ್ಪಾಲಕ ಸೋಮ । ಸೋಮಸ್ಯ ಜಗದಾಪ್ಯಾಯಿಕತ್ವಂ ತತ್ಸ್ವಾಮಿತ್ವಂ । ಹೇ ಇಂದೋ ಸೋಮ ವಯಮನುಷ್ಠಾತಾರಃ ಸ್ವಾಯುಧಸ್ಯ ತೇ ತವ ಸತಃ ಸಖಿತ್ವಮುಶ್ಮಸಿ । ಕಾಮಯಾಮಹೇ ॥

॥ ಪ್ರತಿಪದಾರ್ಥ ॥

**ಭುವನಸ್ಯ ಸತಃ**—ಲೋಕದ ಸಮಸ್ತ ಪ್ರಾಣಿಗಳಿಗೂ । **ಪತೇ**—ಸ್ವಾಮಿಯಾದ । **ಇಂದೋ**—ಎಲೈ ಸೋಮನೇ । **ವಯಂ**—ಯಜ್ಞಾನುಷ್ಠಾತೃಗಳಾದ ನಾವು । **ಸ್ವಾಯುಧಸ್ಯ**—ಉತ್ತಮವಾದ ಆಯುಧಸಹಿತನಾದ । **ತೇ**—ನಿನ್ನ । **ಸಖಿತ್ವಂ**—ಸ್ನೇಹವನ್ನು । **ಉಶ್ಮಸಿ**—ಅಪೇಕ್ಷಿಸುತ್ತೇವೆ.

॥ ಭಾವಾರ್ಥ ॥

ಲೋಕದಲ್ಲಿರುವ ಸಮಸ್ತ ಭೂತಜಾತಕ್ಕೆ ಸ್ವಾಮಿಯಾದ ಎಲೈ ಸೋಮನೇ ನಿನ್ನನ್ನು ಸ್ತುತಿಸುತ್ತಿರುವ ನಾವು ಉತ್ತಮ ಆಯುಧೋಪೇತನಾದ ನಿನ್ನ ಸ್ನೇಹವನ್ನು ಅಪೇಕ್ಷಿಸುತ್ತೇವೆ.

## English Translation

Indu, lord of beings, we desire the friendship of you, the well-armed.

॥ ವಿಶೇಷವಿಷಯಗಳು ॥

ಸ್ವಾಯುಧಸ್ಯ—ಇಲ್ಲಿ ಸೋಮದೇವನ ಉತ್ತಮವಾದ ಆಯುಧವು ಯಾವುದು ಇದರ ವಿವರವೇನು ಎಂಬುದು ಸ್ಪಷ್ಟವಾಗಿಲ್ಲ.

## ಮೂವತ್ತೆರಡನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪ್ರ ಸೋಮಾಸ ಇತಿ ಷಡೃಚಮಷ್ಟಮಂ ಸೂಕ್ತಮಾತ್ರೇಯಸ್ಯ ಶ್ಯಾವಾಶ್ವಸ್ಯಾರ್ಷಂ ಗಾಯತ್ರಂ ಸೌಮ್ಯಂ ।ಅನುಕ್ರಮ್ಯತೇ ಚ । ಪ್ರ ಸೋಮಾಸಃ ಶ್ಯಾವಾಶ್ವ ಇತಿ ॥ ಗತೋ ವಿನಿಯೋಗಃ ॥

ಅನುವಾದವು—ಪ್ರ ಸೋಮಾಸಃ ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಎಂಟನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಅತ್ರಿಗೋತ್ರದ ಶ್ಯಾವಾಶ್ವನೆಂಬುವನು ಋಷಿಯು, ಪವಮಾನ ಸೋಮನು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—ಪ್ರ ಸೋಮಾಸಃ ಶ್ಯಾವಾಶ್ವಃ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೩೨

ಮಂಡಲ—೯ । ಅನುವಾಕ—೨। ಸೂಕ್ತ—೩೨ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೨೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಶ್ಯಾವಾಶ್ವಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರ ಸೋಮಾಸೋ ಮದಚ್ಯುತಃ ಶ್ರವಸೇ ನೋ ಮಘೋನಃ ।
ಸುತಾ ವಿದಥೇ ಅಕ್ರಮುಃ ॥ ೧ ॥

ಪದಪಾಠಃ

ಪ್ರ । ಸೋಮಾಸಃ । ಮದಽಚ್ಯುತಃ । ಶ್ರವಸೇ । ನಃ । ಮಘೋನಃ ।
ಸುತಾಃ। ವಿದಥೇ। ಅಕ್ರಮುಃ ॥ ೧ ॥

॥ ಸಾಯಣಭಾಷ್ಯಂ ॥

ಸೋಮಾಸಃ ಸೋಮಾ ಮದಚ್ಯುತೋ ಮದಸ್ರಾವಿಣಃ ಸುತಾ ಅಭಿಷುತಾಃ ಸಂತೋ ವಿದಥೇ ಯಜ್ಞೇ ಮಘೋನೋ ಹವಿಷ್ಮತೋ ಮಮ ಶ್ರವಸೇಽನ್ನಾಯ ಕೀರ್ತಯೇ ವಾ ಪ್ರಾಕ್ರಮುಃ । ಪ್ರಗಚ್ಛಂತಿ ॥

॥ ಪ್ರತಿಪದಾರ್ಥ ॥

ಮದಚ್ಯುತಃ—ಮದಕರವಾದ ರಸವನ್ನು ಸ್ರವಿಸುತ್ತಿರುವ । ಸೋಮಾಸಃ—ಈ ಸೋಮರಸಗಳು । ಸುತಾಃ—ಹಿಂಡಲ್ಪಟ್ಟು । ವಿದಥೇ—ಯಜ್ಞದಲ್ಲಿ । ಮಘೋನಃ—ದೇವತೆಗಳಿಗೆ ಅರ್ಪಿಸಲು ಹವಿಸ್ಸನ್ನು ಸಿದ್ಧ ಪಡಿಸಿಕೊಂಡಿರುವ ನನಗೆ । ಶ್ರವಸೇ—ಅನ್ನವನ್ನು ಅಥವಾ ಕೀರ್ತಿಯನ್ನು ಒದಗಿಸಿಕೊಡುವುದಕ್ಕಾಗಿ । ಪ್ರ ಅಕ್ರಮುಃ—ಪ್ರವಹಿಸುತ್ತಿರುತ್ತವೆ ।

॥ ಭಾವಾರ್ಥ ॥

ಮದಕರವಾದ ರಸವನ್ನು ಸ್ರವಿಸುತ್ತಿರುವ ಈ ಸೋಮರಸಗಳು ಕಲ್ಲುಗಳಿಂದ ಜಜ್ಜಿ ಹಿಂಡಲ್ಪಟ್ಟು ಯಜ್ಞದಲ್ಲಿ ದೇವತೆಗಳಿಗೆ ಅರ್ಪಿಸಲು ಹವಿಸ್ಸನ್ನು ಸಿದ್ಧಪಡಿಸಿಕೊಂಡಿರುವ ನನಗೆ ಅನ್ನವನ್ನು ಅಥವಾ ಕೀರ್ತಿಯನ್ನು ಗಳಿಸಿಕೊಡುವುದಕ್ಕಾಗಿ ಹರಿಯುತ್ತಿರುತ್ತವೆ

English Translation

The Soma juices, diffusing exhilaration, rush forth effused at the sacrifice for the sustenance of us abounding in oblations

॥ ಸಂಹಿತಾಪಾಠಃ ॥

ಆದೀಂ ತ್ರಿತಸ್ಯ ಯೋಷಣೋ ಹರಿಂ ಹಿನ್ವಂತ್ಯದ್ರಿಭಿಃ ।
ಇಂದುಮಿಂದ್ರಾಯ ಪೀತಯೇ ॥ ೨ ॥

॥ ಪದಪಾಠಃ ॥

ಆತ್ । ಈಂ । ತ್ರಿತಸ್ಯ । ಯೋಷಣಃ । ಹರಿಂ । ಹಿನ್ವಂತಿ । ಅದ್ರಿಽಭಿಃ ।
ಇಂದುಂ । ಇಂದ್ರಾಯ । ಪೀತಯೇ ॥ ೨ ॥

॥ ಸಾಯಣಭಾಷ್ಯಂ ॥

**ಆದಪಿ ಚೇಮೇನಂ ಹರಿಂ ಹರಿತವರ್ಣಂ ಸೋಮಂ ತ್ರಿತಸ್ಯರ್ಷೇರ್ಯೋಷಣೋಽಂಗುಲಯೋಽದ್ರಿಭಿರ್ಗ್ರಾವಭಿರ್ಹಿನ್ವಂತಿ । ಪ್ರೇರಯಂತಿ । ಕಿಮರ್ಥಂ । ಇಂದುಂ ದೀಪ್ತಂ ಸೋಮಮಿಂದ್ರಾಯೇಂದ್ರಸ್ಯ ಪೀತಯೇ ಪಾನಾಯ ॥**

॥ ಪ್ರತಿಪದಾರ್ಥ ॥

**ಆತ್**—ಮತ್ತು । **ಹರಿಂ**—ಹರಿತವರ್ಣದಿಂದ ಶೋಭಿಸುವ । **ಈಂ ಏನಂ**—ಈ ಸೋಮವನ್ನು । **ತ್ರಿತಸ್ಯ**—ತ್ರಿತನೆಂಬ ಋಷಿಯ । **ಯೋಷಣಃ**—ಬೆರಳುಗಳು । **ಅದ್ರಿಭಿಃ**—ಕಲ್ಲುಗಳಿಂದ ಜಜ್ಜಿ । **ಇಂದ್ರಾಯ**—ಇಂದ್ರನ । **ಪೀತಯೇ**—ಪಾನಾರ್ಥವಾಗಿ । **ಇಂದುಂ**—ಪ್ರಕಾಶಮಾನವಾದ ಸೋಮರಸವನ್ನು । **ಹಿನ್ವಂತಿ**—ಸ್ರವಿಸುವಂತೆ ಪ್ರೇರಿಸುತ್ತವೆ ।

॥ ಭಾವಾರ್ಥ ॥

ಮತ್ತು ಹೊಂಬಣ್ಣದಿಂದ ಶೋಭಿಸುವ ಈ ಸೋಮಲತೆಯನ್ನು ತ್ರಿತನೆಂಬ ಋಷಿಯ ಬೆರಳುಗಳು ಕಲ್ಲುಗಳಿಂದ ಜಜ್ಜಿ ಇಂದ್ರನ ಪಾನಾರ್ಥವಾಗಿ ಪ್ರಕಾಶಮಾನವಾದ ಸೋಮರಸವನ್ನು ಲತೆಯಿಂದ ಹೊರಸೂಸಿ ಸ್ರವಿಸುವಂತೆ ಪ್ರೇರಿಸುತ್ತವೆ.

English Translation

And the fingers of Trita express this green-tinted Soma with the stones for Indra's drinking.

॥ ಸಂಹಿತಾಪಾಠಃ ॥

ಆದೀಂ ಹಂಸೋ ಯಥಾ ಗಣಂ ವಿಶ್ವಸ್ಯಾವೀವಶನ್ಮತಿಂ ।
ಅತ್ಯೋ ನ ಗೋಭಿರಜ್ಯತೇ ॥ ೩ ॥

॥ ಪದಪಾಠಃ ॥

ಆತ್ । ಈಂ । ಹಂಸಃ । ಯಥಾ । ಗಣಂ । ವಿಶ್ವಸ್ಯ । ಅವೀವಶತ್ । ಮತಿಂ ।
ಅತ್ಯಃ । ನ । ಗೋಭಿಃ । ಅಜ್ಯತೇ ॥ ೩ ॥

॥ ಸಾಯಣಭಾಷ್ಯಂ ॥

ಆದಪಿ ಚೇಮಯಂ ಸೋಮೋ ಹಂಸೋ ಯಥಾ ಗಣಂ ಜನಸಂಘಂ ಸ್ವಗತಿವಿಶೇಷೇಣ ಸ್ವನೇನ ವಾ ಪ್ರವಿಶತಿ ತದ್ವದ್ವಿಶ್ವಸ್ಯ ಸರ್ವಸ್ಯ ಸ್ತೋತೃಜನಸ್ಯ ಮತಿಂ ಸ್ತುತಿಂ ಬುದ್ಧಿಂ ವಾವೀವಶತ್ । ವಶಂ ನಯತಿ । ಸ ಚ ಸೋಮೋಽತ್ಯೋ ನಾಶ್ವ ಇವ ಗೋಭಿರ್ಗವ್ಯೈರುದಕೈರ್ವಾಜ್ಯತೇ । ಸಿಚ್ಯತೇ । ಸ್ನಿಗ್ಧೀಕ್ರಿಯತೇ ॥

॥ ಪ್ರತಿಪದಾರ್ಥ ॥

**ಆತ್**—ಮತ್ತು । **ಹಂಸಃ**—ಹಂಸಪಕ್ಷಿಯು । **ಗಣಂ**—ಜನಸಂಘವನ್ನು (ಅಥವಾ ನೀರನ್ನು) । **ಯಥಾ**—ಯಾವ ಪ್ರಕಾರವಾಗಿ ಹರ್ಷಧ್ವನಿಯಿಂದ ಪ್ರವೇಶಿಸುವುದೋ ಅದರಂತೆ । **ಈಂ**—ಈ ಸೋಮವು । **ಮತಿಂ**—ಜನರ ಬುದ್ಧಿಯನ್ನು । **ಅವೀವಶತ್**—ಪ್ರವೇಶಿಸಿ ತನ್ನ ವಶವಮಾಡಿಕೊಳ್ಳುವುದು । **ಅತ್ಯಃ ನ**—ಅಶ್ವದಂತೆ । **ಗೋಭಿಃ**—ಗೋವಿಕಾರವಾದ ಹಾಲಿನೊಂದಿಗೆ ಅಥವಾ ಉದಕದೊಡನೆ । **ಅಜ್ಯತೇ**— ಸೇರಿಸಲ್ಪಡುವುದು ।

॥ ಭಾವಾರ್ಥ ॥

ಮತ್ತು ಹಂಸಪಕ್ಷಿಯು ಯಾವರೀತಿ ಸಂತೋಷದಿಂದ ನೀರನ್ನು ಪ್ರವೇಶಿಸುವುದೋ ಅದರಂತೆ ಸೋಮರಸವೂ ಸಹ ಮನುಷ್ಯರನ್ನು ಪ್ರವೇಶಿಸಿ ಅವರ ಬುದ್ಧಿಯನ್ನು ತನ್ನ ವಶಪಡಿಸಿಕೊಳ್ಳುವುದು ಮತ್ತು ಅಶ್ವದಂತೆ ವೇಗವಾಗಿ ಹಾಲಿನೊಡನೆ ಅಥವಾ ಉದಕದೊಡನೆ ಮಿಶ್ರಿತವಾಗುವುದು.

English Translation

And like a swan entering its own flock, the Soma excites the praise of all,—like a horse, it is bathed with milk.

॥ ವಿಶೇಷವಿಷಯಗಳು ॥

ಇಲ್ಲಿ ಭಾಷ್ಯಕಾರರು ಗಣಂ ಎಂಬ ಶಬ್ದಕ್ಕೆ ಜನಸಂಘವೆಂದು ಅರ್ಥಮಾಡಿದಾರೆ. ಹಂಸಪಕ್ಷಿಯು ಜನಸಂಘವನ್ನು ಪ್ರವೇಶಿಸುವಾಗ ಅದಕ್ಕೆ ಹೇಗೆ ಸಂತೋಷವಾಗುವುದು ಅಥವಾ ಹಂಸಪಕ್ಷಿಯನ್ನು ನೋಡಿ ಜನರಿಗೆ ಏಕೆ

ಸಂತೋಷವಾಗುವುದು ಎಂಬ ವಿಷಯವು ಸ್ಪಷ್ಟವಾಗಿಲ್ಲ. ಮತ್ತು **ಅತ್ಯಃ** ಎಂಬ ಅಶ್ವವನ್ನು ಸೂಚಿಸುವ ಶಬ್ದದ ಪ್ರಯೋಗಕ್ಕೂ ಇಲ್ಲಿ ಉಚಿತಾರ್ಥವಿದ್ದಂತೆ ಕಂಡುಬರುವುದಿಲ್ಲ. ಒಟ್ಟಿನಲ್ಲಿ ಈ ಋಕ್ಕಿನ ಅರ್ಥವಿಷಯದಲ್ಲಿ ಋಷಿಯ ಆಶಯವೇನೆಂಬುದು ಸ್ಪಷ್ಟವಾಗಿಲ್ಲ.

॥ ಸಂಹಿತಾಪಾಠಃ ॥

ಉಭೇ ಸೋಮಾವಚಾಕಶನ್ಮೃಗೋ ನ ತಕ್ತೋ ಅರ್ಷಸಿ ।
ಸೀದನ್ನೃತಸ್ಯ ಯೋನಿಮಾ ॥ ೪ ॥

॥ ಪದಪಾಠಃ ॥

ಉಭೇ ಇತಿ । ಸೋಮ । ಅವऽಚಾಕಶತ್ । ಮೃಗಃ । ನ । ತಕ್ತಃ । ಅರ್ಷಸಿ ।
ಸೀದನ್ । ಋತಸ್ಯ । ಯೋನಿಂ । ಆ । ॥ ೪ ॥

॥ ಸಾಯಣಭಾಷ್ಯಂ ॥

**ಹೇ ಸೋಮ ಉಭೇ ದ್ಯಾವಾಪೃಥಿವ್ಯಾವವಚಾಕಶತ್ । ಪಶ್ಯತಿಕರ್ಮೇದಂ । ಪಶ್ಯನ್ಮೃಗೋ ನ ಮೃಗ ಇವ ತಕ್ತೋ ಗವ್ಯೈಃ ಪಯಆದಿಭಿರ್ಮಿಶ್ರಿತಃ ಸನ್ । ದಧ್ನಾ ತನಕ್ತಿ । ತೈ. ಸಂ. ೨-೫-೩-೫. । ಇತ್ಯಾದೌ ತಥಾ ದೃಷ್ಟತ್ವಾತ್ । ಅರ್ಷಸಿ । ಗಚ್ಛಸಿ ಚ । ಕಿಂ ಕುರ್ವನ್ । ಋತಸ್ಯ ಯಜ್ಞಸ್ಯ ಯೋನಿಂ ಸ್ಥಾನಮಾ ಸೀದನ್ನಾಶ್ರಯನ್ । ಯಜ್ಞಸಾಧನಾಯ ಗಚ್ಛಸೀತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ ನೀನು । **ಉಭೇ**—ದ್ಯಾವಾಪೃಥಿವಿಗಳನ್ನು । **ಅವಚಾಕಶತ್**—ಅವಲೋಕಿಸುತ್ತಾ । **ಋತಸ್ಯ**—ಯಜ್ಞದ । **ಯೋನಿಂ**—ಸ್ಥಾನವನ್ನು । **ಆ ಸೀದನ್**—ಆಶ್ರಯಿಸಿ ಕುಳಿತುಕೊಳ್ಳುವುದಕ್ಕಾಗಿ । **ಮೃಗೇನ**—ಜಿಂಕೆಯು ನೀರನ್ನು ಕುಡಿಯುವಂತೆ । **ತಕ್ತಃ**—ಕ್ಷೀರಾದಿಶ್ರಯಣ ದ್ರವ್ಯಗಳಿಂದ ಮಿಶ್ರಿತನಾಗಿ। **ಅರ್ಷಸಿ**—ಯಜ್ಞಾಭಿಮುಖವಾಗಿ ಹೋಗುತ್ತೀಯೆ ।

॥ ಭಾವಾರ್ಥ ॥

ಎಲೈ ಸೋಮದೇವನೇ, ನೀನು ದ್ಯಾವಾಪೃಥಿವಿಗಳನ್ನು ನೋಡುತ್ತಾ ಯಜ್ಞದಲ್ಲಿರುವ ನಿನ್ನ ಸ್ವಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕಾಗಿ ಜಿಂಕೆಯು (ಮೃಗವು) ನೀರನ್ನು ಕುಡಿಯುವಂತೆ ಕ್ಷೀರಾದಿಶ್ರಯಣ ದ್ರವ್ಯಗಳಿಂದ ಮಿಶ್ರಿತನಾಗಿ ಯಜ್ಞಾಭಿಮುಖವಾಗಿ ಪ್ರವಹಿಸಿ ಹೋಗುತ್ತೀಯೆ.

## English Translation

Beholding both worlds, Soma, you hurry, swift as a deer, taking your seat on the place of sacrifice.

॥ ಸಂಹಿತಾಪಾಠಃ ॥

ಅಭಿ ಗಾವೋ ಅನೂಷತ ಯೋಷಾ ಜಾರಮಿವ ಪ್ರಿಯಂ ।

ಅಗನ್ನಾಜಿಂ ಯಥಾ ಹಿತಂ ॥ ೫ ॥

॥ ಪದಪಾಠಃ ॥

ಅಭಿ । ಗಾವಃ । ಅನೂಷತ । ಯೋಷಾ । ಜಾರಂऽಇವ । ಪ್ರಿಯಂ ।

ಅಗನ್ । ಆಜಿಂ । ಯಥಾ । ಹಿತಂ ॥ ೫ ॥

॥ ಸಾಯಣಭಾಷ್ಯಂ ॥

ಹೇ ಸೋಮ ತ್ವಾಂ ಗಾವಃ ಶಬ್ದಾ ಅಭ್ಯನೂಷತ । ಅಭಿಷ್ಟುವಂತಿ । ಯೋಷಾ ಪ್ರಿಯಂ ಜಾರಮಿವ । ಸಾ ಯಥಾ ತಂ ಸ್ತೌತಿ ತದ್ವತ್ । ಸ ಸೋಮ ಆಜಿಂ ಗಂತವ್ಯಂ ಹಿತಂ ಮಿತ್ರಮಿವ ತಂ ಯಥಾನ್ಯೋऽಗನ್ ಸ್ವಹಿತಾಯ ಗಚ್ಛತಿ ತದ್ವತ್ । ಅಥವಾ ಹಿತಂ ಧನಪ್ರಾಪಕತ್ವೇನ ಹಿತಕರಮಾಜಿಂ ಶೂರ ಇವ । ಅಯಮಾಗಚ್ಛತಿ ಪಾತ್ರಂ ॥

॥ ಪ್ರತಿಪದಾರ್ಥ ॥

(ಎಲೈ ಸೋಮನೇ ನಿನ್ನನ್ನು) **ಯೋಷಾ**—ಯುವತಿಯು । **ಪ್ರಿಯಂ ಜಾರಮಿವ**—ತನ್ನನ್ನು ಪ್ರೀತಿಸುತ್ತಿರುವ ಪುರುಷನೊಡನೆ ಮಾತನಾಡುವಂತೆ । **ಗಾವಃ**—ಸ್ತುತಿವಾಕ್ಯಗಳು । **ಅಭಿ ಅನೂಷತ**—ನಿನ್ನನ್ನು ಸ್ತುತಿಸುತ್ತವೆ । **ಆಜಿಂ**—ತಾನು ನೋಡಬೇಕೆಂದು ಹೊರಟಿರುವ । **ಹಿತಂ**—ಸ್ನೇಹಿತನ ಬಳಿಗೆ । **ಯಥಾ**—ಯಾವ ಪ್ರಕಾರವಾಗಿ । **ಅಗನ್**—ಹೋಗುವನೋ । [**ಅಥವಾ ಹಿತಂ**—ತನಗೆ ಹಿತಕರವಾದ । **ಆಜಿಂ**—ಯುದ್ಧವನ್ನುದ್ದೇಶಿಸಿ । (**ಶೂರಃ**—ಶೂರನು) । **ಯಥಾ**—ಯಾವ ಪ್ರಕಾರವಾಗಿ । **ಅಗನ್**—ಹೋಗುವನೋ] ಅದರಂತೆ । (**ಸಃ**—ಈ ಸೋಮವು) । **ಆಜಿಂ**—ಗನ್ತವ್ಯವಾದ । **ಹಿತಂ**—ಹಿತಕರವಾದ ಪಾತ್ರೆಯ ಬಳಿಗೆ । **ಅಗನ್**—ಹರಿದುಹೋಗುತ್ತದೆ ।

॥ ಭಾವಾರ್ಥ ॥

ಎಲೈ ಸೋಮವೇ, ಯುವತಿಯು ತನ್ನನ್ನು ಪ್ರೀತಿಸುವ ಯುವಕನೊಡನೆ ಹಿತಕರವಾದ ಮಾತುಗಳನ್ನಾಡುವಂತೆ ಸ್ತುತಿವಾಕ್ಯಗಳು ನಿನ್ನನ್ನು ಆದರದಿಂದ ಸ್ತುತಿಸುತ್ತವೆ. ಪ್ರಿಯಮಿತ್ರನ ಬಳಿಗೆ ಪುರುಷನು ಹೇಗೆ ಆತುರದಿಂದ ಹೋಗುವನೋ ಅಥವಾ ಯುದ್ಧ ಪ್ರಿಯನಾದ ಶೂರನು ಯುದ್ಧಾಭಿಮುಖವಾಗಿ ಹೇಗೆ ಆತುರದಿಂದ ಹೋಗುವನೋ ಅದರಂತೆ ಈ ಸೋಮವು ತನ್ನ ಸ್ವಕೀಯಸ್ಥಾನವಾದ ಪಾತ್ರೆಯಲ್ಲಿ ಬಂದು ಸೇರಲು ಆತುರವಾಗಿ ಹರಿದುಹೋಗುತ್ತದೆ.

## English Translation

Praises commend you (Soma) as a woman praises a dear lover; (you hasten to the vessel) as a hero hastens to the welcome contest.

॥ ಸಂಹಿತಾಪಾಠಃ ॥

ಅ॒ಸ್ಮೇ ಧೇ᳚ಹಿ ದ್ಯು॒ಮದ್ಯಶೋ᳚ ಮ॒ಘವ॑ದ್ಭ್ಯಶ್ಚ॒ ಮಹ್ಯಂ᳚ ಚ ।

ಸ॒ನಿಂ ಮೇ॒ಧಾಮು॒ತ ಶ್ರವಃ॑ ॥ ೬ ॥

॥ ಪದಪಾಠಃ ॥

ಅ॒ಸ್ಮೇ ಇತಿ॑ । ಧೇ॒ಹಿ॒ । ದ್ಯು॒ಽಮತ್ । ಯಶಃ॑ । ಮ॒ಘವ॑ತ್ಽಭ್ಯಃ । ಚ॒ । ಮಹ್ಯಂ᳚ । ಚ॒ ।

ಸ॒ನಿಂ । ಮೇ॒ಧಾಂ । ಉ॒ತ । ಶ್ರವಃ॑ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸೋಮ ಅಸ್ಮೇ ಅಸ್ಮಭ್ಯಂ ದ್ಯುಮದ್ದೀಪ್ತಿಮದ್ಯಶೋಽನ್ನಂ ಧೇಹಿ । ದೇಹಿ । ಕೀದೃಶೇಭ್ಯೋಽಸ್ಮಭ್ಯಂ । ಮಘವದ್ಭ್ಯಶ್ಚ ಹವಿರ್ಲಕ್ಷಣಾನ್ನವದ್ಭ್ಯಶ್ಚ ಮಹ್ಯಂ ಚ ಸ್ತುತಿಕರ್ತ್ರೇ ಚ । ಅಥವಾ ಮಹ್ಯಮಸ್ಮಭ್ಯಮಿತ್ಯರ್ಥಃ । ಅಸ್ಮೇ ಮಘವದ್ಭ್ಯಶ್ಚ ಮಹ್ಯಂ ಚೇತಿ ತೇಷಾಮೇವಾಶಂಸನಾಭೇದಾದುಭಯತ್ರ ಚ ಶಬ್ದೋ ಯುಕ್ತಃ । ಕಿಂ ಚ ಸನಿಂ ಧನಂ ಮೇಧಾಂ ಪ್ರಜ್ಞಾಮುತಾಪಿ ಚ ಶ್ರವಃ ಕೀರ್ತಿಂ ಚ ಧೇಹಿ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ಮಘವದ್ಭ್ಯಶ್ಚ**—ನಿನಗೆ ಅರ್ಪಿಸುವುದಕ್ಕಾಗಿ ಹವಿರ್ಲಕ್ಷಣೋಪೇತವಾದ ಅನ್ನವನ್ನು ಸಿದ್ಧಪಡಿಸಿಕೊಂಡಿರುವ । **ಅಸ್ಮೇ**—ನಮಗೆ । **ಮಹ್ಯಂ ಚ**—ಸ್ತುತಿಕರ್ತನಾದ ನನಗೂ । **ದ್ಯುಮತ್**—ಕಾಂತಿಯುಕ್ತವಾದ ಎಂದರೆ ಶ್ರೇಷ್ಠವಾದ । **ಯಶಃ**—ಅನ್ನವನ್ನೂ । **ಸನಿಂ**—ಧನವನ್ನೂ । **ಮೇಧಾಂ**—ಪ್ರಜ್ಞೆಯನ್ನೂ । **ಉತ**—ಮತ್ತು । **ಶ್ರವಃ**—ಕೀರ್ತಿಯನ್ನೂ । **ಧೇಹಿ**—ಕೊಡು.

॥ ಭಾವಾರ್ಥ ॥

ಎಲೈ ಸೋಮದೇವನೇ, ನಿನಗೆ ಅರ್ಪಿಸುವುದಕ್ಕಾಗಿ ಹವಿಸ್ಸನ್ನು ಸಿದ್ಧಪಡಿಸಿಟ್ಟುಕೊಂಡಿರುವ ನಮಗೂ ಸ್ತುತಿಕರ್ತನಾದ ಶ್ಯಾವಾಶ್ವನೆಂಬ ಹೆಸರಿನ ನನಗೂ ಸಹ ಶ್ರೇಷ್ಠವಾದ ಅನ್ನವನ್ನೂ, ಧನವನ್ನೂ, ಪ್ರಜ್ಞೆಯನ್ನೂ ಮತ್ತು ಕೀರ್ತಿಯನ್ನು ಕೊಡು.

English Translation

Give to us who are affluent (in oblations) and also to me, brilliant fame, wealth, intelligence, and glory.

# ಮೂವತ್ತಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಪ್ರ ಸೋಮಾಸ ಇತಿ ಷಡೃಚಂ ನವಮಂ ಸೂಕ್ತಂ ತ್ರಿತಸ್ಯಾರ್ಷಂ ಗಾಯತ್ರಂ ಪವಮಾನ-ಸೋಮದೇವತಾಕಂ । ಪ್ರ ಸೋಮಾಸಸ್ತ್ರಿತ ಇತ್ಯನುಕ್ರಾಂತಂ । ಗತೋ ವಿನಿಯೋಗಃ ॥

ಅನುವಾದವು— **ಪ್ರ ಸೋಮಾಸಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಒಂಭತ್ತನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ತ್ರಿತನೆಂಬುವನು ಋಷಿಯು, ಪವಮಾನಸೋಮನು ದೇವತೆಯು, ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ— **ಪ್ರ ಸೋಮಾಸಸ್ತ್ರಿತಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

## ಸೂಕ್ತ—೩೩

ಮಂಡಲ—೯ । ಅನುವಾಕ—೨ । ಸೂಕ್ತ—೩೩ ।
ಅಷ್ಟಕ—೬ । ಅಧ್ಯಾಯ—೮ । ವರ್ಗ—೨೩ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ।
ಋಷಿಃ—ತ್ರಿತಃ ।
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರ ಸೋಮಾಸೋ ವಿಪಶ್ಚಿತೋಽಪಾಂ ನ ಯಂತ್ಯೂರ್ಮಯಃ ।
ವನಾನಿ ಮಹಿಷಾ ಇವ ॥ ೧ ॥

॥ ಪದಪಾಠಃ ॥

ಪ್ರ । ಸೋಮಾಸಃ । ವಿಪಃಽಚಿತಃ । ಅಪಾಂ । ನ । ಯಂತಿ । ಊರ್ಮಯಃ ।
ವನಾನಿ । ಮಹಿಷಾಃಽಇವ ॥ ೧ ॥

॥ ಸಾಯಣಭಾಷ್ಯಂ ॥

ವಿಪಶ್ಚಿತೋ ಮೇಧಾವಿನಃ ಸೋಮಾಸಃ ಸೋಮಾಃ ಪ್ರ ಯಂತಿ । ಪ್ರಗಚ್ಛಂತಿ ಪಾತ್ರಾಣಿ ಪ್ರತಿ । ಕಿಮಿವ । ಅಪಾಮೂರ್ಮಯೋ ನ ಯಥಾ ಸಂತತಮುದ್ಭವಂತಿ ತದ್ವತ್ । ಬಾಹುಲ್ಯೇಽಯಂ ದೃಷ್ಟಾಂತೋ ದರ್ಶಿತೋ ಗಮನೇ ದೃಷ್ಟಾಂತಾಂತರಮಭಿಧೀಯತೇ । ವನಾನಿ ಮಹಿಷಾಃ ಪ್ರವೃದ್ಧಾ ಮೃಗಾ ಇವ । ಅಥವಾ ಸ್ವಾಶ್ರಯಾತ್ಪ್ರಪತನೇ ಪ್ರಥಮೋ ದೃಷ್ಟಾಂತೋ ದ್ವಿತೀಯಸ್ತು ದಶಾಪವಿತ್ರಾ-ಪಥಃ ಪ್ರವೇಶೇ ॥

॥ ಪ್ರತಿಪದಾರ್ಥ ॥

**ವಿಪಶ್ಚಿತಃ**—ಮೇಧಾವಿಗಳಾದ । **ಸೋಮಾಸಃ**—ಈ ಸೋಮರಸಗಳು । **ಅಪಾಂ**—ಉದಕಗಳಲ್ಲಿ ಮೇಲಕ್ಕೇಳುತ್ತಿರುವ । **ಊರ್ಮಯಃ ನ**—ಅಲೆಗಳಂತೆಯೂ । **ಮಹಿಷಾ ಇವ**—ಕಾಡುಕೋಣಗಳು । **ವನಾನಿ**—ಕಾಡುಗಳಲ್ಲಿ ವೇಗವಾಗಿ ಸಂಚರಿಸುವಂತೆಯೂ । **ಪ್ರ ಯಂತಿ**—ಪಾತ್ರೆಗಳ ಬಳಿಗೆ ವೇಗವಾಗಿ ಹರಿದು ಹೋಗುತ್ತವೆ

॥ ಭಾವಾರ್ಥ ॥

ಮೇಧಾವಿಗಳಾದ ಈ ಸೋಮರಸಗಳು ಸಮುದ್ರಾದಿ ಜಲಾಶಯಗಳಲ್ಲಿ ವಿಚ್ಛಿತ್ತಿಯಿಲ್ಲದೆ ಏಳುತ್ತಿರುವ ಅಲೆಗಳಂತೆಯೂ, ಕಾಡುಗಳಲ್ಲಿ ಸ್ವೇಚ್ಛೆಯಾಗಿ ಸಂಚರಿಸುವ ಕಾಡುಕೋಣಗಳಂತೆಯೂ ತಮ್ಮ ಸ್ಥಾನವಾದ ಅಭಿಷವ ಪಾತ್ರೆಯ ಬಳಿಗೆ ವೇಗವಾಗಿ ಪರಿದು ಹೋಗುತ್ತವೆ.

English Translation

The intelligent Soma juices rush along like waves of water, like buffaloes to the forests.

॥ ಸಂಹಿತಾಪಾಠಃ ॥

ಅಭಿ ದ್ರೋಣಾನಿ ಬಭ್ರವಃ ಶುಕ್ರಾ ಋತಸ್ಯ ಧಾರಯಾ ।
ವಾಜಂ ಗೋಮಂತಮಕ್ಷರನ್ ॥ ೨ ॥

॥ ಪದಪಾಠಃ ॥

ಅಭಿ । ದ್ರೋಣಾನಿ । ಬಭ್ರವಃ । ಶುಕ್ರಾಃ । ಋತಸ್ಯ । ಧಾರಯಾ ।
ವಾಜಂ । ಗೋऽಮಂತಂ । ಅಕ್ಷರನ್ ॥ ೨ ॥

॥ ಸಾಯಣಭಾಷ್ಯಂ ॥

**ಅಭಿ ಕ್ಷರಂತೀತಿ ಶೇಷಃ । ಉಪಸರ್ಗಶ್ರುತೇರುಚಿತಕ್ರಿಯಾಧ್ಯಾಹಾರಃ । ಪ್ರತಿ ದ್ರೋಣಾನಿ ದ್ರೋಣಕಲಶಾನ್ । ಯದ್ಯಪಿ ದ್ರೋಣಕಲಶ ಏಕ ಏವ ತಥಾಪಿ ತತ್ಪ್ರಧಾನ್ಯಾದಿತರೇऽಪಿ ಪಾತ್ರಾ ದ್ರೋಣಾ ಇತ್ಯುಚ್ಯಂತೇ । ಅಥವೈಕಸ್ಮಿನ್ನೇವ ಪೂಜಾರ್ಥಂ ಬಹುವಚನಂ । ಕೇ । ಬಭ್ರವೋ ಬಭ್ರುವರ್ಣಾಃ ಸೋಮಾಃ ಶುಕ್ರಾ ದೀಪ್ತಾಃ । ಕೇನ ಪ್ರಕಾರೇಣ । ಋತಸ್ಯಾಮೃತಸ್ಯ ಧಾರಯಾ ಧಾರಾಕಾರೇಣ । ಕಿಂ ಚ ವಾಜಮನ್ನಂ ಗೋಮಂತಂ ಬಹುಗೋಯುಕ್ತಮಕ್ಷರನ್ । ಕ್ಷರಂತಿ । ಅಥವೈಕಮೇವ ವಾಕ್ಯಂ । ಉಕ್ತವಿಧಾಃ ಸೋಮಾ ದ್ರೋಣಾನ್ಪ್ರತ್ಯಕ್ಷರನ್ಧಾರಯಾ । ಕಿಂ ಕುರ್ವಂತಃ । ಗೋಮಂತಂ ವಾಜಂ ಪ್ರಯಚ್ಛಂತ ಇತ್ಯರ್ಥಃ ॥**

॥ ಪ್ರತಿಪದಾರ್ಥ ॥

**ಬಭ್ರವಃ**—ಹೊಂಬಣ್ಣದಿಂದ ಶೋಭಿಸುತ್ತಿರುವ । **ಶುಕ್ರಾಃ**—ಶುಭ್ರವರ್ಣವುಳ್ಳ (ಸ್ವಚ್ಛವಾದ) ಸೋಮರಸಗಳು । **ಋತಸ್ಯ**—ಅಮೃತದಂತಿರುವ ತಮ್ಮ ರಸದ । **ಧಾರಯಾ**—ಪ್ರವಾಹದಿಂದ । **ಗೋಮಂತಂ**—ಬಹು ಗೋವುಗಳಿಂದ ಸಹಿತವಾದ । **ವಾಜಂ**—ಅನ್ನವನ್ನು । **ಅಕ್ಷರನ್**—ಒದಗಿಸುತ್ತಾ । **ದ್ರೋಣಾನಿ**—ದ್ರೋಣ ಕಲಶಾಭಿಮುಖವಾಗಿ । **ಅಭಿ**—ಪ್ರವಹಿಸುತ್ತವೆ.

॥ ಭಾವಾರ್ಥ ॥

ಹೊಂಬಣ್ಣದಿಂದ ಶೋಭಿಸುತ್ತಿರುವ ಈ ಸೋಮರಸಗಳು ಅಮೃತದಂತಿರುವ ತಮ್ಮ ರಸದ ಧಾರೆಗಳಿಂದ ಪ್ರವಹಿಸುತ್ತಾ ದ್ರೋಣಕಲಶಾಭಿಮುಖವಾಗಿ ಸರಿಯುತ್ತವೆ. ಮತ್ತು ಅನ್ನವನ್ನೂ, ಗೋವುಗಳನ್ನೂ ಒದಗಿಸಿ ಕೊಡುತ್ತವೆ.

English Translation

The tawny-coloured bright juices hasten to the pitchers with a stream of ambrosia, they pour forth sustenance accompanied with cattle.

॥ ಸಂಹಿತಾಪಾಠಃ ॥

**ಸುತಾ ಇಂದ್ರಾಯ ವಾಯವೇ ವರುಣಾಯ ಮರುದ್ಭ್ಯಃ ।**

**ಸೋಮಾ ಅರ್ಷಂತಿ ವಿಷ್ಣವೇ ॥ ೩ ॥**

॥ ಪದಪಾಠಃ ॥

**ಸುತಾಃ । ಇಂದ್ರಾಯ । ವಾಯವೇ । ವರುಣಾಯ । ಮರುತ್ಽಭ್ಯಃ ।**

**ಸೋಮಾಃ । ಅರ್ಷಂತಿ । ವಿಷ್ಣವೇ ॥ ೩ ॥**

॥ ಸಾಯಣಭಾಷ್ಯಂ ॥

**ಸುತಾ ಅಭಿಷುತಾಃ ಸೋಮಾ ಇಂದ್ರಾಯೇಂದ್ರಾರ್ಥಂ ವಾಯವೇ ಚ ವರುಣಾಯ ಚ ಮರುದ್ಭ್ಯಶ್ಚ ವಿಷ್ಣವೇ ಚೈಷಾಮರ್ಥಮರ್ಷಂತಿ । ಗಚ್ಛಂತಿ ॥**

॥ ಪ್ರತಿಪದಾರ್ಥ ॥

**ಸುತಾಃ**—ಹಿಂಡಲ್ಪಟ್ಟ । **ಸೋಮಾಃ**—ಈ ಸೋಮರಸಗಳು । **ಇಂದ್ರಾಯ**—ಇಂದ್ರನ । **ವಾಯವೇ**—ವಾಯುದೇವನ । **ವರುಣಾಯ**—ವರುಣನ । **ಮರುದ್ಭ್ಯಃ**—ಮರುದ್ದೇವತೆಗಳ । **ವಿಷ್ಣವೇ**—ವಿಷ್ಣುವಿನ (ಈ ದೇವತೆಗಳ) ಪಾನಾರ್ಥವಾಗಿ । **ಅರ್ಷಂತಿ**—ಪ್ರವಹಿಸುತ್ತವೆ

॥ ಭಾವಾರ್ಥ ॥

ಅಧ್ವರ್ಯುವಿನಿಂದ ಹಿಂಡಲ್ಪಟ್ಟ ಈ ಸೋಮರಸಗಳು ಇಂದ್ರ, ವಾಯು, ವರುಣ, ಮರುದ್ದೇವತೆಗಳು, ವಿಷ್ಣು ಎಂಬ ಈ ದೇವತೆಗಳ ಪಾನಾರ್ಥವಾಗಿ ಸ್ರವಿಸಿ ಹರಿಯುತ್ತವೆ.

## English Translation

The libations effused proceed to Indra, to Vayu, to Varuna, to the Maruts, to Vishnu.

॥ ಸಂಹಿತಾಪಾಠಃ ॥

ತಿಸ್ರೋ ವಾಚ ಉದೀರತೇ ಗಾವೋ ಮಿಮಂತಿ ಧೇನವಃ ।
ಹರಿರೇತಿ ಕನಿಕ್ರದತ್ ॥ ೪ ॥

॥ ಪದಪಾಠಃ ॥

ತಿಸ್ರಃ । ವಾಚಃ । ಉತ್ । ಈರತೇ । ಗಾವಃ । ಮಿಮಂತಿ । ಧೇನವಃ ।
ಹರಿಃ । ಏತಿ । ಕನಿಕ್ರದತ್ ॥ ೪ ॥

॥ ಸಾಯಣಭಾಷ್ಯಂ ॥

ತಿಸ್ರೋ ವಾಚಃ । ಋಗಾದಿಭೇದೇನ ತ್ರಿವಿಧಾ ಸ್ತುತಿಃ । ಉದೀರತೇ । ಪ್ರೋದ್ಗಮಯಂತ್ಯೃತ್ವಿಜಃ । ಧೇನವ ಆಶಿರೇಣ ಪ್ರೀಣಯಿತ್ರ್ಯೋ ಗಾವೋ ಮಿಮಂತಿ । ಶಬ್ದಯಂತಿ ದೋಹಾರ್ಥಂ । ಹರಿರ್ಹರಿತವರ್ಣಶ್ಚ ಸೋಮಃ ಕನಿಕ್ರದಚ್ಛಬ್ದಂ ಕುರ್ವನ್ನೇವ । ಗಚ್ಛತಿ ಕಲಶಂ ॥

॥ ಪ್ರತಿಪದಾರ್ಥ ॥

**ತಿಸ್ರೋ ವಾಚಃ**— ಋಗ್ಯಜುಸ್ಸಾಮಗಳೆಂಬ ಮೂರು ವೇದಗಳ ಮಂತ್ರಗಳನ್ನು । **ಉದೀರತೇ**— ಋತ್ವಿಕ್ಕುಗಳು ಪಠಿಸುತ್ತಾರೆ । **ಧೇನವಃ**— ತಮ್ಮ ಹಾಲಿನಿಂದ ಸರ್ವರನ್ನೂ ಪ್ರೀತಿಗೊಳಿಸುವ । **ಗಾವಃ**— ಗೋವುಗಳು । **ಮಿಮಂತಿ**— ಗೋದೋಹನಾರ್ಥವಾಗಿ ಕೂಗುತ್ತವೆ । **ಹರಿಃ**— ಹಸರುಬಣ್ಣವುಳ್ಳ ಸೋಮವು । **ಕನಿಕ್ರದತ್**— ಜಳಜಳನೆ ಶಬ್ದ ಮಾಡುತ್ತಾ । **ಏತಿ**— ಕಲಶಾಭಿಮುಖವಾಗಿ ಹರಿಯುತ್ತದೆ.

॥ ಭಾವಾರ್ಥ ॥

ಯಜ್ಞಕರ್ಮವು ನೆರವೇರುತ್ತಿರುವ ಈ ಕಾಲದಲ್ಲಿ ಋತ್ವಿಕ್ಕುಗಳು ಋಗ್ಯಜುಸ್ಸಾಮಗಳೆಂಬ ಮೂರು ವೇದಗಳ ಮಂತ್ರಗಳನ್ನು ಗಟ್ಟಿಯಾಗಿ ಪಠಿಸುತ್ತಾರೆ. ಸರ್ವರನ್ನೂ ಪ್ರೀತಿಗೊಳಿಸುವ ಗೋವುಗಳು ಗೋದೋಹನಕ್ಕಾಗಿ ಕೂಗುತ್ತಾ ಇವೆ ಅಭಿಷುತವಾದ ಹರಿತವರ್ಣದ ಸೋಮರಸವು ಜಳಜಳನೆ ಶಬ್ದಮಾಡುತ್ತಾ ಕಲಶಾಭಿಮುಖವಾಗಿ ಹರಿಯುತ್ತಿದೆ.

## English Translation

The priests utter the three sacred texts, the milch cows low (on being milked), the green-tinted Soma goes sounding (to the vessels).

॥ ಸಂಹಿತಾಪಾಠಃ ॥

ಅಭಿ ಬ್ರಹ್ಮೀರನೂಷತ ಯಹ್ವೀರೃತಸ್ಯ ಮಾತರಃ ।
ಮರ್ಮೃಜ್ಯಂತೇ ದಿವಃ ಶಿಶುಂ ॥ ೫ ॥

॥ ಪದಪಾಠಃ ॥

ಅಭಿ । ಬ್ರಹ್ಮೀಃ । ಅನೂಷತ । ಯಹ್ವೀಃ । ಋತಸ್ಯ । ಮಾತರಃ ।
ಮರ್ಮೃಜ್ಯಂತೇ । ದಿವಃ । ಶಿಶುಂ ॥ ೫ ॥

॥ ಸಾಯಣಭಾಷ್ಯಂ ॥

**ಬ್ರಹ್ಮೀರ್ಬ್ರಾಹ್ಮಣಪ್ರೇರಿತಾ ಯಹ್ವೀರ್ಮಹತ್ಯಃ । ಯಹ್ವೀರಿತಿ ಮಹನ್ನಾಮ । ಋತಸ್ಯ ಯಜ್ಞಸ್ಯ ಮಾತರೋ ನಿರ್ಮಾತ್ರ್ಯಃ ಸ್ತುತಯೋಽಭ್ಯನೂಷತ । ಸ್ತುವಂತಿ । ಕಿಂ । ದಿವೋ ದ್ಯುದೇವತಾಯಾಃ ಶಿಶುಂ ಶಿಶುಸ್ಥಾನೀಯಂ ಸೋಮಂ । ತಮೇವ ಮರ್ಮೃಜ್ಯಂತೇ । ಮೃಜಂತಿ । ತೃತೀಯಸ್ಯಾಮಿತೋ ದಿವಿ ಸೋಮ ಆಸೀದಿತ್ಯಾದಿಶ್ರುತೇರ್ದ್ಯುಶಿಶುತ್ವಂ ತಸ್ಯ ॥**

॥ ಪ್ರತಿಪದಾರ್ಥ ॥

**ದಿವಃ**—ಸ್ವರ್ಗಲೋಕದ । **ಶಿಶುಂ**—ಶಿಶುವಾದ ಸೋಮಲತೆಯನ್ನು । **ಮರ್ಮೃಜ್ಯಂತೇ**—ಹಿಂಡುತ್ತಾರೆ ಎಂಬುದಾಗಿ । **ಬ್ರಹ್ಮೀಃ**—ಬ್ರಾಹ್ಮಣರಿಂದ ಪಠಿತವಾದ । **ಯಹ್ವೀಃ**—ಮಹತ್ತಾದ । **ಋತಸ್ಯ**—ಯಜ್ಞದ । **ಮಾತರಃ**—ನಿರ್ಮಾತೃಗಳಾದ ಸ್ತುತಿರೂಪವಾದ ಮಂತ್ರಗಳು । **ಅಭಿ ಅನೂಷತ**—ಸ್ತುತಿಸುತ್ತವೆ.

॥ ಭಾವಾರ್ಥ ॥

ಯಜ್ಞವು ನೆರವೇರುತ್ತಿರುವ ಈ ಕಾಲದಲ್ಲಿ ಸ್ವರ್ಗಲೋಕದ ಶಿಶು ಸ್ಥಾನೀಯವಾದ ಸೋಮಲತೆಯನ್ನು ಮಂತ್ರಪೂರ್ವಕವಾಗಿ ಋತ್ವಿಜರು ಹಿಂಡುತ್ತಾರೆ ಎಂಬ ವಿಷಯವನ್ನು ಬ್ರಾಹ್ಮಣರಿಂದ ಪಠಿತವಾದ ಯಜ್ಞದ ನಿರ್ಮಾತೃಗಳಾದ ಮಹಾ ಸ್ತುತಿಮಂತ್ರಗಳು ಸ್ತುತಿಸುತ್ತವೆ.

## English Translation

The many sacred hymns, the mothers of the sacrifice, give praise, they purify [the Soma], the infant of heaven.

॥ ಸಂಹಿತಾಪಾಠಃ ॥

ರಾಯಃ ಸಮುದ್ರಾಂಶ್ಚತುರೋಽಸ್ಮಭ್ಯಂ ಸೋಮ ವಿಶ್ವತಃ ।

ಆ ಪವಸ್ವ ಸಹಸ್ರಿಣಃ ॥ ೬ ॥

॥ ಪದಪಾಠಃ ॥

ರಾಯಃ । ಸಮುದ್ರಾನ್ । ಚತುರಃ । ಅಸ್ಮಭ್ಯಂ । ಸೋಮ । ವಿಶ್ವತಃ ।

ಆ । ಪವಸ್ವ । ಸಹಸ್ರಿಣಃ ॥ ೬ ॥

॥ ಸಾಯಣಭಾಷ್ಯಂ ॥

ರಾಯೋ ಧನಸ್ಯ ಸಂಬಂಧಿನಶ್ಚತುರಃ ಸಮುದ್ರಾನ್ । ಧನಪೂರ್ಣಾನಿತ್ಯರ್ಥಃ । ತಾದೃಶಾನ್ಸಮುದ್ರಾನಸ್ಮಭ್ಯಮರ್ಥಾಯ ಹೇ ಸೋಮ ವಿಶ್ವತಃ ಸರ್ವತ ಆ ಪವಸ್ವ। ತಥಾ ಸಹಸ್ರಿಣೋಽಪರಿಮಿತಾನ್ಕಾಮಾನಾ ಪವಸ್ವ । ಆಯಚ್ಛ । ಚತುಃಸಮುದ್ರಸ್ಥಧನವಿಶೇಷಪ್ರಾಪ್ತೇಸ್ತನ್ಮಧ್ಯಗತಭೂಮಿಸ್ವಾಮಿತ್ವಮಂತರೇಣಾಸಂಭವಾಚ್ಚತುಃಸಮುದ್ರಮುದ್ರಿತಭೂಮಂಡಲಸ್ವಾಮಿತ್ವಮೇವಾಶಾಸ್ತೇ ಯಜಮಾನಃ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । ರಾಯಃ—ಧನಸಂಬಂಧವಾದ ಎಂದರೆ ಧನದಿಂದ ತುಂಬಿರುವ । ಚತುರಃ ಸಮುದ್ರಾನ್—ನಾಲ್ಕು ಸಮುದ್ರಗಳನ್ನೂ । ಅಸ್ಮಭ್ಯಂ—ನಮಗೆ । ವಿಶ್ವತಃ—ಎಲ್ಲಾ ಕಡೆಗಳಿಂದಲೂ । ಆ ಪವಸ್ವ—ಒದಗಿಸಿಕೊಡು (ಹಾಗೆಯೇ) । ಸಹಸ್ರಿಣಃ—ಅಪರಿಮಿತರಾದ ನಮ್ಮ ಅಭೀಷ್ಟಗಳನ್ನು ಪೂರಯಿಸಿ ಕೊಡು.

॥ ಭಾವಾರ್ಥ ॥

ಎಲೈ ಸೋಮದೇವನೇ, ನಾಲ್ಕು ಸಮುದ್ರದ ತುಂಬ ಇರುವ ಅಪರಿಮಿತವಾದ ಧನವನ್ನು ನಮಗೆ ಎಲ್ಲಾ ಕಡೆಗಳಿಂದಲೂ ಒದಗಿಸಿಕೊಡು ಮತ್ತು ಅಪರಿಮಿತವಾದ ನಮ್ಮ ಅಭೀಷ್ಟಗಳನ್ನೆಲ್ಲಾ ಪೂರ್ಣಮಾಡು.

English Translation

From every side, Soma, pour upon us four oceans of riches, grant us thousands (of desires).

## ಮೂವತ್ತನಾಲ್ಕನೆಯ ಸೂಕ್ತವು

॥ ಸಾಯಣಭಾಷ್ಯಂ ॥

ಪ್ರ ಸುವಾನ ಇತಿ ಷಡೃಚಂ ದಶಮಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪ್ರ ಸುವಾನ ಇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥

ಅನುವಾದವು— ಪ್ರ ಸುವಾನಃ ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹತ್ತನೆಯ ಸೂಕ್ತವು ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ— ಪ್ರ ಸುವಾನಃ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೩೪

ಮಂಡಲ—೯ ॥ ಅನುವಾಕ—೨ ॥ ಸೂಕ್ತ—೩೪ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೨೪ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ತ್ರಿತಃ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರ ಸುವಾನೋ ಧಾರಯಾ ತನೇಂದುರ್ಹಿನ್ವಾನೋ ಅರ್ಷತಿ ।
ರುಜದ್ದೃಳ್ಹಾ ವ್ಯೋಜಸಾ ॥ ೧ ॥

॥ ಪದಪಾಠಃ ॥

ಪ್ರ । ಸುವಾನಃ । ಧಾರಯಾ । ತನಾ । ಇಂದುಃ । ಹಿನ್ವಾನಃ । ಅರ್ಷತಿ ।
ರುಜತ್ । ದೃಳ್ಹಾ । ವಿ । ಓಜಸಾ ॥ ೧ ॥

॥ ಸಾಯಣಭಾಷ್ಯಂ ॥

ಇಂದುಃ ಸೋಮಃ ಸುವಾನಃ ಸೂಯಮಾನೋ ಹಿನ್ವಾನೋಽಧ್ವರ್ಯುಣಾ ಪ್ರೇರ್ಯಮಾಣೋ ಧಾರಯಾ ತನಾ ಪವಿತ್ರಂ ಪ್ರಾರ್ಷತಿ । ಗಚ್ಛತಿ । ಅಥ ಪ್ರತ್ಯಕ್ಷೇಣೋಚ್ಯತೇ । ದೃಳ್ಹಾ ದೃಢಾನ್ಯಪಿ ಶತ್ರುಪುರಾಣ್ಯೋಜಸಾ ಬಲೇನ ವಿರುಜತ್ । ವಿರುಜತಿ । ವಿಶ್ಲಥಯತಿ ॥

॥ ಪ್ರತಿಪದಾರ್ಥ ॥

ಸುವಾನಃ—ಹಿಂಡಲ್ಪಡುವ । ಇಂದುಃ—ಈ ಸೋಮನು । ಹಿನ್ವಾನಃ—ಅಧ್ವರ್ಯುವಿನಿಂದ ಪ್ರೇರಿತನಾಗಿ । ಧಾರಯಾ—ಪ್ರವಾಹರೂಪದಿಂದ ಹರಿಯುತ್ತಾ (ಶೋಧಿಸಲ್ಪಡುವುದಕ್ಕಾಗಿ) । ತನಾ—ದಶಾಪವಿತ್ರದ ಬಳಿಗೆ । ಪ್ರ ಅರ್ಷತಿ—ಹೋಗುತ್ತಾನೆ । ದೃಳ್ಹಾ—ದೃಢವಾದ ಶತ್ರುಪಟ್ಟಣಗಳನ್ನು । ಓಜಸಾ—ತನ್ನ ಸಾಮರ್ಥ್ಯದಿಂದಲೇ । ವಿ ರುಜತ್—ಶಿಥಿಲಹಾಕುತ್ತಾನೆ.

॥ ಭಾವಾರ್ಥ ॥

ಹಿಂಡಲ್ಪಡುತ್ತಿರುವ ಈ ಸೋಮನು ಅಧ್ವರ್ಯುವಿನಿಂದ ಪ್ರೇರಿತನಾಗಿ ಧಾರೆಯಾಗಿ ಹರಿಯುತ್ತಾ ಶೋಧನಾರ್ಥವಾಗಿ ದಶಾಪವಿತ್ರದ ಬಳಿಗೆ ಹೋಗುತ್ತಾನೆ. ದೃಢವಾದ ಶತ್ರುಪಟ್ಟಣಗಳನ್ನು ತನ್ನ ಸಾಮರ್ಥ್ಯದಿಂದಲೇ ಶಿಥಿಲಹಾಕುತ್ತಾನೆ

English Translation

Indu, when effused and expressed (by the priests), flows in a stream to the filtering-cloth, breaking down strong places by its strength.

। ಸಂಹಿತಾಪಾಠಃ ।

ಸುತ ಇಂದ್ರಾಯ ವಾಯವೇ ವರುಣಾಯ ಮರುದ್ಭ್ಯಃ ।
ಸೋಮೋ ಅರ್ಷತಿ ವಿಷ್ಣವೇ ॥ ೨ ॥

॥ ಪದಪಾಠಃ ॥

ಸುತಃ । ಇಂದ್ರಾಯ । ವಾಯವೇ । ವರುಣಾಯ । ಮರುತ್ಽಭ್ಯಃ ।
ಸೋಮಃ । ಅರ್ಷತಿ । ವಿಷ್ಣವೇ ॥ ೨ ॥

। ಸಾಯಣಭಾಷ್ಯಂ ।

ಅಯಂ ಸುತೋಽಭಿಷುತಃ ಸೋಮ ಇಂದ್ರಾದ್ಯರ್ಥಮರ್ಷತಿ । ಗಚ್ಛತಿ ॥

॥ ಪ್ರತಿಪದಾರ್ಥ ॥

**ಸುತಃ**—ಹಿಂಡಲ್ಪಟ್ಟ । **ಸೋಮಃ**—ಈ ಸೋಮವು । **ಇಂದ್ರಾಯ**—ಇಂದ್ರನ । **ವಾಯವೇ**—ವಾಯುದೇವನ । **ಮರುದ್ಭ್ಯಃ**—ಮರುದ್ದೇವತೆಗಳ । **ವಿಷ್ಣವೇ**—ವಿಷ್ಣುವಿನ ಪಾನಾರ್ಥವಾಗಿ । **ಅರ್ಷತಿ**—ಕಲಶಾಭಿಮುಖವಾಗಿ ಪ್ರವಹಿಸಿ ಹೋಗುತ್ತದೆ.

॥ ಭಾವಾರ್ಥ ॥

ಹಿಂಡಲ್ಪಟ್ಟ ಈ ಸೋಮವು ಇಂದ್ರ, ವಾಯು, ಮರುತ್ತುಗಳು ವಿಷ್ಣು ಎಂಬ ಈ ದೇವತೆಗಳ ಪಾನಾರ್ಥವಾಗಿ ಹರಿದುಹೋಗುತ್ತದೆ

English Translation

The Soma effused proceeds to Indra, to Vayu, to Varuna, to the Maruts, to Vishnu.

। ಸಂಹಿತಾಪಾಠಃ ॥

ವೃಷಾಣಂ ವೃಷಭಿರ್ಯತಂ ಸುನ್ವಂತಿ ಸೋಮಮದ್ರಿಭಿಃ ।
ದುಹಂತಿ ಶಕ್ಮನಾ ಪಯಃ ॥ ೩ ॥

॥ ಪದಪಾಠಃ ॥

ವೃಷಾಣಂ । ವೃಷಽಭಿಃ । ಯತಂ । ಸುನ್ವಂತಿ । ಸೋಮಂ । ಅದ್ರಿಽಭಿಃ ।

ದುಹಂತಿ । ಶಕ್ಮನಾ । ಪಯಃ ॥ ೩ ॥

॥ ಸಾಯಣಭಾಷ್ಯಂ ॥

ವೃಷಾಣಂ ರಸಸೇಕ್ತಾರಂ ಯತಂ ನಿಯತಂ ಸೋಮಂ ವೃಷಭೀ ರಸಸ್ಯ ವರ್ಷಕೈರದ್ರಿಭಿರ್ಗ್ರಾವಭಿಃ ಸುನ್ವಂತಿ । ಶಕ್ಮನಾ ಕರ್ಮಣಾ ದುಹಂತ್ಯಧ್ವರ್ಯ್ವಾದಯಃ ಪಯಃ ಸೋಮರಸಂ । ಸೋಮಂ ಪಯೋ ದುಹಂತೀತಿ ದ್ವಿಕರ್ಮಕೋಽಯಂ ॥

॥ ಪ್ರತಿಪದಾರ್ಥ ॥

(ಅಧ್ವರ್ಯ್ವಾದಿಗಳು) **ವೃಷಣಂ** — ರಸವನ್ನು ಹೊರಸೂಸುತ್ತಿರುವ । **ಯತಂ** — ನಿಯತವಾದ । **ಸೋಮಂ**—ಸೋಮಲತೆಯನ್ನು । **ವೃಷಭಿಃ**—ರಸವನ್ನು ಹೊರಡಿಸಲು ಸಾಧಕವಾದ । **ಅದ್ರಿಭಿಃ** — ಜಜ್ಜುವ ಕಲ್ಲುಗಳಿಂದ । **ಸುನ್ವಂತಿ**—ಜಜ್ಜಿ ರಸವನ್ನು ಹಿಂಡುತ್ತಾರೆ (ಅದೇ ಅಧ್ವರ್ಯ್ವಾದಿಗಳು) । **ಶಕ್ಮನಾ**—ಸೋಮಾಭಿಷವ ಕರ್ಮದಿಂದ । **ಪಯಃ**—ಸೋಮರಸವನ್ನು । **ದುಹಂತಿ**—ಕರೆಯುತ್ತಾರೆ

॥ ಭಾವಾರ್ಥ ॥

ಅಧ್ವರ್ಯ್ವಾದಿ ಋತ್ವಿಕ್ಕುಗಳು ರಸಪೂರಿತವೂ, ನಿಯತಪ್ರಮಾಣದಲ್ಲಿರುವುದೂ ಆದ ಸೋಮಲತೆಯನ್ನು ರಸವನ್ನು ಹೊರಡಿಸಲು ಸಾಧಕವಾದ ಜಜ್ಜುವ ಕಲ್ಲುಗಳಿಂದ ಜಜ್ಜಿ ರಸವನ್ನು ಹಿಂಡುತ್ತಾರೆ ಮತ್ತು ಸೋಮಾಭಿಷವ ಕರ್ಮವಿಧಾನದಿಂದ ಸೋಮರಸವನ್ನು (ಹಾಲನ್ನು ಕರೆಯುವಂತೆ) ಕರೆಯುತ್ತಾರೆ ಎಂದರೆ ರಸವನ್ನು ಲತೆಗಳಿಂದ ಬೇರ್ಪಡಿಸುತ್ತಾರೆ.

English Translation

They press the crushed Soma as it pours forth its juice between the effusing stones, they milk out its juice by their acts.

॥ ಸಂಹಿತಾಪಾಠಃ ॥

ಭುವತ್ತ್ರಿತಸ್ಯ ಮರ್ಜ್ಯೋ ಭುವದಿಂದ್ರಾಯ ಮತ್ಸರಃ ।

ಸಂ ರೂಪೈರಜ್ಯತೇ ಹರಿಃ ॥ ೪ ॥

॥ ಪದಪಾಠಃ ॥

ಭುವತ್ । ತ್ರಿತಸ್ಯ । ಮರ್ಜ್ಯಃ । ಭುವತ್ । ಇಂದ್ರಾಯ । ಮತ್ಸರಃ ।

ಸಂ । ರೂಪೈಃ । ಅಜ್ಯತೇ । ಹರಿಃ ॥ ೪ ॥

॥ ಸಾಯಣಭಾಷ್ಯಂ ॥

ತ್ರಿತಸ್ಯಾಪಾಂ ಪುತ್ರಸ್ಯ ಸೂಕ್ತದ್ರಷ್ಟುರ್ಋಷೇಃ ಸೋಽಯಂ ಮತ್ಸರೋ ಮದಕರಃ ಸೋಮೋ ಮರ್ಜ್ಯೋ ಭುವತ್ । ಶುದ್ಧೋ ಭವತಿ । ತಸ್ಯ ಯಾಗಾರ್ಥಂ ತೇಷಪಾನಾರ್ಥಂ ಚ । ತಥೇಂದ್ರಾಯೇಂದ್ರಪಾನಾಯ ಮರ್ಜ್ಯೋ ಭುವತ್ । ರೂಪೈ ರೂಪಕೈಶ್ಚ ಕ್ಷೀರಾದಿಭಿರ್ಹರಿರ್ಹರಿತವರ್ಣಃ ಸೋಮಃ ಸಮಜ್ಯತೇ ॥

॥ ಪ್ರತಿಪದಾರ್ಥ ॥

ತ್ರಿತಸ್ಯ—ಉದಕಗಳ ಪುತ್ರನೂ ಈ ಸೂಕ್ತದ್ರಷ್ಟೃವೂ ಆದ ತ್ರಿತ ಆಪ್ತ್ಯನೆಂಬ ಋಷಿಯಿಂದ ಹಿಂಡಲ್ಪಟ್ಟ । **ಮತ್ಸರಃ**—ಮದಕರವಾದ ಈ ಸೋಮವು (ಯಜ್ಞಾರ್ಥವಾಗಿ) । **ಮರ್ಜ್ಯಃ ಭುವತ್** — ಶುದ್ಧವಾಗಿರುತ್ತದೆ (ಮತ್ತು) । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿಯೂ । **ಭುವತ್**—ಶುದ್ಧವಾಗಿರುತ್ತದೆ । **ರೂಪೈಃ**—ದ್ರವರೂಪವಾದ ಕ್ಷೀರಾದಿಗಳಿಂದ ಮಿಶ್ರಿತವಾದ । **ಹರಿಃ**—ಹರಿತವರ್ಣದಿಂದಿರುವ ಸೋಮವು । **ಸಂ ಅಜ್ಯತೇ**—ಸ್ವಪ್ರಕಾಶದಿಂದ ಬೆಳಗುತ್ತದೆ

॥ ಭಾವಾರ್ಥ ॥

ಉದಕಗಳ ಪುತ್ರನೆಂದು ಪ್ರಸಿದ್ಧನಾದವನೂ, ಈ ಸೂಕ್ತದ ದ್ರಷ್ಟೃವೂ ಆದ ತ್ರಿತ ಆಪ್ತ್ಯ ಎಂಬ ಹೆಸರಿನ ಋಷಿಯಿಂದ ಹಿಂಡಲ್ಪಟ್ಟ ಈ ಸೋಮವು ಇಂದ್ರನ ಪಾನಾರ್ಥವಾಗಿ ಸಿದ್ಧಪಡಿಸಲ್ಪಟ್ಟು ಹರ್ಷಕಾರಕವಾಗಿಯೂ ಶುದ್ಧವಾಗಿಯೂ ಇರುತ್ತದೆ ಮತ್ತು ದ್ರವರೂಪವಸ್ತುಗಳಾದ ಕ್ಷೀರಾದಿಗಳಿಂದ ಮಿಶ್ರಿತವಾದ ಈ ಹರಿತವರ್ಣದ ಸೋಮರಸವು ಸ್ವಪ್ರಕಾಶದಿಂದ ಬೆಳಗುತ್ತದೆ

English Translation

The exhilarating Soma is to be cleansed (for the sacrifice) of Tritra, and for the drinking of Indra the green tinted (juice) is mixed with the ingredients.

॥ ಸಂಹಿತಾಪಾಠಃ ॥

ಅಭೀಮೃತಸ್ಯ ವಿಷ್ಟಪಂ ದುಹತೇ ಪೃಶ್ನಿಮಾತರಃ ।
ಚಾರು ಪ್ರಿಯತಮಂ ಹವಿಃ ॥ ೫ ॥

॥ ಪದಪಾಠಃ ॥

ಅಭಿ । ಈಂ । ಋತಸ್ಯ । ವಿಷ್ಟಪಂ । ದುಹತೇ । ಪೃಶ್ನಿಽಮಾತರಃ ।
ಚಾರು । ಪ್ರಿಯಽತಮಂ । ಹವಿಃ ॥ ೫ ॥

॥ ಸಾಯಣಭಾಷ್ಯಂ ॥

ಈಮೇನಂ ಸೋಮಮೃತಸ್ಯ ವಿಷ್ಟಪಂ ಸ್ಥಾನಂ । ಯಜ್ಞಾಶ್ರಯಮಿತ್ಯರ್ಥಃ । ತಾದೃಶಂ ಪೃಶ್ನಿಮಾತರೋ ಮರುತೋಽಭಿ ದುಹತೇ । ಕಿಂ । ಪ್ರಿಯತಮಮಿಂದ್ರಾದೀನಾಂ ಹವಿರ್ಹೋಮಸಾಧನಂ ಚಾರು ಮನೋಹರಂ । ಮರುತ್ಪ್ರೇರಿತವೃಷ್ಟ್ಯಾ ಸೋಮವೃದ್ಧೇಸ್ತದ್ದೋಗ್ಧೃತ್ವಂ ॥

॥ ಪ್ರತಿಪದಾರ್ಥ ॥

**ಪೃಶ್ನಿಮಾತರಃ** — ಗೋರೂಪವಾದ ಪೃಶ್ನಿಯೇ ಮಾತೃವಾಗುಳ್ಳ ಮರುದ್ದೇವತೆಗಳು । **ಋತಸ್ಯ**— ಯಜ್ಞಕ್ಕೆ । **ವಿಷ್ಟಪಂ**—ಆಶ್ರಯಸ್ಥಾನವಾಗಿರುವುದೂ । **ಪ್ರಿಯತಮಂ**—ಇಂದ್ರಾದಿ ದೇವತೆಗಳಿಗೆ ಪ್ರೀತಿದಾಯಕವಾಗಿರುವುದೂ । **ಹವಿಃ**—ಹೋಮಸಾಧನವಾದುದೂ । **ಚಾರು** — ಮನೋಹರವಾಗಿರುವುದೂ ಆದ । **ಈಂ**—**ಈ** ಸೋಮವನ್ನು । **ಅಭಿ ದುಹತೇ**—ಕರೆಯುತ್ತಾರೆ ಎಂದರೆ ಜಜ್ಜಿ ಹಿಂಡುತ್ತಾರೆ.

॥ ಭಾವಾರ್ಥ ॥

ಪೃಶ್ನಿಯೆಂಬ ಗೋವಿನ ಪುತ್ರರಾದ ಮರುದ್ದೇವತೆಗಳು ಯಜ್ಞಕ್ಕೆ ಆಶ್ರಯಭೂತವಾದುದೂ ಇಂದ್ರಾದಿದೇವತೆಗಳಿಗೆ ಪ್ರಿಯಕರವಾದುದೂ, ಹೋಮಸಾಧನವಾದುದೂ, ಮನೋಹರವಾಗಿರುವುದೂ ಆದ ಈ ಸೋಮವನ್ನು ಜಜ್ಜಿ ರಸವನ್ನು ಹಿಂಡುತ್ತಾರೆ.

English Translation

The sons of Prishni milk this Soma at the place of sacrifice, the most beautiful and grateful oblation (to the gods).

॥ ಸಂಹಿತಾಪಾಠಃ ॥

ಸಮೇನಮಹ್ರುತಾ ಇಮಾ ಗಿರೋ ಅರ್ಷಂತಿ ಸಸ್ರುತಃ ।
ಧೇನೂರ್ವಾಶ್ರೋ ಅವೀವಶತ್ ॥ ೬ ॥

॥ ಪದಪಾಠಃ ॥

ಸಂ । ಏನಂ । ಅಹ್ರುತಾಃ । ಇಮಾಃ । ಗಿರಃ । ಅರ್ಷಂತಿ । ಸಽಸ್ರುತಃ ।
ಧೇನೂಃ । ವಾಶ್ರಃ । ಅವೀವಶತ್ ॥ ೬ ॥

॥ ಸಾಯಣಭಾಷ್ಯಂ ॥

ಸಮರ್ಷಂತಿ ಸಂಗಚ್ಛಂತ ಏನಂ ಸೋಮಮಹ್ರುತಾ ಅಕುಟಿಲಾ ಗಿರೋಽಸ್ಮದೀಯಾಃ ಸ್ತುತಯಃ ಸಸ್ರುತಃ ಸರಂತ್ಯಃ । ತಾಶ್ಚ ಧೇನೂಃ ಪ್ರೀಣಯಿತ್ರೀಃ ಸ್ತುತೀರ್ವಾಶ್ರಃ ಶಬ್ದಯನ್ನವೀವಶತ್ । ಕಾಮಯತೇ ಸೋಮಃ ॥

॥ ಪ್ರತಿಪದಾರ್ಥ ॥

**ಅಹ್ವ್ರುತಾಃ**—ಅಕುಟಿಲವಾದ ಎಂದರೆ ನಿರ್ವಂಚನೆಯಿಂದ ಪಠಿತವಾದ । **ಗಿರಃ**—ನಮ್ಮ ಸ್ತುತಿವಾಕ್ಯಗಳು । **ಸಸ್ರುತಃ**—[illegible] **ಏನಂ**—ಈ ಸೋಮವನ್ನು । **ಅರ್ಷಂತಿ**—ಹೋಗಿ ಸೇರುತ್ತವೆ (ಬಳಿಕ ಆ ಸೋಮದೇವನು) । **ಧೇನೂಃ**—ಪ್ರೀತಿದಾಯಕವಾದ ಆ ಸ್ತುತಿಗಳನ್ನು । **ವಾಶ್ರಃ**—ಸಂತೋಷಸೂಚಕಧ್ವನಿಮಾಡುತ್ತಾ । **ಅವೀವಶತ್**—ಅಪೇಕ್ಷಿಸುತ್ತಾನೆ

॥ ಭಾವಾರ್ಥ ॥

ಅಕುಟಿಲವಾದ ಎಂದರೆ ನಿರ್ವಂಚನೆಯಿಂದ ಪಠಿಸಲ್ಪಡುವ ನಮ್ಮ ಸ್ತುತಿವಾಕ್ಯಗಳು ಸರಿಯುತ್ತಾ ಸೋಮದೇವನನ್ನು ಹೋಗಿ ಸೇರುತ್ತವೆ ಬಳಿಕ ಆ ಸೋಮದೇವನು ತನಗೆ ಪ್ರೀತಿದಾಯಕವಾದ ಆ ಸ್ತುತಿಗಳನ್ನು ಮೆಚ್ಚಿ ಸಂತೋಷಾರ್ಥವಾಗಿ ಶಬ್ದಮಾಡುತ್ತಾ ಅವುಗಳನ್ನು ಅಪೇಕ್ಷಿಸುತ್ತಾನೆ.

English Translation

Our sincere smooth-flowing praises approach him, and uttering a sound welcomes the milch cows.

## ಮೂವತ್ತೈದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಆ ನ ಇತಿ ಷಡೃಚಮೇಕಾದಶಂ ಸೂಕ್ತಮಾಂಗಿರಸಸ್ಯ ಪ್ರಭೂವಸೋರಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ । ಅನುಕ್ರಾಂತಂ ಚ । ಆ ನಃ ಪವಸ್ವ ಪ್ರಭೂವಸುರಿತಿ ॥ ಗತೋ ವಿನಿಯೋಗಃ ॥**

ಅನುವಾದವು—**ಆ ನಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹನ್ನೊಂದನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಪ್ರಭೂವಸುಃ ಆಂಗಿರಸಃ ಎಂಬುವನು ಋಷಿಯು, ಪವಮಾನ ಸೋಮನು ದೇವತೆಯು, ಗಾಯತ್ರೀಛಂದಸ್ಸು ಅನುಕ್ರಮಣಿಕೆಯಲ್ಲಿ—**ಆ ನಃ ಪವಸ್ವ ಪ್ರಭೂವಸುಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

### ಸೂಕ್ತ—೩೫

ಮಂಡಲ—೯ ॥ ಅನುವಾಕ—೨ ॥ ಸೂಕ್ತ—೩೫ ।
ಅಷ್ಟಕ—೭ ॥ ಅಧ್ಯಾಯ—೧ ॥ ವರ್ಗ—೨೫ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಪ್ರಭೂವಸುಃ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಆ ನಃ ಪವಸ್ವ ಧಾರಯಾ ಪವಮಾನ ರಯಿಂ ಪೃಥುಂ ।
ಯಯಾ ಜ್ಯೋತಿರ್ವಿದಾಸಿ ನಃ ॥ ೧ ॥

॥ ಪದಪಾಠಃ ॥

ಆ । ನಃ । ಪವಸ್ವ । ಧಾರಯಾ । ಪವಮಾನ । ರಯಿಂ । ಪೃಥುಂ ।
ಯಯಾ । ಜ್ಯೋತಿಃ । ವಿದಾಸಿ । ನಃ ॥ ೧ ॥

॥ ಸಾಯಣಭಾಷ್ಯಂ ॥

ಹೇ ಪವಮಾನ ಸೋಮ ತ್ವಂ ಧಾರಯಾ ನೋಽಸ್ಮಾಕಮಾ ಪವಸ್ವ । ಸರ್ವತಃ ಕ್ಷರ । ಕಿಂ । ರಯಿಂ ಧನಂ ಪೃಥುಂ ವಿಸ್ತೀರ್ಣಂ । ಯಯಾ ಧಾರಯಾ ಜ್ಯೋತಿರ್ದ್ಯೋತಮಾನಂ ಯಜ್ಞಂ ಸ್ವರ್ಗಂ ವಾ ವಿದಾಸಿ ಲಂಭಯಸಿ ನೋಽಸ್ಮಾಕಂ ॥

॥ ಪ್ರತಿಪದಾರ್ಥ ॥

**ಪವಮಾನ**—ಶೋಧಿಸಲ್ಪಟ್ಟ ಎಲೈ ಸೋಮದೇವನೇ ನೀನು । **ನಃ**—ನಮಗೆ । **ಯಯಾ**—ಯಾವ ನಿನ್ನ ಧಾರೆಯಿಂದ । **ಪೃಥುಂ**—ಬಹಳವಾದ । **ರಯಿಂ**—ಧನವನ್ನೂ । **ಜ್ಯೋತಿಃ**—ಪ್ರಕಾಶಮಾನವಾದ ಸ್ವರ್ಗ ಲೋಕವನ್ನು । **ವಿದಾಸಿ**—ಹೊಂದಿಸಿಕೊಡುವಿಯೋ ಅಂತಹ । **ಧಾರಯಾ**—ಹರಿಯುವ ಧಾರೆಯಿಂದ । **ನಃ**—ನಮ್ಮ ಬಳಿಗೆ । **ಆ ಪವಸ್ವ**—ಹರಿದುಬಾ.

॥ ಭಾವಾರ್ಥ ॥

ಶೋಧಿಸಲ್ಪಟ್ಟ ಎಲೈ ಸೋಮದೇವನೇ, ನೀನು ನಿನ್ನ ಯಾವಧಾರೆಯಿಂದ ನಮಗೆ ಬಹಳವಾದ ಧನವನ್ನೂ ಪ್ರಕಾಶಮಾನವಾದ ಸ್ವರ್ಗಲೋಕವನ್ನೂ ಸಂಪಾದಿಸಿಕೊಡುವೆಯೋ ಅಂತಹ ನಿನ್ನ ಧಾರೆಯಿಂದ (ಪ್ರವಾಹದಿಂದ) ನಮ್ಮ ಬಳಿಗೆ ಹರಿದುಬಾ.

English Translation

Pour upon us, purifier, ample riches with that stream wherewith you bestow upon us light.

॥ ಸಂಹಿತಾಪಾಠಃ ॥

ಇಂದೋ ಸಮುದ್ರಮೀಂಖಯ ಪವಸ್ವ ವಿಶ್ವಮೇಜಯ ।
ರಾಯೋ ಧರ್ತಾ ನ ಓಜಸಾ ॥ ೨ ॥

॥ ಪದಪಾಠಃ ॥

ಇಂದೋ ಇತಿ । ಸಮುದ್ರಂऽಈಂಖಯ । ಪವಸ್ವ । ವಿಶ್ವೇऽಜಯ ।

ರಾಯಃ । ಧರ್ತಾ । ನಃ । ಓಜಸಾ ॥ ೨ ॥

॥ ಸಾಯಣಭಾಷ್ಯಂ ॥

ಹೇ ಇಂದೋ ಸೋಮ ಹೇ ಸಮುದ್ರಮೀಂಖಯ । ಸಮುದ್ರಮಿತ್ಯುದಕನಾಮ । ಈಂಖಯತಿರ್ಗತಿಕರ್ಮಾ । ಉದಕಪ್ರೇರಕ ತಥಾ ಹೇ ವಿಶ್ವಮೇಜಯ ವಿಶ್ವಸ್ಯ ಸರ್ವಸ್ಯಾಸ್ಮಚ್ಛತ್ರೋಃ ಕಂಪಯಿತಃ ಸೋಮ ತ್ವಮೋಜಸಾ ತ್ವದೀಯೇನ ಬಲೇನ ನೋऽಸ್ಮಭ್ಯಂ ರಾಯೋ ಧನಸ್ಯ ಧರ್ತಾ ಧಾರಕಃ ಪವಸ್ವ । ಭವೇತ್ಯರ್ಥಃ । ಅತ್ರ ಯದ್ಯಪ್ಯುದಕಪ್ರೇರಣಸರ್ವಶತ್ರುಕಂಪನೇ ಸಂಭೋಧನಾಂತ-ರ್ಗತತ್ವಾದುದ್ದೇಶ್ಯಗತೇ ತಥಾಪಿ ಯಜಮಾನಸ್ಯಾಪೇಕ್ಷಿತೇ ಇತಿ ರಾಯೋ ಧರ್ತೃತ್ವವದಾಶಾಸ್ಯೇ ಅಧಿಗಂತವ್ಯೇ ॥

॥ ಪ್ರತಿಪದಾರ್ಥ ॥

**ಸಮುದ್ರಮೀಂಖಯ**—ಉದಕವನ್ನು (ವೃಷ್ಟಿರೂಪದಲ್ಲಿ) ಪ್ರೇರಿಸುವವನೂ । **ಓಜಸಾ**—ನಿನ್ನ ಸ್ವಸಾಮರ್ಥ್ಯದಿಂದ । **ವಿಶ್ವಮೇಜಯ**—ನಮ್ಮ ಶತ್ರುಗಳನ್ನು ಭಯದಿಂದ ನಡುಗುವಂತೆ ಮಾಡುವವನೂ ಆದ । **ಇಂದೋ**—ಎಲೈ ಸೋಮದೇವನೇ ನೀನು । **ನಃ**—ನಮಗೆ । **ರಾಯಃ**—ಧನದ । **ಧರ್ತಾ**—ದಾತೃವಾಗಿ । **ಪವಸ್ವ**—ಆಗಿರು

॥ ಭಾವಾರ್ಥ ॥

ಉದಕವನ್ನು ಪ್ರೇರಿಸುವವನೂ, ನಮ್ಮ ಶತ್ರುಗಳನ್ನು ಭಯದಿಂದ ಕಂಪಿಸುವಂತೆ ಮಾಡುವವನೂ ಆದ ಎಲೈ ಸೋಮದೇವನೇ, ನೀನು ನಮಗೆ ಧನವನ್ನು ಕೊಡುವ ದಾನಿಯಾಗಿರು.

## English Translation

Indu, impeller of the waters, confounder of all (our foes), flow forth by your power as the supporter of wealth to us.

॥ ಸಂಹಿತಾಪಾಠಃ ॥

ತ್ವಯಾ ವೀರೇಣ ವೀರವೋऽಭಿ ಷ್ಯಾಮ ಪೃತನ್ಯತಃ ।

ಕ್ಷರಾ ಣೋ ಅಭಿ ವಾರ್ಯಂ ॥ ೩ ॥

॥ ಪದಪಾಠಃ ॥

ತ್ವಯಾ । ವೀರೇಣ । ವೀರऽವಃ । ಅಭಿ । ಸ್ಯಾಮ । ಪೃತನ್ಯತಃ ।

ಕ್ಷರ । ನಃ । ಅಭಿ । ವಾರ್ಯಂ ॥ ೩ ॥

॥ ಸಾಯಣಭಾಷ್ಯಂ ॥

ಹೇ ವೀರವೋ ವೀರವನ್ಸೋಮ ವೀರೇಣ ತ್ವಯಾ ಸಾಧನೇನ ಪೃತನ್ಯತಃ ಸಂಗ್ರಾಮಮಿಚ್ಛತಃ ಶತ್ರೂನಭಿ ಷ್ಯಾಮ । ಅಭಿಭವೇಮ । ಅತೋ ನೋಽಸ್ಮಾಕಂ ವಾರ್ಯಂ ವರಣೀಯಂ ಧನಮಭಿ ಕ್ಷರ । ಅಭಿಗಮಯೇತ್ಯರ್ಥಃ । ಅಥವಾ ವರಣೀಯಂ ಸೋಮಾಖ್ಯಂ ಧನಂ ಕ್ಷರ । ಪವಸ್ವ ॥

॥ ಪ್ರತಿಪದಾರ್ಥ ॥

**ವೀರವಃ**—ಪರಾಕ್ರಮಶಾಲಿಯಾದ ಎಲೈ ಸೋಮನೇ । **ವೀರೇಣ ತ್ವಯಾ**—ನಿನ್ನ ಪರಾಕ್ರಮದ ಸಹಾಯದಿಂದ । **ಪೃತನ್ಯತಃ**—ಯುದ್ಧಾಪೇಕ್ಷಿಗಳಾದ ನಮ್ಮ ಶತ್ರುಗಳನ್ನು । **ಅಭಿ ಷ್ಯಾಮ**—ನಾವು ಸೋಲಿಸುವಂತಾಗಲಿ । **ನಃ**—ನಮಗೆ । **ವಾರ್ಯಂ**—ಅಪೇಕ್ಷಣೀಯವಾದ ಧನವನ್ನು । **ಅಭಿ ಕ್ಷರ**—ಹೊಂದಿಸಿ ಕೊಡು.

॥ ಭಾವಾರ್ಥ ॥

ಪರಾಕ್ರಮಶಾಲಿಯಾದ ಎಲೈ ಸೋಮದೇವನೇ, ನಿನ್ನ ಪರಾಕ್ರಮದ ಸಹಾಯದಿಂದ ನಾವು ಯುದ್ಧಾಪೇಕ್ಷಿಗಳಾದ ನಮ್ಮ ಶತ್ರುಗಳನ್ನು ಜಯಿಸುವಂತಾಗಲಿ. ನಮಗೆ ನಾವು ಅಪೇಕ್ಷಿಸುವ ಧನವನ್ನು ಸಂಪಾದಿಸಿಕೊಡು

English Translation

With you, heroic (Soma), as our hero, may we overcome our enemies, pour upon us desirable (riches).

॥ ಸಂಹಿತಾಪಾಠಃ ॥

ಪ್ರ ವಾಜಮಿಂದುರಿಷ್ಯತಿ ಸಿಷಾಸನ್ವಾಜಸಾ ಋಷಿಃ ।
ವ್ರತಾ ವಿದಾನ ಆಯುಧಾ ॥ ೪ ॥

॥ ಪದಪಾಠಃ ॥

ಪ್ರ । ವಾಜಂ । ಇಂದುಃ । ಇಷ್ಯತಿ । ಸಿಸಾಸನ್ । ವಾಜಽಸಾಃ । ಋಷಿಃ ।
ವ್ರತಾ । ವಿದಾನಃ । ಆಯುಧಾ ॥ ೪ ॥

॥ ಸಾಯಣಭಾಷ್ಯಂ ॥

ಸೋಮೋ ವಾಜಮನ್ನಮಿಷ್ಯತಿ । ಪ್ರೇರಯತಿ ಯಜಮಾನೇಭ್ಯಃ । ಕಿಂ ಕುರ್ವನ್ । ಸಿಷಾಸನ್ಯಜಮಾನಾನ್ಸಂಭಕ್ತುಮಿಚ್ಛನ್ । ಈದೃಶ ಇಂದುರ್ವಾಜಸಾ ಅನ್ನಸ್ಯ ದಾತರ್ಷಿಃ ಸರ್ವಸ್ಯ ದ್ರಷ್ಟಾ ವ್ರತಾ ಕರ್ಮಾಣ್ಯಾಯುಧಾನಿ ಚ ವಿದಾನೋ ಜಾನನ್ ॥

॥ ಪ್ರತಿಪದಾರ್ಥ ॥

**ವಾಜಸಾಃ**—ಅನ್ನವನ್ನು ಕೊಡುವವನೂ । **ಋಷಿಃ**—ಸರ್ವವನ್ನೂ ನೋಡಿ ತಿಳಿಯಬಲ್ಲವನೂ **ವ್ರತಾ**—ಯಜ್ಞಾದಿಕರ್ಮಗಳನ್ನೂ । **ಆಯುಧಾ**—ಆಯುಧಗಳನ್ನೂ । **ವಿದಾನಃ**—ತಿಳಿದವನೂ ಆದ । **ಇಂದುಃ**-ಸೋಮದೇವನು । **ಸಿಷಾಸನ್**—ಯಜಮಾನರಿಗೆ ಉಪಕಾರಮಾಡುವುದಕ್ಕಾಗಿ ಇಷ್ಟಪಟ್ಟು । **ವಾಜಂ**—ಅನ್ನವನ್ನು **ಇಷ್ಯತಿ**—ಯಜಮಾನರಿಗೆ ಪ್ರೇರಿಸಿಕೊಡುತ್ತಾನೆ.

॥ ಭಾವಾರ್ಥ ॥

ಅನ್ನದಾತೃವೂ, ಸರ್ವವನ್ನೂ ನೋಡಿ ತಿಳಿಯಬಲ್ಲವನೂ, ಯಜ್ಞಾದಿಕರ್ಮಗಳನ್ನೂ ಆಯುಧಪ್ರಯೋಗವನ್ನು ತಿಳಿದವನೂ ಆದ ಸೋಮದೇವನು ಯಜಮಾನನಿಗೆ ಉಪಕಾರವಮಾಡುವುದಕ್ಕಾಗಿ ಅವನಿಗೆ ಅನ್ನವನ್ನು ಪ್ರೇರಿಸಿಕೊಡುತ್ತಾನೆ

English Translation

Indu, the bestower of food, the seer, sends food to the worshipper, showing his favour, acquainted with sacred rites and arms.

॥ ಸಂಹಿತಾಪಾಠ ॥

ತಂ ಗೀರ್ಭಿರ್ವಾಚಮೀಂಖಯಂ ಪುನಾನಂ ವಾಸಯಾಮಸಿ ।
ಸೋಮಂ ಜನಸ್ಯ ಗೋಪತಿಂ ॥ ೫ ॥

॥ ಪದಪಾಠಃ ॥

ತಂ । ಗೀಃऽಭಿಃ । ವಾಚಂऽಈಂಖಯಂ । ಪುನಾನಂ । ವಾಸಯಾಮಸಿ ।
ಸೋಮಂ । ಜನಸ್ಯ । ಗೋऽಪತಿಂ ॥ ೫ ॥

॥ ಸಾಯಣಭಾಷ್ಯಂ ॥

ತಂ ಸೋಮಂ ಗೀರ್ಭಿಃ ಸ್ತುತಿವಾಗ್ಭಿಃ ಸ್ತೌಮೀತಿ ಶೇಷಃ । ಕಿಂಚ ವಾಚಮೀಂಖಯಂ ವಾಚಃ ಪ್ರೇರಯಿತಾರಂ ಪುನಾನಂ ಪೂಯಮಾನಂ ತಂ ಸೋಮಂ ವಾಸಯಾಮಸಿ । ವಾಸಯಾಮಃ ಶ್ರಯಣದ್ರವ್ಯೈಃ । ಕೀದೃಶಂ ಸೋಮಂ । ಜನಸ್ಯ ಗೋಪತಿಂ ಗವಾಂ ಪಾಲಕಂ । ಯದ್ವಾ । ಏಕಮೇವ ವಾಕ್ಯಂ । ಉಕ್ತವಿಶೇಷಣವಿಶಿಷ್ಟಂ ಸೋಮಂ ಸ್ತುತಿಭಿರ್ವಾಸಯಾಮ ಇತಿ । ಮಾಧವಸ್ತು ವಾಚಮಿತಿ ಪೃಥಕ್ಪದಂ ತಿಙಂತಂ ಕೃತ್ವಾ ವಾಕ್ಯದ್ವಯಂ ಚಕಾರ ॥

॥ ಪ್ರತಿಪದಾರ್ಥ ॥

**ವಾಚಮೀಂಖಯಂ**—ವಾಕ್ಯಗಳನ್ನು ಪ್ರೇರಿಸುವವನೂ । **ಪುನಾನಂ**—ಶುದ್ಧಿಕಾರಕನೂ । **ಗೋಪತಿಂ**—ಗೋವುಗಳ ಪಾಲಕನೂ । **ಜನಸ್ಯ**—ಜನರಿಗೂ ಪಾಲಕನೂ ಆದ । **ತಂ ಸೋಮಂ**—ಆ ಸೋಮದೇವನನ್ನು । **ಗೀರ್ಭಿಃ**—ಸ್ತುತಿವಾಕ್ಯಗಳಿಂದ । **ವಾಸಯಾಮಸಿ**—ಸವಿಾಪಿಸಿ ಸ್ತುತಿಸುತ್ತೇವೆ.

॥ ಭಾವಾರ್ಥ ॥

ವಾಕ್ಯಗಳನ್ನು ಪ್ರೇರಿಸುವವನೂ, ಶುದ್ಧಿಕಾರಕನೂ, ಜನರ ಮತ್ತು ಗೋವುಗಳ ಪಾಲಕನೂ ಆದ ಈ ಸೋಮದೇವನನ್ನು ಸ್ತುತಿವಾಕ್ಯಗಳಿಂದ ಸಮಿಾಪಿಸಿ ಸ್ತುತಿಸುತ್ತೇನೆ.

English Translation

We clothe with praises that Soma who is the inspiier of praise, the purified, the shepherd of men.

॥ ಸಂಹಿತಾಪಾಠಃ ॥

ವಿಶ್ವೋ ಯಸ್ಯ ವ್ರತೇ ಜನೋ ದಾಧಾರ ಧರ್ಮಣಸ್ಪತೇಃ ।
ಪುನಾನಸ್ಯ ಪ್ರಭೂವಸೋಃ ॥ ೬ ॥

॥ ಪದಪಾಠಃ ॥

ವಿಶ್ವಃ । ಯಸ್ಯ । ವ್ರತೇ । ಜನಃ । ದಾಧಾರ । ಧರ್ಮಣಃ । ಪತೇಃ ।
ಪುನಾನಸ್ಯ । ಪ್ರಭುಽವಸೋಃ ॥ ೬ ॥

॥ ಸಾಯಣಭಾಷ್ಯಂ ॥

ವಿಶ್ವಃ ಸರ್ವೋ ಜನೋ ಮನುಷ್ಯೋ ಯಜಮಾನೋ ಯಸ್ಯ ಸೋಮಸ್ಯ ವ್ರತೇ ಕರ್ಮಣಿ ದಾಧಾರ ಧಾರಯತಿ ಮನ ಇತಿ ಶೇಷಃ । ಕೀದೃಶಸ್ಯ । ಧರ್ಮಣಃ ಕರ್ಮಣಃ ಪತೇಃ ಪಾಲಕಸ್ಯ ಪುನಾನಸ್ಯ ಪೂಯಮಾನಸ್ಯ ಪ್ರಭೂವಸೋಃ ಪ್ರಭೂತಧನಸ್ಯ ॥

॥ ಪ್ರತಿಪದಾರ್ಥ ॥

**ಧರ್ಮಣಃ**—ಯಜ್ಞಾದಿಕರ್ಮದ । **ಪತೇಃ**—ಪಾಲಕನೂ । **ಪುನಾನಸ್ಯ**—ಶುದ್ಧಿಕಾರಕನೂ । **ಪ್ರಭೂವಸೋಃ**—ಪ್ರಭೂತವಾದ (ಬಹಳವಾದ) ಧನವುಳ್ಳವನೂ ಆದ । **ಯಸ್ಯ**—ಈ ಸೋಮದೇವನ । **ವ್ರತೇ**—ಸ್ತುತಿರೂಪವಾದ ಕರ್ಮದಲ್ಲಿ । **ವಿಶ್ವಃ**—ಸಮಸ್ತವಾದ । **ಜನಃ**—ಯಜಮಾನಸಹಿತನಾದ ಜನಸಮೂಹವು । **ದಾಧಾರ**—ಮನಸ್ಸನ್ನಿಡುವುದು

॥ ಭಾವಾರ್ಥ ॥

ಯಜ್ಞಾದಿಕರ್ಮಪಾಲಕನೂ, ಶುದ್ಧಿಕಾರಕನೂ, ಬಹಳವಾದ ಧನವುಳ್ಳವನೂ ಆದ ಈ ಸೋಮದೇವನನ್ನು ಸ್ತುತಿಸುವ ಕರ್ಮದಲ್ಲಿ ಯಜಮಾನನೇ ಮೊದಲಾದ ಸಮಸ್ತ ಜನಸಮೂಹವು ಮನಸ್ಸನ್ನಿಟ್ಟು ಸ್ತುತಿಸುವುದು.

English Translation

On the worship of whom all men fix their thoughts,—the lord of pious acts, the puiified, the possessor of abundant wealth

## ಮೂವತ್ತಾರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಅಸರ್ಜೀತಿ ಷಡೃಚಂ ದ್ವಾದಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಅಸರ್ಜೀತ್ಯನುಕ್ರಾಂತಂ॥ ಗತೋ ವಿನಿಯೋಗಃ ॥**

ಅನುವಾದವು—**ಅಸರ್ಜಿ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹನ್ನೆರಡನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ—ಅಸರ್ಜಿ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ

### ಸೂಕ್ತ—೩೬

ಮಂಡಲ—೯ । ಅನುವಾಕ—೨ । ಸೂಕ್ತ—೩೬ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೨೬ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಪ್ರಭೂವಸುಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಅಸರ್ಜಿ ರಥ್ಯೋ ಯಥಾ ಪವಿತ್ರೇ ಚಮ್ವೋಃ ಸುತಃ ।
ಕಾರ್ಷ್ಮನ್ವಾಜೀ ನ್ಯಕ್ರಮೀತ್ ॥ ೧ ॥

॥ ಪದಪಾಠಃ ॥

**ಅಸರ್ಜಿ । ರಥ್ಯಃ । ಯಥಾ । ಪವಿತ್ರೇ । ಚಮ್ವೋಃ । ಸುತಃ ।**
**ಕಾರ್ಷ್ಮನ್ । ವಾಜೀ । ನಿ । ಅಕ್ರಮೀತ್ ॥ ೧ ॥**

॥ ಸಾಯಣಭಾಷ್ಯಂ ॥

**ರಥ್ಯೋ ಯಥಾ ರಥಸಂಬಂಧ್ಯಶ್ವ ಇವ ಸ ಯಥಾ ವಿಸೃಜ್ಯತೇ ತದ್ವಚ್ಚಮ್ವೋರಭಿಷವಣಫಲಕಯೋಃ ಸುತೋಽಭಿಷುತಃ ಸೋಮೋಽಸರ್ಜಿ । ಸೃಷ್ಟೋಽಭೂತ್ಪವಿತ್ರೇ । ತಥಾಭೂತೋ ವಾಜೀ ವೇಜನವಾನ್ಸೋಮಾಖ್ಯೋಽಶ್ವಃ ಕಾರ್ಷ್ಮನ್ । ಕಾರ್ಷ್ಮ ಯುದ್ಧಮಿತರೇತರಕರ್ಷಣಾತ್ । ಅತ್ರ ದೇವಾನಾಮಾಕರ್ಷಣವತಿ ಯಜ್ಞಾಖ್ಯೇ ಸಂಗ್ರಾಮೇ ನ್ಯಕ್ರಮೀತ್ । ನಿತರಾಂ ಕ್ರಾಮಯತಿ ॥**

॥ ಪ್ರತಿಪದಾರ್ಥ

**ಚಮ್ವೋಃ**—ಸೋಮವನ್ನು ಹಿಂಡುವುದಕ್ಕಾಗಿ ಉಪಯೋಗಿಸುವ ಎರಡು ಹಲಗೆಗಳ ಮಧ್ಯದಲ್ಲಿ । **ಸುತಃ**—ಹಿಂಡಲ್ಪಡುವ ಸೋಮರಸವು । **ರಥ್ಯಃ** — ರಥದಲ್ಲಿ ಹೂಡಿರುವ ಅಶ್ವವನ್ನು ಬಿಚ್ಚಿದಾಗ ಈಚೆಗೆ ಬರುವಂತೆ । **ಅಸರ್ಜಿ**—ಹಲಗೆಗಳಿಂದ ಸರ್ರನೆ ತೂರಿಬರುತ್ತದೆ । ( **ವಾಜೀ**—ವೇಗಗಮನವುಳ್ಳ ಅಶ್ವವು । **ಕಾರ್ಷ್ಮನ್**—ಯುದ್ಧಕರ್ಮದಲ್ಲಿ । **ನ್ಯಕ್ರಮೀತ್**—ನೆಗೆಯುತ್ತಾ ಹೋಗುವಂತೆ ) **ವಾಜೀ**—ವೇಗವುಳ್ಳ ಸೋಮರಸವು । **ಕಾರ್ಷ್ಮನ್**—ಯಜ್ಞಾಖ್ಯಕರ್ಮದಲ್ಲಿ । **ನಿ ಅಕ್ರಮೀತ್**—ಧುಮುಕುತ್ತಾ ಪ್ರವಹಿಸುತ್ತದೆ

॥ ಭಾವಾರ್ಥ ॥

ಸೋಮವನ್ನು ಹಿಂಡುವ ಹಲಗೆಗಳ ಮಧ್ಯದಲ್ಲಿ ಇಡಲ್ಪಟ್ಟ ಸೋಮವು ಹಿಂಡಲ್ಪಟ್ಟನಂತರ ರಥದಲ್ಲಿ ಹೂಡಿರುವ ಕುದುರೆಯು ಬಿಚ್ಚಿದಮೇಲೆ ಈಚೆಗೆ ಬರುವಂತೆ ಹಲಗೆಗಳ ಮಧ್ಯದಿಂದ ಸರ್ರನೆ ತೂರಿಬಂದು ಹರಿಯುತ್ತದೆ. ಮತ್ತು ವೇಗಗಮನವುಳ್ಳ ಅಶ್ವವು ಯುದ್ಧದಲ್ಲಿ ನೆಗೆಯುತ್ತಾ ಓಡುವಂತೆ ಈ ಸೋಮರಸವು ಯಜ್ಞಕರ್ಮದಲ್ಲಿ ವೇಗವಾಗಿ ಪ್ರವಹಿಸುತ್ತದೆ.

## English Translation

Pressed between the boards, (the Soma) has been let loose, like a chariot-horse, upon the straining-cloth,—the courser steps out on the field.

॥ ಸಂಹಿತಾಪಾಠಃ ॥

ಸ ವಹ್ನಿಃ ಸೋಮ ಜಾಗೃವಿಃ ಪವಸ್ವ ದೇವವೀರತಿ ।
ಅಭಿ ಕೋಶಂ ಮಧುಶ್ಚುತಂ ॥ ೨ ॥

॥ ಪದಪಾಠಃ ॥

ಸಃ । ವಹ್ನಿಃ । ಸೋಮ । ಜಾಗೃವಿಃ । ಪವಸ್ವ । ದೇವಽವೀಃ । ಅತಿ ।
ಅಭಿ । ಕೋಶಂ । ಮಧುಽಶ್ಚುತಂ ॥ ೨ ॥

॥ ಸಾಯಣಭಾಷ್ಯಂ ॥

ಹೇ ಸೋಮ ಸ ವಹ್ನಿರ್ವಾಹಕೋ ಜಾಗೃವಿರ್ಜಾಗರೂಕೋ ದೇವವೀರ್ದೇವಕಾಮಸ್ತ್ವಂ ಮಧುಶ್ಚುತಂ ಮಧುಸ್ರಾವಿ ಕೋಶಂ ದಶಾಪವಿತ್ರಮತಿಕ್ರಮ್ಯಾಭಿ ಪವಸ್ವ । ದ್ರೋಣಕಲಶಂ ಪ್ರತಿ ಕ್ಷರ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮದೇವನೇ । **ವಹ್ನಿಃ**—ಯಜ್ಞಕರ್ಮ ವಾಹಕನೂ । **ಜಾಗೃವಿಃ**—ಯಾವಾಗಲೂ ಎಚ್ಚರದಿಂದಿರುವವನೂ । **ದೇವವೀಃ**—ದೇವತೆಗಳನ್ನು ಅಪೇಕ್ಷಿಸುವವನೂ ಆದ । **ಸಃ**— ಆ ನೀನು । **ಮಧು**–

**ಶ್ಚುತಂ**—ಮಧುರರಸವನ್ನು ಪ್ರವಿಸುತ್ತಿರುವ । **ಕೋಶಂ** — ದಶಾಪವಿತ್ರವನ್ನು ಹೊರಸೂಸಿ । **ಅಭಿ ಪವಸ್ವ**— ದ್ರೋಣಕಲಶಾಭಿಮುಖವಾಗಿ ಹರಿದು ಬಾ ।

॥ ಭಾವಾರ್ಥ ॥

ಎಲೈ ಸೋಮದೇವನೇ, ಯಜ್ಞವಾಹಕನೂ, ಯಾವಾಗಲೂ ಜಾಗರೂಕನಾಗಿರುವವನೂ, ದೇವತೆಗಳ ಬಳಿಗೆ ಹೋಗಲಿಚ್ಛಿಸುವವನೂ ಆದ ನೀನು ಮಧುರರಸವನ್ನು ಹೊರಸೂಸುತ್ತಿರುವ ದಶಾಪವಿತ್ರದಿಂದ ಹೊರಸೂಸಿ ಬಂದು ದ್ರೋಣಕಲಶಾಭಿಮುಖವಾಗಿ ಬೇಗನೆ ಹರಿದು ಬಾ.

English Translation

Soma, bearer (of oblations), vigilant, devoted to the gods, flows past the honey-dropping filter-cloth (into the vessel).

॥ ಸಂಹಿತಾಪಾಠಃ ॥

ಸ ನೋ ಜ್ಯೋತೀಂಷಿ ಪೂರ್ವ್ಯ ಪವಮಾನ ವಿ ರೋಚಯ ।
ಕ್ರತ್ವೇ ದಕ್ಷಾಯ ನೋ ಹಿನು ॥ ೩ ॥

॥ ಪದಪಾಠಃ ॥

ಸಃ । ನಃ । ಜ್ಯೋತೀಂಷಿ । ಪೂರ್ವ್ಯ । ಪವಮಾನ । ವಿ । ರೋಚಯ ।
ಕ್ರತ್ವೇ । ದಕ್ಷಾಯ । ನಃ । ಹಿನು ॥ ೩ ॥

॥ ಸಾಯಣಭಾಷ್ಯಂ ॥

ಹೇ ಪೂರ್ವ್ಯ ಪುರಾಣ ಪವಮಾನ ಸೋಮ ನೋಽಸ್ಮಾಕಂ ಜ್ಯೋತೀಂಷಿ ದಿವ್ಯಾನಿ ಸ್ಥಾನಾನಿ ವಿ ರೋಚಯ । ಪ್ರಕಾಶಯ । ಕಿಂಚ ಕ್ರತ್ವೇ ಕರ್ಮಣೇ ಯಾಗಾಯ ದಕ್ಷಾಯ ಬಲಾಯ ಚ ಬಲಪ್ರದಾಯ ಯಾಗಾಯ ವಾ ನೋಽಸ್ಮಾನ್ಹಿನು । ಪ್ರೇರಯ ॥

॥ ಪ್ರತಿಪದಾರ್ಥ ॥

**ಪೂರ್ವ್ಯ**—ಪುರಾತನನಾದ । **ಪವಮಾನ** — ಸ್ರವಿಸುತ್ತಿರುವ ಎಲೈ ಸೋಮನೇ । **ನಃ**—ನಮಗೆ । **ಜ್ಯೋತೀಂಷಿ** — ಪ್ರಕಾಶಮಾನವಾದ ದೇವಲೋಕದ ಸ್ಥಾನಗಳನ್ನು । **ವಿರೋಚಯ**—ಪ್ರಕಾಶಪಡಿಸು (ಲಭಿಸುವಂತೆ ಮಾಡು) **ಕ್ರತ್ವೇ**—ಯಜ್ಞಾರ್ಥವಾಗಿಯೂ । **ದಕ್ಷಾಯ** — ಬಲಪ್ರಾಪ್ತಿಗಾಗಿಯೂ । **ನಃ**—ನಮ್ಮನ್ನು । **ಹಿನು**—ಪ್ರೇರಿಸು ।

॥ ಭಾವಾರ್ಥ ॥

ಪುರಾತನದೇವನಾದ ಎಲೈ ಸೋಮನೇ, ನಮಗೆ ದೇವಲೋಕದ ಪ್ರಕಾಶಮಾನವಾದ ಸ್ಥಾನಗಳನ್ನು ಪ್ರಕಾಶಪಡಿಸು ಎಂದರೆ ತೆರೆದಿಡು ಮತ್ತು ಯಜ್ಞಾರ್ಥವಾಗಿಯೂ, ಬಲಪ್ರಾಪ್ತಿಗಾಗಿಯೂ ನಮ್ಮನ್ನು ಪ್ರೇರಿಸು.

## English Translation

Ancient purifier, illume for us the luminaries (of heaven), animate us for strength-bestowing sacrifice.

॥ ಸಂಹಿತಾಪಾಠಃ ॥

ಶುಂಭಮಾನ ಋತಾಯುಭಿರ್ಮೃಜ್ಯಮಾನೋ ಗಭಸ್ತ್ಯೋಃ ।
ಪವತೇ ವಾರೇ ಅವ್ಯಯೇ ॥ ೪ ॥

॥ ಪದಪಾಠಃ ॥

ಶುಂಭಮಾನಃ । ಋತಯುಽಭಿಃ । ಮೃಜ್ಯಮಾನಃ । ಗಭಸ್ತ್ಯೋಃ ।
ಪವತೇ । ವಾರೇ । ಅವ್ಯಯೇ ॥ ೪ ॥

॥ ಸಾಯಣಭಾಷ್ಯಂ ॥

ಋತಾಯುಭಿರ್ಯಜ್ಞಕಾಮೈರೃತ್ವಿಗ್ಭಿಃ ಶುಂಭಮಾನೋಽಲಂಕ್ರಿಯಮಾಣಸ್ತೇಷಾಮೇವ ಗಭಸ್ತ್ಯೋರ್ಹಸ್ತಯೋರ್ಮೃಜ್ಯಮಾನಃ ಸೋಮೋಽವ್ಯಯೇಽವಿಮಯೇ ವಾರೇ ವಾಲೇ ದಶಾಪವಿತ್ರೇ ಪವತೇ । ಪೂಯತೇ ॥

॥ ಪ್ರತಿಪದಾರ್ಥ ॥

**ಋತಾಯುಭಿಃ**—ಯಜ್ಞಕರ್ಮಾಸಕ್ತರಾದ ಋತ್ವಿಕ್ಕುಗಳಿಂದ । **ಶುಂಭಮಾನಃ**—ಅಲಂಕೃತನಾದವನೂ । **ಗಭಸ್ತ್ಯೋಃ**—ಹಸ್ತಗಳಲ್ಲಿ ಅಥವಾ ಹಸ್ತಗಳಿಂದ । **ಮೃಜ್ಯಮಾನಃ**—ಜಜ್ಜಿ ಹಿಂಡಲ್ಪಟ್ಟವನೂ ಆದ ಈ ಸೋಮನ । **ಅವ್ಯಯೇ**—ಕುರಿಯ ಉಣ್ಣೆಯಿಂದ ನಿರ್ಮಿತವಾದ । **ವಾರೇ**—ದಶಾಪವಿತ್ರದಲ್ಲಿ । **ಪವತೇ**—ಪ್ರವಿಸುತ್ತಾನೆ.

॥ ಭಾವಾರ್ಥ ॥

ಯಜ್ಞಕರ್ಮಾಸಕ್ತರಾದ ಅಧ್ವರ್ಯಾದಿ ಋತ್ವಿಗ್ಜನರಿಂದ ಅಲಂಕರಿಸಲ್ಪಟ್ಟು ಹಸ್ತಗಳಿಂದ ಜಜ್ಜಿ ಹಿಂಡಲ್ಪಟ್ಟ ಈ ಸೋಮರಸವು ಕುರಿಯ ಉಣ್ಣೆಯಿಂದ ನಿರ್ಮಿತವಾದ ದಶಾಪವಿತ್ರದ ಮೇಲೆ ಬಿದ್ದು ಪ್ರವಿಸುತ್ತದೆ

## English Translation

Beautified by the ministers of the rite, expressed by their hands (the Soma) flows through the woollen filter.

॥ ಸಂಹಿತಾಪಾಠಃ ॥

ಸ ವಿಶ್ವಾ ದಾಶುಷೇ ವಸು ಸೋಮೋ ದಿವ್ಯಾನಿ ಪಾರ್ಥಿವಾ ।

ಪವತಾಮಾಂತರಿಕ್ಷ್ಯಾ ॥ ೫ ॥

॥ ಪದಪಾಠಃ ॥

ಸಃ । ವಿಶ್ವಾ । ದಾಶುಷೇ । ವಸು । ಸೋಮಃ । ದಿವ್ಯಾನಿ । ಪಾರ್ಥಿವಾ ।

ಪವತಾಂ । ಆ । ಅಂತರಿಕ್ಷ್ಯಾ ॥ ೫ ॥

॥ ಸಾಯಣಭಾಷ್ಯಂ ॥

ಸೋಽಭಿಷೂಯಮಾಣಃ ಸೋಮೋ ದಾಶುಷೇ ಹವಿರ್ದಾತ್ರೇ ವಿಶ್ವಾ ಸರ್ವಾಣಿ ವಸು ವಸೂನಿ ಧನಾನಿ ಪವತಾಂ। ಪ್ರಯಚ್ಛತು । ವಿಶ್ವಾನೀತ್ಯುಕ್ತಸ್ಯ ವಿವರಣಂ ಶಿಷ್ಟಂ । ದಿವ್ಯಾನಿ ದಿವಿ ಭವಾನಿ ಪಾರ್ಥಿವಾ ಪೃಥಿವೀಸಂಬದ್ಧಾನ್ಯಂತರಿಕ್ಷ್ಯಾಂತರಿಕ್ಷೇ ಭವಾನಿ ಚ ಪವತಾಂ॥

॥ ಪ್ರತಿಪದಾರ್ಥ ॥

ಸಃ ಸೋಮಃ—ಹಿಂಡಲ್ಪಡುವ ಆ ಸೋಮವು । ದಾಶುಷೇ—ಹವಿಸ್ಸನ್ನರ್ಪಿಸುವ ಯಜಮಾನನಿಗೆ। ದಿವ್ಯಾನಿ—ಸ್ವರ್ಗದಲ್ಲಿರುವವೂ । ಪಾರ್ಥಿವಾ—ಪೃಥಿವಿಯಲ್ಲಿರುವವೂ । ಅಂತರಿಕ್ಷ್ಯಾ—ಅಂತರಿಕ್ಷದಲ್ಲಿರುವವೂ ಆದ। ವಿಶ್ವಾ—ಸಮಸ್ತವಾದ । ವಸು—ಧನಗಳನ್ನೂ । ಆ ಪವತಾಂ—ಒದಗಿಸಿಕೊಡಲಿ.

॥ ಭಾವಾರ್ಥ ॥

ಹಿಂಡಲ್ಪಡುವ ಆ ಸೋಮವು ಹವಿಸ್ಸನ್ನರ್ಪಿಸುವ ಯಜಮಾನನಿಗೆ ಸ್ವರ್ಗ, ಭೂಮಿ, ಅಂತರಿಕ್ಷಗಳಲ್ಲಿರುವ ಸಮಸ್ತ ಧನಗಳನ್ನೂ ಒದಗಿಸಿಕೊಡಲಿ.

English Translation

May that Soma bestow upon the donor (of the libation) all treasures whether of heaven or earth or the firmament.

॥ ಸಂಹಿತಾಪಾಠಃ ॥

ಆ ದಿವಸ್ಪೃಷ್ಠಮಶ್ವಯುರ್ಗವ್ಯಯುಃ ಸೋಮ ರೋಹಸಿ ।

ವೀರಯುಃ ಶವಸಸ್ಪತೇ ॥ ೬ ॥

॥ ಪದಪಾಠಃ ॥

ಆ । ದಿವಃ । ಪೃಷ್ಠಂ । ಅಶ್ವ॒ಽಯುಃ । ಗವ್ಯ॒ಽಯುಃ । ಸೋಮ । ರೋಹಸಿ ।
ವೀರ॒ಽಯುಃ । ಶವಸಃ । ಪತೇ ॥ ೬ ॥

॥ ಸಾಯಣಭಾಷ್ಯಂ ॥

**ಹೇ ಸೋಮ ತ್ವಂ ಸ್ತೋತೃಣಾಮಶ್ವಯುರಶ್ವಮಿಚ್ಛನ್ಗವ್ಯಯುರ್ಗಾ ಇಚ್ಛನ್ವೀರಯುಃ ಪುತ್ರಾನಿಚ್ಛನ್ದಿವಃ ಪೃಷ್ಠಂ ದ್ಯುಲೋಕಮಾರೋಹಸ್ಯಾಹುತಿದ್ವಾರಾ ಹೇ ಶವಸಸ್ಪತೇಽನ್ನಸ್ಯ ಪಾಲಕ ॥**

॥ ಪ್ರತಿಪದಾರ್ಥ ॥

**ಶವಸಃ ಪತೇ**—ಅನ್ನಕ್ಕೆ ಪಾಲಕನಾದ । **ಸೋಮ**—ಎಲೈ ಸೋಮನೇ ನೀನು । (**ಸ್ತೋತೃಣಾಂ**—ನಿನ್ನನ್ನು ಸ್ತೋತ್ರಮಾಡುವವರಿಗೆ) **ಅಶ್ವಯುಃ**—ಅಶ್ವಗಳನ್ನು ಕೊಡಬೇಕೆಂದು ಇಚ್ಛಿಸುತ್ತಲೂ । **ಗವ್ಯಯುಃ**—ಗೋವುಗಳನ್ನು ಕೊಡಬೇಕೆಂದು ಇಚ್ಛಿಸುತ್ತಲೂ । **ವೀರಯುಃ**—ವೀರರಾದ ಪುತ್ರಾದಿಗಳನ್ನು ಕೊಡಬೇಕೆಂದು ಇಚ್ಛಿಸುತ್ತಲೂ । **ದಿವಃ ಪೃಷ್ಠಂ**—ಸ್ವರ್ಗಲೋಕಕ್ಕೆ । **ಆ ರೋಹಸಿ**—(ಆಹುತಿಯ ಮೂಲಕ) ಹತ್ತಿ ಹೋಗುತ್ತೀಯೆ.

॥ ಭಾವಾರ್ಥ ॥

ಅನ್ನಕ್ಕೆ ಪಾಲಕನಾದ ಎಲೈ ಸೋಮನೇ, ನೀನು ನಿನ್ನನ್ನು ಸ್ತುತಿಸುವವರಿಗೆ ಅಶ್ವಗಳನ್ನೂ ಗೋವುಗಳನ್ನೂ ವೀರರಾದಪುತ್ರರನ್ನೂ ಕೊಡಬೇಕೆಂಬ ಇಚ್ಛೆಯಿಂದ ಯಜ್ಞಾಹುತಿದ್ವಾರಾ ಸ್ವರ್ಗಲೋಕಕ್ಕೆ ಹತ್ತಿ ಹೋಗುತ್ತೀಯೆ.

English Translation

Soma, lord of food, you ascend to the summmit of the sky, desirous of horses, cows, and male progeny.

## ಮೂವತ್ತೇಳನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಸ ಸುತ ಇತಿ ಷಡೃಚಂ ತ್ರಯೋದಶಂ ಸೂಕ್ತಂ ರಾಹೂಗಣಸ್ಯಾರ್ಷಂ ಗಾಯತ್ರಂ ಸೌಮ್ಯಂ । ಅನುಕ್ರಮ್ಯತೇ ಚ । ಸ ಸುತೋ ರಹೂಗಣ ಇತಿ ॥ ಗತೋ ವಿನಿಯೋಗಃ ॥**

ಅನುವಾದವು—**ಸ ಸುತಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿಮೂರನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ರಹೂಗಣಃ ಎಂಬುವನು ಋಷಿಯು, ಪವಮಾನಸೋಮನು ದೇವತೆಯು ; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಸ ಸುತೋ ರಹೂಗಣಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೩೭

ಮಂಡಲ—೯ ॥ ಅನುವಾಕ—೨ ॥ ಸೂಕ್ತ—೩೭ ।
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೨೭ ।
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ರಹೂಗಣಃ ॥
ದೇವತಾ—ಪವಮಾನಃ ಸೋಮಃ ।
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಸ ಸುತಃ ಪೀತಯೇ ವೃಷಾ ಸೋಮಃ ಪವಿತ್ರೇ ಅರ್ಷತಿ ।
ವಿಘ್ನನ್ರಕ್ಷಾಂಸಿ ದೇವಯುಃ ॥ ೧ ॥

॥ ಪದಪಾಠಃ ॥

ಸಃ । ಸುತಃ । ಪೀತಯೇ । ವೃಷಾ । ಸೋಮಃ । ಪವಿತ್ರೇ । ಅರ್ಷತಿ ।
ವಿಽಘ್ನನ್ । ರಕ್ಷಾಂಸಿ । ದೇವಽಯುಃ ॥ ೧ ॥

॥ ಸಾಯಣಭಾಷ್ಯಂ ॥

ಸ ಸೋಮಃ ಪೀತಯ ಇಂದ್ರಾದಿಪಾನಾಯ ಸುತೋಽಭಿಷುತೋ ವೃಷಾ ವರ್ಷಣಃ ಸನ್ಪವಿತ್ರೇಽರ್ಷತಿ । ಗಚ್ಛತಿ । ಕಿಂ ಕುರ್ವನ್ । ರಕ್ಷಾಂಸಿ ವಿಘ್ನನ್ದೇವಯುರ್ದೇವಕಾಮಃ ಸ ಇತ್ಯನ್ವಯಃ ॥

॥ ಪ್ರತಿಪದಾರ್ಥ ॥

ವೃಷಾ—ಕಾಮವರ್ಷಕನಾದವನೂ । ದೇವಯುಃ—ದೇವತೆಗಳನ್ನು ಸಮೀಪಿಸಲಿಚ್ಛಿಸುವವನೂ ಆದ । ಸಃ ಸೋಮಃ—ಆ ಸೋಮನು । ಪೀತಯೇ—ಇಂದ್ರನ ಪಾನಾರ್ಥವಾಗಿ । ಸುತಃ—ಹಿಂಡಲ್ಪಟ್ಟು । ರಕ್ಷಾಂಸಿ—ರಕ್ಷೋಗಣಗಳನ್ನು । ವಿಘ್ನನ್—ಕೊಲ್ಲುತ್ತಾ । ಪವಿತ್ರೇ—ದಶಾಪವಿತ್ರದ ಬಳಿಗೆ । ಅರ್ಷತಿ—ಹೋಗುತ್ತಾನೆ.

॥ ಭಾವಾರ್ಥ ॥

ಇಷ್ಟಾರ್ಥಪ್ರದನೂ, ದೇವತೆಗಳ ಬಳಿಗೆ ಹೋಗಲಿಚ್ಛಿಸುವವನೂ ಆದ ಆ ಸೋಮದೇವನು ಇಂದ್ರನ ಪಾನಾರ್ಥವಾಗಿ ಹಿಂಡಲ್ಪಟ್ಟು ರಾಕ್ಷಸರನ್ನು ಕೊಲ್ಲುತ್ತಾ ಶೋಧನಾರ್ಥವಾಗಿ ದಶಾಪವಿತ್ರವನ್ನು ಸಮೀಪಿಸುತ್ತಾನೆ.

English Translation

Soma, the showrer (of benefits), when effused for the drinking (of the gods), rushes to the filter, destroying the Rakshasas, devoted to the gods.

॥ ಸಂಹಿತಾಪಾಠಃ ॥

ಸ ಪವಿತ್ರೇ ವಿಚಕ್ಷಣೋ ಹರಿರರ್ಷತಿ ಧರ್ಣಸಿಃ ।
ಅಭಿ ಯೋನಿಂ ಕನಿಕ್ರದತ್ ॥ ೨ ॥

॥ ಪದಪಾಠಃ ॥

ಸಃ । ಪವಿತ್ರೇ । ವಿऽಚಕ್ಷಣಃ । ಹರಿಃ । ಅರ್ಷತಿ । ಧರ್ಣಸಿಃ ।

ಅಭಿ । ಯೋನಿಂ । ಕನಿಕ್ರದತ್ ॥ ೨ ॥

॥ ಸಾಯಣಭಾಷ್ಯಂ ॥

ಸ ಸೋಮೋ ವಿಚಕ್ಷಣಃ । ಪಶ್ಯತಿಕರ್ಮೈತತ್ । ಸರ್ವಸ್ಯ ದ್ರಷ್ಟಾ ಹರಿರ್ಹರಿತವರ್ಣಃ ಸೋಮೋ ಧರ್ಣಸಿಃ ಸರ್ವಸ್ಯ ಧಾರಕಃ ಪವಿತ್ರೇऽರ್ಷತಿ । ಗಚ್ಛತಿ । ಪಶ್ಚಾತ್ಕನಿಕ್ರದಚ್ಛಬ್ದಂ ಕುರ್ವನ್ಯೋನಿಂ ಸ್ಥಾನಂ ದ್ರೋಣಕಲಶಮಭಿಗಚ್ಛತಿ ॥

॥ ಪ್ರತಿಪದಾರ್ಥ ॥

ವಿಚಕ್ಷಣಃ—ಸರ್ವವನ್ನೂ ನೋಡಬಲ್ಲವನೂ। ಹರಿಃ—ಹರಿತವರ್ಣದಿಂದ ಶೋಭಿಸುವವನೂ । ಧರ್ಣಸಿಃ—ಸಮಸ್ತರನ್ನೂ ಧರಿಸಿ ಪೋಷಿಸುವವನೂ ಆದ । ಸಃ—ಆ ಸೋಮನು । ಪವಿತ್ರೇ— ಶೋಧಿಸಲ್ಪಡಲು ದಶಾಪವಿತ್ರದ ಬಳಿಗೆ । ಅರ್ಷತಿ—ಹೋಗುತ್ತಾನೆ (ಅನಂತರ) । ಕನಿಕ್ರದತ್—ಜಳಜಳನೆ ಶಬ್ದಮಾಡುತ್ತಾ । ಯೋನಿಂ—ತನ್ನ ಸ್ಥಾನವಾದ ದ್ರೋಣಕಲಶವನ್ನು । ಅಭಿ ಗಚ್ಛತಿ—ಸಮೀಪಿಸುತ್ತಾನೆ.

॥ ಭಾವಾರ್ಥ ॥

ಸರ್ವವನ್ನೂ ನೋಡಬಲ್ಲವನೂ, ಹಸರು ವರ್ಣದಿಂದ ಶೋಭಿಸುತ್ತಿರುವವನೂ, ಸಮಸ್ತರನ್ನೂ ಪೋಷಣಾರ್ಥವಾಗಿ ಧರಿಸಿರುವವನೂ ಆದ ಆ ಸೋಮದೇವನು ಶೋಧನಾರ್ಥವಾಗಿ ದಶಾಪವಿತ್ರದ ಬಳಿಗೆ ಹೋಗುತ್ತಾನೆ. ಅನಂತರ ಜಳಜಳನ ಶಬ್ದದೊಡನೆ ಹರಿಯುತ್ತಾ ತನ್ನ ಸ್ವಸ್ಥಾನವಾದ ದ್ರೋಣಕಲಶವನ್ನು ಸಮೀಪಿಸುತ್ತಾನೆ.

English Translation

The all-beholding Soma, green-tinted, all-sustaining, rushes to the filter (and thence) crying aloud to the pitcher.

॥ ಸಂಹಿತಾಪಾಠಃ ॥

ಸ ವಾಜೀ ರೋಚನಾ ದಿವಃ ಪವಮಾನೋ ವಿ ಧಾವತಿ ।

ರಕ್ಷೋಹಾ ವಾರಮವ್ಯಯಂ ॥ ೩ ॥

॥ ಪದಪಾಠಃ ॥

ಸಃ । ವಾಜೀ । ರೋಚನಾ । ದಿವಃ । ಪವಮಾನಃ । ವಿ । ಧಾವತಿ ।

ರಕ್ಷಃऽಹಾ । ವಾರಂ । ಅವ್ಯಯಂ ॥ ೩ ॥

॥ ಸಾಯಣಭಾಷ್ಯಂ ॥

ಸ ವಾಜೀ ವೇಗವಾನ್ ದಿವಃ ಸ್ವರ್ಗಸ್ಯ ರೋಚನಾ ರೋಚಕಃ ಪವಮಾನಃ ಪೂಯಮಾನೋ ವಿ ಧಾವತಿ । ಕಿಂಚ । ರಕ್ಷೋಹಾ ರಕ್ಷೋಹಂತಾವ್ಯಯಂ ವಾರಂ ದಶಾಪವಿತ್ರಮತೀತ್ಯ ಚ ಧಾವತಿ ॥

॥ ಪ್ರತಿಪದಾರ್ಥ ॥

ವಾಜೀ—ವೇಗವಾದ ಗಮನವುಳ್ಳವನೂ । ದಿವಃ ರೋಚನಾ—ಸ್ವರ್ಗವನ್ನು ಬೆಳಗುವವನೂ । ಪವಮಾನಃ—ಶುದ್ಧಿಕಾರಕನೂ ಆದ । ಸಃ—ಆ ಸೋಮನು । ವಿಧಾವತಿ—ಬೇಗನೆ ಪ್ರವಹಿಸುತ್ತಾನೆ । ರಕ್ಷೋಹಾ—ರಾಕ್ಷಸರ ಹಂತಕನಾದ ಆ ಸೋಮನು । ಅವ್ಯಯಂ—ಕುರಿಯ ಉಣ್ಣೆಯಿಂದ ಮಾಡಿದ । ವಾರಂ—ದಶಾಪವಿತ್ರದ ಬಳಿಗೆ । (ವಿ ಧಾವತಿ—ಬೇಗನೆ ಹೋಗುತ್ತಾನೆ)

॥ ಭಾವಾರ್ಥ ॥

ವೇಗಗಮನವುಳ್ಳವನೂ, ಸ್ವರ್ಗವನ್ನು ತನ್ನ ಪ್ರಕಾಶದಿಂದ ಬೆಳಗುವವನೂ, ಶುದ್ಧಿಕಾರಕನೂ ಆದ ಆ ಸೋಮನು ಬೇಗನೆ ಪ್ರವಹಿಸುತ್ತಾ ರಾಕ್ಷಸರನ್ನು ಕೊಲ್ಲುವವನಾಗಿ ಕುರಿಯ ಉಣ್ಣೆಯಿಂದ ನಿರ್ಮಿತವಾದ ದಶಾಪವಿತ್ರದ ಬಳಿಗೆ ಶೋಧಿಸಲ್ಪಡಲು ಬೇಗನೆ ಧಾವಿಸುತ್ತಾನೆ

## English Translation

(Fleet as) a horse, the pure Soma, the illumer of heaven, hastens the destroyer of Rakshasas, past the woollen fleece.

॥ ಸಂಹಿತಾಪಾಠಃ ॥

ಸ ತ್ರಿತಸ್ಯಾಧಿ ಸಾನವಿ ಪವಮಾನೋ ಅರೋಚಯತ್ ।
ಜಾಮಿಭಿಃ ಸೂರ್ಯಂ ಸಹ ॥ ೪ ॥

॥ ಪದಪಾಠಃ ॥

ಸಃ । ತ್ರಿತಸ್ಯ । ಅಧಿ । ಸಾನವಿ । ಪವಮಾನಃ । ಅರೋಚಯತ್ ।
ಜಾಮಿಽಭಿಃ । ಸೂರ್ಯಂ । ಸಹ ॥ ೪ ॥

॥ ಸಾಯಣಭಾಷ್ಯಂ ॥

ಸ ಸೋಮಸ್ತ್ರಿತಸ್ಯ ಮಹರ್ಷೇರಧಿ ಸಾನವಿ ಸಮುಚ್ಛ್ರಿತೇ ಯಜ್ಞೇ । ಅಧೀತಿ ಸಪ್ತಮ್ಯರ್ಥಾನುವಾದೀ । ಪವಮಾನಃ ಪೂಯಮಾನೋ ಜಾಮಿಭಿಃ ಪ್ರವೃದ್ಧೈರ್ಬಂಧುಭೂತೈರ್ವಾ ಸ್ವತೇಜೋಭಿಃ ಸಹ ಸಹಿತಃ ಸನ್ಸೂರ್ಯಮರೋಚಯತ್ । ಪ್ರಕಾಶಿತವಾನ್ ॥

॥ ಪ್ರತಿಪದಾರ್ಥ ॥

**ಸಃ**—ಆ ಸೋಮನು । **ತ್ರಿತಸ್ಯ**—ತ್ರಿತನೆಂಬ ಮಹರ್ಷಿಯ । **ಅಧಿ ಸಾನವಿ**—ಶ್ರೇಷ್ಠವಾದ ಯಜ್ಞದಲ್ಲಿ । **ಪವಮಾನಃ**—ಹಿಂಡಲ್ಪಟ್ಟವನಾಗಿ ಅಥವಾ ಶೋಧಿತನಾಗಿ । **ಜಾಮಿಭಿಃ**—ತನ್ನ ತೇಜಸ್ಸುಗಳಿಂದ । **ಸಹ**—ಸಹಿತನಾಗಿ । **ಸೂರ್ಯಂ**—ಸೂರ್ಯನನ್ನೂ । **ಅರೋಚಯತ್**—ಬೆಳಗುವಂತೆ ಮಾಡಿದನು.

॥ ಭಾವಾರ್ಥ ॥

ಅದೇ ಸೋಮದೇವನು ತ್ರಿತನೆಂಬ ಮಹರ್ಷಿಯ ಶ್ರೇಷ್ಠವಾದ ಯಜ್ಞದಲ್ಲಿ ಶೋಧಿಸಲ್ಪಟ್ಟು ತನ್ನ ತೇಜಸ್ಸುಗಳಿಂದ ಸೂರ್ಯನನ್ನು ಪ್ರಕಾಶಿಸುವಂತೆ ಮಾಡಿದನು.

## English Translation

The pure Soma upon the high place (of the sacrifice) of Trita attended by its kindred rays, has lighted up the Sun

॥ ಸಂಹಿತಾಪಾಠಃ ॥

ಸ ವೃತ್ರಹಾ ವೃಷಾ ಸುತೋ ವರಿವೋವಿದದಾಭ್ಯಃ ।

ಸೋಮೋ ವಾಜಮಿವಾಸರತ್ ॥ ೫ ॥

॥ ಪದಪಾಠಃ ॥

ಸಃ । ವೃತ್ರಽಹಾ । ವೃಷಾ । ಸುತಃ । ಪರಿವಃಽವಿತ್ । ಅದಾಭ್ಯಃ ।

ಸೋಮಃ । ವಾಜಂಽಇವ । ಅಸರತ್ ॥ ೫ ॥

॥ ಸಾಯಣಭಾಷ್ಯಂ ॥

**ಸ ವೃತ್ರಹಾ ವೃಷಾ ವರ್ಷಕಃ ಸುತೋಽಭಿಷುತೋ ವರಿವೋವಿದ್ಧನಸ್ಯ ಲಂಭಕೋಽದಾಭ್ಯೋಽನ್ಯೈರದಂಭನೀಯಃ ಸೋಮೋ ವಾಜಮಿವ ಸಂಗ್ರಾಮಮಶ್ವ ಇವಾಸರತ್ । ಗಚ್ಛತಿ ಕಲಶಂ ॥**

॥ ಪ್ರತಿಪದಾರ್ಥ ॥

**ವೃತ್ರಹಾ**—ಶತ್ರುಹಂತಕನೂ ಅಥವಾ ವೃತ್ರಾಸುರಹಂತಕನೂ । **ವೃಷಾ**—ಕಾಮವರ್ಷಕನೂ । **ವರಿವೋವಿತ್**—ಯಜ್ಞಮಾಡುವವರಿಗೆ ಧನವನ್ನು ಒದಗಿಸಿಕೊಡುವವನೂ । **ಅದಾಭ್ಯಃ**—ಅಹಿಂಸಿತನೂ ಆದ । **ಸಃ ಸೋಮಃ**—ಆ ಸೋಮನು । **ಸುತಃ**—ಹಿಂಡಲ್ಪಟ್ಟನಂತರ । **ವಾಜಮಿವ**—ಯುದ್ಧಾಶ್ವವು ಯುದ್ಧಕ್ಕೆ ಮುನ್ನುಗ್ಗುವಂತೆ । **ಅಸರತ್**—ವೇಗವಾಗಿ ಹೋಗುತ್ತಾನೆ (ಪ್ರವಹಿಸುತ್ತಾನೆ).

। ಭಾವಾರ್ಥ ।

ಶತ್ರುಹಂತಕನೂ, ಇಷ್ಟಾರ್ಥಪ್ರದನೂ, ಯಜ್ಞಮಾಡುವವರಿಗೆ ಧನವನ್ನು ಒದಗಿಸಿಕೊಡುವವನೂ ಇತರರಿಂದ ಹಿಂಸೆಗೆ ಒಳಗಾಗದವನೂ ಆದ ಆ ಸೋಮನು ಹಿಂಡಲ್ಪಟ್ಟಕೂಡಲೇ ಯುದ್ಧಕ್ಕೆ ಮುನ್ನುಗ್ಗುವ ಅಶ್ವದಂತೆ ಶೀಘ್ರಗತಿಯಿಂದ ಪ್ರವಹಿಸುತ್ತಾನೆ

English Translation

The slayer of Vritra, the showerer of benefits, the giver of wealth, the invincible, the effused Soma proceeds (to the pitcher) as (a horse) to battle.

। ಸಂಹಿತಾಪಾಠಃ ।

ಸ ದೇವಃ ಕವಿನೇಷಿತೋ೩ಭಿ ದ್ರೋಣಾನಿ ಧಾವತಿ ।
ಇಂದುರಿಂದ್ರಾಯ ಮಂಹನಾ ॥ ೬ ॥

ಪದಪಾಠಃ

ಸಃ । ದೇವಃ । ಕವಿನಾ । ಇಷಿತಃ । ಅಭಿ । ದ್ರೋಣಾನಿ । ಧಾವತಿ ।
ಇಂದುಃ । ಇಂದ್ರಾಯ । ಮಂಹನಾ ॥ ೬ ॥

॥ ಸಾಯಣಭಾಷ್ಯಂ ॥

**ಸ ಸೋಮೋ ದೇವ ಇಂದುಃ ಕ್ಲಿದ್ಯಮಾನಃ ಕವಿನಾ ಕ್ರಾಂತಪ್ರಜ್ಞೇನಾಧ್ವರ್ಯುಣೇಷಿತಃ ಪ್ರೇರಿತಃ ಸನ್ದ್ರೋಣಾನಿ ದ್ರೋಣಕಲಶಾನಭಿ ಧಾವತಿ । ಅಭಿಗಚ್ಛತಿ । ಕಿಮರ್ಥಂ । ಇಂದ್ರಾಯೇಂದ್ರಾರ್ಥಂ । ಮಂಹನಾ ಮಹಾನ್ಸತಿ ಇತಿ ಸಮನ್ವಯಃ ॥**

। ಪ್ರತಿಪದಾರ್ಥ ।

**ದೇವಃ**—ಪ್ರಕಾಶಮಾನನೂ । **ಇಂದುಃ**—ದ್ರವರೂಪದಲ್ಲಿ ಜಿನುಗುತ್ತಿರುವವನೂ । **ಮಂಹನಾ**—ಮಹತ್ಸ್ವರೂಪವುಳ್ಳವನೂ ಆದ । **ಸಃ**—ಆ ಸೋಮನು । **ಕವಿನಾ**—ಕಾಂತಪ್ರಜ್ಞನಾದ ಅಧ್ವರ್ಯುವಿನಿಂದ । **ಇಷಿತಃ**—ಪ್ರೇರಿತನಾಗಿ । **ದ್ರೋಣಾನಿ**—ದ್ರೋಣಕಲಶವನ್ನು । **ಅಭಿ**—ಅಭಿಲಕ್ಷಿಸಿ । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಧಾವತಿ**—ಬೇಗಬೇಗನೆ ಹೋಗುತ್ತಾನೆ.

। ಭಾವಾರ್ಥ ।

ಪ್ರಕಾಶಮಾನನೂ, ಮಹತ್ಸ್ವರೂಪವುಳ್ಳವನೂ, ದ್ರವರೂಪದಲ್ಲಿ ಜಿನುಗುತ್ತಿರುವವನೂ ಆದ ಆ ಸೋಮನು ಕ್ರಾಂತಪ್ರಜ್ಞನಾದ ಅಧ್ವರ್ಯುವಿನಿಂದ ಪ್ರೇರಿತನಾಗಿ ಇಂದ್ರನ ಪಾನಾರ್ಥವಾಗಿ ದ್ರೋಣಕಲಶಾಭಿಮುಖನಾಗಿ ಬೇಗಬೇಗನೆ ಹೋಗುತ್ತಾನೆ.

English Translation

The divine Soma, when effused by the priest, hastens in his might to the pitchers for Indra.

## ಮೂವತ್ತೆಂಟನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಏಷ ಇತಿ ಷಡೃಚಂ ಚತುರ್ದಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಏಷ ಉ ಸ್ಯ ಇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥

ಅನುವಾದವು— ಏಷಃ ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನಾಲ್ಕನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ— ಏಷ ಉ ಸ್ಯಃ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೩೮

ಮಂಡಲ—೯ । ಅನುವಾಕ— ೨। ಸೂಕ್ತ—೩೮ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೨೮ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ರಹೂಗಣಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಏಷ ಉ ಸ್ಯ ವೃಷಾ ರಥೋಽವ್ಯೋ ವಾರೇಭಿರರ್ಷತಿ ।
ಗಚ್ಛನ್ವಾಜಂ ಸಹಸ್ರಿಣಂ ॥ ೧ ॥

॥ ಪದಪಾಠಃ ॥

ಏಷಃ । ಊಂ ಇತಿ । ಸ್ಯಃ । ವೃಷಾ । ರಥಃ । ಅವ್ಯಃ । ವಾರೇಭಿಃ । ಅರ್ಷತಿ ।
ಗಚ್ಛನ್ । ವಾಜಂ । ಸಹಸ್ರಿಣಂ ॥ ೧ ॥

॥ ಸಾಯಣಭಾಷ್ಯಂ ॥

ಸ್ಯ ಸ ಪ್ರಸಿದ್ಧ ಏಷೋಽಭಿಷುತಃ ಸೋಮೋ ವೃಷಾ ವರ್ಷಿತಾ ರಥೋ ರಂಹಣಸ್ವಭಾವೋಽವ್ಯೋ ವಾರೇಭಿರವೇರ್ವಾಲೈರ್ದಶಾಪವಿತ್ರೇಣಾರ್ಷತಿ । ಗಚ್ಛತಿ ಕಲಶಂ । ವಾಜಮನ್ನಂ ಸಹಸ್ರಿಣಂ

**ಸಹಸ್ರಸಂಖ್ಯಾಕಂ ಯಜಮಾನಾಯ ಪ್ರದಾತುಂ ಗಚ್ಛನ್ದ್ರೋಣಕಲಶಂ ಪ್ರವಿಶನ್ನರ್ಷತೀತ್ಯರ್ಥಃ । ಉ ಪೂರಣಃ ॥**

। ಪ್ರತಿಪದಾರ್ಥ ।

**ವೃಷಾ**—ಇಷ್ಟಾರ್ಥಪ್ರದನೂ । **ರಥಃ**—ರಥದಂತೆ ವೇಗಗಮನವುಳ್ಳವನೂ । **ಸ್ಯಃ**—ಪ್ರಸಿದ್ಧನೂ ಆದ । **ಏಷಃ**—ಹಿಂಡಲ್ಪಟ್ಟ ಈ ಸೋಮನು । **ಸಹಸ್ರಿಣಂ**—ಸಹಸ್ರಸಂಖ್ಯಾಕವಾದ ಅಥವಾ ಅಪರಿಮಿತವಾದ । **ವಾಜಂ**—ಅನ್ನವನ್ನು (ಯಜಮಾನನಿಗೆ ಕೊಡುವುದಕ್ಕಾಗಿ) । **ಅವ್ಯಃ ವಾರೇಭಿಃ**—ಕುರಿಯ ಉಣ್ಣೆಯಿಂದ ನಿರ್ಮಿತವಾದ ದಶಾಪವಿತ್ರದಿಂದ ಶೋಧಿತನಾಗಿ । **ಅರ್ಷತಿ**—ದ್ರೋಣಕಲಶಾಭಿಮುಖವಾಗಿ ಹೋಗುತ್ತಾನೆ

। ಭಾವಾರ್ಥ ॥

ಕಾಮವರ್ಷಕನೂ, ರಥದಂತೆ ವೇಗಗಮನವುಳ್ಳವನೂ, ಈಗತಾನೇ ಹಿಂಡಲ್ಪಟ್ಟವನೂ, ಪ್ರಸಿದ್ಧನೂ ಆದ ಈ ಸೋಮನು ಯಜಮಾನನಿಗೆ ಅಪರಿಮಿತವಾದ ಅನ್ನವನ್ನು ಕೊಡುವುದಕ್ಕಾಗಿ ಕುರಿಯ ಉಣ್ಣೆಯಿಂದ ನಿರ್ಮಿತವಾದ ದಶಾಪವಿತ್ರದಿಂದ ಶೋಧಿಸಲ್ಪಟ್ಟು ದ್ರೋಣಕಲಶಾಭಿಮುಖವಾಗಿ ಪ್ರವಹಿಸುತ್ತಾನೆ.

## English Translation

This Soma the showerer of benefits, the chariot, dashes through the woollen fleece, bearing (to the worshipper) thousand-fold food

॥ ಸಂಹಿತಾಪಾಠಃ ॥

**ಏತಂ ತ್ರಿತಸ್ಯ ಯೋಷಣೋ ಹರಿಂ ಹಿನ್ವಂತ್ಯದ್ರಿಭಿಃ ।**
**ಇಂದುಮಿಂದ್ರಾಯ ಪೀತಯೇ ॥ ೨ ॥**

। ಪದಪಾಠಃ ॥

**ಏತಂ । ತ್ರಿತಸ್ಯ । ಯೋಷಣಃ । ಹರಿಂ । ಹಿನ್ವಂತಿ । ಅದ್ರಿಽಭಿಃ ।**
**ಇಂದುಂ । ಇಂದ್ರಾಯ । ಪೀತಯೇ ॥ ೨ ॥**

। ಸಾಯಣಭಾಷ್ಯಂ ।

**ಏತಮಿಂದುಂ ಕ್ಲಿದ್ಯಮಾನಂ ಹರಿಂ ಹರಿತವರ್ಣಂ ಸೋಮಂ ತ್ರಿತಸ್ಯರ್ಷೇರ್ಯೋಷಣೋಽಂಗುಲಯೋಽದ್ರಿಭಿರ್ಹಿನ್ವಂತೀಂದ್ರಾಯೇಂದ್ರಸ್ಯ ಪೀತಯೇ ಪಾನಾಯ ॥**

॥ ಪ್ರತಿಪದಾರ್ಥ ॥

**ಹರಿಂ**—ಹಸರುವರ್ಣದಂತಿರುವ । **ಇಂದುಂ**—ರಸಪೂರಿತವಾದ । **ಏತಂ**—ಈ ಸೋಮಲತೆಯನ್ನು । **ತ್ರಿತಸ್ಯ**—ತ್ರಿತನೆಂಬ ಋಷಿಯ । **ಯೋಷಣಃ**—ಬೆರಳುಗಳು । **ಅದ್ರಿಭಿಃ**—ಕಲ್ಲುಗಳಿಂದ ಜಜ್ಜುತ್ತಾ । **ಇಂದ್ರಾಯ**—ಇಂದ್ರನ । **ಪೀತಯೇ**—ಪಾನಾರ್ಥವಾಗಿ । **ಹಿನ್ವಂತಿ**—ಪ್ರೇರಿಸುತ್ತವೆ ಎಂದರೆ ಹಿಂಡುತ್ತವೆ.

॥ ಭಾವಾರ್ಥ ॥

ರಸಪೂರಿತವಾದ ಹಸರುಬಣ್ಣದ ಈ ಸೋಮಲತೆಯನ್ನು ತ್ರಿತಋಷಿಯ ಬೆರಳುಗಳು ಕಲ್ಲಿನಿಂದ ಜಜ್ಜುತ್ತಾ ಇಂದ್ರನ ಪಾನಾರ್ಥವಾಗಿ ರಸವನ್ನು ಹೊರಸೂಸುವಂತೆ ಪ್ರೇರಿಸುತ್ತವೆ.

English Translation

The fingers of Tritra effuse by the stones this green-tinted juice for Indra's drinking.

॥ ಸಂಹಿತಾಪಾಠಃ ॥

ಏತಂ ತ್ಯಂ ಹರಿತೋ ದಶ ಮರ್ಮೃಜ್ಯಂತೇ ಅಪಸ್ಯುವಃ ।
ಯಾಭಿರ್ಮದಾಯ ಶುಂಭತೇ ॥ ೩ ॥

॥ ಪದಪಾಠಃ ॥

ಏತಂ । ತ್ಯಂ । ಹರಿತಃ । ದಶ । ಮರ್ಮೃಜ್ಯಂತೇ । ಅಪಸ್ಯುವಃ
ಯಾಭಿಃ । ಮದಾಯ । ಶುಂಭತೇ ॥ ೩ ॥

॥ ಸಾಯಣಭಾಷ್ಯಂ ॥

ಏತಂ ತ್ಯಂ ತಂ ಸೋಮಮಧ್ವರ್ಯೋರ್ದಶ ಹರಿತೋ ಹರಣಸ್ವಭಾವಾ ಅಂಗುಲಯೋಽಪಸ್ಯುವಃ ಕರ್ಮೇಚ್ಛವಃ ಸತ್ಯೋ ಮರ್ಮೃಜ್ಯಂತೇ । ಶೋಧಯಂತಿ । ಯಾಭಿರಿಂದ್ರಸ್ಯ ಮದಾಯ ಶುಂಭತೇ ದೀಪ್ಯತೇ । ಶೋಧ್ಯತ ಇತ್ಯರ್ಥಃ । ತಮೇತಮಿತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಹರಿತಃ**— ಹಸರುಬಣ್ಣದಿಂದ ಸಿಕ್ತವಾದ । **ದಶ**—ಅಧ್ವರ್ಯುವಿನ ಹತ್ತು ಬೆರಳುಗಳು । **ಅಪಸ್ಯವಃ**— ಒಂಡುವ ಕರ್ಮದಲ್ಲಿ ಆಸಕ್ತವಾಗಿ । **ತ್ಯಂ**—ಪ್ರಸಿದ್ಧವಾದ । **ಏತಂ**—ಆ ಸೋಮವನ್ನು । **ಮರ್ಮೃಜ್ಯಂತೇ**— ಶೋಧಿಸುತ್ತವೆ । **ಯಾಭಿಃ**—ಆ ಬೆರಳುಗಳಿಂದ । **ಮದಾಯ**—ಇಂದ್ರನ ಹರ್ಷಾರ್ಥವಾಗಿ । **ಶುಂಭತೇ**— ಸೋಮರಸವು ಶೋಧಿಸಲ್ಪಡುತ್ತದೆ.

॥ ಭಾವಾರ್ಥ ॥

ಹಿಂಡುವ ಕಾರ್ಯದಲ್ಲಿ ಪ್ರವೃತ್ತವಾಗಿದ್ದುದರಿಂದ ಹಸರುಬಣ್ಣದಿಂದ ಸಿಕ್ತವಾದ ಅಧ್ವರ್ಯುವಿನ ಹತ್ತು ಬೆರಳುಗಳೂ ಪ್ರಸಿದ್ಧವಾದ ಆ ಸೋಮರಸವನ್ನು ಇಂದ್ರನ ಹರ್ಷಾರ್ಥವಾಗಿ ಶೋಧಿಸುತ್ತವೆ.

English Translation

The ten fingers, eager in the work, express that (Soma), and by them it is purified for the exhilaration (of Indra).

॥ ಸಂಹಿತಾಪಾಠಃ ॥

ಏಷ ಸ್ಯ ಮಾನುಷೀಷ್ವಾ ಶ್ಯೇನೋ ನ ವಿಕ್ಷು ಸೀದತಿ ।
ಗಚ್ಛಞ್ಜಾರೋ ನ ಯೋಷಿತಂ ॥ ೪ ॥

॥ ಪದಪಾಠಃ ॥

ಏಷಃ । ಸ್ಯಃ । ಮಾನುಷೀಷು । ಆ । ಶ್ಯೇನಃ । ನ । ವಿಕ್ಷು । ಸೀದತಿ ।
ಗಚ್ಛನ್ । ಜಾರಃ । ನ । ಯೋಷಿತಂ ॥ ೪ ॥

॥ ಸಾಯಣಭಾಷ್ಯಂ ॥

ಸ್ಯ ಸ ಏಷ ಸೋಮೋ ಮಾನುಷೀಷು ವಿಕ್ಷು ಪ್ರಜಾಸು ಯಜಮಾನರೂಪಾಸ್ವನುಗ್ರಹೇಣಾ ಸೀದತಿ ಶ್ಯೇನೋ ನ ಶ್ಯೇನ ಇವ । ಪುನಃ ಕ ಇವ । ಯೋಷಿತಂ ಗಚ್ಛನ್ನಭಿಗಚ್ಛಞ್ಜಾರೋ ನ ಜಾರ ಇವ । ಸ ಯಥಾ ಸಂಕೇತಿತಸ್ತಸ್ಯಾಃ ಕಾಮಪೂರಣಾಯ ಗೂಢೋ ಗಚ್ಛತಿ ತದ್ವದಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸ್ಯಃ**—ಪ್ರಸಿದ್ಧವಾದ । **ಏಷಃ**—ಈ ಸೋಮರಸವು । **ಶ್ಯೇನೋ ನ**—(ಸೋಮವನ್ನು ಭೂಮಿಗೆ ತಂದ) ಶ್ಯೇನಪಕ್ಷಿಯಂತೆಯೂ । **ಯೋಷಿತಂ**—ತಾನು ಕಾಮಿಸಿದ ಯುವತಿಯನ್ನು । **ಗಚ್ಛನ್**—ಸಮೀಪಿಸುವ । **ಜಾರೋ ನ**—ಪ್ರಿಯನಂತೆಯೂ । **ಮಾನುಷೀಷು ವಿಕ್ಷು**—ಮಾನವರಾದ ಯಜ್ಞಮಾಡುವ ಯಜಮಾನರ ಬಳಿಯಲ್ಲಿ । **ಆ ಸೀದತಿ**—ಅನುಗ್ರಹಬುದ್ಧಿಯಿಂದ ಬಂದು ಕುಳಿತುಕೊಳ್ಳುತ್ತದೆ

॥ ಭಾವಾರ್ಥ ॥

ಪ್ರಸಿದ್ಧವಾದ ಈ ಸೋಮವು, ಶ್ಯೇನಪಕ್ಷಿಯಂತೆಯೂ, ತಾನು ಪ್ರೀತಿಸುವ ಯುವತಿಯನ್ನು ಸಮೀಪಿಸುವ ಪ್ರಿಯನಂತೆಯೂ ಮಾನವರಾದ ಯಜಮಾನರಲ್ಲಿ ಅನುಗ್ರಹಮಾಡುವುದಕ್ಕಾಗಿ ಬೇಗನೆ ಹರಿದು ಬಂದು ಸೇರುತ್ತದೆ.

## English Translation

That Soma sits down amongs human beings like a falcon, hastening as a gallant to his mistress

॥ ಸಂಹಿತಾಪಾಠಃ ॥

ಏಷ ಸ್ಯ ಮದ್ಯೋ ರಸೋಽವ ಚಷ್ಟೇ ದಿವಃ ಶಿಶುಃ ।
ಯ ಇಂದುರ್ವಾರಮಾವಿಶತ್ ॥ ೫ ॥

॥ ಪದಪಾಠಃ ॥

ಏಷಃ । ಸ್ಯಃ । ಮದ್ಯಃ । ರಸಃ । ಅವ । ಚಷ್ಟೇ । ದಿವಃ । ಶಿಶುಃ ।

ಯಃ । ಇಂದುಃ । ವಾರಂ । ಆ । ಅವಿಶತ್ ॥ ೫ ॥

॥ ಸಾಯಣಭಾಷ್ಯಂ ॥

ಸ್ಯ ಸ ಏಷ ಮದ್ಯೋ ಮದನಿಮಿತ್ತೋ ರಸೋಽವಚಷ್ಟೇ । ಸರ್ವಮವಪಶ್ಯತಿ । ದಿವಃ ಶಿಶುರ್ದ್ಯುಪುತ್ರಃ । ತತ್ರೋತ್ಪನ್ನತ್ವಾತ್ ಪುತ್ರತ್ವಮಸ್ಯ । ಯ ಇಂದುರ್ದೀಪ್ತಃ ಸೋಮೋ ವಾರಂ ದಶಾಪವಿತ್ರಮಾವಿಶದಾವಿಶತಿ ಸ ಏಷ ಇತಿ ॥

॥ ಪ್ರತಿಪದಾರ್ಥ ॥

ಸ್ಯಃ—ಪ್ರಸಿದ್ಧವಾದ । ಮದ್ಯಃ—ಹರ್ಷವನ್ನುಂಟುಮಾಡುವ । ಏಷಃ ರಸಃ—ಈ ಸೋಮರಸವು । ಅವ ಚಷ್ಟೇ—ಸರ್ವವನ್ನೂ ನೋಡುತ್ತದೆ । ದಿವಃ—ಸ್ವರ್ಗಕ್ಕೆ (ಹಿಂದೆ ಅಲ್ಲಿದ್ದದ್ದರಿಂದ) । ಶಿಶುಃ—ಶಿಶುರೂಪವಾಗಿದೆ । ಯಃ ಇಂದುಃ—ಪ್ರಕಾಶಮಾನವಾದ ಅಂತಹ ಆ ಸೋಮರಸವು । ವಾರಂ—(ಶುದ್ಧಿಗಾಗಿ) ದಶಾಪವಿತ್ರವನ್ನು । ಅವಿಶತ್—ಪ್ರವೇಶಿಸುತ್ತದೆ.

॥ ಭಾವಾರ್ಥ ॥

ಹರ್ಷಕಾರಕವಾದ ಪ್ರಸಿದ್ಧವಾದ ಈ ಸೋಮರಸವು ಸರ್ವವನ್ನೂ ನೋಡುವುದು. (ಹಿಂದೆ ಸ್ವರ್ಗದಲ್ಲಿ ಹುಟ್ಟಿದ್ದರಿಂದ) ಸ್ವರ್ಗಕ್ಕೆ ಶಿಶುರೂಪವಾಗಿದೆ. ಪ್ರಕಾಶಮಾನವಾದ ಇಂತಹ ಸೋಮರಸವು ಶೋಧಿಸಲ್ಪಡುವುದಕ್ಕಾಗಿ ದಶಾಪವಿತ್ರವನ್ನು ಪ್ರವೇಶಿಸುತ್ತದೆ

English Translation

That exhilarating juice beholds all, —Indu, the child of heaven, that percolates through the fleece.

॥ ಸಂಹಿತಾಪಾಠಃ ॥

ಏಷ ಸ್ಯ ಪೀತಯೇ ಸುತೋ ಹರಿರರ್ಷತಿ ಧರ್ಣಸಿಃ ।

ಕ್ರಂದನ್ಯೋನಿಮಭಿ ಪ್ರಿಯಂ ॥ ೬ ॥

॥ ಪದಪಾಠಃ ॥

ಏಷಃ । ಸ್ಯಃ । ಪೀತಯೇ । ಸುತಃ । ಹರಿಃ । ಅರ್ಷತಿ । ಧರ್ಣಸಿಃ ।

ಕ್ರಂದನ್ । ಯೋನಿಂ । ಅಭಿ । ಪ್ರಿಯಂ ॥ ೬ ॥

॥ ಸಾಯಣಭಾಷ್ಯಂ ॥

ಏಷ ಸ್ಯ ಸ ಸೋಮಃ ಪೀತಯೇ ಪಾನಾಯ ಸುತೋಽಭಿಷುತೋ ಹರಿರ್ಹರಿತವರ್ಣೋ ಧರ್ಣಸಿರ್ಧಾರಕಃ ಪ್ರಿಯಂ ಸ್ವಪ್ರಿಯಭೂತಂ ಯೋನಿಂ ಸ್ಥಾನಂ ದ್ರೋಣಕಲಶಂ ಕ್ರಂದನ್ನಭ್ಯವ್ದಯನ್ನಭ್ಯರ್ಷತಿ । ಗಚ್ಛತಿ ।

॥ ಪ್ರತಿಪದಾರ್ಥ ॥

**ಧರ್ಣಸಿಃ**—ಸಮಸ್ತವನ್ನೂ ಧರಿಸುವ । **ಹರಿಃ**—ಪಸರುಬಣ್ಣದ **ಸ್ಯಃ ಏಷಃ**—ಪ್ರಸಿದ್ಧವಾದ ಈ ಸೋಮಲತೆಯು । **ಪೀತಯೇ**—ಪಾನಾರ್ಥವಾಗಿ । **ಸುತಃ**—ಹಿಂಡಲ್ಪಟ್ಟು । **ಪ್ರಿಯಂ**—ತನಗೆ ಪ್ರೀತಿಪಾತ್ರವಾದ । **ಯೋನಿಂ**—ಸ್ವಸ್ಥಾನವಾದ ದ್ರೋಣಕಲಶವನ್ನು ಲಕ್ಷಿಸಿ । **ಕ್ರಂದನ್**—ಜಳಜಳನೆ ಶಬ್ದಮಾಡುತ್ತಾ । **ಅಭಿ ಅರ್ಷತಿ**—ಹರಿದು ಹೋಗುತ್ತದೆ.

॥ ಭಾವಾರ್ಥ ॥

ಜಗದ್ಧಾರಕವಾದ ಪಸರುಬಣ್ಣದ ಈ ಸೋಮಲತೆಯು ಪಾನಾರ್ಥವಾಗಿ ಜಜ್ಜಿ ಹಿಂಡಲ್ಪಟ್ಟು ತನಗೆ ಪ್ರೀತಿಪಾತ್ರವಾದ ಮತ್ತು ಸ್ವಸ್ಥಾನವಾದ ದ್ರೋಣಕಲಶದ ಬಳಿಗೆ ಜಳಜಳನೆ ಶಬ್ದಮಾಡುತ್ತಾ ಹರಿದುಹೋಗುತ್ತದೆ.

English Translation

That green tinted, all-sustaining (Soma), when effused for the drinking (of the gods), rushes crying aloud to its beloved place.

## ಮೂವತ್ತೊಂಭತ್ತನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಆಶುರರ್ಷೇತಿ ಷಡೃಚಂ ಪಂಚದಶಂ ಸೂಕ್ತಮಾಂಗಿರಸಸ್ಯ ಬೃಹನ್ಮತೇರಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ । ಆಶುರರ್ಷ ಬೃಹನ್ಮತಿರಿತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥

ಅನುವಾದವು—**ಆಶುರರ್ಷ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನೈದನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಬೃಹನ್ಮತಿಃ ಎಂಬುವನು ಋಷಿಯು, ಪವಮಾನಸೋಮನು ದೇವತೆಯು; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಆಶುರರ್ಷ ಬೃಹನ್ಮತಿಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೩೯

ಮಂಡಲ—೯ ॥ ಅನುವಾಕ—೨ ॥ ಸೂಕ್ತ—೩೯ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೨೯ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಬೃಹನ್ಮತಿಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಆಶುರರ್ಷ ಬೃಹನ್ಮತೇ ಪರಿಪ್ರಿಯೇಣ ಧಾಮ್ನಾ ।
ಯತ್ರ ದೇವಾ ಇತಿ ಬ್ರವನ್ ॥ ೧ ॥

॥ ಪದಪಾಠಃ ॥

ಆಶುಃ । ಅರ್ಷ । ಬೃಹತ್ಽಮತೇ । ಪರಿ । ಪ್ರಿಯೇಣ । ಧಾಮ್ನಾ ।
ಯತ್ರ । ದೇವಾಃ । ಇತಿ । ಬ್ರವನ್ ॥ ೧ ॥

॥ ಸಾಯಣಭಾಷ್ಯಂ ॥

ಹೇ ಬೃಹನ್ಮತೇ ಮಹಾಮತೇ ಸೋಮ ಪ್ರಿಯೇಣ ದೇವಾನಾಂ ಪ್ರಿಯತಮೇನ ಧಾಮ್ನಾ ಶರೀರೇಣ ಧಾರಯೊಾಶುಃ ಶೀಘ್ರಃ ಸನ್ಪರ್ಯರ್ಷ । ಪರಿಗಚ್ಛ । ಯತ್ರ ದೇವಾ ಇಂದ್ರಾದಯೋ ವರ್ತಂತ ಇತಿ ಬ್ರವನ್ ಬ್ರುವನ್ನುಚ್ಚಾರಯನ್ । ತಾಂ ದಿಶಂ ಗಚ್ಛಾಮೀತಿ ಬ್ರುವನ್ನಿತ್ಯರ್ಥಃ ॥

॥ ಪ್ರತಿಪದಾರ್ಥ ॥

**ಬೃಹನ್ಮತೇ**—ಬಹಳ ಬುದ್ಧಿವಂತನಾದ ಎಲೈ ಸೋಮನೇ । **ಪ್ರಿಯೇಣ**—ದೇವತೆಗಳಿಗೆ ಪ್ರಿಯವಾದ । **ಧಾಮ್ನಾ**—ಶರೀರವನ್ನು ಧರಿಸಿಕೊಂಡು । **ಯತ್ರ**—ಎಲ್ಲಿ । **ದೇವಾಃ**-ಇಂದ್ರಾದಿದೇವತೆಗಳು ಇರುವರು ?। **ಇತಿ**—ಹೀಗೆಂದು । **ಬ್ರವನ್**—ಹೇಳುತ್ತಾ । **ಆಶುಃ**—ಶೀಘ್ರಗಮನವುಳ್ಳವನಾಗಿ । **ಪರಿ ಅರ್ಷ**—ಬೇಗನೆ ಹೋಗು.

॥ ಭಾವಾರ್ಥ ॥

ಬಹಳ ಬುದ್ಧಿಶಾಲಿಯಾದ ಎಲೈ ಸೋಮನೇ, ಇಂದ್ರಾದಿದೇವತೆಗಳು ಎಲ್ಲಿರುವರು ಎಂದು ಹೇಳುತ್ತಾ ಅವರ ಬಳಿಗೆ ದೇವತೆಗಳಿಗೆ ಪ್ರಿಯವಾದ ತೇಜಃಶರೀರವನ್ನು ಧರಿಸಿಕೊಂಡು ಬೇಗನೆ ಹೋಗು.

## English Translation

Great-minded Soma, go swift with your body that is most dear (to the gods), saying, "Where are the gods?"

॥ ಸಂಹಿತಾಪಾಠಃ ॥

ಪರಿಷ್ಕೃಣ್ವನ್ನನಿಷ್ಕೃತಂ ಜನಾಯ ಯಾತಯನ್ನಿಷಃ ।
ವೃಷ್ಟಿಂ ದಿವಃ ಪರಿ ಸ್ರವ ॥ ೨ ॥

॥ ಪದಪಾಠಃ ॥

ಪರಿಽಕೃಣ್ವನ್ । ಅನಿಃಽಕೃತಂ । ಜನಾಯ । ಯಾತಯನ್ । ಇಷಃ ।

ವೃಷ್ಟಿಂ । ದಿವಃ । ಪರಿ । ಸ್ರವ ॥ ೨ ॥

॥ ಸಾಯಣಭಾಷ್ಯಂ ॥

ಅನಿಷ್ಕೃತಮಸಂಸ್ಕೃತಂ ಯಜಮಾನಂ ಸ್ಥಾನಂ ವಾ ಪರಿಷ್ಕೃಣ್ವನ್ಸಂಸ್ಕುರ್ವಞ್ಜನಾಯ ಯಾಗಕರ್ತ್ರ ಇಷೋಽನ್ನಾನಿ ಯಾತಯನ್ನಿರ್ಗಮಯನ್ದಿವೋಽಂತರಿಕ್ಷಾದ್ವೃಷ್ಟಿಂ ಪರಿ ಸ್ರವ ॥

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) ಅನಿಷ್ಕೃತಂ—ಅಸಂಸ್ಕೃತನಾದ ಯಜಮಾನನನ್ನು ಅಥವಾ ಅಶುದ್ಧವಾದ ಪ್ರದೇಶವನ್ನು । ಪರಿಷ್ಕೃಣ್ವನ್—ಶುದ್ಧವನ್ನಾಗಿ ಮಾಡುತ್ತಲೂ । ಜನಾಯ-ಯಜ್ಞಮಾಡುವ ಯಜಮಾನನಿಗೆ। ಇಷಃ—ಅನ್ನಗಳನ್ನು । ಯಾತಯನ್—ಒದಗಿಸುತ್ತಲೂ । ದಿವಃ—ಅಂತರಿಕ್ಷದಿಂದ । ವೃಷ್ಟಿಂ—ಮಳೆಯನ್ನು । ಪರಿ ಸ್ರವ—ಸುರಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಅಸಂಸ್ಕೃತವಾದ ಅಥವಾ ಶುದ್ಧನಲ್ಲದ ಯಜಮಾನನನ್ನೂ ಅಥವಾ ಪ್ರದೇಶವನ್ನು ಶುದ್ಧವನ್ನಾಗಿ ಮಾಡುತ್ತಲೂ ಯಜ್ಞಕರ್ತನಿಗೆ ಅನ್ನವನ್ನು ಒದಗಿಸಿಕೊಡುತ್ತಲೂ ಅಂತರಿಕ್ಷದಿಂದ ವೃಷ್ಟಿಯನ್ನು ಸುರಿಸು.

English Translation

Sanctifying the unconsecrated (worshipper) bringing food for the offerer, pour down rain from heaven.

॥ ಸಂಹಿತಾಪಾಠಃ ॥

ಸುತ ಏತಿ ಪವಿತ್ರ ಆ ತ್ವಿಷಿಂ ದಧಾನ ಓಜಸಾ ।

ವಿಚಕ್ಷಾಣೋ ವಿರೋಚಯನ್ ॥ ೩ ॥

॥ ಪದಪಾಠಃ ॥

ಸುತಃ । ಏತಿ । ಪವಿತ್ರೇ । ಆ । ತ್ವಿಷಿಂ । ದಧಾನಃ । ಓಜಸಾ ।

ವಿಽಚಕ್ಷಾಣಃ । ವಿಽರೋಚಯನ್ ॥ ೩ ॥

॥ ಸಾಯಣಭಾಷ್ಯಂ ॥

ಸುತೋಽಭಿಷುತಃ ಸೋಮಃ ಸನ್ಪವಿತ್ರೇ ದಶಾಪವಿತ್ರೇ । ಆ ಇತ್ಯನರ್ಥಕಃ । ಓಜಸಾ ಬಲೇನ ಶೀಘ್ರಮೇತಿ । ಗಚ್ಛತಿ । ಕೀದೃಶಃ ಸನ್ । ತ್ವಿಷಿಂ ದೀಪ್ತಿಂ ದಧಾನೋ ಧಾರಯನ್ವಿಚಕ್ಷಾಣಃ ಸರ್ವಂ ಪಶ್ಯನ್ವಿರೋಚಯನ್ದೀಪಯಂಶ್ಚ । ಕಿಂ । ದೇವಾನಿತಿ ಶೇಷಃ ॥

॥ ಪ್ರತಿಪದಾರ್ಥ ॥

ಸುತಃ—ಹಿಂಡಲ್ಪಟ್ಟ ಈ ಸೋಮರಸವು । ತ್ವಿಷಿಂ—ಪ್ರಕಾಶವನ್ನು । ದಧಾನಃ—ಧರಿಸುತ್ತಲೂ । ವಿಚಕ್ಷಾಣಃ—ಎಲ್ಲವನ್ನೂ ನೋಡುತ್ತಲೂ । ವಿರೋಚಯನ್—ದೇವಾದಿಗಳನ್ನು ಪ್ರಕಾಶಪಡಿಸುತ್ತಲೂ । ಓಜಸಾ—ತನ್ನ ಶಕ್ತಿಯಿಂದ । ಪವಿತ್ರೇ—ದಶಾಪವಿತ್ರದ ಬಳಿಗೆ । ಆ ಏತಿ—ಹೋಗುತ್ತದೆ.

॥ ಭಾವಾರ್ಥ ॥

ಹಿಂಡಲ್ಪಟ್ಟ ಈ ಸೋಮರಸವು ತನ್ನ ಸ್ವಪ್ರಕಾಶದಿಂದ ಬೆಳಗುತ್ತಲೂ ಸಮಸ್ತವನ್ನೂ ನೋಡುತ್ತಲೂ ದೇವಾದಿಗಳನ್ನು ಬೆಳಗುವಂತೆ ಮಾಡುತ್ತಲೂ ತನ್ನ ಶಕ್ತಿಯಿಂದಲೇ ದಶಾಪವಿತ್ರದ ಬಳಿಗೆ ಹರಿದುಹೋಗುತ್ತದೆ

English Translation

(The Soma) when effused enters the filter with force, giving forth light, beholding and illuminating (all things).

॥ ಸಂಹಿತಾಪಾಠಃ ॥

ಅಯಂ ಸ ಯೋ ದಿವಸ್ಪರಿ ರಘುಯಾಮಾ ಪವಿತ್ರ ಆ ।
ಸಿಂಧೋರೂರ್ಮಾ ವ್ಯಕ್ಷರತ್ ॥ ೪ ॥

॥ ಪದಪಾಠಃ ॥

ಅಯಂ । ಸಃ । ಯಃ । ದಿವಃ । ಪರಿ । ರಘುಽಯಾಮಾ । ಪವಿತ್ರೇ । ಆ ।
ಸಿಂಧೋಃ । ಊರ್ಮಾ । ವಿ । ಅಕ್ಷರತ್ ॥ ೪ ॥

॥ ಸಾಯಣಭಾಷ್ಯಂ ॥

ಅಯಂ ಸ ಸೋಮಃ ಪವಿತ್ರ ಆ ಸಿಚ್ಯಮಾನ ಇತಿ ಶೇಷಃ । ಸಿಂಧೋರ್ಜಲಸ್ರಾವಿಣ್ಯಾ ಊರ್ಮೇರ್ಮಾ ಸಂಘಾತೇ ವ್ಯಕ್ಷರತ್ । ವಿವಿಧಂ ಕ್ಷರತಿ । ಸ ಇತ್ಯುಕ್ತಂ ಕ ಇತ್ಯಾಹ । ಯೋ ದಿವಸ್ಪರಿ ದ್ಯುಲೋಕಸ್ಯೋಪರಿ ರಘುಯಾಮಾ ಲಘುಗಮನೋ ದೇವಪ್ರಾಪ್ತ್ಯೈ ಸೋಽಯಮಿತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಸೋಮವು । **ದಿವಃ ಪರಿ**—ಸ್ವರ್ಗಲೋಕದ ಮೇಲುಭಾಗದಲ್ಲಿ । **ರಘುಯಾಮಾ**—ದೇವತೆಗಳನ್ನು ಅನಾಯಾಸಗಮನದಿಂದ ಸಮೀಪಿಸುವುದೋ । **ಅಯಂ ಸಃ**—ಅಂತಹ ಈ ಸೋಮವು । **ಸಿಂಧೋಃ**—ಸಮುದ್ರದ । **ಊರ್ಮಾ**—ಅಲೆಗಳಮೇಲೆ ಉದಕದ ತುಂತುರುಗಳು ಬೀಳುವಂತೆ । **ಪವಿತ್ರೇ**—ದಶಾಪವಿತ್ರದ ಮೇಲೆ । ಆ (ಸಿಚ್ಯಮಾನಃ)—ಹನಿಗಳಾಗಿ ಬೀಳುತ್ತದೆ.

॥ ಭಾವಾರ್ಥ ॥

ಸ್ವರ್ಗದ ಮೇಲುಭಾಗದಲ್ಲಿ ದೇವತೆಗಳ ಬಳಿಗೆ ಹೋಗುವ ಈ ಸೋಮರಸವು ಸಮುದ್ರದ ಅಲೆಗಳ ಮೇಲೆ ತುಂತುರುಗಳು ಬೀಳುವಂತೆ ದಶಾಪವಿತ್ರದ ಮೇಲೆ ತುಂತುರುಗಳಾಗಿ ಬೀಳುತ್ತದೆ.

English Translation

This (Soma), who light of movement (mounts) to heaven, flows through the filter in a stream of water.

॥ ಸಂಹಿತಾಪಾಠಃ ॥

ಆವಿವಾಸನ್ಪರಾವತೋ ಅಥೋ ಅರ್ವಾವತಃ ಸುತಃ ।
ಇಂದ್ರಾಯ ಸಿಚ್ಯತೇ ಮಧು ॥ ೫ ॥

ಪದಪಾಠಃ

ಆऽವಿವಾಸನ್ । ಪರಾऽವತಃ । ಅಥೋ ಇತಿ । ಅರ್ವಾऽವತಃ । ಸುತಃ ।
ಇಂದ್ರಾಯ । ಸಿಚ್ಯತೇ । ಮಧು ॥ ೫ ॥

॥ ಸಾಯಣಭಾಷ್ಯಂ ॥

**ಸುತೋऽಭಿಷುತಃ ಸೋಮಃ ಪರಾವತಃ । ದೂರನಾಮೈತತ್ । ದೂರಸ್ಥಾನ್ ಅಥೋ ಅಪಿ ಚಾರ್ವಾವತೋऽಂತಿಕಸ್ಥಾಂಶ್ಚ ದೇವಾನಾವಿವಾಸನ್ ಸೇನ ಪರಿಚರಣಾಯೇತ್ಯರ್ಥಃ । ಇಂದ್ರಾಯೇಂದ್ರಾರ್ಥಂ ಮಧು ಮಧುಸದೃಶಃ ಸೋಮಃ ಸಿಚ್ಯತೇ ॥**

॥ ಪ್ರತಿಪದಾರ್ಥ ॥

**ಸುತಃ**—ಹಿಂಡಲ್ಪಟ್ಟ ಈ ಸೋಮವು । **ಪರಾವತಃ**—ದೂರದೇಶದಲ್ಲಿರುವ ದೇವತೆಗಳನ್ನೂ । **ಅಥೋ**—ಮತ್ತು । **ಅರ್ವಾವತಃ**—ಸಮೀಪದಲ್ಲಿರುವ ದೇವತೆಗಳನ್ನೂ । **ಆವಿವಾಸನ್**—ತನ್ನ ರಸದಿಂದ ಪರಿಚರಿಸುತ್ತಾ । **ಇಂದ್ರಾಯ**—ಇಂದ್ರನ ಪಾನಾರ್ಥವಾಗಿ । **ಮಧು**—ಮಧುರವಾದ ರಸವನ್ನು । **ಸಿಚ್ಯತೆ**—ಸಿಂಪಡಿಸುತ್ತದೆ ಅಥವಾ ಸ್ರವಿಸುತ್ತದೆ.

॥ ಭಾವಾರ್ಥ ॥

ಹಿಂಡಲ್ಪಟ್ಟಿರುವ ಈ ಸೋಮವು ದೂರದಲ್ಲಿರುವ ಮತ್ತು ಸಮೀಪಪ್ರದೇಶದಲ್ಲಿರುವ ದೇವತೆಗಳನ್ನು ತನ್ನ ರಸದಿಂದ ಸೇವಿಸುತ್ತಾ ಇಂದ್ರನ ಪಾನಾರ್ಥವಾಗಿ ಮಧುರವಾದ ರಸವನ್ನು ಸ್ರವಿಸುತ್ತದೆ.

English Translation

The effused (Soma) honouring (the gods), whether he is far off or nigh, is poured out (as) madhu for Indra.

। ಸಂಹಿತಾಪಾಠಃ ।

ಸಮೀಚೀನಾ ಅನೂಷತ ಹರಿಂ ಹಿನ್ವಂತ್ಯದ್ರಿಭಿಃ ।

ಯೋನಾವೃತಸ್ಯ ಸೀದತ ॥ ೬ ॥

॥ ಪದಪಾಠಃ ॥

ಸಂऽಈಚೀನಾಃ । ಅನೂಷತ । ಹರಿಂ । ಹಿನ್ವಂತಿ । ಅದ್ರಿऽಭಿಃ ।

ಯೋನೌ । ಋತಸ್ಯ । ಸೀದತ ॥ ೬ ॥

। ಸಾಯಣಭಾಷ್ಯಂ ।

**ಸಮೀಚೀನಾಃ ಸಮ್ಯಗಂಚಿತಾಃ ಸಂಗತಾಃ ಸ್ತೋತಾರೋऽನೂಷತ । ಸ್ತುವಂತಿ । ಕಿಂ ಚ ಸೋಮಂ ಹರಿಂ ಹರಿತವರ್ಣಂ ಹಿನ್ವಂತಿ । ಪ್ರೇರಯಂತಿ । ಗಮಯಂತ್ಯದ್ರಿಭಿರ್ಗ್ರಾವಭಿಃ। ಯಸ್ಮಾದೇವಂ ತಸ್ಮಾದೃತಸ್ಯ ಯಜ್ಞಸ್ಯ ಯೋನೌ ಸ್ಥಾನೇ ಸೀದತ । ನಿಷಣ್ಣಾ ಭವತ ಹೇ ದೇವಾಃ ॥**

। ಪ್ರತಿಪದಾರ್ಥ ॥

**ಸಮೀಚೀನಾಃ**—ಸ್ತೋತ್ರಮಾಡುವ ಜನರೆಲ್ಲರೂ ಒಟ್ಟಿಗೆ ಒಂದೆಡೆ ಸೇರಿ । **ಅನೂಷತ**—ಸ್ತುತಿಸುತ್ತಾರೆ। **ಹರಿಂ**—ಹರಿತವರ್ಣದ ಸೋಮಲತೆಯನ್ನು । **ಅದ್ರಿಭಿಃ**—ಕಲ್ಲುಗಳಿಂದ । **ಹಿನ್ವಂತಿ**—ಜಜ್ಜಿ ರಸವನ್ನು ದ್ರವಿಸುವಂತೆ ಪ್ರೇರಿಸುತ್ತಾರೆ (ಆದುದರಿಂದ ಎಲೈ ದೇವತೆಗಳೇ) । **ಋತಸ್ಯ**—ಯಜ್ಞದ । **ಯೋನೌ**—ಸ್ಥಾನದಲ್ಲಿ । **ಸೀದತ**—ಕುಳಿತುಕೊಳ್ಳಿ.

। ಭಾವಾರ್ಥ ।

ಸ್ತೋತೃಜನರೆಲ್ಲರೂ ಒಂದೆಡೆ ಸೇರಿ ಒಟ್ಟಿಗೆ ಒಂದೇ ಧ್ವನಿಯಿಂದ ಸ್ತುತಿಸುತ್ತಾರೆ. ಹಸರುಬಣ್ಣದ ಸೋಮಲತೆಯನ್ನು ಕಲ್ಲುಗಳಿಂದ ಜಜ್ಜಿ ರಸವನ್ನು ಸೂಸುವಂತೆ ಮಾಡುತ್ತಾರೆ. ಆದುದರಿಂದ ಎಲೈ ದೇವತೆಗಳೇ ನೀವು ಈ ಯಜ್ಞದ ಸ್ಥಾನದಲ್ಲ ಬಂದು ಕುಳಿತುಕೊಳ್ಳಿ.

## English Translation

The united (worshippers) praise (him), they squeeze (him) forth green-tinted with the stones; sit dowu (O gods) at the place of sacrifice.

# ನಲವತ್ತನೆಯ ಸೂಕ್ತವು

॥ ಸಾಯಣಭಾಷ್ಯಂ ॥

**ಪುನಾನ ಇತಿ ಷಡೃಚಂ ಷೋಡಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಪುನಾನ ಇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—**ಪುನಾನಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನಾರನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ. ಅನುಕ್ರಮಣಿಕೆಯಲ್ಲಿ—**ಪುನಾನಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೪೦

ಮಂಡಲ—೯ । ಅನುವಾಕ—೨ । ಸೂಕ್ತ—೪೦ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೩೦ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಬೃಹನ್ಮತಿಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪುನಾನೋ ಅಕ್ರಮೀದಭಿ ವಿಶ್ವಾ ಮೃಧೋ ವಿಚರ್ಷಣಿಃ ।
ಶುಂಭಂತಿ ವಿಪ್ರಂ ಧೀತಿಭಿಃ ॥ ೧ ॥

॥ ಪದಪಾಠಃ ॥

ಪುನಾನಃ । ಅಕ್ರಮೀತ್ । ಅಭಿ । ವಿಶ್ವಾಃ । ಮೃಧಃ । ವಿऽಚರ್ಷಣಿಃ ।
ಶುಂಭಂತಿ । ವಿಪ್ರಂ । ಧೀತಿऽಭಿಃ ॥ ೧ ॥

॥ ಸಾಯಣಭಾಷ್ಯಂ ॥

**ಪುನಾನಃ ಪೂಯಮಾನೋ ವಿಚರ್ಷಣಿರ್ದ್ರಷ್ಟಾ ಸೋಮೋ ವಿಶ್ವಾಃ ಸರ್ವಾನ್ಮೃಧೋ ಹಿಂಸಕಾಞ್ಛತ್ರೂನಭ್ಯಕ್ರಮೀತ್ । ಅತಿಕ್ರಾಂತವಾನ್ । ತಂ ವಿಪ್ರಂ ಮೇಧಾವಿನಂ ಧೀತಿಭಿಃ ಕರ್ಮಭಿರಭಿಷವಾದಿಭಿಃ ಸ್ತುತಿಭಿರ್ವಾ ಶುಂಭಂತಿ । ದೀಪಯಂತಿ । ಅಲಂಕುರ್ವಂತಿ ॥**

॥ಪ್ರತಿಪದಾರ್ಥ॥

**ಪುನಾನಃ**—ಶುದ್ಧೀಕಾರಕನಾದ । **ವಿಚರ್ಷಣಿಃ**—ಸಮಸ್ತವನ್ನೂ ನೋಡುವ ಈ ಸೋಮದೇವನು । **ವಿಶ್ವಾಃ**—ಸಮಸ್ತರಾದ । **ಮೃಧಃ**—ಹಿಂಸಕರಾದ ಶತ್ರುಗಳನ್ನು । **ಅಭಿ ಅಕ್ರಮೀತ್**—ಅತಿಕ್ರಮಿಸುತ್ತಾನೆ । **ವಿಪ್ರಂ**—ಮೇಧಾವಿಯಾದ ಆ ಸೋಮನನ್ನು । **ಧೀತಿಭಿಃ**—ಅಭಿಷವಾದಿಕರ್ಮಗಳಿಂದ ಅಥವಾ ಸ್ತುತಿಗಳಿಂದ । **ಶುಂಭಂತಿ**—ಅಲಂಕರಿಸುತ್ತಾರೆ. (ಪ್ರಶಂಸಿಸುತ್ತಾರೆ).

॥ ಭಾವಾರ್ಥ ॥

ಶುದ್ಧಿಕಾರಕನೂ, ಸಮಸ್ತವನ್ನೂ ನೋಡುವವನೂ ಆದ ಈ ಸೋಮದೇವನು ಹಿಂಸಕರಾದ ಸಮಸ್ತ ಶತ್ರುಗಳನ್ನೂ ಅತಿಕ್ರಮಿಸುತ್ತಾನೆ ಎಂದರೆ ಪರಾಙ್ಮುಖರನ್ನಾಗಿ ಮಾಡುತ್ತಾನೆ. ಮೇಧಾವಿಯಾದ ಈ ಸೋಮನನ್ನು ಅಭಿಷವಕರ್ಮಾದಿಗಳಿಂದಲೂ ಅಥವಾ ಸ್ತುತಿಗಳಿಂದಲೂ ಅಲಂಕರಿಸುತ್ತಾರೆ ಎಂದರೆ ಪ್ರಶಂಸಿಸುತ್ತಾರೆ

## English Translation

The pure all-seeing (Soma) has overcome all enemies ; (the worshippers) grace the sage (Soma) with their praises.

॥ ಸಂಹಿತಾಪಾಠಃ ॥

ಆ ಯೋನಿಮರುಣೋ ರುಹದ್ಗಮದಿಂದ್ರಂ ವೃಷಾ ಸುತಃ ।
ಧ್ರುವೇ ಸದಸಿ ಸೀದತಿ ॥ ೨ ॥

॥ ಪದಪಾಠಃ ॥

ಆ । ಯೋನಿಂ । ಅರುಣಃ । ರುಹತ್ । ಗಮತ್ । ಇಂದ್ರಂ । ವೃಷಾ । ಸುತಃ ।
ಧ್ರುವೇ । ಸದಸಿ । ಸೀದತಿ ॥ ೨ ॥

॥ ಸಾಯಣಭಾಷ್ಯಂ ॥

**ಅಯಮರುಣೋಽರುಣವರ್ಣಃ ಸೋಮೋ ಯೋನಿಂ ಸ್ಥಾನಂ ದ್ರೋಣಕಲಶಮಾ ರುಹತ್ । ಆರೋಹತಿ । ತತ ಇಂದ್ರಂ ಗಮತ್ । ಗಚ್ಛತಿ । ಕುತಃ ಸನ್ । ಅಯಂ ವೃಷಾ ವರ್ಷಕಃ ಫಲಾನಾಂ ಸುತೋಽಭಿಷುತಃ ಸನ್ಗತ್ವಾ ಧ್ರುವೇ ಸದಸಿ ಸ್ಥಿರೇ ಸ್ಥಾನೇ ದ್ಯುಲೋಕಾಖ್ಯೇ ಸೀದತಿ । ನಿವಸತಿ ॥**

॥ ಪ್ರತಿಪದಾರ್ಥ ॥

**ಅರುಣಃ**—ಹೊಂಬಣ್ಣವುಳ್ಳ ಈ ಸೋಮರಸವು । **ಯೋನಿಂ**—ಸ್ವಸ್ಥಾನವಾದ ದ್ರೋಣಕಲಶವನ್ನು । **ಆ ರುಹತ್**—ಹತ್ತಿ ಕುಳಿತುಕೊಳ್ಳುತ್ತದೆ (ಅನಂತರ) । **ಇಂದ್ರಂ**—ಇಂದ್ರನ ಬಳಿಗೆ । **ಗಮತ್**—(ಆಹುತಿ ಮೂಲಕ) ಹೋಗುತ್ತದೆ । **ವೃಷಾ**—ಕಾಮವರ್ಷಕವಾದ ಈ ಸೋಮವು । **ಸುತಃ**—ಹಿಂಡಲ್ಪಟ್ಟ ಮೇಲೆ । **ಧ್ರುವೇ**—ಸ್ಥಿರವಾದ । **ಸದಸಿ**—ಸ್ಥಾನವಾದ ಸ್ವರ್ಗಲೋಕದಲ್ಲಿ । **ಸೀದಸಿ**—ನೆಲೆಸುತ್ತದೆ.

॥ ಭಾವಾರ್ಥ ॥

(ಬಭ್ರು) ಕೆಂಪುಬಣ್ಣದಿಂದ ಶೋಭಿಸುವ ಈ ಸೋಮರಸವು ತನ್ನ ಸ್ಥಾನವಾದ ದ್ರೋಣಕಲಶವನ್ನು ಸೇರಿ ಅಲ್ಲಿಂದ (ಆಹುತಿಯ ಮೂಲಕ) ಇಂದ್ರನ ಬಳಿಗೆ ಹೋಗುತ್ತದೆ. ಮತ್ತು ಹಿಂಡಲ್ಪಟ್ಟ ಆ ರಸವು ಸ್ಥಿರವಾದ ಸ್ಥಾನವೆಂದು ಪ್ರಸಿದ್ಧವಾದ ದ್ಯುಲೋಕದಲ್ಲಿ ಹೋಗಿ ನೆಲಸುತ್ತದೆ.

English Translation

The twany-hued showerer (of benefits) when effused ascends to his place; he goes to Indra: he dwells in the fixed abode (of heaven)

॥ ಸಂಹಿತಾಪಾಠಃ ॥

ನೂ ನೋ ರಯಿಂ ಮಹಾಮಿಂದೋಽಸ್ಮಭ್ಯಂ ಸೋಮ ವಿಶ್ವತಃ ।
ಆ ಪವಸ್ವ ಸಹಸ್ರಿಣಂ ॥ ೩ ॥

॥ ಪದಪಾಠಃ ॥

ನು । ನಃ । ರಯಿಂ । ಮಹಾಂ । ಇಂದೋ ಇತಿ । ಅಸ್ಮಭ್ಯಂ । ಸೋಮ । ವಿಶ್ವತಃ ।
ಆ । ಪವಸ್ವ । ಸಹಸ್ರಿಣಂ ॥ ೩ ॥

॥ ಸಾಯಣಭಾಷ್ಯಂ ॥

**ಹೇ ಸೋಮ ಅಭಿಷುತಸ್ತ್ವಂ ಹೇ ಇಂದೋ ನೋಽಸ್ಮಭ್ಯಂ ನು ಕ್ಷಿಪ್ರಂ ಮಹಾಂ ಮಹಾಂತಂ ಸಹಸ್ರಿಣಮಸಂಖ್ಯಾತಂ ರಯಿಂ ಧನಂ ವಿಶ್ವತ ಆ ಪವಸ್ವ । ಸರ್ವತಃ ಪರಿಸ್ರವ ॥**

॥ ಪ್ರತಿಪದಾರ್ಥ ॥

**ಸೋಮ**—ಹಿಂಡಲ್ಪಟ್ಟ ಎಲೈ ಸೋಮನೇ । **ಇಂದೋ**—ಸ್ರವಿಸುತ್ತಿರುವ ಎಲೈ ಸೋಮನೇ ( ನೀನು ) **ನಃ**—ನಮಗೆ । **ನು**—ಬೇಗನೆ । **ಮಹಾಂ**—ಬಹಳವಾದುದೂ । **ಸಹಸ್ರಿಣಂ**—ಅಪರಿಮಿತವಾದುದೂ ಆದ । **ರಯಿಂ**—ಧನವನ್ನು । **ವಿಶ್ವತಃ**—ಸಮಸ್ತ ದಿಕ್ಕುಗಳಿಂದಲೂ । **ಆ ಪವಸ್ವ**—ತಂದೊದಗಿಸು.

॥ ಭಾವಾರ್ಥ ॥

ಹಿಂಡಲ್ಪಟ್ಟು ಸ್ರವಿಸುತ್ತಿರುವ ಎಲೈ ಸೋಮನೇ, ನಮಗೆ ಬಹಳವಾದುದೂ ಅಪರಿಮಿತವಾದುದೂ ಆದ ಧನವನ್ನು ಸಮಸ್ತದಿಕ್ಕುಗಳಿಂದಲೂ ಬೇಗನೆ ತಂದೊದಗಿಸು.

English Translation

O Indu, O Soma, quickly pour upon us from all quarters vast and infinite riches.

॥ ಸಂಹಿತಾಪಾಠಃ ॥

ವಿಶ್ವಾ ಸೋಮ ಪವಮಾನ ದ್ಯುಮ್ನಾನೀಂದವಾ ಭರ ।

ವಿದಾಃ ಸಹಸ್ರಿಣೀರಿಷಃ ॥ ೪ ॥

॥ ಪದಪಾಠಃ ॥

ವಿಶ್ವಾ । ಸೋಮ । ಪವಮಾನ । ದ್ಯುಮ್ನಾನಿ । ಇಂದೋ ಇತಿ । ಆ । ಭರ ।

ವಿದಾಃ । ಸಹಸ್ರಿಣೀಃ । ಇಷಃ ॥ ೪ ॥

॥ ಸಾಯಣಭಾಷ್ಯಂ ॥

ಹೇ ಸೋಮ ಪವಮಾನ ಪೂಯಮಾನೇಂದೋ ದೀಪ್ತ ತ್ವಂ ವಿಶ್ವಾ ಸರ್ವಾಣಿ ಬಹುವಿಧಾನಿ ದ್ಯುಮ್ನಾನಿ ದ್ರವಿಣಾನ್ಯಾಭರ । ಆಹರ । ವಿದಾ ಲಂಭಯ ಚ ಸಹಸ್ರಿಣೀಃ ಸಹಸ್ರಸಂಖ್ಯಾಕಾನೀಷೋಽನ್ನಾನಿ ॥

॥ ಪ್ರತಿಪದಾರ್ಥ ॥

**ಪವಮಾನ**—ಶುದ್ಧಿಕಾರಕನೂ । **ಇಂದೋ**—ಪ್ರಕಾಶಯುತನೂ ಆದ । **ಸೋಮ**—ಎಲೈ ಸೋಮನೇ । **ವಿಶ್ವಾ**—ಸಮಸ್ತವಾದ ಅಥವಾ ಬಹು ವಿಧವಾದ । **ದ್ಯುಮ್ನಾನಿ**—ಧನಗಳನ್ನು । **ಆ ಭರ**—ನಮಗೆ ತಂದೊದಗಿಸು । **ಸಹಸ್ರಿಣೀಃ**—ಸಹಸ್ರಸಂಖ್ಯಾಕವಾದ । **ಇಷಃ**—ಅನ್ನಗಳನ್ನೂ । **ವಿದಾಃ**—ಒದಗಿಸಿಕೊಡು.

॥ ಭಾವಾರ್ಥ ॥

ಶುದ್ಧಿಕಾರಕನೂ, ಪ್ರಕಾಶಮಾನನೂ ಆದ ಎಲೈ ಸೋಮನೇ, ಸಮಸ್ತವಾದ ಅಥವಾ ಬಹು ವಿಧವಾದ ದ್ರವ್ಯಗಳನ್ನೂ ಸಹಸ್ರಸಂಖ್ಯಾಕವಾದ ಅನ್ನಗಳನ್ನೂ ನಮಗೆ ತಂದೊದಗಿಸಿಕೊಡು.

English Translation

O purified Soma, O Indu, bring all sorts of wealth, bestow unlimited food.

॥ ಸಂಹಿತಾಪಾಠಃ ॥

ಸ ನಃ ಪುನಾನ ಆ ಭರ ರಯಿಂ ಸ್ತೋತ್ರೇ ಸುವೀರ್ಯಂ ।

ಜರಿತುರ್ವರ್ಧಯಾ ಗಿರಃ ॥ ೫ ॥

॥ ಪದಪಾಠಃ ॥

ಸಃ । ನಃ । ಪುನಾನಃ । ಆ । ಭರ । ರಯಿಂ । ಸ್ತೋತ್ರೇ । ಸುಽವೀರ್ಯಂ ।

ಜರಿತುಃ । ವರ್ಧಯ । ಗಿರಃ ॥ ೫ ॥

॥ ಸಾಯಣಭಾಷ್ಯಂ ॥

**ಹೇ ಸೋಮ ಸ ತ್ವಂ ನೋಽಸ್ಮಭ್ಯಂ ಸ್ತೋತ್ರೇ ಸ್ತೋತೃಭ್ಯಃ ಪುನಾನಃ ಪೂಯಮಾನೋಽಭಿಷೂಯಮಾಣ ಆ ಭರ। ಆಹರ। ಕಿಂ। ರಯಿಂ ಧನಂ। ಕೀದೃಶಂ। ಸುವೀರ್ಯಂ ಸುಪುತ್ರಂ। ಕಿಂಚ ಜರಿತುಃ ಸ್ತೋತುರ್ಗಿರಃ ಸ್ತುತೀರ್ವರ್ಧಯ ॥**

॥ ಪ್ರತಿಪದಾರ್ಥ ॥

(ಎಲೈ ಸೋಮದೇವನೇ) **ಪುನಾನಃ**—ಹಿಂಡಲ್ಪಡುವ। **ಸಃ**-ಆ ನೀನು। **ನಃ**—ನಮಗೂ। **ಸ್ತೋತ್ರೇ**-ನಿನ್ನನ್ನು ಸ್ತೋತ್ರಮಾಡುವ ಪುರುಷನಿಗೂ। **ಸುವೀರ್ಯಂ**—ಉತ್ತಮ ಪುತ್ರಸಹಿತವಾದ। **ರಯಿಂ**—ಧನವನ್ನು। **ಆ ಭರ**—ತಂದೊದಗಿಸು (ಮತ್ತು)। **ಜರಿತುಃ**—ನಿನ್ನನ್ನು ಸ್ತುತಿಸುವ ಸ್ತೋತೃವಿನ। **ಗಿರಃ**—ಸ್ತುತಿವಾಕ್ಯಗಳನ್ನು। **ವರ್ಧಯ**—ವೃದ್ಧಿಪಡಿಸು.

॥ ಭಾವಾರ್ಥ ॥

ಎಲೈ ಸೋಮದೇವನೇ, ಹಿಂಡಲ್ಪಡುವ ನೀನು ನಮಗೂ, ನಿನ್ನನ್ನು ಸ್ತುತಿಸುವವನಿಗೂ ಧನವನ್ನೂ ಸುಪುತ್ರನನ್ನೂ ಸಂಪಾದಿಸಿಕೊಡು. ನಿನ್ನನ್ನು ಸ್ತುತಿಸುವ ಸ್ತೋತ್ರಕರ್ತನ ಸ್ತುತಿವಾಕ್ಯಗಳನ್ನು ವೃದ್ಧಿಪಡಿಸು

English Translation

O Soma, being purified, bring us your worshippers wealth with male offspring, recompense the praises of him who glorifies you

॥ ಸಂಹಿತಾಪಾಠಃ ॥

ಪುನಾನ ಇಂದವಾಭರ ಸೋಮ ದ್ವಿಬರ್ಹಸಂ ರಯಿಂ।
ವೃಷನ್ನಿಂದೋ ನ ಉಕ್ಥ್ಯಂ ॥ ೬ ॥

॥ ಪದಪಾಠಃ ॥

ಪುನಾನಃ। ಇಂದೋ ಇತಿ। ಆ। ಭರ। ಸೋಮ। ದ್ವಿಽಬರ್ಹಸಂ। ರಯಿಂ।
ವೃಷನ್। ಇಂದೋ ಇತಿ। ನಃ। ಉಕ್ಥ್ಯಂ॥ ೬ ॥

॥ ಸಾಯಣಭಾಷ್ಯಂ ॥

**ಹೇ ಇಂದೋ ಸೋಮ ಪುನಾನಃ ಪೂಯಮಾನಸ್ತ್ವಮಾ ಭರ। ಆಹರ। ಕಿಂ। ರಯಿಂ ಧನಂ ದ್ವಿಬರ್ಹಸಂ ದ್ಯಯೋರ್ದ್ಯಾವಾಪೃಥಿವ್ಯಾಖ್ಯಯೋಃ ಸ್ಥಾನಯೋಃ ಪರಿವೃದ್ಧಂ। ತದೇವಾಹ। ಹೇ ಇಂದೋ ವೃಷನ್ವರ್ಷಕ ನೋಽಸ್ಮಭ್ಯಮುಕ್ಥ್ಯಂ ಸ್ತುತ್ಯಂ ಧನಮಾ ಭರ ॥**

॥ ಪ್ರತಿಪದಾರ್ಥ ॥

**ಇಂದೋ**—ಪ್ರಕಾಶಮಾನನಾದ । **ಸೋಮ**—ಎಲೈ ಸೋಮನೇ ನೀನು । **ಪುನಾನಃ**—ಹಿಂಡಲ್ಪಟ್ಟವನಾಗಿ । **ದ್ವಿಬರ್ಹಸಂ**—ದ್ಯಾವಾ ಪೃಥಿವಿಗಳಲ್ಲಿ ಶ್ರೇಷ್ಠವಾಗಿರುವ । **ರಯಿಂ**—ಧನವನ್ನು । **ಆ ಭರ**—ನಮಗೆ ತಂದುಕೊಡು । **ಇಂದೋ**—ಪ್ರಕಾಶಮಾನನೂ । **ವೃಷನ್**—ಕಾಮವರ್ಷಕನೂ ಆದ ಎಲೈ ಸೋಮನೇ । **ನಃ**—ನಮಗೆ । **ಉಕ್ಥ್ಯಂ**—ಪ್ರಶಸ್ಯವಾದ ಧನವನ್ನು ತಂದು ಕೊಡು.

॥ ಭಾವಾರ್ಥ ॥

ಪ್ರಕಾಶಮಾನನಾದ ಎಲೈ ಸೋಮನೇ ನೀನು ಹಿಂಡಲ್ಪಟ್ಟನಂತರ ನಮಗೆ, ದ್ಯಾವಾಪೃಥಿವಿಗಳಲ್ಲಿರುವ ಶ್ರೇಷ್ಠವಾದ ಧನವನ್ನು ತಂದುಕೊಡು. ಕಾಮವರ್ಷಕನೂ ಪ್ರಕಾಶಮಾನನೂ ಆದ ಎಲೈ ಸೋಮನೇ, ನಮಗೆ ಪ್ರಶಸ್ಯವಾದ ಧನಾದಿಗಳನ್ನು ತಂದುಕೊಡು.

English Translation

Indu, Soma, being purified, bring us wealth from both worlds; Indu, Showerer (of benefits), (bring us) glorious (wealth).

## ನಲವತ್ತ ಒಂದನೆಯ ಸೂಕ್ತವು.

॥ ಸಾಯಣಭಾಷ್ಯಂ ॥

**ಪ್ರ ಯೋ ಗಾವ ಇತಿ ಷಡೃಚಂ ಸಪ್ತದಶಂ ಸೂಕ್ತಂ ಕಾಣ್ವಸ್ಯ ಮೇಧ್ಯಾತಿಥೇರಾರ್ಷಂ ಗಾಯತ್ರಂ ಪವಮಾನಸೋಮದೇವತಾಕಂ । ತಥಾ ಚಾನುಕ್ರಾಂತಂ । ಪ್ರ ಯೋ ಗಾವೋ ಮೇಧ್ಯಾತಿಥಿರಿತಿ ॥ ಗತೋ ವಿನಿಯೋಗಃ ॥**

ಅನುವಾದವು—**ಪ್ರ ಯೋ ಗಾವಃ** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನೇಳನೆಯ ಸೂಕ್ತವು. ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಮೇಧ್ಯಾತಿಥಿಃ ಕಾಣ್ವಃ ಎಂಬುವನು ಋಷಿಯು; ಪವಮಾನಸೋಮನು ದೇವತೆಯು; ಗಾಯತ್ರೀಛಂದಸ್ಸು. ಅನುಕ್ರಮಣಿಕೆಯಲ್ಲಿ—**ಪ್ರ ಯೋ ಗಾವೋ ಮೇಧ್ಯಾತಿಥಿಃ** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

### ಸೂಕ್ತ—೪೧

ಮಂಡಲ—೯ ॥ ಅನುವಾಕ—೨ ॥ ಸೂಕ್ತ—೪೧ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೩೧ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಮೇಧ್ಯಾತಿಥಿಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಪ್ರ ಯೋ ಗಾವೋ ನ ಭೂರ್ಣಯಸ್ತ್ವೇಷಾ ಅಯಾಸೋ
ಅಕ್ರಮುಃ ।

ಘ್ನಂತಃ ಕೃಷ್ಣಾಮುಪ ತ್ವಚಂ ॥ ೧ ॥

॥ ಪದಪಾಠಃ ॥

ಪ್ರ । ಯೇ । ಗಾವಃ । ನ । ಭೂರ್ಣಯಃ । ತ್ವೇಷಾಃ । ಅಯಾಸಃ । ಅಕ್ರಮುಃ ।

ಘ್ನಂತಃ । ಕೃಷ್ಣಾಂ । ಅಪ । ತ್ವಚಂ ॥ ೧ ॥

॥ ಸಾಯಣಭಾಷ್ಯಂ ॥

**ಯೇಽಭಿಷುತಾಃ ಸೋಮಾ ಗಾವೋ ನೋದಕಾನೀವ ತಾನಿ ಯಥಾ ತೂರ್ಣಮುಧಃ ಪತಂತಿ ತದ್ವತ್ । ಏವಂ ವೋಪಮಾಯಂತೇ । ಯಥಾ ಗಾವಃ ಸ್ವಗೋಷ್ಠಂ ಪ್ರತ್ಯಾಶು ಗಚ್ಛಂತಿ ತದ್ವತ್ । ಅಥವಾ ಗಾವಃ ಸ್ತುತಿವಾಚಃ । ತಾ ಯಥಾ ಸ್ತುತ್ಯಂ ಪ್ರತಿ ಕ್ಷಿಪ್ರಂ ಪ್ರಾಪ್ನುವಂತಿ ತದ್ವತ್ । ಭೂರ್ಣಯಃ ಕ್ಷಿಪ್ರಾಸ್ತ್ವೇಷಾ ದೀಪ್ತಾ ಅಯಾಸೋಽಯಾ ಗಮನಶೀಲಾಃ ಕೃಷ್ಣಾಂ ತ್ವಚಂ । ಕೃಷ್ಣಾ ತ್ವಗ್ರಕ್ಷಾಃ । ತಮುಪಘ್ನಂತೋ ನಿಘ್ನಂತಃ । ತ್ವಚಿಃ ಸಂವರಣಕವರ್ಮಾ । ಈದೃಗ್ಭೂತಾಃ ಸೋಮಾಃ ಪ್ರಾಕ್ರಮುಃ । ತಾನ್ಸ್ತುತೇತಿ ಶೇಷಃ ॥**

॥ ಪ್ರತಿಪದಾರ್ಥ ॥

**ಭೂರ್ಣಯಃ**—ವೇಗವಾಗಿ ಹರಿಯುವವೂ । **ತ್ವೇಷಾಃ**—ಪ್ರಕಾಶಮಾನವೂ । **ಅಯಾಸಃ**—ಹರಿಯುವ ಸ್ವಭಾವವುಳ್ಳವೂ ಆದ । **ಯೇ**—ಹಿಂಡಲ್ಪಟ್ಟ ಯಾವ ಸೋಮರಸಗಳು । **ಗಾವೋ ನ**—ತಗ್ಗು ಪ್ರದೇಶಕ್ಕೆ ನುಗ್ಗಿ ಹರಿಯುವ ನೀರಿನಂತೆ [ಅಥವಾ । [**ಗಾವೋ ನ**—ಗೋವುಗಳು ತಮ್ಮ ಕೊಟ್ಟಿಗೆಗೆ ಶೀಘ್ರವಾಗಿ ಹೋಗುವಂತೆ ಅಥವಾ । **ಗಾವೋ ನ**—ಸ್ತುತಿವಾಕ್ಯಗಳು ದೇವತೆಗಳನ್ನು ಶೀಘ್ರವಾಗಿ ಸಮೀಪಿಸುವಂತೆ] । **ಕೃಷ್ಣಾಂ**—ಕಪ್ಪು ಬಣ್ಣದ । **ತ್ವಚಂ**—ಚರ್ಮವುಳ್ಳ ಕಪ್ಪುಜನವನ್ನು । **ಘ್ನಂತಃ**—ಕೊಲ್ಲುತ್ತಾ । **ಪ್ರ ಅಕ್ರಮುಃ**—ವೇಗವಾಗಿ ಹರಿಯುವವೋ (ಅಂತಹ ಸೋಮರಸಗಳನ್ನು ಸ್ತೋತ್ರಮಾಡಿ).

॥ ಭಾವಾರ್ಥ ॥

ಎಲೈ ಋತ್ವಿಗ್ಜನರೇ, ವೇಗವಾಗಿ ಹರಿಯುವ ಸ್ವಭಾವವುಳ್ಳ ಹಿಂಡಲ್ಪಟ್ಟ ಈ ಸೋಮರಸಗಳು ತಗ್ಗಾದ ಪ್ರದೇಶಕ್ಕೆ ಹರಿಯುವ ನೀರು ಬೇಗನೆ ನುಗ್ಗಿ ಹರಿಯುವಂತೆ [ಅಥವಾ ಗೋವುಗಳು ತಮ್ಮ ಕೊಟ್ಟಿಗೆಯೊಳಕ್ಕೆ ಬೇಗನೆ ಪ್ರವೇಶಿಸುವಂತೆ ಅಥವಾ ಸ್ತುತಿವಾಕ್ಯಗಳು ಉದ್ದಿಷ್ಟದೇವತೆಗಳನ್ನು ಬೇಗನೆ ಸಮೀಪಿಸುವಂತೆ] ಕಪ್ಪುಜನರನ್ನು ಕೊಲ್ಲುತ್ತಾ ವೇಗವಾಗಿ ಪ್ರವಹಿಸುತ್ತವೆ ಅಂತಹ ಈ ಸೋಮರಸಗಳನ್ನು ಸ್ತೋತ್ರಮಾಡಿರಿ.

## English Translation

(Praise the Soma-juices) with descend like streams of water, swift, brilliant, rapid, driving off the black skinned (Rakshasa).

॥ ಸಂಹಿತಾಪಾಠಃ ॥

ಸುವಿತಸ್ಯ ಮನಾಮಹೇಽತಿ ಸೇತುಂ ದುರಾವ್ಯಂ ।
ಸಾಹ್ವಾಂಸೋ ದಸ್ಯುಮವ್ರತಂ ॥ ೨ ॥

॥ ಪದಪಾಠಃ ॥

ಸುವಿತಸ್ಯ । ಮನಾಮಹೇ । ಅತಿ । ಸೇತುಂ । ದುಃಽಆವ್ಯಂ ।
ಸಾಹ್ವಾಂಸಃ । ದಸ್ಯುಂ । ಅವ್ರತಂ ॥ ೨ ॥

॥ ಸಾಯಣಭಾಷ್ಯಂ ॥

ಸುವಿತಸ್ಯ । ಶೋಭನಂ ಪ್ರಾಪ್ತಃ ಸುವಿತಃ । ಶೋಭನಸ್ಯ ಸೋಮಸ್ಯ ಸೇತುಂ ರಕ್ಷೋವಿಷಯಂ ಬಂಧನಂ ದುರಾವ್ಯಂ ದುಷ್ಟಮತಿಂ ಚ ರಕ್ಷಸಾಂ ಬಂಧನಂ ತೇಷಾಂ ಹನನಬುದ್ಧಿಂ ಚ ಸೋಮಸ್ಯ ಸ್ವಕಾ ಮನಾಮಹೇ । ಸ್ತುಮಃ । ಕಥಂ ಸ್ತುಮ ಇತಿ ತದುಚ್ಯತೇ । ಅವ್ರತಮಕರ್ಮಾಣಂ ದಸ್ಯುಂ ಶತ್ರುಂ ಸಾಹ್ವಾಂಸೋಽಭಿಭವಂತಃ ॥

॥ ಪ್ರತಿಪದಾರ್ಥ ॥

**ಅವ್ರತಂ**—ಯಜ್ಞಾದಿಕರ್ಮಗಳನ್ನು ಮಾಡದಿರುವ । **ದಸ್ಯುಂ**—ದಸ್ಯುವೆಂಬ ಈ ಕಷ್ಟ ಜನರನ್ನು । **ಸಾಹ್ವಾಂಸಃ**—ಸೋಲಿಸುತ್ತಿರುವ ನಾವು । **ಸುವಿತಸ್ಯ**—ಉತ್ತಮವಾದ ಈ ಸೋಮರಸದ । **ಸೇತುಂ**—ರಾಕ್ಷಸರ ಸಂಬಂಧವಾದ । **ದುರಾವ್ಯಂ**—ಕೆಟ್ಟಬುದ್ಧಿಯನ್ನು ನಿಗ್ರಹಿಸುವ ಸಾಮರ್ಥ್ಯವನ್ನು ಅಥವಾ ಶತ್ರುಹನನ ಸಾಮರ್ಥ್ಯವನ್ನು । **ಮನಾಮಹೇ**—ಸ್ತುತಿಸುತ್ತೇವೆ

॥ ಭಾವಾರ್ಥ ॥

ಯಜ್ಞಾದಿಕರ್ಮಗಳನ್ನು ಮಾಡದಿರುವ ದಸ್ಯುಜನರನ್ನು ಸೋಲಿಸುತ್ತಿರುವ ನಾವು ಈ ಶ್ರೇಷ್ಠವಾದ ಸೋಮರಸದ ಶತ್ರುಸಂಹಾರಕವಾದ ಸಾಮರ್ಥ್ಯವನ್ನು ಸ್ತುತಿಸುತ್ತೇವೆ.

## English Translation

We praise the auspicious Soma's imprisonment (of the Rakshasas) and hostile (intent against them), while we triumph over the enemy who performs no rites.

॥ ಸಂಹಿತಾಪಾಠಃ ॥

ಶೃಣ್ವೇ ವೃಷ್ಟೇರಿವ ಸ್ವನಃ ಪವಮಾನಸ್ಯ ಶುಷ್ಮಿಣಃ ।
ಚರಂತಿ ವಿದ್ಯುತೋ ದಿವಿ ॥ ೩ ॥

॥ ಪದಪಾಠಃ ॥

ಶೃಣ್ವೇ । ವೃಷ್ಟೇಃऽಇವ । ಸ್ವನಃ । ಪವಮಾನಸ್ಯ । ಶುಷ್ಮಿಣಃ ।

ಚರಂತಿ । ವಿऽದ್ಯುತಃ । ದಿವಿ ॥ ೩ ॥

॥ ಸಾಯಣಭಾಷ್ಯಂ ॥

ಶೃಣ್ವೇ । ಶ್ರೂಯತೇ । ಕಿಂ। ಸೋಮಸ್ವನಃ । ಕಿಮಿವ । ವೃಷ್ಟೇರ್ವರ್ಷಣಸ್ಯ ಸ್ವನ ಇವ । ತಸ್ಯ ಯಥಾ ಮಹಾನ್ಸ್ವನಃ ಶ್ರೂಯತೇ ತದ್ವತ್ಪೃಥೂತರಸಾಪಾತಸಮಯೇ ಶ್ರೂಯತೇ । ಕಸ್ಯ ಸ್ವನ ಇತಿ ತತ್ರಾಹ । ಪವಮಾನಸ್ಯ ಪೂಯಮಾನಸ್ಯ ಶುಷ್ಮಿಣೋ ಜಲವತಃ । ತಸ್ಯೈವ ವಿದ್ಯುತೋ ದೀಪ್ತಯೋ ದಿವ್ಯಂತರಿಕ್ಷೇ ಕ್ಷರಂತಿ ॥

॥ ಪ್ರತಿಪದಾರ್ಥ ॥

ಶುಷ್ಮಿಣಃ—ಬಲದಾಯಕವಾದ । ಪವಮಾನಸ್ಯ—ಹಿಂಡಲ್ಪಡುವ ಈ ಸೋಮರಸದ । ಸ್ವನಃ—ಜಳಜಳನೆ ಹರಿಯುವ ಶಬ್ದವು । ವೃಷ್ಟೇರಿವ—ಧಾರಾಕಾರವಾಗಿಯೂ ರಭಸವಾಗಿಯೂ ಹುಯ್ಯುವ ಮಳೆಯ ಧ್ವನಿಯಂತೆ । ಶೃಣ್ವೇ—ಕೇಳಿಸಲ್ಪಡುತ್ತದೆ । ದಿವಿ—ಅಂತರಿಕ್ಷದಲ್ಲಿ । ವಿದ್ಯುತಃ—ಮಿಂಚಿನಂತೆ ಹೊಳೆಯುವ ಈ ಸೋಮರಸದ ಕಾಂತಿಗಳು । ಚರಂತಿ—ಚಲಿಸುತ್ತವೆ.

॥ ಭಾವಾರ್ಥ ॥

ಬಲದಾಯಕವಾದ ಹಿಂಡಲ್ಪಡುವ ಈ ಸೋಮರಸದ ಜಳಜಳನೆ ಹರಿಯುವ ಶಬ್ದವು ರಭಸವಾಗಿ ಹುಯ್ಯುತ್ತಿರುವ ಮಳೆಯ ಶಬ್ದದಂತೆ ಕೇಳಿಸುತ್ತಿದೆ. ಮತ್ತು ಈ ಸೋಮರಸದ ಮಿಂಚಿನಂತಿರುವ ಕಾಂತಿಗಳು ಅಂತರಿಕ್ಷದಲ್ಲೆಲ್ಲಾ ವ್ಯಾಪಿಸಿ ಬೆಳಗುತ್ತಿವೆ.

## English Translation

The Sound of the purified, powerful Soma is heard like that of rain; (his) lightnings move in the sky.

॥ ಸಂಹಿತಾಪಾಠಃ ॥

ಆ ಪವಸ್ವ ಮಹೀಮಿಷಂ ಗೋಮದಿಂದೋ ಹಿರಣ್ಯವತ್ ।

ಅಶ್ವಾವದ್ವಾಜವತ್ಸುತಃ ॥ ೪ ॥

॥ ಪದಪಾಠಃ ॥

ಆ । ಪವಸ್ವ । ಮಹೀಂ । ಇಷಂ । ಗೋಽಮತ್ । ಇಂದೋ ಇತಿ । ಹಿರಣ್ಯಽವತ್ ।

ಅಶ್ವಽವತ್ । ವಾಜಽವತ್ । ಸುತಃ ॥ ೪ ॥

॥ ಸಾಯಣಭಾಷ್ಯಂ ॥

**ಹೇ ಇಂದೋ ಸೋಮ ಸುತೋಽಭಿಷುತಸ್ತ್ವಂ ಮಹೀಮಿಷಂ ಮಹದನ್ನಮಾ ಪವಸ್ವ । ಕೀದೃಶಮನ್ನಂ । ಗೋಮದ್ಬಹುಗೋಭಿರುಪೇತಂ ಏವಂ ಹಿರಣ್ಯವದ್ಧಿರಣ್ಯೈರಶ್ವವದಶ್ವೈರ್ವಾಜವದ್ವಾಜೈರ್ಬಲೈಶ್ಚೋಪೇತಂ ॥**

॥ ಪ್ರತಿಪದಾರ್ಥ ॥

**ಇಂದೋ**—ಪ್ರಕಾಶಮಾನವಾದ ಎಲೈ ಸೋಮನೇ । **ಸುತಃ**—ಹಿಂಡಲ್ಪಟ್ಟ ನೀನು । **ಗೋಮತ್**—ಅನೇಕ ಗೋವುಗಳಿಂದ ಸಹಿತವಾದುದೂ । **ಹಿರಣ್ಯವತ್**—ಸುವರ್ಣಾದಿಧನೋಪೇತವಾದುದೂ । **ಅಶ್ವವತ್**—ಅನೇಕ ಅಶ್ವೋಪೇತವಾದುದೂ । **ವಾಜವತ್**—ಬಲಯುತವಾದುದೂ ಆದ । **ಮಹೀಂ ಇಷಂ**—ಬಹಳವಾದ ಅನ್ನವನ್ನು । **ಆ ಪವಸ್ವ**—ತಂದೊದಗಿಸು.

॥ ಭಾವಾರ್ಥ ॥

ಈಗ ತಾನೇ ಹಿಂಡಲ್ಪಟ್ಟು ಪ್ರಕಾಶಿಸುತ್ತಿರುವ ಎಲೈ ಸೋಮನೇ, ನೀನು ನಮಗೆ ಅನೇಕ ಗೋವುಗಳನ್ನೂ, ಅಶ್ವಗಳನ್ನೂ, ಸುವರ್ಣಾದಿಧನಗಳನ್ನೂ ಶಕ್ತಿಯನ್ನೂ ಬಹಳವಾದ ಅನ್ನವನ್ನು ತಂದೊದಗಿಸು.

English Translation

When effused, Indu, pour forth much food with cows, gold, horses, and strength,

॥ ಸಂಹಿತಾಪಾಠಃ ॥

**ಸ ಪವಸ್ವ ವಿಚರ್ಷಣ ಆ ಮಹೀ ರೋದಸೀ ಪೃಣ ।**
**ಉಷಾಃ ಸೂರ್ಯೋ ನ ರಶ್ಮಿಭಿಃ ॥ ೫ ॥**

॥ ಪದಪಾಠಃ ॥

**ಸಃ । ಪವಸ್ವ । ವಿಽಚರ್ಷಣೇ । ಆ । ಮಹೀ ಇತಿ । ರೋದಸೀ ಇತಿ । ಪೃಣ ।**
**ಉಷಾಃ । ಸೂರ್ಯಃ । ನ । ರಶ್ಮಿಽಭಿಃ ॥ ೫ ॥**

॥ ಸಾಯಣಭಾಷ್ಯಂ ॥

**ಹೇ ವಿಚರ್ಷಣೇ ವಿದ್ರಷ್ಟಃ ಸೋಮ ಸ ತ್ವಂ ಪವಸ್ವ । ಕ್ಷರ ರಸಂ । ತಥಾ ಕೃತ್ವಾ ತೇನ ರಸೇನ ಮಹೀ ಮಹತ್ಯೌ ರೋದಸೀ ದ್ಯಾವಾಪೃಥಿವ್ಯಾವಾ ಪೃಣ । ಆಪೂರಯ । ಉಷಾ ಉಷಸಃ । ಏಕದೇಶವಾಚಿನೋಷಃಶಬ್ದೇನ ತದುಪಲಕ್ಷಿತಮಹರುಚ್ಯತೇ ತತ್ಪ್ರಾಧಾನ್ಯಾತ್ । ಅಹಾನಿ ರಶ್ಮಿಭಿಃ ಸೂರ್ಯೋ ನ ಸೂರ್ಯ ಇವ ॥**

॥ ಪ್ರತಿಪದಾರ್ಥ ॥

**ವಿಚರ್ಷಣೇ**—ಸಮಸ್ತವನ್ನೂ ನೋಡಬಲ್ಲ ಎಲೈ ಸೋಮನೇ । **ಸಃ**—ಆ, ನೀನು । **ಆ ಪವಸ್ವ**—ಪ್ರವಹಿಸು । **ಸೂರ್ಯಃ**—ಸೂರ್ಯನು । **ಉಷಾಃ**—ಹಗಲುಗಳನ್ನು ಉಷಃಕಾಲದಲ್ಲಿ । **ರಶ್ಮಿಭಿಃ**—ತನ್ನ ರಶ್ಮಿಗಳಿಂದ

ವ್ಯಾಪಿಸುವಂತೆ । **ಮಹೀ**—ವಿಸ್ತೃತವಾದ । **ರೋದಸೀ**—ದ್ಯಾವಾಪೃಥಿವಿಗಳನ್ನು ( ನಿನ್ನ ಪ್ರಭೆಯಿಂದ ) । **ಆಪೃಣ**—ತುಂಬು.

॥ ಭಾವಾರ್ಥ ॥

ಸಮಸ್ತವನ್ನೂ ನೋಡಬಲ್ಲ ಎಲೈ ಸೋಮನೇ, ಚೆನ್ನಾಗಿ ಪ್ರವಹಿಸು. ಸೂರ್ಯನು ಉಷಃಕಾಲಗಳಲ್ಲಿ ಎಂದರೆ ಹಗಲುಗಳಲ್ಲಿ ಯಾವರೀತಿ ತನ್ನ ರಶ್ಮಿಗಳಿಂದ ಸರ್ವತ್ರ ವ್ಯಾಪಿಸಿ ಬೆಳಗುವನೋ ಅದರಂತೆ ನೀನು ವಿಸ್ತಾರವಾದ ಈ ದ್ಯಾವಾ ಪೃಥಿವಿಗಳನ್ನೆಲ್ಲಾ ನಿನ್ನ ಪ್ರಭೆಯಿಂದ ತುಂಬು.

English Translation

Flow, all-seeing (Soma), fill the vast heaven and earth, as the sun (fills) the days with his beams.

॥ ಸಂಹಿತಾಪಾಠಃ ॥

**ಪರಿ ಣಃ ಶರ್ಮಯಂತ್ಯಾ ಧಾರಯಾ ಸೋಮ ವಿಶ್ವತಃ ।**

**ಸರಾ ರಸೇವ ವಿಷ್ಟಪಂ ॥ ೬ ॥**

॥ ಪದಪಾಠಃ ॥

**ಪರಿ । ನಃ । ಶರ್ಮऽಯಂತ್ಯಾ । ಧಾರಯಾ । ಸೋಮ । ವಿಶ್ವತಃ ।**

**ಸರ । ರಸಾऽಇವ । ವಿಷ್ಟಪಂ ॥ ೬ ॥**

॥ ಸಾಯಣಭಾಷ್ಯಂ ॥

**ಹೇ ಸೋಮ ನೋऽಸ್ಮಭ್ಯಂ ಶರ್ಮಯಂತ್ಯಾ ಸುಖಯಂತ್ಯಾ ಧಾರಯಾ ವಿಶ್ವತಃ ಸರ್ವತಃ ಪರಿ ಸರ । ಪರಿಚರ । ರಸೇವ ರಸೇನೇವ ವಿಷ್ಟಪಂ ಭೂಲೋಕಂ । ಯದ್ವಾ । ರಸಾ ನದೀ ಸ್ಥಾನಂ ಸಾ ಪ್ರವಣರೂಪಮಿವ ॥**

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ರಸೇವ**—ನದಿಯು । **ವಿಷ್ಟಪಂ**—ತನ್ನ ನಿರ್ದಿಷ್ಟ ಪ್ರದೇಶವಾದ ಸಮುದ್ರಕ್ಕೆ ವೇಗವಾಗಿ ಹರಿದುಹೋಗುವಂತೆ ಅಥವಾ । [**ರಸೇವ**—ವೃಷ್ಟಿರೂಪದಿಂದ ಸುರಿಯುವ ಉದಕವು । **ವಿಷ್ಟಪಂ**—ಭೂಮಿಯನ್ನು ಸರ್ವತ್ರ ವ್ಯಾಪಿಸುವಂತೆ] । **ನಃ**—ನಮಗೆ **ಶರ್ಮಯಂತ್ಯಾ**—ಸುಖವನ್ನುಂಟುಮಾಡುವ । **ಧಾರಯಾ**—ನಿನ್ನ ಧಾರೆಯಿಂದ ಅಥವಾ ಪ್ರವಾಹದಿಂದ । **ಪರಿ ಸರ**—ಸುತ್ತಲೂ ಪ್ರಸರಿಸಿ ನಮ್ಮನ್ನು ಸೇವಿಸು ।

॥ ಭಾವಾರ್ಥ ॥

ಎಲೈ ಸೋಮನೇ, ನದಿಯು ತಗ್ಗಾದ ಪ್ರದೇಶದಲ್ಲಿ ವೇಗವಾಗಿ ಹರಿದು ಸಮುದ್ರವನ್ನು ಸೇರುವಂತೆ ಅಥವಾ ಮಳೆಯ ನೀರು ಭೂಮಿಯನ್ನು ಸರ್ವತ್ರ ವ್ಯಾಪಿಸುವಂತೆ ನೀನು ನಮಗೆ ಸುಖವನ್ನುಂಟುಮಾಡುವ ನಿನ್ನ ಪ್ರವಾಹದಿಂದ ಸುತ್ತಲೂ ಪ್ರಸರಿಸಿ ಹರಿಯುತ್ತಾ ನಮ್ಮನ್ನು ಸೇವಿಸು ಎಂದರೆ ಸಂತೋಷಗೊಳಿಸು.

## English Translation

Flow round us, Soma, on all sides in a bliss-bestowing stream, like a river down a steep place.

# ನಲವತ್ತ ಎರಡನೆಯ ಸೂಕ್ತವು.

**ಜನಯನ್ನಿತಿ ಷಡೃಚಮಷ್ಟಾದಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಜನಯನ್ನಿತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥**

ಅನುವಾದವು—**ಜನಯನ್** ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹದಿನೆಂಟನೆಯ ಸೂಕ್ತವು ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಅನುಕ್ರಮಣಿಕೆಯಲ್ಲಿ **ಜನಯನ್** ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೪೨

ಮಂಡಲ—೯ । ಅನುವಾಕ— ೨। ಸೂಕ್ತ—೪೨ ॥
ಅಷ್ಟಕ—೬ । ಅಧ್ಯಾಯ—೮ । ವರ್ಗ—೩೨ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಮೇಧ್ಯಾತಿಥಿಃ ॥
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

। ಸಂಹಿತಾಪಾಠಃ ।

ಜನಯನ್ರೋಚನಾ ದಿವೋ ಜನಯನ್ನಪ್ಸು ಸೂರ್ಯಂ ।
ವಸಾನೋ ಗಾ ಅಪೋ ಹರಿಃ ॥ ೧ ॥

॥ ಪದಪಾಠಃ ।

ಜನಯನ್ । ರೋಚನಾ । ದಿವಃ । ಜನಯನ್ । ಅಪ್ऽಸು । ಸೂರ್ಯಂ ।
ವಸಾನಃ । ಗಾಃ । ಅಪಃ । ಹರಿಃ ॥ ೧ ॥

॥ ಸಾಯಣಭಾಷ್ಯಂ ।

ಅಯಂ ಹರಿಃ ಸೋಮೋ ದಿವೋ ದ್ಯುಸಂಬಂಧೀನಿ ರೋಚನಾ ರೋಚನಾನಿ ನಕ್ಷತ್ರಗ್ರಹಮಂಡಲಾನಿ ಜನಯನ್ ತಥಾಪ್ಸ್ವಂತರಿಕ್ಷೇ ಸೂರ್ಯಂ ಚ ಜನಯನ್ ತಥಾ ಗಾ ಅಧೋಗಂತ್ರೀರಪ್ಶ್ರೀ ವಸಾನೋ ಭೂಮಿಮಾತ್ಮಾನಂ ವಾಚ್ಛಾದಯನ್ ಪವತ ಇತ್ಯುತ್ತರತ್ರ ಸಂಬಂಧಃ ॥

॥ ಪ್ರತಿಪದಾರ್ಥ ॥

**ಹರಿಃ**—ಹಸರುಬಣ್ಣದಿಂದ ಶೋಭಿಸುತ್ತಿರುವ ಈ ಸೋಮನು । **ದಿವಃ**—ಸ್ವರ್ಗಲೋಕಸಂಬಂಧವಾದ । **ರೋಚನಾ**—ನಕ್ಷತ್ರ ಗ್ರಹಮಂಡಲಗಳನ್ನು । **ಜನಯನ್**—ಉತ್ಪತ್ತಿಮಾಡುತ್ತಲೂ । **ಅಪ್ಸು**—ಅಂತರಿಕ್ಷದಲ್ಲಿ । **ಸೂರ್ಯಂ**—ಸೂರ್ಯನನ್ನು । **ಜನಯನ್**—ಉತ್ಪನ್ನಮಾಡುತ್ತಲೂ । **ಗಾಃ**—ಕೆಳಮುಖವಾಗಿ ಹರಿಯುವ । **ಅಪಃ**—ಉದಕಗಳಿಂದ । **ವಸಾನಃ**—ಭೂಮಿಯನ್ನು ಆವರಿಸುವಂತೆ ಮಾಡುತ್ತಲೂ ಪ್ರವಹಿಸುತ್ತಾನೆ ।

॥ ಭಾವಾರ್ಥ ॥

ಹಸರುಬಣ್ಣದ ಈ ಸೋಮದೇವನು ಸ್ವರ್ಗಲೋಕದಲ್ಲಿ ಬೆಳಗುವ ಗ್ರಹನಕ್ಷತ್ರಾದಿಗಳನ್ನೂ ಅಂತರಿಕ್ಷದಲ್ಲಿ ಬೆಳಗುವ ಸೂರ್ಯನನ್ನೂ ಉತ್ಪನ್ನಮಾಡುತ್ತಾ ಭೂಮಿಯನ್ನು ಪ್ರವಹಿಸುವ ಉದಕಗಳಿಂದ ಆವರಿಸುವಂತೆ ಮಾಡುತ್ತಾ ತಾನೂ ಪ್ರವಹಿಸುತ್ತಾನೆ.

ಅಥವಾ

ಹಸರುಬಣ್ಣದಿಂದ ಶೋಭಿಸುತ್ತಿರುವ ಈ ಸೋಮದೇವನು ಸ್ವರ್ಗಲೋಕದಲ್ಲಿರುವ ಗ್ರಹ ನಕ್ಷತ್ರಮಂಡಲಗಳನ್ನು ಅಂತರಿಕ್ಷದಲ್ಲಿರುವ ಸೂರ್ಯನನ್ನು ತನ್ನ ಶಕ್ತಿಯಿಂದ ಬೆಳಗುತ್ತಾ ಭೂಮಿಯನ್ನು ನದಿಗಳಿಂದ ಆವರಿಸುವಂತೆ ಮಾಡುತ್ತಾ ತಾನೂ ಪ್ರವಹಿಸುತ್ತಾನೆ.

English Translation

The green-tinted (Soma) generating the luminaries of heaven, generating the sun in the firmament, clothing himself with the descending waters—

॥ ಸಂಹಿತಾಪಾಠಃ ॥

ಏಷ ಪ್ರತ್ನೇನ ಮನ್ಮನಾ ದೇವೋ ದೇವೇಭ್ಯಸ್ಪರಿ ।
ಧಾರಯಾ ಪವತೇ ಸುತಃ ॥ ೨ ॥

॥ ಪದಪಾಠಃ ॥

ಏಷಃ । ಪ್ರತ್ನೇನ । ಮನ್ಮನಾ । ದೇವಃ । ದೇವೇಭ್ಯಃ । ಪರಿ ।
ಧಾರಯಾ । ಪವತೇ । ಸುತಃ ॥ ೨ ॥

॥ ಸಾಯಣಭಾಷ್ಯಂ ॥

**ಏಷ ಸೋಮಃ ಪ್ರತ್ನೇನ ಪುರಾಣೇನ ಮನ್ಮನಾ ಮನನೀಯೇನ ಸ್ತೋತ್ರೇಣ ಯುಕ್ತಃ ಸತೋಽಭಿಷುತಶ್ಚ ಸನ್ದೇವೇಭ್ಯಃ ಪರಿ ಪರಿತೋ ಧಾರಯಾ ಸ್ವೀಯಯಾ ಪವತೇ ॥**

॥ ಪ್ರತಿಪದಾರ್ಥ ॥

**ಸುತಃ**—ಹಿಂಡಲ್ಪಟ್ಟ । **ಏಷಃ**—ಈ ಸೋಮನು । **ಪ್ರತ್ನೇನ**—ಪುರಾತನವಾದ । **ಮನ್ಮನಾ**—

**ಸ್ತೋತ್ರ**ದಿಂದ ಸ್ತುತನಾಗಿ । **ದೇವೇಭ್ಯಃ**—ದೇವತೆಗಳ ಪಾನಾರ್ಥವಾಗಿ । **ಧಾರಯಾ**—ಪ್ರವಾಹರೂಪದಿಂದ **ಪರಿ**—ಸುತ್ತಲೂ । **ಪವತೇ**—ಪ್ರವಿಸುತ್ತಾನೆ ।

॥ ಭಾವಾರ್ಥ ॥

ಹಿಂಡಲ್ಪಟ್ಟ ಈ ಸೋಮನು ಪುರಾತನವಾದ ಸ್ತೋತ್ರದಿಂದ ಸ್ತುತನಾಗಿ ದೇವತೆಗಳ ಪಾನಾರ್ಥವಾಗಿ ಸುತ್ತಲೂ ಪ್ರವಿಸುತ್ತಾ ಪ್ರವಹಿಸುತ್ತಾನೆ.

English Translation

He with ancient praise when effused flows in a stream, a god for the gods.

॥ ಸಂಹಿತಾಪಾಠಃ ॥

ವಾವೃಧಾನಾಯ ತೂರ್ವಯೇ ಪವಂತೇ ವಾಜಸಾತಯೇ ।
ಸೋಮಾಃ ಸಹಸ್ರಪಾಜಸಃ ॥ ೩ ॥

॥ ಪದಪಾಠಃ ॥

ವವೃಧಾನಾಯ । ತೂರ್ವಯೇ । ಪವಂತೇ । ವಾಜಽಸಾತಯೇ ।
ಸೋಮಾಃ । ಸಹಸ್ರಽಪಾಜಸಃ ॥ ೩ ॥

॥ ಸಾಯಣಭಾಷ್ಯಂ ॥

ವಾವೃಧಾನಾಯ ವರ್ಧಮಾನಾಯ ತೂರ್ವಯೇ ಕ್ಷಿಪ್ರಾಯ ವಾಜಸಾತಯೇ ಸಂಗ್ರಾಮಾಯಾನ್ನಲಾಭಾಯ ವಾ ಪವಂತೇ ಪೂಯಂತೇ ಸೋಮಾಃ ಸಹಸ್ರಪಾಜಸೋಽಪರಿಮಿತಬಲಾಃ । ಅಸಂಖ್ಯಾತವೇಗಾ ಇತ್ಯರ್ಥಃ ॥

॥ ಪ್ರತಿಪದಾರ್ಥ ॥

**ಸಹಸ್ರಪಾಜಸಃ**—ಅಪರಿಮಿತ ಬಲವುಳ್ಳ ಎಂದರೆ ವೇಗಗಮನವುಳ್ಳ । **ಸೋಮಾಃ**—ಈ ಸೋಮರಸಗಳು । **ವಾವೃಧಾನಾಯ**—ಬೆಳೆಯುತ್ತಿರುವ । **ತೂರ್ವಯೇ**—ಬೇಗನೆ ನಡೆಯುವ ಅಥವಾ ದೊರೆಯುವ । **ವಾಜಸಾತಯೇ**—ಯುದ್ಧಾರ್ಥವಾಗಿ ಅಥವಾ ಅನ್ನಪ್ರಾಪ್ತಿಗಾಗಿ । **ಪವಂತೇ**—ಹರಿಯುತ್ತವೆ.

॥ ಭಾವಾರ್ಥ ॥

ಅಪರಿಮಿತಶಕ್ತಿಯುಳ್ಳ ಅಥವಾ ವೇಗಗಮನವುಳ್ಳ ಈ ಸೋಮರಸಗಳು ಬೇಗನೆ ಸಂಭವಿಸುವ ಯುದ್ಧಾರ್ಥವಾಗಿ ಅಥವಾ ಬೇಗನೆ ದೊರೆಯುವ ಅನ್ನಲಾಭಾರ್ಥವಾಗಿ ಪ್ರವಹಿಸುತ್ತವೆ

## English Translation

The Soma juices of unbounded vigour flow for the increasing rapid acquisition of food.

॥ ಸಂಹಿತಾಪಾಠಃ ॥

ದುಹಾನಃ ಪ್ರತ್ನಮಿತ್ಪಯಃ ಪವಿತ್ರೇ ಪರಿ ಷಿಚ್ಯತೇ ।
ಕ್ರಂದನ್ದೇವಾँ ಅಜೀಜನತ್ ॥ ೪ ॥

॥ ಪದಪಾಠಃ ॥

ದುಹಾನಃ । ಪ್ರತ್ನಂ । ಇತ್ । ಪಯಃ । ಪವಿತ್ರೇ । ಪರಿ । ಸಿಚ್ಯತೇ ।
ಕ್ರಂದನ್ । ದೇವಾನ್ । ಅಜೀಜನತ್ ॥ ೪ ॥

॥ ಸಾಯಣಭಾಷ್ಯಂ ॥

ಪ್ರತ್ನಮಿತ್ಪುರಾಣಮೇವ ಪಯೋ ರಸಂ ದುಹಾನೋ ದಧಾನಃ ಸೋಮಃ ಪವಿತ್ರೇ ಪರಿ ಷಿಚ್ಯತೇ । ಕಿಂಚ ಕ್ರಂದಞ್ಶಬ್ದಂ ಕುರ್ವನ್ದೇವಾನಜೀಜನತ್ । ಜನಯತಿ ಸ್ವಸಮೀಪೇ । ಯತ್ರ ಸೋಮೋಽಭಿಷೂಯತೇ ತತ್ರ ದೇವಾ ನಿಯತಂ ಪ್ರಾದುರ್ಭವಂತಿ। ಅತೋ ಜನಯತೀತ್ಯುಪಚರ್ಯತೇ॥

॥ ಪ್ರತಿಪದಾರ್ಥ ॥

(ಈ ಸೋಮರಸವು) **ಪ್ರತ್ನಂ**—ಪುರಾತನವಾದ । **ಪಯಃ ಇತ್**—ರಸವನ್ನೇ । **ದುಹಾನಃ**—ಕರೆಯುತ್ತಾ ಎಂದರೆ ಸ್ರವಿಸುತ್ತಾ । **ಕ್ರಂದನ್**—ಜಳಜಳನೆ ಶಬ್ದಮಾಡುತ್ತಾ । **ಪವಿತ್ರೇ**—ದಶಾಪವಿತ್ರದ ಮೇಲೆ । **ಪರಿ ಷಿಚ್ಯತೇ**—ಹರಿದು ಹೋಗಿ ಬೀಳುತ್ತದೆ । (**ತತ್ರ**—ಆ ಸೋಮಾಭಿಷವಣಪ್ರದೇಶದಲ್ಲಿ ಈ ಸೋಮದೇವನು) । **ದೇವಾನ್**—ದೇವತೆಗಳನ್ನು । **ಅಜೀಜನತ್**—ಪ್ರಾದುರ್ಭವಿಸುವಂತೆ ಮಾಡುತ್ತಾನೆ.

॥ ಭಾವಾರ್ಥ ॥

ಈ ಸೋಮರಸವು ಪುರಾತನವಾದ ಎಂದರೆ ಬಹುಕಾಲದಿಂದಲೂ ನಡೆದುಬಂದಿರುವಂತೆ ಈಗಲೂ ರಸವನ್ನು ಸ್ರವಿಸುತ್ತಾ ಜಳಜಳನೆ ಶಬ್ದಮಾಡುತ್ತಾ ದಶಾಪವಿತ್ರದ ಮೇಲೆ ಹರಿದುಹೋಗಿ ಬೀಳುತ್ತದೆ. ಮತ್ತು ಅಭಿಷವಣ ಪ್ರದೇಶದಲ್ಲಿ ಈ ಸೋಮದೇವನು ದೇವತೆಗಳನ್ನು ಪ್ರಾದುರ್ಭಾವವಾಗುವಂತೆ ಮಾಡುತ್ತಾನೆ.

## English Translation

Milking forth the ancient fluid, the Soma is poured into the filter and crying out generates the gods.

॥ ಸಂಹಿತಾಪಾಠಃ ॥

ಅಭಿ ವಿಶ್ವಾನಿ ವಾರ್ಯಾಭಿ ದೇವಾँ ಋತಾವೃಧಃ ।
ಸೋಮಃ ಪುನಾನೋ ಅರ್ಷತಿ ॥ ೫ ॥

॥ ಪದಪಾಠಃ ॥

ಅಭಿ । ವಿಶ್ವಾನಿ । ವಾರ್ಯಾ । ಅಭಿ । ದೇವಾನ್ । ಋತಽವೃಧಃ ।
ಸೋಮಃ । ಪುನಾನಃ । ಅರ್ಷತಿ ॥ ೫ ॥

॥ ಸಾಯಣಭಾಷ್ಯಂ ॥

**ಅಯಂ ಸೋಮಃ ಪುನಾನಃ ಪೂಯಮಾನೋ ವಿಶ್ವಾನಿ ವಾರ್ಯಾ ವರಣೀಯಾನಿ ಧನಾನ್ಯಭ್ಯರ್ಷತಿ । ತಥರ್ತಾವೃಧೋ ಯಜ್ಞವರ್ಧಕಾನ್ದೇವಾನಭ್ಯರ್ಷತಿ ॥**

॥ ಪ್ರತಿಪದಾರ್ಥ ॥

**ಸೋಮಃ**—ಈ ಸೋಮದೇವನು । **ಪುನಾನಃ**—ಶೋಧಿಸಲ್ಪಟ್ಟವನಾಗಿ । **ವಿಶ್ವಾನಿ**—ಸಮಸ್ತವಾದ । **ವಾರ್ಯಾ**—ಅಪೇಕ್ಷಿತ ಧನಗಳನ್ನು ಸ್ತೋತೃಜನಗಳಿಗೆ ಕೊಡುವುದಕ್ಕಾಗಿ । **ಅಭಿ ಅರ್ಷತಿ**—ಹೋಗುತ್ತಾನೆ (ಹಾಗೆಯೇ) । **ಋತಾವೃಧಃ**—ಯಜ್ಞವರ್ಧಕರಾದ । **ದೇವಾನ್**—ದೇವತೆಗಳ ಸಮೀಪಕ್ಕೂ । **ಅಭಿ**—ಹೋಗುತ್ತಾನೆ.

॥ ಭಾವಾರ್ಥ ॥

ಈ ಸೋಮದೇವನು ಶೋಧಿಸಲ್ಪಟ್ಟನಂತರ ಸ್ತೋತೃಜನರಿಗೆ ಅವರು ಅಪೇಕ್ಷಿಸುವ ಸಮಸ್ತ ಧನಗಳನ್ನೂ ತಂದು ಕೊಡುವುದಕ್ಕಾಗಿ ಯಜ್ಞವರ್ಧಕರಾದ ದೇವತೆಗಳ ಬಳಿಗೆ ಹೋಗುತ್ತಾನೆ.

English Translation

Soma being purified hastens towards all desirable (wealth), towards the gods who favour the sacrifice.

॥ ಸಂಹಿತಾಪಾಠಃ ॥

ಗೋಮನ್ನಃ ಸೋಮ ವೀರವದಶ್ವಾವದ್ವಾಜವತ್ಸುತಃ ।
ಪವಸ್ವ ಬೃಹತೀರಿಷಃ ॥ ೬ ॥

॥ ಪದಪಾಠಃ ॥

ಗೋऽಮತ್ । ನಃ । ಸೋಮ । ವೀರऽವತ್ । ಅಶ್ವऽವತ್ । ವಾಜಃऽವತ್ । ಸುತಃ ।

ಪವಸ್ವ । ಬೃಹತೀಃ । ಇಷಃ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸೋಮ ಸುತಸ್ತ್ವಂ ನೋಽಸ್ಮಭ್ಯಂ ಗೋಮದ್ಗೋಭಿರ್ಯುಕ್ತಂ ವೀರವದ್ಬಹುಭಿರ್ವೀರೈ-ರುಪೇತಮಶ್ವಾವದಶ್ವೈರ್ಯುಕ್ತಂ ವಾಜವದ್ವಾಜೈರ್ಬಲೈಃ ಸಂಗ್ರಾಮೈರ್ವೋಪೇತಂ ಧನಂ ಬೃಹತೀರಿಷಃ ಭೂತಾನ್ಯನ್ನಾನಿ ಪವಸ್ವ । ಪ್ರಯಚ್ಛೇತ್ಯರ್ಥಃ ॥

॥ ಪ್ರತಿಪದಾರ್ಥ ॥

ಸೋಮ—ಎಲೈ ಸೋಮದೇವನೇ । ಸುತಃ—ಹಿಂಡಲ್ಪಟ್ಟ ನೀನು । ನಃ—ನಮಗೆ । ಗೋಮತ್—ಗೋವುಗಳಿಂದ ಯುಕ್ತವಾದುದೂ । ವೀರವತ್—ವೀರರಾದ ಪುತ್ರಾದಿಗಳಿಂದ ಸಹಿತವಾದುದೂ । ಅಶ್ವಾವತ್—ಅಶ್ವಗಳಿಂದ ಕೂಡಿದುದೂ । ವಾಜವತ್—ಬಲದಿಂದ ಯುಕ್ತವಾದುದೂ ಆದ ಧನವನ್ನೂ । ಬೃಹತೀಃ ಇಷಃ—ಪ್ರಭೂತವಾದ ಅನ್ನಗಳನ್ನೂ । ಪವಸ್ವ—ಒದಗಿಸಿಕೊಡು.

॥ ಭಾವಾರ್ಥ ॥

ಎಲೈ ಸೋಮದೇವನೇ, ಹಿಂಡಲ್ಪಟ್ಟನಂತರ ನೀನು ನಮಗೆ ಅನೇಕ ಗೋವುಗಳನ್ನೂ ವೀರರಾದ ಪುತ್ರಾದಿಗಳನ್ನೂ, ಧನವನ್ನೂ ಬಹಳವಾದ ಅನ್ನವನ್ನೂ ಒದಗಿಸಿಕೊಡು.

English Translation

Soma, being effused pour down upon us (wealth) consisting of cows male offspring, horses and strength, and abundant food.

## ನಲವತ್ತಮೂರನೆಯ ಸೂಕ್ತವು.

॥ ಸಾಯಣಭಾಷ್ಯಂ ॥

ಯೋ ಅತ್ಯ ಇವೇತಿ ಷಡೃಚಮೇಕೋನವಿಂಶಂ ಸೂಕ್ತಂ । ಋಷ್ಯಾದ್ಯಾಃ ಪೂರ್ವವತ್ । ಯೋ ಅತ್ಯ ಇವೇತ್ಯನುಕ್ರಾಂತಂ ॥ ಗತೋ ವಿನಿಯೋಗಃ ॥

ಅನುವಾದವು— ಯೋ ಅತ್ಯ ಇವ ಎಂಬ ಈ ಸೂಕ್ತವು ಎರಡನೆಯ ಅನುವಾಕದಲ್ಲಿ ಹತ್ತೊಂಭತ್ತನೆಯಸೂಕ್ತವು ಇದರಲ್ಲಿ ಆರು ಋಕ್ಕುಗಳಿರುವವು. ಈ ಸೂಕ್ತಕ್ಕೆ ಋಷಿದೇವತಾಛಂದಸ್ಸುಗಳು ಹಿಂದಿನ ಸೂಕ್ತದಂತೆಯೇ ಇರುವವು. ಅನುಕ್ರಮಣಿಕೆಯಲ್ಲಿ—ಯೋ ಅತ್ಯ ಇವ ಎಂದು ಹೇಳಿರುವುದು. ವಿನಿಯೋಗವನ್ನು ಹಿಂದೆಯೇ ಹೇಳಲಾಗಿದೆ.

## ಸೂಕ್ತ—೪೩

ಮಂಡಲ—೯ ॥ ಅನುವಾಕ—೨ ॥ ಸೂಕ್ತ—೪೩ ॥
ಅಷ್ಟಕ—೬ ॥ ಅಧ್ಯಾಯ—೮ ॥ ವರ್ಗ—೩೩ ॥
ಸೂಕ್ತದಲ್ಲಿರುವ ಋಕ್ಸಂಖ್ಯೆ—೬ ॥
ಋಷಿಃ—ಮೇಧ್ಯಾತಿಥಿಃ
ದೇವತಾ—ಪವಮಾನಃ ಸೋಮಃ ॥
ಛಂದಃ—ಗಾಯತ್ರೀ ॥

॥ ಸಂಹಿತಾಪಾಠಃ ॥

ಯೋ ಅತ್ಯ ಇವ ಮೃಜ್ಯತೇ ಗೋಭಿರ್ಮದಾಯ ಹರ್ಯತಃ ।
ತಂ ಗೀರ್ಭಿರ್ವಾಸಯಾಮಸಿ ॥ ೧ ॥

॥ ಪದಪಾಠಃ ॥

ಯಃ । ಅತ್ಯಃಽಇವ । ಮೃಜ್ಯತೇ । ಗೋಭಿಃ । ಮದಾಯ । ಹರ್ಯತಃ ।
ತಂ । ಗೀಃಽಭಿಃ । ವಾಸಯಾಮಸಿ ॥ ೧ ॥

॥ ಸಾಯಣಭಾಷ್ಯಂ ॥

ಯಃ ಸೋಮೋಽತ್ಯ ಇವಾತನಶೀಲೋಽಶ್ವ ಇವ ಗೋಭಿರ್ವಸತೀವರೀಭಿರಗ್ಭಿರ್ಗೋವಿಕಾರೈಃ ಪಯಆದಿಭಿರ್ವಾ ಮೃಜ್ಯತೇ ಮಿಶ್ರ್ಯತೇ । ಕಿಮರ್ಥಂ । ಮದಾಯ ದೇವಾನಾಂ । ಹರ್ಯತಃ । ಸ್ಪೃಹಣೀಯಃ ಕಾಂತಃ । ತಂ ಸೋಮಂ ಗೀರ್ಭಿಃ ಸ್ತುತಿಭಿರ್ವಾಸಯಾಮಸಿ । ವಾಸಯಾಮಃ ॥

॥ ಪ್ರತಿಪದಾರ್ಥ ॥

**ಯಃ**—ಯಾವ ಸೋಮದೇವನು । **ಅತ್ಯ ಇವ**—ಅಶ್ವದಂತೆ ವೇಗಗಮನವುಳ್ಳವನೋ । **ಹರ್ಯತಃ**—ಆಕರ್ಷಕವಾದ ರೂಪವುಳ್ಳವನೋ । **ಗೋಭಿಃ**—ಗೋವಿಕಾರಗಳಾದ ಹಾಲು, ಮೊಸರು ಅಥವಾ ವಸತೀವರ್ಯುದಕಗಳಿಂದ । **ಮೃಜ್ಯತೇ**—ಮಿಶ್ರಿತವಾಗುವನೋ । **ತಂ**—ಅಂತಹ ಸೋಮನನ್ನು । **ಮದಾಯ**—ದೇವತೆಗಳ ಹರ್ಷಾರ್ಥವಾಗಿ । **ಗೀರ್ಭಿಃ**—ಸ್ತುತಿವಾಕ್ಯಗಳಿಂದ । **ವಾಸಯಾಮಸಿ**—ಸಮೀಪಿಸಿ ಸ್ತುತಿಸುತ್ತೇವೆ.

॥ ಭಾವಾರ್ಥ ॥

ಯಾವ ಸೋಮದೇವನು ಅಶ್ವಗಮನದಂತೆ ವೇಗವಾಗಿ ಹರಿಯುವ ಸ್ವಭಾವವುಳ್ಳವನೋ, ಯಾವ ಸೋಮದೇವನು ಆಕರ್ಷಕವಾದ ರೂಪವುಳ್ಳವನೋ ಯಾವ ಸೋಮದೇವನು ಹಾಲು, ಮೊಸರು ಅಥವಾ ವಸತೀವರ್ಯುದಕ ಇವುಗಳಿಂದ ಮಿಶ್ರಿತನಾಗುವನೋ ಅಂತಹ ಸೋಮದೇವನನ್ನು ದೇವತೆಗಳ ಸೋಮಪಾನ ಜನಿತ ಹರ್ಷಾರ್ಥವಾಗಿ ಸ್ತುತಿವಾಕ್ಯಗಳಿಂದ ಸಮೀಪಿಸಿ ಸ್ತುತಿಸುತ್ತೇವೆ.

## English Translation

We invest with praises that Soma who, beloved, is cleansed like a horse, with milk for the exhilaration (of the gods).

॥ ಸಂಹಿತಾಪಾಠಃ ॥

ತಂ ನೋ ವಿಶ್ವಾ ಅವಸ್ಯುವೋ ಗಿರಃ ಶುಂಭಂತಿ ಪೂರ್ವಥಾ ।
ಇಂದುಮಿಂದ್ರಾಯ ಪೀತಯೇ ॥ ೨ ॥

॥ ಪದಪಾಠಃ ॥

ತಂ । ನಃ । ವಿಶ್ವಾಃ । ಅವಸ್ಯುವಃ । ಗಿರಃ । ಶುಂಭಂತಿ । ಪೂರ್ವಽಥಾ ।
ಇಂದುಂ । ಇಂದ್ರಾಯ । ಪೀತಯೇ ॥ ೨ ॥

॥ ಸಾಯಣಭಾಷ್ಯಂ ॥

ತಮಿಂದುಂ ಸೋಮಂ ನೋಽಸ್ಮಾಕಂ ವಿಶ್ವಾಃ ಸರ್ವಾಃ ಅವಸ್ಯುವಃ । ಅವೋ ರಕ್ಷಣಂ । ತದಿಚ್ಛಂತ್ಯೋ ಗಿರಃ ಸ್ತುತಯಃ ಪೂರ್ವಥಾ ಪೂರ್ವಮಿವ ಪೂರ್ವಂ ಯಥಾ ತಥೈವೇದಾನೀಮಪಿ ಶುಂಭಂತಿ । ದೀಪಯಂತಿ । ಕಿಮರ್ಥಂ । ಇಂದ್ರಾಯೇಂದ್ರಸ್ಯ ಪೀತಯೇ ಪಾನಾಯ ॥

॥ ಪ್ರತಿಪದಾರ್ಥ ॥

**ಅವಸ್ಯವಃ**—ರಕ್ಷಣೆಯನ್ನು ಇಚ್ಛಿಸುವ ಎಂದರೆ ರಕ್ಷಣಾರ್ಥವಾಗಿ ಮಾಡಲ್ಪಡುವ । **ವಿಶ್ವಾಃ**—ಸಮಸ್ತವಾದ । **ನಃ ಗಿರಃ**—ನಮ್ಮ ಸ್ತುತಿವಾಕ್ಯಗಳು । **ತಂ ಇಂದುಂ**—ಆ ಸೋಮದೇವನನ್ನು । **ಇಂದ್ರಾಯ**—ಇಂದ್ರನ । **ಪೀತಯೇ**—ಪಾನಾರ್ಥವಾಗಿ । **ಪೂರ್ವಥಾ**—ಹಿಂದಿನಂತೆ । **ಶುಂಭಂತಿ**— ಬೆಳಗುತ್ತವೆ ಎಂದರೆ ಪ್ರಶಂಸೆಮಾಡುತ್ತವೆ.

॥ ಭಾವಾರ್ಥ ॥

ರಕ್ಷಣಾರ್ಥವಾಗಿ ನಾವು ಮಾಡುವ ಸಮಸ್ತ ಸ್ತುತಿವಾಕ್ಯಗಳೂ ಆ ಸೋಮದೇವನನ್ನೂ ಇಂದ್ರನ ಪಾನಾರ್ಥವಾಗಿ ಪೂರ್ವದಂತೆ ಸ್ತುತಿಸುತ್ತವೆ

## English Translation

This Indu all our praises desiring protection, beautify (now) as of old for Indra to drink.

|| ಸಂಹಿತಾಪಾಠಃ ||

ಪುನಾನೋ ಯಾತಿ ಹರ್ಯತಃ ಸೋಮೋ ಗೀರ್ಭಿಃ ಪರಿಷ್ಕೃತಃ ।

ವಿಪ್ರಸ್ಯ ಮೇಧ್ಯಾತಿಥೇಃ ॥ ೩ ॥

॥ ಪದಪಾಠಃ ॥

ಪುನಾನಃ । ಯಾತಿ । ಹರ್ಯತಃ । ಸೋಮಃ । ಗೀಃऽಭಿಃ । ಪರಿऽಕೃತಃ ।

ವಿಪ್ರಸ್ಯ । ಮೇಧ್ಯऽಅತಿಥೇಃ ॥ ೩ ॥

॥ ಸಾಯಣಭಾಷ್ಯಂ ॥

ಪುನಾನಃ ಪೂಯಮಾನೋ ಹರ್ಯತಃ ಕಮನೀಯಃ ಸೋಮೋ ಗೀರ್ಭಿಃ ಪರಿಷ್ಕೃತಃ ಸ್ತುತಿಭಿರಲಂಕೃತೋ ಯಾತಿ ಕಲಶಂ ಪ್ರತಿ । ಕಿಮರ್ಥಂ । ವಿಪ್ರಸ್ಯ ಮೇಧಾವಿನೋ ಮೇಧ್ಯಾತಿಥೇರ್ಯಜಮಾನಸ್ಯ ಯಾಗಾರ್ಥಂ । ಯದ್ವಾ । ಮಮ ಗೀರ್ಭಿರಿತಿ ಸಂಬಂಧಃ ॥

॥ ಪ್ರತಿಪದಾರ್ಥ ॥

**ಪುನಾನಃ**—ಹಿಂಡಲ್ಪಟ್ಟ । **ಹರ್ಯತಃ**—ಆಕರ್ಷಕವಾದ ರೂಪವುಳ್ಳ । **ಸೋಮಃ**—ಈ ಸೋಮವು । **ವಿಪ್ರಸ್ಯ**—ಮೇಧಾವಿಯಾದ । **ಮೇಧ್ಯಾತಿಥೇಃ**—ಮೇಧ್ಯಾತಿಥಿಯೆಂಬ ಹೆಸರುಳ್ಳ ಈ ಸೂಕ್ತದ್ರಷ್ಟೃವಾದ ನನ್ನ । **ಗೀರ್ಭಿಃ**—ಸ್ತುತಿವಾಕ್ಯಗಳಿಂದ । **ಪರಿಷ್ಕೃತಃ**—ಅಲಂಕೃತವಾಗಿ ಎಂದರೆ ಸಂಸ್ಕರಿಸಲ್ಪಟ್ಟು । **ಯಾತಿ**—ಕಲಶಾಭಿಮುಖವಾಗಿ ಹರಿದು ಹೋಗುತ್ತದೆ

॥ ಭಾವಾರ್ಥ ॥

ಈಗತಾನೇ ಹಿಂಡಲ್ಪಟ್ಟು ಆಕರ್ಷಕವಾದ ರೂಪದಿಂದ ಶೋಭಿಸುತ್ತಿರುವ ಈ ಸೋಮರಸವು ಮೇಧಾವಿಯೂ ಈ ಸೂಕ್ತದ್ರಷ್ಟೃವೂ ಆದ ಮೇಧ್ಯಾತಿಥಿಯೆಂಬ ನನ್ನ ಸ್ತುತಿವಾಕ್ಯಗಳಿಂದ ಸಂಸ್ಕರಿಸಲ್ಪಟ್ಟು ಕಲಶಾಭಿಮುಖವಾಗಿ ಹರಿದುಹೋಗುತ್ತಿದೆ.

English Translation

Pure flows the beloved Soma, beautified by the praises of the sage Medhyatithi.

॥ ಸಂಹಿತಾಪಾಠಃ ॥

ಪವಮಾನ ವಿದಾ ರಯಿಮಸ್ಮಭ್ಯಂ ಸೋಮ ಸುಶ್ರಿಯಂ ।

ಇಂದೋ ಸಹಸ್ರವರ್ಚಸಂ ॥ ೪ ॥

॥ ಪದಪಾಠಃ ॥

ಪವಮಾನ । ವಿದಾಃ । ರಯಿಂ । ಅಸ್ಮಭ್ಯಂ । ಸೋಮ । ಸುಽಶ್ರಿಯಂ ।

ಇಂದೋ ಇತಿ । ಸಹಸ್ರಽವರ್ಚಸಂ ॥ ೪ ॥

॥ ಸಾಯಣಭಾಷ್ಯಂ ॥

ಹೇ ಪವಮಾನೇಂದೋ ಸೋಮ ಅಸ್ಮಭ್ಯಂ ಸುಶ್ರಿಯಂ ಶೋಭನಯಾ ಶ್ರಿಯಾ ಯುಕ್ತಂ ಸಹಸ್ರವರ್ಚಸಂ ಬಹುದೀಪ್ತಿಂ ರಯಿಂ ಧನಂ ವಿದಾಃ । ದೇಹೀತ್ಯರ್ಥಃ ॥

॥ ಪ್ರತಿಪದಾರ್ಥ ॥

ಪವಮಾನ—ಶುದ್ಧಿಕಾರಕನೂ । ಇಂದೋ—ಪ್ರಕಾಶಮಾನನೂ ಆದ । ಸೋಮ—ಎಲೈ ಸೋಮ ದೇವನೇ । ಅಸ್ಮಭ್ಯಂ—ನಮಗೆ । ಸುಶ್ರಿಯಂ—ಉತ್ತಮವಾದ ಸಂಪತ್ತಿನಿಂದ ಕೂಡಿದುದೂ । ಸಹಸ್ರವರ್ಚಸಂ—ಬಹುಪ್ರಕಾಶಮಾನವಾದುದೂ ಆದ । ರಯಿಂ—ಧನವನ್ನು । ವಿದಾಃ—ಒದಗಿಸಿಕೊಡು.

॥ ಭಾವಾರ್ಥ ॥

ಶುದ್ಧಿಕಾರಕನೂ, ಪ್ರಕಾಶಮಾನನೂ ಆದ ಎಲೈ ಸೋಮದೇವನೇ, ನಮಗೆ ಉತ್ತಮವಾದ ಸಂಪತ್ತಿನಿಂದ, ಕೂಡಿರುವುದೂ, ಬಹು ಪ್ರಕಾಶಮಾನವಾದುದೂ ಆದ ಧನವನ್ನೂ ಒದಗಿಸಿಕೊಡು.

English Translation

Purified Soma, grant us auspicious wealth with infinite splendour, O Indu.

॥ ಸಂಹಿತಾಪಾಠಃ ॥

ಇಂದುರತ್ಯೋ ನ ವಾಜಸೃತ್ಕನಿಕ್ರಂತಿ ಪವಿತ್ರ ಆ ।

ಯದಕ್ಷಾರತಿ ದೇವಯುಃ ॥ ೫ ॥

॥ ಪದಪಾಠಃ ॥

ಇಂದುಃ । ಅತ್ಯಃ । ನ । ವಾಜಽಸೃತ್ । ಕನಿಕ್ರಂತಿ । ಪವಿತ್ರೇ । ಆ ।

ಯತ್ । ಅಕ್ಷಾಃ । ಅತಿ । ದೇವಽಯುಃ ॥ ೫ ॥

॥ ಸಾಯಣಭಾಷ್ಯಂ ॥

ಅಯಮಿಂದುರ್ವಾಜಸೃತ್ಸಂಗ್ರಾಮಂ ಸರಣೋಽತ್ಯೋ ನಾಶ್ವ ಇವ ಪವಿತ್ರ ಆ ಪವಿತ್ರೇ ಕನಿಕ್ರಂತಿ। ಶಬ್ದಂ ಕರೋತಿ । ಯದ್ಯದಾಕ್ಷಾಃ ಕ್ಷರತಿ ।। ಕ್ಷರ ಸಂಚಲನ ಇತ್ಯಸ್ಮಾಚ್ಛಾಂದಸೇ ಲುಙಿ ತಿಪಿ ಸಿಚ್ । ಬಹುಲಂ ಛಂದಸೀತೀಡಭಾವಃ । ಇಡಭಾವೇ ಚ ರಾತ್ಸಸ್ಯೇತಿ ಸಲೋಪಃ ॥ ದೇವಯುರ್ದೇವಕಾಮಃ ಸನ್ ತದಾ ಶಬ್ದಂ ಕರೋತಿ ॥

॥ ಪ್ರತಿಪದಾರ್ಥ ॥

ಇಂದುಃ—ಪ್ರಕಾಶಮಾನವಾದ ಈ ಸೋಮವು । ದೇವಯುಃ—ದೇವತೆಗಳ ಬಳಿಗೆ ಹೋಗಲು ಇಚ್ಛಿಸಿ । ಯತ್—ಯಾವಾಗ । ಅಕ್ಷಾಃ—ಸ್ರವಿಸುವುದೋ ಆಗ । ವಾಜಸೃತ್—ಯುದ್ಧಾಭಿಮುಖವಾಗಿ ಹೋಗುವ । ಅತ್ಯೋ ನ—ಅಶ್ವದಂತೆ ಅತ್ಯುತ್ಸಾಹದಿಂದ । ಪವಿತ್ರೇ ಅತಿ ಆ—ದಶಾಪವಿತ್ರದ ಮೇಲೆ ಬೀಳುವಾಗ । ಕನಿಕ್ರಂತಿ—ಘಟ್ಟಿಯಾಗಿ ಶಬ್ದವನ್ನು ಮಾಡುತ್ತದೆ.

॥ ಭಾವಾರ್ಥ ॥

ಪ್ರಕಾಶಮಾನವಾದ ಈ ಸೋಮವು ದೇವತೆಗಳ ಬಳಿಗೆ ಹೋಗಲು ಇಚ್ಛಿಸುತ್ತಾ ಯಾವಾಗ ಸ್ರವಿಸುವುದೋ ಆಗ ಯುದ್ಧಾಭಿಮುಖವಾಗಿ ಹೋಗುವ ಅಶ್ವವು ಉತ್ಸಾಹದಿಂದ ಕೆನೆಯುವಂತೆ (ಶಬ್ದಮಾಡುವಂತೆ) ದಶಾಪವಿತ್ರದ ಮೇಲೆ ಬೀಳುವಾಗ ಘಟ್ಟಿಯಾಗಿ (ಜಳಜಳನೆ) ಶಬ್ದಮಾಡುತ್ತದೆ.

English Translation

Indu, like a horse rushing into battle, sounds in the sieve, when he flows through, beloved of the gods.

॥ ಸಂಹಿತಾಪಾಠಃ ॥

ಪವಸ್ವ ವಾಜಸಾತಯೇ ವಿಪ್ರಸ್ಯ ಗೃಣತೋ ವೃಧೇ ।
ಸೋಮ ರಾಸ್ವ ಸುವೀರ್ಯಂ ॥ ೬ ॥

॥ ಪದಪಾಠಃ ॥

ಪವಸ್ವ । ವಾಜಽಸಾತಯೇ । ವಿಪ್ರಸ್ಯ । ಗೃಣತಃ । ವೃಧೇ ।
ಸೋಮ । ರಾಸ್ವ । ಸುಽವೀರ್ಯಂ ॥ ೬ ॥

॥ ಸಾಯಣಭಾಷ್ಯಂ ॥

ಹೇ ಸೋಮ ಪವಸ್ವ । ಕ್ಷರ । ಕಿಮರ್ಥಂ । ವಾಜಸಾತಯೇಽನ್ನಲಾಭಾಯ । ತಥಾ ಗೃಣತಃ ಸ್ತುವತೋ ವಿಪ್ರಸ್ಯ ಮಮ ಮೇಧ್ಯಾತಿಥೇರ್ವೃಧೇ ವರ್ಧನಾಯ ಚ । ಹೇ ಸೋಮ ಸುವೀರ್ಯಂ ಶೋಭನವೀರ್ಯೋಪೇತಂ ಪುತ್ರಂ ಚ ರಾಸ್ವ । ದೇಹಿ ॥

॥ ಪ್ರತಿಪದಾರ್ಥ ॥

**ಸೋಮ**—ಎಲೈ ಸೋಮನೇ । **ವಾಜಸಾತಯೇ**—ಅನ್ನಲಾಭಾರ್ಥವಾಗಿಯೂ । **ವೃಧೇ**—ಅಭಿವೃದ್ಧಿಯನ್ನು ಪಡೆಯುವುದಕ್ಕಾಗಿಯೂ । **ಗೃಣತಃ**—ನಿನ್ನನ್ನು ಸ್ತುತಿಸುತ್ತಿರುವ । **ವಿಪ್ರಸ್ಯ**—ಮೇಧಾವಿಯಾದ ಮೇಧ್ಯಾತಿಥಿಯೆಂಬ ಹೆಸರಿನವನಾದ ನನಗೋಸ್ಕರ । **ಪವಸ್ವ**—ಸ್ರವಿಸುತ್ತಾ ಪ್ರವಹಿಸು, (ಮತ್ತು) । **ಸುವೀರ್ಯಂ**—ಶೋಭನವೀರ್ಯೋಪೇತನಾದ ಪುತ್ರನನ್ನೂ । **ರಾಸ್ವ**—ಕೊಡು.

॥ ಭಾವಾರ್ಥ ॥

ಎಲೈ ಸೋಮದೇವನೇ, ಅನ್ನಲಾಭಾರ್ಥವಾಗಿಯೂ, ಅಭಿವೃದ್ಧಿಗಾಗಿಯೂ ನಿನ್ನನ್ನು ಸ್ತುತಿಸುತ್ತಿರುವ ಮೇಧಾವಿಯಾದ ಮೇಧ್ಯಾತಿಥಿಯೆಂಬ ನನಗೋಸ್ಕರ ಸ್ರವಿಸುತ್ತಾ ಪ್ರವಹಿಸು ಮತ್ತು ಉತ್ತಮವೀರ್ಯೋಪೇತನಾದ ಪುತ್ರನನ್ನು ಅನುಗ್ರಹಿಸಿ ಕೊಡು.

English Translation

Flow for the acquisition of food, for the prosperity of the sage who praise you ; O Soma, grant (me) excellent male offspring.

ವೇದಾರ್ಥಸ್ಯ ಪ್ರಕಾಶೇನ ತಮೋ ಹಾರ್ದಂ ನಿವಾರಯನ್ ।
ಪುಮರ್ಥಾಂಶ್ಚತುರೋ ದೇಯಾದ್ವಿದ್ಯಾತೀರ್ಥಮಹೇಶ್ವರಃ ॥

ಇತಿ ಶ್ರೀಮದ್ರಾಜಾಧಿರಾಜಪರಮೇಶ್ವರವೈದಿಕಮಾರ್ಗಪ್ರವರ್ತಕಶ್ರೀವೀರಬುಕ್ಕಭೂಪಾಲ ಸಾಮ್ರಾಜ್ಯಧುರಂಧರೇಣ ಸಾಯಣಾಚಾರ್ಯೇಣ ವಿರಚಿತೇ ಮಾಧವೀಯೇ ವೇದಾರ್ಥಪ್ರಕಾಶ ಋಕ್ಸಂಹಿತಾಭಾಷ್ಯೇಽಷ್ಟಾಷ್ಟಕೇಽಷ್ಟಮೋಽಧ್ಯಾಯಃ ಸಮಾಪ್ತಃ ॥

॥ ಸಮಾಪ್ತಂ ಚ ಷಷ್ಠಾಷ್ಟಕಂ ॥

ಇಲ್ಲಿಗೆ ಶ್ರೀ ಸಾಯಣಭಾಷ್ಯಸಹಿತವೂ ಕರ್ನಾಟಕಭಾಷಾನುವಾದಯುತವೂ ಆದ
ಋಗ್ವೇದಸಂಹಿತೆಯ ಆರನೆಯ ಅಷ್ಟಕದ ಎಂಟನೆಯ ಅಧ್ಯಾಯವು ಸಮಾಪ್ತವು

ಆರನೆಯ ಅಷ್ಟಕವು ಸಮಾಪ್ತವು.

॥ ಓಂ ತತ್ಸತ್ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ವಾಗೀಶ್ವರ ನಮೋಽಸ್ತು ತೇ ॥

। ಶುಭಂ ಭೂಯಾತ್ ॥

॥ ಮಂಗಳಂ ॥